(b). ಪ್ರೂಫಿಗಿಂತ ಹೆಚ್ಚು ಸ್ಟ್ರೇಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ, ಆ ಬಗ್ಯೆ, ಹೆಡ ಸೂಪರ ವೈಜರ ಮೂಲಕ ಡೆಪ್ಯುಟಿ ಕಮ್ಮಿಷನರವರ ವಿಶೇಷ ಹುಕ್ಕುಂಗಳನ್ನು ಪಡೆಯತಕ್ಕದ್ದು; ಸದರೀ ಹೆಡ ಸೂಪರ್‌ವೈಜರು ಸದರೀ ಅಂಶಗಳನ್ನು ಸೂಚಿಸಿ, ಅದರಂತೆ ಬಟ್ಟು ಬಿಕ್ರಿ ಅಂಗಡಿಗಳಿಗೆ ಪ್ಯಾಸಗಳು ಯಾನೇ ರಹದಾರೀಗಳನ್ನು ಕೊಡತಕ್ಕದ್ದು, ಹಾಗೆ ಕೊಡಲ್ಪಟ್ಟ ಸಾರಾಯಿಯು; ಈ ಪ್ಯಾರಾ (a) ಕ್ಲಾಜನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟು ಲೆಖ್ಖ ಇಡಲ್ಪಡತಕ್ಕದ್ದು.

(c). ಅಂಡರ ಪ್ರೂಫ ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೇಂಗ್ತ್ ವುಂಟಾಗಿ ಮತ್ತು ಪ್ರೂಫಿನವರಿಗೆ ಇದ್ದು, ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲೆ ತೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು, ಜಲಪರಿಮಾಪಕ ಯಂತ್ರದ ದರಗಳ ಪ್ರಕಾರ ದಾಮಾಷಾಯಿ ಮೇಲೆ ಹತ್ತು ಡಿಗ್ರಿಗಳ ದರದಂತೆ ಜಾಸ್ತಿ ಮಾಡಲ್ಪಡತಕ್ಕದ್ದು.

(*d*). ಅಂಡರ ಪ್ರೂಫಿನ 20° ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿ
ಯಿಂದ ಕೊಡಲ್ಪಡಕೂಡದು ; ಪರಂತು, ಅಂಡರ ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತಿಗಿಂತ ಕಡಿಮೆ
ಯುಳ್ಳ ಸಾರಾಯಿ ಬಗ್ಯೆ ತಗಾದೇ ಉಂಟಾದರೆ, ಅಂಡರ ಪ್ರೂಫಿನ 30° ಡಿಗ್ರೀ ಸಾರಾಯಿಯು
ಮೊಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯು ದರಗಳ ಮೇರೆ, ಡಿಸ್ಟಿಲೇರಿಯಿಂದ ವಿಶೇ
ಕೊಡಲ್ಪಡಬಹುದು. ಅಂತಾ ಸಾರಾಯಿಯು, ಬಟ್ಟಿ ಕೋಠೀಗಳಲ್ಲಿಯೂ, ಚಿಲ್ಲರೆ ದುಕಾ
ಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ವಿಲೇವಾರಿ ಲೆಕ್ಕ ಕೊಡಲ್ಪಡತಕ್ಕದ್ದು.

XII. ಸಾರಾಯಿಯು ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಮೇರೆ ಪುರೋಖ್ತು ಮಾಡಲ್ಪಡತಕ್ಕದ್ದೇ ಹೊ
ಬಟ್ಟಿ ಬಿಕ್ರಿಯು ಅಥವಾ ಚಿಲ್ಲರೇ ಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆ
ಮಾಡಕೂಡದು ಅಥವಾ ನೀರು ಬೆರಿಸಕೂಡದು. ಆದರೆ ಸಾರಾಯಿಯು ಬಲವನ್ನು ತಗ್ಗಿಸುವ
ಹೆಡ ಸೂಪರ್ವೈಜರವರ ರೂಬರು ಡಿಸ್ಟಿಲೇರಿಯಲ್ಲಿ ಕಾಶಿದ ನೀರು ಉಪಯೋಗಿಸಲ್ಪಡಬಹುದ

XIII. ಅಂಡರ ಪ್ರೂಫಿನ ಬಾಬತು 20° ಡಿಗ್ರೀಯು ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರ
ಯಿಗೆ ಬಂದಾಸೆ ಮೇರೆ ಲೋಕಲ್ ಸೆಸ್ ದೇಖೀಲ್ ಗವರ್ನಮೆಂಟ ತೀರ್ವೆಯು ಸದರೀ ಸಾರಾಯಿ, (
ಪದಾರ್ಥ ಬೆರಿಕೆ ಇಲ್ಲದೆಯೂ, ನೀರು ಬೆರಿಕೆಯಾಗದೆಯೂ) ಬಟ್ಟಿ ಪುರೋಖ್ತು ಅಂಗಡಿಯಲ್ಲಿ
ಚಿಲ್ಲರೆ ಅಂಗಡಿಗಳೊಳಗೂ ಯಾವ ಖರೀದೀ ಪ್ರಕಾರ ಪುರೋಖ್ತಾಗತಕ್ಕದ್ದೋ ಅದು ಇದ
ಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ :—

	ಪ್ರೂಫಿನ 20° ಡಿಗ್ರಿಗಳ ವಳಗಿನ ಸಾರಾಯಿ.			
	ಲೋಕಲ್ ಸೆಸ್ ದೇಖೀಲ ಗ್ಯಾಲನ 1ಕ್ಕೆ ತೀರ್ವೆ.	ಗ್ಯಾಲನ 1ಕ್ಕೆ ಬಟ್ಟಿ ಬಿಕರೀ ದರ.	ಚಿಲ್ಲರೆ ಬಿಕರಿ ದರ.	
			ಗ್ಯಾಲನ 1ಕ್ಕೆ	ಡ್ರಾಂ 1ಕ್ಕೆ
	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ
ಸೀಮೆಯು ತಮಾಂ ಸ್ಥಳಗಳಲ್ಲೂ.	3—5—0	4—6—4	5—0—0	0—1—

(*a*) ಪ್ರೂಫಿಗೆ ಸಮನಾದ ಮತ್ತು ಪ್ರೂಫಿನ 30° ಡಿಗ್ರಿಗಳಿಗೆ ಕೀಳ್ಪಟ್ಟ ಸಾರಾಯಿ ಮತ್ತು ಸದರೀ
ಕ್ಕೆ ಜಾಸ್ತಿ ವ ಕಮ್ಮಿಯಾಗಿರತಕ್ಕ ತಮಾಂ ಬಲಗಳ ಸಾರಾಯಿಯು ಖರೀದಿ ಮತ್ತು ಅ
ಮೇಲೆ ವಸೂಲು ಮಾಡಲ್ಪಡಬೇಕಾದ ತೀರ್ವೆಸುದಾ, ಗವರ್ನಮೆಂಟ ಹೈಡ್ರಾಮೆಟರಸ್ ಪ್ರತಿ
ಗೆಯೊಂದಿಗೆ ಇರತಕ್ಕ ಕ್ಯಾಸೆಲಾಯುವರ ರೂಲ್ಸು ಅನುಸಾರವಾಗಿ 20° ಡಿಗ್ರಿಗಳ ಅಂಡರ ಪ್ರೂಫಿ
ಮೇಲೆ ವಿವರಿಸಿರುವ ದರಗಳಂತೆ ದಾಮಾಷಾಯಿ ಪ್ರಕಾರ ಗೊತ್ತು ಮಾಡಲ್ಪಡತಕ್ಕದ್ದು.
ರೂಲ್ಸುಗಳಲ್ಲಿ ಅಡಗಿರುವ ಯಾವ ಅಂಶವೇಆಗಲೀ ಹೆಡ ಸೂಪರ್ವೈಜರವರು ಅವರಿಗೆ ಆ ಬಾ
ಬರಹ ಮೂಲಕ ದರಖಾಸ್ತು ಬಂದಮೇಲೆ, ಡಿಸ್ಟಿಲೆರಿಯಲ್ಲಿ ಬಟ್ಟಿ ಇಳಿಸಲ್ಪಟ್ಟ ಯಾವ ಬಲದ ಷ
ನ್ನಾಗಲಿ ಸಾಧಾರಣವಾದ ಒಂದು ಕ್ವಾರಟು ಶೀಶೆಗಿಂತ ಕಮ್ಮಿ ಇಲ್ಲದ ತೇದಾದನ್ನು ಬಟ್ಟಿ ಬಿಕ

ಖರೀದಿ ದರಕ್ಕೆ ಫರೋಖ್ತಿಗಲ್ಲದೆ ವಾಸ್ತವ್ಯವಾಗಿ ಅವರ ಸ್ವಂತ ಉಪಯೋಗಕ್ಕಾಗಿ ಮಾತಬರ ಖು
ಷಬಾಷ್ ಜನಗಳಿಗೂ, ಆಸಪತ್ರಿಗಳಿಗೂ, ಮ್ಯೂಜಿಯಂ ವಿವಿಧವಸ್ತುಶಾಲೆಗಳಿಗೂ ಮತ್ತು ಇತರ
ಪಬ್ಲಿಕ್‌ಸ್ಥಾಪನೆಗಳಿಗೂ ಕೊಡುವದನ್ನು ನಿರೋಧಿಸುವದಿಲ್ಲ.

(*b*) ಕಂಟ್ರಾಕ್ಟುದಾರರು, ಬೆಂಗಳೂರು ಡೆಪ್ಯುಟಿ ಕಮ್ಮಿಷ್ನರವರ ಅಪ್ಪಣೆಯನ್ನು ಪಡೆದು, ಮಿಲ್ಕ್
ಪಂಚ್‌ಯೆಂಬ ಸಾರಾಯಿಯನ್ನಾಗಲೀ ಯಾವದಾದರೂ ಇತರ ಮಧುರವಾದ ಸಾರಾಯಿಗಳನ್ನಾಗಲೀ
ಆಬ್ಕಾರಿ ಆಫೀಸರ್‌ಗಳ ಮೇಲ್‌ತನಿಖೆಗೆ ಒಳಪಟ್ಟು ತಯಾರ್ಮಾಡಬಹುದು ; ಸದರೀ ಆಬಕಾರಿ ಆಫೀ
ಸರರು, ಹಾಂಗೆ ಉಪಯೋಗಿಸಲ್ಪಡುವ ಸಾರಾಯಿ ಮೇಲಿನ ತೀರ್ವೆಯು, ಸದರೀ ಸಾರಾಯಿ ತ
ಯಾರಿ ಉದ್ದಿಶ್ಯ ಉಪಯೋಗಿಸಲ್ಪಡುವ ಕಾಕಂಬಿ ಯಾ ಇತರ ಪದಾರ್ಥಗಳು ಬೆರಸಲ್ಪಡುವದ
ಕ್ಕೆ ಮುಂಚಿತವಾಗಿಯೇ ಪೂರ್ತಿಯಾಗಿ ಲೆಕ್ಕಕ್ಕೆ ದಾಖಲ್ಮಾಡಲ್ಪಟ್ಟಿರುತ್ತೆಂಬ ವಿಷಯ ನೋಡತಕ್ಕ
ದ್ದು. ಅಂಥಾ ಮಧುರವಾದ ಸಾರಾಯಿಯು, ಕಂಟ್ರಾಕ್ಟುದಾರನ ಖರ್ಚಿನಲ್ಲಿ ಹೆಡ್ ಸೂಪರ್‌ವೈಜರ
ವರಿಂದ ಮೊಹರ್ ಮಾಡಲ್ಪಟ್ಟು ಚೀಟಿ ಹಚ್ಚಲ್ಪಟ್ಟ ತರುವಾಯು, ಡಿಸ್ಟಿಲೇರಿಯಿಂದ ಪರಭಾರೆಯಾಗಿ
ಮಾರಲ್ಪಡಬಹುದು ಯಾ ಚಿಲ್ಲರೆ ಬಿಕರಿ ದುಕಾನ್‌ಗಳಲ್ಲಿ ಮಾರಲ್ಪಡತಕ್ಕಬಗ್ಯೆ ಇಡಲ್ಪಡಬಹುದು,
ಅಂಥಾ ಸಾರಾಯಿಗಳು ಮಾರಲ್ಪಡಬೇಕಾದ ಖರೀದಿ ದರಗಳು ಆಬಕಾರಿ ಇಲಾಖೆಯಿಂದ ಗೊತ್ತು
ಮಾಡಲ್ಪಡತಕ್ಕದ್ದು.

XIV. ಸಾರಾಯಿ ಕಮ್ಮಿಬಂದಬಗ್ಯೆ, ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟೇರಿ ಸ್ಟೇಷನ್ ಮ್ಯುನಿ
ಸಿಪಲ್ ಸರಹದ್ದುಗಳ ಲಚಿಗೆ ಫರೋಖ್ತುಬಗ್ಯೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ
ಸಲ್ಲತಕ್ಕ ತೆರಿಗೆಯಮೇಲೆ ಸೇಕಡಾ 2ರ ಪ್ರಕಾರ ಸೋಡಿ ಯಾ ವಜಾ ಕೊಡಲ್ಪಡತಕ್ಕದ್ದು. ಕಂ
ಟ್ರಾಕ್ಟುದಾರನು, ಲೆಕ್ಕಗಳು ಕರಾರ್‌ವಾಕಾ ಇರತಕ್ಕ ಉದ್ದಿಶ್ಯ ಬಿಟ್ಟು ಬಿಕರೀದಾರರ ಲೆಕ್ಕಗಳಲ್ಲಿ
ವಾಸ್ತವ್ಯವಾಗಿ ಕಾಣಬಂದ ಆರವಾಶಿಯನ್ನೇ ದಾಖಲ್ಮಾಡುವಂತೆ ವಿಧಿಸತಕ್ಕದ್ದು.

XV. ಇಜಾರೆದಾರನು, ಡಿಸ್ಟಿಲೇರಿಯನ್ನಾಗಲಿ, ಬಟ್ಟಿ ಫರೋಖ್ತು ಅಂಗಡಿಗಳನ್ನಾಗಲಿ, ಕೋಠಿಗಳ
ನ್ನಾಗಲಿ, ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ನೊಕರರ್ ಮಾಡುತ್ತಾನೋ ಅಂತಾ ಪ್ರತಿ
ಮನುಷ್ಯನನ್ನೂ ಹಾಗೆ ನೊಕರರು ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ್‌ಗಳಿಗೆ ಅನುಗು
ಣವಾಗಿ ಕರಾರುಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ ಕರಾರುಗಳು, 1887ನೇ
ಇಸವಿ ಏಪ್ರೆಲ್ ಬಂದನೇ ತಾರೀಖು ಲಾಗಾಯತ್ ಬಂದು ತಿಂಗಳೊಳಗಾಗಿ, ಅಂಥಾ ನವುಕರನು
ಯಾವ ಡಿಸ್ಟ್ರಿಕ್ಟಿನಲ್ಲಿ ನೊಕರರು ಮಾಡಲ್ಪಡುತ್ತಾನೋ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ
ಇಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯಾರಿ, ಸಾಗಿಸುವಣ ಮತ್ತು
ಫರೋಖ್ತು ಈ ಕೆಲಸಗಳಲ್ಲಿ ತನ್ನಿಂದ ನೊಕರರು ಮಾಡಲ್ಪಡುವ ತಮಾಂ ಜನಗಳೂ, ತಮ್ಮಿಂದ
ಮಾಡಿಕೊಳ್ಳಲ್ಪಟ್ಟ ಕರಾರುಗಳ ವ ಕಾನೂನಿನ ನಿಬಂಧನೆಗಳನ್ನು ಖಂಡಿತವಾಗಿ ಅನುಸರಿಸುವಂ
ತೆ ಮಾಡುವದಕ್ಕೆ ಪೂರಾ ತರತೂಬ್ ಮಾಡತಕ್ಕದ್ದು; ಮತ್ತು ಸದರೀ ನಿಬಂಧನೆಗಳಿಗೆ ಬರಕಿಲಾಫ್
ನಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ, ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವ
ಬಗ್ಯೆ, ಯಾವ ಡಿಸ್ಟ್ರಿಕ್ಟಿನಲ್ಲಿ ಬರಕಿಲಾಫ್ ನಡೆಯಿತೋ ಅಂಥಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ
ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಅಪರಾಧಿಗೆ ಫ್ರೌ
ಟಾಗಿ ಜುರ್ಮಾನೆ ವಿಧಿಸಬಹುದಲ್ಲದೆ ಮತ್ತು ಸದರೀ ಅಪರಾಧಿಯನ್ನು ನವುಕರಿಯಿಂದ ಸಸ್ಪೆಂಡ ಯಾ
ತಗೈರ್ ಮಾಡುವಂತೆ ಕಂಟ್ರಾಕ್ಟುದಾರನನ್ನು ಅಪೇಕ್ಷಿಸಬಹುದು.

XVI. ಗವರ್ರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀರೂಲ್ಸಿಗಾಗಲಿ, ಇಜಾರೇದಾರನು ಅನುಗುಣವಾಗಿ ನಡೆಯತಕ್ಕದ್ದು, ಮತ್ತು ಆತನ ನವುಕರವಾನೆಯರೆಲ್ಲಾ, ಬಟ್ಟೀ ಇಳಿಸಲ್ಪಟ್ಟು ಕೊಡಲ್ಪಟ್ಟ ಸಾರಾಯಿಯ ಬಂದೋಬಸ್ತು ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತಮಾಂ ಪಾತ್ರೆಗಳ ಪಾಕೀಜೇ, ಲೋಹ ಪಾತ್ರೆಗಳ ಕಲಾಯಿ ಹಾಕಿಸುವಣಿ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ರ್ನಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳಬಗ್ಯೆ ಗವರ್ರ್ನಮೆಂಟಿನವರು ಜಾರೀ ಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗಳಿಗೆ ನಿಗೇ ಕೊಡತಕ್ಕದ್ದು. ಷರಾಬ್ ಭಟ್ಟಿ ಇಳಿಸುವಲ್ಲಿ ಉಪಯೋಗಿಸಲ್ಪಡುವ ತಮಾಂ ಬಟ್ಟಿ ಪಾತ್ರೆಗಳೂ, ಕೊಳಬೆಗಳೂ, ವರಂಸ್ಯಾನೆ ಪಾತ್ರೆಗಳೂ ಎರಕ ಹೊಯಿದ ತಗರದ ಪಾತ್ರೆಗಳಾಗಿರತಕ್ಕವು; ಆದರೆ ತಾಂಬ್ರದ ಬಟ್ಟಿ ಪಾತ್ರೆಗಳು, ಕೊಳಬೆಗಳು ಮತ್ತು ವರಂಸ್ ಪಾತ್ರೆಗಳು ಉಪಯೋಗಿಸಲ್ಪಟ್ಟರೆ ಅವು ವಿಧಿಸಲ್ಪಟ್ಟ ಕಾಲಗಳಿಗೆ ಕ್ರಮವಾಗಿಯೂ ಮಜಬೂತಾಗಿಯೂ ಕಲಾಯಿ ಮಾಡಲ್ಪಟ್ಟಿರಬೇಕು.

ಆದಿವಾರಗಳು ಮತ್ತು ಮಂಜೂರ್ಮಾಡಲ್ಪಟ್ಟ ರಜಾ ದಿವಸಗಳಾಗಿ ಪೂರ್ತಿಯಾದ ರಜಾ ದಿವಸಗಳಾಗಿ ಆಚರಿಸಲ್ಪಡತಕ್ಕದ್ದಲ್ಲದೆ ಅಂಥಾ ದಿವಸಗಳಲ್ಲಿ ಭಟ್ಟಿ ಇಳಿಸಲ್ಪಡಕೂಡದು, ಮತ್ತು ಷರಾಬ್ ಕೊಡಲ್ಪಡಕೂಡದು. ಅಂಥಾ ರಜಾ ದಿವಸಗಳ ತಿಳುವಳಿಕೆಯು ಸಂಬಂಧಪಟ್ಟ ತಮಾಂ ಜನಗಳಿಗೂ ಪ್ರತಿ ವರುಷದ ಆರಂಭದಲ್ಲಿ ಕೊಡಲ್ಪಡುವದು.

XVII. ಮೇಲೆ ಕಂಡ ಷರತ್ತುಗಳ ಪೈಕೀ ಯಾವ ಷರತ್ತುಗಳಿಗಾಗಲಿ, ಇಜಾರೇದಾರನಿಂದ ಅಥವಾ ಪದಾ ತಯಾರಿ, ಸಾಗಿಸುವಣಿ, ಯಾ ಪುರೋಖ್ತು ಇಂತಾದ್ದರಲ್ಲಿ, ಆತನಿಂದ ನೌಕರರು ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದ ಹಾಗೆ ಇರುವದರಿಂದ ಅಥವಾ ರಹಸ್ಯವಾದ ಷಾಮಿಲಾತೀಯಿಂದ ಮನಃಪೂರ್ವಕವಾಗಿ ಬರಕಿಲಾಫ್ ಯೇನಾದರೂ ನಡಿಸಲ್ಪಟ್ಟರೆ, ಇಜಾರೇಯನ್ನು ರದ್ದು ಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ 1ನೇ ಷರತ್ತಿನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದಿವಾನರವರಿಗೆ ಯಿಖ್ತಿಯಾರಿ ಇರತಕ್ಕದ್ದು.

XVIII. ಗವರ್ರ್ನಮೆಂಟಿನವರಿಂದ ಸದರೀ ಬಗ್ಯೆ ವಿಧಿಸಲ್ಪಡಬಹುದಾದ ಅಂತಾ ಷರತ್ತುಗಳಿಗೆ ಒಳಪಟ್ಟು, ಇಜಾರೇದಾರನಿಂದ, ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಅರೆಕ್ ಸಾರಾಯಿ, ಲಿಕ್ಕರ್ ಸಾರಾಯಿ ಇವುಗಳನ್ನು ತಯಾರ್ಮಾಡಲ್ಪಡಲಿಕ್ಕೂ, ಪುರೋಖ್ತು ಮಾಡಲ್ಪಡಲಿಕ್ಕೂ, ಗವರ್ರ್ನಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರ ನಾಮೆಯಲ್ಲಿ ಕಂಡ ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲೆ ಸದರೀ ಬಗ್ಯೆ ವಜಾ ಯಾವದೂ ಕೊಡಲ್ಪಡಲಾರದು.

XIX. ಮೇಲೆ ಕಂಡ ಷರತ್ತುಗಳಿಂದ, ಡೆಪ್ಯುಟಿ ಕಮ್ಮಿಷನರಿಗೆ ಕೊಡಲ್ಪಟ್ಟ ಅಧಿಕಾರಗಳೂ, ವಿಧಿಸಲ್ಪಟ್ಟ ಕೃತ್ಯಗಳೂ ಸುದಾ, ರೆಸಿಡೆಂಟರು ನೌಕರರು ಮಾಡಬಹುದಾದ ಅಂಥಾ ಆಫೀಸರಿಂದ ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನ್ನೊಳಗೆ ಚಲಾಯಿಸಲ್ಪಡತಕ್ಕದ್ದು, ಮತ್ತು ನಿರ್ವಹಿಸಲ್ಪಡತಕ್ಕದ್ದು.

10. ಕಳೆದ ಹದಿನಾರು ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡೀ ಕಂಡ ತಖ್ತೆಯಲ್ಲಿ ಕಾಣಿಸಿರುತ್ತೇ:—

	1870—71. ಗ್ಯಾಲನ್‌ಗಳು.	1871—72. ಗ್ಯಾಲನ್‌ಗಳು.	1872—73. ಗ್ಯಾಲನ್‌ಗಳು.	1873—74. ಗ್ಯಾಲನ್‌ಗಳು.	1874—75. ಗ್ಯಾಲನ್‌ಗಳು.	1875—76. ಗ್ಯಾಲನ್‌ಗಳು.	1876—77. ಗ್ಯಾಲನ್‌ಗಳು.	1877—78. ಗ್ಯಾಲನ್‌ಗಳು.	1878—79. ಗ್ಯಾಲನ್‌ಗಳು.
ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷರ್.	77,149	83,345	85,099	90,760	78,872	75,125	68,782	71,207	18,533 51,177
ಶೀಮೆಯ ಇತರ ಸ್ಥಳಗಳಿಗೆ ಕೊಡಲ್ಪಟ್ಟ ತೇದಾದು.	160,710	155,139	169,514	182,591	142,554	114,864	102,112	67,770	67,842
ಶೀಮೆಗೆ ಬಟ್ಟು ಜುಮ್ಲಾ ...	237,859	238,484	254,613	273,351	22,426	189,989	170,894	138,977	137,552

	1879—80. ಗ್ಯಾಲನ್‌ಗಳು.	1880—81. ಗ್ಯಾಲನ್‌ಗಳು.	1881—82. ಗ್ಯಾಲನ್‌ಗಳು.	1882—83. ಗ್ಯಾಲನ್‌ಗಳು.	1883—84. ಗ್ಯಾಲನ್‌ಗಳು.	1884—85. ಗ್ಯಾಲನ್‌ಗಳು.	1885—86. ಗ್ಯಾಲನ್‌ಗಳು.	
ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟರಿ ಸ್ಟೇಷರ್.	24,436	28,586	28,812	31,282	34,089	33,993	33,952	ಬೆಂಗಳೂರು ಷಹರ್.
	60,726	66,809	68,502	75,151	76,907	74,010	70,074	ಸಿವಿಲ್ ವ ಮಿಲಿಟೇರಿ ಸ್ಟೇಷರ್.
ಶೀಮೆಯ ಇತರ ಸ್ಥಳಗಳಿಗೆ ಕೊಡಲ್ಪಟ್ಟ ತೇದಾದ್.	94,092	115,352	139,281	137,706	144,312	156,539	159,352	
ಶೀಮೆಗೆ ಬಟ್ಟು ಜುಮ್ಲಾ ..	179,254	210,747	236,595	244,139	255,308	264,542	263,378	

11. ಕಳೆದ ಆರು ವರುಷಗಳಲ್ಲಿ ಖರ್ಚಾದ ಷರಾಬಿನ ಮೇಲೆ ಆಯಾ ಸಾಲಿನಲ್ಲಿ ಜಾರೀಯಲ್ಲಿ ಯಿದ್ದ ತೀರ್ವೆ ದರಗಳ ಪ್ರಕಾರ್‍ ಕರಾರ್‌ವಾಕಾ ಹುಟ್ಟುವಳಿಯಾದ ಮೊಬಲಗು, ಮತ್ತು ಈಗ ಗೊತ್ತು ಮಾಡಲ್ಪಟ್ಟ (ಗ್ಯಾಲರ್ನ್ ವಂದಕ್ಕೆ 3—5—0) ಬಾಬತು ವಂದೇ ದರದ ತೀರ್ವೆಯು ಸದರೀ ಸಾಲ್‌ಗಳಲ್ಲಿ ಜಾರೀಯಿದ್ದ ಪಕ್ಷದಲ್ಲಿ ಹುಟ್ಟುವಳಿಯಾಗಬಹುದಾಗಿದ್ದ ಮೊಬಲಗು ಯಿವುಗಳನ್ನು ತೋರಿಸುವ ತಖ್ತೆಯು ಇದರಡಿ ಕಾಣಿಸಿರುತ್ತೆ:—

ಸಾಲ್‌ಗಳು.	ಪೂರ್ವಕ್ಕೆ ಜಾರೀಯಲ್ಲಿ ಯಿದ್ದ ಹೆಚ್ಚು ಕಮ್ಮೀ ದರಗಳಂತೆ ಹುಟ್ಟುವಳಿಯಾದ ಕರಾರ್‌ವಾಕಾ ಮೊಬಲಗು.	ಈಗ ಗ್ಯಾಲರ್ನ್ ವಂದಕ್ಕೆ ಗೊತ್ತು ಮಾಡಲ್ಪಟ್ಟ 3—5—0 ದರದ ಪ್ರಕಾರ್‍ ಹುಟ್ಟುವಳಿಯಾಗಬಹುದಾಗಿದ್ದ ಮೊಬಲಗು.
	ರೂಪಾಯಿ.	ರೂಪಾಯಿ.
1880—81	6,43,022	6,98,099
1881—82	6,33,329	7,83,720
1882—83	6,58,768	8,08,710
1883—84	6,88,019	8,45,707
1884—85	7,41,574	8,76,295
1885—86	7,47,314	8,72,439

ಹುಕ್ಕುಂ ಬಮೋಜಿಬ್,

ಆರ್. ವಿಜಯಿಂದ್ರರಾವ್,

ಚೀಫ್ ಸೆಕ್ರೆಟೇರಿ.

ಅಪೆಂಡಿಕ್ಸ್.

8ನೇ ಪ್ಯಾರಾದಲ್ಲಿ ಕಂಡ ದರಖಾಸ್ತಿನ ನಮೂನೆ.

ಬೆಂಗಳೂರು ಮೊಕ್ಕಾಂ ಮೈಸೂರು ಶೀಮೆಯ ದಿವಾನರವರ ಚೀಫ್ ಸೆಕ್ರೆಟೇರೀಯವರ ಜನಾಬಿಗೆ.————

ಅಯ್ಯಾ,

—————————————ನೇ ಮರ್ಕ್ಕಮಿನ ಮೈಸೂರು ಗೆಜೆಟ್ಟಿನಲ್ಲಿ ಘಾಯಿಷ್ಮಾಡಲ್ಪಟ್ಟ ದೀವಾನರವರಿಂದ ಸಾದರ್ಮ್ಮಾಡೋಣಾದ ——————————ನೇ ಮರ್ಕ್ಕಂ——————ನೇ ನಂಬರ ಇಸ್ತಿಹಾರ್‌ನಾಮೆ ಅನುಸರಿಸಿ, ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷರ್ನ ದೇಖೀಲ್ ಮೈಸೂರು ಶೀಮೆಯ ತಮಾಂ ಸ್ಥಳಗಳಲ್ಲೂ 1887ನೇ ಇಸವಿ ಏಪ್ರಲ್ 1ನೇ ಮರ್ಕ್ಕಂ ಲಾಗಾಯತು 18—ನೇ ಇಸವಿ ಮಾರ್ಚಿ 31ನೇ ಮರ್ಕ್ಕಂ ವರಿಗೆ ವಿಸ್ತರಿಸುವ———ವರುಷಗಳ ಕಾಲಪರಿಯಂತ, ಷರಾಬನ್ನು, ಮೇಲ್ಕಂಡ ಇಸ್ತಿಹಾರ್ ನಾಮೆಯಲ್ಲಿ ವಿವರಿಸಲ್ಪಟ್ಟ ಷರತ್ತುಗಳಿಗೂ, ರೂಲ್ಸುಗಳಿಗೂ, ಕರಾರ್‌ಗಳಿಗೂ ವಳಪಟ್ಟು ತಯಾರ್ಮ್ಮಾಡುವ ಮತ್ತು ಬಟ್ಟು ಬಿಕರೀಮಾಡುವ ಬಟ್ಟು ಸ್ವಾತಂತ್ರ್ಯದ ಬಗ್ಯೆ ಇದರದೆಶೆಯಿಂದ ದರಖಾಸ್ತು ಮಾಡುತ್ತೇನೆ.

2. ನಾನು ಇದರ ದೆಸೆಯಿಂದ ಸರ್ಕ್ಕಾರಕ್ಕೆಸಾಲಿಯಾನಾ (ಲೋಕಲ್ ಸೆಸ್ ದೇಖೀಲ್) ಇದರಡೀ ಕಂಡ ಪ್ರಕಾರ ಕಮ್ಮಿ ಮೊಬಲಗನ್ನು ಕೊಡುವದಕ್ಕೆ ಒಡಂಬಟ್ಟಿರುತ್ತೇನೆ:—

ಕಂಟ್ರಾಕ್ಟಿನ ಮದಲ್ ಸಾಲಿನಲ್ಲಿ			..	..	ರೂ.
ಡಿಟೋ	ಎರಡನೇ	ಡಿಟೋ	..	..	ರೂ.
ಡಿಟೋ	ಮೂರನೇ	ಡಿಟೋ	..	..	ರೂ.
ಡಿಟೋ	ನಾಲ್ಕನೇ	ಡಿಟೋ	..	..	ರೂ.
ಡಿಟೋ	ಐದನೇ	ಡಿಟೋ	..	..	ರೂ.
					ಜುಮ್ಲಾ ರೂ.

3. ಸದರೀ ಇಸ್ತಿಹಾರ್‌ನಾಮೆಯ 6ನೇ ಪ್ಯಾರಾದಲ್ಲಿ ಅಪೇಕ್ಷಿಸಲ್ಪಟ್ಟ ಪ್ರಕಾರ, ಮೈಸೂರು ಶೀಮೆಯ ದಿವಾನ್ ಸಾಹೆಬರವರ ಹೆಸರಿಗೆ ಕ್ರಮವಾಗಿ ಯಿಂಡಾರ್ಸ್ ಮಾಡಲ್ಪಟ್ಟ 1,000 ರೂಪಾಯಿನ ________ ನ್ನು ಇದರಸಂಗಡ ಕಳುಹಿಸಿರುತ್ತೇನೆ.

ತಮ್ಮ ಅತ್ಯಂತ ಶೇವಕನಾದ

ತಾರೀಖು ____________________

ಹೆಸರು ಮತ್ತು ವಿಳಾಸೆ

ಮೈಸೂರ ಗೆಜೆಟ

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ॥ 15, ಸ್ನ. 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್‌ಸನ್,
ಕಾಂಪ್‌ಟ್ರೋಲರ್.

ಅಂಚೇ ಇಲಾಖಾ.

ನಂ. 528—275. ತಾರೀಖು 6ನೇ ಜನವರೀ 1887.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಚನ್ನಗಿರಿ ತಾಲ್ಲೂಕು ಹೊದಿಗೆರೆಯಲ್ಲಿ ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟಿರುತ್ತೆ.

ಬಿ. ಮರಿಗಂಗಯ್ಯ,
ಅಂಚೇ ಬಕಷಿ.

ಫಾರೆಸ್ಟ್ ಇಲಾಖಾ.

ಇಸ್ತಿಹಾರನಾಮೆ.

ತಾರೀಖು 21ನೇ ಡಿಶಂಬರ್ 1886.

ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ಬಾಬತು, ಯಿದರಡೀಲಿ ಕಂಡ ಚೌಬೀನೆಗಳನ್ನು ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಸಾಹೇಬರವರಿಂದ ಪಬ್ಲಿಕ್ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಡಿಯುತಕ್ಕ ಸ್ಥಳ ದಹೆಸರು.	ಹರಾಜು ತಾರೀಖು.	ಸಾಗವಾನಿ ನಾಟಾಗಳು.	ಕಾಡಜಾತಿ ನಾಟಾಗಳು.	ಸಾಗವಾನಿ ಮತ್ತು ಕಾಡಜಾತಿ ಬೆಲಗಗಳು.	ಷರಾ.
ಶಿರಾಳಕೊಪ್ಪ	15ನೇ ಜನವರೀ 1887	..	80	120	ಹರಾಜ್ ಕಾಲದಲ್ಲಿ ಸರಿಯಾದ ರೇಟ್ ಶಿಕ್ಕರೆ ಜಾಸ್ತಿ ನಾಟಾಗಳನ್ನು ಹರಾಜ್ ಹಾಕಲ್ಪಡುತ್ತದೆ.
ಶಿಕಾರಿಪುರ ಡಿಪೊ	18ನೇ ಡಿಟೋ 1887	..	40	210	
ತರೀಕೆರೆ ಡಿಪೊ	25ನೇ ಡಿಟೋ 1887	50	20	1000	
ಲಕ್ಕವಳ್ಳಿ ಡಿಪೊ	1ನೇ ಫೆಬ್ರುವರೀ 1887	650	650	2000	
ಕುಂಬೂರ್ ಡಿಪೊ ತಾಲ್ಲೂಕು ಕೊಪ್ಪ	5ನೇ ಫೆಬ್ರುವರೀ 1887	500	200	30	
ಆಯನೂರು ಡಿಪೊ ಶಿವಮೊಗ್ಗಾ ತಾಲ್ಲೂಕು	15ನೇ ಡಿಟೋ 1887	100	..	..	

ಹರಾಜಿನ ಷರತುಗಳು—ಮೈಸೂರು ಗೆಜಟಿನಲ್ಲಿ 1873ನೇ ಇಸವಿ ಜೂನ್ 2ನೇ ಮರ್ಕಂ ನಂಬರು 20ನೇ ಯಿಸ್ತಿಹಾರನಾಮೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ್ವ್ರಾಯಿರತಕ್ಕದ್ದು. ಮತ್ತು ಹರಾಜಕಾಲದಲ್ಲಿ ಓದಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1886ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 931.

ಅರ್ಜೀದಾರ್ ತುಮಕೂರು ಡಿಸ್ಟ್ರಿಕ್ಟ್ ಗುಬ್ಬಿ ಕಸಬಾದಲ್ಲಿ ಇರುವ ನೆಟ್ಟಕುಂಟೆ ನಂಜಪ್ಪನವರ ಮಕ್ಕಳು ನಂಜುಂಡಪ್ಪ, 2ನೇ ಈತನ ತಮ್ಮ ಈರಪ್ಪ 1—2ನೇ ಅರ್ಜೀದಾರರು ಮೈನರಗಳು ಇವರ ಗಾರಡಿಯನ್ ಮತ್ತು ಮಾವನಾದ ಮರಿಯಣ್ಣ,

ಅರ್ಜೀದಾರಗೆ ಘಾತಿಯಾದ ನಂಜಪ್ಪ ತಂದೆ ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ವಾಸಸ್ತನಾಗಿ ಮೃತಪಟ್ಟ ನಂಜಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಲೇಣೆಯನ್ನು ವಸೂಲ್ ಮಾಡುವದಕ್ಕೂ ಸದರೀಯವನ ಮೈನರ್ ಮಕ್ಕಳಾದ 1ನೇ ನಂಜುಂಡಪ್ಪ 2ನೇ ಈರಪ್ಪ ಯಿವರಿಗೆ ಇವರ ಮಾವ ಮರಿಯಪ್ಪ ಗಾರಡಿಯನ್ ಆಗಿ ಯಿರಬೇಕೆಂತಲೂ ಸದರೀ ಲೇಣೆಯನ್ನು ವಸೂಲ್ ಮಾಡಿಕೊಳ್ಳುವದಕ್ಕೂ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂದು ಅರ್ಜೀದಾರು ಖಾಯಿಷ್ ಮಾಡುತ್ತಾರೆ. ಸದರೀ ದರಖಾಸ್ತನ್ನು 1887ನೇ ಇಸವಿ ಜನವರೀ 28ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ನಂಜಪ್ಪನಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ತಾರೀಖು 7ನೇ ಜನವರೀ 1887ನೇ ಇಸವಿ.

ಸಿ. ಕ್ರಸ್,
ಸಬ್ ಜಡ್ಜ.

ತುಮಕೂರು ಡಿಸ್ಟ್ರಿಕ್ಟ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿರುವ ಸರ್ಕಾರಿ ಜಂಗ್ಲಿಗಳು (ದೇವರಾಯದುರ್ಗ, ಮದ್ದಗಿರಿ, ಹುಲಿಯೂರುದುರ್ಗವೂ ಶೇರಿ) ಅರಗಿನ ಇಜಾರೆಯು ಸನ್1887—88–1888 89—ಮತ್ತು 1889—90 ಈ ಮೂರು ಸರಕಾರಿ ಸಾಲ್‌ಗಳಿಗಾಗಿ ತುಮಕೂರು ಹೆಡ್ ಕ್ವಾರಟರ್ ಮೊಕ್ಕಾಂನಲ್ಲಿ ಡೆಪ್ಯುಟಿ ಕಮ್ಮಿಷನ್ ಸಾಹೇಬರವರ ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರವರು ಅಥವಾ ಹಾಜರಿರುವ ಅಸಿಸ್ಟೆಂಟ್ ಕಮ್ಮಿಷನರವರ ಮುಂದೆ 1887ನೇ ಇಸವಿ ಫಿಬ್ರವರಿ ತಾರೀಖು 5ರಲ್ಲು ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆ.

ತುಮಕೂರು	..	ಮದ್ದಗಿರಿ	..	ಚಿಕ್ಕನಾಯಕನಹಳ್ಳಿ
ಶಿರಾ	..	ಗುಬ್ಬಿ	..	ತಿಪಟೂರು
ಪಾವಗಡ	..	ಕುಣಿಗಲ್.		

2. ಜಿಡದರಖಾಸ್ತುದಾರನು ಇಜಾರೆಯು ಅವನ ಹೆಸರಿಗೆ ನಿಂತ ಕೂಡ್ಲೆ ವಟ್ಟು ಇಜಾರೆ ಮೊಬಲಗು ಪೈಕಿ ನಾಲ್ಕು ಖಿಸ್ತಿಗೆ ಸಮನಾದ ಮೊಬಲಗನ್ನು ನಗದಾಗಿಯಾಗಲಿ ಕರ್ರೆನ್ಸಿ ನೋಟ್‌ಗಳ ಮೂಲಕವಾಗಲಿ ಡಿಪಾಜಿಟು ಇಡತಕ್ಕದ್ದು. ಹಾಗೆ ಇಡುವದಕ್ಕೆ ತಪ್ಪಿದರೆ ಇಜಾರೆಯು ಕೂಡ್ಲೆ ಅವನ ಅವಗುಣಕ್ಕೆ ಹರಾಜ್ ಮಾಡಲ್ಪಟ್ಟು ಹಾಗೆ ಹರಾಜ್ ಮಾಡುವದ್ದರಿಂದ ವುಂಟಾಗಬಹುದಾದ ಯಾವ ನಷ್ಟಕ್ಕಾಗಲಿ ಅವನನ್ನು ಗುರಿಮಾಡಲ್ಪಡುವದು.

3. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ಇಜಾರೆ ಕೆಲಸದ ಮೇಲೆ 1887ನೇ ಇಸವಿ ಏಪ್ರೆಲ್ ಗುರ್ರೆ ತಾರೀಖಿನಲ್ಲಿ ಪ್ರವೇಶಿಸತಕ್ಕದ್ದು ಮತ್ತು ಅವನು ಮೊದಲನೇ ತಿಂಗಳ ಖಿಸ್ತನ್ನು 1887ನೇ ಇಸವಿ ಮೇ 15ನೇ ಮರ್ಕೂಮಿನಲ್ಲಿ ಆಗಲಿ ಯಾ ತತ್ಪೂರ್ವದಲ್ಲಿ ಆಗಲಿ ಪಾವತೀಮಾಡಬೇಕಲ್ಲದೆ ತರುವಾಯದ ಎಲ್ಲಾ ಮಾಹೇವಾರಿ ಖಿಸ್ತುಗಳನ್ನು ಪ್ರತಿ ಮಾರನೇ ತಿಂಗಳು 15ನೇ ತಾರೀಖಿನ ವಳಗಾಗಿ ಪಾವತೀ ಮಾಡತಕ್ಕದ್ದು. ಈ ಬಾಬತು ಮಾಹೇವಾರೀ ಖಿಸ್ತು ಮೊಬಲಗು ಪಾವತೀ ಮಾಡುವದರಲ್ಲಿ ಡಿಪಾಜಿಟ್ ಇಡಲ್ಪಟ್ಟ ಮೊಬಲಗು ಲೆಖ್ಖಕ್ಕೆ ಶೇರಿಸಿಕೊಳ್ಳಲ್ಪಡಲಾರದು. 15ನೇ ತಾರೀಖಿಗೆ ಮೀರಿ ಪಾವತೀ ಮಾಡಲ್ಪಡುವ ಖಿಸ್ತುಮೊಬಲಗಿಗೆ ಸಾಲೀಯಾನಾ ಶೇಕಡಾ 6 ರೂಪಾಯಿ ಪ್ರಕಾರ ಪೂರಾ ತಿಂಗಳ ಬಡ್ಡಿಯನ್ನು ತೆಗದುಕೊಳ್ಳಲಾಗುವದು.

4. ಇಜಾರಾದಾರನಿಂದ ಪಾವತೀ ಮಾಡಲ್ಪಡಬೇಕಾದ ಮಾಹೇವಾರಿ ಖಿಸ್ತು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್‌ಸೆಸ್ ಛಾರ್ಜು ಮಾಡಲ್ಪಡುವದು.

5. ಮೇಲೆ ಕಂಡ ಖಿಸ್ತು ಮೊಬಲಗುಗಳು ಕ್ರಮವಾಗಿ ಯರಡು ತಿಂಗಳು ವರಿಗೆ ಪಾವತಿ ಮಾಡುವದಕ್ಕೆ ತಪ್ಪಿದರೆ ಯಾ ಸಾವಕಾಶವಾದರೆ ಇಜಾರೆಯು ಫೌರನ್ ರದ್ದು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಮತ್ತು ತಪ್ಪಿಹೋದ ಕಂಟ್ರಾಕ್ಟುದಾರನ ಅವಗುಣಕ್ಕೆ ಇಜಾರೆಯು ಪುನಃ ಹರಾಜ್ ಮಾಡಲ್ಪಡುವದಲ್ಲದೆ ಡಿಪಾಜಿಟು ಇಡಲ್ಪಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು, ಸರಕಾರಕ್ಕೆ ಬರತಕ್ಕ ಬಾಕಿ ಮೊಬಲಗನ್ನು ಜಮೀನ್ ಬಾಬಿನ ಬಾಕಿಯಂತೆ ವಸೂಲ್ಮಾಡಲಾಗುವದು.

6 ಜಂಗ್ಲಿಗಳಲ್ಲಿ ತಾನು ಅರಗು ಜಮಾಯಿಸುವಂಥಾ ಮರಗಳನ್ನು ಕಡಿಯುವದಕ್ಕಾಗಲಿ ಸಾಗಿಸುವದಕ್ಕಾಗಲಿ ಅಥವಾ ಊನಪಡಿಸುವದಕ್ಕಾಗಲಿ ಅಧಿಕಾರ ವುಂಟಾಗುವದಿಲ್ಲ.

7. ಕಂಟ್ರಾಕ್ಟುದಾರನು ಮಂಜೂರ್ಮಾಡಲ್ಪಟ್ಟ ಇನಾಂದಾರ್ರುಗಳ ಹಕ್ಕುದಾರಿಗಳಲ್ಲಿ ಪ್ರವೇಶಿಸಕೂಡದು.

8. ಡೆಪ್ಯುಟಿ ಕಮ್ಮಿಷನರವರು ಯಾವ ಸವಾಲನ್ನಾಗಲಿ ಯಾವ ಸಬಬೂ ತಿಳಿಸದೆ ಅಂಗೀಕರಿಸುವ ಯಾ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ.

ತಾರೀಖು 17ನೇ ಡಿಶಂಬರ 1886.

ಪಿ. ಎನ್. ಕೃಷ್ಣಮೂರ್ತಿ, ಡೆಪ್ಯುಟಿ ಕಮ್ಮಿಷನರ್.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್.

ತಾರೀಖು 8ನೇ ಜನವರೀ 1887.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅತ್ತಿಕುಪ್ಪ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ನಮೂದಿಸುವ ದಸ್ತಾವೇಜನ್ನು ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳ ವೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್‌ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ರೆಜಿಸ್ಟ್ರೇಷರ್ ನಂಬರ್.	ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಹುಟ್ಟಿದ ಸಾಲಮಾಹೆ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ಸಾಲಮಾಹೆ ತಾರೀಖು.	ರಿಜಿಸ್ಟ್ರಾದ ಸಾಲಮಾಹೆ ತಾರೀಖು	ಷರಾ—ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1884—85 ನೇ ಇಸವಿ ಬಾಬತು ನಂಬರ್ 336	ಸಂತ್ತೆಬಾಚಹಳ್ಳಿಲ್ಲಿ ವಾಸವಾಗಿದ್ದು ಹಾಲೀ ಹಾಸನದಲ್ಲಿ ನಿತ್ಯಾತ್ರೆಯಿಂದ ಜೀವನ ಮಾಡಿಕೊಂಡು ಯಿರುವ 42 ವಯಸ್ಸುವುಳ್ಳ ಸ್ಮಾರ್ತ ಬ್ರಾಹ್ಮಣ ಜಾತಿ ಸಂಕಣ್ಣಯ್ಯನ ಹೆಂಡತಿ ಭಾಗೀರತಮ್ಮ.	ಸಂತ್ತೆಬಾಚಹಳ್ಳಿಯಲ್ಲಿ ಇರುವ ಸ್ಮಾರ್ತ ಬ್ರಾಹ್ಮಣ ಅಣಾಜಿರಾಯರ ರಾಮಯ್ಯನವರ ಮಗ 29 ವಯಸ್ಸುವುಳ್ಳವ್ಯವಸಾಯದಿಂದಜೀವನ ಮಾಡುವ ಕೃಷ್ಣಪ್ಪ.	1—11—84	15—11—84	24—11—84	ಸಂತ್ತೆಬಾಚಹಳ್ಳಿ ಗ್ರಾಮದಲ್ಲಿ ಘವತಿಯಾದ ನನ್ನಗಂಡನ ಹಿಸ್ಸೆಗೆ ಬಂದು ಈಗ ಪಾಳುಬಿದ್ದು ಇರುವ ಮನೆ ಚೌತರ್ಫ-ಪೂರ್ವಕ್ಕೆ ನನ್ನ ಮೈದನ ಶ್ರೀಕಂಠಯ್ಯನ ಮನೆ ಮತ್ತು ಅವನ ಹಿತ್ತಲು-ಪಶ್ಚಿಮ ನನ್ನಭಾವ ನಂಜಪ್ಪಯ್ಯ ವುರಫ ಅಣ್ಣೈಯನ ಮನೆ ಮತ್ತು ಅವರ ಹಿತ್ತಲು-ವುತ್ತರಕ್ಕೆ ಬಳೆ ಚನ್ನವೀರಶೆಟ್ಟಿ ಹಿತ್ತಲು-ದಕ್ಷಿಣಕ್ಕೆ ದೊಡ್ಡಬೀದಿ ಈ ಮಧ್ಯೆ ಇರುವ 13 ಅಂಕಣ ಶಿಕಸ್ತು ಮೂರು ಅಂಕಣ ಕಟ್ಟು ದಾಯೆ ಇದಕ್ಕೆ ಶೇರಿದ ಹಿತ್ತಲೂ ಪಾಳು ನಿವೇಶನ ಅದರಲ್ಲಿ ಇರುವ ಫಲಾ ತೆಂಗಿನ ಮರ, ಇದರಲ್ಲಿ ಇರುವ ತೊಲೆಗಳು ಹಂಚು ಸಹಾ ನಿನಗೆ ಗವರ್ನಮೆಂಟ್ 48 ರೂಪಾಯಿಗೆ ಖರೀದಿಗೆ ಕೊಟ್ಟು ಮೊಬಲಗು ತೆಗದುಕೊಂಡು ಯಿರುತ್ತೇನೆಂದು.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 27ನೇ ಡಿಸೆಂಬರ್ 1886.

ಇದರಿಂದ ಸಮ್ಮಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೇಲೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತಾವೇಜನ್ನ ಹಾಜರ್ ಮಾಡಿದವರೇ(ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ಬೇಲೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತಾವೇಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ದಸ್ತಾವೇಜಿನ ನಂಬರ್.	ದಸ್ತಾವೇಜಿನ ತಾರೀಖು.	ದಸ್ತಾವೇಜು ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳಾ.	ದಸ್ತಾವೇಜನ್ನ ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳಾ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
20 / 1884—85	12—6—84	13—6—84	16—7—84	ಬೇಲೂರು ತಾಲ್ಲೂಕು ಮೊದೇಹಳ್ಳಿ ಹೋಬಳಿ ಕಲ್ಲುಕೆರೆ ಪೇಟೆಯಲ್ಲಿರುವ ಬೇಲೂರು ತಾಲ್ಲೂಕು ಪಳ್ಳಿಕೊಂಡೆ ಸ್ಥಳದ ಮೊದೀಪಕ್ಕೀರ್‌ಸಾಬರಮಗ ಮೊಹದೀನ್ ಸಾಬಿ	ಈತನ ಹೆಂಡತಿ ರೈಹಿಮಾನ್‌ಬೀಬಿ	ಬಿಳಗಳ್ಳಿ ಗ್ರಾಮದ ಸರ್ವೆ 55—56ನೇ ಪೈಕೀ 18 ಎಕರೆ 7 ಕುಂಟೆ ಆಕಾರ 15—5—0 ವುಳ್ಳ ಯಿರಡು ಜೋಂದು ತೋಟ 200 ರೂಪಾಯಿಗಳಿಗೆ ಕ್ರಯ.

ಏ. ಡಿ. ಪೊನ್ನರಂಗಂ ಮೊದಲಿಯಾರ್ರು, ಫಾರ್ ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 22ನೇ ಡಿಶಂಬರ್ 1886.

ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿ ಇರುವ ಪತ್ರಗಳನ್ನು ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು 1 ತಿಂಗಳು ಒಳಗಾಗಿ ವಾಪಸು ಪಡಿಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರಿಗೆ ನಾಶಪಡಿಸುತ್ತೆ.

ಅನುಕ್ರಮ ನಂ.	ಪುಸ್ತಕದ ನಂ.	ದಸ್ತಾವೇಜು ನಂಬರ್.	ಬರಕೊಟ್ಟ ತಾರೀಖು.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟರು ಮಾಡಿದ ತಾರೀಖು.	ಬರಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1	I	54 / 1884—85	22—5—84		22—5—84	1 ಸಂಸೆಗ್ರಾಮದಲ್ಲಿರುವ ಪಟೇಲ್ ಈರೇಗೌಡನ ಹೆಂಡತಿ ಹನುಮಮ್ಮ, 2 ಈಕೆ ಮೈದುನ ಉದ್ದೇಗೌಡ	ಮೂಡಗೆರೆ ತಾಲ್ಲೂಕು ಬೈಲಹಳ್ಳಿ ಗ್ರಾಮದಲ್ಲಿ ಇರುವ ಒಕ್ಕಲಗಿರ ಲಿಂಗೇಗೌಡನ ಮಗ ಚಿಕ್ಕೇಗೌಡ	ಸಂಶೆ ಗ್ರಾಮದಲ್ಲಿ ಇರತಕ್ಕ 8 ತರೀ ಜಮೀನುಗಳು 100 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.
2	ಡಿಟ್ಟೋ	58 / 1884—85	26—5—84		26—5—84	ಶಿರಿಗೂರಲ್ಲಿರುವ ಶಿವಾಚಾರದ ಜಾತಿ ಹುಲಿಗೌಡನ ಮಗ ನಂಜೇಗೌಡ	ಶಿರಿಗೂರು ದಾಖಲೆ ಕೆಸವಿನ ಮನೆಯಲ್ಲಿರುವ ಕುರುಬರ ಬೀರಯ್ಯನಮಗ ಅಕ್ಕಯ್ಯಸೇರ್ವೆಗಾರ	ಶಿರಿಗೂರು ದಾಖಲೆ ಕೆಸವಿನ ಹಡ್ಲು ಅಡ್ಡವಾರೆ ಕಾಫಿತೋಟವೂ 225 ರೂಪಾಯಿಗೆ ಕ್ರಯ.
3	ಡಿಟ್ಟೋ	134 / 1884—85	22—7—84		23—7—84	ತಿರುಗಣ ಗ್ರಾಮದ ತಿಮ್ಮೇಗೌಡನ ಮಗ ಒಕ್ಕಲಮಕ್ಕಳ ಜಾತಿ ತಿಮ್ಮೇಗೌಡ	ಹವಳ್ಳಿಯಲ್ಲಿರುವ ಹಳೆಮನೆ ಸಂಣ ನಿರುವಾಣಿಗೌಡರ ಸಬ್ಬೇಗೌಡನ ಮಗ ಅಮೃತೇಗೌಡ	ತಿರುಗಣ ಗ್ರಾಮದ ನಂಬರ್ 30ನೇ ಪೈಕೀ ಕಾಫಿ ಹಿತ್ಲು 50 ರೂಪಾಯಿಯನ್ನ ತೀರಿಸಿಕೊಳ್ಳುವ ಬಗ್ಗೆ 10 ವರುಷದ ವರಿಗೆ ಇಳಿಭೋಗ್ಯಾದಿ ಮಾಡಿರುವಂತ್ತೆ.

ಟಿ. ವ್ಯಾಂಡಗಲೋ,

ಫಾರ್ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರಿ ದೇಣೇದಾರ ಬೆಂಗಳೂರು ಶಿದ್ದಿಕಟ್ಟೆಯಲ್ಲಿರತಕ್ಕ ಹಿರಾಬೂಬಿನ ವಿಷಯದಲ್ಲಿ—

ಸ್ನ 1886ನೇ ಇಸವಿ ದಿವಾಳಿ ಕೇಸ್ ನಂಬರು ಮಿ॥ 723.

ಹುಕ್ಕುಂ.

ಮೇಲ್ಕಂಡ ಹಿರಾಬೂಬಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಸಬ್ ಜಡ್ಜಿಯವರಾದ ಮ॥ ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರಳಾದ ಹಿರಾಬೂಬಿಯು ಖುದ್ದಾಗಿಯೂ ಮತ್ತು ಸದರೀಯವಳ ಲೇಣೇದಾರ್ರಾದ 1—2ನೇರ ತರಫ್ ಪ್ಲೀಡರ್ ಗಂಗಾಧರೈಯನವರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಹಿರಾಬೂಬಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1886ನೇ ಇಸವಿ ಡಿಶಂಬರ್ 6ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಡಿಕ್ರಿ ಆಯಿತು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಬೆಂಗಳೂರಲ್ಲಿರತಕ್ಕ ಹಮಾತ್‌ಬಿ ..	ರೂ. 82 4 4	..	ಬೆಂಗಳೂರು ಮುನಸಿಫ್ ಕೋರ್ಟು 1886ನೇ ಇಸವಿ ಅರಿಜಿನಲ್ 43ನೇ ನಂ. ಬಾಬತು ಕೋರ್ಟು ಖರ್ಚು ಮೊಬಲಗು.	
2	ಮಹಮ್ಮದ್ ಯಾಕೂಬ್ ಬೆಂಗಳೂರು ..				

ಸಿ. ಕ್ರೈಸ್,
ಸಬ್ ಜಡ್ಜ್.

ಗೈರ ವಿಲಾ ಇದ

ಬಿಳಿಭಾಗದ ಕರೆನ್ಸಿನೋಟುಗಳ

ನಂಬರ್	ಸರ್ಕಲ್	ಕ್ರಯ.	
B. 90—30886	,,	ರೂ. 20	ಹಕ್ಕುದಾರ—ಕೋಲ್ಸಿಪೇಟೆ ಕಸಬಾ ಸ್ಟ್ಯಾಂಪ್‌ವೆಂಡರ್ ಭೀಮರಾವ್.
B. 82—91553	,,	,, 20	

ನೋಟೀಸ್.

ಕೊಡಗು ಫಾರೆಸ್ಟು ಡಿಪ್ಯುಟಿ ಕನ್ಸರ್‌ವೇಟರ್ ಆಫೀಸಿನಿಂದ.

ತಾರೀಖು 23ನೇ ಮಾಹೆ ಡಿಸಂಬರ್ 1886.

ಇದರಡಿ ನಮೂದಿಸಲ್ಪಟ್ಟ ಹುಣಸೂರು ಡಿಪೋದಲ್ಲಿ ಇರತಕ್ಕ ನಾಟಗಳನ್ನು ಬರುವ ಸನ್ 1887ನೇ ಇಸವಿ ಫಿಬ್ರವರೀ ತಾರೀಖು 3ರಲ್ಲು ಬಹಿರಂಗವಾಗಿ ಹರಾಜು ಮಾಡೋಣಾಗುತ್ತದೆ.

ಸಾಗುವಾನಿ ನಾಟಗಳು 400. ಇತರ ನಾಟಗಳು 400.

ಷರತ್ತು—ಕೊಡಗು ಚೀಫ್ ಕಮ್ಮಿಷನರ್ ಸಾಹೇಬರವರು ಸನ್ 1885ನೇ ಇಸವಿ ಮೇ ತಾರೀಖು 16ನೇ ನಂಬರ್ 9ರ ಇಸ್ತಿಹಾರ್ ನಾಮೆಯನ್ನು ನೋಡು.

ಯಫ್. ಬಿ. ಡಿಕ್ಕಿನ್ಸನ್,
ಡಿಪ್ಟಿ ಕನ್ಸರ್‌ವೇಟರ್ ಕೊಡಗು ಫಾರೆಸ್ಟು ಡಿವಿಜನ್.

ಕ್ರಿಸ್ಟಲೈಸ್ಡ್ ಸಿಂಖೋನಾ ಫೆಬ್ರಿಫ್ಯೂಜ್.

ಗವರ್ನಮೆಂಟ್ ತೋಟಿಯಲ್ಲಿ ಕೆಂಪುವರ್ಣದ ಸಿಂಖೋನಾ ಪಟ್ಟೆಯಿಂದ ತಯಾರ್‌ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲೈಜ್‌ಡ್ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವಿನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು ಕಲ್‌ಕತ್ತೆ ಬಳಿ ಸೀಬ್‌ಪೂರ್ ಸಮೀಪದಲ್ಲಿ ರಾಯಲ್‌ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರಿಂದ ಗವರ್ನಮೆಂಟ್ ಆಫೀಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಒಂದು ಸಲಕ್ಕೆ ಇಪ್ಪತ್ತು ಪೌಂಡ್ ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಒಂದಕ್ಕೆ 24 ರೂಪಾಯಿಗಳ ದರ ಪ್ರಕಾರ ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್‌ಒಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯನ್ ಮತ್ತು ನೇಟಿವ್ ಡ್ರಗ್ಗಿಸ್ಟರ್‌ಗಳಿಗೂ ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡ್‌ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್‌ಸೂಪರಿಂಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ 4—8—0; ಎಂಟು ಔನ್ಸ್‌ವುಳ್ಳ ಡಬಿ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್‌ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತ್ತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್, ಚಂದಾ ದರ ವಗೈರೇ.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಮಾಹೀ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟೀಸುಗಳು:—				
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ) ..			2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟ್ಟೋ ..			1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟೀಸ್‌ಗಳಿಗೆ:-				
ಮೊದಲನೇ ದಫಾ			5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ			2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.				
ಡ್ಯುಪ್ಲಿಕೇಟ್ ಕಾಫೀಪಟ್ಟೀ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—				
ಮೊದಲನೇ ಸಲಕ್ಕೆ .. ಪುಟ 1ಕ್ಕೆ ..			10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ,, ..			5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ			0	8
ಎರಡನೇ ದಫಾ ಡಿಟ್ಟೋ ಡಿಟ್ಟೋ ..			0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ			0	4

ಷರಾ.—ಚಂದಾ ವಗೈರೆ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತಿ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಬಮೋಜೀಬ್ ಹುಕ್ಕುಂ,

ಟಿ. ಟಿ. ಲೆನರಡ್,

ಮೈ. ಗೆ. ಕಂಪೈಲರ್

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 2 ಸರ್ಕಾರದಿಂದ ಫಾಯಿಷ್ ಆದ್ದು. ಸರ್ 1887.

ಬೆಂಗಳೂರು, ಶನಿವಾರ, ಜನವರೀ ತಾ|| 15, ಸರ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕ್‌ಸ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡ್ಸು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 16ನೇ ಡಿಶಂಬರ್ 1886.

ನಂ. 212.—ಸಕಲಜನಗಳಿಗೂ ತಿಳಿಯುವಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡಿ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ವ ಕಾಯಂಗುತ್ತಾ ಗ್ರಾಮಗಳು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಕಡ ದರಖಾಸ್ತುದಾರರಿಗೆ ಹರಾಜು ನಿಲ್ಲುವವು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜ್ ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬುವದನ್ನ ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟೀ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟ್.	ತಾಲ್ಲೋಕು.	ಹೋಬಳಿ.	ಗ್ರಾಮ.	ಜೋಡೀ ವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಮಾಡೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ಜಾಗ.
					ಎ. ಗುಂ. ಗ.	ರೂ. ಅ. ಪೈ.	ರೂ. ಅ. ಪೈ.	ರೂ. ಅ. ಪೈ.	
ಕೋಲಾರ.	ಚಿಂತಾಮಣಿ.	ಚಿಂತಾಮಣಿ	ಬ್ರಹ್ಮನ ದಿಂಣೆ ಉರಫ್ ಕುಂಟೂರು ಜೋಡಿ ಗ್ರಾಮ	ಶ್ಯಾಮಾಚಾರಿ ವಗೈರೆ	259 25 0 ಖಂ. ಕೊ. ಪ.	151 0 0	74 6 2	292 8 2 ಮತ್ತು ಹರಾಜ್ ತಾರೀಖಿನ ವರಿಗೆ ಆಗುವ ಬಡ್ಡೀ	1887ನೇ ಜನವರೀ ತಾರೀಖು 25ರಲ್ಲು ತಾಲ್ಲೂಕು ಕಚ್ಚೇರಿಯಲ್ಲಿ ಅಮಲ್‌ದಾರ್ರ ರೂಬರೂ.
		ಬಿಡಗಲ್ಲೆ	ಜೋಡಿ ಕಾಟಂಗುಂಟಪಲ್ಲಿ	ಗಂಗಾಧರ ಶಾಸ್ತ್ರಿ ವಗೈರೆ	$6\ 10\ 3\frac{3}{4}$	62 0 0	61 13 10	81 4 2 ಮತ್ತು ಹರಾಜು ತಾರೀಖು ವರಿಗೆ ಬಡ್ಡೀ	ಡಿಟೋ 26 ಡಿಟೋ
	[illegible]	[illegible]	ಕಾಯಂಗುತ್ತಾ ದೊಡ್ಡನಗಟ್ಟಾ	ನಂಜುಂಡ ಶಾಸ್ತ್ರಿ ವಗೈರೆ	22 0 0	74 8 0	79 2 6	279 8 10 ಮತ್ತು ಹರಾಜೆ ತಾರೀಖಿನ ವರಿವಿಗೆ ಬಡ್ಡೀ	ಡಿಟೋ 27 ಡಿಟೋ

ತಾರೀಖು 18ನೇ ಡಿಸಂಬರ್ 1886.

ನಂ. 214.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, [ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ] ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈಕೆಳಗೆ ಕಂಡ ಜೋಡೀ ಗ್ರಾಮವು ಇದರಡೀಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ತೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟೀ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವಂತತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜು ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಕೋಲಾರ.	ಕೋಲಾರ.	ಜೋಡಿ ಬೆಳ್ಳಂಬರೆ	ವೆಂಕಟ್ಟರ್ಷ ಅಮಲ್ದಾರ್ ವೆಂಕಟರಾವ್	50 14 $5\frac{1}{4}$ ಖರಾಬ್ ಜಾತಾ	461 5 0	283 5 5	381 4 5 ಮತ್ತು ಹರಾಜು ತಾರೀಖು ವರಿಗೆ ಆಗುವ ಬಡ್ತೀ	1887ನೇ ಇಸವಿ ಜನವರೀ ತಾರೀಖು 29ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ ರೂಬರೂ.

ತಾರೀಖು 21ನೇ ಡಿಸೆಂಬರ್ 1886.

ನಂ. 215.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು, ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಪೈಸ್ತೈ 11 ಘಂಟೆಗೆ ಹರಾಜು ಷುರುವಾಗಿ ಉಸಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬುವದನ್ನ ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ ಹರಾಜು ಮವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವತಂತ್ರರಿರುತ್ತಾರೆ; ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕಡೂರು	ಕಡೂರು	ಸಕ್ರೆಪಟ್ಟಣ	ಸಿಂಗಟಗೆರೆ	ಹಂದರಾಳು ಇತರ ಹತ್ತು ಮಂದಿ	2988 0 0	1347 0 0	472 0 0	38 1 3 ಮತ್ತು ಹರಾಜ್ ತಾರೀಖು ವರಿಗಿನ ಬಡ್ಡೀ	1887ನೇ ಇಸವಿ ಫೆಬ್ರವರೀ ತಾರೀಖು 9ರಲ್ಲು ತಾಲ್ಲೂಕು ಕಚೇರಿಯಲ್ಲಿಅಸಿಸ್ಟೆಂಟ್ ಕಮ್ಮಿಷನರ್ ಅಥವಾ ಅಮಲ್‌ದಾರ್ರು ರೂಬರೂ.

ತಾರೀಖು 25ನೇ ಡಿಸಂಬರ್ 1886.

ಕ್ಯಾಂಪ್ ನಂ. 1466.—ಕೋಲಾರ ಡಿಸ್ಟ್ರಿಕ್ಟ್ ಅಫಿಷಿಯೇಟಿಂಗ್ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮ॥ ಜೆ. ಜಿ. ನಾತ್ರ್ಪ ಯವರು, 1882ನೇ ಇಸವಿಯ 10ನೇ ಆಕ್ಟಿನ 12ನೇ ಸೆಕ್ಷನಿನ ಅರ್ಥರೀತ್ಯ ಸೆಕೆಂಡ್ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳೂ, ಮತ್ತು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 32 ವ 206ನೇ ಸೆಕ್ಷನ್‌ಗಳಲ್ಲಿ ನಮೂದಾಗುವ ಜಾಸ್ತೀ ಅಧಿಕಾರಗಳು ಅಂದರೆ ಛಡೀ ಸಜಾ ಕೊಡಲಿಕ್ಕೂ ಮತ್ತು ದರ್ಯಾಫ್ತೀ ಬಗ್ಗೆ ಸೆಷನ್ ಕೋರ್ಟಿಗೆ ಕಮ್ಮಿಟ್ ಮಾಡಲಿಕ್ಕೂ ಸಹಾ ಅಧಿಕಾರ ಕೊಡಲ್ಪಟ್ಟು ಯಿರುತ್ತಾರೆ.

ತಾರೀಖು 6ನೇ ಜನವರೀ 1887.

ನಂ. 214.—ದೊಡ್ಡಬಳ್ಳಾಪುರ ತಾಲ್ಲೂಕು ಅಮಲ್ದಾರ್ ಕುಪ್ಪುಸಾಮಿನಾಯಡರವರು, 1884ನೇ ಇಸವಿ ಡಿಸಂಬರ್ 6ನೇ ಮರ್ಸ್ಕಮಿನ 5663—107ನೇ ನಂಬರ್‌ವುಳ್ಳ ದಿವಾನರವರ ಪ್ರೊಸಿಡಿಂಗ್ಸ್‌ನಲ್ಲಿ ವಿಧಿಸೋಣಾದ ರೂಲ್ಸನ್ನನುಸರಿಸಿ 15 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 31ನೇ ಡಿಸಂಬರ್ 1886.

ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನ್ ದೇಖೀಲ್ ಮೈಸೂರು ಶೀಮೆಯ ತಮಾಂ ಸ್ಥಳಗಳಲ್ಲೂ ಷರಾಬ್ ತಯಾರಿ ವ ಬಟ್ಟು ಬಿಕರೀ ಮಾಡುವ ಬಟ್ಟು ಸ್ವಾತಂತ್ರ್ಯದಬಗ್ಗೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತದೆ.

2. ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿನ ಕಂಟ್ರಾಕ್ಟು, ಮೈಸೂರು ದೇಶದ ರೆಸಿಡೆಂಟರವರ ಅಪ್ಪಣೆ ಮೇರೆ, ಈ ಇಸ್ತಿಹಾರನಾಮೆಯಲ್ಲಿ ಶೇರಿಸಲ್ಪಟ್ಟಿರುತ್ತೆ.

3. ಹಾಲಿ ಯಾವ ಸ್ವಾತಂತ್ರ್ಯದಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತೋ ಆ ಬಾಬತು ಸ್ವಾತಂತ್ರ್ಯವು, ಈ ಇಸ್ತಿಹಾರನಾಮೆಯ 9ನೇ ಕಲಂನಲ್ಲಿ ವಿವರಿಸಿರುವ Iರ ಲಾಗಾಯಿತು XIXರ ವರಿಗಿನ ಷರತ್ತುಗಳಿಗೆ ಬಳಪಟ್ಟು, ಕೊಡಲ್ಪಡುವದು. ಸದರೀ ಸ್ವಾತಂತ್ರ್ಯದಲ್ಲಿ ಶೇಂದಿಯನ್ನಾಗಲೀ, ಶೀಮೆ ಬ್ರ್ಯಾಂ ಸಾರಾಯಿಯನ್ನಾಗಲೀ, ಸ್ಪಿರಿಟ್‌ಗಳನ್ನಾಗಲಿ ಅಥವಾ ಬಿಯರ್ ಸಾರಾಯಿಯನ್ನಾಗಲಿ ತಯಾರ್ ಮಾಡುವ ಯಾ ಬಿಕರಿಮಾಡುವ ಸ್ವಾತಂತ್ರ್ಯವು ಅಡಗಿರುವದಿಲ್ಲ.

4. ತೀರ್ವೆ ದರದ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ತೀರ್ವೆ ದರಗಳು, ಮತ್ತು ಕಂಟ್ರಾಕ್ಟರುಗಳಿಂದ ಸರಬರಾಯಿ ಮಾಡಲ್ಪಡುವ ಷರಾಬಿನ ಬಟ್ಟು ಬಿಕರಿ ದರಗಳು ಸುದಾ, ಈ ಇಸ್ತಿಹಾರನಾಮೆಯ 9ನೇ ಪ್ಯಾರಾದಲ್ಲಿನ XIIIನೇ ನಂಬರ್ ಷರತ್ತಿನಲ್ಲಿ ವಿವರಿಸಲ್ಪಟ್ಟ ಪ್ರಕಾರ ಗವರ್ನಮೆಂಟಿನಿಂದ ಗೊತ್ತು ಮಾಡಲ್ಪಟ್ಟಿರುತ್ತೆ.

5. (*a.*) ಈಗ ದರಖಾಸ್ತು ಅಪೇಕ್ಷಿಸಲ್ಪಟ್ಟ ಕಂಟ್ರಾಕ್ಟ ಕಾಲವು, ದರಖಾಸ್ತುದಾರನ ಇಷ್ಟ ಪ್ರಕಾರ 1887ನೇ ಇಸವಿ ಏಪ್ರಿಲ್ 1ನೇ ಮರ್ಸ್ಕಂ ಲಾಗಾಯಿತು 1890ನೇ ಇಸವಿ ಮಾರ್ಚಿ 31ನೇ ಮರ್ಸ್ಕಂವರಿಗೆ ಆಗುವ ಮೂರು ವರುಷಕಾಲಕ್ಕಾಗಲಿ 1887ನೇ ಇಸವಿ ಏಪ್ರಿಲ್ 1ನೇ ಮರ್ಸ್ಕಂ ಲಾಗಾಯಿತು 1892ನೇ ಇಸವಿ ಮಾರ್ಚೀ 31ನೇ ಮರ್ಸ್ಕಂವರಿಗೆ ಆಗುವ ಐದು ವರುಷ ಕಾಲಕ್ಕಾಗಲಿ, ವಿಸ್ತರಿಸಬಹುದು.

೪೦

(*b.*) ಪ್ರತಿ ದರಖಾಸ್ತುದಾರನೂ, ದರಖಾಸ್ತು ಮಾಡುವ ವಾಯಿದೆಯು ಮೂರು ವರುಷ ಕಾಲಕ್ಕೆ ಆ. ಐದುವರುಷ ಕಾಲಕ್ಕೆ ಎಂಬದನ್ನೂ ಆತನು ದರಖಾಸ್ತು ಮಾಡುವ ವಾಯಿದೆಯಲ್ಲಿ ಸಾಲೀಯಾನಾ ಸರ್ಕಾರಕ್ಕೆ ಎಷ್ಟು ಕಮ್ಮಿ ಮೊಬಲಗು ಕೊಡುವದಕ್ಕೆ ಒಡಂಬಡುತ್ತಾನೋ ಆ ಸಂಗತಿಯನ್ನೂ ವಿವರವಾಗಿ ನಮೂದಿಸತಕ್ಕದ್ದು.

(*c.*) ಕಂಟ್ರಾಕ್ಟಿನ ಮದಲ್ ಎರಡು ಸಾಲ್‌ಗಳಲ್ಲಿ ಗವರ್ನಮೆಂಟಿಗೆ ಸಾಲಿಯಾನಾ ಏಳೂವರೆ ಲಕ್ಷ ರೂಪಾಯಿಗಳಿಗಿಂತ ಕಮ್ಮಿಯಾಗಿಯೂ ಉಳಿದ ಸಾಲ್ ಯಾ ಸಾಲ್‌ಗಳಲ್ಲಿ ಎಂಟು ಲಕ್ಷ ರೂಪಾಯಿಗಳಿಗಿಂತ ಕಮ್ಮಿಯಾಗಿಯೂ ಕೊಡುವಂತೆ ಒಪ್ಪುವ ಯಾವ ದರಖಾಸ್ತಾಗಲಿ ಆಲೋಚಿಸಲ್ಪಡಲಾರದು.

6. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲೀ ಅಥವಾ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಸೆಕ್ಯೂರಿಟಿ ಪತ್ರಗಳ ಮೂಲಕವಾಗಿಯಾಗಲೀ 1,000 ರೂಪಾಯಿಗಳ ಠೇವಣಿ ಮೊಬಲಗು ಕಳುಹಿಸಲ್ಪಟ್ಟು "ಷರಾಬ್ ತಯಾರಿ ವ ಬಟ್ಟಿ ಬಿಕರಿಯ ಬಟ್ಟಿ ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಎಂಬ ಮಾತುಗಳು ವಿಳಾಸ ಬರೆಯಲ್ಪಟ್ಟು ಲಿಫಾಫೆಯಲ್ಲಿ ಹಾಕಿ 1887ನೇ ಇಸವಿ ಫಿಬ್ರವರಿ 15ನೇ ಮಂಗಳವಾರ ದಿವಸ ಯಾ ತತ್ಪೂರ್ವದಲ್ಲಿ ಬೆಂಗಳೂರಲ್ಲಿ ದಿವಾನರವರ ಚೀಫ್ ಸೆಕ್ರಟೇರಿಯವರಿಗೆ ತಲಪುವಂತೆ ರವಾನಿಸಲ್ಪಡತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತುಗಳೂ ತೆಗೆದುಕೊಳ್ಳಲ್ಪಡಲಾರದು. ದರಖಾಸ್ತುಗಳು, 1887ನೇ ಇಸವಿ ಫಿಬ್ರವರೀ 15ನೇ ಮರ್ಕುಮಿನ ಮಧ್ಯಾನ್ಹ 12 ಘಂಟೆಗೆ, ಹಾಜರಾಗತಕ್ಕ ದರಖಾಸ್ತುದಾರರ ರೂಬರೂ ದಿವಾನರವರ ಆಫೀಸಿನಲ್ಲಿ ಚೀಫ್ ಸೆಕ್ರಟರಿಯವರಿಂದಲೂ ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷ್ನರವರಿಂದಲೂ ಖುಲ್ಲಾ ಮಾಡಲ್ಪಡುವವು, ದರಖಾಸ್ತುಗಳ ಆಖೈರ್ ವ್ಯವಸ್ಥೆ ದಿವಾನರವರಿಗೆ ಶೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನು ತಿಳಿಸದೇಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು. ದೀವಾನರವರಿಗೆ ಸಿಫಾರಸ್ ಮಾಡುವಬಗ್ಯೆ ಚುನಾಯಿಸಲ್ಪಡುವ ದರಖಾಸ್ತುದಾರರು ಕೂಡ್ಲೇ ನಗದಾಗಿಯಾಗಲೀ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲೀ, ದರಖಾಸ್ತುದಾರರು ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ಮೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಒಂದು ತಿಂಗಳ ಖಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೇ ಠೇವಣಿ ಇಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

7. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಗೆ ತಿಳಿಸಲ್ಪಟ್ಟ ಎಂಟು ದಿವಸಗಳೊಳಗಾಗಿ ಮೊದಲೇ ಇಡಲ್ಪಟ್ಟ ಡಿಪಾಜಿಟ ಮೊಬಲಗಿನೊಡನೆ, ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ $\frac{1}{8}$ರ ಮೊಬಲಗಿಗೆ ಸಮನಾಗುವಂತೆ ಇನ್ನೂ ಕೆಲವು ಮೊಬಲಗನ್ನು ನಗದಾಗಿಯಾಗಲಿ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿ ಯಾಗಲಿ ಬೆಂಗಳೂರು ಡೆಪ್ಯುಟಿ ಕಮ್ಮಿಷನರಲ್ಲಿ ಠೇವಣೀ ಇಡತಕ್ಕದ್ದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್‌ಗಳಿಗೆ ಬದ್ಧನಾಗಿ, ತಕ್ಕ ಛಾಪಾ ಕಾಗದದ ಮೇಲೆ, ವಿಧಿಸಲ್ಪಟ್ಟ ನಮೂನೇಯಲ್ಲಿ ಒಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರುಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟ್ಟನ್ನ ಇಡಲಿಕ್ಕಾಗಲಿ, ತಪ್ಪಿದರೆಯಾ ನಿರಾಕರಿಸಿದರೆ ಮೊದಲೇ ಇಡಲ್ಪಟ್ಟ ಠೇವಣಿ ಮೊಬಲಗುಗಳು ಸರ್ಕಾರಕ್ಕೆ ಸೇರಿಸಿ ಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

8. ಈ ಯಿಸ್ತಿಹಾರ್‌ನಾಮೆಯು ಯಾವ ಷರತ್ತುಗಳನ್ನಾಗಲೀ ಯಷ್ಟುಮಟ್ಟಿಗಾದರೂ ಬದಲಾಯಿಸುವದನ್ನು ಸೂಚಿಸುವ ಯಾವ ದರಖಾಸ್ತುಗಳಾಗಲೀ ಆಲೋಚಿಸಲ್ಪಡಲಾರವು, ಮತ್ತು ತಮಾಂ ದರಖಾಸ್ತುಗಳೂ ಈ ಯಿಸ್ತಿಹಾರ್‌ನಾಮೆಗೆ ಲಗತ್ತಿರುವ ನಮೂನೆಯಲ್ಲಿರತಕ್ಕವು.

9. ಹಾಲಿ ದರಖಾಸ್ತು ಅಪೇಕ್ಷಿಸಲ್ಪಟ್ಟಿರತಕ್ಕ ಕಂಟ್ರಾಕ್ಟು ಯಿದರಡೀ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಯಾವವಂದರೆ:—

ಷರತ್ತುಗಳು.

1. (a.) ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ಮೀ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರ್ಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕಲೋಕಲ್‌ಸೆಸ್ ದೇಖೀಲ ಸರ್ಕಾರದಿಂದ ಗೊತ್ತುಮಾಡಲ್ಪಟ್ಟ ದರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನೂ ಆ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ, ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು.

(b.) ಯಾವದಾದರೂ ತಿಂಗಳ ಆಖೈರ್ ವರಿವಿಗೆ ಕೊಡಲ್ಪಡುವ ಷರಾಬಿನಮೇಲೆ ಸಲ್ಲತಕ್ಕ ತೆರಿಗೇಮೊಬಲಗು, ಕರಾರ್ ಮಾಡಿಕೊಂಡ ಕಮ್ಮೀ ಹುಟ್ಟುವಳೀ ಪೈಕೀ ಸದರೀಮಾಹೆ ಖಿಸ್ತು ಮೊಬಲಗ್ ಭರ್ತಿಗೆ ಸಾಲದೇ ಹೋದರೆ, ಅಂತಾಕಮ್ಮೀ ಮೊಬಲಗನ್ನು ಭರ್ತೀಮಾಡುವದಕ್ಕೆ ಬೇಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತೀ ಪುರೋಖ್ತು ಅದೇಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮೀ ಪುರೋಖ್ತಿಗೆ ಉಪಯೋಗಿಸಲ್ಪಡತಕ್ಕದ್ದು. ಯಾವದಾದರೂ ಒಂದು ಮಾಹೇಯಲ್ಲಿ ಜಾಸ್ತಿ ಪುರೋಖ್ತಿನಿಂದ ಹುಟ್ಟುವಂಥಾ ತೀರ್ವೆಯು ಪೈಕಿ ಅದೇ ಸರ್ಕಾರ್‌ಸಾಲಿನ ಯಾವದಾದರೂ ಹಿಂದಿನ ಮಾಹೆ ಯಾ ಮಾಹೆಗಳಲ್ಲಿ ಕಂಟ್ರಾಕ್ಟುದಾರನಿಂದ ಕಂ ಭರ್ತೀಮಾಡಲ್ಪಟ್ಟಿರಬಹುದಾದ ಮೊಬಲಗಿಗಿಂತಲೂ ಜಾಸ್ತೀಯಾಗಿರುವ ಮೊಬಲಗು, ಜಾಸ್ತೀ ಪುರೋಖ್ತಿನ ದೆಶೆಯಿಂದ ಯಾವ ಮಾಹೆಯಲ್ಲಿ ತೀರ್ವೆ ಮೊಬಲಗು ಹುಟ್ಟುವಳಿಆಯಿತೋ ಅಂಥಾ ಮಾಹೆಗೆ ಸಲ್ಲಬೇಕಾದ ಗೊತ್ತಾದ ಖಿಸ್ತು ಮೊಬಲಗಿನೊಂದಿಗೆ ಸರ್ಕಾರ್ ಖಜಾನೆಗೆ ಪಾವತಿ ಮಾಡಲ್ಪಡತಕ್ಕದ್ದು. ಮತ್ತು ಸದರೀ ಪಾವತಿ ಯೊಂದಿಗೆ ಅದೇ ಸರ್ಕಾರ್ ಸಾಲಿನ ಯಾವದಾದರೂ ಹಿಂದಿನ ಮಾಹೆ ಯಾ ಮಾಹೆಗಳಲ್ಲಿ ಕಂಟ್ರಾಕ್ಟುದಾರನಿಂದ ಕಂಭರ್ತೀ ಮಾಡಲ್ಪಟ್ಟಿರಬಹುದಾದ ಮೊಬಲಗಿಗೋಸ್ಕರ ಜಾಸ್ತಿ ಪುರೋಖ್ತಿನ ಮೇಲಿನ ತೀರ್ವೆ ಬಗ್ಗಾಗಿ ಒಂದು ಸ್ಟಾಂಪು ಹಚ್ಚಿದ ರಶೀತಿಯು ಕಂಟ್ರಾಕ್ಟುದಾರ ಯಾ ಆತನ ಏಜಂಟಿನಿಂದ ರುಜು ಮಾಡಲ್ಪಟ್ಟು ಹಾಜರ್ಮಾಡಲ್ಪಡತಕ್ಕದ್ದು.

(c). ಯಾವ ಮಾಹೆಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮಾರನೇ ತಿಂಗಳ 15 ನೇ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಅವು ಪಾವತಿಯಾಗದೆ ಹೋದರೆ, ಬಾಕೀ ನಿಲ್ಲುವ ತಮಾಂ ಮೊಬಲಗಿನಮೇಲೂ ಸದರೀ ತಾರೀಖುಲಾಗಾಯಿತು ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕಟ್ಟಲ್ಪಡುವದು. ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತ್ತವೋ ಆ ತಿಂಗಳು ಕಳೆದ ತರುವಾಯವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದೇಖಿಲ್ ಸಲ್ಲತಕ್ಕಬಾಕೀ ಮೊಬಲಗು, ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸ್‌ನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ವಟ್ಟು ಬಿಕರೀ ಕೋಠಿಗಳಲ್ಲಿರತಕ್ಕ ನಗದ್ ಮೊಬಲಗ್ ದೇಖಿಲ್

ಕಂಟ್ರಾಕ್ಟುದಾರನ ಸ್ವತ್ತಿನ ಜಫ್ತೀ ಹರಾಜು ಮೂಲಕ ವಸೂಲ್‌ಮಾಡಲ್ಪಡತಕ್ಕದ್ದು. ಮತ್ತು
ಬೆಂಗಳೂರು ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರಾಕ್ಟು ರದ್ದು ಮಾಡಲ್ಪಟ್ಟಿರು
ತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ
ದಂಡವಾಗಿ ತೆಗೆದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರಾಕ್ಟು ಕಾಲದ ಪೈಕಿ
ಉಳಿದ ಕಾಲದಲ್ಲಿ ಕಂಟ್ರಾಕ್ಟುದಾರನ ಖರ್ಚಿಗೂ ಲುಕ್‌ಸಾನಿಗೂ ಒಳಪಟ್ಟು ಬಾಬು ಅಮಾನಿ
ಯಲ್ಲಾಗಲೀ ಅನ್ಯಥಾ ಆಗಲೀ ಇಡುವದಕ್ಕೂ ಸಹ ದಿವಾನರವರ ಯೆಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಖ್ಖಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಖೈದ್ ಮಾಡಲ್ಪಡತಕ್ಕದ್ದು. ಒಂದು ಸಾಲಿ
ನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನಮೆಂಟಿಗೆ ಸಲ್ಲತಕ್ಕ ತೆರಿಗೆಯು ಆಸಾಲಿಗೆ ಕರಾರ್ ಮಾ
ಡಿದ ಕಮ್ಮೀ ಹುಟ್ಟುವಳಿಗೆ ಜಾಸ್ತೀ ಆದರೆ, ಅಂಥಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾ
ಯಿ 1 ಕ್ಕೆ 1 ಆಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೆರಿಗೇ ದೆಸೆಯಿಂದ ವಜಾ ಕೊಡ
ಲ್ಪಡುವದು. ಆದರೆ ವಂದು ವರುಷದ ಜಾಸ್ತೀ ಮೊಬಲಗು, ಇಜಾರೇ ಪೈಕೀ ಯಾವದಾದರೂ ಇತ
ರ ಸಾಲಿನ ಕರಾರ್ ಮಾಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ಮೀ ಬೀಳತಕ್ಕ ಯಾವ ಮೊಬಲಗ
ನ್ನಾಗಲೀ ಭರ್ತೀ ಮಾಡುವಬಗ್ಯೆ ಉಪಯೋಗಿಸುವದಿಲ್ಲ.

III. (*a*). ಕಂಟ್ರಾಕ್ಟುದಾರನು ಬೆಂಗಳೂರು ಬಳಿಯಣ ಸರ್ಕಾರಡಿಸ್ಟಿಲೇರಿಯ ಆವರಣದೊಳಗಾಗಲೀ
ಅಥವಾ VIIನೇ ಷರತ್ತಿನಲ್ಲಿ ವಿವರಿಸಲ್ಪಟ್ಟಂತೆ ಇತರ ಸ್ಥಳದಲ್ಲಾಗಲಿ ಷರಾಬ್ ತಯಾರ್ ಮಾಡು
ವಂತೆಯೂ ಮತ್ತು ಡೆಪ್ಯುಟಿಕಮ್ಮಿಷನರಿಂದ ಮೊಕರರ್ ಮಾಡಲ್ಪಡತಕ್ಕಂಥಾ ಸ್ಥಳಗಳೊಳಗೆ ಬಟ್ಟಿ
ಕೋಠಿಗಳನ್ನು ಸ್ಥಾಪಿಸುವಂತೆಯೂ ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ
ಅಥವಾ ಆಬಗ್ಯಾಗಿ ಮೊಕರರ್ ಮಾಡಲ್ಪಟ್ಟ ಯಾವ ಉದ್ಯೋಗಸ್ಥರಿಂದಾಗಲಿ ಯಾ ತತ್ಕಾಲದಲ್ಲಿ
ಗವರ್ನಮೆಂಟ ಡಿಸ್ಟಿಲೆರಿ ಚಾರ್ಜುವುಳ್ಳ ಹೆಡ್ ಸೂಪರ್‌ವೈಜರ್ ಅಥವಾ ಇತರ ಆಫೀಸರರಿಂದಾಗಲೀ
ತನಖಿ ನೋಡುವಬಗ್ಯೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠಿಗಳು ಖುಲ್ಲಾವಾಗಿರತ
ಕ್ಕದ್ದು; ಮತ್ತು ಸದರಿ ಡಿಸ್ಟಿಲೇರಿ ಚಾರ್ಜುವುಳ್ಳ ಹೆಡ್ ಸೂಪರ್‌ವೈಜರ್ ಯಾ ಇತರ ಆಫೀಸರರವಶ
ಕ್ಕೆ, ರೋಜೀನಾ ಕೆಲಸಮುಗಿದ ತರುವಾಯ ಡಿಸ್ಟಿಲೇರಿಯನ್ನು ಮೊಹರ್‌ಮಾಡಿ ಬೀಗದಕೈಗಳು ಸಹ
ರೇಡಲ್ಲಿ ಭದ್ರಪಡಿಸತಕ್ಕ ಬಗ್ಯಾಗಿ, ಒಪ್ಪಿಸಲ್ಪಡತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಯೆ ಮೊಕ
ರರ್ ಮಾಡಲ್ಪಡುವ ಒಬ್ಬ ಉದ್ಯೋಗಸ್ಥನಿಂದ ಅಳತೇಮಾಡಲ್ಪಟ್ಟು ಅಜಮಾಯಿಷೀ ಮಾಡಲ್ಪಟ್ಟ
ಹೊರತು ಡಿಸ್ಟಿಲೇರಿಯಿಂದಹೊರಗೆ ತೆಗೆದುಕೊಂಡು ಹೋಗಕೂಡದು. ಡಿಸ್ಟಿಲೇರಿಕಟ್ಟಡಗಳನ್ನೂ ನೀರ
ನ್ನೂ ಉಪಯೋಗಿಸತಕ್ಕಬಗ್ಯೆ 250ರೂಪಾಯಿಗಳ ಬಾಡಿಗೆಯನ್ನು ಕಂಟ್ರಾಕ್ಟುದಾರನು ಮಾಹೆಯಾ
ನಾ ಗವರ್ನಮೆಂಟಿಗೆ ಸಂದಾಯ ಮಾಡಲ್ಪಡುವಂತೆಯೂ ಸದರೀ ಕಟ್ಟಡಗಳನ್ನು ನೀರುಕಾಲ್ವೆಗಳನ್ನೂ
ಪೂರಾ ದುರಸ್ತು ಸ್ಥಿತಿಯಲ್ಲಿ ಇಟ್ಟುಕೊಂಡಿರುವಂತೆಯೂ ನಿಯಮಿಸಲ್ಪಡತಕ್ಕದ್ದು. ಯಗ್ಜಿಕ್ಯೂ
ಟಿವ್ ಇಂಜನಿಯರವರು ಸದರೀ ಕಟ್ಟಡಗಳನ್ನೂ ಜಲಾಧಾರದ ಕಾಲ್ವೆಗಳನ್ನೂ ಮೂರುತಿಂಗಳಿಗೆ ವಂದಾ
ವರ್ತಿ ತನಖಿನೋಡುವರು ಮತ್ತು ಆಬಗ್ಯಾಗಿ ಡಿಸ್ಟಿಲೇರಿಯಲ್ಲಿಡಲ್ಪಟ್ಟ ವಂದುಬುಕ್ಕಿನಲ್ಲಿ ಕಟ್ಟಡಗಳ
ಮತ್ತು ನೀರುಕಾಲ್ವೆಗಳ ಸ್ಥಿತಿಯನ್ನು ಷರಾ ಬರದು ಐಮಿಂದ ನಡಿಸಲ್ಪಡಬೇಕಾದ ಕೆಲಸಗಳನ್ನು
ಹಾಜರಿರತಕ್ಕ ಕಂಟ್ರಾಕ್ಟರು ಯಾ ಅವರ ಏಜಂಟು ಅಥವಾ ಇತರ ಉದ್ಯೋಗಸ್ಥನಿಗೆ ತಿಳಿಸತಕ್ಕ
ದ್ದು. ಈ ಬಾಬತು ಷರಾಗಳ ನಕಲು ಡೆಪ್ಯುಟಿ ಕಮ್ಮಿಷನರವರಿಗೂ, ಮತ್ತೊಂದು ಪ್ರತಿ ಕಂಟ್ರಾ
ಕ್ಟುದಾರನಿಗೂ ಕಳುಹಿಸಲ್ಪಡತಕ್ಕದ್ದು. ಯಗ್ಜಿಕ್ಯೂಟಿವ್ ಯಿಂಜನಿಯರವರು ತನಿಖಿನೋಡಿದ ಲಾ
ಗಾಯತು 15 ದಿವಸಗಳೊಳಗಾಗಿ, ಅವಶ್ಯಕಗಳಾದ ಕಾಮಗಾರಿಯು ಕಂಟ್ರಾಕ್ಟುದಾರನಿಂದ ನಡಿ

ಸಲ್ಪಡದೇಹೋದರೆ, ಯಕ್ಸಿಕ್ಯೂಟಿವ್ ಯಿಂಜನೀಯರವರು ಕೂಡ್ಲೇ ಅವಮಾನಿಯಲ್ಲಿ ಸದರೀ ಕಾವು ಗಾರಿಯನ್ನ ಜರಗಿಸತಕ್ಕದ್ದು, ಮತ್ತು ಡೆಪ್ಯುಟಿ ಕಮ್ಮಿಷನರವರು ಆ ಬಾಬತು ಲಾಗವಡನ್ನು ತಪ್ಪಿ ಹೋದ ಕಂಟ್ರಾಕ್ಟುದಾರನಿಂದ, ಜಮೀನ್ಗೆ ಕಂದಾಯದ ಬಾಕೀ ವಸೂಲಿಬಗ್ಯೆ ತತ್ಕಾಲದಲ್ಲಿ ಜಾರೀ ಇರುವ ರೂಲ್ಸ್ ಅನುಸರಿಶಿ ವಸೂಲ್ಮಾಡಬೇಕಾಗಿರುತ್ತೆ.

(b.) ಕಂಟ್ರಾಕ್ಟುದಾರನು, ಡಿಸ್ಟಿಲೇರಿ ಶಿಬ್ಬಂದಿ, ಮೇಲ್ ತನಿಖಿ ಮತ್ತು ಪೈಗಸ್ತಿ ಯಿಲಾಖಾ ಮತ್ತು ಯಿವುಗಳಿಗೆ ಸಂಬಂಧಪಟ್ಟ ಕಂಟಿಂಜಂಟ್ ಖರ್ಚು ಯಿವುಗಳ ಲಾಗವಡಿಗೋಸ್ಕರ, ಡಿಸ್ಟಿಲೇರಿ ಯಿಂದ ಸರಬರಾಯಿ ಮಾಡಲ್ಪಟ್ಟ ತಮಾಂ ಷರಾಬಿನ ಮೇಲೆ ಗ್ಯಾಲನ್ ವಂದಕ್ಕೆ ಅರ್ಧಾಣೆಪ್ರಕಾರ ಆಗುವ ತೀರ್ವೆಯನ್ನು ಮಾಹೇಯಾನಾ ಸಲಾಯಿಸತಕ್ಕದ್ದು.

(c.) ಮೇಲ್ಕಂಡ ಯರಡು ಕಲಂಗಳಲ್ಲಿ ನಮೂದಾದ ಡಿಸ್ಟಿಲೇರಿ ಕಟ್ಟಡಗಳ ಬಾಡಿಗೆ ಮತ್ತು ಶಿಬ್ಬಂದಿ ತೀರ್ವೆ ಮೊಬಲಗುಗಳು, ಅವು ಬಾಕಿಯಾಗುವ ಮಾರನೇ ತಿಂಗಳ 15ನೇ ತಾರೀಖಿನಲ್ಲಿ ಮಾಹೆವಾರಿ ಖಿಸ್ತಿ ನೊಂದಿಗೆ ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಕಂಟ್ರಾಕ್ಟುದಾರನಿಂದ ತಪ್ಪದೆ ಪಾವತೀ ಮಾಡಲ್ಪ ಡಬೇಕು. ಹೀಗೆ ಪಾವತಿ ಮಾಡದೇ ತಪ್ಪಿದರೆ ಈ ಬಾಬತು ಬಾಕಿಯು, ತತ್ಕಾಲದಲ್ಲಿ ಜಾರಿಯಿ ರುವ ರೂಲ್ಸು ಅನುಸರಿಸಿ ಜಮೀನ್ಗೆ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡುವದು.

IV. (a.) 1887ನೇ ಇಸವಿ ಏಪ್ರಲ್ 1ನೇ ತಾರೀಖಿನಲ್ಲಿ ದಾಸ್ತಾನ್ ಯಿರಬಹುದಾದ ಯಾವ ಷರಾಬನ್ನಾ ಗಲೀ ಹಳೇ ಕಂಟ್ರಾಕ್ಟುದಾರರು, ದಿವಾನರವರ ಮಂಜೂರಾತಿನಿಶಿ ಡೆಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡುವ ಈಡು ಮೊಬಲಗನ್ನು ಹೊಸ ಕಂಟ್ರಾಕ್ಟುದಾರನಿಂದ ಪಡೆದು ಅವನಿಗೆ ಒಪ್ಪಿಸತಕ್ಕ ದ್ದು. ಅಂಥಾ ದಾಸ್ತಾನು ಸಾಧಾರಣವಾಗಿ ಳಕದ 36 ತಿಂಗಳುಗಳಲ್ಲಿ ಮಾಹೆಯಾನಾ ತಯಾರ್ಮಾಡ ಲ್ಪಟ್ಟ ಸರಾಸರಿ ತೇದಾದಿಗಿಂತಲೂ ಜಾಸ್ತಿಯಾಗಿರಕೂಡದು.

(b.) ಹೊಸ ಕಂಟ್ರಾಕ್ಟುದಾರನು ಆ ಪ್ರಕಾರ ಅಪೇಕ್ಷಿಸಿದಲ್ಲಿ 1887ನೇ ಇಸವಿ ಮಾರ್ಚಿ ಗುರ್ರೇ ತಾರೀ ಖು ಲಾಗಾಯತು "ಬೆಳೆ" ಹಾಕುವದನ್ನುಹಳೇ ಕಂಟ್ರಾಕ್ಟುದಾರನು ಮೊಕೂಫ್ ಮಾಡತಕ್ಕದ್ದು, ಮತ್ತು ಅದೇ ತಾರೀಖಾರಭ್ಯ ಹೊಸ ಕಂಟ್ರಾಕ್ಟುದಾರನು ಕೆಲಸಗಳು ಆರಂಭಿಸತಕ್ಕ ಬಗ್ಯಾಗಿ ಕ ಟ್ಟಡವನ್ನು ಖಾಲಿ ಮಾಡತಕ್ಕದ್ದು. ಈ ವಿಷಯದಲ್ಲಿ 1887ನೇ ಇಸವಿ ಫೆಬ್ರುವರೀ 22ನೇ ಮರ್ಕ್ಕಾಮಿ ನವಳಗಾಗಿ ಹಳೇ ಕಂಟ್ರಾಕ್ಟುದಾರರಿಗೆ ಬರಹ ಮೂಲಕವಾಗಿ ನೋಟೀಸ್ ಕೊಡಲ್ಪಡತಕ್ಕದ್ದು. ಹಾಂ ಗೆ ನೋಟೀಸ್ ಕೊಡಲ್ಪಡದೆ ಹೋದರೆ ಹಳೇ ಕಂಟ್ರಾಕ್ಟುದಾರನು 1887ನೇ ಇಸವಿ ಮಾರ್ಚಿ 31ನೇ ಮರ್ಕ್ಕಾಂ ಪರಿಯಂತ ಬಟ್ಟಿಯಿಳಿಸತಕ್ಕ ಕೆಲಸ ಚಲಾಯಿಸತಕ್ಕದ್ದು, ಮತ್ತು ಆ ತಾರೀಖು ವಳಗಾಗಿ ಹಾಜರಿರತಕ್ಕ ತಮಾಂ ಬೆಳೆಯನ್ನು ಝಾಡೆಯಾಗಿ ಉಪಯೋಗಿಸತಕ್ಕದ್ದು.

(c.) ಹಳೇ ಕಂಟ್ರಾಕ್ಟುದಾರರಿಂದ ಶಾಶ್ವತವಾಗಿ ಸ್ಥಾಪಿಸಲ್ಪಟ್ಟ ಯಂತ್ರಗಳು ವಿನಾ ಆತನಿಗೆ ಶೇರಿದ ಇತರ ತಮಾಂ ಸಾಮಾನುಗಳು, ಈ ಷರತ್ತನುಸರಿಸಿ ಷರಾಬು ತಯಾರ್ಮಾಡುವದು ಮೋಖೂಫ್ ಮಾಡಿದ ಬಂದು ವಾರದವಳಗಾಗಿ ಆಚೆಗೆ ಸಾಗಿಸಲ್ಪಡತಕ್ಕದ್ದು. ಇದಕ್ಕೆ ತಪ್ಪಿದರೆ, ಡೆಪ್ಯುಟಿ ಕಮ್ಮಿಷನ ರವರು, ಹಳೇ ಕಂಟ್ರಾಕ್ಟುದಾರನ ಖರ್ಚಿಗೆ ವಳಪಟ್ಟು ಅವುಗಳು ಆಚೆಗೆ ಸಾಗಿಸಲ್ಪಡುವ ಬಗ್ಯೆ ಏರ್ಪಾಡು ಮಾಡುವರು.

(d.) ಹಳೇ ಕಂಟ್ರಾಕ್ಟುದಾರರಿಗೆ ಶೇರಿದ ಯಾವದಾದರೂ ದಾಸ್ತಾನ್ ಮತ್ತು ಯಂತ್ರ ಸಾಧನಗಳು ಹೊಸ ಕಂಟ್ರಾಕ್ಟುದಾರನಿಗೆ ಅವಶ್ಯಕವಿದ್ದಲ್ಲಿ ಆತನು ಅವುಗಳನ್ನು ನ್ಯಾಯವಾದ ಖರೀದಿಗೆ ತೆಗೆದು ಕೊಳ್ಳು ವದಾಗಿ 1887ನೇ ಇಸವಿ ಮಾರ್ಚಿ 1ನೇ ತಾರೀಖಿನ ವಳಗಾಗಿ ಹಳೇ ಕಂಟ್ರಾಕ್ಟುದಾರರಿಗೆ ನೋ ಟೀಸ್ ಕೊಡತಕ್ಕದ್ದು; ಮತ್ತು ಅಂಥಾ ಖರೀದಿಯಲ್ಲಿ ತಕರಾರ್ ಉಂಟಾದರ ಡೆಪ್ಯುಟಿ ಕಮ್ಮಿಷನರ

ವರು ಅವುಗಳ ನ್ಯಾಯವಾದ ಖರೀದಿಯನ್ನು ಗೊತ್ತು ಮಾಡತಕ್ಕದ್ದು. ಪರಂತು ಹಾಗೆ 1887ನೇ ಇಸವಿ ಮಾರ್ಚಿ 1ನೇ ತಾರೀಖುವಳಗಾಗಿ ನೋಟೀಸ ಕೊಡಲ್ಪಡದೆಹೋದರೆ, ಹಳೇ ಕಂಟ್ರಾಕ್ಟು ದಾರರು ಅವುಗಳನ್ನು ಸಾಗಿಸಿಕೊಂಡು ಹೋಗುವದಕ್ಕೆ ಸ್ವತಂತ್ರರಾಗಿರತಕ್ಕದ್ದು, ಮತ್ತು ಈ ವಿಷಯದಲ್ಲಿ ಹೊಸಕಂಟ್ರಾಕ್ಟುದಾರನು ತನ್ನ ಯಿಷ್ಟ ಪ್ರಕಾರ ಏರ್ಪಾಡು ಮಾಡಿಕೊಳ್ಳಬಹುದು.

(ಓ.) ಸದರೀ ಷರತ್ತಿನಲ್ಲಿ ಕಂಡ ರೂಲ್ಸಗಳು, ಈಗ ನಡಸಿರುವ ಬದಲಾವಣಿಗಳೊಡನೆ ಹಾಲೀದರಖಾಸ್ತು ಅಪೇಕ್ಷಿಸಲ್ಪಟ್ಟಿರುವ ಕಂಟ್ರಾಕ್ಟಿಗೆ ಅನ್ವಯಿಸತಕ್ಕವು.

V. ತಯಾರ್ಮಾಡಲ್ಪಡುವ ಸಾರಾಯಿಯು, ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಇಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು, ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗೆದುಕೊಳ್ಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್‌ವೈಜರಿಗೆ ಅಥವಾ ಈ ಬಗ್ಗೆ ನೌಕರರ್ ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ್ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಇಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು ಅಥವಾ ಷರಾಬ್ ತಯಾರ್ಮಾಡಲ್ಪಟ್ಟ ತರುವಾಯ ಅದರಲ್ಲಿ ಹಾಕಲೂ ಕೂಡದು ಮತ್ತು ಉಪಯೋಗಿಸಲ್ಪಡುವ ಎಲ್ಲಾ ಪದಾರ್ಥಗಳೂ ಪ್ರಥಮತಃ ವಿಧಿಸಲ್ಪಟ್ಟ ದಾಮಾಷಾಯಿ* ಪ್ರಕಾರ ಇರತಕ್ಕವು, ಅಥವಾ ಕಂಟ್ರಾಕ್ಟುದಾರನಿಂದ ರೋಜೇನಾ ತಯಾರ್ಮಾಡಲ್ಪಡುವದರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕ್ಕೋಸ್ಕರ ಐಯಿಂದ ಗವರ್ನಮೆಂಟಿನವರಿಂದ ನಿರ್ಣಯಿಸಲ್ಪಡುವ ದಾಮಾಷಾಯಿ ಪ್ರಕಾರವಾಗಲಿ ಇರತಕ್ಕದ್ದು. "ಬೆಳೆ" ಬಟ್ಟಿ ಇಳಿಸಲ್ಪಡುವ ಪರಿಯಂತ ಅದರ ಬಲವನ್ನು ಆಯಾ ಕಾಲಗಳಲ್ಲಿ ಗೊತ್ತು ಮಾಡುವದಕ್ಕೋಸ್ಕರ ಅಂಗೀಕರಿಸಲ್ಪಟ್ಟಿರುವ ಲಾಂಗ್ ಅಂಡ್ ಡಿಂಗ್ ಅಂಡ್ ಫೇಜಯುವರ ಸಾಚರೋಮಿಟರಸ್ ಯಂತ್ರವು ಕಂಟ್ರಾಕ್ಟುದಾರರಿಂದ ಇಡಲ್ಪಟ್ಟು ಯೆಕಸೈಸಯಾನೆ ಅಬಕಾರಿ ಆಫೀಸರುಗಳಿಂದ ಪೃಥಪಡಿಸಿ ತನಿಖೆ ನೋಡಲ್ಪಡುವಬಗ್ಗೆ ಅವುಗಳ ನಿಜವಾದ ವ ಕರಾರ್ ವಾಕಾ ಆದ ಲೆಖ್ಖ ಇಡಲ್ಪಡತಕ್ಕದ್ದು.

*ಯರಡು ಮಣಗಳ ತಾಟಪಲ್ಲ ಅಥವಾ ಕಾಕಂಬೀಗೆ ಮೂರು ಮಣಗಳ ವಳ್ಳೀಗನ್ನಾ ಬೆಲ್ಲಾ ಮತ್ತು ಬೆಲ್ಲಾ ಮಣ ವಂದಕ್ಕೆ ಮೂರು ಸೇರುಗಳುಳ್ಳ ವಳ್ಳೀ ಬಬ್ಬಡಿ (ಕೆಂಪುಚಕ್ಕೆ, ಬೀಲದಚಕ್ಕೆ) ಅವಶ್ಯಕವಿದ್ದಲ್ಲಿ ಗನ್ನಾ ಬೆಲ್ಲನಂದೇ ಉಪಯೋಗಿಸಲ್ಪಡಬಹುದು.

VI. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ, ತಯಾರ್ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತ್, ಇವುಗಳ ಕರಾರ್‌ವಾಕಾ ಲೆಖ್ಖಗಳನ್ನೂ, ಮತ್ತು ಡಿಸ್ಟಿಲೇರಿಯಲ್ಲಿ ರೋಜೇನಾ ಜಮಾಖರ್ಚು ಆದ ಎಲ್ಲಾಪದಾರ್ಥಗಳ ಲೆಖ್ಖಗಳನ್ನೂ, ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಕಂಟ್ರಾಕ್ಟುದಾರನ ಕ್ಯಾಷ್ ಲೆಖ್ಖವು ರೋಜೇನಾ ಅಲಾಹಿದಾ ದಾಖಲ್ಮಾಡಲ್ಪಟ್ಟು ದಾಸ್ತಾನ ಪೈಕಿ ಖರೀದೀ ಮಾಡಲ್ಪಟ್ಟ ಪ್ರತಿ ತೇದಾದಿಗೂ ವೌಚರ್ ಇಡಲ್ಪಟ್ಟು ವಿಧಿಸಲ್ಪಟ್ಟ ನಮೂನೆಯಲ್ಲಿ ಕ್ಯಾಷ್ ಲೆಖ್ಖದ ಗೋಷ್ವಾರೆಯು ಮಾಹೆಯಾನಾ ತಯಾರ್ಮಾಡಲ್ಪಟ್ಟು ಕಂಟ್ರಾಕ್ಟುದಾರನಿಂದಾಗಲಿ ಅವನ ಏಜಂಟನಿಂದಾಗಲಿ ಕ್ರಮವಾಗಿ ರುಜು ಮಾಡಲ್ಪಟ್ಟು ಹೆಡ್ ಸೂಪರ್‌ವೈಜರವರಿಗೆ ಒಪ್ಪಿಸಲ್ಪಡತಕ್ಕದ್ದು. ಅತನು ಅಂಥಾ ತಮಾಂ ಲೆಖ್ಖಗಳನ್ನೂ ಡೆಪ್ಯುಟಿ ಕಮಿಷನರವರಿಂದಾಗಲೀ, ಹೆಡ್ ಸೂಪರ್‌ವೈಜರಯುವರಿಂದಾಗಲೀ ಅಥವಾ ಆ ಬಗ್ಗಾಗಿ ನೌಕರರ್ಮಾಡಲ್ಪಡುವ ಯಾವ ಉದ್ಯೋಗಸ್ಥನಿಂದಾಗಲೀ ತನಿಖೀ ನೋಡುವಬಗ್ಗೆ ಹಾಜರ್ ಮಾಡುವಂತೆ ಕೇಳಲ್ಪ

ಟ್ಟಾಗ ಅವುಗಳನ್ನು ಹಾಜರ್‌ಮಾಡತಕ್ಕದ್ದು; ಮತ್ತು ಹೆಡ್ ಸೂಪರ್‌ವೈಜರವರು ಆಗಿಂದಾಗ್ಯೆ ಅಪೇಕ್ಷಿಸಲ್ಪಡುವಂಥಾ ತಪಶೀಲ್‌ಗಳುಳ್ಳ ದೃಢಪಡಿಸಲ್ಪಟ್ಟ ಯಥಾ ನಕಲ್‌ಗಳನ್ನು ಅವರಿಗೆ ಒಪ್ಪಿಸತಕ್ಕದ್ದು.

VII. ಒಂದು ತಿಂಗಳಿಗೆ ಆಗುವಷ್ಟು ಮತ್ತು 16,000 ಗ್ಯಾಲನ್‌ಗಳಿಗೆ ಕಡಿಮೆಯಿಲ್ಲದ ಸಾರಾಯಿಯನ್ನು ಯಾವಾಗ್ಯೂ ಹಾಜರಿಯಲ್ಲಿಟ್ಟುಕೊಂಡಿರಲಿಕ್ಕೆ ಬಟ್ಟೀದಾರನು ಬದ್ಧನಾಗಿರತಕ್ಕದ್ದು. ಮತ್ತು 1887ನೇ ಇಸವಿ ಏಪ್ರಿಲ್ 1ನೇ ತಾರೀಖುಲಾಗಾಯಿತು ಈಮೇರೆ ದಾಸ್ತಾನ್ ಹಾಜರಿಡುವಬಗ್ಯೆ ಆತನು ಸದರೀ ತಾರೀಖಿಗೆ ಮುಂಚೆಯೇ ಬಟ್ಟೀ ಕೆಲಸಕ್ಕೆ ಆರಂಭಿಸಲು ಅವಕಾಶ ಕೊಡಲ್ಪಡತಕ್ಕದ್ದು; ಪರಂತು ಹಾಂಗೆ ತಯಾರ್‌ಮಾಡಲ್ಪಟ್ಟ ಯಾವ ಷರಾಬೇ ಆಗಲೀ, 1887ನೇ ಇಸವಿ ಏಪ್ರಿಲ್ 1ನೇತಾರೀಖಿಗೆ ಮುಂಚಿತವಾಗಿ ತನ್ನ ವಶದಿಂದಲಾಗಲೀ ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಲಾಗಲೀ, ಸದರೀ ತಾರೀಖುವರಿಗೆ ಮೊಹರ್ ಸಮೇತ ಅಮಾನತ್ ಇರುವಬಗ್ಯೆ ಬಟ್ಟಿ ಕೋಠಿಗಳಲ್ಲಿ ತಡೆದಿಡುವಬಗ್ಯೆ ಹೆಡ್ ಸೂಪರ್‌ವೈಜರವರಿಂದ ರುಜು ಮಾಡಲ್ಪಟ್ಟ ಪ್ಯಾಶಿನ ಆಧಾರದ ಮೇಲೆ ಸಾಗಿಸಲ್ಪಡುವದು ವಿನಾ, ಅನ್ಯಥಾ ಮಾರಲ್ಪಡಕೂಡದು ಯಾ ಸಾಗಿಸಲ್ಪಡಕೂಡದು. ಕಂಟ್ರಾಕ್ಟದಾರನು ತಮಾಂ ತಾಲ್ಲೂಕು ಕಸಬಾ ಜಾಗಾಗಳಲ್ಲಿಯೂ, ದೊಡ್ಡ ಷಹರ್‌ಗಳಲ್ಲಿಯೂ ಮತ್ತು ಹೆಡ್ ಸೂಪರ್‌ವೈಜರವರು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಸಿಶಿ ಅಥವಾ ಮಂಜೂರಾತಿ ನಿರೀಕ್ಷಣೆ ಮೇಲೆ ಸದರೀ ಡೆಪ್ಯುಟಿ ಕಮಿಷನರವರ ಅಧಿಕಾರದ ಸ್ಥಳ ಸರಹದ್ದಿಗೆ ಒಳಪಟ್ಟು ಮತ್ತು ಚಿಲ್ಲರೆ ಬಿಕರೀದಾರರ ಅನುಕೂಲ್ಯತೆಗೆ ಸಹಕಾರಿಯಾದ್ದೆಂಬದಾಗಿ ಗೊತ್ತುಮಾಡುವಂಥಾ ಇತರ ಸ್ಥಳಗಳಲ್ಲಿ ಯೂಸುದಾ ಬಟ್ಟಿ ಅಂಗಡಿಗಳನ್ನು ಸ್ಥಾಪಿಸುವದಕ್ಕೆ ಅಪ್ಪಣೆಕೊಡಲ್ಪಡತಕ್ಕದ್ದು. ಕಂಟ್ರಾಕ್ಟದಾರನು, ಅಂಥಾ ವಟ್ಟು ಅಂಗಡಿಗಳಲ್ಲಿ ಯಾವಾಗ್ಯೂ ವಟ್ಟು ಬಿಕರೀ ಲೈಸೆನ್ಸ್‌ರೂಲ್ಸಿನಲ್ಲಿ ವಿವರಿಸಿರುವಂತೆ, ದಾಸ್ತಾನ್ ಇರುವ ಪ್ರದ್ದಿಶ್ಯ ಕ್ರಮವಾಗಿ ಸರಬರಾಯಿ ಮಾಡತಕ್ಕದ್ದು. ಅಂಥಾ ವಟ್ಟು ಬಿಕರೀ ಅಂಗಡಿಗಳಲ್ಲಿ "ದಾಸ್ತಾನ್ ಕಮ್ಮಿ ಯಿದ್ದರೂ" ಮತ್ತು "ದಾಸ್ತಾನ್ ಇಲ್ಲದಿದ್ದರೂ" ಕಮ್ಮಿ ಯಿರುವ ತೇದಾದಿಗೆ ಯೆರಡರಷ್ಟು ಕಿಮ್ಮತು ಜುರ್ಮಾನೇ ತರೀಖು ವಸೂಲ್‌ಮಾಡಲ್ಪಟ್ಟು ಆ ಪೈಕಿ ಚಿಲ್ಲರೆ ಬಿಕರೀದಾರನಿಗೆ ನಷ್ಟವೇನಾದರೂ ಸಂಭವಿಸಿ ಯಿದ್ದಲ್ಲಿ ಅದು ಪಾವತೀ ಮಾಡಲ್ಪಡುವದು. ಹಾಲೀ ವಟ್ಟು ಅಂಗಡಿಗಳು ಯಿರತಕ್ಕ ಸ್ಥಳಗಳ ಒಂದು ಪಟ್ಟಿಯೂ, ಕಂಟ್ರಾಕ್ಟುದಾರನು ಡೆಪ್ಯುಟಿ, ಕಮ್ಮಿಷನರಿಗಾಗಲಿ ಹೆಡ್ ಸೂಪರ್‌ವೈಜರವರಿಗಾಗಲೀ ದರಖಾಸ್ತು ಮಾಡಿ ಪಡಿಯಬಹುದು. ಕಂಟ್ರಾಕ್ಟುದಾರನು, ದುಕಾನ್ ಒಂದಕ್ಕೆ ಮಾಹೆಯಾನಾ 2 ರೂಪಾಯಿನಂತೆ ಗೊತ್ತು ಮಾಡಲ್ಪಟ್ಟ ಲೈಸೆನ್ಸ್ ಫೀಯನ್ನು ಪಾವತೀ ಮಾಡತಕ್ಕದ್ದು.

VIII. ಕಂಟ್ರಾಕ್ಟದಾರನು, XI ಮತ್ತು XIIIನೇ ಷರತ್ತುಗಳಲ್ಲಿನ ರೂಲ್ಸ್‌ಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರತು, ಅನ್ಯಥಾ ಡಿಸ್ಟಿಲೇರಿಯಲ್ಲಾಗಲೀ ಬಟ್ಟಿ ಬಿಕರೀ ಅಂಗಡಿಗಳಲ್ಲ್ಯಾಗಲೀ ಸಾರಾಯಿಯನ್ನು ಚಿಲ್ಲರೆಪುರೋಖ್ತು ಮಾಡಕೂಡದು.

IX. ಚಿಲ್ಲರೆ ಪುರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟು ಜಾತ ಡೆಪ್ಯುಟಿ ಕಮ್ಮಿಷನರುಗಳ ವಿಚಾರಣೆಯಲ್ಲಿಯೂ ಮತ್ತು ಮ್ಯುನಿಸಿಪಲ್ ಷಹರ್‌ಗಳಲ್ಲಿ, ಹಾಂಗೆ ದಿವಾನರವರಿಂದ ಅಪ್ಪಣೆ ಮಾಡಲ್ಪಟ್ಟರೆ, ಅಂಥಾ ಷಹರ್‌ಗಳ ಮ್ಯುನಿಸಿಪಲ್ ಪ್ರೆಸಿಡೆಂಟರು ಯಾ ವೈಸ್ ಪ್ರೆಸಿಡೆಂಟರ ವಿಚಾರಣೆಯಲ್ಲಿಯೂ ಇರತಕ್ಕವು. ಯಾವ ಅಂಗಡಿಗಳನ್ನಾಗಲೀ ಪಬ್ಲಿಕ್ ಜರೂರಾತಿ ಸಬಬಿನ ಮೇಲೆ, ಇಜಾರೆದಾರನು ತನಿಗೆ ಈಡು ಮೊಬಲಗು ಕೊಡಬೇಕೆಂದು ಕೇಳುವ ಹಕ್ಕಿಲ್ಲದೇನೇ, ಮುಚ್ಚುವಂತೆ ಹುಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು. ಜಾತ್ರೆಗಳು, ಸಂತೆಗಳು ಮತ್ತು ಹಬ್ಬಗಳಲ್ಲಿ ಬಟ್ಟಿ ಕೋಠಿಗಳು ಮತ್ತು ಚಿಲ್ಲರೆ ಪುರೋಖ್ತು ಅಂಗಡಿಗಳನ್ನು ಬೇಕ್ಕಾದಾಯಿದೆ ವರಿಗೆ ಖುಲ್ಲಾ ಇಡಲ್ಪಡುವ ಬಗ್ಯೆ ಅಮಲ್‌ದಾರುಗಳಿಂದ ಧಾರಾಳವಾಗಿ ಅಪ್ಪಣೆ ಕೊಡಲ್ಪಡತಕ್ಕದ್ದು.

X. (a) ಡೆಪ್ಯುಟಿ ಕಮ್ಮಿಶ್ನರ್‌ರವರ ಮಂಜೂರಾತಿನಿಶಿ ಅಥವಾ ಮಂಜೂರಾತಿ ನಿರೀಕ್ಷಣವೇಲೆ ಹೆಡ್ ಸುಜರವರಿಂದ ಮೊಕರರ್ಮಾಡಲ್ಪಡುವ ಪ್ರಕಾರಾ, ಮೇಲ್ಕಂಡ ಆಫೀಸರರಿಂದ, ತಾಲ್ಲೂಕು ಕಸಬಾಗಳಲ್ಲಿಯೂ, ಹೋಬಳಿ ಕಸಬಾ ಜಾಗಾಗಳಲ್ಲಿಯೂ, ದೊಡ್ಡ ಹಳ್ಳಿಗಳಲ್ಲಿಯೂ ಮತ್ತು ಜನಗಳು ಆ ಬಗ್ಯಾಗಿ ಅಪೇಕ್ಷಿಸುವಂಥಾ ಇತರ ಸ್ಥಳಗಳಲ್ಲಿಯು ಚಿಲ್ಲರೆ ದುಕ್ಕಾನ್‌ಗಳಿಗೋಸ್ಕರ ವಿಧಿಸಲ್ಪಟ್ಟ ನಮೂನೆಯಲ್ಲಿ ಲೈಸೆನ್ಸ್‌ಗಳು ಕೊಡಲ್ಪಡುವವು. ಹಾಲಿ ಇರತಕ್ಕ ತಮಾಂ ದುಕ್ಕಾನ್‌ಗಳೂ ಕಾಯಂ ಇಡಲ್ಪಡತಕ್ಕವು. 1887ನೇ ಇಸವಿ ಏಪ್ರೆಲ್ 1ನೇ ತಾರೀಖಿನಲ್ಲಿ ಅಮಲ್‌ದಾರರುಗಳು ಬಟ್ಟಿ ಕೋಠೀಗಳಲ್ಲಿನ ದಾಸ್ತಾನ್ ತನಿಖೀಮಾಡಿ ಆ ಪೈಕಿ ಒಂದು ಶೀಶೆ ಸಾರಾಯಿಯನ್ನು ಬಂದೋಬಸ್ತಾಗಿ ಬಿರಡೇಹಾಕಿಶಿ ಮೊಹರ್‌ಮಾಡಿಸಿ ಯಕ್ಸೈಸ್ ಆಫೀಸರರ ತನಿಖಿ ವ ಅಜಮಾಯಿಷೀ ಬಗ್ಯೆ ಇಡಿಸತಕ್ಕದ್ದು. ಯಾವದಾದರೂ ಒಂದು ಸ್ಥಳದಲ್ಲಿ ಯ ಚಿಲ್ಲರೆ ದುಕ್ಕಾನ್‌ಗಳ ಸಂಖೆಯು ಜಾಸ್ತಿ ಮಾಡಬೇಕಾದರೂ ಕಮ್ಮಿ ಮಾಡಬೇಕಾದರೂ, ಅವುಗಳಲ್ಲಿ ನಡೆದ ಬಿಕರೀಮೇಲೆ ಗೊತ್ತು ಮಾಡಲ್ಪಡತಕ್ಕದ್ದು.

(b). ಚಿಲ್ಲರೇ ಬಿಕರೀ ದುಕ್ಕಾನ್‌ಗಳಿಗಾಗಿ ಕೊಡಲ್ಪಡುವ ಲೈಸೆನ್ಸ್‌ಗಳಿಗೋಸ್ಕರ ಯಾವ ಫೀಜೇ ಆಗಲೀ, ಶೀಮೆಯ ತಮಾಂ ಸ್ಥಳಗಳಲ್ಲಿನ ಚಿಲ್ಲರೆ ಬಿಕರೀ ದುಕ್ಕಾನ್‌ಗಳಲ್ಲಿ ಬಿಕರೀ ಮಾಡಲ್ಪಡತಕ್ಕ ಜಾಸ್ತೀ ತೇದಾದಿಗೋಸ್ಕರ ಯಾವ ಮೊತ್ತವಾಗಲೀ ವಸೂಲ್ ಮಾಡಲ್ಪಡತಕ್ಕದ್ದಲ್ಲಾ; ಪರಂತು ಬೆಂಗಳೂರು ಷಹರ್ ಮತ್ತು ಬೆಂಗಳೂರು ಶಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ಮಾತ್ರಾ ಮ್ಯುನಿಸಿಪಲ್ ಬೋರ್ಡಿನವರು, ಆಗಿಂದಾಗ್ಯೆ ಗವರ್ನಮೆಂಟಿನಿಂದ ಗೊತ್ತು ಮಾಡಲ್ಪಡುವಂತೆ ಅಂಥಾ ಲೈಸೆನ್ಸ್ ಫೀಜುಗಳನ್ನೂ ಜಾಸ್ತೀ ಮಾರಾಟದಮೇಲೆ ಮೊತ್ತವನ್ನೂ ಸುದಾ ವಸೂಲ್ ಮಾಡುತ್ತಾ ಬರುವರು.

(c). ಈ ಪ್ರಕಾರ ಮಾಫ್‌ಮಾಡಲ್ಪಟ್ಟ ಲೈಸೆನ್ಸ್ ಫೀಜು, ಜಾಸ್ತೀ ಮಾರಾಟದಮೇಲಿನ ಮೊತ್ತ ಇವುಗಳಿಗೆ ಬದಲಾಗಿ, ಬೆಂಗಳೂರು ಷಹರ್ ಮತ್ತು ಬೆಂಗಳೂರು ಶಿವಿಲ್ ವ ಮಿಲಿಟರಿ ಸ್ಟೇಷನ್ ವಿನಾ ಅನ್ಯಥಾ ಇತರ ಸ್ಥಳಗಳಿಗೆ ಸರಬರಾಯಿಮಾಡಲ್ಪಟ್ಟ ತಮಾಂ ಷರಾಬಿನಮೇಲೂ ಗ್ಯಾಲನ್ ಒಂದಕ್ಕೆ ಮುರಡಾಣೆ ದರವುಳ್ಳ ಒಂದೇವಿಧವಾದ ಫೀಜು ವಸೂಲ್ಮಾಡಲ್ಪಡುವದು. ಕಂಟ್ರಾಕ್ಟುದಾರನು ಈ ಬಾಬತು ಫೀಜನ್ನು ಅವರ ಮಾಹೇವಾರಿ ಕಿಸ್ತು ಮೊಬಲಗಿನೊಂದಿಗೆ ಸರ್ಕಾರ ಖಜಾನೆಗೆ ಪಾವತೀಮಾಡಿ ಈ ಬಾಬತು ಮೊಬಲಗನ್ನು ಚಿಲ್ಲರೆ ಬಿಕರೀದಾರರಿಂದ XIIIನೇ ನಂಬರ್ ಷರತ್ತಿನಲ್ಲಿ ವಿವರಿಸಲ್ಪಟ್ಟ ಬಟ್ಟಿ ಬಿಕರೀ ಖರೀದಿ ಜೊತೇಲಿ ವಸೂಲ್‌ಮಾಡಿ ಕೊಳ್ಳತಕ್ಕದ್ದು. ಸದರೀ ಫೀಜನ್ನು ಕಂಟ್ರಾಕ್ಟುದಾರನು ಮೇಲ್ಕಂಡ ರೀತಿಯಾಗಿ ಪಾವತೀ ಮಾಡುವದಕ್ಕೆ ತಪ್ಪಿದರೆ ಅದು ಜಮೀನ್ ಕಂದಾಯದ ಬಾಕಿಯಂತೆ ಕಂಟ್ರಾಕ್ಟುದಾರನಿಂದ ವಸೂಲ್ಮಾಡಲ್ಪಡುವದು.

(d). ಕ್ರಮಪಡಿಸಲ್ಪಟ್ಟ ದಾರಣೆಗೆ ಮತ್ತು ವಿಧಿಸಲ್ಪಟ್ಟ ಸ್ಟ್ರೆಂಗ್ತಿನಿಂದ ಸಾರಾಯಿಯನ್ನು ಪುರೋಖ್ತು ಮಾಡುವದಕ್ಕೂ, ಜರೂರಾದ ಇತರ ಷರತ್ತುಗಳ ಬಗ್ಯೂ ಲೈಸೆನ್ಸ್‌ಗಳಲ್ಲಿ ನಿಬಂಧನೆ ಮಾಡಲ್ಪಡುವದು. ಚಿಲ್ಲರೇ ಪುರೋಖ್ತುದಾರರು ಅವರಿಗೆ ಅತ್ಯಂತ ಸಮೀಪದಲ್ಲಿನ ಬಟ್ಟಿ ಅಂಗಡಿಗಳಿಂದಲೇ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಸದರೀ ಚಿಲ್ಲರೇ ಪುರೋಖ್ತುದಾರರು, ಅಕ್ರಮವಾದ ವಿಷಯಗಳೇನೂ ನಡೆಯದೆ ಇರುವದನ್ನು ನೋಡುವ ಬಗ್ಯೆ ತಮ್ಮ ಅಂಗಡಿಗಳೊಳಗೆ ಇಜಾರೇದಾರರಿಗಾಗಲಿ ಅವರ ಮುತಾಲೀಕರಿಗಾಗಲಿ ಆಬ್ಕಾರಿ ಆಫೀಸರರುಗಳಿಗಾಗಲೀ ಕ್ರಮ ಪ್ರಕಾರ ಅಧಿಕಾರಹೊಂದಿದ ಯಾವ ಸರ್ಕಾರ್ ನವುಕರನಿಗಾಗಲಿ ಅವಕಾಶ ಸಹ ಕೊಡತಕ್ಕದ್ದು, ಮತ್ತು ಪ್ರತಿದಿನ ತಾವು ತೆಗದುಕೊಳ್ಳುವ ಸಾರಾಯಿಯ ತೇದಾದ್ ವ ಸ್ಟ್ರೆಂಗ್ತು ಮತ್ತು ಸದರೀ ಬಗ್ಯೆ ಹಾಕಲ್ಪಡುವ ಖರೀ

ದಿಗಳು. ಇವುಗಳ ನಿಜವಾಗಿಯೂ ಕರಾರ್‌ವಾಕಾ ಆಗಿಯೂ ಇರುವ ಲೆಖ್ಖಗಳನ್ನು ಇಡತಕ್ಕದ್ದಲ್ಲದೆ ಇಜಾರೇದಾರನಿಂದಾಗಲಿ, ಅವನ ಮುತಾಲೀಕನಿಂದಾಗಲೀ, ಸದರೀ ಲೆಖ್ಖ ಕೇಳುವಂತೆ ಅಧಿಕಾರ ಕೊಡಲ್ಪಟ್ಟ ಯಾವ ಸರಕಾರದ ಉದ್ಯೋಗಸ್ಥನಿಂದಾಗಲಿ, ಹಾಗೆ ಅಪೇಕ್ಷಿಸಲ್ಪಟ್ಟಾಗ ತನಿಖಿ ನೋಡುವ ಬಗ್ಯೆ ಅವುಗಳನ್ನು ಹಾಜರ್ಮಾಡತಕ್ಕದ್ದು. ಕಂಟ್ರಾಕ್ಟರಾಗಲೀ ಅವರ ಏಜಂಟರಾಗಲೀ ಯಾ ಅವರ ಕೈ ಕೆಳಗಣ ಉದ್ಯೋಗಸ್ಥರಾಗಲೀ ಚಿಲ್ಲರೆ ಫುರೋಖ್ತು ದುಕಾ೯ಗಳಲ್ಲಿ ಖುದ್ದಾಗಿಯಾದರೂ ಯಾ ಪರಭಾರೆಯಾಗಿಯಾದರೂ ಯಾವ ಸಂಬಂಧ ಯಾ ಪ್ರಯೋಜನವನ್ನೂ ಉಂಟಾಗಿರಕೂಡದು.

XI. ಡಿಸ್ಟಿಲೇರಿಯಿಂದ ಸಾರಾಯಿ ಕೊಡುವದನ್ನು ಕುರಿತ ಈ ಕೆಳಗೆ ಬರುವ ರೂಲ್ಸ್ ಅನುಸರಿಸಲ್ಪಡತಕ್ಕದ್ದು.

(a) ಸಾಧಾರಣವಾಗಿ 20 ಡಿಗ್ರಿ ಅಂಡರ್ ಪ್ರೂಫಿಗೆ ಹೆಚ್ಚಿದ ಸ್ಟ್ರೆಂಗ್ತ್ ನಿಂದ ಯಾವ ಸಾರಾಯಿಯನ್ನೂ ಕೊಡತಕ್ಕದ್ದಲ್ಲವು, ಆದರೆ ಕಂಟ್ರಾಕ್ಟದಾರನಾಗಲಿ, ಚಿಲ್ಲರೆ ಫುರೋಖ್ತುದಾರನಾಗಲೀ ಮೇಲೆ ಕಂಡ ಸ್ಟ್ರೆಂಗ್ತಿಗಿಂತ ಹೆಚ್ಚಾದ ಸ್ಟ್ರೆಂಗ್ತಿನಲ್ಲಿ ಸಾರಾಯಿ ಕೊಡಲಿಕ್ಕೆ ಅಪೇಕ್ಷಿಸಿದರೆ ಹಾಗೆ ಕೊಡಲ್ಪಡುವ ಸ್ಪಿರಿಟ್ ಸಾರಾಯಿಯು ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತ್ ವುಳ್ಳದ್ದಾಗಿರಕೂಡದು. ಪ್ರೂಫಿಗೆ ಸಮನಾದ ಬಲವುಳ್ಳ ಸಾರಾಯಿಯು, ಯರಡು ಡಜ಼ನ್ ಕ್ವಾರಟ್ ಶೀಶೆಗಳಲ್ಲಿಯೂ, ನಾಲ್ಕು ಡಜ಼ನ್ ಪಯ್ನ್‌ಟ್ ಶೀಶೆಗಳಲ್ಲಿಯೂ, ಇಂಗ್ಲಿಷ ಮತ್ತು ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯೆಂತೆಯೇ ಕಮ್ಮೀ ತೇದಾದಿನ ಡಬ್ಬಿಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಡುವದು; ಅದು ಡಿಸ್ಟಿಲೇರಿಯಲ್ಲಿ ಹೆಡ್ ಸೂಪರ್ ವೈಜರವರಿಂದ ಮೊಹರ್ಮಾಡಲ್ಪಟ್ಟು ಚೀಟಿ ಹಚ್ಚಿರುವ ಪ್ರಕಾರವೇ ಬದಲಾಯಿಸದಂತೆಯೂ ಹೆಡ್ ಸೂಪರ್ ವೈಜರವರ ಪ್ಯಾಸಿನ ಆಧಾರದ ಮೇಲೂ ಬಟ್ಟಿ ಅಂಗಡಿಗಳಿಂದ ಚಿಲ್ಲರೇ ಬಿಕರೀದಾರ್ರಿಗೆ ಕಂಟ್ರಾಕ್ಟದಾರರಿಂದ ಬದಗಿಸಲ್ಪಡತಕ್ಕ ಶೀಶೆಗಳಲ್ಲಿ ಫುರೋಖ್ತು ಮಾಡಲ್ಪಡತಕ್ಕದ್ದು. ದಾರಿಯಲ್ಲಿ ವಡೆದು ಹೋಧೀತೆಂಬದಾಗಿ ಕಾಣಬರುವ ಸಂಗತಿಗಳಲ್ಲಿ, ಹೆಡ ಸೂಪರ್‌ವೈಜರವರು, ರೇಂಜ ಸೂಪರ್‌ವೈಜರುಗಳಿಂದ ಶೀಶೆಗಳಲ್ಲಿ ಭರ್ತೀ ಮಾಡಲ್ಪಟ್ಟು ಮೊಹರ್ ಮಾಡಲ್ಪಡುವಬಗ್ಯೆ ಸದರೀ ರೇಂಜ್ ಸೂಪರ್‌ವೈಜರುಗಳಲ್ಲಿಗೆ ಬೇಕಾದಷ್ಟು ಅಂಥಾ ಷರಾಬನ್ನು ಡಿಸ್ಟಿಲೇರಿಯಿಂದ ಸರಬರಾಯಿಮಾಡತಕ್ಕದ್ದು. ಚಿಲ್ಲರೆ ಬಿಕರೀ ದಾರರು ಅಂಥಾ ಷರಾಬನ್ನು ಅವರಿಗೆ ಗೊತ್ತಿರುವಂತಾ ಮರ್ಯಾದೆವುಳ್ಳ ಜನಗಳಿಗೆ ಮಾತ್ರವೇ ಹೆಡ್ ಸೂಪರ್ ವೈಜರವರಿಂದ ಕೊಡಲ್ಪಟ್ಟ ಅಲಾಹಿದಾ ಪ್ಯಾಸುಗಳೊಂದಿಗೆ ಕೊಡತಕ್ಕದ್ದು. ಮತ್ತು ಬಟ್ಟಿ ಬಿಕರೀದಾರರು ವ ಚಿಲ್ಲರೇ ಫುರೋಖ್ತುದಾರರು ಸುದಾ ಅಂಥಾ ಬಿಕರೀಗಳಿಗೆ ವಿಧಿಸಲ್ಪಟ್ಟ ನಮೂನೆಯಲ್ಲಿ ಲೆಖ್ಖ ಕೊಡತಕ್ಕದ್ದು.

(b). ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ, ಆ ಬಗ್ಯೆ, ಹೆಡ್ ಸೂಪರ ವೈಜರ್ ಮೂಲಕ ಡೆಪ್ಯುಟಿ ಕಮ್ಮಿಷನರವರ ವಿಶೇಷ ಹುಕ್ಕುಂಗಳನ್ನು ಪಡೆಯತಕ್ಕದ್ದು; ಸದರೀ ಹೆಡ್ ಸೂಪರ್‌ವೈಜರು ಸದರೀ ಅಂಶಗಳನ್ನು ಸೂಚಿಸಿ, ಅದರಂತೆ ಬಟ್ಟಿ ಬಿಕ್ರಿ ಅಂಗಡಿಗಳಿಗೆ ಪ್ಯಾಸಗಳು ಯಾನೇ ರಹದಾರೀಗಳನ್ನು ಕೊಡತಕ್ಕದ್ದು, ಹಾಗೆ ಕೊಡಲ್ಪಟ್ಟ ಸಾರಾಯಿಯು, ಈ ಪ್ಯಾರಾ (a) ಕ್ಲಾಜ಼ಿನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟು ಲೆಖ್ಖ ಇಡಲ್ಪಡತಕ್ಕದ್ದು.

(c). ಅಂಡರ್ ಪ್ರೂಫ್ ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೆಂಗ್ತ್ ವುಂಟಾಗಿ ಮತ್ತು ಪ್ರೂಫಿನವರಿಗೆ ಇದ್ದು, ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲೆ ತೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು, ಜಲಪರಿಮಾಪಕ ಯಂತ್ರದ ದರಗಳ ಪ್ರಕಾರ ದಾಮಾಷಾಯಿ ಮೇಲೆ ಹತ್ತು ಡಿಗ್ರಿಗಳ ದರದಂತೆ ಜಾಸ್ತಿ ಮಾಡಲ್ಪಡತಕ್ಕದ್ದು.

(*d*). ಅಂಡರ್ ಪ್ರೂಫಿನ 20° ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು ; ಪರಂತು, ಅಂಡರ್ ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತಿಗಿಂತ ಕಡಿಮೆ ಶಕ್ತಿಯುಳ್ಳ ಸಾರಾಯಿ ಬಗ್ಗೆ ತಗಾದೇ ಉಂಟಾದರೆ, ಅಂಡರ್ ಪ್ರೂಫಿನ 30° ಡಿಗ್ರೀ ಸಾರಾಯಿಯು, ದಾವಾಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯ ದರಗಳ ಮೇರೆ, ಡಿಸ್ಟಿಲೇರಿಯಿಂದ ವಿಶೇಷತಃ ಕೊಡಲ್ಪಡಬಹುದು. ಅಂತಾ ಸಾರಾಯಿಯು, ಬಟ್ಟಿ ಕೋಠೀಗಳಲ್ಲಿಯೂ, ಚಿಲ್ಲರೆ ದುಕಾನ್ಗಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ವಿಲೇವಾರಿ ಲೆಖ್ಖ ಕೊಡಲ್ಪಡತಕ್ಕದ್ದು.

XII. ಸಾರಾಯಿಯು ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಮೇರೆ ಫರೋಖ್ತು ಮಾಡಲ್ಪಡತಕ್ಕದ್ದೇ ಹೊರತು, ಬಟ್ಟಿ ಬಿಕ್ರಿಯ ಅಥವಾ ಚಿಲ್ಲರೇ ಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆರಿಕೇ ಮಾಡಕೂಡದು ಅಥವಾ ನೀರು ಬೆರಿಸಕೂಡದು. ಆದರೆ ಸಾರಾಯಿಯ ಬಲವನ್ನು ತಗ್ಗಿಸುವಬಗ್ಗೆ ಹೆಡ್ ಸೂಪರ್ವೈಜರವರ ರೂಬರು ಡಿಸ್ಟಿಲೇರಿಯಲ್ಲಿ ಕಾಶಿದ ನೀರು ಉಪಯೋಗಿಸಲ್ಪಡಬಹುದು.

XIII. ಅಂಡರ್ ಪ್ರೂಫಿನ ಬಾಬತು 20° ಡಿಗ್ರೀಯ ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರೂಪಾಯಿಗೆ ಬಂದಾಣೆ ಮೇರೆ ಲೋಕಲ್ ಸೆಸ್ ದೇಖೀಲ್ ಗವರ್ನಮೆಂಟ್ ತೀರ್ವೆಯು ಸದರೀ ಸಾರಾಯಿ, (ಇತರ ಪದಾರ್ಥ ಬೆರಿಕೆ ಇಲ್ಲದೆಯೂ, ನೀರು ಬೆರಿಕೆಯಾಗದೆಯೂ) ಬಟ್ಟಿ ಫರೋಖ್ತು ಅಂಗಡಿಯಲ್ಲಿಯೂ ಚಿಲ್ಲರೆ ಅಂಗಡಿಗಳೊಳಗೂ ಯಾವ ಖರೀದೀ ಪ್ರಕಾರ ಫರೋಖ್ತಾಗತಕ್ಕದ್ದೋ ಅದು ಇದರಡೀ ಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ :—

	ಪ್ರೂಫಿನ 20° ಡಿಗ್ರಿಗಳ ಒಳಗಿನ ಸಾರಾಯಿ.			
	ಲೋಕಲ್ ಸೆಸ್ ದೇಖೀಲ್ ಗ್ಯಾಲನ್ 1ಕ್ಕೆ ತೀರ್ವೆ.	ಗ್ಯಾಲನ್ 1ಕ್ಕೆ ಬಟ್ಟಿ ಬಿಕರೀ ದರ.	ಚಿಲ್ಲರೆ ಬಿಕರಿ ದರ.	
			ಗ್ಯಾಲನ್ 1ಕ್ಕೆ.	ಡ್ರಾಂ 1ಕ್ಕೆ.
	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಸೀಮೆಯ ತಮಾಂ ಸ್ಥಳಗಳಲ್ಲೂ.	3—5—0	4—6—4	5—0—0	0—1—8

(*a*) ಪ್ರೂಫಿಗೆ ಸಮನಾದ ಮತ್ತು ಪ್ರೂಫಿನ 30° ಡಿಗ್ರಿಗಳಿಗೆ ಕೀಳ್ಪಟ್ಟ ಸಾರಾಯಿ ಮತ್ತು ಸದರೀ ಬಲಕ್ಕೆ ಜಾಸ್ತಿ ವ ಕಮ್ಮಿಯಾಗಿರತಕ್ಕ ತಮಾಂ ಬಲಗಳ ಸಾರಾಯಿಯ ಖರೀದಿ ಮತ್ತು ಅವುಗಳ ಮೇಲೆ ವಸೂಲು ಮಾಡಲ್ಪಡಬೇಕಾದ ತೀರ್ವೆಸುದಾ, ಗವರ್ನಮೆಂಟ್ ಹೈಡ್ರಾಮೆಟರಸ್ ಪ್ರತಿ ಪೆಟ್ಟಿಗೆಯೊಂದಿಗೆ ಇರತಕ್ಕ ಕ್ಯಾಸೆಲಾಯವರ ರೂಲ್ಸು ಅನುಸಾರವಾಗಿ 20° ಡಿಗ್ರಿಗಳ ಅಂಡರ್ ಪ್ರೂಫಿಗಾಗಿ ಮೇಲೆ ವಿವರಿಸಿರುವ ದರಗಳಂತೆ ದಾವಾಷಾಯಿ ಪ್ರಕಾರ ಗೊತ್ತು ಮಾಡಲ್ಪಡತಕ್ಕದ್ದು. ಈ ರೂಲ್ಸುಗಳಲ್ಲಿ ಅಡಗಿರುವ, ಯಾವ ಅಂಶವೇ ಆಗಲೀ ಹೆಡ್ ಸೂಪರ್ವೈಜರವರು ಅವರಿಗೆ ಅರ್ಜಿಯಾಗಿ ಬರಹ ಮೂಲಕ ದರಖಾಸ್ತು ಬಂದಮೇಲೆ, ಡಿಸ್ಟಿಲೇರಿಯಲ್ಲಿ ಬಟ್ಟಿ ಇಳಿಸಲ್ಪಟ್ಟ ಯಾವ ಬಲದ ಷರಾಬನ್ನಾಗಲಿ ಸಾಧಾರಣವಾದ ಒಂದು ಕ್ವಾರಟು ಶೀಶೆಗಿಂತ ಕಮ್ಮಿ ಇಲ್ಲದ ತೇದ್ಾದನ್ನು ಬಟ್ಟಿ ಬಿಕರಿಯ

ಖರೀದಿ ದರಕ್ಕೆ ಪುರೋಖ್ತಿ ಗಲ್ಲದೆ ವಾಸ್ತವ್ಯವಾಗಿ ಅವರ ಸ್ವಂತ ಉಪಯೋಗಕ್ಕಾಗಿ ಮಾತಬರ್ ಖುಷಬಾಷ್ ಜನಗಳಿಗೂ, ಆಸಪತ್ರಿಗಳಿಗೂ, ಮ್ಯೂಜಿಯಂ ವಿವಿಧವಸ್ತು ಶಾಲೆಗಳಿಗೂ ಮತ್ತು ಇತರ ಪಬ್ಲಿಕ್‌ಸ್ಥಾಪನೆಗಳಿಗೂ ಕೊಡುವದನ್ನು ನಿರೋಧಿಸುವದಿಲ್ಲ.

(*b*) ಕಂಟ್ರಾಕ್ಟುದಾರರು, ಬೆಂಗಳೂರು ಡೆಪ್ಯುಟಿ ಕಮ್ಮಿಷ್ನರವರ ಅಪ್ಪಣೆಯನ್ನು ಪಡೆದು, ಮಿಲ್ಕ್ ಪಂಚ್‌ಯೆಂಬ ಸಾರಾಯಿಯನ್ನಾಗಲೀ ಯಾವದಾದರೂ ಇತರ ಮಧುರವಾದ ಸಾರಾಯಿಗಳನ್ನಾಗಲೀ ಆಬ್‌ಕಾರಿ ಆಫೀಸರ್‌ಗಳ ಮೇಲ್‌ತನಿಖೆಗೆ ಒಳಪಟ್ಟು ತಯಾರ್ಮಾಡಬಹುದು ; ಸದರೀ ಆಬಕಾರಿ ಆಫೀಸರರು, ಹಾಂಗೆ ಉಪಯೋಗಿಸಲ್ಪಡುವ ಸಾರಾಯಿ ಮೇಲಿನ ತೀರ್ವೆಯು, ಸದರೀ ಸಾರಾಯಿ ತಯಾರಿ ಉದ್ದಿಶ್ಯ ಉಪಯೋಗಿಸಲ್ಪಡುವ ಕಾಕಂಬಿ ಯಾ ಇತರ ಪದಾರ್ಥಗಳು ಬೆರಸಲ್ಪಡುವದಕ್ಕೆ ಮುಂಚಿತವಾಗಿಯೇ ಪೂರ್ತಿಯಾಗಿ ಲೆಕ್ಕಕ್ಕೆ ದಾಖಲ್ಮಾಡಲ್ಪಟ್ಟಿರುತ್ತೆಂಬ ವಿಷಯ ನೋಡತಕ್ಕದ್ದು. ಅಂಥಾ ಮಧುರವಾದ ಸಾರಾಯಿಯು, ಕಂಟ್ರಾಕ್ಟುದಾರನ ಖರ್ಚಿನಲ್ಲಿ ಹೆಡ್ ಸೂಪರ್‌ವೈಜರವರಿಂದ ಮೊಹರ್ ಮಾಡಲ್ಪಟ್ಟು ಚೀಟಿ ಹಚ್ಚಲ್ಪಟ್ಟ ತರುವಾಯ, ಡಿಸ್ಟಿಲೇರಿಯಿಂದ ಪರಭಾರೆಯಾಗಿ ಮಾರಲ್ಪಡಬಹುದು ಯಾ ಚಿಲ್ಲರೆ ಬಿಕರಿ ದುಕಾನ್‌ಗಳಲ್ಲಿ ಮಾರಲ್ಪಡತಕ್ಕಬಗ್ಯೆ ಇಡಲ್ಪಡಬಹುದು, ಅಂಥಾ ಸಾರಾಯಿಗಳು ಮಾರಲ್ಪಡಬೇಕಾದ ಖರೀದಿ ದರಗಳು ಆಬ್‌ಕಾರಿ ಇಲಾಖೆಯಿಂದ ಗೊತ್ತುಮಾಡಲ್ಪಡತಕ್ಕದ್ದು.

XIV. ಸಾರಾಯಿ ಕಮ್ತಿ ಬಂದಬಗ್ಯೆ, ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟೇರಿ ಸ್ಟೇಷನ್ ಮ್ಯುನಿಸಿಪಲ್ ಸರಹದ್ದುಗಳ ಆಚೆಗೆ ಪುರೋಖ್ತು ಬಗ್ಯೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ ಸಲ್ಲತಕ್ಕ ತೆರಿಗೆಯ ಮೇಲೆ ಸೇಕಡಾ 2ರ ಪ್ರಕಾರ ಸೋಡಿ ಯಾ ವಜಾ ಕೊಡಲ್ಪಡತಕ್ಕದ್ದು. ಕಂಟ್ರಾಕ್ಟುದಾರನು, ಲೆಕ್ಕಗಳು ಕರಾರ್‌ವಾಕಾ ಇರತಕ್ಕ ಉದ್ದಿಶ್ಯ ಒಟ್ಟು ಬಿಕರೀದಾರರ ಲೆಕ್ಕಗಳಲ್ಲಿ ವಾಸ್ತವ್ಯವಾಗಿ ಕಾಣಬಂದ ಆರವಾಶಿಯನ್ನೇ ದಾಖಲ್ಮಾಡುವಂತೆ ವಿಧಿಸತಕ್ಕದ್ದು.

XV. ಇಜಾರೆದಾರನು, ಡಿಸ್ಟಿಲೇರಿಯನ್ನಾಗಲಿ, ಒಟ್ಟು ಪುರೋಖ್ತು ಅಂಗಡಿಗಳನ್ನಾಗಲಿ, ಕೋಠಿಗಳನ್ನಾಗಲಿ, ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ನೊಕರರ್ ಮಾಡುತ್ತಾನೋ ಅಂತಾ ಪ್ರತಿಮನುಷ್ಯನನ್ನೂ ಹಾಗೆ ನೊಕರರು ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ್‌ಗಳಿಗೆ ಅನುಗುಣವಾಗಿ ಕರಾರುಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ ಕರಾರುಗಳು, 1887ನೇ ಇಸವಿ ಏಪ್ರೆಲ್ ಒಂದನೇ ತಾರೀಖು ಲಾಗಾಯತ್ ಒಂದು ತಿಂಗಳೊಳಗಾಗಿ, ಅಂಥಾ ನವುಕರನು ಯಾವ ಡಿಸ್ಟ್ರಿಕ್ಟಿನಲ್ಲಿ ನೊಕರರು ಮಾಡಲ್ಪಡುತ್ತಾನೋ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ ಇಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯಾರಿ, ಸಾಗಿಸುವಣಿ ಮತ್ತು ಪುರೋಖ್ತು ಈ ಕೆಲಸಗಳಲ್ಲಿ ತನ್ನಿಂದ ನೊಕರರು ಮಾಡಲ್ಪಡುವ ತಮಾಂ ಜನಗಳೂ, ತಮ್ಮಿಂದ ಮಾಡಿಕೊಳ್ಳಲ್ಪಟ್ಟ ಕರಾರುಗಳ ವ ಕಾನೂನಿನ ನಿಬಂಧನೆಗಳನ್ನು ಖಂಡಿತವಾಗಿ ಅನುಸರಿಸುವಂತೆ ಮಾಡುವದಕ್ಕೆ ಪೂರಾ ತರದೂದ್ ಮಾಡತಕ್ಕದ್ದು; ಮತ್ತು ಸದರೀ ನಿಬಂಧನೆಗಳಿಗೆ ಬರಕಿಲಾಫ್ ನಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ, ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವ ಬಗ್ಯೆ, ಯಾವ ಡಿಸ್ಟ್ರಿಕ್ಟಿನಲ್ಲಿ ಬರಕಿಲಾಫ್ ನಡೆಯಿತೋ ಅಂಥಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಅಪರಾಧಿಗೆ ಪ್ರೊಟಾಗಿ ಜುರ್ಮಾನೆ ವಿಧಿಸಬಹುದಲ್ಲದೆ ಮತ್ತು ಸದರೀ ಅಪರಾಧಿಯನ್ನು ನವುಕರಿಯಿಂದ ಸಸ್ಪೆಂಡ್ ಯಾ ತಗ್ಯೆರ್ ಮಾಡುವಂತೆ ಕಂಟ್ರಾಕ್ಟುದಾರನನ್ನು ಅಪೇಕ್ಷಿಸಬಹುದು.

XVI. ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀರೂಲ್ಸಿಗಾಗಲಿ, ಇಜಾರೇದಾರ ನು ಅನುಗುಣವಾಗಿ ನಡೆಯತಕ್ಕದ್ದು, ಮತ್ತು ಆತನ ನೌಕರರವಾನೆಯರೆಲ್ಲಾ, ಬಟ್ಟೀ ಇಳಿಸಲ್ಪ ಟ್ಟು ಕೊಡಲ್ಪಟ್ಟ ಸಾರಾಯಿಯ ಬಂದೋಬಸ್ತು ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತಮಾಂ ಪಾ ತ್ರೆಗಳ ಪಾಕೀಜೀ, ಲೋಹ ಪಾತ್ರೆಗಳ ಕಲಾಯಿ ಹಾಕಿಸುವಣ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ನಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳಬಗ್ಯೆ ಗವರ್ನ ಮೆಂಟಿನವರು ಜಾರೀ ಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗ ಳಿಗೆ ನಿಗೇ ಕೊಡತಕ್ಕದ್ದು. ಷರಾಬ್ ಭಟ್ಟಿ ಇಳಿಸುವಲ್ಲಿ ಉಪಯೋಗಿಸಲ್ಪಡುವ ತಮಾಂ ಬಟ್ಟಿ ಪಾತ್ರೆಗಳೂ, ಕೊಳಬೆಗಳೂ, ವರಂಸಯಾನೆ ಪಾತ್ರೆಗಳೂ ಎರಕ ಹೊಯಿದ ತಗರದ ಪಾತ್ರೆಗ ಳಾಗಿರತಕ್ಕವು; ಆದರೆ ತಾಂಬ್ರದ ಬಟ್ಟಿ ಪಾತ್ರೆಗಳು, ಕೊಳಬೆಗಳು ಮತ್ತು ವರಂಸ ಪಾತ್ರೆಗಳು ಉಪಯೋಗಿಸಲ್ಪಟ್ಟರೆ ಅವು ವಿಧಿಸಲ್ಪಟ್ಟ ಕಾಲಗಳಿಗೆ ಕ್ರಮವಾಗಿಯೂ ಮಜಬೂತಾಗಿಯೂ ಕಲಾ ಯಿ ಮಾಡಲ್ಪಟ್ಟಿರಬೇಕು.

ಆದಿವಾರಗಳು ಮತ್ತು ಮಂಜೂರ್ಮಾಡಲ್ಪಟ್ಟ ರಜಾ ದಿವಸಗಳಾಗಿ ಪೂರ್ತಿಯಾದ ರಜಾ ದಿವಸಗಳಾಗಿ ಆಚರಿಸಲ್ಪಡತಕ್ಕದ್ದಲ್ಲದೆ ಅಂಥಾ ದಿವಸಗಳಲ್ಲಿ ಭಟ್ಟಿ ಇಳಿಸಲ್ಪಡಕೂಡದು, ಮತ್ತು ಷರಾಬ್ ಕೊಡ ಲ್ಪಡಕೂಡದು. ಅಂಥಾ ರಜಾ ದಿವಸಗಳ ತಿಳುವಳಿಕೆಯು ಸಂಬಂಧಪಟ್ಟ ತಮಾಂ ಜನಗಳಿಗೂ ಪ್ರತಿ ವರುಷದ ಆರಂಭದಲ್ಲಿ ಕೊಡಲ್ಪಡುವದು.

XVII. ಮೇಲೆ ಕಂಡ ಷರತ್ತುಗಳ ಪೈಕೀ ಯಾವ ಷರತ್ತುಗಳಿಗಾಗಲಿ, ಇಜಾರೇದಾರನಿಂದ ಅಥವಾ ಸ್ವರಾ ತಯಾರಿ, ಸಾಗಿಸುವಣ, ಯಾ ಫುರೋಖ್ತು ಇಂತಾದ್ದರಲ್ಲಿ, ಆತನಿಂದ ನೌಕರರು ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದ ಹಾಗೆ ಇರುವ ದರಿಂದ ಅಥವಾ ರಹಸ್ಯವಾದ ಷಾಮಿಲಾತೀಯಿಂದ ಮನಃಪೂರ್ವಕವಾಗಿ ಬರಕಿಲಾಫ್ ಯೇನಾದರೂ ನಡಿಸಲ್ಪಟ್ಟರೆ, ಇಜಾರೇಯನ್ನು ರದ್ದು ಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿ ಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ 1ನೇ ಷರತ್ತಿನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದಿವಾನರವರಿಗೆ ಯೆಖ್ತಿಯಾರಿ ಇರತಕ್ಕದ್ದು.

XVIII. ಗವರ್ನಮೆಂಟಿನವರಿಂದ ಸದರೀ ಬಗ್ಯೆ ವಿಧಿಸಲ್ಪಡಬಹುದಾದ ಅಂತಾ ಷರತ್ತುಗಳಿಗೆ ಬಳಪಟ್ಟು, ಇ ಜಾರೇದಾರನಿಂದ, ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಆರೆಕ ಸಾರಾಯಿ, ಲಿಕ್ಕರ್ ಸಾರಾಯಿ ಇವುಗಳನ್ನು ತಯಾರ್ಮಾಡಲ್ಪಡಲಿಕ್ಕೂ, ಫುರೋಖ್ತು ಮಾಡಲ್ಪಡಲಿಕ್ಕೂ, ಗವ ರ್ನಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರು ನಾಮೆಯಲ್ಲಿ ಕಂಡ ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲೆ ಸದರೀ ಬಗ್ಯೆ ವಜಾ ಯಾವದೂ ಕೊಡಲ್ಪ ಡಲಾರದು.

XIX. ಮೇಲೆ ಕಂಡ ಷರತ್ತುಗಳಿಂದ, ಡೆಪ್ಯುಟಿ ಕಮ್ಮಿಷನರಿಗೆ ಕೊಡಲ್ಪಟ್ಟ ಅಧಿಕಾರಗಳೂ, ವಿಧಿಸಲ್ಪಟ್ಟ ಕೃತ್ಯಗಳೂ ಸುದಾ, ರೆಸಿಡೆಂಟರು ನೌಕರರು ಮಾಡಬಹುದಾದ ಅಂಥಾ ಆಫೀಸರಿಂದ ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನೊಳಗೆ ಚಲಾಯಿಸಲ್ಪಡತಕ್ಕದ್ದು, ಮತ್ತು ನಿರ್ವಹಿಸಲ್ಪಡತಕ್ಕದ್ದು.

10. ಕಳೆದ ಹದಿನಾರು ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡೀ ಕಂಡ ತಖ್ತೆಯಲ್ಲಿ ಕಾಣಿಸಿರುತ್ತೇ:—

	1870—71. ಗ್ಯಾಲನ್‌ಗಳು.	1871—72. ಗ್ಯಾಲನ್‌ಗಳು.	1872—73. ಗ್ಯಾಲನ್‌ಗಳು.	1873—74. ಗ್ಯಾಲನ್‌ಗಳು.	1874—75. ಗ್ಯಾಲನ್‌ಗಳು.	1875—76. ಗ್ಯಾಲನ್‌ಗಳು.	1876—77. ಗ್ಯಾಲನ್‌ಗಳು.	1877—78. ಗ್ಯಾಲನ್‌ಗಳು.	1878—79. ಗ್ಯಾಲನ್‌ಗಳು.
ಬೆಂಗಳೂರು ಷಹರ್ ಮತ್ತು ಶಿವಿಲ್ ವ ಮಿಲಿಟರಿ ಸ್ಟೇಷರ್.	77,149	83,345	85,099	90,760	78,872	75,126	68,782	71;207	18,533 51,177
ಶೀಮೆಯ ಇತರ ಸ್ಥಳಗಳಿಗೆ ಕೊಡಲ್ಪಟ್ಟ ತೇದಾದು.	160,710	155,139	169,514	182,591	142,554	114,864	102,112	67,770	67,842
ಶೀಮೆಗೆ ಒಟ್ಟು ಜುಮ್ಲಾ	237,859	238,484	254,613	273,351	22,426	189,989	170,894	138,977	137,552

	1879—80. ಗ್ಯಾಲನ್‌ಗಳು.	1880—81. ಗ್ಯಾಲನ್‌ಗಳು.	1881—82. ಗ್ಯಾಲನ್‌ಗಳು.	1882—83. ಗ್ಯಾಲನ್‌ಗಳು.	1883—84. ಗ್ಯಾಲನ್‌ಗಳು.	1884—85. ಗ್ಯಾಲನ್‌ಗಳು.	1885—86. ಗ್ಯಾಲನ್‌ಗಳು.	
ಬೆಂಗಳೂರು ಷಹರ್ ಮತ್ತು ಶಿವಿಲ್ ವ ಮಿಲಿಟರಿ ಸ್ಟೇಷರ್.	24,436	28,586	28,812	31,282	34,089	33,993	33,952	ಬೆಂಗಳೂರು ಷಹರ್.
	60,726	66,809	68,502	75,151	76,907	74,010	70,074	ಶಿವಿಲ್ ವ ಮಿಲಿಟೇರಿ ಸ್ಟೇಷರ್.
ಶೀಮೆಯ ಇತರ ಸ್ಥಳಗಳಿಗೆ ಕೊಡಲ್ಪಟ್ಟ ತೇದಾದ್.	94,092	115,352	139,281	137,706	144,312	156,539	159,352	
ಶೀಮೆಗೆ ಒಟ್ಟು ಜುಮ್ಲಾ	179,254	210,747	236,595	244,139	255,308	264,542	263,378	

11. ಕಳೆದ ಆರು ವರುಷಗಳಲ್ಲಿ ಖರ್ಚಾದ ಷರಾಬಿನ ಮೇಲೆ ಆಯಾ ಸಾಲಿನಲ್ಲಿ ಜಾರೀಯಲ್ಲಿ ಯಿದ್ದ ತೀರ್ವೆ ದರಗಳ ಪ್ರಕಾರ ಕರಾರ್ವಾಕಾ ಹುಟ್ಟುವಳಿಯಾದ ಮೊಬಲಗು, ಮತ್ತು ಈಗ ಗೊತ್ತು ಮಾಡಲ್ಪಟ್ಟ (ಗ್ಯಾಲನ್ ವಂದಕ್ಕೆ 3—5—0) ಬಾಬತು ವಂದೇ ದರದ ತೀರ್ವೆಯು ಸದರೀ ಸಾಲ್‌ಗಳಲ್ಲಿ ಜಾರೀಯಿದ್ದ ಪಕ್ಷದಲ್ಲಿ ಹುಟ್ಟುವಳಿಯಾಗಬಹುದಾಗಿದ್ದ ಮೊಬಲಗು ಯಿವುಗಳನ್ನು ತೋರಿಸುವ ತಖ್ತೆಯು ಇದರಡಿ ಕಾಣಿಸಿರುತ್ತೆ:—

ಸಾಲ್‌ಗಳು.	ಪೂರ್ವಕ್ಕೆ ಜಾರೀಯಲ್ಲಿ ಯಿದ್ದ ಹೆಚ್ಚು ಕಮ್ಮೀ ದರಗಳಂತೆ ಹುಟ್ಟುವಳಿಯಾದ ಕರಾರ್ವಾಕಾ ಮೊಬಲಗು.	ಈಗ ಗ್ಯಾಲನ್ ವಂದಕ್ಕೆ ಗೊತ್ತು ಮಾಡಲ್ಪಟ್ಟ 3—5—0 ದರದ ಪ್ರಕಾರ ಹುಟ್ಟುವಳಿಯಾಗಬಹುದಾಗಿದ್ದ ಮೊಬಲಗು.
	ರೂಪಾಯಿ.	ರೂಪಾಯಿ.
1880—81	6,43,022	6,98,099
1881—82	6,33,329	7,83,720
1882—83	6,58,768	8,08,710
1883—84	6,88,019	8,45,707
1884—85	7,41,574	8,76,295
1885—86	7,47,314	8,72,439

ಹುಕ್ಕುಂ ಬಮೋಜೀಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಟೇರಿ.

52

ಅಪೆಂಡಿಕ್ಸ್.

8ನೇ ಪ್ಯಾರಾದಲ್ಲಿ ಕಂಡ ದರಖಾಸ್ತಿನ ನಮೂನೆ.

ಬೆಂಗಳೂರು ಮೊಕ್ಕಾಂ ಮೈಸೂರು ಶೀಮೆಯ ದಿವಾನರವರ ಚೀಫ್ ಸೆಕ್ರೆಟೇರೀಯವರ ಜನಾಬಿಗೆ.————

ಅಯ್ಯಾ,

————————————ನೇ ಮರ್ಕ್ಕಮಿನ ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ಮಾಡಲ್ಪಟ್ಟ ದೀವಾನರವರಿಂದ ಸಾದರ್ಮಾಡೋಣಾದ ————————ನೇ ಮರ್ಕ್ಕಂ————————ನೇ ನಂಬರ ಇಸ್ತಿಹಾರ್ನಾಮೆ ಅನುಸರಿಸಿ, ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನ್ ದೇಖೀಲ್ ಮೈಸೂರು ಶೀಮೆಯ ತಮಾಂ ಸ್ಥಳಗಳಲ್ಲೂ 1887ನೇ ಇಸವಿ ಏಪ್ರಲ್ 1ನೇ ಮರ್ಕ್ಕಂ ಲಗಾಯತು 18—ನೇ ಇಸವಿ ಮಾರ್ಚಿ 31ನೇ ಮರ್ಕ್ಕಂ ವರಿಗೆ ವಿಸ್ತರಿಸುವ————ವರುಷಗಳ ಕಾಲಪರಿಯಂತ, ಷರಾಬನ್ನು, ಮೇಲ್ಕಂಡ ಇಸ್ತಿಹಾರ್ ನಾಮೆಯಲ್ಲಿ ವಿವರಿಸಲ್ಪಟ್ಟ ಷರತ್ತುಗಳಿಗೂ, ರೂಲ್ಸುಗಳಿಗೂ, ಕರಾರಿಗಳಿಗೂ ಪಳಪಟ್ಟು ತಯಾರ್ಮಾಡುವ ಮತ್ತು ಬಟ್ಟು ಬಿಕರೀಮಾಡುವ ಬಟ್ಟು ಸ್ವಾತಂತ್ರ್ಯದ ಬಗ್ಯೆ ಇದರದೆಶೆಯಿಂದ ದರಖಾಸ್ತು ಮಾಡುತ್ತೇನೆ.

2. ನಾನು ಇದರ ದೆಸೆಯಿಂದ ಸರ್ಕಾರಕ್ಕೆಸಾಲಿಯಾನಾ (ಲೋಕಲ್ ಸೆಸ್ ದೇಖೀಲ್) ಇದರಡೀ ಕಂಡ ಪ್ರಕಾರ ಕಮ್ಮಿ ಮೊಬಲಗನ್ನು ಕೊಡುವದಕ್ಕೆ ಒಡಂಬಟ್ಟಿರುತ್ತೇನೆ:—

ಕಂಟ್ರಾಕ್ಟಿನ	ಮದಲ ಸಾಲಿನಲ್ಲಿ		..	..	ರೂ.
ಡಿಟೋ	ಎರಡನೇ	ಡಿಟೋ	..	..	ರೂ.
ಡಿಟೋ	ಮೂರನೇ	ಡಿಟೋ	..	..	ರೂ.
ಡಿಟೋ	ನಾಲ್ಕನೇ	ಡಿಟೋ	..	..	ರೂ.
ಡಿಟೋ	ಐದನೇ	ಡಿಟೋ	..	..	ರೂ.
				ಜುಮ್ಲಾ	ರೂ.

3. ಸದರೀ ಇಸ್ತಿಹಾರ್ನಾಮೆಯ 6ನೇ ಪ್ಯಾರಾದಲ್ಲಿ ಅಪೇಕ್ಷಿಸಲ್ಪಟ್ಟ ಪ್ರಕಾರ, ಮೈಸೂರು ಶೀಮೆಯ ದಿವಾನ್ ಸಾಹೆಬರವರ ಹೆಸರಿಗೆ ಕ್ರಮವಾಗಿ ಯಿಂಡಾರ್ಸ್ ಮಾಡಲ್ಪಟ್ಟ 1,000 ರೂಪಾಯಿನ __________ ನ್ನು ಇದರಸಂಗಡ ಕಳುಹಿಸಿರುತ್ತೇನೆ.

ತಮ್ಮ ಅತ್ಯಂತ ಶೇವಕನಾದ

ತಾರೀಖು ____________________

ಹೆಸರು ಮತ್ತು ವಿಳಾಸ

ಮೈಸೂರ ಗೆಜೆಟ್

ಸರ್ಕಾರದಿಂದ ಫ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ|| 15, ಸ್ವ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣ್ಣಾದ ಇಸ್ತಿಹಾರ್ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯು ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,

ಕಾಂಪ್ಟ್ರೋಲರ್.

ಅಂಚೇ ಇಲಾಖಾ.

ನಂ. 528—275. ತಾರೀಖು 6ನೇ ಜನವರೀ 1887.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಚನ್ನಗಿರಿ ತಾಲ್ಲೂಕು ಹೊದಿಗೆರೆಯಲ್ಲಿ ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟಿರುತ್ತೆ.

ಬಿ. ಮರಿಗಂಗಯ್ಯ,

ಅಂಚೇ ಬಕ್ಷಿ.

ಫಾರೆಸ್ಟ್ ಇಲಾಖಾ.

ಇ ಸ್ತಿ ಹಾ ರ ನಾ ಮೆ .

ತಾರೀಖು 21ನೇ ಡಿಶಂಬರ 1886.

ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ಬಾಬತು, ಯಿದರಡೀಲಿ ಕಂಡ ಚೌಬೀನೆಗಳನ್ನು ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕನ್‌ಸರ್ವೇಟರ ಸಾಹೇಬರವರಿಂದ ಪಬ್ಲಿಕ್ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಡಿಯತಕ್ಕ ಸ್ಥಳ ದಹೆಸರು.	ಹರಾಜು ತಾರೀಖು.	ಸಾಗವಾನಿ ನಾಟಾಗಳು.	ಕಾಡಜಾತಿ ನಾಟಾಗಳು.	ಸಾಗವಾನಿ ಮತ್ತು ಕಾಡಜಾತಿ ಬೆಲಗಗಳು.	ಷರಾ.
ಶಿರಾಳಕೊಪ್ಪ	15ನೇ ಜನವರೀ 1887	..	80	120	ಹರಾಜ್ ಕಾಲದಲ್ಲಿ ಸರಿಯಾದ ರೇಟ್ ಶಿಕ್ಕರೆ ಜಾಸ್ತಿ ನಾಟಾಗಳನ್ನು ಹರಾಜ್ ಹಾಕಲ್ಪಡುತ್ತದೆ.
ಶಿಕಾರಿಪುರ ಡಿಪೊ	18ನೇ ಡಿಟೋ 1887	..	40	210	
ತರೀಕೆರೆ ಡಿಪೊ	25ನೇ ಡಿಟೋ 1887	50	20	1000	
ಲಕ್ಕವಳ್ಳಿ ಡಿಪೊ	1ನೇ ಫಿಬ್ರುವರೀ 1887	650	650	2000	
ಕಣಬೂರ ಡಿಪೊ ತಾಲ್ಲೂಕು ಕೊಪ್ಪ	5ನೇ ಫಿಬ್ರುವರೀ 1887	500	200	30	
ಆಯನೂರು ಡಿಪೊ ಶಿವಮೊಗ್ಗಾ ತಾಲ್ಲೂಕು	15ನೇ ಡಿಟೋ 1887	100	..	..	

ಹರಾಜಿನ ಷರತುಗಳು—ಮೈಸೂರು ಗೆಜೆಟನಲ್ಲಿ 1873ನೇ ಇಸವಿ ಜೂನ್ 2ನೇ ಮುದ್ರಿತ ನಂಬರು 20ನೇ ಯಿಸ್ತಿಹಾರ್‌ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಯಿರತಕ್ಕದ್ದು. ಮತ್ತು ಹರಾಜಕಾಲದಲ್ಲಿ ಶ್ರೋಚಲ್ಪಡುವದು.

ಯಲ್. ರಿಕ್ಕೆಟ್ಟಸ್,

ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1886ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 931.

ಅರ್ಜೀದಾರ್ ತುಮಕೂರು ಡಿಸ್ಟ್ರಿಕ್ಟು ಗುಬ್ಬಿ ಕಸಬಾದಲ್ಲಿ ಇರುವ ಸೆಟ್ಟಿಕುಂಟೆ ನಂಜಪ್ಪನವರ ಮಕ್ಕಳು ನಂಜುಂಡಪ್ಪ, 2ನೇ ಈತನ ತಮ್ಮ ಈರಪ್ಪ 1—2ನೇ ಅರ್ಜೀದಾರರು ಮೈನರಗಳು ಇವರ ಗಾರಡಿಯನ್ ಮತ್ತು ಮಾವನಾದ ಮರಿಯಣ್ಣ,

ಅರ್ಜಿದಾರಗೆ ಘಾತಿಯಾದ ನಂಜಪ್ಪ ತಂದೆ ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ವಾಸಸ್ತನಾಗಿ ಮೃತಪಟ್ಟ ನಂಜಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಲೇಣೆಯನ್ನು ವಸೂಲ್ ಮಾಡುವದಕ್ಕೂ ಸದರೀಯವನ ಮೈನರ ಮಕ್ಕಳಾದ 1ನೇ ನಂಜುಂಡಪ್ಪ 2ನೇ ಈರಪ್ಪ ಯಿವರಿಗೆ ಇವರ ಮಾವ ಮರಿಯಪ್ಪ ಗಾರಡಿಯನ್ ಆಗಿ ಯಿರಬೇಕೆಂತಲೂ ಸದರೀ ಲೇಣೆಯನ್ನು ವಸೂಲ್ ಮಾಡಿಕೊಳ್ಳುವದಕ್ಕೂ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂದು ಅರ್ಜೀದಾರು ಖಾಯಿಷ್ ಮಾಡುತ್ತಾರೆ.

ಸದರೀ ದರಖಾಸ್ತನ್ನು 1887ನೇ ಇಸವಿ ಜನವರೀ 28ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ನಂಜಪ್ಪನಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ತಾರೀಖು 7ನೇ ಜನವರೀ 1887ನೇ ಇಸವಿ.

ಸಿ. ಕ್ರೆಸ್,

ಸಬ್ ಜಡ್ಜ.

ತುಮಕೂರು ಡಿಸ್ಟ್ರಿಕ್ಟು.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿರುವ ಸರ್ಕಾರಿ ಜಂಗ್ಲಿಗಳು (ದೇವರಾಯದುರ್ಗ, ಮದ್ದಗಿರಿ, ಹುಲಿಯೂರುದುರ್ಗವೂ ಶೇರಿ) ಅರಗಿನ ಇಜಾರೆಯು ಸನ್ 1887—88–1888 89—ಮತ್ತು 1889—90 ಈ ಮೂರು ಸರಕಾರಿ ಸಾಲ್‌ಗಳಿಗಾಗಿ ತುಮಕೂರು ಹೆಡ್ ಕ್ವಾರಟರ್ ಮೊಕ್ಕಾಂನಲ್ಲಿ ಡೆಪ್ಯುಟಿ ಕಮ್ಮಿಷನ್ ಸಾಹೇಬರವರ ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರವರು ಅಥವಾ ಹಾಜರಿರುವ ಅಸಿಸ್ಟೆಂಟ್ ಕಮ್ಮಿಷನರವರ ಮುಂದೆ 1887ನೇ ಇಸವಿ ಫಿಬ್ರವರಿ ತಾರೀಖು 5ರಲ್ಲು ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆ.

ತುಮಕೂರು	..	ಮದ್ದಗಿರಿ	..	ಚಿಕ್ಕನಾಯಕನಹಳ್ಳಿ
ಶಿರಾ	..	ಗುಬ್ಬಿ	..	ತಿಪಟೂರು
ಪಾವಗಡ	..	ಕುಣಿಗಲ್		

2. ಈ ದರಖಾಸ್ತುದಾರನು ಇಜಾರೆಯು ಅವನ ಹೆಸರಿಗೆ ನಿಂತ ಕೂಡ್ಲೆ ವಟ್ಟು ಇಜಾರೆ ಮೊಬಲಗು ಪೈಕಿ ನಾಲ್ಕು ಖಿಸ್ತಿಗೆ ಸಮನಾದ ಮೊಬಲಗನ್ನು ನಗದಾಗಿಯೂಗಲಿ ಕರ್ರೆನ್ಸಿ ನೋಟ್‌ಗಳ ಮೂಲಕವಾಗಲಿ ಡಿಪಾಜಿಟು ಇಡತಕ್ಕದ್ದು ಹಾಗೆ ಇಡುವದಕ್ಕೆ ತಪ್ಪಿ ದರೆ ಇಜಾರೆಯು ಕೂಡ್ಲೆ ಅವನ ಅವಗುಣಕ್ಕೆ ಹರಾಜ್ ಮಾಡಲ್ಪಟ್ಟು ಹಾಗೆ ಹರಾಜ್ ಮಾಡುವದ್ದರಿಂದ ವುಂಟಾಗಬಹುದಾದ ಯಾವ ನಷ್ಟಕ್ಕಾಗಲಿ ಅವನನ್ನು ಗುರಿಮಾಡಲ್ಪಡುವದು.

3. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ಇಜಾರೆ ಕೆಲಸದ ಮೇಲೆ 1887ನೇ ಇಸವಿ ಏಪ್ರೆಲ್ ಗುರ್ರೆ ತಾರೀಖಿನಲ್ಲಿ ಪ್ರ ವೇಶಿಸತಕ್ಕದ್ದು ಮತ್ತು ಅವನು ಮೊದಲನೇ ತಿಂಗಳ ಖಿಸ್ತನ್ನು 1887ನೇ ಇಸವಿ ಮೇ 15ನೇ ಮುರ್ಕೂಮಿನಲ್ಲಿ ಆಗಲಿ ಯಾ ತತ್ಪೂ ರ್ವದಲ್ಲಿ ಆಗಲಿ ಪಾವತೀಮಾಡಬೇಕಲ್ಲದೆ ತರುವಾಯದ ಎಲ್ಲಾ ಮಾಹೇವಾರಿ ಖಿಸ್ತುಗಳನ್ನು ಪ್ರತಿ ಮಾರನೇ ತಿಂಗಳು 15ನೇ ತಾರೀಖಿನ ವಳಗಾಗಿ ಪಾವತೀ ಮಾಡತಕ್ಕದ್ದು. ಈ ಬಾಬತು ಮಾಹೇವಾರೀ ಖಿಸ್ತು ಮೊಬಲಗು ಪಾವತೀ ಮಾಡುವದರಲ್ಲಿ ಡಿಪಾಜಿಟ್ ಇಡಲ್ಪಟ್ಟ ಮೊಬಲಗು ಲೆಖ್ಖಕ್ಕೆ ಶೇರಿಸಿಕೊಳ್ಳಲ್ಪಡಲಾರದು. 15ನೇ ತಾರೀಖಿಗೆ ಮೀರಿ ಪಾವತೀ ಮಾಡಲ್ಪಡುವ ಖಿಸ್ತುಮೊಬಲಗಿಗೆ ಸಾಲೀಯಾನಾ ಶೇ ಕಡಾ 6 ರೂಪಾಯಿ ಪ್ರಕಾರ ಪೂರಾ ತಿಂಗಳ ಬಡ್ಡಿಯನ್ನು ತೆಗದುಕೊಳ್ಳಲಾಗುವದು.

4. ಇಜಾರಾದಾರನಿಂದ ಪಾವತೀ ಮಾಡಲ್ಪಡಬೇಕಾದ ಮಾಹೇವಾರಿ ಖಿಸ್ತು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಮಂದಾಣೆ ಯಂತೆ ಲೋಕಲ್‌ಸೆಸ್ ಛಾರ್ಜು ಮಾಡಲ್ಪಡುವದು.

5. ಮೇಲೆ ಕಂಡ ಖಿಸ್ತು ಮೊಬಲಗುಗಳು ಕ್ರಮವಾಗಿ ಯರಡು ತಿಂಗಳು ವರಿಗೆ ಪಾವತಿ ಮಾಡುವದಕ್ಕೆ ತಪ್ಪಿದರೆ ಯಾ ಸಾ ವಕಾಶವಾದರೆ ಇಜಾರೆಯು ಪೂರಾಗಿ ರದ್ದು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಮತ್ತು ತಪ್ಪಿಹೋದ ಕಂಟ್ರಾಕ್ಟುದಾರನ ಅವಗು ಣಕ್ಕೆ ಇಜಾರೆಯು ಪುನಃ ಹರಾಜ್ ಮಾಡಲ್ಪಡುವದಲ್ಲದೆ ಡಿಪಾಜಿಟು ಇಡಲ್ಪಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪ ಡುವದು, ಸರಕಾರಕ್ಕೆ ಬರತಕ್ಕ ಬಾಕಿ ಮೊಬಲಗನ್ನು ಜಮೀನ್ ಬಾಬಿನ ಬಾಕಿಯಂತೆ ವಸೂಲ್ಮಾಡಲಾಗುವದು.

6 ಜಂಗ್ಲಿಗಳಲ್ಲಿ ತಾನು ಅರಗು ಜಮಾಯಿಸುವಂಥಾ ಮರಗಳನ್ನು ಕಡಿಯುವದಕ್ಕಾಗಲಿ ಸಾಗಿಸುವದಕ್ಕಾಗಲಿ ಅಥವಾ ಊನ ಪಡಿಸುವದಕ್ಕಾಗಲಿ ಅಧಿಕಾರ ವುಂಟಾಗುವದಿಲ್ಲ.

7. ಕಂಟ್ರಾಕ್ಟುದಾರನು ಮಂಜೂರ್ಮಾಡಲ್ಪಟ್ಟ ಇನಾಂದಾರ್‍ರುಗಳ ಹಕ್ಕುದಾರಿಗಳಲ್ಲಿ ಪ್ರವೇಶಿಸಕೂಡದು.

8. ಡೆಪ್ಯುಟಿ ಕಮ್ಮಿಷನರವರು ಯಾವ ಸವಾಲನ್ನಾಗಲಿ ಯಾವ ಸಬಬೂ ತಿಳಿಸದೆ ಅಂಗೀಕರಿಸುವ ಯಾ ತಿರಸ್ಕರಿಸುವ ಸ್ವಾ ತಂತ್ರಿಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ.

ತಾರೀಖು 17ನೇ ಡಿಶಂಬರ್ 1886.

ಪಿ. ಎನ್. ಕ್ರಿಷ್ಣಮೂರ್ತಿ, ಡೆಪ್ಯುಟಿ ಕಮ್ಮಿಷನರ್.

ಫ್ರೆಂಚ್‌ರಾಕ್ಸ ಸಬ್ ಡಿವೀಜನ್.

ತಾರೀಖು 8ನೇ ಜನವರೀ 1887.

ಫ್ರೆಂಚ್‌ರಾಕ್ಸ ಸಬ್ ಡಿವೀಜನ್ ಅತ್ತಿಕುಪ್ಪ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ನಮೂದಿಸುವ ದಸ್ತಾವೇಜನ್ನು ಕ್ರಮವಾ ದ ವಾರಸ್‌ದಾರ್‍ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳ ವೊಳಗಾಗಿ ಹಾಜರಾ ಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ರೆಜಿಸ್ಟ್ರೇಷನ್ ನಂಬರ.	ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆದು ಕೊಟ್ಟ ತಾರೀಖು.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿ ಮಾಡಿದ ತಾರೀಖು.	ಷರಾ—ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1884—85ನೇ ಇಸವಿ ಬಾಬತು ನಂಬರ 336	ಸಂತೆ ಬಾಚಹಳ್ಳಿಲ್ಲಿ ವಾಸವಾಗಿದ್ದು ಹಾಲೀ ಹಾಸನದಲ್ಲಿ ನಿತ್ಯಾತ್ರೆಯಿಂದ ಜೀವನ ಮಾಡಿಕೊಂಡು ಯಿರುವ 42 ವಯಸ್ಸುವುಳ್ಳ ಸ್ಮಾರ್ತ ಬ್ರಾಹ್ಮಣ ಜಾತಿ ಸಂಕಣ್ಣಯ್ಯನ ಹೆಂಡತಿ ಭಾಗೀರತಮ್ಮ.	ಸಂತೆ ಬಾಚಹಳ್ಳಿಯಲ್ಲಿ ಇರುವ ಸ್ಮಾರ್ತ ಬ್ರಾಹ್ಮಣ ಅಣಾಜಿರಾಯರ ರಾಮಯ್ಯನವರ ಮಗ 29 ವಯಸ್ಸುವುಳ್ಳವ್ಯವಸಾಯದಿಂದಜೀವನ ಮಾಡುವ ಕೃಷ್ಣಪ್ಪ.	1—11—84	15—11—84	24—11—84	ಸಂತೆ ಬಾಚಹಳ್ಳಿ ಗ್ರಾಮದಲ್ಲಿ ಫವತಿಯಾದ ನನ್ನ ಗಂಡನ ಹಿಸ್ಸೆಗೆ ಬಂದು ಈಗ ಪಾಳುಬಿದ್ದು ಇರುವ ಮನೆ ಚೌತರ್ಫ-ಪೂರ್ವಕ್ಕೆ ನನ್ನ ಮೈದನ ಶ್ರೀಕಂಠಯ್ಯನ ಮನೆ ಮತ್ತು ಅವನ ಹಿತ್ತಲು-ಪಶ್ಚಿಮ ನನ್ನ ಭಾವ ನಂಜಪ್ಪಯ್ಯ ಪುರಫ ಅಣ್ಣೈಯನ ಮನೆ ಮತ್ತು ಅವರ ಹಿತ್ತಲು-ಉತ್ತರಕ್ಕೆ ಬಳೆ ಚನ್ನವೀರಶೆಟ್ಟಿ ಹಿತ್ತಲು-ದಕ್ಷಿಣಕ್ಕೆ ದೊಡ್ಡಬೀದಿ ಈ ಮಧ್ಯೆ ಇರುವ 13 ಅಂಕಣ ಶಿಕಸ್ತು ಮೂರು ಅಂಕಣ ಕಟ್ಟುದಾಯೆ ಇದಕ್ಕೆ ಶೇರಿದ ಹಿತ್ತಲೂ ಪಾಳು ನಿವೇಶನ ಅದರಲ್ಲಿ ಇರುವ ಫಲಾ ತೆಂಗಿನ ಮರ, ಇದರಲ್ಲಿ ಇರುವ ತೊಲೆಗಳು ಹಂಚು ಸಹಾ ನಿನಗೆ ಗವರ್ನಮೆಂಟ್ 48 ರೂಪಾಯಿಗೆ ಖರೀದಿಗೆ ಕೊಟ್ಟು ಮೊಬಲಗು ತೆಗದುಕೊಂಡು ಯಿರುತ್ತೇನೆಂದು.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 27ನೇ ಡಿಸೆಂಬರ 1886.

ಇದರಿಂದ ಸಮ್ಮಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೇಲೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತಾವೇಜನ್ನ ಹಾಜರ್ ಮಾಡಿದವರೇಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ಬೇಲೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತಾವೇಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ದಸ್ತಾವೇಜಿನ ನಂಬರ.	ದಸ್ತಾವೇಜು ಬರೆದ ತಾರೀಖು.	ದಸ್ತಾವೇಜು ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಿ ಮಾಡಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳಾ.	ದಸ್ತಾವೇಜನ್ನ ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳಾ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
20 1884—85	12—6—84	15—6—84	16—7—84	ಬೇಲೂರು ತಾಲ್ಲೂಕು ಮೊದೇಹಳ್ಳಿ ಹೋಬಳಿ ಕಲ್ಲುಕೆರೆ ಪೇಟೇಯಲ್ಲಿರುವ ಬೇಲೂರು ತಾಲ್ಲೂಕು ಪಳ್ಳಿಕೊಂಡೆ ಸ್ಥಳದ ಮೊದ್ಯಪಕ್ಕೀರಸಾಬರ ಮಗ ಮೊಹದೀನಸಾಬಿ	ಈತನ ಹೆಂಡತಿ ರೈಹಿಮಾಬೀಬಿ	ಬಿಳಗಳ್ಳಿ ಗ್ರಾಮದ ಸರ್ವೆ 55—56ನೇ ಪೈಕೀ 18 ಎಕರೆ 7 ಕುಂಟೆ ಆಕಾರ 15—5—0 ವೃಕ್ಷ ಯಿರಡು ಬೋಂದು ತೋಟ 200 ರೂಪಾಯಿಗಳಿಗೆ ಕ್ರಯ.

ವಿ. ಡಿ. ಪೊನ್ನರಂಗಂ ಮೊದಲಿಯಾರು, ಫಾರ್ ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 22ನೇ ಡಿಸೆಂಬರ್ 1886.

ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿ ಇರುವ ಪತ್ರಗಳನ್ನು ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು 1 ತಿಂಗಳು ವಳಗಾಗಿ ವಾಪಸು ಪಡಿಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆಗೆ ನಾಶಪಡಿಸುತ್ತೆ.

ಅಂಕಿ ನಂ.	ಪುಸ್ತಕ ನಂಬರು	ದಸ್ತಾವೇಜು ನಂಬರ್.	ಬರೆದ ತಾರೀಖು.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟರಾದ ತಾರೀಖು.	ಬರಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	I	54 / 1884—85	22—5—84		22—5—84	1 ಸಂಸೆಗ್ರಾಮದಲ್ಲಿರುವ ಪಟೇಲ್ ಈರೇಗೌಡನ ಹೆಂಡತಿ ಹನುಮಮ್ಮ, 2 ಈಕೆ ಮೈದುನ ಉದ್ದೇಗೌಡ	ಮೂಡಗೆರೆ ತಾಲ್ಲೂಕು ಬೈಲಹಳ್ಳಿ ಗ್ರಾಮದಲ್ಲಿ ಇರುವ ಒಕ್ಕಲಗಿರ ಲಿಂಗೇಗೌಡನ ಮಗ ಚಿಕ್ಕೇಗೌಡ	ಸಂಸೆ ಗ್ರಾಮದಲ್ಲಿ ಇರತಕ್ಕ 8 ತರೀ ಜಮೀನುಗಳು 100 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.
2	ಡಿಟೋ	58 / 1884—85	26—5—84		26—5—84	ಶಿರಿಗೂರಲ್ಲಿರುವ ಶಿವಾಚಾರದ ಜಾತಿ ಹುಲಿಗೌಡನ ಮಗ ನಂಜೇಗೌಡ	ಶಿರಿಗೂರು ದಾಖಲೆ ಕೆಸವಿನ ಮನೆಯಲ್ಲಿರುವ ಕುರುಬರ ಬೀರಯ್ಯನಮಗ ಅಚ್ಚಯ್ಯಸೇರ್ವೆಗಾರ	ಶಿರಿಗೂರು ದಾಖಲೆ ಕೆಸವಿನ ಹಡ್ಲು ಅಡ್ಡವಾರೆ ಕಾಫಿತೋಟವೂ 225 ರೂಪಾಯಿಗೆ ಕ್ರಯ.
3	ಡಿಟೋ	134 / 1884—85	22—7—84		23—7—84	ತಿರುಗಣ ಗ್ರಾಮದ ತಿಮ್ಮೇಗೌಡನ ಮಗ ವಕ್ಕಲ ಮಕ್ಕಳ ಜಾತಿ ತಿಮ್ಮೇಗೌಡ	ಹವಳ್ಳಿಯಲ್ಲಿರುವ ಹಳೆಮನೆ ಸಂಣ ನಿರುವಾಣಿಗೌಡರ ಸಬ್ಬೇಗೌಡನ ಮಗ ಅಮೃತೇಗೌಡ	ತಿರುಗಣ ಗ್ರಾಮದ ನಂಬರ್ 30ನೇ ಪೈಕೀ ಕಾಫಿ ಹಿತ್ಲು 50 ರೂಪಾಯಿಯನ್ನ ತೀರಿಸಿಕೊಳ್ಳುವ ಬಗ್ಯೆ 10 ವರುಷದ ವರಿಗೆ ಇಳಿಭೋಗ್ಯಾದಿ ಮಾಡಿರುವಂತ್ತೆ.

ಟಿ. ವ್ಯಾಂಡರಲೋರ್,
ಫಾರ್ ರಿಜಿಸ್ಟ್ರಾರ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರಿ ದೇಣೇದಾರ ಬೆಂಗಳೂರು ಏದ್ದಿ ಕಟ್ಟೆಯಲ್ಲಿರತಕ್ಕ ಹಿರಾಬೂಬಿನ ವಿಷಯದಲ್ಲಿ—

ಸ್ನ 1886ನೇ ಇಸವಿ ದಿವಾಳಿ ಕೇಸ್ ನಂಬರು ಮಿ॥ 723.

ಹುಕ್ಕುಂ.

ಮೇಲ್ಕಂಡ ಹಿರಾಬೂಬಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಸಬ್ ಜಡ್ಜಿಯವರಾದ ಮಿ॥ ಸಿ. ಕ್ರೆನ್ ಸಾಹೇಬರವರ ರೂಬರೂ ಅರ್ಜಿದಾರಳಾದ ಹಿರಾಬೂಬಿಯು ಖುದ್ದಾಗಿಯೂ ಮತ್ತು ಸದರೀಯವಳ ಲೇಣೇದಾರ್ರಾದ 1—2ನೇರ ತರಫ್ ಪ್ಲೀಡರ್ ಗಂಗಾಧರೈಯನವರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಹಿರಾಬೂಬಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1886ನೇ ಇಸವಿ ಡಿಸೆಂಬರ್ 6ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯುಬಂದ ಅವರುಗಳ ವಾಸಸ್ಥಳ.	ಮೊಬಲಗು.	ಡಿಕ್ರೀ ಆದ ತಾರೀಖು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಬೆಂಗಳೂರಲ್ಲಿರತಕ್ಕ ಮಹಮ್ಮದ್ ಬಿ ..	ರೂ. 82 4 4	..	ಬೆಂಗಳೂರು ಮುನಸಿಫ್ ಕೋರ್ಟು 1886ನೇ ಇಸವಿ ಅರಿಜಿನಲ್ 43ನೇ ನಂ. ಬಾಬತು ಕೋರ್ಟು ಖರ್ಚು ಮೊಬಲಗು.	
2	ಮಹಮ್ಮದ್ ಯಾಕೂಬ್ ಬೆಂಗಳೂರು ..				

ಸಿ. ಕ್ರೈಸ್,
ಸಬ್ ಜಡ್ಜ್.

ಗೈರ ವಿಲಾ ಆದ

ಬಲಭಾಗದ ಕರೆಂ ಸಿನೋಟ್‌ಗಳ

ನಂಬರ್	ಸರ್ಕಲ್	ಕ್ರಯ.
B. 90—30886	,,	ರೂ. 20
B. 82—91553	,,	,, 20

ಹಕ್ಕುದಾರ—ಕ್ಲೋಸಪೇಟೆ ಕಸಬಾ ಸ್ಟಾಂಪ್‌ವೆಂಡರ್ ಭೀಮರಾವ್.

ನೋಟೀಸ್.

ಕೊಡಗು ಫಾರೆಸ್ಟು ಡಿಪ್ಯುಟಿ ಕನ್ಸರ್ವೇಟರ್ ಆಫಿಸಿನಿಂದ.

ತಾರೀಖು 23ನೇ ಮಾಹೆ ಡಿಶಂಬರ್ 1886.

ಇದರಡಿ ನಮೂದಿಸಲ್ಪಟ್ಟ ಹುಣಸೂರು ಡಿಪೋದಲ್ಲಿ ಇರತಕ್ಕ ನಾಟಗಳನ್ನು ಬರುವ ಸನ್ 1887ನೇ ಇಸವಿ ಫಿಬ್ರವರೀ ತಾರೀಖು 3ರಲ್ಲು ಬಹಿರಂಗವಾಗಿ ಹರಾಜು ಮಾಡೋಣಾಗುತ್ತದೆ.

ಸಾಗುವಾನಿ ನಾಟಗಳು 400. ಇತರ ನಾಟಗಳು 400.

ಷರತ್ತು—ಕೊಡಗು ಚೀಫ್ ಕಮ್ಮಿಷನರ್ ಸಾಹೇಬರವರು ಸನ್ 1885ನೇ ಇಸವಿ ಮೇ ತಾರೀಖು 16ನೇ ನಂಬರ್ 9ರ ಇಸ್ತಿಹಾರ್ ನಾಮೆಯನ್ನು ನೋಡು.

ಯಫ್. ಬಿ. ಡಿಕ್ಕೈನ್ಸನ್,
ಡಿಪ್ಟಿ ಕನ್ಸರ್ವೇಟರ್ ಕೊಡಗು ಫಾರೆಸ್ಟು ಡಿವಿಜನ್.

ಕ್ರಿಸ್ಟಲ್ಲೈ ಸಿಂಖೋನಾ ಫೆಬ್ರಿಫ್ಯೂಜ್.

ಗವರ್ನಮೆಂಟ್ ಕೋಠಿಯಲ್ಲಿ ಕೆಂಪುವರ್ಣದ ಸಿಂಖೋನಾ ಪಟ್ಟೆಯಿಂದ ತಯಾರ್‌ಮಾಡಲ್ಪಟ್ಟ ಹೊಸದಾದ ಮತ್ತು ಅಭಿವೃದ್ಧಿಯಾದ ತಯಾರಿ—ಇದು ಸಾಧಾರಣವಾದ ಕ್ರಿಸ್ಟಲ್ಲೈಜ್ಡ್ ಅಲ್ಲದ ಫೆಬ್ರಿಫ್ಯೂಜಿಗಿಂತ ಕ್ವೈನೈನಿಗೆ ಸಂಪೂರ್ಣವಾದ ಪ್ರತಿನಿಧಿಯಾಗಿದೆ. ಇದನ್ನು ಕಲಕತ್ತೆ ಬಳಿ ಸೀಬ್‌ಪೂರ್ ಸಮೀಪದಲ್ಲಿ ರಾಯಲ್‌ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರಿಂದ ಗವರ್ನಮೆಂಟ್ ಆಫಿಸರ್‌ಗಳು ಸರ್ಕಾರಿಯಾದ ಮತ್ತು ಧರ್ಮಾರ್ಥವಾದ ಕೆಲಸಗಳಿಗಾಗಿ ಮತ್ತು ಒಂದು ಸಲಕ್ಕೆ ಇಪ್ಪತ್ತು ಪೌಂಡ್ ಮತ್ತು ಅದಕ್ಕೆ ಮೇಲ್ಪಟ್ಟು ತೆಗದುಕೊಳ್ಳುವರು ನಗದಿಗಾಗಿಯೇ ಪೌಂಡ್ ಒಂದಕ್ಕೆ 24 ರೂಪಾಯಿಗಳ ದರ ಪ್ರಕಾರ ಕೊಂಡುಕೊಳ್ಳಬಹುದು. ರಾಯಲ್ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ನಗದಿಗೇನೇ ಸಮುದಾಯವಾಗಿ ಪ್ರಜೆಗಳಿಗೆ ಮತ್ತು ಪೌಂಡ್‌ಒಂದಕ್ಕೆ 32 ರೂಪಾಯಿಗಳ ಪ್ರಕಾರ ಮುಖ್ಯರಾದ ಯೂರೋಪಿಯನ್ ಮತ್ತು ನೇಟಿವ್ ಡ್ರಗ್ಗಿಸ್ಟರ್‌ಗಳಿಗೂ ಸರಬರಾಯಿ ಮಾಡತಕ್ಕದ್ದು. ಟಪ್ಪಾಲ್ ಹಾಸಲ್ ಹನ್ನೆರಡಾಣೆ ಜಾಸ್ತಿ.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌನ್‌ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೀ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ 4—8—0; ಎಂಟು ಔನ್ಸವುಳ್ಳ ಡಬಿ ರೂ. 8—8—0; ಒಂದು ಪೌನ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌನ್‌ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್ಕತ್ತೆಯಲ್ಲಿ ಹುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ ತಗರದ ಡಬ್ಬೀ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌನ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್, ಚಂದಾ ದರ ವಗೈರೇ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—				
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..			2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ .. .			1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:-				
ಮೊದಲನೇ ದಫಾ			5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ			2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.				
ಡ್ಯೂಪ್ಲಿಕೇಟ್ ಕಾಫೀಪಟ್ಟೀ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—				
ಮೊದಲನೇ ಸಲಕ್ಕೆ .. ಪುಟ 1ಕ್ಕೆ ..			10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ,, ..			5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ;—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ			0	8
ಎರಡನೇ ದಫಾ ಡಿಟೋ ಡಿಟೋ ..			0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ			0	4

ಷರಾ.—ಚಂದಾ ವಗೈರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತಿ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಬಮೋಜೀಬ್ ಹುಕ್ಕುಂ,

ಟಿ. ಟಿ. ಲೆನರಡ್,

ಮೈ. ಗೆ. ಕಂಪೈಲರ

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 3 ಸರ್ಕಾರದಿಂದ ಪ್ರಕಾಯಿಷ್ ಆದ್ದು. ಸ್ನ 1887.

ಬೆಂಗಳೂರು, ಶನಿವಾರ, ಜನವರೀ ತಾ|| 22, ಸ್ನ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟ್ಲರು, ಡಿಸ್ಟ್ರಿಕ್ಟು ವ ಸೆಷನ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನಗಳು, 1886ನೇ ಇಸವಿ Iನೇ ನಂಬರ್ ರೆಗ್ಯುಲೇಷನ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 10ನೇ ಜನವರೀ 1887.

ನಂ. 218.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಸಲ್ಪಡುವದೇನಂದರೆ, [ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ] ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈಕೆಳಗೆ ಕಂಡ ಜೋಡೀ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾ

ದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವೀಜನ್ ಅಸಿಸ್ಟೆಂಟ್ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರು ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಆವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ತಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವೀಜನ್ ಅಸಿಸ್ಟೆಂಟ್ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವಂತತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳಿ ಯಾ ಜೇಬೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಫ್ರೆಂಚರಾಕ್ಸ ಸಬ್ ಡಿವೀಜನ್	ಅತ್ತಿಕುಪ್ಪೆ	ಸಂತೇಬಾಚನಹಳ್ಳಿ	ಜೋಡೀ ದೊಡ್ಡ ಸೋಮನಹಳ್ಳಿ	ನಾಗರಗಟ್ಟದ ತಿಮ್ಮಯ್ಯ ಇತರ 6 ಮಂದಿ	26 8 8	221 0 7	203 0 0	124 7 9	1887ನೇ ಇಸವಿ ಫಿಬ್ರವರೀ ತಾರೀಖು 18ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ ರೂಬರೂ.

ತಾರೀಖು 11ನೇ ಜನವರೀ 1887.

ನಂ. 219.—ಅ|| ಕಮ್ಮಿಷನರ್ ಮೆ|| ಬಿ. ತಿರುಮಲಾರಿ ಬಿ. ಯಲ್. ಯವರು. ಕಳೆದ ತಿಂಗಳು 18ನೇ ತಾರೀಖು ಮಧ್ಯಾಹ್ನದ ಮೇಲೆ ಮೆ|| ನಾಗೇಶರಾಯರಿಂದ ಶಿವಮೊಗ್ಗಾ 1ನೇ ಅ|| ಕಮ್ಮಿಷನರವರ ಕೋರ್ಟು ಚಾರ್ಜು ವಹಿಸಿಕೊಂಡರು.

ತಾರೀಖು 6ನೇ ಜನವರೀ 1887.

ಕ್ಯಾಂಪ್ ನಂಬರ್ 1556.—ಮೈಸೂರು ಡಿಸ್ಟ್ರಿಕ್ಟ್ ವ ಸೆರ್ಷ ಜಡ್ಜ್ ಕೆಲಸಕ್ಕೆ, 1886ನೇ ಇಸವಿ ಜೂನ್ 25ನೇ ಮರ್ಕ್ಕಂ 116ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಆಕ್ಟಿಂಗ್ ತರೀಕ್ ಮೊಕರರ್ಮಾಡಲ್ಪಟ್ಟ ಮೆ|| ಎಸ್. ಹೇಮಾಜಿರಾಯರು, 3ನೇ ಗ್ರೇಡ್ ಡಿಸ್ಟ್ರಿಕ್ಟ್ ವ ಸೆರ್ಷ ಜಡ್ಜಿರಾಗಿ ಸದರೀ ಗ್ರೇಡಿನ ಪೂರಾ ತಲಬ್‌ನಿಂ 1887ನೇ ಇಸವಿ ಜನವರೀ 1ನೇ ಮರ್ಕ್ಕಂ ಲಾಗಾಯಿತು ಕಾಯಂಮಾಡಲ್ಪಟ್ಟಿರುತ್ತಾರೆ.

2. 1886ನೇ ಇಸವಿ ಜುಲೈ 29ನೇ ಮರ್ಕ್ಕಂ 140ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ವಂದನೇ ಕ್ಲಾಸ್ ಸಬಾರ್ಡಿನೇಟ್ ಜಡ್ಜೀರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟ ಮೆ|| ಸಿ. ಕ್ರಿಸ್ಟಯವರೂ, 2ನೇ ಕ್ಲಾಸ್ ಸಬಾರ್ಡಿನೇಟ್ ಜಡ್ಜೀರಾಗಿ ಆಕ್ಟಿಂಗ್ ತರೀಕ್ ಮೊಕರರ್ ಮಾಡಲ್ಪಟ್ಟ ಮೆ|| ಸಿ. ಶ್ರೀನಿವಾಸೈಯ್ಯಂಗಾರೂ ಸುದಾ, 1887ನೇ ಇಸವಿ ಜನವರೀ 1ನೇ ಮರ್ಕ್ಕಂ ಲಾಗಾಯತು ಅಯಾ ಕ್ಲಾಸ್‌ಗಳಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 31ನೇ ಡಿಶಂಬರ್ 1886.

ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನ್ ದೇಖೀಲ್ ಮೈಸೂರು ಶೀಮೆಯ ತಮಾಂ ಸ್ಥಳಗಳಲ್ಲೂ ಷರಾಬ್ ತಯಾರಿ ವ ಬಟ್ಟು ಬಿಕರೀ ಮಾಡುವ ಬಟ್ಟು ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತದೆ.

2. ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿನ ಕಂಟ್ರಾಕ್ಟು, ಮೈಸೂರು ದೇಶದ ರೆಸಿಡೆಂಟರವರ ಅಪ್ಪಣೆ ಮೇರೆ, ಈ ಇಸ್ತಿಹಾರ್‌ನಾಮೆಯಲ್ಲಿ ಶೇರಿಸಲ್ಪಟ್ಟಿರುತ್ತೆ.

3. ಹಾಲಿ ಯಾವ ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತೋ ಆ ಬಾಬತು ಸ್ವಾತಂತ್ರ್ಯವು, ಈ ಇಸ್ತಿಹಾರ್‌ನಾಮೆಯ 9ನೇ ಕಲಂನಲ್ಲಿ ವಿವರಿಸಿರುವ Iರ ಲಾಗಾಯಿತು XIXರ ವರಿಗಿನ ಷರತ್ತುಗಳಿಗೆ ಒಳಪಟ್ಟು, ಕೊಡಲ್ಪಡುವದು. ಸದರೀ ಸ್ವಾತಂತ್ರ್ಯದಲ್ಲಿ ಶೇಂದಿಯನ್ನಾಗಲೀ, ಶೀಮೆ ವೈನ್ ಸಾರಾಯಿಯನ್ನಾಗಲೀ, ಸ್ಪಿರಿಟ್‌ಗಳನ್ನಾಗಲಿ ಅಥವಾ ಬಿಯರ ಸಾರಾಯಿಯನ್ನಾಗಲಿ ತಯಾರ್ ಮಾಡುವ ಯಾ ಬಿಕರಿಮಾಡುವ ಸ್ವಾತಂತ್ರ್ಯವು ಅಡಗಿರುವದಿಲ್ಲ.

4. ತೀರ್ವೆ ದರದ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತ್ಹೆ ಆಗುವ ಲೋಕಲ್‌ಸೆಸ್ ದೇಖೀಲ್ ತೀರ್ವೆ ದರಗಳು, ಮತ್ತು ಕಂಟ್ರಾಕ್ಟರುಗಳಿಂದ ಸರಬರಾಯಿ ಮಾಡಲ್ಪಡುವ ಷರಾಬಿನ ಬಟ್ಟು ಬಿಕರಿ ದರಗಳು ಸುದ್ದಾ, ಈ ಇಸ್ತಿಹಾರ್‌ನಾಮೆಯ 9ನೇ ಪ್ಯಾರಾದಲ್ಲಿನ XIIIನೇ ನಂಬರ್ ಷರತ್ತಿನಲ್ಲಿ ವಿವರಿಸಲ್ಪಟ್ಟ ಪ್ರಕಾರ ಗವರ್ನಮೆಂಟಿನಿಂದ ಗೊತ್ತು ಮಾಡಲ್ಪಟ್ಟಿರುತ್ತೆ.

5. (*a.*) ಈಗ ದರಖಾಸ್ತು ಅಪೇಕ್ಷಿಸಲ್ಪಟ್ಟ ಕಂಟ್ರಾಕ್ಟು ಕಾಲವು, ದರಖಾಸ್ತುದಾರನ ಇಷ್ಟ ಪ್ರಕಾರ 1887ನೇ ಇಸವಿ ಏಪ್ರೆಲ್ 1ನೇ ಮರ್ಕ್ಕಂ ಲಾಗಾಯಿತು 1890ನೇ ಇಸವಿ ಮಾರ್ಚಿ 31ನೇ ಮರ್ಕ್ಕಂವರಿಗೆ ಆಗುವ ಮೂರು ವರುಷಕಾಲಕ್ಕಾಗಲಿ 1887ನೇ ಇಸವಿ ಏಪ್ರೆಲ್ 1ನೇ ಮರ್ಕ್ಕಂ ಲಾಗಾಯಿತು 1892ನೇ ಇಸವಿ ಮಾರ್ಚಿ 31ನೇ ಮರ್ಕ್ಕಂವರಿಗೆ ಆಗುವ ಐದು ವರುಷ ಕಾಲಕ್ಕಾಗಲಿ, ವಿಸ್ತರಿಸಬಹುದು.

(b.) ಪ್ರತಿ ದರಖಾಸ್ತುದಾರನೂ, ದರಖಾಸ್ತು ಮಾಡುವ ವಾಯಿದೆಯು ಮೂರು ವರುಷ ಕಾಲಕ್ಕೆ ಅಥವಾ ಐದುವರುಷ ಕಾಲಕ್ಕೆ ಎಂಬದನ್ನೂ ಆತನು ದರಖಾಸ್ತು ಮಾಡುವ ವಾಯಿದೆಯಲ್ಲಿ ಸಾಲೀಯಾನಾ ಸರ್ಕಾರಕ್ಕೆ ಎಷ್ಟು ಕಮ್ಮಿ ಮೊಬಲಗು ಕೊಡುವದಕ್ಕೆ ಒಡಂಬಡುತ್ತಾನೋ ಆ ಸಂಗತಿಯನ್ನೂ ವಿವರವಾಗಿ ನಮೂದಿಸತಕ್ಕದ್ದು.

(c.) ಕಂಟ್ರಾಕ್ಟಿನ ಮದಲ ಎರಡು ಸಾಲ್‌ಗಳಲ್ಲಿ ಗವರ್ನ್‌ಮೆಂಟಿಗೆ ಸಾಲಿಯಾನಾ ಏಳೂವರೆ ಲಕ್ಷ ರೂಪಾಯಿಗಳಿಗಿಂತ ಕಮ್ಮಿಯಾಗಿಯೂ ಉಳಿದ ಸಾಲ್ ಯಾ ಸಾಲ್‌ಗಳಲ್ಲಿ ಎಂಟು ಲಕ್ಷ ರೂಪಾಯಿಗಳಿಗಿಂತ ಕಮ್ಮಿಯಾಗಿಯೂ ಕೊಡುವಂತೆ ಒಪ್ಪುವ ಯಾವ ದರಖಾಸ್ತಾಗಲಿ ಆಲೋಚಿಸಲ್ಪಡಲಾರದು.

6. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲೀ ಅಥವಾ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನ್‌ಮೆಂಟ ಸೆಕ್ಯೂರಿಟಿ ಪತ್ರಗಳ ಮೂಲಕವಾಗಿಯಾಗಲೀ 1,000 ರೂಪಾಯಿಗಳ ಠೇವಣಿ ಮೊಬಲಗು ಕಳುಹಿಸಲ್ಪಟ್ಟು "ಷರಾಬ್ ತಯಾರಿ ವ ಒಟ್ಟು ಬಿಕರಿಯ ಬಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಎಂಬ ಮಾತುಗಳು ವಿಳಾಸ ಬರೆಯಲ್ಪಟ್ಟು ಲಿಫಾಫೆಯಲ್ಲಿ ಹಾಕಿ 1887ನೇ ಇಸವಿ ಫಿಬ್ರವರಿ 15ನೇ ಮಂಗಳವಾರ ದಿವಸ ಯಾ ತತ್ಪೂರ್ವದಲ್ಲಿ ಬೆಂಗಳೂರಲ್ಲಿ ದಿವಾನರವರ ಚೀಫ್ ಸೆಕ್ರಟೇರಿಯವರಿಗೆ ತಲಪುವಂತೆ ರವಾನಿಸಲ್ಪಡತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತುಗಳೂ ತೆಗೆದುಕೊಳ್ಳಲ್ಪಡಲಾರದು. ದರಖಾಸ್ತುಗಳು, 1887ನೇ ಇಸವಿ ಫಿಬ್ರವರೀ 15ನೇ ಮುಕ್ಕಾಮಿನ ಮಧ್ಯಾಹ್ನ 12 ಘಂಟೆಗೆ, ಹಾಜರಾಗತಕ್ಕ ದರಖಾಸ್ತುದಾರರ ರೂಬರೂ ದಿವಾನರವರ ಆಫೀಸಿನಲ್ಲಿ ಚೀಫ್ ಸೆಕ್ರಟೆರಿಯವರಿಂದಲೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಂದಲೂ ಖುಲ್ಲಾ ಮಾಡಲ್ಪಡುವವು, ದರಖಾಸ್ತುಗಳ ಆಖೈರ್ ವ್ಯವಸ್ಥೆ ದಿವಾನರವರಿಗೆ ಸೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನೂ ತಿಳಿಸದೇಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು. ದೀವಾನರವರಿಗೆ ಸಿಫಾರಸ್ ಮಾಡುವಬಗ್ಯೆ ಚುನಾಯಿಸಲ್ಪಡುವ ದರಖಾಸ್ತುದಾರರು ಕೂಡ್ಲೇ ನಗದಾಗಿಯಾಗಲೀ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನ್‌ಮೆಂಟ ಪತ್ರಗಳ ಮೂಲಕವಾಗಿಯಾಗಲೀ, ದರಖಾಸ್ತುದಾರರು ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ಮೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಒಂದು ತಿಂಗಳ ಖಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೇ ಠೇವಣಿ ಇಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

7. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಿಗೆ ತಿಳಿಸಲ್ಪಟ್ಟ ಎಂಟು ದಿವಸಗಳೊಳಗಾಗಿ ಮೊದಲೇ ಇಡಲ್ಪಟ್ಟ ಡಿಪಾಜಿಟ್ ಮೊಬಲಗಿನೊಡನೆ, ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ ¼ರ ಮೊಬಲಗಿಗೆ ಸಮನಾಗುವಂತೆ ಇನ್ನೂ ಕೆಲವು ಮೊಬಲಗನ್ನು ನಗದಾಗಿಯಾಗಲಿ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನ್‌ಮೆಂಟ ಪತ್ರಗಳ ಮೂಲಕವಾಗಿ ಯಾಗಲಿ ಬೆಂಗಳೂರು ಡೆಪ್ಯುಟಿ ಕಮ್ಮಿಷನರಲ್ಲಿ ಠೇವಣೀ ಇಡತಕ್ಕದ್ದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್ತಗಳಿಗೆ ಬದ್ಧನಾಗಿ, ತಕ್ಕ ಛಾಪಾ ಕಾಗದದ ಮೇಲೆ, ವಿಧಿಸಲ್ಪಟ್ಟ ನಮೂನೇಯಲ್ಲಿ ಒಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರುಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟ್ಟನ್ನ ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ ಮೊದಲೇ ಇಡಲ್ಪಟ್ಟ ಠೇವಣಿ ಮೊಬಲಗುಗಳು ಸರ್ಕಾರಕ್ಕೆ ಸೇರಿಸಿ ಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

8. ಈ ಯಿಸ್ತಿಹಾರ್‌ನಾಮೆಯ ಯಾವ ಷರತ್ತುಗಳನ್ನಾಗಲೀ ಯಷ್ಟುಮಟ್ಟಿಗಾದ್ದರೂ ಬದಲಾಯಿಸುವದನ್ನು ಸೂಚಿಸುವ ಯಾವ ದರಖಾಸ್ತುಗಳಾಗಲೀ ಆಲೋಚಿಸಲ್ಪಡಲಾರವು, ಮತ್ತು ತಮಾಂ ದರಖಾಸ್ತುಗಳೂ ಈ ಯಿಸ್ತಿಹಾರನಾಮೆಗೆ ಲಗತ್ತಿರುವ ನಮೂನೆಯಲ್ಲಿರತಕ್ಕವು.

9. ಹಾಲಿ ದರಖಾಸ್ತು ಅಪೇಕ್ಷಿಸಲ್ಪಟ್ಟಿರತಕ್ಕ ಕಂಟ್ರಾಕ್ಟು ಯಿದರಡೀ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಯಾವವೆಂದರೆ :—

ಷರತ್ತುಗಳು.

1. (a.) ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ಮಿ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರ್ಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕಲೋಕಲ್ ಸೆಸ್ ದೇಖೀಲ ಸರ್ಕಾರದಿಂದ ಗೊತ್ತು ಮಾಡಲ್ಪಟ್ಟ ದರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನೂ ಆ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ, ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು.

(b.) ಯಾವುದಾದರೂ ತಿಂಗಳ ಅಖೈರ್ ವರಿವಿಗೆ ಕೊಡಲ್ಪಡುವ ಷರಾಬಿನಮೇಲೆ ಸಲ್ಲತಕ್ಕ ತೆರಿಗೇಮೊಬಲಗು, ಕರಾರ್ ಮಾಡಿಕೊಂಡ ಕಮ್ಮೀ ಹುಟ್ಟುವಳೀ ಪೈಕೀ ಸದರೀಮಾಹೆ ಖಿಸ್ತು ಮೊಬಲಗ್ ಭರ್ತಿಗೆ ಸಾಲದೇ ಹೋದರೆ, ಅಂತಾಕಮ್ಮೀ ಮೊಬಲಗನ್ನು ಭರ್ತೀಮಾಡುವದಕ್ಕೆ ಬೇಕ್ಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತೀ ಪುರೋಖ್ತು ಅದೇಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮೀ ಪುರೋಖ್ತಿಗೆ ಉಪಯೋಗಿಸಲ್ಪಡತಕ್ಕದ್ದು. ಯಾವದಾದರೂ ವಂದು ಮಾಹೇಯಲ್ಲಿ ಜಾಸ್ತಿ ಪುರೋಖ್ತಿನಿಂದ ಹುಟ್ಟುವಂಥಾ ತೀರ್ವೆಯ ಪೈಕಿ ಅದೇ ಸರ್ಕಾರ್‌ಸಾಲಿನ ಯಾವದಾದರೂ ಹಿಂದಿನ ಮಾಹೆ ಯಾ ಮಾಹೆಗಳಲ್ಲಿ ಕಂಟ್ರಾಕ್ಟು ದಾರನಿಂದ ಕಂ ಭರ್ತೀಮಾಡಲ್ಪಟ್ಟಿರಬಹುದಾದ ಮೊಬಲಗಿಗಿಂತಲೂ ಜಾಸ್ತಿಯಾಗಿರುವ ಮೊಬಲಗು, ಜಾಸ್ತೀ ಪುರೋಖ್ತಿನ ದೆಶೆಯಿಂದ ಯಾವ ಮಾಹೆಯಲ್ಲಿ ತೀರ್ವೆ ಮೊಬಲಗು ಹುಟ್ಟುವಳಿಆಯಿತೋ ಅಂಥಾ ಮಾಹೆಗೆ ಸಲ್ಲಬೇಕಾದ ಗೊತ್ತಾದ ಖಿಸ್ತು ಮೊಬಲಗಿನೊಂದಿಗೆ ಸರ್ಕಾರ ಖಜಾನೆಗೆ ಪಾವತಿ ಮಾಡಲ್ಪಡತಕ್ಕದ್ದು. ಮತ್ತು ಸದರೀ ಪಾವತಿ ಯೊಂದಿಗೆ ಅದೇ ಸರ್ಕಾರ್ ಸಾಲಿನ ಯಾವದಾದರೂ ಹಿಂದಿನ ಮಾಹೆ ಯಾ ಮಾಹೆಗಳಲ್ಲಿ ಕಂಟ್ರಾಕ್ಟುದಾರನಿಂದ ಕಂಭರ್ತೀ ಮಾಡಲ್ಪಟ್ಟಿರಬಹುದಾದ ಮೊಬಲಗಿಗೋಸ್ಕರ ಜಾಸ್ತಿ ಪುರೋಖ್ತಿನ ಮೇಲಿನ ತೀರ್ವೆ ಬಗ್ಗಾಗಿ ಒಂದು ಸ್ಟಾಂಪು ಹಚ್ಚಿದ ರಶೀತಿಯು ಕಂಟ್ರಾಕ್ಟುದಾರ ಯಾ ಆತನ ಏಜಂಟಿನಿಂದ ರುಜು ಮಾಡಲ್ಪಟ್ಟು ಹಾಜರ್ಮಾಡಲ್ಪಡತಕ್ಕದ್ದು.

(c). ಯಾವ ಮಾಹೆಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮಾರನೇ ತಿಂಗಳ 15 ನೇ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಅವು ಪಾವತಿಯಾಗದೆ ಹೋದರೆ, ಬಾಕೀ ನಿಲ್ಲುವ ತಮಾಂ ಮೊಬಲಗಿನಮೇಲೂ ಸದರೀ ತಾರೀಖುಲಾಗಾಯಿತು ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕಟ್ಟಲ್ಪಡುವದು. ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತ್ತವೋ ಆ ತಿಂಗಳು ಕಳದ ತರುವಾಯುವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದೇಖಿಲ್ ಸಲ್ಲತಕ್ಕ ಬಾಕೀ ಮೊಬಲಗು, ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸ್ ನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ವಟ್ಟು ಬಿಕರೀ ಕೋರ್ಟಿಗಳಲ್ಲಿರತಕ್ಕ ನಗದ್ ಮೊಬಲಗ್ ದೇಖಿಲ್

65

ಕಂಟ್ರಾಕ್ಟುದಾರನ ಸ್ವತ್ತಿನ ಜಪ್ತೀ ಹರಾಜು ಮೂಲಕ ವಸೂಲ್‌ಮಾಡಲ್ಪಡತಕ್ಕದ್ದು. ಮತ್ತು ಬೆಂಗಳೂರು ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರಾಕ್ಟು ರದ್ದು ಮಾಡಲ್ಪಟ್ಟಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟುದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರಾಕ್ಟು ಕಾಲದ ಪೈಕಿ ಉಳಿದ ಕಾಲದಲ್ಲಿ ಕಂಟ್ರಾಕ್ಟುದಾರನ ಖರ್ಚಿಗೂ ಲುಕ್ಸಾನಿಗೂ ವಳಪಟ್ಟು ಬಾಬು ಅಮಾನಿಯಲ್ಲಾಗಲೀ ಅನ್ಯಥಾ ಆಗಲೀ ಇಡುವದಕ್ಕೂ ಸಹ ದಿವಾನರವರ ಯೆಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಖ್ಖಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಫೈಸಲ್ ಮಾಡಲ್ಪಡತಕ್ಕದ್ದು. ಒಂದು ಸಾಲಿನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನಮೆಂಟಿಗೆ ಸಲ್ಲತಕ್ಕ ತೆರಿಗೆಯು ಆಸಾಲಿಗೆ ಕರಾರ್ ಮಾಡಿದ ಕಮ್ಮೀ ಹುಟ್ಟುವಳಿಗೆ ಜಾಸ್ತೀ ಆದರೆ, ಅಂಥಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾಯಿ 1 ಕ್ಕೆ 1 ಅಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೆರಿಗೇ ದೆಸೆಯಿಂದ ವಜಾ ಕೊಡಲ್ಪಡುವದು. ಆದರೆ ವಂದು ವರುಷದ ಜಾಸ್ತೀ ಮೊಬಲಗು, ಇಜಾರೇ ಪೈಕೀ ಯಾವದಾದರೂ ಇತರ ಸಾಲಿನ ಕರಾರ್ ಮಾಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ಮೀ ಬೀಳತಕ್ಕ ಯಾವ ಮೊಬಲಗನ್ನಾಗಲೀ ಭರ್ತೀ ಮಾಡುವಬಗ್ಯೆ ಉಪಯೋಗಿಸುವದಿಲ್ಲ.

III. (*a*). ಕಂಟ್ರಾಕ್ಟುದಾರನು ಬೆಂಗಳೂರು ಬಳಿಯಣ ಸರ್ಕಾರಡಿಸ್ಟಿಲೇರಿಯ ಆವರಣದೊಳಗಾಗಲೀ ಅಥವಾ VIIನೇ ಷರತ್ತಿನಲ್ಲಿ ವಿವರಿಸಲ್ಪಟ್ಟಂತೆ ಇತರ ಸ್ಥಳದಲ್ಲಾಗಲಿ ಷರಾಬ್ ತಯಾರ್ ಮಾಡುವಂತೆಯೂ ಮತ್ತು ಡೆಪ್ಯುಟಿಕಮ್ಮಿಷನರಿಂದ ಮೊಕರರ್ ಮಾಡಲ್ಪಡತಕ್ಕಂಥಾ ಸ್ಥಳಗಳೊಳಗೆ ಬಟ್ಟಿಕೋಠಿಗಳನ್ನು ಸ್ಥಾಪಿಸುವಂತೆಯೂ ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ ಅಥವಾ ಆಬಗ್ಯಾಗಿ ಮೊಕರರ್ ಮಾಡಲ್ಪಟ್ಟ ಯಾವ ಉದ್ಯೋಗಸ್ಥರಿಂದಾಗಲಿ ಯಾ ತತ್ಕಾಲದಲ್ಲಿ ಗವರ್ನಮೆಂಟ್ ಡಿಸ್ಟಿಲೇರಿ ಚಾರ್ಜುವುಳ್ಳ ಹೆಡ್ ಸೂಪರ್‌ವೈಜರ್ ಅಥವಾ ಇತರ ಆಫೀಸರರಿಂದಾಗಲೀ ತನಖಿ ನೋಡುವಬಗ್ಯೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠಿಗಳು ಖುಲ್ಲಾವಾಗಿರತಕ್ಕದ್ದು; ಮತ್ತು ಸದರೀ ಡಿಸ್ಟಿಲೇರಿ ಚಾರ್ಜುವುಳ್ಳ ಹೆಡ್ ಸೂಪರ್‌ವೈಜರ್ ಯಾ ಇತರ ಆಫೀಸರರವಶಕ್ಕೆ, ರೋಜೀನಾ ಕೆಲಸಮುಗಿದ ತರುವಾಯ ಡಿಸ್ಟಿಲೇರಿಯನ್ನು ಮೊಹರ್‌ಮಾಡಿ ಬೀಗದಕೈಗಳು ಪಹರೇದಲ್ಲಿ ಭದ್ರಪಡಿಸತಕ್ಕ ಬಗ್ಯಾಗಿ, ಒಪ್ಪಿಸಲ್ಪಡತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಯೆ ಮೊಕರರ್ ಮಾಡಲ್ಪಡುವ ಒಬ್ಬ ಉದ್ಯೋಗಸ್ಥನಿಂದ ಅಳತೇಮಾಡಲ್ಪಟ್ಟು ಅಜಮಾಯಿಷೀ ಮಾಡಲ್ಪಟ್ಟ ಹೊರತು ಡಿಸ್ಟಿಲೇರಿಯಿಂದಹೊರಗೆ ತೆಗೆದುಕೊಂಡು ಹೋಗಕೂಡದು. ಡಿಸ್ಟಿಲೇರಿಕಟ್ಟಗಳನ್ನೂ ನೀರನ್ನೂ ಉಪಯೋಗಿಸತಕ್ಕಬಗ್ಯೆ 250ರೂಪಾಯಿಗಳ ಬಾಡಿಗೆಯನ್ನು ಕಂಟ್ರಾಕ್ಟುದಾರನು ಮಾಹೆಯಾನಾ ಗವರ್ನಮೆಂಟಿಗೆ ಸಂದಾಯ ಮಾಡಲ್ಪಡುವಂತೆಯೂ ಸದರೀ ಕಟ್ಟಗಳನ್ನು ನೀರುಕಾಲ್ವೆಗಳನ್ನೂ ಪೂರಾ ದುರಸ್ತು ಸ್ಥಿತಿಯಲ್ಲಿ ಇಟ್ಟುಕೊಂಡಿರುವಂತೆಯೂ ನಿಯಮಿಸಲ್ಪಡತಕ್ಕದ್ದು. ಯಗ್ಜಿಕ್ಯುಟಿವ್ ಇಂಜಿನಿಯರುರವರು ಸದರೀ ಕಟ್ಟಗಳನ್ನೂ ಜಲಾಧಾರದ ಕಾಲ್ವೆಗಳನ್ನೂ ಮೂರುತಿಂಗಳಿಗೆ ವಂದಾವರ್ತಿ ತನಖಿನೋಡುವರು ಮತ್ತು ಆಬಗ್ಯಾಗಿ ಡಿಸ್ಟಿಲೇರಿಯಲ್ಲಿಡಲ್ಪಟ್ಟ ವಂದುಬುಕ್ಕಿನಲ್ಲಿ ಕಟ್ಟಗಳ ಮತ್ತು ನೀರುಕಾಲ್ವೆಗಳ ಸ್ಥಿತಿಯನ್ನು ಷರಾ ಬರದು ಬಯಿಂದ ನಡಿಸಲ್ಪಡಬೇಕಾದ ಕೆಲಸಗಳನ್ನು ಹಾಜರಿರತಕ್ಕ ಕಂಟ್ರಾಕ್ಟರು ಯಾ ಅವರ ಏಜಂಟು ಅಥವಾ ಇತರ ಉದ್ಯೋಗಸ್ಥನಿಗೆ ತಿಳಿಸತಕ್ಕದ್ದು. ಈ ಬಾಬತು ಷರಾಗಳ ನಕಲು ಡೆಪ್ಯುಟಿ ಕಮ್ಮಿಷನರವರಿಗೂ, ಮತ್ತೊಂದು ಪ್ರತಿ ಕಂಟ್ರಾಕ್ಟುದಾರನಿಗೂ ಕಳುಹಿಸಲ್ಪಡತಕ್ಕದ್ದು. ಯಗ್ಜಿಕ್ಯೂಟಿವ್ ಯಿಂಜನಿಯರುರವರು ತನಿಖಿನೋಡಿದ ಲಾಗಾಯತು 15 ದಿವಸಗಳೊಳಗಾಗಿ, ಅವಶ್ಯಕಗಳಾದ ಕಾಮಗಾರಿಯು ಕಂಟ್ರಾಕ್ಟುದಾರನಿಂದ ನಡಿ

ಸಲ್ಪಡದೇಹೋದ್ದರೆ, ಯಕ್ಸಿಕ್ಯೂಟಿವ್ ಯಿಂಜನೀಯರವರು ಕೂಡ್ಲೆ ಅವಾಸಿಯಲ್ಲಿ ಸದರೀ ಕಾಮಗಾರಿಯನ್ನ ಜರಗಿಸತಕ್ಕದ್ದು, ಮತ್ತು ಡೆಪ್ಯುಟಿ ಕಮ್ಮಿಷನರವರು ಆ ಬಾಬತು ಲಾಗವಡನ್ನು ತಪ್ಪಿಹೋದ ಕಂಟ್ರಾಕ್ಟುದಾರನಿಂದ, ಜಮೀನ್ ಕಂದಾಯದ ಬಾಕೀ ವಸೂಲಿಬಗ್ಯೆ ತತ್ಕಾಲದಲ್ಲಿ ಜಾರೀ ಇರುವ ರೂಲ್ಸ್ ಅನುಸರಿಸಿ ವಸೂಲ್ಮಾಡಬೇಕಾಗಿರುತ್ತೆ.

(b.) ಕಂಟ್ರಾಕ್ಟುದಾರನು, ಡಿಸ್ಟಿಲೇರಿ ಶಿಬ್ಬಂದಿ, ಮೇಲ್ ತನಿಖಿ ಮತ್ತು ಪೈಗಸ್ತಿ ಯಿಲಾಖಾ ಮತ್ತು ಯಿವುಗಳಿಗೆ ಸಂಬಂಧಪಟ್ಟ ಕಂಟಿಜಂಟ್ ಖರ್ಚ ಯಿವುಗಳ ಲಾಗವಡಿಗೋಸ್ಕರ, ಡಿಸ್ಟಿಲೇರಿಯಿಂದ ಸರಬರಾಯಿ ಮಾಡಲ್ಪಟ್ಟ ತಮಾಂ ಷರಾಬಿನ ಮೇಲೆ ಗ್ಯಾಲನ್ ಒಂದಕ್ಕೆ ಅರ್ಧಾಣೆಪ್ರಕಾರ ಆಗುವ ತೀರ್ವೆಯನ್ನು ಮಾಹೇಯಾನಾ ಸಲಾಯಿಸತಕ್ಕದ್ದು.

(c.) ಮೇಲ್ಕಂಡ ಯರಡು ಕಲಂಗಳಲ್ಲಿ ನಮೂದಾದ ಡಿಸ್ಟಿಲೆರಿ ಕಟ್ಟಗಳ ಬಾಡಿಗೆ ಮತ್ತು ಶಿಬ್ಬಂದಿ ತೀರ್ವೆ ಮೊಬಲಗುಗಳು, ಅವು ಬಾಕಿಯಾಗುವ ಮಾರನೇ ತಿಂಗಳ 15ನೇ ತಾರೀಖಿನಲ್ಲಿ ಮಾಹೆವಾರಿ ಖಿಸ್ತಿನೊಂದಿಗೆ ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಕಂಟ್ರಾಕ್ಟುದಾರನಿಂದ ತಪ್ಪದೆ ಪಾವತೀ ಮಾಡಲ್ಪಡಬೇಕು. ಹೀಗೆ ಪಾವತಿ ಮಾಡದೇ ತಪ್ಪಿದರೆ ಈ ಬಾಬತು ಬಾಕಿಯು, ತತ್ಕಾಲದಲ್ಲಿ ಜಾರಿಯಿರುವ ರೂಲ್ಸು ಅನುಸರಿಸಿ ಜಮೀನ್ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡುವದು.

IV. (a.) 1887ನೇ ಇಸವಿ ಏಪ್ರಲ್ 1ನೇ ತಾರೀಖಿನಲ್ಲಿ ದಾಸ್ತಾನ್ ಯಿರಬಹುದಾದ ಯಾವ ಷರಾಬನ್ನಾಗಲೀ ಹಳೇ ಕಂಟ್ರಾಕ್ಟುದಾರರು, ದಿವಾನರವರ ಮಂಜೂರಾತಿಸಿಶಿ ಡಿಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡುವ ಈಡು ಮೊಬಲಗನ್ನು ಹೊಸ ಕಂಟ್ರಾಕ್ಟುದಾರನಿಂದ ಪಡೆದು ಅವನಿಗೆ ಒಪ್ಪಿಸತಕ್ಕದ್ದು. ಅಂಥಾ ದಾಸ್ತಾನು ಸಾಧಾರಣವಾಗಿ ಕಳದ 36 ತಿಂಗಳುಗಳಲ್ಲಿ ಮಾಹೆಯಾನಾ ತಯಾರ್ಮಾಡಲ್ಪಟ್ಟ ಸರಾಸರಿ ತೇದಾದಿಗಿಂತಲೂ ಜಾಸ್ತಿಯಾಗಿರಕೂಡದು.

(b.) ಹೊಸ ಕಂಟ್ರಾಕ್ಟುದಾರನು ಆ ಪ್ರಕಾರ ಅಪೇಕ್ಷಿಸಿದಲ್ಲಿ 1887ನೇ ಇಸವಿ ಮಾರ್ಚಿ ಗುರ್ರೇ ತಾರೀಖು ಲಾಗಾಯತು “ಬೆಳೆ” ಹಾಕುವದನ್ನು ಹಳೇ ಕಂಟ್ರಾಕ್ಟುದಾರನು ಮೊಕೂಫ್ ಮಾಡತಕ್ಕದ್ದು, ಮತ್ತು ಅದೇ ತಾರೀಖಾರಭ್ಯ ಹೊಸ ಕಂಟ್ರಾಕ್ಟುದಾರನು ಕೆಲಸಗಳು ಆರಂಭಿಸತಕ್ಕ ಒಗ್ಯಾಗಿ ಕಟ್ಟವನ್ನು ಖಾಲಿ ಮಾಡತಕ್ಕದ್ದು. ಈ ವಿಷಯದಲ್ಲಿ 1887ನೇ ಇಸವಿ ಫೆಬ್ರವರೀ 22ನೇ ಮರ್ಸ್ಕಾಮಿನವಳಗಾಗಿ ಹಳೇ ಕಂಟ್ರಾಕ್ಟುದಾರರಿಗೆ ಒರಹಮೂಲಕವಾಗಿ ನೋಟೀಸ್ ಕೊಡಲ್ಪಡತಕ್ಕದ್ದು. ಹಾಂಗೆ ನೋಟೀಸ್ ಕೊಡಲ್ಪಡದೆ ಹೋದರೆ ಹಳೇ ಕಂಟ್ರಾಕ್ಟುದಾರನು 1887ನೇ ಇಸವಿ ಮಾರ್ಚಿ 31ನೇ ವರ್ಸ್ಕಾಂ ಪರಿಯಂತ ಬಟ್ಟಿಯಿಳಿಸತಕ್ಕ ಕೆಲಸ ಚಲಾಯಿಸತಕ್ಕದ್ದು, ಮತ್ತು ಆ ತಾರೀಖು ವಳಗಾಗಿ ಹಾಜರಿರತಕ್ಕ ತಮಾಂ ಬೆಳೆಯನ್ನು ಝಾಡೆಯಾಗಿ ಉಪಯೋಗಿಸತಕ್ಕದ್ದು.

(c.) ಹಳೇ ಕಂಟ್ರಾಕ್ಟುದಾರರಿಂದ ಶಾಶ್ವಿತವಾಗಿ ಸ್ಥಾಪಿಸಲ್ಪಟ್ಟ ಯಂತ್ರಗಳು ಪಿನಾ ಆತನಿಗೆ ಶೇರಿದ ಇತರ ತಮಾಂ ಸಾಮಾನುಗಳು, ಈ ಷರತ್ತನುಸರಿಸಿ ಷರಾಬು ತಯಾರ್ಮಾಡುವದು ಮೋಖೂಫ್ ಮಾಡಿದ ಒಂದು ವಾರದವಳಗಾಗಿ ಆಚೆಗೆ ಸಾಗಿಸಲ್ಪಡತಕ್ಕದ್ದು. ಇದಕ್ಕೆ ತಪ್ಪಿದರೆ, ಡೆಪ್ಯುಟಿ ಕಮ್ಮಿಷನರವರು, ಹಳೇ ಕಂಟ್ರಾಕ್ಟುದಾರನ ಖರ್ಚಿಗೆ ವಳಪಟ್ಟು ಅವುಗಳು ಆಚೆಗೆ ಸಾಗಿಸಲ್ಪಡುವ ಬಗ್ಯೆ ಏರ್ಪಾಡು ಮಾಡುವರು.

(d.) ಹಳೇ ಕಂಟ್ರಾಕ್ಟುದಾರರಿಗೆ ಶೇರಿದ ಯಾವದಾದರೂ ದಾಸ್ತಾನ್ ಮತ್ತು ಯಂತ್ರ ಸಾಧನಗಳು ಹೊಸ ಕಂಟ್ರಾಕ್ಟುದಾರನಿಗೆ ಅವಶ್ಯಕವಿದ್ದಲ್ಲಿ ಆತನು ಅವುಗಳನ್ನು ನ್ಯಾಯವಾದ ಖರೀದಿಗೆ ತೆಗೆದು ಕೊಳ್ಳುವದಾಗಿ 1887ನೇ ಇಸವಿ ಮಾರ್ಚಿ 1ನೇ ತಾರೀಖಿನ ವಳಗಾಗಿ ಹಳೇ ಕಂಟ್ರಾಕ್ಟುದಾರರಿಗೆ ನೋಟೀಸ್ ಕೊಡತಕ್ಕದ್ದು; ಮತ್ತು ಅಂಥಾ ಖರೀದಿಯಲ್ಲಿ ತಕರಾರ್ ಉಂಟಾದರೆ ಡೆಪ್ಯುಟಿ ಕಮ್ಮಿಷನರ

ವರು ಅವುಗಳನ್ಯಾಯವಾದ ಖರೀದಿಯನ್ನು ಗೊತ್ತು ಮಾಡತಕ್ಕದ್ದು. ಪರಂತು ಹಾಂಗೆ 1887ನೇ ಇಸವಿ ಮಾರ್ಚಿ 1ನೇ ತಾರೀಖುವಳಗಾಗಿ ನೋಟೀಸ ಕೊಡಲ್ಪಡದೆಹೋದರೆ, ಹಳೇ ಕಂಟ್ರಾಕ್ಟುದಾರರು ಅವುಗಳನ್ನು ಸಾಗಿಸಿಕೊಂಡು ಹೋಗುವದಕ್ಕೆ ಸ್ವತಂತ್ರರಾಗಿರತಕ್ಕದ್ದು, ಮತ್ತು ಈ ವಿಷಯದಲ್ಲಿ ಹೊಸಕಂಟ್ರಾಕ್ಟುದಾರನು ತನ್ನ ಯಿಷ್ಟ ಪ್ರಕಾರ ಏರ್ಪಾಡು ಮಾಡಿಕೊಳ್ಳಬಹುದು.

(ಲ.) ಸದರೀ ಷರತ್ತಿನಲ್ಲಿ ಕಂಡ ರೂಲ್ಸಗಳು, ಈಗ ನಡೆಸಿರುವ ಬದಲಾವಣೆಗಳೊಡನೆ ಹಾಲೀದರಖಾಸ್ತು ಅಪೇಕ್ಷಿಸಲ್ಪಟ್ಟಿರುವ ಕಂಟ್ರಾಕ್ಟಿಗೆ ಅನ್ವಯಿಸತಕ್ಕವು.

V. ತಯಾರ್‌ಮಾಡಲ್ಪಡುವ ಸಾರಾಯಿಯು, ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಇಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು, ಡೆಪ್ಯುಟಿ ಕಮಿಷನರವರಿಂದ ಮಂಜೂರ್‌ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗದುಕೊಳ್ಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್‌ವೈಜರಿಗೆ ಅಥವಾ ಈ ಬಗ್ಗೆ ನೊಕರರ್ ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಇಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು ಅಥವಾ ಷರಾಬ್ ತಯಾರ್‌ಮಾಡಲ್ಪಟ್ಟ ತರುವಾಯ ಅದರಲ್ಲಿ ಹಾಕಲೂ ಕೂಡದು ಮತ್ತು ಉಪಯೋಗಿಸಲ್ಪಡುವ ಎಲ್ಲಾ ಪದಾರ್ಥಗಳೂ ಪ್ರಥಮತಃ ವಿಧಿಸಲ್ಪಟ್ಟ ದಾಮಾಷಾಯಿ* ಪ್ರಕಾರ ಇರತಕ್ಕವು, ಅಥವಾ ಕಂಟ್ರಾಕ್ಟುದಾರನಿಂದ ರೋಜೇನಾ ತಯಾರ್‌ಮಾಡಲ್ಪಡುವದರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕ್ಕೋಸ್ಕರ ಐಯಿಂದ ಗವರ್ನಮೆಂಟಿನವರಿಂದ ನಿರ್ಣಯಿಸಲ್ಪಡುವ ದಾಮಾಷಾಯಿ ಪ್ರಕಾರವಾಗಲಿ ಇರತಕ್ಕದ್ದು. "ಬೆಳೆ" ಬಟ್ಟಿ ಇಳಿಸಲ್ಪಡುವ ಪರಿಯಂತ ಅವರ ಬಲವನ್ನು ಆಯಾ ಕಾಲಗಳಲ್ಲಿ ಗೊತ್ತು ಮಾಡುವದಕ್ಕೋಸ್ಕರ ಅಂಗೀಕರಿಸಲ್ಪಟ್ಟಿರುವ ಲಾಂಗ್ ಅಂಡ ಡಿಂಗ ಅಂಡ ಫೇಜಯವರ ಸಾಚರೋಮೀಟರಸ ಯಂತ್ರವು ಕಂಟ್ರಾಕ್ಟುದಾರರಿಂದ ಇಡಲ್ಪಟ್ಟು ಯಕಸ್ಯೈಸಿಯಾನೆ ಆಬಕಾರಿ ಆಫೀಸರುಗಳಿಂದ ದೃಢಪಡಿಸಿ ತನಿಖೆ ನೋಡಲ್ಪಡುವಬಗ್ಯೆ ಅವುಗಳ ನಿಜವಾದ ವ ಕರಾರ್ ವಾಕಾ ಆದ ಲೆಖ್ಖ ಇಡಲ್ಪಡತಕ್ಕದ್ದು.

*ಯರಡು ಮಣಗಳ ತಾಟಿಬೆಲ್ಲ ಅಥವಾ ಕಾಕಂಬೀಗೆ ಮೂರು ಮಣಗಳ ವಳ್ಳೇಗನ್ನಾ ಬೆಲ್ಲಾ ಮತ್ತು ಬೆಲ್ಲಾ ಮಣ ವಂದಕ್ಕೆ ಮೂರು ಶೇರುಗಳುಳ್ಳ ವಳ್ಳೇ ಬಬ್ಬಡಿ (ಕೆಂಪುಚಕ್ಕೆ, ಪೀಲದಚಕ್ಕೆ) ಅವಶ್ಯಕವಿದ್ದಲ್ಲಿ ಗನ್ನಾ ಬೆಲ್ಲವಂದೇ ಉಪಯೋಗಿಸಲ್ಪಡಬಹುದು.

VI. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ, ತಯಾರ್‌ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತ್, ಇವುಗಳ ಕರಾರ್‌ವಾಕಾ ಲೆಖ್ಖಗಳನ್ನೂ, ಮತ್ತು ಡಿಸ್ಟಿಲೇರಿಯಲ್ಲಿ ರೋಜೇನಾ ಜಮಾಖರ್ಚು ಆದ ಎಲ್ಲಾಪದಾರ್ಥಗಳ ಲೆಖ್ಖಗಳನ್ನೂ, ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಕಂಟ್ರಾಕ್ಟುದಾರನ ಕ್ಯಾಷ್ ಲೆಖ್ಖವು ರೋಜೇನಾ ಅಲಾಹಿದಾ ದಾಖಲ್‌ಮಾಡಲ್ಪಟ್ಟು ದಾಸ್ತಾ ಪೈಕಿ ಖರೀದೀ ಮಾಡಲ್ಪಟ್ಟ ಪ್ರತಿ ತೇದಾದಿಗೂ ವೌಚರ ಇಡಲ್ಪಟ್ಟುವಿಧಿಸಲ್ಪಟ್ಟ ನಮೂನೆಯಲ್ಲಿ ಕ್ಯಾಷ ಲೆಖ್ಖ ವ ಗೋಷ್ವಾರೆಯು ಮಾಹೆಯಾನಾ ತಯಾರ್‌ಮಾಡಲ್ಪಟ್ಟು ಕಂಟ್ರಾಕ್ಟುದಾರನಿಂದಾಗಲಿ ಅವನ ಏಜಂಟನಿಂದಾಗಲಿ ಕ್ರಮವಾಗಿ ರುಜು ಮಾಡಲ್ಪಟ್ಟು ಹೆಡ ಸೂಪರ್‌ವೈಜರವರಿಗೆ ಒಪ್ಪಿಸಲ್ಪಡತಕ್ಕದ್ದು. ಆತನು ಅಂಥಾ ತಮಾಂ ಲೆಖ್ಖಗಳನ್ನೂ ಡೆಪ್ಯುಟಿ ಕಮಿಷನರವರಿಂದಾಗಲೀ, ಹೆಡ ಸೂಪರ್‌ವೈಜರುವರಿಂದಾಗಲೀ ಅಥವಾ ಆ ಬಗ್ಯಾಗಿ ನೊಕರರ್‌ಮಾಡಲ್ಪಡುವ ಯಾವ ಉದ್ಯೋಗಸ್ಥನಿಂದಾಗಲೀ ತನಿಖೀ ನೋಡುವಬಗ್ಯೆ ಹಾಜರ್ ಮಾಡುವಂತೆ ಕೇಳಲ್ಪ

ಟ್ಟಾಗ ಅವುಗಳನ್ನು ಹಾಜರ್ಮಾಡತಕ್ಕದ್ದು; ಮತ್ತು ಹೆಡ್ ಸೂಪರ್ವೈಜರವರು ಆಗಿಂದಾಗ್ಯೆ ಅಪೇಕ್ಷಿಸಲ್ಪಡುವಂಥಾ ತಪಶೀಲ್‌ಗಳುಳ್ಳ ದೃಢಪಡಿಸಲ್ಪಟ್ಟ ಯಥಾ ನಕಲ್‌ಗಳನ್ನು ಅವರಿಗೆ ಒಪ್ಪಿಸತಕ್ಕದ್ದು.

VII. ಒಂದು ತಿಂಗಳಿಗೆ ಆಗುವಷ್ಟು ಮತ್ತು 16,000 ಗ್ಯಾಲನ್‌ಗಳಿಗೆ ಕಡಿಮೆಯಿಲ್ಲದ ಸಾರಾಯಿಯನ್ನು ಯಾವಾಗ್ಯೂ ಹಾಜರಿಯಲ್ಲಿಟ್ಟುಕೊಂಡಿರಲಿಕ್ಕೆ ಬಟ್ಟೀದಾರನು ಬದ್ಧನಾಗಿರತಕ್ಕದ್ದು. ಮತ್ತು 1887ನೇ ಇಸವಿ ಏಪ್ರೈಲ್ 1ನೇ ತಾರೀಖಿನಲಾಗಾಯಿತು ಈ ಮೇರೆ ದಾಸ್ತಾನ್ ಹಾಜರಿಡುವಬಗ್ಯೆ ಆತನು ಸದರೀ ತಾರೀಖಿಗೆ ಮುಂಚೆಯೇ ಬಟ್ಟೀ ಕೆಲಸಕ್ಕೆ ಆರಂಭಿಸಲು ಅವಕಾಶ ಕೊಡಲ್ಪಡತಕ್ಕದ್ದು; ಪರಂತು ಹಾಂಗೆ ತಯಾರ್ಮಾಡಲ್ಪಟ್ಟ ಯಾವ ಷರಾಬೇ ಆಗಲೀ, 1887ನೇ ಇಸವಿ ಏಪ್ರೈಲ್ 1ನೇ ತಾರೀಖಿಗೆ ಮುಂಚಿತವಾಗಿ ತನ್ನ ವಶದಿಂದಲಾಗಲೀ ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಲಾಗಲೀ, ಸದರೀ ತಾರೀಖುವರಿಗೆ ಮೊಹರ್ ಸಮೇತ ಅಮಾನತ್ ಇರುವಬಗ್ಯೆ ಬಟ್ಟಿ ಕೋಠಿಗಳಲ್ಲಿ ತಡೆದಿಡುವಬಗ್ಯೆ ಹೆಡ್ ಸೂಪರ್ವೈಜರವರಿಂದ ರುಜು ಮಾಡಲ್ಪಟ್ಟ ಪ್ಯಾಶಿನ ಆಧಾರದ ಮೇಲೆ ಸಾಗಿಸಲ್ಪಡುವದು ವಿನಾ, ಅನ್ಯಥಾ ಮಾರಲ್ಪಡಕೂಡದು ಯಾ ಸಾಗಿಸಲ್ಪಡಕೂಡದು. ಕಂಟ್ರಾಕ್ಟುದಾರನು ತಮಾಂ ತಾಲ್ಲೂಕು ಕಸಬಾ ಜಾಗಾಗಳಲ್ಲಿಯೂ, ದೊಡ್ಡ ಷಹರ್‌ಗಳಲ್ಲಿಯೂ ಮತ್ತು ಹೆಡ್ ಸೂಪರ್ವೈಜರವರು ಡೆಪ್ಯುಟಿ ಕಮಿಷನರವರ ಮಂಜೂರಾತಿನಿಶಿ ಅಥವಾ ಮಂಜೂರಾತಿ ನಿರೀಕ್ಷಣೆ ಮೇಲೆ ಸದರೀ ಡೆಪ್ಯುಟಿ ಕಮಿಷನರವರ ಅಧಿಕಾರದ ಸ್ಥಳ ಸರಹದ್ದಿಗೆ ಒಳಪಟ್ಟು ಮತ್ತು ಚಿಲ್ಲರೆ ಬಿಕರೀದಾರರ ಅನುಕೂಲ್ಯತೆಗೆ ಸಹಕಾರಿಯಾದ್ದೆಂಬದಾಗಿ ಗೊತ್ತುಮಾಡುವಂಥಾ ಇತರ ಸ್ಥಳಗಳಲ್ಲಿ ಯೂಸುದಾ ಬಟ್ಟಿ ಅಂಗಡಿಗಳನ್ನು ಸ್ಥಾಪಿಸುವದಕ್ಕೆ ಅಪ್ಪಣೆಕೊಡಲ್ಪಡತಕ್ಕದ್ದು. ಕಂಟ್ರಾಕ್ಟುದಾರನು, ಅಂಥಾ ವಟ್ಟು ಅಂಗಡಿಗಳಲ್ಲಿ ಯಾವಾಗ್ಯೂ ವಟ್ಟು ಬಿಕರೀ ಲೈಸೆನ್ಸ್‌ರೂಲ್ಸಿನಲ್ಲಿ ವಿವರಿಸಿರುವಂತೆ, ದಾಸ್ತಾನ್ ಇರುವ ವೃದ್ಧಿಕ್ಷಯ ಕ್ರಮವಾಗಿ ಸರಬರಾಯಿ ಮಾಡತಕ್ಕದ್ದು. ಅಂಥಾ ವಟ್ಟು ಬಿಕರೀ ಅಂಗಡಿಗಳಲ್ಲಿ "ದಾಸ್ತಾನ್ ಕಮ್ಮಿ ಯಿದ್ದರೂ" ಮತ್ತು "ದಾಸ್ತಾನ್ ಇಲ್ಲದಿದ್ದರೂ" ಕಮ್ಮಿ ಯಿರುವ ತೇದಾದಿಗೆ ಯರಡರಷ್ಟು ಕಿಮ್ಮತು ಜುರ್ಮಾನೇ ತರೀಕ್ ವಸೂಲ್ಮಾಡಲ್ಪಟ್ಟು ಆ ಪೈಕಿ ಚಿಲ್ಲರೆ ಬಿಕರೀದಾರನಿಗೆ ನಷ್ಟವೇನಾದರೂ ಸಂಭವಿಸಿ ಯಿದ್ದಲ್ಲಿ ಅದುಪಾವತೀ ಮಾಡಲ್ಪಡುವದು. ಹಾಲೀ ವಟ್ಟು ಅಂಗಡಿಗಳು ಯಿರತಕ್ಕ ಸ್ಥಳಗಳ ಒಂದು ಪಟ್ಟಿಯು, ಕಂಟ್ರಾಕ್ಟುದಾರನು ಡೆಪ್ಯುಟಿ ಕಮಿಷನರಿಗಾಗಲಿ ಹೆಡ್ ಸೂಪರ್ವೈಜರವರಿಗಾಗಲೀ ದರಖಾಸ್ತು ಮಾಡಿ ಪಡಿಯಬಹುದು. ಕಂಟ್ರಾಕ್ಟುದಾರನು, ದುಕಾನ್ ಒಂದಕ್ಕೆ ಮಾಹೆಯಾನಾ 2 ರೂಪಾಯಿನಂತೆ ಗೊತ್ತು ಮಾಡಲ್ಪಟ್ಟ ಲೈಸೆನ್ಸ್ ಫೀಯನ್ನು ಪಾವತೀ ಮಾಡತಕ್ಕದ್ದು.

VIII. ಕಂಟ್ರಾಕ್ಟುದಾರನು, XI ಮತ್ತು XIIIನೇ ಷರತ್ತುಗಳಲ್ಲಿನ ರೂಲ್ಸ್‌ಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರ್ತು, ಅನ್ಯಥಾ ಡಿಸ್ಟಿಲೇರಿಯಲ್ಲಾಗಲೀ ಬಟ್ಟು ಬಿಕರೀ ಅಂಗಡಿಗಳಲ್ಲ್ಯಾಗಲೀ ಸಾರಾಯಿಯನ್ನು ಚಿಲ್ಲರೆಪುರೋಖ್ತು ಮಾಡಕೂಡದು.

IX. ಚಿಲ್ಲರೆ ಪುರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟು ಜಾತ ಡೆಪ್ಯುಟಿ ಕಮಿಷನರುಗಳ ವಿಚಾರಣೆಯಲ್ಲಿಯೂ ಮತ್ತು ಮ್ಯುನಿಸಿಪಲ್ ಷಹರ್‌ಗಳಲ್ಲಿ, ಹಾಂಗೆ ದಿವಾನ್‌ರವರಿಂದ ಅಪ್ಪಣೆ ಮಾಡಲ್ಪಟ್ಟರೆ, ಅಂಥಾ ಷಹರ್‌ಗಳ ಮ್ಯುನಿಸಿಪಲ್ ಪ್ರೆಸಿಡೆಂಟರು ಯಾ ವೈಸ್ ಪ್ರೆಸಿಡೆಂಟರ ವಿಚಾರಣೆಯಲ್ಲಿಯೂ ಇರತಕ್ಕವು. ಯಾವ ಅಂಗಡಿಗಳನ್ನಾಗಲೀ ಪಬ್ಲಿಕ್ ಜರೂರಾತಿ ಸಬಬಿನ ಮೇಲೆ, ಇಜಾರೆದಾರನು ತನಿಗೆ ಈಡು ಮೊಬಲಗು ಕೊಡಬೇಕೆಂದು ಕೇಳುವ ಹಕ್ಕಿಲ್ಲದೇನೇ, ಮುಚ್ಚುವಂತೆ ಹುಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು. ಜಾತ್ರೆಗಳು, ಸಂತೆಗಳು ಮತ್ತು ಹಬ್ಬಗಳಲ್ಲಿ ಬಟ್ಟು ಕೋಠಿಗಳು ಮತ್ತು ಚಿಲ್ಲರೆ ಪುರೋಖ್ತು ಅಂಗಡಿಗಳನ್ನು ಹೆಚ್ಚುವಾಯಿದೆ ವರಿಗೆ ಖುಲ್ಲಾ ಇಡಲ್ಪಡುವ ಬಗ್ಯೆ ಅಮಲ್‌ದಾರುಗಳಿಂದ ಧಾರಾಳವಾಗಿ ಅಪ್ಪಣೆ ಕೊಡಲ್ಪಡತಕ್ಕದ್ದು.

X. (*a*) ಡೆಪ್ಯುಟಿ ಕಮ್ಮಿಷ್ನರವರ ಮಂಜೂರಾತಿನಿಶಿ ಅಥವಾ ಮಂಜೂರಾತಿ ನಿರೀಕ್ಷಣಾಮೇಲೆ ಹೆಡ್ ಸೂಪರ್‌ವೈಜರವರಿಂದ ಮೊಕರರ್ಮಾಡಲ್ಪಡುವ ಪ್ರಕಾರಾ, ಮೇಲ್ಕಂಡ ಆಫೀಸರರಿಂದ, ತಾಲ್ಲೂಕು ಕಸಬಾಗಳಲ್ಲಿಯೂ, ಹೋಬಳಿ ಕಸಬಾ ಜಾಗಾಗಳಲ್ಲಿಯೂ, ದೊಡ್ಡ ಹಳ್ಳಿಗಳಲ್ಲಿಯೂ ಮತ್ತು ಜನಗಳು ಆ ಬಗ್ಯಾಗಿ ಅಪೇಕ್ಷಿಸುವಂಥಾ ಇತರ ಸ್ಥಳಗಳಲ್ಲಿಯೂ ಚಿಲ್ಲರೆ ದುಕಾನ್‌ಗಳಗೋಸ್ಕರ ವಿಧಿಸಲ್ಪಟ್ಟ ನಮೂನೆಯಲ್ಲಿ ಲೈಸೆನ್ಸಗಳು ಕೊಡಲ್ಪಡುವವು. ಹಾಲಿ ಇರತಕ್ಕ ತಮಾಂ ದುಕಾನ್‌ಗಳೂ ಕಾಯಂ ಇಡಲ್ಪಡತಕ್ಕವು. 1887ನೇ ಇಸವಿ ಏಪ್ರೆಲ್ 1ನೇ ತಾರೀಖಿನಲ್ಲಿ ಅಮಲ್‌ದಾರರುಗಳು ಬಟ್ಟಿ ಕೋಠೀಗಳಲ್ಲಿನ ದಾಸ್ತಾನ್ ತನಿಖೇಮಾಡಿ ಆ ಪೈಕಿ ಪಂದು ಶೀಷೆ ಸಾರಾಯಿಯನ್ನು ಬಂದೋಬಸ್ತಾಗಿ ಬಿರಡೇಹಾಕಿಶಿ ಮೊಹರ್‌ಮಾಡಿಸಿ ಯಕ್ಸೈಸ್ ಅಫೀಸರರ ತನಿಖೆ ವ ಅಜಮಾಯಿಷೀ ಬಗ್ಯೆ ಇಡಿಸತಕ್ಕದ್ದು. ಯಾವದಾದರೂ ಪಂದು ಸ್ಥಳದಲ್ಲಿ ಯ ಚಿಲ್ಲರೆ ದುಕಾನ್‌ಗಳ ಸಂಖ್ಯೆಯು ಜಾಸ್ತಿ ಮಾಡಬೇಕಾದರೂ ಕಮ್ಮಿ ಮಾಡಬೇಕಾದರೂ, ಅವುಗಳಲ್ಲಿ ನಡೆದ ಬಿಕರೀಮೇಲೆ ಗೊತ್ತು ಮಾಡಲ್ಪಡತಕ್ಕದ್ದು.

3. ದರಖಾಸ್ತುಗಳು, ಸ್ನ 1887ನೇ ಇಸವಿ ಫಿಬ್ರುವರೀ 19ನೇ ಮುಕ್ಕಾಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಹೆಸರಿಗೆ ಮೇಲು ವಿಳಾಸಃ ಬರೆಯಲ್ಪಟ್ಟು ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು, ಅಥವಾ 1887ನೇ ಇಸವಿ ಫಿಬ್ರುವರೀ 22ನೇ ಮುಕ್ಕಾಂ ಮಧ್ಯಾನ್ಹದೊಳಗಾಗಲಿ ತತ್ಪೂರ್ವವಾಗಲಿ ಮೈಸೂರು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಹಾಸನ ಡಿ|| ಡೆ|| ಕಮ್ಮಿಷನರವರಿಗೇನೇ ಪಾವತೀ ಮಾಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆ ಸಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೇ ನಗದಾಗಿಯಾಗಲಿ ಕ್ರಮಪ್ರಕಾರ ಮೈಸೂರು ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂಥಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು. ಚಡದರಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಗಲೀ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯೆಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗು ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮ ಪ್ರಕಾರ ಮೈಸೂರು ಶ್ರೀಮೈಯು ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ ಬಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜೂ ಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೆ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ದರಖಾಸ್ತುದಾರನ ಲುಕಸಾನಿಗೊಳಪಟ್ಟು ಅನ್ಯಥಾ ವಿಲಾ ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್‌ಸೆಸ್ ದೇಖೀಲ್ ಅಂಥಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮಾನಾದ ಖಿಸ್ತುಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6ರ ಪ್ರಕಾರ ಬಡ್ಡೀ ಕೊಡತಕ್ಕದ್ದು; ಅಂಥಾ ಬಾಕಿ ಮೊಬಲಗುಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತಿಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಧವಾಗಿ ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀಸಹಿತ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸುಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂತೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣಿಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಂಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆ ಬಗ್ಯಾಗಿ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗ್ಯೆರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರಿಗಳಲ್ಲಿ ಗುತ್ತಿಗೆದಾರನು ಎಷ್ಟು ಮಾತ್ರಕ್ಕೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರುಗಳು ಮತ್ತು ಇನಾಂದಾರರುಗಳಿಗೆ ಶೇಂದೀ ಹುಟ್ಟುವಳಿಗೋಸ್ಕರ ಸಲ್ಲಬೇಕಾದ ಈಡು ಮೊಬಲಗುಗಳ ವಿಷಯದಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದಿವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂತಾ ತೀರ್ಪಿನಲ್ಲಾಗಲಿ ಅಥವಾ ದಿವಾನರವರಿಂದ ಅಪ್ಪೀಲ್‌ನಲ್ಲಾಗಲಿ ಪಾವತೀ ಮಾಡಲ್ಪಡಬೇಕೆಂತ ಹುಕುಂ ಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದ ಬಾಕೀ ವಸೂಲಿ ಬಗ್ಯೆ ತತ್ಕಾಲದಲ್ಲಿ ಜಾರೀ ಯಿರತಕ್ಕ ರೂಲ್ಸು ಅನುಸರಿಸಿ ಕಂಟ್ರಾಕ್ಟುದಾರರಿಂದ ವಸೂಲು ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟ

ತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಗೂಡದ್ದು, ಅಂಥಾ ಘಾಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರಾಕ್ಟನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII. (*a*) ಇಜಾರೇದಾರನು ಸರಕಾರದ ಬಂಜರ್ ಜಮೀನಿನಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲೀ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗ್ಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ ವ ಷರತಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII. (*b*) ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್ವಾಕಾ ಲೆಕ್ಕಗಳು ಯಿಡತಕ್ಕದ್ದು. ಅವುಗಳಲ್ಲಿ (1) ಶೇಂದಿಯಿಳಿಸಲ್ಪಟ್ಟ ಶೇಂದೀ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ (2) ಶೇಂದೀ ಕಟ್ಟಿದ ಮರಗಳ ಸಂಖ್ಯೆ, (3) ರೋಜಿನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದು (4) ರೋಜಿನಾ ಬಿಕರೀ ಮಾಡಲ್ಪಟ್ಟ ಶೇಂದೀಯ ತೇದಾದು ಮತ್ತು (5) ಶೇಂದಿಯು ಸರಬರಾಯಿ ಮಾಡಲ್ಪಟ್ಟ ದುಕಾನುಗಳ ಹೆಸರು ಈ ಬಾಬತು ತಪಶೀಲ್‌ಗಳು ತೋರೀಸಲ್ಪಡತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್‌ದಾರರಿಂದಾಗಲೀ ಈ ಬಗ್ಯಾಗಿ ಡೆಪ್ಯುಟಿ ಕಮ್ಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫೀಸರರಿಂದಾಗಲೀ ತನಿಖೆ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಯಿರತಕ್ಕವು. ಮತ್ತು ಇವುಗಳ ನಕಲು ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಅಮಲ್‌ದಾರರಿಂದಾಗಲೀ ಅಪೇಕ್ಷಿಸಲ್ಪಟ್ಟರೆ ಅವು ಇಜಾರೆದಾರರಿಂದಾ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದೀ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ನೋಡೀಗೆ ಬಾಧ್ಯತೆ ಉಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮವುಕೂಫಾ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಖಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮುಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

XI. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಖಿಲಾಫ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗತಕ್ಕದ್ದು.

XII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ, ಮಾರಲ್ಪಡತಕ್ಕದ್ದು.

ಶೇರು ವಂದಕ್ಕೆ ಕ್ರಯ,

	ಜಾಸ್ತಿ.			ಕಮ್ಮಿ.		
	ರೂ.	ಆ.	ಪೈ.	ರೂ.	ಆ.	ಪೈ.
ಹಾಸನಕಸಬೆಯಲ್ಲಿ	0	1	0	0	0	10
ಇತರ ತಾಲ್ಲೂಕು ಕಸಬೆಗಳಲ್ಲಿ	0	1	0	0	0	6
ಗ್ರಾಮಗಳಲ್ಲಿ	0	0	6	0	0	4

6. ಶೇಂದಿ ಸಾಗಿಸುವಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರಫಾ ಭಂಡೀ ಕಂದಾಯವನ್ನು ಪಾವತೀ ಮಾಡಬೇಕಾಗಿರುತ್ತೆ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಶೇರಿದ ಇದರಡಿ ಕಂಡ ತಾಲ್ಲೂಕುಗಳಲ್ಲಿ 1887ನೇ ಇಸವಿ 1ನೇ ಏಪ್ರೈಲ್ ಲಾಗಾಯತು 1890ನೇ ಇಸವಿ ಮಾರ್ಚಿ 31ನೇ ತಾರೀಖು ವರುವಿಗೆ ಆಗುವ 3 ಸಂವತ್ಸರಗಳ ಕಾಲ ಪರಿಯಂತ ಶೇಂದಿ ಬಿಕರೀ ಮಾಡುವ ಪಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟಿವೆ.

1 ಚಿತ್ರದುರ್ಗ	4 ಹೊಳಲ್‌ಕೆರೆ ಮತ್ತು ಡಿ|| ಅಮಲ್ದಾರ್ರ ಚಾರ್ಜಿನ ಪ್ರದೇಶ ದೇಖೀಲ್	6 ಜಗಳೂರು
2 ಚಳ್ಳಕೆರೆ	5 ದಾವಣಗೆರೆ	7 ಮೊಳಕಾಲ್ಮುರು
3 ಹಿರಿಯೂರು		

2. ಯಷ್ಟರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲಿಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟನಿಸೀ ಲಿಫಾಫೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಶೇಂದಿ ಬಿಕ್ರಿಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯೆಂತ ಲಿಫಾಫೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು ಸ್ನ 1887ನೇ ಇಸವಿ ಫೆಬ್ರವರೀ 26ನೇ ಮುಕ್ಕಾಮಿನ ಮಧ್ಯಾಹ್ನದೊಳಗಾಗಲಿ, ತತ್ಪೂರ್ವವಾಗಲಿ, ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆ ಶಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂತಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತುಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕಿ ಹನ್ನೆರಡರಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದಿವಾನರವರ ತೀರ್ಮಾನ ಫಾಯಿಸ್ಲ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೊ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು. ಜಡದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲೀ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ನಗದಾಗಿಯಾಗಲಿ ಕ್ರಮ ಪ್ರಕಾರ ಮೈಸೂರ್ ಶೀಮೆಯ ದಿವಾನರವರ ಹೆಸರಿಗೆ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದ ಮೇಲೆ ಬಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜುಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೆ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು.

ಷರತ್ತುಗಳು.

I. ಸಾಲಿಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6ರ ಪ್ರಕಾರ ಬಡ್ಡೀ ಕೊಡ

ತಕ್ಕದ್ದು: ಅಂತಾ ಬಾಕೀ ಮೊಬಲಗ್‌ಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೆದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಧವಾಗಿ ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನೀ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

II. ಚಿಲ್ಲರೇ ಫುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ವಿಧಿಸಲ್ಪಟ್ಟ ನಮೂನೆಯಲ್ಲಿ ಲೈಸೆನ್ಸ್‌ಗಳು ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದಿ ಫುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆ ಬಗ್ಯೆ ಯಾವ ಈಡು ಮೊಬಲಗನ್ನಾಗಲಿ ಕೇಳಲಿಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗೆದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡೆದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳು ಮತ್ತು ಇನಾಂದಾರರುಗಳಿಗೆ ಶೇಂದೀ ಹುಟ್ಟುವಳೀಗೋಸ್ಕರ ಸಲ್ಲಬೇಕಾದ ಈಡು ಮೊಬಲಗುಗಳ ವಿಷಯದಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂಥಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು ಸದರೀ ಫೈಸಲು ಅಪ್ಪೀಲಿನಲ್ಲಿ ದಿವಾನರವರಿಂದ ಕಾಯಂ ಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂತಾ ತೀರ್ಪಿನಲ್ಲಾಗಲಿ ಅಥವಾ ದಿವಾನರವರಿಂದ ಅಪ್ಪೀಲ್‌ನಲ್ಲಾಗಲಿ ಪಾವತೀ ಮಾಡಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದ ಬಾಕೀ ವಸೂಲಿಬಗ್ಯೆ ತತ್ಕಾಲದಲ್ಲಿ ಜಾರೀ ಯಿರತಕ್ಕ ರೂಲ್ಸ್ ಅನುಸರಿಸಿ ಕಂಟ್ರಾಕ್ಟುದಾರರಿಂದ ವಸೂಲು ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದೀ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂಧರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದೀ ಫುರೋಖ್ತು ಬಗ್ಯೆ ಯಿರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಅಬ್ಕಾರೀ ಕಂಟ್ರಾಕ್ಟರನ್ನ ಯಿಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿರತಕ್ಕದ್ದು.

VIII. (a) ಇಜಾರೇದಾರನು ಸರಕಾರದ ಬಂಜರ್ ಜಮೀನ್‌ನಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಫುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದ ಅನುಭವಿಸಲ್ಪಡ

ತಕ್ಕ ಜಮೀನ್ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವುದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಸದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ, ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ ಮಾಡಲ್ಪಡತಕ್ಕದ್ದು.

VIII (*b.*) ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್‌ವಾಕಾ ಲೆಕ್ಕಗಳು ಯಿಡತಕ್ಕದ್ದು. ಅವುಗಳಲ್ಲಿ (1) ಶೇಂದೀ, ಯಿಳಿಸಲ್ಪಟ್ಟ ಶೇಂದೀ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದೀ ಕಟ್ಟಿದ ಮರಗಳ ಸಂಖೆ (3) ರೋಜೇನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದು, (4) ರೋಜೇನಾ ಬಿಕರೀ ಮಾಡಲ್ಪಟ್ಟ ಶೇಂದೀಯ ತೇದಾದು, ಮತ್ತು (5) ಶೇಂದಿಯು ಸರಬರಾಯಿ ಮಾಡಲ್ಪಟ್ಟ ದುಕಾನ್‌ಗಳ ಹೆಸರು ಈ ಬಾಬತು ತಪಸೀಲುಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್‌ದಾರ್‌ರಿಂದಾಗಲಿ ಯಾ ಆ ಬಗ್ಗೆಗಿ ಡೆಪ್ಯುಟಿ ಕಮ್ಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಇತರ ಆಫೀಸರರಿಂದಾಗಲಿ ತನಿಖೆ ನೋಡಲ್ಪಡತಕ್ಕ ಬಗ್ಗೆ ಖುಲ್ಲಾ ಯಿರತಕ್ಕವು, ಮತ್ತು ಯಿವುಗಳ ನಕಲು ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಅಮಲ್‌ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರರಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ ಅಥವಾ ಸಬ್ ಡಿವಿಜನಿನ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮೌಕೂಫ್‌ಮಾಡಿ ಆ ಬಗ್ಗೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಷಿಯನ್ ಹೆಂಗಸು ಯಾ ಮಗುವಿಗಾಗಲಿ ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಖಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಫುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಫುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

XI. ಗುತ್ತಿಗೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯುಳೀ ಈಚಲು ಮರಗಳಿಂದ ಶೇಂದೀ ಇಳಿಸದೆಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ವುಪಯೋಗಿಸದೆಯೂ, ಇರುವ ಬಗ್ಗೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಯೇನಾದರೂ ಬರಖಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

XII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

ಶೇರು ಒಂದಕ್ಕೆ ಕ್ರಯ.

	ಜಾಸ್ತಿ.			ಕಮ್ಮಿ.		
	ರೂ.	ಅ.	ಪೈ.	ರೂ.	ಅ.	ಪೈ.
ತಾಲ್ಲೂಕು ಕಸಬೆಗಳಲ್ಲಿ ವ ಗಾವ್‌ಖಾನೆಗಳಲ್ಲಿ ಸಹ	0	1	0	0	0	6

6. ಶೇಂದೀ ರವಾನೆ ಬಗ್ಗೆ ಉಪಯೋಗಿಸಲ್ಪಡುವ ಭಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಮೂರು ವರುಷಗಳ ಕಾಲ ಅಂದರೆ, ಸನ್ 1887ನೇ ಏಪ್ರೆಲ್ 1ನೇ ಮರ್ಸ್ಕಂ ಲಾಗಾಯಿತು 1890ನೇ ಮಾರ್ಚಿ 31ರ ಮಿನಹು ಶೇಂದೀ ಇಜಾರೆಯಾಗಲಿ, ಶೇಂದೀ ಫುರೋಖ್ತು ಮಾಡುವ ಸ್ವಾತಂತ್ರ್ಯವಾದ ಬಾಧ್ಯತೆಯಾಗಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರಿಂದ ಅವರ ಆಫೀಸಿನಲ್ಲಿ ಸನ್ 1887ನೇ ಮಾರ್ಚಿ 3ನೇ ಮರ್ಸ್ತಂ ಮಧ್ಯಾಹ್ನ 12 ಘಂಟೆಗೆ ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಒಳಪಟ್ಟು, ತಾಲ್ಲೂಕುವಾರಾಗಿಯಾಗಲಿ, ತಾಲ್ಲೂಕುಗಳ ಸಮುದಾಯ ಪ್ರಕಾರವಾಗಲಿ, ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು; ಮಲ್‌ನಾಡ್ ತಾಲ್ಲೂಕುಗಳಲ್ಲಿ ಬಗನೀ ಶೇಂದಿಯನ್ನು ಫುರೋಖ್ತು ಮಾಡುವ ಹಕ್ಕುದಾರಿಯು ಗ್ರಾಮವಾರಾಗಿಯಾಗಲಿ ಯಾ ಗ್ರಾಮಗಳ ಸಮುದಾಯ ಪ್ರಕಾರವಾಗಲಿ ಅಲಾಹಿದಾ ಇಜಾರೆಗೆ ಕೊಡಲ್ಪಡುವದರಿಂದ ಮೇಲ್ಕಂಡ ಇಜಾರೆಯು, ಸದರೀ ಮೂರು ವರ್ಷಗಳ ಕಾಲದಲ್ಲಿ ಸದರೀ ಬಗನೀ ಶೇಂದಿಯನ್ನು ಫುರೋಖ್ತು ಮಾಡುವ ಸ್ವಾತಂತ್ರ್ಯವನ್ನು ಅಡಗಿಸಿ ಕೊಂಡಿರುವದಿಲ್ಲಾ. ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ, ಇದರಡೀ ಕಂಡ ತಾಲ್ಲೂಕುಗಳು ಸೇರಿ ಇರುತ್ತವೆ.

1. ಶಿವಮೊಗ್ಗಾ, ಕುಂಠೆ ಡೆಪ್ಯುಟಿ ಅಮಲ್ದಾರ್ರ ಚಾರ್ಜ್ ದೇಖೀಲ್.
2. ತೀರ್ಥಹಳ್ಳಿ.
3. ಚೆನ್ನಗಿರಿ.
4. ಸಾಗರ.
5. ನಗರ.
6. ಸೊರಬ.
7. ಹೊನ್ನಾಳಿ.
8. ಷಿಕಾರಿಪುರ.

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರ್ಕಾರದ ಸವಾಲಿಗೆ ಮೇಲ್ಪಟ್ಟು ಬರತಕ್ಕ ಚಡದರಖಾಸ್ತುದಾರನಿಗೆ ಹರಾಜು ಮೂಲಕ ದಿವಾನರವರ ಮಂಜೂರಾತಿಗೆ ಒಳಪಟ್ಟು ವಿಕ್ರಯಿಸಲ್ಪಡುವದು; ಸದರೀ ಸಾಲೀಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಫಾಯಿಷ್ ಮಾಡಲ್ಪಡುತ್ತೆ; ಚಡದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ ಯಾವಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಳ್ಳುತ್ತಾರೆ.

3. ದರಖಾಸ್ತುಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮಪ್ರಕಾರ ಮೊಕರರ್ ಮಾಡಲ್ಪಟ್ಟಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು; ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾದ ಸರ್ಕಾರ್ ಸವಾಲಿನ ಮೊಬಲಗಿನ ಮೇಲೆ ಸೇಕಡ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಯಿಡಲ್ಪಡುವತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜು ಆಖೈರ್ ಕಾಲದಲ್ಲಿ ಅವರಿಗೆ ವಾಪಸು ಪಾವತೀ ಮಾಡಲ್ಪಡುವದು.

4. ಯಾವ ಚಡದರಖಾಸ್ತುದಾರನ ದರಖಾಸ್ತು ದಿವಾನರವರ ಮಂಜೂರಾತಿಬಗ್ಯೆ ಚುನಾಯಿಸಿಕೊಳ್ಳಲ್ಪಡುತ್ತೋ ಅಂಥಾ ಚಡದರಖಾಸ್ತುದಾರನು ಮೊದಲೇ ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗ್ ಪೈಕೀ ಹನ್ನೆರಡರಲ್ಲಿ ವಂದು ಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ತೇವಣಿ ಯಿಡತಕ್ಕದ್ದು. ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ 8 ದಿವಸಗಳೊಳಗಾಗಿ, ಪೂರ್ವ ಡಿಪಾಜಿಟ್ ಯಿಟ್ಟಿರುವ ಮೊಬಲಗುಗಳ ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗು ಪೈಕಿ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ಇಜಾರೇ ಷರತ್ತುಗಳಂತೆ ಕ್ರಮಪ್ರಕಾರ ನಡದುಕೊಳ್ಳುವ ಬಗ್ಯೆ ಜಾಮೀನಿ ತರೀಕ ನಗದಾಗಿಯಾಗಲೀ ಕ್ರಮಪ್ರಕಾರ ಮೈಸೂರು ಶ್ರೀಮಯು ದಿವಾನರವರ ಹೆಸರಿಗೆ ಇಂಡಾರ್ಸ್‌ಮಾಡಲ್ಪಟ್ಟಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿ ಪೈಕೀ ಅರ್ಧಭಾಗವನ್ನ ನಗದಾಗಿಯಾಗಲೀ ಮೇಲೆ ಹೇಳಿದಂತೆ ಮೈಸೂರು ಶ್ರೀಮಯು ದಿವಾನರವರ ಹೆಸರಿಗೆ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ ಹಾಜರ್ಮಾಡಿ ಬಾಕೀ ಅರ್ಧವನ್ನ ಸದರೀ ಮೊಬಲಗ್ಯೆ ಎರಡರಷ್ಟು ಕ್ರಯಬಾಳುವ ಮತ್ತು ಯಾವ ಬಾಧ್ಯತೆ ದೇಣೆಗಳೂ ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿ ಯಾಗಲೀ ಹಾಜರ್ಮಾಡತಕ್ಕದ್ದು; ಮತ್ತು ಇವರಲ್ಲಿ ಮುಂದೇ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ ಒಂದು ಕರಾರು ಬರೆದುಕೊಡತಕ್ಕದ್ದು.

5. ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ ತಪ್ಪಿದರೆ ಯಾ ನಿರಾಕರಿಸಿದರೆ ಪೂರ್ವವೇ ಇಡಲ್ಪಟ್ಟ ಡಿಪಾಜಿಟುಗಳು ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಪುನಃಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾಮಾಡಲ್ಪಡುವದು. ಹಾಗೆ ಪುನಃ ಹರಾಜು ಮಾಡುವದರಿಂದ ಯಾ ವಿಲಾಮಾಡುವದರಿಂದ ಉಂಟಾಗುವ ನಷ್ಟಕ್ಕೆ ಇಜಾರೇದಾರನನ್ನು ಗುರಿಮಾಡಿ, ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರಿ ಇರುವ ರೂಲ್ಸ್ ಅನುಸರಿಸಿ ಇಜಾರೇದಾರನ ಸ್ವತ್ತಿನ ಜಫ್ತಿ ಹರಾಜ್ ಮೂಲಕ ವಸೂಲ್ ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನ್ನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲೀ ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು.

ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕೀಗಳಿಗೂ, ಸೇಕಡಾ ಸಾಲೀಯಾನಾ 6ರ ಪ್ರಕಾರ ಬಡ್ಡೀ ಕೊಡತಕ್ಕದ್ದು; ಅಂತಾ ಬಾಕೀ ವೊಬಲಗಗಳು ಪಾವತೀಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇ ದಾರನ ಸ್ವತ್ತು ಜಫ್ತೀ ಹರಾಜ್‌ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಸ್ಹ ಹರಾಜ್ ಹಾಕುವದರಿಂದಾಗಲಿ, ಇತರ ವಿಧವಾಗಿ ವಿಲಾ ಮಾಡುವದರಿಂದಾಗಲೀ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನೀ ವೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿ ಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿಸೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರೀ ಇರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರ್‍ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು, ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿಯಿಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತುಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯು ಸಬಬ್‌ಗಳಮೇಲೆ ಯಾವ ಅಂಗಡಿಗಳನ್ನಾದರೂ ತೆಗದು ಹಾಕುವಂತೆ ಹುಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆ ಬಗ್ಯೆ ಯಾವ ಈಡು ವೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಅಗಿಂದ್ಯಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತು ಗ್ರಾಮುಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳು ಮತ್ತು ಇನಾಂದಾರರುಗಳಿಗೆ ಶೇಂದೀ ಹುಟ್ಟುವಳಿಗೋಸ್ಕರ ಸಲ್ಲಬೇಕಾದ ಈಡುವೊಬಲಗುಗಳ ವಿಷಯದಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು, ಪರಂತು ಸದರೀ ಫೈಸಲ್ ಅಪೀಲ್‌ನಲ್ಲಿ ದಿವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂತಾ ತೀರ್ಪಿನಲ್ಲಾಗಲಿ ಅಥವಾ ದಿವಾನರವರಿಂದ ಅಪ್ಪೀಲ್‌ನಲ್ಲಾಗಲಿ ಪಾವತೀಮಾಡಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ವೊಬಲಗುಗಳು ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲ್ಸ್ ಅನುಸರಿಸಿ ಕಂಟ್ರಾಕ್ಟುದಾರರಿಂದ ವಸೂಲ್ ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗೆಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟು ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತುಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂತಾ ಫೌಜಿನವರು ತಮ್ಮಕಡೇ ಆಬ್ಕಾರೀ ಕಂಟ್ರಾಕ್ಟರನ್ನು ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII. (a) ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನ್‌ಗಳಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತುಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿ

ಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಇಯಿಂದಾ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತ್ತುಗಳ ಪ್ರಕಾರವೂ ಮಾತ್ರವೇ ಪಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII. (*b*). ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಜಾ ಮತ್ತು ಕರಾರ್‌ವಾಕಾ ಲೆಖ್ಖಗಳು ಇಡತಕ್ಕದ್ದು. ಅವುಗಳಲ್ಲಿ (1) ಶೇಂದಿ ಇಳಿಸಲ್ಪಟ್ಟ ಶೇಂದಿ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದೀಕಟ್ಟಿದ ಮರಗಳ ಸಂಖ್ಯೆ, (3) ರೋಜೇನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದ್, (4) ರೋಜೇನಾ ಬಿಕರೀ ಮಾಡಲ್ಪಟ್ಟ ಶೇಂದಿಯ ತೇದಾದ್ ಮತ್ತು (5) ಶೇಂದಿಯು ಸರಬರಾಯಿಮಾಡಲ್ಪಟ್ಟ ದುಕಾನುಗಳ ಹೆಸರು ಈ ಬಾಬತು ತಪಶೀಲ್‌ಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಖ್ಖಗಳು ಅಮಲ್‌ದಾರ್‌ರಿಂದಾಗಲಿ ಯಾ ಆ ಬಗ್ಯಾಗಿ ಡಿ|| ಕಮ್ಮಿಷ್ನರವರಿಂದ ಮೊಕರರ್ ಮಾಡಲ್ಪಟ್ಟ ಇತರ ಆಫಿಸರರಿಂದಾಗಲಿ ತನಿಖೆ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕವು; ಮತ್ತು ಇವುಗಳ ನಕಲು ಡಿ|| ಕಮ್ಮಿಷ್ನರವರಿಂದಾಗಲಿ ಅಮಲ್‌ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರರಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದೀ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೇಯನ್ನು ಮವ್ಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ; ಅಥವಾ ಕೆಲಸದಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್ಖಿಲಾಫಾಗಲಿ ನಡದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

XI. ಗುತ್ತಿಗೇದಾರನು, ತನ್ನ ನವುಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದಷ್ಟು ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೆಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಖಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರನು ಗುರಿಯಾಗತಕ್ಕದ್ದು.

XII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಜಾಸ್ತಿ.	ಕಮ್ಮಿ.
	ಶೇರು ಒಂದಕ್ಕೆ ಕ್ರಯ.	
	ರೂ. ಆ. ಪೈ.	ರೂ. ಆ. ಪೈ.
ಶಿವಮೊಗ್ಗಾ ಷಹರು	0—1—6	0—1—0
ಚನ್ನಗಿರಿ ಹೊನ್ನಾಳಿ ತಾಲ್ಲೂಕುಗಳಲ್ಲಿ	0—1—0	0—0—6
ಡಿಸ್ಟ್ರಿಕ್ಟಿನ ಇತರ ಎಲ್ಲಾ ಸ್ಥಳಗಳಲ್ಲೂ	0—1—6	0—0—6

6. ಶೇಂದಿ ರವಾನೇಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ನಿರ್ಣಯಿಸಲ್ಪಟ್ಟ ಮೊಹತರ್ಫಾ ಭಂಡಿ ಕಂದಾಯದ ವಸೂಲೀಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಕಡೂರು ಡಿಸ್ಟ್ರಿಕ್ಟಿನಲ್ಲಿ 1887ನೇ ಇಸವಿ 1ನೇ ಏಪ್ರೆಲ್ ಲಾಗಾಯತು 1890ನೇ ಇಸವಿ ಮಾರ್ಚಿ 31ನೇ ತಾರೀಖುವರಿವಿಗೆ ಆಗುವ 3 ಸಂವತ್ಸರಗಳ ಕಾಲ ಪರಿಯಂತ ಶೇಂದಿ ಬಿಕರೀ ಮಾಡುವ ವಟ್ಟು ಸ್ವಾತಂತ್ರ್ಯ ಯಾ ಇಜಾರೆಯು, ತಾಲ್ಲೂಕುವಾರಾಗಿ ಆಗಲಿ ಅನೇಕ ತಾಲ್ಲೂಕುಗಳ ಸೇರಿಕೆಯಾಗಿ ಯಾಗಲಿ ಇದರಮುಂದೆ ತಿಳಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು, 1887ನೇ ಇಸವಿ ಮಾರ್ಚಿ 7ನೇ ಮಕ್ಕಾಂ ಮಧ್ಯಾನ್ಹ 12 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಂನಲ್ಲಿ ಕಡೂರು ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಇಜಾರೆಯು ಮೇಲ್ಕಂಡ 3 ವರುಷಗಳ ಕಾಲದಲ್ಲಿ ಮಲ್‌ನಾಡು ತಾಲ್ಲೂಕುಗಳಲ್ಲಿ ಬಗನಿ ಶೇಂದಿಯನ್ನು ಪುರೋಖ್ತು ಮಾಡುವ ಸ್ವಾತಂತ್ರ್ಯವನ್ನು ಅಡಿಗಿಸಿಕೊಂಡಿರುವದಿಲ್ಲ; ಸದರೀ ಬಗನೀ ಶೇಂದಿ ಪುರೋಖ್ತು ಮಾಡುವ ಸ್ವಾತಂತ್ರ್ಯವು ಗ್ರಾಮವಾರಾಗಲಿ ಅನೇಕ ಗ್ರಾಮಗಳು ಸೇರಿಯಾಗಿಯಾಗಲಿ ಅಲಾಹಿದಾ ಇಜಾರೆಗೆ ಕೊಡಲ್ಪಡುವದು. ಕಡೂರು ಡಿಸ್ಟ್ರಿಕ್ಟಿಗೆ ಇದರಡೀ ಕಂಡ ತಾಲ್ಲೂಕುಗಳು ಶೇರಿರುತ್ತವೆ.

1 ಚಿಕ್ಕಮಗಳೂರು	4 ತರೀಕೆರೆ
2 ಕಡೂರು	5 ಕೊಪ್ಪ, ಯಡೇಹಳ್ಳಿ ಡಿ|| ಅಮಲ್‌ದಾರ್ರ ಚಾರ್ಜ ದೇಖೀಲ್.
3 ಮೂಡಿಗೆರೆ	

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರಕಾರದ ಸವಾಲಿಗೆ ಮೇಲ್ಪಟ್ಟು ಬರತಕ್ಕ ಚಡ ದರಖಾಸ್ತುದಾರಗೆ ಹರಾಜುಮೂಲಕ ದಿವಾನರವರ ಮಂಜೂರಾತಿಗೆ ವಳಪಟ್ಟು ವಿಕ್ರಯಿಸಲ್ಪಡುವದು, ಸದರೀ ಸಾಲಿಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಘಾಯಿಷ್ ಮಾಡಲ್ಪಡುತ್ತೆ. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮ ಪ್ರಕಾರ ಮೊಕರರ್ ಮಾಡಲ್ಪಟ್ಟ ಮುಖ್ತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು. ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾದ ಸರಕಾರದ ಸವಾಲಿನ ಮೊಬಲಗಿನಮೇಲೆ ಶೇಕಡಾ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಇಡಲ್ಪಡುವ ತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜ್ ಆಖೈರ್ ಕಾಲದಲ್ಲಿ ಅವರಿಗೆ ವಾಪಸ್ ಪಾವತೀ ಮಾಡಲ್ಪಡುವದು.

4. ಯಾವ ಚಡ ದರಖಾಸ್ತುದಾರನ ದರಖಾಸ್ತು ದಿವಾನರವರ ಮಂಜೂರಾತಿ ಬಗ್ಯೆ ಚುನಾಯಿಸಿಕೊಳ್ಳಲ್ಪಡುತ್ತೋ, ಅಂಥಾ ಚಡ ದರಖಾಸ್ತುದಾರನು ಮೊದಲೇ ಡಿಪಾಜಿಟ್ ಇಟ್ಟಿರುವ ಮೊಬಲಗು ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದು ಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಇಡತಕ್ಕದ್ದು. ಆತನು ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ ಪೂರ್ವ ಡಿಪಾಜಿಟ್ ಇಟ್ಟಿರುವ ಮೊಬಲಗುಗಳು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗು ಪೈಕಿ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ಇಜಾರೇ ಷರತ್ತುಗಳಂತೆ ಕ್ರಮ ಪ್ರಕಾರ ನಡದುಕೊಳ್ಳುವ ಬಗ್ಯೆ ಜಾಮೀನಿ ತರೀಕ್ ನಗದಾಗಿಯಾಗಲಿ ಕ್ರಮ ಪ್ರಕಾರ ಮೈಸೂರು ಶೀಮೆಯ ದಿರ್ವಾರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿ ಪೈಕೀ ಅರ್ಧ ಭಾಗವನ್ನ ನಗದಾಗಿಯಾಗಲಿ ಮೇಲೆ ಹೇಳಿದಂತೆ ಮೈಸೂರು ಶೀಮೆಯ ದಿರ್ವಾರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಹಾಜರ್ಮಾಡಿ ಬಾಕೀ ಅರ್ಧವನ್ನ ಸದರೀ ಮೊಬಲಗ್ಯೆಯರಡರಷ್ಟು ಕ್ರಯ ಬಾಳುವ ಮತ್ತು ಯಾವ ಬಾಧ್ಯತೆ ವ ದೇಣೆಗಳು ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿಯಾಗಲಿ ಹಾಜರ್ಮಾಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತುಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದಮೇಲೆ, ಒಂದು ಕರಾರ್ ಬರದುಕೊಡತಕ್ಕದ್ದು.

5. ಆತನು ಕರಾರಿಗೆ ರುಜು ಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು, ಇಜಾರೆಯು ಪುನಃ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾ ಮಾಡಲ್ಪಡುವದು. ಹಾಗೆ ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲಾ ಮಾಡುವದರಿಂದ ವುಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ, ಜಮೀನು ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಜಫ್ತೀ ಹರಾಜಿನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂಥಾ ಇಜಾರೇ ಮೊಬಲಗು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ

ಮುಂದಾಗ್ಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗ್‌ಗಳು ಪಾವತಿಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್‌ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಧವಾಗಿ ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರಿ ಇರತಕ್ಕದ್ದು.

II. ಚಿಲ್ಲರೇ ಫುರೋಖ್ತುದಾರ್‍ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತುಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣಿಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷ್ನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆ ಬಗ್ಯಾಗಿ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗ್ಯೆರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳು ಮತ್ತು ಇನಾಮ್‌ದಾರರುಗಳಿಗೆ ಶೇಂದಿ ಹುಟ್ಟುವಳಿಗೋಸ್ಕರ ಸಲ್ಲಬೇಕಾದ ಈಡು ಮೊಬಲಗುಗಳ ವಿಷಯದಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂಥಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲಿನಲ್ಲಿ ದಿವಾನರವರಿಂದ ಕಾಯಂ ಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂತಾ ತೀರ್ಪಿನಲ್ಲಾಗಲಿ ಅಥವಾ ದಿವಾನರವರಿಂದ ಅಪ್ಪೀಲ್‌ನಲ್ಲಾಗಲಿ ಪಾವತೀ ಮಾಡಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲ್ಸ್ ಅನುಸರಿಸಿ ಕಂಟ್ರಾಕ್ಟುದಾರರಿಂದ ವಸೂಲ್ ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದೀ ಫುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿರತಕ್ಕದ್ದು.

VIII (a.) ಇಜಾರೇದಾರನು ಡಿಸ್ಟ್ರಿಕ್ಟಿನ ಮತ್ತು ಸಬ್ ಡಿವೀಜನ್ನಿನ ಸರಕಾರದ ಬಂಜರ್ ಜಮೀನ್‌ನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಫುರೋಖ್ತುಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋ

ಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಇಯಿಂದ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ, ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII. (*b.*) ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್ವಾಕಾ ಲೆಖ್ಖಗಳು ಇಡತಕ್ಕದ್ದು. ಅವುಗಳಲ್ಲಿ (1) ಶೇಂದಿ ಇಳಿಸಲ್ಪಟ್ಟ ಶೇಂದೀ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದೀ ಕಟ್ಟಿದ ಮರಗಳ ಸಂಖ್ಯೆ, (3) ರೋಜೇನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದ್, (4) ರೋಜೇನಾ ಬಿಕರೀ ಮಾಡಲ್ಪಟ್ಟ ಶೇಂದಿಯ ತೇದಾದ್ ಮತ್ತು (5) ಶೇಂದಿಯು ಸರಬರಾಯಿಮಾಡಲ್ಪಟ್ಟ ದುಕಾನುಗಳ ಹೆಸರು ಈ ಬಾಬತು ತಪಸೀಲ್‌ಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಖ್ಖಗಳು ಅಮಲ್ದಾರರಿಂದಾಗಲಿ ಈ ಬಗ್ಗ್ಯಾಗಿ ಡೆ॥ ಕಮ್ಮಿಷ್ನರವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫೀಸರರಿಂದಾಗಲಿ ತನಿಖೆ ನೋಡಲ್ಪಡತಕ್ಕ ಬಗ್ಗೆ ಖುಲ್ಲಾ ಇರತಕ್ಕವು. ಮತ್ತು ಇವುಗಳ ನಕಲು ಡೆ॥ ಕಮ್ಮಿಷ್ನರವರಿಂದಲಾಗಲಿ ಅಮಲ್ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರರಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಮ ಷರಾಬ್ ಯಾ ಸ್ಪಿರಿಟಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ ಅಥವಾ ಸಬ್ ಡಿವಿಜನಿನ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳಮೇಲೆ ಇಜಾರೆಯನ್ನು ಮವುಕೂಫ್‌ಮಾಡಿ ಆ ಬಗ್ಗೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೊಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್ಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಫುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಫುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

XI. ಗುತ್ತಿಗೇದಾರನು ತನ್ನ ನವುಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಯತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೆಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ವುಪಯೋಗಿಸದೆಯೂ, ಇರುವ ಬಗ್ಗೆ ಜವಾಬುದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರ್ಕಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

XII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಶೇರು ಒಂದಕ್ಕೆ ಕ್ರಯ.	
	ಜಾಸ್ತಿ.	ಕಮ್ತಿ.
	ರೂ. ಅ. ಪೈ.	ರೂ. ಆ. ಪೈ.
ತಾಲ್ಲೂಕು ಕಸಬೆಗಳಲ್ಲಿ	0—1—4	0—0—6
ಗಾವ್‌ಗಾನೆಗಳಲ್ಲಿ	0—1—0	0—0—6

6. ಶೇಂದಿ ರವಾನೇಬಗ್ಗೆ ಉಪಯೋಗಿಸಲ್ಪಡುವ ಭಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಹುಕ್ಕುಂ ಬಮೋಜೀಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಿಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ|| 22, ಸ್ವ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಅಂಚೇ ಇಲಾಖಾ.

ನಂ. 528—275. ತಾರೀಖು 6ನೇ ಜನವರೀ 1887.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮನ್ ಮಹಾರಾಜ ರಾಜಾಸಾಹೇಬ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಚನ್ನಗಿರಿ ತಾಲ್ಲೂಕು ಹೊದಿಗೆರೆಯಲ್ಲಿ ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟಿರುತ್ತೆ.

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

ಫಾರೆಸ್ಟ್ ಇಲಾಖಾ.

ಇ ಸ್ತಿ ಹಾ ರ್ ನಾ ಮೆ.

ತಾರೀಖು 6ನೇ ಜನವರೀ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಉತ್ಪತ್ತೀ ಬಾಬತು ಇದರಡೀ ಕಂಡ ನಾಟಾಗಳು, ಹಾಸನದ ಡಿಪೋದಲ್ಲಿ ಡೆಪ್ಯುಟಿ ಕಮ್ಮಿಷನರ್ ಮತ್ತು ಫಾರೆಸ್ಟು ಆಫೀಸರವರಿಂದ 1887ನೇ ಇಸವಿ ಫಿಬ್ರುವರೀ 3ನೇ ಮುರ್ಕು ಮಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ನಾಟಾದ ತಪಶೀಲು.	ನಾಟಾಗಳ ಸಂಖ್ಯೆ.	
ಹೊನೆ (ಪೂರ್ಣ) ..	49	
ನಂದಿ ..	151	
ಹೆಸವಾ (ಕಾಡಹಲಸು) ..	34	
ಮತ್ತಿ ..	17	
ಕರೀಮರ ..	1	
ಮೆಳಲಿ (ಯಬೋನಿ) ..	6	
ಕಾಡುಮರ ..	62	
ಜುಮ್ಲಾ....	320	ಸ್ವಲ್ಪ ಹೆಚ್ಚು ಕಡಿಮೆ.

ಹರಾಜಿನ ಷರತ್ತುಗಳು—1873ನೇ ಇಸವಿ ಜೂನ್ 12ನೇ ಮುರ್ಕುಂ 20ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ಮಾಡಲ್ಪಟ್ಟ ಪ್ರಕಾರ ಇರತಕ್ಕನ್ನು; ಮತ್ತು ಹರಾಜ್ ಕಾಲದಲ್ಲಿ ಪೋದಲ್ಪಡುವವು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರಿ ದೇಣೇದಾರ ಬೆಂಗಳೂರು ಶಿದ್ದಿಕಟ್ಟೆಯಲ್ಲಿರತಕ್ಕ ಹಿರಾಬೂಬಿನ ವಿಷಯದಲ್ಲಿ—

ಸ್ಸ 1886ನೇ ಇಸವಿ ದಿವಾಳಿ ಕೇಸ್ ನಂಬರು ಮಿ|| 723.

ಹುಕ್ಕುಂ.

ಮೇಲ್ಕಂಡ ಹಿರಾಬೂಬಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಸಬ್ ಜಡ್ಜಿಯವರಾದ ಮಿ|| ಸಿ. ಕ್ರೈಸ್ ಸಾಹೇಬರವರ ರೂಬರೂ ಅರ್ಜೀದಾರಳಾದ ಹಿರಾಬೂಬಿಯು ಖುದ್ದಾಗಿಯೂ ಮತ್ತು ಸದರೀಯವಳ ಲೇಣೇದಾರ್ರಾದ 1—2ನೇ ರ ತರಫ್ ಪ್ಲೀಡರ್ ಗಂಗಾಧರೈಯನವರಿಗೂ ಪರ್ಯಾಫ್ತ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಹಿರಾಬೂಬಿಯು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಸ 1886ನೇ ಇಸವಿ ಡಿಶಂಬರ್ 6ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರು ನಮ್ಮ ದಸ್ತಖತಿನಿಸಿ ಕೊಡಲ್ಪಟ್ಟಿತು.

...ದ ಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	...ತ	ಲಯಾನಗಿ ಡಿಕ್ರಿ ಮೊಬಲಗು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ
1	ಬೆಂಗಳೂರಲ್ಲಿರತಕ್ಕ ಹಯಾತ್‌ಬಿ	ರೂ. 82 4 4	..	ಬೆಂಗಳೂರು ಮುನಸಿಫ್ ಕೋರ್ಟು 1886ನೇ ಇಸವಿ ಅರಿಜಿನಲ್ 43ನೇ ನಂ. ಬಾಬತು ಕೋರ್ಟು ಖರ್ಚು ಮೊಬಲಗು.	
2	ಮಹಮ್ಮದ್ ಯಾಖೂಬ್ ಬೆಂಗಳೂರು ..				

ಸಿ. ಕ್ರಿಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 12ನೇ ಜನವರೀ 1887.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಈ ಕೆಳಗೆ ವಿವರಿಸೋಣಾದ 2 ರಿಜಿಸ್ಟ್ರಾದ ತಮಸೂಕುಗಳು 1884ನೇ ಇಸವಿ ಲಾಗಾಯಿತು ಬಾಗೇಪಲ್ಲಿ ಸಬ್ ರಿಜಿಸ್ಟರ್ ಆಫಿಸಿನಲ್ಲಿ ಬೇವಾರಸಾಗಿ ನಿಂತು ಯಿರುತ್ತವೆ. ಸದರೀ ತಮಸೂಕುಗಳನ್ನು ರಿಜಿಸ್ಟರಿಗೆ ಹಾಜರ್‌ಮಾಡಿದವರಾಗಲಿ, ಅದರಲ್ಲಿ ಬಾಧ್ಯತೆವುಳ್ಳವರಾಗಲಿ, ಈ ಲಾಗಾಯಿತು 1 ತಿಂಗಳಲ್ಲಿ ಬಾಗೇಪಲ್ಲಿ ಸಬ್ ರಿಜಿಸ್ಟ್ರಾರ್ರಲ್ಲಿ ಹಾಜರಾಗಿ ವಾಜಬಿ ಫೀಜು ಪಾವತಿಯಿಂದ ತಂಸೂಕುಗಳನ್ನು ವಾಪಸ್ ಪಡಿಯಬಹುದು ಇಲ್ಲವಾದರೆ ಇಂಡ್ಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅವುಗಳು ನಾಶ ಪಡಿಸಲ್ಪಡುವವು.

ಆಫೀಸಿನ ಹೆಸರು.	ರಿಜಿಸ್ಟರ್ ಬುಕ್ಕಿನ ಮತ್ತು ತಂಸೂಕಿನ ನಂಬರು ಇಸವಿ.	ಕಕ್ಷಿಗಾರ್ರ ಹೆಸರು.		ತಂಸೂಕಿನ ತಾರೀಖು.	ತಂಸೂಕು ರಿಜಿಸ್ಟ್ರಾದ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕಿಂಮತು.
		ತಂಸೂಕುಬರದು ಕೊಟ್ಟವ.	ಬರಸಿಕೊಂಡವ.			
ಬಾಗೇಪಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸು.	1ನೇ ಬುಕ್ಕಿನ 1883—84ನೇ ಇಸವಿ ನಂಬರು 27	ಬಾಗೇಪಲ್ಲಿ ತಾಲ್ಲೂಕು ಬೀಳೂರು ಹೋಬಳಿ ರಾಶ್ಚರುವು ಗ್ರಾಮದ ವಾಸಸ ಪಟೇಲಹೆಬ್ಬಾರರಾಮಪ್ಪನ ಮಗ ಸುಬ್ಬರಾಮಪ್ಪ	ಕಡಪಾಜಿಲ್ಲಾ ಕದಿರಿ ತಾಲ್ಲೂಕು ಈ ತೋಟಿ ಗ್ರಾಮದ ಕೋಮಟಿ ಕರೇರಂಗಪ್ಪನ ಮಗ ಬಾಲಯ್ಯ	1884ನೇ ಇಸವಿ ಫಿಬ್ರವರೀ ತಾರೀಖು 6	1884ನೇ ಇಸವಿ ಫಿಬ್ರವರೀ ತಾರೀಖು 6	ಬಾಗೇಪಲ್ಲಿ ತಾಲ್ಲೂಕು ಸೋವ.ಕಪಲ್ಲಿ ಕೊಂಡೋರುಪಲ್ಲಿ ಈಗ್ರಾಮುಗಳ ಬಾಬತು ತರೀ—ಖುಷ್ಕೀ—ಬಾಗಾಯಿತು ಬೀಜವರೀ [illegible] ಕಂದಾಯ [illegible] ವುಳ್ಳ ಜಮೀನುಗಳು 300 ರೂಪಾಯಿಗಳಿಗೆ ಕ್ರಯ ಮಾಡಿರುವದಾಗಿ.
	ಡಿಟೋ ಇಸವಿ ನಂಬರ್ 28	ಡಿಟೋ	ಡಿಟ್ಟೋ	ಡಿಟೋ	ಡಿಟೋ	ಬಾಗೇಪಲ್ಲಿ ತಾಲ್ಲೂಕು ರಾಶ್ಚರುವು ಮುಸಿಲಿಗಾನಪಲ್ಲಿ ಈ ಗ್ರಾಮುಗಳ ಬಳಿ ಯಿರುವ ತರೀ-ಖುಷ್ಕೀ-ಬಾಗಾಯಿತು ಬೀಜವರೀ [illegible] ಕಂದಾಯ 94—3—0 ವುಳ್ಳ ಜಮೀನುಗಳನ್ನ 740 ರೂಪಾಯಿಗೆ ಗೆ ಅಧಾರಮಾಡಿ ಇರುವದಾಗಿ.

ಸಿ. ಸುಬ್ಬರಾವ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 5.

ಮೃತಪಟ್ಟ ಲಕ್ಷ್ಮಿದೇವಮ್ಮನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನರಸಿಹ್ಮಭಟ್ಟರು ಮೃತಪಟ್ಟಸದರೀ ಲಕ್ಷ್ಮಿದೇವಮ್ಮನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಜರಾಬಾದ್ ತಾಲ್ಲೂಕು ಯಳೂರು ಹೋಬಳಿ ಕೊಂತ್ಲಾಪುರದ ಸ್ಥಳದ ಸದರೀ ನರಸಿಹ್ಮಭಟ್ಟರು ಸಟೋ ವಾಸಸ್ಥಳಾಗಿ ಮೃತಪಟ್ಟ ಲಕ್ಷ್ಮಿದೇವಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನರಸಿಹ್ಮಭಟ್ಟರ ಅರ್ಜೀಯನ್ನು 1887ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಿದೇವಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 9.

ಮೃತಪಟ್ಟ ಕೂರ್ಮೈಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹಾಲಪ್ಪನವರು, ಮೃತಪಟ್ಟ ಸದರೀ ಕೂರ್ಮೈಯನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಹೊಸ ಅಗ್ರಹಾರದ ಸ್ಥಳದ ಸದರೀ ಹಾಲಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ಕೂರ್ಮೈಯನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹಾಲಪ್ಪನವರ ಅರ್ಜೀಯನ್ನು 1887ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೂರ್ಮೈಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಮೈಸೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ನಂಜನಗೂಡು ತಾಲ್ಲೂಕು ಯೇಚಿಗಹಳ್ಳೀಯಲ್ಲಿರುವ ಶಿವಾಚಾರದ ಅಜ್ಜೇಗೌಡನ ಮಗ ಪಟೇಲ ಲಿಂಗೇಗೌಡನ ವಿಷಯದಲ್ಲಿ—

ಸ್ 1886ನೇ ಇಸವಿ ದಿವಾಳಿ ಕೇಸ್ ನಂಬರ್ 32.

ಹುಕ್ಕುಂ.

ಮೇಲ್ಕಂಡ ಲಿಂಗೇಗೌಡನೆಂಬವನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರನಾದ ಲಿಂಗೇಗೌಡನ ಪರವಾಗಿ ಅಡ್ವೊಕೇಟ್ ಮೊ॥ ರಾಘವಾಚಾರ್ರು ಹಾಜರು ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—1ನೇ ಮಲ್ಲಯ್ಯ, 2ನೇ ನಾರಣಪ್ಪ, 3ನೇ

ಶಿವಯ್ಯ, 4ನೇ ಚನ್ನಬಸಪ್ಪ, 5ನೇ ನಂಜುಡಯ್ಯ, 6ನೇ ವೀರಭದ್ರಯ್ಯ, 7ನೇ ಮರಿಕಾಳ, 8ನೇ ನಂಜಪ್ಪ, 9ನೇ ತಿಮ್ಮಯ್ಯಶೆಟ್ಟಿ ವಬ್ಬ 10ನೇ ವರ್ಧಣಯ್ಯ, 11ನೇ ಅಂಚೆ ಮುನಿಯ್ಯ, 12ನೇ ಪ್ಲೀಡರ್ ರಂಗಂಣ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪಟೇಲ ಲಿಂಗೇಗೌಡನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯುದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ತ 1886ನೇ ಇಸವಿ ಡಿಸಂಬರ್ 22ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರಿ ನಮ್ಮ ದಸ್ತಖತನಿಃ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಡ್ಡಿ ಸಹಾ ಅಸಲು ತಾರೀಖು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ
1	ನಂಜನಗೂಡು ಪ್ಲೀಡರ್ ರಂಗಂಣ ..	ನಮೂದಿಲ್ಲ.	..	ಡಿಕ್ರಿ ಬಾಬತು.	

ದಿವಾಳಿಯಾದ ಡಿಕ್ರಿ ದೇಣೇದಾರ ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಪಾಪಮ್ಮನ ವಿಷಯದಲ್ಲಿ—
ಸ್ತ 1886ನೇ ಇಸವಿ ದಿವಾಳಿ ಕೇಸ್ ನಂಬರ್ 42.

ಹುಕ್ಕುಂ.

ಮೇಲ್ಕಂಡ ಪಾಪಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟಿನ ರೂಬರೂ ಅರ್ಜೀದಾರಳಾದ ಪಾಪಮ್ಮನು ಖುದ್ದು ಮತ್ತು ಸವರೀಯವಳ ಲೇಣೇದಾರ್ರಾದ 1ನೇ ಕಾಳೇಗೌಡನ ಕಡೆ ಮೆ|| ರ್ಯ. ಸುಬ್ಬರಾಯರು, 2ನೇ ಕಾಳಾಚಾರೀಕಡೆ ಮೆ|| ಅಡ್ವೋಕೇಟ್ ನರಶಿಂಗರಾಯರು, 4ನೇರ ತರಫ್ ನೀಲಕಂಠಮೊದಲಿ, 5ನೇ ಚಂದ್ರಶೇಖರ ಮೊದಲಿ ಇವರಕಡೆ ಮೆ|| ರ್ಯ ಸುಬ್ಬರಾಯರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ, ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—3ನೇ ಮುತ್ತಸಾಮಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಯಿಟ್ಟಿಗೆ ಗೂಡು ಪಾಪಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದಳವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1886ನೇ ಇಸವಿ ಡಿಸಂಬರ್ ತಿಂಗಳು 22ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತನಿಃ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಡ್ಡಿ ಸಹಾ ಅಸಲು ತಾರೀಖು	ದೇಣೇಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ	ಷರಾ
1	ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಕಾಳೇಗೌಡ.	175–3–10	..	ಡಿಕ್ರೀ ಬಾಬತು.	

ದಿವಾಳಿಯಾದ ಡಿ್ರ ದೇಣೇದಾರ ಮೈಸೂರು ಲಷ್ಕರ್ ಮೊಹಲ್ಲೆಯಲ್ಲಿ ಇರುವ ಗುಲಾಂ ಹುಸೇನ್‌ಖಾನ್ ಮಗ ಗುಲಾಂ ಮಹಮ್ಮದ್‌ಖಾನ ವಿಷಯದಲ್ಲಿ—

ಸನ್ 1886ನೇ ಇಸವಿ ದಿವಾಳಿ ಕೇಸ್ ನಂಬರ್ 224.

ಹುಕ್ಕುಂ.

ಮೇಲ್ಕಂಡ ಗುಲಾಂ ಮಹಮ್ಮದ್‌ಖಾನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರನಾದ ಗುಲಾಂ ಮಹಮ್ಮದ್‌ಖಾನ್ ಖುದ್ದು ಹಾಜರ್ ವಿಚಾರಣೆ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ವ್ಯಾಪ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ—1 ನವಾಬ್ ಯಿಬರಾಹಿಂಖಾನ್ ಬಿನ್ತುರಿ 2ನೇ ಮಹಮ್ಮದ್ ಬಿನ್ತುರಿ ತಂದೆ ಗುಲಾಂಮುಲ್ಕ್ ಸಾಬಿ.

ಸಿವಿಲು ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಗುಲಾಂ ಮಹಮ್ಮದ್‌ಖಾನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವನ್ನ ನಿಶಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಜನವರೀ 12ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಶೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಡ್ಡಿ ಕೊಟ್ಟ ಕಡೆ ತಾರೀಖು.	ದೇಣೆಯು ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಮೈಸೂರು ಮಂಡಿಮೊಹಲ್ಲೇಲಿರುವ ಮಹಂಮದ್ ಬಿನ್‌ತುರಿ ತಂದೆ ಗುಲಾಂ ಮುಲ್ಕ್.	135–5–0	..	ಡಿಕ್ರಿ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಗೈರ ವಿಲಾ ಆದ

ಬಲಭಾಗದ ಕರೆನ್ಸಿನೋಟ್‌ಗಳ

ನಂಬರ	ಸರ್ಕಲ್	ಕ್ರಯ.	
B. 90—30886	,, ರೂ.	20	ಹಕ್ಕುದಾರ—ಕ್ಲೋಸ್‌ಪೇಟೆ ಕಸಬಾ ಸ್ಟಾಂಪ್‌ವೆಂಡರ್ ಭೀಮರಾವ್.
B. 82—91553	,, ,,	20	

ಫ್ರೆಂಚ್‌ರಾಕ್ಸ್ ಸಬ್ ಡಿವೀಜನ್.

ತಾರೀಖು 8ನೇ ಜನವರಿ 1887.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅತ್ತಿಕುಪ್ಪ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ನಮೂದಿಸುವ ದಸ್ತಾವೇಜನ್ನು ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳ ವೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ರೆಜಿಸ್ಟ್ರೇಷ೯ ನಂಬರ್.	ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆದ ತಾರೀಖು.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿಯಾದ ತಾರೀಖು.	ಷರಾ—ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1884—85 ನೇ ಇಸವಿ ಬಾಬತು ನಂಬರ್ 336	ಸಂತ್ತೆಬಾಚಹಳ್ಳಿಲ್ಲಿ ವಾಸವಾಗಿದ್ದು ಹಾಲೀ ಹಾಸನದಲ್ಲಿ ನಿತ್ಯಾತ್ರೆಯಿಂದ ಜೀವನ ಮಾಡಿಕೊಂಡು ಯಿರುವ 42 ವಯಸ್ಸುವುಳ್ಳ ಸ್ಮಾರ್ತ ಬ್ರಾಹ್ಮಣ ಜಾತಿ ಸಂಕಣ್ಣಯ್ಯನ ಹೆಂಡತಿ ಭಾಗೀರತಮ್ಮ.	ಸಂತ್ತೆಬಾಚಹಳ್ಳೀಯಲ್ಲಿ ಇರುವ ಸ್ಮಾರ್ತ ಬ್ರಾಹ್ಮಣ ಅಣ್ಣಾಜಿರಾಯರ ರಾಮಯ್ಯನವರ ಮಗ 29 ವಯಸ್ಸುವುಳ್ವವ್ಯವಸಾಯದಿಂದಜೀವನ ಮಾಡುವ ಕೃಷ್ಣಪ್ಪ.	1—11—84	15—11—84	24—11—84	ಸಂತ್ತೆಬಾಚಹಳ್ಳಿ ಗ್ರಾಮದಲ್ಲಿ ಫವತಿಯಾದ ನನ್ನ ಗಂಡನ ಹಿಸ್ಸೆಗೆ ಬಂದು ಈಗ ಪಾಳುಬಿದ್ದು ಇರುವ ಮನೆ ಚೌತರ್ಫ-ಪೂರ್ವಕ್ಕೆ ನನ್ನ ಮೈದನ ಶ್ರೀಕಂಠಯ್ಯನ ಮನೆ ಮತ್ತು ಅವನ ಹಿತ್ತಲು-ಪಶ್ಚಿಮ ನನ್ನ ಭಾವ ನಂಜಪ್ಪಯ್ಯ ವುರಫ಼ ಅಂಣೈಯನ ಮನೆ ಮತ್ತು ಅವರ ಹಿತ್ತಲು-ವುತ್ತರಕ್ಕೆ ಬಳಿಚನ್ನವೀರಶೆಟ್ಟಿ ಹಿತ್ತಲು-ದಕ್ಷಿಣಕ್ಕೆ ದೊಡ್ಡಬೀದಿ ಈ ಮಧ್ಯೆ ಇರುವ 13 ಅಂಕಣ ಶಿಕಸ್ತು ಮೂರು ಅಂಕಣ ಕಟ್ಟು ದಾಯೆ ಇವಕ್ಕೆ ಶೇರಿದ ಹಿತ್ತಲೂ ಪಾಳು ನಿವೇಶನ ಅದರಲ್ಲಿ ಇರುವ ಫಲಾ ತೆಂಗಿನ ಮರ, ಇದರಲ್ಲಿ ಆಗುವ ತೊಲೆಗಳು ಹಂಚು ಸಹಾ ನಿನಗೆ ಗವರ್ನಮೆಂಟ್ 48 ರೂಪಾಯಿಗೆ ಖರೀದಿಗೆ ಕೊಟ್ಟು ಮೊಬಲಗು ತೆಗದುಕೊಂಡು ಯಿರುತ್ತೇನೆಂದು.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 27ನೇ ಡಿಶಂಬರ್ 1886.

ಇದರಿಂದ ಸಮ್ಮಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೇಲೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತಾವೇಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ಬೇಲೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತಾವೇಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ದಸ್ತಾವೇಜಿನ ನಂಬರ್.	ದಸ್ತಾವೇಜಿನ ತಾರೀಖು.	ದಸ್ತಾವೇಜಿ ರಿಜಿಸ್ಟ್ರಿಗೆ ಹಾಜರಾದ ತಾರೀಖು.	ದಸ್ತಾವೇಜಿ ರಿಜಿಸ್ಟ್ರಿಯಾದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳಾ.	ದಸ್ತಾವೇಜನ್ನ ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳಾ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
20 / 1884—85	12—6—84	13—6—84	16—7—84	ಬೇಲೂರು ತಾಲ್ಲೂಕು ಮೊದೇಹಳ್ಳಿ ಹೋಬಳಿ ಕಲ್ಲುಕೆರೆ ಪೇಟೇಯಲ್ಲಿರುವ ಬೇಲೂರು ತಾಲ್ಲೂಕು ಪಳ್ಳಿಕೊಂಡೆ ಸ್ಥಳದ ಮೊದೀಫಕ್ಕೀರ್‌ಸಾಬರ ಮಗ ಮೊಹದೀನ್‌ಸಾಬಿ	ಈತನ ಹೆಂಡತಿ ರೈಹಿಮಾನ್‌ಬೀಬಿ	ಬಿಳಗಳ್ಳಿ ಗ್ರಾಮದ ಸರ್ವೆ 55—56ನೇ ಫೈ॥ 18 ಎಕರೆ 7 ಕುಂಟೆ ಆಕಾರ 15—5—0 ವುಳ್ಳ ಯಿರಡು ಬೋಂದು ತೋಟ 200 ರೂಪಾಯಿಗಳಿಗೆ ಕ್ರಯ.

ವಿ. ಡಿ. ಪೊನ್ನುರಂಗಂ ಮೊದಲಿಯಾರ್ರು, ಫಾರ್ ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 22ನೇ ಡಿಸೆಂಬರ್ 1886.

ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿ ಇರುವ ಪತ್ರಗಳನ್ನು ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು 1 ತಿಂಗಳು ವಳಗಾಗಿ ವಾಪಸು ಪಡಿಯಬೇಕು, ತಪ್ಪಿದರೆ 1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸುತ್ತೆ.

ಜಂಜರ್ ನಂ.	ಯಾವ ಬುಕ್ಕು.	ದಸ್ತಾವೇಜು ನಂಬರ್.	ದಸ್ತಾವೇಜು ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ಬರಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1	I	54 / 1884—85	22—5—84		22—5—84	1 ಸಂಸೆಗ್ರಾಮದಲ್ಲಿರುವ ಪಟೇಲ್ ಈರೇಗೌಡನ ಹೆಂಡತಿ ಹನುಮಮ್ಮ, 2 ಈಕೆ ಮೈದುನ ಉದ್ದೇಗೌಡ	ಮೂಡಗೆರೆ ತಾಲ್ಲೂಕು ಬೈಲಹಳ್ಳಿ ಗ್ರಾಮದಲ್ಲಿ ಇರುವ ವಕ್ಕಲಗಿರ ಲಿಂಗೇಗೌಡನ ಮಗ ಚಿಕ್ಕೇಗೌಡ	ಸಂಶೆ ಗ್ರಾಮದಲ್ಲಿ ಇರತಕ್ಕ 8 ತರೀ ಜಮೀನುಗಳು 100 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ.
2	ಡಿಟೋ	58 / 1884—85	26—5—84		26—5—84	ಶಿರಿಗೂರಲ್ಲಿರುವ ಒಕ್ಕಲಿಗರ ಜಾತಿ ಹುಲಿಗೌಡನ ಮಗ ನಂಜೇಗೌಡ	ಶಿರಿಗೂರು ದಾಖಲೆ ಕೆಸವಿನ ಮನೆಯಲ್ಲಿರುವ ಕುರುಬರ ಬೀರಯ್ಯನಮಗ ಅಚ್ಚಯ್ಯನೇರ್ಸ್ಯಗಾರ	ಶಿರಿಗೂರು ದಾಖಲೆ ಕೆಸವಿನ ಹಡ್ಲು ಅಡ್ಡವಾರೆ ಕಾಫಿತೋಟವೂ 225 ರೂಪಾಯಿಗೆ ಕ್ರಯ.
3	ಡಿಟೋ	134 / 1884—85	22—7—84		23—7—84	ತಿರುಗಣ ಗ್ರಾಮದ ತಿಮ್ಮೇಗೌಡನ ಮಗ ವಕ್ಕಲ ಮಕ್ಕಳ ಜಾತಿ ತಿಮ್ಮೇಗೌಡ	ಹವಳ್ಳಿಯಲ್ಲಿರುವ ಹಳೆಮನೆ ಸಣ್ಣ ನಿರುವಾಣಿಗೌಡರ ಸಬ್ಬೇಗೌಡನ ಮಗ ಅಮೃತೇಗೌಡ	ತಿರುಗಣ ಗ್ರಾಮದ ನಂಬರ್ 30ನೇ ಪೈಕೀ ಕಾಫಿ ಹಿತ್ತು 50 ರೂಪಾಯಿಯನ್ನ ತೀರಿಸಿಕೊಳ್ಳುವ ಒಗ್ಯೆ 10 ವರುಷದ ವರಿಗೆ ಅಳಿಭೋಗ್ಯಾದಿ ಮಾಡಿರುವಂತ್ತೆ.

ಟಿ. ವ್ಯಾಂಡಗಲೋರ್,
ಫಾರ್ ರಿಜಿಸ್ಟ್ರಾರ್.

ನೋಟೀಸ್.

ಕೊಡಗು ಫಾರೆಸ್ಟು ಡಿಪ್ಯುಟಿ ಕನ್ಸರ್‌ವೇಟರ್ ಆಫೀಸಿನಿಂದ.

ತಾರೀಖು 23ನೇ ಮಾಹೆ ಡಿಸಂಬರ್ 1886.

ಇದರ ಕೆಳಗೆ ನಮೂದಿಸುವ ನಾಟಗಳನ್ನು ಮೈಸೂರು ಡಿಸ್ಟ್ರಿಕ್ಟು ಹುಣಸೂರಲ್ಲಿ ಇರುವ ಕೊಡಗು ಡಿಪೋದಲ್ಲಿ ಬರುವ ಸನ್ 1887ನೇ ಇಸವಿ ಫಿಬ್ರವರೀ ತಾರೀಖು 3ರಲ್ಲು ಬಹಿರಂಗವಾದ ಹರಾಜು ಮಾಡೋಣಾಗುತ್ತದೆ.

ಸಾಗುವಾನಿ ನಾಟಗಳು 600. ಇತರ ನಾಟಗಳು 500.

ಷರತ್ತು—ಕೊಡಗು ಚೀಫ್ ಕಮ್ಮಿಷನರ್ ಸಾಹೇಬರವರು ಸನ್ 1885ನೇ ಇಸವಿ ಮೇ ತಾರೀಖು 16ನೇ ನಂಬರ್ 9ರ ಇಸ್ತಿಹಾರ್ ನಾಮೆಯಲ್ಲಿ ನಮೂದಿರುವ ಮೇರೆ.

ಯಫ್. ಬಿ. ಡಿಕ್ಕಿನ್ಸನ್,
ಕೊಡಗು ಫಾರೆಸ್ಟು ಡಿಪ್ಟಿ ಕನ್ಸರ್‌ವೇಟರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ *ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡ್‌ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ 4—8—0; ಎಂಟು ಔನ್ಸುವುಳ್ಳ ಡಬಿ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒಪಗಿಸ ಬಹುದು; ನಾಲ್ಕು ಔನ್ಸುವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸುವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡುವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಹುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್, ಚಂದಾ ದರ ವಗೈರೇ.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಸ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)		..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ	ಡಿಟೋ ..	.	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:-

ಮೊದಲನೇ ದಫಾ	.. ..	..	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	..	..	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟೀ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ ..	ಪುಟ 1ಕ್ಕೆ	..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	.	0	8
ಎರಡನೇ ದಫಾ ಡಿಟೋ	ಡಿಟೋ	..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	..	..	0	4

ಷರಾ.—ಚಂದಾ ವಗೈರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತಿ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಬಮೋಜೀಬ್ ಹುಕ್ಕುಂ,

ಟಿ. ಟಿ. ಲೆನರಡ್,

ಮೈ. ಗೆ. ಕಂಪೈಲರ್.

ಮೈಸೂರ ಗೆಜೆಟ್.

ನಂ. 4 ಸರ್ಕಾರದಿಂದ ಪ್ರಾಯಿಷ್ ಆದ್ದು. ಸರ್ 1887.

ಬೆಂಗಳೂರು, ಶನಿವಾರ, ಜನವರೀ ತಾ|| 29, ಸರ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, 1886ನೇ ಇಸವಿ Iನೇ ನಂಬರ್ ರೆಗ್ಯುಲೇಷನ್.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 19ನೇ ಜನವರೀ 1887.

ನಂ. 221.—ಘನವನ್ನು ಹೊಂದಿದ ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನೀ—ಯವರು, ತಮ್ಮ ಪ್ರಖ್ಯಾತವಾದ ಧಾರ್ಮಿಕ ರಾಜ್ಯಭಾರದ ಐವತ್ತನೇ ವರುಷ ವರ್ಧಂತಿಯಂ ಗೈದುವ ಶುಭಸಂಭವವನ್ನು ಉಚಿತವಾದ ಮರ್ಯಾದೆಯೊಡನೆ ಮೈಸೂರು ಶೀಮೆಯಲ್ಲೆಲ್ಲಾ ಆಚರಿಸಲ್ಪಡತಕ್ಕದ್ದೆಂತ ಶ್ರೀಮನ್ಮಹಾರಾಜರವರು ಅಪೇಕ್ಷಿಸುವದಲ್ಲದೆ, ಈ ಶೀಮೆಯ ಪ್ರಜೆಗಳೆಲ್ಲರೂ ಇದೊಂದು ಬಹಿರಂಗವಾದ ಉತ್ಸವ ವಿನೋದಗಳಿಗೆ ಸುಸಮಯದಂತೆ ಅವಲಂಬಿಸುವರೆಂದು ಸಹ ನಂಬುತ್ತಾರೆ.

2. ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸುವದೇನಂದರೆ 1887ನೇ ಇಸವಿ ಫಿಬ್ರುವರೀ 16ನೇ ಬುಧವಾರವು—ಘನವನ್ನು ಹೊಂದಿದ ಚಕ್ರವರ್ತಿನೀ—ಯವರ ರಾಜ್ಯಭಾರದ ವರ್ಧಂತಿಯ ದಿವಸವೆಂತ ಮೈಸೂರುಶೀಮೆಯ

ಲ್ಲಿ ಆಚರಿಸಲ್ಪಡತಕ್ಕದ್ದೆಂತಲೂ, ಮತ್ತು ಇಂತ್ಥಾ ವಿಶೇಷ ಸಮಯಕ್ಕೆ ತಕ್ಕ ವುತ್ಸವ ವಿನೋದಗಳನ್ನ ನಡಿಸಲಿಕ್ಕೆ ಯೇರ್ಪಾಡು ಮಾಡಿಕೊಳ್ಳುವ ವುದ್ದಿಶ್ಯ ಡಿಸ್ಟ್ರಿಕ್ಟು ಆಫೀಸರರುಗಳು ಈ ಸಂಗತಿಯನ್ನ ತಮ್ಮ ತಮ್ಮ ಡಿಸ್ಟ್ರಿಕ್ಟಿನೊಳಗಿನ ಪ್ರಜೆಗಳಿಗೂ, ಆಯಾ ಮ್ಯುನಿಸಿಪಾಲಿಟೀಯವರಿಗೂ ಪ್ರಸಿದ್ಧಪಡಿಸತಕ್ಕದ್ದೆಂತಲೂ ಅಪ್ಪಣೆ ಕೊಡಿಸುತ್ತಾರೆ.

3. ಆಯಾ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರುಗಳ ಮ್ಯುನಿಸಿಪಾಲಿಟೀಯವರು ಬಡಜನಗಳಿಗೆ ಅನ್ನ ಮತ್ತು ಬಟ್ಟೆ ಬಟವಾಡೇ ಮಾಡಲಿಕ್ಕೂ, ಪ್ರೈವೇಟ್ ವ ಪಬ್ಲಿಕ್ ಸ್ಕೂಲಗಳ ಹುಡುಗರುಗಳಿಗೆ, ಮತ್ತು ಧರ್ಮಸ್ಥಾಪನೆಗಳಲ್ಲಿರುವ ಜನಗಳಿಗೆ ತಕ್ಕ ಔತನ ಮಾಡಲಿಕ್ಕೂ, ಸಾಕಾಗುವ ಮೊಬಲಗನ್ನ ಡೆಪ್ಯುಟಿ ಕಮ್ಮಿಷನರುಗಳ ಯಖ್ತ್ಯಾರಿಯಲ್ಲಿ ಮಹಾರಾಜಾ ಸರ್ಕಾರದವರು ಇಡುವರು.

4 ಈ ಶುಭ ದಿನಕ್ಕೆ ಮರ್ಯಾದೆಗಾಗಿ, ಈ ಶೀಮೆಯಲ್ಲಿ ಯೆಲ್ಲಾ ಕಡೆಯಲ್ಲೂ ಇರುವ ಮೈಸೂರು ಸವಾರ್ ಬಾರ್ ಫಾಜಿನ ಪ್ರತಿ ನಾನ್‌ಕಮ್ಮಿಷನೆಡ್ ಆಫಿಸರಿಗೂ, ಶಿಪಾಯಿಗೂ ಬಂದು ದಿವಸದ ತಲಬನ್ನ ಬಹುಮಾನವಾಗಿ ಕೊಡಲ್ಪಡತಕ್ಕದ್ದೆಂತಲೂ ಸಹಾ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುತ್ತಾರೆ.

5. ಫೆಬ್ರುವರಿ 16ನೇ ತಾರೀಖಿನ ದಿವಸವು ತಮಾಂ ಆಫೀಸ್‌ಗಳಿಗೆ ರಜಾ ದಿನವಾಗಿ ಎಣಿಸಲ್ಪಡತಕ್ಕದ್ದು.

6. ಮೇಲ್ಕಂಡ ವರ್ಧಂತಿಯ ವುತ್ಸವವನ್ನ, ಬೆಂಗಳೂರಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರು ಖುದ್ದು ನಡಿಸುವ ವುದ್ದಿಶ್ಯ ವಿಶೇಷ ಏರ್ಪಾಡುಗಳು ಮಾಡಲ್ಪಡುವವು. ಮತ್ತು ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರನಲ್ಲಿಯೂ ನಡಿಯಬೇಕಾದ ಸರ್ಕಾರೀ ಮರ್ಯಾದಾವನ್ನ ಕುರಿತು ಇನ್ನು ಮೇಲೆ ಹುಕುಂ ಮಾಡಲಾಧೀತು.

ತಾರೀಖು 10ನೇ ಜನವರೀ 1887.

ನಂ. 218.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, [ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ] ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈಕೆಳಗೆ ಕಂಡ ಜೋಡೀ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವಿಜನ್ ಆಸಿಸ್ಟೆಂಟ್ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ತೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ನಂತ್ರ, ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷ್ನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವಂತತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಮೈಸೂರು ಡಿಸ್ಟ್ರಿಕ್ಟಿಗೆ ಶೇರಿದ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್	ಅತ್ತಿ ಕುಪ್ಪೆ	ಸಂತೇಬಾಚನಹಳ್ಳಿ	ಜೋಡೀ ದೊಡ್ಡಗೋಮನಹಳ್ಳಿ	ನಾಗರಗಟ್ಟದ ತಿಮ್ಮಯ್ಯಾ ಇತರ 6 ಮಂದಿ	26 8 8	221 0 7	203 0 0	124 7 9	1887ನೇ ಇಸವಿ ಫೆಬ್ರವರೀ ತಾರೀಖು 18ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ತಾರೀಖು 31ನೇ ಡಿಶಂಬರ್ 1886.

ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನ್ ದೇಖೀಲ್ ಮೈಸೂರು ಶೀಮೆಯ ತಮಾಂ ಸ್ಥಳಗಳಲ್ಲೂ ಷರಾಬ್ ತಯಾರಿ ವ ಒಟ್ಟು ಬಿಕರೀ ಮಾಡುವ ಒಟ್ಟು ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತದೆ.

2. ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿನ ಕಂಟ್ರಾಕ್ಟು, ಮೈಸೂರು ದೇಶದ ರೆಸಿಡೆಂಟರವರ ಅಪ್ಪಣೆ ಮೇರೆ, ಈ ಇಸ್ತಿಹಾರ್‌ನಾಮೆಯಲ್ಲಿ ಶೇರಿಸಲ್ಪಟ್ಟಿರುತ್ತೆ.

3. ಹಾಲಿ ಯಾವ ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತೋ ಆ ಬಾಬತು ಸ್ವಾತಂತ್ರ್ಯವು, ಈ ಇಸ್ತಿಹಾರ್‌ನಾಮೆಯ 9ನೇ ಕಲಂನಲ್ಲಿ ವಿವರಿಸಿರುವ Iರ ಲಾಗಾಯಿತು XIXರ ವರಿಗಿನ ಷರತ್ತುಗಳಿಗೆ ಒಳಪಟ್ಟು, ಕೊಡಲ್ಪಡುವದು. ಸದರೀ ಸ್ವಾತಂತ್ರ್ಯದಲ್ಲಿ ಶೇಂದಿಯನ್ನಾಗಲೀ, ಶೀಮೆ ವೈನ್ ಸಾರಾಯಿಯನ್ನಾಗಲೀ, ಸ್ಪಿರಿಟಗಳನ್ನಾಗಲಿ ಅಥವಾ ಬಿಯರ್ ಸಾರಾಯಿಯನ್ನಾಗಲಿ ತಯಾರ್ ಮಾಡುವ ಯಾ ಬಿಕರಿಮಾಡುವ ಸ್ವಾತಂತ್ರ್ಯವು ಅಡಗಿರುವದಿಲ್ಲ.

4. ತೀರ್ವೆ ದರದ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ತೀರ್ವೆ ದರಗಳು, ಮತ್ತು ಕಂಟ್ರಾಕ್ಟರುಗಳಿಂದ ಸರಬರಾಯಿ ಮಾಡಲ್ಪಡುವ ಷರಾಬಿನ ಒಟ್ಟು ಬಿಕರಿ ದರಗಳು ಸುದಾ, ಈ ಇಸ್ತಿಹಾರ್‌ನಾಮೆಯ 9ನೇ ಪ್ಯಾರಾದಲ್ಲಿನ XIIIನೇ ನಂಬರ್ ಷರತ್ತಿನಲ್ಲಿ ವಿವರಿಸಲ್ಪಟ್ಟ ಪ್ರಕಾರ ಗವರ್ನಮೆಂಟಿನಿಂದ ಗೊತ್ತು ಮಾಡಲ್ಪಟ್ಟಿರುತ್ತೆ.

5. (*a*.) ಈಗ ದರಖಾಸ್ತು ಅಪೇಕ್ಷಿಸಲ್ಪಟ್ಟ ಕಂಟ್ರಾಕ್ಟು ಕಾಲವು, ದರಖಾಸ್ತುದಾರನ ಇಷ್ಟ ಪ್ರಕಾರ 1887ನೇ ಇಸವಿ ಏಪ್ರೆಲ್ 1ನೇ ಮುರ್ಕ್ಕಂ ಲಾಗಾಯಿತು 1890ನೇ ಇಸವಿ ಮಾರ್ಚಿ 31ನೇ ಮುರ್ಕ್ಕಂವರಿಗೆ ಆಗುವ ಮೂರು ವರುಷಕಾಲಕ್ಕಾಗಲಿ 1887ನೇ ಇಸವಿ ಏಪ್ರೆಲ್ 1ನೇ ಮುರ್ಕ್ಕಂ ಲಾಗಾಯಿತು 1892ನೇ ಇಸವಿ ಮಾರ್ಚೀ 31ನೇ ಮುರ್ಕ್ಕಂವರಿಗೆ ಆಗುವ ಐದು ವರುಷ ಕಾಲಕ್ಕಾಗಲಿ, ವಿಸ್ತರಿಸಬಹುದು.

(b.) ಪ್ರತಿ ದರಖಾಸ್ತುದಾರನೂ, ದರಖಾಸ್ತು ಮಾಡುವ ವಾಯಿದೆಯು ಮೂರು ವರುಷ ಕಾಲಕ್ಕೆ ಅಥವಾ ಐದುವರುಷ ಕಾಲಕ್ಕೆ ಎಂಬದನ್ನೂ ಆತನು ದರಖಾಸ್ತು ಮಾಡುವ ವಾಯಿದೆಯಲ್ಲಿ ಸಾಲೀಯಾನಾ ಸರ್ಕಾರಕ್ಕೆ ಎಷ್ಟು ಕಮ್ಮಿ ಮೊಬಲಗು ಕೊಡುವದಕ್ಕೆ ಒಡಂಬಡುತ್ತಾನೋ ಆ ಸಂಗತಿಯನ್ನೂ ವಿವರವಾಗಿ ನಮೂದಿಸತಕ್ಕದ್ದು.

(c.) ಕಂಟ್ರಾಕ್ಟಿನ ಮೊದಲ್ ಎರಡು ಸಾಲ್‌ಗಳಲ್ಲಿ ಗವರ್ನ್ಮೆಂಟಿಗೆ ಸಾಲಿಯಾನಾ ಏಳೂವರೆ ಲಕ್ಷ ರೂಪಾಯಿಗಳಿಗಿಂತ ಕಮ್ಮಿಯಾಗಿಯೂ ಉಳಿದ ಸಾಲ್ ಯಾ ಸಾಲ್‌ಗಳಲ್ಲಿ ಎಂಟು ಲಕ್ಷ ರೂಪಾಯಿಗಳಿಗಿಂತ ಕಮ್ಮಿಯಾಗಿಯೂ ಕೊಡುವಂತೆ ಒಪ್ಪುವ ಯಾವ ದರಖಾಸ್ತಾಗಲಿ ಆಲೋಚಿಸಲ್ಪಡಲಾರದು.

6. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲೀ ಅಥವಾ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಸೆಕ್ಯೂರಿಟಿ ಪತ್ರಗಳ ಮೂಲಕವಾಗಿಯಾಗಲೀ 1,000 ರೂಪಾಯಿಗಳ ಠೇವಣಿ ಮೊಬಲಗು ಕಳುಹಿಸಲ್ಪಟ್ಟು "ಷರಾಬ್ ತಯಾರಿ ವ ಒಟ್ಟು ಬಿಕರಿಯ ಒಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಎಂಬ ಮಾತುಗಳು ವಿಳಾಸ ಬರೆಯಲ್ಪಟ್ಟ ಲಿಫಾಫೆಯಲ್ಲಿ ಹಾಕಿ 1887ನೇ ಇಸವಿ ಫೆಬ್ರುವರಿ 15ನೇ ಮಂಗಳವಾರ ದಿವಸ ಯಾ ತತ್ಪೂರ್ವದಲ್ಲಿ ಬೆಂಗಳೂರಲ್ಲಿ ದಿವಾನರವರ ಚೀಫ್ ಸೆಕ್ರೆಟೇರಿಯವರಿಗೆ ತಲಪುವಂತೆ ರವಾನಿಸಲ್ಪಡತಕ್ಕದ್ದು. ಸದರೀ ತಾರೀಖಿನ ತರುವಾಯ ಯಾವ ದರಖಾಸ್ತುಗಳೂ ತೆಗೆದುಕೊಳ್ಳಲ್ಪಡಲಾರದು. ದರಖಾಸ್ತುಗಳು, 1887ನೇ ಇಸವಿ ಫೆಬ್ರುವರೀ 15ನೇ ಮುರ್ಕುಮಿನ ಮಧ್ಯಾನ್ಹ 12 ಘಂಟೆಗೆ, ಹಾಜರಾಗತಕ್ಕ ದರಖಾಸ್ತುದಾರರ ರೂಬರೂ ದಿವಾನರವರ ಆಫೀಸಿನಲ್ಲಿ ಚೀಫ್ ಸೆಕ್ರೆಟೆರಿಯವರಿಂದಲೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷ್ನರವರಿಂದಲೂ ಖುಲ್ಲಾ ಮಾಡಲ್ಪಡುವವು, ದರಖಾಸ್ತುಗಳ ಆಖೈರ್ ವ್ಯವಸ್ಥೆ ದಿವಾನರವರಿಗೆ ಸೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನೂ ತಿಳಿಸದೇಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು. ದೀವಾನರವರಿಗೆ ಸಿಫಾರಸ್ ಮಾಡುವಬಗ್ಗೆ ಚುನಾಯಿಸಲ್ಪಡುವ ದರಖಾಸ್ತುದಾರರು ಕೂಡ್ಲೇ ನಗದಾಗಿಯಾಗಲೀ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲೀ, ದರಖಾಸ್ತುದಾರರು ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ಮೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಒಂದು ತಿಂಗಳ ಖಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೇ ಠೇವಣಿ ಇಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

7. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಗೆ ತಿಳಿಸಲ್ಪಟ್ಟ ಎಂಟು ದಿವಸಗಳೊಳಗಾಗಿ ಮೊದಲೇ ಇಡಲ್ಪಟ್ಟ ಡಿಪಾಜಿಟ್ ಮೊಬಲಗಿನೊಡನೆ, ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ ¼ರ ಮೊಬಲಗಿಗೆ ಸಮನಾಗುವಂತೆ ಇನ್ನೂ ಕೆಲವು ಮೊಬಲಗನ್ನು ನಗದಾಗಿಯಾಗಲಿ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿ ಯಾಗಲಿ ಬೆಂಗಳೂರು ಡೆಪ್ಯುಟಿ ಕಮ್ಮಿಷನರಲ್ಲಿ ಠೇವಣೀ ಇಡತಕ್ಕದ್ದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್‌ಗಳಿಗೆ ಬದ್ಧನಾಗಿ, ತಕ್ಕ ಛಾಪಾ ಕಾಗದದ ಮೇಲೆ, ವಿಧಿಸಲ್ಪಟ್ಟ ನಮೂನೇಯಲ್ಲಿ ಒಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರುಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟ್ಟನ್ನ ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ ಮೊದಲೇ ಇಡಲ್ಪಟ್ಟ ಠೇವಣಿ ಮೊಬಲಗುಗಳು ಸರ್ಕಾರಕ್ಕೆ ಸೇರಿಸಿ ಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

8. ಈ ಯಿಸ್ತಿಹಾರ್‌ನಾಮೆಯು ಯಾವ ಷರತ್ತುಗಳನ್ನಾಗಲೀ ಯಷ್ಟುಮಟ್ಟಿಗಾದರೂ ಬದಲಾಯಿಸುವದನ್ನು ಸೂಚಿಸುವ ಯಾವ ದರಖಾಸ್ತುಗಳಾಗಲೀ ಆಲೋಚಿಸಲ್ಪಡಲಾರವು, ಮತ್ತು ತಮಾಂ ದರಖಾಸ್ತುಗಳೂ ಈ ಯಿಸ್ತಿಹಾರ್‌ನಾಮೆಗೆ ಲಗತ್ತಿರುವ ನಮೂನೆಯಲ್ಲಿರತಕ್ಕವು.

9. ಹಾಲಿ ದರಖಾಸ್ತು ಅಪೇಕ್ಷಿಸಲ್ಪಟ್ಟಿರತಕ್ಕ ಕಂಟ್ರಾಕ್ಟು ಯಿದರಡೀ ಕಂಡ ಷರತ್ತುಗಳಿಗೆ ಬಳಪಟ್ಟಿರತಕ್ಕದ್ದು, ಯಾವವಂದರೆ:—

ಷರತ್ತುಗಳು.

1. (a.) ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ಮಿ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರ್ಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕಲೋಕಲ್‌ಸೆಸ್ ದೇಖೀಲ ಸರ್ಕಾರದಿಂದ ಗೊತ್ತು ಮಾಡಲ್ಪಟ್ಟ ದರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನು ಆ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ, ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು.

(b.) ಯಾವದಾದರೂ ತಿಂಗಳ ಆಖೈರ್ ವರಿವಿಗೆ ಕೊಡಲ್ಪಡುವ ಷರಾಬಿನಮೇಲೆ ಸಲ್ಲತಕ್ಕ ತೆರಿಗೇಮೊಬಲಗು, ಕರಾರ್ ಮಾಡಿಕೊಂಡ ಕಮ್ಮೀ ಹುಟ್ಟುವಳೀ ಪೈಕೀ ಸದರೀಮಾಹೆ ಖಿಸ್ತು ಮೊಬಲಗ್ ಭರ್ತಿಗೆ ಸಾಲದೇ ಹೋದರೆ, ಅಂತಾಕಮ್ಮೀ ಮೊಬಲಗನ್ನು ಭರ್ತೀಮಾಡುವದಕ್ಕೆ ಬೇಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತೀ ಪುರೋಖ್ತು ಅದೇಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮೀ ಪುರೋಖ್ತಿಗೆ ಉಪಯೋಗಿಸಲ್ಪಡತಕ್ಕದ್ದು. ಯಾವದಾದರೂ ವಂದು ಮಾಹೇಯಲ್ಲಿ ಜಾಸ್ತಿ ಪುರೋಖ್ತಿನಿಂದ ಹುಟ್ಟುವಂಥಾ ತೀರ್ವೆಯು ಪೈಕಿ ಅದೇ ಸರ್ಕಾರ್‌ಸಾಲಿನ ಯಾವದಾದರೂ ಹಿಂದಿನ ಮಾಹೆ ಯಾ ಮಾಹೆಗಳಲ್ಲಿ ಕಂಟ್ರಾಕ್ಟುದಾರನಿಂದ ಕಂ ಭರ್ತೀಮಾಡಲ್ಪಟ್ಟಿರಬಹುದಾದ ಮೊಬಲಗಿಗಿಂತಲೂ ಜಾಸ್ತೀಯಾಗಿರುವ ಮೊಬಲಗು, ಜಾಸ್ತೀ ಪುರೋಖ್ತಿನ ದೆಶೆಯಿಂದ ಯಾವ ಮಾಹೆಯಲ್ಲಿ ತೀರ್ವೆ ಮೊಬಲಗು ಹುಟ್ಟುವಳಯಿತೋ ಅಂಥಾ ಮಾಹೆಗೆ ಸಲ್ಲಬೇಕಾದ ಗೊತ್ತಾದ ಖಿಸ್ತು ಮೊಬಲಗಿನೊಂದಿಗೆ ಸರ್ಕಾರ್ ಖಜಾನೆಗೆ ಪಾವತಿ ಮಾಡಲ್ಪಡತಕ್ಕದ್ದು. ಮತ್ತು ಸದರೀ ಪಾವತಿ ಯೊಂದಿಗೆ ಅದೇ ಸರ್ಕಾರ್ ಸಾಲಿನ ಯಾವದಾದರೂ ಹಿಂದಿನ ಮಾಹೆ ಯಾ ಮಾಹೆಗಳಲ್ಲಿ ಕಂಟ್ರಾಕ್ಟುದಾರನಿಂದ ಕಂಭರ್ತೀ ಮಾಡಲ್ಪಟ್ಟಿರಬಹುದಾದ ಮೊಬಲಗಿಗೋಸ್ಕರ ಜಾಸ್ತಿ ಪುರೋಖ್ತಿನ ಮೇಲಿನ ತೀರ್ವೆ ಬಗ್ಯಾಗಿ ಬಂದು ಸ್ಟಾಂಪು ಹಚ್ಚಿದ ರಶೀತಿಯು ಕಂಟ್ರಾಕ್ಟುದಾರ ಯಾ ಆತನ ಏಜಂಟನಿಂದ ರುಜು ಮಾಡಲ್ಪಟ್ಟು ಹಾಜರ್ಮಾಡಲ್ಪಡತಕ್ಕದ್ದು.

(c). ಯಾವ ಮಾಹೆಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮಾರನೇ ತಿಂಗಳ 15 ನೇ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಅವು ಪಾವತಿಯಾಗದೆ ಹೋದರೆ, ಬಾಕೀ ನಿಲ್ಲುವ ತಮಾಂ ಮೊಬಲಗಿನಮೇಲೂ ಸದರೀ ತಾರೀಖುಲಾಗಾಯಿತು ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕಟ್ಟಲ್ಪಡುವದು. ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತ್ತವೋ ಆ ತಿಂಗಳು ಕಳದ ತರುವಾಯವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದೇಖಿಲ್ ಸಲ್ಲತಕ್ಕಬಾಕೀ ಮೊಬಲಗು, ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸ್ ನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ವಟ್ಟು ಬಿಕರೀ ಕೋಠಿಗಳಲ್ಲಿರತಕ್ಕ ನಗದ್ ಮೊಬಲಗ್ ದೇಖಿಲ್

ಕಂಟ್ರಾಕ್ಟ್‌ದಾರನ ಸ್ವತ್ತಿನ ಜಫ್ತೀ ಹರಾಜು ಮೂಲಕವಸೂಲ್‌ಮಾಡಲ್ಪಡತಕ್ಕದ್ದು. ಮತ್ತು ಬೆಂಗಳೂರು ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರಾಕ್ಟು ರದ್ದು ಮಾಡಲ್ಪಟ್ಟಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟ್‌ದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರಾಕ್ಟು ಕಾಲದ ಪೈಕಿ ಉಳಿದ ಕಾಲದಲ್ಲಿ ಕಂಟ್ರಾಕ್ಟ್‌ದಾರನ ಖರ್ಚಿಗೂ ಲುಕ್ಸಾನಿಗೂ ಒಳಪಟ್ಟು ಬಾಬು ಅಮಾನಿಯಲ್ಲಾಗಲೀ ಅನ್ಯಥಾ ಆಗಲೀ ಇಡುವದಕ್ಕೂ ಸಹ ದಿವಾನರವರ ಯಿಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಕ್ಕಗಳೂ ಪ್ರತ್ಯೇಕ ಪ್ರತ್ಯೇಕವಾಗಿ ತೈದ್ ಮಾಡಲ್ಪಡತಕ್ಕದ್ದು. ಒಂದು ಸಾಲಿನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನ್‌ಮೆಂಟಿಗೆ ಸಲ್ಲತಕ್ಕ ತೆರಿಗೆಯು ಆಸಾಲಿಗೆ ಕರಾರ್ ಮಾಡಿದ ಕಮ್ಮೀ ಹುಟ್ಟುವಳಿಗೆ ಜಾಸ್ತೀ ಆದರೆ, ಅಂಥಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾಯಿ 1 ಕ್ಕೆ 1 ಆಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೆರಿಗೇ ದೆಶೆಯಿಂದ ವಜಾ ಕೊಡಲ್ಪಡುವದು. ಆದರೆ ವಂದು ವರುಷದ ಜಾಸ್ತೀ ಮೊಬಲಗು, ಇಜಾರೇ ಪೈಕೀ ಯಾವದಾದರೂ ಇತರ ಸಾಲಿನ ಕರಾರ್ ಮಾಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ಮೀ ಬೀಳತಕ್ಕ ಯಾವ ಮೊಬಲಗನ್ನಾಗಲೀ ಭರ್ತೀ ಮಾಡುವಬಗ್ಗೆ ಉಪಯೋಗಿಸುವದಿಲ್ಲ.

III. (*a*). ಕಂಟ್ರಾಕ್ಟ್‌ದಾರನು ಬೆಂಗಳೂರು ಬಳಿಯಣ ಸರ್ಕಾರಡಿಸ್ಟಿಲೇರಿಯ ಆವರಣದೊಳಗಾಗಲೀ ಅಥವಾ VIIನೇ ಷರತ್ತಿನಲ್ಲಿ ವಿವರಿಸಲ್ಪಟ್ಟಂತೆ ಇತರ ಸ್ಥಳಗಳಲ್ಲಾಗಲಿ ಷರಾಬ್ ತಯಾರ್ ಮಾಡುವಂತೆಯೂ ಮತ್ತು ಡೆಪ್ಯುಟಿಕಮ್ಮಿಷನರಿಂದ ಮೊಕರರ್ ಮಾಡಲ್ಪಡತಕ್ಕಂಥಾ ಸ್ಥಳಗಳೊಳಗೆ ಬಟ್ಟಿ ಕೋಠಿಗಳನ್ನು ಸ್ಥಾಪಿಸುವಂತೆಯೂ ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ ಅಥವಾ ಆಬಗ್ಯಾಗಿ ಮೊಕರರ್ ಮಾಡಲ್ಪಟ್ಟ ಯಾವ ಉದ್ಯೋಗಸ್ಥರಿಂದಾಗಲಿ ಯಾ ತತ್ಕಾಲದಲ್ಲಿ ಗವರ್ನ್‌ಮೆಂಟ್ ಡಿಸ್ಟಿಲರಿ ಚಾರ್ಜುವುಳ್ಳ ಹೆಡ್ ಸೂಪರ್‌ವೈಜರ್ ಅಥವಾ ಇತರ ಆಫೀಸರರಿಂದಾಗಲೀ ತನಖಿ ನೋಡುವಬಗ್ಗೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠಿಗಳು ಖುಲ್ಲಾವಾಗಿರತಕ್ಕದ್ದು; ಮತ್ತು ಸದರೀ ಡಿಸ್ಟಿಲೇರಿ ಚಾರ್ಜುವುಳ್ಳ ಹೆಡ್ ಸೂಪರ್‌ವೈಜರ್ ಯಾ ಇತರ ಆಫೀಸರರವಶಕ್ಕೆ, ರೋಜೀನಾ ಕೆಲಸಮುಗಿದ ತರುವಾಯ ಡಿಸ್ಟಿಲೇರಿಯನ್ನು ಮೊಹರ್‌ಮಾಡಿ ಬೀಗದಕೈಗಳು ಪಹರೇದಲ್ಲಿ ಭದ್ರಪಡಿಸತಕ್ಕ ಬಗ್ಯಾಗಿ, ಒಪ್ಪಿಸಲ್ಪಡತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಗೆ ಮೊಕರರ್ ಮಾಡಲ್ಪಡುವ ಒಬ್ಬ ಉದ್ಯೋಗಸ್ಥನಿಂದ ಅಳತೇಮಾಡಲ್ಪಟ್ಟು ಅಜಮಾಯಿಷೀ ಮಾಡಲ್ಪಟ್ಟ ಹೊರತು ಡಿಸ್ಟಿಲೇರಿಯಿಂದಹೊರಗೆ ತೆಗೆದುಕೊಂಡು ಹೋಗಕೂಡದು. ಡಿಸ್ಟಿಲೇರಿಕಟ್ಟಡಗಳನ್ನೂ ನೀರನ್ನೂ ಉಪಯೋಗಿಸತಕ್ಕಬಗ್ಗೆ 250ರೂಪಾಯಿಗಳ ಬಾಡಿಗೆಯನ್ನು ಕಂಟ್ರಾಕ್ಟ್‌ದಾರನು ಮಾಹೆಯಾನಾ ಗವರ್ನ್‌ಮೆಂಟಿಗೆ ಸಂದಾಯ ಮಾಡಲ್ಪಡುವಂತೆಯೂ ಸದರೀ ಕಟ್ಟಡಗಳನ್ನು ನೀರುಕಾಲ್ವೆಗಳನ್ನೂ ಪೂರಾ ದುರಸ್ತು ಸ್ಥಿತಿಯಲ್ಲಿ ಇಟ್ಟುಕೊಂಡಿರುವಂತೆಯೂ ನಿಯಮಿಸಲ್ಪಡತಕ್ಕದ್ದು. ಯಗ್ಜಿಕ್ಯುಟಿವ್ ಇಂಜಿನಿಯರವರು ಸದರೀ ಕಟ್ಟಡಗಳನ್ನೂ ಜಲಾಧಾರದ ಕಾಲ್ವೆಗಳನ್ನು ಮೂರುತಿಂಗಳಿಗೆ ವಂದಾವರ್ತಿ ತನಖಿನೋಡುವರು ಮತ್ತು ಆಬಗ್ಯಾಗಿ ಡಿಸ್ಟಿಲೇರಿಯಲ್ಲಿಡಲ್ಪಟ್ಟ ವಂದುಬುಕ್ಕಿನಲ್ಲಿ ಕಟ್ಟಡಗಳ ಮತ್ತು ನೀರುಕಾಲ್ವೆಗಳ ಸ್ಥಿತಿಯನ್ನು ಷರಾ ಬರದು ಐಯಿಂದ ನಡಿಸಲ್ಪಡಬೇಕಾದ ಕೆಲಸಗಳನ್ನು ಹಾಜರಿರತಕ್ಕ ಕಂಟ್ರಾಕ್ಟರು ಯಾ ಅವರ ಏಜಂಟು ಅಥವಾ ಇತರ ಉದ್ಯೋಗಸ್ಥನಿಗೆ ತಿಳಿಸತಕ್ಕದ್ದು. ಈ ಬಾಬತು ಷರಾಗಳ ನಕಲು ಡೆಪ್ಯುಟಿ ಕಮ್ಮಿಷನರವರಿಗೂ, ಮತ್ತೊಂದು ಪ್ರತಿ ಕಂಟ್ರಾಕ್ಟ್‌ದಾರನಿಗೂ ಕಳುಹಿಸಲ್ಪಡತಕ್ಕದ್ದು. ಯಗ್ಜಿಕ್ಯೂಟಿವ್ ಯಿಂಜನಿಯರವರು ತನಿಖಿನೋಡಿದ ಲಾಗಾಯತು 15 ದಿವಸಗಳೊಳಗಾಗಿ, ಅವಶ್ಯಕಗಳಾದ ಕಾಮಗಾರಿಯು ಕಂಟ್ರಾಕ್ಟ್‌ದಾರನಿಂದ ನಡಿ

ಸಲ್ಪಡದೇಹೋದರೆ, ಯಕ್ಸಿಕ್ಯೂಟಿವ್ ಯಿಂಜನೀಯರರವರು ಕೂಡ್ಲೆ ಅಮಾನಿಯಲ್ಲಿ ಸದರೀ ಕಾಮಗಾರಿಯನ್ನ ಜರಗಿಸತಕ್ಕದ್ದು, ಮತ್ತು ಡೆಪ್ಯುಟಿ ಕಮ್ಮಿಷನರವರು ಆ ಬಾಬತು ಲಾಗವಡನ್ನು ತಪ್ಪಿಹೋದ ಕಂಟ್ರಾಕ್ಟು ದಾರನಿಂದ, ಜಮೀನ್ ಕಂದಾಯದ ಬಾಕೀ ವಸೂಲಿಬಗ್ಗೆ ತತ್ಕಾಲದಲ್ಲಿ ಜಾರೀ ಇರುವ ರೂಲ್‌ಸ್ ಅನುಸರಿಸಿ ವಸೂಲ್ಮಾಡಬೇಕಾಗಿರುತ್ತೆ.

(b.) ಕಂಟ್ರಾಕ್ಟುದಾರನು, ಡಿಸ್ಟಿಲೇರಿ ಶಿಬ್ಬಂದಿ, ಮೇಲ್ ತನಿಖಿ ಮತ್ತು ಪೈಗಸ್ತಿ ಯಿಲಾಖಾ ಮತ್ತು ಯಿವುಗಳಿಗೆ ಸಂಬಂಧಪಟ್ಟ ಕಂಟಿಂಜಂಟ್ ಖರ್ಚು ಯಿವುಗಳ ಲಾಗವಡಿಗೋಸ್ಕರ, ಡಿಸ್ಟಿಲೇರಿ ಯಿಂದ ಸರಬರಾಯಿ ಮಾಡಲ್ಪಟ್ಟ ತಮಾಂ ಷರಾಬಿನ ಮೇಲೆ ಗ್ಯಾಲನ್ ಒಂದಕ್ಕೆ ಅರ್ಧಾಣೆಪ್ರಕಾರ ಆಗುವ ತೀರ್ವೆಯನ್ನು ಮಾಹೇಯಾನಾ ಸಲಾಯಿಸತಕ್ಕದ್ದು.

(c.) ಮೇಲ್ಕಂಡ ಯೆರಡು ಕಲಂಗಳಲ್ಲಿ ನಮೂದಾದ ಡಿಸ್ಟಿಲೇರಿ ಕಟ್ಟಗಳ ಬಾಡಿಗೆ ಮತ್ತು ಶಿಬ್ಬಂದಿ ತೀರ್ವೆ ಮೊಬಲಗುಗಳು, ಅವು ಬಾಕಿಯಾಗುವ ಮಾರನೇ ತಿಂಗಳ 15ನೇ ತಾರೀಖಿನಲ್ಲಿ ಮಾಹೆವಾರಿ ಖಿಸ್ತಿನೊಂದಿಗೆ ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಕಂಟ್ರಾಕ್ಟುದಾರನಿಂದ ತಪ್ಪದೆ ಪಾವತೀ ಮಾಡಲ್ಪಡಬೇಕು. ಹೀಗೆ ಪಾವತಿ ಮಾಡದೇ ತಪ್ಪಿದರೆ ಈ ಬಾಬತು ಬಾಕಿಯು, ತತ್ಕಾಲದಲ್ಲಿ ಜಾರಿಯಿರುವ ರೂಲ್ಸು ಅನುಸರಿಸಿ ಜಮೀನ್ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡುವದು.

IV. (a) 1887ನೇ ಇಸವಿ ಏಪ್ರಲ್ 1ನೇ ತಾರೀಖಿನಲ್ಲಿ ದಾಸ್ತಾನ್ ಯಿರಬಹುದಾದ ಯಾವ ಷರಾಬನ್ನಾಗಲೀ ಹಳೇ ಕಂಟ್ರಾಕ್ಟುದಾರರು, ದಿವಾನರವರ ಮಂಜೂರಾತಿನಿಶಿ ಡಿಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡುವ ಈಡು ಮೊಬಲಗನ್ನು ಹೊಸ ಕಂಟ್ರಾಕ್ಟುದಾರನಿಂದ ಪಡೆದು ಅವನಿಗೆ ಒಪ್ಪಿಸತಕ್ಕದ್ದು. ಅಂಥಾ ದಾಸ್ತಾನು ಸಾಧಾರಣವಾಗಿ ಕಳದ 36 ತಿಂಗಳುಗಳಲ್ಲಿ ಮಾಹೆಯಾನಾ ತಯಾರ್ಮಾಡಲ್ಪಟ್ಟ ಸರಾಸರಿ ತೇದಾದಿಗಿಂತಲೂ ಜಾಸ್ತಿಯಾಗಿರಕೂಡದು.

(b.) ಹೊಸ ಕಂಟ್ರಾಕ್ಟುದಾರನು ಆ ಪ್ರಕಾರ ಅಪೇಕ್ಷಿಸಿದಲ್ಲಿ 1887ನೇ ಇಸವಿ ಮಾರ್ಚಿ ಗುರ್ರೇ ತಾರೀಖು ಲಾಗಾಯತು "ಬೆಳೆ" ಹಾಕುವದನ್ನು ಹಳೇ ಕಂಟ್ರಾಕ್ಟುದಾರನು ಮೊಕೂಫ್ ಮಾಡತಕ್ಕದ್ದು, ಮತ್ತು ಅದೇ ತಾರೀಖಾರಭ್ಯ ಹೊಸ ಕಂಟ್ರಾಕ್ಟುದಾರನು ಕೆಲಸಗಳು ಆರಂಭಿಸತಕ್ಕ ಬಗ್ಗ್ಯಾಗಿ ಕಟ್ಟವನ್ನು ಖಾಲಿ ಮಾಡತಕ್ಕದ್ದು. ಈ ವಿಷಯದಲ್ಲಿ 1887ನೇ ಇಸವಿ ಫಿಬ್ರವರೀ 22ನೇ ಮರ್ಕ್ಕಾಮಿನವಳಗಾಗಿ ಹಳೇ ಕಂಟ್ರಾಕ್ಟುದಾರರಿಗೆ ಬರಹದ ಮೂಲಕವಾಗಿ ನೊಟೀಸ್ ಕೊಡಲ್ಪಡತಕ್ಕದ್ದು. ಹಾಂಗೆ ನೊಟೀಸ್ ಕೊಡಲ್ಪಡದೆ ಹೋದರೆ ಹಳೇ ಕಂಟ್ರಾಕ್ಟುದಾರನು 1887ನೇ ಇಸವಿ ಮಾರ್ಚಿ 31ನೇ ಮರ್ಕ್ಕಾಂ ಪರಿಯಂತ ಬಟ್ಟಿಯಿಳಿಸತಕ್ಕ ಕೆಲಸ ಚಲಾಯಿಸತಕ್ಕದ್ದು, ಮತ್ತು ಆ ತಾರೀಖು ವಳಗಾಗಿ ಹಾಜರಿರತಕ್ಕ ತಮಾಂ ಬೆಳೆಯನ್ನು ಝಾಡೆಯಾಗಿ ಉಪಯೋಗಿಸತಕ್ಕದ್ದು.

(c.) ಹಳೇ ಕಂಟ್ರಾಕ್ಟುದಾರರಿಂದ ಶಾಶ್ವಿತವಾಗಿ ಸ್ಥಾಪಿಸಲ್ಪಟ್ಟ ಯಂತ್ರಗಳು ವಿನಾ ಆತನಿಗೆ ಶೇರಿದ ಇತರ ತಮಾಂ ಸಾಮಾನುಗಳು, ಈ ಷರತ್ತನುಸರಿಸಿ ಷರಾಬು ತಯಾರ್ಮಾಡುವದು ಮೋಖೂಫ್ ಮಾಡಿದ ಬಂದು ವಾರದವಳಗಾಗಿ ಆಚೆಗೆ ಸಾಗಿಸಲ್ಪಡತಕ್ಕದ್ದು. ಇದಕ್ಕೆ ತಪ್ಪಿದರೆ, ಡೆಪ್ಯುಟಿ ಕಮ್ಮಿಷನರವರು, ಹಳೇ ಕಂಟ್ರಾಕ್ಟುದಾರನ ಖರ್ಚಿಗೆ ವಳಪಟ್ಟು ಅವುಗಳು ಆಚೆಗೆ ಸಾಗಿಸಲ್ಪಡುವ ಬಗ್ಗೆ ಏರ್ಪಾಡು ಮಾಡುವರು.

(d.) ಹಳೇ ಕಂಟ್ರಾಕ್ಟುದಾರರಿಗೆ ಶೇರಿದ ಯಾವದಾದರೂ ದಾಸ್ತಾನ್ ಮತ್ತು ಯಂತ್ರ ಸಾಧನಗಳು ಹೊಸ ಕಂಟ್ರಾಕ್ಟುದಾರನಿಗೆ ಅವಶ್ಯಕವಿದ್ದಲ್ಲಿ ಆತನು ಅವುಗಳನ್ನು ನ್ಯಾಯವಾದ ಖರೀದಿಗೆ ತೆಗೆದು ಕೊಳ್ಳುವದಾಗಿ 1887ನೇ ಇಸವಿ ಮಾರ್ಚಿ 1ನೇ ತಾರೀಖಿನ ವಳಗಾಗಿ ಹಳೇ ಕಂಟ್ರಾಕ್ಟುದಾರರಿಗೆ ನೋಟೀಸ್ ಕೊಡತಕ್ಕದ್ದು; ಮತ್ತು ಅಂಥಾ ಖರೀದಿಯಲ್ಲಿ ತಕರಾರ್ ಉಂಟಾದರೆ ಡೆಪ್ಯುಟಿ ಕಮ್ಮಿಷನರ

ವರು ಅವುಗಳನ್ಯಾಯವಾದ ಖರೀದಿಯನ್ನು ಗೊತ್ತು ಮಾಡತಕ್ಕದ್ದು. ಪರಂತು ಹಾಂಗೆ 1887ನೇ ಇಸವಿ ಮಾರ್ಚಿ 1ನೇ ತಾರೀಖುವಳಗಾಗಿ ನೋಟೀಸ ಕೊಡಲ್ಪಡದೆಹೋದರೆ, ಹಳೇ ಕಂಟ್ರಾಕ್ಟುದಾರರು ಅವುಗಳನ್ನು ಸಾಗಿಸಿಕೊಂಡು ಹೋಗುವದಕ್ಕೆ ಸ್ವತಂತ್ರರಾಗಿರತಕ್ಕದ್ದು, ಮತ್ತು ಈ ವಿಷಯವಲ್ಲಿ ಹೊಸಕಂಟ್ರಾಕ್ಟುದಾರನು ತನ್ನ ಯಿಷ್ಟ ಪ್ರಕಾರ ಏರ್ಪಾಡು ಮಾಡಿಕೊಳ್ಳಬಹುದು.

(ಇ.) ಸದರೀ ಷರತ್ತಿನಲ್ಲಿ ಕಂಡ ರೂಲ್ಸಗಳು, ಈಗ ನಡಶಿರುವ ಬದಲಾವಣಿಗಳೊಡನೆ ಹಾಲೀದರಖಾಸ್ತು ಅಪೇಕ್ಷಿಸಲ್ಪಟ್ಟಿರುವ ಕಂಟ್ರಾಕ್ಟಿಗೆ ಅನ್ವಯಿಸತಕ್ಕವು.

V. ತಯಾರ್ಮಾಡಲ್ಪಡುವ ಸಾರಾಯಿಯು, ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಇಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು, ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗದುಕೊಳ್ಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್‌ವೈಜರಿಗೆ ಅಥವಾ ಈ ಬಗ್ಯೆ ಮೊಕರರ್ ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ್ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಇಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು ಅಥವಾ ಷರಾಬ್ ತಯಾರ್ಮಾಡಲ್ಪಟ್ಟ ತರುವಾಯ ಅದರಲ್ಲಿ ಹಾಕಲೂ ಕೂಡದು ಮತ್ತು ಉಪಯೋಗಿಸಲ್ಪಡುವ ಎಲ್ಲಾ ಪದಾರ್ಥಗಳೂ ಪ್ರಥಮತಃ ವಿಧಿಸಲ್ಪಟ್ಟ ದಾಮಾಷಾಯಿ* ಪ್ರಕಾರ ಇರತಕ್ಕವು, ಅಥವಾ ಕಂಟ್ರಾಕ್ಟುದಾರನಿಂದ ರೋಜೀನಾ ತಯಾರ್ಮಾಡಲ್ಪಡುವದರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕ್ಕೋಸ್ಕರ ಐಮಿಂದ ಗವರ್ನಮೆಂಟಿನವರಿಂದ ನಿರ್ಣಯಿಸಲ್ಪಡುವ ದಾಮಾಷಾಯಿ ಪ್ರಕಾರವಾಗಲಿ ಇರತಕ್ಕದ್ದು. "ಬೆಳೆ" ಬಟ್ಟಿ ಇಳಿಸಲ್ಪಡುವ ಪರಿಯಂತ ಅದರ ಬಲವನ್ನು ಆಯಾ ಕಾಲಗಳಲ್ಲಿ ಗೊತ್ತು ಮಾಡುವದಕ್ಕೋಸ್ಕರ ಅಂಗೀಕರಿಸಲ್ಪಟ್ಟಿರುವ ಲಾಂಗ್ ಅಂಡ್ ಡಿಂಗ್ ಅಂಡ್ ಫೇಜಯವರ ಸಾಚರೋಮಿಟರಸ್ ಯಂತ್ರವು ಕಂಟ್ರಾಕ್ಟುದಾರರಿಂದ ಇಡಲ್ಪಟ್ಟು ಯಕಸೈಸ್ಸಿಯಾನಿ ಅಬಕಾರಿ ಆಫೀಸರುಗಳಿಂದ ದೃಢಪಡಿಸಿ ತನಿಖಿ ನೋಡಲ್ಪಡುವಬಗ್ಯೆ ಅವುಗಳ ನಿಜವಾದ ವ ಕರಾರ್ ವಾಕಾ ಅದ ಲೆಖ್ಖ ಇಡಲ್ಪಡತಕ್ಕದ್ದು.

*ಯರಡು ಮಣಗಳ ತಾಟಿಬೆಲ್ಲ ಅಥವಾ ಕಾಕಂಬೀಗೆ ಮೂರು ಮಣಗಳ ವಳ್ಳೇಗನ್ನಾ ಬೆಲ್ಲಾ ಮತ್ತು ಬೆಲ್ಲಾ ಮಣ ವಂದಕ್ಕೆ ಮೂರು ಶೇರುಗಳುಳ್ಳ ವಳ್ಳೇ ಬಬ್ಬ ಡಿ (ಕೆಂಪುಚಕ್ಕೆ, ಪೇಲದಚಕ್ಕೆ) ಅವಶ್ಯಕವಿದ್ದಲ್ಲಿ ಗನ್ನಾ ಬೆಲ್ಲವಂದೇ ಉಪಯೋಗಿಸಲ್ಪಡಬಹುದು.

VI. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ, ತಯಾರ್ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತ್, ಇವುಗಳ ಕರಾರ್‌ವಾಕಾ ಲೆಖ್ಖಗಳನ್ನೂ, ಮತ್ತು ಡಿಸ್ಟಿಲೇರಿಯಲ್ಲಿ ರೋಜೀನಾ ಜಮಾಖರ್ಚು ಅದ ಎಲ್ಲಾಪದಾರ್ಥಗಳ ಲೆಖ್ಖಗಳನ್ನೂ, ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಕಂಟ್ರಾಕ್ಟುದಾರನ ಕ್ಯಾಷ್ ಲೆಖ್ಖವು ರೋಜೀನಾ ಅಲಾಹಿದಾ ದಾಖಿಲ್ಮಾಡಲ್ಪಟ್ಟು ದಾಸ್ತಾ ಪೈಕಿ ಖರೀದೀ ಮಾಡಲ್ಪಟ್ಟ ಪ್ರತಿ ತೇದಾದಿಗೂ ವೌಚರ್ ಇಡಲ್ಪಟ್ಟುವಿಧಿಸಲ್ಪಟ್ಟ ನಮೂನೆಯಲ್ಲಿ ಕ್ಯಾಷ ಲೆಖ್ಖದ ಗೋಷ್ವಾರೆಯು ಮಾಹೆಯಾನಾ ತಯಾರ್ಮಾಡಲ್ಪಟ್ಟು ಕಂಟ್ರಾಕ್ಟುದಾರನಿಂದಾಗಲಿ ಅವನ ಏಜಂಟನಿಂದಾಗಲಿ ಕ್ರಮವಾಗಿ ರುಜು ಮಾಡಲ್ಪಟ್ಟು ಹೆಡ್ ಸೂಪರ್‌ವೈಜರವರಿಗೆ ಒಪ್ಪಿಸಲ್ಪಡತಕ್ಕದ್ದು. ಆತನು ಅಂಥಾ ತಮಾಂ ಲೆಖ್ಖಗಳನ್ನೂ ಡೆಪ್ಯುಟಿ ಕಮಿಷನರವರಿಂದಾಗಲೀ, ಹೆಡ್ ಸೂಪರ್‌ವೈಜರ್‌ಯವರಿಂದಾಗಲೀ ಅಥವಾ ಆ ಬಗ್ಯಾಗಿ ಮೊಕರರ್ಮಾಡಲ್ಪಡುವ ಯಾವ ಉದ್ಯೋಗಸ್ಥನಿಂದಾಗಲೀ ತನಿಖೀ ನೋಡುವಬಗ್ಯೆ ಹಾಜರ್ ಮಾಡುವಂತೆ ಕೇಳಲ್ಪ

ಟ್ಟಾಗ ಅವುಗಳನ್ನು ಹಾಜರ್ಮಾಡತಕ್ಕದ್ದು; ಮತ್ತು ಹೆಡ್ ಸೂಪರ್‌ವೈಜರವರು ಆಗಿಂದಾಗ್ಯೆ ಅಪೇಕ್ಷಿಸಲ್ಪಡುವಂಥಾ ತಪಶೀಲ್‌ಗಳುಳ್ಳ ದೃಢಪಡಿಸಲ್ಪಟ್ಟ ಯಥಾ ನಕಲ್‌ಗಳನ್ನು ಅವರಿಗೆ ಒಪ್ಪಿಸತಕ್ಕದ್ದು.

VII. ಒಂದು ತಿಂಗಳಿಗೆ ಆಗುವಷ್ಟು ಮತ್ತು 16,000 ಗ್ಯಾಲನ್‌ಗಳಿಗೆ ಕಡಿಮೆಯಿಲ್ಲದ ಸಾರಾಯಿಯನ್ನು ಯಾವಾಗ್ಯೂ ಹಾಜರಿಯಲ್ಲಿಟ್ಟುಕೊಂಡಿರಲಿಕ್ಕೆ ಒಟ್ಟೇದಾರನು ಬದ್ಧನಾಗಿರತಕ್ಕದ್ದು. ಮತ್ತು 1887ನೇ ಇಸವಿ ಏಪ್ರಿಲ್ 1ನೇ ತಾರೀಖುಲಾಗಾಯಿತು ಈಮೇರೆ ದಾಸ್ತಾನ್ ಹಾಜರಿಡುವಬಗ್ಯೆ ಆತನು ಸದರೀ ತಾರೀಖಿಗೆ ಮುಂಚೆಯೇ ಒಟ್ಟೇ ಕೆಲಸಕ್ಕೆ ಆರಂಭಿಸಲು ಅವಕಾಶ ಕೊಡಲ್ಪಡತಕ್ಕದ್ದು; ಪರಂತು ಹಾಂಗೆ ತಯಾರ್ಮಾಡಲ್ಪಟ್ಟ ಯಾವ ಷರಾಬೇಆಗಲೀ, 1887ನೇ ಇಸವಿ ಏಪ್ರಿಲ್ 1ನೇತಾರೀಖಿಗೆ ಮುಂಚಿತವಾಗಿ ತನ್ನ ವಶದಿಂದಲಾಗಲೀ ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಲಾಗಲೀ, ಸದರೀ ತಾರೀಖುವರಿಗೆ ಮೊಹರ್ ಸಮೇತ ಅಮಾನತ್ ಇರುವಬಗ್ಯೆ ಒಟ್ಟು ಕೋಠಿಗಳಲ್ಲಿ ತಡೆದಿಡುವಬಗ್ಯೆ ಹೆಡ್ ಸೂಪರ್‌ವೈಜರವರಿಂದ ರುಜು ಮಾಡಲ್ಪಟ್ಟ ಪ್ಯಾಸಿನ ಆಧಾರದ ಮೇಲೆ ಸಾಗಿಸಲ್ಪಡುವದು ವಿನಾ, ಅನ್ಯಥಾ ಮಾರಲ್ಪಡಕೂಡದು ಯಾ ಸಾಗಿಸಲ್ಪಡಕೂಡದು. ಕಂಟ್ರಾಕ್ಟದಾರನು ತಮಾಂ ತಾಲ್ಲೂಕು ಕಸಬಾ ಜಾಗಾಗಳಲ್ಲಿಯೂ, ದೊಡ್ಡ ಷಹರ್‌ಗಳಲ್ಲಿಯೂ ಮತ್ತು ಹೆಡ್ ಸೂಪರ್‌ವೈಜರವರು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿನಿಶಿ ಅಥವಾ ಮಂಜೂರಾತಿ ನಿರೀಕ್ಷಣೆ ಮೇಲೆ ಸದರೀ ಡೆಪ್ಯುಟಿ ಕಮಿಷನರವರ ಅಧಿಕಾರದ ಸ್ಥಳ ಸರಹದ್ದಿಗೆ ಒಳಪಟ್ಟು ಮತ್ತು ಚಿಲ್ಲರೆ ಬಿಕರೀದಾರರ ಅನುಕೂಲ್ಯತೆಗೆ ಸಹಕಾರಿಯಾದ್ದೆಂಬದಾಗಿ ಗೊತ್ತು ಮಾಡುವಂಥಾ ಇತರ ಸ್ಥಳಗಳಲ್ಲಿ ಯೂಸುದಾ ಒಟ್ಟು ಅಂಗಡಿಗಳನ್ನು ಸ್ಥಾಪಿಸುವದಕ್ಕೆ ಅಪ್ಪಣೆಕೊಡಲ್ಪಡತಕ್ಕದ್ದು. ಕಂಟ್ರಾಕ್ಟದಾರನು, ಅಂಥಾ ವಟ್ಟು ಅಂಗಡಿಗಳಲ್ಲಿ ಯಾವಾಗ್ಯೂ ವಟ್ಟು ಬಿಕರೀ ಲೈಸೆನ್ಸ್‌ರೂಲ್ಸಿನಲ್ಲಿ ವಿವರಿಸಿರುವಂತೆ, ದಾಸ್ತಾನ್ ಇರುವ ಪ್ರದ್ದಿಶ್ಯ ಕ್ರಮವಾಗಿ ಸರಬರಾಯಿ ಮಾಡತಕ್ಕದ್ದು. ಅಂಥಾ ವಟ್ಟು ಬಿಕರೀ ಅಂಗಡಿಗಳಲ್ಲಿ "ದಾಸ್ತಾನ್ ಕಮ್ಮಿ ಯಿದ್ದರೂ" ಮತ್ತು "ದಾಸ್ತಾನ್ ಇಲ್ಲದಿದ್ದರೂ" ಕಮ್ಮಿ ಯಿರುವ ತೇದಾವಿಗೆ ಯರಡರಷ್ಟು ಕಿಮ್ಮತು ಜುರ್ಮಾನೇ ತರೀಕ್ ವಸೂಲ್ಮಾಡಲ್ಪಟ್ಟು ಆ ಪೈಕಿ ಚಿಲ್ಲರೆ ಬಿಕರೀದಾರನಿಗೆ ನಷ್ಟವೇನಾದರೂ ಸಂಭವಿಸಿ ಯಿದ್ದಲ್ಲಿ ಅದು ಪಾವತೀ ಮಾಡಲ್ಪಡುವದು. ಹಾಲೀ ವಟ್ಟು ಅಂಗಡಿಗಳು ಯಿರತಕ್ಕ ಸ್ಥಳಗಳ ಒಂದು ಪಟ್ಟಿಯೂ, ಕಂಟ್ರಾಕ್ಟದಾರನು ಡೆಪ್ಯುಟಿ ಕಮ್ಮಿಷನರಿಗಾಗಲಿ . ಹೆಡ್ ಸೂಪರ್‌ವೈಜರವರಿಗಾಗಲೀ ದರಖಾಸ್ತು ಮಾಡಿ ಪಡಿಯಬಹುದು. ಕಂಟ್ರಾಕ್ಟದಾರನು, ದುಕಾನ್ ಒಂದಕ್ಕೆ ಮಾಹೆಯಾನಾ 2 ರೂಪಾಯಿನಂತೆ ಗೊತ್ತು ಮಾಡಲ್ಪಟ್ಟ ಲೈಸೆನ್ಸ್ ಫೀಯನ್ನು ಪಾವತೀ ಮಾಡತಕ್ಕದ್ದು.

VIII. ಕಂಟ್ರಾಕ್ಟದಾರನು, XI ಮತ್ತು XIIIನೇ ಷರತ್ತುಗಳಲ್ಲಿನ ರೂಲ್ಸ್‌ಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರ್ತು, ಅನ್ಯಥಾ ಡಿಸ್ಟಿಲೇರಿಯಲ್ಲಾಗಲೀ ಒಟ್ಟು ಬಿಕರೀ ಅಂಗಡಿಗಳಲ್ಲ್ಯಾಗಲೀ ಸಾರಾಯಿಯನ್ನು ಚಿಲ್ಲರೆಫರೋಖ್ತು ಮಾಡಕೂಡದು.

IX. ಚಿಲ್ಲರೆ ಫರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟು ಜಾತ ಡೆಪ್ಯುಟಿ ಕಮ್ಮಿಷನರುಗಳ ವಿಚಾರಣೆಯಲ್ಲಿಯೂ ಮತ್ತು ಮ್ಯುನಿಸಿಪಲ್ ಷಹರ್‌ಗಳಲ್ಲಿ, ಹಾಂಗೆ ದಿವಾನ್‌ರವರಿಂದ ಅಪ್ಪಣೆ ಮಾಡಲ್ಪಟ್ಟರೆ, ಅಂಥಾ ಷಹರ್‌ಗಳ ಮ್ಯುನಿಸಿಪಲ್ ಪ್ರೆಸಿಡೆಂಟರು ಯಾ ವೈಸ ಪ್ರೆಸಿಡೆಂಟರ ವಿಚಾರಣೆಯಲ್ಲಿಯೂ ಇರತಕ್ಕವು. ಯಾವ ಅಂಗಡಿಗಳನ್ನಾಗಲೀ ಪಬ್ಲಿಕ್ ಜರೂರಾತಿ ಸಬಬಿನ ಮೇಲೆ, ಇಜಾರೆದಾರನು ತನಿಗೆ ಈಡು ಮೊಬಲಗು ಕೊಡಬೇಕೆಂದು ಕೇಳುವ ಹಕ್ಕಿಲ್ಲದೇನೇ, ಮುಚ್ಚುವಂತೆ ಹುಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು. ಜಾತ್ರೆಗಳು, ಸಂತೆಗಳು ಮತ್ತು ಹಬ್ಬಗಳಲ್ಲಿ ಒಟ್ಟು ಕೋಠಿಗಳು ಮತ್ತು ಚಿಲ್ಲರೆ ಫರೋಖ್ತು ಅಂಗಡಿಗಳನ್ನು ಹೆಚ್ಚು ವಾಯಿದೆ ವರಿಗೆ ಖುಲ್ಲಾ ಇಡಲ್ಪಡುವ ಬಗ್ಯೆ ಆಮಲ್‌ದಾರುಗಳಿಂದ ಧಾರಾಳವಾಗಿ ಅಪ್ಪಣೆ ಕೊಡಲ್ಪಡತಕ್ಕದ್ದು.

X. (*a*) ಡೆಪ್ಯುಟಿ ಕಮಿಷ್ನರವರ ಮಂಜೂರಾತಿಸಿಶಿ ಅಥವಾ ಮಂಜೂರಾತಿ ನಿರೀಕ್ಷಣಮೇಲೆ ಹೆಡ್ ಸೂಪರ್‌ವೈಜರವರಿಂದ ಮೊಕರರ್‌ಮಾಡಲ್ಪಡುವ ಪ್ರಕಾರಾ, ಮೇಲ್ಕಂಡ ಆಫೀಸರರಿಂದ, ತಾಲ್ಲೂಕು ಕಸಬಾಗಳಲ್ಲಿಯೂ, ಹೋಬಳಿ ಕಸಬಾ ಜಾಗಾಗಳಲ್ಲಿಯೂ, ದೊಡ್ಡ ಹಳ್ಳಿಗಳಲ್ಲಿಯೂ ಮತ್ತು ಜನಗಳು ಆ ಬಗ್ಯಾಗಿ ಅಪೇಕ್ಷಿಸುವಂಥಾ ಇತರ ಸ್ಥಳಗಳಲ್ಲಿಯೂ ಚಿಲ್ಲರೆ ದುಕಾನ್‌ಗಳಿಗೋಸ್ಕರ ವಿಧಿಸಲ್ಪಟ್ಟ ನಮೂನೆಯಲ್ಲಿ ಲೈಸೆನ್ಸಗಳು ಕೊಡಲ್ಪಡುವವು. ಹಾಲಿ ಇರತಕ್ಕ ತಮಾಂ ದುಕಾನ್‌ಗಳೂ ಕಾಯಂ ಇಡಲ್ಪಡತಕ್ಕವು. 1887ನೇ ಇಸವಿ ಏಪ್ರೈಲ್ 1ನೇ ತಾರೀಖಿನಲ್ಲಿ ಅಮಲ್‌ದಾರರುಗಳು ಬಟ್ಟಿ ಕೋಠೀಗಳಲ್ಲಿನ ದಾಸ್ತಾನ್ ತನಿಖೀಮಾಡಿ ಆ ಪೈಕಿ ಮಂದು ಶೀಶೆ ಸಾರಾಯಿಯನ್ನು ಬಂದೋಬಸ್ತಾಗಿ ಬಿರಡೇಹಾಕಿಶಿ ಮೊಹರ್‌ಮಾಡಿಸಿ ಯಕ್ಸೈಸ್ ಆಫೀಸರರ ತನಿಖೆ ವ ಆಜಮಾಯಿಷೀ ಬಗ್ಯೆ ಇಡಿಸತಕ್ಕದ್ದು. ಯಾವದಾದರೂ ಮಂದು ಸ್ಥಳದಲ್ಲಿಯ ಚಿಲ್ಲರೆ ದುಕಾನ್‌ಗಳ ಸಂಖೆಯು ಜಾಸ್ತಿ ಮಾಡಬೇಕಾದರೂ ಕಮ್ಮಿ ಮಾಡಬೇಕಾದರೂ, ಅವುಗಳಲ್ಲಿ ನಡೆದ ಬಿಕರೀಮೇಲೆ ಗೊತ್ತು ಮಾಡಲ್ಪಡತಕ್ಕದ್ದು.

(*b*). ಚಿಲ್ಲರೇ ಬಿಕರೀ ದುಕಾನ್‌ಗಳಿಗಾಗಿ ಕೊಡಲ್ಪಡುವ ಲೈಸೆನ್ಸ್‌ಗಳಿಗೋಸ್ಕರ ಯಾವ ಫೀಜೇ ಆಗಲೀ, ಶೀಮೆಯ ತಮಾಂ ಸ್ಥಳಗಳಲ್ಲಿನ ಚಿಲ್ಲರೆ ಬಿಕರೀ ದುಕಾನ್‌ಗಳಲ್ಲಿ ಬಿಕರೀ ಮಾಡಲ್ಪಡತಕ್ಕ ಜಾಸ್ತೀ ತೇದಾದಿಗೋಸ್ಕರ ಯಾವ ಮೊತ್ತವಾಗಲೀ ವಸೂಲ್ ಮಾಡಲ್ಪಡತಕ್ಕದ್ದಲ್ಲಾ; ಪರಂತು ಬೆಂಗಳೂರು ಷಹರ್ ಮತ್ತು ಬೆಂಗಳೂರು ಶಿವಿಲ್ ವ ಮಿಲಿಟೆರಿ ಸ್ಟೇಷನಿನಲ್ಲಿ ಮಾತ್ರಾ ಮ್ಯುನಿಸಿಪೆಲ್ ಬೋರ್ಡಿನವರು, ಆಗಿಂದಾಗ್ಯೆ ಗವರ್ನಮೆಂಟಿನಿಂದ ಗೊತ್ತುಮಾಡಲ್ಪಡುವಂತೆ ಅಂಥಾ ಲೈಸೆನ್ಸ್ ಫೀಜುಗಳನ್ನೂ ಜಾಸ್ತೀ ಮಾರಾಟದಮೇಲೆ ಮೊತ್ತವನ್ನೂ ಸುದಾ ವಸೂಲ್ ಮಾಡುತ್ತಾ ಬರುವರು.

(*c*). ಈ ಪ್ರಕಾರ ಮಾಫ್ ಮಾಡಲ್ಪಟ್ಟ ಲೈಸೆನ್ಸ್ ಫೀಜು, ಜಾಸ್ತೀ ಮಾರಾಟದಮೇಲಿನ ಮೊತ್ತ ಇವುಗಳಿಗೆ ಬದಲಾಗಿ, ಬೆಂಗಳೂರು ಷಹರ್ ಮತ್ತು ಬೆಂಗಳೂರು ಶಿವಿಲ್ ವ ಮಿಲಿಟೆರಿ ಸ್ಟೇಷನ್ ವಿನಾ ಅನ್ಯಥಾ ಇತರ ಸ್ಥಳಗಳಿಗೆ ಸರಬರಾಯಿಮಾಡಲ್ಪಟ್ಟ ತಮಾಂ ಷರಾಬಿನಮೇಲೂ ಗ್ಯಾಲನ್ ಮಂದಕ್ಕೆ ದುರಡಾಣೆ ದರವುಳ್ಳ ಮಂದೇವಿಧವಾದ ಫೀಜು ವಸೂಲ್‌ಮಾಡಲ್ಪಡುವದು. ಕಂಟ್ರಾಕ್ಟುದಾರನು ಈ ಬಾಬತು ಫೀಜನ್ನು ಅವರ ಮಾಹೇವಾರಿ ಕಿಸ್ತು ಮೊಬಲಗಿನೊಂದಿಗೆ ಸರ್ಕಾರ ಖಜಾನೆಗೆ ಪಾವತೀಮಾಡಿ ಈ ಬಾಬತು ಮೊಬಲಗನ್ನು ಚಿಲ್ಲರೆ ಬಿಕರೀದಾರರಿಂದ XIIIನೇ ನಂಬರ್ ಷರತ್ತಿನಲ್ಲಿ ವಿವರಿಸಲ್ಪಟ್ಟ ಬಟ್ಟಿ ಬಿಕರೀ ಖರೀದಿ ಜೊತೇಲಿ ವಸೂಲ್‌ಮಾಡಿ ಕೊಳ್ಳತಕ್ಕದ್ದು. ಸದರೀ ಫೀಜನ್ನು ಕಂಟ್ರಾಕ್ಟುದಾರನು ಮೇಲ್ಕಂಡ ರೀತಿಯಾಗಿ ಪಾವತೀ ಮಾಡುವದಕ್ಕೆ ತಪ್ಪಿದರೆ ಅದು ಜಮೀನ್ ಕಂದಾಯದ ಬಾಕಿಯಂತೆ ಕಂಟ್ರಾಕ್ಟುದಾರನಿಂದ ವಸೂಲ್‌ಮಾಡಲ್ಪಡುವದು.

(*d*). ಕ್ರಮಪಡಿಸಲ್ಪಟ್ಟ ದಾರಣೆಗೆ ಮತ್ತು ವಿಧಿಸಲ್ಪಟ್ಟ ಸ್ಟ್ರೆಂಗ್ತಿನಿಂದ ಸಾರಾಯಿಯನ್ನು ಫುರೋಖ್ತು ಮಾಡುವದಕ್ಕೂ, ಜರೂರಾದ ಇತರ ಷರತ್ತುಗಳ ಬಗ್ಯೂ ಲೈಸೆನ್ಸ್‌ಗಳಲ್ಲಿ ನಿಬಂಧನೆ ಮಾಡಲ್ಪಡುವದು. ಚಿಲ್ಲರೇ ಫುರೋಖ್ತುದಾರರು ಅವರಿಗೆ ಅತ್ಯಂತ ಸಮೀಪದಲ್ಲಿನ ಬಟ್ಟಿ ಅಂಗಡಿಗಳಿಂದಲೇ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಸದರೀ ಚಿಲ್ಲರೇ ಫುರೋಖ್ತುದಾರರು, ಅಕ್ರಮವಾದ ವಿಷಯಗಳೇನೂ ನಡೆಯುತ್ತದೆ ಇರುವದನ್ನು ನೋಡುವ ಬಗ್ಯೆ ತಮ್ಮ ಅಂಗಡಿಗಳೊಳಗೆ ಇಜಾರೇದಾರರಿಗಾಗಲಿ ಅವರ ಮುತಾಲೀಕರಿಗಾಗಲಿ ಆಬ್ಕಾರಿ ಆಫೀಸರರುಗಳಿಗಾಗಲೀ ಕ್ರಮ ಪ್ರಕಾರ ಅಧಿಕಾರಹೊಂದಿದ ಯಾವ ಸರ್ಕಾರ್ ನವುಕರನಿಗಾಗಲಿ ಅವಕಾಶ ಸಹ ಕೊಡತಕ್ಕದ್ದು, ಮತ್ತು ಪ್ರತಿದಿನ ತಾವು ತೆಗದುಕೊಳ್ಳುವ ಸಾರಾಯಿಯ ತೇದಾದ್ ವ ಸ್ಟ್ರೆಂಗ್ತ್ ಮತ್ತು ಸದರೀ ಬಗ್ಯೆ ಹಾಕಲ್ಪಡುವ ಖರೀ

ದಿಗಳು ಅವುಗಳ ನಿಜವಾಗಿಯೂ ಕರಾರ್‌ವಾಕಾ ಆಗಿಯೂ ಇರುವ ಲೆಖ್ಖಗಳನ್ನು ಇಡತಕ್ಕದ್ದಲ್ಲದೆ ಇಜಾರೇದಾರನಿಂದಾಗಲಿ, ಅವನ ಮುತಾಲೀಕನಿಂದಾಗಲೀ, ಸದರೀ ಲೆಖ್ಖ ಕೇಳುವಂತೆ ಅಧಿಕಾರ ಕೊಡಲ್ಪಟ್ಟ ಯಾವ ಸರಕಾರದ ಉದ್ಯೋಗಸ್ಥನಿಂದಾಗಲಿ, ಹಾಗೆ ಅಪೇಕ್ಷಿಸಲ್ಪಟ್ಟಾಗ ತನಿಖಿ ನೋಡುವ ಬಗ್ಯೆ ಅವುಗಳನ್ನು ಹಾಜರ್ಮಾಡತಕ್ಕದ್ದು. ಕಂಟ್ರಾಕ್ಟರಾಗಲೀ ಅವರ ಏಜಂಟರಾಗಲೀ ಯಾ ಅವರ ಕೈ ಕೆಳಗಣ ಉದ್ಯೋಗಸ್ಥರಾಗಲೀ ಚಿಲ್ಲರೆ ಫುರೋಖ್ತು ದುಕಾನ್‌ಗಳಲ್ಲಿ ಖುದ್ದಾಗಿಯಾದರೂ ಯಾ ಪರಭಾರೆಯಾಗಿಯಾದರೂ ಯಾವ ಸಂಬಂಧ ಯಾ ಪ್ರಯೋಜನವನ್ನೂ ಉಂಟಾಗಿರಕೂಡದು.

XI. ಡಿಸ್ಟಿಲೇರಿಯಿಂದ ಸಾರಾಯಿ ಕೊಡುವದನ್ನು ಕುರಿತ ಈ ಕೆಳಗೆ ಬರುವ ರೂಲ್ಸ್ ಅನುಸರಿಸಲ್ಪಡತಕ್ಕದ್ದು.

(a) ಸಾಧಾರಣವಾಗಿ 20 ಡಿಗ್ರಿ ಅಂಡರ್ ಪ್ರೂಫಿಗೆ ಹೆಚ್ಚಿನ ಸ್ಟ್ರೆಂಗ್ತ್ ನಿಂದ ಯಾವ ಸಾರಾಯಿಯನ್ನೂ ಕೊಡತಕ್ಕದ್ದಲ್ಲವು, ಆದರೆ ಕಂಟ್ರಾಕ್ಟುದಾರನಾಗಲಿ, ಚಿಲ್ಲರೆ ಫುರೋಖ್ತುದಾರನಾಗಲೀ ಮೇಲ ಕಂಡ ಸ್ಟ್ರೆಂಗ್ತಿಗಿಂತ ಹೆಚ್ಚಾದ ಸ್ಟ್ರೆಂಗ್ತಿನಲ್ಲಿ ಸಾರಾಯಿ ಕೊಡಲಿಕ್ಕೆ ಅಪೇಕ್ಷಿಸಿದರೆ ಹಾಗೆ ಕೊಡಲ್ಪಡುವ ಸ್ಪಿರಿಟ್ ಸಾರಾಯಿಯು ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತ್ ವುಳ್ಳದ್ದಾಗಿರಕೂಡದು. ಪ್ರೂಫಿಗೆ ಸಮನಾದ ಬಲವುಳ್ಳ ಸಾರಾಯಿಯು, ಯರಡು ದರ್ಜೆ ಕ್ವಾರಟ ಶೀಶೆಗಳಲ್ಲಿಯೂ, ನಾಲ್ಕು ದರ್ಜೆ ಪಯ್ನಿಟ ಶೀಶೆಗಳಲ್ಲಿಯೂ, ಇಂಗ್ಲಿಷು ಮತ್ತು ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಿಂತೆಯೇ ಕಮ್ಮೀ ತೇದಾದಿನ ಡಬ್ಬಿಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಡುವದು; ಅದು ಡಿಸ್ಟಿಲೇರಿಯಲ್ಲಿ ಹೆಡ್ ಸೂಪರ್ ವೈಜರವರಿಂದ ಮೊಹರ್ಮಾಡಲ್ಪಟ್ಟು ಚೀಟಿ ಹಚ್ಚಿರುವ ಪ್ರಕಾರವೇ ಬದಲಾಯಿಸದಂತೆಯೂ ಹೆಡ್ ಸೂಪರ ವೈಜರವರ ಪ್ಯಾಸಿನ ಆಧಾರದ ಮೇಲೂ ಒಟ್ಟು ಅಂಗಡಿಗಳಿಂದ ಚಿಲ್ಲರೇ ಬಿಕರೀದಾರ್ರಿಗೆ ಕಂಟ್ರಾಕ್ಟುದಾರರಿಂದ ಬದಗಿಸಲ್ಪಡತಕ್ಕ ಶೀಶೆಗಳಲ್ಲಿ ಫುರೋಖ್ತು ಮಾಡಲ್ಪಡತಕ್ಕದ್ದು. ದಾರಿಯಲ್ಲಿ ಪಡೆದು ಹೋಧೀತೆಂಬದಾಗಿ ಕಾಣಬರುವ ಸಂಗತಿಗಳಲ್ಲಿ, ಹೆಡ್ ಸೂಪರ್‌ವೈಜರವರು, ರೇಂಜ ಸೂಪರ್‌ವೈಜರುಗಳಿಂದ ಶೀಶೆಗಳಲ್ಲಿ ಭರ್ತೀ ಮಾಡಲ್ಪಟ್ಟು ಮೊಹರ್ ಮಾಡಲ್ಪಡುವಬಗ್ಯೆ ಸದರೀ ರೇಂಜ ಸೂಪರ್‌ವೈಜರುಗಳಲ್ಲಿಗೆ ಬೇಕಾದಷ್ಟು ಅಂಥಾ ಷರಾಬನ್ನು ಡಿಸ್ಟಿಲೇರಿಯಿಂದ ಸರಬರಾಯಿಮಾಡತಕ್ಕದ್ದು. ಚಿಲ್ಲರೆ ಬಿಕರೀದಾರರು ಅಂಥಾ ಷರಾಬನ್ನು ಅವರಿಗೆ ಗೊತ್ತಿರುವಂತಾ ಮರ್ಯಾದೆವುಳ್ಳ ಜನಗಳಿಗೆ ಮಾತ್ರವೇ ಹೆಡ್ ಸೂಪರ ವೈಜರವರಿಂದ ಕೊಡಲ್ಪಟ್ಟ ಆಲಾಹಿದಾ ಪ್ಯಾಸುಗಳೊಂದಿಗೆ ಕೊಡತಕ್ಕದ್ದು. ಮತ್ತು ಒಟ್ಟು ಬಿಕರೀದಾರರು ವ ಚಿಲ್ಲರೇ ಫುರೋಖ್ತುದಾರರು ಸುದಾ ಅಂಥಾ ಬಿಕರೀಗಳಿಗೆ ವಿಧಿಸಲ್ಪಟ್ಟ ನಮೂನೆಯಲ್ಲಿ ಲೆಖ್ಖ ಕೊಡತಕ್ಕದ್ದು.

(b). ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ, ಆ ಬಗ್ಯೆ, ಹೆಡ್ ಸೂಪರ ವೈಜರ ಮೂಲಕ ಡೆಪ್ಯುಟಿ ಕಮಿಷನರವರ ವಿಶೇಷ ಹುಕುಂಗಳನ್ನು ಪಡೆಯತಕ್ಕದ್ದು; ಸದರೀ ಹೆಡ್ ಸೂಪರ್‌ವೈಜರು ಸದರೀ ಅಂಶಗಳನ್ನು ಸೂಚಿಸಿ, ಅದರಂತೆ ಒಟ್ಟು ಬಿಕ್ರಿ ಅಂಗಡಿಗಳಿಗೆ ಪ್ಯಾಸಗಳು ಯಾನೇ ರಹದಾರೀಗಳನ್ನು ಕೊಡತಕ್ಕದ್ದು, ಹಾಗೆ ಕೊಡಲ್ಪಟ್ಟ ಸಾರಾಯಿಯು, ಈ ಪ್ಯಾರಾ (a) ಕ್ಲಾಜನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟು ಲೆಖ್ಖ ಇಡಲ್ಪಡತಕ್ಕದ್ದು.

(c). ಅಂಡರ್ ಪ್ರೂಫ ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೆಂಗ್ತ್ ವುಂಟಾಗಿ ಮತ್ತು ಪ್ರೂಫಿನವರಿಗೆ ಇದ್ದು ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲೆ ಶೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು, ಜಲಪರಿಮಾಪಕ ಯಂತ್ರದ ದರಗಳ ಪ್ರಕಾರ ದಾಮಾಷಾಯಿ ಮೇಲೆ ಹತ್ತು ಡಿಗ್ರಿಗಳ ದರದಂತೆ ಜಾಸ್ತಿ ಮಾಡಲ್ಪಡತಕ್ಕದ್ದು.

(*d*). ಅಂಡರ್ ಪ್ರೂಫಿನ 20° ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು ; ಪರಂತು, ಅಂಡರ್ ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತ್‌ಗಿಂತ ಕಡಿಮೆ ಶಕ್ತಿಯುಳ್ಳ ಸಾರಾಯಿ ಬಗ್ಯೆ ತಗಾದೇ ಉಂಟಾದರೆ, ಅಂಡರ್ ಪ್ರೂಫಿನ 30° ಡಿಗ್ರೀ ಸಾರಾಯಿಯು, ದಾಮಾಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯ ದರಗಳ ಮೇರೆ, ಡಿಸ್ಟಿಲೇರಿಯಿಂದ ವಿಶೇಷತಃ ಕೊಡಲ್ಪಡಬಹುದು. ಅಂತಾ ಸಾರಾಯಿಯು, ಒಟ್ಟು ಕೋಠೀಗಳಲ್ಲಿಯೂ, ಚಿಲ್ಲರೆ ದುಕಾನ್ಗಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ವಿಲೇವಾರಿ ಲೆಖ್ಖ ಕೊಡಲ್ಪಡತಕ್ಕದ್ದು.

XII. ಸಾರಾಯಿಯು ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಮೇರೆ ಪುರೋಖ್ತು ಮಾಡಲ್ಪಡತಕ್ಕದ್ದೇ ಹೊರತು, ಒಟ್ಟು ಬಿಕ್ರಿಯ ಅಥವಾ ಚಿಲ್ಲರೇ ಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆರಿಕೇ ಮಾಡಕೂಡದು ಅಥವಾ ನೀರು ಬೆರಿಸಕೂಡದು. ಆದರೆ ಸಾರಾಯಿಯ ಬಲವನ್ನು ತಗ್ಗಿಸುವಬಗ್ಯೆ ಹೆಡ್ ಸೂಪರ್‌ವೈಜರವರ ರೂಬರೂ ಡಿಸ್ಟಿಲೇರಿಯಲ್ಲಿ ಕಾಶಿದ ನೀರು ಉಪಯೋಗಿಸಲ್ಪಡಬಹುದು.

XIII. ಅಂಡರ್ ಪ್ರೂಫಿನ ಬಾಬತು 20° ಡಿಗ್ರೀಯ ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರೂಪಾಯಿಗೆ ಬಂದಾಣೆ ಮೇರೆ ಲೋಕಲ್ ಸೆಸ್ ದೇಖೀಲ್ ಗವರ್ನಮೆಂಟ್ ತೀರ್ವೆಯು ಸದರೀ ಸಾರಾಯಿ, (ಇತರ ಪದಾರ್ಥ ಬೆರಿಕೆ ಇಲ್ಲದೆಯೂ, ನೀರು ಬೆರಿಕೆಯಾಗದೆಯೂ) ಒಟ್ಟು ಪುರೋಖ್ತು ಅಂಗಡಿಯಲ್ಲಿಯೂ ಚಿಲ್ಲರೆ ಅಂಗಡಿಗಳೊಳಗೂ ಯಾವ ಖರೀದೀ ಪ್ರಕಾರ ಪುರೋಖ್ತಾಗತಕ್ಕದ್ದೋ ಅದು ಇದರಡೀ ಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ :—

	ಪ್ರೂಫಿನ 20° ಡಿಗ್ರಿಗಳ ಒಳಗಿನ ಸಾರಾಯಿ.			
	ಲೋಕಲ್ ಸೆಸ್ ದೇಖೀಲ್ ಗ್ಯಾಲನ್ 1ಕ್ಕೆ ತೀರ್ವೆ.	ಗ್ಯಾಲನ್ 1ಕ್ಕೆ ಒಟ್ಟು ಬಿಕರೀ ದರ.	ಚಿಲ್ಲರೆ ಬಿಕರಿ ದರ.	
			ಗ್ಯಾಲನ್ 1ಕ್ಕೆ.	ಡ್ರಾಂ 1ಕ್ಕೆ.
	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಸೀಮೆಯ ತಮಾಂ ಸ್ಥಳಗಳಲ್ಲೂ.	3—5—0	4—6—4	5—0—0	0—1—8

(*a*) ಪ್ರೂಫಿಗೆ ಸಮನಾದ ಮತ್ತು ಪ್ರೂಫಿನ 30° ಡಿಗ್ರಿಗಳಿಗೆ ಕೀಳ್ಪಟ್ಟ ಸಾರಾಯಿ ಮತ್ತು ಸದರೀ ಬಲಕ್ಕೆ ಜಾಸ್ತಿ ವ ಕಮ್ಮಿಯಾಗಿರತಕ್ಕ ತಮಾಂ ಬಲಗಳ ಸಾರಾಯಿಯ ಖರೀದಿ ಮತ್ತು ಅವುಗಳ ಮೇಲೆ ವಸೂಲು ಮಾಡಲ್ಪಡಬೇಕಾದ ತೀರ್ವೆಸುದಾ, ಗವರ್ನಮೆಂಟ್ ಹೈಡ್ರಾಮೆಟರಸ್ ಪ್ರತಿ ಪೆಟ್ಟಿಗೆಯೊಂದಿಗೆ ಇರತಕ್ಕ ಕ್ಯಾಸೆಲಾಯವರ ರೂಲ್ಸು ಅನುಸಾರವಾಗಿ 20° ಡಿಗ್ರಿಗಳ ಅಂಡರ್ ಪ್ರೂಫಿಗಾಗಿ ಮೇಲೆ ವಿವರಿಸಿರುವ ದರಗಳಂತೆ ದಾಮಾಷಾಯಿ ಪ್ರಕಾರ ಗೊತ್ತು ಮಾಡಲ್ಪಡತಕ್ಕದ್ದು. ಈ ರೂಲ್ಸುಗಳಲ್ಲಿ ಅಡಗಿರುವ ಯಾವ ಅಂಶವೇ ಆಗಲೀ ಹೆಡ್ ಸೂಪರ್‌ವೈಜರವರು ಅವರಿಗೆ ಆ ಬಗ್ಯಾಗಿ ಬರಹ ಮೂಲಕ ದರಖಾಸ್ತು ಬಂದಮೇಲೆ, ಡಿಸ್ಟಿಲೇರಿಯಲ್ಲಿ ಒಟ್ಟು ಇಳಿಸಲ್ಪಟ್ಟ ಯಾವ ಬಲದ ಷರಾಬನ್ನಾಗಲಿ ಸಾಧಾರಣವಾದ ಒಂದು ಕ್ವಾರ್ಟು ಶೀಶೆಗಿಂತ ಕಮ್ಮಿ ಇಲ್ಲದ ತೇದಾದನ್ನು ಒಟ್ಟು ಬಿಕರಿಯ

ಖರೀದಿ ದರಕ್ಕೆ ಪುರೋಖ್ತಿಗಲ್ಲದೆ ವಾಸ್ತವ್ಯವಾಗಿ ಅವರ ಸ್ವಂತ ಉಪಯೋಗಕ್ಕಾಗಿ ಮಾತಬರ್ ಖುಷಬಾಷ್ ಜನಗಳಿಗೂ, ಆಸಪತ್ರಿಗಳಿಗೂ, ಮ್ಯೂಜಿಯಂ ವಿವಿಧವಸ್ತುಶಾಲೆಗಳಿಗೂ ಮತ್ತು ಇತರ ಪಬ್ಲಿಕ್‌ಸ್ಥಾಪನೆಗಳಿಗೂ ಕೊಡುವದನ್ನು ನಿರೋಧಿಸುವದಿಲ್ಲ.

(b) ಕಂಟ್ರಾಕ್ಟುದಾರರು, ಬೆಂಗಳೂರು ಡೆಪ್ಯುಟಿ ಕಮ್ಮಿಷ್ನರವರ ಅಪ್ಪಣೆಯನ್ನು ಪಡೆದು, ಮಿಲ್ಕ್ ಪಂಚ್‌ಯೆಂಬ ಸಾರಾಯಿಯನ್ನಾಗಲೀ ಯಾವದಾದರೂ ಇತರ ಮಧುರವಾದ ಸಾರಾಯಿಗಳನ್ನಾಗಲೀ ಅಬ್‌ಕಾರಿ ಆಫೀಸರಗಳ ಮೇಲ್‌ತನಿಖೆಗೆ ಒಳಪಟ್ಟು ತಯಾರ್ಮಾಡಬಹುದು ; ಸದರೀ ಅಬಕಾರಿ ಆಫೀಸರರು, ಹಾಂಗೆ ಉಪಯೋಗಿಸಲ್ಪಡುವ ಸಾರಾಯಿ ಮೇಲಿನ ತೀರ್ವೆಯು, ಸದರೀ ಸಾರಾಯಿ ತಯಾರಿ ಉದ್ದಿಶ್ಯ ಉಪಯೋಗಿಸಲ್ಪಡುವ ಕಾಕಂಬಿ ಯಾ ಇತರ ಪದಾರ್ಥಗಳು ಬೆರಸಲ್ಪಡುವದಕ್ಕೆ ಮುಂಚಿತವಾಗಿಯೇ ಪೂರ್ತಿಯಾಗಿ ಲೆಕ್ಕಕ್ಕೆ ದಾಖಲ್ಮಾಡಲ್ಪಟ್ಟಿರುತ್ತೆಂಬ ವಿಷಯ ನೋಡತಕ್ಕದ್ದು. ಅಂಥಾ ಮಧುರವಾದ ಸಾರಾಯಿಯು, ಕಂಟ್ರಾಕ್ಟುದಾರನ ಖರ್ಚಿನಲ್ಲಿ ಹೆಡ್ ಸೂಪರ್‌ವೈಜರವರಿಂದ ಮೊಹರ್ ಮಾಡಲ್ಪಟ್ಟು ಚೀಟಿ ಹಚ್ಚಲ್ಪಟ್ಟ ತರುವಾಯ, ಡಿಸ್ಟಿಲೇರಿಯಿಂದ ಪರಭಾರೆಯಾಗಿ ಮಾರಲ್ಪಡಬಹುದು ಯಾ ಚಿಲ್ಲರೆ ಬಿಕರಿ ದುಕಾನಗಳಲ್ಲಿ ಮಾರಲ್ಪಡತಕ್ಕಬಗ್ಯೆ ಇಡಲ್ಪಡಬಹುದು, ಅಂಥಾ ಸಾರಾಯಿಗಳು ಮಾರಲ್ಪಡಬೇಕಾದ ಖರೀದಿ ದರಗಳು ಅಬಕಾರಿ ಇಲಾಖೆಯಿಂದ ಗೊತ್ತು ಮಾಡಲ್ಪಡತಕ್ಕದ್ದು.

XIV. ಸಾರಾಯಿ ಕಮ್ಮಾಬಂದಬಗ್ಯೆ, ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟೇರಿ ಸ್ಟೇಷ್ನ ಮ್ಯುನಿಸಿಪಲ್ ಸರಹದ್ದುಗಳ ಆಚೆಗೆ ಪುರೋಖ್ತುಬಗ್ಯೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ ಸಲ್ಲತಕ್ಕ ತೇಗೆಯಮೇಲೆ ಸೇಕಡಾ 2ರ ಪ್ರಕಾರ ಸೋಡಿ ಯಾ ವಜಾ ಕೊಡಲ್ಪಡತಕ್ಕದ್ದು. ಕಂಟ್ರಾಕ್ಟುದಾರನು, ಲೆಕ್ಕಗಳು ಕರಾರ್‌ವಾಕಾ ಇರತಕ್ಕ ಉದ್ದಿಶ್ಯ ಒಟ್ಟು ಬಿಕರೀದಾರರ ಲೆಕ್ಕಗಳಲ್ಲಿ ವಾಸ್ತವ್ಯವಾಗಿ ಕಾಣಬಂದ ಆರವಾಶಿಯನ್ನೇ ದಾಖಲ್ಮಾಡುವಂತೆ ವಿಧಿಸತಕ್ಕದ್ದು.

XV. ಇಜಾರೆದಾರನು, ಡಿಸ್ಟಿಲೇರಿಯನ್ನಾಗಲಿ, ಒಟ್ಟು ಪುರೋಖ್ತು ಅಂಗಡಿಗಳನ್ನಾಗಲಿ, ಕೋಟೆಗಳನ್ನಾಗಲಿ, ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ನೌಕರರ್ ಮಾಡುತ್ತಾನೋ ಅಂತಾ ಪ್ರತಿ ಮನುಷ್ಯನನ್ನೂ ಹಾಗೆ ನೌಕರರು ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ್‌ಗಳಿಗೆ ಅನುಗುಣವಾಗಿ ಕರಾರುಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ ಕರಾರುಗಳು, 1887ನೇ ಇಸವಿ ಏಪ್ರಿಲ್ ಒಂದನೇ ತಾರೀಖು ಲಾಗಾಯತ್ ಒಂದು ತಿಂಗಳೊಳಗಾಗಿ, ಅಂಥಾ ನವುಕರನು ಯಾವ ಡಿಸ್ಟ್ರಿಕ್ಟಿನಲ್ಲಿ ನೌಕರರು ಮಾಡಲ್ಪಡುತ್ತಾನೋ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ ಇಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯಾರಿ, ಸಾಗಿಸುವಣ ಮತ್ತು ಪುರೋಖ್ತು ಈ ಕೆಲಸಗಳಲ್ಲಿ ತನ್ನಿಂದ ನೌಕರರು ಮಾಡಲ್ಪಡುವ ತಮಾಂ ಜನಗಳೂ, ತಮ್ಮಿಂದ ಮಾಡಿಕೊಳ್ಳಲ್ಪಟ್ಟ ಕರಾರುಗಳ ವ ಕಾನೂನಿನ ನಿಬಂಧನೆಗಳನ್ನು ಖಂಡಿತವಾಗಿ ಅನುಸರಿಸುವಂತೆ ಮಾಡುವದಕ್ಕೆ ಪೂರಾ ತರದೂದ್ ಮಾಡತಕ್ಕದ್ದು; ಮತ್ತು ಸದರೀ ನಿಬಂಧನೆಗಳಿಗೆ ಬರಖಿಲಾಫ್ ನಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ, ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವಬಗ್ಯೆ, ಯಾವ ಡಿಸ್ಟ್ರಿಕ್ಟಿನಲ್ಲಿ ಬರಖಿಲಾಫ್ ನಡೆಯಿತೋ ಅಂಥಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು ಅಪರಾಧಿಗೆ ಫೊಟಾಗಿ ಜುರ್ಮಾನೆ ವಿಧಿಸಬಹುದಲ್ಲದೆ ಮತ್ತು ಸದರೀ ಅಪರಾಧಿಯನ್ನು ನವುಕರಿಯಿಂದ ಸಸ್ಪೆಂಡ್ ಯಾ ತಗ್ಯೆರ್ ಮಾಡುವಂತೆ ಕಂಟ್ರಾಕ್ಟುದಾರನನ್ನು ಅಪೇಕ್ಷಿಸಬಹುದು.

XVI. ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀರೂಲ್ಸಿಗಾಗಲಿ, ಇಜಾರೇದಾರನು ಅನುಗುಣವಾಗಿ ನಡೆಯತಕ್ಕದ್ದು, ಮತ್ತು ಆತನ ನವುಕರಮಾನೆಯರೆಲ್ಲಾ, ಬಟ್ಟೀ ಇಳಿಸಲ್ಪಟ್ಟು ಕೊಡಲ್ಪಟ್ಟ ಸಾರಾಯಿಯ ಬಂದೋಬಸ್ತು ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತಮಾಂ ಪಾತ್ರೆಗಳ ಪಾಕೀಜೀ, ಲೋಹ ಪಾತ್ರೆಗಳ ಕಲಾಯಿ ಹಾಕಿಸುವಣ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ನಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳಬಗ್ಯೆ ಗವರ್ನಮೆಂಟಿನವರು ಜಾರೀ ಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗಳಿಗೆ ನಿಗೇ ಕೊಡತಕ್ಕದ್ದು. ಷರಾಬ್ ಭಟ್ಟಿ ಇಳಿಸುವಲ್ಲಿ ಉಪಯೋಗಿಸಲ್ಪಡುವ ತಮಾಂ ಭಟ್ಟಿ ಪಾತ್ರೆಗಳೂ, ಕೊಳಬೆಗಳೂ, ವರಂಸ್ಯಾನೆ ಪಾತ್ರೆಗಳೂ ಎರಕ ಹೊಯಿದ ತಗರದ ಪಾತ್ರೆಗಳಾಗಿರತಕ್ಕವು; ಆದರೆ ತಾಂಬ್ರದ ಬಟ್ಟಿ ಪಾತ್ರೆಗಳು, ಕೊಳಬೆಗಳು ಮತ್ತು ವರಂಸ್ ಪಾತ್ರೆಗಳು ಉಪಯೋಗಿಸಲ್ಪಟ್ಟರೆ ಅವು ವಿಧಿಸಲ್ಪಟ್ಟ ಕಾಲಗಳಿಗೆ ಕ್ರಮವಾಗಿಯೂ ಮಜಬೂತಾಗಿಯೂ ಕಲಾಯಿ ಮಾಡಲ್ಪಟ್ಟಿರಬೇಕು.

ಆದಿವಾರಗಳು ಮತ್ತು ಮಂಜೂರ್ಮಾಡಲ್ಪಟ್ಟ ರಜಾ ದಿವಸಗಳಾಗಿ ಪ್ರೋತ್ತಿಯಾದ ರಜಾ ದಿವಸಗಳಾಗಿ ಆಚರಿಸಲ್ಪಡತಕ್ಕದ್ದಲ್ಲದೆ ಅಂಥಾ ದಿವಸಗಳಲ್ಲಿ ಭಟ್ಟಿ ಇಳಿಸಲ್ಪಡಕೂಡದು, ಮತ್ತು ಷರಾಬ್ ಕೊಡಲ್ಪಡಕೂಡದು. ಅಂಥಾ ರಜಾ ದಿವಸಗಳ ತಿಳುವಳಿಕೆಯು ಸಂಬಂಧಪಟ್ಟ ತಮಾಂ ಜನಗಳಿಗೂ ಪ್ರತಿ ವರುಷದ ಆರಂಭದಲ್ಲಿ ಕೊಡಲ್ಪಡುವದು.

XVII. ಮೇಲೆ ಕಂಡ ಷರತ್‌ಗಳ ಪೈಕೀ ಯಾವ ಷರತ್‌ಗಳಿಗಾಗಲಿ, ಇಜಾರೇದಾರನಿಂದ ಅಥವಾ ಷರಾಬ್ ತಯಾರಿ, ಸಾಗಿಸುವಣ, ಯಾ ಪುರೋಖ್ತು ಇಂತಾದ್ದರಲ್ಲಿ, ಆತನಿಂದ ಮೋಕರರು ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದ ಹಾಗೆ ಇರುವದರಿಂದ ಅಥವಾ ರಹಸ್ಯವಾದ ಷಾಮೀಲಾತೀಯಿಂದ ಮನಃಪೂರ್ವಕವಾಗಿ ಖಿಲಾಫ್ ಯೇನಾದರೂ ನಡಿಸಲ್ಪಟ್ಟರೆ, ಇಜಾರೀಯನ್ನು ರದ್ದು ಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ Iನೇ ಷರತ್ತಿನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದಿವಾನರವರಿಗೆ ಮುಖ್ತಿಯಾರಿ ಇರತಕ್ಕದ್ದು.

XVIII. ಗವರ್ನಮೆಂಟಿನವರಿಂದ ಸದರೀ ಬಗ್ಯೆ ವಿಧಿಸಲ್ಪಡಬಹುದಾದ ಅಂತಾ ಷರತ್ತುಗಳಿಗೆ ಒಳಪಟ್ಟು, ಇಜಾರೇದಾರನಿಂದ, ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಆರೇಕ್ ಸಾರಾಯಿ, ಲಿಕ್ಕರ್ ಸಾರಾಯಿ ಇವುಗಳನ್ನು ತಯಾರ್ಮಾಡಲ್ಪಡಲಿಕ್ಕೂ, ಪುರೋಖ್ತು ಮಾಡಲ್ಪಡಲಿಕ್ಕೂ, ಗವರ್ನಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರು ನಾಮೆಯಲ್ಲಿ ಕಂಡ ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲೆ ಸದರೀ ಬಗ್ಯೆ ವಜಾ ಯಾವದೂ ಕೊಡಲ್ಪಡಲಾರದು.

XIX. ಮೇಲೆ ಕಂಡ ಷರತ್ತುಗಳಿಂದ, ಡೆಪ್ಯುಟಿ ಕಮ್ಮಿಷನರಿಗೆ ಕೊಡಲ್ಪಟ್ಟ ಅಧಿಕಾರಗಳೂ, ವಿಧಿಸಲ್ಪಟ್ಟ ಕೃತ್ಯಗಳೂ ಸುದಾ, ರೆಸಿಡೆಂಟರು ಮೊಕರರು ಮಾಡಬಹುದಾದ ಅಂಥಾ ಆಫೀಸರಿಂದ ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನ್ನೊಳಗ್ಗೆ ಚಲಾಯಿಸಲ್ಪಡತಕ್ಕದ್ದು, ಮತ್ತು ನಿರ್ವಹಿಸಲ್ಪಡತಕ್ಕದ್ದು.

01. ಕಳೆದ ಹದಿನಾರು ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡೀ ಕಂಡ ತಖ್ತೆಯಲ್ಲಿ ಕಾಣಿಸಿರುತ್ತೇ:—

	1870—71. ಗ್ಯಾಲನ್‌ಗಳು.	1871—72. ಗ್ಯಾಲನ್‌ಗಳು.	1872—73. ಗ್ಯಾಲನ್‌ಗಳು.	1873—74. ಗ್ಯಾಲನ್‌ಗಳು.	1874—75. ಗ್ಯಾಲನ್‌ಗಳು.	1875—76. ಗ್ಯಾಲನ್‌ಗಳು.	1876—77. ಗ್ಯಾಲನ್‌ಗಳು.	1877—78. ಗ್ಯಾಲನ್‌ಗಳು.	1878—79. ಗ್ಯಾಲನ್‌ಗಳು.
ಬೆಂಗಳೂರು ಷಹರ್ ಮತ್ತು ಶಿವಿಲ್ ವ ಮಿಲಿಟೆರಿ ಸ್ಟೇಷನ್.	77,149	83,345	85,099	90,760	78,872	75,125	68,782	71,207	{ 18,533 { 51,177
ಶೀಮೆಯ ಇತರ ಸ್ಥಳಗಳಿಗೆ ಕೊಡಲ್ಪಟ್ಟ ತೇದಾದು.	160,710	155,139	169,514	182,591	142.554	114,864	102,112	67,770	67,842
ಶೀಮೆಗೆ ಒಟ್ಟು ಜುಮ್ಲಾ ...	237,859	238,484	254,613	273,351	22,426	189,989	170,894	138,977	137,552

	1879—80. ಗ್ಯಾಲನ್‌ಗಳು.	1880—81. ಗ್ಯಾಲನ್‌ಗಳು.	1881—82. ಗ್ಯಾಲನ್‌ಗಳು.	1882—83. ಗ್ಯಾಲನ್‌ಗಳು.	1883—84. ಗ್ಯಾಲನ್‌ಗಳು.	1884—85. ಗ್ಯಾಲನ್‌ಗಳು.	1885—86. ಗ್ಯಾಲನ್‌ಗಳು.	
ಬೆಂಗಳೂರು ಷಹರ್ ಮತ್ತು ಶಿವಿಲ್ ವ ಮಿಲಿಟೆರಿ ಸ್ಟೇಷನ್.	24,436	28,586	28,812	31,282	34,089	33,993	33,952	ಬೆಂಗಳೂರು ಷಹರ್.
	60,726	66,809	68,502	75,151	76,907	74,010	70,074	ಶಿವಿಲ್ ವ ಮಿಲಿಟೇರಿ ಸ್ಟೇಷನ್.
ಶೀಮೆಯ ಇತರ ಸ್ಥಳಗಳಿಗೆ ಕೊಡಲ್ಪಟ್ಟ ತೇದಾದ್.	94,092	115,352	139,281	137,706	144,312	156,539	159,352	
ಶೀಮೆಗೆ ಒಟ್ಟು ಜುಮ್ಲಾ ..	179,254	210,747	236,595	244,139	255,308	264,542	263,378	

11. ಕಳೆದ ಆರು ವರುಷಗಳಲ್ಲಿ ಖರ್ಚಾದ ಷರಾಬಿನ ಮೇಲೆ ಆಯಾ ಸಾಲಿನಲ್ಲಿ ಜಾರೀಯಲ್ಲಿ ಯಿದ್ದ ತೀರ್ವೇ ದರಗಳ ಪ್ರಕಾರ ಕರಾರ್ವಾಕಾ ಹುಟ್ಟುವಳಿಯಾದ ಮೊಬಲಗು, ಮತ್ತು ಈಗ ಗೊತ್ತು ಮಾಡಲ್ಪಟ್ಟ (ಗ್ಯಾಲನ್ ವಂದಕ್ಕೆ 3—5—0) ಬಾಬತು ವಂದೇ ದರದ ತೀರ್ವೆಯು ಸದರೀ ಸಾಲ್‌ಗಳಲ್ಲಿ ಜಾರೀಯಿದ್ದ ಪಕ್ಷದಲ್ಲಿ ಹುಟ್ಟುವಳಿಯಾಗಬಹುದಾಗಿದ್ದ ಮೊಬಲಗು ಯಿವುಗಳನ್ನು ತೋರಿಸುವ ತಖ್ತೆಯು ಇದರಡಿ ಕಾಣಿಸಿರುತ್ತೆ:—

ಸಾಲ್‌ಗಳು.	ಪೂರ್ವಕ್ಕೆ ಜಾರೀಯಲ್ಲಿ ಯಿದ್ದ ಹೆಚ್ಚು ಕಮ್ಮೀ ದರಗಳಂತೆ ಹುಟ್ಟುವಳಿಯಾದ ಕರಾರ್ವಾಕಾ ಮೊಬಲಗು	ಈಗ ಗ್ಯಾಲನ್ ವಂದಕ್ಕೆ ಗೊತ್ತು ಮಾಡಲ್ಪಟ್ಟ 3—5—0 ದರದ ಪ್ರಕಾರ ಹುಟ್ಟುವಳಿಯಾಗಬಹುದಾಗಿದ್ದ ಮೊಬಲಗು.
	ರೂಪಾಯಿ.	ರೂಪಾಯಿ.
1880—81 ..	6,43,022	6,98,099
1881—82	6,33,329	7,83,720
1882—83	6,58,768	8,08,710
1883—84	6,88,019	8,45,707
1884—85	7,41,574	8,76,295
1885—86	7,47,314	8,72,439

ಅಪೆಂಡಿಕ್ಸ್.

8ನೇ ಪ್ಯಾರಾದಲ್ಲಿ ಕಂಡ ದರಖಾಸ್ತಿನ ನಮೂನೆ.

ಬೆಂಗಳೂರು ಮೊಕ್ಕಾಂ ಮೈಸೂರು ಶೀಮೆಯ ದಿವಾನರವರ ಚೀಫ್ ಸೆಕ್ರೆಟೇರೀಯವರ ಜನಾಬಿಗೆ.————
ಅಯ್ಯಾ,

————————————ನೇ ಮರ್ಕ್ಕಿನ ಮೈಸೂರು ಗೆಜೆಟ್ಟನಲ್ಲಿ ಪ್ರಾಯಿಷ್ಮಾಡಲ್ಪಟ್ಟ ದಿವಾನರವರಿಂದ ಸಾದರ್ಮಾಡೋಣಾದ ——— ————————ನೇ ಮರ್ಕ್ಕಂ————————ನೇ ನಂಬರ ಇಸ್ತಿಹಾರ್ನಾಮೆ ಅನುಸರಿಸಿ, ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನ್ ದೇಖೀಲ್ ಮೈಸೂರು ಶೀಮೆಯ ತಮಾಂ ಸ್ಥಳಗಳಲ್ಲೂ 1887ನೇ ಇಸವಿ ಏಪ್ರಲ್ 1ನೇ ಮರ್ಕ್ಕಂ ಲಾಗಾಯತು 18—ನೇ ಇಸವಿ ಮಾರ್ಚೀ 31ನೇ ಮರ್ಕ್ಕಂ ವರಿಗೆ ವಿಸ್ತರಿಸುವ———ವರುಷಗಳ ಕಾಲಪರಿಯಂತ, ಷರಾಬನ್ನು, ಮೇಲ್ಕಂಡ ಇಸ್ತಿಹಾರ ನಾಮೆಯಲ್ಲಿ ವಿವರಿಸಲ್ಪಟ್ಟ ಷರತ್ತುಗಳಿಗೂ, ರೂಲ್ಸಗಳಿಗೂ, ಕರಾರ್‌ಗಳಿಗೂ ವಳಪಟ್ಟು ತಯಾರ್ಮಾಡುವ ಮತ್ತು ಬಟ್ಟಿ ಬಿಕರೀಮಾಡುವ ಬಟ್ಟಿ ಸ್ವಾತಂತ್ರ್ಯದ ಬಗ್ಗೆ ಇದರದೆಶೆಯಿಂದ ದರಖಾಸ್ತು ಮಾಡುತ್ತೇನೆ.

2. ನಾನು ಇದರ ದೆಸೆಯಿಂದ ಸರ್ಕಾರಕ್ಕೆಸಾಲಿಯಾನಾ (ಲೋಕಲ್ ಸೆಸ್ ದೇಖೀಲ) ಇದರಡೀ ಕಂಡ ಪ್ರಕಾರ ಕಮ್ಮಿ ಮೊಬಲಗನ್ನು ಕೊಡುವದಕ್ಕೆ ಒಡಂಬಟ್ಟಿರುತ್ತೇನೆ:—

ಕಂಟ್ರಾಕ್ಟಿನ	ಮದಲ ಸಾಲಿನಲ್ಲಿ		..	..	ರೂ.
ಡಿಟ್ಟೋ	ಎರಡನೇ	ಡಿಟ್ಟೋ	..	..	ರೂ.
ಡಿಟ್ಟೋ	ಮೂರನೇ	ಡಿಟ್ಟೋ	..	..	ರೂ.
ಡಿಟ್ಟೋ	ನಾಲ್ಕನೇ	ಡಿಟ್ಟೋ	..	..	ರೂ.
ಡಿಟ್ಟೋ	ಐದನೇ	ಡಿಟ್ಟೋ	..	..	ರೂ.
					ಜುಮ್ಲಾ ರೂ.

3. ಸದರೀ ಇಸ್ತಿಹಾರ್ನಾಮೆಯ 6ನೇ ಪ್ಯಾರಾದಲ್ಲಿ ಅಪೇಕ್ಷಿಸಲ್ಪಟ್ಟ ಪ್ರಕಾರ, ಮೈಸೂರು ಶೀಮೆಯ ದಿವಾನ ಸಾಹೆಬರವರ ಹೆಸರಿಗೆ ಕ್ರಮವಾಗಿ ಯಿಂಡಾರ್ಸ ಮಾಡಲ್ಪಟ್ಟ 1,000 ರೂಪಾಯಿನ __________ನ್ನು ಇದರಸಂಗಡ ಕಳುಹಿಸಿರುತ್ತೇನೆ.

ತಮ್ಮ ಅತ್ಯಂತ ಶೇವಕನಾದ

ತಾರೀಖು __________________

ಹೆಸರು ಮತ್ತು ವಿಳಾಸ

ತಾರೀಖು 4ನೇ ಜನವರೀ 1887.

(ರೇಡೆಂಟರ ಅಪ್ಪಣೆ ಪ್ರಕಾರ ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನ್ ಶೇರಿ,) ಬೆಂಗಳೂರು ಷಹರ್ ದೇಖೀಲ್ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ 1887ನೇ ಇಸವಿ ಏಪ್ರೈಲ್ 1ನೇ ತಾರೀಖು ಮೊದಲು 1890ನೇ ಇಸವಿ ಮಾರ್ಚಿ 31ನೇ ತಾರೀಖುವರಿಗೆ ಆಗುವ ಮೂರು ವರುಷ ಕಾಲಪರಿಯಂತ ಶೇಂದೀ ಬಿಕ್ರೀ ಮಾಡುವ, ವಟ್ಟು ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಕೋರಲ್ಪಟ್ಟವೆ. ಬೆಂಗಳೂರು ಡಿಸ್ಟ್ರಿಕ್ಟಿಗೆ, ಇದರಡೀಕಂಡ ತಾಲ್ಲೂಕುಗಳು ಶೇರಿ ಇರುತ್ತವೆ :—

1 ಬೆಂಗಳೂರು
2 ಹೊಸಕೋಟೆ
3 ದೊಡ್ಡಬಳ್ಳಾಪುರ
4 ನೆಲಮಂಗಲ
5 ಕಾನಖಾನಹಳ್ಳಿ
6 ಮಾಗಡಿ
7 ಕ್ಲೋಸ್‌ಪ್ಯಾಟೆ, ಚನ್ನಪಟ್ಣದ ಡೆ|| ಅಮಲ್‌ದಾರ್‌ರ್ರ ಛಾರ್ಜಿನಪ್ರದೇಶದೇಖೀಲ್.
8 ಆನೆಕಲ್
9 ದೇವನಹಳ್ಳಿ

2. ಯಷ್ಟರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲಿಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನ್‌ಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟ್‌ನಿ ಲಿಫಾಫೆಯೊಳಗೆ ಹಾಕಿ ಬಂದುಮಾಡಲ್ಪಟ್ಟು "ಬೆಂಗಳೂರು ಡಿಸ್ಟ್ರಿಕ್ಟಿನೊಳಗೆ ಶೇಂದಿ ಬಿಕ್ರಿಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂತಲಿಫಾಫೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸ್ 1887ನೇ ಇಸವಿ ಫಿಬ್ರುವರೀ 17ನೇ ಮಕ್ಕುಮಿನ ಮಧ್ಯಾಹ್ನದೊಳಗಾಗಲಿ, ತತ್ಪೂರ್ವವಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫಿಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆ ರಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನ್‌ಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲಿಯಾನಾ ಇಜಾರೆ ಮೊಬಲಗು ಪೈಕೀ ಹನ್ನೆರಡರಲ್ಲಿ ವಂದು ಭಾಗವಾಗಲೀ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತೀಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು : ಚಡದರಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಗಲೀ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್‌ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖಿಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ನಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ನಗದಾಗಿಯಾಗಲೀ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನ್‌ಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಬಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜೂಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ನ್‌ಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ತಪ್ಪಿಹೋದ ದರಖಾಸ್ತುದಾರನ ಲುಕ್‌ಸಾನಿಗೆ ಬಳಪಟ್ಟು ಅನ್ಯಥಾ ವಿಲೇಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೆ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದ

ಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಮಾಹೆಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು, ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕೀಗಳಿಗೂ, ಸೇಕಡಾ ಸಾಲಿಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು : ಅಂತಾ ಬಾಕೀ ಮೊಬಲಗುಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೆ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀದೇಖೀಲ್ ತಮಾಂ ಬಾಕಿಗಳನ್ನೂ ಹಾಗೆ ಇಜಾರೆ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಲೇ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಇರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು, ಮಾಮೂಲ್ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿಯಿಲ್ಲದೆ, ಇಜಾರೇದಾರನು ಹಾಲೀ ಶೇಂದಿ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆಬಗ್ಯಾಗಿ ಯಾವ ಈಡು ಮೊಬಲಗನ್ನೂ ಕೇಳಕೂಡದು.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ಮತ್ತು ಇನಾಂದಾರರುಗಳಿಗೆ ಶೇಂದಿ ವುತ್ಪತ್ತಿಗಾಗಿ ಬರಬೇಕಾದ ಈಡುಮೊಬಲಗುಗಳ ವಿಷಯಗಳಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲ್‌ನಲ್ಲಿ ದಿವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರ ಅಂಥಾ ಫೈಸಲಾತಿಯಲ್ಲಾಗಲಿ ಅಥವಾ ದಿವಾನರವರಿಂದ ಅಪ್ಪೀಲು ನಲ್ಲಾಗಲಿ ಸಲಾಯಿಸಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು, ಜಮೀನ್ ಕಂದಾಯದ ಬಾಕಿ ವಸೂಲಿಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲಿಗೆಅನುಸಾರವಾಗಿ, ಕಂಟ್ರಾಕ್ಟುದಾರರಿಂದ ವಸೂಲು ಮಾಡಲ್ಪಡತಕ್ಕವು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗೆಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂಧರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಆಬ್ಕಾರಿ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII. (a) ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನ್‌ನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ

ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕುರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕುರುವದಿಲ್ಲ. ಡೆಪ್ಯುಟಿ ಕಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತಗಳ ಪ್ರಕಾರನೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII. (b) ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಜಾ ಮತ್ತು ಕರಾರ್‌ವಾಕಾ ಲೆಖ್ಖಗಳು ಇಡತಕ್ಕದ್ದು; ಅವುಗಳಲ್ಲ (1) ಶೇಂದಿ ಇಳಿಸಲ್ಪಟ್ಟ ಶೇಂದಿ ತೋಪುಗಳ ಹೆಸರು ಮತ್ತು ಅವುಗಳು ಇರತಕ್ಕ ಸ್ಥಳ, (2) ಶೇಂದಿ ಕಟ್ಟಿದ ಮರಗಳ ಸಂಖೆ, (3) ರೋಜೀನಾ ಉತಾರ್ ಮಾಡಲ್ಪಟ್ಟ ಶೇಂದಿ ತೇದಾದು, (4) ರೋಜೀನಾ ಬಿಕರೀಮಾಡಲ್ಪಟ್ಟ ಶೇಂದಿಯ ತೇದಾದು, ಮತ್ತು (5) ಶೇಂದಿಯೂ ಸರಬರಾಯಿ ಮಾಡಲ್ಪಟ್ಟ ದುಕಾನುಗಳ ಹೆಸರು ಈಬಾಬತು ತಪಸೀಲುಗಳು ತೋರಿಸತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್ದಾರರಿಂದಾಗಲೀ ಯಾ ಆಬಗ್ಯಾಗಿ ಡೆಪ್ಯುಟಿ ಕಮಿಷನರಿಂದ ಮೊಕರರ್ ಮಾಡಲ್ಪಟ್ಟ ಇತರ ಯಾವ ಆಫೀಸರಿಂದಾಗಲೀ ತನಿಖೆ ನೋಡಲ್ಪಡುವಬಗ್ಯೆ ಖುಲ್ಲಾ ಇರತಕ್ಕವು, ಮತ್ತು ಇವುಗಳ ನಕಲು, ಡೆಪ್ಯುಟಿ ಕಮಿಷನರಿಂದಾಗಲಿ ಅಮಲ್ದಾರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರನಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು ಈಡಿಗೆ ಯಾ ನೋಡೀಗೆ ಬಾಧ್ಯತೆಯುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮವುಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಷಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಸಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

XI. ಗುತ್ತಿಗೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಎಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗತಕ್ಕದ್ದು.

XII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೂ, ರೊಟ್ಟೀ ಮಾಡತಕ್ಕವರಿಗೂ ಮಾರಲ್ಪಡತಕ್ಕದ್ದು.

	ಜಾಸ್ತಿ.	ಕಮ್ಮಿ.	ರೊಟ್ಟೀ ಮಾಡುವವರಿಗೆ ಶೇರು
	ಶೇರು ಒಂದಕ್ಕೆ ಕ್ರಯ.		ಒಂದಕ್ಕೆ ಕಾಯಂ ಖರೀದಿ.
	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಶಿವಿಲ್ ವ ಮಿಲಿಟೇರಿ ಸ್ಟೇಷನ್ ಬೇಖೀಲ್			
ಬೆಂಗಳೂರು ಷಹರ್‌ನಲ್ಲಿ	0 1 6	0 1 0	0 1 0
ಬೆಂಗಳೂರು ಡಿಸ್ಟ್ರಿಕ್ಟಿನ ತಾಲ್ಲೂಕು			
ಕಸಬೆಗಳಲ್ಲಿ	0 1 3	0 0 10	
ಡಿಟ್ಟೋ ಗಾವ್‌ಗಾನೆಗಳಲ್ಲಿ	0 1 0	0 0 8	

6. ಶೇಂದಿ ಸಾಗಿಸುವಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕುಂದಾಯವನ್ನು ಷಾವತೀ ಮಾಡಬೇಕಾಗಿರುತ್ತೆ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸ್ನ 1887ನೇ ಇಸವಿ ಏಪ್ರೈಲ್ 1ನೇ ತಾರೀಖು ಲಾಗಾಯಿತು 1890ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಆಗುವ 3 ವರುಷಗಳ ಕಾಲದ ಪರ್ಯಂತ ಶೇಂದಿ ಬಿಕ್ರೀ ಮಾಡುವ ಬಟ್ಟು ಸ್ವಾತಂತ್ರ್ಯದಬಗ್ಗೆ ದರಖಾಸ್ತುಗಳು ಮಾಡಬಹುದೆಂದು ಇದರಿಂದ ಕೋರಲ್ಪಟ್ಟಿರುತ್ತೆ. ಕೋಲಾರ ಡಿಸ್ಟ್ರಿಕ್ಟಿಗೆ, ಇದರಡಿ ಕಂಡ ತಾಲ್ಲೂಕುಗಳು ಸೇರಿಯಿರುತ್ತವೆ.

1. ಕೋಲಾರ.
2. ಬೌರಿಂಗಪೇಟೆ.
3. ಚಿಂತಾಮಣಿ, ಶ್ರೀನಿವಾಸಪುರದ ರೇಂಜ್ ದೇಖೀಲ್.
4. ಮುಳಬಾಗಲ್.
5. ಸಿಡ್ಲಘಟ್ಟ.
6. ಚಿಕ್ಕಬಳ್ಳಾಪುರ.
7. ಬಾಗೇಪಲ್ಲಿ, ಗುಡಿಬಂಡೆ ರೇಂಜ್ ದೇಖೀಲ್.
8. ಗೋರೀಬಿದನೂರು.
9. ಮಾಲೂರು.

2. ಯಷ್ಟರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲೀಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಮೈಸೂರು ಸೀಮೆಯ ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟನಿಟ್ಟು ಲಿಫಾಫೆಯೊಳಗೆ ಹಾಕಿ ಬಂದ್ ಮಾಡಲ್ಪಟ್ಟು "ಕೋಲಾರ ಡಿಸ್ಟ್ರಿಕ್ಟಿನೊಳಗೆ ಶೇಂದಿ ಬಿಕ್ರಿ ಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಯಂತ ಲಿಫಾಫೆ ಮೇಲೆ ಬರೆದುಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸ್ನ 1887ನೇ ಇಸವಿ ಫೆಬ್ರುವರಿ 15ನೇ ಮಂಗಳವಾರ ಸಾಯಿಂಕಾಲ 6 ಘಂಟೆಗಳ ವಳಗಾಗಿಯಾಗಲಿ, ತತ್ಪೂರ್ವವಾಗಲಿ, ಕೋಲಾರದಲ್ಲಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು; ಅಥವಾ 1887ನೇ ಇಸವಿ ಫೆಬ್ರುವರಿ 17ನೇ ಗುರುವಾರ ಮಧ್ಯಾನ್ಹದಲ್ಲಿ ಯಾ ತತ್ಪೂರ್ವದಲ್ಲಿಯಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಗೆ ಪಾವತಿ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆಶಿಫಾರಸ್ ಮಾಡುವಬಗ್ಗೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂತಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಮೈಸೂರು ಸೀಮೆಯ ದಿವಾನರವರ ಹೆಸರಿಗೆ ಕ್ರಮವಾಗಿ ಷರಾ ಬರೆಯಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ಒಂದು ಭಾಗವಾಗಲಿ (ಅಥವಾ ಒಂದು ತಿಂಗಳ ಕಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು. ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದಿವಾನರವರ ತೀರ್ಮಾನ ಖಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟುಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು; ಜಿಹದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲೀ, ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮಪ್ರಕಾರ ಮೈಸೂರು ಸೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದ ಮೇಲೆ, ಒಂದು ಕರಾರ್‌ಬರೆದುಕೊಡತಕ್ಕದ್ದು, ಆತನು ಕರಾರಿಗೆ ರುಜು ಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟುಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ಅನ್ಯಥಾವಿಲಾ ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ

ಮುಂದಾಗಿಯಾಗಲಿ, ಡಿಸ್ಟ್ರಿಕ್ಟ ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೆ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನಿಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನ ಮೊಬಲಗ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರಿ ಯಿರತಕ್ಕದ್ದು.

ಕಡೂರು ಡಿಸ್ಟ್ರಿಕ್ಟಿನಲ್ಲಿ 1887ನೇ ಇಸವಿ 1ನೇ ಏಪ್ರಿಲ್ ಆರಭ್ಯವಾಗಿ 1890ನೇ ಇಸವಿ ಮಾರ್ಚಿ 31ನೇ ತಾರೀಖುವರಿವಿಗೆ ಆಗುವ 3 ಸಂವತ್ಸರಗಳ ಕಾಲ ಪರಿಯಂತ ಸೇಂದಿ ಬಿಕರೀ ಮಾಡುವ ವಟ್ಟು ಸ್ವಾತಂತ್ರ್ಯ ಯಾ ಇಜಾರೆಯು, ತಾಲ್ಲೂಕುವಾರಾಗಿ ಆ ಗಲಿ ಅನೇಕ ತಾಲ್ಲೂಕುಗಳ ಸೇರಿಕೆಯಾಗಿ ಯಾಗಲಿ ಇದರಮುಂದೆ ತಿಳಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು, 1887ನೇ ಇಸವಿ ಮಾರ್ಚಿ 7ನೇ ಮಧ್ಯಾಹ್ನ 12 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಂನಲ್ಲಿ ಕಡೂರು ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಇಜಾರೆಯು ಮೇಲ್ಕಂಡ 3 ವರುಷಗಳ ಕಾಲದಲ್ಲಿ ಮಲ್ನಾಡು ತಾಲ್ಲೂಕುಗಳಲ್ಲಿ ಬಗನಿ ಸೇಂದಿಯನ್ನು ಪುರೋಖ್ತು ಮಾಡುವ ಸ್ವಾತಂತ್ರ್ಯವನ್ನು ಅಡಿಗಿಸಿಕೊಂಡಿರುವದಿಲ್ಲ; ಸದರೀ ಬಗನೀ ಸೇಂದಿ ಪುರೋಖ್ತು ಮಾಡುವ ಸ್ವಾತಂತ್ರ್ಯವು ಗ್ರಾಮವಾರಾಗಲಿ ಅನೇಕ ಗ್ರಾಮಗಳು ಸೇರಿಯಾಗಿಯಾಗಲಿ ಅಲಾಹಿದಾ ಇಜಾರೆಗೆ ಕೊಡಲ್ಪಡುವದು. ಕಡೂರು ಡಿಸ್ಟ್ರಿಕ್ಟಿಗೆ ಇದರಡೀ ಕಂಡ ತಾಲ್ಲೂಕುಗಳು ಸೇರಿರುತ್ತವೆ.

1	ಚಿಕ್ಕಮಗಳೂರು	4	ತರೀಕೆರೆ
2	ಕಡೂರು	5	ಕೊಪ್ಪ, ಯಡೇಹಳ್ಳಿ ಡೆ॥ ಅಮಲ್‌ದಾರ್ರ ಚಾರ್ಜು ದೇಖೀಲ್.
3	ಮೂಡಿಗೆರೆ		

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರಕಾರದ ಸವಾಲಿಗೆ ಮೇಲ್ಪಟ್ಟು ಬರತಕ್ಕ ಚಡ ದರಖಾಸ್ತುದಾರಗೆ ಹರಾಜುಮೂಲಕ ದಿವಾನರವರ ಮಂಜೂರಾತಿಗೆ ವಳಪಟ್ಟು ವಿಕ್ರಯಿಸಲ್ಪಡುವದು, ಸದರೀ ಸಾಲಿಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಫಾಯಿಷ್ ಮಾಡಲ್ಪಡುತ್ತೆ. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮ ಪ್ರಕಾರ ಮೊಕರರ್ ಮಾಡಲ್ಪಟ್ಟ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು. ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾದ ಸರಕಾರದ ಸವಾಲಿನ ಮೊಬಲಗಿನಮೇಲೆ ಶೇಕಡಾ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಇಡಲ್ಪಡುವ ತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜ್ ಆಖೈರ್ ಕಾಲದಲ್ಲಿ ಅವರಿಗೆ ವಾಪಸ್ ಪಾವತೀ ಮಾಡಲ್ಪಡುವದು.

4. ಯಾವ ಚಡ ದರಖಾಸ್ತುದಾರನ ದರಖಾಸ್ತು ದಿವಾನರವರ ಮಂಜೂರಾತಿ ಬಗ್ಗೆ ಚುನಾಯಿಸಿಕೊಳ್ಳಲ್ಪಡುತ್ತೋ ಅಂಥಾ ಚಡ ದರಖಾಸ್ತುದಾರನು ಮೊದಲೇ ಡಿಪಾಜಿಟ್ ಇಟ್ಟಿರುವ ಮೊಬಲಗು ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದು ಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಕೇವಣಿ ಇಡತಕ್ಕದ್ದು. ಆತನು ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ ಪೂರ್ವ ಡಿಪಾಜಿಟ್ ಇಟ್ಟಿರುವ ಮೊಬಲಗುಗಳು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗು ಪೈಕಿ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ಇಜಾರೇ ಷರತ್ತುಗಳಂತೆ ಕ್ರಮ ಪ್ರಕಾರ ನಡದುಕೊಳ್ಳುವ ಬಗ್ಗೆ ಜಾಮೀನಿ ತರೀಕ್ ನಗದಾಗಿಯಾಗಲಿ ಕ್ರಮ ಪ್ರಕಾರ ಮೈಸೂರು ಶ್ರೀಮೆಯ್ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿ ಪೈಕೀ ಅರ್ಧಭಾಗವನ್ನ ನಗದಾಗಿಯಾಗಲಿ ಮೇಲೆ ಹೇಳಿದಂತೆ ಮೈಸೂರು ಶ್ರೀಮೆಯು ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಹಾಜರ್ಮಾಡಿ ಬಾಕೀ ಅರ್ಧವನ್ನ ಸದರೀ ಮೊಬಲಗ್ಯೆಯರಡರಷ್ಟು ಕ್ರಯ ಬಾಳುವ ಮತ್ತು ಯಾವ ಬಾಧ್ಯತೆ ವಗೈರೆ ದೇಣೆಗಳು ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿಯಾಗಲಿ ಹಾಜರ್ಮಾಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದಮೇಲೆ, ಒಂದು ಕರಾರ್ ಬರದುಕೊಡತಕ್ಕದ್ದು.

5. ಆತನು ಕರಾರಿಗೆ ರುಜು ಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್ಟುಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು, ಇಜಾರೆಯು ಪುನಃ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾ ಮಾಡಲ್ಪಡುವದು. ಹಾಗೆ ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲಾ ಮಾಡುವದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ, ಜಮೀನು ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರಿ ಇರುವ ರೂಲ್ಸ್ ಅನುಸರಿಸಿ ಜಫ್ತೀ ಹರಾಜಿನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂಥಾ ಇಜಾರೇ ಮೊಬಲಗು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ

ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡ ತಕ್ಕದ್ದು. ಅಂತಾ ಬಾಕೀ ಮೊಬಲಗ್‌ಗಳು ಪಾವತಿಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವು ಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾ ರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಧವಾಗಿ ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿ ಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರಿ ಇರತಕ್ಕದ್ದು.

II. ಚಿಲ್ಲರೇ ಪುರೋಖುದ್ದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡ ಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳಮೇಲೆ ಯಾವ ಅಂಗಡಿಗಳನ್ನಾ ದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷ್ನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರ ನು ಆ ಬಗ್ಯಾಗಿ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆ ಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದು ಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟ ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮುಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳ ನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮು ಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಾತ್ರಕ್ಕೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳು ಮತ್ತು ಇನಾಮುದಾರರುಗಳಿಗೆ ಶೇಂದಿ ಹುಟ್ಟುವಳಿಗೋಸ್ಕರ ಸಲ್ಲಬೇಕಾದ ಈಡು ಮೊಬಲಗುಗಳ ವಿಷಯದಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂಥಾ ಫೈಸಲಿಗೆ ಗುತ್ತಿಗೇ ದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲಿನಲ್ಲಿ ದಿವಾನರವರಿಂದ ಕಾಯಂ ಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂತಾ ತೀರ್ಪಿನಲ್ಲಾಗಲಿ ಅಥವಾ ದಿವಾನರವರಿಂದ ಅಪ್ಪೀಲಿನಲ್ಲಾಗಲಿ ಪಾವತೀ ಮಾಡಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲ್ಸ್ ಅನುಸರಿಸಿ ಕಂಟ್ರಾಕ್ಟುದಾರರಿಂದ ವಸೂಲ್ ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡ ತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದೀ ಪುರೋಖು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂ ಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಅಬ್ಕಾರೀ ಕಂಟ್ರಾಕ್ಟರನ್ನು ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿರತಕ್ಕದ್ದು.

VIII (a.) ಇಜಾರೇದಾರನು ಡಿಸ್ಟ್ರಿಕ್ಟಿನ ಮತ್ತು ಸಬ್ ಡಿವಿಜನ್ನಿನ ಸರಕಾರದ ಬಂಜರ್ ಜಮೀನಿನಲ್ಲಿ ಇರುವ ಈಚಲು ಮರಗಳನ್ನು ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪುರೋಖು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೂ

ಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ, ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII. (*b.*) ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್‌ವಾಕಾ ಲೆಖ್ಖಗಳು ಇಡತಕ್ಕದ್ದು. ಅವುಗಳಲ್ಲಿ (1) ಶೇಂದಿ ಇಳಿಸಲ್ಪಟ್ಟ ಶೇಂದೀ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದೀ ಕಟ್ಟಿದ ಮರಗಳ ಸಂಖ್ಯೆ, (3) ರೋಜೀನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದ್, (4) ರೋಜೀನಾ ಬಿಕರೀ ಮಾಡಲ್ಪಟ್ಟ ಶೇಂದಿಯ ತೇದಾದ್ ಮತ್ತು (5) ಶೇಂದಿಯು ಸರಬರಾಯಿಮಾಡಲ್ಪಟ್ಟ ದುಕಾನುಗಳ ಹೆಸರು ಈ ಬಾಬತು ತಪಸೀಲ್‌ಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಖ್ಖಗಳು ಅಮಲ್‌ದಾರರಿಂದಾಗಲಿ ಈ ಬಗ್ಗ್ಯಾಗಿ ಡೆ|| ಕಮ್ಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫೀಸರರಿಂದಾಗಲಿ ತನಿಖೆ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕವು. ಮತ್ತು ಇವುಗಳ ನಕಲು ಡೆ|| ಕಮ್ಮಿಷನರವರಿಂದಲಾಗಲಿ ಅಮಲ್‌ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರರಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ನೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ ಅಥವಾ ಸಬ್ ಡಿವಿಜನಿನ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳಮೇಲೆ ಇಜಾರೆಯನ್ನು ಮನ್ಸೂಖ್‌ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಷಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್‌ಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಫುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಫುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

XI. ಗುತ್ತಿಗೇದಾರನು ತನ್ನ ನವುಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಯತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೆಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ವುಪಯೋಗಿಸದೆಯೂ, ಇರುವ ಬಗ್ಯೆ ಜವಾಬುದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರ್‌ಕಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

XII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

ಶೇರು ಒಂದಕ್ಕೆ ಕ್ರಮು.

	ಜಾಸ್ತಿ. ರೂ. ಆ. ಪೈ.	ಕಮ್ಮಿ. ರೂ. ಆ. ಪೈ.
ತಾಲ್ಲೂಕು ಕಸಬೆಗಳಲ್ಲಿ	0—1—4	0—0—6
ಗಾವ್‌ಗಾನೆಗಳಲ್ಲಿ	0—1—0	0—0—6

6. ಶೇಂದಿ ರವಾನೆಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ತಾರೀಖು 8ನೇ ಜನವರೀ 1887ನೇ ಇಸವಿ.

ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷರ್ನ ವಿನಾ, ಮೈಸೂರು ಶೀಮೆಯ ತಮಾಂ ಪ್ರದೇಶಗಳಲ್ಲೂ, ಹಲ್ವಾ ವಿನಾ ಗಾಂಜಾ ಮತ್ತು ಅದರಿಂದ ತಯಾರ್ಮಾಡಲ್ಪಟ್ಟ ಯಾವ ಪದಾರ್ಥಗಳನ್ನಾಗಲೀ, ಒಟ್ಟು ಬಿಕರೀ ಮಾಡುವ ಒಟ್ಟು ಸ್ವಾತಂತ್ರ್ಯದ ಬಗ್ಗೆ ಯಿದರ ದೆಶೇಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ.

2. ಸದರೀ ಕಂಟ್ರ್ಯಾಕ್ಟು 1887ನೇ ಇಸವಿ ಏಪ್ರೈಲ್ 1ನೇ ತಾರೀಖು ಮೊದಲು 1889ನೇ ಇಸವಿ 31ನೇ ಮಾರ್ಚಿ ವರಿಗಿನ ಯೆರಡು ವರ್ಷಗಳ ಪರಿಯಂತ ವ್ಯಾಪಿಸತಕ್ಕದ್ದು.

3. ಪ್ರತಿ ದರಖಾಸ್ತಿನಲ್ಲಿಯೂ, ದರಖಾಸ್ತುದಾರನು ಸರಕಾರಕ್ಕೆ ಸಾಲಿಯಾನಾ ಯೆಷ್ಟು ಮೊಬಲಗು ಕೊಡುವದಕ್ಕೆ ಒಪ್ಪುತ್ತಾನೋ ಅಂಥಾ ಕಮ್ತಿ ಮೊಬಲಗನ್ನ ನಮೂದಿಸತಕ್ಕದ್ದಲ್ಲದೆ, ಶೀಮೆ ಮುಳಿಗೋಸ್ಕರವಾಗಿ, ಲೋಕಲ್‌ಸೆಸ್ ವಿನಾ ವಂದು ವ್ರೊಟ್ಟು ಮೊಬಲಗನ್ನು ನಮೂದಿಸತಕ್ಕದ್ದು. ಸಾಲಿಯಾನಾ 5,500 ರೂಪಾಯಿಗಳಿಗಿಂತ ಕಮ್ಮಿ ಮೊತ್ತವನ್ನು ಸರ್ಕಾರಕ್ಕೆ ತೆರುವಂತೆ ಒಪ್ಪುವ ಯಾವ ದರಖಾಸ್ತೇ ಆಗಲಿ ಆಲೋಚಿಸಲ್ಪಡಲಾರದು. ಪ್ರತಿ ದರಖಾಸ್ತಿನ ಸಂಗಡಲೂ 100 ರೂಪಾಯಿಗಳ ಠೇವಣಿ ಮೊಬಲಗು ನಗದಾಗಿ ಕಳುಹಿಸಲ್ಪಟ್ಟು "ಸಿವಿಲ್ ವ ಮಿಲಿಟೇರಿ ಸ್ಟೇಷರ್ನ ವಿನಾ ಮೈಸೂರು ದೇಶದ ತಮಾಂ ಡಿಸ್ಟ್ರಿಕ್ಟುಗಳಲ್ಲಿ ಹಲ್ವಾ ಶಿವಾಯಿ ಗಾಂಜಾ ಮತ್ತು ಅದರ ಯಾವದಾದರೂ ತಯಾರಿಯನ್ನು ಒಟ್ಟು ಬಿಕರಿ ಮಾಡುವ ಒಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಯೆಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. ದರಖಾಸ್ತುಗಳು, 1887ನೇ ಇಸವಿ ಫೆಬ್ರವರೀ 15ನೇ ಮುಕ್ಕಾಮಿನ ಮಧ್ಯಾನ್ಹದಲ್ಲಾಗಲೀ ತತ್ಪೂರ್ವವಾಗಲೀ ಬೆಂಗಳೂರು ಮೊಕ್ಕಾಂ ದಿವಾನರವರ ಆಫೀಸಿನಲ್ಲಿ ಒಪ್ಪಿಸಲ್ಪಡತಕ್ಕದ್ದು; ಆಗ ಅವು ಬೆಂಗಳೂರು ಡೆಪ್ಯುಟಿ ಕಮ್ಮಿಷನರ್ ಮತ್ತು ಚೀಫ್ ಸೆಕ್ರೆಟೇರಿಯವರಿಂದ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು, ಯಾವ ದರಖಾಸ್ತು ಗವರ್ನಮೆಂಟಿಗೆ ಶಿಫಾರಸ್ ಮಾಡುವ ಬಗ್ಗೆ ಚೀಫ್ ಸೆಕ್ರೆಟೇರಿ ಮತ್ತು ಬೆಂಗಳೂರು ಡೆಪ್ಯುಟಿ ಕಮ್ಮಿಷನರಿಂದ ಚುನಾಯಿಸಲ್ಪಡುತ್ತೋ ಅಂಥಾ ದರಖಾಸ್ತುದಾರನು ತಾನು ಒಪ್ಪಿಕೊಳ್ಳುವ ಸಾಲಿಯಾನಾ ಮೊಬಲಗ್ ಪೈಕಿ ಹನ್ನೆರಡರಲ್ಲಿ ವಂದು ಭಾಗಕ್ಕೆ (ಯಾ ವಂದು ತಿಂಗಳ ಖಿಸ್ತು ಮೊಬಲಗಿಗೆ) ಸರಿಯಾದ ಜಾಸ್ತೀ ಮೊಬಲಗನ್ನು ನಗದಾಗಿಯಾಗಲೀ "ಮೈಸೂರ ದಿವಾನರವರ ಹೆಸರಿಗೆ" ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಕೂಡ್ಲೇ ಡಿಪಾಜಿಟ್ ಯಿಡಬೇಕಾಗಿರುತ್ತೆ. ಹಾಂಗೆ ಮಾಡುವದಕ್ಕೆ ತಪ್ಪಿದರೆ ದರಖಾಸ್ತಿನೊಡನೆ ಹಾಜರ್ಮಾಡಲ್ಪಟ್ಟ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದಲ್ಲದೆ, ಇಜಾರೆಯು ದರಖಾಸ್ತುದಾರನ ಲುಕ್‌ಸಾನಿಗೆ ವಳಪಟ್ಟು ಪುನಹಾ ಹರಾಜು ಮಾಡಲ್ಪಡುವದು.

5. ಗವರ್ನಮೆಂಟಿನವರ ತೀರ್ಮಾನವು ತಿಳಿಸಲ್ಪಟ್ಟ ತರುವಾಯ, ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರುಗಳ ಠೇವಣಿ ಮೊಬಲಗುಗಳು ಅವರವರು ಅರ್ಜಿ ಬರಕೊಂಡಲ್ಲಿ ವಾಪಸ್ ಕೊಡಲ್ಪಡುವವು. ಹೆಚ್ಚು ಮೊಬಲಗಿನ ಯಾ ಯಾವ ದರಖಾಸ್ತನ್ನೇ ಆಗಲಿ ಕಾರಣ ನಮೂದಿಸದೇ ತಿರಸ್ಕರಿಸುವ ಅಧಿಕಾರವನ್ನ ಗವರ್ನಮೆಂಟಿನವರು ವುಳಿಸಿಕೊಂಡಿರುತ್ತಾರೆ.

6. ಯಾವ ಮನುಷ್ಯನ ದರಖಾಸ್ತನ್ನ ಅಂಗೀಕರಿಸೋಣಾಗುತ್ತೋ ಆತನು, ಗವರ್ನಮೆಂಟಿನವರ ಮಂಜೂರಾತಿಯು ಅವನಿಗೆ ತಿಳಿಸಲ್ಪಟ್ಟ 8 ದಿವಸಗಳೊಳಗಾಗಿ 4ನೇ ಕಲಮನುಸರಿಸಿ ಮುಂದಾಗಿಯೇ ಹಾಜರ್ಮಾಡಿದ್ದ ಠೇವಣಿಮೊಬಲಗು ಶೇರಿ ಸಾಲೀಯಾನಾ ಕರಾರುಮಾಡಿಕೊಳ್ಳುವ ಹುಟ್ಟುವಳಿಯ ನಾಲ್ಕರಲ್ಲೊಂದು ಭಾಗಕ್ಕೆ ಸಮವಾದ ಮೊಬಲಗನ್ನ ನಗದಾಗಿಯಾಗಲಿ, "ಮೈಸೂರು ದಿವಾನರವರ ಹೆಸರಿಗೆ" ಕ್ರಮವಾಗಿ ಯಿಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಡೆಪ್ಯುಟಿ ಕಮ್ಮಿಷನರವರ ಬಳಿ ಠೇವಣಿ ಇಟ್ಟು ಈ ಕೆಳಗೆ ವಿವರಿಸೋಣಾಗುವ ಷರತ್ತುಗಳ ಮೇರಿಗೆ ನಡದುಕೊಳ್ಳುವದಕ್ಕೆ ಬದ್ಧನಾಗಿ ಸರಿಯಾದ ಛಾಪಾ ಕಾಗದ್ದಲ್ಲಿ ಕ್ರಮವಾಗಿ ಮುಚ್ಚಲಿಕೆಯನ್ನ ಬರದುಕೊಡತಕ್ಕದ್ದು. ಅಂತ್ಥಾ ಮುಚ್ಚಲಿಕೆಗೆ ಆತನು ರುಜು ಮಾಡಲಿಕ್ಕೆ ತಪ್ಪಿದಲ್ಲಿ ಯಾ ರುಜು ಮಾಡಲಿಕ್ಕೆ ನಿರಾಕರಿಸಿದ ಪಕ್ಷದಲ್ಲಿ ಅಥವಾ ಅವಶ್ಯಕವಾದ ಠೇವಣೀಯನ್ನ ಹಾಜರ್ಮಾಡಲಿಕ್ಕೆ ತಪ್ಪಿದಲ್ಲಿ ಆತನು ಮುಂಚಿತವಾಗಿ ಹಾಜರ್ಮಾಡಿದ್ದ ಠೇವಣಿ ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳುವದಲ್ಲದೆ, ಇಜಾರೆಯು ಅನ್ಯಥಾ ವಿಲಾ ಮಾಡಲ್ಪಡುವದು. ಈ ಇಸ್ತಿಹಾರ್‌ನಾಮೆಯ ಯಾವ ಷರತ್ತುಗಳನ್ನಾಗಲೀ ಬದಲಾಯಿಸುವಂತೆ ಸೂಚಿಸುವ ಯಾವ ದರಖಾಸ್ತೇ ಆಗಲಿ ಆಲೋಚಿಸಲ್ಪಡಲಾರದು.

7. ಕಂಟ್ರ್ಯಾಕ್ಟುದಾರನಿಂದ ಲೈಸೆನ್ಸ್‌ಪಡೆದ ಬಿಕರೀದಾರ್ರುಗಳಿಗೆ ಯಾವದಾದರೂ ಸಾಲಿನಲ್ಲಿ ಮಾರಲ್ಪಡುವ ಗಾಂಜಾ ವ ಅದರ ತಯಾರೀ ಪಧಾರ್ಥಗಳ ಬಿಕರೀ ಮೊಬಲಗು. ಕರಾರು ಮಾಡಿಕೊಂಡ ಮೊಬಲಗಿಗಿಂತಲೂ ಜಾಸ್ತಿ ಯಾಗುವ ಪಕ್ಷಕ್ಕೆ, ಅಂತಾ ಜಾಸ್ತೀ ಮೊಬಲಗಿನ ಮೇಲೆ ಶೇಕಡಾ 25ರ ಮೇರಿಗೆ ಆಗುವ ಮೊಬಲಗು, ಸದರೀ ಸಾಲ್ ಆಖೈರಿನ ಖಿಸ್ತಿನೊಂದಿಗೆ ಇದರ ಕೆಳಗೆ IIIನೇ ಷರತ್ತಿನಲ್ಲಿ ಕಂಡ ಉಳೀ ಮೊಬಲಗಿಗೆ ಒಳಪಟ್ಟು ಗೌರ್ನಮೆಂಟಿಗೆ ಕ್ರಮವಾಗಿ ಪಾವತೀ ಮಾಡಲ್ಪಡತಕ್ಕದ್ದು.

8. ಹಾಲಿ ದರಖಾಸ್ತು ಅಪೇಕ್ಷಿಸಲ್ಪಟ್ಟಿರುವ ಕಂಟ್ರ್ಯಾಕ್ಟು, ಇದರಡೀ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಯಾವವೆಂದರೆ;—

ಷರತ್ತುಗಳು.

I. ಸದರೀ ಕಂಟ್ರಾಕ್ಟ್ಟು, ಮೈಸೂರು ಗವರ್ರಮೆಂಟಿನ ಮಂಜೂರಾತಿ ವಿನಾ ವರ್ಗ ಮಾಡಲ್ಪಡಕೂಡದು.

II. ಈ ಕಂಟ್ರಾಕ್ಟಿನ, ಪ್ರದ್ದೇಶಗಳಿಗಾಗಿ, ಯಿಜಾರೆಯ ಮಾಯಿದೆ ಯೊಳಗೆ ಕಂಟ್ರಾಕ್ಟ್ಟದಾರರಿಂದಾ ಮೊಕರರ್ರ್ಮಾಡಲ್ಪಡುವ ಯಾ ಯಿಟ್ಟುಕೊಳ್ಳಲ್ಪಡುವ ಯಾವ ಪ್ರತಿನಿಧಿ, ಮುತಾಲೀಕ ಯಾ ಪಾಲುದಾರನನ್ನೇ ಆಗಲಿ, ಅಂತಾ ಪ್ರತಿನಿಧಿ, ಮುತಾಲೀಕ ಯಾ ಪಾಲ್ದಾರನನ್ನ, ತಾತ್ಕಾಲಿಕ ಬೆಂಗಳೂರು ಡಿಪ್ಯುಟಿ ಕಮ್ಮಿಷನರು ಮುಂಚಿತವಾಗಿ ಮಂಜೂರ್ರ್ಮಾಡಿದ್ದರೇನೆ ಹೊರ್ತು, ಗೌರ್ನಮೆಂಟಿನವರು ನಿರಾಕರಿಸಬಹುದು.

III. ಕಂಟ್ರಾಕ್ಟದಾರನು ಒಪ್ಪಿಕೊಳ್ಳುವ ಅಥವ ಪಕ್ಷದ ಹುಟ್ಟುವಳೀ ಮೊಬಲಗನ್ನ, ರೂಪಾಯಿ ಒಂದಕ್ಕೆ ಪ್ರೊಂದಾಣೆ ಮೇರಿಗೆ ಲೋಕಲ್ ಸೆಸ್‌ದೇಖಿಲ್, ಮಾಹೇವಾರಿ ಸಮ ಮೊಬಲಗ್ ಖಿಸ್ತುಬಂದೀಯಾಗಿ ಬೆಂಗಳೂರು ಡಿಸ್ಟ್ರಿಕ್ಟು ಖಜಾನೆಯಲ್ಲಿ ಪ್ರತಿ ತಿಂಗಳ 20ನೇ ತಾರೀಖಿನಲ್ಲಿ ಯಾ ಅದಕ್ಕೆ ಮುಂಚಿತವಾಗಿ ಪಾವತೀ ಮಾಡತಕ್ಕದ್ದು. ಕರಾರ್ ಮೊಬಲಗಿಗಿಂತಲೂ ಜಾಸ್ತೀ ಬಿಕರೀ ಯಾದ ಬಾಬತಿನ ಶೇಕಡಾ 25ರ ಮೇರಿಗೆ ಆಗುವ ಹಣವನ್ನ ಸೊಲ್ ಆಕ್ಟೈರ್ ಖಿಸ್ತಿನೊಂದಿಗೆ ಪಾವತ್ತಿ ಮಾಡತಕ್ಕದ್ದು. ಸದರೀ ಶೇಕಡಾ 25ರ ಬಾಬತು ಮೊಬಲಗು, (ಲೋಕಲ್ ಸೆಸ್ ದೇಖೀಲ್) ಗೊತ್ತುಮಾಡಿಕೊಂಡ ಕಮ್ಮಿ ಹುಟ್ಟುವಳಿ ಮೊಬಲಗು ಪಾವತೀಮಾಡಲ್ಪಟ್ಟು ಕಂಟ್ರಾಕ್ಟುದಾರರಿಗೆ ಗಾಂಜಾಗೋಸ್ಕರ ತಗಲಿದ ಲಾಗವಜು ಮತ್ತು ಸದರೀ ಗಾಂಜಾ ಆಯಾ ಡಿಪೋಗಳಿಗೆ ಸಾಗಿಸುವದಕ್ಕೋಸ್ಕರ ವಾಸ್ತವ್ಯವಾಗಿ ತಗಲಿದ ತಮಾಂ ನ್ಯಾಯವಾದ ಖರ್ಚು ಸುದಾ ವಜಾಮಾಡಿದ ತರುವಾಯ ಕಂಟ್ರಾಕ್ಟುದಾರರಿಗೆ ಉಳಿದ ನಿವಳ ಮೊಬಲಗಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಹಾಂಗೆ ಉಳಿದ ನಿವಳ ಮೊಬಲಗು 500 ರೂಪಾಯಿಗಳಿಗೆ ಮಳಪಟ್ಟರೆ ಅಂಥ ಮೊಬಲಗಿನ ಮೇಲೆ ಗವರ್ರಮೆಂಟಿಗೆ ಶೇಕಡಾ ಯಾವದೂ ಸಲ್ಲಬೇಕಾದ್ದಿಲ್ಲ; ಪರಂತು ಕಂಟ್ರಾಕ್ಟುದಾರರು ನಿರ್ವಂಚನೆಯಾಗಿ ಈ ಇಸ್ತಿಹಾರ್‌ನಾಮೆ, ಯಕ್ಸೈಸ್ ಆಕ್ಟು ಮತ್ತು ಗವರ್ರಮೆಂಟಿನ ರೂಲ್‌ಸ್ ಯಿವುಗಳ ಷರತ್ತುಗಳನ್ನು ಕ್ರಮವಾಗಿ ನೆರವೇರಿಸತಕ್ಕದ್ದು. ಮೇಲೆ ಹೇಳಲ್ಪಟ್ಟ ಮೇರಿಗೆ ಯಾವದಾದರೊಂದು ಖಿಸ್ತಿನ ಮೊಬಲಗು ಪಾವತೀಮಾಡಲಿಕ್ಕೆ ತಪ್ಪಿದಲ್ಲಿ ಗವರ್ರಮೆಂಟಿನವರ ಮಂಜೂರಾತಿನಿಂ ಠೇವಣೀ ಮೊಬಲಗು ಸರ್ಕಾರ್ ದಾಖಲಾಗಿರುತ್ತೆಂದು ತಿಳಿಸಲಿಕ್ಕೂ, ಇಜಾರೆಯನ್ನ ಗವರ್ರಮೆಂಟಿನವರ ವಿಚಾರಣೆಯಲ್ಲಿ ತೆಗದುಕೊಳ್ಳಲಿಕ್ಕೂ, ಯಾ ಕಂಟ್ರಾಕ್ಟದಾರನ ಜವಾಬ್‌ದಾರೀ ಮೇಲೆ ಮತ್ಯಾವ ಇತರ ರೀತಿಯಲ್ಲಿ ಇಡುವದಕ್ಕೂ, ಅಥವಾ ಇಜಾರೆಯು ಅವನಿಗೆ ತಪ್ಪಿಹೋಗಿರುತ್ತೆಂದು ತಿಳಿಸಿ ಕಂಟ್ರಾಕ್ಟುದಾರನ ಜವಾಬ್‌ದಾರೀ ವ ಅವನ ಲುಕ್ಸಾನಿಗೆ ಗುರಿಮಾಡಿ ಇಜಾರೆಯನ್ನ ಪುನಹ್ಹ ಹರಾಜ್ ಮಾಡಲಿಕ್ಕೂ, ಮತ್ತು ಬರಬೇಕಾದ ವಿಶಿಷ್ಟ ಬಾಕೀ ಮೊಬಲಗನ್ನೂ ಸಾಲೀಯಾನಾ ಶೇಕಡಾ 6 ರೂಪಾಯಿ ಮೇರಿಗೆ ಆಗುವ ಬಡ್ಡೀ ಮೊಬಲಗ್ ದೇಖೀಲ್ ಒಟ್ಟು ಬಿಕರೀ ಡಿಪೋಗಳಲ್ಲಿರತಕ್ಕ ನಗದ್ ಮೊಬಲಗಿನಿಂದಲೂ ಕಂಟ್ರಾಕ್ಟುದಾರನ ಚರ ವ ಸ್ಥಿರ ಜಿಂದಗಿಗೆ ಜಫ್ತಿ ಹರಾಜ್ ಮೂಲಕವಾಗಿಯೂ, ಜಮೀನ್ ಕಂದಾಯದ ಬಾಕೀವಸೂಲಿ ಬಗ್ಗೆ ಸಂಬಂಧಪಟ್ಟ ರೂಲ್ಸ್ ಅನುಸರಿಸಿ ವಸೂಲ್ಮಾಡಲಿಕ್ಕೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷ್ನರಿಗೆ ನ್ಯಾಯವಾಗಿ ಯಿರತಕ್ಕದ್ದು.

IV. ಡೆಪ್ಯುಟಿ ಕಮ್ಮಿಷನರವರು, ದುಕಾನ್‌ಗಳ ಸಂಖ್ಯೆ ಮತ್ತು ಸ್ಥಳಗಳ ವಿಷಯದಲ್ಲಿ ಸಾಕಾದ ಮತ್ತು ನ್ಯಾಯವಾಗಿ ತೋರಿಬರುವ ಸಬಬಿನ ಮೇಲೆ ಮಾತ್ರವೇ ಅವಶ್ಯಕವೆಂದು ತೋರಿಬರುವ ಯಾವ ಬದಲಾವಣೆಗಳನ್ನಾದರೂ ಆಗಿಂದಾಗ್ಯೆ ಮಾಡುವದಕ್ಕೂ ಅಥವಾ ಯಾವ ದುಕಾನನ್ನಾದರೂ, ಕಂಟ್ರಾಕ್ಟುದಾರನು ಈಡು ಮೊಬಲಗು ಕೇಳುವದಕ್ಕೆ ಹಕ್ಕಿಲ್ಲದೇನೇ ಈ ಇಸ್ತಿಹಾರ್‌ನಾಮೆಯು IXನೇ ಷರತ್ತಿನಲ್ಲಿ ವಿವರಿಸಲ್ಪಟ್ಟ ಷರತ್ತುಗಳ ಪ್ರಕಾರವೂ ಮತ್ತು ಅವು ಅನುಸರಿಸಿಯೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

V. ಕಂಟ್ರಾಕ್ಟುದಾರರ ಹಕ್ಕುಗಳನ್ನು, ಮತ್ತು ಸರಕಾರ ಬಾಧ್ಯತೆಗಳನ್ನು ಕಾಪಾಡುವದಕ್ಕೂ, ಜನಗಳಿಗೆ ಅನಾನೂಕೂಲ್ಯತೆಯನ್ನು ತಪ್ಪಿಸುವದಕ್ಕೂ (ಹಲವಾವಿನಾ) ಗಾಂಜಾ ಮತ್ತು ಅದರ ತಯಾರಿ ಪದಾರ್ಥಗಳಿಗೋಸ್ಕರ ಒಟ್ಟು ವ ಚಿಲ್ಲರೆ ಬಿಕರಿ ದುಕಾನ್‌ಗಳ ವಿಷಯಗಳಲ್ಲಿ ಇದರಡಿ ಕಂಡ ನಡವಳಿತೆಗಳು ಜಾರೀಯಲ್ಲಿ ತರಲ್ಪಡತಕ್ಕವು:—

(a.) ಅಮಲ್‌ದಾರ್ರುಗಳು, ವಿನಾಯಿತಿಯಿಲ್ಲದೇ ಹಾಲಿ ಇರತಕ್ಕ ತಮಾಂ ಒಟ್ಟು ವ ಚಿಲ್ಲರೆ ಬಿಕರೀ ದುಕಾನ್‌ಗಳನ್ನೂ 1887ನೇ ಇಸವಿ ಏಪ್ರೈಲ್ 1ನೇ ತಾರೀಖಿನಲ್ಲಿ ಕಾಯಂ ಮಾಡತಕ್ಕದ್ದು.

(b.) ಅಮಲ್‌ದಾರರು, ತಮಾಂ ತಾಲ್ಲೂಕು ಕಸಬಾಗಳು, ಹೋಬಳಿ ಕಸಬಾಗಳು, ದೊಡ್ಡ ಷಹರ್ ವ ಗ್ರಾಮಗಳು ಮತ್ತು ಗಾಂಜಾವಿಗೆ ಗಿರಾಕಿ ಯಿರಬಹುದಾದಂಥಾ ಇತರ ಸ್ಥಳಗಳಲ್ಲಿ ದುಕಾನ್ ಬಗ್ಯಾಗಿ ಬರುವ ವಾಸ್ತವ್ಯವಾದ ದರಖಾಸ್ತುಗಳನ್ನು ಕೂಡ್ಲೆ ಅಂಗೀಕರಿಸತಕ್ಕದ್ದು.

(c.) ಯಾವದಾದರೂ ಒಂದು ಸ್ಥಳದಲ್ಲಿ ದುರ್ಕಾ ಇಡತಕ್ಕ ಆವಶ್ಯಕತೆ ವಿಷಯದಲ್ಲಿ ಅನುಮಾನ ಕಾಣಬರುವ ಸಂಗತಿಗಳಲ್ಲೂ, ಮತ್ತು ಒಂದೇ ಸ್ಥಳದಲ್ಲಿ ಯಾ ಮತ್ತೊಂದು ದುಕಾನಿನ ಸಮೀಪದಲ್ಲಿ ಒಂದು ಜಾಸ್ತಿ ದುಕಾನು ಯಿಡುವದು ಅವಶ್ಯಕವೆಂದು ತೋರಿಬರುವ ಪ್ರತಿ ಸಂಗತಿಯಲ್ಲೂ, ಹೆಡ್ ಸೂಪರವೈಜರವರ ಅಭಿಪ್ರಾಯ ಪಡೆಯತಕ್ಕದ್ದು.

(d.) ಹೆಡ್ ಸೂಪರವೈಜರವರಿಗೆ, ಇಲಾಖಾ ಮೂಲಕ ತಿಳಿಯಬಂಬ ಆಧಾರದ ಮೇಲೆ ಯಾವದಾದರೂ ಮುಖ್ಯ ಸ್ಥಳದಲ್ಲಿ ಹೊಸದಾದ ದುಕಾನನ್ನು ಯಿಡುವದು ಯುಕ್ತವೆಂದು ಕಾಣಬಂದರೆ ಆಬಗ್ಗ್ಯಾಗಿ ಅಮಲ್‌ದಾರರಿಗೆ ತಿಳಿಸತಕ್ಕದ್ದು; ಸದರೀಯವರು, ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿ ಮತ್ತು ಕ್ರಮವಾಗಿ ಲೈಸೆನ್ಸ್ ಕೊಡುವಣದರ ನಿರೀಕ್ಷಣೆ ಮೇಲೆ ಕೂಡ್ಲೆ ಅಪ್ರಕಾರ ನೆರವೇರಿಸತಕ್ಕದ್ದು.

(e.) ಅಮಲ್‌ದಾರರು, ಬಿಕರೀದಾರರ ಹೆಸರು ಮತ್ತು ಬಿಕರೀ ಸ್ಥಳದ ತಬ್ದೀಲ ಬಗ್ಗ್ಯಾಗಿ ಬರುವ ತಮಾಂ ದರಖಾಸ್ತುಗಳನ್ನೂ ಕೂಡ್ಲೆ ಅಂಗೀಕರಿಸತಕ್ಕದ್ದಲ್ಲದೆ ಗಾಂಜಾ ದುರ್ಕಾದಾರರು, ಚಿಲ್ಲರೆ ಬಿಕರಿ ಲೈಸೆನ್ಸಿನಲ್ಲಿ ವಿಧಿಸಿರುವ ಪ್ರಕಾರ ಜಾತ್ರೆಗಳಿಗೂ ಸಂತೆಗಳಿಗೂ ಹೋಗುವ ಬಗ್ಗೆ ಧಾರಾಳವಾಗಿ ಅವಕಾಶ ಕೊಡತಕ್ಕದ್ದು.

(f.) ಒಬ್ಬ ಕಾಯಂ ದುರ್ಕಾದಾರನು ಅಕ್ರಮವಾದ ನಡತೆಯುಳ್ಳವನೆಂದು ನಂಬುವದಕ್ಕೆ ನ್ಯಾಯವಾದ ಮತ್ತು ದೃಢವಾದ ಸಬೂಬುಗಳು ಕಾಣಬಂದು ಕಂಟ್ರಾಕ್ಟದಾರನು ಫಿರ್ಯಾದಿ ಮಾಡಿದರೆ, ಅಮಲ್‌ದಾರರು ಯಾವದಾದರೂ ದುಕಾನಿಗೆ ತತ್ಕಾಲದಲ್ಲಿ ಯಿರತಕ್ಕ ಬಿಕರೀದಾರನ ಜೊತೆಗೆ ಮತ್ತೊಬ್ಬ ಹೊಸಬಿಕರೀದಾರನನ್ನು ಕೆಲಸ ನಡಿಸುವ ಬಗ್ಗೆ ಮೊಕರರ್ ಮಾಡಬಹುದು; ಮತ್ತು ಹಾಂಗೆ ಆಂತರದಲ್ಲಿ ಮಾರಾಟನಡಿಸಿದನೆಂಬ ಅನುಮಾನ ದೃಢಪಟ್ಟರೆ ಅಂಥಾ ಹೊಸಬಿಕರೀದಾರನನ್ನು ಕಾಯಂ ಮಾಡಲೂ ಬಹುದು; ಪರಂತು ಹೊಸಬಿಕರೀದಾರನು, ಕಂಟ್ರಾಕ್ಟದಾರನೊಂದಿಗೆ ತನಗೆ ಯಾವ ಸಂಬಂಧವೂ ಇಲ್ಲವೆಂತಲೂ ಅವನ ಯಿಹಸಾನಿಗೆ ತಾನು ವಳಪಟ್ಟಿಲ್ಲವೆಂತಲೂ ಆದರೆ ಇತರ ಯಾವದಾದರೂ ಸ್ವತಂತ್ರ ಬಿಕರೀದಾರನಂತೆಯೇ ತಾನು ಕೆಲಸ ಚಲಾಯಿಸುವದಾಗಿಯೂ ವಂದು ಮುಚ್ಚಳಿಕೆ ಕೊಡಬೇಕು. ಇದಕ್ಕೆ ತಪ್ಪಿದರೆ, ಅಮಲ್‌ದಾರರು, ಅಂಥಾ ದುಕಾನಿಗೆ ವಬ್ಬ ಸ್ವತಂತ್ರ ಬಿಕರೀದಾರನನ್ನು ನೇಮಿಸತಕ್ಕದ್ದು. ಯೆಲ್ಲ ಸಂದರ್ಭಗಳಲ್ಲೂ ಗ್ರಾಮಸ್ಥರಲ್ಲಿ ಚುನಾಯಿಸತಕ್ಕದ್ದು.

(g.) ಕಂಟ್ರಾಕ್ಟರು, ಅವರ ಏಜಂಟರು ಯಾ ಅವರ ತಾಬೇದಾರರು ಯಿವರೊಂದಿಗೆ ಯಾವ ವಿಧದಲ್ಲಾಗಲಿ ಯಾ ಯಾವ ಗತಿಗಳಲ್ಲಿಯಾಗಲಿ ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಸಂಬಂಧವುಳ್ಳ ಯಾ ಅವರಿಗೆ ಯಾವ ರುಸುಮನ್ನಾದರೂ ಕೊಡುವಂಥಾ ಯಾ ಅವರಿಂದ ಪಡೆಯುವಂಥಾ ಯಾವ ಮನುಷ್ಯನೇ ಆಗಲಿ ಗಾಂಜಾ ದುಕಾನಿಗೆ ಬಿಕರೀದಾರನಾಗಿ ಲೈಸೆನ್ಸ್ ಪಡೆಯಕೂಡದು ಯಾ ಲೈಸೆನ್ಸ್‌ದಾರನಾಗಿ ಮೊಕರರ್ ಮಾಡಲ್ಪಡಕೂಡದು.

(h.) ಅಮಲ್‌ದಾರರು, ಹೊಸದಾಗಿ ಯಿಡಲ್ಪಟ್ಟ ತಮಾಂ ದುರ್ಕಾಗಳಿಗೋಸ್ಕರ ಗಾಂಜಾ ಮಾರಾಟ ಮಾಡುವದಕ್ಕೆ ಪ್ರಥಮತಃ ಪಾಸ್ ಕೊಟ್ಟು ನಂತರ ಲೈಸೆನ್ಸಿಗೋಸ್ಕರ ಡೆಪ್ಯುಟಿ ಕಮ್ಮಿಷನರವರಿಗೆ ಜಾಹಿರ್ಮಾಡಿ ಕೊಳ್ಳತಕ್ಕದ್ದು.

(i.) ಅಮಲ್‌ದಾರರು, ಬಟ್ಟು ಮತ್ತು ಚಿಲ್ಲರೆ ಬಿಕರೀ ಬಗ್ಗ್ಯಾಗಿ ಯಿಡಲ್ಪಟ್ಟ ತಮಾಂ ದುರ್ಕಾಗಳ ವಂದು ತಖ್ತೆಯನ್ನೂ ತಯಾರ್ಮಾಡಿ ಅದರಲ್ಲಿ ದುರ್ಕಾಗಳ ನಂಬರ್, ಲೈಸೆನ್ಸ್‌ದಾರ ಮತ್ತು ಬಿಕರೀದಾರರ ಹೆಸರು ವಗೈರೇ ತಪಸೀಲ್ ಕಾಣಿಸಿ ಆ ಬಾಬತು ತಖ್ತೆಯನ್ನು 1887ನೇ ಇಸವಿ ಏಪ್ರೆಲ್ 15ರ ವಳಗಾಗಿ ಡೆಪ್ಯುಟಿ ಕಮ್ಮಿಷನರವರಿಗೆ ರವಾನಿಸತಕ್ಕದ್ದು. ಈ ಬಾಬತು ತಖ್ತೆಯ ವಂದು ಯಥಾ ನಕಲು ಅದೇ ತಾರೀಖು ವಳಗಾಗಿ ಹೆಡ್ ಸೂಪರ ವೈಜರವರಿಗೆ ರವಾನಿಸಲ್ಪಡಬೇಕು. ಸದರೀ ಉಭಯ ಮೇಲ್ಕಂಡ ಆಫೀಸರರುಗಳಿಗೂ, ಹೊಸದಾಗಿ ದುರ್ಕಾ ಇಡಲ್ಪಟ್ಟ ಸಂಗತಿಗಳಲ್ಲಿ ಅಥವಾ ಬಿಕರೀದಾರರ ಯಾ ಬಿಕರೀ ಸ್ಥಳಗಳ ವಿಷಯದಲ್ಲಿ ಅಮಲ್‌ದಾರರಿಂದ ಮಂಜೂರ್ ಮಾಡಲ್ಪಟ್ಟ ಬದಲಾವಣೆಗಳ ಬಗ್ಗೆ ಮಾಹೇವಾರಿ ಸಪ್ಲಿಮೆಂಟ್ ತಖ್ತೆಗಳು ಕಳುಹಿಸಲ್ಪಡತಕ್ಕದ್ದು.

VI. ಕಂಟ್ರಾಕ್ಟದಾರನು, ಗಾಂಜಾ ವ ಅದರ ತಯಾರೀ ಪದಾರ್ಥಗಳನ್ನ ಲೈಸೆನ್ಸ್ ಹೊಂದಿದ ಬಿಕರೀದಾರರಿಗ ಮಾತ್ರವೇ ವಿಕ್ರಯಿಸತಕ್ಕದ್ದು, ಮತ್ತು ಚಿಲ್ಲರೆ ಬಿಕರೀದಾರರೊಡನೆ ಯಾವ ವಿಧವಾಗಿಯೂ ಸಂಬಂಧ ವುಂಟಾಗಿರಕೂಡದು.

VII. ಮಾರಲ್ಪಡುವ ಗಾಂಜಾ ಮತ್ತು ಮಾಜಿಂ ಮತ್ತು ಇತರ ತಯಾರಿಗಳು ವಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಅದು ಕಪ್ಪಾಗಿಯಾಗಲಿ, ಹಳೇದಾಗಿಯಾಗಲಿ ಅಥವಾ ಅದರ ಅವುಷಧಗುಣ ಹೋದಂಥಾದ್ದಾಗಿಯಾಗಲಿ, ಇರಕೂಡದು; ಮತ್ತು ಚಿಲ್ಲರೇ ಬಿಕರೀದಾರರಿಗೆ ಕೊಡಲ್ಪಡುವದಕ್ಕೆ ಮುಂಚಿತವಾಗಿ ದಂಟು ಮತ್ತು ಬೀಜಗಳು ತೆಗದುಹಾಕಲ್ಪಟ್ಟಿರಬೇಕು ಅಥವಾ ಚಿಲ್ಲರೆ ಬಿಕರೀದಾರರಿಂದ ವಾಪಸ್ ಮಾಡಲ್ಪಟ್ಟಾಗ ಅಂಥಾ ದಂಟು ಮತ್ತು ಬೀಜದ ತೂಕಕ್ಕೆ ಬದಲಾಗಿ ಬೆರಕೆ ಇಲ್ಲದಂಥಾ ವಳ್ಳೇ ಗಾಂಜಾ ಕೊಡಲ್ಪಡತಕ್ಕದ್ದು. ಪುಡಿಮಾಡಲ್ಪಟ್ಟ ಗಾಂಜಾ ಶೇಕಡಾ 5ರಂತೆ ಮಾತ್ರವೇ ಬಿಕರೀದಾರರಿಂದ ತೆಗದುಕೊಳ್ಳಲ್ಪಡತಕ್ಕದ್ದು. ಪುಡಿಮಾಡಲ್ಪಟ್ಟ ಅಂಥಾ ಗಾಂಜಾದಿಂದ ಚಿಲ್ಲರೆ ಬಿಕರೀದಾರನು ಹಲ್ವಾ ತಯಾರ್ಮಾಡಬ-

ಹುದು. ಕಂಟ್ರಾಕ್ಟದಾರನು ಯಾವಾಗ್ಯೂ ಪ್ರತಿ ಡಿಪೋದಲ್ಲಿ ಒಂದು ತಿಂಗಳಿಗೆ ಸಾಕಾಗುವಷ್ಟು ತೇದಾದಿನ ಗಾಂಜಾವನ್ನೂ ಬೆಂಗಳೂರು ಡಿಸ್ಟಿಲರಿಯಲ್ಲಿ ಯ ಪ್ರಾವಿನ್ಷಿಯಲ್ ಹೆಡ್ ಕ್ವಾರ್ಟರ್ ಡಿಪೋದಲ್ಲಿ (ಡಿಪೋಗಳಲ್ಲಿರುಕ್ಕ ದಾಸ್ತಾ ಅಲ್ಲದೆ) ಯರಡು ತಿಂಗಳಿಗೆ ಸಾಕಾಗುವಷ್ಟು ತೇದಾದಿನ ಗಾಂಜಾವನ್ನೂ ದಾಸ್ತಾ ಯಿಟ್ಟಿರತಕ್ಕದ್ದು.

VIII. ಒಂದು ಡಿಸ್ಟ್ರಿಕ್ಟ ಡಿಪೋದಿಂದ ಮತ್ತೊಂದು ಡಿಸ್ಟ್ರಿಕ್ಟ ಡಿಪೋಗೆ ವರ್ಗ ಮಾಡಲ್ಪಟ್ಟ ಸಮಂ ಗಾಂಜಾ ಮತ್ತು ಅದರ ತಯಾರೀ ಪದಾರ್ಥಗಳಿಗೆ ಒಂದು "ರಪ್ತು ಪ್ಯಾಸ್" ಯಾನೆ ರಹದಾರಿ ಕೊಡಲ್ಪಡತಕ್ಕದ್ದು ಮತ್ತು ಒಂದೇ ಡಿಸ್ಟ್ರಿಕ್ಟಿನಲ್ಲಿ ಒಂದು ಡಿಪೋಯಿಂದ ಮತ್ತೊಂದು ಡಿಪೋಗೆ "ಕಂಟ್ರಾಕ್ಟದಾರನ ಪ್ಯಾಸಿನ" ಆಧಾರದ ಮೇಲೆ ಕಳುಹಿಸಲ್ಪಟ್ಟಾಗ ಸದರೀ ಉಭಯ ಪ್ಯಾಸ್‌ಗಳೂ ವಿಧಿಸಲ್ಪಟ್ಟ ನಮೂನೆಯಲ್ಲಿ ಯಿರತಕ್ಕವು, ಮತ್ತು ಅದರಲ್ಲಿ ಕಂಡ ಷರತ್ತುಗಳು ಉಲ್ಲಂಘಿಸಲ್ಪಡಕೂಡದು, ಮತ್ತು ಸದರೀ ಪ್ಯಾಸಿನ ನಂಬರು ವ ತಾರೀಖು ಸುದಾ ಡಿಪೋ ರಿಜಿಸ್ಟರ ಬುಕ್ಕಿನಲ್ಲಿ ಜಮಾ ಬರೆಯಲ್ಪಡುವ ಖತಾಯಿತಿಗೆ ಮುದರಾಗಿ ದಾಖಲೇ ತೋರಿಸಲ್ಪಡತಕ್ಕದ್ದು. ಡಿಪೋ ಯಿಂದ ಚಿಲ್ಲರೇ ಬಿಕರೀದಾರರಿಗೆ ಪುರೋಖ್ತು ಮಾಡಲ್ಪಡುವ ಗಾಂಜಾ ವ ಅದರ ತಯಾರಿಗಳಿಗೆ, ವಿಧಿಸಲ್ಪಟ್ಟ ನಮೂನೆಯಲ್ಲಿ ಒಂದು ಪ್ಯಾಸ್ ತಯಾರಾಗಲ್ಪಟ್ಟು ಕಂಟ್ರಾಕ್ಟದಾರರಿಂದಾಗಲೀ ಅವರಿಂದ ಅಧಿಕಾರ ಕೊಡಲ್ಪಟ್ಟ ಅವರ ಏಜಂಟರಿಂದಾಗಲೀ ರುಜುಮಾಡಲ್ಪಟ್ಟು ಕೊಡಲ್ಪಡತಕ್ಕದ್ದು. ಮತ್ತು ಅವುಗಳಲ್ಲಿ ನಮೂದಾದ ಷರತುಗಳು ಉಲ್ಲಂಘಿಸಲ್ಪಡಕೂಡದು ಸಂಸ್ಥಾನಾ ಮುಳೆ 24 ತೊಲೆಗಳುಳ್ಳ ಒಂದು ಶೇರಿಗೆ ವಟ್ಟಿಟ್ಟ ವ ಚಿಲ್ಲರೆ ಬಿಕರೀ ಖರೀದೀ ದರವು ಇದರಡಿ ಕಂಡ ಪ್ರಕಾರ ಗೊತ್ತು ಮಾಡಲ್ಪಟ್ಟಿರುತ್ತೆ:—

	ವಟ್ಟು ಬಿಕರಿ.	ಚಿಲ್ಲರೆ ಬಿಕರಿ.
	ರೂ.—ಆ.—ಪೈ.	ರೂ.—ಆ.—ಪೈ.
ಗಾಂಜಾ.	0—10—0	0—13—0
ಮಾಜಿಂ ಯಾ ಗಾಂಜಾದಿಂದ ತಯಾರ್ಮಾಡಲ್ಪಟ್ಟ ಯಿತರ ಯಾವದಾದರೂ ಪದಾರ್ಥ. (ಹಲ್ವಾ ವಿನಾ)	0— 4—0	0—6—0

IX. ಡೆಪ್ಯುಟೀ ಕಮಿಷನರವರು, ಮಿಲಿಟೇರೀ ಅಧಿಕಾರಸ್ಥರ ಅಥವಾ ಮಾಜಿಸ್ಟ್ರೇಟರ ಅಪೇಕ್ಷೆ ಮೇರಿಗೆ ಯಾವ ದುಕಾನನ್ನಾಗಲಿ ಯಾ ದುಕಾನುಗಳನ್ನಾಗಲಿ ಕಾಯಂ ಆಗಿ ಯಾದರೂ ಅಥವಾ ತತ್ಕಾಲಕ್ಕೆ ಆದರೂ ಮುಚ್ಚಿಸಲು ಅಧಿಕಾರವುಳ್ಳವರಾಗಿರುತ್ತಾರೆ, ಮತ್ತು ಆಬಗ್ಯೆ ಕಂಟ್ರಾಕ್ಟದಾರನಿಗೆ ಯಾವ ಈಡು ಮೊಬಲಗಿಗೂ ಹಕ್ಕು ಇರುವದಿಲ್ಲವು. ಪರಂತು, ಹಾಗೆ ಕಮ್ಮಿ ಮಾಡಲ್ಪಟ್ಟ ದುಕಾನಗಳ ಸಂಖ್ಯೆಯು, ಜನಗಳ ಅಪೇಕ್ಷೆಗೆ ಆವಶ್ಯಕವಿದ್ದಲ್ಲಿ, ಯಿತರ ಅಜೂ ಬಾಜು ಷಹರ್ ಯಾ ಗ್ರಾಮಗಳಲ್ಲಿ ಮರಳೀ ಸ್ಥಾಪಿಸಲ್ಪಡಬಹುದು. ಆಯಾ ಡಿಸ್ಟ್ರಿಕ್ಟಿಗೋಸ್ಕರ 1886—87ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟ ಸಂಖ್ಯೆಯೊಳಗಾಗಿ ಯಷ್ಟು ದುಕಾನಗಳನ್ನಾದರೂ ಮುಚ್ಚತಕ್ಕದ್ದು ಸಂಸ್ಥಾನದ ಆವಶ್ಯಕತೆಗೆ ಜರೂರಾಗಿ ಕಾಣಬಂದರೆ, ಹಾಗೆ ಮುಚ್ಚಲ್ಪಟ್ಟ ದುಕಾನಗಳಬಗ್ಯೆ ಕಂಟ್ರಾಕ್ಟದಾರನಿಗೆ ಗೌರ್ನಮೆಂಟಿನವರ ಮಂಜೂರಾತಿ ಸಹ ಸದರೀ ಸಾಲಿನಲ್ಲಿ ಲೈಸೆನ್ಸು ಕೊಡಲ್ಪಟ್ಟ ದುಕಾನಗಳಿಗೋಸ್ಕರ ಪಾವತಿಮಾಡಲ್ಪಡುವ ಕರಾರಾದ ಮೊಬಲಗಿನಮೇಲೆ ದಾಮಾಷಾಯಿ ಪ್ರಕಾರ ಈಡು ಮೊಬಲಗು ಕೊಡಲ್ಪಡತಕ್ಕದ್ದು. (ಹಾಂಗೆ ಮುಚ್ಚುವದಕ್ಕೋಸ್ಕರ ನ್ಯಾಯವಾದ ಮತ್ತು ದೃಢವಾದ ಕಾರಣಗಳಿದ್ದು ಅಂಥಾ ಕಾರಣಗಳು ಬರಹಮೂಲಕ ರಿಕಾರ್ಡು ಮಾಡಲ್ಪಡಬೇಕಾಗಿರುತ್ತೆ. ಪರಂತು ಹಾಗೆ ದುಕಾನಗಳ ಸಂಖ್ಯೆಯಲ್ಲಿ ಕಮ್ಮಿ ಮಾಡಿದ್ದರಿಂದ ಕಂಟ್ರಾಕ್ಟದಾರನಿಗೆ ಲುಕ್ಸಾನು ಆಯಿತೆಂದು ರುಜುವಾದರೇನೇ ಶಿವಾಯಿ ಅನ್ಯಥಾ ಅಂಥಾ ಈಡು ಮೊಬಲಗು ಕೊಡತಕ್ಕದಲ್ಲವು.

X. ಗಾಂಜಾ ಚಿಲ್ಲರೆ ಮಾರಾಟದ ದಗ್ಯೆ ಕೊಡಲ್ಪಡುವ ಲೈಸೆನ್ಸ್‌ಗಳಿಗೆ ಬೆಂಗಳೂರು ವ ಮೈಸೂರು ಷಹರುಗಳಲ್ಲಿ ಶಿವಾಯಿ ಫೀಜು ಏನೂ ವಸೂಲ್ಮಾಡತಕ್ಕದ್ದಲ್ಲವು. ಸದರೀ ಸ್ಥಳದಲ್ಲಿ ಅಂದರೆ ಬೆಂಗಳೂರು ಷಹರಿನಲ್ಲಿ ಪ್ರತಿ ಲೈಸೆನ್ಸಿಗೂ ಮಾಹೆ 1ಕ್ಕೆ 3 ರೂಪಾಯಿ ಮೇರಿಗೂ ಮೈಸೂರು ಷಹರಿನಲ್ಲಿ 1 ರೂಪಾಯಿ ಮೇರಿಗೂ ಫೀಜು ವಸೂಲು ಮಾಡತಕ್ಕದ್ದು. ಗಾಂಜಾ ಪುರೋಖ್ತು ಬಗ್ಯೆ ಲೈಸೆನ್ಸ್ ಪಡೆದಿರುವಂಥಾವರಿಗೆ ಅಫೀಂ ಮಾರಾಟಬಗ್ಯೆ ಲೈಸೆನ್ಸನ್ನೂ ಬದಲಾಗಿ ಅಫೀಂ ಮಾರಾಟದಬಗ್ಯೆ ಲೈಸೆನ್ಸ್ ಪಡೆದಿರುವಂಥಾವರಿಗೆ ಗಾಂಜಾ ಪುರೋಖ್ತು ಮಾಡುವಾಗ್ಯೆ ಲೈಸೆನ್ಸನ್ನೂ ಧಾರಾಳವಾಗಿ ಕೊಡತಕ್ಕದ್ದು.

XI. ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷ್ನರವರು, ಮೈಸೂರು ದೇಶದ ಆಚೆ ಯಿರತಕ್ಕ ಸ್ಥಳಗಳಿಂದ ಕಂಟ್ರಾಕ್ಟುದಾರನು ಗಾಂಜಾವನ್ನ ಆಮದ್ ಮಾಡತಕ್ಕಬಗ್ಯೆ ಅದು ಯಲ್ಲಿಂದ ಆಮದ್ ಮಾಡಲ್ಪಡುತ್ತೋ ಅಂಥಾ ಸ್ಥಳದ ಡಿಸ್ಟ್ರಿಕ್ಟು ಅಧಿಕಾರಿಗಳಿಗೆ ವರ್ತಮಾನ ತಿಳಿಸಿ "ಆಮದ್ ಪ್ಯಾಸ್" ಗಳನ್ನು ಕೊಡಬಹುದು. ಮತ್ತು ಹಾಂಗೆ ಕೊಡಲ್ಪಟ್ಟ ಪ್ಯಾಸ್‌ಗಳು ದೇಖೀಲ್ ಅಂಥಾ ಮದ್ದತ್ ಪದಾರ್ಥಗಳು ಅವು ಉಪಯೋಗಿಸಲ್ಪಡುವದಕ್ಕೆ ಅಥವಾ ಯಿತರ ಷಿಕ್ಕೀ ಡಿಪೋಗಳಿಗೆ ಸಾಗಿಸಲ್ಪಡುವದಕ್ಕೆ ಮುಂಚಿತವಾಗಿ ಬೆಂಗಳೂರಲ್ಲಿಯ ಗವರ್ನಮೆಂಟ್ ಸೆಂಟ್ರಲ್ ಡಿಸ್ಟಿಲೇರಿಯ ಹೆಡ್‌ಕ್ವಾರ್ಟರ್ ಡಿಪೋ ಲೆಖ್ಖಕ್ಕೆ ಪ್ರಥಮತಃ ದಾಖಲ್‌ಮಾಡಲ್ಪಡತಕ್ಕದ್ದು. ಲೆಖ್ಖದಲ್ಲಿ ಗಲಾಟೆ ಸಂಭವಿಸುವದನ್ನ ಅಡ್ಡೀ ಮಾಡುವದಕ್ಕೋಸ್ಕರ ವಂದು ಡಿಸ್ಟ್ರಿಕ್ಟಿಗೆ ರವಾನಿಸಲ್ಪಟ್ಟ ಸರದೀ ಮದ್ದತ್ ಪದಾರ್ಥದ ದಾಸ್ತಾನು ಮತ್ತೊಂದು ಡಿಸ್ಟ್ರಿಕ್ಟಿಗೆ ಸಾಗಿಸಲ್ಪಡಕೂಡದು; ವಂದು ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ ಡಿಪೋಯಿಂದ ಅದೇ ಡಿಸ್ಟ್ರಿಕ್ಟಿನ ವಂದು ತಾಲ್ಲೂಕು ಡಿಪೋವಿಗೆ ಸಾಗಿಸಲ್ಪಡಬೇಕಾದಾಗ, ಅಸಿಸ್ಟೆಂ ಸೂಪರ್‌ವೈಜರು ಯಾ ರೇಂಜಿನ ಅಥವಾ ಡಿಸ್ಟ್ರಿಕ್ಟಿನ ರೇಂಜರು, ಸದರೀ ಮದ್ದತ್ ಪದಾರ್ಥಗಳು ಸಾಗಿಸಲ್ಪಡುವದಕ್ಕೆ ಮುಂಚಿತವಾಗಿ ವಜನೀ ಮಾಡಿ "ಕಂಟ್ರಾಕ್ಟರ ಪ್ಯಾಸಿನ" ಕೆಳಗೆ ಸರಟಿಫಿಕೇಟಿಯಾನೆ ದೃಢಪಡಿಸಿ ರುಜುಮಾಡತಕ್ಕದ್ದು. ತಮಾಂ ಪ್ಯಾಸ್‌ಗಳಲ್ಲಿಯೂ ವಿಧಿಸಿರತಕ್ಕ ಷರತ್ತುಗಳು ಸಂಬಂಧಪಟ್ಟ ತಮಾಂ ಜನಗಳಿಂದಲೂ ಖಂಡಿತವಾಗಿ ಆಚರಿಸಲ್ಪಡತಕ್ಕದ್ದು.

XII. ಕಂಟ್ರಾಕ್ಟುದಾರನು, ಪಟ್ಟು ಮಾರಾಟದ ಕೋಠಿಗಳಲ್ಲಿ ನಡೆದ ಪುರೋಖ್ತು ಬಗ್ಯೆ ಸಾಚಾ ಮತ್ತು ಕರಾರ್‌ವಾಕಾ ಆದ ಲೆಖ್ಖಗಳನ್ನು ದ್ವಿಪ್ರತಿಯಾಗಿ ತಯಾರ್‌ಮಾಡಿ ಮಾಹೇಯಾನಾ ಹೆಡ್‌ಸೂಪರ್‌ವೈಜರವರದ್ವಾರಾ ಡೆಪ್ಯುಟಿ ಕಮ್ಮಿಷನರವರಿಗೆ ರವಾನಿಸತಕ್ಕದ್ದು; ಮತ್ತು ಅಬ್‌ಕಾರಿ ಆಫೀಸರುಗಳಿಗೆ ಸರ್ವಕಾಲದಲ್ಲಿಯೂ ಕಂಟ್ರಾಕ್ಟು ದಾರರಿಂದ ಇಡಲ್ಪಟ್ಟ ಲೆಖ್ಖಗಳನ್ನು ತನಖೆ ನೋಡುವಬಗ್ಯೆ ಧಾರಾಳವಾಗಿ ಅವಕಾಶ ಕೊಡಲ್ಪಡತಕ್ಕದ್ದು; ಮತ್ತು ಸದರೀ ಲೆಕ್ಕಗಳು 1885ನೇ ಇಸವಿ ಫೆಬ್ರುವರೀ 27ನೇ ಮರ್ಸ್ಥಂ 229ನೇ ನಂಬರ್ ಇಸಿಹಾರ್ ನಾಮೆಯಲ್ಲಿ ಗವರ್ನಮೆಂಟಿನಿಂದ ವಿಧಿಸೋಣಾದ ನಮೂನೆಯಲ್ಲಿ ಸಾಚಾ ವ ಕರಾರ್‌ವಾಕಾಗಿ ಇಡಲ್ಪಡತಕ್ಕದ್ದು. ಮತ್ತು ಈ ಕಂಟ್ರಾಕ್ಟಿನ ಉದ್ದೇಶಗಳಿಗಾಗಿ, ಕಂಟ್ರಾಕ್ಟುದಾರರು, ಮದ್ದತ್ ಪದಾರ್ಥಗಳ ಖರೀದಿ, ಅದನ್ನ ರೈಲ್ ಮಾರ್ಗವಾಗಿಯೂ ಭಂಡೀ ಮೂಕವಾಗ್ಗಿಯೂ ಸಾಗಿಸುವ ಬಗ್ಯೆ ತಗಲಿದ ಲಾಗವಡು, ಯಿತರ ಖರ್ಚುಗಳು ಯಾವದಾದರೂ ಇದ್ದರೆ ಅದೂ ಮತ್ತು ಮದ್ದತ್ ಪದಾರ್ಥಗಳ ಪಟ್ಟು ಲಾಗವಡು ಮತ್ತು ಮಣ ಒಕ್ಕೆ ತಗಲಿದಖರ್ಚು ಯಿವುಗಳನ್ನು ತಪಸೀಲಾಗಿ ತೋರಿಸುವಂತೆ ಒಂದು ಲೆಖ್ಖ ಯಿಡತಕ್ಕದ್ದು. ಸ್ವಾತಂತ್ರ್ಯ ಮಾಡುವಬಗ್ಯೆ ಯಾ ಆಮದ್‌ಮಾಡುವ ಬಗ್ಯೆ ಕೊಡಲ್ಪಟ್ಟ ಪ್ಯಾಸಿನ ನಂಬರು ಮತ್ತು ತಾರೀಖು ಇವುಗಳನ್ನು ಷರಾ ಕಾಣಿಕೆ ಪ್ರತಿ ಖತಾಯಿತಿಗೂ ವರಿಜನಾಲ್ ರೀತಿ ವಗೈರೆಗಳಿಂದೆ ದೃಢಪಡಿಸತಕ್ಕದ್ದಲ್ಲದೆ ಕ್ರಮವಾಗಿ ನಂಬರ್ ಹಾಕತಕ್ಕದ್ದು. ಸಿಂಬ್ಬಂದಿ, ಕಂಟಿಜಂಟ್ ವಗೈರೆ ಖರ್ಚುಗಳ ತಪಸೀಲ್ ಮಾಹೇವಾರಿ ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಕ್ಕದ ವಂದು ನಕಲು ಹೆಡ್ ಸೂಪರ್ ವೈಜರವರಿಗೆ ಮಾಹೇವಾರ್ ಒಪ್ಪಿಸಲ್ಪಡತಕ್ಕದ್ದಲ್ಲದೆ ಒರಿಜನಲ್ ಲೆಕ್ಕಗಳು ಪಾಚಕರ ಸಮೇತ ಬೆಂಗಳೂರು ಡಿಸ್ಟಿಲೇರಿಯಲ್ಲಿ ಯ ಹೆಡ್ ಕ್ವಾರ್ಟರ ಡಿಪೋದಲ್ಲಿ ಇರತಕ್ಕವು.

XIII. ಪಟ್ಟು ಮಾರಾಟದ ಕೋಠಿಗಳಲ್ಲಿ ಅಕ್ರಮವಾದ ನಡತೆ ಮತ್ತು ಅಕ್ರಮವಾದ ನಡವಳಿಕೆಗಳ್ಯಾವದೂ ನಡಿಸಲು ಕಂಟ್ರಾಕ್ಟುದಾರನ ಮುತಲೀಕರಾಗಲಿ ನಾಕರಮಾನೇರಾಗಲಿ ಅವಕಾಶ ಕೊಡತಕ್ಕದ್ದಲ್ಲನು. ಅವರಿಗೆ ಇಜಾರೇದಾರನ ಖರ್ಚಿನಿಂದ ಕರಾರುವಾಕ ತ್ರಾಸುಗಳು ಮತ್ತು ಸರಕಾರದ ಸ್ಟಾಂಪು ಹ್ಯಾಕಿರುವ ತೂಕದ ಬಟ್ಟುಗಳು ಸಹ ಕೊಡಲ್ಪಡುವದು, ಮತ್ತು ಇದಲ್ಲದೆ ಅಂಥಾ ದರೋಬಸ್ತು ನಾಕರ ಮಾನೇರುಗಳೂ, ಕಂಟ್ರಾಕ್ಟುದಾರನು ಒಡಂಬಡಿಕೆಗೆ ರುಜುಮಾಡಿದ ತರುವಾಯ 15 ದಿವಸಗಳೊಳಗಾಗಿ, ಗವರ್ನಮೆಂಟನವರೊಂದಿಗೆ ಕಂಟ್ರಾಕ್ಟುದಾರನು ಮಾಡಿಕೊಂಡಿರುವ ಷರತ್ತುಗಳಿಗೂ ಮತ್ತು ಜಾರಿಯಲ್ಲಿಯಿರುವ ಕಾನೂನುಗಳ ವ ನಿಬಂಧನೆಗಳ ಉದ್ದೇಶ್ಯಗಳಿಗೂ ಅನುಸಾರವಾಗಿ ಅಕ್ಷರಶಃ ನಡಮುಕೊಳ್ಳುವ ಬಗ್ಯೆ ಕಂಟ್ರಾಕ್ಟುದಾರನೊಂದಿಗೆ ಕರಾರುಮಾಡಿಕೊಳ್ಳತಕ್ಕದ್ದು. ಮತ್ತು ಅಂಥಾ ವಡಂಬಡಿಕೆಗಳು ತಪ್ಪದೆ ಆತಿಂಗಳ 20ನೇ ತಾರೀಖಿನೊಳಗಾಗಿ ಆಯಾಡಿಸ್ಟ್ರಿಕ್ಟು ಡೆಪ್ಯುಟಿಕಮ್ಮಿಷನರವರ ಆಫೀಸಿನಲ್ಲಿ ಅಮಾನತ್ ಇಡಲ್ಪಡತಕ್ಕದ್ದು. ಮತ್ತು ಅವರು ಮದ್ದತ್ ಸಾಮಾನುಗಳನ್ನು ಮಾರುವಬಗ್ಯೆ ನೇಮಿಸಲ್ಪಟ್ಟರೆ, ಬಟ್ಟು ಬಿಕರೀ ಲೈಸೆನ್ಸ್‌ಗಳನ್ನು ಪಡೆಯತಕ್ಕದ್ದು, ಅಥವಾ ಕಂಟ್ರಾಕ್ಟುದಾರನಿಗೋಸ್ಕರ ಪರಮಿಟ್‌ಗಳಿಗೆ ರುಜು ಮಾಡತಕ್ಕದ್ದು. ಷರಾಬು ಇಜಾರೇದಾರ್ರುಗಳ ಅಪ್ಪಣೇ ಅನುಸರಿಸಿ ತಮಾಂ ಷರಾಬು ಒಟ್ಟು ಬಿಕರೀದಾರರುಗಳೂ ಗಾಂಜಾ ಪಟ್ಟುಬಿಕರೀದಾರರಾಗಿ ನೋಕರರ ನಾಡಲ್ಪಟ್ಟು, ಅಂಥಾ ಮಾರಾಟದಬಗ್ಯೆ ಗವರ್ನಮೆಂಟ್ ಡಿಸ್ಟಿಲೇರಿ ಹೆಡ್ ಸೂಪರ್ ವೈಜರವರಿಂದ ಠರಾಯಿಸಲ್ಪಡುವ ಮೇರಿಗೆ ಅವರಿಂದ ಪುರೋಖ್ತು ಮಾಡಲ್ಪಟ್ಟ ಪ್ರತಿ ವಂದುಸೇರಿಗೂ 1ಆಣೆಗೆ ಜಾಸ್ತಿಯಾಗದಂತೆ ಕಮ್ಮಿಷನ್ ಪಾವತೀಮಾಡಲ್ಪಡತಕ್ಕದ್ದು. ಹೆಡ್‌ಕ್ವಾರಟರ್ ಡಿಪೋದಲ್ಲಿಯೂ ತಮಾಂ

ವಟ್ಟ್ಯಬಿಕರೀ ಡಿಪೋಗಳಲ್ಲಿಯೂ 1887ನೇ ಇಸವಿ ಎಪ್ರೆಲ್ 1ನೇ ತಾರೀಖಿನಲ್ಲಿ ಹಾಜರಿರಬಹುದಾದ ತಮಾಂ ಗಾಂಜಾ ವ ಮಾಜಿಂ ಸುದಾ ಅವು ವಳ್ಳೇ ಗುಣವುಳ್ಳದ್ದಾಗಿಯೂ ಉಪಯೋಗಾರ್ಹವಾಗಿಯೂ ಇದ್ದರೆ ಅದನ್ನು ಹೊಸ ಕಂಟ್ರಾಕ್ಟು ದಾರನಿಗೆ ಒಪ್ಪಿಸತಕ್ಕದ್ದು, ಆತನು ಅವುಗಳನ್ನು ಈ ಇಸ್ತಿಹಾರನಾಮೆಯ XIIನೇ ಷರತ್ತನುಸರಿಸಿ ಇಡಲ್ಪಟ್ಟ ಲೆಕ್ಕ ಗಳಲ್ಲಿ ಧಾಖಲಾದ ದರಗಳ ಮೇಲೆ ಸರಾಸರೀ ಗೊತ್ತಾಗುವ ಖರೀದಿ ಮೊಬಲಗು ಮತ್ತು ಹಾಗೆ ಒಪ್ಪಿಸಲ್ಪಟ್ಟ ಮದ್ದತ ಪದಾರ್ಥಗಳ ಕಿಂಮತ್ತಿನ ಮೇಲೆ ಸಾಲೀಯಾನಾ ಶೇಕಡಾ 12ರಂತೆ ಆಗುವ ಬಾಕಿ ಮೊಬಲಗು ಸುದಾ ಪಾವತೀಮಾಡತಕ್ಕದ್ದು. ಹೆಡ್ ಕ್ವಾರಟರ್ ಡಿಪೋದಲ್ಲಿಯೂ ಇತರ ಡಿಪೋಗಳಲ್ಲಿಯೂ ಇರತಕ್ಕ ತಮಾಂ ತಾಸುಗಳನ್ನೂ ಬಟ್ಟಿಗಳನ್ನೂ ಅವು, ಕರಾರ್‌ವಾಕ ಆಗಿಇದ್ದು ವಳ್ಳೇ ಸ್ಥಿತಿಯಲ್ಲಿ ಇದ್ದರೆ, ಹಳೇ ಕಂಟ್ರಾಕ್ಟುದಾರನು ಡೆಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡುವ ಖರೀದಿ ಮೊಬಲಗಿಗೆ ಹೊಸ ಕಂಟ್ರಾಕ್ಟುದಾರನಿಗೆ ಒಪ್ಪಿಸತಕ್ಕದ್ದು ಮತ್ತು ಆತನು ಅವುಗಳನ್ನ ತೆಗದು ಕೊಳ್ಳತಕ್ಕದ್ದು.

XIV. ಕಂಟ್ರಾಕ್ಟುದಾರನು, ಗವರ್ರ್ನಮೆಂಟಿನವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವದಾದರೂ ಜಾಸ್ತಿ ನಿಬಂಧನೆಗಳಿಗೆ ಅನುಗುಣವಾಗಿ ನಡಿಯುವದಕ್ಕೂ ಮತ್ತು ಮುಚ್ಚಳಿಕೆಯಲ್ಲಿ ನಮೂದು ಮಾಡಲ್ಪಟ್ಟ್ಯ 1885ನೇ ಇಸವಿ ಫಿಬ್ರುವರೀ 27ನೇ ಮರ್ಕುಂ 229ನೇ ನಂಬರ ಇಸ್ತಿಹಾರ ನಾಮೆಯಲ್ಲಿ ಗವರ್ರ್ನಮೆಂಟಿನವರಿಂದ ಫಾಯಿಷ್ ಮಾಡಲ್ಪಟ್ಟ ನಿಬಂಧನೆ ಗಳಿಗೂ, ಮುಖ್ಯವಾಗಿ ವಟ್ಟು ಬಿಕರೀ ಲೈಸೆನ್ಸ್‌ರೂಲ್ಸಿನಲ್ಲಿ ಅಡಗಿರುವ ನಿಬಂಧನೆಗಳಿಗೂ ಲೆಕ್ಕಗಳ ತಯಾರೀ ವ ಸ್ತಳಾಂ ತರ ಪಡಿಸತಕ್ಕ ಮತ್ತು ಆಮದ್ ಮಾಡತಕ್ಕ ಪ್ಯಾಸುಗಳು ಪಡೆಯುವಬಗ್ಯೆ ಮತ್ತು ತಂಬಂದಲೇ ಪ್ಯಾಸುಗಳನ್ನು ಕೊ ಡುವ ಬಗ್ಯೆ ಮತ್ತು ಅದರಲ್ಲಿ ನಮೂದಾದ ಇತರ ವಿಷಯಗಳನ್ನು ಕುರಿತ ನಿಬಂಧನೆಗ ಗೂ ಅನುಸರಿಸಿ ನಡಿಯುವ ದಕ್ಕೂ ಬದ್ಧರಾಗಿರತಕ್ಕದ್ದು. ಮತ್ತು ಸದರೀ ರೂಲ್ಸಗಳ ನಕಲ್‌ಗಳು ಡಿಸ್ಟ್ರಿಕ್ಟು ಆಫೀಸಿನಲ್ಲಿ ಬೆಳಿಗ್ಯೆ 11 ಘಂಟೇ ಲಾ ಗಾಯತು 5 ಘಂಟೆ ವರಿಗೂ ಪ್ರತಿ ದಿವಸವೂ ನೋಡಲ್ಪಡಬಹುದು. ಈ ಇಜಾರೆಗೆ ಸಂಬಂಧಪಟ್ಟ ಇತರ ತಪಸೀಲ್‌ಗಳು ಸದರೀ ಆಫೀಸಿನಲ್ಲಾಗಲೀ ಬೆಂಗಳೂರಲ್ಲಿ ಯ ಗವರ್ರ್ನಮೆಂಟ್ ಡಿಸ್ಟಿಲೇರಿ ಹೆಡ್ ಸೂಪರವೈಜರರಲ್ಲ್ಯಾಗಲಿ ದೊರಿಯುವವು.

XV. ಕಂಟ್ರಾಕ್ಟುದಾರನು, ಪರಬಾಸ್ತು ಮಾಡಿ ಅಮಲ್‌ದಾರ್‍ರಿಂದ ಕೊಡಲ್ಪಡುವ ಗವರ್ರ್ನಮೆಂಟ್ ಪಟ್ಟೆಯನ್ನು ಪಡೆದು ಗಾಂಜಾ ವನ್ನು ಬೆಳೆಯಬಹುದು ಮತ್ತು ಸದರೀ ಪಟ್ಟೆಯಲ್ಲಿ ಕಂಡ ಷರತ್ತುಗಳು ಖಂಡಿತವಾಗಿ ಆಚರಿಸಲ್ಪಡತಕ್ಕದ್ದು. ಕಂಟ್ರಾ ಕ್ಟುದಾರನಿಂದಾಗಲೀ ಸಂಸ್ಥಾನಾಮುಳೆ ಮತ್ತ್ಯಾರಿಂದಲಾಗಲೀ ಅನ್ಯಥಾ ಗಾಂಜಾ ಸಾಗುವಳಿ ಮಾಡಲ್ಪಡುವಣವು ಅಡ್ಡೀಮಾ ಡಲ್ಪಟ್ಟು ಮತ್ತು ಈ ದಳೆಯಿಂದ ನಿಷೇಧಿಸಲ್ಪಟ್ಟಿರುತ್ತೆ.

XVI. ಮೇಲಿಕಂಡ ಷರತ್ತುಗಳ ಉಲ್ಲಂಘನೆಗಾಗಿ ಡೆಪ್ಯುಟಿ ಕಮ್ಮಿಷನರವರ ಯುಖ್ತ್ಯಾರಿಮೇಲೆ ಹಾಕಲ್ಪಡುವಂಥಾ 500 ರೂ ಪಾಯಿಗೆ ಜಾಸ್ತೀಯಾಗದ ವಂದು ಜುರ್ಮಾನೆಯನ್ನು ಕೊಡಲಿಕ್ಕೂ, ಮತ್ತು ಅವರು ಅವಶ್ಯಕವೆಂದು ಭಾವಿಸುವ ಪಕ್ಷ ದಲ್ಲಿ ಗವರ್ರ್ನಮೆಂಟನವರ ಮಂಜೂರಾತಿನೀ ಅವರ ಕಂಟ್ರಾಕ್ಟು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡಲಿಕ್ಕೂ ಮತ್ತು ಅವು ಗಳ ಮತ್ತು ಗವರ್ರ್ನಮೆಂಟಿನವರಿಂದ ಮಾಡಲ್ಪಟ್ಟ ನಿಬಂಧನೆಗಳ ಉಲ್ಲಂಘನೇ ವಿಷಯದಲ್ಲಿ ಜಾರೀಯಲ್ಲಿ ಇರುವ ಕಾನೂ ನುಗಳಲ್ಲಿ ನಿಯಮಿಸಲ್ಪಟ್ಟ ಅಂಥಾ ಜಾಸ್ತಿ ದಂಡನೆಗಳಿಗೂ ಕಂಟ್ರಾಕ್ಟುದಾರರು ಒಳಪಟ್ಟಿರತಕ್ಕದ್ದು.

9. 1885—86ನೇ ಇಸವಿಯಲ್ಲಿಯೂ ಮತ್ತು ಚಾಲತಿ ಸಾಲಿನ 6 ತಿಂಗಳುಗಳಲ್ಲೂ ಬಿಕರೀ ಮಾಡಲ್ಪಟ್ಟ ಗಾಂಜಾ ತೇದಾ ದು ಮತ್ತು ಕೀಮತು * ಮತ್ತು ಒಡಂಬಡಿಕೆ ಮಾಡಿಕ್ಕೊಂಡ ಕಮ್ಮಿ ಮೊಬಲಗಿಗಿಂತಲೂ ಜಾಸ್ತಿಯಾಗಿ ನಡೆದ ಜಾಸ್ತಿವುರೋಖ್ತು ಗಳೂ ಮತ್ತು 1886—87ನೇ ಸಾಲಿಗೆ ಸರಕಾರಕ್ಕೆ ಸಲ್ಲಬೇಕಾದ ಒಡಂಬಟ್ಟ ಕಮ್ಮಿಮೊಬಲಗೂಸುದಾ ಇದರಡೀ ಕಾಣಿಸಿರುತ್ತೆ :—

1885—86.	ಗಾಂಜಾ.	ತೇದಾದು.	ಸೇ.	6,245
			ಮ.	4
		ಕಿಮ್ಮತು.	ರೂ.	10,153
			ಅ.	3
			ಪೈ.	8
	ಅಫೀಂ.	ತೇದಾದು.	ಸೇ.	1,534
			ಮ.	20
		ಕಿಮ್ಮತು.	ರೂ.	383
			ಅ.	11
			ಪೈ.	4
	1885—86ನೇ ಸಾಲಿಗೆ ವಟ್ಟು ಕಿಮ್ಮತು.		ರೂ.	10,536
			ಅ.	15
			ಪೈ.	0
	1885—86ನೇ ಸಾಲಿಗೆ ಒಪ್ಪಿಕೊಂಡ ಕಮ್ಮಿಮೊಬಲಗು ಯಾ ಇಜಾರೇ ಮೊಬಲಗು.		ರೂ.	8,375
			ಅ.	..
			ಪೈ.	0
	ಜಾಸ್ತಿ ಪುರೋಖ್ತುಗಳು.		ರೂ.	2,161
			ಅ.	15
			ಪೈ.	0
1886-87ನೇ ಸಾಲಿನ ಫಸ್ಲ ಮಾಹೆಗೆ ಅಂದರೆ 1886ನೇ ಜುಲೈ ಮೊದಲುಗೊಂಡು ಸೆಪ್ಟೆಂಬರ ವರೆಗೆ.	ಗಾಂಜಾ.	ತೇದಾದು.	ಸೇ.	8,305
			ಮ.	0
		ಕಿಮ್ಮತು.	ರೂ.	5,190
			ಅ.	10
			ಪೈ.	0
	ಅಫೀಂ.	ತೇದಾದು.	ಸೇ.	644
			ಮ.	12
		ಕಿಮ್ಮತು.	ರೂ.	161
			ಅ.	2
			ಪೈ.	0
	1886—87ನೇ ಸಾಲಿನ ಫಸ್ಲ ಮಾಹೆಗೆ ವಟ್ಟು ಕಿಮ್ಮತು.		ರೂ.	5,351
			ಅ.	12
			ಪೈ.	0
	1886—87ನೇ ಸಾಲಿಗೆ ಲೋಕಲ್ ಸೆಸ್ ದೇಖಿಲ್ ಒಪ್ಪಿಕೊಂಡ ಕಮ್ಮಿಮೊಬಲಗು.		ರೂ.	5,312
			ಅ.	8
			ಪೈ.	0
	1886—87ನೇ ಸಾಲಿನ ಫಸ್ಲ ಮಾಹೆಗೆ ಜಾಸ್ತೀ ಪುರೋಖ್ತುಗಳು.		ರೂ.	2,695
			ಅ.	8
			ಪೈ.	0
1886—87ರಲ್ಲಿ ಇಡಲ್ಪಟ್ಟ ಡಿಪೋಗಳ ಸಂಖ್ಯೆ.				39
1886—87ರಲ್ಲಿ ಇಡಲ್ಪಟ್ಟ ಚಿಲ್ಲರೇ ಬಿಕರೀ ದುಕಾನಗಳ ಸಂಖ್ಯೆ.				75
ಷರಾ.				

ತಾರೀಖು 15ನೇ ಜನವರೀ 1887.

ನಂ. 220.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸವಸೂಧಾನಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮವು, ಇದರಡೀಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬುವದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ ಹರಾಜು ಮವ್ಕೂಫ಼್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾಗ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮೂಬ್ತಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟೆಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟ್	ತಾಲ್ಲೂಕು	ಹೋಬಳಿ	ಗ್ರಾಮ	ಕಾಯಂಗುತ್ತಾದಾರರ ಹೆಸರು.	ಅಂದಾಜಾಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಹಾಸನ.	ಹೊಳೆನರಸೀಪುರ	ಹಳೇಕೋಟೆ	ಬಿಟ್ಟಗಳ್ಳಿ	1 ನರಸಿಹ್ಮಪಂಡಿತ (ಫವತ್ತಿ) ಇವನ ಮಗ ಲಕ್ಷ್ಮಿನಾರಣಪಂಡಿತ, 2 ಕೃಷ್ಣಪಂಡಿತ 3 ನರಸಿಹ್ಮಪಂಡಿತ	0 0 0	181 15 5	181 6 0	350 0 6	1887ನೇ ಇಸವಿ ಫೆಬ್ರವರೀ ತಾರೀಖು 24 ಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರರು ರೂಬರೂ.

ಹುಕ್ಕುಂ, ಬಮೋಜಿಬ್,

ಆರ್. ವಿಜಯಿಂದ್ರರಾವ್,

ಚೀಫ್ ಸೆಕ್ರೆಟೇರಿ.

ವಿದ್ಯಾ ಇಲಾಖೆ.

ತಾರೀಖು 28ನೇ ಜನವರೀ 1887ನೇ ಇಸವಿ.

ಮೈಸೂರು ದೇಶೀ ಪರಿಕ್ಷೆ.

ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಅಂಬರೆ ಪ್ರಮುಖ ಸ್ಥಳಗಳಲ್ಲಿ ನಡಿಯುವ ಮೈಸೂರು ದೇಶೀ ಪರೀಕ್ಷೆಗೆ ಹೆಸರು ರಿಜಸ್ಟರಾಗಿರತಕ್ಕಂಥಾ ವಿದ್ಯಾರ್ಥಿಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ.—ಸದರೀ ಪರಿಕ್ಷೆಯು ಸ್ಟ 1887ನೇ ಇಸವಿ ಫೆಬ್ರುವರಿ 21ನೇ ಸೋಮವಾರದ ದಿವಸ ಪ್ರಾತಃಕಾಲ 10 ಘಂಟೆಗೆ ಸರಿಯಾಗಿ ಆರಂಭಿಸುತ್ತದೆ.

2. ವಿದ್ಯಾರ್ಥಿಗಳು ಪ್ರತಿ ದಿವಸವು ಪರಿಕ್ಷೆಯಾಗುವಂಥ ಸ್ಥಳಗಳಲ್ಲಿ 9 ಘಂಟೆಗೆ ಸರಿಯಾಗಿ ಹಾಜರಿರತಕ್ಕದ್ದು.

ಪರಿಕ್ಷೆಯು ಇದರಡಿ ಕಂಡ ಕಾಲಕ್ರಮವಾರಿ ಆಯಾ ಅಂಶಗಳಲ್ಲಿ ನಡಿಸಲ್ಪಡುವದು.

ದಿವಸ.	ಮೈಸೂರು ದೇಶೀ ಪರಿಕ್ಷೆ.		ಉಪಾಧ್ಯಾಯರ ಪರಿಕ್ಷೆ.	
	ಘಂಟೆ.	ಅಂಶಗಳು.	ಘಂಟೆ.	ಅಂಶಗಳು.
ಮೊದಲನೇ ದಿವಸ.	10ರಿಂದ 1ರ ವರಿಗೆ.	ಭಾಷಾ ಗ್ರಂಥ, ವ್ಯಾಕರಣ (ಅವಶ್ಯಕ ಭಾಷೆ.)	10ರಿಂದ 1ರವರಿಗೆ	ಪದ್ಯಕಾವ್ಯ ವಾಕ್ಯವಿಭಜನೆ.
	2 „ 5 „	ಡಿಟ್ಟೋ ಡಿಟ್ಟೋ (ಎರಡನೇ ಭಾಷೆ.)	2 „ 4 „ 4 „ 5 „	ವ್ಯಾಕರಣ. ವಾಕ್ಯರಚನೆ.
ಎರಡನೇ ದಿವಸ.	10ರಿಂದ 11ರವರಿಗೆ	ಬರವಣಿಗೆ ಅಕ್ಷರ ಸಂಯೋಜನ (ಅವಶ್ಯಕ ಭಾಷೆ)	10ರಿಂದ 1ರವರಿಗೆ	ಚರಿತ್ರೆ.
	11 „ 1 „ 2 „ 5 „	ಚರಿತ್ರೆ ಭೂಗೋಳ. ಭೂಪಟನಕ್ಷೆಬರಿಯುವಿಕೆ	2 „ 4 „	ರೇಖಾಗಣಿತ.
ಮೂರನೇ ದಿವಸ.	10ರಿಂದ 12ರವರಿಗೆ 12ರಿಂದ 1 „	ಅಂಕಾಗಣಿತ ಬರವಣಿಗೆ ಅಕ್ಷರಸಂಯೋಜನ (ಎರಡನೇ ಭಾಷೆ)	10ರಿಂದ 1ರವರಿಗೆ 2 „ 4 „	ಅಂಕಾಗಣಿತ. ಬೀಜಗಣಿತ.
	2 „ 3. 30 3. 30. 5 „	ವ್ಯವಸಾಯಭೋಧಿನಿ. ಆರೋಗ್ಯಭೋಧಿನಿ.		
ನಾಲ್ಕನೇ ದಿವಸ.	10ರಿಂದ11-30ರವರಿಗೆ 11. 30 „ 1	ಕ್ಷೇತ್ರಗಣಿ. ಭಾಷಾಂತ್ರ.	10ರಿಂದ 1ರವರಿಗೆ 2 „ 5 „	ಭೂಗೋಳ ಶಾಸ್ತ್ರ ಪಾಠ.
ಐದನೇ ದಿವಸ.	..	..	10ರಿಂದ 1ರವರಿಗೆ	ಪಾಠಶಾಲೆಯನ್ನು ನಡಿಸುವ ಕ್ರಮ.

ಇದರಡಿ ನಮೂದಿಸಲ್ಪಟ್ಟ ಅಂಶಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

1. ಪರಿಕ್ಷೆಯು ಆರಂಭಿಸುವದಕ್ಕೆ ಕ್ಲುಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವವರಿಗೂ ಪರಿಕ್ಷೆಯಾಗುವ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲ ಮತ್ತು ಅಂಥ ಅರ್ಧ ಘಂಟೆ ಕಳೆದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

2. ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷೆ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದನಂತರ ಪುನಃ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ವುಂಟಾಗಲಾರದು. ಅಲ್ಲದೆ ತನ್ನ ವುತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷೇ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

3. ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನ್ಯಾವ ವಿಧದಿಂದಲಾದರು ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೆ ಕೊಟಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ಸಂಗತಿಯು ಡೈರೆಕ್ಟರ್ ಸಾಹೇಬರವರಿಗೆ ರಿಪೋರ್ಟುಮಾಡಲ್ಪಡುವದು.

4. ಪರೀಕ್ಷೇ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ ರೂಲರುಗಳನ್ನಾಗಲಿ ಪುಸ್ತಕಗಳನ್ನಾಗಲಿ ಬರದ ಕಾಗದಗಳನ್ನಾಗಲಿ ಅಥವಾ ಇನ್ನ್ಯಾವ ವಿಧವಾದ ಕಾಗದಪತ್ರವನ್ನಾಗಲಿ ತೆಗದುಕೊಂಡು ಹೋಗಲು ಯಾವ ವಿದ್ಯಾರ್ಥಿಗೂ ಯಾವ ಸಂದರ್ಭದಲ್ಲಿಯೂ ಅವಕಾಶಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವಲ್ಲಿಯಾಗಲಿ, ಅಥವಾ ಇನ್ನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವಲ್ಲಿಯಾಗಲೀ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೇ ಸದರೀ ನಡವಳಿತವು ಡೈರೆಕ್ಟರ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

5. ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರು ಕೇಳಬೇಕೆನ್ನಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

6. ವಿದ್ಯಾರ್ಥಿಯ ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರಿಯದೆ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

7. ಪ್ರಶ್ನಾ ಕಾಗದಗಳು ಶಿವಾಯಿ ಯಾವ ಕಾಗದಗಳನ್ನಾಗಲಿ ಪರೀಕ್ಷೆ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಲ್ಪಡುವದಿಲ್ಲ.

8. ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. "ವಿಶಿಷ್ಟ ಕೆಟ್ಟು ಹೋದ ಕಾಗದ ವಗ್ಯೆರೆಗಳು" ವಿದ್ಯಾರ್ಥಿಯು ಬರಿಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು.

ಎಲ್. ರೈಸ್,
ಎಡಿಕೇಷನ್ ಸೆಕ್ರೆಟೇರಿ.

ಮೈಸೂರ ಗೆಜೆಟ

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರೀ ತಾ|| 29, ಸ್ನ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 6ನೇ ಜನವರೀ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟು ಉತ್ಪತ್ತೀ ಬಾಬತು ಇದರಡೀ ಕಂಡ ನಾಟಾಗಳು, ಹಾಸನದ ಡಿಪೋದಲ್ಲಿ ಡೆಪ್ಯುಟಿ ಕಮ್ಮಿಷನರ್ ಮತ್ತು ಫಾರೆಸ್ಟು ಆಫೀಸರವರಿಂದ 1887ನೇ ಇಸವಿ ಫೆಬ್ರುವರೀ 3ನೇ ಮುಕ್ಕಾಮಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ನಾಟಾದ ತಪಶೀಲು.	ನಾಟಾಗಳ ಸಂಖ್ಯೆ.	
ಕೂವೆ (ಪೂ್ರ್ಣ) ..	49	
ನಂದಿ ..	151	
ಹೆನವಾ (ಕಾಡಹಲಸು) ..	34	
ಮತ್ತಿ ..	17	
ಕರೀಮರ ..	1	
ಮಳಲಿ (ಯಬೊನಿ) ..	6	
ಕಾಡುಮರ ..	62	
ಜುಮ್ಲಾ....	320	ಸ್ವಲ್ಪ ಹೆಚ್ಚು ಕಡಿಮೆ.

ಹರಾಜಿನ ಷರತ್ತುಗಳು—1873ನೇ ಇಸವಿ ಜೂ್ನ 12ನೇ ಮುಕ್ಕಂ 20ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಛಾಯಿಷ್ಮಾಡಲ್ಪಟ್ಟ ಪ್ರಕಾರ ಇರತಕ್ಕವು; ಮತ್ತು ಹರಾಜ್ ಕಾಲದಲ್ಲಿ ಪೋದಲ್ಪಡುವವು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ನಂಬರ್ 4.

ಅರ್ಜೀದಾರ ಬೆಂಗಳೂರು ನಗರ್ತಪೇಟೇಲಿರುವ ಚಿಕ್ಕ ಚನ್ನರಾಯಪ್ಪನಮಗಳೂ ಲಕ್ಷ್ಮಮ್ಮ.

ಅರ್ಜೀದಾರಳಿಗೆ ಘಾತೀಯಾದ ಚಿಕ್ಕ ಚನ್ನರಾಯಪ್ಪ ತಂದೆ ಯಾಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ವಾಸಸ್ಥನಾಗಿ ಮೃತಪಟ್ಟ ಚಿಕ್ಕ ಚನ್ನರಾಯಪ್ಪನ ಆಸ್ತಿ ಬಗ್ಯಾಗಿ ಬರತಕ್ಕ ಹೊಸಕೋಟೆ ನಂಜುಂಡಪ್ಪ ವಗೈರೆ ಇಂದ ಭೋಗ್ಯ ಮಾಡಿಕೊಂಡು ಯಿದ್ದ ಮನೆ ಭೋಗ್ಯದ ದಸ್ತೈವಜು ಬಾಬತು 600 ರೂಪಾಯಿ ಲೇಣೆಯನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂತ ಅರ್ಜೀದಾರಳು ಖಾಯಿಷ್ ಮಾಡಿರುತ್ತಾಳಾಗಿ ಸದರೀ ದರಖಾಸ್ತನ್ನು 1887ನೇ ಇಸವಿ ಫಿಬ್ರುವರೀ 11ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಚನ್ನರಾಯಪ್ಪನಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಾಗಿರತಕ್ಕದ್ದೆಂದು ಇದರಿಂದ ತಿಳಿಯಪಡಿಸಿ ಇದೆ.

ಬಿತಾರೀಖು 12ನೇ ಜನವರೀ 1887ನೇ ಇಸವಿ.

1887ನೇ ಇಸವಿ ಮಿಸಲೇನಿಯಸ್ ನಂಬರ್ 5.

ಅರ್ಜೀದಾರ ಬೆಂಗಳೂರು ಚವಡಯ್ಯನ ಪೇಟೇಲಿ ಗಂಗಡಿಕಾರ ಒಕ್ಕಲಿಗರ ಘಾತೀಪಟ್ಟ ನರಸಿಹ್ಮಣ್ಣನ ತಮ್ಮ ಹೊನ್ನಪ್ಪ.

ಅರ್ಜೀದಾರಗೆ ಫವತಿಪಟ್ಟ ನರಸಿಹ್ಮಣ ಅಂಣನಾಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ವಾಸಸ್ಥನಾಗಿ ಮೃತಪಟ್ಟ ನರಸಿಹ್ಮಣನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಲೇಣೆಯನ್ನು ವಸೂಲ್ ಮಾಡಿಕೊಳ್ಳುವದಕ್ಕೂ ಸದರೀಯವನ ಹೆಂಡತಿ ಮತ್ತು 12 ವರುಷ ವಯಸ್ಸುಳ್ಳ ಮಗನಿಗೂ ಸಹ ತನ್ನ ಪೋಷಣೆಯಲ್ಲಿ ಯಿಟ್ಟುಕೊಂಡಿರುವದ್ದರಿಂದ ಇವರಿಗೆ ತಾನು ಗಾರಡಿಯನ್ನಾಗಿ ಯಿರಬೇಕೆಂತಲೂ ಸಹ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಕೊಡಿಸಬೇಕೆಂತ ಅರ್ಜೀದಾರನು ಖಾಯಿಷ್ ಮಾಡುತ್ತಾನೆ.

ಸದರೀ ದರಖಾಸ್ತನ್ನು 1887ನೇ ಇಸವಿ ಫಿಬ್ರುವರೀ 11ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ, ಆ ಕಾಲದಲ್ಲಿ ಸದರೀ ನರಸಿಹ್ಮಣನಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂತ ಇದರಿಂದ ತಿಳಿಯಪಡಿಸಿ ಇದೆ.

ತಾರೀಖು 8ನೇ ಜನವರೀ 1887ನೇ ಇಸವಿ.

1886ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 825.

ಮೃತಪಟ್ಟ ಅಚಂಭಟ್ಟರ ಆಸ್ತಿ ವಿಷಯದಲ್ಲಿ.—

ಚಿಕ್ಕಬಳ್ಳಾಪುರದ ತಾಲ್ಲೂಕು ಪೆರಿಸಂದ್ರದಲ್ಲಿ ಯಿರುವ ಅರ್ಜೀದಾರು ಸುಬ್ರಾವು, ಮೃತಪಟ್ಟ ಸದರೀ ಅಚ್ಚಂಭಟ್ಟರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಪೆರಿಸಂದ್ರ ಸ್ಥಳದ ಸುಬ್ರಾಯರು ಸದರೀ ವಾಸಸ್ಥರಾಗಿ ಮೃತಪಟ್ಟ ಅಚ್ಚಂಭಟ್ಟರ ಜಿಂದಗಿಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ರಾಯರ ಅರ್ಜೀಯನ್ನು 1887ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಚ್ಚಂಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದೇ ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರೆ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್, ಸಬ್, ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 12ನೇ ಜನವರೀ 1887.

ಯಿದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸೋಣಾದ 2 ರಿಜಿಸ್ಟ್ರಾದ ತಮಸೂಕುಗಳು 1884ನೇ ಇಸವಿ ಲಾಗಾಯಿತು ಬಾಗೇಪಲ್ಲಿ ಸಬ್ ರಿಜಿಸ್ಟರ್ ಆಫೀಸಿನಲ್ಲಿ ಬೇವಾರಸಾಗಿ ನಿಂತು ಯಿರುತ್ತವೆ. ಸದರೀ ತಮಸೂಕುಗಳನ್ನು ರಿಜಿಸ್ಟರಿಗೆ ಹಾಜರ್‌ಮಾಡಿದವರಾಗಲಿ, ಅದರಲ್ಲಿ ಬಾಧ್ಯತೆವುಳ್ಳವರಾಗಲಿ, ಈ ಲಾಗಾಯಿತು 1 ತಿಂಗಳಲ್ಲಿ ಬಾಗೇಪಲ್ಲಿ ಸಬ್ ರಿಜಿಸ್ಟ್ರಾರ್‌ರಲ್ಲಿ ಹಾಜರಾಗಿ ವಾಜಬಿ ಫೀಜು ಪಾವತಿಯಿಂದ ತಂಸೂಕುಗಳನ್ನು ವಾಪಸ್ ಪಡಿಯಬಹುದು ಇಲ್ಲವಾದರೆ ಇಂಡ್ಯನ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ಅವುಗಳು ನಾಶ ಪಡಿಸಲ್ಪಡುವವು.

ಆಫೀಸಿನ ಹೆಸರು.	ರಿಜಿಸ್ಟರ್ ಬುಕ್ಕಿನ ಮತ್ತು ತಂಸೂಕಿನ ನಂಬರು ಇಸವಿ.	ಕಕ್ಷಿಗಾರರ ಹೆಸರು.		ತಂಸೂಕಿನ ತಾರೀಖು.	ತಂಸೂಕು ರಿಜಿಸ್ಟ್ರಾದ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕಿಂಮತು.
		ತಂಸೂಕುಬರದು ಕೊಟ್ಟವ.	ಬರಸಿಕೊಂಡವ.			
ಬಾಗೇಪಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸು.	1ನೇ ಬುಕ್ಕಿನ 1883—84ನೇ ಇಸವಿ ನಂಬರು 27	ಬಾಗೇಪಲ್ಲಿ ತಾಲ್ಲೂಕು ಬೀಳೂರು ಹೋಬಳಿ ರಾಶ್ಚರುವು ಗ್ರಾಮದ ವಾಸಸ್ತ ಪಟೇಲಹೆಬ್ಬೂರರಾಮಪ್ಪನ ಮಗ ಸುಬ್ಬರಾಮಪ್ಪ	ಕಡಪಾಜಿಲ್ಲಾ ಕದಿರಿ ತಾಲ್ಲೂಕು ಈ ತೋಟಿಗ್ರಾಮದ ಕೋಮಟಿ ಕರೇರಂಗಪ್ಪನ ಮಗ ಬಾಲಯ್ಯ	1884ನೇ ಇಸವಿ ಫಿಬ್ರವರೀ ತಾರೀಖು 6	1884ನೇ ಇಸವಿ ಫಿಬ್ರವರೀ ತಾರೀಖು 6	ಬಾಗೇಪಲ್ಲಿ ತಾಲ್ಲೂಕು ಸೋಮಕಪಲ್ಲಿ ಕೊಂಡೋರುಪಲ್ಲಿ ಈಗ್ರಾಮಗಳ ಬಾಬತು ತರೀ—ಖುಷ್ಕಿ—ಬಾಗಾಯಿತು ಬೀಜವರೀ ೨||೦|೧|| ಕಂದಾಯ ೩೪||÷೬ ವುಳ್ಳ ಜಮೀನುಗಳು 300 ರೂಪಾಯಿಗಳಿಗೆ ಕ್ರಯ ಮಾಡಿರುವದಾಗಿ.
	ಡಿಟೋ ಇಸವಿ ನಂಬರ್ 28	ಡಿಟೋ	ಡಿಟೋ	ಡಿಟೋ	ಡಿಟೋ	ಬಾಗೇಪಲ್ಲಿ ತಾಲ್ಲೂಕು ರಾಶ್ಚರುವು ಮುಸಿಲಿಗಾನಪಲ್ಲಿ ಈ ಗ್ರಾಮಗಳ ಬಳಿ ಯಿರುವ ತರೀ-ಖುಷ್ಕಿ-ಬಾಗಾಯಿತು ಬೀಜವರೀ ೯|೩೦-೩||೦ಗೆ ಕಂದಾಯ 94-3-0 ವುಳ್ಳ ಜಮೀನುಗಳನ್ನು 740 ರೂಪಾಯಿಗಳಿಗೆ ಆಧಾರಮಾಡಿ ಇರುವದಾಗಿ.

ಸಿ. ಸುಬ್ಬರಾವ್, ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 24ನೇ ಜನವರೀ 1887.

ಇದರಿಂದ ಸಮ್ಮಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ.—ತಿಪಟೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತಾವೇಜನ್ನ ಹಾಜರ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ತಿಪಟೂರು ಸಬ್ ರಿಜಿಸ್ಟ್ರಾರರಲ್ಲಿ ಹಾಜರಾಗಿ ಸದರೀ ದಸ್ತಾವೇಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ದಸ್ತಾವೇಜಿನ ನಂಬರ.	ದಸ್ತಾವೇಜಿನ ತಾರೀಖು.	ರಿಜಿಸ್ಟ್ರೇಷನ್ನಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರು ಮಾಡಿದ ತಾರೀಖು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳಾ.	ದಸ್ತಾವೇಜನ್ನ ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳಾ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
336 / 1884—85	25—12—84	29—12—84	30—12—84	ತಿಪಟೂರು ತಾಲ್ಲೂಕು ನೋಣವಿನಕೆರೆಗ್ರಾಮದಲ್ಲಿ ಇರುವ ಬಾಣಾವಾರದ ತಾಲ್ಲೂಕು ಲೇಟ್ ಜುಡಿಷಿಯಲ್ ಗಮಾಸ್ತೆ ಕಡಬದಕೂಗಿ ಮೇಡು ನರಸುಹ್ಮಾಚಾರ್ರ ಮಕ್ಕಳು ಗೋಪಾಲಯ್ಯಂಗಾರ್ರ ಹೆಂಡತಿ ಶೀತಮ್ಮ	ತಿಪಟೂರು ತಾಲ್ಲೂಕು ನೋಣವಿನಕೆರೆ ವಾಸಸ್ಥಂಭಂ ಅಳಸಿಂಗರಾಚಾರ್ಯರವರ ಮಕ್ಕಳು ಗರುಡಾಚಾರ್ರು	ಸದರೀ ನೋಣವಿನಕೆರೆ ಗ್ರಾಮದಲ್ಲಿ ಇರುವ ಮನೆ 1ಕ್ಕೆ ಚಕ್ಕಬಂದಿ ಪೂರ್ವಕ್ಕೆ ನಗರದ ಕೃಷ್ಣಯ್ಯಂಗಾರ್ರ ಮನೆ, ಪಶ್ಚಿಮಕ್ಕೆ ಲಕ್ಷ್ಮಿನಾರಣಪ್ಪನವರ ಮನೆ ಮಗ್ಗಲು ಪ್ರೋಣಿ, ದಕ್ಷಿಣಕ್ಕೆ ರಾಜಬೀದಿ, ವುತ್ತರಕ್ಕೆ ಅಂಚೇ ತಿರುಮಲ್ಲಯ್ಯನವರ ಪಾಳು ನಿವೇಶನದ ಮಗ್ಗಲು ಪ್ರೋಣಿ, ಪೂರ್ವ ಪಶ್ಚಿಮ ಗಜ $18\frac{1}{2}$ ವುತ್ರ ದಕ್ಷಣ ಗಜ 18 ಹೆಂಚಿನ ಮನೆ ಇದಕ್ಕೆ ಸೇರಿದ ಹಿತ್ತಲು ಮತ್ತು ನಿವೇಶನ ಸಹ (300) ರೂಪಾಯಿಗಳಿಗೆ ಖರೀದಿಗೆಕೊಟ್ಟು ಯಿರುವದಾಗಿ ವಗೈರೆ.

ಪಿ. ಯನ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ 5.

ಮೃತಪಟ್ಟ ಲಕ್ಷ್ಮೀದೇವಮ್ಮನವರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ನರಸಿಹ್ಮಭಟ್ಟರು ಮೃತಿತಪ್ಪಸದರೀ ಲಕ್ಷ್ಮೀದೇವಮ್ಮನವರಿಗೆ ಮಗ ಆಗಬೇಕೆಂಬ ಹಕ್ಕುದಾರೀಮೇಲೆ ಮಂಜರಾಬಾದ್ ತಾಲ್ಲೂಕು ಯಳೂರು ಹೋಬಳಿ ಕೊಂತ್ಲಾಪುರದ ಸ್ತಳದ ಸದರೀ ನರಸಿಹ್ಮಭಟ್ಟರು ಡಿಟ್ಟೋ ವಾಸಸ್ಥಳಾಗಿ ಮೃತಪಟ್ಟ ಲಕ್ಷ್ಮೀದೇವಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನರಸಿಹ್ಮಭಟ್ಟರ ಅರ್ಜೀಯನ್ನು 1887ನೇ ಇಸವಿ ಫೆಬ್ರವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮೀದೇವಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜನವರೀ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 9.

ಮೃತಪಟ್ಟ ಕೂರ್ವೈಯನವರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ಹಾಲಪ್ಪನವರು, ಮೃತಪಟ್ಟ ಸದರೀ ಕೂರ್ವೈಯನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಹೊಸ ಅಗ್ರಹಾರದ ಸ್ಥಳದ ಸದರೀ ಹಾಲಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ಕೂರ್ವೈಯನವರ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹಾಲಪ್ಪನವರ ಅರ್ಜೀಯನ್ನು 1887ನೇ ಇಸವಿ ಫಿಬ್ರುವರೀ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ, ಆ ಕಾಲದಲ್ಲಿ ಸದರೀ ಮೃತಪಟ್ಟ ಕೂರ್ವೈಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಜನವರೀ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಸ್. ಹೇಮಾಜಿರಾವ್,

ಡಿಸ್ಟ್ರಿಕ್ಟ ಜಡ್ಜ್.

ಮೈಸೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ-ನಂಜನಗೂಡು ತಾಲ್ಲೂಕು ಯೇಚಿಗೆಹಳ್ಳೀಯಲ್ಲಿರುವ ಶಿವಾಚಾರದ ಅಜ್ಜೀಗೌಡನ ಮಗ ಪಟೇಲ ಲಿಂಗೇಗೌಡನ ವಿಷಯದಲ್ಲಿ.—

ಸನ್ 1886ನೇ ಇಸವಿ ದಿವಾಳಿ ಕೇಸ್ ನಂಬರ್ 32.

ಹುಕ್ಕುಂ.

ಮೇಲ್ಕಂಡ ಲಿಂಗೇಗೌಡನೆಂಬವನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರನಾದ ಲಿಂಗೇಗೌಡನ ಪರವಾಗಿ ಅಡ್ವೊಕೇಟ್ ಮೆ|| ರಾಘವಾಚಾರ್ರು ಹಾಜರು ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು; ಯಾರೆಂದರೆ—1ನೇ ಮಲ್ಲಯ್ಯಾ, 2ನೇ ನಾರಣಪ್ಪಾ, 3ನೇ ಶಿವಯ್ಯಾ, 4ನೇ ಚನ್ನಬಸಪ್ಪ, 5ನೇ ನಂಜುಂಡಯ್ಯಾ, 6ನೇ ವೀರಭದ್ರಯ್ಯಾ, 7ನೇ ಮರಿಕಾಳಾ, 8ನೇ ನಂಜಪ್ಪ, 9ನೇ ತಿಮ್ಮಯ್ಯಾಶೆಟಿ ಮಬ್ಬ 10ನೇ ವರ್ಧಣಯ್ಯಾ, 11ನೇ ಅಂಚೆ ದುನಿಯ್ಯಾ, 12ನೇ ಪ್ಲೀಡರ್ ರಂಗಂಣ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಪಟೇಲ ಲಿಂಗೇಗೌಡನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ, ಸದರೀ ದಿವಾಳಿಯಾದವನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟ ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯುದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1886ನೇ ಇಸವಿ ಡಿಶಂಬರ್ 22ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತುಖತ್‌ನಿಶೀ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು	[illegible]	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ
1	ನಂಜನಗೂಡು ಪ್ಲೀಡರ್ ರಂಗಂಣ	ನಮೂದಿಲ್ಲ.	..	ಡಿಕ್ರಿ ಬಾಬತು.	

ದಿವಾಳಿಯಾದ ಡಿಕ್ರಿ ದೇಣೇದಾರ್ ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಪಾಪಮ್ಮನ ವಿಷಯದಲ್ಲಿ.—

ಸನ್ 1886ನೇ ಇಸವಿ ದಿವಾಳಿ ಕೇಸ್ ನಂಬರ್ 42.

ಹುಕ್ಕುಂ.

ಮೇಲ್ಕಂಡ ಪಾಪಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟಿನ ರೂಬರೂ ಅರ್ಜೀದಾರಳಾದ ಪಾಪಮ್ಮನು ಖುದ್ದು ಮತ್ತು ಸದರೀಯವಳ ಲೇಣೇದಾರರಾದ 1ನೇ ಕಾಳೇಗೌಡನ ಕಡೆ ಮೆ|| ಯನ್. ಸುಬ್ಬರಾಯರು, 2ನೇ ಕಾಳಾಚಾರೀಕಡೆ ಮೆ|| ಅಡ್ವೊಕೇಟ್ ನರಸಿಂಗರಾಯರು, 4ನೇರ ತರಫ್ ನೀಲಕಂಠಮೊದಲಿ, 5ನೇ ಚಂದ್ರಶೇಖರ ಮೊದಲಿ ಇವರಕಡೆ ಮೆ|| ಯನ್ ಸುಬ್ಬರಾಯರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ, ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—3ನೇ ಮುತ್ತಸಾಮಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಯಿಟ್ಟಿಗೆ ಗೂಡು ಪಾಪಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದಳವನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1886ನೇ ಇಸವಿ ಡಿಸೆಂಬರ್ ತಿಂಗಳು 22ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರರು ಅಥವಾ ದಾವಾದಾರರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಡಬೇಕಾದದ್ದು.	ದೇಣೇಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ	ಷರಾ.
1	ಮೈಸೂರು ಯಿಟ್ಟಿಗೆ ಗೂಡಿನಲ್ಲಿರುವ ಕಾಳೇಗೌಡ.	175–3–10	..	ಡಿಕ್ರೀ ಬಾಬತು.	

ದಿವಾಳಿಯಾದ ಡಿಕ್ರಿ ದೇಣೇದಾರ ಮೈಸೂರು ಲಷ್ಕರ್ ಮೊಹಲೆಯಲ್ಲಿ ಇರುವ ಗುಲಾಂ ಹುಸೇನ್‌ಖಾನ್ ಮಗ ಗುಲಾಂ ಮಹಮ್ಮತ್‌ಖಾನ ವಿಷಯದಲ್ಲಿ.—

ಸನ್ 1886ನೇ ಇಸವಿ ದಿವಾಳಿ ಕೇಸ್ ನಂಬರ್ 224.

ಹುಕ್ಕುಂ.

ಮೇಲ್ಕಂಡ ಗುಲಾಂ ಮಹಮ್ಮತ್‌ಖಾನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟಿನ ರೂಬರೂ ಅರ್ಜೀದಾರನಾದ ಗುಲಾಂ ಮಹಮ್ಮತ್‌ಖಾನ್ ಖುದ್ದು ಹಾಜರ್ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ—1 ನವಾಬ್ ಯಿಬ್ರಾಹಿಂಖಾನ್ ಬಿನ್ಸ್ತುರಿ, 2ನೇ ಮಹಮ್ಮದ್ ಬಿನ್ಸ್ತುರಿ ತಂದೆ ಗುಲಾಂಮುಲ್ಕ್ ಸಾಬಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗುಲಾಂ ಮಹಮ್ಮತ್‌ಖಾನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಜನವರೀ 12ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಶೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಡಿಕ್ರಿ ಆದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಮೈಸೂರು ಮಂಡಿಮೊಹಲ್ಲೇಲಿರುವ ಮಹಂಮದ್ ಬೇತೂರಿ ತಂದೆ ಗುಲಾಂ ಮುಲ್ಕ್.	135—5—0	..	ಡಿಕ್ರಿ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ.

ಫ್ರೇಂಚ್‌ರಾಕ್ಸ ಸಬ್ ಡಿವಿಜನ್.

ತಾರೀಖು 8ನೇ ಜನವರೀ 1887.

ಫ್ರೇಂಚ್‌ರಾಕ್ಸ ಸಬ್ ಡಿವಿಜನ್ ಅತ್ತಿಕುಪ್ಪ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ನಮೂದಿಸುವ ದಸ್ತಾವೇಜನ್ನು ಕ್ರಮವಾದ ವಾರಸ್‌ದಾರರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳ ವೊಳಗಾಗಿ ಹಾಜರಾಗಿ ವಾಪಸ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ರಿಜಿಸ್ಟ್ರೇಷನ್ ನಂಬರ.	ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆದುಕೊಟ್ಟ ತಾರೀಖು.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರು ಮಾಡಿದ ತಾರೀಖು.	ಷರಾ—ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1884—85ನೇ ಇಸವಿ ಬಾಬತು ನೆಂಬರ್ 336	ಸಂತೆಬಾಚಹಳ್ಳಿಲ್ಲಿ ವಾಸವಾಗಿದ್ದು ಹಾಲೀ ಹಾಸನದಲ್ಲಿ ನಿತ್ಯಾತ್ರಿಯಿಂದ ಜೀವನ ಮಾಡಿಕೊಂಡು ಯಿರುವ 42 ವಯಸ್ಸುವುಳ್ಳ ಸ್ಮಾರ್ತ ಬ್ರಾಹ್ಮಣ ಜಾತಿ ಸಂಕಣ್ಣಯ್ಯನ ಹೆಂಡತಿ ಭಾಗೀರತಮ್ಮ.	ಸಂತೆಬಾಚಹಳ್ಳೀಯಲ್ಲಿ ಇರುವ ಸ್ಮಾರ್ತ ಬ್ರಾಹ್ಮಣ ಅಣ್ಣಾ ಜಿರಾಯರ ರಾಮಯ್ಯನವರ ಮಗ 29 ವಯಸ್ಸುವುಳ್ಳ ವ್ಯವಸಾಯದಿಂದಜೀವನ ಮಾಡುವ ಕೃಷ್ಣಪ್ಪ.	1—11—84	15—11—84	24—11—84	ಸಂತೆಬಾಚಹಳ್ಳಿ ಗ್ರಾಮದಲ್ಲಿ ಫ ವತಿಯಾದ ನನ್ನ ಗಂಡನ ಹಿಸ್ಸೆಗೆ ಬಂದು ಈಗ ಪಾಳುಬಿದ್ದು ಇರುವ ಮನೆ ಚೌತರ್ಫ—ಪೂರ್ವಕ್ಕೆ ನನ್ನ ಮೈದನ ಶ್ರೀಕಂಠಯ್ಯನ ಮನೆ ಮತ್ತು ಅವನ ಹಿತ್ತಲು—ಪಶ್ಚಿಮ ನನ್ನ ಭಾವ ನಂಜಪ್ಪಯ್ಯ ವುರುಫ ಅಂಣೈಯನ ಮನೆ ಮತ್ತು ಅವರ ಹಿತ್ತಲು—ವುತ್ತರಕ್ಕೆ ಬಳೇ ಚನ್ನ ವೀರಶೆಟ್ಟಿ ಹಿತ್ತಲು—ದಕ್ಷಿಣಕ್ಕೆ ದೊಡ್ಡಬೀದಿ ಈ ಮಧ್ಯೆ ಇರುವ 13 ಅಂಕಣ ಶಿಕಸ್ತು ಮೂರು ಅಂಕಣ ಕಟ್ಟು ದಾಯೆ ಇವಕ್ಕೆ ಶೇರಿದ ಹಿತ್ತಲೂ ಪಾಳು ನಿವೇಶನ ಅದರಲ್ಲಿ ಇರುವ ಫಲಾ ತೆಂಗಿನಮರ, ಇದರಲ್ಲಿ ಇರುವ ತೊಲೆಗಳು ಹಂಚು ಸಹಾ ನಿನಗೆ ಗವರ್ನ್‌ಮೆಂಟ್ 48 ರೂಪಾಯಿಗೆ ಖರೀದಿಗೆ ಕೊಟ್ಟು ಮೊಬಲಗು ತೆಗದುಕೊಂಡು ಯಿರುತ್ತೇನೆಂದು.

ಬಿ. ಕೆ. ವೆಂಕಟವರದಯ್ಯಂಗಾರ್,
ರಿಜಿಸ್ಟ್ರಾರ್.

166

ಹಾಸನ-ಡಿಸ್ಟ್ರಿಕ್ಟು.

ತಾರೀಖು 19ನೇ ಜನವರೀ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದಿವಾನಸಾಹೇಬರವರ ಹುಕ್ಕುಂ ಬಮೋಜೀಬ್ ಹಾಸನ ಡಿಸ್ಟ್ರಿಕ್ಟು ಪೈಕಿ ಮಂಜಿರಾಬಾದು ತಾಲ್ಲೂಕಿನಲ್ಲಿ ಇರುವ ಮಾರನಹಳ್ಳಿ ಘಾಟಿಯಲ್ಲಿ ಟೋಲ್‌ಗೇಟ್. ಯಂಬ ಸುಂಕದ ಕಟ್ಟೆವಳಗೆ 1887ನೇ ಇಸವಿ ಏಪ್ರೈಲ್ ಮಾಹೆ 1ನೇ ಮುರ್ಕ್ಕಂ ಲಾಗಾಯತು 1888ನೇ ಇಸವಿ ಮಾರ್ಚಿ 31ರ ವರಿಗೆ ಸುಂಕ ವಸೂಲ್ ಮಾಡುವ ಸ್ವಾತಂತ್ರ್ಯವು ಸರ್ 1887ನೇ ಇಸವಿ ಮಾರ್ಚಿ ತಾರೀಖು 1ರಲ್ಲು ಸಕಲೇಶಪುರದ ಮೊಕ್ಕಾಂ ತಾಲ್ಲೂಕು ಕಚೇರಿ ವಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರ್ಯಾಕ್ಟುದಾರನು ಇದಕ್ಕೆ ಲಗ್ಗತ್ತಾಗಿರುವ ಷೆಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೆನೆ ಟೋಲ್ ವಸೂಲ್ ಮಾಡಬೇಕು. ಮತ್ತು ಸರ್ 1876ನೇ ಇಸವಿ ನವಂಬರ್ 4ನೇ ಮುರ್ಕ್ಕಂ 274ನೇ ನಂಬರುವುಳ್ಳ ಲೇಟ ಚೀಫ್ ಕಮ್ಮಿಷನರ್ ಸಾಹೇಬರವರ ನೋಟಿಫಿಕೇಷನ್ನಲ್ಲಿ ಘಾಯಿಷ್ ಆಗಿರುವ ರೂಲ್ಸ್ ಪ್ರಕಾರ ನಡಕೊಳ್ಳಬೇಕು.

3. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಡಿಸ್ಟ್ರಿಕ್ಟು ಆಫೀಸರವರು ಅಧಿಕಾರ ವುಳಿಸಿಕೊಂಡಿರುತ್ತಾರೆ

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದಯೊ ಅವನು ಕೂಡಲೆ ದರಖಾಸ್ತು ಮೊಬಲಗಿನಲ್ಲಿ ನಾಲ್ಕರಲ್ಲಿ ವಂದಂಶ ಮೊಬಲಗನ್ನ ಅಡ್ವಾನಸಾಗಿ ಠೇವಣಿ ಯಿಟ್ಟು ಬಾಕೀ ಮೊಬಲಗನ್ನು ಸರ್ 1887ನೇ ಇಸವಿ ಏಪ್ರೈಲ್ 20ರ ಲಾಗಾಯತು ಸಮನಾದ ಆರು ಖಿಸ್ತುಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತಿ ಮಾಡಬೇಕು, ದರಖಾಸ್ತುದಾರನು ಪ್ರತಿಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪದೇ ಕೊಡುತ್ತಾ ಬರುವದಕ್ಕೆ ಲಾಯಖಾದ ವಬ್ಬನನ್ನು ಜಾಮಿನು ಕೊಡಬೇಕು.

5. ಠೇವಣಿ ಯಿಡದೇ ಯಿದ್ದರೆ ಅಥವಾ ಜಾಮಿನು ಕೊಡದೆ ಇದ್ದರೆ ದರಖಾಸ್ತುದಾರನಿಗೆ ಲುಕ್ಸಾನುಕರವಾಗಿ ಕಂಟ್ರ್ಯಾಕ್ಟು ಯರಡನೇ ಹರಾಜು ಮಾಡಲ್ಪಡುವದು. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪಾವತಿ ತಾರೀಖಿನ ವರಿಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ ವಂದು ಕಾಸಿನಂತೆ ಬಡ್ಡೀ ವಸೂಲ್ ಮಾಡಲ್ಪಡುವದು, ಮತ್ತು ಡೆಪ್ಯುಟಿ ಕಮ್ಮಿಷನರವರು ತಮಿಗೆ ಯುಕ್ತ ತೋರುವ ಪ್ರಕಾರ ಅಥವಾ ಜಾಮಿನುದಾರನ ಅಪೇಕ್ಷೆ ಪ್ರಕಾರ ಕಂಟ್ರ್ಯಾಕ್ಟು ಮರಡನೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಅದರಿಂದ ಯೇನಾದರು ನಷ್ಟ ಸಂಭವಿಸಿದರೆ ಅದು ಕಂಟ್ರ್ಯಾಕ್ಟುದಾರನಿಂದ ಅಥವಾ ಜಾಮಿನುದಾರನಿಂದ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಸಿವಾಯಿ 4 ಮತ್ತು 5ನೇ ಕಲಂಮಿನಲ್ಲಿ ನಮೂದಾಗುವ ಷರತ್ತಿಗೆ ವಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರ್ಯಾಕ್ಟು ಮೊಬಲಗಿನ ರೂಪಾಯಿ 1ಕ್ಕೆ 0—1—0 ಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರ್ಯಾಕ್ಟುದಾರನು ಬದ್ಧನಾಗಿರುತ್ತಾನೆ.

7. ಪ್ರತಿ ದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರುವಾಕಾ ಲೆಖ್ಖವನ್ನ ಯಿಡಲು ಸಹ ಕಂಟ್ರ್ಯಾಕ್ಟುದಾರನು ಬದ್ಧನಾಗಿ ಯಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ವುದ್ಯೋಗಸ್ಥರ ಇನ್ಸ್‌ಪೆಕ್ಷನ್ಗೆ ಲೆಖ್ಖ ವಳಗಾಗಿ ಯಿರತಕ್ಕದ್ದು.

8. ಗವರ್ನಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರ್ಯಾಕ್ಟುದಾರ ವುಪಯೋಗಿಸತಕ್ಕದ್ದು. ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಯಿಟ್ಟುಕೊಂಡಿರತಕ್ಕದ್ದು.

9. ಕಂಟ್ರ್ಯಾಕ್ಟುದಾರನು ಪ್ರತಿ ತಿಂಗಳ ಗುರ್ರೇ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲ್ ಲೆಖ್ಖದನ್ನ ಮಂಜಿರಾಬಾದು ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

ದರಗಳಪಟ್ಟಿ—1882ನೇ ಇಸವಿ ಮಾರ್ಚಿ 18ನೇ ಮುರ್ಕ್ಕಂ ಮೈಸೂರು ಗೆಜೆಟ್ಟಿನಲ್ಲಿ ನಮೂದಾಗಿರುತ್ತೆ.

ಟಿ. ಆನಂದರಾವ್,
ಡೆಪ್ಯುಟಿ ಕಮ್ಮಿಷನರ್.

166

ಹಾಸನ ಡಿಸ್ಟ್ರಿಕ್ಟು.

ತಾರೀಖು 19ನೇ ಜನವರೀ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದಿವಾನಸಾಹೆಬರವರ ಹುಕ್ಕುಂ ಬಮೋಜೀಬ್ ಹಾಸನ ಡಿಸ್ಟ್ರಿಕ್ಟು ಪೈಕಿ ಮಂಜಿರಾಬಾದು ತಾಲ್ಲೂಕಿನಲ್ಲಿ ಇರುವ ಮಾರನಹಳ್ಳಿ ಘಾಟಿಯಲ್ಲಿ ಟೋಲ್‌ಗೇಟಿ ಯಂಬ ಸುಂಕದ ಕಟ್ಟೆವಳಗೆ 1887ನೇ ಇಸವಿ ಏಪ್ರೆಲ್ ಮಾಹೆ 1ನೇ ಮುಕ್ಕಾಂ ಲಾಗಾಯತು 1888ನೇ ಇಸವಿ ಮಾರ್ಚೀ 31ರ ವರಿಗೆ ಸುಂಕ ವಸೂಲ್ ಮಾಡುವ ಸ್ವಾತಂತ್ರ್ಯವು ಸರ್ 1887ನೇ ಇಸವಿ ಮಾರ್ಚಿ ತಾರೀಖು 1ರಲ್ಲು ಸಕಲೇಶಪುರದ ಮೊಕ್ಕಾಂ ತಾಲ್ಲೂಕು ಕಚೇರಿ ವಳಗೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ವಸೂಲಿ ಹಕ್ಕನ್ನು ಕೊಂಡುಕೊಳ್ಳುವ ಕಂಟ್ರಾಕ್ಟುದಾರನು ಇದಕ್ಕೆ ಲಗತ್ತಾಗಿರುವ ಷೆಡ್ಯೂಲಿನಲ್ಲಿ ನಮೂದಾಗಿರುವ ದರಗಳ ಮೇರಿಗೆನೆ ಟೋಲ್ ವಸೂಲ್ ಮಾಡಬೇಕು. ಮತ್ತು ಸರ್ 1876ನೇ ಇಸವಿ ನವಂಬರ್ 4ನೇ ಮುಕ್ಕಾಂ 274ನೇ ನಂಬರುವುಳ್ಳ ಲೇಟಿ ಚೀಫ್ ಕಮ್ಮಿಷನರ್ ಸಾಹೇಬರವರ ನೋಟಿಫಿಕೇಷನ್‌ನಲ್ಲಿ ಫಾಯಿಷ್ ಆಗಿರುವ ರೂಲ್ಸ್ ಪ್ರಕಾರ ನಡದುಕೊಳ್ಳಬೇಕು.

3. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಹಾಸನ ಡಿಸ್ಟ್ರಿಕ್ಟು ಆಫೀಸರವರು ಅಧಿಕಾರ ವುಳ್ಳವರಾಗಿಕೊಂಡಿರುತ್ತಾರೆ.

4. ಯಾವ ದರಖಾಸ್ತು ಅಂಗೀಕರಿಸಲ್ಪಡುತ್ತದಯೊ ಅವನು ಕೂಡಲೆ ದರಖಾಸ್ತು ಮೊಬಲಗಿನಲ್ಲಿ ನಾಲ್ಕರಲ್ಲಿ ಒಂದಂಶ ಮೊಬಲಗನ್ನ ಅಡ್ವಾನಸಾಗಿ ಠೇವಣಿ ಯಿಟ್ಟು ಬಾಕೀ ಮೊಬಲಗನ್ನು ಸರ್ 1887ನೇ ಇಸವಿ ಏಪ್ರೆಲ್ 20ರ ಲಾಗಾಯತು ಸಮನಾದ ಆರು ಖಿಸ್ತುಗಳಾಗಿ ಪ್ರತಿ ತಿಂಗಳ 20ನೇ ತಾರೀಖಿಗೆ ಪಾವತಿ ಮಾಡಬೇಕು, ದರಖಾಸ್ತುದಾರನು ಪ್ರತಿಮಾಹೆವಾರಿ ಖಿಸ್ತು ಮೊಬಲಗನ್ನು ತಪ್ಪದೇ ಕೊಡುತ್ತಾ ಬರುವದಕ್ಕೆ ಲಾಯಖಾದ ಒಬ್ಬನನ್ನು ಜಾಮೀನು ಕೊಡಬೇಕು.

5. ಠೇವಣಿ ಯಿಡದೇ ಯಿದ್ದರೆ ಅಥವಾ ಜಾಮೀನು ಕೊಡದೆ ಇದ್ದರೆ ದರಖಾಸ್ತುದಾರನಿಗೆ ಲುಕ್ಸಾನುಕರವಾಗಿ ಕಂಟ್ರಾಕ್ಟು ಯರಡನೇ ಹರಾಜು ಮಾಡಲ್ಪಡುವದು. ಖಿಸ್ತು ಪ್ರಕಾರ ಹಣ ಕೊಡುವದಕ್ಕೆ ತಪ್ಪಿದರೆ ಹಾಗೆ ಬಾಕಿಯಾದ ಮೊಬಲಗಿಗೆ ಪಾವತಿ ತಾರೀಖಿನ ವರಿಗೆ ತಿಂಗಳು 1ಕ್ಕೆ ರೂಪಾಯಿ 1ಕ್ಕೆ ಒಂದು ಕಾಸಿನಂತೆ ಬಡ್ಡೀ ವಸೂಲ್ ಮಾಡಲ್ಪಡುವದು, ಮತ್ತು ಡೆಪ್ಯುಟಿ ಕಮ್ಮಿಷನರವರು ತಮಿಗೆ ಯುಕ್ತ ತೋರುವ ಪ್ರಕಾರ ಅಥವಾ ಜಾಮೀನುದಾರನ ಅಪೇಕ್ಷೆ ಪ್ರಕಾರ ಕಂಟ್ರಾಕ್ಟು ಯರಡನೆ ಹರಾಜು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಆದರಿಂದ ಯೇನಾದರು ನಷ್ಟ ಸಂಭವಿಸಿದರೆ ಅದು ಕಂಟ್ರಾಕ್ಟುದಾರನಿಂದ ಅಥವಾ ಜಾಮೀನುದಾರನಿಂದ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡತಕ್ಕದ್ದು.

6. ದರಖಾಸ್ತು ಮೊಬಲಗು ಸಹಾಯಿ 4 ಮತ್ತು 5ನೇ ಕಲಂಮಿನಲ್ಲಿ ನಮೂದಾಗುವ ಷರತ್ತಿಗೆ ವಳಪಟ್ಟು ಖಜಾನೆಗೆ ಸಲಾಯಿಸುವ ಸದರೀ ಕಂಟ್ರಾಕ್ಟು ಮೊಬಲಗಿನ ರೂಪಾಯಿ 1ಕ್ಕೆ 0—1—0 ಯಂತೆ ಲೋಕಲ್‌ಸೆಸ್ ಕೊಡಲಿಕ್ಕೆ ಕಂಟ್ರಾಕ್ಟುದಾರನು ಬದ್ಧನಾಗಿರುತ್ತಾನೆ.

7. ಪ್ರತಿ ದಿನದ ಟೋಲ್ ವಸೂಲ್ ತೋರಿಸುವ ನಿಜವಾದ ಮತ್ತು ಕರಾರುವಾಕಾ ಲೆಖ್ಖವನ್ನ ಯಿಡಲು ಸಹ ಕಂಟ್ರಾಕ್ಟುದಾರನು ಬದ್ಧನಾಗಿ ಯಿರುವದಲ್ಲದೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ಥರ ಇನ್ಸ್‌ಪೆಕ್ಷನ್‌ಗೆ ಲೆಖ್ಖ ವಳಗಾಗಿ ಯಿರತಕ್ಕದ್ದು.

8. ಗವರ್ನ್‌ಮೆಂಟ್ ಟೋಲ್ ಮನೆ ಮತ್ತು ಗೇಟನ್ನು ಕಂಟ್ರಾಕ್ಟುದಾರ ವುಪಯೋಗಿಸತಕ್ಕದ್ದು. ಮತ್ತು ಅವುಗಳನ್ನ ಆತನು ಪೂರಾ ದುರಸ್ತಿನಲ್ಲಿ ಯಿಟ್ಟುಕೊಂಡಿರತಕ್ಕದ್ದು.

9. ಕಂಟ್ರಾಕ್ಟುದಾರನು ಪ್ರತಿ ತಿಂಗಳ ಗುರ್‍ರೇ ತಾರೀಖಿನಲ್ಲಿ ಹಿಂದಣ ತಿಂಗಳ ಟೋಲ್ ವಸೂಲ್ ಲೆಖ್ಖದನ್ನ ಮಂಜಿರಾಬಾದು ತಾಲ್ಲೂಕು ಕಚೇರಿಗೆ ಕಳುಹಿಸತಕ್ಕದ್ದು.

ದರಗಳಪಟ್ಟಿ.—1882ನೇ ಇಸವಿ ಮಾರ್ಚೀ 18ನೇ ಮುಕ್ಕಾಂ ಮೈಸೂರು ಗೆಜೆಟ್ಟಿನಲ್ಲಿ ನಮೂದಾಗಿರುತ್ತೆ.

ಟಿ. ಆನಂದರಾವ್,
ಡೆಪ್ಯುಟಿ ಕಮ್ಮಿಷನರ್.

ನಗರ ಡಿವೀಜನ್.

ನಗರ ಡಿವೀಜನ್ ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ 3.

ಮೃತಪಟ್ಟ ತರೀಕೆರೆ ತಾಲ್ಲೂಕು ಲೇಟ್ ಅಮಲ್‌ದಾರ್ ತಾಯರ್ ಸಾಬರ ಆಸ್ತಿ ವಿಷಯದಲ್ಲಿ.—

ಅರ್ಜೀದಾರ ಅಬ್ದುಲ್‌ಖಾದರ್‌ಸಾಬ್, ಮೃತಪಟ್ಟ ಸದರೀ ತಾಯರ್‌ಸಾಬರಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಶಿವಮೊಗ್ಗಾ ಕಸಬಾ ಸವ್ವಾಪಾಳ್ಯದಲ್ಲಿರುವ ಅಬ್ದುಲ್‌ಖಾದರ್ ಸಾಬನು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ತಾಯರ್‌ಸಾಬರ ಜಿಂದಗೀ ಬಗ್ಗ್ಯಾಗಿ ಬರತಕ್ಕ 430 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಬ್ದುಲ್‌ಖಾದರಸಾಬನ ಅರ್ಜೀಯನ್ನು 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 19ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಾಯರ್‌ಸಾಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಜನವರೀ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್.

ನೋಟೀಸ್.

ಕೊಡಗು ಫಾರೆಸ್ಟು ಡಿಪ್ಯುಟಿ ಕನ್‌ಸರ್‌ವೇಟರ್ ಆಫಿಸಿನಿಂದ.

ತಾರೀಖು 23ನೇ ಮಾಹೆ ಡಿಸಂಬರ್ 1886.

ಇದರ ಕೆಳಗೆ ನಮೂದಿಸುವ ನಾಟಗಳನ್ನು ಮೈಸೂರು ಡಿಸ್ಟ್ರಿಕ್ಟು ಹುಣಸೂರಲ್ಲಿ ಇರುವ ಕೊಡಗು ಡಿಪೋದಲ್ಲಿ ಬರುವ ಸರ್ 1887ನೇ ಇಸವಿ ಫಿಬ್ರವರೀ ತಾರೀಖು 3ರಲ್ಲು ಬಹಿರಂಗವಾದ ಹರಾಜು ಮಾಡೋಣಾಗುತ್ತದೆ.

ಸಾಗುವಾನಿ ನಾಟಗಳು 600. ಇತರ ನಾಟಗಳು 500.

ಷರತ್ತು—ಕೊಡಗು ಚೀಫ್ ಕಮ್ಮಿಷನರ ಸಾಹೇಬರವರ ಸರ್ 1885ನೇ ಇಸವಿ ಮೇ ತಾರೀಖು 16ನೇ ನಂಬರ್ 9ರ ಇಸ್ತಿಹಾರ್ ನಾಮೆಯಲ್ಲಿ ನಮೂದಿರುವ ಮೇರೆ.

ಯಫ್. ಬಿ. ಡಿಕ್ಕಿನ್ಸರ್,
ಕೊಡಗು ಫಾರೆಸ್ಟು ಡಿಪ್ಟಿ ಕನ್‌ಸರ್‌ವೇಟರ್.

ಖಾಸಾಗಿ ಪ್ರಕಟನೆ.

ನೋಟೀಸ್.

ರೆವೆರೆಂಡ್ ಎ. ಮುಲ್ಲರ್. ಎಸ್. ಜೆ. ಇವರಿಂದ ರಚಿಸಲ್ಪಟ್ಟ ಹೋಮ್ಯೋಪೆತಿಕ್ ವೈದ್ಯ ಪುಸ್ತಕ—ಇಂಗ್ಲಿಷ್ ಪುಸ್ತಕಕ್ಕೆ ರೂಪಾಯಿ 1—8—0; 250 ಪುಟಗಳುಳ್ಳ ಕರ್ನಾಟಕ ಪುಸ್ತಕಕ್ಕೆ ರೂಪಾಯಿ 1; ಟಪ್ಪಾಲ್ ದಸ್ತೂರಿ ಕೂಡಿ—ಮಂಗಳೂರು ಸೈಂಟ್ ಲೋಯಿಸ್ಯಸ್ ಕಾಲೇಜಿನ ಬಡಜನರ ಹೋಮ್ಯೋಪೆತಿಕ್ ವೈದ್ಯಶಾಲೆಯ ಮೇನೇಜರರ ಕೂಡೆ ಅಪೇಕ್ಷಿಸಿದ್ದಲ್ಲಿ ಶಿಕ್ಕುವವು.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡ್‌ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒಪಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್‌ವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತ್ತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬೀ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್, ಚಂದಾ ದರ ವಗೈರೇ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟೀಸುಗಳು:—				
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ)			2	8
ಎರಡನೇ ಸಲ ವ ಆ ತರುವಾಯು ಪ್ರತಿ ಆವರ್ತಿಗೂ ಡಿಟೋ			1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್‌ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಗೆ ನೋಟೀಸ್‌ಗಳಿಗೆ:—				
ಮೊದಲನೇ ದಫಾ			5	0
ಎರಡನೇ ವ ಆ ತರುವಾಯು ಪ್ರತಿ ದಫಾಕ್ಕೆ			2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್‌ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.				
ಡ್ಯುಪ್ಲಿಕೇಟ್ ಕಾಫೀಪಟ್ಟೀ ವಗೈರೇ ಕೊಡುವ ಬಗ್ಗೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—				
ಮೊದಲನೇ ಸಲಕ್ಕೆ ಪುಟ 1ಕ್ಕೆ			10	0
ಎರಡನೇ ಸಲ ವ ಆ ತರುವಾಯು ಪ್ರತಿ ಸಲಕ್ಕೂ „			5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ			0	8
ಎರಡನೇ ದಫಾ ಡಿಟೋ ಡಿಟೋ			0	6
ಮೂರನೇ ವ ಆ ತರುವಾಯು ಪ್ರತಿ ಸಲಕ್ಕೆ			0	4

ಷರಾ.—ಚಂದಾ ವಗೈರೆ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತಿ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಬಮೋಜಿಬ್ ಹುಕ್ಕುಂ,

ಟಿ. ಟಿ. ಲೆನರಡ್,

ಮೈ. ಗೆ. ಕಂಪೈಲರ್.

169

ಮೈಸೂರ ಗೆಜೆಟ್.

ನಂ. 5 ಸರ್ಕಾರದಿಂದ ಫ್ರಾಯಿಷ್ ಆದ್ದು. ಸ್ 1887.

ಬೆಂಗಳೂರು, ಶನಿವಾರ, ಫಿಬ್ರವರೀ ತಾ|| 5, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, 1886ನೇ ಇಸವಿ Iನೇ ನಂಬರ್ ರೆಗ್ಯುಲೇಷನ್.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 19ನೇ ಜನವರೀ 1887.

ನಂ. 221.—ಘನವನ್ನು ಹೊಂದಿದ ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನೀ—ಯವರು, ತಮ್ಮ ಪ್ರಖ್ಯಾತವಾದ ಧಾರ್ಮಿಕ ರಾಜ್ಯಭಾರದ ಐವತ್ತನೇ ವರುಷ ವರ್ಧಂತಿಯಂ ಗೈದುವ ಶುಭಸಂಭವವನ್ನು ಉಚಿತವಾದ ಮರ್ಯಾದೆಯೊಡನೆ ಮೈಸೂರು ಶೀಮೆಯಲ್ಲೆಲ್ಲಾ ಆಚರಿಸಲ್ಪಡತಕ್ಕದ್ದೆಂತ ಶ್ರೀಮನ್ಮಹಾರಾಜರವರು ಅಪೇಕ್ಷಿಸುವದಲ್ಲದೆ, ಈ ಶೀಮೆಯ ಪ್ರಜೆಗಳೆಲ್ಲರೂ ಇದೊಂದು ಬಹಿರಂಗವಾದ ವುತ್ಸವ ವಿನೋದಗಳಿಗೆ ಸುಸಮಯದಂತೆ ಅವಲಂಬಿಸುವರೆಂದು ಸಹ ನಂಬುತ್ತಾರೆ.

2. ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸುವದೇನಂದರೆ 1887ನೇ ಇಸವಿ ಫಿಬ್ರವರೀ 16ನೇ ಬುಧವಾರವು—ಘನವನ್ನು ಹೊಂದಿದ ಚಕ್ರವರ್ತಿನೀ—ಯುವರ ರಾಜ್ಯಭಾರದ ವರ್ಧಂತಿಯ ದಿವಸವೆಂತ ಮೈಸೂರುಶೀಮೆಯ

ಲ್ಲಿ ಆಚರಿಸಲ್ಪಡತಕ್ಕದ್ದೆಂತಲೂ, ಮತ್ತು ಇಂತ್ಥಾ ವಿಶೇಷ ಸಮಯಕ್ಕೆ ತಕ್ಕ ವುತ್ಸವ ವಿನೋದಗಳನ್ನ ನಡಿಸಲಿಕ್ಕೆ ಯೇರ್ಪಾಡು ಮಾಡಿಕೊಳ್ಳುವ ವುದ್ದಿಶ್ಯ ಡಿಸ್ಟ್ರಿಕ್ಟ್ ಆಫೀಸರರುಗಳು ಈ ಸಂಗತಿಯನ್ನ ತಮ್ಮ ತಮ್ಮ ಡಿಸ್ಟ್ರಿಕ್ಟಿನೊಳಗಿನ ಪ್ರಜೆಗಳಿಗೂ, ಆಯಾ ಮ್ಯುನಿಸಿಪಾಲಿಟೀಯವರಿಗೂ ಪ್ರಸಿದ್ಧಪಡಿಸತಕ್ಕದ್ದೆಂತಲೂ ಅಪ್ಪಣೆ ಕೊಡಿಸುತ್ತಾರೆ.

3. ಆಯಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳ ಮ್ಯುನಿಸಿಪಾಲಿಟೀಯವರು ಬಡಜನಗಳಿಗೆ ಅನ್ನ ಮತ್ತು ಬಟ್ಟೆ ಬಟವಾಡೇ ಮಾಡಲಿಕ್ಕೂ, ಪ್ರೈವೇಟ್ ವ ಪಬ್ಲಿಕ್ ಸ್ಕೂಲ್‌ಗಳ ಹುಡುಗರುಗಳಿಗೆ, ಮತ್ತು ಧರ್ಮಸ್ಥಾಪನೆಗಳಲ್ಲಿರುವ ಜನಗಳಿಗೆ ತಕ್ಕ ಔತನ ಮಾಡಲಿಕ್ಕೂ, ಸಾಕಾಗುವ ಮೊಬಲಗನ್ನ ಡೆಪ್ಯುಟಿ ಕಮ್ಮಿಷನರುಗಳ ಯಖ್ತ್ಯಾರಿಯಲ್ಲಿ ಮಹಾರಾಜಾ ಸರ್ಕಾರದವರು ಇಡುವರು.

4 ಈ ಶುಭ ದಿನಕ್ಕೆ ಮರ್ಯಾದೆಗಾಗಿ, ಈ ಶೀಮೆಯಲ್ಲಿ ಯೆಲ್ಲಿ ಕಡೆಯಲ್ಲೂ ಇರುವ ಮೈಸೂರು ಸವಾರ್ ಬಾರ್ ಫೌಜಿನ ಪ್ರತಿ ನಾನ್‌ಕಮ್ಮಿಷನೆಡ್ ಆಫಿಸರಿಗೂ, ಶಿಪಾಯಿಗೂ ಒಂದು ದಿವಸದ ತಲಬನ್ನ ಬಹುಮಾನವಾಗಿ ಕೊಡಲ್ಪಡತಕ್ಕದ್ದೆಂತಲೂ ಸಹಾ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುತ್ತಾರೆ.

5. ಫೆಬ್ರವರಿ 16ನೇ ತಾರೀಖಿನ ದಿವಸವು ತಮಾಂ ಆಫೀಸ್‌ಗಳಿಗೆ ರಜಾ ದಿನವಾಗಿ ಎಣಿಸಲ್ಪಡತಕ್ಕದ್ದು.

6. ಮೇಲ್ಕಂಡ ವರ್ಧಂತಿಯ ವುತ್ಸವವನ್ನ, ಬೆಂಗಳೂರಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರು ಖುದ್ದು ನಡಿಸುವ ವುದ್ದಿಶ್ಯ ವಿಶೇಷ ಯೇರ್ಪಾಡುಗಳು ಮಾಡಲ್ಪಡುವವು. ಮತ್ತು ಪ್ರತಿ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್‌ನಲ್ಲಿಯೂ ನಡಿಯಬೇಕಾದ ಸರ್ಕಾರೀ ಮರ್ಯಾದಾವನ್ನ ಕುರಿತು ಇನ್ನು ಮೇಲೆ ಹುಕುಂ ಮಾಡಲಾಧೀತು.

ತಾರೀಖು 10ನೇ ಜನವರೀ 1887.

ನಂ. 218.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, [ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ] ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈಕೆಳಗೆ ಕಂಡ ಜೋಡೀ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವೀಜನ್ ಅಸಿಸ್ಟೆಂಟ್ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂಗಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡಲೆ ಗ್ರಾಮವು ಆತನ ಸುಪರ್ದಿಗೆ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್‌ಡಿವಿಜನ್ ಅಸಿಸ್ಟೆಂಟ್ ಕಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೇಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಹೊಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವಂತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೇಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಮೈಸೂರು ಡಿಸ್ಟ್ರಿಕ್ಟಿಗೆ ಶೇರಿದ ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್	ಅಷ್ಟಗ್ರಾಮ	ಸಂತೇಬಾಚನಹಳ್ಳಿ	ಜೋಡೀ ದೊಡ್ಡ ಸೋಮನಹಳ್ಳಿ	ನಾಗರಗಟ್ಟದ ತಿಮ್ಮಯ್ಯ ಇತರ 6 ಮಂದಿ	26 8 8	221 0 7	203 0 0	124 7 9	1887ನೇ ಇಸವಿ ಫೆಬ್ರವರೀ ತಾರೀಖು 18ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ತಾರೀಖು 31ನೇ ಡಿಶಂಬರ್ 1886.

ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನ್ ದೇಖೀಲ್ ಮೈಸೂರು ಶೀಮೆಯ ತಮಾಂ ಸ್ಥಳಗಳಲ್ಲೂ ಷರಾಬ್ ತಯಾರಿ ವ ಒಟ್ಟು ಬಿಕರೀ ಮಾಡುವ ಬಟ್ಟು ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಕೊಡಬಹುದೆಂದು ಇದರಿಂದ ತಿಳಿಸೋಣಾಗುತ್ತದೆ.

2. ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿನ ಕಂಟ್ರಾಕ್ಟು, ಮೈಸೂರು ದೇಶದ ರೆಸಿಡೆಂಟರವರ ಅಪ್ಪಣೆ ಮೇರೆ, ಈ ಇಸ್ತಿಹಾರ್‌ನಾಮೆಯಲ್ಲಿ ಶೇರಿಸಲ್ಪಟ್ಟಿರುತ್ತೆ.

3. ಹಾಲಿ ಯಾವ ಸ್ವಾತಂತ್ರ್ಯದಬಗ್ಯೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತೋ ಆ ಬಾಬತು ಸ್ವಾತಂತ್ರ್ಯವು, ಈ ಇಸ್ತಿಹಾರ್‌ನಾಮೆಯ 9ನೇ ಕಲಂನಲ್ಲಿ ವಿವರಿಸಿರುವ Iರ ಲಾಗಾಯಿತು XIXರ ವರಿಗಿನ ಷರತ್ತುಗಳಿಗೆ ಒಳಪಟ್ಟು ಕೊಡಲ್ಪಡುವ್ವದು. ಸದರೀ ಸ್ವಾತಂತ್ರ್ಯದಲ್ಲಿ ಶೇಂದಿಯನ್ನಾಗಲೀ, ಶೀಮೆ ವೈನ್ ಸಾರಾಯಿಯನ್ನಾಗಲೀ, ಸ್ಪಿರಿಟ್‌ಗಳನ್ನಾಗಲಿ ಅಥವಾ ಬಿಯರ್ ಸಾರಾಯಿಯನ್ನಾಗಲಿ ತಯಾರ್ ಮಾಡುವ ಯಾ ಬಿಕರಿಮಾಡುವ ಸ್ವಾತಂತ್ರ್ಯವು ಅಡಗಿರುವದಿಲ್ಲ.

4. ತೀರ್ವೆ ದರದ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ತೀರ್ವೆ ದರಗಳು, ಮತ್ತು ಕಂಟ್ರಾಕ್ಟರುಗಳಿಂದ ಸರಬರಾಯಿ ಮಾಡಲ್ಪಡುವ ಷರಾಬಿನ ಒಟ್ಟು ಬಿಕರಿ ದರಗಳು ಸುದಾ, ಈ ಇಸ್ತಿಹಾರ್‌ನಾಮೆಯ 9ನೇ ಪ್ಯಾರಾದಲ್ಲಿನ XIIIನೇ ನಂಬರ್ ಷರತ್ತಿನಲ್ಲಿ ವಿವರಿಸಲ್ಪಟ್ಟ ಪ್ರಕಾರ ಗವರ್ನಮೆಂಟಿನಿಂದ ಗೊತ್ತು ಮಾಡಲ್ಪಟ್ಟಿರುತ್ತೆ.

5. (*a.*) ಈಗ ದರಖಾಸ್ತು ಅಪೇಕ್ಷಿಸಲ್ಪಟ್ಟ ಕಂಟ್ರಾಕ್ಟು ಕಾಲವು, ದರಖಾಸ್ತುದಾರನ ಇಷ್ಟ ಪ್ರಕಾರ 1887ನೇ ಇಸವಿ ಏಪ್ರೆಲ್ 1ನೇ ಮಾರ್ಕ್ಸಂ ಲಾಗಾಯಿತು 1890ನೇ ಇಸವಿ ಮಾರ್ಚಿ 31ನೇ ಮಾರ್ಕ್ಸಂವರಿಗೆ ಆಗುವ ಮೂರು ವರುಷಕಾಲಕ್ಕಾಗಲಿ 1887ನೇ ಇಸವಿ ಏಪ್ರೆಲ್ 1ನೇ ಮಾರ್ಕ್ಸಂ ಲಾಗಾಯಿತು 1892ನೇ ಇಸವಿ ಮಾರ್ಚಿ 31ನೇ ಮಾರ್ಕ್ಸಂವರಿಗೆ ಆಗುವ ಐದು ವರುಷ ಕಾಲಕ್ಕಾಗಲಿ, ವಿಸ್ತರಿಸಬಹುದು.

(*b.*) ಪ್ರತಿ ದರಖಾಸ್ತುದಾರನೂ, ದರಖಾಸ್ತು ಮಾಡುವ ವಾಯಿದೆಯು ಮೂರು ವರುಷ ಕಾಲಕ್ಕೆ ಅಥವಾ ಐದುವರುಷ ಕಾಲಕ್ಕೆ ಎಂಬದನ್ನೂ ಆತನು ದರಖಾಸ್ತು ಮಾಡುವ ವಾಯಿದೆಯಲ್ಲಿ ಸಾಲೀಯಾನಾ ಸರ್ಕಾರಕ್ಕೆ ಎಷ್ಟು ಕಮ್ಮಿ ಮೊಬಲಗು ಕೊಡುವದಕ್ಕೆ ಒಡಂಬಡುತ್ತಾನೋ ಆ ಸಂಗತಿಯನ್ನೂ ವಿವರವಾಗಿ ನಮೂದಿಸತಕ್ಕದ್ದು.

(*c.*) ಕಂಟ್ರಾಕ್ಟಿನ ಮೊದಲ ಎರಡು ಸಾಲ್‌ಗಳಲ್ಲಿ ಗವರ್ನಮೆಂಟಿಗೆ ಸಾಲಿಯಾನಾ ಏಳೂವರೆ ಲಕ್ಷ ರೂಪಾಯಿಗಳಿಗಿಂತ ಕಮ್ಮಿಯಾಗಿಯೂ ಉಳಿದ ಸಾಲ್ ಯಾ ಸಾಲ್‌ಗಳಲ್ಲಿ ಎಂಟು ಲಕ್ಷ ರೂಪಾಯಿಗಳಿಗಿಂತ ಕಮ್ಮಿಯಾಗಿಯೂ ಕೊಡುವಂತೆ ಒಪ್ಪುವ ಯಾವ ದರಖಾಸ್ತಾಗಲಿ ಆಲೋಚಿಸಲ್ಪಡಲಾರದು.

6. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲೀ ಅಥವಾ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಸೆಕ್ಯೂರಿಟಿ ಪತ್ರಗಳ ಮೂಲಕವಾಗಿಯಾಗಲೀ 1,000 ರೂಪಾಯಿಗಳ ಠೇವಣಿ ಮೊಬಲಗು ಕಳುಹಿಸಲ್ಪಟ್ಟು "ಷರಾಬ ತಯಾರಿ ವ ಒಟ್ಟು ಬಿಕರಿಯ ಬಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಎಂಬ ಮಾತುಗಳು ವಿಳಾಸ ಬರೆಯಲ್ಪಟ್ಟ ಲಿಫಾಫೆಯಲ್ಲಿ ಹಾಕಿ 1887ನೇ ಇಸವಿ ಫೆಬ್ರವರಿ 15ನೇ ಮಂಗಳವಾರ ದಿವಸ ಯಾ ತತ್ಪೂರ್ವದಲ್ಲಿ ಬೆಂಗಳೂರಲ್ಲಿ ದಿವಾನರವರ ಚೀಫ್ ಸೆಕ್ರೇಟೇರಿಯವರಿಗೆ ತಲಪುವಂತೆ ರವಾನಿಸಲ್ಪಡತಕ್ಕದ್ದು. ಸದರೀ ತಾರೀಖಿನ ತರುವಾಯು ಯಾವ ದರಖಾಸ್ತುಗಳೂ ತೆಗೆದುಕೊಳ್ಳಲ್ಪಡಲಾರದು. ದರಖಾಸ್ತುಗಳು, 1887ನೇ ಇಸವಿ ಫೆಬ್ರವರೀ 15ನೇ ಮರ್ಕುಮಿನ ಮಧ್ಯಾನ್ಹ 12 ಘಂಟೆಗೆ, ಹಾಜರಾಗತಕ್ಕ ದರಖಾಸ್ತುದಾರರ ರೂಬರೂ ದಿವಾನರವರ ಆಫೀಸಿನಲ್ಲಿ ಚೀಫ್ ಸೆಕ್ರೆಟರಿಯವರಿಂದಲೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಂದಲೂ ಖುಲ್ಲಾ ಮಾಡಲ್ಪಡುವವು, ದರಖಾಸ್ತುಗಳ ಆಖೈರ್ ವ್ಯವಸ್ಥೆ ದಿವಾನರವರಿಗೆ ಶೇರಿದ್ದಾಗಿರುತ್ತೆ. ಸದರೀಯವರು ಯಾವ ದರಖಾಸ್ತನ್ನಾಗಲಿ, ತಮಾಂ ದರಖಾಸ್ತುಗಳನ್ನಾಗಲಿ ಯಾವ ಸಬಬನ್ನೂ ತಿಳಿಸದೇಯೇ ತಿರಸ್ಕರಿಸತಕ್ಕ ಸಂಪೂರ್ಣ ಅಧಿಕಾರವನ್ನು ತಾವೇ ಉಳಿಸಿಕೊಂಡಿರುತ್ತಾರೆ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಠೇವಣಿಗಳು ಅವರುಗಳು ಕೇಳಿದಾಗ ವಾಪಸ್ ಕೊಡಲ್ಪಡುವವು. ದೀವಾನರವರಿಗೆ ಸಿಫಾರಸ್ ಮಾಡುವಬಗ್ಗೆ ಚುನಾಯಿಸಲ್ಪಡುವ ದರಖಾಸ್ತುದಾರರು ಕೂಡ್ಲೇ ನಗದಾಗಿಯಾಗಲೀ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲೀ, ದರಖಾಸ್ತುದಾರರು ಒಡಂಬಡಿಕೆ ಮಾಡಿಕೊಂಡ ಸಾಲೀಯಾನಾ ಕಮ್ಮೀ ಹುಟ್ಟುವಳಿಯ ಹನ್ನೆರಡರಲ್ಲೊಂದು ಭಾಗಕ್ಕೆ (ಅಥವಾ ಒಂದು ತಿಂಗಳ ಕಿಸ್ತಿಗೆ) ಸಮನಾದ ಮೊಬಲಗನ್ನು ಕೂಡ್ಲೇ ಠೇವಣಿ ಇಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದು.

7. ಯಾವ ದರಖಾಸ್ತುದಾರರ ದರಖಾಸ್ತು ದೀವಾನರವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೋ ಅಂಥಾವನು ತನ್ನ ದರಖಾಸ್ತು ಮಂಜೂರಾದ ಸಂಗತಿ ತನಗೆ ತಿಳಿಸಲ್ಪಟ್ಟ ಎಂಟು ದಿವಸಗಳೊಳಗಾಗಿ ಮೊದಲೇ ಇಡಲ್ಪಟ್ಟ ಡಿಪಾಜಿಟ ಮೊಬಲಗಿನೊಡನೆ, ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಹುಟ್ಟುವಳಿ ಪೈಕಿ $\frac{1}{8}$ರ ಮೊಬಲಗಿಗೆ ಸಮನಾಗುವಂತೆ ಇನ್ನೂ ಕೆಲವು ಮೊಬಲಗನ್ನು ನಗದಾಗಿಯಾಗಲಿ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲಿ ಬೆಂಗಳೂರು ಡೆಪ್ಯೂಟಿ ಕಮ್ಮಿಷನರಲ್ಲಿ ಠೇವಣೀ ಇಡತಕ್ಕದ್ದಲ್ಲದೇ ಇದರಲ್ಲಿ ಮುಂದೆ ವಿಧಿಸಲ್ಪಡುವ ಷರತ್‌ಗಳಿಗೆ ಬದ್ಧನಾಗಿ, ತಕ್ಕ ಛಾಪಾ ಕಾಗದದ ಮೇಲೆ, ವಿಧಿಸಲ್ಪಟ್ಟ ನಮೂನೇಯಲ್ಲಿ ಒಂದು ಕರಾರು ಬರೆದು ಕೊಡತಕ್ಕದ್ದು. ಮತ್ತು ಸದರೀ ದರಖಾಸ್ತುದಾರನು ಕರಾರಿಗೆ ರುಜು ಮಾಡಲಿಕ್ಕಾಗಲಿ, ನೇಮಿಸಲ್ಪಟ್ಟ ಡಿಪಾಜಿಟ್ಟನ್ನ ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ ಮೊದಲೇ ಇಡಲ್ಪಟ್ಟ ಠೇವಣಿ ಮೊಬಲಗುಗಳು ಸರ್ಕಾರಕ್ಕೆ ಸೇರಿಸಿ ಕೊಳ್ಳಲ್ಪಟ್ಟು ಇಜಾರೇ ಅನ್ಯಥಾ ವಿಲೇ ಮಾಡಲ್ಪಡುವದು.

8. ಈ ಯಿಸ್ತಿಹಾರ್‌ನಾಮೆಯ ಯಾವ ಷರತ್ತುಗಳನ್ನಾಗಲೀ ಯಷ್ಟುಮಟ್ಟಿಗಾದರೂ ಬದಲಾಯಿಸುವದನ್ನು ಸೂಚಿಸುವ ಯಾವ ದರಖಾಸ್ತುಗಳಾಗಲೀ ಆಲೋಚಿಸಲ್ಪಡಲಾರವು, ಮತ್ತು ತಮಾಂ ದರಖಾಸ್ತುಗಳೂ ಈ ಯಿಸ್ತಿಹಾರ್‌ನಾಮೆಗೆ ಲಗತ್ತಿರುವ ನಮೂನೆಯಲ್ಲಿರತಕ್ಕವು.

9. ಹಾಲಿ ದರಖಾಸ್ತು ಅಪೇಕ್ಷಿಸಲ್ಪಟ್ಟಿರತಕ್ಕ ಕಂಟ್ರಾಕ್ಟು ಯಿದರಡೀ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಯಾವವಂದರೆ :—

ಷರತ್ತುಗಳು.

1. (a.) ಕರಾರ್ ಮಾಡಿಕೊಳ್ಳಲ್ಪಟ್ಟ ಸಾಲಿಯಾನಾ ಕಮ್ಮಿ ಹುಟ್ಟುವಳೀ ಮೊಬಲಗು, ಸಮನಾದ ಹನ್ನೆರಡು ಮಾಹೇವಾರೀ ಖಿಸ್ತುಗಳ ಪ್ರಕಾರ ಸರ್ಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಇಜಾರೇದಾರನು ಪ್ರತಿತಿಂಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಷರಾಬಿನ ಮೇಲೆ ಸರ್ಕಾರಕ್ಕೆ ಸಲ್ಲತಕ್ಕಲೋಕಲ-ಸೆಸ್ ದೇಖೀಲ ಸರ್ಕಾರದಿಂದ ಗೊತ್ತು ಮಾಡಲ್ಪಟ್ಟ ದರಗಳ ಪ್ರಕಾರ ವಿಸಿಷ್ಟ ತೆರಿಗೆ ಮೊಬಲಗನ್ನೂ ಆ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲಿ, ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕದ್ದು.

(b.) ಯಾವದಾದರೂ ತಿಂಗಳ ಆಖೈರ್ ವರಿವಿಗೆ ಕೊಡಲ್ಪಡುವ ಷರಾಬಿನಮೇಲೆ ಸಲ್ಲತಕ್ಕ ತೆರಿಗೇಮೊಬಲಗು, ಕರಾರ್ ಮಾಡಿಕೊಂಡ ಕಮ್ಮೀ ಹುಟ್ಟುವಳೀ ಪೈಕೀ ಸದರೀಮಾಹೆ ಖಿಸ್ತು ಮೊಬಲಗ್ ಭರ್ತಿಗೆ ಸಾಲದೇ ಹೋದರೆ, ಅಂತಾಕಮ್ಮೀ ಮೊಬಲಗನ್ನು ಭರ್ತೀಮಾಡುವದಕ್ಕೆ ಬೇಕಾದಷ್ಟು ಮೊಬಲಗನ್ನು ಇಜಾರೇದಾರನು ಹೆಚ್ಚಾಗಿ ಪಾವತೀ ಮಾಡತಕ್ಕದ್ದು. ಯಾವದಾದರೂ ಮಾಹೇಯಲ್ಲಿ ನಡೆದ ಜಾಸ್ತೀ ಪುರೋಖ್ತು ಅದೇಸರ್ಕಾರ್ ಸಾಲಿನ ಯಾವದಾದರೂ ಮಾಹೇಯ ಕಮ್ಮೀ ಪುರೋಖ್ತಿಗೆ ಉಪಯೋಗಿಸಲ್ಪಡತಕ್ಕದ್ದು. ಯಾವದಾದರೂ ವಂದು ಮಾಹೇಯಲ್ಲಿ ಜಾಸ್ತಿ ಪುರೋಖ್ತಿನಿಂದ ಹುಟ್ಟುವಂಥಾ ತೀರ್ವೆಯ ಪೈಕಿ ಅದೇ ಸರ್ಕಾರ್‌ಸಾಲಿನ ಯಾವದಾದರೂ ಹಿಂದಿನ ಮಾಹೆ ಯಾ ಮಾಹೆಗಳಲ್ಲಿ ಕಂಟ್ರಾಕ್ಟು ದಾರನಿಂದ ಕಂ ಭರ್ತೀಮಾಡಲ್ಪಟ್ಟಿರಬಹುದಾದ ಮೊಬಲಗಿಗಿಂತಲೂ ಜಾಸ್ತೀಯಾಗಿರುವ ಮೊಬಲಗು, ಜಾಸ್ತೀ ಪುರೋಖ್ತಿನ ದೆಶೆಯಿಂದ ಯಾವ ಮಾಹೆಯಲ್ಲಿ ತೀರ್ವೆ ಮೊಬಲಗು ಹುಟ್ಟುವಳಆಯಿತೋ ಅಂಥಾ ಮಾಹೆಗೆ ಸಲ್ಲಬೇಕಾದ ಗೊತ್ತಾದ ಖಿಸ್ತು ಮೊಬಲಗಿನೊಂದಿಗೆ ಸರ್ಕಾರ್ ಖಜಾನೆಗೆ ಪಾವತಿ ಮಾಡಲ್ಪಡತಕ್ಕದ್ದು. ಮತ್ತು ಸದರೀ ಪಾವತಿ ಯೊಂದಿಗೆ ಅದೇ ಸರ್ಕಾರ್ ಸಾಲಿನ ಯಾವದಾದರೂ ಹಿಂದಿನ ಮಾಹೆ ಯಾ ಮಾಹೆಗಳಲ್ಲಿ ಕಂಟ್ರಾಕ್ಟುದಾರನಿಂದ ಕಂಭರ್ತೀ ಮಾಡಲ್ಪಟ್ಟಿರಬಹುದಾದ ಮೊಬಲಗಿಗೋಸ್ಕರ ಜಾಸ್ತಿ ಪುರೋಖ್ತಿನ ಮೇಲಿನ ತೀರ್ವೇ ಬಗ್ಗಾಗಿ ಒಂದು ಸ್ಟಾಂಪು ಹಚ್ಚಿದ ರಶೀತಿಯು ಕಂಟ್ರಾಕ್ಟುದಾರ ಯಾ ಆತನ ಏಜಂಟಿನಿಂದ ರುಜು ಮಾಡಲ್ಪಟ್ಟು ಹಾಜರ್ಮಾಡಲ್ಪಡತಕ್ಕದ್ದು.

(c). ಯಾವ ಮಾಹೆಗೆ ಸದರೀ ಮೊಬಲಗುಗಳು ಸಲ್ಲತಕ್ಕದ್ದೋ ಅದರ ಮಾರನೇ ತಿಂಗಳ 15 ನೇ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಅವು ಪಾವತಿಯಾಗದೆ ಹೋದರೆ, ಬಾಕೀ ನಿಲ್ಲುವ ತಮಾಂ ಮೊಬಲಗಿನಮೇಲೂ ಸದರೀ ತಾರೀಖುಲಾಗಾಯಿತು ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕಟ್ಟಲ್ಪಡುವದು. ಮತ್ತು ಯಾವ ತಿಂಗಳಲ್ಲಿ ಮೊಬಲಗುಗಳು ಬಾಕೀ ಯಾಗುತ್ತವೋ ಆ ತಿಂಗಳು ಕಳದ ತರುವಾಯುವೂ ಮೊಬಲಗು ಸಲ್ಲದೇ ಹೋದರೆ ಬಡ್ಡೀ ದೇಖಿಲ್ ಸಲ್ಲತಕ್ಕ ಬಾಕೀ ಮೊಬಲಗು, ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ತತ್ಕಾಲದಲ್ಲಿ ಜಾರೀ ಯಿರುವ ರೂಲ್ಸ್ನಿಂದ ವಿಧಿಸಲ್ಪಟ್ಟ ಪ್ರಕಾರವಾಗಿ, ವಟ್ಟು ಬಿಕರೀ ಕೋಠಿಗಳಲ್ಲಿರತಕ್ಕ ನಗದ್ ಮೊಬಲಗ್ ದೇಖಿಲ್

ಕಂಟ್ರಾಕ್ಟದಾರನ ಸ್ವತ್ತಿನ ಜಪ್ತೀ ಹರಾಜು ಮೂಲಕವಸೂಲ್‌ಮಾಡಲ್ಪಡತಕ್ಕದ್ದು. ಮತ್ತು ಬೆಂಗಳೂರು ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲೆ, ಕಂಟ್ರಾಕ್ಟು ರದ್ದು ಮಾಡಲ್ಪಟ್ಟಿರುತ್ತೆಂದು ತಿಳಿಸುವದಕ್ಕೂ, ಕಂಟ್ರಾಕ್ಟದಾರನಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳುವಂತೆ ಅಪ್ಪಣೆ ಮಾಡುವದಕ್ಕೂ, ಮತ್ತು ಕಂಟ್ರಾಕ್ಟು ಕಾಲದ ಪೈಕಿ ಉಳಿದ ಕಾಲದಲ್ಲಿ ಕಂಟ್ರಾಕ್ಟದಾರನ ಖರ್ಚಿಗೂ ಲುಕ್ಸಾನಿಗೂ ವಳಪಟ್ಟು ಬಾಬು ಅಮಾನಿಯಲ್ಲಾಗಲೀ ಅನ್ಯಥಾ ಆಗಲೀ ಇಡುವದಕ್ಕೂ ಸಹ ದಿವಾನರವರ ಯಿಖ್ತ್ಯಾರಿಗೆ ಸೇರಿರುತ್ತದೆ.

II. ಪ್ರತಿ ಸಾಲಿನ ಲೆಖ್ಖಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಖೈದ್ ಮಾಡಲ್ಪಡತಕ್ಕದ್ದು. ಒಂದು ಸಾಲಿನಲ್ಲಿ ಕೊಡಲ್ಪಟ್ಟ ಸಾರಾಯಿ ಮೇಲೆ ಗವರ್ನಮೆಂಟಿಗೆ ಸಲ್ಲತಕ್ಕ ತೆರಿಗೆಯು ಆಸಾಲಿಗೆ ಕರಾರ್ ಮಾಡಿದ ಕಮ್ಮೀ ಹುಟ್ಟುವಳಿಗೆ ಜಾಸ್ತೀ ಆದರೆ, ಅಂಥಾ ಜಾಸ್ತೀಯಾದ ಮೊಬಲಗಿನ ಮೇಲೆ ರೂಪಾಯಿ 1 ಕ್ಕೆ 1 ಆಣೆಗೆ ಸಮನಾಗಿ, ಇಜಾರೇದಾರನಿಂದ ಸಲ್ಲಬೇಕಾದ ತೆರಿಗೇ ದೆಶೆಯಿಂದ ವಜಾ ಕೊಡಲ್ಪಡುವದು. ಆದರೆ ವಂದು ವರುಷದ ಜಾಸ್ತೀ ಮೊಬಲಗು, ಇಜಾರೇ ಪೈಕೀ ಯಾವದಾದರೂ ಇತರ ಸಾಲಿನ ಕರಾರ್ ಮಾಡಿದ ಹುಟ್ಟುವಳೀ ಮೊಬಲಗಿನಲ್ಲಿ ಕಮ್ಮೀ ಬೀಳತಕ್ಕ ಯಾವ ಮೊಬಲಗನ್ನಾಗಲೀ ಭರ್ತೀ ಮಾಡುವಬಗ್ಗೆ ಉಪಯೋಗಿಸುವದಿಲ್ಲ.

III. (*a*). ಕಂಟ್ರಾಕ್ಟದಾರನು ಬೆಂಗಳೂರು ಒಳಿಯುಣ ಸರ್ಕಾರಡಿಸ್ಟಿಲೇರಿಯ ಆವರಣದೊಳಗಾಗಲೀ ಅಥವಾ VIIನೇ ಷರತ್ತಿನಲ್ಲಿ ವಿವರಿಸಲ್ಪಟ್ಟಂತೆ ಇತರ ಸ್ಥಳದಲ್ಲಾಗಲಿ ಷರಾಬ್ ತಯಾರ್ ಮಾಡುವಂತೆಯೂ ಮತ್ತು ಡೆಪ್ಯುಟಿಕಮ್ಮಿಷನರಿಂದ ಮೊಕರರ್ ಮಾಡಲ್ಪಡತಕ್ಕಂಥಾ ಸ್ಥಳಗಳೊಳಗೆ ಬಟ್ಟಿ ಕೋಠಿಗಳನ್ನು ಸ್ಥಾಪಿಸುವಂತೆಯೂ ನಿಯಮಿಸಲ್ಪಡತಕ್ಕದ್ದು. ಡೆಪ್ಯುಟಿ ಕಮ್ಮಿಷನರಿಂದಾಗಲಿ ಅಥವಾ ಆಬಗ್ಗಾಗಿ ಮೊಕರರ್ ಮಾಡಲ್ಪಟ್ಟ ಯಾವ ಉದ್ಯೋಗಸ್ಥರಿಂದಾಗಲಿ ಯಾ ತತ್ಕಾಲದಲ್ಲಿ ಗವರ್ನಮೆಂಟ್ ಡಿಸ್ಟಿಲೆರಿ ಚಾರ್ಜುವುಳ್ಳ ಹೆಡ್ ಸೂಪರ್‌ವೈಜರ್ ಅಥವಾ ಇತರ ಆಫೀಸರರಿಂದಾಗಲೀ ತನಖಿ ನೋಡುವಬಗ್ಗೆ ಸರ್ವಕಾಲಗಳಲ್ಲಿಯೂ ಡಿಸ್ಟಿಲೇರಿ ಮತ್ತು ಕೋಠಿಗಳು ಖುಲ್ಲಾವಾಗಿರತಕ್ಕದ್ದು; ಮತ್ತು ಸದರೀ ಡಿಸ್ಟಿಲೇರಿ ಚಾರ್ಜುವುಳ್ಳ ಹೆಡ್ ಸೂಪರ್‌ವೈಜರ್ ಯಾ ಇತರ ಆಫೀಸರರವಶಕ್ಕೆ, ರೋಜೀನಾ ಕೆಲಸಮುಗಿದ ತರುವಾಯ ಡಿಸ್ಟಿಲೇರಿಯನ್ನು ಮೊಹರ್‌ಮಾಡಿ ಬೀಗದಕೈಗಳು ಸಹ ರೇಪಲ್ಲಿ ಭದ್ರಪಡಿಸತಕ್ಕ ಬಗ್ಗಾಗಿ, ಒಪ್ಪಿಸಲ್ಪಡತಕ್ಕದ್ದು. ಯಾವ ಷರಾಬನ್ನೂ ಸದರೀ ಬಗ್ಗೆ ಮೊಕರರ್ ಮಾಡಲ್ಪಡುವ ಒಬ್ಬ ಉದ್ಯೋಗಸ್ಥನಿಂದ ಅಳತೇಮಾಡಲ್ಪಟ್ಟು ಅಜಮಾಯಿಷೀ ಮಾಡಲ್ಪಟ್ಟ ಹೊರತು ಡಿಸ್ಟಿಲೇರಿಯಿಂದಹೊರಗೆ ತೆಗದುಕೊಂಡು ಹೋಗಕೂಡದು. ಡಿಸ್ಟಿಲೇರಿಕಟ್ಟಡಗಳನ್ನೂ ನೀರನ್ನೂ ಉಪಯೋಗಿಸತಕ್ಕಬಗ್ಗೆ 250ರೂಪಾಯಿಗಳ ಬಾಡಿಗೆಯನ್ನು ಕಂಟ್ರಾಕ್ಟದಾರನು ಮಾಹೆಯಾನಾ ಗವರ್ನಮೆಂಟಿಗೆ ಸಂದಾಯ ಮಾಡಲ್ಪಡುವಂತೆಯೂ ಸದರೀ ಕಟ್ಟಡಗಳನ್ನು ನೀರುಕಾಲ್ವೆಗಳನ್ನೂ ಪೂರಾ ದುರಸ್ತು ಸ್ಥಿತಿಯಲ್ಲಿ ಇಟ್ಟುಕೊಂಡಿರುವಂತೆಯೂ ನಿಯಮಿಸಲ್ಪಡತಕ್ಕದ್ದು. ಯಗ್ಜಿಕ್ಯುಟಿವ್ ಇಂಜಿನಿಯರವರು ಸದರೀ ಕಟ್ಟಡಗಳನ್ನೂ ಜಲಾಧಾರದ ಕಾಲ್ವೆಗಳನ್ನೂ ಮೂರುತಿಂಗಳಿಗೆ ವಂದಾವರ್ತಿ ತನಖಿನೋಡುವರು ಮತ್ತು ಆಬಗ್ಗಾಗಿ ಡಿಸ್ಟಿಲೇರಿಯಲ್ಲಿಡಲ್ಪಟ್ಟ ವಂದುಬುಕ್ಕಿನಲ್ಲಿ ಕಟ್ಟಡಗಳ ಮತ್ತು ನೀರುಕಾಲ್ವೆಗಳ ಸ್ಥಿತಿಯನ್ನು ಷರಾ ಬರದು ಖಯಿಂದ ನಡಿಸಲ್ಪಡಬೇಕಾದ ಕೆಲಸಗಳನ್ನು ಹಾಜರಿರತಕ್ಕ ಕಂಟ್ರಾಕ್ಟರು ಯಾ ಅವರ ಏಜಂಟು ಅಥವಾ ಇತರ ಉದ್ಯೋಗಸ್ಥನಿಗೆ ತಿಳಿಸತಕ್ಕದ್ದು. ಈ ಬಾಬತು ಷರಾಗಳ ನಕಲು ಡೆಪ್ಯುಟಿ ಕಮ್ಮಿಷನರವರಿಗೂ, ಮತ್ತೊಂದು ಪ್ರತಿ ಕಂಟ್ರಾಕ್ಟದಾರನಿಗೂ ಕಳುಹಿಸಲ್ಪಡತಕ್ಕದ್ದು. ಯಗ್ಜಿಕ್ಯೂಟಿವ್ ಯಿಂಜನಿಯರವರು ತನಿಖಿನೋಡಿದ ಲಾಗಾಯತು 15 ದಿವಸಗಳೊಳಗಾಗಿ, ಅವಶ್ಯಕಗಳಾದ ಕಾಮಗಾರಿಯು ಕಂಟ್ರಾಕ್ಟದಾರನಿಂದ ನಡಿ

ಸಲ್ಪಡದೇಹೋದರೆ, ಯೆಕ್ಸಿಕ್ಯೂಟಿವ್ ಯಿಂಜನೀಯರರವರು ಕೂಡ್ಲೇ ಅಮಾನಿಯಲ್ಲಿ ಸದರೀ ಕಾವು ಗಾರಿಯನ್ನ ಜರಗಿಸತಕ್ಕದ್ದು; ಮತ್ತು ಡೆಪ್ಯುಟಿ ಕಮ್ಮಿಷನರರವರು ಆ ಬಾಬತು ಲಾಗವಡನ್ನು ತಪ್ಪಿ ಹೋದ ಕಂಟ್ರಾಕ್ಟು ದಾರನಿಂದ, ಜವಿರ್ಹ್ ಕಂದಾಯದ ಬಾಕೀ ವಸೂಲಿಬಗ್ಯೆ ತತ್ಕಾಲದಲ್ಲಿ ಜಾರೀ ಇರುವ ರೂಲ್ಸ್ ಅನುಸರಿಶಿ ವಸೂಲ್ಮಾಡಬೇಕಾಗಿರುತ್ತೆ:

(b.) ಕಂಟ್ರಾಕ್ಟುದಾರನು, ಡಿಸ್ಟಿಲೇರಿ ಶಿಬ್ಬಂದಿ, ಮೇಲ್ ತನಿಖಿ ಮತ್ತು ಪೈಗಸ್ತಿ ಯಿಲಾಖಾ ಮತ್ತು ಯಿವುಗಳಿಗೆ ಸಂಬಂಧಪಟ್ಟ ಕ್ಯಾಂಟಿಂಜಂಟ್ ಖರ್ಚು ಯಿವುಗಳ ಲಾಗವಡಿಗೋಸ್ಕರ, ಡಿಸ್ಟಿಲೇರಿ ಯಿಂದ ಸರಬರಾಯಿ ಮಾಡಲ್ಪಟ್ಟ ತಮಾಂ ಷರಾಬಿನ ಮೇಲೆ ಗ್ಯಾಲ್ಲನ್ ವಂದಕ್ಕೆ ಅರ್ಧಾಣೆಪ್ರಕಾರ ಆಗುವ ತೀರ್ವೆಯನ್ನು ಮಾಹೇಯಾನಾ ಸಲಾಯಿಸತಕ್ಕದ್ದು.

(c.) ಮೇಲ್ಕಂಡ ಯೆರಡು ಕಲಂಗಳಲ್ಲಿ ನಮೂದಾದ ಡಿಸ್ಟಿಲೆರಿ ಕಟ್ಟಡಗಳ ಬಾಡಿಗೆ ಮತ್ತು ಶಿಬ್ಬಂದಿ ತೀರ್ವೆ ಮೊಬಲಗುಗಳು, ಅವು ಬಾಕಿಯಾಗುವ ಮಾರನೇ ತಿಂಗಳ 15ನೇ ತಾರೀಖಿನಲ್ಲಿ ಮಾಹೆವಾರಿ ಖಿಸ್ತಿ ನೊಂದಿಗೆ ಬೆಂಗಳೂರು ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಕಂಟ್ರಾಕ್ಟುದಾರನಿಂದ ತಪ್ಪದೆ ಪಾವತೀ ಮಾಡಲ್ಪ ಡಬೇಕು. ಹೀಗೆ ಪಾವತಿ ಮಾಡದೇ ತಪ್ಪಿದರೆ ಈ ಬಾಬತು ಬಾಕಿಯು, ತತ್ಕಾಲದಲ್ಲಿ ಜಾರಿಯಿ ರುವ ರೂಲ್ಸು ಅನುಸರಿಸಿ ಜವಿರ್ಹ್ ಕಂದಾಯದ ಬಾಕೀಯಂತೆ ವಸೂಲ್ ಮಾಡಲ್ಪಡುವದು.

IV. (a.) 1887ನೇ ಇಸವಿ ಏಪ್ರಲ್ 1ನೇ ತಾರೀಖಿನಲ್ಲಿ ದಾಸ್ತಾನ್ ಯಿರಬಹುದಾದ ಯಾವ ಷರಾಬನ್ನಾ ಗಲೀ ಹಳೇ ಕಂಟ್ರಾಕ್ಟುದಾರರು, ದಿವಾನರವರ ಮಂಜೂರಾತಿನಿಶಿ ಡಿಪ್ಯುಟಿ ಕಮ್ಮಿಷನರಿಂದ ಗೊತ್ತು ಮಾಡಲ್ಪಡುವ ಈಡು ಮೊಬಲಗನ್ನು ಹೊಸ ಕಂಟ್ರಾಕ್ಟುದಾರನಿಂದ ಪಡೆದು ಅವನಿಗೆ ಒಪ್ಪಿಸತಕ್ಕ ದ್ದು. ಅಂಥಾ ದಾಸ್ತಾನು ಸಾಧಾರಣವಾಗಿ ಕಳದ 36 ತಿಂಗಳುಗಳಲ್ಲಿ ಮಾಹೆಯಾನಾ ತಯಾರ್ಮಾಡ ಲ್ಪಟ್ಟ ಸರಾಸರಿ ತೇದಾದಿಗಿಂತಲೂ ಜಾಸ್ತಿಯಾಗಿರಕೂಡದು.

(b.) ಹೊಸ ಕಂಟ್ರಾಕ್ಟುದಾರನು ಆ ಪ್ರಕಾರ ಅಪೇಕ್ಷಿಸಿದಲ್ಲಿ 1887ನೇ ಇಸವಿ ಮಾರ್ಚಿ ಗುರ್ರೇ ತಾರೀ ಖು ಲಾಗಾಯತು "ಬೆಳೆ" ಹಾಕುವದನ್ನು ಹಳೇ ಕಂಟ್ರಾಕ್ಟುದಾರನು ಮೊಕೂಫ್ ಮಾಡತಕ್ಕದ್ದು, ಮತ್ತು ಅದೇ ತಾರೀಖಾರಭ್ಯ ಹೊಸ ಕಂಟ್ರಾಕ್ಟುದಾರನು ಕೆಲಸಗಳು ಆರಂಭಿಸತಕ್ಕ ಬಗ್ಗ್ಯಾಗಿ ಕ ಟ್ಟಡವನ್ನು ಖಾಲಿ ಮಾಡತಕ್ಕದ್ದು. ಈ ವಿಷಯದಲ್ಲಿ 1887ನೇ ಇಸವಿ ಫೆಬ್ರುವರೀ 22ನೇ ಮುಕ್ಕಾಮಿ ನವಳಗಾಗಿ ಹಳೇ ಕಂಟ್ರಾಕ್ಟುದಾರರಿಗೆ ಬರಹಮೂಲಕವಾಗಿ ನೊಟೀಸ್ ಕೊಡಲ್ಪಡತಕ್ಕದ್ದು. ಹಾಂ ಗೆ ನೊಟೀಸ್ ಕೊಡಲ್ಪಡದೆ ಹೋದರೆ ಹಳೇ ಕಂಟ್ರಾಕ್ಟುದಾರನು 1887ನೇ ಇಸವಿ ಮಾರ್ಚಿ 31ನೇ ವರ್ಕ್ಕಂ ಪರಿಯಂತ ಬಟ್ಟಿಯಿಳಿಸತಕ್ಕ ಕೆಲಸ ಚಲಾಯಿಸತಕ್ಕದ್ದು, ಮತ್ತು ಆ ತಾರೀಖು ವಳಗಾಗಿ ಹಾಜರಿರತಕ್ಕ ತಮಾಂ ಬೆಳೆಯನ್ನು ಝೂಡೆಯಾಗಿ ಉಪಯೋಗಿಸತಕ್ಕದ್ದು.

(c.) ಹಳೇ ಕಂಟ್ರಾಕ್ಟುದಾರರಿಂದ ಶಾಶ್ವಿತವಾಗಿ ಸ್ಥಾಪಿಸಲ್ಪಟ್ಟ ಯಂತ್ರಗಳು ವಿನಾ ಆತನಿಗೆ ಶೇರಿದ ಇತರ ತಮಾಂ ಸಾಮಾನುಗಳು, ಈ ಷರತ್ತನುಸರಿಸಿ ಷರಾಬು ತಯಾರ್ಮಾಡುವದು ಮೋಖೂಫ್ ಮಾಡಿದ ಬಂದು ವಾರದವಳಗಾಗಿ ಆಚೆಗೆ ಸಾಗಿಸಲ್ಪಡತಕ್ಕದ್ದು. ಇದಕ್ಕೆ ತಪ್ಪಿದರೆ, ಡೆಪ್ಯುಟಿ ಕಮ್ಮಿಷನ ರವರು, ಹಳೇ ಕಂಟ್ರಾಕ್ಟುದಾರನ ಖರ್ಚಿಗೆ ವಳಪಟ್ಟು ಅವುಗಳು ಆಚೆಗೆ ಸಾಗಿಸಲ್ಪಡುವ ಬಗ್ಯೆ ಏರ್ಪಾಡು ಮಾಡುವರು.

(d.) ಹಳೇ ಕಂಟ್ರಾಕ್ಟುದಾರರಿಗೆ ಶೇರಿದ ಯಾವದಾದರೂ ದಾಸ್ತಾನ್ ಮತ್ತು ಯಂತ್ರ ಸಾಧನಗಳು ಹೊಸ ಕಂಟ್ರಾಕ್ಟುದಾರನಿಗೆ ಅವಶ್ಯಕವಿದ್ದಲ್ಲಿ ಆತನು ಅವುಗಳನ್ನು ನ್ಯಾಯವಾದ ಖರೀದಿಗೆ ತೆಗೆದು ಕೊಳ್ಳು ವದಾಗಿ 1887ನೇ ಇಸವಿ ಮಾರ್ಚಿ 1ನೇ ತಾರೀಖಿನ ವಳಗಾಗಿ ಹಳೇ ಕಂಟ್ರಾಕ್ಟುದಾರರಿಗೆ ನೋ ಟೀಸ್ ಕೊಡತಕ್ಕದ್ದು; ಮತ್ತು ಅಂಥಾ ಖರೀದಿಯಲ್ಲಿ ತಕರಾರ್ ಉಂಟಾದರೆ ಡೆಪ್ಯುಟಿ ಕಮ್ಮಿಷನರ

ವರು ಅವುಗಳ ನ್ಯಾಯವಾದ ಖರೀದಿಯನ್ನು ಗೊತ್ತು ಮಾಡತಕ್ಕದ್ದು. ಪರಂತು ಹಾಗೆ 1887ನೇ ಇಸವಿ ಮಾರ್ಚಿ 1ನೇ ತಾರೀಖುವಳಗಾಗಿ ನೋಟೀಸ್ ಕೊಡಲ್ಪಡದೆಹೋದರೆ, ಹಳೇ ಕಂಟ್ರಾಕ್ಟುದಾರರು ಅವುಗಳನ್ನು ಸಾಗಿಸಿಕೊಂಡು ಹೋಗುವದಕ್ಕೆ ಸ್ವತಂತ್ರರಾಗಿರತಕ್ಕದ್ದು, ಮತ್ತು ಈ ವಿಷಯದಲ್ಲಿ ಹೊಸಕಂಟ್ರಾಕ್ಟುದಾರನು ತನ್ನ ಯಿಷ್ಟ ಪ್ರಕಾರ ಏರ್ಪಾಡು ಮಾಡಿಕೊಳ್ಳಬಹುದು.

(e.) ಸದರೀ ಷರತ್ತಿನಲ್ಲಿ ಕಂಡ ರೂಲ್ಸ್‌ಗಳು, ಈಗ ನಡಿಸಿಂವ ಬದಲಾವಣೆಗಳೊಡನೆ ಹಾಲೀದರಖಾಸ್ತು ಅಪೇಕ್ಷಿಸಲ್ಪಟ್ಟಿರುವ ಕಂಟ್ರಾಕ್ಟಿಗೆ ಅನ್ವಯಿಸತಕ್ಕವು.

V. ತಯಾರ್ಮಾಡಲ್ಪಡುವ ಸಾರಾಯಿಯು, ಒಳ್ಳೇ ಗುಣವುಳ್ಳದ್ದಾಗಿರತಕ್ಕದ್ದು. ಬಟ್ಟಿ ಇಳಿಸುವಲ್ಲಿ ಉಪಯೋಗಿಸಲ್ಪಡತಕ್ಕ ಪದಾರ್ಥಗಳು, ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಟ್ಟು ಒಳ್ಳೇ ಗುಣವುಳ್ಳವಾಗಿರಬೇಕಾದ್ದಲ್ಲದೆ ಅವುಗಳು ಡಿಸ್ಟಿಲೇರಿಯಲ್ಲಿ ತೆಗದುಕೊಳ್ಳಲ್ಪಡುವದಕ್ಕೆ ಮುಂದಾಗಿ ಡಿಸ್ಟಿಲೇರಿ ಸೂಪರ್‌ವೈಜರಿಗೆ ಅಥವಾ ಈ ಬಗ್ಯೆ ನೊಕರರ್ ಮಾಡಲ್ಪಡತಕ್ಕ ಇತರ ಉದ್ಯೋಗಸ್ಥನಿಗೆ ತೋರಿಸಲ್ಪಟ್ಟು ಅವರಿಂದ ಪ್ಯಾಸ್ ಮಾಡಲ್ಪಡತಕ್ಕದ್ದು. ಸಾರಾಯಿ ಬಟ್ಟಿ ಇಳಿಸುವಲ್ಲಿ ಆರೋಗ್ಯಕ್ಕೆ ವಿರುದ್ಧವಾದ ಯಾವ ಪದಾರ್ಥಗಳನ್ನೂ ಉಪಯೋಗಿಸಕೂಡದು ಅಥವಾ ಷರಾಬ್ ತಯಾರ್ಮಾಡಲ್ಪಟ್ಟ ತರುವಾಯ ಅದರಲ್ಲಿ ಹಾಕಲೂ ಕೂಡದು ಮತ್ತು ಉಪಯೋಗಿಸಲ್ಪಡುವ ಎಲ್ಲಾ ಪದಾರ್ಥಗಳೂ ಪ್ರಥಮತಃ ವಿಧಿಸಲ್ಪಟ್ಟ ದಾಮೂಷಾಯಿ* ಪ್ರಕಾರ ಇರತಕ್ಕವು, ಅಥವಾ ಕಂಟ್ರಾಕ್ಟುದಾರನಿಂದ ರೋಜೇನಾ ತಯಾರ್ಮಾಡಲ್ಪಡುವದರ ಫಲಿತಾಂಶಗಳು ಸರ್ಕಾರ್ ಆಫೀಸರುಗಳಿಂದ ನ್ಯಾಯವಾದ ತನಿಖಿ ನಡಿಸಲ್ಪಡಲಿಕ್ಕೋಸ್ಕರ ಐಯಿಂದ ಗವರ್ನಮೆಂಟಿನವರಿಂದ ನಿರ್ಣಯಿಸಲ್ಪಡುವ ದಾಮೂಷಾಯಿ ಪ್ರಕಾರವಾಗಲಿ ಇರತಕ್ಕದ್ದು. "ಬೆಳೆ" ಬಟ್ಟಿ ಇಳಿಸಲ್ಪಡುವ ಪರಿಯಂತ ಅದರ ಬಲವನ್ನು ಆಯಾ ಕಾಲಗಳಲ್ಲಿ ಗೊತ್ತು ಮಾಡುವದಕ್ಕೋಸ್ಕರ ಅಂಗೀಕರಿಸಲ್ಪಟ್ಟಿರುವ ಲಾಂಗ್ ಅಂಡ್ ಡಿಂಗ್ ಅಂಡ್ ಫೇಜಯುವರ ಸಾಚರೋಮಿಾಟರಸ್ ಯಂತ್ರವು ಕಂಟ್ರಾಕ್ಟುದಾರರಿಂದ ಇಡಲ್ಪಟ್ಟು ಯಕಸೈಸಿಯಾನೆ ಆಬಕಾರಿ ಆಫೀಸರುಗಳಿಂದ ದೃಢಪಡಿಸಿ ತನಿಖಿ ನೋಡಲ್ಪಡುವಬಗ್ಯೆ ಅವುಗಳ ನಿಜವಾದ ವ ಕರಾರ್‌ವಾಕಾ ಅದ ಲೆಖ್ಖ ಇಡಲ್ಪಡತಕ್ಕದ್ದು.

*ಯರಡು ಮಣಗಳ ತಾಟಿಬೆಲ್ಲ ಅಥವಾ ಕಾಕಂಬಿಗೆ ಮೂರು ಮಣಗಳ ವಳ್ಳೇಗನ್ನಾ ಬೆಲ್ಲಾ ಮತ್ತು ಬೆಲ್ಲಾ ಮಣ ವಂದಕ್ಕೆ ಮೂರು ಸೇರುಗಳುಳ್ಳ ವಳ್ಳೇ ಬಬ್ಬುಡಿ (ಕೆಂಪುಚಕ್ಕೆ, ಜೇಲದಚಕ್ಕೆ) ಅವಶ್ಯಕವಿದ್ದಲ್ಲಿ ಗನ್ನಾ ಬೆಲ್ಲವಂದೇ ಉಪಯೋಗಿಸಲ್ಪಡಬಹುದು.

VI. ಇಜಾರೇದಾರನು, ಡಿಸ್ಟಿಲೇರಿಯಲ್ಲಿಯೂ, ಪ್ರತಿ ಕೋಠಿಯಲ್ಲಿಯೂ, ತಯಾರ್ಮಾಡಲ್ಪಡುವ ಸಾರಾಯಿಗಳ ಜಮಾಖರ್ಚುಗಳು, ತೇದಾದು, ವ ಸ್ಟ್ರೆಂಗ್ತ್, ಇವುಗಳ ಕರಾರ್‌ವಾಕಾ ಲೆಖ್ಖಗಳನ್ನೂ, ಮತ್ತು ಡಿಸ್ಟಿಲೇರಿಯಲ್ಲಿ ರೋಜೇನಾ ಜಮಾಖರ್ಚು ಆದ ಎಲ್ಲಾಪದಾರ್ಥಗಳ ಲೆಖ್ಖಗಳನ್ನೂ, ಸುದಾ ವಿಧಿಸಲ್ಪಟ್ಟ ನಮೂನೆಗಳಲ್ಲಿ ಇಡತಕ್ಕದ್ದು, ಕಂಟ್ರಾಕ್ಟುದಾರನ ಕ್ಯಾಷ್ ಲೆಖ್ಖವು ರೋಜೇನಾ ಅಲಾಹಿದಾ ದಾಖಲ್ಮಾಡಲ್ಪಟ್ಟು ದಾಸ್ತಾನ್ ಪೈಕಿ ಖರೀದೀ ಮಾಡಲ್ಪಟ್ಟ ಪ್ರತಿ ತೇದಾದಿಗೂ ವೌಚರ್ ಇಡಲ್ಪಟ್ಟುವಿಧಿಸಲ್ಪಟ್ಟ ನಮೂನೆಯಲ್ಲಿ ಕ್ಯಾಷ್ ಲೆಖ್ಖದ ಗೋಷ್ವಾರೆಯು ಮಾಹೆಯಾನಾ ತಯಾರ್ಮಾಡಲ್ಪಟ್ಟು ಕಂಟ್ರಾಕ್ಟುದಾರನಿಂದಾಗಲಿ ಅವನ ಏಜಂಟನಿಂದಾಗಲಿ ಕ್ರಮವಾಗಿ ರುಜು ಮಾಡಲ್ಪಟ್ಟು ಹೆಡ್ ಸೂಪರ್‌ವೈಜರವರಿಗೆ ಒಪ್ಪಿಸಲ್ಪಡತಕ್ಕದ್ದು. ಆತನು ಅಂಥಾ ತಮಾಂ ಲೆಖ್ಖಗಳನ್ನೂ ಡೆಪ್ಯುಟಿ ಕಮ್ಮಿಷನರವರಿಂದಾಗಲೀ, ಹೆಡ್ ಸೂಪರ್‌ವೈಜರ್‌ಯವರಿಂದಾಗಲೀ ಅಥವಾ ಆ ಬಗ್ಯಾಗಿ ನೊಕರರ್ಮಾಡಲ್ಪಡುವ ಯಾವ ಉದ್ಯೋಗಸ್ಥನಿಂದಾಗಲೀ ತನಿಖೀ ನೋಡುವಬಗ್ಯೆ ಹಾಜರ್ ಮಾಡುವಂತೆ ಕೇಳಲ್ಪ

ಟ್ಟಾಗ ಅವುಗಳನ್ನು ಹಾಜರ್ಮಾಡತಕ್ಕದ್ದು; ಮತ್ತು ಹೆಡ್ ಸೂಪರ್‌ವೈಜರವರು ಆಗಿಂದಾಗ್ಯೆ ಅಪೇಕ್ಷಿಸಲ್ಪಡುವಂಥಾ ತಪಶೀಲಿಗಳುಳ್ಳ ದೃಢಪಡಿಸಲ್ಪಟ್ಟ ಯಥಾ ನಕಲ್‌ಗಳನ್ನು ಅವರಿಗೆ ಒಪ್ಪಿಸತಕ್ಕದ್ದು.

VII. ಒಂದು ತಿಂಗಳಿಗೆ ಆಗುವಷ್ಟು ಮತ್ತು 16,000 ಗ್ಯಾಲನ್‌ಗಳಿಗೆ ಕಡಿಮೆಯಿಲ್ಲದ ಸಾರಾಯಿಯನ್ನು ಯಾವಾಗ್ಯೂ ಹಾಜರಿಯಲ್ಲಿಟ್ಟುಕೊಂಡಿರಲಿಕ್ಕೆ ಬಟ್ಟೀದಾರನು ಬದ್ಧನಾಗಿರತಕ್ಕದ್ದು. ಮತ್ತು 1887ನೇ ಇಸವಿ ಏಪ್ರಿಲ್ 1ನೇ ತಾರೀಖುಲಾಗಾಯಿತು ಈ ಮೇರೆ ದಾಸ್ತಾನ್ ಹಾಜರಿಡುವಬಗ್ಯೆ ಆತನು ಸದರೀ ತಾರೀಖಿಗೆ ಮುಂಚೆಯೇ ಬಟ್ಟೀ ಕೆಲಸಕ್ಕೆ ಆರಂಭಿಸಲು ಅವಕಾಶ ಕೊಡಲ್ಪಡತಕ್ಕದ್ದು; ಪರಂತು ಹಾಂಗೆ ತಯಾರ್ಮಾಡಲ್ಪಟ್ಟ ಯಾವ ಶರಾಬೇಲಾಗಲೀ, 1887ನೇ ಇಸವಿ ಏಪ್ರಿಲ್ 1ನೇತಾರೀಖಿಗೆ ಮುಂಚಿತವಾಗಿ ತನ್ನ ವಶದಿಂದಲಾಗಲೀ ತನ್ನ ಕೈಕೆಳಗಣ ಉದ್ಯೋಗಸ್ಥನ ವಶದಿಂದಲಾಗಲೀ, ಸದರೀ ತಾರೀಖುವರಿಗೆ ಮೊಹರ್ ಸಮೇತ ಅಮಾನತ್ ಇರುವಬಗ್ಯೆ ಬಟ್ಟಿ ಕೋಠಿಗಳಲ್ಲಿ ತಡೆದಿಡುವಬಗ್ಯೆ ಹೆಡ್ ಸೂಪರ್‌ವೈಜರವರಿಂದ ರುಜು ಮಾಡಲ್ಪಟ್ಟ ಪ್ಯಾಶಿನ ಆಧಾರದ ಮೇಲೆ ಸಾಗಿಸಲ್ಪಡುವದು ವಿನಾ, ಅನ್ಯಥಾ ಮಾರಲ್ಪಡಕೂಡದು ಯಾ ಸಾಗಿಸಲ್ಪಡಕೂಡದು. ಕಂಟ್ರಾಕ್ಟದಾರನು ತಮಾಂ ತಾಲ್ಲೂಕು ಕಸಬಾ ಜಾಗಾಗಳಲ್ಲಿಯೂ, ದೊಡ್ಡ ಷಹರ್‌ಗಳಲ್ಲಿಯೂ ಮತ್ತು ಹೆಡ್ ಸೂಪರ್‌ವೈಜರವರು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿನಿಶಿ ಅಥವಾ ಮಂಜೂರಾತಿ ನಿರೀಕ್ಷಣೆ ಮೇಲೆ ಸದರೀ ಡೆಪ್ಯುಟಿ ಕಮಿಷನರವರ ಅಧಿಕಾರದ ಸ್ಥಳ ಸರಹದ್ದಿಗೆ ಒಳಪಟ್ಟು ಮತ್ತು ಚಿಲ್ಲರೆ ಬಿಕರೀದಾರರ ಅನುಕೂಲ್ಯತೆಗೆ ಸಹಕಾರಿಯಾದ್ದೆಂಬದಾಗಿ ಗೊತ್ತುಮಾಡುವಂಥಾ ಇತರ ಸ್ಥಳಗಳಲ್ಲಿ ಯೂಸುದಾ ಬಟ್ಟಿ ಅಂಗಡಿಗಳನ್ನು ಸ್ಥಾಪಿಸುವವಕ್ಕೆ ಅಪ್ಪಣೆಕೊಡಲ್ಪಡತಕ್ಕದ್ದು. ಕಂಟ್ರಾಕ್ಟದಾರನು, ಅಂಥಾ ವಟ್ಟು ಅಂಗಡಿಗಳಲ್ಲಿ ಯಾವಾಗ್ಯೂ ವಟ್ಟು ಬಿಕರೀ ಲೈಸೆನ್ಸ್‌ರೂಲ್ಸಿನಲ್ಲಿ ವಿವರಿಸಿರುವಂತೆ, ದಾಸ್ತಾನ್ ಇರುವ ಪ್ರದ್ದಿಶ್ಯ ಕ್ರಮವಾಗಿ ಸರಬರಾಯಿ ಮಾಡತಕ್ಕದ್ದು. ಅಂಥಾ ವಟ್ಟು ಬಿಕರೀ ಅಂಗಡಿಗಳಲ್ಲಿ "ದಾಸ್ತಾನ್ ಕಮ್ಮಿ ಯಿದ್ದರೂ" ಮತ್ತು "ದಾಸ್ತಾನ್ ಇಲ್ಲದಿದ್ದರೂ" ಕಮ್ಮಿ ಯಿರುವ ತೇದಾದಿಗೆ ಯರಡರಷ್ಟು ಕಿಮ್ಮತು ಜುರ್ಮಾನೇ ತರೀಕ್ ವಸೂಲ್ಮಾಡಲ್ಪಟ್ಟು ಆ ಪೈಕಿ ಚಿಲ್ಲರೆ ಬಿಕರೀದಾರನಿಗೆ ನಷ್ಟವೇನಾದರೂ ಸಂಭವಿಸಿ ಯಿದ್ದಲ್ಲಿ ಅದುಪಾವತೀ ಮಾಡಲ್ಪಡುವದು. ಹಾಲೀ ವಟ್ಟು ಅಂಗಡಿಗಳು ಯಿರತಕ್ಕ ಸ್ಥಳಗಳ ಒಂದು ಪಟ್ಟಿಯೂ, ಕಂಟ್ರಾಕ್ಟದಾರನು ಡೆಪ್ಯುಟಿ ಕಮ್ಮಿಷನರಿಗಾಗಲಿ ಹೆಡ್ ಸೂಪರ್‌ವೈಜರವರಿಗಾಗಲೀ ದರಖಾಸ್ತು ಮಾಡಿ ಪಡಿಯಬಹುದು. ಕಂಟ್ರಾಕ್ಟದಾರನು, ದುಕಾನ್ ಒಂದಕ್ಕೆ ಮಾಹೆಯಾನಾ 2 ರೂಪಾಯಿನಂತೆ ಗೊತ್ತುಮಾಡಲ್ಪಟ್ಟ ಲೈಸೆನ್ಸ್ ಫೀಯನ್ನು ಪಾವತೀ ಮಾಡತಕ್ಕದ್ದು.

VIII. ಕಂಟ್ರಾಕ್ಟದಾರನು, XI ಮತ್ತು XIIIನೇ ಷರತ್ತುಗಳಲ್ಲಿನ ರೂಲ್ಸ್‌ಗಳಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಹೊರ್ತು, ಅನ್ಯಥಾ ಡಿಸ್ಟಿಲೇರಿಯಲ್ಲಾಗಲೀ ಬಟ್ಟಿ ಬಿಕರೀ ಅಂಗಡಿಗಳಲ್ಲ್ಯಾಗಲೀ ಸಾರಾಯಿಯನ್ನು ಚಿಲ್ಲರೆಪುರೋಖ್ತು ಮಾಡಕೂಡದು.

IX. ಚಿಲ್ಲರೆ ಪುರೋಖ್ತು ಅಂಗಡಿಗಳು, ಡಿಸ್ಟ್ರಿಕ್ಟ ಜಾತ ಡೆಪ್ಯುಟಿ ಕಮ್ಮಿಷನರುಗಳ ವಿಚಾರಣೆಯಲ್ಲಿಯೂ ಮತ್ತು ಮ್ಯುನಿಸಿಪಲ್ ಷಹರ್‌ಗಳಲ್ಲಿ, ಹಾಂಗೆ ದಿವಾನ್‌ರವರಿಂದ ಅಪ್ಪಣೆ ಮಾಡಲ್ಪಟ್ಟರೆ, ಅಂಥಾ ಷಹರ್‌ಗಳ ಮ್ಯುನಿಸಿಪಲ್ ಪ್ರೆಸಿಡೆಂಟರು ಯಾ ವೈಸ್ ಪ್ರೆಸಿಡೆಂಟರ ವಿಚಾರಣೆಯಲ್ಲಿಯೂ ಇರತಕ್ಕವು. ಯಾವ ಅಂಗಡಿಗಳನ್ನಾಗಲೀ ಪಬ್ಲಿಕ್ ಜರೂರಾತಿ ಸಬಬಿನ ಮೇಲೆ, ಇಜಾರೆದಾರನು ತನಿಗೆ ಈಡು ಮೊಬಲಗು ಕೊಡಬೇಕೆಂದು ಕೇಳುವ ಹಕ್ಕಿಲ್ಲದೇನೇ, ಮುಚ್ಚುವಂತೆ ಹುಕುಂ ಮಾಡಲಿಕ್ಕೆ ಅವರು ಅರ್ಹರಾಗಿರತಕ್ಕದ್ದು. ಜಾತ್ರೆಗಳು, ಸಂತೆಗಳು ಮತ್ತು ಹಬ್ಬಗಳಲ್ಲಿ ಬಟ್ಟಿ ಕೋಠಿಗಳು ಮತ್ತು ಚಿಲ್ಲರೆ ಪುರೋಖ್ತು ಅಂಗಡಿಗಳನ್ನು ಸೆಚ್ಛಾ ವಾಯಿದೆ ವರಿಗೆ ಖುಲ್ಲಾ ಇಡಲ್ಪಡುವ ಬಗ್ಯೆ ಅಮಲ್‌ದಾರುಗಳಿಂದ ಧಾರಾಳವಾಗಿ ಅಪ್ಪಣೆ ಕೊಡಲ್ಪಡತಕ್ಕದ್ದು.

X. (a) ಡೆಪ್ಯುಟಿ ಕಮಿಷ್ನರವರ ಮಂಜೂರಾತಿಸಿಕಿ ಅಥವಾ ಮಂಜೂರಾತಿ ನಿರೀಕ್ಷಣೆಮೇಲೆ ಹೆಡ್ ಸೂಪರ್‌ವೈಜರವರಿಂದ ಮೊಕರರ್ಮಾಡಲ್ಪಡುವ ಪ್ರಕಾರಾ, ಮೇಲ್ಕಂಡ ಆಫೀಸರರಿಂದ, ತಾಲ್ಲೂಕು ಕಸಬಾಗಳಲ್ಲಿಯೂ, ಹೋಬಳಿ ಕಸಬಾ ಜಾಗಾಗಳಲ್ಲಿಯೂ, ದೊಡ್ಡ ಹಳ್ಳಿಗಳಲ್ಲಿಯೂ ಮತ್ತು ಜನಗಳು ಆ ಬಗ್ಯಾಗಿ ಅಪೇಕ್ಷಿಸುವಂಥಾ ಇತರ ಸ್ಥಳಗಳಲ್ಲಿಯೂ ಚಿಲ್ಲರೆ ದುಕಾನಗಳಿಗೋಸ್ಕರ ವಿಧಿಸಲ್ಪಟ್ಟ ನಮೂನೆಯಲ್ಲಿ ಲೈಸೆನ್ಸಗಳು ಕೊಡಲ್ಪಡುವವು. ಹಾಲಿ ಇರತಕ್ಕ ತಮಾಂ ದುಕಾನಗಳೂ ಕಾಯಂ ಇಡಲ್ಪಡತಕ್ಕವು. 1887ನೇ ಇಸವಿ ಏಪ್ರಿಲ್ 1ನೇ ತಾರೀಖಿನಲ್ಲಿ ಅಮಲ್ದಾರರುಗಳು ಬಟ್ಟಿ ಕೋಠೀಗಳಲ್ಲಿನ ದಾಸ್ತಾನ ತನಿಖೀಮಾಡಿ ಆ ಕೈಕಿ ಹೆಂದು ಶೀಶೆ ಸಾರಾಯಿಯನ್ನು ಬಂದೋಬಸ್ತಾಗಿ ಬಿರಡೇಹಾಕಿಶಿ ಮೊಹರ್‌ಮಾಡಿಸಿ ಯಕ್ಸೈಸ್ ಆಫೀಸರ ತನಿಖೆ ವ ಅಜಮಾಯಿಷೀ ಬಗ್ಯೆ ಇಡಿಸತಕ್ಕದ್ದು. ಯಾವದಾದರೂ ವಂದು ಸ್ಥಳದಲ್ಲಿ ಯ ಚಿಲ್ಲರೆ ದುಕಾನಗಳ ಸಂಖೆಯು ಜಾಸ್ತಿ ಮಾಡಬೇಕಾದರೂ ಕಮ್ಮಿ ಮಾಡಬೇಕಾದರೂ, ಅವುಗಳಲ್ಲಿ ನಡೆದ ಬಿಕರೀಮೇಲೆ ಗೊತ್ತು ಮಾಡಲ್ಪಡತಕ್ಕದ್ದು.

(b). ಚಿಲ್ಲರೇ ಬಿಕರೀ ದುಕಾನಗಳಿಗಾಗಿ ಕೊಡಲ್ಪಡುವ ಲೈಸೆನ್ಸಗಳಿಗೋಸ್ಕರ ಯಾವ ಫೀಜೇ ಆಗಲೀ, ಶೀಮೆಯ ತಮಾಂ ಸ್ಥಳಗಳಲ್ಲಿನ ಚಿಲ್ಲರೆ ಬಿಕರೀ ದುಕಾನಗಳಲ್ಲಿ ಬಿಕರೀ ಮಾಡಲ್ಪಡತಕ್ಕ ಜಾಸ್ತೀ ತೇದಾದಿಗೋಸ್ಕರ ಯಾವ ಮೊತ್ತವಾಗಲೀ ವಸೂಲ್ ಮಾಡಲ್ಪಡತಕ್ಕದ್ದಲ್ಲಾ; ಪರಂತು ಬೆಂಗಳೂರು ಷಹರ್ ಮತ್ತು ಬೆಂಗಳೂರು ಶಿವಿಲ್ ವ ಮಿಲಿಟರಿ ಸ್ಟೇಷನಿನಲ್ಲಿ ಮಾತ್ರಾ ಮ್ಯುನಿಸಿಪಲ್ ಬೋರ್ಡಿನವರು, ಆಗಿಂದಾಗ್ಯೆ ಗವರ್ನಮೆಂಟಿನಿಂದ ಗೊತ್ತು ಮಾಡಲ್ಪಡುವಂತೆ ಅಂಥಾ ಲೈಸೆನ್ಸ ಫೀಜುಗಳನ್ನೂ ಜಾಸ್ತೀ ಮಾರಾಟದಮೇಲೆ ಮೊತ್ತವನ್ನೂ ಸುದಾ ವಸೂಲ್ ಮಾಡುತ್ತಾ ಬರುವರು.

(c). ಈ ಪ್ರಕಾರ ಮಾಫ್ ಮಾಡಲ್ಪಟ್ಟ ಲೈಸೆನ್ಸ ಫೀಜು, ಜಾಸ್ತೀ ಮಾರಾಟದಮೇಲಿನ ಮೊತ್ತ ಇವುಗಳಿಗೆ ಬದಲಾಗಿ, ಬೆಂಗಳೂರು ಷಹರ್ ಮತ್ತು ಬೆಂಗಳೂರು ಶಿವಿಲ್ ವ ಮಿಲಿಟರಿ ಸ್ಟೇಷನ ವಿನಾ ಅನ್ಯಥಾ ಇತರ ಸ್ಥಳಗಳಿಗೆ ಸರಬರಾಯಿಮಾಡಲ್ಪಟ್ಟ ತಮಾಂ ಷರಾಬಿನಮೇಲೂ ಗ್ಯಾಲನ್ ವಂದಕ್ಕೆ ಯುರಡಾಣೆ ದರವುಳ್ಳ ವಂದೇವಿಧವಾದ ಫೀಜು ವಸೂಲ್ಮಾಡಲ್ಪಡುವದು. ಕಂಟ್ರಾಕ್ಟುದಾರನು ಈ ಬಾಬತು ಫೀಜನ್ನು ಅವರ ಮಾಹೇವಾರಿ ಕಿಸ್ತು ಮೊಬಲಗಿನೊಂದಿಗೆ ಸರ್ಕಾರ ಖಜಾನೆಗೆ ಪಾವತೀಮಾಡಿ ಈ ಬಾಬತು ಮೊಬಲಗನ್ನು ಚಿಲ್ಲರೆ ಬಿಕರೀದಾರರಿಂದ XIIIನೇ ನಂಬರ್ ಷರತ್ತಿನಲ್ಲಿ ವಿವರಿಸಲ್ಪಟ್ಟ ಬಟ್ಟಿ ಬಿಕರೀ ಖರೀದಿ ಜೊತೇಲಿ ವಸೂಲ್‌ಮಾಡಿ ಕೊಳ್ಳತಕ್ಕದ್ದು. ಸದರೀ ಫೀಜನ್ನು ಕಂಟ್ರಾಕ್ಟುದಾರನು ಮೇಲ್ಕಂಡ ರೀತಿಯಾಗಿ ಪಾವತೀ ಮಾಡುವದಕ್ಕೆ ತಪ್ಪಿದರೆ ಅದು ಜಮೀನ್ ಕಂದಾಯದ ಬಾಕಿಯಂತೆ ಕಂಟ್ರಾಕ್ಟುದಾರನಿಂದ ವಸೂಲ್ಮಾಡಲ್ಪಡುವದು.

(d). ಕ್ರಮಪಡಿಸಲ್ಪಟ್ಟ ದಾರಣೆಗೆ ಮತ್ತು ವಿಧಿಸಲ್ಪಟ್ಟ ಸ್ಟ್ರೆಂಗ್ತಿನಿಂದ ಸಾರಾಯಿಯನ್ನು ಪುರೋಖ್ತು ಮಾಡುವದಕ್ಕೂ, ಜರೂರಾದ ಇತರ ಷರತ್ತುಗಳ ಬಗ್ಯೂ ಲೈಸೆನ್ಸಗಳಲ್ಲಿ ನಿಬಂಧನೆ ಮಾಡಲ್ಪಡುವದು. ಚಿಲ್ಲರೇ ಪುರೋಖ್ತುದಾರರು ಅವರಿಗೆ ಅತ್ಯಂತ ಸಮೀಪದಲ್ಲಿನ ಬಟ್ಟಿ ಅಂಗಡಿಗಳಿಂದಲೇ ಸಾರಾಯಿಯನ್ನು ಕೊಂಡುಕೊಳ್ಳತಕ್ಕದ್ದು. ಸದರೀ ಚಿಲ್ಲರೇ ಪುರೋಖ್ತುದಾರರು, ಅಕ್ರಮವಾದ ವಿಷಯಗಳೇನೂ ನಡೆಯದೆ ಇರುವದನ್ನು ನೋಡುವ ಬಗ್ಯೆ ತಮ್ಮ ಅಂಗಡಿಗಳೊಳಗೆ ಇಜಾರೇದಾರರಿಗಾಗಲಿ ಅವರ ಮುತಾಲೀಕರಿಗಾಗಲಿ ಅಬ್ಕಾರಿ ಆಫೀಸರರುಗಳಿಗಾಗಲೀ ಕ್ರಮ ಪ್ರಕಾರ ಅಧಿಕಾರಹೊಂದಿದ ಯಾವ ಸರ್ಕಾರ್ ನವುಕರನಿಗಾಗಲಿ ಅವಕಾಶ ಸಹ ಕೊಡತಕ್ಕದ್ದು, ಮತ್ತು ಪ್ರತಿದಿನ ತಾವು ತೆಗದುಕೊಳ್ಳುವ ಸಾರಾಯಿಯ ತೇದಾದ್ ವ ಸ್ಟ್ರೆಂಗ್ತು ಮತ್ತು ಸದರೀ ಬಗ್ಯೆ ಹಾಕಲ್ಪಡುವ ಖರೀ

ದಿಗಳು ಇವುಗಳ ನಿಜವಾಗಿಯೂ ಕರಾರ್ವಾಕಾ ಆಗಿಯೂ ಇರುವ ಲೆಖ್ಖಗಳನ್ನು ಇಡತಕ್ಕದ್ದಲ್ಲದೆ ಇಜಾರೇದಾರನಿಂದಾಗಲಿ, ಅವನ ಮುತಾಲೀಕನಿಂದಾಗಲೀ, ಸದರೀ ಲೆಖ್ಖ ಕೇಳುವಂತೆ ಅಧಿಕಾರ ಕೊಡಲ್ಪಟ್ಟ ಯಾವ ಸರಕಾರದ ಉದ್ಯೋಗಸ್ಥನಿಂದಾಗಲಿ, ಹಾಗೆ ಅಪೇಕ್ಷಿಸಲ್ಪಟ್ಟಾಗ ತನಿಖಿ ನೋಡುವ ಬಗ್ಗೆ ಅವುಗಳನ್ನು ಹಾಜರ್ಮಾಡತಕ್ಕದ್ದು. ಕಂಟ್ರಾಕ್ಟರಾಗಲೀ ಅವರ ಏಜಂಟರಾಗಲೀ ಯಾ ಅವರ ಕೈ ಕೆಳಗಣ ಉದ್ಯೋಗಸ್ಥರಾಗಲೀ ಚಿಲ್ಲರೆ ಪುರೋಖ್ತು ದುಕಾನಗಳಲ್ಲಿ ಖುದ್ದಾಗಿಯಾದರೂ ಯಾ ಪರಭಾರೆಯಾಗಿಯಾದರೂ ಯಾವ ಸಂಬಂಧ ಯಾ ಪ್ರಯೋಜನವನ್ನೂ ಉಂಟಾಗಿರಕೂಡದು.

XI. ಡಿಸ್ಟಿಲೆರಿಯಿಂದ ಸಾರಾಯಿ ಕೊಡುವದನ್ನು ಕುರಿತ ಈ ಕೆಳಗೆ ಬರುವ ರೂಲ್ಸ್ ಅನುಸರಿಸಲ್ಪಡತಕ್ಕದ್ದು.

(a) ಸಾಧಾರಣವಾಗಿ 20 ಡಿಗ್ರಿ ಅಂಡರ್ ಪ್ರೂಫಿಗೆ ಹೆಚ್ಚಿನ ಸ್ಟ್ರೆಂಗ್ತ್ ನಿಂದ ಯಾವ ಸಾರಾಯಿಯನ್ನೂ ಕೊಡತಕ್ಕದ್ದಲ್ಲವು, ಆದರೆ ಕಂಟ್ರಾಕ್ಟುದಾರನಾಗಲಿ, ಚಿಲ್ಲರೆ ಪುರೋಖ್ತುದಾರನಾಗಲೀ ಮೇಲ್ ಕಂಡ ಸ್ಟ್ರೆಂಗ್ತಿಗಿಂತ ಹೆಚ್ಚಾದ ಸ್ಟ್ರೆಂಗ್ತಿನಲ್ಲಿ ಸಾರಾಯಿ ಕೊಡಲಿಕ್ಕೆ ಅಪೇಕ್ಷಿಸಿದರೆ ಹಾಗೆ ಕೊಡಲ್ಪಡುವ ಸ್ಪಿರಿಟ್ ಸಾರಾಯಿಯು ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತ್ ವುಳ್ಳದ್ದಾಗಿರಕೂಡದು. ಪ್ರೂಫಿಗೆ ಸಮನಾದ ಬಲವುಳ್ಳ ಸಾರಾಯಿಯು, ಯರಡು ದರ್ಜ ಕ್ವಾರಟ್ ಶೀಶೆಗಳಲ್ಲಿಯೂ, ನಾಲ್ಕು ದರ್ಜ ಪಯಿಂಟ್ ಶೀಶೆಗಳಲ್ಲಿಯೂ, ಇಂಗ್ಲಿಷ ಮತ್ತು ಪರಾಯಿ ದೇಶದ ಸ್ಪಿರಿಟ್ ಸಾರಾಯಿ ಯಂತೆಯೇ ಕಮ್ಮೀ ತೇದಾದಿನ ಡಬ್ಬಿಗಳಲ್ಲಿ ಡಿಸ್ಟಿಲೇರಿಯಿಂದ ಕೊಡಲ್ಪಡುವದು; ಅದು ಡಿಸ್ಟಿಲೇರಿಯಲ್ಲಿ ಹೆಡ್ ಸೂಪರ್ ವೈಜರವರಿಂದ ಮೊಹರ್ಮಾಡಲ್ಪಟ್ಟು ಚೀಟಿ ಹಚ್ಚಿರುವ ಪ್ರಕಾರವೇ ಬದಲಾಯಿಸದಂತೆಯೂ ಹೆಡ್ ಸೂಪರ್ ವೈಜರವರ ಪ್ಯಾಸಿನ ಆಧಾರದ ಮೇಲೂ ಬಟ್ಟು ಅಂಗಡಿಗಳಿಂದ ಚಿಲ್ಲರೇ ಬಿಕರೀದಾರ್ರಿಗೆ ಕಂಟ್ರಾಕ್ಟುದಾರರಿಂದ ಒದಗಿಸಲ್ಪಡತಕ್ಕ ಶೀಶೆಗಳಲ್ಲಿ ಪುರೋಖ್ತು ಮಾಡಲ್ಪಡತಕ್ಕದ್ದು. ದಾರಿಯಲ್ಲಿ ವಡೆದು ಹೋದೀತೆಂಬದಾಗಿ ಕಾಣಬರುವ ಸಂಗತಿಗಳಲ್ಲಿ, ಹೆಡ್ ಸೂಪರ್‌ವೈಜರವರು, ರೇಂಜ್ ಸೂಪರ್‌ವೈಜರುಗಳಿಂದ ಶೀಶೆಗಳಲ್ಲಿ ಭರ್ತೀ ಮಾಡಲ್ಪಟ್ಟು ಮೊಹರ್ ಮಾಡಲ್ಪಡುವಬಗ್ಗೆ ಸದರೀ ರೇಂಜ್ ಸೂಪರ್‌ವೈಜರುಗಳಲ್ಲಿಗೆ ಬೇಕಾದಷ್ಟು ಅಂಥಾ ಷರಾಬನ್ನು ಡಿಸ್ಟಿಲೇರಿಯಿಂದ ಸರಬರಾಯಿಮಾಡತಕ್ಕದ್ದು. ಚಿಲ್ಲರೆ ಬಿಕರೀ ದಾರರು ಅಂಥಾ ಷರಾಬನ್ನು ಅವರಿಗೆ ಗೊತ್ತಿರುವಂತಾ ಮರ್ಯಾದೆವುಳ್ಳ ಜನಗಳಿಗೆ ಮಾತ್ರವೇ ಹೆಡ್ ಸೂಪರ್ ವೈಜರವರಿಂದ ಕೊಡಲ್ಪಟ್ಟ ಅಲಾಹಿದಾ ಪ್ಯಾಸುಗಳೊಂದಿಗೆ ಕೊಡತಕ್ಕದ್ದು. ಮತ್ತು ಬಟ್ಟು ಬಿಕರೀದಾರರು ವ ಚಿಲ್ಲರೇ ಪುರೋಖ್ತುದಾರರು ಸುದಾ ಅಂಥಾ ಬಿಕರೀಗಳಿಗೆ ವಿಧಿಸಲ್ಪಟ್ಟ ನಮೂನೆಯಲ್ಲಿ ಲೆಖ್ಖ ಕೊಡತಕ್ಕದ್ದು.

(b). ಪ್ರೂಫಿಗಿಂತ ಹೆಚ್ಚು ಸ್ಟ್ರೆಂಗ್ತಿನ ಸಾರಾಯಿಯನ್ನು ಇಜಾರೇದಾರನು ಕೊಡಲಿಕ್ಕೆ ಅಪೇಕ್ಷಿಸಿದರೆ, ಆ ಬಗ್ಗೆ, ಹೆಡ್ ಸೂಪರ ವೈಜರ ಮೂಲಕ ಡೆಪ್ಯುಟಿ ಕಮಿಷನರವರ ವಿಶೇಷ ಹುಕ್ಕುಂಗಳನ್ನು ಪಡೆಯತಕ್ಕದ್ದು; ಸದರೀ ಹೆಡ್ ಸೂಪರ್‌ವೈಜರು ಸದರೀ ಅಂಶಗಳನ್ನು ಸೂಚಿಸಿ, ಅದರಂತೆ ಬಟ್ಟು ಬಿಕ್ರಿ ಅಂಗಡಿಗಳಿಗೆ ಪ್ಯಾಸ್‌ಗಳು ಯಾನೇ ರಹದಾರೀಗಳನ್ನು ಕೊಡತಕ್ಕದ್ದು, ಹಾಗೆ ಕೊಡಲ್ಪಟ್ಟ ಸಾರಾಯಿಯು, ಈ ಪ್ಯಾರಾ (a) ಕ್ಲಾಜಿನಲ್ಲಿ ವಿಧಿಸಲ್ಪಟ್ಟ ಪ್ರಕಾರ ವಿಕ್ರಯಿಸಲ್ಪಟ್ಟು ಲೆಖ್ಖ ಇಡಲ್ಪಡತಕ್ಕದ್ದು.

(c). ಅಂಡರ್ ಪ್ರೂಫ್ ಬಾಬತು 20° ಡಿಗ್ರೀಗೆ ಮೇಲ್ಪಟ್ಟ ಸ್ಟ್ರೆಂಗ್ತುಳ್ಳದ್ದಾಗಿ ಮತ್ತು ಪ್ರೂಫಿನವರಿಗೆ ಇದ್ದು, ಕೊಡಲ್ಪಡುವ ತಮಾಂ ಸಾರಾಯಿಗೂ, ಪ್ರೂಫಿನ ಮೇಲ್ತೀರ್ವೆಯನ್ನು ವಿಧಿಸತಕ್ಕದ್ದು. ಪ್ರೂಫಿನ ಮೇಲಣ ದರವು, ಜಲಪರಿಮಾಪಕ್ಕ ಯಂತ್ರದ ದರ್ಜೆಗಳ ಪ್ರಕಾರ, ದ್ವಾವ್ಯವಸಾಯಿ ಮೇಲೆ ಹತ್ತು ಡಿಗ್ರಿಗಳ ದರದಂತೆ ಜಾಸ್ತಿ ಮಾಡಲ್ಪಡತಕ್ಕದ್ದು.

(*d*). ಅಂಡರ್ ಪ್ರೂಫಿನ 20ಂ ಡಿಗ್ರೀಗೆ ಕೀಳ್ಪಟ್ಟ ಯಾವ ಸಾರಾಯಿಯೂ, ಸಾಧಾರಣವಾಗಿ ಡಿಸ್ಟಿಲೇರಿಯಿಂದ ಕೊಡಲ್ಪಡಕೂಡದು ; ಪರಂತು, ಅಂಡರ್ ಪ್ರೂಫಿನ 20° ಡಿಗ್ರೀ ಸ್ಟ್ರೆಂಗ್ತಿಗಿಂತ ಕಡಿಮೆ ಶಕ್ತಿಯುಳ್ಳ ಸಾರಾಯಿ ಬಗ್ಯೆ ತಗಾದೇ ಉಂಟಾದರೆ, ಅಂಡರ್ ಪ್ರೂಫಿನ 30° ಡಿಗ್ರೀ ಸಾರಾಯಿಯು, ದಾಮೂಷಾಯಿ ಪ್ರಕಾರ ಕಮ್ಮಿ ಮಾಡಲ್ಪಟ್ಟ ತೀರ್ವೆಯ ದರಗಳ ಮೇರೆ, ಡಿಸ್ಟಿಲೇರಿಯಿಂದ ವಿಶೇಷತಃ ಕೊಡಲ್ಪಡಬಹುದು. ಅಂತಾ ಸಾರಾಯಿಯು, ಬಟ್ಟು ಕೋಠಿಗಳಲ್ಲಿಯೂ, ಚಿಲ್ಲರೆ ದುಕ್ಕಾನಗಳೊಳಗೂ ಪ್ರತ್ಯೇಕ ಪ್ರತ್ಯೇಕವಾಗಿ ಇಡಲ್ಪಟ್ಟು ವಿಲೇವಾರಿ ಲೆಖ್ಖ ಕೊಡಲ್ಪಡತಕ್ಕದ್ದು.

XII. ಸಾರಾಯಿಯು ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಮೇರೆ ಪುರೋಖ್ತು ಮಾಡಲ್ಪಡತಕ್ಕದ್ದೇ ಹೊರತು, ಬಟ್ಟು ಬಿಕ್ರಿಯ ಅಥವಾ ಚಿಲ್ಲರೇ ಅಂಗಡಿಗಳಲ್ಲಿ ಯಾವ ರೀತಿಯಲ್ಲಾಗಲಿ ಇತರ ಪದಾರ್ಥ ಬೆರಿಕೇ ಮಾಡಕೂಡದು ಅಥವಾ ನೀರು ಬೆರಿಸಕೂಡದು. ಆದರೆ ಸಾರಾಯಿಯ ಬಲವನ್ನು ತಗ್ಗಿಸುವಬಗ್ಯೆ ಹೆಡ್ ಸೂಪರ್‌ವೈಜರವರ ರೂಬರೂ ಡಿಸ್ಟಿಲೇರಿಯಲ್ಲಿ ಕಾಶಿದ ನೀರು ಉಪಯೋಗಿಸಲ್ಪಡಬಹುದು.

XIII. ಅಂಡರ್ ಪ್ರೂಫಿನ ಬಾಬತು 20° ಡಿಗ್ರೀಯ ಸ್ಟ್ರೆಂಗ್ತಿನ ಸಾರಾಯಿಯ ಮೇಲೆ ಸಲ್ಲತಕ್ಕ ರೂಪಾಯಿಗೆ ಬಂದಾಣೆ ಮೇರೆ ಲೋಕಲ್ ಸೆಸ್ ದೇಖೀಲ್ ಗವರ್ನಮೆಂಟ ತೀರ್ವೆಯು ಸದರೀ ಸಾರಾಯಿ, (ಇತರ ಪದಾರ್ಥ ಬೆರಿಕೆ ಇಲ್ಲದೆಯೂ, ನೀರು ಬೆರಿಕೆಯಾಗದೆಯೂ) ಬಟ್ಟು ಪುರೋಖ್ತು ಅಂಗಡಿಯಲ್ಲಿಯೂ ಚಿಲ್ಲರೆ ಅಂಗಡಿಗಳೊಳಗೂ ಯಾವ ಖರೀದೀ ಪ್ರಕಾರ ಪುರೋಖ್ತಾಗತಕ್ಕದ್ದೋ ಅದು ಇದರಡೀಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಮೇರೆ ಇದರಿಂದ ನಿಶ್ಚಯಿಸಲ್ಪಟ್ಟಿರುತ್ತೆ :—

	ಪ್ರೂಫಿನ 20° ಡಿಗ್ರಿಗಳ ಕೆಳಗಿನ ಸಾರಾಯಿ.			
	ಲೋಕಲ್ ಸೆಸ್ ದೇಖೀಲ್ ಗ್ಯಾಲನ್ 1ಕ್ಕೆ ತೀರ್ವೆ.	ಗ್ಯಾಲನ್ 1ಕ್ಕೆ ಬಟ್ಟು ಬಿಕರೀ ದರ.	ಚಿಲ್ಲರೆ ಬಿಕರಿ ದರ.	
			ಗ್ಯಾಲನ್ 1ಕ್ಕೆ	ಡ್ರಾಂ1ಕ್ಕೆ.
	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಸೀಮೆಯ ತಮಾಂ ಸ್ಥಳಗಳಲ್ಲೂ.	3—5—0	4—6—4	5—0—0	0—1—8

(*a*) ಪ್ರೂಫಿಗೆ ಸಮನಾದ ಮತ್ತು ಪ್ರೂಫಿನ 30° ಡಿಗ್ರಿಗಳಿಗೆ ಕೀಳ್ಪಟ್ಟ ಸಾರಾಯಿ ಮತ್ತು ಸದರೀ ಬಲಕ್ಕೆ ಜಾಸ್ತಿ ವ ಕಮ್ಮಿಯಾಗಿರತಕ್ಕ ತಮಾಂ ಬಲಗಳ ಸಾರಾಯಿಯ ಖರೀದಿ ಮತ್ತು ಅವುಗಳ ಮೇಲೆ ವಸೂಲು ಮಾಡಲ್ಪಡಬೇಕಾದ ತೀರ್ವೆಸುದಾ, ಗವರ್ನಮೆಂಟ ಹೈಡ್ರಾಮೆಟರಸ್ ಪ್ರತಿ ಪೆಟ್ಟಿಗೆಯೊಂದಿಗೆ ಇರತಕ್ಕ ಕ್ಯಾಸೆಲಾಯವರ ರೂಲ್ಸು ಅನುಸಾರವಾಗಿ 20ಂ ಡಿಗ್ರಿಗಳ ಅಂಡರ್ ಪ್ರೂಫಿಗಾಗಿ ಮೇಲೆ ವಿವರಿಸಿರುವ ದರಗಳಂತೆ ದಾಮಾಷಾಯಿ ಪ್ರಕಾರ ಗೊತ್ತು ಮಾಡಲ್ಪಡತಕ್ಕದ್ದು. ಈ ರೂಲ್ಸುಗಳಲ್ಲಿ ಅಡಗಿರುವ ಯಾವ ಅಂಶವೇಆಗಲೀ ಹೆಡ್ ಸೂಪರ್‌ವೈಜರವರು ಅವರಿಗೆ ಆ ಬಗ್ಯಾಗಿ ಬರಹ ಮೂಲಕ ದರಖಾಸ್ತು ಬಂದಮೇಲೆ, ಡಿಸ್ಟಿಲೆರಿಯಲ್ಲಿ ಬಟ್ಟಿ ಇಳಿಸಲ್ಪಟ್ಟ ಯಾವ ಬಲದ ಷರಾಬನ್ನಾಗಲಿಸಾಧಾರಣವಾದ ಬಂದು ಕ್ವಾರಟು ಶೀಶೆಗಿಂತ ಕಮ್ಮಿ ಇಲ್ಲದ ತೇದಾದನ್ನು ಬಟ್ಟು ಬಿಕರಿಯ.

ಖರೀದಿ ದರಕ್ಕೆ ಪುರೋಖ್ತು ಗಲ್ಲದೆ ವಾಸ್ತವ್ಯವಾಗಿ ಅವರ ಸ್ವಂತ ಉಪಯೋಗಕ್ಕಾಗಿ ಮಾತಬರ್ ಖುಷಬಾಷ್ ಜನಗಳಿಗೂ, ಆಸ್ಪತ್ರಿಗಳಿಗೂ, ಮ್ಯೂಜಿಯಂ ವಿವಿಧವಸ್ತುಶಾಲೆಗಳಿಗೂ ಮತ್ತು ಇತರ ಪಬ್ಲಿಕ್ ಸ್ಥಾಪನೆಗಳಿಗೂ ಕೊಡುವದನ್ನು ನಿರೋಧಿಸುವದಿಲ್ಲ.

(b) ಕಂಟ್ರಾಕ್ಟುದಾರರು, ಬೆಂಗಳೂರು ಡೆಪ್ಯುಟಿ ಕಮ್ಮಿಷ್ನರವರ ಅಪ್ಪಣೆಯನ್ನು ಪಡೆದು, ಮಿಲ್ಕ್ ಪಂಚ್‌ಯೆಂಬ ಸಾರಾಯಿಯನ್ನಾಗಲೀ ಯಾವದಾದರೂ ಇತರ ಮಧುರವಾದ ಸಾರಾಯಿಗಳನ್ನಾಗಲೀ ಅಬ್‌ಕಾರಿ ಆಫೀಸರಗಳ ಮೇಲ್‌ತನಿಖೆಗೆ ಒಳಪಟ್ಟು ತಯಾರ್ಮಾಡಬಹುದು; ಸದರೀ ಅಬಕಾರಿ ಆಫೀಸರರು, ಹಾಂಗೆ ಉಪಯೋಗಿಸಲ್ಪಡುವ ಸಾರಾಯಿ ಮೇಲಿನ ತೀರ್ವೆಯು, ಸದರೀ ಸಾರಾಯಿ ತಯಾರಿ ಉದ್ದಿಶ್ಯ ಉಪಯೋಗಿಸಲ್ಪಡುವ ಶ್ಯಾಕಂಬಿ ಯಾ ಇತರ ಪದಾರ್ಥಗಳು, ಬೆರಸಲ್ಪಡುವದಕ್ಕೆ ಮುಂಚಿತವಾಗಿಯೇ ಪೂರ್ತಿಯಾಗಿ ಲೆಕ್ಕಕ್ಕೆ ದಾಖಲ್ಮಾಡಲ್ಪಟ್ಟಿರುತ್ತೆಂಬ ವಿಷಯ ನೋಡತಕ್ಕದ್ದು. ಅಂಥಾ ಮಧುರವಾದ ಸಾರಾಯಿಯು, ಕಂಟ್ರಾಕ್ಟುದಾರನ ಖರ್ಚಿನಲ್ಲಿ ಹೆಡ್ ಸೂಪರ್‌ವೈಜರವರಿಂದ ಮೊಹರ್ ಮಾಡಲ್ಪಟ್ಟು ಚೀಟಿ ಹಚ್ಚಲ್ಪಟ್ಟ ತರುವಾಯ, ಡಿಸ್ಟಿಲೇರಿಯಿಂದ ಪರಭಾರೆಯಾಗಿ ಮಾರಲ್ಪಡಬಹುದು ಯಾ ಚಿಲ್ಲರೆ ಬಿಕರಿ ದುಕಾನುಗಳಲ್ಲಿ ಮಾರಲ್ಪಡತಕ್ಕಬಗ್ಗೆ ಇಡಲ್ಪಡಬಹುದು, ಅಂಥಾ ಸಾರಾಯಿಗಳು ಮಾರಲ್ಪಡಬೇಕಾದ ಖರೀದಿ ದರಗಳು ಅಬಕಾರಿ ಇಲಾಖೆಯಿಂದ ಗೊತ್ತು ಮಾಡಲ್ಪಡತಕ್ಕದ್ದು.

XIV. ಸಾರಾಯಿ ಕಮ್ಮಿಬಳಕೆಬಗ್ಗೆ, ಬೆಂಗಳೂರು ಷಹರ್ ಮತ್ತು ಸಿವಿಲ್ ವ ಮಿಲಿಟೇರಿ ಸ್ಟೇಷ್ನ ಮ್ಯುನಿಸಿಪಲ್ ಸರಹದ್ದುಗಳ ಒಳಗೆ ಪುರೋಖ್ತು ಬಗ್ಗೆ ಡಿಸ್ಟಿಲೇರಿಯಿಂದ ಕೊಡಲ್ಪಟ್ಟ ಸಾರಾಯಿಯ ಮೇಲೆ ಸಲ್ಲತಕ್ಕ ತೆರಿಗೆಯ ಮೇಲೆ ಸೇಕಡಾ 2ರ ಪ್ರಕಾರ ಸೋಡಿ ಯಾ ವಜಾ ಕೊಡಲ್ಪಡತಕ್ಕದ್ದು. ಕಂಟ್ರಾಕ್ಟುದಾರನು, ಲೆಕ್ಕಗಳು ಕರಾರ್‌ವಾಕಾ ಇರತಕ್ಕ ಉದ್ದಿಶ್ಯದಿಂಟ್ಟು ಬಿಕರೀದಾರರ ಲೆಕ್ಕಗಳಲ್ಲಿ ವಾಸ್ತವ್ಯವಾಗಿ ಕಾಣಿಬಂದ ಆರವಾಶಿಯನ್ನೇ ದಾಖಲ್ಮಾಡುವಂತೆ ವಿಧಿಸತಕ್ಕದ್ದು.

XV. ಇಜಾರ್‍ದಾರನು, ಡಿಸ್ಟಿಲೇರಿಯನ್ನಾಗಲಿ, ಒಟ್ಟು ಪುರೋಖ್ತು ಅಂಗಡಿಗಳನ್ನಾಗಲಿ, ಕೋಠಿಗಳನ್ನಾಗಲಿ, ಮೇಲ್ವಿಚಾರಣೆ ಮಾಡಲಿಕ್ಕೆ ಯಾವನನ್ನು ನೌಕರರ್ ಮಾಡುತ್ತಾನೋ ಅಂಥಾ ಪ್ರತಿ ಮನುಷ್ಯನನ್ನೂ ಹಾಗೆ ನೌಕರರು ಮಾಡುವದಕ್ಕೆ ಮುಂದಾಗಿ ಮೇಲೆ ಕಂಡ ಷರತ್ತುಗಳಿಗೆ ಅನುಗುಣವಾಗಿ ಕರಾರುಗಳನ್ನು ಬರೆದು ಕೊಡುವಂತೆ ಮಾಡತಕ್ಕದ್ದು. ಅಂಥಾ ಕರಾರುಗಳು, 1887ನೇ ಇಸವಿ ಏಪ್ರೆಲ್ ಒಂದನೇ ತಾರೀಖು ಲಾಗಾಯತ್ ಒಂದು ತಿಂಗಳೊಳಗಾಗಿ, ಅಂಥಾ ನವುಕರನು ಯಾವ ಡಿಸ್ಟ್ರಿಕ್ಟಿನಲ್ಲಿ ನೌಕರರು ಮಾಡಲ್ಪಡುತ್ತಾನೋ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರಲ್ಲಿ ಇಡಲ್ಪಡತಕ್ಕದ್ದು. ಮತ್ತು ಸದರೀ ಇಜಾರೇದಾರನು, ಷರಾಬ್ ತಯ್ಯಾರಿ, ಸಾಗಿಸುವಣ ಮತ್ತು ಪುರೋಖ್ತು ಈ ಕೆಲಸಗಳಲ್ಲಿ ತನ್ನಿಂದ ನೌಕರರು ಮಾಡಲ್ಪಡುವ ತಮಾಂ ಜನಗಳೂ, ತಮ್ಮಿಂದ ಮಾಡಿಕೊಳ್ಳಲ್ಪಟ್ಟ ಕರಾರುಗಳ ವ ಕಾನೂನಿನ ನಿಬಂಧನೆಗಳನ್ನು ಖಂಡಿತವಾಗಿ ಅನುಸರಿಸುವಂತೆ ಮಾಡುವದಕ್ಕೆ ಪೂರಾ ತರದೂದ್ ಮಾಡತಕ್ಕದ್ದು; ಮತ್ತು ಸದರೀ ನಿಬಂಧನೆಗಳಿಗೆ ಬರಕಿಲಾಫ್ ನಡಿಸಲ್ಪಟ್ಟಂತೆ ಆತನ ತಿಳುವಳಿಕೆಗೆ ಬಂದರೆ, ಸದರೀ ಅಪರಾಧಕ್ಕೆ ವಿಧಿಸಲ್ಪಟ್ಟ ದಂಡನೆ ವಿಧಿಸುವ ಬಗ್ಗೆ, ಯಾವ ಡಿಸ್ಟ್ರಿಕ್ಟಿನಲ್ಲಿ ಬರಕಿಲಾಫ್ ನಡೆಯಿತೋ ಅಂಥಾ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ ಜಾಹೀರಾತಿಗೆ ಸದರೀ ಸಂಗತಿಯನ್ನು ತರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರು, ಅಪರಾಧಿಗೆ ಫೋಟಾಗಿ ಜುರ್ಮಾನೆ ವಿಧಿಸ ~~ಮಾಡಲ್ಲದೆ ಮತ್ತು~~ ಸದರೀ ಅಪರಾಧಿಯನ್ನು ~~ನವುಕರಿಯಿಂದ~~ ಸಸ್ಪೆಂಡ್ ಯಾ ತಗ್ಯೈರ್ ಮಾಡುವಂತೆ ಕಂಟ್ರಾಕ್ಟುದಾರನನ್ನು ಅಪೇಕ್ಷಿಸಬಹುದು.

XVI. ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಶಾಸ್ತ್ರೀರೂಲ್ಸಿಗಾಗಲಿ, ಇಜಾರೇದಾರನು ಅನುಗುಣವಾಗಿ ನಡೆಯತಕ್ಕದ್ದು, ಮತ್ತು ಆತನ ನವುಕರಸಮಾನೆಯರೆಲ್ಲಾ, ಬಟ್ಟೀ ಇಳಿಸಲ್ಪಟ್ಟು ಕೊಡಲ್ಪಟ್ಟ ಸಾರಾಯಿಯ ಬಂದೋಬಸ್ತಿ ಮತ್ತು ಕ್ರಮ, ಉಪಯೋಗಿಸಲ್ಪಟ್ಟ ತಮಾಂ ಪಾತ್ರೆಗಳ ಪಾಕೀಜೇ, ಲೋಹ ಪಾತ್ರೆಗಳ ಕಲಾಯಿ ಹಾಕಿಸುವಣ, ಕಾವಲು, ಆವರಣದ ತನಿಖೀ ಮತ್ತು ಆರೋಗ್ಯಕರವಾದ ಸ್ಥಿತಿ ಮತ್ತು ಗವರ್ನಮೆಂಟಿನವರ ಅಥವಾ ಇಜಾರೇದಾರರ ಅಥವಾ ಉಭಯತ್ರರ ಪ್ರಯೋಜನಗಳಿಗೆ ಸಂಬಂಧಪಟ್ಟ ಇತರ ವಿಷಯಗಳು, ಇವುಗಳಬಗ್ಯೆ ಗವರ್ನಮೆಂಟಿನವರು ಜಾರೀ ಮಾಡಿದ ರೂಲ್ಸನ್ನೂ, ಹುಕ್ಕುಂಗಳನ್ನೂ, ಪೂರಾ ಜಾರೀಗೆ ತರುವ ಅಂಶಗಳಿಗೆ ಸಿಗೇ ಕೊಡತಕ್ಕದ್ದು. ಷರಾಬ ಭಟ್ಟಿ ಇಳಿಸುವಲ್ಲಿ ಉಪಯೋಗಿಸಲ್ಪಡುವ ತಮಾಂ ಭಟ್ಟಿ ಪಾತ್ರೆಗಳೂ, ಕೊಳಬೆಗಳೂ, ವರಂಸ್‌ಯಾನೆ ಪಾತ್ರೆಗಳೂ ಎರಕ ಹೊಯಿದ ತಗರದ ಪಾತ್ರೆಗಳಾಗಿರತಕ್ಕವು; ಆದರೆ ತಾಂಬ್ರದ ಬಟ್ಟಿ ಪಾತ್ರೆಗಳು, ಕೊಳಬೆಗಳು ಮತ್ತು ವರಂಸ್ ಪಾತ್ರೆಗಳು ಉಪಯೋಗಿಸಲ್ಪಟ್ಟರೆ ಅವು ವಿಧಿಸಲ್ಪಟ್ಟ ಕಾಲಗಳಿಗೆ ಕ್ರಮವಾಗಿಯೂ ಮಜಬೂತಾಗಿಯೂ ಕಲಾಯಿ ಮಾಡಲ್ಪಟ್ಟಿರಬೇಕು.

ಆದಿವಾರಗಳು ಮತ್ತು ಮಂಜೂರ್ಮಾಡಲ್ಪಟ್ಟ ರಜಾ ದಿವಸಗಳಾಗಿ ಪೂರ್ತಿಯಾದ ರಜಾ ದಿವಸಗಳಾಗಿ ಆಚರಿಸಲ್ಪಡತಕ್ಕದ್ದಲ್ಲದೆ ಅಂಥಾ ದಿವಸಗಳಲ್ಲಿ ಭಟ್ಟಿ ಇಳಿಸಲ್ಪಡಕೂಡದು, ಮತ್ತು ಷರಾಬ್ ಕೊಡಲ್ಪಡಕೂಡದು. ಅಂಥಾ ರಜಾ ದಿವಸಗಳ ತಿಳುವಳಿಕೆಯು ಸಂಬಂಧಪಟ್ಟ ತಮಾಂ ಜನಗಳಿಗೂ ಪ್ರತಿ ವರುಷದ ಆರಂಭದಲ್ಲಿ ಕೊಡಲ್ಪಡುವದು.

XVII. ಮೇಲೆ ಕಂಡ ಷರತ್ತುಗಳ ಪೈಕೀ ಯಾವ ಷರತ್ತುಗಳಿಗಾಗಲಿ, ಇಜಾರೇದಾರನಿಂದ ಅಥವಾ ಷರಾಬ್ ತಯಾರಿ, ಸಾಗಿಸುವಣ, ಯಾ ಪುರೋಖ್ತು ಇಂತಾದ್ದರಲ್ಲಿ, ಆತನಿಂದ ನೊಕರರು ಮಾಡಲ್ಪಟ್ಟ ಜನಗಳ ಪೈಕೀ ಯಾರಿಂದಾದರೂ, ಸದರೀ ಇಜಾರೇದಾರನು ನೋಡಿಯೂ ನೋಡದ ಹಾಗೆ ಇರುವದರಿಂದ ಅಥವಾ ರಹಸ್ಯವಾದ ಷಾಮಿಲಾತೀಯಿಂದ ಮನಃಪೂರ್ವಕವಾಗಿ ಬರಕಿಲಾಫ್ ಯೇನಾದರೂ ನಡಿಸಲ್ಪಟ್ಟರೆ, ಇಜಾರೇಯನ್ನು ರದ್ದು ಮಾಡುವದಕ್ಕೂ, ಠೇವಣೀ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿತೆಂದು ತಿಳಿಸುವದಕ್ಕೂ Iನೇ ಷರತ್ತಿನಲ್ಲಿ ವಿಧಿಸಲ್ಪಟ್ಟ ಪ್ರಕಾರ ಅಮಲ್ ನಡಿಸುವದಕ್ಕೂ ದಿವಾನರವರಿಗೆ ಯಿಖ್ತಿಯಾರಿ ಇರತಕ್ಕದ್ದು.

XVIII. ಗವರ್ನಮೆಂಟಿನವರಿಂದ ಸದರೀ ಬಗ್ಯೆ ವಿಧಿಸಲ್ಪಡಬಹುದಾದ ಅಂತಾ ಷರತ್ತುಗಳಿಗೆ ಬಳಪಟ್ಟು, ಇಜಾರೇದಾರನಿಂದ, ಕೊಲಂಬೋ ಸಾರಾಯಿಯನ್ನು ಅಥವಾ ಇತರ ವಿಧಗಳುಳ್ಳ ಆರೆಕ್ ಸಾರಾಯಿ, ಲಿಕ್ಕರ್ ಸಾರಾಯಿ ಇವುಗಳನ್ನು ತಯಾರ್ಮಾಡಲ್ಪಡಲಿಕ್ಕೂ, ಪುರೋಖ್ತು ಮಾಡಲ್ಪಡಲಿಕ್ಕೂ, ಗವರ್ನಮೆಂಟಿನವರು ಅಂಗೀಕರಿಸಬಹುದು, ಪರಂತು ಈ ಇಸ್ತಿಹಾರು ನಾಮೆಯಲ್ಲಿ ಕಂಡ ಸಾಧಾರಣ ಕಂಟ್ರಿ ಸಾರಾಯಿಯಿಂದ ಆಗುವ ಹುಟ್ಟುವಳಿಯ ಮೇಲೆ ಸದರೀ ಬಗ್ಯೆ ವಜಾ ಯಾವದೂ ಕೊಡಲ್ಪಡಲಾರದು.

XIX. ಮೇಲೆ ಕಂಡ ಷರತ್ತುಗಳಿಂದ, ಡೆಪ್ಯುಟಿ ಕಮ್ಮಿಷನರಿಗೆ ಕೊಡಲ್ಪಟ್ಟ ಅಧಿಕಾರಗಳೂ, ವಿಧಿಸಲ್ಪಟ್ಟ ಕೃತ್ಯಗಳೂ ಸುದಾ, ರೆಸಿಡೆಂಟರು ಮೊಕರರ್ಮಾಡಬಹುದಾದ ಅಂಥಾ ಆಫೀಸರಿಂದ ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನ್ನೊಳಗೆ ಚಲಾಯಿಸಲ್ಪಡತಕ್ಕದ್ದು, ಮತ್ತು ನಿರ್ವಹಿಸಲ್ಪಡತಕ್ಕದ್ದು.

01. ಕಳೆದ ಹದಿನಾರು ವರುಷಗಳಲ್ಲಿ ಕೊಡಲ್ಪಟ್ಟ ಷರಾಬಿನ ತೇದಾದು ಇದರಡೀ ಕಂಡ ತಖ್ತೆಯಲ್ಲಿ ಕಾಣಿಸಿರುತ್ತೇ:—

	1870—71. ಗ್ಯಾಲನ್ಗಳು.	1871—72. ಗ್ಯಾಲನ್ಗಳು.	1872—73. ಗ್ಯಾಲನ್ಗಳು.	1873—74. ಗ್ಯಾಲನ್ಗಳು.	1874—75. ಗ್ಯಾಲನ್ಗಳು.	1875—76. ಗ್ಯಾಲನ್ಗಳು.	1876—77. ಗ್ಯಾಲನ್ಗಳು.	1877—78. ಗ್ಯಾಲನ್ಗಳು.	1878—79. ಗ್ಯಾಲನ್ಗಳು.
ಬೆಂಗಳೂರು ಷಹರ್ ಮತ್ತು ಶಿವಿಲ್ ವ ಮಿಲಿಟೆರಿ ಸ್ಟೇಷನ್.	77,149	83,345	85,099	90,760	78,872	75,125	68,782	71,207	{ 18,533 { 51,177
ಶೀಮೆಯ ಇತರ ಸ್ಥಳಗಳಿಗೆ ಕೊಡಲ್ಪಟ್ಟ ತೇದಾದು.	160,710	155,139	169,514	182,591	142,554	114,864	102,112	67,770	67,842
ಶೀಮೆಗೆ ಒಟ್ಟು ಜಾಮ್ಲಾ ...	237,859	238,484	254,613	273,351	22,426	189,989	170,894	138,977	137,552

	1879—80. ಗ್ಯಾಲನ್ಗಳು.	1880—81. ಗ್ಯಾಲನ್ಗಳು.	1881—82. ಗ್ಯಾಲನ್ಗಳು.	1882—83. ಗ್ಯಾಲನ್ಗಳು.	1883—84. ಗ್ಯಾಲನ್ಗಳು.	1884—85. ಗ್ಯಾಲನ್ಗಳು.	1885—86. ಗ್ಯಾಲನ್ಗಳು.	
ಬೆಂಗಳೂರು ಷಹರ್ ಮತ್ತು ಶಿವಿಲ್ ವ ಮಿಲಿಟೆರಿ ಸ್ಟೇಷನ್.	24,436	28,586	28,812	31,282	34,089	33,993	33,952	ಬೆಂಗಳೂರು ಷಹರ್.
	60,726	66,809	68,502	75,151	76,907	74,010	70,074	ಶಿವಿಲ್ ವ ಮಿಲಿಟೇರಿ ಸ್ಟೇಷನ್.
ಶೀಮೆಯ ಇತರ ಸ್ಥಳಗಳಿಗೆ ಕೊಡಲ್ಪಟ್ಟ ತೇದಾದ್.	94,092	115,352	139,281	137,706	144,312	156,539	159,352	
ಶೀಮೆಗೆ ಒಟ್ಟು ಜಾಮ್ಲಾ ..	179,254	210,747	236,595	244,139	255,308	264,542	263,378	

11. ಕಳೆದ ಆರು ವರುಷಗಳಲ್ಲಿ ಖರ್ಚಾದ ಷರಾಬಿನ ಮೇಲೆ ಆಯಾ ಸಾಲಿನಲ್ಲಿ ಜಾರೀಯಲ್ಲಿ ಯಿದ್ದ ತೀರ್ವೇ ದರಗಳ ಪ್ರಕಾರ ಕರಾರ್ವಾಕಾ ಹುಟ್ಟುವಳಿಯಾದ ಮೊಬಲಗು, ಮತ್ತು ಈಗ ಗೊತ್ತು ಮಾಡಲ್ಪಟ್ಟ (ಗ್ಯಾಲನ್ ವಂದಕ್ಕೆ 3—5—0) ಬಾಬತ್ತು ವಂದೇ ದರದ ತೀರ್ವೆಯು ಸದರೀ ಸಾಲ್ಗಳಲ್ಲಿ ಜಾರೀಯಿದ್ದ ಪಕ್ಷದಲ್ಲಿ ಹುಟ್ಟುವಳಿಯಾಗಬಹುದಾಗಿದ್ದ ಮೊಬಲಗು ಯಿವುಗಳನ್ನು ತೋರಿಸುವ ತಖ್ತೆಯು ಇದರಡಿ ಕಾಣಿಸಿರುತ್ತೆ:—

ಸಾಲ್ಗಳು.	ಪೂರ್ವಕ್ಕೆ ಜಾರೀಯಲ್ಲಿ ಯಿದ್ದ ಹೆಚ್ಚು ಕಮ್ಮೀ ದರಗಳಂತೆ ಹುಟ್ಟುವಳಿಯಾದ ಕರಾರ್ವಾಕಾ ಮೊಬಲಗು	ಈಗ ಗ್ಯಾಲನ್ ವಂದಕ್ಕೆ ಗೊತ್ತು ಮಾಡಲ್ಪಟ್ಟ 3—5—0 ದರದ ಪ್ರಕಾರ ಹುಟ್ಟುವಳಿಯಾಗಬಹುದಾಗಿದ್ದ ಮೊಬಲಗು.
	ರೂಪಾಯಿ.	ರೂಪಾಯಿ.
1880—81	6,43,022	6,98,099
1881—82	6,33,329	7,83,720
1882—83	6,58,768	8,08,710
1883—84	6,88,019	8,45,707
1884—85	7,41,574	8,76,295
1885—86	7,47,314	8,72,439

ಅಪೆಂಡಿಕ್ಸ್.

8ನೇ ಪ್ಯಾರಾದಲ್ಲಿ ಕಂಡ ದರಖಾಸ್ತಿನ ನಮೂನೆ.

ಬೆಂಗಳೂರು ಮೊಕ್ಕಾಂ ಮೈಸೂರು ಶೀಮೆಯ ದಿವಾನರವರ ಚೀಫ್ ಸೆಕ್ರೆಟೇರೀಯವರ ಜನಾಬಿಗೆ.———
ಅಯ್ಯಾ,

—————————ನೇ ಮುರ್ಕುಮಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ಮಾಡಲ್ಪಟ್ಟ ದಿವಾನರವರಿಂದ ಸಾದರ್ಮಾಡೋಣಾದ ————————ನೇ ಮುರ್ಕುಂ—————ನೇ ನಂಬರ್ ಇಸ್ತಿಹಾರ್ನಾಮೆ ಅನುಸರಿಸಿ, ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನ್ ದೇಖೀಲ್ ಮೈಸೂರು ಶೀಮೆಯ ತಮಾಂ ಸ್ಥಳಗಳಲ್ಲೂ 1887ನೇ ಇಸವಿ ಏಪ್ರಲ್ 1ನೇ ಮುರ್ಕುಂ ಲಾಗಾಯತು 18—ನೇ ಇಸವಿ ಮಾರ್ಚಿ 31ನೇ ಮುರ್ಕುಂ ವರಿಗೆ ವಿಸ್ತರಿಸುವ———ವರುಷಗಳ ಕಾಲಪರಿಯಂತ, ಷರಾಬನ್ನು, ಮೇಲ್ಕಂಡ ಇಸ್ತಿಹಾರ್ ನಾಮೆಯಲ್ಲಿ ವಿವರಿಸಲ್ಪಟ್ಟ ಷರತ್ತುಗಳಿಗೂ, ರೂಲ್ಸುಗಳಿಗೂ, ಕರಾರ್‌ಗಳಿಗೂ ವಳಪಟ್ಟು ತಯಾರ್ಮಾಡುವ ಮತ್ತು ಬಟ್ಟು ಬಿಕರೀಮಾಡುವ ಬಟ್ಟು ಸ್ವಾತಂತ್ರ್ಯದ ಬಗ್ಯೆ ಇದರದೆಶೆಯಿಂದ ದರಖಾಸ್ತು ಮಾಡುತ್ತೇನೆ.

2. ನಾನು ಇದರ ದೆಸೆಯಿಂದ ಸರ್ಕಾರಕ್ಕೆ ಸಾಲಿಯಾನಾ (ಲೋಕಲ್ ಸೆಸ್ ದೇಖೀಲ್) ಇದರಡೀ ಕಂಡ ಪ್ರಕಾರ ಕಮ್ಮಿ ಮೊಬಲಗನ್ನು ಕೊಡುವದಕ್ಕೆ ಒಡಂಬಟ್ಟಿರುತ್ತೇನೆ:—

ಕಂಟ್ರಾಕ್ಟಿನ ಮೊದಲ ಸಾಲಿನಲ್ಲಿ			..	..	ರೂ.
ಡಿಟೋ	ಎರಡನೇ	ಡಿಟೋ	..	..	ರೂ.
ಡಿಟೋ	ಮೂರನೇ	ಡಿಟೋ	..	..	ರೂ.
ಡಿಟೋ	ನಾಲ್ಕನೇ	ಡಿಟೋ	..	..	ರೂ.
ಡಿಟೋ	ಐದನೇ	ಡಿಟೋ	..	..	ರೂ.
				ಜುಮ್ಲಾ	ರೂ.

3. ಸದರೀ ಇಸ್ತಿಹಾರ್ನಾಮೆಯ 6ನೇ ಪ್ಯಾರಾದಲ್ಲಿ ಅಪೇಕ್ಷಿಸಲ್ಪಟ್ಟ ಪ್ರಕಾರ, ಮೈಸೂರು ಶೀಮೆಯ ದಿವಾನ್ ಸಾಹೆಬರವರ ಹೆಸರಿಗೆ ಕ್ರಮವಾಗಿ ಯಿಂಡಾರ್ಸ್ ಮಾಡಲ್ಪಟ್ಟ 1,000 ರೂಪಾಯಿನ ————ನ್ನು ಇದರಸಂಗಡ ಕಳುಹಿಸಿರುತ್ತೇನೆ.

ತಮ್ಮ ಅತ್ಯಂತ ಶೇವಕನಾದ

ತಾರೀಖು ————————

ಹೆಸರು ಮತ್ತು ವಿಳಾಸ

ತಾರೀಖು 4ನೇ ಜನವರೀ 1887.

(ರೇಜೆಂಟರ ಅಪ್ಪಣೆ ಪ್ರಕಾರ ಬೆಂಗಳೂರು ಸಿವಿಲ್ ವ ಮಿಲಿಟೆರಿ ಸ್ಟೇಷನ್ ಶೇರಿ,) ಬೆಂಗಳೂರು ಷಹರ್ ದೇಖೀಲ್ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ 1887ನೇ ಇಸವಿ ಏಪ್ರೆಲ್ 1ನೇ ತಾರೀಖು ಮೊದಲು 1890ನೇ ಇಸವಿ ಮಾರ್ಚಿ 31ನೇ ತಾರೀಖುವರಿಗೆ ಆಗುವ ಮೂರು ವರುಷ ಕಾಲಪರಿಯಂತ ಶೇಂದೀ ಬಿಕ್ರೀ ಮಾಡುವ ವಟ್ಟು ಸ್ವಾತಂತ್ರ್ಯದಬಗ್ಗೆ ದರಖಾಸ್ತುಗಳು ಕೋರಲ್ಪಟ್ಟಿವೆ. ಬೆಂಗಳೂರು ಡಿಸ್ಟ್ರಿಕ್ಟಿಗೆ, ಇದರಡೀಕಂಡ ತಾಲ್ಲೂಕುಗಳು ಶೇರಿ ಇರುತ್ತವೆ :—

1 ಬೆಂಗಳೂರು	5 ಕಾನಖಾನಹಳ್ಳಿ	8 ಆನೆಕಲ್
2 ಹೊಸಕೋಟೆ	6 ಮಾಗಡಿ	9 ದೇವನಹಳ್ಳಿ
3 ದೊಡ್ಡಬಳ್ಳಾಪುರ	7 ಕ್ಲೋಸ್‌ಪ್ಯಾಟೆ, ಚನ್ನಪಟ್ಣದ ಡೆ|| ಅಮಲ್‌ದಾರ್‍ರ ಛಾರ್ಜಿನಪ್ರದೇಶದೇಖೀಲ್.	
4 ನೆಲಮಂಗಲ		

2. ಯಷ್ಟುರ ಮೊಬಲಗಿಗೆ ಕೇಳುತ್ತಾರೋ ಅಂತಾ ಸಾಲಿಯಾನಾ ಮೊಬಲಗು ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಟ್ಟು ಅದರ ಸಂಗಡ ನಗದಾಗಿಯಾಗಲಿ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ 1,000 ರೂಪಾಯಿಗಳ ಡಿಪಾಜಿಟನ್ನು ಲಿಫಾಫೆಯೊಳಗೆ ಹಾಕಿ ಬಂದುಮಾಡಲ್ಪಟ್ಟು "ಬೆಂಗಳೂರು ಡಿಸ್ಟ್ರಿಕ್ಟಿನೊಳಗೆ ಶೇಂದಿ ಬಿಕ್ರಿಮಾಡತಕ್ಕ ಬಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಯಂತಲಿಫಾಫೆ ಮೇಲೆ ಬರೆದು ಕಳುಹಿಸತಕ್ಕದ್ದು.

3. ದರಖಾಸ್ತುಗಳು, ಸನ್ 1887ನೇ ಇಸವಿ ಫೆಬ್ರುವರೀ 17ನೇ ಮಿರ್ಕ್ಕಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ದಿವಾನರವರಿಗೆ ಶಿಫಾರಸ್ ಮಾಡುವ ಬಗ್ಗೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲಿಯಾನಾ ಇಜಾರೆ ಮೊಬಲಗು ಪೈಕೀ ಹನ್ನೆರಡರಲ್ಲಿ ವಂದು ಭಾಗವಾಗಲೀ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತೀಯಾಗಿ ಡಿಪಾಜಿಟ್ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

4. ದಿವಾನರವರ ತೀರ್ಮಾನ ಫಾಯಿಸ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟುಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು : ಚಡದರಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಗಲೀ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

5. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಲಿ, 3ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಯಿಟ್ಟಿರುವ ಮೊಬಲಗ್ ದೇಖಿಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹಾಗಪಾಲಿಗೆ ಸಮನಾಗಿರುವ ಬಂದು ಮೊಬಲಗನ್ನು ನಗದಾಗಿಯಾಗಲೀ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ, ಬಂದು ಕರಾರ್ ಬರದುಕೊಡತಕ್ಕದ್ದು, ಅತನು ಕರಾರಿಗೆ ರುಜುಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟುಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ತಪ್ಪಿಹೋದ ದರಖಾಸ್ತುದಾರನ ಲುಕಸಾನಿಗೆ ಬಳಪಟ್ಟು ಅನ್ಯಥಾ ವಿಲೇಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೆ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದ

ಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಮಾಹೆಯಾನಾ ಸಹಿನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು, ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕೀಗಳಿಗೂ, ಸೇಕಡಾ ಸಾಲಿಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು : ಅಂತಾ ಬಾಕೀ ಮೊಬಲಗುಗಳು ಪಾವತೀಯಾಗತಕ್ಕ ದಿನಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸನಲ್ಲಿ ವಿಧಿಸಲ್ಪಟ್ಟರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕವು. ಮತ್ತು ಇಜಾರೆ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀದೇಖೀಲ್ ತಮಾಂ ಬಾಕಿಗಳನ್ನೂ ಹಾಗೆ ಇಜಾರೆ ಪುನಹ ಹರಾಜ್ ಹಾಕುವದರಿಂದಾಗಲಿ, ಇತರ ವಿಲೇ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನು ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಇರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು, ಮಾಮೂಲ್ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂತೋಕ್ತವಾದ ಮಂಜೂರಾತಿಯಿಲ್ಲದೆ, ಇಜಾರೇದಾರನು ಹಾಲೀ ಶೇಂದಿ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆಬಗ್ಯಾಗಿ ಯಾವ ಈಡು ಮೊಬಲಗನ್ನೂ ಕೇಳಕೂಡದು.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡಿದು ಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗ್ಯೆರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ಮತ್ತು ಇನಾಂದಾರರುಗಳಿಗೆ ಶೇಂದಿ ವುತ್ಪತ್ತಿಗಾಗಿ ಬರಬೇಕಾದ ಈಡುಮೊಬಲಗುಗಳ ವಿಷಯಗಳಲ್ಲಿ ಉಂಟಾಗುವ ತಕರಾರ್‌ಗಳನ್ನು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲನಲ್ಲಿ ದಿವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರ ಅಂಥಾ ಫೈಸಲಾತಿಯನ್ನಾಗಲಿ ಅಥವಾ ದಿವಾನರವರಿಂದ ಅಪ್ಪೀಲು ನಲ್ಲಾಗಲಿ ಸಲಾಯಿಸಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು, ಜಮೀನ್ ಕಂದಾಯದ ಬಾಕಿ ವಸೂಲಿಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲಿಗೆಅನುಸಾರವಾಗಿ, ಕಂಟ್ರಾಕ್ಟುದಾರರಿಂದ ವಸೂಲು ಮಾಡಲ್ಪಡತಕ್ಕವು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂಧರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಪಾಜಿನವರು ತಮ್ಮ ಕಡೇ ಅಬ್ಕಾರಿ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII. (a) ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನ್‌ನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪ್ರರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿ ಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಖಯಿಂದಾ

ಅನುಭವಿಸಲ್ಪಡತಕ್ಕ ಜಮೀನ್ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕುರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರ ತ್ತಗಳ ಪ್ರಕಾರವೂ ಮಾತ್ರವೇ ಶೆಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII. (b) ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್ವಾಕಾ ಲೆಖ್ಖಗಳು ಇಡತಕ್ಕದ್ದು; ಅವುಗಳಲ್ಲಿ (1) ಶೇಂದಿ ಇಳಿಸಲ್ಪಟ್ಟ ಶೇಂದಿ ತೋಪುಗಳ ಹೆಸರು ಮತ್ತು ಅವುಗಳು ಇರತಕ್ಕ ಸ್ಥಳ, (2) ಶೇಂದಿ ಕಟ್ಟಿದ ಮರಗಳ ಸಂಖ್ಯೆ, (3) ರೋಜೀನಾ ಉತಾರ್ ಮಾಡಲ್ಪಟ್ಟ ಶೇಂದಿ ತೇದಾದು, (4) ರೋಜೀನಾ ಬಿಕರೀಮಾಡಲ್ಪಟ್ಟ ಶೇಂದಿಯ ತೇದಾದು, ಮತ್ತು (5) ಶೇಂದಿಯೂ ಸರಬರಾಯಿ ಮಾಡಲ್ಪಟ್ಟ ದುರ್ಕಾಗಳ ಹೆಸರು ಈಬಾಬತು ತಪಶೀಲುಗಳು ತೋರಿಸತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್ದಾರರಿಂದಾಗಲೀ ಯಾ ಆಬಗ್ಯಾಗಿ ಡೆಪ್ಯುಟಿ ಕಮ್ಮಿಷನರಿಂದ ಮೊಕರರ್ ಮಾಡಲ್ಪಟ್ಟ ಇತರ ಯಾವ ಆಫೀಸರಿಂದಾಗಲೀ ತನಿಖೆ ನೋಡಲ್ಪಡುವಬಗ್ಯೆ ಖುಲ್ಲಾ ಇರತಕ್ಕವು, ಮತ್ತು ಅವುಗಳ ನಕಲು, ಡೆಪ್ಯುಟಿ ಕಮ್ಮಿಷನರಿಂದಾಗಲಿ ಅಮಲ್ದಾರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರನಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು ಈಡಿಗೆ ಯಾ ಸೋಡೀಗೆ ಬಾಧ್ಯತೆಯುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟ ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮವುಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

II. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸಗಳು, ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಶೋಕ್ತವಾದ ಮಂಜೂರಾತಿಯಿಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತುಬಗ್ಗೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳಮೇಲೆ ಯಾವ ಅಂಗಡಿಗಳನ್ನಾದರೂ ತೆಗದು ಹಾಕುವಂತೆ ಹುಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆ ಬಗ್ಗೆ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ ಗುತ್ತಿಗೇದಾರನು ಎಷ್ಟುಮಟ್ಟಿಗೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರ್‌ಗಳು ಮತ್ತು ಇನಾಂದಾರರುಗಳಿಗೆ ಶೇಂದೀ ಹುಟ್ಟುವಳಿಗೋಸ್ಕರ ಸಲ್ಲಬೇಕಾದ ಈಡುಮೊಬಲಗುಗಳ ವಿಷಯದಲ್ಲಿ ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು, ಪರಂತು ಸದರೀ ಫೈಸಲ್ ಅಪೀಲ್‌ನಲ್ಲಿ ದಿವಾನರವರಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂತಾ ತೀರ್ಪಿನಲ್ಲಾಗಲಿ ಅಥವಾ ದಿವಾನರವರಿಂದ ಅಪ್ಪೀಲ್‌ನಲ್ಲಾಗಲಿ ಪಾವತೀಮಾಡಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲ್ಸ ಅನುಸರಿಸಿ ಕಂಟ್ರಾಕ್ಟದಾರರಿಂದ ವಸೂಲ್ ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗೆಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟು ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತುಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು ಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂತಾ ಫೌಜಿನವರು ತಮ್ಮಕಡೇ ಅಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII. (*a*) ಇಜಾರೇದಾರನು ಡಿಸ್ಟ್ರಿಕ್ಟಿನ ಸರಕಾರದ ಬಂಜರ್ ಜಮೀನ್‌ಗಳಲ್ಲಿ ಇರುವ ಈಚಲು ಮರಗಳನ್ನು, ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತುಬಗ್ಯಾಗಲಿ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿ

ಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತ್ತುಗಳ ಪ್ರಕಾರವೂ ಮಾತ್ರವೇ ಶ್ಲಲ ತಯಾರ್ಮಾಡಲ್ಪಡತಕ್ಕದ್ದು.

VIII. (*b*). ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರಿವಾಕಾ ಲೆಖ್ಖಗಳು ಇಡತಕ್ಕದ್ದು. ಅವುಗಳಲ್ಲಿ (1) ಶೇಂದಿ ಇಳಿಸಲ್ಪಟ್ಟ ಶೇಂದಿ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದೀಕಟ್ಟಿದ ಮರಗಳ ಸಂಖೆ, (3) ರೋಜೇನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದ್, (4) ರೋಜೇನಾ ಬಿಕರೀ ಮಾಡಲ್ಪಟ್ಟ ಶೇಂದಿಯ ತೇದಾದ್ ಮತ್ತು (5) ಶೇಂದಿಯು ಸರಬರಾಯಿಮಾಡಲ್ಪಟ್ಟ ದುಕಾನಗಳ ಹೆಸರು ಈ ಬಾಬತು ತಪಶೀಲ್‌ಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಖ್ಖಗಳು ಅಮಲ್ದಾರ್ರಿಂದಾಗಲಿ ಯಾ ಆ ಬಗ್ಯಾಗಿ ಡಿ॥ ಕಮ್ಮಿಷ್ನರವರಿಂದ ಮೊಕರರ್ ಮಾಡಲ್ಪಟ್ಟ ಇತರ ಆಫಿಸರರಿಂದಾಗಲಿ ತನಿಖ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕವು; ಮತ್ತು ಇವುಗಳ ನಕಲು ಡಿ॥ ಕಮ್ಮಿಷ್ನರವರಿಂದಾಗಲಿ ಅಮಲ್ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರರಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದೀ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೇಯನ್ನು ಮವುಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು, ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಷಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡದಲ್ಲಿ ಆದರಿಂದ ಗುತ್ತಿಗೇದಾರ ಯಾ ಪುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗುತ್ತೆ.

XI. ಗುತ್ತಿಗೇದಾರನು, ತನ್ನ ನವುಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೆಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರನು ಗುರಿಯಾಗತಕ್ಕದ್ದು.

XII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

ಶೇರು ವಂದಕ್ಕೆ ಕ್ರಯ.

	ಜಾಸ್ತಿ.	ಕಮ್ಮಿ.
	ರೂ. ಆ. ಪೈ.	ರೂ. ಆ. ಪೈ.
ಶಿವಮೊಗ್ಗಾ ಷಹರು	0—1—6	0—1—0
ಚನ್ನಗಿರಿ ಹೊನ್ನಾಳಿ ತಾಲ್ಲೂಕುಗಳಲ್ಲಿ	0—1—0	0—0—6
ಡಿಸ್ಟ್ರಿಕ್ಟಿನ ಇತರ ಎಲ್ಲಾ ಸ್ಥಳಗಳಲ್ಲೂ	0—1—6	0—0—6

6. ಶೇಂದಿ ರವಾನೇಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ನಿರ್ಣಯಿಸಲ್ಪಟ್ಟ ಮೊಹತರ್ಫಾ ಭಂಡಿ ಕಂದಾಯದ ವಸೂಲೀಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ಕಡೂರು ಡಿಸ್ಟ್ರಿಕ್ಟಿನಲ್ಲಿ 1887ನೇ ಇಸವಿ 1ನೇ ಏಪ್ರೈಲ್ ಲಾಗಾಯತು 1890ನೇ ಇಸವಿ ಮಾರ್ಚಿ 31ನೇ ತಾರೀಖುವರಿವಿಗೆ ಆಗುವ 3 ಸಂವತ್ಸರಗಳ ಕಾಲ ಪರಿಯಂತ ಶೇಂದಿ ಬಿಕರೀ ಮಾಡುವ ಪಟ್ಟು ಸ್ವಾತಂತ್ರ್ಯ ಯಾ ಇಜಾರೆಯು, ತಾಲ್ಲೂಕುವಾರಾಗಿ ಆಗಲಿ ಅನೇಕ ತಾಲ್ಲೂಕುಗಳ ಸೇರಿಕೆಯಾಗಿಯಾಗಲಿ ಇದರಮುಂದೆ ತಿಳಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು, 1887ನೇ ಇಸವಿ ಮಾರ್ಚಿ 7ನೇ ಮಂಗಳವಾರ ಮಧ್ಯಾಹ್ನ 12 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಂನಲ್ಲಿ ಕಡೂರು ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಇಜಾರೆಯು ಮೇಲ್ಕಂಡ 3 ವರುಷಗಳ ಕಾಲದಲ್ಲಿ ಮಲ್ನಾಡು ತಾಲ್ಲೂಕುಗಳಲ್ಲಿ ಬಗನಿ ಶೇಂದಿಯನ್ನು ಪುರೋಖ್ತು ಮಾಡುವ ಸ್ವಾತಂತ್ರ್ಯವನ್ನು ಅಡಿಗಿಸಿಕೊಂಡಿರುವದಿಲ್ಲ; ಸದರೀ ಬಗನೀ ಶೇಂದಿ ಫರೋಖ್ತು ಮಾಡುವ ಸ್ವಾತಂತ್ರ್ಯವು ಗ್ರಾಮವಾರಾಗಲಿ ಅನೇಕ ಗ್ರಾಮಗಳು ಸೇರಿಯಾಗಿಯಾಗಲಿ ಅಲಾಹಿದಾ ಇಜಾರೆಗೆ ಕೊಡಲ್ಪಡುವದು. ಕಡೂರು ಡಿಸ್ಟ್ರಿಕ್ಟಿಗೆ ಇದರಡೀ ಕಂಡ ತಾಲ್ಲೂಕುಗಳು ಶೇರಿರುತ್ತವೆ.

1 ಚಿಕ್ಕಮಗಳೂರು	4 ತರೀಕೆರೆ
2 ಕಡೂರು	5 ಕೊಪ್ಪ, ಯಡೇಹಳ್ಳಿ ಡೆ॥ ಅಮಲ್‌ದಾರ್ರ ಚಾರ್ಜ ದೇಖೀಲ್.
3 ಮೂಡಿಗೆರೆ	

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರಕಾರದ ಸವಾಲಿಗೆ ಮೇಲ್ಪಟ್ಟು ಬರತಕ್ಕ ಚಡ ದರಖಾಸ್ತುದಾರಗೆ ಹರಾಜುಮೂಲಕ ದಿವಾನರವರ ಮಂಜೂರಾತಿಗೆ ವಳಪಟ್ಟು ವಿಕ್ರಯಿಸಲ್ಪಡುವದು, ಸದರೀ ಸಾಲಿಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಫಾಯಿಷ್ ಮಾಡಲ್ಪಡುತ್ತೆ. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮ ಪ್ರಕಾರ ಮೊಕರರ್ ಮಾಡಲ್ಪಟ್ಟ ಮುಖ್ತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು. ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾದ ಸರಕಾರದ ಸವಾಲಿನ ಮೊಬಲಗಿನಮೇಲೆ ಶೇಕಡಾ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಇಡಲ್ಪಡುವ ತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜ್ ಆಖೈರ್ ಕಾಲದಲ್ಲಿ ಅವರಿಗೆ ವಾಪಸ್ ಪಾವತೀ ಮಾಡಲ್ಪಡುವದು.

4. ಯಾವ ಚಡ ದರಖಾಸ್ತುದಾರನ ದರಖಾಸ್ತು ದಿವಾನರವರ ಮಂಜೂರಾತಿ ಬಗ್ಯೆ ಚುನಾಯಿಸಿಕೊಳ್ಳಲ್ಪಡುತ್ತೋ ಅಂಥಾ ಚಡ ದರಖಾಸ್ತುದಾರನು ಮೊದಲೇ ಡಿಪಾಜಿಟ್ ಇಟ್ಟಿರುವ ಮೊಬಲಗು ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದು ಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಇಡತಕ್ಕದ್ದು. ಆತನು ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ ಪೂರ್ವ ಡಿಪಾಜಿಟ್ ಇಟ್ಟಿರುವ ಮೊಬಲಗುಗಳು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗು ಪೈಕಿ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ಇಜಾರೇ ಷರತ್ತುಗಳಂತೆ ಕ್ರಮ ಪ್ರಕಾರ ನಡದುಕೊಳ್ಳುವ ಬಗ್ಯೆ ಜಾಮೀನಿ ತರೀಕ ನಗದಾಗಿಯಾಗಲಿ ಕ್ರಮ ಪ್ರಕಾರ ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ರಮೆಂಟ್ ಪತ್ರಗಳ ಮೂಲಕವಾಗಿಯಾಗಲಿ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿ ಪೈಕೀ ಅರ್ಧ ಭಾಗವನ್ನ ನಗದಾಗಿಯಾಗಲಿ ಮೇಲೆ ಹೇಳಿದಂತೆ ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ರಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಹಾಜರ್ಮಾಡಿ ಬಾಕೀ ಅರ್ಧವನ್ನ ಸದರೀ ಮೊಬಲಗ್ಯೆ ಯರಡರಷ್ಟು ಕ್ರಯ ಬಾಳುವ ಮತ್ತು ಯಾವ ಬಾಧ್ಯತೆ ವ ದೇಣೆಗಳು ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿಯಾಗಲಿ ಹಾಜರ್ಮಾಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದಮೇಲೆ, ಒಂದು ಕರಾರ್ ಬರದುಕೊಡತಕ್ಕದ್ದು.

5. ಆತನು ಕರಾರಿಗೆ ರುಜು ಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು, ಗವರ್ರಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು, ಇಜಾರೆಯು ಪುನಃ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾ ಮಾಡಲ್ಪಡುವದು. ಹಾಗೆ ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲಾ ಮಾಡುವದರಿಂದ ವುಂಟಾಗುವ ನಷ್ಟಕ್ಕೆ ಅವನನ್ನು ಗುರಿಮಾಡಿ, ಜಮೀನು ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಜಫ್ತೀ ಹರಾಜಿನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನಮೇಲೆ ರೂಪಾಯಿಗೆ ಬಂದ್ದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ

ಮುಂದಾಗಿಯಾಗಲಿ, ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಮಾಹೇಯಾನಾ ಸಮಸಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗುಗಳು ಪಾವತಿಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಧವಾಗಿ ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ದಿವಾನರವರ ಮಂಜೂರಾತೀನಿಶೀ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರಿ ಇರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು; ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತು ಬಗ್ಗೆ ನೇಮಿಸಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷ್ನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆ ಬಗ್ಗಾಗಿ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ದಿವಾನರವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರೀಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಖಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳಲ್ಲಿ, ಗುತ್ತಿಗೇದಾರನು ಎಷ್ಟುಮಾತ್ರವೂ ಪ್ರವೇಶಿಸಕೂಡದು. ಅಂತಾ ಹಕ್ಕುಗಳ ವಿಷಯದಲ್ಲಿ ಉಂಟಾಗುವ ತಕರಾರುಗಳು ಮತ್ತು ಇನಾಮುದಾರರುಗಳಿಗೆ ಶೇಂದಿ ಹುಟ್ಟುವಳಿಗೋಸ್ಕರ ಸಲ್ಲಬೇಕಾದ ಈಡು ಮೊಬಲಗುಗಳ ವಿಷಯದಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರು ಫೈಸಲ್ ಮಾಡತಕ್ಕದ್ದು. ಅಂಥಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲ್ ಅಪ್ಪೀಲಿನಲ್ಲಿ ದಿವಾನರವರಿಂದ ಖಾಯಂ ಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂತಾ ತೀರ್ಪಿನಲ್ಲಾಗಲಿ ಅಥವಾ ದಿವಾನರವರಿಂದ ಅಪ್ಪೀಲಿನಲ್ಲಾಗಲಿ ಪಾವತೀ ಮಾಡಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಗೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲ್ಸ್ ಅನುಸರಿಸಿ ಕಂಟ್ರಾಕ್ಟದಾರರಿಂದ ವಸೂಲ್ ಮಾಡಲ್ಪಡತಕ್ಕದ್ದು.

VI. ಬೆಳಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದೀ ಪುರೋಖ್ತು ಬಗ್ಗೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರಾಕ್ಟರನ್ನು ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿರತಕ್ಕದ್ದು.

VIII (a.) ಇಜಾರೇದಾರನು ಡಿಸ್ಟ್ರಿಕ್ಟಿನ ಮತ್ತು ಸಬ್ ಡಿವಿಜನ್ನಿನ ಸರಕಾರದ ಬಂಜರ್ ಜಮೀನಿನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಗಾಗಲಿ ಬೆಲ್ಲ ತಯಾರ್ ಮಾಡುವ ಬಗ್ಗಾಗಲಿ ಶೇಂದೀ ಇಳಿಸುವದಕ್ಕೂ

ಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ಡಿಸ್ಟ್ರಿಕ್ಟುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ, ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತುಗಳ ಪ್ರಕಾರವೂ ಮಾತ್ರವೇ ಶೆಲ್ಲ ತಯಾರ್ಮಾಡಲ್ಪಡತಕ್ಕದ್ದು.

VIII. (*b.*) ಇಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್ವಾರ್ ಲೆಖ್ಖಗಳು ಇಡತಕ್ಕದ್ದು. ಅವುಗಳಲ್ಲಿ (1) ಶೇಂದಿ ಇಳಿಸಲ್ಪಟ್ಟ ಶೇಂದೀ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದೀ ಕಟ್ಟಿದ ಮರಗಳ ಸಂಖ್ಯೆ, (3) ರೋಜೇನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದ್, (4) ರೋಜೇನಾ ಬಿಕರೀ ಮಾಡಲ್ಪಟ್ಟ ಶೇಂದಿಯ ತೇದಾದ್ ಮತ್ತು (5) ಶೇಂದಿಯು ಸರಬರಾಯಿಮಾಡಲ್ಪಟ್ಟ ದುಕಾನುಗಳ ಹೆಸರು ಈ ಬಾಬತು ತಪಶೀಲ್‌ಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಖ್ಖಗಳು ಅಮಲ್ದಾರರಿಂದಾಗಲಿ ಈ ಬಗ್ಯಾಗಿ ಡೆ|| ಕಮ್ಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫೀಸರರಿಂದಾಗಲಿ ತನಿಖೆ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕವು. ಮತ್ತು ಇವುಗಳ ನಕಲು ಡೆ|| ಕಮ್ಮಿಷನರವರಿಂದಲಾಗಲಿ ಅಮಲ್ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಇಜಾರೇದಾರರಿಂದ ಹಾಜರ್ಮಾಡಲ್ಪಡತಕ್ಕದ್ದು.

IX. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬು ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ನೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಡಿಸ್ಟ್ರಿಕ್ಟು ಪೈಕೀ ಯಾವ ಭಾಗದಲ್ಲಾಗಲಿ ಅಥವಾ ಸಬ್ ಡಿವೀಜನಿನ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳಮೇಲೆ ಇಜಾರೆಯನ್ನು ಮವುಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

X. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವರಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಖಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರ ಯಾ ಫುರೋಖ್ತುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಫುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

XI. ಗುತ್ತಿಗೇದಾರನು ತನ್ನ ನವುಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರೆಗೆ ಒಂದು ಗಜದ ಯತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೆಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ವುಪಯೋಗಿಸದೆಯೂ, ಇರುವ ಬಗ್ಯೆ ಜವಾಬುದಾರನಾಗಿರತಕ್ಕದ್ದು. ಈ ನಿಬಂಧನೆಗಳಿಗೆ ಏನಾದರೂ ಬರಖಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯು ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುತ್ತಿಗೇದಾರ ಗುರಿಯಾಗತಕ್ಕದ್ದು.

XII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಶೇರು ಒಂದಕ್ಕೆ ಕ್ರಯ. ಜಾಸ್ತಿ. ರೂ. ಆ. ಪೈ.	ಕಮ್ಮಿ. ರೂ. ಆ. ಪೈ.
ತಾಲ್ಲೂಕು ಕಸಬೆಗಳಲ್ಲಿ	0—1—4	0—0—6
ಗಾವ್‌ಗಾನೆಗಳಲ್ಲಿ	0—1—0	0—0—6

6. ಶೇಂದಿ ರವಾನೇಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. ಹಿಂದಿನ ಹುಟ್ಟುವಳಿಯನ್ನೂ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

ತಾರೀಖು 8ನೇ ಜನವರೀ 1887ನೇ ಇಸವಿ.

ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷರ್ಷ ವಿನಾ, ಮೈಸೂರು ಶೀಮೆಯು ತಮಾಂ ಪ್ರದೇಶಗಳಲ್ಲೂ, ಹಲ್ವಾ ವಿನಾ ಗಾಂಜಾ ಮತ್ತು ಅದರಿಂದ ತಯಾರ್ಮಾಡಲ್ಪಟ್ಟ ಯಾವ ಪದಾರ್ಥಗಳನ್ನಾಗಲೀ, ಒಟ್ಟು ಬಿಕರೀ ಮಾಡುವ ಒಟ್ಟು ಸ್ವಾತಂತ್ರ್ಯದ ಬಗ್ಯೆ ಯಿದರ ದೆಶೇಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿವೆ.

2. ಸದರೀ ಕಂಟ್ರಾಕ್ಟು, 1887ನೇ ಇಸವಿ ಏಪ್ರೈಲ್ 1ನೇ ತಾರೀಖು ಮೊದಲು 1889ನೇ ಇಸವಿ 31ನೇ ಮಾರ್ಚಿ ವರಿಗಿನ ಯರಡು ವರ್ಷಗಳ ಪರಿಯಂತ ವ್ಯಾಪಿಸತಕ್ಕದ್ದು.

3. ಪ್ರತಿ ದರಖಾಸ್ತಿನಲ್ಲಿಯೂ, ದರಖಾಸ್ತುದಾರನು ಸರಕಾರಕ್ಕೆ ಸಾಲಿಯಾನಾ ಯಷ್ಟು ಮೊಬಲಗು ಕೊಡುವದಕ್ಕೆ ಒಪ್ಪುತ್ತಾನೋ ಅಂಥಾ ಕಮ್ಮಿ ಮೊಬಲಗನ್ನ ನಮೂದಿಸತಕ್ಕದ್ದಲ್ಲದೆ; ಶೀಮೆ ಮುಳೆಗೋಸ್ಕರವಾಗಿ, ಲೋಕಲ್‌ಸೆಸ್ ವಿನಾ ವಂದು ಪ್ರೊಟ್ಟು ಮೊಬಲಗನ್ನು ನಮೂದಿಸತಕ್ಕದ್ದು. ಸಾಲಿಯ್ಯಾನಾ 5,500 ರೂಪಾಯಿಗಳಿಗಿಂತ ಕಮ್ಮಿ ಮೊತ್ತವನ್ನು ಸರ್ಕಾರಕ್ಕೆ ತೆರುವಂತೆ ಒಪ್ಪುವ ಯಾವ ದರಖಾಸ್ತೇ ಆಗಲಿ ಆಲೋಚಿಸಲ್ಪಡಲಾರದು. ಪ್ರತಿ ದರಖಾಸ್ತಿನ ಸಂಗಡಲೂ 100 ರೂಪಾಯಿಗಳ ಠೇವಣಿ ಮೊಬಲಗು ನಗದಾಗಿ ಕಳುಹಿಸಲ್ಪಟ್ಟು "ಸಿವಿಲ್ ವ ಮಿಲಿಟೇರಿ ಸ್ಟೇಷರ್ಷ ವಿನಾ ಮೈಸೂರು ದೇಶದ ತಮಾಂ ಡಿಸ್ಟ್ರಿಕ್ಟುಗಳಲ್ಲಿ ಹಲ್ವಾ ಶಿವಾಯಿ ಗಾಂಜಾ ಮತ್ತು ಅದರ ಯಾವದಾದರೂ ತಯಾರಿಯನ್ನು ಒಟ್ಟು ಬಿಕರಿ ಮಾಡುವ ಒಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

4. ದರಖಾಸ್ತುಗಳು, 1887ನೇ ಇಸವಿ ಫೆಬ್ರುವರೀ 15ನೇ ಮರ್ಕು ದಿನ ಮಧ್ಯಾನ್ಹದಲ್ಲಾಗಲೀ ತತ್ಪೂರ್ವವಾಗಲೀ ಬೆಂಗಳೂರು ಮೊಕ್ಕಾಂ ದಿವಾನರವರ ಆಫೀಸಿನಲ್ಲಿ ಒಪ್ಪಿಸಲ್ಪಡತಕ್ಕದ್ದು; ಆಗ ಅವು ಬೆಂಗಳೂರು ಡೆಪ್ಯುಟಿ ಕಮ್ಮಿಷನರ್ ಮತ್ತು ಚೀಫ್ ಸೆಕ್ರೆಟೇರಿಯವರಿಂದ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು, ಯಾವ ದರಖಾಸ್ತು ಗವರ್ನಮೆಂಟಿಗೆ ಶಿಫಾರಸ್ ಮಾಡುವ ಬಗ್ಯೆ ಚೀಫ್ ಸೆಕ್ರೆಟೇರಿ ಮತ್ತು ಬೆಂಗಳೂರು ಡೆಪ್ಯುಟಿ ಕಮ್ಮಿಷನರಿಂದ ಚುನಾಯಿಸಲ್ಪಡುತ್ತೋ ಅಂಥಾ ದರಖಾಸ್ತುದಾರನು ತಾನು ಒಪ್ಪಿಕೊಳ್ಳುವ ಸಾಲಿಯಾನಾ ಮೊಬಲಗ್ ಪೈಕಿ ಹನ್ನೆರಡರಲ್ಲಿ ವಂದು ಭಾಗಕ್ಕೆ (ಯಾ ವಂದು ತಿಂಗಳ ಖಿಸ್ತು ಮೊಬಲಗಿಗೆ) ಸರಿಯಾದ ಜಾಸ್ತೀ ಮೊಬಲಗನ್ನು ನಗದಾಗಿಯಾಗಲೀ "ಮೈಸೂರ ದಿವಾನರವರ ಹೆಸರಿಗೆ" ಕ್ರಮವಾಗಿ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಕೂಡ್ಲೇ ಡಿಪಾಜಿಟ್ ಯಿಡಬೇಕಾಗಿರುತ್ತೆ. ಹಾಂಗೆ ಮಾಡುವದಕ್ಕೆ ತಪ್ಪಿದರೆ ದರಖಾಸ್ತಿನೊಡನೆ ಹಾಜರ್ಮಾಡಲ್ಪಟ್ಟ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದಲ್ಲದೆ, ಇಜಾರೆಯು ದರಖಾಸ್ತುದಾರನ ಲುಕ್‌ಸಾನಿಗೆ ವಳಪಟ್ಟು ಪುನಹಾ ಹರಾಜು ಮಾಡಲ್ಪಡುವದು.

5. ಗವರ್ನಮೆಂಟಿನವರ ತೀರ್ಮಾನವು ತಿಳಿಸಲ್ಪಟ್ಟ ತರುವಾಯ, ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರುಗಳ ಠೇವಣಿ ಮೊಬಲಗುಗಳು ಅವರವರು ಅರ್ಜಿ ಬರಕೊಂಡಲ್ಲಿ ವಾಪಸ್ ಕೊಡಲ್ಪಡುವವು. ಹೆಚ್ಚು ಮೊಬಲಗಿನ ಯಾ ಯಾವ ದರಖಾಸ್ತನ್ನೇ ಆಗಲಿ ಕಾರಣ ನಮೂದಿಸದೇ ತಿರಸ್ಕರಿಸುವ ಅಧಿಕಾರವನ್ನ ಗವರ್ನಮೆಂಟಿನವರು ವುಳಿಸಿಕೊಂಡಿರುತ್ತಾರೆ.

6. ಯಾವ ಮನುಷ್ಯನ ದರಖಾಸ್ತನ್ನ ಅಂಗೀಕರಿಸೋಣಾಗುತ್ತೋ ಆತನು, ಗವರ್ನಮೆಂಟಿನವರ ಮಂಜೂರಾತಿಯು ಅವನಿಗೆ ತಿಳಿಸಲ್ಪಟ್ಟ 8 ದಿವಸಗಳೊಳಗಾಗಿ 4ನೇ ಕಲಮನುಸರಿಸಿ ಮುಂದಾಗಿಯೇ ಹಾಜರ್ಮಾಡಿದ್ದ ಠೇವಣಿಮೊಬಲಗು ಶೇರಿ ಸಾಲೀಯಾನಾ ಕರಾರುಮಾಡಿಕೊಳ್ಳುವ ಹುಟ್ಟುವಳಿಯ ನಾಲ್ಕರಲ್ಲೊಂದು ಭಾಗಕ್ಕೆ ಸಮವಾದ ಮೊಬಲಗನ್ನ ನಗದಾಗಿಯಾಗಲಿ, "ಮೈಸೂರು ದಿವಾನರವರ ಹೆಸರಿಗೆ" ಕ್ರಮವಾಗಿ ಯಿಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಡೆಪ್ಯುಟಿ ಕಮ್ಮಿಷನರವರ ಬಳಿ ಠೇವಣಿ ಇಟ್ಟು ಈ ಕೆಳಗೆ ವಿವರಿಸೋಣಾಗುವ ಷರತ್ತುಗಳ ಮೇರಿಗೆ ನಡದುಕೊಳ್ಳುವದಕ್ಕೆ ಬದ್ಧನಾಗಿ ಸರಿಯಾದ ಛಾಪಾ ಕಾಗದ್ದಲ್ಲಿ ಕ್ರಮವಾಗಿ ಮುಚ್ಚಲಿಕೆಯನ್ನ ಬರದುಕೊಡತಕ್ಕದ್ದು. ಅಂತ್ಹಾ ಮುಚ್ಚಲಿಕೆಗೆ ಆತನು ರುಜು ಮಾಡಲಿಕ್ಕೆ ತಪ್ಪಿದಲ್ಲಿ ಯಾ ರುಜು ಮಾಡಲಿಕ್ಕೆ ನಿರಾಕರಿಸಿದ ಪಕ್ಷದಲ್ಲಿ ಅಥವಾ ಅವಶ್ಯಕವಾದ ಠೇವಣೀಯನ್ನ ಹಾಜರ್ಮಾಡಲಿಕ್ಕೆ ತಪ್ಪಿದಲ್ಲಿ ಆತನು ಮುಂಚಿತವಾಗಿ ಹಾಜರ್ಮಾಡಿದ್ದ ಠೇವಣಿ ಮೊಬಲಗು ಸರಕಾರಕ್ಕೆ ದಾಖಲ್ಮಾಡಿಕೊಳ್ಳುವದಲ್ಲದೆ, ಇಜಾರೆಯು ಅಂನ್ಯಥಾ ವಿಲಾ ಮಾಡಲ್ಪಡುವದು. ಈ ಇಸ್ತಿಹಾರ್‌ನಾಮೆಯ ಯಾವ ಷರತ್ತುಗಳನ್ನಾಗಲೀ ಬದಲಾಯಿಸುವಂತೆ ಸೂಚಿಸುವ ಯಾವ ದರಖಾಸ್ತೇ ಆಗಲಿ ಆಲೋಚಿಸಲ್ಪಡಲಾರದು.

7. ಕಂಟ್ರಾಕ್ಟುದಾರನಿಂದ ಲೈಸೆನ್ಸ್‌ಪಡೆದ ಬಿಕರೀದಾರ್ರುಗಳಿಗೆ ಯಾವದಾದರೂ ಸಾಲಿನಲ್ಲಿ ಮಾರಲ್ಪಡುವ ಗಾಂಜಾ ವ ಅದರ ತಯಾರೀ ಪಧಾರ್ಥಗಳ ಬಿಕರೀ ಮೊಬಲಗು. ಕರಾರು ಮಾಡಿಕೊಂಡ ಮೊಬಲಗಿಗಿಂತಲೂ ಜಾಸ್ತಿ ಯಾಗುವ ಪಕ್ಷಕ್ಕೆ, ಅಂತಾ ಜಾಸ್ತೀ ಮೊಬಲಗಿನ ಮೇಲೆ ಶೇಕಡಾ 25ರ ಮೇರಿಗೆ ಆಗುವ ಮೊಬಲಗು, ಸದರೀ ಸಾಲ್ ಆಖೈರಿನ ಖಿಸ್ತಿನೊಂದಿಗೆ ಇದರ ಕೆಳಗೆ IIIನೇ ಷರತ್ತಿನಲ್ಲಿ ಕಂಡ ಉಳೀ ಮೊಬಲಗಿಗೆ ಬುಳಪಟ್ಟು ಗೌರ್ನಮೆಂಟಿಗೆ ಕ್ರಮವಾಗಿ ಪಾವತೀ ಮಾಡಲ್ಪಡತಕ್ಕದ್ದು.

8. ಹಾಲಿ ದರಖಾಸ್ತು ಅಪೇಕ್ಷಿಸಲ್ಪಟ್ಟಿರುವ ಕಂಟ್ರಾಕ್ಟು, ಇದರಡೀ ಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಯಾವವೆಂದರೆ:—

ಷರತ್ತುಗಳು.

I. ಸದರೀ ಕಂಟ್ರಾಕ್ಟು, ಮೈಸೂರು ಗವರ್ನಮೆಂಟಿನ ಮಂಜೂರಾತಿ ವಿನಾ ವರ್ಗ ಮಾಡಲ್ಪಡಕೂಡದು.

II. ಈ ಕಂಟ್ರಾಕ್ಟಿನ, ಉದ್ದೇಶಗಳಿಗಾಗಿ, ಯಿಜಾರೆಯ ಮಾಯಿದೆ ಯೊಳಗೆ ಕಂಟ್ರಾಕ್ಟುದಾರರಿಂದಾ ಮೊಕರರ್ಮಾಡಲ್ಪಡುವ ಯಾ ಯಿಟ್ಟುಕೊಳ್ಳಲ್ಪಡುವ ಯಾವ ಪ್ರತಿನಿಧಿ, ಮುತಾಲೀಕ ಯಾ ಖಾಲುದಾರನನ್ನೇ ಆಗಲಿ, ಅಂತಾ ಪ್ರತಿನಿಧಿ, ಮುತಾಲೀಕ ಯಾ ಪಾಲ್ದಾರನನ್ನ, ತಾತ್ಕಾಲಿಕ ಬೆಂಗಳೂರು ಡಿಪ್ಯುಟಿ ಕಮ್ಮಿಷನರು ಮುಂಚಿತವಾಗಿ ಮಂಜೂರ್ಮಾಡಿದ್ದರೇನೆ ಹೊರ್ತು, ಗೌರ್ನಮೆಂಟಿನವರು ನಿರಾಕರಿಸಬಹುದು,

III. ಕಂಟ್ರಾಕ್ಟದಾರನು ಒಪ್ಪಿಕೊಳ್ಳುವ ಅಥವ ಪಕ್ಷದ ಹುಟ್ಟುವಳೀ ಮೊಬಲಗನ್ನ, ರೂಪಾಯಿ ಬಂದಕ್ಕೆ ಪ್ರೊಂದಾಣೆ ಮೇರಿಗೆ ಲೋಕಲ್ ಸೆಸ್‌ದೇಖಿಲ್, ಮಾಹೇವಾರಿ ಸಮ ಮೊಬಲಗ್ ಖಿಸ್ತುಬಂದೀಯಾಗಿ ಬೆಂಗಳೂರು ಡಿಸ್ಟ್ರಿಕ್ಟು ಖಜಾನೆಯಲ್ಲಿ ಪ್ರತಿ ತಿಂಗಳ 20ನೇ ತಾರೀಖಿನಲ್ಲಿ ಯಾ ಅದಕ್ಕೆ ಮುಂಚಿತವಾಗಿ ಪಾವತೀ ಮಾಡತಕ್ಕದ್ದು. ಕರಾರ್ ಮೊಬಲಗಿಗಿಂತಲೂ ಜಾಸ್ತೀ ಬಿಕರೀ ಯಾದ ಬಾಬತಿನ ಶೇಕಡಾ 25ರ ಮೇರಿಗೆ ಆಗುವ ಹಣವನ್ನ ಸಾಲ್ ಆಖೈರ್ ಖಿಸ್ತಿನೊಂದಿಗೆ ಪಾವತೀ ಮಾಡತಕ್ಕದ್ದು. ಸದರೀ ಶೇಕಡಾ 25ರ ಬಾಬತು ಮೊಬಲಗು, (ಲೋಕಲ್ ಸೆಸ್ ದೇಖೀಲ್) ಗೊತ್ತುಮಾಡಿಕೊಂಡ ಕಮ್ಮಿ ಹುಟ್ಟುವಳಿ ಮೊಬಲಗು ಪಾವತೀಮಾಡಲ್ಪಟ್ಟು ಕಂಟ್ರಾಕ್ಟುದಾರರಿಗೆ ಗಾಂಜಾವಿಗೋಸ್ಕರ ತಗಲಿದ ಲಾಗವಜು ಮತ್ತು ಸದರೀ ಗಾಂಜಾ ಆಯಾ ಡಿಪೋಗಳಿಗೆ ಸಾಗಿಸುವದಕ್ಕೋಸ್ಕರ ವಾಸ್ತವ್ಯವಾಗಿ ತಗಲಿದ ತಮಾಂ ನ್ಯಾಯವಾದ ಖರ್ಚು ಸುದಾ ವಜಾಮಾಡಿದ ತರುವಾಯ ಕಂಟ್ರಾಕ್ಟುದಾರರಿಗೆ ಉಳಿದ ನಿವಳ ಮೊಬಲಗಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಹಾಗೆ ಉಳಿದ ನಿವಳ ಮೊಬಲಗು 500 ರೂಪಾಯಿಗಳಿಗೆ ಮೀರಪಟ್ಟರೆ ಅಂಥಾ ಮೊಬಲಗಿನ ಮೇಲೆ ಗವರ್ನಮೆಂಟಿಗೆ ಶೇಕಡಾ ಯಾವದೂ ಸಲ್ಲಬೇಕಾದ್ದಿಲ್ಲ; ಪರಂತು ಕಂಟ್ರಾಕ್ಟುದಾರರು ನಿರ್ವಂಚನೆಯಾಗಿ ಈ ಇಸ್ತಿಹಾರ್‌ನಾಮೆ, ಯಕ್ಸೈಸ್ ಆಕ್ಟು ಮತ್ತು ಗವರ್ನಮೆಂಟಿನ ರೂಲ್‌ಸ್ ಯಿವುಗಳ ಷರತ್ತುಗಳನ್ನು ಕ್ರಮವಾಗಿ ನೆರವೇರಿಸತಕ್ಕದ್ದು. ಮೇಲೆ ಹೇಳಲ್ಪಟ್ಟ ಮೇರಿಗೆ ಯಾವದಾದರೊಂದು ಖಿಸ್ತಿನ ಮೊಬಲಗು ಪಾವತೀಮಾಡಲಿಕ್ಕೆ ತಪ್ಪಿದಲ್ಲಿ ಗವರ್ನಮೆಂಟಿನವರ ಮಂಜೂರಾತಿನಿಃ ಠೇವಣೀ ಮೊಬಲಗು ಸರ್ಕಾರ್ ದಾಖಲಾಗಿರುತ್ತೆಂದು ಎಣಿಸಲಿಕ್ಕೂ, ಇಜಾರೆಯನ್ನ ಗವರ್ನಮೆಂಟಿನವರ ವಿಚಾರಣೆಯಲ್ಲಿ ತೆಗದುಕೊಳ್ಳಲಿಕ್ಕೂ, ಯಾ ಕಂಟ್ರಾಕ್ಟದಾರನ ಜವಾಬ್‌ದಾರೀ ಮೇಲೆ ಮತ್ತ್ಯಾವ ಇತರ ರೀತಿಯಲ್ಲಿ ಇಡುವದಕ್ಕೂ, ಅಥವಾ ಇಜಾರೆಯು ಅವನಿಗೆ ತಪ್ಪಿಹೋಗಿರುತ್ತೆಂದು ಎಣಿಸಿ ಕಂಟ್ರಾಕ್ಟುದಾರನ ಜವಾಬ್‌ದಾರೀ ವ ಅವನ ಲುಕ್ಸಾನಿಗೆ ಗುರಿಮಾಡಿ ಇಜಾರೆಯನ್ನ ಪುನಃ ಹರಾಜು ಮಾಡಲಿಕ್ಕೂ, ಮತ್ತು ಬರಬೇಕಾದ ವಿಶಿಷ್ಟ ಬಾಕೀ ಮೊಬಲಗನ್ನೂ ಸಾಲೀಯಾನಾ ಶೇಕಡಾ 6 ರೂಪಾಯಿ ಮೇರಿಗೆ ಆಗುವ ಬಡ್ಡೀ ಮೊಬಲಗ್ ದೇಖೀಲ್ ಬಟ್ಟು ಬಿಕರೀ ಡಿಪೋಗಳಲ್ಲಿರತಕ್ಕ ನಗದ್ ಮೊಬಲಗಿನಿಂದಲೂ ಕಂಟ್ರಾಕ್ಟದಾರನ ಚರಸ್ಥಿರ ಚೀಜಗಿಗೆ ಜಫ್ತಿಹರಾಜು ಮೂಲಕವಾಗಿಯೂ, ಜಮೀನ್ ಕಂದಾಯದ ಬಾಕೀವಸೂಲಿ ಬಗ್ಯೆ ಸಂಬಂಧಪಟ್ಟ ರೂಲ್ಸ್ ಅನುಸರಿಸಿ ವಸೂಲ್ಮಾಡಲಿಕ್ಕೂ ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರಿಗೆ ನ್ಯಾಯವಾಗಿ ಯಿರತಕ್ಕದ್ದು.

IV. ಡೆಪ್ಯುಟಿ ಕಮ್ಮಿಷನರವರು, ದುಕಾನುಗಳ ಸಂಖ್ಯೆ ಮತ್ತು ಸ್ಥಳಗಳ ವಿಷಯದಲ್ಲಿ ಸಾಕಾದ ಮತ್ತು ನ್ಯಾಯವಾಗಿ ತೋರಿ ಬರುವ ಸಬಬಿನ ಮೇಲೆ ಮಾತ್ರವೇ ಅವಶ್ಯಕವೆಂದು ತೋರಿಬರುವ ಯಾವ ಬದಲಾವಣೆಗಳನ್ನಾದರೂ ಆಗಿಂದಾಗ್ಯೆ ಮಾಡುವದಕ್ಕೂ ಅಥವಾ ಯಾವ ದುಕಾನನ್ನಾದರೂ, ಕಂಟ್ರಾಕ್ಟುದಾರನು ಈಡು ಮೊಬಲಗು ಕೇಳುವದಕ್ಕೆ ಹಕ್ಕಿಲ್ಲದೇನೇ ಈ ಇಸ್ತಿಹಾರ್‌ನಾಮೆಯು IXನೇ ಷರತ್ತಿನಲ್ಲಿ ವಿವರಿಸಲ್ಪಟ್ಟ ಷರತ್ತುಗಳ ಪ್ರಕಾರವೂ ಮತ್ತು ಅವು ಅನುಸಾರಿಯೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೂ ಸ್ವತಂತ್ರರಾಗಿರುತ್ತಾರೆ.

V. ಕಂಟ್ರಾಕ್ಟುದಾರರ ಹಕ್ಕುಗಳನ್ನು, ಮತ್ತು ಸರಕಾರ ಬಾಧ್ಯತೆಗಳನ್ನು ಕಾಪಾಡುವದಕ್ಕೂ, ಜನಗಳಿಗೆ ಅನಾನೂಕೂಲ್ಯತೆಯನ್ನು ತಪ್ಪಿಸುವದಕ್ಕೂ (ಹಲವಾವಿನಾ) ಗಾಂಜಾ ಮತ್ತು ಅದರ ತಯಾರಿ ಪದಾರ್ಥಗಳಿಗೋಸ್ಕರ ಬಟ್ಟು ವ ಚಿಲ್ಲರೆ ಬಿಕರಿ ದುಕಾನುಗಳ ವಿಷಯಗಳಲ್ಲಿ ಇದರಡಿ ಕಂಡ ನಡವಳಿಕೆಗಳು ಜಾರೀಯಲ್ಲಿ ತರಲ್ಪಡತಕ್ಕವು:—

(a.) ಅಮಲ್‌ದಾರ್ರುಗಳು, ವಿನಾಯಿತಿಯಿಲ್ಲದೇ ಹಾಲಿ ಇರತಕ್ಕ ತಮಾಂ ಬಟ್ಟು ವ ಚಿಲ್ಲರೆ ಬಿಕರೀ ದುಕಾನುಗಳನ್ನೂ 1887ನೇ ಇಸವಿ ಏಪ್ರೈಲ್ 1ನೇ ತಾರೀಖಿನಲ್ಲಿ ಕಾಯಂ ಮಾಡತಕ್ಕದ್ದು.

(b.) ಅಮಲ್‌ದಾರರು, ತಮಾಂ ತಾಲ್ಲೂಕು ಕಸಬಾಗಳು, ಹೋಬಳಿ ಕಸಬಾಗಳು, ದೊಡ್ಡ ಷಹರ್ ವ ಗ್ರಾಮಗಳು ಮತ್ತು ಗಾಂಜಾವಿಗೆ ಗಿರಾಕಿ ಯಿರಬಹುದಾದಂಥಾ ಇತರ ಸ್ಥಳಗಳಲ್ಲಿ ದುಕಾನ್ ಬಗ್ಯಾಗಿ ಬರುವ ವಾಸ್ತವ್ಯವಾದ ದರಖಾಸ್ತುಗಳನ್ನು ಕೂಡಲೆ ಅಂಗೀಕರಿಸತಕ್ಕದ್ದು.

(c.) ಯಾವದಾದರೂ ಒಂದು ಸ್ಥಳದಲ್ಲಿ ದುಕಾನ ಇಡತಕ್ಕ ಆವಶ್ಯಕತೆ ವಿಷಯದಲ್ಲಿ ಅನುಮಾನ ಕಾಣಬರುವ ಸಂಗತಿಗಳಲ್ಲೂ, ಮತ್ತು ಒಂದೇ ಸ್ಥಳದಲ್ಲಿ ಯಾ ಮತ್ತೊಂದು ದುಕಾನಿನ ಸಮೀಪದಲ್ಲಿ ಒಂದು ಜಾಸ್ತಿ ದುಕಾನು ಯಿಡುವದು ಅವಶ್ಯಕವೆಂದು ತೋರಿಬರುವ ಪ್ರತಿ ಸಂಗತಿಯಲ್ಲೂ, ಹೆಡ್ ಸೂಪರವೈಜರವರ ಅಭಿಪ್ರಾಯ ಪಡೆಯತಕ್ಕದ್ದು.

(d.) ಹೆಡ್ ಸೂಪರವೈಜರವರಿಗೆ, ಇಲಾಖಾ ಮಾರಿಫತ್ತು ತಿಳಿಯಬಂಬ ಆಧಾರದ ಮೇಲೆ ಯಾವದಾದರೂ ಮುಖ್ಯ ಸ್ಥಳದಲ್ಲಿ ಹೊಸದಾದ ದುಕಾನನ್ನು ಯಿಡುವದು ಯುಕ್ತವೆಂದು ಕಾಣಬಂದರೆ ಆಬಗ್ಗ್ಯಾಗಿ ಅಮಲ್‌ದಾರ್ರಿಗೆ ತಿಳಿಸತಕ್ಕದ್ದು; ಸದರೀಯವರು, ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿ ಮತ್ತು ಕ್ರಮವಾಗಿ ಲೈಸೆನ್ಸ್ ಕೊಡುವಣದರ ನಿರೀಕ್ಷಿಣೆ ಮೇಲೆ ಕೂಡ್ಲೆ ಅಪ್ರಕಾರ ನೆರವೇರಿಸತಕ್ಕದ್ದು.

(e.) ಅಮಲ್‌ದಾರರು, ಬಿಕರೀದಾರರ ಹೆಸರು ಮತ್ತು ಬಿಕರೀ ಸ್ಥಳದ ತಖ್ತೆ ಬಗ್ಗ್ಯಾಗಿ ಬರುವ ತಮಾಂ ದರಖಾಸ್ತುಗಳನ್ನೂ ಕೂಡ್ಲೆ ಅಂಗೀಕರಿಸತಕ್ಕದ್ದಲ್ಲದೆ ಗಾಂಜಾ ದುಕಾನದಾರರು, ಚಿಲ್ಲರೆ ಬಿಕರಿ ಲೈಸೆನ್ಸಿನಲ್ಲಿ ವಿಧಿಸಿರುವ ಪ್ರಕಾರ ಜಾತ್ರೆಗಳಿಗೂ ಸಂತೆಗಳಿಗೂ ಹೋಗುವ ಬಗ್ಯೆ ಧಾರಾಳವಾಗಿ ಅವಕಾಶ ಕೊಡತಕ್ಕದ್ದು.

(f.) ಒಬ್ಬ ಕಾಯಂ ದುಕಾನದಾರನು ಅಕ್ರಮವಾದ ನಡತೆಯುಳ್ಳವನೆಂದು ನಂಬುವದಕ್ಕೆ ನ್ಯಾಯವಾದ ಮತ್ತು ದೃಢವಾದ ಸಬುಬುಗಳು ಕಾಣಬಂದು ಕಂಟ್ರಾಕ್ಟದಾರನು ಖಾಯಿಷ್ ಮಾಡಿದರೆ, ಅಮಲ್‌ದಾರರು ಯಾವದಾದರೂ ದುಕಾನಿಗೆ ತತ್ಕಾಲದಲ್ಲಿ ಯಿರತಕ್ಕ ಬಿಕರೀದಾರನ ಜೊತೆಗೆ ಮತ್ತೊಬ್ಬ ಹೊಸಬಿಕರೀದಾರನನ್ನು ಕೆಲಸ ನಡಿಸುವ ಬಗ್ಯೆ ಮೊಕರರ್ ಮಾಡಬಹುದು; ಮತ್ತು ಹಾಂಗೆ ಅಂತೆಯರ್ದಲ್ಲಿ ಮಾರಾಟನಡಿಸಿದನೆಂಬ ಅನುಮಾನ ದೃಢಪಟ್ಟರೆ ಅಂಥಾ ಹೊಸಬಿಕರೀದಾರನನ್ನು ಕಾಯಂ ಮಾಡಲೂ ಬಹುದು; ಪರಂತು ಹೊಸಬಿಕರೀದಾರನು, ಕಂಟ್ರಾಕ್ಟದಾರನೊಂದಿಗೆ ತನಗೆ ಯಾವ ಸಂಬಂಧವೂ ಇಲ್ಲವೆಂತಲೂ ಅವನ ಯೆಹಸಾನಿಗೆ ತಾನು ವಳಪಟ್ಟಿಲ್ಲವೆಂತಲೂ ಆದರೆ ಇತರ ಯಾವದಾದರೂ ಸ್ವತಂತ್ರ ಬಿಕರೀದಾರನಂತೆಯೇ ತಾನು ಕೆಲಸ ಚಲಾಯಿಸುವದಾಗಿಯೂ ವಂದು ವಾಂಗ್ಮೂಲ ಕೊಡಬೇಕು. ಇದಕ್ಕೆ ತಪ್ಪಿದರೆ, ಅಮಲ್‌ದಾರರು, ಅಂಥಾ ದುಕಾನಿಗೆ ವಬ್ಬ ಸ್ವತಂತ್ರ ಬಿಕರೀದಾರನನ್ನು ನೇಮಿಸತಕ್ಕದ್ದು. ಯೆಲ್ಲ ಸಂದರ್ಭಗಳಲ್ಲೂ ಗ್ರಾಮಸ್ಥರಲ್ಲಿ ಚುನಾಯಿಸತಕ್ಕದ್ದು.

(g.) ಕಂಟ್ರಾಕ್ಟರು, ಅವರ ಏಜಂಟರು ಯಾ ಅವರ ತಾಬೇದಾರರು ಯಿವರೊಂದಿಗೆ ಯಾವ ವಿಧದಲ್ಲಾಗಲಿ ಯಾ ಯಾವ ಗತಿಗಳಲ್ಲಿಯಾಗಲಿ ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಸಂಬಂಧವುಳ್ಳ ಯಾ ಅವರಿಗೆ ಯಾವ ರುಸುಮನ್ನಾದರೂ ಕೊಡುವಂಥಾ ಯಾ ಅವರಿಂದ ಪಡೆಯುವಂಥಾ ಯಾವ ಮನುಷ್ಯನೇ ಆಗಲಿ ಗಾಂಜಾ ದುಕಾನಿಗೆ ಬಿಕರೀದಾರನಾಗಿ ಲೈಸೆನ್ಸ್ ಪಡೆಯಕೂಡದು ಯಾ ಲೈಸೆನ್ಸದಾರನಾಗಿ ಮೊಕರರ್ ಮಾಡಲ್ಪಡಕೂಡದು.

(h.) ಅಮಲ್‌ದಾರರು, ಹೊಸದಾಗಿ ಯಿಡಲ್ಪಟ್ಟ ತಮಾಂ ದುಕಾನಗಳಿಗೋಸ್ಕರ ಗಾಂಜಾ ಮಾರಾಟ ಮಾಡುವದಕ್ಕೆ ಪ್ರಥಮತಃ ಪ್ಯಾಸ್ ಕೊಟ್ಟು ನಂತರ ಲೈಸೆನ್ಸಿಗೋಸ್ಕರ ಡೆಪ್ಯುಟಿ ಕಮ್ಮಿಷನರವರಿಗೆ ಜಾಹಿರ್ಮಾಡಿ ಕೊಳ್ಳತಕ್ಕದ್ದು.

(i.) ಅಮಲ್‌ದಾರರು, ಬಟ್ಟು ಮತ್ತು ಚಿಲ್ಲರೆ ಬಿಕರೀ ಬಗ್ಗ್ಯಾಗಿ ಯಿಡಲ್ಪಟ್ಟ ತಮಾಂ ದುಕಾನಗಳ ವಂದು ತಖ್ತೆಯನ್ನೂ ತಯಾರ್ಮಾಡಿ ಅದರಲ್ಲಿ ದುಕಾನಗಳ ನಂಬರ್, ಲೈಸೆನ್ಸದಾರ ಮತ್ತು ಬಿಕರೀದಾರರ ಹೆಸರು ವಗೈರೇ ತಪಸೀಲ್ ಕಾಣಿಸಿ ಆ ಬಾಬತು ತಖ್ತೆಯನ್ನು 1887ನೇ ಇಸವಿ ಏಪ್ರೈಲ್ 15ರ ವಳಗಾಗಿ ಡೆಪ್ಯುಟಿ ಕಮ್ಮಿಷನರವರಿಗೆ ರವಾನಿಸತಕ್ಕದ್ದು. ಈ ಬಾಬತು ತಖ್ತೆಯ ವಂದು ಯಥಾ ನಕಲು ಅದೇ ತಾರೀಖು ವಳಗಾಗಿ ಹೆಡ್ ಸೂಪರ ವೈಜರವರಿಗೆ ರವಾನಿಸಲ್ಪಡಬೇಕು. ಸದರೀ ಉಭಯ ಮೇಲ್ಕಂಡ ಆಫೀಸರರುಗಳಿಗೂ, ಹೊಸದಾಗಿ ದುಕಾನ ಇಡಲ್ಪಟ್ಟ ಸಂಗತಿಗಳಲ್ಲಿ ಅಥವಾ ಬಿಕರೀದಾರರ ಯಾ ಬಿಕರೀ ಸ್ಥಳಗಳ ವಿಷಯದಲ್ಲಿ ಅಮಲ್‌ದಾರರಿಂದ ಮಂಜೂರ್ ಮಾಡಲ್ಪಟ್ಟ ಬದಲಾವಣೆಗಳ ಬಗ್ಯೆ ಮಾಹೇವಾರಿ ಸಪ್ಲಿಮೆಂಟ್ ತಖ್ತೆಗಳು ಕಳುಹಿಸಲ್ಪಡತಕ್ಕದ್ದು.

VI. ಕಂಟ್ರಾಕ್ಟದಾರನು, ಗಾಂಜಾ ವ ಅದರ ತಯಾರೀ ಪದಾರ್ಥಗಳನ್ನು ಲೈಸೆನ್ಸ್ ಹೊಂದಿದ ಬಿಕರೀದಾರರಿಗೆ ಮಾತ್ರವೇ ವಿಕ್ರಯಿಸತಕ್ಕದ್ದು, ಮತ್ತು ಚಿಲ್ಲರೆ ಬಿಕರೀದಾರರೊಡನೆ ಯಾವ ವಿಧವಾಗಿಯೂ ಸಂಬಂಧವುಂಟಾಗಿರಕೂಡದು.

VII. ಮಾರಲ್ಪಡುವ ಗಾಂಜಾ ಮತ್ತು ಮಾಜಿಂ ಮತ್ತು ಇತರ ತಯಾರಿಗಳು ವಳ್ಳೇ ಗುಣವುಳ್ಳದ್ದಾಗಿರತಕ್ಕದ್ದು, ಅದು ಕಪ್ಪಾಗಿಯಾಗಲಿ, ಹಳೇದಾಗಿಯಾಗಲಿ ಅಥವಾ ಅದರ ಔಷಧಗುಣ ಹೋದಂಥಾದ್ದಾಗಿಯಾಗಲಿ, ಇರಕೂಡದು, ಮತ್ತು ಚಿಲ್ಲರೇ ಬಿಕರೀದಾರರಿಗೆ ಕೊಡಲ್ಪಡುವದಕ್ಕೆ ಮುಂಚಿತವಾಗಿ ದಂಟ್ಟು ಮತ್ತು ಬೀಜಗಳು ತೆಗೆದುಹಾಕಲ್ಪಟ್ಟು ಇರಬೇಕು ಅಥವಾ ಚಿಲ್ಲರೆ ಬಿಕರೀದಾರರಿಂದ ವಾಪಸ್ ಮಾಡಲ್ಪಟ್ಟಾಗ ಅಂಥಾ ದಂಟ್ಟು ಮತ್ತು ಬೀಜದ ತೂಕಕ್ಕೆ ಬದಲಾಗಿ ಬೆರಿಕೆ ಇಲ್ಲದಂಥಾ ವಳ್ಳೇ ಗಾಂಜಾ ಕೊಡಲ್ಪಡತಕ್ಕದ್ದು. ಪುಡಿಮಾಡಲ್ಪಟ್ಟ ಗಾಂಜಾ ಶೇಕಡಾ 5ರಂತೆ ಮಾತ್ರವೇ ಬಿಕರೀದಾರರಿಂದ ತೆಗದುಕೊಳ್ಳಲ್ಪಡತಕ್ಕದ್ದು. ಪುಡಿಮಾಡಲ್ಪಟ್ಟ ಅಂಥಾ ಗಾಂಜಾದಿಂದ ಚಿಲ್ಲರೆ ಬಿಕರೀದಾರನು ಹಲ್ವಾ ತಾಯಾರ್ಮಾಡಬ

ಹುದು. ಕಂಟ್ರಾಕ್ಟದಾರನು ಯಾವಾಗ್ಯೂ ಪ್ರತಿ ಡಿಪೋದಲ್ಲಿ ಒಂದು ತಿಂಗಳಿಗೆ ಸಾಕಾಗುವಷ್ಟು ತೇದಾದಿನ ಗಾಂಜಾವನ್ನೂ ಬೆಂಗಳೂರು ಡಿಸ್ಟಿಲೆರಿಯಲ್ಲಿ ಯ ಪ್ರಾವಿನ್ಷಿಯಲ್ ಹೆಡ್ ಕ್ವಾರ್ಟರ್ ಡಿಪೋವಲ್ಲಿ (ಡಿಪೋಗಳಲ್ಲಿರತಕ್ಕ ದಾಸ್ತಾ ಅಲ್ಲದೆ) ಯರಡು ತಿಂಗಳಿಗೆ ಸಾಕಾಗುವಷ್ಟು ತೇದಾದಿನ ಗಾಂಜಾವನ್ನೂ ದಾಸ್ತಾ ಯಿಟ್ಟಿರತಕ್ಕದ್ದು.

VIII. ಒಂದು ಡಿಸ್ಟ್ರಿಕ್ಟು ಡಿಪೋದಿಂದ ಮತ್ತೊಂದು ಡಿಸ್ಟ್ರಿಕ್ಟು ಡಿಪೋಗೆ ವರ್ಗ ಮಾಡಲ್ಪಟ್ಟ ತಮಾಂ ಗಾಂಜಾ ಮತ್ತು ಅದರ ತಯಾರೀ ಪದಾರ್ಥಗಳಿಗೆ ಒಂದು "ರಪ್ತು ಪ್ಯಾಸ್" ಯಾನೆ ರಹದಾರಿ ಕೊಡಲ್ಪಡತಕ್ಕದ್ದು. ಮತ್ತು ಒಂದೇ ಡಿಸ್ಟ್ರಿಕ್ಟಿನಲ್ಲಿ ಒಂದು ಡಿಪೋಯಿಂದ ಮತ್ತೊಂದು ಡಿಪೋಗೆ "ಕಂಟ್ರಾಕ್ಟುದಾರನ ಪ್ಯಾಸಿನ" ಆಧಾರದ ಮೇಲೆ ಕಳುಹಿಸಲ್ಪಟ್ಟಾಗ ಸದರೀ ಉಭಯ ಪ್ಯಾಸ್‌ಗಳೂ ವಿಧಿಸಲ್ಪಟ್ಟ ನಮೂನೆಯಲ್ಲಿ ಯಿರತಕ್ಕವು, ಮತ್ತು ಅದರಲ್ಲಿ ಕಂಡ ಷರತ್ತುಗಳು ಉಲ್ಲಂಘಿಸಲ್ಪಡಕೂಡದು, ಮತ್ತು ಸದರೀ ಪ್ಯಾಸಿನ ನಂಬರು ವ ತಾರೀಖು ಸುದಾ ಡಿಪೋ ರಿಜಿಸ್ಟರ ಬುಕ್ಕಿನಲ್ಲಿ ಜಮಾ ಬರೆಯಲ್ಪಡುವ ಖತಾಯಿತಿಗೆ ಯದುರಾಗಿ ದಾಖಲೇ ತೋರಿಸಲ್ಪಡತಕ್ಕದ್ದು. ಡಿಪೋ ಯಿಂದ ಚಿಲ್ಲರೇ ಬಿಕರೀದಾರರಿಗೆ ಪರೋಖ್ತು ಮಾಡಲ್ಪಡುವ ಗಾಂಜಾ ವ ಅದರ ತಯಾರಿಗಳಿಗೆ, ವಿಧಿಸಲ್ಪಟ್ಟ ನಮೂನೆಯಲ್ಲಿ ಒಂದು ಪ್ಯಾಸ್ ತಯಾರ್ಮಾಡಲಟ್ಟು ಕಂಟ್ರಾಕ್ಟುದಾರರಿಂದಾಗಲೀ ಅವರಿಂದ ಅಧಿಕಾರ ಕೊಡಲ್ಪಟ್ಟ ಅವರ ಏಜಂಟರಿಂದಾಗಲೀ ರುಜು ಮಾಡಲ್ಪಟ್ಟು ಕೊಡಲ್ಪಡತಕ್ಕದ್ದು. ಮತ್ತು ಅವುಗಳಲ್ಲಿ ನಮೂದಾದ ಷರತುಗಳು ಉಲ್ಲಂಘಿಸಲ್ಪಡಕೂಡದು ಸಂಸ್ಥಾನಾ ಪೂರ್ತಿ 24 ತೊಲೆಗಳುಳ್ಳ ಒಂದು ಸೇರಿಗೆ ವಟ್ಟು ವ ಚಿಲ್ಲರೆ ಬಿಕರೀ ಖರೀದೀ ದರವು ಇದರಡಿ ಕಂಡ ಪ್ರಕಾರ ಗೊತ್ತು ಮಾಡಲ್ಪಟ್ಟಿರುತ್ತೆ:—

	ವಟ್ಟು ಬಿಕರೀ	ಚಿಲ್ಲರೆ ಬಿಕರಿ.
	ರೂ.—ಆ.—ಪೈ.	ರೂ.—ಆ.—ಪೈ.
ಗಾಂಜಾ.	0—10—0	0—13—0
ಮಾಜಿಂ ಯಾ ಗಾಂಜಾದಿಂದ ತಯಾರ್ಮಾಡಲ್ಪಟ್ಟ ಯಿತರ ಯಾವದಾದರೂ ಪದಾರ್ಥ. (ಹಲ್ವಾ ವಿನಾ)	0— 4—0	0—6—0

IX. ಡೆಪ್ಯುಟೀ ಕಮಿಷನರವರು, ಮಿಲಿಟೇರೀ ಅಧಿಕಾರಸ್ಥರ ಅಥವಾ ಮಾಜಿಸ್ಟ್ರೇಟರ ಅಪೇಕ್ಷೆಮೇರಿಗೆ ಯಾವ ದುಕಾನನ್ನಾಗಲಿ ಯಾ ದುಕಾನುಗಳನ್ನಾಗಲಿ ಕಾಯಂ ಆಗಿ ಯಾದರೂ ಅಥವಾ ತತ್ಕಾಲಕ್ಕೆ ಆದರೂ ಮುಚ್ಚಿಸಲು ಅಧಿಕಾರವುಳ್ಳವರಾಗಿರುತ್ತಾರೆ, ಮತ್ತು ಆಬಗ್ಯೆ ಕಂಟ್ರಾಕ್ಟುದಾರನಿಗೆ ಯಾವ ಈಡು ಮೊಬಲಗಿಗೂ ಹಕ್ಕು ಇರುವದಿಲ್ಲವು. ಪರಂತು, ಹಾಗೆ ಕಮ್ಮಿ ಮಾಡಲ್ಪಟ್ಟ ದುಕಾನಗಳ ಸಂಖ್ಯೆಯು, ಜನಗಳ ಅಪೇಕ್ಷೆಗೆ ಆವಶ್ಯಕವಿದ್ದಲ್ಲಿ, ಯಿತರ ಆಜು ಬಾಜು ಷಹರ್ ಯಾ ಗ್ರಾಮಗಳಲ್ಲಿ ಮರಳೀ ಸ್ಥಾಪಿಸಲ್ಪಡಬಹುದು. ಆಯಾ ಡಿಸ್ಟ್ರಿಕ್ಟಿಗೋಸ್ಕರ 1886—87ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟ ಸಂಖ್ಯೆಯೊಳಗಾಗಿ ಯಷ್ಟು ದುಕಾನಗಳನ್ನಾದರೂ ಮುಚ್ಚತಕ್ಕದ್ದು. ಸಂಸ್ಥಾನದ ಆವಶ್ಯಕತೆಗೆ ಜರೂರಾಗಿ ಕಾಣಬಂದರೆ, ಹಾಗೆ ಮುಚ್ಚಲ್ಪಟ್ಟ ದುಕಾನಗಳಬಗ್ಯೆ ಕಂಟ್ರಾಕ್ಟುದಾರನಿಗೆ ಗೌರ್ನಮೆಂಟಿನವರ ಮಂಜೂರಾತಿ ನಿಶಿ ಸದರೀ ಸಾಲಿನಲ್ಲಿ ಲೈಸೆನ್ಸು ಕೊಡಲ್ಪಟ್ಟ ದುಕಾನಗಳಿಗೋಸ್ಕರ ಪಾವತಿಮಾಡಲ್ಪಡುವ ಕರಾರಾದ ಮೊಬಲಗಿನಮೇಲೆ ದಾಮಾಷಾಯಿ ಪ್ರಕಾರ ಈಡು ಮೊಬಲಗು ಕೊಡಲ್ಪಡತಕ್ಕದ್ದು. (ಹಾಗೆ ಮುಚ್ಚುವದಕ್ಕೋಸ್ಕರ ನ್ಯಾಯವಾದ ಮತ್ತು ದೃಢವಾದ ಕಾರಣಗಳಿದ್ದು ಅಂಥಾ ಕಾರಣಗಳು ಬರಹಮೂಲಕ ರಿಕಾರ್ಡು ಮಾಡಲ್ಪಡಬೇಕಾಗಿರುತ್ತೆ. ಪರಂತು ಹಾಗೆ ದುಕಾನಗಳ ಸಂಖ್ಯೆಯಲ್ಲಿ ಕಮ್ಮಿ ಮಾಡಿದ್ದರಿಂದ ಕಂಟ್ರಾಕ್ಟುದಾರರಿಗೆ ಲುಕ್ಸಾನು ಆಯಿತೆಂದು ರುಜುವಾದರೇನೇ ಶಿವಾಯಿ ಅನ್ಯಥಾ ಅಂಥಾ ಈಡು ಮೊದಲಗು ಕೊಡತಕ್ಕದಲ್ಲವು.

X. ಗಾಂಜಾ ಚಿಲ್ಲರೆ ಮಾರಾಟದ ದಗ್ಯೆ ಕೊಡಲ್ಪಡುವ ಲೈಸೆನ್ಸ್‌ಗಳಿಗೆ ಬೆಂಗಳೂರು ವ ಮೈಸೂರು ಷಹರುಗಳಲ್ಲಿ ಶಿವಾಯಿ ಫೀಜು ಏನೂ ವಸೂಲ್ಮಾಡತಕ್ಕದ್ದಲ್ಲವು. ಸದರೀ ಸ್ಥಳದಲ್ಲಿ ಅಂದರೆ ಬೆಂಗಳೂರು ಷಹರಿನಲ್ಲಿ ಪ್ರತಿ ಲೈಸೆನ್ಸಿಗೂ ಮಾಹೆ 1ಕ್ಕೆ 3 ರೂಪಾಯಿ ಮೇರಿಗೂ ಮೈಸೂರು ಷಹರಿನಲ್ಲಿ 1 ರೂಪಾಯಿ ಮೇರಿಗೂ ಫೀಜು ವಸೂಲು ಮಾಡತಕ್ಕದ್ದು. ಗಾಂಜಾ ಪುರೋಖ್ತು ಬಗ್ಯೆ ಲೈಸೆನ್ಸ ಪಡೆದಿರುವಂಥಾವರಿಗೆ ಅಫೀಂ ಮಾರಾಟದಬಗ್ಯೆ ಲೈಸೆನ್ಸನ್ನೂ—ಬದಲಾಗಿ ಅಫೀಂ ಮಾರಾಟದಬಗ್ಯೆ ಲೈಸೆನ್ಸ ಪಡೆದಿರುವಂಥಾವರಿಗೆ ಗಾಂಜಾ ಪುರೋಖ್ತು ಮಾಡುವಾಗ್ಯೆ ಲೈಸೆನ್ಸನ್ನೂ ಧಾರಾಳವಾಗಿ ಕೊಡತಕ್ಕದ್ದು.

XI. ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು, ಮೈಸೂರು ದೇಶದ ಆಚೆ ಯಿರತಕ್ಕ ಸ್ಥಳಗಳಿಂದ ಕಂಟ್ರಾಕ್ಟುದಾರನು ಗಾಂಜಾವನ್ನ ಆಮದ್ ಮಾಡತಕ್ಕಬಗ್ಯೆ ಅದು ಯಲ್ಲಿಂದ ಆಮದ್ ಮಾಡಲ್ಪಡುತ್ತೋ ಅಂಥಾ ಸ್ಥಳದ ಡಿಸ್ಟ್ರಿಕ್ಟು ಅಧಿಕಾರಿಗಳಿಗೆ ವರ್ತಮಾನ ತಿಳಿಸಿ "ಆಮದ್ ಪ್ಯಾಸ್" ಗಳನ್ನು ಕೊಡಬಹುದು. ಮತ್ತು ಹಾಂಗೆ ಕೊಡಲ್ಪಟ್ಟ ಪ್ಯಾಸ್‌ಗಳು ದೇಖೀಲ್ ಅಂಥಾ ಮದ್ದತ್ ಪದಾರ್ಥಗಳು ಅವು ಉಪಯೋಗಿಸಲ್ಪಡುವದಕ್ಕೆ ಅಥವಾ ಯಿತರ ಷಿಕ್ರೀ ಡಿಪೋಗಳಿಗೆ ಸಾಗಿಸಲ್ಪಡುವದಕ್ಕೆ ಮುಂಚಿತವಾಗಿ ಬೆಂಗಳೂರಲ್ಲಿಯ ಗವರ್ನಮೆಂಟ್ ಸೆಂಟ್ರಲ್ ಡಿಸ್ಟಿಲೇರಿಯ ಹೆಡ್‌ಕ್ವಾರ್ಟರ್ ಡಿಪೋ ಲೆಖ್ಖಕ್ಕೆ ಪ್ರಥಮತಃ ದಾಖಲ್‌ಮಾಡಲ್ಪಡತಕ್ಕದ್ದು. ಲೆಖ್ಖದಲ್ಲಿ ಗಲಾಟೆ ಸಂಭವಿಸುವದನ್ನ ಅಡ್ಡೀ ಮಾಡುವದಕ್ಕೋಸ್ಕರ ವಂದು ಡಿಸ್ಟ್ರಿಕ್ಟಿಗೆ ರವಾನಿಸಲ್ಪಟ್ಟ ಸರದೀ ಮದ್ದತ್ ಪದಾರ್ಥದ ದಾಸ್ತಾನು ಮತ್ತೊಂದು ಡಿಸ್ಟ್ರಿಕ್ಟಿಗೆ ಸಾಗಿಸಲ್ಪಡಕೂಡದು ; ವಂದು ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಡಿಪೋಯಿಂದ ಅದೇ ಡಿಸ್ಟ್ರಿಕ್ಟಿನ ವಂದು ತಾಲ್ಲೂಕು ಡಿಪೋವಿಗೆ ಸಾಗಿಸಲ್ಪಡಬೇಕಾದಾಗ, ಅಸಿಸ್ಟೆಂಟ್ ಸೂಪರ್‌ವೈಜರು ಯಾ ರೇಂಜಿನ ಅಥವಾ ಡಿಸ್ಟ್ರಿಕ್ಟಿನ ರೇಂಜರು, ಸದರೀ ಮದ್ದತ್ ಪದಾರ್ಥಗಳು ಸಾಗಿಸಲ್ಪಡುವದಕ್ಕೆ ಮುಂಚಿತವಾಗಿ ವಜನೀ ಮಾಡಿ "ಕಂಟ್ರಾಕ್ಟರ ಪ್ಯಾಸಿನ" ಕೆಳಗೆ ಸರಟಿಫಿಕೇಟ್‌ಯಾನೆ ದೃಢಪಡಿಸಿ ರುಜುಮಾಡತಕ್ಕದ್ದು. ತಮಾಂ ಪ್ಯಾಸ್‌ಗಳಲ್ಲಿಯೂ ವಿಧಿಸಿರತಕ್ಕ ಷರತ್ತುಗಳು ಸಂಬಂಧಪಟ್ಟ ತಮಾಂ ಜನಗಳಿಂದಲೂ ಖಂಡಿತವಾಗಿ ಆಚರಿಸಲ್ಪಡತಕ್ಕದ್ದು.

XII. ಕಂಟ್ರಾಕ್ಟುದಾರನು, ವಟ್ಟು ಮಾರಾಟದ ಕೋಠಿಗಳಲ್ಲಿ ನಡೆದ ಫುರೋಖ್ತು ಬಗ್ಯೆ ಸಾಚಾ ಮತ್ತು ಕರಾರ್‌ವಾಕಾ ಆದ ಲೆಖ್ಖಗಳನ್ನು ದ್ವಿಪ್ರತಿಯಾಗಿ ತಯಾರ್ಮಾಡಿ ಮಾಹೇಯಾನಾ ಹೆಡ್‌ಸೂಪರ್‌ವೈಜರವರದ್ವಾರಾ ಡೆಪ್ಯುಟಿ ಕಮ್ಮಿಷನರವರಿಗೆ ರವಾನಿಸತಕ್ಕದ್ದು ; ಮತ್ತು ಆಬ್‌ಕಾರಿ ಆಫೀಸರುಗಳಿಗೆ ಸರ್ವಕಾಲದಲ್ಲಿಯೂ ಕಂಟ್ರಾಕ್ಟು ದಾರರಿಂದ ಇಡಲ್ಪಟ್ಟ ಲೆಖ್ಖಗಳನ್ನು ತನಖೆ ನೋಡುವಬಗ್ಯೆ ಧಾರಾಳವಾಗಿ ಅವಕಾಶ ಕೊಡಲ್ಪಡತಕ್ಕದ್ದು ; ಮತ್ತು ಸದರೀ ಲೆಕ್ಕಗಳು 1885ನೇ ಇಸವಿ ಫಿಬ್ರುವರೀ 27ನೇ ಮರ್ಸೂಂ 229ನೇ ನಂಬರ್ ಇಸಿಹಾರ್ ನಾಮೆಯಲ್ಲಿ ಗವರ್ನಮೆಂಟಿನಿಂದ ವಿಧಿಸೋಣಾದ ನಮೂನೆಯಲ್ಲಿ ಸಾಚಾ ವ ಕರಾರ್‌ವಾಕಾಗಿ ಇಡಲ್ಪಡತಕ್ಕದ್ದು. ಮತ್ತು ಈ ಕಂಟ್ರಾಕ್ಟಿನ ಉದ್ದೇಶಗಳಿಗಾಗಿ, ಕಂಟ್ರಾಕ್ಟುದಾರರು, ಮದ್ದತ್ ಪದಾರ್ಥಗಳ ಖರೀದಿ, ಅದನ್ನ ರೈಲ್ ಮಾರ್ಗವಾಗಿಯೂ ಭಂಡೀ ಮೂಕವಾಗಿಯೂ ಸಾಗಿಸುವ ಬಗ್ಯೆ ತಗಲಿದ ಲಾಗವಜು, ಯಿತರ ಖರ್ಚುಗಳು ಯಾವದಾದರೂ ಇದ್ದರೆ ಅದೂ ಮತ್ತು ಮದ್ದತ್ ಪದಾರ್ಥಗಳ ವಟ್ಟು ಲಾಗವಜು ಮತ್ತು ಮಣಿಂಕ್ಕೆ ತಗಲಿದಖರ್ಚು ಯಿವುಗಳನ್ನು ತಪಶೀಲಾಗಿ ತೋರಿಸುವಂತೆ ಬಂದು ಲೆಖ್ಖ ಯಿಡತಕ್ಕದ್ದು. ಸ್ತಳಾಂತ್ರ ಮಾಡುವಬಗ್ಯೆ ಯಾ ಆಮದ್‌ಮಾಡುವ ಬಗ್ಯೆ ಕೊಡಲ್ಪಟ್ಟ ಪ್ಯಾಸಿನ ನಂಬರು ಮತ್ತು ತಾರೀಖು ಇವುಗಳನ್ನು ಷರಾ ಕಾಣಿಸಿ ಪ್ರತಿ ಖತಾಯಿತಿಗೂ ಫೋರಿಜನಾಲ್ ರಸೀತಿ ವಗೈರೆಗಳಿಂದ ದೃಢಪಡಿಸತಕ್ಕದ್ದಲ್ಲದೆ ಕ್ರಮವಾಗಿ ನಂಬರ್ ಹಾಕತಕ್ಕದ್ದು. ಶಿಂಬ್ಬಂದಿ, ಕಂಟಿಂಜಂಟ್ ವಗೈರೆ ಖರ್ಚುಗಳ ತಪಶೀಲ್ ಮಾಹೇವಾರಿ ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಕ್ಕದ ವಂದು ನಕಲು ಹೆಡ್ ಸೂಪರ ವೈಜರವರಿಗೆ ಮಾಹೇವಾರ್ ಒಪ್ಪಿಸಲ್ಪಡತಕ್ಕದ್ದಲ್ಲದೆ ಒರಿಜನಲ್ ಲೆಕ್ಕಗಳು ವೋಚರ ಸಮೇತ ಬೆಂಗಳೂರು ಡಿಸ್ಟಿಲೇರಿಯಲ್ಲಿ ಯ ಹೆಡ್ ಕ್ವಾರ್ಟರ ಡಿಪೋದಲ್ಲಿ ಇರತಕ್ಕವು.

XIII. ವಟ್ಟು ಮಾರಾಟದ ಕೋಠಿಗಳಲ್ಲಿ ಅಕ್ರಮವಾದ ನಡತೆ ಮತ್ತು ಅಕ್ರಮವಾದ ನಡವಳಿತೆಗಳ್ಯಾವದೂ ನಡಿಸಲು ಕಂಟ್ರಾಕ್ಟುದಾರನ ಮುತಲೀಕರಾಗಲಿ ನೌಕರಮಾನೇರಾಗಲಿ ಅವಕಾಶ ಕೊಡತಕ್ಕದ್ದಲ್ಲವು. ಅವರಿಗೆ ಇಜಾರೇದಾರನ ಖರ್ಚಿನಿಂದ ಕರಾರುವಾಕ ತ್ರಾಸುಗಳು ಮತ್ತು ಸರಕಾರದ ಸ್ಟಾಂಪು ಹ್ಯಾಕಿರುವ ತೂಕದ ವಟ್ಟುಗಳು ಸಹ ಕೊಡಲ್ಪಡುವದು, ಮತ್ತು ಇದಲ್ಲದೆ ಅಂಥಾ ದರೋಬಸ್ತು ನೌಕರ ಮಾನೇರುಗಳೂ, ಕಂಟ್ರಾಕ್ಟುದಾರನು ಒಡಂಬಡಿಕೆಗೆ ರುಜುಮಾಡಿದ ತರುವಾಯ 15 ದಿವಸಗಳೊಳಗಾಗಿ, ಗವರ್ನಮೆಂಟಿನವರೊಂದಿಗೆ ಕಂಟ್ರಾಕ್ಟುದಾರನು ಮಾಡಿಕೊಂಡಿರುವ ಷರತ್ತುಗಳಿಗೂ ಮತ್ತು ಜಾರಿಯಲ್ಲಿಯಿರುವ ಕಾನೂನುಗಳ ವ ನಿಬಂಧನೆಗಳ ಉದ್ದೇಶ್ಯಗಳಿಗೂ ಅನುಸಾರವಾಗಿ ಅಕ್ಷರಶಃ ನಡದುಕೊಳ್ಳುವ ಬಗ್ಯೆ ಕಂಟ್ರಾಕ್ಟುದಾರನೊಂದಿಗೆ ಕರಾರುಮಾಡಿಕೊಳ್ಳತಕ್ಕದ್ದು. ಮತ್ತು ಅಂಥಾ ವಡಂಬಡಿಕೆಗಳು ತಪ್ಪದೆ ಆತಿಂಗಳ 20ನೇ ತಾರೀಖಿನೊಳಗಾಗಿ ಆಯಾಡಿಸ್ಟ್ರಿಕ್ಟು ಡೆಪ್ಯುಟಿಕಮ್ಮಿಷನರವರ ಆಫೀಸಿನಲ್ಲಿ ಅಮಾನತ್ ಇಡಲ್ಪಡತಕ್ಕದ್ದು. ಮತ್ತು ಅವರು ಮದ್ದತ್ ಸಾಮಾನುಗಳನ್ನು ಮಾರುವಬಗ್ಯೆ ನೇಮಿಸಲ್ಪಟ್ಟರೆ, ಬಟ್ಟು ಬಿಕರೀ ಲೈಸೆನ್ಸ್‌ಗಳನ್ನು ಪಡೆಯತಕ್ಕದ್ದು, ಅಥವಾ ಕಂಟ್ರಾಕ್ಟುದಾರನಿಗೋಸ್ಕರ ಪರಮಿಟ್‌ಗಳಿಗೆ ರುಜು ಮಾಡತಕ್ಕದ್ದು. ಷರಾಬ್ ಇಜಾರೇದಾರುಗಳ ಅಪ್ಪಣೀ ಅನುಸರಿಸಿ ತಮಾಂ ಷರಾಬ್‌ಬಟ್ಟು ಬಿಕರೀದಾರರುಗಳೂ ಗಾಂಜಾ ವಟ್ಟುಬಿಕರೀದಾರರಾಗಿ ಮೊಕರರ್ ಮಾಡಲ್ಪಟ್ಟು, ಅಂಥಾ ಮಾರಾಟದಬಗ್ಯೆ ಗವರ್ನಮೆಂಟ್ ಡಿಸ್ಟಿಲೇರಿ ಹೆಡ್ ಸೂಪರ್ ವೈಜರವರಿಂದ ಠರಾಯಿಸಲ್ಪಡುವ ಮೇರಿಗೆ ಅವರಿಂದ ಫುರೋಖ್ತು ಮಾಡಲ್ಪಟ್ಟ ಪ್ರತಿ ವಂದುಶೇರಿಗೂ 1ಆಣೆಗೆ ಜಾಸ್ತಿ ಯೋಗದಂತೆ ಕಮ್ಮಿಷನ್ ಪಾವತೀಮಾಡಲ್ಪಡತಕ್ಕದ್ದು. ಹೆಡ್‌ಕ್ವಾರಟರ್ ಡಿಪೋದಲ್ಲಿಯೂ ತಮಾಂ

214.

ವಟ್ಟುಬಿಕರೀ ಡಿಪೋಗಳಲ್ಲಿಯೂ 1887ನೇ ಇಸವಿ ಏಪ್ರೆಲ್ 1ನೇ ತಾರೀಖಿನಲ್ಲಿ ಹಾಜರಿರಬಹುದಾದ ತಮಾಂ ಗಾಂಜಾ ವ ಮಾಜಿಂ ಸುದಾ ಅವು ಒಳ್ಳೇ ಗುಣವುಳ್ಳದ್ದಾಗಿಯೂ ಉಪಯೋಗಾರ್ಹವಾಗಿಯೂ ಇದ್ದರೆ ಅದನ್ನು ಹೊಸ ಕಂಟ್ರಾಕ್ಟು ದಾರನಿಗೆ ಒಪ್ಪಿಸತಕ್ಕದ್ದು, ಆತನು ಅವುಗಳನ್ನು ಈ ಇಸ್ತಿಹಾರ್‌ನಾಮೆಯ XIIನೇ ಷರತ್ತನುಸರಿಸಿ ಇಡಲ್ಪಟ್ಟ ಲೆಕ್ಕ ಗಳಲ್ಲಿ ಧಾಖಲಾದ ದರಗಳ ಮೇಲೆ ಸರಾಸರೀ ಗೊತ್ತಾಗುವ ಖರೀದಿ ಮೊಬಲಗು ಮತ್ತು ಹಾಗೆ ಒಪ್ಪಿಸಲ್ಪಟ್ಟ ಮದ್ದತ್ ಪದಾರ್ಥಗಳ ಕಿಂಮತ್ತಿನ ಮೇಲೆ ಸಾಲೀಯಾನಾ ಶೇಕಡಾ 12ರಂತೆ ಆಗುವ ಬಾಕೀ ಮೊಬಲಗು ಸುದಾ ಪಾವತೀಮಾಡತಕ್ಕ ದ್ದು. ಹೆಡ್ ಕ್ವಾರಟರ್ ಡಿಪೋದಲ್ಲಿಯೂ ಇತರ ಡಿಪೋಗಳಲ್ಲಿಯೂ ಇರತಕ್ಕ ತಮಾಂ ತ್ರಾಸುಗಳನ್ನೂ ಬಟ್ಟುಗಳನ್ನೂ ಅವು, ಕರಾರ್‌ವಾಕ ಆಗಿಇದ್ದು ಒಳ್ಳೇ ಸ್ಥಿತಿಯಲ್ಲಿ ಇದ್ದರೆ, ಹಳೇ ಕಂಟ್ರಾಕ್ಟುದಾರನು ಡೆಪ್ಯುಟಿ ಕಮಿಷನರಿಂದ ಗೊತ್ತು ಮಾಡಲ್ಪಡುವ ಖರೀದಿ ಮೊಬಲಗಿಗೆ ಹೊಸ ಕಂಟ್ರಾಕ್ಟುದಾರನಿಗೆ ಒಪ್ಪಿಸತಕ್ಕದ್ದು ಮತ್ತು ಆತನು ಅವುಗಳನ್ನ ತೆಗದು ಕೊಳ್ಳತಕ್ಕದ್ದು.

XIV. ಕಂಟ್ರಾಕ್ಟುದಾರನು, ಗವರ್ನಮೆಂಟಿನವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವದಾದರೂ ಜಾಸ್ತಿ ನಿಬಂಧನೆಗಳಿಗೆ ಅನುಗುಣವಾಗಿ ನಡಿಯುವದಕ್ಕೂ ಮತ್ತು ಮುಚ್ಚಳಿಕೆಯಲ್ಲಿ ನಮೂದು ಮಾಡಲ್ಪಟ್ಟು 1885ನೇ ಇಸವಿ ಫಿಬ್ರುವರೀ 27ನೇ ಮರ್ಕುಂ 229ನೇ ನಂಬರ್ ಇಸ್ತಿಹಾರ್ ನಾಮೆಯಲ್ಲಿ ಗವರ್ನಮೆಂಟಿನವರಿಂದ ಫಾಯಿಷ್ ಮಾಡಲ್ಪಟ್ಟ ನಿಬಂಧನೆ ಗಳಿಗೂ, ಮುಖ್ಯವಾಗಿ ವಟ್ಟು ಬಿಕರೀ ಲೈಸೆನ್ಸ್‌ರೂಲ್ಸಿನಲ್ಲಿ ಅಡಗಿರುವ ನಿಬಂಧನೆಗಳಿಗೂ ಲೆಕ್ಕಗಳ ತಯಾರೀ ವ ಸ್ತಳಾಂ ತರ ಪಡಿಸತಕ್ಕ ಮತ್ತು ಆಮದ್ ಮಾಡತಕ್ಕ ಪ್ಯಾಸುಗಳು ಪಡೆಯುವಬಗ್ಯೆ ಮತ್ತು ತಂಮಿಂದಲೇ ಪ್ಯಾಸುಗಳನ್ನು ಕೊ ಡುವ ಬಗ್ಯೆ ಮತ್ತು ಅದರಲ್ಲಿ ನಮೂದಾದ ಇತರ ವಿಷಯಗಳನ್ನು ಕುರಿತ ನಿಬಂಧನೆಗಳಿಗೂ ಅನುಸರಿಸಿ ನಡಿಯುವ ದಕ್ಕೂ ಬದ್ಧರಾಗಿರತಕ್ಕದ್ದು. ಮತ್ತು ಸದರೀ ರೂಲ್ಸುಗಳ ನಕಲ್‌ಗಳು ಡಿಸ್ಟ್ರಿಕ್ಟು ಆಫೀಸಿನಲ್ಲಿ ಬೆಳಿಗ್ಯೆ 11 ಘಂಟೆಯಿಂದ ಸಾ ಗಾಯತು 5 ಘಂಟೆ ವರಿಗೂ ಪ್ರತಿ ದಿವಸವೂ ನೋಡಲ್ಪಡಬಹುದು. ಈ ಇಜಾರೆಗೆ ಸಂಬಂಧಪಟ್ಟ ಇತರ ತಪಶೀಲ್‌ಗಳು ಸದರೀ ಆಫೀಸಿನಲ್ಲಾಗಲೀ ಬೆಂಗಳೂರಲ್ಲಿಯ ಗವರ್ನಮೆಂಟ್ ಡಿಸ್ಟಿಲೇರಿ ಹೆಡ್ ಸೂಪರ್‌ವೈಜರವರಲ್ಲ್ಯಾಗಲಿ ದೊರಿಯುವವು.

XV. ಕಂಟ್ರಾಕ್ಟುದಾರನು, ದರಖಾಸ್ತು ಮಾಡಿ ಅಮಲ್‌ದಾರ್ರಿಂದ ಕೊಡಲ್ಪಡುವ ಗವರ್ನಮೆಂಟ್ ಪಟ್ಟೆಯನ್ನು ಪಡೆದು ಗಾಂಜಾ ವನ್ನು ಬೆಳೆಯಬಹುದು ಮತ್ತು ಸದರೀ ಪಟ್ಟೆಯಲ್ಲಿ ಕಂಡ ಷರತ್ತುಗಳು ಖಂಡಿತವಾಗಿ ಆಚರಿಸಲ್ಪಡತಕ್ಕದ್ದು. ಕಂಟ್ರಾ ಕ್ಟುದಾರನಿಂದಾಗಲೀ ಸಂಸ್ಥಾನಾಮುಳೆ ಮತ್ಯಾರಿಂದಲಾಗಲೀ ಅನ್ಯಥಾ ಗಾಂಜಾ ಸಾಗುವಳಿ ಮಾಡಲ್ಪಡುವಣವು ಅಡ್ಡೀಮಾ ಡಲ್ಪಟ್ಟು ಮತ್ತು ಈ ದಶೆಯಿಂದ ನಿಷೇಧಿಸಲ್ಪಟ್ಟಿರುತ್ತೆ.

XVI. ಮೇಲೆಕಂಡ ಷರತ್ತುಗಳ ಉಲ್ಲಂಘನೆಗಾಗಿ ಡೆಪ್ಯುಟಿ ಕಮಿಷನರವರ ಮುಖಾಂತ್ರ ಮೇಲೆ ಹಾಕಲ್ಪಡುವಂಥಾ 500 ರೂ ಪಾಯಿಗೆ ಜಾಸ್ತೀಯಾಗದ ವಂದು ಜುರ್ಮಾನೆಯನ್ನು ಕೊಡಲಿಕ್ಕೂ, ಮತ್ತು ಅವರು ಅವಶ್ಯಕವೆಂದು ಭಾವಿಸುವ ಪಕ್ಷ ದಲ್ಲಿ ಗವರ್ನಮೆಂಟಿನವರ ಮಂಜುರಾತಿನಿಂ ಅವರ ಕಂಟ್ರಾಕ್ಟು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡಲಿಕ್ಕೂ ಮತ್ತು ಅವು ಗಳ ಮತ್ತು ಗವರ್ನಮೆಂಟಿನವರಿಂದ ಮಾಡಲ್ಪಟ್ಟ ನಿಬಂಧನೆಗಳ ಉಲ್ಲಂಘನೇ ವಿಷಯದಲ್ಲಿ ಜಾರೀಯಲ್ಲಿ ಇರುವ ಕಾನೂ ನುಗಳಲ್ಲಿ ನಿಯಮಿಸಲ್ಪಟ್ಟ ಅಂಥಾ ಜಾಸ್ತಿ ದಂಡನೆಗಳಿಗೂ ಕಂಟ್ರಾಕ್ಟುದಾರರು ಒಳಪಟ್ಟಿರತಕ್ಕದ್ದು.

9. 1885—86ನೇ ಇಸವಿಯಲ್ಲಿಯೂ ಮತ್ತು ಚಾಲತಿ ಸಾಲಿನ 6 ತಿಂಗಳುಗಳಲ್ಲೂ ಬಿಕರೀ ಮಾಡಲ್ಪಟ್ಟ ಗಾಂಜಾ ತೇದಾ ದು ಮತ್ತು ಕಿಂಮತು * ಮತ್ತು ಒಡಂಬಡಿಕೆ ಮಾಡಿಕ್ಕೊಂಡ ಕಮ್ಮಿ ಮೊಬಲಗಿಗಿಂತಲೂ ಜಾಸ್ತಿಯಾಗಿ ನಡೆದ ಜಾಸ್ತಿ ಪುರೋಖ್ತು ಗಳೂ ಮತ್ತು 1886—87ನೇ ಸಾಲಿಗೆ ಸರಕಾರಕ್ಕೆ ಸಲ್ಲಬೇಕಾದ ಒಡಂಬಟ್ಟ ಕಮ್ಮಿಮೊಬಲಗೂಸುದಾ ಇದರಡೀ ಕಾಣಿಸಿರುತ್ತೆ :—

---

* ಷರಾ.—ಇಪ್ಪತ್ತುನಾಲ್ಕು ತೊಲೆಗಳುಳ್ಳ ಗಾಂಜಾ ಶೇರು ವಂದಕ್ಕೆ 10 ಆಣೇ ಪ್ರಕಾರವೂ ಮಾಜಿಂ ಶೇರು ವಂದಕ್ಕೆ 4 ಆಣೇ ಪ್ರಕಾರವೂ ಒಟ್ಟು ಬಿಕರೀ ದರಗಳ ಪ್ರಕಾರ ಲೆಖ್ಖ ಮಾಡಲ್ಪಟ್ಟ ಕಿಮ್ಮತು.

1885—86.	ಗಾಂಜಾ.	ತೇದಾದು.	ತೂ.	6,245
			ತೊ.	4
		ಕಿಮ್ಮತು.	ರೂ.	10,153
			ಆ.	3
			ಪೈ.	8
	ಬಂಗಿ.	ತೇದಾದು.	ತೂ.	1,534
			ತೊ.	20
		ಕಿಮ್ಮತು.	ರೂ.	383
			ಆ.	11
			ಪೈ.	4
	1885—86ನೇ ಸಾಲಿಗೆ ವಟ್ಟು ಕಿಮ್ಮತು.		ರೂ.	10,536
			ಆ.	15
			ಪೈ.	0
	1885—86ನೇ ಸಾಲಿಗೆ ಒಪ್ಪಿಕೊಂಡ ಕಮ್ಮಿ ಮೊಬಲಗು ಯಾ ಇಜಾರೇ ಮೊಬಲಗು.		ರೂ.	8,375
			ಆ.	..
			ಪೈ.	0
	ಜಾಸ್ತಿ ಪುರೋಖ್ತುಗಳು.		ರೂ.	2,161
			ಆ.	15
			ಪೈ.	0
1886—87ನೇ ಸಾಲಿನ ಫಸ್ಲ್ ಮಾಹೆಗೆ ಅಂದರೆ 1886ನೇ ಏಪ್ರಿಲ್ ಆರಾಭ್ಯ ಸೆಪ್ಟೆಂಬರ್ ವರೆಗೆ.	ಗಾಂಜಾ.	ತೇದಾದು.	ತೂ.	8,305
			ತೊ.	0
		ಕಿಮ್ಮತು.	ರೂ.	5,190
			ಆ.	10
			ಪೈ.	0
	ಬಂಗಿ.	ತೇದಾದು.	ತೂ.	644
			ತೊ.	12
		ಕಿಮ್ಮತು.	ರೂ.	161
			ಆ.	2
			ಪೈ.	0
	1886—87ನೇ ಸಾಲಿನ ಫಸ್ಲ್ ಮಾಹೆಗೆ ವಟ್ಟು ಕಿಮ್ಮತು.		ರೂ.	5,351
			ಆ.	12
			ಪೈ.	0
	1886—87ನೇ ಸಾಲಿಗೆ ಲೋಕಲ್ ಸೆಸ್ ದೇಖಿಲ್ ಒಪ್ಪಿಕೊಂಡ ಕಮ್ಮಿ ಮೊಬಲಗು.		ರೂ.	53 12
			ಆ.	8
			ಪೈ.	0
	1886—87ನೇ ಸಾಲಿನ ಫಸ್ಲ್ ಮಾಹೆಗೆ ಜಾಸ್ತಿ ಪುರೋಖ್ತುಗಳು.		ರೂ.	2,695
			ಆ.	8
			ಪೈ.	0
1886—87ರಲ್ಲಿ ಇಡಲ್ಪಟ್ಟ ಡಿಪೋಗಳ ಸಂಖ್ಯೆ.				39
1886—87ರಲ್ಲಿ ಇಡಲ್ಪಟ್ಟ ಚಿಲ್ಲರೇ ಬಿಕರೀ ದುಕಾನುಗಳ ಸಂಖ್ಯೆ.				75
ಷರಾ.				

ತಾರೀಖು 15ನೇ ಜನವರೀ 1887.

ನಂ. 220.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮವು, ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಜ್ರಕೆ ಯಾವದೂ ಇಲ್ಲದೆ ಗ್ರಾಮವು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಸೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬುವದನ್ನ ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಆಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ ಹರಾಜು ಮವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮೊದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಖಸೀಲ್‌ನಲ್ಲಾಗಲಿ ಅಂದಾಜು ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತುಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟೆಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಹಾಸನ.	ಹೊಳೆನರಸೀಪುರ.	ಹಳೇಕೋಟೆ.	ನಲ್ಲರಹಳ್ಳಿ.	1 ನರಸಿಹ್ಮಪಂಡಿತ (ಫವತಿ) ಇವನ ಮಗ ಲಕ್ಷ್ಮಿನಾರಣಪಂಡಿತ, 2 ಕೃಷ್ಣ ಪಂಡಿತ 3 ನರಸಿಹ್ಮಪಂತ	0 0 0	181 15 5	181 6 0	350 0 6	1887ನೇ ಇಸವಿ ಫೆಬ್ರವರೀ ತಾರೀಖು 24 ಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ತಾರೀಖು 25ನೇ ಜನವರೀ 1887ನೇ ಇಸವಿ.

ನಂ. 226.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇವರಡಿ: ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇವರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಕೆ ಯಾವದೂ ಇಲ್ಲದೆ ಗ್ರಾಮಗಳು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರಿಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟಿ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಕಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂತವರ ದರಕಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ. ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲೀ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ನಂಬ್ರು.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳ್ಳಿ ಯಾ ಜೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾಸರಕಾರದ ಕಂದಾಯದ ಬಾಕೀ.	ಹರಾಜಿನ ತಾರೀಖು ಸ್ಥಳ.
		3			ಖಂ ಕೊ. ಪ.	ರೂ. ಆ. ಪೈ.	ರೂ. ಆ. ಪೈ	ರೂ. ಆ. ಪೈ.	
ಹಾಸನ.	ಹೊಳೇನರಸೀಪುರ.	೧	ಹರಿಹರಪುರ	ಕೃಷ್ಣಪ್ಪ, ಇತರ 45 ಮಂದಿ	0 0 0	1062 4 1	835 6 8	2264 5 4 ಮತ್ತು ಹರಾಜು ತಾರೀಖು ವರಿಗಿನ ಬಡ್ಡೀ.	1887ನೇ ಇಸವಿ ಮಾರ್ಚೀ ತಾರೀಖು 7ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ ಎರ್ರ ರೂಬರೂ

ತಾರೀಖು 22ನೇ ಡಿಸೆಂಬರ್ 1886.

ಕ್ಯಾಂಪ್ ನಂಬರ್ 1461.—ಸರ್ಕಾರ್ ನವುಕರರು ಜಮೀನ್ ಉಂಟಾಗಿರುವ ವಿಷಯದಲ್ಲಿ 1870ನೇ ಇಸವಿ ಜುಲೈ 6ನೇ ಮರ್ಕುಂ 123ನೇ ನಂಬರು ಮತ್ತು ಅದೇ ಇಸವಿ ನವೆಂಬರ್ 10ನೇ ಮರ್ಕುಂ 260ನೇ ನಂಬರು ಈ ಇಸ್ತಿಹಾರ್‌ನಾಮೆಗಳಿಂದ ಬದಲಾಯಿಸಲ್ಪಟ್ಟಂತೆ 1863ನೇ ಇಸವಿ ಮೇ 29ನೇ ಮರ್ಕುಮಿನ ರೂಲ್ಸ್‌ಗಳಿಗೆ ತಮಾಂ ಸರ್ಕಾರ್ ನವುಕರರೂ ನಿಗೇ ಕೊಡತಕ್ಕದ್ದು. ಸದರೀ ರೂಲ್ಸ್‌ಗಳ ಅಮಲ್ ಚಲಾವಣಿ ದೆಶೆಯಿಂದ ತಪ್ಪಿಸಿಕೊಳ್ಳುವದಕ್ಕೆ ಯಾರಾದರು ಪ್ರಯತ್ನಪಟ್ಟರೆ, ಅಂಥಾ ತಪ್ಪಿತಸ್ಥನು ಸರ್ಕಾರ್ ನವುಕರಿಯಿಂದ ತಗ್ಯೆರ್ ಮಾಡಲ್ಪಡಲಿಕ್ಕಾಗಲೀ ಗವರ್ನಮೆಂಟಿನವರು ಯುಕ್ತವೆಂದು ಭಾವಿಸುವಂಥಾ ಇತರ ಯಾವದಾದರು ಇಲಾಖೇ ಮೂಲಕವಾದ ಶೀಕ್ಷೆಗಾಗಲಿ ಗುರಿಯಾಗುವದಕ್ಕೆ ಒಳಪಡತಕ್ಕದ್ದು.

2. ಗವರ್ನಮೆಂಟಿನಿಂದ ಸಾಧಾರಣವಾಗಿ ನೊಕರರ್ಮಾಡಲ್ಪಡುವ ಆಫೀಸರುಗಳ ವಿಷಯದಲ್ಲಿ ಅವರುಗಳು, ಖುದ್ದಾಗಿಯಾಗಲೀ ಪರೋಕ್ಷವಾಗಿಯಾಗಲೀ ತಮ್ಮ ಹೆಸರಿನಲ್ಲಿಯಾದರೂ ಅಥವಾ ತಮಿಗೋಸ್ಕರ ಇತರರ ಹೆಸರಿನಲ್ಲಿಯಾದರೂ ಯಾವದಾದರು ಭೂಸ್ಥಿತಿಯನ್ನಾಗಲೀ ಅಥವಾ ಅದರಲ್ಲಿ ಯಾವ ಸಂಬಂಧವನ್ನಾಗಲೀ ಖುಷ್‌ಖರೀದಿ ಮೂಲಕವಾದರೂ ಆಧಾರವಾಗಿಯಾದರೂ ವರ್ಗಮೂಲಕವಾದರೂ ಅಥವಾ ಇನ್ಯಾವಮೂಲಕವಾದರೂ ಪಡೆಯುವದಕ್ಕೆ ಮುಂಚಿತವಾಗಿ ಗವರ್ನಮೆಂಟಿನವರ ಮಂಜೂರಾತಿಯನ್ನು ಪಡೆಯತಕ್ಕದ್ದು. ಅಂಥಾ ಆಫೀಸರುಗಳ ವಿಷಯದಲ್ಲಿ ಅವರುಗಳ ಸ್ವಾಧೀನಕ್ಕೆ ಭೂಸ್ಥಿತಿಯಾಗಲಿ ಅದರಲ್ಲಿ ಸಂಬಂಧವಾಗಲೀ ಪಿತರಾರ್ಜಿತ ಹಕ್ಕಿನಮೂಲಕವಾದರೂ ಯಾ ದಾಯಭಾಗದ ಮೂಲಕವಾದರೂ ಪಡೆದಾಗ, ಡೆಪ್ಯುಟಿ ಕಮಿಷ್ನರ್‌ರವರು, 1863ನೇ ಇಸವಿ ಮೇ 29ನೇ ಮರ್ಕುಂವುಳ್ಳ ಇಸ್ತಿಹಾರ್‌ನಾಮೆಯ 3ನೇ ಕಲಂ ಅನುಸರಿಸಿ ಹಿಡುವಳಿ ಹಕ್ಕನ್ನು ರಿಜಿಸ್ಟರ್ ಮಾಡಿದ ಬಿರುವಾಯ, ಸದರೀ ಸಂಗತಿಯನ್ನು ದಿವಾನ್‌ರವರಿಗೆ ರಿಪೋರ್ಟ್ ಮಾಡತಕ್ಕದ್ದು.

ತಾರೀಖು 6ನೇ ಜನವರೀ 1887.

ಕ್ಯಾಂಪ್ ನಂಬರ್ 1552.—ಸನ 1882ನೇ ಇಸವಿ ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡಿನ 269 ವ 274ನೇ ಸೆಕ್ಷನ್‌ಗಳ ನಿಬಂಧನೆಗಳನ್ನನುಸರಿಸಿ, ಈ ಕೆಳಗೆ ನಮೂದಾಗುವ ತಕಶೀರ್‌ಗಳು, ಮೈಸೂರು ಚೀಫ್ ಕೋರ್ಟಿನ ಸೆಷನ್ ಕೋರ್ಟುಮುಂದೆ, ದರ್ಯಾಫ್ತೀ ಮಾಡಲ್ಪಡುವಾಗ ಜ್ಯೂರಿಯಾನೆ ಐದು ಜನಗಳ ಪಂಚಾಯತಿಯು ಇರತಕ್ಕದ್ದೆಂದು ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೇ ಮಾಡುತ್ತಾರೆ.

ಇಂಡ್ಯನ್ ಪಿನಲ್‌ಕೋಡಿನ 379, 380 ವ 381 ಈ ಸೆಕ್ಷನ್‌ಗಳಿಗನುಸಾರವಾದ ಕಳವು.

384ರ ಲಾಗಾಯತು 389ನೇವರಿಗಿನ ಸೆಕ್ಷನ್‌ಗಳಿಗನುಸಾರವಾದ ಸುಲಿಗೆ.

392ರ ಲಾಗಾಯತು 395ನೇವರಿಗಿನ ವ 397ರ ಲಾಗಾಯತು 402ನೇ ವರಿಗಿನ ಸೆಕ್ಷನ್‌ಗಳಿಗನುಸಾರವಾದ ಜೋರೀ ಅಥವಾ ದರೋಡೇ ಕಳವು.

411, 412 ವ 414ನೇ ಸೆಕ್ಷನ್‌ಗಳಿಗನುಸಾರವಾದ ಚೋರೀ ಮಾಲನ್ನ ಈಸುಕೊಳ್ಳೋಣ.

451, 452, 454ರ ಲಾಗಾಯತು 459 ವ 462ನೇ ಸೆಕ್ಷನ್‌ಗಳಿಗನುಸಾರವಾದ ಮನೆಗೆ ಅತಿಕ್ರಮ ಪ್ರವೇಶ ಮಾಡೋಣ ವಗ್ಯೆರೆ.

406, 407, 408 ವ 409 ಈ ಸೆಕ್ಷನ್‌ಗಳಿಗನುಸಾರವಾದ ತಕಶೀರುಕರವಾದ ವಿಶ್ವಾಸ ಘಾತುಕತೆ.

418, 419 ವ 420 ಈ ಸೆಕ್ಷನ್‌ಗಳಿಗನುಸಾರವಾದ ದಗಾಮಾಡೋಣ.

429ರ ಲಾಗಾಯತು 433 ವ 435ರ ಲಾಗಾಯತು 440 ವರಿಗಿನ ಸೆಕ್ಷನ್‌ಗಳಿಗನುಸಾರವಾದ ಕೆಡಕು.

ಮೇಲೆ ಹೇಳಲ್ಪಟ್ಟ ತಕಶೀರುಗಳ ಪೈಕಿ ಯಾವ ತಕಶೀರಿಗಾಗಲಿ ಕುಮ್ಮಕ್ಕು ಮಾಡೋಣ.

ತಾರೀಖು 8ನೇ ಜನವರೀ 1887.

ಕ್ಯಾಂಪ್ ನಂ. 1561.—ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಬೇಷನೇರಿ ಮ॥ ಯಸ್. ಎ. ಬಾಪೂರಾಯರು, 1887ನೇ ಜನವರೀ ಗುರ್ರೆ ಲಾಗಾಯತು, ಫಾರೆಸ್ಟ್ ಸಬ್ ಅ॥ ಕನ್ಸರ್ವೇಟರ್ ಆಗಿ ನೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 215.—ಅಸಿಸ್ಟೆಂಟ್ ಕಮಿಷನರ್ ಮೆ॥ ಡಿ. ದೇವರಾಜ ಅರಸಿನವರು, ಮಾಹೆ ಗುಜಸ್ತಾ 21ನೇ ಮರ್ಕುಮಿನ ಮಧ್ಯಾಹ್ನಾತರ ಮೈಸೂರು ಡಿಸ್ಟ್ರಿಕ್ಟು ಟ್ರೆಜರೀ ಛಾರ್ಜನ್ನು ಅಟ್ಯಾಚಿ ಮೆ॥ ಹೆಚ್. ನಂಜುಂಡರಾಜೇ ಅರಸಿನವರಿಗೆ ಒಪ್ಪಿಸಿರುತ್ತಾರೆ.

ನಂ. 216.—ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ನಂಜುಂಡಯ್ಯನವರು, ಮಾಹೆ ಗುಜಸ್ತಾ 18ನೇ ಮರ್ಕುಮಿನ ಮಧ್ಯಾನ್ಹತರ ಮೈಸೂರು ಯರಡನೇ ಜನರಲ್ ಅ॥ ಕಮ್ಮಿಷನರ್ ಕೋರ್ಟಿನ ಚಾರ್ಜನ್ನು ಮೆ॥ ಸ್ಮೈಟ್ ಯವರಿಗೆ ಒಪ್ಪಿಸಿರುತ್ತಾರೆ.

ನಂ. 217.—ಮೆ॥ ಯಲ್. ರಿಕ್ಕೆಟ್ಸ್‌ಯವರು, ಮಾಹೇ ಗುಜಸ್ತಾ 29ನೇ ತಾರೀಖು ಪೂರ್ವಾನ್ಹದಲ್ಲಿ ಗವರ್ನಮೆಂಟ್ ಬೊಟಾನಿಕಲ್ ಗಾರ್ಡ್ಡನ್ಸ ವ ಫಾರ್ಕ್ಸ ಮತ್ತು ಗವರ್ನಮೆಂಟ್ ಮ್ಯೂಜಿಯಂ ಇವುಗಳ ಚಾರ್ಜನ್ನು ಮೆ॥ ಜೆ. ಕ್ಯಾಮರ್ರನ್ ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 21ನೇ ಜನವರೀ 1887.

ನಂ. 223.—1877ನೇ ಇಸವಿ ಜುಲೈ 14ನೇ ಮರ್ಕುಮಿನ ಮೈಸೂರ ಗೆಜೆಟ್ 198ನೇ ಪುಟದಲ್ಲಿ ಛಾಪಿಸೋಣಾದ ಅದೇ ಇಸವಿ ಜುಲೈ 10ನೇ ಮರ್ಕುಂವುಳ್ಳ ಲೇಟ್ ಚೀಫ್ ಕಮ್ಮಿಷನರವರ 100ನೇ ನಂಬರ್ ಇಸ್ತಿಹಾರ್‌ನಾಮೆಯನ್ನ ಬದಲಾಯಿಸಿ ಇದರದೆಶೆಯಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ, ವ ಕಡೂರು ಡಿಸ್ಟ್ರಿಕ್ಟುಗಳಲ್ಲಿ ಬೊಂಬುಗಳಿಗೋಸ್ಕರ, ಅಂಥಾ ಬೊಂಬುಗಳು ತೆಪ್ಪದಮೂಲಕವಾಗಲೀ ಭಂಡಿಗಳಮೇಲಾಗಲೀ ಸಾಗಿಸಲ್ಪಟ್ಟಾಗ್ಯೂ, ಕೊಡಲ್ಪಡುವ ಲೈಸೆನ್ಸಗಳಿಗೋಸ್ಕರ ಇದರಡೀಕಂಡ ದರಗಳು ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ವಸೂಲ್ಮಾಡಲ್ಪಡತಕ್ಕದ್ದು :—

ಹೆಬ್ಬಿದುರುಗಳಿಗೆ ದರ 100ಕ್ಕೆ 7 ರೂಪಾಯಿ ಪ್ರಕಾರ.

ಕಿರೀ ಬಿದುರುಗಳಿಗೆ, ದರ 100ಕ್ಕೆ ರೂ. 2—8—0 ರ ಪ್ರಕಾರ.

ತಾರೀಖು 22ನೇ ಜನವರೀ 1887.

ನಂ. 224.—ಇದರಡೀ ಕಂಡ ಆಫೀಸರುಗಳು, (1882ನೇ ಇಸವಿ Xನೇ ನಂಬರ್ ಆಕ್ಟೆಂಬು) ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡಿನ 110ನೇ ಸೆಕ್ಷನ್ ಅನುಸರಿಸಿ, ವಾಡಿಕೆಯಾದ ತಕ್ಸೀರುದಾರರಿಂದ ನೇಕ್‌ಚಾಲ್ ಜಾಮೀನೀ ಅಪೇಕ್ಷಿಸುವಬಗ್ಗೆ ಇದರದೆಶೆಯಿಂದ ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಕ್ಲೋಸ್‌ಪೇಟೆ ಸಬ್ ಡಿವೀಜನ್ ಅಸಿಸ್ಟೆಂಟ್ ಕಮ್ಮಿಷನರು ಮತ್ತು ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟರಾದ ಮೆ॥ ಅಬ್ದುಲ್ ರಹಿಮಾನ್ ಯವರು.

ಬೆಂಗಳೂರು ಅಸಿಸ್ಟೆಂಟ್ ಕಮ್ಮಿಷನರ್ ಮತ್ತು ಫಸ್ಟ್‌ಕ್ಲಾಸ್ ಮಾಜಿಸ್ಟ್ರೇಟರಾದ ಮೆ॥ ಸೈಯ್ಯದ್‌ನಸಿರುದ್ದೀನ್‌ಯವರು.

ಬೆಂಗಳೂರು ಟೌನ್ ಮ್ಯಾಜಿಸ್ಟ್ರೇಟರಾದ ಮೆ॥ ಈ. ಸಿ. ಷಣ್ಮುಗವೇಲುಪಿಳ್ಳೇಯವರು.

ತಾರೀಖು 26ನೇ ಜನವರೀ 1887.

ನಂ. 227.—ಸಾಗರ ತಾಲ್ಲೂಕು ಅಮಲ್ದಾರ್ ಲಿಂಗಪ್ಪನವರಿಗೆ, 1886ನೇ ಇಸವಿ ಅಕ್ಟೋಬರ್ 1ನೇ ಮರ್ಕುಂ 741ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಮೂರುತಿಂಗಳು ಪ್ರಿವಲೀಜ್ ರಜಾ, ಸ್ವಂತಕೆಲಸದ ರಜಾವಾಗಿ ಬದಲಾಯಿಸಲ್ಪಟ್ಟು ಇನ್ನೂ ಎರಡು ತಿಂಗಳು ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 27ನೇ ಜನವರೀ 1887.

ನಂ. 229.—ತುಮಕೂರು ಡಿಸ್ಟ್ರಿಕ್ಟು ತುರ್ವೇಕೆರೆ ಆಕ್ಟಿಂಗ್ ಡೆಪ್ಯುಟಿ ಅಮಲ್ದಾರ್ ಪಿ. ಶೀತಾರಾಮಯ್ಯನವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ವಂದು ತಿಂಗಳ ಪ್ರಿವಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕ್ಕುಂ, ಬಮೋಜೀಬ್,

ಆರ್. ವಿಜಯರಂಗರಾವ್,

ಚೀಫ್ ಸೆಕ್ರೆಟೇರಿ.

ವಿದ್ಯಾ ಇಲಾಖೆ.

ತಾರೀಖು 28ನೇ ಜನವರೀ 1887ನೇ ಇಸವಿ.

ಮೈಸೂರು ದೇಶೀ ಪರಿಕ್ಷೆ.

ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಅಂವರೆ ಪ್ರಮುಖ ಸ್ಥಳಗಳಲ್ಲಿ ನಡಿಯುವ ಮೈಸೂರು ದೇಶೀ ಪರೀಕ್ಷೆಗೆ ಹೆಸರು ರಿಜಸ್ಟರಾಗಿರತಕ್ಕಂಥಾ ವಿದ್ಯಾರ್ಥಿಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ.—ಸದರೀ ಪರಿಕ್ಷಯು ಸನ 1887ನೇ ಇಸವಿ ಫೆಬ್ರುವರಿ 21ನೇ ಸೋಮುವಾರದ ದಿವಸ ಪ್ರಾತಃಕಾಲ 10 ಘಂಟೆಗೆ ಸರಿಯಾಗಿ ಆರಂಭಿಸುತ್ತದೆ.

2. ವಿದ್ಯಾರ್ಥಿಗಳು ಪ್ರತಿ ದಿವಸವೂ ಪರಿಕ್ಷೆಯಾಗುವಂಥ ಸ್ಥಳಗಳಲ್ಲಿ 9 ಘಂಟೆಗೆ ಸರಿಯಾಗಿ ಹಾಜರಿರತಕ್ಕದ್ದು.

ಪರಿಕ್ಷೆಯು ಇದರಡಿ ಕಂಡ ಕಾಲಕ್ರಮುವಾರಿ ಆಯಾ ಅಂಶಗಳಲ್ಲಿ ನಡಿಸಲ್ಪಡುವದು.

ದಿವಸ.	ಮೈಸೂರು ದೇಶೀ ಪರಿಕ್ಷೆ. ಘಂಟೆ.	ಮೈಸೂರು ದೇಶೀ ಪರಿಕ್ಷೆ. ಅಂಶಗಳು.	ಉಪಾಧ್ಯಾಯರ ಪರಿಕ್ಷೆ. ಘಂಟೆ.	ಉಪಾಧ್ಯಾಯರ ಪರಿಕ್ಷೆ. ಅಂಶಗಳು.
ಮೊದಲನೇ ದಿವಸ.	10ರಿಂದ 1ರ ವರಿಗೆ. 2 „ 5 „	ಭಾಷಾ ಗ್ರಂಥ, ವ್ಯಾಕರಣ (ಅವಶ್ಯಕ ಭಾಷೆ.) ಡಿಟೋ ಡಿಟೋ (ಎರಡನೇ ಭಾಷೆ.)	10ರಿಂದ 1ರವರಿಗೆ 2 „ 4 „ 4 „ 5 „	ಪದ್ಯಕಾವ್ಯ ವಾಕ್ಯವಿಭಜನೆ. ವ್ಯಾಕರಣ. ವಾಕ್ಯರಚನೆ.
ಎರಡನೇ ದಿವಸ.	10ರಿಂದ 11ರವರಿಗೆ. 11 „ 1 „ 2 „ 5 „	ಬರವಣಿಗೆ ಅಕ್ಷರ ಸಂಯೋಜನ (ಅವಶ್ಯಕ ಭಾಷೆ) ಚರಿತ್ರೆ ಭೂಗೋಳ. ಭೂಪಠನಕ್ಷೆಬರಿಯುವಿಕೆ	10ರಿಂದ 1ರವರಿಗೆ 2 „ 4 „	ಚರಿತ್ರೆ. ರೇಖಾಗಣಿತ.
ಮೂರನೇ ದಿವಸ.	10ರಿಂದ 12ರವರಿಗೆ 12ರಿಂದ 1 „ 2 „ 3. 30 3. 30. 5 „	ಅಂಕಾಗಣಿತ ಬರವಣಿಗೆ ಅಕ್ಷರಸಂಯೋಜನ (ಎರಡನೇ ಭಾಷೆ) ವ್ಯವಸಾಯಭೋಧಿನಿ. ಆರೋಗ್ಯಭೋಧಿನಿ.	10ರಿಂದ 1ರವರಿಗೆ 2 „ 4 „	ಅಂಕಾಗಣಿತ. ಬೀಜಗಣಿತ.
ನಾಲ್ಕನೇ ದಿವಸ.	10ರಿಂದ11-30ರವರಿಗೆ 11. 30 „ 1	ಕ್ಷೇತ್ರಗಣಿ. ಭಾಷಾಂತ್ರ.	10ರಿಂದ 1ರವರಿಗೆ 2 „ 5 „	ಭೂಗೋಳ ಶಾಸ್ತ್ರ ಪಾಠ.
ಐದನೇ ದಿವಸ.	..	..	10ರಿಂದ 1ರವರಿಗೆ	ಪಾಠಶಾಲೆಯನ್ನು ನಡಿಸುವ ಕ್ರಮ.

ಇದರಡಿ ನಮೂದಿಸಲ್ಪಟ್ಟ ಅಂಶಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

1. ಪರಿಕ್ಷೆಯು ಆರಂಭಿಸುವದಕ್ಕೆ ಕ್ಲುಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವವರಿಗೂ ಪರಿಕ್ಷೆಯಾಗುವ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲ ಮತ್ತು ಅಂಥ ಅರ್ಧ ಘಂಟೇ ಕಳದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

2. ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷೆ ಕೊಠಡಿಯನ್ನು ಬಂದಾವರ್ತಿ ಬಿಟ್ಟು ಬಂದನಂತರ ಪುನಃ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ವುಂಟಾಗಲಾರದು. ಅಲ್ಲದೆ ತನ್ನ ವುತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷೇ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

3. ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನ್ಯಾವ ವಿಧದಿಂದಲಾದರು ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ಸಂಗತಿಯು ಡೈರೆಕ್ಟರ್ ಸಾಹಬರವರಿಗೆ ರಿಪೋರ್ಟುಮಾಡಲ್ಪಡುವದು.

4. ಪರಿಕ್ಷೇ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ ರೂಲರುಗಳನ್ನಾಗಲಿ ಪುಸ್ತಕಗಳನ್ನಾಗಲಿ ಬರದ ಕಾಗದಗಳನ್ನಾಗಲಿ ಅಥವಾ ಇನ್ನ್ಯಾವ ವಿಧವಾದ ಕಾಗದಪತ್ರವನ್ನಾಗಲಿ ತೆಗದುಕ್ಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವಲ್ಲಿಯಾಗಲಿ, ಅಥವಾ ಇನ್ನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವಲ್ಲಿಯಾಗಲೀ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೇ ಸದರೀ ನಡವಳಿತವು ಡೈರೆಕ್ಟರ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

5. ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರು ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

6. ವಿದ್ಯಾರ್ಥಿಯ ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರಿಯದೆ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರಿಕ್ಷಿಸಲ್ಪಡುವದಿಲ್ಲವು.

7. ಪ್ರಶ್ನಾ ಕಾಗದಗಳು ಶಿವಾಯಿ ಯಾವ ಕಾಗದಗಳನ್ನಾಗಲಿ ಪರೀಕ್ಷೆ ಕೊಠಡಿಯಿಂದ ಹೊರಗೆ ತೆಗದುಕ್ಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಲ್ಪಡುವದಿಲ್ಲ.

8. ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇದಿಸಲ್ಪಟ್ಟಿರುತ್ತಾರೆ. "ವಿಸಿಷ್ಟಕೆಟ್ಟು ಹೋದ ಕಾಗದ ವಗ್ಯೆರೆಗಳು" ವಿದ್ಯಾರ್ಥಿಯು ಬರಿಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು.

ಎಲ್. ರೈಸ್,
ಎಡಿಕೇಷನ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಫಿಬ್ರುವರೀ ತಾ|| 5, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ ನಾಮೆ.

ತಾರೀಖು 6ನೇ ಜನವರೀ 1887.

ಇದರಿಂದ ಪ್ರಕಟಪಡಿಸುವದೇನೆಂದರೆ, ಹಾಸನ ಡಿಸ್ಟ್ರಿಕ್ಟ್ ಉತ್ಪತ್ತೀ ಬಾಬತು ಇದರಡೀ ಕಂಡ ನಾಟಾಗಳು, ಹಾಸನದ ಡಿಪೋದಲ್ಲಿ ಡೆಪ್ಯುಟಿ ಕಮ್ಮಿಷನರ್ ಮತ್ತು ಫಾರೆಸ್ಟು ಆಫೀಸರವರಿಂದ 1887ನೇ ಇಸವಿ ಫಿಬ್ರುವರೀ 3ನೇ ಮುಕ್ಕಾಮಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ನಾಟಾದ ತಪಶೀಲು.	ನಾಟಾಗಳ ಸಂಖ್ಯೆ.	
ಕೂವೆ (ಪೂರ್ಣ) ..	49	
ನಂದಿ ..	151	
ಹೆಸವಾ (ಕಾಡಹಲಸು) ..	34	
ಮತ್ತಿ ..	17	
ಕರೀಮರ ..	1	
ಮಳಲಿ (ಯಮೂನಿ) ..	6	
ಕಾಡುಮರ ..	62	
ಜುಮ್ಲಾ....	320	ಸ್ವಲ್ಪ ಹೆಚ್ಚು ಕಡಿಮೆ.

ಹರಾಜಿನ ಷರತ್ತುಗಳು—1873ನೇ ಇಸವಿ ಜೂನ್ 12ನೇ ಮುಕ್ಕಾಂ 20ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ಮಾಡಲ್ಪಟ್ಟ ಪ್ರಕಾರ ಇರತಕ್ಕವು; ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವವು.

ಯಲ್. ರಿಕ್ಕೆಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ಸೂರಪ್ಪನ ಆಸ್ತಿವಿಷಯದಲ್ಲಿ—

ಅರ್ಜೀದಾರು ಶೇಷಪ್ಪ ಮೃತಪಟ್ಟ ಸದರೀ ಸೂರಪ್ಪನವರಿಗೆ ತಮ್ಮ ಆಗಬೇಕೆಂಬ ಹಕ್ಕುದಾವಿ ಮೇಲೆ ಕೋಲಾರ ಡಿಸ್ಟ್ರಿಕ್ಟು ಬವರಿಂಗ್‌ಪೇಟೆ ತಾಲ್ಲೂಕು ದಾಸರ ಹೊಸಹಳ್ಳಿ, ಹೊರುಳೀಮಾರಕುಪ್ಪೆ ಗ್ರಾಮದ ಸ್ಥಳದ ಶೇಷಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ಸೂರಪ್ಪನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೇಷಪ್ಪನವರ ಅರ್ಜೀಯನ್ನ 1887ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 11ರಲ್ಲು ಕೆ ೧೧ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೂರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 46.

ಮೃತಪಟ್ಟ ರಂಗರಾಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಹೊಸಮನೆ ವೆಂಕಣ್ಣ, ಮೃತಪಟ್ಟ ಸದರೀ ರಂಗರಾಯರಿಗೆ ಮಾವ ಆಗಬೇಕೆಂಬ ಹಕ್ಕುದಾರೀ ಮೇಲೆ ಶಿಡ್ಲಘಟ್ಟದ ತಾಲ್ಲೂಕು ಜಂಗಮಕೋಟೆ ಸಮ್ಮತು ಕುಗಟೂರು ಗ್ರಾಮ ಸ್ಥಳದ ಹೊಸಮನೆ ವೆಂಕಣ್ಣ ಸದರೀ ವಾಸಸ್ಥರಾಗಿ ಮೃತಪಟ್ಟ ರಂಗರಾಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಣ್ಣನವರ ಅರ್ಜೀಯನ್ನು 1887ನೇ ಇಸವಿ ಫೆಬ್ರುವರೀ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂತ ಇದರಿಂದ ತಿಳಿಯಪಡಿಸಿ ಇಧೆ.

ಇದರಿಂದ ಸಮಸ್ತರಿಗೂ ತಿಳಿಸುವದೇನಂದರೆ,—ಕಡೂರು ಡಿಸ್ಟ್ರಿಕ್ಟು ಕೊಪ್ಪದ ತಾಲ್ಲೂಕು ಕೊಪ್ಪದ ಹಾಲಿಗಾರು ವೆಂಕಟಸುಬ್ಬಯ್ಯ ನವರ ಕುಟುಂಬ ತಿಂಮಮ್ಮನು, 1885ನೇ ಇಸವಿ ಜನವರೀ ತಾರೀಖು 9ರಲ್ಲು ತನ್ನ ಕಾರಖಾನೆ ಪೈವಟ್ಟು ನೋಡತಕ್ಕ ಬಗ್ಯೆ ಹರಾವರಿ ಸಂಣಸುಬ್ಬಯ್ಯ ಹಾ॥ ವೆಂಕಟಗಿರಿಯಪ್ಪ ಯಿವರಿಬ್ಬರಿಗೆ ಬರಕೊಟ್ಟು ಸರ್ವ ಮೊಖ್ತ್ಯಾರಿ ಪ್ರಕಾರ ಸರಿಯಾಗಿ ಕೆಲಸ ನಡಿಯದೇಲೂ, ಈಚಿಗೆ ನನಗೂ ನನ್ನ ಭಾವ ವಿಶ್ವೇಶ್ವರಯ್ಯನವರ ಕುಟುಂಬ ಲಕ್ಷ್ಮಮ್ಮನಿಗೂ ವಿವಾದ ತೀರಮಾನವಾಗಿ ಹಿಸ್ಸೇಪಾರೀಖತ್ತು ಆಗಿ ಆ ಪಾರೀಖತ್ತು ರಿಜಿಸ್ಟ್ರು ಆದನಂತರದಲ್ಲಿ ನನ್ನ ಹಿಸ್ಸೆ ಪೂರ್ತಿಕೆಲಸ ನಡಿಸುವದಕ್ಕೆ ಪಟ್ಟು ಮೊಖ್ತ್ಯಾರಿಯನ್ನು ನನ್ನ ಭಾವ ಹಾಲಿಗಾರ ವೆಂಕಟಸುಬ್ಬಯ್ಯನಿಗೆ ಕೊಟ್ಟು ಈ ಮೊಖ್ತ್ಯಾರಿಯನ್ನ ಅನುಸರಿಸಿ ಯರಡುವರುಷದ ಲಾಗಾಯತು ವೆಂಕಟಸುಬ್ಬಯ್ಯನ ಮಾರ್ಫತ್ತು ಲೇಣೆ ದೇಣೆಗಳು ನಡಿಯುತ್ತಾ ಬರುವದ್ದರಿಂದ ಮೊದಲು ಸಂಣಸುಬ್ಬಯ್ಯ, ವೆಂಕಟಗಿರಿಯಪ್ಪ ಯಿವರುಗಳ ಹೆಸರಿಗೆ 1885ನೇ ಇಸವಿ ಜನವರೀ ತಾರೀಖು 29ರಲ್ಲಿ ಬರಸಿಕೊಟ್ಟ ಮೊಖ್ತ್ಯಾರಿಯನ್ನು ಇದರಿಂದ ರದ್ದುಮಾಡಿ ಯಿದೆ ಯಾವ ವಿಧವಾಗಿಯೇ ಆಗಲಿ ನನ್ನ ಕಾರಖಾನೆಗೆ ಅವರುಗಳು ಪ್ರವೇಶ ಮಾಡಕೂಡದು.

ತಿಂಮಮ್ಮನ ಪದ್ಮದ ರುಜುವಿಗೆ ವೆಂಕಟಸುಬ್ಬಯ್ಯನ ಬರಹಾ.

ಮೈಸೂರು ಗೋಲ್ಡ್ ಫೀಲ್ಡ್ಸ್ ಕಂಪೆನಿ ಲಿಮಿಟೆಡ್.

ಕೋಲಾರ್ ರೋಡ್ ಸ್ಟೇಷನ್.

ಲೋಹಾರ್ ಮತ್ತು ಬಡಾಯಿ ಕೆಲಸದವರು.

ಮೈಸೂರು ಗೋಲ್ಡ್ ಫೀಲ್ಡ್ಸ್‌ಯಾನೆ ಬಂಗಾರದ ಗನಿ ಕೆಲಸದ ಕಂಪೆನಿಯವರಿಗೆ, ಇಂಗ್ಲೀಷ್ ತಿಳಿದಂಥಾ ಬಡಾಯಿ ಕೆಲಸದಬುದ್ಧಿವಂತನಾದ ಪಬ್ಬ ಮೇಸ್ತ್ರಿ ಮತ್ತು ಲೋಹಾರ್ ಇಸಂ ಸುದಾ ಬೇಕಾಗಿ ಯಿರುತ್ತೆ.

ಕೋಲಾರ್ ರೋಡ್ ಸ್ಟೇಷನಿನಲ್ಲಿಯ ಸದರೀ ಮೇಲಿಕಂಡ ಕಂಪೆನಿ ಸೂಪರಿಂಟೆಂಡೆಂಟರವರಿಗೆ ಸಂಬಳ ನಮೂದಿನಿಂದ ಬರೆದುಕೊಳ್ಳತಕ್ಕದ್ದು.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಕಾಯಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಮಾರ್ಚಿ ತಾ॥ 26, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

1887ನೇ ಇಸವಿಯ 1ನೇ ನಂ. ರೆಗ್ಯುಲೇಷನ್.

ಇದರಡಿಕಂಡ ರೆಗ್ಯುಲೇಷನ್ನ ಯಾನೆ ನಿಬಂಧನೆಯು 1887ನೇ ಇಸವಿ ಮಾರ್ಚಿ 5ನೇ ಮರ್ಕಾವಿನಲ್ಲಿ ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರವರಿಂದ ಮಂಜೂರ್ಮಾಡಲ್ಪಟ್ಟು ಸಕಲಜನಗಳ ತಿಳುವಳಿಕೆಯಬಗ್ಗೆ ಇದರಡಿ ಪ್ರಕಟಿಸಲ್ಪಟ್ಟಿರುತಿದೆ:—

ಬೆಂಗಳೂರು ಷಹರ್‌ನಲ್ಲಿ ಬಾಡಿಗೆಗಾಡಿಗಳ ವ್ಯವಸ್ಥೆ ಮತ್ತು ವಿಚಾರಣೆಯಬಗ್ಗೆ ಹುಟ್ಟಿದ ನಿಬಂಧನೆಯು.

ಪೀಠಿಕೆ.

ಬೆಂಗಳೂರು ಷಹರ್‌ನಲ್ಲಿ ಬಾಡಿಗೆ ಗಾಡಿಗಳ ವ್ಯವಸ್ಥೆ ಮತ್ತು ವಿಚಾರಣೆಯಬಗ್ಗೆ ವಿಧಿಸಬೇಕಾದದ್ದು ಆವಶ್ಯಕವಾಗಿರುವದರಿಂದ, ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರವರು ಇದರಡಿಕಂಡಂತೆ ನಿಬಂಧಿಸಿರುತ್ತಾರೆ:—

ಚಿಕ್ಕ ಹೆಸರು.

1. ಈ ನಿಬಂಧನೆಯು, "1887ನೇ ಇಸವಿಯ ಬೆಂಗಳೂರು ಷಹರ್ ಬಾಡಿಗೆ ಗಾಡಿಗಳ ರೆಗ್ಯುಲೇಷನ್" (Bangalore City Hackney Carriage Regulation) ಎಂದು ಕರೆಯಲ್ಪಡಬಹುದು.

ಸ್ಥಳವ್ಯಾಪ್ತಿ. ಪ್ರಾರಂಭ.

ಅದು ಬೆಂಗಳೂರು ಷಹರಿಗೆ ವ್ಯಾಪಿಸಿ ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

2. ಈ ರೆಗ್ಯುಲೇಷನಿನಲ್ಲಿ, "ಬಾಡಿಗೆ ಗಾಡಿ" ಯಂದರೆ ಪ್ರಯಾಣಸ್ಥರ ಸಂಚಾರದ ಉಪಯೋಗಾರ್ಥ, ಬಾಡಿಗೆಗಾಗಿ ಇಡಲ್ಪಟ್ಟಿರುವ ಅಥವಾ ಕೊಡುವಂತೆ ಹೇಳಲ್ಪಡುವ ಅಥವಾ ನಡೆಸುವ, ಚಕ್ರಗಳುಳ್ಳ ಮತ್ತು ಜಾನವರ್‌ಗಳಿಂದ ಎಳೆಯಲ್ಪಡತಕ್ಕ ಯಾವದಾದರೊಂದು ಗಾಡಿಯೆಂದರ್ಥವು.

3. ಬೆಂಗಳೂರು ಷಹರ್ ಮ್ಯುನಿಸಿಪೆಲ್ ಕಮಿಷನರ್‌ಗಳು, ಅಗಿಂದಾಗ್ಗೆ, ಸದರೀ ಮ್ಯುನಿಸಿಪಾಲಿಟಿಯ ಸರಹದ್ದಿನೊಳಗೆ ಬಾಡಿಗೆ ಗಾಡಿಗಳ ವ್ಯವಸ್ಥೆಯು ಮತ್ತು ವಿಚಾರಣೆಯಬಗ್ಗೆ ತತ್ಕಾಲದೊಳು ಜಾರಿಯಲ್ಲಿರುವ

ಕಾನೂನನುಸರಿಸಿ, ಸದರೀ ಸರಹದ್ದುಗಳೊಳಗಣ ಇತರ ವಿಷಯುಗಳ ವ್ಯವಸ್ಥೆ ಮತ್ತು ವಿಚಾರಣೆಯ ಬಗ್ಗೆ ಮಾಡಲ್ಪಡುವ ಬೈಲಾಯಾನೆ ಉಪನಿಬಂಧನೆಗಳ ರೀತಿಯನ್ನನುಸರಿಸಿ ನಿಬಂಧನೆಗಳನ್ನು ಮಾಡಬಹುದು.

ಈ ಪ್ರಕರಣವನ್ನನುಸರಿಸಿ ಮಾಡಲ್ಪಟ್ಟ ಪ್ರತಿ ನಿಬಂಧನೆಯೂ ಮೈಸೂರು ಗವರ್ನಮೆಂಟಿನವರಿಂದ ಖಾಯಂ ಮಾಡಲ್ಪಟ್ಟ ಬಳಿಕ ಅವರು ಆಗಿಂದಾಗ್ಗೆ ವಿಧಿಸಬಹುದಾದ ಕಾಲದತನಕ ಮತ್ತು ರೀತಿಯಂತೆ ಘಾಯಿಷ್ ಮಾಡಲ್ಪಟ್ಟ ಕಾನೂನಿನ ಶಕ್ತಿಯುಳ್ಳದ್ದಾಗಿರತಕ್ಕದ್ದು.

ಪರಂತು ಮೈಸೂರು ಗವರ್ನಮೆಂಟಿನವರು ಯಾವಕಾಲದಲ್ಲಾದರೂ ಅಂತಾ ನಿಬಂಧನೆಯನ್ನು ರದ್ದುಮಾಡಬಹುದು.

4. 3ನೇ ಪ್ರಕರಣವನ್ನನುಸರಿಸಿ, ಮಾಡಲ್ಪಡತಕ್ಕ ನಿಬಂಧನೆಗಳು, ಇತರ ವಿಷಯಗಳನ್ನಲ್ಲದೆ,—

(*a.*) ಯಾವ ಬಾಡಿಗೆ ಗಾಡಿಯಾಗಲಿ, ಅಥವಾ ಗೊತ್ತಾದ ತರಹಾವಿನ ಯಾವ ಬಾಡಿಗೆ ಗಾಡಿಯಾಗಲಿ, ಆ ಬಗ್ಗೆ, ಈ ರೆಗ್ಯುಲೇಷನಿಗೆ ಅಥವಾ ಬೆಂಗಳೂರು ಬಾಡಿಗೆ ಗಾಡಿಗಳ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಲ್ಪಟ್ಟ ಲೈಸೆನ್ಸ್ ಮೇರಿಗೆಹೊರತು, ಬಾಡಿಗೆಗೆ ಕೊಡಕೂಡದೆಂತಲೂ, ಸವಾರಿಗೆ ತೆಗದುಕೊಳ್ಳಲಾಗದೆಂತಲೂ, ಬಾಡಿಗೆಗೆ ಕೊಡುವಂತೆ ಹೇಳಕೂಡದೆಂತಲೂ ವಿಧಿಸಬಹುದು;

(*b.*) ಈ ರೆಗ್ಯುಲೇಷನಿಗೆ ಅಥವಾ ಬೆಂಗಳೂರು ಬಾಡಿಗೆ ಗಾಡಿಗಳ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಲ್ಪಟ್ಟ ಲೈಸೆನ್ಸಂತೆವಿನಾ ಯಾವ ಮನುಷ್ಯನೂ, ಬಾಡಿಗೆ ಗಾಡಿಯನ್ನು ನಡೆಸತಕ್ಕವನಾಗಿರಕೂಡದೆಂದು ವಿಧಿಸಬಹುದು;

(*c.*) (*a*) ಮತ್ತು (*b*) ಕ್ಲಾಜ್‌ಗಳಲ್ಲಿ ನಮೂದಾಗಿರುವ ಲೈಸೆನ್ಸ್‌ಗಳು ಕೊಡುವದನ್ನೂ, ಅಂತಾ ಲೈಸೆನ್ಸ್‌ಗಳು ಯಾವದಾದರೂ ಷರತ್ತುಗಳಮೇಲೆ ಕೊಡಲ್ಪಡತಕ್ಕದ್ದಾಗಿರುವದನ್ನೂ ಮತ್ತು ಅದಕ್ಕಾಗಿ (ಯೇನಾದರಿದ್ದರೆ) ಕೊಡಬೇಕಾದ ರುಸುಂಗಳ ನಿಬಂಧನೆಯನ್ನೂ ವಿಧಿಸಬಹುದು;

(*d.*) ಲೈಸೆನ್ಸ್ ಪಡೆದ ಗಾಡಿಗಳಿಗೆ ಉಪಯೋಗಿಸಲ್ಪಡತಕ್ಕ ಜಾನವರ್‌ಗಳು, ಹಾರ್ನೆಸ್‌ಯಾನೆ ಸರಂಜಾಂ ಮತ್ತು ಇತರ ಪದಾರ್ಥಗಳು, ಇವುಗಳ ವಿವರಣೆಯನ್ನೂ ಅಂತಾ ಗಾಡಿಗಳು ಮತ್ತು ಅವುಗಳಿಗೆ ಉಪಯೋಗಿಸಲ್ಪಡತಕ್ಕ ಜಾನವರ್‌ಗಳು, ಸರಂಜಾಂ ಮತ್ತು ಇತರ ಪದಾರ್ಥಗಳು ಇವು ಇಡಲ್ಪಡಬೇಕಾದ ಸ್ಥಿತಿಯನ್ನೂ ಮತ್ತು ಸೂರ್ಯಾಸ್ತಮಾನಾ ನಂತರ ಮತ್ತು ಸೂರ್ಯೋದಯಾತ್ಪೂರ್ವ (ಯೇನಾದರೂ ಯಿದ್ದರೆ) ಒಯ್ಯಲ್ಪಡಬೇಕಾದ ಬೆಳಕುಗಳನ್ನೂ ಕ್ರಮಪಡಿಸಬಹುದು;

(*e.*) ಅಂತಾ ಗಾಡಿಗಳು, ಜಾನವರ್‌ಗಳು, ಸರಂಜಾಂ ವಗೈರೆ ಪದಾರ್ಥಗಳಿಡಲ್ಪಡತಕ್ಕ ಕಟ್ಟಡದ ತನಿಖೀ ಬಗ್ಗೆ ವಿಧಿಸಬಹುದು;

(*f.*) ಸದರೀ ಲೈಸೆನ್ಸ್‌ಗಳು ಯಾವತ್ಪರ್ಯಂತ ಜಾರಿಯಲ್ಲಿರತಕ್ಕದ್ದೋ ಅಂತಾ ಕಾಲವನ್ನೂ ಮತ್ತು (ಯಾವದಾದರಿದ್ದರೆ) ಸದರೀ ಕಾಲದೊಳಗಾಗಿ ಆ ಲೈಸೆನ್ಸ್‌ಗಳನ್ನು ರದ್ದು ಯಾ ಅಮಾನತ್ತಿಗೆ ಒಳಪಡಿಸತಕ್ಕ ಸಂಭವಗಳನ್ನೂ ಗೊತ್ತು ಮಾಡಬಹುದು;

(*g.*) ಅಂತಾ ಗಾಡಿಗೆ ನಂಬರ್ ಹಾಕುವಂತೆ ವಿಧಿಸಬಹುದು;

(*h*). ಬಾಡಿಗೆ ಗಾಡಿಗಳ ನಿಟ್ಟುಕೊಂಡಿರುವ ಪ್ರತಿ ಮನುಷ್ಯನೂ ಸದರೀ ಗಾಡಿಯನ್ನು ಅಪೇಕ್ಷಿಸತಕ್ಕ ಇತರ ಯಾವಮನುಷ್ಯನಿಗಾಗಲಿ ಅದನ್ನು ಬಾಡಿಗೆಗೆ ಕೊಡಲಿಕ್ಕೂ, ಕೊಡದೆ ನಿರಾಕರಿಸಲಿಕ್ಕೂ ಯಾವಕಾಲಗಳಲ್ಲಿ ಮತ್ತು ಯೆಂತಾಸಂದರ್ಭಗಳಲ್ಲಿ ಬದ್ಧನಾಗಿರತಕ್ಕದ್ದೆಂಬದನ್ನು ನಿಶ್ಚೈಸಬಹುದು;

(i.) ಬಾಡಿಗೆ ಗಾಡಿಗಳು ನಿಲ್ಲಿಸಲ್ಪಡಬೇಕಾದ ಸ್ಟಾಂಡ್ಸ್ ಯಾನೆ ಸ್ಥಾನಗಳನ್ನು ಏರ್ಪಾಡು ಮಾಡಬಹುದು; ಮತ್ತು ಅಂತಾ ಸ್ಥಾನಗಳಲ್ಲಿವಿನಾ ಅನ್ಯತ್ರ, ಸದರೀ ಗಾಡಿಗಳು ಬಾಡಿಗೆಯು ಬಗ್ಗೆ ಹಾಜರಿರಕೂಡದೆಂದು ನಿರೋಧಿಸಲೂಬಹುದು;

(j.) ಯಾವದಾದರೊಂದು ಬಾಡಿಗೆ ಗಾಡಿಯು ಬಗ್ಗೆ ಕೇಳಲ್ಪಡುವ ಬಾಡಿಗೆಯು ದರ ಅಥವಾ ಮೊಬಲಗನ್ನು ಕಾಲಕ್ಕೂ, ಫಾಸಲೆಗೂ ತಕ್ಕಂತೆ ಗೊತ್ತುಮಾಡಬಹುದು; ಮತ್ತು ಸದರೀ ಗಾಡಿಗಳು ಕಾಲಕ್ಲಿಪ್ತಿಯಿಂದ ಬಾಡಿಗೆಗೆ ಗೊತ್ತಾದಮೇಲೆ ಕನಿಷ್ಟಪಕ್ಷ ಇಷ್ಟರ ವೇಗದೊಡನೆಯೇ ನಡಿಸಲ್ಪಡತಕ್ಕದ್ದೆಂದು ವಿಧಿಸಬಹುದು;

(k.) ಅಂತಾ ಯಾವದಾದರೊಂದು ಗಾಡಿಯಲ್ಲಿ ಹತ್ತತಕ್ಕ ಜನಗಳ ಸಂಖ್ಯೆಯನ್ನೂ, ಅದರಲ್ಲಿ ತೆಗೆದುಕೊಂಡು ಹೋಗಬಹುದಾದ ಸ್ವತ್ತಿನ ತೂಕವನ್ನು ಸಹ ಗೊತ್ತುಮಾಡಬಹುದು;

(l.) ಅಂತಾ ಯಾವದಾದರೊಂದು ಗಾಡಿಯ ಮಾಲಿಕನು ಅಥವಾ ಅದನ್ನು ಸ್ವಾಧೀನದೊಳಟ್ಟುಕೊಂಡಿರುವ ಮನುಷ್ಯನು, ಬಾಡಿಗೇ ದರಗಳ ಪಟ್ಟಿಯನ್ನು ಇಂಗ್ಲೀಷ್ ಭಾಷೆಯಲ್ಲಿ ಮತ್ತು ವಿಧಿಸಲ್ಪಡಬಹುದಾದಂತಾ ಇತರ ಭಾಷೆಯಲ್ಲಿ ಸಹ ಛಾಪಿಸಿ ಅದನ್ನು ಗಾಡಿಯೊಳಗೆ ರೂಲ್ಸಗಳಿಂದ ಗೊತ್ತುಮಾಡಲ್ಪಡತಕ್ಕ ಪ್ರದೇಶದಲ್ಲಿ ಚಿಕಟಾಯಿಸುವಂತೆ ನಿಯಮಿಸಬಹುದು. ಮತ್ತು ಅಂತಾ ಪಟ್ಟಿಯನ್ನು ನಾಶಪಡಿಸದೆ ಅಥವಾ ವಿರೂಪಗೊಳಿಸದಿರುವಂತೆ ನಿರೋಧಿಸಬಹುದು;

(m.) ಗಾಡಿ ನಡಿಸುವವರು, ನಂಬರ್ ಹಾಕಲ್ಪಟ್ಟ ಬಿಲ್ಲೆ ಅಥವಾ ಟಿಕ್ಕೆಟನ್ನು ಧರಿಸುವಂತೆಯೂ, ಅವರ ಲೈಸೆನ್ಸಗಳನ್ನು ಒಬ್ಬ ಮ್ಯಾಜಿಸ್ಟ್ರೇಟರು ಅಥವಾ ಈ ಬಗ್ಗೆ ರೂಲ್ಸಗಳ ಮೂಲಕ ಅಧಿಕಾರಹೊಂದಿದ ಇತರ ಮನುಷ್ಯನು ಅಪೇಕ್ಷಿಸಿದಾಗ ಹಾಜರ್ಮಾಡುವಂತೆಯೂ ನಿಯಮಿಸಬಹುದು. ಮತ್ತು ಅಂತಾ ಲೈಸೆನ್ಸಗಳು ವ ಬಿಲ್ಲೆಗಳು ವರ್ಗ ಅಥವಾ ಎರವಲು ಕೊಡಲ್ಪಡಕೂಡದೆಂದು ನಿರೋಧಿಸಬಹುದು; ಮತ್ತು

(n.) ಅಂತಾ ಗಾಡಿಗಳಲ್ಲಿ ದೊರೆಯುತಕ್ಕ ಸ್ವತ್ತನ್ನು ಅಮಾನತ್ತಿಡುವಂತೆಯೂ, ಮತ್ತು ಅಂತಾ ಸ್ವತ್ತುಕರ್ತನಿಗೆ ಆ ಮಾಲನ್ನೊಪ್ಪಿಸುವಾಗ್ಯೆ ಆತನು ರುಸುಮನ್ನು ಕೊಡುವಂತೆಯೂ ವಿಧಿಸಬಹುದು.

5. (1) ಮೇಲೆ ಕಂಡ 3ನೇ ಪ್ರಕರಣಾನುಗುಣವಾದ ನಿಬಂಧನೆಗಳನುಸರಿಸಿ ಕೊಡಲ್ಪಟ್ಟ ಲೈಸೆನ್ಸು, ಬೆಂಗಳೂರು ಸಿವಿಲ್ ವ ಮಿಲಿಟರಿಸ್ಟೇಷನಿನಲ್ಲಾಗಲಿ, ಅಥವಾ ಬೆಂಗಳೂರು ಷಹರ್‌ನಲ್ಲಾಗಲಿ, ಸಂಗತ್ಯಾನುಸಾರವಾಗಿ ಜಾರಿಯಲ್ಲಿರುವ ಕಾನೂರ್ರೀತ್ಯಾ ಯಾವ ಸಂದರ್ಭದಲ್ಲಿ ರದ್ದು ಯಾ ಅಮಾನತ್ತಿಗೆ ಗುರಿಯಾಗಿರುತ್ತೋ ಅಂತಾ ಸಂದರ್ಭದಲ್ಲಿಯೂ, ಮತ್ತು ಲೈಸೆನ್ಸ ಕೊಡಲ್ಪಡುವ ಬಗ್ಗೆ ಏರ್ಪಟ್ಟ ರೂಲ್ಸನಲ್ಲಿ ನಮೂದಾಗಿರುವ ಸಂದರ್ಭದಲ್ಲಿಯೂ, ಸದರೀ ಲೈಸೆನ್ಸು ರದ್ದು ಯಾ ಅಮಾನತ್ತಿಗೆ ಒಳಪಡತಕ್ಕದ್ದು.

(2.) ಈ ರೆಗ್ಯುಲೇಷನಿಗೆ ಅನುಗುಣವಾಗಿ ಮಾಡಲ್ಪಟ್ಟ ಯಾವ ನಿಬಂಧನೆಗಾಗಲಿ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಯಾವ ಮನುಷ್ಯನಾದ್ದರೂ ೫೦ ರೂಪಾಯಿಗಳವರಿಗಿನ ಜುಲ್ಮಾನೆಮೂಲಕ ಶಿಕ್ಷಿಸಲ್ಪಡತಕ್ಕದ್ದು.

6. ಈ ರೆಗ್ಯುಲೇಷನನ್ನು ಜಾರೀಯಲ್ಲಿ ತರುವದರೊಳು ಹುಟ್ಟುವಳಿಯಾಗುವ ಯಾವದಾದರು ರುಸುಂ ಮೊಬಲಗೂ, ತಗಲುವ ಲಾಗವಡು ಮೊಬಲಗೂ ಕ್ರಮವಾಗಿ ಬೆಂಗಳೂರು ಷಹರ್ ಮ್ಯುನಿಸಿಪಲ್ ಫಂಡಿನ ಲೆಕ್ಕದಲ್ಲಿ ಜಮಾಖರ್ಚು ಮಾಡಲ್ಪಡತಕ್ಕದ್ದು.

7. ಯಾವದಾದರು ಬಾಡಿಗೆ ಗಾಡಿಯ ಬಾಡಿಗೇದಾರನಿಗೂ ಅಂತಾ ಗಾಡಿಯ ಸ್ವಂತಗಾರ ಅಥವಾ ಗಾಡಿ ನಡೆಸತಕ್ಕವನಿಗೂ, ಈ ರೆಗ್ಯುಲೇಷನ್ ಅನುಸರಿಸಿ ಮಾಡಲ್ಪಟ್ಟ ಯಾವದಾದರೊಂದು ನಿಬಂಧನೆಯಮೇಲೆ ಅಂತಾ ಬಾಡಿಗೇದಾರನಿಂದ ಕೊಡಲ್ಪಡಬೇಕಾದ ಬಾಡಿಗೇ ಮೊಬಲಗಿನ ವಿಷಯದಲ್ಲಿ ಏನಾದರು ತಕರಾರ್ ವುಂಟಾದರೆ ಆ ತಕರಾರ್‌ದಾರರ ಪೈಕಿ ಯಾರೇಆಗಲಿ, ಆ ಮೇರೆ ಅಪೇಕ್ಷಿಸಿದಲ್ಲಿ ಸದರೀ ತಕರಾರ್ ಬೆಂಗಳೂರು ಷಹರ್‌ನಲ್ಲಿ ಯಾವ ಮ್ಯಾಜಿಸ್ಟ್ರೇಟರ ಯಾ ಮ್ಯಾಜಿಸ್ಟ್ರೇಟರ ಬೆಂಚ್‌ಯಾನೆ ಸಮುದಾಯದವರ ಸ್ಥಳಾಧಿಕಾರ ಸರಹದ್ದಿಗೆ ಒಳಪಟ್ಟಿರುತ್ತಿದೆಯೋ ಅಂತವರಿಂದ ದರ್ಯಾಫ್ತೀಮೂಲಕ ವ್ಯವಸ್ಥೆಯಾಗತಕ್ಕದ್ದಾಗಿರುತ್ತೆ. ಮತ್ತು ಅಂತಾ ಮ್ಯಾಜಿಸ್ಟ್ರೇಟರು ಯಾ ಸಮುದಾಯದವರು ಹಾಗೆ ತಕರಾರ್‌ನಲ್ಲಿರುವ ಬಾಡಿಗೇ ಮೊಬಲಗನ್ನು ವ್ಯವಸ್ಥೆ ಮಾಡುವದಲ್ಲದೆ ಅಂತಾ ಮ್ಯಾಜಿಸ್ಟ್ರೇಟರಿಗೆ ಅಥವಾ ಸಮುದಾಯದವರಿಗೆ ಯುಕ್ತವೆಂದು ತೋರುವಷ್ಟು ಮೊಬಲಗನ್ನು ಕಾಲವನ್ನು ವ್ಯರ್ಥಗೊಳಿಸಿದ ಬಗ್ಯೆ ಪರಿಹಾರಕವಾಗಿ ತಕರಾರ್‌ದಾರರ ಪೈಕಿ ಯೊಬ್ಬನು ಮತ್ತೊಬ್ಬನಿಗೆ ಕೊಡುವಂತೆ ಹುಕ್ಕುಂ ಮಾಡಬಹುದು.

ಈ ಪ್ರಕರಣವನ್ನನುಸರಿಸಿ ಸಲ್ಲಬೇಕೆಂದು ನಿರ್ಣಯವಾದ ಅಥವಾ ಕೊಡುವಂತೆ ಹುಕುಮಾದ ಯಾವ ಮೊಬಲಗೇಯಾಗಲಿ ಜುರ್ಮಾನೆಮೊಬಲಗಾಗಿದ್ದರೆ ಹ್ಯಾಗೋ ಹಾಗೆ ವಸೂಲ್ಮಾಡಲ್ಪಡತಕ್ಕದ್ದು.

ಈ ಪ್ರಕರಣವನ್ನನುಸರಿಸಿ ಯಾವ ಮೊಕದ್ದಮೆಯಲ್ಲಾಗಲಿ, ಅಂತಾ ಮ್ಯಾಜಿಸ್ಟ್ರೇಟರಿಂದ ಅಥವಾ ಸಮುದಾಯದವರಿಂದ ಮಾಡಲ್ಪಡುವ ನಿರ್ಣಯವು ಆಖೈರಾಗಿರತಕ್ಕದ್ದು.

ಅಂತಾ ಯಾವದಾದರೊಂದು ಮೊಕದ್ದಮೆಯು ಮ್ಯಾಜಿಸ್ಟ್ರೇಟ್ ಸಮುದಾಯದವರಿಂದ ದರ್ಯಾಫ್ತಿ ಮಾಡಲ್ಪಡುವಾಗ್ಯೆ ಅಂತಾ ಮ್ಯಾಜಿಸ್ಟ್ರೇಟ್ ಸಮುದಾಯದ ಮೆಂಬರ್‌ಗಳಲ್ಲಿ ಭಿನ್ನಾಭಿಪ್ರಾಯ ವುಂಟಾದರೆ ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆಯಲ್ಲಿ, ಅಂತಾ ಮೆಂಬರುಗಳೊಳು ಭಿನ್ನಾಭಿಪ್ರಾಯಗಳು ವುಂಟಾದರೆ ಅವು ಹ್ಯಾಗೆ ವ್ಯವಸ್ಥೆ ಮಾಡಲ್ಪಡುವವೋ ಹಾಗೆಯೇ ವ್ಯವಸ್ಥೆ ಮಾಡಲ್ಪಡತಕ್ಕದ್ದು.

8. ಯಾವಕಾಲದಲ್ಲಾಗಲಿ 7ನೇ ಪ್ರಕರಣದೊಳು ನಮೂದಿಸಲ್ಪಟ್ಟಿರುವ ಯಾವದಾದರು ತಕರಾರ್ ವುಂಟಾದರೆ, ಅಂತಾ ತಕರಾರ್ ವಿಷಯದಲ್ಲಿ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟಾದರೂ, ಕೋರ್ಟು ಮಾಡುತ್ತಲಿದ್ದರೆ, ಗಾಡಿಯ ಬಾಡಿಗೇದಾರನು ಸದರೀ ಪ್ರಕರಣವನ್ನನುಸರಿಸಿ ಅರ್ಜೀ ಕೊಡತಕ್ಕ ಬಗ್ಯೆ ಅಂತಾ ಮ್ಯಾಜಿಸ್ಟ್ರೇಟರ ಕೋರ್ಟಿಗೆ ತನ್ನನ್ನು ಅದೇ ಗಾಡಿಯಲ್ಲಿ ಕರೆದುಕೊಂಡು ಹೋಗುವಂತೆ ಸದರೀ ಗಾಡಿ ನಡೆಸುವವನನ್ನು ಅಪೇಕ್ಷಿಸಬಹುದು.

ಅಂತಾ ಅಪೇಕ್ಷೆಯನ್ನು ನಡಿಸಲು, ಉಪೇಕ್ಷಿಸುವ ಅಥವಾ ನಿರಾಕರಿಸುವ ಗಾಡಿ ನಡೆಸತಕ್ಕವನ್ಯಾವನಾದರೂ ಒಂದು ತಿಂಗಳವರಿವಿಗೆ ತಿನ್ನೆದು ಸಜಾ ಮೂಲಕವಾಗಲಿ, ೫೦ ರೂಪಾಯಿಗಳಿಗೆ ಮೀರದ ಜುರ್ಮಾನೆಯಮೂಲಕವಾಗಿಯಾಗಲಿ, ಅಥವಾ ಎರಡರಮೂಲಕವಾಗಿಯಾಗಲಿ ದಂಡಿಸಲ್ಪಡತಕ್ಕದ್ದು.

9. ಈ ರೆಗ್ಯುಲೇಷನ್ ಅನುಸರಿಸಿ ಯಾವದಾದರು ಬಾಡಿಗೇ ಗಾಡಿಯಲ್ಲಿ ಸವಾರಿ ಹೋಗತಕ್ಕ ಯಾವ ಮನುಷ್ಯನೇಯಾಗಲಿ, ಮನಃಪೂರ್ವಕವಾಗಿಯಾದರೂ, ಅಥವಾ ಅಶ್ರದ್ಧೆಯಿಂದಲಾದರೂ ಸದರೀ ಗಾಡಿಗೆ ನಷ್ಟ ವುಂಟುಮಾಡಿದರೆ ಅವನು ೨೦ ರೂಪಾಯಿಗಳತನಕ ಒಂದು ಜುರ್ಮಾನೆಮೂಲಕ ಶಿಕ್ಷಿಸಲ್ಪಡತಕ್ಕದ್ದಲ್ಲದೆ ಬಾಡಿಗೆ ಬಂಡಿಯ ಸ್ವಂತಗಾರನಿಗೆ ನಷ್ಟದಬಗ್ಯೆ ಪರಿಹಾರ ದ್ರವ್ಯ ಕೊಡತಕ್ಕದ್ದು. ಸದರೀ ಪರಿಹಾರದ್ರವ್ಯದ ಮೊತ್ತವು ದಂಡಿಸತಕ್ಕ ಮ್ಯಾಜಿಸ್ಟ್ರೇಟರಿಂದ ಗೊತ್ತುಮಾಡಲ್ಪಟ್ಟು, ಜುರ್ಮಾನೆ ತರೀಕ್ ವಸೂಲ್ಮಾಡಲ್ಪಡತಕ್ಕದ್ದು.

ಕೆ. ಶೇಷಾದ್ರಿಅಯ್ಯರ್,
ಮೈಸೂರು ಸಂಸ್ಥಾನದ ದಿವಾನ್.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 13 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ 1887.

ಬೆಂಗಳೂರು, ಶನಿವಾರ, ಏಪ್ರಿಲ್ ತಾ|| 2, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, 1887ನೇ ಇಸವಿಯ 1ನೇ ನಂ. ರೆಗ್ಯುಲೇಷನ್.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 3ನೇ ಮಾರ್ಚಿ 1887.

ನಂ 256.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈಕೆಳಗೆಕಂಡ ಜೋಡೀ ಗ್ರಾಮಗಳು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರು ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಪೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕಡೂರು.	ಚಿಕ್ಕಮಗಳೂರು.	ವಸ್ತಾರ.	ಕೂದವಳ್ಳಿ ಅಗ್ರಹಾರ	ಪುರಾಣೀಕ ರಾಮಣ್ಣ, ಇತರ 46 ಮಂದಿ.	88 7 8	334 2 8	246 0 0		ಮುಂದಿನ ತಿಂಗಳು 15ನೇ ವರ್ಕುಮಿನಲ್ಲಿ ಅಮಲ್ದಾರ್ ಯಾ ಅಸಿಸ್ಟೆಂಟ್ ಕಮ್ಮಿಷನರವರ ರೂಬರೂ ತಾಲ್ಲೂಕು ಕಚ್ಚೇರಿಯಲ್ಲಿ.
			ಮೇಲೆ ಕಂಡ ಗ್ರಾಮಕ್ಕೆ ಸೇರಿದ ದಾಖಲೆ ಚನ್ನಾಪುರ	ಪುರಾಣೀಕ ರಾಮಣ್ಣ, ಇತರ 28 ಮಂದಿ	25 15 0	82 10 4	48 0 0	76 7 11 ಮತ್ತು ಹರಾಜು ತಾರೀಖು ವರಿಗೆ ಬಡ್ಡೀ ವಗೈರೆ	
			ಡಿಟ್ಟೋ ಡಿಟ್ಟೋ ಕಾಸೋಜಿಮನೆ	ರಾಮಕೃಷ್ಣಭಟ್ಟಾ, ಇತರ 14 ಮಂದಿ	6 0 0	22 11 0	11 0 0		

ತಾರೀಖು 16ನೇ ಮಾರ್ಚಿ 1887.

ನಂ. 260.—ಕಾಶಿಯಾತ್ರೆ ಹೋಗತಕ್ಕ ಜನಗಳಿಗೆ ಇದರಿಂದ ಎಚ್ಚರಿಸುವದೇನಂದರೆ, ಕಾಶಿಯಲ್ಲಿ ಅಪಾಯಕರವಾದ ಮಾರಿ ಕಾ ಉಪದ್ರವ ವ್ಯಾಪಿಸಿರುವದಾಗಿ ಸದರೀ ಸ್ಥಳದ ಕಲೆಕ್ಟರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಂದ ತಿಳಿಯಬಂದಿರುತ್ತೆ.

ತಾರೀಖು 3ನೇ ಮಾರ್ಚಿ 1887.

ಕ್ಯಾಂಪ್ ನಂ. 1652.—1870ನೇ ಇಸವಿ Xನೇ ನಂಬರ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಇದರ ದಶೆಯಿಂದ ತಿಳಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ್ ಕೆಲಸಕ್ಕೆ, ಅಂದರೆ ಮಾದಿಗರ ಮನೆಗಳು ಕಟ್ಟತಕ್ಕ ಬಗ್ಯೆ ಬೇಕಾಗಿರುತ್ತೆ:—

ತಾಲ್ಲೂಕು.	ಗ್ರಾಮ.	ಸರ್ವೇನಂಬರ್.	ಬೇಕಾಗಿರುವ ವಿಸ್ತೀರ್ಣ.	ಕಂದಾಯ.
			ಯೆ. ಗುಂ. ಗ.	ರೂ. ಆ. ಪೈ.
ತುಮಕೂರು	ತುಮಕೂರು	289	3 35 0	3 8 0

ತಾರೀಖು 18ನೇ ಮಾರ್ಚಿ 1887.

ಕ್ಯಾಂಪ್ ನಂ. 2042.—ಕೋಲಾರ ಡಿಸ್ಟ್ರಿಕ್ಟಿನೊಳಗಣ ಇದರಡೀ ಕಂಡ ಗ್ರಾಮಗಳ ವರ್ಗಾವರ್ಗಿಯು 1887ನೇ ಇಸವಿ ಏಪ್ರೆಲ್ ಗುರ್ರೇ ಲಾಗಾಯತು ಜಾರಿಯಲ್ಲಿ ಬರತಕ್ಕದ್ದೆಂದು ಮಂಜೂರ್ಮಾಡಲ್ಪಟ್ಟಿರುತ್ತೆ.

ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕಿನಿಂದ ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕಿಗೆ:—

1. ದಬ್ಬಕುಂಟೆ (ಸರ್ಕಾರಿ)
2. ಅಂಬಲಿಪುರ (ಜೋಡಿ)

ತಾರೀಖು 10ನೇ ಮಾರ್ಚಿ 1887.

ಕ್ಯಾಂಪ್ ನಂ. 1874.—ಕಾಫಿ ಸಾಗುವಳಿ ಬಗ್ಯೆ 1885ನೇ ಇಸವಿ ಮಾರ್ಚಿ 24ನೇ ಮರ್ಕುಂ 242ನೇ ನಂಬರ ಇಸ್ತಿಹಾರ್ ನಾಮೆಯ 9ನೇ ಕಲಂ ಅನುಸರಿಸಿ ಸರ್ಕಾರ್ ಬಂಜರ್ ಜಮೀನುಗಳನ್ನು ಕೊಡುವ ವಿಷಯದಲ್ಲಿ ಇದರಡಿ ಕಂಡ ರೂಲ್ಸ್‌ಯಾನೆ ನಿಬಂಧನೆಗಳು ಸರ್ವರ ತಿಳುವಳಿಕೆ ಮತ್ತು ನಡವಳಿಕೆ ಬಗ್ಯೆ ಪ್ರಕಟಿಸಲ್ಪಡುತ್ತೆ:—

I. ಕಾಫಿ ಸಾಗುವಳಿ ಬಗ್ಯೆ ಜಮೀನಿಗೋಸ್ಕರ ದರಖಾಸ್ತುಗಳು ಪ್ರಥಮತಃ ಅಮಲ್‌ದಾರ್ರಲ್ಲಿ ಕೊಡಲ್ಪಡತಕ್ಕದ್ದು; ಮತ್ತು ಸದರೀ ದರಖಾಸ್ತಿನಲ್ಲಿ ಡಿಟೋ ಜಮೀನ್ ಇರತಕ್ಕ ಹೋಬಳಿ ಗ್ರಾಮ ವ ಅದರ ಬೀಜವರಿ ಮತ್ತು ಸರ್ವೆ ನಂಬರು ಸಹಾ ವಿವರಿಸತಕ್ಕದ್ದು.

II. ದರಖಾಸ್ತು ಮಾಡಲ್ಪಟ್ಟ ಜಮೀನು 50 ಎಕರೆಗಳಿಗಿಂತ ಜಾಸ್ತಿಯಾಗಿ ಇರುವ ಪಕ್ಷದಲ್ಲಿ, ಒಬ್ಬ ಮೇಲ್ಪಟ್ಟ ರೆವಿನ್ಯೂ ಆಫೀಸರರಿಂದಲೂ ಮತ್ತು ಸದರೀ ಜಮೀನು ಹೆಚ್ಚು ಕ್ರಯ ಬಾಳುವ ಜಂಗಲ್ ಪ್ರದೇಶಗಳಲ್ಲಿ ಇರುವ ಪಕ್ಷದಲ್ಲಿ ಫಾರೆಸ್ಟ್ ಆಫೀಸರರಿಂದಲೂ ನೋಡಿ ತನಿಖೆ ಮಾಡಲ್ಪಡತಕ್ಕದ್ದು.

III. ಯಲ್ಲಾ ಸಂದರ್ಭಗಳಲ್ಲೂ ಸದರೀ ಜಮೀನು ಸಾಗುವಳಿ ಬಗ್ಯೆ ಕೊಡುವ ವಿಷಯದಲ್ಲಿ ನೆರೆ ಹೊರೆ ಗ್ರಾಮಸ್ಥರ ಮತ್ತು ಫಾರೆಸ್ಟ್ ಇಲಾಖೆಯ ಹಕ್ಕುದಾರಿ ಮತ್ತು ಪ್ರಯೋಜನಗಳಿಗೆ ಅಭ್ಯಂತರವಿಲ್ಲವೆಂಬ ವಿಷಯದಲ್ಲಿ ಕ್ರಮವಾದ ವಿಚಾರಣೆಯು ನಡಿಸಲ್ಪಡತಕ್ಕದ್ದು.

IV. ಸಾಧಾರಣವಾಗಿ 200 ಯಕರೆಗಳಿಗಿಂತಲೂ ಜಾಸ್ತೀ ವಿಸ್ತೀರ್ಣವುಳ್ಳ ಜಮೀನಿಗಾಗಿ ಯಾವ ದರಖಾಸ್ತೂ ಅಂಗೀಕರಿಸಲ್ಪಡಕೂಡದು. ಪರಂತು ದರಖಾಸ್ತುದಾರನು ಜಾಸ್ತೀ ಬೀಜವರಿವುಳ್ಳ ಜಮೀನನ್ನು ನ್ಯಾಯವಾದ ವಾಯಿದೆ ವಳಗೆ ಸಾಗುವಳೀ ಮಾಡುವದಕ್ಕೆ ಶಕ್ತನೆಂಬದಾಗಿ ಡೆಪ್ಯುಟಿ ಕಮ್ಮಿಷನರವರು ತೃಪ್ತಿಪಡುವಂಥಾ ವಿಶೇಷ ಸಂದರ್ಭಗಳಲ್ಲಿ ಅವರಿಗೆ ಯುಕ್ತತೋರುವಷ್ಟು ವಿಸ್ತೀರ್ಣವುಳ್ಳ ಜಮೀನಿಗೋಸ್ಕರ ದರಖಾಸ್ತು ಅಂಗೀಕರಿಸಲ್ಪಡಬಹುದು.

V. ಅಮೌಲ್ಯವಾದ ವಿಶೇಷ ಮರಗಳು ಯಿದ್ದು ಅವುಗಳು ಫಾರೆಸ್ಟು ಇಲಾಖೆ ಮುಖಾಂತ್ರ ಕಾಪಾಡಲ್ಪಟ್ಟು ಅಭಿವೃದ್ಧಿ ಮಾಡಲ್ಪಡಬೇಕೆಂದು ಗವರ್ನಮೆಂಟಿನವರು ಅಭಿಪ್ರಾಯ ಪಡುವಂಥಾ ಯಾವ ಜಮೀನೇ ಆಗಲೀ ಕಾಫೀ ಸಾಗುವಳೀ ಬಗ್ಯೆ ಯಾವಾಗ್ಯೂ ಕೊಡಲ್ಪಡಕೂಡದು.

VI. ದರಖಾಸ್ತುಮಾಡಲ್ಪಟ್ಟ ಜಮೀನು ಕೊಡಲ್ಪಡುವ ಬಗ್ಗೆ ಯಾವ ಅಭ್ಯಂತರವೂ ಯಿಲ್ಲವೆಂಬದಾಗಿ ವಿಚಾರಣೆ ಮೂಲಕ ತಿಳಿಯಬಂದಾಗ, ಅದು ಡಿಮಾರ್ಕೇಟ್ ಯಾನೆ ಹದ್ದುಮಾಡಲ್ಪಟ್ಟು ಇದರಡಿ ಗೊತ್ತುಮಾಡಲ್ಪಟ್ಟ ಸರ್ಕಾರ್ ಸವಾಲಿಗೆ ಒಳಪಟ್ಟು ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡತಕ್ಕದ್ದು.

ದರಯಕರೆ ವಂದಕ್ಕೆ ಹತ್ತು ರೂಪಾಯಿ ಪ್ರಕಾರ.

1. ಹಾಸನ ಡಿಸ್ಟ್ರಿಕ್ಟು ಮುಳೆ.
2. ಕಡೂರು ಡಿಸ್ಟ್ರಿಕ್ಟಿನ ಕಡೂರು ಮತ್ತು ತರೀಕೆರೆ ತಾಲ್ಲೂಕುಗಳಲ್ಲಿ.
3. ಖಾಂಡ್ಯ ವ ಜಾಗರ ಮಾಗಣಿಗಳ ವಿನಾ ಚಿಕ್ಕಮಗಳೂರು ತಾಲ್ಲೂಕಿನಲ್ಲಿ.
4. ಕಳಸಾ (ಮಾವಿನಕೆರೆ) ವ ಸಂಶಿ ಮಾಗಣಿಗಳು ಮತ್ತು ಭದ್ರಾನದಿಯ ಕೊರಕಲು ವಿನಾ ಮೂಡಿಗೆರೆ ತಾಲ್ಲೂಕಿನಲ್ಲಿ.

ದರಯಕರೆ ವಂದಕ್ಕೆ ಐದು ರೂಪಾಯಿ ಪ್ರಕಾರ.

1. ಚಿಕ್ಕಮಗಳೂರು ತಾಲ್ಲೂಕು ಖಾಂಡ್ಯ ವ ಜಾಗರ ಮಾಗಣಿಗಳಲ್ಲಿ.
2. ಮೂಡಗೆರೆ ತಾಲ್ಲೂಕು ಕಳಸ(ಮಾವಿನಕೆರೆ) ವ ಸಂಶಿ ಮಾಗಣಿಗಳಲ್ಲೂ ಮತ್ತು ಭದ್ರಾನದಿ ಕೊರಕಲು ಸುದಾ
3. ಕೊಪ್ಪಾ ತಾಲ್ಲೂಕಿನಲ್ಲಿ, ಯಡೆಹಳ್ಳಿ ಸಬ ಡಿವಿಜನ್ ದೇಖೀಲ್.

VII. ಮೇಲೆ ಗೊತ್ತು ಮಾಡಲ್ಪಟ್ಟಂತೆ ಸರ್ಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚುಗಳು ಮತ್ತು ಗವರ್ನಮೆಂಟಿಗೆ ಯಾವಾಗ್ಯೂ ನಿರಾತಂಕವಾಗಿ ಉಳಿಸಿಕೊಳ್ಳಲ್ಪಟ್ಟ ಸಂದಲ್ ಮರಗಳು ಅಲ್ಲದೆ ಮತ್ತು ಇತರ ತಮಾಂಮನ್ನಾ ಜಾತಿ ಮರಗಳ ವಿಷಯದಲ್ಲಿ ಗವರ್ನಮೆಂಟಿಗೆ ಇರುವ ಹಕ್ಕುದಾರಿಯು ಸುದಾ ಅಡಗಿರತಕ್ಕದ್ದು.

VIII. ಜಮೀನು ಹರಾಜ್ ಮಾಡಲು ಪ್ರಸಿದ್ಧಪಡಿಸುವದಕ್ಕೆ ಮುಂಚಿತವಾಗಿ ದರಖಾಸ್ತುದಾರನು ಮೇಲೆ ಗೊತ್ತು ಮಾಡಲ್ಪಟ್ಟ ಸರ್ಕಾರ್ ಸವಾಲ್ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗವನ್ನು ಡೆಪ್ಯುಟಿ ಕಮ್ಮಿಷನರವರಲ್ಲಿ ಠೇವಣಿ ಇಡತಕ್ಕದ್ದು.

IX. ಉದ್ದೇಶಿಸಲ್ಪಟ್ಟ ತಮಾಂ ಪುರೋಖ್ತುಗಳ ಪೂರಾ ನೋಟೀಸುಗಳು ನೆರೆಹೊರೆ ಗ್ರಾಮಗಳಲ್ಲಿ ಘಾಯಿಷ್ಮಾಡಲ್ಪಡತಕ್ಕದ್ದು. ಮತ್ತು 50 ಎಕರೆಗಳಿಗಿಂತ ಜಾಸ್ತಿವಿಸ್ತೀರ್ಣವುಳ್ಳ ಪ್ರದೇಶಗಳ ತಮಾಂ ಪುರೋಖ್ತುಗಳೂ ಸರ್ಕಾರ್ ಗೆಜಟಿನಲ್ಲಿ ಪ್ರಕಟಿಸುವದರ ಮೂಲಕ ಪ್ರಸಿದ್ಧಪಡಿಸಲ್ಪಡತಕ್ಕದ್ದು.

X. ಸದರೀ ಹರಾಜ್ ಜಾರೀಲಿರುವ ಷರತ್ತುಗಳನುಸರಿಸಿ ಬಹಿರಂಗವಾಗಿ ನಡಿಸಲ್ಪಡತಕ್ಕದ್ದು, ಮತ್ತು ಗೊತ್ತು ಮಾಡಲ್ಪಟ್ಟ ಸರ್ಕಾರ್ ಸವಾಲ್ ಮೊಬಲಗಿಗೆ ಮೇಲ್ಪಟ್ಟ ಚಡವರಖಾಸ್ತುದಾರನಿಗೆ ಜಮೀನು ವಿಕ್ರಯಿಸಲ್ಪಡತಕ್ಕದ್ದು. ದರಖಾಸ್ತುದಾರನಿಂದ ಠೇವಣಿ ಇಡಲ್ಪಟ್ಟ ಸರ್ಕಾರ್ ಸವಾಲ್ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗದ ಮೊಬಲಗು ಸದರೀ ಜಮೀನು ದರಖಾಸ್ತುದಾರನಿಗೆ ಹರಾಜಿನಲ್ಲಿ ವಿಕ್ರಯಿಸಲ್ಪಟ್ಟರೆ ಪುರೋಖ್ತು ಮೊಬಲಗಿಗೋಸ್ಕರ ಶೇಕಡಾ 25ರ ಪ್ರಕಾರ ಕೊಡಬೇಕಾದ ಮೊಬಲಗಿಗೋಸ್ಕರ ಜಮೆ ಕಟ್ಟಲ್ಪಡತಕ್ಕದ್ದು, ಮತ್ತು ಸದರೀ ಜಮೀನು ಯಾವ ಇತರ ಯಾರಿಂದಲಾಗಲಿ ಕೊಂಡುಕೊಳ್ಳಲ್ಪಟ್ಟರೆ ಸದರೀ ಮೊಬಲಗು ಡಿಪಾಜಿಟ್‌ದಾರನಿಗೆ ವಾಪಸ್ ಮಾಡಲ್ಪಡತಕ್ಕದ್ದು.

XI. ಮೇಲ್ಕಂಡ ರೂಲ್ಸ್ ಪ್ರಕಾರ ಪುರೋಖ್ತು ಮಾಡಲ್ಪಟ್ಟ ಜಮೀನುಗಳಿಗೆ ಮೊದಲ್ ಮೂರು ವರುಷಗಳ ಪರಿಯಂತ ಯಾವ ಕಂದಾಯವೂ ತೆರಬೇಕಾದ್ದಿಲ್ಲವು; ತರುವಾಯ ಯರಡು ವರುಷಗಳಿಗೆ ಅರ್ಧಕಂದಾಯ ವಸೂಲ್ ಮಾಡಲ್ಪಡತಕ್ಕದ್ದು. ಆರನೇ ವರುಷದಾರಭ್ಯ ಪೂರಾ ಕಂದಾಯ ವಸೂಲ್ ಮಾಡಲ್ಪಡತಕ್ಕದ್ದು. ಪರಂತು ಈ ರಿಯಾಯತಿ ತೋರಿಸುವದಕ್ಕೆ ಮುಂಚಿತವಾಗಿ, ದರಖಾಸ್ತುದಾರನು, ಸದರೀ ಜಮೀನಿನಲ್ಲಿರತಕ್ಕ ಮರಗಳು ಕಡದ ತರುವಾಯ ಯಾ ಅದರ ಯಾವ ಭಾಗವನ್ನಾಗಲಿ ಅನ್ಯಥಾ ಬೈಲು ಮಾಡಿದನಂತರ ಸದರೀ ಜಮೀನಿನಲ್ಲಿ ಅಡಗಿ ಯಿರತಕ್ಕ ಸಾಗುವಳೀ ಲಾಯಖ್ ಭಾಗವನ್ನ ಸಾಗುವಳೀ ಮಾಡುವದಕ್ಕೆ ವಾಸ್ತವ್ಯವಾಗಿ ಪ್ರಯತ್ನ ಪಡದೆ ಸದರೀ ಜಮೀನನ್ನ ರಾಜೀನಾಮೆ ಮೂಲಕ ಒಪ್ಪಿಸಿ ಬಿಡುವ ಪಕ್ಷದಲ್ಲಿ ಮೊದಲ್ ವರುಷದ ಲಾಗಾಯತು ಪೂರಾ ಕಂದಾಯ ಕೊಡುವದಕ್ಕೆ ಬದ್ಧನಾಗಿ ಮುಚ್ಚಳಿಕೆ ಬರೆದು ಕೊಡತಕ್ಕದ್ದು.

ಹುಕ್ಕುಂ ಬಮೋಜೀಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ಪಬ್ಲಿಕ್ ವರ್ಕ್ಸ್ ಇಲಾಖಾ.

ಇ ಸ್ತಿ ಹಾ ರ್ ನಾ ಮೆ .

ನಂ. 1117—192.　　ತಾರೀಖು 24ನೇ ಮಾರ್ಚಿ 1887.

ಮೈಸೂರು ಪಬ್ಲಿಕ್‌ವರ್ಕ್ಸ (ಲೋಕಲ್) ಇಲಾಖೆಯ ಅಪ್ಪರ್ ಸಬಾರ್ಡಿನೇಟ್ ಶಿಬ್ಬಂದಿಯಲ್ಲಿ ಇದರಡೀ ಕಂಡ ಬಡ್ತಿಗಳು ಆಯಾ ತಾರೀಖುಗಳ ಲಾಗಾಯತು ಮಾಡಲ್ಪಟ್ಟಿರುತ್ತವೆ:—

ಡಿವೀಜ೯.	ಹೆಸರುಗಳು.	ಹಾಲೀ ಯಿರುವ ದರ್ಜೆ.	ಯಾವ ದರ್ಜೆಗೆ ಬಡ್ತಿ ಮಾಡಲ್ಪಟ್ಟದ್ದು.	ಯಾವ ಲಾಗಾಯತು ಜಾರಿ.	ಬಡ್ತಿ ಸ್ವಭಾವ.	ಷರಾ.
ಕೋಲಾರ	ವಿ. ಅರುಣಾಚಲಮೊದಲಿಯಾರ್ರು.	ಸೂಪರ್‌ವೈಜರ್, 2ನೇ ಗ್ರೇಡ್	ಸೂಪರ್‌ವೈಜರ್ 1ನೇ ಗ್ರೇಡ್	1ನೇ ಏಪ್ರೆಲ್ 1887	ಖಾಯಂ.	
ಅಷ್ಟಗ್ರಾಮ ಚಾನಲ್ ಡಿವೀಜ೯	ಮೆ|| ಜೆ. ಡಬ್ಲಿಯು. ಕಿಂಗ್	ಡಿಟೋ 3ನೇ ಗ್ರೇಡ್	ಡಿಟೋ 2ನೇ ಗ್ರೇಡ್	ಡಿಟೋ	ಡಿಟೋ	
ಮೈಸೂರು	ಮೆ|| ಸಿ. ಏ. ವೆಲ್ಷ್	ಡಿಟೋ	ಡಿಟೋ	ಡಿಟೋ	ಡಿಟೋ	
ಬೆಂಗಳೂರು	ಮೆ|| ಡಬ್ಲಿಯು. ಎಂ. ಮೊಲ್ಲರ್	ಡಿಟೋ	ಡಿಟೋ	ಡಿಟೋ	ಡಿಟೋ	
ಹಾಸನ	ಮೆ|| ಏ. ಏ. ಪೆರೈರ	ಓವರಸಿಯರ್ 1ನೇ ಗ್ರೇಡ್	ಸೂಪರ್‌ವೈಜರ್ 3ನೇ ಗ್ರೇಡ್	ಡಿಟೋ	ಡಿಟೋ	

ನಂ. 1131—202.　　ತಾರೀಖು 24ನೇ ಮಾರ್ಚಿ 1887.

ಮೈಸೂರು ಡಿವೀಜ೯ ಯಗ್ಜಿಕ್ಯುಟಿವ್ ಇಂಜನಿಯರ್ ಮೆ|| ವಿ. ಹೆಚ್. ಕರವೀಯವರಿಗೆ, ಮೊಹೇ ಮಜಕೂರು 10ನೇ ಮರ್ಕೂಂ 814—135ನೇ ನಂಬರಿನ ಈ ಆಫೀಸ್ ಇಸ್ತಿಹಾರ್‌ನಾಮೆಯಲ್ಲಿ ಮಂಜೂರ್‍ಮಾಡಿದ್ದ ರಜಾಕ್ಕೆ ಜಾಸ್ತಿಯಾಗಿ 2 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕ್ಕುಂ ಬಮೋಜೀಬ್,

ಸಿ. ಬರ್ವೆ, ಲೆ. ಕ. ಆರ್. ಇ.,
ಮೈಸೂರು ಗವರ್ನಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರೆಟೇರಿ.

३५८

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಏಪ್ರಿಲ್ ತಾ॥ 2, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಪೊಲೀಸ್ ಇಲಾಖಾ.

ತಾರೀಖು 8ನೇ ಮಾರ್ಚಿ 1887.

ಬಾಳೇ ಹೊನ್ನೂರು ಮತ್ತು ಯಡೆಹಳ್ಳಿ ಸ್ಟೇಷನುಗಳ ಸರಹದ್ದಿನ ವಳಗೆ ಯಿರತಕ್ಕ ಕಾಡಕೊಡಗಿ ಗ್ರಾಮದಲ್ಲಿನ ಚಂದಯ್ಯನ ಮನೆಯಿಂದ 1885ನೇ ಇಸವಿ ಮೇ 13ನೇ ತಾರೀಖಿನಲ್ಲಿ ಚೋರಿಯಿಂದ ವಯ್ಯೋಣಾದ ಸುಮಾರು 12 ವರುಷ ವಯಸ್ಸುಳ್ಳ ಗುತ್ತಿ ಯೆಂಬ ಹುಡುಗಿಯ ಪತ್ತೇ ವಿಷಯದಲ್ಲಿ ಸಾಧಕವಾದ ವರ್ತಮಾನ ಕೊಡುವಂಥಾವರಿಗೆ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಯಲ್. ರಿಕ್ಕೆಟ್ಸ್,
ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 264.

ಮೃತಪಟ್ಟ ಶಿವರಂ ರಾಮಸ್ವಾಮಿಮೊದಲಿಯಾರ್ರು ಆಸ್ತಿ ವಿಷಯದಲ್ಲಿ—

ಅರ್ಜೀದಾರ ರತ್ನಮ್ಮಾಳ್, ಮೃತಪಟ್ಟ ಸದರೀ ರಾಮಸ್ವಾಮಿಮೊದಲಿಯಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ರತ್ನಮ್ಮಾಳ್ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮಿ ಮೊದಲಿಯಾರ್ರು ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ರತ್ನಮ್ಮಾಳ್ ಅರ್ಜಿಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಸ್ವಾಮಿಮೊದಲಿಯಾರ್ರು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಮಿ|| ಅರ್ಜೀ ನಂಬರ್ 269.

ಮೃತಪಟ್ಟ ಚಿನ್ನಮ್ಮ ಚನ್ನಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಬೆಂಗಳೂರು ಅರಳೇಪೇಟೆ ರಾಮಪ್ಪನ ಮಗ ದೊಮ್ಮಸಂದ್ರದ ನಾರಣಪ್ಪ ಮೃತಪಟ್ಟ ಸದರೀ ಚಿನ್ನಮ್ಮ ಚನ್ನಪ್ಪನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ನಾರಣಪ್ಪನು ದೊಮ್ಮಸಂದ್ರದ ವಾಸಸ್ಥನಾಗಿ ಮೃತಪಟ್ಟ ಚಿನ್ನಮ್ಮ ಚನ್ನಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೆ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಾರಣಪ್ಪನ ಅರ್ಜೀಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು 26ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಚಿನ್ನಮ್ಮ ಚನ್ನಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚೀ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೇನ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 14ನೇ ಮಾರ್ಚೀ 1887.

ಇದರಿಂದ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟು ಬವರಿಂಗಪೇಟೆ ತಾಲ್ಲೂಕಿಗೆ ಶೇರಿದ ಕಾಮಸಂದ್ರದ ಜಂಗಲ್‌ನಲ್ಲಿ ಒಂದು ಅಥವಾ ಎರಡು ವರುಷಗಳ ವರಿಗೆ ಸಾದೆ ಕಡದುಕೊಳ್ಳುವ ಹಕ್ಕನ್ನು ಅಪೇಕ್ಷಿಸತಕ್ಕವರಿಂದ ಬರುವ ಮೊಹರ್ಮಾಡಿದ ದರಖಾಸ್ತುಗಳನ್ನು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರು 1887ನೇ ಇಸವಿ ಏಪ್ರೆಲ್ 20ನೇ ತಾರೀಖಿನವರಿಗೆ ತೆಗದುಕ್ಕೊಳ್ಳುವರು:—

2. ಈ ಜಂಗಲ್‌ನಿಂದ ಸಾಗಿಸಲ್ಪಡುವ ಕತ್ತರಿಸದೇ ಇರುವ ಸಾದೆಯು ಅಥವಾ ಸಣ್ಣ ಸಣ್ಣ ತುಂಡುಗಳಾಗಿ ಕೊಯಿದ್ದು, ಯಾ ಕತ್ತರಿಸಿ ಇರುವ ಸಾದೆಯ ಭಂಡಿ ಬೋಜಾ ವೊಂದಕ್ಕಾಗಲಿ ಅಥವಾ 68 ಘನ ಅಡಿಗಳುಳ್ಳ ಟನ್ ಒಂದಕ್ಕಾಗಲಿ ಆಯಾ ದರಖಾಸ್ತುದಾರರು ಕೊಡಲು ವೊಪ್ಪುವ ಶೀನಿಯರೇಜ್ ತೀರ್ವೆಯ ದರವನ್ನು ಅವರವರ ದರಖಾಸ್ತಿನಲ್ಲಿ ನಮೂದಿಸಿ ಇರಬೇಕು. ನಗದು ಅಥವಾ ನೋಟು ಮೂಲಕ (100) ರೂಪಾಯಿಗಳ ಡಿಪಾಜಿಟ್ ಮೊಬಲಗಿನ ಸಮೇತ ಬಾರದೆ ಇರುವ ದರಖಾಸ್ತುಗಳು ತೆಗದುಕೊಳ್ಳಲ್ಪಡುವದಿಲ್ಲ. ಈ ಕಂಟ್ರಾಕ್ಟಿನಲ್ಲಿ ಸಾಧಾರಣವಾಗಿರುವ ಎರಡು ಭಂಡಿ ಬೋಜಾಗಳು ವೊಂದು ಟನ್ ಯಂದು ಎಣಿಸಲ್ಪಡುವದು.

3. ಜಂಗಲ್‌ನಲ್ಲಿ ಯಾವ ಪ್ರದೇಶದಲ್ಲಿ ಮರಕಡಿಯತಕ್ಕದ್ದೋ ಅದನ್ನು ಕಡಿಯುತಕ್ಕ ಮರಗಳನ್ನು ಸಹ ಫಾರೆಸ್ಟ್ ಇಲಾಖೆಯವರು ಗುರ್ತು ಮಾಡುತ್ತಾರೆ, ಹಾಗೆ ಗುರ್ತು ಮಾಡಲ್ಪಟ್ಟ ಮರಗಳನ್ನು ಮಾತ್ರ ಕಂಟ್ರಾಕ್ಟುದಾರನು ಫಾರೆಸ್ಟ್ ಇಲಾಖೆಯವರು ನೇಮಿಸುವ ರೀತಿಯಲ್ಲಿ ಕಡದುಕೊಳ್ಳುವದಕ್ಕೂ ಮತ್ತು ತಿಂಗಳು ಒಂದಕ್ಕೆ 400 ಟನ್ ಅಥವಾ ವರುಷ ಒಂದಕ್ಕೆ 4,800 ಟನ್‌ಗಿಂತ ಹೆಚ್ಚಾಗಿ ಸಾದೆಯನ್ನು ಕಡಿದು ಸಾಗಿಸದೆ ಇರುವದಕ್ಕೂ ಬದ್ಧನಾಗಿ ಮುಚ್ಚಲಿಕೆ ಬರದುಕೊಡಬೇಕು. ಈ ಷರತ್ತುಗಳಿಗೆ ತಪ್ಪಿದರೆ ಸರ್ಕಾರದವರು ಗೊತ್ತು ಮಾಡುವ ಜುರ್ಮಾನೆ ತೆರಲಿಕ್ಕೆ ಗುರಿಯಾಗಿರುವದಾಗಿ ಸದರೀ ಮುಚ್ಚಲಿಕೆಯಲ್ಲಿ ನಮೂದಿಸಬೇಕು. ಉಳಿಸಿಕೊಳ್ಳಲ್ಪಟ್ಟು ಇರುವ ಜಾತಿ ಮರಗಳನ್ನು ಫಲವೃಕ್ಷಗಳನ್ನು ಅಥವಾ ಇತರ ಜಿನಸಿ ಹುಟ್ಟುವಳಿಯಾಗತಕ್ಕ ಮರಗಳನ್ನು ಕಡಿಯಕೊಡದು, ಮತ್ತು ಅವುಗಳ ರೆಂಬೆಗಳನ್ನು ಸವರಲೂ ಕೂಡದು.

4. ಕಂಟ್ರಾಕ್ಟುದಾರನು ಸಾದೆಯನ್ನು ಭಂಡಿಗಳಿಗೆ ಭರ್ತೀಮಾಡಿಕೊಂಡು ಹೋಗಿ ಭಂಗಾರದ ಗಣಿಯವರಿಗೆ ಟನ್ ಒಂದಕ್ಕೆ ಏಳು ರೂಪಾಯಿಗಳಿಗೆ ಜಾಸ್ತಿ ಇಲ್ಲದ ದರಪ್ರಕಾರ ಬಿಕರೀ ಮಾಡತಕ್ಕದ್ದು. ಇವನು ತರುವ ಸಾದೆಯು ಯಲ್ಲಾ ಗಣಿಯವರಿಗೂ ಬೇಕಾಗುವದಕ್ಕಿಂತ ಜಾಸ್ತಿಯಾಗಿದ್ದು ಅದು ಅವರಿಗೆ ಅವಶ್ಯಕವಿಲ್ಲದ ಪಕ್ಷದಲ್ಲಿ ಹಾಗೆ ಉಳಿಯುವ ಸಾದೆಯನ್ನು ಅವನು ಮತ್ತೆಲ್ಲ್ಯಾದರೂ ಯಾವ ದರದ ಪ್ರಕಾರವಾದರೂ ಮಾರಿಕೊಳ್ಳಬಹುದು.

5. ಈ ವಿಷಯದಲ್ಲಿ ಮೇಲೆ ನಮೂದಾಗುವದಕ್ಕಿಂತ ಹೆಚ್ಚು ತಪಸೀಲುಗಳು ತಿಳಿಯಬೇಕಾಗಿ ಇದ್ದಲ್ಲಿ ಅವುಗಳನ್ನೂ ಕಂಟ್ರಾಕ್ಟಿನ ಷರತ್ತುಗಳನ್ನೂ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

6. ಮೊಹರ್ಮಾಡಿದ ದರಖಾಸ್ತುಗಳನ್ನು ಸನ್ 1887ನೇ ಇಸವಿ ಏಪ್ರೈಲ್ 20ನೇ ತಾರೀಖು ಮಧ್ಯಾನ್ಹ 12 ಘಂಟೆಗೆ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರವರಾಗಲಿ ಅಥವಾ ಅವರು ನೇಮಿಸುವ ಇತರ ಆಫೀಸರರಾಗಲಿ ಆಗ್ಯೆ ಹಾಜರಿರುವ ದರಖಾಸ್ತುದಾರರ ಸಮಕ್ಷಮ ಒಡೆದು ನೋಡುವರು.

7. ಡೆಪ್ಯುಟಿ ಕಮ್ಮಿಷನರವರು ಕಾರಣ ನಮೂದಿಸದೆ ಯಾವ ದರಖಾಸ್ತನ್ನಾದರೂ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡು ಇದ್ದಾರೆ.

8. ಯಾವ ಮನುಷ್ಯನ ದರಖಾಸ್ತು ಅಂಗೀಕರಿಸಲ್ಪಡುವದೋ ಅವನ ಡಿಪಾಜಿಟ್ ಮೊಬಲಗು ನಿಲ್ಲಿಸಿಕ್ಕೊಳ್ಳಲ್ಪಡುವದು. ಅಂಥಾ ದರಖಾಸ್ತುದಾರನ ದರಖಾಸ್ತು ಮಂಜೂರಾದ ಸಂಗತಿ ಅವನಿಗೆ ತಿಳಿಸಲ್ಪಟ್ಟ (10) ದಿವಸಗಳ ಒಳಗಾಗಿ ಸರಿಯಾದ ಸ್ಟಾಂಪು ಕಾಗದ್ದಲ್ಲಿ ಸದರೀಯವನು ಅವಶ್ಯಕವಾದ ಮುಚ್ಚಲಿಕೆ ಬರದು ಕೊಡಬೇಕು ಮತ್ತು ಕಂಟ್ರಾಕ್ಟು ಷರತ್ತುಗಳ ಪ್ರಕಾರ ಕ್ರಮವಾಗಿ ನಡದುಕೊಳ್ಳಲು ಜಾಮೀನ್ ತರೀಕ್ ನಗದು 500 ರೂಪಾಯಿ ಠೇವಣಿ ಇಡಬೇಕು, ಇದಕ್ಕೆ ತಪ್ಪಿದರೆ ಅವನ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

9. ದರಖಾಸ್ತುದಾರರು ತಾವು ಕಳುಹಿಸುವ ದರಖಾಸ್ತುಗಳ ಮೇಲೆ "ಕಾಮಸಂದ್ರದ ಜಂಗಲ್‌ನಿಂದ ಸಾದೆ ಕಡದು ತರುವ ಹಕ್ಕಿಗೋಸ್ಕರ ಕಳುಹಿಸಲ್ಪಟ್ಟ ದರಖಾಸ್ತು" ಎಂದು ಬರಿಯಬೇಕು.

ತಾರೀಖು 17ನೇ ಮಾರ್ಚೀ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸನ್ 1887—88ನೇ ಇಸವಿ ಸರ್ವಜಿತು ಸಂವತ್ಸರಕ್ಕೆ ಕೋಲಾರ ಡಿಸ್ಟ್ರಿಕ್ಟು ಗೋರೀಬಿದನೂರು ತಾಲ್ಲೂಕು ಸರ್ಕಾರ ಬಂಜರ್ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಕೋಲಾರ ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಯಾ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರ ರೂಬರೂ 1887ನೇ ಇಸವಿ ಏಪ್ರೈಲ್ 21ನೇ ತಾರೀಖಿನಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಈ ಹರಾಜು ಸದರೀ ತಾರೀಖು ದಿವಿ 12 ಘಂಟೆಗೆ ಷುರೂ ಆಗುತ್ತೆ.

2. ಹರಾಜು ಪೂರೈಸಿದ ಒಡನೆ ಚಡ ಸವಾಲ್‌ದಾರನು ಹರಾಜು ಮೊಬಲಗಿಗೆ ಶೇಕಡಾ 25 ರೂಪಾಯಿ ಮೇರಿಗೆ ಠೇವಣಿ ಯಿಡಬೇಕು, ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿಯು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ತಿಳಿಸಲ್ಪಟ್ಟ 7 ದಿವಸಗಳ ಒಳಗಾಗಿ ಬಾಕೀ ಮೊಬಲಗು ಮತ್ತು ಪೂರಾ ಮೊಬಲಗ್ಯೆ ರೂಪಾಯಿ 1ಕ್ಕೆ 1 ಆಣೆ ಪ್ರಕಾರ ಲೋಕಲ್‌ಸೆಸ್ ಸಹಾ ಪಾವತೀ ಮಾಡಬೇಕು. ಹಾಗೆ ಪಾವತೀ ಮಾಡದೇ ಯಿದ್ದರೆ ಠೇವಣಿ ಯಿಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಮೇಲ್ಕಂಡ ಠೇವಣಿ ಮೊಬಲಗು ಯಿಡುವದಕ್ಕೆ ತಪ್ಪಿದರೂ ಅಥವಾ ಬಾಕೀ ಮೊಬಲಗನ್ನ ಪಾವತೀ ಮಾಡುವದಕ್ಕೆ ತಪ್ಪಿದರೂ ಹಕ್ಕು ಪುನಹ ಹರಾಜುಮಾಡಲ್ಪಡುವದು ಲುಕ್ಸಾನ್ ಮೊಬಲಗು ತಪ್ಪಿದ ಚಡ ಸವಾಲ್‌ದಾರನಿಂದಲೇ ವಸೂಲ್ಮಾಡಲ್ಪಡುವದು.

361

3. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮಿಗೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುತ್ತಾರೆಯಿ ತಿಳಿಸಬೇಕು. ಇತರರ ಯೇಜಂಟುಗಳಾಗಿ ಸವಾಲ್ ಮಾಡುವದಾಗಿ ಯಿದ್ದರೆ ಅವರಿಂದ ರುಜು ಮಾಡಲ್ಪಟ್ಟ ವೊಖ್ತ್ಯಾರ್‌ನಾಮೆಯನ್ನ ಹಾಜರ್ಮಾಡಬೇಕು, ಹಾಗೆ ಹಾಜರ್ಮಾಡದೆ ಇದ್ದರೆ ಅಂಥಾವರ ಸವಾಲುಗಳು ತಿರಸ್ಕರಿಸಲ್ಪಡುವದು.

ಈ ಹರಾಜು ದಿವಾನ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ಸಿ. ಸುಬ್ಬರಾವ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 117.

ಮೃತಪಟ್ಟ ಪುಟ್ಟಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಮಸ್ವಾಮಯ್ಯನವರು, ಮೃತಪಟ್ಟ ಸದರೀ ಪುಟ್ಟಮ್ಮನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಚಿಟ್ಟದಪುರದ ಸ್ಥಳದ ಸದರೀ ರಾಮಸ್ವಾಮಯ್ಯನವರು ಅರಕಲಗೂಡು ತಾಲ್ಲೂಕು ಮಲ್ಲದಾಸಪಾಳ್ಯದಲ್ಲಿ ವಾಸಸ್ಥರಾಗಿದ್ದು ಮೃತಪಟ್ಟ ಪುಟ್ಟಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮಸ್ವಾಮಯ್ಯನವರ ಅರ್ಜೀಯನ್ನ 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 118.

ಮೃತಪಟ್ಟ ನಾಗಂಣನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪದ್ಮರಾಜಯ್ಯನವರು, ಮೃತಪಟ್ಟ ಸದರೀ ನಾಗಂಣನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಸಾಲಿಗ್ರಾಮದ ಸ್ಥಳದ ಸದರೀ ಪದ್ಮರಾಜಯ್ಯನವರು ಸದರೀ ವಾಸಸ್ಥರಾಗಿ ಮೃತಪಟ್ಟ ನಾಗಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರಟಿಫಿಕೇಟ್ ಬಗ್ಯೆಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪದ್ಮರಾಜಯ್ಯನವರ ಅರ್ಜೀಯನ್ನು 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಗಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 119.

ಮೃತಪಟ್ಟ ಗುಂಡಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಶಾಂತಮ್ಮನವರು ಮೃತಪಟ್ಟ ಸದರೀ ಗುಂಡಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಸದರೀ ಶಾಂತಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ಗುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾಂತಮ್ಮನವರ ಅರ್ಜಿಯನ್ನು 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಮಾರ್ಚೀ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1887ನೇ ಇಸವಿ ಮಿಸಲೇನಿಯಸ್ ನಂಬರ್ 138.

ಮೃತಪಟ್ಟ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶಾಮಯ್ಯ ಮೈನರಗಾರ್ಡಿಯರ್ ತಾಯಿ ಸಾವಿತ್ರಮ್ಮ, ಮೃತಪಟ್ಟ ಸದರೀ ವೆಂಕಟರಮಣಯ್ಯ ವುರಫ್ ತಮ್ಮಪ್ಪ ನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಅರಕಲಗೂಡು ತಾಲ್ಲೂಕು ಕೃಷ್ಣರಾಜಕಟ್ಟೆ ಹೋಬಳಿ ರುದ್ರಪಟ್ಟಣದ ಸ್ಥಳದ ಸದರೀ ಮೈನರಗಾರ್ಡಿಯರ್ ತಾಯಿ ಸಾವಿತ್ರಮ್ಮನು ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರ ಜಿಂದಗಿ ಬಗ್ಗಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಸಾವಿತ್ರಮ್ಮನವರ ಅರ್ಜಿಯನ್ನು 1887ನೇ ಇಸವಿ ಏಪ್ರೈಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚಿ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ಸಿಸಿ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಫಾರೆಸ್ಟು ಇಲಾಖಾ.

ತಾರೀಖು 27ನೇ ಫಿಬ್ರವರೀ 1887.

ಹಾಸನದ ಡಿಸ್ಟ್ರಿಕ್ಟಿನಲ್ಲಿ ಗವರ್ನಮೆಂಟ್ ಫಾರೆಸ್ಟುಗಳಿಂದಲೂ ಹಿಡುವಳೀ ಜಮೀನುಗಳಿಂದಲೂ, 1887—88ನೇ ಮುಂದಿನ ಸರ್ಕಾರ್ ಸಾಲಿನಲ್ಲಿ ಇದರಡೀಕಂಡ ತೇದಾದುವುಳ್ಳ ವಣಗಿದ ಗಂಧದಮರಗಳು ಮತ್ತು ಹಳೆ ಗಂಧದ ಮರದ ಬೇರುಗಳನ್ನು ಕ್ರಮವಾಗಿ ಚೆಕ್ಕಿ ತಯಾರ್ಮಾಡಿ ಅಂದರೆ ಮೇಲ್‌ಗಡೆ ಸ್ವಲ್ಪ ಬಿಳಿಮರ ಸಹಿತವಾಗಿ ಕಂಟ್ರಾಕ್ಟು ಮೂಲಕ ಜಮಾಯಿಸಿ ಹಾಸನದ ಸಂದಲ್ ಕೋಠಿಯಲ್ಲಿ ಒಪ್ಪಿಸುವ ಬಗ್ಗೆ ಇದರ ದೆಶೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ.

			ಟನ್‌ಗಳು.
1.	ಹಾಸನ ತಾಲ್ಲೂಕು ಗ್ರಾಮದ ಸಬ್ ತಾಲ್ಲೂಕು ದೇಖೀಲ್		40
2.	ಅರಸೀಕೆರೆ ತಾಲ್ಲೂಕು	.. ..	30
3.	ಚನ್ನರಾಯಪಟ್ಟಣದ ತಾಲ್ಲೂಕು	.. ..	10
4.	ಹೊಳೇನರಸೀಪುರ	ಡಿಟೋ	10
5.	ಅರಕಲ್‌ಗೂಡು	ಡಿಟೋ	40
6.	ಮಂಜರಾಬಾದ್	ಡಿಟೋ	60
7.	ಬೇಲೂರು	ಡಿಟೋ	60
		ಜುಮ್ಲಾ	250

2. ದರಖಾಸ್ತುಗಳು "ಹಾಸನದ ಕೋಠೀಗೆ ವಣಗಿದ ಗಂಧದ ಮರಗಳನ್ನೂ ಹಳೇ ಗಂಧದಮರದ ಬೇರುಗಳನ್ನೂ ಸರಬರಾಯಿ ಮಾಡುವ ಬಗ್ಗೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ಸರಬರಾಯಿ ಮಾಡುವ ಬಗ್ಗೆ ವಪ್ಪಿಕೊಳ್ಳುವ ತೇದಾದಿನ ಮೇಲೆ ದರ ಟನ್ ವಂದಕ್ಕೆ ನಾಲ್ಕು ರೂಪಾಯಿ ಮೇರೆ ಆಗುವ ಮೊಬಲಗನ್ನ ನಗದಾಗಿಯಾಗಲೀ ಕರೆನ್ಸಿ ನೋಟಿನ ಮೂಲಕವಾಗಿಯಾಗಲೀ ದರಖಾಸ್ತಿನೊಡನೆ ಕಳುಹಿಲ್ಪಟ್ಟ ಹೊರತು ಅನ್ಯಥಾ ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು.

4. ಪ್ರತಿದರಖಾಸ್ತಿನಲ್ಲಿಯೂ, ದರಖಾಸ್ತುದಾರನು ವಣಗಿದ ಮರಗಳಿಗೂ ಮತ್ತು ಹಳೇ ಬೇರುಗಳಿಗೂ ಅವುಗಳು ತಯಾರ್ಮಾಡಿ ವಿಂಗಡಿಸಲ್ಪಟ್ಟ ತರುವಾಯ ಕೋಠೀಯಲ್ಲಿ ತೂಕಮಾಡಲ್ಪಟ್ಟು ದಾಸ್ತಾನ್ ಮಾಡಲ್ಪಟ್ಟ ತೇದಾದಿಗೆ ದರ ಟನ್ ವಂದಕ್ಕೆ ಖಾಯಿಷ್ ಮಾಡುವ ಬೇರೆಬೇರೆ ಕಮ್ಮಿದರವನ್ನು ನಮೂದಿಸತಕ್ಕದ್ದು.

5. ಡೆಪ್ಯುಟಿ ಕಮ್ಮಿಷನರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ; ಮತ್ತು ಹಾಂಗೆ ತಿರಸ್ಕರಿಸುವ ಬಗ್ಗೆ ಅವರು ಯಾವ ಕಾರಣವೂ ತಿಳಿಸಬೇಕಾಗಿಲ್ಲವು.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು ಹಂದುವಾರದವಳಗಾಗಿ ತಕ್ಕ ಖಾಪಾಕಾಗದದಲ್ಲಿ ಕಂಟ್ರಾಕ್ಟು ಮುಚ್ಚಳಿಕೆಯನ್ನು ಬರೆದು ಕೊಡದಿದ್ದರೆ ಡಿಪಾಜಿಟ್ ಹೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

7. ಅಂಗೀಕರಿಸಲ್ಪಡದ ದರಖಾಸ್ತುದಾರರ ಡಿಪಾಜಿಟ್ ಹೊಬಲಗು ಕ್ರಮವಾಗಿ ಅವರಿಗೆ ವಾಪಸ್ ಮಾಡಲ್ಪಡುವದು.

8. ಬಂದ್ ಮಾಡಲ್ಪಟ್ಟ ದರಖಾಸ್ತುಗಳು ಇದರಡೀ ರುಜು ಮಾಡಿರುವವರಿಂದ 1887ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ತೆಗದುಕೊಳ್ಳಲ್ಪಡುವದು.

9. ದರಖಾಸ್ತುದಾರರು, ಒಂದು ಯಾ ಹೆಚ್ಚು ತಾಲ್ಲೂಕುಗಳಿಗೋಸ್ಕರವಾಗಲೀ ವಟ್ಟು ಡಿಸ್ಟ್ರಿಕ್ಟು ಗೋಸ್ಕರವಾಗಲೀ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

10. ಕಂಟ್ರಾಕ್ಟಿನ ಷರತ್ತುಗಳು ಕುರಿತ ಯಾ ಇತರ ವಿಷಯಿಕವಾದ ವಿಶೇಷ ತಪಶೀಲುಗಳು ಹಾಸನದ ಡಿಸ್ಟ್ರಿಕ್ಟು ಫಾರೆಸ್ಟು ಪ್ರೊಬೇಷನರವರಿಂದ ತಿಳಿದುಕೊಳ್ಳಬಹುದು.

ಹೆಚ್. ಮುದ್ದಪ್ಪ,
ಫಾರೆಸ್ಟ್ ಪ್ರೊಬೇಷನರ, ಹಾಸನ ರೇಂಜ್.

ಸ್ನ 1887ನೇ ಇಸವಿ ಫೆಬ್ರವರೀ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳೊಳಗೆ ಮಳೆ ಬೀಳಲಿಲ್ಲ.

ಬೆಳೆಗಳ ಸ್ಥಿತಿ.—ಫಸಲಲ್ಲಿರುವ ಗನ್ನಾ ಮತ್ತು ನೆಲ್ಲಿನ ಬೆಳೆಗಳು ವಳ್ಳೇ ಸ್ಥಿತಿಯಲ್ಲಿದ್ದವು. ಗನ್ನಾ ಮತ್ತು ವೈಶಾಖೀ ನೆಲ್ಲು ಬಿತ್ತಲ್ಪಟ್ಟವು; ಕಾರ್ತೀಕಿ ನೆಲ್ಲು, ಗನ್ನಾ ಮತ್ತು ಡಿಸ್ಟ್ರಿಕ್ಟಿನ ಕೆಲವು ಪ್ರದೇಶಗಳಲ್ಲಿ ರಾಗಿ, ಅವರೆ ಮತ್ತು ತೊಗರಿ ಕಟಾವಾದವು.

ಜನಾರೋಗ್ಯ.—ಸರ್ವತ್ರ ಚನ್ನಾಗಿತ್ತು, ಜ್ವರ, ಆಮಶಂಕೆ ಕ್ಲೋಸ್‌ಪೇಟೆ, ಕಾನಕಾನಹಳ್ಳಿ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ವ್ಯಾಪಿಸಿದ್ದವು ಮತ್ತು ಶಿಡಬು ನೆಲಮಂಗಲ ತಾಲ್ಲೂಕಿನಲ್ಲಿ ಕೆಲವು ಮಟ್ಟಿಗೆ ವ್ಯಾಪಿಸಿತ್ತು.

ಜನಮರಣ.—ಜನವರೀ ತಿಂಗಳಲ್ಲಿ (ಲೆಕ್ಕಖಾರದ ದೊಡ್ಡಬಳ್ಳಾಪುರ ತಾಲ್ಲೂಕು ವಿನಾ) 741 ಮಂದಿಯೂ ಆ ಹಿಂದಿನ ತಿಂಗಳಲ್ಲಿ 907 ಮಂದಿಯೂ ಮೃತಪಟ್ಟಿರುತ್ತಾರೆ.

ಕಾಲ್ನಡೆ.—ಈ ತಿಂಗಳಲ್ಲಿ 1,787 ಕಾಲ್ನಡೆಯೂ ಆ ಹಿಂದಿನ ತಿಂಗಳಲ್ಲಿ 656 ಕಾಲ್ನಡೆಯೂ ಮೃತಪಟ್ಟಿರುತ್ತವೆ, ಈ ಪೈಕೀ 104 ಕಾಡುಮೃಗಗಳಿಂದ ಕೊಲ್ಲಲ್ಪಟ್ಟವು.

ಜವಿರ್ಮಾ.—ಸಾಗುವಳೀ ಬಗ್ಗಾಗಿ 148—2—6 ರೂಪಾಯಿಗಳು ಕಂದಾಯವುಳ್ಳ ಜವಿರ್ಮಾಗಳು ತೆಗದುಕೊಳ್ಳಲ್ಪಟ್ಟವು.

ಎ. ಹೆಚ್. ಮಕ್ಕಿಂಟೈರ್,
ಡೆಪ್ಯುಟಿ ಕಮ್ಮಿಷನರ.

ಕಡೂರು ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳೊಳಗೆ ಮಳೆ ಬೀಳಲಿಲ್ಲ.

ಬೀಜಪೇರಾವಾದ್ದು.—ಕೊಪ್ಪ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಕಾರ್‌ನೆಲ್ಲು ಪೇರಾವಾಯಿತು.

ಫಸಲ್ ಕಟಾವಾದ್ದು.—ತರೀಕೆರೆ ತಾಲ್ಲೂಕಿನಲ್ಲಿ ಅವರೆ, ಹುರಳಿ, ಹರಳು ಕಟಾವಾದವು, ಕೊಪ್ಪ ಮತ್ತು ಮೂಡಗೆರೆ ತಾಲ್ಲೂಕಿನಲ್ಲಿ ಅಡಿಕೆ ಕಟಾವಾಯಿತು, ಕೊಪ್ಪ ತಾಲ್ಲೂಕಿನಲ್ಲಿ ಮೆಣಸು ಕಟಾವಾಯಿತು. ಚಿಕ್ಕಮಗಳೂರು ಮತ್ತು ಕಡೂರು ತಾಲ್ಲೂಕಿನಲ್ಲಿ ಕಡ್ಲೆ, ಗೋಧಿ ಕಟಾವಾದವು, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗನ್ನಾ ಮತ್ತು ಮೆಂಥ್ಯ ಕಟಾವಾದವು.

ಫಸಲ್‌ಗಳ ಸ್ಥಿತಿ.—ತರೀಕೆರೆ, ಕೊಪ್ಪ, ಚಿಕ್ಕಮಗಳೂರು ವ ಮೂಡಗೆರೆ ತಾಲ್ಲೂಕುಗಳಲ್ಲಿ ಸಾಧಾರಣವಾಗಿಯೂ ಕಡೂರು ತಾಲ್ಲೂಕಿನಲ್ಲಿ ವಳ್ಳೇ ಸ್ಥಿತಿಯಲ್ಲೂ ಇವೆ.

ಕಾಲಸ್ಥಿತಿ.—ಚೆನ್ನಾಗಿಧೆ.

ಜನಾರೋಗ್ಯ.—ಚಿಕ್ಕಮಗಳೂರು ವ ಕೊಪ್ಪ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಟಿಡಬು ಬಹಳ ಬಲವಾಗಿದೆ, ಕೊಪ್ಪ, ಚಿಕ್ಕಮಗಳೂರು ವ ಕಡೂರು ತಾಲ್ಲೂಕುಗಳಲ್ಲಿ ಜ್ವರ ವ್ಯಾಪಿಸಿತ್ತು.

ಕಾಲ್ನಡೆ.—ಕಾಲ್ನಡೆಗಳ ಸ್ಥಿತಿ ಸರ್ವತ್ರ ಚೆನ್ನಾಗಿಧೆ. ಈ ತಿಂಗಳೊಳಗೆ 412 ಆ ಹಿಂದಿನ ತಿಂಗಳಲ್ಲಿ 1,591 ಕಾಲ್ನಡೆಗಳು ಮೃತಪಟ್ಟವು. ನೀರು ಮತ್ತು ಮೇವು ಸಾಧಾರಣವಾಗಿಧೆ.

ಜರ್ಮಾನೆ.—ಸಾಗುವಳೀ ಬಗ್ಯಾಗಿ 144—12—0 ರೂಪಾಯಿಗಳ ಕಂದಾಯವುಳ್ಳ ಜರ್ಮಿಗಳು ತೆಗದುಕೊಳ್ಳಲ್ಪಟ್ಟವು.

ನಿರಖು.—ತಗ್ಗುತಲಿಧೆ.

ಬಿ. ಕೃಷ್ಣಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಗವರ್ನಮೆಂಟ್ ತೋಟಗಳ ಇಲಾಖಾ.

ನೋಟೀಸ್.

ತಾರೀಖು 15ನೇ ಮಾರ್ಚಿ 1887.

ಮಾವು, ಹಲಸು, ಪನ್ನೇರಲೆ ವ ಲಕೋಟೆ ಮುಂತಾದ ಗಿಡಗಳಲ್ಲಿರುವ ಫಸಲು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ವ ತಾರೀಖುಗಳಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಲಾಲ್‌ಬಾಗ್— ಸ 1887ನೇ ಇಸವಿ ಏಪ್ರಿಲ್ ತಾರೀಖು 4ನೇ ಸೋಮವಾರ ಮಧ್ಯಾನ್ಹ 12 ಘಂಟೆಗೆ ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ.

ಕಬ್ಬನ್‌ಪಾರ್ಕ್—ಸ 1887ನೇ ಇಸವಿ ಏಪ್ರಿಲ್ ತಾರೀಖು 5ನೇ ಮಂಗಳವಾರ ಪ್ರಾತಃಕಾಲ 8 ಘಂಟೆಗೆ.

ಅರಮನೆ ತೋಟ—(ಗ್ಯಾರಟ್‌ಸಾಹೇಬರ ಮಾವಿನ ತೋಪು ಸಹ) ಸ 1887ನೇ ಇಸವಿ ಏಪ್ರಿಲ್ ತಾರೀಖು 6ನೇ ಗುರುವಾರ ಪ್ರಾತಃಕಾಲ 8 ಘಂಟೆಗೆ.

ಜೆ. ಕ್ಯಾಮರನ್,
ಸೂಪರಿಂಟೆಂಡೆಂಟ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿ ರೂ. 8—8—0; ಒಂದು ಪೌಂಡು ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್‌ವುಳ್ಳ ಡಬ್ಬಿಗೆ 20 ರೂಪಾಯಿ ಈ ಔಷಧವು, ಕಲಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 88

ಮೃತಪಟ್ಟ ಬದರಣವರ್ಮಾಖಾನಾಯಿಕರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸೈದ್ ಮೋವರ್ಮಷಾಖಾದ್ರಿಯು, ಮೃತಪಟ್ಟ ಸದರೀ ಬದರಣವರ್ಮಾಖಾ ನಾಯಿಕರಿಗೆ ಯೇಜಂಟ್ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ಸದರೀ ಮೋವರ್ಮಷಾಖಾದ್ರಿಯು ಸದರೀ ವಾರಿಸ್ಥರಾಗಿ ಮೃತಪಟ್ಟ ಬದರಣವರ್ಮಾಖಾ ನಾಯಿಕರ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೈದ್ ಮೋವರ್ಮಷಾಖಾದ್ರಿಯ ಅರ್ಜಿಯನ್ನು 1887ನೇ ಇಸವಿ ಜೂನ್ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬದರಣವರ್ಮಾಖಾ ನಾಯಿಕರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1887ನೇ ಇಸವಿ ಮಾರ್ಚೀ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಹೇಮಾಜಿರಾವ್,

ಡಿಸ್ಟ್ರಿಕ್ಟು ಜಡ್ಜು.

ಮೈಸೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿದೇಣೇದಾರ ಮಂಜಿರಾಬಾದ್ ತಾಲ್ಲೂಕು ಬ್ಯಾಗಡಹಳ್ಳಿ ಹೋಬಳಿ ಟೀಕದಾರ್ ಅಕಬರ್‌ಮೊಹರ್ದೀನ್‌ಸಾಬನ ವಿಷಯದಲ್ಲಿ—

ಸ್ 1886ನೇ ಇಸವಿ ದಿವಾಳಿ ಕೇಸ್ ನಂಬರು 251.

ಹುಕ್ಕುಂ

ಮೇಲ್ಕಂಡ ಅಕಬರ್‌ಮೊಹರ್ದೀನ್‌ಸಾಬನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಅಕಬರ್ ಮೊಹರ್ದೀನ್‌ಸಾಬಿ ಖುದ್ದು ಹಾಜರು ಇವನ್ನ ದರ್ಯಾಪ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಪ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—1ನೇ ಸುಬ್ಬಂಣಾಚಾರಿ, 2ನೇ ಗುಲಾಂ ಮೊಹದೀನ್‌ಸಾಬ್ 3ನೇ ಅಬ್ದುಲ್ಲಾಸಾಬ್.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಅಕಬರ್‌ಮೊಹರ್ದೀನ್‌ಸಾಬನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ 1887ನೇ ಇಸವಿ ಮಾರ್ಚೀ 23ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	[illegible]	ದೇಣೆಯ ಸ್ವಭಾವಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಹೊಳೇನರಶೀಪುರದಲ್ಲಿರುವ ಕುಂಭಕೋಣೆ ಸುಬ್ಬಂಣಾಚಾರ್ರು	256 3 0		ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,

ಸಬ್ ಜಡ್ಜು.

ಮೈಸೂರ ಗೆಜೆಟ್.

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಏಪ್ರಿಲ್ ತಾ|| 2, ಸನ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

1887ನೇ ಇಸವಿಯ 1ನೇ ನಂ. ರೆಗ್ಯುಲೇಷನ್.

ಇದರಡಿಕಂಡ ರೆಗ್ಯುಲೇಷನ್ ಯಾನೆ ನಿಬಂಧನೆಯು 1887ನೇ ಇಸವಿ ಮಾರ್ಚಿ 5ನೇ ಮುಕ್ಕಾಮಿನಲ್ಲಿ ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟು ಸಕಲಜನಗಳ ತಿಳುವಳಿಕೆಯಬಗ್ಗೆ ಇದರಡಿ ಪ್ರಕಟಿಸಲ್ಪಟ್ಟಿರುತಿದೆ:—

ಬೆಂಗಳೂರು ಷಹರ್‌ನಲ್ಲಿ ಬಾಡಿಗೆಗಾಡಿಗಳ ವ್ಯವಸ್ಥೆ ಮತ್ತು ವಿಚಾರಣೆಯಬಗ್ಗೆ ಹುಟ್ಟಿದ ನಿಬಂಧನೆಯು.

ಪೀಠಿಕೆ.

ಬೆಂಗಳೂರು ಷಹರ್‌ನಲ್ಲಿ ಬಾಡಿಗೆ ಗಾಡಿಗಳ ವ್ಯವಸ್ಥೆ ಮತ್ತು ವಿಚಾರಣೆಯಬಗ್ಗೆ ವಿಧಿಸಬೇಕಾದದ್ದು ಆವಶ್ಯಕವಾಗಿರುವದರಿಂದ, ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರು ಇದರಡಿಕಂಡಂತೆ ನಿಬಂಧಿಸಿರುತ್ತಾರೆ:—

ಚಿಕ್ಕ ಹೆಸರು.

1. ಈ ನಿಬಂಧನೆಯು, "1887ನೇ ಇಸವಿಯ ಬೆಂಗಳೂರು ಷಹರ್ ಬಾಡಿಗೆ ಗಾಡಿಗಳ ರೆಗ್ಯುಲೇಷನ್" (Bangalore City Hackney Carriage Regulation) ಎಂದು ಕರೆಯಲ್ಪಡಬಹುದು.

ಸ್ಥಳವ್ಯಾಪ್ತಿ. ಪ್ರಾರಂಭ.

ಅದು ಬೆಂಗಳೂರು ಷಹರಿಗೆ ವ್ಯಾಪಿಸಿ ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

2. ಈ ರೆಗ್ಯುಲೇಷನಿನಲ್ಲಿ, "ಬಾಡಿಗೆ ಗಾಡಿ" ಯೆಂದರೆ ಪ್ರಯಾಣಸ್ಥರ ಸಂಚಾರದ ಉಪಯೋಗಾರ್ಥ, ಬಾಡಿಗೆಗಾಗಿ ಇಡಲ್ಪಟ್ಟಿರುವ ಅಥವಾ ಕೊಡುವಂತೆ ಹೇಳಲ್ಪಡುವ ಅಥವಾ ನಡೆಸುವ, ಚಕ್ರಗಳುಳ್ಳ ಮತ್ತು ಜಾನ್ವರ್‌ಗಳಿಂದ ಎಳೆಯಲ್ಪಡತಕ್ಕ ಯಾವದಾದರೊಂದು ಗಾಡಿಯೆಂದರ್ಥವು.

3. ಬೆಂಗಳೂರು ಷಹರ್ ಮ್ಯೂನಿಸಿಪಲ್ ಕಮ್ಮಿಷನರ್‌ಗಳು, ಆಗಿಂದಾಗ್ಯೆ, ಸದರೀ ಮ್ಯೂನಿಸಿಪಾಲಿಟಿಯ ಸರಹದ್ದಿನೊಳಗೆ ಬಾಡಿಗೆ ಗಾಡಿಗಳ ವ್ಯವಸ್ಥೆಯ ಮತ್ತು ವಿಚಾರಣೆಯಬಗ್ಗೆ ತತ್ಕಾಲದೊಳು ಜಾರಿಯಲ್ಲಿರುವ

ಕಾನೂನನುಸರಿಸಿ, ಸದರೀ ಸರಹದ್ದುಗಳೊಳಗಣ ಇತರ ವಿಷಯಗಳ ವ್ಯವಸ್ಥೆ ಮತ್ತು ವಿಚಾರಣೆಯ ಬಗ್ಯೆ ಮಾಡಲ್ಪಡುವ ಬೈಲಾಯೆಂಬ ಉಪನಿಬಂಧನೆಗಳ ರೀತಿಯನ್ನನುಸರಿಸಿ ನಿಬಂಧನೆಗಳನ್ನು ಮಾಡಬಹುದು.

ಈ ಪ್ರಕರಣವನ್ನನುಸರಿಸಿ ಮಾಡಲ್ಪಟ್ಟ ಪ್ರತಿ ನಿಬಂಧನೆಯೂ ಮೈಸೂರು ಗವರ್ನಮೆಂಟಿನವರಿಂದ ಖಾಯಂ ಮಾಡಲ್ಪಟ್ಟ ಬಳಿಕ ಅವರು ಆಗಿಂದಾಗ್ಯೆ ವಿಧಿಸಬಹುದಾದ ಕಾಲದತನಕ ಮತ್ತು ರೀತಿಯಂತೆ ಫಾಯಿಷ್ ಮಾಡಲ್ಪಟ್ಟು ಕಾನೂನಿನ ಶಕ್ತಿಯುಳ್ಳದ್ದಾಗಿರತಕ್ಕದ್ದು.

ಪರಂತು ಮೈಸೂರು ಗವರ್ನಮೆಂಟಿನವರು ಯಾವಕಾಲದಲ್ಲಾದರೂ ಅಂತಾ ನಿಬಂಧನೆಯನ್ನು ರದ್ದುಮಾಡಬಹುದು.

4. 3ನೇ ಪ್ರಕರಣವನ್ನನುಸರಿಸಿ, ಮಾಡಲ್ಪಡತಕ್ಕ ನಿಬಂಧನೆಗಳು, ಇತರ ವಿಷಯಗಳನ್ನಲ್ಲದೆ,—

(a.) ಯಾವ ಬಾಡಿಗೆ ಗಾಡಿಯಾಗಲಿ, ಅಥವಾ ಗೊತ್ತಾದ ತರಹಾವಿನ ಯಾವ ಬಾಡಿಗೆ ಗಾಡಿಯಾಗಲಿ, ಆ ಬಗ್ಯೆ, ಈ ರೆಗ್ಯುಲೇಷನಿಗೆ ಅಥವಾ ಬೆಂಗಳೂರು ಬಾಡಿಗೆ ಗಾಡಿಗಳ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಲ್ಪಟ್ಟ ಲೈಸೆನ್ಸ್ ಮೇರಿಗೆಹೊರತು, ಬಾಡಿಗೆಗೆ ಕೊಡಕೂಡದೆಂತಲೂ, ಸವಾರಿಗೆ ತೆಗದುಕೊಳ್ಳಲಾಗದೆಂತಲೂ, ಬಾಡಿಗೆಗೆ ಕೊಡುವಂತೆ ಹೇಳಕೂಡದೆಂತಲೂ ವಿಧಿಸಬಹುದು;

(b.) ಈ ರೆಗ್ಯುಲೇಷನಿಗೆ ಅಥವಾ ಬೆಂಗಳೂರು ಬಾಡಿಗೆ ಗಾಡಿಗಳ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಲ್ಪಟ್ಟ ಲೈಸೆನ್ಸನಂತೆವಿನಾ ಯಾವ ಮನುಷ್ಯನೂ, ಬಾಡಿಗೆ ಗಾಡಿಯನ್ನು ನಡೆಸತಕ್ಕವನಾಗಿರಕೂಡದೆಂದು ವಿಧಿಸಬಹುದು;

(c.) (a) ಮತ್ತು (b) ಕ್ಲಾಜ್‌ಗಳಲ್ಲಿ ನಮೂದಾಗಿರುವ ಲೈಸೆನ್ಸ್‌ಗಳು ಕೊಡುವದನ್ನೂ, ಅಂತಾ ಲೈಸೆನ್ಸ್‌ಗಳು ಯಾವದಾದರೂ ಷರತ್ತುಗಳಮೇಲೆ ಕೊಡಲ್ಪಡತಕ್ಕದ್ದಾಗಿರುವದನ್ನೂ ಮತ್ತು ಅದಕ್ಕಾಗಿ (ಯೇನಾದರಿದ್ದರೆ) ಕೊಡಬೇಕಾದ ರುಸುಂಗಳ ನಿಬಂಧನೆಯನ್ನೂ ವಿಧಿಸಬಹುದು;

(d.) ಲೈಸೆನ್ಸ್ ಪಡೆದ ಗಾಡಿಗಳಿಗೆ ಉಪಯೋಗಿಸಲ್ಪಡತಕ್ಕ ಜಾನವರ್‌ಗಳು, ಹಾರ್ನೆಸ್‌ಯೆಂಬ ಸರಂಜಾಂ ಮತ್ತು ಇತರ ಪದಾರ್ಥಗಳು, ಇವುಗಳ ವಿವರಣೆಯನ್ನೂ ಅಂತಾ ಗಾಡಿಗಳು ಮತ್ತು ಅವುಗಳಿಗೆ ಉಪಯೋಗಿಸಲ್ಪಡತಕ್ಕ ಜಾನವರ್‌ಗಳು, ಸರಂಜಾಂ ಮತ್ತು ಇತರ ಪದಾರ್ಥಗಳು ಇವು ಇಡಲ್ಪಡಬೇಕಾದ ಸ್ಥಿತಿಯನ್ನೂ ಮತ್ತು ಸೂರ್ಯಾಸ್ತಮಾನಾ ನಂತರ ಮತ್ತು ಸೂರ್ಯೋದಯಾತ್ಪೂರ್ವ (ಯೇನಾದರೂ ಯಿದ್ದರೆ) ಒಯ್ಯಲ್ಪಡಬೇಕಾದ ಬೆಳಕುಗಳನ್ನೂ ಕ್ರಮಪಡಿಸಬಹುದು;

(e.) ಅಂತಾ ಗಾಡಿಗಳು, ಜಾನವರ್‌ಗಳು, ಸರಂಜಾಂ ವಗೈರೆ ಪದಾರ್ಥಗಳಡಲ್ಪಡತಕ್ಕ ಕಟ್ಟಡದ ತನಿಖೀ ಬಗ್ಯೆ ವಿಧಿಸಬಹುದು;

(f.) ಸದರೀ ಲೈಸೆನ್ಸ್‌ಗಳು ಯಾವತ್ಪರ್ಯಂತ ಜಾರಿಯಲ್ಲಿರತಕ್ಕದ್ದೋ ಅಂತಾ ಕಾಲವನ್ನೂ ಮತ್ತು (ಯಾವದಾದರಿದ್ದರೆ) ಸದರೀ ಕಾಲದೊಳಗಾಗಿ ಆ ಲೈಸೆನ್ಸ್‌ಗಳನ್ನು ರದ್ದು ಯಾ ಅಮಾನತ್ತಿಗೆ ಒಳಪಡಿಸತಕ್ಕ ಸಂಭವಗಳನ್ನೂ ಗೊತ್ತು ಮಾಡಬಹುದು;

(g.) ಅಂತಾ ಗಾಡಿಗೆ ನಂಬರ್ ಹಾಕುವಂತೆ ವಿಧಿಸಬಹುದು;

(h). ಬಾಡಿಗೆ ಗಾಡಿಗಳ ನಿಟ್ಟುಕೊಂಡಿರುವ ಪ್ರತಿ ಮನುಷ್ಯನೂ ಸದರೀ ಗಾಡಿಯನ್ನು ಅಪೇಕ್ಷಿಸತಕ್ಕ ಇತರ ಯಾವಮನುಷ್ಯನಿಗಾಗಲಿ ಅದನ್ನು ಬಾಡಿಗೆಗೆ ಕೊಡಲಿಕ್ಕೂ, ಕೊಡದೆ ನಿರಾಕರಿಸಲಿಕ್ಕೂ ಯಾವಕಾಲಗಳಲ್ಲಿ ಮತ್ತು ಯೆಂತಾಸಂದರ್ಭಗಳಲ್ಲಿ ಬದ್ಧನಾಗಿರತಕ್ಕದ್ದೆಂಬದನ್ನು ನಿಶ್ಚೈಸಬಹುದು;

(*i.*) ಬಾಡಿಗೆ ಗಾಡಿಗಳು ನಿಲ್ಲಿಸಲ್ಪಡಬೇಕಾದ ಸ್ಟ್ಯಾಂಡ್ಸ್ ಯಾನೆ ಸ್ಥಾನಗಳನ್ನು ಮೊಕರರ್ಮಾಡಬಹುದು; ಮತ್ತು ಅಂತಾ ಸ್ಥಾನಗಳಲ್ಲಿವಿನಾ ಅನ್ಯತ್ರ, ಸದರೀ ಗಾಡಿಗಳು ಬಾಡಿಗೆಯ ಬಗ್ಗೆ ಕಾದಿರಕೂಡದೆಂದು ನಿರೋಧಿಸಲೂಬಹುದು;

(*j.*) ಯಾವದಾದರೊಂದು ಬಾಡಿಗೆ ಗಾಡಿಯ ಬಗ್ಗೆ ಕೇಳಲ್ಪಡುವ ಬಾಡಿಗೆಯ ದರ ಅಥವಾ ಮೊಬಲಗನ್ನು ಕಾಲಕ್ಕೂ, ಫಾಸಲೆಗೂ ತಕ್ಕಂತೆ ಗೊತ್ತುಮಾಡಬಹುದು; ಮತ್ತು ಸದರೀ ಗಾಡಿಗಳು ಕಾಲಕ್ಲಿಪ್ತಿಯಿಂದ ಬಾಡಿಗೆಗೆ ಗೊತ್ತಾದಮೇಲೆ ಕನಿಷ್ಟಪಕ್ಷ ಇಷ್ಟರ ವೇಗದೊಡನೆಯೇ ನಡಿಸಲ್ಪಡತಕ್ಕದ್ದೆಂದು ವಿಧಿಸಬಹುದು;

(*k.*) ಅಂತಾ ಯಾವದಾದರೊಂದು ಗಾಡಿಯಲ್ಲಿ ಹತ್ತತಕ್ಕ ಜನಗಳ ಸಂಖ್ಯೆಯನ್ನೂ, ಅದರಲ್ಲಿ ತೆಗೆದುಕೊಂಡು ಹೋಗಬಹುದಾದ ಸ್ವತ್ತಿನ ತೂಕವನ್ನು ಸಹ ಗೊತ್ತುಮಾಡಬಹುದು;

(*l.*) ಅಂತಾ ಯಾವದಾದರೊಂದು ಗಾಡಿಯ ಮಾಲಿಕನು ಅಥವಾ ಅದನ್ನು ಸ್ವಾಧೀನದೊಳಟ್ಟುಕೊಂಡಿರುವ ಮನುಷ್ಯನು, ಬಾಡಿಗೇ ದರಗಳ ಪಟ್ಟಿಯನ್ನು ಇಂಗ್ಲೀಷ್ ಭಾಷೆಯಲ್ಲಿ ಮತ್ತು ವಿಧಿಸಲ್ಪಡಬಹುದಾದಂತಾ ಇತರ ಭಾಷೆಯಲ್ಲಿ ಸಹ ಛಾಪಿಸಿ ಅದನ್ನು ಗಾಡಿಯೊಳಗೆ ರೂಲ್ಸ್‌ಗಳಿಂದ ಗೊತ್ತುಮಾಡಲ್ಪಡತಕ್ಕ ಪ್ರದೇಶದಲ್ಲಿ ಚಿಕಟಾಯಿಸುವಂತೆ ನಿಯಮಿಸಬಹುದು. ಮತ್ತು ಅಂತಾ ಪಟ್ಟಿಯನ್ನು ನಾಶಪಡಿಸದೆ ಅಥವಾ ವಿರೂಪಗೊಳಸದಿರುವಂತೆ ನಿರೋಧಿಸಬಹುದು;

(*m.*) ಗಾಡಿ ನಡಿಸುವವರು, ನಂಬರ್ ಹಾಕಲ್ಪಟ್ಟ ಬಿಲ್ಲೆ ಅಥವಾ ಟಿಕ್ಕೆಟನ್ನು ಧರಿಸುವಂತೆಯೂ, ಅವರ ಲೈಸೆನ್ಸ್‌ಗಳನ್ನು ಬಗ್ಗ ಮ್ಯಾಜಿಸ್ಟ್ರೇಟರು ಅಥವಾ ಈ ಬಗ್ಗೆ ರೂಲ್ಸ್‌ಗಳ ಮೂಲಕ ಅಧಿಕಾರಹೊಂದಿದ ಇತರ ಮನುಷ್ಯನು ಅಪೇಕ್ಷಿಸಿದಾಗ ಹಾಜರ್ಮಾಡುವಂತೆಯೂ ನಿಯಮಿಸಬಹುದು. ಮತ್ತು ಅಂತಾ ಲೈಸೆನ್ಸ್‌ಗಳು ವ ಬಿಲ್ಲೆಗಳು ವರ್ಗ ಅಥವಾ ಎರವಲು ಕೊಡಲ್ಪಡಕೂಡದೆಂದು ನಿರೋಧಿಸಬಹುದು; ಮತ್ತು

(*n.*) ಅಂತಾ ಗಾಡಿಗಳಲ್ಲಿ ದೊರೆಯತಕ್ಕ ಸ್ವತ್ತನ್ನು ಅಮಾನತ್ತಿಡುವಂತೆಯೂ, ಮತ್ತು ಅಂತಾ ಸ್ವತ್ತು ಕರ್ತನಿಗೆ ಆ ಮಾಲನ್ನೊಪ್ಪಿಸುವಾಗ್ಯೆ ಆತನು ರುಸುಮನ್ನು ಕೊಡುವಂತೆಯೂ ವಿಧಿಸಬಹುದು.

5. (1) ಮೇಲೆ ಕಂಡ 3ನೇ ಪ್ರಕರಣಾನುಗುಣವಾದ ನಿಬಂಧನೆಗಳನುಸರಿಸಿ ಕೊಡಲ್ಪಟ್ಟ ಲೈಸೆನ್ಸು, ಬೆಂಗಳೂರು ಸಿವಿಲ್ ವ ಮಿಲಿಟರಿಸ್ಟೇಷನಿನಲ್ಲಾಗಲಿ, ಅಥವಾ ಬೆಂಗಳೂರು ಷಹರ್‌ನಲ್ಲಾಗಲಿ, ಸಂಗತ್ಯಾನುಸಾರವಾಗಿ ಜಾರಿಯಲ್ಲಿರುವ ಕಾನೂರೀತ್ಯಾ ಯಾವ ಸಂದರ್ಭದಲ್ಲಿ ರದ್ದು ಯಾ ಅಮಾನತ್ತಿಗೆ ಗುರಿಯಾಗಿರುತ್ತೋ ಅಂತಾ ಸಂದರ್ಭದಲ್ಲಿಯೂ, ಮತ್ತು ಲೈಸೆನ್ಸ್ ಕೊಡಲ್ಪಡುವ ಬಗ್ಗೆ ಏರ್ಪಟ್ಟ ರೂಲ್ಸನಲ್ಲಿ ನಮೂದಾಗಿರುವ ಸಂದರ್ಭದಲ್ಲಿಯೂ, ಸದರೀ ಲೈಸೆನ್ಸು ರದ್ದು ಯಾ ಅಮಾನತ್ತಿಗೆ ಒಳಪಡತಕ್ಕದ್ದು.

(2.) ಈ ರೆಗ್ಯುಲೇಷನಿಗೆ ಅನುಗುಣವಾಗಿ ಮಾಡಲ್ಪಟ್ಟ ಯಾವ ನಿಬಂಧನೆಗಾಗಲಿ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಯಾವ ಮನುಷ್ಯನಾದರೂ ೫೦ ರೂಪಾಯಿಗಳವರಿಗಿನ ಜುಲ್ಮಾನೆಮೂಲಕ ಶಿಕ್ಷಿಸಲ್ಪಡತಕ್ಕದ್ದು.

6. ಈ ರೆಗ್ಯುಲೇಷನನ್ನು ಜಾರೀಯಲ್ಲಿ ತರುವದರೊಳು ಹುಟ್ಟುವಳಿಯಾಗುವ ಯಾವದಾದರು ರುಸುಂ ಮೊಬಲಗೂ, ತಗಲುವ ಲಾಗವಡು ಮೊಬಲಗೂ ಕ್ರಮವಾಗಿ ಬೆಂಗಳೂರು ಷಹರ್ ಮ್ಯುನಿಸಿಪಲ್ ಫಂಡಿನ ಲೆಕ್ಕದಲ್ಲಿ ಜಮಾಖರ್ಚು ಮಾಡಲ್ಪಡತಕ್ಕದ್ದು.

7. ಯಾವದಾದರು ಬಾಡಿಗೆ ಗಾಡಿಯ ಬಾಡಿಗೇದಾರನಿಗೂ ಅಂತಾ ಗಾಡಿಯ ಸ್ವಂತಗಾರ ಅಥವಾ ಗಾಡಿ ನಡೆಸತಕ್ಕವನಿಗೂ, ಈ ರೆಗ್ಯುಲೇಷನ ಅನುಸರಿಸಿ ಮಾಡಲ್ಪಟ್ಟ ಯಾವದಾದರೊಂದು ನಿಬಂಧನೆಯಮೇಲೆ ಅಂತಾ ಬಾಡಿಗೇದಾರನಿಂದ ಕೊಡಲ್ಪಡಬೇಕಾದ ಬಾಡಿಗೇ ಮೊಬಲಗಿನ ವಿಷಯದಲ್ಲಿ ಏನಾದರು ತಕರಾರ್ ವುಂಟಾದರೆ ಆ ತಕರಾರ್‌ದಾರರ ಪೈಕಿ ಯಾರೇಆಗಲಿ, ಆ ಮೇರೆ ಅಪೇಕ್ಷಿಸಿದಲ್ಲಿ ಸದರೀ ತಕರಾರ್ ಬೆಂಗಳೂರು ಷಹರ್‌ನಲ್ಲಿ ಯಾವ ಮ್ಯಾಜಿಸ್ಟ್ರೇಟರ ಯಾ ಮ್ಯಾಜಿಸ್ಟ್ರೇಟರ ಬೆಂಚ್‌ಯೆಂಬ ಸಮುದಾಯದವರ ಸ್ಥಳಾಧಿಕಾರ ಸರಹದ್ದಿಗೆ ಒಳಪಟ್ಟಿರುತ್ತಿದೆಯೋ ಅಂತವರಿಂದ ದರ್ಯಾಪ್ತಿಮೂಲಕ ವ್ಯವಸ್ಥೆಯಾಗತಕ್ಕದ್ದಾಗಿರುತ್ತೆ. ಮತ್ತು ಅಂತಾ ಮ್ಯಾಜಿಸ್ಟ್ರೇಟರು ಯಾ ಸಮುದಾಯದವರು ಹಾಗೆ ತಕರಾರ್‌ನಲ್ಲಿರುವ ಬಾಡಿಗೇ ಮೊಬಲಗನ್ನು ವ್ಯವಸ್ಥೆ ಮಾಡುವದಲ್ಲದೆ ಅಂತಾ ಮ್ಯಾಜಿಸ್ಟ್ರೇಟರಿಗೆ ಅಥವಾ ಸಮುದಾಯದವರಿಗೆ ಯುಕ್ತವೆಂದು ತೋರುವಷ್ಟು ಮೊಬಲಗನ್ನು ಕಾಲವನ್ನು ವ್ಯರ್ಥಗೊಳಿಸಿದ ಬಗ್ಯೆ ಪರಿಹಾರಕವಾಗಿ ತಕರಾರ್‌ದಾರರ ಪೈಕಿ ಯೊಬ್ಬನು ಮತ್ತೊಬ್ಬನಿಗೆ ಕೊಡುವಂತೆ ಹುಕ್ಕುಂ ಮಾಡಬಹುದು.

ಈ ಪ್ರಕರಣವನ್ನನುಸರಿಸಿ ಸಲ್ಲಬೇಕೆಂದು ನಿರ್ಣಯವಾದ ಅಥವಾ ಕೊಡುವಂತೆ ಹುಕುಮಾದ ಯಾವ ಮೊಬಲಗೇಯಾಗಲಿ ಜುರ್ಮಾನೆಮೊಬಲಗಾಗಿದ್ದರೆ ಹ್ಯಾಗೋ ಹಾಗೆ ವಸೂಲ್ಮಾಡಲ್ಪಡತಕ್ಕದ್ದು.

ಈ ಪ್ರಕರಣವನ್ನನುಸರಿಸಿ ಯಾವ ಮೊಕದ್ದಮೆಯಲ್ಲಾಗಲಿ, ಅಂತಾ ಮ್ಯಾಜಿಸ್ಟ್ರೇಟರಿಂದ ಅಥವಾ ಸಮುದಾಯದವರಿಂದ ಮಾಡಲ್ಪಡುವ ನಿರ್ಣಯವು ಆಖೈರಾಗಿರತಕ್ಕದ್ದು.

ಅಂತಾ ಯಾವದಾದರೊಂದು ಮೊಕದ್ದಮೆಯು ಮ್ಯಾಜಿಸ್ಟ್ರೇಟ ಸಮುದಾಯದವರಿಂದ ದರ್ಯಾಪ್ತಿ ಮಾಡಲ್ಪಡುವಾಗ್ಯೆ ಅಂತಾ ಮ್ಯಾಜಿಸ್ಟ್ರೇಟ ಸಮುದಾಯದ ಮೆಂಬರಗಳಲ್ಲಿ ಭಿನ್ನಾಭಿಪ್ರಾಯ ವುಂಟಾದರೆ ಕ್ರಿಮಿನಲ ಮೊಕದ್ದಮೆಗಳ ವಿಚಾರಣೆಯಲ್ಲಿ, ಅಂತಾ ಮೆಂಬರುಗಳೊಳು ಭಿನ್ನಾಭಿಪ್ರಾಯಗಳು ವುಂಟಾದರೆ ಅವು ಹ್ಯಾಗೆ ವ್ಯವಸ್ಥೆ ಮಾಡಲ್ಪಡುವವೋ ಹಾಗೆಯೇ ವ್ಯವಸ್ಥೆ ಮಾಡಲ್ಪಡತಕ್ಕದ್ದು.

8. ಯಾವಕಾಲದಲ್ಲಾಗಲಿ 7ನೇ ಪ್ರಕರಣದೊಳು ನಮೂದಿಸಲ್ಪಟ್ಟಿರುವ ಯಾವದಾದರು ತಕರಾರ್ ವುಂಟಾದರೆ, ಅಂತಾ ತಕರಾರ್ ವಿಷಯದಲ್ಲಿ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರದರೂ, ಕೋರ್ಟು ಮಾಡುತ್ತಲಿದ್ದರೆ, ಗಾಡಿಯ ಬಾಡಿಗೇದಾರನು ಸದರೀ ಪ್ರಕರಣವನ್ನನುಸರಿಸಿ ಅರ್ಜೀ ಕೊಡತಕ್ಕ ಬಗ್ಯೆ ಅಂತಾ ಮ್ಯಾಜಿಸ್ಟ್ರೇಟರ ಕೋರ್ಟಿಗೆ ತನ್ನನ್ನು ಅದೇ ಗಾಡಿಯಲ್ಲಿ ಕರೆದುಕೊಂಡು ಹೋಗುವಂತೆ ಸದರೀ ಗಾಡಿ ನಡೆಸುವವನನ್ನು ಅಪೇಕ್ಷಿಸಬಹುದು.

ಅಂತಾ ಅಪೇಕ್ಷೆಯನ್ನು ನಡಿಸಲು, ಉಪೇಕ್ಷಿಸುವ ಅಥವಾ ನಿರಾಕರಿಸುವ ಗಾಡಿ ನಡೆಸತಕ್ಕವನ್ಯಾವನಾದರೂ ಒಂದು ತಿಂಗಳವರಿವಿಗೆ ಕೈದು ಸಜಾ ಮೂಲಕವಾಗಲಿ, ೫೦ ರೂಪಾಯಿಗಳಿಗೆ ಮೀರದ ಜುರ್ಮಾನೆಯಮೂಲಕವಾಗಿಯಾಗಲಿ, ಅಥವಾ ಎರಡರಮೂಲಕವಾಗಿಯಾಗಲಿ ದಂಡಿಸಲ್ಪಡತಕ್ಕದ್ದು.

9. ಈ ರೆಗ್ಯುಲೇಷನ ಅನುಸರಿಸಿ ಯಾವದಾದರು ಬಾಡಿಗೇ ಗಾಡಿಯಲ್ಲಿ ಸವಾರಿ ಹೋಗತಕ್ಕ ಯಾವ ಮನುಷ್ಯನೇಯಾಗಲಿ, ಮನಃಪೂರ್ವಕವಾಗಿಯಾದರೂ, ಅಥವಾ ಅಶ್ರದ್ಧೆಯಿಂದಲಾದರೂ ಸದರೀ ಗಾಡಿಗೆ ನಷ್ಟ ವುಂಟುಮಾಡಿದರೆ ಅವನು ೨೦ ರೂಪಾಯಿಗಳತನಕ ಒಂದು ಜುರ್ಮಾನೆಮೂಲಕ ಶಿಕ್ಷಿಸಲ್ಪಡತಕ್ಕದ್ದಲ್ಲದೆ ಬಾಡಿಗೆ ಬಂಡಿಯ ಸ್ವಂತಗಾರನಿಗೆ ನಷ್ಟದಬಗ್ಯೆ ಪರಿಹಾರ ದ್ರವ್ಯ ಕೊಡತಕ್ಕದ್ದು. ಸದರೀ ಪರಿಹಾರದ್ರವ್ಯದ ಮೊತ್ತವು ದಂಡಿಸತಕ್ಕ ಮ್ಯಾಜಿಸ್ಟ್ರೇಟರಿಂದ ಗೊತ್ತುಮಾಡಲ್ಪಟ್ಟು ಜುರ್ಮಾನೆ ತರೀಕ್ ವಸೂಲ್ಮಾಡಲ್ಪಡತಕ್ಕದ್ದು.

ಕೆ. ಶೇಷಾದ್ರಿಅಯ್ಯರ್,
ಮೈಸೂರು ಸಂಸ್ಥಾನದ ದಿವಾನ.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 14 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ಏಪ್ರಿಲ್ ತಾ|| 9, ಸನ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡ[illegible] ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು,
1887ನೇ ಇಸವಿಯ 1ನೇ ನಂ. ರೆಗ್ಯುಲೇಷನ್.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 1[illegible]ನೇ ಮಾರ್ಚಿ 1887.

ನಂ. 260.—ಕಾಶಿಯಾತ್ರೆ ಹೋಗತಕ್ಕ ಜನಗಳಿಗೆ [illegible]ದರಿಂದ ಯಚ್ಚರಿಸುವದೇನಂದರೆ, ಕಾಶಿಯಲ್ಲಿ ಅಪಾಯಕರವಾದ ಮಾರಿಕಾ ಉಪದ್ರವ ವ್ಯಾಪಿಸಿರುವದಾಗಿ ಸದರೀ ಸ್ಥಳದ ಕಲೆಕ್ಟರ್ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಂದ ತಿಳಿಯಬಂದಿರುತ್ತೆ.

ತಾರೀಖು 18ನೇ ಮಾರ್ಚಿ 1887.

ಕ್ಯಾಂಪ್ ನಂ. 2042.—ಕೋಲಾರ ಡಿಸ್ಟ್ರಿಕ್ಟಿನೊಳ[illegible] ಇದರಡೀ ಕಂಡ ಗ್ರಾಮಗಳ ವರ್ಗಾವರ್ಗಿಯು 1887ನೇ ಇಸವಿ ಏಪ್ರೈಲ್ ಗುರ್ರೇ ಲಾಗಾಯತು ಜಾರಿಯಲ್ಲಿ ಬರತಕ್ಕದ್ದೆಂದು ಮಂಜೂರ್ಮಾಡಲ್ಪಟ್ಟಿರುತ್ತೆ.

ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕಿನಿಂದ ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕಿಗೆ:—

1. ದಬ್ಬ ಕುಂಟೆ (ಸರ್ಕಾರಿ)
2. ಅಂಬಲಿಪುರ (ಜೋಡಿ)

ತಾರೀಖು 10ನೇ ಮಾರ್ಚಿ 1887.

ಕ್ಯಾಂಪ್ ನಂ. 1874.—ಕಾಫಿ ಸಾಗುವಳಿ ಬಗ್ಯೆ 1885ನೇ ಇಸವಿ ಮಾರ್ಚಿ 24ನೇ ಮರ್ಕ್ಕುಂ 242ನೇ ನಂಬರ್ ಇಸ್ತಿಹಾರ್ ನಾಮೆಯ 9ನೇ ಕಲಂ ಅನುಸರಿಸಿ ಸರ್ಕ್ಕಾರ್ ಬಂಜರ್ ಜಮಿಾನುಗಳನ್ನು ಕೊಡುವ ವಿಷಯದಲ್ಲಿ ಇದರಡಿ ಕಂಡ ರೂಲ್ಸ್ ಯಾನೆ ನಿಬಂಧನೆಗಳು ಸರ್ವರ ತಿಳುವಳಿಕೆ ಮತ್ತು ನಡವಳಿಕೆ ಬಗ್ಯೆ ಪ್ರಕಟಿಸಲ್ಪಡುತ್ತೆ:—

I. ಕಾಫಿ ಸಾಗುವಳಿ ಬಗ್ಯೆ ಜಮಿಾನಿಗೋಸ್ಕರ ದರಖಾಸ್ತುಗಳು ಪ್ರಥಮತಃ ಅಮಲ್‌ದಾರ್ರಲ್ಲಿ ಕೊಡಲ್ಪಡತಕ್ಕದ್ದು, ಮತ್ತು ಸದರೀ ದರಖಾಸ್ತಿನಲ್ಲಿ ಡಿಟೋ ಜಮಿಾ ಇರತಕ್ಕ ಹೋಬಳಿ ಗ್ರಾಮ ವ ಅದರ ಬೀಜವರಿ ಮತ್ತು ಸರ್ವೆ ನಂಬರು ಸುದಾ ವಿವರಿಸತಕ್ಕದ್ದು.

II. ದರಖಾಸ್ತು ಮಾಡಲ್ಪಟ್ಟ ಜಮಿಾನು 50 ಎಕರೆಗಳಿಗಿಂತ ಜಾಸ್ತಿಯಾಗಿ ಇರುವ ಪಕ್ಷದಲ್ಲಿ, ಬಬ್ಬ ಮೇಲ್ಪಟ್ಟ ರೆವಿನ್ಯೂ ಆಫಿಸರರಿಂದಲೂ ಮತ್ತು ಸದರೀ ಜಮಿಾನು ಹೆಚ್ಚು ಕ್ರಯ ಬಾಳುವ ಜಂಗಲ್ ಪ್ರದೇಶಗಳಲ್ಲಿ ಇರುವ ಪಕ್ಷದಲ್ಲಿ ಫಾರೆಸ್ಟ್ ಆಫೀಸರರಿಂದಲೂ ನೋಡಿ ತನಿಖೆ ಮಾಡಲ್ಪಡತಕ್ಕದ್ದು.

III. ಯಲ್ಲಾ ಸಂದರ್ಭಗಳಲ್ಲೂ ಸದರೀ ಜಮಿಾನು ಸಾಗುವಳಿ ಬಗ್ಯೆ ಕೊಡುವ ವಿಷಯದಲ್ಲಿ ನೆರೆ ಹೊರೆ ಗ್ರಾಮಸ್ತರ ಮತ್ತು ಫಾರೆಸ್ಟ್ ಇಲಾಖೆಯ ಹಕ್ಕುದಾರಿ ಮತ್ತು ಪ್ರಯೋಜನಗಳಿಗೆ ಅಭ್ಯಂತರವಿಲ್ಲವೆಂಬ ವಿಷಯದಲ್ಲಿ ಕ್ರಮವಾದ ವಿಚಾರಣೆಯು ನಡಿಸಲ್ಪಡತಕ್ಕದ್ದು.

IV. ಸಾಧಾರಣವಾಗಿ 200 ಯಕರೆಗಳಿಗಿಂತಲೂ ಜಾಸ್ತೀ ವಿಸ್ತೀರ್ಣವುಳ್ಳ ಜಮಿಾನಿಗಾಗಿ ಯಾವ ದರಖಾಸ್ತೂ ಅಂಗೀಕರಿಸಲ್ಪಡಕೂಡದು. ಪರಂತು ದರಖಾಸ್ತುದಾರನು ಜಾಸ್ತೀ ಬೀಜವರಿವುಳ್ಳ ಜಮಿಾನನ್ನು ನ್ಯಾಯವಾದ ಮಾಯಿದೆ ವಳಗೆ ಸಾಗುವಳೀ ಮಾಡುವದಕ್ಕೆ ಶಕ್ತನೆಂಬದಾಗಿ ಡೆಪ್ಯುಟಿ ಕಮಿಷನರವರು ತೃಪ್ತಿಪಡುವಂಥಾ ವಿಶೇಷ ಸಂದರ್ಭಗಳಲ್ಲಿ ಅವರಿಗೆ ಯುಕ್ತತೋರುವಷ್ಟು ವಿಸ್ತೀರ್ಣವುಳ್ಳ ಜಮಿಾನಿಗೋಸ್ಕರ ದರಖಾಸ್ತು ಅಂಗೀಕರಿಸಲ್ಪಡಬಹುದು.

V. ಅಮೌಲ್ಯವಾದ ವಿಶೇಷ ಮರಗಳು ಯಿದ್ದು ಅವುಗಳು ಫಾರೆಸ್ಟು ಇಲಾಖೆ ಮುಖಾಂತ್ರ ಕಾಪಾಡಲ್ಪಟ್ಟು ಅಭಿವೃದ್ಧಿ ಮಾಡಲ್ಪಡಬೇಕೆಂದು ಗವರ್ನಮೆಂಟಿನವರು ಅಭಿಪ್ರಾಯ ಪಡುವಂಥಾ ಯಾವ ಜಮಿಾನೇ ಆಗಲೀ ಕಾಫೀ ಸಾಗುವಳೀ ಬಗ್ಯೆ ಯಾವಾಗ್ಯೂ ಕೊಡಲ್ಪಡಕೂಡದು.

VI. ದರಖಾಸ್ತು ಮಾಡಲ್ಪಟ್ಟ ಜಮಿಾನು ಕೊಡಲ್ಪಡುವ ಬಗ್ಯೆ ಯಾವ ಅಭ್ಯಂತರವೂ ಯಿಲ್ಲವೆಂಬದಾಗಿ ವಿಚಾರಣೆ ಮೂಲಕ ತಿಳಿಯಬಂದಾಗ, ಅದು ಡಿಮಾರ್ಕೇಟ್ ಯಾನೆ ಹದ್ದು ಮಾಡಲ್ಪಟ್ಟು ಇದರಡಿ ಗೊತ್ತು ಮಾಡಲ್ಪಟ್ಟ ಸರ್ಕ್ಕಾರ್ ಸವಾಲಿಗೆ ಬಳಪಟ್ಟು ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡತಕ್ಕದ್ದು.

ದರಯಕರೆ ವಂದಕ್ಕೆ ಹತ್ತು ರೂಪಾಯಿ ಪ್ರಕಾರ.

1. ಹಾಸನ ಡಿಸ್ಟ್ರಿಕ್ಟು ಮುಳೆ.
2. ಕಡೂರು ಡಿಸ್ಟ್ರಿಕ್ಟಿನ ಕಡೂರು ಮತ್ತು ತರೀಕೆರೆ ತಾಲ್ಲೂಕುಗಳಲ್ಲಿ.
3. ಖಾಂಡ್ಯ ವ ಜಾಗರ ಮಾಗಣೆಗಳ ವಿನಾ ಚಿಕ್ಕಮಗಳೂರು ತಾಲ್ಲೂಕಿನಲ್ಲಿ.
4. ಕಳಸಾ (ಮಾವಿನಕೆರೆ) ವ ಸಂಶೆ ಮಾಗಣೆಗಳು ಮತ್ತು ಭದ್ರಾನದಿಯ ಕೊರಕಲು ವಿನಾ ಮೂಡಿಗೆರೆ ತಾಲ್ಲೂಕಿನಲ್ಲಿ.

ದರಯಕರೆ ವಂದಕ್ಕೆ ಐದು ರೂಪಾಯಿ ಪ್ರಕಾರ.

1. ಚಿಕ್ಕಮಗಳೂರು ತಾಲ್ಲೂಕು ಖಾಂಡ್ಯ ವ ಜಾಗರ ಮಾಗಣೆಗಳಲ್ಲಿ.
2. ಮೂಡಗೆರೆ ತಾಲ್ಲೂಕು ಕಳಸ (ಮಾವಿನಕೆರೆ) ವ ಸಂಶೆ ಮಾಗಣೆಗಳಲ್ಲೂ ಮತ್ತು ಭದ್ರಾನದಿ ಕೊರಕಲು ಸುದಾ
3. ಕೊಪ್ಪಾ ತಾಲ್ಲೂಕಿನಲ್ಲಿ, ಯಡೆಹಳ್ಳಿ ಸಬ್ ಡಿವಿಜನ್ ದೇಖೀಲ್.

VII. ಮೇಲೆ ಗೊತ್ತು ಮಾಡಲ್ಪಟ್ಟಂತೆ ಸರ್ಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚುಗಳು ಮತ್ತು ಗವರ್ನಮೆಂಟಿಗೆ ಯಾವಾಗ್ಯೂ ನಿರಾತಂಕವಾಗಿ ಉಳಿಸಿಕೊಳ್ಳಲ್ಪಟ್ಟ ಸಂದಲ್ ಮರಗಳು ಅಲ್ಲದೆ ಮತ್ತು ಇತರ ತಮಾಂ ಮನ್ನಾಜಾತಿ ಮರಗಳ ವಿಷಯದಲ್ಲಿ ಗವರ್ನಮೆಂಟಿಗೆ ಇರುವ ಹಕ್ಕುದಾರಿಯು ಸುದಾ ಅಡಗಿರತಕ್ಕದ್ದು.

VIII. ಜಮಿಾನು ಹರಾಜ್ ಮಾಡಲು ಪ್ರಸಿದ್ಧಪಡಿಸುವದಕ್ಕೆ ಮುಂಚಿತವಾಗಿ ದರಖಾಸ್ತುದಾರನು ಮೇಲೆ ಗೊತ್ತು ಮಾಡಲ್ಪಟ್ಟ ಸರ್ಕ್ಕಾರ್ ಸವಾಲ್ ಮೊಬಲಗಿನ ನಾಲ್ಕರಲ್ಲಿ ಬಂದು ಭಾಗವನ್ನು ಡೆಪ್ಯುಟಿ ಕಮ್ಮಿಷನರವರಲ್ಲಿ ಠೇವಣಿ ಇಡತಕ್ಕದ್ದು.

IX. ಉದ್ದೇಶಿಸಲ್ಪಟ್ಟ ತಮಾಂ ಪುರೋಖ್ತುಗಳ ಪೂರಾ ನೋಟೀಸುಗಳು ನೆರೆಹೊರೆ ಗ್ರಾಮಗಳಲ್ಲಿ ಫಾಯಿಷ್ಮಾಡಲ್ಪಡತಕ್ಕದ್ದು. ಮತ್ತು 50 ಎಕರೆಗಳಿಗಿಂತ ಜಾಸ್ತಿ ವಿಸ್ತೀರ್ಣವುಳ್ಳ ಪ್ರದೇಶಗಳ ತಮಾಂ ಪುರೋಖ್ತುಗಳೂ ಸರ್ಕಾರ್ ಗೆಜೆಟಿನಲ್ಲಿ ಪ್ರಕಟಿಸುವದರ ಮೂಲಕ ಪ್ರಸಿದ್ಧಪಡಿಸಲ್ಪಡತಕ್ಕದ್ದು.

X. ಸದರೀ ಹರಾಜ್ ಜಾರೀಲಿರುವ ಷರತ್ತುಗಳನುಸಾರ ಬಹಿರಂಗವಾಗಿ ನಡಿಸಲ್ಪಡತಕ್ಕದ್ದು, ಮತ್ತು ಗೊತ್ತು ಮಾಡಲ್ಪಟ್ಟ ಸರ್ಕಾರ್ ಸವಾಲ್ ಮೊಬಲಗಿಗೆ ಮೇಲ್ಪಟ್ಟ ಕಡದರಖಾಸ್ತುದಾರನಿಗೆ ಜಮೀನು ವಿಕ್ರಯಿಸಲ್ಪಡತಕ್ಕದ್ದು. ದರಖಾಸ್ತುದಾರನಿಂದ ಠೇವಣಿ ಇಡಲ್ಪಟ್ಟ ಸರ್ಕಾರ್ ಸವಾಲ್ ಮೊಬಲಗಿನ ನಾಲ್ಕರಲ್ಲಿ ಒಂದು ಭಾಗದ ಮೊಬಲಗು ಸದರೀ ಜಮೀನು ದರಖಾಸ್ತುದಾರನಿಗೆ ಹರಾಜಿನಲ್ಲಿ ವಿಕ್ರಯಿಸಲ್ಪಟ್ಟರೆ ಪುರೋಖ್ತು ಮೊಬಲಗಿಗೋಸ್ಕರ ಶೇಕಡಾ 25ರ ಪ್ರಕಾರ ಕೊಡಬೇಕಾದ ಮೊಬಲಗಿಗೋಸ್ಕರ ಜಮೆ ಕಟ್ಟಲ್ಪಡತಕ್ಕದ್ದು, ಮತ್ತು ಸದರೀ ಜಮೀನು ಯಾವ ಇತರ ಯಾರಿಂದಲಾಗಲಿ ಕೊಂಡುಕೊಳ್ಳಲ್ಪಟ್ಟರೆ ಸದರೀ ಮೊಬಲಗು ಡಿಪಾಜಿಟ್‌ದಾರನಿಗೆ ವಾಪಸ್ ಮಾಡಲ್ಪಡತಕ್ಕದ್ದು.

XI. ಮೇಲ್ಕಂಡ ರೂಲ್‌ಸ್ ಪ್ರಕಾರ ಪುರೋಖ್ತು ಮಾಡಲ್ಪಟ್ಟ ಜಮೀನುಗಳಿಗೆ ಮೊದಲ್ ಮೂರು ವರುಷಗಳ ಪರಿಯಂತ ಯಾವ ಕಂದಾಯವೂ ತೆರವೇಕಾಗಿಲ್ಲವು; ತರುವಾಯ ಯರಡು ವರುಷಗಳಿಗೆ ಅರ್ಧಕಂದಾಯ ವಸೂಲ್ ಮಾಡಲ್ಪಡತಕ್ಕದ್ದು. ಆರನೇ ವರುಷದಾರಭ್ಯ ಪೂರಾ ಕಂದಾಯ ವಸೂಲ್ ಮಾಡಲ್ಪಡತಕ್ಕದ್ದು. ಪರಂತು ಈ ರಿಯಾಯತಿ ತೋರಿಸುವದಕ್ಕೆ ಮುಂಚಿತವಾಗಿ, ದರಖಾಸ್ತುದಾರನು, ಸದರೀ ಜಮೀನಿನಲ್ಲಿರತಕ್ಕ ಮರಗಳು ಕಡದ ತರುವಾಯ ಯಾ ಅದರ ಯಾವ ಭಾಗವನ್ನಾಗಲಿ ಅನ್ಯಥಾ ಬೈಲು ಮಾಡಿದನಂತರ ಸದರೀ ಜಮೀನಿನಲ್ಲಿ ಅಡಗಿ ಯಿರತಕ್ಕ ಸಾಗುವಳೀ ಲಾಯಖ್ ಭಾಗವನ್ನ ಸಾಗುವಳೀ ಮಾಡುವದಕ್ಕೆ ವಾಸ್ತವ್ಯವಾಗಿ ಪ್ರಯತ್ನ ಪಡದೆ ಸದರೀ ಜಮೀನನ್ನ ರಾಜೀನಾಮೆ ಮೂಲಕ ಒಪ್ಪಿಸಿ ಬಿಡುವ ಪಕ್ಷದಲ್ಲಿ ಮೊದಲ್ ವರುಷದ ಲಾಗಾಯತು ಪೂರಾ ಕಂದಾಯ ಕೊಡುವದಕ್ಕೆ ಬದ್ಧನಾಗಿ ಮುಚ್ಚಲಿಕೆ ಬರೆದು ಕೊಡತಕ್ಕದ್ದು.

ತಾರೀಖು 17ನೇ ಮಾರ್ಚೀ 1887.

ಕ್ಯಾಂಪ್ ನಂ. 2014.—ಮಳವಳ್ಳಿ ಅಮಲ್‌ದಾರ್ ನಂಜುಂಡ ಮೊದಲಿಯಾರ್‌ರಿಗೆ, 1887ನೇ ಇಸವಿ ಏಪ್ರೈಲ್ 1ನೇ ಮುಕ್ಕಾಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೇ ಮಾರ್ಚೀ 1887.

ಕ್ಯಾಂಪ್ ನಂ. 2126.—1884ನೇ ಇಸವಿ ಡಿಸೆಂಬರ್ 6ನೇ ಮುಕ್ಕಾಂ 5063—107ನೇ ನಂಬರ್‌ವುಳ್ಳ ದಿವಾನರವರ ಪ್ರೊಸಿಡಿಂಗ್ಸ್ ಷರತ್ತು ಅನುಸರಿಸಿ ಕೋಲಾರದ ಅಮಲ್‌ದಾರ್ ನಿಜಾಮುದ್ದೀನ್ ಅಲ್ಲೀಖಾನ್‌ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 26ನೇ ಮಾರ್ಚೀ 1887.

ಕ್ಯಾಂಪ್ ನಂ. 2154.—ಮೂರನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್ ಜಾನ್ ಟೈಲರ್‌ಗೆ, 1887ನೇ ಇಸವಿ ಫಿಬ್ರುವರೀ 5ನೇ ಮುಕ್ಕಾಂ ಲಾಗಾಯತು 2ನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 2188.—ಇದರಿಂದ ಪ್ರಕಟಪಡಿಸುವದೇನಂದರೆ, ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಿಗೋಸ್ಕರ 1877ನೇ ಇಸವಿ ಜೂನ್ 13ನೇ ಮುಕ್ಕಾಂ 72ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯಲ್ಲಿ ಬೊಂಬಿನ ಭರ್ತಿ ಭಂಡಿ 1ಕ್ಕೆ ರೂಪಾಯಿ 1—4—0 ಯಂತೆ ಗೊತ್ತುಮಾಡಲ್ಪಟ್ಟ ದರವು, ಭಂಡಿಜೋಡೆ ವಂದಕ್ಕೆ ರೂ. 2—8—0 ಕ್ಕೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 1ನೇ ಏಪ್ರೈಲ್ 1887.

ಮೈಸೂರು ರೆವಿನ್ಯು ಸರ್ವೆಗೆ ಸೇರಿದ ಫಾರೆಸ್ಟು ಅಸಿಸ್ಟೆಂಟ್ ಕನ್‌ಸರ್ವೇಟರ್ ಮೆ|| ಟಿ. ಅಬ್ದುಲ್ ಕರೀಂಯವರಿಗೆ, 1887ನೇ ಇಸವಿ ಜನವರೀ 17ನೇ ಮುಕ್ಕಾಂ ಲಾಗಾಯತು 17 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕ್ಕುಂ ಬಮೋಜೀಬ್,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಏಪ್ರೆಲ್ ತಾ॥ 9, ಸನೆ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್‌ಸನ್,
ಕಾಂಪ್‌ಟ್ರೋಲರ್.

ಪೋಲೀಸ್ ಇಲಾಖಾ.

ತಾರೀಖು 8ನೇ ಮಾರ್ಚಿ 1887.

ಬಾಳೇ ಹೊನ್ನೂರು ಮತ್ತು ಯಡೆಹಳ್ಳಿ ಸ್ಟೇಷನುಗಳ ಸರಹದ್ದಿನ ವಳಗೆ ಯಿರತಕ್ಕ ಕಾಡಕೊಡಗಿ ಗ್ರಾಮದಲ್ಲಿನ ಚಂದಯ್ಯನ ಮನೆಯಿಂದ 1885ನೇ ಇಸವಿ ಮೇ 13ನೇ ತಾರೀಖಿನಲ್ಲಿ ಚೋರಿಯಿಂದ ಪಯ್ಯೋಣಾದ ಸುಮಾರು 12 ವರುಷ ವಯಸ್ಸುಳ್ಳ ಗುತ್ತಿ ಯೆಂಬ ಹುಡುಗಿಯ ಪತ್ತೇ ವಿಷಯದಲ್ಲಿ ಸಾಧಕವಾದ ವರ್ತಮಾನ ಕೊಡುವಂಥಾವರಿಗೆ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಯಲ್. ರಿಕ್ಕೆಟ್ಸ್,
ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್.

ಫಾರೆಸ್ಟ್ ಇಲಾಖಾ.

ತಾರೀಖು 23ನೇ ಮಾರ್ಚಿ 1887.

ಇದರಿಂದ ಸರ್ವರತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತಿ ಬಾಬತು ಯಿದರಡೀ ಕಂಡ ಮರಗಳು ಫಾರೆಸ್ಟು ಅಸಿಸ್ಟೆಂಟ್ ಕನ್ಸರವೇಟರವರಿಂದ ಆಯಾತಾರೀಖುಗಳಲ್ಲಿ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುತ್ತೆ.

ಡಿಪೋ ಹೆಸರು.	ಹರಾಜ್ ತಾರೀಖು.	ತೇಗದನಾಟಾಗಳು.	ಕಾಡುಮರದ ನಾಟಾಗಳು.	ತೇಗದ ಮತ್ತು ಕಾಡುಜಾತಿ ಕೊಳೆಗಳು.	ಷರಾ.
ಸೊರಬ ತಾಲ್ಲೂಕು ತೆಲಗದ್ದೆ ..	2ನೇ ಮೇ 1887	100	..	..	ಹೆಚ್ಚು ಕಡಿಮೆಯಾಗಿ.
ಷಿಕಾರೀಪುರ ..	7ನೇ ಡಿಟೋ	..	100	350	
ಶಿರಾಳಕೊಪ್ಪ ..	8ನೇ ಡಿಟೋ	..	150	..	
ಚನ್ನಗಿರಿ ..	13ನೇ ಡಿಟೋ	25	10	300	
ಆಯಿನೂರು ..	22ನೇ ಡಿಟೋ	150	400	100	
ಶಿವಮೊಗ್ಗಾ ..	24ನೇ ಡಿಟೋ	180	100	300	
ಕೊಪ್ಪದ ತಾಲ್ಲೂಕು ಕಣಬೂರು ..	28ನೇ ಡಿಟೋ	..	300	..	
ತರೀಕೆರೆ ತಾಲ್ಲೂಕು ಲಕ್ಕುವಳ್ಳಿ ..	1ನೇ ಜೂನ್ ಡಿಟೋ	2,200	400	600	

ಹರಾಜಿನ ಷರತ್ತುಗಳು—1873ನೇ ಇಸವಿ ಜೂನ್ 12ನೇ ಮರ್ಕುಂ 20ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಫಾಯಿಷ್ಮಾಡಲ್ಪಟ್ಟ ಪ್ರಕಾರ ಯಿರತಕ್ಕವು, ಮತ್ತು ಹರಾಜ್‌ಕಾಲದಲ್ಲಿ ಓದಲ್ಪಡುವದು.

ಯಲ್. ರಿಕ್ಕೆಟ್ಸ್,
ಫಾರೆಸ್ಟು ವ ಪ್ಲಾಂಟೇಷನ್‌ಗಳ
ಇನ್‌ಸ್ಪೆಕ್ಟರ್ ಜನರಲ್.

ತಾರೀಖು 24ನೇ ಮಾರ್ಚಿ 1887.

ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಚಾಮರಾಜನಗರದ ಫಾರೆಸ್ಟುಗಳಲ್ಲಿ, ಮೇಕೆಗಳು ವಿನಾ ದನಗಳು ಮಾತ್ರ ಮೇಯುವ ಬಗ್ಗೆ ವಂದು ಕಾಲಾವಧಿಯಲ್ಲಿ ಅಂದರೆ ಜೂನ್ ಗುರ್ರೇ ಲಾಗಾಯತು 1888ನೇ ಇಸವಿ ಜನವರೀ ಆಖೈರ್ ಪರಿಯಂತ ದರ ರಾಸು 1ಕ್ಕೆ ನಾಲ್ಕಾಣೆ ಪಾವತೀ ಮಾಡಿದ ಮೇಲೆ ಅಪ್ಪಣೆ ಕೊಡಲ್ಪಡುವದು, ಮತ್ತು ಆ ಬಗ್ಗ್ಯಾಗಿ ಟಿಕೇಟುಗಳು ಕೊಡಲ್ಪಡುವದು. ವಂದು ವರುಷಕ್ಕಿಂತ ಕಂ ವಯಸ್ಸಿನ ಕರಗಳು ವಿನಾಯಿಸಲ್ಪಡತಕ್ಕವು. ಫಾರೆಸ್ಟು ಇಲಾಖೆಯವರು, ಈ ಇಸ್ತಿಹಾರ್‌ನಾಮೆಯ ಅಂತ್ಯಭಾಗದಲ್ಲಿ ಕಂಡ ವಿನಾಯಿತಿಗೆ ಸಂಬಂಧಪಟ್ಟ ಯಾವ ಭಾಗಗಳನ್ನಾಗಲೀ ಬಂದ್ ಮಾಡುವ ಮತ್ತು ಮೇಯುವ ಬಗ್ಗೆ ಅಪ್ಪಣೆ ಕೊಡಲ್ಪಟ್ಟ ರಾಸುಗಳ ಸಂಖ್ಯೆಯನ್ನು ಗೊತ್ತು ಮಾಡುವ ಹಕ್ಕುದಾರೀಯನ್ನು ಸಹ ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ. ರಾಸುಗಳ ಮಂದೆಗಳು ಅವು ಯಾವ ಗ್ರಾಮಗಳಿಗೆ ಸೇರಿರುತವೋ ಅಂಥಾ ಗ್ರಾಮಗಳಿಗೆ ಸಮೀಪವಾದ ಬೇರೇ ಬೇರೆ ಪ್ರದೇಶಗಳಿಗೆ ಭಾಗಿಸಲ್ಪಡತಕ್ಕವು.

ಲೈಸೆನ್ಸ್ ಯಿಲ್ಲದೆ ಮೇಯುತ್ತಿರುವ ಯಾವ ದನಗಳಾಗಲಿ ದೊಡ್ಡಿಗೆ ದಾಖಲ್ಮಾಡಲ್ಪಟ್ಟು ಅವುಗಳ ಸ್ವಂತಗಾರರ ಮೇಲೆ ಪ್ರಾಸಿಕ್ಯೂಷನ್‌ಯಾನೆ ಫಿರ್ಯಾದ್ ಮಾಡಲ್ಪಡತಕ್ಕದ್ದು.

ದನಗಳ ದೊಡ್ಡಿಬಗ್ಯಾಗಿ ಯಾವ ಯಳೇಮರಗಳಾದರೂ ಯಾವ ಸಂದರ್ಭಗಳಲ್ಲೂ ಕಡಿಯಲ್ಪಡಕೂಡದು, ಮತ್ತು ಆ ಬಗ್ಯಾಗಿ ಬೇಕಾಗುವ ತಮಾಂ ಬೊಂಬುಗಳೂ ದರ ಭಂಡಿ ಬೋಜಾ 1ಕ್ಕೆ ವಂದು ರೂಪಾಯಿ ಪ್ರಕಾರ ಫಾರೆಸ್ಟು ಇಲಾಖೇಯಿಂದ ಕ್ರಯಕ್ಕೆ ತೆಗದುಕೊಳ್ಳಲ್ಪಡತಕ್ಕದ್ದು, ಹಾಂಗೆ ಖರೀದಿ ಮೊಬಲಗು ಪಾವತೀ ಮಾಡಿದ ತರುವಾಯ ಅವುಗಳನ್ನ ಕಡಿದು ಸಾಗಿಸತಕ್ಕ ಲಾಗವಡು ಆಯಾ ಜನಗಳಿಗೆ ಶೇರಿರುತ್ತೆ. ಮುಳ್ಳು ಕಂವೆಗಳು ಮುಫತ್ತಾಗಿ ತೆಗೆದುಕೊಳ್ಳಲ್ಪಡಬಹುದು.

ವಿನಾಯಿತಿಗಳು.

(1.) ಸೊಸಿನಾಟುವ ಬಗ್ಯಾಗಲೀ ಮತ್ತ್ಯಾವ ಇತರ ವಿಧವಾಗಿಯಾದರೂ ಪುನರಭಿವೃದ್ಧಿ ಮಾಡುವ ಬಗ್ಯಾಗಲೀ ಉಳಿಸಿಕೊಳ್ಳಲ್ಪಟ್ಟ ಅಂಥಾ ಪ್ರದೇಶಗಳಿಗೆ ದನಗಳು ಅವಕಾಶ ಕೊಡಲ್ಪಡದೆ ಯಿರುವಂಥಾ ಯಾವದಾದರು ಜಂಗಲೀ ಪ್ರದೇಶಗಳು.

(2.) ಫಾರೆಸ್ಟು ಆಫೀಸರರು, ಭೂಗುಣದ ದೆಶೇಯಿಂದಲಾಗಲೀ, ಫಾರೆಸ್ಟು ಬೆಳೆಯುವದರ ದೆಸೇಯಿಂದಲಾಗಲೀ ಯಾ ಯಾವದಾದರೂ ವಿಶೇಷ ಸಂದರ್ಭಗಳ ಆವಶ್ಯಕತೆಗೋಸ್ಕರವಾಗಲೀ ಯಾವ ಪ್ರದೇಶದಲ್ಲಿಯಾದರೂ ಮೇಯುವದನ್ನ ಅಡ್ಡೀ ಪಡಿಸುವದು ಉತ್ತಮವೆಂಬದಾಗಿ ಭಾವಿಸುವಂಥಾ ಪ್ರದೇಶಗಳು.

ತಾರೀಖು 28ನೇ ಮಾರ್ಚಿ 1887.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡೀಕಂಡ ಫಾರೆಸ್ಟುಗಳಿಂದ ಆಯಾ ಡಿಪೋಗಳಿಗೆ 1888ನೇ ಇಸವಿ ಮಾರ್ಚಿ 31ನೇ ತಾರೀಖಿನ ಪರಿಯಂತ ನಾಟಾ ವ ಬೊಂಬುಗಳನ್ನು ಸಾಗಿಸುವ ಬಗ್ಯಾಗಿ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತವೆ.

ತಾಲ್ಲೂಕು.	ಫಾರೆಸ್ಟು.	ಡಿಪೋ ಹೆಸರು.
ಗುಂಡ್ಲು ಪೇಟೆ	ಬಂಡಿಪುರ	ಮೈಸೂರು ಉಡ್ಯಾರಡು, ಹಂಗಲದ ಡಿಪೋ
ಡಿಟೋ	ಬಾರೆಂಬಾಡಿ	ಡಿಟೋ ಮದ್ದೂರು ಡಿಪೋ.
ಹೆಗ್ಗಡದೇವನಕೋಟೆ	ಆಯಿನೂರು ಮಾರಿಗುಡಿ	ಡಿಟೋ ಹುರದ ಡಿಪೋ.
ಡಿಟೋ	ಬೇಗೂರು	ಡಿಟೋ ಬೇಗೂರು ಡಿಪೋ.
ಡಿಟೋ	ಕಾಕನಕೋಟೆ	ಡಿಟೋ ಅಂತರಸಂತೆ ಡಿಪೋ.
ಡಿಟೋ	ಮತ್ತಿ ಕುಪ್ಪೆ	ಡಿಟೋ ಡಿಟೋ.
ಹುಣಸೂರು	ವೀರನಹೊಸಹಳ್ಳಿ	ಡಿಟೋ ಹುಣಸೂರು ಡಿಪೋ.
ಡಿಟೋ	ಆನೆಚೌಕೂರು ಮತ್ತು ದೊಡ್ಡ ಹಾರವೇ ಫಾರೆಸ್ಟು.	ಡಿಟೋ ಡಿಟೋ
ಡಿಟೋ	ಮಾವ್ಕಲ್ ಮತ್ತು ಲಿಂಗಾಪುರ ಫಾರೆಸ್ಟು	ಡಿಟೋ ಡಿಟೋ.
ಚಾಮರಾಜನಗರ	ಚಾಮರಾಜನಗರದ ಫಾರೆಸ್ಟುಗಳು	ಡಿಟೋ ಚಾಮರಾಜನಗರದ ಡಿಪೋ.

2. ತಮಾಂ ದರಖಾಸ್ತುಗಳೂ, "ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಟಾ ವ ಬೊಂಬುಗಳನ್ನು ಫಾರೆಸ್ಟುಗಳಿಂದ ಡಿಪೋಗಳಿಗೆ ಸಾಗಿಸುವ ಬಗ್ಯೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ದರಖಾಸ್ತುಗಳು, ಮೈಸೂರು ಡಿಸ್ಟ್ರಿಕ್ಟಿನ ಫಾರೆಸ್ಟು ವ ಗವರ್ನಮೆಂಟ್ ಫಾರಂಗಳ ಸೂಪರಿಂಟೆಂಡೆಂಟರವರಿಂದ 1887ನೇ ಇಸವಿ ಮೇ 15ನೇ ತಾರೀಖಿನ ವರಿಗೆ ತೆಗದುಕೊಳ್ಳಲ್ಪಟ್ಟು ಮತ್ತು ಸದರೀ ತಾರೀಖಿನಲ್ಲಿ ಅವು ವ್ಯವಸ್ತೆ ಮಾಡಲ್ಪಡುವವು.

4. ದರಖಾಸ್ತು ಮಾಡಲು ಯಿಚ್ಛೆವುಳ್ಳ ಕಂಟ್ರಾಕ್ಟುದಾರರು ಮೇಲೆ ಕಂಡ ಫಾರೆಸ್ಟುಗಳ ಪೈಕಿ ವಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ ಸಾಗಿಸುವ ಬಗ್ಯೆ ದರಖಾಸ್ತು ಮಾಡಿದ ಪಕ್ಷದಲ್ಲಿ ಅವರು ನಾಟಾ ಯಾ ಬೊಂಬುಗಳನ್ನು ಪ್ರತಿ ವಂದು ಫಾರೆಸ್ಟಿನಿಂದಲೂ, ಆಯಾ ಡಿಪೋಗಳಿಗೆ ಸಾಗಿಸುವ ಬಗ್ಯೆ ಒಪ್ಪಿಕೊಳ್ಳುವ ಕಮ್ಮೀ ದರವನ್ನು ಪ್ರತ್ಯೇಕವಾಗಿ ನಮೂದಿಸತಕ್ಕದ್ದು.

5. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು, ಮೈಸೂರು ಉಡ್ಯಾರಡಿಗೆ ಅಲ್ಲಿಂದ ಸಾಗಿಸಲು ಉದ್ದೇಶಿಸಲ್ಪಟ್ಟ ತಮಾಂ ಚದರ ನಾಟಾಗಳನ್ನೂ ಫಾರೆಸ್ಟು ಇಲಾಖೆ ನವಕರರಿಂದ ತನ್ನ ಕಡೆ ಜನಗಳು ವಹಿಸಿಕ್ಕೊಂಡ ಲಾಗಾಯತು 40 ದಿವಸಗಳ ವಳಗಾಗಿ ಭಂಡೀ ಮೂಲಕ ಸಾಗಿಸುವ ಬಗ್ಯೆ ಬದ್ಧನಾಗಿರತಕ್ಕದ್ದು; ಮತ್ತು ಅವುಗಳನ್ನ ಅವನ ಕಡೆ ಏಜಂಟರಾಗಲೀ ಭಂಡಿಯವರಾಗಲಿ ಅವರ ಸ್ವಾಧೀನಕ್ಕೆ ತೆಗದುಕ್ಕೊಂಡ 40 ದಿವಸಗಳವಳಗಾಗಿ ಉಡ್ಯಾರಡಿಗೆ ತಲಪಿಸದೆ ಯಿದ್ದರೆ ಆತನು ಭಂಡಿಗೋಸ್ಕರ ಉಂಟಾದ ಯಾವ ನಷ್ಟಗಳಿಗಾಗಲಿ ತಮಾಂ ಹಕ್ಕು ದಾರಿಗಳನ್ನೂ ದಂಡವಾಗಿ ಕಳೆದುಕೊಳ್ಳತಕ್ಕದ್ದು.

6. ಉದ್ದೇಶಿಸುವ ಕಂಟ್ರಾಕ್ಟುದಾರರಿಗೆ ಅಪೇಕ್ಷಿತವಾದ ಯಿನ್ನು ಜಾಸ್ತಿ ಸಂಗತಿಗಳು, ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ವ ಗವರ್ರ್ನಮೆಂಟ ಫಾರಂಗಳ ಸೂಪರ್ರಿಟೆಂಡೆಂಟರವರ ಆಫೀಸಿನಲ್ಲಿ ವಿಚಾರಿಸಿ ಪಡೆಯಬಹುದು.

7. ಫಾರೆಸ್ಟುಗಳ ಸೂಪರ್ರಿಟೆಂಡೆಂಟರವರು ಕಮ್ಮೀದರದ ಅಥವಾ ಮತ್ಯಾವ ದರಖಾಸ್ತನ್ನಾಗಲಿ ಅಂಗಿಕರಿಸುವದಕ್ಕೆ ಬದ್ಧರಾಗಿರುವದಿಲ್ಲವು.

8. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತನ್ನ ದರಖಾಸ್ತುಪ್ರಕಾರ ಕ್ರಮವಾಗಿ ನಡೆದುಕೊಳ್ಳುವ ಬಗ್ಯೆ ಜಾಮಿನಿ ತರೀಕ ಫಾರೆಸ್ಟು ವಂದಕ್ಕೆ 150 ರೂಪಾಯಿ ಪ್ರಕಾರ ಡಿಪಾಜಿಟ್ಟು ಕಟ್ಟತಕ್ಕದ್ದಲ್ಲದೆ ಒಂದು ಕರಾರನ್ನೂ ಬರೆದು ಕೊಡತಕ್ಕದ್ದು.

ಸಿ. ಯೆಂ. ರಸ್ಸೆಲ್,
ಫಾರೆಸ್ಟು ವ ಗವರ್ರ್ನಮೆಂಟ ಫಾರಂಗಳ ಸೂಪರ್ರಿಟೆಂಡೆಂಟ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 17ನೇ ಮಾರ್ಚಿ 1887

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ, ಸರ್ 1887—88ನೇ ಇಸವಿ ಸರ್ವಜಿತು ಸಂವತ್ಸರಕ್ಕೆ ಕೋಲಾರ ಡಿಸ್ಟ್ರಿಕ್ಟು ಗೋರೀಬಿದನೂರು ತಾಲ್ಲೂಕು ಸರ್ಕಾರ ಬಂಜರ ಜಮೀನುಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕು ಕೋಲಾರ ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರ ಸಾಹೇಬರವರ ಯಾ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಸಾಹೇಬರವರ ರೂಬರೂ 1887ನೇ ಇಸವಿ ಏಪ್ರೆಲ್ 21ನೇ ತಾರೀಖಿನಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡತ್ತೆ. ಈ ಹರಾಜು ಸದರೀ ತಾರೀಖು ದಿವಿ 12 ಘಂಟೆಗೆ ಷುರೂ ಆಗುತ್ತೆ.

2. ಹರಾಜು ಪೂರೈಸಿದ ವಡನೆ ಕಡ ಸವಾಲ್‌ದಾರನು ಹರಾಜು ಮೊಬಲಗಿಗೆ ಶೇಕಡಾ 25 ರೂಪಾಯಿ ಮೇರಿಗೆ ಠೇವಣಿ ಯಿಡಬೇಕು, ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿಯು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ತಿಳಿಸಲ್ಪಟ್ಟ 7 ದಿವಸಗಳ ವಳಗಾಗಿ ಬಾಕೀ ಮೊಬಲಗು ಮತ್ತು ಪೂರಾ ಮೊಬಲಗ್ಯೆ ರೂಪಾಯಿ 1ಕ್ಕೆ 1 ಆಣೆ ಪ್ರಕಾರ ಲೋಕಲ್‌ಸೆಸ್ ಸಹಾ ಪಾವತೀ ಮಾಡಬೇಕು. ಹಾಗೆ ಪಾವತೀ ಮಾಡದೇ ಯಿದ್ದರೆ ಠೇವಣಿ ಯಿಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು. ಮೇಲ್ಕಂಡ ಠೇವಣಿ ಮೊಬಲಗು ಯಿಡುವದಕ್ಕೆ ತಪ್ಪಿದರೂ ಅಥವಾ ಬಾಕೀ ಮೊಬಲಗನ್ನ ಪಾವತೀ ಮಾಡುವದಕ್ಕೆ ತಪ್ಪಿದರೂ ಹಕ್ಕು ಪುನಹ ಹರಾಜುಮಾಡಲ್ಪಡುವದು ಲುಕ್ಸಾನ್ ಮೊಬಲಗು ತಪ್ಪಿದ ಕಡ ಸವಾಲ್‌ದಾರನಿಂದಲೇ ವಸೂಲ್ಮಾಡಲ್ಪಡುವದು.

3. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮಗೋಸ್ಕರ ಸವಾಲ್ ಮಾಡುತ್ತಾರೆಯೇ ಅಥವಾ ಮತ್ತೊಬ್ಬರಿಗೋಸ್ಕರ ಸವಾಲ್ ಮಾಡುತ್ತಾರೆಯೆ ತಿಳಿಸಬೇಕು. ಇತರರ ಯೇಜಂಟುಗಳಾಗಿ ಸವಾಲ್ ಮಾಡುವದಾಗಿ ಯಿದ್ದರೆ ಅವರಿಂದ ರುಜು ಮಾಡಲ್ಪಟ್ಟ ಮೊಖ್ತ್ಯಾರ್‌ನಾಮೆಯನ್ನ ಹಾಜರ್ಮಾಡಬೇಕು, ಹಾಗೆ ಹಾಜರ್ಮಾಡದೆ ಇದ್ದರೆ ಅಂಥಾವರ ಸವಾಲ್‌ಗಳು ತಿರಸ್ಕರಿಸಲ್ಪಡುವದು.

ಈ ಹರಾಜು ದಿವಾನ್ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.

ಸಿ. ಸುಬ್ಬರಾವ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 8

ಮೃತಪಟ್ಟ ಬದರಾಇಮ್ರ್ ಖಾನಾಯಿಕರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸೈದ್ ಮೋರ್ಮೆಷಾಖಾದ್ರಿಯು, ಮೃತಪಟ್ಟ ಸದರೀ ಬದರಾಇಮ್ರ್ ಖಾನಾಯಿಕರಿಗೆ ಯೇಜಂಟ್ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ಸದರೀ ಮೋರ್ಮೆಷಾಖಾದ್ರಿಯು ಸದರೀ ಅಸಸ್ಥರಾಗಿ ಮೃತಪಟ್ಟ ಬದರಾಇಮ್ರ್ ಖಾನಾಯಿಕರ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ **ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.**

ಸದರೀ ದರಖಾಸ್ತುದಾರರಾದ ಸೈಯದ್ ಮೋರ್ಮೆಷಾಖಾದ್ರಿಯ ಅರ್ಜಿಯನ್ನು 1887ನೇ ಇಸವಿ ಜೂನ್ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಖದರಇಮಾಮ್‌ಖಾನ್ ನಾಯಿಕರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

ಸನ್ 1887ನೇ ಇಸವಿ ಮಾರ್ಚಿ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಮೈಸೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಮಂಜಿರಾಬಾದ್ ತಾಲ್ಲೂಕು ಬ್ಯಾಗಡಹಳ್ಳಿ ಹೋಬಳಿ ಶೇಕದಾರ್ ಅಕಬರ್‌ಮೊಹದೀನ್‌ಸಾಬನ ವಿಷಯದಲ್ಲಿ—

ಸನ್ 1886ನೇ ಇಸವಿ ದಿವಾಳಿ ಕೇಸ್ ನಂಬರು 251.

ಹುಕ್ಕುಂ

ಮೇಲ್ಕಂಡ ಅಕಬರ್‌ಮೊಹದೀನ್‌ಸಾಬನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜೀದಾರನಾದ ಅಕಬರ್ ಮೊಹದೀನ್‌ಸಾಬಿ ಖುದ್ದು ಹಾಜರು ಇವನ್ನ ದರ್ಯಾಪ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಪ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಸುಬ್ಬಂಣಾಚಾರಿ, 2ನೇ ಗುಲಾಂ ಮೊಹದೀನ್‌ಸಾಬ್ 3ನೇ ಅಬ್ದುಲ್ಲಾಸಾಬ್.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅಕಬರ್‌ಮೊಹದೀನ್‌ಸಾಬನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಮಾರ್ಚಿ 23ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಡಬೇಕಾದ್ದು.	ದೇಣೆಯ ಸ್ವಭಾವವಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಹೊಳೇನರಶೀಪುರದಲ್ಲಿರುವ ಕುಂಭಕೋಣೆ ಸುಬ್ಬಂಣಾಚಾರ್ರು	256 3 0		ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ದರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌನ್‌ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟು ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿ ರೂ. 8—8—0; ಒಂದು ಪೌನ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌನ್‌ವುಳ್ಳ ಡಬ್ಬಿಗೆ 20 ರೂಪಾಯಿ ಈ ಔಷಧವು, ಕಲಕತ್ತೆಯಲ್ಲಿ ಮುಖ್ಯ ಮುಖ್ಯ.

ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌನ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್, ಚಂದಾ ದರ ವಗೈರೇ.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಪ್ಪ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—

	ರೂ.	ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2	8
ಎರಡನೇ ಸಲ ವ ಆ ತರುವಾಯು ಪ್ರತಿ ಆವರ್ತಿಗೂ ಡಿಟೋ ..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:-

	ರೂ.	ಆ.
ಮೊದಲನೇ ದಫಾ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್‌ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟೀ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

		ರೂ.	ಆ.
ಮೊದಲನೇ ಸಲಕ್ಕೆ ..	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	,, ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

		ರೂ.	ಆ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಜ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	..	0	4

ಷರಾ.—ಚಂದಾ ವಗೈರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತಿ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಬಮೋಜಿಬ್ ಹುಕ್ಕುಂ,
ಟಿ. ಟಿ. ಲೆನರಡ್,
ಮೈ. ಗೆ. ಕಂಟ್ರೋಲರ್.

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಸಿದ್ಧಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಏಪ್ರಿಲ್ ತಾ॥ 9, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

1887ನೇ ಇಸವಿಯ 1ನೇ ನಂ. ರೆಗ್ಯುಲೇಷನ್.

ಇದರಡಿಕಂಡ ರೆಗ್ಯುಲೇಷನ್ ಯಾನೆ ನಿಬಂಧನೆಯು 1887ನೇ ಇಸವಿ ಮಾರ್ಚಿ ೨ನೇ ಮುಕ್ಕಾಮಿನಲ್ಲಿ ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟು ಸಕಲಜನಗಳ ತಿಳುವಳಿಕೆಯಬಗ್ಗೆ ಇದರಡಿ ಪ್ರಕಟಿಸಲ್ಪಟ್ಟಿರುತಿದೆ:—

ಬೆಂಗಳೂರು ಷಹರ್‌ನಲ್ಲಿ ಬಾಡಿಗೆಗಾಡಿಗಳ ವ್ಯವಸ್ಥೆ ಮತ್ತು ವಿಚಾರಣೆಯಬಗ್ಗೆ ಹುಟ್ಟಿದ ನಿಬಂಧನೆಯು.

ಬೆಂಗಳೂರು ಷಹರ್‌ನಲ್ಲಿ ಬಾಡಿಗೆ ಗಾಡಿಗಳ ವ್ಯವಸ್ಥೆ ಮತ್ತು ವಿಚಾರಣೆಯಬಗ್ಗೆ ವಿಧಿಸಬೇಕಾದದ್ದು ಆವಶ್ಯಕವಾಗಿರುವದರಿಂದ, ಘನವನ್ನು ಹೊಂದಿದ ಶ್ರೀಮನ್ಮಹಾರಾಜ ರಾಜಾ ಪೀಠಿಕೆ. ಸಾಹೆಬ್ ಬಹದೂರವರು ಇದರಡಿಕಂಡಂತೆ ನಿಬಂಧಿಸಿರುತ್ತಾರೆ:—

1. ಈ ನಿಬಂಧನೆಯು, "1887ನೇ ಇಸವಿಯ ಬೆಂಗಳೂರು ಷಹರ್ ಬಾಡಿಗೆ ಗಾಡಿಗಳ ರೆಗ್ಯುಲೇಷನ್" (Bangalore City Hackney Carriage Regulation) ಎಂದು ಕರೆ ಚಿಕ್ಕ ಹೆಸರು. ಯಲ್ಪಡಬಹುದು.

ಸ್ಥಳವ್ಯಾಪ್ತಿ. ಪ್ರಾರಂಭ. ಅದು ಬೆಂಗಳೂರು ಷಹರಿಗೆ ವ್ಯಾಪಿಸಿ ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

2. ಈ ರೆಗ್ಯುಲೇಷನಿನಲ್ಲಿ, "ಬಾಡಿಗೆ ಗಾಡಿ" ಯೆಂದರೆ ಪ್ರಯಾಣಸ್ಥರ ಸಂಚಾರದ ಉಪಯೋಗಾರ್ಥ, ಬಾಡಿಗೆಗಾಗಿ ಇಡಲ್ಪಟ್ಟಿರುವ ಅಥವಾ ಕೊಡುವಂತೆ ಹೇಳಲ್ಪಡುವ ಅಥವಾ ನಡೆಸುವ, ಚಕ್ರಗಳುಳ್ಳ ಮತ್ತು ಜಾನವರ್‌ಗಳಿಂದ ಎಳೆಯಲ್ಪಡತಕ್ಕ ಯಾವದಾದರೊಂದು ಗಾಡಿಯೆಂದರ್ಥವು.

3. ಬೆಂಗಳೂರು ಷಹರ್ ಮ್ಯೂನಿಸಿಪಲ್ ಕಮ್ಮಿಷನರ್‌ಗಳು, ಆಗಿಂದಾಗ್ಯೆ, ಸದರೀ ಮ್ಯೂನಿಸಿಪಾಲಿಟಿಯ ಸರಹದ್ದಿನೊಳಗೆ ಬಾಡಿಗೆ ಗಾಡಿಗಳ ವ್ಯವಸ್ಥೆಯ ಮತ್ತು ವಿಚಾರಣೆಯಬಗ್ಗೆ ತತ್ಕಾಲದೊಳು ಜಾರಿಯಲ್ಲಿರುವ

ಕಾನೂನನುಸರಿಸಿ, ಸದರೀ ಸರಹದ್ದುಗಳೊಳಗಣ ಇತರ ವಿಷಯುಗಳ ವ್ಯವಸ್ಥೆ ಮತ್ತು ವಿಚಾರಣೆಯು ಬಗ್ಯೆ ಮಾಡಲ್ಪಡುವ ಬೈಲಾಯಾನೆ ಉಪನಿಬಂಧನೆಗಳ ರೀತಿಯನ್ನನುಸರಿಸಿ ನಿಬಂಧನೆಗಳನ್ನು ಮಾಡಬಹುದು.

ಈ ಪ್ರಕರಣವನ್ನನುಸರಿಸಿ ಮಾಡಲ್ಪಟ್ಟ ಪ್ರತಿ ನಿಬಂಧನೆಯೂ ಮೈಸೂರು ಗವರ್ನಮೆಂಟಿನವರಿಂದ ಖಾಯಂ ಮಾಡಲ್ಪಟ್ಟ ಬಳಿಕ ಅವರು ಆಗಿಂದಾಗ್ಯೆ ವಿಧಿಸಬಹುದಾದ ಕಾಲದತನಕ ಮತ್ತು ರೀತಿಯಂತೆ ಫಾಯಿಷ್ ಮಾಡಲ್ಪಟ್ಟು ಕಾನೂನಿನ ಶಕ್ತಿಯುಳ್ಳದ್ದಾಗಿರತಕ್ಕದ್ದು.

ಪರಂತು ಮೈಸೂರು ಗವರ್ನಮೆಂಟಿನವರು ಯಾವಕಾಲದಲ್ಲಾದರೂ ಅಂತಾ ನಿಬಂಧನೆಯುನ್ನು ರದ್ದುಮಾಡಬಹುದು.

4. 3ನೇ ಪ್ರಕರಣವನ್ನನುಸರಿಸಿ, ಮಾಡಲ್ಪಡತಕ್ಕ ನಿಬಂಧನೆಗಳು, ಇತರ ವಿಷಯುಗಳನ್ನಲ್ಲದೆ,—

(a.) ಯಾವ ಬಾಡಿಗೆ ಗಾಡಿಯಾಗಲಿ, ಅಥವಾ ಗೊತ್ತಾದ ತರಹಾವಿನ ಯಾವ ಬಾಡಿಗೆ ಗಾಡಿಯಾಗಲಿ, ಆ ಬಗ್ಯೆ, ಈ ರೆಗ್ಯುಲೇಷನಿಗೆ ಅಥವಾ ಬೆಂಗಳೂರು ಬಾಡಿಗೆ ಗಾಡಿಗಳ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಲ್ಪಟ್ಟ ಲೈಸೆನ್ಸ್ ಮೇರಿಗೆಹೊರತು, ಬಾಡಿಗೆಗೆ ಕೊಡಕೂಡದೆಂತಲೂ, ಸವಾರಿಗೆ ತೆಗದುಕೊಳ್ಳಲಾಗದೆಂತಲೂ, ಬಾಡಿಗೆಗೆ ಕೊಡುವಂತೆ ಹೇಳಕೂಡದೆಂತಲೂ ವಿಧಿಸಬಹುದು;

(b.) ಈ ರೆಗ್ಯುಲೇಷನಿಗೆ ಅಥವಾ ಬೆಂಗಳೂರು ಬಾಡಿಗೆ ಗಾಡಿಗಳ ರೆಗ್ಯುಲೇಷನಿಗೆ ಅನುಸಾರವಾಗಿ ಕೊಡಲ್ಪಟ್ಟ ಲೈಸೆನ್ಸನಂತೆವಿನಾ ಯಾವ ಮನುಷ್ಯನೂ, ಬಾಡಿಗೆ ಗಾಡಿಯನ್ನು ನಡೆಸತಕ್ಕವನಾಗಿರಕೂಡದೆಂದು ವಿಧಿಸಬಹುದು;

(c.) (a) ಮತ್ತು (b) ಕ್ಲಾಜಗಳಲ್ಲಿ ನಮೂದಾಗಿರುವ ಲೈಸೆನ್ಸಗಳು ಕೊಡುವದನ್ನೂ, ಅಂತಾ ಲೈಸೆನ್ಸಗಳು ಯಾವದಾದರೂ ಷರತ್ತುಗಳಮೇಲೆ ಕೊಡಲ್ಪಡತಕ್ಕದ್ದಾಗಿರುವದನ್ನೂ ಮತ್ತು ಅದಕ್ಕಾಗಿ (ಯೇನಾದರಿದ್ದರೆ) ಕೊಡಬೇಕಾದ ರುಸುಂಗಳ ನಿಬಂಧನೆಯನ್ನೂ ವಿಧಿಸಬಹುದು;

(d.) ಲೈಸೆನ್ಸ್ ಪಡೆದ ಗಾಡಿಗಳಿಗೆ ಉಪಯೋಗಿಸಲ್ಪಡತಕ್ಕ ಜಾನವರಗಳು, ಹಾರನೆಸಯಾನೆ ಸರಂಜಾಂ ಮತ್ತು ಇತರ ಪದಾರ್ಥಗಳು, ಇವುಗಳ ವಿವರಣೆಯನ್ನೂ ಅಂತಾ ಗಾಡಿಗಳು ಮತ್ತು ಅವುಗಳಿಗೆ ಉಪಯೋಗಿಸಲ್ಪಡತಕ್ಕ ಜಾನವರಗಳು, ಸರಂಜಾಂ ಮತ್ತು ಇತರ ಪದಾರ್ಥಗಳು ಇವು ಇಡಲ್ಪಡಬೇಕಾದ ಸ್ಥಿತಿಯನ್ನೂ ಮತ್ತು ಸೂರ್ಯಾಸ್ತಮಾನಾ ನಂತರ ಮತ್ತು ಸೂರ್ಯೋದಯಾತ್ಪೂರ್ವ (ಯೇನಾದರೂ ಯಿದ್ದರೆ) ಒಯ್ಯಲ್ಪಡಬೇಕಾದ ಬೆಳಕುಗಳನ್ನೂ ಕ್ರಮಪಡಿಸಬಹುದು;

(e.) ಅಂತಾ ಗಾಡಿಗಳು, ಜಾನವರಗಳು, ಸರಂಜಾಂ ವಗೈರೆ ಪದಾರ್ಥಗಳಿಡಲ್ಪಡತಕ್ಕ ಕಟ್ಟಡದ ತನಿಖೀ ಬಗ್ಯೆ ವಿಧಿಸಬಹುದು;

(f.) ಸದರೀ ಲೈಸೆನ್ಸಗಳು ಯಾವತ್ಪರ್ಯಂತ ಜಾರಿಯಲ್ಲಿರತಕ್ಕದ್ದೋ ಅಂತಾ ಕಾಲವನ್ನೂ ಮತ್ತು (ಯಾವದಾದರಿದ್ದರೆ) ಸದರೀ ಕಾಲದೊಳಗಾಗಿ ಆ ಲೈಸೆನ್ಸಗಳನ್ನು ರದ್ದು ಯಾ ಅಮಾನತ್ತಿಗೆ ಒಳಪಡಿಸತಕ್ಕ ಸಂಭವಗಳನ್ನೂ ಗೊತ್ತು ಮಾಡಬಹುದು;

(g.) ಅಂತಾ ಗಾಡಿಗೆ ನಂಬರ್ ಹಾಕುವಂತೆ ವಿಧಿಸಬಹುದು;

(h). ಬಾಡಿಗೆ ಗಾಡಿಗಳ ನಿಟ್ಟುಕೊಂಡಿರುವ ಪ್ರತಿ ಮನುಷ್ಯನೂ ಸದರೀ ಗಾಡಿಯನ್ನು ಅಪೇಕ್ಷಿಸತಕ್ಕ ಇತರ ಯಾವಮನುಷ್ಯನಿಗಾಗಲಿ ಅದನ್ನು ಬಾಡಿಗೆಗೆ ಕೊಡಲಿಕ್ಕೂ, ಕೊಡದೆ ನಿರಾಕರಿಸಲಿಕ್ಕೂ ಯಾವಕಾಲಗಳಲ್ಲಿ ಮತ್ತು ಯೆಂತಾಸಂದರ್ಭಗಳಲ್ಲಿ ಬದ್ಧನಾಗಿರತಕ್ಕದ್ದೆಂಬದನ್ನು ನಿಶ್ಚೈಸಬಹುದು;

(*i.*) ಬಾಡಿಗೆ ಗಾಡಿಗಳು ನಿಲ್ಲಿಸಲ್ಪಡಬೇಕಾದ ಸ್ಟಾಂಡ್ಸ್ ಯಾನೆ ಸ್ಥಾನಗಳನ್ನು ವೊಕರ್ರ್ಮಾಡಬಹುದು; ಮತ್ತು ಅಂತಾ ಸ್ಥಾನಗಳಲ್ಲಿವಿನಾ ಅನ್ಯತ್ರ ಸದರೀ ಗಾಡಿಗಳು ಬಾಡಿಗೆಯ ಬಗ್ಗೆ ಕಾದಿರಕೂಡದೆಂದು ನಿರೋಧಿಸಲೂಬಹುದು;

(*j.*) ಯಾವದಾದರೊಂದು ಬಾಡಿಗೆ ಗಾಡಿಯ ಬಗ್ಗೆ ಕೇಳಲ್ಪಡುವ ಬಾಡಿಗೆಯ ದರ ಅಥವಾ ವೊಬಲಗನ್ನು ಕಾಲಕ್ಕೂ, ಫಾಸಲೆಗೂ ತಕ್ಕಂತೆ ಗೊತ್ತುಮಾಡಬಹುದು; ಮತ್ತು ಸದರೀ ಗಾಡಿಗಳು ಕಾಲಕ್ಲುಪ್ತಿಯಿಂದ ಬಾಡಿಗೆಗೆ ಗೊತ್ತಾದಮೇಲೆ ಕನಿಷ್ಟಪಕ್ಷ ಇಷ್ಟರ ವೇಗದೊಡನೆಯೇ ನಡಿಸಲ್ಪಡತಕ್ಕದ್ದೆಂದು ವಿಧಿಸಬಹುದು;

(*k.*) ಅಂತಾ ಯಾವದಾದರೊಂದು ಗಾಡಿಯಲ್ಲಿ ಹತ್ತತಕ್ಕ ಜನಗಳ ಸಂಖ್ಯೆಯನ್ನೂ, ಅದರಲ್ಲಿ ತೆಗೆದುಕೊಂಡು ಹೋಗಬಹುದಾದ ಸ್ವತ್ತಿನ ತೂಕವನ್ನು ಸಹ ಗೊತ್ತುಮಾಡಬಹುದು;

(*l.*) ಅಂತಾ ಯಾವದಾದರೊಂದು ಗಾಡಿಯ ಮಾಲಿಕನು ಅಥವಾ ಅದನ್ನು ಸ್ವಾಧೀನದೊಳಿಟ್ಟುಕೊಂಡಿರುವ ಮನುಷ್ಯನು, ಬಾಡಿಗೇ ದರಗಳ ಪಟ್ಟಿಯನ್ನು ಇಂಗ್ಲೀಷ್ ಭಾಷೆಯಲ್ಲಿ ಮತ್ತು ವಿಧಿಸಲ್ಪಡಬಹುದಾದಂತಾ ಇತರ ಭಾಷೆಯಲ್ಲಿ ಸಹ ಛಾಪಿಸಿ ಅದನ್ನು ಗಾಡಿಯೊಳಗೆ ರೂಲ್ಸ್‌ಗಳಿಂದ ಗೊತ್ತುಮಾಡಲ್ಪಡತಕ್ಕ ಪ್ರದೇಶದಲ್ಲಿ ಚಿಕಟಾಯಿಸುವಂತೆ ನಿಯಮಿಸಬಹುದು. ಮತ್ತು ಅಂತಾ ಪಟ್ಟಿಯನ್ನು ನಾಶಪಡಿಸದೆ ಅಥವಾ ವಿರೂಪಗೊಳಿಸದಿರುವಂತೆ ನಿರೋಧಿಸಬಹುದು;

(*m.*) ಗಾಡಿ ನಡಿಸುವವರು, ನಂಬರ್ ಹಾಕಲ್ಪಟ್ಟ ಬಿಲ್ಲೆ ಅಥವಾ ಟಿಕ್ಕೆಟನ್ನು ಧರಿಸುವಂತೆಯೂ, ಅವರ ಲೈಸೆನ್ಸ್‌ಗಳನ್ನು ಬಬ್ಬ ಮ್ಯಾಜಿಸ್ಟ್ರೇಟರು ಅಥವಾ ಈ ಬಗ್ಗೆ ರೂಲ್ಸ್‌ಗಳ ಮೂಲಕ ಅಧಿಕಾರಹೊಂದಿದ ಇತರ ಮನುಷ್ಯನು ಅಪೇಕ್ಷಿಸಿದಾಗ ಹಾಜರ್ಮಾಡುವಂತೆಯೂ ನಿಯಮಿಸಬಹುದು. ಮತ್ತು ಅಂತಾ ಲೈಸೆನ್ಸ್‌ಗಳು ವ ಬಿಲ್ಲೆಗಳು ವರ್ಗ ಅಥವಾ ಎರವಲು ಕೊಡಲ್ಪಡಕೂಡದೆಂದು ನಿರೋಧಿಸಬಹುದು; ಮತ್ತು

(*n.*) ಅಂತಾ ಗಾಡಿಗಳಲ್ಲಿ ದೊರೆಯತಕ್ಕ ಸ್ವತ್ತನ್ನು ಅಮಾನತ್ತಿಡುವಂತೆಯೂ, ಮತ್ತು ಅಂತಾ ಸ್ವತ್ತು ಕರ್ತನಿಗೆ ಆ ಮಾಲನ್ನೊಪ್ಪಿಸುವಾಗ್ಯೆ ಆತನು ರುಸುಮನ್ನು ಕೊಡುವಂತೆಯೂ ವಿಧಿಸಬಹುದು.

5. (1) ಮೇಲೆ ಕಂಡ 3ನೇ ಪ್ರಕರಣಾನುಗುಣವಾದ ನಿಬಂಧನೆಗಳನುಸರಿಸಿ ಕೊಡಲ್ಪಟ್ಟ ಲೈಸೆನ್ಸು, ಬೆಂಗಳೂರು ಸಿವಿಲ್ ವ ಮಿಲಿಟರಿಸ್ಟೇಷನಿನಲ್ಲಾಗಲಿ, ಅಥವಾ ಬೆಂಗಳೂರು ಷಹರಿನಲ್ಲಾಗಲಿ, ಸಂಗತ್ಯಾನುಸಾರವಾಗಿ ಜಾರಿಯಲ್ಲಿರುವ ಕಾನೂರ್ರೀತ್ಯಾ ಯಾವ ಸಂದರ್ಭದಲ್ಲಿ ರದ್ದು ಯಾ ಅಮಾನತ್ತಿಗೆ ಗುರಿಯಾಗಿರುತ್ತೋ ಅಂತಾ ಸಂದರ್ಭದಲ್ಲಿಯೂ, ಮತ್ತು ಲೈಸೆನ್ಸ ಕೊಡಲ್ಪಡುವ ಬಗ್ಗೆ ಏರ್ಪಟ್ಟ ರೂಲ್ಸನಲ್ಲಿ ನಮೂದಾಗಿರುವ ಸಂದರ್ಭದಲ್ಲಿಯೂ, ಸದರೀ ಲೈಸೆನ್ಸು ರದ್ದು ಯಾ ಅಮಾನತ್ತಿಗೆ ಒಳಪಡತಕ್ಕದ್ದು.

(2.) ಈ ರೆಗ್ಯುಲೇಷನಿಗೆ ಅನುಗುಣವಾಗಿ ಮಾಡಲ್ಪಟ್ಟ ಯಾವ ನಿಬಂಧನೆಗಾಗಲಿ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಯಾವ ಮನುಷ್ಯನಾದರೂ ೫೦ ರೂಪಾಯಿಗಳವರಿಗಿನ ಜುಲ್ಮಾನೆಮೂಲಕ ಶಿಕ್ಷಿಸಲ್ಪಡತಕ್ಕದ್ದು.

6. ಈ ರೆಗ್ಯುಲೇಷನನ್ನು ಜಾರೀಯಲ್ಲಿ ತರುವದರೊಳು ಹುಟ್ಟುವಳಿಯಾಗುವ ಯಾವದಾದರು ರುಸುಂ ವೊಬಲಗೂ, ತಗಲುವ ಲಾಗವಡು ವೊಬಲಗೂ ಕ್ರಮವಾಗಿ ಬೆಂಗಳೂರು ಷಹರ್ ಮ್ಯುನಿಸಿಪಲ್ ಫಂಡಿನ ಲೆಕ್ಕದಲ್ಲಿ ಜಮಾಖರ್ಚು ಮಾಡಲ್ಪಡತಕ್ಕದ್ದು.

7. ಯಾವದಾದರು ಬಾಡಿಗೆ ಗಾಡಿಯ ಬಾಡಿಗೇದಾರನಿಗೂ ಅಂತಾ ಗಾಡಿಯ ಸ್ವಂತಗಾರ ಅಥವಾ ಗಾಡಿ ನಡೆಸತಕ್ಕವನಿಗೂ, ಈ ರೆಗ್ಯುಲೇಷನ್ ಅನುಸರಿಸಿ ಮಾಡಲ್ಪಟ್ಟ ಯಾವದಾದರೊಂದು ನಿಬಂಧನೆಯಮೇಲೆ ಅಂತಾ ಬಾಡಿಗೇದಾರನಿಂದ ಕೊಡಲ್ಪಡಬೇಕಾದ ಬಾಡಿಗೇ ಮೊಬಲಗಿನ ವಿಷಯದಲ್ಲಿ ಏನಾದರು ತಕರಾರ್ ವುಂಟಾದರೆ ಆ ತಕರಾರ್‌ದಾರರ ಪೈಕಿ ಯಾರೇಆಗಲಿ, ಆ ಮೇರೆ ಅಪೇಕ್ಷಿಸಿದಲ್ಲಿ ಸದರೀ ತಕರಾರ್ ಬೆಂಗಳೂರು ಷಹರ್‌ನಲ್ಲಿ ಯಾವ ಮ್ಯಾಜಿಸ್ಟ್ರೇಟರ ಯಾ ಮ್ಯಾಜಿಸ್ಟ್ರೇಟರ ಬೆಂಚ್‌ಯೆಂಬ ಸಮುದಾಯದವರ ಸ್ಥಳಾಧಿಕಾರ ಸರಹದ್ದಿಗೆ ಒಳಪಟ್ಟಿರುತ್ತಿದೆಯೋ ಅಂತವರಿಂದ ದರ್ಯಾಫ್ತೀಮೂಲಕ ವ್ಯವಸ್ಥೆಯಾಗತಕ್ಕದ್ದಾಗಿರುತ್ತೆ. ಮತ್ತು ಅಂತಾ ಮ್ಯಾಜಿಸ್ಟ್ರೇಟರು ಯಾ ಸಮುದಾಯದವರು ಹಾಗೆ ತಕರಾರ್‌ನಲ್ಲಿರುವ ಬಾಡಿಗೇ ಮೊಬಲಗನ್ನು ವ್ಯವಸ್ಥೆ ಮಾಡುವದಲ್ಲದೆ ಅಂತಾ ಮ್ಯಾಜಿಸ್ಟ್ರೇಟರಿಗೆ ಅಥವಾ ಸಮುದಾಯದವರಿಗೆ ಯುಕ್ತವೆಂದು ತೋರುವಷ್ಟು ಮೊಬಲಗನ್ನು ಕಾಲವನ್ನು ವ್ಯರ್ಥಗೊಳಿಸಿದ ಬಗ್ಗೆ ಪರಿಹಾರಕವಾಗಿ ತಕರಾರ್‌ದಾರರ ಪೈಕಿ ಯೊಬ್ಬನು ಮತ್ತೊಬ್ಬನಿಗೆ ಕೊಡುವಂತೆ ಹುಕ್ಕುಂ ಮಾಡಬಹುದು.

ಈ ಪ್ರಕರಣವನ್ನನುಸರಿಸಿ ಸಲ್ಲಬೇಕೆಂದು ನಿರ್ಣಯವಾದ ಅಥವಾ ಕೊಡುವಂತೆ ಹುಕುಮಾದ ಯಾವ ಮೊಬಲಗೇಯಾಗಲಿ ಜುರ್ಮಾನೆಮೊಬಲಗಾಗಿದ್ದರೆ ಹ್ಯಾಗೋ ಹಾಗೆ ವಸೂಲ್ಮಾಡಲ್ಪಡತಕ್ಕದ್ದು.

ಈ ಪ್ರಕರಣವನ್ನನುಸರಿಸಿ ಯಾವ ಮೊಕದ್ದಮೆಯಲ್ಲಾಗಲಿ, ಅಂತಾ ಮ್ಯಾಜಿಸ್ಟ್ರೇಟರಿಂದ ಅಥವಾ ಸಮುದಾಯದವರಿಂದ ಮಾಡಲ್ಪಡುವ ನಿರ್ಣಯವು ಆಖೈರಾಗಿರತಕ್ಕದ್ದು.

ಅಂತಾ ಯಾವದಾದರೊಂದು ಮೊಕದ್ದಮೆಯು ಮ್ಯಾಜಿಸ್ಟ್ರೇಟ್ ಸಮುದಾಯದವರಿಂದ ದರ್ಯಾಫ್ತಿ ಮಾಡಲ್ಪಡುವಾಗ್ಯೆ ಅಂತಾ ಮ್ಯಾಜಿಸ್ಟ್ರೇಟ್ ಸಮುದಾಯದ ಮೆಂಬರ್‌ಗಳಲ್ಲಿ ಭಿನ್ನಾಭಿಪ್ರಾಯ ವುಂಟಾದರೆ ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆಯಲ್ಲಿ, ಅಂತಾ ಮೆಂಬರುಗಳೊಳು ಭಿನ್ನಾಭಿಪ್ರಾಯಗಳು ವುಂಟಾದರೆ ಅವು ಹ್ಯಾಗೆ ವ್ಯವಸ್ಥೆ ಮಾಡಲ್ಪಡುವವೋ ಹಾಗೆಯೇ ವ್ಯವಸ್ಥೆ ಮಾಡಲ್ಪಡತಕ್ಕದ್ದು.

8. ಯಾವಕಾಲದಲ್ಲಾಗಲಿ 7ನೇ ಪ್ರಕರಣದೊಳು ನಮೂದಿಸಲ್ಪಟ್ಟಿರುವ ಯಾವದಾದರು ತಕರಾರ್ ವುಂಟಾದರೆ, ಅಂತಾ ತಕರಾರ್ ವಿಷಯದಲ್ಲಿ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟಾದರೂ, ಕೋರ್ಟು ಮಾಡುತ್ತಲಿದ್ದರೆ, ಗಾಡಿಯ ಬಾಡಿಗೇದಾರನು ಸದರೀ ಪ್ರಕರಣವನ್ನನುಸರಿಸಿ ಅರ್ಜೀ ಕೊಡತಕ್ಕ ಬಗ್ಯೆ ಅಂತಾ ಮ್ಯಾಜಿಸ್ಟ್ರೇಟರ ಕೋರ್ಟಿಗೆ ತನ್ನನ್ನು ಅದೇ ಗಾಡಿಯಲ್ಲಿ ಕರೆದುಕೊಂಡು ಹೋಗುವಂತೆ ಸದರೀ ಗಾಡಿ ನಡೆಸುವವನನ್ನು ಅಪೇಕ್ಷಿಸಬಹುದು.

ಅಂತಾ ಅಪೇಕ್ಷೆಯನ್ನು ನಡಿಸಲು, ಉಪೇಕ್ಷಿಸುವ ಅಥವಾ ನಿರಾಕರಿಸುವ ಗಾಡಿ ನಡೆಸತಕ್ಕವನ್ಯಾವನಾದರೂ ಒಂದು ತಿಂಗಳವರಿವಿಗೆ ಕೈದು ಸಜಾ ಮೂಲಕವಾಗಲಿ, ೫೦ ರೂಪಾಯಿಗಳಿಗೆ ಮೀರದ ಜುರ್ಮಾನೆಯಮೂಲಕವಾಗಿಯಾಗಲಿ, ಅಥವಾ ಎರಡರಮೂಲಕವಾಗಿಯಾಗಲಿ ದಂಡಿಸಲ್ಪಡತಕ್ಕದ್ದು.

9. ಈ ರೆಗ್ಯುಲೇಷನ್ ಅನುಸರಿಸಿ ಯಾವದಾದರು ಬಾಡಿಗೇ ಗಾಡಿಯಲ್ಲಿ ಸವಾರಿ ಹೋಗತಕ್ಕ ಯಾವ ಮನುಷ್ಯನೇಯಾಗಲಿ, ಮನಃಪೂರ್ವಕವಾಗಿಯಾದರೂ, ಅಥವಾ ಅಶ್ರದ್ಧೆಯಿಂದಲಾದರೂ ಸದರೀ ಗಾಡಿಗೆ ನಷ್ಟ ವುಂಟುಮಾಡಿದರೆ ಅವನು ೨೦ ರೂಪಾಯಿಗಳತನಕ ಒಂದು ಜುರ್ಮಾನೆಮೂಲಕ ಶಿಕ್ಷಿಸಲ್ಪಡತಕ್ಕದ್ದಲ್ಲದೆ ಬಾಡಿಗೆ ಬಂಡಿಯ ಸ್ವಂತಗಾರನಿಗೆ ನಷ್ಟದಬಗ್ಯೆ ಪರಿಹಾರ ದ್ರವ್ಯ ಕೊಡತಕ್ಕದ್ದು. ಸದರೀ ಪರಿಹಾರದ್ರವ್ಯದ ಮೊತ್ತವು ದಂಡಿಸತಕ್ಕ ಮ್ಯಾಜಿಸ್ಟ್ರೇಟರಿಂದ ಗೊತ್ತುಮಾಡಲ್ಪಟ್ಟು ಜುರ್ಮಾನೆ ತರೀಕ್ ವಸೂಲ್ಮಾಡಲ್ಪಡತಕ್ಕದ್ದು.

ಕೆ. ಶೇಷಾದ್ರಿಅಯ್ಯರ್,
ಮೈಸೂರು ಸಂಸ್ಥಾನದ ದಿವಾನ್.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 15 ಸರ್ಕಾರದಿಂದ ಫ್ರಾಯಿಸ್ಷ್ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ಏಪ್ರಿಲ್ ತಾ|| 16, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 18ನೇ ಮಾರ್ಚಿ 1887.

ಕ್ಯಾಂಪ್ ನಂ. 2042.—ಕೋಲಾರ ಡಿಸ್ಟ್ರಿಕ್ಟಿನೊಳಗಣ ಇದರಡೀ ಕಂಡ ಗ್ರಾಮಗಳ ವರ್ಗಾವರ್ಗಿಯು 1887ನೇ ಇಸವಿ ಏಪ್ರೆಲ್ ಗುರ್‍ರೇ ಲಾಗಾಯತು ಜಾರಿಯಲ್ಲಿ ಬರತಕ್ಕದ್ದೆಂದು ಮಂಜೂರ್ಮಾಡಲ್ಪಟ್ಟಿರುತ್ತೆ.

ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕಿನಿಂದ ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕಿಗೆ:—

1. ದಬ್ಬಕುಂಟೆ (ಸರ್ಕಾರಿ)
2. ಅಂಬಲಿಪುರ (ಜೋಡಿ)

ತಾರೀಖು 26ನೇ ಮಾರ್ಚಿ 1887.

ಕ್ಯಾಂಪ್ ನಂ. 2188.—ಇದರಿಂದ ಪ್ರಕಟಪಡಿಸುವದೇನಂದರೆ, ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಿಗೋಸ್ಕರ 1877ನೇ ಇಸವಿ ಜೂನ್ 13ನೇ ಮರ್ಕುಂ 72ನೇ ನಂಬರಿವುಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯಲ್ಲಿ ಬೊಂಬಿನ ಭರ್ತಿ ಭಂಡಿ 1ಕ್ಕೆ ರೂಪಾಯಿ 1—4—0 ಯಂತೆ ಗೊತ್ತುಮಾಡಲ್ಪಟ್ಟ ದರವು, ಭಂಡಿಬೋಜೆ ವಂದಕ್ಕೆ ರೂ. 2—8—0 ಕ್ಕೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

3&4.

ತಾರೀಖು 30ನೇ ಮಾರ್ಚಿ 1887.

ಕ್ಯಾಂಪ್ ನಂ. 2287.—ಪಬ್ಲಿಕ್‌ವರಿಕ್ಸ್ ಇಲಾಖೆಯಲ್ಲಿ ಜಾರೀಲಿರುವ ಮ.ಲ್ನಾಡು ತಾಲ್ಲೂಕುಗಳ ತರಗತಿಯನ್ನ ಅನುಸರಿಶಿ ಸರ್ 1886ನೇ ಇಸವಿ ಮೇ 20ನೇ ಮುರ್ಸ್ಕಂ 77ನೇ ನಂಬರ್ ಇಸ್ತಿಹಾರಿನಲ್ಲಿ ನಮೂದಿಶಿದ ಮಲ್ನಾಡು ತಾಲ್ಲೂಕುಗಳ ಪಟ್ಟಿಗೆ ಶಿವ ಮೊಗ್ಗಾ ಡಿಸ್ಟ್ರಿಕ್ಟ್ನ ಪೈಕಿ ಶಿಕಾರಿಪುರ ತಾಲ್ಲೂಕು ಶೇರಿಸಲ್ಪಟ್ಟಿರುತ್ತದೆ.

ತಾರೀಖು 2ನೇ ಏಪ್ರಿಲ್ 1887.

ಕ್ಯಾಂಪ್ ನಂ. 6.—1885ನೇ ಇಸವಿ ಮಾರ್ಚಿ 24ನೇ ಮುರ್ಸ್ಕಂ 242ನೇ ನಂಬರ್ ಇಸ್ತಿಹಾರಿನಲ್ಲಿ ಕಾಫಿ ಜಮೀನಿಗಾಗಿ ಎಕರೆ ಮೇಲೆ ಕಂದಾಯ ಕರಾವು ಮಾಡುವ ಬಗ್ಗೆ ನಿಬಂಧನೆಗಳು ವಿಧಿಸಲ್ಪಟ್ಟಿರುತ್ತವೆಯಷ್ಟೆ, ಆ ಇಸ್ತಿಹಾರ್‌ನಾಮೆಯ 10ನೇ ಕಲಂ ಅನುಸರಿಸಿ ಹುಲ್ಲುಗಾವಲ್ ಕಂದಾಯಕ್ಕೆ ಇನ್ನು ಮೇಲೆ ಕೊಡಲ್ಪಡುವ ಜಮೀನುಗಳ ಕವುಲ್‌ಗಳಲ್ಲಿ ಮೇಲ್ಕಂಡ ಇಸ್ತಿಹಾರ್‌ನಾಮೆಯ 6ನೇ ಕಲಮಿನಲ್ಲಿ ನಮೂದಿರುವ ಸರ್ಕಾರಕ್ಕೆ ವುಳಿಕೊಳ್ಳಲ್ಪಟ್ಟ ಮರಗಳ ಪಟ್ಟಿಗೇ ಬಿಳೀಮತ್ತಿ ವ ಕರೀಮತ್ತಿ ಮರಗಳು ಶೇರಿಸಲ್ಪಡ ತಕ್ಕದ್ದು.

ಕ್ಯಾಂಪ್ ನಂ. 8.—ಕಾಫಿ ಸಾಗುವಳಿಗೋಸ್ಕರ ಕೊಡಲ್ಪಟ್ಟ ಜಮೀನುಗಳ ಫೈಸಲಾತಿಗೆ ಸಂಬಂಧಪಟ್ಟ 1885ನೇ ಇಸವಿ ಮಾರ್ಚಿ 24ನೇ ಮುರ್ಸ್ಕಂ 242ನೇ ನಂಬರ್ ಇಸ್ತಿಹಾರ್‌ನಾಮೆಯ 5ನೇ ಪ್ಯಾರಾ (,) ಕ್ಲಾಜ್ ಅನುಸರಿಸಿ ಇದರಡೀಕಂಡ ಸೀನಿಯರೇಜ್ ಯಾನೆ ತೀರ್ವೆ ದರಗಳು, ಕಾಫಿ ಜಮೀನುಗಳಲ್ಲಿ ಬೆಳೆಯುವ ಸರ್ಕಾರಕ್ಕೆ ಉಳಿಸಿಕೊಳ್ಳಲ್ಪಟ್ಟ ನಾನಾ ಜಾತಿ ಮರಗಳಿಗೆ, ಅವು ಹಿಡುವಳೀ ದಾರನ ವಾಸ್ತವ್ಯವಾದ ಸ್ವಂತ ಕೆಲಸಕ್ಕೆ ಅಲ್ಲದೆ ಅನ್ಯಥಾ ಕಡಿಯಲ್ಪಟ್ಟಾಗ ವಸೂಲ್ಮಾಡಲ್ಪಡತಕ್ಕದ್ದೆಂದು ಗೊತ್ತುಮಾಡಲ್ಪಟ್ಟಿರುತ್ತೆ:—

ಕಡಿಯಲ್ಪಟ್ಟ ದರ ಮರ		1ಕ್ಕೆ ರೂಪಾಯಿ.	ಕಡಿಯಲ್ಪಟ್ಟ ದರ ಮರ		1ಕ್ಕೆ ರೂಪಾಯಿ.
ತೇಗ	..	8	ಹೊನ್ನೆ	..	3
ಪೂರ್	..	6	ಜಾಲಾರಿ	..	3
ಕರೀಮರ	..	8	ನಂದಿ	..	3

ಹುಕ್ಕುಂ ಬಮೋಜಿಬ್,
ಆರ್. ವಿಜಯರಾಘವೇಂದ್ರರಾವ್,
ಚೀಫ್ ಸೆಕ್ರೆಟರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಛಾಯಿಸಿ ಆದ್ದು.

ಬೆಂಗಳೂರು, ಶನಿವಾರ, ಏಪ್ರೆಲ್ ತಾ॥ 16, ಸ್ತ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜಾ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಅಂಚೇ ಇಲಾಖಾ.

ನಂ. 22—12. ತಾರೀಖು 13ನೇ ಏಪ್ರೆಲ್ 1887.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫೀಸುಗಳು ಸ್ಥಾಪಿಸಲ್ಪಟ್ಟಿರುತ್ತೆ.

ತಾಲ್ಲೂಕು.	ಅಂಚೆ ಆಫೀಸು ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಗೋರೀಬಿದನೂರು	ತರದಾಳು
ನಂಜನಗೂಡು	ಚಿಕ್ಕಯ್ಯನ ಛತ್ರ.

ಬಿ. ಮರಿಗಂಗೈಯ್ಯ,
ಅಂಚೇ ಬಕ್ಷಿ.

ಪೊಲೀಸ್ ಇಲಾಖಾ.

ತಾರೀಖು 8ನೇ ಮಾರ್ಚೀ 1887.

ಬಾಳೀ ಹೊನ್ನೂರು ಮತ್ತು ಯಡಿಹಳ್ಳಿ ಸ್ಟೇಷನುಗಳ ಸರಹದ್ದಿನ ವಳಗೆ ಯಿರತಕ್ಕ ಕಾಡಕೊಡಗಿ ಗ್ರಾಮದಲ್ಲಿನ ಚಂದಯ್ಯನ ಮನೆಯಿಂದ 1885ನೇ ಇಸವಿ ಮೇ 13ನೇ ತಾರೀಖಿನಲ್ಲಿ ಚೋರಿಯಿಂದ ವಯ್ಯೋಣಾದ ಸುಮಾರು 12 ವರುಷ ವಯಸ್ಸುಳ್ಳ ಗುತ್ತಿ, ಯಂಬ ಹುಡುಗಿಯ ಪತ್ತೇ ವಿಷಯದಲ್ಲಿ ಸಾಧಕವಾದ ವರ್ತಮಾನ ಕೊಡುವಂಥವರಿಗೆ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಯಲ್. ರಿಕ್ಕೆಟ್ಸ್,
ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್.

ಫಾರೆಸ್ಟ್ ಇಲಾಖಾ.

ತಾರೀಖು 23ನೇ ಮಾರ್ಚೀ 1887.

ಇದರಿಂದ ಸರ್ವರಿತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತಿ ಬಾಬತು ಯಿದ ರಡೀ ಕಂಡ ಮರಗಳು ಫಾರೆಸ್ಟು ಅಸಿಸ್ಟೆಂಟ್ ಕನ್ಸರ್‌ವೇಟರವರಿಂದ ಆಯಾತಾರೀಖುಗಳಲ್ಲಿ ಬಹಿರಂಗವಾದ ಹರಾಜುಮೂಲಕ ವಿಕ್ರ ಯಿಸಲ್ಪಡುತ್ತೆ.

ಡಿಪೋ ಹೆಸರು.	ಹರಾಜ್ ತಾರೀಖು.	ತೇಗದನಾಟಾಗಳು.	ಕಾಡುಮರದ ನಾಟಾಗಳು.	ತೇಗದ ಮತ್ತು ಕಾಡುಜಾತಿ ಕೊಳೆಗಳು.	ಷರಾ.
ಸೊರಬ ತಾಲ್ಲೂಕು ತೆಲಗಡ್ಡೆ ..	2ನೇ ಮೇ 1887	100	..	..	ಹೆಚ್ಚು ಕಡಿಮೆಯಾಗಿ.
ಷಿಕಾರೀಪುರ ..	7ನೇ ಡಿಟ್ಟೋ	..	100	350	
ಶಿರಾಳಕೊಪ್ಪ ..	8ನೇ ಡಿಟ್ಟೋ	..	150	..	
ಚನ್ನಗಿರಿ ..	13ನೇ ಡಿಟ್ಟೋ	25	10	300	
ಆಯಿನೂರು ..	22ನೇ ಡಿಟ್ಟೋ	150	400	100	
ಶಿವಮೊಗ್ಗಾ ..	24ನೇ ಡಿಟ್ಟೋ	180	100	300	
ಕೊಪ್ಪದ ತಾಲ್ಲೂಕು ಕಣಬೂರು ..	28ನೇ ಡಿಟ್ಟೋ	..	300	..	
ತರೀಕೆರೆ ತಾಲ್ಲೂಕು ಲಕ್ಕುವಳ್ಳಿ .	1ನೇ ಜೂನ್ ಡಿಟ್ಟೋ	2,200	400	600	

ಹರಾಜಿನ ಷರತ್ತುಗಳು—1873ನೇ ಇಸವಿ ಜೂನ್ 12ನೇ ಮರ್ಕ್ಯುಂ 10ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಛಾಯಿಷ್ಮಾಡ ಲ್ಪಟ್ಟ ಪ್ರಕಾರ ಯಿರತಕ್ಕವು, ಮತ್ತು ಹರಾಜ್‌ಕಾಲದಲ್ಲಿ ವೋದಲ್ಪಡುವದು.

ತಾರೀಖು 30ನೇ ಮಾರ್ಚೀ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಮತ್ತೊಂದು ಹುಕುಂ ಕೊಡುವ ವರಿಯಂತ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗ ಳಲ್ಲಿಯು ಇದರಡೀ ಕಂಡ ಡಿಪೋಗಳಲ್ಲಿ ಮರಗಳ ಹರಾಜು ಸಾಲೀಯಾನಾ ಇದರಡೀ ನಮೂದಿರುವ ತಾರೀಖುಗಳಲ್ಲಿ ನಡಿಸಲ್ಪಡುವದು.

ಡಿಪೋ ಹೆಸರು.	ಸಾಲೀಯಾನಾ ಹರಾಜು ನಡಿಸುವ ತಾರಿಖು.
ತೆಲಗದ್ದೆ (ಅಜಮಾಯಿಷಿ ತರೀಕೆ)	2ನೇ ಮೇ
ಷಿಕಾರಿಪುರ	7ನೇ ಡಿಟ್ಟೋ
ಶಿರಾಳಕೊಪ್ಪ	8ನೇ ಡಿಟ್ಟೋ
ಚನ್ನಗಿರಿ	13ನೇ ಡಿಟ್ಟೋ
ಉಬ್ರಾಣಿ (ಅಜಮಾಯಿಷಿ ತರೀಕೆ)	18ನೇ ಡಿಟ್ಟೋ
ತರೀಕೆರೆ	20ನೇ ಡಿಟ್ಟೋ
ಆಯಿನೂರು	22ನೇ ಡಿಟ್ಟೋ
ಶಿವಮೊಗ್ಗ	24ನೇ ಡಿಟ್ಟೋ
ಕಣಬೂರು	28ನೇ ಡಿಟ್ಟೋ
ಲಕ್ಕುವಳ್ಳಿ	1ನೇ ಜೂನ್.

ಯಲ್. ರಿಕ್ಕೆಟ್ಸ್,
ಫಾರೆಸ್ಟು ವ ಪ್ಲಾಂಟೇಷನ್ಗಳ
ಇನ್ಸ್ಪೆಕ್ಟರ್ ಜನರಲ್.

ತಾರೀಖು 24ನೇ ಮಾರ್ಚಿ 1887.

ಇದರಿಂದ ಸರ್ಕಾರ ತಿಳುವಳಿಕೆ ಬಗ್ಯೆ ಪ್ರಕಟಪಡಿಸುವದೇನಂದರೆ, ಚಾಮರಾಜನಗರದ ಫಾರೆಸ್ಟುಗಳಲ್ಲಿ, ಮೇಕೆಗಳು ವಿನಾ ದನಗಳು ಮಾತ್ರ ಮೇಯುವ ಬಗ್ಯೆ ವಂದು ಕಾಲಾವಧಿಯಲ್ಲಿ ಅಂದರೆ ಜೂನ್ ಗುರ್ರೇ ಲಾಗಾಯತು 1888ನೇ ಇಸವಿ ಜನವರೀ ಆಖೈರ್ ಪರಿಯಂತ ದರ ರಾಸು 1ಕ್ಕೆ ನಾಲ್ಕಾಣೆ ಪಾವತೀ ಮಾಡಿದ ಮೇಲೆ ಅಪ್ಪಣೆ ಕೊಡಲ್ಪಡುವದು, ಮತ್ತು ಆ ಬಗ್ಯಾಗಿ ಟಿಕೇಟುಗಳು ಕೊಡಲ್ಪಡುವದು. ವಂದು ವರುಷಕಿಂತ ಕಂ ವಯಸ್ಸಿನ ಕರಗಳು ವಿನಾಯಿಸಲ್ಪಡತಕ್ಕವು. ಫಾರೆಸ್ಟು ಇಲಾಖೆಯವರು, ಈ ಇಸ್ತಿಹಾರ್ನಾಮೆಯ ಅಂತ್ಯಭಾಗದಲ್ಲಿ ಕಂಡ ವಿನಾಯಿತಿಗೆ ಸಂಬಂಧಪಟ್ಟ ಯಾವ ಭಾಗಗಳನ್ನಾಗಲೀ ಬಂದ್ ಮಾಡುವ ಮತ್ತು ಮೇಯುವ ಬಗ್ಯೆ ಅಪ್ಪಣೆ ಕೊಡಲ್ಪಟ್ಟ ರಾಸುಗಳ ಸಂಖೆಯನ್ನು ಗೊತ್ತು ಮಾಡುವ ಹಕ್ಕುದಾರೀಯನ್ನು ಸಹ ತಮ್ಮಲ್ಲಿಯೇ ಉಳಸಿಕೊಂಡಿರುತ್ತಾರೆ. ರಾಸುಗಳ ಮಂದೆಗಳು ಅವು ಯಾವ ಗ್ರಾಮಗಳಿಗೆ ಶೇರಿರುತವೋ ಅಂಥಾ ಗ್ರಾಮಗಳಿಗೆ ಸಮೀಪವಾದ ಬೇರೇ ಬೇರೆ ಪ್ರದೇಶಗಳಿಗೆ ಭಾಗಿಸಲ್ಪಡತಕ್ಕವು.

ಲೈಸೆನ್ಸ್ ಯಿಲ್ಲದೆ ಮೇಯುತ್ತಿರುವ ಯಾವ ದನಗಳಾಗಲಿ ದೊಡ್ಡಿಗೆ ದಾಖಲ್ಮಾಡಲ್ಪಟ್ಟು ಅವುಗಳ ಸ್ವಂತಗಾರರ ಮೇಲೆ ಪ್ರಾಸಿಕ್ಯೂಷನ್ಯಾನೆ ಫಿರ್ಯಾದ್ ಮಾಡಲ್ಪಡತಕ್ಕದ್ದು.

ದನಗಳ ದೊಡ್ಡೀಬಗ್ಯಾಗಿ ಯಾವ ಯಳೇಮರಗಳಾದರೂ ಯಾವ ಸಂದರ್ಭಗಳಲ್ಲೂ ಕಡಿಯಲ್ಪಡಕೂಡದು, ಮತ್ತು ಆ ಬಗ್ಯಾಗಿ ಬೇಕಾಗುವ ತಮಾಂ ಬೊಂಬುಗಳೂ ದರ ಭಂಡಿ ಬೋಜಾ 1ಕ್ಕೆ ವಂದು ರೂಪಾಯಿ ಪ್ರಕಾರ ಫಾರೆಸ್ಟು ಇಲಾಖೇಯಿಂದ ಕ್ರಯಕ್ಕೆ ತೆಗದುಕೊಳ್ಳಲ್ಪಡತಕ್ಕದ್ದು, ಹಾಂಗೆ ಖರೀದಿ ಮೊಬಲಗು ಪಾವತೀ ಮಾಡಿದ ತರುವಾಯ ಅವುಗಳನ್ನ ಕಡಿದು ಸಾಗಿಸತಕ್ಕಲಾಗವಡು ಆಯಾ ಜನಗಳಿಗೆ ಶೇರಿರುತ್ತೆ. ಮುಳ್ಳು ಕಂಪೆಗಳು ಮುಫತ್ತಾಗಿ ತೆಗೆದುಕೊಳ್ಳಲ್ಪಡಬಹುದು.

ವಿನಾಯಿತಿಗಳು.

(1.) ಸೊಸ್ಸಿನಾಟ್ಟುವ ಬಗ್ಯಾಗಲೀ ಮತ್ಯಾವ ಇತರ ವಿಧವಾಗಿಯಾದರೂ ಪುನರಭಿವೃದ್ಧಿ ಮಾಡುವ ಬಗ್ಯಾಗಲೀ ಉಳಸಿಕೊಳ್ಳಲ್ಪಟ್ಟ ಅಂಥಾ ಪ್ರದೇಶಗಳಿಗೆ ದನಗಳು ಅವಕಾಶ ಕೊಡಲ್ಪಡದೆ ಯಿರುವಂಥಾ ಯಾವದಾದರು ಜಂಗಲೀ ಪ್ರದೇಶಗಳು.

(2.) ಫಾರೆಸ್ಟು ಆಫೀಸರರು, ಭೂಗುಣದ ದಶೇಯಿಂದಲಾಗಲೀ, ಫಾರೆಸ್ಟು ಬೆಳೆಯುವದರ ದೆಸೇಯಿಂದಲಾಗಲೀ ಯಾ ಯಾವದಾದರೂ ವಿಶೇಷ ಸಂದರ್ಭಗಳ ಆವಶ್ಯಕತೆಗೋಸ್ಕರವಾಗಲೀ ಯಾವ ಪ್ರದೇಶದಲ್ಲಿಯಾದರೂ ಮೇಯುವದನ್ನ ಅಡ್ಡೀ ಪಡಿಸುವದು ಉತ್ತಮವೆಂಬದಾಗಿ ಭಾವಿಸುವಂಥಾ ಪ್ರದೇಶಗಳು.

ತಾರೀಖು 28ನೇ ಮಾರ್ಚಿ 1887.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡೀಕಂಡ ಫಾರೆಸ್ಟುಗಳಿಂದ ಆಯಾ ಡಿಪೋಗಳಿಗೆ 1888ನೇ ಇಸವಿ ಮಾರ್ಚಿ 31ನೇ ತಾರೀಖಿನ ಪರಿಯಂತ ನಾಟಾ ವ ಬೊಂಬುಗಳನ್ನು ಸಾಗಿಸುವ ಬಗ್ಯಾಗಿ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತವೆ.

ತಾಲ್ಲೂಕು.	ಫಾರೆಸ್ಟು.	ಡಿಪೋ ಹೆಸರು.
ಗುಂಡ್ಲು ಪೇಟೆ	ಬಂಡಿಪುರ	ಮೈಸೂರು ಉಡಿಯಾರಡು, ಹಂಗಲದ ಡಿಪೋ
ಡಿಟ್ಟೋ	ಬಾರೆಂಬಾಡಿ	ಡಿಟ್ಟೋ ಮದ್ದೂರು ಡಿಪೋ.
ಹೆಗ್ಗಡದೇವನಕೋಟೆ	ಆಯಿನೂರು ಮಾರಿಗುಡಿ	ಡಿಟ್ಟೋ ಹುರದ ಡಿಪೋ.
ಡಿಟ್ಟೋ	ಬೇಗೂರು	ಡಿಟ್ಟೋ ಬೇಗೂರು ಡಿಪೋ.
ಡಿಟ್ಟೋ	ಕಾಕನಕೋಟೆ	ಡಿಟ್ಟೋ ಅಂತರಸಂತೆ ಡಿಪೋ.
ಡಿಟ್ಟೋ	ಮತ್ತಿ ಕುಪ್ಪೆ	ಡಿಟ್ಟೋ ಡಿಟ್ಟೋ.
ಹುಣಸೂರು	ವೀರನಹೊಸಹಳ್ಳಿ	ಡಿಟ್ಟೋ ಹುಣಸೂರು ಡಿಪೋ.
ಡಿಟ್ಟೋ	ಆನೆಚೌಕೂರು ಮತ್ತು ದೊಡ್ಡ ಬಾರವೇ ಫಾರೆಸ್ಟು.	ಡಿಟ್ಟೋ ಡಿಟ್ಟೋ
ಡಿಟ್ಟೋ	ಮಾವಕಲ್ ಮತ್ತು ಲಿಂಗಾಪುರ ಫರೆಸ್ಟ್	ಡಿಟ್ಟೋ ಡಿಟ್ಟೋ.
ಚಾಮರಾಜನಗರ	ಚಾಮರಾಜನಗರದ ಫಾರೆಸ್ಟುಗಳು	ಡಿಟ್ಟೋ ಚಾಮರಾಜನಗರದ ಡಿಪೋ.

2. ತಮಾಂ ದರಖಾಸ್ತುಗಳೂ, "ಮೈಸೂರು ಡಿಸ್ಟ್ರಿಕ್ಟಿನಲ್ಲಿ ನಾಟಾ ವ ಬೊಂಬುಗಳನ್ನು ಫಾರೆಸ್ಟುಗಳಿಂದ ಡಿಪೋಗಳಿಗೆ ಸಾಗಿಸುವ ಬಗ್ಯೆ ದರಖಾಸ್ತು" ಯೆಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ದರಖಾಸ್ತುಗಳು, ಮೈಸೂರು ಡಿಸ್ಟ್ರಿಕ್ಟಿನ ಫಾರೆಸ್ಟು ವ ಗವರ್ನಮೆಂಟ್ ಫಾರಂಗಳ ಸೂಪರ್ಇಂಟೆಂಡೆಂಟರವರಿಂದ 1887ನೇ ಇಸವಿ ಮೇ 15ನೇ ತಾರೀಖಿನ ವರಿಗೆ ತೆಗದುಕೊಳ್ಳಲ್ಪಟ್ಟು ಮತ್ತು ಸದರೀ ತಾರೀಖಿನಲ್ಲಿ ಅವು ವ್ಯವಸ್ತೆ ಮಾಡಲ್ಪಡುವವು.

4. ದರಖಾಸ್ತು ಮಾಡಲು ಯಿಚ್ಛೆವುಳ್ಳ ಕಂಟ್ರಾಕ್ಟುದಾರರು ಮೇಲೆ ಕಂಡ ಫಾರೆಸ್ಟುಗಳ ಪೈಕಿ ವಂದಕ್ಕಿಂತಲೂ ಜಾಸ್ತೀ ಫಾರೆಸ್ಟುಗಳಿಂದ ಸಾಗಿಸುವ ಬಗ್ಯೆ ದರಖಾಸ್ತು ಮಾಡಿದ ಪಕ್ಷದಲ್ಲಿ ಅವರು ನಾಟಾ ಯಾ ಬೊಂಬುಗಳನ್ನು ಪ್ರತಿ ವಂದು ಫಾರೆಸ್ಟಿನಿಂದಲೂ, ಆಯಾ ಡಿಪೋಗಳಿಗೆ ಸಾಗಿಸುವ ಬಗ್ಯೆ ಒಪ್ಪಿಕೊಳ್ಳುವ ಕಮ್ಮೀ ದರವನ್ನು ಬೇರೆಬೇರೆಯಾಗಿ ನಮೂದಿಸತಕ್ಕದ್ದು.

5. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು, ಮೈಸೂರು ಉಡಿಯಾರಡಿಗೆ ಅಲ್ಲಿಂದ ಸಾಗಿಸಲು ಉದ್ದೇಶಿಸಲ್ಪಟ್ಟ ತಮಾಂ ಚದರ ನಾಟಾಗಳನ್ನೂ ಫಾರೆಸ್ಟು ಇಲಾಖೆ ನವಕರರಿಂದ ತನ್ನ ಕಡೆ ಜನಗಳು ವಹಿಸಿಕೊಂಡ ಲಾಗಾಯತು 40 ದಿವಸಗಳ ವಳಗಾಗಿ ಭಂಡೀ ಮೂಲಕ ಸಾಗಿಸುವ ಬಗ್ಯೆ ಬದ್ಧನಾಗಿರತಕ್ಕದ್ದು; ಮತ್ತು ಅವುಗಳನ್ನ ಅವನ ಕಡೆ ಏಜಂಟರಾಗಲೀ ಭಂಡಿಯವರಾಗಲಿ ಅವರ ಸ್ವಾಧೀನಕ್ಕೆ ತೆಗದುಕೊಂಡ 40 ದಿವಸಗಳವಳಗಾಗಿ ಉಡಿಯಾರಡಿಗೆ ತಲಪಿಸದೆ ಯಿದ್ದರೆ ಆತನು ಭಂಡಿಗೋಸ್ಕರ ಉಂಟಾದ ಯಾವ ನಷ್ಟಗಳಿಗಾಗಲಿ ತಮಾಂ ಹಕ್ಕುದಾರಿಗಳನ್ನೂ ದಂಡವಾಗಿ ಕಳೆದುಕೊಳ್ಳತಕ್ಕದ್ದು.

6. ಉದ್ದೇಶಿಸುವ ಕಂಟ್ರಾಕ್ಟುದಾರರಿಗೆ ಅಪೇಕ್ಷಿತವಾದ ಯಿನ್ನು ಜಾಸ್ತಿ ಸಂಗತಿಗಳು, ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟುವ ಗವರ್ನಮೆಂಟ್ ಫಾರಂಗಳ ಸೂಪರ್ಇಂಟೆಂಡೆಂಟರವರ ಆಫೀಸಿನಲ್ಲಿ ವಿಚಾರಿಸಿ ಪಡೆಯಬಹುದು.

7. ಫಾರೆಸ್ಟುಗಳ ಸೂಪರ್ಇಂಟೆಂಡೆಂಟರವರು ಕಮ್ಮೀದರದ ಅಥವಾ ಮತ್ಯಾವ ದರಖಾಸ್ತನ್ನಾಗಲಿ ಅಂಗಿಕರಿಸುವದಕ್ಕೆ ಬದ್ಧರಾಗಿರುವದಿಲ್ಲವು.

8. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತನ್ನ ದರಖಾಸ್ತುಪ್ರಕಾರ ಕ್ರಮವಾಗಿ ನಡೆದುಕೊಳ್ಳುವ ಬಗ್ಯೆ ಜಾಮೀನಿ ತರೀಕ ಫಾರೆಸ್ಟು ವಂದಕ್ಕೆ 150 ರೂಪಾಯಿ ಪ್ರಕಾರ ಡಿಪಾಜಿಟ್ ಕಟ್ಟತಕ್ಕದ್ದಲ್ಲದೆ ಒಂದು ಕರಾರನ್ನೂ ಬರೆದು ಕೊಡತಕ್ಕದ್ದು.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡೀಕಂಡ ತಾಲ್ಲೂಕುಗಳಲ್ಲಿನ ಹಿಡುವಳಿಯಲ್ಲಿ ಯಿಲ್ಲದ ಕಂದಾಯ ಗೊತ್ತಿಲ್ಲದಂಥಾ ಮತ್ತು ಗೊತ್ತು ಮಾಡಲ್ಪಟ್ಟ ಜಮೀನುಗಳು ಅಡಗಿರುವಂಥಾ ಡಿಸ್ಟ್ರಿಕ್ಟು ಫಾರೆಸ್ಟುಗಳ, ಗ್ರಾಮ ಬೇಲಿಗಳ, ಅಮೃತ ಮಹಲ್ ಕಾವಲ್‌ಗಳು ವಿನಾ, ಅಮರಾಯಿ ಮತ್ತು ಅಮರಾಯಿ ಬೇಲಿಗಳ ಪಸಾರೆ ಜುಟ್ಟುವಳಿಗಳನ್ನ 1887ನೇ ಇಸವಿ

ಮೇ 1ನೇ ಮರ್ಸ್ಕಂ ಲಾಗಾಯತು 1888ನೇ ಇಸವಿ ಏಪ್ರೆಲ್ 30ನೇ ಮರ್ಸ್ಕಂ ವರಿಗೆ ಜಮಾಯಿಸುವ ಹಕ್ಕುದಾರಿಯು ಆಯಾ ತಾಲ್ಲೂಕು ಅಮಲ್‌ದಾರರ್ರ ರೂಬರೂ ಇದರಡೀಕಂಡ ತಾರೀಖುಗಳಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ಸ್ಟೇಟ್ ಫಾರೆಸ್ಟುಗಳಲ್ಲಿ ಶೇರುವದಕ್ಕೋಸ್ಕರ ಹೊಸದಾಗಿ ಹದ್ದು ವಿಂಗಡಿಸಲ್ಪಟ್ಟ ವಿಸ್ತೀರ್ಣವು ಈ ಇಸ್ತಿಹಾರ್‌ನಾಮೆಯಲ್ಲಿ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ಶೇರಿ ಯಿರುತ್ತೆ.

ತಾಲ್ಲೂಕು.		ತಾರೀಖು.	ಮಾಹೆ	ಹುಟ್ಟುವಳೀ ತಪಶೀಲ್.
ಮೈಸೂರು	..	15	ಏಪ್ರಿಲ್	1 ಅಳಲೇಕಾಯಿ, 2 ತಾರೇಕಾಯಿ, 3 ಶೀಗೇಕಾಯಿ, 4 ಅಂಟುವಾಳದ ಕಾಯಿ, 5 ದಿಂಡಗದಗೋಂದು, 6 ಕಾಡು ಅರಿಸಿನ, 7 ಜೇನುಮೇಣ, 8 ಅರಗು ಜೇನುತುಪ್ಪ, 9 ಕಪಿಲೇರಂಗು, 10 ಪಪ್ಪಳಿಚಕ್ಕೆ, 11 ಪತಂಗ, 12 ಮಡ್ಡಿ, 13 ಚಿಲ್ಲದ ಬೀಜ, 14 ಚಗಚೇಬೀಜ, 15 ಹೊಂಗೇಬೀಜ, 16 ಗೇರುಬೀಜ, 17 ಹಾಲ್‌ಮಡ್ಡಿ, 18 ಆವರಿಕೆಮೇಣ, 19 ಜಿಂಕೇಕೊಂಬು, 20 ಗುಗ್ಗಳ ವಗೈರೆ.
ಯಡತೊರೆ	..	15		
ನಾಗಮಂಗಲ	..	15		
ಅತ್ತಿಕುಪ್ಪೆ	..	15		
ಮಂಡ್ಯ	..	15		
ಶ್ರೀರಂಗಪಟ್ಣ	..	16		
ತಿರಮಕೂಡ್ಲು ನರಶೀಪುರ	..	15		
ಮಳವಳ್ಳಿ	..	15		
ಹುಣಸೂರು	..	19		
ಹೆಗ್ಗಡದೇವನಕೋಟೆ	..	21		
ಗುಂಡ್ಲುಪೇಟೆ	..	25		
ಚಾಮರಾಜನಗರ	..	28		
ನಂಜನಗೂಡು	..	26		

ಕಂಟ್ರಾಕ್ಟುದಾರರಿಗೆ ಹಿಡುವಳೀ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳ ಹುಟ್ಟುವಳಿಗೆ ಹಕ್ಕಿರುವದಿಲ್ಲ.

ಗ್ರಾಮ ಅಮರಾಯಿಯು ಫಲ್‌ಫಲಾರಿ ಹುಟ್ಟುವಳಿಗಳು ಮೇಲ್ಕಂಡ ಹುಟ್ಟುವಳಿಗಳಲ್ಲಿ ಅಡಗಿರುವದಿಲ್ಲ.

ಚಡ ದರಖಾಸ್ತುದಾರನು ಹರಾಜು ಮೊಬಲಗು ಪೈಕೀ ಶೇಕಡಾ 25ರಂತೆ ಆಗುವ ಮೊಬಲಗನ್ನು ಕೂಡ್ಲೆ ಠೇವಣಿ ಕಟ್ಟತಕ್ಕದ್ದು, ವುಳಿದ ಮೊಬಲಗನ್ನು ಡಿಸ್ಟ್ರಿಕ್ಟು ಯಾ ತಾಲ್ಲೂಕು ಟ್ರೆಜರೀಯಲ್ಲಿ 3 ಸಮನಾದ ಖಿಸ್ತುಗಳಿಂದ ಅಂದರೆ ಸ‍ನ 1887ನೇ ಇಸವಿ ಅಕ್ಟೋಬರ್, ನವಂಬರ್, ಡಿಶಂಬರ್ 1ನೇ ತಾರೀಖುಗಳಲ್ಲಿ ಕ್ರಮವಾಗಿ ಪಾವತೀ ಮಾಡತಕ್ಕದ್ದು.

ಕಂಟ್ರಾಕ್ಟುದಾರನು ಯಾವದಾದರೂ ಖಿಸ್ತು ವಾಯಿದೆಗೆ ಸರಿಯಾಗಿ ಮೊಬಲಗು ಪಾವತೀ ಮಾಡದೆ ತಪ್ಪಿದರೆ ಫಾರೆಸ್ಟು ಹುಟ್ಟುವಳೀಯನ್ನ 1888ನೇ ಇಸವಿ ಏಪ್ರೆಲ್ 30ನೇ ತಾರೀಖು ವರಿಗಿನ ವುಳಿದಕಾಲಕ್ಕೆ ಜಮಾಯಿಸುವ ಹಕ್ಕುದಾರಿಯು ಫಾರೆಸ್ಟು ಇಲಾಖೆಯವರಿಂದ ಪುನಹ ವಿಕ್ರಯಿಸಲ್ಪಡುವದು, ಅಥವಾ ಅಮಾನಿಯಲ್ಲಿ ರೂಢಿಸಲ್ಪಡುವದು, ಪರಂತು ತಪ್ಪಿಹೋದ ಕ್ರಯದಾರನು ಅದರಿಂದ ವುಂಟಾಗುವ ಯಾವ ನಷ್ಟಕ್ಕಾಗಲೀ ಗುರಿಯಾಗಿರತಕ್ಕದ್ದು.

ಇದರಡೀ ಕಂಡ ತಾಲ್ಲೂಕುಗಳಿಂದ, ವರಟಾಗಿ ಚೆಕ್ಕಲ್ಪಟ್ಟ ಸಂದಲ್ ಮರಗಳನ್ನು ಆಯಾ ಡಿಪೋಗಳಿಗೆ ಸಾಗಿಸತಕ್ಕ ಬಗ್ಗೆ ದರಖಾಸ್ತುಗಳು ಅಪೇಕ್ಷಿಸಲ್ಪಡುತವೆ.

ಹುಣಸೂರು	ಹುಣಸೂರು ಕೋಠೀಗೆ
ಹೆಗ್ಗಡದೇವನಕೋಟೆ	ಡಿಟೋ
ನಂಜನಗೂಡು	ಶ್ರೀರಂಗಪಟ್ಣ ಡಿಟೋ
ಗುಂಡ್ಲುಪೇಟೆ	ಡಿಟೋ
ಚಾಮರಾಜನಗರ	ಡಿಟೋ

2. ಪ್ರತಿ ದರಖಾಸ್ತುದಾರನೂ, ಮಂಜೂರಿಕಾಲದಲ್ಲಿ, ಸಾಗಿಸಲ್ಪಡದೆ ಉಳಿದ 1887—88ನೇ ಇಸವಿಯಲ್ಲಿ ಜಮಾಯಿಸಲ್ಪಟ್ಟ ಪೂರಾ ತೇದಾದನ್ನು, ಅದು ಒಂದು ಬಂಡಿ ಬೋಜಾ ತಯಾರಾದ ಕೂಡ್ಲೆ ಸಾಗಿಸುವ ಬಗ್ಗೆ ದರ ಟನ್ನಿಂದಕ್ಕೆ ತಾನು ಒಡಂಬಡುವ ಕಮ್ಮಿದರವನ್ನು ನಮೂದಿಸತಕ್ಕದ್ದು.

３೭

3. ದರಖಾಸ್ತು ಮಾಡಲ್ಪಟ್ಟ ದರವು ಯಾವ ತಾಲ್ಲೂಕಿಗಾ । ದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾ ತಾಲ್ಲೂಕಿಗೆಲ್ಲಾ ಸರಾಸರಿ ವಂದೇಯಾಗಿರತಕ್ಕದ್ದು.

4. ದರಖಾಸ್ತುಗಳು ಮೈಸೂರು ಫಾರೆಸ್ಟು ಸೂಪರ್ಇಟೆಂಡೆಂಟರವರ ಆಫೀಸಿಗೆ 30ನೇ ಏಪ್ರೇಲ್ ಮರ್ಕುಮಿನಲ್ಲಾಗಲೀ ತತ್ಪೂರ್ವವಾಗಲೀ ತಲಪಬೇಕಾಗಿರುತ್ತೆ.

5. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು, ತನ್ನ ಕಂಟ್ರಾಕ್ಟ ಪ್ರಕಾರ ಕ್ರಮವಾಗಿ ನಡೆದುಕೊಳ್ಳುವ ಬಗ್ಯೆ ಪ್ರತಿ ಬಂದು ತಾಲ್ಲೂಕಿಗೋಸ್ಕರ ಇದರಡೀ ಕಂಡಪ್ರಕಾರ ಜಾಮೀನಿ ಮೊಬಲಗು ಠ ಜಮ್ಮಾಡುವದಕ್ಕೆ ಬಳಪಟ್ಟಿರತಕ್ಕದ್ದು.

			ರೂಪಾಯಿ
ಹುಣಸೂರು ತಾಲ್ಲೂಕಿನಲ್ಲಿ	..	..	250
ಹೆಗ್ಗಡದೇವನಕೋಟೆ ಡಿಟೋ	..	..	250
ನಂಜನಗೂಡು ಡಿಟೋ	..	..	120
ಗುಂಡ್ಲುಪೇಟೆ ಡಿಟೋ	..	..	120
ಚಾಮರಾಜನಗರ ಡಿಟೋ	..	—	120

6. ಸಂದಲ್ ಮಹೇಗಾರನಿಂದಾಗಲೀ ಫಾರೆಸ್ಟರನಿಂದಾಗಲೀ ಯಾ ವಾದರೂ ಗಂಧದ ಮರಗಳು ಸಾಗಿಸುವ ಬಗ್ಯೆ ಸಿದ್ಧವಾಗಿರುವದಾಗಿ ವರ್ತಮಾನ ತಿಳಿಸಲ್ಪಟ್ಟ ಮೇಲೆ, ಕಂಟ್ರಾಕ್ಟದಾರನು ಅವುಗಳ್ನ ಸಂದಲ್ ಕೋಠೀಗಳಿಗೆ 20 ದಿವಸಗಳವಳಗಾಗಿ ಸಾಗಿಸುವ ಬಗ್ಯೆ ಬದ್ಧನಾಗಿರತಕ್ಕದ್ದು.

ಕಂಟ್ರಾಕ್ಟದಾರನು ವಾಯಿದೆವಳಗಾಗಿ ಅವುಗಳನ್ನ ಸಾಗಿಸುವದಕ್ಕೆ ತಪ್ಪಿದರೆ, ಅವನು ದರ ಭಂಡೀಬೋಜೆ 1ಕ್ಕೆ 2 ಆಣೆ ಪ್ರಕಾರ ಕಟ್ಟಿಕೊಡತಕ್ಕದ್ದು, ಅಂದರೆ ಮರಗಳು ಕೋಠೀಗೆ ಬಂದು ತಲಪುವ ಬಗ್ಯೆ ಸಾವಕಾಶವಾದ ದಿನ 1ಕ್ಕೆ ಟನ್ 1ಕ್ಕೆ 4 ಆಣೆ ಪ್ರಕಾರ ತೆರತಕ್ಕದ್ದು.

ಸಿ. ಇ. ಯೆಂ, ರಸ್ಸೆಲ್,
ಫಾರೆಸ್ಟು ವ ಗವರ್ನಮೆಂಟ್ ಫಾರಂಗಳ ಸೂಪರ್ಇಟೆಂಡೆಂಟ್.

ಪ ರಿ ಕ್ಷೆ.

ತಾರೀಖು 4ನೇ ಏಪ್ರೇಲ್ 1887.

1887ನೇ ಇಸವಿ ಜೂನ್ ಮಾಹೆಯಲ್ಲಿ ನಡಿಯುವ ಮೈಸೂರ್ ಲೋಕಲ್ ಸರವಿಸ್ ವ ಪ್ಲೀಡರಗಳ ಪರಿಕ್ಷೆ ವಿಷಯದಲ್ಲಿ—

ಇದರಿಂದ ಪ್ರಕಟಪಡಿಸುವದೇನಂದರೆ, ಅಸಿಸ್ಟೆಂಟ್ ಕಮ್ಮಿಷನರು, ಮುನ್ಸಿಫರು ಅಮಲ್ದಾರರು, ಡೆಪ್ಯುಟಿ ಅಮಲ್ದಾರರು ವ ಪ್ಲೀಡರುಗಳ ಉದ್ಯೋಗಕ್ಕಾಗಿ ವಿಧಿಸಲ್ಪಟ್ಟ ಪರಿಕ್ಷೆಗಳು, 1887ನೇ ಇಸವಿ ಜೂನ್ 13ನೇ ಮರ್ಕುಂ ಮತ್ತು ಆ ಮಾರನೇ ದಿವಸಗಳಲ್ಲಿ ಪ್ರತಿ ದಿವಸವೂ ಬೆಳಿಗ್ಯೆ $10\frac{1}{2}$ ಘಂಟೆ ಲಾಗಾಯಿತು ಬೆಂಗಳೂರು ಮೊಕ್ಕಾಂ ಪಬ್ಲಿಕ್ ಆಫೀಸಿನಲ್ಲಿಯ ಸೆಂಟ್ರೆಲ್ ಹಾಲ್‌ನಲ್ಲಿ ನಡಿಸಲ್ಪಡುವದು.

ಪರಿಕ್ಷೆಗಳು ಅಕ್ಷರಗಳಿಂದ ಗುರ್ತು ಮಾಡಲ್ಪಟ್ಟಿವೆ.

ಪ್ರತಿ ಪಾಠದ ಸವಾಲ್ ಪಟ್ಟಿಯು ಕೊಡುವ ತಾರೀಖು ವ ಘಂಟೆ ತೋರಿಸುವ ತಖ್ತೆಯು ಇದರಡೀ ಕಾಣಿಸಿರುತ್ತೆ. ಆಯಾ ಪರಿಕ್ಷೆಗೆ ಬರತಕ್ಕ ದರಖಾಸ್ತುದಾರರು ಆಯಾ ತಾರೀಖುಗಳಲ್ಲಿ ಹಾಜರಿರಬೇಕು.

ಅಸಿಸ್ಟೆಂಟ್ ಕಮ್ಮಿಷನರುಗಳ ಮೊಕರರಾತೀ ಬಗ್ಯೆ ಪರಿಕ್ಷೆ				..	A.
ಮುನ್ಸಿಫರ	ಡಿಟೋ	ಡಿಟೋ	..	..	B.
ಅಮಲ್ದಾರ್ ವ ಡೆಪ್ಯುಟಿ ಅಮಲ್ದಾರರ	ಡಿಟೋ	ಡಿಟೋ		..	C.
ಪ್ಲೀಡರುಗಳ	..	ಡಿಟೋ	ಡಿಟೋ	..	D.

391

ತಾರೀಖು.	ಘಂಟೆ.	ಪಾಠ.	ಪರೀಕ್ಷೆ.
ಸೋಮವಾರ, 13ನೇ ಜೂನ್ 1887.	10 ರಿಂದ 12	ಲ್ಯಾಂಡ್ ಅಕ್ವಿಜಿಷನ್ ಆಕ್ಟು	A. C.
	12 " 1½	ರಿಜಿಸ್ಟ್ರೇಷನ್ ಆಕ್ಟು	A. C. D.
	2 " 4	ಕ್ಯಾಟಲ್ ಟ್ರೆಸ್ಪೆಸ್ ಆಕ್ಟು, ಎಕ್ಸೈಸ್ ಆಕ್ಟು, ಓಪಿಯಂ ಆಕ್ಟು ..	A. C.
	4 " 5½	ಸ್ಟಾಂಪ್ ಮತ್ತು ಕೋರ್ಟು ಫೀಸ್ ಆಕ್ಟು	A. C. D.
ಮಂಗಳವಾರ, 14ನೇ ಜೂನ್ 1887.	10½ " 11½	ಫಾರೆಸ್ಟು ರೂಲ್ಸು	A. C.
	11½ " 2	ರೆವಿನ್ಯೂ ಮ್ಯಾನ್ಯುಯಲ್	A. C. D.
		ಸರ್ವೆ ಮ್ಯಾನ್ಯುಯಲ್	A. C.
	2½ " 4½	ಸಿವಿಲ್ ಅಕ್ಕವುಂಟ್ ಮತ್ತು ಫಿನಾನ್ಶಿಯಲ್ ಕೋಡುಗಳು ..	A. C.
ಬುಧವಾರ, 15ನೇ ಜೂನ್ 1887.	10½ " 2	ಇಂಡಿಯನ್ ಪಿನಲ್‌ಕೋಡ್	A. B. C. D.
	2½ " 5½	ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್	A. B. C. D.
ಗುರುವಾರ, 16ನೇ ಜೂನ್ 1887.	10½ " 1	ಟಾರ್ಟ್ಸ್	A. B. D.
	1½ " 4	ಎವಿಡೆನ್ಸ್ ಆಕ್ಟು	A. B. C. D.
	4 " 5	ಪೋಲೀಸ್ ರೂಲ್ಸು	A. C.
ಶುಕ್ರವಾರ, 17ನೇ ಜೂನ್ 1887.	10½ " 1½	ಹಿಂದೂ ಲಾ	A. B. D.
	2 " 5	ಮಹಮ್ಮದನ್ ಲಾ	A. B. D.
ಶನಿವಾರ, 18ನೇ ಜೂನ್ 1887.	10½ " 1½	ಸ್ಪೆಸಿಫಿಕ್ ರಿಲೀಫ್ ಆಕ್ಟು	A. B. D.
	2 " 5	ಸಿವಿಲ್ ಪ್ರೊಸಿಡ್ಯೂರ್ ಕೋಡ್	A. B. D.
ಸೋಮವಾರ, 20ನೇ ಜೂನ್ 1887.	10½ " 12½	ಮಾರ್ಟಗೇಜ್ ಕಾನೂನ್	A. B. D.
	1 " 3	ಲಿಮಿಟೇಷನ್ ಆಕ್ಟು	A. B. D.
	3 " 5	ಕಂಟ್ರಾಕ್ಟು ಕಾನೂನ್	A. B. D.
ಮಂಗಳವಾರ, 21ನೇ ಜೂನ್ 1887.	10½ " 12½	ವ್ಯವಹರಣೆ	D.

ಎಲ್. ಅನಂತಸ್ವಾಮಿ ರಾವ್,
ಸೆಕ್ರೆಟರಿ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 137.

ಮೃತಪಟ್ಟ ಪಟೇಲ್‌ಬಸವೇಗೌಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹೊಂಬಾಳೆ ಮೈನರ್ ಗಾರ್ಡಿಯನ್ ಮತ್ತು ಸೋದರಮಾವನಾದ ಹೊಂನನು ಮೃತಪಟ್ಟ ಸದರೀ ಪಟೇಲ್ ಬಸವೇ ಗೌಡರಿಗೆ ಮಗಳು ಹೊಂಬಾಳೆ ಮೈನರ್ ಸಬಬು ಗಾರ್ಡಿಯನ್ ಆಗಬೇಕೆಂಬ ಹಕ್ಕುದಾರಿ ಮೇಲೆ ಮಳವಳ್ಳಿ ತಾಲ್ಲೂಕು ರಾವಣಿ ಸ್ಥಳದ ಸದರೀ ಹೊಂನನು ಡಿಟೋ ತಾಲ್ಲೂಕು ಯಮದೂರು ವಾಸಸ್ಥರಾಗಿ ಮೃತಪಟ್ಟ ಪಟೇಲ್ ಬಸವೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹೊಂನನ ಅರ್ಜಿಯನ್ನು 1887ನೇ ಇಸವಿ ಜೂನ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ್ ಬಸವೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 177.

ಮೃತಪಟ್ಟ ಮೈಸೂರು ಡೆಪ್ಯುಟಿ ಕಮ್ಮಿಷನರಾಗಿದ್ದ ಅಬ್ದುಲ್‌ಖಾದರ್ ಸಾಹೇಬರವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ತುಮಕೂರು ಡಿಸ್ಟ್ರಿಕ್ಟು ಪೋಲೀಸ್ ಅ|| ಕಮ್ಮಿಷನರ್ ಮ|| ಮಹಮ್ಮದಲ್ಲಿಯವರು ಮೃತಪಟ್ಟ ಸದರಿ ಅಬ್ದುಲ್‌ಖಾದರ್ ಸಾಹೇಬರವರಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆಯು ಮತ್ತು ಸದರೀ ಅಬ್ದುಲ್‌ಖಾದರ್ ಸಾಹೇಬರವರ ಮಕ್ಕಳಾದ 1ನೇ ಆಷಾಬೀಬಿ 2ನೇ ಸಬೀನಾಬೀಬಿ 3ನೇ ರಬಿಯಾಬೀಬಿ ಈ ಮೂರುಜನರು ತಮ್ಮ ಹೆಸರಿಗೆ ಸರ್ಟಿಫಿಕೇಟ್ ಆಗತಕ್ಕ ಬಗ್ಯೆ ಒಪ್ಪಿ ಯಿರುತ್ತಾರೆಂತಲೂ ತುಮಕೂರು ಸ್ಥಳದ ಸದರೀ ಮ|| ಮಹಮ್ಮದಲ್ಲಿಯವರು ಮೈಸೂರು ವಾಸಸ್ಥರಾಗಿ ಮೃತಪಟ್ಟ ಅಬ್ದುಲ್‌ಖಾದರ್ ಸಾಹೇಬರವರ ಜಿಂದಗಿ ಬಗ್ಯಾಗಿ ಬರತಕ್ಕ ರೂಪಾಯಿ 2,953—10—0 ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮ|| ಮಹಮ್ಮದಲ್ಲಿಯವರ ಅರ್ಜಿಯನ್ನು 1887ನೇ ಇಸವಿ ಜೂನ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಬ್ದುಲ್‌ಖಾದರ್‌ಸಾಹೇಬರ ರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಏಪ್ರೆಲ್ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ಸಿಸಿ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿಧೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ನಗರ ಡಿವೀಜನ್.

ನಗರ ಡಿವೀಜನ್ ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 40.

ಮೃತಪಟ್ಟ ಶಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರರು 1 ಶ್ರೀನಿವಾಸರಾವು, 2 ಈತನ ತಮ್ಮ ತಿಮ್ಮಪ್ಪ, ಮೈನರ್‌ಗಾರ್ಡಿಯನ್ ಸಾಹುಕಾರ್ ರಾಮಪ್ಪ ಮೃತಪಟ್ಟ ಸದರಿ ಶಾಮಯ್ಯನಿಗೆ ಸದರೀ ಮೈನರುಗಳು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಯಿಡೆಹಳ್ಳಿ ಸ್ಥಳದ 1 ಶ್ರೀನಿವಾಸರಾವು, 2 ತಿಮ್ಮಪ್ಪ, ಇವರ ಗಾರ್ಡಿಯನ್ ಸಾಹುಕಾರ್ ರಾಮಪ್ಪನು ಯಡೆಹಳ್ಳಿ ವಾಸಸ್ಥನಾಗಿ ಮೃತಪಟ್ಟ ಸದರೀ ಶಾಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 6,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

393

ಸದರೀ ಮೈನರುಗಳ ಗಾರ್ಡಿಯನ್ ಸಾಹುಕಾರ್ ರಾಮಪ್ಪನ ಅರ್ಜೀಯನ್ನು 1887ನೇ ಇಸವಿ ಮೇ ತಿಂಗಳು ತಾರೀಖು 25ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಮಾರ್ಚಿ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,

ಡಿಸ್ಟ್ರಿಕ್ಟು ಜಡ್ಜಿ.

ಕಡೂರು ಡಿಸ್ಟ್ರಿಕ್ಟು.

ತಾರೀಖು 5ನೇ ಏಪ್ರಿಲ್ 1887.

ಕಡೂರು ಡಿಸ್ಟ್ರಿಕ್ಟು ಯಡೆಹಳ್ಳಿ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜನ್ನು ಕ್ರಮಪ್ರಕಾರ ವಾರಸ್‌ದಾರ್‍ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲೀ ಈ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್‌ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಸ್ಟರ್ ಬಗ್ಯೆ ಹಾಜರ್‍ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1ನೇ ಬುಕ್ಕು 11ನೇ ಸಂಪುಟ ನಂಬರ್ 35 ——— 1884—85 ಯಡೇಹಳ್ಳಿ ಸಬ್ ರಿಜಿಸ್ಟ್ರಾರ್	ಕೊಪ್ಪ ತಾಲ್ಲೂಕು ಮುಡಬೂರ ಮಾಗಣಿ ಚಬ್ಬೆಗ್ರಾಮದಲ್ಲಿ ಇರುವ ಕಾಳೇಗೌಡನ ಮಗ ತಮ್ಮಯ್ಯಗೌಡ	ತೀರ್ಥಹಳ್ಳಿ ತಾಲ್ಲೂಕು ಮಾಳೂರು ಮಾಗಣಿ ಕುದೂರು ಗ್ರಾಮದಲ್ಲಿರುವ ಶೇಷಯ್ಯಗೌಡರ ಮಗ ಮಾನಪ್ಪ ಗೌಡರಿಗೆ	29ನೇ ಜನವರೀ 1885ನೇ ಇಸವಿ	29ನೇ ಜನವರೀ 1885ನೇ ಇಸವಿ	ಚಬ್ಬೆನಾಡುಗ್ರಾಮದಲ್ಲಿರತಕ್ಕ ಸ್ವತ್ತುಗಳು. 1 ಖಾನೆಷುಮಾರಿ ನಂಬರ್ 111ನೇ ತಃಖ್ತು ಪೋಷ ಹಾಕಿದ ಹಂಚಿನ ಮನೆ 1ಕ್ಕೆ 13 ಅಂಕಣದ ಬಾಬತು. 2. ಸರ್ವೆ ನಂಬರ್ 169ನೇ ಕಾಫೀ ತೋಟ ಯಕರೆ 1–20 ಆಕಾರ 0–12–0 3. ಸರ್ವೆ ನಂ. 170ನೇ ಬಾಗಾಯತು ಯಕರೆ 3–37 ಆಕಾರ 24–0–0 4. ಸರ್ವೇ ನಂ. 172ನೇ ಪೈಕಿ ತರೀ ಯಕರೆ 8–4 ಆಕಾರ 23–4–0. 5. ಸರ್ವೆ ನಂ. 201ನೇ ತರೀ ಯಕರೆ 5–2 ಆಕಾರ 14–0–0 6. ಸರ್ವೆ ನಂ. 191ನೇ ಖುಷ್ಕಿ ಯಕರೆ 14–4 ಆಕಾರ 5–8–0 ಕುಟುಂಬ ಸಂರಕ್ಷಣೆಗೋಸ್ಕರ ನಡಿಸಿದ ಲೇವಾದೇವಿ ಬಾಬತು 400 ರೂಪಾಯಿ ಸಲ್ಲಲೇಕಾದ್ದಕ್ಕೆ 4 ವರುಷ ಕಂತಿನಿಂದ ಕೊಡುವದಾಗಿಯೂ ಇದಕ್ಕೆ ಮೇಲ್ಕಂಡ ಸೊತ್ತುಗಳು ದೀಡು ಮಾಡಿರುವದಾಗಿ ಬರಕೊಟ್ಟ ಪತ್ರ.

ಜೆ. ಎಫ್. ಮೈಕಲ್‌ಜಾನ್,

ರಿಜಿಸ್ಟ್ರಾರ್.

394.

ಮೈಸೂರು ರೆವಿನ್ಯು ಸರ್ವೆ ಸೆಟ್ಲಮೆಂಟ ಇಲಾಖಾ.

ಇಸ್ತಿಹಾರ ನಾಮೆ.

ನಂಬರ 53. ತಾರೀಖು 15ನೇ ಏಪ್ರೈಲ 1887.

ಇಜಾರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ, ಪ್ರಕಟಿಸಲ್ಪಡುವದೇನಂದರೆ, ಕೋಲಾರ ಡಿಸ್ಟ್ರಿಕ್ಟು ಮುಳಬಾಗಲು ತಾಲ್ಲೂಕಿನ ಸರ್ವೆ ಜಮಾಬಂದಿ ಫೈಸಲಾತಿಯು, ಇದೇ ತಿಂಗಳ 22ನೇ ತಾರೀಖಿಗೆ, ಯಾ, ಆ ಷುಮಾರಿಗೆ ಪ್ರಾರಂಭಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ,
ಸೂ॥ ರೆವಿನ್ಯೂ ಸರ್ವೆ ಮತ್ತು
ಸೆಟಲಮೆಂಟ ಮೈಸೂರು.

ಮೈಸೂರ ಗೆಜೆಟ್, ಚಂದಾ ದರ ವಗೈರೇ.

	ಚಂದಾ.		ಟಪ್ಪಾಲ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ	
	ರೂ.	ಅ.	ರೂ.	ಅ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛೆಷ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			

ಸಿವಿಲ ಕೋರ್ಟನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟ್ಯಾನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟೀಸುಗಳು:—

	ರೂ.	ಅ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ ಪ್ರೊಸಿಡ್ಯೂರ ಕೋಡಿನ 347ನೇ ಸೆಕ್ಷನ ಅನುಸರಿಸಿ ದಿವಾಳೀ ಅಪ್ಲಿಕೇಷನಗಳ ಬಗ್ಯೆ ನೋಟೀಸಗಳಿಗೆ:—

	ರೂ.	ಅ.
ಮೊದಲನೇ ದಫಾ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ ಪ್ರೊಸಿಡ್ಯೂರ ಕೋಡಿನ 354ನೇ ಸೆಕ್ಷನಅನುಸರಿಸಿ ಸಿವಿಲ ಕೋರ್ಟಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ ಕಾಫೀಪಟ್ಟೀ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟೀಸಗಳಿಗೆ:—

		ರೂ.	ಅ.
ಮೊದಲನೇ ಸಲಕ್ಕೆ	ಪುಟ 1ಕ್ಕೆ	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	,,	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—

		ರೂ.	ಅ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	0	8
ಎರಡನೇ ದಫಾ ಡಿಟೋ	ಡಿಟೋ	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		0	4

ಷರಾ.—ಚಂದಾ ವಗೈರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಎಂದಾಣೆ ಯಂತೆ ಜಾಸ್ತಿ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಬಮೋಜಿಬ ಹುಕ್ಕುಂ,
ಟಿ. ಟಿ. ಲಿನರಡ,
ಮ್ಯಾ. ಗೆ. ಕಂಪೈಲರ.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 16 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ 1887.

ಬೆಂಗಳೂರು; ಶನಿವಾರ, ಏಪ್ರಿಲ ತಾ|| 23, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟ್ಸರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 26ನೇ ಮಾರ್ಚಿ 1887.

ಕ್ಯಾಂಪ್ ನಂ. 2188.—ಇದರಿಂದ ಪ್ರಕಟಪಡಿಸುವದೇನಂದರೆ, ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಿಗೋಸ್ಕರ 1877ನೇ ಇಸವಿ ಜೂನ್ 13ನೇ ಮುರ್ಕುಂ 72ನೇ ನಂಬರ್‌ವುಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್‌ನಾಮೆಯಲ್ಲಿ ಬೊಂಬಿನ ಭರ್ತಿ ಭಂಡಿ 1ಕ್ಕೆ ರೂಪಾಯಿ 1—4—0 ಯಂತೆ ಗೊತ್ತುಮಾಡಲ್ಪಟ್ಟ ದರವು, ಭಂಡಿಬೋಜೆ ವಂದಕ್ಕೆ ರೂ. 2—8—0 ಕ್ಕೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 30ನೇ ಮಾರ್ಚಿ 1887.

ಕ್ಯಾಂಪ್ ನಂ. 2287.—ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಜಾರಿಯಲಿರುವ ಮಲ್‌ನಾಡು ತಾಲ್ಲೂಕುಗಳ ತರಗತಿಯನ್ನ ಅನುಸರಿಸಿ ಸ್ 1886ನೇ ಇಸವಿ ಮೇ 20ನೇ ಮರ್ಸ್ಕಂ 77ನೇ ನಂಬರ್ ಇಸ್ತಿಹಾರಿನಲ್ಲಿ ನಮೂದಿಸಿದ ಮಲ್‌ನಾಡು ತಾಲ್ಲೂಕುಗಳ ಪಟ್ಟಿಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಪೈಕಿ ಶಿಕಾರಿಪುರ ತಾಲ್ಲೂಕು ಸೇರಿಸಲ್ಪಟ್ಟಿರುತ್ತದೆ.

ತಾರೀಖು 2ನೇ ಏಪ್ರಿಲ್ 1887.

ಕ್ಯಾಂಪ್ ನಂ. 6.—1885ನೇ ಇಸವಿ ಮಾರ್ಚಿ 24ನೇ ಮರ್ಸ್ಕಂ 242ನೇ ನಂಬರ್ ಇಸ್ತಿಹಾರಿನಲ್ಲಿ ಕಾಫಿ ಜಮೀನಿಗಾಗಿ ಎಕರೆ ಮೇಲೆ ಕಂದಾಯ ಕರಾವು ಮಾಡುವ ಬಗ್ಗೆ ನಿಬಂಧನೆಗಳು ವಿಧಿಸಲ್ಪಟ್ಟಿರುತ್ತವೆಯಷ್ಟೆ, ಆ ಇಸ್ತಿಹಾರ್‌ನಾಮೆಯ 10ನೇ ಕಲಂ ಅನುಸರಿಸಿ ಹುಲ್ಲುಗಾವಲ್ ಕಂದಾಯಕ್ಕೆ ಇನ್ನು ಮೇಲೆ ಕೊಡಲ್ಪಡುವ ಜಮೀನುಗಳ ಕವುಲ್‌ಗಳಲ್ಲಿ ಮೇಲ್ಕಂಡ ಇಸ್ತಿಹಾರ್‌ನಾಮೆಯ 6ನೇ ಕಲಮಿನಲ್ಲಿ ನಮೂದಿರುವ ಸರ್ಕಾರಕ್ಕೆ ವುಳಿಸಿಕೊಳ್ಳಲ್ಪಟ್ಟ ಮರಗಳ ಪಟ್ಟಿಗೇ ಬಿಳೀಮತ್ತಿ ವ ಕರೀಮತ್ತಿ ಮರಗಳು ಸೇರಿಸಲ್ಪಡತಕ್ಕದ್ದು.

ಕ್ಯಾಂಪ್ ನಂ. 8.—ಕಾಫಿ ಸಾಗುವಳಿಗೋಸ್ಕರ ಕೊಡಲ್ಪಟ್ಟ ಜಮೀನುಗಳ ಫೈಸಲಾತಿಗೆ ಸಂಬಂಧಪಟ್ಟ 1885ನೇ ಇಸವಿ ಮಾರ್ಚಿ 24ನೇ ಮರ್ಸ್ಕಂ 242ನೇ ನಂಬರ್ ಇಸ್ತಿಹಾರ್‌ನಾಮೆಯ 5ನೇ ಪ್ಯಾರಾ (b) ಕ್ಲಾಜ್ ಅನುಸರಿಸಿ ಇದರಡೀಕಂಡ ಸೀನಿಯರೇಜ್ ಯಾನೆ ತೀರ್ವೆ ದರಗಳು, ಕಾಫಿ ಜಮೀನುಗಳಲ್ಲಿ ಬೆಳೆಯುವ ಸರ್ಕಾರಕ್ಕೆ ಉಳಿಸಿಕೊಳ್ಳಲ್ಪಟ್ಟ ನಾನಾ ಜಾತಿ ಮರಗಳಿಗೆ, ಅವು ಹಿಡುವಳೀದಾರನ ವಾಸ್ತವ್ಯವಾದ ಸ್ವಂತ ಕೆಲಸಕ್ಕೆ ಅಲ್ಲದೆ ಅನ್ಯಥಾ ಕಡಿಯಲ್ಪಟ್ಟಾಗ ವಸೂಲ್ಮಾಡಲ್ಪಡತಕ್ಕದ್ದೆಂದು ಗೊತ್ತುಮಾಡಲ್ಪಟ್ಟಿರುತ್ತೆ:—

ಕಡಿಯಲ್ಪಟ್ಟ ದರ ಮರ 1ಕ್ಕೆ ರೂಪಾಯಿ.		ಕಡಿಯಲ್ಪಟ್ಟ ದರ ಮರ 1ಕ್ಕೆ ರೂಪಾಯಿ.	
ತೇಗ ..	8	ಹೊನ್ನೆ ..	3
ಪೂರ್ ..	6	ಜಾಲಾರಿ ..	3
ಕರೀಮರ ..	8	ಸಂದು ..	3

ತಾರೀಖು 11ನೇ ಏಪ್ರಿಲ್ 1887.

ನಂಬರ್ 2.—ಬವರಿಂಗ್‌ಪೇಟೆ ತಾಲ್ಲೂಕು ಅಮಲ್ದಾರ್ ಕೆ. ಶ್ರೀನಿವಾಸರಾಯರಿಗೆ, 1887ನೇ ಇಸವಿ ಮಾರ್ಚಿ 5ನೇ ಮರ್ಸ್ಕಂ 257ನೇ ನಂಬರುಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 5 ದಿವಸಗಳ ಕ್ಯಾಜುಎಲ್ ರಜಾ ಯಿನ್ನೂ ಮೂರು ದಿವಸಗಳ ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 15ನೇ ಏಪ್ರಿಲ್ 1887.

ನಂ. 3.—ತುಮಕೂರು ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಕೆ. ಮಹಮ್ಮದಲ್ಲಿಯವರಿಗೆ, 1884ನೇ ಇಸವಿ ಡಿಸೆಂಬರ್ 6ನೇ ಮರ್ಸ್ಕಂ 5063—107ನೇ ನಂಬರುಳ್ಳ ದಿವಾನರವರ ಪ್ರೊಸಿಡಿಂಗ್ಸ್ ಷರತ್ತುಗಳನುಸರಿಸಿ 1887ನೇ ಇಸವಿ ಮಾರ್ಚಿ 24ನೇ ಮರ್ಸ್ಕಂ ಲಾಗಾಯತು ಹತ್ತು ದಿವಸಗಳ ಕ್ಯಾಜುಎಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 15ನೇ ಏಪ್ರಿಲ್ 1887.

ನಂ 4.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀಮಾಡಲ್ಪಟ್ಟಿರುವ ಈಕೆಳಗೆಕಂಡ ಜೋಡೀ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿಸುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಕಡೆ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
1	2	3	4	5	6	7	8	8	10
					ಖ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಹಾಸನ.	ಬೇಲೂರು.	ಅರೇಹಳ್ಳಿ.	ಕಂದವಾರ	ಕೊಂಡಿ ಜಗಲೂರು ವ ಇತರ 25 ಮಂದಿ	404 4 0	678 3 1	312 0 0	259–14–0 ಮತ್ತು ಹರಾಜು ತಾರೀಖಿನವರಿಗೆ ಬಡ್ಡೀ ವಗೈರೆ	ಮುಂದಿನ ತಿಂಗಳು ತಾರೀಖು 26ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರೂಬರು.

ತಾರೀಖು 9ನೇ ಏಪ್ರೆಲ್, 1887.

ಕ್ಯಾಂಪ್ ನಂ. 17.—ಮಾಗಡಿ ಅಮಲ್ದಾರ್ ಅಲ್ಲೀನಕ್ಕಿ ಖಾನರವರು, ಅವರ ಹೆಸರಿಗೆ "ಮೇಕ್ರಿ" ಯಂಬ ಶಬ್ದವನ್ನು ಶೇರಿಸಿರುವದರಿಂದ ಅವರ ಹೆಸರು ಈ ತಾರೀಖು ಲಾಗಾಯತು ಶಿಬ್ಬಂದಿಯಲ್ಲಿ ಅಲ್ಲೀನಕ್ಕಿ ಖಾನ್ ಮೇಕ್ರಿ ಯಂಬದಾಗಿ ದಾಖಲ್ಮಾಡಲ್ಪಡತಕ್ಕದ್ದು.

ತಾರೀಖು 11ನೇ ಏಪ್ರಿಲ್ 1887.

ಕ್ಯಾಂಪ್ ನಂ. 47.—ಚಿಕ್ಕಬಳ್ಳಾಪುರದ ಮುನ್ಸಿಫರಾದ ಸಿ. ಯಂ. ಶೇಷಗಿರಿರಾಯರಿಗೆ, 1882ನೇ ಇಸವಿ Xನೇ ನಂಬರ್ ಆಕ್ಟಿನ 12ನೇ ಸೆಕ್ಷನ್ ಅರ್ಥರೀತ್ಯಾ ಯರಡನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳೂ ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡಿನ 32 ಮತ್ತು 206ನೇ ಸೆಕ್ಷನ್‌ಗಳಲ್ಲಿ ಕಂಡ ಜಾಸ್ತೀ ಅಧಿಕಾರಗಳೂ ಅಂದರೆ ಛಡಿ ಸಜಾ ಕೊಡತಕ್ಕ ಮತ್ತು ಸೆಷನ್ ಕೋರ್ಟಿಗೆ ಪರ್‍ಯಾಪ್ತೀ ಬಗ್ಯೆ ಕಮ್ಮಿಟ್ ಮಾಡತಕ್ಕ ಅಧಿಕಾರಗಳು ಸುದಾ ಕೊಡಲ್ಪಟ್ಟಿರುತ್ತೆ.

ಸದರೀಯವರಿಗೆ, ಫಿರ್‍ಯಾದಿಗಳ ವ ಸಾಕ್ಷಿಗಾರರ ವಾಂಗ್ಮೂಲವನ್ನು ಸದರೀ ಮೇಲ್ಕಂಡ ಆಕ್ಟಿನ 357ನೇ ಸೆಕ್ಷನ್ ಅನುಸರಿಸಿ ಇಂಗ್ಲೀಷ್ ಭಾಷೆಯಲ್ಲಿ ಸ್ವದಸ್ತೂರು ತೆಗದುಕೊಳ್ಳುವದಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ಹುಕ್ಮುಂ ಬಮೋಜೀಬ್,
ಆರ್. ವಿಜಯರಾಂದ್ರರಾವ್,
ಚೀಫ್ ಸೆಕ್ರಟೇರಿ.

ಮೈಸೂರ ಗೆಜೆಟ್.

ನಂ. 17 ಸರ್ಕಾರದಿಂದ ಘಾಯಿಷ್ ಆದ್ದು. ಸ್ನ 1887.

ಬೆಂಗಳೂರು, ಶನಿವಾರ, ಏಪ್ರಿಲ್ ತಾ|| 30, ಸ್ನ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರಿಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—1887ನೇ ಫೆಬ್ರುವರೀ ತಿಂಗಳಲ್ಲಿ ನಡೆದ ಮೈಸೂರು ಲೋಕಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳ ಪಟ್ಟಿ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 30ನೇ ಮಾರ್ಚಿ 1887.

ಕ್ಯಾಂಪ್ ನಂ. 2287.—ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಜಾರೀಲಿರುವ ಮಲ್‌ನಾಡು ತಾಲ್ಲೂಕುಗಳ ತರಗತಿಯನ್ನ ಅನುಸರಿಸಿ ಸ್ನ 1886ನೇ ಇಸವಿ ಮೇ 20ನೇ ಮರ್ಕೂಂ 77ನೇ ನಂಬರ್ ಇಸ್ತಿಹಾರಿನಲ್ಲಿ ನಮೂದಿಸಿದ ಮಲ್‌ನಾಡು ತಾಲ್ಲೂಕುಗಳ ಪಟ್ಟಿಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಪೈಕಿ ಶಿಕಾರಿಪುರ ತಾಲ್ಲೂಕು ಸೇರಿಸಲ್ಪಟ್ಟಿರುತ್ತದೆ.

ತಾರೀಖು 2ನೇ ಏಪ್ರಿಲ್ 1887.

ಕ್ಯಾಂಪ್ ನಂ. 6.—1885ನೇ ಇಸವಿ ಮಾರ್ಚಿ 24ನೇ ಮರ್ಕೂಂ 242ನೇ ನಂಬರ್ ಇಸ್ತಿಹಾರಿನಲ್ಲಿ ಕಾಫಿ ಜಮೀನಿಗಾಗಿ ಎಕರೆ ಮೇಲೆ ಕಂದಾಯ ಕರಾವು ಮಾಡುವ ಬಗ್ಯೆ ನಿಬಂಧನೆಗಳು ವಿಧಿಸಲ್ಪಟ್ಟಿರುತ್ತವೆಯಷ್ಟೆ, ಆ ಇಸ್ತಿಹಾರ್‌ನಾಮೆಯ 10ನೇ ಕಲಂ ಅನುಸರಿಸಿ ಹುಲ್ಲುಗಾವಲ್ ಕಂದಾಯಕ್ಕೆ ಇನ್ನು ಮೇಲೆ ಕೊಡಲ್ಪಡುವ ಜಮೀನುಗಳ ಕವುಲ್‌ಗಳಲ್ಲಿ ಮೇಲ್‌ಕಂಡ ಇಸ್ತಿಹಾರ್‌ನಾಮೆಯ

6ನೇ ಕಲಮಿನಲ್ಲಿ ನಮೂದಿರುವ ಸರ್ಕಾರಕ್ಕೆ ವುಳಿಕೊಳ್ಳಲ್ಪಟ್ಟ ಮರಗಳ ಪಟ್ಟಿಗೆ ಬಿಳೀಮತ್ತಿ ವ ಕರೀಮತ್ತಿ ಮರಗಳು ಸೇರಿಸಲ್ಪಡತಕ್ಕದ್ದು.

ಕ್ಯಾಂಪ್ ನಂ. 8.—ಕಾಫಿ ಸಾಗುವಳಿಗೋಸ್ಕರ ಕೊಡಲ್ಪಟ್ಟ ಜಮೀನುಗಳ ಫೈಸಲಾತಿಗೆ ಸಂಬಂಧಪಟ್ಟ 1885ನೇ ಇಸವಿ ಮಾರ್ಚಿ 24ನೇ ಮುಕ್ಕಾಂ 242ನೇ ನಂಬರ್ ಇಸ್ತಿಹಾರ್‌ನಾಮೆಯ 5ನೇ ಪ್ಯಾರಾ (·) ಕ್ಲಾಜ್ ಅನುಸರಿಸಿ ಇದರಡೀಕಂಡ ಸೀನಿಯರೇಜ್ ಯಾನೆ ಶೀರ್ವೆ ದರಗಳು, ಕಾಫಿ ಜಮೀನುಗಳಲ್ಲಿ ಬೆಳೆಯುವ ಸರ್ಕಾರಕ್ಕೆ ಉಳಿಸಿಕೊಳ್ಳಲ್ಪಟ್ಟ ನಾನಾ ಜಾತಿ ಮರಗಳಿಗೆ, ಅವು ಹಿಡುವಳೀದಾರನ ವಾಸ್ತವ್ಯವಾದ ಸ್ವಂತ ಕೆಲಸಕ್ಕೆ ಅಲ್ಲದೆ ಅನ್ಯಥಾ ಕಡಿಯಲ್ಪಟ್ಟಾಗ ವಸೂಲ್ಮಾಡಲ್ಪಡತಕ್ಕದ್ದೆಂದು ಗೊತ್ತುಮಾಡಲ್ಪಟ್ಟಿರುತ್ತೆ:—

	ಕಡಿಯಲ್ಪಟ್ಟ ದರ ಮರ 1ಕ್ಕೆ ರೂಪಾಯಿ.		ಕಡಿಯಲ್ಪಟ್ಟ ದರ ಮರ 1ಕ್ಕೆ ರೂಪಾಯಿ.
ತೇಗ ..	8	ಹೊನ್ನೆ ..	3
ಪೂರ್ಗ ..	6	ಜಾಲರಿ ..	3
ಕರೀಮರ ..	8	ನಂದಿ ..	3

ತಾರೀಖು 15ನೇ ಏಪ್ರಿಲ್ 1887.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳ ಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಖ. ಗುಂ. ಗ.	ರೂ ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಮೈಸೂರು.	ಶ್ರೀರಂಗಪಟ್ಟಣ.	ಪಾಲಹಳ್ಳಿ.	ಮುಂಡಗದರಿ.	ಕೊಸಂಣಾಚಾರಿ ಮತ್ತು ಇತರರು ಇಬ್ಬರು	264 3 39½	1621 7 4	1056 9 10	789 14 9 ಮತ್ತು ಹರಾಜ್ ತಾರೀಖು ವರಿಗಿನಬಡ್ಡಿ.	ಬರುವ ಜುಲೈ ತಾರೀಖು 4ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರರ ರೂಬರೂ.

ತಾರೀಖು 30ನೇ ಮೇ 1887.

ಕ್ಯಾಂಪ್ ನಂ. 626.—ಸನ್ 1870ನೇ ಇಸವಿ Xನೇ ನಂಬರ್ ಲ್ಯಾಂಡು ಅಕ್ವಿಜಿಷನ್ ಆಕ್ಟು 6ನೇ ಸೆಕ್ಷನ್ ನಿಯಮಗಳನು ಸರಿಸಿ ಪ್ರಸಿದ್ಧಪಡಿಸುವದೇನಂದರೆ, ಇದರಡೀಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟ ಜಮೀನು ಸರ್ಕಾರದ ಕೆಲಸಗಳಿಗೋಸ್ಕರ ಅಂದರೆ ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಕನಹಳ್ಳಿ ತಾಲ್ಲೂಕು ತಿಮ್ಮನಹಳ್ಳಿ ಕೆರೆ ಕಾಮಗಾರಿಗಾಗಿ ಮಣ್ಣು ಅಗಿಯುವ ಬಗ್ಯೆ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಖಾತೆದಾರನ ಹೆಸರು.	ಬೇಕಾಗಿರುವ ಜಮೀನ್ ಆವರಣ.						ಚತುಸ್ಸೀಮೆ.			
				ತರಗತಿ.	ಸ. ನಂ.	ವಿಸ್ತೀರ್ಣ.		ಬೇರೀಜು.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ತುಮಕೂರು	ಚಿಕ್ಕನಾಯಕನಹಳ್ಳಿ	ತಿಮ್ಮನಹಳ್ಳಿ	ಸರ್ಕಾರು	ಬಾಗಾಯತು	೧	೨	39	29	12	0	ಸರಸ ಬೀ ಮಾನ್ಯದ ಕೆರೆ 4ನೇ ನಂಬರು ಬಾಗಾಯತು	ತಿಮ್ಮನಹಳ್ಳಿ ಕೆರೆ ಏರಿ	ಕಾಲುವೆ	ಸರ್ಕಾರಿ 3ನೇ ನಂಬರು ಖುಷ್ಕಿ

ತಾರೀಖು 1ನೇ ಜೂನ್ 1887.

ನಂ. 33.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತು ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಗ್ಗೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಕಡದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮೌಖೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಂ ಮಾಡಲ್ಪಡುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಜೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಹಾಸನ.	ಹೊಳೆನರಸೀಪುರ.	ಗೊರೂರು.	ಚೌತಿ ಗುಪ್ಪೆ ಎಂಬ 5 ಣಿ ಖರಿ ಹೊಸ್ಸಾಗೆ.	ಹೆಬ್ಬಾರ ನಂಜಪ್ಪ, ಇತರ 62 ಮಂದಿ.	0 0 0	835 5 6	590 3 4	1,986 12 10 ನೋಟಿಸ್ ಫೀ ಮತ್ತು ಹರಾಜು ತಾರೀಖು ವರೆಗಿನ ಬಡ್ಡೀ.	ಮುಂದಿನ ತಿಂಗಳು ತಾರೀಖು 13ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್‌ ರೂಬರೂ.

ತಾರೀಖು 7ನೇ ಜೂನ್ 1887.

ಕ್ಯಾಂಪ್ ನಂಬರ್ 751.—ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ॥ ಹೆಚ್. ರಾಮಾನುಜಯ್ಯಂಗಾರ್ರಿಗೆ, 1887ನೇ ಇಸವಿ ಮೇ 29ನೇ ಮುಕ್ಕಾಂ ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂಬರ್ 753.—ಶಿಡ್ಲಘಟ್ಟದ ತಾಲ್ಲೂಕು ಅಮಲ್‌ದಾರ್ ಗುಂಡಪ್ಪನವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಎಂದೂವರೆ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಶಿರಸ್ತೇದಾರ್ ತಿರುಮಲಾಚಾರ್ರು, ಅಮಲ್‌ದಾರ್ ಗುಂಡಪ್ಪನವರ ಗೈರ್ ಹಾಜರಿಯಲ್ಲಿ ಯಾ ಮತ್ತೊಂದುಹುಕ್ಕುಂ ಕೊಡುವ ಪರಿಯಂತ ಸದರೀ ಶಿಡ್ಲಘಟ್ಟ ತಾಲ್ಲೂಕು ಚಾರ್ಜ್ ವಹಿಸತಕ್ಕದ್ದು; ಮತ್ತು 1882ನೇ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 12ನೇ ಸೆಕ್‌ಷನ್ ಅನುಸರಿಸಿ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳನ್ನು ಚಲಾಯಿಸುವ ಬಗ್ಯೆ ಅಧಿಕಾರ ಕೊಡಲ್ಪಡತಕ್ಕದ್ದು.

ತಾರೀಖು 9ನೇ ಜೂನ್ 1887.

ಕ್ಯಾಂಪ್ ನಂ. 773.—ಇಂಡಿಯ ಗವರ್ನ್‌ಮೆಂಟಿನವರ ಇದರಡೀ ಕಂಡ ಇಸ್ತಿಹಾರ್‌ನಾಮೆಗಳು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತೆ:—

ತಾರೀಖು 13ನೇ ಏಪ್ರೈಲ್ 1887.

"ನಂ. 1652 I.—1882ನೇ ಇಸವಿ XIVನೇ ನಂಬರ್ ಆಕ್ಟು ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿಗೆ ವಿಸ್ತರಿಸಲ್ಪಟ್ಟ ಪ್ರಕಾರ ಸದರೀ ಆಕ್ಟಿನಿಂದ ಉಂಟು ಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಸಮಾಜದಲ್ಲಿನ ಗವರ್ನರ್‌ಜನರಲ್‌ಯವರು ನಿಯಮಿಸುವದೇನಂದರೆ, ಮೈಸೂರು ದೇಶದ ಶಿವಿಲ್ ವ ರೆವಿನ್ಯು ಕೋರ್ಟುಗಳ ಡಿಕ್ರಿಗಳು, ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿನಲ್ಲಿ ಅವು ಸದರೀ ಸ್ಟೇಷನಿನ ಕೋರ್ಟುಗಳಿಂದ ಕೊಡಲ್ಪಟ್ಟ ಡಿಕ್ರಿಗಳಂತೆಯೇ ಅಮಲ್‌ಜಾರಿ ನಡಿಸಲ್ಪಡಬಹುದು."

"ನಂ. 1,653 I.—1882ನೇ ಇಸವಿ XIVನೇ ನಂಬರ ಆಕ್ಟು ಶಿವಿಲ್ ವ ಮಿಲಿಟೇರಿ ಸ್ಟೇಷನಿಗೆ ವಿಸ್ತರಿಸಲ್ಪಟ್ಟ ಪ್ರಕಾರ ಸದರೀ ಆಕ್ಟಿನ 650ನೇ A ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ, ಸಮಾಜದಲ್ಲಿನ ಗವರ್ನರ್ ಜನರಲ್‌ಯವರು ವಿಧಿಸುವದೇನಂದರೆ, ಸದರಿ ಸೆಕ್ಷನಿನ ನಿಯಮಗಳು ಮೈಸೂರು ದೇಶದ ಶಿವಿಲ್ ಕೋರ್ಟುಗಳಿಗೆ ಲಗಾಮಾಗತಕ್ಕದ್ದು."

ಕ್ಯಾಂಪ್ ನಂ, 778.—ಮೈಸೂರು ಷಹರ್ ಚಾರ್ಜುಉಳ್ಳ ಫಸ್ಟ್ ಕ್ಲಾಸ್ ಮಾಜಿಸ್ಟ್ರೇಟ್ ಮೆ|| ಅಬ್ದುಲ್ ರಹಿಮ್ಖಾಯವರಿಗೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 260ನೇ ಸೆಕ್ಷನ್ ಅನುಸರಿಸಿ, ಮೊಕದ್ದಮೆಗಳನ್ನು ಫೂರಾಗಿ ವಿಚಾರಣೆಮಾಡುವ ಅಧಿಕಾರ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಜೂನ್ 1887.

ನಂ. 35.—ಮೈಸೂರು ರೆವಿನ್ಯೂ ಸರ್ವೆ ಇಲಾಖಾ ಡೆಪ್ಯುಟಿ ಸೂಪರಿಂಟೆಂಡೆಂಟ್ ಲೆಫ್ಟಿನೆಂಟ್ ಕರ್ನಲ್ ಜೆ. ರೂಥರ್‌ಫರ್ಡ್‌ಯವರಿಗೆ, ಯೂರೋಪಿಗೆ ಹೋಗತಕ್ಕ ಬಗ್ಗ್ಯಾಗಿ ಬೊಂಬಾಯಿ ಸರ್ಕಾರದಿಂದ ಅವಶ್ಯಕವಾದ ಸಬ್‌ಸಿಡಿಯರಿ ರಜಾ ದೇಖಿಲ್ ಆರು ತಿಂಗಳ ಫರಲೋರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ಜೂನ್ 1887.

ನಂ. 36.—ಮೆ|| ಬಿ. ಕೆ. ವೆಂಕಟವರದಯ್ಯಂಗಾರ್ರವರು ಫ್ರೆಂಚ್‌ರಾಕ್ಸ್ ಸಬ್ ಡಿವೀಜನಿನ ಚಾರ್ಜನ್ನು 1887ನೇ ಇಸವಿ ಜೂನ್ 3ನೇ ಮಾರ್ಚು ಮಿನ ಮಧ್ಯಾನ್ಹಾತ್ಪರ ಮೆ|| ಡಿ. ದೇವರಾಜಅರಸಿನವರಿಗೆ ಒಪ್ಪಿಸಿರುತ್ತಾರೆ.

ತಾರೀಖು 15ನೇ ಜೂನ್ 1887.

ನಂ. 37.—ಮೆ|| ಪಿ. ಯನ್. ಕೃಷ್ಣಮೂರ್ತಿಗಳವರು, ತುಮಕೂರು ಡಿಸ್ಟ್ರಿಕ್ಟ್ ವ ಟ್ರೆಜರೀ ಚಾರ್ಜನ್ನು 1887ನೇ ಇಸವಿ ಜೂನ್ 11ನೇ ಮಾರ್ಚು ಮಿನ ಮಧ್ಯಾನ್ಹಾತ್ಪರ ಮೆ|| ಬಿ. ಕೆ. ವೆಂಕಟವರದಯ್ಯಂಗಾರ್ರಿಗೆ ಒಪ್ಪಿಸಿರುತ್ತಾರೆ.

ತಾರೀಖು 27ನೇ ಮೇ 1887.

ನಂ. 31.—ಇಂಡಿಯ ದೇಶದ ಸ್ಟೇಟ್ ಸೆಕ್ರೆಟೇರಿಯವರ 1883ನೇ ಇಸವಿ ಜುಲೈ 19ನೇ ಮಾರ್ಕುಂ (ಪಬ್ಲಿಕ್) 73ನೇ ನಂಬರ ಉಳ್ಳ ಇದರಡೀಕಂಡ ಲೆಟರು ಸರ್ವರ ತಿಳುವಳಿಕೆ ಮತ್ತು ನಡವಳಿಕೆ ಬಗ್ಯೆ ಘಾಯಿಷ್ ಮಾಡುವದರಲ್ಲಿ, ಶ್ರೀಮನ್ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ, ಸರ್ಕಾರ್ ನವಕರರು ತಾವು ಉದ್ಯೋಗದಲ್ಲಿರುವ ಡಿಸ್ಟ್ರಿಕ್ಟಿನಲ್ಲಿ ವಹಿವಾಟ್ಟು ನಡಿಸುವಂಥಾ ಜಾಯಿಂಟ್ ಸ್ಟಾಕ ಮತ್ತು ಇತರ ಕಂಪೆನಿಗಳಲ್ಲಿ ಹಿಸ್ಸೆಗಳನ್ನು ಉಂಟಾಗಿರುವದನ್ನ ನಿರೋಧಿಸುವ ಲೇಟ ಚೀಫ್ ಕಮಿಷನರವರಿಂದ ಸಾದರ್‌ಮಾಡಲ್ಪಟ್ಟ 1874ನೇ ಇಸವಿ ಸೆಪ್ಟಂಬರ್ 21ನೇ ಮಾರ್ಕುಂ 177ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ ಅಡಗಿರತಕ್ಕ ರೂಲ್‌ಶಿನ ಅಮಲ್ ಚಲಾವಣಿ ದೆಶೆಯಿಂದ, ಮುನ್‌ಸಿಫ್ ವ ಡೆಪ್ಯುಟಿ ಅಮಲ್‌ದಾರ್ ದರ್ಜೆಗೆ ಕೀಳ್ಪಟ್ಟ ತಮಾಂ ಸರ್ಕಾರ್ ಉದ್ಯೋಗಸ್ಥರೂ ವಿನಾಯಿಸಲ್ಪಡತಕ್ಕದ್ದು.

ಇಂಡಿಯ ಗವರ್ನಮೆಂಟಿನ ಹೋಂ ಡಿಪಾರ್ಟ್‌ಮೆಂಟ್ ಸೆಕ್ರೆಟೇರಿ ಎ. ಮೆಕ್ಕೆಂಜಿ ಯಸ್ಕ್ವಯರ್ ಸಿ. ಎಸ್. ಯವರಿಂದ, ಮದರಾಸ್ ಗವರ್ನಮೆಂಟಿನ ಚೀಫ್ ಸೆಕ್ರೆಟೇರಿಯವರಿಗೆ, ಮಾರ್ಕುಂ 1883ನೇ ಇಸವಿ ಸೆಪ್ಟಂಬರ್ 6, ಮೊಕ್ಕಾಂ ಸಿಂಲಾ, ನಂಬರ 37—1211 (ಪಬ್ಲಿಕ್).

ಸಹಾಯ ಸಂಘಗಳ ಆಪಕ್ಷಿತಗಳಲ್ಲಿ ಸರ್ಕಾರನವುಕರರ ಸಂಬಂಧವನ್ನು ಕುರಿತ ಯಿಂಡಿಯ ದೇಶದ ಹರ್‌ಮಾಜೆಸ್ಟೀಸ್ ಸ್ಟೇಟ್ ಸೆಕ್ರೆಟೇರಿ ಯವರೊಡನೆ ನಡೆದ, ಬಾಜಾದಲ್ಲಿ ಕಂಡ ಕರೆಸ್ಪಾಂಡೆನ್ಸ್ ಯಾನೆ ಲೇಟರ್‌ಗಳ ನಕ್ಕಲನ್ನು ತಿಳುವಳಿಕೆ ಮತ್ತು ನಡವಳಿಕೆ ಬಗ್ಯೆ ರವಾನಿಸಲು ನಾನು ಆಜ್ಞಾಪಿಸಲ್ಪಟ್ಟಿರುತ್ತೇನೆ. ವ್ಯಾಪಾರದ ಕಂಪೆನಿಗಳೊಂದಿಗೆ ಗವರ್ನಮೆಂಟ್ ಆಫಿಸರ್‌ಗಳ ಸಂಬಂಧದ ವಿಷಯದಲ್ಲಿ ಜಾರಿಯಲ್ಲಿರತಕ್ಕ ಹುಕುಂಗಳು, ಸರ್ಕಾರದಲ್ಲಿ ನವಕರಿ ಯಿರತಕ್ಕ ಕ್ಲರಕ್

ಸೆಕ್ರೆಟೇರಿ ಆಫ್ ಸ್ಟೇಟ್‌ಯವರಿಗೆ ಬರೆದ 1883ನೇ ಇಸವಿ ಏಪ್ರಿಲ್ 24ನೇ ಮಾರ್ಕುಂ ಲೆಟರ್ ನಂಬರ 25.

B

ಸೆಕ್ರೆಟೇರಿ ಆಫ್ ಸ್ಟೇಟ್‌ಯವರಿಂದ ಬಂದ 1883ನೇ ಇಸವಿ ಜುಲೈ 19ನೇ ಮುಕ್ಕಾಂ ಲೆಟರ್ ನಂಬರ್ 73.

ಗಳು ಮತ್ತು ಇತರ ಮಿನಿಸ್ಟೀರಿಯಲ್ ಯಾನೆ ಮೊಖ್ತೇಸರಿ ಉದ್ಯೋಗಸ್ಥರುಗಳಿಗೆ ಅನ್ವಯಿಸುವದಿಲ್ಲವೆಂಬ ವಿಷಯ ತೀರ್ಮಾನಿಸಲ್ಪಟ್ಟಂತೆಯೂ ತಿಳಿಯಬರುತ್ತೆ.

ಇಂಡಿಯ ಗವರ್ನ್‌ಮೆಂಟಿನಿಂದ, ಇಂಡಿಯ ದೇಶದ ಹರ್‌ಮಾಜೆಸ್ಟೀಸ್ ಸ್ಟೇಟ್ ಸೆಕ್ರೆಟೇರಿ ಯವರಿಗೆ, ಮೊಕ್ಕಾಂ ಸಿಂಲಾ, ತಾರೀಖು 24ನೇ ಏಪ್ರೈಲ್ 1883ನೇ ಇಸವಿ, ನಂಬರ್ 25 (ಪಬ್ಲಿಕ್)

ಸಿಂಲಾದಲ್ಲಿ ವಹಿವಾಟ್ಟು ನಡಿಸುವ ಕೆಲವು ವ್ಯಾಪಾರಸ್ಥರು, ಸದರೀ ಸ್ಥಳದಲ್ಲಿ ವಂದು ಸಹಾಯ ಸಂಘದ ಆಡಳಿತ ಮತ್ತು ಕಾರ್‌ಬಾರ್ ಕೆಲಸಗಳು ಸರ್ಕಾರ್ ಉದ್ಯೋಗದಲ್ಲಿರತಕ್ಕ ಕವಿನಾರ್ಟೆಡ್ ಮತ್ತು ಅನ್‌ಕವಿನಾರ್ಟೆಡ್ ನವಕರರುಗಳಿಂದ ನಡಿಸಲ್ಪಡುತಿದೆಯೆಂಬದಾಗಿಯೂ, ಸರ್ಕಾರ್ ಉದ್ಯೋಗಸ್ಥರು ಕಂಪೆನಿಗಳ ಆಡಳಿತ ನಡಿಸುವದರಲ್ಲಿ ಪ್ರವೇಶಿಸುವದನ್ನ ನಿರೋಧಿಸುವ ಹಾಲಿ ಜಾರಿಯಲ್ಲಿರತಕ್ಕ ಗವರ್ನ್‌ಮೆಂಟ್ ಆರ್ಡರ್‌ಕುರಿತು ತಕ್ಷಣದಲ್ಲಿ ಸಂಘದ ಆಡಳಿತೆ ಮತ್ತು ಕಾರ್‌ಬಾರಿ ಕೆಲಸಗಳಲ್ಲಿ ಪ್ರವೇಶಮಾಡುತ್ತಿರುವ ಉದ್ಯೋಗಸ್ಥರು ಅದರ ಸಂಬಂಧದಿಂದ ನಿವೃತ್ತರಾಗುವಂತೆ ಅಪ್ಪಣೆ ಆಗಪಡಕೆಂಬದಾಗಿಯೂ ಕೊಟ್ಟ ಲೆಟರಿನ ನಕ್ಕಲು ಯಿದರೊಂದಿಗೆ ಕಳುಹಿಸಲ್ಪಟ್ಟಿರುತ್ತೆ. ಮತ್ತು ಬಾಜೂದಲ್ಲಿ ಕಂಡ ಕಾಗದ ಪತ್ರಗಳ ನಕ್ಕಲೂ, 1883ನೇ ಇಸವಿ ಜನವರೀ 11ನೇ ಮುಕ್ಕಾಂವುಳ್ಳ (ಅರ್ಜಿದಾರರ ಲೆಟರಿನ ವಂದನೇ ಪ್ಯಾರಾದಲ್ಲಿ ನಮೂದಾದ) ಅನ್‌ಕವಿನಾರ್ಟೆಡ್ ಆಫೀಸರುಗಳು ಯಾವದಾದರೂ ಬ್ಯಾಂಕಿನ ಆಡಳಿತ ನಡಿಸುವ ಬೋರ್ಡಿನ ಮೆಂಬರಾಗಿರಕೂಡದೆಂದು ವಿಧಿಸುವ್ವ ನಮ್ಮ ಹುಕ್ಕುಮಿನ ನಕ್ಕಲೂ ಸುದಾ ಯಿದರೊಂದಿಗೆ ಕಳುಹಿಸುತ್ತೇವೆ.

1 "ಸಿಂಲಾವಿನ ಕೋಆಪರೇಟಿವ್ ಅಸೋಸಿಯೇಷನ್ ಲಿಮಿಟೆಡ್" ಯಾನೆ ಸಹಾಯ ಸಂಘದ ಮಿಮೊರಾಂಡಂ.

2 "ಸಿಂಲಾವಿನ ಕೋಆಪರೇಟಿವ್ ಅಸೋಸಿಯೇಷನ್ ಲಿಮಿಟೆಡ್" ಯಾನೆ ಸಂಘದ ಆರ್ಟಿಕಲ್ಸ್ ಯಾನೆ ನಿಬಂಧನೆ.

2. ಶಿಂಲಾ ಸ್ಥಳದ ಸಹಾಯ ಸಂಘದವರ ಮಿಮೊರಾಂಡಂನಲ್ಲಿ ಉದಹರಿಸಲ್ಪಡುವದೇನಂದರೆ "ಸದರೀ ಕಂಪೆನಿಯು ಸ್ಥಾಪಿಸಲ್ಪಟ್ಟಿರುವ ಮುಖ್ಯ ಉದ್ದೇಶವೇನಂದರೆ ಸಾಧಾರಣವಾಗಿ ವ್ಯಾಪಾರಕೆಲಸಗಳು ನಡಿಸುವ ಬಗ್ಯೆ ಸದರೀ ಸಂಘದ ಹಿಸ್ಸೇದಾರರಿಗೂ ಟಿಕೆಟ್ ಪಡೆದಿರುವ ಜನಗಳಿಗೂ ವ ಇತರ ಖುಷ್‌ಬಾಷ್ ಜನಗಳಿಗೂ (ಐಯಿಂದ ಅಪೇಕ್ಷಿಸಲ್ಪಟ್ಟರೆ) ಸ್ವಂತ ಖರ್ಚಿನ ಬಗ್ಯೆ ಮತ್ತು ಸಾಧಾರಣವಾಗಿ ಉಪಯೋಗದ ಬಗ್ಯೆ ಪದಾರ್ಥಗಳನ್ನು ಸಾಧ್ಯವಾದಷ್ಟು ಅಗ್ಗವಾಗಿ ಒದಗಿಸುವದೂ ಮತ್ತು ಮೇಲ್ಕಂಡ ಅವರ ಕೋರಿಕೆ ನೆರವೇರುವ ಬಗ್ಯೆ ಅವಶ್ಯಕಗಳಾದ ಯಾ ಅನುಕೂಲ್ಯಗಳಾದ ಅಂಥಾ ತಮಾಂ ಇತರ ಕೆಲಸಗಳನ್ನು ಚಲಾಯಿಸುವದೂ ಸುದಾ ಆಗಿರುವದಾಗಿ ತಿಳಿಯಬರುತ್ತೆ." ಇದಲ್ಲದೆ ಹಿಸ್ಸೇದಾರರುಗಳು ಮಾತ್ರವೇ ಸದರೀ ಸಂಘದ ಆದಾಯಗಳಿಗೆ ಭಾಗಸ್ಥರೆಂಬದಾಗಿಯೂ ಕಾಣಬರುತ್ತದೆ. "ಸಂಘದ ನಿಬಂಧನೆ" ರೀತ್ಯಾ ಹಿಸ್ಸೆಯು, ಡೈರೆಕ್ಟರುಗಳ ಅನುಮತಿ ವಿನಾ ಅನ್ಯಥಾ ಪರಭಾರೆ ಮಾಡಲ್ಪಡಕೂಡದು ಪರಂತು, ಒಬ್ಬ ಮೆಂಬರು ಫವತೀ ಆದ ತರುವಾಯ ಆತನ ಹಿಸ್ಸೆಗಳು ಆತನ ಯಗ್ಜಿಕ್ಯೂಟರ್ ಯಾ ಅಡ್ಮಿನಿಸ್ಟ್ರೇಟರುಯಾನೇ ವಾರಸುದಾರರುಗಳಿಗೆ ವರ್ಗ ಮಾಡಲ್ಪಡತಕ್ಕವು, ಮತ್ತು ಆತನು ದೀವಾಳಿಯಾದರೆ ಕಾನೂನ್ ಪ್ರಕಾರ ಅವುಗಳಿಗೆ ಹಕ್ಕುದಾರರಾದವರಿಗೂ ವರ್ಗಮಾಡಲ್ಪಡತಕ್ಕವು. ಡೈರೆಕ್ಟರುಗಳು, ಹಿಸ್ಸೇದಾರರು ವಟ್ಟಾಗಿ ಒಂದು ಜನರಲ್ ಮೀಟಿಂಗ್‌ನಲ್ಲಿ ರುಸುಂ ಹೊಂದಬಹುದೆಂದು ತೀರ್ಮಾನ ಮಾಡುವವರಿಗೂ ಮತ್ತು ಮಾಡಿದ ಹೊರ್ತು ಅನ್ಯಥಾ ಅಂಥಾ ಯಾವ ರುಸುಮನ್ನಾಗಲೀ ತೆಗದುಕೊಳ್ಳಕೂಡದು, ಮತ್ತು ಯಾವ ಸಂದರ್ಭದಲ್ಲಾದರೂ, ತಿಂಗಳು ಒಂದಕ್ಕೆ 20 ರೂಪಾಯಿಗಳಿಗಿಂತ ಜಾಸ್ತಿಯಾಗಿ ರುಸುಂ ತೆಗೆದುಕೊಳ್ಳಕೂಡದು. ಒಂದು ರಿಜರ್ವ್‌ಫಂಡು ಯಾನೆ ಅಮಾನತ್ ಫಂಡು ಉಂಟುಮಾಡಲ್ಪಡಬಹುದು, ಮತ್ತು ಸದರೀ ಅಮಾನತ್ತು ಫಂಡು ಸಂಘದ ಕ್ಯಾಪಿಟೆಲ್ ಯಾನೆ ಮೂಲಧನದ ನಾಲ್ಕರಲ್ಲಿ ವಂದು ಭಾಗದ ಪರಿಯಂತ ಜಮಾಯಿಸುವವರಿಗೂ, ವಸೂಲ್ ಬಂದ ಮೂಲಧನಕ್ಕೆ ಸಾಲಿಯಾನಾ ಶೇಕಡ ಆರಕ್ಕಿಂತ ಜಾಸ್ತಿಯಾಗಿ ನಫೇ ಕೊಡಲ್ಪಡಕೂಡದು.

3. "ಮಿಮೊರಾಂಡಂ" ಮತ್ತು "ಸಂಘದ ನಿಬಂಧನೆ" ಇವುಗಳನ್ನ ವೋದುವದರಿಂದ ಮಾತ್ರವೇ ಸದರೀ ಸಂಘದ ನ್ಯಾಯವಾದ ತಾತ್ಪರ್ಯವು ಗೊತ್ತು ಮಾಡಲ್ಪಡಬಹುದು, ಯೇನಂದರೆ ಸದರೀ ಸಂಘವು ವಾಸ್ತವ್ಯವಾಗಿ ಖುಷ್‌ಬುಷ್‌ಜನರಿಗಾಗಲೀ ಅಥವಾ ರಿಜಿಸ್ಟರಾದ ಹಿಸ್ಸೇದಾರರು ವಿನಾ ಇತರ ಯಾರಿಗೇ ಆಗಲೀ ವಿಕ್ರಯಿಸುವದಿಲ್ಲವೆಂಬದಾಗಿ ತಿಳಿಯಬಂದಿದ್ದಾಗ್ಯೂ, ಇದು ಸದ್ಯಹ ಕಾನೂನ್ ಪ್ರಕಾರ ಒಂದು ವ್ಯಾಪಾರ ಸಂಘವೆಂದು ತಿಳಿಯತಕ್ಕದ್ದಾಗಿ ಇದೆ.

4. ಇದೇ ಪ್ರಕಾರವಾದ ಸಂಘಗಳು ಅನ್ಯತ್ರ ರೈಲ್‌ವೇ ನವುಕರರಲ್ಲಿಯೂ ಮತ್ತು ಇತರರಲ್ಲಿಯೂ ಏರ್ಪಡಿಸಲ್ಪಟ್ಟವೆಯೆಂದು ನಂಬುವದಕ್ಕೆ ಸಾಕಾದ ಕಾರಣಗಳು ಉಂಟು; ಮತ್ತು ಅವುಗಳ ವಹಿವಾಟ್ಟುಗಳು, ವ್ಯಕ್ತಿಯೊಬ್ಬರಿಗೆ ಸರಬರಾಯಿ ಮಾಡುವ ಮಟ್ಟಿಗೆ ನಡಸುತ್ತಿರುವ ಪರಿಯಂತ ಅಂಥಾವುಗಳ ಪ್ರತಿಬಂಧಕ್ಕಾಗಿ ಯಾವ ಕೆಲಸ ಚಲಾಯಿಸುವದಕ್ಕೂ ನಮಗೆ ತಾತ್ಪರ್ಯವಿಲ್ಲಾ. ಸಿಂಲಾದಲ್ಲಿರತಕ್ಕ ಸಂಘವು, ಅವರ ವಹಿವಾಟ್ಟುಗಳನ್ನು ವೊಬ್ಬರಿಗೊಬ್ಬರಿಗೆ ಸಹಾಯ ಮಾಡತಕ್ಕ ಸಂಘದ ವಹಿವಾಟ್ಟಿನಂತೆಯೇ ಅಂದರೆ ಪದಾರ್ಥಗಳನ್ನು

ಅನ್ಯರಿಗೆ ವಿಕ್ರಯಿಸದೇನು ಮತ್ತು ನಷ್ಟೆಯನ್ನ ಯಾವಾಗಲೇ ಆಗಲೀ ಬಂಧು ಗೊತ್ತಾದ ವ ನ್ಯಾಯವಾದ ದರಕ್ಕಿಂತ ಜಾಸ್ತಿಯಾಗಿ ಹಿಸ್ಸೇದಾರರುಗಳು ಪಾವತೀ ಮಾಡೋಣಾದ ಮೂಲ ಧನದ ಮೇಲೆ ಹಂಚಕದೇನೂ ಇರುವ ಬಗ್ಗೆ ಕ್ರಮವಾಗಿ ಬದ್ಧರಾಗಿ ಆಪ್ರಕಾರ ಏರ್ಪಾಟುಗಳನ್ನು ಬದಲಾಯಿಸಿದ ಸಂದರ್ಭದಲ್ಲಿ ಗವರ್ನಮೆಂಟ್ ಆಫೀಸರ್‌ಗಳು ಸದರೀ ಸಂಘದ ಆಡಳಿತಗಳಲ್ಲಿ ಪ್ರವೇಶಿಸುವದಕ್ಕೆ ಆಕ್ಷೇಪಣೆ ಯೇನೂ ಇಲ್ಲವೆಂಬದಾಗಿ ಸೂಚಿಸಲ್ಪಟ್ಟಿದೆ. * ಈ ಇರಾದೆಯನ್ನ ನಾವೂ ಅಂಗೀಕರಿಸುತ್ತೇವೆ. ಪರಂತು, 1862ನೇ ಇಸವಿ ಮೇ 31ನೇ ಮುಕ್ಕಾಂ 46ನೇ ನಂಬರ್ ವುಳ್ಳ ಸರ್ ಸಿ. ಉಡ್ ಯವರ ಡೆಸ್‌ಪಾಚಿನಲ್ಲಿ ಕಂಡ ನಿರೋಧಗಳೂ ವ್ಯಾಪಾರ ಸಂಘಗಳೊಂದಿಗೆ ಗವರ್ನಮೆಂಟ್ ಆಫಿಸರುಗಳ ಸಂಬಂಧದ ವಿಷಯದಲ್ಲಿ ಜಾರಿ ಇರುವ ಇತರ ಬಟ್ಟು ಹುಕುಂಗಳೂ ಸುದಾ ಯಾವ ಸಂದರ್ಭದಲ್ಲಾದರೂ ಈ ವಿಧವಾದ ಸಂಘಗಳಿಗೆ ಲಗಾವ್ ಮಾಡಲ್ಪಡುವ ಬಗ್ಗೆ ಉದ್ದೇಶಿಸಲ್ಪಟ್ಟಿರುತ್ತದೆಯೇ ಹೊರ್ತು ಗವರ್ನಮೆಂಟ್ ಆಫೀಸರುಗಳು, ದೇಶದ ಆಮದಾನನ್ನು ವೃದ್ಧಿಪಡಿಸುವದಕ್ಕೋಸ್ಕರ ಉದ್ದೇಶಿಸಲ್ಪಟ್ಟು ಮತ್ತು ಕೇವಲ ಫಾಯಿದೆ ಸಂಪಾದಿಸುವ ತಾತ್ಪರ್ಯವುಳ್ಳ ಸಂಘಗಳಲ್ಲಿ ಸಂಬಂಧ ಉಂಟಾಗಿರಕೂಡದೆಂದು ಅಭಿಪ್ರಾಯವಾಗುವದಿಲ್ಲವೆಂಬದಾಗಿ ಅನುಮಾನ ಉಂಟಾಗಿರುತ್ತೆ; ಆದ ಪ್ರಯುಕ್ತ ಈ ಸಂಗತಿಯಲ್ಲಿ ಕಂಶೋಕ್ತವಾದ ತಮ್ಮ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳುವದು ಅವಶ್ಯಕವಾಗಿ ನಮಿಗೆ ಕಾಣಬರುತ್ತೆ.

* ಡೈರೆಕ್ಟರುಗಳಿಂದ ಕೊಡಲ್ಪಟ್ಟ ನೋಟಿಸಿನಿಂದ (ಕಾಪಿ ಲಗತ್ ಮಾಡಿರುತ್ತೆ) ಸೂಚಿಸಲ್ಪಟ್ಟ ಬದಲಾವಣೆಯು ಪ್ರಾಯಶಃ ನಡಿಸಲ್ಪಡಬಹುದಾಗಿ ನಾವು ವೂಹಿಸುತ್ತೇವೆ.

5. ವ್ಯಾಪಾರಕ್ಕೋಸ್ಕರ ಮತ್ತು ವ್ಯಾಪಾರದ ದೆಶೆಯಿಂದ ಫಾಯಿದೆ ಪಡಿಯತಕ್ಕ ಬಗ್ಗೆ ಸ್ಥಾಪಿಸಲ್ಪಟ್ಟ ಯಾವದಾದರೂ ತರಹೆಯ ಕಂಪೆನಿ ಯಾನೆ ಸಂಘದ ಆಡಳಿತದಲ್ಲಿ ಸರ್ಕಾರ್ ಉದ್ಯೋಗಸ್ಥರು ಸಂಬಂಧ ಉಂಟಾಗಿರುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಸಾಕಾದ ಕಾರಣಗಳು ಉಂಟೆಂದು ನಮಗೆ ಕಾಣಬರುತ್ತದೆ, ಯಾವವಂದರೆ, ಮಸಲಾ ಬ್ಯಾಂಕುಗಳು, ಇವುಗಳ ವಿಷಯದಲ್ಲಿ ಈ ಡೆಸ್‌ಪ್ಯಾಚಿನ 2ನೇ ಕಲಂನಲ್ಲಿ ಕಂಡ ನಿಬಂಧನೆಯು ನಮ್ಮಿಂದ ಈಚೆಗೆ ಜಾರೀಮಾಡಲ್ಪಟ್ಟಿರುತ್ತೆ; ಆದರೆ ಮೊದಲೇ ತಿಳಿಸಿದ ಪ್ರಕಾರ ಸಹಾಯ ಸಂಘವಾಗಿದ್ದು ಬದಸ್ತೂರು ವಾಸ್ತವ್ಯವಾಗಿಯೂ ವಹಿವಾಟು ನಡಿಸತಕ್ಕಂಥಾ ಮತ್ತು ಫಾಯಿದೆಗೋಸ್ಕರವಲ್ಲದೆ ಪಬ್ಬರಿಗೊಬ್ಬರಿಗೆ ಸಹಾಯ ಮಾಡುವದಕ್ಕೆ ಮಾತ್ರ ಸ್ಥಾಪಿಸಲ್ಪಟ್ಟಿರುವಂಥಾ ಸಹಾಯ ಸಂಘಗಳ ವಿಷಯದಲ್ಲಿ ನಾವು ಪ್ರವೇಶಿಸುವದಿಲ್ಲ.

6. ಈ ಸಂದರ್ಭದಲ್ಲಿ ಮತ್ತೊಂದು ವಿಷಯ ಚರ್ಚಿಸಲ್ಪಡುವದೇನಂದರೆ, ಆಲೋಚನೆಯಲ್ಲಿರುವ ಬಟ್ಟು ಹುಕ್ಕುಂಗಳು ಕವಿನ್ಯಾಟೆಡ್ ವ ಅನ್‌ಕವಿನ್ಯಾಟೆಡ್ ತರ್ಗತಿಗೆ ಶೇರಿದ ಗೆಜೆಟೆಡ್ ಆಫೀಸರುಗಳಿಗೆ ಮಾತ್ರ ಲಗಾವಾಗುತ್ತದೆಯೇ ಅಥವಾ ಸರ್ಕಾರದ ನವಕರಿಯಲ್ಲಿ ಇರತಕ್ಕ ಕ್ಲರ್ಕ್ ವ ಇತರ ಮುಖ್ಯ ಉದ್ಯೋಗಸ್ಥರಿಗೂ ಲಗಾವಾಗುತ್ತದಯೇ ಯೆಂಬುವದು. ನಾವು ತಿಳಿಯುವದೇನಂದರೆ, ಸದರೀ ಹುಕುಂಗಳ ಅಭಿಪ್ರಾಯವನ್ನು ಕುರಿತು ಸಂಗತಿಗಳನ್ನು ಆಲೋಚಿಸಿದರೆ ಅವುಗಳ ಅಮಲ್‌ಜಾರಿಯು ಗೆಜೆಟೆಡ್ ಆಫೀಸರುಗಳಿಗೆ ಮಾತ್ರ ಲಗಾವ್ ಮಾಡಲ್ಪಡಬಹುದೆಂತಲೂ ಮತ್ತು ತಾಬೇದಾರಿ ವ ಮುಖ್ಯ ಉದ್ಯೋಗಸ್ಥರ ವಿಷಯದಲ್ಲಿ ಅವರುಗಳು ಯಾವ ಬಗ್ಗಾಗಿ ಸಂಬಳ ಪಡೆಯುತ್ತಾರೋ ಅಂಥಾ ಪೂರ್ತಿ ಯಾದ ಕಾಲವನ್ನು ಸರ್ಕಾರ ಕೆಲಸಕ್ಕೆ ಉಪಯೋಗಿಸುತ್ತಾರೆಂದು ನಿಗೇ ಇಡುವದು ಸಾಕಾಗಿರುತ್ತೆ. ಅಂಥಾವರುಗಳು ಆಫೀಸ್ ಹೊತ್ತು ವಿನಾ ಇತರ ಕಾಲದಲ್ಲಿ ಯೇನು ಕೆಲಸ ನಡಿಸುತ್ತಾರೆಂಬ ವಿಷಯ ಗವರ್ನಮೆಂಟಿನವರು ಸಾಧಾರಣವಾಗಿ ತಾವಾಗಿಯೇ ವಿಚಾರಿಸಬೇಕಾದ್ದೇನೂ ಅವಶ್ಯಕವಿಲ್ಲ, ಪರಂತು, ಅಂಥಾ ಕೆಲಸಗಳಿಂದ ಸದರೀ ನವುಕರರು ದಾರಿದ್ರಾವಸ್ಥೆಗೆ ಬಾರದೆಯೂ ಯಾ ಬದ್‌ಚಾಲ್ ಜನಗಳ ಸಹವಾಸ ಮಾಡದೆಯೂ ಇದ್ದರೆ ಸಾಕಾಗಿರುತ್ತೆ; ಆದರೆ ಗವರ್ನಮೆಂಟಿನವರು, ಯಾವದಾದರೊಂದು ಗೊತ್ತಾದ ಸಂದರ್ಭದಲ್ಲಿ ತಕ್ಕ ಕಾರಣಗಳ ಮೇಲೆ ಅಂಥಾ ಸಂಬಂಧವನ್ನು ಅಡ್ಡೀ ಮಾಡುವದಕ್ಕೆ ಯಾವಾಗ್ಯೂ ಸ್ವತಂತ್ರರಾಗಿರತಕ್ಕದ್ದು.

ಇಂಡಿಯ ದೇಶದ ಮಹಾರಾಜ್ಞೀಯವರ ಸ್ಟೇಟ್ ಸೆಕ್ರೆಟೇರಿಯಿಂದ, ಇಂಡ್ಯಾ ಗವರ್ನಮೆಂಟಿನವರಿಗೆ, ಇಂಡಿಯಾ ಆಫೀಸ್ ಮೊಕ್ಕಾಂ ಲಂಡನ್, ಮುಕ್ಕಾಂ 1883ನೇ ಇಸವಿ ಜುಲೈ 19ನೇ ಮುಕ್ಕಾಂ ನಂಬರು 73. (ಪಬ್ಲಿಕ್)

ಶಿಮ್ಲಾದಲ್ಲಿ ವಹಿವಾಟು ನಡಿಸುತ್ತಲಿರುವ ಕೆಲವು ವ್ಯಾಪಾರಸ್ಥರು, ಕೆಲವು ಕವಿನ್ಯಾಟೆಡ್ ವ ಅನ್‌ಕವಿನ್ಯಾಟೆಡ್ ದರ್ಜೆಯ ಸರಕಾರ್ನವಕರರು ಸಹಾಯ ಸಂಘಗಳ ಆಡಳಿತ ಮತ್ತು ಕಾರ್‌ಬಾರೀ ಕೆಲಸಗಳಲ್ಲಿ ಪ್ರವೇಶಿರುವದಾಗಿಯೂ ಮತ್ತು ಅಂಥಾವರುಗಳು ಸದರೀ ಸಂಘದ ಸಂಬಂಧದಿಂದ ನಿವೃತ್ತರಾಗುವಂತೆ ಹುಕ್ಕುಂ ಆಗಬೇಕೆಂದು ಪ್ರಾರ್ಥಿಸಿ ತಮಿಗೆ ಬರೆದುಕೊಂಡ ಲೆಟ್ಟರಿನ ಕಾಪಿ ಸಹಿತ ತಾವು ಬರೆದ ಕಳೆದ ಏಪ್ರೆಲ್ 24ನೇ ಮುಕ್ಕಾಂ 25ನೇ ನಂಬರ್ ಲೆಟ್ಟರು ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಸುದಾ ತಲಪಿ ಅದನ್ನು ಕುರಿತು ನಾನು ಸಮಾಜದಲ್ಲಿ ಆಲೋಚಿಸಿರುತ್ತೇನೆ.

814.

2. ಏರ್ಪಟ್ಟ ಪ್ರಕಾರ ಸದರೀ ಸಂಘವು, ಶಬ್ದದ ವಾಡಿಕೆಯಾದ ಅರ್ಥರೀತ್ಯಾ ಒಂದು ವ್ಯಾಪಾರದ ಸಂಘವೆಂದು ಭಾವಿಸಲ್ಪಡತಕ್ಕದ್ದೆಂತ ತಾವು ಯೋಚಿಸುವಣವಾಗಿಧೆ. ಈ ಅಭಿಪ್ರಾಯವನ್ನು ನಾನು ಅನುಮೋದಿಸುತ್ತೇನಲ್ಲದ. ಸರ್ಕಾರ್ ನವುಕರರು ಜಾರೀಲಿರುವ ಹುಕ್ಕುಂಗಳನುಸರಿಸಿ ಅಂಥಾ ಒಂದು ಸಂಘದ ಆಡಳಿತದಲ್ಲಿ ಪ್ರವೇಶಿಸುವದಕ್ಕೆ ಅಡ್ಡಿಪಡಿಸಲ್ಪಟ್ಟಿರುತ್ತಾರೆಂಬದಾಗಿಯೂ ಸುದಾ ಭಾವಿಸುತ್ತೇನೆ.

3. ಸದರೀ ಸಂಘವು ಅದರ ಏರ್ಪಾಟನ್ನು ಬದಲಾಯಿಸಿ ಅದರ ವಹಿವಾಟಗಳನ್ನು ಪರಸ್ಪರರೊಬ್ಬರ ಸಹಾಯಾರ್ಥವಾದ ಸಂಘದೋಪಾದಿಯಲ್ಲಿ ಹದ್ದು ಪಡಿಸಿ, ಸದರೀ ಸಂಘದ ಮೆಂಬರುಗಳು ವಿನಾ ಅನ್ಯಥಾ ಯಾರಿಗೂ ಸಾಮಾನು ವಿಕ್ರಯಿಸುವದಿಲ್ಲವೆಂಬದಾಗಿಯೂ ಯಾವ ಕಾಲದಲ್ಲಾಗಲೀ ಹಿಸ್ಸೇದಾರರಿಗೆ ಅವರು ಕೊಟ್ಟ ಮೂಲಧನದ ಮೇಲೆ ಗೊತ್ತಾದ ಮತ್ತು ನ್ಯಾಯವಾದ ದರಕ್ಕಿಂತ ಜಾಸ್ತಿಯಾದ ಬಡ್ಡಿಯು ಹಂಚಲ್ಪಡುವದಿಲ್ಲವೆಂಬದಾಗಿಯೂ ಕ್ರಮಪ್ರಕಾರ ಬದ್ಧರಾಗುವ ಸಂದರ್ಭದಲ್ಲಿ ಅಂಥಾ ಸಂಘದ ಆಡಳಿತದಲ್ಲಿ ಗವರ್ನಮೆಂಟ್ ಆಫೀಸರುಗಳು ಪ್ರವೇಶಿಸುವದನ್ನು ಅಡ್ಡಿಪಡಿಸುವದು ತಮ್ಮ ಅಭಿಪ್ರಾಯವಲ್ಲವೆಂತಲೂ ಉದಹರಿಸೋಣಾಗಿಧೆ. ಹೀಗಿದ್ದಾಗ್ಯೂ, 1862ನೇ ಇಸವಿ ಮೇ 31ನೇ ಮುಕ್ಕಾಂವುಳ್ಳ ಛಾರಲ್ಸ್ ಉಡ್‌ಯವರ ಡೆಸ್‌ಪಾಚಿನ ತಾತ್ಪರ್ಯಗಳು ಮತ್ತು ಅದೇ ವಿಷಯಿಕವಾದ ಇತರ ಬಟ್ಟು ಹುಕ್ಕುಂಗಳು ಸುದಾ ಈ ತರಹೆಯ ಸಂಘದ ಸಂಬಂಧಕ್ಕೆ ಅನ್ವಯಿಸುತ್ತದೋ ಯಂಬದಾಗಿ ತಾವು ಅನುಮಾನಪಟ್ಟು ಈ ವಿಷಯದಲ್ಲಿ ನನ್ನ ಕಂಠೋಕ್ತವಾದ ಅಭಿಪ್ರಾಯವನ್ನು ಕೇಳೋಣವಾಗಿಯಧೆ.

4. ನಮೂದುಮಾಡಲ್ಪಟ್ಟ ಹುಕುಂಗಳು, ದೇಶದ ಆಮದಾನನ್ನು ವೃದ್ಧಿಪಡಿಸುವದಕ್ಕೋಸ್ಕರ ಉಂಟು ಮಾಡಲ್ಪಟ್ಟಂಥಾ ಕಂಪೆನಿಗಳಲ್ಲಿ ಮಾತ್ರವೇ ಗವರ್ನಮೆಂಟ್ ಆಫೀಸರುಗಳು ಕಾರ್‌ಬಾರೀ ಕೆಲಸಗಳಲ್ಲಿ ಭಾಗಸ್ಥರಾಗುವದಕ್ಕೆ ಅನ್ವಯಿಸತಕ್ಕದ್ದೆಂದು ಉದ್ದೇಶಿಸಲ್ಪಡಲಿಲ್ಲ, ಮತ್ತು ಅಂಥಾ ಆಫೀಸರುಗಳು ಬ್ಯಾಂಕುಗಳ ಆಡಳಿತಗಳಲ್ಲಿ ಪ್ರವೇಶಿಸಕೂಡದೆಂದು ತಾವು ಈಚಿಗೆ ವಿಧಿಸಿರುವದು ಬಹಳ ಯುಕ್ತವಾಗಿ ಇಧೆ. ಪರಂತು, ಪ್ರೊಬ್ಬರಿಗೊಬ್ಬರಿಗೆ ಸಹಾಯಮಾಡತಕ್ಕಂಥಾ ಒಂದು ಸಂಘದ ಆಡಳಿತದಲ್ಲಿ ಸರ್ಕಾರ್ ನವುಕರರಿಗೆ ಪ್ರವೇಶಿಸುವದಕ್ಕೆ ಅವಕಾಶ ಕೊಡುವದು ನ್ಯಾಯವಾದದ್ದೇ ಯೆಂಬ ಅಂಶವು ಬೇರೆ ವಿಷಯವಾಗಿರುತ್ತೆ, ಯೇನಂದರೆ ಸದರೀ ಆಫೀಸರರು ಸರ್ಕಾರ್ ಉದ್ಯೋಗವನ್ನು ಕ್ರಮವಾಗಿ ನಿರ್ವಹಿಸುತ್ತಾ ಎರಡನೇ ಉದ್ಯೋಗವನ್ನು ಅವಲಂಬಿಸುವದು ಸಮ್ಮತವಾದದ್ದೇ ಎಂಬುವದು. ನನಗೆ ಕಾಣಬರುವದೇನಂದರೆ ಸದರೀ ಹುಕುಂಗಳು, ವಾಸ್ತವ್ಯವಾಗಿ ಪ್ರೊಬ್ಬರಿಗೊಬ್ಬರು ಸಹಾಯ ಮಾಡತಕ್ಕಂಥಾ ಮತ್ತು ವ್ಯಾಪಾರಕ್ಕೋಸ್ಕರವ ವ್ಯಾಪಾರ ದೆಶೆಯಿಂದ ಫಾಯಿದೆ ಪಡಿಯುವದಕ್ಕೋಸ್ಕರ ಅಲ್ಲದಂಥಾ ಸಂಘಗಳಿಗೆ ಅನ್ವಯಿಸಲ್ಪಡತಕ್ಕದ್ದೆಂದು ಉದ್ದೇಶಿಸಲ್ಪಡಲಿಲ್ಲ, ಮತ್ತು ಹಾಗೆ ಅನ್ವಯಿಸಲ್ಪಡಲೂ ಕೂಡದು. ಸರ್ಕಾರ್ ನವುಕರರು ಈವಿಧವಾಗಿ ಹದ್ದುಪಡಿಸಲ್ಪಟ್ಟ ತರಹೇಯ ಸಂಘದಲ್ಲಿ ಪ್ರವೇಶಿಸುವದನ್ನ ಖಂಡಿತವಾಗಿ ನಿರೋಧಿಸುವದು ಅನಾವಶ್ಯಕವಾಗಿದ್ದಾಗ್ಯೂ, ಹಾಂಗೆ ಮತ್ತೊಂದು ಉದ್ಯೋಗವನ್ನ ಅವಲಂಬಿಸುವದು ಅನೇಕ ಸಂದರ್ಭಗಳಲ್ಲಿ ಸರ್ಕಾರ್ ಕೆಲಸಕ್ಕೆ ಕುಂದಕವಾಗಬಹುದೆಂಬ ವಿಷಯ ಜ್ಞಾಪಕದಲ್ಲಿ ಇಡತಕ್ಕದ್ದಾಗಿ ಇಧೆ; ಯಾತಕ್ಕಂದರೆ, ವಾಡಿಕೆಯಾಗಿ ಒಬ್ಬ ಮನುಷ್ಯನು ಇಬ್ಬರ ತಾಬೇದಾರೀ ಮಾಡುವದು ಅಸಾಧ್ಯವಾಗಿರುತ್ತೆ, ಮತ್ತು ಸರಕಾರದ ಕೆಲಸಗಳಿಗೆ ಕುಂದಕವಿಲ್ಲವೆಂಬ ವಿಷಯ ನಿಗೇ ಇಡತಕ್ಕದ್ದಾಗಿ ಇಧೆ.

5. ವ್ಯಾಪಾರ ಸಂಘಗಳೊಂದಿಗೆ ಗವರ್ನಮೆಂಟ್ ಆಫೀಸರರುಗಳ ಸಂಬಂಧದ ವಿಷಯದಲ್ಲಿ ಜಾರೀ ಯಿರತಕ್ಕ ಬಟ್ಟು ಹುಕ್ಕುಂಗಳು, ಗವರ್ನಮೆಂಟಿನ ಕವಿನಾಂಟೆಡ್ ವ ಅನ್‌ಕವಿನಾಂಟೆಡ್ ಉದ್ಯೋಗದ ಗೆಜೆಟೆಡ್ ಆಫಿಸರರುಗಳಿಗೆ ಲಗಾವಾಗುತ್ತೆಂಬದಾಗಿಯೂ, ಸರ್ಕಾರ್ ನವುಕರಿಯಲ್ಲಿ ಯಿರತಕ್ಕ ಕ್ಲರ್ಕ್ ವ ಇತರ ಮೊಹ್ತೇಸರೀ ಉದ್ಯೋಗಸ್ಥರ ವಿಷಯದಲ್ಲಿ ಲಗಾವಾಗುವದಿಲ್ಲವೆಂಬದಾಗಿಯೂ ಸಮಾಜದಲ್ಲಿ ತಾವು ಅಭಿಪ್ರಾಯ ಪಡುವದನ್ನು ನಾನು ಅನುಮೋದಿಸುತ್ತೇನೆ. ಈ ತರಗತೀ ಉದ್ಯೋಗಸ್ಥರ ವಿಷಯದಲ್ಲಿ ಇಲಾಖಾ ಮೊಹ್ತೇಸರರ ಮೇಲ್ ತನಿಖೆಯು ಸಾಕಾಗಿರುತ್ತೆ; ಮತ್ತು ಯಿದಲ್ಲದೆ ಗವರ್ನಮೆಂಟಿನವರು, ಯಾವ ಕಾಲದಲ್ಲಾಗಲಿ ಅವರ ತಾಬೆಯಲ್ಲಿರತಕ್ಕ ನವುಕರರು ಪ್ರವೇಶಿಸಕೂಡದೆಂದು ತಾವು ಅಭಿಪ್ರಾಯ ಪಡುವ ಯಾವ ಇತರ ಉದ್ಯೋಗವನ್ನಾದರೂ ಅವಲಂಬಿಸಕೂಡದೆಂದು ನಿರೋಧಪಡಿಸಬಹುದು.

ಹುಕ್ಕುಂ ಬಮೋಜಿಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜೂನ್ ತಾ॥ 25, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಫಾರೆಸ್ಟ್ ಇಲಾಖಾ

ತಾರೀಖು 11ನೇ ಜೂನ್ 1887.

ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟ್ ಸರಕಾರಿ ಜಂಗಲಿಗಳ 1886–87ನೇ ಸಾಲಿನ ಉತ್ಪತ್ತಿ ಬಾಬತು (ಸ್ವಲ್ಪ ಹೆಚ್ಚು ಕಡಿಮೆ) 4,700 ಮಣ ಯಾ 783 ಪಲ್ಲಗಳ ಅಳಲೇಕಾಯಿಯು, ಮೈಸೂರು ಪೂಡ್ಯಾರ್ಡಿನಲ್ಲಿ 1887ನೇ ಜೂನ್ 25ನೇ ಮುಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

ಷರತ್ತುಗಳು.

1. ಜಪ್ತದರಬಾಸ್ತುದಾರನು ಕ್ರಯದಾರನಾಗಿರತಕ್ಕದ್ದು.
2. ಕ್ರಯದ ಮೊಬಲಗಿನ ಸೈಕಿ ಶೇಕಡ 25 ರೂಪಾಯಿಗಳನ್ನು ಕ್ರಯದಾರನು ಹರಾಜ್ ದಿನದ ಲಾಗಾಯಿತು 3 ದಿನಗಳೊಳಗಾಗಿ ಖಜಾನೆಗೆ ಪಾವತೀ ಮಾಡತಕ್ಕದ್ದು.

518

3. ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಖಜಾನೆಗೆ ಪಾವತೀ ಮಾಡಲ್ಪಡತಕ್ಕದ್ದು.
4. ಕ್ರಯದ ಮೊಬಲಗು ಪೂರಾ ಪಾವತೀಯಾದ ನಂತರ ಅಳಲೆಕಾಯಿಯು ಕ್ರಯದಾರನಿಗೆ ತೂಕಮಾಡಿ ಕೊಡಲ್ಪಡುವದು.
5. ಮೇಲ್ಕಂಡ ಕಾಲದೊಳಗಾಗಿ ಶೇಕಡ 25 ರೂಪಾಯಿಯಂತೆ ಠೇವಣಿಯು ಮತ್ತು ಬಾಕೀ ಮೊಬಲಗೂ ಪಾವತೀ ಮಾಡಲ್ಪಡದಿದ್ದರೆ, ಅಳಲೆಕಾಯಿಯು ಕ್ರಯದಾರನಿಗೆ ಲುಕ್ಸಾನಕರವಾಗಿ ಮರಳಿ ಹರಾಜುಹಾಕಲ್ಪಡುವದು. ಆದರೆ ಕ್ರಯದಾರನು ಅದರಿಂದುಂಟಾಗುವ ಫಾಯಿದೆಗೆ ಅರ್ಹನಾಗಿರುವದಿಲ್ಲ.
6. ಅಳಲೇಕಾಯಿಯು 30 ದಿನಗಳೊಳಗಾಗಿ ಸಾಗಿಸಲ್ಪಡದಿದ್ದರೆ ಹರಾಜು ತಾರೀಖು ಲಾಗಾಯಿತು ತಿಂಗಳು 1ಕ್ಕೆ ಯಾ ಅದರ ಭಾಗಕ್ಕೆ ಮಣ 1ಕ್ಕೆ 3 ಕಾಸಿನ ಪ್ರಕಾರ ಡಿಪೋಬಾಡಿಗೆಯು ವಸೂಲ್ಮಾಡಲ್ಪಡುವದು.

ಯಲ್. ರಿಕೆಟ್ಸ್,
ಫಾರೆಸ್ಟುಗಳ ಇನ್ಸ್‌ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿ॥ ಅರ್ಜೀ ನಂಬರ್ 427.

ಬೆಂಗಳೂರು ತಾ॥ ವರ್ತೂರುಹೋಬಳಿ ಕೈಕೊಂಡರಹಳ್ಳೀಲಿದ್ದು ಮೃತಪಟ್ಟ ಈರಂಣ ಇವನ ಹೆಂಡತಿ ಪಾರ್ವತಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ 1ನೇ ಜೋಗಂಣನ ಮಗ ನಂಜಪ್ಪ 2ನೇ ಭೈರಪ್ಪ 3ನೇ ಇವನ ತಮ್ಮ ಚಿಕ್ಕಂಣ 2—3ನೇರು ಮೈನರ್ ಇವರ ಗಾರ್ಡಿಯನ್ 1ನೇ ನಂಜಪ್ಪ 4ನೇ ಲಿಂಗಾಚಾರದ ರುದ್ರಪ್ಪನ ಮಗ ವೀರಭದ್ರಯ್ಯ, ಮೃತಪಟ್ಟ ಸದರೀ ಈರಂಣ ಪಾರ್ವತಮ್ಮನಿಗೆ ತಮ್ಮನ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ಕೈಕೊಂಡರಹಳ್ಳಿ ಸ್ಥಳದ ಮೇಲ್ ಕಂಡ ನಂಜಪ್ಪ ವಗೈರೆ 4 ಜನರು ಸದರೀ ಕೈಕೊಂಡರಹಳ್ಳಿ ವಾಸಸ್ಥನಾಗಿ ಮೃತಪಟ್ಟ ಈರಂಣ ಇವನ ಹೆಂಡತಿ ಪಾರ್ವತಮ್ಮನ ಜಿಂದಗಿ ಬಗ್ಗೆಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಪ್ಪ ವಗೈರೆ ಮೇಲ್ ಕಂಡ 4 ಜನರ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಈರಂಣ ಪಾರ್ವತಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1887ನೇ ಯಿಸವಿ ಜೂನ್ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಮಿ॥ ಅರ್ಜೀ ನಂಬರ್ 438.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಹೊಸಕೆರೇಲಿದ್ದು ಮೃತಪಟ್ಟ ನಂದಹಳ್ಳಿ ಬಸೆಟ್ಟಿ ಆಸ್ತಿ ವಿಷಯದಲ್ಲಿ—

ಅರ್ಜೀದಾರ ತುಮಕೂರು ಡಿ॥ ಚಿಕ್ಕನಾಯಕನಹಳ್ಳಿ ಕಸಬಾದಲ್ಲಿರುವ ಶಿವಾಚಾರದ ಜಿರಾಯಿತುಕಸಬು ಶಿದ್ದಂಣನ ಮಗ ಮರುಳಶಿದ್ದ ಮೈನರ್ ಗುಂಡಪ್ಪ ಮರುಳಯ್ಯ ಮೃತಪಟ್ಟ ಸದರೀಬಸೆಟ್ಟಿಗೆ ಮೊಮ್ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕನಾಯಕನಹಳ್ಳಿ ಸ್ಥಳದ ಮರುಳಶಿದ್ದ ಮೈನರ್ ಮರುಳಯ್ಯ ಸದರೀ ವಾಸಸ್ಥನಾಗಿ ಮೃತಪಟ್ಟ ಬಸೆಟ್ಟಿಯ ಜಿಂದಗಿ ಬಗ್ಗೆಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮರುಳಶಿದ್ದಯ್ಯನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 1ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸೆಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜೂನ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೆಸ್,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 8ನೇ ಜೂನ್ 1887.

ಇದರಿಂದ ಸಂಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಗುಬ್ಬಿ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಬೇವಾರಸ್ ಆಗಿ ಇರತಕ್ಕ ಈ ಕೆಳಗೆ ವಿವರಿಸೋಣವಾಗಿಯಿರುವ ದಸ್ತೈವಜನ್ನ ಹಾಜರ್ಮಾಡಿದವರೆ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರು ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಗುಬ್ಬಿ ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರಿ ದಸ್ತೈವಜನ್ನ ವಾಪಸುಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು.

ದಸ್ತೈವಜಿನ ನಂಬರ್.	ದಸ್ತೈವಜಿನ ತಾರೀಖು.	ದಸ್ತೈವಜು ರಿಜಿಸ್ಟ್ರೇಷನ್ ಬಗ್ಗೆ ಹಾಜರ್ಮಾಡಿದ ತಾರೀಖು.	ದಸ್ತೈವಜು ರಿಜಿಸ್ಟ್ರಾದ ತಾರೀಖು.	ದಸ್ತೈವಜನ್ನ ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನ ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತು.
2 1885—86	28—12—84	16—4—85	16—4—85	ಗುಬ್ಬಿತಾಲ್ಲೂಕು ದೊಡ್ಡಗುಣಿ ಗ್ರಾಮದಲ್ಲಿಯಿರುವ ಕೊರಟಿಗೆರ ಚನ್ನಬಸೆಟ್ಟಿ	ಗುಬ್ಬಿ ತಾಲ್ಲೂಕು ದೊಡ್ಡಗುಣಿ ಗ್ರಾಮದಲ್ಲಿಯಿರುವ ಚನ್ನಪ್ಪನ ಮಗ ಕರಿಬಸೆಟ್ಟಿ	ತನ್ನ ಬಾಬತು ಕರಿಹಸು 1 ಕೆಂದ ಹಸು 1 ಕೆಂದಹಸುವಿನ ಮಣಕ 1 ಕರಿಹೆಂಣು ಕರಾ 1 ಬಿಳಿ ಹೆಂಣುಕರಾ 1 ಕೆಂದಹೋರಿಕರಾ 1 ಅಂಡಹೋರಿಕರಾ 1 ಕೆಂಧಹೆಂಣುಕರಾ1 ಕರಿಹೆಂಣುಕರಾ 1 ಕರಿಹೆಂಣು ಮಣಕ 1 ಕರಿಗಂಡುಕರಾ 2 ಜುಮ್ಲಾ 12 ರಾಸುಗಳನ್ನ 90 ರೂಪಾಯಿಗಳಿಗೆ ಶುದ್ಧ ಕ್ರಯಕ್ಕೆ ಕೊಟ್ಟು ಯಿರುವದಾಗಿ ಬರದುಕೊಟ್ಟ ಹಣಸಂದ ರಶೀತಿ ಮತ್ತು ಅದರ ಮುಲಪ್ರತಿ ರಿಜಿಸ್ಟ್ರಾಗದೆ ಯಿರುವ ಡಿಟೋ ರಾಸುಗಳ ಖರೀದಿ ಪತ್ರಸಹ.

ಪಿ. ಎನ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 206.

ಮೃತಪಟ್ಟ ವೆಂಕಟರಮಣಶೆಟ್ಟರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಲಕ್ಷ್ಮಿದೇವಮ್ಮನು, ಮೃತಪಟ್ಟ ಸದರೀ ವೆಂಕಟರಮಣಶೆಟ್ಟರಿಗೆ ಸಹೋದರನ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜ ನಗರದ ಸ್ಥಳದ ಸದರೀ ಲಕ್ಷ್ಮಿದೇವಮ್ಮನು, ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಶೆಟ್ಟರ ಜೀವಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಿದೇವಮ್ಮನವರ ಅರ್ಜೀಯನ್ನು 18[illegible]7ನೇ ಇಸವಿ ಜೂನ್ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಶೆಟ್ಟಿಗೆ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಜೂನ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತುಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 2[illegible]1.

ಮೃತಪಟ್ಟ ಗೌರಮ್ಮನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಜೊಕ್ಕಸ್ತ ಮಾದಪ್ಪನವರು, ಮೃತಪಟ್ಟ ಸದರೀ ಗೌರಮ್ಮನವರಿಗೆ ಭಾವನಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ಸದರೀ ಜೊಕ್ಕಸ್ತ ಮಾದಪ್ಪನವರು ನಂಜನಗೂಡು ತಾ|| ಸರ್ವಮಾನ್ಯ ಹೊಸಕೋಟೆ ವಾಸಸ್ಥರಾಗಿ ಮೃತಪಟ್ಟ ಗೌರಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜೊಕ್ಕಸ್ತ ಮಾದಪ್ಪನವರ ಅರ್ಜೀಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೌರಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜೂನ್ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತುಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 217.

ಮೃತಪಟ್ಟ ಅಳಿಶಿಂಗ್ರ್ಯಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಅಳಿಶಿಂಗ್ರ್ಯಾಚಾರ್ರು ಮೈನರ್‌ಗಾರ್ಡಿಯನ್ ನರಸುಹ್ಮಾಚಾರ್ರು, ಮೃತಪಟ್ಟ ಸದರೀ ಅಳಿಶಿಂಗ್ರ್ಯಾಚಾರ್ರಿಗೆ ದತ್ತುಮಗ ಮೈನರ್ ಗಾರ್ಡಿಯನ್ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಸನದ ತಾಲ್ಲೂಕು ಗೊರೂರು ಸ್ಥಳದ ಸದರೀ ಅಳಿಶಿಂಗ್ರ್ಯಾಚಾರ್ಯರ ಗಾರ್ಡಿಯನ್ ನರಸುಹ್ಮಾಚಾರ್ರು ಸದರೀ ವಾಸಸ್ಥರಾಗಿ ಮೃತಪಟ್ಟ ಅಳಿಶಿಂಗ್ರ್ಯಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಳಿಶಿಂಗ್ರ್ಯಾಚಾರ್ರು ಮೈನರ್ ಗಾರ್ಡಿಯನ್ ನರಸುಹ್ಮಾಚಾರ್ರ ಅರ್ಜೀಯನ್ನ 1887ನೇ ಇಸವಿ ಜುಲೈ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಳಿಶಿಂಗ್ರ್ಯಾಚಾರ್ರ ಆಸ್ತಿಗೆಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 224.

ಮೃತಪಟ್ಟ ನಾರಣಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ನಾಗಮ್ಮನು, ಮೃತಪಟ್ಟ ಸದರೀ ನಾರಣಮ್ಮನವರಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲ್ಲಾ ಸ್ಥಳದ ಸದರೀ ನಾಗಮ್ಮನು ಸದರೀ ವಾಸಸ್ಥರಾಗಿ ಮೃತಪಟ್ಟ ನಾರಣಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಾಗಮ್ಮನ ಅರ್ಜೀಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ನಾರಣಮ್ಮನವರ ಆಸ್ತಿಗೆ ಹಕ್ಕುದಾರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 239.

ಮೃತಪಟ್ಟ ಸಿದ್ದೇಗೌಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರ 1ನೇ ಸಿದ್ದಾ 2ನೇ ಚನ್ನೇಗೌಡ ಮೈನರ್ ಗಾರ್ಡಿಯನ್ ಮತ್ತು ತಾಯಿ ಲಿಂಗಮ್ಮನು ಮೃತಪಟ್ಟ ಸದರೀ ಸಿದ್ದೇಗೌಡರಿಗೆ ಹೆಂಡತಿ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹೆಗ್ಗಡದೇವನ ಕೋಟೆ ತಾಲ್ಲೂಕು ಬಿರಂಬಳಿ ಸ್ಥಳದ ಸದರೀ 1ನೇ ಸಿದ್ದಾ 2ನೇ ಚನ್ನೆಗೌಡ ಮೈನರ್ ಗಾರ್ಡಿಯನ್ ಮತ್ತು ತಾಯಿ ಲಿಂಗಮ್ಮನು ಸದರಿ ವಾಸಸ್ಥರಾಗಿ ಮೃತಪಟ್ಟ ಸಿದ್ದೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಿಂಗಮ್ಮನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 253.

ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವೆಂಕಟಾಚಾರ್ರು ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ವಿಭಕ್ತಸಹೋದರ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕೃಷ್ಣವಿಲಾಸ ಅಗ್ರಹಾರ ಸ್ಥಳದ ಸದರೀ ವೆಂಕಟಾಚಾರ್ರು ಮೇಲುಕೋಟೆ ವಾಸಸ್ಥರಾಗಿ ಮೃತಪಟ್ಟ ಕೃಷ್ಣಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 250 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಾಚಾರ್ರ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿದೆ.

1887ನೇ ಯಿಸವಿ ಜುಲೈ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮಾ.

ತಾರೀಖು 26ನೇ ಮೇ 1887.

ಚಿತ್ರದುರ್ಗ ಡಿಸ್ಟ್ರಿಕ್ಟು ಮೈಸೂರು ಗವರ್ನಮೆಂಟ್ ಸೇವಿಂಗ್ಸ್‌ಬ್ಯಾಂಕು ಡಿಪಾಜಿಟರುಗಳು, ಸ್ 1887ನೇ ಮಾರ್ಚಿ ಆಖೈರುವರಿಗಿನ ಬಡ್ಡಿ ದಾಖಲ್ ಬಗ್ಯೆ ತಮ್ಮ ಪ್ಯಾಸು ಬುಕ್ಕುಗಳನ್ನು ಚಿತ್ರದುರ್ಗ ಡಿಸ್ಟ್ರಿಕ್ಟು ಖಜಾನೆಗೆ ಹಾಜರ್‌ಮಾಡಬೇಕೆಂದು ಇದರಿಂದ ಕೇಳಲ್ಪಟ್ಟಿರುತ್ತಾರೆ.

ರಘುನಾಥರಾವ್,
ಟ್ರೆಜರಿ ಆಫೀಸರ್.

NOTICE.

The 21st June 1887.

A reward of Rupees 100 is offered by Complainant Putu Rao for such information as will lead to the discovery of perpetrators or recovery of the stolen property, as per list hereunder, in the Hulgur house breaking and theft case No. 201 of 1887, Koppa Taluk, Kadur District.

L. Ricketts,
Inspector General of Police.

ಕಡೂರು ಡಿಸ್ಟ್ರಿಕ್ಟು.

ಕಿಗ್ಗದ ಪುಟ್ಟೂರಾಯರಲ್ಲಿ ಸರ್ವಜಿತು ಸಂವತ್ಸರದ ವೈಶಾಖ ಶುದ್ಧ 14 ದಿವಸ ರಾತ್ರಿ ಕಳವು ಆದ ನಗ ವಗೈರೇ ತಪಸೀಲ್.

ಭಂಗಾರದ ಬಾಬ್ತು ನಗಗಳು.

ಅಂದಾಜು ರೂ.	ಹೆಸರು ವಗೈರೆ.	ವರಹಾ ತೂಕ.
240	ವಂಕೀ ಹಿಂಬಳೀ ಜೊತೆ 1 ಇದರಲ್ಲಿ ವಂದುಮುರದು ಯಿದೆ. ..	40
55	ಗುಂಡಿನ ಸರ 1ಕ್ಕೆ ಗುಂಡು 68ಕ್ಕೆ	10
66	ಗುಂಡಿನಸರ 1ಕ್ಕೆ ಗುಂಡು 87 ..	12
30	ಗಿಣಿ ವಾಲೇಜೊತೆ 1 ..	6
7½	ಗುಬ್ಬಿ ಯಡಬಳೆ ಜೊತೆ 1ಕ್ಕೆ ..	1½
25	ಅಡ್ಡಿಕೆ ಸರ1ಕ್ಕೆ ಅಡ್ಡಿಕೆ 44 ಗೆಜ್ಜೆ 39	5
15	ಜಳೆಮಣಿಸರ1ಕ್ಕೆ ಗೋಧಿಮಣಿ 20 ಗುಂಡು 45 ತಾಳಿ 1 ಸಹ ..	3
5	ಮುಂದಲೆ ಹುವ್ವು 1ಕ್ಕೆ ..	1
27½	ಹಿಂಬಳೆ ಜೊತೆ 1 ತಾಂಬ್ರದ ತಗಡು ಹಾಕಿದ್ದ ಬಾಬತು	5
22	ಸುರಿಗೆ ಯಡಬಳೆ ಜೊತೆ 1 ತಾಂಬ್ರ ತಗಡು ಹಾಕಿದ್ದು	4
20	ಡಿಟೋ ಯಡಬಳೆ ಜೊತೆ 1 ತಾಂಬ್ರದ ತಗಡು ಹಾಕಿದ್ದು	4
15	ಕಮಲದ ಹುವ್ವು 1ಕ್ಕೆ ..	3
15	ಸುರಿಗೆ ಯಡಬಳೆ 1ಕ್ಕೆ ..	3
12½	ಚವುರಿ ತುಂಬು 1ಕ್ಕೆ ..	2½
15	ಅಡ್ಡಕ್ಯಾದಿಗೆ 1ಕ್ಕೆ ..	3
7½	ಕೊಟ್ಟಿಗೆ ಮುರುವಿನ ಜೊತೆ 1ಕ್ಕೆ ..	
22	ಪವಿತ್ರದ ವುಂಗ್ರದ ಮಾದ್ರಿದು ವುಂಗ್ರ 1	4
10	ಬೆಂಡವಾಲೆ ಜೊತೆ 1ಕ್ಕೆ ..	2
20	ಕೈಗೆ ಯಿಡುವ ಗುಂಡು ಜೊತೆ 1ಕ್ಕೆ	4
12½	5 ಕಲಶದ ಬುಗಡಿ ಜೊತೆ 1ಕ್ಕೆ ..	2½
1	ಕೆಂಪು ಹರಳು ನತ್ತು 1ಕ್ಕೆ ..	
15	ಮುತ್ತಿನಮಣಿ ಹಾಕಿದ ಮುಗತ್ತಿ ವಂದು	
60	ತಲೆಗೆ ಯಿಡುವ ನಾಗರು 1ಕ್ಕೆ ..	10
50	ಕುರ್ಜಾತು 2ಕ್ಕೆ	
½	ಕಟ್ಟಿನ ಚಕ್ರ 2ಕ್ಕೆ ..	
10	ಹುಡುಗರ ವುಂಗ್ರ 4ಕ್ಕೆ ..	2
27½	ಮುದ್ರೆ ವುಂಗ್ರ 1ಕ್ಕೆ ಶ್ರೀರಂಗೇಶ್ವರಿ ಪ್ರಸಂನ ಯಂತ ಬೆಳ್ಳೀ ಕುಳವು ಹಾಕಿದ್ದು ..	5½

ರೂಪಾಯಿ..	ಹೆಸರು ವಗೈರೆ.	ವರಹಾ ತೂಕ
5	ಸಣ್ಣ ಮುರುವಿನ ಜೊತೆ 1ಕ್ಕೆ ..	
4	ಬುಗಡಿ ಜೊತೆ 1ಕ್ಕೆ ..	
4	ಯಸಲು ಜೊತೆ 1ಕ್ಕೆ ..	
4	ಮುತ್ತಿನಮಣಿ ಸರ 1ಕ್ಕೆ ..	
120	ಗಿಣಿವಾಲೆ ಜೊತೆ 3 ಮುತ್ತು ಸುತ್ತಿದ ಚಳ ತುಂಬು ಸಹ ಯಿರುವ ಬಾಬತು ..	24
200	ಯೇಳುಯೆಳೆ ಕಟ್ಟಾಣಿ ಸರ 2ಕ್ಕೆ ..	40
20	ಐದುಯೆಳೆ ಕಟ್ಟಾಣಿ ಸರ 1ಕ್ಕೆ ..	4
15	ಮೂರುಯೆಳೆ ಕಟ್ಟಾಣಿ ಸರ 1ಕ್ಕೆ ..	3
45	ಸಣಬಂಪಿ ಸರಿಗೆ 1ಕ್ಕೆ ..	9
25	ಕಾಶೀತಾಳಿ ಸರ 1ಕ್ಕೆ ಭಂಗಾರದ ಗುಂಡು 14 ಹವಳ 16	5
15	ರಾಗಟೆ 1ಕ್ಕೆ ಬೆಳ್ಳೀತಗಡು ಹಾಕಿದ್ದು ಪಟ್ಟೆ ಬಿಟ್ಟಿದೆ ರಾಮನಾಯಕ ಯಂತ ವಿಳಾಸವಿದೆ	3
14	ಮುತ್ತು ಸುತ್ತಿದ ಚಳತುಂಬು ಜೊತೆ 1ಕ್ಕೆ	2
72	ಅವರೇಬೇಳೆ ಮಾದ್ರಿ ಇರುವ ಕೆಂಪು ಹರಳು 6ಕ್ಕೆ ರೂಪಾಯಿ	
20	ಬಳೇವಾಲೆ ಜೊತೆ 1ಕ್ಕೆ ..	4
2	ಕರೀಮಣಿ ಸುತ್ತುಕಾಲುಂಗ್ರ ..	
45	ಗೆಜ್ಜೇಅಡ್ಡಿಕೆ ಸರ 1ಕ್ಕೆ ..	9
10	ಕಮಲದ ಹುವ್ವು 1ಕ್ಕೆ ..	2
7½	ತಿರುಪಿನ ಹುವ್ವು 1ಕ್ಕೆ ..	1½
20	ಗುಬ್ಬಿ ಯಡಬಳೆ ಜೊತೆ 1ಕ್ಕೆ ..	4
20	ಕೊಟ್ಟಿಗೆ ಮುರು ಜೊತೆ 1ಕ್ಕೆ ..	4
15	ಹೊನ್ನಹುವ್ವಿನ ಯಸಳು ಸರಪಣಿ ಜೊತೆ 1 ಸರಪಣಿ ಸಹಾ ..	3
5	ಬೆಂಡವಾಲೆ ಜೊತೆ 1 ಹಿಂಭಾಗಕ್ಕೆ ಬೆಳ್ಳೀ ಪಾಳಿ ಹಾಕಿದೆ ..	
30	ಕೆಂಪು ಹರಳು ವುಂಗ್ರ 1ಕ್ಕೆ ..	
10	ಕರೀಮಣಿ ತಾಳಿ ಕೋವಿಗುಂಡು ವಂಟಿ ಸಹ	
1	ನತ್ತು 1ಕ್ಕೆ ..	
1	ಹಣೆ ಬಟ್ಟು 1ಕ್ಕೆ ..	
20	ಆರು ಕಲಶದ ಬುಗಡಿ ಜೊತೆ 1ಕ್ಕೆ	4
2½	ಹೊನ್ನುತಗಕದ ಭಂಗಾರದ ಗಟ್ಟಿ 1ಕ್ಕೆ	
40	ವಾಲೆ ಜೊತೆ 1ಕ್ಕೆ ..	8
50	ತೋಳು ಸರಿಗೆ 1ಕ್ಕೆ ..	10
1648½		

ಬೆಳ್ಳೀ ನಗಗಳು.

ರೂಪಾಯಿ.	ಹೆಸರು ವಗೈರೆ.	ರೂಪಾಯಿ.
13	ಬೆಳ್ಳೀ ಚತ್ರಿನೆಲೆ 4ರದು 1ಕ್ಕೆ	13
11	ಪಟ್ಟೆ ಅಡ್ಡಿಕೆ ಹಾಕಿರುವದು 1	11
7	ಬೆಳ್ಳೀ ಬಟ್ಲು 1ಕ್ಕೆ	7
10½	ನಾಗಸಂಪಿಗೆ ಹುವ್ವು 10ಕ್ಕೆ	10½
11½	ಪಖ್ಯ 4ಕ್ಕೆ	11½
11	ಬೆಳ್ಳೀ ನೆರಿ 1ಕ್ಕೆ	11
37	ಯರಕದ ಬಾಬತು ಬೇದ್ರಿ ರಥ 1ಕ್ಕೆ	37
58	ಯರಕದ ಪ್ರಭಾಳೆ 1ಕ್ಕೆ	58
14	ನಾಗಸಂಪಿಗೆ ಹುವ್ವು 20 ಹುರಿಹಾಕಿದ್ದು ತೂಕ 2 ವಜಾ	16
3¾	ಬೆಳ್ಳೀ ಕ್ಯಾದಿಗೆ 1ಕ್ಕೆ	3¾
8	ಕ್ಯಾದಿಗೆ 5ಕ್ಕೆ	8
3¼	ನಾಗರ ಫಣೆ 1ಕ್ಕೆ	3¼
6	ಸೋಮಸೂಸ್ತ್ರ ನಾಗರಹೆಡೆ ಇರುವ ಬಾ॥ 1ಕ್ಕೆ	6
3¾	ನಾಗಸಂಪಿಗೆ ಹುವ್ವು 3ಕ್ಕೆ ಪೈಕೀ 1 ಚಿನ್ನದ ಕುಸುರು ಹಾಕಿದ್ದು	3¾
24	ಮುತ್ತೊಂದು ಪ್ರಭಾವಳೆ 1ಕ್ಕೆ	24
12	ಯಿದರ ಪೀಠ ಅರಗು ಹಾಕಿದ ಬಾಬತು ಅಂದಾಜು ರೂಪಾಯಿ	12
12	ಹಿತ್ತಾಳೆ ಮಡಾಯಿಸಿದ ಬಾಬತು ಪ್ರಭಾಳೆ 1ಕ್ಕೆ	12
5½	ಚತ್ರಿ 4 ನೆಲೆ ಬಾಬತು 1 ತೂಕ 7½ಗೆ ಹಿತ್ತಾಳೆ ದಡೀ ಬಾ॥ 2 ವಜಾ ಜಾತಾ	5½
5	ಮೂರುನೆಲೆ ಚತ್ರಿ 1ಕ್ಕೆ	5
4	ಚತ್ರಿ 2ನೆಲೆ ಬಾಬತು ಅಂದಾಜು ತೂಕ 6ಕ್ಕೆ ಹಿತ್ತಾಳೆ ಖಡ್ಡಿ ತೂಕ 2 ವಜಾ ಜಾತಾ	4
8	ಸೂರೆಪೇಟಿ ಪಬ್ಯ ಸಹ 7ಕ್ಕೆ	8
21½	ಬೆಳ್ಳೀಡಾಬು 1ಕ್ಕೆ	21½
20	ಬೆಳ್ಳೀ ನೇವಳ 1 ಜೋಡುಯಳೆ ಬಾಬತು 1ಕ್ಕೆ	20
4	ತೋಳುಸರಿಗೆ 1ಕ್ಕೆ	4
10	ಬೆಳ್ಳೀ ಡಾಬು 1ಕ್ಕೆ	10
12	ನ್ಯಾವಳಾ 1ಕ್ಕೆ	12
15	ನೇವಳಾ 1ಕ್ಕೆ	15
6	ಬಳೇ ಜೊತೆ 1ಕ್ಕೆ	6
8	ಸರಪಣಿ ಜೊತೆ 1ಕ್ಕೆ	8
10	ಸರಿಗೆ 3ಕ್ಕೆ	3
3	ತಾತೀ ಜೊತೆ 5ಕ್ಕೆ	3
5	ತೋಳು ಬಳೆ 1ಕ್ಕೆ	5
9	ಬಳೆ 2 ಹಲ್ಲೆ 1	9
7	ನೇವಳಾ ವುಂಗ್ರ ಸಹ	7
12	ಬೆಳ್ಳೀ ಗೆಜ್ಜೆಸರ 1ಕ್ಕೆ	12
18	ಪಾಡಗದ ಜೊತೆ 2ಕ್ಕೆ	18

ರೂಪಾಯಿ.	ಹೆಸರು ವಗೈರೆ.	ರೂಪಾಯಿ.
18	ಅಂದಿಗೆ ಜೊತೆ 2ಕ್ಕೆ	18
25	ನ್ಯಾವಳಾ 2ಕ್ಕೆ ರೂಪಾಯಿ	25
2	ಹರಿವಾಣ 2ಕ್ಕೆ	2
2½	ಪಂಚಾಮೃತದ ಬಟ್ಲು 5ಕ್ಕೆ	2½
1½	ಬೆಳ್ಳೀ ಬಟ್ಲು 2ಕ್ಕೆ	1½
3	ಸಣ್ಣಬೆಳ್ಳೀ ಹರಿವಾಣ 1ಕ್ಕೆ	3
10	ಸಣ್ಣಬೆಳ್ಳೀ ಕವುಳಿಗೆ 1ಕ್ಕೆ	10
2	ಬೆಳ್ಳೀ ಘಂಟೆ 1ಕ್ಕೆ	2
1	ಆರಿತಿ ಬೆಳ್ಳೀ ಬಾಬತು 1ಕ್ಕೆ	1
12	ಹಾಲುಗಡಗ ಜೊತೆ 2ಕ್ಕೆ	12
12	ಗೆಜ್ಜೆ ಪಿಂಚು 4ಕ್ಕೆ	12
2	ಸುತ್ತು ಕಾಲುಂಗ್ರ 2ಕ್ಕೆ	2
112½	ಪಂನೀರು ದಾನಿ 2 ವರೆಃನ ಕೆಲಸ ಮಾಡಿದ್ದು ಅಂದಾಜು ತೂಕ ರೂ. 60 ಕ್ರಯ ರೂ.	112½
20	ಬೆಳ್ಳೀ ಬಳೆ ಜೊತೆ 1ಕ್ಕೆ	20
12	ಬೆಳ್ಳೀ ಪಟ್ಟೆ 2ಕ್ಕೆ	12
8	ತವಾಚಿ ಸರಪಣಿ 1ಕ್ಕೆ	8
12	ನೆವಳಾ ಜೋಡುಯಳೆ ಬಾಬತು 1ಕ್ಕೆ	12
10	ಗೆಜ್ಜೇಸರ 1ಕ್ಕೆ	10
2	ಸುತ್ತು ಕಾಲುಂಗ್ರ 2ಕ್ಕೆ	2
3	ಸಣ್ಣಬೆಳ್ಳೀ ಪಟ್ಟೆ 3ಕ್ಕೆ	3
½	ಬೆಳ್ಳೀ ಹಣತಿ 1ಕ್ಕೆ	
2	ದುಂಡಿನ ಜೊತೆ 1ಕ್ಕೆ	2
½	ಕಪ್ಪಿನ ಕರಡಿಗೆ 1ಕ್ಕೆ	
1450	ನಗದಿ ಬಾಬತು	
	79 ರಾಜಾ ರೂಪಾಯಿ	
	21 ನಾಮಿ ಕುಂಪಣಿ ರೂಪಾಯಿ	
	1350 ನಗದು ರೂಪಾಯಿ	
	1450 ಯಿವುಗಳಲ್ಲಿ ಕೆಲವು ಸುಟ್ಟದ್ದು ಇರುತ್ತೆ.	
2152¼		

ಬಟ್ಟೇ ಬಾಬತು.

ರೂ.	ಆ.	ಪೈ.	
30	0	0	ಬನಾತು ಪೀತಾಂಬರ 1 ಕಲಾಬತ್ತು ಬಾಬತು ಕೆಂಪು
10	0	0	ಹೊಸಪಟ್ಟೆ ಮಡಿ 2ಕ್ಕೆ 4—6 ಮಳದ ಬಾಬತು
11	5	8	ಹೊಸಬಿಳೆ ಕಲಾಬತ್ತು ರುಮಾಲ್ 1ಕ್ಕೆ ನಂಬರ್ 7 ನಂಬರ್ 889
5	5	6	ಕಲಾಬತ್ತು ಪಂಚೆ ಜೊತೆ 1 ಮಳ 6ರ ಬಾಬತು ನಂಬರ್ 48
12	0	0	ಶಾಲ್ಯದ ಜೊತೆ 1 ನಂಬರ್ ಸೆನವು ಯಿಲ್ಲ
4	5	9	ಶಾಲ್ಯದ 8 ಮಳದ ಪಂಚೆ 2 ನಂಬರ್ 19
6	4	0	ಕೋಟು 1ಕ್ಕೆ
79-4-11			

522

ತಾಂಬ್ರದ ನಗಗಳು.

ರೂ.

4 ಮದ್ದಗಿರಿ ಪಂಚಪಾತ್ರೆ 4ಕ್ಕೆ.

10½ ನಗಗಳು ಹಾಕಿದ ಕರಡಿಗೆ ಹಿತ್ತಾಳೆ ತಾಂಬ್ರ ಸಹ 5ರ ಕ್ರಯ

25 ಹಿತ್ತಾಳೆ ಸಂದೂಕದಲ್ಲಿ ಹಾಕಿ ಯಿಟ್ಟ ಬೆಳ್ಳೀ ಗಣಪತಿ

39½ ವುಂತಾದ ಸಾಮಾನು ಅಂದಾಜು ರೂಪಾಯಿ.

3919-8-11 ವಟ್ಟು ಜುಮ್ಲಾ ರೂಪಾಯಿ.

ಯಿದು ಶಿವಾಯಿ ಯಿನ್ನು ಯಷ್ಟು ಮಾಹಲ್ ಹೋಗಿದೆ ಯಂಬುವದು ನಿರ್ದೇಶಿಸಿಲು ಆಗಲಿಲ್ಲ, ನಾನು ನನ್ನ ತಮ್ಮ ನನ್ನ ಮನೇಜನರು ಸಹಾ ಯಿದರಲ್ಲಿ ಯಿಟ್ಟು ತೆಗಿಯತಕ್ಕವರು ಬಂದಲ್ಲಿ ಯಿನ್ನೇನಾದರೂ ಹೋದವಾ? ಸಂಗತಿ ತಿಳಿದರೆ ಹಿಂದಿನಿಂದ ತಿಳಿಸುತ್ತೇನೆ.

ಮಾಲ್ ಮತ್ತು ಅಸಾಮಿ ಪತ್ತೇಮಾಡಿ ಶಿಕ್ಷೆಗೆ ಗುರಿಯಾಗುವ ಹಾಗೆ ಮಾಡಿ ಕೊಟ್ಟವರಿಗೆ (100) ರೂಪಾಯಿ ಇನಾಂ ಕೊಡಲ್ಪಡುತ್ತೆ.

ತಾರೀಖು 11ನೇ ಜೂನ್ 1887ನೇ ಇಸವಿ.

ಕಿಗ್ಗದ ಪುಟ್ಟೂರಾಯನ ರುಜು.

ತಾರೀಖು 31ನೇ ಮೇ 1887.

ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜನ್ನು ಕ್ರಮ ಪ್ರಕಾರ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ವಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್ ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರೇಷನ್ ಬಗ್ಯೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
Iನೇ ಬುಕ್ಕು ನಂಬರ್ 19 / 1885—86 ತರೀಕೆರೆತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫಿಸ್	ತರೀಕೆರೆ ತಾಲ್ಲೂಕು ಕಸಬಾ ಹಾದೀಕೆರೆಯಲ್ಲಿರುವ ಸೈದ್ ಸಾಬರ ಮಗ ಸೈದ್ ಅಬ್ಬಾಸಾಬ್	ತರೀಕೆರೆ ತಾಲ್ಲೂಕು ಕಸಬಾ ಹಾದೀಕೆರೆಯಲ್ಲಿರುವ ಸೈದ್ ಸಾಬರ ಮಗ ಸೈದ್ ಅಬ್ಬಾಸಾಬನ ಹೆಂಡತಿ ಜಹಬಾರಾಬಿ	30ನೇ ಏಪ್ರೈಲ್ 1885ನೇ ಇಸವಿ	30ನೇ ಏಪ್ರೈಲ್ 1885ನೇ ಇಸವಿ	200 ರೂಪಾಯಿಗಳಿಗೆ ಹಾದೀಕೆರೆ ಗ್ರಾಮದ ಸರ್ವೆ ನಂ. 53-5 ಮತ್ತು ಈ ಗ್ರಾಮಕ್ಕೆ ಶೇರಿದ ಮಲ್ಲೇನಹಳ್ಳಿ ಸರ್ವೆ ನಂ. 5ನೇ ಪೈಕೀ ಗದ್ದೇ ಸಹ ಶುದ್ಧ ಕ್ರಯಕ್ಕೆ ಕೊಟ್ಟಿರುವದಾಗಿ.
Iನೇ ಬುಕ್ಕು ನಂಬರ್ 38 / 1885—86 ತರೀಕೆರೆತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸ್	ತರೀಕೆರೆ ತಾಲ್ಲೂಕು ಅಜ್ಜಂಪುರಹಳ್ಳಿ ಇರುವ ಅಂತರಗಟ್ಟೆ ನಾಡಿಗ ಲಿಂಗಪ್ಪನವರ ಮಗ ಶಂಕರಪ್ಪ ಯಾನೆ ಪುಟ್ಟರಾಮಣ್ಣ	ಕಡೂರು ತಾಲ್ಲೂಕು ಚಿಕ್ಕ ನಲ್ಲೂರಲ್ಲಿರುವ ಕೃಷ್ಣಪ್ಪನವರ ಮಗ ಸಣ್ಣಪ್ಪ	23ನೇ ಮೇ 1885ನೇ ಇಸವಿ	23ನೇ ಮೇ 1885ನೇ ಇಸವಿ	200 ರೂಪಾಯಿಗಳಿಗೆ ತರೀಕೆರೆ ತಾಲ್ಲೂಕು ಬುಕ್ಕಾಂಬುದಿ ಗ್ರಾಮದಲ್ಲಿರುವ 31ನೇ ನಂ. ಹಂಚಿನ ಮನೆ ಇದಕ್ಕೆ ಶೇರಿದ ಹಿತ್ತಲು ಅಂಗಳ ಸಹ ಮತ್ತು ಕಡೂರು ತಾಲ್ಲೂಕು ಚಿಕ್ಕನಲ್ಲೂರು ಕಸಬಾಗ್ರಾಮದಲ್ಲಿರುವ ನಂ. 81—82ನೇ ಹಂಚಿನ ಮನೆ ಇದಕ್ಕೆ ಶೇರಿದ ನಿವೇಶನ ಸಹ ಮತ್ತು ಯಿದೇ ಗ್ರಾಮದ ಬಗರ್ ನಂಬರ್ ಹುಲ್ಲಿನ ಮನೆ ಈ ಮೂರು ಸೊತ್ತುಗಳನ್ನು ಕ್ರಯಕ್ಕೆ ಕೊಟ್ಟಿರುವದಾಗಿ ವಗೈರೆ.

ಜೆ. ಯಿ. ಕ್ಯಾಂಪ್‌ಬೆಲ್, ಕರ್ನಲ್,

ಅ|| ರಿಜಿಸ್ಟ್ರಾರ್.

ತಾರೀಖು 20ನೇ ಮೇ 1887.

ಕಡೂರು ಡಿಸ್ಟ್ರಿಕ್ಟು ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್‌ದಾರರುಗಳು, ಸನ್ 1887ನೇ ಇಸವಿ ಮಾರ್ಚಿ ಆಖೈರ್ ವರಿಗಿನ ಬಡ್ಡೀ ದಾಖಲ್ ಬಗ್ಯೆ ತಮ್ಮ ಪ್ಯಾಸ್ ಬುಕ್ಕುಗಳನ್ನು ಬಹಳ ಕ್ಷಿಪ್ರವಾಗಿ ಡಿಸ್ಟ್ರಿಕ್ಟು ಖಜಾನೆಗೆ ಹಾಜರ್ಮಾಡಬೇಕೆಂದು ಇದರಿಂದ ಕೇಳಲ್ಪಟ್ಟಿರುತ್ತಾರೆ.

ಟಿ. ರಾಘವೇಂದ್ರರಾವ್,

ಟ್ರೆಜರಿ ಆಫೀಸರ್.

ತಾರೀಖು 4ನೇ ಜೂನ್ 1887.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಈ ಡಿಸ್ಟ್ರಿಕ್ಟಿನಲ್ಲಿನ ಇದರಡಿಕಂಡ ಕಾಫೀ ಜಮೀನುಗಳ ಬಾಬತು ಬಾಕಿಯು ತಹಲ್ ಪಾವತೀ ಮಾಡದೇ ಯಿರುವದ್ದರಿಂದ ಸದರೀ ಜಮೀನುಗಳು ಸನ್ 1887ನೇ ಇಸವಿ ಜುಲೈ 11ನೇ ಸೋಮವಾರ ಮಧ್ಯಾನ್ಹ ಯಡೇಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾದ ಹರಾಜಿನಲ್ಲಿ ಕಂದಾಯದ ಬಾಕೀ ವಸೂಲಿ ಬಗ್ಯಾಗಿ ವಿಕ್ರಯಿಸಲ್ಪಡುವವು:—

ಸರ್ವೇ ನಂಬರು.	ಖಾತೇದಾರನ ಹೆಸರು.	ತಾಲ್ಲೂಕು ವ ಗ್ರಾಮ.	ವಿಸ್ತೀರ್ಣ ಎಕರೆ.		ಕಂದಾಯ.			ಬಾಕೀ. 1886–87			ಬಾಕೀ. ಜುಮ್ಲಾ.			ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ದಕ್ಷಿಣ.	ಷರಾ.
19	ಬಾಳೆಜಿ ಕೃಷ್ಣರಾವ್.	ಕೊಪ್ಪ ತಾ|| ಕಬ್ಬಿಕೊಪ್ಪ ಗ್ರಾಮ.	164	31	165	0	0	165 *10 †1	0 5 0	0 0 0	176	5	0	24, 25, 26, 27ನೇ ಸರ್ವೆ ನಂಬರುಗಳು.	29ನೇ ಸರ್ವೆ ನಂಬರು.	29ನೇ ಸರ್ವೆ ನಂಬರು.	18ನೇ ಸರ್ವೆ ನಂಬರು.	ಕೊಪ್ಪ ತಾಲ್ಲೂಕಿನ ಯಡೇಹಳ್ಳಿ ತಾಲ್ಲೂಕು ಕಚೇರಿಯಲ್ಲಿ ಹರಾಜು ದ್ವಾರಾ ವಿಕ್ರಯಿಸಲ್ಪಡುವದು.

* ಲೋಕಲ್ ಸೆಸ್

† ನೋಟೀಸ್ ಫೀ

ಜೆ. ಯೆ. ಕ್ಯಾಂಪ್‌ಬೆಲ್, ಕರ್ನಲ್,
ಡೆಪ್ಯುಟಿ ಕಮ್ಮಿಷನರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನಿಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ದರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾವರೂ ಕಲಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸವುಳ್ಳ ಡಬ್ಬಿ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡುವುಳ್ಳ ಡಬ್ಬಿಗೆ 20 ರೂಪಾಯಿ ಈ ಔಷಧವು, ಕಲಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಖಾಸಗಿ ಪ್ರಕಟನೆ.

ಇದರಕೆಳಗೆ ರುಜು ಮಾಡಲ್ಪಟ್ಟು ಯಿರುವವರು ನಗದು ಮೊಬಲಗ್ಯೆ ಯೆಷ್ಟು ಮೂಳೆ ಅವರು ತೆಗದುಕೊಳ್ಳುವದಕ್ಕೆ ಸಿದ್ಧವಾಗಿ ಯಿದ್ದಾರೆ ಈಗಿನ ದಾರಣೆ 28 ಪೌಂಡಿನ ಮಣ 1ಕ್ಕೆ ಆರುಆಣೆ ಮೇರಿಗೆ ತೆಗದುಕೊಳ್ಳುತ್ತಾರೆ.

ಸಿ. ಸ್ಪೀಚ್‌ಲಿ,
ಮ್ಯಾನೇಜರ್,
ಸ್ಟುವರ್ಟ್ಸ್ ವರ್ಕ್ಸ್, ಹುಣಸೂರು.

ಮೈಸೂರ ಗೆಜೆಟ್, ಚಂದಾ ದರ ವಗೈರೇ.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—				
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..			2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ			1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್ಗಳ ಬಗ್ಯೆ ನೋಟೀಸ್‌ಗಳಿಗೆ:-				
ಮೊದಲನೇ ದಫಾ			5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ			2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್‌ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟೀ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—			
ಮೊದಲನೇ ಸಲಕ್ಕೆ ..	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	" ..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—			
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	..	0	4

ಷರಾ.—ಚಂದಾ ವಗೈರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತಿ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಬನೋಜೀಬ್ ಹುಕ್ಕುಂ,
ಟಿ. ಟಿ. ಲೆನರಡ,
ಮೈ. ಗೆ. ಕಂಪೈಲರ್.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 26 ಸರ್ಕಾರದಿಂದ ಪ್ರಕಾಯಿಷ್ ಆದ್ದು. ಸರ್ 1887.

ಬೆಂಗಳೂರು, ಶನಿವಾರ, ಜುಲೈ ತಾ|| 2, ಸರ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ-ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ-ರಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡುಗ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ-ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ-ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 1ನೇ ಜೂನ್ 1887.

ನಂ. 33.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ

ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮ್ಮಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗ್ಯೆರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ ಆ. ಪೈ.	
ಹಾಸನ.	ಹೊಳೇನರಸೀಪುರ.	ಗುಬ್ಬಿ.	ಸೋಡಿ ಗುಬ್ಬಿ, ಅದರ 5 ದಾಖಲೆ ಪಾಳ್ಯಗಳು.	ಹೆಬ್ಬಾರ ನಂಜಪ್ಪ, ಇತರ 62 ಮಂದಿ.	0 0 0	835 5 6	590 3 4	1,9 ̒6 12 10 ನೋಟೀಸ್ ಫೀ ಮತ್ತು ಹರಾಜು ತಾರೀಖು ವರಿಗಿನ ಬಡ್ಡೀ.	ಮುಂದಿನ ತಿಂಗಳು ತಾರೀಖು 13ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರು ರೂಬರೂ.

ತಾರೀಖು 9ನೇ ಜೂ 1887.

ಕ್ಯಾಂಪ್ ನಂ. 773.—ಇಂಡಿಯ ಗವರ್ನಮೆಂಟಿನವರ ಇದರಡೀ ಕಂಡ ಇಸ್ತಿಹಾರ್‌ನಾಮೆಗಳು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತೆ:—

ತಾರೀಖು 13ನೇ ಏಪ್ರೈಲ್ 1887.

"ನಂ. 1652 I.—1882ನೇ ಇಸವಿ XIVನೇ ನಂಬರ್ ಆಕ್ಟು ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿಗೆ ವಿಸ್ತರಿಸಲ್ಪಟ್ಟ ಪ್ರಕಾರ ಸದರೀ ಆಕ್ಟಿನಿಂದ ಉಂಟು ಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಸಮಾಜದಲ್ಲಿನ ಗವರ್ನರ್‌ಜನರಲ್‌ಯವರು ನಿಯಮಿಸುವದೇನಂದರೆ, ಮೈಸೂರು ದೇಶದ ಸಿವಿಲ್ ವ ರೆವಿನ್ಯು ಕೋರ್ಟುಗಳ ಡಿಕ್ರಿಗಳು, ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿನಲ್ಲಿ ಅವು ಸದರೀ ಸ್ಟೇಷನಿನ ಕೋರ್ಟುಗಳಿಂದ ಕೊಡಲ್ಪಟ್ಟ ಡಿಕ್ರಿಗಳಂತೆಯೇ ಅಮಲ್‌ಜಾರಿ ನಡಿಸಲ್ಪಡಬಹುದು."

"ನಂ. 1,653 I.—1882ನೇ ಇಸವಿ XIVನೇ ನಂಬರ್ ಆಕ್ಟು ಸಿವಿಲ್ ವ ಮಿಲಿಟೇರಿ ಸ್ಟೇಷನಿಗೆ ವಿಸ್ತರಿಸಲ್ಪಟ್ಟ ಪ್ರಕಾರ ಸದರೀ ಆಕ್ಟಿನ 650ನೇ A ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ, ಸಮಾಜದಲ್ಲಿನ ಗವರ್ನರ್ ಜನರಲ್‌ಯವರು ವಿಧಿಸುವದೇನಂದರೆ, ಸದರಿ ಸೆಕ್ಷನಿನ ನಿಯಮಗಳು ಮೈಸೂರು ದೇಶದ ಸಿವಿಲ್ ಕೋರ್ಟುಗಳಿಗೆ ಲಗಾವಾಗತಕ್ಕದ್ದು."

ತಾರೀಖು 27ನೇ ಮೇ 1887.

ನಂ. 31.—ಇಂಡಿಯ ದೇಶದ ಸ್ಟೇಟ್ ಸೆಕ್ರೆಟೇರಿಯವರ 1883ನೇ ಇಸವಿ ಜುಲೈ 19ನೇ ಮುರ್ಕುಂ (ಪಬ್ಲಿಕ್) 73ನೇ ನಂಬರ್ ಉಳ್ಳ ಇದರಡೀಕಂಡ ಲೆಟರು ಸರ್ವರ ತಿಳುವಳಿಕೆ ಮತ್ತು ನಡವಳಿಕೆ ಬಗ್ಯೆ ಪ್ರಾಯಿಷ್ ಮಾಡುವದರಲ್ಲಿ, ಶ್ರೀಮನ್ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ, ಸರ್ಕಾರ್ ನವಕರರು ತಾವು ಉದ್ಯೋಗದಲ್ಲಿರುವ ಡಿಸ್ಟ್ರಿಕ್ಟಿನಲ್ಲಿ ವಹಿವಾಟ್ಟು ನಡಿಸುವಂಥಾ ಜಾಯಿಂಟ್ ಸ್ಟಾಕ್ ಮತ್ತು ಇತರ ಕಂಪೆನಿಗಳಲ್ಲಿ ಹಿಸ್ಸೆಗಳನ್ನು ಉಂಟಾಗಿರುವದನ್ನ ನಿರೋಧಿಸುವ ಲೇಟ ಚೀಫ್ ಕಮಿಷನರವರಿಂದ ಸಾದರ್‌ಮಾಡಲ್ಪಟ್ಟ 1874ನೇ ಇಸವಿ ಸೆಪ್ಟಂಬರ್ 21ನೇ ಮುರ್ಕುಂ 177ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅಡಗಿರತಕ್ಕ ರೂಲ್‌ಸಿನ ಅಮಲ್ ಚಲಾವಣಿ ದೆಸೆಯಿಂದ, ಮುನಸಿಫ್ ವ ಡೆಪ್ಯುಟಿ ಅಮಲ್‌ದಾರ್ ದರ್ಜೆಗೆ ಕೀಳ್ಪಟ್ಟ ತಮಾಂ ಸರ್ಕಾರ್ ಉದ್ಯೋಗಸ್ಥರೂ ವಿನಾಯಿಸಲ್ಪಡತಕ್ಕದ್ದು.

ಇಂಡಿಯ ಗವರ್ನಮೆಂಟಿನ ಹೋಂ ಡಿಪಾರ್ಟ್‌ಮೆಂಟ್ ಸೆಕ್ರೆಟೇರಿ ಎ. ಮೆಕ್ಕೆಂಜಿ ಯಸ್ಕ್ವೈಯರ್ ಸಿ. ಎಸ್. ಯವರಿಂದ, ಮದರಾಸ್ ಗವರ್ನಮೆಂಟಿನ ಚೀಫ್ ಸೆಕ್ರೆಟೇರಿಯವರಿಗೆ, ಮುರ್ಕುಂ 1883ನೇ ಇಸವಿ ಸೆಪ್ಟಂಬರ್ 6, ಮೊಕ್ಕಾಂ ಸಿಂಲಾ, ನಂಬರ್ 37—1211 (ಪಬ್ಲಿಕ್).

ಸಹಾಯ ಸಂಘಗಳ ಆಡಳಿತಗಳಲ್ಲಿ ಸರ್ಕಾರನವುಕರರ ಸಂಬಂಧವನ್ನು ಕುರಿತ ಯಿಂಡಿಯ ದೇಶದ ಹರ್‌ಮಾಜೆಸ್ಟಿಸ್ ಸ್ಟೇಟ್ ಸೆಕ್ರೆಟೇರಿ ಯವರೊಡನೆ ನಡೆದ, ಬಾಜೂದಲ್ಲಿ ಕಂಡ ಕರೆಸ್ಪಾಂಡೆನ್ಸ್ ಯಾನೆ ಲೆಟರ್‌ಗಳ ನಕ್ಕಲನ್ನು ತಿಳುವಳಿಕೆ ಮತ್ತು ನಡವಳಿಕೆ ಬಗ್ಯೆ ರವಾನಿಸಲು ನಾನು ಆಜ್ಞಾಪಿಸಲ್ಪಟ್ಟಿರುತ್ತೇನೆ. ವ್ಯಾಪಾರದ ಕಂಪೆನಿಗಳೊಂದಿಗೆ ಗವರ್ನಮೆಂಟ್ ಆಫಿಸರ್‌ಗಳ ಸಂಬಂಧದ ವಿಷಯದಲ್ಲಿ ಜಾರಿಯಲ್ಲಿರತಕ್ಕ ಹುಕುಂಗಳು, ಸರ್ಕಾರದಲ್ಲಿ ನವಕರಿ ಯಿರತಕ್ಕ ಕ್ಲರಕ್‌ಗಳು ಮತ್ತು ಇತರ ಮಿನಿಸ್ಟೀರಿಯಲ್ ಯಾನೆ ಮೊಖ್ತೇಸರಿ ಉದ್ಯೋಗಸ್ಥರುಗಳಿಗೆ ಅನ್ವಯಿಸುವದಿಲ್ಲವೆಂಬ ವಿಷಯ ತಿರ್ಮಾನಿಸಲ್ಪಟ್ಟಂತೆಯೂ ತಿಳಿಯಬರುತ್ತೆ.

ಸಿಕ್ರೆಟೇರಿ ಆಫ್ ಸ್ಟೇಟಯವರಿಗೆ ಬರೆದ 1883ನೇ ಇಸವಿ ಏಪ್ರೈಲ್ 24ನೇ ಮುರ್ಕುಂ ಲೆಟರ್ ನಂಬರ್ 25.

ಸೆಕ್ರೆಟೇರಿ ಆಫ್ ಸ್ಟೇಟಯವರಿಂದ ಬಂದ 1883ನೇ ಇಸವಿ ಜುಲೈ 19ನೇ ಮುರ್ಕುಂ ಲೆಟರ್ ನಂಬರ್ 73.

ಇಂಡಿಯ ಗವರ್ನಮೆಂಟಿನಿಂದ, ಇಂಡಿಯ ದೇಶದ ಹರ್‌ಮಾಜೆಸ್ಟಿಸ್ ಸ್ಟೇಟ್ ಸೆಕ್ರೆಟೇರಿ ಯವರಿಗೆ, ಮೊಕ್ಕಾಂ ಸಿಂಲಾ,
ತಾರೀಖು 24ನೇ ಏಪ್ರೈಲ್ 1883ನೇ ಇಸವಿ, ನಂಬರ್ 25 (ಪಬ್ಲಿಕ್)

ಸಿಂಲಾದಲ್ಲಿ ವಹಿವಾಟ್ಟು ನಡಿಸುವ ಕೆಲವು ವ್ಯಾಪಾರಸ್ಥರು, ಸದರೀ ಸ್ಥಳದಲ್ಲಿ ಒಂದು ಸಹಾಯ ಸಂಘದ ಆಡಳಿತ ಮತ್ತು ಕಾರ್‌ಬಾರ್ ಕೆಲಸಗಳು ಸರ್ಕಾರ್ ಉದ್ಯೋಗದಲ್ಲಿರತಕ್ಕ ಕವಿನೆಂಟೆಡ್ ಮತ್ತು ಅನ್‌ಕವಿನೆಂಟೆಡ್ ನವಕರರುಗಳಿಂದ ನಡಿಸಲ್ಪಡುತಿದೆಯೆಂಬದಾಗಿಯೂ, ಸರ್ಕಾರ್ ಉದ್ಯೋಗಸ್ಥರು ಕಂಪೆನಿಗಳ ಆಡಳಿತ ನಡಿಸುವದರಲ್ಲಿ ಪ್ರವೇಶಿಸುವದನ್ನ ನಿರೋಧಿಸುವ ಹಾಲಿ ಜಾರಿಯಲ್ಲಿರತಕ್ಕ ಗವರ್ನಮೆಂಟ್ ಆರಡರ್‌ಕುರಿತು ತತ್ಕಾಲದಲ್ಲಿ ಸಂಘದ ಆಡಳಿತ ಮತ್ತು ಕಾರ್‌ಬಾರಿ ಕೆಲಸಗಳಲ್ಲಿ ಪ್ರವೇಶಮಾಡುತ್ತಿರುವ ಉದ್ಯೋಗಸ್ಥರು ಅದರ ಸಂಬಂಧದಿಂದ ನಿವೃತ್ತರಾಗುವಂತೆ ಅಪ್ಪಣೆ ಆಗಬೇಕೆಂಬದಾಗಿಯೂ ಕೊಟ್ಟ ಲೆಟರಿನ ನಕ್ಕಲು ಯಿದರೊಂದಿ

1 "ಸಿಂಲಾವಿನ ಕೋಆಪರೇಟಿವ ಅಸೋಸಿಯೇಷರ್ ಲಿಮಿಟೆಡ್" ಯಾನೆ ಸಹಾಯ ಸಂಘದ ಮಿಮೊರಾಂಡಂ.

2 "ಸಿಂಲಾವಿನ ಕೋಆಪರೇಟಿವ ಆಸೋಸಿಯೇಷರ್ ಲಿಮಿಟೆಡ್" ಯಾನೆ ಸಂಘದ ಆರ್ಟಿಕಿಲ್ಸ್ ಯಾನೆ ನಿಬಂಧನೆ.

ಗೆ ಕಳುಹಿಸಲ್ಪಟ್ಟಿರುತ್ತೆ. ಮತ್ತು ಬುಜೂದಲ್ಲಿ ಕಂಡ ಕಾಗದ ಪತ್ರಗಳ ನಕ್ಕಲೂ 1883ನೇ ಇಸವಿ ಜನವರೀ 11ನೇ ಮರ್ರ್ಕುಂವುಳ್ಳ (ಅರ್ಜೀದಾರರ ಲೆಟರಿನ ವಂದನೇ ಪ್ಯಾರಾದಲ್ಲಿ ನಮೂದಾದ) ಅಕವಿನ್ಟಟೆಡ್ ಆಫೀಸರುಗಳು ಯಾವದಾದರೂ ಬ್ಯಾಂಕಿನ ಆಡಳಿತ ನಡಿಸುವ ಜೋರ್ಡಿನ ಮೆಂಬರಾಗಿರಕೂಡದೆಂದು ವಿಧಿಸುವ ನಮ್ಮ ಹುಕ್ಕುಮಿನ ನಕ್ಕಲೂ ಸುದಾ ಯಿವರೊಂದಿಗೆ ಕಳುಹಿಸುತ್ತೇವೆ.

2. ಶಿಂಲಾ ಸ್ಥಳದ ಸಹಾಯ ಸಂಘದವರ ಮಿಮೊರಾಂಡಂನಲ್ಲಿ ಉದಹರಿಸಲ್ಪಡುವದೇನಂದರೆ "ಸದರೀ ಕಂಪೆನಿಯು ಸ್ಥಾಪಿಸಲ್ಪಟ್ಟಿರುವ ಮುಖ್ಯ ಉದ್ದೇಶವೇನಂದರೆ ಸಾಧಾರಣವಾಗಿ ವ್ಯಾಪಾರಕೆಲಸಗಳು ನಡಿಸುವ ಬಗ್ಯೆ ಸದರೀ ಸಂಘದ ಹಿಸ್ಸೇದಾರರಿಗೂ ಟಿಕೆಟ್ ಪಡೆದಿರುವ ಜನಗಳಿಗೂ ವ ಇತರ ಖುಷ್‌ಬಾಷ್ ಜನಗಳಿಗೂ (ಐಯಿಂದ ಅಪೇಕ್ಷಿಸಲ್ಪಟ್ಟರೆ) ಸ್ವಂತ' ಖರ್ಚಿನ ಬಗ್ಯೆ ಮತ್ತು ಸಾಧಾರಣವಾಗಿ ಉಪಯೋಗದ ಬಗ್ಯೆ ಪದಾರ್ಥಗಳನ್ನು ಸಾಧ್ಯವಾದಷ್ಟು ಅಗ್ಗವಾಗಿ ವದಗಿಸುವದೂ ಮತ್ತು ಮೇಲ್ಕಂಡ ಅವರ ಕೋರಿಕೆ ನೆರವೇರುವ ಬಗ್ಯೆ ಅವಶ್ಯಕಗಳಾದ ಯಾ ಆನುಕೂಲ್ಯಗಳಾದ ಅಂಥಾ ತಮಾಂ ಇತರ ಕೆಲಸಗಳನ್ನು ಚಲಾಯಿಸುವದೂ ಸುದಾ ಆಗಿರುವದಾಗಿ ತಿಳಿಯಬರುತ್ತೆ." ಇದಲ್ಲದೆ ಹಿಸ್ಸೇದಾರರುಗಳು ಮಾತ್ರವೇ ಸದರೀ ಸಂಘದ ಆದಾಯಗಳಿಗೆ ಭಾಗಸ್ಥರೆಂಬದಾಗಿಯೂ ಕಾಣಬರುತ್ತದೆ. "ಸಂಘದ ನಿಬಂಧನೆ" ರೀತ್ಯಾ ಹಿಸ್ಸೆಯು, ಡೈರೆಕ್ಟರುಗಳ ಅನುಮತಿ ವಿನಾ ಅನ್ಯಥಾ ಪರಭಾರೆ ಮಾಡಲ್ಪಡಕೂಡದು ಪರಂತು, ಒಬ್ಬ ಮೆಂಬರು ಫವತೀ ಆದ ತರುವಾಯು ಅತನ ಹಿಸ್ಸೆಗಳು ಆತನ ಯಗ್ಜಿಕ್ಯೂಟರ್ ಯಾ ಅಡ್ಮಿನಿಸ್ಟ್ರೇಟರುಯಾನೇ ವಾರಸುದಾರರುಗಳಿಗೆ ವರ್ಗ ಮಾಡಲ್ಪಡತಕ್ಕವು, ಮತ್ತು ಆತನು ದೀವಾಳಿಯಾದರೆ ಕಾನೂರ್ ಪ್ರಕಾರ ಅವುಗಳಿಗೆ ಹಕ್ಕುದಾರರಾದವರಿಗೂ ವರ್ಗಮಾಡಲ್ಪಡತಕ್ಕವು. ಡೈರೆಕ್ಟರುಗಳು, ಹಿಸ್ಸೇದಾರರು ಪಟ್ಟಾಗಿ ಒಂದು ಜನರಲ್ ಮೀಟಿಂಗ್‌ನಲ್ಲಿ ರುಸುಂ ಹೊಂದಬಹುದೆಂದು ತೀರ್ಮಾನ ಮಾಡುವವರಿಗೂ ಮತ್ತು ಮಾಡಿದ ಹೊರ್ತು ಅನ್ಯಥಾ ಅಂಥಾ ಯಾವ ರುಸುಮನ್ನಾಗಲೀ ತೆಗದುಕೊಳ್ಳಕೂಡದು, ಮತ್ತು ಯಾವ ಸಂದರ್ಭದಲ್ಲಾದರೂ, ತಿಂಗಳು ಒಂದಕ್ಕೆ 20 ರೂಪಾಯಿಗಳಿಗಿಂತ ಜಾಸ್ತಿಯಾಗಿ ರುಸುಂ ತೆಗೆದುಕೊಳ್ಳಕೂಡದು. ಒಂದು ರಿಜರ್ವ್‌ಫಂಡು ಯಾನೆ ಅಮಾನತ' ಫಂಡು ಉಂಟುಮಾಡಲ್ಪಡಬಹುದು, ಮತ್ತು ಸದರೀ ಅಮಾನತ್ತು ಫಂಡು ಸಂಘದ ಕ್ಯಾಪಿಟಲ್ ಯಾನೆ ಮೂಲಧನದ ನಾಲ್ಕರಲ್ಲಿ ವಂದು ಭಾಗದ ಪರಿಯಂತ ಜಮಾಯಿಸುವವರಿಗೂ, ವಸೂಲ್ ಬಂದ ಮೂಲಧನಕ್ಕೆ ಸಾಲಿಯಾನಾ ಶೇಕಡ ಆರಕ್ಕಿಂತ ಜಾಸ್ತಿಯಾಗಿ ನಫೇ ಕೊಡಲ್ಪಡಕೂಡದು.

3. "ಮಿಮೊರಾಂಡಂ" ಮತ್ತು "ಸಂಘದ ನಿಬಂಧನೆ" ಇವುಗಳನ್ನ ನೋಡುವದರಿಂದ ಮಾತ್ರವೇ ಸದರೀ ಸಂಘದ ನ್ಯಾಯವಾದ ತಾತ್ಪರ್ಯವು ಗೊತ್ತು ಮಾಡಲ್ಪಡಬಹುದು, ಯೇನಂದರೆ ಸದರೀ ಸಂಘವು ವಾಸ್ತವ್ಯವಾಗಿ ಖುಷ್‌ಬಾಷ್‌ಜನರಿಗಾಗಲೀ ಅಥವಾ ರಿಜಿಸ್ಟರಾದ ಹಿಸ್ಸೇದಾರರು ವಿನಾ ಇತರ ಯಾರಿಗೇ ಆಗಲೀ ವಿಕ್ರಯಿಸುವದಿಲ್ಲವೆಂಬದಾಗಿ ತಿಳಿಯಬಂದಿದ್ದಾಗ್ಯೂ, ಇದು ಸದ್ಯಹ ಕಾನೂರ್ ಪ್ರಕಾರ ಒಂದು ವ್ಯಾಪಾರ ಸಂಘವೆಂದು ತಿಳಿಯತಕ್ಕದ್ದಾಗಿ ಇಧೆ.

4. ಇದೇ ಪ್ರಕಾರವಾದ ಸಂಘಗಳು ಅನ್ಯತ್ರ ರೈಲ್‌ವೇ ನವುಕರರಲ್ಲಿಯೂ ಮತ್ತು ಇತರರಲ್ಲಿಯೂ ಏರ್ಪಡಿಸಲ್ಪಟ್ಟಿವೆಯೆಂದು ನಂಬುವದಕ್ಕೆ ಸಾಕಾದ ಕಾರಣಗಳು ಉಂಟು; ಮತ್ತು ಅವುಗಳ ವಹಿವಾಟ್ಟುಗಳು, ಪ್ರೊಬ್ಬರೊಬ್ಬರಿಗೆ ಸರಬರಾಯಿ ಮಾಡುವ ಮಟ್ಟಿಗೆ ನಡಸುತ್ತಿರುವ ಪರಿಯಂತ ಅಂಥಾವುಗಳ ಪ್ರತಿಬಂಧಕ್ಕಾಗಿ ಯಾವ ಕೆಲಸ ಚಲಾಯಿಸುವದಕ್ಕೂ ನಮಗೆ ತಾತ್ಪರ್ಯವಿಲ್ಲಾ. ಸಿಂಲಾದಲ್ಲಿರತಕ್ಕ ಸಂಘವು, ಅದರ ವಹಿವಾಟ್ಟುಗಳನ್ನು ಪ್ರೊಬ್ಬರಿಗೊಬ್ಬರಿಗೆ ಸಹಾಯ ಮಾಡತಕ್ಕ ಸಂಘದ ವಹಿವಾಟ್ಟಿನಂತೆಯೇ ಅಂದರೆ ಪದಾರ್ಥಗಳನ್ನು ಅನ್ಯರಿಗೆ ವಿಕ್ರಯಿಸದೇನು ಮತ್ತು ನಫೆಯನ್ನ ಯಾವಾಗಲೇ ಆಗಲೀ ಒಂದು ಗೊತ್ತಾದ ವ ನ್ಯಾಯವಾದ ದರಕ್ಕಿಂತ ಜಾಸ್ತಿಯಾಗಿ ಹಿಸ್ಸೆದಾರರುಗಳು ಪಾವತೀ ಮಾಡೋಣಾದ ಮೂಲ ಧನದ ಮೇಲೆ ಹಂಚದೇನೂ ಇರುವ ಬಗ್ಯೆ ಕ್ರಮವಾಗಿ ಬದ್ಧರಾಗಿ ಆಪ್ರಕಾರ ಏರ್ಪಾಟುಗಳನ್ನು ಬದಲಾಯಿಸಿದ ಸಂದರ್ಭದಲ್ಲಿ ಗವರ್ರ್ನಮೆಂಟ್ ಆಫೀಸರ್‌ಗಳು ಸದರೀ ಸಂಘದ ಆಡಳಿತಗಳಲ್ಲಿ ಪ್ರವೇಶಿಸುವದಕ್ಕೆ ಆಕ್ಷೇಪಣೆ ಯೇನೂ ಇಲ್ಲವೆಂಬದಾಗಿ ಸೂಚಿಸಲ್ಪಟ್ಟಿಧೆ.* ಈ ಇರಾದೆಯನ್ನ ನಾವೂ ಅಂಗೀಕರಿಸುತ್ತೇವೆ. ಪರಂತು, 1862ನೇ ಇಸವಿ ಮೇ 31ನೇ ಮರ್ರ್ಕುಂ 46ನೇ ನಂಬರ್ ವುಳ್ಳ ಸರ್ ಸಿ. ಉಡ್ ಯವರ ಡೆಸ್‌ಪಾಚಿನಲ್ಲಿ ಕಂಡ ನಿರೋಧಗಳೂ ವ್ಯಾಪಾರ ಸಂಘಗಳೊಂದಿಗೆ ಗವರ್ರ್ನಮೆಂಟ್ ಆಫಿಸರುಗಳ ಸಂಬಂಧದ ವಿಷಯದಲ್ಲಿ ಜಾರಿ ಇರುವ ಇತರ ಬಟ್ಟು ಹುಕುಂಗಳೂ ಸುದಾ ಯಾವ ಸಂದರ್ಭದಲ್ಲಾದರೂ ಈ ವಿಧವಾದ ಸಂಘಗಳಿಗೆ ಲಗಾವ್ ಮಾಡಲ್ಪಡುವ ಬಗ್ಯೆ ಉದ್ದೇಶಿಸಲ್ಪಟ್ಟಿರುತ್ತದೆಯೇ ಹೊರ್ತು ಗವರ್ರ್ನಮೆಂಟ್ ಆಫೀಸರುಗಳು, ದೇಶದ ಆಮದಾನನ್ನು ವೃದ್ಧಿಪಡಿಸುವದಕ್ಕೋಸ್ಕರ ಉದ್ದೇಶಿಸಲ್ಪಟ್ಟು ಮತ್ತು ಕೇವಲ ಫಾಯಿದೆ ಸಂಪಾದಿಸುವ ತಾತ್ಪರ್ಯವುಳ್ಳ ಸಂಘಗಳಲ್ಲಿ ಸಂಬಂಧ ಉಂಟಾಗಿರಕೂಡದೆಂದು ಅಭಿಪ್ರಾಯವಾಗುವದಿಲ್ಲವೆಂಬದಾಗಿ ಅನುಮಾನ ಉಂಟಾಗಿರುತ್ತೆ; ಅದು ಪ್ರಯುಕ್ತ ಈ ಸಂಗತಿಯಲ್ಲಿ ಕಂಠೋಕ್ತವಾದ ತಮ್ಮ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳುವದು ಅವಶ್ಯಕವಾಗಿ ನಮಿಗೆ ಕಾಣಬರುತ್ತೆ.

* ಡೈರೆಕ್ಟರುಗಳಿಂದ ಕೊಡಲ್ಪಟ್ಟ ನೋಟಿಸಿನಿಂದ (ಕಾಪಿ ಲಗತ' ಮಾಡಿರುತ್ತೆ) ಸೂಚಿಸಲ್ಪಟ್ಟ ಬದಲಾವಣೆಯು ಪ್ರಾಯಶಃ ನಡಿಸಲ್ಪಡಬಹುದಾಗಿ ನಾವು ವೂಹಿಸುತ್ತೇವೆ.

5. ವ್ಯಾಪಾರಕ್ಕೋಸ್ಕರ ಮತ್ತು ವ್ಯಾಪಾರದ ದೆಶೆಯಿಂದ ಫಾಯಿದೆ ಪಡೆಯತಕ್ಕ ಬಗ್ಯೆ ಸ್ಥಾಪಿಸಲ್ಪಟ್ಟ ಯಾವದಾದರೂ ತರಹೆಯ ಕಂಪೆನಿ ಯಾನೆ ಸಂಘದ ಆಡಳಿತದಲ್ಲಿ ಸರ್ಕಾರ್ ಉದ್ಯೋಗಸ್ಥರು ಸಂಬಂಧ ಉಂಟಾಗಿರುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಸಾಕಾದ ಕಾರಣಗಳು ಉಂಟೆಂದು ನಮಗೆ ಕಾಣಬರುತ್ತದೆ, ಯಾವವಂದರೆ, ಮಸಲಾ ಬ್ಯಾಂಕುಗಳು, ಇವುಗಳ ವಿಷಯದಲ್ಲಿ ಈ ಡೆಸ್ಪ್ಯಾಚಿನ 2ನೇ ಕಲಂನಲ್ಲಿ ಕಂಡ ನಿಬಂಧನೆಯು ನಮ್ಮಿಂದ ಈಚಿಗೆ ಜಾರೀಮಾಡಲ್ಪಟ್ಟಿರುತ್ತೆ; ಆದರೆ ಮೊದಲೇ ತಿಳಿಸಿದ ಪ್ರಕಾರ ಸಹಾಯ ಸಂಘವಾಗಿದ್ದು ಬದಸ್ತೂರು ವಾಸ್ತವ್ಯವಾಗಿಯೂ ವಹಿವಾಟು ನಡಿಸತಕ್ಕಂಥಾ ಮತ್ತು ಫಾಯಿದೆಗೋಸ್ಕರವಲ್ಲದೆ ಒಬ್ಬರಿಗೊಬ್ಬರಿಗೆ ಸಹಾಯ ಮಾಡುವದಕ್ಕೆ ಮಾತ್ರ ಸ್ಥಾಪಿಸಲ್ಪಟ್ಟಿರುವಂಥಾ ಸಹಾಯ ಸಂಘಗಳ ವಿಷಯದಲ್ಲಿ ನಾವು ಪ್ರವೇಶಿಸುವದಿಲ್ಲ.

6. ಈ ಸಂದರ್ಭದಲ್ಲಿ ಮತ್ತೊಂದು ವಿಷಯ ಚರ್ಚಿಸಲ್ಪಡುವದೇನಂದರೆ, ಆಲೋಚನೆಯಲ್ಲಿರುವ ಒಟ್ಟು ಹುಕುಂಗಳು ಕವಿನೆಂಟೆಡ್ ವ ಅನ್‌ಕವಿನೆಂಟೆಡ್ ತರಗತಿಗೆ ಸೇರಿದ ಗೆಜೆಟೆಡ್ ಆಫೀಸರುಗಳಿಗೆ ಮಾತ್ರ ಲಗಾವಾಗುತ್ತದೆಯೋ ಅಥವಾ ಸರ್ಕಾರದ ನವಕರಿಯಲ್ಲಿ ಇರತಕ್ಕ ಕ್ಲರ್ಕ್ ವ ಇತರ ಮುಖ್ಯ ಉದ್ಯೋಗಸ್ಥರಿಗೂ ಲಗಾವಾಗುತ್ತದಯೇ ಯೆಂಬುವದು. ನಾವು ತಿಳಿಯುವದೇನಂದರೆ, ಸದರೀ ಹುಕುಂಗಳ ಅಭಿಪ್ರಾಯವನ್ನು ಕುರಿತು ಸಂಗತಿಗಳನ್ನು ಆಲೋಚಿಸಿದರೆ ಅವುಗಳ ಅಮಲ್‌ಜಾರಿಯು ಗೆಜೆಟೆಡ್ ಆಫೀಸರುಗಳಿಗೆ ಮಾತ್ರ ಲಗಾವ್ ಮಾಡಲ್ಪಡಬಹುದೆಂತಲೂ ಮತ್ತು ತಾಬೇದಾರಿ ವ ಮುಖ್ಯ ಉದ್ಯೋಗಸ್ಥರ ವಿಷಯದಲ್ಲಿ ಅವರುಗಳು ಯಾವ ಬಗ್ಯಾಗಿ ಸಂಬಳ ಪಡೆಯುತ್ತಾರೋ ಅಂಥಾ ಪೂರ್ತಿಯಾದ ಕಾಲವನ್ನು ಸರ್ಕಾರ ಕೆಲಸಕ್ಕೆ ಉಪಯೋಗಿಸುತ್ತಾರೆಂದು ನಿಗೇ ಇಡುವದು ಸಾಕಾಗಿರುತ್ತೆ. ಅಂಥಾವರುಗಳು ಆಫೀಸ್ ಹೊತ್ತು ವಿನಾ ಇತರ ಕಾಲದಲ್ಲಿ ಯೇನು ಕೆಲಸ ನಡಿಸುತ್ತಾರೆಂಬ ವಿಷಯ ಗವರ್ನಮೆಂಟಿನವರು ಸಾಧಾರಣವಾಗಿ ತಾವಾಗಿಯೇ ವಿಚಾರಿಸಬೇಕಾದ್ದೇನೂ ಅವಶ್ಯಕವಿಲ್ಲ, ಪರಂತು, ಅಂಥಾ ಕೆಲಸಗಳಿಂದ ಸದರೀ ನವುಕರರು ದಾರಿದ್ರ್ಯಾವಸ್ಥೆಗೆ ಬಾರದೆಯೂ ಯಾ ಬದ್‌ಚಾಲ್ ಜನಗಳ ಸಹವಾಸ ಮಾಡದೆಯೂ ಇದ್ದರ ಸಾಕಾಗಿರುತ್ತೆ; ಆದರೆ ಗವರ್ನಮೆಂಟಿನವರು, ಯಾವದಾದರೊಂದು ಗೊತ್ತಾದ ಸಂದರ್ಭದಲ್ಲಿ ತಕ್ಕ ಕಾರಣಗಳ ಮೇಲೆ ಅಂಥಾ ಸಂಬಂಧವನ್ನು ಅಡ್ಡೀ ಮಾಡುವದಕ್ಕೆ ಯಾವಾಗ್ಯೂ ಸ್ವತಂತ್ರರಾಗಿರತಕ್ಕದ್ದು.

ಇಂಡಿಯ ದೇಶದ ಮಹಾರಾಜ್ಞೀಯವರ ಸ್ಟೇಟ್ ಸೆಕ್ರೇಟರಿಯಿಂದ, ಇಂಡ್ಯ ಗವರ್ನಮೆಂಟಿನವರಿಗೆ, ಇಂಡಿಯಾ ಆಫೀಸ್ ಮೊಕ್ಕಾಂ ಲಂಡನ್, ಮರ್ಕುಂ 1883ನೇ ಇಸವಿ ಜುಲೈ 19ನೇ ಮರ್ಕುಂ ನಂಬರು 73. (ಪಬ್ಲಿಕ್)

ಶಿಂಲಾದಲ್ಲಿ ವಹಿವಾಟು ನಡಿಸುತ್ತಲಿರುವ ಕೆಲವು ವ್ಯಾಪಾರಸ್ಥರು, ಕೆಲವು ಕವಿನೆಂಟೆಡ್ ವ ಅನ್‌ಕವಿನೆಂಟೆಡ್ ದರ್ಜೆಯ ಸರಕಾರ್ಯನವಕರರು ಸಹಾಯ ಸಂಘಗಳ ಆಡಳಿತ ಮತ್ತು ಕಾರ್ಬಾರೀ ಕೆಲಸಗಳಲ್ಲಿ ಪ್ರವೇಶಿರುವದಾಗಿಯೂ ಮತ್ತು ಅಂಥಾವರುಗಳು ಸದರೀ ಸಂಘದ ಸಂಬಂಧದಿಂದ ನಿವೃತ್ತರಾಗುವಂತೆ ಹುಕ್ಕುಂ ಆಗಬೇಕೆಂದು ಪ್ರಾರ್ಥಿಸಿ ತಮಗೆ ಬರೆದುಕೊಂಡ ಲೆಟ್ಟರಿನ ಕಾಪಿ ಸಹಿತ ತಾವು ಬರೆದ ಕಳೆದ ಏಪ್ರೆಲ್ 24ನೇ ಮರ್ಕುಂ 25ನೇ ನಂಬರ್ ಲೆಟ್ಟರು ಮತ್ತು ಆದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಸುದಾ ತಲಪಿ ಅದನ್ನು ಕುರಿತು ನಾನು ಸಮಾಜದಲ್ಲಿ ಆಲೋಚಿಸಿರುತ್ತೇನೆ.

2. ಏರ್ಪಾಟು ಪ್ರಕಾರ ಸದರೀ ಸಂಘವು, ಶಬ್ದದ ವಾಡಿಕೆಯಾದ ಅರ್ಥರೀತ್ಯಾ ಒಂದು ವ್ಯಾಪಾರದ ಸಂಘವೆಂದು ಭಾವಿಸಲ್ಪಡತಕ್ಕದ್ದೆಂತ ತಾವು ಯೋಚಿಸುವಣವಾಗಿಧೆ. ಈ ಅಭಿಪ್ರಾಯವನ್ನು ನಾನು ಅನುಮೋದಿಸುತ್ತೇನಲ್ಲದೆ ಸರ್ಕಾರ್ ನವುಕರರು ಜಾರೀಲಿರುವ ಹುಕ್ಕುಂಗಳನುಸರಿಸಿ ಅಂಥಾ ಒಂದು ಸಂಘದ ಆಡಳಿತದಲ್ಲಿ ಪ್ರವೇಸಿಸುವದಕ್ಕೆ ಅಡ್ಡೀಪಡಿಸಲ್ಪಟ್ಟಿರುತ್ತಾರೆಂಬದಾಗಿಯೂ ಸುದಾ ಭಾವಿಸುತ್ತೇನೆ.

3. ಸದರೀ ಸಂಘವು ಅದರ ಏರ್ಪಾಟನ್ನು ಬದಲಾಯಿಸಿ ಅದರ ವಹಿವಾಟಗಳನ್ನು ಒಬ್ಬರಿಗೊಬ್ಬರ ಸಹಾಯಾರ್ಥವಾದ ಸಂಘದೋಪಾದಿಯಲ್ಲಿ ಹದ್ದು ಪಡಿಸಿ, ಸದರೀ ಸಂಘದ ಮೆಂಬರುಗಳು ವಿನಾ ಅನ್ಯಥಾ ಯಾರಿಗೂ ಸಾಮಾನು ವಿಕ್ರಯಿಸುವದಿಲ್ಲವೆಂಬದಾಗಿಯೂ ಯಾವ ಕಾಲದಲ್ಲಾಗಲೀ ಹಿಸ್ಸೇದಾರರಿಗೆ ಅವರು ಕೊಟ್ಟ ಮೂಲಧನದ ಮೇಲೆ ಗೊತ್ತಾದ ಮತ್ತು ನ್ಯಾಯವಾದ ದರಕ್ಕಿಂತ ಜಾಸ್ತಿಯಾದ ಬಡ್ಡಿಯು ಹಂಚಲ್ಪಡುವದಿಲ್ಲವೆಂಬದಾಗಿಯೂ ಕ್ರಮಪ್ರಕಾರ ಬದ್ಧರಾಗುವ ಸಂದರ್ಭದಲ್ಲಿ ಅಂಥಾ ಸಂಘದ ಆಡಳಿತದಲ್ಲಿ ಗವರ್ನಮೆಂಟ್ ಆಫೀಸರರುಗಳು ಪ್ರವೇಶಿಸುವದನ್ನು ಅಡ್ಡೀಪಡಿಸುವದು ತಮ್ಮ ಅಭಿಪ್ರಾಯವಲ್ಲವೆಂತಲೂ ಉದಹರಿಸೋಣಾಗಿಧೆ. ಹೀಗಿದ್ದಾಗ್ಯೂ, 1862ನೇ ಇಸವಿ ಮೇ 31ನೇ ಮರ್ಕುಂವುಳ್ಳ ಛಾರಲ್ಸ್ ಉಡ್‌ಯವರ ಡೆಸ್ಪಾಚಿನ ತಾತ್ಪರ್ಯಗಳು ಮತ್ತು ಅದೇ ವಿಷಯಿಕವಾದ ಇತರ ಒಟ್ಟು ಹುಕ್ಕುಂಗಳು ಸುದಾ ಈ ತರಹೆಯ ಸಂಘದ ಸಂಬಂಧಕ್ಕೆ ಅನ್ವಯಿಸುತ್ತದೋ ಯಂಬದಾಗಿ ತಾವು ಅನುಮಾನಪಟ್ಟು ಈ ವಿಷಯದಲ್ಲಿ ನನ್ನ ಕಂಠೋಕ್ತವಾದ ಅಭಿಪ್ರಾಯವನ್ನು ಕೇಳೋಣವಾಗಿಯಿಧೆ.

4. ನಮೂದುಮಾಡಲ್ಪಟ್ಟ ಹುಕುಂಗಳು, ದೇಶದ ಆಮದಾನನ್ನು ವೃದ್ಧಿಪಡಿಸುವದಕ್ಕೋಸ್ಕರ ಉಂಟು ಮಾಡಲ್ಪಟ್ಟಂಥಾ ಕಂಪೆನಿಗಳಲ್ಲಿ ಮಾತ್ರವೇ ಗವರ್ನಮೆಂಟ್ ಆಫೀಸರುಗಳು ಕಾರ್ಬಾರೀ ಕೆಲಸಗಳಲ್ಲಿ ಭಾಗಸ್ಥರಾಗುವದಕ್ಕೆ ಅನ್ವಯಿಸತಕ್ಕದ್ದೆಂದು ಉದ್ದೇಶಿಸಲ್ಪಡಲಿಲ್ಲ, ಮತ್ತು ಅಂಥಾ ಆಫೀಸರುಗಳು ಬ್ಯಾಂಕುಗಳ ಆಡಳಿತಗಳಲ್ಲಿ ಪ್ರವೇಶಿಸಕೂಡದೆಂದು ತಾವು ಈಚಿಗೆ ವಿಧಿಸಿರುವದು ಬಹಳ ಯುಕ್ತವಾಗಿ ಇಧೆ, ಪರಂತು, ಒಬ್ಬರಿಗೊಬ್ಬರಿಗೆ ಸಹಾಯಮಾಡತಕ್ಕಂಥಾ ಒಂದು ಸಂಘದ ಆಡಳಿತದಲ್ಲಿ ಸರ್ಕಾರ್ ನವುಕರರಿಗೆ ಪ್ರವೇಶಿಸು

ವದಕ್ಕೆ ಅವಕಾಶ ಕೊಡುವದು ನ್ಯಾಯವಾದದ್ದೇ ಯೆಂಬ ಅಂಶವು ಬೇರೆ ವಿಷಯವಾಗಿರುತ್ತೆ, ಯೇನಂದರೆ ಸದರೀ ಆಫೀಸರರು ಸರ್ಕಾರ್ ಉದ್ಯೋಗವನ್ನು ಕ್ರಮವಾಗಿ ನಿರ್ವಹಿಸುತ್ತಾ ಎರಡನೇ ಉದ್ಯೋಗವನ್ನು ಅವಲಂಬಿಸುವದು ಸಮ್ಮತವಾದದ್ದೇ ಎಂಬುವದು. ನನಿಗೆ ಕಾಣಬರುವದೇನಂದರೆ ಸದರೀ ಹುಕುಂಗಳು, ವಾಸ್ತವ್ಯವಾಗಿ ಒಬ್ಬರಿಗೊಬ್ಬರು ಸಹಾಯ ಮಾಡತಕ್ಕಂಥಾ ಮತ್ತು ವ್ಯಾಪಾರಕ್ಕೋಸ್ಕರವೆ ವ್ಯಾಪಾರ ದೆಸೆಯಿಂದ ಫಾಯಿದೆ ಪಡಿಯುವದಕ್ಕೋಸ್ಕರ ಇಲ್ಲದಂಥಾ ಸಂಘಗಳಿಗೆ ಅನ್ವಯಿಸಲ್ಪಡತಕ್ಕದ್ದೆಂದು ಉದ್ದೇಶಿಸಲ್ಪಡಲಿಲ್ಲ, ಮತ್ತು ಹಾಗೆ ಅನ್ವಯಿಸಲ್ಪಡಲೂ ಕೂಡದು. ಸರ್ಕಾರ್ ನವುಕರರು ಈವಿಧವಾಗಿ ಹದ್ದುಪಡಿಸಲ್ಪಟ್ಟತರಹೇಯ ಸಂಘದಲ್ಲಿ ಪ್ರವೇಶಿಸುವದನ್ನ ಖಂಡಿತವಾಗಿ ನಿರೋಧಿಸುವದು ಅನಾವಶ್ಯಕವಾಗಿದ್ದಾಗ್ಯೂ, ಹಾಂಗೆ ಮತ್ತೊಂದು ಉದ್ಯೋಗವನ್ನ ಅವಲಂಬಿಸುವದು ಅನೇಕ ಸಂದರ್ಭಗಳಲ್ಲಿ ಸರ್ಕಾರ್ ಕೆಲಸಕ್ಕೆ ಕುಂದಕವಾಗಬಹುದೆಂಬ ವಿಷಯ ಜ್ಞಾಪಕದಲ್ಲಿ ಇಡತಕ್ಕದ್ದಾಗಿ ಇಧೆ; ಯಾತಕ್ಕೆಂದರೆ, ವಾಡಿಕೆಯಾಗಿ ಒಬ್ಬ ಮನುಷ್ಯನು ಇಬ್ಬರ ತಾಬೇದಾರೀ ಮಾಡುವದು ಅಸಾಧ್ಯವಾಗಿರುತ್ತೆ, ಮತ್ತು ಸರಕಾರದ ಕೆಲಸಗಳಿಗೆ ಕುಂದಕವಿಲ್ಲವೆಂಬ ವಿಷಯ ನಿಗೇ ಇಡತಕ್ಕದ್ದಾಗಿ ಇಧೆ.

5. ವ್ಯಾಪಾರ ಸಂಘಗಳೊಂದಿಗೆ ಗವರ್ನಮೆಂಟ್ ಆಫೀಸರರುಗಳ ಸಂಬಂಧದ ವಿಷಯದಲ್ಲಿ ಜಾರೀ ಯಿರತಕ್ಕ ಬಟ್ಟು ಹುಕ್ಕುಂಗಳು, ಗವರ್ನಮೆಂಟಿನ ಕವಿನಾಂಟೆಡ್ ವ ಅನ್‌ಕವಿನಾಂಟೆಡ್ ಉದ್ಯೋಗದ ಗೆಜೆಟೆಡ್ ಅಫಿಸರರುಗಳಿಗೆ ಲಗಾವಾಗುತ್ತೆಂಬದಾಗಿಯೂ, ಸರ್ಕಾರ್ ನವುಕರಿಯಲ್ಲಿ ಯಿರತಕ್ಕ ಕ್ಲರ್ಕ್ ವ ಇತರ ಮೊಖ್ತೇಸರೀ ಉದ್ಯೋಗಸ್ಥರ ವಿಷಯದಲ್ಲಿ ಲಗಾವಾಗುವದಿಲ್ಲವೆಂಬದಾಗಿಯೂ ಸಮಾಜದಲ್ಲಿ ತಾವು ಅಭಿಪ್ರಾಯ ಪಡುವದನ್ನು ನಾನು ಅನುಮೋದಿಸುತ್ತೇನೆ. ಈ ತರಗತೀ ಉದ್ಯೋಗಸ್ಥರ ವಿಷಯದಲ್ಲಿ ಇಲಾಖಾ ಮೊಖ್ತೇಸರರ ಮೇಲ್ ತನಿಖೆಯು ಸಾಕಾಗಿರುತ್ತೆ; ಮತ್ತು ಯಿದಲ್ಲದೆ ಗವರ್ನಮೆಂಟಿನವರು, ಯಾವ ಕಾಲದಲ್ಲಾಗಲಿ ಅವರ ತಾಬೆಯಲ್ಲಿರತಕ್ಕ ನವುಕರರು ಪ್ರವೇಶಿಸಕೂಡದೆಂದು ತಾವು ಅಭಿಪ್ರಾಯ ಪಡುವ ಯಾವ ಇತರ ಉದ್ಯೋಗವನ್ನಾದರೂ ಅವಲಂಬಿಸಕೂಡದೆಂದು ನಿರೋಧಪಡಿಸಬಹುದು.

ತಾರೀಖು 21ನೇ ಮೇ 1887.

ಕ್ಯಾಂಪ್ ನಂ. 567.—ಹಾಸನ ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಬೇಷನರ್ ಮ॥ ಹೆಚ್. ಮುದ್ದಪ್ಪನವರು, 1887ನೇ ಇಸವಿ ಏಪ್ರೆಲ್ 1ನೇ ಮಾರ್ಕ್ಕಂ ಲಗಾಯತು ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 17ನೇ ಜೂನ್ 1887.

ನಂ. 38.—ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಶ್ರೀಮನ್ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ, ಮದರಾಸ್ ಪ್ರೆಸಿಡೆನ್ಸಿಯಲ್ಲಿರತಕ್ಕ ಭೂಸ್ಥಿತಿಗಳನ್ನು ಪರಭಾರೆ ಮಾಡುವ ಜನರು, ಯಾವ ರೂಲ್ಸ್ ಪ್ರಕಾರ ಅಂಥಾ ಭೂಸ್ಥಿತಿಗಳಿಗೆ ಸಂಬಂಧಪಟ್ಟ ದಸ್ತಾವೇಜುಗಳನ್ನ ರಿಜಿಸ್ಟ್ರೇಷನ್ ಆಕ್ಟು ಅನುಸರಿಸಿ ರಿಜಿಸ್ಟ್ರು ಮಾಡುವ ಆಫೀಸರರ ಮುಖಾಂತ್ರ ಅಂಥಾ ಪರಭಾರೆಯ ರೆವಿನ್ಯೂ ರಿಜಿಸ್ಟ್ರಿಯನ್ನು ನಡಿಸಬಹುದೊ ಅಂಥಾ ರೂಲ್ಸ್‌ಯಾನೆ ನಿಬಂಧನೆಗಳು, ಮೈಸೂರು ದೇಶದಲ್ಲಿ 1887ನೇ ಇಸವಿ ಜೂನ್ 15ನೇ ಮಾರ್ಕ್ಕಂ ಮತ್ತು ಆತರ್ವಾಯದಲ್ಲಿ ಜಾರೀಲಿ ಬರತಕ್ಕದ್ದು.

2. ಸದರೀ ನಿಬಂಧನೆಯು, ಸ್ಥಳ ಸಂದರ್ಭಗಳನುಸರಿಸಿ ಅವಶ್ಯಕಗಳಾದ ಬದಲಾವಣೆಗಳೊಡನೆ ಇದರಡೀ ಕಂಡ ಪ್ರಕಾರ ಯಿರತಕ್ಕವು:—

(1) ರಿಜಿಸ್ಟ್ರೇಷನ್ ಆಫೀಸಿನಲ್ಲಿ ರಿಜಿಸ್ಟ್ರು ಬಗ್ಗೆ ಹಾಜರಾಗುವಂಥಾ ಕ್ರಯಪತ್ರದ ಮೂಲಕವಾದರೂ ಯಾ ಮತ್ಯಾವ ತರಹೆಯ ದಸ್ತಾವೇಜಿನ ದೆಸೆಯಿಂದಲಾದರೂ ಭೂಸ್ಥಿತಿಯು ಶುದ್ಧವಾಗಿ ಪರಭಾರೆ ಯಾ ಅದರ ಸ್ವಾಧೀನ ವರ್ಗ ಮಾಡಲ್ಪಡುವ ಪ್ರತಿ ಸಂದರ್ಭದಲ್ಲೂ ಅಂಥಾ ದಸ್ತಾವೇಜನ್ನ ರಿಜಿಸ್ಟು ಮಾಡುವದಕ್ಕೆ ಮುಂಚಿತವಾಗಿ ರೆಜಿಸ್ಟ್ರಾರ್ ಯಾ ಸಬ್ ರೆಜಿಸ್ಟ್ರಾರ್ರು ಸದರೀ ದಸ್ತಾವೇಜಿಗೆ ಸಂಬಂಧಪಟ್ಟ ಜನರನ್ನು ಹಾಂಗೆ ಪರಭಾರೆ ಯಾ ವರ್ಗಮಾಡಲ್ಪಟ್ಟ ಜಮೀನಿನ ರೆವಿನ್ಯೂ ರಿಜಿಸ್ಟ್ರಿಯನ್ನು ವರ್ಗಾಯಿಸುವದಕ್ಕೆ ಸಮ್ಮತಿ ಉಂಟೆ ಯೆಂಬದಾಗಿ ವಿಚಾರಿಸತಕ್ಕದ್ದು; ಅವರು ಸಂಮತಿಪಟ್ಟರೆ, ರಿಜಿಸ್ಟ್ರಿಂಗ್ ಆಫೀಸರರು ದಸ್ತಾವೇಜನ್ನು ರಿಜಿಸ್ಟು ಮಾಡಿದ ತರುವಾಯ ಅವರಿಂದ ತಮ್ಮ ರೂಬರು ಇದರಡೀ ಕಂಡ ನಮೂನೆಯಲ್ಲಿ ರೆವಿನ್ಯೂ ಇಲಾಖೆಗೆ ಒಂದು ಅರ್ಜಿಯನ್ನು ಬರೆಯಿಸಿ ಅದನ್ನ ಸದರೀ ಭೂಮಿ ಯಿರತಕ್ಕಂಥಾ ತಾಲ್ಲೂಕು ಅಮಲ್‌ದಾರರಿಗೆ ಕಳುಹಿಸತಕ್ಕದ್ದು. ಅಮಲ್‌ದಾರರು ಸದರೀ ಅರ್ಜಿಯನ್ನ ಅದು ತಮ್ಮ ರೂಬರು ಕಕ್ಷಿಗಾರರಿಂದ ಹಾಜರ್ಮಾಡಲ್ಪಟ್ಟಿದ್ದರೆ ಹ್ಯಾಗೋ ಹಾಗೆ ಕಕ್ಷಿಗಾರರು ಸಮ್ಮತಿಪಟ್ಟಿರುವಂತೆ ಅಂಗೀಕರಿಸಿ, ನಮೂದು ಮಾಡಲ್ಪಟ್ಟ ಹಿಡುವಳಿಯ ತಪಸೀಲು ಕರಾರ್‌ವಾಕಾ ಯಿರುವಷ್ಟರ ಮಟ್ಟಿಗೆ ಕೂಡ್ಲೆ ಜಾರೀ ಮಾಡತಕ್ಕದ್ದು.

ಅರ್ಜೀ ನಮೂನೆ.

" ದಲ್ಲಿ ವಾಸವಾಗಿರುವ * ಯಂಬುವನ ಮಗನಾದ ಯೆ. ಬಿ. ಯಂಬ ನಾನು ಇವರಡೀ ಕಂಡ ತಖ್ತೇಯಲ್ಲಿ ನಮೂದಾಗುವ ಹುತ್ತು ನನ್ನ ಹೆಸರಿನಲ್ಲಿ ರಿಜಿಸ್ಟ್ರು ಮಾಡಲ್ಪಟ್ಟಿರುವ ಜಮೀನಿನ ರೆವಿನ್ಯೂ ರಿಜಿಸ್ಟ್ರಿಯನ್ನು ಸ್ಥಳದಲ್ಲಿ ವಾಸಮಾಡುವ ನ ಮಗನಾದ ಸಿ. ಡಿ. ಯಂಬುವನ ಹೆಸರಿಗೆ ವರ್ಗ ಮಾಡಬಹುದೆಂಬದಾಗಿ ಪ್ರಾರ್ಥಿಸುತ್ತೇನೆ.

ರುಜು. ಯೆ. ಬಿ.

" ಮೇಲೆಕಂಡ ಸಿ. ಡಿ. ಯಂಬ ನಾನು, ಸದರೀ ತಖ್ತೇಯಲ್ಲಿ ಕಂಡ ಜಮೀನುಗಳ ರೆವಿನ್ಯೂ ರಿಜಿಸ್ಟ್ರಿಯು ನನ್ನ ಹೆಸರಿಗೆ ವರ್ಗ ಮಾಡಲ್ಪಡುವ ಬಗ್ಗೆ ಒಪ್ಪಿ ಯಿರುತ್ತೇನೆ.

ರುಜು ಸಿ. ಡಿ.

ತಖ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಸರ್ವೇ ನಂಬರ.	ಪೈಕಿ ನಂಬರ್.	ಖುಷ್ಕಿಯೋ ಅಥವಾ ತರೀಯೋ.	ಬೀಜವರೀ.	ಆಕಾರ.
1	2	3	4	5	6	7	8

ನನ್ನ ರೂಬರೂ ಬರೆಯಲ್ಪಟ್ಟಿತು.

ರುಜು.

ರೆಜಿಸ್ಟ್ರಾರ್ ಅಥವಾ ಸಬ್ ರೆಜಿಸ್ಟ್ರಾರ್
(ಸಂದರ್ಭಾನುಸಾರ.)

ಮೊಕ್ಕಾಂ
ತಾರೀಖು.

(2) ಸರ್ವೇ ನಂಬರು ಯಿಲ್ಲದಂಥಾ ಜಮೀನುಗಳ ವಿಷಯದಲ್ಲಿಯೂ ಹಾಂಗೂ ಇನಾಂ ಗ್ರಾಮಗಳು ಮುಂತಾದ ವಿಷಯದಲ್ಲಿಯೂ ಜಮೀನು ರಿಜಿಸ್ಟ್ರು ಮಾಡಲ್ಪಟ್ಟ ದಸ್ತಾವೇಜಿನ ಪ್ರಕಾರ ಚಕ್ಕು ಬಂದಿ ಮೂಲಕ ವಿವರಿಸಲ್ಪಡತಕ್ಕದ್ದು; ಮತ್ತು ತಖ್ತೇಯಲ್ಲಿ ಕಂಡ ತಮಾಂ ತಪಶೀಲ್‌ಗಳನ್ನೂ ಒದಗಿಸುವದಕ್ಕೆ ಕಕ್ಷಿಗಾರರು ಅಸಮರ್ಥರಾಗಿರುವ ಸಬಬಿನ ಮೇಲೆ ಸದರೀ ಅರ್ಜಿಯನ್ನು ಬರಸದೆ ಯಿರಕೂಡದು, ಪರಂತು ಜಮೀನುಗಳು ಫಲಾನೇವೆಂದು ಗೊತ್ತು ಮಾಡಲ್ಪಡುವ ಬಗ್ಗೆ ಸಾಕಾದ ಸಂಗತಿಗಳು ನಮೂದ್ ಮಾಡಿದರೆ ಸಾಕಾಗಿರುತ್ತೆ.

(3) ದಾಖಲೆ ಬಗ್ಗಾಗಿ, ರಿಜಿಸ್ಟ್ರಿಂಗ್ ಆಫೀಸರರು, ಪ್ರತಿ ಅರ್ಜಿಯ ಮೇಲೂ ಅದರಲ್ಲಿ ನಮೂದ್ ಮಾಡೋಣಾದ ದಸ್ತಾವೇಜು ರಿಜಿಸ್ಟ್ರು ಮಾಡಲ್ಪಟ್ಟ ರಿಜಿಸ್ಟರ್ ಬುಕ್ಕಿನ ಸಂಪುಟ ಮತ್ತು ಪುಟಗಳ ಸಂಖ್ಯೆಯನ್ನು ನಮೂದಿಸತಕ್ಕದ್ದು.

ನಂ. 39.—ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಜಾಹಿರ್ ಮಾಡುವದೇನಂದರೆ, ಫ್ರೆಂಚ್‌ರಾಕ್ಸ್‌ನಲ್ಲಿರುವ ಮುಸಾಫರ್ ಬಂಗ್ಲೆಯು, ಈ ಇಸ್ತಿಹಾರ್‌ನಾಮೆ ತಾರೀಖಾರಭ್ಯ 3ನೇ ಕ್ಲಾಸ್ ಮುಸಾಫರ್ ಬಂಗ್ಲೆ ಯಂಬದಾಗಿ ಭಾವಿಸಲ್ಪಡತಕ್ಕದ್ದು.

ತಾರೀಖು 22ನೇ ಜೂನ್ 1837.

ನಂ. 40.—ಮೆ|| ಹೆಚ್. ಈಗಲ್‌ಸ್‌ಯವರು, ಮೈಸೂರು ದೇಶದ ಕಂಪ್‌ಟ್ರೋಲರ ಆಫೀಸ ಚಾರ್ಜನ್ನು 1887ನೇ ಇಸವಿ ಜೂನ್ 20ನೇ ಮರ್ಕುಮಿನ ಪೂರ್ವಾಹ್ನದಲ್ಲಿ ಮೆ|| ಯಿ. ರಂಗಸ್ವಾಮಯ್ಯಂಗಾರ್ರವರಿಗೆ ಒಪ್ಪಿಸಿ ಯಿರುತ್ತಾರೆ.

ಕಾಂಪ್‌ಟ್ರೋಲರ್ ಮೆ|| ಯಿ. ರಂಗಸ್ವಾಮಯ್ಯಂಗಾರ್ರವರು, ಅವರಿಗೆ 1887ನೇ ಇಸವಿ ಏಪ್ರೈಲ್ 21ನೇ ಮರ್ಕುಂ 6ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಯರಡು ತಿಂಗಳ ಪ್ರಿವಿಲೀಜ್ ರಜಾದಿಂದ ಮಾಹೆ ಮಜಕೂರ್ 20ನೇ ಮರ್ಕುಮಿನ ಪೂರ್ವಾಹ್ನದಲ್ಲಿ ಮರಳಿ ಉದ್ಯೋಗದ ಮೇಲೆ ಬಂದಿರುವದರಿಂದ, ಉಪಯೋಗಿಸಿಕೊಳ್ಳದ ಭಾಗ ಅಂದರೆ 6 ದಿವಸಗಳ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 41.—ಹಾಸನ ಡಿಸ್ಟ್ರಿಕ್ಟ್ ಫೋರೆಸ್ಟು ಸಬ್ ಅಸಿಸ್ಟೆಂಟ್ ಕನ್‌ಸರ್ವೇಟರವರಿಗೆ, 1887ನೇ ಇಸವಿ ಮೇ 12ನೇ ಮರ್ಕುಂ 446ನೇ ನಂಬರ್‌ಉಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ 21 ದಿವಸಗಳ ಪ್ರಿವಿಲೀಜ್ ರಜಾ ಅವರ ಖಾಯಿಷ್ ಮೇರೆ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 23ನೇ ಜೂನ್ 1837.

ನಂ. 42.—ಮೆ|| ಸಿ. ಮಾದಯ್ಯನವರು, ಹುಜೂರ್ ಟ್ರೆಜರಿ ವ ಸ್ಟಾಂಪ್ ಇಲಾಖಾ ಚಾರ್ಜನ್ನು ಮಾಹೆ ಮಜಕೂರ್ 20ನೇ ಮರ್ಕುಮಿನಲ್ಲಿ ಮೆ|| ಯಿ. ರಂಗಸ್ವಾಮಯ್ಯಂಗಾರ್ರವರಿಗೆ ಒಪ್ಪಿಸಿ ಯಿರುತ್ತಾರೆ.

ಹುಕ್ಕುಂ ಬಮೋಜಿಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರಿಟೇರಿ.

533

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜುಲೈ ತಾ॥ 2, ಸ್ಣ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್‌ಸನ್,
ಕಾಂಪ್‌ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂ. 469.

ಅರ್ಜೀದಾರ ಶಿರಾ ತಾಲ್ಲೂಕು ದೊಡ್ಡಬಾಣಗೆರೆಯಲ್ಲಿರುವ ಶಾನುಭೋಗ ಲಕ್ಷ್ಮೀನರಸಪ್ಪನ ಮಗ ಶಾಮಣ್ಣ.

ಡಿಟ್ಟೋ ಬಾಣಗೆರೆಲಿದ್ದು ಮೃತಪಟ್ಟ ಲಕ್ಷ್ಮೀನರಸಪ್ಪನಿಗೆ ಅರ್ಜಿದಾರ ಮಗನಾಗಬೇಕೆಂತಲೂ ಸದರೀ ಮೃತಪಟ್ಟ ಲಕ್ಷ್ಮೀನರಸಪ್ಪನಿಗೆ ಬರಬೇಕಾದ 1,000 ರೂಪಾಯಿ ಸಾಲವನ್ನು ತಾನು ವಸೂಲ್ ಮಾಡಿಕೊಳ್ಳತಕ್ಕ ಬಗ್ಯೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ ಸರ್ಟಿಫಿಕೇಟ್ ಕೊಡಿಸಬೇಕೆಂದು ವಗ್ಯೆರೆ ಕೊಟ್ಟಿರುವ ಅರ್ಜೀ ವಿಮರ್ಶೆ ಬಗ್ಯೆ ಯಿದೇ ಇಸವಿ ಜುಲೈ 27ನೇ ತಾರೀಖಿಗೆ ಹಿಯರಿಂಗ್ ಮೊಕರರ್ ಮಾಡಿರುತ್ತೆ.

ಸದರೀ ಮೃತಪಟ್ಟ ಲಕ್ಷ್ಮೀನರಸಪ್ಪನಿಗೆ ಹಕ್ಕುದಾರರಾದ ವಿಸಿಷ್ಟರೂ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಬೇಕೆಂತ ಇದರಿಂದ ತಿಳಿಯಪಡಿಸಿ ಯಿಧೆ.

ತಾರೀಖು 24ನೇ ಜೂನ್ 1887ನೇ ಇಸವಿ.

1887ನೇ ಇಸವಿ ಮಿ|| ಅರ್ಜಿ ನಂಬರ್ 471.

ಅರ್ಜಿದಾರ್ ಬೆಂಗಳೂರು ದೊಡ್ಡಪೇಟೇಲಿರುವ ಕ್ಲೋಸ್‌ಪೇಟೆ ಕರೆಕೊಂಡಯ್ಯನ ಹೆಂಡತಿ ಲಕ್ಷ್ಮಮ್ಮ.

ಘಾತೀ ಗೋವಿಂದಮ್ಮನ ಮಗ ನರಸಿಹ್ಮಯ್ಯ ಈ ಅರ್ಜಿದಾರಳಿಗೆ ಸವತಿ ಮಗನಾಗಬೇಕೆಂತಲೂ ಡಿಟೋ ನರಸಿಹ್ಮಯ್ಯನ ಹೆಂಡತಿ ಸೊಸೆಯಾಗಬೇಕೆಂತಲೂ ಯಿವರುಗಳಿಗೆ ಬರಬೇಕಾದ 600 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳಲು 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಬೇಕೆಂತ ಕೊಟ್ಟಿರುವ ಅರ್ಜಿ ವಿಮರ್ಶೆ ಬಗ್ಯೆ ಯಿದೇ ಇಸವಿ ಜುಲೈ 8ನೇ ತಾರೀಖಿಗೆ ಹಿಯರಿಂಗ್ ಯಿಟ್ಟುಯಿಧೆ, ತಕರಾರ್‌ದಾರ್‍ರು ಯಾರಾದರು ಯಿದ್ದರೆ ಮೇಲ್ಕಂಡ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದಿಧೆ.

ತಾರೀಖು 23ನೇ ಜೂನ್ 1887ನೇ ಇಸವಿ.

1887ನೇ ಇಸವಿ ಮಿಸಲೇನಿಯಸ್ ನಂಬರ್ 472.

ಅರ್ಜಿದಾರ್ ಬೆಂಗಳೂರು ಡಿಸ್ಟ್ರಿಕ್ಟು ನೆಲವಂಗಲ ತಾಲ್ಲೂಕು ಅಮಲ್ದಾರ್ ವಿ. ಎನ್. ಗೋಪಾಲಯ್ಯಂಗಾರ್‍ರು.

ಡಿಟೋ ನೆಲವಂಗಲದಲ್ಲಿದ್ದು ಮೃತಪಟ್ಟ ವೆಂಕಟಲಕ್ಷ್ಮಮ್ಮ, ಅರ್ಜಿದಾರರಿಗೆ ಹೆಂಡತಿ ಆಗಬೇಕೆಂತಲೂ ಸದರೀ ಮೃತಪಟ್ಟ ವೆಂಕಟಲಕ್ಷ್ಮಮ್ಮಗೆ ಬರಬೇಕಾದ 2,000 ರೂಪಾಯಿ ಸಾಲವನ್ನು ತಾವು ವಸೂಲ್ ಮಾಡಿಕೊಳ್ಳಲು 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಬೇಕೆಂದು ವಗೈರೆ ಕೊಟ್ಟಿರುವ ಅರ್ಜೀ ವಿಮರ್ಶೆ ಬಗ್ಯೆ ಯಿದೇ ಇಸವಿ ಜುಲೈ 15ನೇ ತಾರೀಖಿಗೆ ಹಿಯರಿಂಗ್ ಮೊಕರರ್ ಮಾಡಿರುತ್ತೆ.

ಸದರೀ ಮೃತಪಟ್ಟ ವೆಂಕಟಲಕ್ಷ್ಮಮ್ಮಗೆ ಹಕ್ಕುದಾರರಾದ ವಿಸಿಷ್ಟರೂ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1887ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 484.

ಅರ್ಜಿದಾರ್ ಬೆಂಗಳೂರು ರಾಣಾಸಿಂಗನಪೇಟೇಲಿರುವ ಮಹೇದ ಡೊಡ್ಡಪುಟ್ಟಣ್ಣನ ಮಕ್ಕಳು 1ನೇ ರಾಮಣ್ಣ 2ನೇ ತಿರಕಪ್ಪಾ.

ಡಿಟೋ ಪೇಟೇಲಿದ್ದು ಮೃತಪಟ್ಟ ಮಹೇದ ಡೊಡ್ಡ ಪುಟ್ಟಣ್ಣನಿಗೆ ಅರ್ಜಿದಾರ್‍ರು ಮಕ್ಕಳಾಗಬೇಕೆಂತಲೂ ಮೃತಪಟ್ಟ ಪುಟ್ಟಣ್ಣನಿಗೆ ಬರಬೇಕಾದ 500 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವದಕೋಸ್ಕರವೂ 1860ನೇ ಇಸವಿ 27ನೇ ಆಕ್ಟು ಪ್ರಕಾರ ವಾರಸ್ ಸರಟಿಫಿಕೇಟ್ ಕೊಡಿಸಬೇಕೆಂತ ವಗೈರೆ ಕೊಟ್ಟಿರುವ ಅರ್ಜಿ ವಿಮರ್ಶೆ ಬಗ್ಯೆ ಯಿದೇ ಇಸವಿ ಜುಲೈ 15ನೇ ತಾರೀಖಿಗೆ ಹಿಯರಿಂಗ್ ಮೊಕರರ್ ಮಾಡಿರುತ್ತೆ.

ಸದರೀ ಮೃತಪಟ್ಟ ಪುಟ್ಟಣ್ಣನಿಗೆ ಹಕ್ಕುದಾರರಾದ ವಿಸಿಷ್ಟರೂ ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಹಾಜರಾಗಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

ತಾರೀಖು 24ನೇ ಜೂನ್ 1887ನೇ ಇಸವಿ.

ಸಿ. ಕ್ರೈಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 24ನೇ ಜೂನ್ 1887.

ಕೋಲಾರ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಈ ಕೆಳಗೆ ವಿವರಿಸೋಣಾದ ರಿಜಿಸ್ಟ್ರಾದ ಮತ್ತು ರಿಜಿಸ್ಟ್ರೇಷನ್ ತಿರಸ್ಕರಿಸಲ್ಪಟ್ಟ 3 ತಂಸೂಕುಗಳು 2 ವರುಷಗಳಿಗೆ ಮೇಲ್ಪಟ್ಟ ಕಾಲದಿಂದ ಹಾಜರ್ಮಾಡಿದವರು ವಾಪಸ್ ಕೇಳದೆ ಇರುವ ಕಾರಣ ನಿಂತಿರುತ್ತವೆ. ಸದರಿ ತಂಸೂಕುಗಳನ್ನು ಹಾಜರ್ಮಾಡಿದವರು ಅಥವಾ ವಾಪಸು ಪಡಿಯಲು ಅಧಿಕಾರ ಹೊಂದಿದವರು ಯಾ ತಂಸೂಕುಗಳಲ್ಲಿ ಬಾಧ್ಯತೆವುಳ್ಳವರು ಯಾರಾಗಲಿ ಭದ್ರಪಡಿಸಿದ ಬಗ್ಗೆ ರೂಲ್ಸು ಪ್ರಕಾರ ವಿಧಾಯಕವಾಗಿರುವ ಫೀಜು ಪಾವತಿಯಿಂದ ತಂಸೂಕುಗಳನ್ನು ಈ ತಾರೀಖು ಲಗಾಯಿತು 1 ತಿಂಗಳಲ್ಲಿ ಮೇಲ್ಕಂಡ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಹಾಜರಾಗಿ ವಾಪಸ್ ಪಡಿಯಬಹುದು, ತಪ್ಪಿದರೆ ಅವುಗಳು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವವು.

ರಿಜಿಸ್ಟ್ರು ಬುಕ್ಕಿನ ಇಸವಿ ಮತ್ತು ನಂಬರು.	ಕಕ್ಷಿಗಾರ್ರ ಹೆಸರು.		ತಂಸೂಕಿನ ತಾರೀಖು.	ರಿಜಿಸ್ಟ್ರಿಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಾದ ಅಥವಾ ರಿಜಿಸ್ಟ್ರೇಷನ್ ತಿರಸ್ಕರಿಸಲ್ಪಟ್ಟ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕಿಮ್ಮತ್ತು.
	ಬರದುಕೊಟ್ಟವರ ಹೆಸರು.	ಬರಸಿಕೊಂಡವರು.				
1884—85ನೇ ಇಸವಿ ಬಗೆ 2ನೇ ನಂಬರು ರಿಜಿಸ್ಟ್ರೇಷನ್ ಬುಕ್ಕು ಬಾಬತು	ಬೆಂಗಳೂರು ಮಾಮೂಲ್ ಪೇಟೆಯಲ್ಲಿರುವ ರಾಯಬಹದೂರಿಯಲೆ ಮಲ್ಲಪ್ಪಶೆಟ್ರು ಕೊಮಾರ್ರು ಯಲವೀರಣ ಶೆಟ್ಟರು	ಕೋಲಾರ ತಾಲ್ಲೂಕು ಹುತ್ತೂರು ಹೋಬಳಿ ನಂದಂಬಳ್ಳಿ ಗ್ರಾಮದಲ್ಲಿ ಯಿರುವ ದೇಶಕುಲಕರಣಿ—1ನೇ ಲಕ್ಷ್ಮಿನಾರಣಪ್ಪ 2ನೇ ವೆಂಮಂಣ	1884ನೇ ಇಸವಿ ಫೆಬ್ರವರಿ ತಾರೀಖು 17	1884ನೇ ಇಸವಿ ನವಂಬರು ತಾರೀಖು 18	ರಿಜಿಸ್ಟ್ರೇಷನ್ ತಿರಸ್ಕರಿಸಲ್ಪಟ್ಟದ್ದು 1885ನೇ ಇಸವಿ ಮಾರ್ಚಿ 18	ನಂದಂಬಳ್ಳಿ ಗ್ರಾಮದ ಬಳಿಯ 1 ಖಂಡಿ ತರಿ, ಶಿರಸಂದ್ರದ ಜಮೀನಿನಲ್ಲಿ 1 ಖಂಡಗದ 6 ಆರು ಬಳ್ಳ ಜಮೀನು ಸಾಲು 1ಕ್ಕೆ 16-1-0 ಮೇಗೆ ಕಾಯಂ ಕಂದಾಯಕ್ಕೆ ಕೊಟ್ಟಿರುವದಾಗಿ
ಡಿಟ್ಟೋ 1885—86ನೇ ಇಸವಿ ಬಗೆ	ಮುಳಬಾಗಲ್ ತಾಲ್ಲೂಕು ಪಂಬರಹಳ್ಳಿಯಲ್ಲಿ ಯಿರುವ 1ನೇ ಶಾಪೂರು ಕಿಚ್ಚಯ್ಯ 2ನೇ ಇವನ ತಮ್ಮ ಮುನಿಶಾಮಯ್ಯ	ಕೋಲಾರದ ತಾಲ್ಲೂಕು ಹೋಳೂರು ಹೋಬಳಿ ಮಣಿಗಟ್ಟದಲ್ಲಿರುವ ಯಂಗಟರಡ್ಡಿ	1884ನೇ ಇಸವಿ ಜೂನ್ 13	1885ನೇ ಇಸವಿ ಮೇ 10	ರಿಜಿಸ್ಟ್ರೇಷನ್ ತಿರಸ್ಕರಿಸಲ್ಪಟ್ಟದ್ದು 1885ನೇ ಇಸವಿ ಆಗಸ್ಟ್ 13	ಮಣಿಗಟ್ಟ ಗ್ರಾಮಕ್ಕೆ ಶೇರಿದ ಕಾಯಂಗುತ್ತಾ ಕೃಷ್ಣರಾಜಪುರದ ಬೇಚರಾಖ್ ಗ್ರಾಮದಲ್ಲಿ ಬರಿಶಿಕೊಟ್ಟವರ 8ರಲ್ಲಿ ವಂದು ಭಾಗ 55 ರೂಪಾಯಿಗಳಿಗೆ ಕ್ರಯಮಾಡಿ ಯಿರುವದಾಗಿ
1ನೇ ನಂಬರು ಬುಕ್ಕಿನ 1885 86ನೇ ಇಸವಿ ನಂಬರು 171	ಕೋಲಾರ ತಾಲ್ಲೂಕು ಹೋಳೂರು ಹೋಬಳಿ ಮಣಿಗಟ್ಟ ಗ್ರಾಮದಲ್ಲಿ ಯಿರುವ ಶೀನಪ್ಪನ ಮಗ ಕೃಷ್ಣಪ್ಪ	ಡಿಟ್ಟೋ ಗ್ರಾಮದಲ್ಲಿ ಯಿರುವ ಕೊಂಡಾರಡ್ಡಿ	1885ನೇ ಇಸವಿ ಜನವರಿ 8	1885ನೇ ಇಸವಿ ಜನವರಿ 8	ರಿಜಿಸ್ಟ್ರಾದದ್ದು 1885ನೇ ಇಸವಿ ಜನವರಿ 8	ಮಣಿಗಟ್ಟ ಗ್ರಾಮದಲ್ಲಿ ಬರಶಿಕೊಟ್ಟವನಿಗೆ ಯಿರುವ 9ನೇ ನಂಬರು ಖುಷ್ಕಿ ಂ।ಂ॥೪ಗೆ ಕಂದಾಯ 6—6—0 ವುಳ್ಳ ಜಮೀನು 20 ರೂಪಾಯಿಗಳಿಗೆ ಕ್ರಯ ಮಾಡಿ ಯಿರುವದಾಗಿ

ಕೃಷ್ಣಯ್ಯಂಗಾರ್,
ಫಾರ್ ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 8ನೇ ಜೂನ್ 1887.

ಇದರಿಂದ ಸಂಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಗುಬ್ಬಿ ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಬೇವಾರಸ್ಆಗಿ ಇರತಕ್ಕ ಈ ಕೆಳಗೆ ವಿವರಿಸೋಣವಾಗಿಯಿರುವ ದಸ್ತೈವಜನ್ನ ಹಾಜರ್ಮಾಡಿದವರೆ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೆ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಗುಬ್ಬಿ ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರಿ ದಸ್ತೈವಜನ್ನ ವಾಪಸುಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು.

ದಸ್ತೈವಜಿನ ನಂಬರ.	ದಸ್ತೈವಜು ಬರೆದ ತಾರೀಖು.	ದಸ್ತೈವಜು ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ದಸ್ತೈವಜು ರಿಜಿಸ್ಟ್ರಿ ಮಾಡಿದ ತಾರೀಖು.	ದಸ್ತೈವಜನ್ನ ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನ ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತು.
2 1885—86	28—12—84	16—4—85	16—4—85	ಗುಬ್ಬಿತಾಲ್ಲೂಕು ದೊಡ್ಡಗುಣಿ ಗ್ರಾಮದಲ್ಲಿ ಯಿರುವ ಕೊರಟಿಗೆರೆ ಚನ್ನಬಸೆಟ್ಟಿ	ಗುಬ್ಬಿ ತಾಲ್ಲೂಕು ದೊಡ್ಡಗುಣಿ ಗ್ರಾಮದಲ್ಲಿ ಯಿರುವ ಚನ್ನಪ್ಪನ ವ. ಗ ಕರಿಬಸೆಟ್ಟಿ	ತನ್ನ ಬಾಬತು ಕರಿಹಸು 1 ಕೆಂದ ಹಸು 1 ಕೆಂದಹಸುವಿನ ಮಣಕ 1 ಕರಿಹೆಂಣು ಕರಾ 1 ಬಿಳಿ ಹೆಂಣುಕರಾ 1 ಕೆಂಬಹೋರಿಕರಾ 1 ಅಂಡಹೋರಿಕರಾ 1 ಕೆಂದಹೆಂಣುಕರಾ 1 ಕರಿಹೆಂಣುಕರಾ 1 ಕರಿಹೆಂಣು ಮಣಕ 1 ಕರಿಗಂಡುಕರಾ 2 ಜುಮ್ಲಾ 12 ರಾಸುಗಳನ್ನ 90 ರೂಪಾಯಿಗಳಿಗೆ ಶುದ್ಧ ಕ್ರಯಕ್ಕೆ ಕೊಟ್ಟು ಯಿರುವದಾಗಿ ಬರದುಕೊಟ್ಟ ಹಣಸಂದ ರಶೀತಿ ಮತ್ತು ಅದರ ಮಲಪ್ರೂಪಿ ರಿಜಿಸ್ಟ್ರಾಗದೆ ಯಿರುವ ಡಿಟೋ ರಾಸುಗಳ ಖರೀದಿ ಪತ್ರಸಹ.

ಪಿ. ಎನ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 217.

ಮೃತಪಟ್ಟ ಅಳಸಿಂಗ್ರಾಚಾರ್ಯರ ಆಸ್ತೀ ವಿಷಯವಲ್ಲಿ—

ಅರ್ಜೀದಾರ ಅಳಸಿಂಗ್ರಾಚಾರ್ರು ಮೈನರ್‌ಗಾರ್ಡಿಯನ್ ನರಸುಹ್ಮಾಚಾರ್ರು, ಮೃತಪಟ್ಟ ಸದರೀ ಅಳಸಿಂಗ್ರಾಚಾರ್ರಿಗೆ ದತ್ತುಮಗ ಮೈನರ್ ಗಾರ್ಡಿಯನ್ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಸನದ ತಾಲ್ಲೂಕು ಗೊರೂರು ಸ್ಥಳದ ಸದರೀ ಅಳಸಿಂಗ್ರಾಚಾರ್ಯರ ಗಾರ್ಡಿಯನ್ ನರಸುಹ್ಮಾಚಾರ್ರು ಸದರೀ ವಾಸಸ್ಥರಾಗಿ ಮೃತಪಟ್ಟ ಅಳಸಿಂಗ್ರಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಳಸಿಂಗ್ರಾಚಾರ್ರು ಮೈನರ್ ಗಾರ್ಡಿಯನ್ ನರಸುಹ್ಮಾಚಾರ್ರು ಅರ್ಜೀಯನ್ನ 1887ನೇ ಇಸವಿ ಜುಲೈ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಳಸಿಂಗ್ರಾಚಾರ್ರ ಆಸ್ತಿಗೆಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 224.

ಮೃತಪಟ್ಟ ನಾರಣಮ್ಮನವರ ಆಸ್ತೀ ವಿಷಯವಲ್ಲಿ—

ಅರ್ಜೀದಾರ ನಾಗಮ್ಮನು, ಮೃತಪಟ್ಟ ಸದರೀ ನಾರಣಮ್ಮನವರಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಲಷ್ಕರ್ ಮೊಹಲ್ಲಾ ಸ್ಥಳದ ಸದರೀ ನಾಗಮ್ಮನು ಸದರೀ ವಾಸಸ್ಥರಾಗಿ ಮೃತಪಟ್ಟ ನಾರಣಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಾಗವ್ಮನ ಅರ್ಜೀಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 12ರಲ್ಲು ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ನಾರಣಮ್ಮನವರ ಆಸ್ತಿಗೆ ಹಕ್ಕುದಾರರದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯುಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 239.

ಮೃತಪಟ್ಟ ಸಿದ್ದೇಗೌಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರ 1ನೇ ಸಿದ್ದಾ 2ನೇ ಚನ್ನೇಗೌಡ ಮೈನರ್ ಗಾರ್ಡಿಯನ್ ಮತ್ತು ತಾಯಿ ಲಿಂಗವ್ಮನು ಮೃತಪಟ್ಟ ಸದರೀ ಸಿದ್ದೇಗೌಡರಿಗೆ ಹೆಂಡತಿ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಹೆಗ್ಗಡದೇವನ ಕೋಟೆ ತಾಲ್ಲೂಕು ಬಿರಂಬಳಿ ಸ್ಥಳದ ಸದರೀ 1ನೇ ಸಿದ್ದಾ 2ನೇ ಚನ್ನೆಗೌಡ ಮೈನರ್ ಗಾರ್ಡಿಯನ್ ಮತ್ತು ತಾಯಿ ಲಿಂಗವ್ಮನು ಸದರಿ ವಾಸಸ್ಥರಾಗಿ ಮೃತಪಟ್ಟ ಸಿದ್ದೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಿಂಗವ್ಮನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 253.

ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವೆಂಕಟಾಚಾರ್ರು ಮೃತಪಟ್ಟ ಸದರೀ ಕೃಷ್ಣಯ್ಯಂಗಾರ್ರಿಗೆ ವಿಭಕ್ತ ಸಹೋದರ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕೃಷ್ಣವಿಲ್ಲಾಸ ಅಗ್ರಹಾರ ಸ್ಥಳದ ಸದರೀ ವೆಂಕಟಾಚಾರ್ರು ಮೇಲುಕೋಟೆ ವಾಸಸ್ಥರಾಗಿ ಮೃತಪಟ್ಟ ಕೃಷ್ಣಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ 250 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಾಚಾರ್ರ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿಧೆ.

1887ನೇ ಯಿಸವಿ ಜೂನ್ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1887ನೇ ಇಸವಿ ಅರ್ಜೀ ನಂಬರ್ 270.

ಮೃತಪಟ್ಟ ಈರೇಗೌಡರ ಆಸ್ತಿ ವಿಷಯದಲ್ಲಿ—.

ಅರ್ಜೀದಾರ ಹೊಟ್ಟೇಗೌಡರು, ಮೃತಪಟ್ಟ ಸದರೀ ಈರೇಗೌಡರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಹಾರನಹಳ್ಳಿ ಹೋಬಳಿ ಅಂಬಲಾರ ಗ್ರಾಮದ ಸ್ಥಳದ ಸದರೀ ಹೊಟ್ಟೇಗೌಡರು ಸದರೀ ವಾಸಸ್ಥರಾಗಿ ಮೃತಪಟ್ಟ ಈರೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟುಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹೊಟ್ಟೇಗೌಡರ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುರೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 275.

ಮೃತಪಟ್ಟ ಶಿವಂಣನವರ ಆಸ್ತಿ ವಿಷಯವಲ್ಲಿ—

ಅರ್ಜೀದಾರ ಶಂಕರಯ್ಯನವರು, ಮೃತಪಟ್ಟ ಸದರೀ ಶಿವಂಣನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಮಂಡೀ ಮೊಹಲಾ ಸ್ಥಳದ ಸದರೀ ಶಂಕರಯ್ಯನವರು ಸದರೀ ವಾಸಸ್ಥರಾಗಿ ಮೃತಪಟ್ಟ ಶಿವಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರ.

ಸದರೀ ದರಖಾಸ್ತುದಾರರಾದ ಶಂಕರಯ್ಯನವರ ಅರ್ಜೀಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 28ರಲ್ಲು ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿವಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1887ನೇ ಇಸವಿ ಜೂನ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ನಂ. 4. ತಾರೀಖು 18ನೇ ಜೂನ್ 1887.

ಯಡತೊರೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನ ಕ್ರಮವಾದ ವಾರಸುದಾರರಾಗಲಿ ಅಥವಾ ಅಧಿಕಾರ ಹೊಂದಿದ ಮುಖ್ತಾಲೀಕನಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳು ವಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತಾವೇಜು ಬರಸಿ ಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ವ ಕಿಮ್ಮತ್ತು.
31 1885—86	ಯಡತೊರೆ ತಾಲ್ಲೂಕು ಲಾಳನಹಳ್ಳೀಲಿರುವ ದೊಂಣೆ ಮರೀಗೌಡನ ಸೊಸೆ ಮಲ್ಲಮ್ಮ, ಯಿವಳ ಮಗ ಈರಂಣ ಉರಫ್ ಪುಟ್ಟ ಸಹ	ಯಡತೊರ ತಾಲ್ಲೂಕು ಲಾಳನಹಳ್ಳೀಲಿ ಯಿರುವ ಕಲ್ಲೂರು ಲಿಂಗೇಗೌಡನ ಮಗ ಚನ್ನೇಗೌಡ	1—4—85	13—4—85	(20) ರೂಪಾಯಿನ ಮನೆ ನಿವೇಶನ ಕ್ರಯಪತ್ರ.

ಟಿ. ಆನಂದರಾವ್,
ರಿಜಿಸ್ಟ್ರಾರ್.

539

ನಗರ ಡಿವಿಜನ್.

ನಗರ ಡಿವಿಜನ್ ಡಿಸ್ಟ್ರಿಕ್ಟ ಜಡ್ಜಿಯವರಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ 54.

ಮೃತಪಟ್ಟ ಹಟಸಾಲೆ ನಾಗಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹಟಸಾಲೆ ಮಲ್ಲಪ್ಪ, ಮೃತಪಟ್ಟ ಸದರೀ ಹಟಸಾಲೆ ನಾಗಪ್ಪನಿಗೆ ಸಹೋದರನ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ, ತೀರ್ಥಹಳ್ಳಿ ತಾಲ್ಲೂಕು ಹಟಸಾಲೆ ಸ್ಥಳದ ಮಲ್ಲಪ್ಪನು, ಸದರೀ ಹಟಸಾಲೆ ವಾಸಸ್ಥನಾಗಿ ಮೃತಪಟ್ಟ ನಾಗಪ್ಪನ ಜಿಂದಗಿ ಬಗ್ಗೆಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಹಟಸಾಲೆ ಮಲ್ಲಪ್ಪನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಟಸಾಲೆ ನಾಗಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1887ನೇ ಯಿಸವಿ ಜೂನ್ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತಿನೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ 55.

ಮೃತಪಟ್ಟ ಪರಂಡಿ ಹಂಪ್ಪಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪರಂಡಿ ವಿರುಪಾಕ್ಷಪ್ಪ ಮೈನರ ಗಾರ್ಡಿಯನ್ ಉಪ್ಪಾಶಿ ರಾಚಪ್ಪ ಮೃತಪಟ್ಟ ಸದರೀ ಹಂಪ್ಪಯ್ಯನಿಗೆ ಮೈನರ ವಿರುಪಾಕ್ಷಪ್ಪನು ದತ್ತುಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಅನಂತಪುರದ ಸ್ಥಳದ ಸದರೀ ಮೈನರ ವಿರುಪಾಕ್ಷಪ್ಪನ ಗಾರ್ಡಿಯನ್ ಉಪಾಶಿ ರಾಚಪ್ಪನು ಅನಂತಪುರದ ವಾಸಸ್ಥನಾಗಿ ಮೃತಪಟ್ಟ ಹಂಪ್ಪಯ್ಯನ ಜಿಂದಗಿ ಬಗ್ಗೆಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಉಪಾಶಿ ರಾಚಪ್ಪನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 23ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಂಪ್ಪಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜೂನ್ ತಿಂಗಳು ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತಿನೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ 56.

ಮೃತಪಟ್ಟ ಶಾಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರರು 1ನೇ ಶ್ರೀನಿವಾಸರಾವ್, 2ನೇ ಈತನ ತಮ್ಮ ತಿಮ್ಮಪ್ಪ ಮೈನರುಗಳು ಗಾರ್ಡಿಯನ್ ಸಾಹುಕಾರ ರಾಮಪ್ಪ, ಮೃತಪಟ್ಟ ಸದರೀ ಶಾಮಯ್ಯನಿಗೆ ಸದರೀ ಮೈನರುಗಳು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಯಡೆಹಳ್ಳಿ ಸ್ಥಳದ 1ನೇ ಶ್ರೀನಿವಾಸರಾವ್ 2ನೇ ತಿಮ್ಮಪ್ಪ ಯಂಬವರ ಗಾರ್ಡಿಯನ್ ಸಾಹುಕಾರ ರಾಮಪ್ಪನು ಯಡೆಹಳ್ಳಿ ವಾಸಸ್ಥರಾಗಿ ಮೃತಪಟ್ಟ ಶಾಮಯ್ಯನ ಜಿಂದಗಿ ಬಗ್ಗೆಯಾಗಿ ಬರತಕ್ಕ 6000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಬಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸದರೀ ಮೈನರ ಗಾರ್ಡಿಯನ್ ಸಾಹುಕಾರ ರಾಮಪ್ಪನ ಅರ್ಜೀಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ಯಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಜೂನ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತಿನೊಡನೆ ಕೊಡೋಣಾಗಿದೆ.

ಟಿ. ನರಹರಿರಾವ,
ಡಿಸ್ಟ್ರಿಕ್ಟ ಜಡ್ಜಿ.

ಕಡೂರು ಡಿಸ್ಟ್ರಿಕ್ಟು.

ತಾರೀಖು 4ನೇ ಜೂನ್ 1887.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಈ ಡಿಸ್ಟ್ರಿಕ್ಟಿನಲ್ಲಿನ ಈವರಡೀಕಂಡ ಕಾಫೀ ಜಮೀನುಗಳ ಬಾಬತು ಬಾಕಿಯು ತಹಲ್ ಪಾವತೀ ಮಾಡದೇ ಯಿರುವದ್ದರಿಂದ ಸದರೀ ಜಮೀನುಗಳು ಸನ್ 1887ನೇ ಇಸವಿ ಜುಲೈ 11ನೇ ಸೋಮವಾರ ಮಧ್ಯಾನ್ನ ಯಡೇಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾದ ಹರಾಜಿನಲ್ಲಿ ಕಂದಾಯದ ಬಾಕೀ ವಸೂಲಿ ಬಗ್ಯಾಗಿ ವಿಕ್ರಯಿಸಲ್ಪಡುವವು:—

ಸರ್ವೆ ನಂಬರು.	ಖಾತೆದಾರನ ಹೆಸರು ತಾಲ್ಲೂಕು ವ ಗ್ರಾಮ.	ವಿಸ್ತೀರ್ಣ ಎಕರೆ.		ಕಂದಾಯ.			ಬಾಕೀ. 1886-87			ಬಾಕೀ. ಜುಮ್ಲ.			ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ದಕ್ಷಿಣ.	ಷರಾ.
19.	ಮತ್ತೆ ಹಾಸ್ಟ್ರಾವ್. ಕೊಪ್ಪ ತಾ॥ ನರಸೀಕೊಪ್ಪ ಗ್ರಾಮ.	164	31	165	0	0	165 *10 †1	0 5 0	0 0 0	176	5	0	24, 25, 26, 27ನೇ ಸರ್ವೆ ನಂಬರುಗಳು.	29ನೇ ಸರ್ವೆ ನಂಬರು.	29ನೇ ಸರ್ವೆ ನಂಬರು.	18ನೇ ಸರ್ವೆ ನಂಬರು.	ಸೆಪ್ಟ ಡಿ ತಾರೀಖಿನಲ್ಲಿ ಯಡೇಹಳ್ಳಿ ತಾಲ್ಲೂಕು ಕಚೇರಿಯಲ್ಲಿ ಶಿ ಅವರು ದಾರ್ರ ರೂಪಾಯ ವಿಕ್ರಯಿಸಲ್ಪಡುವದು.

* ಲೋಕಲ್ ಸೆಸ್

† ನೋಟೀಸ್ ಫೀ

ಜೆ. ಯ. ಕ್ಯಾಂಪ್‌ಬೆಲ್, ಕರ್ನಲ್,
ಡೆಪ್ಯುಟಿ ಕಮ್ಮಿಷನರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ದರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇವರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸವುಳ್ಳ ಡಬ್ಬಿ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸವುಳ್ಳ ಡಬ್ಬಿ ಒಂದಕ್ಕೆ ರೂ. 5—8—0, ಎಂಟು ಔನ್ಸವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡುವುಳ್ಳ ಡಬ್ಬಿಗೆ 20 ರೂಪಾಯಿ ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 27 ಸರ್ಕಾರದಿಂದ ಪ್ರಾಯಿಷ್ ಆದ್ದು. ಸರ್ 1887.

ಬೆಂಗಳೂರು, ಶನಿವಾರ, ಜುಲೈ ತಾ|| 9, ಸರ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರಗಳು, ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಯೆರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 27ನೇ ಜೂನ್ 1887.

ನಂ. 43.—ತಿರುಮಕೂಡ್ಲು ನರಸೀಪುರದ ಸಬ್ ರೆಜಿಸ್ಟ್ರಾರ್ ಶ್ಯಾಮೈಂಗರಿಗೆ ಯಡತೊರೆಗೂ—ಯಡತೊರೆ ಸಬ್ ರೆಜಿಸ್ಟ್ರಾರ್ ಶ್ರೀನಿವಾಸರಾಯರಿಗೆ ತಿರುಮಕೂಡ್ಲು ನರಸೀಪುರಕ್ಕೂ ವರ್ಗ ಮಾಡಲ್ಪಟ್ಟಿರುತ್ತೆ.

ತಾರೀಖು 9ನೇ ಜೂನ್ 1887.

ಕ್ಯಾಂಪ್ ನಂ. 773.—ಇಂಡಿಯ ಗವರ್ನಮೆಂಟಿನವರ ಇದರಡೀ ಕಂಡ ಇಸ್ತಿಹಾರನಾಮೆಗಳು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ:—

ತಾರೀಖು 13ನೇ ಏಪ್ರೈಲ್ 1887.

"ನಂ. 1652 I.—1882ನೇ ಇಸವಿ XIVನೇ ನಂಬರ್ ಆಕ್ಟು ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿಗೆ ವಿಸ್ತರಿಸಲ್ಪಟ್ಟ ಪ್ರಕಾರ ಸದರೀ ಆಕ್ಟಿನಿಂದ ಉಂಟು ಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ ಸಮಾಜದಲ್ಲಿನ ಗವರ್ನರ್ಜನರಲ್‌ಯವರು ನಿಯಮಿಸುವದೇನಂದರೆ, ಮೈಸೂರು ದೇಶದ ಶಿವಿಲ್ ವ ರೆವಿನ್ಯು ಕೋರ್ಟುಗಳ ಡಿಕ್ರಿಗಳು, ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿನಲ್ಲಿ ಅವು ಸದರೀ ಸ್ಟೇಷನಿನ ಕೋರ್ಟುಗಳಿಂದ ಕೊಡಲ್ಪಟ್ಟ ಡಿಕ್ರಿಗಳಂತೆಯೇ ಅಮಲ್‌ಜಾರಿ ನಡಿಸಲ್ಪಡಬಹುದು."

"ನಂ. 1,653 I.—1882ನೇ ಇಸವಿ XIVನೇ ನಂಬರ್ ಆಕ್ಟು ಶಿವಿಲ್ ವ ಮಿಲಿಟೇರಿ ಸ್ಟೇಷನಿಗೆ ವಿಸ್ತರಿಸಲ್ಪಟ್ಟ ಪ್ರಕಾರ ಸದರೀ ಆಕ್ಟಿನ 650ನೇ A ಸೆಕ್ಷನಿನಿಂದ ಉಂಟುಮಾಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವದರಲ್ಲಿ, ಸಮಾಜದಲ್ಲಿನ ಗವರ್ನರ್ ಜನರಲ್‌ಯವರು ವಿಧಿಸುವದೇನಂದರೆ, ಸದರಿ ಸೆಕ್ಷನಿನ ನಿಯಮಗಳು ಮೈಸೂರು ದೇಶದ ಶಿವಿಲ್ ಕೋರ್ಟುಗಳಿಗೆ ಲಗಾವಾಗತಕ್ಕದ್ದು."

ತಾರೀಖು 27ನೇ ಮೇ 1887.

ನಂ. 31.—ಇಂಡಿಯಾ ದೇಶದ ಸ್ಟೇಟ್ ಸೆಕ್ರೆಟೇರಿಯವರ 1883ನೇ ಇಸವಿ ಜುಲೈ 19ನೇ ಮುರ್ಕುಂ (ಪಬ್ಲಿಕ್) 73ನೇ ನಂಬರ್ ಉಳ್ಳ ಇದರಡೀಕಂಡ ಲೆಟರು ಸರ್ವರ ತಿಳುವಳಿಕೆ ಮತ್ತು ನಡವಳಿಕೆ ಬಗ್ಗೆ ಪ್ರಾಯಿಷ್ ಮಾಡುವದರಲ್ಲಿ, ಶ್ರೀಮನ್ ಮಹಾರಾಜಾ ಸರ್ಕಾರದವರು ಅಜ್ಞಾಪಿಸುವದೇನಂದರೆ, ಸರ್ಕಾರ್ ನವಕರರು ತಾವು ಉದ್ಯೋಗದಲ್ಲಿರುವ ಡಿಸ್ಟ್ರಿಕ್ಟಿನಲ್ಲಿ ವಹಿವಾಟ್ಟು ನಡಿಸುವಂಥಾ ಜಾಯಿಂಟ್ ಸ್ಟಾಕ್ ಮತ್ತು ಇತರ ಕಂಪೆನಿಗಳಲ್ಲಿ ಹಿಸ್ಸೆಗಳನ್ನು ಉಂಟಾಗಿರುವದನ್ನ ನಿರೋಧಿಸುವ ಲೇಟ್ ಚೀಫ್ ಕಮ್ಮಿಷನರವರಿಂದ ಸಾದರ್‌ಮಾಡಲ್ಪಟ್ಟ 1874ನೇ ಇಸವಿ ಸೆಪ್ಟಂಬರ್ 21ನೇ ಮುರ್ಕುಂ 177ನೇ ನಂಬರ್ ಇಸ್ತಿಹಾರನಾಮೆಯಲ್ಲಿ ಅಡಗಿರತಕ್ಕ ರೂಲ್‌ಶಿನ ಅಮಲ್ ಚಲಾವಣಿ ದೆಶೆಯಿಂದ, ಮುನ್‌ಸಿಫ್ ವ ಡೆಪ್ಯುಟಿ ಅಮಲ್‌ದಾರ್ ದರ್ಜೆಗೆ ಕೀಳ್ಪಟ್ಟ ತಮಾಂ ಸರ್ಕಾರ್ ಉದ್ಯೋಗಸ್ಥರೂ ವಿನಾಯಿಸಲ್ಪಡತಕ್ಕದ್ದು.

ಇಂಡಿಯ ಗವರ್ನಮೆಂಟಿನ ಹೋಂ ಡಿಪಾರ್ಟ್‌ಮೆಂಟ್ ಸೆಕ್ರೆಟೇರಿ ಎ. ಮೆಕ್ಕೆಂಜಿ ಯಸ್ಕ್ವಾಯರ್ ಸಿ. ಎಸ್. ಯವರಿಂದ, ಮದರಾಸ್ ಗವರ್ನಮೆಂಟಿನ ಚೀಫ್ ಸೆಕ್ರೆಟೇರಿಯವರಿಗೆ, ಮುರ್ಕುಂ 1883ನೇ ಇಸವಿ ಸೆಪ್ಟಂಬರ್ 6, ಮೊಕ್ಕಾಂ ಸಿಂಲಾ, ನಂಬರ್ 37—1211 (ಪಬ್ಲಿಕ್).

ಸಹಾಯ ಸಂಘಗಳ ಆಡಳಿತಗಳಲ್ಲಿ ಸರ್ಕಾರನವುಕರರ ಸಂಬಂಧವನ್ನು ಕುರಿತ ಯಿಂಡಿಯಾ ದೇಶದ ಹರ್‌ಮಾಜೆಸ್ಟೀಸ್ ಸ್ಟೇಟ್ ಸೆಕ್ರೆಟೇರಿ ಯವರೊಡನೆ ನಡೆದ, ಬಾಜೂದಲ್ಲಿ ಕಂಡ ಕರೆಸ್ಪಾಂಡೆನ್ಸ್ ಯಾನೆ ಲೆಟರ್‌ಗಳ ನಕ್ಕಲನ್ನು ತಿಳುವಳಿಕೆ ಮತ್ತು ನಡವಳಿಕೆ ಬಗ್ಗೆ ರವಾನಿಸಲು ನಾನು ಅಜ್ಞಾಪಿಸಲ್ಪಟ್ಟಿರುತ್ತೇನೆ. ವ್ಯಾಪಾರದ ಕಂಪೆನಿಗಳೊಂದಿಗೆ ಗವರ್ನಮೆಂಟ್ ಆಫಿಸರ್‌ಗಳ ಸಂಬಂಧದ ವಿಷಯದಲ್ಲಿ ಜಾರಿಯಲ್ಲಿರತಕ್ಕ ಹುಕುಂಗಳು, ಸರ್ಕಾರದಲ್ಲಿ ನವಕರಿ ಯಿರತಕ್ಕ ಕ್ಲರಕ್‌ಗಳು ಮತ್ತು ಇತರ ಮಿನಿಸ್ಟೀರಿಯಲ್ ಯಾನೆ ಮೊಹ್ತೇಸರಿ ಉದ್ಯೋಗಸ್ಥರುಗಳಿಗೆ ಅನ್ವಯಿಸುವದಿಲ್ಲವೆಂಬ ವಿಷಯ ತಿರ್ಮಾನಿಸಲ್ಪಟ್ಟಂತೆಯೂ ತಿಳಿಯಬರುತ್ತೆ.

ಸೆಕ್ರೆಟೇರಿ ಆಫ್ ಸ್ಟೇಟ್‌ಯವರಿಗೆ ಬರೆದ 1883ನೇ ಇಸವಿ ಏಪ್ರೈಲ್ 24ನೇ ಮುರ್ಕುಂ ಲೆಟರ್ ನಂಬರ್ 25.

ಸೆಕ್ರೆಟೇರಿ ಆಫ್ ಸ್ಟೇಟ್‌ಯವರಿಂದ ಬಂದ 1883ನೇ ಇಸವಿ ಜುಲೈ 19ನೇ ಮುರ್ಕುಂ ಲೆಟರ್ ನಂಬರ್ 73.

ಇಂಡಿಯ ಗವರ್ನಮೆಂಟಿನಿಂದ, ಇಂಡಿಯ ದೇಶದ ಹರ್‌ಮಾಜೆಸ್ಟೀಸ್ ಸ್ಟೇಟ್ ಸೆಕ್ರೆಟೇರಿ ಯವರಿಗೆ, ಮೊಕ್ಕಾಂ ಸಿಂಲಾ, ತಾರೀಖು 24ನೇ ಏಪ್ರೈಲ್ 1883ನೇ ಇಸವಿ, ನಂಬರ್ 25 (ಪಬ್ಲಿಕ್)

ಸಿಂಲಾದಲ್ಲಿ ವಹಿವಾಟ್ಟು ನಡಿಸುವ ಕೆಲವು ವ್ಯಾಪಾರಸ್ಥರು, ಸದರೀ ಸ್ಥಳದಲ್ಲಿ ಒಂದು ಸಹಾಯ ಸಂಘದ ಆಡಳಿತ ಮತ್ತು ಕಾರ್‌ಬಾರ್ ಕೆಲಸಗಳು ಸರ್ಕಾರ್ ಉದ್ಯೋಗದಲ್ಲಿರತಕ್ಕ ಕವಿನಾಂಟೆಡ್ ಮತ್ತು ಅನ್‌ಕವಿನಾಂಟೆಡ್ ನವಕರರುಗಳಿಂದ ನಡಿಸಲ್ಪಡುತಿದೆಯೆಂಬದಾಗಿಯೂ, ಸರ್ಕಾರ್ ಉದ್ಯೋಗಸ್ಥರು ಕಂಪೆನಿಗಳ ಆಡಳಿತ ನಡಿಸುವದರಲ್ಲಿ ಪ್ರವೇಶಿಸುವದನ್ನ ನಿರೋಧಿಸುವ ಹಾಲಿ ಜಾರಿಯಲ್ಲಿರತಕ್ಕ ಗವರ್ನಮೆಂಟ್ ಆರಡರ್‌ಕುರಿತು ತತ್ಕಾಲದಲ್ಲಿ ಸಂಘದ ಆಡಳಿತ ಮತ್ತು ಕಾರ್‌ಬಾರಿ ಕೆಲಸಗಳಲ್ಲಿ ಪ್ರವೇಶಮಾಡುತ್ತಿರುವ ಉದ್ಯೋಗಸ್ಥರು ಅದರ ಸಂಬಂಧದಿಂದ ನಿವೃತ್ತರಾಗುವಂತೆ ಅಪ್ಪಣೆ ಆಗಬೇಕೆಂಬದಾಗಿಯೂ ಕೊಟ್ಟ ಲೆಟರಿನ ನಕ್ಕಲು ಯಿದರೊಂದಿ

1 "ಸಿಂಲಾವಿನ ಕೋಆಪರೇಟಿವ ಅಸೋಸಿಯೇಷನ್ ಲಿಮಿಟೆಡ್" ಯಾನೆ ಸಹಾಯ ಸಂಘದ ಮಿಮೊರಾಂಡಂ.

2 "ಸಿಂಲಾವಿನ ಕೋಆಪರೇಟಿವ್ ಅಸೋಸಿಯೇಷನ್ ಲಿಮಿಟೆಡ್" ಯಾನೆ ಸಂಘದ ಆರ್ಟಿಕಿಲ್ಸ್ ಯಾನೆ ನಿಬಂಧನೆ.

ಗೆ ಕಳುಹಿಸಲ್ಪಟ್ಟಿರುತ್ತೆ. ಮತ್ತು ಬಾಜಾದಲ್ಲಿ ಕಂಡ ಕಾಗದ ಪತ್ರಗಳ ನಕ್ಕಲೂ 1883ನೇ ಇಸವಿ ಜನವರೀ 11ನೇ ಮರ್ರ್ಕುಂವುಳ್ಳ (ಅರ್ಜಿದಾರರ ಲೆಟರಿನ ವಂದನೇ ಪ್ಯಾರಾದಲ್ಲಿ ನಮೂದಾದ) ಅಕವಿನಾಟೆಡ್ ಆಫೀಸರುಗಳು ಯಾವದಾದರೂ ಬ್ಯಾಂಕಿನ ಆಡಳಿತ ನಡಿಸುವ ಬೋರ್ಡಿನ ಮೆಂಬರಾಗಿರಕೂಡದೆಂದು ವಿಧಿಸುವ ನಮ್ಮ ಹುಕ್ಕುಮಿನ ನಕ್ಕಲೂ ಸುದಾ ಯಿದರೊಂದಿಗೆ ಕಳುಹಿಸುತ್ತೇವೆ.

2. ಶಿಂಲಾ ಸ್ಥಳದ ಸಹಾಯ ಸಂಘದವರ ಮಿಮೊರಾಂಡಂನಲ್ಲಿ ಉದಹರಿಸಲ್ಪಡುವದೇನಂದರೆ "ಸದರೀ ಕಂಪೆನಿಯು ಸ್ಥಾಪಿಸಲ್ಪಟ್ಟಿರುವ ಮುಖ್ಯ ಉದ್ದೇಶವೇನಂದರೆ ಸಾಧಾರಣವಾಗಿ ವ್ಯಾಪಾರಕೆಲಸಗಳು ನಡಿಸುವ ಬಗ್ಯೆ ಸದರೀ ಸಂಘದ ಹಿಸ್ಸೇದಾರರಿಗೂ ಟಿಕೆಟ್ ಪಡೆದಿರುವ ಜನಗಳಿಗೂ ವ ಇತರ ಖುಷ್‌ಬಾಷ್ ಜನಗಳಿಗೂ (ಇಯಿಂದ ಅಪೇಕ್ಷಿಸಲ್ಪಟ್ಟರೆ) ಸ್ವಂತ ಖರ್ಚಿನ ಬಗ್ಯೆ ಮತ್ತು ಸಾಧಾರಣವಾಗಿ ಉಪಯೋಗದ ಬಗ್ಯೆ ಪದಾರ್ಥಗಳನ್ನು ಸಾಧ್ಯವಾದಷ್ಟು ಅಗ್ಗವಾಗಿ ವದಗಿಸುವದೂ ಮತ್ತು ಮೇಲ್ಕಂಡ ಅವರ ಕೋರಿಕೆ ನೆರವೇರುವ ಬಗ್ಯೆ ಆವಶ್ಯಕಗಳಾದ ಯಾ ಅನುಕೂಲ್ಯಗಳಾದ ಅಂಥಾ ತಮಾಂ ಇತರ ಕೆಲಸಗಳನ್ನು ಚಲಾಯಿಸುವದೂ ಸುದಾ ಆಗಿರುವದಾಗಿ ತಿಳಿಯಬರುತ್ತೆ." ಇದಲ್ಲದೆ ಹಿಸ್ಸೇದಾರರುಗಳು ಮಾತ್ರವೇ ಸದರೀ ಸಂಘದ ಆದಾಯಗಳಿಗೆ ಭಾಗಸ್ಥರೆಂಬದಾಗಿಯೂ ಕಾಣಬರುತ್ತದೆ. "ಸಂಘದ ನಿಬಂಧನೆ" ರೀತ್ಯಾ ಹಿಸ್ಸೆಯು, ಡೈರೆಕ್ಟರುಗಳ ಅನುಮತಿ ವಿನಾ ಅನ್ಯಥಾ ಪರಭಾರೆ ಮಾಡಲ್ಪಡಕೂಡದು ಪರಂತು, ಒಬ್ಬ ಮೆಂಬರು ಫವತೀ ಆದ ತರುವಾಯ ಆತನ ಹಿಸ್ಸೆಗಳು ಆತನ ಯಗ್ಜಿಕ್ಯೂಟರ್ ಯಾ ಅಡ್ಮಿನಿಸ್ಟ್ರೇಟರುಯಾನೇ ವಾರಸುದಾರರುಗಳಿಗೆ ವರ್ಗ ಮಾಡಲ್ಪಡತಕ್ಕವು, ಮತ್ತು ಆತನು ದೀವಾಳಿಯಾದರೆ ಕಾನೂನ್ ಪ್ರಕಾರ ಅವುಗಳಿಗೆ ಹಕ್ಕುದಾರರಾದವರಿಗೂ ವರ್ಗಮಾಡಲ್ಪಡತಕ್ಕವು. ಡೈರೆಕ್ಟರುಗಳು, ಹಿಸ್ಸೇದಾರರು ವಟ್ಟಾಗಿ ಒಂದು ಜನರಲ್ ಮೀಟಿಂಗ್‌ನಲ್ಲಿ ರುಸುಂ ಹೊಂದಬಹುದೆಂದು ತೀರ್ಮಾನ ಮಾಡುವವರಿಗೂ ಮತ್ತು ಮಾಡಿದ ಹೊರ್ತು ಅನ್ಯಥಾ ಅಂಥಾ ಯಾವ ರುಸುಮನ್ನಾಗಲೀ ತೆಗೆದುಕೊಳ್ಳಕೂಡದು, ಮತ್ತು ಯಾವ ಸಂದರ್ಭದಲ್ಲಾದರೂ, ತಿಂಗಳು ಒಂದಕ್ಕೆ 20 ರೂಪಾಯಿಗಳಿಗಿಂತ ಜಾಸ್ತಿಯಾಗಿ ರುಸುಂ ತೆಗೆದುಕೊಳ್ಳಕೂಡದು. ಒಂದು ರಿಜರ್ವ್‌ಫಂಡು ಯಾನೆ ಅಮಾನತ್ ಫಂಡು ಉಂಟುಮಾಡಲ್ಪಡಬಹುದು, ಮತ್ತು ಸದರೀ ಅಮಾನತ್ತು ಫಂಡು ಸಂಘದ ಕ್ಯಾಪಿಟಲ್ ಯಾನೆ ಮೂಲಧನದ ನಾಲ್ಕರಲ್ಲಿ ವಂದು ಭಾಗದ ಪರಿಯಂತ ಜಮಾಯಿಸುವವರಿಗೂ, ವಸೂಲ್ ಬಂದ ಮೂಲಧನಕ್ಕೆ ಸಾಲಿಯಾನಾ ಶೇಕಡ ಆರಕ್ಕಿಂತ ಜಾಸ್ತಿಯಾಗಿ ನಫೇ ಕೊಡಲ್ಪಡಕೂಡದು.

3. "ಮಿಮೊರಾಂಡಂ" ಮತ್ತು "ಸಂಘದ ನಿಬಂಧನೆ" ಇವುಗಳನ್ನ ನೋಡುವದರಿಂದ ಮಾತ್ರವೇ ಸದರೀ ಸಂಘದ ನ್ಯಾಯವಾದ ತಾತ್ಪರ್ಯವು ಗೊತ್ತು ಮಾಡಲ್ಪಡಬಹುದು, ಯೇನಂದರೆ ಸದರೀ ಸಂಘವು ವಾಸ್ತವ್ಯವಾಗಿ ಖುಷ್‌ಬಾಷ್‌ಜನರಿಗಾಗಲೀ ಅಥವಾ ರಿಜಿಸ್ಟರಾದ ಹಿಸ್ಸೇದಾರರು ವಿನಾ ಇತರ ಯಾರಿಗೇ ಆಗಲೀ ವಿಕ್ರಯಿಸುವದಿಲ್ಲವೆಂಬದಾಗಿ ತಿಳಿಯಬಂದಿದ್ದಾಗ್ಯೂ, ಇದು ಸದ್ಯಹ ಕಾನೂನ್ ಪ್ರಕಾರ ಒಂದು ವ್ಯಾಪಾರ ಸಂಘವೆಂದು ತಿಳಿಯತಕ್ಕದ್ದಾಗಿ ಇದೆ.

4. ಇದೇ ಪ್ರಕಾರವಾದ ಸಂಘಗಳು ಅನ್ಯತ್ರ ರೈಲ್ವೇ ನವುಕರರಲ್ಲಿಯೂ ಮತ್ತು ಇತರರಲ್ಲಿಯೂ ಏರ್ಪಡಿಸಲ್ಪಟ್ಟಿವೆಯೆಂದು ನಂಬುವದಕ್ಕೆ ಸಾಕಾದ ಕಾರಣಗಳು ಉಂಟು; ಮತ್ತು ಅವುಗಳ ವಹಿವಾಟ್ಟುಗಳು, ವೊಬ್ಬರೊಬ್ಬರಿಗೆ ಸರಬರಾಯಿ ಮಾಡುವ ಮಟ್ಟಿಗೆ ನಡಸುತ್ತಿರುವ ಪರಿಯಂತ ಅಂಥಾವುಗಳ ಪ್ರತಿಬಂಧಕ್ಕಾಗಿ ಯಾವ ಕೆಲಸ ಚಲಾಯಿಸುವದಕ್ಕೂ ನಮಗೆ ತಾತ್ಪರ್ಯವಿಲ್ಲ. ಸಿಂಲಾದಲ್ಲಿರತಕ್ಕ ಸಂಘವು, ಅದರ ವಹಿವಾಟ್ಟುಗಳನ್ನು ವೊಬ್ಬರಿಗೊಬ್ಬರಿಗೆ ಸಹಾಯ ಮಾಡತಕ್ಕ ಸಂಘದ ವಹಿವಾಟ್ಟಿನಂತೆಯೇ ಅಂದರೆ ಪದಾರ್ಥಗಳನ್ನು ಅನ್ಯರಿಗೆ ವಿಕ್ರಯಿಸದೇನು ಮತ್ತು ನಫೆಯನ್ನ ಯಾವಾಗಲೇ ಆಗಲೀ ಒಂದು ಗೊತ್ತಾದ ವ ನ್ಯಾಯವಾದ ದರಕ್ಕಿಂತ ಜಾಸ್ತಿಯಾಗಿ ಹಿಸ್ಸೇದಾರರುಗಳು ಪಾವತೀ ಮಾಡೋಣಾದ ಮೂಲ ಧನದ ಮೇಲೆ ಹಂಚದೇನೂ ಇರುವ ಬಗ್ಯೆ ಕ್ರಮವಾಗಿ ಬದ್ಧರಾಗಿ ಅಪ್ರಕಾರ ಏರ್ಪಾಟುಗಳನ್ನು ಬದಲಾಯಿಸಿದ ಸಂದರ್ಭದಲ್ಲಿ ಗವರ್ನಮೆಂಟ್ ಆಫೀಸರ್‌ಗಳು ಸದರೀ ಸಂಘದ ಆಡಳಿತಗಳಲ್ಲಿ ಪ್ರವೇಶಿಸುವದಕ್ಕೆ ಆಕ್ಷೇಪಣೆ ಯೇನೂ ಇಲ್ಲವೆಂಬದಾಗಿ ಸೂಚಿಸಲ್ಪಟ್ಟಿದೆ.* ಈ ಇರಾದೆಯನ್ನ ನಾವೂ ಅಂಗೀಕರಿಸುತ್ತೇವೆ. ಪರಂತು, 1862ನೇ ಇಸವಿ ಮೇ 31ನೇ ಮರ್ರ್ಕುಂ 46ನೇ ನಂಬರ್ ವುಳ್ಳ ಸರ್ ಸಿ. ಉಡ್ ಯವರ ಡೆಸ್‌ಪಾಚಿನಲ್ಲಿ ಕಂಡ ನಿರೋಧಗಳೂ ವ್ಯಾಪಾರ ಸಂಘಗಳೊಂದಿಗೆ ಗವರ್ನಮೆಂಟ್ ಆಫಿಸರುಗಳ ಸಂಬಂಧದ ವಿಷಯದಲ್ಲಿ ಜಾರಿ ಇರುವ ಇತರ ಒಟ್ಟು ಹುಕುಂಗಳೂ ಸುದಾ ಯಾವ ಸಂದರ್ಭದಲ್ಲಾದರೂ ಈ ವಿಧವಾದ ಸಂಘಗಳಿಗೆ ಲಗಾವ್ ಮಾಡಲ್ಪಡುವ ಬಗ್ಯೆ ಉದ್ದೇಶಿಸಲ್ಪಟ್ಟಿರುತ್ತದೆಯೋ ಹೊರ್ತು ಗವರ್ನಮೆಂಟ್ ಆಫೀಸರುಗಳು, ದೇಶದ ಆಮದಾನನ್ನು ವೃದ್ಧಿಪಡಿಸುವದಕ್ಕೋಸ್ಕರ ಉದ್ದೇಶಿಸಲ್ಪಟ್ಟು ಮತ್ತು ಕೇವಲ ಫಾಯಿದೆ ಸಂಪಾದಿಸುವ ತಾತ್ಪರ್ಯವುಳ್ಳ ಸಂಘಗಳಲ್ಲಿ ಸಂಬಂಧ ಉಂಟಾಗಿರಕೂಡದೆಂದು ಅಭಿಪ್ರಾಯವಾಗುವದಿಲ್ಲವೆಂಬದಾಗಿ ಅನುಮಾನ ಉಂಟಾಗಿರುತ್ತೆ; ಆದ ಪ್ರಯುಕ್ತ ಈ ಸಂಗತಿಯಲ್ಲಿ ಕಂಶೋಕ್ತವಾದ ತಮ್ಮ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳುವದು ಅವಶ್ಯಕವಾಗಿ ನಮಗೆ ಕಾಣಬರುತ್ತೆ.

* ಡೈರೆಕ್ಟರುಗಳಿಂದ ಕೊಡಲ್ಪಟ್ಟ ನೋಟೀಸಿನಿಂದ (ಕಾಪಿ ಲಗತ್ ಮಾಡಿರುತ್ತೆ) ಸೂಚಿಸಲ್ಪಟ್ಟ ಬದಲಾವಣೆಯು ಪ್ರಾಯಃ ನಡಿಸಲ್ಪಡಬಹುದಾಗಿ ನಾವು ಊಹಿಸುತ್ತೇವೆ.

5. ವ್ಯಾಪಾರಕ್ಕೋಸ್ಕರ ಮತ್ತು ವ್ಯಾಪಾರದ ದೆಸೆಯಿಂದ ಫಾಯಿದೆ ಪಡೆಯತಕ್ಕ ಐಕ್ಯ ಸ್ಥಾಪಿಸಲ್ಪಟ್ಟ ಯಾವದಾದರೂ ತರಹೆಯ ಕಂಪೆನಿ ಯಾನೆ ಸಂಘದ ಆಡಳಿತದಲ್ಲಿ ಸರ್ಕಾರ್ ಉದ್ಯೋಗಸ್ಥರು ಸಂಬಂಧ ಉಂಟಾಗಿರುವದನ್ನು ಅಡ್ಡಿಪಡಿಸುವದಕ್ಕೋಸ್ಕರ ಸಾಕಾದ ಕಾರಣಗಳು ಉಂಟೆಂದು ನಮಗೆ ಕಾಣಬರುತ್ತದೆ, ಯಾವವೆಂದರೆ, ಮಸಲಾ ಬ್ಯಾಂಕುಗಳು, ಇವುಗಳ ವಿಷಯದಲ್ಲಿ ಈ ಡೆಸ್ಪ್ಯಾಚಿನ 2ನೇ ಕಲಂನಲ್ಲಿ ಕಂಡ ನಿಬಂಧನೆಯು ನಮ್ಮಿಂದ ಈಚೆಗೆ ಜಾರೀಮಾಡಲ್ಪಟ್ಟಿರುತ್ತೆ; ಆದರೆ ಮೊದಲೇ ತಿಳಿಸಿದ ಪ್ರಕಾರ ಸಹಾಯ ಸಂಘವಾಗಿದ್ದು ಬದಸ್ತೂರು ವಾಸ್ತವ್ಯವಾಗಿಯೂ ವಹಿವಾಟ್ಟು ನಡಿಸತಕ್ಕಂಥಾ ಮತ್ತು ಫಾಯಿದೆಗೋಸ್ಕರವಲ್ಲದೆ ಒಬ್ಬರಿಗೊಬ್ಬರಿಗೆ ಸಹಾಯ ಮಾಡುವದಕ್ಕೆ ಮಾತ್ರ ಸ್ಥಾಪಿಸಲ್ಪಟ್ಟಿರುವಂಥಾ ಸಹಾಯ ಸಂಘಗಳ ವಿಷಯದಲ್ಲಿ ನಾವು ಪ್ರವೇಶಿಸುವದಿಲ್ಲ.

6. ಈ ಸಂದರ್ಭದಲ್ಲಿ ಮತ್ತೊಂದು ವಿಷಯು ಚರ್ಚಿಸಲ್ಪಡುವದೇನಂದರೆ, ಆಲೋಚನೆಯಲ್ಲಿರುವ ಒಟ್ಟು ಹುಕುಂಗಳು ಕವಿನೆಂಟೆಡ್ ವ ಅನ್‌ಕವಿನೆಂಟೆಡ್ ತರಗತಿಗೆ ಸೇರಿದ ಗೆಜೆಟೆಡ್ ಆಫೀಸರುಗಳಿಗೆ ಮಾತ್ರ ಲಗಾವಾಗುತ್ತದೆಯೋ ಅಥವಾ ಸರ್ಕಾರದ ನವಕರಿಯಲ್ಲಿ ಇರತಕ್ಕ ಕ್ಲರ್ಕ್ ವ ಇತರ ಮುಖ್ಯ ಉದ್ಯೋಗಸ್ಥರಿಗೂ ಲಗಾವಾಗುತ್ತವೆಯೋ ಯೆಂಬುವದು. ನಾವು ತಿಳಿಯುವದೇನಂದರೆ, ಸದರೀ ಹುಕುಂಗಳ ಅಭಿಪ್ರಾಯವನ್ನು ಕುರಿತು ಸಂಗತಿಗಳನ್ನು ಆಲೋಚಿಸಿದರೆ ಅವುಗಳ ಅಮಲ್ದಾರಿಯು ಗೆಜೆಟೆಡ್ ಆಫೀಸರುಗಳಿಗೆ ಮಾತ್ರ ಲಗಾವ್ ಮಾಡಲ್ಪಡಬಹುದೆಂತಲೂ ಮತ್ತು ತಾಬೇದಾರಿ ವ ಮುಖ್ಯ ಉದ್ಯೋಗಸ್ಥರ ವಿಷಯದಲ್ಲಿ ಅವರುಗಳು ಯಾವ ಬಗ್ಯಾಗಿ ಸಂಬಳ ಪಡೆಯುತ್ತಾರೋ ಅಂಥಾ ಪೂರ್ತಿ ಯಾವ ಕಾಲವನ್ನು ಸರ್ಕಾರ ಕೆಲಸಕ್ಕೆ ಉಪಯೋಗಿಸುತ್ತಾರೆಂದು ನಿಗೇ ಇಡುವದು ಸಾಕಾಗಿರುತ್ತೆ. ಅಂಥಾವರುಗಳು ಆಫೀಸ್ ಹೊತ್ತು ವಿನಾ ಇತರ ಕಾಲದಲ್ಲಿ ಯೇನು ಕೆಲಸ ನಡಿಸುತ್ತಾರೆಂಬ ವಿಷಯ ಗವರ್ನಮೆಂಟಿನವರು ಸಾಧಾರಣವಾಗಿ ತಾವಾಗಿಯೇ ವಿಚಾರಿಸಬೇಕಾದ್ದೇನೂ ಅವಶ್ಯಕವಿಲ್ಲ, ಪರಂತು, ಅಂಥಾ ಕೆಲಸದಿಂದ ಸದರೀ ನವುಕರರು ದಾರಿದ್ರ್ಯಾವಸ್ಥೆಗೆ ಬಾರದೆಯೂ ಯಾ ಬದ್‌ಚಾಲ್ ಜನಗಳ ಸಹವಾಸ ಮಾಡದೆಯೂ ಇದ್ದರೆ ಸಾಕಾಗಿರುತ್ತೆ; ಆದರೆ ಗವರ್ನಮೆಂಟಿನವರು, ಯಾವದಾದರೊಂದು ಗೊತ್ತಾದ ಸಂದರ್ಭದಲ್ಲಿ ತಕ್ಕ ಕಾರಣಗಳ ಮೇಲೆ ಅಂಥಾ ಸಂಬಂಧವನ್ನು ಅಡ್ಡೀ ಮಾಡುವದಕ್ಕೆ ಯಾವಾಗ್ಯೂ ಸ್ವತಂತ್ರರಾಗಿರತಕ್ಕದ್ದು.

ಇಂಡಿಯ ದೇಶದ ಮಹಾರಾಜ್ಞೀಯವರ ಸ್ಟೇಟ್ ಸೆಕ್ರೆಟೇರಿಯಿಂದ, ಇಂಡ್ಯ ಗವರ್ನಮೆಂಟಿನವರಿಗೆ, ಇಂಡಿಯಾ ಆಫೀಸ್ ಮೊಕ್ಕಾಂ ಲಂಡನ್, ಮುಕ್ಕಾಂ 1883ನೇ ಇಸವಿ ಜುಲೈ 19ನೇ ಮುಕ್ಕಾಂ ನಂಬರು 73. (ಪಬ್ಲಿಕ್)

ಶಿಂಲಾದಲ್ಲಿ ವಹಿವಾಟ್ಟು ನಡಿಸುತ್ತಲಿರುವ ಕೆಲವು ವ್ಯಾಪಾರಸ್ಥರು, ಕೆಲವು ಕವಿನೆಂಟೆಡ್ ವ ಅನ್‌ಕವಿನೆಂಟೆಡ್ ದರ್ಜೆಯ ಸರಕಾರ್ನವಕರರು ಸಹಾಯ ಸಂಘಗಳ ಆಡಳಿತ ಮತ್ತು ಕಾರ್‌ಬಾರೀ ಕೆಲಸಗಳಲ್ಲಿ ಪ್ರವೇಶಿಸುವದಾಗಿಯೂ ಮತ್ತು ಅಂಥಾವರುಗಳು ಸದರೀ ಸಂಘದ ಸಂಬಂಧದಿಂದ ನಿವೃತ್ತರಾಗುವಂತೆ ಹುಕ್ಕುಂ ಆಗಬೇಕೆಂದು ಪ್ರಾರ್ಥಿಸಿ ತಮಗೆ ಬರೆದುಕೊಂಡ ಲೆಟ್ಟರಿನ ಕಾಪಿ ಸಹಿತ ತಾವು ಬರೆದ ಕಳೆದ ಏಪ್ರೈಲ್ 24ನೇ ಮುಕ್ಕಾಂ 25ನೇ ನಂಬರ್ ಲೆಟ್ಟರು ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು ಸುದಾ ತಲಪಿದ್ದನ್ನು ಕುರಿತು ನಾನು ಸಮಾಜದಲ್ಲಿ ಆಲೋಚಿಸಿರುತ್ತೇನೆ.

2. ನಿರ್ಬಂಧ ಪ್ರಕಾರ ಸದರೀ ಸಂಘವು, ಶಬ್ದದ ವಾಡಿಕೆಯಾದ ಅರ್ಥರೀತ್ಯಾ ಒಂದು ವ್ಯಾಪಾರದ ಸಂಘವೆಂದು ಭಾವಿಸಲ್ಪಡತಕ್ಕದ್ದೆಂತ ತಾವು ಯೋಚಿಸುವಣವಾಗಿಧೆ. ಈ ಅಭಿಪ್ರಾಯವನ್ನು ನಾನು ಅನುಮೋದಿಸುತ್ತೇನಲ್ಲದೆ ಸರ್ಕಾರ್ ನವುಕರರು ಜಾರೀಲಿರುವ ಹುಕ್ಕುಂಗಳನುಸರಿಸಿ ಅಂಥಾ ಒಂದು ಸಂಘದ ಆಡಳಿತದಲ್ಲಿ ಪ್ರವೇಶಿಸುವದಕ್ಕೆ ಅಡ್ಡೀಪಡಿಸಲ್ಪಟ್ಟಿರುತ್ತಾರೆಂಬದಾಗಿಯೂ ಸುದಾ ಭಾವಿಸುತ್ತೇನೆ.

3. ಸದರೀ ಸಂಘವು ಅದರ ನಿರ್ಬಂಧನ್ನು ಬದಲಾಯಿಸಿ ಅದರ ವಹಿವಾಟ್‌ಗಳನ್ನು ಒಬ್ಬರಿಗೊಬ್ಬರ ಸಹಾಯಾರ್ಥವಾದ ಸಂಘದೋಪಾದಿಯಲ್ಲಿ ಹದ್ದು ಪಡಿಸಿ, ಸದರೀ ಸಂಘದ ಮೆಂಬರುಗಳು ವಿನಾ ಅನ್ಯಥಾ ಯಾರಿಗೂ ಸಾಮಾನು ವಿಕ್ರಯಿಸುವದಿಲ್ಲವೆಂಬದಾಗಿಯೂ ಯಾವ ಕಾಲದಲ್ಲಾಗಲೀ ಹಿಸ್ಸೇದಾರರಿಗೆ ಅವರು ಕೊಟ್ಟ ಮೂಲಧನದ ಮೇಲೆ ಗೊತ್ತಾದ ಮತ್ತು ನ್ಯಾಯವಾದ ದರಕ್ಕಿಂತ ಜಾಸ್ತಿಯಾದ ಬಡ್ಡಿಯು ಹಂಚಲ್ಪಡುವದಿಲ್ಲವೆಂಬದಾಗಿಯೂ ಕ್ರಮಪ್ರಕಾರ ಬದ್ಧರಾಗುವ ಸಂದರ್ಭದಲ್ಲಿ ಅಂಥಾ ಸಂಘದ ಆಡಳಿತದಲ್ಲಿ ಗವರ್ನಮೆಂಟ್ ಆಫೀಸರರುಗಳು ಪ್ರವೇಶಿಸುವದನ್ನು ಅಡ್ಡೀಪಡಿಸುವದು ತಮ್ಮ ಅಭಿಪ್ರಾಯವಲ್ಲವೆಂತಲೂ ಉದಾಹರಿಸೋಣಾಗಿಧೆ. ಹೀಗಿದ್ದಾಗ್ಯೂ, 1862ನೇ ಇಸವಿ ಮೇ 31ನೇ ಮುಕ್ಕಾಂವುಳ್ಳ ಛಾರಲ್ಸ್ ಉಡ್‌ಯವರ ಡೆಸ್ಪಾಚಿನ ತಾತ್ಪರ್ಯಗಳು ವ ತ್ತು ಅದೇ ವಿಷಯಿಕವಾದ ಇತರ ಒಟ್ಟು ಹುಕ್ಕುಂಗಳು ಸುದಾ ಈ ತರಹೆಯ ಸಂಘದ ಸಂಬಂಧಕ್ಕೆ ಅನ್ವಯಿಸುತ್ತವೋ ಯೆಂಬದಾಗಿ ತಾವು ಅನುಮಾನಪಟ್ಟು ಈ ವಿಷಯದಲ್ಲಿ ನನ್ನ ಕಂಪ್ಲೋಕ್ವಾದ ಅಭಿಪ್ರಾಯವನ್ನು ಕೇಳೋಣವಾಗಿಯಿಧೆ.

4. ನಮೂದುಮಾಡಲ್ಪಟ್ಟ ಹುಕುಂಗಳು, ದೇಶದ ಆಮದಾನನ್ನು ವೃದ್ಧಿಪಡಿಸುವದಕ್ಕೋಸ್ಕರ ಉಂಟು ಮಾಡಲ್ಪಟ್ಟಂಥಾ ಕಂಪೆನಿಗಳಲ್ಲಿ ಮಾತ್ರವೇ ಗವರ್ನಮೆಂಟ್ ಆಫೀಸರುಗಳು ಕಾರ್‌ಬಾರೀ ಕೆಲಸಗಳಲ್ಲಿ ಭಾಗಸ್ಥರಾಗುವದಕ್ಕೆ ಅನ್ವಯಿಸತಕ್ಕದ್ದೆಂದು ಉದ್ದೇಶಿಸಲ್ಪಡಲಿಲ್ಲ, ಮತ್ತು ಅಂಥಾ ಆಫೀಸರುಗಳು ಬ್ಯಾಂಕುಗಳ ಆಡಳಿತಗಳಲ್ಲಿ ಪ್ರವೇಶಿಸಕೂಡದೆಂದು ತಾವು ಈಚೆಗೆ ವಿಧಿಸಿರುವದು ಬಹಳ ಯುಕ್ತವಾಗಿ ಇಧೆ, ಪರಂತು, ಒಬ್ಬರಿಗೊಬ್ಬರಿಗೆ ಸಹಾಯಮಾಡತಕ್ಕಂಥಾ ಒಂದು ಸಂಘದ ಆಡಳಿತದಲ್ಲಿ ಸರ್ಕಾರ್ ನವುಕರರಿಗೆ ಪ್ರವೇಶಿಸು

ವದಕ್ಕೆ ಅವಕಾಶ ಕೊಡುವದು ನ್ಯಾಯವಾದದ್ದೇ ಯೆಂಬ ಅಂಶವು ಬೇರೆ ವಿಷಯವಾಗಿರುತ್ತೆ, ಯೇನಂದರೆ ಸದರೀ ಆಫೀಸರರು ಸರ್ಕಾರ್ ಉದ್ಯೋಗವನ್ನು ಕ್ರಮವಾಗಿ ನಿರ್ವಹಿಸುತ್ತಾ ಎರಡನೇ ಉದ್ಯೋಗವನ್ನು ಅವಲಂಬಿಸುವದು ಸಮ್ಮತವಾದದ್ದೇ ಎಂಬುವದು. ನನಿಗೆ ಕಾಣಬರುವದೇನಂದರೆ ಸದರೀ ಹುಕುಂಗಳು, ವಾಸ್ತವ್ಯವಾಗಿ ಪೊಬ್ಬರಿಗೊಬ್ಬರು ಸಹಾಯ ಮಾಡತಕ್ಕಂಥಾ ಮತ್ತು ವ್ಯಾಪಾರಕ್ಕೋಸ್ಕರವ ವ್ಯಾಪಾರ ದೆಶೆಯಿಂದ ಘಾಯಿದೆ ಪಡಿಯುವದಕ್ಕೋಸ್ಕರ ಅಲ್ಲದಂಥಾ ಸಂಘಗಳಿಗೆ ಅನ್ವಯಿಸಲ್ಪಡತಕ್ಕದ್ದೆಂದು ಉದ್ದೇಶಿಸಲ್ಪಡಲಿಲ್ಲ, ಮತ್ತು ಹಾಗೆ ಅನ್ವಯಿಸಲ್ಪಡಲೂ ಕೂಡದು. ಸರ್ಕಾರ್ ನವುಕರರು ಈವಿಧವಾಗಿ ಹದ್ದುಪಡಿಸಲ್ಪಟ್ಟತರಹೇಯ ಸಂಘದಲ್ಲಿ ಪ್ರವೇಶಿಸುವದನ್ನ ಖಂಡಿತವಾಗಿ ನಿರೋಧಿಸುವದು ಅನಾವಶ್ಯಕವಾಗಿದ್ದಾಗ್ಯೂ, ಹಾಂಗೆ ಮತ್ತೊಂದು ಉದ್ಯೋಗವನ್ನ ಅವಲಂಬಿಸುವದು ಅನೇಕ ಸಂದರ್ಭಗಳಲ್ಲಿ ಸರ್ಕಾರ್ ಕೆಲಸಕ್ಕೆ ಕುಂದಕವಾಗಬಹುದೆಂಬ ವಿಷಯ ಜ್ಞಾಪಕದಲ್ಲಿ ಇಡತಕ್ಕದ್ದಾಗಿ ಇಧೆ; ಯಾತಕ್ಕಂದರೆ, ವಾಡಿಕೆಯಾಗಿ ಒಬ್ಬ ಮನುಷ್ಯನು ಇಬ್ಬರ ತಾಬೇದಾರೀ ಮಾಡುವದು ಅಸಾಧ್ಯವಾಗಿರುತ್ತೆ, ಮತ್ತು ಸರಕಾರದ ಕೆಲಸಗಳಿಗೆ ಕುಂದಕವಿಲ್ಲವೆಂಬ ವಿಷಯ ನಿಗೇ ಇಡತಕ್ಕದ್ದಾಗಿ ಇಧೆ.

5. ವ್ಯಾಪಾರ ಸಂಘಗಳೊಂದಿಗೆ ಗವರ್ರ್ನಮೆಂಟ್ ಆಫೀಸರರುಗಳ ಸಂಬಂಧದ ವಿಷೆಯದಲ್ಲಿ ಜಾರೀ ಯಿರತಕ್ಕ ಒಟ್ಟು ಹುಕ್ಕುಂಗಳು, ಗವರ್ರ್ನಮೆಂಟಿನ ಕವಿನಾಂಟೆಡ್ ವ ಅನ್‌ಕವಿನಾಂಟೆಡ್ ಉದ್ಯೋಗದ ಗೆಜೆಟೆಡ್ ಆಫಿಸರರುಗಳಿಗೆ ಲಗಾವಾಗುತ್ತೆಂಬದಾಗಿಯೂ, ಸರ್ಕಾರ್ ನವುಕರಿಯಲ್ಲಿ ಯಿರತಕ್ಕ ಕ್ಲರ್ಕ್ ವ ಇತರ ಮೊಖ್ತೇಸರೀ ಉದ್ಯೋಗಸ್ಥರ ವಿಷಯದಲ್ಲಿ ಲಗಾವಾಗುವದಿಲ್ಲವೆಂಬದಾಗಿಯೂ ಸಮಾಜದಲ್ಲಿ ತಾವು ಅಭಿಪ್ರಾಯ ಪಡುವದನ್ನು ನಾನು ಅನುಮೋದಿಸುತ್ತೇನೆ. ಈ ತರಗತೀ ಉದ್ಯೋಗಸ್ಥರ ವಿಷಯದಲ್ಲಿ ಇಲಾಖಾ ಮೊಖ್ತೇಸರರ ಮೇಲ್ ತನಿಖೆಯು ಸಾಕಾಗಿರುತ್ತೆ; ಮತ್ತು ಯಿದಲ್ಲದೆ ಗವರ್ರ್ನಮೆಂಟಿನವರು, ಯಾವ ಕಾಲದಲ್ಲಾಗಲಿ ಅವರ ತಾಬೆಯಲ್ಲಿರತಕ್ಕ ನವುಕರರು ಪ್ರವೇಶಿಸಕೂಡದೆಂದು ತಾವು ಅಭಿಪ್ರಾಯ ಪಡುವ ಯಾವ ಇತರ ಉದ್ಯೋಗವನ್ನಾದರೂ ಅವಲಂಬಿಸಕೂಡದೆಂದು ನಿರೋಧಪಡಿಸಬಹುದು.

ತಾರೀಖು 17ನೇ ಜೂನ್ 1887.

ನಂ. 38.—ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ದೇಶದ ಶ್ರೀಮನ್ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ, ಮದರಾಸ್ ಪ್ರೆಸಿಡೆನ್ಸಿಯಲ್ಲಿರತಕ್ಕ ಭೂಸ್ಥಿತಿಗಳನ್ನು ಪರಭಾರೆ ಮಾಡುವ ಜನರು, ಯಾವ ರೂಲ್‌ಸ್ ಪ್ರಕಾರ ಅಂಥಾ ಭೂಸ್ತಿತಿಗಳಿಗೆ ಸಂಬಂಧಪಟ್ಟ ದಸ್ತಾವೇಜುಗಳನ್ನ ರಿಜಿಸ್ಟ್ರೇಷನ್ ಆಕ್ಟು ಅನುಸರಿಸಿ ರಿಜಿಸ್ಟ್ರು ಮಾಡುವ ಆಫೀಸರರ ಮುಖಾಂತ್ರ ಅಂಥಾ ಪರಭಾರೆಯ ರೆವಿನ್ಯೂ ರಿಜಿಸ್ಟ್ರಿಯನ್ನು ನಡಿಸಬಹುದೊ ಅಂಥಾ ರೂಲ್‌ಸ್‌ಯಾನೆ ನಿಬಂಧನೆಗಳು, ಮೈಸೂರು ದೇಶದಲ್ಲಿ 1887ನೇ ಇಸವಿ ಜೂನ್ 15ನೇ ಮುಕ್ಕಾಂ ಮತ್ತು ಆತರ್ವಾಯದಲ್ಲಿ ಜಾರೀಲಿ ಬರತಕ್ಕದ್ದು.

2. ಸದರೀ ನಿಬಂಧನೆಯು, ಸ್ಥಳ ಸಂದರ್ಭಗಳನುಸರಿಸಿ ಅವಶ್ಯಕಗಳಾದ ಬದಲಾವಣೆಗಳೊಡನೆ ಇದರಡೀ ಕಂಡ ಪ್ರಕಾರ ಯಿರತಕ್ಕವು:—

(1) ರಿಜಿಸ್ಟ್ರೇಷನ್ ಆಫೀಸಿನಲ್ಲಿ ರಿಜಿಸ್ಟ್ರು ಬಗ್ಯೆ ಹಾಜರಾಗುವಂಥಾ ಕ್ರಯಪತ್ರದ ಮೂಲಕವಾದರೂ ಯಾ ಮತ್ಯಾವ ತರಹೆಯ ದಸ್ತಾವೇಜಿನ ದೆಶೆಯಿಂದಲಾದರೂ ಭೂಸ್ಥಿತಿಯು ಶುದ್ಧವಾಗಿ ಪರಭಾರೆ ಯಾ ಅದರ ಸ್ವಾಧೀನ ವರ್ಗ ಮಾಡಲ್ಪಡುವ ಪ್ರತಿ ಸಂದರ್ಭದಲ್ಲೂ ಅಂಥಾ ದಸ್ತಾವೇಜನ್ನ ರಿಜಿಸ್ಟ್ರು ಮಾಡುವದಕ್ಕೆ ಮುಂಚಿತವಾಗಿ ರೆಜಿಸ್ಟ್ರಾರ್ ಯಾ ಸಬ್ ರೆಜಿಸ್ಟ್ರಾರ್ರು ಸದರೀ ದಸ್ತಾವೇಜಿಗೆ ಸಂಬಂಧಪಟ್ಟ ಜನರನ್ನು ಹಾಂಗೆ ಪರಭಾರೆ ಯಾ ವರ್ಗಮಾಡಲ್ಪಟ್ಟ ಜಮೀನಿನ ರೆವಿನ್ಯು ರಿಜಿಸ್ಟ್ರಿಯನ್ನು ವರ್ಗಾಯಿಸುವದಕ್ಕೆ ಸಮ್ಮತಿ ಉಂಟೆ ಯಂಬದಾಗಿ ವಿಚಾರಿಸತಕ್ಕದ್ದು; ಅವರು ಸಂಮತಿ ಪಟ್ಟರೆ, ರಿಜಿಸ್ಟ್ರಿಂಗ್ ಆಫೀಸರರು ದಸ್ತಾವೇಜನ್ನು ರಿಜಿಸ್ಟ್ರು ಮಾಡಿದ ತರುವಾಯ ಅವರಿಂದ ತಮ್ಮ ರೂಬರು ಇದರಡೀ ಕಂಡ ನಮೂನೆಯಲ್ಲಿ ರೆವಿನ್ಯೂ ಇಲಾಖೆಗೆ ವಂದು ಅರ್ಜಿಯನ್ನು ಬರೆಯಿಸಿ ಅದನ್ನ ಸದರೀ ಭೂಮಿ ಯಿರತಕ್ಕಂಥಾ ತಾಲ್ಲೂಕು ಅಮಲ್ದಾರರಿಗೆ ಕಳುಹಿಸತಕ್ಕದ್ದು. ಅಮಲ್ದಾರರು ಸದರೀ ಅರ್ಜಿಯನ್ನ ಅದು ತಮ್ಮ ರೂಬರು ಕಕ್ಷಿಗಾರರಿಂದ ಹಾಜರ್ಮಾಡಲ್ಪಟ್ಟಿದ್ದರೆ ಹ್ಯಾಗೋ ಹಾಗೆ ಕಕ್ಷಿಗಾರರು ಸಮ್ಮತಿಪಟ್ಟಿರುವಂತೆ ಅಂಗೀಕರಿಸಿ, ನಮೂದು ಮಾಡಲ್ಪಟ್ಟ ಹಿಡುವಳಿಯ ತಪಸೀಲು ಕರಾರ್‌ವಾಕಾ ಯಿರುವಷ್ಟರ ಮಟ್ಟಿಗೆ ಕೂಡ್ಲೆ ಜಾರೀ ಮಾಡತಕ್ಕದ್ದು.

ಅರ್ಜೀ ನಮೂನೆ.

"　　　　ದಲ್ಲಿ ವಾಸವಾಗಿರುವ　　　　ಯಂಬುವನ ಮಗನಾದ ಯೆ. ಬಿ. ಯಂಬ ನಾನು ಇದರಡೀ ಕಂಡ ತಖ್ತೇಯಲ್ಲಿ ನಮೂದಾಗುವ ಮತ್ತು ನನ್ನ ಹೆಸರಿನಲ್ಲಿ ರಿಜಿಸ್ಟ್ರು ಮಾಡಲ್ಪಟ್ಟಿರುವ ಜಮೀನಿನ ರೆವಿನ್ಯು ರಿಜಿಸ್ಟ್ರಿಯನ್ನು　　　　ಸ್ಥಳದಲ್ಲಿ ವಾಸಮಾಡುವ　　　　ನ ಮಗನಾದ ಸಿ. ಡಿ. ಯಂಬುವನ ಹೆಸರಿಗೆ ವರ್ಗ ಮಾಡಬಹುದೆಂಬದಾಗಿ ಪ್ರಾರ್ಥಿಸುತ್ತೇನೆ.

ರುಜು. ಯೆ. ಬಿ.

" ಮೇಲಿಕಂಡ ಸಿ. ಡಿ. ಯಂಬ ನಾನು, ಸದರೀ ತಖ್ತೇಯಲ್ಲಿ ಕಂಡ ಜಮೀನುಗಳ ರೆವಿನ್ಯು ರಿಜಿಸ್ಟ್ರಿಯು ನನ್ನ ಹೆಸರಿಗೆ ವರ್ಗ ಮಾಡಲ್ಪಡುವ ಬಗ್ಯೆ ಒಪ್ಪಿ ಯಿರುತ್ತೇನೆ.

ರುಜು ಸಿ. ಡಿ.

ತಖ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಸರ್ವೆ ನಂಬರ್.	ಪೋ ನಂಬರ್.	ವಿಸ್ತೀರ್ಣ ಯಕರೆ ಗುಂಟೆ.	ಬೀಜವರಿ.	ಕಂದಾಯ.
1	2	3	4	5	6	7	8

ನನ್ನ ರೂಬರೂ ಬರೆಯಲ್ಪಟ್ಟಿತು.
ರುಜು.

ರೆಜಿಸ್ಟ್ರಾರ್ ಅಥವಾ ಸಬ್ ರೆಜಿಸ್ಟ್ರಾರ
(ಸಂದರ್ಭಾನುಸಾರ.)

ಮೊಕ್ಕಾಂ }
ತಾರೀಖು. }

(2) ಸರ್ವೇ ನಂಬರು ಯಿಲ್ಲದಂಥಾ ಜಮೀನುಗಳ ವಿಷಯದಲ್ಲಿಯೂ ಹಾಂಗೂ ಇನಾಂ ಗ್ರಾಮಗಳು ಮುಂತಾದ ವಿಷಯದಲ್ಲಿಯೂ ಜಮೀನು ರಿಜಿಸ್ಟ್ರು ಮಾಡಲ್ಪಟ್ಟ ದಸ್ತಾವೇಜಿನ ಪ್ರಕಾರ ಚಕ್ಕು ಬಂದಿ ಮೂಲಕ ವಿವರಿಸಲ್ಪಡತಕ್ಕದ್ದು; ಮತ್ತು ತಖ್ತೇಯಲ್ಲಿ ಕಂಡ ತಮಾಂ ತಪಶೀಲ್‌ಗಳನ್ನೂ ಒದಗಿಸುವದಕ್ಕೆ ಕಕ್ಷಿಗಾರರು ಅಸಮರ್ಥರಾಗಿರುವ ಸಬಬಿನ ಮೇಲೆ ಸದರೀ ಅರ್ಜಿಯನ್ನು ಬರಸದೆ ಯಿರಕೂಡದು, ಪರಂತು ಜಮೀನುಗಳು ಫಲಾನೇವೆಂದು ಗೊತ್ತು ಮಾಡಲ್ಪಡುವ ಬಗ್ಯೆ ಸಾಕಾದ ಸಂಗತಿಗಳು ನಮೂದ್ ಮಾಡಿದರೆ ಸಾಕಾಗಿರುತ್ತೆ.

(3) ದಾಖಲೆ ಬಗ್ಯಾಗಿ, ರಿಜಿಸ್ಟ್ರಿಂಗ್ ಆಫೀಸರರು, ಪ್ರತಿ ಅರ್ಜಿಯ ಮೇಲೂ ಅದರಲ್ಲಿ ನಮೂದ್ ಮಾಡೋಣಾದ ದಸ್ತಾವೇಜು ರಿಜಿಸ್ಟ್ರು ಮಾಡಲ್ಪಟ್ಟ ರಿಜಿಸ್ಟರ್ ಬುಕ್ಕಿನ ಸಂಪುಟ ಮತ್ತು ಪುಟಗಳ ಸಂಖ್ಯೆಯನ್ನು ನಮೂದಿಸತಕ್ಕದ್ದು.

ತಾರೀಖು 2ನೇ ಜುಲೈ 1887.

ನಂ. 47.—ಸಕಲಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಅದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು; ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟದ್ದರೆ, ಡೆಪ್ಯುಟಿ ಕಮ್ಮಿಷ್ನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ವೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ, ಕ್ರಯದ ವೊಬಲಗ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ವಾಡದೇ ಇದ್ದರೆ, ಡಿಪಾಜಿಟ್ ವೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ವೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ವೊಬಲಗನ್ನು ಪಾವತೀ ವಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ವಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ವಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ವಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ವಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ವೊಬಲಗನ್ನು ಪೂರಾ ಹಾಜರ್ ವಾಡಿದರೆ, ಹರಾಜು ಮವುಕೂಫ್ ವಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ವಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ವೊಬಲಗನ್ನು ಪೂರ್ತಿಯಾಗಿ ಪಾವತೀ ವಾಡಿ, ಹರಾಜನ್ನ ದಿವಾನರವರು ಖಾಯಂ ವಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ವಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ವಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ವೊಹರ್ ವಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ವಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೋಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ವಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಎ. ಸೆಂ.	ರೂ. ಆ. ಪೈ.	ರೂ. ಅ. ಪೈ.	ರೂ. ಆ. ಪೈ.	
ಶಿವಮೊಗ್ಗ.	ಹೊನ್ನಾಳಿ.		ಕಂಚಿಗನಹಳ್ಳಿ.	ವೆಂಕಣ್ಣಾಚಾರು) ವ ಇತರ 3 ಜನರು	335 58	390 0 0	262 0 0	206 14 8	ಸನ್ 1887ನೇ ಇಸವಿ ಆಗಸ್ಟ್ ತಾರೀಖು 15ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರು.

ತಾರೀಖು 18ನೇ ಜೂನ್ 1887.

ಕ್ಯಾಂಪ್ ನಂ. 878.—ಮೈಸೂರು ರೆವಿನ್ಯೂ ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ|| ಹೆಚ್. ರಾಮಾನುಜಯ್ಯಂಗಾರ್ರಿಗೆ 1887ನೇ ಇಸವಿ ಜೂನ್ 7ನೇ ಮುಕ್ಕಾಂ ಕ್ಯಾಂಪ್ 751ನೇ ನಂಬರುಳ್ಳ ದಿವಾನರವರ ಇಸ್ತಿಹಾರಿನಲ್ಲಿ ಮಂಜೂರ್ ವಾಡಲ್ಪಟ್ಟಿದ್ದ ರಜಾಕ್ಕೆ ಜಾಸ್ತೀಯಾಗಿ, 1887ನೇ ಇಸವಿ ಜೂನ್ 13ರ ಲಾಗಾಯತು ಯರಡು ತಿಂಗಳೂ ಹದಿನೈದು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 23ನೇ ಜೂನ್ 1887.

ಕ್ಯಾಂಪ್ ನಂ. 904.—ಮದ್ದಗಿರಿ ತಾಲ್ಲೂಕು ಅಮಲ್ದಾರ್ ವೇಲಾಯುಧಂ ಪಿಳ್ಳೆಯವರಿಗೆ, ಜೂನ್ 16ರ ಲಾಗಾಯತು ಯಾ ಅವರು ರಜಾ ಉಪಯೋಗಿಸಿಕೊಳ್ಳುವ ತಾರೀಖು ವೊದಲು 20 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟು ಯಿರುತ್ತೆ.

ವೇಲಾಯುಧಂ ಪಿಳ್ಳೇಯವರ ಗೈರ್ ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ವರಿಗೂ, ಪೋಲೀಸ್ ಇನ್ಸ್ಪೆಕ್ಟರ್ ನಾಗೇಶ್ವರಯ್ಯನವರು ಸದರೀ ತಾಲ್ಲೂಕಿನ ಚಾರ್ಜ್ [illegible] ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಚಲಾಯಿಸಲಿಕ್ಕೆ ಅಪ್ಪಣೆ ಪಡೆದು ಯಿರುತ್ತಾರೆ.

ಕ್ಯಾಂಪ್ ನಂ. 908.—1884ನೇ ಇಸವಿ ಡಿಶಂಬರ್ 6ನೇ ಹುಕ್ಕುಂ 5063—107ನೇ ನಂಬರ್‌ವುಳ್ಳ ದಿವಾನರವರ ಪ್ರೊಸೀಡಿಂಗ್ಸ್‌ನ್ನನುಸರಿಸಿ, ಚನ್ನರಾಯಪಟ್ಟ ತಾಲ್ಲೂಕು ಅಮಲ್ದಾರ್ ರಾಮಾನುಜಯ್ಯಂಗಾರ್ರು ತಾವು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 6 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 910.—ತಿಪಟೂರು ತಾ|| ಅಮಲ್ದಾರ್ ರಾಮಸ್ವಾಮಯ್ಯನವರು, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 25 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ರಾಮಸ್ವಾಮಯ್ಯನವರ ಗೈರ್ ಹಾಜರೀ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ ತುರವೇಕೆರೆ ಡೆಪ್ಯುಟಿ ಅಮಲ್ದಾರ್ರು ತಿಪಟೂರು ತಾಲ್ಲೂಕು ಚಾರ್ಜ್‌ವಹಿಸಿರತಕ್ಕದ್ದು.

ಕ್ಯಾಂಪ್ ನಂ. 912.—ಕೊರಟಗೆರೆ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ ಜಿ. ತಿರುನಾರಣಯ್ಯಂಗಾರ್ರು, 1887ನೇ ಇಸವಿ ಜೂನ್ 25ರ ಲಾಗಾಯತು ಯಾ ಅವರು ರಜಾ ಉಪಯೋಗಿಸಿಕೊಳ್ಳುವ ತಾರೀಖು ವೊದಲು 2 ತಿಂಗಳು 16 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ತಿರುನಾರಣಯ್ಯಂಗಾರ್ರು ರಜಾದಮೇಲೆ ಯಿರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ, ತುಮಕೂರು ಡೆಪ್ಯುಟಿ ಕಮ್ಮಿಷನರ್ ಆಫೀಸ್ ರೆವಿನ್ಯೂ ಹೆಡ್ ಮುನಷಿ ಸೀತಾರಾಮಯ್ಯನವರು, ಕೊರಟಗೆರೆ ಡೆಪ್ಯುಟಿ ಅಮಲ್ದಾರ್ ವ ಥರ್ಡ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 29ನೇ ಜೂನ್ 1887.

ನಂ. 44.—ಬೆಂಗಳೂರು ಟವ್ನ್ ಮ್ಯಾಜಿಸ್ಟ್ರೇಟ್ ಇ. ಸಿ. ಷಣ್ಮುಗವೇಲು ಪಿಳ್ಳೆಯವರಿಗೆ, 1884ನೇ ಇಸವಿ ಡಿಶಂಬರ್ 6ನೇ ಹುಕ್ಕುಂ 5063—407ನೇ ನಂಬರುಳ್ಳ ದಿವಾನರವರ ಪ್ರೊಸೀಡಿಂಗ್ಸ್ ಅನುಸರಿಸಿ, 1887ನೇ ಇಸವಿ ಜೂನ್ 21ರ ಲಾಗಾಯತು ಹದಿನೈದು ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 45.—1887ನೇ ಇಸವಿ ಮೇ 30ನೇ ಮರ್ಕೂಮಿನ 619ನೇ ನಂಬರುಳ್ಳ ದಿವಾನರವರ ಇಸ್ತಿಹಾರನ್ನನುಸರಿಸಿ, ಹೇಮಾ ಹನುಮಂತಯ್ಯನವರ ಗೈರ್ ಹಾಜರೀ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ, ತುಮಕೂರು ಡಿಸ್ಟ್ರಿಕ್ಟ್ ರೆವಿನ್ಯೂ ಹೆಡ್ ಅಕೌಂಟೆಂಟ್ ಗೋಪಾಲಯ್ಯಂಗಾರ್ರು, ಗುಬ್ಬಿ ತಾ|| ಆಕ್ಟಿಂಗ್ ಅಮಲ್ದಾರ್ರಾಗಿ ಮೊಕರರ್ ಮಾಡಲ್ಪಟ್ಟಿರುವದಲ್ಲದೆ 3ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳನ್ನೂ ಇದರ ದೆಸೆಯಿಂದ ಪಡೆದು ಯಿರುತ್ತಾರೆ.

ಹುಕ್ಕುಂ ಬಮೋಜೀಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರೆಟೇರಿ.

549

ಪಬ್ಲಿಕ್ ವರ್ಕ್ಸ್ ಇಲಾಖಾ.

ಇಸ್ತಿಹಾರ್ ನಾಮೆ.

ತಾರೀಖು 24ನೇ ಜೂನ್ 1887.

ನಂ. 2604—532.—ಶಿವಮೊಗ್ಗಾ ಡಿವಿಜನ್ ಅಸಿಸ್ಟೆಂಟ್ ಇಂಜನೀರ್ ಮೆ|| ಆರ್. ಯಸ್. ವೆಂಕಟಾಚಾರ್ಯರಿಗೆ, 1887ನೇ ಜೂನ್ ತಾರಿಖು 18ರ ಲಾಗಾಯಿತು 10 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2605—533.—ಈ ಕೆಳಗೆ ನಮೂದಾಗುವ ವರ್ಗಾವರ್ಗಿಗಳು, ಸರ್ಕಾರದ ಕೆಲಸದ ಬಗ್ಯಾಗಿ ಅಪ್ಪಣೆ ಮಾಡಲ್ಪಟ್ಟಿರುತ್ತವೆ.

ಅಪ್ರೆಂಟಿಸ್ ಇಂಜನೀರ್ ಮೆ|| ಬಿ. ಸುಬ್ಬರಾಯರಿಗೆ, ಪ್ಯಾಲೆಸ್ ಡಿವಿಜನ್ನಿಂದ ಕೋಲಾರ ಡಿವಿಜನಿಗೆ ವರ್ಗ—ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.

ನಂ. 2607—535.—ಅಪ್ರೆಂಟಿಸ್ ಇಂಜನೀರ್ ಮೆ|| ಕೆ. ಕೃಷ್ಣಯ್ಯಂಗಾರ್ರಿಗೆ, ಪ್ಯಾಲೆಸ್ ಡಿವಿಜನಿನಿಂದ ಚಿತ್ರದುರ್ಗ ಡಿವಿಜನಿಗೆ ವರ್ಗ—ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.

ತಾರೀಖು 27ನೇ ಜೂನ್ 1887.

ನಂ. 2633—540.—ಅಸಿಸ್ಟೆಂಟ್ ಇಂಜನೀರ್ ಮೆ|| ಕೆ. ಎ. ಮಹದೇವಶಾಸ್ತ್ರಿಯವರ ನೌಕರೀಯು, 1887ನೇ ಇಸವಿ ಜುಲೈ ಗುರ್ರೇ ಲಾಗಾಯತು ಸದರ್ನಮರಾಟಾ ರೈಲವೇ ಕಂಪೆನಿಯವರಿಂದ ಈ ಇಲಾಖೆಗೆ ವರ್ಗವಾಗಿ ಬರುವವರಿಂದ ಆ ತಾರೀಖು ಲಾಗಾಯತು ಅವರು ಹಾಸನ ಡಿವಿಜನ್ನಿಗೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 28ನೇ ಜೂನ್ 1887.

ನಂ. 2656—543.—ಎಗ್ಸಿಕ್ಯೂಟಿವ್ ಇಂಜನೀರ್ ಮೆ|| ಯಫ್. ಜೇ. ಮೆಕ್ ಲಾರ್ಲಿಯವರಿಗೆ, ಅಷ್ಟಗ್ರಾಮ ಛಾನಲ್ ಡಿವಿಜನಿಗೆ ಮೊಕರರ್ ಮಾಡಲ್ಪಟ್ಟಿರುತ್ತೆ.

2. ಯಿವರಿಗೆ 1887ನೇ ಮೇ 16ನೇ ಮರ್ಸ್ತುಂ 1985—403ನೇ ನಂಬರುಳ್ಳ ಇಸ್ತಿಹಾರ್ನಾಮೆಯಲ್ಲಿ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾ ಜೂನ್ 16ನೇ ತಾರೀಖು ಪೂರ್ವಾಹ್ನದ ಲಾಗಾಯತು ರದ್ದು ಮಾಡಲ್ಪಟ್ಟಿರುತ್ತೆ.

ಸಿ. ಬರ್ನ, ಲೆಫ್ಟಿನೆಂಟ್ ಕರ್ನಲ್ ಆರ್. ಇ.,
ಮೈಸೂರು ಗವರ್ನಮೆಂಟ್ ಸೆಕ್ರಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಸಿದ್ಧಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಜುಲೈ ತಾ॥ 9, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನ್‌ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿ॥ ಅರ್ಜಿ ನಂಬರ್ 470.

ಮೃತಪಟ್ಟ ಮರಡೀ ರಂಗಂಣನ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ ಬೆಂಗಳೂರು ದೇವಾಂಗದ ರಾಮಂಣನ ಪೇಟೇಲಿರುವ ಮೈಸೂರು ಮರಡೀ ರಂಗಂಣನ ಮಗ ಸುಬ್ಬಯ್ಯ ಮೈನರ್ ಗಾರ್ಡಿಯನ್ ಇವನ ತಾಯಿ ಶೇಷಮ್ಮ ಮೃತಪಟ್ಟ ಸದರೀ ರಂಗಂಣನಿಗೆ ಹೆಂಡತಿ ಮತ್ತು ಮೈನರ್ ಸುಬ್ಬಯ್ಯ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಸುಬ್ಬಯ್ಯ ಮೈನರ್ ಶೇಷಮ್ಮ ಬೆಂಗಳೂರು ಸ್ಥಳದ ಮೃತಪಟ್ಟ ರಂಗಂಣನ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ಸುಬ್ಬಯ್ಯ ಮೈನರ್ ಗಾರ್ಡಿಯನ್ ಶೇಷಮ್ಮನ ಅರ್ಜಿಯನ್ನು 1887ನೇ ಇಸವಿ ಜುಲೈ ತಾರೀಖು 8ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಿಸಲೇನಿಯಸ್ ನಂಬರ್ 495.

ಮೃತಪಟ್ಟ ಮೈಲಪ್ಪನಹಳ್ಳಿ ಪುಮ್ಮರಸಾಬಿ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ ಚಿಕ್ಕಬಳ್ಳಾಪುರ ತಾಲ್ಲೂಕು ಕಸಬಾ ಹೋಬಳಿ ಮೈಲಪ್ಪನಹಳ್ಳೀಲಿರುವ ಪುಮ್ಮರಸಾಬಿ ಮಗ ಅಲ್ಲೀಸಾಬಿ ಮೃತಪಟ್ಟ ಸದರೀ ಪುಮ್ಮರಸಾಬಿಗೆ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ಮೈಲಪ್ಪನಹಳ್ಳಿ ಸ್ಥಳದ ಅಲ್ಲೀಸಾಬಿ ಸದರಿ ಮೃತಪಟ್ಟ ಪುಮ್ಮರಸಾಬಿಗೆ ಬರತಕ್ಕ ಆಸ್ತೀ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಲ್ಲೀಸಾಬಿ ಅರ್ಜಿ ವಿಚಾರಣೆ ಬಗ್ಯೆ ಇದೇ ಇಸವಿ ಜುಲೈ 22ನೇ ತಾರೀಖಿಗೆ ಹಿಯರಿಂಗ್ ಮೊಕರರ್ ಮಾಡಿರುತ್ತೆ. ಮೃತಪಟ್ಟ ಸದರೀ ಪುಮ್ಮರಸಾಬಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

1887ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 496.

ಮೃತಪಟ್ಟ ಪಟೇಲ ತಿರುಮಳೇ ಗವುಡನ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ ಸದರೀ ತಿರುಮಳೇ ಗವುಡನ ಮೈನರ್‌ಮಗ ದೊಡ್ಡಅರಸೇ ಗವುಡನ ಪೋಷಣ ಕರ್ತನಾದ ಚನ್ನರಾಯಗವುಡನು ಮೃತಪಟ್ಟ ಸದರೀ ದೊಡ್ಡಬಳ್ಳಾಪುರ ತಾಲ್ಲೂಕು ಹುಲ್ಲಕುಂಟೆ ಹೋಬಳಿ ದೊಡ್ಡ ಬೆಳವಾಗಲ್‌ನಲ್ಲಿದ್ದ ತಿರುಮಳೆ ಗವುಡನಿಗೆ ತಮ್ಮನಾಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ದೊಡ್ಡ ಬೆಳವಾಗಲದಲ್ಲಿ ಇರುವ ಚನ್ನರಾಯಗವುಡನು ಮೃತಪಟ್ಟ ತಿರುಮಳೆ ಗವುಡನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಅರ್ಜೀ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಚನ್ನರಾಯಗವುಡನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು 22ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುಮಳೇಗವುಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ತಾರೀಖು 27ನೇ ಜೂನ್ 1887ನೇ ಇಸವಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 511.

ಮೃತಪಟ್ಟ ಪಿಲ್ಲಯ್ಯನ ಮಗ ತಿಮ್ಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಆನೆಕಲ್ ತಾಲ್ಲೂಕು ಹುಲ್ಲಮಂಗಲದಲ್ಲಿರುವ ಸಡುಬೀದಿ ಪಿಲ್ಲಯ್ಯನ ಮಗ ಮುನಿಯ ಮೈನರ್ ಗಾರ್ಡಿಯನ್ ದೊಡ್ಡತಂದೆ ನಂಜುಡಪ್ಪ, ಮೃತಪಟ್ಟ ಸದರೀ ತಿಮ್ಮಯ್ಯನಿಗೆ ಅಣ್ಣ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಲ್ಲಮಂಗಲ ಸ್ಥಳದ ನಂಜುಂಡಪ್ಪನು ಡಿಟೋ ವಾಸಸ್ಥನಾಗಿ ಮೃತಪಟ್ಟ ತಿಮ್ಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ನಂಜುಂಡಪ್ಪನ ಅರ್ಜಿಯನ್ನು 1887ನೇ ಇಸವಿ ಜುಲೈ ತಿಂಗಳು ತಾರೀಖು 22ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಜುಲೈ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊ ಜನೆ ಕೊ ಹೋಣಾಗಿಧೆ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 497.

ಅರ್ಜೀದಾರ್ ಕೋಲಾರ ಡಿಸ್ಟ್ರಿಕ್ಟು ಬೌರಿಂಗಪೇಟೆ ತಾಲ್ಲೂಕು ಬೂದುಗುಟ್ಟೆಲಿದ್ದು ಮೃತಪಟ್ಟ ಗುರಿಕಾರ ತಿಮ್ಮರಾಯಪ್ಪನ ಹೆಂಡತಿ ನಾರಾಯಣಮ್ಮ, ಈಕೆಮಗಳು ಕೃಷ್ಣಮ್ಮ ಸದರೀ ಮೃತಪಟ್ಟ ಗುರಿಕಾರ ತಿಮ್ಮರಾಯಪ್ಪನಿಗೆ ಬರತಕ್ಕ ಸಾಲದ ಬಾಬತು 3,000 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಕೊಡಿಸಬೇಕೆಂತ ವಗೈರೇ ಕೊಟ್ಟಿರುವ ಅರ್ಜಿ ವಿಮರ್ಶೆ ಬಗ್ಯೆ ಯಿದೇ ಇಸವಿ ಜುಲೈ 22ನೇ ತಾರೀಖಿಗೆ ಹಿಯರಿಂಗ್ ಮೊಕರರ್ ಮಾಡಿರುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರಿಕಾರ ತಿಮ್ಮರಾಯಪ್ಪನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ಯೆನಾದರೂ ಯಿದ್ದರೆ ತಿಳಿಸತಕ್ಕದ್ದಿದೆ.

ಬತಾರೀಖು 1ನೇ ಜುಲೈ 1887ನೇ ಇಸವಿ.

ಸಿ. ಕ್ರೈಸ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 24ನೇ ಜೂನ್ 1887.

ಕೋಲಾರ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಈ ಕೆಳಗೆ ವಿವರಿಸೋಣಾದ ರಿಜಿಸ್ಟ್ರುದ ಮತ್ತು ರಿಜಿಸ್ಟ್ರೇಷನ್ ತಿರಸ್ಕರಿಸಲ್ಪಟ್ಟ 3 ತಂಸೂಕುಗಳು 2 ವರುಷಗಳಿಗೆ ಮೇಲ್ಪಟ್ಟ ಕಾಲದಿಂದ ಹಾಜರ್ಮಾಡಿದವರು ವಾಪಸ್ ಕೇಳದೆ ಇರುವ ಕಾರಣ ನಿಂತಿರುತ್ತವೆ. ಸದರೀ ತಂಸೂಕುಗಳನ್ನು ಹಾಜರ್ಮಾಡಿದವರು ಅಥವಾ ವಾಪಸು ಪಡಿಯಲು ಅಧಿಕಾರ ಹೊಂದಿದವರು ಯಾ ತಂಸೂಕುಗಳಲ್ಲಿ ಬಾಧ್ಯತೆವುಳ್ಳವರು ಯಾರಾಗಲಿ ಭದ್ರಪಡಿಸಿದ ಬಗ್ಯೆ ರೂಲ್ಸು ಪ್ರಕಾರ ವಿಧಾಯಕವಾಗಿರುವ ಫೀಜು ಪಾವತಿಯಿಂದ ತಂಸೂಕುಗಳನ್ನು ಈ ತಾರೀಖು ಲಾಗಾಯತು 1 ತಿಂಗಳಲ್ಲಿ ಮೇಲ್ಕಂಡ ಸಬ್ ರಿಜಿಸ್ಟ್ರು ಆಫೀಸಿನಲ್ಲಿ ಹಾಜರಾಗಿ ವಾಪಸ್ ಪಡಿಯಬಹುದು, ತಪ್ಪಿದರೆ ಅವುಗಳು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುವವು.

ರಿಜಿಸ್ಟ್ರು ಬುಕ್ಕಿನ ಇಸವಿ ಮತ್ತು ನಂಬರು.	ಕಕ್ಷಿಗಾರರ ಹೆಸರು.		ತಂಸೂಕಿನ ತಾರೀಖು.	ರಿಜಿಸ್ಟ್ರೇಷನ್ಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರುದ ಅಥವಾ ರಿಜಿಸ್ಟ್ರೇಷನ್ ತೀರಸ್ಕರಿಸಲ್ಪಟ್ಟ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕಿಮ್ಮತು.
	ಬರದುಕೊಟ್ಟವರ ಹೆಸರು.	ಬರಸಿಕೊಂಡವರು.				
ಮೇಲ್ಕಂಡ ಪುಟ್ಟೀರಿ, ಚನ್ನಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಶವು ಈ ಕೋರ್ಟು ರೂಬರೂ ಅರ್ಜೀದಾರರಾದ ಪುಟ್ಟೀರಿ, ಚನ್ನಿ ಇವರ ಪರವಾಗಿ ಅಡ್ವೊಕೇಟರು ನಾರಣಯ್ಯಂಗಾರ್ರನ್ನು ಮತ್ತು ಸದರೀಯವರ ಲೇಣೇದಾರ್ರಾದ ಹೊನ್ನಿ ಖುದ್ದು ಹಾಜರು ಯಿವಳಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪುಟ್ಟೀರಿ ಅಕ್ಕ ಚನ್ನಿಯು ಮಾತ್ರ ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ಜುಲೈ ತಿಂಗಳು 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	[illegible]	[illegible]	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರು ತಾಲ್ಲೂಕು ದ್ಯಾವಯ್ಯನ ಹುಂಡೀಲಿರುವ ಹೊನ್ನಿ	30	0	0	ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ತಾರೀಖು 26ನೇ ಜುಲೈ 1887.

ಹುಣಸೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜು ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು. ತಪ್ಪಿದಲ್ಲಿ 1887ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ:—

ನಂಬರ್.	ದಸ್ತಾವೇಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತಾವೇಜನ್ನು ಬರಸಿ ಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರೇಷನ್‌ಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟರು ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
389 1884-85ನೇ ಇಸವಿ.	ಹುಣಸೂರಲ್ಲಿರುವ ಕಂದಾರ್ ಸೈದ್ ಕಿದ್ದಿಸಾಬ್ ಸೈದ್ ದುರ್ವೇಷ ಮಗ ವ್ಯಾಪಾರ ಕಸಬು.	ಹನಗೋಡು ಗ್ರಾಮದಲ್ಲಿಯಿರುವ ಮುಸಲ್‌ಮಾನರ ಹೈದರ್‌ಸಾಬಿ ಮಗ ಚಿಲ್ಲರೆ ದುಕಾನದಾರ ಖಾಸಿಂಸಾಬಿ.	12—3—85	13—3—85	ಕ್ರಯಪತ್ರ ಭೂಸ್ಥಿತಿಗೆ ಸಂಬಂಧಪಟ್ಟದ್ದು. ಕ್ರಯದ ಮೊಬಲಗು 27 ರೂಪಾಯಿ.

ಹೆಚ್. ನಂಜುಂಡರಾಜ್ ಅರಸ್,
ಫಾರ್ ರಿಜಿಸ್ಟ್ರಾರ್.

ಮೈಸೂರು ಸಬ್ ಡಿವಿಜನ್ ಮುನ್ಸಿಫ್ ಕೋರ್ಟಿನಲ್ಲಿ.

ತಾರೀಖು 21ನೇ ಜುಲೈ 1887.

1886ನೇ ಇಸವಿ ಒರಿಜನಲ್ ಮೊಕದ್ದಮಾ ನಂಬರ್ 1078.

ವಾದಿ.	ಪ್ರತಿವಾದಿ.
ಮೈಸೂರು ವೀರನಗೆರೆಯಲ್ಲಿ ಇರುವ ಪರಿವಾರದ ಜಾತಿ ಶಿದ್ದನಾಯಕನ ಮಗ ಜಮೀನಿನಿಂದ ಜೀವಿಸುವ ಶಿದ್ದನಾಯಕ.	ವೀರನಗೆರೆಯಲ್ಲಿ ಇರುವ ಪರಿವಾರದ ಜಾತಿ ಮಾದನಾಯಕನ ಮಗ ಜಮೀನಿನಿಂದ ಜೀವಿಸುವ ಬಡೇಸಂಜೀವನಾಯಕ.

ಸಿವಿಲ್ ಪ್ರೊಸಿಡ್ಯೂರ್ ಕೋಡ್ 30ನೇ ಸೆಕ್ಷನ್ ಮೇರೆ ಮೈಸೂರು ವಾಸಸ್ಥರಾದ ಈ ಮೊಕದ್ದಮಾಕ್ಕೆ ಸಂಬಂಧಪಟ್ಟ ಪರಿವಾರದ ಜಾತಿ ಜನಗಳಿಗೆಲ್ಲಾ ತಿಳಿಯಪಡಿಸುವದೇನಂದರೆ—

ಮೇಲ್ಕಂಡ ವಾದಿಯು ಈ ವ್ಯಾಜ್ಯವನ್ನು ತನ್ನ ಪರವಾಗಿಯೂ ಮತ್ತು ತನ್ನ ಜಾತಿಯವರ ಪರವಾಗಿಯೂ ದಾವಾ ದಾಖಲ್ಮಾಡಲು ಕೋರ್ಟಿನವರ ಅಪ್ಪಣೆಯನ್ನು ಪ್ರಾರ್ಥಿಸಿ ಇದ್ದಾನೆ.

ಕೆಳಗೆ ವಿವರಿಸಿಇರುವ ಚರಸ್ವತ್ತುಗಳನ್ನು ವಾದಿಯ ಸ್ವಾಧೀನಕ್ಕೆ ಸುಮಾರು 2—2½ ವರುಷಗಳ ಕೆಳಗೆ ವಾದಿಯು ಮತ್ತು ವಾದಿಯ ತರಫ್ ಕೋಮಿನವರು ಸೇರಿ ಒಪ್ಪಿಸಿದರೆಂತಲೂ ಆದರೆ ಪ್ರತಿವಾದಿಯು ಮತ್ತು ಕೋಮಿನವರ ಪೈಕಿ ಮೂರರಲ್ಲಿ ವೊಂದು ಭಾಗದವರು 3—4 ತಿಂಗಳುಗಳಿಂದ ತಮ್ಮ ಸ್ವಂತ ಜಿಂದಗಿಯೆಂದು ಭಾವಿಸಿ ವಾದಿಗೂ ಮತ್ತು ವಾದಿಯ ತರಫ್ ಕೋಮಿನವರಿಗೂ ಕೊಡುವದಿಲ್ಲವೆಂದುನ್ನೂ ವಾದಿ ನಮೂದು ಮಾಡಿಧಾನೆ.

ಈ ರೀತಿ ಮೊಕದ್ದಮೆಯು ದಾಖಲಾಗಿರುತ್ತೆಂದುನ್ನೂ ಮತ್ತು ಬರುವ ಆಗಸ್ಟ್ 8ನೇ ತಾರೀಖಿಗೆ ಇಷ್ಯು ತೀರ್ಮಾನದ ಬಗ್ಯೆ ಮೊಕರರ್ರು ಮಾಡಲ್ಪಟ್ಟಿರುತ್ತೆ.

ಷೆಡ್ಯೂಲ್.

ಚರಸ್ವತ್ತುಗಳು.	ರೂ.	ಆ.	ಪೈ.
ನೀರು ತುಂಬುವ ದೊಡ್ಡ ಹಂಡೆ 1ಕ್ಕೆ	30	0	0
ಯೆಸರು ಮಾಡುವ ಹಂಡೆ 4ಕ್ಕೆ	20	0	0
ಅನ್ನ ಮಾಡುವ ತಪ್ಪಲೆ 5ಕ್ಕೆ	35	0	0
ಹಿತ್ತಾಳೆ ತಪ್ಪಲೆ 3ಕ್ಕೆ	19	8	0
ತಾಂಬ್ರದ ಗಂಜು 3ಕ್ಕೆ	13	0	0
ತಾಂಬ್ರದ ಪರಾತ 1ಕ್ಕೆ	3	0	0
ಹಿತ್ತಾಳೀದು ನೀರು ಕುಡಿಯುವ ಕೊಳಗತಪ್ಪಲೆ 5ಕ್ಕೆ	5	0	0
ಶಾಸ್ತ್ರದ ಅರ್ಧನಾರಿ ಚೆಂಬು 5ಕ್ಕೆ	7	8	0
ಹಿತ್ತಾಳಿ ಕಳಶದ ಮಿಳ್ಳೆ 1ಕ್ಕೆ	1	0	0
ಕಂದೀಲು ಜೋಡಿ 4ಕ್ಕೆ	12	0	0
ಛತ್ರಿ ಕಿಕಸ್ತು 1ಕ್ಕೆ	4	0	0
ಕಿಕಸ್ತು ಪೂದಾ ದಮಾಸು ಛತ್ರಿ 1ಕ್ಕೆ	5	0	0
ಕೆಂಪು ದಮಾಸು ಹೊಸ ಛತ್ರಿ 1ಕ್ಕೆ	10	0	0
ಕಿಕಸ್ತು ಅಲವಾಸು ಚಳ್ಳೇ ದುಬಟಿ 1ಕ್ಕೆ	2	0	0
ದಂಡಿ ಇಲ್ಲ-ಹೊಸ ಚವುರಿ ಜೋಡಿ 1ಕ್ಕೆ	1	0	0
ಚಿನದಿ ಕೋರುರುಮಾಲು 1ಕ್ಕೆ	31	0	0
ಬನಾರಸ್ ಕೋರು ಬುಟ್ಟೇದಾರಿ ದುಪ್ಪಟ್ಟಾ 1ಕ್ಕೆ	25	0	0
ಕುತ್ನಿ ಷರಾಯಿ 1ಕ್ಕೆ	8	0	0
ಹಳೇಚವುರಿ ಜೋಡಿ 1ಕ್ಕೆ	2	0	0
ದೇವಸ್ಥಾನದ ಕುತ್ನಿನಡುಛತ್ರಿ 1ಕ್ಕೆ	10	0	0
ಕಾರ್ವೆ ಛತ್ರಿ 1ಕ್ಕೆ	8	0	0
ಚವುರಿಗೆ 8ಕ್ಕೆ	48	0	0
ನಗದು ರೂಪಾಯಿ	80	0	0
ಡಾಮೇಜ್ ಬಾಬತು	20	0	0
ಜುಮ್ಲಾ ರೂಪಾಯಿ	400	0	0

ಎಸ್. ವೆಂಕಟವರದಯ್ಯಂಗಾರ್, ಮುನ್ಸಿಫ್.

ಹಾಸನ ಡಿಸ್ಟ್ರಿಕ್ಟು.

ತಾರೀಖು—ನೇ ಜುಲೈ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟಿನಲ್ಲಿರತಕ್ಕ ಕೆಲವು ಕಾಫೀ ತೋಟಗಳ ಮೇಲೆಬರ ಬೇಕಾದ ಕಂದಾಯದ ಬಾಕಿ ಅದ್ಯಾಪಿ ಪಾವತೀ ಆಗದೆ ಇರುವದರಿಂದ ಹರಾಜು ಮಾಡುವ ತಾರೀಖಿಗೆ ಹಿಂದಿನ ಅಥವಾ ಆ ತಾರೀಖು ವಳಗಾಗಿ ಸದರೀ ಕಂದಾಯ ಬಾರದೇ ಹೋದರೆ ಸ್ಟೇಟುಮೆಂಟಿನಲ್ಲಿ ನಮೂದಾಗತಕ್ಕ ಸ್ಥಳ ಮತ್ತು ತಾರೀಖುಗಳಲ್ಲಿ ಸದರೀ ಯಸ್ಟೇಟು ಗಳು ಹರಾಜು ಮಾಡಲ್ಪಡುವವು.

ತಾಲ್ಲೂಕು.	ಹೋಬಳಿ ಮತ್ತು ಗ್ರಾಮ.	ಖಾತೇದಾರರ ಹೆಸರು.	ಎಸ್ಟೇಟಿನ ತಪಶೀಲು. ಹೆಸರು.	ಸರ್ವೆ ನಂಬರು.	ಎಕರೆ.	ಆಕಾರ.	ಬರಬೇಕಾದ ಬಾಕಿ. ತಪಶೀಲು. ವಿವರ.	ಮೊಬಲಗು.	ಸರಹದ್ದು. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಷರಾ.
ಮಂಜರಾಬಾದು.	ಬೆಳಗೋಡು ಬಾಗೆ.	ಶ್ರೀ ಸ್ಯಯದ ಅಮಾರ್ ಅಲ್ಲೀ ಸಾಹೆಬ್ ವಗೈರರು.	ಗೊದ್ದೆನಹಳ್ಳಿ ಪಟ್ಟಿ.	49	301 29	365 0 0 ನೋಟೀಸ್ ಜಾರಿ ಆಗಿದೆ	ವ್ಯಯ ಸಂ॥ ಬಾಬತು .. ಲೋಕಲ್ ಫಂಡ್ .. ನೋಟೀಸ್ ಫೀಸ್ .. ಮತ್ತು ಹರಾಜ್ ತಾರೀಖು ವರಿಗೆ ಆಗತಕ್ಕ ಬಡ್ಡಿ.	391 12 0 24 8 0 2 0 0 418 4 0	ಸರ್ವೆ ನಂಬರು 67, 66, 58, 52, 51, 50, 53 ಮತ್ತು 48.	ಹೊಳೇಕೆರೆ ಮತ್ತು ಹೊಸಕೆರೆ ಗ್ರಾಮಗಳ ಗಡಿ.	ಹೊಸಕೆರೆ ಗ್ರಾಮದ ಗಡಿ.	ಹೊಳೇಕೆರೆ ಗ್ರಾಮದ ಗಡಿ.	ಮಂಜರಾಬಾದು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರರಿಂದ ಸನ್ 1887ನೇ ಇಸವಿ ಆಗಸ್ಟ್ 15ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುವದು.
	ಬೆಳಗೋಡು ಹೊಸಕೆರೆ.	ಅಲ್ಲೀಖಾನ್ ಸಾಹೇಬರು ಮತ್ತು ಮಮ್ಮುದಾರ ಶ್ರೀ ಅಮಾರ್ ಅಲ್ಲೀ ಸಾಹೇಬರು.	1	33	35 0	52 0 0 ನೋಟೀಸ್ ಜಾರಿ ಆಗಿದೆ.	ವ್ಯಯ ಸಂ॥ .. ನೋಟೀಸ್ ಫೀಸ್ ..	55 8 0 3 0 0 58 8 0	ನಂಬರು 32.	ನಂಬರು 34 ಮತ್ತು 35.	ನಂಬರು 31.	ನಂ. 35 ಮತ್ತು ಬಾಗೆ ಗ್ರಾಮದ ಗಡಿ.	ಡಿಟ್ಟೋ ಆಗಸ್ಟ್ 16ನೇ ತಾರೀಖು ಡಿಟ್ಟೋ
	ಅಶ್ವಾರಸಂತೆ, ಕೋಡಿಹಳ್ಳಿ.	ರಾಮಯ್ಯಗೌಡ ವಗೈರೆ 5 ಜನಗಳು.	1	1	62 0	31 0 0 ನೋಟೀಸ್ ಜಾರಿ ಆಗಿದೆ	ಪಾರ್ಥಿವ ಸಂ॥ .. ಲೋಕಲ್‌ಫಂಡ್ .. ನೋಟೀಸ್ ಫೀಸ್ .. ಮತ್ತು ಹರಾಜ್ ತಾರೀಖು ವರಿಗೆ ಆಗುವ ಬಡ್ಡಿ.	31 0 0 1 15 0 2 0 0 34 15 0	ಕೊಣಬುರಹಳ್ಳಿ ಅಡ್ಡಾಕಿ ಕಟ್ಟೆ ಎಸ್ಟೇಟು.	ಚಿಕ್ಕ ಕೊರಂಗಡಿ ಖಾನ್ಸಾಹೇಬರ ಎಸ್ಟೇಟು.	ಕರೋಡಿ ಗ್ರಾಮದ ಗಡಿ.	ಕೋಡಿಹಳ್ಳಿ ಗ್ರಾಮದ ಸರ ದಿಣ್ಣೆ.	ಡಿಟ್ಟೋ ಆಗಸ್ಟ್ 17ನೇ ತಾರೀಖು ಡಿಟ್ಟೋ

ಪಿ. ಎನ್. ಪೂರ್ಣಯ್ಯ,
ಡೆಪ್ಯುಟಿ ಕಮಿಷನರ್.

ತಾರೀಖು 12ನೇ ಜುಲೈ 1887.

ಇದರಿಂದ ಸಂಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೇಲೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತೈವಜನ್ನು ಹಾಜರ್ಮಾಡಿದವರೇಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೇಆಗಲಿ ಈ ನೋಟಿಸ್ ತಾರೀಖು ಲಾಗಾಯಿತು ವೊಂದು ತಿಂಗಳೊಳಗಾಗಿ ಬೇಲೂರು ಸಬ್ ರಿಜಿಸ್ಟ್ರಾರ್ರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ನಂಬರ್.	ದಸ್ತೈವಜು ಬರೆದ ತಾರೀಖು.	ರಿಜಿಸ್ಟ್ರಿಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಿ ಮಾಡಿದ ತಾರೀಖು.	ದಸ್ತೈವಜನ್ನು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1 / 1885—86	27—5—85	27—5—85	28—5—85	ನಾರ್ವೆ ಫಿರ್ಕಾ ಶಾನುಭೋಗ ಬಂದಪ್ಪಯ್ಯನವರ ಹೆಂಡತಿ ಹೊನ್ನಮ್ಮ	ಸಕಲೇಶಪುರದಲ್ಲಿರುವ ಕೋಳೂರು ಪುಟ್ಟಯ್ಯನವರಮಗ ಅರೆಹಳ್ಳಿ ಶೇಕದಾರ್ ಸೀತಾರಾಮಯ್ಯ	ಯಾವ ದ್ವೀಕಿಷ್ಟ ಆಸ್ತಿ ವಿಚಾರಣೆ ವುದ್ರಿ ವಸೂಲಿ ದಾವಾ ವಗೈರೆ ಬಗ್ಗೆ ಸರ್ವಾಧಿಕಾರ ವಹಿಸಿರುವ ಪತ್ರ.

ಪಿ. ಯನ್. ಪೂರ್ಣಯ್ಯ, ರಿಜಿಸ್ಟ್ರಾರ್.

ನಗರ್ ಡಿವಿಜನ್ ಡಿಸ್ಟ್ರಿಕ್ಟ್ಜಡ್ಜಿಯವರಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 69.

ಮೃತಪಟ್ಟ ದಾಸಣ್ಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಲಕ್ಷ್ಮಮ್ಮನು, ಮೃತಪಟ್ಟ ಸದರೀ ದಾಸಣ್ಣನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕ ಮಗಳೂರು ಸ್ಥಳದ ಲಕ್ಷ್ಮಮ್ಮನು ಚಿಕ್ಕಮಗಳೂರು ವಾಸಸ್ಥನಾಗಿ ಮೃತಪಟ್ಟ ದಾಸಣ್ಣನ ಜೆಂಡಗೆ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಮ್ಮನ ಅರ್ಜೀಯನ್ನು 1887ನೇ ಇಸವಿ ಆಗಸ್ಟು ತಿಂಗಳು ತಾರೀಖು 20ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾಸಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಯಿಸವಿ ಜುಲೈ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜಿ.

ಕಡೂರು ಡಿಸ್ಟ್ರಿಕ್ಟು.

ತಾರೀಖು 23ನೇ ಜುಲೈ 1887.

ಕಡೂರು ಡಿಸ್ಟ್ರಿಕ್ಟು ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನ ಕ್ರಮಪ್ರಕಾರ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ:—

ರಿಜಿಸ್ಟ್ರೇಷನ್ ನಂಬರ್.	ದಸ್ತೈವಜು ಬರೆದು ಕೊಟ್ಟವನ ಹೆಸರು.	ದಸ್ತೈವಜು ಬರೆಸಿ ಕೊಂಡವನ ಹೆಸರು.	ಬರೆದು ಕೊಟ್ಟ ತಾರೀಖು.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿ ಮಾಡಿದ್ದು ಅಥವಾ ನಿರಾಕರಿಸಿದ್ದು ತಾರೀಖು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
1884-85ನೇ ಇಸವಿ 2ನೇ ನಂಬರ್ ಬುಕ್ಕಿನ ಬಾಬತ್ತು	ಹೊಸಕೆರೆ ಮಾಗಣಿ ಬಂಡಿಗಡಿ ಗ್ರಾಮದ ಶಿವಾಚಾರ ಜಾತಿ ವ್ಯಾಪಾರ ಕಸಬಿನ ಶಿದ್ಧಮಲ್ಲಪ್ಪಶೆಟ್ರ ಹೆಂಡತಿಹೊನ್ನಮ್ಮ 1, ಮಳಿಗೆ ಸುಬ್ಬಣ್ಣಶೆಟ್ರ ಮಗ ಶಿದ್ಧಪ್ಪ 1	ಬಂಡಿಗಡಿ ಗ್ರಾಮದ ಮುನಿಯೂರು ವಾಸಸ್ಥನಾದ ಸಾಹುಕಾರಿ ಕಸಬಿನ ಸುಬ್ಬರಾಯರ ಮಗ ಕೃಷ್ಣಪ್ಪನವರು	26ನೇ ಮೇ 1884ನೇ ಇಸವಿ	16ನೇ ಸೆಪ್ಟಂಬರ್ 1884ನೇ ಇಸವಿ	ರಿಜಿಸ್ಟ್ರೇಷನ್ ತಿರಸ್ಕರಿಸಲ್ಪಟ್ಟದ್ದು 28ನೇ ಜನವರಿ 1885ನೇ ಇಸವಿ	ನಿಮಗೆ ಸಲ್ಲಬೇಕಾದ 350 ರೂಪಾಯಿಗಳಿಗೆಖಾನೇಷುಮಾರಿ ನಂ. 44ನೇ ತಖ್ತೆ ಪೋಷು ಹಾಕಿದ 15 ಅಂಕಣದ ಹುಲ್ಲುಮನೆ ಮತ್ತು ಭಂಗಾರದ ಬಾಬತು ನಗಗಳು 3, ಬೆಳ್ಳಿ ಬಾಬತು ನಗಗಳು 2, ಜಾನುವರಗಳು 2, ಈರೀತಿ ತೋಕಹವು ಮಾಡಿರುತದೆಯಂತ.
1885-86ನೇ ಇಸವಿ ನಂಬರ್ 55ನೇ 1ನೇಬುಕಿನ ಬಾಬತು.	ಮುರಪ್ಪ ಮಾಗಣಿ ಹುಲಗರಡ್ಡಿ ಗ್ರಾಮದ ವಾಸಸ್ಥ ಸುಬ್ಬರಾಯರ ಮಗ ಶೇಷಯ್ಯ	ಮೇಗುಂದ ಮಾಗಣಿ ಭೈರೆದೇವರ ಗ್ರಾಮದಲ್ಲಿರುವ ಮರಿಯಪ್ಪನವರ ಮಗ ನಾರಣಪ್ಪ ಹೆಬ್ಬಾರು	7ನೇ ಮೇ 1885ನೇ ಇಸವಿ	29ನೇ ಮೇ 1885ನೇ ಇಸವಿ	ರಿಜಿಸ್ಟ್ರಾದದ್ದು 29ನೇ ಮೇ 1885ನೇ ಇಸವಿ	140 ರೂಪಾಯಿನ ತರೀಬಾಗಾಯತು ಜಮೀನಿನ ಕ್ರಯಪತ್ರ.

ಜೆ. ಯ. ಕ್ಯಾಂಪೆಲ್,
ರಿಜಿಸ್ಟ್ರಾರ್.

ನೋಟೀಸ್.

ಹಾರಟಿಕಲ್‌ಚರಲ್ ಷೋ ಯಾನೆ ಫಲಪುಷ್ಪ ತೋರಿಸುವ ವಿನೋದವು, 1887ನೇ ಇಸವಿ ಆಗಸ್ಟು 3ನೇ ತಾರೀಖು ಬುಧವಾರ ಮಧ್ಯಾಹ್ನತ್ತರ 3½ ಘಂಟೆಗೆ ಲಾಲ್‌ಬಾಗಿನಲ್ಲಿ ನಡೆಯುತ್ತೆ.

ಒಳಗೆ ಹೋಗುವ ಬಗ್ಯೆಗೆ ಇದರಡೀಕಂಡ ದರಗಳು ವಸೂಲ್ ಮಾಡಲ್ಪಡುವವು :—

ದೊಡ್ಡವರಿಗೆ	ಫೀ ಇಸಂ ವಂದುರೂಪಾಯಿ.
ಮಕ್ಕಳಿಗೆ	ಡಿಟ್ಟೋ ಯಂಟಾಣೆ.
ದಿರಸ್‌ಮೇಲೆ ಇರತಕ್ಕ ಸೋಲ್ಜರುಗಳಿಗೆ	ಡಿಟ್ಟೋ ನಾಲ್ಕಾಣೆ.

ತಾರೀಖು 4ನೇ ಗುರುವಾರ ದಿವಸವೆಲ್ಲಾ ಸರ್ವರೂ ಫೀ ಇಸಂ ಯರಡಾಣೆ ಪ್ರಕಾರ ಪಾವತಿ ಮಾಡಿ ಒಳಗೆ ಹೋಗಬಹುದು.

ಲಾಲ್‌ಬಾಗ್ ತೋಟಕ್ಕೆ ಸದರೀ ದಿವಸಗಳಲ್ಲಿ, ವಿನೋದಕೆಲಸಕ್ಕಾಗಿ ಸಂಬಂಧಪಟ್ಟ ಜನಗಳು ವಿನಾ, ಅನ್ಯಥಾ ಯಾರಿಗೂ ಅವಕಾಶ ಕೊಡಲ್ಪಡಲಾರದು.

ಜೆ. ಕ್ಯಾಮರನ್,
ಸೂಪರಿಂಟೆಂಡೆಂಟ್, ಗ|| ಗಾರ್ಡನ್ಸ್.

ಗೈರವಿಲಾ ಆದ

ಪ್ರಾಮಿಸರಿ ನೋಟಿನ.—

ನಂಬರ್.	ಸರ್ಕಲ್.	ಕ್ರಯ.	
B 96—01224	ಮದರಾಸ್	ರೂ. 10	ಹಕ್ಕುದಾರ್—ಶಿವಮೊಗ್ಗಾ ಡಿಸ್ಟ್ರಿಕ್ಟು ಶಿರಾಳಕೊಪ್ಪದಲ್ಲಿರುವ ಮೇಸ್ತ್ರಿ ಬಿ. ವೆಂಕಟರಾವ್.

Mysore Government Press, Bangalore.—1887.

607

ಮೈಸೂರ ಗೆಜೆಟ್.

ಸಂ. 31 ಸರ್ಕಾರದಿಂದ ಛಾಯಿಷ್ ಆದ್ದು. ಸರ್ 1887.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 6, ಸರ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೇಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕ್‌ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜೆಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 12ನೇ ಜ್ಯುಲೈ 1887.

ನಂ. 55.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜಾ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜಾ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಅಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೇ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಖಂ. ಕೊ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಕೋಲಾರ	ಕೋಲಾರ	ಬೆಟ್ಟದಹೊಸಹಳ್ಳಿ	ಶೇಷಮ್ಮ ವಗೈರೆ	28 13 15½	45 0 0	44 12 10	197 5 11 ಮತ್ತು ಬಡ್ಡೀ	ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರ ರೂಬರೂ ಅಗಸ್ಟ ತಾರೀಖು 18ರಲ್ಲು.
					ಯೆ. ಸೆಂ.				
	ಶಿಡ್ಲಘಟ್ಟ	ಗಂಜಿಗುಂಟೆ	ನಾಗಿರಡ್ಡಿಹಳ್ಳಿ	ಕೆ. ವಾಸುದೇವಾಚಾರಿ ವಗೈರೆ	25 0	125 15 5	98 3 4	547 3 5 ಮತ್ತು ಬಡ್ಡೀ	ಡಿಟೋ
ಶಿವಮೊಗ್ಗ.	ಷಿಕಾರಪುರ	ತಾಳಗುಂದ	ಅಗ್ರಹಾರ ಮುಚಡಿ	ಕಲ್ಲಾಭಟ್ಟು ಇತರ 16 ಮಂದಿ	381 34	1,333 0 0	1,201 0 0	1,253 9 8 ಮತ್ತು ಬಡ್ಡೀ	ಡಿಟೋ ಡಿಟೋ ತಾರೀಖು 31ರಲ್ಲು.
			ಮುಟ್ಟಹಳ್ಳಿ	ಡಿಟೋ	176 52	680 0 0	595 0 0	618 15 0 ಮತ್ತು ಬಡ್ಡೀ	ಡಿಟೋ
					ಯೆ. ಗುಂ.				
ಹಾಸನ.	ಬೇಲೂರು	ಬಾಣಾವರ	ಮೇಣಸುಮಾವಿ	ನರಸಿಮ್ಮಭಟ್ಟು ಇತರ 3 ಮಂದಿ	196 38	204 8 0	39 0 0	201 9 11 ಮತ್ತು ಬಡ್ಡೀ	ಡಿಟೋ ಡಿಟೋ ತಾರೀಖು 18ರಲ್ಲು.

ತಾರೀಖು 23ನೇ ಜುಲೈ 1887.

ನಂ. 60.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಅದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡೀಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮವು ಚಡ ದರಖಾಸ್ತುದಾರನಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಸಬ್ ಡಿವಿಜನ್ ಆಫೀಸರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ, ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಸಬ್ ಡಿವಿಜನ್ ಆಫೀಸರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗ್ಯೆರೆ.
					ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಮೈಸೂರು.	ಅತ್ತಿಕುಪ್ಪ.	ಸಂತೇಬಾಚಹಳ್ಳಿ.	ದೊಡ್ಡಸೋಮನಹಳ್ಳಿ.	ತಿಮ್ಮಯ್ಯ ವಗ್ಯೆರೆ.	349 17 0	221 0 7	223 14 9	83 13 10	ಸನ್ 1887ನೇ ಇಸವಿ ಆಗಸ್ಟ್ ತಾರೀಖು 31ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರು.

ತಾರೀಖು 23ನೇ ಜುಲೈ 1887.

ನಂ. 61.—ಮೂಡಿಗೆರೇ ಅಮಲ್‌ದಾರ್ ಕಂಠೀರವಾಚಾರ್ರು ಮಾಹೆ ಮಜಕೂರು 11ನೇ ಮರ್ಕುಮಿನಲ್ಲಿ ಮರಳಿ ಉದ್ಯೋಗದ ಮೇಲೆ ಹಾಜರಾಗಿರುವದರಿಂದ ಅವರಿಗೆ 1887ನೇ ಇಸವಿ ಮಾರ್ಚಿ 10ನೇ ಮರ್ಕುಮಿನ 1793ನೇ ನಂಬರ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ರಜಾ ಪೈಕೀ ಉಳಿದಭಾಗ ಅಂದರೆ 4 ದಿವಸಗಳ ರಜಾ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 26ನೇ ಜುಲೈ 1887.

ನಂ. 62.—ಹಾಸನ ಡಿಸ್ಟ್ರಿಕ್ಟು ಪೋಲೀಸ್ ಅ. ಕಮ್ಮಿಷನರ ಮ॥ ಏ. ಡಿ. ಪೊನ್ನರಂಗ ಮೊದಲಿಯಾರ್ರು ಅವರು ವುಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಯೇಳು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 63.—ಚಳ್ಳಕೆರೆ ತಾಲ್ಲೂಕು ಅಮಲ್‌ದಾರ್ ಗುಂಡಪ್ಪನವರಿಗೆ, 1887ನೇ ಇಸವಿ ಜೂನ 7ನೇ ಮರ್ಕುಂ ಕ್ಯಾಂಪ 753ನೇ ನಂಬರ್‌ವುಳ್ಳ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟಿದ್ದ ವೊಂದೂವರೇ ತಿಂಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ ಹತ್ತು ದಿನಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 64.—ಮ॥ ಹೆಚ್. ಯಸ್. ವಾರ್ಡಯವರು ಕ್ಲೋಸ್‌ಪೇಟೆ ಸಬ್ ಡಿವಿಜನಿನ ಚಾರ್ಜನ್ನ ಮ॥ ನಾಮಕಲ್‌ರಾಯರಿಗೆ 1887ನೇ ಇಸವಿ ಜುಲೈ 19ನೇ ತಾರೀಖಿನ ಮಧ್ಯಾನ್ಹಾತ್ಪರ ವೊಪ್ಪಿಸಿರುತ್ತಾರೆ.

ನಂ. 65—ಬೆಂಗಳೂರ ಟವರ್ನ ಮಾಜಿಸ್ಟ್ರೇಟ್ ಮ॥ ಈ. ಸಿ. ಷಣ್ಮುಗವೇಲುಪಿಳ್ಳೆಯವರಿಗೆ 1887ನೇ ಇಸವಿ ಜುಲೈ 9ನೇ ಮರ್ಕುಂ 52ನೇ ನಂಬರ್‌ವುಳ್ಳ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ 25 ದಿವಸಗಳ ಸೀಕ್ ರಜಾಕ್ಕೆ ಜಾಸ್ತಿಯಾಗಿ 4 ದಿವಸಗಳ ರಜಾ ಕೊಡಲ್ಪಟ್ಟಿರುತ್ತೆ.

ಹುಕ್ಕುಂ ಬಮೋಜಿಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರೇಟರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಫ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 6, ಸನ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್‌ಟ್ರೋಲರ್.

ಫಾರೆಸ್ಟು ಇಲಾಖಾ.

ತಾರೀಖು 23ನೇ ಜೂನ್ 1887.

ಹಾಸನದ ಡಿಸ್ಟ್ರಿಕ್ಟು ಮಂಜಿರಾಬಾದ್ ತಾಲ್ಲೂಕಿನಲ್ಲಿ ಇರತಕ್ಕ ಇದರಡೀ ಕಂಡ ಘಾಟೀ ಫಾರೆಸ್ಟುಗಳು ಮತ್ತು ಪ್ಲಾನ್‌ಟೇಷನ್‌ಗಳಲ್ಲಿ ಉತ್ಪತ್ತಿಯಾಗುವ ಇಲಾಚಿ ಮತ್ತು ಮೆಣಸನ್ನು ಗೇಣೀಮೂಲಕ ಹತ್ತುವರುಷಗಳ ಕಾಲಕ್ಕೆ ಅಂದರೆ 1887—88ನೇ ಸರ್ಕಾರ್ ಸಾಲ್ ಲಾಗಾಯತು 1896—97ನೇ ಸರ್ಕಾರ್ ಸಾಲಿನವರಿಗೆ ಜಮಾಯಿಸುವ ಹಕ್ಕುದಾರೀ ಬಗ್ಯೆ ದರಖಾಸ್ತುಗಳು ಯಿದರ ದೆಸೆಯಿಂದ ಅಪೇಕ್ಷಿಸಲ್ಪಡುತವೆ.

1. ಬಿದುರದ ಉಡವೇದೇಖೀಲ್ ಬಿಸಲೇಘಾಟಿ ಫಾರೆಸ್ಟು.

2. ಕಾಗನೀರೆಘಾಟಿ ಫಾರೆಸ್ಟು.
3. ಕೆಂಪಹೊಳೆ ಮತ್ತು ಕೆಂಚನ ಕುಮರಿ ಫಾರೆಸ್ಟುಗಳು.
4. ಕಬ್ಬಿನಾಲೆ ಮತ್ತು ಮೇಲಗದ್ದೆ ಫಾರೆಸ್ಟುಗಳು.
5. ನಡತೊಪ್ಪಲು ಪ್ಲಾಂಟೇಷನ್.

2. ದರಖಾಸ್ತುಗಳು, "ಘಾಟಿ ಫಾರೆಸ್ಟುಗಳು ವ ಪ್ಲಾಂಟೇಷನ್‍ಗಳ ಇಲಾಚಿ ಮತ್ತು ಮೆಣಸಿನಗೇಣಿಗೋಸ್ಕರ ದರಖಾಸ್ತುಗಳು" ಯೆಂಬದಾಗಿ ಮೇಲ್‍ವಿಳಾಸ ಬರೆಯಲ್ಪಟ್ಟು ಹಾಸನದ ಮೊಕ್ಕಾಂ ಹಾಸನದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರಿಗೆ 1887ನೇ ಇಸವಿ ಆಗಸ್ಟು 10ನೇ ಮುಕ್ಕಾಂ ಯಾ ಅದಕ್ಕೆ ಮುಂಚಿತವಾಗಿ ತಲಪುವಂತೆ ಕಳುಹಿಸಲ್ಪಡತಕ್ಕದ್ದು. ದರಖಾಸ್ತುಗಳು 1887ನೇ ಇಸವಿ ಆಗಸ್ಟು 10ನೇ ಮುಕ್ಕಾಮಿನಲ್ಲಿ ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಸದರೀ ಯವರಿಂದಲಾಗಲೀ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದಲಾಗಲೀ ಆಫೀಸ್ ಹೊತ್ತಿನಲ್ಲಿ ಖುಲ್ಲಾ ಮಾಡಲ್ಪಡುವದು. ದರಖಾಸ್ತುಗಳ ಆಖೈರ್ ವಿಲೇವಾರಿಯು ಮೈಸೂರು ದೇಶದ ಫಾರೆಸ್ಟು ವ ಪ್ಲಾಂಟೇಷನ್‍ಗಳ ಇನ್‍ಸ್ಪೆಕ್ಟರ್‍ಜನರಲ್‍ಯವರಿಗೆ ಸೇರಿಯಿರುತ್ತೆ; ಸದರೀ ಯಾವ ದರಖಾಸ್ತನ್ನಾಗಲಿ ಯಾ ತಮಾಂ ದರಖಾಸ್ತುಗಳನ್ನಾಗಲೀ ಯಾವ ಸಬಬೂ ತಿಳಿಸದೆಯೇ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

3. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲೀ ಕರ್ರೆನ್ಸೀನೋಟಿನ ಮೂಲಕವಾಗಿಯಾಗಲೀ ವಂದು ನೂರು ರೂಪಾಯಿಗಳ ಠೇವಣಿಯನ್ನು ಕಳುಹಿಸತಕ್ಕದ್ದು. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾಜರ್‍ಮಾಡಲ್ಪಟ್ಟ ಠೇವಣಿಗಳು, ಆಯಾ ಜನಗಳಿಗೆ ಕ್ರಮವಾಗಿ ವಾಪಸ್ ಮಾಡಲ್ಪಡುವವು.

4. ಯಾವ ದರಖಾಸ್ತು ಫಾರೆಸ್ಟು ವ ಪ್ಲಾಂಟೇಷನ್‍ಗಳ ಇನ್‍ಸ್ಪೆಕ್ಟರ್ ಜನರಲ್‍ಯವರಿಂದ ಆಖೈರಾಗಿ ಮಂಜೂರ್‍ಮಾಡಲ್ಪಡುತದೆಯೋ ಅಂಥಾ ದರಖಾಸ್ತುದಾರನು, ತನ್ನ ದರಖಾಸ್ತು ಮಂಜೂರ್‍ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ 15 ದಿವಸಗಳವಳಗಾಗಿ ನಗದಾಗಿಯಾದರೂ ಅಥವಾ ಕರ್ರೆನ್ಸೀನೋಟುಗಳ ಮೂಲಕವಾಗಿಯಾದರೂ, ತಾನು ಮೊದಲೆ ಹಾಜರ್‍ಮಾಡಿರುವ ಡಿಪಾಜಿಟ್ ಮೊಬಲಗು ದೇಖೀಲ್ ಗುತ್ತಿಗೇ ಮೊಬಲಗಿನ ಹತ್ತರಲ್ಲಿ ವಂದು ಭಾಗಕ್ಕೆ ಸಮನಾಗುವಂತೆ ಠೇವಣಿ ಮೊಬಲಗನ್ನು ಡೆಪ್ಯುಟಿ ಕಮ್ಮಿಷನರಲ್ಲಿ ಹಾಜರ್‍ಮಾಡಿ, ತಕ್ಕ ಛಾಪಾ ಕಾಗದ್ದಲ್ಲಿ ಮುಂದೆ ವುದಹರಿಸಲ್ಪಟ್ಟ ಷರತ್ತುಗಳಿಗೆ ಒಳಪಟ್ಟು ಬದ್ಧನಾಗಿ ಕರಾರು ಬರೆದು ಕೊಡತಕ್ಕದ್ದು; ಮತ್ತು ಆತನು ಸದರೀ ಕರಾರಿಗೆ ರುಜು ಮಾಡುವದಕ್ಕೆ ತಪ್ಪಿದರೆ ಯಾ ತಿರಸ್ಕರಿಸಿದರೆ ಅಥವಾ ಅವಶ್ಯಕವಾದ ಠೇವಣಿಯನ್ನು ಹಾಜರ್‍ಮಾಡದಿದ್ದರೆ, ಮೊದಲೇ ಯಿಡೋಣಾದ ಡಿಪಾಜಿಟ್ಟು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದಲ್ಲದೆ ಗೇಣಿಯು ಅನ್ಯಥಾ ವಿಲಾಮಾಡಲ್ಪಡುವದು.

5. ಹಾಲೀ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುವ ಗೇಣಿಯು, ಇದರಡೀ ಕಂಡ ಷರತ್ತುಗಳಿಗೆ ವೊಳಪಟ್ಟಿರತಕ್ಕದ್ದು:—

I. ಗೇಣಿ ಮೊಬಲಗು ಹತ್ತು ಸಮನಾದ ಸಾಲಿಯಾನಾ ಖಿಸ್ತುಗಳಾಗಿ ಪ್ರತಿ ಆಗಸ್ಟು ತಿಂಗಳಲ್ಲಿ ಅಂದರೆ ಆಯಾ ಕಾಲದ ಫಸಲನ್ನು ಜಮಾಯಿಸುವದಕ್ಕೆ ಮುಂಚಿತವಾಗಿ ಸರಕಾರಕ್ಕೆ ಪಾವತೀ ಮಾಡಲ್ಪಡತಕ್ಕದ್ದು. ಗೇಣೀದಾರನು ಇದಕ್ಕೆ ತಪ್ಪಿದರೆ ಗೇಣಿಯು ರದ್ದುಮಾಡಲ್ಪಟ್ಟು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟು ಯಾ ಪ್ಲಾಂಟೇಷನ್ ಸರ್ಕಾರ್ ಸ್ವಾಧೀನತೆಗೆ ತೆಗದುಕ್ಕೊಳ್ಳಲ್ಪಡುವದು. ಗೇಣೀದಾರನಿಂದ ಇಡಲ್ಪಟ್ಟ ಠೇವಣಿಯು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

II. ಗೇಣೀ ವಾಯಿದೆಯು ಮುಗಿದ ತರುವಾಯ, ಗೇಣಿಯನ್ನು ರೆನ್ಯೂ ಯಾನೆ ಪುನಹಾ ಪಡೆಯುವ ಬಗ್ಯೆ ಸರ್ಕಾರದವರಿಗೆ ಯುಕ್ತವಾಗಿ ತೋರಿಬರುವ ಷರತ್ತುಗಳ ಮೇಲೆ ಮತ್ತು ಹಾಂಗೆ ಗೊತ್ತುಮಾಡಲ್ಪಡಬಹುದಾದ ಕಾಲಕ್ಕೆ ಗೇಣೀದಾರನಿಗೆ ಅವಕಾಶ ಕೊಡಲ್ಪಡುವದು.

III. ಗೇಣಿಯು, ಯಿಲಾಚಿ ಮತ್ತು ಮೆಣಸನ್ನು ಜಮಾಯಿಸುವದಕ್ಕೂ ಮತ್ತು ಅವುಗಳನ್ನು ಸಾಗುವಳಿ ಮಾಡುವದಕ್ಕೂ ಮಾತ್ರವೇ ಆಗಿರುವದರಿಂದ, ಇನ್ನ್ಯಾವ ತರಹೆಯ ಇತರ ಫಸಲಾಗಲೀ ಗೇಣಿಗೆ ಪಡೆದಿರುವ ಫಾರೆಸ್ಟಿನಲ್ಲಿ ಸಾಗುವಳಿ ಮಾಡಲ್ಪಡಕೂಡದು, ಪರಂತು ಯಿಲಾಚಿ ಗಿಡಗಳಿಗೂ ಮೆಣಸಿನ ಬಳ್ಳಿಗಳಿಗೂ ನೆರಳಿಗೋಸ್ಕರ ಅವಶ್ಯಕವಾದ ಬಾಳೆ ಹರಳು ಯಾ ಇತರ ಮರಗಳು ಬೆಳಿಸಕೂಡದೆಂದು ಅರ್ಥವಾಗತಕ್ಕದ್ದಲ್ಲಾ.

IV. ಫಾರೆಸ್ಟು ಆಫೀಸರರ ಬರಹಮೂಲಕವಾದ ಅಪ್ಪಣೆ ವಿನಾ ಯಾವವಿಧವಾದ ಮರವೇಆಗಲೀ ಕಡಿಯಲ್ಪಡಕೂಡದು; ಮತ್ತು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟುಗಳಿಂದ ಯಾವ ಇಲಾಚೀಗಿಡಗಳಾಗಲಿ ಮೆಣಸಿನಬಳ್ಳಿಯಾಗಲಿ ಯಾವ ಸಂದರ್ಭಗಳಲ್ಲೂ ಆಗೆದು ಆಚೆಗೆ ಸಾಗಿಸಲ್ಪಡಕೂಡದು. ಯಿಲಾಚೀ ಗಿಡಗಳ ಮತ್ತು ಮೆಣಸಿನಬಳ್ಳಿಗಳ ಬೆಳವಣಿಗೆ ಯಾ ಅಭಿವೃದ್ಧಿಗೋಸ್ಕರವೇ ಜಮೀನನ್ನು ಬೈಲ್ ಮಾಡುವದಕ್ಕಾಗಿ ಯಾವದಾದರೂ ಮರಗಳನ್ನು ಕತರಾಯಿಸುವದು ಅವಶ್ಯಕವಾದಾಗ ಗೇಣೀದಾರನು ಫಾರೆಸ್ಟು ಆಫೀಸರರಿಗೆ ಬರೆದು ಕೊಳ್ಳತಕ್ಕದ್ದು, ಅವರು ಕತರಾಯಿಸಲ್ಪಡಬೇಕಾದ ಮರಗಳನ್ನು ಗುರ್ತು ಮಾಡತಕ್ಕದ್ದು ಮತ್ತು ಹಾಂಗೆ ಕತರಾಯಿಸಲ್ಪಟ್ಟ ಮರಗಳು ಫಾರೆಸ್ಟು ಇಲಾಖೆಯವರಿಂದ ಸ್ವಾಧೀನ

ಕ್ಕೆ ತೆಗೆದುಕೊಳ್ಳಲ್ಪಡತಕ್ಕದ್ದು. ಗೇಣೀದಾರನು ಸದರೀ ಮರಗಳ ಪೈಕಿ ಯಾವದನ್ನಾದರೂ ಅಪೇಕ್ಷಿಸಿದರೆ, ಇದರಡೀ ಕಂಡ ಗೊತ್ತಾದ ಸೀನಿಯ ರೇಜ್ ಯಾನೆ ತೀರ್ವೇ ದರಗಳು ಯಾ ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ಯಿನ್ನೂ ಕಮ್ಮಿಯಾದ ದರಗಳು ಪಾವತೀ ಮಾಡಲ್ಪಟ್ಟ ತರುವಾಯ ಕೊಡಲ್ಪಡತಕ್ಕದ್ದು:—

		ರೂ.
ಪ್ರೂ	ದರಮರ ಒಂದಕ್ಕೆ	15
ಹೆಸವಾ	ಡಿಟೋ	10
ಕರೀಮರ	ಡಿಟೋ	8
ನಂದಿ	ಡಿಟೋ	8
ಹೆಜನಿ	ಡಿಟೋ	6
ಯಬನಿ	ಡಿಟೋ	10
ಇತರ ತಮಾಂ ತರಹೆಯ ಮರಗಳೂ	ಡಿಟೋ	3½
ಬೊಂಬುಗಳು	ದರ 100ಕ್ಕೆ	10

V. ಗೇಣೀದಾರನು, ಇಲಾಚಿ ಮತ್ತು ಮೆಣಸು ವಿನಾ ಇತರ ಯಾವ ಫಾರೆಸ್ಟು ಹುಟ್ಟುವಳಿಗಾಗಲೀ ಹಕ್ಕುದಾರನಾಗಿರುವದಿಲ್ಲಾ, ಮತ್ತು ಫಾರೆಸ್ಟುಗಳು ವ ಪ್ಲಾಂಟೇಷನ್ಗಳಲ್ಲಿರತಕ್ಕ ರಸ್ತೆಗಳನ್ನು ಆವರಣಿಸುವದಕ್ಕಾಗಲಿ, ನಿರೋಧಪಡಿಸುವದಕ್ಕಾಗಲಿ ಯಾ ಮತ್ತ್ಯಾವ ವಿಧವಾಗಿಯಾದರೂ ಅಟಂಕಪಡಿಸುವದಕ್ಕಾಗಲೀ ಗೇಣೀದಾರಗೆ ಸ್ವತಂತ್ರ ವಿರುವದಿಲ್ಲಾ; ಮತ್ತು ಗವರ್ನಮೆಂಟಿನವರು ಅಂಥಾ ತಮಾಂ ಫಾರೆಸ್ಟು ವ ಪ್ಲಾಂಟೇಷನ್ಗಳಲ್ಲಿಯು ಯಲ್ಲ ತರಹೆಯ ಪೂರ್ತಿಯಾದ ಹಕ್ಕುದಾರಿಗಳನ್ನೂ ತಾವೇ ಉಳಸಿಕೊಂಡಿರುತ್ತಾರೆ.

VI. ಈ ರೂಲ್ಸ್ ಅನುಸರಿಸಿ ಪಡೆದ ಇಲಾಚಿ ವ ಮೆಣಸಿನ ಗೇಣಿಯು ಗೇಣೀದಾರನ ಯಿಷ್ಟಾನುಸಾರ ವಿಕ್ರಯಿಸಲ್ಪಡಬಹುದು ಯಾ ಅನ್ಯಥಾ ಪರಭಾರೇ ಮಾಡಲ್ಪಡಬಹುದು, ಪರಂತು ಅಂಥಾ ಪರಭಾರೆಯ ವರ್ತಮಾನವು ಡೆಪ್ಯುಟಿ ಕಮ್ಮಿಷನರವರಿಗೆ ಅವರ ಆಫೀಸಿನಲ್ಲಿ ದಾಖಲೆ ಬಗ್ಯಾಗಿ ಕೊಡಲ್ಪಡತಕ್ಕದ್ದು, ಮತ್ತು ಗೇಣಿಯ ಪರಭಾರೆಯು ರೆಜಿಸ್ಟ್ರೇಷನ್ ಆಕ್ಟಿನ ನಿಯಮಗಳನ್ನನುಸರಿಸಿ ಕ್ರಮವಾಗಿ ರಿಜಿಸ್ಟ್ರು ಮಾಡಲ್ಪಡತಕ್ಕದ್ದು.

ಯಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್.

ಅಂಚೇ ಇಲಾಖಾ.

ನಂಬರ್ 167—92. ತಾರೀಖು 28ನೇ ಜುಲೈ 1887.

ಇದರಿಂದ ಸಕಲಜನಗಳಿಗೂ ತಿಳಿಯುವ ಬಗ್ಯೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರ ಅಪ್ಪಣೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೇ ಆಫೀಸ್‌ಗಳು ಸ್ಥಾಪಿಸಲ್ಪಟ್ಟು ಯಿರುತ್ತೆ:—

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳದ ಹೆಸರು.
ನೆಲಮಂಗಲ ..	ಯಲೆಕ್ಯಾತನಹಳ್ಳಿ.
ಮಾಗಡಿ ..	ತಿಪ್ಪಸಂದ್ರ

ತಾಲ್ಲೂಕು.	ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳದ ಹೆಸರು.
ಮದ್ದಗಿರಿ ...	ಹೊಳವನಹಳ್ಳಿ
ಮಂಜರಾಬಾದ್ ..	ವುದೇವಾರ
ಡಿಟೋ ..	ಮಾರ್‍ನಹಳ್ಳಿ
ತುಮಕೂರು ..	ಹೆಳಧರ

ಬಿ. ಮರಿಗೆಂಗಯ್ಯ,
ಅಂಚೇ ಬಕ್ಷಿ.

ಮೈಸೂರು ಡಿಸ್ಟ್ರಿಕ್ಟ್.

ನಂ. 8.

ತಾರೀಖು 1ನೇ ಅಗಸ್ಟು 1387.

ಚಾಮರಾಜನಗರ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತೈವಜನ್ನು ಕ್ರಮವಾದ ವಾರಸ್‌ದಾರ್ರಾಗಲಿ, ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷರ್ನ ಆಕ್ಟು 85ನೇ ಸೆಕ್ಷರ್ನ ಮೇರಿಗೆ ನಾಶಪಡಿಸಲ್ಪಡುತ್ತೆ.

ನಂಬರ್.	ದಸ್ತೈವಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರು ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
236 / 1885—86	ಚಾಮರಾಜನಗರ ತಾಲ್ಲೂಕು ನಾಗನಹಳ್ಳಿ ಗ್ರಾಮದಲ್ಲಿರುವ ರಂಗಪ್ಪನ ಮಗ ಪುಟ್ಟಿನಪುರದ ಶ್ಯಾನಭೋಗ ಅನಂತಪ್ಪ	ಚಾಮರಾಜನಗರ ತಾಲ್ಲೂಕು ನಾಗನಹಳ್ಳಿ ಗ್ರಾಮದಲ್ಲಿರುವ ಮುಸಲಮಾನರ ಅಬ್ದುಲ್ ನಬೀಸಾಬಿ ಮಗ ಖಾಶಿಂಸಾಬಿ	28—7—85	29—7—85	(70) ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ಟಿ. ಆನಂದರಾವ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 331.

ಮೃತಪಟ್ಟ ಸುಬ್ಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಸುಬ್ಬರಾಮಯ್ಯ ಮೈನರ್, ಗಾರ್ಡಿಯರ್ನ ಕ್ರಿಷ್ಣಪ್ಪನವರು, ಮೃತಪಟ್ಟ ಸದರೀ ಸುಬ್ಬರಾಯರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಲಷ್ಕರ್ ಮೊಹಲಾ ಸ್ಥಳದ ಸದರೀ ಕ್ರಿಷ್ಣಪ್ಪನವರು ಸದರೀ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯರ ಜೆಂದಗಿ ಭಗ್ಯಾಗಿ ಬರತಕ್ಕ 150 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕ್ರಿಷ್ಣಪ್ಪನವರ ಅರ್ಜೀಯನ್ನ 1887ನೇ ಇಸವಿ ಆಗಸ್ಟು ತಿಂಗಳು ತಾರೀಖು 19ರಲ್ಲು ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 347.

ಮೃತಪಟ್ಟ ಆಸ್ಪತ್ರೇಲಿಂಗಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ನಾಗಯ್ಯನು, ಮೃತಪಟ್ಟ ಸದರೀ ಆಸ್ಪತ್ರೇಲಿಂಗಯ್ಯನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ದೇವರಾಜ ಮೊಹಲಾ ಸ್ಥಳದ ಸದರೀ ನಾಗಯ್ಯನು ಸದರೀ ವಾಸಸ್ಥರಾಗಿ ಮೃತಪಟ್ಟಆಸ್ಪತ್ರೇಲಿಂಗಯ್ಯನವರ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಾಗಯ್ಯನ ಅರ್ಜೀಯನ್ನು 1887ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆಸ್ಪತ್ರೇಲಿಂಗಯ್ಯನವರ ಆಸ್ತಿಗೆ ಹಕ್ಕುದಾರರಾದವಿಸಿಸ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಜುಲೈ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟು ಸೆಂಟ್ರಲ್ ರಿಕಾರ್ಡ್ ರೂಂನಲ್ಲಿ, ಮೈಸೂರು ಚೀಫ್ ಕೋರ್ಟಿನಿಂದ ಬಂದಿರುವ 1886ನೇ ಇಸವಿ ಫೆಬ್ರವರೀ 3ನೇ ಮರ್ಕ್ಯುಂ ರೂಲಾಫ್ ಪ್ರಾಕ್ಟಿಸ 66ನೇ ನಂಬರ ಅನುಸರಿಸಿ ನಾಶ ಮಾಡಲ್ಪಡುವ ಯೆಕ್ಸಿಬಿಟ ವಗೈರೆಗಳ ಸ್ಟೇಟಮೆಂಟು.

ಮೊಕದ್ದಮಾ ನಂಬರ ಮತ್ತು ಇಸವಿ.	ಯಾವ ಕೋರ್ಟಿನಲ್ಲಿ ಹಾಜರಾಯಿತೋ ಅದರ ಹೆಸರು.	ಕಕ್ಷಿಗಾರರ ಹೆಸರು.		ಯಾರಿಂದ ಹಾಜರಾಯಿತೋ ಅವರ ಹೆಸರು.	ಯೆಕ್ಸಿಬಿಟಗಳಸಂಖ್ಯೆ.
		ವಾದಿ.	ಪ್ರತಿವಾದಿ.		
1869ನೇ ಇಸವಿ ಅರಿಜಿನಲ್ ನಂ. 4	ಮೈಸೂರು ಜುಡಿಷಿಯಲ್ ಅಸಿಸ್ಟೆಂಟ ಕಮಿಷನರವರ ಕೋರ್ಟು. ..	ಚನ್ನಕೃಷ್ಣಯ್ಯ ..	ವೆಂಕಟಲಕ್ಷ್ಮಮ್ಮಾ ..	ವಾದಿಯಿಂದ	1
ಡಿಟೋ ನಂಬರು 15	ಡಿಟೋ ..	ತಮ್ಮಯ್ಯ ..	ಸುಬ್ಬಯ್ಯ ..	ಡಿಟೋ	1
ಡಿಟೋ ನಂಬರು 19	ಡಿಟೋ ..	ನಂಜಣ್ಣ ..	ಹೊಂಬಾಲಮ್ಮ ..	ಡಿಟೋ	1
ಡಿಟೋ ನಂಬರು 20	ಡಿಟೋ ...	ಜಾವಲ್‌ದಾಸ ಕಿಂಮತ'ರಾಂಶೇಟ	ಕಂದಾರಿ ಸೈದ್‌ಷರಾಪ್ ..	ಡಿಟೋ	1
ಡಿಟೋ ನಂಬರು 21	ಡಿಟೋ ...	ಗಿರಿಶೆಟ್ಟಿ ..	ಪುಟ್ಟಲಿಂಗಣ್ಣ ..	ಡಿಟೋ	3
ಡಿಟೋ ನಂಬರು 22	ಡಿಟೋ ..	ಸಯ್ಯದ್‌ಬುರ್ಹ ..	ಚೌದ್ರಿಲಾಲಾಮಿಯ್ಯ ..	ಪ್ರತಿವಾದಿಯಿಂದ	2
ಡಿಟೋ ನಂಬರು 23	ಡಿಟೋ ..	ತಿಂಮಮ್ಮಾ ..	ಶಾಮಯ್ಯ ..	ವಾದಿಯಿಂದ	1
ಡಿಟೋ ನಂಬರು 24	ಡಿಟೋ ..	ಶಾಮಯ್ಯ ..	ವೆಂಕಟಾವಧಾನಿ ..	ಡಿಟೋ	1
ಡಿಟೋ ನಂಬರು 25	ಡಿಟೋ ..	ಶ್ರೀಕಂಠಯ್ಯ ..	ಬಸವರಾಜೇಅರಸು ..	ಡಿಟೋ	1
ಡಿಟೋ ನಂಬರು 27	ಡಿಟೋ ..	ಗುರಿಕಾರ್ ದ್ಯಾವಣ್ಣ ..	ತೋಟದಯ್ಯ ..	ಡಿಟೋ	1
ಡಿಟೋ ನಂಬರು 29	ಡಿಟೋ ..	ತಂಮಯ್ಯ ..	ಕೆಂಪಣ್ಣ ..	ಡಿಟೋ	1
ಡಿಟೋ ನಂಬರು 30	ಡಿಟೋ ..	ಗಿರಿಶೆಟ್ಟಿ ..	ವೆಂಕಮ್ಮಾ ..	ಡಿಟೋ	1
ಡಿಟೋ ನಂಬರು 34	ಡಿಟೋ ..	ಅರ್ಕೇಶ್ವರಭಟ್ಟ ..	ತಿಂಮಪ್ಪಯ್ಯ ..	ಡಿಟೋ	1
ಡಿಟೋ ನಂಬರು 35	ಡಿಟೋ ..	ಶ್ರೀಕಂಠಯ್ಯ ..	ಗಂಗಾಧರಯ್ಯ ..	ಉಭಯಕಕ್ಷಿಗಾರರಿಂದ	3
ಡಿಟೋ ನಂಬರು 36	ಡಿಟೋ ..	ಗರಳಪುರಯ್ಯ ..	ತಿರುಮಲಗಿರಿ ..	ವಾದಿಯಿಂದ	1
ಡಿಟೋ ನಂಬರು 39	ಡಿಟೋ ..	ಪುಟ್ಟಣ್ಣ ..	ಮಂಜಾಚಾರಿ ..	ಡಿಟೋ	1
ಡಿಟೋ ನಂಬರು 40	ಡಿಟೋ ..	ಚಂದ್ರಶೆಟ್ಟಿ ..	ಕರಿಬಸವಯ್ಯ ..	ಡಿಟೋ	1
ಡಿಟೋ ನಂಬರು 41	ಡಿಟೋ ..	ಶಾಮರಾವು ..	ಚಿಕ್ಕಮಾದಪ್ಪ ..	ಡಿಟೋ	1

2 B

ಮೊಕದ್ದಮಾ ನಂಬರ್ ಮತ್ತು ಇಸವಿ.	ಯಾವ ಕೋರ್ಟಿನಲ್ಲಿ ಹಾಜರಾಯಿತೋ ಅದರ ಹೆಸರು.	ಕಕ್ಷಿಗಾರರ ಹೆಸರು.		ಯಾರಿಂದ ಹಾಜರಾಯಿತೋ ಅವರ ಹೆಸರು.	ಯೆಕ್ಸಿಬಿಟ್‌ಗಳ ಸಂಖ್ಯೆ.
		ವಾದಿ.	ಪ್ರತಿವಾದಿ.		
1869ನೇ ಇಸವಿ ಅ|| ನಂಬರ್ 42.	ಮೈಸೂರು ಜುಡಿಷಿಯಲ್ ಅ|| ಕಮಿಷನರವರ ಕೋರ್ಟು.	ಮಾದಯ್ಯ ..	ಮಾದೇಗವುಡ ..	ವಾದಿಯಿಂದ ..	1
ಡಿಟೋ ನಂಬರು 51	ಡಿಟೋ ..	ಮರಿಗವುಡಾ ..	ಬೋರೆಗವುಡ ..	ಡಿಟೋ ..	1
ಡಿಟೋ ನಂಬರು 54	ಡಿಟೋ ..	ವುಗ್ರಪ್ಪ ..	ಅರಸಾವಗ್ಯೆರೆ ..	ಡಿಟೋ ..	1
ಡಿಟೋ ನಂಬರು 55	ಡಿಟೋ ..	ಡಿಟೋ ..	ಈರಾ ..	ಡಿಟೋ ..	1
ಡಿಟೋ ನಂಬರು 56	ಡಿಟೋ ..	ರಾಧಾಬಾಯಿ ..	ವೆಂಕಮ್ಮಾ ..	ಡಿಟೋ ..	2
ಡಿಟೋ ನಂಬರು 57	ಡಿಟೋ ..	ಚನ್ನೆಗವುಡ ..	ಹುಚ್ಚಮ್ಮವಗ್ಯೆರೆ ..	ಡಿಟೋ ..	1
ಡಿಟೋ ನಂಬರು 58	ಡಿಟೋ ..	ದಾಸಪ್ಪಾ ..	ಯೆಗ್ಗಡೆ ..	ಡಿಟೋ ..	1
ಡಿಟೋ ನಂಬರು 60	ಡಿಟೋ ..	ಮಾಚೆಗವುಡ ..	ಚಂಸೆಗವುಡಾ ..	ಡಿಟೋ ..	1
ಡಿಟೋ ನಂಬರು 61	ಡಿಟೋ ..	ವೆಂಕಟಸುಬ್ಬಯ್ಯ ..	ಚೆಂನಯ್ಯ ..	ಡಿಟೋ ..	1
ಡಿಟೋ ನಂಬರು 62	ಡಿಟೋ ..	ಈರಂಣ ..	ದೇವಿವಗ್ಯೆರೆ ..	ಡಿಟೋ ..	2
ಡಿಟೋ ನಂಬರು 63	ಡಿಟೋ ..	ನಂಜಂಣ ..	ಬಸೆಟ್ಟಿ ..	ಡಿಟೋ ..	1
ಡಿಟೋ ನಂಬರು 65	ಡಿಟೋ ..	ಸುಬ್ಬಂಣ ..	ಅಸವತ್‌ಖಾ ..	ಡಿಟೋ ..	1
ಡಿಟೋ ನಂಬರು 66	ಡಿಟೋ ..	ನಂಜಂಣ ..	ನಂಜಮ್ಮಾ ..	ಡಿಟೋ ..	1
ಡಿಟೋ ನಂಬರು 67	ಡಿಟೋ ..	ಶ್ರೀರಂಗಾಚಾರ್ ..	ನರಸಂಭಟ್ಟಾ ..	ಡಿಟೋ ..	1
ಡಿಟೋ ನಂಬರು 69	ಡಿಟೋ ..	ಹಯಾತ್‌ಸಾಬಿ ..	ಚಿಕ್ಕಮಾದಪ್ಪ ..	ಡಿಟೋ ..	2
ಡಿಟೋ ನಂಬರು 70	ಡಿಟೋ ..	ಹೊಂಬೆಗವುಡ ..	ಲಿಂಗಿ ..	ಡಿಟೋ ..	1
ಡಿಟೋ ನಂಬರು 71	ಡಿಟೋ ..	ಸಂಪತ್ತು ಮಾರಯ್ಯ ..	ರಾಮಾನುಜಯ್ಯಂಗಾರ್ ..	ಡಿಟೋ ..	4
ಡಿಟೋ ನಂಬರು 73	ಡಿಟೋ ..	ವೆಂಕಟಸಾಮಯ್ಯ ..	ಚಂದ್ರಗಿರಿಗೋಸಾಯಿ ..	ಡಿಟೋ ..	3
ಡಿಟೋ ನಂಬರು 75	ಡಿಟೋ ..	ತಮ್ಮಯ್ಯ ..	ವೆಂಕಟರಮಣಶೆಟ್ಟಿ ..	ಡಿಟೋ ..	1
ಡಿಟೋ ನಂಬರು 76	ಡಿಟೋ ..	ಶಿಬಯ್ಯ ..	ಡಿಟೋ ..	ಡಿಟೋ ..	1
ಡಿಟೋ ನಂಬರು 77	ಡಿಟೋ ..	ಸುಬ್ಬಯ್ಯ ..	ಸುಬ್ಬಂಣ ..	ಡಿಟೋ ..	1
ಡಿಟೋ ನಂಬರು 78	ಡಿಟೋ ..	ಮರೀಂಬಿ ..	ತೇಗನಾಯಕ ..	ಪ್ರತಿವಾದಿಯಿಂದ ..	2

1869ನೇ ಇಸವಿ ಅ|| ನಂಬರು 79	ಮೈಸೂರು ಜುಡಿಷಿಯಲ್ ಅಸಿಸ್ಟೆಂಟ್ ಕಮಿಷ್ನರವರ ಕೋರ್ಟು. ..	ತಮ್ಮಯ್ಯ ..	ಮಧ್ವಾಚಾರಿ ..	ವಾದಿಯಿಂದ	1
ಡಿಟೋ ನಂಬರು 80	ಡಿಟೋ ..	ಬ್ರಹ್ಮಯ್ಯ ..	ಯೆ.ನಪ್ಪ ..	ಡಿಟೋ	1
ಡಿಟೋ ನಂಬರು 83	ಡಿಟೋ ..	ಡಿಟೋ ..	ಚಿಕ್ಕಣ್ಣ ..	ಡಿಟೋ	1
ಡಿಟೋ ನಂಬರು 84	ಡಿಟೋ ..	ಲಿಂಗಯ್ಯ ..	ಲಿಂಗೇಗವುಡ ..	ಡಿಟೋ	1
ಡಿಟೋ ನಂಬರು 85	ಡಿಟೋ ..	ಚನ್ನವೀರೇದೇವರು ..	ಸಿದ್ದಮ್ಮ ..	ಡಿಟೋ	1
ಡಿಟೋ ನಂಬರು 86	ಡಿಟೋ ..	ಪುಟ್ಟಪ್ಪ ..	ರಂಗಮ್ಮ ..	ಡಿಟೋ	1
ಡಿಟೋ ನಂಬರು 88	ಡಿಟೋ ..	ದೊಡ್ಡಣ್ಣ ..	ಚನ್ನಯ್ಯ ..	ಡಿಟೋ	1
ಡಿಟೋ ನಂಬರು 89	ಡಿಟೋ ..	ಗುಂಡಪ್ಪ ..	ವೀರತ್ತೇಗವುಡ ..	ಡಿಟೋ	2
ಡಿಟೋ ನಂಬರು 90	ಡಿಟೋ ..	ಕೃಷ್ಣಪ್ಪ ..	ಸೈಯದ್ ಬುರ್ಹ ..	ಡಿಟೋ	2
ಡಿಟೋ ನಂಬರು 91	ಡಿಟೋ ..	ಬಿಕೆಟ್ಟಿ ..	ರುದ್ರಯ್ಯ ..	ಡಿಟೋ	2
ಡಿಟೋ ನಂಬರು 92	ಡಿಟೋ ..	ವೆಂಕಟಸುಬ್ಬಯ್ಯ ..	ಬಸವಯ್ಯ ..	ಡಿಟೋ	1
ಡಿಟೋ ನಂಬರು 94	ಡಿಟೋ ..	ನಂಜುಂಡಯ್ಯ ..	ಕೆಂಪೇಗವುಡ ..	ಡಿಟೋ	2
ಡಿಟೋ ನಂಬರು 95	ಡಿಟೋ ...	ವೀರಭದ್ರಯ್ಯ ..	ಪುಟ್ಟಣ್ಣ ..	ಡಿಟೋ	1
ಡಿಟೋ ನಂಬರು 96	ಡಿಟೋ ..	ಕೃಷ್ಣಯ್ಯ ..	ತಿಮ್ಮರಾಯ ..	ಡಿಟೋ	5
ಡಿಟೋ ನಂಬರು 98	ಡಿಟೋ ..	ಗೋವಿಂದಯ್ಯ ..	ಇಸಬ್‌ಖಾ ..	ಡಿಟೋ	2
ಡಿಟೋ ನಂಬರು 99	ಡಿಟೋ ..	ಚೆನ್ನಮ್ಮ ..	ಚಿಕ್ಕಣ್ಣ ..	ಡಿಟೋ	1
ಡಿಟೋ ನಂಬರು 100	ಡಿಟೋ ..	ಹರಿರಾಮಯ್ಯ ..	ದಾಸಪ್ಪ ..	ಡಿಟೋ	1
ಡಿಟೋ ನಂಬರು 101	ಡಿಟೋ ..	ನಾಗಪ್ಪ ..	ಮುನಿಸ್ವಾಮಿ ..	ಡಿಟೋ	1
ಡಿಟೋ ನಂಬರು 102	ಡಿಟೋ ..	ಬಾವಾಸಾಬಿ ..	ಸುಬ್ಬಣ್ಣ ..	ಡಿಟೋ	1
ಡಿಟೋ ನಂಬರು 103	ಡಿಟೋ ..	ಸುಬ್ಬಾಬೋಯಿ ..	ಚಿಕ್ಕಣ್ಣ ..	ಡಿಟೋ	1
ಡಿಟೋ ನಂಬರು 104	ಡಿಟೋ ..	ನಾಗಣ್ಣ ..	ಚೆಲುವಿ ವಗೈರೆ ..	ಡಿಟೋ	1
ಡಿಟೋ ನಂಬರು 105	ಡಿಟೋ ..	ನರಸಪ್ಪ ..	ರಂಗಾಚಾರಿ ..	ಉಭಯವಾದಿಗಳಿಂದ	4
ಡಿಟೋ ನಂಬರು 109	ಡಿಟೋ ..	ದೇವೀದಾಸಲಾಲಾ ..	ದಾಸಪ್ಪ ..	ಡಿಟೋ	2
ಡಿಟೋ ನಂಬರು 110	ಡಿಟೋ ..	ಲಕ್ಷ್ಮೀಬಾಯಿ ..	ರಂಗಣ್ಣ ..	ವಾದಿಯಿಂದ	1
ಡಿಟೋ ನಂಬರು 113	ಡಿಟೋ ..	ಗುರುರಾವ್ ..	ಹಲಗೈಯ್ಯ ..	ಡಿಟೋ	2
ಡಿಟೋ ನಂಬರು 114	ಡಿಟೋ ..	ಶಾಮಣ್ಣ ..	ಮಾದಯ್ಯ ..	ಡಿಟೋ	1
ಡಿಟೋ ನಂಬರು 118	ಡಿಟೋ ..	ಡಿಟೋ ..	ಆದಿವಾನಯ್ಯ ..	ಡಿಟೋ	1
ಡಿಟೋ ನಂಬರು 120	ಡಿಟೋ ..	ಜೂಡಪ್ಪ ..	ಗವುರೀ ನಾಗಣ್ಣ ..	ಡಿಟೋ	1

ನೋಕದ್ದಮಾ ನಂಬರ್ ಮತ್ತು ಇಸವಿ.	ಯಾವ ಕೋರ್ಟಿನಲ್ಲಿ ಹಾಜರಾಯಿತೋ ಅದರ ಹೆಸರು.	ಕಕ್ಷಿಗಾರರ ಹೆಸರು.		ಯಾರಿಂದ ಹಾಜರಾಯಿತೋ ಅವರ ಹೆಸರು.	ಎಕ್ಸಿಬಿಟ್‌ಗಳ ಸಂಖ್ಯೆ.
		ವಾದಿ.	ಪ್ರತಿವಾದಿ.		
1869ನೇ ಇಸವಿ ಅ|| ನಂ 121	ಮೈಸೂರು ಜುಡಿಷಿಯಲ್ ಅಸಿಸ್ಟೆಂಟ್ ಕಮಿಷನರವರ ಕೋರ್ಟು	ತಿಮ್ಮಮ್ಮ	ತಿಂಗಿರಿ	ವಾದಿಯಿಂದ	2
ಡಿಟೋ ನಂಬರು 122	ಡಿಟೋ	ರಂಗಪ್ಪಾ	ಗವಿರಾಯಶಟ್ಟಿ	ಡಿಟೋ	2
ಡಿಟೋ ನಂಬರ್ರು 123	ಡಿಟೋ	ಬ್ಯಾಟಿರಾಯ	ಭೀಮರಾಯ	ಡಿಟೋ	1
ಡಿಟೋ ನಂಬರು 124	ಡಿಟೋ	ಚಿಕ್ಕಪಾಪಯ್ಯಾ	ವಿರೇಗವುಡ	ಡಿಟೋ	1
ಡಿಟೋ ನಂಬರು 125	ಡಿಟೋ	ಕೃಷ್ಣರಾವ್	ಖಾದರಖಾ	ಡಿಟೋ	1
ಡಿಟೋ ನಂಬರು 126	ಡಿಟೋ	ಚಿಕ್ಕನರಸಂಣ	ಶ್ರೀಕಂಠಯ್ಯಾ	ಡಿಟೋ	1
ಡಿಟೋ ನಂಬರು 127	ಡಿಟೋ	ಹೈದರ್‌ಸಾಬಿ	ಚಿಕ್ಕಮ್ಮಿ ವಗೈರೆ	ಡಿಟೋ	1
ಡಿಟೋ ನಂಬರು 128	ಡಿಟೋ	ವೇಲಾಯುಧಮೊದಲಿಯಾರ್	ಧರ್ಮಲಿಂಗ ಮೊದಲಿಯಾರ್	ಉಭಯವಾದಿಗಳಿಂದ	4
ಡಿಟೋ ನಂಬರು 130	ಡಿಟೋ	ಬುದ್ಧಿನಾಥಪಂಡಿತ	ದಾಸಪ್ಪ	ವಾದಿಯಿಂದ	1
ಡಿಟೋ ನಂಬರು 131	ಡಿಟೋ	ರಂಗಯ್ಯಂಗಾರ್	ಬೋಗಶಟ್ಟಿ	ಡಿಟೋ	2
ಡಿಟೋ ನಂಬರು 132	ಡಿಟೋ	ಕೃಷ್ಣಾಚಾರಿ	ವೆಂಕಟಾದ್ರಿಜೋಯಿಸ	ಡಿಟೋ	1
ಡಿಟೋ ನಂಬರು 133	ಡಿಟೋ	ಖಾಬೂಮಿಯ್ಯ	ಶ್ರೀರಂಗಶಟ್ಟಿ	ಡಿಟೋ	1
ಡಿಟೋ ನಂಬರು 134	ಡಿಟೋ	ನರಸಿಂಹಯ್ಯಾ	ಲಿಂಗಾ ವಗೈರೆ	ಡಿಟೋ	1
ಡಿಟೋ ನಂಬರು 135	ಡಿಟೋ	ಗೋವಿಂದಯ್ಯಾ	ಯಿರಾರತ್ತೇಗವುಡ	ಡಿಟೋ	2
ಡಿಟೋ ನಂಬರು 137	ಡಿಟೋ	ಮಾಯಂಣ	ಲಿಂಗಂಣ	ಡಿಟೋ	1
ಡಿಟೋ ನಂಬರು 141	ಡಿಟೋ	ಲಿಂಗಾಚಾರಿ	ಜಗತ್ಪಾಲಪಂಡಿತ	ಡಿಟೋ	1
ಡಿಟೋ ನಂಬರು 143	ಡಿಟೋ	ಕೆಂಚಶೆಟ್ಟಿ	ಗುರುಮೂರ್ತಿ	ಡಿಟೋ	1
ಡಿಟೋ ನಂಬರು 145	ಡಿಟೋ	ಗುಂಡಭಟ್ಟಾ	ಲಿಂಗಂಣ	ಡಿಟೋ	2
ಡಿಟೋ ನಂಬರು 146	ಡಿಟೋ	ಶಾಮಂಣ	ರಾಮರಾವು	ಡಿಟೋ	1
ಡಿಟೋ ನಂಬರು 147	ಡಿಟೋ	ತಾಲಿಂಗಶೆಟ್ಟಿ	ಮಾದಿ	ಡಿಟೋ	1
ಡಿಟೋ ನಂಬರು 149	ಡಿಟೋ	ರಂಗಸಾಮಿಅಯ್ಯಂಗಾರ್	ರಾಮಯ್ಯಾ	ಡಿಟೋ	2
ಡಿಟೋ ನಂಬರು 150	ಡಿಟೋ	ಮರಿದಾಸಾ	ಜೋಗಿ	ಡಿಟೋ	1

ಮೇಲ್ಕಂಡ ದಸ್ತೈವಜುಗಳನ್ನು ಹಾಜರ್ಮಾಡಿರತಕ್ಕವರು ಮುಂಚಿತವಾಗಿ ಹಾಜರಾಗಿ ವಾಪಸ್ ಪಡಿಯದೇ ಹೋದಪಕ್ಷದಲ್ಲಿ ಅವುಗಳನ್ನು 1887ನೇ ಇಸವಿ ಶಪಟಂಬರ್ 15ನೇ ತಾರೀಖಿನಲ್ಲಿ ನಾಶಮಾಡಲ್ಪಡುತ್ತೆಂದು ಇದರಿಂದ ತಿಳಿಯಪಡಿಸಿರುತ್ತೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ತಾರೀಖು 26ನೇ ಜುಲೈ 1887.

ಹುಣಸೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತೈವಜು ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು. ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ:—

ನಂಬರ್.	ದಸ್ತಾವೇಜನ್ನು ಬರದುಕೊಟ್ಟವರ ಹೆಸರು ಮತ್ತು ಅಡಿರ್ಷ.	ದಸ್ತಾವೇಜನ್ನು ಬರೆಸಿಕೊಂಡವರ ಹೆಸರು ಮತ್ತು ಅಡಿರ್ಷ.	ರಿಜಿಸ್ಟ್ರೇಷನ್ನಿಗೆ ಹಾಜರುಮಾಡಿದ ತಾರೀಖು.	ರಿಜಿಸ್ಟ್ರೇಷನ್ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
389 1884-85ನೇ ಇಸವಿ.	ಹುಣಸೂರಲ್ಲಿರುವ ಕಂದಾರೆ ಸೈದ್ ಶಿದ್ದಿ ಸಾಬ್ ಸೈದ್ ದುರ್ವೇಷ ಮಗ ವ್ಯಾಪಾರ ಕಸಬು.	ಹನಗೋಡು ಗ್ರಾಮದಲ್ಲಿಯಿರುವ ಮುಸಲ್‌ಮಾನರ ಹೈದರ್‌ಸಾಬಿ ಮಗ ಚಿಲ್ಲರೆ ದುರ್ಕಾನದಾರ ಖಾಸಿಂಸಾಬಿ.	12—3—85	13—3—85	ಕ್ರಯಪತ್ರ ಭೂಸ್ಥಿತಿಗೆ ಸಂಬಂಧಪಟ್ಟದ್ದು. ಕ್ರಯದ ಮೊಬಲಗು 27 ರೂಪಾಯಿ.

ಹೆಚ್. ಸಂಜುಂಡರಾಜ್ ಅರಸ್,
ಫಾರ್ ರಿಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 12ನೇ ಜುಲೈ 1887.

ಇದರಿಂದ ಸಂಬಂಧಪಟ್ಟ ಜನಗಳಿಗೆ ತಿಳಿಯಪಡಿಸುವದೇನಂದರೆ, ಬೇಲೂರು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತೈವಜನ್ನು ಹಾಜರ್ಮಾಡಿದವರೇಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೇಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ವೊಂದು ತಿಂಗಳುವಳಗಾಗಿ ಬೇಲೂರು ಸಬ್ ರಿಜಿಸ್ಟ್ರಾರ್ರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನು ವಾಪಸ್ ಪಡಿಯಲು ತಪ್ಪಿದರೆ 1877ನೇ ಇಸವಿ 3ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುವದು.

ನಂಬರ್.	ದಸ್ತಾವೇಜು ಬರದ ತಾರೀಖು.	ರಿಜಿಸ್ಟ್ರೇಷನ್ನಿಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರೇಷನ್ ಆದ ತಾರೀಖು.	ದಸ್ತೈವಜನ್ನು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನು ಬರೆಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1 1885—86	27—5—85	27—5—85	28—5—85	ನಾರ್ವೆ ಫಿರ್ಕಾ ಶಾನುಭೋಗ ಬಂದಪ್ಪಯ್ಯನವರ ಹೆಂಡತಿ ಹೊನ್ನಮ್ಮ	ಸಕಲೇಶಪುರದಲ್ಲಿರುವ ಕೋಳೂರು ಪುಟ್ಟಯ್ಯನವರಮಗ ಅರೆಹಳ್ಳಿ ಶೇಕದಾರ್ ಸೀತಾರಾಮಯ್ಯ	ಯಾವ ದ್ವಿಪಿಷ್ಟು ಆಸ್ತಿ ವಿಚಾರಣೆ ವೃದ್ಧಿ ವಸೂಲಿ ದಾವಾ ವಧ್ಯೆರೆ ಬಗ್ಯೆ, ಸರ್ವಾಧಿಕಾರ ವಹಿಸಿರುವ ಪತ್ರ.

ಪಿ. ಯನ್. ಪೂರ್ಣಯ್ಯ, ರಿಜಿಸ್ಟ್ರಾರ್.

ತಾರೀಖು—ನೇ ಜುಲೈ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟಿನಲ್ಲಿರತಕ್ಕ ಕೆಲವು ಕಾಫೀ ತೋಟಗಳ ಮೇಲೆಬರಬೇಕಾದ ಕಂದಾಯದ ಬಾಕಿ ಅದ್ಯಾಪಿ ಪಾವತೀ ಆಗದೆ ಇರುವದರಿಂದ ಹರಾಜು ಮಾಡುವ ತಾರೀಖಿಗೆ ಹಿಂದಿನ ಅಥವಾ ಆ ತಾರೀಖು ವಳಗಾಗಿ ಸದರೀ ಕಂದಾಯ ಬಾರದೇ ಹೋದರೆ ಸ್ಟೇಟ್‌ಮೆಂಟಿನಲ್ಲಿ ನಮೂದಾಗತಕ್ಕ ಸ್ಥಳ ಮತ್ತು ತಾರೀಖುಗಳಲ್ಲಿ ಸದರೀ ಯಸ್ಟೇಟುಗಳು ಹರಾಜು ಮಾಡಲ್ಪಡುವವು.

ತಾಲ್ಲೂಕು.	ಹೋಬಳಿ ಮತ್ತು ಗ್ರಾಮ.	ಬಾಕೀದಾರ್ರ ಹೆಸರು.	ಎಸ್ಟೇಟಿನ ತಪಸೀಲು. ಹೆಸರು.	ಸರ್ವೆ ನಂಬರು.	ಯಕರೆ.		ಆಕಾರ.			ಬರಬೇಕಾದ ಬಾಕಿ. ತಪಸೀಲು. ವಿವರ.	ಮೊಬಲಗು.			ಸರಹದ್ದು. ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.	ಷರಾ.
ಮಂಜರಾಬಾದ್.	ಬೆಳಗೋಡು ಬಾಗೆ.	ಮೆ|| ಸೈಯದ್ ಅನಿೂರ್ ಅಲ್ಲೀ ಸಾಹೇಬರವರು.	ಗೊದ್ದೇನಹಳ್ಳಿ ಬೆಟ್ಟ.	49	301	29	365	0	0	ವ್ಯಾಯ ಸಂ|| ಬಾಬತು .. ಲೋಕಲ್ ಫಂಡ್ .. ನೋಟೀಸ್ ಫೀಜ ..	391 24 2	12 8 0	0 0 0	ಸರ್ವೆ ನಂಬರು 67, 66, 58, 52, 51, 50, 53 ಮತ್ತು 48.	ಹಳೇಕೆರೆ ಮತ್ತು ಹೊಸಕೆರೆ ಗ್ರಾಮಗಳ ಗಡಿ.	ಹೊಸಕೆರೆ ಗ್ರಾಮದ ಗಡಿ.	ಹಳೇಕೆರೆ ಗ್ರಾಮದ ಗಡಿ.	ಮಂಜರಾಬಾದು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರರಿಂದ ಸ್ನ 1887ನೇ ಇಸವಿ ಆಗಸ್ಟ್ 15ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುವದು.
					ನೋಟೀಸ್ ಜಾರಿ ಆಗಿಧೆ					ಮತ್ತು ಹರಾಜ್ ತಾರೀಖು ವರೆಗೆ ಆಗತಕ್ಕ ಬಡ್ಡಿ.	418	4	0					
	ಬೆಳಗೋಡು ಹೊಸಕೆರೆ.	ಅಲ್ಲೀಖಾನ್ ಸಾಹೇಬರುವೈ ವಟ್ಟುದಾರ ಮೆ|| ಅಮೀರ್ ಅಲ್ಲೀ ಸಾಹೇಬರು.	1	33	35	0	52	0	0	ವ್ಯಾಯ ಸಂ|| .. ನೋಟೀಸ್ ಫೀಜ ..	55 3	8 0	0 0	ನಂಬರು 32.	ನಂಬರು 34 ಮತ್ತು 35.	ನಂಬರು 31.	ನಂ. 35 ಮತ್ತು ಬಾಗೇ ಗ್ರಾಮದ ಗಡಿ.	ಡಿಟೋ ಆಗಸ್ಟ್ 16ನೇ ತಾರೀಖು ಡಿಟೋ.
					ನೋಟೀಸ್ ಜಾರಿ ಆಗಿಧೆ						58	8	0					
	ಶುಕ್ರವಾರಸಂತೆ, ಕೋತನಹಳ್ಳಿ.	ರಾಮಯ್ಯಂಗಾರ್ ವಗ್ಯೆರೆ 5 ಜನಗಳು.	1	1	62	0	31	0	0	ಪಥಿಗಾಜ ಸಂ|| .. ಲೋಕಲ್ ಫಂಡ್ .. ನೋಟೀಸ್ ಫೀಜ ..	31 1 2	0 15 0	0 0 0	ಕುಂಬಾರಹಳ್ಳಿ ಅಪ್ಪಣ್ಣ ಶೆಟ್ಟಿ ಎಸ್ಟೇಟಿ.	ಚಿಕ್ಕ ವೂರುಗಡಿ ಭಾಪ್ಯಾಚಾರ್ರ ಎಸ್ಟೇಟ್.	ಕರೋಡಿ ಗ್ರಾಮದ ಗಡಿ.	ಕೋತನಹಳ್ಳಿ ಗ್ರಾಮದ ಬಂಜರು ದಿಣ್ಣೆ.	ಡಿಟೋ ಆಗಸ್ಟ್ 17ನೇ ತಾರೀಖು ಡಿಟೋ.
					ನೋಟೀಸ್ ಜಾರಿ ಆಗಿಧೆ					ಮತ್ತು ಹರಾಜ್ ತಾರೀಖು ವರೆಗೆ ಆಗುವ ಬಡ್ಡಿ.	34	15	0					

ಪಿ. ಎಸ್. ಪೋರ್ಣಯ್ಯ,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.

ತಾರೀಖು 23ನೇ ಜುಲೈ 1887.

ಕಡೂರು ಡಿಸ್ಟ್ರಿಕ್ಟು ಕೊಪ್ಪ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ:—

ರಿಜಿಸ್ಟ್ರೇಷನ್ ನಂಬರ್.	ದಸ್ತೈವಜು ಬರದು ಕೊಟ್ಟವನ ಹೆಸರು.	ದಸ್ತೈವಜು ಬರಸಿ ಕೊಂಡವನ ಹೆಸರು.	ದಸ್ತೈವಜು ಬರೆದ ತಾರೀಖು.	ರಿಜಿಸ್ಟರಿಗೆ ಹಾಜರಾದ ತಾರೀಖು.	ರಿಜಿಸ್ಟರಾದ ತಾರೀಖು ಅಥವಾ ರಿಜಿಸ್ಟರಿ ತಿರಸ್ಕರಿಸಿದ ತಾರೀಖು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
1884-85ನೇ ಇಸವಿ 2ನೇ ನಂಬರ್ ಬುಕ್ಕಿನ ಬಾಬತು	ಹೊಸಕೆರೆ ಮಾಗಣಿ ಬಂಡಿಗಡಿ ಗ್ರಾಮದ ಶಿವಾಚಾರ ಜಾತಿ ವ್ಯಾಪಾರ ಕಸಬಿನ ಶಿದ್ದಮಲ್ಲಪ್ಪಶೆಟ್ರು ಹೆಂಡತಿಹೊನ್ನಮ್ಮ1, ಮಳಿಗೆ ಸುಬ್ಬಣ್ಣಶೆಟ್ರು ಮಗ ಶಿದ್ದಪ್ಪ 1	ಬಂಡಿಗಡಿ ಗ್ರಾಮದ ಮುನಿಯೂರು ವಾಸಸ್ಥನಾದ ಸಾಹುಕಾರಿ ಕಸಬಿನ ಸುಬ್ಬರಾಯರ ಮಗ ಕೃಷ್ಣಪ್ಪನವರು	26ನೇ ಮೇ 1884ನೇ ಇಸವಿ	16ನೇ ಸೆಪ್ಟಂಬರ್ 1884ನೇ ಇಸವಿ	ರಿಜಿಸ್ಟ್ರೇಷನ್ ತಿರಸ್ಕರಿಸಲ್ಪಟ್ಟದ್ದು 28ನೇ ಜನವರಿ 1885ನೇ ಇಸವಿ	ನಿಮಗೆ ಸಲ್ಲಬೇಕಾದ 350 ರೂಪಾಯಿಗಳಿಗೆಖಾನೇಷುಮಾರಿ ನಂ. 44ನೇ ತಖ್ತೆಪೋಷು ಹಾಕಿದ 15 ಅಂಕಣದ ಹುಲ್ಲುಮನೆ ಮತ್ತು ಭಂಗಾರದ ಬಾಬತು ನಗಗಳು 3, ಬೆಳ್ಳೀ ಬಾಬತು ನಗಗಳು 2, ಜಾನುವರ್‌ಗಳು ?, ಈರೀತಿ ತೋರೆಡನ್ನು ಮಾಡಿರುತದೆಯಂತ.
1885-86ನೆ ಇಸವಿ ನಂಬರ್ 55ನೇ 1ನೇಬುಕ್ಕಿನ ಬಾಬತು.	ಮುರವ್ಳ್ಳ ಮಾಗಣಿ ಹುಲಗರಡ್ಡಿ ಗ್ರಾಮದ ವಾಸಸ್ಥ ಸುಬ್ಬರಾಯರ ಮಗ ಶೇಷಯ್ಯ	ಮೇಗುಂದ ಮಾಗಣಿ ಭೈರೇದೇವರ ಗ್ರಾಮದಲ್ಲಿರುವ ಮರಿಯಪ್ಪನವರ ಮಗ ನಾರಣಪ್ಪ ಹೆಬ್ಬಾರು	7ನೇ ಮೇ 1885ನೇ ಇಸವಿ	29ನೇ ಮೇ 1885ನೇ ಇಸವಿ	ರಿಜಿಸ್ಟ್ರಾದದ್ದು 29ನೇ ಮೇ 1885ನೇ ಇಸವಿ	140 ರೂಪಾಯಿನ ತರೀ ಬಾಗಾಯತು ಜಮೀನಿನ ಕ್ರಯಪತ್ರ.

ಜೆ. ಯ. ಕ್ಯಾಂಬೆಲ್,
ರಿಜಿಸ್ಟ್ರಾರ್.

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡ್‌ಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಇಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಇಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್‌ವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್ ಚಂದಾ ದರ ವಗೈರೇ.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಹ್ ಮಾಹೇ ಯಾ ಕ್ವಾರ್ಟರಿಗೆ	ದಾಮಾಷಾಯಿ ಪ್ರಕಾರ ದರಗಳು.			
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಗೆ ನೋಟೀಸುಗಳು:—				
ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಗೆ (ಇಂಗ್ಲೀಷು ಅಥವಾ ಕನ್ನಡ)			2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟ್ಟೋ			1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‍ಗಳ ಬಗ್ಗೆ ನೋಟೀಸುಗಳಿಗೆ:—				
ಮೊದಲನೇ ದಫಾ			5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ			2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.				
ಡ್ಯುಪ್ಲಿಕೇಟ್ ಕಾಫೀಪಟ್ಟೇ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—				
ಮೊದಲನೇ ಸಲಕ್ಕೆ .. ಪ್ರತಿ 1ಕ್ಕೆ ..			10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ,, ..			5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ			0	8
ಎರಡನೇ ದಫಾ ಡಿಟ್ಟೋ ಡಿಟ್ಟೋ ..			0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ			0	4

ಷರಾ.—ಚಂದಾ ವಗೈರೆ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಬಮೋಜೀಬ್ ಹುಕ್ಕುಂ,
ಟಿ. ಟಿ. ಲಿನರಡ್,
ಮೈ. ಗೆ. ಕಂಪೈಲರ್.

ಗೈರಹಿಲಾ ಆದ

ಪ್ರೊ. ನೋಟಿನ.—

ನಂಬರ.	ಸರ್ಕಲ್.	ಕ್ರಯ.	
B 96—01224	ಮದರಾಸ್	ರೂ. 10	ಹಕ್ಕುದಾರ್—ಶಿವಮೊಗ್ಗಾ ಡಿಸ್ಟ್ರಿಕ್ಟ್ ಶಿರಾಳಕೊಪ್ಪದಲ್ಲಿರುವ ಮೇಸ್ತ್ರಿ ಬಿ. ವೆಂಕಟರಾವ್.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 33 ಸರ್ಕಾರದಿಂದ ಘಾಯಿಷ ಆದ್ದು. ಸಟ 1887.

ಬೆಂಗಳೂರು, ಶನಿವಾರ, ಆಗಸ್ಟ್ಟ ತಾ|| 20, ಸಟ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ಟ ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷರ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ಟ ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟ್ಟ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 5ನೇ ಆಗಸ್ಟ್ಟು 1887.

ನಂ. 72.—ಕೋಲಾರ ತಾಲ್ಲೂಕು ಅಮಲ್‌ದಾರ್ ಮೀರ್‌ನಿಜಾಮುದ್ದೀನ್ ಅಲ್ಲೀಖಾನರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 17 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 8ನೇ ಆಗಸ್ಟ್ಟು 1887.

ನಂ. 73.—ಸಾಗರದ ಅಮಲ್‌ದಾರ್ ವೆಂಕಟರಾಯರು, ಸಾಗರ ತಾಲ್ಲೂಕಿನ ಚಾರ್ಜನ್ನ ಆಕ್ಟಿಂಗ್ ಅಮಲ್‌ದಾರ್ ಜಿ. ಕೊಯಲ್ಹೋಯವರಿಂದ ಮೊಹೇ ಗುಜಸ್ತಾ 27ನೇ ತಾರೀಖು ಮಧ್ಯಾನ್ಹ ವಹಿಸಿರುತ್ತಾರೆ.

ತಾರೀಖು 9ನೇ ಆಗಸ್ಟು 1887.

ನಂ. 74.—ನಂಜನಗೂಡು ಮುನಸೀಫ್ ಯಿಸ್. ಯಮ್. ರಾಮಸ್ವಾಮಯ್ಯಂಗಾರ್ಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಅರ್ಧ ತಲಬಿನಮೇಲೆ ಹತ್ತು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿತ್ತು.

ನಂ. 75.—ಈ ಕೆಳಗೆ ನಮೂದಾಗುವ ಮೆಡಿಕಲ್ ಪ್ಯೂಪಿಲ್‌ಗಳು ಆವಶ್ಯವಾದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವದ್ದರಿಂದ ಅವರುಗಳು 1887ನೇ ಇಸವಿ ಜುಲೈ ಗುರ್ರೇ ಲಾಗಾಯತು 3ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್ ಗ್ರೇಡಿಗೆ ಬಡತೀ ಮಾಡಲ್ಪಟ್ಟಿರುತ್ತಾರೆ.

1. ಜೆ. ಮೋರಲಿ
2. ಬಿ. ಎ. ನರಸಿಂಹಯ್ಯಂಗಾರ್
3. ಯಂ. ಲಕ್ಷ್ಮಣರಾವ್
4. ರಾಜಗೋಪಾಲಯ್ಯಂಗಾರ್
5. ಯಸ್ ವೆಂಕಟಾಚಾರ್

ನಂ. 77.—ಮಕ್ಕಾಕ್ಕೆ ಖುಷ್ಕೀಮೇಲೂ ಸಮುದ್ರದ ಮೇಲೂ ಪ್ರಯಾಣ ಮಾಡುವಂತಾವರಿಗೆ ಜೋಕೆ ಮತ್ತು ಅನುಕೂಲ್ಯತೆ ವುಂಟು ಮಾಡಿಕೊಡುವ ಬಗ್ಯೆ ಇಂಡಿಯಾ ಗವರ್ನಮೆಂಟಿನವರು ಮೆ|| ತಾಮ್ಸಕೂಕ್ ಅಂಡಸರ್ನ್ಸಯವರನ್ನ ಏಜಂಟರಾಗಿ ನೇಮಿಸಿ ಅದಕ್ಕಾಗಿ ಏರ್ಪಾಟುಗಳನ್ನ ಮಾಡಿರುವದರಿಂದ ಮಕ್ಕಾಕ್ಕೆ ಪ್ರಯಾಣ ಮಾಡಲಿಛೆಯುಳ್ಳ ಜನಗಳು ಸದರೀ ಏರ್ಪಾಡಿಗೆ ನಿಗೇ ಕೊಡತಕ್ಕದ್ದು.

2. ಸದರೀ ಏರ್ಪಾಡುಗಳಿಂದ ವುಂಟಾಗಿರುವ ಪ್ರಯೋಜನಗಳ ತಪಸೀಲ್ ಮೈಸೂರು ಶೀಮೆಯ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರ ಆಫೀಸ್‌ಗಳಿಗೆ ಅರ್ಜೀ ಬರದುಕೊಂಡಲ್ಲಿ ತಿಳಿಯಬರುತ್ತೆ.

ನಂ. 78.—ಚಿತ್ರದುರ್ಗ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರಜನ್ ಮೆ|| ಎ. ಆರ್. ವೈದ್ಯನಾಥಶಾಸ್ತ್ರಿಯವರಿಗೆ, ಮಾಹೇ ಮಜಕೂರ್ 10ರ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ವೊಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟು ಯಿಧೆ.

ನಂ. 79.—ಶಿವಮೊಗ್ಗಾ ಅಮಲ್ದಾರ್ ಸೀತಾರಾಮಯ್ಯನವರಿಗೆ ಅವರು ವುಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿಧೆ.

ಶಿರಸ್ತೇದಾರ್ ನರಸಿಂಹಲುನಾಯುಡು ಯವರು, ಸೀತಾರಾಮಯ್ಯನವರ ಗೈರ್‌ಹಾಜರು ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವವರಿಗೆ ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತಾರೆ.

ನಂ. 80.—ರೆವಿನ್ಯೂ ಸರ್ವೇ ಇಲಾಖೆಯಲ್ಲಿ ಕೆಲಸ ನೋಡುವ ಅಮಲ್ದಾರ್ ಲಿಂಗೋಮಲ್ಲಾರನಾಯಕರಿಗೆ, 1887ನೇ ಇಸವಿ ಜುಲೈ 11ರ ಲಾಗಾಯಿತು 22ರ ವರಿಗೆ, ಎರಡು ದಿನಗಳೂ ಶೇರಿ ಹನ್ನೆರಡು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿತು.

ತಾರೀಖು 10ನೇ ಆಗಸ್ಟ್ 1887.

ನಂ. 81.—ಮೆಸ್ಸಿಯರ್ಸ್ ವೈ. ಸೀತಾರಾಮಯ್ಯ ಬಿ. ಎ.— ಬಿ. ರಾಮಸ್ವಾಮಯ್ಯರ್ ಬಿ. ಎ. ಮತ್ತು ಎಂ. ವೆಂಕಟರಮಣಪ್ಪ ಬಿ. ಎ. ಯಿವರುಗಳು ಫಾರೆಸ್ಟ್ ಇಲಾಖೆಯಲ್ಲಿ 1887ನೇ ಇಸವಿ ಏಪ್ರೆಲ್ ಗುರ್ರೇ ಲಾಗಾಯತು ಪ್ರೊಬೇಷನರುಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 11ನೇ ಆಗಸ್ಟ್ 1887.

ನಂ. 82.—ಮೆ|| ಪಿ. ಎನ್. ಕೃಷ್ಣಮೂರ್ತೀಯವರು, ತುಮಕೂರು ಡಿಸ್ಟ್ರಿಕ್ಟು ವ ಟ್ರೆಜರೀ ಚಾರ್ಜನ್ನ ಮೆ|| ಬಿ. ಕೆ. ವೆಂಕಟವರದಯ್ಯಂಗಾರ್‌ಯವರಿಂದ 1887ನೇ ಇಸವಿ ಆಗಸ್ಟ್ 5ನೇ ತಾರೀಖಿನ ಪೂರ್ವಾಹ್ನದಲ್ಲಿ ವಹಿಸಿರುತ್ತಾರೆ.

ತಾರೀಖು 12ನೇ ಆಗಸ್ಟ್ 1887.

ನಂ. 84.—ಮೊಳಕಾಲ್ಮುರು ಅಮಲ್ದಾರ್ ಕಸ್ತೂರಿರಂಗಾಚಾರ್ರಿಗೆ ಅವರು ವುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 25 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿಧೆ.

ಕಸ್ತೂರಿ ರಂಗಾಚಾರ್ಯ ಗೈರ್ ಹಾಜರಿ ಕಾಲದಲ್ಲಿ ಯೂ ಮತ್ತೊಂದು ಹುಕ್ಕುಂ ಕೊಡುವವರಿಗೂ, ಶಿರಸ್ತೇದಾರ್ ಎಸ್. ಶಾಮರಾಯರು, ಮೊಳಕಾಲ್ಮುರು ಅಮಲ್ದಾರಿ ವ 3ನೇ ಕ್ಲಾಸ್ ಮೇಜಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರ್ರಾಮಾಡಲ್ಪಟ್ಟಿರುತ್ತಾರೆ.

ನಂ. 85.—ಹಾಸನದ ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಪೊನ್ನರಂಗಂ ಮೊದಲಿಯಾರ್ರು ಅವರಿಗೆ 1887ನೇ ಇಸವಿ ಜುಲೈ 26ನೇ ಮುರ್ಕ್ಕುಮಿನ 62ನೇ ನಂಬರುವುಳ್ಳ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಜುಲೈ 12ರ ಲಾಗಾಯಿತು 7 ದಿವಸಗಳ ಪ್ರಿವಿಲೇಜ್ ರಜಾವನ್ನ ವುಪಯೋಗಿಸಿಕೊಂಡು ಅದೇ ತಿಂಗಳ 19ನೇ ತಾರೀಖಿನಲ್ಲಿ ಕೆಲಸಕ್ಕೆ ವಾಪಸ್ ಬಂದ್ದಿರುತ್ತಾರೆ.

ನಂ. 86. ತಾರೀಖು 12ನೇ ಆಗಸ್ಟು 1887.

ಸರ್ಕಾರ ಹರಾಜು ಮೂಲಕ ಸಂದಲ್ ವಿಕ್ರೀ ಬಗ್ಗೆ ಇದರಡೀ ಬರುವ ಪರಿಷ್ಕರಿಸಲ್ಪಟ್ಟ ರೂಲ್ಸ್ ಸಕಲರಿಗೂ ತಿಳಿಯತಕ್ಕ ಬಗ್ಗೆ ಪ್ರಾಯಿಷ್ ಮಾಡಲ್ಪಟ್ಟಿವೆ.

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರೊಡನೆ ಫಾರೆಸ್ಟು ಆಫೀಸರಿಂದಾಗಲಿ, ಡೆಪ್ಯುಟಿ ಕಮ್ಮಿಷನರವರಿಂದ ಆ ಬಗ್ಗೆ ನಿಯಮಿಸಲ್ಪಡುವ ಇತರ ಆಫೀಸರಿಂದಲಾಗಲಿ ನಡಿಸಲ್ಪಡತಕ್ಕದ್ದು.

2. ಚಡ್ ದರಖಾಸ್ತುದಾರ ಕ್ರಯದಾರನಾಗಿರತಕ್ಕದ್ದು—ಯಾವ ಲಾಟಿನ ವಿಷಯದಲ್ಲಿ ತಕರಾರು ವುಂಟಾಗುತ್ತದೋ ಅಂತಾ ಲಾಟ್ ಪುನಃ ಹರಾಜ್ ಮಾಡಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ವೊಂದು ಲಾಟ್ ತನ್ನ ಹೆಸರಿಗೆ ಕೂಗಿದ ಕೂಡ್ಲೇ ರುಜು ಮಾಡತಕ್ಕ ಬಗ್ಗೆ ಯೇರ್ಪಡಿಸಲ್ಪಟ್ಟಿರುವ ಬುಕ್ಕಿನಲ್ಲಿ ತಾನು ಕೊಂಡು ಕೊಂಡ ಲಾಟಿನ ನಂಬರ್ ಮತ್ತು ತಪ್ಸೀಲ್ ಯಿನುಗಳ ಪಕ್ಕದಲ್ಲಿ ತನ್ನ ರುಜು ಹಾಕತಕ್ಕದ್ದು. ಅಂತಾ ರುಜು ದೆಶೆಯಿಂದ ಸದರೀ ಲಾಟನ್ನು ಅವನು ಕೊಂಡುಕೊಂಡ ಬಗ್ಗೆ ಅವನ ಅಂಗೀಕಾರವನ್ನಾಗಿ ಯೆಣಿಸಲ್ಪಡತಕ್ಕದ್ದು.

II. ಹಣ ಯಾವ ರೀತಿಯಾಗಿ ಪಾವತೀ ಮಾಡತಕ್ಕದ್ದು.

4. ಹರಾಜಾದ ಕೂಡ್ಲೇ ಖರೀದೀದಾರನಿಂದ ಸಲ್ಲಬೇಕಾದ ಖುಲ್ಲು ಮೊಬಲಗನ್ನು ತೋರಿಸುವ ಒಂದು ಯಾದಾಸ್ತು ಪ್ರತಿ ಖರೀದೀದಾರನಿಗೂ ಕೊಡಲ್ಪಡುವದು ಮತ್ತು ಹರಾಜ್ ತಾರೀಖು ಲಾಗಾಯಿತು 3ನೇ ದಿನ ಆಖೈರಾಗುವದಕ್ಕೆ ಮುಂಚೆ ಖುಲ್ಲು ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಪ್ರಕಾರ ಠೇವಣೀ ಮೊಬಲಗನ್ನ ಅತ್ಯಂತ ಸಮೀಪದಲ್ಲಿರುವ ಗವರ್ನಮೆಂಟ್ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕ ಬಗ್ಗೆ ಲೆಟರ್ ಆಫ್ ಅಡ್ವೈಸ್ ಯೆಂಬ ಮೇಲ್ ಕಾಗದ ಕೊಡಲ್ಪಡುವದು ಹಾಂಗೆ ಠೇವಣೀ ಯಿಟ್ಟ ಮೊಬಲಗಿಗೆ ಟ್ರೆಜರೀ ಆಫೀಸರರು ಒಂದು ರಸೀದಿಯನ್ನು ಕೊಡತಕ್ಕದ್ದು ಸದರೀ ರಸೀದಿಯನ್ನು 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟು ಆಫೀಸರರಲ್ಲಿ ಹಾಜರ್ಮಾಡತಕ್ಕದ್ದು, ಫಾರೆಸ್ಟು ಆಫೀಸರರು ಸದರೀ ರಸೀದೀ ಮೇಲೆ ತಮ್ಮ ಚಿಕ್ಕರುಜುವನ್ನು ಹಾಕಿ ಹಾಜರ್ಮಾಡಿದ ತಾರೀಖು ಸಹ ಬರಿಯತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೇ ಪ್ರಕಾರ ನಡಿಯಲಿಕ್ಕೆ ತಪ್ಪಿದರೆ ಫಾರೆಸ್ಟು ಆಫೀಸರರು ಹಾಂಗೆ ತಪ್ಪಿದವನಿಂದ ಕೊಂಡುಕೊಳ್ಳಲ್ಪಟ್ಟ ಸಂದಲ್ ಪೈಕೀ ದರೋಬಸ್ತನ್ನಾಗಲಿ ವೊಂದು ಭಾಗವನ್ನಾಗಲಿ ಇತರರಿಗೆ ಮಾರಲಿಕ್ಕೆ ಸ್ವತಂತ್ರರಾಗಿರತಕ್ಕದ್ದು. ಇದರ ದೆಸೇಯಿಂದ ಸಂಭವಿಸುವ ನುಕ್ಸಾನಿಗೆ ಸದರೀ ತಪ್ಪಿದ ಮನುಷ್ಯನು ಜವಾಬದಾರನಾಗಿ ಯಿರತಕ್ಕದ್ದಲ್ಲದೇ ಅದರಿಂದ ಯೇನಾದರೂ ಆದಾಯ ಬಂದರೆ ಅಂತಾ ಆದಾಯದಲ್ಲಿ ಅತನಿಗೆ ಯಾವ ಭಾಗವೂ ಸಲ್ಲತಕ್ಕದ್ದಲ್ಲ, ಹಾಂಗೆ ತಪ್ಪಿ ಹೋದ ಮನುಷ್ಯನಿಂದ ಬರಬೇಕಾದ ಬಾಕಿಯು ರೆವಿನ್ಯೂ ಕಂದಾಯದೋಪಾದಿಯಲ್ಲಿ ವಸೂಲ್ ಮಾಡಲ್ಪಡುವದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಡುವ ದರೋಬಸ್ತು ಸಂದಲಿಗೂ ಖರೀದೀ ಮೊಬಲಗ್ ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತೀ ಮಾಡಲ್ಪಡತಕ್ಕದ್ದು. ಯಿದಕ್ಕೆ ತಪ್ಪಿದರೆ ಠೇವಣೀ ಕೊಟ್ಟ ಮೊಬಲಗ್ ಸರಕಾರಕ್ಕೆ ದಾಖಲಾಗುವದು ಮತ್ತು ಸದರೀ ಮೊಬಲಗ್ ಪಾವತೀ ಮಾಡಲ್ಪಡಬೇಕಾದ ಮೊಬಲಗ್ ಪೈಕೀ ವೊಂದು ಭಾಗವನ್ನಾಗಿ ಯಂದಿಗೂ ಯೆಣಿಸಲ್ಪಡಕೂಡದು ಬಾಕೀ ಆಗುವ ಐವಜು ಯಾವ ತಾಲ್ಲೂಕಿನಲ್ಲಿ ಕೋಠೀ ಯೇರ್ಪಟ್ಟಿರುತ್ತೋ ಅಂತಾ ತಾಲ್ಲೂಕಿನ ಖಜಾನೇಯಲ್ಲಾಗಲಿ, ಡಿಸ್ಟ್ರಿಕ್ಟು ಟ್ರೆಜರೀಯಲ್ಲಾಗಲಿ, ಪಾವತೀ ಮಾಡಲ್ಪಡತಕ್ಕದ್ದೇ ಹೊರ್ತು ಮತ್ಯಾವ ಸ್ಥಳದಲ್ಲಿಯೂ ಪಾವತೀ ಮಾಡಲ್ಪಡತಕ್ಕದ್ದಲ್ಲ.

III. ಸಂದಲು ತೂಕ ಮಾಡುವಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ದರೋಬಸ್ತು ಸಂದಲೂ ಫಾರೆಸ್ಟು ಆಫೀಸರರಿಂದ ಖುದ್ದಾಗಿಯಾಗಲಿ ಯಾ ಅವರ ಗೈರ್ ಹಾಜರೀಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫೀಸರರಿಂದಲಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು, ಪ್ರತಿ ಕೋಠಿಯಲ್ಲಿ ಮಾರಲ್ಪಟ್ಟ ಸಂದಲ್ ತೂಗೋಣವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸತಕ್ಕದ್ದು, ತೂಕ ಮಾಡುವಲ್ಲಿ ಜಾಸ್ತೀ ಕಾಣಬಂದರೆ ಅಂತಾ ಜಾಸ್ತಿಯನ್ನು ಆಚೆಗೆ ತೆಗದುಕೊಳ್ಳತಕ್ಕದ್ದು. ಯೇನಾದರೂ ಕಮ್ಮೀಬಿದ್ದಲ್ಲಿ ತೂಗಿಸುವ ಆಫೀಸರರು ಭರ್ತೀಮಾಡಿ ಛಾಪಾ ಹಾಕಬಹುದಾದ ತುಂಡುಗಳಿಗೆ ಛಾಪಾ ಹಾಕಿ ಶುದ್ಧಾಂಗವಾಗಿ ಅವು ಸಾಗಿ ಹೋಗುವದರೊಳಗಾಗಿ ಅವುಗಳಿಗೆ ಹೆಚ್ಚು ಕಡಮೆ ಸಂಭವಿಸದಂತೆ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನು ವಹಿಸತಕ್ಕದ್ದು.

ಈ ರೀತಿಯಾಗಿ ಕಮ್ಮಿಬಿದ್ದ ಸಂದಲ್ ವೊಂದುದಫಾ ಪೂರಾ ಭರ್ತೀಯಾದ ಬಳಿಕ ಮಣಗುವ ದೆಶೇಯಿಂದಲಾಗಲಿ, ಯಿತರ ಕಾರಣಗಳಿಂದಲಾಗಲಿ ಯೇನಾದರೂ ಲುಕ್ಸಾನ್ ಸಂಭವಿಸಿದರೆ ಆ ಲುಕ್ಸಾನನ್ನು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟುಗಳನ್ನು ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀದೀದಾರನಿಗೆ ಎಚ್ಚರಿಕೆ ಕೊಡತಕ್ಕದ್ದು. ಆ ಪ್ರಕಾರ ಅವನೇ ಆಗಲಿ ಅವನಿಂದ ಪೂರಾ ಅಧಿಕಾರ ಪಡದ ಅವನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟು ಆಫೀಸರರು ಯಾ ವಜನೀ ಮಾಡಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫೀಸರರು ತಮಗೆ ಅನುಕೂಲ ವಾದಾಗ್ಯೆ ಲಾಟುಗಳನ್ನು ತೂಗಿಸಿ ಸ್ಟಾಂಪು ವ ಮುದ್ರೆ, ಹಾಕಿಸತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲ. ಸಂದಲ್ ತೂಕ ಮಾಡುವ ಬಗ್ಯೆ ತಗಲುವ ಖರ್ಚು ಸರಕಾರವೇ ವಹಿಸುವದು. ಆದರೆ ಕೋಠಿಯಿಂದ ಖುದ್ದಾಂಗ ಸಾಗಿಸಿಕೊಂಡು ಹೋಗಲಿಕ್ಕೆ ಜರೂರಾದ ದರೋಬಸ್ತು ಖರ್ಚುಗಳನ್ನೂ ಖರೀದೀದಾರ ವಹಿಸತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತೀ ಮಾಡಿದರೆ ಅಂತಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟು ಆಫೀಸರರು ತೂಕ ಮಾಡುವದರಿಂದ ಯಾವದೂ ಅಡ್ಡೀ ಪಡಿಸತಕ್ಕದ್ದಲ್ಲ.

7. ಪೂರಾ ಮೊಬಲಗು ಪಾವತೀ ಮಾಡುವ ಪರಿಯಂತ ಮತ್ತು ಫಾರೆಸ್ಟು ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ್" ಪಡಿಯುವ ವರಿವಿಗೂ, ಯಾವ ಸಂದಲ್ ಮರವನ್ನಾಗಲೀ ಸಾಗಿಸಕೂಡದು.

IV. ಕೋಠೀ ಬಾಡಿಗೆ.

8. ಮೇಲಿನ ರೂಲ್ಸ್ ಅನುಸರಿಸಿ ತೂಕ ಮಾಡಲ್ಪಟ್ಟ ಸ್ಟಾಂಪು ಹಾಕಲ್ಪಟ್ಟ ಮತ್ತು ಮೊಬಲಗು ಪಾವತೀ ಮಾಡಲ್ಪಟ್ಟ ಸಂದಲ್ ಮರವು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗೆ ಯಾವ ಕಾಲದಲ್ಲಾಗಲಿ, ಕೋಠೀ ಬಾಡಿಗೇ ಕೊಡದೇ ಸಾಗಿಸಿಕೊಳ್ಳಲ್ಪಡಬಹುದು ಅಂತಾ ಮರವನ್ನು ಹರಾಜ್ ತಾರೀಖು ಲಾಗಾಯತು 90 ದಿನಗಳಿಗೆ ಮೇಲೆ ಕೋಠಿಯಲ್ಲೇ ಬಿಟ್ಟಿದ್ದರೆ ಹರಾಜ್ ತಾರೀಖು ಲಾಗಾಯತು ಮಾಹೇ ಒಂದಕ್ಕೆ ದರ ಬಂಡಿಗೆ 4 ಆಣೇ ಪ್ರಕಾರ ಕೋಠೀ ಬಾಡಿಗೆ ಕಟ್ಟಲ್ಪಡುವದು ಅಂತಾ ಸಂದಲ್ ಯಿಟ್ಟಿರುವ ಜಾಗಾ ಹೊಸ ಸಂದಲ್ ಜಮಾಯಿಸಿ ಯಿಡಲಿಕ್ಕೆ ಬೇಕಾದ ಪಕ್ಷದಲ್ಲಿ ಖರೀದೀದಾರನಿಗೆ 10 ದಿನಗಳ ನೋಟೀಸ್ ಕೊಟ್ಟ ಬಳಿಕ ಫಾರೆಸ್ಟು ಆಫೀಸರರು ಸದರೀ ಮರವನ್ನು ಕೋಠಿಯಿಂದ ಆಚೆ ಸಾಗಿಸಲಿಕ್ಕೂ ಮತ್ತು ಖರೀದೀದಾರನ ಲಾಗವಡಿನಲ್ಲಿಯೂ ಮತ್ತು ಹಾಂಗೆ ಹೊರಗೆ ಹಾಕಿಸೋಣದರಿಂದ ಸಂಭವಿಸಬಹುದಾದ ಲುಕ್ಸಾನಿಗೆ ಸಹ ಖರೀದೀದಾರನ್ನ ಗುರಿಮಾಡಿ ಸದರೀ ಮರವನ್ನು ಕೋಠೀ ಆಚೆ ಅಮಾನತ್ತು ಯಿಡಿಸಲಿಕ್ಕೂ ಸ್ವತಂತ್ರರಾಗಿರತಕ್ಕದ್ದು.

V. ಸಾಗಿಸಲಿಕ್ಕೆ ಲೈಸೆನ್ಸ.

9. ಇನ್‌ಚಾರ್ಜ್ ಆಫೀಸರರಿಂದ ದಸ್ತಖತ್ ಆದ "ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ್" ಪಡಿಯುವ ಪರಿಯಂತ ಕೋಠೀಯಿಂದ ಯಾವ ಮರವನ್ನೂ ಸಾಗಿಸಕೂಡದು. ಅಂತಾ ಲೈಸೆನ್ಸುವುಳ್ಳ ದರೋಬಸ್ತು ಜನಗಳೂ ಅಂತಾ ಲೈಸೆನ್ಸುಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು, ತನ್ನ ಲೈಸೆನ್ಸ ಷರತ್ತುಗಳನ್ನು ಅತಿಕ್ರಮಿಸುವ ಮತ್ತು ಕೊಡಲ್ಪಟ್ಟ ವಾಯಿದೇ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸ್ ಮಾಡದ ಯಾವ ವರ್ತಕನಾಗಲೀ ಇತರ ಮನುಷ್ಯನಾಗಲೀ ಮೈಸೂರು ಫಾರೆಸ್ಟು ರೂಲ್ಸ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ನಡಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

VI. ಜನರಲ್.

10. ಖಾಯಂ ನಿಬಂಧನೆಗಳನುಸಾರವಾಗಿ ಮೈಸೂರು ಸೀಮೆ ಗಡಿಗಳೊಳಗೆ ಯಾವ ಸಂದಲ್ ಮರವೂ ಖುಷ್ ಬಾಷ್ ಜನಗಳಿಂದ ಮಾರಲ್ಪಡ ಕೂಡದು, ಅಥವಾ ರೇಂಜ್ ಇನ್‌ಚಾರ್ಜ್ ಫಾರೆಸ್ಟು ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ ಶಿವಾಯಿ ವೊಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡತಕ್ಕದ್ದಲ್ಲ.

11. ಯಿಸ್ಚಾರ್ಜ ಘಾರೆಸ್ಟು ಆಫೀಸರರು ಖರೀದಿಗೆ ತೆಗದುಕೊಳ್ಳಲಿಚ್ಛೈಸುವ ಜನಗಳಿಗೆ ಯಾವದೊಂದು ಸಬಬೂ ತಿಳಸದೇ ಹರಾಜನ್ನು ಯಾವ ಕಾಲದಲ್ಲಾಗಲಿ ನಿಲ್ಲಿಸಲಿಕ್ಕೆ ಸ್ವತಂತ್ರರಾಗಿರತಕ್ಕದ್ದು.

ಬವೋಜೀಬ್ ಹುಕ್ಕುಂ,

ಆರ್. ವಿಜಯಿರಾಂದ್ರರಾವ್,

ಚೀಫ್ ಸೆಕ್ರೆಟೇರಿ.

ವಿದ್ಯಾಭ್ಯಾಸದ ಇಲಾಖೆ.

ಸ 1887ನೇ ಇಸವಿ ಆಗಸ್ಟು ತಾರೀಖು 12.

ವ್ಯವಸಾಯ ಕ್ರಮ ಬೋಧಿನಿಯ ಬಗ್ಗೆ ಬೆಳ್ಳೀ ಬಿರುದು ಬಿಲ್ಲೆ.

ಸೂಳೇಕೆರೆ ಸ್ಥಿತಿವಂತರಾದ ಮ॥ ರಾ॥ ಕೆ. ಶ್ಯಾಮಯ್ಯಂಗಾರ್ ಮತ್ತು ಸಹೋದರರು ಎಂಬವರ ಹೆಸರಿನಲ್ಲಿ 15 ರೂಪಾಯಿ ಬೆಲೆಯುಳ್ಳ ಒಂದು ಬೆಳ್ಳೀ ಬಿರುದು ಬಿಲ್ಲೆ 1888ನೇ ಇಸವಿ ಫೆಬ್ರವರೀ ತಿಂಗಳಲ್ಲಿ ನಡಿಯುವ ಮೈಸೂರು ದೇಶೀಯ ಪರೀಕ್ಷೆಯ ವ್ಯವಸಾಯ ಬೋಧಿನಿಯಲ್ಲಿ ಅಧಿಕವಾದ ನಂಬರನ್ನ ಹೊಂದುವಂಥಾ ವಿದ್ಯಾರ್ಥಿಗೆ ಕೊಡಲ್ಪಡುತ್ತೆ.

ತಿದ್ದಪಾಟು.

ಸ 1887ನೇ ಇಸವಿ ಆಗಸ್ಟು 13ನೇ ಮರ್ಕೂಂ ಮೈಸೂರು ಗೆಜೆಟ್ಟಿನ 1ನೇ ಭಾಗದ 348ನೇ ಪುಟದಲ್ಲಿ ಪ್ರಕಟಿಸಲ್ಪಟ್ಟ ಮೈಸೂರು ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗದೆ ಇರುವ ಅಂಶಗಳ ಪಟ್ಟಿಯ ರಿಜಿಸ್ಟರ್ ನಂಬರ್ ಎಂಬ ಮದ್ದಿನಲ್ಲಿ "261"ಕ್ಕೆ ಬದಲಾಗಿ "262" ಎಂದು ಓದತಕ್ಕದ್ದು; ಮತ್ತು "[273 | b. c. d.]" ಎಂಬದರ ತರುವಾಯ "[274 | b. c. d.]" ಎಂಬದನ್ನ ಸಹ ಓದತಕ್ಕದ್ದು.

ಯಲ್. ರೈಸ್,

ಎಜ್ಯುಕೇಶನ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಫ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 20, ಸರ್ಕ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೧ನೇ ಭಾಗ.

ಇಂಡ್ಯಗವರ್ರ್ಣಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾರ್ನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡರ್ನನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡರ್ನನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಆವ ರುಗಳೊಡನೆ ಮೈಸೂರು ಗವರ್ರ್ಣಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡರ್ನನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎರ್ನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜೂ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎರ್ನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್ನ,
ಕಾಂಪ್‌ಟ್ರೋಲರ್.

ಫಾರೆಸ್ಟು ಇಲಾಖಾ.

ತಾರೀಖು 8ನೇ ಆಗಸ್ಟ್ 1887.

ಇದರಿಂದ ಪ್ರಕಟಸಲ್ಪಡುವದೇನಂದರೆ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ಬಾಬತು ಇದರಡಿಯಲ್ಲಿ ಚವುಬಿನೇಗಳು ಕೆಳಗೆ ಕಾಣಿಶಿ ಯಿರುವ ತಾರೀಖು ವ ಸ್ಥಳಗಳಲ್ಲಿ ಫಸ್ಟ್‌ಕ್ಲಾಸ್ ಅಸಿಸ್ಟೆಂಟ್ ಕನ್ಸರ್‌ವೇಟರ್ ಸಾಹೇಬರವರಿಂದ ಪಬಿಕ್ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಡಿಯತಕ್ಕ ಸ್ಥಳದ ಹೆಸರು.	ಹರಾಜ್ ತಾರೀಖು.	ಕಾಡು ಜಾತೀನಾಟಾಗಳು.	ಸಾಗವಾನಿ ಬೆಲಗಗಳು.	ಷರಾ.
ಆಯನೂರ ಡಿಪೋ ..	3ನೇ ಸೆಪ್ಟಂಬರ್ 1887	360	..	0
ತರೀಕೆರೇ ಡಿಪೋ ..	6ನೇ ಡಿಟೋ 1887	25	250	0
ಲಕ್ಕುವಳ್ಳೀ ಡಿಪೋ ..	8ನೇ ಡಿಟೋ 1887	100	..	0
ಕೊಣಬೂರು ಡಿಪೋ ..	12ನೇ ಡಿಟೋ 1887	150	..	0

ಹರಾಜಿನ ಷರತ್ತುಗಳು—ಮೈಸೂರು ಗೆಜೆಟಿನಲ್ಲಿ 1873ನೇ ಇಸವಿ ಜೂನ್ 12ನೇ ಮರ್ಕುಂ ನಂಬರು 20ನೇ ಇಸ್ತಿಹಾರ್ ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಯಿರತಕ್ಕದ್ದು. ಮತ್ತು ಹರಾಜ್ ಕಾಲದಲ್ಲಿ ಪ್ರೋದಲ್ಪಡುವದು.

ಯಲ್. ರಿಕ್ಕೇಟ್ಸ್,
ಇನ್ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 662.

ಕೋಲಾರದ ಕಸಬೇಲಿದ್ದು ಮೃತಪಟ್ಟ ಅಪ್ಪಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕೋಲಾರದ ಕಸಬೇಲಿರುವ ತೋಟದ ವೆಂಕಟಪ್ಪ, ಮೃತಪಟ್ಟ ಸದರೀ ಅಪ್ಪಣ್ಣನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲಿ ಕೋಲಾರ್ ಸ್ಥಳದ ವೆಂಕಟಪ್ಪನು ಕೋಲಾರ ವಾಸಸ್ಥನಾಗಿ ಮೃತಪಟ್ಟ ಅಪ್ಪಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಪ್ಪನವರ ಅರ್ಜೀಯನ್ನು 1887ನೇ ಇಸವಿ ಆಗಸ್ಟು ತಿಂಗಳು ತಾರೀಖು 26ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಪ್ಪಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಆಗಸ್ಟು ತಿಂಗಳು 12ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಮಿ॥ ಅರ್ಜೀ ನಂಬರ್ 690.

ಬೆಂಗಳೂರು ಗುಡಮಯ್ಯನ ಪೇಟೇಲಿದ್ದು ಮೃತಪಟ್ಟ ಬಸಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಬೆಂಗಳೂರು ಗುಡಮಯ್ಯನಪೇಟೇಲಿರುವ ಮಂಗಮ್ಮ, ಮೃತಪಟ್ಟ ಸದರೀ ಬಸಪ್ಪನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲಿ ಬೆಂಗಳೂರು ಸ್ಥಳದ ಮಂಗಮ್ಮನು ಡಿಟೋ ವಾಸಸ್ಥನಾಗಿ ಮೃತಪಟ್ಟ ಬಸಪ್ಪನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಮಂಗಮ್ಮನ ಅರ್ಜೀಯನ್ನು 1887ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 9ರಲ್ಲು ಕೇಳಿ ಸರಟಿಫಿಕೇಟ್ ಪಡಿಯ ತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಆಗಸ್ಟು ತಿಂಗಳು 15ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ತಾಲ್ಲೂಕು ವರ್ತೂರು ಹೋಬಳಿ ಗುಂಜೂರು ಗ್ರಾಮದಲ್ಲಿ ಇರತಕ್ಕ ಸೂಳಿಗೆರೇ ಮರಿಯಪ್ಪನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ ಮಿಸಲೇನಿಯಸ್ 2.

ಹುಕ್ಕುಂ.

ಮೇಲ್ಕಂಡ ಸೂಳಿಗೆರೇ ಮರಿಯಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜೀಯವರಾದ ಮೆ|| ಕ್ರೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಸೂಳಿಗೆರೇ ಮರಿಯಪ್ಪನ ಪರವಾಗಿ ಮೆ|| ಅಡ್ವೊಕೇಟ್ ನಾರಾಯಣರಾಯರನ್ನೂ ಮತ್ತು ಸದರೀಯವನ ಲೇಣೇದಾರ್‍ರಾದ 6—7ನೇ ಯವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‍ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1—3—5—8ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸೂಳಿಗೆರೇ ಮರಿಯಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸರ್ 1887ನೇ ಇಸವಿ ಜುಲೈ 19ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್‍ರು ಅಥವಾ ದಾವಾದಾರ್‍ರ ಹೆಸರು ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಡ್ಡಿ ಮೊಬಲಗು ಬಡ್ಡಿ ದರ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಗುಂಜೂರು ಚೆನ್ನಪ್ಪಗೆ ..	4,000	..	ತಪಸೀಲ್ ಯಿಲ್ಲಾ	
	ಡಿಟೋ ..	750	..	ಆಧಾರ ಪತ್ರದಬಗೆ	
2	ಬೆಂಗಳೂರು ಸಂಪನ್ನಯ್ಯನವರ ಮರಿನಂಜಪ್ಪ ..	500	..	ಡಿಕರೀ ಬಾಬತು	
3	ಡಿಟೋ ಬಿಗದೇನಹಳ್ಳೀ ಬಸಪ್ಪ ..	425	..	ಪತ್ರ 2ಕ್ಕೆ ಈಪೈಕಿ 225 ರೂಪಾಯಿಗೆ ಡಿಕರೀ ಆಗಿ ಯಿದೆ ಆಧಾರ ಪತ್ರದ ಬಗೆ	
4	ದೊಮ್ಮಸಂದ್ರದ ಮುದ್ದನಂಜಪ್ಪಗೆ ..	200	..		
5	ಹಲಸೂರು ಸೋಮಪ್ಪಗೆ ..	300	..	ತಪಸೀಲ್ ಯಿಲ್ಲಾ	
6	ಡಿಟೋ ನಿಜಗುಣಪ್ಪಗೆ ..	350	..	ಪತ್ರ 3ಕ್ಕೆ ಈಪೈಕೀ 2 ಪತ್ರಕ್ಕೆ ಡಿಕರೀ ಆಗಿದೆ	
7	ಹಲಸೂರು ಮಲ್ಲೇಸೀ ಮಗ ಪರಪ್ಪಗೆ ..	150	..	ಡಿಕರೀ ಬಾಬತು	
8	ಮಲ್ಲೇಗೌಡನ ಪಾಳ್ಯದ ತಮ್ಮಣ್ಣನಮಗ ಮುನಿಶಾಮಿಗೆ ..	100	..	ತಪಸೀಲ್ ಯಿಲ್ಲಾ	
	ಜುಮ್ಲಾ ..	6,725			

ದಿವಾಳೀಯಾದ ಡಿಕ್ರೀ ದೇಣೇದಾರ ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ್ ತಾಲ್ಲೂಕು ಕುರುಬ ಚದಮನಹಳ್ಳೀ ವಾಸಸ್ಥನಾದ ನರಶೀಗವುಡನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರು ಮಿಸಲೇನಿಯಸ್ 111.

ಹುಕ್ಕುಂ.

ಮೇಲ್ಕಂಡ ನರಶೀಗವುಡನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ನರಶೀಗವುಡನ ಪರವಾಗಿ ಪ್ಲೀಡರ್ ಮೆ|| ಗಂಗಾಧರಯ್ಯನವರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 3ನೇ ಐಯಪ್ಪನವರ ತರಫ್ ಪ್ಲೀಡರ್ ಮೆ|| ಶೇಷಗಿರಿಯಪ್ಪನವರಿಗೂ ದರ್ಯಾಪ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಪ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾವಂದರೆ 1—2—4—5—6ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವಾಗಿ ಸದರೀ ನರಶೀಗವುಡನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಜುಲೈ 22ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಸಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಡಬೇಕಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಕೋಲಾರ ಡಿಸ್ಟ್ರಿಕ್ಟು ಮುಳಬಾಗಲಿನಲ್ಲಿರತಕ್ಕ ತಿಮ್ಮಕೊಪ್ಪಂ ಅಂಣಯ್ಯಶೆಟ್ಟಿ ...	210	..	ಡಿಕರೀ ಬಾಬತು	
2	ಡಿಟೋ ಮುಳಬಾಗಲ್‌ನಲ್ಲಿರತಕ್ಕ ನೂರಮೊಹರ್ದೀ ಸಾಬಿಗೆ	18	..	ತಂಬೂಕು ಬಗೆ	
3	ಮುಳಬಾಗಲ್ ತಾ|| ವಿಜಲಾಪುರದಲ್ಲಿರತಕ್ಕ ಐಯಪ್ಪಗೆ	280	..	ತಪಸೀಲ್ ಇಲ್ಲ	
4	ಮುಳಬಾಗಲ್ ತಾ|| ಆವನಿ ಸಂ|| ಬೊಮ್ಮಸಂದ್ರದಲ್ಲಿರತಕ್ಕ ಭೀಮಾಪುರದ ವೆಂಕಟಪ್ಪಗೆ ..	50	..	ಡಿಟೋ	
5	ಮುಳಬಾಗಲ್ ತಾ|| ವೊದಕಾಪ್ಪೈಲಿರುವ ಚನ್ನಪ್ಪಗೆ.	50	.	ಡಿಟೋ	
6	ಮುಳಬಾಗಲ್ ತಾಲ್ಲೂಕಿಗೆ ರಿವಿನ್ಯೂ ಕಂದಾಯದ ಬಾಕಿಗೆ	90	..	ಡಿಟೋ	
	ಜುಮ್ಲಾ ರೂಪಾಯಿ	698	..		

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಸಿದ್ದೀಕಟ್ಟೇಲಿ ಯಿರತಕ್ಕ ಜಯಮಂಗಲದ ಕೃಷ್ಣಾಚಾರೀ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ ಮಿಸಲೇನಿಯಸ್ 290.

ಹುಕ್ಕುಂ.

ಮೇಲ್ಕಂಡ ಜಯಮಂಗಳದ ಕೃಷ್ಣಾಚಾರ್ಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜೀಯವರಾದ ಮೆ|| ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಕೃಷ್ಣಾಚಾರ್ರನ್ನ ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಹಿಂದೂ ಬ್ಯಾಂಕಿನ ತರಫ್ ಮೆ|| ಪಿ. ನಾರಾಯಣರಾಯರಿಗೂ ದರ್ಯಾಪ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ಪರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ–2—3ನೇಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಜಯಮಂಗಲದ ಕೃಷ್ಣಾಚಾರೀ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸರ್ 1887ನೇ ಇಸವಿ ಜುಲೈ 19ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಟ್ಟಿದ್ದು ತಾರೀಖು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
		ರೂಪಾಯಿ.			
1	ಬೆಂಗಳೂರು ಹಿಂದೂ ಬ್ಯಾಂಕಿಗೆ ..	97 4 0	11 18 77	ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟು ಡಿಕರೀ.	
2	ಬೆಂಗಳೂರು ದೊಡ್ಡ ಪೇಟೇಲಿರತಕ್ಕ ದೊಡ್ಡಬಳ್ಳಾಪುರದ ಕೃಷ್ಣಾಚಾರಿಗೆ	50 0 0	..	ತಪಸೀಲ್ ನಮೂದಿಲ್ಲಾ.	
3	ಬೆಂಗಳೂರು ೧೯ಗೆ ಪೇಟೆಲಿರತಕ್ಕ ಮಾಲೂರು ಯಲ್ಲಪ್ಪಗೆ	71 0 0	..	ಡಿಟೋ.	
	ಜುಮ್ಲಾ ..	218 3 11			

ಸಿ. ಕ್ರಿಸ್,
ಸಬ್ ಜಡ್ಜಿ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ, ಅರ್ಜೀ ನಂಬರ್ 359.

ಮೃತಪಟ್ಟ ಕಾರ್ಖಾನೇ ಕೆಂಪಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮುದ್ದಯ್ಯನು, ಮೃತಪಟ್ಟಸದರೀ ಕಾರ್ಖಾನೇ ಕೆಂಪಯ್ಯನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಮಂಡೀಮೊಹಲಾ ಸ್ಥಳದ ಸದರೀ ಮುದ್ದಯ್ಯನು ಸದರೀ ವಾಸಸ್ಥನಾಗಿ ಮೃತಪಟ್ಟ ಕಾರ್ಖಾನೇ ಕೆಂಪಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮುದ್ದಯ್ಯನ ಅರ್ಜೀಯನ್ನು 1887ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾರ್ಖಾನೇ ಕೆಂಪಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಆಗಸ್ಟು ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1887ನೇ ಇಸವಿ ಅರ್ಜೀ ನಂಬರ್ 378.

ಮೃತಪಟ್ಟ ನಂಜಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ನಾಗಮ್ಮನು, ಮೃತಪಟ್ಟ ಸದರೀ ನಂಜಶೆಟ್ಟರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡ್ಲು ನರಶೀಪುರದ ತಾಲ್ಲೂಕು ತಲ್ಕಾಡು ಹೋಬಳಿ ಮಾವಿನಹಳ್ಳಿ ಸ್ಥಳದ ಸದರೀ ನಾಗಮ್ಮನು ಡಿಟೋ ವಾಸಸ್ಥನಾಗಿ ಮೃತಪಟ್ಟ ನಂಜಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 5,000 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಾಗಮ್ಮನ ಅರ್ಜೀಯನ್ನು 1887ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಆಗಸ್ಟು ತಿಂಗಳು 8ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತುಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 388.

ಮೃತಪಟ್ಟ ಚಿಕ್ಕೇಗೌಡ ವುರಫ್ ಕರೀಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ದ್ಯಾವಾ ಮೈನರ್ ಗಾರ್ಡಿಯನ್ ಮತ್ತು ಜನಕ ತಂದೆ ದ್ಯಾವೇಗೌಡನು ಮೃತಪಟ್ಟ ಸದರೀ ಚಿಕ್ಕೇಗೌಡ ವುರಫ್ ಕರೀಗೌಡರಿಗೆ ಮೈನರ್ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ತಾಲ್ಲೂಕು ಪಡವಾರಹಳ್ಳೀ ಸ್ಥಳದ ಸದರೀ ದ್ಯಾವೇಗೌಡನು ಸದರೀ ತಾಲ್ಲೂಕು ನಾಗನಹಳ್ಳೀ ವಾಸಸ್ಥನಾಗಿ ಮೃತಪಟ್ಟ ಚಿಕ್ಕೇಗೌಡ ವುರಫ್ ಕರೀಗೌಡರ ಜಿಂದಗೀ ಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ ದ್ಯಾವೇಗೌಡನ ಅರ್ಜೀಯನ್ನು 1887ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 2ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕೇಗೌಡ ವುರಫ್ ಕರೀಗೌಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಆಗಸ್ಟು ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತುಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 399.

ಮೃತಪಟ್ಟ ನಾಯಕ ಕೃಷ್ಣಾಜೀರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಸಾವಿತ್ರಾಬಾಯಿ ಮೈನರ್ ಗಾರ್ಡಿಯನ್ ಮತ್ತು ತಂದೆಯಾದ ಲೋಕರೆ ಬಂದೋಜಿರಾವ್ ಮೃತಪಟ್ಟ ಸದರೀ ನಾಯಕ ಕೃಷ್ಣಾಜೀರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಲಷ್ಕರ್ ಮೊಹಲ್ಲಾ ಸ್ಥಳದ ಸದರೀ ಸಾವಿತ್ರಾಬಾಯಿ ಗಾರ್ಡಿಯನ್ ಲೋಕರೆ ಬಂದೋಜೀ ಸದರೀ ವಾಸಸ್ಥರಾಗಿ ಮೃತಪಟ್ಟ ನಾಯಕ ಕೃಷ್ಣಾಜೀರ ಜಿಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ

ಸದರೀ ದರಖಾಸ್ತುದಾರನಾದ ಲೋಕರೆ ಬಂದೋಜಿಯು ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಯಕ ಕೃಷ್ಣಾಜೀರ ಆಸ್ತಿಗೆ ಹಕ್ಕುದಾರರಾದವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 400.

ಮೃತಪಟ್ಟ ಮುತವಲಿ ಹಕೀಂ ಮಹಮ್ಮದ್ ವುಮ್ಮತ್ ಸಾಹೇಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮೊಹದೀನ್‌ಸಾಬರು ಮೃತಪಟ್ಟ ಸದರೀ ಮುತವಲಿ ಹಕೀಂ ಮಹಮ್ಮದ್ ಸಾಹೆಬರಿಗೆ ವಾರಸ್‌ದಾರ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ವರಾಂಪೇಟೆ ಸ್ಥಳದ ಸದರೀ ಮೊಹದೀನ್‌ಸಾಬರು ಸದರೀ ವಾಸಸ್ಥರಾಗಿ ಮೃತಪಟ್ಟ ಮುತವಲಿ ಹಕೀಂ

ಮಹಮ್ಮದ್ ಪುಮ್ಮತ್ ಸಾಹೆಬರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೊಹರ್ದೀನ್ ಸಾಬರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುತವಲಿ ಹಕೀಂ ಮಹಮ್ಮದ್ ಪುಮ್ಮತ್ ಸಾಹೆಬರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಸರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇಧೆ.

1887ನೇ ಇಸವಿ ಆಗಸ್ಟು ತಿಂಗಳು 8ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟ್ ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ಶ್ರೀರಾಂಪೇಟೇಲಿರುವ ಸವಾರ್ ಇಲಾಖಾ 1ನೇ ರಿಜಿಮೆಂಟ್ 6ನೇ ರಿಸಾಲೆ ಪೇಷ್ಕಾರ್ ವಿಠಲರಾಯನ ವಿಷಯದಲ್ಲಿ—

ಸ್ನ 1887ನೇ ಇಸವಿ ದಿವಾಳೀ ಕೇಸ್ ನಂಬರು 154.

ಹುಕ್ಕುಂ.

ಮೇಲ್ಕಂಡ ವಿಠಲರಾಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು, ಈ ಕೋರ್ಟು ರೂಬರೂ ಅರ್ಜೀದಾರನಾದ ವಿಠಲರಾಯನ ಪರವಾಗಿ ಫಸ್ಟ್‌ಗ್ರೇಡ್ ಪ್ಲೀಡರ್ ಮ|| ವೆಂಕೋಬರಾಯರನ್ನು ಮತ್ತು ಸದರೀಯವನ ಲೇಣೇದಾರ್‍ರಾದ 6ನೇ ಕೃಷ್ಣಮೂರ್ತಿರಾವ್ ಇವರಿಗೂ ದರ್ಯಾಪ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‍ರು ತಮಗೆ ಈ ದರ್ಯಾಪ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರೆಂದರೆ, 1ನೇ ವಡಿಸ್ವಾಮಿ ರಾಯಾಚಾರಿ 2ನೇ ರಂಗಪ್ಪ 3ನೇ ಶೇಷಗಿರಿರಾವ್, 4ನೇ ಮಾರವಾಡೀ ದೇವಾಜಿ ಜೋಲಾಜಿ. 5ನೇ ರಾಜಪ್ಪ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪೇಷ್ಕಾರ್ ವಿಠಲರಾಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ತಾಗಿರುವ ಪಟ್ಟಿಯಲ್ಲಿಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1887ನೇ ಇಸವಿ ಜುಲೈ 27ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್‍ರು ಅಥವಾ ದಾವಾದಾರ್‍ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.	[illegible]	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೋ ನಾದರೂ ಇದ್ದರೆ.	ಷರಾ.
1	ಶಿವಮೊಗ್ಗಾದಲ್ಲಿರುವ ವಡಿಸ್ವಾಮಿರಾಯಾಚಾರಿ	89 3 4		ಡಿಕ್ರೀ ಬಾಬತು	

ದಿವಾಳಿಯಾದ ಡಿಕ್ರೀ ದೇಣೇದಾರಳು ಶ್ರೀರಂಗಪಟ್ಟಣ ತಾಲ್ಲೂಕು ಕ್ಯಾತನಹಳ್ಳೀ ಹೋಬಳಿ ಕಡತನಾಳು ಗ್ರಾಮದಲ್ಲಿರುವ

ಅಕ್ಕಮ್ಮನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 57.

ಹುಕ್ಕುಂ.

ಮೇಲ್ಕಂಡ ಅಕ್ಕಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜೀದಾರಳಾದ ಅಕ್ಕಮ್ಮನ ಪರವಾಗಿ ಅಡ್ವೋಕೇಟ್ ಮ॥ ನಾರಣಯ್ಯಂಗಾರ್ರವರನ್ನು ಮತ್ತು ಸದರೀಯವಳ ಲೇಣೇದಾರ್ರಾದ 1ನೇ ಲಿಂಗೇಗೌಡ 2ನೇ ಚನ್ನಲಿಂಗೇಗೌಡನ ಲಿಂಗೇಗೌಡ, 3ನೇ ಪುರಿಪುಟ್ಟೇಗೌಡ ಖುದ್ದು ಹಾಜರು 7ನೇ ಕೊಮಾರಯ್ಯನಕಡೆ ಅಡ್ವೋಕೇಟ್ ಮ॥ ಡಿ, ಸಾಹೆಬರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ, ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರೆಂದರೆ, 4ನೇ ಲಿಂಗ 5ನೇ ನಂಜೆ 6ನೇ ಜವರೇಗೌಡನ ಲಿಂಗೇಗೌಡ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅಕ್ಕಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇವಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಜುಲೈ 27ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ಸಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿದುಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣಿ ಬಂದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಶ್ರೀರಂಗಪಟ್ಟಣ ತಾಲ್ಲೂಕು ಕಡತನಾಳಲ್ಲಿರುವ ಲಿಂಗೇಗವುಡ.	180 0 0	..	ಆಧಾರ ತಮಸೂಕು ಬಾಬತು	
2	ಡಿಟ್ಟೋ ವೂರು ಚನ್ನಲಿಂಗೇಗವುಡನ ಲಿಂಗೇಗವುಡ	25 0 0	..	ನಗದು ಲೇವಾದೇವೀ ತಮಸೂಕು ಬಾಬತು	
7	ಶ್ರೀರಂಗಪಟ್ಟಣದಲ್ಲಿರುವ ಕೊಮಾರಯ್ಯ ಪ್ಲೀಡರ್	32 0 0	..	ಡಿಕರೀ ಬಾಬತು	
		237 0 0			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ನಂ. 9. ತಾರೀಖು 12ನೇ ಆಗಸ್ಟ್ 1887.

ಯಡತೊರೇ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನ ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯ್ತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸು ಪಡಿಯಬೇಕು ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 35ನೇ ಸೆಕ್ಷನ್ ಮೇರೆಗೆ ನಾಶಪಡಿಸಲ್ಪಡುತ್ತೆ:—

ನಂಬರ್ ಇಸವಿ.	ದಸ್ತಾವೇಜನ್ನು ಬರದು ಕೊಟ್ಟವರ ಹೆಸರು ಮತ್ತು ಅಡಿರ್ಷ.	ದಸ್ತಾವೇಜನ್ನು ಬರಸಿ ಕೊಂಡವರ ಹೆಸರು ಮತ್ತು ಅಡಿರ್ಷ.	ರಿಜಿಸ್ಟ್ರೇಷನ್ನಿಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರ ಮಾಡಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
272 1885-86ನೇ ಇಸವಿ	ಯಡತೊರೆ ತಾಲ್ಲೂಕು ಬಿಳ್ಳೂರು ಗ್ರಾಮದಲ್ಲಿರುವ ಶಿವಾಚಾರದ ಕೊಪ್ಪಲು ವೀರಪ್ಪನ ಮಕ್ಕಳು ಬಸವಂಣ, ವೀರಂಣ, ನಾಗಂಣ ಸಹ	ಯಡತೊರೆ ತಾಲ್ಲೂಕು ಬಿಳ್ಳೂರು ಗ್ರಾಮದಲ್ಲಿ ಬಂದಿರುವ ವೈನಾಡು ತಾಲ್ಲೂಕು ತಲ್ಪಾತಿ ಚಾಮೇಗೌಡನ ಮಗ ಚಾಮೇಗೌಡ.	19—5—85	2—9—85	ಹಿತ್ತಲು ನಿವೇಶನದ ಕ್ರಯಪತ್ರ ರೂಪಾಯಿ (50)
268 ಡಿಟೋ	ಯಡತೊರೆ ತಾಲ್ಲೂಕು ಬಿಳ್ಳೂರು ಗ್ರಾಮದಲ್ಲಿರುವ ಶಿವಾಚಾರದ ಚನ್ನಮ್ಮನ ಲಿಂಗಂಣನ ಮಕ್ಕಳು ಬಸವಂಣ ಇವನ ತಂಮ ಪುಟ್ಟ ಸಹ	ಡಿಟೋ	ಡಿಟೋ	ಡಿಟೋ	ಭೂಸ್ಥಿತಿ ಆಧಾರ ಪತ್ರ ರೂಪಾಯಿ (50)
270 ಡಿಟೋ	ಯಡತೊರೆ ತಾಲ್ಲೂಕು ಬಿಳ್ಳೂರು ಗ್ರಾಮದಲ್ಲಿರುವ ಶಿವಾಚಾರದ ಕೊಪ್ಪಲು ಲಿಂಗೇಗೌಡನ ವೀರಪ್ಪನ ಮಗ ವೀರಂಣ	ಡಿಟೋ	ಡಿಟೋ	ಡಿಟೋ	ಡಿಟೋ
305 ಡಿಟೋ	ಯಡತೊರೆ ತಾಲ್ಲೂಕು ಸರ್ವ ಮಾನ್ಯ ಕುಂದೂರು ಗ್ರಾಮದಲ್ಲಿ ಇರುವ ಕುರುಬರ ಜಾತಿ ಮರಿಗೌಡ	ಹುಣಸೂರು ತಾಲ್ಲೂಕು ಚಿಕ್ಕ ಅಡಗನಹಳ್ಳಿ ಗ್ರಾಮದಲ್ಲಿರುವ ಅಗಸಾಲೀ ರುದ್ರಾಚಾರಿ ಮಗ ನಂಜಾಚಾರಿ	22—5—85	4—6—85	ಸರ್ವಮಾನ್ಯ ಮಲ್ಲಿಕೆರೆಗ್ರಾಮದ ಪೃತ್ತಿ ಜಮೀನ್ ವುಳಮೆಹಕ್ಕು ಕ್ರಯ ಪತ್ರ 90 ರೂಪಾಯಿ
344 ಡಿಟೋ	ಡಿಟೋ ತಾಲ್ಲೂಕು ಡಿಟೋ ಗ್ರಾಮದಲ್ಲಿರುವ ಶಂಕರಂಪಾಡಿ ತಾತಾಚಾರ್ಯ	ಮೈಸೂರು ಚೆಲುವಾಂಬಾ ಅಗ್ರಹಾರದಲ್ಲಿರುವ ಶ್ರೀಕಂಠಸೋಮಯಾಜಿ ಕುಟುಂಬ ರಾಮಕ್ಕಮ್ಮ	30—5—85	6—6—85	ಭೂಸ್ಥಿತಿ ಕ್ರಯ ಪತ್ರ (50) ರೂಪಾಯಿ.

ಟಿ. ಆನಂದರಾವ್, ರಿಜಿಸ್ಟ್ರಾರ್.

ರಾಯಚೂರು ಜಿಲ್ಲಾ ಅದಾಲತ್ತು ಮೊಹತಮಾದಿಂದ.

ಇಸ್ತಿಹಾರ್‌ನಾಮೆ.

ಇದರಮೂಲಕವಾಗಿ ಪ್ರಸಿದ್ಧಮಾಡುವದೇನಂದರೆ, ಧಾರುವಾಡ ಜಿಲ್ಲಾ ಕಲಘಟಕಿ ತಾಲ್ಲೂಕು ಪೈಕೀ ಮಿಶ್ರೀಕೋಟಿ ಗೋವಿಂದರಾಯನು ಸರಕಾರ ಅಲ್ಲಿ ಇಲಾಖೆ ಕಿ|| ರಾಯಚೂರಿಗೆ ಬಂದು ಅಕಸ್ಮಾತ್ತಿಯಿಂದ ಮೃತವಾಗಿ ಯಿರುವದ್ದರಿಂದ ಕೊತ್ತವಾಲೀ ಇಲಾಖಾದಿಂದ ವಿಚಾರಣೆ ಆಗುವಾಗ್ಯೆ ಘಾತೀ ಪತ್ರ ಮುನಸಿಫ್ ನಂ. 1 ಸಬ್ ಡಿವೀಜ಼ನ್ ಬೆಂಗಳೂರು ತಾರೀಖು 30 ಅಕ್ಟೋಬರ್ ಸೆ 1876ನೇ ಇಸವಿಯ ಇಂಗ್ಲಿಷ್ ಲಿಪೀ ಬಾಬತು ಶಿವಿಲ್ ಡಿಕರಿ ನಕಲ್ ಯರಡು ಅದದು ರೂಪಾಯಿ 623, ದು ರೂಪಾಯಿ 242 ದು ಈಪ್ರಕಾರ ದೊರತಿರುವದ್ದರಿಂದ ಈ ಅಡಾಲತ್ತಿಗೆ ದಾಖಲಾದ ಕಾರಣ ವಾರಸುದಾರ ಹಾಜರಿ ತಾರೀಖು ಧಾರುವಾಡ ಜಿಲ್ಲಾ ಕಲೆಕ್ಟರ್ ಸಾಹೇಬರಲ್ಲಿ ಹುಕ್ಮಾಂ ಯಿವರ ಮುದ್ದತ್ ಇಸ್ತಿಹಾರ್ ಯಿಜರಾಮಾಡಿ ಇರಲಾಗಿ ಈತನ ವಾರಸುದಾರ ರಾಮಚಂದ್ರ ವಗೈರೇರು ಬೆಂಗಳೂರಲ್ಲಿ ಇರುವದಾಗಿ ಸಾಹೆಬ್ ಮೌಸೂಫರವರ ಕಡೇಯಿಂದ ಜವಾಬು ಸಾದರಾದ ಕಾರಣ ಇಸ್ತಿಹಾರ್ ತಾರೀಖು ಲಾಗಾಯತು ತಿಂಗಳು ಮುದ್ದತ್ತು ಕೊಟ್ಟು ಇರುತ್ತಾರೆ ಈ ಮುದ್ದತ್ತಿನಲ್ಲಿ ವಾರಸುದಾರ ತಮ್ಮಪು ದಾವೆ ದಸ್ತಕ್ ಸಮೇತ ಹಾಜರಾಗಬೇಕು, ತಹಲ್ ಮೊದಂನಿಂದ ಪ್ರದಾಕಾರ ಖಾತ್ರಿ ಮಾಡಿಸಿ ಸಾಬೀತು ಆದಲ್ಲಿ ಸದರೀ ಡಿಕರೀ ವಾರಸುದಾರ್ರ ಯಲ್ಲಾವರವ್ರು ಮುದ್ದತ್ತು ಕಿರ ಹಾಜರಾಗಿ ಪೂರಾ ದಾವೆ ಮಾಡದೇ ಹೋದಲ್ಲಿ ಪ್ರಕರಣ ನಿಕಾಲ ಮಾಡಲಾಧೀತು. ತಾರೀಖು 29ನೇ ಮಾಹೆ ಅರ್ದಿಬೆಸ್ ಸೆ 12963 ಮುತಾಬಕ್ ತಾರೀಖು ಏಪ್ರೆಲ್ ಸೆ ಇಸವಿ, ಮೊಕ್ಕಾಂ ಜಿಲ್ಲಾ ರಾಯಚೂರು.

ಹಾಸನ ಡಿಸ್ಟ್ರಿಕ್ಟ್.

ತಾರೀಖು 10ನೇ ಆಗಸ್ಟ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟಿನಲ್ಲಿರತಕ್ಕ ಕೆಲವು ಕಾಫೀ ತೋಟಗಳ ಮೇಲೆ ಬರಬೇಕಾದ ಕಂದಾಯದ ಬಾಕಿ ಅದ್ಯಾಪಿ ಪಾವತೀ ಆಗದೆ ಇರುವದರಿಂದ ಹರಾಜು ಮಾಡುವ ತಾರೀಖಿಗೆ ಹಿಂದಿನ ದಿನ ಸಾಯಂಕಾಲದ ವಳಗಾಗಿ ಅಥವಾ ಆ ತಾರೀಖುವಳಗಾಗಿ ಬಾರದೇ ಹೋದರೆ ಸ್ಟೇಟ್‍ಮೆಂಟಿನಲ್ಲಿ ನಮೂದಾಗತಕ್ಕ ಸ್ಥಳ ಮತ್ತು ತಾರೀಖಿನಲ್ಲಿ ಸದರೀ ಯಸ್ಟೇಟನ್ನು ಹರಾಜು ಮಾಡಲ್ಪಡುವದು.

ತಾಲ್ಲೂಕು.	ಹೋಬಳಿ ಮತ್ತು ಗ್ರಾಮ.	ಬಾಕೀದಾರ್ರ ಹೆಸರು.	ಎಸ್ಟೇಟಿ ತಪಶೀಲು.							ಬರಬೇಕಾದ ಬಾಕಿ. ತಪಶೀಲು.				ಸರಹದ್ದು.				ಷರಾ.
			ಹೆಸರು.	ಸರ್ವೇ ನಂಬರು.	ಯಕರೆ.		ಆಕಾರ.			ವಿವರ.	ಮೊಬಲಗು.			ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.	
ಮಂಜರಾಬಾದ್.	ಕಸಬಾ ಸಕಳೇಶಪುರ ಕೋರಹಳ್ಳಿ ಗ್ರಾಮ.	ಬಾಕೀದಾರ ದೇವರಾಜು ಬಿನ್ ಭರಮಣ್ಣ ಖರೀದೀದಾರ ಸೈದಅಮೀರ್ ಹುಸೇನ್ ಸಾಬರು.	:	47	56	4	56	0	0	ವ್ಯಯ ಸಾಲ ಬಾಬತು..	59	8	0	ಸರ್ವೇ ನಂಬರು 49,70, ಮತ್ತು 48.	ಸರ್ವೇ ನಂಬರು 163 ಮತ್ತು 164.	ಸರ್ವೇ ನಂಬರು 46 ಮತ್ತು 76.	ಸರ್ವೇ ನಂಬರು 51 ಮತ್ತು 55.	ಮಂಜರಾಬಾದು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರಿಂದ ಸನ್ 1887ನೇ ಇಸವಿ ಸೆಪ್ಟಂಬರ 29ನೇ ತಾರೀಖಿನಲ್ಲಿ ಹರಾಜು ಮಾಡಲ್ಪಡುವದು.
										ನೋಟೀಸ್ ಫೀಸ್..	1	0	0					
										ಜುಮ್ಲಾ..	60	8	0					
										ಬಡ್ಡಿ ಹರಾಜ್ ತಾರೀಖಿನ ವರೆಗೆ								

ಪಿ. ಎನ್. ಪೂರ್ಣಯ್ಯ,
ಡೆಪ್ಯುಟಿ ಕಮ್ಮಿಷನರ್.

ನಗರ ಡಿವಿಜರ್ಜ.

ತಾರೀಖು 8ನೇ ಆಗಸ್ಟ್ 1887.

1886ನೇ ಇಸವಿ ಫಿಬ್ರುವರೀ 3ನೇ ಮರ್ಸ್ಕುಂ 66ನೇ ನಂಬರ ರೂಲ್ಸ್ ಆಫ್ ಪ್ರಾಕ್ಟಿಸ್ ಪ್ರಕಾರ ನಾಶ ಪಡಿಸತಕ್ಕಂಥಾ ಯೆಗ್ಜಿಬೀಟ ವಗೈರೆಗಳನ್ನು ತೋರಿಸುವ ಸ್ಟೇಟ್‌ಮೆಂಟು.

ಮೊಕದ್ದಮಾ ಇಸವಿ ಮತ್ತು ನಂಬರ.	ಯಾವ ಕೋರ್ಟಿನಲ್ಲಿ ಯೆಗ್ಜಿಬೀಟ ಹಾಜರಾಯಿತೋ ಆ ಕೋರ್ಟು ಹೆಸರು.	ಕಕ್ಷಿಗಾರರ ಹೆಸರುಗಳು.		ಯಾರಿಂದ ಯೆಗ್ಜಿಬೀಟ ಹಾಜರ್ಮಾಡಲ್ಪಟ್ಟಿತು.	ಷರಾ.
		ವಾದಿ ಅಪ್ಪೀಲಾಂಟ್ ಅಥವಾ ಅರ್ಜೀದಾರ.	ಪ್ರತಿವಾದಿ ರಸ್ಪಾಂಡೆಂಟ್ ಅಥವಾ ಕೌಂಟರ್ ಪೆಟಿಷನರ್.		
1886ನೇ ಇಸವಿ ಅಸಲ್ ನಂ. 1	ನಗರ ಡಿವಿಜರ್ಜ ಡಿಸ್ಟ್ರಿಕ್ಟು ಜಡ್ಜಿರವರ ಕೋರ್ಟು. ..	ಬಾಟ್ಲಿ ಕ್ರಿಷ್ಣರಾವು ..	ದಾವಣಗೆರೆ ಭೀಮಂಣಾ ..	ವಾದಿಯಿಂದ	
ಡಿಟೋ ನಂಬರು 3	ಡಿಟೋ ..	ಅಚ್ಚುತಾಚಾರ್ ..	ಶೇಷಾಚಾರ ವಗೈರೆ 5 ಜನ ..	ಉಭಯಕಕ್ಷಿಗಾರರಿಂದ	
ಡಿಟೋ ನಂಬರು 4	ಡಿಟೋ ..	ಧರಣಯ್ಯಶೆಟ್ಟಿ ..	ವೆಂಕಟಂಣಾ ವಗೈರೆ 5 ಜನ ..	ವಾದಿಯಿಂದ	
ಡಿಟೋ ನಂಬರು 5	ಡಿಟೋ ..	ಕಿ. ಎಸ್. ಎಂ. ಲವ್ರೇವ್ ..	ರೆವರೆಂಡ್ ಎಫ್. ಎಂ. ಕ್ರೈಲೊ ವಗೈರೆ 5ಜನ ..	ಡಿಟೋ	
ಡಿಟೋ ನಂಬರು 8	ಡಿಟೋ ..	ಪತ್ರೇರುದ್ರಪ್ಪ ..	ಕ್ರಿಷ್ಣಪ್ಪ ವಗೈರೆ 2 ಜನ ..	ಡಿಟೋ	
ಡಿಟೋ ನಂಬರು 11	ಡಿಟೋ ..	ಅಗಸಾಲೆ ದೊಡ್ಡಮಲ್ಲಯ್ಯ ವಗೈರೆ 13 ಜನ ..	ಮಿಸ್ಟರ್ ಸೈಯ್ಯದ್ ನಸರೂದ್ದೀನ ವಗೈರೆ 14 ಜನ ..	ವಾದಿಗಳಿಂದ	
ಡಿಟೋ ನಂಬರು 14	ಡಿಟೋ ..	ಅಡಿವಪ್ಪ ..	ಲಿಂಗಪ್ಪ ವಗೈರೆ 2 ಜನ ..	ವಾದಿಯಿಂದ	
ಡಿಟೋ ನಂಬರು 15	ಡಿಟೋ ..	ಧರಣಯ್ಯಶೆಟ್ಟಿ ..	ಸುಬ್ಬಯ್ಯ ವಗೈರೆ 2 ಜನ ..	ಡಿಟೋ	
ಡಿಟೋ ನಂಬರು 16	ಡಿಟೋ ..	ಕೆ. ಪುಟ್ಟುರಾವ್ ..	ಮಲ್ಲಪ್ಪಯ್ಯವಗೈರೆ 4 ಜನ ..	ಡಿಟೋ	
ಡಿಟೋ ನಂಬರು 19	ಡಿಟೋ ..	ಕೊಲ್ಲಾಭಟ್ಟು ..	ಶೇಷ ಭಟ್ಟುವಗೈರೆ 3 ಜನ ..	ಡಿಟೋ	
ಡಿಟೋ ಮಿಸ್ಲೇನಿಯಸ್ ನಂ. 47	ಡಿಟೋ ..	ಬಸಂಣ ..	..	ಅರ್ಜೀದಾರನಿಂದ	
ಡಿಟೋ ಡಿಟೋ ನಂ. 51	ಡಿಟೋ ..	ಸತ್ಯಂಮಾ ..	..	ಡಿಟೋ	
ಡಿಟೋ ಅಸಲ್ ನಂ. 14	ಶಿವಮೊಗ್ಗಾ ಮುನಸೀಫ್ ಕೋರ್ಟು.	ಲಕ್ಷ್ಮಣರಾವ್ .	ಹನುಮಂತಪ್ಪಾ ವಗೈರೆ 2 ಜನ.	ವುಭಯ ಕಕ್ಷಿಗಾರರಿಂದ	
ಡಿಟೋ ನಂಬರು 50	ಡಿಟೋ ..	ಜವಳಿಬಸಪ್ಪ ..	ಗಂಗಪ್ಪ ವಗೈರೆ 4 ಜನ ..	ಡಿಟೋ	
ಡಿಟೋ ನಂಬರು 76	ಡಿಟೋ ..	ದೊಡ್ಡಹುಚ್ಚನಾಯಿಕಾ ..	ಅಂತೋನಿಶೆಟ್ಟಿ ವಗೈರೆ 3 ಜನ ..	ಡಿಟೋ	
ಡಿಟೋ ನಂಬರು 89	ಡಿಟೋ ..	ಶಿದ್ದಪ್ಪ ..	ಲಕ್ಷ್ಮೀನಾರ್ಣಪ್ಪವಗೈರೆ 2 ಜನ	ವಾದಿಯಿಂದ	
ಡಿಟೋ ನಂಬರು 99	ಡಿಟೋ .	ಮಲ್ಲೇಶಪ್ಪ ..	ಸಿದ್ದೋಜಿ ವಗೈರೆ 3 ಜನ ..	ಡಿಟೋ	
ಡಿಟೋ ನಂಬರು 100	ಡಿಟೋ ..	ರಾಮಂಣನಾಯಿಕ ..	ನಂದೆಂಣಾ ವಗೈರೆ 6 ಜನ ..	ಡಿಟೋ	

ಮೊಕದ್ದಮೆ ಇಸವಿ ಮತ್ತು ನಂಬರ್.	ಯಾವ ಕೋರ್ಟಿನಲ್ಲಿ ಯಗ್ಗಿಬೀಟ್ ಹಾಜರಾಯಿತೋ ಆ ಕೋರ್ಟಿನ ಹೆಸರು.	ಕಕ್ಷಿಗಾರರ ಹೆಸರುಗಳು.		ಯಾರಿಂದ ಯಗ್ಗಿ ಬೀಟ್ ಹಾಜರ್ಮಾ ಡಲ್ಪಟ್ಟಿತು.	ಷರಾ.
		ವಾದಿ ಅಪ್ಪೀಲಾಂಟ್ ಅಥವಾ ಅರ್ಜೀದಾರ.	ಪ್ರತಿವಾದಿ ರಸ್ಪಾಂಡೆಂಟ್ ಅಥವಾ ಕೌಂಟರ್ ಪೆಟಿಷನರ್.		
1886ನೇ ಇಸವಿ ಅ|| ನಂ. 105	ಶಿವಮೊಗ್ಗಾ ಮುನಸೀಫ್ ಕೋರ್ಟು. ..	ಹರ್ಸಸಾಬು ..	ಖಾದರಬಾಷ ..	ವಾದಿಯಿಂದ	
ಡಿಟ್ಟೋ ನಂಬರು 107	ಡಿಟ್ಟೋ ..	ಶಿವಲಿಂಗಪ್ಪ ..	ದೊಡ್ಡ ಮರಳಯ್ಯ ವಗೈರೆ 2 ಜನ	ಪ್ರತಿವಾದೀರಿಂದ	
ಡಿಟ್ಟೋ ನಂಬರು 108	ಡಿಟ್ಟೋ ..	ನಂಜುಂಡಾ ಮೈನರ್ ಗಾರ್ಡಿಯನ್ ಪುಟ್ಟಣ್ಣ ..	ನೇಗೇ ರುದ್ರ ..	ಉಭಯಕಕ್ಷಿಗಾರರಿಂದ	
ಡಿಟ್ಟೋ ಸ್ಮಾಲ್‌ಕಾಜ್ ನಂ. 185	ಡಿಟ್ಟೋ ..	ವೆಂಕೂಬಾಯಿ ..	ಸಾಬವ್ವಾ ..	ವಾದಿಯಿಂದ	
ಡಿಟ್ಟೋ ಅಸಲ್ ನಂಬರು 189	ಡಿಟ್ಟೋ ..	ಶೇಷಾಚಾರ್ ..	ಭೀಮರಾವು ..	ಉಭಯಕಕ್ಷಿಗಾರರಿಂದ	
ಡಿಟ್ಟೋ ನಂಬರು 201	ಡಿಟ್ಟೋ ..	ವಿರುಪಾಕ್ಷಪ್ಪ. ..	ಮಹಮ್ಮದ್‌ಸಾಬಿ ..	ವಾದಿಯಿಂದ	
ಡಿಟ್ಟೋ ನಂಬರು 236	ಡಿಟ್ಟೋ ..	ದಾಸಾಚಾರ್ ..	ರಾಜಾಚಾರ್ ವಗೈರೆ 3 ಜನ ..	ಪ್ರತಿವಾದೀರಿಂದ	
ಡಿಟ್ಟೋ ನಂಬರು 252	ಡಿಟ್ಟೋ ..	ಬಾಟ್ಲಿ ತಿರುಮಲರಾವು ಫಾತೀ ಮಕ್ಕಳು ಗುಂಡೇರಾವು ವಗೈರೆ 3 ಜನ ಮೈನರ್ ಗಾರ್ಡಿಯನ್ ರಂಗೂಬಾಯಿ ..	ಕೃಷ್ಣಯ್ಯ ..	ಪ್ರತಿವಾದೀಪರ 4ನೇ ಸಾಕ್ಷೀಮಾಧವರಾಯರಿಂದ	
ಡಿಟ್ಟೋ ನಂಬರು 282	ಡಿಟ್ಟೋ ..	ಚಂದಪ್ಪ ...	ಕೊಟ್ರಣ್ಣ ..	ವಾದಿಯಿಂದ	
ಡಿಟ್ಟೋ ನಂಬರು 308	ಡಿಟ್ಟೋ ..	ಸುಬ್ಬಣ್ಣ ..	ಶೇಷವಗೈರೆ 2 ಜನ ..	ಉಭಯಕಕ್ಷಿಗಾರರಿಂದ	
ಡಿಟ್ಟೋ ನಂಬರು 356	ಡಿಟ್ಟೋ ..	ಹಿರಿಯಣ್ಣಯ್ಯಾಚಾರ್ ..	ವೆಂಕಟರಾಮಣ್ಣ ..	ಪ್ರತಿವಾದಿಯಿಂದ	
ಡಿಟ್ಟೋ ನಂಬರು 385	ಡಿಟ್ಟೋ ..	ಬಸಮ್ಮಾ ..	ಚನ್ನಬಸಯ್ಯ ವಗೈರೆ 8 ಜನ ..	ಉಭಯಕಕ್ಷಿಗಾರರಿಂದ	
ಡಿಟ್ಟೋ ಮಿಸ್ಲೇನಿಯಸ್ ನಂ. 50	ಡಿಟ್ಟೋ ..	ಕೃಷ್ಣಪ್ಪ ..	ದಾಸಪ್ಪ ..	ಅರ್ಜೀದಾರನಿಂದ	
ಡಿಟ್ಟೋ ನಂಬರು 59	ಡಿಟ್ಟೋ ..	ಪುಟ್ಟೋಬರಾವು ..	ಗಂಗಾಧರಭಟ್ಟಾ ..	ಡಿಟ್ಟೋ	
ಡಿಟ್ಟೋ ನಂಬರು 77	ಡಿಟ್ಟೋ ..	ಸರಾಫ ರಂಗಪ್ಪ ..	ಶಾನಭೋಗ ರಂಗಪ್ಪ ..	ಡಿಟ್ಟೋ	
ಡಿಟ್ಟೋ ನಂಬರು. 92	ಡಿಟ್ಟೋ ..	ಮುರಡಪ್ಪ ..	ಮುರಿಗೆಪ್ಪ ..	ಡಿಟ್ಟೋ	
ಡಿಟ್ಟೋ ನಂಬರು 102	ಡಿಟ್ಟೋ ..	ಕೇಶವಪ್ಪ ವಗೈರೆ 2 ಜನ ..	ಮಲ್ಲೂರಾ ..	ಡಿಟ್ಟೋ	
ಡಿಟ್ಟೋ ಅಸಲ್ ನಂಬರು 10	ಸಾಗರ ಮುನಸೀಫ್ ಕೋರ್ಟು ..	ವೀರಬಸಪ್ಪ ವಗೈರೆ 2 ಜನ ಮೈನರು ಗಾರ್ಡಿಯನ್‌ಗಳು ಶಿವಮ್ಮ ವಗೈರೆ 2 ಜನ	ಸೋಮ ..	ವಾದಿಯಿಂದ	
ಡಿಟ್ಟೋ ನಂಬರು 12	ಡಿಟ್ಟೋ ..	ಬಸಪ್ಪ ಮೈನರ್‌ಗಾರ್ಡಿಯನ್ ಬಸಮ್ಮ	ದುರ್ಗಾವಗೈರೆ 2 ಜನ ..	ಪ್ರತಿವಾದೀರಿಂದ	

1886ನೇ ಇಸವಿ ಅ|| ನಂಬರು 15	ಸಾಗರ ಮುನಸೀಫ್ ಕೋರ್ಟು.	ತಿಮ್ಮಪ್ಪ	ಲಕ್ಷ್ಮೀನಾರಣಪ್ಪ ವಗೈರೆ 2 ಜನ	ವುಭಯಕಕ್ಷಿಗಾರರಿಂದ
ಡಿಟೋ ನಂಬರು 32	ಡಿಟೋ	ಸೂರನಾರಣಪ್ಪ	ವೆಂಕಮ್ಮ	ವಾದಿಯಿಂದ
ಡಿಟೋ ಸ್ಮಾಲ್‌ಕಾಜ್ ನಂ. 42	ಡಿಟೋ	ಅನಂತಭಟ್ಟ	ದಾವುದಸಾಬ ವುರಫ್ ವುಸವಾನ ದಾವುಸಾಬ	ಡಿಟೋ
ಡಿಟೋ ಅಸಲ್ ನಂಬರು 44	ಡಿಟೋ	ಪಟೇಲರುದ್ರಯ್ಯ	ಜೆಟ್ಟೆಪ್ಪ ವಗೈರೆ 2 ಜನ	ಡಿಟೋ
ಡಿಟೋ ಸ್ಮಾಲ್‌ಕಾಜ್ ನಂ. 82	ಡಿಟೋ	ಹೆಚ್. ನರಸಿಹ್ಮಯ್ಯ ಗಾರ್ಡಿಯನ್ ತಿಮ್ಮಪ್ಪ ವಗೈರೆ 2 ಜನ	ಅಣ್ಣಪ್ಪ	ಡಿಟೋ
ಡಿಟೋ ನಂಬರು 83	ಡಿಟೋ	ಡಿಟೋ	ಸೀತಾವಗೈರೆ 2 ಜನ	ಡಿಟೋ
ಡಿಟೋ ನಂಬರು 100	ಡಿಟೋ	ವುದ್ದಾ ಮರಿಯಪ್ಪ	ಗಿರಿಯಾ	ಡಿಟೋ
ಡಿಟೋ ಅಸಲ್ ನಂಬರು 101	ಡಿಟೋ	ಹೆಚ್. ನರಸಿಹ್ಮಯ್ಯ ಮೈನರ್ ಗಾರ್ಡಿಯನ್ 2ನೇ ವಾದಿ ಹುಲಿಕಲ್ ಕೃಷ್ಣಪ್ಪ.	ನಾಗಪ್ಪ ವಗೈರೆ 5 ಜನ	ಡಿಟೋ
ಡಿಟೋ ಸ್ಮಾಲ್‌ಕಾಜ್ ನಂ. 112	ಡಿಟೋ	ನಾರಣಪ್ಪ	ಭರ್ಮ	ಡಿಟೋ
ಡಿಟೋ ಅಸಲ್ ನಂಬರು 117	ಡಿಟೋ	ಗುರುಸಿದ್ಧಪ್ಪ	ಮಲ್ಲಪ್ಪ	ಪ್ರತಿವಾದಿಯಿಂದ
ಡಿಟೋ ನಂಬರು 133	ಡಿಟೋ	ವ್ಯಾಸರಾವು	ಗುರುಸಿದ್ದಪ್ಪ	ವುಭಯಕಕ್ಷಿಗಾರರಿಂದ
ಡಿಟೋ ನಂಬರು 163	ಡಿಟೋ	ಹೊಳೆ ಬಸಪ್ಪಗೌಡ	ಸಿದ್ದಯ್ಯ ವಗೈರೆ 2 ಜನ	ವಾದಿಯಿಂದ
ಡಿಟೋ ಅಮಲ್‌ಜಾರೀ ನಂ. 16	ಡಿಟೋ	ವೀರಭದ್ರಪ್ಪ	ಈರಯ್ಯಗೌಡ	ಬಾಧ್ಯತೇದಾರ ಕೆ. ವೀರಭದ್ರಯ್ಯನ ಸಾಕ್ಷಿ ಚನ್ನಬಸಪ್ಪಗೌಡನಿಂದ ಮತ್ತು ಬಾಧ್ಯತೆದಾರ ಚಿಂತಾಮಣಿ ಜೋಯಿಸನಿಂದ
ಡಿಟೋ ನಂಬರು 44	ಡಿಟೋ	ಬಾಳಾಚಾರ್	ವೀರಾ	ಪ್ರತಿವಾದಿಯಿಂದ
ಡಿಟೋ ನಂಬರು 133	ಡಿಟೋ	ವರಾಮಪ್ಪ	ನಿರವಾಣಿ	ಬಾಧ್ಯತೇದಾರ ನಾರಣಪ್ಪನಿಂದ
ಡಿಟೋ ನಂಬರು 186	ಡಿಟೋ	ಸುಬ್ಬಯ್ಯನ ತಿಂಮಪ್ಪ	ದೇವಪ್ಪನ ಲಿಂಗಪ್ಪ	ಬಾಧ್ಯತೇದಾರ ವೆಂಕಪ್ಪಯ್ಯ ವುರಫ್ ಸಂಣಯ್ಯ
ಡಿಟೋ ಮಿಸ್ಲೇನಿಯಸ್ ನಂ. 47	ಡಿಟೋ	ಲಾಡಪ್ಪ	ಗುರುನಾಥ ವಗೈರೆ 2 ಜನ	ಅರ್ಜೀದಾರನಿಂದ
ಡಿಟೋ ಅಸಲ್ ನಂಬರು 29	ಹೊನ್ನಾಳೀ ಮುನಸೀಫ್ ಕೋರ್ಟು.	ಸ್ವಾಮಿರಾವು	ದೊಡ್ಡಸಿದ್ದಪ್ಪ	ವುಭಯಕಕ್ಷಿಗಾರರಿಂದ
ಡಿಟೋ ನಂಬರು 43	ಡಿಟೋ	ಹನುಮಕ್ಕ	ಲಕ್ಕಮ್ಮ ವಗೈರೆ 2 ಜನ	ವಾದಿಯಿಂದ
ಡಿಟೋ ನಂಬರು 63	ಡಿಟೋ	ಸ್ವಾಮಿರಾವು	ಸುಬ್ಬಣ್ಣ	ಉಭಯಕಕ್ಷಿಗಾರರಿಂದ
ಡಿಟೋ ಮಿಸ್ಲೇನಿಯಸ್ ನಂ. 21	ಡಿಟೋ	ಭೀಮಾಚಾರಿ	ಬಸಲಿಂಗಪ್ಪವಗೈರೆ 2 ಜನ	ಅರ್ಜೀದಾರನಿಂದ
ಡಿಟೋ ಅಸಲ್ ನಂಬರು 3	ಚಿಕ್ಕಮಗಳೂರು ಮು|| ಕೋರ್ಟು.	ಪುಟ್ಟಲಿಂಗೇಗೌಡ	ಲಿಂಗೇಗೌಡ	ಪ್ರತಿವಾದಿಯಿಂದ
ಡಿಟೋ ನಂಬರು 6	ಡಿಟೋ	ನರಸಿಹ್ಮಾಚಾರ್	ಚನ್ನಬಸವ	ವುಭಯಕಕ್ಷಿಗಾರರಿಂದ
ಡಿಟೋ ನಂಬರು 33	ಡಿಟೋ	ಲಿಂಗನಾಯಿಕ	ಮಲ್ಲಾ	ಡಿಟೋ

ಮೊಕದ್ದಮಾ ಇಸವಿ ಮತ್ತು ನಂಬರ್.	ಯಾವ ಕೋರ್ಟಿನಲ್ಲಿ ಯಗ್ಜಿಬೀಟ್ ಹಾಜರಾಯಿತೋ ಆ ಕೋರ್ಟಿನ ಹೆಸರು.	ಕಕ್ಷಿಗಾರರ ಹೆಸರುಗಳು. ವಾದಿ ಅಪ್ಪೀಲಾಂಟ್ ಅಥವಾ ಅರ್ಜೀದಾರ.	ಕಕ್ಷಿಗಾರರ ಹೆಸರುಗಳು. ಪ್ರತಿವಾದಿ ರಸ್ಪಾಂಡೆಂಟ್ ಅಥವಾ ಕೌಂಟರ ಪೆಟಿಷನರ.	ಯಾರಿಂದ ಯಗ್ಜಿಬೀಟ್ ಹಾಜರ್ಮಾಡಲ್ಪಟ್ಟಿತು.	ಷರಾ.
1886ನೇ ಇಸವಿ ಅ|| ನಂ. 36	ಚಿಕ್ಕಮುಗಳೂರು ಮುನಸೀಫ್ ಕೋರ್ಟು.	ಕಲ್ಲಪ್ಪಶೆಟ್ಟಿ ..	ಬಶೆಟ್ಟಿ	ಉಭಯಕಕ್ಷಿಗಾರರಿಂದ	
ಡಿಟ್ಟೋ ನಂಬರು 40	ಡಿಟ್ಟೋ	ಮೆಸ್ಟರ್ ಡಗ್ಲಸ್ ಮೆರ್ಫ್ವ ..	ಬಾಬ್ಡ ಕೃಷ್ಣರಾವು ವಗೈರೆ 2 ಜನ.	ಡಿಟ್ಟೋ	
ಡಿಟ್ಟೋ ನಂಬರು 41	ಡಿಟ್ಟೋ	ಮೆ|| ಜೆ. ಆರ್. ಅಲಿವರ್ ..	ಬಡಿಗಬಾಬು ವಗೈರೆ 2 ಜನ ..	ಡಿಟ್ಟೋ	
ಡಿಟ್ಟೋ ನಂಬರು 42	ಡಿಟ್ಟೋ	ಹನುಮೇಗೌಡ ..	ಜಟ್ಟೆಪ್ಪಗೌಡ ವಗೈರೆ 2 ಜನ ..	ಡಿಟ್ಟೋ	
ಡಿಟ್ಟೋ ನಂಬರು 61	ಡಿಟ್ಟೋ ..	ಚಿಕ್ಕಮುದ್ದಣ್ಣ ..	ನಾರಾಯಣಗೌಡ ವಗೈರೆ 2 ಜನ ..	ವಾದಿಯಿಂದ	
ಡಿಟ್ಟೋ ನಂಬರು 65	ಡಿಟ್ಟೋ ..	ರಾಮಸ್ವಾಮಯ್ಯಂಗಾರ್ ..	ರಂಗಣ್ಣ ..	ಡಿಟ್ಟೋ	
ಡಿಟ್ಟೋ ನಂಬರು 76	ಡಿಟ್ಟೋ ..	ಸಣ್ಣಪಾಯಣ್ಣಶೆಟ್ಟಿ ..	ರುದ್ರೇಗೌಡ ಉರುಫ್ ವೀರಭದ್ರೇಗೌಡ ವಗೈರೆ 2 ಜನ ..	ಡಿಟ್ಟೋ	
ಡಿಟ್ಟೋ ಸ್ಮಾಲ್‌ಕಾಜ್ ನಂ. 77	ಡಿಟ್ಟೋ ..	ಗೋವಿಂದರಾಜಮೊದಲಿಯಾರ್ ..	ಸಭಾಪತಿ ಮೊದ್ಲಿಯಾರ್ ..	ಡಿಟ್ಟೋ	
ಡಿಟ್ಟೋ ಅಸಲ್ ನಂಬರು 91	ಡಿಟ್ಟೋ ..	ಫ್ರಾನ್ಸಿಸ್ ಹ್ಯೂಗನಿಸ್ ..	ಜೆ. ಎಂ. ಅಡೋನೆಲ್ ..	ಉಭಯಕಕ್ಷಿಗಾರರಿಂದ	
ಡಿಟ್ಟೋ ನಂಬರು 107	ಡಿಟ್ಟೋ ..	ಲಕ್ಷ್ಮಯ್ಯ ..	ರಂಗಣ್ಣ ..	ವಾದಿಯಿಂದ	
ಡಿಟ್ಟೋ ನಂಬರು 123	ಡಿಟ್ಟೋ ..	ಚಿಕ್ಕಯ್ಯಶೆಟ್ಟಿ ..	ಶಿದ್ಧಲಿಂಗಯ್ಯ ..	ಉಭಯಕಕ್ಷಿಗಾರರಿಂದ	
ಡಿಟ್ಟೋ ನಂಬರು 14	ಯಡೆಹಳ್ಳಿ ಮುನಸೀಫ್ ಕೋರ್ಟು.	ಕಾಳಯ್ಯ ..	ಗೋವಿಂದ ಮೈನರ್ ಗಾರ್ಡಿಯನ್ ಹೊನ್ನಮ್ಮ ..	ವಾದಿಯಿಂದ	
ಡಿಟ್ಟೋ ನಂಬರು 15	ಡಿಟ್ಟೋ ..	ಜಮಖಗವಿಶ್ವೇಶ್ವರಭಟ್ಟ ..	ಸೋಗಾನಮೇಲಪ್ಪ [illegible] ಮಾ ವಗೈರೆ 2 ಜನ ..	ಡಿಟ್ಟೋ	
ಡಿಟ್ಟೋ ನಂಬರು 16	ಡಿಟ್ಟೋ ..	ಬುಡೇಸಾಬಿ ..	ಹಯಾತ್‌ಸಾಬಿ ..	ಉಭಯಕಕ್ಷಿಗಾರರಿಂದ	
ಡಿಟ್ಟೋ ನಂಬರು 30	ಡಿಟ್ಟೋ ..	ಕೊತುಗೋಡು ಕಿಂಗಾಭಟ್ಟ ..	ಅಣ್ಣಯ್ಯ ಹೆಗ್ಗಡೆ ..	ಡಿಟ್ಟೋ	
ಡಿಟ್ಟೋ ನಂಬರು 62	ಡಿಟ್ಟೋ	ದರ್ಜೀಗಂಗೋಜಿ	ಬಕ್ರೆ ಅಣ್ಣಪ್ಪ ಉರುಫ್ ಅಂಕೋಜಿ	ವಾದಿಯಿಂದ	
ಡಿಟ್ಟೋ ನಂಬರು 78	ಡಿಟ್ಟೋ	ಬಸ್ತಿಜ್ವಾಲನ್ನಯ್ಯ ..	ಮಾಕೋಡು ಗೋವಿಂದಯ್ಯ ..	ಉಭಯಕಕ್ಷಿಗಾರರಿಂದ	

ಮೇಲ್ಕಂಡ ಯಗ್ಜಿಬೀಟ್‌ಗಳನ್ನು ಹಾಜರ್ಮಾಡಿರತಕ್ಕವರು ಮುಂಚಿತವಾಗಿ ಹಾಜರಾಗಿ ವಾಪಸ್ ಪಡಿಯದೇ ಹೋದಪಕ್ಷದಲ್ಲಿ ಅವುಗಳನ್ನು 1887ನೇ ಇಸವಿ ಅಕ್ಟೋಬರ್ 13ನೇ ತಾರೀಖಿನಲ್ಲಿ ನಾಶಮಾಡಲ್ಪಡುತ್ತೆಂದು ಇದರಿಂದ ತಿಳಿಯಪಡಿಸಿರುತ್ತೆ.

ನಗರ ಡಿವೀಜ‌ ಡಿಸ್ಟ್ರಿಕ್ಟ್ಜಡ್ಜಿಯವರಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 75.

ಮೃತಪಟ್ಟ ರಾಯಸದ ಶೇಷಯ್ಯನಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಯಸದ ವೆಂಕಟರವಣ ಮತ್ತು ಲಕ್ಷ್ಮಣ್ಣ, ಮೃತಪಟ್ಟ ಸದರೀ ರಾಯಸದ ಶೇಷಯ್ಯನಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ತರೀಕೆರೆ ಸ್ಥಳದ ಮೈನರ್ ವೆಂಕಟರವಣನು ಮತ್ತು ಲಕ್ಷ್ಮಣ್ಣ ಇವರ ಗಾರ್ಡಿಯನ್ ಲಕ್ಷ್ಮಮ್ಮನು, ತರೀಕೆರೆ ವಾಸಸ್ಥನಾಗಿ ಮೃತಪಟ್ಟ ರಾಯಸದ ಶೇಷಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮಮನ ಅರ್ಜೀಯನ್ನು 1887ನೇ ಇಸವಿ ಸೆಪ್ಟಂಬರ ತಿಂಗಳು ತಾರೀಖು 16ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಯಸದ ಶೇಷಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಥೆ.

1887ನೇ ಇಸವಿ ಆಗಸ್ಟು ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ವಸ್ತಖತ್ತಿನಿಂದ ಕೊಡೋಣಾಗಿಥೆ.

ಟಿ. ನರಹರಿರಾವ್,

ಡಿಸ್ಟ್ರಿಕ್ಟ್ ಜಡ್ಜಿ.

ಕೊಡಗು.

ನೋಟಿಸ್.

ತಾರೀಖು 1ನೇ ಆಗಸ್ಟು 1887.

ಕೊಡಗು ಫಾರೆಸ್ಟ್ ಉತ್ಪತ್ತೀ ಬಾಬತು ಈ ಕೆಳಗೆ ಕಂಡ ನಾಟಾ ವಗೈರೇ ಸಾಮಾನುಗಳು ಸ‌ 1887ನೇ ಇಸವಿ ಸೆಪ್ಟಂಬರ್ ತಾರೀಖು 1ರಲ್ಲು ಹುಣಸೂರಲ್ಲಿ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತವೆ.

1115	ನಾಟಾಗಳು	ತ್ಯಾಗ	30355	ಸಲೆ ಅಡಿ
10	ತುಂಡಿದ ಬಾಬತು	ಸದರೀ	449	,,
63	ಹಲಿಗೆಗಳು	ಸದರೀ	559	,,
167	ನಾಟಾಗಳು	ಹೊನ್ನೆ	3442	,,
38	ಸದರೀ	ಬೀಟೆ	877	,,
32	ಸದರೀ	ನಂದಿ	755	,,
144	ಸದರೀ	ಮತ್ತೀ ವಗೈರೆ	3266	,,

25 ಗಾಡಿ ಜೋಡಾ ತ್ಯಾಗದ ಸರಗಳು.

ಮೈಸೂರಿಂದ ಹುಣಸೂರಿಗೆ ಸಲೀಸಾಗಿ ತಲಪಬಹದು. ಅಲ್ಲಿಂದ ಅಲ್ಲಿಗೆ 27 ಮೈಲ್ ದೂರವಿಥೆ, ಮತ್ತು ವಳ್ಳೇ ರಸ್ತೆಯೂ ಇರುತ್ತದೆ.

ತ್ಯಾಗದ ನಾಟಾಗಳಲ್ಲಿ ದೊಡ್ಡ ತೊಲೆಗಳು ಅನೇಕ ಇರುತ್ತವೆ. ಕಳದ ಎರಡು ಹರಾಜುಗಳಲ್ಲಿ ತ್ಯಾಗ ಸಲೆಅಡಿ ವಂದಕ್ಕೆ 13 ಆಣ ; ಹೊನ್ನೆ 0—10—7; ಬೀಟೆ 0—10—6; ನಂದಿ 0—5—10; ಮತ್ತಿ 0—6—11 ಈ ಮೇರೆ ದರಗಳಲ್ಲಿ ಮಾರಲ್ಪಟ್ಟವು. ಷರತ್ ಎಂದಿನಂತೆ ಇರುವ್ದಾಗಿ ಹರಾಜು ಮುಂಚೆ ಓದಿ ತಿಳಿಸಲ್ಪಡುವದು.

ಎಫ್ ಜೆ. ಡಿಕೆನ್ಸ‌,

ಡೆಪ್ಯುಟಿ ಕನ್ಸರ‌ವೇಟರ್, ಫಾರೆಸ್ಟ್.

ಗವರ‌ಮೆಂಟ ತಯಾರೀ ಬಾಬತು ಸಿಂಕೋನಾ ಫೆಬ್ರಿಪ್ಯೂಜ್ ಎಂಬ ಔಷಧ.

ಈ ಔಷಧವು ಕ್ವಿನೈನಿಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ‌ಮೆಂಟ ಆಫೀಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕ್ರಯಕ್ಕೆ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ

ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸಿನವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸಿನವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡುವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು ಕಲಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತ್ತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್ ಚಂದಾ ದರ ವಗೈರೇ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟೀಸುಗಳು:—

	ರೂ.	ಆ.
ಮೊದಲನೇ ದಫಾ ಪ್ರಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2	8
ಎರಡನೇ ಸಲ ವ ಆ ತರುವಾಯು ಪ್ರತಿ ಆವರ್ತಿಗೂ. ಡಿಟ್ಟೋ	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:—

	ರೂ.	ಆ.
ಮೊದಲನೇ ದಫಾ	5	0
ಎರಡನೇ ವ ಆ ತರುವಾಯು ಪ್ರತಿ ದಫೆಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡೂಪ್ಲಿಕೇಟ್ ಕಾಪೀಪಟ್ಟೀ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫೀಸರುಗಳು ಕೊಡುವ ನೋಟೀಸ್‌ಗಳಿಗೆ:—

		ರೂ.	ಆ.
ಮೊದಲನೇ ಸಲಕ್ಕೆ	ಫಾ: 1ಕ್ಕೆ	10	0
ಎರಡನೇ ಸಲ ವ ಆ ತರುವಾಯು ಪ್ರತಿ ಸಲಕ್ಕೂ		5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

		ರೂ.	ಆ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	0	8
ಎರಡನೇ ದಫಾ ಡಿಟ್ಟೋ	ಡಿಟ್ಟೋ	0	6
ಮೂರನೇ ವ ಆ ತರುವಾಯು ಪ್ರತಿ ಸಲಕ್ಕೆ		0	4

ಷರ್‍ತು.—ಚಂದಾ ವಗೈರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟರೆ 1 ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಟಿ. ಟಿ. ಲಿಸರಡ್,
ಮೈ. ಗೆ. ಕಂಪೈಲರ್.

Mysore Government Press, Bangalore.—1887.

6.44

ಮೈಸೂರ ಗೆಜೆಟ್.

ನಂ. 34 ಸರ್ಕಾರದಿಂದ ಛಾಯಿಸ್ಪಲ್ಪದ್ದು. ಸನ್ 1887.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 27, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ—ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು, ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 9ನೇ ಆಗಸ್ಟು 1887.

ನಂ. 77.—ಮಕ್ಕಾಕ್ಕೆ ಖುಷ್ಕೀಮೇಲೂ ಸಮುದ್ರದ ಮೇಲೂ ಪ್ರಯಾಣ ಮಾಡುವಂತಾವರಿಗೆ ಜೋಕೆ ಮತ್ತು ಅನುಕೂಲ್ಯತೆ ವುಂಟು ಮಾಡಿಕೊಡುವ ಬಗ್ಗೆ ಇಂಡಿಯಾ ಗವರ್ನಮೆಂಟಿನವರು ಮೆ|| ತಾಮ್ಸಕೂಕ್. ಅಂಡರ್ಸನ್ಸಯವರನ್ನ ಏಜಂಟರಾಗಿ ನೇಮಿಸಿ ಅದಕ್ಕಾಗಿ ಏರ್ಪಾಟುಗಳನ್ನ ಮಾಡಿರುವದರಿಂದ ಮಕ್ಕಾಕ್ಕೆ ಪ್ರಯಾಣ ಮಾಡಲಿಚ್ಛೆಯುಳ್ಳ ಜನಗಳು ಸದರೀ ಏರ್ಪಾಡಿಗೆ ನಿಗೇ ಕೊಡತಕ್ಕದ್ದು.

2. ಸದರೀ ಏರ್ಪಾಡುಗಳಿಂದ ವುಂಟಾಗಿರುವ ಪ್ರಯೋಜನಗಳ ತಪಸೀಲ್ ಮೈಸೂರು ಶೀಮೆಯು ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರ ಆಫೀಸಗಳಿಗೆ ಅರ್ಜೀ ಬರದುಕೊಂಡಲ್ಲಿ ತಿಳಿಯಬರುತ್ತೆ.

ನಂ. 86. ತಾರೀಖು 12ನೇ ಆಗಸ್ಟ್ 1887.

ಸರ್ಕಾರ ಹರಾಜು ಮೂಲಕ ಸಂದಲ್ ಬಿಕರೀ ಬಗ್ಗೆ ಇದರಡೀ ಬರುವ ಪರಿಷ್ಕರಿಸಲ್ಪಟ್ಟ ರೂಲ್ಸ್ ಸಕಲರಿಗೂ ತಿಳಿಯತಕ್ಕ ಬಗ್ಗೆ ಘಾಯಿಷ್ ಮಾಡಲ್ಪಟ್ಟಿವೆ.

I. ನಡವಳಿತ.

1. ಪ್ರತಿ ಹರಾಜೂ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರೊಡನೆ ಫಾರೆಸ್ಟು ಆಫೀಸರಿಂದಾಗಲಿ, ಡೆಪ್ಯುಟಿ ಕಮಿಷನರವರಿಂದ ಆ ಬಗ್ಗೆ ನಿಯಮಿಸಲ್ಪಡುವ ಇತರ ಆಫೀಸರರಿಂದಲಾಗಲಿ ನಡಿಸಲ್ಪಡತಕ್ಕದ್ದು.

2. ಜಡ್ ದರಖಾಸ್ತುದಾರ ಕ್ರಯದಾರನಾಗಿರತಕ್ಕದ್ದು—ಯಾವ ಲಾಟಿನ ವಿಷಯದಲ್ಲಿ ತಕರಾರು ವುಂಟಾಗುತ್ತದೋ ಅಂತಾ ಲಾಟ್ ಪುನಃ ಹರಾಜ್ ಮಾಡಲ್ಪಡತಕ್ಕದ್ದು.

3. ಪ್ರತಿ ಖರೀದೀದಾರನೂ ವೊಂದು ಲಾಟ್ ತನ್ನ ಹೆಸರಿಗೆ ಕೂಗಿದ ಕೂಡ್ಲೇ ರುಜು ಮಾಡತಕ್ಕ ಬಗ್ಗೆ ಯೇರ್ಪಡಿಸಲ್ಪಟ್ಟಿರುವ ಬುಕ್ಕಿನಲ್ಲಿ ತಾನು ಕೊಂಡು ಕೊಂಡ ಲಾಟಿನ ನಂಬರ್ ಮತ್ತು ತಪಸೀಲ್ ಯಿವುಗಳ ಪಕ್ಕದಲ್ಲಿ ತನ್ನ ರುಜು ಹಾಕತಕ್ಕದ್ದು. ಅಂತಾ ರುಜು ದೆಶೆಯಿಂದ ಸದರೀ ಲಾಟನ್ನು ಅವನು ಕೊಂಡುಕೊಂಡ ಬಗ್ಗೆ ಅವನ ಅಂಗೀಕಾರವನ್ನಾಗಿ ಯೆಣಿಸಲ್ಪಡತಕ್ಕದ್ದು.

II. ಹಣ ಯಾವ ರೀತಿಯಾಗಿ ಪಾವತೀ ಮಾಡತಕ್ಕದ್ದು.

4. ಹರಾಜಾದ ಕೂಡ್ಲೇ ಖರೀದೀದಾರನಿಂದ ಸಲ್ಲಬೇಕಾದ ಖುಲ್ಲು ಮೊಬಲಗನ್ನು ತೋರಿಸುವ ಬಂದು ಯಾದಾಸ್ತು ಪ್ರತಿ ಖರೀದೀದಾರನಿಗೂ ಕೊಡಲ್ಪಡುವದು ಮತ್ತು ಹರಾಜ್ ತಾರೀಖು ಲಾಗಾಯತು 3ನೇ ದಿನ ಆಖೈರಾಗುವದಕ್ಕೆ ಮುಂಚೆ ಖುಲ್ಲು ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಪ್ರಕಾರ ಠೇವಣೀ ಮೊಬಲಗನ್ನ ಅತ್ಯಂತ ಸಮೀಪದಲ್ಲಿರುವ ಗವರ್ನಮೆಂಟ್ ಟ್ರೆಜರೀಯಲ್ಲಿ ಪಾವತೀ ಮಾಡತಕ್ಕ ಬಗ್ಗೆ ಲೆಟರ್ ಆಫ್ ಅಡ್ವೈಸ್ ಯಾನೇ ಮೇಲ್ ಕಾಗದ ಕೊಡಲ್ಪಡುವದು ಹಾಂಗೆ ಠೇವಣೀ ಯಿಟ್ಟ ಮೊಬಲಗಿಗೆ ಟ್ರೆಜರೀ ಆಫೀಸರರು ಬಂದು ರಸೀದಿಯನ್ನು ಕೊಡತಕ್ಕದ್ದು ಸದರೀ ರಸೀದಿಯನ್ನು 5ನೇ ದಿನ ಆಖೈರಾಗುವದಕ್ಕೆ ಮುಂಚೆ ಫಾರೆಸ್ಟು ಆಫೀಸರರಲ್ಲಿ ಹಾಜರ್ಮಾಡತಕ್ಕದ್ದು, ಫಾರೆಸ್ಟು ಆಫೀಸರರು ಸದರೀ ರಸೀದೀ ಮೇಲೆ ತಮ್ಮ ಚಿಕ್ಕರುಜುವನ್ನು ಹಾಕಿ ಹಾಜರ್ಮಾಡಿದ ತಾರೀಖು ಸಹ ಬರಿಯತಕ್ಕದ್ದು. ಯಾವ ಖರೀದೀದಾರನಾಗಲಿ ಈ ನಿಬಂಧನೇ ಪ್ರಕಾರ ನಡಿಯಲಿಕ್ಕೆ ತಪ್ಪಿದರೆ ಫಾರೆಸ್ಟು ಆಫೀಸರರು ಹಾಂಗೆ ತಪ್ಪಿದವನಿಂದ ಕೊಂಡುಕೊಳ್ಳಲ್ಪಟ್ಟ ಸಂದಲ್ ಪೈಕೀ ದರೋಬಸ್ತನ್ನಾಗಲಿ ವೊಂದು ಭಾಗವನ್ನಾಗಲಿ ಇತರರಿಗೆ ಮಾರಲಿಕ್ಕೆ ಸ್ವತಂತ್ರರಾಗಿರತಕ್ಕದ್ದು. ಇದರ ದೆಸೇಯಿಂದ ಸಂಭವಿಸುವ ನುಕ್ಸಾನಿಗೆ ಸದರೀ ತಪ್ಪಿದ ಮನುಷ್ಯನು ಜವಾಬ್‌ದಾರನಾಗಿ ಯಿರತಕ್ಕದ್ದಲ್ಲದೇ ಅದರಿಂದ ಯೇನಾದರೂ ಆದಾಯ ಬಂದರೆ ಅಂತಾ ಆದಾಯದಲ್ಲಿ ಆತನಿಗೆ ಯಾವ ಭಾಗವೂ ಸಲ್ಲತಕ್ಕದ್ದಲ್ಲ. ಹಾಂಗೆ ತಪ್ಪಿ ಹೋದ ಮನುಷ್ಯನಿಂದ ಬರಬೇಕಾದ ಬಾಕಿಯು ರೆವಿನ್ಯೂ ಕಂದಾಯದೋಪಾದಿಯಲ್ಲಿ ವಸೂಲ್ ಮಾಡಲ್ಪಡುವದು.

5. ಪ್ರತಿ ವರ್ತಕನಿಂದ ಕೊಂಡುಕೊಳ್ಳಲ್ಪಡುವ ದರೋಬಸ್ತು ಸಂದಲಿಗೂ ಖರೀದೀ ಮೊಬಲಗ್ ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗಾಗಿ ಪಾವತೀ ಮಾಡಲ್ಪಡತಕ್ಕದ್ದು. ಯಿದಕ್ಕೆ ತಪ್ಪಿದರೆ ಠೇವಣೀ ಕೊಟ್ಟ ಮೊಬಲಗ್ ಸರಕಾರಕ್ಕೆ ದಾಖಲಾಗುವದು ಮತ್ತು ಸದರೀ ಮೊಬಲಗ್ ಪಾವತೀ ಮಾಡಲ್ಪಡಬೇಕಾದ ಮೊಬಲಗ್ ಪೈಕೀ ವೊಂದು ಭಾಗವನ್ನಾಗಿ ಯಂದಿಗೂ ಯೆಣಿಸಲ್ಪಡ ಕೂಡದು ಬಾಕೀ ಆಗುವ ಐವಜು ಯಾವ ತಾಲ್ಲೂಕಿನಲ್ಲಿ ಕೋಠೀ ಯೇರ್ಪಟ್ಟಿರುತ್ತೋ ಅಂತಾ ತಾಲ್ಲೂಕಿನ ಖಜಾನೇಯಲ್ಲಾಗಲಿ, ಡಿಸ್ಟ್ರಿಕ್ಟು ಟ್ರೆಜರೀಯಲ್ಲಾಗಲಿ, ಪಾವತೀ ಮಾಡಲ್ಪಡತಕ್ಕದ್ದೇ ಹೊರ್ತು ಮತ್ಯಾವ ಸ್ಥಳದಲ್ಲಿಯೂ ಪಾವತೀ ಮಾಡಲ್ಪಡತಕ್ಕದ್ದಲ್ಲ.

III. ಸಂದಲು ತೂಕ ಮಾಡುವಣ ವ ವಪ್ಪಿಸೋಣ.

6. ಪ್ರತಿ ಖರೀದೀದಾರನಿಂದ ಕೊಂಡುಕೊಳ್ಳಲ್ಪಟ್ಟ ದರೋಬಸ್ತು ಸಂದಲೂ ಫಾರೆಸ್ಟು ಆಫೀಸರರಿಂದ ಖುದ್ದಾಗಿಯಾಗಲಿ ಯಾ ಆವರ ಗೈರ್ ಹಾಜರೀಯಲ್ಲಿ ಡೆಪ್ಯುಟಿ ಕಮಿಷನರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫೀಸರರಿಂದಲಾಗಲಿ ಖುದ್ದು ತೂಗಿಸಲ್ಪಡತಕ್ಕದ್ದು, ಪ್ರತಿ ಕೋಠಿಯಲ್ಲಿ ಮಾರಲ್ಪಟ್ಟ ಸಂದಲ್ ತೂಗೋಣವು ಹರಾಜು ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಪೂರೈಸತಕ್ಕದ್ದು, ತೂಕ ಮಾಡುವಲ್ಲಿ ಜಾಸ್ತೀ ಕಾಣಬಂದರೆ ಅಂತಾ ಜಾಸ್ತಿಯನ್ನು ಆಚೆಗೆ ತೆಗದುಕೊಳ್ಳತಕ್ಕದ್ದು. ಯೇನಾದರೂ ಕಮ್ಮೀ ಬಿದ್ದಲ್ಲಿ ತೂಗಿಸುವ ಆಫೀಸರರು ಭರ್ತೀಮಾಡಿ ಛಾಪಾ ಹಾಕಬಹುದಾದ ತುಂಡುಗಳಿಗೆ ಛಾಪಾ ಹಾಕಿ ಶುದ್ಧಾಂಗವಾಗಿ ಅವು ಸಾಗಿ ಹೋಗುವದರೊಳಗಾಗಿ ಅವುಗಳಿಗೆ ಜಾಸ್ತಿ ಕಡಮೆ ಸಂಭವಿಸದಂತೆ ಯಿರಲಿಕ್ಕೆ ಬೇಕಾದ ಜಾಗರೂಕತೆಗಳನ್ನು ವಹಿಸತಕ್ಕದ್ದು.

ಈ ರೀತಿಯಾಗಿ ಕಮ್ಮೀಬಿದ್ದ ಸಂದಲ್ ವೊಂದುದಫಾ ಪೂರಾ ಭರ್ತೀಯಾದ ಬಳಿಕ ವಣಗುವ ದೆಸೇಯಿಂದಲಾಗಲಿ, ಯಿತರ ಕಾರಣಗಳಿಂದಲಾಗಲಿ ಯೇನಾದರೂ ಲುಕ್ಸಾನ್ ಸಂಭವಿಸಿದರೆ ಆ ಲುಕ್ಸಾನನ್ನು ಖರೀದೀದಾರನೇ ಸಂಪೂರ್ಣವಾಗಿ ವಹಿಸತಕ್ಕದ್ದು. ತನ್ನ ಲಾಟ್

ಗಳನ್ನು ತೂಕ ಮಾಡುವಲ್ಲಿ ಹಾಜರಾಗುವಂತೆ ಖರೀದೀದಾರನಿಗೆ ಎಚ್ಚರಿಕೆ ಕೊಡತಕ್ಕದ್ದು. ಆ ಪ್ರಕಾರ ಅವನೇ ಆಗಲಿ ಅವನಿಂದ ಪೂರಾ ಅಧಿಕಾರ ಪಡದ ಅವನ ಮುತಾಲೀಕನೇ ಆಗಲಿ ಹಾಜರಾಗದ ಪಕ್ಷಕ್ಕೆ ಫಾರೆಸ್ಟು ಆಫೀಸರರು ಯಾ ವಜನೀ ಮಾಡಿಸುವ ಬಗ್ಯೆ ನಿಯಮಿಸಲ್ಪಟ್ಟ ಇತರ ಆಫೀಸರರು ತಮಗೆ ಅನುಕೂಲ ವಾದಾಗ್ಯೆ ಲಾಟಗಳನ್ನು ತೂಗಿಸಿ ಸ್ಟಾಂಪು ವ ಮುದ್ರೆ, ಹಾಕಿಸತಕ್ಕದ್ದು. ಆ ಬಳಿಕ ಖರೀದೀದಾರ ಮಾಡುವ ಯಾವ ಫಿರ್ಯಾದಿಗಾಗಲಿ ನಿಗೇ ಕೊಡಲ್ಪಡುವದಿಲ್ಲ. ಸಂದಲ್ ತೂಕ ಮಾಡುವ ಬಗ್ಯೆ ತಗಲುವ ಖರ್ಚು ಸರಕಾರವೇ ವಹಿಸುವದು. ಆದರೆ ಕೋಠಿಯಿಂದ ಶುದ್ಧಾಂಗ ಸಾಗಿಸಿಕೊಂಡು ಹೋಗಲಿಕ್ಕೆ ಜರೂರಾದ ದರೋಬಸ್ತು ಖರ್ಚುಗಳನ್ನೂ ಖರೀದೀದಾರ ವಹಿಸತಕ್ಕದ್ದು. ಯಾವ ಖರೀದೀದಾರನಾಗಲಿ ಮುಂಚಿತವಾಗಿ ಸಂದಲ್ ಮರಗಳನ್ನು ಪಡೆಯುವ ಬಗ್ಯೆ ಖಾಯಿಷ್ ಮಾಡಿ ಆ ಬಾಬತು ಪೂರಾ ಮೊಬಲಗನ್ನು ಪಾವತೀ ಮಾಡಿದರೆ ಅಂತಾ ಖರೀದೀದಾರನಿಗೆ ಮರಗಳನ್ನು ಫಾರೆಸ್ಟು ಆಫೀಸರರು ತೂಕ ಮಾಡುವ ದರಿಂದ ಯಾವದೂ ಅಡ್ಡೀ ಪಡಿಸತಕ್ಕದ್ದಲ್ಲ.

7. ಪೂರಾ ಮೊಬಲಗು ಪಾವತೀ ಮಾಡುವ ಪರಿಯಂತ ಮತ್ತು ಫಾರೆಸ್ಟು ಆಫೀಸರರಿಂದ "ಸಾಗಿಸಲಿಕ್ಕೆ ಲೈಸೆನ್ಸ" ಪಡಿಯುವ ವರಿವಿಗೂ, ಯಾವ ಸಂದಲ್ ಮರವನ್ನಾಗಲೀ ಸಾಗಿಸಕೂಡದು.

IV. ಕೋಠೀ ಬಾಡಿಗೆ.

8. ಮೇಲಿನ ರೂಲ್ಸ್ ಅನುಸರಿಸಿ ತೂಕ ಮಾಡಲ್ಪಟ್ಟ ಸ್ಟಾಂಪು ಹಾಕಲ್ಪಟ್ಟ ಮತ್ತು ಮೊಬಲಗು ಪಾವತೀ ಮಾಡಲ್ಪಟ್ಟ ಸಂದಲ್ ಮರವು ಹರಾಜ್ ತಾರೀಖು ಲಾಗಾಯತು 90 ದಿನಗಳೊಳಗೆ ಯಾವ ಕಾಲದಲ್ಲಾಗಲಿ, ಕೋಠೀ ಬಾಡಿಗೇ ಕೊಡದೇ ಸಾಗಿಸಿಕೊಳ್ಳಲ್ಪಡಬಹುದು ಅಂತಾ ಮರವನ್ನು ಹರಾಜ್ ತಾರೀಖು ಲಾಗಾಯತು 90 ದಿನಗಳಿಗೆ ಮೇಲೆ ಕೋಠಿಯಲ್ಲೇ ಬಿಟ್ಟದ್ದರೆ ಹರಾಜ್ ತಾರೀಖು ಲಾಗಾಯತು ಮಾಹೇ ಒಂದಕ್ಕೆ ಪರ ಖಂಡಿಗೆ 4 ಆಣೇ ಪ್ರಕಾರ ಕೋಠೀ ಬಾಡಿಗೆ ಕಟ್ಟಲ್ಪಡುವದು ಅಂತಾ ಸಂದಲ್ ಯಿಟ್ಟಿರುವ ಜಾಗಾ ಹೊಸ ಸಂದಲ್ ಜಮಾಯಿಸಿ ಯಿಡಲಿಕ್ಕೆ ಬೇಕಾದ ಪಕ್ಷದಲ್ಲಿ ಖರೀದೀದಾರನಿಗೆ 10 ದಿನಗಳ ನೋಟೀಸ ಕೊಟ್ಟು ಬಳಿಕ ಫಾರೆಸ್ಟು ಆಫೀಸರರು ಸದರೀ ಮರವನ್ನು ಕೋಠೀಯಿಂದ ಆಚೆ ಸಾಗಿಸಲಿಕ್ಕೂ ಮತ್ತು ಖರೀದೀದಾರನ ಲಾಗವಡಿನಲ್ಲಿಯೂ ಮತ್ತು ಹಾಂಗೆ ಹೊರಗೆ ಹಾಕಿಸೋಣದರಿಂದ ಸಂಭವಿಸಬಹುದಾದ ಲುಕ್ಸಾನಿಗೆ ಸಹ ಖರೀದೀದಾರನ್ನ ಗುರಿಮಾಡಿ ಸದರೀ ಮರವನ್ನು ಕೋಠೀ ಆಚೆ ಅಮಾನತ್ತು ಯಿಡಿಸಲಿಕ್ಕೂ ಸ್ವತಂತ್ರರಾಗಿರತಕ್ಕದ್ದು.

V. ಸಾಗಿಸಲಿಕ್ಕೆ ಲೈಸೆನ್ಸ.

9. ಇನ್‌ಚಾರ್ಜ ಆಫೀಸರರಿಂದ ದಸ್ತಖತ ಆದ "ಸಂದಲ್ ಸಾಗಿಸಲಿಕ್ಕೆ ಲೈಸೆನ್ಸ" ಪಡಿಯುವ ಪರಿಯಂತ ಕೋಠೀಯಿಂದ ಯಾವ ಮರವನ್ನೂ ಸಾಗಿಸಕೂಡದು. ಅಂತಾ ಲೈಸೆನ್ಸವುಳ್ಳ ದರೋಬಸ್ತು ಜನಗಳೂ ಅಂತಾ ಲೈಸೆನ್ಸಗಳಲ್ಲಿ ವಿಧಿಸಲ್ಪಟ್ಟಿರುವ ಷರತ್ತುಗಳ ಪ್ರಕಾರ ನಡಿಯಲಿಕ್ಕೆ ಬದ್ಧರಾಗಿರತಕ್ಕದ್ದು, ತನ್ನ ಲೈಸೆನ್ಸ ಷರತ್ತುಗಳನ್ನು ಅತಿಕ್ರಮಿಸುವ ಮತ್ತು ಕೊಡಲ್ಪಟ್ಟ ವಾಯಿದೇ ಪೂರೈಸಿದ ಬಳಿಕ ತನ್ನ ಲೈಸೆನ್ಸನ್ನು ವಾಪಸ್ ಮಾಡದ ಯಾವ ವರ್ತಕನಾಗಲೀ ಇತರ ಮನುಷ್ಯನಾಗಲೀ ಮೈಸೂರು ಫಾರೆಸ್ಟು ರೂಲ್ಸ 40ನೇ ಸೆಕ್ಷನಿನಲ್ಲಿ ವಿಧಿಸಲ್ಪಟ್ಟ ಷರತ್ತುಗಳನುಸರಿಸಿ ನಡಿಸಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

VI. ಜನರಲ್.

10. ಖಾಯಂ ನಿಬಂಧನೆಗಳನುಸಾರವಾಗಿ ಮೈಸೂರು ಶೀಮೇ ಗಡಿಗಳೊಳಗೆ ಯಾವ ಸಂದಲ್ ಮರವೂ ಖುಷ್ ಬಾಷ್ ಜನಗಳಿಂದ ಮಾರಲ್ಪಡ ಕೂಡದು, ಅಥವಾ ರೇಂಜ್ ಇನ್‌ಚಾರ್ಜ ಫಾರೆಸ್ಟು ಆಫೀಸರರಿಂದ ಕೊಡಲ್ಪಡತಕ್ಕ ಲೈಸೆನ್ಸ ಶಿವಾಯಿ ವೊಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲ್ಪಡತಕ್ಕದ್ದಲ್ಲ.

11. ಯಿನ್‌ಚಾರ್ಜ ಫಾರೆಸ್ಟು ಆಫೀಸರರು ಖರೀದಿಗೆ ತೆಗದುಕೊಳ್ಳಲಿಚ್ಛೈಸುವ ಜನಗಳಿಗೆ ಯಾವದೊಂದು ಸಬಬೂ ತಿಳಸದೇ ಹರಾಜನ್ನು ಯಾವ ಕಾಲದಲ್ಲಾಗಲಿ ನಿಲ್ಲಿಸಲಿಕ್ಕೆ ಸ್ವತಂತ್ರರಾಗಿರತಕ್ಕದ್ದು.

ತಾರೀಖು 13ನೇ ಆಗಸ್ಟು 1887.

ನಂ. 87.—ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮೆ॥ ಮಹಮ್ಮದ್ ಅಲ್ಲಿ ಕೆ. ಬಿ. ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಯರಡು ತಿಂಗಳೂ ಹದಿನೈದು ದಿನಗಳ ರಜಾ ಕೊಡಲ್ಪಟ್ಟು ಯಿರುತ್ತೆ.

ಮೆ॥ ಮಹಮ್ಮದಅಲ್ಲಿ ಯವರ ಗೈರ್ ಹಾಜರೀ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೆ, ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ರವರು ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟು ಮಾಜಸ್ಟ್ರೇಟರ ಕೆಲಸ ಆಕ್ಟಿಂಗ್ ತರೀಕ ನೋಡುವಂತೆ ಮೊಕರರ್.

ತಾರೀಖು 15ನೇ ಆಗಸ್ಟು 1887.

ನಂ. 88.—ಚನ್ನಗಿರೀ ತಾಲ್ಲೂಕು ಶಿರಸ್ತೇದಾರ್ ಮಂಜನಾಥಯ್ಯನವರು, ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ, ಅದೇ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು, ಸದರೀಯವರು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 4ನೇ ಸೆಕ್ಷನ್ ಅನುಸರಿಸಿ 12ನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಅಧಿಕಾರಗಳನ್ನು ಕೊಡಲ್ಪಟ್ಟಿರುತ್ತಾರೆ.

ತಾರೀಖು 16ನೇ ಆಗಸ್ಟು 1887.

ನಂ. 89.—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ತಾಲ್ಲೂಕು ಮೇಸ್ತ್ರಿ ಡ್ಯಾನಿಯಲ್ ಯಂಬಾತನು, ದಾನಪ್ಪ ಯಂಬ ಹೆಸರು ಯಿಟ್ಟು ಕೊಂಡಿರುವದರಿಂದ ಈ ತಾರೀಖು ಲಾಗಾಯತು ಇಲಾಖೇ ಲವಾಜಮೆಯಲ್ಲಿ ದಾನಪ್ಪಯಂಬ ಹೆಸರು ದಾಖಲ್ಮಾಡತಕ್ಕದ್ದು.

ತಾರೀಖು 17ನೇ ಆಗಸ್ಟು 1887.

ನಂ. 90.—ಅಸಿಸ್ಟೆಂಟ್ ಕಮ್ಮಿಷನರ್ ಮೆ|| ರ್ಯ. ಚಲುವಯ್ಯಂಗಾರ್‍ರವರು, ಕೋಲಾರ ಡಿಸ್ಟ್ರಿಕ್ಟಿನಿಂದ ಹಾಸನ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

2. ಮೆ|| ಕೆ. ರಾಮಚಂದ್ರರಾಯರವರು, ಹಾಸನ ಡಿಸ್ಟ್ರಿಕ್ಟಿನಿಂದ ಕೋಲಾರ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ಈ ಕೆಳಗೆ ನಮೂದಾಗುವ ಅಮಲ್ದಾರ್‍ರುಗಳ ವರ್ಗಾವರ್ಗಿಯನ್ನ ಅಪ್ಪಣೇ ಮಾಡಲ್ಪಟ್ಟಿರುತ್ತೆ:—

3. ಪ್ರೊಬೇಷನೇರಿ ಅಮಲ್ದಾರ್ ನಿಜಾಮುದ್ದೀನ್ ಅಲ್ಲೀಖಾನರಿಗೆ, ಕೋಲಾರ ತಾಲ್ಲೂಕಿನಿಂದ ಮಾಲೂರ್ ತಾಲ್ಲೂಕಿಗೆ ವರ್ಗ.
4. ಕೆ. ಶ್ರೀನಿವಾಸರಾಯರಿಗೆ, ಬೌರಿಂಗ್‍ಪೇಟೆ ತಾಲ್ಲೂಕಿನಿಂದ ಕೋಲಾರ ತಾಲ್ಲೂಕಿಗೆ.
5. ಸ್ಪೆಷಿಯಲ್ ಡ್ಯೂಟೀಮೇಲೆ ಯಿದ್ದ ವಿ. ರಾಜುಮೊದಲ್ಯಾರು, ಬೌರಿಂಗ್‍ಪೇಟೇ ಅಮಲ್ದಾರ್ ಕೆಲಸಕ್ಕೆ ಪುನಃ ದಾಖಲಾಗ ತಕ್ಕದ್ದು.
6. ಪ್ರೊಬೇಷನೇರಿ ಅಮಲ್ದಾರ್ ಮೀರ್‍ಕಮಾಲುದ್ದೀನ್ ಅಲ್ಲೀಖಾನರು ಹಿರಿಯೂರು ತಾಲ್ಲೂಕಿನಿಂದ ಹುಣಸೂರು ತಾಲ್ಲೂಕಿಗೆ.
7. ಆರ್. ಲಕ್ಷ್ಮಣರಾಯರಿಗೆ, ಹುಣಸೂರು ತಾಲ್ಲೂಕಿನಿಂದ ಹಿರಿಯೂರು ತಾಲ್ಲೂಕಿಗೆ.
8. ಬಿ. ರಘುನಾಥರಾಯರಿಗೆ, ನಂಜನಗೂಡು ತಾಲ್ಲೂಕಿನಿಂದ ಗೌರೀಬಿದನೂರು ತಾಲ್ಲೂಕಿಗೆ.
9. ಡಿ. ವೆಂಕಟಪ್ಪಯ್ಯನವರಿಗೆ, ಸೊರಬ ತಾಲ್ಲೂಕಿನಿಂದ ನಂಜನಗೂಡು ತಾಲ್ಲೂಕಿಗೆ.
10. ರ್ಯ. ವೆಂಕಟರಾಯರಿಗೆ, ಹೆಗ್ಗಡದೇವನಕೋಟೇ ತಾಲ್ಲೂಕಿನಿಂದ ಸೊರಬದ ತಾಲ್ಲೂಕಿಗೆ.
11. ಕೆ. ಶಾಮಯ್ಯಂಗಾರ್‍ರಿಗೆ, ಮಾಲೂರು ತಾಲ್ಲೂಕಿನಿಂದ ಹೆಗ್ಗಡದೇವನಕೋಟೇ ತಾಲ್ಲೂಕಿಗೆ.

ತಾರೀಖು 18ನೇ ಆಗಸ್ಟು 1887.

ನಂ. 91. ಕುಮಸೀ ಡೆಪ್ಯುಟಿ ಅಮಲ್ದಾರ್ ಗುಲಾಂ ಅಹಮ್ಮದಖಾನರಿಗೆ, 1887ನೇ ಇಸವಿ ಏಪ್ರಿಲ್ 29ನೇ ಮರ್ಕುಂ C. 248ನೇ ನಂಬರಿನ ಇಸ್ತಿಹಾರಿನ ದೆಸೆಯಿಂದ ಮೆಡಿಕೆಲ್ ಸರಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಮೂರು ತಿಂಗಳ ರಜಾಕ್ಕೆ ಜಾಸ್ತೀಯಾಗಿ ಯರಡು ತಿಂಗಳುಗಳ ರಜಾ ಕೊಡಲ್ಪಟ್ಟಿ ಯಿದೆ.

ಡೆಪ್ಯುಟಿ ಕಮ್ಮಿಷನರ ಆಫೀಸಿನ ರೆವಿನ್ಯೂ ಹೆಡ್ ಮುನಷಿ ರಾಮಚಂದ್ರರಾಯರು, ಗುಲಾಂ ಅಹಮ್ಮದಖಾನರ ಗೈರ್ ಹಾಜರೀ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೆ, ಕುಂಸಿಯ ಡೆಪ್ಯುಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೆಲಸವನ್ನ ನೋಡತಕ್ಕದ್ದು.

ನಂ. 92.—1877ನೇ ಇಸವಿ IIIನೇ ನಂಬರ್ ರೆಜಿಸ್ಟ್ರೇಷನ್ ಆಕ್ಟಿನ 69ನೇ ಸೆಕ್ಷನ್ ಅನುಸರಿಸಿ, ಮೈಸೂರು ಶೀಮೆಯ ರೆಜಿಸ್ಟ್ರೇಷನ್ ಯಿನ್ಸ್‌ಪೆಕ್ಟರ್ ಜನರಲ್ ಯವರಿಂದ ಮಾಡಲ್ಪಟ್ಟ ರೆಜಿಸ್ಟ್ರೇಷನ್ ರೂಲಸ್‍ಗಳ 89ನೇ ಕಲಮಿಗೆ ಸೇರಿಸಲ್ಪಟ್ಟಿರುವ ಈ ಕೆಳಗೆ ಕಂಡ ಜಾಸ್ತೀ ನಿಬಂಧನೆಯು ಮಂಜೂರಾತಿಯನ್ನು ಹೊಂದಿ ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತೆ.

ಕಲಮು 89 A. (1.) ಇದರ ಕೆಳಗೆ ನಮೂದಾಗುವ ದಸ್ತಾವೇಜುಗಳು, ಯಿದುವರಿವಿಗೂ 1ನೇ ನಂಬರ್ ರಿಜಿಸ್ಟರ್ ಬುಕ್ಕಿನಲ್ಲಿ ದಾಖಲ್ ಮಾಡಲ್ಪಡುತ್ತಾ ಯಿದ್ದದ್ದಕ್ಕೆ ಬದಲಾಗಿ "1ನೇ ನಂಬರ್ ಸಪ್ಲಿಮೆಂಟೇರಿ ರೆಜಿಸ್ಟರ್ ಬುಕ್ಕು" ಯಂಬ ಹೆಸರುಳ್ಳ ಅಲಾಹಿದ ಬುಕ್ಕಿನಲ್ಲಿ ಶೇರಿಸಿಡಲ್ಪಟ್ಟು, ಆ ದಸ್ತಾವೇಜುಗಳು ಸಪ್ಲಿಮೆಂಟರಿ ಬುಕ್ಕಿನ ಫಲಾನೇ ಪುಟಗಳಲ್ಲಿ ಚಿಕಟಾಯಿಸಲ್ಪಟ್ಟಿವೆ ಯಂಬದಾಗಿ, 1ನೇ ನಂಬರ್ ರಿಜಿಸ್ಟರ್ ಬುಕ್ಕಿನೊಳಗೆ ಸರಿಯಾದ ಸ್ಥಳದಲ್ಲಿ ಒಂದು ಷರಾ ನಮೂದಿಸತಕ್ಕದ್ದು:—

(a) ಮ್ಯಾಪುಗಳ ವ ಪ್ಲಾನುಗಳ ನಕಲುಗಳು (ಸೆಕ್‌ಷ೯ 61.)
(b) ಇತರ ರಿಜಿಸ್ಟರಿಂಗ್ ಆಫೀಸರುಗಳಿಂದ ಬಂದ ದಸ್ತೈವೆಜುಗಳ ನಕಲಗಳು ವ ಮಿಮೋರಾಂಡಂಗಳು (ಸೆ॥ 64ರ ಲಾಗಾಯತು 67ರ ವರಿವಿಗೆ.)

(c) 1871ನೇ ಇಸವಿಯ ಲ್ಯಾಂಡ್ ಇಂಪ್ರುವಮೆಂಟ್ ಆಕ್ಟು ಅನುಸರಿಸಿ ರೆವಿನ್ಯೂ ಆಫೀಸರುಗಳಿಂದ ಕೊಡೋಣಾಗುವ ಸರಟಫಿಕೇಟಗಳ ನಕಲುಗಳು, ಮತ್ತು ಶಿವಿಲ್ ಪ್ರೊ॥ ಕೋಡಿನ 316ನೇ ಸೆಕ್‌ಷನ್ನನುಸರಿಸಿ ಕೋರ್ಟುಗಳಿಂದ ಕೊಡೋಣಾಗುವ ಹರಾಜ್ ಸರಟಫಿಕೇಟಗಳ ನಕಲುಗಳು (ಸೆಕ್‌ಷ೯ 89.)

(d) ರೂಢಿಯಲ್ಲಿಲ್ಲದ ಭಾಷೆಗಳಲ್ಲಿ ಬರೆಯಲ್ಪಟ್ಟ ದಸ್ತಾವೇಜುಗಳ ತರ್ಜುಮೆ ವ ನಕಲುಗಳು (ಸೆಕ್‌ಷ೯ 62.)

(2.) ಸದರೀ ದಸ್ತಾವೇಜುಗಳಿಗೆ ನಂಬರು ಕೊಡೋಣ ವ ಇಂಡೆಕ್ಸ ಮಾಡೋಣ ಯಿವುಗಳ ಕ್ರಮವು ರೂಲ್ಸಿನ 88ನೇ ಕಲವಿನ ಆಖೈರ್ ಭಾಗದಲ್ಲಿ ವಿಧಿಸಲ್ಪಟ್ಟಿರುವ ಕ್ರಮವನ್ನೇ ಅನುಸರಿಸಿರತಕ್ಕದ್ದು.

ನಂ. 93.—ಈ ಕೆಳಗೆ ನಮೂದಾಗುವ ಫಾರೆಸ್ಟ್ ಪ್ರೊಬೇಷನರುಗಳ ನೇಮಣೂಕೀ ವ ವರ್ಗಾವರ್ಗಿಯನ್ನ ಅಪ್ಪಣೇ ಮಾಡಿರುತ್ತೆ.

ಮ॥ ಬಿ. ರಾಮಸ್ವಾಮಯ್ಯ, ಬಿ. ಎ.—ಮೈಸೂರು ಡಿಸ್ಟ್ರಿಕ್ಟಿಗೆ.

ಮ॥ ವೈ. ಸೀತಾರಾಮಯ್ಯ, ಬಿ. ಎ.—⎫
ಮ॥ ಯಂ. ವೆಂಕಟರಮಣಪ್ಪ ಬಿ. ಎ.⎭ ಶಿವಮೊಗ್ಗಾ ಡಿಸ್ಟ್ರಿಗೆ.

ಮ॥ ಬಿ. ಶ್ರೀನಿವಾಸರಾಯರಿಗೆ ಶಿವಮೊಗ್ಗಾ ಡಿಸ್ಟ್ರಿಕ್ಟಿನಿಂದ ತುಮಕೂರು ಡಿಸ್ಟ್ರಿಕ್ಟಿಗೆ ವರ್ಗ.

ಬಮೋಜೀಬ್ ಹುಕ್ಕುಂ,
ಆರ್. ವಿಜಯಿರಾಂದ್ರರಾವ್,
ಚೀಫ್ ಸೆಕ್ರೆಟೇರಿ.

ಪಬ್ಲಿಕ್ ವರ್ಕ್ಸ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 17ನೇ ಆಗಸ್ಟು 1887.

ನಂ. 3611—725.

ಅಸಿಸ್ಟೆಂಟ್ ಇಂಜನೀರ್ ಮ॥ ಡಿ. ರಂಗರಾಯರು, 1887ನೇ ಇಸವಿ ಮೇ ತಿಂಗಳ 2ರ ಲಾಗಾಯತು ಜುಲೈ 16ರ ವರಿವಿಗೆ (ಈ ಯೆರಡು ದಿನಗಳೂ ಶೇರಿ), ಹಾಸನ ಡಿವಿಜನಿನ ಯಗ್ಜಿಕ್ಯುಟೀವ್ ಇಂಜನೀಯರ್ ಕೆಲಸ ನೋಡಿರುತ್ತಾರೆ.

ಸಿ. ಬೋರ್ಯ, ಲೆ॥ ಕರ್ನಲ್ ಆರ್. ಇ.
ಮೈಸೂರು ಪಬ್ಲಿಕ್ ವರಕ್ಸ ಇಲಾಖಾ ಸೆಕ್ರೆಟೇರಿ.

ವಿದ್ಯಾಭ್ಯಾಸದ ಇಲಾಖೆ.

ಸ೯ 1887ನೇ ಇಸವಿ ಆಗಸ್ಟು ತಾರೀಖು 12.

ವ್ಯವಸಾಯ ಕ್ರಮ ಬೋಧಿನಿಯ ಬಗ್ಗೆ ಬೆಳ್ಳೀ ಬಿರುದು ಬಿಲ್ಲೆ.

ಸೂಳೇಕೆರೆ ಸ್ಥಿತಿವಂತರಾದ ಮ॥ ರಾ॥ ಕೆ. ಶ್ಯಾಮಯ್ಯಂಗಾರ್ ಮತ್ತು ಸಹೋದರರು ಎಂಬವರ ಹೆಸರಿನಲ್ಲಿ 15 ರೂಪಾಯಿ ಬೆಲೆಯುಳ್ಳ ಒಂದು ಬೆಳ್ಳೀ ಬಿರುದು ಬಿಲ್ಲೆ 1888ನೇ ಇಸವಿ ಫೆಬ್ರುವರೀ ತಿಂಗಳಲ್ಲಿ ನಡಿಯುವ ಮೈಸೂರು ದೇಶೀಯ ಪರೀಕ್ಷೆಯ ವ್ಯವಸಾಯ ಬೋಧಿನಿಯಲ್ಲಿ ಅಧಿಕವಾದ ನಂಬರನ್ನ ಹೊಂದುವಂಥಾ ವಿದ್ಯಾರ್ಥಿಗೆ ಕೊಡಲ್ಪಡುತ್ತೆ.

ಯಲ್. ರೈಸ್,
ಎಡ್ಯುಕೇಷ೯ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಆಗಸ್ಟ್ಟು ತಾ॥ 27, ಸ॥ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ದೇಶದ ರೆಸಿಡೆಂಟರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ನಂ. 2626—2357. ತಾರೀಖು 17ನೇ ಆಗಸ್ಟು 1887.

ಮೈಸೂರು ದೇಶದ ಆಫಿಷಿಯೇಟಿಂಗ್ ರೆಸಿಡೆಂಟರವರು ಅಪ್ಪಣೇ ಕೊಡುವದೇನಂದರೆ, ಇದರಡೀ ಕಂಡ ನಿಬಂಧನೆಯು, ಬೆಂಗಳೂರು ಶಿವಿಲ್ ವ ಮಿಲಿಟೇರಿ ಸ್ಟೇಷನಿಗೆ ಮ್ಯುನಿಸಿಪೆಲ್ ಕಮ್ಮಿಷನರುಗಳನ್ನ ಚುನಾಯಿಸುವ ಬಗ್ಗೆ ಏರ್ಪಾಟಾದ 1884ನೇ ಇಸವಿ ಜನವರೀ 30ನೇ ಮರ್ಕ್ಯುಂ 24ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಛಾಯಿಷ್ ಮಾಡಲ್ಪಟ್ಟ ನಿಬಂಧನೆಯ 7ನೇ ರೂಲಿಗೆ ಬದಲಾಗಿ ಶೇರಿಸಲ್ಪಡತಕ್ಕದ್ದು.

7. ಯೆರಡನೇ ರೂಲ್‌ನಲ್ಲಿ ನಮೂದಾದ ಆಯಾ ತರಗತಿಯವರ ಪ್ರತಿನಿಧಿ ಬಗ್ಗೆ ಮ್ಯುನಿಸಿಪೆಲ್ ಕಮ್ಮಿಷನರುಗಳ ವಂದು ಬಟ್ಟು ಚುನಾವಣೆಯು, ಯೆರಡು ವರುಷಗಳಿಗೆ ವಂದಾವರ್ತಿ ಆಯಾ ತರಗತಿಗೋಸ್ಕರ ಇದರಡೀ ಗೊತ್ತು ಮಾಡಲ್ಪಟ್ಟಿರುವ ತಾರೀಖುಗಳಲ್ಲಿ ನಡಿಸಲ್ಪಡತಕ್ಕದ್ದು:—

I.	ಯೂರೋಪಿಯರ್ಸ ವ ಯುರೇಜಿಯರ್ಸರು	..	1ನೇ ಆಗಸ್ಟು.
II.	ಮಹಮ್ಮದಿಯರ್ಸರು	.. ..	8ನೇ ಡಿಟೋ
III.	ಹಿಂದೂ ವ ಯಿತರರು	.. ..	15ನೇ ಡಿಟೋ

ಅಥವಾ ಸದರೀ ತಾರೀಖುಗಳು ಆದಿವಾರ ಯಾ ಮಂಜೂರಾದ ಸರ್ಕಾರದ ರಜಾ ದಿವಸಗಳಾಗುವ ಪಕ್ಷಕ್ಕೆ ಅವುಗಳ ಮಾರನೇ ದಿವಸದಲ್ಲಿ ನಡಿಸಲ್ಪಡತಕ್ಕದ್ದು. ಮ್ಯುನಿಸಿಪೆಲ್ ಕಮ್ಮಿಷನ್ನಿನ ಪ್ರೆಸಿಡೆಂಟರು ಮೇಲೆ ನಮೂದ್ ಮಾಡಲ್ಪಟ್ಟ ತಾರೀಖುಗಳಲ್ಲಿ, ಸಂಬಂಧಪಟ್ಟ ಆಯಾ ತರಗತಿಯ ಚುನಾವಣೇದಾರರ ವಂದು ಸಮಾಜವನ್ನು ಶೇರಿಸತಕ್ಕದ್ದು, ಮತ್ತು ಆ ಬಗ್ಯಾಗಿ ಕನಿಷ್ಠ ಪಕ್ಷ ಯೇಳು ದಿವಸಗಳಿಗೆ ಮುಂಚಿತವಾಗಿ ನೋಟೀಸ್ ಕೊಡಲ್ಪಡತಕ್ಕದ್ದಲ್ಲದೇ ಅಂಥಾ ಸಮಾಜದಲ್ಲಿ ಚುನಾವಣೀ ಬಗ್ಯಾಗಿ ಇಸಂಗಳು ಸೂಚಿಸಲ್ಪಟ್ಟು ಅನುಮೋದಿಸಲ್ಪಡತಕ್ಕದ್ದು. ಇಸಂಗಳ ಸಂಖ್ಯೆಯು, ಪ್ರತಿ ತರಗತಿಗೆ ಗೊತ್ತು ಮಾಡಲ್ಪಟ್ಟ ಕಮ್ಮಿಷನರುಗಳ ಸಂಖ್ಯೆಗೆ ಜಾಸ್ತಿಯಾಗದಿದ್ದ ಪಕ್ಷಕ್ಕೆ ಅಂಥಾ ಇಸಂಗಳು ಕ್ರಮವಾಗಿ ಚುನಾಯಿಸಲ್ಪಟ್ಟಂತೆ ತಿಳಿಸಲ್ಪಡತಕ್ಕದ್ದು. ಪರಂತು ಇಸಂಗಳ ಸಂಖ್ಯೆಯು, ಅಂಥಾ ತರಗತೀ ಜನಗಳ ತರಫಿನ ಕಮ್ಮಿಷನರುಗಳ ಸಂಖ್ಯೆಗೆ ಜಾಸ್ತಿಯಾದರೆ ಚುನಾವಣೆಯು, ಅಭಿಪ್ರಾಯ ಮೂಲಕ ಗೊತ್ತು ಮಾಡಲ್ಪಡತಕ್ಕದ್ದು.

ಅಭಿಪ್ರಾಯ ಮೂಲಕವಾದ ಚುನಾವಣೆಯು, ಆ ಕಾಲದಲ್ಲಿ ಮ್ಯುನಿಸಿಪೆಲ್ ಕಮ್ಮಿಷನಿನ ಪ್ರೆಸಿಡೆಂಟರವರಿಂದ ಗೊತ್ತು ಮಾಡಲ್ಪಡುವಂಥಾ ವೊಂದು ದಿವಸದಲ್ಲಿ ನಡಿಸಲ್ಪಡತಕ್ಕದ್ದು, ಪರಂತು ಹಾಂಗೆ ಗೊತ್ತು ಮಾಡಲ್ಪಡುವ ದಿವಸವು ಸಮಾಜ ಶೇರಿದ ತಾರೀಖು ಮೊದಲು ಮೂರು ದಿವಸದ ತರುವಾಯಯಿರತಕ್ಕದ್ದು.

ಹುಕ್ಕುಂ ಬಮೋಜೀಬ್,
ಯಲ್. ಡಬ್ಲಿಯು. ಕಿಂಗ್,
ರೆಸಿಡೆಂಟರ ಅಸಿಸ್ಟೆಂಟ್.

1887ನೇ ಇಸವಿಯ ಮೈಸೂರು ಪ್ಲೀಡರಗಳ ಪರೀಕ್ಷೆಗಳು.

ಬೆಂಗಳೂರು—ಸರ್ 1887ನೇ ಇಸವಿ ಆಗಸ್ಟ್ ತಾರೀಖು 24ರಲ್ಲು.

ಮೈಸೂರು ಸೀಮೆಯ 1ನೇ ಗ್ರೇಡ್ ಪ್ಲೀಡರುಗಳ ಪರೀಕ್ಷೆಯಲ್ಲಿ, ಈ ಕೆಳಗೆ ನಮೂದಾಗಿರುವವರು ತೇರ್ಗಡೆಯಾಗಿರುತ್ತಾರೆ.

ಯೋಗ್ಯತಾನುಸಾರ ನಂಬರು.	ರಿಜಿಸ್ಟರ್ ನಂಬರು.	ಹೆಸರು.	ಕಸಬು ಮುಂತಾದ ವಿವರ.	ಯಾವ ಭಾಷೆಯಲ್ಲಿ ಪರೀಕ್ಷೆಕೊಟ್ಟದ್ದು.
1	25	ಎಂ. ವೆಂಕಟರಾಮಯ್ಯ ..	2ನೇ ಗ್ರೇಡ್ ಪ್ಲೀಡರ್—ಮೈಸೂರು	ಇಂಗ್ಲೀಷ್
2	27	ಎಂ. ಎಲ್. ನರಸಿಂಹ್ಮಯ್ಯಂಗಾರ್ ..	,, ಸದರೀ—ಹಾಸನ	ಸದರೀ
3	24	ಎಸ್. ಗರುಡಾಚಾರ್ ..	,,	ಸದರೀ
4	11	ಬಿ. ಮೈಲಾರಯ್ಯ ..	2ನೇ ಗ್ರೇಡ್ ಪ್ಲೀಡರ್—ಶ್ರೀರಂಗಪಟ್ಟಣ	ಕನ್ನಡ
5	16	ಎ. ಕೃಷ್ಣರಾವ್ ..	,,	ಇಂಗ್ಲೀಷ

2. 2ನೇ ಗ್ರೇಡ್ ಪ್ಲೀಡರ್ ಪರಿಕ್ಷೆಗೆ ಬಂದವರ ಪೈಕೀ ಈ ಕೆಳಗೆ ನಮೂದಿರುವರು, ಸರ್ 1885ನೇ ಇಸವಿ ಮೇ ತಾರೀಖು 27ರಲ್ಲು ದಿವಾನ್ ಸಾಹೇಬರವರು ಕೊಟ್ಟಿರುವ ಕ್ಯಾಂಪ್ ನಂಬರು 274ನೇ ಇಸ್ತಿಹಾರ್‌ನಾಮೆಯು ಪ್ರಕಾರ 1ನೇ ಗ್ರೇಡ್ ಪ್ಲೀಡರ್ ಪರೀಕ್ಷೆಗೆ ನಿಯಾಮಕವಾದ ರುಸುಮಿನ ಭರ್ತೀ ಬಗ್ಯೆ ಬೇಕಾಗುವಷ್ಟು ಜಾಸ್ತೀ ರುಸುಮನ್ನ ಕೊಟ್ಟರೆ, ಸದರೀ 1ನೇ ಗ್ರೇಡ್ ಪ್ಲೀಡರುಗಳಾಗಿ ಸೇರುವ ಬಗ್ಯೆ ಅರ್ಹತೆಯನ್ನು ಹೊಂದಿರುತ್ತಾರೆ.

ಯೋಗ್ಯತಾನುಸಾರ ನಂಬರು.	ರಿಜಿಸ್ಟರ್ ನಂಬರು.	ಹೆಸರು.	ಕಸಬು ಮುಂತಾದ ವಿವರ.	ಯಾವ ಭಾಷೆಯಲ್ಲಿ ಪರೀಕ್ಷೆಕೊಟ್ಟದ್ದು.
1	4	ಮೈಸೂರು ಸುಬ್ಬರಾವ್ ..	,,	ಇಂಗ್ಲೀಷ್
2	23	ಎಂ. ಶ್ರೀಕಂಠಯ್ಯ ..	,,	ಸದರೀ
3	29	ಬಿ. ಕೆ. ಶ್ರೀನಿವಾಸರಾವ್ ..	ಶಿವಮೊಗ್ಗೆಯಲ್ಲಿ—ಗುಮಾಸ್ತೆ	ಸದರೀ

ಮೈಸೂರು ಸೀಮೆಯ 2ನೇ ಗ್ರೇಡ್ ಪ್ಲೀಡರಗಳ ಪರೀಕ್ಷೆಯಲ್ಲಿ ಈ ಕೆಳಗೆ ನಮೂದಾಗಿರುವವರು ತೇರ್ಗಡೆಯಾಗಿರುತ್ತಾರೆ.

[illegible]	[illegible]	ಹೆಸರು.	ಕಸಬು ಮುಂತಾದ ವಿವರ.	ಯಾವ ಭಾಷೆಯಲ್ಲಿ ಪರೀಕ್ಷೆ ಕೊಟ್ಟದ್ದು.
1	30	ಬಿ. ವೆಂಕಪ್ಪ, ..	ದಾವಣಗೆರೆ ಇಂಗ್ಲೀಷ್ ಸ್ಕೂಲ್ ಹೆಡ್‌ಮಾಸ್ಟರ್	ಇಂಗ್ಲೀಷ್
2	9	ಕೆ. ಸುಬ್ಬರಾವ್ ..	"	ಸದರೀ

ಯಲ್. ಅನಂತಸ್ವಾಮಿರಾವ್,
ರೆಜಿಸ್ಟ್ರಾರ್.

ಫೈನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜು ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸನ್, ಕಾಂಪ್‌ಟ್ರೋಲರ್.

ಫಾರೆಸ್ಟು ಇಲಾಖಾ.

ತಾರೀಖು 8ನೇ ಆಗಸ್ಟ 1887.

ಇದರಿಂದ ಪ್ರಕಟಿಸಲ್ಪಡುವದೇನಂದರೆ, ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿಯಾದ ಬಾಬತು ಇದರಡಿಯಲ್ಲಿ ಚವುಬೀನೇಗಳು ಕೆಳಗೆ ಕಾಣಿಸಿ ಯಿರುವ ತಾರೀಖು ವ ಸ್ಥಳಗಳಲ್ಲಿ ಫಸ್ಟ್‌ಕ್ಲಾಸ್ ಅಸಿಸ್ಟೆಂಟ್ ಕನ್ಸರ್‌ವೇಟರ್ ಸಾಹೇಬರವರಿಂದ ಪಬ್ಲಿಕ್ ಹರಾಜ್ ಮೂಲಕ ವಿಕ್ರಯಿಸಲ್ಪಡುವದು.

ಹರಾಜ್ ನಡಿಯತಕ್ಕ ಸ್ಥಳದ ಹೆಸರು.	ಹರಾಜ್ ತಾರೀಖು.	ಕಾಡು ಜಾತೀನಾಟಾಗಳು.	ಸಾಗವಾನಿ ಬೆಲಗಗಳು.	ಷರಾ.
ಆಯನೂರ ಡಿಪೊ ..	3ನೇ ಸೆಪ್ಟಂಬರ್ 1887	360	..	0
ತರೀಕೆರೇ ಡಿಪೊ ..	6ನೇ ಡಿಟೋ 1887	25	250	0
ಲಕ್ಕುವಳ್ಳೀ ಡಿಪೊ ..	8ನೇ ಡಿಟೋ 1887	100	..	0
ಕಣಬೂರು ಡಿಪೊ ..	12ನೇ ಡಿಟೋ 1887	150	..	0

ಹರಾಜಿನ ಷರತ್ತುಗಳು—ಮೈಸೂರು ಗೆಜೆಟಿನಲ್ಲಿ 1873ನೇ ಇಸವಿ ಜೂನ 12ನೇ ಮರ್ಕುಂ ನಂಬರು 20ನೇ ಇಸ್ತಿಹಾರ್ ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಪ್ರಕಾರ ಯಿರತಕ್ಕದ್ದು. ಮತ್ತು ಹರಾಜ್ ಕಾಲದಲ್ಲಿ ಪೋದಲ್ಪಡುವದು.

ಶಿವೊಗ್ಗಾ ಡಿಸ್ಟ್ರಿಕ್ಟು.

ತಾರೀಖು 9ನೇ ಆಗಸ್ಟು 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ಕಾಣಿಸಿರುವ ಡಿಪೋಗಳಿಗೆ ಕಂಟ್ರಾಕ್ಟು ಮೂಲಕ ನಾಟಾ ವಗೈರೇ ಸಾಮಾನು ಜಮಾಯಿಸುವದಕ್ಕೆ ಈ ತಾರೀಖು ಲಾಗಾಯತು ಸೆಪ್ಟಂಬರ್ ತಾರೀಖು 30ರ ವರಿಗೆ ಟೆಂಡರುಗಳು ಅಂಗೀಕರಿಸಲ್ಪಡುತ್ತದೆ.

1. ಈ ಕಂಟ್ರಾಕ್ಟು ಕಂಟ್ರಾಕ್ಟು ತಾರೀಖು ಲಾಗಾಯತು 1888ನೇ ಇಸವಿ ಮೇ ತಾರೀಖು 31ರ ವರಿಗೆ ಜಾರೀಯಲ್ಲಿ ಯಿರತಕ್ಕದ್ದು.

1. ಶಿವಮೊಗ್ಗಾ ಡಿಪೊ ..
2. ಆಯನೂರು ..
3. ಶಿಕಾರಿಪುರ ..
4. ಶಿರಾಳಕೊಪ್ಪ ..
5. ಚನ್ನಗಿರೀ ಡಿಪೊ ..
6. ಲಕ್ಕವಳ್ಳಿ ..
7. ತರೀಕೆರೇ ..
8. ಕಣಬೂರು ..

2. ಟೆಂಡರುಗಳು ಯಿಂಥಾ "ಡಿಪೋಗಳಿಗೆ ನಾಟಾ ವಗೈರೇ ಜಮಾಯಿಸತಕ್ಕ ಬಗ್ಗೆ ಟೇಂಡರ್" ಯಂದು ಲಿಫಾಪೆಗಳ ಮೇಲೆ ಬರದಿರತಕ್ಕದ್ದು.

3. ಪ್ರತಿ ವಂದು ಡಿಪೋಕ್ಕೆ ಯಿಷ್ಟು ನಾಟಾ ವಗೈರೇ ಜಮಾಯಿಸಬೇಕೆಂಬ ತಪಸೀಲ್, ಮತ್ತು ಯಾವ ಜಂಗ್ಲಿಯಿಂದ ನಾಟಾ ಕತರಾಯಿಸಬೇಕೆಂಬುವದು ಮತ್ತು ಈ ವಿಷಯದಲ್ಲಿ ತಿಳಿಯಬೇಕಾದ ಇತರ ಸಂಗತಿಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರಸ್ಟು ಅಸಿಸ್ಟೆಂಟ ಕನಸರವೇಟರ್ ಸಾಹೇಬರವರ ಆಫೀಸಿನಲ್ಲಿ ನೋಟೀಸ್ ತಖ್ತೇಮೇಲೆ ನೋಡಿ ತಿಳಿದುಕೊಳ್ಳತಕ್ಕದ್ದು.

4. ಟೆಂಡರುಗಳ ಸಮೇತ ವಂದು ನೂರು ರೂಪಾಯಿಗಳನ್ನು ನಗದೀಯಾಗಲಿ ಕರೆನ್ಸೀ ನೋಟ ಮೂಲಕವಾಗಿಯಾಗಲಿ ಠೇವಣೀ ಹಾಜರ್ ಮಾಡಬೇಕು. ಠೇವಣೀ ಮೊಬಲಗು ಯಿಲ್ಲದೇ ಬರುವ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದಿಲ್ಲವು.

5. ಪ್ರತಿ ದರಖಾಸ್ತುದಾರನು ನಾಟಾ ಯಾ ಜೆಲಗು ಜಮಾಯಿಸುವದಕ್ಕೆ ಸಲೆ ಅಡಿ 1ಕ್ಕೆ ಬಿದರುಗಳ ಜಮಾಯಿಸುವದಕ್ಕೆ ಶೇಕಡಾ ವಂದಕ್ಕೆ ದರ ನಮೂದಿಸಬೇಕು.

6. ಯಾವ ಟೆಂಡರನ್ನಾಗಲೀ ಕಾರಣವನ್ನು ತೋರಿಸದೇ ತಿರಸ್ಕರಿಸಲಿಕ್ಕೆ ಫಾರೆಸ್ಟು ಅಸಿಸ್ಟೆಂಟ ಕನಸರವೇಟರ್ ಸಾಹೇಬರವರು ಸ್ವತಂತ್ರರಾಗಿ ಯಿರುತ್ತಾರೆ.

7. ಜಂಗಲಿಯಲ್ಲಿ ಫಾರೆಸ್ಟು ಇಲಾಖೇಯವರು ನಿಷಾನ ಮಾಡಿದ ಮರವನ್ನು ಕಡದು ಹಮೇಶವಕವಾಗಿ ಕೆತ್ತಿ ಡಿಪೋಕ್ಕೆ ಸಾಗಿಸುವದಕ್ಕೆ ದರಖಾಸ್ತುದಾರನು ಬದ್ಧನಾಗಿ ಯಿರತಕ್ಕದ್ದು.

8. ಕಂಟ್ರಾಕ್ಟು ಮಂಜೂರಾದ ತಾರೀಖು ಲಾಗಾಯತು ವಂದು ವಾರದವಳಗಾಗಿ ನ್ಯಾಯವಾದ ಸ್ಟಾಂಪು ಕಾಗದದಮೇಲೆ ಕಂಟ್ರಾಕ್ಟು ಮುಚ್ಚಳಿಕೆ ಬರಕೊಡದೇ ತಪ್ಪಿದ ಪಕ್ಷದಲ್ಲಿ ಠೇವಣೀ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತದೆ.

9. ಕಂಟ್ರಾಕ್ಟು ಮುಚ್ಚಳಿಕೆ ನಮೂನೆ ವ ಷರತ್ತುಗಳು ಮತ್ತು ಕಂಟ್ರಾಕ್ಟುದಾರಿಗೆ ಬೇಕಾದ ಇತರ ವಿಷಯಗಳನ್ನು ಫಾರೆಸ್ಟು ಅಸಿಸ್ಟೆಂಟ ಕನಸರವೇಟರ್ ಸಾಹೇಬರವರ ಆಫೀಸಿನಲ್ಲಿ ಹಾಜರಾಗಿ ತಿಳಿದುಕೊಳ್ಳತಕ್ಕದ್ದು.

ಯಲ್. ರಿಕ್ಕೇಟ್ಸ್,
ಇನಸ್ಪೆಕ್ಟರ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ತಾಲ್ಲೂಕು ವರ್ತೂರು ಹೋಬಳಿ ಗುಂಜೂರು ಗ್ರಾಮದಲ್ಲಿ ಇರತಕ್ಕ ಸೂಳಿಗೆರೇ ಮರಿಯಪ್ಪನ ವಿಷಯದಲ್ಲಿ—

ಸ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ ಮಿಸಲೇನಿಯಸ್ 2.

ಹುಕ್ಕುಂ.

ಮೇಲ್ಕಂಡ ಸೂಳಿಗೆರೇ ಮರಿಯಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜೀಯವರಾದ ಮೆ|| ಕ್ರೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಸೂಳಿಗೆರೇ ಮರಿಯಪ್ಪನ ಪರವಾಗಿ ಮೆ|| ಅಡ್ವೋಕೇಟ್ ನಾರಾಯಣರಾಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 6—7ನೇ ಯವರಿಗೂ ದರ್‍ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್‍ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲೀ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1—3—5—8ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸೂಳಿಗೆರೇ ಮರಿಯಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ 1887ನೇ ಇಸವಿ ಜುಲೈ 19ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಐವಜು.	[illegible]	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಗುಂಜೂರು ಚನ್ನಪ್ಪಗೆ ..	4,000	..	ತಪಸೀಲ್ ಯಿಲ್ಲಾ	
	ಡಿಟೋ	750	..	ಆಧಾರ ಪತ್ರದಬಗೆ	
2	ಬೆಂಗಳೂರು ಸಂಪನ್ನ ಯ್ಯಾನವರ ಮರಿನಂಜಪ್ಪ ..	500	..	ಡಿಕರೀ ಬಾಬತು	
3	ಡಿಟೋ ಬಿಗದೇನಹಳ್ಳೀ ಬಸಪ್ಪ ..	425	..	ಪತ್ರ 2ಕ್ಕೆ ಈಪೈಕಿ 225 ರೂಪಾಯಿಗೆ ಡಿಕರೀ ಆಗಿ ಯಿದೆ	
4	ದೊಮ್ಮಸಂದ್ರದ ಮುದ್ದನಂಜಪ್ಪಗೆ ..	200	..	ಆಧಾರ ಪತ್ರದ ಬಗೆ	
5	ಹಲಸೂರು ಸೋಮಪ್ಪಗೆ ..	300	..	ತಪಸೀಲ್ ಯಿಲ್ಲಾ	
6	ಡಿಟೋ ನಿಜಗುಣಪ್ಪಗೆ ..	350	..	ಪತ್ರ 3ಕ್ಕೆ ಈ ಪೈಕೀ 2 ಪತ್ರಕ್ಕೆ ಡಿಕರೀ ಆಗಿದೆ	
7	ಹಲಸೂರು ಮಲ್ಲೆಟೀ ಮಗ ಪರಪ್ಪಗೆ ..	150	..	ಡಿಕರೀ ಬಾಬತು	
8	ಮಲ್ಲೇಗೌಡನ ಪಾಳ್ಯದ ತಮ್ಮಣ್ಣನಮಗ ಮುನಿಶಾಮಿಗೆ ..	100	..	ತಪಸೀಲ್ ಯಿಲ್ಲಾ	
	ಜುಮ್ಲಾ ..	6,725			

ದಿವಾಳಿಯಾದ ಡಿಕ್ರೀ ದೇಣೇದಾರ ಕೋಲಾರ ಡಿಸ್ಟ್ರಿಕ್ಟ್ಟು ಮುಳಬಾಗಲ್ ತಾಲ್ಲೂಕು ಕುರುಬ ಚಿದಮನಹಳ್ಳೀ ವಾಸಸ್ಥನಾದ ನರಸೀಗವುಡನ ವಿಷಯದಲ್ಲಿ—

ಸ್ 1887ನೇ ಇಸವಿ ದಿವಾಳೀ ಕೇಸ್ ನಂಬರು ಮಿಸಲ್ ನಿಯಸ್ 111.

ಹುಕ್ಕುಂ.

ಮೇಲ್ಕಂಡ ನರಸೀಗವುಡನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ನರಸೀಗವುಡನ ಪರವಾಗಿ ಪ್ಲೀಡರ್ ಮೆ|| ಗಂಗಾಧರಯ್ಯನವರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 3ನೇ ಐಯಪ್ಪನವರ ತರಫ ಪ್ಲೀಡರ್ ಮೆ|| ಶೇಷಗಿರಿಯಪ್ಪನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾವಂದರೆ 1—2—4—5—6ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ನರಸೀಗವುಡನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ 1887ನೇ ಇಸವಿ ಜುಲೈ 22ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತುಖತ್ ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಅಡಮಾನ ಬಗ್ಗೆ ಮೊಬಲಗು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಕೋಲಾರ ಡಿಸ್ಟ್ರಿಕ್ಟ್ಟು ಮುಳಬಾಗಲಿನಲ್ಲಿರತಕ್ಕ ತಿಮ್ಮಕೊಪ್ಪಂ ಅಂಣಯ್ಯಶೆಟ್ಟಿ ..	210	..	ಡಿಕರೀ ಬಾಬತು	
2	ಡಿಟ್ಟೋ ಮುಳಬಾಗಲಿನಲ್ಲಿರತಕ್ಕ ನೂರಮೊಹದ್ದೀನ್ ಸಾಬಿಗೆ ..	18	..	ತಂಬಾಕು ಬಗೆ	
3	ಮುಳಬಾಗಲ್ ತಾ|| ವಿಜಲಾಪುರದಲ್ಲಿರತಕ್ಕ ಐಯಪ್ಪಗೆ ..	280	..	ತಪಸೀಲ್ ಇಲ್ಲ	
4	ಮುಳಬಾಗಲ್ ತಾ|| ಆವನಿ ಸಂ|| ಬೊಮ್ಮಸಂದ್ರದಲ್ಲಿರತಕ್ಕ ಭೀಮಾಪುರದ ವೆಂಕಟಪ್ಪಗೆ ..	50	..	ಡಿಟ್ಟೋ	
5	ಮುಳಬಾಗಲ್ ತಾ|| ಪೊದಕಾಷ್ಟಿಲಿರುವ ಚನ್ನಪ್ಪಗೆ.	50	..	ಡಿಟ್ಟೋ	
6	ಮುಳಬಾಗಲ್ ತಾಲ್ಲೂಕಿಗೆ ರೆವಿನ್ಯೂ ಕಂದಾಯದ ಬಾಕಿಗೆ. ..	90	..	ಡಿಟ್ಟೋ	
	ಜಮ್ಲಾ ರೂಪಾಯಿ	698	..		
ಬೆಂಗಳೂರು	ಆನೇಕಲ್	ಸರ್ಜಾಪುರ	ಕೋಟಿಗಾನ ಹಳ್ಳಿ	ನಂಜುಂಡಭಟ್ಟ ವ ಇತರ 2 ಜನರು	16	14	0	150	0	0	116	14	0	178	11	11	ಸೆ 1887ನೇ ಇಸವಿ ಅಕ್ಟೋಬರ ತಾರೀಖು 15ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ತಾರೀಖು 2ನೇ ಸೆಪ್ಟಂಬರ್ 1887.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಚಡದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಪೇರೆ ಪೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ವೇಖಿಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು, ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
						ರೂ. ಅ. ಪೈ.			
ಮೈಸೂರು.	ಚಾಮರಾಜನಗರ.	ಉಮ್ಮತ್ತೂರು	ಮೂಡ್ಲು ಅಗ್ರಹಾರ	ಗೋಪಾಲಕೃಷ್ಣಭಟ್ಟ ವ ಇತರ 18 ಜನರು	..	403 7 0	357 5 6	134 1 10	1887ನೇ ಇಸವಿ ಅಕ್ಟೋಬರ್ ತಾರೀಖು 12ರಲ್ಲು ತಾಲ್ಲೂಕು ಕಚ್ಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ತಾರೀಖು 9ನೇ ಸೆಪ್ಟೆಂಬರ್ 1887.

ನಂ. 109.—1887ನೇ ಇಸವಿ ಸೆಪ್ಟೆಂಬರ್ 3ನೇ ಮರ್ಕುಂ 103ನೇ ನಂಬರ್ ಇಶ್ತಿಹಾರಿನೊಂದಿಗೆ ಪ್ರಕಟಿಸಲ್ಪಟ್ಟ ಪಟ್ಟಿಗೆ ಬದಲಾಗಿ ಈ ಕೆಳಗೆ ಬರುವ ತೇರ್ಗಡೆಯಾದ ಇಸಮುಗಳ ದರ್ಜೇವಾರ್ ಪಟ್ಟಿಯು, ಪ್ರಸಿದ್ಧಿಪಡಿಸಲ್ಪಟ್ಟಿರುತ್ತೆ.

ದರ್ಜೇವಾರ್ ನಂಬರ್.	ರಿಜಿಸ್ಟರ್ ನಂಬರ್.	ಹೆಸರು.	ಉದ್ಯೋಗದ ಹೆಸರು.	ಯಾವ ಭಾಷೆಯಲ್ಲಿ ಪರೀಕ್ಷಿಸಲ್ಪಟ್ಟದ್ದು.
1	70	ಬಿ. ನರಸಿಹ್ಮಯ್ಯಂಗಾರ್ ..	ಸಾಗರದ ಮುನಸಿಫ್ ..	ಇಂಗ್ಲೀಷ್.
2	4	ಎಸ್. ಶ್ರೀನಿವಾಸರಾವ್ ..	ಬೆಂಗಳೂರು ಡೆಪ್ಯುಟಿ ಕಮ್ಮಿಷನರ್ ಆಫೀಸ್ ರವಿನ್ಯೂ ಹೆಡ್ ಅಕೌಂಟೆಂಟ್ ..	ಡಿಟೋ
3	15	ಟಿ. ಎಂ. ನಾರಣಯ್ಯ ..	ಚೀಫ್ ಕೋರ್ಟು ಟ್ರಾನ್ಸ್ಲೇಟರ್ ..	ಡಿಟೋ
4	65	ಎಸ್. ಲೇರ್ಟ ..	ಬೆಂಗಳೂರಲ್ಲಿ ಕೊಡಗು ಚೀಫ್ ಕಮ್ಮಿಷನರವರ ಆಫೀಸ್ ಹೆಡ್ ಕ್ಲರ್ಕ ..	ಡಿಟೋ
5	10	ಬೇಲೀ ಕೃಷ್ಣರಾವ್ ..	ಮೈಸೂರು ಗವರ್ನಮೆಂಟ್ ಪ್ರೆಸ್ ಆಫೀಸ್ ಅಕೌಂಟೆಂಟ್ ಮತ್ತು ಅಸಿಸ್ಟೆಂಟ್ ಟ್ರಾನ್ಸ್ಲೇಟರ್ ..	ಡಿಟೋ
6	24	ಮೆ|| ವಿ. ಡಿ. ಪೊನ್ನರಂಗ ಮೊದಲಿಯಾರ್ ..	ಹಾಸನದ ಪೋಲೀಸ್ ಅ|| ಕಮ್ಮಿಷನರ್ ..	ಡಿಟೋ
7	27	ಸಿ. ವಾಸುದೇವಯ್ಯ ..	ದಿವಾನರವರ ಆಫೀಸ್ ಲೆಜಿಸ್ಲೇಟೀವ್ ಇಲಾಖಾ ಡೆಪ್ಯುಟಿ ಟ್ರಾನ್ಸ್ಲೇಟರ್ ..	ಡಿಟೋ
8	19	ಬಾಲಕೃಷ್ಣರಾವ್ ..	ತೀರ್ಥಹಳ್ಳಿ ತಾ|| ಶಿರಸ್ತೇದಾರ್ ..	ಕನ್ನಡ
	39	ಕೆ. ಶ್ರೀಕಂಠಯ್ಯ ..	ಚಿಕ್ಕನಾಯಕನಹಳ್ಳಿ ತಾ|| ಅಮಲ್ದಾರ್ ..	ಇಂಗ್ಲೀಷ್
10	34	ಪಿ. ಸುಬ್ಬರಾವ್ನಾಯುಡು ..	ಕನ್ಸಲ್ಟಿಂಗ್ ಇಂಜನಿಯರ್ ಆಫೀಸ್ ಹೆಡ್ ಕ್ಲರ್ಕ ..	ಡಿಟೋ
11	58	ವೆಂಕಟರಾವ್ ..	ಚಾಮರಾಜನಗರದ ತಾ|| ಶಿರಸ್ತೇದಾರ್ ..	ಕನ್ನಡ
12	38	ಆರ್. ರಾಘವೇಂದ್ರರಾವ್ ..	ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್ದಾರ್ ..	ಇಂಗ್ಲೀಷ್
13	69	ಮೆ|| ಎಸ್. ವೈದ್ಯನಾಥ ಅಯ್ಯರ್ ..	ದಿವಾನರವರ ಪ್ರೈವೇಟ್ ಸೆಕ್ರಿಟೇರಿ ..	ಡಿಟೋ
14	30	ಎಸ್. ಕೃಷ್ಣ ಅಯ್ಯರ್ ..	ಕೋಲಾರದ ಡೆಪ್ಯುಟಿ ಕಮ್ಮಿಷನರ್ ಆಫೀಸ್ ಕ್ಲರ್ಕ ..	ಡಿಟೋ
15	56	ಜಿ. ಸೂರ್ಯನಾರಣ ಶೆಟ್ಟಿ ..	ಕೊಡಗು ಸೂಪರಿಂಟೆಂಡಿಂಗ್ ಇಂಜನಿಯರ್ ಆಫೀಸ್ ಡೆಪ್ಯುಟಿ ಕ್ಲರ್ಕ ..	ಡಿಟೋ
16	52	ಅಹಮ್ಮದ್ಅಲ್ಲಿ ..	ಹೊಳಲಕೆರೆ ತಾಲ್ಲೂಕು ಅಮಲ್ದಾರ್ ..	ಕನ್ನಡ
17	11	ಎಲ್ಲೋ ಶ್ರೀನಿವಾಸ್ ..	ಸರ್ವೇ ಸೂಪರಿಂಟೆಂಡೆಂಟರವರ ಆಫೀಸ್ಹೆಡ್ಕ್ಲರ್ಕ ..	ಇಂಗ್ಲೀಷ್
18	55	ಆರ್. ಮಾಧವರಾವ್ ..	ಹಾಸನದ ಜನರಲ್ ಅ|| ಕಮ್ಮಿಷನರವರ ಆಫೀಸ್ ಹೆಡ್ ಮುನಷಿ ..	ಡಿಟೋ
19	45	ಬಿ. ವಾಸುದೇವರಾವ್ ..	ನಾಗಮಂಗಲ ತಾ|| ಪೋಲೀಸ್ ಇನ್ಸ್ಪೆಕ್ಟರ್ ..	ಡಿಟೋ
20	74	ಆರ್. ಲಕ್ಷ್ಮಣರಾವ್ ..	ಹುಣಸೂರು ತಾ|| ಅಮಲ್ದಾರ್ ..	ಡಿಟೋ
21	46	ಸಿ. ಶ್ರೀನಿವಾಸರಾವ್ ..	ಕನ್ಸಲ್ಟಿಂಗ್ ಇಂಜನಿಯರ್ ಆಫೀಸ್ ಡೆಪ್ಯುಟಿ ಕ್ಲರ್ಕ ..	ಡಿಟೋ
22	16	ಜಿ. ಶ್ರೀನಿವಾಸರಾವ್ ..	ಮಿಲಿಟೆರಿ ಸೆಕ್ರಿಟೇರೀ ಆಫೀಸ್ ಹೆಡ್ ಕ್ಲರ್ಕ ..	ಡಿಟೋ
23	35	ಎಂ. ಗುಂಡಪ್ಪ ..	ಚಿತ್ರದುರ್ಗದ ಡೆಪ್ಯುಟಿ ಕಮ್ಮಿಷನರ ಆಫೀಸ್ ರಜಿಸ್ಟ್ರೇಷನ್ ಕ್ಲರ್ಕ ..	ಡಿಟೋ
24	7	ಎಂ. ಸಿ. ಸುಬ್ಬರಾವ್ ..	ಮೈಸೂರು ಡಿಸ್ಟ್ರಿಕ್ಟ್ ಕೋರ್ಟು ಅಸಿಸ್ಟೆಂಟ್ ರಕಾರ್ಡ್‌ಕೀಪರ್ ..	ಡಿಟೋ
25	60	ಡಬ್ಲಿಯು. ವೆಂಕಟಕೃಷ್ಣಯ್ಯ ..	ಹಾಸನ ತಾಲ್ಲೂಕು ಶಿರಸ್ತೇದಾರ್ ..	ಕನ್ನಡ
26	37	ಸೈದ್ ಅಮೀರ್ಹಸನ್ ..	ಆನೇಕಲ್ ತಾ|| ಅಮಲ್ದಾರ್ ..	ಇಂಗ್ಲೀಷ್
27	33	ಎನ್. ನಾರಾಯಣರಾವ್ ..	ಹಾಸನದ ಸಂದಲ್ ದರೋಗ ..	ಡಿಟೋ

ಇದರಡೀ ಕಂಡ ಉಮೇದ್‌ವಾರರು 1885ನೇ ಇಸವಿಯ ರೆವಿನ್ಯೂ ಪರೀಕ್ಷೆಯಲ್ಲಿ ಮದಲ್ ಭಾಗದಲ್ಲಿ ತೇರ್ಗಡೆಯಾಗಿ ನಿಲ್ಲಿಸಿ ಇಡಲ್ಪಟ್ಟ ಎರಡನೇ ಭಾಗದ ಅಂಶಗಳಲ್ಲಿ ಹಾಲೀ ತೇರ್ಗಡೆಯಾಗಿರುವದರಿಂದ ಸದರೀಯವರುಗಳು ರೆವಿನ್ಯೂ ಪರೀಕ್ಷೆಯನ್ನು ಪೂರ್ತಿ ಮಾಡಿರುತ್ತಾರೆ:—

ಪಟ್ಟಿಯ ನಂಬರು	ಪತ್ರಿಕೆ ನಂಬರು	ಹೆಸರು.	ಉದ್ಯೋಗದ ಹೆಸರು.	ಯಾವ ಭಾಷೆಯಲ್ಲಿ ಪರೀಕ್ಷಿಸಲ್ಪಟ್ಟದ್ದು.
1	57	ವಿ. ಕೃಷ್ಣರಾವ್ ..	ತುಮಕೂರು ಜುಡಿಷಲ್ ಹೆಡ್ ಮುನಷಿ ..	ಇಂಗ್ಲೀಷ್
2	62	ಯಂ. ಶಂಕರನಾರಣಪ್ಪ ..	ಹೊಳೇನರಶೀಪುರದ ಮುನ್ಸಿಫ್ ಕೋರ್ಟು ಹೆಡ್ ಕ್ಲರ್ಕ್ ..	ಡಿಟೋ
3	1	ವಿ. ಕಂಠೀರವಾಚಾರ್ಲು ..	ಮೂಡಗೆರೇ ತಾಲ್ಲೂಕು ಅಮಲ್‌ದಾರ್ ..	ಡಿಟೋ

ತಾರೀಖು 5ನೇ ಸೆಪ್ಟಂಬರ್ 1887.

ನಂ. 104.—ಮೈಸೂರು ಟವರ್ ಮಾಜಿಸ್ಟ್ರೇಟ್ ವ ಮ್ಯುನಿಸಿಪಲ್ ವೈಸ್ ಪ್ರಸಿಡೆಂಟ್ ಮ॥ ಅಬ್ದುಲ್ ರಹಿಮ್ಖಾಯವರಿಗೆ 1887ನೇ ಜುಲೈ 27ರ ಲಾಗಾಯಿತು ಆಗಸ್ಟ್ 7ರವರಿವಿಗೂ ಈ ಎರಡು ದಿನಗಳೂ ಸೇರಿ 12 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿತು.

ತಾರೀಖು 7ನೇ ಸೆಪ್ಟಂಬರ್ 1887.

ನಂ. 108.—ಬೌರಿಂಗ್‌ಪೇಟೆ ತಾಲ್ಲೂಕು ಅಮಲ್‌ದಾರ್ ಕೆ. ಶ್ರೀನಿವಾಸರಾಯರು, ತಾವು ವುಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 9ನೇ ಸೆಪ್ಟಂಬರ್ 1887.

ನಂ. 110.—ತಪ್ಪು ತಿದ್ದುಪಾಟು—1887ನೇ ಇಸವಿ ಆಗಸ್ಟ್ 30ನೇ ಮುರ್ಕುಂ 101ನೇ ನಂಬರಿನ ಇಸ್ತಿಹಾರ್‌ನೊಳಗೆ ನಮೂದಿರುವ, "1887ನೇ ಆಗಸ್ಟ್ 20ನೇ ಮುರ್ಕುಂ" ಎಂಬದಕ್ಕೆ ಬದಲಾಗಿ" 1887ನೇ ಆಗಸ್ಟ್ 12" ಎಂಬದಾಗಿ ಓದಿಕೊಳ್ಳತಕ್ಕದ್ದು.

ನಂ. 111.—ಗುಬ್ಬೀ ಅವಲ್‌ದಾರ್ ಹೇಮಾ ಹನುಮಂತಯ್ಯನವರಿಗೆ, 1887ನೇ ಇಸವಿ ಮೇ 30ನೇ ಮುರ್ಕುಂ 619ನೇ ನಂಬರಿನ ಇಸ್ತಿಹಾರಿನ ದೆಶೆಯಿಂದ ಕೊಡಲ್ಪಟ್ಟಿದ್ದ ಪ್ರೈವೇಟ್ ಅಫೇರ್ಸ್ ರಜಾವನ್ನ ಅವರ ಅಪೇಕ್ಷೆ ಮೇರಿಗೆ, ಇದರಿಂದ ರದ್ದುಪಡಿಸಿ ಇಧೆ.

ತಾರೀಖು 7ನೇ ಸೆಪ್ಟಂಬರ್ 1887.

ಕ್ಯಾಂಪ್ ನಂ. 1165.—ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಮ॥ ಟಿ. ಆನಂದರಾಯರವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೈಸೂರು ಟವರ್ ಮಾಜಿಸ್ಟ್ರೇಟ್ ಮ॥ ಅಬ್ದುಲ್ ರಹಿಮ್ಖಾಯವರು, ಮ॥ ಆನಂದರಾಯರವರ ಗೈರ್ ಹಾಜರೀಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೆ ಆಕ್ಟಿಂಗ್ ತರೀಕ್ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಬಮೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ವಿದ್ಯಾಭ್ಯಾಸದ ಇಲಾಖೆ.

ಸ್ತ 1887ನೇ ಇಸವಿ ಸೆಪ್ಟೆಂಬರ್ ತಾರೀಖು 13.

ಕನ್ನಡ ಭಾಷೆಗಾಗಿ ಚಿನ್ನದ ಬಿರುದು ಬಿಲ್ಲೆ.

ಇದರಿಂದ ತಿಳಿಸಲ್ಪಡುವದೇನಂದರೆ, ಬೆಂಗಳೂರು ಚಿಕ್ಕ ಪೇಟೆಯಲ್ಲಿರುವ ಮ|| ರಾ|| ಪಾಲವುಂಡರಾಮರಾವ್ ಎಂಬವರಿಂದ, ಸ್ತ 1888ನೇ ಇಸವಿಯಲ್ಲಿ ನಡಿಯುವ ಮೈಸೂರು ದೇಶೀಯ ಪರೀಕ್ಷೆಯ ಕನ್ನಡ ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನ ಹೊಂದಿ ತೇರ್ಗಡೆಯಾಗುವ ವಿದ್ಯಾರ್ಥಿಗೆ 20 ರೂಪಾಯಿ ಬೆಲೆಯುಳ್ಳ ಒಂದು ಚಿನ್ನದ ಬಿರುದುಬಿಲ್ಲೆ ಕೊಡಲ್ಪಡುತ್ತೆ.

ಯಲ್. ರೈಸ್,
ಎಡ್ಯುಕೇಷನ್ ಸೆಕ್ರೆಟೇರಿ.

ಮೈಸೂರ ಗೆಜೆಟ

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ॥ 17, ಸ್ಸ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೧ನೇ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಿನಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎನ್‌ಫೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎನ್‌ಫೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್‌ಸನ್,

ಕಾಂಪ್‌ಟ್ರೋಲರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟು 1887.

ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ಸಬ್ ರೆಜಿಸ್ಟ್ರೀ ಆಫೀಸಿನಲ್ಲಿ ಈ ಕೆಳಗೆ ವಿವರಿಸೋಣಾದ ರೆಜಿಸ್ಟ್ರಾದ 1 ತಂಸೂಕು 2 ವರುಷಗಳಿಗೆ ಮೇಲ್ಪಟ್ಟ ಕಾಲದಿಂದ ಹಾಜರ್ಮಾಡಿದವನು ವಾಪಸ್ ಕೇಳದೇ ಇರುವ ಕಾರಣ ನಿಂತಿರುತ್ತೆ ಡಿಟೋ ತಂಸೂಕನ್ನು ಹಾಜರ್ಮಾಡಿದವನಾಗಲಿ ಅಥವಾ ವಾಪಸ್ ಪಡಿಯಲು ಅಧಿಕಾರ ಹೊಂದಿದವರಾಗಲಿ ಈ ಲಾಗಾಯತು 1 ತಿಂಗಳೊಳಗೆ ಚಿಕ್ಕಬಳ್ಳಾಪುರ ಸಬ್ ರೆಜಿಸ್ಟ್ರಾರ್ರ ರೂಬರೂ ಹಾಜರಾಗಿ ರೂಲ್ಸ್ ಮೇರಿಗೆ ಪಾವತೀ ಮಾಡಬೇಕಾಗಿರುವ ಭದ್ರಪಡಿಸಿದ ಫೀಜು ಪಾವತೀ ಮಾಡಿ ವಾಪಸ್ ಪಡೆಯಬಹುದು ತಪ್ಪಿದರೆ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶ ಪಡಿಸಲ್ಪಡುವದು:—

ರೆಜಿಸ್ಟ್ರಿನ ಇಸವಿ ಮತ್ತು ನಂಬರ್.	ಕಕ್ಷಿಗಾರ್ರ ಹೆಸರು.		ತಂಸೂಕಿನ ತಾರೀಖು.	ರೆಜಿಸ್ಟ್ರಿಗೆ ಹಾಜರ್ಮಾಡಿದ ತಾರೀಖು.	ರೆಜಿಸ್ಟ್ರಾದ ತಾರೀಖು.	ಸ್ವಭಾವ.
	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.				
1885—86ನೇ ಇಸವಿ 82ನೇ ನಂಬರು.	ಪೇರೇಸಂದ್ರದಲ್ಲಿ ಇರುವ ಜಂಗಮಕೋಟೆ ವೆಂಕಟರಾಜು ಮಗ ಸುಬ್ಬರಾಜು.	ಪೇರೇಸಂದ್ರದಲ್ಲಿ ಇರುವ ಕಿಟ್ಟರಾಮಯ್ಯನ ಕೊವಾರ ಪ್ರಾಯಪ್ಪ.	1885ನೇ ಇಸವಿ ಜೂನ್ ತಾರೀಖು 24.	1885ನೇ ಇಸವಿ ಜೂನ್ ತಾರೀಖು 26.	1885ನೇ ಇಸವಿ ಜೂನ್ ತಾರೀಖು 26.	ಪೇರೇಸಂದ್ರ ಗ್ರಾಮದ ಬಳೀ ಪೂರ್ವ ಕಡೆ ಗೋವಿಂದಪ್ಪನ ತೋಟದ ಹತ್ತಿರ ಇರುವ ಬರದುಕೊಟ್ಟವನ ಸ್ವಂತ ಕಂದಾಯದ ಸರ್ವೇ 73ನೇ ನಂಬರು ತರೀ ಜಮೀನ್ ೦-೩ ಗುಂಟೇ ಜಮೀನನ್ನು 20 ರೂಪಾಯಿಗಳಿಗೆ ಕ್ರಯಕ್ಕೆ ಕೊಟ್ಟು ಇರುವದಾಗಿ.

ಸಿ. ಸುಬ್ಬರಾವ್,
ರಿಜಿಸ್ಟ್ರಾರ್.

ನಗರ್ ಡಿವಿಜನ್ ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 87.

ಮೃತಪಟ್ಟ ಶೇಕದಾರ್ ಸುಬ್ಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕೃಷ್ಣಪ್ಪನು, ಮೃತಪಟ್ಟ ಸದರೀ ಸುಬ್ಬರಾಯರಿಗೆ ಸಹೋದರನು ಆಗಬೇಕೆಂಬ ಹಕ್ಕುದಾರೀ ಮೇಲೆ ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ್ ತಾಲ್ಲೂಕು ಮಣಿಚೆನಹಳ್ಳಿ ಸ್ಥಳದ ಕೃಷ್ಣಪ್ಪನು ಸಾಗರ ತಾಲ್ಲೂಕು ಕಲ್ಲಹಳ್ಳಿ ವಾಸಸ್ಥನಾಗಿ ಮೃತಪಟ್ಟ ಸುಬ್ಬರಾಯನ ಜಿಂದಗೀ ಬಗ್ಯಾಗಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಇರುವ ರೂಪಾಯಿ 575—5—10 ತೆಗೆದು ಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ವರಟಾಸ್ತುದಾರನಾದ ಕೃಷ್ಣಪ್ಪನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿಧೆ.

1887ನೇ ಇಸವಿ ಸೆಪ್ಟಂಬರ್ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟು 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸನ್ 1887ನೇ ಇಸವಿ ಅಕ್ಟೋಬರ್ ಗುರ್ರೇ ಲಾಗಾಯಿತು 1888ನೇ ಇಸವಿ ಜೂನ್ 15ನೇ ತಾರೀಖುವರಿಗೆ ಸುಮಾರು 200 ಯಕರೆ ಜಂಗಲೀಯನ್ನು ಕ್ಲಿಯರ್‌ಮಾಡಿಸಿ 18, ಅಂಗುಲ ಲಾಂಬಿ 18, ಅಂಗುಲ ರುಂದೀ 18, ಅಂಗುಲ ಮಟ್ಟುವಾದ (200000) ಯರಡು ಲಕ್ಷ ಗುಣಿಗಳನ್ನು ತೆಗಿಯತಕ್ಕ ಬಗ್ಯೆ ಈ ತಾರೀಖು ಲಾಗಾಯಿತು (1887ನೇ ಇಸವಿ) ಅಕ್ಟೋಬರ್ 15ನೇ ತಾರೀಖುವರಿಗೆ ಟೆಂಡರುಗಳು ಅಂಗೀಕರಿಸಲ್ಪಡುತದೆ.

ಕ್ಲಿಯರ್‌ಮಾಡತಕ್ಕ ಸ್ಥಳ.	ಯಕರೆ.	ಗುಣಿಗಳ ಸಂಖೆ.
ಲಕ್ಕುವಳ್ಳೀ ತರೀಕೆರೇ ತಾಲ್ಲೂಕು	50	50000
ಸಕ್ರೇಬೈಲ್ ಶಿವಮೊಗ್ಗಾ ತಾಲ್ಲೂಕು	50	50000
ಅನಿಪೆನಕಟ್ಟೆ ಡಿಟೋ.	25	25000
ಕಾಳೇನಹಳ್ಳೀ ಷಿಕಾರೀಪುರ	25	25000
ಚಿಡ್ಡಿಹಳ್ಳೀ ಸೊರಬದ ತಾಲ್ಲೂಕು	50	50000
	200	200000

2. ಟೆಂಡರುಗಳು ಕ್ಲಿಯರ್‌ಮಾಡಲಿಕ್ಕೂ ಗುಣೀ ತೆಗಿಸುವದಕ್ಕೂ ಬೇರೆಬೇರೆಯಾಗಿ ದರ ನಮೂದ್ ಮಾಡಬೇಕು. ಕ್ಲಿಯರ್ ಮಾಡಲಿಕ್ಕೆ ಯಾಗಲೀ ಯಾ ಗುಣಿಗಳನ್ನ ತೆಗಿಯಲಿಕ್ಕೆ ಆಗಲಿ ಅಥವಾ ಯರಡಕ್ಕೂ ಒಟ್ಟಿಗೆ ಯಾಗಲಿ ಟೆಂಡರ್ ಕೊಡಬಹುದು.

3. ಕ್ಲಿಯರ್ ಮಾಡುವದರಲ್ಲಿ ಮರಗಳು ಸೊಸಿಗಳು, ಬಿದರು ಟೆಂಡ್ಲುಗಳು, ನೆಲದಿಂದ 2 ಅಡೀ ಒಳಗೆ ಕಡಿಯತಕ್ಕದ್ದು, ನಾಟೂ ಮತ್ತು ಬೆಲಗಿಗೆ ಲಾಯಖಾದಂಥಾ ಮರ ಮತ್ತು ಸೊಸಿಗಳು, ಮತು ಉಪಯೋಗವಾದಂಥಾ ಬಿದರುಗಳು ರೆಂಬೆ ಮುಳ್ಳು ವಗ್ಯೆರೆಗಳನ್ನು ಕಡದು ಅಲ್ಲೇ ಬಿಡತಕ್ಕದ್ದು. ರೆಂಬೆಗಳು ಮತ್ತು ಮುಳ್ಳುಗಳು ವಗ್ಯೆರೇ ಕಚರಾ ರಾಶಿಗಳಾಗಿ ಒಟ್ಟಿ ಸುಡತಕ್ಕದ್ದು, ಕ್ಲಿಯರ್‌ಮಾಡಿದ್ದ ಜಾಗಾವು 1888ನೇ ಇಸವಿ ಏಪ್ರೈಲ್ ತಾರೀಖು 30ರ ವಳಗಾಗಿ ಗುಣೀ ತೆಗಿಯಲಿಕ್ಕೆ ಸಿದ್ಧವಾಗಿರಬೇಕು. ಗುಣೀ ತೆಗಿಯುವ ಕೆಲಸವು ಜೂನ್ 30ನೇ ತಾರೀಖಿನ ವಳಗಾಗಿ ಮುಗಿಯತಕ್ಕದ್ದು.

4. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನಮುಚ್ಚಳಿಕೇ ಷರ್ತುಗಳಿಗೆ ಅನುಸರಿಸಿ ನಡಿಯುವ ಹಾಗೆ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯಿತು 3 ದಿವಸದ ವಳಗಾಗಿ (100) ನೂರು ರೂಪಾಯಿ ಠೇವಣೀ ಇಡತಕ್ಕದ್ದು.

5. ಸನ್ 1887ನೇ ಇಸವಿ ಡಿಶಂಬರ್ ಆಖೈರ್ ವಳಗಾಗಿ ಕ್ಲಿಯರ್‌ಮಾಡುವ ಕೆಲಸವೂ 1888ನೇ ಇಸವಿ ಮೇ ಆಖೈರುವಳಗಾಗಿ ಗುಣೀ ತೆಗಿಯುವ ಕೆಲಸವೂ ತಕ್ಕ ಅಭಿವೃದ್ಧೀಯಲ್ಲಿ ಇಲ್ಲದಿದ್ದ ಪಕ್ಷಕ್ಕೆ ಕಂಟ್ರಾಕ್ಟು ರದ್ದುಮಾಡಲಿಕ್ಕೆ ಅಸಿಸ್ಟೆಂಟ್ ಕನ್ಸರ್‌ವೇಟರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ, ಮತ್ತು ಠೇವಣೀ ಯಿಟ್ಟ ಮೊಬಲಗು ಸರ್ಕಾರಕ್ಕೆ ಸೇರಿಸಲ್ಪಡತಕ್ಕದ್ದು.

6. ಈ ನೋಟಿಫಿಕೇಷನ್ನಲ್ಲಿ ನಮೂದ್ ಮಾಡಿದ ತಾರೀಖು ವಳಗೆ ಕ್ಲಿಯರ್ ಮತ್ತು ಗುಣೀ ತೆಗಿಯುವ ಕೆಲಸವು ಸಂಪೂರ್ಣವಾಗಿ ಪೂರೈಸದಿದ್ದ ಪಕ್ಷಕ್ಕೆ ಕೆಲಸ ಮಾಡಿದ್ದ ಭಾಗಕ್ಕೆ ಕಂಟ್ರಾಕ್ಟುದಾರನಿಗೆ ಸರಕಾರದಿಂದ ಏನೇನೂ ಸಲ್ಲತಕ್ಕದ್ದಿಲ್ಲವು. ಮತ್ತು ಠೇವಣೀ ಇಟ್ಟ ಮೊಬಲಗಿನ ಹಕ್ಕು ತಪ್ಪಿಹೋಗುವದು.

7. ಟೆಂಡರ್‌ಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕನ್ಸರ್‌ವೇಟರವರ ಆಫೀಸಿಗೆ ಕಳುಹಿಸಬೇಕು. ಯಾವ ಟೆಂಡರನ್ನಾಗಲಿ ಕಾರಣವನ್ನ ತೋರಿಸದೇ ಮಂಜೂರ್ಮಾಡದೇ ಇರಲಿಕ್ಕೆ ಅಸಿಸ್ಟೆಂಟ್ ಕನ್ಸರ್‌ವೇಟರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ.

8. ಇದರ ಸಿವಾಯಿ ಯಿನ್ನೇನಾದರೂ ಸಂಗತೀ ತಿಳಕೊಳ್ಳತಕ್ಕದ್ದಿದ್ದರೆ ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕನ್ಸರ್‌ವೇಟರ್ ಸಾಹೇಬರವರಲ್ಲಿ ತಿಳಕೊಳ್ಳಬಹುದು.

ಡಿ. ಪಿ. ಲಾರಿ,
ಅಸಿಸ್ಟೆಂಟ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್.

ಕೊಡಗು.

ನೋಟೀಸ್.

ತಾರೀಖು 5ನೇ ಸೆಪ್ಟಂಬರ್ 1887.

ಇಂಜನಿಯರು ಇಲಾಖಾ ಬಾಬತು ತಾಂಬ್ರದ ತಗಡುಗಳು ಮತ್ತು ಮೊಳೆಗಳು ಸುಮಾರು 200 ಪೌನ್ಗಗಳು ಮಡಿಕೇರೀ ತಾಲ್ಲೂಕು ಕಚೇರೀಮುಂದೆ ಸೆಪ್ಟಂಬರ್ ತಾರೀಖು ? ನೇ ಶುಕ್ರವಾರದ ಲಾಗಾಯತು ಪ್ರತಿ ಶುಕ್ರವಾರದಲ್ಲೂ ಇನ್ನೊಂದು ನೋಟೀಸ್ ಕೊಡುವ ಪರಿಯಂತರ ಹರಾಜ್ ಹಾಕಲ್ಪಡುತವೆ. (ನಗದು ಹಣ.)

ಇ. ಐ. ಪೆರ್‍ರ್ಯಾಮ್,
ಎಗ್ಸಿಕ್ಯೂಟಿವ್ ಇಂಜನಿಯರ್.

ಗವರ್ನ್‌ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥ ವಾಗಿ ಗವರ್ನ್‌ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡ್‌ಗಳು ತೆಗದುಕೊಳ್ಳುವ ಯಾವ ಮನುಷ್ಯ ನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಇಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡ್ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಇಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡ್‌ವುಳ್ಳ ಡಬ್ಬಿಗೆ 20 ರೂಪಾಯಿ; ಈ ಔಷಧವು ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತ್ತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡ್ ಡಬ್ಬಿಗೆ ಹನ್ನೆರಡು ಆಣೇ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್ ಚಂದಾ ದರ ವಗೈರೇ.

	ಚಂದಾ. ರೂ.	ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—				
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..			2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ ..			1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:-				
ಮೊದಲನೇ ಸಲಕ್ಕೆ			5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ			2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.				
ಡ್ಯುಪ್ಲಿಕೇಟ್ ಕಾಫೀಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—				
ಮೊದಲನೇ ಸಲಕ್ಕೆ .. ಪುಟ 1ಕ್ಕೆ ..			10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ,, ..			5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—				
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ಕ್ತಿ 1ಕ್ಕೆ ..			0	8
ಎರಡನೇ ದಫಾ ಡಿಟೋ ಡಿಟೋ ..			0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ			0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಟಿ. ಟಿ. ಲೆನರಡ್,
ಮೈ. ಗೆ. ಕಂಪೈಲರ್.

ಮೈಸೂರ ಗೆಜೆಟ್.

ನಂ. 38 ಸರ್ಕಾರದಿಂದ ಪ್ರಸಿದ್ಧಿ ಮಾಡಲ್ಪಟ್ಟದ್ದು. ಸನ್ 1887.

ಬೆಂಗಳೂರು, ಶನಿವಾರ, ಸೆಪ್ಟೆಂಬರ ತಾ|| 24, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 9ನೇ ಆಗಸ್ಟು 1887.

ನಂ. 77.—ಮಕ್ಕಾಕ್ಕೆ ಖುಷ್ಕೀಮೇಲೂ ಸಮುದ್ರದ ಮೇಲೂ ಪ್ರಯಾಣ ಮಾಡುವಂತಾವರಿಗೆ ಜೋಕೆ ಮತ್ತು ಅನುಕೂಲ್ಯತೆ ವುಂಟು ಮಾಡಿಕೊಡುವ ಬಗ್ಯೆ ಇಂಡಿಯಾ ಗವರ್ನಮೆಂಟಿನವರು ಮೆ|| ತಾಮ್ಸನ್ ಕೂಕ್ ಅಂಡ್ ಸನ್ಸ್‌ಯವರನ್ನು ಏಜಂಟರಾಗಿ ನೇಮಿಸಿ ಅದಕ್ಕಾಗಿ ಏರ್ಪಾಟುಗಳನ್ನು ಮಾಡಿರುವದರಿಂದ ಮಕ್ಕಾಕ್ಕೆ ಪ್ರಯಾಣ ಮಾಡಲಿಚ್ಛೆಯುಳ್ಳ ಜನಗಳು ಸದರೀ ಏರ್ಪಾಡಿಗೆ ನಿಗೇ ಕೊಡತಕ್ಕದ್ದು.

2. ಸದರೀ ಏರ್ಪಾಡುಗಳಿಂದ ವುಂಟಾಗಿರುವ ಪ್ರಯೋಜನಗಳ ತಫಸೀಲ್ ಮೈಸೂರು ಶೀಮೆಯ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರ ಆಫೀಸ್‌ಗಳಿಗೆ ಅರ್ಜೀ ಬರದುಕೊಂಡಲ್ಲಿ ತಿಳಿಯಬರುತ್ತೆ.

ತಾರೀಖು 25ನೇ ಆಗಸ್ಟು 1887.

ಕ್ಯಾಂಪ್ ನಂ. 1043.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಉಡ್ ಯಾರ್ಡಿನಲ್ಲಿರುವ ತ್ಯಾಗದ ದಿಮ್ಮಿಗಳು ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ, ಈ ಕೆಳಗೆ ನಮೂದಾಗುವ ದರಗಳ ಮೇರಿಗೆ ವಿಕ್ರಯಿಸಲ್ಪಡುವವು:—

	ಸಲೆಅಡಿ 1ಕ್ಕೆ ರೂ. ಅ. ಪೈ.		ಸಲೆಅಡಿ 1ಕ್ಕೆ ರೂ. ಅ. ಪೈ.
1ನೇ ಕ್ಲಾಸ್, ಅವ್ವಲ್	.. 1 10 0	3ನೇ ಕ್ಲಾಸ್	.. 1 2 0
ಡಿಟೋ	.. 1 8 0	4ನೇ ಕ್ಲಾಸ್	.. 1 0 0
2ನೇ ಕ್ಲಾಸ್	.. 1 6 0		

ಕ್ಯಾಂಪ್ ನಂ. 1060.—ಸರ್ 1886ನೇ ಇಸವಿ ಜೂನ್ 4ನೇ ಮುಕ್ಕಾಂ 89ನೇ ನಂಬರ್‌ವುಳ್ಳ ಇಸ್ತಿಹಾರ್‌ನಾಮೆಯನ್ನು ರದ್ದು ಪಡಿಸಿ, ಇದರಿಂದ ಪ್ರಕಟಿಸಲ್ಪಡುವದೇನಂದರೆ-ಫಾರೆಸ್ಟು ರೂಲ್ಸ್ 32ನೇ ಸೆಕ್ಷನಿನ 1ನೇ ಕಲಂ ಅನುಸರಿಸಿ, ಇನಾಂ ಜಮೀನುಗಳಲ್ಲಿರುವ ಯಾವ ಮರಗಳನ್ನಾಗಲಿ, ಚೌಬೀನೆಯನ್ನಾಗಲಿ, ನಾಟಾ ಯಾ ದೂಲ ವಗೈರೇಗಳನ್ನ ಅಂಥಾ ಇನಾಂಜಮೀನುಗಳು ಯಾವ ಡಿಸ್ಟ್ರಿಕ್ಟಿನಲ್ಲಿರುತವೋ ಆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಂದಾಗಲಿ, ಅಥವಾ ಆ ಬಗ್ಯೆ ಡೆಪ್ಯುಟಿ ಕಮ್ಮಿಷನರವರಿಂದ ಕ್ರಮಪ್ರಕಾರ ಮೊಕರರ್ ಮಾಡುವ ಇತರ ಆಫೀಸರಿಂದಾಗಲಿ ಕ್ರಮವಾಗಿ ಲೈಸೆನ್ಸ್ ಯಿಲ್ಲದೇ ಸದರೀ ಮರ ವಗೈರೇಗಳನ್ನ ಕಡಿಯಲೂ ಕೊಡದು ಯಾ ಸಾಗಿಸಲೂ ಕೊಡದು.

ತಾರೀಖು 9ನೇ ಸೆಪ್ಟಂಬರ್ 1887.

ನಂ. 112.—ಮೆ|| ಎನ್. ಚಲುವಯ್ಯಂಗಾರ್ರವರು ಜನರಲ್ ಅಸಿಸ್ಟೆಂಟ್ ಕಮ್ಮಿಷನರ ಕೋರ್ಟು ವ ಆಫೀಸಿನ ಚಾರ್ಜನ್ನ, 1887ನೇ ಇಸವಿ ಸೆಪ್ಟಂಬರ್ 7ನೇ ತಾರೀಖಿನ ಮಧ್ಯಾಹ್ನಾತ್ಪರ ಮೆ|| ಬಿ. ಕೃಷ್ಣಯ್ಯಂಗಾರ್ರವರಿಗೆ ವೊಪ್ಪಿಸಿರುತ್ತಾರೆ.

ತಾರೀಖು 30ನೇ ಆಗಸ್ಟು 1887.

ನಂ. 99.—ನಾಟಾ ವ ಚೌಬೀನೆಯನ್ನ ಮೈಸೂರು ಸೀಮೆಯಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸತಕ್ಕ ಬಗ್ಯೆ ಈ ಕೆಳಗೆ ಬರುವ ಪರಿಷ್ಕರಿಸಲ್ಪಟ್ಟ ರೂಲ್ಸ್‌ಯಾನೇ ನಿಬಂಧನೆಗಳು, ಶ್ರೀಮನ್ ಮಹಾರಾಜಾ ಸರಕಾರದವರ ಮಂಜೂರಾತಿಯನ್ನ ಹೊಂದಿ, ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಯೆ ಫಾಯಿಷ್ ಮಾಡಲ್ಪಟ್ಟಿರುತ್ತವೆ.

I. ನಡವಳಿತ.

1\. ಪ್ರತಿ ಹರಾಜೂ ಡಿಸ್ಟ್ರಿಕ್ಟು ಚಾರ್ಜುಉಳ್ಳ ಫಾರೆಸ್ಟು ಆಫೀಸರಿಂದಾಗಲಿ, ಡೆಪ್ಯುಟಿ ಕಮ್ಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಇತರ ಆಫೀಸರಿಂದಾಗಲಿ ನಡಿಸಲ್ಪಡತಕ್ಕದ್ದು.

2\. ಚಡ ದರಖಾಸ್ತುದಾರನು ಖರೀದಿದಾರನಾಗಿರತಕ್ಕದ್ದು. ಯಾವದಾದರೊಂದು ಲಾಟಿನ ವಿಷಯದಲ್ಲಿ ತಕರಾರು ವುಂಟಾಗುವ ಪಕ್ಷದಲ್ಲಿ ಡಿಟೋ ಲಾಟು ಮರಳಿ ಹರಾಜಿನಿಂದ ವಿಕ್ರಯಿಸಲ್ಪಡತಕ್ಕದ್ದು.

3\. ಪ್ರತಿ ಖರೀದಿದಾರನೂ ತಾನು ಲಾಟು ತೆಗದುಕೊಂಡ ಕೂಡ್ಲೇ ಯಿದಕ್ಕಾಗಿಯೇ ಯಿಟ್ಟು ಯಿರುವ ವೊಂದು ಬುಕ್ಕಿನಲ್ಲಿ, ಆ ಲಾಟಿನ ನಂಬರ ಮತ್ತು ಅದರ ತಪಸೀಲಿನ ಪಕ್ಕದಲ್ಲಿ ರುಜು ಮಾಡತಕ್ಕದ್ದು. ಹಾಗೆ ರುಜುಮಾಡೋಣವರಿಂದ ಲಾಟನ್ನ ಆ ಮನುಷ್ಯನು ಖರೀದಿಗೆ ತೆಗದುಕೊಂಡದ್ದು ಕಬೂಲ್ ಪಟ್ಟಂತೆಯೇ ತಿಳಿಯತಕ್ಕದ್ದು.

II. ಮೊಬಲಗ್ ಪಾವತಿಯ ಕ್ರಮ.

4\. ಹರಾಜು ಆದಕೂಡ್ಲೇ ಖರೀದಿದಾರನಿಂದ ಬರತಕ್ಕ ವೊಟ್ಟು ಮೊಬಲಗ ನಮೂನೆ ನಿಶೀ ವ್ರೇಂದು ಯಾದೀಯನ್ನೂ ಮತ್ತು ಡಿಪಾಜಿಟ್ ತರೀಕು ವೊಟ್ಟು ಮೊಬಲಗಿನ ಮೇಲೆ ಸೇಕಡಾ 25ಕ್ಕೆ ಕಡಿಮೆಯಿಲ್ಲದ ವೊಂದು ಮೊಬಲಗನ್ನ, ಹರಾಜ್ ತಾರೀಖು ಲಾಗಾಯತು ಸಂದರ್ಭಾನುಸಾರ 3ನೇ ಯಾ 5ನೇ ದಿನದೊಳಗಾಗಿಯೇ ತಾಲ್ಲೂಕು ಖಜಾನೆಯ ಫಾಸಲೇದಾರನ್ನೂ ಆಲೋಚನೆಯಲ್ಲಿ ತಂದು ಸಮೀಪದ

ಲ್ಲಿರುವ ಸರ್ಕಾರದ ಖಜಾನೇಯಲ್ಲಿ ಪಾವತೀ ಮಾಡಲಿಕ್ಕೆ ವೊಂದು ಲೆಟರ್ ಆಫ್ ಅಡ್ವೈಸ್‌ಯಾನೇ ಮೇಲ್ ಕಾಗದವನ್ನೂ ಖರೀದೀದಾರನಿಗೆ ಕೊಡಲ್ಪಡತಕ್ಕದ್ದು. ಡಿಪಾಜಿಟ್ ಮೊಬಲಗಿಗಾಗಿ ಟ್ರೆಜರೀ ಆಫೀಸರರು ರಶೀದೀ ಕೊಡತಕ್ಕದ್ದು. ಆ ರಶೀದೀಯನ್ನ ನಿಷ್ಕರ್ಷೆಯಾದ ಮೇರಿಗೆ ಹರಾಜು ತಾರೀಖು ಲಾಗಾಯತು ಐದನೇ ಯಾ ಯಂಟನೇ ದಿನ ಪೂರೈಸುವದರೊಳಗಾಗಿ, ಫಾರೆಸ್ಟು ಆಫೀಸರರ ಬಳಿ ಹಾಜರ್ಮಾಡ ತಕ್ಕದ್ದು. ಫಾರೆಸ್ಟು ಆಫೀಸರರು ಆ ರಶೀದಿಯ ಮೇಲೆ ಅದು ಹಾಜರ್ಮಾಡಲ್ಪಟ್ಟ ತಾರೀಖನ್ನ ಬರೆದು ಅದಕ್ಕೆ ತಮ್ಮ ಚಿಕ್ಕಸೈನ್ ಮಾಡತಕ್ಕದ್ದು. ಯಾವ ಖರೀದೀದಾರನಾಗಲಿ ಸದರೀ ಕಾನೂನಿಗನುಸರಿಸಿ ನಡಿಯಲು ತಪ್ಪಿದಲ್ಲಿ ಅಂಥಾ ತಪ್ಪಿತಸ್ಥನಿಂದ ಖರೀದೀ ಮಾಡ ಲ್ಪಟ್ಟಿದ್ದ ನಾಟಾ ವ ಚೌಬೀನೆಯನ್ನ ಸಂಪೂರ್ಣವಾಗಿ ಯಾಗಲಿ ಯಾ ಅದರ ಪೈಕೀ ವೊಂದು ಭಾಗವಾಗಲಿ, ಮರಳಿ ಹರಾಜ್ ಮಾಡಿ ಸಲಿಕ್ಕೆ ಫಾರೆಸ್ಟು ಆಫೀಸರರಿಗೆ ಯಖ್ತ್ಯಾರೀ ಯಿರತಕ್ಕದ್ದು. ಹಾಗೆ ಮರಳಿ ಹರಾಜು ಮಾಡೋಣದರ ದೆಸೇಯಿಂದ ವುಂಟಾಗುವ ನಷ್ಟ ವನ್ನ ಅವ್ವಲ್ ಖರೀದೀದಾರನೇ ಕಂಭರ್ತೀ ಮಾಡತಕ್ಕದ್ದು. ಪರಂತು ನಫೇ ಯೇನಾದರೂ ಬಂದಲ್ಲಿ ಅದಕ್ಕೆ ಅವನು ಅರ್ಹನಾಗುವದಿಲ್ಲವು. ಅಂಥಾ ತಪ್ಪಿತಸ್ಥನಿಂದ ಬರಬೇಕಾದ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

5. ಹರಾಜಿನಲ್ಲಿ ತೆಗದುಕೊಳ್ಳಲ್ಪಟ್ಟ ವೊಟ್ಟು ತೇದಾದಿನ ಮೊಬಲಗು ಹರಾಜು ತಾರೀಖು ಲಾಗಾಯತು 30 ದಿವಸಗಳೊಳಗಾಗಿ ಯೇ ಪಾವತೀ ಮಾಡಲ್ಪಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಯಿಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ದಾಖಲಾಗ ತಕ್ಕದ್ದು. ಸರಕಾರಕ್ಕೆ ಸಲ್ಲಿಸಬೇಕಾದ ಮೊಬಲಗುಗಳು ವುಡ್‌ಯಾರ್ಡು ಯಾವ ತಾಲ್ಲೂಕಿನಲ್ಲಿರುತ್ತದೆಯೋ ಆ ತಾಲ್ಲೂಕಿನ ಖಜಾನೇಯಲ್ಲಾಗಲಿ ಡಿಸ್ಟ್ರಿಕ್ಟು ಖಜಾನೇಯಲ್ಲಾಗಲಿ, ಪಾವತೀ ಮಾಡಲ್ಪಡಬೇಕೇ ಹೊರ್ತು, ಮತ್ಯಾವ ಸರಕಾರೀ ಖಜಾನೇಯಲ್ಲಿ ಪಾವತೀ ಮಾಡಲಿಕ್ಕೆ ಸ್ವಾತಂತ್ರ್ಯವುಳ್ಳ ವರ್ತಕಜನರ ವಿಷಯಗಳಲ್ಲಿ ವಿನಾ ಇತರ ಯಾವ ಖಜಾನೇಯಲ್ಲಿಯೂ ಪಾವತೀ ಯಾಗತಕ್ಕದ್ದಲ್ಲವು.

III. ನಾಟಾವನ್ನ ವಪ್ಪಿಸುವಣ.

6. ನಾಟಾ ಖರೀದೀ ಮೊಬಲಗನ್ನ ಖರೀದೀದಾರನು ಪೂರಾ ಪಾವತೀ ಮಾಡಿ, "ಸಾಗಿಸಲಿಕ್ಕೆ ಲೈಸೆನ್ಸ್" ಫಾರೆಸ್ಟು ಆಫೀಸರರಿಂದ ಪಡೆದ ಹೊರ್ತು ಯಾವ ನಾಟಾವನ್ನೂ ಸಾಗಿಸಕೂಡದು.

IV. ವುಡ್‌ಯಾರ್ಡಿನ ಬಾಡಿಗೆ.

7. ಹಿಂದಿನ ಸೆಕ್ಷನ್‌ಗಳ ನಿಬಂಧನೆಯನ್ನನುಸರಿಸಿ ಖರೀದೀ ಮೊಬಲಗು ಪಾವತಿಯಾದ ಬಾಬತು ನಾಟಾ ವ ಚೌಬೀನೆಯನ್ನ ಹರಾಜ್ ತಾರೀಖು ಲಾಗಾಯಿತು 30 ದಿವಸಗಳೊಳಗಾಗಿ ವುಡ್‌ಯಾರ್ಡ್ ಬಾಡಿಗೆ ಇಲ್ಲದೇ ಯಾವಾಗಲಾದರೂ ಸಾಗಿಸಲ್ಪಡಬಹುದು; ಅಥ ವಾ ಪ್ರತಿ ಸಂಗತಿಯ ಸಂದರ್ಭಾನುಸಾರ ಫಾರೆಸ್ಟು ಆಫೀಸರರಿಂದ ಮೊಕರರ್ಮಾಡಲ್ಪಡುವ(ಅಂದರೆ ಹರಾಜ್ ತಾರೀಖು ಲಾಗಾಯಿತು 90 ದಿನಗಳಿಗೆ ಅತಿಕ್ರಮಿಸದ) ಜಾಸ್ತೀ ವಾಯಿದೆಯೊಳಗೆ ಯಾವಾಗಲಾದರೂ ಉಡ್‌ಯಾರ್ಡು ಬಾಡಿಗೆ ಇಲ್ಲದೇನೇ ಸಾಗಿಸಲ್ಪಡಬಹುದು. ಆದರೆ ಹರಾಜ್ ತಾರೀಖು ಲಾಗಾಯತು ಸದರೀ ವಾಯಿದೆಗಿಂತಲೂ ಹೆಚ್ಚಾಗಿ ವುಡ್‌ಯಾರ್ಡಿನಲ್ಲಿ ನಿಲ್ಲುವ ಪಕ್ಷಕ್ಕೆ ಹರಾಜ್ ತಾರೀಖು ಲಾಗಾಯ ತು ತಿಂಗಳು 1ಕ್ಕೆ ದಿಮ್ಮಿ 1ಕ್ಕೆ ಅಥವಾ 20 ಬಂಬುಗಳಿಗೆ 8 ಆಣೇ ಮೇರಿಗೆ ವುಡ್‌ಯಾರ್ಡು ಬಾಡಿಗೆಯನ್ನ ವಸೂಲ್ಮಾಡತಕ್ಕದ್ದು. ಒಂದು ವೇಳೆ, ಅಂಥಾ ನಾಟಾ ಹಾಕಲ್ಪಟ್ಟಿದ್ದ ಸ್ಥಳವು ಬೇರೆ ಹೊಸ ನಾಟಾಗಳನ್ನಿಡುವದಕ್ಕೋಸ್ಕರ ಬೇಕಾಗುವ ಪಕ್ಷದಲ್ಲಿ ಖರೀದೀದಾರ ನಿಗೆ 10 ದಿನಗಳ ನೋಟೀಸ್ ಕೊಟ್ಟು ಆ ಬಳಿಕ ಆತನ ಖರ್ಚು ವ ಲುಕ್ಸಾನಿಗೆ ಗುರಿಮಾಡಿ ಖರೀದೀದಾರನ ನಾಟಾಗಳನ್ನ ವುಡ್‌ಯಾರ್ಡಿ ನ ಹೊರ ಭಾಗದಲ್ಲಿ ಜಮಾಯಿಸಲಿಕ್ಕೆ ಫಾರೆಸ್ಟು ಆಫೀಸರರಿಗೆ ಯಖ್ತ್ಯಾರೀ ವುಂಟಾಗಿರತಕ್ಕದ್ದು.

V. ಸಾಗಿಸಲಿಕ್ಕೆ ಲೈಸೆನ್ಸ.

8. ಡಿಸ್ಟ್ರಿಕ್ಟಿನ ಇನ್‌ಚಾರ್ಜು ಫಾರೆಸ್ಟು ಆಫೀಸರರ ರುಜಾನಿಶೀ "ನಾಟಾ ವ ಚೌಬೀನೆಯನ್ನ ಸಾಗಿಸಲಿಕ್ಕೆ ಲೈಸೆನ್ಸ್" ಪಡೆದ ಹೊ ರ್ತು, ಉಡ್‌ಯಾರ್ಡಿನಿಂದ ಯಾವ ನಾಟಾ ಆಗಲಿ ಸಾಗಿಸಲ್ಪಡಕೂಡದು; ಅಂಥಾ ಲೈಸೆನ್ಸ್‌ದಾರರೆಲ್ಲರೂ ಲೈಸೆನ್ಸ್‌ಗಳಲ್ಲಿ ನಮೂದಿಸಲ್ಪಟ್ಟ ಷರತ್ತು ಪ್ರಕಾರ ನಡದುಕೊಳ್ಳಲಿಕ್ಕೆ ಬದ್ಧರಾಗಿರತಕ್ಕದ್ದು. ಯಾವ ವ್ಯಾಪಾರಸ್ಥನಾಗಲಿ ಯಾ ಇತರ ಮನುಷ್ಯನಾಗಲಿ ತನ್ನ ಲೈಸೆನ್ಸಿನ ಷರತಬಂದಿಗೆ ಅತಿಕ್ರಮಿಸಿ ನಡಿಯುತ್ತಾನೋ ಅಥವಾ ಕೊಟ್ಟ ವಾಯಿದೇ ಪೂರೈಸಿದ ವಡನೇ ತನ್ನ ಲೈಸೆನ್ಸನ್ನ ವಾಪಸ್ ಮಾಡು ವದಿಲ್ಲವೋ ಅಂಥಾ ಮನುಷ್ಯನು ಮೈಸೂರ್ ಫಾರೆಸ್ಟು ರೂಲ್ಸುಗಳ 40ನೇ ಸೆಕ್ಷನಿನಲ್ಲಿ ವಿಧಿಸೋಣಾದ ಷರತ್ತುಗಳ ಪ್ರಕಾರ ಕ್ರಮ ನಡಿಸಲ್ಪಡಲಿಕ್ಕೆ ಗುರಿಯಾಗಿರತಕ್ಕದ್ದು.

VI. ವೊಟ್ಟು ವಿಷಯ.

9. ಫಾರೆಸ್ಟು ಆಫೀಸರರು, ಯಾವ ಕಾಲದಲ್ಲೇ ಆಗಲಿ ಖರೀದೀದಾರ್‌ರಿಗೆ ಕಾರಣ ತಿಳಿಸದೇನೇ ಹರಾಜನ್ನ ನಿಲ್ಲಿಸಲಿಕ್ಕೆ ಯಖ್ತ್ಯಾರೀ ವುಂಟಾಗಿರತಕ್ಕದ್ದು.

ತಾರೀಖು 5ನೇ ಸೆಪ್ಟಂಬರ್ 1887.

ನಂ. 105.—ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲೀ ತಾಲ್ಲೂಕು ಪೈಕೀ ಇದರಡಿ ನಮೂದಾಗುವ ಗ್ರಾಮಗಳು ಅದೇ ತಾಲ್ಲೂಕಿನಲ್ಲಿರುವ ಆಜೂಬಾಜೂ ಗ್ರಾಮಗಳಿಗೆ ಸೇರಿಸಲ್ಪಡತಕ್ಕದ್ದು.

ಹೋಬಳಿ.	ನಂಬರು.	ಕಾಯಂ ಇರತಕ್ಕ ಗ್ರಾಮಗಳ ಹೆಸರು.	ನಂಬರು.	3ನೇ ಮೇಸ್ತ್ರ ಕಿಸ್ಲಿನಲ್ಲಿ ನಮೂದಿಸಿರುವ ಗ್ರಾಮಗಳಿಗೆ ಸೇರಿಸಲ್ಪಡತಕ್ಕ ಗ್ರಾಮಗಳ ಹೆಸರು.	ಷರಾ.
1	2	3	4	5	6
ಚೇಳೂರು.	1	ಚೇಳೂರು ..	1	ಚಿಗರಮಾಕಲಪಲ್ಲಿ ..	ಬೇಚಿರಾಖ್.
			2	ರಾಗೀಮಾಕಲಪಲ್ಲಿ ..	ಡಿಟೋ
	2	ನಿಮ್ಮಕಾಯಲಪಲ್ಲಿ ..	1	ನಲ್ಲಪೈಂಗರಪಲ್ಲಿ ..	
				ಕುರುಬಪಲ್ಲಿ ..	ಡಿಟೋ
	3	ಷೇರಖಾ ಕೋಟೆ ..	1	ಪೋತೂರು ..	
			2	ಚೇಳೂರ ಪೈಕೀ ವಡದ ಭಾಗ ..	
	4	ಹೊಸಹುಡ್ಯ ..	1	ನುಲ್ಲಗುಂಡ್ಲಪಲ್ಲಿ ..	ಡಿಟೋ
			2	ಕೋಪ್ಪಲಪಲ್ಲಿ ..	ಡಿಟೋ
				ಚೇಳೂರ ಪೈಕೀ ವಡದ ಭಾಗ ..	
	5	ಪೆಮ್ಮಯ್ಯಗಾರಪಲ್ಲಿ ..	1	ಜಾಮುವಾರಪಲ್ಲಿ ..	ಡಿಟೋ
			2	ಚೇರಲಪಲ್ಲಿ ..	ಡಿಟೋ
	6	ಪಾಳ್ಯಕೆರೆ ..	1	ಚಿನ್ನಮಂಡೇಪಲ್ಲಿ ..	ಡಿಟೋ
	7	ವೋಚನಪಲ್ಲಿ ..	1	ಅಬರವಾರಪಲ್ಲಿ ..	
	8	ಪೆದ್ದರಾಜಪಲ್ಲಿ ..	1	ಚಿಟಗನಪುರ ..	
	9	ರಾಮಜೆಪಲ್ಲಿ ..	1	ಯಗವಮಲ್ಲಪಾಂಡ್ಲಪಲ್ಲಿ ..	
				ಕಾಯಲಪಲ್ಲಿ ಪೈಕೀ ವಡದ ಭಾಗ ..	
	10	ದೈಯಲಪಲ್ಲಿ ..	1	ಜೆಂಕಪಲ್ಲಿ ..	
			2	ಕೊತ್ತೂರಪಲ್ಲಿ ..	
			3	ಬೊಮ್ಮನಪಲ್ಲಿ ..	ಡಿಟೋ
			4	ಪಚ್ಚಿಪಾಲಪರತಿ ..	ಡಿಟೋ
	11	ಮಂಡೇಪಲ್ಲಿ ..	1	ಪಿಲ್ಲಿಗುಟ್ಟ ..	
	12	ದೊಡ್ಡಿಪಲ್ಲಿ ..	1	ಯಾಕಿಲಿಪಲ್ಲಿ ..	ಡಿಟೋ
	13	ಕೊಂಡಿಕೊಂಡೆ ..	1	ಬಲಕವಾರಪಲ್ಲಿ ...	ಡಿಟೋ
	14	ನಲಗುಟ್ಟಪಲ್ಲಿ ..	1	ಗುಂಟ್ರಪಲ್ಲಿ ..	
			2	ನಾಗಿರೆಡ್ಡಿಪಲ್ಲಿ ..	ಡಿಟೋ
	15	ವೆಂಕಟಾಪುರ ..	1	ಮಂಗಲಪಲ್ಲಿ ..	ಡಿಟೋ
			2	ಪುಲಗೋರಪಲ್ಲಿ ..	ಡಿಟೋ
			3	ದೈಯಾಲಪಲ್ಲಿ ..	
			4	ಜೆಂಕಪಲ್ಲಿ ..	
	16	ಪುಲಗಲ್ಲು ..	1	ಪುಲಗತ್ತಿಪಲ್ಲಿ ..	
			2	ಚಿಕ್ಕವೇಲಂಪಲ್ಲಿ ..	ಡಿಟೋ
			3	ಪ್ಯಾಯುಲವಾರಪಲ್ಲಿ ..	ಡಿಟೋ
			4	ಬಂದರಲಪಲ್ಲಿ ..	ಡಿಟೋ

ಹೋಬಳಿ.	ನಂಬರ್.	ಕಾಯಂ ಯಿರತಕ್ಕ ಗ್ರಾಮಗಳ ಹೆಸರು.	ನಂಬರ್.	3ನೇ ಮೇಸ್ತಕಿನಲ್ಲಿ ನಮೂದಿಶಿರುವ ಗ್ರಾಮಗಳಿಗೆ ಶೇರಿಸಲ್ಪಡತಕ್ಕ ಗ್ರಾಮಗಳ ಹೆಸರು.	ಷರಾ.
1	2	3	4	5	6
ಚೇಳೂರು.	17	ಗಲಶನಂಪಲ್ಲಿ ..	1	ತಂಡ್ರಮಾಕಲಪಲ್ಲಿ ..	ಬೇಚಿರಾಖ್.
	18	ಯುಡವಂಡ್ಲಪಲ್ಲಿ ..	1	ಪಂದಿವಾಂಡ್ಲಪಲ್ಲಿ ..	ಡಿಟೋ
			2	ಕೊಕ್ಕಲವಾರಪಲ್ಲಿ ..	ಡಿಟೋ
ಬೀಳೂರು.	19	ಮುಕ್ಕರವಾರಪಲ್ಲಿ ..	1	ಯಟಿವಾರಪಲ್ಲಿ ..	ಡಿಟೋ
	20	ನಾರಾಯಣರಡ್ಡಿಪಲ್ಲಿ ..	1	ಉಗ್ರರನಪಲ್ಲಿಯ ಪಡದ ಭಾಗ ..	
	21	ಗುಟ್ಟಪಾಳ್ಯ ..	1	ಮುಲ್ಲಂಗಿಚಟ್ಲಪಲ್ಲಿ ..	
			2	ರಾತ್ರಿವಾರಪಲ್ಲಿ ..	
	22	ಬೋಯಿನವಾರಪಲ್ಲಿ ..	1	ನಾಗಶೆಟ್ಟಗಾರಪಲ್ಲಿ ..	ಡಿಟೋ
	23	ತಾತನ್ನಗಾರಪಲ್ಲಿ ..	1	ಯರ್ರಮಲ್ಲೈಗಾರಪಲ್ಲಿ ..	ಡಿಟೋ
	24	ಮದ್ದೇಪಲ್ಲಿ ..	1	ಮಾಕಮವಾರಪಲ್ಲಿ ..	ಡಿಟೋ
	25	ಗರತಿಪಲ್ಲಿ ..	1	ಚರಲಪಲ್ಲಿ ..	ಡಿಟೋ
			2	ಶೈಪಲ್ಲಿ ..	
			3	ದೊಡ್ಡಿವಾರಿಪಲ್ಲಿ ..	ಡಿಟೋ
			4	ರಾಮಪುರ ..	ಡಿಟೋ
	26	ಸದ್ದುಪಲ್ಲಿ ..	1	ದನಕೊಂಡ ..	
			2	ಪತ್ರವಾರಪಲ್ಲಿ ..	
			3	ನಕ್ಕಪಾರಪಲ್ಲಿ ..	
	27	ನಲಗುಟ್ಟಪಲ್ಲಿ ..	1	ದಾರನಲ್ಲಪಲ್ಲಿ ..	ಡಿಟೋ
	28	ಕದರನಕೋಟೆ ..	1	ಗಡ್ಡಂಪಲ್ಲಿ ..	
	29	ರಾಮನುಪಾಡಿ ..	1	ನಡಿಂಪಲ್ಲಿ ..	ಡಿಟೋ
	30	ನಾರಾಯಣಂಪಲ್ಲಿ ..	1	ನಾಗನಾತಂಪಲ್ಲಿ ..	ಡಿ ಟೋ
	31	ತಿಕ್ಕಪಲ್ಲಿ ..	1	ಕೊನಕೊಂಡಯ್ಯಗಾರಪಲ್ಲಿ ..	ಡಿಟೋ
			2	ಮ್ಯಾಕವಾರಪಲ್ಲಿ ..	ಡಿಟೋ
	32	ತಿಮ್ಮಯ್ಯಗಾರಪಲ್ಲಿ ..	1	ಮರವಪಲ್ಲಿ ..	
				ರಾಸ್ಚಕರುವಿನ ವಡದ ಭಾಗ ..	
	33	ಕೊಂಡೂರಪಲ್ಲಿ ..	1	ಸೋಮಕಪಲ್ಲಿ ..	
ಮಿಟ್ಟೆಮರಿ.	34	ಮಿಟ್ಟಮರಿ	1	ಗೊಲ್ಲಪಲ್ಲಿ ..	ಡಿಟೋ
			2	ಚನ್ನಪೈನದಿಣ್ಣೆ ..	ಡಿಟೋ
			3	ಚಂಗಲದಿನ್ನೆ ..	
			4	ಕುರಬದಿನ್ನೆ ..	ಡಿಟೋ
			5	ಜಕ್ಕಲವಾರಪಲ್ಲಿ ..	ಡಿಟೋ
	35	ಮುತ್ತಿನಪಲ್ಲಿ ..	1	ಬೂದಕಾಯಲಕೋಟೆ ..	
	36	ಚೊಕ್ಕಂಪಲ್ಲಿ ..	1	ವಕ್ರಪಲ್ಲಿ ..	
			2	ಚಿಂತಮಾಕಲದಿನ್ನೆ ..	ಡಿಟೋ
			3	ಜರಗುದಿನ್ನೆ ..	ಡಿಟೋ

ಹೋಬಳಿ.	ನಂಬರು.	ಕಾಯಂ ಯಿರತಕ್ಕ ಗ್ರಾಮುಗಳ ಹೆಸರು.	ನಂಬರು.	3ನೇ ಮೇಸ್ತ್ರಕಿನಲ್ಲಿ ನಮೂದಿಸಿರುವ ಗ್ರಾಮುಗಳಿಗೆ ಶೇರಿಸಲ್ಪಡತಕ್ಕ ಗ್ರಾಮುಗಳ ಹೆಸರು.	ಷರಾ.
1	2	3	4	5	6
	37	ಪಾಪಿನಾಯುಕನಪಲ್ಲಿ ..	1	ವೈಲಪಲ್ಲಿ ..	
	38	ಜೆನ್ನಂಪಲ್ಲಿ ..	1	ರಾಲಗುಟ್ಟಪಲ್ಲಿ ..	
	39	ಪೈಪಾಳ್ಯ ..	1	ಮರವಪಲ್ಲಿ ..	ಬೇಚಿರಾಖ್.
			2	ನಾಗನಗುಟ್ಟಪಲ್ಲಿ ..	ಡಿಟೋ
			3	ತಂಗಲಪಲ್ಲಿ ..	
			4	ಕಾಟಂದೇವರಗುಟ್ಟ ..	
			5	ಚಿಗರವಾಕಲಪಲ್ಲಿ ..	ಡಿಟೋ
	40	ವಡಿಗೆರೆ ..	1	ಉತ್ತಪಲ್ಲಿ ..	ಡಿಟೋ
			2	ಯರಕದರೆಪಲ್ಲಿ ..	ಡಿಟೋ
ಪಾತ್ಪಾಳ್ಯ.	41	ಸಡಿಂಪಲ್ಲಿ ..	1	ದೇವಗಾನಪಲ್ಲಿ ..	ಡಿಟೋ
	42	ಪಾಚರ್ಲ ಪಲ್ಲಿ ..	1	ಶೇಷಾದ್ರಿಪಲ್ಲಿ ..	ಡಿಟೋ
	43	ಪೋಲನಾಯ್ಕನಪಲ್ಲಿ ..	1	ನಲ್ಲರಾತಿಪಲ್ಲಿ ..	
			2	ವೋಟಕಪಲ್ಲಿ ..	
			3	ಆಗತಮಡಿಕೆ ..	ಡಿಟೋ
	44	ದುಗಿ ನಾಯ್ಕನಪಲ್ಲಿ ..	1	ಯುನ್ನಿವಾಂಡ್ಲ ಪಲ್ಲಿ ..	ಡಿಟೋ
	45	ಗುಮ್ಮಲಪಲ್ಲಿ ..	1	ಭೇರಿವಂಡ್ಲ ಪಲ್ಲಿ ..	ಡಿಟೋ
			2	ಯರ್ರಗುಂಡ್ಲ ಪಲ್ಲಿ ..	ಡಿಟೋ
	46	ಕನಗವಾಕಲಪಲ್ಲಿ ..	1	ಪಿಲಿಗುಟ್ಟೆ ..	
	47	ಸೋಲಿವಾಕಲಪಲ್ಲಿ ..	1	ಛಪ್ರಂಪಲ್ಲಿ ..	
	48	ಮಾಕರಡ್ಡಿಪಲ್ಲಿ ..	1	ಮುದ್ದಲಪಲ್ಲಿ ..	
	49	ಬಾಲರಡ್ಡಿಪಲ್ಲಿ ..	1	ರಾಗಿವಾಕಲಪಲ್ಲಿ ..	
			2	ಕನ್ನಂಪಲ್ಲಿ ..	
	50	ಬಾಗೇಪಲ್ಲಿ ..	1	ಜೆಲಕರಪಲ್ಲಿ ..	
			2	ಕೊಂಡರಾಜಪಲ್ಲಿ ..	ಡಿಟೋ
	51	ಹೊಸಕುದ್ಯ ..	1	ತಂಗೇಪಲ್ಲಿ ..	
	52	ಪಾತಬಾಗೇಪಲ್ಲಿ ..	1	ಮರಿವಾಕಲಪಲ್ಲಿ ..	ಡಿಟೋ
	53	ಮಲಸಂದ್ರ ..	1	ಸೆಟ್ಟಿವಾರದಿನ್ನೆ ..	ಡಿಟೋ
			2	ಉಗ್ಗಲನಾಗಯ್ಯಂಗಾರಪಲ್ಲಿ ..	
ಬಾಗೇಪಲ್ಲಿ.	54	ಕದರನ್ನಗಾರಪಲ್ಲಿ ..	1	ಗೊಲ್ಲಪಲ್ಲಿ ..	ಡಿಟೋ
	55	ಸಾದಲವಾರಪಲ್ಲಿ ..	1	ಜೋಡಂವಾರಪಲ್ಲಿ ..	ಡಿಟೋ
	56	ಲಾಗುಮದ್ದೇಪಲ್ಲಿ ..	1	ಮರಿವಾಕಲಪಲ್ಲಿ ..	
	57	ಕವರಕೂರು ..	1	ಶಂಕನಾರಂಪಲ್ಲಿ ..	ಡಿಟೋ
			2	ಬಿದರ್ಲಪಲ್ಲಿ ..	ಡಿಟೋ
	58	ಪರಗೋಡು ..	1	ವಡುಪಾಲದಿನ್ನೆ ..	ಡಿಟೋ
			2	ಕದರನಾಯಕನಪಲ್ಲಿ ..	ಡಿಟೋ

719

ಹೋಬಳಿ.	ನಂಬರ.	ಕಾಯಂ ಯಿರತಕ್ಕ ಗ್ರಾಮಗಳ ಹೆಸರು.	ನಂಬರ.	3ನೇ ಕಾಲಮ್ ನಲ್ಲಿ ನಮೂದಿರುವ ಗ್ರಾಮಗಳಿಗೆ ಸೇರಿಸಲ್ಪಡತಕ್ಕ ಗ್ರಾಮಗಳ ಹೆಸರು.	ಷರಾ.
1	2	3	4	5	6
ಗುಳ್ಳೂ.	59	ಗುಳ್ಳೂರು ..	1	ಗೋಣಪಾತಲದೊಡ್ಡಿ ..	
			2	ತಾವಲೆವಾರದಿನ್ನೆ ..	
	60	ಚಂಚರಯ್ಯನಪಲ್ಲಿ ..	1	ಬ್ರಾಹ್ಮಣಪಲ್ಲಿ ..	
			2	ಗುಂಡ್ಲ ಪಲ್ಲಿ ..	
	61	ನರಸಾಪುರ ..	1	ಮನವಾರದಿನ್ನೆ ..	
	62	ಚಿನ್ನ ಕಾಯಲಪಲ್ಲಿ ..	1	ಐಯ್ಯವಾರಪಲ್ಲಿ ..	
	63	ಕನ್ನಂಪಲ್ಲಿ ..	1	ದೊರನಾಲಪಲ್ಲಿ ..	
	64	ನಲ್ಲಪ್ಪರಡ್ಡಿ ಪಲ್ಲಿ ..	1	ಯರ್ರನಾಗಿರಡ್ಡಿ ದಿನ್ನೆ ..	
	65	ಪಿಚ್ಚಲವಾರಪಲ್ಲಿ ..	1	ಗಾಜಲಪಲ್ಲಿ ..	
	66	ಪೋತಮಾಕಲಪಲ್ಲಿ ..	1	ಜೋಗಿರಡ್ಡಿ ಪಲ್ಲಿ ..	
			2	ಗುಂಡ್ಲವಾರಪಲ್ಲಿ ..	
	67	ದೇವಿಕುಂಟೆ ..	1	ವಕ್ರಜಟ್ಟಿಕುಂಟೆ ..	(ಬೇಚಿರಾಖ್.
	68	ಹೊನ್ನಂಪಲ್ಲಿ ..	1	ಮಾದಪ್ಪಗಾರಪಲ್ಲಿ ..	
	69	ಬೆಸಲಪತ್ರಿ ..	1	ದೇವಲವಾರದಿನ್ನೆ ..	ಡಿಟ್ಟೋ
	70	ರಾಮನಾಥಪಲ್ಲಿ ..	1	ರಾಗಿಮಾಕಲಪಲ್ಲಿ ..	ಡಿಟ್ಟೋ
			2	ಕುರುಬರಪಲ್ಲಿ ..	ಡಿಟ್ಟೋ
	71	ಕಾಟಕೋಟೆ ..	1	ಕೃಷ್ಣಾಪುರ	
			2	ಚಿದ್ದರಡ್ಡಿ ಪಲ್ಲಿ ..	ಡಿಟ್ಟೋ
ಮಿಟ್ಟೆ.	72	ನಾರೆಮದ್ದೆಪಲ್ಲಿ ..	1	ಕಾಂತಂಪಲ್ಲಿ	ಡಿಟ್ಟೋ
	73	ವಸಂತಪುರ ..	1	ಕಸಬಾ ಪಾಳ್ಯ ..	
			2	ಊರಸುತ್ತ ಹೋಬಳಿ ..	
	74	ದೇವಲವಾರಪಲ್ಲಿ ..	1	ಸೋಮನಾಥಪುರದ ದಾಖಲೇಗ್ರಾಮ ..	
	75	ಪೋತಪಾಳ್ಯ ..	1	ಯಿಟ್ಟನಮಾಕಲಪಲ್ಲಿ ..	
			2	ಚಿಂತಲಕುಂಟೆ ..	ಡಿಟ್ಟೋ
			3	ಬೂಕನಪಲ್ಲಿ ..	
	76	ವಲ್ಲಚರುವು ..	1	ಭೈರೇಪಲ್ಲಿ ..	
			2	ಯಲಗಲಪಲ್ಲಿ ..	
				ಪೋತಪಾಳ್ಯದ ವಡದ ಭಾಗ ..	
	77	ಗುಜ್ಜೇಪಲ್ಲಿ	1	ರಾವುಲಾಂಬಾಪುರ ..	ಡಿಟ್ಟೋ
	78	ಪಾತಕೋಟೆ ..	1	ಕಾಟ್ಟೆಗಾರಪಲ್ಲಿ ..	
			2	ಕುಂದನಂಪಲ್ಲಿ ..	
			3	ಗುಟ್ಟುಘಾವಪಲ್ಲಿ ..	
			4	ಹಿರಣ್ಯದೇವಾಲ ..	
	79	ರಾಚೇವಾರಪಲ್ಲಿ ..	1	ಮುದ್ದೇಪಲ್ಲಿ ..	ಡಿಟ್ಟೋ
			2	ನೆಟ್ಟವಾರಪಲ್ಲಿ ..	ಡಿಟ್ಟೋ
	80	ನೀರಗಂಟಿಪಲ್ಲಿ ..	1	ಕನಮಕುಂಟಪಲ್ಲಿ ..	
	81	ಗೂರಲದಿನ್ನೆ ..	1	ಚಲವಾರಪಲ್ಲಿ ..	
	82	ಕಮಸನಪಲ್ಲಿ ..	1	ಸಿರಗಂಡ್ಲ ಪಲ್ಲಿ ..	
				ಪಾತಪಾಳ್ಯದ ವಡದ ಭಾಗ ..	
				ಗುಜ್ಜೇಪಲ್ಲಿ, ಕಂಸನಪಲ್ಲಿಯ ವಡದ ಭಾಗ ..	
	83	ದೇವರಾಜಪಲ್ಲಿ ..	1	ಪೆದ್ದೂರದಿನ್ನೆ	

ತಾರೀಖು 7ನೇ ಸೆಪ್ಟೆಂಬರ್ 1887.

ನಂ. 106.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿಯ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮಗಳು ಇದರಡಿಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಜಡ ದಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಸೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ಜೆಬೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮಖೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜು ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಖಂ. ಕೊ.	ರೂ. ಅ. ಪೈ.	ರೂ. ಅ. ಪೈ.	ರೂ. ಅ ಪೈ.	
ಬೆಂಗಳೂರು	ಆನೇಕಲ್	ಸರ್ಜಾಪುರ	ಕೋಟಿಗಾನಹಳ್ಳಿ	ನಂಜುಂಡಭಟ್ಟ ವ ಇತರ 2 ಜನರು	16 14 0	150 0 0	116 14 0	178 11 11	ಸ್ನ 1887ನೇ ಇಸವಿ ಅಕ್ಟೋಬರ್ ತಾರೀಖು 15ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ತಾರೀಖು 2ನೇ ಸೆಪ್ಟೆಂಬರ್ 1887.

ಸಕಲ ಜನಗಳಿಗೂ ತಿಳಿಯುವ ಬಗ್ಗೆ. ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಚಡಪರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಿಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮಿನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ಬೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು, ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
						ರೂ. ಅ. ಪೈ.			
ಮೈಸೂರು.	ಚಾಮರಾಜನಗರ.	ಉಮ್ಮತ್ತೂರು	ಮೂಡ್ಲು ಅಗ್ರಹಾರ	ಗೋಪಾಲಕೃಷ್ಣಭಟ್ಟ ವ ಇತರ 18 ಜನರು	..	403 7 0	357 5 6	134 1 10	1887ನೇ ಇಸವಿ ಅಕ್ಟೋಬರ್ ತಾರೀಖು 12ರಲ್ಲು. ತಾಲ್ಲೂಕು ಕಚ್ಚೇರಿಯಲ್ಲಿ ಅಮಲ್‌ದಾರ್‍ರ ರೂಬರೂ.

ತಾರೀಖು 14ನೇ ಸೆಪ್ಟಂಬರ್ 1887.

ನಂ. 114.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸವಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮಗಳು ಇದರಡೀಕಂಡ ತಖ್ತೇಯಲ್ಲಿ ನಮೂದಿಸಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಜಾಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಿಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜಾ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮನ್ಸೂಖ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಯಾ ಬೇರೀಜು.	ಸಾಲೀಯಾನಾ ಸರ್ಕಾರಕ್ಕೆ ಕೊಡಬೇಕಾದಕ್ವಿಟ್ ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕಡೂರು.	ಚಿಕ್ಕಮಗಳೂರು.	ಲಕ್ಯ.	ಹಂಪಾಪುರ.	ಹೆಬ್ಬಾರ ರಾಮಯ್ಯ ವಗೈರೇರು	307 35 0	599 15 7	195 8 0	51 6 3	1887ನೇ ಇಸವಿ ಅಕ್ಟೋಬರ ತಾರೀಖು 25ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರ ರೂಬರೂ.

ನಂ. 117.—ಈ ಕ್ಕೆಳಗೆ ಬರುವ ನಿಬಂಧನೆಗಳು ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಮೈಸೂರ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ಕೆಲಸ ನಡಿಸತಕ್ಕ ಬಗ್ಯೆ ನಿಬಂಧನೆಗಳು.

I. ಸಾಮಾನ್ಯವಾಗಿ ಎಲ್ಲಾ ಪ್ರಜೆಗಳಿಗೂ ಮುಖ್ಯವಾಗಿರುವ ಸಂಗತಿಗಳಲ್ಲಿ ಯಾವಧಾದರೂ ವಿದ್ಯಮಾನಗಳು ಯಾವ ಮೆಂಬರಿಗಾದರೂ ತಿಳಿಯಬೇಕಾದಲ್ಲಿ ಡೆಪ್ಯುಟಿ ಕಮ್ಮಿಷನರವರಿಗಾಗಲಿ ಅಥವಾ ಸರಕಾರದ ಯಾವದಾದರೂ ಸೆಕ್ರಿಟೇರಿಯವರಿಗಾಗಲಿ ಬರದುಕೊಂಡು ತಿಳಿದುಕೊಳ್ಳಬಹುದು.

II. ಸಭೆ ಶೇರುವ ಕಾಲದಲ್ಲಿ ಯಾವ್ಯಾವ ಸಂಗತಿಗಳಲ್ಲಿ ಸವಾಲ್ ಮಾಡಬೇಕೋ ಆ ಸಂಗತಿಗಳ ವಿಷಯದಲ್ಲಿ ಆಯಾಯ ಡಿಸ್ಟ್ರಿಕ್ಟು ಮೆಂಬರುಗಳು ಪರಸ್ಪರ ಕಾಗದ ಪತ್ರಗಳನ್ನು ನಡಿಸಿ—ಮೈಸೂರಿಗೆ ಎಲ್ಲಾ ಮೆಂಬರುಗಳೂ ಬಂದನಂತರ—ಎಲ್ಲರೂ ಸಭೆಶೇರಿ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚಿಸಬೇಕಾದ ಪ್ರಮೇಯಗಳನ್ನು ನಿಷ್ಕರ್ಷೆಮಾಡಿಕೊಂಡು ಯಾವ್ಯಾವ ಪ್ರಮೇಯಗಳನ್ನು ಕುರಿತು ಯಾರ್ಯಾರು ವಾದಿಸಬೇಕೋ ಅದನ್ನು ತೀರ್ಮಾನ ಮಾಡತಕ್ಕದ್ದು.

III. ಈ ಪ್ರಕಾರ ತೀರ್ಮಾನವಾದ ಸಂಗತಿಗಳನ್ನೂ ಅವುಗಳನ್ನು ಕುರಿತು ಯಾರು ಮಾತನಾಡುವರೋ ಅವರ ಹೆಸರುಗಳನ್ನೂ ನಮೂದಿಸಿ ವಂದು ಪಟ್ಟಿಯನ್ನು—ಪ್ರಜಾ ಪ್ರತಿನಿಧಿ ಸಭೆಯು ಮೊದಲ್ ಶೇರುವ ತಾರೀಖಿಗೆ ಕೊನೇಪಕ್ಷ 3 ದಿವಸಗಳು ಮುಂಚಿತವಾಗಿ ಚೀಫ್ ಸೆಕ್ರಿಟೇರಿಯವರಿಗೆ ಕಳುಹಿಸತಕ್ಕದ್ದು.

IV. ನಂತರ ಸದರೀ ಪಟ್ಟಿಯಲ್ಲಿ ನಮೂದಿರತಕ್ಕ ಸಂಗತಿಗಳು ಯಾವ ಕ್ರಮ ಪ್ರಕಾರ ಚರ್ಚಿಸಲ್ಪಡುವವೋ ಅದನ್ನು ದಿವಾನರವರು ತೀರ್ಮಾನಿಸಿ ಪ್ರಸಿದ್ಧ ಪಡಿಸುತ್ತೆ.

X. ಆಯಾಯ ದಿವಸದ ಸಭೆಯ ನಡವಡಿಕೆಗಳನ್ನು ಮಾರಣೇದಿವಸವೇ ಕನ್ನಡದಲ್ಲಿ ಛಾಯಿಷ್ ಮಾಡಲು ಪ್ರಯತ್ನ ಮಾಡಲ್ಪಡುತ್ತೆ.

ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸತಕ್ಕ ಬಗ್ಯೆ ನಿಬಂಧನೆಗಳು.

I. ಪ್ರತಿ ತಾಲ್ಲೂಕಿನಿಂದ ಜಮೀನ್ದಾರ್‍ರುಗಳ ಪ್ರತಿನಿಧಿಗಳಾಗಿ VIIIನೇ ರೂಲಿಗೆ ವಳಪಟ್ಟು ಸಾಮಾನ್ಯವಾಗಿ ತಾಲ್ಲೂಕು ವಂಧಕ್ಕೆ ಐದು ಮೆಂಬರುಗಳಿಗಿಂತಾ ಜಾಸ್ತೀಯಾಗಿ ಚುನಾಯಿಸಲ್ಪಡಕೂಡದು, ಸಾಲೀಯಾನಾ ಸರಕಾರಕ್ಕೆ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಡುವ ಮೊಬಲಗಿಗೆ ಕಮ್ಮೀ ಯಿಲ್ಲದೆ ಜಮೀನ್ ಬಾಬಿನಲ್ಲಿ ಕಂದಾಯ ಕೊಡತಕ್ಕ ಜಮೀನ್ದಾರ್‍ರುಗಳ ಪೈಕೀ ಮೆಂಬರುಗಳನ್ನು ಚುನಾಯಿಸತಕ್ಕದ್ದು. ಆಯಾಯ ತಾಲ್ಲೂಕಿನ ವ್ಯವಸಾಯ ಸ್ಥಿತಿಗೆ ತಕ್ಕ ಹಾಗೆ ಮೇಲ್ಕಂಡ ಮೊಬಲಗನ್ನು ಡೆಪ್ಯುಟಿ ಕಮ್ಮಿಷನರವರು ಗೊತ್ತು ಮಾಡತಕ್ಕದ್ದು.

II. ಡಿಸ್ಟ್ರಿಕ್ಟಿನಲ್ಲಿ ಇರುವ ಇನಾಂ ಗ್ರಾಮಗಳ ಮುತಾಲೀಕರ ತರ್ಫೆ ಕೆಲವು ಮೆಂಬರುಗಳು ಚುನಾಯಿಸಲ್ಪಡಬೇಕು.

III. ಡಿಸ್ಟ್ರಿಕ್ಟಿನ ವ್ಯಾಪಾರದ ಕ್ಷೇಮ ಚಿಂತಕರಾದ ವರ್ತಕರು ಮುತ್ತು ವ್ಯಾಪಾರಸ್ಥರ ಪೈಕೀ ಕೆಲವು ಮೆಂಬರುಗಳು ಚುನಾಯಿಸಲ್ಪಡಬೇಕು.

IV. ಆಯಾಯ ಡಿಸ್ಟ್ರಿಕ್ಟಿನ ಲೋಕಲ್ ಫಂಡು ಬೋರ್ಡಿನವರು ಸಾಧಾರಣವಾಗಿ ಡಿಸ್ಟ್ರಿಕ್ಟಿನ ಯಲ್ಲಾ ಪ್ರಜೆಗಳಿಗೂ ಪ್ರತಿನಿಧಿಗಳಾಗಿ ತಮ್ಮ ಮೆಂಬರುಗಳ ಪೈಕೀ ಇಬ್ಬರನ್ನು ಸಭೆಗೆ ಕಳುಹಿಸಬಹುದು.

V. ಪ್ರತಿ ಮ್ಯುನಿಸಿಪಾಲಿಟಿಯವರೂ ವಬ್ಬ ಮೆಂಬರನ್ನು ಸಭೆಗೆ ಕಳುಸಬಹುದು. ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಜಾಗಾದಲ್ಲಿರುವ ಮ್ಯುನಿಸಿಪಾಲಿಟಿಯವರೂ ಯಿಬ್ಬರು ಮೆಂಬರುಗಳನ್ನು ಸಭೆಗೆ ಕಳುಹಿಸಬಹುದು.

VI. 100 ಮಂದಿಗೆ ಜಾಸ್ತೀಯಾಗಿ ಮೆಂಬರುಗಳುಳ್ಳ ಸರ್ವಜನ ಕ್ಷೇಮ ಚಿಂತಕರಾದ ಸಂಘದವರುಗಳು ಮುತ್ತು ಯೂರೋಪಿಯನ್ ಪ್ಲಾಂಟರ್ ಸಂಘದವರೂ ತಮಿಗೆ ಪ್ರತಿನಿಧಿಯಾಗಿ ವಬ್ಬ ಮೆಂಬರನ್ನು ಸಭೆಗೆ ಕಳುಹಿಸಬಹುದು.

VII. ಮೇಲ್ಕಂಡ ರೂಲ್ಸ್‌ಗಳ ಪೈಕೀ ಯಾವದಾದರೂ ಒಂದರ ಪ್ರಕಾರ ಚುನಾಯಿಸಲ್ಪಟ್ಟ ಮೆಂಬರು ಇತರ ರೂಲ್ಸ್‌ಗಳಲ್ಲಿ ಕಂಡಿರುವ ಬಾಬಿನಲ್ಲಿಯೂ ಪ್ರತಿನಿಧಿಯಾಗಿ ಯಿದ್ದಲ್ಲಿ ಪ್ರತಿ ಒಂದು ರೂಲ್ಸ್ ಪ್ರಕಾರವೂ ಪ್ರತ್ಯೇಕ ಪ್ರತ್ಯೇಕ ಮೆಂಬರುಗಳನ್ನು ಚುನಾಯಿಸುವದು ಅವಶ್ಯಕವಿಲ್ಲ.

VIII. ಮೇಲ್ಕಂಡ ಯಲ್ಲಾ ತರಹೇದ ಮೆಂಬರುಗಳ ಒಟ್ಟು ಸಂಖೆಯು ಆಯಾಯ ಡಿಸ್ಟ್ರಿಕ್ಟಿಗೆ ಕೆಳಗೆ ಬರೆಯಲ್ಪಟ್ಟಿರುವ ಸಂಖೆಗಿಂತ ಸಧ್ಯಕ್ಕೆ ಜಾಸ್ತೀ ಯಿರಕೂಡದು.

ಕಡೂರು, ಶಿವಮೊಗ್ಗಾ ಡಿಸ್ಟ್ರಿಕ್ಟುಗಳಿಗೆ, ತಾಲ್ಲೂಕು ಒಂದಕ್ಕೆ ಐದು ಜನ ಮೆಂಬರುಗಳ ಪ್ರಕಾರ.

ಮೈಸೂರು, ಬೆಂಗಳೂರು ಡಿಸ್ಟ್ರಿಕ್ಟುಗಳಿಗೆ—ತಾಲ್ಲೂಕು ಒಂದಕ್ಕೆ 4 ಜನ ಮೆಂಬರುಗಳ ಪ್ರಕಾರವೂ, ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಿಗಾಗಿ 4 ಜನ ಮೆಂಬರುಗಳು.

ಇತರ ಡಿಸ್ಟ್ರಿಕ್ಟುಗಳಿಗೆ—ತಾಲ್ಲೂಕು ಒಂದಕ್ಕೆ 4 ಜನ ಮೆಂಬರುಗಳ ಪ್ರಕಾರ.

ಈ ಮೇರೆ ಸಭೆಗೆ ಬರತಕ್ಕ ಮೆಂಬರುಗಳ ಸಂಖ್ಯೆ 285ಕ್ಕೆ ಮೀರುವದಿಲ್ಲ.

IX. ಸಭೆಯು ಸೇರುವದಕ್ಕೆ ಒಂದು ತಿಂಗಳು ಮುಂಚಿತವಾಗಿಯೇ ಮೇಲ್ಕಂಡ ಮೇರೆ ಮೆಂಬರುಗಳನ್ನು ಚುನಾಯಿಸಿ ಆ ರೀತಿ ಚುನಾಯಿಸಲ್ಪಟ್ಟ ಮೆಂಬರುಗಳ ಹೆಸರುಗಳನ್ನು ಒಂದು ಪಟ್ಟಿಯಲ್ಲಿ ಬರದು ಎಲ್ಲರ ತಿಳುವಳಿಕೇ ಬಗ್ಗೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಕಚೇರಿಯ ಬಹಿರಂಗವಾದ ಸ್ಥಳದಲ್ಲಿ ಸದರೀ ಪಟ್ಟಿಯನ್ನು ಅಂಟಿಸತಕ್ಕದ್ದು. ಚುನಾಯಿಸಿದ ಕೂಡ್ಲೆಯೇ ಆಯಾಯ ಮೆಂಬರುಗಳಿಗೆ ತಿಳಿಸತಕ್ಕದ್ದು.

ತಾರೀಖು 9ನೇ ಸೆಪ್ಟಂಬರ್ 1887.

ಕ್ಯಾಂಪ್ ನಂ. 1187.—ಕೋಲಾರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರರ್ಜ ಮೆ|| ವಿ. ಕೆ. ಸ್ವಾಮಿನಾಥಅಯ್ಯರ್ ಯವರಿಗೆ, 1887ನೇ ಇಸವಿ ಸೆಪ್ಟಂಬರ್ 5ರ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಸೆಪ್ಟಂಬರ್ 1887.

ಕ್ಯಾಂಪ್ ನಂ. 1225.—ಮೆ|| ಟ. ವಿ. ಆರಮುಗಂಮೊದಲಿಯಾರ್ ಯಂ. ಬಿ. ಮತ್ತು ಸಿ. ಯಂ. ಯವರು ಅಜಮಾಯಿಷಿ ತರೀಕ್ 3ನೇ ಗ್ರೇಡ್ ಅಸಿಸ್ಟೆಂಟ್ ಸರ್ಜರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಬಮೋಜೇಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ವಿದ್ಯಾಭ್ಯಾಸದ ಇಲಾಖೆ.

ಸ್ 1887ನೇ ಇಸವಿ ಸೆಪ್ಟಂಬರ್ ತಾರೀಖು 13.

ಕನ್ನಡ ಭಾಷೆಗಾಗಿ ಚಿನ್ನದ ಬಿರುದು ಬಿಲ್ಲೆ.

ಇದರಿಂದ ತಿಳಿಸಲ್ಪಡುವದೇನಂದರೆ, ಬೆಂಗಳೂರು ಚಿಕ್ಕ ಪೇಟೆಯಲ್ಲಿರುವ ಮ|| ರಾ|| ಪಾಲಮುಂಡರಾಮರಾವ್ ಎಂಬವರಿಂದ, ಸ್ 1888ನೇ ಇಸವಿಯಲ್ಲಿ ನಡಿಯುವ ಮೈಸೂರು ದೇಶೀಯ ಪರೀಕ್ಷೆಯು ಕನ್ನಡ ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನ ಹೊಂದಿ ತೇರ್ಗಡೆಯಾಗುವ ವಿದ್ಯಾರ್ಥಿಗೆ 20 ರೂಪಾಯಿ ಬೆಲೆಯುಳ್ಳ ಒಂದು ಚಿನ್ನದ ಬಿರುದುಬಿಲ್ಲೆ ಕೊಡಲ್ಪಡುತ್ತೆ.

ಯಲ್. ರೈಸ್,
ಎಡ್ಯುಕೇಶನ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ|| 24, ಸ|| 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಅಂಚೇ ಇಲಾಖಾ.

ನಂ. 294—169. ತಾರೀಖು 21ನೇ ಸೆಪ್ಟಂಬರ್ 1887.

ಇದರಿಂದ ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರ ಶ್ರೀಮ್ಮ ಮಹಾರಾಜ ರಾಜಾಸಾಹೇಬ್ ಬಹದೂರವರ, ದಿವಾನರವರ ಅಪ್ಪಣೇ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳೀ ಅಂಚೇ ಆಫೀಸ್‌ಗಳು ಸ್ಥಾಪಿಸಲ್ಪಟ್ಟಿರುತ್ತೆ.

ತಾಲ್ಲೂಕು.		ಅಂಚೇ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ನಾಗಮಂಗಲ	..	ಹೊನ್ನೇನಹಳ್ಳಿ
ಮಾಲೂರು	..	ಲಕ್ಕೂರು
ಅರಕಲಗೂಡು	..	ಪುರವೂರು

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿ|| ಅರ್ಜೀ ನಂಬರ್ 746.

ತುಮಕೂರು ಡಿ|| ಚಿಕ್ಕನಾಯಿಕನಹಳ್ಳಿಲಿದ್ದು ಮೃತಪಟ್ಟ ಅಕ್ಕಸಾಲಿಗರ ನಂಜುಂಡಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಿಕ್ಕನಾಯಿಕನಹಳ್ಳೀಲಿರುವ ಮಲ್ಲಯ್ಯ ಮೈನರ್ ತಾಯಿ ಲಿಂಗಮ್ಮ ಮೃತಪಟ್ಟ ಸದರೀ ನಂಜುಂಡಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕನಾಯಿಕನಹಳ್ಳಿ ಸ್ಥಳದ ಮಲ್ಲಯ್ಯ ಮೈನರ್ ತಾಯಿ ಲಿಂಗಮ್ಮ ಸದರೀ ವಾಸಸ್ಥರಾಗಿ ಮೃತಪಟ್ಟ ನಂಜುಂಡಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ, 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಲ್ಲಯ್ಯ ಮೈನರ್ ತಾಯಿ ಲಿಂಗಮ್ಮನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 7ರಲ್ಲು, ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಸೆಪ್ಟಂಬರ್ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

126

1887ನೇ ಇಸವಿ ಮಿ|| ಅರ್ಜೀ ನಂಬರ 765.

ತುಮಕೂರು ತಾಲ್ಲೂಕು ಹೇಜ್ಜಾರು ಸಮ್ಮತು ಬನ್ನಿಕುಪ್ಪೇಲಿದ್ದು ಮೃತಪಟ್ಟ ರಂಗೇಗೌಡನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ರಂಗೇಗೌಡ ಮೈನರ ತಾಯಿ ನಂಜಮ್ಮ ಮೃತಪಟ್ಟ ಸದರೀ ರಂಗೇಗೌಡರ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಬನ್ನಿಕುಪ್ಪೆ ಸ್ಥಳದ ರಂಗೇಗೌಡ ಮೈನರ್ ತಾಯಿ ನಂಜಮ್ಮ ಡಿಟೋ ವಾಸಸ್ಥರಾಗಿ ಮೃತಪಟ್ಟ ರಂಗೇಗೌಡರ ಜಿಂದಗೀ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗೇಗೌಡ ಮೈನರ ತಾಯಿ ನಂಜಮ್ಮನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 7ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಸೆಪ್ಟಂಬರ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರಿಸಿಸಿ ನವ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರೆಸ್,
ಸಬ್ ಜಡ್ಜಿ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ 484.

ಮೃತಪಟ್ಟ ಭರಮಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕರಡೀ ಅನಂತಪ್ಪನವರು ಮೃತಪಟ್ಟ ಸದರೀ ಭರಮಂಣನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಕರಡೀ ಅನಂತಪ್ಪನವರು ಚನ್ನರಾಯಪಟ್ಣದ ತಾಲ್ಲೂಕು ಬೆಳಗೊಳದ ವಾಸಸ್ಥನಾಗಿ ಮೃತಪಟ್ಟ ಭರಮಂಣನವರ ಜಿಂದಗೀ ಬಗ್ಯಾಗಿ ಬರತಕ್ಕ 5,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕರಡೀ ಅನಂತಪ್ಪನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭರಮಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ 499.

ಮೃತಪಟ್ಟ ದುಂಡೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ನಂಜೇಗವುಡ 2ನೇ ದುಂಡೇಗವುಡ 3ನೇ ಮಾದೇಗವುಡ 2—3ನೇ ಮೈನರ್ ಗಾರ್ಡಿಯರ್ನ ತಾಯಿ ಮಾದಮ್ಮ ಮೃತಪಟ್ಟ ಸದರೀ ದುಂಡೇಗವುಡರಿಗೆ ಮಕ್ಕಳು ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರ ತಾಲ್ಲೂಕು ಸಂತೆಮರಹಳ್ಳಿ ಸ್ಥಳದ ಸದರೀ 1ನೇ ನಂಜೇಗವುಡ ಮಾದಮ್ಮನೂ ಸಹ ಸದರೀ ವಾಸಸ್ಥನಾಗಿ ಮೃತಪಟ್ಟ ದುಂಡೇಗವುಡರ ಜಿಂದಗೀ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನುವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜೇಗವುಡ, ಮಾದಮ್ಮ ಇವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದುಂಡೇಗವುಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಸೆಪ್ಟಂಬರು ತಿಂಗಳು 12ನೇ ತಾರೀಖಿನಲ್ಲಿ ಕೋರ್ಟ ಮೊಹರ್‌ಸಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1887ನೇ ಇಸವಿ ಅರ್ಜೀ ನಂಬರ 506.

ಮೃತಪಟ್ಟ ಕಂಚುಗಾರ ಗುರುವಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕಪನಯ್ಯನು ಮೃತಪಟ್ಟ ಸದರೀ ಗುರುವಯ್ಯನವರಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಳವಳ್ಳಿ ಕಸಬಾ ಸ್ಥಳದ ಸದರೀ ಕಪನಯ್ಯನು ಸದರೀ ವಾಸಸ್ಥನಾಗಿ ಮೃತಪಟ್ಟ ಗುರುವಯ್ಯನವರ ಜೆಂದಗೀ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕಪನಯ್ಯನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರುವಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಸೆಪ್ಟಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜಿ.

ಮೈಸೂರು ಡಿಸ್ಟ್ರಿಕ್ಟು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ನಂಜನಗೂಡು ತಾಲ್ಲೂಕು ಕಳಲೇ ಗ್ರಾಮದಲ್ಲಿರುವ ಶ್ಯಾಮಯ್ಯನ ಪಟ್ಟಾಭಿರಾಮಯ್ಯನ ವಿಷಯದಲ್ಲಿ—

ಸ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 51.

ಹುಕ್ಕುಂ.

ಮೇಲ್ಕಂಡ ಪಟ್ಟಾಭಿರಾಮಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ, ಅರ್ಜೀದಾರನಾದ ಪಟ್ಟಾಭಿರಾಮಯ್ಯನ ಪರವಾಗಿ ಅಡ್ವೋಕೇಟ್ ಮ|| ಕಂಠೀರವಾಚಾರ್ಯರನ್ನು ಮತ್ತು ಸದರೀ ಯವನ ಲೇಣೇದಾರ್‍ರಾದ 1ನೇ ಕೃಷ್ಣಮಾಚಾರೀ ಕಡೇ ಅಡ್ವೋಕೇಟ್ ಗೋವಿಂದರಾಯರು 2ನೇ ಶೇಷಗಿರಿರಾವ್ 3ನೇ ಪುಟ್ಟಂಣ 11ನೇ ಮರಿದೇವರು 12ನೇ ಶಿದ್ದಶೆಟ್ಟಿ 13ನೇ ವೆಂಕಟಶೆಟ್ಟಿ ಇವರಿಗೂ ದರ್‍ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‍ರು ತಮಗೆ ಈ ದರ್‍ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—4ನೇ ಲಿಂಗಪ್ಪ 5ನೇ ಸುಡಗಾಡಂಣ 6ನೇ ದೇವರಾಜಭಟ್ಟ 7ನೇ ಲಕ್ಷ್ಮಮ್ಮ 8ನೇ ಮೂಗಶೆಟ್ಟಿ 9ನೇ ತಾಂಡುಕಾಳಶೆಟ್ಟಿ 10ನೇ ಸುಬ್ಬಶೆಟ್ಟಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪಟ್ಟಾಭಿರಾಮಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ 1887ನೇ ಇಸವಿ ಸೆಪ್ಟಂಬರ್ 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್‍ರು ಅಥವಾ ದಾವಾದಾರ್‍ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಸಂಭವನೀಯ ಮೊಬಲಗು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಹುಂಡಿ ಕೃಷ್ಣಮಾಚಾರಿ ..	692 0 0	..	ಡಿಕ್ರೀ ಬಾಬತು	
2	ಮೈಸೂರು ಧನಾಭಿವೃದ್ಧಿ ಬ್ಯಾಂಕ್ ಯೇಜಂಟ್ ಶೇಷಗಿರಿರಾವ್ ..	50 0 0	..	ಡಿಟೋ	
		742 0 0			

ದಿವಾಳೀಯಾದ ಡಿಕ್ರೀ ದೇಣೇದಾರ ಮೈಸೂರಲ್ಲಿರುವ ಸವಾರ್ ಇಲಾಖಾ ಪೇಷ್ಕರ್ ಮಂಡ್ಲಗಿರೀ ಕೃಷ್ಣರಾಯನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 142.

ಹುಕ್ಕುಂ.

ಮೇಲ್ಕಂಡ ಕೃಷ್ಣರಾಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಕೃಷ್ಣರಾಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣರಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದ 5ನೇ ಗೋಪಾಲಶೆಟ್ಟಿ ಖುದ್ದು ಹಾಜರು 14ನೇ ಕೃಷ್ಣಾಚಾರೀ ಕಡೇ ಫಸ್ಟ್‌ಗ್ರೇಡ್ ಪ್ಲೀಡರ್ ವೆಂಕೋಬರಾಯರು ಹಾಜರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ–1ನೇ ವಡೀಸ್ವಾಮಿರಾಯಚಾರಿ 2ನೇ ಸಂಪತ್‌ಕುಮಾರೀ ಬ್ಯಾಂಕ್ 3ನೇ ಖಾಸಿಂಸಾಬ್ 4ನೇ ಬುಡ್ಡಾಸಾಬಿ 6ನೇ ಮೈಸೂರು ಬ್ಯಾಂಕ್ 7ನೇ ಭಾಗೀರಥಿಬಾಯಿ 8ನೇ ಬಸಪ್ಪ 9ನೇ ಶೀತಮ್ಮ 10ನೇ ರಂಗಪ್ಪ 11ನೇ ಗೋವಿಂದಭೀಮಾಜಿ 12ನೇ ಮಲ್ಲಶೆಟ್ಟಿ 13ನೇ ಆಲಪ್ಪ 15ನೇ ಶೇಷಗಿರಿರಾವ್ 16ನೇ ದೇವಾಜೀ ಡೋಲಾಜೀ ತಂದೇ ನವಲಾಜಿ 17ನೇ ರಂಗಪ್ಪ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಪೇಷ್ಕಾರ್ ಕೃಷ್ಣರಾಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟುನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸರ್ 1887ನೇ ಇಸವಿ ಆಗಸ್ಟು 31ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಡಬೇಕಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಶಿವಮೊಗ್ಗೇಲಿರುವ ವಡೀಸ್ವಾಮಿರಾಯಾಚಾರಿ ..	89 3 4	..	ಡಿಕ್ರೀ ಬಾಬತು	
12	ಮೈಸೂರಲ್ಲಿರುವ ಮಲ್ಲಶೆಟ್ಟಿ ..	44 0 8	..	ಡಿಟೋ	
13	ಡಿಟೋ ಕುರ್ಮಾಬಾನ ಮಗ ಆಲಪ್ಪ ..	33 8 6	..	ಡಿಟೋ	
14	ಹೊಳೇನರಸೀಪುರದ ಕೃಷ್ಣಾಚಾರಿ ..	212 0 0	..	ಡಿಟೋ	
15	ಶಿವಮೊಗ್ಗೆಯಲ್ಲಿರುವ ತಿಮ್ಮಯ್ಯ ಫೌತಿ ವಾರಸ್‌ದಾರ್ ಶೇಷಗಿರಿರಾವು ..	251 0 0	..	ಡಿಟೋ	
16	ಡಿಟೋ ಪೂರು ದೇವಾಜೀ ಡೋಲಾಜಿ ..	350 0 0	..	ಡಿಟೋ	
17	ಡಿಟೋ ರಂಗಪ್ಪ ..	30 0 6	..	ಡಿಟೋ	
		1019 13 0			

ದಿವಾಳೀಯಾದ ಡಿಕ್ರೀ ದೇಣೇದಾರ ಹಾಸನದಲ್ಲಿರುವ ನಾಯಿಕ ಮಹಮ್ಮದ್ ಯೂಸುಫನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 169.

ಹುಕ್ಕುಂ.

ಮೇಲ್ಕಂಡ ಮಹಮ್ಮದ್ ಯೂಸುಫನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಮಹಮ್ಮದ್ ಯೂಸಫನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ಯಲ್. ನರಸಿಂಗರಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ.--1. ಖಾದರಬೀ ಮೈನರ್‌ಗಾರ್ಡಿಯರ್ ಸೈದಲ್ಲೀಸಾಬಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮಹಮ್ಮದ್ ಯೂಸುಫನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ 1887ನೇ ಇಸವಿ ಆಗಸ್ಟು 31ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ್ಪಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಾಕಿ ಬಡ್ಡಿ ಮೊಬಲಗು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಹಾಸನದಲ್ಲಿರುವ ಖಾದರಬೀ ಮೈನರ್‌ಗಾರ್ಡಿಯರ್ ಸೈದಲ್ಲೀಸಾಬ್.	115 0 0	..	ಡಿಕರೀ ಬಾಬತು.	

ದಿವಾಳೀಯಾದ ಡಿಕ್ರೀ ದೇಣೇದಾರ ಮೈಸೂರು ಬಸವನ ಮೊಹಲ್ಲಾದಲ್ಲಿರುವ ಶಿವಾಚಾರದ ನಂಜುಂಡನ ಮಗ ಸುಬ್ರಾಯಪ್ಪನ ವಿಷಯದಲ್ಲಿ—

ಸ 1887ನೇ ಇಸವಿ ದಿವಾಳೀ ಕೇಸ್ ನಂಬರು 230.

ಹುಕ್ಕುಂ.

ಮೇಲ್ಕಂಡ ಸುಬ್ರಾಯಪ್ಪನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜೀದಾರನಾದ ಸುಬ್ರಾಯಪ್ಪನ ಪರವಾಗಿ ಫಸ್ಟ್‌ಗ್ರೇಡ್ ಪ್ಲೀಡರ್ ಸದಾಶಿವರಾಯರನ್ನೂ ಮತ್ತು ಸದರೀ ಯವನ ಲೇಣೇದಾರ್ರಾದ 4ನೇ ನಾರಣಪ್ಪ 6ನೇ ರಾಮಣ್ಣ 7ನೇ ವೆಂಕಟಕೃಷ್ಣಯ್ಯ 8ನೇ ಮಲ್ಲಪ್ಪ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—1ನೇ ಮೈಸೂರು ರಾಜಧಾನೀ ಬ್ಯಾಂಕ್ ಯೇಜಂಟ್ ಸುಬ್ರಾವು 2ನೇ ಹೊನ್ನಯ್ಯ 3ನೇ ಲಕ್ಷ್ಮೀಪತಯ್ಯ 5ನೇ ಪಾಲಾಯಿ ಅಮ್ಮ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ನಂಜುಂಡಪ್ಪನ ಮಗ ಸುಬ್ರಾಯಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೇಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ 1887ನೇ ಇಸವಿ ಸೆಪ್ಟೆಂಬರ್ 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಾಕಿ ಬಡ್ಡಿ ಮೊಬಲಗು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಮೈಸೂರು ರಾಜಧಾನೀ ಬ್ಯಾಂಕ್ ಯೇಜಂಟ್ ಸುಬ್ರಾವು.	315 0 11	..	ಡಿಕರೀ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್, ಸಬ್ ಜಡ್ಜ್.

ತಾರೀಖು 14ನೇ ಸೆಪ್ಟಂಬರ್ 1887.

ಗುಂಡ್ಲು ಪೇಟೆ ತಾಲ್ಲೂಕು ಪೈಕೀ ತಿರುಕನಾಂಬೀ ಬಳೀ ಇರುವ ವೆಂಕಟರಮಣಸ್ವಾಮೀ ದೇವಸ್ಥಾನದಲ್ಲಿ ಇದರಡೀ ಕಂಡ ಪಟ್ಟಿಯಲ್ಲಿ ನಮೂದಾಗುವ ದಾಗಿನೇಗಳು ಚೋರೀ ಹೋಗಿರುವದ್ದರಿಂದ ಈ ಚೋರಿಯ ಪತ್ತೇ ಆಗುವಂತೆ ಸಮಾಚಾರ ಕೊಡೋಣ ಮತ್ತು ಚೋರೀ ಮಾಲುಗಳು ಪತ್ತೇ ಮಾಡಿ ಕೊಟ್ಟಲ್ಲಿ ಅದಕ್ಕಾಗಿ 200 ರೂಪಾಯಿಗಳ ಇನಾಂ ಕೊಡಲ್ಪಡುವದು.

ಎಲ್. ರಿಕ್ಕೆಟ್ಸ್,
ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್.

ತಾರೀಖು 3ನೇ ಸೆಪ್ಟಂಬರ್ 1887.

ಸನ್ 1887ನೇ ಇಸವಿ ಸೆಪ್ಟಂಬರ್ ತಾರೀಖು 2ನೇ ರಾತ್ರಿ ಗುಂಡ್ಲು ಪೇಟೆ ತಾ|| ಶ್ರೀ ಹುಲಿಗನ್ನ ಮುರಡೀ ಪ್ರಸನ್ನ ವೆಂಕಟರಮಣಸ್ವಾಮೀಯವರ ದೇವಸ್ಥಾನಕ್ಕೆ ಕಳ್ಳರು ನುಗ್ಗಿ ಕಳವುಮಾಡಿಕೊಂಡು ಹೋದ ಮಾಲಿನ ತಪಶೀಲ್.

ನಂಬರ್.	ಮಾಲುಗಳ ತಪಶೀಲ್.	ರೂಪಾಯಿಗಳ ತೂಕ.			ಮೊಬಲಗು ಖರೀದೀ ಬಾಳತಕ್ಕದ್ದು.		
1	ಚಿನ್ನದ ಕಂಠಾಭರಣ 1ಕ್ಕೆ	2	8	0	33	12	0
2	ದಫಾ ಕಂಠಾಭರಣ 1ಕ್ಕೆ ಬೆಳ್ಳೀಬಿಲ್ಲೇ ಅರಗು ಸಹ ..	7	14	0	45	8	0
3	ಕಂಠಾಭರಣ ತಾಂಬ್ರದ ಮೇಲೆ ಗಿಲೀಟು ಮಾಡಿಧೆ .	1	15	0	8	0	0
4	ಜನಿವಾರದ ಜೊತೆ 1ಕ್ಕೆ	1	3	0	16	0	0
5	ಲಕ್ಷ್ಮೀದೇವೀ ತಾಲೀ ಬೆಳ್ಳೀಸರಪಣೀ ಬಿಲ್ಲೆ ಸಹ	6	8	0	6	0	0
6	ಸ್ಫಟಿಕದ ತಾಲೀ ಗುಂಡಿನ ಸರ 1ಕ್ಕೆ ಅರಗು ವಗೈರೇ ಸಹ ..	7	8	0	8	0	0
7	ಲಕ್ಷ್ಮೀಕಾಂತ ಪದಕದ ಗುಂಡಿನ ಸರ	6	0	0	15	0	0
8	ದೊಡ್ಡ ಮೋಹನ ಮಾಲೇ ಸರ 1ಕ್ಕೆ ಪದಕ ವಗೈರೇ. ..	15	8	0	20	0	0
9	ಪಟ್ಟಾಭಿರಾಮನ ಗುಂಡಿನ ಸರ 1ಕ್ಕೆ ಗುಂಡು 24 ಬೆಳ್ಳೀ ಸರಿಗೆ ..	6	4	0	12	0	0
10	ಕರ್ನಪತ್ರ ಜೊತೆ 1ಕ್ಕೆ	2	1	0	5	0	0
11	ದಫಾ ಕರ್ನಪತ್ರದ ಜೊತೆ 1ಕ್ಕೆ	8	6	0	70	0	0
12	ಮೋಹನ ಮಾಲೇ ಸರ 1ಕ್ಕೆ	6	0	0	10	0	0
13	ಗುಂಡಿನ ಸರ 1ಕ್ಕೆ ಅರಗು ಧಾರ ಸಹ	1	0	0	5	0	0
14	ಮೂಗುತಿ 1ಕ್ಕೆ	0	1	0	1	0	0
15	ತಿಲಕದ ಬಟ್ಟು 1ಕ್ಕೆ	0	2	0	2	0	0
16	ತಿರುಮಂಗ್ಲಿ 1ಕ್ಕೆ	0	1	0	0	9	4
17	ದಫಾ ತಿರುಮಂಗ್ಲಿ 1ಕ್ಕೆ	0	1	6	0	12	0
18	ಹಸರು ಕಲ್ಲು ತಿಲಕ 1ಕ್ಕೆ	0	1	0	1	0	0
19	ಕರೀಕಲ್ಲು ತಿಲಕ 1ಕ್ಕೆ	0	1	6	0	8	0
20	ಕೆಂಪು, ವಜ್ರದ ಪದಕ 1ಕ್ಕೆ ಬೊಂಬಾಯಿ ಮುತ್ತಿನ ಸಾತಲಡೀಯಲ್ಲಿ ಸುತ್ತಿ ಯಿಧೆ	9	0	0	70	0	0
21	ಕೆಂಪು, ವಜ್ರದ ಹಣೇನಾಮ	0	14	0	50	0	0
22	ಜೋಮಾಲೇ ಗುಂಡಿನ ಸರ 1ಕ್ಕೆ	5	0	0	35	0	0
23	ಕಂಠೀಸರ ಗುಂಡು 83 ತಾಲೀ ಸಹ	4	0	0	50	0	0
24	ದಫಾ ಸರ 1ಕ್ಕೆ ಗುಂಡು 38 ತಾಲೀ ಸಹ	2	2	0	25	0	0
25	ಚಂದ್ರಮುರು ಶಿಕಸ್ತು	0	6	0	3	8	0
26	ಬುಗಡೀ ಜೊತೆ 1ಕ್ಕೆ ವಳ್ಳೇಮುತ್ತು	2	1	0	40	0	0

ನಂಬರ.	ಮಾಲುಗಳ ತಪಶೀಲ್.	ರೂಪಾಯಿಗಳ ತೂಕ.			ಮೊಬಲಗು ಖರೀದೀ ಬಾಳತಕ್ಕದ್ದು.		
27	ಬೊಂಬಾಯಿ ಮುತ್ತಿನ ಸಾತಲಡೀ ಯಿದರಲ್ಲಿ ವಜ್ರದ ತಾಲೀ ಶೇರಿ ಯಿಧೆ.	0	0	0	18	0	0
28	ಅಭಯಹಸ್ತ ತಾಂಬ್ರದ ತಗಡಿನಮೇಲೆ ಗಿಲೀಟು ಮಾಡಿಧೆ ..	22	0	0	122	0	0
29	ಕಟೀ ಹಸ್ತ ಡಿಟ್ಟೋ ಮೇರೆ	15	0	0	80	0	0
30	ಶಂಖಚಕ್ರ ಸಹ ಬೆಳ್ಳೀತಗಡಿನಮೇಲೆ ಚಿನ್ನದ ಗಿಲೀಟು ..	17	0	0	200	0	0
31	ತೋರಂಭ ಬೆಳ್ಳೀ ತಗಡಿನಮೇಲೆ ಡಿಟ್ಟೋ ..	3	4	0	20	0	0
32	ಕಂಠೀಸರ ಬೊಂಬಾಯಿ ಮುತ್ತು ಪದಕ ಸಹ ಯಳೆ 3 ..	5	0	0	16	0	0
33	3 ಯಳೀ ಬಾಬತು ಕಂಠೀ ಗುಂಡಿನ ಸರ ಪದಕ ಬೆಳ್ಳೀಸರಿಗೇ ಸಹ ..	0	0	0	22	8	0
34	ಸದರೀ ಬಾಬತು 1 ಯಳೀ ಚಿನ್ನದ ಸರಿಗೆ ಸಹ ..	10	1	0	12	0	0
35	ಕೊರಳ ಹಸ್ತ ಬೆಳ್ಳೀ ತಗಡಿನಮೇಲೆ ಚಿನ್ನದ ಗಿಲೀಟು ..	1	4	0	60	0	0
36	ಚಳತುಂಬು ಜೊತೆ 1ಕ್ಕೆ ಚಿನ್ನದ ಗುಂಡು ಸುತ್ತಿಯಿಧೆ ..	0	14	0	12	0	0
37	ಕೊರಳು ಹಸ್ತ 3ಕ್ಕೆ ಬೆಳ್ಳೀತಗಡಿನಮೇಲೆ ಗಿಲೀಟು ..	4	0	0	12	0	0
38	ಬಣ್ಣ ಸರ ಗುಂಡು 35 ಹವಳ 35 ..	3	8	0	1	0	0
39	ಹಿರಿದುಂಬಿ ಬಟ್ಟು ಜೊತೆ 1ಕ್ಕೆ ..	0	0	0	8	0	0
40	ಅಪರಂಜೀ ಚಿನ್ನದ ಕಿರೀಟ ಬೆಳ್ಳೀ ತಗಡಿನಮೇಲೆ ಚಿನ್ನದ ಗಿಲೀಟು ..	26	0	0	176	0	0
41	ತೋರಂಭ ಬೆಳ್ಳೀ ತಗಡಿನಮೇಲೆ ಚಿನ್ನದಗಿಲೀಟು ..	11	0	0	76	0	0
42	ಅಭಯ ಹಸ್ತ ಕಟಿ ಹಸ್ತ ಡಿಟ್ಟೋ ಮೇರೆ ..	2	14	0	57	8	0
43	ಹೊನ್ನುದುಂಬಿ ಬಟ್ಟು ..	0	0	0	0	2	0
44	ಉಭಯ ಅಮ್ಮನವರ ಕಿರೀಟ ಜೊತೆ 1ಕ್ಕೆ ಬೆಳ್ಳೀ ತಗಡಿನ ಮೇಲೆ ಚಿನ್ನದ ಗಿಲೀಟು ಮಾಡಿಧೆ ಜೊತೆ 1 ..	8	8	0	170	0	0
45	ಕಮಲಹಸ್ತ ಲಂಬಹಸ್ತ ಸಹ ಅದದು 4ಕ್ಕೆ ಬೆಳ್ಳೀ ತಗಡಿನ ಮೇಲೆ ..	10	8	0	120	0	0
46	ಚಳಿಕೆ ಜೊತೆ 1ಕ್ಕೆ ಹವಳ ಗುಂಡು ..	0	0	0	25	0	0
47	ಸಣ್ಣಗುಂಡಿನ ಸರ ಧಾರದಲ್ಲಿ ..	0	0	0	12	0	0
48	ಕರ್ನಪತ್ರದ ಜೊತೆ 1ಕ್ಕೆ ಬೆಳ್ಳೀ ತಗಡಿನಮೇಲೆ ..	3	0	0	18	0	0
49	ಅಭಯಹಸ್ತ ಕಟಿಹಸ್ತ ಸಹ ಬೆಳ್ಳೀಮೇಲೆ ..	9	8	0	75	0	0
50	ಕರ್ನಪತ್ರದ ಜೊತೆ 1ಕ್ಕೆ ಬೆಳ್ಳೀಮೇಲೆ ..	3	0	0	15	0	0
51	ಡಿಟ್ಟೋ ಜೊತೆ 2ಕ್ಕೆ ಡಿಟ್ಟೋ ..	6	21	0	30	0	0
52	ತೋರಂಭ 2ಕ್ಕೆ ..	4	12	0	23	12	0
53	ವಡ್ಯಾಣ 4ಕ್ಕೆ ಡಿಟ್ಟೋ ..	2	0	0	10	0	0
54	ಶಿರೋತಗಡು 4 ಬುಗಡೀ ಜೊತೆ 1 ..	0	0	0	4	0	0
					1865	15	4
	ಬೆಳ್ಳೀ ಬಾಬತು ನಗಗಳು.						
55	ಕಿರೀಟ 1ಕ್ಕೆ ..	10	8	0	7	8	0
56	ತಿರುಪದಕ 1ಕ್ಕೆ 5¾ ಶೇರು ..	0	0	0	57	8	0
57	ಬಟ್ಲು 1ಕ್ಕೆ ..	9	0	0	6	12	0
58	ತಟ್ಟೆ 1ಕ್ಕೆ 2 ಶೇರು ..	0	0	0	24	0	0
59	ಗಿಂಡಿ 1ಕ್ಕೆ ०॥= ಶೇರು ..	0	0	0	24	12	0
60	ತಟ್ಟೆ 1ಕ್ಕೆ ಬಟ್ಲು 5ಕ್ಕೆ ಸಹ ಶೇರು ೯। ಪೈಕೀ 1 ತಟ್ಟೆ 1 ಬಟ್ಲು ಹಾಜರ	0	0	0	36	8	0

ನಂಬರ್.	ಮಾಲುಗಳ ತಪಶೀಲ್.	ರೂಪಾಯಿಗಳ ತೂಕ.			ಮೊಬಲಗು ಬರೀದಿ ಬಾಳತಕ್ಕದ್ದು.		
61	ಜಲ್ಲೀ ತಣಿಗೆ 1ಕ್ಕೆ ೪||| ಶೇರು	0	0	0	77	0	0
62	ಬಟ್ಟು 1ಕ್ಕೆ ೯||| ರೂಪಾಯಿ	9	12	0	4	14	0
63	ದಫಾ ಬಟ್ಟು 1ಕ್ಕೆ	7	0	0	3	8	0
64	ಡಿಟೋ ಬಟ್ಟು 1ಕ್ಕೆ	4	0	0	2	0	0
65	ಡಿಟೋ 1ಕ್ಕೆ	3	0	0	1	8	0
66	ಡಿಟೋ 1ಕ್ಕೆ	1	0	0	0	8	0
67	ಪಂಚಪಾತ್ರೆ	11	0	0	2	12	0
68	ಉದ್ಧರಣೆ 2ಕ್ಕೆ	8	0	0	4	0	0
69	ಪ್ರಭಾವಳೀ ತುಕಡ 2ಕ್ಕೆ ೧|| ಶೇರು	0	0	0	31	8	0
70	ಗರಡು ಪೀಠ 1ಕ್ಕೆ ಡಿಟೋ	0	0	0	31	8	0
71	ಪದ್ಮಪೀಠ 1 ಶೇರು	1	0	0	25	8	0
72	ತೋರಂಭ	4	0	0	3	0	0
73	ಕರ್ನಪತ್ರ ಜೊತೆ 1ಕ್ಕೆ	4	0	0	3	0	0
74	ಕೊರಳ ಪತ್ತೆ	1	0	0	0	12	0
75	ಭುಜಕೀರ್ತಿ 2ಕ್ಕೆ 1 ಶೇರು ಮುತ್ತು	1	0	0	18	12	0
76	ವಕ್ಷಸ್ಥಳ	13	0	0	9	12	0
77	ವಡ್ಯಾಣ	12	0	0	9	0	0
78	ವೃಡಗೆಜ್ಜೇಸರ 1	4	12	0	3	6	0
79	ವೈಕುಂಠಹಸ್ತ, ಕಟಿಹಸ್ತ ಸಹ ಶೇರು 1	4	0	0	21	0	0
80	ಶಂಖಚಕ್ರ ಶೇರು ೧|||	0	0	0	31	8	0
81	ತೋಳಕಡಗ	2	4	0	1	8	0
82	ಶ್ರೀಪಾದದ ಜೊತೆ	10	0	0	5	0	0
83	ತಂಡೇ ಜೊತೆ ಗೆಜ್ಜೇಸಹ	7	12	0	7	0	0
84	ಪಾಡಗದ ಜೊತೆ	6	0	0	5	4	0
85	ಸತ್ತಿಗೆ	8	0	0	4	0	0
86	ಕಿರೀಟ	9	0	0	5	4	0
87	ತೋರಂಭ	1	8	0	12	12	0
88	ಶಂಖಚಕ್ರ	9	4	0	7	2	0
89	ಕವಚ ತುಂಡು 2ಕ್ಕೆ ಶೇರು1	7	0	0	23	4	0
90	ಉಡಿಗೆಜ್ಜೇಸರ 1ಕ್ಕೆ	1	8	0	1	2	0
91	ಕರ್ನಪತ್ರ ಜೊತೆ 1ಕ್ಕೆ	3	8	0	1	12	0
92	ತಂಡೇ ಜೊತೆ 1ಕ್ಕೆ	5	8	0	2	12	0
93	ಪಾಡಗದ ಜೊತೆ 1ಕ್ಕೆ	6	0	0	3	0	0
94	ಜೋಡಿ ಗೆಜ್ಜೆ	1	12	0	1	2	0
95	ಪುಲೀಉಗರು ಜೊತೆ 1ಕ್ಕೆ	4	0	0	2	0	0
96	ವಡ್ಯಾಣ	2	0	0	1	0	0
97	ಕಿರೀಟ	19	0	0	9	8	0

ನಂಬರ್.	ಮಾಲುಗಳ ತಪಶೀಲ್.	ರೂಪಾಯಿಗಳ ತೂಕ.			ಮೊಬಲಗು ಖರೀದೀ ಬಾಳತಕ್ಕದ್ದು.		
98	ಡಾಬು 2ಕ್ಕೆ	4	0	0	1	0	0
99	ಕಿರೀಟ	5	0	0	2	12	0
100	ತೋರಂಭ	1	0	0	1	0	0
101	ಕರ್ನಪತ್ರದ ಜೋಡೀ 1ಕ್ಕೆ	1	12	0	1	8	0
102	ಕಮಲಹಸ್ತ	10	0	0	2	8	0
103	ಅವಯ ಹಸ್ತದ ಜೋಡೀ	7	0	0	1	12	0
104	ಡಾಬು	2	0	0	0	10	0
105	ಡಿಟೋ	9	0	0	2	4	0
106	ಬೆಳ್ಳೀ ಸರಪಣೀ ಹೊನ್ನಾರು ತಾಳಿ	1	8	0	0	12	0
107	ಮೂಲ ಅಮ್ಮನವರ ಕರ್ನಪತ್ರದ ಜೋಡಿ	7	0	0	3	8	0
108	ಕಮಲಹಸ್ತ ಜೋಡಿ 1ಕ್ಕೆ ೧॥ ಶೇರು	3	0	0	0	13	8
109	ತೋರಂಭ	2	12	0	1	8	0
110	ಬೀಸಣಿಗೆ	4	0	0	2	0	0
111	ಉಭಯ ಅಮ್ಮನವರ ಕಿರೀಟ	11	8	0	5	12	0
112	ಡಿಟೋ 1ಕ್ಕೆ	11	8	0	5	12	0
113	ಕಂಠಾಭರಣದ ಜೋಡೀ 1ಕ್ಕೆ	5	8	0	2	12	0
114	ಬೆಳ್ಳೀ ಕೋಲು ಶೇರು 1ಕ್ಕೆ	0	0	0	15	0	0
115	ಕಿರೀಟ 1ಕ್ಕೆ	12	0	0	6	0	0
116	ಅಂಭ ಹಸ್ತ ಜೋಡೀ 1ಕ್ಕೆ	10	0	0	5	0	0
117	ಕಂಠಾಭರಣ	10	0	0	5	0	0
118	ಬಾಕು	5	0	0	3	12	0
119	ಚಾಮರದ ಕೋಲು	2	0	0	1	0	0
120	ಉಪಚಾರದ ಕನ್ನಡಿ	3	0	0	1	8	0
121	ದೈವ ತಗಡು ಕಂಣು ಮಣಿ ವಗೈರೇ	21	0	0	5	11	0
122	ಚಿಲ್ಲರೇ ಮಾಹೇವಾರೀ ಜಮಾ ಬಾ॥	0	0	0	42	0	0
123	ಹೊನ್ನಾಮ ಕಡಗ ವಗೈರೇ ಸುಮಾರು ಶೇರೂವರೇ ಹೆಚ್ಚು ತಪಶೀಲ್ ರಿಜಿಸ್ಟರಿನಲ್ಲಿ ಇಧೆ	7	0	0	0	0	0
					555	14	0
	ಗಿರ್ವೀನಗಗಳ ವಿವರ.						
	ಸರದೀದಾರ್ರುಗಳು ಡಿಪಾಜಿಟ್ ಇಟ್ಟು ಇದ್ದ ಮೊಬಲಗಿನ ಬಾಬತು ಚಿನ್ನದ್ದು						
124	ಚಿನ್ನದ ಕಂಕಣ ಕಟ್ಟುಬಳೆ ಜೋಡೀ 1ಕ್ಕೆ ಅರಗು ಸಹ ಮತ್ತು ಬೆಳ್ಳಿ ಕಾಲ್ಸರ ಜೋಡಿ 1ಕ್ಕೆ ಸಹ	0	0	0	100	0	0
125	ರಾಕಡಿ 1 ಜಡೇಬಿಲ್ಲೇ 1 ಸಹ ಗಿರ್ವೀ ಮೊಬಲಗು ..	0	0	0	42	0	0
126	ಚಳತುಂಬು ಜೋಡೀ 1 ಬೆಳ್ಳೀ ಉಡಿಗೆಜ್ಜೇ ಸಾಹ ಗಿರ್ವೀ ಮೊಬಲಗು	0	0	0	8	0	0
127	ಬೆಳ್ಳೀವೇಲಾಬಟ್ಲು 1ಕ್ಕೆ	0	0	0	15	0	0
128	ಬೆಳ್ಳೀ ಪನ್ನೀರ್ದಾನೀ 1 ಆನೇಪಾದದತಟ್ಟೇ ಸಹ	0	0	0	55	0	0
					220	0	0

ನಂಬರ್.	ಮಾಲುಗಳ ತಪಶೀಲ್.	ರೂಪಾಯಿಗಳ ತೂಕ.			ಮೊಬಲಗು ಖರೀದೀ ಬಾಳತಕ್ಕದ್ದು.		
	ತಾಂಬ್ರದ ಮೇಲೆ ಚಿನ್ನದ ಮುಲಾವು ಬಾಬತು ನಗಗಳು.						
129	ವೈಕುಂಠ ಹಸ್ತ 1 ಕಿರೀಟ ಜೋಡೀ 1 ಕರ್ನಪತ್ರ ಜೋಡೀ 1 ಶ್ರೀಪಾದ ಜೋಡೀ 1 ಡಿಟ್ಟೋ 2 ಬಂದಿ 1 ತಾಲೀ ಸಹ ರಾಜಮುಡಿ 1 ತೋರಂಭ ಸಹ 1 ಪ್ರಭಂದ ಕಿರೀಟ 1 ಸಾಲಿಗ್ರಾಮದ ಮಾಲಿಕೆ ಸಾಲಿಗ್ರಾಮ ಬೆಳ್ಳಿ ಸರಿಗೆ ಮಗಸು ಸಹ ಶ್ರೀಶಗೋಪ 1 ಬಿಡೀ ಸಾಲಿಗ್ರಾಮ 6						
	ಪಾರ್ಜೀ ಸಾಮಾನುಗಳು.						
130	ಉತ್ಸವದೇವರ ಪಂಚೆಗಳು ಶಾಲ್ಯದ ಬುಗಡೀ ಅಂಚು ಬಾಬತು	4	0	0	4	0	8
131	ಹಳೇಪಂಚೆ ಸದರೀ ಬಾಬತು	0	0	0	0	0	0
132	ವಾಮನೂರು ಬುಗಡಂಚಿನ ಖಾಸಾ ಧೋತ್ರ ಜೋಡೀ 1ಕ್ಕೆ ..	0	0	0	15	0	0
133	ಸಾದಾ ಬುಗಡಂಚಿನ ಧೋತ್ರ	0	0	0	4	0	0
					264	13	0
	ಈ ಬಾಬತು ಮಾಲುಗಳು ಹೊರ್ತು ಇನ್ನೇನೂ ಹೋಗಿಲ್ಲ ರುಜು ಅರ್ಜಿನಾವರ್ತಿ ಸರ್ದೀದಾರ್ ಯಂದು ಇಧೆ						
	(ಕಾಪಿ.)						
	ವೆಂಕಟಾಚಾರ್ಯರ ಬಾಬತು ಸ್ವಂತ ಮಾಲಿನ ತಪಶೀಲ್.						
134	ವಿ. ಡೀ. ಮಗಳು ಅರವಿಂದಮ್ಮನ ಬಾಬತು ಚಿನ್ನದ ಪಾಟ್ಲ ಜೋಡೀ 1ಕ್ಕೆ 12 ವರಹಾ ತೂಕ	0	0	0	75	0	0
135	ಬುಗುಡೀ ಜೋಡೀ 1ಕ್ಕೆ ০॥ ವರಹಾ ತೂಕ ಜೊಂಬಾಯಿ ಮುತ್ತು ಸುತ್ತಿಧೆ	0	0	0	7	8	0
136	ಚಳತುಂಬು ಜೋಡೀ 1ಕ್ಕೆ ಹಿತ್ತಾಳಿ ಬಾಬತು ..	0	0	0	0	4	0
137	ಹಿತ್ತಾಳೀ ಜಾಬಿಲ್ಲೀ 1ಕ್ಕೆ	0	0	0	0	4	0
138	ಬೆಳ್ಳಿ ವಡ್ಯಾಣ ಸುಮಾರು	8	0	0	8	0	0
					91	0	0
139	ಡೀ. ತಂಗಿ ಅಲಮೇಲಮ್ಮನ ಬಾಬತು						
140	ಬೆಳ್ಳೀಬಟ್ಲು 2ಕ್ಕೆ 1–10 ರೂಪಾಯಿ ತೂಕ 1–12 ರೂಪಾಯಿ ತೂಕ	22	0	0	22	0	0
141	ಧಾವಳಿ 1ಕ್ಕೆ	0	0	0	2	8	0
					24	8	0
	ಡೀತಂಗಿ ಶ್ರೀರಂಗಮ್ಮನ ಬಾಬತು						
142	ಕೆಂಪು ಸೀರೆ 1ಕ್ಕೆ	0	0	0	7	0	0
	ವಿ. ಡೀ. ಬಾಬತು						
143	ನಗದು ರೂಪಾಯಿಗಳು	0	0	0	40	0	0
144	ಪಂಚೇ 2ರ ಪೈಕಿ ಬಂದು ನಾಲಾಯಖ್ ವಂದಕ್ಕೆ ಅಂದಾಜಾ ಮೊಬಲಗು	0	0	0	1	0	0
145	ವಿ. ಡೀ. ಮಗ ಲಕ್ಷ್ಮಣಾಚಾರಿ ಪಂಚೆ 2ಕ್ಕೆ	0	0	0	1	0	0
					42	0	0
	ಒಟ್ಟು ಜುಮ್ಲಾ....				164	8	0

ಶಿವಮೊಗ್ಗಾ ಡಿಸ್ಟ್ರಿಕ್ಟು.

ತಾರೀಖು 25ನೇ ಆಗಸ್ಟು 1887.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ, ಸನ್ 1887ನೇ ಇಸವಿ ಆಕ್ಟೋಬರ ಗುರ್ರೇ ಲಾಗಾಯಿತು 1888ನೇ ಇಸವಿ ಜೂನ್ 15ನೇ ತಾರೀಖುವರಿಗೆ ಸುಮಾರು 200 ಯಕರೆ ಜಂಗಲೀಯನ್ನ ಕ್ಲಿಯರ್‌ಮೂಡಿಸಿ 18, ಅಂಗುಲ ಲಾಂಬಿ 18, ಅಂಗುಲ ರುಂದೀ 18, ಅಂಗುಲ ಮಟ್ಟುವಾದ (200000) ಯರಡು ಲಕ್ಷ ಗುಣಿಗಳನ್ನು ತೆಗಿಯತಕ್ಕ ಬಗ್ಯೆ ಈ ತಾರೀಖು ಲಾಗಾಯಿತು (1887ನೇ ಇಸವಿ) ಆಕ್ಟೋಬರ 15ನೇ ತಾರೀಖುವರಿಗೆ ಟೆಂಡರುಗಳು ಅಂಗೀಕರಿಸಲ್ಪಡುತದೆ.

ಕ್ಲಿಯರ್‌ಮೂಡತಕ್ಕ ಸ್ಥಳ.	ಯಕರೆ.	ಗುಣಿಗಳ ಸಂಖ್ಯೆ.
ಲಕ್ಕುವಳ್ಳೀ ತರೀಕೆರೇ ತಾಲ್ಲೂಕು,	50	50000
ಸಕ್ರೇಬೈಲ್ ಶಿವಮೊಗ್ಗಾ ತಾಲ್ಲೂಕು	50	50000
ಅನಿಸೆನಕಟ್ಟೆ ಡಿಟೋ	25	25000
ಕಾಳೇನಹಳ್ಳೀ ಶಿಕಾರೀಪುರ	25	25000
ಕೆಡ್ಡಿಹಳ್ಳೀ ಸೊರಬದ ತಾಲ್ಲೂಕು	50	50000
	200	200000

2. ಟೆಂಡರುಗಳು ಕ್ಲಿಯರ್‌ಮೂಡಲಿಕ್ಕೂ ಗುಣೀ ತೆಗಿಸುವದಕ್ಕೂ ಬೇರೆಬೇರೆಯಾಗಿ ದರ ನಮೂದ್ ಮೂಡಬೇಕು. ಕ್ಲಿಯರ್ ಮೂಡಲಿಕ್ಕೆಯಾಗಲೀ ಯಾ ಗುಣಿಗಳನ್ನ ತೆಗಿಯಲಿಕ್ಕೆ ಆಗಲಿ ಅಥವಾ ಯರಡಕ್ಕೂ ಪಟ್ಟಿಗೆ ಯಾಗಲಿ ಟೆಂಡರ್ ಕೊಡಬಹುದು.

3. ಕ್ಲಿಯರ್ ಮೂಡುವದರಲ್ಲಿ ಮರಗಳು ಸೊಸಿಗಳು, ಬಿದರು ಟೆಂಡ್ಲುಗಳು, ನೆಲದಿಂದ 2 ಅಡೀ ವಳಗೆ ಕಡಿಯತಕ್ಕದ್ದು, ನಾಟೂ ಮತ್ತು ಬೆಲಗಿಗೆ ಲಾಯಖಾದಂಥಾ ಮರ ಮತ್ತು ಸೊಸಿಗಳು, ಮತ್ತು ಉಪಯೋಗವಾದಂಥಾ ಬಿದರುಗಳು ರೆಂಬೆ ಮುಳ್ಳು ವಗೈರೆಗಳನ್ನು ಕಡದು ಅಲ್ಲೇ ಬಿಡತಕ್ಕದ್ದು. ರೆಂಬೆಗಳು ಮತ್ತು ಮುಳ್ಳುಗಳು ವಗೈರೇ ಕಚರಾ ರಾಶಿಗಳಾಗಿ ಪಟ್ಟಿ ಸುಡತಕ್ಕದ್ದು, ಕ್ಲಿಯರ್‌ಮೂಡಿದ್ದ ಜಾಗಾವು 1888ನೇ ಇಸವಿ ಏಪ್ರೈಲ್ ತಾರೀಖು 30ರ ವಳಗಾಗಿ ಗುಣೀ ತೆಗಿಯಲಿಕ್ಕೆ ಸಿದ್ಧವಾಗಿರಬೇಕು, ಗುಣೀ ತೆಗಿಯುವ ಕೆಲಸವು ಜೂನ್ 30ನೇ ತಾರೀಖಿನ ವಳಗಾಗಿ ಮುಗಿಯತಕ್ಕದ್ದು.

4. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನಮುಚ್ಚಳಿಕೇ ಷರ್ತುಗಳಿಗೆ ಅನುಸರಿಸಿ ನಡಿಯುವ ಹಾಗೆ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯಿತು 3 ದಿವಸದ ವಳಗಾಗಿ (100) ನೂರು ರೂಪಾಯಿ ಠೇವಣೀ ಇಡತಕ್ಕದ್ದು.

5. ಸನ್ 1887ನೇ ಇಸವಿ ಡಿಶಂಬರ ಆಖೈರ್ ವಳಗಾಗಿ ಕ್ಲಿಯರ್‌ಮೂಡುವ ಕೆಲಸವೂ 1888ನೇ ಇಸವಿ ಮೇ ಆಖೈರುವಳಗಾಗಿ ಗುಣೀ ತೆಗಿಯುವ ಕೆಲಸವೂ ತಕ್ಕ ಅಭಿವೃದ್ಧೀಯಲ್ಲಿ ಇಲ್ಲದಿದ್ದ ಪಕ್ಷಕ್ಕೆ ಕಂಟ್ರಾಕ್ಟು ರದ್ದು ಮೂಡಲಿಕ್ಕೆ ಅಸಿಸ್ಟೆಂಟ್ ಕನ್ಸರವೇಟರ ಸಾಹೇಬರವರು ಸ್ವತಂತ್ರರಾಗಿರುತ್ತಾರೆ, ಮತ್ತು ಠೇವಣೀ ಯಿಟ್ಟ ಮೊಬಲಗು ಸರ್ಕಾರಕ್ಕೆ ಶೇರಿಸಲ್ಪಡತಕ್ಕದ್ದು.

6. ಈ ನೋಟಿಫಿಕೇಷನ್‌ನಲ್ಲಿ ನಮೂದ್ ಮೂಡಿದ ತಾರೀಖು ವಳಗೆ ಕ್ಲಿಯರ್ ಮತ್ತು ಗುಣೀ ತೆಗಿಯುವ ಕೆಲಸವು ಸಂಪೂರ್ಣವಾಗಿ ಪೂರೈಸದಿದ್ದ ಪಕ್ಷಕ್ಕೆ ಕೆಲಸ ಮೂಡಿದ್ದ ಭಾಗಕ್ಕೆ ಕಂಟ್ರಾಕ್ಟುದಾರನಿಗೆ ಸರಕಾರದಿಂದ ಏನೇನೂ ಸಲ್ಲತಕ್ಕದ್ದಿಲ್ಲವು, ಮತ್ತು ಠೇವಣೀ ಇಟ್ಟ ಮೊಬಲಗಿನ ಹಕ್ಕು ತಪ್ಪಿಹೋಗುವದು.

7. ಟೆಂಡರಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕನ್ಸರವೇಟರವರ ಆಫೀಸಿಗೆ ಕಳುಹಿಸಬೇಕು. ಯಾವ ಟೆಂಡರನ್ನಾಗಲಿ ಕಾರಣವನ್ನ ತೋರಿಸದೇ ಮಂಜೂರ್ಮಾಡದೇ ಇರಲಿಕ್ಕೆ ಅಸಿಸ್ಟೆಂಟ್ ಕನ್ಸರವೇಟರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ.

8. ಇದರ ಸಿವಾಯಿ ಯಿನ್ನೇನಾದರೂ ಸಂಗತೀ ತಿಳಕೊಳ್ಳತಕ್ಕದ್ದಿದ್ದರೆ ಶಿವಮೊಗ್ಗಾ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕನ್ಸರವೇಟರ್ ಸಾಹೇಬರವರಲ್ಲಿ ತಿಳಕೊಳ್ಳಬಹುದು.

ಯಿ. ಪಿ. ಲಾರಿ,
ಅಸಿಸ್ಟೆಂಟ್ ಕನ್ಸರವೇಟರ್ ಆಫ್ ಫಾರೆಸ್ಟ್.

ಕೊಡಗು.

ನೋಟೀಸ್.

ತಾರೀಖು 5ನೇ ಸೆಪ್ಟಂಬರ್ 1887.

ಇಂಜನಿಯರು ಇಲಾಖಾ ಬಾಬತು ತಾಂಬ್ರದ ತಗಡುಗ್ಗಳು ಮತ್ತು ಮೊಳೆಗಳು ಸುಮಾರು 200 ಪೌಂಗಳು ಮಡಿಕೇರೀ ತಾಲ್ಲೂಕು ಕಚೇರೀಮುಂದೆ ಸೆಪ್ಟಂಬರ್ ತಾರೀಖು 9ನೇ ಶುಕ್ರವಾರದ ಲಾಗಾಯತು ಪ್ರತಿ ಶುಕ್ರವಾರದಲ್ಲೂ ಇನ್ನೊಂದು ನೋಟೀಸ್ ಕೊಡುವ ಪರಿಯಂತರ ಹರಾಜ್ ಹಾಕಲ್ಪಡುತವೆ. (ನಗದು ಹಣ.)

ಇ. ಐ. ಪೆರ್ರಾಮ್,
ಎಗ್ಸಿಕ್ಯೂಟಿವ್ ಇಂಜನಿಯರ್.

ಮೈಸೂರ ಗೆಜೆಟ್ ಚಂದಾ ದರ ವಗ್ಯೆರೇ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಛಷ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.	

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)	..	2 8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ	..	1 4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:-

ಮೊದಲನೇ ಸಲಕ್ಕೆ	..	5 0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	..	2 8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಮುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟೆ ವಗ್ಯೆರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10 0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	„	..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಟ್ಟಿ 1ಕ್ಕೆ	.	0 8
ಎರಡನೇ ದಫಾ ಡಿಟೋ	ಡಿಟೋ	..	0 6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	..	..	0 4

ಷರಾ.—ಚಂದಾ ವಗ್ಯೆರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಟಿ. ಟಿ. ಲೆನರಡ್,
ಮೈ. ಗೆ. ಕಂಪೈಲರ್.

Mysore Government Press, Bangalore.—1887.

737

ಮೈಸೂರ ಗೆಜೆಟ್.

ನಂ. 39 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 1, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 15ನೇ ಸೆಪ್ಟಂಬರ್ 1887.

ನಂ. 115.—ಚಿತ್ರದುರ್ಗ ಡಿಸ್ಟ್ರಿಕ್ಟಿನ ಮೆ|| ಯಿ. ಆರ್. ವೈದ್ಯನಾಥಶಾಸ್ತ್ರಿಯವರಿಗೆ 1887ನೇ ಇಸವಿ ಆಗಸ್ಟು 9ನೇ ಮುಕ್ಕಾಂ 75ನೇ ನಂಬರ್‌ವುಳ್ಳ ಈ ಆಫೀಸಿನ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾ ಪೈಕಿ ಉಪಯೋಗಿಸಿಕೊಳ್ಳದೇ ಯಿರುವಂತಾ ಏಳು ದಿನಗಳ ರಜಾ ರದ್ದುಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1243.—ಸಿವಿಲ್ ಲೀವ್ ಕೋಡಿನ 73ನೇ ಸೆಕ್ಷನ್ 2ನೇ ನಿಬಂಧನೆಯನ್ನನುಸರಿಸಿ, ಸಾಗರದ ಮುನಸಿಫ್ ಮೆ|| ಬಿ. ನರಸಿಂಹಯ್ಯಂಗಾರ್ರವರಿಗೆ ದಸರಾ ಹಬ್ಬದ ರಜಾಕ್ಕೆ ಜಾಸ್ತಿಯಾಗಿ, 1887ನೇ ಇಸವಿ ಅಕ್ಟೋಬರ್ 3ರ ಲಾಗಾಯ್ತು ಯಾ ಅವರು ವುಪಯೋಗಿಸಿ ಕೊಳ್ಳುವ ತಾರೀಖು ಲಾಗಾಯತು 14 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 5ನೇ ಸೆಪ್ಟಂಬರ 1387.

ನಂ. 105.—ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲೀ ತಾಲ್ಲೂಕು ಪೈಕೀ ಇದರಡಿ ನಮೂದಾಗುವ ಗ್ರಾಮಗಳು ಅದೇ ತಾಲ್ಲೂಕಿನಲ್ಲಿರುವ ಅಜಾಬಾಜಾ ಗ್ರಾಮಗಳಿಗೆ ಶೇರಿಸಲ್ಪಡತಕ್ಕದ್ದು.

ಹೋಬಳಿ.	ನಂಬರು.	ಕಾಯಂ ಇರತಕ್ಕ ಗ್ರಾಮಗಳ ಹೆಸರು.	ನಂಬರು.	3ನೇ ಮೇಸ್ತಕಿನಲ್ಲಿ ನಮೂದಿಸಿರುವ ಗ್ರಾಮಗಳಿಗೆ ಶೇರಿಸಲ್ಪಡತಕ್ಕ ಗ್ರಾಮಗಳ ಹೆಸರು.	ಷರಾ.
1	2	3	4	5	6
ಚೇಲೂರು.	1	ಚೇಲೂರು ..	1	ಚಿಗರಮಾಕಲಪಲ್ಲಿ ..	ಬೇಚಿರಾಖ್.
			2	ರಾಗೀಮಾಕಲಪಲ್ಲಿ ..	ಡಿಟೋ
	2	ನಿಮ್ಮಕಾಯಲಪಲ್ಲಿ ..	1	ನಲ್ಲಬೈಂಗರಪಲ್ಲಿ ..	
				ಕುರಬಪಲ್ಲಿ ..	ಡಿಟೋ
	3	ಷೇರಖಾನ್ ಕೋಟೆ ..	1	ಪೋತೂರು ..	
			2	ಚೇಲೂರ ಪೈಕೀ ವಡದ ಭಾಗ ..	
	4	ಹೊಸಹೂಡ್ಯ ..	1	ಪುಲ್ಲಗುಂಡ್ಲಪಲ್ಲಿ ..	ಡಿಟೋ
			2	ಕೋಪ್ಪಲಪಲ್ಲಿ ..	ಡಿಟೋ
				ಚೇಲೂರ ಪೈಕೀ ವಡದ ಭಾಗ ..	
	5	ಪೆಮ್ಮಯ್ಯಗಾರಪಲ್ಲಿ ..	1	ಚಾಮವಾರಪಲ್ಲಿ ..	ಡಿಟೋ
			2	ಚೇರಲಪಲ್ಲಿ ..	ಡಿಟೋ
	6	ಪಾಳ್ಯಕೆರೆ ..	1	ಚಿನ್ನಮಂದೇಪಲ್ಲಿ ..	ಡಿಟೋ
	7	ವೋಚಕನಪಲ್ಲಿ ..	1	ಅಬರವಾರಪಲ್ಲಿ ..	
	8	ಪೆದ್ದರಾಜಪಲ್ಲಿ ..	1	ಚಿಟಗನಪುರ ..	
	9	ರಾಮಜಿಪಲ್ಲಿ ..	1	ಮುಗವಮಲ್ಲವಾಂಡ್ಲಪಲ್ಲಿ ..	
				ದಾಯಲಪಲ್ಲಿ ಪೈಕೀ ವಡದ ಭಾಗ ..	
	10	ದೈಯಲಪಲ್ಲಿ ..	1	ಜಿಂಕಪಲ್ಲಿ ..	
			2	ಕೊತ್ತೂರಪಲ್ಲಿ ..	
			3	ಜೊಮ್ಮನಪಲ್ಲಿ ..	ಡಿಟೋ
			4	ಪಚ್ಚಿಪಾಲಪರತಿ ..	ಡಿಟೋ
	11	ಮಂಡೇಪಲ್ಲಿ ..	1	ಪಿಲ್ಲಿಗುಟ್ಟ ..	
	12	ದೊಡ್ಡಿಪಲ್ಲಿ ..	1	ಯಾಕಿಲಿಪಲ್ಲಿ ..	ಡಿಟೋ
	13	ಕೊಂಡಿಕೊಂಡೆ ..	1	ಬಲಕವಾರಪಲ್ಲಿ ...	ಡಿಟೋ
	14	ನಲಗುಟ್ಟಪಲ್ಲಿ ..	1	ಗುಂಟ್ರಪಲ್ಲಿ ..	
			2	ನಾಗಿರೆಡ್ಡಿಪಲ್ಲಿ ..	ಡಿಟೋ
	15	ವೆಂಕಟಾಪುರ ..	1	ಮಂಗಲಪಲ್ಲಿ ..	ಡಿಟೋ
			2	ಪುಲಗೂರಪಲ್ಲಿ ..	ಡಿಟೋ
			3	ದೈಮಾಲಪಲ್ಲಿ ..	
			4	ಜಿ. ಕಪಲ್ಲಿ ..	
	16	ಪುಲಗಲ್ಲು ..	1	ಪುಲಗತ್ತಿಪಲ್ಲಿ ..	
			2	ಚೋಕ್ಕವೇಲಂಪಲ್ಲಿ ..	ಡಿಟೋ
			3	ಪ್ಯಾಮುಲವಾರಪಲ್ಲಿ ..	ಡಿಟೋ
			4	ಬಂವರಲಪಲ್ಲಿ ..	ಡಿಟೋ

ಹೋಬಳಿ.	ನಂಬರ್.	ಖಾಯಂ ಯಿರತಕ್ಕ ಗ್ರಾಮಗಳ ಹೆಸರು.	ನಂಬರ್.	3ನೇ ಕಾಲಂನಲ್ಲಿ ನಮೂದಿಸಿರುವ ಗ್ರಾಮಗಳಿಗೆ ಸೇರಿಸಲ್ಪಡತಕ್ಕ ಗ್ರಾಮಗಳ ಹೆಸರು.	ಷರಾ.
1	2	3	4	5	6
ಪಾತಪಾಳ್ಯ.	37	ಪಾಪಿನಾಯಕನಪಲ್ಲಿ ..	1	ಮೈಲಪಲ್ಲಿ ..	
	38	ಜಿನ್ನಂಪಲ್ಲಿ ..	1	ರಾಲಗುಟ್ಟಪಲ್ಲಿ ..	
	39	ವೈಪಾಳ್ಯ ..	1	ಮರವಪಲ್ಲಿ ..	ಬೇಚಿರಾಖ್.
			2	ನಾಗನಗುಟ್ಟಪಲ್ಲಿ ..	ಡಿಟೋ
			3	ತಂಗಲಪಲ್ಲಿ ..	
			4	ಕಾಟಂದೇವರಗುಟ್ಟ ..	
			5	ಚಿಗರಮಾಕಲಪಲ್ಲಿ ..	ಡಿಟೋ
	40	ವಡಿಗೆರೆ ..	1	ಉತ್ತಪಲ್ಲಿ ..	ಡಿಟೋ
			2	ಯರಕಚೆರೆಪಲ್ಲಿ ..	ಡಿಟೋ
	41	ನಡಿಂಪಲ್ಲಿ ..	1	ದೇವಗಾನಪಲ್ಲಿ ..	ಡಿಟೋ
	42	ಪಾಚರ್ಲ ಪಲ್ಲಿ ..	1	ಶೇಷಾದ್ರಿಪಲ್ಲಿ ..	ಡಿಟೋ
	43	ಪೋಲನಾಯ್ಕನಪಲ್ಲಿ ..	1	ನಲ್ಲರಾಚಿಪಲ್ಲಿ ..	
			2	ಮೋಟಕಪಲ್ಲಿ ..	
			3	ಅಗತಮಡಿಕೆ ..	ಡಿಟೋ
	44	ದುಗಿ ನಾಯ್ಕನಪಲ್ಲಿ ..	1	ಯುಸ್ಥಿ ವಾಂಡ್ಲ ಪಲ್ಲಿ ..	ಡಿಟೋ
	45	ಗುಮ್ಮಲಪಲ್ಲಿ ..	1	ಭೇರಿವಂಡ್ಲ ಪಲ್ಲಿ ..	ಡಿಟೋ
			2	ಯರ್ರಗುಂಡ್ಲ ಪಲ್ಲಿ ..	ಡಿಟೋ
	46	ಕನಗಮಾಕಲಪಲ್ಲಿ ..	1	ಪಿಲಿಗುಟ್ಟೆ ..	
	47	ಸೋಲಿಮಾಕಲಪಲ್ಲಿ ..	1	ಛಪ್ಪಂಪಲ್ಲಿ ..	
ಬಾಗೇಪಲ್ಲಿ.	48	ಮಾಕರಡ್ಡಿ ಪಲ್ಲಿ ..	1	ಮುದ್ದಲಪಲ್ಲಿ ..	
	49	ಬಾಲರಡ್ಡಿ ಪಲ್ಲಿ ..	1	ರಾಗಿಮಾಕಲಪಲ್ಲಿ ..	
			2	ಕನ್ನಂಪಲ್ಲಿ ..	
	50	ಬಾಗೇಪಲ್ಲಿ ..	1	ಜಿಲಕರಪಲ್ಲಿ ..	
			2	ಕೊಂಡರಾಜಪಲ್ಲಿ ..	ಡಿಟೋ
	51	ಹೊಸಕುಡ್ಯ ..	1	ತಂಗೇಪಲ್ಲಿ ..	
	52	ಪಾತಬಾಗೇಪಲ್ಲಿ ..	1	ಮರಿಮಾಕಲಪಲ್ಲಿ ..	ಡಿಟೋ
	53	ಮಲಸಂದ್ರ ..	1	ಸೆಟ್ಟಿವಾರದಿನ್ನೆ ..	ಡಿಟೋ
			2	ಉಗ್ಗನಲನಾಗಯ್ಯಂಗಾರಪಲ್ಲಿ ..	
	54	ಕದರನ್ನಗಾರಪಲ್ಲಿ ..	1	ಗೊಲ್ಲಪಲ್ಲಿ ..	ಡಿಟೋ
	55	ಸಾದಲವಾರಪಲ್ಲಿ ..	1	ಜೋಡಂವಾರಪಲ್ಲಿ ..	ಡಿಟೋ
	56	ಲಾಗುಮದ್ದೇಪಲ್ಲಿ ..	1	ಮರಿಮಾಕಲಪಲ್ಲಿ ..	
	57	ಕರಕೂರು ..	1	ಶಂಕನಾರಂಪಲ್ಲಿ ..	ಡಿಟೋ
			2	ಬಿದರ್ಲ ಪಲ್ಲಿ ..	ಡಿಟೋ
	58	ಪರಗೋಡು ..	1	ವಡ್ಡುಪಾಲದಿನ್ನೆ ..	ಡಿಟೋ
			2	ಕದರನಾಯಕನಪಲ್ಲಿ ..	ಡಿಟೋ

ಹೋಬಳಿ.	ನಂಬರು.	ಕಾಯಂ ಯಿರತಕ್ಕ ಗ್ರಾಮಗಳ ಹೆಸರು.	ನಂಬರು.	3ನೇ ಮೇಸ್ತ್ರಕಿನಲ್ಲಿ ನಮೂದಿರುವ ಗ್ರಾಮಗಳಿಗೆ ಶೇರಿಸಲ್ಪಡತಕ್ಕ ಗ್ರಾಮಗಳ ಹೆಸರು.	ಷರಾ.
1	2	3	4	5	6
ಗುಳ್ಳೂ.	59	ಗುಳ್ಳೂರು ..	1	ಗೋಣಪಾತಲದೊಡ್ಡಿ ..	
			2	ತಾವಲೀವಾರದಿನ್ನೆ ..	
	60	ಚಂಚರಯ್ಯನಪಲ್ಲಿ ..	1	ಬ್ರಾಹ್ಮಣಪಲ್ಲಿ ..	
			2	ಗುಂಡ್ಲ ಪಲ್ಲಿ ..	
	61	ನರಸಾಪುರ ..	1	ಮನವಾರದಿನ್ನೆ ..	
	62	ಚಿನ್ನ ಕಾಯಲಪಲ್ಲಿ ..	1	ಐಯ್ಯವಾರಪಲ್ಲಿ ..	
	63	ಕನ್ನಂಪಲ್ಲಿ ..	1	ದೊರನಾಲಪಲ್ಲಿ ..	
	64	ನಲ್ಲಪ್ಪರಡ್ಡಿ ಪಲ್ಲಿ ..	1	ಯರ್ರನಾಗಿರಡ್ಡಿ ದಿನ್ನೆ ..	
	65	ಪಿಚ್ಚಲವಾರಪಲ್ಲಿ ..	1	ಗಾಜಲಪಲ್ಲಿ ..	
	66	ಪಾತಮಾಕಲಪಲ್ಲಿ ..	1	ಜೋಗಿರಡ್ಡಿ ಪಲ್ಲಿ ..	
			2	ಗುಂಡಂವಾರಪಲ್ಲಿ ..	
	67	ದೇವಿಕುಂಟೆ ..	1	ವಕ್ರಜಟ್ಟಿಕುಂಟೆ ..	ಬೇಚಿರಾಖ್.
	68	ಹೊನ್ನಂಪಲ್ಲಿ ..	1	ಮಾದಪ್ಪಗಾರಪಲ್ಲಿ ..	
	69	ವೆಸಲಪತ್ರಿ ..	1	ದೇವಲವಾರದಿನ್ನೆ ..	ಡಿಟೋ.
	70	ರಾಮನಾಥಪಲ್ಲಿ ..	1	ರಾಗಿಮಾಕಲಪಲ್ಲಿ ..	ಡಿಟೋ.
			2	ಕುರುಬರಪಲ್ಲಿ ..	ಡಿಟೋ.
	71	ಕಾಟಕೋಟೆ ..	1	ಕೃಷ್ಣಾಪುರ ..	
			2	ಚದ್ದರಡ್ಡಿ ಪಲ್ಲಿ ..	ಡಿಟೋ.
ಪಾತ.	72	ನಾರೆಮದ್ದೆಪಲ್ಲಿ ..	1	ಕಾಂತಂಪಲ್ಲಿ ..	ಡಿಟೋ.
	73	ವಸಂತಪುರ ..	1	ಕಸಬಾ ಪಾಳ್ಯ ..	
			2	ಊರಸುತ್ತ ಹೋಬಳಿ ..	
	74	ದೇವಲವಾರಪಲ್ಲಿ ..	1	ಸೋಮನಾಥಪುರದ ದಾಖಲೇಗ್ರಾಮ ..	
	75	ಪೋತಪಾಳ್ಯ ..	1	ಯಿಟ್ಟಮಾಕಲಪಲ್ಲಿ ..	
			2	ಚಿಂತಲಕುಂಟೆ ..	ಡಿಟೋ.
			3	ಬೂಕನಪಲ್ಲಿ ..	
	76	ನಲ್ಲಚರುವು ..	1	ಭೈರೇಪಲ್ಲಿ ..	
			2	ಯಲಗಲಪಲ್ಲಿ ..	
				ಪೋತಪಾಳ್ಯದ ವಡದ ಭಾಗ ..	
	77	ಗುಜ್ಜೇಪಲ್ಲಿ ..	1	ರಾಮಾಂಬಾಪುರ ..	ಡಿಟೋ.
	78	ಪಾತಕೋಟೆ ..	1	ಕಾಟ್ಟೈಗಾರಪಲ್ಲಿ ..	
			2	ಕುಂದನಂಪಲ್ಲಿ ..	
			3	ಗುಟ್ಟಮಾದಪಲ್ಲಿ ..	
			4	ಹಿರಣ್ಯದೇವಾಲ ..	
	79	ರಾಚೇವಾರಪಲ್ಲಿ ..	1	ಮುದ್ರೆಪಲ್ಲಿ ..	ಡಿಟೋ.
			2	ನೆಟ್ಟವಾರಪಲ್ಲಿ ..	ಡಿಟೋ.
	80	ನೀರಗಂಟಿಪಲ್ಲಿ ..	1	ಕನಮಕುಂಟಪಲ್ಲಿ ..	
	81	ಗೂರಲದಿನ್ನೆ ..	1	ಚಲವಾರಪಲ್ಲಿ ..	
	82	ಕಮಸನಪಲ್ಲಿ ..	1	ಸಿರಗಂಡ ಪಲ್ಲಿ ..	
				ಪಾತಪಾಳ್ಯದ ವಡದ ಭಾಗ ..	
				ಗುಜ್ಜೇಪಲ್ಲಿ, ಕಂಸನಪಲ್ಲಿಯ ವಡದ ಭಾಗ ..	
	83	ಭೇವರಾಜಪಲ್ಲಿ ..	1	ವೆದ್ದೂರದಿನ್ನೆ ..	

ತಾರೀಖು 7ನೇ ಸೆಪ್ಟಂಬರ್ 1887.

ನಂ. 106.–ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮಗಳು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಹಗಲು 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಜಡ ದಖಾಸ್ತುದಾರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ಬೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವ್ಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಖಂ. ಕೊ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಬೆಂಗಳೂರು	ಆನೇಕಲ್	ಸರ್ಜಾಪುರ	ಕೋಟಿಗಾನಹಳ್ಳಿ	ನಂಜುಂಡಭಟ್ಟ ವ ಇತರ 2 ಜನರು	16 14 0	150 0 0	116 14 0	178 11 11	ಸ್ನ 1887ನೇ ಇಸವಿ ಅಕ್ಟೋಬರ್ ತಾರೀಖು 15ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ತಾರೀಖು 2ನೇ ಸೆಪ್ಟಂಬರ್ 1887.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಚಡದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ಧಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ಬೇಖಿಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುಪ್ತಖೂಫ್ ಮಾಡಲ್ಪಡತಕ್ಕದ್ದು. ಪರಂತು, ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
						ರೂ. ಆ. ಪೈ.			
ಮೈಸೂರು.	ಚಾಮರಾಜನಗರ.	ಉಮ್ಮತ್ತೂರು	ಮೂಡ್ಲು ಅಗ್ರಹಾರ	ಗೋಪಾಲಕೃಷ್ಣಭಟ್ಟ ವ ಇತರ 18 ಜನರು	..	403 7 0	357 5 6	134 1 10	1887ನೇ ಇಸವಿ ಅಕ್ಟೋಬರ್ ತಾರೀಖು 12ರಲ್ಲು ತಾಲ್ಲೂಕು ಕಚ್ಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ತಾರೀಖು 14ನೇ ಸೆಪ್ಟಂಬರ್ 1887.

ನಂ. 114.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮಗಳು ಇದರಡೀಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಮುಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಬಳಪಟ್ಟಿರುತ್ತೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲೀಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್ ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೇ. ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎ. ಗುಂ. ಗ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕಡೂರು.	ಚಿಕ್ಕ ಮಗಳೂರು.	ವಸ್ತಾರೆ.	ಪಂಪಾಪುರ.	ಹೆಬ್ಬಾರ ರಾಮಯ್ಯ ವಗೈರೇರು	307 35 0	599 15 7	195 8 0	51 6 3	1887ನೇ ಇಸವಿ ಅಕ್ಟೋಬರ್ ತಾರೀಖು 25ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ನಂ. 117.—ಈ ಕೆಳಗೆ ಬರುವ ನಿಬಂಧನೆಗಳು ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಮೈಸೂರ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ಕೆಲಸ ನಡಿಸತಕ್ಕ ಬಗ್ಯೆ ನಿಬಂಧನೆಗಳು.

I. ಸಾಮಾನ್ಯವಾಗಿ ಎಲ್ಲಾ ಪ್ರಜೆಗಳಿಗೂ ಮುಖ್ಯವಾಗಿರುವ ಸಂಗತಿಗಳಲ್ಲಿ ಯಾವದಾದರೂ ವಿದ್ಯಮಾನಗಳು ಯಾವ ಮೆಂಬರಿಗಾದರೂ ತಿಳಿಯಬೇಕಾದಲ್ಲಿ ಡೆಪ್ಯುಟಿ ಕಮ್ಮಿಷನರವರಿಗಾಗಲಿ ಅಥವಾ ಸರಕಾರದ ಯಾವದಾದರೂ ಸೆಕ್ರೆಟೇರಿಯವರಿಗಾಗಲಿ ಬರದುಕೊಂಡು ತಿಳಿದುಕೊಳ್ಳಬಹುದು.

II. ಸಭೆ ಶೇರುವ ಕಾಲದಲ್ಲಿ ಯಾವ್ಯಾವ ಸಂಗತಿಗಳಲ್ಲಿ ಸವಾಲ್ ಮಾಡಬೇಕೋ ಆ ಸಂಗತಿಗಳ ವಿಷಯದಲ್ಲಿ ಆಯಾಯ ಡಿಸ್ಟ್ರಿಕ್ಟು ಮೆಂಬರುಗಳು ಪರಸ್ಪರ ಕಾಗದ ಪತ್ರಗಳನ್ನು ನಡಿಸಿ—ಮೈಸೂರಿಗೆ ಎಲ್ಲಾ ಮೆಂಬರುಗಳೂ ಬಂದನಂತರ—ಎಲ್ಲರೂ ಸಭೆಶೇರಿ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚಿಸಬೇಕಾದ ಪ್ರಮೇಯಗಳನ್ನು ನಿಷ್ಕರ್ಷೆಮಾಡಿಕೊಂಡು ಯಾವ್ಯಾವ ಪ್ರಮೇಯಗಳನ್ನು ಕುರಿತು ಯಾರ್ಯಾರು ವಾದಿಸಬೇಕೋ ಅದನ್ನು ತೀರ್ಮಾನ ಮಾಡತಕ್ಕದ್ದು.

III. ಈ ಪ್ರಕಾರ ತೀರ್ಮಾನವಾದ ಸಂಗತಿಗಳನ್ನೂ ಅವುಗಳನ್ನು ಕುರಿತು ಯಾರು ಮಾತನಾಡುವರೋ ಅವರ ಹೆಸರುಗಳನ್ನೂ ನಮೂದಿಸಿ ಒಂದು ಪಟ್ಟಿಯನ್ನು—ಪ್ರಜಾ ಪ್ರತಿನಿಧಿ ಸಭೆಯು ಮೊದಲ್ ಶೇರುವ ತಾರೀಖಿಗೆ ಕೊನೇಪಕ್ಷ 3 ದಿವಸಗಳು ಮುಂಚಿತವಾಗಿ ಚೀಫ್ ಸೆಕ್ರೆಟೇರಿಯವರಿಗೆ ಕಳುಹಿಸತಕ್ಕದ್ದು.

IV. ನಂತರ ಸದ್ರೀ ಪಟ್ಟಿಯಲ್ಲಿ ನಮೂದಿರತಕ್ಕ ಸಂಗತಿಗಳು ಯಾವ ಕ್ರಮ ಪ್ರಕಾರ ಚರ್ಚಿಸಲ್ಪಡುವವೋ ಅದನ್ನು ದಿವಾನರವರು ತೀರ್ಮಾನಿಸಿ ಪ್ರಸಿದ್ಧ ಪಡಿಸುತ್ತೆ.

X. ಆಯಾಯ ದಿವಸದ ಸಭೆಯ ನಡವಡಿಕೆಗಳನ್ನು ಮಾರಣೇದಿವಸವೇ ಕನ್ನಡದಲ್ಲಿ ಛಾಯಿಷ್ ಮಾಡಲು ಪ್ರಯತ್ನ ಮಾಡಲ್ಪಡುತ್ತೆ.

ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳನ್ನು ಚುನಾಯಿಸತಕ್ಕ ಬಗ್ಯೆ ನಿಬಂಧನೆಗಳು.

I. ಪ್ರತಿ ತಾಲ್ಲೂಕಿನಿಂದ ಜಮೀನ್‌ದಾರ್ರುಗಳ ಪ್ರತಿನಿಧಿಗಳಾಗಿ VIIIನೇ ರೂಲಿಗೆ ಒಳಪಟ್ಟು ಸಾಮಾನ್ಯವಾಗಿ ತಾಲ್ಲೂಕು ಒಂದಕ್ಕೆ ಐದು ಮೆಂಬರುಗಳಿಗಿಂತಾ ಜಾಸ್ತೀಯಾಗಿ ಚುನಾಯಿಸಲ್ಪಡಕೂಡದು. ಸಾಲೀಯಾನಾ ಸರಕಾರಕ್ಕೆ ಡೆಪ್ಯುಟಿ ಕಮ್ಮಿಷನರವರಿಂದ ಗೊತ್ತು ಮಾಡಲ್ಪಡುವ ಮೊಬಲಗಿಗೆ ಕಮ್ಮೀ ಯಿಲ್ಲದೆ ಜಮೀನ್ ಬಾಬಿನಲ್ಲಿ ಕಂದಾಯ ಕೊಡತಕ್ಕ ಜಮೀನ್‌ದಾರ್ರುಗಳ ಪೈಕೀ ಮೆಂಬರುಗಳನ್ನು ಚುನಾಯಿಸತಕ್ಕದ್ದು. ಆಯಾಯ ತಾಲ್ಲೂಕಿನ ವ್ಯವಸಾಯ ಸ್ಥಿತಿಗೆ ತಕ್ಕ ಹಾಗೆ ಮೇಲ್ಕಂಡ ಮೊಬಲಗನ್ನು ಡೆಪ್ಯುಟಿ ಕಮ್ಮಿಷನರವರು ಗೊತ್ತು ಮಾಡತಕ್ಕದ್ದು.

II. ಡಿಸ್ಟ್ರಿಕ್ಟಿನಲ್ಲಿ ಇರುವ ಇನಾಂ ಗ್ರಾಮಗಳ ಮುತಾಲೀಕರ ತರ್ಫ್ರ ಕೆಲವು ಮೆಂಬರುಗಳು ಚುನಾಯಿಸಲ್ಪಡಬೇಕು.

III. ಡಿಸ್ಟ್ರಿಕ್ಟಿನ ವ್ಯಾಪಾರದ ಕ್ಷೇಮ ಚಿಂತಕರಾದ ವರ್ತಕರು ಮತ್ತು ವ್ಯಾಪಾರಸ್ಥರ ಪೈಕೀ ಕೆಲವು ಮೆಂಬರುಗಳು ಚುನಾಯಿಸಲ್ಪಡಬೇಕು.

IV. ಆಯಾಯ ಡಿಸ್ಟ್ರಿಕ್ಟಿನ ಲೋಕಲ್ ಫಂಡು ಬೋರ್ಡಿನವರು ಸಾಧಾರಣವಾಗಿ ಡಿಸ್ಟ್ರಿಕ್ಟಿನ ಯಲ್ಲಾ ಪ್ರಜೆಗಳಿಗೂ ಪ್ರತಿನಿಧಿಗಳಾಗಿ ತಮ್ಮ ಮೆಂಬರುಗಳ ಪೈಕೀ ಇಬ್ಬರನ್ನು ಸಭೆಗೆ ಕಳುಹಿಸಬಹುದು.

V. ಪ್ರತಿ ಮ್ಯುನಿಸಿಪಾಲಿಟಿಯವರೂ ಒಬ್ಬ ಮೆಂಬರನ್ನು ಸಭೆಗೆ ಕಳುಸಬಹುದು. ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ ಜಾಗಾದಲ್ಲಿರುವ ಮ್ಯುನಿಸಿಪಾಲಿಟಿಯವರೂ ಯಿಬ್ಬರು ಮೆಂಬರುಗಳನ್ನು ಸಭೆಗೆ ಕಳುಹಿಸಬಹುದು.

VI. 100 ಮಂದಿಗೆ ಜಾಸ್ತೀಯಾಗಿ ಮೆಂಬರುಗಳುಳ್ಳ ಸರ್ವಜನ ಕ್ಷೇಮ ಚಿಂತಕರಾದ ಸಂಘದವರುಗಳು ಮತ್ತು ಯೂರೋಪಿಯನ್ ಪ್ಲಾಂಟರ್ ಸಂಘದವರೂ ತಮಗೆ ಪ್ರತಿನಿಧಿಯಾಗಿ ಒಬ್ಬ ಮೆಂಬರನ್ನು ಸಭೆಗೆ ಕಳುಹಿಸಬಹುದು.

VII. ಮೇಲ್ಕಂಡ ರೂಲ್ಸ್‌ಗಳ ಪೈಕೀ ಯಾವದಾದರೂ ಒಂದರ ಪ್ರಕಾರ ಚುನಾಯಿಸಲ್ಪಟ್ಟ ಮೆಂಬರು ಇತರ ರೂಲ್ಸ್‌ಗಳಲ್ಲಿ ಕಂಡಿರುವ ಬಾಬಿನಲ್ಲಿಯೂ ಪ್ರತಿನಿಧಿಯಾಗಿ ಯಿದ್ದಲ್ಲಿ ಪ್ರತಿ ಒಂದು ರೂಲಸ್ ಪ್ರಕಾರವೂ ಪ್ರತ್ಯೇಕ ಪ್ರತ್ಯೇಕ ಮೆಂಬರುಗಳನ್ನು ಚುನಾಯಿಸುವದು ಅವಶ್ಯಕವಿಲ್ಲ.

VIII. ಮೇಲ್ಕಂಡ ಯಲ್ಲಾ ತರಹೇದ ಮೆಂಬರುಗಳ ಒಟ್ಟು ಸಂಖ್ಯೆಯು ಆಯಾಯ ಡಿಸ್ಟ್ರಿಕ್ಟಿಗೆ ಕೆಳಗೆ ಬರೆಯಲ್ಪಟ್ಟಿರುವ ಸಂಖ್ಯೆಗಿಂತ ಸದ್ಯಕ್ಕೆ ಜಾಸ್ತೀ ಯಿರಕೂಡದು.

ಕಡೂರು, ಶಿವಮೊಗ್ಗಾ ಡಿಸ್ಟ್ರಿಕ್ಟುಗಳಿಗೆ, ತಾಲ್ಲೂಕು ಒಂದಕ್ಕೆ ಐದು ಜನ ಮೆಂಬರುಗಳ ಪ್ರಕಾರ.

ಮೈಸೂರು, ಬೆಂಗಳೂರು ಡಿಸ್ಟ್ರಿಕ್ಟುಗಳಿಗೆ— ತಾಲ್ಲೂಕು ಒಂದಕ್ಕೆ 4 ಜನ ಮೆಂಬರುಗಳ ಪ್ರಕಾರವೂ, ಮೈಸೂರು ಮತ್ತು ಬೆಂಗಳೂರು ಪಟ್ಟಣಗಳಿಗಾಗಿ 4 ಜನ ಮೆಂಬರುಗಳು.

ಇತರ ಡಿಸ್ಟ್ರಿಕ್ಟುಗಳಿಗೆ—ತಾಲ್ಲೂಕು ಒಂದಕ್ಕೆ 4 ಜನ ಮೆಂಬರುಗಳ ಪ್ರಕಾರ.

ಈ ಮೇರೆ ಸಭೆಗೆ ಬರತಕ್ಕ ಮೆಂಬರುಗಳ ಸಂಖ್ಯೆ 285ಕ್ಕೆ ಮೀರುವದಿಲ್ಲ.

IX. ಸಭೆಯು ಸೇರುವದಕ್ಕೆ ಒಂದು ತಿಂಗಳು ಮುಂಚಿತವಾಗಿಯೇ ಮೇಲ್ಕಂಡ ಮೇರೆ ಮೆಂಬರುಗಳನ್ನು ಚುನಾಯಿಸಿ ಆ ರೀತಿ ಚುನಾಯಿಸಲ್ಪಟ್ಟ ಮೆಂಬರುಗಳ ಹೆಸರುಗಳನ್ನು ಒಂದು ಪಟ್ಟಿಯಲ್ಲಿ ಬರೆದು ಎಲ್ಲರ ತಿಳುವಳಿಕೇ ಬಗ್ಯೆ ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಕಚೇರಿಯ ಬಹಿರಂಗವಾದ ಸ್ಥಳದಲ್ಲಿ ಸದರೀ ಪಟ್ಟಿಯನ್ನು ಅಂಟಿಸತಕ್ಕದ್ದು. ಚುನಾಯಿಸಿದ ಕೂಡ್ಲೆಯೇ ಆಯಾಯ ಮೆಂಬರುಗಳಿಗೆ ತಿಳಿಸತಕ್ಕದ್ದು.

ತಾರೀಖು 16ನೇ ಸೆಪ್ಟಂಬರ್ 1887.

ನಂ. 116.—ಮೆ|| ಟಿ. ಆನಂದರಾವ್ ಬಿ. ಎ. ಯವರು ಮೈಸೂರು ಡಿಸ್ಟ್ರಿಕ್ಟಿನ ಖಜಾನೆ ಚಾರ್ಜನ್ನು ಮೊಪ್ಪಿಸಿ, ಮೆ|| ಅಬ್ದುಲ್ ರಹಿಮ್ಖಾನ್ಯವರು, ಮಾಹೆ ಮಜಕೂರು ತಾರೀಖು 10ನೇ ಪ್ರಾತಃಕಾಲ ವಹಿಸಿರುತ್ತಾರೆ.

ಕ್ಯಾಂಪ್ ನಂ. 1273.—ಬೌರಿಂಗ್ ಪೇಟೆ ತಾಲ್ಲೂಕು ಅಮಲ್ದಾರ್ ಶ್ರೀನಿವಾಸರಾಯರಿಗೆ 1887ನೇ ಇಸವಿ ಸೆಪ್ಟಂಬರ್ 7ನೇ ಮರ್ಕುಮಿನ 1108ನೇ ನಂಬರ್‌ವುಳ್ಳ ದಿವಾನರವರ ಇಸ್ತಿಹಾರಿನಿಂದ ಮಂಜೂರಾದ ಒಂದು ತಿಂಗಳ ಪ್ರಿವಿಲೀಜ್ ರಜಾವನ್ನು ಅವರು 1887ನೇ ಇಸವಿ ಆಗಸ್ಟು 21ನೇ ತಾರೀಖು ಲಾಗಾಯಿತು ವುಪಯೋಗಿಸಿಕೊಂಡಿರುತ್ತಾರಾಗಿ ಈ ರಜಾ 1887ನೇ ಅಕ್ಟೋಬರ್ 2ನೇ ತಾರೀಖು ವರಿವಿಗೂ ಜಾಸ್ತೀ ಮಾಡಲ್ಪಟ್ಟಿರುತ್ತೆ.

ತಾರೀಖು 20ನೇ ಸೆಪ್ಟಂಬರ್ 1887.

ನಂ. 118.—ಹುಣಸೂರು ತಾಲ್ಲೂಕು ಅಮಲ್ದಾರ್ ಟಿ. ಯಸ್. ಕಮಾಲುದ್ದೀನ್ ಅಲ್ಲೀಖಾನ್ಯವರಿಗೆ 1887ನೇ ಇಸವಿ ಮಾರ್ಚೀ 10ನೇ ಮರ್ಕುಂ 1782ನೇ ನಂಬರ್‌ವುಳ್ಳ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ ಯರಡು ತಿಂಗಳ ಪ್ರಿವಿಲೀಜ್ ರಜಾವನ್ನು 1887ನೇ ಜುಲೈ 8ರ ಲಾಗಾಯಿತು ವುಪಯೋಗಿಸಿಕೊಂಡು, ಆಗಸ್ಟು 27ರಲ್ಲು ಕೆಲಸದ ಮೇಲೆ ಹಾಜರಾಗಿರುತ್ತಾರಾಗಿ ಉಪಯೊಗಿಸಿಕೊಳ್ಳದ 11 ದಿವಸ ರಜಾವನ್ನು ರದ್ದು ಪಡಿಸಿಯಿಧೆ.

ತಾರೀಖು 21ನೇ ಸೆಪ್ಟಂಬರ್ 1887.

ನಂ. 120.—ಮಾಹೆ ಮಜಕೂರು 5ನೇ ಮರ್ಕುಂ 105ನೇ ನಂಬರ್ ಇಸ್ತಿಹಾರನ್ನನುಸರಿಸಿ, ಈ ಕೆಳಗೆ ನಮೂದಾಗುವ ಗ್ರಾಮ ಮತ್ತೊಂದು ಗ್ರಾಮಕ್ಕೆ ದಾಖಲಾಗುವಂತೆ ಅಪ್ಪಣೆ ಮಾಡಿರುತ್ತೆ.

ತಾಲ್ಲೂಕು	ಗ್ರಾಮದ ಹೆಸರು	ಯಾವ ಗ್ರಾಮಕ್ಕೆ ಸೇರತಕ್ಕದ್ದು.
ಬಾಗೇಪಲ್ಲಿ	ನಂಬಿಕುಂಟೆದಿನ್ನೆ	ಪಾಸಲಪರತಿ

ಬಮೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ವಿದ್ಯಾಭ್ಯಾಸದ ಇಲಾಖೆ.

ಸನ್ 1887ನೇ ಇಸವಿ ಸೆಪ್ಟಂಬರ್ ತಾರೀಖು 13.

ಕನ್ನಡ ಭಾಷೆಗಾಗಿ ಚಿನ್ನದ ಬಿರುದು ಬಿಲ್ಲೆ.

ಇದರಿಂದ ತಿಳಿಸಲ್ಪಡುವದೇನಂದರೆ, ಬೆಂಗಳೂರು ಚಿಕ್ಕ ಪೇಟೆಯಲ್ಲಿರುವ ಮಾ|| ರಾ|| ಪಾಲಮಂಡರಾಮರಾವ್ ಎಂಬವರಿಂದ, ಸನ್ 1888ನೇ ಇಸವಿಯಲ್ಲಿ ನಡಿಯುವ ಮೈಸೂರು ದೇಶೀಯ ಪರೀಕ್ಷೆಯ ಕನ್ನಡ ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನು ಹೊಂದಿ ತೇರ್ಗಡೆಯಾಗುವ ವಿದ್ಯಾರ್ಥಿಗೆ 20 ರೂಪಾಯಿ ಬೆಲೆಯುಳ್ಳ ಒಂದು ಚಿನ್ನದ ಬಿರುದುಬಿಲ್ಲೆ ಕೊಡಲ್ಪಡುತ್ತೆ.

ಯಲ್. ರೈಸ್,
ಎಡ್ಯುಕೇಷನ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 1, ಸ್ಸ 1887.

ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಬೆಂಗಳೂರು ಮುನಸೀಫ್ ಕೋರ್ಟಿನಲ್ಲಿ.

1887ನೇ ಇಸವಿ ಒರಿಜಿನಲ್ ನಂಬರ 432.

ವಾದಿಗಳು.

ಆನೆಕಲ್ ತಾಲ್ಲೂಕು ಜಿಗಣೀ ಹೋಬಳೀ ಕಾಯಂ ಗುತ್ತಾ ಹುಲ್ಲುಹಳ್ಳೀಯಲ್ಲಿರುವರು ಚಿನ್ನಯ್ಯನ ಮಗ 1ನೇ ನಾರಪ್ಪ, 2ನೇ ನಂಜಯ್ಯನ ಮಗ ಪೆಳ್ಳಪ್ಪ, 3ನೇ ನಾರಪ್ಪಯ್ಯನ ಮಗ ಮುನಿಯಪ್ಪ, 4ನೇ ನಾರಪ್ಪನಮಗ ಮುನಿಯಪ್ಪ, 5ನೇ ಪಾಪಯ್ಯನಮಗ ಮಲ್ಲಯ್ಯ, 6ನೇ ದೊಡ್ಡಯರ್ರಪ್ಪನ ಮಗಳು ಮುನ್ನಂಜಿ, 7ನೇ ಚೌಡಯ್ಯನ ಮಗಳು ರಾಮಕ್ಕ, 8ನೇ ಸಂಪನ ಮಗ ಮುನಿಯ, 9ನೇ ಕೃಷ್ಣಯ್ಯನ ಮಗ ವೆಂಕಟ, 10ನೇ ಮುನಿಯಪ್ಪನ ಮಗ ಪಿಲ್ಲಿಗಾ.

ಪ್ರತಿವಾದಿಗಳು.

ಬೆಂಗಳೂರು ಕಂಟೋನ್ಮೆಂಟಿನಲ್ಲಿ ಯಿರುವರು—1ನೇ ರಾಯಬಹದ್ದೂರ ಗೋವಿಂದಸೆಟ್ಟರ ಮಕ್ಕಳು ಗಂಗಾಧರಸೆಟ್ಟರು, 2ನೇ, 1ನೇ ಪ್ರತಿವಾದೀ ಭಾವಮೈದ ಮುನಿಸಾಮಿ ಸೆಟ್ಟರು, 3ನೇ, 1ನೇ ಪ್ರತಿವಾದೀ ಗುಮಾಸ್ತೆ ನಾರಣಪ್ಪನವರು, 4ನೇ ಬೆಂಗಳೂರು ತಾಲ್ಲೂಕು ಬೇಗೂರು ಹೋಬಳಿ ಶೆಟ್ಟಿಪಾಳ್ಯದಲ್ಲಿ ಯಿರುವ ಅಪ್ಪಯ್ಯಣ್ಣ, 5ನೇ ಆನೆಕಲ್ ತಾ॥ ಕಾಯಂಗುತ್ತಾ ಹುಲ್ಲುಹಳ್ಳೀಲಿ ಇರುವ ಸೀತಯ್ಯನ ಮಗ ಕತ್ತೀ ಮುನಿಯ, 6ನೇ ಡಿಟೋ ಪೂರಲ್ಲಿ ಇರುವ ಬಲಗ್ಯೆ ಈರನ ಮಗ ತೋಟ ನಂಜ, 7ನೇ ಡಿಟೋ ಪೂರಲ್ಲಿ ಇರುವ ಮುನಿಯನ ಮಗ ಆನೆಕಲ್ಲುಗಾ, 8ನೇ ಬೆಂಗಳೂರು ತಾ॥ ಬೇಗೂರು ಹೋಬಳಿ ಪಟ್ಟದಲ್ಲಿ ಇರುವ ಖಾಶಿಂಸಾಬೀಮಗ ಬಾಬೂಸಾಬಿ, 9ನೇ ಡಿಟೋ ಗ್ರಾಮದಲ್ಲಿ ಇರುವ ಇವನ ತಮ್ಮ ಯಿಮಾಂಸಾಬಿ.

ಆನೆಕಲ್ ತಾಲ್ಲೂಕು ಜಿಗಣೀ ಹೋಬಳಿ ಹುಲ್ಲುಹಳ್ಳೀಲಿ ಯಿರುವರು—1ನೇ ಕತ್ತೀ ಮುನಿಯ, 2ನೇ ಚಿಕ್ಕಈರ, 3ನೇ ಪಾಪ, 4ನೇ ನಾನಿಗ, 5ನೇ ಕುರುಬ ಮುನಿಗ, 6ನೇ ನರಸಿಂಹಯ್ಯ, 7ನೇ ಚಿಕ್ಕಕ್ಕ, 8ನೇ ಗುಂಡ, 9ನೇ ತಿಮ್ಮಾ, 10ನೇ ತಿಮ್ಮರಾಯ, 11ನೇ ಆನೆಕಲ್ಲುಗಾ, 12ನೇ ಮದ್ದೂರ, 13ನೇ ಮುನಿಗ, 14ನೇ ಲಿಂಗಾ, 15ನೇ ಕರಿಯ, 16ನೇ ದಾಸಮುನಿಯ, 17ನೇ ಗುಟ್ಟ, 18ನೇ ಮುತ್ತ, 19ನೇ ಅಳ್ಳಿಗ, 20ನೇ ನಂಜ—ಯಿವರುಗಳಿಗೂ ಮತ್ತು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—

ಮೇಲ್ಕಂಡ ವಾದಿಗಳು ಪ್ರತಿವಾದಿಗಳ ಮೇಲೆ ದಾವಾ ಷೆಡ್ಯೂಲ್‌ನಲ್ಲಿ ಕಂಡ ಹುಲ್ಲುಗಾವಲ್ ಜಮೀನಿನಲ್ಲಿ ಲಾಗಾಯತಿನಿಂದ ತಮ್ಮ ದನಗಳನ್ನ ಮೇಯಿಸಿಕೊಳ್ಳುತ್ತಾ ಯಿದ್ದಂತೆ ಮುಂದೆಯೂ ಮೇಯಿಸಿಕೊಳ್ಳುವದಕ್ಕೆ ಪ್ರತಿವಾದಿಗಳು ಅಡ್ಡೀಮಾಡದಂತೆ ಶಾಶ್ವತವಾದ ಇಂಜಂಗ್‌ಷನ್ ಕೊಡಿಸಬೇಕೆಂದು ವಗೈರೇ ದಾವಾಮಾಡಿ ಯಿರುವ ಸಂಗತಿ ಯಿದರಿಂದ ಮೇಲ್ಕಂಡ ಜನಗಳಿಗೂ ಮತ್ತು ಸಮಸ್ತ ಜನಗಳಿಗೂ ತಿಳಿಯಪಡಿಸಿಯಿದೆ.

ಈ ವಿವಾದ ವಿಷಯಕ್ಕೆ ಸಂಬಂಧಪಟ್ಟವರು 87ನೇ ಇಸವಿ ಅಕ್ಟೋಬರು ತಿಂಗಳು 6ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಖುದ್ದಾಗಲಿ ಅಥವಾ ಪ್ಲೀಡರ್‌ಗಳ ಮೂಲಕವಾಗಲಿ ಹಾಜರಾಗಿ ತಮ್ಮ ಮೊಕದ್ದಮೆಯನ್ನ ತಿಳಿಸಬಹುದು.

ತಾರೀಖು 22ನೇ ಸೆಪ್ಟಂಬರ 1887.

ಸುಬ್ಬರಾಯರ್,
ಮುನಸೀಫ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 21ನೇ ಸೆಪ್ಟಂಬರ್ 1887.

ತಿಪ್ಟೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಬಂದು ತಿಂಗಳೊಳಗಾಗಿ ತಿಪ್ಟೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನ ವಾಪಸ್ ಪಡಿಯಲೂ ತಪ್ಪಿದರೆ ಸ್ 1877ನೇ ಇಸವಿ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು:—

ದಸ್ತೈವಜಿನ ನಂಬರ್.	ದಸ್ತೈವಜಿನ ತಾರೀಖು.	ದಸ್ತೈವಜು ರಿಜಿಸ್ಟ್ರೇಷರ್ಷ ಬಗ್ಯೆ ಹಾಜರ್ಮಾಡಿದ ತಾರೀಖು.	ದಸ್ತೈವಜು ರಿಜಿಸ್ಟ್ರಾದ ತಾರೀಖು.	ದಸ್ತೈವಜನ್ನ ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನ ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತು.
182 / 1885—86	8—5—85	15—8—85	29—8—85	ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ಮಾಕನಹಳ್ಳಿ ಗ್ರಾಮಕ್ಕೆ ಸೇರಿದ ಚಿಕ್ಕಣ್ಣ ಕಟ್ಟೆ ಪಾಳ್ಯದಲ್ಲಿರುವ ತವಾಚಾರದ ಬಳೇ ಪುಟ್ಟೇರಯ್ಯನ ಮಗ ಚನ್ನಬಸಯ್ಯ	ತಿಪ್ಟೂರು ತಾಲ್ಲೂಕು ನೊಣವಿನಕೆರೇಯಲ್ಲಿರುವ ಹೊಸಮನೆ ನಾರಣಸ್ವಾಮಯ್ಯಂಗಾರ್	ತನ್ನ ಬಾಬತು ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ವಿಘ್ನಸಂತೆ ಗ್ರಾಮದ ಕೆರೇಹಿಂದೆ ಇರುವ ಅಡಿಕೆ, ತೆಂಗೂ ಮಿಶ್ರವಾದ ಸರ್ವೇನಂಬರ್ 92 ಎಕರೆ 1 ಕುಂಟೆ 19 ಆಕಾರ 15 ರೂಪಾಯಿವುಳ್ಳ ತೋಟ ಆಧಾರದ ವಂದು ನೂರು ರೂಪಾಯಿನ ಕಂತು ಪತ್ರ.

ಪಿ. ಎನ್. ಕೃಷ್ಣಮೂರ್ತಿ,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 484.

ಮೃತಪಟ್ಟ ಭರಮಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕರಡೀ ಅನಂತಪ್ಪನವರು ಮೃತಪಟ್ಟ ಸದರೀ ಭರಮಂಣನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಕರಡೀ ಅನಂತಪ್ಪನವರು ಚನ್ನರಾಯಪಟ್ಟಣದ ತಾಲ್ಲೂಕು ಬೆಳಗೊಳದ ವಾಸಸ್ಥನಾಗಿ ಮೃತಪಟ್ಟ ಭರಮಂಣನವರ ಜಿಂದಗೀ ಬಗ್ಯಾಗಿ ಬರತಕ್ಕ 5,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕರಡೀ ಅನಂತಪ್ಪನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭರಮಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ್ 499.

ಮೃತಪಟ್ಟ ದುಂಡೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ನಂಜೇಗವುಡ 2ನೇ ದುಂಡೇಗವುಡ 3ನೇ ಮಾದೇಗವುಡ 2—3ನೇ ಮೈನರ್ ಗಾರ್ಡಿಯನ್ ತಾಯಿ ಮಾದಮ್ಮ, ಮೃತಪಟ್ಟ ಸದರೀ ದುಂಡೇಗವುಡರಿಗೆ ಮಕ್ಕಳು, ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರ ತಾಲ್ಲೂಕು ಸಂತೇಮರಹಳ್ಳಿ ಸ್ಥಳದ ಸದರೀ 1ನೇ ನಂಜೇಗವುಡ, ಮಾದಮ್ಮನೂ ಸಹ ಸದರೀ ವಾಸಸ್ಥರಾಗಿ ಮೃತಪಟ್ಟ ದುಂಡೇಗವುಡರ ಜಿಂದಗೀ ಬಗ್ಯಾಗಿ ಬರತಕ್ಕ

900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜೇಗವುಡ, ಮಾದಮ್ಮ ಇವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದುಂಡೇಗವುಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಸೆಪ್ಟಂಬರು ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1887ನೇ ಇಸವಿ ಅರ್ಜೀ ನಂಬರ್ 506.

ಮೃತಪಟ್ಟ ಕಂಚುಗಾರ ಗುರುವಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕಪನಯ್ಯನು ಮೃತಪಟ್ಟ ಸದರೀ ಗುರುವಯ್ಯನವರಿಗೆ ದತ್ತು ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಳವಳ್ಳಿ ಕಸಬಾ ಸ್ಥಳದ ಸದರೀ ಕಪನಯ್ಯನು ಸದರೀ ವಾಸಸ್ಥನಾಗಿ ಮೃತಪಟ್ಟ ಗುರುವಯ್ಯನವರ ಜಿಂದಗೀ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕಪನಯ್ಯನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರುವಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಸೆಪ್ಟಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ.

ಮೈಸೂರು ಡಿಸ್ಟ್ರಿಕ್ಟು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಮೈಸೂರಲ್ಲಿರುವ ಸವಾರ್ ಇಲಾಖಾ ಪೇಷ್ಕಾರ್ ಮಂಡ್ಯಗಿರೀ ಕೃಷ್ಣರಾಯನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 142.

ಹುಕ್ಕುಂ.

ಮೇಲ್ಕಂಡ ಕೃಷ್ಣರಾಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಕೃಷ್ಣರಾಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣರಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದ 5ನೇ ಗೋಪಾಲಶೆಟ್ಟಿ ಖುದ್ದು ಹಾಜರು 14ನೇ ಕೃಷ್ಣಾಚಾರೀ ಕಡೇ ಫಸ್ಟ್‌ಗ್ರೇಡ್ ಪ್ಲೀಡರ್ ವೆಂಕೋಬರಾಯನು ಹಾಜರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—1ನೇ ವಡೀಸ್ವಾಮಿರಾಯಚಾರಿ 2ನೇ ಸಂಪತ್‌ಕುಮಾರೀ ಬ್ಯಾಂಕ 3ನೇ ಖಾಸಿಂಸಾಬ್ 4ನೇ ಬುಡ್ಡಾಸಾಬಿ 6ನೇ ಮೈಸೂರು ಬ್ಯಾಂಕ 7ನೇ ಭಾಗೀರಥಿಬಾಯಿ 8ನೇ ಬಸಪ್ಪ 9ನೇ ಶೀತಮ್ಮ 10ನೇ ರಂಗಪ್ಪ 11ನೇ ಗೋವಿಂದಭೀಮಾಜಿ 12ನೇ ಮಲ್ಲಶೆಟ್ಟಿ 13ನೇ ಆಲಪ್ಪ 15ನೇ ಶೇಷಗಿರಿರಾವ್ 16ನೇ ದೇವಾಜೀ ಡೋಲಾಜೀ ತಂದೇ ನವಲಾಜಿ 17ನೇ ರಂಗಪ್ಪ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪೇಷ್ಕಾರ್ ಕೃಷ್ಣರಾಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಆಗಸ್ಟು 31ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಡಬೇಕೆಂಬದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಶಿವಮೊಗ್ಗೇಲಿರುವ ವಡೀಸ್ವಾಮಿರಾಯಾಚಾರಿ ..	89 3 4	..	ಡಿಕ್ರೀ ಬಾಬತು	
12	ಮೈಸೂರಲ್ಲಿರುವ ಮಲ್ಲಶೆಟ್ಟಿ ..	44 0 8	..	ಡಿಟೋ	
13	ಡಿಟೋ ಕುರ್ದೂಬಾನ ಮಗ ಆಲಪ್ಪ ..	33 8 6	.	ಡಿಟೋ	
14	ಹೊಳೇನರಸೀಪುರದ ಕೃಷ್ಣಾಚಾರಿ ..	212 0 0	..	ಡಿಟೋ	
15	ಶಿವಮೊಗ್ಗೆಯಲ್ಲಿರುವ ತಿಮ್ಮಯ್ಯ ಫೌತಿ ವಾರಸ್ ದಾರ್ ಶೇಷಗಿರಿರಾವು ..	251 0 0	..	ಡಿಟೋ	
16	ಡಿಟೋ ಪೂರು ದೇವಾಜೀ ಜೋಲಾಜಿ ..	350 0 0	..	ಡಿಟೋ	
17	ಡಿಟೋ ರಂಗಪ್ಪ ..	30 0 6	..	ಡಿಟೋ	
		1019 13 0			

ದಿವಾಳೀಯೊದ ಡಿಕ್ರೀ ದೇಣೇದಾರ ಹಾಸನದಲ್ಲಿರುವ ನಾಯಿಕ ಮಹಮ್ಮದ್ ಯೂಸುಫನ ವಿಷಯದಲ್ಲಿ—

ಸ೯ 1887ನೇ ಇಸವಿ ದಿವಾಳೀ ಕೇಸ್ ನಂಬರ್ 169.

ಹುಕ್ಕುಂ.

ಮೇಲ್ಕಂಡ ಮಹಮ್ಮದ್ ಯೂಸುಫನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜೀದಾರನಾದ ಮಹಮ್ಮದ್ ಯೂಸಫನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ಯಲ್. ನರಸಿಂಗರಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ --1 ಖಾದರಬೀ ಮೈನರ್‌ಗಾರ್ಡಿಯನ್ ಸೈದಲ್ಲೀಸಾಬಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮಹಮ್ಮದ್ ಯೂಸುಫನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರತ್ತದೆಯಾಗಿ, ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟೆಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಬಾಲಸ್ ಮಾಡಲಾಗುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ೯ 1887ನೇ ಇಸವಿ ಆಗಸ್ಟು 31ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಡಬೇಕೆಂಬದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಹಾಸನದಲ್ಲಿರುವ ಖಾದರಬೀ ಮೈನರ್‌ಗಾರ್ಡಿಯನ್ ಸೈದಲ್ಲೀಸಾಬ್. ..	115 0 0	..	ಡಿಕರೀ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್, ಸಬ್ ಜಡ್ಜ್.

Mysore Government Press, Bangalore.—1887.

751

ಮೈಸೂರ ಗೆಜೆಟ್.

ನಂ. 40 ಸರ್ಕಾರದಿಂದ ಪ್ರಸಿದ್ಧಿ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 8, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ನಂ. 107. ತಾರೀಖು 5ನೇ ಸೆಪ್ಟಂಬರ್ 1887.

ಮೈಸೂರು ಶೀಮೆಯಲ್ಲಿ ಗನಿಗಳ ಕೆಲಸ ನಡಿಸಲಿಕ್ಕೆ ಗುತ್ತಿಗೆಗಳನ್ನ ಕೊಡತಕ್ಕ ಬಗ್ಯೆ ಹಿಂದಿನ ನಿಬಂಧನೆಗಳು ರದ್ದುಪಡಿಸಿ ಈ ಕೆಳಗೆ ಬರುವ ನಿಬಂಧನೆಗಳು ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಟ್ಟಿರುತ್ತವೆ. ಸದರೀ ನಿಬಂಧನೆಗಳು ಈ ಸರಕಾರದಿಂದ ಯಿದಕ್ಕೆ ಮುಂಚೆಯೇ ಕೊಡೋಣಾದ ಗನಿಯ ಗುತ್ತಿಗೆಗಳ ವಿಷಯದಲ್ಲಿ ಲಗಾವಾಗುವದಿಲ್ಲವು.

ಅಜಮಾಯಿಷಿ ಬಗ್ಯೆ ಲೈಸೆನ್ಸ್.

1. ಮೈಸೂರು ಶೀಮೆಯೊಳಗೆ ಗನಿಗಳ ಕೆಲಸ ನಡಿಸುವ ಉದ್ದಿಶ್ಯ ಭೂಮಿಯನ್ನ ನಿವಡಾಯಿಸತಕ್ಕ ಬಗ್ಯೆ ಜಮೀನ್ ಅಜಮಾಯಿಷಿ ಕೆಲಸ ನಡಿಸಲಿಚ್ಛೈಯುಳ್ಳ ಜನರು ದಿವಾನರವರಲ್ಲಿ ದರಖಾಸ್ತು ಮಾಡಿ 500 ರೂಪಾಯಿಗಳ ಫೀಜನ್ನು ಸಲ್ಲಿಸಿದಲ್ಲಿ, ಹತ್ತು ಚದರ ಮೈಲ್‌ಗಳಿಗೆ ಅತಿಕ್ರಮಿಸದ ವೊಂದು ಗೊತ್ತಾದ ವಿಸ್ತೀರ್ಣದಲ್ಲಿ ಅಜಮಾಯಿಷೀ ಮಾಡುವದಕ್ಕೆ ಅಪ್ಪಣೇ ಕೊಡುವ ಲೈಸೆನ್ಸನ್ನ ಪಡೆ

ಯಬಹುದು; ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನಲ್ಲಿ ನಮೂದಾದ ವಿಸ್ತೀರ್ಣದೊಳಗೆ ಗನೀ ಕೆಲಸ ನಡೆಸುವ ಉದ್ದಿಶ್ಯ, ವೊಂದು ಚದರ ಮೈಲಿ ಭೂಮಿಯನ್ನು, ಲೈಸೆನ್ಸ್ ತಾರೀಖು ಲಾಗಾಯತು ವೊಂದು ವರುಷದ ವಳಗಾಗಿ ನಿವಡಾಯಿಸಿಕೊಳ್ಳಲಿಕ್ಕೆ ಅರ್ಹನಾಗಿರುವನು ಭೂಮಿಯನ್ನು ನಿವಡಾಯಿಸಿಕೊಂಡ ನಂತರ ಲೈಸೆನ್ಸ್‌ದಾರನು, ನಿವಡವಾದ ವಿಸ್ತೀರ್ಣಕ್ಕಾಗಿ ಯಿದರ ಕೆಳಗೆ ನಮೂದಾಗುವ ನಿಬಂಧನೆಗಳಿಗೂ ಷರತ್ತುಗಳಿಗೂ ಬಳಟ್ಟು ಗುತ್ತಿಗೆಯನ್ನು ಪಡಿಯಬಹುದು. ಅಜಮಾಯಿಷೀ ಬಗ್ಯೆ ಕೊಡಲ್ಪಟ್ಟ ಲೈಸೆನ್ಸ್ ಜಾರೀಲಿರುವ ಕಾಲದಲ್ಲೂ ಮತ್ತು ಅದರಲ್ಲಿ ನಮೂದಿಸಿರುವ ವಿಸ್ತೀರ್ಣದೊಳಗೂ, ಗನಿಗಳ ಕೆಲಸದ ಬಗ್ಯೆ ಗುತ್ತಿಗೆಯಾಗಲಿ, ಅಜಮಾಯಿಷೀ ಬಗ್ಯೆ ಲೈಸೆನ್ಸಾಗಲಿ, ಇತರ ಯಾವ ಮನುಷ್ಯನಿಗೂ ಕೊಡಲ್ಪಡತಕ್ಕದ್ದಲ್ಲವು. ಆದರೆ ಯಾವದಾದರೊಂದು ಪ್ರದೇಶಕ್ಕಾಗಿ ಅಜಮಾಯಿಷೀ ಲೈಸೆನ್ಸ್ ಕೊಡಲಿಕ್ಕೆ ತಿರಸ್ಕರಿಸುವ ಅಧಿಕಾರವನ್ನು ಗವರ್ನಮೆಂಟಿನವರು ಉಳಿಸಿಕೊಂಡಿರುತ್ತಾರೆ.

ಗನಿಗಳಬಗ್ಯೆ ಗುತ್ತಿಗೆ—ಪ್ರತಿ ಗುತ್ತಿಗೆಯ ವಿಸ್ತೀರ್ಣ.

II. ಗನಿಗಳ ಪ್ರತಿಗುತ್ತಿಗೆಯೂ ವೊಂದು ಚದರ ಮೈಲಿಯ ವಿಸ್ತೀರ್ಣಕ್ಕೆ ಅತಿಕ್ರಮಿಸದ ವೊಂದು ತಾಕಿಗೆ ಕ್ಲುಪ್ತವಾಗಿಯಿರತಕ್ಕದ್ದು. ಅಂಥಾ ತಾಕು ಸಾಧಾರಣವಾಗಿ ಪ್ರತಿ ಪಾರ್ಶ್ವವೂ ಅರ್ಧಮೈಲಿಯ ವುದ್ದಳತೆಗಿಂತಲೂ ಕಡಿಮೆಯಾಗಿ ಯಿಲ್ಲದೇ ಯಿರುವಂಥಾ ಪ್ಯಾರಲ್ಲೆಲೊಗ್ರಾಂ ಅಂದರೆ ಸಮಾನಾಂತರ ಕ್ಷೇತ್ರದಂತೆ ಯಿರತಕ್ಕದ್ದು. ವೊಬ್ಬ ದರಖಾಸ್ತುದಾರನು, ವೊಂದು ತಾಕಿಗಿಂತಾ ಹೆಚ್ಚಾದ ತಾಕುಗಳಿಗಾಗಿ ದರಖಾಸ್ತುಗಳು ಮಾಡಿದಲ್ಲಿ ಇತರ ದರಖಾಸ್ತುದಾರರ್ಯಾರೂ ಯಿಲ್ಲದೇ ಯಿದ್ದು, ಮತ್ಯಾವ ತಕರಾರೂ ಯಿಲ್ಲದೇ, ಯಿದು ಶಿವಾಯಿ ಅಂಥಾ ದರಖಾಸ್ತು ಯಥಾರ್ಥವಾಗಿ ಗನಿಗಳ ಕೆಲಸ ನಡಿಸುವದಕ್ಕಾಗಿಯೇ ಹೊರ್ತು ಗನಿಗಳಬಗ್ಯೆ ಭೂಮಿಯ ವ್ಯಾಪಾರದ ಉದ್ದಿಶ್ಯವಾಗಿ ಅಲ್ಲವೆಂದು ಗವರ್ನಮೆಂಟಿನವರಿಗೆ ತೃಪ್ತಿಕರವಾಗಿ ತಿಳಿಯಬಂದರೇನೇ ಅಂಥಾ ದರಖಾಸ್ತುಗಳು ಆಲೋಚನೆಯಲ್ಲಿ ತರಲ್ಪಡುವವು.

ಗುತ್ತಿಗೆ ಬಗ್ಯೆ ದರಖಾಸ್ತು.

III. (1.) 1ನೇ ನಿಬಂಧನೆ ಮೇರಿಗೆ ಅಜಮಾಯಿಷಿ ಬಗ್ಯೆ ಲೈಸೆನ್ಸ್ ಪಡೆದಂಥಾ ಮನುಷ್ಯನಿಂದಲಾಗಲಿ, ಅಥವಾ ಇತರ ಯಾವ ಮನುಷ್ಯನಿಂದಲಾಗಲಿ, ಗನಿಯ ಗುತ್ತಿಗೆ ಬಗ್ಯೆ ಮಾಡಲ್ಪಡುವ ಪ್ರತಿ ದರಖಾಸ್ತೂ ದಿವಾನರವರ ಚೀಫ್ ಸಿಕ್ರೆಟೇರಿಯವರಿಗೆ ರೊಬರೊಬಾಗಲಿ, ಅಥವಾ ಅವರ ಹೆಸರಿಗೆ ಮೇಲ್‌ವಿಲಾಸದ ಮೂಲಕವಾಗಲಿ ಕೊಡಲ್ಪಡತಕ್ಕದ್ದು. ಮತ್ತು ದರಖಾಸ್ತು ಮಾಡಲ್ಪಡುವಂಥಾ ಪ್ರತಿ ಚದರ ಮೈಲು ಯಾ ಅದರ ಭಿನ್ನಾಂಶಕ್ಕಾಗಿ ದರಖಾಸ್ತುದಾರನು ಕರಾರ್ ಮೇರಿಗೆ ಸರಿಯಾಗಿ ನಡೆದು ಕೊಳ್ಳತಕ್ಕ ಉದಿಶ್ಯ ಠೇವಣೀ ಬಗ್ಯೆ 1000 ರೂಪಾಯಿಗಳನ್ನು ಹಾಜರ್ಮಾಡತಕ್ಕದ್ದು. ಮತ್ತು ದರಖಾಸ್ತುದಾರನು ಗನಿಗಳ ಕೆಲಸ ನಡಿಸಲಿಕ್ಕೆ ಬೇಕಾಗುವ ಮೂಲಧನವನ್ನು ಯಾವ ರೀತಿ ವೊದಗಿಸಿಕೊಳ್ಳಲು ಯತ್ನಿಸಿರುತ್ತಾನೋ ಆ ಸಂಗತಿಯೂ ದರಖಾಸ್ತಿನಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

(2.) ಪ್ರತಿ ದರಖಾಸ್ತಿನೊಂದಿಗೂ, ಟೊಪೊಗ್ರಾಫಿಕಲ್ ರೆವಿನ್ಯು ಸರ್ವೆ ಯಾ ಇತರ ಸರಕಾರ್ ಮ್ಯಾಪ್ ಯಾನೆ ನಕ್ಷೆಯ ಎಕ್ಸ್‌ಟ್ರಾಕ್ಟ್ ಸಹ ಸೇರಿರತಕ್ಕದ್ದು, ಮತ್ತು ಅಂಥಾ ಎಕ್ಸ್‌ಟ್ರಾಕ್ಟಿನೊಳಗೆ, ದರಖಾಸ್ತು ಮಾಡಲ್ಪಟ್ಟ ಭೂಮಿಯು ಗುರ್ತುಮಾಡಲ್ಪಟ್ಟು ಆ ಭೂಮಿಯ ಸುತ್ತಲೂ ಇರುವ ಗ್ರಾಮಗಳ ಹೆಸರುಗಳು ಸಹ ನಮೂದಿಸಿರತಕ್ಕದ್ದು.

(3.) ಭೂಮಿಯ ಮೋಜಣೀ ಬಗ್ಯೆ ಗವರ್ನಮೆಂಟಿನವರು ಕೊಡುವ ಅಪ್ಪಣೆಯನ್ನು ದರಖಾಸ್ತುದಾರನಿಗೆ ತಿಳಿಸಲ್ಪಟ್ಟ ಲಾಗಾಯತು ಹದಿನೈದುದಿವಸಗಳೊಳಗಾಗಿ, ಆ ದರಖಾಸ್ತುದಾರನು ತಾನು ದರಖಾಸ್ತು ಮಾಡಿದ ಭೂಮಿಯ ತಾಕಿನ ಸರಹದ್ದುಗಳನ್ನು ಸರ್ವೆ ಆಫೀಸರಿಗೂ ವ ಸ್ಥಳದ ರೆವಿನ್ಯೂ ಆಫೀಸರಿಗೂ ಸಹ ತೋರಿಸತಕ್ಕದ್ದು.

(4.) ಸರ್ವೆ ವ ರೆವಿನ್ಯೂ ಆಫೀಸರುಗಳಿಂದ ಮೋಜಣೀ ವ ಆವಶ್ಯಕವಾದ ವಿಚಾರಣೆಗಳು ಪೂರೈಸಿದ ನಂತರ ಭೂಮಿಯ ವಿಸ್ತೀರ್ಣ ವ ಕಂದಾಯ ಮುಂತಾದ ಪೂರಾ ತಪಶೀಲೂ ವ ಗುತ್ತಿಗೆ ಕರಾರಿನ ಅಚ್ಚುಹಾಕಿದ ನಮೂನೆಗಳೂ, ಮತ್ತು ಮೋಜಣೀ ವ ಹದ್ದು ಗುರ್ತು ಮಾಡಿದ ಲಾಗವಡಿಗಾಗಿ ವೊಂದು ಬಿಲ್ಲು ಸಹ ದರಖಾಸ್ತುದಾರನಿಗೆ ಕಳುಹಿಸಲ್ಪಡುವದು; ದರಖಾಸ್ತುದಾರನು, ಇವುಗಳು ತನಗೆ ತಲಪಿದ ವೊಂದು ತಿಂಗಳವಳಗಾಗಿ ಗುತ್ತಿಗೆ ಕರಾರಿನ ಯರಡು ಪ್ರತಿಗಳನ್ನು ತಾನೇ ಬರೆದು ಕ್ರಮವಾಗಿ ಸ್ಟಾಂಪು ಹಾಕಿಸಿ ದಿವಾನರವರ ರುಜು ಬಗ್ಯೆ ಹಾಜರ್ಮಾಡಿ, ಮೋಜಣೀ ವ ಹದ್ದು ಗುರ್ತು ಮಾಡಿದ ಲಾಗವಡ್ ಮೊಬಲಗ್ ಸಹ ಪಾವತೀ ಮಾಡತಕ್ಕದ್ದು.

(5.) ಈ ನಿಬಂಧನೆಯ 3 ವ 4ನೇ ಕಲಮುಗಳನ್ನನುಸರಿಸಿ ನಡೆದುಕೊಳ್ಳಲಿಕ್ಕೆ ತಪ್ಪಿದಲ್ಲಿ, ದರಖಾಸ್ತು ರದ್ದಾಗುವದಲ್ಲದೆ ಅದರೊಂದಿಗೆ ಹಾಜರ್ಮಾಡಲ್ಪಟ್ಟಿದ್ದ ಠೇವಣೀ ಮೊಬಲಗು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಲ್ಪಡುವದು.

(6.) ಗುತ್ತಿಗೆ ಕರಾರು ದಿವಾನರವರಿಂದ ರುಜುಮಾಡಲ್ಪಟ್ಟ ಹೊರ್ತು, ದರಖಾಸ್ತಾದ ಭೂಮಿಗಾಗಿ ದರಖಾಸ್ತುದಾರನ ಬಾಧ್ಯತೆಯು ಪೂರ್ತಿಯಾಗುವದಿಲ್ಲವು.

(7.) ಗುತ್ತಿಗೆ ಕರಾರು ಹುಟ್ಟಿದ ತರುವಾಯ ಹಾಲಿ ಜಾರೀಲಿರುವ ಕಾನೂನು ಅನುಸರಿಸಿ ಭರವಸೆಗಾಗಿ ರಿಜಿಸ್ಟರ್ ಮಾಡಲ್ಪಟ್ಟು ಅದರ ಯರಡನೇ ಪ್ರತಿಯು ಮೈಸೂರು ಗವರ್ನ್ಮೆಂಟಿನಲ್ಲಿ ಅವಾನತು ಇಡಲ್ಪಡತಕ್ಕದ್ದು.

(8.) ಯಾವ ದರಖಾಸ್ತನ್ನಾಗಲಿ, ಕಾರಣ ತಿಳಿಸದೇನೇ, ಶಿರಸ್ಕರಿಸಲಿಕ್ಕೆ ಗವರ್ನಮೆಂಟಿನವರಿಗೆ ಯಾವಾಗಲೂ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ.

ಗುತ್ತಿಗೆಯ ಷರತ್ತುಗಳು.

IV. ಗನಿಗಳ ಕೆಲಸ ನಡಿಸಲಿಕ್ಕೆ, ಈ ಕೆಳಗೆ ಬರುವ ಷರತ್ತುಗಳಿಗೊಳಪಟ್ಟು, ಗುತ್ತಿಗೆಗಳು ಕೊಡಲ್ಪಡುವವು;—

(1.) ಪ್ರತಿ ಗುತ್ತಿಗೆಯ ವಾಯಿದೆಯು 30 ವರುಷಗಳಿಗೆ ಕ್ಲಿಪ್ತವಾಗಿರುವದು, ಆ ವಾಯಿದೆ ಪೂರೈಸುವ ಕಾಲದಲ್ಲಿ ಸರಕಾರದಿಂದ ಆಬಗ್ಯಾಗಿ ವಿಧಿಸಲ್ಪಡುವಂಥಾ ಷರತ್ತುಗಳ ಮೇಲೆ ಗುತ್ತಿಗೆ ಕರಾರು ಹೊಸದಾಗಿ ಹುಟ್ಟುವದಕ್ಕೊಳಪಟ್ಟಿರತಕ್ಕದ್ದು.

(2.) ನಿವಡಾಯಿಸಲ್ಪಟ್ಟ ಯಾವ ತಾಕು ಗುತ್ತಿಗ್ಯೆ ಕೊಡಲ್ಪಡುತ್ತೋ ಅಂಥಾ ತಾಕಿನೊಳಗೆ ಹಿಡುವಳೀಲಿರುವ ಸರಕಾರಿ ಜಮೀನಾಗಲಿ, ಇನಾಂಜಮೀನಾಗಲಿ ಶೇರಿಯಿದ್ದಲ್ಲಿ, ಗುತ್ತಿಗೆದಾರನು ಅಂತಾ ಜಮೀನಿನ ಮೇಲ್ಭಾಗದ ಹಕ್ಕುಗಳನ್ನ ಜಮೀನ್ ಮಾಲೀಕರಿಂದಾ ಖರೀದಿಗೆ ತೆಗೆದುಕೊಳ್ಳತಕ್ಕದ್ದು, ಅಥವಾ ಅಂಥಾ ಜಮೀನ್‌ನಲ್ಲಿ ಪ್ರವೇಶಿಸುವದಕ್ಕಾಗಲಿ, ಗನಿಗಳ ಕೆಲಸ ನಡಿಸುವದಕ್ಕಾಗಲಿ ಅವಶ್ಯಕವಾದ ಇತರ ಏರ್ಪಾಡುಗಳನ್ನ ಆ ಮಾಲೀಕರುಗಳೊಂದಿಗೆ ಮಾಡಿಕೊಳ್ಳತಕ್ಕದ್ದು.

(3.) ಗುತ್ತಿಗೆದಾರನು, ಹಿಡುವಳೀಲೀರುವ ಯಾ ಬಂಜರಿರುವ ಸಾಗುವಳೀ ಲಾಯಖ್ ಯಲ್ಲ ಜಮೀನ್‌ಗಳ ಮೇಲೆ ಹಾಲೀ ದಾಖಲಾಗಿರುವ ಯಾ ಯಿನ್ನು ಮೇಲೆ ಸರ್ವೆ ಸೆಟಲ್‌ಮೆಂಟ್ ಇಲಾಖೆಯವರಿಂದ ಏರ್ಪಾಡಾಗುವ ರೆವಿನ್ಯೂ ಕಂದಾಯವನ್ನೂ, ಇನಾಮತೀ ಜಮೀನಿದ್ದಲ್ಲಿ ಅದರ ಜೋಡಿ ಯಾ ಕ್ವಿಟ್‌ರೆಂಟ್ ಮೊಬಲಗನ್ನೂ ಗುತ್ತಿಗೆ ಭೂಮಿಯ ಸರಹದ್ದಿನೊಳಗೆ ಶೇರಿರುವ ವಿಶಿಷ್ಟ ಸಾಗುವಳೀ ನಾಲಾಯಖ್ ಜಮೀನಿನ ಮೇಲೆ ಯಕರೆ ವೊಂದಕ್ಕೆ ಯಂಟು ಆಣೆಯ ಕಂದಾಯವನ್ನೂ ಮತ್ತು ಆ ತಾಕಿನೊಳಗೆ ಅಡಗಿರುವ ನಿವೇಶನಗಳು ಯಾ ಜಮೀನಿಗಳಿಗಾಗಿ, ಅಥವಾ ಕಟ್ಟಡಗಳು ಯಾ ಇತರ ಕಾಮಗಾರಿಗಳಿಗಾಗಿ ತೆರಬೇಕಾದ ಯಲ್ಲಾ ಲೋಕಲ್ ತೆರಿಗೆ, ವ ಸುಂಕ ಯಾ ಇತರ ಬಾಬುಗಳ ಮೊಬಲಗುಗಳನ್ನೆಲ್ಲಾ, ಸಾಲೇಸಾಲ್ ಸರಕಾರಕ್ಕೆ ತೆರತಕ್ಕದ್ದು.

(4.) ವಿಶಿಷ್ಟ ಚಿನ್ನ, ಲೋಹ ಸಂಬಂಧವಾದ ಅದರು, ಕಲ್ಲಿದ್ದಲು ವ ವ್ಯಾಪರಕ್ಕೆ ಅರ್ಹವಾದ ಇತರ ವಸ್ತುಗಳು, ಇವುಗಳನ್ನ ತಯಾರು ಮಾಡೋಣ ವುಡಿ ಮಾಡೋಣ ಮತ್ತು ವ್ಯಾಪಾರಕ್ಕೆ ಲಾಯಖ್ ಮಾಡೋಣ, ಇವುಗಳಿಂದ ಆಗುವ ವೊಟ್ಟು ಹುಟ್ಟುವಳೀ ಮೇಲೆ ಶೇಕಡಾ 5ರ ಮೇರಿಗೂ, ಮತ್ತು ನಿವಡಾಯಿಸಲ್ಪಟ್ಟ ತಾಕಿನೊಳಗೆ ದೊರಕುವ ತಮಾಂ ರತ್ನವುಡಿ ಮುಂತಾದ ಬೆಲೆಯುಳ್ಳ ಕಲ್ಲುಗಳ ಖರೀದಿ ಮೊಬಲಗಿನ ಮೇಲೆ ಯಾವ ವಜಾ ಬಾಬುಗಳನ್ನೂ ಲೆಖ್ಖಕ್ಕೆ ಶೇರಿಸದೇನೇ ಶೇಕಡಾ 10ರ ಮೇರಿಗೂ, ಆಗುವ ರಾಜಪಾಲನ್ನ ಗುತ್ತಿಗೆದಾರನು ಪಾವತೀಮಾಡತಕ್ಕದ್ದು.

(5.) ಗುತ್ತಿಗೆ ಮಾಡಿಕೊಂಡ ಯರಡು ವರುಷಗಳೊಳಗಾಗಿ, ಗುತ್ತಿಗೇದಾರನಾಗಲಿ ಯಾ ಅವನ ವರ್ಗದಾರರಾಗಲಿ, ಚದರ ಮೈಲ್ ವೊಂದಕ್ಕೆ 5000 ಪೌಂಡುಗಳಿಗೆ ಕಡಿಮೇ ಯಿಲ್ಲದಂತೆ ಜಮಾವಣೀಯಾದ ಆಡಳಿತದ ಮೂಲಧನದೊಂದಿಗೆ ವೊಂದು ಕಂಪೆನಿಯಾಗಿ ಏರ್ಪಾಡು ಮಾಡಲಿಕ್ಕೆ ಅಸಮರ್ಥರಾಗುವ ಪಕ್ಷದಲ್ಲಿ ಆ ಗುತ್ತಿಗೆ ರದ್ದಾಗತಕ್ಕದ್ದು.

(6.) ಗುತ್ತಿಗೇದಾರನು ಗುತ್ತಿಗೆ ವಾಯಿದೇ ಯಲ್ಲಾವತ್ತು ಅಪರಿಹಾರ್ಯವಾದ ಆಕಸ್ಮಿಕದ ದೆಸೆಯಿಂದ ತಪ್ಪಿದರೇ ಹೊರ್ತು ಅವಿಚ್ಛಿನ್ನವಾಗಿ ಭಂಗಾರ ಮುಂತಾದವುಗಳನ್ನ ಶೋಧನೆ ಮಾಡೋಣ, ವ ಗನೀ ಕೆಲಸ ನಡಿಸುವಣ ಯಿವುಗಳನ್ನ ಚನ್ನಾಗಿ ಸಂಪೂರ್ಣ ಸಾಧ್ಯವಾಗುವ ರೀತ್ಯ ನಡಿಸತಕ್ಕದ್ದು. ಪರಂತು ಗುತ್ತಿಗೆಯ ಪ್ರಥಮತಃ ಯರಡು ವರುಷಗಳು ಪೂರೈಸಿದ ತರುವಾಯ ಗನಿಯ ಕೆಲಸಗಳ ವಿಷಯವಾಗಿ ಯಾಗಲಿ ಯಾ ಯಾವ ವರುಷಗಳ ಬಾಬತು ಪರ್ಯವಸಾನದ ವಿಷಯವಾಗಿಯಾಗಲಿ, ಸರಕಾರದವರಿಗೆ ತೃಪ್ತಿ ವುಂಟಾಗದ ಪಕ್ಷದಲ್ಲಿ ರಾಜಪಾಲಿಗೆ ಬದಲಾಗಿ ಯಕರೆ ವೊಂದಕ್ಕೆ 5 ರೂಪಾಯಿಯ ಮೇರಿಗೆ ಕಂದಾಯ ವಸೂಲ್ ಮಾಡುವ ಸ್ವಾತಂತ್ರ್ಯ ಸರಕಾರದವರು ಉಳಿಸಿಕೊಂಡಿರುತ್ತಾರೆ.

(7.) ಗುತ್ತಿಗೇದಾರನು, ಗನಿಗಳ ವ ಕಾಮಗಾರಿಗಳ ಕ್ರಮವಾದ ಲೆಖ್ಖಗಳನ್ನೂ ಪ್ಲಾನ್‌ಗಳನ್ನೂ ವ ನಕ್ಷೇಗಳನ್ನೂ ಯಿಡತಕ್ಕದ್ದು. ಯಿವುಗಳು ಗವರ್ನಮೆಂಟ್ ಆಫೀಸರುಗಳ ತನಿಖೀಗೆ ವೊಳಗಾಗಿರತಕ್ಕದ್ದು.

(8.) ಗವರ್ನಮೆಂಟ್ ಆಫೀಸರುಗಳು ಗನೀಗಳನ್ನ ನೋಡಲಿಕ್ಕೂ ವ ತನಿಖೀ ಮಾಡಲಿಕ್ಕೂ ಅಧಿಕಾರ ಹೊಂದಿರುತ್ತಾರೆ.

(9.) ಗುತ್ತಿಗೇದಾರನು ಯಲ್ಲ ಹದ್ದುಗುರ್ತುಗಳನ್ನೂ ದುರಸ್ತಿನಲ್ಲಿ ಯಿಟ್ಟುಕೊಂಡಿರತಕ್ಕದ್ದು, ಪ್ರತಿ ಗನಿಯ ಕಾಲುವೆ ಯಾ ಹಳ್ಳದ ಸುತ್ತಲೂ ಯಾ ಮೇಲ್‌ಕಾಮಗಾರಿಯ ಸುತ್ತಲೂ ಬೇಲಿ ಹಾಕತಕ್ಕದ್ದು.

(10.) ಸರಕಾರದವರು ಆಗಿಂದಾಗ್ಯೆ ವಿಧಿಸುವಂಥಾ ಆರೋಗ್ಯ ಸಂಬಂಧವಾದ ನಿಬಂಧನೆಗಳನ್ನು ಗುತ್ತಿಗೇದಾರನು ಕ್ರಮವಾಗಿ ಜಾರೀಲ್ಲಿ ತರತಕ್ಕದ್ದು.

(11.) ಗುತ್ತಿಗೇದಾರನು, ಅಪ್ಪಣೆ ವಿನಾ ಯಾವ ಗನಿಯನ್ನೂ ಪುನಃಪೂರ್ತಿಯಾಗಿ ಬಂದ ಮಾಡಕೂಡದು, ಭರ್ತೀಮಾಡಕೂಡದು ಯಾ ಮುಚ್ಚಲೂ ಕೂಡದು, ಮತ್ತು ಜಮೀನ್ಮೇಲೆ ಯಿರುವ ಯಾವ ರೋಡುಗಳಿಗಾಗಲಿ ಕಾಲ್ದಾರಿಗಳಿಗಾಗಲೀ ಯಾ ಅಡ್ಡದಾರೀಗಾಗಲಿ ಅತಂಕಪಡಿಸ ಕೂಡದು.

(12.) ಸರಕಾರದವರು, ಕಂದಾಯ, ರಾಜಪಾಲು, ಬಾಡಿಗೆ ವ ಇತರ ಬಾಬುಗಳ ಬಾಕೀಯನ್ನ ಗುತ್ತಿಗೇದಾರನ ಜಿಂದಗಿ ಜಪ್ತು ವ ಹರಾಜು ಮೂಲಕ ವಸೂಲ್ ಮಾಡಲಿಕ್ಕೆ ಅಧಿಕಾರಉಳ್ಳವರಾಗಿರುತ್ತಾರೆ. ಮತ್ತು ಗುತ್ತಿಗೇದಾರನು ಮಾಡಿಕೊಂಡ ಕರಾರುಗಳ ಪೈಕೀ ಯಾವದನ್ನಾಗಲಿ ತಪ್ಪಿದಲ್ಲಿ ಯಾ ಯಾವ ಜಾತಿಯ ಜನಗಳಿಗಾಗಲಿ ಸರಕಾರ ಉದ್ಯೋಗಸ್ತರಿಗಾಗಲಿ ತೊಂದರೆ ಯಾ ಅತಂಕ ಪಡಿಸಿದಲ್ಲಿ ಗವರ್ನಮೆಂಟಿನವರು ಆ ಬಗ್ಯೆ ಕ್ರಮವಾಗಿ ನೋಟೀಸ್ ಕೊಟ್ಟ ಆರು ತಿಂಗಳ ವಳಗಾಗಿ ತೃಪ್ತಿಕರವಾದ ಸಮಜಾಯಷೀ ಬಾರದೇ ಯಿದ್ದಲ್ಲಿ ಗವರ್ನಮೆಂಟಿನವರು ಆ ಗುತ್ತಿಗೆಯನ್ನ ರದ್ದುಪಡಿಸ ಬಹುದು.

(13.) 30 ವರುಷಗಳ ಮಾಯಿದೆಯ ಅಖೈರಿನಲ್ಲಿ ಗವರ್ನಮೆಂಟಿನವರು ನಿಷ್ಕರ್ಷೆ ಮಾಡುವ ಷರತ್ತುಗಳ ಮೇರಿಗೆ ಗುತ್ತಿಗೆಯನ್ನ ಹೊಸದಾಗಿ ಮಾಡಿಕೊಳ್ಳಲಿಕ್ಕೆ ಗುತ್ತಿಗೆದಾರನು ಅಪೇಕ್ಷಿಸದ ಪಕ್ಷದಲ್ಲಿ, ಅವನು, ಭೂಮಿಯನ್ನೂ ಗನೀ ಕಾಲ್ವೆಗಳನ್ನೂ ವ ಇತರ ನಿವೇಶನಗಳನ್ನೂ; ದುರಸ್ತು ವ ಕೆಲಸಕ್ಕೆ ಲಾಯಖಾದ ಸ್ಥಿತಿಯಲ್ಲಿ ಗನೀ ಕಾಲ್ವೆಗಳನ್ನೂ ವ ಇತರ ನಿವೇಶನಗಳನ್ನೂ, ಮತ್ತು ಬುಕ್ಕುಗಳು, ಪ್ಲಾನ್‌ಗಳು ವ ನಕ್ಷೆಗಳು, ಇದು ಶಿವಾಯಿ ಅಂತಾ ಜಮೀನ್ಗಳ ಮೇಲೆ ಇರುವ ಕಟ್ಟಡಗಳು ಯಾ ಇತರ ಸ್ಥಿತಿ ಇವುಗಳ ವಿಷಯದಲ್ಲಿ ಯಾವ ಹಕ್ಕುದಾರಿಯೂ ಇಲ್ಲದೇ ಸರ್ಕಾರಕ್ಕೆ ವೊಪ್ಪಿಸಿಬಿಡತಕ್ಕದ್ದು. ಕಟ್ಟಡಗಳನ್ನೂ, ಅಜಬಾಬನ್ನೂ ವ ಯಂತ್ರ ಸಾಧನ ಮುಂತಾದ ಸಾಮಾನುಗಳನ್ನೂ ಗವರ್ನಮೆಂಟಿನವರು ವಾಜಬೀ ಅಂದಾಜಿನ ಮೇಲೆ ಖರೀದಿಗೆ ತೆಗದುಕೊಳ್ಳಲಿಕ್ಕೆ ಆತನು ಅವಕಾಶ ಕೊಡತಕ್ಕದ್ದು.

(14.) (a) ಗುತ್ತಿಗೆಯ ದೆಸೆಯಿಂದ ಕೊಡೋಣಾಗುವ ಹಕ್ಕು ಬಾಧ್ಯತೆ, ವ ಸಂಬಂಧ ಇವುಗಳ ಪ್ರತಿ ವರ್ಗವೂ ಅಂಥಾ ವರ್ಗ ಗುತ್ತಿಗೇದಾರರುಗಳಿಂದಲಾಗಲಿ; ಯಾ ವರ್ಗ ಮೂಲಕ ಅವರುಗಳ ಪರಂಪರೆಯವರಿಂದ ಮಾಡಲ್ಪಡಲಿ, ಪರಂತು ಅಂತವರು ಪರಂಪರೆಯಾಗಿ ಯೆಷ್ಟುದೂರದವರಾಗಲಿ, ಈ ಕೆಳಗೆ ಠರಾವ್ ಮಾಡಿರುವ ಮೇರಿಗೆ ಜುರುಮಾನೆಯನ್ನ ಸರಕಾರಕ್ಕೆ ತೆರಲಿಕ್ಕೆ ಗುರಿಯಾಗಿರತಕ್ಕದ್ದು. ಅದು ಹ್ಯಾಗಂದರೆ ಮೊದಲನೇ ವರ್ಗಕ್ಕಾಗಿ ಅದರ ಖರೀದಿ ಮೊಬಲಗಿನ ದಶಮಾಂಶ ಅಂದರೆ 1—10ರಭಾಗದ ಮೊಬಲಗು ಜುರ್ಮಾನೆ; ಆ ತರುವಾಯದ ಪ್ರತಿ ವರ್ಗಕ್ಕೂ ಅದರ ಹಿಂದಿನ ವರ್ಗದ ಖರೀದಿ ಮೊಬಲಗಿಗೆ ಜರ್ ಜಾಸ್ತಿ ಯೇನಾದರು ಇದ್ದಲ್ಲಿ ಅಂತಾ ಜಾಸ್ತೀ ಮೊಬಲಗಿನ ದಶಮಾಂಶವನ್ನ ಜುರುಮಾನೆ ತೆರತಕ್ಕದ್ದು.

(b) ಮೇಲೆ ಹೇಳೋಣಾದ ಜುರ್ಮಾನೆಯ ಲೆಖ್ಖಾಚಾರ ಮಾಡುವ ವೃದ್ಧಿಶ್ಯ, ವೊಂದು ಕಂಪೆನಿಯ ಷೇರ್‌ಗಳ (ಹಿಸ್ಸೆ) ಅಂತಾ ಮೊಬಲಗಿಗೆ ಪೂರ್ತಿಯಾಗಿಯಾಗಲಿ ಯಾ ಅದರಲ್ಲೊಂದು ಭಾಗವಾಗಿಯಾಗಲಿ ಇರುವ ಪಕ್ಷಕ್ಕೆ ಅಂತಾ ಷೇರುಗಳು ಲೆಖ್ಖಕ್ಕೋಸ್ಕರ ಸರ್ಕಾರದವರ ಯಿಷ್ಟಾನುಸಾರ ಅವುಗಳ ಕ್ಲಿಪ್ತವಾದ ಮೌಲ್ಯಕ್ಕೆ ಸಮನಾದ ಮೊತ್ತದಂತೆ ಎಣಿಸಲ್ಪಡಬಹುದು.

(c) ತರುವಾಯ ಮಾಡಲ್ಪಡುವ ವರ್ಗದ ಖರೀದಿ ಮೊಬಲಗಿನ ಮೇಲೆ ವಸೂಲಾಗಬೇಕಾದ ಜುರ್ಮಾನೆಯ ಲೆಖ್ಖಾಚಾರಮಾಡುವ ವೃದ್ಧಿಶ್ಯ ಹಿಂದಿನ ವರ್ಗದ ಖರೀದಿ ಮೊಬಲಗು ವಜಾ ಮಾಡಲ್ಪಡಬೇಕಾದಾಗ ಆ ಹಿಂದಿನ ವರ್ಗದ ತಾತ್ಕಾಲಿಕ ಮೌಲ್ಯವನ್ನ ನಿಷ್ಕರ್ಷೆ ಮಾಡುವ ಅಧಿಕಾರ ಯಾವಾಗಲೂ ಗವರ್ನಮೆಂಟಿನವರಿಗೆ ಇರತಕ್ಕದ್ದು.

ಉದಾಹರಣೆ.

ಗುತ್ತಿಗೆದಾರರು ತಮ್ಮ ಗುತ್ತಿಗೆಯನ್ನ A ಯೆಂಬುವನಿಗೆ 100 ರೂಪಾಯಿಗಳ ಖರೀದಿಗಾಗಿ ವರ್ಗ ಮಾಡಿದರೆ ಆಗ ತೆರತಕ್ಕ ಜುರ್ಮಾನೆ ಮೊಬಲಗು ರೂಪಾಯಿ 10; A ಯೆಂಬುವನು ತರುವಾಯ ಅದೇ ಗುತ್ತಿಗೆಯನ್ನ B ಯೆಂಬುವನಿಗೆ 1000 ರೂಪಾಯಿಗಳ ಖರೀದಿಗಾಗಿ ವರ್ಗ ಮಾಡಿದರೆ, ಆಗ್ಯೆ1000 ರೂಪಾಯಿಯಲ್ಲಿ 100 ರೂಪಾಯಿ ವಜಾ ಹೋಗಲಾಗಿ ಬಾಕಿ ಮೊಬಲಗಿನ ದಶಮಾಂಶವೆಂದರೆ 90 ರೂಪಾಯಿಗಳನ್ನ ಜುರ್ಮಾನೆ ತೆರತಕ್ಕದ್ದು. B ಯೆಂಬುವನು ತರುವಾಯ ಆ ಗುತ್ತಿಗೆಯನ್ನ C ಅಂಡ್ ಕಂಪೆನಿಯವರಿಗೆ 1,00,000 ರೂಪಾಯಿಗಳ ನಗದು ವ C ಅಂಡ್ ಕಂಪೆನಿಯ 500 ಷೇರುಗಳು ಇವುಗಳಿಗಾಗಿ ವರ್ಗ ಮಾಡಿದರೆ, ಅಂತಾ ಪ್ರತಿ ಷೇರಿನ ಮೌಲ್ಯವು 1ರಂತೆ ಇದ್ದಲ್ಲಿ ಆಗ್ಯೆರೂ. 1,00,000ಯಲ್ಲಿ 1000 ರೂಪಾಯಿ ವಜಾ ಜಾತಾ ಬಾಕೀ ಮೊಬಲಗಿನ ದಶಮಾಂಶ ಅಂದರೆ 9,900 ರೂಪಾಯಿಗಳ ನಗದು ಮತ್ತು C ಅಂಡ್ ಕಂಪೆನಿಯ 50 ಷೇರುಗಳಾಗಲಿ ಅಥವಾ ಸರ್ಕಾರದವರ ಇಷ್ಟಾನುಸಾರ £50 ನಗದಾಗಲಿ ಜುರ್ಮಾನೆ ತೆರತಕ್ಕದ್ದು. ಸದರೀ ಗುತ್ತಿಗೆಯನ್ನ C ಅಂಡ್ ಕಂಪೆನಿಯವರು ತರುವಾಯ D ಅಂಡ್ ಕಂಪೆನಿಯವರಿಗೆ ಸಾಲೀಯಾನಾ 1000£ಗಳ ಗುತ್ತಿಗ್ಯಾಗಲಿ ಅಥವಾ ಗನೀಯಲ್ಲಿ ಹುಟ್ಟುವಳಿ ಆಗುವ ಮೊಬಲಗಿನಲ್ಲಿ ಶೇಕಡಾ 10ರ ಮೇರಿಗೆ ರಾಜಪಾಲಿಗಾ

ಗಲಿ ವರ್ಗ ಮಾಡಿದರೆ, ಆಗ್ಯೆ ಸಾಲೀಯಾನಾ 1000£ಗಳಾಗಲಿ ಅಥವಾ ಸಂದರ್ಭಾನುಸಾರ ಗನಿಯ ಹುಟ್ಟುವಳಿ ಮೊಬಲಗಿನಲ್ಲಿ ಶೇಕಡಾ 1ರ ಮೇರಿಗೆ ರಾಜಪಾಲಾಗಲಿ ಜುರ್ಮಾನೆ ತೆರತಕ್ಕದ್ದು. ಈ ಷಿಕಮಿ ಗುತ್ತಿಗೆಯನ್ನ D ಅಂಡ್ ಕಂಪೆನಿಯವರು ತರುವಾಯ E ಎಂಬುವನಿಗೆ 10,000£ಗಳ ನಗದಿಗೂ ವ ಯರಡು ವರುಷಗಳ ಆಖೈರಿನಲ್ಲಿ 10,000£ಗಳ ಸಲಿಕೆಗಾಗಿ ಸಹಾ ವರ್ಗ ಮಾಡಿದರೆ ಆಗ್ಯೆ D ಅಂಡ್ ಕಂಪೆನಿಯವರು ಷಿಕಮಿ ಗುತ್ತಿಗೆ ತೆಗದುಕೊಂಡಿದ್ದ ಬಾಬತು ಸಾಲೀಯಾನಾ 1000£ಗಳಿಗಾಗಲಿ ಯಾ ಗನಿಯ ಹುಟ್ಟುವಳಿಯ ಶೇಕಡಾ 1ರ ರಾಜಪಾಲಿಗಾಗಲಿ ಸರ್ಕಾರದವರು ಠರಾವ್ಮಾಡುವಂತಾ ತಾತ್ಕಾಲಿಕದ ಮೌಲ್ಯ ವಜಾ ಜಾತಾ ನಗದು 1000£ಗಳನ್ನೂ ಮತ್ತು ಎರಡು ವರುಷಗಳ ಆಖೈರಿನಲ್ಲಿ ಸಲಿಕೆ ಆಗತಕ್ಕ 1000£ಗಳನ್ನೂ ಅಂತಾ ವರ್ಗಕ್ಕಾಗಿ ಜುರ್ಮಾನೆ ತೆರತಕ್ಕದ್ದು.

(d) ಮೇಲೆ ಹೇಳೋಣಾದ ಜುರ್ಮಾನೆಯನ್ನ ಸರ್ಕಾರಕ್ಕೆ ಕ್ರಮವಾಗಿ ಪಾವತಿ ಮಾಡಿದ ಹೊರ್ತು ಯಾವ ವರ್ಗಾವರ್ಗಿಯೂ ಸಿದ್ಧಿಯಾದಂತೆ ಅಂಗೀಕರಿಸಲ್ಪಡಲಾರದು ಮತ್ತು ವರ್ಗ ತೆಗದುಕೊಂಡವನು ಸಹಾ ಇದೇ ರೀತಿ ಅಂತಾ ಜುರ್ಮಾನೆ ಸಲಿಕೆಯಾಗುವಂತೆ ಮಾಡಿಸೋಣದರ ಮೂಲಕ ತನ್ನ ಬಂದೋಬಸ್ತು ತಾನು ಮಾಡಿಕೊಳ್ಳಬೇಕು.

ಪಬ್ಲಿಕ್ ದರಖಾಸ್ತುಗಳು.

V. ಗನೀ ಕೆಲಸ ನಡಿಸಲಿಕ್ಕೆ ಗುತ್ತಿಗಳನ್ನ ಕೊಡುವ ವೃದ್ಧಿಶ್ಯ ಬಟ್ಟು ಛದರ ಮೈಲ್‌ಗಳನ್ನ ಆಗಿಂದಾಗ್ಯೆ ಕ್ಲಿಪ್ತ ಮಾಡುವದಕ್ಕೂ, ಮತ್ತು ಅಂತಾ ಜಮೀನಿನ ಗನೀ ಗುತ್ತಿಗೆಗಳನ್ನ ಖರೀದಿಗೆ ತೆಗದುಕೊಳ್ಳತಕ್ಕ ಬಗ್ಯಾಗಿ ದರಖಾಸ್ತುಗಳನ್ನ ಅಪೇಕ್ಷಿಸುವದಕ್ಕೂ ಸಹಾ ಅಧಿಕಾರವನ್ನ ಸರ್ಕಾರದವರು ಉಳಿಸಿಕೊಂಡಿರುತ್ತಾರೆ, ಮತ್ತು ಯಾವ ದರಖಾಸ್ತನ್ನಾಗಲಿ ಯಾ ಚಡದರಖಾಸ್ತನ್ನೇ ಆಗಲಿ ಮಂಜೂರ್ಮಾಡುವದಕ್ಕೆ ಸರ್ಕಾರದವರು ಬದ್ಧರಾಗಿರುವದಿಲ್ಲವು.

ಗುತ್ತಿಗೆ ನಮೂನೆ.

VI. ಮೇಲೆ ನಮೂದಾದ ನಿಬಂಧನೆಗಳನ್ನನುಸರಿಸಿ ಕೊಡಲ್ಪಡುವ ಗುತ್ತಿಗೆ ನಮೂನೆಯು ಇದಕ್ಕೆ ಲಗ್ಗತ್ತಾಗಿರುತ್ತದೆ.

ಕೆ. ಶೇಷಾದ್ರಿ ಐಯ್ಯರ್,
ದಿವಾನ್.

1887ನೇ ಇಸವಿ ಸೆಪ್ಟಂಬರ್ 5ನೇ ಮರ್ಸ್ಕಂ ರೂಲ್ಸ್ ಅನುಸರಿಸಿ ಕೊಡಲ್ಪಟ್ಟ ಗನಿ ಕೆಲಸದ ಗುತ್ತಿಗೆಯ ಕರಾರ ನಮೂನೆ.

ಕಕ್ಷಿಗಾರರು.

ಈ ಕರಾರು ಒಂದು ಸಾವಿರದ ಯಂಟನೂರು ಯಂಭತ

ನೇ ಇಸವಿ ನೇ ಮರ್ಸ್ಕುಮಿನಲ್ಲಿ ("ಗುತ್ತಿಗೆಗೆ ಕೊಡುವವರೆಂತ" ಯಿಯಿಂದ ಕರೆಯಲ್ಪಡುವ) ಮೈಸೂರು ಗವರ್ನಮೆಂಟಿನವರಿಗೂ ಮತ್ತು "ಗುತ್ತಿಗೆದಾರರೆಂತ" (ಯಿಯಿಂದ ಕರೆಯಲ್ಪಡುವ) ಇತರರಿಗೂ ನಡೆದಿರುತ್ತೆ.

ಗುತ್ತಿಗೆಗೆ ಕೊಡತಕ್ಕವರು ಗುತ್ತಿಗೇದಾರರ ಕೇಳಿಕೆ ಮೇಲೆ ಮತ್ತು ಅವರು ಇದರ ಮುಂದೆ ನಮೂದ್ ಮಾಡಲ್ಪಟ್ಟ ಒಡಂಬಡಿಕೆಗಳನ್ನು ನೆರವೇರಿಸುವದಕ್ಕೋಸ್ಕರ ಜಾಮೀನೀ ತರೀಕ್ ರೂಪಾಯಿ

ಠೇವಣೀ ಮತ್ತು ಗುತ್ತಿಗೆಗೆ ಕೊಡುವ ಬಗ್ಗೆ ಕರಾರು.

ಗಳನ್ನು ಠೇವಣೀ ಕಟ್ಟಿ ಅಂಥಾ ಯಾವದಾದರೊಂದು ಒಡಂಬಡಿಕೆ ತಪ್ಪಿ ನಡಿಯುವಲ್ಲಿ ಸದರೀ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡತಕ್ಕದ್ದೆಂಬ ಷರತ್ತಿನ ಮೇಲೆ, ಮುಂದೆ ಅಡಗಿರತಕ್ಕ ಇದಕ್ಕೆ ಶೇರಿಸೋಣಾದ ಪಠ ಯಾ ನಕ್ಷೆಯಲ್ಲಿ ತೋರಿಸಲ್ಪಟ್ಟು ಮೈಸೂರು ಶೀಮೆಯ ಡಿಸ್ಟ್ರಿಕ್ಟು ತಾಲ್ಲೂಕಿನಲ್ಲಿ ಯಿರುವ ಅಂದಾಜೆವುಳ್ಳ ಮತ್ತು ಯಿದರಡೀ ಶೇರಿಸಲ್ಪಟ್ಟ ಷೆಡ್ಯೂಲ್ ತಖ್ತೆಯಲ್ಲಿ ಮುಖ್ಯವಾಗಿ ನಮೂದ್ ಮಾಡಿ ವಿವರಿಸಲ್ಪಟ್ಟು "ಚುನಾಯಿಸಲ್ಪಟ್ಟ ತಾಕು" ಯಂಬದಾಗಿ ಯಿಯಿಂದ ಕರೆಯಲ್ಪಡುವ ಜಮೀನ ವಿಷಯದಲ್ಲಿ ಗನಿ ಕೆಲಸ ನಡಿಸುವದಕ್ಕಾಗಿ ಗುತ್ತಿಗೆಗೆ ಕೊಡುವ ಬಗ್ಗೆ ಒಪ್ಪಿಯಿರುತ್ತಾದ್ದರಿಂದ.

ಅಂಗೀಕಾರ.

ಕೊಡುವಣ.

ಹಾಲಿ ಈ ಕರಾರಿನಿಂದ ಅಂಗೀಕರಿಸಲ್ಪಡುವದೇನಂದರೆ, ಮುಂದೆ ಉಳಸಿಕೊಳ್ಳಲ್ಪಟ್ಟ ಕಂದಾಯಕ್ಕೂ ರಾಜಪಾಲಿಗೂ, ಜುರ್ಮಾನೆಗೂ, ಮತ್ತು ಇತರ ಪಾವತೀಗಳಿಗೂ ಮತ್ತು ಮುಂದೆ ಅಡಗಿರತಕ್ಕ ಗುತ್ತಿಗೇದಾರರಿಂದ ಹುಟ್ಟಲ್ಪಡುವ ಒಡಂಬಡಿಕೆಗಳು ವ ಕರಾರ್‌ಗಳಿಗೂ ಒಳಪಟ್ಟು, ಗುತ್ತಿಗೆಗೆ ಕೊಡುವವರಿಂದ ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರಿಗೆ, ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ, ಮೇಲೆ ನಮೂದ್ ಮಾಡಲ್ಪಟ್ಟು ವಿವರಿಸಲ್ಪಟ್ಟ ಚುನಾಯಿಸಲ್ಪಡೋಣಾದ ತಾಕಿನಲ್ಲಿ ಅಡಗಿರುವ ಆಕಾರ ಕಂಡದ ಸರ್ಕಾರ್ ಬಂಜರ್ ಜಮೀನ ದೇಖಿಲ್ ಹಿಡುವಳಿಯಲ್ಲಿ ಯಿಲ್ಲದ ಆಕಾರ ಕಂಡ ಸರ್ಕಾರ್ ಜಮೀನಲ್ಲಿಯೂ, ಮತ್ತು ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ಹಿಡುವಳಿಯಲ್ಲಿನ ಸರ್ಕಾರ್ ಜಮೀನ ದೇಖಿಲ್ ಇನಾಂ ಜಮೀನಗಳಲ್ಲಿಯೂ ವಿಂಗಡಿಸಿ, ಗನಿ ಕೆಲಸ ನಡಿಸುವದಕ್ಕೂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಯಿದ್ದಲು ಯಾ ವ್ಯಾಪಾರಕ್ಕೆ ಲಾಯಖಾದ ಇತರ ಪದಾರ್ಥಗಳುಳ್ಳಂಥಾ ಕಲ್ಲುಗಳು, ಬಳ್ಳಿಮೊಂಣು ಮುಂತಾದವುಗಳನ್ನು ಅಗೆದು ವಿಂಗಡಿಸುವದಕ್ಕೂ ಮತ್ತು ಅಲ್ಲಿ ಸಿಗಬಹುವಾದ ತಮಾಂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು; ಮತ್ತು ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳನ್ನು ಜಾಲಿಸಿ ತಯಾರ್ಮಾಡಿ ಪುಡಿಮಾಡಿ ವ್ಯಾಪಾರಕ್ಕೆ ಲಾಯಖಾಗಿ ಮಾಡುವ ಬಗ್ಗೂ ಯಿದರ ದೆಸೆಯಿಂದ ಪಟ್ಟ ಲೈಸೆನ್ಸು ಕೊಡೋಣಾಗಿರುತ್ತದೆ, ಪರಂತು ಹಿಡುವಳಿ ವ ಇನಾಂ ಜಮೀನಗಳ ವಿಷಯದಲ್ಲಿ ಅಂಥಾ ಹಿಡುವಳೀದಾರು) ಮತ್ತು ಇನಾಂದಾರರಿಂದ ಮೇಲ್ಕಂಡ ಹಕ್ಕನ್ನು ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರ್‌ಗಳು, ವಹಿವಾಟುದಾರರೂ ಮತ್ತು ವರ್ಗದಾರರೂ ಕೊಂಡುಕೊಂಡಿರಬೇಕು, ಯಾ ಕೊಂಡುಕೊಳ್ಳುವವರಾಗಿರಬೇಕು ಯಾ ಅವರೊಂದಿಗೆ ಗುತ್ತಿಗೇದಾರರೂ, ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರರು ಯಾ ವರ್ಗದಾರರು ಸದರೀ ಯವರ ಹಕ್ಕು ಪಡೆಯುವದಕ್ಕಾಗಿ ಅವರ ಸ್ವಂತ ಏರ್ಪಾಡು ಮಾಡಿಕೊಂಡಿರಬೇಕು ಯಾ ಮಾಡಿಕೊಳ್ಳಬೇಕು.

ಗನೀ ಕೆಲಸ ನಡಿಸುವ ಬಗ್ಗೆ ಪಟ್ಟ ಸ್ವಾತಂತ್ರ್ಯ.

ಗನಿ ಕೆಲಸದಲ್ಲಿ ಉತ್ಪತ್ತಿ ಆದದ್ದನ್ನು ಮಾರುವ ಬಗ್ಗೆ ಗುತ್ತಿಗೇದಾರಗೆ ಸ್ವಾತಂತ್ರ್ಯ.

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳಿಗೆ ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ ಅವರಿಂದಲಾಗಲಿ ಯಾ ಅವರ ಪೈಕೀ ಯಾರಿಂದಲಾಗಲೀ ಅಂಥಾ ಚುನಾಯಿಸಲ್ಪಟ್ಟ ತಾಕಿನ ಮೇಲ್‌ಭಾಗದಲ್ಲಾಗಲೀ ತಳಭಾಗದಲ್ಲಾಗಲೀ ಹೊಂದಲ್ಪಡುವ ಭಂಗಾರ, ಲೋಹವುಳ್ಳ ಅದುರು, ವಜ್ರ ಮುಂತಾದ ಕಲ್ಲುಗಳು ಮತ್ತು ಕಲ್ಲಿದ್ದಲು ಮುಂತಾದ ವ್ಯಾಪಾರಕ್ಕೆ ಲಾಯಖಾದ ಪದಾರ್ಥಗಳನ್ನು ಸಾಗಿಸುವದಕ್ಕೂ ವಿಕ್ರಯಿಸುವದಕ್ಕೂ ಮತ್ತು ವಿಲೇವಾರಿ ಮಾಡುವದಕ್ಕೂ ಸ್ವಾತಂತ್ರ್ಯ ಕೊಡೋಣಾಗಿರುತ್ತೆ.

ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರು ವಹಿವಾಟುದಾರರು ಮತ್ತು ವರ್ಗದಾರರಿಗೆ 30 ವರುಷಕಾಲ ಪರಿಯಂತ ಸ್ವಾಧೀನ.

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳು, ವಹಿವಾಟುದಾರರು ವ ವರ್ಗದಾರರು ಯಿದರ ದೆಶೆಯಿಂದ ಅವರಿಗೆ ಕೊಡಲ್ಪಟ್ಟಿತೆಂಬ ಮತ್ತು ಕೊಡೋಣಾದ ಮೇಲೆ ನಮೂದ್ ಮಾಡಲ್ಪಟ್ಟ ಪ್ರದೇಶಗಳನ್ನ ಈ ಕರಾರ್ ತಾರೀಖು ಮೊದಲು ಮೂವತ್ತು ವರುಷಗಳ ವಾಯಿದೇ ಪರಿಯಂತ ಸ್ವಾಧೀನ ಉಂಟಾಗಿರತಕ್ಕದ್ದು.

ಸರ್ಕಾರಿ ಜಮೀನುಗಳಿಗೆ ಕಂದಾಯವನ್ನೂ ಇನಾಂ ಜಮೀನುಗಳಿಗೆ ಜೋಡೀ ಮತ್ತು ಕ್ವಿಟ್ ರೆಂಟನ್ನೂ ಪಾವತೀ ಮಾಡುವಣ.

ಮತ್ತು ಸದರೀ ವಾಯಿದೇಯಲ್ಲಿ——————ಡಿಸ್ಟ್ರಿಕ್ಟಿನೊಳಗೆ ಜಮೀನು ಕಂದಾಯದ ವಸೂಲಿ ಬಗ್ಯಾಗಿ ಜಾರೀ ಯಿರುವ ರೂಲ್ಸ್ ಅನುಸರಿಸಿ ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಹಿಡುವಳಿಯಲ್ಲಿ ಯಿರುವ ಮತ್ತು ಸಾಗುವಳಿ ಲಾಯಖಾದ ಬಂಜರ್ ಜಮೀನುಗಳ ಮೇಲೆ ಹಾಲೀ ವಸೂಲ್ ಮಾಡಲ್ಪಡಬೇಕಾದ ಸಾಲಿಯಾನಾ ಕಂದಾಯವನ್ನೂ ಅಥವಾ ಐಯಿಂದ ಯಾವ ಕಾಲದಲ್ಲಾಗಲೀ ಈ ಗುತ್ತಿಗೆ ಜಾರೀ ಯಿರುವ ಕಾಲದಲ್ಲಿ ಗುತ್ತಿಗೇಗೆ ಕೊಡುವವರಿಂದ ಯಾ ಅವರ ಉತ್ತರಾಧಿಕಾರಿಗಳಿಂದ ಯಾ ವರ್ಗದಾರರಿಂದ ಜಮೀನು ಕಂದಾಯದ ಯಾವದಾದರೂ ತಿದ್ದುಪಾಟಿನಲ್ಲಿ ಕಂದಾಯದ ತರೀಕ್ ಅಂಥಾ ಜಮೀನಿನ ಮೇಲೆ ಗೊತ್ತುಮಾಡಲ್ಪಡುವ ಜಾಸ್ತೀ ಮೊಬಲಗನ್ನೂ ಮತ್ತು ಸದರೀ ತಾಕಿನಲ್ಲಿ ಅಡಗಿರುವ ಯಾವದಾದರೂ ಇನಾಂ ಜಮೀನಿನ ಮೇಲೆ ತೆರಬೇಕಾದ ಜೋಡೀ ಯಾ ಕ್ವಿಟ್‌ರೆಂಟ್ ಮೊಬಲಗನ್ನೂ ಖಿಸ್ತುಬಂದೀ ಪ್ರಕಾರ ಪಾವತೀ ಮಾಡತಕ್ಕದ್ದಲ್ಲದೆ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಸಾಗುವಳಿ ನಾಲಾಯಖ ಸರ್ಕಾರಿ ಜಮೀನಿನ ಮೇಲೆ ಯಕರೆ ವಂದಕ್ಕೆ 8 ಆಣೆ ಮೇರಿಗೆ ಸಾಲೀಯಾನಾ ಕಂದಾಯವನ್ನು ಸುದಾ ಅವುಗಳಿಗಾಗಿ ಒಪ್ಪಿ ಮತ್ತು ಪಾವತೀ ಮಾಡುತ್ತಾ ಬರಬೇಕು.

ಮತ್ತು ಲೋಕಲ್‌ಸೆಸ್ಸು, ತೆರಿಗೆಗಳು ಯಾ ರಿವಾಜುಗಳನ್ನ ಪಾವತೀ ಮಾಡುವಣ.

ಮತ್ತು ಮೇಲೆಕಂಡ ಸಾಲಿಯಾನಾ ಕಂದಾಯ, ಜೋಡೀ ವ ಕ್ವಿಟ್‌ರೆಂಟ್ ದೇಖೀಲ್, ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ನಿವೇಶನ ಯಾ ಜಮೀನುಗಳು ಯಾ ಅವುಗಳಲ್ಲಿರುವ ಕಟ್ಟಡಗಳು ಯಾ ಕಾಮಗಾರಿ ಯಿವುಗಳಿಗಾಗಿ ತತ್ಕಾಲದಲ್ಲಿ ತೆರಬೇಕಾದ ತಮಾಂ ಲೋಕಲ್‌ಸೆಸ್ಸುಗಳೂ ಇತರ ತಮಾಂ ತರಹೆಯ ತೆರಿಗೆಗಳೂ ರಿವಾಜುಗಳೂ ಸುದಾ ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು.

ಮತ್ತು ಉತ್ಪತ್ತಿಯಾದ ಭಂಗಾರ ವಗೈರೇ ಮೇಲೆ ಶೇಕಡಾ 5ರಂತೆ ರಾಜಪಾಲು ಕೊಡುವಣ.

ಮತ್ತು ಗುತ್ತಿಗೇದಾರರಿಂದ ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರು ಯಾ ವರ್ಗದಾರರುಗಳಿಂದ ತಯಾರ್ಮಾಡಲ್ಪಡುವ, ಪುಡಿಮಾಡಲ್ಪಡುವ ಮತ್ತು ವ್ಯಾಪಾರಕ್ಕೆ ಲಾಯಖಾಗಿ ಮಾಡಲ್ಪಡುವ ತಮಾಂ ಭಂಗಾರ, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮತ್ತು ಖರೀದಿ ಆಗುವ ಯಾ ವ್ಯಾಪಾರದ ಸ್ವಭಾವವುಳ್ಳ ಇತರ ಪದಾರ್ಥಗಳ ಒಟ್ಟು ಹುಟ್ಟುವಳೀ ಮೇಲೆ ಶೇಕಡಾ 5ರ ಪ್ರಕಾರ ರಾಜಪಾಲು ಕೊಡುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರಬೇಕು, ಅಂಥಾ ರಾಜಪಾಲು ಯಾವ ಬಾಬಿನ ಖರ್ಚೂ ವಜಾ ಮಾಡಲ್ಪಡದೆಯೆ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ದೊರಿಯುವಂಥಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಮೌಲ್ಯದ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನಲ್ಲಿ ದೊರಿಯುವಂಥಾ ತಮಾಂ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಖರೀದಿ ಮೊಬಲಗಿನ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲ್ ಮೊಬಲಗನ್ನು ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು; ಅಂಥಾ ರಾಜಪಾಲು, ಯಾವ ಬಾಬಿನ ಖರ್ಚೂ ವಜಾ ಮಾಡಲ್ಪಡದೆಯೇ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ಪ್ರತಿ ವರ್ಗದ ಯಾ ವೊಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುರಮಾನೆ ಕೊಡುವಣ.

ಯಾವ ಕಾಲದಲ್ಲಾಗಲಿ ಗುತ್ತಿಗೇದಾರರಿಂದ ಅವರ ಎಗ್ಜಿಕ್ಯೂಟರುಗಳಿಂದ ವಹಿವಾಟ್‌ದಾರರಿಂದ ಯಾ ವರ್ಗದಾರ್ರುಗಳಿಂದ ಸಂಪೂರ್ಣವಾಗಿಯಾಗಲಿ ವೊಂದುಭಾಗವಾಗಿಯಾಗಲಿ ಕೊಡಲ್ಪಡುವ ಮೇಲೆ ಹೇಳಲ್ಪಟ್ಟ ನಿವೇಶನಗಳ ಪ್ರತಿ ವರ್ಗ ಯಾ ವೊಳಗುತ್ತಿಗೇಗಾಗಿಯಾಗಲಿ ಈ ಕರಾರ್‌ಗಳಿಂದ ವೊಪ್ಪಿಸಲ್ಪಟ್ಟ ವ ಕೊಡಲ್ಪಟ್ಟ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸ್‌ಗಳನ್ನ ವಿಶಿಷ್ಟವಾಗಲಿ ಆ ಪೈಕೀ ಕೆಲವನ್ನ ವರ್ಗ ಮಾಡುವದಕ್ಕಾಗಿಯಾಗಲಿ ಅಥವಾ ಮೇಲೆ ಹೇಳಲ್ಪಟ್ಟ ನಿವೇಶನಗಳೊಳಗಣ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸುಗಳಲ್ಲಿ ಸಂಬಂಧ ಯಾ ಹಿಸ್ಸೆಯನ್ನ ಸಂಪೂರ್ಣವಾಗಿಯಾಗಲಿ, ಕೆಲವು ಮಟ್ಟಿಗಾಗಲಿ ಕೊಡುವದಕ್ಕಾಗಲಿ, ಅಂತಾ ವರ್ಗ ಯಾ ವೊಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುರಮಾನೆ ತೆರಲಿಕ್ಕೆ ವೊಪ್ಪಿಕೊಂಡು ಪಾವತೀ ಮಾಡುತ್ತಾ ಬರತಕ್ಕದ್ದು. ಅಂತಾ ಜುರಮಾನೆಯು ಯಾವಬಾಬಿನ ಖರ್ಚೂ ವಜಾ ಮಾಡಲ್ಪಡದೇಯೇ ಪಾವತೀ ಮಾಡಲ್ಪಡತಕ್ಕದ್ದು. ಆದರೆ ಯರಡನೇ ದಫಾ ಯಾ ಆ ತರುವಾಯ ಮಾಡಲ್ಪಡುವ ವರ್ಗ ಯಾ ವೊಳಗುತ್ತಿಗೆ ವಿಷಯದಲ್ಲಿ ಕೊಡಬೇಕಾದ ಜುರಮಾನೆಯನ್ನ ಲೆಖ್ಖ ಮಾಡುವಾಗ, ಅದರ ಹಿಂದೆ ನಡೆದ ವರ್ಗ ಯಾ ವೊಳಗುತ್ತಿಗೆ ಮೊಬ

ಲಗು ಜಾತಾ ಆ ವರ್ಗದ ಯಾ ವೊಳಗುತ್ತಿಗೆಯ ಮೊಬಲಗಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಪರಂತು ಯಾವದಾದರೊಂದು ವರ್ಗ ಯಾ ಒಳಗುತ್ತಿಗೆಯ ಮೊಬಲಗು ವಿಶಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ವೊಂದು ಕಂಪೆನಿಯ ಷೇರುಗಳಾಗಿ ಯಿದ್ದರೆ, ಅಂಥಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ಗುತ್ತಿಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಯಿಷ್ಟಾನುಸಾರ ಆ ಕಂಪೆನಿಯ ಷೇರುಗಳಾದರೂ ಆಗಬಹುದು ಅಥವಾ ಆ ಷೇರುಗಳ ಕ್ಲಿಪ್ತವಾದ ಮೌಲ್ಯದ ಮೇರಿಗೆ ಅದಕ್ಕೆ ಸರಿಯಾದ ನಗದು ಹಣವಾದರೂ ಆಗಬಹುದು. ಮತ್ತು ಯಾವದಾದರೊಂದು ವರ್ಗ ಯಾ ಒಳಗುತ್ತಿಗೆಯ ಮೊಬಲಗು ವಿಸಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ವೊಂದು ತೆರಿಗೆ, ರಾಜಪಾಲು, ಯಾ ಇತರ ಖಿಸ್ತುಬಂದಿಯಾಗಿ ಸಲಿಕೆಯಾಗುವ ಸ್ವಭಾವ ಉಳ್ಳದ್ದಾಗಿ ಯಿದ್ದರೆ, ಅಂತಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ತೆರಿಗೆ, ರಾಜಪಾಲು, ಅಥವಾ ಸಂದರ್ಭಾನುಸಾರ ಇತರ ಖಿಸ್ತುಬಂದೀ ಮೇರಿಗೆ ಸಲಿಕೆಯಾಗುವ ಸ್ವಭಾವವುಳ್ಳದ್ದಾಗಿಯೇ ಯಿರತಕ್ಕದ್ದು. ಹಾಗೆ ತರುವಾಯ ಮಾಡಲ್ಪಡುವ ವರ್ಗ ಯಾ ಒಳಗುತ್ತಿಗೆಯ ಮೇಲೆ ವಸೂಲಾಗತಕ್ಕ ಜುರಮಾನೆಯನ್ನ ಲೆಖ್ಖ ಮಾಡುವದಕ್ಕಾಗಿ ಆ ವರ್ಗ ಯಾ ಒಳಗುತ್ತಿಗೆಯ ಮೊಬಲಗಿನಲ್ಲಿ ಆವಶ್ಯಕವಾದ ವಜಾವನ್ನ ಮಾಡುವ ವುದ್ದಿಶ್ಯ ಅಂಥಾ ತೆರಿಗೆ, ರಾಜಪಾಲು ಯಾ ಇತರ ಖಿಸ್ತುಬಂದಿ ಸಲಿಕೆಯ ತಾತ್ಕಾಲಿಕ ಮೌಲ್ಯವು ಗುತ್ತಿಗೆಗೆ ಕೊಡುವವರಿಂದಲಾಗಲಿ ಅವರ ಉತ್ತರಾಧಿಕಾರಿಗಳಿಂದಲಾಗಲಿ, ಯಾ ವರ್ಗದಾರರುಗಳಿಂದಲಾಗಲಿ ಠರಾವ್ ಮಾಡಲ್ಪಡತಕ್ಕದ್ದು. ಮತ್ತು ಯಾವ ವರ್ಗವಾಗಲಿ ಯಾ ಒಳಗುತ್ತಿಗೆಯೇ ಆಗಲೀ ಅಂತಾ ವರ್ಗ ಯಾ ಒಳಗುತ್ತಿಗೆಗಾಗಿ ಜುರ್ಮಾನೆಯು ಗುತ್ತಿಗೆಗೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರುಗಳಿಗೆ ಕ್ರಮವಾಗಿಯೂ, ಪೂರ್ತಿಯಾಗಿಯೂ ಪಾವತೀ ಮಾಡಲ್ಪಟ್ಟಿದ್ದರೇನೇ ಹೊರ್ತು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರ್ರುಗಳ ವಿಷಯದಲ್ಲಿ ಅದು ಸಿದ್ಧವಾಗುವದಿಲ್ಲವು.

ಕಂದಾಯ, ರಾಜಪಾಲ್, ಜುರ್ಮಾನೆ ಮತ್ತು ಇತರ ಬಾಕೀಗೋಸ್ಕರ ಗುತ್ತಿಗೆಗೆ ಕೊಡುವವರಿಂದ ಜಫ್ತಿ ಮಾಡುವಣ.

ಮತ್ತು ಅಂಥಾ ಕಂದಾಯ, ರಾಜಪಾಲು, ತೆರಿಗೆ ವ ಜುರ್ಮಾನೆ ಮೊದಲಾದ ಯಿತರ ಬಾಕಿಗಳು ಅವುಗಳ ಪಾವತಿಬಗ್ಗ್ಯಾಗಿ ಈ ಕರಾರಿನ ದೆಶೆಯಿಂದ ಕೊಡಲ್ಪಟ್ಟಿ ವಾಯಿದೆಯು ಮುಗಿದ ಅರವತ್ತು ದಿವಸಗಳ ಪರಿಯಂತ ಪಾವತಿಆಗದೆ ಬಾಕಿಯಿದ್ದು ಮತ್ತು ಅಂಥಾ ಬಾಕಿಗಳನ್ನ ಪಾವತೀಮಾಡಬೇಕೆಂಬದಾಗಿ ಸದರೀ—ಡಿಸ್ಟ್ರಿಕ್ಟ್ ಶಿವಿಲ್ ಯುಗ್ಜಿಕ್ಯೂಟಿವ್ ಆಫಿಸರವರಿಂದ ವಂದು ನೋಟೀಸು ಜಾರಿಮಾಡಲ್ಪಟ್ಟ ತರುವಾಯ ಮೂವತ್ತು ದಿವಸಗಳ ವಳಗಾಗಿ ಸದರೀ ಗುತ್ತಿಗೆದಾರರು, ಅವರ ಯುಗ್ಜಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರ್ರು ಪಾವತಿಮಾಡದೆಯಿದ್ದ ಸಂದರ್ಭದಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ತಮಾಂ ಭಂಗಾರ, ಲೋಹ ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು, ಮತ್ತು ಚುನಾಯಿಸಲ್ಪಟ್ಟ ತಾಕಿನೊಳಗಣ ಗನಿ ಯಾ ಹಳ್ಳಗಳ ಆಸ್ಪಾಸಿನಲ್ಲಿ ಗುತ್ತಿಗೇದಾರರು, ಅವರ ಯುಗ್ಜಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರರಿಂದ ಉಪಯೋಗಿಸಲ್ಪಟ್ಟ ಯಾ ಸಾಗಿಸಲ್ಪಟ್ಟ ವಿಕ್ರಯ ಸ್ವಭಾವವುಳ್ಳ ಇತರ ಪದಾರ್ಥಗಳನ್ನಾಗಲಿ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಿರಬಹುದಾದ ಮತ್ಯಾವ ಯಿತರ ಸ್ವತ್ತನ್ನಾಗಲಿ ಹಿಡಿದುಕೊಳ್ಳುವಬಗ್ಗೆ ಸ್ವತಂತ್ರರಾಗಿರತಕ್ಕದ್ದು. ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಂಥಾ ಭಂಗಾರ ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು ಮುಂತಾದ ಇತರ ಪದಾರ್ಥಗಳನ್ನೂ ಸ್ವತ್ತುಗಳನ್ನೂ ವಿಕ್ರಯಿಸಿ ವಿಲಾವಾರಿ ಮಾಡಬಹುದು, ಮತ್ತು ಅಂಥಾ ವಿಕ್ರಯದಿಂದ ಹುಟ್ಟಿದ ಮೊಬಲಗಿನಲ್ಲಿ ಈ ಗುತ್ತಿಗೆ ಅನುಸರಿಸಿ ಬರಬೇಕಾದ ಕಂದಾಯ, ರಾಜಪಾಲು, ಜುರ್ಮಾನೆ ಮುಂತಾದ ಯಿತರ ವಸೂಲಾಗಬೇಕಾದ ಮೊಬಲಗಿಗೋಸ್ಕರವೂ ಅಂಥಾ ಜಫ್ತಿ ಮತ್ತು ಹರಾಜಿಗೋಸ್ಕರ ತಗಲಿದ ಖರ್ಚು ಮೊಬಲಗಿಗೋಸ್ಕರವೂ ವಜಾಹಾಕಿಕೊಳ್ಳಬಹುದು.

ಗನಿ ಕೆಲಸಗಳನ್ನು ಅವಿಚ್ಛಿನ್ನವಾಗಿ ನಡೆಸುವಬಗ್ಗೆ ಗುತ್ತಿಗೇದಾರನಿಂದ ಒಡಂಬಡಿಕೆ.

ಮತ್ತು ಇದರದೆಶೆಯಿಂದ ಗುತ್ತಿಗೇದಾರರು ತಮಿಗೋಸ್ಕರವೂ ಅವರ ವಾರಸುದಾರರು, ಯುಗ್ಜಿಕ್ಯೂಟರು, ವಹಿವಾಟುದಾರರು ಮತ್ತು ವರ್ಗದಾರರು ಯಿವರಿಗೋಸ್ಕರವೂ ಮತ್ತು ಆಯಾ ಪ್ರತಿ ವಬ್ಬರಿಗೋಸ್ಕರವೂ ಬೇರೆಬೇರೆಯಾಗಿ ಒಡಂಬಟ್ಟು ಇದರದೆಶೆಯಿಂದ ಅವರಿಗೋಸ್ಕರ, ಮತ್ತು ಅವರ ವಾರಸುದಾರರು, ಯುಗ್ಜಿಕ್ಯೂಟರು, ವಹಿವಾಟುದಾರರು ವ ವರ್ಗದಾರರಿಗೋಸ್ಕರ ಗುತ್ತಿಗೆಗೆ ಕೊಡುವವರೊಂದಿಗೂ, ಅವರ ಉತ್ತರಾಧಿಕಾರಿಗಳ ಮತ್ತು ವರ್ಗದಾರರೊಂದಿಗೂ ಒಡಂಬಟ್ಟಿರುವದೇನಂದರೆ, ಅವರು ಅಂದರೆ ಗುತ್ತಿಗೇದಾರರು, ಅವರ ಯುಗ್ಜಿಕ್ಯೂಟರುಗಳು, ವಹಿವಾಟದಾರರು ಗುತ್ತಿಗೆ ಕಾಲದ ಮದಲ್ ವರುಷದಲ್ಲಿ ಚುನಾಯಿಸಲ್ಪಟ್ಟ ಪ್ರದೇಶದಲ್ಲೆಲ್ಲ ಛಂದಾಗಿಯೂ ಫಲಕಾರಿಯಾಗುವಂತೆಯೂ ಭಂಗಾರಕ್ಕೋಸ್ಕರ ಯಾ ಯಿತರ ಲೋಹಗಳು ಯಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳಿಗೋಸ್ಕರ ಅಜಮಾಯಿಷೀಕೆಲಸ ನಡಿಸುವದಲ್ಲದೆ ಹಾಗೆ ಅವಶ್ಯಕವಾದಲ್ಲಿ ಅಜಮಾಯಿಷೀ ಕೆಲಸಗಳ ಫಲಪರ್ಯವಸಾನವನ್ನು ತೋರಿಸುಬಗ್ಯೆ ತಯಾರ್ಮಾಡಲ್ಪಟ್ಟಿರಬಹುದಾದಂಥಾ ಯಾವದಾದರೂ ರಿಪೋರ್ಟುಗಳ ಯಥಾ ನಕಲ್‌ಗಳನ್ನ ಗುತ್ತಿಗೆಗೆ ಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಒದಗಿಸತಕ್ಕದ್ದು.

ಮತ್ತು ಈ ಗುತ್ತಿಗೆ ತಾರೀಖು ಮೊದಲು ಯರಡು ವರುಷಗಳ ವಳಗಾಗಿ, ಚುನಾಯಿಸಲ್ಪಟ್ಟ ತಾಕಿನ ಪ್ರತಿ ಚದರಮೈಲ್ ವಂದಕ್ಕೆ 5,000 (ಐದುಸಾವಿರ) ಪರ್ವಗಳಿಗೆ ಕಮ್ಮಿಯಿಲ್ಲದ, ಖರ್ಚಿನಬಗ್ಗ್ಯಾಗಿ ವಸೂಲ್ಮಾಡಲ್ಪಟ್ಟ ಮೂಲಧನವುಳ್ಳ ವಂದು ಕಂಪೆನಿಯಾನೆ ಸಂಘ

ವನ್ನು ಶೇರಿಸುವದಕ್ಕೆ ಅಶಕ್ತರಾದರೆ ಈ ಗುತ್ತಿಗೆಯ ದೆಶೆಯಿಂದ ಉಂಟುಮಾಡಲ್ಪಟ್ಟ ತಮಾಂ ಬಾಧ್ಯತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಗುತ್ತಿಗ್ಯೆಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ದಂಡವಾಗಿ ವಪ್ಪಿಸತಕ್ಕದ್ದು.

ಮತ್ತು ಗುತ್ತಿಗೆ ವಾಯಿದೆಯಲ್ಲಿ ಫಲಕಾರಿಯಾಗುವಂತೆ ಅವಿಚ್ಛಿನ್ನವಾಗಿ, ಪರಂತು ಅಸಾಧ್ಯವಾದ ಆಕಸ್ಮಿಕದ ದೆಶೆಯಿಂದ ಅಡ್ಡೀ ಮಾಡಲ್ಪಟ್ಟ ಕಾಲದಲ್ಲಿವಿನಾ, ಚುನಾಯಿಸಲ್ಪಟ್ಟ ತಾಕಿನೊಳಗೂ ಮೇಲ್ಭಾಗದಲ್ಲಿಯೂ ಗನಿಕೆಲಸ ನಡಶಿ ದೊರಿಯುವ ತಮಾಂ ಭಂಗಾರ, ಲೋಹ, ಲೋಹಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲು, ಕಲ್ಲಿದ್ದಲು ಮತ್ತು ವಿಕ್ರಯಕ್ಕೆ ವ ವ್ಯಾಪಾರಕ್ಕೆ ಲಾಯಖಾದ ತಮಾಂ ಯಿತರ ಪದಾರ್ಥಗಳನ್ನೂ ತಯಾರ್ಮಾಡಿ ವ್ಯಾಪಾರ ಲಾಯಖಾಗಿ ಮಾಡತಕ್ಕದ್ದು.

ಭಂಗಾರದ ಮಾದರಿ ವಗೈರೆಯನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸುವಣ ಯಾ ತೆಗೆದುಕೊಳ್ಳುವಬಗ್ಯೆ ಅವಕಾಶ ಕೊಡುವಣ.

ಮತ್ತು, ಅಪೇಕ್ಷಿಸಲ್ಪಟ್ಟಲ್ಲಿ ಅವು ವಿಕ್ರಯವಾಗುವದಕ್ಕೆ ಮುಂಚಿತವಾಗಿ, ತಯಾರ್ಮಾಡಲ್ಪಟ್ಟು, ಪುಡಿ ಮಾಡಲ್ಪಟ್ಟು ಮತ್ತು ವ್ಯಾಪಾರ ಲಾಯಖಾಗಿ ಮಾಡಲ್ಪಟ್ಟಿರುವ ವಿಕ್ರಯಕ್ಕೆ ಶಿದ್ಧಪಡಿಶಿದಂಥಾ ತಮಾಂ ಭಂಗಾರ, ಲೋಹಗಳು, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳ ಮಾದರಿ ಯಾ ಮಾದರಿಗಳನ್ನು ಗುತ್ತಿಗ್ಯೆ ಕೊಡುವವರಿಗೆ. ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಅಥವಾ ಏಜಂಟ್ ಯಾ ಏಜಂಟರುಗಳಿಗೆ ಒಪ್ಪಿಸತಕ್ಕದ್ದು, ಅಥವಾ ಅವರಿಂದ ತೆಗದುಕೊಳ್ಳುವಬಗ್ಯೆ ಅವಕಾಶಕೊಡಲ್ಪಡತಕ್ಕದ್ದು ಹಾಂಗೆ ತೆಗದುಕೊಳ್ಳುವ ತಮಾಂ ಮಾದರಿಬಗ್ಯೆ ಆಗಿನ ಬಾಜಾರ್ ಧಾರಣೆಪ್ರಕಾರ ಖರೀದಿ ಮೊಬಲಗು ಗುತ್ತಿಗೆಗೆ ಕೊಡುವವರಿಂದಲಾಗಲಿ, ಅವರ ಉತ್ತರಾಧಿಕಾರಿಗಳಿಂದಲಾಗಲೀ ಯಾ ವರ್ಗದಾರರಿಂದಲಾಗಲೀ ಪಾವತಿ ಮಾಡಲ್ಪಡತಕ್ಕದ್ದು.

ಗುತ್ತಿಗ್ಯೆ ಕೊಡುವವರಿಗೆದಾರಣೆಗಳ ಲೆಕ್ಕಗಳನ್ನು ಕೊಡುವಣ.

ಮತ್ತು ಸದರೀ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮತ್ತು ಇತರ ಪದಾರ್ಥಗಳು ಖರೀದಿಆದ ತರುವಾಯ, ಗುತ್ತಿಗ್ಯೆಕೊಡುವವರಿಗಾಗಲೀ ಅವರ ಉತ್ತರಾಧಿಕಾರಗಳು ಅಥವಾ ವರ್ಗದಾರರು ಯಾ ಏಜಂಟ್ ಯಾ ಏಜಂಟರಿಗಾಗಲಿ ಸದರೀ ಪದಾರ್ಥಗಳು ಯೆಷ್ಟು ಮೊಬಲಗ್ಯೆ ವಿಕ್ರಯಿಸಲ್ಪಟ್ಟವೋ ಆ ತಪಶೀಲನ್ನೂ ಅಪೇಕ್ಷಿಸಲ್ಪಟ್ಟಲ್ಲಿ ಅವುಗಳನ್ನ ಖರೀದಿಗೆ ಪಡೆದವರ ಹೆಸರನ್ನೂ ಸುದಾ ವದಗಿಸತಕ್ಕದ್ದು.

ಖರೀದಿಆದ 90 ದಿವಸಗಳ ವಳಗಾಗಿ ಯಾ ಅದುರು ತೆಗೆದ ಆರು ತಿಂಗಳ ವಳಗಾಗಿ ರಾಜಪಾಲ್ ಮೊಬಲಗನ್ನ ಪಾವತಿ ಮಾಡುವಣ.

ಮತ್ತು ಅಂಥಾ ವಿಕ್ರಯ ನಡೆದ 90 ದಿವಸಗಳ ವಳಗಾಗಿಯಾಗಲಿ ಅಥವಾ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳು ತೆಗದ ಅಥವಾ ವಜ್ರಮುಂತಾದ ಪೆಲೆಯುಳ್ಳ ಕಲ್ಲುಗಳು ಕಂಡುಹಿಡಿದ ಆರು ತಿಂಗಳ ವಳಗಾಗಿಯಾಗಲಿ, ಮೇಲೆ ಕಂಡ ಉಳಿಕೊಳ್ಳಲ್ಪಟ್ಟ ರಾಜಪಾಲು ಮೊಬಲಗನ್ನು ಗುತ್ತಿಗ್ಯೆ ಕೊಡುವವರಿಗೆ ಆಗಲಿ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ತಮಾಂ ವರ್ಗಗಳ ನಕ್ಕಲುಗಳನ್ನೂ ಗುತ್ತಿಗ್ಯೆ ಕೊಡುವವರಿಗೆ ಒಪ್ಪಿಸುವಣ.

ಮತ್ತು ಗುತ್ತಿಗೇದಾರರಿಗಾಗಲೀ ಅವರ ಉತ್ತರಾಧಿಕಾರಗಳು ಯಾ ವರ್ಗದಾರರಿಗಾಗಲೀ, ಸದರೀ ನಿವೇಶನಗಳು ಯಾ ಅದರ ಯಾವದಾದರೂ ವಂದು ಭಾಗದ ವರ್ಗ ಯಾ ವಳಗುತ್ತಿಗೆಯ ಅಥವಾ ಈ ಕರಾರಿನಿಂದ ಒಪ್ಪಿಸಲ್ಪಟ್ಟ ಯಾ ಕೊಡಲ್ಪಟ್ಟ ತಮಾಂ ಯಾ ಯಾವದಾದರೂ ಹಕ್ಕು ಸ್ವಾತಂತ್ರ್ಯ ಮತ್ತು ಲೈಸೆನ್ಸ್‌ಗಳ ಅಥವಾ ಸದರೀ ನಿವೇಶನಗಳಲ್ಲಿ ಅಥವಾ ಸದರೀ ಹಕ್ಕು, ಸ್ವಾತಂತ್ರ್ಯ ಮತ್ತು ಲೈಸೆನ್ಸ್ ಇವುಗಳಲ್ಲಿ ಪೂರ್ತಿಯಾಗಿ ಯಾಗಲಿ ಕೆಲವು ಮಟ್ಟಿಗಾಗಲಿ ಸಂಬಂಧ ಯಾ ಹಿಸ್ಸೆ ಇವುಗಳ ವರ್ಗ ಯಾ ವಳಗುತ್ತಿಗೆಯು ಅದು ನಡೆದ ಯರಡು ತಿಂಗಳ ವಳಗಾಗಿ ಒಪ್ಪಿಸಲ್ಪಡತಕ್ಕದ್ದು.

ತಮಾಂ ವರ್ಗಗಳ ಮೇಲೂ 90 ದಿವಸಗಳ ವಳಗಾಗಿ ಜುರ್ಮಾನೆ ಪಾವತಿ ಮಾಡುವಣ.

ಮತ್ತು ಅಂಥಾ ವರ್ಗ ಯಾ ವಳಗುತ್ತಿಗೆ ನಡೆದ 90 ದಿವಸಗಳ ವಳಗಾಗಿ ಅಂಥಾ ವರ್ಗ ಯಾ ವಳಗುತ್ತಿಗೆಗೋಸ್ಕರ ಇದಕ್ಕೆ ಮುಂಚೆ ವಿಧಿಶಿ ಉಳಿಶಿಕೊಂಡಿರುವ ಜುರ್ಮಾನೆಯನ್ನು ಗುತ್ತಿಗ್ಯೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಅಥವಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ಲೆಖ್ಖ ವ ನಕ್ಷೆಗಳ ಕ್ರಮವಾದ ಬುಕ್ಕುಗಳನ್ನ ಇಡುವಣ.

ಮತ್ತು ಸದರೀ ವಾಯಿದೆಯಲ್ಲಿ ಚುನಾಯಿಸಲ್ಪಟ್ಟ ತಾಕಿನ ಯಾವದಾದರೂ ಅನುಕೂಲವಾದ ಸ್ಥಳದಲ್ಲಿ, ಗುತ್ತಿಗೆದಾರರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಏಜಂಟ್ ಯಾ ಏಜಂಟರುಗಳು ಯಲ್ಲ ಕಾಲಗಳಲ್ಲೂ ಧಾರಾಳವಾಗಿ ನೋಡುವ ಬಗ್ಯೆ ಸದರೀ ಗನಿಗಳ ಆಡಳಿತ ಮತ್ತು ಹುಟ್ಟುವಳಿ ವ ಖರ್ಚು ಇವುಗಳ ತಪಶೀಲನ್ನೂ ಮತ್ತು ಭಂಗಾರ, ಲೋಹಗಳು, ಲೋಹ

ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲು, ವಿಕ್ರಯ ಯಾ ವ್ಯಾಪಾರ ಲಾಯಖಾದ ತಮಾಂ ಇತರ ಪದಾರ್ಥಗಳ ವಿಲಾವಾರಿ ಹಾಂಗೂ ಅವುಗಳ ಕರಾರ್‌ವಾಕಾ ಬೆಲೆ ತಿಳಿಯುವ ಬಗ್ಯಾಗಿ ಅವುಗಳ ತೇದಾದು, ತಾರೀಖು ಮತ್ತು ಅವಶ್ಯಕವಾದ ಯಾ ಯುಕ್ತವಾದ ಇತರ ಸಂಗತಿಗಳನ್ನ ತೋರಿಸುವಂಥಾ ಲೆಖ್ಖದ ಬುಕ್ಕುಗಳನ್ನ ತಯಾರ್‍ಮಾಡಿ ಇಡತಕ್ಕದ್ದಲ್ಲದೆ ಸದರೀ ಗನಿ ವ ಕಾಮಗಾರಿಗಳ ಸಾಚಾ ನಕ್ಷೆ, ಪ್ಲ್ಯಾನು ವ ಸೆಕ್ಷನ್‌ಗಳನ್ನ ತಯಾರ್‍ಮಾಡಿ ಇಡತಕ್ಕದ್ದು.

ಮತ್ತು ಅವುಗಳ ನಕಲುಗಳನ್ನು ಗುತ್ತಿಗೆಗೆ ಕೊಡುವವರಿಗೆ ಒದಗಿಸುವಣ.

ಮತ್ತು ಗುತ್ತಿಗೆಗೆ ಕೊಡುವವರಿಂದಲಾಗಲೀ ಅವರ ಉತ್ತರಾಧಿಕಾರಿಗಳಿಂದಲಾಗಲೀ ಅಥವಾ ವರ್ಗದಾರರಿಂದಲಾಗಲೀ ಯಾ ಅವರ ಏಜಂಟ್ ಯಾ ಏಜಂಟರುಗಳಿಂದಲಾಗಲೀ ಅಪೇಕ್ಷಿಸಲ್ಪಟ್ಟಾಗ ಅವರಿಗೆ ಸದರೀ ಬುಕ್ಕಿನಲ್ಲಿ ದಾಖಲಾದ ತಮಾಂ ಖತಾಯಿತಿಗಳ ನಕಲುಗಳನ್ನೂ ವ ತ್ತು ಅಂಥಾ ತಮಾಂ ನಕ್ಷೆ, ಪ್ಲ್ಯಾನು ವ ಮೇಲ್ಕಂಡ ಸೆಕ್ಷನಿನ ನಕಲುಗಳನ್ನೂ ಒದಗಿಸತಕ್ಕದ್ದು.

ಮತ್ತು ವಾಯಿದೆ ಆಖೈರಾದಾಗ ಬುಕ್ಕು ವ ಪ್ಲ್ಯಾನ್‌ಗಳನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡುವಣ.

ಮತ್ತು ಸದರೀ ವಾಯಿದೆಯು ಮುಗಿದಾಗ ಅಥವಾ ಮುಂಚಿತವಾಗಿ ಮೌಕೂಫಾದಾಗ ಸದರೀ ಬುಕ್ಕುಗಳು, ನಕ್ಷೆಗಳು, ಪ್ಲ್ಯಾನ್‌ಗಳು, ಸೆಕ್ಷನ್‌ಯಾನೆ ವಿವರಣೆಗಳು ಇವುಗಳನ್ನು ಗುತ್ತಿಗೆಗೆ ಕೊಡುವವರಿಗಾಗಲೀ ಅವರ ಉತ್ತರಾಧಿಕಾರಿಗಳಿಗಾಗಲೀ ಅಥವಾ ಅವರ ವರ್ಗದಾರರಿಗಾಗಲೀ ಪೂರ್ತಿಯಾಗಿ ಯಾ ವಳ್ಳೇ ಸ್ಥಿತಿಯಲ್ಲಿಯೂ ಒಪ್ಪಿಸತಕ್ಕದ್ದು.

ಸರಹದ್ದು ಸ್ತಂಭಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಡುವಣ ಮತ್ತು ಸುರಂಗಗಳನ್ನು ಕ್ರಮವಾಗಿ ಬೇಲಿಯಿಂದ ಭದ್ರಪಡಿಸುವಣ.

ಮತ್ತು ಸದರೀ ವಾಯಿದೇ ಕಾಲದಲ್ಲಿ ತಮಾಂ ಸರಹದ್ದು ಸ್ತಂಭಗಳನ್ನೂ ದುರಸ್ತಿನಲ್ಲಿಯೂ ವಳ್ಳೇ ಸ್ಥಿತಿಯಲ್ಲಿಯೂ ಇಟ್ಟಿರತಕ್ಕದ್ದಲ್ಲದೆ ಸದರೀ ಚುನಾಯಿಸಲ್ಪಟ್ಟ ತಾಲ್ಲೂಕಿನೊಳಗಣ ಯಲ್ಲ ಕಾಲಿವೆ, ಹಳ್ಳ, ಯಾ ಶ್ಯಾಫ್ಟ್ ಕಾಮಗಾರಿಗಳನ್ನು ಮನುಷ್ಯರು ಮತ್ತು ಜಾನವರುಗಳಿಗೆ ಅಪಾಯ ಸಂಭವಿಸದಂತೆ ಪೂರ್ತಿಯಾಗಿ ಬೇಲಿ ಹಾಕಿ ಭದ್ರ ಪಡಿಸತಕ್ಕದ್ದು.

ಮತ್ತು ಸದರೀ ವಾಯಿದೇಯಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು, ಆಗಿಂದಾಗ್ಯೆ ವಿಧಿಸಬಹುದಾದಂಥಾ ಆರೋಗ್ಯ ವಿಷಯಕವಾದ ನಿಬಂಧನೆಗಳನ್ನು, ಚುನಾಯಿಸಲ್ಪಟ್ಟ ತಾಕಿನ ಯಲ್ಲ ಪ್ರದೇಶದಲ್ಲೂ ಕ್ರಮವಾಗಿ ಜಾರಿಯಲ್ಲಿರತಕ್ಕದ್ದು.

ಕಾಲುವೆ ಯಾ ಸುರಂಗಗಳನ್ನು ಮುಚ್ಚದೆ ಇರುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಅವರ ಏಜಂಟ್ ಯಾ ಏಜಂಟರುಗಳಿಂದ ಬರಹ ಮೂಲಕವಾಗಿ ಲೈಸೆನ್ಸ್ ಪಡೆದ ಹೊರ್‍ತು ಯಾವ ಕಾಲಿವೆ ಯಾ ಸುರಂಗವನ್ನಾಗಲೀ ಮನಃಪೂರ್ವಕವಾಗಿ ಮುಚ್ಚಕೂಡದು ಭರ್ತೀ ಮಾಡಕೂಡದು ಅಥವಾ ಬಂದ್ ಮಾಡಕೂಡದು.

ಅಥವಾ ರೋಡು ವಗೈರೆಗಳನ್ನ ಆತಂಕಪಡಿಸದೆ ಇರುವಣ.

ಮತ್ತು ಈಗ ಇರುವ ತಮಾಂ ಯಾ ಯಾವ ರಸ್ತೆಗಳನ್ನಾಗಲಿ, ಕಾಲ್ದಾದಿಗಳನ್ನಾಗಲೀ ಯಾ ಯಾವ ತರಹೆಯು ಅಡ್ಡದಾರಿಗಳನ್ನಾಗಲೀ ಖುಲ್ಲಾ ಇಡತಕ್ಕದ್ದೇ ಹೊರ್‍ತು ಅತಂಕಪಡಿಸತಕ್ಕದ್ದಲ್ಲವು.

ಗುತ್ತಿಗೆಗೆ ಕೊಡುವವರು ಕಾಮಗಾರೀ ವಗೈರೆಗಳನ್ನ ತನಿಖೆ ಮಾಡಲಿಕ್ಕೆ ಅವಕಾಶ ಕೊಡುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮತ್ತು ಅವರ ಮುತಾಲೀಕ ಯಾ ಮುತಾಲೀಕರುಗಳು, ನೌಕರರು, ವ ಕೆಲಸಗಾರರು, ಇವರುಗಳು ವಾಯಿದೇ ಕಾಲದಲ್ಲಿ ಈ ಕರಾರುಗಳನ್ನನುಸರಿಸಿ ಯಾ ಈ ಕರಾರುಗಳ ಬಲೀಯದ ಮೇಲೆ ನಡಿಯುವ ಯಾವ ಕಾಮಗಾರಿಗಳೊಳಗಾಗಲೀ ಪ್ರವೇಶಿಸಿ ಅವುಗಳ ಸ್ಥಿತಿ ವ ಲಕ್ಷಣವನ್ನು ತನಿಖೆ ಮಾಡಲಿಕ್ಕೂ ಮತ್ತು ಆ ಬಗ್ಯೆ ಯಾಗಲೀ, ಅಥವಾ ಇತರ ಯಾವ ನ್ಯಾಯವಾದ ವ ಯುಕ್ತವಾದ ಉದ್ದೇಶ್ಯಕ್ಕಾಗಲೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾ ಅದರೊಳಗೆ ಇರುವ ಯಂಜಿನ್‌ಗಳನ್ನೂ, ಯಂತ್ರ ಸಾಧನಗಳನ್ನೂ ವ ಅಜಬಾಬುಗಳನ್ನೂ ಉಪಯೋಗಿಸಲಿಕ್ಕೂ ಪರಂತು ತನಖೀ ಮಾಡಿ ನಕ್ಷೆಗಳನ್ನೂ ತೆಗೆದುಕೊಳ್ಳತಕ್ಕದ್ದಕ್ಕಾಗಿ ವಿನಾ, ಅಂತಾ ಉಪಯೋಗಕ್ಕಾಗಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮುನಾಸಬು ಈಡು ಮೊಬಲಗು ಕೊಡಲಾಗಿ ಅವಕಾಶ ಕೊಡತಕ್ಕದ್ದು ಮತ್ತು ಇದಕ್ಕೆ ಹಿಂದೆ ಉಳಿಸಿಕೊಳ್ಳಲ್ಪಟ್ಟ ಸ್ವಾತಂತ್ರ್ಯಗಳನ್ನು ಚಲಾಯಿಸಲಿಕ್ಕೂ ಸಹ ಅವಕಾಶ ಕೊಡತಕ್ಕದ್ದು ಮತ್ತು ಆ ಸ್ವಾತಂತ್ರ್ಯಗಳನ್ನ ಚಲಾಯಿಸುವದಕ್ಕಾಗಿ ನ್ಯಾಯವಾದ ಯಲ್ಲಾ ಅನುಕೂಲ್ಯತೆಯನ್ನೂ ವ ಕುಮ್ಮಕ್ಕನ್ನೂ ಕೊಡತಕ್ಕದ್ದು.

ಜಮೀನ್‌ಮೇಲಿನ ಹಕ್ಕುಗಳ ಹಾನಿಗಾಗಿ ಈಡು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನ ಯಾವದಾದರೊಂದು ಭಾಗದ ಯಾ ಪ್ರದೇಶದ ಜಮೀನ್ ಮೇಲ್ಭಾಗಕ್ಕೆ ಕೆಡಕ್ಕು, ಹಾನಿ ಯಾ ಅಡ್ಡಿ ಉಂಟಾದ್ದಕ್ಕಾಗಿ ಅಂತಾ ಜಮೀನಿನ ಹಿಡುವಳೀದಾರ, ಅನುಭವದಾರ ಯಾ ಇತರೆ ಸ್ವಾಧೀನಗಾರನಿಗೆ ಆಗಿಂದಾಗ್ಯೆ ಈಡು ಕಟ್ಟಿಕೊಡತಕ್ಕದ್ದು.

ಮತ್ತು, ಚುನಾಯಿಸಲ್ಪಟ್ಟ ತಾಕಿನ ಯಾವಭಾಗದಲ್ಲಾಗಲಿ, ಗ್ರಾಮಸ್ತರು ದನಗಳನ್ನ ಮುಫತ್ ಮೇಯಿಸಿಕೊಳ್ಳುವ ಹಕ್ಕು ಉಂಟಾಗಿಯಿದ್ದು, ಅಂತಾ ಹಕ್ಕಿಗೆ ಯಾವರೀತಿಯಲ್ಲಾಗಲಿ ಅಡ್ಡಿ ಸಂಭವಿಸಿದಾಗ ಅಂತಾ ಗ್ರಾಮಸ್ಥರಿಗೆ ಕ್ರಮವಾದ ಈಡು ಸಹಾ ಕಟ್ಟಿಕೊಡತಕ್ಕದ್ದು.

ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಸೆಯಿಂದುಂಟಾಗುವ ದಾವೆಗಳು, ಗುತ್ತಿಗೆಗೆ ಕೊಡುವವರುಗಳ ಮೇಲೆ ಬಾರದಂತೆ ಮಾಡುವಣ.

ಯಾವ ಜಮೀನ್‌ಗಳಿಗಾಗಲಿ ಯಾ ಯಾವಬಗೆಯ ಸ್ವತ್ತಿಗಾಗಲಿ ಈ ಕರಾರುಗಳನ್ನನುಸರಿಸಿ ಕೆಲಸನಡಿಸುವಣದರ ದೆಸೆಯಿಂದ ಯಾ ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಸೆಇಂದ ಉಂಟಾಗುವ ಯಾ ಸಂಭವಿಸುವ ಯಾವ ವಿಧವಾದ ಹಾನಿ ಯಾ ಆತಂಕ ಈ ಕಾರಣದಿಂದ, ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರುಗಳ ಮೇಲೆ ಯಾವಬಗೆ ಖರ್ಚು ಯಿನ್ನುಮೇಲೆ ಆಗಿಂದಾಗ್ಯೆ ವ ಯಾವಾಗಲೂ ಶುದ್ಧಾಂಗವಾಗಿ ಯಾವಬಗೆ ದಾವೆಗಳೂ ತಗಾದೆಗಳೂ ಬಾರದಂತೆ ನಡದುಕೊಳ್ಳತಕ್ಕದ್ದು.

ವಾಯಿದೆ ಪೂರೈಸಿದ ನಂತರ ಗನಿಗಳು, ಕಟ್ಟಡ ವಗೈರೆಯನ್ನ ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡೋಣ.

ಮತ್ತು ಮೇಲೆಹೇಳಲ್ಪಟ್ಟ ವಾಯಿದೆ ಪೂರೈಸಿದಾಗಲಾಗಲಿ ಯಾ ಅದಕ್ಕೆ ಮುಂಚಿತವಾಗಿ ನಿಂತು ಹೋದಾಗಲಾಗಲಿ ಈ ಕರಾರುಗಳ ದೆಸೆಇಂದ ಕೆಲಸ ನಡಿಯುತ್ತಿದ್ದ ಗನಿಗಳನ್ನೂ ತಮಾಂ ಕಾಲುವೆಗಳನ್ನೂ ಕಾಮಗಾರಿಗಳನ್ನೂ, ಸರಹದ್ದು ಸ್ತಂಭಗಳು ವ ಅವುಗಳಿಗೆ ಸೇರಿದ ಬೇಲಿಗಳನ್ನೂ ಮತ್ತು ಯಿತರ ನಿವೇಶನಗಳು ಇವುಗಳೆಲ್ಲವನ್ನೂ ಪೊಳ್ಳೇದಾದ ವ ಕೆಲಸ ನಡಿಸಲಿಕ್ಕೆ ಅನುಕೂಲವಾದ ಸ್ಥಿತಿಯಲ್ಲಿ ಯೇವಂಚ ಇದಕ್ಕೆ ಹಿಂದೆ ಹೇಳಲ್ಪಟ್ಟ ಕರಾರುಗಳ ಪ್ರಕಾರ ನಡಿಯಲಿಕ್ಕೆ ಅನುಗುಣವಾಗುವಂತೆ ತಕ್ಕ ಸ್ಥಿತಿಯಲ್ಲಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಅಥವಾ ವರ್ಗದಾರರುಗಳಿಗಾಗಲಿ ಒಪ್ಪಿಸಿಬಿಡತಕ್ಕದ್ದು ಸದರೀ ಜಾಗಾವಲ್ಲಿ ಯಿರುವ ಕಟ್ಟಡಗಳಿಗಾಗಿಯಾಗಲಿ, ಯಾ ಇತರ ಸ್ವತ್ತಿಗಾಗಿಯಾಗಲಿ ಗುತ್ತಿಗೆದಾರರುಗಳಿಂದ, ಅವರ ಯಗ್ಜಿಕ್ಯೂಟರುಗಳಿಂದ, ಆಡಳಿತ ನಡಿಸುವವರುಗಳಿಂದ ಯಾ ವರ್ಗದಾರರುಗಳಿಂದಾಗಲಿ, ಗುತ್ತಿಗೆಗೆ ಕೊಡುವವರಮೇಲೆ, ಅವರ ಉತ್ತರಾಧಿಕಾರಿಗಳಮೇಲೆ ಯಾ ವರ್ಗದಾರರಮೇಲೆ ಯಾವ ದಾವೆಯೂ ಯಿಲ್ಲದಂತೆ ಒಪ್ಪಿಸತಕ್ಕದ್ದು. ಅಂತಾ ಕಟ್ಟಡಗಳನ್ನು ವ ಯಿತರ ಸ್ವತ್ತುಗಳನ್ನು, ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರುಗಳು ಆಡಳಿತ ನಡಿಸುವವರು ಯಾ ವರ್ಗದಾರರು ಮುಂಚಿತವಾಗಿಯೇ ಸಾಗಿಸಲು ಸ್ವತಂತ್ರರಾಗಿರತಕ್ಕದ್ದು.

ಕಂದಾಯಗಳನ್ನ ರಾಜಪಾಲುಗಳನ್ನ ವ ಜುರ್ಮಾನೆ ವಗೈರೆಯನ್ನ ಕೊಡದೇ ಹೋದಮೇಲಾಗಲಿ ಕರಾರುಗಳಿಗೆ ತಪ್ಪಿದಮೇಲೆಯಾಗಲಿ ಪುನಃ ಪ್ರವೇಶಿಸಲಿಕ್ಕೆ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಮತ್ತು ಕಂಠೋಕ್ತವಾದ ಈ ಷರತ್ತಿನಿಂದ ಕರಾರು ಮಾಡಿಕೊಳ್ಳುವದೇನಂದರೆ ಇದರ ದೆಸೆಇಂದ ಉಳಿಸಿಕೊಳ್ಳಲ್ಪಟ್ಟಿರುವ ಕಂದಾಯಗಳು ರಾಜಪಾಲುಗಳು, ಜುರ್ಮಾನೆಗಳು ಯಾ ಯಿತರ ಸಲಿಕೆಗಳ ಯಾವಭಾಗವನ್ನಾಗಲಿ ಪಾವತೀಮಾಡಬೇಕೆಂತ ಗುತ್ತಿಗೆದಾರರ ಅವರ ಎಗ್ಜಿಕ್ಯೂಟರಗಳ, ಆಡಳಿತ ನಡಿಸುವವರ ಯಾ ವರ್ಗದಾರರುಗಳಮೇಲೆ ಅಥವಾ ಅವರುಗಳಪೈಕಿ ಒಬ್ಬನಮೇಲಾಗಲಿ ಹೆಚ್ಚಿಗೆ ಜನಗಳಮೇಲೆ, ಯಾ ಅವರ ಅಥವಾ ಆತನ ಮುತಾಲೀಕರುಗಳಮೇಲೆ ನೋಟಿಸ್ ಜಾರೀಯಾದ ಅಥವಾ ಚುನಾಯಿಸಲ್ಪಟ್ಟ ತಾಕಿನಪೈಕಿ ಯಾವದಾದರೊಂದು ಭಾಗದಲ್ಲಿ ಚಿಕಟಾಯಿಸಲ್ಪಟ್ಟ ತರುವಾಯ್ಯ ಮೂವತ್ತು ದಿನಗಳ ವರಿವಿಗು ಬಾಕೀಲಿಯಿಟ್ಟುಕೊಂಡಾಗ್ಯೂ, ಅಥವಾ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರ್‌ಗಳು ಆಡಳಿತ ನಡಿಸುವವರು ಯಾ ಅವರ ಯಾ ಆತನ ಕೆಲಸಗಾರರು ಗನಿಕೆಲಸ ಕ್ರಮವಾಗಿ ನಡಿಸದೇ ನಿಲ್ಲಿಸಿದಾಗ್ಯೂ, ಅಥವಾ ಗುತ್ತಿಗೆಗೆ ಕೊಡುವವರ, ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಉದ್ಯೋಗಸ್ಥರುಗಳಿಗೆ ಯಾವ ವಿಧವಾದ ಆತಂಕ ಯಾ ತೊಂದರೆ ಉಂಟುಮಾಡಿದಾಗ್ಯೂ ಅಥವಾ ಗುತ್ತಿಗೆಗೆ ಕೊಡುವವರಿಗಾಗಲಿ ಅಥವಾ ಉತ್ತರಾಧಿಕಾರಿಗಳಿಗಾಗಲಿ ಯಾ ವರ್ಗದಾರರಿಗಾಗಲಿ ಸಮಾಚಾರ ಕೊಡಲಿಕ್ಕೆ ನಿರಾಕರಿಸಿದಾಗ್ಯೂ ಅಥವಾ ಗುತ್ತಿಗೆದಾರರು ಅವರ ಯಗ್ಜಿಕ್ಯೂಟರುಗಳು, ಆಡಳಿತ ನಡಿಸುವರು ಯಾ ವರ್ಗದಾರರು ಈ ಕರಾರುಗಳ ಪೈಕಿ ಯಾವದಕ್ಕಾದರೂ ಅತಿಕ್ರಮಿಸಿ ನಡೆದರೇಆಗಲಿ ಆಗ ಅಂತಾ ಸಂಗತಿಯಲ್ಲಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಾ ಅವರ ತರಫಿನಲ್ಲಿ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಮುತಾಲೀಕರಾಗಲಿ ಯಲ್ಲರ ಹೆಸರಿನಲ್ಲಿಯೂ ಯಿರುವ ಈ ಗುತ್ತಿಗೆಯನ್ನನುಸರಿಸಿ ನಡಿಸಲ್ಪಡುವ ಕೆಲಸಗಳು ಯಾ ಇತರ ಕಾಮಗಾರಿಗಳ ಯಾವ ಭಾಗದೊಳಗೂ ಪುನಃ ಪ್ರವೇಶಿಸಬಹುದು. ಆ ತರುವಾಯ ಮೇಲೆ ಹೇಳಲ್ಪಟ್ಟ ಮೂವತ್ತು ವರುಷಗಳ ವಾಯಿದೆಯು ಖಂಡಿತವಾಗಿ ಮುಕ್ತಾಯವಾಗತಕ್ಕದ್ದು.

ಆರುತಿಂಗಳ ನೋಟಿಸಿನ ಹೊರ್ತು ಪುನಃಪ್ರವೇಶ ಮಾಡುವ ಅಧಿಕಾರ ಚಲಾಯಿಸಕೂಡದೆಂಬ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರದೆಸೆಇಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ, ಇದಕ್ಕೆ ಹಿಂದೆ ನಮೂದಿಸಲ್ಪಟ್ಟ ಮೇರಿಗೆ ಪುನಃಪ್ರವೇಶಿಸಲಿಕ್ಕಿರುವ ನಿಯಮವನ್ನನುಸರಿಸಿ ಅಂತಾ ಯಾವ ಪುನಃಪ್ರವೇಶವಾಗಲಿ ಮೇಲೆ ಉದಹರಿಸಿದಂತಾ ವಾಯಿದೆಯ ಭಂಗವಾಗಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಿವರುಗಳು ಫಿರ್ಯಾದ್ ಬರುವ ಸಂಗತಿ ಯಾ ಸಂಗತಿಗಳ ವಿಷಯದಲ್ಲಿ ಸಮರ್ಪಕವಾದ ಸಮಜಾಯಿಷಿ ಕೊಡುವಂತೆಯೂ, ವ ಅಂತಾವುಗಳನ್ನ ವ್ಯವಸ್ಥೆ ಮಾಡಿಕೊಳ್ಳುವಂತೆಯೂ ಗುತ್ತಿಗೆದಾರರಿಗಾಗಲಿ, ಅವರ ಯಗ್ಜಿಕ್ಯೂಟರುಗಳಿಗಾಗಲಿ ಆಡಳಿತ ನಡಿಸುವವರಿಗಾಗಲಿ ಯಾ ವರ್ಗದಾರರಿಗಾಗಲಿ ಈ ಪೈಕಿ ಯಾವನಿಗಾಗಲಿ ಅಥವಾ ಯಾರಿಗಾಗಲಿ ನೋಟಿಸ್ ಕೊಟ್ಟಹೊರ್ತು ನಡಿಯತಕ್ಕದ್ದಲ್ಲವು. ಸದರೀ ನೋಟೀಸು ಬರವಣಿಗೆ ಮೂಲಕಇದ್ದು ಅದು ಗುತ್ತಿಗೆಗೆ ಕೊಡುವವರೆ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರುಗಳ ತರಫ ಮೇಲೆ ಹೇಳಲ್ಪಟ್ಟ ಡಿಸ್ಟ್ರಿಕ್ಟಿನ ಸಿವಿಲ್ ಕಾರಬಾರ್ ನಡಿಸುವ ಆಫಿಸರಿಂದಾಗಲಿ ಅಬಗ್ಯೆ ಮುಖ್ಯವಾಗಿ ಅಧಿಕಾರ ಪಡೆದ ಮತ್ಯಾವ ಆಫಿಸರಿಂದಾಗಲಿ ರುಜುಮಾಡಲ್ಪಟ್ಟು, ಗುತ್ತಿಗೆದಾರರ ಮೇಲೆ ಅಥವಾ ಅವರ ಯಗ್ಜಿಕ್ಯೂಟರುಗಳಮೇಲೆ ಆಡಳಿತ ನಡಿಸುವವರಮೇಲೆ ವ ವರ್ಗದಾರರುಗಳ ಮೇಲೆಯಾಗಲಿ ಆ ಪೈಕಿ ವೊಬ್ಬನ ಮೇಲಾಗಲಿ ಅದಕ್ಕೆ ಹೆಚ್ಚಿಗೆ ಜನರಮೇಲಾಗಲಿ ಅವರುಗಳ ಯಾ ಆತನ ಮುತಾಲೀಕರುಗಳ ಮೇಲಾಗಲಿ ಜಾರೀಮಾಡಲ್ಪಡತಕ್ಕದ್ದು, ಅಥವಾ ಆ ನೋಟೀಸು ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾವ ಪ್ರದೇಶದಲ್ಲಾಗಲಿ ಚಿಕಟಾಯಿಸಲ್ಪಡತಕ್ಕದ್ದು. ಹಾಗೆ ನೋಟಿಸು ಜಾರೀ ಆದ ಯಾ ಅಥವಾ ಚಿಕಟಾಯಿಸಲ್ಪಟ್ಟ ಲಾಗಾಯತು ಆರುತಿಂಗಳವರಿವಿಗೂ ಅಂತಾ ಫಿರ್ಯಾದಾದ ಸಂಗತಿ ಯಾ ಸಂಗತಿಗಳಲ್ಲಿ ಸಮರ್ಪಕವಾದ ಸಮಜಾಯಿಷಿಯೂ ಕೊಡಲ್ಪಡದೇ ವ ಫಿರ್ಯಾದ್ ಸಂಗತೀಲಿ ವ್ಯವಸ್ಥೆಯೂ ಮಾಡಿಕೊಳ್ಳದೇ ತಪ್ಪಿಹೋಗದ ಹೊರ್ತು ಅಂತಾ ಪುನಃಪ್ರವೇಶವಾಗಲಿ ಯಾ ವಾಯಿದೆಯ ಭಂಗವಾಗಲಿ ನಡಿಯತಕ್ಕದಲ್ಲವು.

ಯಾವ ವರುಷದಲ್ಲಾಗಲಿ ರಾಜಪಾಲಿಗೆ ಬದಲಾಗಿ ಎಕರೆ ಒಂದಕ್ಕೆ ಐದು ರೂಪಾಯಿ ಮೇರಿಗೆ ಕಂದಾಯ ವಸೂಲು ಮಾಡಲಿಕ್ಕೆ ಗುತ್ತಿಗೆಗೆ ಕೊಡುವವರಿಗೆ ಅಧಿಕಾರವಿರುವಬಗ್ಯೆನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ—ಗನಿಗಳ ಕೆಲಸ ನಡಿಸುವ ಬಗ್ಯಾಗಿ ಆವಶ್ಯಕವಾದ ಪ್ರಥಮ ಏರ್ಪಾಡಿಗೋಸ್ಕರ ಕೊಡಲ್ಪಡುವ ಗುತ್ತಿಗೆಯ ಪ್ರಾರಂಭದ ಎರಡು ವರುಷಗಳು ಆದ ತರುವಾಯ, ಗನಿಗಳ ಕೆಲಸದ ವಿಷಯದಲ್ಲಾಗಲಿ, ಅದರ ಫಲಾಂಶದ ವಿಷಯದಲ್ಲಾಗಲಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ, ಯಾ ವರ್ಗದಾರರುಗಳಿಗಾಗಲಿ ತೃಪ್ತಿಕರವಾಗಿ ಇರದೇಯಿರುವ ಪಕ್ಷಕ್ಕೆ ಅವರು ಗುತ್ತಿಗೆಯ ಯಾವವರುಷದ ರಾಜಪಾಲಿಗೆ ಬದಲಾಗಿಯಾದರೂ ಎಕರೆ ಒಂದಕ್ಕೆ ಐದು ರೂಪಾಯಿಯಮೇರಿಗೆ ಕಂದಾಯ ವಸೂಲ್ ಮಾಡಲಿಕ್ಕೆ ಸ್ವತಂತ್ರರಾಗಿರತಕ್ಕದ್ದು.

ಯಾವದಾದರೊಂದು ವರುಷದ ಆಖೈರಿನಲ್ಲಿ ಗುತ್ತಿಗೆದಾರನ ಇಷ್ಟಾನುಸಾರ ಗುತ್ತಿಗೆ ಖೈದಾಗತಕ್ಕ ಬಗ್ಯೆ ನಿಯಮ.

ಇನ್ನೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ,—ಇದರ ದೆಸೆಯಿಂದ ಕೊಡೋಣಾದ ಮೂವತ್ತು ವರುಷಗಳ ವಾಯಿದೆಯ ಪೈಕಿ ಯಾವದಾದರೊಂದು ವರುಷ ಆಖೈರಾಗುವಾಗ ಆ ವಾಯಿದೆಯು ಮೌಕೂಫ ಆಗಬೇಕೆಂಬದಾಗಿ ಗುತ್ತಿಗೆದಾರರಾಗಲಿ, ಅವರ ಎಗ್ಜಿಕ್ಯೂಟರುಗಳಾಗಲಿ, ಆಡಳಿತ ನಡಿಸುವವರಾಗಲಿ ಯಾ ವರ್ಗದಾರರಾಗಲಿ ಇಚ್ಛೈಸುವ ಪಕ್ಷಕ್ಕೆ ತಮ್ಮ ಇರಾದೆಯನ್ನ ನಮೂದಿಸಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಆರುತಿಂಗಳ ಮುಂಚಿತವಾಗಿ ಬರವಣಿಗೆ ಮೂಲಕ ನೋಟಿಸು ಕೊಟ್ಟು ಇದರ ದೆಸೆಯಿಂದ ಉಳಿಸಿಕೊಳ್ಳಲ್ಪಟ್ಟ ಮೇಲೆ ಹೇಳೋಣಾದ ಕಂದಾಯಗಳು, ರಾಜಪಾಲುಗಳು, ಜುರ್ಮಾನೆಗಳು, ಯಾ ಇತರ ಸಲಿಕೆಗಳು ಇವುಗಳನ್ನ ಸಂದಾಯಮಾಡಿ, ಇದರಲ್ಲಿ ಕಂಡ ಎಲ್ಲಾ ಕರಾರುಗಳ ವ ಒಡಂಬಡಿಕೆಗಳ ಮೇರಿಗೆ ನಡೆದುಕ್ಕೊಂಡು ವ ಜಾರೀಲಿತಂದು, ಮತ್ತು ಅಂತಾ ವರುಷ ಪೂರೈಸುವವರಿವಿಗೂ, ಗುತ್ತಿಗೆದಾರರು, ಅವರ ಎಗ್ಜಿಕ್ಯೂಟರುಗಳು, ಆಡಳಿತ ನಡಿಸುವವರು ಯಾ ವರ್ಗದಾರರು ನಡದುಕ್ಕೊಂಡಲ್ಲಿ ಯಾ ಜಾರೀಲಿ ತಂದಲ್ಲಿ ಆಗ್ಯೆ ಅಂತಾ ಸಂಗತಿಯಲ್ಲಿ ಆ ವರುಷ ಪೂರೈಸಿದ ತರುವಾಯ ಇದರ ದೆಸೆಯಿಂದಕೊಡಲ್ಪಟ್ಟಿರುವ ವಾಯಿದೆಯು ಖಂಡಿತವಾಗಿ ನಿಂತುಹೋಗಿ ಖೈದಾಗತಕ್ಕದ್ದಲ್ಲದೆ ಇದರಲ್ಲಿ ಮೇಲ್ಕಂಡ ಠೇವಣೀ ಬಾಬತು ರೂಪಾಯಿಗಳು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರ ವಶದಲ್ಲೇನೇ ಅವರ ಸ್ವಂತ ಆಸ್ತಿಯಂತೆ ನಿಂತು ಹೋಗತಕ್ಕದ್ದು.

ಇದಕ್ಕೆ ಸಾಕ್ಷಿಯಾಗಿ ಗುತ್ತಿಗೆ ಕೊಡುವವರಿಗಾಗಿ ವ ಅವರ ತರಫ ಕೆಲಸ ನೋಡುವ ಮೈಸೂರು ಸೀಮೆಯ ದಿವಾನರಾದ ಯವರೂ,

ವ ಗುತ್ತಿಗೆದಾರರು ಸಹಾ ಮೇಲೆ ಷುರುವಿನಲ್ಲಿ ಬರಿಯೋಣಾದ ವರುಷ ವ ತಾರೀಖಿನಲ್ಲಿ ಇದಕ್ಕೆ ತಮ್ಮ ತಮ್ಮ ದಸ್ತಖತ ವ ಮೊಹರು ಹಾಕಿರುತ್ತಾರೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ತಾರೀಖು 21ನೇ ಸೆಪ್ಟಂಬರ್ 1887.

ನಂ. 120.—ಮಾಹೆ ಮಜಕೂರು 5ನೇ ಮರ್ಕುಂ 105ನೇ ನಂಬರ್ ಇಸ್ತಿಹಾರನ್ನನುಸರಿಸಿ, ಈ ಕೆಳಗೆ ನಮೂದಾಗುವ ಗ್ರಾಮ ಮತ್ತೊಂದು ಗ್ರಾಮಕ್ಕೆ ದಾಖಲಾಗುವಂತೆ ಅಪ್ಪಣೆ ಮಾಡಿರುತ್ತೆ.

ತಾಲ್ಲೂಕು	ಗ್ರಾಮದ ಹೆಸರು	ಯಾವ ಗ್ರಾಮಕ್ಕೆ ಸೇರತಕ್ಕದ್ದು.
ಬಾಗೇಪಲ್ಲಿ	ನಂಬಿಕುಂಟೆದಿನ್ನೆ	ಪಾಸಲಪರತಿ

ತಾರೀಖು 30ನೇ ಸೆಪ್ಟಂಬರ್ 1887.

ನಂ. 122.—ಮ|| ಕೆ. ರಾಮಚಂದ್ರರಾಯರು ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರ ಆಫೀಸಿನ ಚಾರ್ಜನ್ನು ಮಾಹೆ ಮಜಕೂರ್ 16ನೇ ತಾರೀಖಿನ ಮಧ್ಯಾನ್ಹಾತ್ಪರ ಒಪ್ಪಿಸಿ ಮ|| ರ್ಯ. ಚಲುವಯ್ಯಂಗಾರ್ರು ವಹಿಸಿರುತ್ತಾರೆ.

ನಂ. 123.—ಮ|| ಅಣ್ಣಾಜಿರಾಯರು ತುಮಕೂರು ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರ ಆಫೀಸಿನ ಚಾರ್ಜನ್ನು ಮಾಹೆ ಮಜಕೂರ್ 20ನೇ ತಾರೀಖಿನ ಮಧ್ಯಾನ್ಹಾತ್ಪರ ಒಪ್ಪಿಸಿ ಮ|| ಪಂಚನಾಥರಾಯರು ವಹಿಸಿರುತ್ತಾರೆ.

ನಂ. 124.—ಕೋಲಾರ ಡಿಸ್ಟ್ರಿಕ್ಟು ಶ್ರೀನಿವಾಸಪುರದ ರೇಂಜಿನ ಡೆಪ್ಯುಟಿ ಅಮಲ್ದಾರ್ ವಿ. ಎಸ್. ಗೋಪಾಲರಾಯರಿಗೆ 1887ನೇ ಇಸವಿ ಆಗಸ್ಟ್ 21ನೇ ಮರ್ಕುಮಿನ 955ನೇ ನಂಬರುಳ್ಳ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ ಒಂದು ವಾರದ ಪ್ರಿವಿಲೇಜ್ ರಜಾಕ್ಕೆ ಜಾಸ್ತೀ ಯಾಗಿ ಒಂದು ದಿವಸದ ರಜಾ ಕೊಡಲ್ಪಟ್ಟಿರುತ್ತೆ.

ಅಪೆಂಡಿಕ್ಸ್.

1887ನೇ ಇಸವಿ ಸೆಪ್ಟಂಬರ್ ಮಾಹೇ 17ನೇ ಮರ್ಕುಂ 121ನೇ ನಂಬರು ಇಸ್ತಿಹಾರನಾಮಾ ಪ್ರಕಾರ ಕೊಡಲ್ಪಡುವ ಕೌಲ್ ನಾಮೆಯ ನಮೂನೆ:—

ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಂದ ತಾಲ್ಲೂಕು
ಗ್ರಾಮದಲ್ಲಿ ವಾಸವಾಗಿರುವ ನ ಮಗ ಗೆ ಕೊಡಲ್ಪಟ್ಟ ಕೌಲ್ನಾಮೆ.

1887ನೇ ಇಸವಿ ಸೆಪ್ಟಂಬರ ಮಾಹೇ 17ನೇ ಮಸ್ತುಂ ನೇ ನಂಬರು ಇಸ್ತಿಹಾರ್‌ನಾಮೆಯ ಪ್ರಕಾರ ರಿಯಾಯಿತ್ ಷರತ್ತುಗಳ ಮೇಲೆ ಹೊಸದಾಗಿ ಸೊಸಿಗಳನ್ನು ಹಾಕಿ ಬಾಗಾಯಿತು ಸಾಗುವಳೀ *[ಅಭಿವೃದ್ಧಿ] ಮಾಡುವ ಬಗ್ಯೆ ಈ ಕೆಳಗೆ ನಮೂದಾಗುವ ಜಮೀನನ್ನು ನಿನಗೆ ಕೊಡಲ್ಪಟ್ಟಿದೆ.

ಜಮೀನಿನ ತಪಶೀಲು.

ತಾಲ್ಲೂಕು.	ಗ್ರಾಮ.	ಜಮೀನಿನ ನಂಬರು.	ಬೀಜವರಿ.		ಸರಕಾರದ ಬಂಜರು ಜಮೀನು ಆಕಾರ ಕಂಡದ್ದೋ ಕಾಣದ್ದೋ.	ಜಮೀನು ಆಕಾರಕಂಡ ದ್ದಾದರೆ				ಷರಾ.
			ಎಕರೆ.	ಗುಂಟೆ.		ಹಾಲೀ ಖುಷ್ಕಿ ತರಿ ಯಾ ಬಾಗಾಯಿತೇ.	ಹಾಲಿ ಆಕಾರ.			
							ರೂ.	ಆ.	ಪೈ.	

2. ಮೇಲ್ಕಂಡ ಜಮೀನಿಗೋಸ್ಕರ ಈ ಕೆಳಗೆ ನಮೂದಾಗುವ ಮೇರೆ ಕಂದಾಯವನ್ನು ಕೊಡತಕ್ಕದ್ದು.

ಸಂವತ್ಸರ.	ಇಸವಿ.	ಸಾಲೀಯಾನಾ ಕಂದಾಯ.			ಮೊಕರರಾಗಿರುವ ಕಂದಾಯದ ದರ.
		ರೂ.	ಆ.	ಪೈ.	
1	2	3			4
1ನೇ ಸಂವತ್ಸರ	188—8	..	..	..	ಎಕರೆ 1ಕ್ಕೆ 4 ಆಣೆ ಮೇರೆ.
2ನೇ ಡಿಟೋ					ಡಿಟೋ
3ನೇ ಡಿಟೋ					ಡಿಟೋ
4ನೇ ಡಿಟೋ					ಡಿಟೋ
5ನೇ ಡಿಟೋ					ಡಿಟೋ
6ನೇ ಡಿಟೋ					ಡಿಟೋ
7ನೇ ಡಿಟೋ					ಡಿಟೋ
8ನೇ ಡಿಟೋ					ಡಿಟೋ
9ನೇ ಡಿಟೋ					ಡಿಟೋ
10ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಚತುರ್ಥಾಂಶ]
11ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಅರ್ಧಾಂಶ]
12ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಮುಕ್ಕಾಲುಭಾಗ]
13ನೆ ಡಿಟೋ					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಚತುರ್ಥಾಂಶ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ಪೂರಾ ದರ]
14ನೇ ಡಿಟೋ					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಅರ್ಧಾಂಶ
15ನೇ ಡಿಟೋ					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಮುಕ್ಕಾಲು ಭಾಗ.
16ನೇ ಸಂವತ್ಸರದ ಬಾಗಾಯತು.					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ಪೂರಾ ದರ.

ನೋಟ್ * 7ನೇ ರೂಲಿನ ಪ್ರಕಾರ ಕೊಡಲ್ಪಡುವ ಕೌಲ್‌ನಾಮಾಗಳಲ್ಲಿ ಇದು ದಾಖಲಾಗತಕ್ಕದ್ದು.

ನೋಟ್ † 1 B ರೂಲ್ ಮೇರೆ ಕೊಡಲ್ಪಡುವ ಮೈದಾನಿನಲ್ಲಿರುವ ಅಡಿಕೇ ತೋಟಗಳಿಗೂ ಸಮಸ್ತ ತೆಂಗಿನ ತೋಟಗಳಿಗೂ ಇದು ದಾಖಲಾಗತಕ್ಕದ್ದು.

3. ಈ ತಖ್ತೆಯ 4ನೇ ಹೆಡ್ಡಿನಲ್ಲಿ ನಮೂದಾಗಿರುವ ಬಾಗಾಯಿತು ಕಂದಾಯದ ದರವು ತಾಲ್ಲೂಕಾಮುಳೆ *[ಸರ್ವೇ ಸೆಟ್ಲಮೆಂಟ್ ವೇಳೆ] ಸರ್ವೇ ಸೆಟ್ಲಮೆಂಟ್ ತಿದ್ದುಪಾಟಾಗುವ ವೇಳೆ ಬದಲಾವಣೆಗೆ ವಳಪಟ್ಟಿರುತ್ತೆ.

4. ಈ ತಾರೀಖು ಲಾಗಾಯಿತು 2†(5) ಸಂವತ್ಸರಗಳೊಳಗೆ ಮೇಲ್ಕಂಡ ಎಲ್ಲಾ ಪ್ರದೇಶದಲ್ಲಿಯೂ ಸೊಸಿಗಳನ್ನ ಹಾಕಿರಬೇಕು ಇದಕ್ಕೆ ತಪ್ಪಿದಲ್ಲಿ 3ನೇ †[6ನೇ] ಸಂವತ್ಸರದ ಲಾಗಾಯಿತು ನೀನು ತೆಗದುಕೊಂಡಿರುವ ವಿಶಿಷ್ಟ ಜಮೀನಿಗೂ ಬಾಗಾಯಿತು ಪೂರಾ ದರವಾದ ಎಕರೆ 1ಕ್ಕೆ ರೂಪಾಯಿನಂತೆ ನಿನ್ನಿಂದಾ ಪೂರಾ ಕಂದಾಯ ವಸೂಲ್ಮಾಡುವದು. ‡ [ಶಿವಾಯಿ ಮೇಲ್ಕಂಡ ಜಮೀನಿನಲ್ಲಿ ಈಗ ಇರುವ ಮರಗಳ ಕಿಮ್ಮತ್ತಿನ ಅಂದಾಜಾ ಮೊಬಲಗು ರೂಪಾಯಿಗಳು ಜುರ್ಮಾನೆಯ ತರೀಕ್ ಕಂದಾಯದ ಬಾಕಿಯಂತೆ ನಿನ್ನಿಂದಾ ವಸೂಲ್‌ಮಾಡಲ್ಪಡುವದು.]

5. ನೀನು ತೆಗದುಕ್ಕೊಂಡಿರುವ ಜಮೀನ್ ವಿಶಿಷ್ಟಕ್ಕೂ 4ನೇ ಪ್ಯಾರಾದಲ್ಲಿ ನಮೂದಾಗಿರುವ ವಾಯಿದೆ ವಳಗೆ ಸೊಸಿಗಳನ್ನು ಹಾಕಲು ಅನುಕೂಲಿಸದಿದ್ದರೆ ಮೇಲ್ಕಂಡ ಜಮೀನಿನ ಪೈಕಿ ಎಷ್ಟು ಭಾಗವನ್ನಾದರೂ 10 ಎಕರೆಗಳಿಗೆ ಕಮ್ಮಿ ಇಲ್ಲದಂತೆ ಒಂದೇ ಪ್ರದೇಶದಲ್ಲಿರತಕ್ಕ ತಾಕುಗಳನ್ನು ನೀನು ರಾಜೀನಾಮೆ ಕೊಡಬಹುದು.

6. ಎರಡನೇ ಪ್ಯಾರಕ್ಕೆ ಸೇರಿರುವ ತಖ್ತೆಯಲ್ಲಿ ನಮೂದಾಗಿರುವ ಮೇರೆ ಸರಕಾರಕ್ಕೆ ಸಾಲೀಯಾನಾ ಸಲ್ಲಬೇಕಾದ ಕಂದಾಯವು ಈ ಡಿಸ್ಟ್ರಿಕ್ಟಿನಲ್ಲಿ ಕಂದಾಯದ ವಸೂಲಿಗೋಸ್ಕರ ಮೊಕರರಾಗಿರುವ ಖಿಸ್ತುಬಂದಿ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

ಈ ಕೌಲ್‌ನಾಮಾ ನಮ್ಮ ದಸ್ಕತ್ ಮೊಹರ್‌ನಿಸಿ 18 ನೇ ಇಸವಿ ಮಾಹೇ ಮುಕ್ಕಾಂನಲ್ಲು ಕೊಡಲ್ಪಟ್ಟಿದೆ.

ಡೆಪ್ಯುಟಿ ಕಮಿಷನರ್,
ಡಿಸ್ಟ್ರಿಕ್ಟು.

ನೋಟ್ * ಸೆಟ್ಲಾದ ತಾಲ್ಲೂಕುಗಳಲ್ಲಿ ಇದನ್ನು ದಾಖಲ್ಮಾಡಲವಶ್ಯಕವಿಲ್ಲ.

† 50 ಎಕರೆಗಳಿಗಿಂತ ಜಾಸ್ತಿಯಾಗಿರುವ ಜಮೀನಿನ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

‡ ಹತ್ತು ರೂಪಾಯಿಗಳಿಗಿಂತ ಜಾಸ್ತಿ ಬೆಲೆಯಾಗುವಷ್ಟು ಮರಗಳಿರುವ ಸರ್ಕಾರದ ಬಂಜರು ಜಮೀನು ಕೊಡಲ್ಪಡುವ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

ಇಸ್ತಿಹಾರ್‌ನಾಮು.

ನಂ|| 121. 17ನೇ ಸೆಪ್ಟಂಬರು 1887ನೇ ಇಸವಿ.

ಬಾಗಾಯಿತು ಸಾಗುವಳಿಗೆ ಸರಕಾರದ ಜಮೀನನ್ನು ರಿಯಾಯಿತೀ ಷರತ್ತಿನ ಮೇಲೆ ಕೊಡುವದಕ್ಕೋಸ್ಕರವಾಗಿ ಈ ಮುಂದೆ ವಿವರಿಸುವ ನಿಬಂಧನೆಗಳು ಶ್ರೀಮನ್ಮಹಾರಾಜಾ ಸರಕಾರದವರಿಂದ ಮಂಜೂರಾಗಿ ಸರ್ವರಿಗೂ ತಿಳಿಯಲು ಫಾಯಿಷ್‌ಮಾಡಲ್ಪಟ್ಟಿರುತ್ತವೆ:—

1. ತರಂ ಮೊಕರರು ಆಗದೇ ಇರುವ ಸರ್ಕಾರಿ ಬಂಜರಿನಲ್ಲಿ ಧವಸೈರು ಬಾಗಾಯಿತು ಸಾಗುವಳಿಗೋಸ್ಕರ ದರಖಾಸ್ತು ಬಂದರೆ ಇತರ ಆಕ್ಷೇಪಣೆ ಏನೂ ಇಲ್ಲದ ಪಕ್ಷದಲ್ಲಿ ಸದರೀ ಜಮೀನು ದರಖಾಸ್ತುದಾರನಿಗೆ ಈ ಕೆಳಗೆ ವಿವರಿಸುವ ದರಗಳ ಮೇರೆ ಕೊಡಲ್ಪಡುವದು ಹ್ಯಾಗಂದರೆ:

A. ಮಲನಾಡಿನ ಅಡಿಕೆ ತೋಟಗಳಿಗೆ.

1ನೇದು.—ಜಮೀನು ಕೊಡಲ್ಪಟ್ಟ ಲಾಗಾಯಿತು ಷುರೂ 12 ವರುಷಗಳವರಿವಿಗೂ ಎಕರೆ 1ಕ್ಕೆ ಸಾಲೀಯಾನಾ 4 ಆಣೆ ಪ್ರಕಾರ.

2ನೇದು.—ಆ ಗ್ರಾಮದಲ್ಲಿ ಅದೇ ತರಹೇದ ತೋಟಗಳಿಗೆ ಬಿದ್ದಿರುವ ಸರಾಸರಿ ಬಾಗಾಯತು ದರದಲ್ಲಿಯಾಗಲಿ, ಅಥವಾ ಆ ಗ್ರಾಮದಲ್ಲಿ ಅಂಥಾ ಬಾಗಾಯತು ಇಲ್ಲದಿದ್ದರೆ ಅಜುಬಾಜು ಗ್ರಾಮದಲ್ಲಿ ಸದರೀ ತರಹೇದ ಬಾಗಾಯತಿಗೆ ಮೊಕರರು ಆಗಿಯಿರುವ ಸರಾಸರೀ ದರದಲ್ಲಿಯಾಗಲಿ, ಅಥವಾ ಡೆಪ್ಯುಟಿ ಕಮಿಷನರವರ ರಿಪೋರ್ಟಿನ ಮೇಲಾಗಲಿ, ರೆವಿನ್ಯೂ ಸರ್ವೆ ಸೆಟಲ್‌ಮೆಂಟು ಜಾರೀಗೆ ಬರುವಾಗಲಾಗಲಿ, ಸದರೀ ಸೆಟಲ್‌ಮೆಂಟು ಬದಲಾಯಿಸುವಾಗಾಗಲಿ, ಸರ್ವೆ ಸೂಪರಿಂಟೆಂಡೆಂಟರವರಿಂದ ಮೊಕರರು ಮಾಡಲ್ಪಡುವ ಬಾಗಾಯತು ದರದಲ್ಲಿಯಾಗಲಿ—

13ನೇ ವರ್ಷ—ಕಾಲು ಭಾಗ.
14ನೇ ವರ್ಷ—ಅರ್ಧ ಭಾಗ.
15ನೇ ವರ್ಷ—ಮುಕ್ಕಾಲು ಭಾಗ.

3ನೇದು.—ಮೇಲೆ ನಮೂದಾದಂತೆ ಮೊಕರರು ಆದ ಪೂರಾ ಬಾಗಾಯತು ದರವು 16ನೇ ವರ್ಷದ ಲಾಗಾಯತು ಜಾರೀಲಿ ಬರತಕ್ಕದ್ದು.

B. ಮೈದಾ ಪ್ರದೇಶಗಳಲ್ಲಿನ ಅಡಿಕೆ ತೋಟಗಳಿಗೂ ಮತ್ತು ಎಲ್ಲಾ ತೆಂಗಿನ ತೋಟಗಳಿಗೂ.

1ನೇದು.—ಜಮೀನು ಕೊಡಲ್ಪಟ್ಟ ಲಾಗಾಯತು ಮೊದಲು 9 ವರ್ಷಗಳವರಿವಿಗೂ ಎಕರೆ 1ಕ್ಕೆ ಸಾಲೀಯಾನಾ 4 ಆಣೆ ಪ್ರಕಾರ.

2ನೇದು.—ಆ ಗ್ರಾಮದಲ್ಲಿ ಅದೇ ತರಹೇದ ತೋಟಗಳಿಗೆ ಬಿದ್ದಿರುವ ಸರಾಸರಿ ಬಾಗಾಯತು ದರದಲ್ಲಿಯಾಗಲಿ, ಅಥವಾ ಆ ಗ್ರಾಮದಲ್ಲಿ ಅಂಥಾ ಬಾಗಾಯತು ಇಲ್ಲದಿದ್ದರೆ ಅಜುಬಾಜು ಗ್ರಾಮದಲ್ಲಿ ಸದರೀ ಬಾಗಾಯತಿಗೆ ಮೊಕರರು ಆಗಿಯಿರುವ ಸರಾಸರೀ ದರದಲ್ಲಿ ಆಗಲೀ ಅಥವಾ ಡೆಪ್ಯುಟಿ ಕಮಿಷನರವರ ರಿಪೋರ್ಟಿನ ಮೇಲಾಗಲಿ, ರೆವಿನ್ಯೂ ಸರ್ವೆ ಸೆಟಲ್‌ಮೆಂಟು ಜಾರೀಗೆ ಬರುವಾಗಾಗಲಿ, ಸದರೀ ಸೆಟಲ್‌ಮೆಂಟು ಬದಲಾಯಿಸುವಾಗಾಗಲಿ, ಸರ್ವೆ ಸೂಪರಿಂಟೆಂಡೆಂಟರವರಿಂದ ಮೊಕರರು ಮಾಡಲ್ಪಡುವ ಬಾಗಾಯತು ದರದಲ್ಲಿಯಾಗಲಿ—

10ನೇ ವರ್ಷ—ಕಾಲು ಭಾಗ.
11ನೇ ವರ್ಷ—ಅರ್ಧ ಭಾಗ.
12ನೇ ವರ್ಷ—ಮುಕ್ಕಾಲು ಭಾಗ.

3ನೇದು.—13ನೇ ವರ್ಷದ ಲಾಗಾಯತು ಮೇಲೆ ನಮೂದಾದಂತೆ ಮೊಕರರು ಆದ ಪೂರಾ ಬಾಗಾಯತುದರವು ಜಾರೀಯಲ್ಲಿ ಬರತಕ್ಕದ್ದು.

2. ಜಮೀನು ಪಡಕೊಂಡ 2 ವರುಷಗಳ ವಳಗಾಗಿ ಅದರಲ್ಲಿ ಸೊಸಿಗಳನ್ನು ಸಂಪೂರ್ಣವಾಗಿ ಹಾಕತಕ್ಕದ್ದು. ಆದರೆ ಬಾಗಾಯತು ಸಾಗುವಳಿಗಾಗಿ ಕೊಟ್ಟ ಜಮೀನು 50 ಎಕರೆಗಳಿಗೆ ಹೆಚ್ಚಾಗಿ ಇದ್ದಲ್ಲಿ ಸಾಗುವಳೀದಾರನು ಪ್ರತಿ ವರ್ಷವೂ ತಾನು ಪಡದಿರುವ ಜಮೀನಿನ 5ರಲ್ಲಿ ಒಂದು ಭಾಗದ ಮೇರೆ ಸೊಸಿಗಳನ್ನು ಹಾಕುತ್ತಾ 5ನೇ ವರ್ಷ ಪೂರೈಸುವದರ ಒಳಗಾಗಿ ಸದರೀ ಜಮೀನು ಪೂರ್ತ ಸೊಸಿಗಳನ್ನು ಹಾಕಿರತಕ್ಕದ್ದು. ಸೊಸಿಗಳು ಹಾಕುವ ಭಾಗದಲ್ಲಿ ಈ ಷರತ್ತುಗಳಿಗೆ ತಪ್ಪಿದರೆ ಸದರೀ ದರೋಬಸ್ತು ಜಮೀನಿಗೂ ಮೇಲೆ ಹೇಳಿದ ಪೂರಾ ಬಾಗಾಯತು ದರದ ಮೇರೆ ಪೂರಾ ಕಂದಾಯ ಮೊಕರರು ಮಾಡಲ್ಪಡುವದಲ್ಲದೇ ಅದರಲ್ಲಿ ಸಾಗುವಳಿಗೆ ಕೊಡುವಕಾಲದಲ್ಲಿ ಇದ್ದ ಮರಗಳ ಕಿಮ್ಮತ್ತು ಅಂದಾಜು ಮೊಬಲಗು ಜುರ್ಮಾನೇ ತರೀಕ ವಸೂಲು ಮಾಡಲ್ಪಡುವದು. ಈ ನಿಬಂಧನೆಗಳನ್ನನುಸರಿಸಿ ಕೊಡಲ್ಪಡುವ ಕೌಲ್‌ನಲ್ಲಿ ಸದರೀ ಜುರ್ಮಾನೇ ಮೊಬಲಗು ಇಷ್ಟೆಂದು ದಾಖಲಾಗಿರತಕ್ಕದ್ದು. ಸಾಗುವಳಿಗೆ ಕೊಟ್ಟ ದರೋಬಸ್ತು ಜಮೀನಿನಲ್ಲಿಯೂ ಮೇಲೆ ಕಂಡ ವಾಯಿದೇ ಒಳಗಾಗಿ ಸೊಸಿಗಳನ್ನು ಹಾಕುವದಕ್ಕೆ ತಪ್ಪಿ ಹೋಗುವ ಸಾಗುವಳೀದಾರನು ಸದರೀ ಜಮೀನಿನ ಪೈಕೀ 10 ಎಕರೆಗೆ ಕಮ್ಮಿ ಇಲ್ಲದಂಥ ಒಂದೇ ಪ್ರದೇಶದಲ್ಲಿರತಕ್ಕ ತಾಕುಗಳನ್ನು ರಾಜೀನಾಮೇ ಮೂಲಕ ಸರಕಾರಕ್ಕೆ ಒಪ್ಪಿಸಬಹುದು.

3. ಮೈದಾ ತಾಲ್ಲೂಕುಗಳಲ್ಲಿ ಸರ್ವೇಯಲ್ಲಿ ಸಾಗುವಳೀಯಿಂದ ವಿನಾಯಿಸಲ್ಪಟ್ಟಿರುವ ಕೆರೆಗೆ ನೀರು ಬರುವ ಕಾಲುವೆ, ವಳಗೆರೆ ಒಣಿ ಇತ್ಯಾದಿ ಜಾಗಾಗಳಲ್ಲಿರುವ ಅಲ್ಪಸ್ವಲ್ಪವಾದ ಜಮೀನಿಗೆ ಈ ನಿಬಂಧನೆಗಳನ್ನನುಸರಿಸಿ ಕೌಲ್ ಕೊಡಕೂಡದು. ಈ ನಿಬಂಧನೆಗಳ ಮೇರೆ ಕೌಲ್ ಕೊಡತಕ್ಕ ಪ್ರದೇಶವು 2 ಎಕರೆಗಳಿಗಿಂತ ಕಮ್ಮಿಯಾಗಿರಕೂಡದು.

4. ಮೇಲಿನ ನಿಬಂಧನೆಗಳಲ್ಲಿ ನಮೂದಿಸಿರುವ ಬಾಗಾಯತು ದರವು ತಾಲ್ಲೂಕಾಮುಳೇ ಎಲ್ಲಾ ಜಮೀನುಗಳ ತರಂ ಬದಲಾಯಿಸುವಕಾಲದಲ್ಲಿ ವಿನಹಾ ಬದಲಾಯಿಸಲ್ಪಡಕೂಡದು.

5. ಸರ್ವೇ ಸೆಟಲ್‌ಮೆಂಟ್ ಆಗಿರುವ ತಾಲ್ಲೂಕುಗಳಲ್ಲಿಯೂ ಮತ್ತು ಸರ್ವೇ ಆಗದೇ ಇರುವ ತಾಲ್ಲೂಕುಗಳಲ್ಲಿಯೂ ಸಹ ಈ ನಿಬಂಧನೆಗಳನ್ನನುಸರಿಸಿ ಇದಕ್ಕೆ ಲಗ್ಗತ್ತು ಮಾಡಿ ಇರುವ ನಮೂನೇಯಂತೆ ಕೌಲ್ ಕೊಡತಕ್ಕದ್ದು.

6. ಈ ನಿಬಂಧನೆಗಳ ಪ್ರಕಾರ ಕೌಲ್‌ಗಳ ಬಗ್ಯೆ ದರಖಾಸ್ತುಗಳನ್ನು ಬರಹ ಮೂಲಕವಾಗಿ ತಾಲ್ಲೂಕು ಅಮಲ್ದಾರ್‍ರಿಗೆ ಕೊಡಬೇಕು. ಅಮಲ್ದಾರ್‍ರು ಸಾಧ್ಯವಾದಷ್ಟು ಸ್ವಲ್ಪ ಸಾವಕಾಶದಿಂದ ಅವಶ್ಯವಾದ ವಿಚಾರಣೇ ನಡಿಸಿ ಸದರೀ ದರಖಾಸ್ತನ್ನು ಡೆಪ್ಯುಟಿ ಕಮಿಷನರವರ ಹುಕ್ಕುಂ ಬಗ್ಯೆ ಕಳುಹಿಸತಕ್ಕದ್ದು.

7. ಹಾಲೀ ಬಾಗಾಯತು ದರ ಮೊಕರರು ಆಗಿರುವ ಅಡಿಕೆ ಮತ್ತು ತೆಂಗಿನ ತೋಟಗಳು ಯಾವ ಕಾರಣದಿಂದಲಾದರೂ ಈ ತಾರೀಖಿನಿಂದ ಹಿಂದೆ 3 ವರ್ಷಗಳ ಲಾಗಾಯತು ಹಿಡುವಳೀ ಕೆಳಗೆ ಬಾರದೇ ಇದ್ದಲ್ಲಿ ಡೆಪ್ಯುಟಿ ಕಮ್ಮಿಷನರವರು ಅಂಥಾ ತೋಟಗಳ ಹಾಲೀ ಸ್ಥಿತಿಯನ್ನು ನೋಡಿ ನ್ಯಾಯವಾಗಿ ಮುನಾಸಬು ತೋರಿದಲ್ಲಿ 1ನೇ ಕಲಮಿನಲ್ಲಿ ನಮೂದಾಗುವ ರಿಯಾಯತೀ ಕಂದಾಯದ ಅವಧಿ ಯಲ್ಲಿ ಅರ್ಧಕ್ಕೆ ಹೆಚ್ಚಿಲ್ಲದಂತೆ ಹಂಗಾಮಿಯಾಗಿ ರಿಮಿಷನ್ ಕೊಡಬಹುದು.

8. ಮೇಲೆ 7ನೇ ಕಲಂಗೆ ಲಗಾವಾಗುವ ಜಮೀನುಗಳ ವಿಷಯದಲ್ಲಿ ಆ ಕಲಂನಲ್ಲಿ ನಮೂದಾಗುವದಕ್ಕಿಂತಲೂ ಜಾಸ್ತೀಯಾದ ರಿಯಾಯತೀ ತೋರಿಸತಕ್ಕದ್ದು ಅವಶ್ಯಕವೆಂದು ಡೆಪ್ಯುಟಿ ಕಮ್ಮಿಷನರವರು ಅಭಿಪ್ರಾಯಪಡುವ ಸಂದರ್ಭದಲ್ಲಿ ಅಂಥಾ ವಿಷಯಗಳನ್ನು ಅವರು ಸರ್ವೇ ಸೂಪರಿಂಟೆಂಡೆಂಟರವರ ಮೂಲಕವಾಗಿ ಗವರ್ನಮೆಂಟಿನವರ ಹುಕ್ಕುಂ ಬಗ್ಯೆ ಸ್ಪೆಷಲ್ ಆಗಿ ರಿಪೋರ್ಟು ಮಾಡತಕ್ಕದ್ದು.

9. 1ನೇ ಕಲಂನಲ್ಲಿ ನಮೂದಾಗಿರುವಂತೆ ಬಾಗಾಯತು ದರವನ್ನು ತಿಳಿದುಕೊಳ್ಳುವದು ಸಾವಕಾಶವಾಗುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಕೌಲ್ ದರಖಾಸ್ತನ್ನು ಮಂಜೂರು ಮಾಡಿ ನಂತರ ಮೊಕರರ್ ಆಗಬೇಕಾದ ಬಾಗಾಯತು ದರವನ್ನು ವ್ಯವಸ್ಥೇ ಮಾಡ ತಕ್ಕದ್ದು. ಇಂಥಾ ಸಂದರ್ಭದಲ್ಲಿ ಸಾಧ್ಯವಾದಷ್ಟು ಜಾಗ್ರತೆಯಾಗಿ ಬಾಗಾಯತು ದರವನ್ನು ನಂತರ ಮೊಕರರ್ ಮಾಡಿ ಮೊದಲು ಕೊಟ್ಟ ಕೌಲಿಗೆ ಬದಲಾಗಿ ಹೊಸ ಕೌಲ್ ತಯಾರುಮಾಡಿಸಿ ಅದರಲ್ಲಿ ಸದರೀ ದರವನ್ನು ನಮೂದಿಸತಕ್ಕದ್ದು.

10. ಮಲನಾಡು ತಾಲ್ಲೂಕುಗಳಲ್ಲಿ ತರಂ ದಾಖಲಾಗದೇ ಇರುವ ಸರಕಾರೀ ಬಂಜರು ಜಮೀನುಗಳನ್ನು ತತ್ಕಾಲದಲ್ಲಿ ಜಾರೀಲಿ ರುವ ಸ್ಪೆಷಲ್ ಬಾಗಾಯತು ದರಕ್ಕೆ ಒಳಪಡುವ ಷರತ್ತಿನ ಮೇಲೆ ವಿನಹಾ ಹೊಸದಾಗಿ ತರಂ ಮೊಕರರು ಮಾಡಿ ಸಾಗುವಳೀಬಗ್ಯೆ ಕೊಡ ಕೂಡದು.

ಬಮೋಜೇಬ್ ಹುಕ್ಕುಂ,
ಆರ್. ವಿಜಯಿಾಂದ್ರರಾವ್,
ಚೀಫ್ ಸೆಕ್ರೆಟೇರಿ.

ಮೈಸೂರು ದಿವಾನರವರ ಪ್ರೊಸಿಡಿಂಗ್ಸ್ ರೆವಿನ್ಯೂ ಇಲಾಖಾ.

ಆರ್ಡರ್ ನಂಬರ್ 3786—95—101 ಮುಕ್ಕಾಂ 1ನೇ ಸೆಪ್ಟಂಬರ್ 1887ನೇ ಇಸವಿ ಮೊಕ್ಕಾಂ ಬೆಂಗಳೂರು.

1887ನೇ ಇಸವಿ ಫಿಬ್ರುವರೀ 11ನೇ ಮುಕ್ಕಾಂ 341ನೇ ನಂಬರು ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿ ಆದ ಪ್ರಕಾರ ಸರ್ವೇ ಗ್ಯಾರಂಟಿಯಾನೆ ಸರ್ವೆ ಕೌಲಿನ XVIIನೇ ನಿಬಂಧನೆ ಅನುಸರಿಸಿ ಇನಾಂ ಗ್ರಾಮಗಳಲ್ಲಿರತಕ್ಕ ತರೀ ಜಮೀನುಗಳ ಸರ್ವೆ ಆಕಾರದ $\frac{1}{17}$ರ ಭಾಗವು "ಇರಿಗೇಷನ್ ಸೆಸ್‌ಗೆ ಸಮನಾದ ಮೊಬಲಗು" ಯೆಂಬ ಹೆಸರಿಂದ ವಸೂಲ್ಮಾಡಲ್ಪಡತ್ತಿದೆ. ಇನಾಂದಾರರು ಸಾಧಾರಣವಾಗಿ ಈ ವಸೂಲಾತಿ ವಿಷಯದಲ್ಲಿ ಫಿರ್ಯಾದು ಮಾಡುವದಲ್ಲದೆ ಸದರೀ ಜಮೀನುಗಳಿಗೆ ಯಾವದೊಂದು ಸರ್ಕಾರಿ ಜಲಾಧಾರಗಳಿಂದಲೂ ಫಾಯಿದೆ ಇಲ್ಲವಾದದರಿಂದ ಈ ಬಾಬತು ಮೊಬಲಗು ವಸೂಲ್ ಮಾಡುವದು ಅನ್ಯಾಯವೆಂಬದಾಗಿ ವಾದಿಸುತ್ತಾರೆ. ಈ ಬಾಬತು ಫಿರ್ಯಾದು ಇನಾಂ ಕೆರೆಗಳಿಂದ ಮಾತ್ರವೇ ನೀರು ಹಾಯುವಂಥಾ ಇನಾಂ ತರೀ ಜಮೀನುಗಳುಳ್ಳ ಪೂರಾ ಗ್ರಾಮದ ಇನಾಂದಾರರುಗಳ ವಿಷಯದಲ್ಲಿ ನ್ಯಾಯವಾದುದೆಂಬದಾಗಿ ಶ್ರೀಮನ್ ಮಹಾರಾಜಾ ಸರ್ಕಾರದವರು ಅಭಿಪ್ರಾಯ ಪಡುತ್ತಾರೆ. ಸರ್ಕಾರದವರು ಈ ಬಾಬತು ವಸೂಲಿಯನ್ನು ಮೋಕೂಫ್ ಮಾಡತಕ್ಕದ್ದೆಂದು ಆಜ್ಞಾಪಿಸುತ್ತಾರೆ. ಆದರೆ ಈ ನಡವಳಿತೆಯನ್ನು ಮಂಜೂರ್ಮಾಡುವದರಲ್ಲಿ ಗವರ್ನಮೆಂಟಿನವರು ಸದರೀ ನಡವಳಿತೆಯಿಂದ ಫಾಯಿದೆ ಪಡಿಯುವ ತಮಾಂ ಇನಾಂದಾರರಿಗೂ ತಿಳಿಸುವದೇನಂದರೆ ಸದರೀ ಇನಾಂದಾರರು ಅವರ ಕೆರೆಗಳಿಗೆ ಅವಶ್ಯಕವಾದಾಗ ರಿಪೇರಿ ಕೆಲಸಗಳನ್ನು ನಡಿಸುವದಕ್ಕೂ ಮತ್ತು ಅವುಗಳನ್ನು ಯಾವಾಗಲೂ ಕ್ರಮವಾದ ಸ್ಥಿತಿಯಲ್ಲಿಟ್ಟುಕೊಂಡಿರುವದಕ್ಕೂ ಖಂಡಿತವಾಗಿ ಜವಾಬ್‌ದಾರರಾಗಿರತಕ್ಕದ್ದು. ಅವರು ಈ ಕೆಲಸದಲ್ಲಿ ತಪ್ಪಿದರೆ ಅವಶ್ಯಕವಾದ ಕಾಮಗಾರಿಯು ಸರ್ಕಾರದಿಂದ ನಡಿಸಲ್ಪಟ್ಟು ಲಾಗವಡು ಇನಾಂದಾರರಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

2. ಮೇಲ್ಕಂಡ ಹುಕ್ಕುಂ ಅನುಸರಿಸಿ ಇದರಡೀಕಂಡ ಸೆಕ್ಷನ್‌ಗಳು ಸರ್ವೆಕೌಲಿನ XVII ಮತ್ತು XVIIIನೇ ಸೆಕ್ಷನಿಗೆ ಬದಲಾಗಿ ಉಪಯೋಗಿಸಲ್ಪಡತಕ್ಕದ್ದು.

XVII. ಯಿರಿಗೇಷನ್ ಸೆಸ್ಸಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲ್ಲಿ ಇನಾಂ ತರೀಕ್ ಯಿರತಕ್ಕ ತಮಾಂ ತರೀ ಜಮೀನುಗಳ ಐಯಿಂದ ಠರಾವ್ ಆಗತಕ್ಕ ಸರ್ವೆ ಆಕಾರದಲ್ಲಿ ಬದಸ್ತೂರು ಶೇರಿಸಲ್ಪಡತಕ್ಕದ್ದು. ಮತ್ತು ಅಂಥಾ ಆಕಾರದ $\frac{1}{17}$ರ ಭಾಗವು ಬದಸ್ತೂರು ಜೋಡೀಮೇಲ್ಕೆ ಪರಂತು "ಯಿರಿಗೇಷನ್ ಸೆಸ್ಸಗೆ

ಸಮನಾದ ಮೊಬಲಗು" ಯಂಬ ಹೆಸರಿನಿಂದ ಮತ್ತು ಅಂಥಾ ಜಮೀನ್ ಯಾ ಗ್ರಾಮಗಳ ಮೇಲೆ ಅಲಾಹಿದಾ ವಸೂಲ್ ಮಾಡಲ್ಪಡಬೇಕಾದ ಕ್ವಿಟ್‌ರೆಂಟ್ ದೇಖೀಲ್ ವಸೂಲ್‌ಮಾಡಲ್ಪಡತಕ್ಕ ದ್ದಲ್ಲದೆ "ಡಿಸ್ಟ್ರಿಕ್ಟ್ ಯಿರಿಗೇಷನ್ ಫಂಡ್" ಹೆಡ್ಡಿಗೆ ಲೆಖ್ಖದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮೀನುಗಳು ಪೂರಾ ಇನಾಂ ಗ್ರಾಮಗಳಲ್ಲಿ ಯಿದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ಪಡೆಯಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಮೊಬಲಗಾಗಲೀ ಸರ್ಕಾರಕ್ಕೆ ತೆರಬೇಕಾದ್ದಿಲ್ಲವು.

ಪರಂತು ಯಿರಿಗೇಷನ್ ಸೆಸ್ಸು ಯಾನೆ ನೀರು ಸರದಿಯನ್ನು ಠರಾವ್ ಮಾಡುವದಕ್ಕೋಸ್ಕರ ಸರ್ವೇ ಇಲಾಖೇಯವರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮಗಳಲ್ಲಿರತಕ್ಕ ಅಂಥಾ ತರೀ ಜಮೀನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು, ಮತ್ತು ತಮಾಂ ಇನಾಂ ಯಾ ಇತರ ತರೀ ಜಮೀನುಗಳ ಸರ್ವೇ ಆಕಾರದಲ್ಲಿ ಅವುಗಳ ಮೇಲೆ ಠರಾವ್ ಮಾಡಲ್ಪಡಬಹುದಾದ ಯಾವದಾದರೂ ಅಲಾಹಿದಾ ನೀರು ಸರದಿಯೂ ಅಡಗಿ ಯಿರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮಗಳಿಗೂ ಮತ್ತು (ಸರ್ವಮಾನ್ಯ ಯಾ ಜೋಡೀ) ಇನಾಂ ಗ್ರಾಮಗಳಿಗೂ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕ್ಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾಯಂಗುತ್ತಾ ಮೊಬಲಗಿನ ಮೇಲೂ ಇನಾಂ ಗ್ರಾಮಗಳ ವಿಷಯದಲ್ಲಿ ಇನಾಂ ಗ್ರಾಮಗಳ ಆಕಾರದಮೇಲೂ ವಸೂಲ್ ಮಾಡಲ್ಪಡತಕ್ಕದ್ದು.

3. ಬದಸ್ತೂರು 1875ನೇ ಇಸವಿ ಮೇ 7ನೇ ಮರ್ಕಂ 72ನೇ ನಂಬರುಳ್ಳ ಮಾಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಂದಿಗೆ ಫಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟ್ ಯಿರಿಗೇಷನ್ ಸೆಸ್ ಫಂಡಿನ ಆಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟ್ ಕಮಿಟಿಗಳವರು ಅನುಸರಿಸತಕ್ಕ ಬಗ್ಯೆ ಏರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರಿಗೆ ತಿದ್ದುಪಾಡಾಗಿರತಕ್ಕದ್ದು.

VI. ಇನಾಂ ವ ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ಸಾಗುವಳೀ ಆಗುವ ತರೀ ಜಮೀನಿಗಾಗಿ ನೀರು ಸರದಿಯನ್ನ ತೆರಬೇಕಾದ ಅವಶ್ಯಕತೆ ತಪ್ಪಿರುತ್ತದೆಯಾಗಿ ಅಂತಾ ಕೆರೆಗಳಿಗೆ ಕಾಲ ಕಾಲಕ್ಕೆ ರಿಪೇರಿ ಮಾಡುವಂತಾ ವ ಅವುಗಳನ್ನ ವೊಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂತಾ ಜವಾಬ್ದಾರಿಯನ್ನ ಖಂಡಿತವಾಗಿ ಜಾರಿಯಲ್ಲಿ ತರಲ್ಪಡತಕ್ಕದ್ದು. ವೊಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ವೊಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಅವಶ್ಯಕವಾದ ಕಾಮಗಾರಿಗಳನ್ನ ಸಕಾಲದಲ್ಲಿ ಸಾಧ್ಯವಾದ ತ್ವರ್ಯದಿಂದಲೂ ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂತಾ ಕಾಮಗಾರೀ ವಗೈರೇ ಕೆಲಸವನ್ನ ಗವರ್ನ್‌ಮೆಂಟಿನವರೇ ತೆಗದುಕೊಂಡು ಖುದ್ದು ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಲಾಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

4. ಈ ತಿದ್ದುಪಾಟುಗಳು ಸರ್ವರ ತಿಳುವಳಿಕೆ ಬಗ್ಯೆ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಡತಕ್ಕದ್ದು.

5. ಇನಾಂ ಗ್ರಾಮಗಳಲ್ಲಿರುವ ತರೀ ಜಮೀನ್ ಮೇಲೆ ವಸೂಲಾಗುವ ನೀರು ಸರದಿಯನ್ನ ನಿಲ್ಲಿಸಿ ಯಿಡತಕ್ಕ ಬಗ್ಯೆ, 1881ನೇ ಇಸವಿ ಡಿಶಂಬರ್ 17ನೇ ಮರ್ಕಂ 7416—225ನೇ ನಂಬರ್‌ವುಳ್ಳ ಪ್ರೊಸಿಡಿಂಗ್ಸನಲ್ಲಿ ಕಂಡ ಹುಕ್ಕುಂ ಯಿದರ ದೆಸೆಯಿಂದ ರದ್ದು ಪಡಿಸಿರುತ್ತೆ. ಸರ್ಕಾರದ ಜಲಾಧಾರ ವಿಲ್ಲದೇ ಯಿರುವ ತರೀ ಇನಾಂತಿ ಜಮೀನ್‌ಗಳ ಬಾಬತು ಬರತಕ್ಕ ಬಾಕೀಯಂತೆ ಲೆಖ್ಖದಲ್ಲಿ ನಮೂದಾಗಿರುವ ಮೊಬಲಗು, ಈಗ ಮಂಜೂರ್ಮಾಡಿರುವ ರೂಲ್ಸ್ ಅನುಸರಿಸಿ ವಜಾ ಮಾಡಲ್ಪಡತಕ್ಕದ್ದು, ಹಾಗೆ ವಜಾ ಮಾಡಲ್ಪಟ್ಟ ಮೊಬಲಗುಗಳು ಆಫೀಸಿಗೆ ಪ್ರತ್ಯೇಕವಾಗಿ ತಿಳಿಯಲ್ಪಡಿಸತಕ್ಕದ್ದು. ಈ ಬಾಬಿನಲ್ಲಿ ಮಿಕ್ಕಾದ ಸಂಗತಿಯೊಳಗೆ ಯಿರುವ ಬಾಕೀಗಳನ್ನ ವಸೂಲ್ ಮಾಡಲಿಕ್ಕೆ ಕೂಡ್ಲೆ ತರದೂದು ನಡಿಸಲ್ಪಡತಕ್ಕದ್ದು.

6. ಸದರೀ ಪರಿಷ್ಕರಿಸಲ್ಪಟ್ಟ ಸರ್ವೇ ಕೌಲಿನ 18ನೇ ಕಲಮನುಸರಿಸಿ ಯಿರಿಗೇಷನ್ ಸೆಸ್ಸ ಯಾ ಅದರ ಸಮಾನ ಮೊಬಲಗನ್ನ ವಸೂಲ್ ಮಾಡುವದರಲ್ಲಿ ಯಾವ ಇನಾಂತಿ ತರೀ ಜಮೀನುಗಳನ್ನ ವಿನಾಯಿಸತಕ್ಕದ್ದೋ ಆ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರುಗಳು ರೆವಿನ್ಯೂ ಸರ್ವೇ ಸೂಪರಿಂಟೆಂಡೆಂಟರಿಗೆ ಬರದು ವ್ಯವಸ್ಥೆ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಆರ್. ವಿಜಯೀಂದ್ರರಾವ್;
ಚೀಫ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ॥ 8, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಬೆಂಗಳೂರು ಮುನಸೀಫ್ ಕೋರ್ಟಿನಲ್ಲಿ.

1887ನೇ ಇಸವಿ ಒರಿಜಿನಲ್ ನಂಬರ್ 432.

ವಾದಿಗಳು.

ಆನೇಕಲ್ ತಾಲ್ಲೂಕು ಜಿಗಣೀ ಹೋಬಳೀ ಕಾಯಂ ಗುತ್ತಾ ಹುಲ್ಲುಹಳ್ಳೀಯಲ್ಲಿರುವರು ಚಿನ್ನಯ್ಯನ ಮಗ 1ನೇ ನಾರಪ್ಪ, 2ನೇ ನಂಜಯ್ಯನಮಗ ಪೆಳ್ಳಪ್ಪ, 3ನೇ ನಾರಪ್ಪಯ್ಯನ ಮಗ ಮುನಿಯಪ್ಪ, 4ನೇ ನಾರಪ್ಪನಮಗ ಮುನಿಯಪ್ಪ, 5ನೇ ಪಾಪಯ್ಯನಮಗ ಮಲ್ಲಯ್ಯ, 6ನೇ ದೊಡ್ಡಯರ್ರಪ್ಪನ ಮಗಳು ಮುನ್ನಂಜಿ, 7ನೇ ಚೌಡಯ್ಯನ ಮಗಳು ರಾಮಕ್ಕ, 8ನೇ ಸಂಪನ ಮಗ ಮುನಿಯ, 9ನೇ ಕೃಷ್ಣಯ್ಯನ ಮಗ ವೆಂಕಟ, 10ನೇ ಮುನಿಯಪ್ಪನ ಮಗ ಪಿಲ್ಲಿಗಾ.

ಪ್ರತಿವಾದಿಗಳು.

ಬೆಂಗಳೂರು ಕಂಟೋನ್ಮೆಂಟಿನಲ್ಲಿ ಯಿರುವರು—1ನೇ ರಾಯಬಹದ್ದೂರ್ ಗೋವಿಂದಸೆಟ್ಟರ ಮಕ್ಕಳು ಗಂಗಾಧರಸೆಟ್ಟರು, 2ನೇ, 1ನೇ ಪ್ರತಿವಾದೀ ಭಾವಮೈದ ಮುನಿಸಾಮಿ ಸೆಟ್ಟರು, 3ನೇ, 1ನೇ ಪ್ರತಿವಾದೀ ಗುಮಾಸ್ತೇ ನಾರಣಪ್ಪನವರು, 4ನೇ ಬೆಂಗಳೂರು ತಾಲ್ಲೂಕು ಬೇಗೂರು ಹೋಬಳಿ ಶೆಟ್ಟಿಪಾಳ್ಯದಲ್ಲಿ ಯಿರುವ ಅಪ್ಪಯ್ಯಣ್ಣ, 5ನೇ ಆನೇಕಲ್ ತಾ॥ ಕಾಯಂಗುತ್ತಾ ಹುಲ್ಲುಹಳ್ಳೀಲಿ ಇರುವ ಶೀತಯ್ಯನ ಮಗ ಕತ್ತೀ ಮುನಿಯ, 6ನೇ ಡಿಟೋ ವೂರಲ್ಲಿ ಇರುವ ಜಲಗ್ಯೆ ಈರನ ಮಗ ತೋಟಿ ನಂಜ, 7ನೇ ಡಿಟೋ ವೂರಲ್ಲಿ ಇರುವ ಮುನಿಯನ ಮಗ ಆನೇಕಲ್ಲುಗಾ, 8ನೇ ಬೆಂಗಳೂರು ತಾ॥ ಬೇಗೂರು ಹೋಬಳಿ ಪಟ್ಟದಲ್ಲಿ ಇರುವ ಖಾಸಿಂಸಾಬೀಮಗ ಬಾಬೂಸಾಬಿ, 9ನೇ ಡಿಟೋ ಗ್ರಾಮದಲ್ಲಿ ಇರುವ ಇವನ ತಮ್ಮ ಯಿಮಾಂಸಾಬಿ.

ಆನೇಕಲ್ ತಾಲ್ಲೂಕು ಜಿಗಣೀ ಹೋಬಳಿ ಹುಲ್ಲುಹಳ್ಳೀಲಿ ಯಿರುವರು—1ನೇ ಕತ್ತೀ ಮುನಿಯ, 2ನೇ ಚಿಕ್ಕ ಈರ, 3ನೇ ಪಾಪ, 4ನೇ ನಾನಿಗ, 5ನೇ ಕುರುಬ ಮುನಿಗ, 6ನೇ ನರಸಿಂಹಯ್ಯ, 7ನೇ ಚಿಕ್ಕಕ್ಕ, 8ನೇ ಗುಂಡ, 9ನೇ ತಿಮ್ಮಾ, 10ನೇ ತಿಮ್ಮರಾಯ, 11ನೇ ಆನೇಕಲ್ಲುಗಾ, 12ನೇ ಮದ್ದೂರ, 13ನೇ ಮುನಿಗ, 14ನೇ ಲಿಂಗಾ, 15ನೇ ಕರಿಯ, 16ನೇ ದಾಸಮುನಿಯ, 17ನೇ ಗುಟ್ಟ, 18ನೇ ಮುತ್ತ, 19ನೇ ಅಳ್ಳಿಗ, 20ನೇ ನಂಜ—ಯಿವರುಗಳಿಗೂ ಮತ್ತು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಮೇಲ್ಕಂಡ ವಾದಿಗಳು ಪ್ರತಿವಾದಿಗಳ ಮೇಲೆ ದಾವಾ ಷೆಡ್ಯೂಲ್‌ನಲ್ಲಿ ಕಂಡ ಹುಲ್ಲುಗಾವಲ್ ಜಮೀನಿನಲ್ಲಿ ಲಾಗಾಯತಿನಿಂದ ತಮ್ಮ ದನಗಳನ್ನ ಮೇಯಿಸಿಕೊಳ್ಳುತ್ತಾ ಯಿದ್ದಂತೆ ಮುಂದೆಯೂ ಮೇಯಿಸಿಕೊಳ್ಳುವದಕ್ಕೆ ಪ್ರತಿವಾದಿಗಳು ಅಡ್ಡೀಮಾಡದಂತೆ ಶಾಶ್ವತವಾದ ಇಂಜಂಗ್‌ಷನ್ ಕೊಡಿಸಬೇಕೆಂದು ವಗ್ಯೆರೇ ದಾವಾಮಾಡಿ ಯಿರುವ ಸಂಗತಿ ಯಿದರಿಂದ ಮೇಲ್ಕಂಡ ಜನಗಳಿಗೂ ಮತ್ತು ಸಮಸ್ತ ಜನಗಳಿಗೂ ತಿಳಿಯಪಡಿಸಿಯಿದೆ.

ಈ ವಿವಾದ ವಿಷಯಕ್ಕೆ ಸಂಬಂಧಪಟ್ಟವರು 87ನೇ ಇಸವಿ ಅಕ್ಟೋಬರು ತಿಂಗಳು 6ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟಿಗೆ ಖುದ್ದಾಗಲಿ ಅಥವಾ ಪ್ಲೀಡರ್‌ಗಳ ಮೂಲಕವಾಗಲಿ ಹಾಜರಾಗಿ ತಮ್ಮ ವೊಕದ್ದಮೆಯನ್ನ ತಿಳಿಸಬಹುದು.

ತಾರೀಖು 22ನೇ ಸೆಪ್ಟಂಬರ್ 1887.

ಸುಬ್ಬರಾಯರ್,
ಮುನಸೀಫ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿ॥ ಅರ್ಜೀ ನಂಬರ್ 819.

ಮೃತಪಟ್ಟ ಚನ್ನಪಟ್ಟಣದ ಕಸಬಾ ತಿಟವಮಾನಹಳ್ಳಿಯಲ್ಲಿಯಿದ್ದ ಬೊಮ್ಮೇಶಿದ್ದೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸದರೀ ತಿಟವಮಾನಹಳ್ಳಿಯಲ್ಲಿ ಹುನುಮಾ ಮೈನರ್ ಇವನ ತಾಯಿ ಲಿಂಗಮ್ಮ ಮೃತಪಟ್ಟ ಸದರೀ ಬೊಮ್ಮೇಶಿದ್ದೇಗೌಡರಿಗೆ ಮೈನರ್ ಹನುಮಾ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ತಿಟವಮಾನಹಳ್ಳೀ ಸ್ಥಳದ ಮೈನರ್ ಹನುಮಾ ಇವನ ತಾಯಿ ಲಿಂಗಮ್ಮನು ತಿಟವಮಾನಹಳ್ಳೀ ವಾಸಸ್ಥರಾಗಿ ಮೃತಪಟ್ಟ ಬೊಮ್ಮೇಶಿದ್ದೇಗೌಡರ ಜಿಂದಗೀ ಬಗ್ಯಾಗಿ ಬರತಕ್ಕ 1000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹನುಮಾ ಮೈನರ್ ಇವನ ತಾಯಿ ಲಿಂಗಮ್ಮನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೊಮ್ಮೇಶಿದ್ದೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಮಿ॥ ಅರ್ಜೀ ನಂಬರ್ 849.

ಮೃತಪಟ್ಟ ನೆಲವಂಗಲದ ತಾಲ್ಲೂಕು ಶಿವಗಂಗೆಯಲ್ಲಿಯಿದ್ದ ಶಿದ್ದಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸದರೀ ಶಿವಗಂಗೆಯಲ್ಲಿ ಯಿರುವ ಲಿಂಗಪ್ಪನ ಮಗ ಲಿಂಗಣ್ಣನು ಮೃತಪಟ್ಟ ಸದರೀ ಶಿದ್ದಪ್ಪನಿಗೆ ಅಣ್ಣನಾಗಬೇಕೆಂಬ ಹಕ್ಕುದಾರೀ ಮೇಲೆ ಶಿವಗಂಗೆ ಸ್ಥಳದ ಲಿಂಗಣ್ಣನು ಶಿವಗಂಗೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ಶಿದ್ದಪ್ಪನ ಜಿಂದಗೀ ಬಗ್ಯಾಗಿ ಬರತಕ್ಕ 950 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಿಂಗಣ್ಣನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿದ್ದಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

1887ನೇ ಇಸವಿ ಅರ್ಜೀ ನಂಬರ್ 882.

ಕೋಲಾರ ಡಿಸ್ಟ್ರಿಕ್ಟು ಗೋರೀಬಿದನೂರು ತಾಲ್ಲೂಕು ಮಂಚೇನಹಳ್ಳಿ ಸಮ್ಮತು ವುಪ್ಪಾರಹಳ್ಳಿಯಲ್ಲಿ ಮೃತಪಟ್ಟ ಗುಡ್ಡೇಗೌಡನ ಮಗ ತಿಮ್ಮರಾಯಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳಾದ ಸದರೀ ವುಪ್ಪಾರಹಳ್ಳಿಯಲ್ಲಿಯಿರುವ ತಿಪ್ಪಮ್ಮನು ಮೃತಪಟ್ಟ ಸದರೀ ತಿಮ್ಮರಾಯಗೌಡನಿಗೆ ತಾಯಿ ಆಗಬೇಕೆಂಬಹಕ್ಕುದಾರೀ ಮೇಲೆ ಸದರೀ ವುಪ್ಪಾರಹಳ್ಳೀ ಸ್ಥಳದ ತಿಪ್ಪಮ್ಮನು ಸದರೀ ವುಪ್ಪಾರಹಳ್ಳಿಯಲ್ಲಿ ವಾಸಸ್ಥನಾಗಿ ಮೃತಪಟ್ಟ ತಿಮ್ಮರಾಯಗೌಡನ ಜಿಂದಗೀ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರಳಾದ ತಿಪ್ಪಮ್ಮನ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮರಾಯಗೌಡನ ಆಸ್ತಿಗೆ ಹಕ್ಕುದಾರರಾದವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಮಿಸಲೇನಿಯಸ್‌ನಂಬರ್ 718.

ಮೃತಪಟ್ಟ ಬೆಂಗಳೂರು ದೊಡ್ಡಪ್ಯಾಟೆಯಲ್ಲಿ ಯಿದ್ದ ಕಾಯಿ ಅಂಗಡಿ ದೊಡ್ಡಬಸಪ್ಪನಿಗೆ, ಮುರಡಪ್ಪನೆಂಬುವನು ಮೈನರ್ ಮಗನಾಗಬೇಕೆಂದುನ್ನು ಅವನ ಅಣ್ಣ ಮುದ್ದಬಸಪ್ಪ ನೆಂಬುವನು ತನ್ನನ್ನ ಮೈನರಿಗೆ ಗಾರ್ಡಿಯನ್ನಾಗಿ ಮೊಕರರು ಮಾಡಬೇಕೆಂದುನ್ನು ವಗ್ಯೆರೆ ಸದರೀ ಮುದ್ದಬಸಪ್ಪನು ಅರ್ಜೀ ಕೊಟ್ಟು ಯಿರುತ್ತಾನೆ.

ಸದರೀ ದರಖಾಸ್ತುದಾರನಾದ ಮುದ್ದಬಸಪ್ಪನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು 14ನೇ ತಾರೀಖಿನ ದಿನ ಕೇಳಿ ಸದರೀ ಯವನ ಹೆಸರಿಗೆ ಗಾರ್ಡಿಯನ್ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ, ಆ ಕಾಲದಲ್ಲಿ ಸದರೀ ಸರ್ಟಿಫಿಕೇಟನ್ನ ಕೊಡಿಸಕೂಡದೆಂಬುವದಕ್ಕೆ ತಕರಾರುವುಳ್ಳ ಹಕ್ಕುದಾರರು ಯಾರಾದರೂ ಇದ್ದಲ್ಲಿ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದಿಧೆಯೆಂದು ಯಿದರಿಂದ ತಿಳಿಸಲ್ಪಟ್ಟಿಯಿಧೆ.

1887ನೇ ಇಸವಿ ಸೆಪ್ಟಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿಧೆ.

ಸಿ. ಕ್ರೇನ್,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 21ನೇ ಸೆಪ್ಟಂಬರ್ 1887.

ತಿಪ್ಟೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ತಿಪ್ಟೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನ ವಾಪಸ್ ಪಡಿಯಲೂ ತಪ್ಪಿದರೆ ಸನ್ 1877ನೇ ಇಸವಿ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು:—

ದಸ್ತೈವಜಿನ ನಂಬರ್.	ದಸ್ತೈವಜಿನ ತಾರೀಖು.	ದಸ್ತೈವಜು ರಿಜಿಸ್ಟ್ರೇಷನ ಬಗ್ಗೆ ಹಾಜರ್ಮಾಡಿದ ತಾರೀಖು.	ದಸ್ತೈವಜು ರಿಜಿಸ್ಟ್ರಾದ ತಾರೀಖು.	ದಸ್ತೈವಜನ್ನ ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನ ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತು.
182 / 1885—86	8—5—85	15—8—85	29—8—85	ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ಮಾಕನಹಳ್ಳಿ ಗ್ರಾಮಕ್ಕೆ ಸೇರಿದ ಚಿಕ್ಕಣ್ಣಶೆಟ್ಟಿ ಪಾಳ್ಯದಲ್ಲಿರುವ ಶಿವಾಚಾರದ ಬಳೇ ಪುಟ್ಟೀರಯ್ಯನ ಮಗ ಚನ್ನಬಸಯ್ಯ	ತಿಪ್ಟೂರು ತಾಲ್ಲೂಕು ನೊಣವಿನಕೆರೇಯಲ್ಲಿರುವ ಹೊಸಮನೆ ನಾರಣಸಾಮಯ್ಯಂಗಾರ್	ತನ್ನ ಬಾಬತು ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ವಿಘ್ನಸಂತೆ ಗ್ರಾಮದ ಕೆರೇಹಿಂದೆ ಇರುವ ಅಡಿಕೆ, ತೆಂಗೂ ಮಿಶ್ರವಾದ ಸರ್ವೇನಂಬರ್ 92 ಎಕರೆ 1 ಕುಂಟೆ 19 ಆಕಾರ 15 ರೂಪಾಯಿವುಳ್ಳ ತೋಟ ಆಧಾರದ ವಂದು ನೂರು ರೂಪಾಯಿನ ಕಂತು ಪತ್ರ.

ಪಿ. ಎನ್. ಕೃಷ್ಣಮೂರ್ತಿ, ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 513.

ಮೃತಪಟ್ಟ ಗುಂಡಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಚಪ್ಪ ಮೈನರ್ ಗಾರ್ಡಿಯನ್ ಮತ್ತು ತಾಯಿ ಮಾದಮ್ಮನು ಮೃತಪಟ್ಟ ಸದರೀ ಗುಂಡಪ್ಪನವರಿಗೆ ಮಗನು ಹಿಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕಿಲ್ಲೇ ಸ್ಥಳದ ಮೈನರ್ ಗಾರ್ಡಿಯನ್ ಮಾದಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಗುಂಡಪ್ಪನವರ ಜಿಂದಗೀ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್‌ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಮಾದಮ್ಮನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನವರ ಆಸ್ತಿ

ಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1887ನೇ ಯಿಸವಿ ಸೆಪ್ಟಂಬರು ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜಿ.

ಮೈಸೂರು ಡಿಸ್ಟ್ರಿಕ್ಟು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಮೈಸೂರಲ್ಲಿರುವ ಸವಾರ್ ಇಲಾಖಾ ಪೇಷ್ಕಾರ್ ಮಂಡ್ಯ ಗಿರೀ ಕೃಷ್ಣರಾಯನ ವಿಷಯದಲ್ಲಿ—
ಸ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 142.

ಹುಕ್ಕುಂ.

ಮೇಲ್ಕಂಡ ಕೃಷ್ಣರಾಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಕೃಷ್ಣರಾಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣರಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದ 5ನೇ ಗೋಪಾಲಶೆಟ್ಟಿ ಖುದ್ದು ಹಾಜರು 14ನೇ ಕೃಷ್ಣಾಚಾರೀ ಕಡೇ ಫಸ್ಟ್‌ಗ್ರೇಡ್ ಪ್ಲೀಡರ್ ವೆಂಕೋಬರಾಯರು ಹಾಜರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ವಡೀಸ್ವಾಮಿರಾಯಚಾರಿ 2ನೇ ಸಲಪ ತಂಕುಮಾರೀ ಬ್ಯಾಂಕ್ 3ನೇ ಖಾಸಿಂಸಾಬ್ 4ನೇ ಬುಡ್ಡಾಸಾಬಿ 6ನೇ ಮೈಸೂರು ಬ್ಯಾಂಕ್ 7ನೇ ಭಾಗೀರಥಿಬಾಯಿ 8ನೇ ಬಸಪ್ಪ 9ನೇ ಸೀತಮ್ಮ 10ನೇ ರಂಗಪ್ಪ 11ನೇ ಗೋವಿಂದಭೀಮಾಜಿ 12ನೇ ಮಲ್ಲಶೆಟ್ಟಿ 13ನೇ ಆಲಪ್ಪ 15ನೇ ಶೇಷಗಿರಿರಾವ್ 16ನೇ ದೇವಾಜೀ ಜೋಲಾಜೀ ತಂದೇ ನವಲಾಜಿ 17ನೇ ರಂಗಪ್ಪ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪೇಷ್ಕಾರ್ ಕೃಷ್ಣರಾಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ ಮಾಡಲಾಗಿರುತ್ತೆ ಯೆಂಬು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ 1887ನೇ ಇಸವಿ ಆಗಸ್ಟು 31ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಕೊಡಬೇಕಾದ ಮೊಬಲಗು.			ಯಾವಾಗ ಬಾಕಿ ಸರ್ವವಾಯಿತು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಶಿವಮೊಗ್ಗೇಲಿರುವ ವಡೀಸ್ವಾಮಿರಾಯಚಾರಿ ..	89	3	4	..	ಡಿಕ್ರೀ ಬಾಬತು	
12	ಮೈಸೂರಲ್ಲಿರುವ ಮಲ್ಲಶೆಟ್ಟಿ ..	44	0	8	..	ಡಿಟೋ	
13	ಡಿಟೋ ಕುರ್ದೂಬಾನ ಮಗ ಆಲಪ್ಪ ..	33	8	6	..	ಡಿಟೋ	
14	ಹೊಳೇನರಸೀಪುರದ ಕೃಷ್ಣಾಚಾರಿ ..	212	0	0	..	ಡಿಟೋ	
15	ಶಿವಮೊಗ್ಗೆಯಲ್ಲಿರುವ ತಿಮ್ಮಯ್ಯ ಫಾತಿ ವಾರಸ್‌ದಾರ್ ಶೇಷಗಿರಿರಾವು ..	251	0	0	..	ಡಿಟೋ	
16	ಡಿಟೋ ವ್ಯರು ದೇವಾಜೀ ಜೋಲಾಜಿ ..	350	0	0	..	ಡಿಟೋ	
17	ಡಿಟೋ ರಂಗಪ್ಪ ..	30	0	6	..	ಡಿಟೋ	
		1019	13	0			

ದಿವಾಳೀಯೊದ ಡಿಕ್ರೀ ದೇಣೇದಾರ ಹಾಸನದಲ್ಲಿರುವ ನಾಯಿಕ ಮಹಮ್ಮದ ಯೂಸುಫನ ವಿಷಯದಲ್ಲಿ—

ಸ್ನ 1887ನೇ ಇಸವಿ ದಿವಾಳೀ ಕೇಸ್ ನಂಬರ 169.

ಹುಕ್ಕುಂ.

ಮೇಲ್ಕಂಡ ಮಹಮ್ಮದ ಯೂಸುಫನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜೀದಾರನಾದ ಮಹಮ್ಮದ ಯೂಸಫನ ಪರವಾಗಿ ಫಸ್ಟ ಗ್ರೇಡ್ ಪ್ಲೀಡರ್ ಯಲ್. ನರಸಿಂಗರಾಯರನ್ನು ಮತ್ತು ಸದರೀಯವನ ಲೇಣೇದಾರ್ರಾದವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು; ಯಾರೆಂದರೆ.—1 ಖಾದರಬೀ ಮೈನರಗಾರ್ಡಿಯನ್ ಸೈದಲ್ಲೀಸಾಬಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮಹಮ್ಮದ ಯೂಸುಫನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ, ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1887ನೇ ಇಸವಿ ಆಗಸ್ಟು 31ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಿಶೆ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಡಿಕ್ರೀ ಆದ ತಾರೀಖು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಹಾಸನದಲ್ಲಿರುವ ಖಾದರಬೀ ಮೈನರಗಾರ್ಡಿಯನ್ ಸೈದಲ್ಲೀಸಾಬ್. ..	115 0 0	..	ಡಿಕರೀ ಬಾಬತು.	

'ಸಿ. ಶ್ರೀನಿವಾಸಯ್ಯಂಗಾರ್, ಸಬ್ ಜಡ್ಜ್.

ಗೈರವಿಲಾ ಆದ

ಪ್ರಾಮಿಸರೀ ನೋಟಿನ,

ನಂಬರ್.	ಸ್ಕಿಲ್.	
ಬಿ. 94—66445	ಕ್ರಯ ರೂ. 100	ಹಕ್ಕುದಾರ್—ಮೈಸೂರು ಕೆಂಪನಂಜಮ್ಮಾಂಬಾ ಅಗ್ರಹಾರದಲ್ಲಿರುವ ಯೇಜಂಟ್ ವೆಂಕಟರಾಮಯ್ಯ.

ಗವರ್ನಮೆಂಟ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕಿನೈನಿಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ ಆಫೀಸರಗಳು ಕೊಂಡುಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ ಸೂಪರಿಂಟೆಂಡೆಂಟರ ದೆಸೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು ಕಲಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂ ಡಬ್ಬಿಗೆ ಹನ್ನೆರಡು ಆಣೇ ಹಾಸಲೂ ಕೊಡಬೇಕು.

Mysore Government Press, Bangalore.—1887.

774

ಮೈಸೂರ ಗೆಜೆಟ್.

ನಂ. 41 ಸರ್ಕಾರದಿಂದ ಪ್ರಾಯಿಷ್ ಆದ್ದು. ಸರ್ 1887.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 15, ಸರ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡ್ಸ್ ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 5ನೇ ಸೆಪ್ಟಂಬರ್ 1887.

ನಂ. 107.

ಮೈಸೂರು ಶೀಮೆಯಲ್ಲಿ ಗನಿಗಳ ಕೆಲಸ ನಡಿಸಲಿಕ್ಕೆ ಗುತ್ತಿಗೆಗಳನ್ನ ಕೊಡತಕ್ಕ ಬಗ್ಯೆ ಹಿಂದಿನ ನಿಬಂಧನೆಗಳು ರದ್ದುಪಡಿಶಿ ಈ ಕೆಳಗೆ ಬರುವ ನಿಬಂಧನೆಗಳು ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಟ್ಟಿರುತ್ತವೆ. ಸದರೀ ನಿಬಂಧನೆಗಳು ಈ ಸರಕಾರದಿಂದ ಯಿದಕ್ಕೆ ಮುಂಚೆಯೇ ಕೊಡೋಣಾದ ಗನಿಯ ಗುತ್ತಿಗೆಗಳ ವಿಷಯದಲ್ಲಿ ಲಗಾವಾಗುವದಿಲ್ಲವು.

ಅಜಮಾಯಿಷಿ ಬಗ್ಯೆ ಲೈಸೆನ್ಸ್.

1. ಮೈಸೂರು ಶೀಮೆಯೊಳಗೆ ಗನಿಗಳ ಕೆಲಸ ನಡಿಸುವ ಉದ್ದಿಶ್ಯ ಭೂಮಿಯನ್ನ ನಿವಡಾಯಿಸತಕ್ಕ ಬಗ್ಯೆ ಜಮೀನ್ ಅಜಮಾಯಿಷಿ ಕೆಲಸ ನಡಿಸಲಿಚ್ಛೆಯುಳ್ಳ ಜನರು ದಿವಾನರವರಲ್ಲಿ ದರಖಾಸ್ತು ಮಾಡಿ 500 ರೂಪಾಯಿಗಳ ಫೀಜನ್ನು ಸಲ್ಲಿಸಿದಲ್ಲಿ ಹತ್ತು ಚದರ ಮೈಲ್‌ಗಳಿಗೆ ಅತಿಕ್ರಮಿಸದ ವೊಂದು ಗೊತ್ತಾದ ವಿಸ್ತೀರ್ಣದಲ್ಲಿ ಅಜಮಾಯಿಷೀ ಮಾಡುವದಕ್ಕೆ ಅಪ್ಪಣೇ ಕೊಡುವ ಲೈಸೆನ್ಸನ್ನ ಪಡಿ

ಯಬಹುದು; ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನಲ್ಲಿ ನಮೂದಾದ ವಿಸ್ತೀರ್ಣದೊಳಗೆ ಗನೀ ಕೆಲಸ ನಡಿಸುವ ಉದ್ದಿಶ್ಯ, ವೊಂದು ಚದರ ಮೈಲಿ ಭೂಮಿಯನ್ನ, ಲೈಸೆನ್ಸ್ ತಾರೀಖು ಲಾಗಾಯತು ವೊಂದು ವರುಷದ ವಳಗಾಗಿ ನಿವಡಾಯಿಸಿಕೊಳ್ಳಲಿಕ್ಕೆ ಅರ್ಹನಾಗಿರುವನು ಭೂಮಿಯನ್ನ ನಿವಡಾಯಿಸಿಕೊಂಡ ನಂತರ ಲೈಸೆನ್ಸ್‌ದಾರನು, ನಿವಡವಾದ ವಿಸ್ತೀರ್ಣಕ್ಕಾಗಿ ಯಿದರ ಕೆಳಗೆ ನಮೂದಾಗುವ ನಿಬಂಧನೆಗಳಿಗೂ ಷರತ್ತುಗಳಿಗೂ ಬಳಟ್ಟು ಗುತ್ತಿಗೆಯನ್ನ ಪಡಿಯಬಹುದು. ಅಜಮಾಯಿಷೀ ಬಗ್ಯೆ ಕೊಡಲ್ಪಟ್ಟ ಲೈಸೆನ್ಸ್ ಜಾರೀಲಿರುವ ಕಾಲದಲ್ಲೂ ಮತ್ತು ಅದರಲ್ಲಿ ನಮೂದಿಸಿರುವ ವಿಸ್ತೀರ್ಣದೊಳಗೂ, ಗನಿಗಳ ಕೆಲಸದ ಬಗ್ಯೆ ಗುತ್ತಿಗೆಯಾಗಲಿ; ಅಜಮಾಯಿಷೀ ಬಗ್ಯೆ ಲೈಸೆನ್ಸಾಗಲಿ, ಇತರ ಯಾವ ಮನುಷ್ಯನಿಗೂ ಕೊಡಲ್ಪಡತಕ್ಕದ್ದಲ್ಲವು. ಆದರೆ ಯಾವದಾದರೊಂದು ಪ್ರದೇಶಕ್ಕಾಗಿ ಅಜಮಾಯಿಷೀ ಲೈಸೆನ್ಸ್ ಕೊಡಲಿಕ್ಕೆ ತಿರಸ್ಕರಿಸುವ ಅಧಿಕಾರವನ್ನ ಗವರ್ನಮೆಂಟಿನವರು ಉಳಿಸಿಕೊಂಡಿರುತ್ತಾರೆ.

ಗನಿಗಳಬಗ್ಯೆ ಗುತ್ತಿಗೆ—ಪ್ರತಿ ಗುತ್ತಿಗೆಯ ವಿಸ್ತೀರ್ಣ.

II. ಗನಿಗಳ ಪ್ರತಿಗುತ್ತಿಗೆಯೂ ವೊಂದು ಚದರ ಮೈಲಿಯ ವಿಸ್ತೀರ್ಣಕ್ಕೆ ಅತಿಕ್ರಮಿಸದ ವೊಂದು ತಾಕಿಗೆ ಕ್ಲುಪ್ತವಾಗಿಯಿರತಕ್ಕದ್ದು. ಅಂಥಾ ತಾಕು ಸಾಧಾರಣವಾಗಿ ಪ್ರತಿ ಪಾರ್ಶ್ವವೂ ಅರ್ಧಮೈಲಿಯ ವೃದ್ಧಳತೆಗಿಂತಲೂ ಕಡಿಮೆಯಾಗಿ ಯಿಲ್ಲದೇ ಯಿರುವಂಥಾ ಪ್ಯಾರಲ್ಲೆಲೊಗ್ರಾಂ ಅಂದರೆ ಸಮಾನಾಂತರ ಕ್ಷೇತ್ರದಂತೆ ಯಿರತಕ್ಕದ್ದು. ಪ್ರೊಬ್ಬ ದರಖಾಸ್ತುದಾರನು, ವೊಂದು ತಾಕಿಗಿಂತಾ ಹೆಚ್ಚಾದ ತಾಕುಗಳಿಗಾಗಿ ದರಖಾಸ್ತುಗಳು ಮಾಡಿದಲ್ಲಿ ಇತರ ದರಖಾಸ್ತುದಾರರ್‍ಯಾರೂ ಯಿಲ್ಲದೇ ಯಿದ್ದು, ಮತ್ಯಾವ ತಕರಾರೂ ಯಿಲ್ಲದೇ, ಯಿದು ಶಿವಾಯಿ ಅಂಥಾ ದರಖಾಸ್ತು ಯಥಾರ್ಥವಾಗಿ ಗನಿಗಳ ಕೆಲಸ ನಡಿಸುವದಕ್ಕಾಗಿಯೇ ಹೊರ್ತು ಗನಿಗಳಬಗ್ಯೆ ಭೂಮಿಯ ವ್ಯಾಪಾರದ ಉದ್ದಿಶ್ಯವಾಗಿ ಅಲ್ಲವೆಂದು ಗವರ್ನಮೆಂಟಿನವರಿಗೆ ತೃಪ್ತಿಕರವಾಗಿ ತಿಳಿಯಬಂದರೇನೇ ಅಂಥಾ ದರಖಾಸ್ತುಗಳು ಆಲೋಚನೆಯಲ್ಲಿ ತರಲ್ಪಡುವವು.

ಗುತ್ತಿಗೆ ಬಗ್ಯೆ ದರಖಾಸ್ತು.

III. (1.) 1ನೇ ನಿಬಂಧನೆ ಮೇರಿಗೆ ಅಜಮಾಯಿಷಿ ಬಗ್ಯೆ ಲೈಸೆನ್ಸ್ ಪಡೆದಂಥಾ ಮನುಷ್ಯನಿಂದಲಾಗಲಿ, ಅಥವಾ ಇತರ ಯಾವ ಮನುಷ್ಯನಿಂದಲಾಗಲಿ, ಗನಿಯ ಗುತ್ತಿಗೆ ಬಗ್ಯೆ ಮಾಡಲ್ಪಡುವ ಪ್ರತಿ ದರಖಾಸ್ತೂ ದಿವಾನರವರ ಚೀಫ್ ಸಿಕ್ರೇಟೇರಿಯವರಿಗೆ ರೂಬರೂಬಾಗಲಿ, ಅಥವಾ ಅವರ ಹೆಸರಿಗೆ ಪೋಲ್‌ವಿಲಾಸದ ಮೂಲಕವಾಗಲಿ ಕೊಡಲ್ಪಡತಕ್ಕದ್ದು. ಮತ್ತು ದರಖಾಸ್ತು ಮಾಡಲ್ಪಡುವಂಥಾ ಪ್ರತಿ ಚದರ ಮೈಲು ಯಾ ಅದರ ಭಿನ್ನಾಂಶಕ್ಕಾಗಿ ದರಖಾಸ್ತುದಾರನು ಕರಾರ್ ಮೇರಿಗೆ ಸರಿಯಾಗಿ ನಡೆದು ಕೊಳ್ಳತಕ್ಕ ಉದಿಶ್ಯ ಠೇವಣೀ ಬಗ್ಯೆ 1000 ರೂಪಾಯಿಗಳನ್ನ ಹಾಜರ್‍ಮಾಡತಕ್ಕದ್ದು. ಮತ್ತು ದರಖಾಸ್ತುದಾರನು ಗನಿಗಳ ಕೆಲಸ ನಡಿಸಲಿಕ್ಕೆ ಬೇಕಾಗುವ ಮೂಲಧನವನ್ನ ಯಾವ ರೀತಿ ವೊದಗಿಸಿಕೊಳ್ಳಲು ಯತ್ನಿಸಿರುತ್ತಾನೋ ಆ ಸಂಗತಿಯೂ ದರಖಾಸ್ತಿನಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

(2.) ಪ್ರತಿ ದರಖಾಸ್ತಿನೊಂದಿಗೂ, ಟೊಪೊಗ್ರಾಫಿಕಲ್ ರೆವಿನ್ಯು ಸರ್ವೆ ಯಾ ಇತರ ಸರಕಾರ್ ಮ್ಯಾಪ್ ಯಾನೆ ನಕ್ಷೆಯ ಎಕ್ಸ್‌ಟ್ರಾಕ್ಟ್ ಸಹ ಶೇರಿರತಕ್ಕದ್ದು, ಮತ್ತು ಅಂಥಾ ಎಕ್ಸ್‌ಟ್ರಾಕ್ಟಿನೊಳಗೆ, ದರಖಾಸ್ತು ಮಾಡಲ್ಪಟ್ಟ ಭೂಮಿಯು ಗುರ್ತುಮಾಡಲ್ಪಟ್ಟು ಆ ಭೂಮಿಯ ಸುತ್ತಲೂ ಇರುವ ಗ್ರಾಮಗಳ ಹೆಸರುಗಳು ಸಹ ನಮೂದಿಸಿರತಕ್ಕದ್ದು.

(3.) ಭೂಮಿಯ ಮೋಜನೀ ಬಗ್ಯೆ ಗವರ್ನಮೆಂಟಿನವರು ಕೊಡುವ ಅಪ್ಪಣೆಯನ್ನ ದರಖಾಖಾಸ್ತುದಾರನಿಗೆ ತಿಳಿಸಲ್ಪಟ್ಟ ಲಾಗಾಯತು ಹದಿನೈದುದಿವಸಗಳೊಳಗಾಗಿ, ಆ ದರಖಾಸ್ತುದಾರನು ತಾನು ದರಖಾಸ್ತು ಮಾಡಿದ ಭೂಮಿಯ ತಾಕಿನ ಸರಹದ್ದುಗಳನ್ನ ಸರ್ವೆ ಆಫಿಸರಿಗೂ ವ ಸ್ಥಳದ ರೆವಿನ್ಯೂ ಆಫಿಸರಿಗೂ ಸಹ ತೋರಿಸತಕ್ಕದ್ದು.

(4.) ಸರ್ವೆ ವ ರೆವಿನ್ಯೂ ಆಫಿಸರುಗಳಿಂದ ಮೋಜಣೀ ವ ಅವಶ್ಯಕವಾದ ವಿಚಾರಣೆಗಳು ಪೂರೈಸಿದ ನಂತರ ಭೂಮಿಯ ವಿಸ್ತೀರ್ಣ ವ ಕಂದಾಯ ಮುಂತಾದ ಪೂರಾ ತಪಸೀಲೂ ವ ಗುತ್ತಿಗೆ ಕರಾರಿನ ಅಚ್ಚುಹಾಕಿದ ನಮೂನೆಗಳೂ, ಮತ್ತು ಮೋಜಣೀ ವ ಹದ್ದು ಗುರ್ತು ಮಾಡಿದ ಲಾಗವಡಿಗಾಗಿ ವೊಂದು ಬಿಲ್ಲು ಸಹ ದರಖಾಸ್ತುದಾರನಿಗೆ ಕಳುಹಿಸಲ್ಪಡುವದು; ದರಖಾಸ್ತುದಾರನು, ಇವುಗಳು ತನಿಗೆ ತಲಪಿದ ವೊಂದು ತಿಂಗಳವಳಗಾಗಿ ಗುತ್ತಿಗೆ ಕರಾರಿನ ಯರಡು ಪ್ರತಿಗಳನ್ನ ತಾನೇ ಬರೆದು ಕ್ರಮವಾಗಿ ಸ್ಟಾಂಪು ಹಾಕಿಸಿ ದಿವಾನರವರ ರುಜು ಬಗ್ಯೆ ಹಾಜರ್‍ಮಾಡಿ, ಮೋಜಣೀ ವ ಹದ್ದು ಗುರ್ತು ಮಾಡಿದ ಲಾಗವಡ್ ಮೊಬಲಗ್ ಸಹ ಪಾವತೀ ಮಾಡತಕ್ಕದ್ದು.

(5.) ಈ ನಿಬಂಧನೆಯ 3 ವ 4ನೇ ಕಲಮುಗಳನ್ನನುಸರಿಸಿ ನಡೆದುಕೊಳ್ಳಲಿಕ್ಕೆ ತಪ್ಪಿದಲ್ಲಿ, ದರಖಾಸ್ತು ರದ್ದಾಗುವದಲ್ಲದೆ ಅದರೊಂದಿಗೆ ಹಾಜರ್‍ಮಾಡಲ್ಪಟ್ಟಿದ್ದ ಠೇವಣೀ ಮೊಬಲಗು ದಂಡವಾಗಿ ಸರಕ್ಕಾರಕ್ಕೆ ದಾಖಲ್‍ಮಾಡಲ್ಪಡುವದು.

(6.) ಗುತ್ತಿಗೆ ಕರಾರು ದಿವಾನರವರಿಂದ ರುಜುಮಾಡಲ್ಪಟ್ಟ ಹೊರ್ತು, ದರಖಾಸ್ತಾದ ಭೂಮಿಗಾಗಿ ದರಖಾಸ್ತುದಾರನ ಬಾಧ್ಯತೆಯು ಪೂರ್ತಿಯಾಗುವದಿಲ್ಲವು.

(7.) ಗುತ್ತಿಗೆ ಕರಾರು ಹುಟ್ಟಿದ ತರುವಾಯ ಹಾಲಿ ಜಾರೀಲಿರುವ ಕಾನೂನ್ ಅನುಸರಿಸಿ ಭರವಸೆಗಾಗಿ ರಿಜಿಸ್ಟರ್ ಮಾಡಲ್ಪಟ್ಟು ಅದರ ಯರಡನೇ ಪ್ರತಿಯು ಮೈಸೂರು ಗವರ್ನ್ಮೆಂಟಿನಲ್ಲಿ ಅಮಾನತ್ ಇಡಲ್ಪಡತಕ್ಕದ್ದು.

(8.) ಯಾವ ದರಖಾಸ್ತನ್ನಾಗಲಿ, ಕಾರಣ ತಿಳಿಸದೇನೇ, ತಿರಸ್ಕರಿಸಲಿಕ್ಕೆ ಗವರ್ನಮೆಂಟಿನವರಿಗೆ ಯಾವಾಗಲೂ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ.

ಗುತ್ತಿಗೆಯ ಷರತ್ತುಗಳು.

IV. ಗನಿಗಳ ಕೆಲಸ ನಡಿಸಲಿಕ್ಕೆ, ಈ ಕೆಳಗೆ ಬರುವ ಷರತ್ತುಗಳಿಗೊಳಪಟ್ಟು, ಗುತ್ತಿಗೆಗಳು ಕೊಡಲ್ಪಡುವವು;—

(1.) ಪ್ರತಿ ಗುತ್ತಿಗೆಯ ಮಾಯಿದೆಯು 30 ವರುಷಗಳಿಗೆ ಕ್ಲಿಪ್ತವಾಗಿರುವದು, ಆ ಮಾಯಿದೆ ಪೂರೈಸುವ ಕಾಲದಲ್ಲಿ ಸರಕಾರದಿಂದ ಆಬಗ್ಯಾಗಿ ವಿಧಿಸಲ್ಪಡುವಂಥಾ ಷರತ್ತುಗಳ ಮೇಲೆ ಗುತ್ತಿಗೆ ಕರಾರು ಹೊಸದಾಗಿ ಹುಟ್ಟುವದಕ್ಕೊಳಪಟ್ಟಿರತಕ್ಕದ್ದು.

(2.) ನಿವಡಾಯಿಸಲ್ಪಟ್ಟ ಯಾವ ತಾಕು ಗುತ್ತಿಗ್ಯೆ ಕೊಡಲ್ಪಡುತ್ತೋ ಅಂಥಾ ತಾಕಿನೊಳಗೆ ಹಿಡುವಳೀಲಿರುವ ಸರಕಾರಿ ಜಮೀನಾಗಲಿ, ಇನಾಂಜಮೀನಾಗಲಿ ಶೇರಿಯಿದ್ದಲ್ಲಿ, ಗುತ್ತಿಗೆದಾರನು ಅಂತಾ ಜಮೀನಿನ ಮೇಲ್ಭಾಗದ ಹಕ್ಕುಗಳನ್ನ ಜಮೀನ್ ಮಾಲೀಕರಿಂದಾ ಖರೀದಿಗೆ ತೆಗದುಕೊಳ್ಳತಕ್ಕದ್ದು, ಅಥವಾ ಅಂಥಾ ಜಮೀನ್ನಲ್ಲಿ ಪ್ರವೇಶಿಸುವದಕ್ಕಾಗಲಿ, ಗನಿಗಳ ಕೆಲಸ ನಡಿಸುವದಕ್ಕಾಗಲಿ ಅವಶ್ಯಕವಾದ ಇತರ ಏರ್ಪಾಡುಗಳನ್ನ ಆ ಮಾಲೀಕರುಗಳೊಂದಿಗೆ ಮಾಡಿಕೊಳ್ಳತಕ್ಕದ್ದು.

(3.) ಗುತ್ತಿಗೆದಾರನು, ಹಿಡುವಳೀಲಿರುವ ಯಾ ಬಂಜರಿರುವ ಸಾಗುವಳೀ ಲಾಯಖ್ ಯಲ್ಲ ಜಮೀನ್‌ಗಳ ಮೇಲೆ ಹಾಲೀ ದಾಖಲಾಗಿರುವ ಯಾ ಯಿನ್ನು ಮೇಲೆ ಸರ್ವೆ ಸೆಟಲ್‌ಮೆಂಟ್ ಇಲಾಖೆಯವರಿಂದ ಏರ್ಪಾಡಾಗುವ ರೆವಿನ್ಯೂ ಕಂದಾಯವನ್ನೂ, ಇನಾಮತೀ ಜಮೀನಿದ್ದಲ್ಲಿ ಅದರ ಜೋಡಿ ಯಾ ಕ್ವಿಟ್‌ರೆಂಟ್ ಮೊಬಲಗನ್ನೂ ಗುತ್ತಿಗೆ ಭೂಮಿಯ ಸರಹದ್ದಿನೊಳಗೆ ಶೇರಿರುವ ವಿಶಿಷ್ಟ ಸಾಗುವಳೀ ನಾಲಾಯಖ್ ಜಮೀನಿನ ಮೇಲೆ ಯಕರೆ ವೊಂದಕ್ಕೆ ಯಂಟು ಆಣೆಯ ಕಂದಾಯವನ್ನೂ ಮತ್ತು ಆ ತಾಕಿನೊಳಗೆ ಅಡಗಿರುವ ನಿವೇಶನಗಳು ಯಾ ಜಮೀನಿಗಳಿಗಾಗಿ, ಅಥವಾ ಕಟ್ಟಡಗಳು ಯಾ ಇತರ ಕಾಮಗಾರಿಗಳಿಗಾಗಿ ತೆರಬೇಕಾದ ಯಲ್ಲಾ ಲೋಕಲ್ ತೆರಿಗೆ, ವ ಸುಂಕ ಯಾ ಇತರ ಬಾಬುಗಳ ಮೊಬಲಗುಗಳನ್ನೆಲ್ಲಾ, ಸಾಲೇಸಾಲ್ ಸರಕಾರಕ್ಕೆ ತೆರತಕ್ಕದ್ದು.

(4.) ವಿಶಿಷ್ಟ ಚಿನ್ನ, ಲೋಹ ಸಂಬಂಧವಾದ ಅದುರು, ಕಲ್ಲಿದ್ದಲು ವ ವ್ಯಾಪರಕ್ಕೆ ಅರ್ಹವಾದ ಇತರ ವಸ್ತುಗಳು, ಇವುಗಳನ್ನ ತಯಾರು ಮಾಡೋಣ ಪುಡಿ ಮಾಡೋಣ ಮತ್ತು ವ್ಯಾಪಾರಕ್ಕೆ ಲಾಯಖ್ ಮಾಡೋಣ, ಇವುಗಳಿಂದ ಆಗುವ ವೊಟ್ಟು ಹುಟ್ಟುವಳೀ ಮೇಲೆ ಶೇಕಡಾ 5ರ ಮೇರಿಗೂ, ಮತ್ತು ನಿವಡಾಯಿಸಲ್ಪಟ್ಟ ತಾಕಿನೊಳಗೆ ದೊರಕುವ ತವಮಾಂ ರತ್ನ ಪುಡಿ ಮುಂತಾದ ಬೆಲೆಯುಳ್ಳ ಕಲ್ಲುಗಳ ಖರೀದಿ ಮೊಬಲಗಿನ ಮೇಲೆ ಯಾವ ವಜಾ ಬಾಬುಗಳನ್ನೂ ಲೆಖ್ಖಕ್ಕೆ ಶೇರಿಸದೇನೇ ಶೇಕಡಾ 10ರ ಮೇರಿಗೂ, ಆಗುವ ರಾಜಪಾಲನ್ನ ಗುತ್ತಿಗೆದಾರನು ಪಾವತೀಮಾಡತಕ್ಕದ್ದು.

(5.) ಗುತ್ತಿಗೆ ಮಾಡಿಕೊಂಡ ಯರಡು ವರುಷಗಳೊಳಗಾಗಿ, ಗುತ್ತಿಗೇದಾರನಾಗಲಿ ಯಾ ಅವನ ವರ್ಗದಾರರಾಗಲಿ, ಚದರ ಮೈಲ್ ವೊಂದಕ್ಕೆ 5000 ಪವ್‌ಗಳಿಗೆ ಕಡಿಮೇ ಯಿಲ್ಲದಂತೆ ಜಮಾವಣೀಯಾದ ಆಡಳಿತದ ಮೂಲಧನದೊಂದಿಗೆ ವೊಂದು ಕಂಪೆನಿಯಾಗಿ ಏರ್ಪಾಡು ಮಾಡಲಿಕ್ಕೆ ಅಸಮರ್ಥರಾಗುವ ಪಕ್ಷದಲ್ಲಿ ಆ ಗುತ್ತಿಗೆ ರದ್ದಾಗತಕ್ಕದ್ದು.

(6.) ಗುತ್ತಿಗೇದಾರನು ಗುತ್ತಿಗೆ ಮಾಯಿದೇ ಯಲ್ಲ್ಯಾವತ್ತು ಅಪರಿಹಾರ್ಯವಾದ ಆಕಸ್ಮಿಕದ ದೆಸೆಯಿಂದ ತಪ್ಪಿದರೇ ಹೊರ್ತು ಅವಿಚ್ಛಿನ್ನವಾಗಿ ಭಂಗಾರ ಮುಂತಾದವುಗಳನ್ನ ಶೋಧನೆ ಮಾಡೋಣ, ವ ಗನೀ ಕೆಲಸ ನಡಿಸುವಣ ಯಿವುಗಳನ್ನ ಚೆನ್ನಾಗಿ ಸಂಪೂರ್ಣ ಸಾಧ್ಯವಾಗುವ ರೀತ್ಯ ನಡಿಸತಕ್ಕದ್ದು. ಪರಂತು ಗುತ್ತಿಗೆಯ ಪ್ರಥಮತಃ ಯರಡು ವರುಷಗಳು ಪೂರೈಸಿದ ತರುವಾಯು ಗನಿಯ ಕೆಲಸಗಳ ವಿಷಯವಾಗಿ ಯಾಗಲಿ ಯಾ ಯಾವ ವರುಷಗಳ ಬಾಬತು ಪರ್ಯವಸಾನದ ವಿಷಯವಾಗಿಯಾಗಲಿ, ಸರಕಾರದವರಿಗೆ ತೃಪ್ತಿ ವುಂಟಾಗದ ಪಕ್ಷದಲ್ಲಿ ರಾಜಪಾಲಿಗೆ ಬದಲಾಗಿ ಯಕರೆ ವೊಂದಕ್ಕೆ 5 ರೂಪಾಯಿಯ ಮೇರಿಗೆ ಕಂದಾಯ ವಸೂಲ್ ಮಾಡುವ ಸ್ವಾತಂತ್ರ್ಯ ಸರಕಾರದವರು ಉಳಿಸಿಕೊಂಡಿರುತ್ತಾರೆ.

(7.) ಗುತ್ತಿಗೇದಾರನು, ಗನಿಗಳ ವ ಕಾಮಗಾರಿಗಳ ಕ್ರಮವಾದ ಲೆಖ್ಖಗಳನ್ನೂ ಪ್ಲಾನ್‌ಗಳನ್ನೂ ವ ನಕಶೇಗಳನ್ನೂ ಯಿಡತಕ್ಕದ್ದು. ಯಿವುಗಳು ಗವರ್ನಮೆಂಟ್ ಆಫೀಸರುಗಳ ತನಿಖೀಗೆ ವೊಳಗಾಗಿರತಕ್ಕದ್ದು.

(8.) ಗವರ್ನಮೆಂಟ್ ಆಫೀಸರುಗಳು ಗನೀಗಳನ್ನ ನೋಡಲಿಕ್ಕೂ ವ ತನಿಖೀ ಮಾಡಲಿಕ್ಕೂ ಅಧಿಕಾರ ಹೊಂದಿರುತ್ತಾರೆ.

(9.) ಗುತ್ತಿಗೇದಾರನು ಯಲ್ಲ ಹದ್ದು ಗುರ್ತುಗಳನ್ನೂ ದುರಸ್ತಿನಲ್ಲಿ ಯಿಟ್ಟುಕೊಂಡಿರತಕ್ಕದ್ದು, ಪ್ರತಿ ಗನಿಯ ಕಾಲುವೆ ಯಾ ಹಳ್ಳದ ಸುತ್ತಲೂ ಯಾ ಮೇಲ್‌ಕಾಮಗಾರಿಯ ಸುತ್ತಲೂ ಬೇಲಿ ಹಾಕತಕ್ಕದ್ದು.

(10.) ಸರಕಾರದವರು ಆಗಿಂದಾಗ್ಯೆ ವಿಧಿಸುವಂಥಾ ಆರೋಗ್ಯ ಸಂಬಂಧವಾದ ನಿಬಂಧನೆಗಳನ್ನು ಗುತ್ತಿಗೇದಾರನು ಕ್ರಮವಾಗಿ ಜಾರೀಲ್ಲಿ ತರತಕ್ಕದ್ದು.

(11.) ಗುತ್ತಿಗೇದಾರನು, ಅಪ್ಪಣೆ ವಿನಾ ಯಾವ ಗನಿಯನ್ನೂ ಪುನಃಪೂರ್ತಿಯಾಗಿ ಬಂದ ಮಾಡಕೂಡದು, ಭರ್ತೀಮಾಡಕೂಡದು ಯಾ ಮುಚ್ಚಲೂ ಕೂಡದು, ಮತ್ತು ಜಮೀನ್ಮೇಲೆ ಯಿರುವ ಯಾವ ರೋಡುಗಳಿಗಾಗಲಿ ಕಾಲ್ದಾರಿಗಳಿಗಾಗಲೀ ಯಾ ಅಡ್ಡದಾರೀಗಾಗಲಿ ಅತಂಕಪಡಿಸ ಕೂಡದು.

(12.) ಸರಕಾರದವರು, ಕಂದಾಯ, ರಾಜಪಾಲು, ಬಾಡಿಗೆ ವ ಇ॰ ರ ಬಾಬುಗಳ ಬಾಕೀಯನ್ನು ಗುತ್ತಿಗೇದಾರನ ಜಿಂದಗಿ ಜಪ್ತು ವ ಹರಾಜು ಮೂಲಕ ವಸೂಲ್ ಮಾಡಲಿಕ್ಕೆ ಅಧಿಕಾರವುಳ್ಳವರಾಗಿರುತ್ತಾರೆ. ಮತ್ತು ಗುತ್ತಿಗೇದಾರನು ಮಾಡಿಕೊಂಡ ಕರಾರುಗಳ ಪೈಕೀ ಯಾವದನ್ನಾಗಲಿ ತಪ್ಪಿದಲ್ಲಿ ಯಾ ಯಾವ ಜಾತಿಯ ಜನಗಳಿಗಾಗಲಿ ಸರಕಾರ ಉದ್ಯೋಗಸ್ತರಿಗಾಗಲಿ ತೊಂದರೆ ಯಾ ಆತಂಕ ಪಡಿಸಿದಲ್ಲಿ ಗವರ್ನಮೆಂಟಿನವರು ಆ ಬಗ್ಯೆ ಕ್ರಮವಾಗಿ ನೋಟೀಸ್ ಕೊಟ್ಟು ಆರು ತಿಂಗಳ ವಳಗಾಗಿ ತೃಪ್ತಿಕರವಾದ ಸಮಜಾಯಿಷೀ ಬಾರದೇ ಯಿದ್ದಲ್ಲಿ ಗವರ್ನಮೆಂಟಿನವರು ಆ ಗುತ್ತಿಗೆಯನ್ನು ರದ್ದುಪಡಿಸ ಬಹುದು.

(13.) 30 ವರುಷಗಳ ವಾಯಿದೆಯ ಅಖ್ಯೈರಿನಲ್ಲಿ ಗವರ್ನಮೆಂಟಿನವರು ನಿಷ್ಕರ್ಷೆ ಮಾಡುವ ಷರತ್ತುಗಳ ಮೇರೆಗೆ ಗುತ್ತಿಗೆಯನ್ನು ಹೊಸದಾಗಿ ಮಾಡಿಕೊಳ್ಳಲಿಕ್ಕೆ ಗುತ್ತಿಗೆದಾರನು ಅಪೇಕ್ಷಿಸದ ಪಕ್ಷದಲ್ಲಿ, ಅವನು, ಭೂಮಿಯನ್ನೂ ಗನೀ ಕಾಲ್ವೆಗಳನ್ನೂ ವ ಇತರ ನಿವೇಶನಗಳನ್ನೂ; ದುರಸ್ತು ವ ಕೆಲಸಕ್ಕೆ ಲಾಯಖಾದ ಸ್ಥಿತಿಯಲ್ಲಿ ಗನೀ ಕಾಲ್ವೆಗಳನ್ನೂ ವ ಇತರ ನಿವೇಶನಗಳನ್ನೂ, ಮತ್ತು ಖುಕ್ಕುಗಳು, ಪ್ಲಾನ್ಗಳು ವ ನಕ್ಷೆಗಳು, ಇದು ಶಿವಾಯಿ ಅಂತಾ ಜಮೀನ್ಗಳ ಮೇಲೆ ಇರುವ ಕಟ್ಟಡಗಳು ಯಾ ಇತರ ಸ್ಥಿತಿ ಇವುಗಳ ವಿಷಯದಲ್ಲಿ ಯಾವ ಹಕ್ಕುದಾರಿಯೂ ಇಲ್ಲದೇ ಸರ್ಕಾರಕ್ಕೆ ವೊಪ್ಪಿಸಿ ಬಿಡತಕ್ಕದ್ದು. ಕಟ್ಟಡಗಳನ್ನೂ, ಅಜಬಾಬನ್ನೂ ವ ಯಂತ್ರ ಸಾಧನ ಮುಂತಾದ ಸಾಮಾನುಗಳನ್ನೂ ಗವರ್ನಮೆಂಟಿನವರು ವಾಜಬೀ ಅಂದಾಜಿನ ಮೇಲೆ ಖರೀದಿಗೆ ತೆಗದುಕೊಳ್ಳಲಿಕ್ಕೆ ಆತನು ಅವಕಾಶ ಕೊಡತಕ್ಕದ್ದು.

(14.) (a) ಗುತ್ತಿಗೆಯ ದೆಶೆಯಿಂದ ಕೊಡೋಣಾಗುವ ಹಕ್ಕು ಬಾಧ್ಯತೆ, ವ ಸಂಬಂಧ ಇವುಗಳ ಪ್ರತಿ ವರ್ಗವೂ ಅಂಥಾ ವರ್ಗ ಗುತ್ತಿಗೇದಾರರುಗಳಿಂದಲಾಗಲಿ; ಯಾ ವರ್ಗ ಮೂಲಕ ಅವರುಗಳ ಪರಂಪರೆಯವರಿಂದ ಮಾಡಲ್ಪಡಲಿ, ಪರಂತು ಅಂತವರು ಪರಂಪರೆಯಾಗಿ ಯಷ್ಟುದೂರದವರಾಗಲಿ, ಈ ಕೆಳಗೆ ಕಲಂವಾರ್ ಮಾಡಿರುವ ಮೇರೆಗೆ ಜಾರುವಾನೆಯನ್ನು ಸರಕಾರಕ್ಕೆ ತೆರಲಿಕ್ಕೆ ಗುರಿಯಾಗಿರತಕ್ಕದ್ದು. ಅದು ಹ್ಯಾಗಂದರೆ ಮೊದಲನೇ ವರ್ಗಕ್ಕಾಗಿ ಅದರ ಖರೀದಿ ಮೊಬಲಗಿನ ದಶವಾಂಶ ಅಂದರೆ 1—10ರಭಾಗದ ಮೊಬಲಗು ಜುರ್ಮಾನೆ; ಆ ತರುವಾಯದ ಪ್ರತಿ ವರ್ಗಕ್ಕೂ ಅದರ ಹಿಂದಿನ ವರ್ಗದ ಖರೀದಿ ಮೊಬಲಗಿಗೆ ಜಿಆ ಜಾಸ್ತಿ ಯೇನಾದರು ಇದ್ದಲ್ಲಿ ಅಂತಾ ಜಾಸ್ತೀ ಮೊಬಲಗಿನ ದಶವಾಂಶವನ್ನು ಜುರುವಾನೆ ತೆರತಕ್ಕದ್ದು.

(b) ಮೇಲೆ ಹೇಳೋಣಾದ ಜುರ್ಮಾನೆಯ ಲೆಖ್ಖಾಚಾರ ಮಾಡುವ ವೃದ್ದಿಶ್ಯ, ಫೊಂದು ಕಂಪೆನಿಯ ಷೇರ್‌ಗಳ (ಹಿಸ್ಸೆ) ಅಂತಾ ಮೊಬಲಗಿಗೆ ಪೂರ್ತಿಯಾಗಿಯಾಗಲಿ ಯಾ ಅದರಲ್ಲೊಂದು ಭಾಗವಾಗಿಯಾಗಲಿ ಇರುವ ಪಕ್ಷಕ್ಕೆ ಅಂತಾ ಷೇರುಗಳು ಲೆಖ್ಖಕ್ಕೋಸ್ಕರ ಸರ್ಕಾರದವರ ಯಿಷ್ಟಾನುಸಾರ ಅವುಗಳ ಕ್ಲಿಪ್ತವಾದ ಮೌಲ್ಯಕ್ಕೆ ಸಮನಾದ ಮೊತ್ತದಂತೆ ಎಣಿಸಲ್ಪಡಬಹುದು.

(c) ತರುವಾಯ ಮಾಡಲ್ಪಡುವ ವರ್ಗದ ಖರೀದಿ ಮೊಬಲಗಿನ ಮೇಲೆ ವಸೂಲಾಗಬೇಕಾದ ಜುರ್ಮಾನೆಯ ಲೆಖ್ಖಾಚಾರಮಾಡುವ ವೃದ್ದಿಶ್ಯ ಹಿಂದಿನ ವರ್ಗದ ಖರೀದಿ ಮೊಬಲಗು ವಜಾ ಮಾಡಲ್ಪಡಬೇಕಾದಾಗ ಆ ಹಿಂದಿನ ವರ್ಗದ ತಾತ್ಕಾಲಿಕ ಮೌಲ್ಯವನ್ನು ನಿಷ್ಕರ್ಷೆ ಮಾಡುವ ಅಧಿಕಾರ ಯಾವಾಗಲೂ ಗವರ್ನಮೆಂಟಿನವರಿಗೆ ಇರತಕ್ಕದ್ದು.

ಉದಾಹರಣೆ.

ಗುತ್ತಿಗೇದಾರರು ತಮ್ಮ ಗುತ್ತಿಗೆಯನ್ನು A ಯೆಂಬುವನಿಗೆ 100 ರೂಪಾಯಿಗಳ ಖರೀದಿಗಾಗಿ ವರ್ಗ ಮಾಡಿದರೆ ಆಗ ತೆರತಕ್ಕ ಜುರ್ಮಾನೆ ಮೊಬಲಗು ರೂಪಾಯಿ 10; A ಯೆಂಬುವನು ತರುವಾಯ ಅದೇ ಗುತ್ತಿಗೆಯನ್ನು B ಯೆಂಬುವನಿಗೆ 1000 ರೂಪಾಯಿಗಳ ಖರೀದಿಗಾಗಿ ವರ್ಗ ಮಾಡಿದರೆ, ಆಗ್ಯೆ1000 ರೂಪಾಯಿಯಲ್ಲಿ 100 ರೂಪಾಯಿ ವಜಾ ಹೋಗಲಾಗಿ ಬಾಕಿ ಮೊಬಲಗಿನ ದಶವಾಂಶವೆಂದರೆ 90 ರೂಪಾಯಿಗಳನ್ನು ಜುರ್ಮಾನೆ ತೆರತಕ್ಕದ್ದು. B ಯೆಂಬುವನು ತರುವಾಯ ಆ ಗುತ್ತಿಗೆಯನ್ನು C ಅಂಡ್ ಕಂಪೆನಿಯವರಿಗೆ 1,00,000 ರೂಪಾಯಿಗಳ ನಗದು ವ C ಅಂಡ್ ಕಂಪೆನಿಯ 500 ಷೇರುಗಳು ಇವುಗಳಿಗಾಗಿ ವರ್ಗ ಮಾಡಿದರೆ, ಅಂತಾ ಪ್ರತಿ ಷೇರಿನ ಮೌಲ್ಯವು 1ರಂತೆ ಇದ್ದಲ್ಲಿ ಆಗ್ಯೆರೂ. 1,00,000ಯಲ್ಲಿ 1000 ರೂಪಾಯಿ ವಜಾ ಹೋಗಾ ಬಾಕೀ ಮೊಬಲಗಿನ ದಶವಾಂಶ ಅಂದರೆ 9,900 ರೂಪಾಯಿಗಳ ನಗದು ಮತ್ತು C ಅಂಡ್ ಕಂಪೆನಿಯ 50 ಷೇರುಗಳಾಗಲಿ ಅಥವಾ ಸರ್ಕಾರದವರ ಇಷ್ಟಾನುಸಾರ £50 ನಗದಾಗಲಿ ಜುರ್ಮಾನೆ ತೆರತಕ್ಕದ್ದು. ಸದರೀ ಗುತ್ತಿಗೆಯನ್ನು C ಅಂಡ್ ಕಂಪೆನಿಯವರು ತರುವಾಯ D ಅಂಡ್ ಕಂಪೆನಿಯವರಿಗೆ ಸಾಲೀಯಾನಾ 1000£ಗಳ ಗುತ್ತಿಗ್ಯಾಗಲಿ ಅಥವಾ ಗನೀಯಲ್ಲಿ ಹುಟ್ಟುವಳಿ ಆಗುವ ಮೊಬಲಗಿನಲ್ಲಿ ಶೇಕಡಾ 10ರ ಮೇರೆಗೆ ರಾಜಪಾಲಿಗಾ

ಗಲಿ ವರ್ಗ ಮಾಡಿದರೆ, ಆಗ್ಯೆ ಸಾಲೀಯಾನಾ 1000ರೂಗಳಾಗಲಿ ಅಥವಾ ಸಂದರ್ಭಾನುಸಾರ ಗನಿಯ ಹುಟ್ಟುವಳಿ ಮೊಬಲಗಿನಲ್ಲಿ ಶೇಕಡಾ 1ರ ಮೇರಿಗೆ ರಾಜಪಾಲಾಗಲಿ ಜುರ್ಮಾನೆ ತೆರತಕ್ಕದ್ದು. ಈ ಶಿಕಮಿ ಗುತ್ತಿಗೆಯನ್ನ D ಅಂಡ್ ಕಂಪೆನಿಯವರು ತರುವಾಯ E ಎಂಬುವನಿಗೆ 10,000ರೂಗಳ ನಗದಿಗೂ ವ ಯರಡು ವರುಷಗಳ ಆಖೈರಿನಲ್ಲಿ 10,000ರೂಗಳ ಸಲಿಕೆಗಾಗಿ ಸಹಾ ವರ್ಗ ಮಾಡಿದರೆ ಆಗ್ಯೆ D ಅಂಡ್ ಕಂಪೆನಿಯವರು ಶಿಕಮಿ ಗುತ್ತಿಗೆ ತೆಗದುಕೊಂಡಿದ್ದ ಬಾಬತು ಸಾಲೀಯಾನಾ 1000ರೂಗಳಿಗಾಗಲಿ ಯಾ ಗನಿಯ ಹುಟ್ಟುವಳಿಯ ಶೇಕಡಾ 1ರ ರಾಜಪಾಲಿಗಾಗಲಿ ಸರ್ಕಾರದವರು ಠರಾವ್ ಮಾಡುವಂತಾ ತಾತ್ಕಾಲಿಕದ ಮೌಲ್ಯ ವಜಾ ಜಾತಾ ನಗದು 1000ರೂಗಳನ್ನೂ ಮತ್ತು ಎರಡು ವರುಷಗಳ ಆಖೈರಿನಲ್ಲಿ ಸಲಿಕೆ ಆಗತಕ್ಕ 1000ರೂಗಳನ್ನೂ ಅಂತಾ ವರ್ಗಕ್ಕಾಗಿ ಜುರ್ಮಾನೆ ತೆರತಕ್ಕದ್ದು.

(d) ಮೇಲೆ ಹೇಳೋಣಾದ ಜುರ್ಮಾನೆಯನ್ನ ಸರ್ಕಾರಕ್ಕೆ ಕ್ರಮವಾಗಿ ಪಾವತಿ ಮಾಡಿದ ಹೊರ್ತು ಯಾವ ವರ್ಗಾವರ್ಗಿಯೂ ಶಿದ್ಧಿಯಾದಂತೆ ಅಂಗೀಕರಿಸಲ್ಪಡಲಾರದು. ಮತ್ತು ವರ್ಗ ತೆಗದುಕೊಂಡವನು ಸಹಾ ಇದೇ ರೀತಿ ಅಂತಾ ಜುರ್ಮಾನೆ ಸಲಿಕೆಯಾಗುವಂತೆ ಮಾಡಿಸೋಣದರ ಮೂಲಕ ತನ್ನ ಬಂದೋಬಸ್ತು ತಾನು ಮಾಡಿಕೊಳ್ಳಬೇಕು.

ಪಬ್ಲಿಕ್ ದರಖಾಸ್ತುಗಳು.

V. ಗನೀ ಕೆಲಸ ನಡಿಸಲಿಕ್ಕೆ ಗುತ್ತಿಗಳನ್ನ ಕೊಡುವ ವೃದ್ಧಿಶ್ಯ ಬಟ್ಟು ಚದರ ಮೈಲಗಳನ್ನ ಆಗಿಂದಾಗ್ಯೆ ಕ್ಲಿಪ್ತ ಮಾಡುವದಕ್ಕೂ, ಮತ್ತು ಅಂತಾ ಜಮೀನಿನ ಗನೀ ಗುತ್ತಿಗೆಗಳನ್ನ ಖರೀದಿಗೆ ತೆಗದುಕೊಳ್ಳತಕ್ಕ ಬಗ್ಯಾಗಿ ದರಖಾಸ್ತುಗಳನ್ನ ಅಪೇಕ್ಷಿಸುವದಕ್ಕೂ ಸಹಾ ಅಧಿಕಾರವನ್ನ ಸರ್ಕಾರದವರು ಉಳಿಸಿಕೊಂಡಿರುತ್ತಾರೆ, ಮತ್ತು ಯಾವ ದರಖಾಸ್ತನ್ನಾಗಲಿ ಯಾ ಚಡದರಖಾಸ್ತನ್ನೇ ಆಗಲಿ ಮಂಜೂರ್ಮಾಡುವದಕ್ಕೆ ಸರ್ಕಾರದವರು ಬದ್ಧರಾಗಿರುವದಿಲ್ಲವು.

ಗುತ್ತಿಗೆ ನಮೂನೆ.

VI. ಮೇಲೆ ನಮೂದಾದ ನಿಬಂಧನೆಗಳನ್ನನುಸರಿಸಿ ಕೊಡಲ್ಪಡುವ ಗುತ್ತಿಗೆ ನಮೂನೆಯು ಇದಕ್ಕೆ ಲಗ್ಗತ್ತಾಗಿರುತ್ತದೆ.

ಕೆ. ಶೇಷಾದ್ರಿ ಅಯ್ಯರ್,
ದಿವಾನ್.

1887ನೇ ಇಸವಿ ಸೆಪ್ಟಂಬರ್ 5ನೇ ಮರ್ಸ್ಟಂ ರೂಲ್ಸ್ ಅನುಸರಿಸಿ ಕೊಡಲ್ಪಟ್ಟ ಗನಿ ಕೆಲಸದ ಗುತ್ತಿಗೆಯ ಕರಾರ್ ನಮೂನೆ.

ಕಕ್ಷಿಗಾರರು.

ಈ ಕರಾರು ಒಂದು ಸಾವಿರದ ಯಂಟನೂರು ಯಂಭತ ನೇ ಇಸವಿ ನೇ ಮರ್ಸ್ಟ ಮಿನಲ್ಲಿ (''ಗುತ್ತಿಗೆಗೆ ಕೊಡುವವರೆಂತ'' ಯಿಯಿಂದ ಕರೆಯಲ್ಪಡುವ) ಮೈಸೂರು ಗವರ್ನಮೆಂಟಿನವರಿಗೂ ಮತ್ತು ''ಗುತ್ತಿಗೆದಾರರೆಂತ'' (ಯಿಯಿಂದ ಕರೆಯಲ್ಪಡುವ) ಇತರರಿಗೂ ನಡೆದಿ ರುತ್ತೆ.

ಶೇವಣೀ ಮತ್ತು ಗುತ್ತಿಗೆಗೆ ಕೊಡುವ ಬಗ್ಯೆ ಕರಾರು.

ಗುತ್ತಿಗೆಗೆ ಕೊಡತಕ್ಕವರು ಗುತ್ತಿಗೇದಾರರ ಕೇಳಿಕೆ ಮೇಲೆ ಮತ್ತು ಅವರುಇದರ ಮುಂದೆನಮೂದ್ ಮಾಡಲ್ಪಟ್ಟ ಒಡಂಬಡಿಕೆಗಳನ್ನು ನೆರವೇರಿಸುವರಕ್ಕೋಸ್ಕರ ಜಾಮಿನ್ ತರೀಕ್ ರೂಪಾಯಿ ಗಳನ್ನು ಶೇವಣೀ ಕಟ್ಟಿ ಅಂಥಾ ಯಾವದಾದರೊಂದು ಒಡಂಬಡಿಕೆ ತಪ್ಪಿ ನಡಿಯುವಲ್ಲಿ ಸದರೀ ಶೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡತಕ್ಕದ್ದೆಂಬ ಷರತ್ತಿನ ಮೇಲೆ, ಮುಂದೆ ಅಡಗಿರತಕ್ಕ ಇದಕ್ಕೆ ಶೇರಿಸೋಣಾದ ಪಠ ಯಾ ನಕ್ಷೆಯಲ್ಲಿ ತೋರಿಸಲ್ಪಟ್ಟ ಮೈಸೂರು ಶೀಮೆಯ ಡಿಸ್ಟ್ರಿಕ್ಟ್ ತಾಲ್ಲೂಕಿನಲ್ಲಿ ಯಿರುವ ಅಂದಾಜ್‌ನ್ನುಳ್ಳ ಮತ್ತು ಯಿದರಡೀ ಶೇರಿಸಲ್ಪಟ್ಟ ಷೆಡ್ಯೂಲ್ ತಖ್ತೆಯಲ್ಲಿ ಮುಖ್ಯವಾಗಿ ನಮೂದ್ ಮಾಡಿ ವಿವರಿಸಲ್ಪಟ್ಟ ''ಚುನಾಯಿಸಲ್ಪಟ್ಟ ತಾಕು'' ಯೆಂಬದಾಗಿ ಯಿಯಿಂದ ಕರೆಯಲ್ಪಡುವ ಜಮೀನ್ ವಿಷಯದಲ್ಲಿ ಗನಿ ಕೆಲಸ ನಡಿಸುವದಕ್ಕಾಗಿ ಗುತ್ತಿಗೆಗೆ ಕೊಡುವ ಬಗ್ಯೆ ಒಪ್ಪಿ ಯಿರುತ್ತಾದ್ದರಿಂದ.

ಅಂಗೀಕಾರ.

ಕೊಡುವಣ.

ಹಾಲಿ ಈ ಕರಾರಿನಿಂದ ಅಂಗೀಕರಿಸಲ್ಪಡುವದೇನಂದರೆ, ಮುಂದೆ ಉಳಿಸಿಕೊಳ್ಳಲ್ಪಟ್ಟ ಕಂದಾಯಕ್ಕೂ ರಾಜಪಾಲಿಗೂ, ಜುರ್ಮಾನೆಗೂ, ಮತ್ತು ಇತರ ಪಾವತೀಗಳಿಗೂ ಮತ್ತು ಮುಂದೆ ಅಡಗಿರತಕ್ಕ ಗುತ್ತಿಗೇದಾರರಿಂದ ಹುಟ್ಟಲ್ಪಡುವಒಡಂಬಡಿಕೆಗಳು ವ ಕರಾರ್‌ಗಳಿಗೂ ಒಳಪಟ್ಟು, ಗುತ್ತಿಗೆಗೆ ಕೊಡುವವರಿಂದ ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರಿಗೆ, ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ, ಮೇಲೆ ನಮೂದ್ ಮಾಡಲ್ಪಟ್ಟ ವಿವರಿಸಲ್ಪಟ್ಟ ಚುನಾಯಿಸಲ್ಪಡೋಣಾದ ತಾಕಿನಲ್ಲಿ ಅಡಗಿರುವ ಆಕಾರ ಕಾಣದ ಸರ್ಕಾರ್ ಬಂಜರ್ ಜಮೀನ್ ದೇಖಿಲ್ ಹಿಡುವಳಿಯಲ್ಲಿ ಯಿಲ್ಲದ ಆಕಾರ್ ಕಂಡ ಸರ್ಕಾರ್ ಜಮೀನಲ್ಲಿಯೂ, ಮತ್ತು ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ಹಿಡುವಳಿಯಲ್ಲಿನ ಸರ್ಕಾರ್ ಜಮೀನ್ ದೇಖಿಲ್ ಇನಾಂ ಜಮೀನ್‌ಗಳಲ್ಲಿಯೂ ವಿಂಗಡಿಸಿ, ಗನಿ ಕೆಲಸ ನಡಿಸುವದಕ್ಕೂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಯಿದ್ದಲು ಯಾ ವ್ಯಾಪಾರಕ್ಕೆ ಲಾಯಖಾದ ಇತರ ಪದಾರ್ಥಗಳುಳ್ಳಂಥಾ ಕಲ್ಲುಗಳು, ಬಳ್ಳಿ ಮೊಣ್ಣು ಮುಂತಾದವುಗಳನ್ನು ಅಗೆದು ವಿಂಗಡಿಸುವದಕ್ಕೂ ಮತ್ತು ಅಲ್ಲಿ ಸಿಗಬಹುದಾದ ತಮಾಂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು; ಮತ್ತು ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳನ್ನು ಜಾಲಿಶಿ ತಯಾರ್ಮಾಡಿ ಪುಡಿಮಾಡಿ ವ್ಯಾಪಾರಕ್ಕೆ ಲಾಯಖಾಗಿ ಮಾಡುವ ಬಗ್ಯೆ ಯಿದರ ದೆಸೆಯಿಂದ ವಟ್ಟು ಲೈಸೆನ್ಸು ಕೊಡೋಣಾಗಿರುತ್ತದೆ, ಪರಂತು ಹಿಡುವಳಿ ವ ಇನಾಂ ಜಮೀನ್‌ಗಳ ವಿಷಯದಲ್ಲಿ ಅಂಥಾ ಹಿಡುವಳಿದಾರು ಮತ್ತು ಇನಾಂದಾರರಿಂದ ಮೇಲ್ಕಂಡ ಹಕ್ಕನ್ನು ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರ್‌ಗಳು, ವಹಿವಾಟುದಾರರೂ ಮತ್ತು ವರ್ಗದಾರರೂ ಕೊಂಡುಕೊಂಡಿರಬೇಕು, ಯಾ ಕೊಂಡುಕೊಳ್ಳುವವರಾಗಿರಬೇಕು ಯಾ ಅವರೊಂದಿಗೆ ಗುತ್ತಿಗೇದಾರರೂ, ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರರು ಯಾ ವರ್ಗದಾರರು ಸದರೀ ಯವರ ಹಕ್ಕು ಪಡೆಯುವದಕ್ಕಾಗಿ ಅವರ ಸ್ವಂತ ಏರ್ಪಾಡು ಮಾಡಿಕೊಂಡಿರಬೇಕು ಯಾ ಮಾಡಿಕೊಳ್ಳಬೇಕು.

ಗನೀ ಕೆಲಸ ನಡಿಸುವ ಬಗ್ಯೆ ವಟ್ಟು ಸ್ವಾತಂತ್ರ್ಯ.

ಗನಿ ಕೆಲಸದಲ್ಲಿ ಉತ್ಪತ್ತಿ ಆದದ್ದನ್ನು ಮಾರುವ ಬಗ್ಯೆ ಗುತ್ತಿಗೇದಾರಗೆ ಸ್ವಾತಂತ್ರ್ಯ.

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳಿಗೆ ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ ಅವರಿಂದಲಾಗಲಿ ಯಾ ಅವರ ಪೈಕೀ ಯಾರಿಂದಲಾಗಲೀ ಅಂಥಾ ಚುನಾಯಿಸಲ್ಪಟ್ಟ ತಾಕಿನ ಮೇಲ್‌ಭಾಗದಲ್ಲಾಗಲೀ ತಳಭಾಗದಲ್ಲಾಗಲೀ ಪೊಂದಲ್ಪಡುವ ಭಂಗಾರ, ಲೋಹವುಳ್ಳ ಅದುರು, ವಜ್ರ ಮುಂತಾದ ಕಲ್ಲುಗಳು ಮತ್ತು ಕಲ್ಲಿದ್ದಲು ಮುಂತಾದ ವ್ಯಾಪಾರಕ್ಕೆ ಲಾಯಖಾದ ಪದಾರ್ಥಗಳನ್ನು ಸಾಗಿಸುವದಕ್ಕೂ ವಿಕ್ರಯಿಸುವದಕ್ಕೂ ಮತ್ತು ವಿಲೆವಾರಿ ಮಾಡುವದಕ್ಕೂ ಸ್ವಾತಂತ್ರ್ಯ ಕೊಡೋಣಾಗಿರುತ್ತೆ.

ಗುತ್ತಿಗೇದಾರರಿಗೆ, ಅವರ ಯಗ್ಸಿಕ್ಯೂಟರು ವಹಿವಾಟುದಾರರು ಮತ್ತು ವರ್ಗದಾರರಿಗೆ 30 ವರುಷಕಾಲ ಪರಿಯಂತ ಸ್ವಾಧೀನ.

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಸಿಕ್ಯೂಟರುಗಳು, ವಹಿವಾಟುದಾರರು ವ ವರ್ಗದಾರರು ಯಿದರ ದೆಶೆಯಿಂದ ಅವರಿಗೆ ಕೊಡಲ್ಪಟ್ಟಿತೆಂಬ ಮತ್ತು ಕೊಡೋಣಾದ ಮೇಲೆ ನಮೂದ್ ಮಾಡಲ್ಪಟ್ಟ ಪ್ರದೇಶಗಳನ್ನ ಈ ಕರಾರ್ ತಾರೀಖು ಮೊದಲು ಮೂವತ್ತು ವರುಷಗಳ ಮಾಯಿದೇ ಪರಿಯಂತ ಸ್ವಾಧೀನ ಉಂಟಾಗಿರತಕ್ಕದ್ದು,

ಸರ್ಕಾರ್ ಜಮೀನುಗಳಿಗೆ ಕಂದಾಯವನ್ನೂ ಇನಾಂ ಜಮೀನುಗಳಿಗೆ ಜೋಡೀ ಮತ್ತು ಕ್ವಿಟ್ ರೆಂಟನ್ನೂ ಪಾವತೀ ಮಾಡುವಣ.

ಮತ್ತು ಸದರೀ ಮಾಯಿದೇಯಲ್ಲಿ——————ಡಿಸ್ಟ್ರಿಕ್ಟಿನೊಳಗೆ ಜಮೀನ ಕಂದಾಯದ ವಸೂಲಿ ಬಗ್ಯಾಗಿ ಜಾರೀ ಯಿರುವ ರೂಲ್ಸ್ ಅನುಸರಿಸಿ ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಹಿಡುವಳಿಯಲ್ಲಿ ಯಿರುವ ಮತ್ತು ಸಾಗುವಳಿ ಲಾಯಖಾದ ಬಂಜರ್ ಜಮೀನುಗಳ ಮೇಲೆ ಹಾಲೀ ವಸೂಲ್ ಮಾಡಲ್ಪಡಬೇಕಾದ ಸಾಲಿಯಾನಾ ಕಂದಾಯವನ್ನೂ ಅಥವಾ ಐಯಿಂದ ಯಾವ ಕಾಲದಲ್ಲಾಗಲೀ ಈ ಗುತ್ತಿಗೆ ಜಾರೀ ಯಿರುವ ಕಾಲದಲ್ಲಿ ಗುತ್ತಿಗೇಗೆ ಕೊಡುವವರಿಂದ ಯಾ ಅವರ ಉತ್ತರಾಧಿಕಾರಿಗಳಿಂದ ಯಾ ವರ್ಗದಾರರಿಂದ ಜಮೀನ ಕಂದಾಯದ ಯಾವದಾವರೂ ತಿದ್ದು ಪಾಟಿನಲ್ಲಿ ಕಂದಾಯದ ತರೀಕ್ ಅಂಥಾ ಜಮೀನಿನ ಮೇಲೆ ಗೊತ್ತು ಮಾಡಲ್ಪಡುವ ಜಾಸ್ತೀ ಮೊಬಲಗನ್ನೂ ಮತ್ತು ಸದರೀ ತಾಕಿನಲ್ಲಿ ಅಡಗಿರುವ ಯಾವದಾದರೂ ಇನಾಂ ಜಮೀನಿನ ಮೇಲೆ ತೆರಬೇಕಾದ ಜೋಡೀ ಯಾ ಕ್ವಿಟ್‌ರೆಂಟ್ ಮೊಬಲಗನ್ನೂ ಖಿಸ್ತುಬಂದೀ ಪ್ರಕಾರ ಪಾವತೀ ಮಾಡತಕ್ಕದ್ದಲ್ಲದೆ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಸಾಗುವಳಿ ನಾಲಾಯಖ್ ಸರ್ಕಾರಿ ಜಮೀನಿನ ಮೇಲೆ ಯಕರೆ ಒಂದಕ್ಕೆ 8 ಆಣೆ ಮೇರಿಗೆ ಸಾಲೀಯಾನಾ ಕಂದಾಯವನ್ನು ಸುದಾ ಅವುಗಳಿಗಾಗಿ ಒಪ್ಪಿ ಮತ್ತು ಪಾವತೀ ಮಾಡುತ್ತಾ ಬರಬೇಕು.

ಮತ್ತು ಲೋಕಲ್‌ಸೆಸ್ಸು, ತೆರಿಗೆಗಳು ಯಾ ರಿವಾಜುಗಳನ್ನ ಪಾವತೀ ಮಾಡುವಣ.

ಮತ್ತು ಮೇಲೆಕಂಡ ಸಾಲಿಯಾನಾ ಕಂದಾಯ, ಜೋಡೀ ವ ಕ್ವಿಟ್‌ರೆಂಟ್ ದೇಖೀಲ್, ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ನಿವೇಶನ ಯಾ ಜಮೀನುಗಳು ಯಾ ಅವುಗಳಲ್ಲಿರುವ ಕಟ್ಟಡಗಳು ಯಾ ಕಾಮಗಾರಿ ಯಿವುಗಳಿಗಾಗಿ ತತ್ಕಾಲದಲ್ಲಿ ತೆರಬೇಕಾದ ತಮಾಂ ಲೋಕಲ್‌ಸೆಸ್ಸುಗಳೂ ಇತರ ತಮಾಂ ತರಹೆಯ ತೆರಿಗೆಗಳೂ ರಿವಾಜುಗಳೂ ಸುದಾ ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು.

ಮತ್ತು ಉತ್ಪತ್ತಿಯಾದ ಭಂಗಾರ ವಗೈರೇ ಮೇಲೆ ಶೇಕಡಾ 5ರಂತೆ ರಾಜಪಾಲು ಕೊಡುವಣ.

ಮತ್ತು ಗುತ್ತಿಗೇದಾರರಿಂದ ಅವರ ಯಗ್ಸಿಕ್ಯೂಟರುಗಳು ವಹಿವಾಟುದಾರ್ರು ಯಾ ವರ್ಗದಾರರುಗಳಿಂದ ತಯಾರ್ಮಾಡಲ್ಪಡುವ, ಪುಡಿಮಾಡಲ್ಪಡುವ ಮತ್ತು ವ್ಯಾಪಾರಕ್ಕೆ ಲಾಯಖಾಗಿ ಮಾಡಲ್ಪಡುವ ತಮಾಂ ಭಂಗಾರ, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮತ್ತು ಖರೀದಿ ಆಗುವ ಯಾ ವ್ಯಾಪಾರದ ಸ್ವಭಾವವುಳ್ಳ ಇತರ ಪದಾರ್ಥಗಳ ಒಟ್ಟು ಹುಟ್ಟುವಳೀ ಮೇಲೆ ಶೇಕಡಾ 5ರ ಪ್ರಕಾರ ರಾಜಪಾಲು ಕೊಡುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರಬೇಕು, ಅಂಥಾ ರಾಜಪಾಲು ಯಾವ ಬಾಬಿನ ಖರ್ಚೂ ವಜಾ ಮಾಡಲ್ಪಡದೆಯೆ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ದೊರಿಯುವಂಥಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಮೌಲ್ಯದ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನಲ್ಲಿ ದೊರಿಯುವಂಥಾ ತಮಾಂ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಖರೀದಿ ಮೊಬಲಗಿನ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲ್ ಮೊಬಲಗನ್ನು ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು; ಅಂಥಾ ರಾಜಪಾಲು, ಯಾವ ಬಾಬಿನ ಖರ್ಚೂ ವಜಾ ಮಾಡಲ್ಪಡದೆಯೇ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ಪ್ರತಿ ವರ್ಗದ ಯಾ ವೊಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುರಮಾನೆ ಕೊಡುವಣ.

ಯಾವ ಕಾಲದಲ್ಲಾಗಲಿ ಗುತ್ತಿಗೇದಾರರಿಂದ ಅವರ ಎಗ್ಸಿಕ್ಯೂಟರುಗಳಿಂದ ವಹಿವಾಟ್‌ದಾರರಿಂದ ಯಾ ವರ್ಗದಾರ್ರುಗಳಿಂದ ಸಂಪೂರ್ಣವಾಗಿಯಾಗಲಿ ವೊಂದುಭಾಗವಾಗಿಯಾಗಲಿ ಕೊಡಲ್ಪಡುವ ಮೇಲೆ ಹೇಳಲ್ಪಟ್ಟ ನಿವೇಶನಗಳ ಪ್ರತಿ ವರ್ಗ ಯಾ ವೊಳಗುತ್ತಿಗೇಗಾಗಿಯಾಗಲಿ ಈ ಕರಾರ್‌ಗಳಿಂದ ವೊಪ್ಪಿಸಲ್ಪಟ್ಟ ವ ಕೊಡಲ್ಪಟ್ಟ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸ್‌ಗಳನ್ನ ವಿಶಿಷ್ಟವಾಗಲಿ ಆ ವೈಕೀ ಕೆಲವನ್ನ ವರ್ಗ ಮಾಡುವದಕ್ಕಾಗಿಯಾಗಲಿ ಅಥವಾ ಮೇಲೆ ಹೇಳಲ್ಪಟ್ಟ ನಿವೇಶನಗಳೊಳಗಣ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸುಗಳಲ್ಲಿ ಸಂಬಂಧ ಯಾ ಹಿಸ್ಸೆಯನ್ನ ಸಂಪೂರ್ಣವಾಗಿಯಾಗಲಿ, ಕೆಲವು ಮಟ್ಟಿಗಾಗಲಿ ಕೊಡುವದಕ್ಕಾಗಲಿ, ಅಂತಾ ವರ್ಗ ಯಾ ವೊಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುರಮಾನೆ ತೆರಲಿಕ್ಕೆ ವೊಪ್ಪಿಕೊಂಡು ಪಾವತೀ ಮಾಡುತ್ತಾ ಬರತಕ್ಕದ್ದು. ಅಂತಾ ಜುರಮಾನೆಯು ಯಾವಬಾಬಿನ ಖರ್ಚೂ ವಜಾ ಮಾಡಲ್ಪಡದೇಯೇ ಪಾವತೀ ಮಾಡಲ್ಪಡತಕ್ಕದ್ದು. ಆದರೆ ಯರಡನೇ ದಫಾ ಯಾ ಆ ತರುವಾಯ ಮಾಡಲ್ಪಡುವ ವರ್ಗ ಯಾ ವೊಳಗುತ್ತಿಗೆ ವಿಷಯದಲ್ಲಿ ಕೊಡಬೇಕಾದ ಜುರಮಾನೆಯನ್ನ ಲೆಖ್ಖ ಮಾಡುವಾಗ, ಅದರ ಹಿಂದೆ ನಡೆದ ವರ್ಗ ಯಾ ವೊಳಗುತ್ತಿಗೆ ಮೊಬ

ಲಗು ಜಾತಾ ಆ ವರ್ಗದ ಯಾ ಒಳಗುತ್ತಿಗೆಯು ಮೊಬಲಗಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಪರಂತು ಯಾವದಾದರೊಂದು ವರ್ಗ ಯಾ ಒಳಗುತ್ತಿಗೆಯು ಮೊಬಲಗು ವಿಶಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ಒಂದು ಕಂಪೆನಿಯ ಷೇರುಗಳಾಗಿ ಯಿದ್ದರೆ, ಅಂಥಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ಗುತ್ತಿಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಯಿಷ್ಟಾನುಸಾರ ಆ ಕಂಪೆನಿಯ ಷೇರುಗಳಾದರೂ ಆಗಬಹುದು ಅಥವಾ ಆ ಷೇರುಗಳ ಕ್ಲಿಪ್ತವಾದ ಮೌಲ್ಯದ ಮೇರಿಗೆ ಅದಕ್ಕೆ ಸರಿಯಾದ ನಗದು ಹಣವಾದರೂ ಆಗಬಹುದು. ಮತ್ತು ಯಾವದಾದರೊಂದು ವರ್ಗ ಯಾ ಒಳಗುತ್ತಿಗೆಯ ಮೊಬಲಗು ವಿಸಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ಒಂದು ತೆರಿಗೆ, ರಾಜಪಾಲು, ಯಾ ಇತರ ಖಿಸ್ತುಬಂದಿಯಾಗಿ ಸಲಿಕೆಯಾಗುವ ಸ್ವಭಾವ ಉಳ್ಳದ್ದಾಗಿ ಯಿದ್ದರೆ, ಅಂತಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ತೆರಿಗೆ, ರಾಜಪಾಲು, ಅಥವಾ ಸಂದರ್ಭಾನುಸಾರ ಇತರ ಖಿಸ್ತುಬಂದೀ ಮೇರಿಗೆ ಸಲಿಕೆಯಾಗುವ ಸ್ವಭಾವವುಳ್ಳದ್ದಾಗಿಯೇ ಯಿರತಕ್ಕದ್ದು. ಹಾಗೆ ತರುವಾಯ ಮಾಡಲ್ಪಡುವ ವರ್ಗ ಯಾ ಒಳಗುತ್ತಿಗೆಯ ಮೇಲೆ ವಸೂಲಾಗತಕ್ಕ ಜುರಮಾನೆಯನ್ನು ಲೆಖ್ಖ ಮಾಡುವದಕ್ಕಾಗಿ ಆ ವರ್ಗ ಯಾ ಒಳಗುತ್ತಿಗೆಯ ಮೊಬಲಗಿನಲ್ಲಿ ಅವಶ್ಯಕವಾದ ವಜಾವನ್ನು ಮಾಡುವ ವೃದ್ಧಿಕ್ಕೆ ಅಂಥಾ ತೆರಿಗೆ, ರಾಜಪಾಲು ಯಾ ಇತರ ಖಿಸ್ತುಬಂದಿ ಸಲಿಕೆಯು ತಾತ್ಕಾಲಿಕ ಮೌಲ್ಯವು ಗುತ್ತಿಗೆಗೆ ಕೊಡುವವರಿಂದಲಾಗಲಿ ಅವರ ಉತ್ತರಾಧಿಕಾರಿಗಳಿಂದಲಾಗಲಿ, ಯಾ ವರ್ಗದಾರರುಗಳಿಂದಲಾಗಲಿ ಕರಾವ್ ಮಾಡಲ್ಪಡತಕ್ಕದ್ದು. ಮತ್ತು ಯಾವ ವರ್ಗವಾಗಲಿ ಯಾ ಒಳಗುತ್ತಿಗೆಯೇ ಆಗಲೀ ಅಂತಾ ವರ್ಗ ಯಾ ಒಳಗುತ್ತಿಗೆಗಾಗಿ ಜುರ್ಮಾನೆಯು ಗುತ್ತಿಗೆಗೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರುಗಳಿಗೆ ಕ್ರಮವಾಗಿಯೂ, ಪೂರ್ತಿಯಾಗಿಯೂ ಪಾವತೀ ಮಾಡಲ್ಪಟ್ಟಿದ್ದರೇನೇ ಹೊರ್ತು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರ್ರುಗಳ ವಿಷಯದಲ್ಲಿ ಅದು ಸಿದ್ಧವಾಗುವದಿಲ್ಲವು.

ಕಂದಾಯ, ರಾಜಪಾಲ್, ಜುರ್ಮಾನೆ ಮತ್ತು ಇತರ ಬಾಕೀಗೋಸ್ಕರ ಗುತ್ತಿಗೆಗೆ ಕೊಡುವವರಿಂದ ಜಫ್ತಿ ಮಾಡುವದು.

ಮತ್ತು ಅಂಥಾ ಕಂದಾಯ, ರಾಜಪಾಲು, ತೆರಿಗೆ ವ ಜುರ್ಮಾನೆ ಮೊದಲಾದ ಯಿತರ ಬಾಕಿಗಳು ಅವುಗಳ ಪಾವತಿಬಗ್ಯಾಗಿ ಈ ಕರಾರಿನ ದೆಸೆಯಿಂದ ಕೊಡಲ್ಪಟ್ಟ ವಾಯಿದೆಯು ಮುಗಿದ ಅರವತ್ತು ದಿವಸಗಳ ಪರಿಯಂತ ಪಾವತಿಆಗದೆ ಬಾಕಿಯಿದ್ದು ಮತ್ತು ಅಂಥಾ ಬಾಕಿಗಳನ್ನ ಪಾವತೀಮಾಡಬೇಕೆಂಬದಾಗಿ ಸದರೀ—ಡಿಸ್ಟ್ರಿಕ್ಟು ಶಿವಿಲ್ ಯಗ್ಜಿಕ್ಯೂಟಿವ್ ಆಫೀಸರವರಿಂದ ಒಂದು ನೋಟೀಸು ಜಾರಿಮಾಡಲ್ಪಟ್ಟ ತರುವಾಯ ಮೂವತ್ತು ದಿವಸಗಳ ಒಳಗಾಗಿ ಸದರೀ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರ್ರು ಪಾವತಿಮಾಡದೆಯಿದ್ದ ಸಂದರ್ಭದಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ತಮಾಂ ಭಂಗಾರ, ಲೋಹ ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು, ಮತ್ತು ಚುನಾಯಿಸಲ್ಪಟ್ಟ ತಾಕಿನೊಗಣ ಗನಿ ಯಾ ಹಳ್ಳಗಳ ಆಸ್ಪಾಕಿನಲ್ಲಿ ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರರಿಂದ ಉಪಯೋಗಿಸಲ್ಪಟ್ಟ ಯಾ ಸಾಗಿಸಲ್ಪಟ್ಟ ವಿಕ್ರಯ ಸ್ವಭಾವವುಳ್ಳ ಇತರ ಪದಾರ್ಥಗಳನ್ನಾಗಲಿ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಿರಬಹುದಾದ ಮತ್ಯಾವ ಯಿತರ ಸ್ವತ್ತನ್ನಾಗಲಿ ಹಿಡಿದುಕೊಳ್ಳುವಬಗ್ಯೆ ಸ್ವತಂತ್ರರಾಗಿರತಕ್ಕದ್ದು. ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಂಥಾ ಭಂಗಾರ ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು ಮುಂತಾದ ಇತರ ಪದಾರ್ಥಗಳನ್ನೂ ಸ್ವತ್ತುಗಳನ್ನೂ ವಿಕ್ರಯಿಸಿ ವಿಲಾವಾರಿ ಮಾಡಬಹುದು, ಮತ್ತು ಅಂಥಾ ವಿಕ್ರಯದಿಂದ ಹುಟ್ಟಿದ ಮೊಬಲಗಿನಲ್ಲಿ ಈ ಗುತ್ತಿಗೆ ಅನುಸರಿಸಿ ಬರಬೇಕಾದ ಕಂದಾಯ, ರಾಜಪಾಲು, ಜುರ್ಮಾನೆ ಮುಂತಾದ ಯಿತರ ವಸೂಲಾಗಬೇಕಾದ ಮೊಬಲಗಿಗೋಸ್ಕರವೂ ಅಂಥಾ ಜಫ್ತಿ ಮತ್ತು ಹರಾಜಿಗೋಸ್ಕರ ತಗಲಿದ ಖರ್ಚು ಮೊಬಲಗಿಗೋಸ್ಕರವೂ ವಜಾಹಾಕಿಕೊಳ್ಳಬಹುದು.

ಗನಿ ಕೆಲಸಗಳನ್ನು ಅವಿಚ್ಛಿನ್ನವಾಗಿ ನಡೆಸುವಬಗ್ಯೆ ಗುತ್ತಿಗೇದಾರನಿಂದ ಒಡಂಬಡಿಕೆ.

ಮತ್ತು ಇದರದೆಸೆಯಿಂದ ಗುತ್ತಿಗೇದಾರರು ತಮಗೋಸ್ಕರವೂ ಅವರ ವಾರಸುದಾರರು, ಯಗ್ಜಿಕ್ಯೂಟರು, ವಹಿವಾಟ್ಟುದಾರರು ಮತ್ತು ವರ್ಗದಾರರು ಯಿವರಿಗೋಸ್ಕರವೂ ಮತ್ತು ಆಯಾ ಪ್ರತಿ ಒಬ್ಬರಿಗೋಸ್ಕರವೂ ಬೇರೆಬೇರೆಯಾಗಿ ಒಡಂಬಟ್ಟು ಇದರದೆಸೆಯಿಂದ ಅವರಿಗೋಸ್ಕರ, ಮತ್ತು ಅವರ ವಾರಸುದಾರರು, ಯಗ್ಜಿಕ್ಯೂಟರು, ವಹಿವಾಟುದಾರು ವ ವರ್ಗದಾರರಿಗೋಸ್ಕರ ಗುತ್ತಿಗೆಗೆ ಕೊಡುವವರೊಂದಿಗೂ, ಅವರ ಉತ್ತರಾಧಿಕಾರಿಗಳ ಮತ್ತು ವರ್ಗದಾರರೊಂದಿಗೂ ಒಡಂಬಟ್ಟಿರುವದೇನಂದರೆ, ಅವರು ಅಂದರೆ ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರುಗಳು, ವಹಿವಾಟದಾರರು ಗುತ್ತಿಗೆ ಕಾಲದ ಮದಲ್ ವರುಷದಲ್ಲಿ ಚುನಾಯಿಸಲ್ಪಟ್ಟ ಪ್ರದೇಶದಲ್ಲೆಲ್ಲ ಛಂದಾಗಿಯೂ ಫಲಕಾರಿಯಾಗುವಂತೆಯೂ ಭಂಗಾರಕ್ಕೋಸ್ಕರ ಯಾ ಯಿತರ ಲೋಹಗಳು ಯಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳಿಗೋಸ್ಕರ ಅಜಮಾಯಿಷೀಕೆಲಸ ನಡಿಸುವದಲ್ಲದೆ ಹಾಗೆ ಅವಶ್ಯಕವಾದಲ್ಲಿ ಅಜಮಾಯಿಷೀ ಕೆಲಸಗಳ ಫಲಪರ್ಯವಸಾನವನ್ನು ತೋರಿಸುಬಗ್ಯೆ ತಯಾರ್ಮಾಡಲ್ಪಟ್ಟಿರಬಹುದಾದಂಥಾ ಯಾವದಾದರೂ ರಿಪೋರ್ಟುಗಳ ಯಥಾ ನಕಲ್‌ಗಳನ್ನ ಗುತ್ತಿಗೆಗೆ ಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಒಪಗಿಸತಕ್ಕದ್ದು.

ಮತ್ತು ಈ ಗುತ್ತಿಗೆ ತಾರೀಖು ಮೊದಲು ಯರಡು ವರುಷಗಳ ಒಳಗಾಗಿ, ಚುನಾಯಿಸಲ್ಪಟ್ಟ ತಾಕಿನ ಪ್ರತಿ ಚದರಮೈಲ್ ಒಂದಕ್ಕೆ 5,000 (ಐದುಸಾವಿರ) ಪವರ್ಗಳಿಗೆ ಕಮ್ಮಿಯಿಲ್ಲದ, ಖರ್ಚಿನಬಗ್ಯಾಗಿ ವಸೂಲ್ಮಾಡಲ್ಪಟ್ಟ ಮೂಲಧನವುಳ್ಳ ಒಂದು ಕಂಪೆನಿಯಾನೆ ಸಂಘ

ವನ್ನು ಸೇರಿಸುವದಕ್ಕೆ ಅಶಕ್ತರಾದರೆ ಈ ಗುತ್ತಿಗೆಯು ದೆಶೆಯಿಂದ ಉಂಟುಮಾಡಲ್ಪಟ್ಟ ತಮಾಂ ಬಾಧ್ಯತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಗುತ್ತಿಗ್ಯೆಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ದಂಡವಾಗಿ ವಪ್ಪಿಸತಕ್ಕದ್ದು.

ಮತ್ತು ಗುತ್ತಿಗೆ ವಾಯಿದೆಯಲ್ಲಿ ಫಲಕಾರಿಯಾಗುವಂತೆ ಅವಿಚ್ಛಿನ್ನವಾಗಿ, ಪರಂತು ಅಸಾಧ್ಯವಾದ ಆಕಸ್ಮಿಕದ ದೆಶೆಯಿಂದ ಅಡ್ಡಿ ಮಾಡಲ್ಪಟ್ಟ ಕಾಲದಲ್ಲಿವಿನಾ, ಚುನಾಯಿಸಲ್ಪಟ್ಟ ತಾಕಿನೊಳಗೂ ಮೇಲ್ಭಾಗದಲ್ಲಿಯೂ ಗನಿಕೆಲಸ ನಡಸಿ ದೊರಿಯುವ ತಮಾಂ ಭಂಗಾರ, ಲೋಹ, ಲೋಹಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲು, ಕಲ್ಲಿದ್ದಲು ಮತ್ತು ವಿಕ್ರಯಕ್ಕೆ ವ ವ್ಯಾಪಾರಕ್ಕೆ ಲಾಯಖಾದ ತಮಾಂ ಯಿತರ ಪದಾರ್ಥಗಳನ್ನೂ ತಯಾರ್ಮಾಡಿ ವ್ಯಾಪಾರ ಲಾಯಖಾಗಿ ಮಾಡತಕ್ಕದ್ದು.

ಭಂಗಾರದ ಮಾದರಿ ವಗೈರೆಯನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸುವಣ ಯಾ ತೆಗೆದುಕ್ಕೊಳ್ಳುವಬಗ್ಯೆ ಅವಕಾಶ ಕೊಡುವಣ.

ಮತ್ತು, ಅಪೇಕ್ಷಿಸಲ್ಪಟ್ಟಲ್ಲಿ ಅವು ವಿಕ್ರಯವಾಗುವದಕ್ಕೆ ಮುಂಚಿತವಾಗಿ, ತಯಾರ್ಮಾಡಲ್ಪಟ್ಟು, ಪುಡಿ ಮಾಡಲ್ಪಟ್ಟು ಮತ್ತು ವ್ಯಾಪಾರ ಲಾಯಖಾಗಿ ಮಾಡಲ್ಪಟ್ಟಿರುವ ವಿಕ್ರಯಕ್ಕೆ ಶಿದ್ಧಪಡಿಸಿದಂಥಾ ತಮಾಂ ಭಂಗಾರ, ಲೋಹಗಳು, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳ ಮಾದರಿ ಯಾ ಮಾದರಿಗಳನ್ನು ಗುತ್ತಿಗ್ಯೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಅಥವಾ ಏಜಂಟ್ ಯಾ ಏಜಂಟರುಗಳಿಗೆ ಒಪ್ಪಿಸತಕ್ಕದ್ದು, ಅಥವಾ ಅವರಿಂದ ತೆಗೆದುಕೊಳ್ಳುವಬಗ್ಯೆ ಅವಕಾಶಕೊಡಲ್ಪಡತಕ್ಕದ್ದು ಹಾಂಗೆ ತೆಗೆದುಕೊಳ್ಳುವ ತಮಾಂ ಮಾದರಿಬಗ್ಯೆ ಆಗಿನ ಬಾಜಾರ್ ದಾರಣೆಪ್ರಕಾರ ಖರೀದಿ ಮೊಬಲಗು ಗುತ್ತಿಗೆಗೆ ಕೊಡುವವರಿಂದಲಾಗಲಿ, ಅವರ ಉತ್ತರಾಧಿಕಾರಿಗಳಿಂದಲಾಗಲೀ ಯಾ ವರ್ಗದಾರರಿಂದಲಾಗಲೀ ಪಾವತಿ ಮಾಡಲ್ಪಡತಕ್ಕದ್ದು.

ಗುತ್ತಿಗ್ಯೆ ಕೊಡುವವರಿಗೆದಾರಣೆಗಳ ಲೆಕ್ಕಗಳನ್ನು ಕೊಡುವಣ.

ಮತ್ತು ಸದರೀ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮತ್ತು ಇತರ ಪದಾರ್ಥಗಳು ಖರೀದಿಆದ ತರುವಾಯ, ಗುತ್ತಿಗ್ಯೆಕೊಡುವವರಿಗಾಗಲೀ ಅವರ ಉತ್ತರಾಧಿಕಾರಗಳು ಅಥವಾ ವರ್ಗದಾರರು ಯಾ ಏಜಂಟ್ ಯಾ ಏಜಂಟರಿಗಾಗಲಿ ಸದರೀ ಪದಾರ್ಥಗಳು ಯೆಷ್ಟು ಮೊಬಲಗ್ಯೆ ವಿಕ್ರಯಿಸಲ್ಪಟ್ಟವೋ ಆ ತಪಶೀಲನ್ನೂ ಅಪೇಕ್ಷಿಸಲ್ಪಟ್ಟಲ್ಲಿ ಅವುಗಳನ್ನ ಖರೀದಿಗೆ ಪಡೆದವರ ಹೆಸರನ್ನೂ ಸುದಾ ವದಗಿಸತಕ್ಕದ್ದು.

ಖರೀದಿಆದ 90 ದಿವಸಗಳ ವಳಗಾಗಿ ಯಾ ಅದುರು ತೆಗೆದ ಆರು ತಿಂಗಳ ವಳಗಾಗಿ ರಾಜಪಾಲ್ ಮೊಬಲಗನ್ನ ಪಾವತಿ ಮಾಡುವಣ.

ಮತ್ತು ಅಂಥಾ ವಿಕ್ರಯ ನಡೆದ 90 ದಿವಸಗಳ ವಳಗಾಗಿಯಾಗಲಿ ಅಥವಾ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳು ತೆಗೆದ ಅಥವಾ ವಜ್ರಮುಂತಾದ ಬೆಲೆಯುಳ್ಳ ಕಲ್ಲುಗಳು ಕಂಡುಹಿಡಿದ ಆರು ತಿಂಗಳ ವಳಗಾಗಿಯಾಗಲಿ, ಮೇಲೆ ಕಂಡ ಉಳಕೊಳ್ಳಲ್ಪಟ್ಟ ರಾಜಪಾಲು ಮೊಬಲಗನ್ನು ಗುತ್ತಿಗ್ಯೆ ಕೊಡುವವರಿಗೆ ಆಗಲಿ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ತಮಾಂ ವರ್ಗಗಳ ನಕ್ಕಲುಗಳನ್ನೂ ಗುತ್ತಿಗ್ಯೆ ಕೊಡುವವರಿಗೆ ಒಪ್ಪಿಸುವಣ.

ಮತ್ತು ಗುತ್ತಿಗೇದಾರರಿಗಾಗಲೀ ಅವರ ಉತ್ತರಾಧಿಕಾರಗಳು ಯಾ ವರ್ಗದಾರರಿಗಾಗಲೀ, ಸದರೀ ನಿವೇಶನಗಳು ಯಾ ಅದರ ಯಾವದಾದರೂ ವಂದು ಭಾಗದ ವರ್ಗ ಯಾ ವಳಗುತ್ತಿಗೆಯು ಅಥವಾ ಈ ಕರಾರಿನಿಂದ ಒಪ್ಪಿಸಲ್ಪಟ್ಟ ಯಾ ಕೊಡಲ್ಪಟ್ಟ ತಮಾಂ ಯಾ ಯಾವದಾದರೂ ಹಕ್ಕು ಸ್ವಾತಂತ್ರ್ಯ ಮತ್ತು ಲೈಸೆನ್ಸುಗಳ ಅಥವಾ ಸದರೀ ನಿವೇಶನಗಳಲ್ಲಿ ಅಥವಾ ಸದರೀ ಹಕ್ಕು, ಸ್ವಾತಂತ್ರ್ಯ ಮತ್ತು ಲೈಸೆನ್ಸ್ ಇವುಗಳಲ್ಲಿ ಪೂರ್ತಿಯಾಗಿ ಯಾಗಲಿ ಕೆಲವು ಮಟ್ಟಿಗಾಗಲಿ ಸಂಬಂಧ ಯಾ ಹಿಸ್ಸೆ ಇವುಗಳ ವರ್ಗ ಯಾ ವಳಗುತ್ತಿಗೆಯು ಅದು ನಡೆದ ಯೆರಡು ತಿಂಗಳ ವಳಗಾಗಿ ಒಪ್ಪಿಸಲ್ಪಡತಕ್ಕದ್ದು.

ತಮಾಂ ವರ್ಗಗಳ ಮೇಲೂ 90 ದಿವಸಗಳ್ಳ ವಳಗಾಗಿ ಜುರ್ಮಾನೆ ಪಾವತಿ ಮಾಡುವಣ.

ಮತ್ತು ಅಂಥಾ ವರ್ಗ ಯಾ ವಳಗುತ್ತಿಗೆ ನಡೆದ 90 ದಿವಸಗಳ ವಳಗಾಗಿ ಅಂಥಾ ವರ್ಗ ಯಾ ವಳಗುತ್ತಿಗೆಗೋಸ್ಕರ ಇದಕ್ಕೆ ಮುಂಚೆ ವಿಧಿಸಿ ಉಳಿಕೊಂಡಿರುವ ಜುರ್ಮಾನೆಯನ್ನು ಗುತ್ತಿಗ್ಯೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಅಥವಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ಲೆಕ್ಕ ವ ನಕ್ಷೆಗಳ ಕ್ರಮವಾದ ಬುಕ್ಕುಗಳನ್ನ ಇಡುವಣ.

ಮತ್ತು ಸದರೀ ವಾಯಿದೆಯಲ್ಲಿ ಚುನಾಯಿಸಲ್ಪಟ್ಟ ತಾಕಿನ ಯಾವದಾದರೂ ಅನುಕೂಲವಾದ ಸ್ಥಳದಲ್ಲಿ, ಗುತ್ತಿಗೇದಾರರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಏಜಂಟ್ ಯಾ ಏಜಂಟರುಗಳು ಯೆಲ್ಲ ಕಾಲಗಳಲ್ಲೂ ಧಾರಾಳವಾಗಿ ನೋಡುವ ಬಗ್ಯೆ ಸದರೀ ಗನಿಗಳ ಆಡಳತ ಮತ್ತು ಹುಟ್ಟುವಳಿ ವ ಖರ್ಚು ಇವುಗಳ ತಪಶೀಲನ್ನೂ ಮತ್ತು ಭಂಗಾರ, ಲೋಹಗಳು, ಲೋಹ

ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲು, ವಿಕ್ರಯ ಯಾ ವ್ಯಾಪಾರ ಲಾಯಖಾದ ತಮಾಂ ಇತರ ಪದಾರ್ಥಗಳ ವಿಲಾವಾರಿ ಹಾಂಗೂ ಅವುಗಳ ಕರಾರ್ವಾಕಾ ಬೆಲೆ ತಿಳಿಯುವ ಬಗ್ಗ್ಯಾಗಿ ಅವುಗಳ ಕೇದಾದು, ತಾರೀಖು ಮತ್ತು ಅವಶ್ಯಕವಾದ ಯಾ ಯುಕ್ತವಾದ ಇತರ ಸಂಗತಿಗಳನ್ನ ತೋರಿಸುವಂಥಾ ಲೆಖ್ಖದ ಬುಕ್ಕುಗಳನ್ನ ತಯಾರ್ಮಾಡಿ ಇಡತಕ್ಕದ್ದಲ್ಲದೆ ಸದರೀ ಗನಿ ವ ಕಾಮುಗಾರಿಗಳ ಸಾಚಾ ನಕ್ಷೆ, ಪ್ಲ್ಯಾನು ವ ಸೆಕ್ಶರ್ನಗಳನ್ನ ತಯಾರ್ಮಾಡಿ ಇಡತಕ್ಕದ್ದು.

ಮತ್ತು ಅವುಗಳ ನಕಲುಗಳನ್ನು ಗುತ್ತಿಗೆಗೆ ಕೊಡುವವರಿಗೆ ಒದಗಿಸುವಣ.

ಮತ್ತು ಗುತ್ತಿಗೆಗೆ ಕೊಡುವವರಿಂದಲಾಗಲೀ ಅವರ ಉತ್ತರಾಧಿಕಾರಿಗಳಿಂದಲಾಗಲೀ ಅಥವಾ ವರ್ಗದಾರರಿಂದಲಾಗಲೀ ಯಾ ಅವರ ಏಜಂಟ್ ಯಾ ಏಜಂಟರುಗಳಿಂದಲಾಗಲೀ ಅಪೇಕ್ಷಿಸಲ್ಪಟ್ಟಾಗ ಅವರಿಗೆ ಸದರೀ ಬುಕ್ಕಿನಲ್ಲಿ ದಾಖಲಾದ ತಮಾಂ ಖತಾಯಿತಿಗಳ ನಕಲುಗಳನ್ನೂ ಮತ್ತು ಅಂಥಾ ತಮಾಂ ನಕ್ಷೆ, ಪ್ಲ್ಯಾನು ವ ಮೇಲ್ಕಂಡ ಸೆಕ್ಷನಿನ ನಕಲುಗಳನ್ನೂ ಒದಗಿಸತಕ್ಕದ್ದು.

ಮತ್ತು ವಾಯಿದೆ ಆಖ್ಯೈರಾದಾಗ ಬುಕ್ಕು ವ ಪ್ಲ್ಯಾನ್ಗಳನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡುವಣ.

ಮತ್ತು ಸದರೀ ವಾಯಿದೆಯು ಮುಗಿದಾಗ ಅಥವಾ ಮುಂಚಿತವಾಗಿ ಮೌಕೂಫಾದಾಗ ಸದರೀ ಬುಕ್ಕುಗಳು, ನಕ್ಷೆಗಳು, ಪ್ಲ್ಯಾನ್ಗಳು, ಸೆಕ್ಶರ್ನಯಾನೆ ವಿವರಣೆಗಳು ಇವುಗಳನ್ನು ಗುತ್ತಿಗೆಗೆ ಕೊಡುವವರಿಗಾಗಲೀ ಅವರ ಉತ್ತರಾಧಿಕಾರಿಗಳಿಗಾಗಲೀ ಅಥವಾ ಅವರ ವರ್ಗದಾರರಿಗಾಗಲೀ ಪೂರ್ತಿಯಾಗಿ ಯೂ ಒಳ್ಳೇ ಸ್ಥಿತಿಯಲ್ಲಿಯೂ ಒಪ್ಪಿಸತಕ್ಕದ್ದು.

ಸರಹದ್ದು ಸ್ತಂಭಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಡುವಣ ಮತ್ತು ಸುರಂಗಗಳನ್ನು ಕ್ರಮವಾಗಿ ಬೇಲಿಯಿಂದ ಭದ್ರಪಡಿಸುವಣ.

ಮತ್ತು ಸದರೀ ವಾಯಿದೇ ಕಾಲದಲ್ಲಿ ತಮಾಂ ಸರಹದ್ದು ಸ್ತಂಭಗಳನ್ನೂ ದುರಸ್ತಿನಲ್ಲಿಯೂ ಒಳ್ಳೇ ಸ್ಥಿತಿಯಲ್ಲಿಯೂ ಇಟ್ಟಿರತಕ್ಕದ್ದಲ್ಲದೆ ಸದರೀ ಚುನಾಯಿಸಲ್ಪಟ್ಟ ತಾಲ್ಲೂಕಿನೊಳಗಣ ಯಲ್ಲ ಕಾಲಿವೆ, ಹಳ್ಳ, ಯಾ ಪೈಲ್ ಕಾಮುಗಾರಿಗಳನ್ನು ಮನುಷ್ಯರು ಮತ್ತು ಜಾನವರುಗಳಿಗೆ ಅಪಾಯ ಸಂಭವಿಸದಂತೆ ಪೂರ್ತಿಯಾಗಿ ಬೇಲಿ ಹಾಕಿ ಭದ್ರ ಪಡಿಸತಕ್ಕದ್ದು.

ಮತ್ತು ಸದರೀ ವಾಯಿದೇಯಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು, ಆಗಿಂದಾಗ್ಯೆ ವಿಧಿಸಬಹುದಾದಂಥಾ ಆರೋಗ್ಯ ವಿಷಯಕವಾದ ನಿಬಂಧನೆಗಳನ್ನು ಚುನಾಯಿಸಲ್ಪಟ್ಟ ತಾಕಿನ ಯೆಲ್ಲ ಪ್ರದೇಶದಲ್ಲೂ ಕ್ರಮವಾಗಿ ಜಾರಿಯಲ್ಲಿರತಕ್ಕದ್ದು.

ಕಾಲುವೆ ಯಾ ಸುರಂಗಗಳನ್ನು ಮುಚ್ಚದೆ ಇರುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಅವರ ಏಜಂಟ್ ಯಾ ಏಜಂಟರುಗಳಿಂದ ಬರಹ ಮೂಲಕವಾಗಿ ಲೈಸೆನ್ಸ್ ಪಡೆದ ಹೊರ್ತು ಯಾವ ಕಾಲಿವೆ ಯಾ ಸುರಂಗವನ್ನಾಗಲೀ ಮನಃಪೂರ್ವಕವಾಗಿ ಮುಚ್ಚಕೂಡದು ಭರ್ತೀ ಮಾಡಕೂಡದು ಅಥವಾ ಬಂದ್ ಮಾಡಕೂಡದು.

ಅಥವಾ ರೋಡು ವಗ್ಯೆರೆಗಳನ್ನ ಆತಂಕಪಡಿಸದೆ ಇರುವಣ.

ಮತ್ತು ಈಗ ಇರುವ ತಮಾಂ ಯಾ ಯಾವ ರಸ್ತೆಗಳನ್ನಾಗಲಿ, ಕಾಲ್ದಾರಿಗಳನ್ನಾಗಲೀ ಯಾ ಯಾವ ತರಹೆಯ ಅಡ್ಡದಾರಿಗಳನ್ನಾಗಲೀ ಖುಲ್ಲಾ ಇಡತಕ್ಕದ್ದೇ ಹೊರ್ತು ಆತಂಕಪಡಿಸತಕ್ಕದ್ದಲ್ಲವು.

ಗುತ್ತಿಗೆಗೆ ಕೊಡುವವರು ಕಾಮುಗಾರೀ ವಗ್ಯೆರೆಗಳನ್ನ ತನಿಖೆ ಮಾಡಲಿಕ್ಕೆ ಅವಕಾಶ ಕೊಡುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮತ್ತು ಅವರ ಮುತಾಲೀಕ ಯಾ ಮುತಾಲೀಕರುಗಳು, ನೌಕರರು, ವ ಕೆಲಸಗಾರರು, ಇವರುಗಳು ವಾಯಿದೇ ಕಾಲದಲ್ಲಿ ಈ ಕರಾರುಗಳನ್ನನುಸರಿಸಿ ಯಾ ಈ ಕರಾರುಗಳ ಬಲೀಯದ ಮೇಲೆ ನಡಿಯುವ ಯಾವ ಕಾಮಗಾರಿಗಳೊಳಗಾಗಲೀ ಪ್ರವೇಶಿಸಿ ಅವುಗಳ ಸ್ಥಿತಿ ವ ಲಕ್ಷಣವನ್ನು ತನಿಖೆ ಮಾಡಲಿಕ್ಕೂ ಮತ್ತು ಆ ಬಗ್ಯೆ ಯಾಗಲೀ, ಅಥವಾ ಇತರ ಯಾವ ನ್ಯಾಯವಾದ ವ ಯುಕ್ತವಾದ ಉದ್ದೇಶ್ಯಕ್ಕಾಗಲೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾ ಅದರೊಳಗೆ ಇರುವ ಯಂಜಿನ್ಗಳನ್ನೂ, ಯಂತ್ರ ಸಾಧನಗಳನ್ನೂ ವ ಅಜಬಾಬುಗಳನ್ನೂ ಉಪಯೋಗಿಸಲಿಕ್ಕೂ ಪರಂತು ತನಖೀ ಮಾಡಿ ನಕ್ಷೆಗಳನ್ನೂ ತೆಗದುಕೊಳ್ಳತಕ್ಕದ್ದಕ್ಕಾಗಿ ವಿನಾ, ಅಂತಾ ಉಪಯೋಗಕ್ಕಾಗಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮುನಾಸಬು ಈಡು ಮೊಬಲಗು ಕೊಡಲಾಗಿ ಅವಕಾಶ ಕೊಡತಕ್ಕದ್ದು ಮತ್ತು ಇದಕ್ಕೆ ಹಿಂದೆ ಉಳಿಸಿಕೊಳ್ಳಲ್ಪಟ್ಟ ಸ್ವಾತಂತ್ರ್ಯಗಳನ್ನು ಚಲಾಯಿಸಲಿಕ್ಕೂ ಸಹ ಅವಕಾಶ ಕೊಡತಕ್ಕದ್ದು ಮತ್ತು ಆ ಸ್ವಾತಂತ್ರ್ಯಗಳನ್ನ ಚಲಾಯಿಸುವದಕ್ಕಾಗಿ ನ್ಯಾಯವಾದ ಯಲ್ಲಾ ಅನುಕೂಲ್ಯತೆಯನ್ನೂ ವ ಕುಮ್ಮಕ್ಕನ್ನೂ ಕೊಡತಕ್ಕದ್ದು.

ಜಮೀರ್ನಮೇಲಿನ ಪಕ್ಕಾಗಳ ಹಾನಿಗಾಗಿ ಈ ಡು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನ ಯಾವದಾದರೊಂದು ಭಾಗದ ಯಾ ಪ್ರದೇಶವ ಜಮೀರ್ನ ಮೇಲ್ಭಾಗಕ್ಕೆ ಕೆಡಕು, ಹಾನಿ ಯಾ ಅಡ್ಡಿ ಉಂಟಾದ್ದಕ್ಕಾಗಿ ಅಂತಾ ಜಮೀನಿನ ಹಿಡುವಳೀದಾರ, ಅನುಭವದಾರ ಯಾ ಇತರ ಸ್ವಾಧೀನಗಾರನಿಗೆ ಆಗಿಂದಾಗ್ಯೆ ಈಡು ಕಟ್ಟಿಕೊಡತಕ್ಕದ್ದು.

ಮತ್ತು, ಚುನಾಯಿಸಲ್ಪಟ್ಟ ತಾಕಿನ ಯಾವಭಾಗದಲ್ಲಾಗಲಿ, ಗ್ರಾಮಸ್ತರು ದನಗಳನ್ನ ಮುಫತ್ ಮೇಯಿಸಿಕೊಳ್ಳುವ ಹಕ್ಕು ಉಂಟಾಗಿಯಿದ್ದು, ಅಂತಾ ಹಕ್ಕಿಗೆ ಯಾವರೀತಿಯಲ್ಲಾಗಲಿ ಅಡ್ಡಿ ಸಂಭವಿಶಿದಾಗ ಅಂತಾ ಗ್ರಾಮಸ್ಥರಿಗೆ ಕ್ರಮವಾದ ಈಡು ಸಹಾ ಕಟ್ಟಿಕೊಡತಕ್ಕದ್ದು.

ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಸೆಯಿಂದುಂಟಾಗುವ ದಾವೆಗಳು, ಗುತ್ತಿಗೆಗೆ ಕೊಡುವವರುಗಳ ಮೇಲೆ ಬಾರದಂತೆ ಮಾಡುವಣ.

ಯಾವ ಜಮೀರ್ನಗಳಿಗಾಗಲಿ ಯಾ ಯಾವಬಗೆಯ ಸ್ವತ್ತಿಗಾಗಲಿ ಈ ಕರಾರುಗಳನ್ನನುಸರಿಸಿ ಕೆಲಸನಡಿಸುವಣಧರ ದೆಸೆಯಿಂದ ಯಾ ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಶೆಇಂದ ಉಂಟಾಗುವ ಯಾ ಸಂಭವಿಸುವ ಯಾವ ವಿಧವಾದ ಹಾನಿ ಯಾ ಆತಂಕ ಈ ಕಾರಣದಿಂದ, ಗುತ್ತಿಗೆಗೆ ಕೊಡುವವರ ಅವರ ಉಸ್ತರಾಧಿಕಾರಿಗಳ ವ ವರ್ಗದಾರರುಗಳು ಮೇಲೆ ಯಾವಬಗೆ ಖರ್ಚೂ ಯಿನ್ನುಮೇಲೆ ಆಗಿಂದಾಗ್ಯೆ ವ ಯಾವಾಗಲೂ ಶುದ್ಧಾಂಗವಾಗಿ ಯಾವಬಗೆ ದಾವೆಗಳೂ ತಗಾದೆಗಳೂ ಬಾರದಂತೆ ನಡದುಕೊಳ್ಳತಕ್ಕದ್ದು.

ವಾಯಿದೆ ಪೂರೈಕೆದ ನಂತರ ಗನಿಗಳು, ಕಟ್ಟಾ ವಗೈರೆಯನ್ನ ಗುತ್ತಿಗೆಗೆ ಕೊಡುವವರಿಗೆ ವೊಪ್ಪಿಸಿಬಿಡೋಣ.

ಮತ್ತು ಮೇಲೆಹೇಳಲ್ಪಟ್ಟ ವಾಯಿದೆ ಪೂರೈಕೆದಾಗಲಾಗಲಿ ಯಾ ಅದಕ್ಕೆ ಮುಂಚಿತವಾಗಿ ನಿಂತು ಹೋದಾಗಲಾಗಲಿ ಈ ಕರಾರುಗಳ ದೆಸೆಇಂದ ಕೆಲಸ ನಡಿಯುತ್ತಿದ್ದ ಗನಿಗಳನ್ನೂ ತಮೂಂ ಕಾಲುವೆಗಳನ್ನೂ ಕಾಮಗಾರಿಗಳನ್ನೂ, ಸರಹದ್ದು ಸ್ತಂಭಗಳು ವ ಅವುಗಳಿಗೆ ಶೇರಿದ ಬೇಲಿಗಳನ್ನೂ ಮತ್ತು ಯಿತರ ನಿವೇಶನಗಳು ಇವುಗಳೆಲ್ಲವನ್ನೂ ವೊಳ್ಳೇದಾದ ವ ಕೆಲಸ ನಡಿಸಲಿಕ್ಕೆ ಅನುಕೂಲವಾದ ಸ್ಥಿತಿಯಲ್ಲಿ ಯೇವಂಚ ಇದಕ್ಕೆ ಹಿಂದೆ ಹೇಳಲ್ಪಟ್ಟ ಕರಾರುಗಳ ಪ್ರಕಾರ ನಡಿಯಲಿಕ್ಕೆ ಅನುಗುಣವಾಗುವಂತೆ ತಕ್ಕ ಸ್ಥಿತಿಯಲ್ಲಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಅಥವಾ ವರ್ಗದಾರರುಗಳಿಗಾಗಲಿ ಒಪ್ಪಿಸಿಬಿಡತಕ್ಕದ್ದು ಸದರೀ ಜಾಗಾದಲ್ಲಿ ಯಿರುವ ಕಟ್ಟಗಳಿಗಾಗಿಯಾಗಲಿ, ಯಾ ಇತರ ಸ್ವತ್ತಿಗಾಗಿಯಾಗಲಿ ಗುತ್ತಿಗೆದಾರರುಗಳಿಂದ, ಅವರ ಯಗ್ಜಿಕ್ಯೂಟರುಗಳಿಂದ, ಆಡಳಿತ ನಡಿಸುವವರುಗಳಿಂದ ಯಾ ವರ್ಗದಾರರುಗಳಿಂದಾಗಲಿ, ಗುತ್ತಿಗೆಗೆ ಕೊಡುವವರಮೇಲೆ, ಅವರ ಉತ್ತರಾಧಿಕಾರಿಗಳಮೇಲೆ ಯಾ ವರ್ಗದಾರರಮೇಲೆ ಯಾವ ದಾವೆಯೂ ಯಿಲ್ಲದಂತೆ ವೊಪ್ಪಿಸತಕ್ಕದ್ದು. ಅಂತಾ ಕಟ್ಟಗಳನ್ನು ವ ಯಿತರ ಸ್ವತ್ತುಗಳನ್ನು, ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರುಗಳು ಆಡಳಿತ ನಡಿಸುವವರು ಯಾ ವರ್ಗದಾರರು ಮುಂಚಿತವಾಗಿಯೇ ಸಾಗಿಸಲು ಸ್ವತಂತ್ರರಾಗಿರತಕ್ಕದ್ದು.

ಕಂದಾಯುಗಳನ್ನ ರಾಜಪಾಲುಗಳನ್ನ ವ ಜುರ್ಮಾನೆ ವಗೈರೆಯನ್ನ ಕೊಡದೇ ಹೋದಮೇಲಾಗಲಿ ಕರಾರುಗಳಿಗೆ ತಪ್ಪಿದಮೇಲೆಯಾಗಲಿ ಪುನಹ್ಹ ಪ್ರವೇಶಿಸಲಿಕ್ಕೆ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಮತ್ತು ಕಂಠೋಕ್ತವಾದ ಈ ಷರತ್ತಿನಿಂದ ಕರಾರು ಮಾಡಿಕೊಳ್ಳುವದೇನಂದರೆ ಇದರ ದೆಸೆಇಂದ ಉಸಿಕ್ಕೊಳ್ಳಲ್ಪಟ್ಟಿರುವ ಕಂದಾಯುಗಳು ರಾಜಪಾಲುಗಳು, ಜುರ್ಮಾನೆಗಳು ಯಾ ಯಿತರ ಸಲಿಕೆಗಳ ಯಾವಭಾಗವನ್ನಾಗಲಿ ಪಾವತೀಮಾಡಬೇಕೆಂತ ಗುತ್ತಿಗೆದಾರರ ಅವರ ಎಗ್ಜಿಕ್ಯೂಟರಗಳ, ಆಡಳಿತ ನಡಿಸುವವರ ಯಾ ವರ್ಗದಾರರುಗಳಮೇಲೆ ಅಥವಾ ಅವರುಗಳಪೈಕಿ ವೊಬ್ಬನಮೇಲಾಗಲಿ ಹೆಚ್ಚಿಗೆ ಜನಗಳಮೇಲೆ, ಯಾ ಅವರ ಅಥವಾ ಆತನ ಮುತಾಲೀಕರುಗಳಮೇಲೆ ನೋಟಿಸ್ ಜಾರೀಯಾದ ಅಥವಾ ಚುನಾಯಿಸಲ್ಪಟ್ಟ ತಾಕಿನಪೈಕಿ ಯಾವದಾದರೊಂದು ಭಾಗದಲ್ಲಿ ಚಿಕಟಾಯಿಸಲ್ಪಟ್ಟ ತರುವಾಯ ಮೂವ್ವತ್ತುದಿನಗಳ ವರಿವಿಗು ಬಾಕೀಲಿಯಿಟ್ಟುಕೊಂಡಾಗ್ಯೂ, ಅಥವಾ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರ್‌ಗಳು ಆಡಳಿತ ನಡಿಸುವವರು ಯಾ ಅವರ ಯಾ ಆತನ ಕೆಲಸಗಾರರು ಗನಿಕೆಲಸ ಕ್ರಮವಾಗಿ ನಡಿಸದೇ ನಿಲ್ಲಿಸಿದಾಗ್ಯೂ, ಅಥವಾ ಗುತ್ತಿಗೆಗೆ ಕೊಡುವವರ, ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಉದ್ಯೋಗಸ್ಥರುಗಳಿಗೆ ಯಾವ ವಿಧವಾದ ಆತಂಕ ಯಾ ತೊಂದರೆ ವುಂಟುಮಾಡಿದಾಗ್ಯೂ ಅಥವಾ ಗುತ್ತಿಗೆಗೆ ಕೊಡುವವರಿಗ್ಗಾಗಲಿ ಅಥವಾ ಉತ್ತರಾಧಿಕಾರಿಗಳಿಗಾಗಲಿ ಯಾ ವರ್ಗದಾರರಿಗಾಗಲಿ ಸಮಾಚಾರ ಕೊಡಲಿಕ್ಕೆ ನಿರಾಕರಿಃದಾಗ್ಯೂ ಅಥವಾ ಗುತ್ತಿಗೆದಾರರು ಅವರ ಯಗ್ಜಿಕ್ಯೂಟರುಗಳು, ಆಡಳಿತ ನಡಿಸುವರು ಯಾ ವರ್ಗದಾರರು ಈ ಕರಾರುಗಳ ಪೈಕಿ ಯಾವದಕ್ಕಾದರೂ ಅತಿಕ್ರಮಿಸಿ ನಡೆದರೇಆಗಲಿ ಆಗ ಅಂತಾ ಸಂಗತಿಯಲ್ಲಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಾ ಅವರ ತರಫಿನಲ್ಲಿ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಮುತಾಲೀಕರಾಗಲಿ ಯಲ್ಲರ ಹೆಸರಿನಲ್ಲಿಯೂ ಯ್ಹಿರುವ ಈ ಗುತ್ತಿಗೆಯನ್ನನುಸರಿಃ ನಡಿಸಲ್ಪಡುವ ಕೆಲಸಗಳು ಯಾ ಇತರ ಕಾಮಗಾರಿಗಳ ಯಾವ ಭಾಗದೊಳಗೂ ಪುನಹ್ಹ ಪ್ರವೇಶಿಸಬಹುದು. ಆ ತರುವಾಯ ಮೇಲೆ ಹೇಳಲ್ಪಟ್ಟ ಮೂವತ್ತು ವರುಷಗಳ ವಾಯಿದೆಯು ಖಂಡಿತವಾಗಿ ಮವಕೂಫಾಗತಕ್ಕದ್ದು.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರದೆಸೆಇಂದ ನೊಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ, ಇದಕ್ಕೆ ಹಿಂದೆ ನಮೂದಿಸಲ್ಪಟ್ಟ

ಆರುತಿಂಗಳ ನೋಟಿಸಿನ ಹೊರ್ತು ಪುನಃ ಪ್ರವೇಶ ಮಾಡುವಅಧಿಕಾರ ಚಲಾಯಿಸಕೂಡ ದೆಂಬ ನಿಯಮ.

ಮೇರಿಗೆ ಪುನಃ ಪ್ರವೇಶಸಲಿಕ್ಕಿರುವ ನಿಯಮವನ್ನನುಸರಿಸಿ ಅಂತಾ ಯಾವ ಪುನಃಪ್ರವೇಶವಾಗಲಿ ಮೇಲೆ ಉದಹರಿಸಿದಂತಾ ವಾಯಿದೆಯ ಭಂಗವಾಗಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಿವರುಗಳು ಫಿರ್ಯಾದ್ ಬರುವ ಸಂಗತಿ ಯಾ ಸಂಗತಿಗಳ ವಿಷಯದಲ್ಲಿ ಸಮರ್ಪಕವಾದ ಸಮಜಾಯಿಷಿ ಕೊಡುವಂತೆಯೂ, ವ ಅಂತಾವುಗಳನ್ನ ವ್ಯವಸ್ಥೆ ಮಾಡಿಕೊಳ್ಳುವಂತೆಯೂ ಗುತ್ತಿಗೆದಾರರಿಗಾಗಲಿ, ಅವರ ಯಗ್ಸಿಕ್ಯೂಟರುಗಳಿಗಾಗಲಿ ಆಡಳಿತ ನಡಿಸುವವರಿಗಾಗಲಿ ಯಾ ವರ್ಗದಾರರಿಗಾಗಲಿ ಈ ಪೈಕಿ ಯಾವನಿಗಾಗಲಿ ಅಥವಾ ಯಾರಿಗಾಗಲಿ ನೋಟಿಸ್ ಕೊಟ್ಟಹೊರ್ತು ನಡಿಯತಕ್ಕದ್ದಲ್ಲವು. ಸದರೀ ನೋಟೀಸು ಬರವಣಿಗೆ ಮೂಲಕಇದ್ದು ಅದು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರುಗಳ ತರಫ ಮೇಲೆ ಹೇಳಲ್ಪಟ್ಟ ಡಿಸ್ಟ್ರಿಕ್ಟಿನ ಶಿವಿಲ್ ಕಾರ್ಬಾರ್‌ನಡಿಸುವ ಆಫೀಸರಿಂದಾಗಲಿ ಆಬಗ್ಗೆ ಮುಖ್ಯವಾಗಿ ಅಧಿಕಾರ ಪಡೆದ ಮತ್ಯಾವ ಆಫೀಸರಿಂದಾಗಲಿ ರುಜುಮಾಡಲ್ಪಟ್ಟು ಗುತ್ತಿಗೆದಾರರ ಮೇಲೆ ಅಥವಾ ಅವರ ಯಗ್ಸಿಕ್ಯೂಟರುಗಳಮೇಲೆ ಆಡಳಿತ ನಡಿಸುವವರಮೇಲೆ ವ ವರ್ಗದಾರರುಗಳ ಮೇಲೆಯಾಗಲಿ ಆ ಪೈಕಿ ಪೊಬ್ಬನ ಮೇಲಾಗಲಿ ಅದಕ್ಕೆ ಹೆಚ್ಚಿಗೆ ಜನರಮೇಲಾಗಲಿ ಅವರುಗಳ ಯಾ ಆತನ ಮುತಾಲೀಕರುಗಳ ಮೇಲಾಗಲಿ ಜಾರೀಮಾಡಲ್ಪಡತಕ್ಕದ್ದು, ಅಥವಾ ಆ ನೋಟೀಸು ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾವ ಪ್ರದೇಶದಲ್ಲಾಗಲಿ ಚಿಕಟಾಯಿಸಲ್ಪಡತಕ್ಕದ್ದು. ಹಾಗೆ ನೋಟಿಸು ಜಾರೀ ಆದ ಯಾ ಅಥವಾ ಚಿಕಟಾಯಿಸಲ್ಪಟ್ಟ ಲಾಗಾಯತು ಆರುತಿಂಗಳವರಿವಿಗೂ ಅಂತಾ ಫಿರ್ಯಾದಿನ ಸಂಗತಿ ಯಾ ಸಂಗತಿಗಳಲ್ಲಿ ಸಮರ್ಪಕವಾದ ಸಮಜಾಯಿಷಿಯೂ ಕೊಡಲ್ಪಡದೇ ವ ಫಿರ್ಯಾದ್ ಸಂಗತೀಲಿ ವ್ಯವಸ್ಥೆಯೂ ಮಾಡಿಕೊಳ್ಳದೇ ತಪ್ಪಿಹೋಗದ ಹೊರ್ತು ಅಂತಾ ಪುನಃಪ್ರವೇಶವಾಗಲಿ ಯಾ ವಾಯಿದೆಯ ಭಂಗವಾಗಲಿ ನಡಿಯತಕ್ಕದಲ್ಲವು.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ—ಗನಿಗಳ ಕೆಲಸ ನಡಿಸುವ

ಯಾವ ವರುಷದಲ್ಲಾಗಲಿ ರಾಜಪಾಲಿಗೆ ಬದಲಾಗಿ ಎಕರೆ ಒಂದಕ್ಕೆ ಐದು ರೂಪಾಯಿ ಮೇರಿಗೆ ಕಂದಾಯ ವಸೂಲು ಮಾಡಲಿಕ್ಕೆ ಗುತ್ತಿಗೆಗೆ ಕೊಡುವವರಿಗೆ ಅಧಿಕಾರವಿರುವಬಗ್ಗೆನಿಯಮ.

ಬಗ್ಗೆಗಿ ಆವಶ್ಯಕವಾದ ಪ್ರಥಮ ಏರ್ಪಾಡಿಗೋಸ್ಕರ ಕೊಡಲ್ಪಡುವ ಗುತ್ತಿಗೆಯ ಪ್ರಾರಂಭದ ಎರಡು ವರುಷಗಳು ಆದ ತರುವಾಯ, ಗನಿಗಳ ಕೆಲಸದ ವಿಷಯದಲ್ಲಾಗಲಿ, ಅದರ ಫಲಾಂಶದ ವಿಷಯದಲ್ಲಾಗಲೀ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ, ಯಾ ವರ್ಗದಾರರುಗಳಿಗಾಗಲಿ ತೃಪ್ತಿಕರವಾಗಿ ಇರದೇಯಿರುವ ಪಕ್ಷಕ್ಕೆ ಅವರು ಗುತ್ತಿಗೆಯ ಯಾವವರುಷದ ರಾಜಪಾಲಿಗೆ ಬದಲಾಗಿಯಾದರೂ ಎಕರೆ ಒಂದಕ್ಕೆ ಐದು ರೂಪಾಯಿಯಮೇರಿಗೆ ಕಂದಾಯ ವಸೂಲ್ ಮಾಡಲಿಕ್ಕೆ ಸ್ವತಂತ್ರರಾಗಿರತಕ್ಕದ್ದು.

ಇನ್ನೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ,—ಇದರ ದೆಸೆಯಿಂದ ಕೊಡೋಣಾದ

ಯಾವದಾದರೊಂದು ವರುಷದ ಆಖೈರಿನಲ್ಲಿ ಗುತ್ತಿಗೆದಾರನ ಇಷ್ಟಾನುಸಾರ ಗುತ್ತಿಗೆ ಖೈದಾಗತಕ್ಕಬಗ್ಗೆ ನಿಯಮ.

ಮೂವತ್ತು ವರುಷಗಳ ವಾಯಿದೆಯ ಪೈಕಿ ಯಾವದಾದರೊಂದು ವರುಷ ಆಖೈರಾಗುವಾಗ ಆ ವಾಯಿದೆಯು ಮೌಕೂಫ ಆಗಬೇಕೆಂಬದಾಗಿ ಗುತ್ತಿಗೆದಾರರಾಗಲಿ, ಅವರ ಎಗ್ಸಿಕ್ಯೂಟರುಗಳಾಗಲಿ, ಆಡಳಿತ ನಡಿಸುವವರಾಗಲಿ ಯಾ ವರ್ಗದಾರರಾಗಲಿ ಇಚ್ಛೈಸುವ ಪಕ್ಷಕ್ಕೆ ತಮ್ಮ ಇರಾದೆಯನ್ನ ನಮೂದಿಸಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಆರುತಿಂಗಳ ಮುಂಚಿತವಾಗಿ ಬರವಣಿಗೆ ಮೂಲಕ ನೋಟಿಸು ಕೊಟ್ಟು ಇದರ ದೆಸೆಯಿಂದ ಉಳಿಕೊಳ್ಳಲ್ಪಟ್ಟ ಮೇಲೆ ಹೇಳೋಣಾದ ಕಂದಾಯಗಳು, ರಾಜಪಾಲುಗಳು, ಜುರ್ಮಾನೆಗಳು, ಯಾ ಇತರ ಸಲಿಕೆಗಳು ಇವುಗಳನ್ನ ಸಂದಾಯಮಾಡಿ, ಇದರಲ್ಲಿ ಕಂಡ ಎಲ್ಲಾ ಕರಾರುಗಳ ವ ಒಡಂಬಡಿಕೆಗಳ ಮೇರಿಗೆ ನಡೆದುಕ್ಕೊಂಡುವ ಜಾರೀಲಿತಂದು, ಮತ್ತು ಅಂತಾ ವರುಷ ಪೂರೈಸುವವರಿವಿಗೂ, ಗುತ್ತಿಗೆದಾರರು, ಅವರ ಎಗ್ಸಿಕ್ಯೂಟರುಗಳು, ಆಡಳಿತ ನಡಿಸುವವರು ಯಾ ವರ್ಗದಾರರು ನಡದುಕ್ಕೊಂಡಲ್ಲಿ ಯಾ ಜಾರೀಲಿ ತಂದಲ್ಲಿ ಆಗ್ಯೆ ಅಂತಾ ಸಂಗತಿಯಲ್ಲಿ ಆ ವರುಷ ಪೂರೈಸಿದ ತರುವಾಯ ಇದರ ದೆಸೆಯಿಂದಕೊಡಲ್ಪಟ್ಟಿರುವ ವಾಯಿದೆಯು ಖಂಡಿತವಾಗಿ ನಿಂತುಹೋಗಿ ಖೈದಾಗತಕ್ಕದ್ದಲ್ಲವೆ ಇದರಲ್ಲಿ ಮೇಲ್ಕಂಡ ರೇವಣೀ ಬಾಬತು ರೂಪಾಯಿಗಳು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರ ವಶದಲ್ಲೀನೇ ಅವರ ಸ್ವಂತ ಆಸ್ತಿಯಂತೆ ನಿಂತು ಹೋಗತಕ್ಕದ್ದು.

ಅದಕ್ಕೆ ಸಾಕ್ಷಿಯಾಗಿ ಗುತ್ತಿಗೆ ಕೊಡುವವರಿಗಾಗಿ ವ ಅವರ ತರಫ ಕೆಲಸ ನೋಡುವ ಮೈಸೂರು ಶೀಮೆಯ ದಿವಾನರಾದ

ಯವರೂ

ವ ಗುತ್ತಿಗೆದಾರರು ಸಹಾ ಮೇಲೆ ಷುರುವಿನಲ್ಲಿ ಬರಿಯೋಣಾದ ವರುಷ ವ ತಾರೀಖಿನಲ್ಲಿ ಇದಕ್ಕೆ ತಮ್ಮ ತಮ್ಮ ದಸ್ತಖತ್ ವ ಮೊಹರು ಹಾಕಿರುತ್ತಾರೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ತಾರೀಖು 21ನೇ ಸೆಪ್ಟಂಬರ್ 1887.

ನಂ. 120.—ಮಾಹೆ ಮಜಕೂರು 5ನೇ ಮುಕ್ಕಾಂ 105ನೇ ನಂಬರ್ ಇಸ್ತಿಹಾರನ್ನನುಸರಿಸಿ, ಈ ಕೆಳಗೆ ನಮೂದಾಗುವ ಗ್ರಾಮ ಮತ್ತೊಂದು ಗ್ರಾಮಕ್ಕೆ ದಾಖಲಾಗುವಂತೆ ಅಪ್ಪಣೆ ಮಾಡಿರುತ್ತೆ.

ತಾಲ್ಲೂಕು	ಗ್ರಾಮದ ಹೆಸರು	ಯಾವ ಗ್ರಾಮಕ್ಕೆ ಸೇರತಕ್ಕದ್ದು.
ಬಾಗೇಪಲ್ಲಿ	ನಂಬಿಕುಂಟೆದಿನ್ನೆ	ಪಾಸಲಪರತಿ

ಇಸ್ತಿಹಾರ್ನಾಮ.

ನಂ|| 121.　　17ನೇ ಸೆಪ್ಟಂಬರು 1887ನೇ ಇಸವಿ.

ಬಾಗಾಯಿತು ಸಾಗುವಳಿಗೆ ಸರಕಾರದ ಜಮೀನನ್ನು ರಿಯಾಯಿತೀ ಷರತ್ತಿನ ಮೇಲೆ ಕೊಡುವದಕ್ಕೋಸ್ಕರವಾಗಿ ಈ ಮುಂದೆ ವಿವರಿಸುವ ನಿಬಂಧನೆಗಳು ಶ್ರೀಮನ್ಮಹಾರಾಜಾ ಸರಕಾರದವರಿಂದ ಮಂಜೂರಾಗಿ ಸರ್ವರಿಗೂ ತಿಳಿಯಲು ಫಾಯಿಷ್ ಮಾಡಲ್ಪಟ್ಟಿರುತ್ತವೆ:—

1. ತರಂ ಮೊಕರರು ಆಗದೇ ಇರುವ ಸರ್ಕಾರಿ ಬಂಜರಿನಲ್ಲಿ ಥವಪೈರು ಬಾಗಾಯಿತು ಸಾಗುವಳಿಗೋಸ್ಕರ ದರಖಾಸ್ತು ಬಂದರೆ ಇತರ ಆಕ್ಷೇಪಣೆ ಏನೂ ಇಲ್ಲದ ಪಕ್ಷದಲ್ಲಿ ಸದರೀ ಜಮೀನು ದರಖಾಸ್ತುದಾರನಿಗೆ ಈ ಕೆಳಗೆ ವಿವರಿಸುವ ದರಗಳ ಮೇರೆ ಕೊಡಲ್ಪಡು ವದು ಹ್ಯಾಗಂದರೆ:

A. ಮಲನಾಡಿನ ಅಡಿಕೆ ತೋಟಗಳಿಗೆ.

1ನೇದು.—ಜಮೀನು ಕೊಡಲ್ಪಟ್ಟ ಲಾಗಾಯಿತು ಷುರೂ 12 ವರುಷಗಳವರಿವಿಗೂ ಎಕರೆ 1ಕ್ಕೆ ಸಾಲೀಯಾನಾ 4 ಆಣೆ ಪ್ರಕಾರ.

2ನೇದು.—ಆ ಗ್ರಾಮದಲ್ಲಿ ಅದೇ ತರಹೇದ ತೋಟಗಳಿಗೆ ಬಿದ್ದಿರುವ ಸರಾಸರಿ ಬಾಗಾಯತು ದರದಲ್ಲಿಯಾಗಲಿ, ಅಥವಾ ಆ ಗ್ರಾಮದಲ್ಲಿ ಅಂಥಾ ಬಾಗಾಯತು ಇಲ್ಲದಿದ್ದರೆ ಆಜೂಬಾಜೂ ಗ್ರಾಮದಲ್ಲಿ ಸದರೀ ತರಹೇದ ಬಾಗಾಯತಿಗೆ ಮೊಕರರು ಆಗಿಯಿರುವ ಸರಾಸರೀ ದರದಲ್ಲಿಯಾಗಲಿ, ಅಥವಾ ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲಾಗಲಿ, ರೆವಿನ್ಯೂ ಸರ್ವೆ ಸೆಟಲ್ ಮೆಂಟು ಜಾರೀಗೆ ಬರುವಾಗಲಾಗಲಿ, ಸದರೀ ಸೆಟಲ್‌ಮೆಂಟು ಬದಲಾಯಿಸುವಾಗಾಗಲಿ, ಸರ್ವೆ ಸೂಪರಿಂಟೆಂಡೆಂಟರವರಿಂದ ಮೊಕರರು ಮಾಡಲ್ಪಡುವ ಬಾಗಾಯತು ದರದಲ್ಲಿಯಾಗಲಿ—

13ನೇ ವರ್ಷ—ಕಾಲು ಭಾಗ.

14ನೇ ವರ್ಷ—ಅರ್ಧ ಭಾಗ.

15ನೇ ವರ್ಷ—ಮುಕ್ಕಾಲು ಭಾಗ.

3ನೇದು.—ಮೇಲೆ ನಮೂದಾದಂತೆ ಮೊಕರರು ಆದ ಪೂರಾ ಬಾಗಾಯತು ದರವು 16ನೇ ವರ್ಷದ ಲಾಗಾಯತು ಜಾರೀಲಿ ಬರತಕ್ಕದ್ದು.

B. ಮೈದಾ ಪ್ರದೇಶಗಳಲ್ಲಿನ ಅಡಿಕೆ ತೋಟಗಳಿಗೂ ಮತ್ತು ಎಲ್ಲಾ ತೆಂಗಿನ ತೋಟಗಳಿಗೂ.

1ನೇದು.—ಜಮೀನು ಕೊಡಲ್ಪಟ್ಟ ಲಾಗಾಯತು ಮೊದಲು 9 ವರ್ಷಗಳವರಿವಿಗೂ ಎಕರೆ 1ಕ್ಕೆ ಸಾಲೀಯಾನಾ 4 ಆಣೆ ಪ್ರಕಾರ.

2ನೇದು.—ಆ ಗ್ರಾಮದಲ್ಲಿ ಅದೇ ತರಹೇದ ತೋಟಗಳಿಗೆ ಬಿದ್ದಿರುವ ಸರಾಸರಿ ಬಾಗಾಯತು ದರದಲ್ಲಿಯಾಗಲಿ, ಅಥವಾ ಆ ಗ್ರಾಮದಲ್ಲಿ ಅಂಥಾ ಬಾಗಾಯತು ಇಲ್ಲದಿದ್ದರೆ ಆಜೂಬಾಜೂ ಗ್ರಾಮದಲ್ಲಿ ಸದರೀ ಬಾಗಾಯತಿಗೆ ಮೊಕರರು ಆಗಿಯಿರುವ ಸರಾಸರೀ ದರದಲ್ಲಿ ಆಗಲೀ ಅಥವಾ ಡಿಪ್ಯೂಟಿ ಕಮಿಷ್ನರವರ ರಿಪೋರ್ಟಿನ ಮೇಲಾಗಲಿ, ರೆವಿನ್ಯೂ ಸರ್ವೆ ಸೆಟಲ್‌ಮೆಂಟು ಜಾರೀಗೆ ಬರುವಾಗಾಗಲಿ, ಸದರೀ ಸೆಟಲ್‌ಮೆಂಟು ಬದಲಾಯಿಸುವಾಗಾಗಲಿ, ಸರ್ವೆ ಸೂಪರಿಂಟೆಂಡೆಂಟರವರಿಂದ ಮೊಕರರು ಮಾಡಲ್ಪಡುವ ಬಾಗಾಯತು ದರದಲ್ಲಿಯಾಗಲಿ—

10ನೇ ವರ್ಷ—ಕಾಲು ಭಾಗ.

11ನೇ ವರ್ಷ—ಅರ್ಧ ಭಾಗ.

12ನೇ ವರ್ಷ—ಮುಕ್ಕಾಲು ಭಾಗ.

3ನೇದು.—13ನೇ ವರ್ಷದ ಲಾಗಾಯತು ಮೇಲೆ ನಮೂದಾದಂತೆ ಮೊಕರರು ಆದ ಪೂರಾ ಬಾಗಾಯತುದರವು ಜಾರೀಯಲ್ಲಿ ಬರತಕ್ಕದ್ದು.

2. ಜಮೀನು ಪಡದುಕೊಂಡ 2 ವರುಷಗಳ ಒಳಗಾಗಿ ಅದರಲ್ಲಿ ಸೊಸಿಗಳನ್ನು ಸಂಪೂರ್ಣವಾಗಿ ಹಾಕತಕ್ಕದ್ದು. ಆದರೆ ಬಾಗಾಯತು ಸಾಗುವಳೀಗಾಗಿ ಕೊಟ್ಟ ಜಮೀನು 50 ಎಕರೆಗಳಿಗೆ ಹೆಚ್ಚಾಗಿ ಇದ್ದಲ್ಲಿ ಸಾಗುವಳೀದಾರನು ಪ್ರತಿ ವರ್ಷವೂ ತಾನು ಪಡದಿರುವ ಜಮೀನಿನ 5ರಲ್ಲಿ ಒಂದು ಭಾಗದ ಮೇರೆ ಸೊಸಿಗಳನ್ನು ಹಾಕುತ್ತಾ 5ನೇ ವರ್ಷ ಪೂರೈಸುವದರ ಒಳಗಾಗಿ ಸದರೀ ಜಮೀನು ಪೂರ್ತಿ ಸೊಸಿಗಳನ್ನು ಹಾಕಿರತಕ್ಕದ್ದು. ಸೊಸಿಗಳು ಹಾಕುವ ಭಾಗದಲ್ಲಿ ಈ ಷರತ್ತುಗಳಿಗೆ ತಪ್ಪಿದರೆ ಸದರೀ ದರೋಬಸ್ತು ಜಮೀನಿಗೂ ಮೇಲೆ ಹೇಳಿದ ಪೂರಾ ಬಾಗಾಯತು ದರದ ಮೇರೆ ಪೂರಾ ಕಂದಾಯ ಮೊಕರರು ಮಾಡಲ್ಪಡುವದಲ್ಲದೇ ಅದರಲ್ಲಿ ಸಾಗುವಳೀಗೆ ಕೊಡುವಕಾಲದಲ್ಲಿ ಇದ್ದ ಮರಗಳ ಕಿಮ್ಮತ್ತು ಅಂದಾಜು ಮೊಬಲಗು ಜುರ್ಮಾನೇ ತರೀಕ ವಸೂಲು ಮಾಡಲ್ಪಡುವದು. ಈ ನಿಬಂಧನೆಗಳನ್ನನುಸರಿಸಿ ಕೊಡಲ್ಪಡುವ ಕೌಲ್‌ನಲ್ಲಿ ಸದರೀ ಜುರ್ಮಾನೇ ಮೊಬಲಗು ಇಷ್ಟೆಂದು ದಾಖಲಾಗಿರತಕ್ಕದ್ದು. ಸಾಗುವಳೀಗೆ ಕೊಟ್ಟ ದರೋಬಸ್ತು ಜಮೀನಿನಲ್ಲಿಯೂ ಮೇಲೆ ಕಂಡ ವಾಯಿದೇ ಒಳಗಾಗಿ ಸೊಸಿಗಳನ್ನು ಹಾಕುವದಕ್ಕೆ ತಪ್ಪಿ ಹೋಗುವ ಸಾಗುವಳೀದಾರನು ಸದರೀ ಜಮೀನಿನ ಪೈಕೀ 10 ಎಕರೆಗೆ ಕಮ್ಮಿ ಇಲ್ಲದಂಥ ಒಂದೇ ಪ್ರದೇಶದಲ್ಲಿರತಕ್ಕ ತಾಕುಗಳನ್ನು ರಾಜೀನಾಮೇ ಮೂಲಕ ಸರಕಾರಕ್ಕೆ ಒಪ್ಪಿಸಬಹುದು.

3. ಮೈದಾ ತಾಲ್ಲೂಕುಗಳಲ್ಲಿ ಸರ್ವೇಯಲ್ಲಿ ಸಾಗುವಳೀಯಿಂದ ವಿನಾಯಿಸಲ್ಪಟ್ಟಿರುವ ಕೆರೆಗೆ ನೀರು ಬರುವ ಕಾಲುವೆ, ಒಳಗೆರೆ ಓಣಿ ಇತ್ಯಾದಿ ಜಾಗಾಗಳಲ್ಲಿರುವ ಅಲ್ಪಸ್ವಲ್ಪವಾದ ಜಮೀನಿಗೆ ಈ ನಿಬಂಧನೆಗಳನ್ನನುಸರಿಸಿ ಕೌಲ್ ಕೊಡಕೂಡದು. ಈ ನಿಬಂಧನೆಗಳ ಮೇರೆ ಕೌಲ್ ಕೊಡತಕ್ಕ ಪ್ರದೇಶವು 2 ಎಕರೆಗಳಿಗಿಂತ ಕಮ್ಮಿಯಾಗಿರಕೂಡದು.

4. ಮೇಲಿನ ನಿಬಂಧನೆಗಳಲ್ಲಿ ನಮೂದಿಸಿರುವ ಬಾಗಾಯತು ದರವು ತಾಲ್ಲೂಕಾಮುಳೀ ಎಲ್ಲಾ ಜಮೀನುಗಳ ತರಂ ಬದಲಾಯಿಸುವಕಾಲದಲ್ಲಿ ವಿನಹಾ ಬದಲಾಯಿಸಲ್ಪಡಕೂಡದು.

5. ಸರ್ವೇ ಸೆಟಲ್‌ಮೆಂಟ್ ಆಗಿರುವ ತಾಲ್ಲೂಕುಗಳಲ್ಲಿಯೂ ಮತ್ತು ಸರ್ವೇ ಆಗದೇ ಇರುವ ತಾಲ್ಲೂಕುಗಳಲ್ಲಿಯೂ ಸಹ ಈ ನಿಬಂಧನೆಗಳನ್ನನುಸರಿಸಿ ಇದಕ್ಕೆ ಲಗ್ಗತ್ತು ಮಾಡಿ ಇರುವ ನಮೂನೇಯಂತೆ ಕೌಲ್ ಕೊಡತಕ್ಕದ್ದು.

6. ಈ ನಿಬಂಧನೆಗಳ ಪ್ರಕಾರ ಕೌಲ್‌ಗಳ ಬಗ್ಯೆ ದರಖಾಸ್ತುಗಳನ್ನು ಬರಹ ಮೂಲಕವಾಗಿ ತಾಲ್ಲೂಕು ಅಮಲ್‌ದಾರ್‌ರಿಗೆ ಕೊಡಬೇಕು. ಅಮಲ್‌ದಾರ್‌ರು ಸಾಧ್ಯವಾದಷ್ಟು ಸ್ವಲ್ಪ ಸಾವಕಾಶದಿಂದ ಅವಶ್ಯವಾದ ವಿಚಾರಣೇ ನಡಿಸಿ ಸದರೀ ದರಖಾಸ್ತನ್ನು ಡಿಪ್ಯುಟಿ ಕಮಿಷನರವರ ಹುಕ್ಕುಂ ಬಗ್ಯೆ ಕಳುಹಿಸತಕ್ಕದ್ದು.

7. ಹಾಲೀ ಬಾಗಾಯತು ದರ ಮೊಕರರು ಆಗಿರುವ ಅಡಿಕೆ ಮತ್ತು ತೆಂಗಿನ ತೋಟಗಳು ಯಾವ ಕಾರಣದಿಂದಲಾದರೂ ಈ ತಾರೀಖಿನಿಂದ ಹಿಂದೆ 3 ವರ್ಷಗಳ ಲಾಗಾಯತು ಹಿಡುವಳೀ ಕೆಳಗೆ ಬಾರದೇ ಇದ್ದಲ್ಲಿ ಡೆಪ್ಯುಟಿ ಕಮ್ಮಿಷನರವರು ಅಂಥಾ ತೋಟಗಳ ಹಾಲೀ ಸ್ಥಿತಿಯನ್ನು ನೋಡಿ ನ್ಯಾಯವಾಗಿ ಮುನಾಸಬು ತೋರಿದಲ್ಲಿ 1ನೇ ಕಲಮಿನಲ್ಲಿ ನಮೂದಾಗುವ ರಿಯಾಯತೀ ಕಂದಾಯದ ಅವಧಿಯಲ್ಲಿ ಅರ್ಧಕ್ಕೆ ಹೆಚ್ಚಿಲ್ಲದಂತೆ ಹಂಗಾಮಿಯಾಗಿ ರಿಮಿಷನ್ ಕೊಡಬಹುದು.

8. ಮೇಲೆ 7ನೇ ಕಲಂಗೆ ಲಗಾವಾಗುವ ಜಮೀನುಗಳ ವಿಷಯವಲ್ಲಿ ಆ ಕಲಂನಲ್ಲಿ ನಮೂದಾಗುವದಕ್ಕಿಂತಲೂ ಜಾಸ್ತೀಯಾದ ರಿಯಾಯತೀ ತೋರಿಸತಕ್ಕದ್ದು ಅವಶ್ಯಕವೆಂದು ಡೆಪ್ಯುಟಿ ಕಮ್ಮಿಷನರವರು ಅಭಿಪ್ರಾಯಪಡುವ ಸಂದರ್ಭದಲ್ಲಿ ಅಂಥಾ ವಿಷಯಗಳನ್ನು ಅವರು ಸರ್ವೇ ಸೂಪರಿಂಟೆಂಡೆಂಟರವರ ಮೂಲಕವಾಗಿ ಗವರ್ನಮೆಂಟಿನವರ ಹುಕ್ಕುಂ ಬಗ್ಯೆ ಸ್ಪೆಷಲ್ ಆಗಿ ರಿಪೋರ್ಟು ಮಾಡತಕ್ಕದ್ದು.

9. 1ನೇ ಕಲಂನಲ್ಲಿ ನಮೂದಾಗಿರುವಂತೆ ಬಾಗಾಯತು ದರವನ್ನ ತಿಳಿದುಕೊಳ್ಳುವದು ಸಾವಕಾಶವಾಗುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಕೌಲ್ ದರಖಾಸ್ತನ್ನು ಮಂಜೂರು ಮಾಡಿ ನಂತರ ಮೊಕರರ್ ಆಗಬೇಕಾದ ಬಾಗಾಯತು ದರವನ್ನು ವ್ಯವಸ್ಥೇ ಮಾಡತಕ್ಕದ್ದು. ಇಂಥಾ ಸಂದರ್ಭದಲ್ಲಿ ಸಾಧ್ಯವಾದಷ್ಟು ಜಾಗ್ರತೆಯಾಗಿ ಬಾಗಾಯತು ದರವನ್ನು ನಂತರ ಮೊಕರರ್ ಮಾಡಿ ಮೊದಲು ಕೊಟ್ಟ ಕೌಲಿಗೆ ಬದಲಾಗಿ ಹೊಸ ಕೌಲ್ ತಯಾರುಮಾಡಿಸಿ ಅದರಲ್ಲಿ ಸದರೀ ದರವನ್ನು ನಮೂದಿಸತಕ್ಕದ್ದು.

10. ಮಲನಾಡು ತಾಲ್ಲೂಕುಗಳಲ್ಲಿ ತರಂ ದಾಖಲಾಗದೇ ಇರುವ ಸರಕಾರೀ ಬಂಜರು ಜಮೀನುಗಳನ್ನು ತತ್ಕಾಲದಲ್ಲಿ ಜಾರೀಲಿರುವ ಸ್ಪೆಷಲ್ ಬಾಗಾಯತು ದರಕ್ಕೆ ಒಳಪಡುವ ಷರತ್ತಿನ ಮೇಲೆ ವಿನಹಾ ಹೊಸದಾಗಿ ತರಂ ಮೊಕರರು ಮಾಡಿ ಸಾಗುವಳೀಬಗ್ಯೆ ಕೊಡಕೂಡದು.

ಅಪೆಂಡಿಕ್ಸ್.

1887ನೇ ಇಸವಿ ಸೆಪ್ಟಂಬರ್ ಮಾಹೇ 17ನೇ ಮರ್ಕುಂ 121ನೇ ನಂಬರು ಇಸ್ತಿಹಾರನಾಮಾ ಪ್ರಕಾರ ಕೊಡಲ್ಪಡುವ ಕೌಲ್ ನಾಮೆಯ ನಮೂನೆ:–

ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರಿಂದ ತಾಲ್ಲೂಕು
ಗ್ರಾಮದಲ್ಲಿ ವಾಸವಾಗಿರುವ ನ ಮಗ ಗೆ ಕೊಡಲ್ಪಟ್ಟ ಕೌಲ್‌ನಾಮ.

1887ನೇ ಇಸವಿ ಸೆಪ್ಟಂಬರ್ ಮಾಹೇ 17ನೇ ಮರ್ಕುಂ ನೇ ನಂಬರು ಇಸ್ತಿಹಾರ್‌ನಾಮೆಯ ಪ್ರಕಾರ ರಿಯಾಯಿತಿ ಷರತ್ತುಗಳ ಮೇಲೆ ಹೊಸದಾಗಿ ಸಸಿಗಳನ್ನು ಹಾಕಿ ಬಾಗಾಯಿತು ಸಾಗುವಳೀ *[ಅಭಿವೃದ್ಧಿ] ಮಾಡುವ ಬಗ್ಯೆ ಈ ಕೆಳಗೆ ನಮೂದಾಗುವ ಜಮೀನನ್ನು ನಿನಗೆ ಕೊಡಲ್ಪಟ್ಟಿದೆ.

ಜಮೀನಿನ ತಪಶೀಲು.

ತಾಲ್ಲೂಕು.	ಗ್ರಾಮ.	ಜಮೀನಿನ ನಂಬರು.	ಬೀಜವರಿ.		ಸರಕಾರದ ಬಂಜರು ಜಮೀನು ಆಕಾರ ಕಂಡದ್ದೋ ಕಾಣದ್ದೋ.	ಜಮೀನು ಆಕಾರಕಂಡದ್ದಾದರೆ				ಷರಾ.
			ಎಕರೆ.	ಗುಂಟೆ.		ಹಾಲೀ ಖುಷ್ಕಿ ತರಿ ಯಾ ಬಾಗಾಯಿತೇ.	ಹಾಲಿ ಆಕಾರ.			
							ರೂ.	ಆ.	ಪೈ.	

2. ಮೇಲ್ಕಂಡ ಜಮೀನಿಗೋಸ್ಕರ ಈ ಕೆಳಗೆ ನಮೂದಾಗುವ ಮೇರೆ ಕಂದಾಯವನ್ನು ಕೊಡತಕ್ಕದ್ದು.

ಸಂವತ್ಸರ.	ಇಸವಿ.	ಸಾಲೀಯಾನಾ ಕಂದಾಯ. ರೂ.	ಆ.	ಪೈ.	ಮೊಕರರಾಗಿರುವ ಕಂದಾಯದ ದರ.
1	2	3			4
1ನೇ ಸಂವತ್ಸರ	188—8	..	..	..	ಎಕರೆ 1ಕ್ಕೆ 4 ಆಣೆ ಮೇರೆ.
2ನೇ ಡಿಟೋ					ಡಿಟೋ
3ನೇ ಡಿಟೋ					ಡಿಟೋ
4ನೇ ಡಿಟೋ					ಡಿಟೋ
5ನೇ ಡಿಟೋ					ಡಿಟೋ
6ನೇ ಡಿಟೋ					ಡಿಟೋ
7ನೇ ಡಿಟೋ					ಡಿಟೋ
8ನೇ ಡಿಟೋ					ಡಿಟೋ
9ನೇ ಡಿಟೋ					ಡಿಟೋ
10ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಚತುರ್ಥಾಂಶ]
11ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಅರ್ಧಾಂಶ]
12ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಮುಕ್ಕಾಲುಭಾಗ]
13ನೆ ಡಿಟೋ					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಚತುರ್ಥಾಂಶ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ಪೂರಾ ದರ]
14ನೇ ಡಿಟೋ					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಅರ್ಧಾಂಶ
15ನೇ ಡಿಟೋ					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಮುಕ್ಕಾಲು ಭಾಗ.
16ನೇ ಸಂವತ್ಸರದ ಲಾಗಾಯತು					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ಪೂರಾ ದರ.

ನೋಟ್ * 7ನೇ ರೂಲಿನ ಪ್ರಕಾರ ಕೊಡಲ್ಪಡುವ ಕೌಲ್‌ನಾಮಾಗಳಲ್ಲಿ ಇದು ದಾಖಲಾಗತಕ್ಕದ್ದು.

ನೋಟ್ † 1 B ರೂಲ್ ಮೇರೆ ಕೊಡಲ್ಪಡುವ ಮೈದಾನಿನಲ್ಲಿರುವ ಅಡಿಕೇ ತೋಟಗಳಿಗೂ ಸಮಸ್ತ ತೆಂಗಿನ ತೋಟಗಳಿಗೂ ಇದು ದಾಖಲಾಗತಕ್ಕದ್ದು.

3. ಈ ತಖ್ತೆಯ 4ನೇ ಹೆಡ್ಡಿನಲ್ಲಿ ನಮೂದಾಗಿರುವ ಬಾಗಾಯಿತು ಕಂದಾಯದ ದರವು ತಾಲ್ಲೂಕಾಮುಳೆ *[ಸರ್ವೇ ಸೆಟ್ಲಮೆಂಟ್ ವೇಳೆ] ಸರ್ವೇ ಸೆಟ್ಲಮೆಂಟ್ ತಿದ್ದುಪಾಟಾಗುವ ವೇಳೆ ಬದಲಾವಣೆಗೆ ಒಳಪಟ್ಟಿರುತ್ತೆ.

4. ಈ ತಾರೀಖು ಲಾಗಾಯಿತು 2†(5) ಸಂವತ್ಸರಗಳೊಳಗೆ ಮೇಲ್ಕಂಡ ಎಲ್ಲಾ ಪ್ರದೇಶದಲ್ಲಿಯೂ ಸಸಿಗಳನ್ನ ಹಾಕಿರಬೇಕು ಇದಕ್ಕೆ ತಪ್ಪಿದಲ್ಲಿ 3ನೇ †[6ನೇ] ಸಂವತ್ಸರದ ಲಾಗಾಯಿತು ನೀನು ತೆಗದುಕೊಂಡಿರುವ ವಿಶಿಷ್ಟ ಜಮೀನಿಗೂ ಬಾಗಾಯಿತು ಪೂರಾ ದರವಾದ ಎಕರೆ 1ಕ್ಕೆ ರೂಪಾಯಿನಂತೆ ನಿನ್ನಿಂದಾ ಪೂರಾ ಕಂದಾಯ ವಸೂಲ್ಮಾಡುವದು. ‡ [ಶಿವಾಯಿ ಮೇಲ್ಕಂಡ ಜಮೀನಿನಲ್ಲಿ ಈಗ ಇರುವ ಮರಗಳ ಕಿಮ್ಮತ್ತಿನ ಅಂದಾಜಾ ಮೊಬಲಗು ರೂಪಾಯಿಗಳು ಜುರ್ಮಾನೆಯು ತರೀಕ್ ಕಂದಾಯದ ಬಾಕಿಯಂತೆ ನಿನ್ನಿಂದಾ ವಸೂಲ್‌ಮಾಡಲ್ಪಡುವದು.]

5. ನೀನು ತೆಗದುಕೊಂಡಿರುವ ಜಮೀನ್ ವಿಶಿಷ್ಟಕ್ಕೂ 4ನೇ ಪ್ಯಾರಾದಲ್ಲಿ ನಮೂದಾಗಿರುವ ವಾಯಿದೆ ಒಳಗೆ ಸಸಿಗಳನ್ನು ಹಾಕಲು ಅನುಕೂಲಿಸದಿದ್ದರೆ ಮೇಲ್ಕಂಡ ಜಮೀನಿನ ಪೈಕಿ ಎಷ್ಟು ಭಾಗವನ್ನಾದರೂ 10 ಎಕರೆಗಳಿಗೆ ಕಮ್ಮಿ ಇಲ್ಲದಂತೆ ಒಂದೇ ಪ್ರದೇಶದಲ್ಲಿರತಕ್ಕ ತಾಕುಗಳನ್ನು ನೀನು ರಾಜೀನಾಮೆ ಕೊಡಬಹುದು.

6. ಎರಡನೇ ಪ್ಯಾರಕ್ಕೆ ಸೇರಿರುವ ತಖ್ತೆಯಲ್ಲಿ ನಮೂದಾಗಿರುವ ಮೇರೆ ಸರಕಾರಕ್ಕೆ ಸಾಲೀಯಾನಾ ಸಲ್ಲಬೇಕಾದ ಕಂದಾಯವು ಈ ಡಿಸ್ಟ್ರಿಕ್ಟಿನಲ್ಲಿ ಕಂದಾಯದ ವಸೂಲಿಗೋಸ್ಕರ ಮೊಕರರಾಗಿರುವ ಖಿಸ್ತುಬಂದಿ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

ಈ ಕೌಲ್‌ನಾಮಾ ನಮ್ಮ ದಸ್ಕತ್ ಮೊಹರ್‌ನಿಸಿ 18 ನೇ ಇಸವಿ ಮಾಹೆ ಮಾರ್ಕಂನಲ್ಲು ಕೊಡಲ್ಪಟ್ಟಿದೆ.

ಡೆಪ್ಯುಟಿ ಕಮ್ಮಿಷನರ್,
ಡಿಸ್ಟ್ರಿಕ್ಟು.

ನೋಟ್ * ಸೆಟ್ಲಾದ ತಾಲ್ಲೂಕುಗಳಲ್ಲಿ ಇದನ್ನು ದಾಖಲ್ಮಾಡಲವಶ್ಯಕವಿಲ್ಲ.

† 50 ಎಕರೆಗಳಿಗಿಂತ ಜಾಸ್ತಿಯಾಗಿರುವ ಜಮೀನಿನ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

‡ ಹತ್ತು ರೂಪಾಯಿಗಳಿಗಿಂತ ಜಾಸ್ತಿ ಬೆಲೆಯಾಗುವಷ್ಟು ಮರಗಳಿರುವ ಸರ್ಕಾರದ ಬಂಜರು ಜಮೀನು ಕೊಡಲ್ಪಡುವ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

ತಾರೀಖು 3ನೇ ಅಕ್ಟೋಬರ್ 1887.

ನಂ. 125.—ಮ॥ ಪಂಚನಾಥರಾಯರು ಬೆಂಗಳೂರು ಡಿಸ್ಟ್ರಿಕ್ಟು ಪೋಲೀಸ್ ಸೂಪರಿಂಟೆಂಡೆಂಟರ ಆಫೀಸಿನ ಚಾರ್ಜನ್ನ 1887ನೇ ಇಸವಿ ಸೆಪ್ಟಂಬರ್ 14ನೇ ತಾರೀಖಿನ ಮಧ್ಯಾಹ್ನ ಒಪ್ಪಿಸಿ ಮ॥ ಕುಪ್ಪುಸಾಮಿ ಮೊದಲಿಯಾರ್ರು ಪುನಃ ವಹಿಸಿರುತ್ತಾರೆ.

ತಾರೀಖು 4ನೇ ಅಕ್ಟೋಬರ್ 1887.

ನಂ. 126.—ಕೋಲಾರ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಸರಜಿಯನ್ ಮ॥ ಪಿ. ಕೆ. ಸ್ವಾಮಿನಾಥಯ್ಯರ್ ಯವರಿಗೆ, 1887ನೇ ಇಸವಿ ಸೆಪ್ಟಂಬರ್ 9ನೇ ಮರ್ಸ್ಕುಮಿನ C 1187ನೇ ನಂ. ವುಳ್ಳ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ 15 ದಿವಸಗಳ ಪ್ರಿವಿಲೀಜ್ ರಜಾವನ್ನ ಸೆಪ್ಟಂಬರ್ 6ರ ಲಾಗಾಯತು ಉಪಯೋಗಿಸಿಕೊಂಡು ಅದೇ ತಿಂಗಳ 20ರಲ್ಲಿ ಪುನಃ ಕೆಲಸದ ಮೇಲೆ ಹಾಜರಾಗಿರುತ್ತಾರಾಗಿ ಅವರು ಉಪಯೋಗಿಸಿಕೊಳ್ಳದ ಒಂದು ದಿವಸದ ರಜಾವನ್ನ ಇದರಿಂದ ರದ್ದುಪಡಿಸಲ್ಪಟ್ಟಿರುತ್ತೆ.

ತಾರೀಖು 5ನೇ ಅಕ್ಟೋಬರ್ 1887.

ನಂ. 127.—ಮ॥ ಅಬ್ದುಲ್ ರಹಿಮಾನ್ಸಾರವರು ಮೈಸೂರು ಡಿಸ್ಟ್ರಿಕ್ಟು ವ ಟ್ರೆಜರೀ ಚಾರ್ಜನ್ನು ಮಾಹೇ ಗುಜಸ್ತಾ 25ನೇ ತಾರೀಖಿನ ಪ್ರಾತಃಕಾಲ ಒಪ್ಪಿಸಿ ಮ॥ ಟಿ. ಆನಂದರಾಯರವರು ವಹಿಸಿರುತ್ತಾರೆ.

ನಂ. 128.—ಈ ಕೆಳಗೆ ಬರುವ ಸೆಕ್ಷನ್‌ಗಳು ಸರ್ವೆ ಮ್ಯಾನ್ಯುಯಲಿನ XVII ವ XVIII ಸೆಕ್ಷನ್‌ಗಳಿಗೆ ಬದಲಾಗಿ ಸೇರಿಸಲ್ಪಡತಕ್ಕದ್ದು.

XVII. ಯಿರಿಗೇಷನ್ ಸೆಸ್ಸಿಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲಿ ಇನಾಂ ತರೀಕ ಯಿರತಕ್ಕ ತಮಾಂ ತರೀ ಜಮೀನುಗಳ ಐಯಿಂದ ಠರಾವ್ ಆಗತಕ್ಕ ಸರ್ವೆ ಆಕಾರದಲ್ಲಿ ಬದಸ್ತೂರು ಸೇರಿಸಲ್ಪಡತಕ್ಕದ್ದು, ಮತ್ತು ಅಂಥಾ ಆಕಾರದ 1/7ರ ಭಾಗವು ಬದಸ್ತೂರು ಜೋಡೀಮೇಲೆ ಪರಂತು "ಯಿರಿಗೇಷನ್ ಸೆಸ್ಸಿಗೆ ಸಮಾನಾದ ಮೊಬಲಗು" ಯಂಬ ಹೆಸರಿನಿಂದ ಮತ್ತು ಅಂಥಾ ಜಮೀನು ಯಾ ಗ್ರಾಮಗಳ ಮೇಲೆ ಅಲಾಹಿದಾ ವಸೂಲ್ ಮಾಡಲ್ಪಡಬೇಕಾದ ಕ್ವಿಟ್‌ರೆಂಟ್ ದೇಖೀಲ್ ವಸೂಲ್‌ಮಾಡಲ್ಪಡತಕ್ಕದ್ದಲ್ಲದೆ "ಡಿಸ್ಟ್ರಿಕ್ಟು ಯಿರಿಗೇಷನ್ ಫಂಡ್" ಹೆಡ್ಡಿಗೆ ಲೆಖ್ಖದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮೀನುಗಳು ಪೂರಾ ಇನಾಂ ಗ್ರಾಮಗಳಲ್ಲಿ ಯಿದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ಒದಗಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಮೊಬಲಗಾಗಲಿ ಸರ್ಕಾರಕ್ಕೆ ತೆರಬೇಕಾದ್ದಿಲ್ಲವು.

ಪರಂತು ಯಿರಿಗೇಷನ್ ಸೆಸ್ಸಿಯಾನೆ ನೀರು ಸರದಿಯನ್ನು ಠರಾವ್ ಮಾಡುವದಕ್ಕೋಸ್ಕರ ಸರ್ವೆ ಇಲಾಖೆಯವರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮಗಳಲ್ಲಿರತಕ್ಕ ಅಂಥಾ ತರೀ ಜಮೀನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು. ಮತ್ತು ತಮಾಂ ಇನಾಂ ಯಾ ಇತರ ತರೀ ಜಮೀನುಗಳ ಸರ್ವೆ ಆಕಾರದಲ್ಲಿ ಅವುಗಳ ಮೇಲೆ ಠರಾವ್ ಮಾಡಲ್ಪಡಬಹುದಾದ ಯಾವದಾದರೂ ಅಲಾಹಿದಾ ನೀರು ಸರದಿಯೂ ಅಡಗಿ ಯಿರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮಗಳಿಗೂ ಮತ್ತು (ಸರ್ವಮಾನ್ಯ ಯಾ ಜೋಡೀ) ಇನಾಂ ಗ್ರಾಮಗಳಿಗೂ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾಯಂಗುತ್ತಾ ಮೊಬಲಗಿ ಮೇಲೂ ಇನಾಂ ಗ್ರಾಮಗಳ ವಿಷಯದಲ್ಲಿ ಇನಾಂ ಗ್ರಾಮಗಳ ಆಕಾರದಮೇಲೂ ವಸೂಲ್ ಮಾಡಲ್ಪಡತಕ್ಕದ್ದು.

ನಂ. 129.—1875ನೇ ಇಸವಿ ಮೇ 7ನೇ ಮರ್ರ್ಕುಂ 62ನೇ ನಂಬರುಳ್ಳ ಮಾಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಂದಿಗೆ ಪಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟು ಯಿರಿಗೇಷನ್ ಸೆಸ್ ಫಂಡಿನ ಅಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟು ಕಮ್ಮಿಟಿಗಳವರು ಅನುಸರಿಸತಕ್ಕ ಬಗ್ಯೆ ಏರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರೆಗೆ ತಿದ್ದುಪಾಟಾಗಿರುತ್ತದೆ:—

VI. ಇನಾಂ ವ ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ಸಾಗುವಳೀ ಆಗುವ ತರೀ ಜಮೀನಿಗಾಗಿ ನೀರು ಸರದಿಯನ್ನ ತೆರಬೇಕಾದ ಆವಶ್ಯಕತೆ ತಪ್ಪಿರುತ್ತದೆಯಾಗಿ ಅಂಥಾ ಕೆರೆಗಳಿಗೆ ಕಾಲ ಕಾಲಕ್ಕೆ ರಿಪೇರಿ ಮಾಡುವಂಥಾ ವ ಅವುಗಳನ್ನ ಒಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂಥಾ ಜವಾಬ್ದಾರಿಯು ಖಂಡಿತವಾಗಿ ಜಾರೀಯಲ್ಲಿ ತರಲ್ಪಡತಕ್ಕದ್ದು. ಒಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ಒಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಆವಶ್ಯಕವಾದ ಕಾಮಗಾರಿಗಳನ್ನ ಸಕಾಲದಲ್ಲಿ ಸಾಧ್ಯವಾದ ತ್ವರ್ಯದಿಂದಲೂ ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂಥಾ ಕಾಮಗಾರೀ ವಗೈರೇ ಕೆಲಸವನ್ನ ಗವರ್ನಮೆಂಟಿನವರೇ ತೆಗದುಕೊಂಡು ಖುದ್ದು ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಆಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

ತಾರೀಖು 6ನೇ ಅಕ್ಟೋಬರ್ 1887

ನಂ. 130.—ಈಚಿಗೆ ನಡೆದ ಸರ್ಕಾರೀ ಪರೀಕ್ಷೆಗೆ ಹಾಜರಾಗಿದ್ದ ಇದರಡೀ ನಮೂದಾಗುವ ಆಫೀಸರರುಗಳಿಗೆ ಅವರವರ ಹೆಸರಿನ ಬಾಜೂದಲ್ಲಿ ಕಂಡ ಮೇರಿಗೆ ಯಿಮ್ತಿಹಾನ್ ರಜಾ ಕೊಡಲ್ಪಟ್ಟಿರುತ್ತದೆ.

	ಯಿಂದ.	ವರಿಗೆ.
ಹಾಸನ ಅ|| ಕಮ್ಮಿಷನರ್ ಮೆ|| ಪೊನ್ನರಂಗಂ ಮೊದಲಿಯಾರು	1887ನೇ ಜೂ 9ರ ಲಾ||	1887ನೇ ಜೂ 18ರ ವರಿಗೆ.
ಆನೇಕಲ್ ಅಮಲ್ದಾರ್ ಸೈಯ್ಯದ್ ಅಮೀರಹಸನ್ ..	ಡಿಟ್ಟೋ 12	ಡಿಟ್ಟೋ 17
ಚನ್ನಪಟ್ಣ ಡೆಪ್ಯೂಟಿ ಅಮಲ್ದಾರ್ ರಾಘವೇಂದ್ರರಾವ್ ..	ಡಿಟ್ಟೋ 12	ಡಿಟ್ಟೋ 18
ಗ್ರಾಮದ ಡೆಪ್ಯೂಟಿ ಅಮಲ್ದಾರ್ ನರಶಿಹ್ಮಮೂರ್ತಿ ..	ಡಿಟ್ಟೋ 8	ಡಿಟ್ಟೋ 20
ಹಿರಿಯೂರ್ ಅಮಲ್ದಾರ್ ಮೀರ್ಕಮಾಲುದ್ದೀನ್ ಅಲ್ಲೀಖಾನ್ ..	ಡಿಟ್ಟೋ 14	ಡಿಟ್ಟೋ 16
ಹೊಳಲಕೆರೇ ಅಮಲ್ದಾರ್ ಅಹಮ್ಮದ್ ಅಲ್ಲಿ ..	ಡಿಟ್ಟೋ 13	ಡಿಟ್ಟೋ 15
ದಾವಣಗೆರೇ ಅಮಲ್ದಾರ್ ಹೊನ್ನಪ್ಪನಾಯಡು ..	ಡಿಟ್ಟೋ 12	ಡಿಟ್ಟೋ 18
ಜಗಲೂರು ಅಮಲ್ದಾರ್ ಸೀತೂರಾವ್ ..	ಡಿಟ್ಟೋ 13	ಡಿಟ್ಟೋ 15
ತಿರಮಕೂಡ್ಲು ಅಮಲ್ದಾರ್ ಕೃಷ್ಣಯ್ಯಂಗಾರ್ ..	ಡಿಟ್ಟೋ 12	ಡಿಟ್ಟೋ 15
ಕೋಲಾರ ಅಮಲ್ದಾರ್ ಮೀರ್ನಿಜಾಮುದ್ದೀನ್ ಅಲ್ಲೀಖಾನ್ ..	ಡಿಟ್ಟೋ 14	ಡಿಟ್ಟೋ 17
ಬಾಗೇಪಲ್ಲೀ ಅಮಲ್ದಾರ್ ಸೀತಾರಾಮಯ್ಯ ..	ಡಿಟ್ಟೋ 11	ಡಿಟ್ಟೋ 22
ಚಿಕ್ಕನಾಯಕನಹಳ್ಳೀ ಅಮಲ್ದಾರ್ ಶ್ರೀಕಂಠಯ್ಯ ..	ಡಿಟ್ಟೋ 10	ಡಿಟ್ಟೋ 18
ಶಿರಾ ಅಮಲ್ದಾರ್ ವೆಂಕಟಾಚಲಯ್ಯ ..	ಡಿಟ್ಟೋ 11	ಡಿಟ್ಟೋ 16
ಕುಣಿಗಲ್ ಅಮಲ್ದಾರ್ ಕೃಷ್ಣರಾವ್ ..	ಡಿಟ್ಟೋ 11	ಡಿಟ್ಟೋ 20
ಪಾವಗಡ ಅಮಲ್ದಾರ್ ರಾಮಯ್ಯಂಗಾರ್ ..	ಡಿಟ್ಟೋ 8	ಡಿಟ್ಟೋ 21

ನಂ. 132.—ಈ ಕೆಳಗೆ ನಮೂದಾಗುವ ಉಮೇದವಾರರು, 1887ನೇ ಇಸವಿ ಸೆಪ್ಟಂಬರ್ 15ನೇ ತಾರೀಖು ಲಾಗಾಯತು 3ನೇ ಕ್ಲಾಸ್ ಅಸಿಸ್ಟೆಂಟರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಪಿ. ರಾಜರತ್ನಂ ಪಿಳ್ಳೆ. ವೀ. ಅರಿವಾನಂದಂ.

ತಾರೀಖು 7ನೇ ಅಕ್ಟೋಬರ್ 1887.

ನಂ. 133.—ಮೆ|| ಬಿ. ಕೃಷ್ಣಯ್ಯಂಗಾರ್ರವರು, ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಕೋರ್ಟು ವ ಆಫೀಸಿನ ಚಾರ್ಜನ್ನ 1887ನೇ ಇಸವಿ ಸೆಪ್ಟಂಬರ್ ತಾರೀಖು 30ನೇ ಮಧ್ಯಾನ್ಹಾತ್ಪರ ಒಪ್ಪಿಸಿ ಮೆ|| ಕೆ. ರಾಮಚಂದ್ರರಾಯರವರು ವಹಿಸಿರುತ್ತಾರೆ.

ಮ್ಯುನಿಸಿಪಲ್.

ನಂ. 131.—ಮೈಸೂರ ಷಹರಿನಲ್ಲಿ, ಕೆಲವು ಬೀದಿಗಳನ್ನ ಏರ್ಪಡಿಸತಕ್ಕ ಬಗ್ಯೆ ಈ ಕೆಳಗೆ ವಿವರಿಸೋಣಾದ ಜಮೀನ್ಗಳು, ಸರ್ಕಾರಕ್ಕೆ ಬೇಕಾಗಿರುತ್ತೆಂಬದಾಗಿ 1870ನೇ ಇಸವಿ 10ನೇ ಲ್ಯಾಂಡ್ ಅಕ್ವಿಜೇಷನ್ ಆಕ್ಟಿನ ಸೆಕ್‌ಷನ್ ಅನುಸರಿಸಿ ಯಿದರಿಂದ ಪ್ರಕಟಿಸಲ್ಪಟ್ಟು ಯಿಧೆ.

ನಂಬರ.	ಜಮೀನ್ ಇರತಕ್ಕ ಭಾಗ.	ಮಾಲೀಕರ ಹೆಸರುಗಳು.	ವಿಸ್ತೀರ್ಣ.		ತಪಶೀಲು.	ಯಾವ ಕೆಲಸಕ್ಕೆ ಬೇಕಾದ್ದು.	ಚಾತಕ್ಸರ್ಸ್.
			ಉತ್ತರದಕ್ಷಿಣ ಗಜ.	ಪೂರ್ವಪಶ್ಚಿಮ ಗಜ.			
1	ಕಿಲ್ಲೆಯಲ್ಲಿ ಮೋತೀಖಾನೆ ಬೀದಿ	ನಂಜನಗೂಡು ನಂಜುಂಡಪ್ಪ.	24	60	ತಖ್ತಪೋಷ್‌ಮನೆಯ 40 ಅಂಕಣಗಳು 11 ಅಂಕಣದ ತಾರಸೀ ಡಿಟ್ಟೋ 1 ಭಾವಿ	ಚರಾಂಡೀನಲ್ಲಿ ಹಾಕುವಬಗ್ಯೆ	ಪೂರ್ವಕ್ಕೆ ರಾಮಣ್ಣನ ಮನೆ, ದಕ್ಷಿಣಕ್ಕೆ ಮೋತೀಖಾನೆಬೀದಿ, ಪಶ್ಚಿಮಕ್ಕೆ ಯಿಬ್ಬನಶೆಟ್ಟಿ ಮನೆ, ಉತ್ತರಕ್ಕೆ ರಾಮಣ್ಣನ ಮನೆ
2	ಡಿಟ್ಟೋ	ರಾಮಣ್ಣ	18	24	3 ಹಂಚಿನ ಅಂಕಣಗಳು	ಡಿಟ್ಟೋ	ಪೂರ್ವಕ್ಕೆ ತಿರುಮಲರಂಗಾಚಾರೀ ಮನೆ, ದಕ್ಷಿಣಕ್ಕೆ ನಂಜುಂಡಪ್ಪನ ಮನೆ, ಪಶ್ಚಿಮಕ್ಕೆ ರಾಮಣ್ಣನ ಮನೆ, ಉತ್ತರಕ್ಕೆ ಅನಂತಯ್ಯನ ಮನೆ
3	ಡಿಟ್ಟೋ	ಅನಂತಯ್ಯ	11	16	ಜಮೀನು	ಡಿಟ್ಟೋ	ಪೂರ್ವಕ್ಕೆ ಗಲ್ಲಿ, ದಕ್ಷಿಣಕ್ಕೆ ರಾಮಣ್ಣನ ಮನೆ, ಪಶ್ಚಿಮಕ್ಕೆ ಅನಂತಯ್ಯನ ಮನೆ, ಉತ್ತರಕ್ಕೆ ರಾಮಾಚಾರಿ ಮನೆ.
4	ಡಿಟ್ಟೋ	ಪೆನಗೊಂಡೆ ರಾಮಾಚಾರ್	11	36	ಹಂಚಿನ 3 ಅಂಕಣ ತಾರಸೀವರಾಂಡಾವಿನ 3 ಅಂಕಣ, ತಖ್ತಪೋಷಿನ 2 ಅಂಕಣ ಹಂಚಿನ 2 ಅಂಕಣ	ಡಿಟ್ಟೋ	ಪೂರ್ವಕ್ಕೆ ಗೋಪಾಲಾಚಾರಿ ಮನೆ, ದಕ್ಷಿಣಕ್ಕೆ ಅನಂತಯ್ಯನ ಮನೆ, ಪಶ್ಚಿಮಕ್ಕೆ ರಾಮಾಚಾರ್ರ ಮನೆ, ಉತ್ತರಕ್ಕೆ ವೆಂಕಟಸುಬಯ್ಯನ ಮನೆ
5	ವೆಂಕಟಸುಬಯ್ಯನವರ ಸಂದಿ	ದಾಸಂಭಟ್ಟ	33	46	ತಖ್ತಪೋಷ್ 11 ಅಂಕಣ, ಹಂಚಿನ 15 ಅಂಕಣ ಡಿಟ್ಟೋ ವರಾಂಡ 5 ಅಂಕಣ ತಾರಸೀ 1 ಅಂಕಣ ಭಾವಿ 1	ಡಿಟ್ಟೋ	ಪೂರ್ವಕ್ಕೆ ರಾಮಾಶಾಸ್ತ್ರೀ ಮನೆ, ದಕ್ಷಿಣಕ್ಕೆ ವೆಂಕಟಸುಬಯ್ಯನವರ ಸಂದಿ, ಪಶ್ಚಿಮಕ್ಕೆ ಡಿ. ಕೃಷ್ಣಪ್ಪನ ಮನೆ, ಉತ್ತರಕ್ಕೆ ಮುನಿಯಾಜಟ್ಟೀ ಬೀದಿ
6	ಕಿಲ್ಲೆಯಲ್ಲಿ ಮುನಿಯಾಜಟ್ಟೀ ಬೀದಿ	ನಾಗೇಶರಾವ್	10	60	ಹಂಚಿನ ವಪ್ಪಾರದ 1 ಅಂಕಣ, 1 ಭಾವಿ	ಡಿಟ್ಟೋ	ಪೂರ್ವಕ್ಕೆ ಮುರಾರಿರಾಯರ ಮನೆ, ದಕ್ಷಿಣಕ್ಕೆ ಸುಬ್ಬರಾಯರ ಜಮೀನು, ಪಶ್ಚಿಮಕ್ಕೆ ನಾಗೇಶರಾಯರ ಮನೆ, ಉತ್ತರಕ್ಕೆ ಮುನಿಯಾಜಟ್ಟೀಬೀದಿ
7	ಮೋತೀಖಾನಾ ಬೀದಿ	ಸುಬ್ಬರಾವ್	18	30	ಜಮೀನು	ಡಿಟ್ಟೋ	ಪೂರ್ವಕ್ಕೆ ಸುಬ್ಬರಾಯರ ಮನೆ, ದಕ್ಷಿಣಕ್ಕೆ ಗರಳಪುರಿ ಶಾಸ್ತ್ರೀಗಳ ಮನೆಯಹಿತ್ತಲು, ಪಶ್ಚಿಮಕ್ಕೆ ವೆಂಕಟಕೃಷ್ಣೆಅರಸಿನವರ ಮನೆ, ಉತ್ತರಕ್ಕೆ ನಾಗೇಶರಾಯರ ಮನೆ
8	ಡಿಟ್ಟೋ	ಗರಳಪುರಿಶಾಸ್ತ್ರಿ	18	33	ಹಂಚಿನ ವಪ್ಪಾರ 1 ಅಂಕಣ	ಡಿಟ್ಟೋ	ಪೂರ್ವಕ್ಕೆ ಗರಳಪುರಿಶಾಸ್ತ್ರಿಗಳ ಮನೆ, ದಕ್ಷಿಣಕ್ಕೆ ಮೂರ್ತಪ್ಪನ ಮಗ ನರಸಿಂಹಮೂರ್ತಿ ಮನೆ, ಪಶ್ಚಿಮಕ್ಕೆ ವೆಂಕಟಕೃಷ್ಣೇಅರಸಿನವರ ಮನೆ, ಉತ್ತರಕ್ಕೆ ಸುಬ್ಬರಾಯರ ಮನೆ

ನಂಬರ್.	ಜಮೀನ್ ಇರತಕ್ಕ ಭಾಗ.	ಮಾಲೀಕರ ಹೆಸರುಗಳು.	ವಿಸ್ತೀರ್ಣ. ಪೂರ್ವ ಪಶ್ಚಿಮ	ವಿಸ್ತೀರ್ಣ. ದಕ್ಷಿಣ ಉತ್ತರ	ತಪಶೀಲು.	ಯಾವ ಬಾಬ್ತಿಗೆ ಸೇರಿದ್ದು	ಚೌತರ್ಫ.
9	ಮೋತೀಖಾನಾ ಬೀದಿ	ಮೂರ್ತೆಪ್ಪನ ಮಗ ನೃಸಿಂಹ ಮೂರ್ತಿ	48 48	30 31	ತಾರಸೀ ಮನೆಯ 3 ಅಂಕಣ ತಖ್ತೆಪೋಷ್ 21 ಅಂಕಣ ಹಂಚಿನ 2 ಅಂಕಣ ಬಂಜರ್ ಜಮೀನು	ಚರಾಂಡೀನಲ್ಲಿ ಹಾಕುವ ಬಗ್ಯೆ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಮೋತೀಖಾನೆ ಬೀದಿ, ಪಶ್ಚಿಮಕ್ಕೆ ವೆಂಕಟಕೃಷ್ಣೇಅರಸಿನವರ ಮನೆ, ಉತ್ತರಕ್ಕೆ ಗರಳಪುರಿಶಾಸ್ತ್ರಿಗಳ ಮನೆ
10	ಡಿಟೋ	ಕಪನೀಪತಿ ಶಾಸ್ತ್ರಿ	26	66	ಹಂಚಿನ 16 ಅಂಕಣ ಡಿಟೋ ಮಪ್ಪಾರ 2 ಅಂಕಣ 1 ಭಾವಿ	ಡಿಟೋ	ಪೂರ್ವಕ್ಕೆ ವೆಂಕಟಸುಬಯ್ಯನ ಮನೆ, ದಕ್ಷಿಣಕ್ಕೆ ಸುಬ್ಬಣ್ಣನ ಮನೆ, ಪಶ್ಚಿಮಕ್ಕೆ ರಘುಪತಿ ಶಾಸ್ತ್ರಿಗಳ ಮನೆ, ಉತ್ತರಕ್ಕೆ ಮೋತೀಖಾನೆ ಬೀದಿ
11	ಡಿಟೋ	ಚಿಕ್ಕಲಿಂಗರಾಜೇಅರಸಿನವರು	22 20	33 20	ಹಂಚಿನ 9 ಅಂಕಣ ಜಮೀನು	ಡಿಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಮೋತೀಖಾನೆ ಬೀದಿ ಪಶ್ಚಿಮಕ್ಕೆ ಶಾಮರಾಯರ ಮನೆ, ಉತ್ತರಕ್ಕೆ ಮಾದಪ್ಪಶಾಸ್ತ್ರಿ ಮನೆ
12	ಡಿಟೋ	ಮಾದಪ್ಪ ಶಾಸ್ತ್ರಿ	18	22	ತಖ್ತೆಪೋಷ್ 5 ಅಂಕಣ ಹಂಚಿನ 2 ಅಂಕಣ	ಡಿಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಲಿಂಗರಾಜೇ ಅರಸಿನವರ ಲಾಯ, ಪಶ್ಚಿಮಕ್ಕೆ ಶಾಮರಾಯ ಬಂಜರ್ ಜಮೀನು, ಉತ್ತರಕ್ಕೆ ಸರಕಾರ್ ಜಮೀನು
13	ವೀಣೇ ವೆಂಕಟಸುಬ್ಬಯ್ಯನವರ ಬೀದಿ	ಸುಬ್ಬಣ್ಣ	30	34	ತಾರಸೀ 7 ಅಂಕಣ ತಖ್ತೆಪೋಷ್ 12 ಅಂಕಣ ಹಂಚಿನದು 15 ಅಂಕಣ 1 ಭಾವಿ	ಡಿಟೋ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಸರಕಾರದ ಜಮೀನು, ಪಶ್ಚಿಮಕ್ಕೆ ವೆಂಕಟರಮಣಯ್ಯನ ಮನೆ, ಉತ್ತರಕ್ಕೆ ವೀಣೇ ವೆಂಕಟಸುಬಯ್ಯನವರ ಗಲ್ಲಿ
14	ಡಿಟೋ	ಅಗರದ ಕೃಷ್ಣಪ್ಪನ ಹೆಂಡತಿ ಶಂಕರಮ್ಮ	43	20	ಜಮೀನು 1 ಭಾವಿ	ಡಿಟೋ	ಪೂರ್ವಕ್ಕೆ ಸುಬ್ಬಯ್ಯನ ಮನೆ, ದಕ್ಷಿಣಕ್ಕೆ ವೆಂಕಟಸುಬಯ್ಯನ ಬೀದಿ, ಪಶ್ಚಿಮಕ್ಕೆ ರಾಮಶಾಸ್ತ್ರಿ ಮನೆ, ಉತ್ತರಕ್ಕೆ ವೆಂಕಟಶಾಸ್ತ್ರಿ ಮನೆ
15	ಮುನಿಯಾಜಟ್ಟೀ ಬೀದಿ	ವೆಂಕಟಶಾಸ್ತ್ರಿ	45	27	ತಖ್ತೆಪೋಷ್ 4 ಅಂಕಣ ಹಂಚಿನದು 8 ಅಂಕಣ ಮಪ್ಪಾರ 3 ಅಂಕಣ	ಡಿಟೋ	ಪೂರ್ವಕ್ಕೆ ಚಿನ್ನಪ್ಪ ಜೋಯಿಸರಮನೆ, ದಕ್ಷಿಣಕ್ಕೆ ಶಂಕರಮ್ಮನ ಮನೆ, ಪಶ್ಚಿಮಕ್ಕೆ ಸುಬ್ಬರಾಯರ ಮನೆ, ಉತ್ತರಕ್ಕೆ ಮುನಿಯಾಜಟ್ಟಿ ಬೀದಿ.

ಬಮೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ಮೈಸೂರು ದಿವಾನರವರ ಪ್ರೊಸಿಡಿಂಗ್ಸ್ ರೆವಿನ್ಯೂ ಇಲಾಖಾ.

ಆರ್ಡರ್ ನಂಬರ್ 3786—95—101 ಮುಕ್ಕಾಂ 1ನೇ ಸೆಪ್ಟಂಬರ್ 1887ನೇ ಇಸವಿ ಮೊಕ್ಕಾಂ ಬೆಂಗಳೂರು.

1887ನೇ ಇಸವಿ ಫಿಬ್ರುವರೀ 11ನೇ ಮುಕ್ಕಾಂ 341ನೇ ನಂಬರು ಇಸ್ತಿಹಾರ್ ನಾಮೆಯಿಂದ ತಿದ್ದುಪಡಿ ಆದ ಪ್ರಕಾರ ಸರ್ವೆ ಗ್ಯಾರಂಟಿಯಾನೆ ಸರ್ವೆ ಕಾಲಿನ XVIIನೇ ನಿಬಂಧನೆ ಅನುಸರಿಸಿ ಇನಾಂ ಗ್ರಾಮಗಳಲ್ಲಿರತಕ್ಕ ತರೀ ಜಮೀನ್‌ಗಳ ಸರ್ವೆ ಆಕಾರದ $\frac{1}{17}$ರ ಭಾಗವು "ಇಂಗೇರ್ಷನ್‌ಗೆ ಸಮನಾದ ಮೊಬಲಗು" ಯೆಂಬ ಹೆಸರಿಂದ ವಸೂಲ್ಮಾಡಲ್ಪಡುತ್ತಿದೆ. ಇನಾಂದಾರರು ಸಾಧಾರಣವಾಗಿ ಈ

ವಸೂಲಾತಿ ವಿಷಯದಲ್ಲಿ ಫಿರ್ಯಾದು ಮಾಡುವದಲ್ಲದೆ ಸದರೀ ಜಮೀನುಗಳಿಗೆ ಯಾವದೊಂದು ಸರ್ಕಾರಿ ಜಲಾಧಾರಗಳಿಂದಲೂ ಫಾಯಿದೆ ಇಲ್ಲವಾದದರಿಂದ ಈ ಬಾಬತು ಮೊಬಲಗು ವಸೂಲ್ ಮಾಡುವದು ಅನ್ಯಾಯವೆಂಬದಾಗಿ ವಾದಿಸುತ್ತಾರೆ. ಈ ಬಾಬತು ಫಿರ್ಯಾದು ಇನಾಂ ಕೆರೆಗಳಿಂದ ಮಾತ್ರವೇ ನೀರು ಹಾಯುವಂಥಾ ಇನಾಂ ತರೀ ಜಮೀನುಗಳುಳ್ಳ ಪೂರಾ ಗ್ರಾಮದ ಇನಾಂದಾರರುಗಳ ವಿಷಯದಲ್ಲಿ ನ್ಯಾಯವಾದುದೆಂಬದಾಗಿ ಶ್ರೀಮನ್ ಮಹಾರಾಜಾ ಸರ್ಕಾರದವರು ಅಭಿಪ್ರಾಯ ಪಡುತ್ತಾರೆ. ಸರ್ಕಾರದವರು ಈ ಬಾಬತು ವಸೂಲಿಯನ್ನು ಮೋಕೂಫ್ ಮಾಡತಕ್ಕದ್ದೆಂದು ಆಜ್ಞಾಪಿಸುತ್ತಾರೆ. ಆದರೆ ಈ ನಡವಳಿತೆಯನ್ನು ಮಂಜೂರ್ಮಾಡುವದರಲ್ಲಿ ಗವರ್ನಮೆಂಟಿನವರು ಸದರೀ ನತವಳಿತೆಯಿಂದ ಫಾಯಿದೆ ಪಡಿಯುವ ತಮಾಂ ಇನಾಂದಾರರಿಗೂ ತಿಳಿಸುವದೇನಂದರೆ ಸದರೀ ಇನಾಂದಾರರು ಅವರ ಕೆರೆಗಳಿಗೆ ಅವಶ್ಯಕವಾದಾಗ ರಿಪೇರಿ ಕೆಲಸಗಳನ್ನು ನಡಿಸುವದಕ್ಕೂ ಮತ್ತು ಅವುಗಳನ್ನು ಯಾವಾಗಲೂ ಕ್ರಮವಾದ ಸ್ಥಿತಿಯಲ್ಲಿಟ್ಟುಕೊಂಡಿರುವದಕ್ಕೂ ಖಂಡಿರವಾಗಿ ಜವಾಬ್ದಾರರಾಗಿರತಕ್ಕದ್ದು. ಅವರು ಈ ಕೆಲಸದಲ್ಲಿ ತಪ್ಪಿದರೆ ಅವಶ್ಯಕವಾದ ಕಾಮಗಾರಿಯು ಸರ್ಕಾರದಿಂದ ನಡಿಸಲ್ಪಟ್ಟು ಲಾಗವಡು ಇನಾಂದಾರರಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

2. ಮೇಲ್ಕಂಡ ಹುಕ್ಕುಂ ಅನುಸರಿಸಿ ಇದರಡೀಕಂಡ ಸೆಕ್ಷನ್‌ಗಳು ಸರ್ವೆಕಾಲಿನ XVII ಮತ್ತು XVIIIನೇ ಸೆಕ್ಷನಿಗೆ ಬದಲಾಗಿ ಉಪಯೋಗಿಸಲ್ಪಡತಕ್ಕದ್ದು.

XVII. ಯಿರಿಗೇಷನ್ ಸೆಸ್ಸಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲ್ಲಿ ಇನಾಂ ತರೀಕ್ ಯಿರತಕ್ಕ ತಮಾಂ ತರೀ ಜಮೀನುಗಳ ಐಯಿಂದ ಕರಾವ್ ಆಗತಕ್ಕ ಸರ್ವೆ ಆಕಾರದಲ್ಲಿ ಬದಸ್ತೂರು ಸೇರಿಸಲ್ಪಡತಕ್ಕದ್ದು. ಮತ್ತು ಅಂಥಾ ಆಕಾರದ $\frac{1}{7}$ ರ ಭಾಗವು ಬದಸ್ತೂರು ಜೋಡೀಮೇಲೆ ಪರಂತು "ಯಿರಿಗೇಷನ್ ಸೆಸ್ಸಗೆ ಸಮನಾದ ಮೊಬಲಗು" ಯಂಬ ಹೆಸರಿನಿಂದ ಮತ್ತು ಅಂಥಾ ಜಮೀನು ಯಾ ಗ್ರಾಮುಗಳ ಮೇಲೆ ಅಲಾಹಿದಾ ವಸೂಲ್ ಮಾಡಲ್ಪಡಬೇಕಾದ ಕ್ವಿಟರೆಂಟ್ ದೇಖೀಲ್ ವಸೂಲ್ಮಾಡಲ್ಪಡತಕ್ಕದ್ದಲ್ಲದೆ "ಡಿಸ್ಟ್ರಿಕ್ಟ್ಯಿರಿಗೇಷನ್ ಫಂಡ್"ಹೆಡ್ಡಿಗೆ ಲೆಖ್ಖದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮೀನುಗಳು ಪೂರಾ ಇನಾಂ ಗ್ರಾಮುಗಳಲ್ಲಿ ಯಿದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ಪದಗಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಮೊಬಲಗಾಗಲೀ ಸರ್ಕಾರಕ್ಕೆ ತೆರಬೇಕಾದ್ದಿಲ್ಲವು.

ಪರಂತು ಯಿರಿಗೇಷನ್ ಸೆಸ್ಸುಯಾನೆ ನೀರು ಸರದಿಯನ್ನು ಕರಾವ್ ಮಾಡುವದಕ್ಕೋಸ್ಕರ ಸರ್ವೇ ಇಲಾಖೇಯವರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮುಗಳಲ್ಲಿರತಕ್ಕ ಅಂಥಾ ತರೀ ಜಮೀನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು, ಮತ್ತು ತಮಾಂ ಇನಾಂ ಯಾ ಇತರ ತರೀ ಜಮೀನುಗಳ ಸರ್ವೇ ಆಕಾರದಲ್ಲಿ ಅವುಗಳ ಮೇಲೆ ಕರಾವ್ ಮಾಡಲ್ಪಡಬಹುದಾದ ಯಾವದಾರೂ ಅಲಾಹಿದಾ ನೀರು ಸರದಿಯೂ ಅಪಗಿ ಯಿರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮುಗಳಿಗೂ ಮತ್ತು(ಸರ್ವಮಾನ್ಯ ಯಾ ಜೋಡೀ) ಇನಾಂ ಗ್ರಾಮುಗಳಿಗೂ ರೂಪಾಯಿ ಪಂದಕ್ಕೆ ಪಂದಾಣೆಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕ್ಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾಯಂಗುತ್ತಾ ಮೊಬಲಗಿನ ಮೇಲೂ ಇನಾಂ ಗ್ರಾಮುಗಳ ವಿಷಯದಲ್ಲಿ ಇನಾಂ ಗ್ರಾಮುಗಳ ಆಕಾರದಮೇಲೂ ವಸೂಲ್ ಮಾಡಲ್ಪಡತಕ್ಕದ್ದು.

3. ಬದಸ್ತೂರು 1875ನೇ ಇಸವಿ ಮೇ 7ನೇ ಮರ್ಕುಂ 72ನೇ ನಂಬರುಳ್ಳ ಮಾಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಂದಿಗೆ ಫಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟ್ ಯಿರಿಗೇಷನ್ ಸೆಸ್ಸ ಫಂಡಿನ ಆಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟ್ ಕಮ್ಮಿಟಿಗಳವರು ಅನುಸರಿಸತಕ್ಕ ಬಗ್ಯೆ ಏರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರಿಗೆ ತಿದ್ದುಪಾಡಾಗಿರತಕ್ಕದ್ದು.

VI. ಇನಾಂ ವ ಕಾಯಂಗುತ್ತಾ ಗ್ರಾಮುಗಳ ಹಿಡುವಳೀದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ಸಾಗುವಳೀ ಆಗುವ ತರೀ ಜಮೀನಿಗಾಗಿ ನೀರು ಸರದಿಯನ್ನ ತೆರಬೇಕಾದ ಆವಶ್ಯಕತೆ ತಪ್ಪಿರುತ್ತದೆಯಾಗಿ ಅಂತಾ ಕೆರೆಗಳಿಗೆ ಕಾಲ ಕಾಲಕ್ಕೆ ರಿಪೇರಿ ಮಾಡುವಂತಾ ವ ಅವುಗಳನ್ನ ವೊಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂತಾ ಜವಾಬ್ದಾರಿಯನ್ನ ಖಂಡಿತವಾಗಿ ಜಾರಿಯಲ್ಲಿ ತರಲ್ಪಡತಕ್ಕದ್ದು. ವೊಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ವೊಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಅವಶ್ಯಕವಾದ ಕಾಮಗಾರಿಗಳನ್ನ ಸಕಾಲದಲ್ಲಿ ಸಾಧ್ಯವಾದ ತ್ವರ್ಯದಿಂದಲೂ ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂತಾ ಕಾಮಗಾರೀ ವಗೈರೇ ಕೆಲಸವನ್ನ ಗವರ್ನಮೆಂಟಿನವರೇ ತೆಗದುಕೊಂಡು ಖುದ್ದು ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಲಾಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

4. ಈ ತಿದ್ದುಪಾಟುಗಳು ಸರ್ವರ ತಿಳುವಳಿಕೆ ಬಗ್ಗೆ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಡತಕ್ಕದ್ದು.

5. ಇನಾಂ ಗ್ರಾಮಗಳಲ್ಲಿರುವ ತರೀ ಜಮೀನ್ ಮೇಲೆ ವಸೂಲಾಗುವ ನೀರು ಸರಡಿಯನ್ನು ನಿಲ್ಲಿಸಿ ಯಿಡತಕ್ಕ ಬಗ್ಗೆ, 1881ನೇ ಇಸವಿ ಡಿಶಂಬರ್ 17ನೇ ಮರ್‍ಕುಂ 7416—225ನೇ ನಂಬರ್‌ವುಳ್ಳ ಪ್ರೊಸಿಡಿಂಗ್ಸ್‌ನಲ್ಲಿ ಕಂ: ಹುಕ್ಕುಂ ಯಿದರ ದೆಸೆಯಿಂದ ರದ್ದು ಪಡಿಸಿರುತ್ತೆ. ಸರಕಾರದ ಜಲಾಧಾರ ವಿಲ್ಲದೇ ಯಿರುವ ತರೀ ಇನಾಂತಿ ಜಮೀನ್‌ಗಳ ಬಾಬತು ಒರತಕ್ಕ ಬಾಕೀಯಂತೆ ಲೆಖ್ಖದಲ್ಲಿ ನಮೂದಾಗಿರುವ ಮೊಬಲಗು, ಈಗ ಮಂಜೂರ್‍ಮಾಡಿರುವ ರೂಲ್ಸ್ ಅನುಸರಿಸಿ ವಜಾ ಮಾಡಲ್ಪಡತಕ್ಕದ್ದು, ಹಾಗೆ ವಜಾ ಮಾಡಲ್ಪಟ್ಟ ಮೊಬಲಗುಗಳು ಈ ಆಫೀಸಿಗೆ ಕ್ರಮವಾಗಿ ತಿಳಿಯಲ್ಪಡಿಸತಕ್ಕದ್ದು. ಈ ಬಾಬಿನಲ್ಲಿ ಮಿಕ್ಕಾದ ಸಂಗತಿಯೊಳಗೆ ಯಿರುವ ಬಾಕೀಗಳನ್ನ ವಸೂಲ್ ಮಾಡಲಿಕ್ಕೆ ಕೂಡ್ಲೆ ತರದೂದು ನಡಿಸಲ್ಪಡತಕ್ಕದ್ದು.

6. ಸದರೀ ಪರಿಷ್ಕರಿಸಲ್ಪಟ್ಟ ಸರ್ವೇ ಕೌಲಿನ 18ನೇ ಕಲಮನುಸರಿಸಿ ಯಿರಿಗೇಷನ್ ಸೆಸ್ಸ್ ಯಾ ಅವರ ಸಮಾನ ಮೊಬಲಗನ್ನ ವಸೂಲ್ ಮಾಡುವದರಲ್ಲಿ ಯಾವ ಇನಾಂತಿ ತರೀ ಜಮೀನುಗಳನ್ನ ವಿನಾಯಿಸತಕ್ಕದ್ದೋ; ಆ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರುಗಳು ರೆವಿನ್ಯೂ ಸರ್ವೇ ಸೂಪರಿಂಟೆಂಡೆಂಟರಿಗೆ ಬರದು ವ್ಯವಸ್ಥೇ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಫ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ ತಾ॥ 15, ಸರ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾಗವರ್ರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟು ಇಲಾಖಾ.

ತಾರೀಖು 11ನೇ ಸೆಪ್ಟಂಬರ್ 1887.

ಇದರಿಂದ ತಿಳಿಯಪಡಿಸುವದೇನಂದರ, ಮೈಸೂರಿಂದ 43ನೇ ಮೈಲಿಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕು ನಿಸನ ಸ್ಥಳದಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ಈ ಕೆಳಗೆ ನಮೂದು ಮಾಡಲ್ಪಡುವ ಆನೆಗಳು ಮತ್ತು ಈ ಮಧ್ಯ ಕಾಲದಲ್ಲಿ ಹಿಡಿಯಲ್ಪಡುವ ಆನೆಗಳು ಸಹ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸೂಪರ್ರಿಟೆಂಡೆಂಟರವರಿಂದ ಸರ್ 1887ನೇ ಇಸವಿ ನವಂಬರ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹೆಸರುಗಳು.	ಜಾತಿ.	ಎತ್ತರ.		ಹಿಡಿಯಲ್ಪಟ್ಟ ತಿಂಗಳು.	ಷರಾ.
			ಅಡಿ.	ಅಂಗುಲ.		
1	ಗಜಲಕ್ಷ್ಮಿ ..	ಹೆಣ್ಣು.	4	10	1887ನೇ ಏಪ್ರೆಲ್	
2	ಸದಾಶಿವ ..	ಗಂಡು	4	5	ಡಿಟೋ ಜೂನ್	
3	ಶುಕಾರಿ ..	ಹೆಣ್ಣು.	4	0	ಡಿಟೋ ಆಗಸ್ಟ್	

ಷರತ್ತುಗಳು—ಶೇಕಡಾ 25 ರೂಪಾಯಿ ಪ್ರಕಾರ ಠೇವಣಿ ಮೊಬಲಗನ್ನು ಕೂಡ್ಲೆ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡತಕ್ಕದ್ದು. ಬಾಕಿ ಮೊಬಲಗನ್ನು ಹರಾಜ್ ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಮತ್ತು ಆನೆಗಳನ್ನು ಸಾಗಿಸಿಕೊಳ್ಳುವದಕ್ಕೆ ಮುಂಚಿತವಾಗಿ ಪಾವತೀ ಮಾಡ ಬೇಕು, ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಆನೆಗಳು ಪುನಃ ಹರಾಜ್ ಮಾಡಲ್ಪಡುವವು ನಷ್ಟಕ್ಕೆ ಅವಲ್ ಖರೀದೀದಾರನು ಗುರಿಯಾಗತಕ್ಕದ್ದು. ಹರಾಜಿನಲ್ಲಿ ಜಾಸ್ತಿ ಹುಟ್ಟಿದರೆ ಅದರಲ್ಲಿ ಆತನಿಗೆ ಯೇನೂ ಸಲ್ಲಲಾರದು. ಖರೀದಿ ತಾರೀಖು ಲಾಗಾಯಿತು ಖರೀದಿದಾರನೇ ಆನೆಗಳ ರಾತೀಪು ವಗ್ಯೆರೆ ಖರ್ಚುಗಳನ್ನ ವಹಿಸತಕ್ಕದ್ದು.

ತಾರೀಖು 5ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದ ಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬುಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು—ಶಿಕಾರಿಪುರದ ಕೋಠಿ	10ನೇ ನವಂಬರ್ 1887.	ಹೆಚ್ಚು ಕಡಮೆ	250 ಟನ್‌ಗಳು.
ಅನಂತಪುರದ ಕೋಠಿ	14ನೇ ಡಿಟೋ.	..	50 ಡಿಟೋ
ಶಿವಮೊಗ್ಗಾ ಡಿಟೋ	19ನೇ ಡಿಟೋ.	..	500 ಡಿಟೋ
ತೀರ್ಥಹಳ್ಳಿ ಡಿಟೋ	25ನೇ ಡಿಟೋ.	..	200 ಡಿಟೋ
ಕಡೂರು ಡಿಸ್ಟ್ರಿಕ್ಟು—ಚಿಕ್ಕಮಗಳೂರು ಕೋಠಿ	1ನೇ ಡಿಸಂಬರ್ 1887.	..	200 ಡಿಟೋ
ಹಾಸನ ಡಿಸ್ಟ್ರಿಕ್ಟು—ಹಾಸನ ಕೋಠಿ	7ನೇ ಡಿಟೋ.	..	300 ಡಿಟೋ
ಮೈಸೂರು ಡಿಸ್ಟ್ರಿಕ್ಟು—ಶ್ರೀರಂಗಪಟ್ಟಣ ಕೋಠಿ	12ನೇ ಡಿಟೋ.	..	800 ಡಿಟೋ
ಹುಣಸೂರು ಡಿಟೋ	16ನೇ ಡಿಟೋ.	..	
ಬೆಂಗಳೂರು ಡಿಸ್ಟ್ರಿಕ್ಟು—ಬೆಂಗಳೂರು ಕೋಠಿ	20ನೇ ಡಿಟೋ.	..	150 ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ವುರ್ಖಂಗಳ 34, 35ನೇ ನಂಬರು ಗೆಜೆಟ್‌ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿ॥ ಅರ್ಜೀ ನಂಬರ್ 877.

ಮೃತಪಟ್ಟ ಕಾಮಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಗುಡ್ಡಪ್ಪ, ಮೃತಪಟ್ಟ ಸದರೀ ಕಾಮಣ್ಣರವರಿಗೆ ತಮ್ಮ ನಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗೂರು ಸ್ಥಳದ ಗುಡ್ಡಪ್ಪನೆಂಬುವರು ಸದರಿ ವಾಸಸ್ಥರಾಗಿ ಮೃತಪಟ್ಟ ಕಾಮಣ್ಣನವರ ಜಿಂದಗೀ ಬಗ್ಯಾಗಿ ಬರತಕ್ಕ 2000 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಫಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ಗುಡ್ಡಪ್ಪನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 28ರಲ್ಲು ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಮಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ಸರ್ 1887ನೇ ಇಸವಿ ಅಕ್ಟೋಬರ್ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ತರಗಿನಪೇಟೇಲಿರುವ ವೀರಸಂಗಣ್ಣನವರ ರುದ್ರಪ್ಪನ ವಿಷಯುತಲ್ಲಿ—

ಸರ್ 1887ನೇ ಇಸವಿ ದಿವಾಳೀ ಮಿ॥ ಕೇಸ್ ನಂಬರ್ 263.

ಹುಕ್ಕುಂ.

ಮೇಲ್ಕಂಡ ರುದ್ರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಒಂದವು ಸಬ್ ಜಡ್ಜಿಯವರಾದ ಮೆ॥ ಸಿ. ಕ್ರಿಸ್ ಸಾಹೇಬರವರ ರೂಬರೂ ಅರ್ಜೀದಾರನಾದ ರುದ್ರಪ್ಪನ ಪರವಾಗಿ ಮೆ॥ ಆಡ್ವೊಕೇಟ್ ನಾರಾಯಣರಾವ್ ಯವರನ್ನ ಮತ್ತು ಸದರೀಯವನ ಲೇಣೇದಾರ್ರಾದ 3ನೇ ಮುನಿಯಪ್ಪನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ–1—2—4—5—6—7ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ರುದ್ರಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಜೂನ್ 24ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.			ಸಾಲಮಾಡಿದ ಇಸವಿ	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಬೆಂಗಳೂರಲ್ಲಿರುವ ಮಳವಳ್ಳಿ ಚಿಕ್ಕಗಿರಿಯಪ್ಪ .	1080	12	4	1880	ಡಿಕ್ರೀ ಬಾಬತು	
2	ಡಿಟೋ ಮಾತ್ರಬಾಯಿ ಮುನಿಪ್ಪ ..	1000	0	0	ಡಿಟೋ	ಡಿಟೋ	
3	ಆನೆಕಲ್ ತಾ|| ಬೆಂಡಿಗನಹಳ್ಳಿ ಯಲೇ ತೋಟದ ಮುನಿಯಪ್ಪ	1000	0	0	ಡಿಟೋ	ಡಿಟೋ	
4	ಬೆಂಗಳೂರಲ್ಲಿರತಕ್ಕ ದೇವರಿಟಿ ಗುರಂಣ ..	800	0	0	ಡಿಟೋ	ಪ್ರಾಂಸರಿ ಬಾಬತು	
5	ನೆಲವಂಗಲದ ಬಳೇ ಪುಟ್ಟಲಿಂಗಪ್ಪ ..	350	0	0	ಡಿಟೋ	ತಂಮಸೂಕು	
6	ನೆಲವಂಗಲದ ತಾ|| ಹುಸಕೂರಲ್ಲಿರತಕ್ಕ ಬಳೇ ಬಸಮ್ಮ	150	0	0	1887	ಡಿಟೋ	
7	ಬೆಂಗಳೂರಲ್ಲಿರತಕ್ಕ ಕುಡತಿ ಗುರಂಣ ..	12	0	0	.	ಲೆಖ್ಖದ ಬಾಬತು	
	ಜುಮ್ಲಾ	4392	12	4	..		

ದಿವಾಳೀಯಾದ ಡಿಕ್ರೀ ದೇಣೇದಾರ ಕೋಲಾರ ತಾ|| ಮಾದಹಳ್ಳೀಲಿರುವ ಸುಬ್ಬಾಭಟ್ಟನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯಸ್ ನಂಬರ್ 398.

ಹುಕ್ಕುಂ.

ಮೇಲ್ಕಂಡ ಸುಬ್ಬಾಭಟ್ಟನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜೀದಾರನಾದ ಸುಬ್ಬಾಭಟ್ಟನ್ನ ಖುದ್ದಾಗಿ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ–1—2—3—4—5—6—7—8 9—10ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸುಬ್ಬಾಭಟ್ಟನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಆಗಸ್ಟು 26ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯೋಗ್ಯಾಗ ಹೆಜ್ಜೆ ಹೋದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಚಿಂತಾಮಣಿ ತಾ|| ಚಲಮಕೋಟೆ ರಾಮಾಶಾಸ್ತ್ರಿ.	73 0 0	..	ಡಿಕ್ರೀ ಬಾಬತು	
2	ಕೋಲಾರ ತಾ|| ಮಾದನಹಳ್ಳಿ ಗೋವಿಂದಗೌಡ ..	100 0 0	..	ಭೋಗ್ಯ ಪತ್ರ	
3	ಡಿಟೋ ವೆಂಕಟರಮಣ ಗವುಡ ..	100 0 0	..	ಡಿಟೋ	
4	ಚಿಂತಾಮಣಿ ಕಾಶಲ್ರ ಸುಬ್ಬಾಭಟ್ಟ —	25 0 0	..	ಡಿಟೋ	
5	ಡಿಟೋ ತಾ|| ಇರಗಂಪಲ್ಲಿ ರಾಮಸೋಮಯಾಜಿ.	50 0 0	..	ಆಧಾರಪತ್ರ	
6	ಡಿಟೋ ತಾಲ್ಲೂಕು ಚಲಮಕೋಟೆ ಬೂರ್ಲಪಲ್ಲಿ ರಾಮಾಶಾಸ್ತ್ರಿ	145 0 0	..	ಡಿಟೋ	
7	ಡಿಟೋ ತಾ|| ಕೋಟಗಲ್ಲು ತ್ರಿಯಂಬಕ ಶಾಸ್ತ್ರಿ.	25 0 0	..	ಭೋಗ್ಯಗತ್ರ	
8	ಕೋಲಾರ ತಾ|| ವೆಲಗಲಬುರೆ ಯಳೇಗವುಡ ..	50 0 0	..	ಡಿಟೋ	
9	ಚಿಂತಾಮಣಿ ವೆಂಕಟಾಚಲ ಶಾಸ್ತ್ರಿ ..	45 0 0	..	ಆಧಾರಪತ್ರ	
10	ಕೋಲಾರ ತಾ|| ಕೊರ್ಲಹಳ್ಳಿ ವಾಜರ ನಲ್ಲಪ್ಪ, ಶ್ರೀ ನಿವಾಸಾಚಾರಿಗೆ	30 0 0	..	ಪತ್ರ ಇದರಲ್ಲಿ 6ರಲ್ಲಿ 1 ಹಿಸ್ಸೆ	
	ಜಾಮ್ಲಾ 643 ರೂ. ನಲ್ಲಿ ಅರ್ಜೀದಾರನ ಇಸ್ಸೆ ..	4215 4 0			

ದಿವಾಳೀಯೊದ ಡಿಕ್ರೀ ದೇಣೇದಾರ ಬೆಂಗಳೂರು ಹಾಜರಿ ಬಾರ್ ಇಲಾಖಾ ಫಸ್ಟ್ ಪಟಾಲಂ 7ನೇ ಕಂಪಣಿ ಹವಾಲ್ದಾರನಾಗಿರುವ ಮಹಮ್ಮದ್ ದಾವೂದನ ವಿಷಯದಲ್ಲಿ—

ಸನ 1887ನೇ ಇಸವಿ ದಿವಾಳೀ ಕೇಸ ಮಿಸಲೇನಿಯಸ್ ನಂಬರ 625.

ಹುಕ್ಕುಂ.

ಮೋಕ್ಕಂಡ ಮಹಮ್ಮದ್ ದಾವೂದನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಮಹಮ್ಮದ್ ದಾವೂದನ್ನ ಖುದ್ದಾಗಿ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ.--1—2—3—4—5ನೇ ಯವರು ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮಹಮ್ಮದ್ ದಾವೂದನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ದೇವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ 1887ನೇ ಇಸವಿ ಸೆಪ್ಟಂಬರ 9ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತುಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಡಿಕ್ರೀ ಆದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಬೆಂಗಳೂರಲ್ಲಿರತಕ್ಕ ಸಂಪನ್ನಪ್ಪನವರ ನಂಜುಂಡಪ್ಪ ..	17 0 0	..	ತಂಬಾಕು ಬಾಬತು	
2	ಡಿಟ್ಟೋ ಅಡಿಕೆ ಅಂಗಡಿ ನಂಜಪ್ಪ ..	20 0 0	..	ಡಿಟ್ಟೋ	
3	ಡಿಟ್ಟೋ ಅರಳೇಪೇಟೇಲಿರುವ ರಾಮಚಂದ್ರರಾವ್.	24 0 0	..	ಡಿಟ್ಟೋ	
4	ಡಿಟ್ಟೋ ಕುಂಬಾರಪೇಟೇಲಿರತಕ್ಕ ಸಿದ್ಧರಾಮಣ್ಣ.	25 0 0	..	ಭತ್ತದ ಬಾಬತು	
5	ಡಿಟ್ಟೋ ವಾದಿ ಹಾಜರಾಂಬಿ ..	118 6 0	1887	ಡಿಕ್ರೀ ಬಾಬತು	
	ಜುಮ್ಲಾ....	204 6 0	..		

ಸಿ. ಕ್ರೆಸ್,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 21ನೇ ಸೆಪ್ಟಂಬರ 1887.

ತಿಪ್ಟೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ತಿಪ್ಟೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನ ವಾಪಸ್ ಪಡಿಯಲೂ ತಪ್ಪಿದರೆ ಸನ್ 1877ನೇ ಇಸವಿ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು:—

ದಸ್ತೈವಜಿನ ನಂಬರ್.	ಬರೆದುಕೊಟ್ಟ ತಾರೀಖು.	ಬರೆದುಕೊಟ್ಟ ರಿಜಿಸ್ಟ್ರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟರಾದ ತಾರೀಖು.	ದಸ್ತೈವಜನ್ನ ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನ ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತು.
182 / 1885—86	8—5—85	15—8—85	29—8—85	ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ಮಾಕನಹಳ್ಳಿ ಗ್ರಾಮಕ್ಕೆ ಶೇರಿದ ಚಿಕ್ಕಣ್ಣಶೆಟ್ಟಿ ಪಾಳ್ಯದಲ್ಲಿರುವ ವ್ಯಾಪಾರದ ಬಳೇ ಪುಟ್ಟೀರಯ್ಯನ ಮಗ ಚೆನ್ನಬಸಯ್ಯ	ತಿಪ್ಟೂರು ತಾಲ್ಲೂಕು ನೊಣವಿನಕೆರೇಯಲ್ಲಿರುವ ಹೊಸಮನೆ ನಾರಣಸಾಮಯ್ಯಂಗಾರ್	ತನ್ನ ಬಾಬತು ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ವಿಗ್ನಸಂತೆ ಗ್ರಾಮದ ಕೆರೇಹಿಂದೆ ಇರುವ ಅಡಿಕೆ, ತೆಂಗೂ ಮಿಶ್ರವಾದ ಸರ್ವೇನಂಬರ್ 92 ಎಕರೆ 1 ಕುಂಟೆ 19 ಆಕಾರ 15 ರೂಪಾಯಿಯುಳ್ಳ ತೋಟ ಆಧಾರದ ವಂದು ನೂರು ರೂಪಾಯಿನ ಕಂತು ಪತ್ರ.

ಪಿ. ಎನ್. ಕೃಷ್ಣಮೂರ್ತಿ, ರಿಜಿಸ್ಟ್ರಾರ್.

ವೈಸೂರು ಡಿಸ್ಟ್ರಿಕ್ಟು.

ನಂ. 10. ತಾರೀಖು 6ನೇ ಅಕ್ಟೋಬರ್ 1887.

ಹುಣಸೂರು ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನ ಕ್ರಮವಾದ ವಾರಸ್‌ದಾರ‍್ರಾಗಲೀ, ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶ ಪಡಿಸಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ಅಡಿರ್ಷ.	ದಸ್ತಾವೇಜು ಬರಸಿಕೊಂಡವನ ಹೆಸರು ಮತ್ತು ಅಡಿರ್ಷ.	ದಸ್ತಾವೇಜು ಬರೆದುಕೊಟ್ಟ ತಾರೀಖು.	ರಿಜಿಸ್ಟರ್ ಮಾಡಿದ ತಾರೀಖು.	ಸ್ವಭಾವ ಮತ್ತು ಕಿಮ್ಮತು.
4ನೇ ಬುಕ್ಕು 2ನೇ ನಂಬರ್ — 85—86ನೇ ಇಸವಿ	ಹುಣಸೂರು ತಾಲ್ಲೂಕು ಯಿಜೂರು ಗ್ರಾಮದಲ್ಲಿ ಇರುವ ಗುಡಗನಹಳ್ಳಿ ಬಲಗೈ ಕಾಳ	ಹುಣಸೂರು ತಾಲ್ಲೂಕು ಯಿಜೂರು ಗ್ರಾಮದಲ್ಲಿರುವ ಶಿರ್‍ವೇಗಾರ ಬಸವೇಗೌಡನ ಮಗ ಬೋರೇಗವುಡ	15—7—85	31—7—85	ಜೀತದ ಕರಾರು 50 ರೂಪಾಯಿ ಮತ್ತು ಒಂದುಖಂಡಗ ರಾಗಿ ಒಂದುಖಂಡಗ ಭತ್ತಾ ಸಹ ಮದಗಡ ತೆಗದುಕೊಂಡು ಯಿರುವಹಾಗೂ ಮತ್ತು ಬರಸಿಕೊಂಡವನ ಮನೇಲಿ ಯಿರ ಡುಹೊತ್ತು ವೂಟಾ ಮಾಡಿಕೊಂಡು ಹೊದಿಯುವದಕ್ಕೆ ಕಂಬಳಿಯೂ ವುಡುವದಕ್ಕೆ ಭಟ್ಟೆಯೂ ಹೆಂಡರ ಮಕ್ಕಳ ಜೀವನಕ್ಕೆ ವರುಷ ಒಂದಕ್ಕೆ ಯರಡುಖಂಡಗ ರಾಗಿ ತೆಗದುಕೊಂಡು ಮೇಲ್ಕಂಡ ಅಸಲ್ ಹಣಕ್ಕೆ ಶೇಕಡಾ ಯರಡು ರೂಪಾಯಿ ಮೇರೆ ಆಗುವ ಬಡ್ಡಿ 12 ರೂಪಾಯಿ ಸಂಬಳಕ್ಕೆ ಒಪ್ಪಿ 12 ವರುಷ ಪರಿಯಂತ್ರ ಜೀತಾ ಮಾಡುವದಾಗಿ.
4ನೇ ಬುಕ್ಕು 4ನೇ ನಂಬರ್ — 1885—86	ಸದರೀ ಗ್ರಾಮದಲ್ಲಿರುವ ಬಲಗೈ ಜಾತಿ ಲಕ್ಕನ ಈರಾ	ಡಿಟೋ	ಡಿಟೋ	ಡಿಟೋ	ಡಿಟೋ
4ನೇ ಬುಕ್ಕು 3ನೇ ನಂಬರ್ — 1885—86	ಸದರೀ ಗ್ರಾಮದ ಬಲಗೈ ಜಾತಿ ದಂಡನಮಗ ದಂಡಾ	ಡಿಟೋ	ಡಿಟೊ	ಡಿಟೋ	ಜೀತದ ಕರಾರು 60 ರೂಪಾಯಿ ಮತ್ತು ಒಂದುಖಂಡಗಭತ್ತಾ ಮತ್ತು ಒಂದುಖಂಡಗೆ ರಾಗಿ ಸಹ ಮದಗಡೆ ತೆಗದುಕೊಂಡು ಯಿರುವಹಾಗೂ ಬರಸಿಕೊಂಡವನಲ್ಲಿ ಅಶನಾ ಆಛ್ಛಾದಾನ ತೆಗದುಕೊಂಡು 10 ವರುಷ ಪರಿಯಂತ್ರ ಅಸಲ್ ಹಣ ಬಡ್ಡಿಗಾಗಿ ನೌಕರೀ ಮಾಡುವದಾಗಿಯು ಹೆಂಡತಿ ಜೀವನಕ್ಕೆ ಸಾಲೆಸಾಲ್ 10 ವರುಷ ಪರಿಯಂತ್ರ 2 ಖಂಡಗ ರಾಗಿ ಕೊಡಬೇಕೆಂದು.

ಟಿ. ಆನಂದರಾವ್,

ರಿಜಿಸ್ಟ್ರಾರ್.

ವೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 513.

ಮೃತಪಟ್ಟ ಗುಂಡಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಜಪ್ಪ ಮೈನರ್ ಗಾರ್ಡಿಯನ್ ಮತ್ತು ತಾಯಿ ಮಾದಮ್ಮನು ಮೃತಪಟ್ಟ ಸದರೀ ಗುಂಡಪ್ಪನವರಿಗೆ ಮಗನು ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ವೈಸೂರು ಕಿಲ್ಲೇ ಸ್ಥಳದ ಮೈನರ್ ಗಾರ್ಡಿಯನ್ ಮಾದಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ

ಗುಂಡಪ್ಪನವರ ಜಿಂದಗೀ ಬಗ್ಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್‌ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಕ್ಟ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಮಾದಮ್ಮನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ ತಿಂಗಳು ತಾರೀಖು 31ರಲ್ಲ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

1887ನೇ ಯಿಸವಿ ಸೆಪ್ಟಂಬರು ತಿಂಗಳು 24ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 7ನೇ ಅಕ್ಟೋಬರ 1887.

ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಅದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮ ಪ್ರಕಾರ ವಾರಸದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ:—

ದಸ್ತಾವೇಜಿನ ನಂಬರ್.	ರಿಜಿಸ್ಟ್ರೇಷನ್ಗೆ ಹಾಜರ್‌ಮಾಡಿದ ತಾರೀಖು.	ಬರದುಕೊಟ್ಟವರು ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
11 / 1883—84	21 4 83	21 4 83	21 4 83	ಚಿಕ್ಕನಾಯನಹಳ್ಳಿ ಬಲಗ್ಯೆ ಲಾಳಿಮಗ ಲಕ್ಕ	ಚಿಕ್ಕನಾಯಕನಹಳ್ಳಿ ಬಸವೇಗೌಡ	(80) ರೂಪಾಯಿನ ಕ್ರಯಪತ್ರ.
79 / 1883—84	27 9 83	27 9 83	27 9 83	ಹೊಂಗಡಹಳ್ಳದ ಬಲಗ್ಯೆ ಜೆಂಬ್ಬನಹಳ್ಳಿ ತಿಪ್ಪನಮಕ್ಕಳು ದೊಂಕೆಮಲ್ಲ ಮತ್ತು ಕೆಂಚ ಸಹ	ಹೊಂಗಡಹಳ್ಳದ ಮಂಜೇಗೌಡ	(100) ರೂಪಾಯಿನ ಕ್ರಯಪತ್ರ.
14 / 1884—85	11 4 84	11 4 84	12 4 84	ಬೈಕೆರೆ ಮಹಂತಗೌಡನ ಮಕ್ಕಳು ನಂಜೇಗೌಡ 1, ಅಂಜೇಗೌಡ 2, ಶಿವೇಗೌಡ 3, ಕೊಮಾರಗೌಡ 4 ವುರಫ್ ಪುಟ್ಟಶಾಮಿಗೌಡ ಸಹ	ಬೈಕೆರೆ ಮಹಂತಗೌಡನ ಮಕ್ಕಳು ಅಂಜೇಗವುಡ 1 ಶಿವೇಗೌಡ 2, ಕೊಮಾರಗೌಡ 3 ವುರಫ್ ಪುಟ್ಟಸಾಮಿಗೌಡ ನಂಜೇಗೌಡ 4 ಸಹ	(150) ರೂಪಾಯಿ ಕ್ರಯಬಾಳತಕ್ಕ ಸ್ವತ್ತುಗಳ ಬಾಬತು ಪಾಲು ಪಾರೀಖತ್ತು.
42 / 1884—85	26 6 84	26 6 84	26 6 84	ಮಂಜರಾಬಾದ್ ತಾಲ್ಲೂಕು ಮಾವಿನಕೋಲು ಗ್ರಾಮದಲ್ಲಿರುವ ಬಸವೇಗೌಡನ ಮಗ ನಂಜೇಗೌಡ	ಹಾಸನ ತಾಲ್ಲೂಕು ಬಾಂಮಸವಳ್ಳೀ ಗ್ರಾಮದ ಈರೇಗವುಡನ ಮಗ ನಿರ್ವಾಣಿಗವುಡ	(50) ರೂಪಾಯಿನ ಭೋಗ್ಯಪತ್ರ.

ಪಿ. ಎನ್. ಪೂರ್ಣಯ್ಯ,
ರಿಜಿಸ್ಟ್ರಾರ್.

ಖಾಸಗೀ ಪ್ರಕಟನೆ.

ತಾರೀಖು 10ನೇ ಅಕ್ಟೋಬರ್ 1887.

ನೋಟಿಸ್—ಬೆಂಗಳೂರು ಬಳ್ಳಾಪುರದ ಪೇಟೇಲಿರುವ ಬೂದುಗುಂಟೆ ಕೊತ್ತ ವೆಂಕಟಣ್ಣನವರು ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ನನ್ನ ದತ್ತು ಮಗನಾದ ಗೋಪಾಲಯ್ಯನೆಂಬುವ ಹುಡುಗನು ನನಗೆ ಅವಿಧೇಯನಾಗಿ ತುಂಟ ಜನಗಳ ಸೋಬತ್ತಿನಿಂದ ಮನಸ್ವಿ ಸಾಲಾ ಮಾಡಿ ದುರ್ವ್ಯಯ ಮಾಡುವದಾಗಿ ತಿಳಿಯ ಬರುವ ಕಾರಣ ಅವನಿಗೆ ಇದುವರಿಗೂ ಯಾರು ಸಾಲಾ ಕೊಟ್ಟು ಇದ್ದಾಗ್ಯೂ ಮುಂದೆ ಯಾರೇ ಆಗಲಿ ಸಾಲಾ ಕೊಟ್ಟಾಗ್ಯೂ ಅದಕ್ಕೆ ನಾನು ನನ್ನ ಸ್ಥಾವರ ಚರಸ್ವತ್ತಿನ ಜಿಂದಗಿಗೆ ಸಹ ಜವಾಬ್ದಾರಿ ಆಗುವದಿಲ್ಲವೆಂದು ತಿಳಿಸಿ ಇದ್ದೇನೆ.

ಬೂ. ಕೊ. ವೆಂಗಟಣ್ಣನ ರುಜು.

ಗೈರವಿಲಾ ಅದ

ಪೂರಾ ಕರೆನ್ಸೀ ನೋಟನ್ನ.

ನಂಬರ್.	ಸರ್ಕಲ್.	ಹಕ್ಕುದಾರ್—ಮೈಸೂರು ಕೆಂಪನಂಜಂಮಾಂಬಾ ಅಗ್ರಹಾರದಲ್ಲಿರುವ ಯೋಜಂಟ್ ವೆಂಕಟರಾಮಯ್ಯ.
ಬಿ. 94—66445	ಕ್ರಯ ರೂ. 100	

ಮೈಸೂರ ಗೆಜೆಟ್ ಚಂದಾ ದರ ವಗೈರೇ.

	ಚಂದಾ. ರೂ.	ಆ.		ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8		1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0		3	8
ಛಿನ್ನ ಮಾಹೇ ಯಾ ಕ್ವಾರಟರಿಗೆ	ದಾಮೂಷಾಯಿ ಪ್ರಕಾರ ದರಗಳು.				
ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—					
ಮೊದಲನೇ ದಫೆ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..				2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ				1	4
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸುಗಳಿಗೆ:-					
ಮೊದಲನೇ ಸಲಕ್ಕೆ				5	0
ಎರಡನೇ ವ ಆ ತರುವಾಯ ಪ್ರತಿ ದಫೆಕ್ಕೆ				2	8
ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.					
ಡ್ಯುಪ್ಲಿಕೇಟ್ ಕಾಫೀಪಟ್ಟಿ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರಿಗಳು ಕೊಡುವ ನೋಟೀಸ್‌ಗಳಿಗೆ:—					
ಮೊದಲನೇ ಸಲಕ್ಕೆ ..			ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ			" ..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—					
ಮೊದಲನೇ ದಫೆ ಇಂಗ್ಲೀಷ್ ಅಥವಾ ಕನ್ನಡಕ್ಕೆ			ಪಙ್ಕ್ತಿ 1ಕ್ಕೆ ..	0	8
ಎರಡನೇ ದಫೆ ಡಿಟೋ			ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ				0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಟಿ. ಟಿ. ಲಿನರಡ್,

ಮೈ. ಗೆ. ಕಂಪೈಲರ್,

804

ಮೈಸೂರ ಗೆಜೆಟ್.

ಸರ್ಕಾರದಿಂದ ಪ್ರಕಾಶಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 15, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ

ಸರ್ಕಾರೀ ಕಾಗದ ಪತ್ರಗಳು.

ಮೈಸೂರಲ್ಲಿ ಪ್ರಜಾ ಪ್ರತಿನಿಧಿಗಳ ಸಭೆಯೊಳಗೆ
ಸನ್ 1887ನೇ ಇಸವಿ ಸೆಪ್ಟಂಬರ್ ತಾ|| 30ನೇ ಶುಕ್ರವಾರದಲ್ಲು
ಮೈಸೂರು ಶೀಮೆಯ ದಿವಾನರವರು ನಡೆಸಿದ ಉಪನ್ಯಾಸವು.

ಶ್ರೀಮನ್ಮಹಾರಾಜ ರಾಜಾ ಸಾಹೇಬ್ ಬಹದ್ದೂರವರ ಆಜ್ಞಾನುಸಾರವಾಗಿ ಈ ಶೀಮೆಯ ನಗೇದಿಯಾತು ಆಡಳಿತದ ಕ್ರಮದಲ್ಲಿ ವಿಶೇಷ ಆದಾಯಕರವಾದ ಹೋದವರ್ಷದ ಜಮಾ ಖರ್ಚು ತಪ್ಸೀಲನ್ನು ನಿಮಗೆ ತಿಳಿಸುತ್ತೇವೆ:— ಕಳೆದ 50 ಸಂವತ್ಸರಗಳಲ್ಲಿ ವಸೂಲಾದ ದಸ್ತಾಲಾ ಸರಾಸರೀ ಒಟ್ಟು ಹುಟ್ಟುವಳಿಯನ್ನು ಈ ಕೆಳಗೆ ವಿವರಿಸಿದೆ:—

1836—37ನೇ ಇಸವಿ ಲಾಗಾಯಿತು 1845—46ನೇ ಇಸವಿ ವರಿಗಿನ ಹತ್ತು ವರುಷಗಳ ಸರಾಸರೀ 73 ಲಕ್ಷ ರೂಪಾಯಿಗಳು.
1846—47ನೇ ಇಸವಿ ಲಾಗಾಯಿತು 1855—56ನೇ ಇಸವಿ ವರಿಗಿನ ಹತ್ತು ವರುಷಗಳ ಸರಾಸರೀ 78 ಲಕ್ಷ ರೂಪಾಯಿಗಳು.
1856—57ನೇ ಇಸವಿ ಲಾಗಾಯಿತು 1865—66ನೇ ಇಸವಿ ವರಿಗಿನ ಹತ್ತು ವರುಗಳ ಸರಾಸರೀ $97\frac{1}{4}$ ಲಕ್ಷ ರೂಪಾಯಿಗಳು.
1866—67ನೇ ಇಸವಿ ಲಾಗಾಯಿತು 1875—76ನೇ ಇಸವಿ ವರಿಗಿನ ಹತ್ತು ವರುಷಗಳ ಸರಾಸರೀ $105\frac{1}{4}$ ಲಕ್ಷ ರೂಪಾಯಿಗಳು.
1876—77ನೇ ಇಸವಿ ಲಾಗಾಯಿತು 1885—86ನೇ ಇಸವಿ ವರಿಗಿನ ಹತ್ತು ವರುಷಗಳ ಸರಾಸರೀ $101\frac{3}{4}$ ಲಕ್ಷ ರೂಪಾಯಿಗಳು.

ಕಳೆದ ಸಂವತ್ಸರವೆಂದರೆ 1886—87ನೇ ಇಸವಿಯಲ್ಲಿ ಅಪೂರ್ವವಾಗಿ $127\frac{1}{2}$ ಲಕ್ಷ ರೂಪಾಯಿಗಳ ಹುಟ್ಟುವಳಿಯಾಗಿ ಈ ಕೆಳಗೆ ವಿವರಿಸಿರುವ ಮೇರೆ ಎಲ್ಲಾ ಬಾಬುಗಳಲ್ಲಿಯೂ ಜಾಸ್ತೀ ಕಂಡುಬಂದಿರುತ್ತೆ.

ಜಮಾಬಾಬು.

	1885—86. ರೂ.	1886—1887. ರೂ.
ಲ್ಯಾಂಡ್ ರೆವಿನ್ಯೂ ಯಾನೇ ಜಮೀನಿನ ಬಾಬು	76,41,241	87,09,602
ಆಬ್ಕಾರಿ	11,68,722	11,78,165
ಫಾರಿಸ್ಟ	8,83,098	9,98,364
ಸ್ಟಾಂಪು	4,80,479	5,15,326
ಸಾಯರ್	3,91.139	4,36,340
ಮೊಹತರ್ಫಾ	2,94,927	3,35,104
ಲಾ ಅಂಡ್ ಜಸ್ಟಿಸ್ ಯಾನೆ ಜುಡಿಷಿಯಲ್ ಮತ್ತು ಜೈಲುಗಳು	63,970	49,983
ಅಂಚೆ	65,303	68,008
ರಿಜಿಸ್ಟ್ರೇಷನ್	50,459	56,014
ಅಮೃತಮಹಲ್	68,464	77,424
ವಿದ್ಯಾಭ್ಯಾಸದ ಇಲಾಖೆ	24,322	23,538
ಉಪ್ಪಿನ ಮೋಳಿ	21,623	26,107
ಪಬ್ಲಿಕ್‌ವರ್ಕ್‌ಸ್ ಯಾನೇ ಮರಹ್ಮತ್ ಬಾಬು	13,854	12,994
ಚಲಾವಣೇ ತಪ್ಪಿದ ನಾಣ್ಯಗಳ ಕಿಮ್ಮತ್ತು	2,936	1,482
ಭಂಗಾರದ ಗಣೀ ಬಾಬು	38,867	51,248
ಚಿಲ್ಲರೇ ಬಾಬುಗಳು	2,21,349	2,18,758
ಜುಮ್ಲಾ....	1,14,30,753	1,27,58,508

ಖರ್ಚು ಬಾಬು.

A

	1885—86. ರೂ.	1886—87. ರೂ.
ಸಬ್‌ಸಿಡಿಯಾನೇ ಪಗದಿ	24,50,000	24,50.000
ಅರಮನೇ ಖರ್ಚು	10,00,000	13,00,000
ಸರಕಾರೀ ಸಾಲದ ಬಡ್ಡಿ	4,94,793	4,96,955
ಪೊಲಿಟಿಕಲ್ ಪೆನ್‌ಷನ್‌ಗಳು ಮತ್ತು ಜಹಗೀರಿಗೆ ಬದಲಾಗಿ ಕೊಡುವ ಅಲೋವೆನ್ಸ್	1,02,630	1,01,301
ಮಿಲಿಟೆರಿ	7,35,100	7,37,234
ಜುಮ್ಲಾ....	47,82,523	50,86,090

B

	1885—86. ರೂ.	1886—87 ರೂ.
ಹಜೂರು ಇಲಾಖೆ ಖರ್ಚು	2,04,119	2,36,699
ವಸೂಲಾತೀ ಖರ್ಚು ಬಾಬುಗಳು—		
ಡೆಪ್ಯುಟಿ ಕಮ್ಮಿಷನರುಗಳು ಮತ್ತು ಅವರ ಸಿಬ್ಬಂದಿ	1,40,270	1,60,776
ಅಸಿಸ್ಟೆಂಟ್ ಕಮ್ಮಿಷನರುಗಳು ಮತ್ತು ಅವರ ಸಿಬ್ಬಂದಿ	58,134	58,744
ತಾಲ್ಲೂಕು ಜಾತುಗಳ ಸಿಬ್ಬಂದಿ	3,13,316	3,18,715
ರೆವಿನ್ಯೂ ಸರ್ವೇ ಇಲಾಖೆ	2,31,026	2,22,570
ಇನಾಂ ಇಲಾಖೆ	8,265	7,964
ಗ್ರಾಮ ನೌಕರರ ತಲಬು	2,32,315	4,24,472
ಇತರ ಬಾಬುಗಳು	20,450	30,612
ಅಬ್ಕಾರಿ	15,576	16,123
ಫಾರೆಸ್ಟ	2,26,070	3,20,687

ಸ್ಟಾಂಪು	15,524	25,455
ಸಾಯರ್	13,632	12,839
ಸಾದಿಲ್‌ವಾರು ಮತ್ತು ಛಾಪಾಖಾನೆ	60,516	69,718
ಅಮೃತಮಹಲ್ ಇಲಾಖೆ	36,421	34,869
ಟೊಪೋಗ್ರಾಫಿಕಲ್ ಸರ್ವೇ	65,391	27,079
ಶಾಸನ ವಗೈರೇ ಪುರಾತನ ಲಿಪ್ಯನ್ವೇಷಣೇ ಇಲಾಖೆ	..	8,445
ಜಿಯೋಲಾಜಿಕಲ್ ಸರ್ವೇ ಇಲಾಖೆ	..	9,592
ಜುಮ್ಲಾ	16,41,025	19,85,459

C

ಲಾ ಅಂಡ್ ಜಸ್ಟಿಸ್ ಅಂದರೆ ಜುಡಿಷಿಯಲ್ ಬಾಬು ಮತ್ತು ಜೈಲುಗಳು ..	7,38,016	7,45,289
ಪೋಲೀಸ್	5,08,606	5,36,993
ವಿದ್ಯಾಭ್ಯಾಸದ ಇಲಾಖೆ	1,56,429	1,75,610
ಮುಜರಾಯಿ	2,96,819	2,83,601
ಮೆಡಿಕಲ್ ಇಲಾಖೆ	1,47,945	1,45,954
ಪೆನ್ಷನ್ ಮತ್ತು ಗ್ರಾಟ್ಯೂಟಿಗಳು	2,56,561	2,44,110
ಪಬ್ಲಿಕ್ ವರ್ಕ್ಸ್ ಯಾನೇ ಮರಾಮತ್ ಬಾಬು	11,32,299	12,71,132
ಅಂಚೆ	1,26,755	1,29,422
ರಿಜಿಸ್ಟ್ರೇಷನ್	26,672	25,532
ಚಿಲ್ಲರೇ ಇಲಾಖೆಗಳು	19,123	17,400
ಬ್ರಿಟಿಷ್ ಆಫೀಸರುಗಳ ಫರ್ಲೋ ಅಲೋವೆನ್ಸ್, ಗ್ರಾಟ್ಯೂಟಿ, ಕರ್ಸೇಷನ್, ಲೀವು ಮತ್ತು ಪೆನ್ಷನ್ ಸಂಬಂಧವಾದ ಖರ್ಚುಗಳು	42,590	33,852
ಚಿಲ್ಲರೇ ಬಾಬುಗಳು	2,41,594	2,28,709
ಜುಮ್ಲಾ	36,93,409	38,37,604
ಒಟ್ಟು ಜುಮ್ಲಾ	1,01,16,957	1,09,09,153

ಜಮೀನ್ದಾರಿ ಬಾಬಿನಲ್ಲಿ ಸ್ವಲ್ಪ ಹೆಚ್ಚು ಕಡಮೆಯಾಗಿ 11 ಲಕ್ಷ ರೂಪಾಯಿಗಳ ವರಿಗೂ ವಿಶೇಷ ಜಾಸ್ತೀ ಹುಟ್ಟುವಳಿಯಾಗಿರತಕ್ಕದ್ದು ಮೇಲ್ಕಂಡ ತಖ್ತೆಗಳಲ್ಲಿ ಮುಖ್ಯಾಂಶವಾಗಿ ಇರುತ್ತೆ. ಇವರ ಪೈಕೀ ಕಂದಾಯದ ಬಾಕೀ ವಸೂಲಿಯಲ್ಲಿ ಹೆಚ್ಚಾದ ತರದೂದ್ ನಡೆಸಿದ್ದರಿಂದಲೂ, ಕಳೆದ ಸಂವತ್ಸರದಲ್ಲಿ ಮಳೇ ಬೆಳೇ ಸರಿಯಾಗಿ ನಡೆದು ಕಂದಾಯವನ್ನು ಸಲೀಸಾಗಿ ಕೊಡಲು ರೈತರಿಗೆ ಹೆಚ್ಚಾದ ಉಪಪತ್ತಿ ಇದ್ದದ್ದರಿಂದಲೂ, ಹಿಂದಣ ಸಂವತ್ಸರಕ್ಕಿಂತ 7½ ಲಕ್ಷ ರೂಪಾಯಿಗಳು ಜಾಸ್ತಿಯಾಗಿ ವಸೂಲಾಗುವದಕ್ಕೆ ಕಾರಣವಾಯಿತು. ಈ ಜಾಸ್ತೀ ವಸೂಲಿಯನ್ನು ಒಟ್ಟು ಹುಟ್ಟುವಳಿಯಲ್ಲಿ ವಜಾ ಮಾಡಲಾಗಿ ಉಳಿದ 80 ಲಕ್ಷ ರೂಪಾಯಿಗಳು ಕಳೆದ ಸಂವತ್ಸರದ ಜಮೀನ್ದಾರಿ ಬಾಬಿನ ಸಾಮಾನ್ಯ ಹುಟ್ಟುವಳಿಯೆಂದು ದೃಢವಾಗಿ ಹೇಳಬಹುದು.

ಕಳೆದ 50 ವರುಷಗಳ ಲಾಗಾಯಿತು ಈ ಮುಖ್ಯವಾದ ಬಾಬಿನ ಹುಟ್ಟುವಳಿಯ ಅಭಿವೃದ್ಧಿಯನ್ನು ಹೋದ ವರುಷ ಸಭೆಯಲ್ಲಿ ತಪ್ಸೀಲಾಗಿ ವಿವರಿಸಿ, 1876—78ನೇ ಇಸವಿಯಲ್ಲಿ ಪ್ರಾಪ್ತವಾಗಿದ್ದ ಕ್ಷಾಮದ ದೆಶೆಯಿಂದುಂಟಾದ ಕೇಡುಗಳು ಸಂಪೂರ್ಣವಾಗಿ ನಿವರ್ತಿಯಾಗಿ ಈ ಬಾಬಿನ ಹುಟ್ಟುವಳಿಯು ಪೂರ್ವದ ಸ್ಥಿತಿಗೆ ಬಂದಿರುತ್ತೆಂದು ಹೇಳಿದ್ದೆವಷ್ಟೆ. ಹಿಂದಣ ವರ್ಷಗಳ ಪೈಕಿ ಅತ್ಯುತ್ತಮವಾದ ಸಾಲಿನ ಹುಟ್ಟುವಳಿಗಿಂತಲೂ ಕಳೆದ ಸಾಲ್ ಹುಟ್ಟುವಳಿಯು 7 ಲಕ್ಷ ರೂಪಾಯಿಗಳು ಜಾಸ್ತಿಯಾಯಿತು. ಕಾಲಸ್ಥಿತಿಯ ಅನುಕೂಲತೆಯಿಂದಲೂ, ಕೆರೆ ಮತ್ತು ಇತರ ನೀರಾವರೀ ಕಾಮಗಾರಿಗಳು ಈಚೆಗೆ ವಿಶೇಷವಾಗಿ ನಡಿಸಲ್ಪಟ್ಟದ್ದರಿಂದಲೂ, ವಿಶೇಷ ಜಮೀನ್ದಾರಿಗಳು ಸಾಗುವ

ಳಿಗೆ ಬರಲು ಕಾರಣವಾಯಿತು. ಶಿವಾಯಿ ರೈಲ್ವೆ ಮತ್ತು ಹೊಸ ರಸ್ತೆಗಳನ್ನ ಮಾಡೋಣದರಿಂದಲೂ, ಧಾನ್ಯಾದಿಗಳಿಗೆ ಅನುಕೂಲವಾದ ಬೆಲೆಯು ದೊರೆಯುವದ್ದರಿಂದಲೂ, ಸರ್ವೇ ಸೆಟಿಲ್‌ಮೆಂಟ್ ಮೂಲಕ ಕಂದಾಯದ ತೀರ್ವೆಯು ಕ್ರಮಪಡೋಣದರಿಂದಲೂ, ಮೇಲ್ಕಂಡ ಮೇರೆ ಹುಟ್ಟುವಳಿ ಜಾಸ್ತಿಯಾಗಲು ಕಾರಣವಾಯಿತು.

ಫಾರೆಸ್ಟುಬಾಬಿನಲ್ಲಿ ಶ್ರೀಗಂಧಕ್ಕೆ ಕಳೆದ ಸಂವತ್ಸರದಲ್ಲಿ ಅನುಕೂಲವಾದ ಬೆಲೆಯು ಸಿಕ್ಕಿತಾದ್ದರಿಂದ ಒಂದು ಲಕ್ಷ ರೂಪಾಯಿಗಳ ಮೇಲೆ ಜಾಸ್ತಿಯಾಗಿರುತ್ತೆ. ಗಂಧದ ಬಾಬಿನಲ್ಲಿ 1885—86ನೇ ಇಸವಿಯಲ್ಲಿ 4,74,436 ರೂಪಾಯಿಗಳು ಉತ್ಪತ್ತಿಯಾಗಿದ್ದು ಕಳೆದ ಸಾಲಿನಲ್ಲಿ 6,48,348 ರೂಪಾಯಿಗಳು ಹುಟ್ಟುವಳಿ ಆಯಿತು. ಚೌಬೀನೆ ಪುರೋಖ್ತು ಬಾಬಿನಲ್ಲಿ ರೈಲ್ವೆ ಸ್ಲೀಪರ್‌ಗಳ ಪುರೋಖ್ತಿನಿಂದ 1885—86ನೇ ಇಸವಿಯಲ್ಲಿ 1,42,000 ರೂಪಾಯಿಗಳ ವರಿಗೆ ಉತ್ಪತ್ತಿಯಾಗಿದ್ದದ್ದು ಕಳೆದ ಸಂವತ್ಸರದಲ್ಲಿ 32,000 ರೂಪಾಯಿಗಳ ಮಟ್ಟಿಗೆ ಹುಟ್ಟುವಳಿ ಆಯಿತಾದ್ದರಿಂದ ಸುಮಾರು 1 ಲಕ್ಷ ರೂಪಾಯಿಗಳ ವರಿಗೂ ಈ ಬಾಬಿನಲ್ಲಿ ಕಮ್ಮಿ ಆಯಿತು.

ಛಂಗಾರಗಣೀ ಬಾಬಿನಲ್ಲಿ ಸೇಕಡ 5 ರೂಪಾಯಿಗಳ ಮೇರೆ ಸರಕಾರಕ್ಕೆ ಬರತಕ್ಕ ರಾಜಾಯಕ್ಕಾಗಿ 47,000 ರೂಪಾಯಿಗಳು, ಡಿಪಾಜಟ್ಟು ಬಗ್ಗೆ 4,000 ರೂಪಾಯಿಗಳು, ಊತು 51,000 ರೂಪಾಯಿಗಳ ಹುಟ್ಟುವಳಿ ಆಯಿತು. ಇತರ ಎಲ್ಲಾ ಜಮಾಬಾಬುಗಳಲ್ಲಿಯೂ ಕೂಡ ಸಾಮಾನ್ಯತಃ ಜಾಸ್ತಿಯೇ ಆಗಿರುತ್ತೆ.

ಕಳೆದ ಸಂವತ್ಸರದಲ್ಲಿ ಒಟ್ಟು ಖರ್ಚು 1,09,09,153 ರೂಪಾಯಿಗಳು. ಅಂದರೆ ಹಿಂದಣ ವರುಷದಲ್ಲಿಲಿದ 1,01,16,957 ರೂಪಾಯಿಗಳ ಖರ್ಚಿಗಿಂತ 7,92,196 ರೂಪಾಯಿಗಳು ಜಾಸ್ತಿಯಾಗಿದೆ. ಜಾಸ್ತೀ ಖರ್ಚಾದ ಬಾಬುಗಳ್ಯಾವವಂದರೆ :—

3,00,000 ಶ್ರೀಮನ್ಮಹಾರಾಜಾವರ ಸಿವಿಲ್ ಲೀಸ್ಟಿಯಾನೆ ಅರಮನೆ ಖರ್ಚಿಗಾಗಿ ಕೊಡಲ್ಪಟ್ಟ ಜಾಸ್ತೀ ಮೊಬಲಗು.

1,92,000 ಈಚಿಗೆ ಸರ್ವೇ ಸೆಟಿಲ್‌ಮೆಂಟ್ ಆದ ತಾಲ್ಲೂಕುಗಳಲ್ಲಿ ಗ್ರಾಮ ನವುಕರರುಗಳ ತಲಬಿಗೋಸ್ಕರ ಜಾಸ್ತೀಖರ್ಚು.

94,000 ಫಾರೆಸ್ಟು ಬಾಬಿನಲ್ಲಿ ಜಂಗಲ್‌ಗಳಲ್ಲಿ ಚೌಬೀನೆ ಕಡಿಯತಕ್ಕ ಕೆಲಸವೂ ಹೊಸ ಪ್ಲಾಂಟೇಷನ್‌ಗಳ ಕೆಲಸವೂ ವಿಶೇಷವಾಗಿ ನಡದ್ದರಿಂದ ಜಾಸ್ತಿ.

1,40,000 ಪಬ್ಲಿಕ್ ವರ್ಕ್ಸ್ ಯಾನೆ ಮರಹಮ್ಮತು ಬಾಬಿನಲ್ಲಿ ಅಂದರೆ ಮುಖ್ಯವಾಗಿ ನೀರಾವರೀ ಕಾಮಗಾರಿಗಳಿಗಾಗಿ ಜಾಸ್ತಿ.

57,000 1882ನೇ ಇಸವಿ ಡಿಸಂಬರು ತಿಂಗಳಲ್ಲಿ ಮೌಕೂಫ್‌ಆಗಿದ್ದ ಡಿಸ್ಟ್ರಿಕ್ಟು ಮತ್ತು ತಾಲ್ಲೂಕುಗಳನ್ನು ಪುನಹ ಏರ್ಪಾಟು ಮಾಡಿದ್ದರಿಂದ "ರೆವಿನ್ಯೂ" "ಜುಡಿಷಿಯಲ್" ಮತ್ತು "ಪೋಲೀಸ್" ಬಾಬುಗಳಲ್ಲಿ ಜಾಸ್ತಿ.

18,000 ಪುರಾತನ ಲಿಪ್ಯನ್ವೇಷಣೆ ಇಲಾಖೆ ಮತ್ತು ಜಿಯೋಲಾಜಿಕಲ್ ಸರ್ವೇ ಅಂದರೆ ಭೂಶೋಧಕಶಾಸ್ತ್ರದ ಇಲಾಖೆಗಾಗಿ ಜಾಸ್ತಿ.

1,00,000 ಇದುವರಿಗೆ ಬ್ರಿಟಿಷ್ ಗವರ್ನ್‌ಮೆಂಟಿನವರಿಂದ ಸರಬರಾಯಿ ಆಗುತ್ತಿದ್ದ ಕೋರ್ಟು ಫೀ ಲೇಬಿಲ್‌ಗಳನ್ನು ಮುದ್ರಿಸತಕ್ಕ ಬಗ್ಗೆ ಅಚ್ಚುಗಳ ಖರೀದಿಗಾಗಿ "ಸ್ಟಾಂಪು" ಬಾಬಿನಲ್ಲಿ ಜಾಸ್ತಿ.

ಜುಮ್ಲಾ 8,11,000

ಕಳೆದ ಸಾಲಿನಲ್ಲಿ ಷುರೂ 3 ತಿಂಗಳುಗಳ ವರಿಗೆ ಅಂದರೆ 1886ನೇ ಜುಲೈ ಗುರ್ರೇ ವರಿಗೆ ರೈಲ್ವೆಯು ಸರಕಾರದ ಆಡಳಿತದಲ್ಲಿದ್ದು ಆ ತಾರೀಖಿನಲ್ಲಿ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರ ಸುಫರ್ದಿಗೆ ಕೊಡಲ್ಪಟ್ಟಿತು. ಸರಕಾರದ ಸುಫರ್ದಿನಲ್ಲಿದ್ದ 3 ತಿಂಗಳಲ್ಲಿ 1,13,468 ರೂಪಾಯಿಗಳು ಹುಟ್ಟುವಳಿ ಆಯಿತು. ಸರ್ವೆಗಳ ಬಗ್ಗ್ಯಾ ಮೂಲ ಧನಕ್ಕೆ ಖರ್ಚು ಬೀಳತಕ್ಕ ಕಾಮಗಾರೀ ಬಗ್ಗ್ಯಾ ತಗಲಿನ 46,000 ರೂಪಾಯಿಗಳು ಸೇರಿ ಮೇಲ್ಕಂಡ ಕಾಲದಲ್ಲಿ 1,15,486 ರೂಪಾಯಿಗಳು ಒಟ್ಟು ಖರ್ಚಾಯಿತು.

ಕಳೆದ ಸಂವತ್ಸರದಲ್ಲಿ ಖರ್ಚು ಜಾತಾ ಉಳಿದ ಮೊಬಲಗಿನಲ್ಲಿ, ರೈಲ್ವೆ ಬಾಬಿನ ಹುಟ್ಟುವಳಿಗಿಂತ ಜಾಸ್ತಿಯಾಗಿ ಖರ್ಚಾದ 2,018 ರೂಪಾಯಿಗಳು, ಬೆಂಗಳೂರು ಸಿವಿಲ್ ಮತ್ತು ಮಿಲಿಟೇರಿ ಸ್ಟೇಷನ್ ಬಗ್ಗೆ ಜಾಸ್ತಿಯಾಗಿ ಜಮೆ ದಾಖಲಾಗಿದ್ದ 35,781 ರೂಪಾಯಿಗಳು, ಇವುಗಳನ್ನು ವಜಾ ಮಾಡಿದಲ್ಲಿ 18,11,556 ರೂಪಾಯಿಗಳು ನಿವ್ವಳ ಶಿಲ್ಕು ನಿಂತಿತು. 1886ನೇ ಇಸವಿ ಏಪ್ರೆಲ್ ಗುರ್ರೇ ತಾರೀಖಿನಲ್ಲಿ ಹಾಜರಿದ್ದ ಶಿಲ್ಕು 32,65,955 ರೂಪಾಯಿಗಳು ಸೇರಿ ಹಾಲಿ ನಡಿಯುವ ಸಂವತ್ಸರದ ಷುರುವಿನಲ್ಲಿ 50,77,511 ರೂಪಾಯಿಗಳು ಶಿಲ್ಕು ಹಾಜರಿತ್ತು.

1887—88ನೇ ಇಸವಿ ಬಾಬತು ಬಡ್ಜೆಟ್ ಅಂದಾಜು, ಕಳದ ಸಂವತ್ಸರದಲ್ಲಿ ಒಟ್ಟು 1,27,58,508 ರೂಪಾಯಿಗಳು ವಸೂಲಾಗಿದ್ದಾಗ್ಯೂ 1887—88ನೇ ಇಸವಿಗೆ ಜಮಾ ಬಾಬಿನಲ್ಲಿ 1,16,39,452 ರೂಪಾಯಿಗಳ ಮಟ್ಟಿಗೆ ಅಂದಾಜು ಮಾಡಿರುತ್ತೆ. ಜಮೀನ್ ಬಾಬಿನಲ್ಲಿ ಕಳೆದ 3 ವರುಷಗಳ ವಸೂಲೀ ಸರಾಸರೀ ಮೇಲೆ 76,97,000 ರೂಪಾಯಿಗಳು ಮಾತ್ರ ಅಂದಾಜಿನಲ್ಲಿ ದಾಖಲ್ಮಾಡಿರುವದ್ದರಿಂದ ಮೇಲ್ಕಂಡ ಮೇರೆ ಒಟ್ಟು ಅಂದಾಜಿನಲ್ಲಿ ಕಮ್ಮಿಯಾಗುವದಕ್ಕೆ ಕಾರಣವಾಯಿತು. ಯೋಚನಾ ಪೂರ್ವಕವಾಗಿಯೇ ಹೀಗೆ ಕಮ್ಮಿ ಅಂದಾಜು ದಾಖಲ್ ಮಾಡೋಣವಾಯಿತು, ಆದರೆ ಶೀಮೆಯ ಎಲ್ಲಾ ಪ್ರದೇಶಗಳಲ್ಲಿಯೂ ಖುಷ್ಕೀ ಫಸಲಿಗೆ ಈಗ ಅತ್ಯವಶ್ಯಕವಾಗಿ ಬೇಕಾಗಿರುವ ಮಳೆಯು ಕೆಲವು ದಿವಸಗಳೊಳಗಾಗಿಯೇ ನಡಸಿದಲ್ಲಿ ಮೇಲ್ಕಂಡ ಮೊಬಲಗಿಗಿಂತಲೂ ಹೆಚ್ಚಾದ ಹುಟ್ಟುವಳಿಯಾಗುವದಕ್ಕೇನೂ ಸಂಶಯವಿಲ್ಲ.

ಖರ್ಚುಬಾಬಿನಲ್ಲಿ 1886—87ನೇ ಇಸವಿ ಖರ್ಚಿಗಿಂತ 5,82,000 ರೂಪಾಯಿ ಜಾಸ್ತಿ ಅಂದರೆ 1,14,89452 ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ದಾಖಲು ಮಾಡಿರುತ್ತೆ. ಈ ಜಾಸ್ತೀ ಖರ್ಚಿನ ಬಾಬುಗಳ್ಯಾವವೆಂದರೆ ;—

ಮರಹಮ್ಮತ್ತು ಬಾಬಿನಲ್ಲಿ 3½ ಲಕ್ಷ ರೂಪಾಯಿಗಳು, ಫಾರೆಸ್ಟ್ ಬಾಬಿನಲ್ಲಿ ಸುಮಾರು 1 ಲಕ್ಷ ರೂಪಾಯಿಗಳು, ಮೈಸೂರಲ್ಲಿ ತಯಾರಾಗತಕ್ಕ "ಜೂಬಿಲಿ ಮೆಮೋರಿಯಲ್ ಹಾಲು" ಎಂಬ ಕಟ್ಟಡಕ್ಕೂ ಲಂಡನ್ ರಾಜಧಾನಿಯಲ್ಲಿ ತಯಾರಾಗುವ "ಇಂಡೋ ಕಲೋನಿಯಲ್ ಇನ್ಸ್ಟಿಟ್ಯೂಟ್" ಎಂಬ ಕಟ್ಟಡಕ್ಕೆ ಕೊಡಬೇಕಾದ ಸಹಾಯ ದ್ರವ್ಯಕ್ಕೋಸ್ಕರವೂ ಒಂದು ಲಕ್ಷರೂಪಾಯಿಗಳು ; ಮುಂದೆ ವಿವರಿಸಲ್ಪಡುವ ಕಾರಣಗಳಿಂದ ಪೋಲೀಸು ಬಾಬಿನಲ್ಲಿ ½ ಲಕ್ಷ ರೂಪಾಯಿ, ಮೆಡಿಕಲ್ ಇಲಾಖೆಯಲ್ಲಿ ದೇವಿ—ವಗೈರೇ ಲವಾಜಮೆಗಳಿಗೋಸ್ಕರವೂ ಜಾಸ್ತೀ ಔಷಧಿಗಳ ಖರ್ಚಿಗೋಸ್ಕರವೂ 30,000 ರೂಪಾಯಿಗಳು, ಈ ಮೇರೆ ಜಾಸ್ತೀ ಖರ್ಚುಗಳನ್ನು ಬಡ್ಜೆಟ್ಟಿನಲ್ಲಿ ದಾಖಲ್ಮಾಡಿರುತ್ತೆ.

ನಗದಿಯಾತ್ ವಿಷಯವನ್ನು ಪೂರೈಸುವದಕ್ಕೆ ಮುಂಚಿತವಾಗಿ ನಿಮಗೆ ತಿಳಿಸುವದೇನಂದರೆ :—ಇಂಡಿಯಾ ಗೌರ್ನಮೆಂಟಿನವರ ಅಪ್ಪಣೇ ನಿರೀಕ್ಷಣೆಯಲ್ಲಿ ಕಳೆದ ಸಂವತ್ಸರದ 9 ತಿಂಗಳ ರೈಲ್ವೇ ಹುಟ್ಟುವಳೀ ಲೆಖ್ಖಾ ಚಾರವು ಫೈಸಲಾಗುವದಕ್ಕೆ ಅವಕಾಶವಿಲ್ಲದೆ ಇರುತ್ತೆ. ಶಿವಾಯಿ, ದಕ್ಷಿಣ ಮಹಾರಾಷ್ಟ್ರ ಕಂಪೆನಿಯವರಿಂದ ಹಿರುವಹಣಿಂದ ಕ್ಷಾಮಕಾಲದಲ್ಲಿ ಸರ್ಕಾರಕ್ಕೆ ಆದ ಸಾಲವನ್ನು ತೀರಿಸುವದಕ್ಕಾಗಲಿ, ಆ ಕಂಪೆನಿಯವರಿಗೆ ಕೊಡತಕ್ಕ ಭರವಸೆ ಬಡ್ಡಿಯನ್ನು ಪಾವತೀ ಮಾಡತಕ್ಕ ಬಾಬಿನಲ್ಲಿಯಾಗಲಿ, ಯಾವದೊಂದು ನಿಷ್ಕರ್ಷೆಯಾದ ತೀರ್ಮಾನವೂ ಇದುವರಿವಿಗೆ ಆಗಿಲ್ಲವಾಗಿ ಹಾಜರಿರತಕ್ಕ ಶಿಲ್ಕು ಮೊಬಲಗು ಪೈಕಿ ಕೆಲವನ್ನು ಗವರ್ನಮೆಂಟ್ ಬಾಂಡ್‌ಗಳಲ್ಲಿಯೂ ಕೆಲವನ್ನು ಮದ್ರಾಸ್ ಬ್ಯಾಂಕಿನಲ್ಲಿ ಕರೆಂಟ್ ಡಿಪಾಜಿಟ್ಟಾಗಿಯೂ ಇಟ್ಟಿರುತ್ತೆ. ಮದ್ರಾಸ್ ಬ್ಯಾಂಕಿನಲ್ಲಿ ಇಟ್ಟಿರುವ ಮೊಬಲಗಿಗೆ ಸ್ಪೆಷಲ ಏರ್ಪಾಡಿನ ಪ್ರಕಾರ ಸಾಲೀಯಾನಾ ಶೇಕಡಾ 2 ರೂಪಾಯಿ ಮೇರೆ ಬಡ್ಡಿಯೂ ಬರುತ್ತೆ.

ಮರಹಮ್ಮತ್ ಕಾಮಗಾರಿಗಳ ವಿಷಯದಲ್ಲಿ ಮುಖ್ಯವಾಗಿ ತಿಳಿಸತಕ್ಕದ್ದೇನಂದರೆ :—ದಕ್ಷಿಣ ಮಹಾರಾಷ್ಟ್ರ ರೈಲ್ವೇ ಕಂಪೆನಿಯವರು ಗುಬ್ಬೀ ಲಾಗಾಯಿತು ಹರಿಹರದವರಿಗೆ ರೈಲ್ವೇ ಲೈನನ್ನು ಶೀಘ್ರವಾಗಿ ಪೂರೈಸುವ ಉದ್ದೇಶದಿಂದ ಜಾಗ್ರತೆಯಾಗಿ ಕಾಮಗಾರಿಗಳನ್ನು ನಡೆಸುತ್ತಲಿದ್ದಾರೆ. ಶಿವಾಯಿ ತಿಪಟೂರು, ಅರಸೀಕೆರೆ, ಕಡೂ

ರು, ಮತ್ತು ಬೀರೂರು ಈ ಗ್ರಾಮಗಳಮೇಲೆ ಹೋಗುವ ಸ್ವಲ್ಪ ಓಳಸಾದ ರಸ್ತೆಯನ್ನು ಬಿಟ್ಟು ನೆಟ್ಟಗೆ ಒಂದು ಲೈನನ್ನು ಹಾಕಬೇಕೆಂಬ ಪ್ರಯತ್ನವನ್ನು ತ್ಯಜಿಸಿರುತ್ತಾರೆ. ಈಗ ನಡೆಯುತ್ತಿರುವ ರೈಲ್ವೇಲೈನಿನ ಹುಟ್ಟುವಳಿಯು ಕ್ರಮೇಣ ಜಾಸ್ತಿಯಾಗುತ್ತಲೇ ಇರುತ್ತೆ; ಇದು ಶೀಮೆಯ ಸಂಪದಭಿವೃದ್ಧಿಗೆ ಸೂಚಕವಾಗಿದೆ.

ನಮ್ಮ ರೈಲ್ವೆಯನ್ನು ಪರಾಯ ದೇಶದ ದ್ರವ್ಯಸ್ತರ ಸುಫರ್ದಿಗೆ ಕೊಟ್ಟದ್ದರಿಂದ, ರೈಲ್ವೇ ಕಾಮಗಾರಿಯು ಅಮಾನಿಯಲ್ಲಿ ಸಾಲೀಯಾನಾ ನಡೆಯುತ್ತಿದ್ದ ಕಾಲದಲ್ಲಿ ನೀರಾವರೀ ಕಾಮಗಾರಿಗಳ ಬಗ್ಗ್ಯಾಗಿ ಖರ್ಚು ಮಾಡುವದಕ್ಕೆ ಸಾಧ್ಯವಾಗಿದ್ದದ್ದಕ್ಕಿಂತ ವಿಶೇಷವಾಗಿ ಜಾಸ್ತೀ ಮೊಬಲಗನ್ನು ಕಳೆದ ಎರಡು ಸಂವತ್ಸರಗಳ ಲಾಗಾಯಿತು ಖರ್ಚುಮಾಡುವದಕ್ಕೆ ಅನುಕೂಲವಾಯಿತು. ಈಗಲೂ ಇದೇ ರೀತಿಯಾಗಿಯೇ ನಡಿಯುತ್ತಲಿದೆ. ಈ ವರುಷದಲ್ಲಿ ಕೆರೆ ನಾಲೆಗಳ ಕಾಮಗಾರೀ ಬಗ್ಗೆ ಮಟ್ಟಿಗೆ 10¼ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿರುತ್ತೆ. ಶಿವಾಯಿ ನಮ್ಮ ನಗದೀಯಾತ್ ಆಡಳಿತವು ಒಳ್ಳೇ ಸ್ಥಿತಿಯಲ್ಲಿರುವ ಹಾಗೆ ಕಾಣುವದ್ದರಿಂದ ನೀರಾವರೀ ಕಾಮಗಾರಿಗಳನ್ನು ಸಾಧ್ಯವಾದ ಮಟ್ಟಿಗೂ ವಿಸ್ತಾರಮಾಡಬೇಕೆಂಬುವದೇ ಶ್ರೀಮನ್ಮಹಾರಾಜರ ಸರ್ಕಾರದವರ ಮುಖ್ಯಾಭಿಲಾಷೆಯಾಗಿರುತ್ತೆ. ಆದರೆ ನೀರಾವರೀ ಕಾಮಗಾರಿಗಳ ಬಗ್ಗೆ ಕ್ರಮವಾಗಿ ಅಂದಾಜಾಗಳನ್ನು ತಯಾರ್ಮಾಡಬೇಕಾದಲ್ಲಿ ವಿಶೇಷ ವ್ಯವಧಾನವೂ ವಿಚಾರವೂ ಆಲೋಚನೆಯೂ ಅವಶ್ಯಕವಾಗಿ ಇರುವದು, ಶಿವಾಯಿ, ಕೆಲಸಗಾರರು ಧಾರಾಳವಾಗಿ ದೊರೆಯದೇ ಹೋಗೋಣದರಿಂದ ಪ್ರತಿ ವರುಷವೂ ಎಷ್ಟು ಕೆಲಸವಾಗಬೇಕೆಂದು ಸರಕಾರದವರಿಗೆ ಅಭಿಲಾಷೆಯುಂಟೋ ಅಷ್ಟು ಕೆಲಸವು ನಡೆಯುವದಿಲ್ಲ. ವರುಷಂಪ್ರತಿಯಲ್ಲಿಯೂ ಈ ಸಭೆಯವರು ಅವರವರ ತಾಲ್ಲೂಕುಗಳಲ್ಲಿ ಪ್ರಯೋಜಕವಾದ ಕಾಮಗಾರಿಗಳು ಫಲಾನೇಯವುಗಳೆಂದು ಅರಿಕೇ ಮಾಡುತ್ತಲೇ ಇರುತ್ತಾರೆ. ಈ ಕಾಮಗಾರಿಗಳ ವಿಷಯದಲ್ಲಿ ತಕ್ಕ ವಿಚಾರವನ್ನು ಮಾಡಿಯಿರುತ್ತೆ—ಅಥವಾ ಮಾಡುವದಾಗಿರುತ್ತೆ. ಆದಾಯಕರವಾದ್ದೆಂಬ ಕಾರಣದಿಂದಲಾಗಲಿ ಸಾಧರಣವಾಗಿ ಜನಗಳಿಗೆ ಕ್ಷೇಮದಾಯಕವಾದ್ದೆಂಬ ಕಾರಣದಿಂದಲಾಗಲಿ ಮಂಜೂರ್ಮಾಡಬಹುದಾದ ಕಾಮಗಾರಿಗಳು ಹಾಲೀ ನಡೆಯುತ್ತಲಿವೆ, ಅಥವಾ ಮುಂದೆ ನಡೆಸಲ್ಪಡುತ್ತವೆ. ನಮ್ಮ ಇಂಜನೀರುಗಳು ಯಾವ ಕಾಮಗಾರಿಗಳನ್ನು ಶಾಸ್ತ್ರರೀತ್ಯಾ ಸಾಧ್ಯವಾದವುಗಳು, ಅವುಗಳನ್ನು ಪ್ರಾರಂಭಿಸಬಹುದೆಂದು ಧೈರ್ಯವಾಗಿ ಶಿಫಾರಸುಮಾಡುತ್ತಾರೋ ಅಂಥಾ ಕಾಮಗಾರಿಗಳನ್ನು ನಡೆಸುವದರಲ್ಲಿ ಸರ್ವ ಸಾಹಸವೂ ನಡೆಯುತ್ತಲಿರುತ್ತೆ. ಈ ಉದ್ದೇಶದಿಂದ ಮುಂದೆ 5 ವರುಷಗಳ ಪರಿಯಂತರ ನಡಸಬೇಕಾದ ಕಾಮಗಾರಿಗಳ ಪಟ್ಟಿಯು ತಯಾರಾಗುತ್ತಲಿದೆ. ನಮ್ಮ ತಿಳುವಳಿಕೆಯಲ್ಲಿ ಸಾಧ್ಯವೆಂದು ಭಾವಿಸಬಹುದಾದ ಎಲ್ಲಾ ಕಾಮಗಾರಿಗಳನ್ನೂ ಈ ಪಟ್ಟಿಯಲ್ಲಿ ಶೇರಿಸುತ್ತೆ.

ಕೆರೆಗಳ ದುರಸ್ತೀ ವಿಷಯ.—300 ರೂಪಾಯಿಗಳ ವಳಗಿನ ಹುಟ್ಟುವಳಿಯುಳ್ಳ ಕೆರೆಗಳಿಗೆ ಮಟ್ಟೀ ಕಾಮಗಾರಿಯನ್ನು ರೈತರಿಂದ ಮಾಡಿಸತಕ್ಕ ಏರ್ಪಾಟು ಪರೀಕ್ಷಾರ್ಥವಾಗಿ 8 ತಾಲ್ಲೂಕುಗಳಲ್ಲಿ ಜಾರಿಯಲ್ಲಿ ತಂದಿರುತ್ತೆಂದು ಹೋದ ಸಂವತ್ಸರ ತಿಳಿಸಿ ಇದ್ದೆವಷ್ಟೆ. ಪೂರ್ವದಲ್ಲಿ ಜಾರಿಯಲ್ಲಿದ್ದು ಈಚೆಗೆ ಕೆಲವು ಸಂವತ್ಸರಗಳಿಂದ ಆಚರಣೇ ತಪ್ಪಿಯಿದ್ದ ಬಹುಕಾಲದ ಪದ್ಧತಿಯನ್ನು ಪುನಃ ಜಾರಿಯಲ್ಲಿ ತರತಕ್ಕದ್ದಕ್ಕೋಸ್ಕರ ಮಾಡಲ್ಪಟ್ಟದ್ದ ಮೇಲ್ಕಂಡ ಏರ್ಪಾಟು ಯಾವ ರೀತಿಯಾಗಿ ಪರಿಣಮಿಸಿತೋ ಎಂಬದನ್ನು ತಿಳಿಯಲು ನೀವು ಅಪೇಕ್ಷಿತರಾಗಿ ಇರಬಹುದು. ಷುರುವಿನಲ್ಲಿ ನಾವು ನಿರೀಕ್ಷಿಸಿದಂತೆ ಈ ಏರ್ಪಾಟಿಗೆ ಕೆಲವು ಸಂದರ್ಭಗಳಲ್ಲಿ ಆಕ್ಷೇಪಣೆ ಉಂಟಾದಾಗ್ಯೂ ಕ್ರಮೇಣ ಸರ್ಕಾರದವರ ಉದ್ದೇಶವು ಅಂದರೆ ರೈತರು ನ್ಯಾಯವಾಗಿ ತಮ್ಮ ಭಾಗದ ಕೆಲಸವನ್ನು ನೆರವೇರಿಸಿದಲ್ಲಿ ಸರ್ಕಾರದವರು ತಮ್ಮ ಭಾಗದ ಕೆಲಸವನ್ನು ಮಾಡುವದಕ್ಕೆ ಸಿದ್ಧವಾಗಿರುತ್ತಾರೆಂಬ ಅಂಶವು ಜನಗಳಿಗೆ ಚೆನ್ನಾಗಿ ತಿಳಿದನಂತರ ಮೇಲ್ಕಂಡ ಆಕ್ಷೇಪಣೆಯು ನಿವಾರಣೇ ಆಯಿತು. ನೆಲಮಂಗಲ, ಶಿರಾ, ಚಳ್ಳಕೆರೆ, ಮಂಡ್ಯ ಮತ್ತು ಶಿವಮೊಗ್ಗಾ ತಾಲ್ಲೂಕುಗಳಲ್ಲಿ ಮೇಲ್ಕಂಡ ಏರ್ಪಾಟು ಕೂಡಿದ ಮಟ್ಟಿಗೂ ಸಫಲವಾಯಿತು. ಅರಸೀಕೆರೆ; ಕೋಲಾರ, ಕಡೂರು ಈ ತಾಲ್ಲೂಕುಗಳಲ್ಲಿ ಅನೇಕ ಕಾರಣಗಳಿಂದ, ಮುಖ್ಯವಾಗಿ ಆ ತಾಲ್ಲೂಕುಗಳ ಅಮಲ್ದಾರುಗಳಿಗೆ ಈ ಭಾಗದಲ್ಲಿ ಶ್ರದ್ಧೆಯೂ ವಿವೇಕವೂ ಕಮ್ಮಿಯಾದ್ದರಿಂದ ಸದರೀ ಏರ್ಪಾಟು ಕ್ರಮ

ವಾಗಿ ಜಾರಿಯಲ್ಲಿ ಬರಲಿಲ್ಲ. ಪ್ರಪಂಚ ಮೇಲ್ಕಂಡ ಏರ್ಪಾಟಿನಿಂದ ಕೂಡಿದ ಮಟ್ಟಿಗೂ ಪ್ರಯೋಜನ ಉಂಟಾಗಿರುವದರಿಂದ ಇತರ ತಾಲ್ಲೂಕುಗಳಲ್ಲಿಯೂ ಅದನ್ನು ಜಾರಿಯಲ್ಲಿ ತರಬೇಕೆಂಬ ತಜವೀಜು ನಡೆಯುತ್ತಲಿವೆ. ಸದರೀ ಏರ್ಪಾಟಿನ ಪ್ರಕಾರ ದುರಸ್ತಾಗಬೇಕಾದ ಕೆರೆಗಳು ಎಷ್ಟು ಸಂಣವಾದಾಗ್ಯೂ ಅಳತೆ ಅಂದಾಜು ತಯಾರಾಗಿ ಕಲ್ಲು ಅಥವಾ ಗಚ್ಚೀ ಕೆಲಸವು ನಡೆಯಬೇಕಾಗಿರುತ್ತೆ. ಈ ಕೆಲಸಗಳನ್ನು ಇತರ ಸಹಾಯವಿಲ್ಲದೆ ಅಮಲ್ದಾರರ ತಾಬೆಯಲ್ಲಿರುವ ರೆವಿನ್ಯೂ ಸಿಬ್ಬಂದಿಯವರು ಮಾಡಲು ಅಸಾಧ್ಯವಾದ್ದರಿಂದ ಈ ಏರ್ಪಾಟನ್ನು ಕ್ರಮವಾಗಿ ಜಾರಿಯಲ್ಲಿ ತರಲು ಪ್ರತಿ ತಾಲ್ಲೂಕಿನ ಅಮಲ್ದಾರ್ರ ಸಹಾಯಕ್ಕಾಗಿ ಲಾಯಖಾದ ತಾಬೇದಾರನನ್ನು ಕೊಡತಕ್ಕದ್ದು ಅವಶ್ಯಕವಾಗಿದೆ. ಕೆರೆಗಳ ಜೀರ್ಣೋದ್ಧಾರ ಮತ್ತು ದುರಸ್ತೀ ವಿಷಯದಲ್ಲಿ ರೈತರಿಗೆ ಪ್ರೋತ್ಸಾಹ ಪಡಿಸುವ ಬಗ್ಗೆ ಅಮಲ್ದಾರ್ರ ತಾಬೆಯಲ್ಲಿ ತಾಲ್ಲೂಕಿಗೆ ಒಬ್ಬ ಟ್ಯಾಂಕ್ ಓವರ್ಸೀಯರನ್ನು ನೌಕರರು ಮಾಡಬೇಕೆಂದು ಉದ್ದೇಶಿಸಿರುತ್ತೆ. ಕೆಲಸದ ಮಾಹೀಯತ್ ಇರತಕ್ಕ ಓವರ್ಸೀಯರುಗಳು ಈಗ ದೊರೆಯುವದು ಸಾಧ್ಯವಲ್ಲವಾಗಿ ಹಾಲೀ ರೆವಿನ್ಯೂ ಸರ್ವೇ ಇಲಾಖೆಯ ಸಿಬ್ಬಂದೀ ಕಮ್ಮಿಯಾಗುವ ಸಂದರ್ಭದಲ್ಲಿ ಕೆಲಸದಿಂದ ತೆಗೆಯಲ್ಪಡುವ ಮೋಜಣೀದಾರರ ಪೈಕೀ ಬುದ್ಧಿವಂತನನ್ನು ಚುನಾಯಿಸಿ ಟ್ಯಾಂಕ್ ಓವರ್ಸೀಯರ್ ಕೆಲಸಕ್ಕೆ ನೌಕರರು ಮಾಡಬೇಕೆಂದು ಉದ್ದೇಶಿಸಿರುತ್ತೆ.

ಈ ಪ್ರಕಾರ 300 ರೂಪಾಯಿಗಳಿಗಿಂತ ಕಮ್ಮಿಯಾದ ಹುಟ್ಟುವಳಿಯುಳ್ಳ ಚಿಲ್ಲರೇ ಕೆರೆಗಳ ವಿಷಯದಲ್ಲಿ ಮೇಲ್ಕಂಡ ಏರ್ಪಾಟು ಸಂಪೂರ್ಣವಾಗಿ ಜಾರಿಯಲ್ಲಿ ಬಂದಹಾಗೆ ಆಗುತ್ತೆ. ಇದೇರೀತಿಯಾಗಿ ಪುರಾತನ ಪದ್ಧತಿಯನ್ನನುಸರಿಸಿ ಯಲ್ಲಾ ಕೆರೆಗಳ ವಿಷಯದಲ್ಲೂ ಈ ಏರ್ಪಾಟನ್ನು ಜಾರಿಯಲ್ಲಿ ತಂದರೆ ರೈತರಿಗೆ ಉತ್ತರೋತ್ತರ ವಿಶೇಷ ಪ್ರಯೋಜನ ವುಂಟೆಂಬುವದಕ್ಕೆ ಸಂಶಯವಿಲ್ಲ. ರೈತನು ಮಟ್ಟೀ ಕಾಮಗಾರೀ ಮಾಡತಕ್ಕದ್ದು ಸಹಜವಾಗಿರುವಲ್ಲಿ 300 ರೂಪಾಯಿಗಳಿಗೆ ಒಳಪಟ್ಟ ಹುಟ್ಟುವಳೀ ಕೆರೆಗಳ ವಿಷಯದಲ್ಲಿ ಒಂದು ನಿಬಂಧನೆಯನ್ನು ಯಿದಕ್ಕೆ ಮೇಲ್ಪಟ್ಟ ಹುಟ್ಟುವಳಿಯುಳ್ಳ ದೊಡ್ಡ ಕೆರೆಗಳ ವಿಷಯದಲ್ಲಿ ಮತ್ತೊಂದು ನಿಬಂಧನೆಯನ್ನೂ ಮಾಡತಕ್ಕದ್ದು ಉಚಿತವಲ್ಲ. ಆದರೆ ಇಂಥಾ ದೊಡ್ಡ ಕೆರೆಗಳಿಗೆ ಆಗಬೇಕಾದ ಮಟ್ಟೀ ಕಾಮಗಾರಿಯು ಭಾರಿಯಾಗಿರುತ್ತಾದ್ದರಿಂದ ಷುರುವಿನಲ್ಲಿ 300 ರೂಪಾಯಿಗಳಿಗೆ ಮೀರದ ಕೆರೆಗಳ ವಿಷಯದಲ್ಲಿ ಮಟ್ಟಿಗೆ ಮೇಲ್ಕಂಡ ಏರ್ಪಾಟನ್ನು ಜಾರಿಯಲ್ಲಿ ತರುವದು ಯುಕ್ತವೆಂದು ಭಾವಿಸಲ್ಪಟ್ಟಿತು. ಈ ಸಂಣ ಕೆರೆಗಳ ವಿಷಯಕವಾದ ಅನುಭವದಲ್ಲಿ ಕೆರೆಯೇ ತನ್ನ ಸರ್ವಸ್ವವೆಂದು ಭಾವಿಸುವ ರೈತನು ಅದರ ದುರಸ್ತೀ ಬಗ್ಗೆ ತನ್ನ ಭಾಗದ ಕಾಮಗಾರಿಯನ್ನು ಮಾಡಲು ಹಿಂತೆಗೆಯುವದಿಲ್ಲವಲ್ಲದೆ ಅನೇಕ ಸ್ಥಳಗಳಲ್ಲಿ ಈ ಏರ್ಪಾಟು ಸಫಲವಾಗಲು ಮನಃಪೂರ್ತಿಯಾಗಿ ಸಹಾಯ ಮಾಡಿರುತ್ತಾನೆ. ಸಂಣ ಕೆರೆಗಳಿಗೆ ರೈತನು ಮಟ್ಟೀ ಕಾಮಗಾರಿಯನ್ನು ಪೂರೈಸಿದ್ದಲ್ಲಿ ಕಲ್ಲು ಮತ್ತು ಗಚ್ಚೀ ಕಾಮಗಾರಿಯನ್ನು ಸರ್ಕಾರದವರು ಮಾಡುತ್ತಾರೆಂಬ ಭರವಸೆಯು ವ್ಯಕ್ತವಾಗಿರುವದ್ದರಿಂದ, ಕೆಲವು ದೊಡ್ಡ ಕೆರೇ ಕೆಳಗಣ ಜಮೀನ ಮಾಡುವ ರೈತರು ಸಂಣ ಕೆರೆಗಳಂತೆ ತಮ್ಮ ಕೆರೆಗಳಿಗೂ ತೂಬು ಮತ್ತು ಕೋಡಿಗಳನ್ನೂ ಸರಕಾರದಿಂದ ಮಾಡಿಸಿ ಕೊಟ್ಟಲ್ಲಿ ಮಟ್ಟೀ ಕಾಮಗಾರಿಯನ್ನು ತಾವೇ ಮಾಡುತ್ತೇವೆಂದು ಮನಃಪೂರ್ವಕವಾಗಿ ಒಪ್ಪಿಕೊಂಡಿರುತ್ತಾರೆ. ಭಾರಿಯಾಗಿ ಮಟ್ಟೀ ಕಾಮಗಾರೀ ನಡೆಯಬೇಕಾದ ದೊಡ್ಡ ಕೆರೆಗಳ ಮಟ್ಟೀ ಕಾಮಗಾರೀ ಮಾಡುವ ಭಾರವನ್ನೆಲ್ಲಾ ರೈತನಮೇಲೆ ಹಾಕತಕ್ಕದ್ದು ಉಚಿತವಲ್ಲ. ಆದ್ದರಿಂದ ಇಂಥಾ ಕೆರೆಗಳ ವಿಷಯದಲ್ಲಿ ರೈತರ ಜವಾಬುದಾರೀಗೆ ಒಳಪಟ್ಟ ಕಾಮಗಾರೀ ಪೈಕೀ ಸ್ವಲ್ಪಮಟ್ಟಿನ ಕಾಮಗಾರೀಗೆ ಬದಲಾಗಿ ಈಗ ಜಾರಿಯಲ್ಲಿರುವ ಪದ್ಧತಿಯನ್ನನುಸರಿಸಿ ಅವರಿಂದ ತಕ್ಕ ಕಂಟ್ರಿಬ್ಯೂಷನ್ ಅಪೇಕ್ಷಿಸಬೇಕಾಗಿರುತ್ತೆ ; ಇಲ್ಲದಿದ್ದರೆ ಯಿದುವರಿಗೂ ಈ ಕೆಲಸಕ್ಕೆ ತಪ್ಪಿದ್ದಕ್ಕಾಗಿ ರೈತರು ಇಷ್ಟಕ್ಕೆ ಹೆಚ್ಚಿಲ್ಲದ ಮೊಬಲಗಿನ ಮಟ್ಟೀ ಕಾಮಗಾರಿಯನ್ನು ಮಾಡಬೇಕೆಂದು ವಿಧಿಸಬೇಕು. ಈ ಅಂಶವು ಡೆಪ್ಯುಟಿ ಕಮ್ಮಿಷನರವರು ಯೋಚಿಸಿ ವ್ಯವಸ್ಥೆ ಮಾಡತಕ್ಕದ್ದಾಗಿರುತ್ತೆ.

ಮೇಲ್ಕಂಡ ಏರ್ಪಾಟಿನ ಪ್ರಕಾರ ಕೆರೆಗಳನ್ನು ಆಬಾದು ಸ್ಥಿತಿಯಲ್ಲಿ ಕಾಪಾಡತಕ್ಕ ಬಗ್ಗೆ ಅವಶ್ಯಕವಾದ ಮಟ್ಟೀ ಕಾಮಗಾರಿಯನ್ನು ರೈತರು ಮಾಡಿ ಕಲ್ಲು ಕೆಲಸ ಅಥವಾ ಗಚ್ಚೀ ಕೆಲಸವು ನಡೆಯಬೇಕಾದಾಗ ಮಾತ್ರ ಸರಕಾರದವರ ಸಹಾಯವನ್ನು ಅಪೇಕ್ಷಿಸತಕ್ಕ ಪದ್ಧತಿಯು ಆರ್ಷೇಯದಿಂದ ಅಂದರೆ, ಕೆರೆಗಳು ಕಟ್ಟಲ್ಪಟ್ಟ ಕಾಲದಿಂದ ಬಂದದ್ದಾಗಿ

ಇರುತ್ತೆ. ಈ ಅಂಶವನ್ನು ಆಗಾಗ್ಯೆಯಿದ್ದ ಚೀಫ್ ಕಮ್ಮಿಷನರವರುಗಳು, ಸರಕಾರೀ ಉದ್ಯೋಗಸ್ಥರಿಗೆ ತಿಳಿಸುತ್ತಲೇಯಿದ್ದರು. ಇರಿಗೇಷನ್‌ಸೆಸ್ ಎಂಬ ತೀರ್ವೆಯು ಮೊಕರರು ಆದ ಕಾಲದಲ್ಲಿಯೂ ಇದರಿಂದ ಆದ ಹುಟ್ಟುವಳಿಯನ್ನು ತಲಾವುಗಳ ರಿಪೇರಿ ಯೂ ಅಭಿವೃದ್ಧಿಗೋಸ್ಕರ ಉಪಯೋಗಿಸಬೇಕೇ ಹೊರತು ಅವುಗಳನ್ನ ಅಬಾದ್ ಸ್ಥಿತಿಯಲ್ಲಿ ಕಾಪಾಡತಕ್ಕ ಬಗ್ಯೆ ಉಪಯೋಗಿಸತಕ್ಕದ್ದಲ್ಲವೆಂತಲೂ, ಈ ದುರಸ್ತು ಕೆಲಸವು ರೈತರಿಗೆ ಸೇರಿದ್ದೆಂತಲೂ ವಿಧಾಯಕವಾಗಿರುತ್ತೆ. 1873ನೇ ಇಸವಿ ಅಕ್ಟೋಬರ್ ತಿಂಗಳಲ್ಲಿ ಚೀಫ್ ಕಮ್ಮಿಷನರವರು ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಕೊಟ್ಟ ಸರ್ಕ್ಯುಲರ್‌ನಲ್ಲಿ ಆ ಇಲಾಖೆಯವರಿಂದ ಸರಿಯಾದ ಸ್ಥಿತಿಗೆ ತರಲ್ಪಟ್ಟ ತಲಾವ್ ಪರಂಪರೆಯ ವಿಷಯವಾಗಿ ರೈತರು ಮಾಡಬೇಕಾದ ಕೆಲಸಗಳ ವಿಷಯದಲ್ಲಿ ನಿಬಂಧನೆಗಳನ್ನು ಏರ್ಪಡಿಸಿದರು. ಆದರೆ, ಈ ಹುಕ್ಕುಂಗಳನ್ನು ಎಲ್ಲಾ ಕೆರೆಗಳ ವಿಷಯದಲ್ಲೂ ಜಾರೀಗೆ ತರುವದರಲ್ಲಿ ಆಯಾಯ ಡಿಸ್ಟ್ರಿಕ್ಟ್ ಆಫೀಸರುಗಳು ಈ ಭಾಗದ ತಮ್ಮ ತಮ್ಮ ಜವಾಬ್‌ದಾರಿಯನ್ನು ತಿಳಿದುಕೊಂಡದಾಗೆಲ್ಲ ವಿವಿಧವಾಗಿ ಫಲಾಂಶಗಳು ಪರಿಣಮಿಸಿದವು. ಕೆಲವು ಡಿಸ್ಟ್ರಿಕ್ಟುಗಳಲ್ಲಿ ಅಂದರೆ, ಮುಖ್ಯವಾಗಿ ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ರೈತರು ತಾವು ಮಾಡಬೇಕಾದ ಕೆಲಸಗಳನ್ನು ಸರಿಯಾಗಿ ನಡಿಸಿದ್ದರಿಂದತಲಾವುಗಳು ಸಾಧಾರಣವಾಗಿ ಉತ್ತಮಸ್ಥಿತಿಯಲ್ಲಿರುತ್ತವೆ. ಇತರ ಕಡೆಗಳಲ್ಲಿ ಅಂದರೆ ಮೈಸೂರು, ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ತಲಾವುಗಳ ವಿಷಯದಲ್ಲಿ ತಾವು ಮಾಡಬೇಕಾದ ಕೆಲಸವನ್ನು ರೈತರು ಶುದ್ಧಾಂಗವಾಗಿ ಮರತುಬಿಡುವದಕ್ಕೆ ಅವಕಾಶವಾಯಿತಾಗಿ ಕೆರೆಗಳು ಸಾಧಾರಣವಾಗಿ ಹೀನಸ್ಥಿತಿಯಲ್ಲಿರುತ್ತೆ. ಶಿವಾಯಿ ಕ್ಷಾಮವು ಪ್ರಾಪ್ತವಾಗಿ ರಾಜ್ಯಾಡಳಿತ ಕ್ರಮಗಳೆಲ್ಲವೂ ಅವ್ಯವಸ್ಥೇ ಸ್ಥಿತಿಯಲ್ಲಿ ಬಂದು ಆಗಾಗ್ಯೆ ತಲಾವುಗಳ ವಿಷಯವಾಗಿ ಸರ್ಕಾರದವರು ಕೊಟ್ಟ ವಿವಿಧವಾದ ಹುಕುಂಗಳದೆಶೆಯಿಂದ ರೈತರಿಗೆ ಭರವಸೆ ಕಮ್ಮಿಯಾಗುವದಕ್ಕೆ ಕಾರಣವಾಯಿತು. ಇತ್ಯಾದಿ ಕಾರಣಗಳಿಂದ ಈ ವಿಷಯದಲ್ಲಿ ನಿಷ್ಕರ್ಷೆಯಾದ ತೀರ್ಮಾನವನ್ನು ಮಾಡತಕ್ಕದ್ದು ಅತ್ಯವಶ್ಯಕವೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಎಣಿಸಿ ಲಾಗಾಯತ್‌ನಿಂದ ಬಂದ ಪದ್ಧತಿಯನ್ನೇ ಅನುಸರಿಸಿರುವ ಮೇಲ್ಕಂಡ ಏರ್ಪಾಡನ್ನು ಪ್ರಜೆಗಳ ಕ್ಷೇಮಾರ್ಥವಾಗಿ ಜಾರಿಯಲ್ಲಿ ತಂದಿರುತ್ತಾರೆ. ಇನ್ನ್ಯಾವ ವಿಧವಾಗಿಯೂ, ಸೀಮೆಯ ಎಲ್ಲಾ ಕಡೆಗಳಲ್ಲಿಯೂ ದರೋಬಸ್ತು ಕೆರೆಗಳನ್ನು ಅಬಾದ್ ಸ್ಥಿತಿಗೆ ತರಲು ಸಾಧ್ಯ ತೋರಲಿಲ್ಲ. ಈ ರೀತಿಯಾಗಿ ರೈತರು ತಾವು ಮಾಡಬೇಕಾಗಿದ್ದು ತಪ್ಪಿದ ಕೆಲಸಗಳನ್ನೂ ನಡಿಸುತ್ತಾ ಬರುವದರ ಮೂಲಕ ಒಂದು ದಫೆ ಎಲ್ಲಾ ತಲಾವುಗಳೂ ಅಬಾದ್ ಸ್ಥಿತಿಗೆ ತರಲ್ಪಟ್ಟನಂತರ ಅವುಗಳನ್ನು ಆ ಸ್ಥಿತಿಯಲ್ಲಿ ಕಾಪಾಡಬೇಕಾದ್ದಕ್ಕಾಗಿ ಸಾಲೀಯಾನಾ ಮಾಡಬೇಕಾದ ಕೆಲಸವು ಬಹಳ ಸುಲಭವಾಗಿರುವದು. ಕಲ್ಲು ಮತ್ತು ಗಚ್ಚೀ ಕೆಲಸವನ್ನೂ ರೈತರ ಹತೋಟಿಗೆ ಮೀರಿದ ಅಕಸ್ಮಾತ್ತುಗಳಿಂದುಂಟಾಗುವ ವಡವು ವಗೈರೇ ಅಪಾಯಗಳನ್ನು ದುರಸ್ತುಮಾಡುವದಕ್ಕೆ ಸರಕಾರದವರು ಬದ್ಧರಾಗಿರುತ್ತಾರೆ. ಈ ರೀತಿಯಾದ ಏರ್ಪಾಟನ್ನು ಮಾಡಿರುವದರಲ್ಲಿ ನಮ್ಮ ದೇಶದ ಉತ್ಕೃಷ್ಟವಾದ ತಲಾವ್‌ಗಳನ್ನು ಸರಿಯಾದ ಸ್ಥಿತಿಗೆ ತರಬೇಕೆಂಬುವದೇ ಸರಕಾರದವರ ಮುಖ್ಯೋದ್ದೇಶವೆಂತಲೂ, ಇದರಿಂದ ಗ್ರಾಮಸ್ಥರಿಗೆ ಉತ್ತರೋತ್ತರ ಅತ್ಯಂತ ಪ್ರಯೋಜನ ಉಂಟೆಂತಲೂ ಅವರುಗಳ ಅನ್ನೋದಕಗಳಿಗೆ ಮುಖ್ಯಾಧಾರಭೂತಗಳಾದ ಕೆರೆಗಳ ದುರಸ್ತಿಗೋಸ್ಕರ ಕಾಮಗಾರೀ ನಡಿಸುವದರಲ್ಲಿ ಆರ್ಷೇಯದಿಂದ ಬಂದ ಪದ್ಧತಿಯನ್ನನುಸರಿಸುವದೇ ಹೊರತು ಅನ್ಯಥಾ ಇಲ್ಲವೆಂಬ ಅಂಶವನ್ನೂ ಪ್ರಜಾ ಪ್ರತಿನಿಧಿಗಳಾದ ನೀವುಗಳು ನಿಮ್ಮ ನಿಮ್ಮ ತಾಲ್ಲೂಕುಗಳಲ್ಲಿರತಕ್ಕ ಸಮಸ್ತ ಪ್ರಜೆಗಳಿಗೂ ಸಂದರ್ಭಬಿದ್ದಹಾಗೆಲ್ಲಾ ತಿಳಿಸುವಿರೆಂದು ನಂಬುತ್ತೇವೆ.

ತಲಾವುಗಳ ವಿಷಯದಲ್ಲಿ ರೈತರು ಮಾಡತಕ್ಕ ಕೆಲಸಗಳು ಇಂಥಾವುಗಳೆಂದು ಸ್ಪಷ್ಟವಾದ ನಿಬಂಧನೆಗಳನ್ನು ಏರ್ಪಡಿಸಬೇಕೆಂಬ ತಾತ್ಪರ್ಯವಿರುತ್ತೆ. ಇಂಥಾ ನಿಬಂಧನೆಗಳ ಮುಸವಿದೆಯನ್ನು ನಿಮ್ಮಲ್ಲಿ ಕೊಡುವೆವು. ಅದನ್ನು ನೋಡಿ ಸರಕಾರದವರ ಉದ್ದೇಶವು ಸಫಲವಾಗಲು ಸಮಾಚೀನವಾದ ಸಲಹೆಗಳನ್ನು ಕೊಟ್ಟಲ್ಲಿ ನಮಗೆ ಬಹಳ ಸಂತೋಷವಾಗುವದು.

ನದೀ ನಾಲೆಗಳು.—ಇತರ ಡಿಸ್ಟ್ರಿಕ್ಟ್‌ಗಳಿಗೆ ಕೆರೆಗಳು ಎಷ್ಟು ಮುಖ್ಯವೋ ಅದೇ ರೀತಿಯಾಗಿ ಮೈಸೂರು ಹಾಸನ ಡಿಸ್ಟ್ರಿಕ್ಟ್‌ಗಳಿಗೆ ನದೀನಾಲೆಗಳು ಮುಖ್ಯವಾದವುಗಳಾಗಿರುತ್ತವೆ. ಈ ನಾಲೆಗಳ ಅಭಿವೃದ್ಧಿಯೂ ಮತ್ತು

ಬಡಾವಣೆಯು ಈಗಲೂ ಮರಹಮ್ಮತ್ ಇಲಾಖೆಯವರ ಆಲೋಚನೆಯಲ್ಲಿ ಸರ್ವದಾ ಇರುವದು. ಪಶ್ಚಿಮದಿಗ್ಭಾಗದಿಂದ ಪ್ರವಹಿಸುವ ನದಿಗಳಿಂದ ಸಾಧ್ಯವಾದಮಟ್ಟಿಗೂ ಆಗಬೇಕಾದ ಪ್ರಯೋಜನವನ್ನು ಪೂರ್ತಿಯಾಗಿ ಪಡೆಯುವವರಿಗೂ ಈ ವಿಷಯವು ಸದರೀ ಇಲಾಖೆಯವರ ಆಲೋಚನೆಯಲ್ಲಿಯೇ ಇರುವದು. ರಾಮಪುರದ ನಾಲೆಯ ಕಾಮಗಾರಿಯು ಜಾಗ್ರತೆಯಾಗಿ ನಡೆಯುತ್ತಲಿದೆ. ಅದೇ ಆಣೆ ಕಟ್ಟಿನಿಂದ ಹೊರಡುವ ಹುಲ್ಲಹಳ್ಳೀ ನಾಲೆಯ ಕಾಮಗಾರಿಯು ಸರಕಾರದವರ ಆಲೋಚನೆಯಲ್ಲಿರುತ್ತೆ. ರಾಮಸಮುದ್ರದ ನಾಲೆಯನ್ನು ಮೊದಲು ಇದ್ದದ್ದಕ್ಕಿಂತಲೂ 10 ಮೈಲೀ ವರಿಗೂ ಬಡಾಯಿಸಲು ಕಾಮಗಾರೀ ನಡಿಯುತ್ತಲಿದೆ. ಕಾಮನಹಳ್ಳೀ ಬಳಿ 1,000 ಎಕರೆಗಳ ಮಟ್ಟಿಗೂ ನೀರು ಸರಬರಾಯಿಮಾಡುವದಕ್ಕೆ ಬೇಕಾದ ಬಂದು ತೋಳು ಕಾಲ್ವೆಗೋಸ್ಕರ ಸರ್ವೇ ಮಾಡಲ್ಪಡುತ್ತಲಿದೆ. ರಾಜಪರಮೇಶ್ವರೀ ನಾಲೆಯನ್ನು ಅಭಿವೃದ್ಧಿಮಾಡುವದಕ್ಕೆ ಬೇಕಾದ ಕಾಮಗಾರಿಯು ನಡೆಯುತ್ತಲಿದೆ. ವಿರಜಾನದೀ ನಾಲೆಯನ್ನ ವಿಸ್ತರಿಸತಕ್ಕ ಅಂಶವೂ ಯೋಚನೆಯಲ್ಲಿದೆ ; ಇದನ್ನು ಚನ್ನಾಗಿ ವ್ಯವಸ್ಥೆಮಾಡತಕ್ಕದ್ದು ಸುಲಭಸಾಧ್ಯವಲ್ಲ, ಯಾಕಂದರೆ ಇದರಿಂದ ಬಹಳ ಮಟ್ಟಿಗೂ ನೀರಿನ ಸರಬರಾಯಿ ಆಗಬಹುದೆಂಬ ಅಂಶವೂ, ಈಗಲೂ ಕಾಣಿಸುತ್ತಿರುವ ಹಳೇ ನಾಲೆ ಆಸರೆಯಲ್ಲಿ ಉತ್ಕೃಷ್ಟವಾದ ಜಮೀನು ಇರತಕ್ಕ ಅಂಶವೂ, ಪ್ರಥಮತಃ ವ್ಯಕ್ತವಾಗಿದ್ದಾಗ್ಯೂ ಅಣೆಕಟ್ಟಿನ ಎತ್ತರ, ನೀರಿನ ಮಟ್ಟ, ಹಾಲೀ ನಾಲೇ ಬಂದಿರತಕ್ಕ ಸ್ಥಳ ಇವುಗಳನ್ನ ಆಲೋಚಿಸಿದಲ್ಲಿ ವಿಶೇಷವಾಗಿ ನೀರು ಮುಂದಕ್ಕೆ ಹರಿಯಲಾರದೆಂದು ತೋರುತ್ತೆ. ಶಿವಾಯಿ ಈ ನಾಲೇ ಕೆಳಗೆ ಹಾಲೀ ಸಾಗುವಳೀಯಾಗತಕ್ಕ ಜಮೀನುಗಳಿಗೇನೇ ಆಖೈರು ಕಾಲದಲ್ಲಿ ತಕ್ಕಷ್ಟು ನೀರು ಒದಗಿಸುವದು ಕಷ್ಟವಾಗಿರುತ್ತೆ.

ಆನಂದೂರು ನಾಲೆಯನ್ನು ಬಡಾಯಿಸುವ ಉದ್ದಿಶ್ಯದಿಂದ ಇದಕ್ಕೆ ಸೇರಿರುವ ಚೋಳನಹಳ್ಳೀ ಆಣೆ ಮತ್ತು ನಾಲೆಯನ್ನು ದುರಸ್ತಿನಲ್ಲಿ ತರುವದು ಸಾಧ್ಯವೇ ಎಂಬ ಅಂಶವನ್ನು ಕುರಿತು ವಿಚಾರಣೆ ನಡೆಯುತ್ತಲಿದೆ. ಮಾದಾಪುರದ ಅಣೆ ಮತ್ತು ಕಾಲ್ವೆ ದುರಸ್ತುಮಾಡುವದು ಅಥವಾ ಶ್ರೀರಾಮದೇವರ ಅಣೆಯನ್ನು ಎತ್ತರಿಸತಕ್ಕದ್ದು, ಯಗಚೀ ನದೀ ಬಾಬತುಪೂರ್ವದಲ್ಲಿದ್ದ ಕಾಲ್ವೆಗಳನ್ನು ದುರಸ್ತುಮಾಡಿಬಡಾಯಿಸುವದು, ಈ ಕಾಮಗಾರಿಗಳು ಮರಹಮ್ಮತ್ ಇಲಾಖೆಯವರ ಯೋಚನೆಯಲ್ಲಿರುತ್ತವೆ.

ನೀರಾವರೀ ಅಲ್ಲದ ಇತರ ಮರಹಮ್ಮತ್ ಕೆಲಸಗಳನ್ನ ಕುರಿತು ಸಂಕ್ಷೇಪವಾಗಿ ತಿಳಿಸುತ್ತೇವೆ. ವ್ಯಾಪಾರಕ್ಕೂ ಸ್ಥಳಾನುಕೂಲಗಳಿಗೂ ಬೇಕಾದ ಹಾಗೆಲ್ಲ ರಸ್ತೆಗಳನ್ನು ವಿಸ್ತರಿಸುತಲಿದೆ. ಇವುಗಳಲ್ಲಿ ರೈಲ್ ಸ್ಥಳಗಳಿಗೆ ಸೇರತಕ್ಕ ರಸ್ತೆಗಳು ಮುಖ್ಯವಾಗಿ ನಡೆಸಲ್ಪಡುವವು.

ಕೋಲಾರದ ಭಂಗಾರದ ಗಣಿಗೆ ಬಂದು ರಸ್ತೆಯು ಸೇತುವೆಗಳೊಡನೆ ತಯಾರಾಗುತ್ತಲಿದೆ. ಈ ರಸ್ತೆಯು ಭಂಗಾರಗಣಿಗಳಿಂದ ಮದ್ರಾಸ್ ರೈಲ್ವೆಗೆ ಸಂಬಂಧಪಟ್ಟ ಕಾಮಸಮುದ್ರ ಮತ್ತು ಬವರಿಂಗ್‌ಪೇಟೆ ಸ್ಟೇಷನುಗಳ ಪರ್ಯಂತವೂ ಹಾಕಲ್ಪಡುವದು. ಈಗ 2 ವರ್ಷಗಳಿಂದಲೂ ಈ ಗಣಿಗಳು ಪ್ರಾಬಲ್ಯಸ್ಥಿತಿಗೆ ಬಂದು ಈ ಪ್ರಾಂತ್ಯದಲ್ಲಿ ಸಾಮಾನು ಸಾಗುವದು ಹೆಚ್ಚಾದ್ದರಿಂದ ಇಲ್ಲಿನ ವ್ಯಾಪಾರದ ಸಾಕರ್ಯಕ್ಕಾಗಿ ಒಳ್ಳೇರಸ್ತೆಯನ್ನು ಆವಶ್ಯಕವಾಗಿ ಹಾಕಬೇಕಾಯಿತು.

ಮಾಗಡಿಯಿಂದ ಕುಲೀಸಪ್ಪಾಟೆಗೆ ಬಹಳ ದಿವಸಗಳಿಂದಲೂ ಆಗಬೇಕೆನ್ನುತ್ತಿದ್ದ ರಸ್ತೆಯ ಕಾಮಗಾರಿಯು ತ್ವರ್ಯವಾಗಿ ನಡಿಯುತ್ತಲಿದೆ. ಬಾಬಾಬುಡ್ಡಗಿರಿಯ ಪಶ್ಚಿಮ ದಿಗ್ಭಾಗದಲ್ಲಿರುವ ಫಲವತ್ತಾದ ಜಾಗಕ್ಕೆ ಹಾಕುತ್ತಿರುವ ರಸ್ತೆಯು ಪೂರೈಸುತ್ತಾ ಬರುತ್ತೆ. ಎರಡನೇ ತರಗತಿಗೆ ಸೇರಿದ ಡಿಸ್ಟ್ರಿಕ್ಟರಸ್ತೆಗಳನ್ನು ತಯಾರುಮಾಡುವದು, ಹಳೇ ರಸ್ತೆಗಳನ್ನು ದುರಸ್ತಿನಲ್ಲಿ ತರುವದು, ಸಹ ನಡಿಯುತ್ತಲಿದೆ. ಪ್ರಯಾಣಕ್ಕೆ ಕುಂದಕವಾಗಿದ್ದ ಹೊಳೆಗಳ ಮೇಲೆ ಸೇತುವೆಗಳು ಕ್ರಮೇಣ ತಯಾರಾಗುತ್ತಾ ಬರುತ್ತಲಿವೆ. ಈಗ ಕಟ್ಟುತ್ತಿರುವ ಮುಖ್ಯವಾದ ಸೇತುವೆಗಳಲ್ಲಿ ಬೇಲೂರು ಸೇತುವೆಯೂ, ಸೂಳೇಕೆರೆ ಮತ್ತು ಕುಮುದ್ವತೀ ಸೇತುವೆಗಳೂ ಸೇರಿರುತ್ತವೆ. ಇವುಗಳ ಪೈಕೀ ಯಾರಾದರೂ ಬೇಲೂರಿಗೆ, ಹರಿಹರದಿಂದ ಮಲೇಬೆನ್ನೂರಿಗೆ, ಮತ್ತು ಸೊರಬದಿಂದ ಶಿವಮೊಗ್ಗೆಗೆ ಹೋಗಿದ್ದವರಿಗೆ ಸೇತುವೆಯಿಲ್ಲದ ಯಗಚೀನದಿಯೂ, ಸೂಳೇಕೆರೇ ಹಳ್ಳವೂ, ಕುಮುದ್ವತಿನದಿಯೂ ಸಹ ಪ್ರಯಾಣಕ್ಕೆ ಎಷ್ಟು ಪ್ರತಿಬಂಧಕಗಳಾಗಿರುತ್ತೆಂಬ ಅಂಶವು ಮುಂದಟ್ಟಾಗಿರಬಹುದು.

ಪ್ರಜಾಪ್ರಯೋಜನಾರ್ಥವಾದ ಚಿಲ್ಲರೇ ಕಾಮಗಾರಿಗಳಲ್ಲಿ ನಮೂದಿಸಬೇಕಾಗಿರುವ ಅಂಶಗಳ್ಯಾವವೆಂದರೆ, ಈ ಶೀಮೆಯ ರಾಜಧಾನಿಯಾದ ಈ ಪಟ್ಟಣದಲ್ಲಿ ಆರೋಗ್ಯವನ್ನುಂಟುಮಾಡುವ ಕಾಮಗಾರಿಗಳಿಗೂ ಮತ್ತು ನೀರಿನ ಸರಬರಾಯಿ ಕಾಮಗಾರಿಗಳಿಗೂ ವಿಶೇಷ ದ್ರವ್ಯ ವ್ರಯಮಾಡಬೇಕಾದ್ದು ಅಗತ್ಯವೆಂದು ಯೋಚಿಸಲ್ಪಟ್ಟಿರುತ್ತೆ. ಈ ಸಂದರ್ಭದಲ್ಲಿ ಕಾವೇರೀನದಿಯ ಉದಕವನ್ನು ಮೈಸೂರಿಗೆ ತರುವದು ಸಾಧ್ಯವೇ, ಅದಕ್ಕೆ ತಗಲುವ ಖರ್ಚು ಎಷ್ಟು ಎಂಬ ಬಹುಕಾಲದಿಂದ ಚರ್ಚೆಯಲ್ಲಿರುವ ಅಂಶಗಳನ್ನು ವ್ಯವಸ್ಥೆ ಮಾಡುವದಕ್ಕೆ ಬೇಕಾದ ಸರ್ವೆ ಮುಂತಾದ್ದು ನಡಿಯುತ್ತಲಿವೆ.

ಮರಹಮ್ಮತ್ ಬಾಬುಗಳಲ್ಲಿ ಕಳೆದ ಸಾಲಿನಲ್ಲಿ ಆದ ಖರ್ಚನ್ನೂ ಈ ವರ್ಷದ ಬಡ್ಜೆಟ್ ಅಂದಾಜನ್ನೂ ಈ ಕೆಳಗೆ ನಮೂದಿಸಿರುತ್ತೆ.

	1886—87ನೇ ಇಸವಿ ಖರ್ಚು.	1887—88ನೇ ಇಸವಿ ಬಡ್ಜೆಟ್ ಅಂದಾಜು.
ನೀರಾವರೀ ಕಾಮಗಾರಿಗಳಿಗೋಸ್ಕರ ..	7,68,904	10,67,812
ರಸ್ತೇ ವಗೈರೇ ಕಾಮಗಾರಿಗಳಿಗೋಸ್ಕರ ..	7,97,548	8,47,872
ಕಟ್ಟಡಗಳಿಗೋಸ್ಕರ ..	2,53,417	3,49,302
ಚಿಲ್ಲರೇ ಕಾಮಗಾರಿಗಳು ..	1,06,979	1,34,264
ಜಮಾ....	19,26,848	23,99,250

ಈ ಕಾಮಗಾರಿಗಳಿಗೆ ಪ್ರೊವಿನ್ಷಲ್ ಫಂಡಿನಿಂದ ಕೊಟ್ಟ 16ಲಕ್ಷ ರೂಪಾಯಿಗಳು ಜಾತಾ ಬಾಕಿ ಮೊಬಲಗನ್ನು ಸ್ಟ್ರಿಕ್ಟ್ ಮತ್ತು ಇತರ ಫಂಡ್‌ಗಳಿಂದ ಕೊಟ್ಟಿರುತ್ತೆ. ಮುಂದಿನ ಸಂವತ್ಸರದಲ್ಲಿ ಹೆಚ್ಚಾದ ಕಾಮಗಾರಿಗಳಿಗೆ ಅಂದಾಜು ತಯಾರಾಗಿ ಅವುಗಳು ನಮ್ಮಲ್ಲಿರುವ ಸ್ವಲ್ಪ ಜನ ಇಂಜನಿಯರುಗಳಿಂದ ಸಾಧ್ಯವಾಗುವದಾದರೆ ಅವುಗಳಿಗಾಗಿ ಹೆಚ್ಚು ದ್ರವ್ಯವನ್ನು ಖರ್ಚು ಮಾಡಲು ಸಿದ್ಧರಾಗಿದ್ದೇವೆ. ಪ್ರಜಾಕ್ಷೇಮಕ್ಕೆ ಅವಶ್ಯಕವಾದ ಮರಹಮ್ಮತ್ ಕಾಮಗಾರಿಗಳಿಗೋಸ್ಕರ ವಿಶೇಷವಾಗಿ ದ್ರವ್ಯ ವ್ರಯಮಾಡುತ್ತಿರುವದರಿಂದಲೂ ಮತ್ತು ಸ್ವಲ್ಪ ಕಾಲದಲ್ಲಿಯೇ ಇದನ್ನ ಇನ್ನೂ ಹೆಚ್ಚಿಸುವ ಉದ್ದೇಶವಿರುವದರಿಂದಲೂ ಈಗಿನ ಈ ಬಾಬಿನ ಖರ್ಚು ಬ್ರಿಟಿಷ್ ಗೌರ್ನಮೆಂಟಿನವರ ಆಡಳಿತದ ಸುಭಿಕ್ಷ ಕಾಲಗಳಲ್ಲಿ ವಿಶೇಷವಾಗಿ ನಡಿಯುತ್ತಿದ್ದ ಖರ್ಚಿಗೆ ಸರಿಸಮವಾಗಿದೆ.

ಭಂಗಾರದ ಗಣಿ.—ಕಳೆದ ಸಂವತ್ಸರದ ಸಭೆಯಲ್ಲಿ ನಮೂದುಮಾಡಲ್ಪಟ್ಟ ಸ್ವರ್ಣಗರ್ಭಿತವಾದ ಭೂಮಿಗಳ ಅಜಮಾಯಿಷಿಯು ಈಚೆಗೆ ಪೂರೈಸಿ ಇರುತ್ತೆ. ಪ್ರಾರಂಭದಲ್ಲಿ ಕೋಲಾರದ ಭಂಗಾರದ ಗಣಿಗಳನ್ನು ಕಂಡು ಹಿಡಿದ ಮೆ॥ ಲೆವೆಲ್ ಸಾಹೇಬರವರು ಮೆ॥ ಮಾರ್ಶ್ ಸಾಹೇಬರವರ ಸಹಾಯದಿಂದ ಸ್ವರ್ಣಗರ್ಭಿತವಾದ ಪ್ರದೇಶಗಳನ್ನು ಪೂರಾ ಅಜಮಾಯಿಷಿ ಮಾಡಿದರು. ಇವರುಗಳು ನಿರ್ದೇಶಿಸಿದ ಸ್ಥಳಗಳನ್ನು ಇಂಡಿಯಾ ಜಿಯೋಲಾಜಿಕಲ್ ಸರ್ವೆ ಸೂಪರಿಂಟೆಂಡೆಂಟರಾದ ಮೆ॥ ಬ್ರೂಸ್ ಫುಟ್ ಸಾಹೇಬರವರು ಪುನಃ ಅಜಮಾಯಿಷಿ ಮಾಡಿಯಿರುತ್ತಾರೆ. ಇವರುಗಳ ರಿಪೋರ್ಟುಗಳನ್ನು ಈಚೆಗೆ ಘೋಯಿಷ ಮಾಡಿರುತ್ತೆ. ಈ ಶೀಮೆಯಲ್ಲಿ ಸ್ವರ್ಣಗರ್ಭಿತವಾದ ಮುಖ್ಯ ಪ್ರದೇಶಗಳ ವಿಷಯವಾಗಿ ಉಪಯೋಗಕರವಾದ ಅನೇಕ ಸಂಗತಿಗಳು ಈ ರಿಪೋರ್ಟುಗಳ ಮೂಲಕ ಸಮಸ್ತರಿಗೂ ತಿಳಿಯುವಹಾಗೆ ಪ್ರಸಿದ್ಧ ಮಾಡಿರುತ್ತೆ.

ಭಂಗಾರದ ಗಣೀಬಗ್ಗೆ ಜಮೀನುಗಳನ್ನು ಕೊಡತಕ್ಕ ಷರತ್ತುಗಳನ್ನು ತೀರ್ಮಾನಿಸಿ ಹೊಸದಾಗಿ ನಿಬಂಧನೆಗಳನ್ನು ಈಚೆಗೆ ಪ್ರಕಟಿಸಿರುತ್ತೆ. ಪೂರ್ವದಲ್ಲಿ ಜಾರಿಯಲ್ಲಿದ್ದ ನಿಬಂಧನೆಗಳಿಗೂ ಈಗ ಹೊಸದಾಗಿ ಮಂಜೂರು ಮಾಡಲ್ಪಟ್ಟಿರುವ ರೂಲ್ಸುಗಳಿಗೂ ಇರತಕ್ಕ ಮುಖ್ಯ ವ್ಯತ್ಯಾಸಗಳು ಯಾವವೆಂದರೆ:—

೧. ಷುರುವಿನಲ್ಲಿ ಅಜಮಾಯಿಷಿಬಗ್ಗೆ ಲೈಸೆನ್ಸ್ ಯಾನೆ ಅಪ್ಪಣೆ ಕೊಡತಕ್ಕದ್ದು.

೨. ಜಮೀನು ಸುಪರ್ದಾದ ತಾರೀಖು ಲಾಗಾಯಿತು 2 ವರುಷಗಳ ಒಳಗಾಗಿ ಆ ಜಮೀನಿನಲ್ಲಿ ಕೆಲಸ ನಡಿಸತಕ್ಕ ಬಗ್ಗೆ ಚದುರಮೈಲು 1ಕ್ಕೆ 5,000 ಪೌಂಡುಗಳಿಗೆ ಕಮ್ಮಿಯಿಲ್ಲದೆ ಪಾವತೀ ಆಗಿರುವ ಬಂಡವಾಳವುಳ್ಳ ಕಂಪೆನಿಯನ್ನು ಏರ್ಪಾಟು ಮಾಡಬೇಕೆಂಬ ಷರತ್ತನ್ನು ಸೇರಿಸತಕ್ಕದ್ದು.

೩. ಆಗಿಂದಾಗ್ಯೆ ಭಂಗಾರದ ಗಣೀಬಗ್ಗೆ ಕೊಡಲ್ಪಡಬಹುದಾದ ಜಮೀನುಗಳ ಒಟ್ಟುವಿಸ್ತೀರ್ಣವನ್ನು ನಿಷ್ಕರ್ಷೆ ಮಾಡುವದಕ್ಕೂ ಅಂಥಾ ಜಮೀನುಗಳ ಬಗ್ಗೆ ಪೋಟಾಪೋಟೀ ಮೂಲಕ ದರಖಾಸ್ತುಗಳನ್ನು ತೆಗದುಕೊಳ್ಳುವದಕ್ಕೂ ಸರಕಾರಕ್ಕೆ ಇರತಕ್ಕ ಹಕ್ಕನ್ನು ಉಳಿಸಿಕೊಂಡಿರತಕ್ಕದ್ದು.

ಪ್ರಾರಂಭದಲ್ಲಿ ಅಜಮಾಯಿಷೀ ಬಗ್ಗೆ ಲೈಸೆನ್ಸ್ ಕೊಡೋಣದರಿಂದ ಈ ವ್ಯಾಪಾರದಲ್ಲಿ ಹಣ ಹಾಕಬೇಕೆಂಬ ಇರಾದೆವುಳ್ಳ ಮನುಷ್ಯನು ಗಣೀಕೆಲಸಕ್ಕೆ ಬೇಕಾದ ಜಮೀನನ್ನು ಸರಿಯಾದ ಅನ್ವೇಷಣೆಯಿಂದ ಚುನಾಯಿಸುವದಕ್ಕೂ ತಾನು ಅನ್ವೇಷಣೆಮಾಡಿದ ಪ್ರದೇಶದಲ್ಲಿ ಬಹಳ ಮೌಲ್ಯವುಳ್ಳದ್ದೆಂದು ತಾನು ಭಾವಿಸುವ ಜಮೀನಿನ ಹಕ್ಕು ತನಿಗೇನೇ ಬರುತ್ತೆಂಬ ಭರವಸೆಯಿಂದ ಷುರೂ ಅನ್ವೇಷಣೆಗಾಗಿ ಅವಶ್ಯಕವಾದ ದ್ರವ್ಯವನ್ನು ಖರ್ಚುಮಾಡುವದಕ್ಕೂ ಅನುಕೂಲವಾಗುತ್ತೆ.

ಕೆಲಸ ನಡಿಯತಕ್ಕ ಬಗ್ಗೆ ಸರಿಯಾದ ಬಂಡವಾಳವುಳ್ಳ ಕಂಪೆನಿಯನ್ನು ಉಚಿತ ಕಾಲದೊಳಗೆ ಏರ್ಪಾಟು ಮಾಡಬೇಕೆಂಬ ಷರತ್ತಿನಿಂದ, ಮುಂದೆ ಹೆಚ್ಚಾದ ಬೆಲೆಯು ದೊರೆಯಬಹುದೆಂಬ ಆಶೆಯಿಂದ ಮಾಡತಕ್ಕ ಊಹಾ ವ್ಯಾಪಾರಗಳು ಕಮ್ಮಿಯಾಗುವದಕ್ಕೆ ಕಾರಣವಾಗಿರುವದಲ್ಲದೆ ನಿಜವಾಗಿ ಕೆಲಸ ನಡಸತಕ್ಕ ಚೈತನ್ಯವುಳ್ಳ ಕಂಪೆನಿಗಳು ಈ ವ್ಯಾಪಾರವನ್ನು ನಡಸುವದಕ್ಕೆ ಅನುಕೂಲವುಂಟು.

ಈ ಶೀಮೆಯಲ್ಲಿರುವ ಸ್ವರ್ಣಗರ್ಭಿತವಾದ ಜಮೀನುಗಳೆಲ್ಲವನ್ನೂ ಈಗಲೇ ಒಟ್ಟಿಗೆ ದರಖಾಸ್ತುದಾರ್ರುಗಳಿಗೆ ಕೊಟ್ಟುಬಿಡೋಣದರಿಂದ ಸರಕಾರಕ್ಕೆ ಈ ಬಾಬಿನಿಂದ ನ್ಯಾಯವಾಗಿ ಬರಬೇಕಾದ ಉತ್ಪತ್ತಿಯನ್ನು ಅನವಶ್ಯಕವಾಗಿ ಹೋಗಲಾಡಿಸಿಕೊಳ್ಳುವದಕ್ಕೆ ಆಕರವಾಗುತ್ತೆಯೇ ಹೊರತು ಶೀಮೆಯ ಎಲ್ಲಾ ಕಡೆಗಳಲ್ಲಿಯೂ ಭಂಗಾರಗಣೀ ಕೆಲಸವು ನಡಿಯಲು ಪ್ರೋತ್ಸಾಹಪಡಿಸಿದ ಹಾಗೆ ಆಗುವದಿಲ್ಲ. ಈ ರೀತಿಯಾಗಿ ಭಂಗಾರಗಣೀ ಕೆಲಸವು ಎಲ್ಲಾ ಕಡೆಗಳಲ್ಲಿಯೂ ನಡೆಯಬೇಕೆಂಬ ಉದ್ದೇಶವು ನೆರವೇರುವದಾದರೆ ಎಷ್ಟು ನಷ್ಟವಾದರೂ ಗಣನೆಗೆ ತರತಕ್ಕದ್ದಲ್ಲ. ಭಂಗಾರದಗಣಿ ಕೆಲಸದಬಗ್ಗೆ ನಿಜವಾಗಿ ಬರುವ ಜಮೀನ್ ದರಖಾಸ್ತುಗಳನ್ನು ಮಂಜೂರ್ಮಾಡಬೇಕೆಂಬ ಅಭಿಲಾಷೆಯು ಸರ್ಕಾರದವರಿಗೆ ಸಂಪೂರ್ಣವಾಗಿರುವದ್ದರಿಂದ ಈ ಸಾಲಿನಲ್ಲಿ 35 ಚದುರಮೈಲಿಗಳಪ್ರದೇಶವನ್ನು ದರಖಾಸ್ತುದಾರ್ರುಗಳಿಗೆ ಕೊಡಬಹುದೆಂತಲೂ, ಇದು ಶಿವಾಯಿ ಮುಂದಾಗಿಯೇ ವಾಗ್ದಾನ ಮಾಡಿದ್ದಮೇರೆ 8 ಚದುರಮೈಲಿ ಪ್ರದೇಶವನ್ನೂ ಕೊಡತಕ್ಕದ್ದೆಂತಲೂ ಶ್ರೀಮನ್ಮಹಾರಾಜಾ ಸರ್ಕಾರದವರು ತೀರ್ಮಾನಿಸಿರುತ್ತಾರೆ. ಒಂದೇ ಜಮೀನಿಗೆ ಅನೇಕ ದರಖಾಸ್ತುದಾರ್ರುಗಳು ಇರುವ ಸಂದರ್ಭದಲ್ಲಿ ಅವರುಗಳ ಹಕ್ಕುಗಳನ್ನು ತೃಪ್ತಿಕರವಾಗಿ ತೀರ್ಮಾನಿಸುವ ಬಗ್ಗೂ ಮತ್ತು ತಾತ್ಕಾಲಸ್ಥಿತಿಯಲ್ಲಿ ಜಮೀನುಗಳ ನಿಜವಾದ ಮೌಲ್ಯವನ್ನು ತಿಳದುಕೊಳ್ಳುವಬಗ್ಗೂ ದರಖಾಸ್ತುಗಳ ಮೂಲಕ ಪೋಟಾಪೋಟಿ ಮಾಡತಕ್ಕಕ್ರಮವನ್ನು ಅವಲಂಬಿಸಲಾಯಿತು. ಈಗಾಗಲೇ ವಿಲಾಯಿತಿಯಲ್ಲಿ ಬಂಡವಾಳಸ್ಥರಾಗಿಯೂ ಪ್ರಬಲರಾಗಿಯೂ ಇರುವ ಕೆಲವರು ನಮ್ಮ ಶೀಮೆಯ ಸ್ವರ್ಣಗರ್ಭಿತವಾಗಿರುವ ಜಮೀನುಗಳಿಗೆ ದರಖಾಸ್ತು ಮಾಡುವರಾಗಿಧಾರೆ. ಇದರಿಂದ ಇದುವರಿವಿಗೆ ಭಂಗಾರದಗಣಿ ಕೆಲಸ ನಡೆಯುತ್ತಿದ್ದ ಕೋಲಾರಡಿಸ್ಟ್ರಿಕ್ಟ್ ಶಿವಾಯಿ ಇತರ ಡಿಸ್ಟ್ರಿಕ್ಟುಗಳಲ್ಲಿಯೂ ಈ ವ್ಯಾಪಾರವು ಜಾಗ್ರತೆಯಾಗಿಯೂ ತೃಪ್ತಿಕರವಾಗಿಯೂ ಪ್ರೇಕುರಗೊಳ್ಳಬಹುದೆಂದು ನ್ಯಾಯವಾಗಿ ಊಹಿಸಬಹುದಾಗಿದೆ.

ಹಿಂದಣ ಸಭೆಯಲ್ಲಿ ಚರ್ಚಿಸಲ್ಪಟ್ಟ ಸಾರ್ವಜನಿಕವಾದ ಕೆಲವು ಮುಖ್ಯಾಂಶಗಳಲ್ಲಿ ಸರ್ಕಾರದವರು ನಡಿಸಿರುವ ನಡವಳಿಕೆಯನ್ನು ಕುರಿತು ಸಂಕ್ಷೇಪವಾಗಿ ಈಗ ತಿಳಿಸುವದೇನಂದರೆ ;—

ಮಲ್‌ನಾಡು ಪ್ರಾಂತ್ಯದ ಬಾಗಾಯಿತು ಕಂದಾಯದ ವಿಷಯದಲ್ಲಿ ಈಚಿಗೆ ಫಾಯಿಷ್‌ಮಾಡಲ್ಪಟ್ಟಿರುವ ಶ್ರಯದ ನಿಬಂಧನೆಗಳಿಂದ ಸ್ವಲ್ಪಮಟ್ಟಿಗೆ ಈ ವಿಷಯದ ತೊಂದರೆಯು ಕಮ್ಮಿಯಾಗುತ್ತೆ. ಹಾಲೀ ಇಂಡಿಯಾ ಗವರ್ನ್‌ಮೆಂಟ್ ನವರ ಆಲೋಚನೆಯಲ್ಲಿರುವ ಡ್ರಾಫ್ಟ್ ರೆವಿನ್ಯೂ ರೆಗ್ಯುಲೇಷನ್ನಿನ 115ನೇ ಸೆಕ್‌ಷನ್ಗೆ ಸರಿಯಾಗಿ ಅರ್ಥಮಾಡುವದರಲ್ಲಿ ಇದ್ದ ತೊಂದರೆಯ ದೆಶೆಯಿಂದ ಈ ಶ್ರಯದ ನಿಬಂಧನೆಗಳನ್ನು ಫಾಯಿಷ್ ಮಾಡಲು ಇದುವರಿವಿಗೆ ಸಾವಕಾಶವಾಯಿತು. ಈ ಸೆಕ್‌ಷನ್ ವಿಷಯವಾಗಿ ರೆಸಿಡೆಂಟರವರಾದ ಮೆಸ್ಟರ್ ಲೈಯ್ಯಾಲ್ ಸಾಹೇಬರವರು ಮತ್ತು ಮೆಸ್ಟರ್ ಫಿಟ್ಸ್‌ಪ್ಯಾಟ್ರಿಕ್‌ಸಾಹೇಬರವರು ಇವರುಗಳೊಡನೆ ಅನೇಕಾವರ್ತಿ ವಿಳಂಬವಾದ ಚರ್ಚೆನಡೆಯಿತು. ಈ ಉಭಯತ್ರರ ಅಭಿಪ್ರಾಯಗಳು ಸರಕಾರದವರಿಗೆ ವಿಶೇಷ ಪ್ರಯೋಜನ ಕಾರಿಗಳಾದವು—ನಗದೀಯಾತು ಹುಟ್ಟುವಳಿಯನ್ನೂ ಮತ್ತು ಮುಖ್ಯವಾಗಿ ಬಾಗಾಯಿತು ಕಂದಾಯದ್ದೆಶೆಯಿಂದ ಬರುವ ಉತ್ಪತ್ತಿಯನ್ನು ಚನ್ನಾಗಿ ಆಲೋಚಿಸಿದ್ದರಲ್ಲಿ ನಮ್ಮ ಶೀಮೆಯಲ್ಲೆಲ್ಲಾ ಒಂದೇರೀತಿಯಾದ ತರಂ ಕ್ರಮವನ್ನನುಸರಿಸತಕ್ಕದ್ದು ಅವಶ್ಯಕವಾದ್ದರಿಂದ ಈ ಶೀಮೆಯ ಪೂರ್ವದ ಪದ್ಧತಿಯಂತೆ ಹಿಂದಣ ಮುಲ್ಕೀ ಆಡಳಿತ ಕ್ರಮದಲ್ಲಿ ಜಾರೀಯಲ್ಲಿದ್ದ ಪ್ರಕಾರ ಬಾಗಾಯತಿಗೆ ಪ್ರತ್ಯೇಕ ದರವನ್ನು ಈಗಲೂ ಬಹಲ್ ಇಟ್ಟುಕೊಂಡಿರತಕ್ಕದ್ದು ಅವಶ್ಯವೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ತೀರ್ಮಾನಿಸಿರುತ್ತಾರೆ. ಈ ತೀರ್ಮಾನದರೀತ್ಯಾ ಮೇಲ್ಕಂಡ 115ನೇ ಸೆಕ್‌ಷನನ್ನು ತಿದ್ದುಪಡಿಮಾಡುವೆವು. ಈಗ ಫಾಯಿಷ್ ಮಾಡಿರುವ ಶ್ರಯದ ನಿಬಂಧನೆಗಳಿಂದ ಹಾಲೀ ಇರುವ ನ್ಯೂನತೆಯು ನಿವರ್ತಿಯಾಗುವದಲ್ಲದೆ ರೆವಿನ್ಯೂ ಸರ್ವೇ ಸೆಟಲ್‌ಮೆಂಟ್ ಬಂದನಂತರ ನಿಂತು ಹೋಗಿದ್ದ ಈ ಪುರಾತನ ಪದ್ಧತಿಯನ್ನು ಈಗ ಪುನಃ ಜಾರಿಗೆ ತಂದಹಾಗೆ ಆಯಿತು. ಈ ನಿಬಂಧನೆಗಳ ಪ್ರಕಾರ ಹೊಸದಾಗಿ ಬಾಗಾಯಿತು ಸಾಗುವಳೀ ಮಾಡತಕ್ಕವರಿಗೆ ವಿಶೇಷ ಪ್ರೋತ್ಸಾಹಗಳುಂಟು. ಹ್ಯಾಗಂದರೆ:—

೧ನೇದು. ಮಲ್‌ನಾಡಿನಲ್ಲಿ ಅಡಿಕೇ ತೋಟಗಳ ಬಗ್ಗೆ ತೆಗದುಕೊಳ್ಳುವ ಹೊಸಜಮೀನುಗಳಿಗೆ ಷುರೂ 12ವರುಷಗಳ ವರಿಗೂ ಎಕರೇ 1ಕ್ಕೆ ಸಾಲೀಯಾನಾ 4 ಆಣೇ ದರದ ಪ್ರಕಾರ ನಾಮ ಮಾತ್ರದ ಕಂದಾಯ, ನಂತರ 3 ವರುಷಗಳವರಿಗೆ ಶ್ರಯ.

೨ನೇದು. ಇತರ ಕಡೆಗಳಲ್ಲಿನ ಅಡಿಕೇ ತೋಟಗಳು ಮತ್ತು ಎಲ್ಲಾ ತೆಂಗಿನ ತೋಟಗಳು. ಇವುಗಳ ಬಗ್ಗೆ ಕೊಡಲ್ಪಡುವ ಜಮೀನುಗಳಿಗೆ ಷುರೂ 9 ವರುಷಗಳ ವರಿವಿಗೂ ಮೇಲ್ಕಂಡ ಮೇರೆ ಎಕರೇ 1ಕ್ಕೆ 4ಆಣೇ ಪ್ರಕಾರ ನಾಮ ಮಾತ್ರದ ಕಂದಾಯ, ನಂತರ 3 ಸಂವತ್ಸರಗಳ ವರಿಯಂತ ಶ್ರಯ.

ಕಳೆದ ಸಂವತ್ಸರದ ಸಭೆಯಲ್ಲಿ ನೀವು ಹೇಳಿಕೊಂಡದ್ದನ್ನು ನೋಡಲಾಗಿ ಮೇಲ್ಕಂಡ ರಿಯಾಯತಿಯು ನಿಮಗೆಲ್ಲರಿಗೂ ತೃಪ್ತಿಕರವಾಗಿರಬಹುದೆಂದು ನಂಬಿ ಇದ್ದೇವೆ.

ಬಹಳ ದಿವಸಗಳಿಂದ ಚರ್ಚೆಯಲ್ಲಿರುವ ಕೊಡಗಿ ಇನಾಂಗಳ ಬಂಧ ವಿಮೋಚನೇ ವಿಷಯವು ಈಚಿಗೆ ವ್ಯವಸ್ಥೆಯಾಗಿದೆ. ಇದರಿಂದ ಮೈದಾನ ತಾಲ್ಲೂಕುಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗಿದ್ದ ಸಹಾಯವನ್ನು ಮಾಡಿದ ಹಾಗೆ ಆಗುತ್ತೆ. ಕೊಡಗೀ ಕೆರೆಗಳು ವಿಶೇಷವಾಗಿರುವ ಕೋಲಾರ ಡಿಸ್ಟ್ರಿಕ್ಟು ಪ್ರಾಂತ್ಯ ನಾವು ಸ್ವಲ್ಪದಿವಸಗಳ ಕೆಳಗೆ ಸಂಚಾರ ಮಾಡಿದ್ದರಲ್ಲಿ ಈ ಕೊಡಗೀ ವಿಷಯವನ್ನು ಚನ್ನಾಗಿ ಪರಿಶೀಲನೇ ಮಾಡಿ ಇರುತ್ತೇವೆ. ಗಾರ್ನ್‌ಮೆಂಟ ನವರಿಂದ ಮಂಜೂರು ಮಾಡಲ್ಪಟ್ಟಿರುವ ಬಂಧ ವಿಮೋಚನೆ ನಿಬಂಧನೆಗಳು ನ್ಯಾಯವಲ್ಲವೆಂದು ಈ ಕೊಡಿಗೀದಾರರಿಗೆ ಯಾವದೊಂದು ಫಿರ್ಯಾದೂ ಇರುವದಿಲ್ಲ. ಆದರೆ ಆ ರೂಲ್ಸುಗಳನ್ನು ಇನಾಂ ಇಲಾಖೆಯವರು ಜಾರಿಗೆ ತಂದಿರುವ ವಿಧಾನವು ಸರಿಯಾದ್ದಲ್ಲವೆಂಬುವದೇ ಅವರ ಫಿರ್ಯಾದಾಗಿರುತ್ತೆ. ಕೆರೆಗಳನ್ನು ಹೊಸದಾಗಿ ಕಟ್ಟಿಸಿ ದುರಸ್ತಿನಲ್ಲಿ ಇಟ್ಟುಕೊಂಡಿರುವ ಬಗ್ಗೆ ಕೊಡಲ್ಪಟ್ಟ ಕೊಡಗೀ ಇನಾಂಗಳು ದುರಸ್ತು ಬಗ್ಗೆ ಮಾತ್ರ ಕೊಡಲ್ಪಟ್ಟದ್ದೆಂದು ಇನಾಂ ಇಲಾಖೆಯವರು ಅನ್ವಯಿಸಿ ಇಂಥಾ ಇನಾಂಗಳಿಗೆ ಕಾನೂನ್ ಮೇರೆ ಕಾಬುವಾಸಿ ಅಥವಾ ಅರ್ಧ ಕ್ವಿಟರೆಂಟುಂ

ಹಾಕಿ ವಂಶಪಾರಂಪರ್ಯವಾಗಿ ಜಾರಿಯಲ್ಲಿರುವಂತೆ ಕಾಯಂ ಮಾಡುವದಕ್ಕೆ ಬದಲಾಗಿ ಅನೇಕ ಸಂದರ್ಭಗಳಲ್ಲಿ ಅರ್ಧ ಕ್ವಿಟರೆಂಟ ಮೇಲೆ ಅಥವಾ ಒಂದು ಜೀವಮಾನದ ಮಟ್ಟಿಗೆ ಕಾಯಂಮಾಡಿ ಇರುತ್ತಾರೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಇನಾಂಗಳು ಕೆರೆಗಳನ್ನು ಹೊಸದಾಗಿ ಕಟ್ಟಿಸಿ ದುರಸ್ತಿನಲ್ಲಿ ಇಟ್ಟುಕೊಂಡಿರುವಬಗ್ಗೆ ಕೊಡಲ್ಪಟ್ಟದ್ದೋ ಅಥವಾ ದುರಸ್ತು ಬಗ್ಗೆ ಮಾತ್ರ ಕೊಡಲ್ಪಟ್ಟದ್ದೋ ಎಂಬ ಸಂಶಯ ಉಂಟಾದಕಾಲದಲ್ಲಿ ಈ ಸಂಶಯದ ಫಾಯಿದೆಯನ್ನು ಇನಾಂದಾರನಿಗೆ ಕೊಡುವದಕ್ಕೆ ಬದಲಾಗಿ ಸರಕಾರಕ್ಕೆ ಕೊಟ್ಟಿರುತ್ತಾರೆ. ಇತ್ಯಾದಿಕಾರಣಗಳಿಂದ ಕೊಡಗೀ ಇನಾಂದಾರರುಗಳ ಫಿರ್ಯಾದಿನ ಮೇಲೆ ಇಂಥಾ ದರೋಬಸ್ತು ಮೊಕದ್ದಮೆಗಳನ್ನೂ ಪುನರ್ವಿಮರ್ಶೆ ಮಾಡಬೇಕೆಂದು ಸರಕಾರದವರು ಇನಾಂ ಇಲಾಖೆಗೆ ಅಪ್ಪಣೆಮಾಡಿ ಇರುತ್ತಾರೆ. ಕೆರೆಗಳನ್ನು ದುರಸ್ತಿನಲ್ಲಿ ಕಾಪಾಡಬೇಕೆಂಬ ಷರತ್ತಿಗೆ ಒಪ್ಪಿಕೊಂಡು ಇನಾಂ ಜಮೀನುಗಳನ್ನು ಪೂರ್ವದಂತೆಯೇ ನಡೆಸಿಕೊಡಬೇಕೆಂದು ಸ್ವಲ್ಪ ಜನ ಕೊಡಗೀದಾರರು ಮಾತ್ರ ಕೇಳತಕ್ಕವರಾಗಿ ಇದ್ದಾರೆಯಾಗಿ ಮೇಲ್‌ಕಂಡಮೇರೆ ಅಪ್ಪಣೆಮಾಡಿರುವ ಪುನರ್ವಿಚಾರಣೆಯ ದೆಸೆಯಿಂದ ಪುನಃಫಿರ್ಯಾದಿಗೆ ಆಸ್ಪದ ವಿಲ್ಲದಹಾಗೆ ಆಗುತ್ತೆ.

ಶೇಂದೀ ಹುಟ್ಟುವಳಿಯಲ್ಲಿ ಇನಾಂದಾರ್ರುಗಳಿಗೆ ಇರತಕ್ಕ ಹಕ್ಕಿನ ವಿಷಯದಲ್ಲಿ, ಇನಾಂದಾರರಿಗೂ, ಸರಕಾರೀ ಅಬ್‌ಕಾರೀ ಕಂಟ್ರಾಕ್ಟುದಾರರಿಗೂ, ಛಾಗಾಯತಿನಿಂದ ಇರುವ ವಿವಾದವು ಸರಕಾರದವರ ಆಲೋಚನೆಯಲ್ಲಿ ಇರುತ್ತೆ. ಈ ವಿಷಯವನ್ನು ಚನ್ನಾಗಿ ಪರ್ಯಾಲೋಚನೆಮಾಡಿದ್ದರಲ್ಲಿ, ಸರಿಯಾದ ಮೌಲ್ಯವನ್ನು ಕೊಟ್ಟು ಇನಾಂದಾರ್ರುಗಳಿಗೆ ಈ ಭಾಗದಲ್ಲಿರತಕ್ಕ ಹಕ್ಕನ್ನು ಸರಕಾರದವರು ಖರೀದಿಗೆ ತೆಗೆದುಕೊಳ್ಳತಕ್ಕದ್ದೋ, ಅಥವಾ ಗವರ್ನಮೆಂಟ ಅಬ್‌ಕಾರೀ ಕಂಟ್ರಾಕ್ಟರುಗಳು ಇನಾಂದಾರರಿಗೆ ಕೊಡತಕ್ಕ ಮೊಬಲಗ್ ವಿಷಯದಲ್ಲಿ ನಿಬಂಧನೆಗಳನ್ನು ಏರ್ಪಡಿಸಿ ಆ ನಿಬಂಧನೆಗಳ ಪ್ರಕಾರ ಜಾರೀಯಲ್ಲಿ ತರತಕ್ಕದ್ದೋ, ಇವೆರಡು ಏರ್ಪಾಟುಗಳಲ್ಲಿ ಇನಾಂದಾರರುಗಳಿಗೆ ಬೇಕಾದ್ದನ್ನು ಒಪ್ಪಿಕೊಳ್ಳುವಹಾಗೆ ಸರಕಾರದವರು ತಿಳಿಸುವರಾಗಿ ಇದ್ದಾರೆ. ಈ ಸಭೆಯಲ್ಲಿ ಈ ಪ್ರಮೇಯವು ಜಿಜ್ಞಾಸೆಗೆ ಬರಬಹುದಾಗಿ ಈ ವಿಷಯದಲ್ಲಿ ತಾತ್ಕಾಲದಲ್ಲಿ ವಿಶೇಷ ಹೇಳತಕ್ಕದ್ದೇನೂ ಇರುವದಿಲ್ಲ.

ಮೊಹತರ್ಫಾ ಮಗ್ಗದ ಕಂದಾಯವನ್ನು ಮೌಕೂಫ್ ಮಾಡತಕ್ಕ ಅಂಶವು ಪುನಃ ಆಲೋಚನೆಯಲ್ಲಿ ಬಂದಿದೆ. ಈ ಕಂದಾಯವನ್ನು ಕೂಡ್ಲೇ ಮೌಕೂಫ್ ಮಾಡಲು ಗವರ್ನಮೆಂಟಿನವರಿಗೆ ಈಗ ಅನುಕೂಲವುಂಟಾಗಿರುತ್ತೆ. ಕಳೆದ ಕ್ಷಾಮಕಾಲದಲ್ಲಿ ವಿಶೇಷವಾಗಿ ಕಷ್ಟವನ್ನನುಭವಿಸಿ ಎಲ್ಲರಿಗೂ ತಿಳಿದಿರುವಂತೆ ವಿಶೇಷ ದರಿದ್ರರಾದ ನೇಯಿಗೆ ಕಸಬಿನಿಂದ ಜೀವನ ಮಾಡತಕ್ಕವರಿಗೆ ಇದರಿಂದ ವಿಶೇಷವಾದ ಉಪಕಾರವಾಗುವದಲ್ಲದೆ, ಕ್ಷಾಮಕಾಲದಲ್ಲಿ ಈ ಕಂದಾಯವನ್ನು ತೆರಲಾರದೆ ದೇಶಾಂತರಗತರಾದ ಅನೇಕ ಕುಟುಂಬಗಳು ಪುನಃ ಅವರವರ ಸ್ಥಳಗಳಿಗೆ ಬಂದು ಸೇರಿಕೊಳ್ಳುವದಕ್ಕೆ ಅನುಕೂಲವಾಗುತ್ತೆ. ಈ ನೇಯಿಗೆ ಕಸಬು ದಿನೇದಿನೇ ಕ್ಷೀಣವಾಗುತಲಿದೆ. ಈ ಕ್ಷೀಣತೆಯ ಕಾರಣಗಳನ್ನು ಸಂಪೂರ್ಣವಾಗಿ ಪರಿಹರಿಸುವದು ನಮ್ಮ ಶಕ್ತಿಯನ್ನು ಮೀರಿರುವದರಿಂದ ಈ ಭಾಗದಲ್ಲಿ ಗವರ್ನಮೆಂಟಿನವರು ತಮ್ಮ ಕೈಲಾದಮಟ್ಟಿಗೂ ಅವರಿಗೆ ಸಹಾಯಮಾಡತಕ್ಕದ್ದು ನ್ಯಾಯವಾಗಿಯೇ ಇದೆ. ಈ ಬಾಬಿನಲ್ಲಿ ಸಾಲೀಯಾನಾ ಸುಮಾರು 50,000 ರೂಪಾಯಿಗಳು ಸರಕಾರಕ್ಕೂ 12,000 ರೂಪಾಯಿಗಳು ಮ್ಯುನಿಸಿಪಲ್ ಫಂಡಿಗೂ ಜಮೆಯಾಗುತಲಿದೆ. ಶಿವಾಯಿ ಮ್ಯುನಿಸಿಪಾಲಿಟಿಗಳಲ್ಲಿ ಜವಳಿಯ ಮೇಲೆ ಹಾಲೀ ವಸೂಲಾಗುವ ಅಕ್ಟ್ರಾಯಿ ಹಾಸಲಿನ ಪ್ರತ್ಯೇಕ ಪ್ರತ್ಯೇಕ ದರಗಳನ್ನು ಸಮಪಡಿಸಬೇಕಾಗಿರುತ್ತೆ. ಈಗ ಬ್ರಿಟಿಷ್ ಇಂಡಿಯಾ ಜವಳೀ ಕಿಮ್ಮತ್ತಿನ ಮೇಲೆ ಶೇಕಡಾ 3 ರೂಪಾಯಿಗಳ ಮೇರೆಯೂ ವಿಲಾಯಿತಿ ಜವಳೀಮೇಲೆ ಶೇಕಡಾ $1\frac{1}{2}$ ರೂಪಾಯಿ ಮೇರೆಯೂ ಅಕ್ಟ್ರಾಯಿ ವಸೂಲಾಗುತ್ತೆ. ಮಗ್ಗದ ಮೇಲೆ ಕಂದಾಯವಿರುವದ್ದರಿಂದ ಮೈಸೂರು ದೇಶದ ಜವಳಿಗೆ ಈ ತೆರಿಗೆಯು ದಾಖಲಾಗಿರುವದಿಲ್ಲ. ಈಚೆಗೆ ವಿಲಾಯತಿ ಜವಳಿಗೆ ಇಂಡಿಯಾ ದೇಶದಲ್ಲಿ ಇದ್ದ ಸರಕಾರೀ ಹಾಸಲು ಮೌಕೂಫ್ ಆಗಿರುವದರಿಂದ ಇದರ ಮೇಲೆ ಕಮ್ಮಿ ಅಕ್ಟ್ರಾಯಿ ದರವನ್ನು ಕಾಯಂ ಇಡಲು ಕಾರಣವಿರುವದಿಲ್ಲ. ಮಗ್ಗದ ಕಂದಾಯವು ಮಾಫಃ ಆದಮೇಲೆ ಮೈಸೂರು ಜವಳಿಗೂ ಅಕ್ಟ್ರಾಯಿ ದಾಖಲಾಗಬೇಕಾಗುವದು. ಈ ಭಾಗದಲ್ಲಿ ಒಂದೇ ರೀತಿಯಾಗಿ ದರಗಳು ಏರ್ಪಟ್ಟನಂತರ ಈ ತೆರಿಗೆಯನ್ನು ಬೇಕಾದಕಡೆ ಇಟ್ಟುಕೊಳ್ಳುವದು ಮ್ಯುನಿಸಿಪಾಲಿಟಿಯವರ ಅಧೀನವಾಗಿರುತ್ತೆ.

ಪೋಲೀಸ್.—ಇತರ ಇಲಾಖೆಗಳಂತೆಯೇ ಪೋಲೀಸ ಇಲಾಖೆಯೂ ಅಭಿವೃದ್ಧಿಯಾಗುತ್ತಲಿದೆ. ಹುಷಾರು ಮತ್ತು ಅಮಾನತ್ತುದಾರರಾದ ನವುಕರರನ್ನು ಪೋಲೀಸ್ ಇಲಾಖೆಗೆ ಸೇರಿಸುವದಕ್ಕೋಸ್ಕರ ಸರಕಾರದವರು ಪೋಲೀಸ್ ಬಾಬಿನಲ್ಲಿ ಈ ಸಂವತ್ಸರ 53,638 ರೂಪಾಯಿಗಳು ಜಾಸ್ತಿ ಖರ್ಚು ಮಂಜೂರ್ಮಾಡಬೇಕಾದ್ದು ಅವಶ್ಯಕವಾಯಿತು.

ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸುವದಕ್ಕೆ ಸ್ವಲ್ಪಕಾಲಮುಂಚೆ ಸರಕಾರಕ್ಕೆ ದ್ರವ್ಯಾನುಕೂಲ ಕಡಿಮೆಯಾಗಿದ್ದ ಪ್ರಯುಕ್ತ ಲವಾಜಮೆ ಕಮ್ಮಿಯಾದ ಸಂದರ್ಭದಲ್ಲಿ ಪೋಲೀಸ ಸಿಬ್ಬಂದಿಯೂ ವಿಸ್ತಾರವಾಗಿ ಕಮ್ಮಿ ಆಯಿತಷ್ಟೆ. ಉಳಿಸಿಟ್ಟುಕೊಂಡ ಸ್ವಲ್ಪಜನ ಆಫೀಸರರಿಗೆ ತಲಬು ಕಮ್ಮಿಯಾಗಿ ಕೆಲಸಗಳು ಮಟ್ಟಿಗೆ ಪೂರ್ವದಂತೆಯೇ ಇದ್ದದ್ದರಿಂದ ಈ ಇಲಾಖೆ ನೌಕರರಲ್ಲಿ ಯೋಗ್ಯತೆಯೂ, ಶ್ರದ್ಧೆಯೂ ವಿಶೇಷವಾಗಿರುತ್ತೆಂದು ಹೇಳಲಾಗದು. ಆಪ್ರಯುಕ್ತ ತಲಬು ಇಜಾಫೆ ಮತ್ತು ಉತ್ತರೋತ್ತರ ಹುದ್ದೆ ಅಭಿವೃದ್ಧಿ ಈ ಮೂಲಕವಾಗಿ ಪೋಲೀಸ್ ಇಲಾಖಾ ತಾಬೇದಾರ ನೌಕರರಿಗೆ ಉತ್ಸಾಹ ಪಡಿಸಬೇಕಾದ್ದು ಅವಶ್ಯಕ ತೋರಿ ಆ ರೀತಿ ಮಾಡಲ್ಪಟ್ಟಿತು. ಅತ್ಯವಶ್ಯಕವಾದ ಸಂದರ್ಭಗಳಲ್ಲಿ ಪೋಲೀಸ ಸಿಬ್ಬಂದಿ ಸಂಖ್ಯೆಯನ್ನು ಸಹ ಹೆಚ್ಚಿಸಿದ್ದಾಯಿತು. ಈ ರೀತಿಯಾದ ಏರ್ಪಾಟು ಅನಿವಾರ್ಯಗಳಾದ ಸಂದರ್ಭಗಳಲ್ಲಿ ಮಾತ್ರ ಮಾಡಿದಾಗ್ಯೂ ಪೋಲೀಸ ಸಿಬ್ಬಂದಿ ಖರ್ಚನ್ನು ವಿಶೇಷವಾಗಿ ಹೆಚ್ಚಿಸಬೇಕಾಯಿತು. ಮೇಲ್ಕಂಡಮೇರೆ ಪೋಲೀಸ್ ಇಲಾಖೆ ಬದಲಾವಣೆ ಮತ್ತು ಅಭಿವೃದ್ಧಿಯು ಜಾರಿಯಲ್ಲಿ ಬಂದು ಬಹಳ ಸ್ವಲ್ಪಕಾಲವಾಯಿತು; ಅದರ ಗುಣಾವಗುಣಗಳನ್ನು ಈಗಾಗಲೇ ನಿರ್ಧರಿಸಲು ಅನುಕೂಲವಿಲ್ಲ. ಆದಾಗ್ಯೂ ಈಚೆಗೆ ತಕ್ಸೀರುಗಳು ತಪ್ಪದೆ ರಿಪೋರ್ಟಾಗುವದರಿಂದಲೂ ತಕ್ಸೀರುದಾರರುಗಳನ್ನು ಕ್ರಮವಾಗಿ ಪತ್ತೇಮಾಡಿ ಅವರುಗಳಿಗೆ ಶಿಕ್ಷೆ ಮಾಡಿಸುವದರಿಂದಲೂ, ಮಾಮೂಲಾಗಿ ತಕ್ಸೀರುಗಳನ್ನು ನಡಿಸುವ ಜನಗಳ ಮೇಲೆ ನಿಗೇವಾನೀ ಜಾಸ್ತಿ ಆಗಿರೋಣದರಿಂದ ಕ್ರಮವಾಗಿ ದರೋಡೆ ವಗೈರೆಯು ನಡೆಯುವದು ಕಮ್ಮಿಯಾಗುತ್ತಿರೋಣದರಿಂದಲೂ ಪೋಲೀಸ ಸಿಬ್ಬಂದಿಯನ್ನು ಅಭಿವೃದ್ಧಿ ಪಡಿಸಲು ಉಂಟಾದ ಸರ್ಕಾರದವರ ಉದ್ದೇಶವು ಸಫಲವಾಗಲು ಈಗಾಗಲೇ ಪ್ರಾರಂಭವಾಗಿದೆ. ಮುಖ್ಯವಾಗಿ ಪೋಲೀಸ ನೌಕರರನ್ನು ಚನ್ನಾಗಿ ತರಬೇಯತ್ ಮಾಡಿ ಕಬೂಲೀ ಮೇಲಾಗಲೀ ಅಕಸ್ಮಾತ್ತಾಗಾಗಲೀ ಮೊಕದ್ದಮೆಗಳು ಪತ್ತೇ ಆಗತಕ್ಕದ್ದು ತಪ್ಪಿಸಿ ಸರಿಯಾದ ಪತ್ತೇ ಕ್ರಮವನ್ನನುಸರಿಸಬೇಕಾದ ಭಾಗದಲ್ಲಿಯೂ ಗ್ರಾಮ ಪೋಲೀಸ ನೌಕರರು ಇತರ ಪೋಲೀಸ ಅಧಿಕಾರಿಗಳಿಗೆ ಮದ್ದತ್ತಾಗುವ ಭಾಗದಲ್ಲಿಯೂ ಗ್ರಾಮ ಪೋಲೀಸನವರ ಧಾನ್ಯರೂಪಕವಾದ ಸ್ವಾಮ್ಯವನ್ನು ಕ್ರಮಪಡಿಸಿ ಅವರ ನೌಕರೀ ಅಂತಸ್ತನ್ನು ಅಭಿವೃದ್ಧಿ ಪಡಿಸಬೇಕಾದ ಅಂಶದಲ್ಲಿಯೂ ಇನ್ನೂ ಆಗಬೇಕಾದ ಏರ್ಪಾಟುಗಳು ಬಹಳವಾಗಿರುವವು.

ಫಾರೆಸ್ಟ್.—ಹಾಲೀ ವಿಶೇಷ ಕತರಾವಣಿ ಆಗಿ ನಾಶಹೊಂದುತ್ತಲಿರುವ ಜಂಗಲ್ ಪ್ರದೇಶಗಳಲ್ಲಿ ನಿಬಂಧನೆ ಇಲ್ಲದ ಕತರಾವಣಿಯನ್ನು ನಿಲ್ಲಿಸುವದರ ಮೂಲಕವೂ ಚೌಬೀನೆ ಲಾಯಖ್ ಮರಗಳನ್ನು ಪ್ಲಾಂಟೇಷನ್‌ಗಳಲ್ಲಿ ವಿಸ್ತಾರವಾಗಿ ಬೆಳೆಯುವದರ ಮೂಲಕವೂ, ಫಾರೆಸ್ಟ್ ಬಾಬಿನಲ್ಲಿ ವಿಶೇಷ ಅಭಿವೃದ್ಧಿಯು ನಡೆಯುತ್ತಲಿದೆ. ಈ ಪ್ಲಾಂಟೇಷನ್‌ಗಳಿಗೆ ತಗಲುವ ಲಾಗವಡಿಗೆ ಪ್ರತಿಯಾಗಿ ಶೀಘ್ರದಲ್ಲಿಯೇ ಆದಾಯವಾಗುತ್ತೆಂದು ಯೋಚಿಸಲಾಗದು. ಆದಾಗ್ಯೂ ಲಕ್ಕವಳ್ಳಿ ಕಾಡುಗಳಲ್ಲಿ ಹಾಕಿರತಕ್ಕ ತ್ಯಾಗದ ಸಸಿಗಳು ಚನ್ನಾಗಿ ಅಭಿವೃದ್ಧಿಯಾಗುತ್ತಲಿರುವದರಿಂದ ಉತ್ತರೋತ್ತರ ಸರ್ಕಾರಕ್ಕೆ ವಿಶೇಷ ಫಾಯಿದೆಯು ಬರುವದಕ್ಕೇನೂ ಸಂಶಯವಿಲ್ಲ.

ರೈಲ್ವೆ ಉಪಯೋಗಕ್ಕೂ ಪ್ರಜೆಗಳ ಗೃಹಕೃತ್ಯಕ್ಕೂ ಭಂಗಾರ ಗಣಿಗಳಿಗೋಸ್ಕರವೂ ಬೇಕಾದ ಸೌದೇ ಖರ್ಚು ದಿನೇದಿನೇ ಹೆಚ್ಚಾಗುತ್ತಿರುವ ಪ್ರಯುಕ್ತ ಇತರ ವಿಧವಾದ ಸಹಾಯವಿಲ್ಲದೆ ಹಾಲಿ ಇರುವ ಕಾಡುಗಳಿಂದಲೇ ಬೇಕಾಗುವಷ್ಟು ಸೌದೇ ಸರಬರಾಯಿ ಆಗಲಾರದೆಂದು ತಿಳಿದು ಅನೇಕ ಸ್ಥಳಗಳಲ್ಲಿ ವಿಸ್ತಾರವಾದ ಪ್ರದೇಶಗಳಲ್ಲಿ ಸರ್ಕಾರಿಯಾಗಿ ಹೊಸ ಸಾದೇಮರಗಳ ಪ್ಲಾಂಟೇಷನ್‌ಗಳು ಮಾಡಲ್ಪಟ್ಟಿವೆ. ಈ ಕೆಲಸಕ್ಕೋಸ್ಕರ ಸದ್ಯಕ್ಕೆ ವಿಶೇಷವಾಗಿ ಲಾಗವಡಾಗಿದ್ದಾಗ್ಯೂ ಉತ್ತರೋತ್ತರ ಇದರಿಂದ ಸರ್ಕಾರಕ್ಕೆ ಅಧಿಕವಾದ ಆದಾಯ ಉಂಟಾಗುತ್ತೆ. ಭಂಗಾರ ಗಣಿ ಉಪಯೋಗಕ್ಕೆ ಬೇಕಾದ ಸಾದೇ ಖರ್ಚು ಬಹಳ ಜಾಸ್ತಿಯಾಗುತ್ತಲಿರುವದ್ದರಿಂದ ಕ್ಷಿಪ್ರದಲ್ಲಿಯೇ ಸಾದೇ ಖರೀದಿಯು ಬಹಳ ಜಾಸ್ತಿಯಾಗಿ ಸಾಧಾರಣವಾದ ಆರಂಬ ಕೆಲಸಕ್ಕಿಂತಲೂ ಸಾದೇಗಿಡಗಳನ್ನು ಬೆಳೆಸತಕ್ಕದ್ದೇ

ವಿಶೇಷ ಆದಾಯಕರವಾಗುವಹಾಗೆ ತೋರುತ್ತಲಿದೆ. ಆದ್ದರಿಂದ ಸಾದೇ ಪ್ಲಾಂಟೇಷನ್‌ಗಳನ್ನು ಸ್ವಂತವಾಗಿಮಾಡಿ ಅಭಿವೃದ್ಧಿಪಡಿಸುವ ಭಾಗದಲ್ಲಿ, ಪ್ರಜೆಗಳಿಗೆ ಪ್ರೋತ್ಸಾಹಪಡಿಸಬೇಕಾದ್ದು ಆವಶ್ಯಕತೋರಿ ಸರ್ಕಾರಿ ಬಂಜರ್ ಜಮಿಾನಿನಲ್ಲಿ ಸಾದೇ ಪ್ಲಾಂಟೇಷನ್‌ಗಳನ್ನು ಮಾಡುವವರಿಗೆ ವಿಶೇಷ ಅನುಕೂಲತೆಯನ್ನು ಕಲ್ಪಿಸತಕ್ಕ ಅಂಶವು ಸರ್ಕಾರದವರ ಆಲೋಚನೆಯಲ್ಲಿರುತ್ತೆ.

ಸಂದಲ್‌ಬಾಬು ಸರ್ಕಾರದ ಫಾರೆಸ್ಟ್ ಹುಟ್ಟುವಳಿಗೆ ಮುಖ್ಯಾಧಾರವಾಗಿರುವ ಪ್ರಯುಕ್ತ ಮರಗಳಿಂದ ಬೀಜಗಳು ಉದುರಿ ಸ್ವಭಾವವಾಗಿ ಹುಟ್ಟುವ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಳಸುವ ಸಂದಲ್ ಸೊಸಿಗಳನ್ನು ಅಭಿವೃದ್ಧಿಪಡಿಸುವದರ ಮೂಲಕ ಸಂದಲ್ ಸರಬರಾಯಿಗೆ ಯಾವಾಗ್ಯೂ ಅಪೋಹಬರದಂತೆ ಸರ್ಕಾರದವರು ಏರ್ಪಾಟುಗಳನ್ನು ಮಾಡತಕ್ಕದ್ದು ಯುಕ್ತವಾಗಿದೆ. ಸಂದಲ್ ಗಿಡಗಳ ಸ್ವಭಾವವು ಮತ್ತು ಅವುಗಳ ಸಾಗುವಳೀ ಕ್ರಮವು ಚನ್ನಾಗಿ ಅನುಭವವಿಲ್ಲವಾಗಿ ಇಡುವರಿವಿಗೆ ಸಂದಲ್ ಬೆಳೆಯತಕ್ಕ ಬಾಬಿನಲ್ಲಿ ನಡಸಿದ ತರದೂದು ವಿಶೇಷ ಫಲದಾಯಕವಾಗಲಿಲ್ಲ, ಈಚಿಗೆ ಪ್ಲಾಂಟೇಷನ್‌ಗಳಲ್ಲಿ ಸಂದಲ್ ಗಿಡಗಳು ತೃಪ್ತಿಕರವಾಗಿ ಬೆಳೆಯುತ್ತಲಿವೆ, ಆದರೆ ಒಂದೊಂದು ಪ್ರದೇಶದಲ್ಲಿ ಒಂದೊಂದುವಿಧವಾಗಿ ಬೆಳೆಯುತ್ತಲಿರುವದ್ದರಿಂದ ಪ್ಲಾಂಟೇಷನ್‌ಗಳಲ್ಲಿ ಬೆಳಸುವ ಸಂದಲ್ ಮರದಲ್ಲಿ ಸ್ವಭಾವವಾಗಿ ಬೆಳೆಯುವ ಸಂದಲ್‌ಮರದಷ್ಟು ಪರಿಮಳ ವಿರುವದೇಯೆಂಬ ಅಂಶವು ಇನ್ನೂ ನಿಷ್ಕರ್ಷೆ ಆಗಲಿಲ್ಲ. ಈ ಭಾಗದಲ್ಲಿ ಈಗಲೂ ಸಂಶಯವಿರುವದ್ದರಿಂದ ಸಾಗುವಳಿ ಯಿಲ್ಲದೇ ಜಂಗಲ್‌ನಲ್ಲಿ ಬೆಳೆಯುವ ಸೊಸಿಗಳನ್ನು ಅಭಿವೃದ್ಧಿಪಡಿಸುವದು ಅತ್ಯವಶ್ಯಕವಾದ್ದೆಂಬ ವಿಷಯ ವ್ಯಕ್ತಪಡುತ್ತೆ. ಈ ಉದ್ದೇಶಕ್ಕೆ ಈಚಿಗೆ ಮಂಜೂರ್ಮಾಡಿರುವ ಸಂದಲ್ ಮಣೇಗಾರರ ಏರ್ಪಾಟು ಸಹಕಾರಿಯಾಗಿರುತ್ತೆ.

ವಿದ್ಯಾಭ್ಯಾಸ.—ಬಹಳ ಮಟ್ಟಿಗೂ ವ್ಯವಸಾಯಜೀವಿಗಳಾದ ಈ ದೇಶದ ಜನರ ಪ್ರಾಬಲ್ಯಸ್ಥಿತಿಗೆ ಅನುಕೂಲವಾಗಿ ಮಳೆ ಬೆಳೆಯು ನಡಿಸಿದ್ದರಿಂದ ಕಳೆದ ವರ್ಷ ವಿವರಿಸಿ ಇರುವಂತೆ ವಿದ್ಯಾಭಿವೃದ್ಧಿಗೋಸ್ಕರವಾಗಿ ಮಾಡಿರುವ ಏರ್ಪಾಟುಗಳು ನಾನಾಮುಖವಾಗಿ ಫಲಿಸುತ್ತಬರುತ್ತಲಿವೆ. ಪಾಠಶಾಲೆಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯು ಪೂರ್ವಕ್ಕಿಂತಲೂ ಬಹಳ ಹೆಚ್ಚಿ ಇರುತ್ತದೆ. ವಿದ್ಯಾವಿಷಯಕವಾದ ಏರ್ಪಾಟಿಗೆಲ್ಲ ಆಧಾರವಾದ ಆರಂಭಶಿಕ್ಷೆಗಾಗಿ ಯಿಟ್ಟಿರುವ ಪಾಠಶಾಲೆಗಳಲ್ಲಿ ವಿಶೇಷವಾಗಿ ವಿದ್ಯಾರ್ಥಿಗಳ ಸಂಖ್ಯೆಯು ಜಾಸ್ತಿಯಾಗಿರುತ್ತೆ. ದ್ವಿತೀಯತರಗತಿಯ ಪಾಠಶಾಲೆಗಳು ಕೂಡ ಬಳ್ಳೆ ಅಭಿವೃದ್ಧಿಸ್ಥಿತಿಗೆ ಬಂದಿರುತ್ತವೆ. ಹೊಸದಾಗಿ ಏರ್ಪಾಡಾಗಿರುವ "ಮೈಸೂರ ಲೋಕಲ್ ಎಗ್ಜಾಮಿನೇಷನ್" ಯಾನೆ ಮೈಸೂರ ದೇಶೀಯ ಪರೀಕ್ಷೆಯ ಮೂಲಕ ಉಂಟಾಗಿರುವ ಪ್ರೋತ್ಸಾಹದಿಂದ ದೇಶಭಾಷೆಯ ಪರೀಕ್ಷೆಗೋಸ್ಕರ ಎಲ್ಲೆಲ್ಲಿಯೂ ಪ್ರಯತ್ನ ನಡೆಯುತ್ತಿರುತ್ತೆ. ಇದೇ ರೀತಿಯಲ್ಲಿ ಮಿಡಿಲ್ ಸ್ಕೂಲ್ ಎಗ್ಜಾಮಿನೇಷನ್ ಎಂಬ ಇಂಗ್ಲಿಷ್ ಪರೀಕ್ಷೆಯು ತಾಲ್ಲೂಕು ಕಸಬಾಗಳಲ್ಲಿರುವ ಮ್ಯುನಿಸಿಪಲ್ ಮತ್ತು ಇತರ ಇಂಗ್ಲಿಷ್ ಸ್ಕೂಲ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವನ್ನುಂಟುಮಾಡಿರುತ್ತೆ. ಸದರೀ ದೇಶೀಯ ಪರೀಕ್ಷೆಯನ್ನು ಸರ್ಕಾರದ ನೌಕರಿಯ ಕೆಲವು ತರಗತಿಗಳಿಗೆ ಆವಶ್ಯಕವಾದ ಪರೀಕ್ಷೆಯಂತೆ ಗಣಿಸುವ ಹಾಗೆ ಮಾಡಬೇಕೆಂಬ ಯೋಚನೆ ಇರುತ್ತೆ.

ಮುಖ್ಯವಾಗಿರುವ ಬೆಂಗಳೂರು ಮತ್ತು ಮೈಸೂರು ಕಾಲೇಜುಗಳ ವಿದ್ಯಾರ್ಥಿಗಳು ಬಹಳವಾಗಿ ಮದ್ರಾಸ್ ಯೂನಿವರ್ಸಿಟಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗುತ್ತಾರೆ. ಪ್ರೌಢಪರೀಕ್ಷೆಗಳಿಗೆ ಓದುವ ವಿದ್ಯಾರ್ಥಿಗಳ ಸಂಖ್ಯೆಯು ದಿನೇದಿನೇ ಹೆಚ್ಚುತ್ತಾ ಬಂದದ್ದರಿಂದ ಬೆಂಗಳೂರು ಬಿ. ಎ. ಪರೀಕ್ಷಾಸ್ಥಳವಾಗಿ ಏರ್ಪಟ್ಟಿರುತ್ತೆ. ಕನ್ನಡ ಭಾಷೆಯಲ್ಲಿಯೂ ಕನ್ನಡ ಗ್ರಂಥಗಳಲ್ಲಿಯೂ ಜನರು ಕೃಷಿ ಮಾಡಿ ಅವು ಪ್ರಾಬಲ್ಯದೆಶೆಗೆ ಬರುವಂತೆ ಮಾಡುವದಕ್ಕೋಸ್ಕರ ಕರ್ನಾಟಕ ಭಾಷೋಜ್ಜೀವಿನೀ ಸಭೆಯು ಏರ್ಪಟ್ಟಿರುತ್ತೆ. ಈ ಸಭೆಯವರು ಉದ್ಗ್ರಂಥಗಳನ್ನು ಬೋಧಿಸುವ ವಿದ್ಯಾಶಾಲೆಯನ್ನು ಸ್ಥಾಪಿಸಿ ಇರುವದಲ್ಲದೆ ಬಹಳವಾಗಿ ಮಾಲಿನ್ಯ ಹೊಂದುತ್ತ ಬಂದಿರುವ ಈ ಭಾಷೆಯಲ್ಲಿ ಚನ್ನಾಗಿ ವ್ಯಾಸಂಗವನ್ನು ಮಾಡುವದಕ್ಕಾಗಿ ವಿದ್ಯಾರ್ಥಿಗಳಿಗೆ ವೇತನಗಳ ಮೂಲಕವಾಗಿ ಪ್ರೋತ್ಸಾಹವನ್ನುಂಟುಮಾಡಿರುತ್ತಾರೆ

ಶ್ರೀಮನ್ಮಹಾರಾಜ್ಞೀ ಇಂಡಿಯಾ ಚಕ್ರವರ್ತಿನಿಯವರ ಆಳ್ವಿಕೆಯ 50ನೇ ವರ್ಷದ ಮಹೋತ್ಸವದ ಜ್ಞಾಪಕಾರ್ಥವಾಗಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ದೊರೆಯುವ ಪುರಾತನ ಗ್ರಂಥ ಮೊದಲಾದವುಗಳನ್ನು ಶೇಖರಮಾಡಿ ಇಡಲು ಒಂದು ಕಟ್ಟಡವು ತಯಾರಾಗುತ್ತಲಿದೆ. ಇದರಿಂದ ವಿದ್ಯಾರ್ಥಿಗಳು ಈ ಗ್ರಂಥಗಳನ್ನು ನೋಡಿಕೊಳ್ಳುವದಕ್ಕೂ ಅವುಗಳ ಪ್ರತಿಗಳನ್ನು ಬರೆದುಕೊಳ್ಳುವದಕ್ಕೂ ಅನುಕೂಲ ವುಂಟಾಗುವದು.

ಬಾಲಿಕಾವಿದ್ಯಾಭ್ಯಾಸದ ವಿಷಯದಲ್ಲಿ, ಮೈಸೂರಲ್ಲಿರುವ ಶ್ರೀಮನ್ಮಹಾರಾಣಿ ಬಾಲಿಕಾ ಪಾಠಶಾಲೆಯು ಪ್ರಾಮುಖ್ಯ ಸ್ಥಿತಿಯಲ್ಲಿಯೇ ಇರುತ್ತೆ. ಇದರಂತೆಯೇ ಬೆಂಗಳೂರು ಬಾಲಿಕಾ ಪಾಠಶಾಲೆಯನ್ನು ತಿದ್ದುಪಾಟುಮಾಡಿ ಮ್ಯೂನಿಸಿಪಲ್ ಬೋರ್ಡಿನವರ ಮೇಲ್ವಿಚಾರಣೆಗೆ ಒಳಪಡಿಸಿ ಹಿಂದೂಜನರ ಕಮಿಟಿಯ ಆಡಳಿತಕ್ಕೆ ಕೊಟ್ಟಿರುತ್ತೆ. ಇದರಿಂದ ಈಗಾಗಲೇ ಪ್ರಯೋಜನ ಕಾಣಬರುತ್ತಲಿದೆ.

ಇಂಡಿಯಾ ದೇಶದ ವೈಸರಾಯಿ ಮತ್ತು ಗೌರ್ನರ್‌ಜನರಲ್ ಲಾರ್ಡ್‌ಡಫರಿನ್ ಸಾಹೇಬರವರ ಸವಾರಿಯು ಮೈಸೂರಿಗೆ ಚಿತ್ತೈಸಿಯಿದ್ದವೇಳೆ ಅವರಿಗೆ ಸಮರ್ಪಿಸಿದ ವಿಜ್ಞಾಪನ ಪತ್ರಿಕೆಗಳಿಗೆ ಅವರು ದಯಪಾಲಿಸಿದ ಉತ್ತರಗಳೊಳಗೆ ಒಂದರಲ್ಲಿ ಈ ದೇಶದ ವಿದ್ಯಾಭಿವೃದ್ಧಿಯನ್ನು ಕುರಿತು ಅಪ್ಪಣೆ ಕೊಡಿಸಿದ್ದನ್ನು ಇಲ್ಲಿ ವಿವರಿಸುವೆವು:—

"ವಿದ್ಯಾಭ್ಯಾಸದ ವಿಷಯವನ್ನು ನೀವು ಸೂಚಿಸಿದ್ದರಿಂದ ಈ ರಾಜ್ಯದಲ್ಲಿ ವಿದ್ಯಾವಿಷಯಕವಾಗಿ ಇರುವ ವಿಶೇಷ ಅಭಿಲಾಷೆಯೂ ವಿದ್ಯಾಭಿವೃದ್ಧಿಗೋಸ್ಕರ ವಿವೇಚನಾಪೂರ್ವಕವಾಗಿಯೂ ಧಾರಾಳವಾಗಿಯೂ ಕಲ್ಪಿಸಿಯಿರುವ ಸಾಲಭ್ಯಗಳು ಎಲ್ಲೆಲ್ಲಿಯೂ ವ್ಯಕ್ತವಾಗಿರುವದನ್ನು ನೋಡಿದ್ದರಿಂದ ನಮಗೆ ಉಂಟಾಗಿರುವ ಉತ್ಸಾಹವನ್ನು ಕೈಲಾದಮಟ್ಟಿಗೂ ವಿವರಿಸುವದಕ್ಕೆ ಅವಕಾಶವಾಯಿತು. ನಾವು ಬರ ಮಾರ್ಗ್ಯೆ ರಸ್ತೆಯಲ್ಲಿ ಕಾಲ್ಮೈಲಿ ಪರಿಯಂತವೂ 8, 10 ಪಂಕ್ತಿಗಳಾಗಿ ಸೇರಿದ್ದ ಈ ದೇಶದ ವಿದ್ಯಾರ್ಥಿಗಳನ್ನು ಅವರ ಉಪಾಧ್ಯಾಯರನ್ನು ನೋಡಲಾಗಿ ಈ ಶೀಮೆಯು ಮುಂದೆ ಉನ್ನತ ಸ್ಥಿತಿಗೆ ಬರುವದಕ್ಕೆ ಸೂಚಕವಾಗಿ ಕಂಡಿತು. ಸಾಮಾನ್ಯವಾಗಿ ವಿದ್ಯಾಭ್ಯಾಸವು ಇಷ್ಟು ಅಭಿವೃದ್ಧಿಯನ್ನು ಹೊಂದುತ್ತಿರುವದಕ್ಕಾಗಿ ನಮಗೆ ತೃಪ್ತಿ ಉಂಟಾಯಿತು; ಮತ್ತು ಅತಿಶಯವಾಗಿ ಇಂಡಿಯಾದೇಶದಲ್ಲಿ ಮತ್ತೆಲ್ಲಿಯೂ ಯಿಲ್ಲದ ವಿಶೇಷವನ್ನು ಯಿಲ್ಲಿ ನೋಡಿದೆವು. ಅದೇನಂದರೆ, ಯೂರೋಪ್ ಖಂಡದಲ್ಲಿ ವಿಶೇಷ ನಾಗರೀಕಸ್ಥಿತಿಗೆ ಬಂದಿರುವ ಪಟ್ಟಣಗಳಲ್ಲಿನಂತೆಯೇ ಇಲ್ಲಿಯೂ ಬಾಲಕರಹಾಗೆಯೇ ವಿದ್ಯಾಪ್ರಾಪ್ತಿಯನ್ನು ಸಂಪಾದಿಸಲು ಸಾಲಭ್ಯಗಳನ್ನನುಭವಿಸುತ್ತ ಅಲ್ಲಿ ನೆರದಿದ್ದ ಕುಲಪಾಲಿಕಾ ಬಾಲಿಕೆಯರನ್ನು ನೋಡಿ ಆನಂದ ಪರವಶರಾದೆವು."

ಪ್ರಾಚೀನ ಲಿಪ್ಯನ್ವೇಷಣವಿಷಯ.—ಪುರಾತನ ಶಾಸನಗಳನ್ನು ಸಂಪಾದಿಸಿ ಪರಿಶೋಧಿಸುವ ಕೆಲಸವು ಕಳೆದ ವರ್ಷ 6 ತಾಲ್ಲೂಕುಗಳಲ್ಲಿ ನಡೆಯಿತು. ಈ ಮೂಲಕವಾಗಿ ಪೂರ್ವಕಾಲದ ಚರಿತ್ರೆಗೆ ಸಂಬಂಧಪಟ್ಟ ವಿಶೇಷ ಸಮಾಚಾರವು ದೊರತಿರುತ್ತೆ. ಶ್ರವಣಬೆಳಗೊಳದಲ್ಲಿರುವ ಜೈನಶಾಸನಗಳ ಪುಸ್ತಕವು ಪೂರ್ತಿಯಾಗುತ್ತ ಬಂದಿರುತ್ತೆ. ಇದರಿಂದ ಚರಿತ್ರೆ ಮತ್ತು ಭಾಷಾ ಸಂಬಂಧವಾದ ವೃತ್ತಾಂತವು ದೊರೆಯುವದಲ್ಲದೆ ಯಿದುವರಿವಿಗೂ ಅನುಮಾನಗ್ರಸ್ತವಾಗಿದ್ದ ಅಂಶಗಳು ಸ್ಪಷ್ಟವಾಗುವದಕ್ಕೆ ಸಾಧಕವಾಗುತ್ತದೆ. ಇತಃಪರ ಇವುಗಳನ್ನು ಛಾಪಿಸುವದಕ್ಕೆ ಪ್ರತ್ಯೇಕ ಏರ್ಪಾಡು ಮಾಡುವದರಮೂಲಕ ಇವು ಕ್ಷಿಪ್ರದಲ್ಲಿಯೇ ಪ್ರಚಾರಕ್ಕೆ ಬರುವವು.

ಶಾಸನಗಳನ್ನು ಶೇಖರಮಾಡಿ ತರ್ಜುಮೆಮಾಡುವದಲ್ಲದೆ ಇತರ ಪೂರ್ವೀಕ ಸಂಗತಿಗಳನ್ನು ತಿಳಿಯಲು ಸಂಪೂರ್ತಿಯಾಗಿ ಅನ್ವೇಷಣವನ್ನು ಮಾಡಿಸಬೇಕೆಂಬ ಯೋಚನೆ ಇರುತ್ತೆ. ಹೀಗೆ ಮಾಡುವದರಲ್ಲಿ ವಿಚಿತ್ರವಾದ ಪುರಾತನ ಶಾಸನಗಳನ್ನೂ ಕಟ್ಟಡಗಳನ್ನೂ ಚಿತ್ರಪಟಗಳ ಮೂಲಕವಾಗಿ ವಿವರಿಸುವದಲ್ಲದೆ ಇವುಗಳನ್ನು ಕಾಪಾಡತಕ್ಕ ವಿಷಯದಲ್ಲಿಯೂ ಅವಶ್ಯಕವಾದಲ್ಲಿ ಜೀರ್ಣೋದ್ಧಾರ ಮಾಡತಕ್ಕ ವಿಷಯದಲ್ಲಿಯೂ ಏರ್ಪಾಡು ಮಾಡ.

ಲ್ಪಡುವದು. ಎಲ್ಲಾವಿಧವಾದ ಪುರಾತನ ಸಂಗತಿಗಳೂ ಅನ್ವೇಷಣೆಗೆ ಒಳಪಡುವವು. ಇದರಲ್ಲಿ ಮುಖ್ಯವಾದ ಸಂಗೆತಿಗಳನ್ನೆಲ್ಲ ಜನಗಳಿಗೆ ತಿಳಿಯತಕ್ಕ ಬಗ್ಯೆ ಪ್ರಚಾರ ಮಾಡುವದಾಗುವದು. ಶಿವಾಯಿ ಪುರಾತನ ಗ್ರಂಥಗಳ ಸಂಗ್ರಹಾರ್ಥವಾಗಿ ಮಾಡಿರುವ ಏರ್ಪಾಟು ಮೇಲೆಯೇ ವಿವರಿಸಿರುತ್ತಷ್ಟೆ, ಹೀಗೆ ಮಾಡುವದರಿಂದ ದೇಶದ ಚರಿತ್ರೆಯ ವಿಷಯವಾಗಿ ಅಭಿರುಚಿ ಹುಟ್ಟಿ, ದೇಶೀಯವಾದ ವಿಷಯಗಳಲ್ಲಿ ಪ್ರಯೋಜನಾಂಶಗಳು ತೋರಿಬರುವವು.

ಈ ಸಭೆಯ ಏರ್ಪಾಟು ಮತ್ತು ಇವರಲ್ಲಿ ಕೆಲಸನಡಿಸತಕ್ಕ ವಿಧಾನ ಇವುಗಳನ್ನು ಕುರಿತು ಕೆಲವು ಅಂಶಗಳನ್ನ ಹೇಳುವೆವು. ಶ್ರೀಮನ್ಮಹಾರಾಜರವರು ರಾಜ್ಯಾಳ್ವಿಕೆಯನ್ನು ವಹಿಸಿದ ಸಂವತ್ಸರವೇ ಈ ಸಭೆ ಸೇರುವದಕ್ಕೆ ಪ್ರಾರಂಭ ವಾಯಿತಾದ್ದರಿಂದ ಈಗ ಏಳನೇದಫೆ ಸೇರಿದ್ದಾಗಿರುತ್ತೆ. ಪ್ರಜಾಪ್ರತಿನಿಧಿಗಳಾದ ನಿಮಗಳಲ್ಲಿ ನಂಬಿಕೆಯನ್ನಿಟ್ಟು ಈ ಶೀಮೆ ಆಡಳತಕ್ಕೆಸಂಬಂಧಪಟ್ಟ ಏರ್ಪಾಟುಗಳ ವಿಷಯದಲ್ಲಿ, ಸರ್ಕಾರದವರ ಅಭಿಪ್ರಾಯ ಮತ್ತು ಉದ್ದೇಶಗಳನ್ನು ನಿಮಗಳಿಗೆ ತಿಳಿಯಪಡಿಸಿ ಆ ಭಾಗದಲ್ಲಿ ನಿಮಗಳ ನಿಷ್ಪಕ್ಷಪಾತವಾದ ಮತ್ತು ಸಮೀಚೀನವಾದ ಅಭಿಪ್ರಾಯಗಳನ್ನು ಗ್ರಹಿಸಿ ಪ್ರಜೆಗಳ ನಿಜವಾದ ಕ್ಷೇಮವನ್ನು ಅಭಿವೃದ್ಧಿ ಮಾಡುವಂತೆ ಸರ್ಕಾರದ ಏರ್ಪಾಟುಗಳನ್ನು ಕ್ರಮಪಡಿಸಬೇಕೆಂಬದಾಗಿ ಶ್ರೀಮನ್ಮಹಾರಾಜರವರ ಸಂಕಲ್ಪವಾಗಿತ್ತು. ಈ ಸಂಕಲ್ಪವು ಕೂಡಿದಮಟ್ಟಿಗೂ ಸಫಲವಾಯಿತು ಕಳೆದ ಆರು ವರ್ಷಗಳಕಾಲದಲ್ಲಿ ಈ ಸಭೆಯಲ್ಲಿ ನಡೆದ ಚರ್ಚೆಯಿಂದ ಪ್ರಯೋಜನ ಉಂಟಾಗಿರುತ್ತಾಗಿ ರಾಜ್ಯಾಡಳಿತ ಕ್ಯೋಸ್ಕರ ಈ ಸಭೆಯನ್ನು ಇತೋಪ್ಯತಿಶಯವಾಗಿ ಪ್ರಯೋಜನಕಾರಿಯಾಗುವಂತೆ ಮಾಡಬೇಕೆಂಬ ಇರಾದೆ ಇರುತ್ತೆ; ಇದನ್ನು ನಿಮ್ಮಗಳಿಗೆ ತಿಳಿಸಬೇಕೆಂದು ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರುತ್ತಾರೆ. ಈ ಸಭೆಯಲ್ಲಿ ಶೀಮೆಯ ದರೋಬಸ್ತು ಪಜ್ರೆಗಳ ಹಾಲ್ ಅಹವಾಲ್‌ಗಳು ಸಂಪೂರ್ಣವಾಗಿ ಜಾಹಿರಾತಿಗೆ ಬರುವದಕ್ಕಾಗಿ ಸಾಧ್ಯವಾಗುವ ಮಟ್ಟಿಗೂ ಸಮಸ್ತ ಕಸಬಿನ ಪ್ರತಿನಿಧಿಗಳೂ ಶೇರಬೇಕೆಂಬುವದೇ ಶ್ರೀಮನ್ಮಹಾರಾಜರವರ ಮುಖ್ಯಾಭಿಲಾಷೆಯಾಗಿ ಇರುತ್ತೆಂಬುವದು ಕಳೆದ ಆಗಸ್ಟ್ 13ನೇ ತಾರೀಖಿನಲ್ಲಿ ಫಾಯಿಷ್ ಮಾಡಲ್ಪಟ್ಟ ನಿಬಂಧನೆಗಳಿಂದ ನೀವು ತಿಳದು ಕೊಳ್ಳಬಹುದು.

ಈ ಸಭೆಗೆ ಬರುವವರು ಆಸ್ತಿವಂತರಾಗಿರಬೇಕೆಂಬ ನಿಬಂಧನೆಯನ್ನು ಹೊಸದಾಗಿ ಏರ್ಪಡಿಸಿದೆ. ಆಸ್ತಿವಂತರಿಗೆ ವಿಶೇಷವಾದ ಜವಾಬುದಾರಿ ಇರುವದಲ್ಲದೆ ಅವರು ಕೊಡುವ ಸಲಹೆಗಳು ವಿಹಿತವಾಗಿಯೂ ಸಾಧ್ಯವಾದವುಗಳಾಗಿಯೂ ನ್ಯಾಯವಾಗಿಯೂ ಇರುತ್ತವಾದ್ದರಿಂದ ಮೇಲ್ಕಂಡ ಏರ್ಪಾಟಿನಿಂದ ವಿಶೇಷ ಪ್ರಯೋಜನ ಉಂಟಾಗಬಹುದೆಂದು ನಂಬಿ ಇದೆ. ಯೂರೋಪ್ ಖಂಡದ ಪ್ರಜಾ ಸಂಘಗಳಲ್ಲಿಯೂ ಇದೇ ರೀತಿಯಾಗಿ ಆಸ್ತಿವಂತರೇ ಸೇರಿರುವರು. ಈ ನಿಬಂಧನೆಯನ್ನು ಭೂ ಕೃಷಿಯೇ ಮುಖ್ಯಾಧಾರವಾದ ಈ ಶೀಮೆಯಲ್ಲಿ ಜಾರೀಗೆ ತಂದಿರುವದರಲ್ಲಿ ರೈತರಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಈ ಶೀಮೆಯ 66 ತಾಲ್ಲೂಕುಗಳಿಂದಲ್ಲೂ ತಾಲೋಕು 1ಕ್ಕೆ5 ಜನದಮೇರೆ ಮುಖಂಡರಾದ ರೈತರು ಸಭೆಗೆ ಬರಬಹುದೆಂದು ಏರ್ಪಾಟುಮಾಡಿರುತ್ತೆ. ಶಿವಾಯಿ 8 ಲೋಕಲ್ ಬೋರ್ಡುಗಳು 92 ಮ್ಯುನಿಸಿಪಾಲಿಟಿಗಳು ಸಹ ಈ ಸಭೆಗೆ ಮೆಂಬರುಗಳನ್ನ ಕಳುಹಿಸ ಬಹುದೆಂದು ವಿಧಿಸಿರುವದರಿಂದ ಯೆಲ್ಲೆಲ್ಲಿಯೂ ಎಲ್ಲಾ ಕಸಬಿನವರೂ ತಮ್ಮತಮ್ಮ ಅಹವಾಲುಗಳನ್ನು ಕ್ರಮವಾಗಿ ಅರಿಕೆಮಾಡಲೂ ಅನುಕೂಲವಾಗುವ ಹಾಗೆ ತಕ್ಕಮಟ್ಟಿಗೂ ಅವಕಾಶ ಕೊಟ್ಟಿರುತ್ತೆ. ಮತ್ತು ಮುಖ್ಯವಾದ ಸಂಘದವರು ಒಬ್ಬೊಬ್ಬ ಮೆಂಬರನ್ನು ಈ ಸಭೆಗೆ ಕಳುಹಿಸ ಬಹುದೆಂದು ವಿಧಿಸಿರೋಣಾದರಿಂದ ವಿಶೇಷ ಅಭಿವೃದ್ಧಿಯನ್ನು ಅಪೇಕ್ಷಿಸತಕ್ಕವರೂ ತಮ್ಮ ಅಭಿಪ್ರಾಯಗಳನ್ನು ಶೃತಪಡಿಸುವದಕ್ಕೆ ಅನುಕೂಲವಾಗಿರುತ್ತೆ.

ಮೇಲ್ಕಂಡ ನಿಬಂಧನೆಗಳು ತಾತ್ಕಾಲದಲ್ಲಿ ಪ್ರಯೋಜನವುಳ್ಳದ್ದಾಗಿರುವವೆಂದು ಸರ್ಕಾರದವರು ಯೋಚಿಸಿದ್ದಾಗ್ಯೂ ಐಯಿಂದ ಕಾಲೋಚಿತವಾಗಿ ನಮ್ಮ ಅನುಭವ ಹೆಚ್ಚಾಗುತ್ತಾ ಬಂದಹಾಗೆಲ್ಲಾ ಸದರೀ ನಿಬಂಧನೆಗಳು ತಿದ್ದುಪಾಟಾಗಬೇಕಾಗುತ್ತೆ.

ಈ ಸಭೆಯಲ್ಲಿ ಕೆಲಸ ನಡೆಸತಕ್ಕ ಕ್ರಮದ ವಿಷಯವಾಗಿ ಫಾಯಿಷಾಗಿರುವ ನಿಬಂಧನೆಗಳಿಂದ ನೀವುಗಳು ಜಿಜ್ಞಾಸ ಮಾಡಬೇಕಾದ ಅಂಶಗಳಿಗೆ ಸರ್ಕಾರಿ ದಾಖಲೆಗಳನ್ನು ಒದಗಿಸಿಕೊಡುವ ಬಗ್ಯೆ ನೀವುಗಳು ಸದರೀ ವಿಷ

ಯಗಳನ್ನು ಚನ್ನಾಗಿ ಮಾಹಿಯತ್ತು ಮಾಡಿಕೊಂಡು ನೀವುಗಳೆಲ್ಲರೂ ಒಟ್ಟಾಗಿ ಸಲಹೆಗಳನ್ನು ಕೊಡುವದಕ್ಕೂ ತನ್ಮೂಲಕ ಪ್ರಯೋಜನಕರವಾದ ಚರ್ಚೆ ನಡಿಯುವದಕ್ಕೂ ಅನುಕೂಲವಾಗಿರುತ್ತೆ. ಈ ಮೇರೆ ನೀವುಗಳೆಲ್ಲರೂ ಒಟ್ಟಾಗಿ ಆಲೋಚಿಸಿ ಕೊಡುವ ಅಭಿಪ್ರಾಯಗಳು ನೀವುಗಳು ಪೃಥಕ್ಕಾಗಿ ಕೊಡುವ ಅಭಿಪ್ರಾಯಗಳಿಗಿಂತ ಹೆಚ್ಚಾಗಿ ನಮ್ಮ ಆಲೋಚನಾರ್ಹವಾಗಿರುವವು. ಸರ್ವಜನ ಕ್ಷೇಮಕರವಾದ ವಿಷಯಗಳನ್ನೇ ಈ ಸಭೆಯಲ್ಲಿ ಚರ್ಚಿಸತಕ್ಕದ್ದು ಮುಖ್ಯವಾಗಿರುವದ್ದರಿಂದ ನಿಮಗಳ ಪೈಕೀ ಹೆಚ್ಚು ಸಂಖೆಯುವರು ಅಥವಾ, ಮುಖಂಡರಾದ ಅನೇಕರು ಯಾವ್ಯಾವ ವಿಷಯಗಳನ್ನು ಪ್ರಸ್ತಾಪದಲ್ಲಿ ತರಬೇಕೆಂಬುವದನ್ನು ಮೊದಲೇ ನಿಶ್ಚಯಮಾಡಿಕೊಂಡು ಬರಬೇಕಾಗಿ ಏರ್ಪಾಟುಮಾಡಿರುತ್ತೆ. ಈ ಸಭೆಯು ಪೂರೈಸಿದನಂತರ ಮೇಲ್ಕಂಡ ನಿಬಂಧನೆಗಳ ಯುಕ್ತಾಯುಕ್ತತೆಯನ್ನು ನಿರ್ಧರಿಸಲು ಅನುಕೂಲಿಸುವದು. ಅನಂತರ ಯುಕ್ತತೋರಿದಂತೆ ಅವುಗಳನ್ನು ತಿದ್ದುಪಾಟು ಮಾಡುವ ಆಲೋಚನೇಮಾಡಿರುತ್ತೆ.

ಈ ಸಂವತ್ಸರದ ಆದಿಭಾಗದಲ್ಲಿ ಇಂಡಿಯಾದೇಶದ ವೈಸರಾಯ್ ಮತ್ತುಗವರ್ನರ್ ಜನರಲ್‌ರವರಾದ ಘನವನ್ನು ಹೊಂದಿದ ಲಾರ್ಡ್‌ಡಫರಿನ್‌ರವರ ಸವಾರೀ ಇಲ್ಲಿಗೆ ಚಿತ್ತೈಸಿದಾಗ ಅವರನ್ನು ಉಚಿತ ಮರ್ಯಾದೇಯಿಂದ ಬರಮಾಡಿಕೊಂಡಾಗ್ಯೆ ನೀವುಗಳು ಹಾಜರಿದ್ದ ಪ್ರಯುಕ್ತ ಆಗ ನಡೆದ ಸಂಗತಿಗಳೆಲ್ಲ ನಿಮಗಳಿಗೆ ಚನ್ನಾಗಿ ಜ್ಞಾಪಕವಿರಬಹುದು. ಈ ಶೀಮೆಯಲ್ಲಿ ಕ್ಷೇಮ ಸಾಭಾಗ್ಯಗಳು ನೆಲಗೊಂಡಿರುವದನ್ನು ಅವರು ಪರಾಂಬರಿಸಿ ಸಂತುಷ್ಟರಾದ್ದಲ್ಲದೆ, ಮುಖಂಡರೂ ವಿವೇಕಿಗಳೂ ಆದ ನಿಮ್ಮಂಥಾವರುಗಳ ಅಭಿಪ್ರಾಯಗಳನ್ನು ಗ್ರಹಿಸುವ ಉದ್ದಿಶ್ಯ ಶ್ರೀಮನ್ಮಹಾರಾಜರವರು ಮಾಡಿರುವ ಈ ಸಭೆಯ ಏರ್ಪಾಟನ್ನು ಕುರಿತು ಕೊಂಡಾಡಿದರು. ಇದರಿಂದ ಪ್ರೋತ್ಸಾಹವನ್ನು ಹೊಂದಿ ನೀವುಗಳು ಇದುವರಿಗಿನಂತೆಯೇ ರಾಜ್ಯಾಡಳಿತದ ವಿಷಯಗಳಲ್ಲಿ ಆಸಕ್ತಿಯನ್ನು ತೋರಿಸುತ್ತಿರುವಿರೆಂದು ಶ್ರೀಮನ್ಮಹಾರಾಜರವರು ಅಪ್ಪಣೇ ಕೊಡಿಸಿರುವದಲ್ಲದೆ ಘನವನ್ನು ಹೊಂದಿದ ವೈಸರಾಯರವರ ಸಂದರ್ಶನಾರ್ಥವಾಗಿ ಬರುವ ಹಿಮಗಾಲದಲ್ಲಿ ಶ್ರೀಮನ್ಮಹಾರಾಜರವರ ಸವಾರಿಯು ಕಲ್ಕತ್ತೆಗೆ ದಯಮಾಡಿಸಬಹುದಾಗಿರುತ್ತೆ.

ಮೈಸೂರು,
ಸನ್ 1887ನೇ ಸೆಪ್ಟಂಬರ್ ತಾರೀಖು 30

ಕೆ. ಶೇಷಾದ್ರಿ ಐಯ್ಯರ್,
ಮೈಸೂರು ಸಂಸ್ಥಾನದ ದಿವಾನರವರು.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 42 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ 1887.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 22, ಸ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರ್ ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೇಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ಇಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಇಂಟೆಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ನಂ. 107. ತಾರೀಖು ೫ನೇ ಸೆಪ್ಟಂಬರ್ 1887.

ಮೈಸೂರು ಶೀಮೆಯಲ್ಲಿ ಗನಿಗಳ ಕೆಲಸ ನಡಿಸಲಿಕ್ಕೆ ಗುತ್ತಿಗೆಗಳನ್ನ ಕೊಡತಕ್ಕ ಬಗ್ಗೆ ಹಿಂದಿನ ನಿಬಂಧನೆಗಳು ರದ್ದುಪಡಿಸಿ ಈ ಕೆಳಗೆ ಬರುವ ನಿಬಂಧನೆಗಳು ಶ್ರೀಮನ್ ಮಹಾರಾಜರವರಿಂದ ಮಂಜೂರ್ಮಾಡಲ್ಪಟ್ಟಿರುತ್ತವೆ. ಸದರೀ ನಿಬಂಧನೆಗಳು ಈ ಸರಕಾರದಿಂದ ಯಿದಕ್ಕೆ ಮುಂಚೆಯೇ ಕೊಡೋಣಾದ ಗನಿಯ ಗುತ್ತಿಗೆಗಳ ವಿಷಯದಲ್ಲಿ ಲಗಾವಾಗುವದಿಲ್ಲವು.

ಅಜಮಾಯಿಷಿ ಬಗ್ಗೆ ಲೈಸೆನ್ಸ್.

1. ಮೈಸೂರು ಶೀಮೆಯೊಳಗೆ ಗನಿಗಳ ಕೆಲಸ ನಡಿಸುವ ಉದ್ದಿಶ್ಯ ಭೂಮಿಯನ್ನ ನಿವಡಾಯಿಸತಕ್ಕ ಬಗ್ಗೆ ಜಮೀನ್ ಅಜಮಾಯಿಷಿ ಕೆಲಸ ನಡಿಸಲಿಚ್ಛೆಯುಳ್ಳ ಜನರು ದಿವಾನರವರಲ್ಲಿ ದರಖಾಸ್ತು ಮಾಡಿ 500 ರೂಪಾಯಿಗಳ ಫೀಜನ್ನು ಸಲ್ಲಿಸಿದಲ್ಲಿ ಹತ್ತು ಚದರ ಮೈಲ್‌ಗಳಿಗೆ ಅತಿಕ್ರಮಿಸದ ವೊಂದು ಗೊತ್ತಾದ ವಿಸ್ತೀರ್ಣದಲ್ಲಿ ಅಜಮಾಯಿಷೀ ಮಾಡುವದಕ್ಕೆ ಅಪ್ಪಣೇ ಕೊಡುವ ಲೈಸೆನ್ಸನ್ನ ಪಡಿ

ಯಬಹುದು; ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನಲ್ಲಿ ನಮೂದಾದ ವಿಸ್ತೀರ್ಣದೊಳಗೆ ಗನೀ ಕೆಲಸ ನಡಿಸುವ ಉದ್ದಿಶ್ಯ, ವೊಂದು ಚದರ ಮೈಲಿ ಭೂಮಿಯನ್ನು, ಲೈಸೆನ್ಸ್ ತಾರೀಖು ಲಾಗಾಯತು ವೊಂದು ವರುಷದ ವಳಗಾಗಿ ನಿವಡಾಯಿಸಿಕೊಳ್ಳಲಿಕ್ಕೆ ಅರ್ಹನಾಗಿರುವನು ಭೂಮಿಯನ್ನು ನಿವಡಾಯಿಸಿಕೊಂಡ ನಂತರ ಲೈಸೆನ್ಸ್‌ದಾರನು, ನಿವಡವಾದ ವಿಸ್ತೀರ್ಣಕ್ಕಾಗಿ ಯಿದರ ಳಗೆ ನಮೂದಾಗುವ ನಿಬಂಧನೆಗಳಿಗೂ ಷರತ್ತುಗಳಿಗೂ ಒಳಪಟ್ಟು ಗುತ್ತಿಗೆಯನ್ನು ಪಡಿಯಬಹುದು. ಅಜಮಾಯಿಷೀ ಬಗ್ಯೆ ಕೊಡಲ್ಪಟ್ಟ ಲೈಸೆನ್ಸ್ ಜಾರೀಲಿರುವ ಕಾಲದಲ್ಲೂ ಮತ್ತು ಅದರಲ್ಲಿ ನಮೂದಿಸಿರುವ ವಿಸ್ತೀರ್ಣದೊಳಗೂ, ಗನಿಗಳ ಕೆಲಸದ ಬಗ್ಯೆ ಗುತ್ತಿಗೆಯಾಗಲಿ, ಅಜಮಾಯಿಷೀ ಬಗ್ಯೆ ಲೈಸೆನ್ಸಾಗಲಿ, ಇತರ ಯಾವ ಮನುಷ್ಯನಿಗೂ ಕೊಡಲ್ಪಡತಕ್ಕದ್ದಲ್ಲವು. ಆದರೆ ಯಾವದಾದರೊಂದು ಪ್ರದೇಶಕ್ಕಾಗಿ ಅಜಮಾಯಿಷೀ ಲೈಸೆನ್ಸ್ ಕೊಡಲಿಕ್ಕೆ ತಿರಸ್ಕರಿಸುವ ಅಧಿಕಾರವನ್ನು ಗವರ್ನಮೆಂಟಿನವರು ಉಳಿಸಿಕೊಂಡಿರುತ್ತಾರೆ.

ಗನಿಗಳಬಗ್ಯೆ ಗುತ್ತಿಗೆ—ಪ್ರತಿ ಗುತ್ತಿಗೆಯ ವಿಸ್ತೀರ್ಣ.

II. ಗನಿಗಳ ಪ್ರತಿಗುತ್ತಿಗೆಯೂ ವೊಂದು ಚದರ ಮೈಲಿಯ ವಿಸ್ತೀರ್ಣಕ್ಕೆ ಅತಿಕ್ರಮಿಸದ ವೊಂದು ತಾಕಿಗೆ ಕ್ಲುಪ್ತವಾಗಿಯಿರತಕ್ಕದ್ದು. ಅಂಥಾ ತಾಕು ಸಾಧಾರಣವಾಗಿ ಪ್ರತಿ ಪಾರ್ಶ್ವವೂ ಅರ್ಧಮೈಲಿಯ ವುದ್ದಳತೆಗಿಂತಲೂ ಕಡಿಮೆಯಾಗಿ ಯಿಲ್ಲದೇ ಯಿರುವಂಥಾ ಪ್ಯಾರಲ್ಲೆಲೋಗ್ರಾಂ ಅಂದರೆ ಸಮಾನಾಂತರ ಕ್ಷೇತ್ರದಂತೆ ಯಿರತಕ್ಕದ್ದು. ವೊಬ್ಬ ದರಖಾಸ್ತುದಾರನು, ವೊಂದು ತಾಕಿಗಿಂತಾ ಹೆಚ್ಚಾದ ತಾಕುಗಳಿಗಾಗಿ ದರಖಾಸ್ತುಗಳು ಮಾಡಿದಲ್ಲಿ ಇತರ ದರಖಾಸ್ತುದಾರರ್ಯಾರೂ ಯಿಲ್ಲದೇ ಯಿದ್ದು, ಮತ್ಯಾವ ತಕರಾರೂ ಯಿಲ್ಲದೇ, ಯಿದು. ಶಿವಾಯಿ ಅಂಥಾ ದರಖಾಸ್ತು ಯಥಾರ್ಥವಾಗಿ ಗನಿಗಳ ಕೆಲಸ ನಡಿಸುವದಕ್ಕಾಗಿಯೇ ಹೊರ್ತು ಗನಿಗಳ ಬಗ್ಯೆ ಭೂಮಿಯ ವ್ಯಾಪಾರದ ಉದ್ದಿಶ್ಯವಾಗಿ ಅಲ್ಲವೆಂದು ಗವರ್ನಮೆಂಟಿನವರಿಗೆ ತೃಪ್ತಿಕರವಾಗಿ ತಿಳಿಯಬಂದರೇನೇ ಅಂಥಾ ದರಖಾಸ್ತುಗಳು ಆಲೋಚನೆಯಲ್ಲಿ ತರಲ್ಪಡುವವು.

ಗುತ್ತಿಗೆ ಬಗ್ಯೆ ದರಖಾಸ್ತು.

III. (1.) 1ನೇ ನಿಬಂಧನೆ ಮೇರಿಗೆ ಅಜಮಾಯಿಷಿ ಬಗ್ಯೆ ಲೈಸೆನ್ಸ್ ಪಡೆದಂಥಾ ಮನುಷ್ಯನಿಂದಲಾಗಲಿ, ಅಥವಾ ಇತರ ಯಾವ ಮನುಷ್ಯನಿಂದಲಾಗಲಿ, ಗನಿಯ ಗುತ್ತಿಗೆ ಬಗ್ಯೆ ಮಾಡಲ್ಪಡುವ ಪ್ರತಿ ದರಖಾಸ್ತೂ ದಿವಾನರವರ ಚೀಫ್ ಸಿಕ್ರೇಟೇರಿಯವರಿಗೆ ರೂಬರೂಬಾಗಲಿ, ಅಥವಾ ಅವರ ಹೆಸರಿಗೆ ಪೋಸ್ಟ್‌ವಿಲಾಸದ ಮೂಲಕವಾಗಲಿ ಕೊಡಲ್ಪಡತಕ್ಕದ್ದು. ಮತ್ತು ದರಖಾಸ್ತು ಮಾಡಲ್ಪಡುವಂಥಾ ಪ್ರತಿ ಚದರ ಮೈಲು ಯಾ ಅದರ ಭಿನ್ನಾಂಶಕ್ಕಾಗಿ ದರಖಾಸ್ತುದಾರನು ಕರಾರ್ ಮೇರಿಗೆ ಸರಿಯಾಗಿ ನಡೆದುಕೊಳ್ಳತಕ್ಕ ಉದಿಶ್ಯ ಠೇವಣೀ ಬಗ್ಯೆ 1000 ರೂಪಾಯಿಗಳನ್ನು ಹಾಜರ್ಮಾಡತಕ್ಕದ್ದು, ಮತ್ತು ದರಖಾಸ್ತುದಾರನು ಗನಿಗಳ ಕೆಲಸ ನಡಿಸಲಿಕ್ಕೆ ಬೇಕಾಗುವ ಮೂಲಧನವನ್ನು ಯಾವ ರೀತಿ ವೊದಗಿಸಿಕೊಳ್ಳಲು ಯತ್ನಿಸಿರುತ್ತಾನೋ ಆ ಸಂಗತಿಯೂ ದರಖಾಸ್ತಿನಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

(2.) ಪ್ರತಿ ದರಖಾಸ್ತಿನೊಂದಿಗೂ, ಟೋಪೋಗ್ರಾಫಿಕಲ್ ರೆವಿನ್ಯೂ ಸರ್ವೆ ಯಾ ಇತರ ಸರಕಾರ್ ಮ್ಯಾಪ್ ಯಾನೆ ನಕ್ಷೆಯ ಎಕ್ಸ್‌ಟ್ರಾಕ್ಟ್ ಸಹ ಶೇರಿರತಕ್ಕದ್ದು, ಮತ್ತು ಅಂಥಾ ಎಕ್ಸ್‌ಟ್ರಾಕ್ಟಿನೊಳಗೆ, ದರಖಾಸ್ತು ಮಾಡಲ್ಪಟ್ಟ ಭೂಮಿಯು ಗುರ್ತುಮಾಡಲ್ಪಟ್ಟು ಆ ಭೂಮಿಯ ಸುತ್ತಲೂ ಇರುವ ಗ್ರಾಮಗಳ ಹೆಸರುಗಳು ಸಹ ನಮೂದಿಸಿರತಕ್ಕದ್ದು.

(3.) ಭೂಮಿಯ ಮೋಜಣೀ ಬಗ್ಯೆ ಗವರ್ನಮೆಂಟಿನವರು ಕೊಡುವ ಅಪ್ಪಣೆಯನ್ನು ದರಖಾಸ್ತುದಾರನಿಗೆ ತಿಳಿಸಲ್ಪಟ್ಟ ಲಾಗಾಯತು ಹದಿನೈದುದಿವಸಗಳೊಳಗಾಗಿ, ಆ ದರಖಾಸ್ತುದಾರನು ತಾನು ದರಖಾಸ್ತು ಮಾಡಿದ ಭೂಮಿಯ ತಾಕಿನ ಸರಹದ್ದುಗಳನ್ನು ಸರ್ವೆ ಆಫೀಸರಿಗೂ ವ ಸ್ಥಳದ ರೆವಿನ್ಯೂ ಆಫೀಸರಿಗೂ ಸಹ ತೋರಿಸತಕ್ಕದ್ದು.

(4.) ಸರ್ವೆ ವ ರೆವಿನ್ಯೂ ಆಫೀಸರುಗಳಿಂದ ಮೋಜಣೀ ವ ಆವಶ್ಯಕವಾದ ವಿಚಾರಣೆಗಳು ಪೂರೈಸಿದ ನಂತರ ಭೂಮಿಯ ವಿಸ್ತೀರ್ಣ ವ ಕಂದಾಯ ಮುಂತಾದ ಪೂರಾ ತಪಶೀಲೂ ವ ಗುತ್ತಿಗೆ ಕರಾರಿನ ಅಚ್ಚು ಹಾಕಿದ ನಮೂನೆಗಳೂ, ಮತ್ತು ಮೋಜಣೀ ವ ಹದ್ದು ಗುರ್ತು ಮಾಡಿದ ಲಾಗವಡಿಗಾಗಿ ವೊಂದು ಬಿಲ್ಲು ಸಹ ದರಖಾಸ್ತುದಾರನಿಗೆ ಕಳುಹಿಸಲ್ಪಡುವದು; ದರಖಾಸ್ತುದಾರನು, ಇವುಗಳು ತನಿಗೆ ತಲಪಿದ ವೊಂದು ತಿಂಗಳವಳಗಾಗಿ. ಗುತ್ತಿಗೆ ಕರಾರಿನ ಯೆರಡು ಪ್ರತಿಗಳನ್ನು ತಾನೇ ಬರೆದು ಕ್ರಮವಾಗಿ ಸ್ಟ್ಯಾಂಪು ಹಾಕಿಸಿ ದಿವಾನರವರ ರುಜು ಬಗ್ಯೆ ಹಾಜರ್ಮಾಡಿ, ಮೋಜಣೀ ವ ಹದ್ದು ಗುರ್ತು ಮಾಡಿದ ಲಾಗವಡ್ ಮೊಬಲಗ್ ಸಹ ಪಾವತೀ ಮಾಡತಕ್ಕದ್ದು.

(5.) ಈ ನಿಬಂಧನೆಯ 3 ವ 4ನೇ ಕಲಮುಗಳನ್ನನುಸರಿಸಿ ನಡೆದುಕೊಳ್ಳಲಿಕ್ಕೆ ತಪ್ಪಿದಲ್ಲಿ, ದರಖಾಸ್ತು ರದ್ದಾಗುವದಲ್ಲದೆ ಅದರೊಂದಿಗೆ ಹಾಜರ್ಮಾಡಲ್ಪಟ್ಟಿದ್ದ ಠೇವಣೀ ಮೊಬಲಗು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಲ್ಪಡುವದು.

(6.) ಗುತ್ತಿಗೆ ಕರಾರು ದಿವಾನರವರಿಂದ ರುಜುಮಾಡಲ್ಪಟ್ಟ ಹೊರ್ತು, ದರಖಾಸ್ತಾದ ಭೂಮಿಗಾಗಿ ದರಖಾಸ್ತುದಾರನ ಬಾಧ್ಯತೆಯು ಪೂರ್ತಿಯಾಗುವದಿಲ್ಲವು.

(7.) ಗುತ್ತಿಗೆ ಕರಾರು ಹುಟ್ಟಿದ ತರುವಾಯ ಹಾಲಿ ಜಾರೀಲಿರುವ ಕಾನೂನ್ ಅನುಸರಿಸಿ ಭರವಸೆಗಾಗಿ ರಿಜಿಸ್ಟರ್ ಮಾಡಲ್ಪಟ್ಟು ಅದರ ಯರಡನೇ ಪ್ರತಿಯು ಮೈಸೂರು ಗವರ್ನ್ಮೆಂಟಿನಲ್ಲಿ ಅಮಾನತ್ ಇಡಲ್ಪಡತಕ್ಕದ್ದು.

(8.) ಯಾವ ದರಖಾಸ್ತನ್ನಾಗಲಿ, ಕಾರಣ ತಿಳಿಸದೇನೇ, ತಿರಸ್ಕರಿಸಲಿಕ್ಕೆ ಗವರ್ನಮೆಂಟಿನವರಿಗೆ ಯಾವಾಗಲೂ ಸಂಪೂರ್ಣ ಸ್ವಾತಂತ್ರ್ಯ ವಿರುತ್ತದೆ.

ಗುತ್ತಿಗೆಯ ಷರತ್ತುಗಳು.

IV. ಗನಿಗಳ ಕೆಲಸ ನಡಿಸಲಿಕ್ಕೆ, ಈ ಕೆಳಗೆ ಬರುವ ಷರತ್ತುಗಳಿಗೊಳಪಟ್ಟು, ಗುತ್ತಿಗೆಗಳು ಕೊಡಲ್ಪಡುವವು;—

(1.) ಪ್ರತಿ ಗುತ್ತಿಗೆಯ ವಾಯಿದೆಯು 30 ವರುಷಗಳಿಗೆ ಕ್ಲಿಪ್ತವಾಗಿರುವದು, ಆ ವಾಯಿದೆ ಪೂರೈಸುವ ಕಾಲದಲ್ಲಿ ಸರಕಾರದಿಂದ ಆಬಗ್ಯಾಗಿ ವಿಧಿಸಲ್ಪಡುವಂಥಾ ಷರತ್ತುಗಳ ಮೇಲೆ ಗುತ್ತಿಗೆ ಕರಾರು ಹೊಸದಾಗಿ ಹುಟ್ಟುವದಕ್ಕೊಳಪಟ್ಟಿರತಕ್ಕದ್ದು.

(2.) ನಿವಡಾಯಿಸಲ್ಪಟ್ಟ ಯಾವ ತಾಕು ಗುತ್ತಿಗ್ಯೆ ಕೊಡಲ್ಪಡುತ್ತೋ ಅಂಥಾ ತಾಕಿನೊಳಗೆ ಹಿಡುವಳೀಲಿರುವ ಸರಕಾರಿ ಜಮೀನಾಗಲಿ, ಇನಾಂಜಮೀನಾಗಲಿ ಶೇರಿಯಿದ್ದಲ್ಲಿ, ಗುತ್ತಿಗೆದಾರನು ಅಂತಾ ಜಮೀನಿನ ಮೇಲ್ಭಾಗದ ಹಕ್ಕುಗಳನ್ನ ಜಮೀನ್ ಮಾಲೀಕರಿಂದಾ ಖರೀದಿಗೆ ತೆಗೆದುಕೊಳ್ಳತಕ್ಕದ್ದು, ಅಥವಾ ಅಂಥಾ ಜಮೀನ್ನಲ್ಲಿ ಪ್ರವೇಶಿಸುವದಕ್ಕಾಗಲಿ, ಗನಿಗಳ ಕೆಲಸ ನಡಿಸುವದಕ್ಕಾಗಲಿ ಅವಶ್ಯಕವಾದ ಇತರ ಏರ್ಪಾಡುಗಳನ್ನ ಆ ಮಾಲೀಕರುಗಳೊಂದಿಗೆ ಮಾಡಿಕೊಳ್ಳತಕ್ಕದ್ದು.

(3.) ಗುತ್ತಿಗೆದಾರನು, ಹಿಡುವಳೀಲೀರುವ ಯಾ ಬಂಜರುರುವ ಸಾಗುವಳೀ ಲಾಯಖ್ ಯಲ್ಲ ಜಮೀನ್ಗಳ ಮೇಲೆ ಹಾಲೀ ದಾಖಲಾಗಿರುವ ಯಾ ಯಿನ್ನು ಮೇಲೆ ಸರ್ವೆ ಸೆಟಿಲ್ಮೆಂಟ್ ಇಲಾಖೆಯವರಿಂದ ಏರ್ಪಾಡಾಗುವ ರೆವಿನ್ಯೂ ಕಂದಾಯವನ್ನೂ, ಇನಾಮತೀ ಜಮೀನಿದ್ದಲ್ಲಿ ಅದರ ಜೋಡಿ ಯಾ ಕ್ವಿಟ್ರೆಂಟ್ ಮೊಬಲಗನ್ನೂ ಗುತ್ತಿಗೆ ಭೂಮಿಯು ಸರಹದ್ದಿನೊಳಗೆ ಶೇರಿರುವ ವಿಶಿಷ್ಟ ಸಾಗುವಳೀ ನಾಲಾಯಖ್ ಜಮೀನಿನ ಮೇಲೆ ಯಕರೆ ವೊಂದಕ್ಕೆ ಯಂಟು ಆಣೆಯ ಕಂದಾಯವನ್ನೂ ಮತ್ತು ಆ ತಾಕಿನೊಳಗೆ ಅಡಗಿರುವ ನಿವೇಶನಗಳು ಯಾ ಜಮೀನಿಗಳಿಗಾಗಿ, ಅಥವಾ ಕಟ್ಟಡಗಳು ಯಾ ಇತರ ಕಾಮಗಾರಿಗಳಿಗಾಗಿ ತೆರಬೇಕಾದ ಯಲ್ಲಾ ಲೋಕಲ್ ತೆರಿಗೆ, ವ ಸುಂಕ ಯಾ ಇತರ ಬಾಬುಗಳ ಮೊಬಲಗುಗಳನ್ನೆಲ್ಲಾ, ಸಾಲೇಸಾಲ್ ಸರಕಾರಕ್ಕೆ ತೆರತಕ್ಕದ್ದು.

(4.) ವಿಶಿಷ್ಟ ಚಿನ್ನ, ಲೋಹ ಸಂಬಂಧವಾದ ಅದರು, ಕಲ್ಲಿದ್ದಲು ವ ವ್ಯಾಪರಕ್ಕೆ ಅರ್ಹವಾದ ಇತರ ವಸ್ತುಗಳು, ಇವುಗಳನ್ನ ತಯಾರು ಮಾಡೋಣ ಪುಡಿ ಮಾಡೋಣ ಮತ್ತು ವ್ಯಾಪಾರಕ್ಕೆ ಲಾಯಖ್ ಮಾಡೋಣ, ಇವುಗಳಿಂದ ಆಗುವ ವೊಟ್ಟು ಹುಟ್ಟುವಳೀ ಮೇಲೆ ಶೇಕಡಾ 5ರ ಮೇರಿಗೂ, ಮತ್ತು ನಿವಡಾಯಿಸಲ್ಪಟ್ಟ ತಾಕಿನೊಳಗೆ ದೊರಕುವ ತಮಾಂ ರತ್ನ ಪುಡಿ ಮುಂತಾದ ಬೆಲೆಯುಳ್ಳ ಕಲ್ಲುಗಳ ಖರೀದಿ ಮೊಬಲಗಿನ ಮೇಲೆ ಯಾವ ವಜಾ ಬಾಬುಗಳನ್ನೂ ಲೆಖ್ಖಕ್ಕೆ ಶೇರಿಸದೇನೇ ಶೇಕಡಾ 10ರ ಮೇರಿಗೂ, ಆಗುವ ರಾಜಪಾಲನ್ನ ಗುತ್ತಿಗೆದಾರನು ಪಾವತೀಮಾಡತಕ್ಕದ್ದು.

(5.) ಗುತ್ತಿಗೆ ಮಾಡಿಕೊಂಡ ಯರಡು ವರುಷಗಳೊಳಗಾಗಿ, ಗುತ್ತಿಗೇದಾರನಾಗಲಿ ಯಾ ಅವನ ವರ್ಗದಾರರಾಗಲಿ, ಚದರ ಮೈಲ್ ವೊಂದಕ್ಕೆ 5000 ಪವನ್ಗಳಿಗೆ ಕಡಿಮೇ ಯಿಲ್ಲದಂತೆ ಜವಾಬವಣೀಯಾದ ಆಡಳಿತದ ಮೂಲಧನದೊಂದಿಗೆ ವೊಂದು ಕಂಪೆನಿಯಾಗಿ ಏರ್ಪಾಡು ಮಾಡಲಿಕ್ಕೆ ಅಸಮರ್ಥರಾಗುವ ಪಕ್ಷದಲ್ಲಿ ಆ ಗುತ್ತಿಗೆ ರದ್ದಾಗತಕ್ಕದ್ದು.

(6.) ಗುತ್ತಿಗೇದಾರನು ಗುತ್ತಿಗೆ ವಾಯಿದೇ ಯಲ್ಲ್ಯಾವತ್ತು ಅಪರಿಹಾರ್ಯವಾದ ಆಕಸ್ಮಿಕದ ದೆಸೆಯಿಂದ ತಪ್ಪಿದರೇ ಹೊರ್ತು ಅವಿಛ್ಛಿನ್ನವಾಗಿ ಭಂಗಾರ ಮುಂತಾದವುಗಳನ್ನ ಶೋಧನೆ ಮಾಡೋಣ, ವ ಗನೀ ಕೆಲಸ ನಡಿಸುವಣ ಯಿವುಗಳನ್ನ ಚೆನ್ನಾಗಿ ಸಂಪೂರ್ಣ ಸಾಧ್ಯವಾಗುವ ರೀತ್ಯ ನಡಿಸತಕ್ಕದ್ದು. ಪರಂತು ಗುತ್ತಿಗೆಯ ಪ್ರಥಮತಃ ಯರಡು ವರುಷಗಳು ಪೂರೈಸಿದ ತರುವಾಯ ಗನಿಯ ಕೆಲಸಗಳ ವಿಷಯವಾಗಿ ಯಾಗಲಿ ಯಾ ಯಾವ ವರುಷಗಳ ಬಾಬತು ಪರ್ಯವಸಾನದ ವಿಷಯವಾಗಿಯಾಗಲಿ, ಸರಕಾರದವರಿಗೆ ತೃಪ್ತಿ ವುಂಟಾಗದ ಪಕ್ಷದಲ್ಲಿ ರಾಜಪಾಲಿಗೆ ಬದಲಾಗಿ ಯಕರೆ ವೊಂದಕ್ಕೆ 5 ರೂಪಾಯಿಯ ಮೇರಿಗೆ ಕಂದಾಯ ವಸೂಲ್ ಮಾಡುವ ಸ್ವಾತಂತ್ರ್ಯ ಸರಕಾರದವರು ಉಳಿಸಿಕೊಂಡಿರುತ್ತಾರೆ.

(7.) ಗುತ್ತಿಗೇದಾರನು, ಗನಿಗಳ ವ ಕಾಮುಗಾರಿಗಳ ಕ್ರಮವಾದ ಲೆಖ್ಖಗಳನ್ನೂ ಪ್ಲಾನ್ಗಳನ್ನೂ ವ ನಕಷೇಗಳನ್ನೂ ಯಿಡತಕ್ಕದ್ದು. ಯಿವುಗಳು ಗವರ್ನಮೆಂಟ್ ಆಫೀಸರುಗಳ ತನಿಖೀಗೆ ವೊಳಗಾಗಿರತಕ್ಕದ್ದು.

(8.) ಗವರ್ನಮೆಂಟ್ ಆಫೀಸರುಗಳು ಗನೀಗಳನ್ನ ನೋಡಲಿಕ್ಕೂ ವ ತನಿಖೀ ಮಾಡಲಿಕ್ಕೂ ಅಧಿಕಾರ ಹೊಂದಿರುತ್ತಾರೆ.

(9.) ಗುತ್ತಿಗೇದಾರನು ಯಲ್ಲ ಹದ್ದು ಗುರ್ತುಗಳನ್ನೂ ದುರಸ್ತಿನಲ್ಲಿ ಯಿಟ್ಟುಕೊಂಡಿರತಕ್ಕದ್ದು, ಪ್ರತಿ ಗನಿಯ ಕಾಲುವೆ ಯಾ ಹಳ್ಳದ ಸುತ್ತಲೂ ಯಾ ಮೇಲ್ಕಾಮುಗಾರಿಯ ಸುತ್ತಲೂ ಬೇಲಿ ಹಾಕತಕ್ಕದ್ದು.

(10.) ಸರಕಾರದವರು ಆಗಿಂದಾಗ್ಯೆ ವಿಧಿಸುವಂಥಾ ಆರೋಗ್ಯ ಸಂಬಂಧವಾದ ನಿಬಂಧನೆಗಳನ್ನು ಗುತ್ತಿಗೇದಾರನು ಕ್ರಮವಾಗಿ ಜಾರೀಲ್ಲಿ ತರತಕ್ಕದ್ದು.

(11.) ಗುತ್ತಿಗೇದಾರನು, ಅಪ್ಪಣೆ ವಿನಾ ಯಾವ ಗನಿಯನ್ನೂ ಪೂರ್ಣಪೂರ್ತಿಯಾಗಿ ಬಂದ ಮಾಡಕೂಡದು, ಭರ್ತೀಮಾಡಕೂಡದು ಯಾ ಮುಚ್ಚಲೂ ಕೂಡದು, ಮತ್ತು ಜಮೀನ್ ಮೇಲೆ ಯಿರುವ ಯಾವ ರೋಡುಗಳಿಗಾಗಲಿ ಕಾಲ್ದಾರಿಗಳಿಗಾಗಲೀ ಯಾ ಅಡ್ಡದಾರೀಗಾಗಲಿ ಆತಂಕಪಡಿಸ ಕೂಡದು.

(12.) ಸರಕಾರದವರು, ಕಂದಾಯ, ರಾಜಪಾಲು, ಬಾಡಿಗೆ ವ ಇತರ ಬಾಬುಗಳ ಬಾಕೀಯನ್ನ ಗುತ್ತಿಗೇದಾರನ ಜಿಂದಗಿ ಜಪ್ತು ವ ಹರಾಜು ಮೂಲಕ ವಸೂಲ್ ಮಾಡಲಿಕ್ಕೆ ಅಧಿಕಾರಉಳ್ಳವರಾಗಿರುತ್ತಾರೆ. ಮತ್ತು ಗುತ್ತಿಗೇದಾರನು ಮಾಡಿಕೊಂಡ ಕರಾರುಗಳ ಪೈಕೀ ಯಾವದನ್ನಾಗಲಿ ತಪ್ಪಿದಲ್ಲಿ ಯಾ ಯಾವ ಜಾತಿಯ ಜನಗಳಿಗಾಗಲಿ ಸರಕಾರ ಉದ್ಯೋಗಸ್ತರಿಗಾಗಲಿ ತೊಂದರೆ ಯಾ ಆತಂಕ ಪಡಿಸಿದಲ್ಲಿ ಗವರ್ನಮೆಂಟಿನವರು ಆ ಬಗ್ಯೆ ಕ್ರಮವಾಗಿ ನೋಟೀಸ್ ಕೊಟ್ಟ ಆರು ತಿಂಗಳ ವಳಗಾಗಿ ತೃಪ್ತಿಕರವಾದ ಸಮಜಾಯಷೀ ಬಾರದೇ ಯಿದ್ದಲ್ಲಿ ಗವರ್ನಮೆಂಟಿನವರು ಆ ಗುತ್ತಿಗೆಯನ್ನ ರದ್ದುಪಡಿಸ ಬಹುದು.

(13.) 30 ವರುಷಗಳ ವಾಯಿದೆಯ ಅಖೈರಿನಲ್ಲಿ ಗವರ್ನಮೆಂಟಿನವರು ನಿಷ್ಕರ್ಷೆ ಮಾಡುವ ಷರತ್ತುಗಳ ಮೇರಿಗೆ ಗುತ್ತಿಗೆಯನ್ನ ಹೊಸದಾಗಿ ಮಾಡಿಕೊಳ್ಳಲಿಕ್ಕೆ ಗುತ್ತಿಗೆದಾರನು ಅಪೇಕ್ಷಿಸದ ಪಕ್ಷದಲ್ಲಿ, ಅವನು, ಭೂಮಿಯನ್ನೂ ಗನೀ ಕಾಲ್ವೆಗಳನ್ನೂ ವ ಇತರ ನಿವೇಶನಗಳನ್ನೂ; ದುರಸ್ತು ವ ಕೆಲಸಕ್ಕೆ ಲಾಯಖಾದ ಸ್ಥಿತಿಯಲ್ಲಿ ಗನೀ ಕಾಲ್ವೆಗಳನ್ನೂ ವ ಇತರ ನಿವೇಶನಗಳನ್ನೂ, ಮತ್ತು ಬುಕ್ಕುಗಳು, ಪ್ಲಾನ್‌ಗಳು ವ ನಕಷೆಗಳು, ಇದು ಶಿವಾಯಿ ಅಂತಾ ಜಮೀನ್‌ಗಳ ಮೇಲೆ ಇರುವ ಕಟ್ಟಡಗಳು ಯಾ ಇತರ ಸ್ಥಿತಿ ಇವುಗಳ ವಿಷಯದಲ್ಲಿ ಯಾವ ಹಕ್ಕುದಾರಿಯೂ ಇಲ್ಲದೇ ಸರ್ಕಾರಕ್ಕೆ ವೊಪ್ಪಿಸಿಬಿಡತಕ್ಕದ್ದು. ಕಟ್ಟಡಗಳನ್ನೂ, ಅಜಬಾಬನ್ನೂ ವ ಯಂತ್ರ ಸಾಧನ ಮುಂತಾದ ಸಾಮಾನುಗಳನ್ನೂ ಗವರ್ನಮೆಂಟಿನವರು ವಾಜಬೀ ಅಂದಾಜಿನ ಮೇಲೆ ಖರೀದಿಗೆ ತೆಗದುಕೊಳ್ಳಲಿಕ್ಕೆ ಆತನು ಅವಕಾಶ ಕೊಡತಕ್ಕದ್ದು.

(14.) (*a*) ಗುತ್ತಿಗೆಯ ದೆಶೆಯಿಂದ ಕೊಡೋಣಾಗುವ ಹಕ್ಕುಬಾಧ್ಯತೆ, ವ ಸಂಬಂಧ ಇವುಗಳ ಪ್ರತಿ ವರ್ಗವೂ ಅಂಥಾ ವರ್ಗ ಗುತ್ತಿಗೇದಾರರುಗಳಿಂದಲಾಗಲಿ; ಯಾ ವರ್ಗ ಮೂಲಕ ಅವರುಗಳ ಪರಂಪರೆಯವರಿಂದ ಮಾಡಲ್ಪಡಲಿ, ಪರಂತು ಅಂತವರು ಪರಂಪರೆಯಾಗಿ ಯೆಷ್ಟುದೂರದವರಾಗಲಿ, ಈ ಕೆಳಗೆ ಠರಾವ್ ಮಾಡಿರುವ ಮೇರಿಗೆ ಜುರುಮಾನೆಯನ್ನ ಸರಕಾರಕ್ಕೆ ತೆರಲಿಕ್ಕೆ ಗುರಿಯಾಗಿರತಕ್ಕದ್ದು. ಅದು ಹ್ಯಾಗೆಂದರೆ ಮೊದಲನೇ ವರ್ಗಕ್ಕಾಗಿ ಅದರ ಖರೀದಿ ಮೊಬಲಗಿನ ದಶಮಾಂಶ ಅಂದರೆ 1—10ರಭಾಗದ ಮೊಬಲಗು ಜುರ್ಮಾನೆ; ಆ ತರುವಾಯದ ಪ್ರತಿ ವರ್ಗಕ್ಕೂ ಅದರ ಹಿಂದಿನ ವರ್ಗದ ಖರೀದಿ ಮೊಬಲಗಿಗೆ ಏನ್ ಜಾಸ್ತಿ ಯೇನಾದರು ಇದ್ದಲ್ಲಿ ಅಂತಾ ಜಾಸ್ತೀ ಮೊಬಲಗಿನ ದಶಮಾಂಶವನ್ನ ಜುರುಮಾನೆ ತೆರತಕ್ಕದ್ದು.

(*b*) ಮೇಲೆ ಹೇಳೋಣಾದ ಜುರ್ಮಾನೆಯ ಲೆಖ್ಖಾಚಾರ ಮಾಡುವ ವುದ್ದಿಶ್ಯ, ವೊಂದು ಕಂಪೆನಿಯ ಷೇರ್‌ಗಳ (ಹಿಸ್ಸೆ) ಅಂತಾ ಮೊಬಲಗಿಗೆ ಪೂರ್ತಿಯಾಗಿಯಾಗಲಿ ಯಾ ಅದರಲ್ಲೊಂದು ಭಾಗವಾಗಿಯಾಗಲಿ ಇರುವ ಪಕ್ಷಕ್ಕೆ ಅಂತಾ ಷೇರುಗಳು ಲೆಖ್ಖಕ್ಕೋಸ್ಕರ ಸರ್ಕಾರದವರ ಯಿಷ್ಟಾನುಸಾರ ಅವುಗಳ ಕ್ಲಿಪ್ತವಾದ ಮೌಲ್ಯಕ್ಕೆ ಸಮನಾದ ಮೊತ್ತದಂತೆ ಎಣಿಸಲ್ಪಡಬಹುದು.

(*c*) ತರುವಾಯ ಮಾಡಲ್ಪಡುವ ವರ್ಗದ ಖರೀದಿ ಮೊಬಲಗಿನ ಮೇಲೆ ವಸೂಲಾಗಬೇಕಾದ ಜುರ್ಮಾನೆಯ ಲೆಖ್ಖಾಚಾರಮಾಡುವ ವುದ್ದಿಶ್ಯ ಹಿಂದಿನ ವರ್ಗದ ಖರೀದಿ ಮೊಬಲಗು ವಜಾ ಮಾಡಲ್ಪಡಬೇಕಾದಾಗ ಆ ಹಿಂದಿನ ವರ್ಗದ ತಾತ್ಕಾಲಿಕ ಮೌಲ್ಯವನ್ನ ನಿಷ್ಕರ್ಷೆ ಮಾಡುವ ಅಧಿಕಾರ ಯಾವಾಗಲೂ ಗವರ್ನಮೆಂಟಿನವರಿಗೆ ಇರತಕ್ಕದ್ದು.

ಉದಾಹರಣೆ.

ಗುತ್ತಿಗೆದಾರರು ತಮ್ಮ ಗುತ್ತಿಗೆಯನ್ನ A ಯೆಂಬುವನಿಗೆ 100 ರೂಪಾಯಗಳ ಖರೀದಿಗಾಗಿ ವರ್ಗ ಮಾಡಿದರೆ ಆಗ ತೆರತಕ್ಕ ಜುರ್ಮಾನೆ ಮೊಬಲಗು ರೂಪಾಯಿ 10; A ಯೆಂಬುವನು ತರುವಾಯ ಅದೇ ಗುತ್ತಿಗೆಯನ್ನ B ಯೆಂಬುವನಿಗೆ 1000 ರೂಪಾಯಗಳ ಖರೀದಿಗಾಗಿ ವರ್ಗ ಮಾಡಿದರೆ, ಆಗ್ಯೆ1000 ರೂಪಾಯಿಯಲ್ಲಿ 100 ರೂಪಾಯಿ ವಜಾ ಹೋಗಲಾಗಿ ಬಾಕಿ ಮೊಬಲಗಿನ ದಶಮಾಂಶವೆಂದರೆ 90 ರೂಪಾಯಗಳನ್ನ ಜುರ್ಮಾನೆ ತೆರತಕ್ಕದ್ದು. B ಯೆಂಬುವನು ತರುವಾಯ ಆ ಗುತ್ತಿಗೆಯನ್ನ C ಅಂಡ್ ಕಂಪೆನಿಯವರಿಗೆ 1,00,000 ರೂಪಾಯಿಗಳ ನಗದು ವ C ಅಂಡ್ ಕಂಪೆನಿಯ 500 ಷೇರುಗಳು ಇವುಗಳಿಗಾಗಿ ವರ್ಗ ಮಾಡಿದರೆ, ಅಂತಾ ಪ್ರತಿ ಷೇರಿನ ಮೌಲ್ಯವು 1ರಂತೆ ಇದ್ದಲ್ಲಿ ಆಗ್ಯೆರೂ. 1,00,000ಯಲ್ಲಿ 1000 ರೂಪಾಯಿ ವಜಾ ಜಾತಾ ಬಾಕೀ ಮೊಬಲಗಿನ ದಶಮಾಂಶ ಅಂದರೆ 9,900 ರೂಪಾಯಿಗಳ ನಗದು ಮತ್ತು C ಅಂಡ್ ಕಂಪೆನಿಯ 50 ಷೇರುಗಳಾಗಲಿ ಅಥವಾ ಸರ್ಕಾರದವರ ಇಷ್ಟಾನುಸಾರ £50 ನಗದಾಗಲಿ ಜುರ್ಮಾನೆ ತೆರತಕ್ಕದ್ದು. ಸದರೀ ಗುತ್ತಿಗೆಯನ್ನ C ಅಂಡ್ ಕಂಪೆನಿಯವರು ತರುವಾಯ D ಅಂಡ್ ಕಂಪೆನಿಯವರಿಗೆ ಸಾಲೀಯಾನಾ 1000£ಗಳ ಗುತ್ತಿಗ್ಯಾಗಲಿ ಅಥವಾ ಗನೀಯಲ್ಲಿ ಹುಟ್ಟುವಳಿ ಆಗುವ ಮೊಬಲಗಿನಲ್ಲಿ ಶೇಕಡಾ 10ರ ಮೇರಿಗೆ ರಾಜಪಾಲಿಗಾ

ಗಲಿ ವರ್ಗ ಮಾಡಿದರೆ, ಆಗ್ಯೆ ಸಾಲೀಯಾನಾ 1000£ಗಳಾಗಲಿ ಅಥವಾ ಸಂದರ್ಭಾನುಸಾರ ಗನಿಯ ಹುಟ್ಟುವಳಿ ಮೊಬಲಗಿನಲ್ಲಿ ಶೇಕಡಾ 1ರ ಮೇರಿಗೆ ರಾಜಪಾಲಾಗಲಿ ಜುರ್ಮಾನೆ ತೆರತಕ್ಕದ್ದು. ಈ ಷಿಕಮಿ ಗುತ್ತಿಗೆಯನ್ನ D ಅಂಡ್ ಕಂಪೆನಿಯವರು ತರುವಾಯ E ಎಂಬುವನಿಗೆ 10,000£ಗಳ ನಗದಿಗೂ ವ ಯರಡು ವರುಷಗಳ ಆಖೈರಿನಲ್ಲಿ 10,000£ಗಳ ಸಲಿಕೆಗಾಗಿ ಸಹಾ ವರ್ಗ ಮಾಡಿದರೆ ಆಗ್ಯೆ D ಅಂಡ್ ಕಂಪೆನಿಯವರು ಷಿಕಮಿ ಗುತ್ತಿಗೆ ತೆಗದುಕೊಂಡಿದ್ದ ಬಾಬತು ಸಾಲೀಯಾನಾ 1000£ಗಳಿಗಾಗಲಿ ಯಾ ಗನಿಯ ಹುಟ್ಟುವಳಿಯ ಶೇಕಡಾ 1ರ ರಾಜಪಾಲಿಗಾಗಲಿ ಸರ್ಕಾರದವರು ಕರಾರ್ಮಾಡುವಂತಾ ತಾತ್ಕಾಲಿಕದ ಮೌಲ್ಯ ವಜಾ ಜಾತಾ ನಗದು 1000£ಗಳನ್ನೂ ಮತ್ತು ಎರಡು ವರುಷಗಳ ಆಖೈರಿನಲ್ಲಿ ಸಲಿಕೆ ಆಗತಕ್ಕ 1000£ಗಳನ್ನೂ ಅಂತಾ ವರ್ಗಕ್ಕಾಗಿ ಜುರ್ಮಾನೆ ತೆರತಕ್ಕದ್ದು.

(d) ಮೇಲೆ ಹೇಳೋಣಾದ ಜುರ್ಮಾನೆಯನ್ನ ಸರ್ಕಾರಕ್ಕೆ ಕ್ರಮವಾಗಿ ಪಾವತಿ ಮಾಡಿದ ಹೊರ್ತು ಯಾವ ವರ್ಗಾವರ್ಗಿಯೂ ಶಿದ್ಧಿಯಾದಂತೆ ಅಂಗೀಕರಿಸಲ್ಪಡಲಾರದು ಮತ್ತು ವರ್ಗ ತೆಗದುಕ್ಕೊಂಡವನು ಸಹಾ ಇದೇ ರೀತಿ ಅಂತಾ ಜುರ್ಮಾನೆ ಸಲಿಕೆಯಾಗುವಂತೆ ಮಾಡಿಸೋಣದರ ಮೂಲಕ ತನ್ನ ಬಂದೋಬಸ್ತು ತಾನು ಮಾಡಿಕೊಳ್ಳಬೇಕು.

ಪಬ್ಲಿಕ್ ದರಖಾಸ್ತುಗಳು.

V. ಗನೀ ಕೆಲಸ ನಡಿಸಲಿಕ್ಕೆ ಗುತ್ತಿಗಳನ್ನ ಕೊಡುವ ಉದ್ದಿಶ್ಯ ಒಟ್ಟು ಚದರ ಮೈಲ್‌ಗಳನ್ನ ಆಗಿಂದಾಗ್ಯೆ ಕ್ಲಿಪ್ತ ಮಾಡುವದಕ್ಕೂ, ಮತ್ತು ಅಂತಾ ಜಮೀನಿನ ಗನೀ ಗುತ್ತಿಗೆಗಳನ್ನ ಖರೀದಿಗೆ ತೆಗದುಕೊಳ್ಳತಕ್ಕ ಬಗ್ಯಾಗಿ ದರಖಾಸ್ತುಗಳನ್ನ ಅಪೇಕ್ಷಿಸುವದಕ್ಕೂ ಸಹಾ ಅಧಿಕಾರವನ್ನ ಸರ್ಕಾರದವರು ಊ?ಸಿಕೊಂಡಿರುತ್ತಾರೆ, ಮತ್ತು ಯಾವ ದರಖಾಸ್ತನ್ನಾಗಲಿ ಯಾ ಚಡದರಖಾಸ್ತನ್ನೇ ಆಗಲಿ ಮಂಜೂರ್ಮಾಡುವದಕ್ಕೆ ಸರ್ಕಾರದವರು ಬದ್ಧರಾಗಿರುವದಿಲ್ಲವು.

ಗುತ್ತಿಗೆ ನಮೂನೆ.

VI. ಮೇಲೆ ನಮೂದಾದ ನಿಬಂಧನೆಗಳನ್ನನುಸರಿಸಿ ಕೊಡಲ್ಪಡುವ ಗುತ್ತಿಗೆ ನಮೂನೆಯು ಇದಕ್ಕೆ ಲಗ್ಗತ್ತಾಗಿರುತ್ತದೆ.

ಕೆ. ಶೇಷಾದ್ರಿ ಐಯ್ಯರ್,
ದಿವಾನ್.

B

1887ನೇ ಇಸವಿ ಸೆಪ್ಟಂಬರ 5ನೇ ಮರ್ಖ್ಹಂ ರೂಲ್ಸ ಅನುಸರಿಸಿ ಕೊಡಲ್ಪಟ್ಟ ಗನಿ ಕೆಲಸದ ಗುತ್ತಿಗೆಯ ಕರಾರ ನಮೂನೆ.

ಕಕ್ಷಿಗಾರರು.

ಈ ಕರಾರು ಒಂದು ಸಾವಿರದ ಯಂಟನೂರು ಯಂಭತ‌ ನೇ ಇಸವಿ ನೇ ಮರ್ಖ ಮಿನಲ್ಲಿ ("ಗುತ್ತಿಗೆಗೆ ಕೊಡುವವರೆಂತ" ಯಿಯಿಂದ ಕರೆಯಲ್ಪಡುವ) ಮೈಸೂರು ಗವರ್ನಮೆಂಟಿನವರಿಗೂ ಮತ್ತು "ಗುತ್ತಿಗೆದಾರರೆಂತ" (ಯಿಯಿಂದ ಕರೆಯಲ್ಪಡುವ) ಇತರರಿಗೂ ನಡೆದಿರುತ್ತೆ.

ಗುತ್ತಿಗೆಗೆ ಕೊಡತಕ್ಕವರು ಗುತ್ತಿಗೇದಾರರ ಕೇಳಿಕೆ ಮೇಲೆ ಮತ್ತು ಅವರುಇದರ ಮುಂದೆನಮೂದ್ ಮಾಡಲ್ಪಟ್ಟ ಒಡಂಬಡಿಕೆಗಳನ್ನು ನೆರವೇರಿಸುವದಕ್ಕೋಸ್ಕರ ಜಾಮೀನೀ ತರೀಕ್ ರೂಪಾಯಿ

ಠೇವಣೀ ಮತ್ತು ಗುತ್ತಿಗೆಗೆ ಕೊಡುವ ಬಗ್ಯೆ ಕರಾರು.

ಗಳನ್ನು ಠೇವಣೀ ಕಟ್ಟಿ ಅಂಥಾ ಯಾವದಾದರೊಂದು ಒಡಂಬಡಿಕೆ ತಪ್ಪಿ ನಡಿಯುವಲ್ಲಿ ಸದರೀ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡತಕ್ಕದ್ದೆಂಬ ಷರತ್ತಿನ ಮೇಲೆ, ಮುಂದೆ ಅಡಗಿರತಕ್ಕ ಇದಕ್ಕೆ ಶೇರಿಸೋಣಾದ ಪಠ ಯಾ ನಕ್ಷೆಯಲ್ಲಿ ತೋರಿಸಲ್ಪಟ್ಟು ಮೈಸೂರು ಶೀಮೆಯ ಡಿಸ್ಟ್ರಿಕ್ಟು ತಾಲ್ಲೂಕಿನಲ್ಲಿ ಯಿರುವ ಅಂದಾಜ್‌ವುಳ್ಳ ಮತ್ತು ಯಿದರಡೀ ಶೇರಿಸಲ್ಪಟ್ಟ ಷೆಡ್ಯೂಲ್ ತಖ್ತೆಯಲ್ಲಿ ಮುಖ್ಯವಾಗಿ ನಮೂದ್ ಮಾಡಿ ವಿವರಿಸಲ್ಪಟ್ಟು "ಚುನಾಯಿಸಲ್ಪಟ್ಟ ತಾಕು" ಯಂಬದಾಗಿ ಯಿಯಿಂದ ಕರೆಯಲ್ಪಡುವ ಜಮೀನ ವಿಷಯದಲ್ಲಿ ಗನಿ ಕೆಲಸ ನಡಿಸುವದಕ್ಕಾಗಿ ಗುತ್ತಿಗೆಗೆ ಕೊಡುವ ಬಗ್ಯೆ ಒಪ್ಪಿ ಯಿರುತ್ತಾದ್ದರಿಂದ.

ಅಂಗೀಕಾರ.

ಕೊಡುವಣ.

ಹಾಲಿ ಈ ಕರಾರಿನಿಂದ ಅಂಗೀಕರಿಸಲ್ಪಡುವದೇನಂದರೆ, ಮುಂದೆ ಉಳಸಿಕೊಳ್ಳಲ್ಪಟ್ಟ ಫಂದಾಯಕ್ಕೂ ರಾಜಪಾಲಿಗೂ, ಜುರ್ಮಾನೆಗೂ, ಮತ್ತು ಇತರ ಪಾವತೀಗಳಿಗೂ ಮತ್ತು ಮುಂದೆ ಅಡಗಿರತಕ್ಕ ಗುತ್ತಿಗೇದಾರರಿಂದ ಹುಟ್ಟಲ್ಪಡುವಒಡಂಬಡಿಕೆಗಳು ವ ಕರಾರುಗಳಿಗೂ ಒಳಪಟ್ಟು, ಗುತ್ತಿಗೆಗೆ ಕೊಡುವವರಿಂದ ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರಿಗೆ, ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ, ಮೇಲೆ ನಮೂದ ಮಾಡಲ್ಪಟ್ಟು ವಿವರಿಸಲ್ಪಟ್ಟ ಚುನಾಯಿಸಲ್ಪಡೋಣಾದ ತಾಕಿನಲ್ಲಿ ಅಡಗಿರುವ ಆಕಾರ ಕಾಣದ ಸರ್ಕಾರ ಬಂಜರ್ ಜಮೀನ ದೇಖಿಲ್ ಹಿಡುವಳಿಯಲ್ಲಿ ಯಿಲ್ಲದ ಆಕಾರ ಕಂಡ ಸರ್ಕಾರ್ ಜಮೀನಲ್ಲಿಯೂ, ಮತ್ತು ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ಹಿಡುವಳಿಯಲ್ಲಿನ ಸರ್ಕಾರ ಜಮೀನ ದೇಖಿಲ್ ಇನಾಂ ಜಮೀನಗಳಲ್ಲಿಯೂ ವಿಂಗಡಿಸಿ, ಗನಿ ಕೆಲಸ ನಡಿಸುವದಕ್ಕೂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಯಿದ್ದಲು ಯಾ ವ್ಯಾಪಾರಕ್ಕೆ ಲಾಯಖಾದ ಇತರ ಪದಾರ್ಥಗಳುಳ್ಳಂಥಾ ಕಲ್ಲುಗಳು, ಬಳ್ಳಿ ಮೊಣು ಮುಂತಾದವುಗಳನ್ನು ಅಗೆದು ವಿಂಗಡಿಸುವದಕ್ಕೂ ಮತ್ತು ಅಲ್ಲಿ ಸಿಗಬಹುದಾದ ತಮಾಂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು; ಮತ್ತು ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳನ್ನು ಜಾಲಿಸಿ ತಯಾರ್ಮಾಡಿ ಪುಡಿಮಾಡಿ ವ್ಯಾಪಾರಕ್ಕೆ ಲಾಯಖಾಗಿ ಮಾಡುವ ಬಗ್ಯೆ ಯಿದರ ದೆಸೆಯಿಂದ ವಟ್ಟು ಲೈಸೆನ್ಸು ಕೊಡೋಣಾಗಿರುತ್ತದೆ, ಪರಂತು ಹಿಡುವಳಿ ವ ಇನಾಂ ಜಮೀನಗಳ ವಿಷಯದಲ್ಲಿ ಅಂಥಾ ಹಿಡುವಳೀದಾರು ಮತ್ತು ಇನಾಂದಾರರಿಂದ

ಗನೀ ಕೆಲಸ ನಡಿಸುವ ಬಗ್ಯೆ ವಟ್ಟು ಸ್ವಾತಂತ್ರ್ಯ.

ಮೇಲ್ಕಂಡ ಹಕ್ಕನ್ನು ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರ್‌ಗಳು, ವಹಿವಾಟುದಾರರೂ ಮತ್ತು ವರ್ಗದಾರರೂ ಕೊಂಡುಕೊಂಡಿರಬೇಕು, ಯಾ ಕೊಂಡುಕೊಳ್ಳುವವರಾಗಿರಬೇಕು ಯಾ ಅವರೊಂದಿಗೆ ಗುತ್ತಿಗೇದಾರರೂ, ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರರು ಯಾ ವರ್ಗದಾರರು ಸದರೀ ಯವರ ಹಕ್ಕು ಪಡೆಯುವದಕ್ಕಾಗಿ ಅವರ ಸ್ವಂತ ಏರ್ಪಾಡು ಮಾಡಿಕೊಂಡಿರಬೇಕು ಯಾ ಮಾಡಿಕೊಳ್ಳಬೇಕು.

ಗನಿ ಕೆಲಸದಲ್ಲಿ ಉತ್ಪತ್ತಿ ಆದದ್ದನ್ನು ಮಾರುವ ಬಗ್ಯೆ ಗುತ್ತಿಗೇದಾರಗೆ ಸ್ವಾತಂತ್ರ್ಯ).

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳಿಗೆ ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ ಅವರಿಂದಲಾಗಲಿ ಯಾ ಅವರ ಪೈಕೀ ಯಾರಿಂದಲಾಗಲೀ ಅಂಥಾ ಚುನಾಯಿಸಲ್ಪಟ್ಟ ತಾಕಿನ ಮೇಲ್‌ಭಾಗದಲ್ಲಾಗಲೀ ಒಳಭಾಗದಲ್ಲಾಗಲೀ ಹೊಂದಲ್ಪಡುವ, ಭಂಗಾರ, ಲೋಹಉಳ್ಳ ಅದುರು, ವಜ್ರ ಮುಂತಾದ ಕಲ್ಲುಗಳು ಮತ್ತು ಕಲ್ಲಿದ್ದಲು ಮುಂತಾದ ವ್ಯಾಪಾರಕ್ಕೆ ಲಾಯಖಾದ ಪದಾರ್ಥಗಳನ್ನು ಸಾಗಿಸುವದಕ್ಕೂ ವಿಕ್ರಯಿಸುವದಕ್ಕೂ ಮತ್ತು ನಿಲಾವಾರಿ ಮಾಡುವದಕ್ಕೂ ಸ್ವಾತಂತ್ರ್ಯ ಕೊಡೋಣಾಗಿರುತ್ತೆ.

ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರು ವಹಿವಾಟುದಾರರು ಮತ್ತು ವರ್ಗದಾರರಿಗೆ 30 ವರುಷಕಾಲ ಪರಿಯಂತ ಸ್ವಾಧೀನ.

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳು, ವಹಿವಾಟುದಾರರು ವ ವರ್ಗದಾರರು ಯಿದರ ದೆಶೆಯಿಂದ ಅವರಿಗೆ ಕೊಡಲ್ಪಟ್ಟಿತೆಂಬ ಮತ್ತು ಕೊಡೋಣಾದ ಮೇಲೆ ನಮೂದ್ ಮಾಡಲ್ಪಟ್ಟ ಪ್ರದೇಶಗಳನ್ನ ಈ ಕರಾರ್ ತಾರೀಖು ಮೊದಲು ಮೂವತ್ತು ವರುಷಗಳ ವಾಯಿದೇ ಪರಿಯಂತ ಸ್ವಾಧೀನ ಉಂಟಾಗಿರತಕ್ಕದ್ದು.

ಸರ್ಕಾರಿ ಜಮೀನ್‌ಗಳಿಗೆ ಕಂದಾಯವನ್ನೂ ಇನಾಂ ಜಮೀನ್‌ಗಳಿಗೆ ಜೋಡೀ ಮತ್ತು ಕ್ವಿಟ್ ರೆಂಟನ್ನೂ ಪಾವತೀ ಮಾಡುವಣ.

ಮತ್ತು ಸದರೀ ವಾಯಿದೇಯಲ್ಲಿ——————ಡಿಸ್ಟ್ರಿಕ್ಟಿನೊಳಗೆ ಜಮೀನ್ ಕಂದಾಯದ ವಸೂಲಿ ಬಗ್ಯಾಗಿ ಜಾರೀ ಯಿರುವ ರೂಲ್ಸ್ ಅನುಸರಿಸಿ ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಹಿಡುವಳಿಯಲ್ಲಿ ಯಿರುವ ಮತ್ತು ಸಾಗುವಳಿ ಲಾಯಖಾದ ಬಂಜರ್ ಜಮೀನ್‌ಗಳ ಮೇಲೆ ಹಾಲೀ ವಸೂಲ್ ಮಾಡಲ್ಪಡಬೇಕಾದ ಸಾಲೀಯಾನಾ ಕಂದಾಯವನ್ನೂ ಅಥವಾ ಖಯಿಂದ ಯಾವ ಕಾಲದಲ್ಲಾಗಲೀ 'ಈ ಗುತ್ತಿಗೆ ಜಾರೀ ಯಿರುವ ಕಾಲದಲ್ಲಿ ಗುತ್ತಿಗೇಗೆ ಕೊಡುವವರಿಂದ ಯಾ ಅವರ ಉತ್ತರಾಧಿಕಾರಿಗಳಿಂದ ಯಾ ವರ್ಗದಾರರಿಂದ ಜಮೀನ್ ಕಂದಾಯದ ಯಾವದಾದರೂ ತಿದ್ದುಪಾಟಿನಲ್ಲಿ ಕಂದಾಯದ ತರೀಕ್ ಅಂಥಾ ಜಮೀನಿನ ಮೇಲೆ ಗೊತ್ತುಮಾಡಲ್ಪಡುವ ಜಾಸ್ತೀ ಮೊಬಲಗನ್ನೂ ಮತ್ತು ಸದರೀ ತಾಕಿನಲ್ಲಿ ಅಡಗಿರುವ ಯಾವದಾದರೂ ಇನಾಂ ಜಮೀನಿನ ಮೇಲೆ ತೆರಬೇಕಾದ ಜೋಡೀ ಯಾ ಕ್ವಿಟ್‌ರೆಂಟ್ ಮೊಬಲಗನ್ನೂ ಖಿಸ್ತುಬಂದೀ ಪ್ರಕಾರ ಪಾವತೀ ಮಾಡತಕ್ಕದ್ದಲ್ಲದೆ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಸಾಗುವಳಿ ನಾಲಾಯಖ್ ಸರ್ಕಾರಿ ಜಮೀನಿನ ಮೇಲೆ ಯಕರೆ ಒಂದಕ್ಕೆ 8 ಆಣೆ ಮೇರಿಗೆ ಸಾಲೀಯಾನಾ ಕಂದಾಯವನ್ನು ಸುದಾ ಅವುಗಳಿಗಾಗಿ ಒಪ್ಪಿ ಮತ್ತು ಪಾವತೀ ಮಾಡುತ್ತಾ ಬರಬೇಕು.

ಮತ್ತು ಲೋಕಲ್‌ಸೆಸ್ಸು, ತೆರಿಗೆಗಳು ಯಾ ರಿವಾಜುಗಳನ್ನ ಪಾವತೀ ಮಾಡುವಣ.

ಮತ್ತು ಮೇಲೆಕಂಡ ಸಾಲೀಯಾನಾ ಕಂದಾಯ, ಜೋಡೀ ವ ಕ್ವಿಟ್‌ರೆಂಟ್ ದೇಖೀಲ್, ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ನಿವೇಶನ ಯಾ ಜಮೀನುಗಳು ಯಾ ಅವುಗಳಲ್ಲಿರುವ ಕಟ್ಟಡಗಳು ಯಾ ಕಾಮಗಾರಿ ಯಿವ್ರುಗಳಿಗಾಗಿ ತತ್ಕಾಲದಲ್ಲಿ ತೆರಬೇಕಾದ ತಮಾಂ ಲೋಕಲ್‌ಸೆಸ್ಸುಗಳೂ ಇತರ ತಮಾಂ ತರಹೆಯ ತೆರಿಗೆಗಳೂ ರಿವಾಜುಗಳೂ ಸುದಾ ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು.

ಮತ್ತು ಉತ್ಪತ್ತಿಯಾದ ಭಂಗಾರ ವಗ್ಯೆರೇ ಮೇಲೆ ಶೇಕಡಾ 5ರಂತೆ ರಾಜಪಾಲು ಕೊಡುವಣ.

ಮತ್ತು ಗುತ್ತಿಗೇದಾರರಿಂದ ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರ್ರು ಯಾ ವರ್ಗದಾರರುಗಳಿಂದ ತಯಾರ್ಮಾಡಲ್ಪಡುವ, ಪುಡಿಮಾಡಲ್ಪಡುವ ಮತ್ತು ವ್ಯಾಪಾರಕ್ಕೆ ಲಾಯಖಾಗಿ ಮಾಡಲ್ಪಡುವ ತಮಾಂ ಭಂಗಾರ, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮತ್ತು ಖರೀದಿ ಆಗುವ ಯಾ ವ್ಯಾಪಾರದ ಸ್ವಭಾವವುಳ್ಳ ಇತರ ಪದಾರ್ಥಗಳ ಒಟ್ಟು ಹುಟ್ಟುವಳೀ ಮೇಲೆ ಶೇಕಡಾ 5ರ ಪ್ರಕಾರ ರಾಜಪಾಲು ಕೊಡುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರಬೇಕು, ಅಂಥಾ ರಾಜಪಾಲು ಯಾವ ಬಾಬಿನ ಖರ್ಚು ವಜಾ ಮಾಡಲ್ಪಡದೆಯೆ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ದೊರಿಯುವಂಥಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಮೌಲ್ಯದ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನಲ್ಲಿ ದೊರಿಯುವಂಥಾ ತಮಾಂ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ-ಖರೀದಿ ಮೊಬಲಗಿನ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲ್ ಮೊಬಲಗನ್ನು ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು; ಅಂಥಾ ರಾಜಪಾಲು, ಯಾವ ಬಾಬಿನ ಖರ್ಚು ವಜಾ ಮಾಡಲ್ಪಡದೆಯೇ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ಪ್ರತಿ ವರ್ಗದ ಯಾ ಪೊಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುರಮಾನೆ ಕೊಡುವಣ.

ಯಾವ ಕಾಲದಲ್ಲಾಗಲಿ ಗುತ್ತಿಗೇದಾರರಿಂದ ಅವರ ಎಗ್ಜಿಕ್ಯೂಟರುಗಳಿಂದ ವಹಿವಾಟದಾರರಿಂದ ಯಾ ವರ್ಗದಾರ್ರುಗಳಿಂದ ಸಂಪೂರ್ಣವಾಗಿಯಾಗಲಿ ಪೊಂದುಭಾಗವಾಗಿಯಾಗಲಿ ಕೊಡಲ್ಪಡುವ ಮೇಲೆ ಹೇಳಲ್ಪಟ್ಟ ನಿವೇಶನಗಳ ಪ್ರತಿ ವರ್ಗ ಯಾ ಪೊಳಗುತ್ತಿಗೇಗಾಗಿಯಾಗಲಿ ಈ ಕರಾರ್‌ಗಳಿಂದ ಪೊಪ್ಪಿಸಲ್ಪಟ್ಟ ವ ಕೊಡಲ್ಪಟ್ಟ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸಗಳನ್ನ ವಿಶಿಷ್ಟವಾಗಲಿ ಆ ಪೈಕೀ ಕೆಲವನ್ನ ವರ್ಗ ಮಾಡುವದಕ್ಕಾಗಿಯಾಗಲಿ ಅಥವಾ ಮೇಲೆ ಹೇಳಲ್ಪಟ್ಟ ನಿವೇಶನಗಳೊಳಗಣ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸುಗಳಲ್ಲಿ ಸಂಬಂಧ ಯಾ ಹಿಸ್ಸೆಯನ್ನ ಸಂಪೂರ್ಣವಾಗಿಯಾಗಲಿ, ಕೆಲವು ಮಟ್ಟಿಗಾಗಲಿ ಕೊಡುವದಕ್ಕಾಗಲಿ, ಅಂತಾ ವರ್ಗ ಯಾ ಪೊಳಗುತ್ತಿಗೆಯ ಮೊಬಲಗಿನ ದಶವಾಂಶವನ್ನ ಜುರಮಾನೆ ತೆರಲಿಕ್ಕೆ ಪೊಪ್ಪಿಕೊಂಡು ಪಾವತೀ ಮಾಡುತ್ತಾ ಬರತಕ್ಕದ್ದು. ಅಂತಾ ಜುರಮಾನೆಯು ಯಾವ ಬಾಬಿನ ಖರ್ಚು ವಜಾ ಮಾಡಲ್ಪಡದೆಯೇ ಪಾವತೀ ಮಾಡಲ್ಪಡತಕ್ಕದ್ದು. ಆದರೆ ಯರಡನೇ ದಫಾ ಯಾ ಆ ತರುವಾಯ ಮಾಡಲ್ಪಡುವ, ವರ್ಗ ೦ ಗುತ್ತಿಗೆ ವಿಷಯದಲ್ಲಿ ಕೊಡಬೇಕಾದ ಜುರಮಾನೆಯನ್ನ ಲೆಖ್ಖ ಮಾಡುವಾಗ, ಅದರ ಹಿಂದೆ ನಡೆದ ವರ್ಗ ಯಾ ಪೊಳಗು

ಶಾಂ
ವಜಾ
ಯಾ ಪೊಳ
ತ್ತಿಗೆ ಮೊಬ

ಲಗು ಜಾತಾ ಆ ವರ್ಗದ ಯಾ ವೊಳಗುತ್ತಿಗೆಯು ವೊಬಲಗಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಪರಂತು ಯಾವದಾವರೊಂದು ವರ್ಗ ಯಾ ಒಳಗುತ್ತಿಗೆಯ ವೊಬಲಗು ವಿಶಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ವೊಂದು ಕಂಪೆನಿಯ ಷೇರುಗಳಾಗಿ ಯಿದ್ದರೆ, ಅಂಥಾ ವಿಸಿಷ್ಟ ಯಾ ಭಿನ್ನಾಂಶದ ವೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ಗುತ್ತಿಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಯಿಷ್ಟಾನುಸಾರ ಆ ಕಂಪೆನಿಯ ಷೇರುಗಳಾದರೂ ಆಗಬಹುದು ಅಥವಾ ಆ ಷೇರುಗಳ ಕ್ಲಿಪ್ತವಾದ ಮೌಲ್ಯದ ಮೇರಿಗೆ ಅದಕ್ಕೆ ಸರಿಯಾದ ನಗದು ಹಣವಾದರೂ ಆಗಬಹುದು. ಮತ್ತು ಯಾವದಾದರೊಂದು ವರ್ಗ ಯಾ ಒಳಗುತ್ತಿಗೆಯ ವೊಬಲಗು ವಿಸಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ವೊಂದು ತೆರಿಗೆ, ರಾಜಪಾಲು, ಯಾ ಇತರ ಖಿಸ್ತುಬಂದಿಯಾಗಿ ಸಲಿಕೆಯಾಗುವ ಸ್ವಭಾವ ಉಳ್ಳದ್ದಾಗಿ ಯಿದ್ದರೆ, ಅಂತಾ ವಿಸಿಷ್ಟ ಯಾ ಭಿನ್ನಾಂಶದ ವೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ತೆರಿಗೆ, ರಾಜಪಾಲು, ಅಥವಾ ಸಂದರ್ಭಾನುಸಾರ ಇತರ ಖಿಸ್ತುಬಂದೀ ಮೇರಿಗೆ ಸಲಿಕೆಯಾಗುವ ಸ್ವಭಾವವುಳ್ಳದ್ದಾಗಿಯೇ ಯಿರತಕ್ಕದ್ದು. ಹಾಗೆ ತರುವಾಯ ಮಾಡಲ್ಪಡುವ ವರ್ಗ ಯಾ ಒಳಗುತ್ತಿಗೆಯ ಮೇಲೆ ವಸೂಲಾಗತಕ್ಕ ಜುರಮಾನೆಯನ್ನ ಲೆಖ್ಖ ಮಾಡುವದಕ್ಕಾಗಿ ಆ ವರ್ಗ ಯಾ ಒಳಗುತ್ತಿಗೆಯ ವೊಬಲಗಿನಲ್ಲಿ ಆವಶ್ಯಕವಾದ ವಜಾವನ್ನ ಮಾಡುವ ವುದ್ದಿಶ್ಯ ಅಂಥಾ ತೆರಿಗೆ, ರಾಜಪಾಲು ಯಾ ಇತರ ಖಿಸ್ತುಬಂದಿ ಸಲಿಕೆಯ ತಾತ್ಕಾಲಿಕ ಮೌಲ್ಯವು ಗುತ್ತಿಗೆಗೆ ಕೊಡುವವರಿಂದಲಾಗಲಿ ಅವರ ಉತ್ತರಾಧಿಕಾರಿಗಳಿಂದಲಾಗಲಿ, ಯಾ ವರ್ಗದಾರರುಗಳಿಂದಲಾಗಲಿ ಠರಾವ್ ಮಾಡಲ್ಪಡತಕ್ಕದ್ದು. ಮತ್ತು ಯಾವ ವರ್ಗವಾಗಲಿ ಯಾ ಒಳಗುತ್ತಿಗೆಯೇ ಆಗಲೀ ಅಂತಾ ವರ್ಗ ಯಾ ಒಳಗುತ್ತಿಗೆಗಾಗಿ ಜುರ್ಮಾನೆಯು ಗುತ್ತಿಗೆಗೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರುಗಳಿಗೆ ಕ್ರಮವಾಗಿಯೂ, ಪೂರ್ತಿಯಾಗಿಯೂ ಪಾವತೀ ಮಾಡಲ್ಪಟ್ಟಿದ್ದರೇನೇ ಹೊರ್ತು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರ್ರುಗಳ ವಿಷಯದಲ್ಲಿ ಅದು ಸಿದ್ಧವಾಗುವದಿಲ್ಲವು.

ಕಂದಾಯ, ರಾಜಪಾಲ್, ಜುರ್ಮಾನೆ ಮತ್ತು ಇತರ ಬಾಕೀಗೋಸ್ಕರ ಗುತ್ತಿಗೆಗೆ ಕೊಡುವವರಿಂದ ಜಫ್ತಿ ಮಾಡುವಣ.

ಮತ್ತು ಅಂಥಾ ಕಂದಾಯ, ರಾಜಪಾಲು, ತೆರಿಗೆ ವ ಜುರ್ಮಾನೆ ಮೊದಲಾದ ಯಿತರ ಬಾಕಿಗಳು ಅವುಗಳ ಪಾವತಿಬಗ್ಗಾಗಿ ಈ ಕರಾರಿನ ದೆಶೆಯಿಂದ ಕೊಡಲ್ಪಟ್ಟ ವಾಯಿದೆಯು ಮುಗಿದ ಅರವತ್ತು ದಿವಸಗಳ ಪರಿಯಂತ ಪಾವತಿಆಗದೆ ಬಾಕಿಯಿದ್ದು ಮತ್ತು ಅಂಥಾ ಬಾಕಿಗಳನ್ನ ಪಾವತೀಮಾಡಬೇಕೆಂಬದಾಗಿ ಸದರೀ–ಡಿಸ್ಟ್ರಿಕ್ಟು ಸಿವಿಲ್ ಯಗ್ಜಿಕ್ಯೂಟಿವ್ ಆಫಿಸರವರಿಂದ ವಂದು ನೋಟೀಸು ಜಾರಿಮಾಡಲ್ಪಟ್ಟ ತರುವಾಯ ಮೂವತ್ತು ದಿವಸಗಳ ವಳಗಾಗಿ ಸದರೀ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರ್ರು ಪಾವತಿಮಾಡದೆಯಿದ್ದ ಸಂದರ್ಭದಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ತವರ್ಾಂ ಭಂಗಾರ, ಲೋಹ ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು, ಮತ್ತು ಚುನಾಯಿಸಲ್ಪಟ್ಟ ತಾಕಿನೊಳಗಣ ಗನಿ ಯಾ ಹಳ್ಳಗಳ ಆಸ್ಪಾಟಿನಲ್ಲಿ ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರರಿಂದ ಉಪಯೋಗಿಸಲ್ಪಟ್ಟ ಯಾ ಸಾಗಿಸಲ್ಪಟ್ಟ ವಿಕ್ರಯ ಸ್ವಭಾವವುಳ್ಳ ಇತರ ಪದಾರ್ಥಗಳನ್ನಾಗಲಿ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಿರಬಹುದಾದ ಮತ್ಯಾವ ಯಿತರ ಸ್ವತ್ತನ್ನಾಗಲಿ ಹಿಡಿದುಕೊಳ್ಳುವಬಗ್ಗೆ ಸ್ವತಂತ್ರರಾಗಿರತಕ್ಕದ್ದು. ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಂಥಾ ಭಂಗಾರ ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು ಮುಂತಾದ ಇತರ ಪದಾರ್ಥಗಳನ್ನೂ ಸ್ವತ್ತುಗಳನ್ನೂ ವಿಕ್ರಯಿಸಿ ವಿಲಾವಾರಿ ಮಾಡಬಹುದು, ಮತ್ತು ಅಂಥಾ ವಿಕ್ರಯದಿಂದ ಹುಟ್ಟಿದ ವೊಬಲಗಿನಲ್ಲಿ ಈ ಗುತ್ತಿಗೆ ಅನುಸರಿಸಿ ಬರಬೇಕಾದ ಕಂದಾಯ, ರಾಜಪಾಲು, ಜುರ್ಮಾನೆ ಮುಂತಾದ ಯಿತರ ವಸೂಲಾಗಬೇಕಾದ ವೊಬಲಗಿಗೋಸ್ಕರವೂ ಅಂಥಾ ಜಫ್ತಿ ಮತ್ತು ಹರಾಜಿಗೋಸ್ಕರ ತಗಲಿದ ಖರ್ಚು ವೊಬಲಗಿಗೋಸ್ಕರವೂ ವಜಾಹಾಕಿಕೊಳ್ಳಬಹುದು.

ಗನಿ ಕೆಲಸಗಳನ್ನು ಅವಿಚ್ಛಿನ್ನವಾಗಿ ನಡೆಸುವಬಗ್ಗೆ ಗುತ್ತಿಗೇದಾರನಿಂದ ಒಡಂಬಡಿಕೆ.

ಮತ್ತು ಇದರದೆಶೆಯಿಂದ ಗುತ್ತಿಗೇದಾರರು ತಮಿಗೋಸ್ಕರವೂ ಅವರ ವಾರಸುದಾರರು, ಯಗ್ಜಿಕ್ಯೂಟರು, ವಹಿವಾಟ್ಟುದಾರರು ಮತ್ತು ವರ್ಗದಾರರು ಯಿವರಿಗೋಸ್ಕರವೂ ಮತ್ತು ಆಯಾ ಪ್ರತಿ ವಬ್ಬರಿಗೋಸ್ಕರವೂ ಬೇರೆಬೇರೆಯಾಗಿ ಒಡಂಬಟ್ಟು ಇದರದೆಶೆಯಿಂದ ಅವರಿಗೋಸ್ಕರ, ಮತ್ತು ಅವರ ವಾರಸುದಾರರು, ಯಗ್ಜಿಕ್ಯೂಟರು, ವಹಿವಾಟುದಾರರು ವ ವರ್ಗದಾರರಿಗೋಸ್ಕರ ಗುತ್ತಿಗೆಗೆ ಕೊಡುವವರೊಂದಿಗೂ, ಅವರ ಉತ್ತರಾಧಿಕಾರಿಗಳ ಮತ್ತು ವರ್ಗದಾರರೊಂದಿಗೂ ಒಡಂಬಟ್ಟಿರುವದೇನೆಂದರೆ, ಅವರು ಅಂದರೆ ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರುಗಳು, ವಹಿವಾಟದಾರರು ಗುತ್ತಿಗೆ ಕಾಲದ ಮೊದಲ್ ವರುಷದಲ್ಲ ಚುನಾಯಿಸಲ್ಪಟ್ಟ ಪ್ರದೇಶದಲ್ಲೆಲ್ಲ ಛಂದಾಗಿಯೂ ಫಲಕಾರಿಯಾಗುವಂತೆಯೂ ಭಂಗಾರಕ್ಕೋಸ್ಕರ ಯಾ ಯಿತರ ಲೋಹಗಳು ಯಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳಿಗೋಸ್ಕರ ಅಜಮಾಯಿಷೀಕೆಲಸ ನಡಿಸುವದಲ್ಲದೆ ಹಾಗೆ ಅವಶ್ಯಕವಾದಲ್ಲಿ ಅಜಮಾಯಿಷೀ ಕೆಲಸಗಳ ಫಲಪರ್ಯವಸಾನವನ್ನು ತೋರಿಸುಬಗ್ಗೆ ತಯಾರ್ಮಾಡಲ್ಪಟ್ಟಿರಬಹುದಾದಂಥಾ ಯಾವದಾದರೂ ರಿಪೋರ್ಟುಗಳ ಯಥಾ ನಕಲ್‌ಗಳನ್ನ ಗುತ್ತಿಗೆಗೆ ಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಒಪ್ಪಿಸತಕ್ಕದ್ದು.

ಮತ್ತು ಈ ಗುತ್ತಿಗೆ ತಾರೀಖು ಮೊದಲು ಯರಡು ವರುಷಗಳ ವಳಗಾಗಿ, ಚುನಾಯಿಸಲ್ಪಟ್ಟ ತಾಕಿನ ಪ್ರತಿ ಚದರಮೈಲ್ ವಂದಕ್ಕೆ 5,000 (ಐದುಸಾವಿರ) ಪವರ್ಗಳಿಗೆ ಕಮ್ಮಿಯಿಲ್ಲದ, ಖರ್ಚಿನಬಗ್ಗಾಗಿ ವಸೂಲ್ಮಾಡಲ್ಪಟ್ಟ ಮೂಲಧನವುಳ್ಳ ವಂದು ಕಂಪೆನಿಯಾನೆ ಸಂಘ

ವನ್ನು ಸೇರಿಸುವದಕ್ಕೆ ಅಶಕ್ತರಾದರೆ ಈ ಗುತ್ತಿಗೆಯ ದೆಶೆಯಿಂದ ಉಂಟುಮಾಡಲ್ಪಟ್ಟ ತಮಾಂ ಬಾಧ್ಯತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನ ಗುತ್ತಿಗ್ಯೆಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ದಂಡವಾಗಿ ಒಪ್ಪಿಸತಕ್ಕದ್ದು.

ಮತ್ತು ಗುತ್ತಿಗೆ ವಾಯಿದೆಯಲ್ಲಿ ಫಲಕಾರಿಯಾಗುವಂತೆ ಅವಿಚ್ಛಿನ್ನವಾಗಿ, ಪರಂತು ಅಸಾಧ್ಯವಾದ ಆಕಸ್ಮಿಕದ ದೆಶೆಯಿಂದ ಅಡ್ಡೀ ಮಾಡಲ್ಪಟ್ಟ ಕಾಲದಲ್ಲಿವಿನಾ, ಚುನಾಯಿಸಲ್ಪಟ್ಟ ತಾಕಿನೊಳಗೂ ಮೇಲ್ಭಾಗದಲ್ಲಿಯೂ ಗನಿಕೆಲಸ ನಡಸಿ ದೊರೆಯುವ ತಮಾಂ ಭಂಗಾರ, ಲೋಹ, ಲೋಹಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲು, ಕಲ್ಲಿದ್ದಲು ಮತ್ತು ವಿಕ್ರಯಕ್ಕೆ ವ ವ್ಯಾಪಾರಕ್ಕೆ ಲಾಯಖಾದ ತಮಾಂ ಯಿತರ ಪದಾರ್ಥಗಳನ್ನೂ ತಯಾರ್ಮಾಡಿ ವ್ಯಾಪಾರ ಲಾಯಖಾಗಿ ಮಾಡತಕ್ಕದ್ದು.

ಭಂಗಾರದ ಮಾದರಿ ವಗ್ಯೆರೆಯನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸುವಣ ಯಾ ತೆಗೆದುಕೊಳ್ಳುವಬಗ್ಯೆ ಅವಕಾಶ ಕೊಡುವಣ.

ಮತ್ತು, ಅಪೇಕ್ಷಿಸಲ್ಪಟ್ಟಲ್ಲಿ ಅವು ವಿಕ್ರಯವಾಗುವದಕ್ಕೆ ಮುಂಚಿತವಾಗಿ, ತಯಾರ್ಮಾಡಲ್ಪಟ್ಟು, ಪುಡಿ ಮಾಡಲ್ಪಟ್ಟು ಮತ್ತು ವ್ಯಾಪಾರ ಲಾಯಖಾಗಿ ಮಾಡಲ್ಪಟ್ಟಿರುವ ವಿಕ್ರಯಕ್ಕೆ ಸಿದ್ಧಪಡಿಸಿದಂಥಾ ತಮಾಂ ಭಂಗಾರ, ಲೋಹಗಳು, ಲೋಹಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳ ಮಾದರಿ ಯಾ ಮಾದರಿಗಳನ್ನು ಗುತ್ತಿಗ್ಯೆ ಕೊಡುವವರಿಗೆ. ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಅಥವಾ ಏಜಂಟ್ ಯಾ ಏಜಂಟರುಗಳಿಗೆ ಒಪ್ಪಿಸತಕ್ಕದ್ದು, ಅಥವಾ ಅವರಿಂದ ತೆಗೆದುಕೊಳ್ಳುವಬಗ್ಯೆ ಅವಕಾಶಕೊಡಲ್ಪಡತಕ್ಕದ್ದು ಹಾಂಗೆ ತೆಗೆದುಕೊಳ್ಳುವ ತಮಾಂ ಮಾದರಿಬಗ್ಯೆ ಆಗಿನ ಬಾಜಾರ ಧಾರಣೆಪ್ರಕಾರ ಖರೀದಿ ಮೊಬಲಗು ಗುತ್ತಿಗೆಗೆ ಕೊಡುವವರಿಂದಲಾಗಲಿ, ಅವರ ಉತ್ತರಾಧಿಕಾರಿಗಳಿಂದಲಾಗಲೀ ಯಾ ವರ್ಗದಾರರಿಂದಲಾಗಲೀ ಪಾವತಿ ಮಾಡಲ್ಪಡತಕ್ಕದ್ದು.

ಗುತ್ತಿಗ್ಯೆ ಕೊಡುವವರಿಗೆದಾರಣೆಗಳ ಲೆಕ್ಕಗಳನ್ನು ಕೊಡುವಣ.

ಮತ್ತು ಸದರೀ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮತ್ತು ಇತರ ಪದಾರ್ಥಗಳು ಖರೀದಿಆದ ತರುವಾಯ, ಗುತ್ತಿಗ್ಯೆಕೊಡುವವರಿಗಾಗಲೀ ಅವರ ಉತ್ತರಾಧಿಕಾರಗಳು ಅಥವಾ ವರ್ಗದಾರರು ಯಾ ಏಜಂಟ್ ಯಾ ಏಜಂಟರಿಗಾಗಲಿ ಸದರೀ ಪದಾರ್ಥಗಳು ಯೆಷ್ಟು ಮೊಬಲಗ್ಯೆ ವಿಕ್ರಯಿಸಲ್ಪಟ್ಟವೋ ಆ ತಪಸೀಲನ್ನೂ, ಅಪೇಕ್ಷಿಸಲ್ಪಟ್ಟಲ್ಲಿ ಅವುಗಳನ್ನ ಖರೀದಿಗೆ ಪಡೆದವರ ಹೆಸರನ್ನೂ ಸುದಾ ಒದಗಿಸತಕ್ಕದ್ದು.

ಖರೀದಿಆದ 90 ದಿವಸಗಳ ವಳಗಾಗಿ ಯಾ ಅದುರು ತೆಗೆದ ಆರು ತಿಂಗಳ ವಳಗಾಗಿ ರಾಜಪಾಲ್ ಮೊಬಲಗನ್ನ ಪಾವತಿ ಮಾಡುವಣ.

ಮತ್ತು ಅಂಥಾ ವಿಕ್ರಯ ನಡೆದ 90 ದಿವಸಗಳ ವಳಗಾಗಿಯಾಗಲಿ ಅಥವಾ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳು ತೆಗೆದ ಅಥವಾ ವಜ್ರಮುಂತಾದ ಬೆಲೆಯುಳ್ಳ ಕಲ್ಲುಗಳು ಕಂಡುಹಿಡಿದ ಆರು ತಿಂಗಳ ವಳಗಾಗಿಯಾಗಲಿ, ಮೇಲೆ ಕಂಡ ಉಳಿಕೊಳ್ಳಲ್ಪಟ್ಟ ರಾಜಪಾಲು ಮೊಬಲಗನ್ನು ಗುತ್ತಿಗ್ಯೆ ಕೊಡುವವರಿಗೆ ಆಗಲಿ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ತಮಾಂ ವರ್ಗಗಳ ನಕ್ಕಲುಗಳನ್ನೂ ಗುತ್ತಿಗ್ಯೆ ಕೊಡುವವರಿಗೆ ಒಪ್ಪಿಸುವಣ.

ಮತ್ತು ಗುತ್ತಿಗೇದಾರರಿಗಾಗಲೀ ಅವರ ಉತ್ತರಾಧಿಕಾರಗಳು ಯಾ ವರ್ಗದಾರರಿಗಾಗಲೀ, ಸದರೀ ನಿವೇಶನಗಳು ಯಾ ಅದರ ಯಾವದಾದರೂ ವಂದು ಭಾಗದ ವರ್ಗ ಯಾ ವಳಗುತ್ತಿಗೆಯು ಅಥವಾ ಈ ಕರಾರಿನಿಂದ ಒಪ್ಪಿಸಲ್ಪಟ್ಟ ಯಾ ಕೊಡಲ್ಪಟ್ಟ ತಮಾಂ ಯಾ ಯಾವದಾದರೂ ಹಕ್ಕು ಸ್ವಾತಂತ್ರ್ಯ ಮತ್ತು ಲೈಸೆನ್ಸಗಳ ಅಥವಾ ಸದರೀ ನಿವೇಶನಗಳಲ್ಲಿ ಅಥವಾ ಸದರೀ ಹಕ್ಕು, ಸ್ವಾತಂತ್ರ್ಯ ಮತ್ತು ಲೈಸೆನ್ಸ ಇವುಗಳಲ್ಲಿ ಪೂರ್ತಿಯಾಗಿ ಯಾಗಲಿ ಕೆಲವು ಮಟ್ಟಿಗಾಗಲಿ ಸಂಬಂಧ ಯಾ ಹಿಸ್ಸೆ ಇವುಗಳ ವರ್ಗ ಯಾ ವಳಗುತ್ತಿಗೆಯು ಅದು ನಡೆದ ಯರಡು ತಿಂಗಳ ವಳಗಾಗಿ ಒಪ್ಪಿಸಲ್ಪಡತಕ್ಕದ್ದು.

ತಮಾಂ ವರ್ಗಗಳ ಮೇಲೂ 90 ದಿವಸಗಳ ವಳಗಾಗಿ ಜುರ್ಮಾನೆ ಪಾವತಿ ಮಾಡುವಣ.

ಮತ್ತು ಅಂಥಾ ವರ್ಗ ಯಾ ವಳಗುತ್ತಿಗೆ ನಡೆದ 90 ದಿವಸಗಳ ವಳಗಾಗಿ ಅಂಥಾ ವರ್ಗ ಯಾ ವಳಗುತ್ತಿಗೆಗೋಸ್ಕರ ಇದಕ್ಕೆ ಮುಂಚೆ ವಿಧಿಸಿ ಉಳಿಕೊಂಡಿರುವ ಜುರ್ಮಾನೆಯನ್ನು ಗುತ್ತಿಗ್ಯೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಅಥವಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ಲೆಖ್ಖ ವ ನಕ್ಷೆಗಳ ಕ್ರಮವಾದ ಬುಕ್ಕುಗಳನ್ನ ಇಡುವಣ.

ಮತ್ತು ಸದರೀ ವಾಯಿದೆಯಲ್ಲಿ ಚುನಾಯಿಸಲ್ಪಟ್ಟ ತಾಕಿನ ಯಾವದಾದರೂ ಅನುಕೂಲವಾದ ಸ್ಥಳದಲ್ಲಿ, ಗುತ್ತಿಗೆದಾರರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಏಜಂಟ್ ಯಾ ಏಜಂಟರುಗಳು ಯಲ್ಲ ಕಾಲಗಳಲ್ಲೂ ಧಾರಾಳವಾಗಿ ನೋಡುವ ಬಗ್ಯೆ ಸದರೀ ಗನಿಗಳ ಆಡಳಿತ ಮತ್ತು ಹುಟ್ಟುವಳಿ ವ ಖರ್ಚು ಇವುಗಳ ತಪಸೀಲನ್ನೂ ಮತ್ತು ಭಂಗಾರ, ಲೋಹಗಳು, ಲೋಹ

ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲು, ವಿಕ್ರಯ ಯಾ ವ್ಯಾಪಾರ ಲಾಯಖಾದ ತಮಾಂ ಇತರ ಪದಾರ್ಥಗಳ ವಿಲಾವಾರಿ ಹಾಂಗೂ ಅವುಗಳ ಕರಾರ್‌ವಾಕಾ ಬೆಲೆ ತಿಳಿಯುವ ಬಗ್ಯಾಗಿ ಅವುಗಳ ತೇದಾದು, ತಾರೀಖು ಮತ್ತು ಅವಶ್ಯಕವಾದ ಯಾ ಯುಕ್ತವಾದ ಇತರ ಸಂಗತಿಗಳನ್ನ ತೋರಿಸುವಂಥಾ ಲೆಖ್ಖದ ಬುಕ್ಕುಗಳನ್ನ ತಯಾರ್‍ಮಾಡಿ ಇಡತಕ್ಕದ್ದಲ್ಲದೆ ಸದರೀ ಗನಿ ವ ಕಾಮಗಾರಿಗಳ ಸಾಚಾ ನಕ್ಷೆ, ಪ್ಲಾನು ವ ಸೆಕ್ಷರ್ಷಗಳನ್ನ ತಯಾರ್‍ಮಾಡಿ ಇಡತಕ್ಕದ್ದು.

ಮತ್ತು ಅವುಗಳ ನಕಲುಗಳನ್ನು ಗುತ್ತಿಗೆಗೆ ಕೊಡುವವರಿಗೆ ಒದಗಿಸುವಣ.

ಮತ್ತು ಗುತ್ತಿಗೆಗೆ ಕೊಡುವವರಿಂದಲಾಗಲೀ ಅವರ ಉತ್ತರಾಧಿಕಾರಿಗಳಿಂದಲಾಗಲೀ ಅಥವಾ ವರ್ಗದಾರರಿಂದಲಾಗಲೀ ಯಾ ಅವರ ಏಜಂಟ್ ಯಾ ಏಜಂಟರುಗಳಿಂದಲಾಗಲೀ ಅಪೇಕ್ಷಿಸಲ್ಪಟ್ಟಾಗ ಅವರಿಗೆ ಸದರೀ ಬುಕ್ಕಿನಲ್ಲಿ ದಾಖಲಾದ ತಮಾಂ ಖತಾಯಿತಿಗಳ ನಕಲುಗಳನ್ನೂ ಮತ್ತು ಅಂಥಾ ತಮಾಂ ನಕ್ಷೆ, ಪ್ಲಾನು ವ ಮೇಲ್ಕಂಡ ಸೆಕ್ಷನಿನ ನಕಲುಗಳನ್ನೂ ಒದಗಿಸತಕ್ಕದ್ದು.

ಮತ್ತು ವಾಯಿದೆ ಆಖೈರಾದಾಗ ಬುಕ್ಕು ವ ಪ್ಲಾನುಗಳನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡುವಣ.

ಮತ್ತು ಸದರೀ ವಾಯಿದೆಯು ಮುಗಿದಾಗ ಅಥವಾ ಮುಂಚಿತವಾಗಿ ಮೌಕೂಫಾದಾಗ ಸದರೀ ಬುಕ್ಕುಗಳು, ನಕ್ಷೆಗಳು, ಪ್ಲಾನುಗಳು, ಸೆಕ್ಷರ್ಷಯಾನೆ ವಿವರಣೆಗಳು ಇಷ್ಟುಗಳನ್ನು ಗುತ್ತಿಗೆಗೆ ಕೊಡುವವರಿಗಾಗಲೀ ಅವರ ಉತ್ತರಾಧಿಕಾರಿಗಳಿಗಾಗಲೀ ಅಥವಾ ಅವರ ವರ್ಗದಾರರಿಗಾಗಲೀ ಪೂರ್ತಿಯಾಗಿ ಯೂ ವಳ್ಳೇ ಸ್ಥಿತಿಯಲ್ಲಿಯೂ ಒಪ್ಪಿಸತಕ್ಕದ್ದು.

ಸರಹದ್ದು ಸ್ತಂಭಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಡುವಣ ಮತ್ತು ಸುರಂಗಗಳನ್ನು ಕ್ರಮವಾಗಿ ಬೇಲಿಯಿಂದ ಭದ್ರಪಡಿಸುವಣ.

ಮತ್ತು ಸದರೀ ವಾಯಿದೇ ಕಾಲದಲ್ಲಿ ತಮಾಂ ಸರಹದ್ದು ಸ್ತಂಭಗಳನ್ನೂ ದುರಸ್ತಿನಲ್ಲಿಯೂ ವಳ್ಳೇ ಸ್ಥಿತಿಯಲ್ಲಿಯೂ ಇಟ್ಟಿರತಕ್ಕದ್ದಲ್ಲದೆ ಸದರೀ ಚುನಾಯಿಸಲ್ಪಟ್ಟ ತಾಲ್ಲೂಕಿನೊಳಗಣ ಯಲ್ಲ ಕಾಲಿವೆ, ಹಳ್ಳ, ಯಾ ಶ್ಯೆಲ್ ಕಾಮಗಾರಿಗಳನ್ನು ಮನುಷ್ಯರು ಮತ್ತು ಜಾನವರುಗಳಿಗೆ ಅಪಾಯ ಸಂಭವಿಸದಂತೆ ಪೂರ್ತಿಯಾಗಿ ಬೇಲಿ ಹಾಕಿ ಭದ್ರ ಪಡಿಸತಕ್ಕದ್ದು.

ಮತ್ತು ಸದರೀ ವಾಯಿದೇಯಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು, ಆಗಿಂದಾಗ್ಯೆ ವಿಧಿಸಬಹುದಾದಂಥಾ ಆರೋಗ್ಯ ವಿಷಯಕವಾದ ನಿಬಂಧನೆಗಳನ್ನು ಚುನಾಯಿಸಲ್ಪಟ್ಟ ತಾಕಿನ ಯೆಲ್ಲ ಪ್ರದೇಶದಲ್ಲೂ ಕ್ರಮವಾಗಿ ಜಾರಿಯಲ್ಲಿರತಕ್ಕದ್ದು.

ಕಾಲುವೆ ಯಾ ಸುರಂಗಗಳನ್ನು ಮುಚ್ಚದೆ ಇರುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಅವರ ಏಜಂಟ್ ಯಾ ಏಜಂಟರುಗಳಿಂದ ಬರಹ ಮೂಲಕವಾಗಿ ಲೈಸೆನ್ಸ್ ಪಡೆದ ಹೊರ್ತು ಯಾವ ಕಾಲಿವೆ ಯಾ ಸುರಂಗವೆನ್ನಾಗಲೀ ಮನಃಪೂರ್ವಕವಾಗಿ ಮುಚ್ಚಕೂಡದು ಭರ್ತೀ ಮಾಡಕೂಡದು ಅಥವಾ ಬಂದ್ ಮಾಡಕೂಡದು.

ಅಥವಾ ರೋಡು ವಗೈರೆಗಳನ್ನ ಆತಂಕಪಡಿಸದೆ ಇರುವಣ.

ಮತ್ತು ಈಗ ಇರುವ ತಮಾಂ ಯಾ ಯಾವ ರಸ್ತೆಗಳನ್ನಾಗಲಿ, ಕಾಲ್ದಾರಿಗಳನ್ನಾಗಲೀ ಯಾ ಯಾವ ತರಹೆಯ ಅಡ್ಡದಾರಿಗಳನ್ನಾಗಲೀ ಖುಲ್ಲಾ ಇಡತಕ್ಕದ್ದೇ ಹೊರ್ತು ಆತಂಕಪಡಿಸತಕ್ಕದ್ದಲ್ಲವು.

ಗುತ್ತಿಗೆಗೆ ಕೊಡುವವರು ಕಾಮಗಾರೀ ವಗೈರೆಗಳನ್ನ ತನಿಖೆ ಮಾಡಲಿಕ್ಕೆ ಅವಕಾಶ ಕೊಡುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮತ್ತು ಅವರ ಮುತಾಲೀಕ ಯಾ ಮುತಾಲೀಕರುಗಳು, ನೌಕರರು, ವ ಕೆಲಸಗಾರರು, ಇವರುಗಳು ವಾಯಿದೇ ಕಾಲದಲ್ಲಿ ಈ ಕರಾರುಗಳನ್ನನುಸರಿಸಿ ಯಾ ಈ ಕರಾರುಗಳ ಬಲೀಯದ ಮೇಲೆ ನಡಿಯುವ ಯಾವ ಕಾಮಗಾರಿಗಳೊಳಗಾಗಲೀ ಪ್ರವೇಶಿಸಿ ಅವುಗಳ ಸ್ಥಿತಿ ವ ಲಕ್ಷಣವನ್ನು ತನಿಖೆ ಮಾಡಲಿಕ್ಕೂ ಮತ್ತು ಆ ಬಗ್ಯೆ ಯಾಗಲೀ, ಅಥವಾ ಇತರ ಯಾವ ನ್ಯಾಯವಾದ ವ ಯುಕ್ತವಾದ ಉದ್ದೇಶ್ಯಕ್ಕಾಗಲೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾ ಅದರೊಳಗೆ ಇರುವ ಯಂಜಿನ್‌ಗಳನ್ನೂ, ಯಂತ್ರ ಸಾಧನಗಳನ್ನೂ ವ ಅಜಬಾಬುಗಳನ್ನೂ ಉಪಯೋಗಿಸಲಿಕ್ಕೂ ಪರಂತು ತನಖೀ ಮಾಡಿ ನಕ್ಷೆಗಳನ್ನೂ ತೆಗದುಕೊಳ್ಳತಕ್ಕದ್ದಕ್ಕಾಗಿ ವಿನಾ, ಅಂತಾ ಉಪಯೋಗಕ್ಕಾಗಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮುನಾಸಬ್ ಈಡು ಮೊಬಲಗು ಕೊಡಲಾಗಿ ಅವಕಾಶ ಕೊಡತಕ್ಕದ್ದು ಮತ್ತು ಇದಕ್ಕೆ ಹಿಂದೆ ಉಳಿಸಿಕೊಳ್ಳಲ್ಪಟ್ಟ ಸ್ವಾತಂತ್ರ್ಯಗಳನ್ನು ಚಲಾಯಿಸಲಿಕ್ಕೂ ಸಹ ಅವಕಾಶ ಕೊಡತಕ್ಕದ್ದು ಮತ್ತು ಆ ಸ್ವಾತಂತ್ರ್ಯಗಳನ್ನ ಚಲಾಯಿಸುವದಕ್ಕಾಗಿ ನ್ಯಾಯವಾದ ಯಲ್ಲಾ ಅನುಕೂಲ್ಯತೆಯನ್ನೂ ವ ಕುಮ್ಮಕ್ಕನ್ನೂ ಕೊಡತಕ್ಕದ್ದು.

ಜಮೀನ್ಮೇಲಿನ ಹಕ್ಕುಗಳ ಹಾನಿಗಾಗಿ ಈಡು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನ ಯಾವದಾದರೊಂದು ಭಾಗದ ಯಾ ಪ್ರದೇಶದ ಜಮೀನ್ ಮೇಲ್ಭಾಗಕ್ಕೆ ಕೆಡಕು, ಹಾನಿ ಯಾ ಅಡ್ಡಿ ಉಂಟಾದ್ದಕ್ಕಾಗಿ ಅಂತಾ ಜಮೀನಿನ ಹಿಡುವಳೀದಾರ, ಅನುಭವದಾರ ಯಾ ಇತರ ಸ್ವಾಧೀನಗಾರನಿಗೆ ಆಗಿಂದಾಗ್ಯೆ ಈಡು ಕಟ್ಟಿಕೊಡತಕ್ಕದ್ದು.

ಮತ್ತು, ಚುನಾಯಿಸಲ್ಪಟ್ಟ ತಾಕಿನ ಯಾವಭಾಗದಲ್ಲಾಗಲಿ, ಗ್ರಾಮಸ್ತರು ದನಗಳನ್ನ ಮುಫತ್ ಮೇಯಿಸಿಕೊಳ್ಳುವ ಹಕ್ಕು ಉಂಟಾಗಿಯಿದ್ದು, ಅಂತಾ ಹಕ್ಕಿಗೆ ಯಾವರೀತಿಯಲ್ಲಾಗಲಿ ಅಡ್ಡಿ ಸಂಭವಿಶಿದಾಗ ಅಂತಾ ಗ್ರಾಮಸ್ಥರಿಗೆ ಕ್ರಮವಾದ ಈಡು ಸಹಾ ಕಟ್ಟಿಕೊಡತಕ್ಕದ್ದು.

ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಸೆಯಿಂದುಂಟಾಗುವ ದಾವೆಗಳು, ಗುತ್ತಿಗೆಗೆ ಕೊಡುವವರುಗಳ ಮೇಲೆ ಬಾರದಂತೆ ಮಾಡುವಣ.

ಯಾವ ಜಮೀನ್‌ಗಳಿಗಾಗಲಿ ಯಾ ಯಾವಬಗೆಯ ಸ್ವತ್ತಿಗಾಗಲಿ ಈ ಕರಾರುಗಳನ್ನನುಸರಿಸಿ ಕೆಲಸನಡಿಸುವಣದರ ದೆಸೆಯಿಂದ ಯಾ ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಶಿಇಂದ ಉಂಟಾಗುವ ಯಾ ಸಂಭವಿಸುವ ಯಾವ ವಿಧವಾದ ಹಾನಿ ಯಾ ಆತಂಕ ಈ ಕಾರಣದಿಂದ, ಗುತ್ತಿಗೆಗೆ ಕೊಡುವವರ ಅವರ ಉಸ್ತರಾಧಿಕಾರಿಗಳ ವ ವರ್ಗದಾರರುಗಳು ಮೇಲೆ ಯಾವಬಗೆ ಖರ್ಚು ಯಿನ್ನುಮೇಲೆ ಆಗಿಂದಾಗ್ಯೆ ವ ಯಾವಾಗಲೂ ಶುದ್ಧಾಂಗವಾಗಿ ಯಾವಬಗೆ ದಾವೆಗಳೂ ತಗಾದೆಗಳೂ ಬಾರದಂತೆ ನಡದುಕೊಳ್ಳತಕ್ಕದ್ದು.

ವಾಯಿದೆ ಪೂರೈಶಿದ ನಂತರ ಗನಿಗಳು, ಕಟ್ಟ ವಗೈರೆಯನ್ನ ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡೋಣ.

ಮತ್ತು ಮೇಲೆಹೇಳಲ್ಪಟ್ಟ ವಾಯಿದೆ ಪೂರೈಶಿದಾಗಲಾಗಲಿ ಯಾ ಅದಕ್ಕೆ ಮುಂಚಿತವಾಗಿ ನಿಂತು ಹೋದಾಗಲಾಗಲಿ ಈ ಕರಾರುಗಳ ದೆಸೆಇಂದ ಕೆಲಸ ನಡಿಯುತ್ತಿದ್ದ ಗನಿಗಳನ್ನೂ ತವಾಂ ಕಾಲುವೆಗಳನ್ನೂ ಕಾಮಗಾರಿಗಳನ್ನೂ, ಸರಹದ್ದು ಸ್ತಂಭಗಳು ವ ಅವುಗಳಿಗೆ ಶೇರಿದ ಬೇಲಿಗಳನ್ನೂ ಮತ್ತು ಯಿತರ ನಿವೇಶನಗಳು ಇವುಗಳೆಲ್ಲವನ್ನೂ ಒಳ್ಳೇದಾದ ವ ಕೆಲಸ ನಡಿಸಲಿಕ್ಕೆ ಅನುಕೂಲವಾದ ಸ್ಥಿತಿಯಲ್ಲಿ ಯೇವಂಚ ಇದಕ್ಕೆ ಹಿಂದೆ ಹೇಳಲ್ಪಟ್ಟ ಕರಾರುಗಳ ಪ್ರಕಾರ ನಡಿಯಲಿಕ್ಕೆ ಅನುಗುಣವಾಗುವಂತೆ ತಕ್ಕ ಸ್ಥಿತಿಯಲ್ಲಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಅಥವಾ ವರ್ಗದಾರರುಗಳಿಗಾಗಲಿ ಒಪ್ಪಿಸಿಬಿಡತಕ್ಕದ್ದು ಸದರೀ ಜಾಗಾದಲ್ಲಿ ಯಿರುವ ಕಟ್ಟಗಳಿಗಾಗಿಯಾಗಲಿ, ಯಾ ಇತರ ಸ್ವತ್ತಿಗಾಗಿಯಾಗಲಿ ಗುತ್ತಿಗೆದಾರರುಗಳಿಂದ, ಅವರ ಯಗ್ಜಿಕ್ಯೂಟರುಗಳಿಂದ, ಆಡಳಿತ ನಡಿಸುವವರುಗಳಿಂದ ಯಾ ವರ್ಗದಾರರುಗಳಿಂದಾಗಲಿ, ಗುತ್ತಿಗೆಗೆ ಕೊಡುವವರಮೇಲೆ, ಅವರ ಉತ್ತರಾಧಿಕಾರಿಗಳಮೇಲೆ ಯಾ ವರ್ಗದಾರರಮೇಲೆ ಯಾವ ದಾವೆಯೂ ಯಿಲ್ಲದಂತೆ ಒಪ್ಪಿಸತಕ್ಕದ್ದು. ಈ ಅಂತಾ ಕಟ್ಟಗಳನ್ನು ವ ಯಿತರ ಸ್ವತ್ತುಗಳನ್ನ, ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರುಗಳು ಆಡಳಿತ ನಡಿಸುವವರು ಯಾ ವರ್ಗದಾರರು ಮುಂಚಿತವಾಗಿಯೇ ಸಾಗಿಸಲು ಸ್ವತಂತ್ರರಾಗಿರತಕ್ಕದ್ದು.

ಕಂದಾಯುಗಳನ್ನ ರಾಜಪಾಲುಗಳನ್ನ ವ ಜುರ್ಮಾನೆ ವಗೈರೆಯನ್ನ ಕೊಡದೇ ಹೋದಮೇಲಾಗಲಿ ಕರಾರುಗಳಿಗೆ ತಪ್ಪಿದಮೇಲೆಯಾಗಲಿ ಪುನಶ್ಚ ಪ್ರವೇಶಿಸಲಿಕ್ಕೆ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಮತ್ತು ಕಂಠೋಕ್ತವಾದ ಈ ಷರತ್ತಿನಿಂದ ಕರಾರು ಮಾಡಿಕೊಳ್ಳುವದೇನೆಂದರೆ ಇದರ ದೆಸೆಇಂದ ಉಳಿಸಿಕೊಳ್ಳಲ್ಪಟ್ಟಿರುವ ಕಂದಾಯುಗಳು ರಾಜಪಾಲುಗಳು, ಜುರ್ಮಾನೆಗಳು ಯಾ ಯಿತರ ಸಲಿಕೆಗಳ ಯಾವಭಾಗವನ್ನಾಗಲಿ ಪಾವತೀಮಾಡಬೇಕೆಂತ ಗುತ್ತಿಗೆದಾರರ ಅವರ ಎಗ್ಜಿಕ್ಯೂಟರಗಳ, ಆಡಳಿತ ನಡಿಸುವವರ ಯಾ ವರ್ಗದಾರರುಗಳಮೇಲೆ ಅಥವಾ ಅವರುಗಳಪೈಕಿ ಒಬ್ಬನಮೇಲಾಗಲಿ ಹೆಚ್ಚಿಗೆ ಜನಗಳಮೇಲೆ, ಯಾ ಅವರ ಅಥವಾ ಆತನ ಮುತಾಲೀಕರುಗಳಮೇಲೆ ನೋಟಿಸ್ ಜಾರೀಯಾದ ಅಥವಾ ಚುನಾಯಿಸಲ್ಪಟ್ಟ ತಾಕಿನಪೈಕಿ ಯಾವದಾದರೊಂದು ಭಾಗದಲ್ಲಿ ಚಿಕಟಾಯಿಸಲ್ಪಟ್ಟ ತರುವಾಯ ಮೂವತ್ತು ದಿನಗಳ ವರವಿಗು ಬಾಕೀಲಿಯಿಟ್ಟುಕೊಂಡಾಗ್ಯೂ, ಅಥವಾ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರ್‌ಗಳು ಆಡಳಿತ ನಡಿಸುವವರು ಯಾ ಅವರ ಯಾ ಆತನ ಕೆಲಸಗಾರರು ಗನಿಕೆಲಸ ಕ್ರಮವಾಗಿ ನಡಿಸದೇ ನಿಲ್ಲಿಸಿದಾಗ್ಯೂ, ಅಥವಾ ಗುತ್ತಿಗೆಗೆ ಕೊಡುವವರ, ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಉದ್ಯೋಗಸ್ಥರುಗಳಿಗೆ ಯಾವ ವಿಧವಾದ ಆತಂಕ ಯಾ ತೊಂದರೆ ಉಂಟುಮಾಡಿದಾಗ್ಯೂ ಅಥವಾ ಗುತ್ತಿಗೆಗೆ ಕೊಡುವವರಿಗಾಗಲಿ ಅಥವಾ ಉತ್ತರಾಧಿಕಾರಿಗಳಿಗಾಗಲಿ ಯಾ ವರ್ಗದಾರರಿಗಾಗಲಿ ಸಮಾಚಾರ ಕೊಡಲಿಕ್ಕೆ ನಿರಾಕರಿಸಿದಾಗ್ಯೂ ಅಥವಾ ಗುತ್ತಿಗೆದಾರರು ಅವರ ಯಗ್ಜಿಕ್ಯೂಟರುಗಳು, ಆಡಳಿತ ನಡಿಸುವರು ಯಾ ವರ್ಗದಾರರು ಈ ಕರಾರುಗಳ ಪೈಕಿ ಯಾವದಕ್ಕಾದರೂ ಅತಿಕ್ರಮಿಸಿ ನಡೆದರೇಆಗಲಿ ಆಗ ಅಂತಾ ಸಂಗತಿಯಲ್ಲಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಾ ಅವರ ತರಫಿನಲ್ಲಿ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಮುತಾಲೀಕರಾಗಲಿ ಯಿಲ್ಲರ ಹೆಸರಿನಲ್ಲಿಯೂ ಯಿರುವ ಈ ಗುತ್ತಿಗೆಯನ್ನನುಸರಿಶಿ ನಡಿಸಲ್ಪಡುವ ಕೆಲಸಗಳು ಯಾ ಇತರ ಕಾಮಗಾರಿಗಳ ಯಾವ ಭಾಗದೊಳಗೂ ಪುನಶ್ಚ ಪ್ರವೇಶಿಸಬಹುದು. ಆ ತರುವಾಯ ಮೇಲೆ ಹೇಳಲ್ಪಟ್ಟ ಮೂವತ್ತು ವರುಷಗಳ ವಾಯಿದೆಯು ಖಂಡಿತವಾಗಿ ಮುಕ್ತಾಯವಾಗತಕ್ಕದ್ದು.

ಆರುತಿಂಗಳ ನೋಟಿಸಿನ ಹೊರ್ತು ಪುನಃ ಪ್ರವೇಶ ಮಾಡುವಅಧಿಕಾರ ಚಲಾಯಿಸಕೂಡ ದೆಂಬ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರದೆಸೆಇಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ, ಇದಕ್ಕೆ ಹಿಂದೆ ನಮೂದಿಸಲ್ಪಟ್ಟ ಮೇರಿಗೆ ಪುನಃ ಪ್ರವೇಶಿಸಲಿಕ್ಕಿರುವ ನಿಯಮವನ್ನನುಸರಿಸಿ ಅಂತಾ ಯಾವ ಪುನಃಪ್ರವೇಶವಾಗಲಿ ಮೇಲೆ ಉದಹರಿಸಿದಂತಾ ವಾಯಿದೆಯ ಭಂಗವಾಗಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಿವರುಗಳು ಫಿರ್ಯಾದ್ ಬರುವ ಸಂಗತಿ ಯಾ ಸಂಗತಿಗಳ ವಿಷಯದಲ್ಲಿ ಸಮರ್ಪಕವಾದ ಸಮಜಾಯಿಷಿ ಕೊಡುವಂತೆಯೂ, ವ ಅಂತಾವುಗಳನ್ನ ವ್ಯವಸ್ಥೆ ಮಾಡಿಕೊಳ್ಳುವಂತೆಯೂ ಗುತ್ತಿಗೆದಾರರಿಗಾಗಲಿ, ಅವರ ಯಗ್ಸಿಕ್ಯೂಟರುಗಳಿಗಾಗಲಿ ಆಡಳಿತ ನಡಿಸುವವರಿಗಾಗಲಿ ಯಾ ವರ್ಗದಾರರಿಗಾಗಲಿ ಈ ಪೈಕಿ ಯಾವನಿಗಾಗಲಿ ಅಥವಾ ಯಾರಿಗಾಗಲಿ ನೋಟಿಸ್ ಕೊಟ್ಟಹೊರ್ತು ನಡಿಯತಕ್ಕದ್ದಲ್ಲವು. ಸದರೀ ನೋಟೀಸು ಬರವಣಿಗೆ ಮೂಲಕಇದ್ದು ಅದು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರುಗಳ ತರಫ ಮೇಲೆ ಹೇಳಲ್ಪಟ್ಟ ಡಿಸ್ಟ್ರಿಕ್ಟಿನ ಶಿವಿಲ್ ಕಾರ್ಬಾರ್‌ನಡಿಸುವ ಆಫೀಸರಿಂದಾಗಲಿ ಅಬಗ್ಗೆ ಮುಖ್ಯವಾಗಿ ಅಧಿಕಾರ ಪಡೆದ ಮತ್ಯಾವ ಆಫೀಸರಿಂದಾಗಲಿ ರುಜುಮಾಡಲ್ಪಟ್ಟು, ಗುತ್ತಿಗೆದಾರರ ಮೇಲೆ ಅಥವಾ ಅವರ ಯಗ್ಸಿಕ್ಯೂಟರುಗಳಮೇಲೆ ಆಡಳಿತ ನಡಿಸುವವರಮೇಲೆ ವ ವರ್ಗದಾರರುಗಳ ಮೇಲೆಯಾಗಲಿ ಆ ಪೈಕಿ ಒಬ್ಬನ ಮೇಲಾಗಲಿ ಅದಕ್ಕೆ ಹೆಚ್ಚಿಗೆ ಜನರಮೇಲಾಗಲಿ ಅವರುಗಳ ಯಾ ಆತನ ಮುತಾಲೀಕರುಗಳ ಮೇಲಾಗಲಿ ಜಾರೀಮಾಡಲ್ಪಡತಕ್ಕದ್ದು, ಅಥವಾ ಆ ನೋಟೀಸು ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾವ ಪ್ರದೇಶದಲ್ಲಾಗಲಿ ಚಿಕಟಾಯಿಸಲ್ಪಡತಕ್ಕದ್ದು. ಹಾಗೆ ನೋಟಿಸು ಜಾರೀ ಆದ ಯಾ ಅಥವಾ ಚಿಕಟಾಯಿಸಲ್ಪಟ್ಟ ಲಾಗಾಯತು ಆರುತಿಂಗಳವರಿವಿಗೂ ಅಂತಾ ಫಿರ್ಯಾದಾದ ಸಂಗತಿ ಯಾ ಸಂಗತಿಗಳಲ್ಲಿ ಸಮರ್ಪಕವಾದ ಸಮಜಾಯಿಷಿಯೂ ಕೊಡಲ್ಪಡದೇ ವ ಫಿರ್ಯಾದ್ ಸಂಗತೀಲಿ ವ್ಯವಸ್ಥೆಯೂ ಮಾಡಿಕೊಳ್ಳದೇ ತಪ್ಪಿಹೋಗದ ಹೊರ್ತು ಅಂತಾ ಪುನಃಪ್ರವೇಶವಾಗಲಿ ಯಾ ವಾಯಿದೆಯ ಭಂಗವಾಗಲಿ ನಡಿಯತಕ್ಕದ್ದಲ್ಲವು.

ಯಾವ ವರುಷದಲ್ಲಾಗಲಿ ರಾಜಪಾಲಿಗೆ ಬದಲಾಗಿ ಎಕರೆ ಒಂದಕ್ಕೆ ಐದು ರೂಪಾಯಿ ಮೇರಿಗೆ ಕಂದಾಯ ವಸೂಲು ಮಾಡಲಿಕ್ಕೆ ಗುತ್ತಿಗೆಗೆ ಕೊಡುವವರಿಗೆ ಅಧಿಕಾರವಿರುವಬಗ್ಗೆನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ—ಗನಿಗಳ ಕೆಲಸ ನಡಿಸುವ ಬಗ್ಯಾಗಿ ಆವಶ್ಯಕವಾದ ಪ್ರಥಮ ಏರ್ಪಾಟಿಗೋಸ್ಕರ ಕೊಡಲ್ಪಡುವ ಗುತ್ತಿಗೆಯ ಪ್ರಾರಂಭದ ಎರಡು ವರುಷಗಳು ಆದ ತರುವಾಯ, ಗನಿಗಳ ಕೆಲಸದ ವಿಷಯದಲ್ಲಾಗಲಿ, ಅದರ ಫಲಾಂಶದ ವಿಷಯದಲ್ಲಾಗಲೀ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ, ಯಾ ವರ್ಗದಾರರುಗಳಿಗಾಗಲಿ ತೃಪ್ತಿಕರವಾಗಿ ಇರದೇಯಿರುವ ಪಕ್ಷಕ್ಕೆ ಅವರು ಗುತ್ತಿಗೆಯ ಯಾವವರುಷದ ರಾಜಪಾಲಿಗೆ ಬದಲಾಗಿಯಾದರೂ ಎಕರೆ ಒಂದಕ್ಕೆ ಐದು ರೂಪಾಯಿಯಮೇರಿಗೆ ಕಂದಾಯ ವಸೂಲ್ ಮಾಡಲಿಕ್ಕೆ ಸ್ವತಂತ್ರರಾಗಿರತಕ್ಕದ್ದು.

ಯಾವದಾದರೊಂದು ವರುಷದ ಆಖೈರಿನಲ್ಲಿ ಗುತ್ತಿಗೆದಾರನ ಇಷ್ಟಾನುಸಾರ ಗುತ್ತಿಗೆ ಖೈದಾಗತಕ್ಕಬಗ್ಗೆ ನಿಯಮ.

ಇನ್ನೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ,—ಇದರ ದೆಸೆಯಿಂದ ಕೊಡೋಣಾದ ಮೂವತ್ತು ವರುಷಗಳ ವಾಯಿದೆಯ ಪೈಕಿ ಯಾವದಾದರೊಂದು ವರುಷ ಆಖೈರಾಗುವಾಗ ಆ ವಾಯಿದೆಯು ಮಾಕೂಫ ಆಗಬೇಕೆಂಬದಾಗಿ 'ಗುತ್ತಿಗೆದಾರರಾಗಲಿ, ಅವರ ಎಗ್ಸಿಕ್ಯೂಟರುಗಳಾಗಲಿ, ಆಡಳಿತ ನಡಿಸುವವರಾಗಲಿ ಯಾ ವರ್ಗದಾರರಾಗಲಿ ಇಛ್ಛೈಸುವ ಪಕ್ಷಕ್ಕೆ ತಮ್ಮ ಇರಾದೆಯನ್ನ ನಮೂದಿಸಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಆರುತಿಂಗಳ ಮುಂಚಿತವಾಗಿ ಬರವಣಿಗೆ ಮೂಲಕ ನೋಟಿಸು ಕೊಟ್ಟು ಇದರ ದೆಸೆಯಿಂದ ಉಳಿಸಿಕೊಳ್ಳಲ್ಪಟ್ಟ ಮೇಲೆ ಹೇಳೋಣಾದ ಕಂದಾಯಗಳು, ರಾಜಪಾಲುಗಳು, ಜುರ್ಮಾನೆಗಳು, ಯಾ ಇತರ ಸಲಿಕೆಗಳು ಇವುಗಳನ್ನ ಸಂದಾಯಮಾಡಿ, ಇದರಲ್ಲಿ ಕಂಡ ಎಲ್ಲಾ ಕರಾರುಗಳ ವ ಒಡಂಬಡಿಕೆಗಳ ಮೇರಿಗೆ ನಡೆದುಕ್ಕೊಂಡು ವ ಜಾರೀಲಿತಂದು, ಮತ್ತು ಅಂತಾ ವರುಷ ಪೂರೈಸುವವರಿವಿಗೂ, ಗುತ್ತಿಗೆದಾರರು, ಅವರ ಎಗ್ಸಿಕ್ಯೂಟರುಗಳು, ಆಡಳಿತ ನಡಿಸುವವರು ಯಾ ವರ್ಗದಾರರು ನಡದುಕ್ಕೊಂಡಲ್ಲಿ ಯಾ ಜಾರೀಲಿ ತಂದಲ್ಲಿ ಆಗ್ಯೆ ಅಂತಾ ಸಂಗತಿಯಲ್ಲಿ ಆ ವರುಷ ಪೂರೈಸಿದ ತರುವಾಯ ಇದರ ದೆಸೆಯಿಂದಕೊಡಲ್ಪಟ್ಟಿರುವ ವಾಯಿದೆಯು ಖಂಡಿತವಾಗಿ ನಿಂತುಹೋಗಿ ಖೈದಾಗತಕ್ಕದ್ದಲ್ಲದೆ ಇದರಲ್ಲಿ ಮೇಲ್ಕಂಡ ಠೇವಣೀ ಬಾಬತು ರೂಪಾಯಿಗಳು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರ ವಶದಲ್ಲೇನೇ ಅವರ ಸ್ವಂತ ಆಸ್ತಿಯಂತೆ ನಿಂತು ಹೋಗತಕ್ಕದ್ದು.

ಇದಕ್ಕೆ ಸಾಕ್ಷಿಯಾಗಿ ಗುತ್ತಿಗೆ ಕೊಡುವವರಿಗಾಗಿ ವ ಅವರ ತರಫ ಕೆಲಸ ನೋಡುವ ಮೈಸೂರು ಶೀಮೆಯ ದಿವಾನರಾದ ಯವರೂ.

ವ ಗುತ್ತಿಗೆದಾರರು ಸಹಾ ಮೇಲೆ ಷುರುವಿನಲ್ಲಿ ಬರಿಯೋಣಾದ ವರುಷ ವ ತಾರೀಖಿನಲ್ಲಿ ಇವಕ್ಕೆ ತಮ್ಮ ತಮ್ಮ ದಸ್ತಖತ ವ ಮೊಹರು ಹಾಕಿರುತ್ತಾರೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ತಾರೀಖು 21ನೇ ಸೆಪ್ಟಂಬರ್ 1887.

ನಂ. 120.—ಮಾಹೆ ಮಜಕೂರು 5ನೇ ಮುರ್ಕುಂ 105ನೇ ನಂಬರ್ ಇಸ್ತಿಹಾರನ್ನನುಸರಿಸಿ, ಈ ಕೆಳಗೆ ನಮೂದಾಗುವ ಗ್ರಾಮ ಮತ್ತೊಂದು ಗ್ರಾಮಕ್ಕೆ ದಾಖಲಾಗುವಂತೆ ಅಪ್ಪಣೆ ಮಾಡಿರುತ್ತೆ.

ತಾಲ್ಲೂಕು	ಗ್ರಾಮದ ಹೆಸರು	ಯಾವ ಗ್ರಾಮಕ್ಕೆ ಸೇರತಕ್ಕದ್ದು.
ಬಾಗೇಪಲ್ಲಿ	ನಂಬಿಕುಂಟೆದಿನ್ನೆ	ಪಾಸಲಪರತಿ

ಇಸ್ತಿಹಾರ್ನಾಮ.

ನಂ|| 121. 17ನೇ ಸೆಪ್ಟಂಬರು 1887ನೇ ಇಸವಿ.

ಬಾಗಾಯಿತು ಸಾಗುವಳಿಗೆ ಸರಕಾರದ ಜಮೀನನ್ನು ರಿಯಾಯಿತೀ ಷರತ್ತಿನ ಮೇಲೆ ಕೊಡುವದಕ್ಕೋಸ್ಕರವಾಗಿ ಈ ಮುಂದೆ ವಿವರಿಸುವ ನಿಬಂಧನೆಗಳು ಶ್ರೀಮನ್ಮಹಾರಾಜಾ ಸರಕಾರದವರಿಂದ ಮಂಜೂರಾಗಿ ಸರ್ವರಿಗೂ ತಿಳಿಯಲು ಪ್ರಾಯಿಷ್ ಮಾಡಲ್ಪಟ್ಟಿರುತ್ತವೆ:—

1. ತರಂ ಮೊಕರರು ಆಗದೇ ಇರುವ ಸರ್ಕಾರಿ ಬಂಜರಿನಲ್ಲಿ ಧವಪ್ಯೆರು ಬಾಗಾಯಿತು ಸಾಗುವಳಿಗೋಸ್ಕರ ದರಖಾಸ್ತು ಬಂದರೆ ಇತರ ಆಕ್ಷೇಪಣೆ ಏನೂ ಇಲ್ಲದ ಪಕ್ಷದಲ್ಲಿ ಸದರೀ ಜಮೀನು ದರಖಾಸ್ತುದಾರನಿಗೆ ಈ ಕೆಳಗೆ ವಿವರಿಸುವ ದರಗಳ ಮೇರೆ ಕೊಡಲ್ಪಡುವದು ಹ್ಯಾಗಂದರೆ:

A. ಮಲನಾಡಿನ ಅಡಿಕೆ ತೋಟಗಳಿಗೆ.

1ನೇದು.—ಜಮೀನು ಕೊಡಲ್ಪಟ್ಟ ಲಾಗಾಯಿತು ಷುರೂ 12 ವರುಷಗಳವರಿವಿಗೂ ಎಕರೆ 1ಕ್ಕೆ ಸಾಲೀಯಾನಾ 4 ಆಣೆ ಪ್ರಕಾರ.

2ನೇದು.—ಆ ಗ್ರಾಮದಲ್ಲಿ ಅದೇ ತರಹೇದ ತೋಟಗಳಿಗೆ ಬಿದ್ದಿರುವ ಸರಾಸರಿ ಬಾಗಾಯತು ದರದಲ್ಲಿಯಾಗಲಿ, ಅಥವಾ ಆ ಗ್ರಾಮದಲ್ಲಿ ಅಂಥಾ ಬಾಗಾಯತು ಇಲ್ಲದಿದ್ದರೆ ಅಜೂಬಾಜೂ ಗ್ರಾಮದಲ್ಲಿ ಸದರೀ ತರಹೇದ ಬಾಗಾಯತಿಗೆ ಮೊಕರರು ಆಗಿಯಿರುವ ಸರಾಸರೀ ದರದಲ್ಲಿಯಾಗಲಿ, ಅಥವಾ ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲಾಗಲಿ, ರವಿನ್ಯೂ ಸರ್ವೆ ಸೆಟಲ್‌ಮೆಂಟು ಜಾರಿಗೆ ಬರುವಾಗಲಾಗಲಿ, ಸದರೀ ಸೆಟಲ್‌ಮೆಂಟು ಬದಲಾಯಿಸುವಾಗಾಗಲಿ, ಸರ್ವೆ ಸೂಪರಿಂಟೆಂಡೆಂಟರವರಿಂದ ಮೊಕರರು ಮಾಡಲ್ಪಡುವ ಬಾಗಾಯತು ದರದಲ್ಲಿಯಾಗಲಿ—

13ನೇ ವರ್ಷ—ಕಾಲು ಭಾಗ.
14ನೇ ವರ್ಷ—ಅರ್ಧ ಭಾಗ.
15ನೇ ವರ್ಷ—ಮುಕ್ಕಾಲು ಭಾಗ.

3ನೇದು.—ಮೇಲೆ ನಮೂದಾದಂತೆ ಮೊಕರರು ಆದ ಪೂರಾ ಬಾಗಾಯತು ದರವು 16ನೇ ವರ್ಷದ ಲಾಗಾಯತು ಜಾರೀಲಿ ಬರತಕ್ಕದ್ದು.

B. ಮೈದಾ ಪ್ರದೇಶಗಳಲ್ಲಿನ ಅಡಿಕೆ ತೋಟಗಳಿಗೂ ಮತ್ತು ಎಲ್ಲಾ ತೆಂಗಿನ ತೋಟಗಳಿಗೂ.

1ನೇದು.—ಜಮೀನು ಕೊಡಲ್ಪಟ್ಟ ಲಾಗಾಯತು ಮೊದಲು 9 ವರ್ಷಗಳವರೆವಿಗೂ ಎಕರೆ 1ಕ್ಕೆ ಸಾಲೀಯಾನಾ 4 ಅಣೆ ಪ್ರಕಾರ.

2ನೇದು.—ಆ ಗ್ರಾಮದಲ್ಲಿ ಅದೇ ತರಹೇದ ತೋಟಗಳಿಗೆ ಬಿದ್ದಿರುವ ಸರಾಸರಿ ಬಾಗಾಯತು ದರದಲ್ಲಿಯಾಗಲಿ, ಅಥವಾ ಆ ಗ್ರಾಮದಲ್ಲಿ ಅಂಥಾ ಬಾಗಾಯತು ಇಲ್ಲದಿದ್ದರೆ ಆಜೂಬಾಜೂ ಗ್ರಾಮದಲ್ಲಿ ಸದರೀ ಬಾಗಾಯತಿಗೆ ಮೊಕರರು ಆಗಿಯಿರುವ ಸರಾಸರೀ ದರದಲ್ಲಿ ಆಗಲೀ ಅಥವಾ ಡೆಪ್ಯುಟಿ ಕಮಿಷನರವರ ರಿಪೋರ್ಟಿನ ಮೇಲಾಗಲಿ, ರೆವಿನ್ಯೂ ಸರ್ವೆ ಸೆಟಲ್‌ಮೆಂಟು ಜಾರೀಗೆ ಬರುವಾಗಾಗಲಿ, ಸದರೀ ಸೆಟಲ್‌ಮೆಂಟು ಬದಲಾಯಿಸುವಾಗಾಗಲಿ, ಸರ್ವೆ ಸೂಪರಿಂಟೆಂಡೆಂಟರವರಿಂದ ಮೊಕರರು ಮಾಡಲ್ಪಡುವ ಬಾಗಾಯತು ದರದಲ್ಲಿಯಾಗಲಿ—

10ನೇ ವರ್ಷ—ಕಾಲು ಭಾಗ.
11ನೇ ವರ್ಷ—ಅರ್ಧ ಭಾಗ.
12ನೇ ವರ್ಷ—ಮುಕ್ಕಾಲು ಭಾಗ.

3ನೇದು.—13ನೇ ವರ್ಷದ ಲಾಗಾಯತು ಮೇಲೆ ನಮೂದಾದಂತೆ ಮೊಕರರು ಆದ ಪೂರಾ ಬಾಗಾಯತುದರವು ಜಾರೀಯಲ್ಲಿ ಬರತಕ್ಕದ್ದು.

2. ಜಮೀನು ಪಡದುಕೊಂಡ 2 ವರುಷಗಳ ವಳಗಾಗಿ ಅದರಲ್ಲಿ ಸೊಸಿಗಳನ್ನು ಸಂಪೂರ್ಣವಾಗಿ ಹಾಕತಕ್ಕದ್ದು. ಆದರೆ ಬಾಗಾಯತು ಸಾಗುವಳೀಗಾಗಿ ಕೊಟ್ಟ ಜಮೀನು 50 ಎಕರೆಗಳಿಗೆ ಹೆಚ್ಚಾಗಿ ಇದ್ದಲ್ಲಿ ಸಾಗುವಳೀದಾರನು ಪ್ರತಿ ವರ್ಷವೂ ತಾನು ಪಡದಿರುವ ಜಮೀನಿನ 5ರಲ್ಲಿ ಒಂದು ಭಾಗದ ಮೇರೆ ಸೊಸಿಗಳನ್ನು ಹಾಕುತ್ತಾ 5ನೇ ವರ್ಷ ಪೂರೈಸುವದರ ಒಳಗಾಗಿ ಸದರೀ ಜಮೀನು ಪೂರ್ತ ಸೊಸಿಗಳನ್ನು ಹಾಕಿರತಕ್ಕದ್ದು. ಸೊಸಿಗಳು ಹಾಕುವ ಭಾಗದಲ್ಲಿ ಈ ಷರತ್ತುಗಳಿಗೆ ತಪ್ಪಿದರೆ ಸದರೀ ದರೋಬಸ್ತು ಜಮೀನಿಗೂ ಮೇಲೆ ಹೇಳಿದ ಪೂರಾ ಬಾಗಾಯತು ದರದ ಮೇರೆ ಪೂರಾ ಕಂದಾಯ ಮೊಕರರು ಮಾಡಲ್ಪಡುವದಲ್ಲದೆ ಅದರಲ್ಲಿ ಸಾಗುವಳೀಗೆ ಕೊಡುವಕಾಲದಲ್ಲಿ ಇದ್ದ ಮರಗಳ ಕಿಮ್ಮತು ಅಂದಾಜು ಮೊಬಲಗು ಜುರ್ಮಾನೇ ತರೀಕ್ ವಸೂಲು ಮಾಡಲ್ಪಡುವದು. ಈ ನಿಬಂಧನೆಗಳನ್ನನುಸರಿಸಿ ಕೊಡಲ್ಪಡುವ ಕೌಲ್‌ನಲ್ಲಿ ಸದರೀ ಜುರ್ಮಾನೇ ಮೊಬಲಗು ಇಷ್ಟೆಂದು ದಾಖಲಾಗಿರತಕ್ಕದ್ದು. ಸಾಗುವಳೀಗೆ ಕೊಟ್ಟ ದರೋಬಸ್ತು ಜಮೀನಿನಲ್ಲಿಯೂ ಮೇಲೆ ಕಂಡ ವಾಯಿದೇ ಒಳಗಾಗಿ ಸೊಸಿಗಳನ್ನು ಹಾಕುವದಕ್ಕೆ ತಪ್ಪಿ ಹೋಗುವ ಸಾಗುವಳೀದಾರನು ಸದರೀ ಜಮೀನಿನ ಪೈಕೀ 10 ಎಕರೆಗೆ ಕಮ್ಮಿ ಇಲ್ಲದಂಥ ಒಂದೇ ಪ್ರದೇಶದಲ್ಲಿರತಕ್ಕ ತಾಕುಗಳನ್ನು ರಾಜೀನಾಮೇ ಮೂಲಕ ಸರಕಾರಕ್ಕೆ ಒಪ್ಪಿಸಬಹುದು.

3. ಮೈದಾ ತಾಲ್ಲೂಕುಗಳಲ್ಲಿ ಸರ್ವೇಯಲ್ಲಿ ಸಾಗುವಳೀಯಿಂದ ವಿನಾಯಿಸಲ್ಪಟ್ಟಿರುವ ಕೆರೆಗೆ ನೀರು ಬರುವ ಕಾಲುವೆ, ವಳಗೆರೆ ಓಣಿ ಇತ್ಯಾದಿ ಜಾಗಾಗಳಲ್ಲಿರುವ ಅಲ್ಪಸ್ವಲ್ಪವಾದ ಜಮೀನಿಗೆ ಈ ನಿಬಂಧನೆಗಳನ್ನನುಸರಿಸಿ ಕೌಲ್ ಕೊಡಕೂಡದು. ಈ ನಿಬಂಧನೆಗಳ ಮೇರೆ ಕೌಲ್ ಕೊಡತಕ್ಕ ಪ್ರದೇಶವು 2 ಎಕರೆಗಳಿಗಿಂತ ಕಮ್ಮಿಯಾಗಿರಕೂಡದು.

4. ಮೇಲಿನ ನಿಬಂಧನೆಗಳಲ್ಲಿ ನಮೂದಿಸಿರುವ ಬಾಗಾಯತು ದರವು ತಾಲ್ಲೂಕಾಮುಳೇ ಎಲ್ಲಾ ಜಮೀನುಗಳ ತರಂ ಬದಲಾಯಿಸುವಕಾಲದಲ್ಲಿ ವಿನಹಾ ಬದಲಾಯಿಸಲ್ಪಡಕೂಡದು.

5. ಸರ್ವೇ ಸೆಟಲ್‌ಮೆಂಟ್ ಆಗಿರುವ ತಾಲ್ಲೂಕುಗಳಲ್ಲಿಯೂ ಮತ್ತು ಸರ್ವೇ ಆಗದೇ ಇರುವ ತಾಲ್ಲೂಕುಗಳಲ್ಲಿಯೂ ಸಹ ಈ ನಿಬಂಧನೆಗಳನ್ನನುಸರಿಸಿ ಇದಕ್ಕೆ ಲಗ್ಗತ್ತು ಮಾಡಿ ಇರುವ ನಮೂನೇಯಂತೆ ಕೌಲ್ ಕೊಡತಕ್ಕದ್ದು.

6. ಈ ನಿಬಂಧನೆಗಳ ಪ್ರಕಾರ ಕೌಲ್‌ಗಳ ಬಗ್ಯೆ ದರಖಾಸ್ತುಗಳನ್ನು ಬರಹ ಮೂಲಕವಾಗಿ ತಾಲ್ಲೂಕು ಅಮಲ್‌ದಾರ್ರಿಗೆ ಕೊಡಬೇಕು. ಅಮಲ್‌ದಾರ್ರು ಸಾಧ್ಯವಾದಷ್ಟು ಸ್ವಲ್ಪ ಸಾವಕಾಶದಿಂದ ಅವಶ್ಯವಾದ ವಿಚಾರಣೇ ನಡಿಸಿ ಸದರೀ ದರಖಾಸ್ತನ್ನು ಡೆಪ್ಯುಟಿ ಕಮಿಷನರವರ ಹುಕ್ಕುಂ ಬಗ್ಯೆ ಕಳುಹಿಸತಕ್ಕದ್ದು.

7. ಹಾಲೀ ಬಾಗಾಯತು ದರ ವೊಕರರು ಆಗಿರುವ ಅಡಿಕೆ ಮತ್ತು ತೆಂಗಿನ ತೋಟಗಳು ಯಾವ ಕಾರಣದಿಂದಲಾದರೂ ಈ ತಾರೀಖಿನಿಂದ ಹಿಂದೆ 3 ವರ್ಷಗಳ ಲಾಗಾಯತು ಹಿಡುವಳೀ ಕೆಳಗೆ ಬಾರದೇ ಇದ್ದಲ್ಲಿ ಡೆಪ್ಯುಟಿ ಕಮ್ಮಿಷನರವರು ಅಂಥಾ ತೋಟಗಳ ಹಾಲೀ ಸ್ಥಿತಿಯನ್ನು ನೋಡಿ ನ್ಯಾಯವಾಗಿ ಮುನಾಸಬು ತೋರಿದಲ್ಲಿ 1ನೇ ಕಲಮಿನಲ್ಲಿ ನಮೂದಾಗುವ ರಿಯಾಯತೀ ಕಂದಾಯದ ಅವಧಿಯಲ್ಲಿ ಅರ್ಧಕ್ಕೆ ಹೆಚ್ಚಿಲ್ಲದಂತೆ ಹಂಗಾಮಿಯಾಗಿ ರಿಮಿಷನ್ ಕೊಡಬಹುದು.

8. ಮೇಲೆ 7ನೇ ಕಲಂಗೆ ಲಗಾವಾಗುವ ಜಮೀನುಗಳ ವಿಷಯದಲ್ಲಿ ಆ ಕಲಂನಲ್ಲಿ ನಮೂದಾಗುವದಕ್ಕಿಂತಲೂ ಜಾಸ್ತಿಯಾದ ರಿಯಾಯತೀ ತೋರಿಸತಕ್ಕದ್ದು ಅವಶ್ಯಕವೆಂದು ಡೆಪ್ಯುಟಿ ಕಮ್ಮಿಷನರವರು ಅಭಿಪ್ರಾಯಪಡುವ ಸಂದರ್ಭದಲ್ಲಿ ಅಂಥಾ ವಿಷಯಗಳನ್ನು ಅವರು ಸರ್ವೇ ಸೂಪರ್ಇಂಟೆಂಡೆಂಟರವರ ಮೂಲಕವಾಗಿ ಗವರ್ನಮೆಂಟಿನವರ ಹುಕ್ಕುಂ ಬಗ್ಗೆ ಸ್ಪೆಷಲ್ ಆಗಿ ರಿಪೋರ್ಟು ಮಾಡತಕ್ಕದ್ದು.

9. 1ನೇ ಕಲಂನಲ್ಲಿ ನಮೂದಾಗಿರುವಂತೆ ಬಾಗಾಯತು ದರವನ್ನು ತಿಳಿದುಕೊಳ್ಳುವದು ಸಾವಕಾಶವಾಗುವ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಕೌಲ್ ದರಖಾಸ್ತನ್ನು ಮಂಜೂರು ಮಾಡಿ ನಂತರ ವೊಕರರ್ ಆಗಬೇಕಾದ ಬಾಗಾಯತು ದರವನ್ನು ವ್ಯವಸ್ಥೆ ಮಾಡತಕ್ಕದ್ದು. ಇಂಥಾ ಸಂದರ್ಭದಲ್ಲಿ ಸಾಧ್ಯವಾದಷ್ಟು ಜಾಗ್ರತೆಯಾಗಿ ಬಾಗಾಯತು ದರವನ್ನು ನಂತರ ವೊಕರರ್ ಮಾಡಿ ಮೊದಲು ಕೊಟ್ಟ ಕೌಲಿಗೆ ಬದಲಾಗಿ ಹೊಸ ಕೌಲ್ ತಯಾರುಮಾಡಿಸಿ ಅದರಲ್ಲಿ ಸದರೀ ದರವನ್ನು ನಮೂದಿಸತಕ್ಕದ್ದು.

10. ಮಲನಾಡು ತಾಲ್ಲೂಕುಗಳಲ್ಲಿ ತರಂ ದಾಖಲಾಗದೇ ಇರುವ ಸರಕಾರೀ ಬಂಜರು ಜಮೀನುಗಳನ್ನು ತತ್ಕಾಲದಲ್ಲಿ ಜಾರೀಲಿರುವ ಸ್ಪೆಷಲ್ ಬಾಗಾಯತು ದರಕ್ಕೆ ಒಳಪಡುವ ಷರತ್ತಿನ ಮೇಲೆ ವಿನಹಾ ಹೊಸದಾಗಿ ತರಂ ವೊಕರರು ಮಾಡಿ ಸಾಗುವಳೀಬಗ್ಗೆ ಕೊಡಕೂಡದು.

ಅ ಪೆ ್ಡ ಡಿ ಕ್ಸ್.

1887ನೇ ಇಸವಿ ಸೆಪ್ಟಂಬರ್ ಮಾಹೇ 17ನೇ ಮರ್ಕುಂ 121ನೇ ನಂಬರು ಇಸ್ತಿಹಾರ್‌ನಾಮಾ ಪ್ರಕಾರ ಕೊಡಲ್ಪಡುವ ಕೌಲ್ ನಾಮೆಯ ನಮೂನೆ:—

ಡಿಸ್ಟ್ರಿಕ್ಟ್ಸು ಡೆಪ್ಯುಟಿ ಕಮ್ಮಿಷನರವರಿಂದ ತಾಲ್ಲೂಕು
ಗ್ರಾಮದಲ್ಲಿ ವಾಸವಾಗಿರುವ ನ ಮಗ ಗೆ ಕೊಡಲ್ಪಟ್ಟ ಕೌಲ್‌ನಾಮು.

1887ನೇ ಇಸವಿ ಸೆಪ್ಟಂಬರ್ ಮಾಹೇ 17ನೇ ಮರ್ಕುಂ ನೇ ನಂಬರು ಇಸ್ತಿಹಾರ್‌ನಾಮೆಯ ಪ್ರಕಾರ ರಿಯಾಯಿತಿ ಷರತ್ತುಗಳ ಮೇಲೆ ಹೊಸದಾಗಿ ಸಸಿಗಳನ್ನು ಹಾಕಿ ಬಾಗಾಯಿತು ಸಾಗುವಳೀ *[ಅಭಿವೃದ್ಧಿ] ಮಾಡುವ ಬಗ್ಗೆ ಈ ಕೆಳಗೆ ನಮೂದಾಗುವ ಜಮೀನನ್ನು ನಿನಗೆ ಕೊಡಲ್ಪಟ್ಟಿದೆ.

ಜಮೀನಿನ ತಪಶೀಲು.

ತಾಲ್ಲೂಕು.	ಗ್ರಾಮ.	ಜಮೀನಿನ ನಂಬರು.	ಬೀಜವರಿ.		ಸರಕಾರದ ಬಂಜರು ಜಮೀನು ಆಕಾರ ಕಂಡದ್ದೋ ಕಾಣದ್ದೋ.	ಜಮೀನು ಆಕಾರಕಂಡದ್ದಾದರೆ				ಷರಾ.
			ಎಕರೆ.	ಗುಂಟೆ.		ಹಾಲೀ ಖುಷ್ಕಿ ತರಿ ಯಾ ಬಾಗಾಯಿತೀ.	ಹಾಲಿ ಆಕಾರ.			
							ರೂ.	ಆ.	ಪೈ.	

2. ಮೇಲ್ಕಂಡ ಜಮೀನಿಗೋಸ್ಕರ ಈ ಕೆಳಗೆ ನಮೂದಾಗುವ ಮೇರೆ ಕಂದಾಯವನ್ನು ಕೊಡತಕ್ಕದ್ದು.

ಸಂವತ್ಸರ.	ಇಸವಿ.	ಸಾಲೀಯಾನಾ ಕಂದಾಯು. ರೂ.	ಅ.	ಪೈ.	ಮೊಕರರಾಗಿರುವ ಕಂದಾಯದ ದರ.
1	2	3			4
1ನೇ ಸಂವತ್ಸರ	188—8	..	..	..	ಎಕರೆ 1ಕ್ಕೆ 4 ಆಣೆ ಮೇರೆ.
2ನೇ ಡಿಟೋ					ಡಿಟೋ
3ನೇ ಡಿಟೋ					ಡಿಟೋ
4ನೇ ಡಿಟೋ					ಡಿಟೋ
5ನೇ ಡಿಟೋ					ಡಿಟೋ
6ನೇ ಡಿಟೋ					ಡಿಟೋ
7ನೇ ಡಿಟೋ					ಡಿಟೋ
8ನೇ ಡಿಟೋ					ಡಿಟೋ
9ನೇ ಡಿಟೋ					ಡಿಟೋ
10ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಚತುರ್ಥಾಂಶ]
11ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಅರ್ಧಾಂಶ]
12ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಮುಕ್ಕಾಲುಭಾಗ]
13ನೇ ಡಿಟೋ					{ ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಚತುರ್ಥಾಂಶ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ಪೂರಾ ದರ]
14ನೇ ಡಿಟೋ					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಅರ್ಧಾಂಶ
15ನೇ ಡಿಟೋ					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಮುಕ್ಕಾಲು ಭಾಗ.
16ನೇ ಸಂವತ್ಸರದ ಲಾಗಾಯ್ತು.					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ಪೂರಾ ದರ.

ನೋಟ್ * 7ನೇ ರೂಲಿನ ಪ್ರಕಾರ ಕೊಡಲ್ಪಡುವ ಕೌಲ್‌ನಾಮಾಗಳಲ್ಲಿ ಇದು ದಾಖಲಾಗತಕ್ಕದ್ದು.

ನೋಟ್ † 1 B ರೂಲ್ ಮೇರೆ ಕೊಡಲ್ಪಡುವ ಮೈದಾನಿನಲ್ಲಿರುವ ಅಡಿಕೇ ತೋಟಗಳಿಗೂ ಸಮಸ್ತ ತೆಂಗಿನ ತೋಟಗಳಿಗೂ ಇದು ದಾಖಲಾಗತಕ್ಕದ್ದು.

3. ಈ ತಖ್ತೆಯ 4ನೇ ಜಿಡ್ಡಿನಲ್ಲಿ ನಮೂದಾಗಿರುವ ಬಾಗಾಯಿತು ಕಂದಾಯದ ದರವು ತಾಲ್ಲೂಕಾಮುಳೆ *[ಸರ್ವೇ ಸೆಟ್ಲಮೆಂಟ್ ವೇಳೆ] ಸರ್ವೇ ಸೆಟ್ಲಮೆಂಟ್ ಶಿಸ್ತುಪಾಟಾಗುವ ವೇಳೆ ಬದಲಾವಣೆಗೆ ವಳಪಟ್ಟಿರುತ್ತೆ.

4. ಈ ತಾರೀಖು ಲಾಗಾಯಿತು 2†(5) ಸಂವತ್ಸರಗಳೊಳಗೆ ಮೇಲ್ಕಂಡ ಎಲ್ಲಾ ಪ್ರದೇಶದಲ್ಲಿಯೂ ಸೊಸಿಗಳನ್ನ ಹಾಕಿರಬೇಕು ಇದಕ್ಕೆ ತಪ್ಪಿದಲ್ಲಿ 3ನೇ †[6ನೇ] ಸಂವತ್ಸರದ ಲಾಗಾಯಿತು ನೀನು ತೆಗದುಕೊಂಡಿರುವ ವಿಸ್ತ್ಯ ಜಮೀನಿಗೂ ಬಾಗಾಯಿತು ಪೂರಾ ದರ ವಾದ ಎಕರೆ 1ಕ್ಕೆ ರೂಪಾಯಿನಂತೆ ನಿನ್ನಿಂದಾ ಪೂರಾ ಕಂದಾಯ ವಸೂಲ್ಮಾಡುವದು. ‡ [ಶಿವಾಯಿ ಮೇಲ್ಕಂಡ ಜಮೀನಿನಲ್ಲಿ ಈಗ ಇರುವ ಮರಗಳ ಕಿಮ್ಮತಿನ ಅಂದಾಜಾ ಮೊಬಲಗು ರೂಪಾಯಿಗಳು ಜುರ್ಮಾನೆಯ ತರೀಕ್ ಕಂದಾಯದ ಬಾಕಿಯಂತೆ ನಿನ್ನಿಂದಾ ವಸೂಲ್‌ಮಾಡಲ್ಪಡುವದು.]

5. ನೀನು ತೆಗದುಕೊಂಡಿರುವ ಜಮೀನ್ ವಿಸ್ತ್ಯಕ್ಕೂ 4ನೇ ಪ್ಯಾರಾದಲ್ಲಿ ನಮೂದಾಗಿರುವ ವಾಯಿದೆ ವಳಗೆ ಸೊಸಿಗಳನ್ನು ಹಾಕಲು ಅನುಕೂಲಿಸದಿದ್ದರೆ ಮೇಲ್ಕಂಡ ಜಮೀನಿನ ಪೈಕಿ ಎಷ್ಟು ಭಾಗವನ್ನಾದರೂ 10 ಎಕರೆಗಳಿಗೆ ಕಮ್ಮಿ ಇಲ್ಲದಂತೆ ಒಂದೇ ಪ್ರದೇಶದಲ್ಲಿರತಕ್ಕ ತಾಕುಗಳನ್ನು ನೀನು ರಾಜೀನಾಮೆ ಕೊಡಬಹುದು.

6. ಎರಡನೇ ಪ್ಯಾರಕ್ಕೆ ಸೇರಿರುವ ತಖ್ತೆಯಲ್ಲಿ ನಮೂದಾಗಿರುವ ಮೇರೆ ಸರಕಾರಕ್ಕೆ ಸಾಲೀಯಾನಾ ಸಲ್ಲಬೇಕಾದ ಕಂದಾಯವು ಈ ಡಿಸ್ಟ್ರಿಕ್ಟಿನಲ್ಲಿ ಕಂದಾಯದ ವಸೂಲಿಗೋಸ್ಕರ ಮೊಕರರಾಗಿರುವ ಖಿಸ್ತುಬಂದಿ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

ಈ ಕೌಲ್‌ನಾಮಾ ನಮ್ಮ ದಸ್ತಕತ್ ಮೊಹರಿನಿಸಿ 18 ನೇ ಇಸವಿ ಮಾಹೆ ಮರ್ಕುಂನಲ್ಲು ಕೊಡಲ್ಪಟ್ಟಿದೆ.

ಡೆಪ್ಯುಟಿ ಕಮ್ಮಿಷನರ್,
ಡಿಸ್ಟ್ರಿಕ್ಟು.

ನೋಟ್ * ಸೆಟ್ಲಾದ ತಾಲ್ಲೂಕುಗಳಲ್ಲಿ ಇದನ್ನು ದಾಖಲ್ಮಾಡಲವಶ್ಯಕವಿಲ್ಲ.

†. 50 ಎಕರೆಗಳಿಗಿಂತ ಜಾಸ್ತಿಯಾಗಿರುವ ಜಮೀನಿನ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

‡ ಹತ್ತು ರೂಪಾಯಿಗಳಿಗಿಂತ ಜಾಸ್ತಿ ಬೆಲೆಯಾಗುವಷ್ಟು ಮರಗಳಿರುವ ಸರ್ಕಾರದ ಬಂಜರು ಜಮೀನು ಕೊಡಲ್ಪಡುವ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

XVII. ಯಿರಿಗೇಷರ್ನ ಸೆಸ್ಸ್ಸಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲಿ ಇನಾಂ ತರೀಕೆ ಯಿರತಕ್ಕ ತಮಾಂ ತರೀ ಜಮೀನುಗಳ ಐಯಿಂದ ಠರಾವ್ ಆಗತಕ್ಕ ಸರ್ವೆ ಆಕಾರದಲ್ಲಿ ಬದಸ್ತೂರು ಶೇರಿಸಲ್ಪಡ ತಕ್ಕದ್ದು. ಮತ್ತು ಅಂಥಾ ಆಕಾರದ $\frac{1}{7}$ರ ಭಾಗವು ಬದಸ್ತೂರು ಜೋಡೀಮೇಲೆ ಪರಂತು "ಯಿರಿಗೇಷರ್ನ ಸೆಸ್ಸಿಗೆ ಸಮಾನಾದ ಮೊಬಲಗು" ಯಂಬ ಹೆಸರಿನಿಂದ ಮತ್ತು ಅಂಥಾ ಜಮೀನು ಯಾ ಗ್ರಾಮಗಳ ಮೇಲೆ ಅಲಾಹಿದಾ ವಸೂಲ್ ಮಾಡಲ್ಪಡಬೇಕಾದ ಕ್ವಿಟ್‌ರೆಂಟ್ ದೇಖೀಲ್ ವಸೂಲ್‌ಮಾಡಲ್ಪಡತಕ್ಕದ್ದಲ್ಲದೆ "ಡಿಸ್ಟ್ರಿಕ್ಟು ಯಿರಿಗೇಷರ್ನ ಫಂಡ್" ಹೆಡ್ಡಿಗೆ ಲೆಖ್ಖದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮೀನುಗಳು ಪೂರಾ ಇನಾಂ ಗ್ರಾಮಗಳಲ್ಲಿ ಯಿದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ವದಗಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಮೊಬಲಗಾಗಲಿ ಸರ್ಕಾರಕ್ಕೆ ತೆರಬೇಕಾದ್ದಿಲ್ಲವು.

ಪರಂತು ಯಿರಿಗೇಷರ್ನ ಸೆಸ್ಸುಯಾನೆ ನೀರು ಸರದಿಯನ್ನು ಠರಾವ್ ಮಾಡುವದಕ್ಕೋಸ್ಕರ ಸರ್ವೆ ಇಲಾಖೆಯವರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮಗಳಲ್ಲಿರತಕ್ಕ ಅಂಥಾ ತರೀ ಜಮೀನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು. ಮತ್ತು ತಮಾಂ ಇನಾಂ ಯಾ ಇತರ ತರೀ ಜಮೀನುಗಳ ಸರ್ವೆ ಆಕಾರದಲ್ಲಿ ಅವುಗಳ ಮೇಲೆ ಠರಾಪ್ ಮಾಡಲ್ಪಡಬಹುದಾದ ಯಾವದಾದರೂ ಅಲಾಹಿದಾ ನೀರು ಸರದಿಯೂ ಅಡಗಿ ಯಿರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮಗಳಿಗೂ ಮತ್ತು (ಸರ್ವಮಾನ್ಯ ಯಾ ಜೋಡೀ) ಇನಾಂ ಗ್ರಾಮಗಳಿಗೂ ರೂಪಾಯಿ ಬಂದಕ್ಕೆ ಬಂದಾಣೆಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾಯಂಗುತ್ತಾ ಮೊಬಲಗಿ ಮೇನೇಲೂ ಇನಾಂ ಗ್ರಾಮಗಳ ವಿಷಯದಲ್ಲಿ ಇನಾಂ ಗ್ರಾಮಗಳ ಆಕಾರದಮೇಲೂ ವಸೂಲ್ ಮಾಡಲ್ಪಡತಕ್ಕದ್ದು.

ನಂ. 129.—1875ನೇ ಇಸವಿ ಮೇ 7ನೇ ಮರ್ಕುಂ 62ನೇ ನಂಬರುಳ್ಳ ಮಾಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಂದಿಗೆ ಫಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟು ಯಿರಿಗೇಷರ್ನ ಸೆಸ್ಸ ಫಂಡಿನ ಆಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟು ಕಮ್ಮಿಟಿಗಳವರು ಅನುಸರಿಸತಕ್ಕ ಬಗ್ಯೆ ಏರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರೆಗೆ ತಿದ್ದುಪಾಟಾಗಿರುತ್ತದೆ:—

VI. ಇನಾಂ ವ ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ಸಾಗುವಳೀ ಆಗುವ ತರೀ ಜಮೀನಿಗಾಗಿ ನೀರು ಸರದಿಯನ್ನ ತೆರಬೇಕಾದ ಆವಶ್ಯಕತೆ ತಪ್ಪಿರುತ್ತದೆಯಾಗಿ ಅಂಥಾ ಕೆರೆಗಳಿಗೆ ಕಾಲಕಾಲಕ್ಕೆ ರಿಪೇರಿ ಮಾಡುವಂಥಾ ವ ಅವುಗಳನ್ನ ಒಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂಥಾ ಜವಾಬ್‌ದಾರಿಯು ಖಂಡಿತವಾಗಿ ಜಾರೀಯಲ್ಲಿ ತರಲ್ಪಡತಕ್ಕದ್ದು. ಒಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ಒಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಅವಶ್ಯಕವಾದ ಕಾಮಗಾರಿಗಳನ್ನ ಸಕಾಲದಲ್ಲಿ ಸಾಧ್ಯವಾದ ತ್ವರ್‍ಯದಿಂದಲೂ ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂಥಾ ಕಾಮಗಾರೀ ವಗೈರೇ ಕೆಲಸವನ್ನ ಗವರ್ನಮೆಂಟಿನವರೇ ತೆಗದುಕೊಂಡು ಖುದ್ದು ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಲಾಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

ತಾರೀಖು 3ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1380.—ಸೊರಬದ ಅಮಲ್‌ದಾರ್ ರ್ಯ. ವೆಂಕಟರಾಯರಿಗೆ, 1887ನೇ ಇಸವಿ ಆಗಸ್ಟು 26ನೇ ಮರ್ಕುಂ ಕ್ಯಾಂಪ್ 1048ನೇ ನಂಬರುಳ್ಳ ದಿವಾನರವರ ಇಸ್ತಿಹಾರಿನಿಂದ ಬಗರ್ ತಲಬಿನಮೇಲೆ ಮಂಜೂರ್ಮಾಡಲ್ಪಟ್ಟಿದ್ದ ವೊಂದು ತಿಂಗಳ ರಜಾಕ್ಕೆ ಜಾಸ್ತಿಯಾಗಿ ಯಿನ್ನೂ 3 ವಾರಗಳ ರಜಾ ಕೊಡಲ್ಪಟ್ಟು ಯಿಥೆ.

ತಾರೀಖು 7ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1420.—ತೀರ್ಥಹಳ್ಳೀ ತಾಲ್ಲೂಕು ಅಮಲ್‌ದಾರ್ ತಿರುಮಲಾಚಾರ್‍ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಒಂದು ತಿಂಗಳಪ್ರಿವಿಲೀಜ್ ರಜಾ ಕೊಡಲ್ಪಟ್ಟಿಥೆ.

ತಿರುಮಲಾಚಾರ್‍ರು ರಜಾಮೇಲೆ ಇರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೂ ಶಿವಮೊಗ್ಗಾ ಡಿಸ್ಟ್ರಿಕ್ಟು ಕಮ್ಮಿಷನರ ಆಫೀಸಿನ ಹೆಡ್ ಅಕ್ಕೌಂಟೆಂಟೆ ಜೇ. ಜೆ. ಕೊಯಲ್ಹೋಯವರು ತೀರ್ಥಹಳ್ಳೀ ಅಮಲ್‌ದಾರ್ ವ 3ನೇ ಕ್ಲಾಸ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮ್ಯುನಿಸಿಪಲ್.

ನಂ. 131.—ಮೈಸೂರ ಷಹರಿನಲ್ಲಿ, ಕೆಲವು ಬೀದಿಗಳನ್ನ ಏರ್ಪಡಿಸತಕ್ಕ ಬಗ್ಯೆ ಈ ಕೆಳಗೆ ವಿವರಿಸೋಣಾದ ಜಮೀನ್‌ಗಳು, ಸರ್ಕಾರಕ್ಕೆ ಬೇಕಾಗಿರುತ್ತೆಂಬದಾಗಿ 1870ನೇ ಇಸವಿ 10ನೇ ಲ್ಯಾಂಡ್ ಅಕ್ವಿಜೇಷನ್ ಆಕ್ಟಿನ ಸೆಕ್ಷನ್ ಅನುಸರಿಸಿ ಯಿದರಿಂದ ಪ್ರಕಟಿಸಲ್ಪಟ್ಟು ಯಿಧೆ.

ನಂಬರು.	ಜಮೀನ್ ಇರತಕ್ಕ ಭಾಗ.	ಮಾಲೀಕರ ಹೆಸರುಗಳು.	ವಿಸ್ತೀರ್ಣ. ಪೂರ್ವ ಪಶ್ಚಿಮ ಅಡಿ.	ವಿಸ್ತೀರ್ಣ. ಉತ್ತರ ದಕ್ಷಿಣ ಅಡಿ.	ತಪಶೀಲು.	ಯಾವ ವರ್ಗಕ್ಕೆ ಸೇರಿದ್ದು?	ಚಕ್ಕುಬಂದಿ.
1	ಕಿಲ್ಲೆಯಲ್ಲಿ ಮೋತೀಖಾನೆ ಬೀದಿ	ನಂಜನಗೂಡು ನಂಜುಂಡಪ್ಪ.	24	60	ತಖ್ತಪೋಷ್ ಮನೆಯ 40 ಅಂಕಣಗಳು 11 ಅಂಕಣದ ತಾರಸೀ ಡಿಟೋ 1 ಭಾವಿ	ಚರಾಂಡೀನಲ್ಲಿ ಹಾಕುವ ಬಗ್ಯೆ	ಪೂರ್ವಕ್ಕೆ ರಾಮಣ್ಣನ ಮನೆ, ದಕ್ಷಿಣಕ್ಕೆ ಮೋತೀಖಾನೆ ಬೀದಿ, ಪಶ್ಚಿಮಕ್ಕೆ ಯಿಬ್ಬನಿಕಟ್ಟೆ ಮನೆ, ಉತ್ತರಕ್ಕೆ ರಾಮಣ್ಣನ ಮನೆ
2	ಡಿಟೋ	ರಾಮಣ್ಣ	18	24	3 ಹಂಚಿನ ಅಂಕಣಗಳು	ಡಿಟೋ	ಪೂರ್ವಕ್ಕೆ ತಿರುಮಲರಂಗಾಚಾರೀ ಮನೆ, ದಕ್ಷಿಣಕ್ಕೆ ನಂಜುಂಡಪ್ಪನ ಮನೆ, ಪಶ್ಚಿಮಕ್ಕೆ ರಾಮಣ್ಣನ ಮನೆ, ಉತ್ತರಕ್ಕೆ ಅನಂತಯ್ಯನ ಮನೆ
3	ಡಿಟೋ	ಅನಂತಯ್ಯ	11	16	ಜಮೀನು	ಡಿಟೋ	ಪೂರ್ವಕ್ಕೆ ಗಲ್ಲಿ, ದಕ್ಷಿಣಕ್ಕೆ ರಾಮಣ್ಣನ ಮನೆ, ಪಶ್ಚಿಮಕ್ಕೆ ಅನಂತಯ್ಯನ ಮನೆ, ಉತ್ತರಕ್ಕೆ ರಾಮಾಚಾರಿ ಮನೆ.
4	ಡಿಟೋ	ಪೆನಗೊಂಡೆ ರಾಮಾಚಾರ್	11	36	ಹಂಚಿನ 3 ಅಂಕಣ ತಾರಸೀವರಾಂಡಾವಿನ 3 ಅಂಕಣ, ತಖ್ತಪೋಷಿನ 2 ಅಂಕಣ ಹಂಚಿನ 2 ಅಂಕಣ	ಡಿಟೋ	ಪೂರ್ವಕ್ಕೆ ಗೋಪಾಲಾಚಾರಿ ಮನೆ, ದಕ್ಷಿಣಕ್ಕೆ ಅನಂತಯ್ಯನ ಮನೆ, ಪಶ್ಚಿಮಕ್ಕೆ ರಾಮಾಚಾರ್ರ ಮನೆ, ಉತ್ತರಕ್ಕೆ ವೆಂಟಸುಬಯ್ಯನ ಮನೆ
5	ವೆಂಕಟಸುಬಯ್ಯನವರ ಸಂದಿ	ದಾಸಂಭಟ್ಟ	33	46	ತಖ್ತಪೋಷ್ 11 ಅಂಕಣ, ಹಂಚಿನ 15 ಅಂಕಣ ಡಿಟೋ ವರಾಂಡ 5 ಅಂಕಣ ತಾರಸೀ 1 ಅಂಕಣ ಭಾವಿ 1	ಡಿಟೋ	ಪೂರ್ವಕ್ಕೆ ರಾಮಶಾಸ್ತ್ರೀ ಮನೆ, ದಕ್ಷಿಣಕ್ಕೆ ವೆಂಕಟಸುಬಯ್ಯನವರ ಸಂದಿ, ಪಶ್ಚಿಮಕ್ಕೆ [illegible] ಕೃಷ್ಣಪ್ಪನ ಮನೆ, ಉತ್ತರಕ್ಕೆ ಮುನಿಯಾಜಟ್ಟೀ ಬೀದಿ
6	ಕಿಲ್ಲೆಯಲ್ಲಿ ಮುನಿಯಾಜಟ್ಟೀ ಬೀದಿ	ನಾಗೇಶರಾವ್	10	60	ಹಂಚಿನ ಮಪ್ಪರದ 1 ಅಂಕಣ, 1 ಭಾವಿ	ಡಿಟೋ	ಪೂರ್ವಕ್ಕೆ ಮುರಾರಿರಾಯರ ಮನೆ, ದಕ್ಷಿಣಕ್ಕೆ ಸುಬ್ಬರಾಯರ ಜಮೀನು, ಪಶ್ಚಿಮಕ್ಕೆ ನಾಗೇಶರಾಯರ ಮನೆ, ಉತ್ತರಕ್ಕೆ ಮುನಿಯಾಜಟ್ಟೀಬೀದಿ
7	ಮೋತೀಖಾನಾ ಬೀದಿ	ಸುಬ್ಬರಾವ್	18	30	ಜಮೀನು	ಡಿಟೋ	ಪೂರ್ವಕ್ಕೆ ಸುಬ್ಬರಾಯರ ಮನೆ, ದಕ್ಷಿಣಕ್ಕೆ ಗರಳಪುರಿ ಶಾಸ್ತ್ರೀಗಳ ಮನೆಯಹಿತ್ತಲು, ಪಶ್ಚಿಮಕ್ಕೆ ವೆಂಕಟಕೃಷ್ಣ ಅರಸಿನವರ ಮನೆ, ಉತ್ತರಕ್ಕೆ ನಾಗೇಶರಾಯರ ಮನೆ
8	ಡಿಟೋ	ಗರಳಪುರಿಶಾಸ್ತ್ರಿ	18	33	ಹಂಚಿನ ಮಪ್ಪಾರ 1 ಅಂಕಣ	ಡಿಟೋ	ಪೂರ್ವಕ್ಕೆ ಗರಳಪುರಿಶಾಸ್ತ್ರಿಗಳ ಮನೆ, ದಕ್ಷಿಣಕ್ಕೆ ಮೂರ್ತೆಪ್ಪನ ಮಗ ನರಸಿಂಹಮೂರ್ತಿ ಮನೆ, ಪಶ್ಚಿಮಕ್ಕೆ ವೆಂಕಟಕೃಷ್ಣೋಅರಸಿನವರ ಮನೆ, ಉತ್ತರಕ್ಕೆ ಸುಬ್ಬರಾಯರ ಮನೆ

ನಂಬರು.	ಜಮೀನ್ ಇರತಕ್ಕ ಭಾಗ.	ಮಾಲೀಕರ ಹೆಸರುಗಳು.	ವಿಸ್ತೀರ್ಣ. ಪೂರ್ವಪಶ್ಚಿಮ ಅಡಿ	ಉತ್ತರದಕ್ಷಿಣ ಅಡಿ	ತಪಸೀಲು.	ಯಾವ ಹೋಬಳಿ ಸೇರಿದ್ದು	ಚಾತಪ್ರ್ಸ.
9	ಮೋತೀಖಾನಾ ಬೀದಿ	ಮೂರ್ತೆಪ್ಪನ ಮಗ ನೃಸಿಂಹ ಮೂರ್ತಿ	48 48	30 31	ತಾರಸೀ ಮನೆಯ 3 ಅಂಕಣ ತಖ್ತಪೋಷ್ 21 ಅಂಕಣ ಹಂಚಿನ 2 ಅಂಕಣ ಬಂಜರ್ ಜಮೀನು	ಚರಾಂಡೀನಲ್ಲಿ ಹಾಕುವ ಬ್ಯೆ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಮೋತೀಖಾನೆಬೀದಿ, ಪಶ್ಚಿಮಕ್ಕೆ ವೆಂಕಟಕೃಷ್ಣೋಅರಚಿನವರ ಮನೆ, ಉತ್ತರಕ್ಕೆ ಗರಳಪುರಿಶಾಸ್ತ್ರಿಗಳ ಮನೆ
10	ಡಿಟೋ	ಕಪನೀಪತಿ ಶಾಸ್ತ್ರಿ	26	66	ಹಂಚಿನ 16 ಅಂಕಣ ಡಿಟೋ ಪಪ್ಪಾರ 2 ಅಂಕಣ 1 ಭಾವಿ	ಡಿಟೋ	ಪೂರ್ವಕ್ಕೆ ವೆಂಕಟಸುಬಯ್ಯನ ಮನೆ, ದಕ್ಷಿಣಕ್ಕೆ ಸುಬಂಣನ ಮನೆ, ಪಶ್ಚಿಮಕ್ಕೆ ರಘುಪತಿ ಶಾಸ್ತ್ರಿಗಳ ಮನೆ, ಉತ್ತರಕ್ಕೆ ಮೋತೀಖಾನೆ ಬೀದಿ
11	ಡಿಟೋ	ಚಿಕ್ಕಲಿಂಗರಾಜೇಅರಸಿನವರು	22 20	33 20	ಹಂಚಿನ 9 ಅಂಕಣ ಜಮೀನು	ಡಿಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಮೋತೀಖಾನೆ ಬೀದಿ ಪಶ್ಚಿಮಕ್ಕೆ ಶಾಮರಾಯರ ಮನೆ, ಉತ್ತರಕ್ಕೆ ಮಾದಪ್ಪಶಾಸ್ತ್ರಿ ಮನೆ
12	ಡಿಟೋ	ಮಾದಪ್ಪ ಶಾಸ್ತ್ರಿ	18	22	ತಖ್ತಪೋಷ್ 5 ಅಂಕಣ ಹಂಚಿನ 2 ಅಂಕಣ	ಡಿಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಲಿಂಗರಾಜೇ ಅರಸಿನವರ ಲಾಯ, ಪಶ್ಚಿಮಕ್ಕೆ ಶಾಮರಾಯ ಬಂಜರ್ ಜಮೀನು, ಉತ್ತರಕ್ಕೆ ಸರಕಾರ್ ಜಮೀನು
13	ವೀಣೇ ವೆಂಕಟಸುಬ್ಬಯ್ಯನವರ ಬೀದಿ	ಸುಬ್ಬಂಣ	30	34	ತಾರಸೀ 7 ಅಂಕಣ ತಖ್ತಪೋಷ್ 12 ಅಂಕಣ ಹಂಚಿನದು 15 ಅಂಕಣ 1 ಭಾವಿ	ಡಿಟೋ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಸರಕಾರದ ಜಮೀನು, ಪಶ್ಚಿಮಕ್ಕೆ ವೆಂಕಟರಮಣಯ್ಯನ ಮನೆ, ಉತ್ತರಕ್ಕೆ ವೀಣೇ ವೆಂಕಟಸುಬಯ್ಯನವರ ಗಲ್ಲಿ
14	ಡಿಟೋ	ಅಗರದ ಕೃಷ್ಣಪ್ಪನ ಹೆಂಡತಿ ಶಂಕರಮ್ಮ	43	20	ಜಮೀನು 1 ಭಾವಿ	ಡಿಟೋ	ಪೂರ್ವಕ್ಕೆ ಸುಬ್ಬಯ್ಯನ ಮನೆ, ದಕ್ಷಿಣಕ್ಕೆ ವೆಂಕಟಸುಬಯ್ಯನ ಬೀದಿ, ಪಶ್ಚಿಮಕ್ಕೆ ರಾಮಾಶಾಸ್ತ್ರಿ ಮನೆ, ಉತ್ತರಕ್ಕೆ ವೆಂಕಟಶಾಸ್ತ್ರಿ ಮನೆ
15	ಮುನಿಯಾಜಟ್ಟೀ ಬೀದಿ	ವೆಂಕಟಶಾಸ್ತ್ರಿ	45	27	ತಖ್ತಪೋಷ್ 4 ಅಂಕಣ ಹಂಚಿನದು 8 ಅಂಕಣ ಪಪ್ಪಾರ 3 ಅಂಕಣ	ಡಿಟೋ	ಪೂರ್ವಕ್ಕೆ ಚಿನ್ನಪ್ಪ ಜೋಯಿಸರಮನೆ, ದಕ್ಷಿಣಕ್ಕೆ ಶಂಕರಮ್ಮನ ಮನೆ, ಪಶ್ಚಿಮಕ್ಕೆ ಸುಬ್ಬರಾಯರ ಮನೆ, ಉತ್ತರಕ್ಕೆ ಮುನಿಯಾಜಟ್ಟಿ ಬೀದಿ

ತಾರೀಖು 7ನೇ ಅಕ್ಟೋಬರ್ 1887.

ನಂ. 1429.—ಮ|| ವಿ. ಪಿ. ಮಾಧವರಾಯರು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಚಾರ್ಜನ್ನು 1887ನೇ ಇಸವಿ ಸೆಪ್ಟಂಬರ್ ತಾರೀಖು 22ನೇ ಮಧ್ಯಾನ್ಹಾತ್ಪರ ಒಪ್ಪಿಸಿ ಅಸಿಸ್ಟೆಂಟ್ ಕಮ್ಮಿಷನರ್ ಮ|| ತಿರುಮಲಾಚಾರ್ರು ವಹಿಸಿರುತ್ತಾರೆ.

ನಂ. 1430.—ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಮ|| ವಿ. ಪಿ. ಮಾಧವರಾವ್ ಬಿ. ಎ. ಯವರಿಗೆ ಮಾಹೇ ಮಜಕೂರ್ 3ನೇ ತಾರೀಖು ಲಾಗಾಯತು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿದೆ.

ತಾರೀಖು 12ನೇ ಅಕ್ಟೋಬರ್ 1887.

ತಪ್ಪು ತಿದ್ದುಪಡಿ.

ನಂ. 134.—ಸನ್ 1884ನೇ ಇಸವಿ ಜೂನ್ 28ನೇ ಮರ್ಖೂಮಿನ ಮೈಸೂರು ಗೆಜೆಟ್ಟಿನ IIIನೇ ಭಾಗದಲ್ಲಿ ಪ್ರಾಯಿಷ್ಠಾದ ಕನ್ನಡ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 629ನೇ ಸೆಕ್ಷನಿನ 8ನೇ ಪಂಕ್ತಿಯಲ್ಲಿ "ಅಂಗೀಕಾರ ವಾಗಲಾರದೆಂಬ" ಯಂಬ ಮಾತುಗಳಿಗೆ ಬದಲಾಗಿ "ಅಂಗೀಕಾರವಾಗ ಬಹುದೆಂಬ" ಯಂದು ಓದಿಕೊಳ್ಳತಕ್ಕದ್ದು.

ತಾರೀಖು 10ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1458.—ಮೊಹೇ ಮಜಕೂರ್ 7ನೇ ಮರ್ಖೂಂ ಕ್ಯಾಂಪ್ 1430ನೇ ನಂಬರುಳ್ಳ ಇಸ್ತಿಹಾರನ್ನನುಸರಿಸಿ, ಮೆಸ್ಟರ್ ವಿ. ಪಿ. ಮಾಧವರಾಯರು ರಜಾಮೇಲೆ ಇರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೆ ಮೆ|| ಬಿ. ತಿರುಮಲಾಚಾರ್ ಬಿ. ಎ. ಯವರು ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ವ ಡಿಸ್ಟ್ರಿಕ್ಟು ಮಾಜಿಸ್ಟ್ರೇಟ್ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 14ನೇ ಅಕ್ಟೋಬರ್ 1887.

ನಂ. 135.—ಮದ್ದಗಿರೀ ತಾಲ್ಲೂಕು ಅಮಲ್ದಾರ್ ವೇಲಾಯುಧಂ ಪಿಳ್ಳೆಯವರಿಗೆ, ಮೆಡಿಕಲ್ ಸರಟಿಫಿಕೇಟ್ ಮೇಲೆ ಯರಡು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ವೇಲಾಯುಧಂ ಪಿಳ್ಳೆಯವರು ರಜಾದಮೇಲೆ ಇರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ವರಿವಿಗೆ ತುಮಕೂರು ಡೆಪ್ಯುಟಿ ಕಮ್ಮಿಷನರ್ ಆಫೀಸಿನ ಹೆಡ್ ಅ|| ಗೋಪಾಲಯ್ಯಂಗಾರ್ರು ಮದ್ದಗಿರೀ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 136.—ಮಂಡ್ಯ ತಾಲ್ಲೂಕು ಅಮಲ್ದಾರ್ ನರಸಂಣನವರಿಗೆ, 1887ನೇ ಇಸವಿ ಜುಲೈ 11ನೇ ಮರ್ಖೂಮಿನ 53ನೇ ನಂಬರುಳ್ಳ ಇಸ್ತಿಹಾರಿನಿಂದ ಕೊಡೋಣಾದ ಒಂದು ತಿಂಗಳ ಪ್ರಿವಿಲೀಜ್ ರಜಾವಿಗೆ ಜಾಸ್ತಿಯಾಗಿ 2 ದಿನಗಳ ರಜಾ ಕೊಡಲ್ಪಟ್ಟಿರುತ್ತೆ.

ಬಮೋಜೀಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟೇರಿ.

ಮೈಸೂರು ದಿವಾನರವರ ಪ್ರೊಸಿಡಿಂಗ್ಸ್, ರೆವಿನ್ಯೂ ಇಲಾಖಾ.

ಆರ್ಡರ್ ನಂಬರ್ 3786—95—101 ಮರ್ಖೂಂ 1ನೇ ಸೆಪ್ಟಂಬರ್ 1887ನೇ ಇಸವಿ ಮೊಕ್ಕಾಂ ಬೆಂಗಳೂರು.

1887ನೇ ಇಸವಿ ಫಿಬ್ರವರೀ 11ನೇ ಮರ್ಖೂಂ 341ನೇ ನಂಬರು ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿ ಆದ ಪ್ರಕಾರ ಸರ್ವೆ ಗ್ಯಾರಂಟಿಯಾನೆ ಸರ್ವೆ ಕಾಲಿನ XVIIನೇ ನಿಬಂಧನೆ ಅನುಸರಿಸಿ ಇನಾಂ ಗ್ರಾಮಗಳಲ್ಲಿರತಕ್ಕ ತರೀ ಜಮೀನುಗಳ ಸರ್ವೆ ಆಕಾರದ $\frac{1}{17}$ರ ಭಾಗವು "ಇರಿಗೇಷನ್ ಸೆಸ್‌ಗೆ ಸಮನಾದ ಮೊಬಲಗು" ಯೆಂಬ ಹೆಸರಿಂದ ವಸೂಲ್ಮಾಡಲ್ಪಡುತ್ತಿದೆ. ಇನಾಂದಾರರು ಸಾಧಾರಣವಾಗಿ ಈ ವಸೂಲಾತಿ ವಿಷಯದಲ್ಲಿ ಫಿರ್ಯಾದು ಮಾಡುವದಲ್ಲದೆ ಸದರೀ ಜಮೀನುಗಳಿಗೆ ಯಾವದೊಂದು ಸರ್ಕಾರಿ ಜಲಾಧಾರಗಳಿಂದಲೂ ಫಾಯಿದೆ ಇಲ್ಲವಾದದರಿಂದ ಈ ಬಾಬತು ಮೊಬಲಗು ವಸೂಲ್ ಮಾಡುವದು ಅನ್ಯಾಯವೆಂಬದಾಗಿ ವಾದಿಸುತ್ತಾರೆ. ಈ ಬಾಬತು ಫಿರ್ಯಾದು ಇನಾಂ ಕೆರೆಗಳಿಂದ ಮಾತ್ರವೇ ನೀರು ಹಾಯುವಂಥಾ ಇನಾಂ ತರೀ ಜಮೀನುಗಳುಳ್ಳ ಪೂರಾ ಗ್ರಾಮದ ಇನಾಂದಾರರುಗಳ ವಿಷಯದಲ್ಲಿ ನ್ಯಾಯವಾದುದೆಂಬದಾಗಿ ಶ್ರೀಮನ್ ಮಹಾರಾಜಾ ಸರ್ಕಾರದವರು ಅಭಿಪ್ರಾಯ ಪಡುತ್ತಾರೆ. ಸರ್ಕಾರದವರು ಈ ಬಾಬತು ವಸೂಲಿಯನ್ನು ಮೋಕೂಫ್ ಮಾಡತಕ್ಕದ್ದೆಂದು ಆಜ್ಞಾಪಿಸುತ್ತಾರೆ. ಆದರೆ ಈ ನಡವಳಿಕೆಯನ್ನು ಮಂಜೂರ್ಮಾಡುವದರಲ್ಲಿ ಗವರ್ನಮೆಂಟಿನವರು ಸದರೀ ನಡವಳಿಕೆಯಿಂದ ಫಾಯಿದೆ ಪಡಿಯುವ ತಮಾಂ ಇನಾಂದಾರರಿಗೂ ತಿಳಿಸುವದೇನಂದರೆ ಸದರೀ ಇನಾಂದಾರರು ಅವರ ಕೆರೆಗಳಿಗೆ ಅವಶ್ಯಕವಾದಾಗ ರಿಪೇರಿ ಕೆಲಸಗಳನ್ನು ನಡಿಸುವದಕ್ಕೂ ಮತ್ತು ಅವುಗಳನ್ನು ಯಾವಾಗಲೂ ಕ್ರಮವಾದ ಸ್ಥಿತಿಯಲ್ಲಿಟ್ಟುಕೊಂಡಿರುವದಕ್ಕೂ ಖಂಡಿತವಾಗಿ ಜವಾಬ್‌ದಾರರಾಗಿರತಕ್ಕದ್ದು. ಅವರು ಈ ಕೆಲಸದಲ್ಲಿ ತಪ್ಪಿದರೆ ಅವಶ್ಯಕವಾದ ಕಾಮಗಾರಿಯು ಸರ್ಕಾರದಿಂದ ನಡಿಸಲ್ಪಟ್ಟು ಲಾಗವಡು ಇನಾಂದಾರರಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

2. ಮೇಲ್ಕಂಡ ಹುಕ್ಕುಂ ಅನುಸರಿಸಿ ಇದರಡೀಕಂಡ ಸೆಕ್ಷನ್‌ಗಳು ಸರ್ವೆ ಕಾಲಿನ XVII ಮತ್ತು XVIIIನೇ ಸೆಕ್ಷನಿಗೆ ಬದಲಾಗಿ ಉಪಯೋಗಿಸಲ್ಪಡತಕ್ಕದ್ದು.

XVII. ಯಿರಿಗೇಷನ್ ಸೆಸ್ಸಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲ್ಲಿ ಇನಾಂ ತರೀಕ್ ಯಿರತಕ್ಕ ತಮಾಂ ತರೀ ಜಮೀನ್‌ಗಳ ಐಯಿಂದ ಶರಾವ್ ಆಗತಕ್ಕ ಸರ್ವೆ ಆಕಾರದಲ್ಲಿ ಬದಸ್ತೂರು ಶೇರಿಸಲ್ಪಡತಕ್ಕದ್ದು. ಮತ್ತು ಅಂಥಾ ಆಕಾರದ [17] ರ ಭಾಗವು ಬದಸ್ತೂರು ಜೋಡೀಮೇಲೆ ಪರಂತು "ಯಿರಿಗೇಷನ್ ಸೆಸ್ಸಗೆ ಸಮನಾದ ಮೊಬಲಗು" ಯಂಬ ಹೆಸರಿನಿಂದ ಮತ್ತು ಅಂಥಾ ಜಮೀನ್ ಯಾ ಗ್ರಾಮಗಳ ಮೇಲೆ ಅಲಾಹಿದಾ ವಸೂಲ್ ಮಾಡಲ್ಪಡಬೇಕಾದ ಕ್ವಿಟರೆಂಟ್ ದೇಖೀಲ್ ವಸೂಲ್‌ಮಾಡಲ್ಪಡತಕ್ಕದ್ದಲ್ಲದೆ "ಡಿಸ್ಟ್ರಿಕ್ಟು ಯಿರಿಗೇಷನ್ ಫಂಡ್" ಹೆಡ್ಡಿಗೆ ಲೆಖ್ಖದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮೀನುಗಳು ಪೂರಾ ಇನಾಂ ಗ್ರಾಮಗಳಲ್ಲಿ ಯಿದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ಮದಗಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಮೊಬಲಗಾಗಲೀ ಸರ್ಕಾರಕ್ಕೆ ತೆರಬೇಕಾದ್ದಿಲ್ಲವು.

ಪರಂತು ಯಿರಿಗೇಷನ್ ಸೆಸ್ಸುಯಾನೆ ನೀರು ಸರದಿಯನ್ನು ಶರಾವ್ ಮಾಡುವದಕ್ಕೋಸ್ಕರ ಸರ್ವೇ ಇಲಾಖೆಯವರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮಗಳಲ್ಲಿರತಕ್ಕ ಅಂಥಾ ತರೀ ಜಮೀನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು, ಮತ್ತು ತಮಾಂ ಇನಾಂ ಯಾ ಇತರ ತರೀ ಜಮೀನುಗಳ ಸರ್ವೇ ಆಕಾರದಲ್ಲಿ ಅವುಗಳ ಮೇಲೆ ಶರಾಪ್ ಮಾಡಲ್ಪಡಬಹುದಾದ ಯಾವದಾರೂ ಅಲಾಹಿದಾ ನೀರು ಸರದಿಯೂ ಅಡಗಿ ಯಿರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮಗಳಿಗೂ ಮತ್ತು (ಸರ್ವಮಾನ್ಯ ಯಾ ಜೋಡೀ) ಇನಾಂ ಗ್ರಾಮಗಳಿಗೂ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕ್ಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾಯಂಗುತ್ತಾ ಮೊಬಲಗಿನ ಮೇಲೂ ಇನಾಂ ಗ್ರಾಮಗಳ ವಿಷಯದಲ್ಲಿ ಇನಾಂ ಗ್ರಾಮಗಳ ಆಕಾರದಮೇಲೂ ವಸೂಲ್ ಮಾಡಲ್ಪಡತಕ್ಕದ್ದು.

3. ಬದಸ್ತೂರು 1875ನೇ ಇಸವಿ ಮೇ 7ನೇ ಮರ್ಕುಂ 72ನೇ ನಂಬರುಳ್ಳ ಮಾಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಂದಿಗೆ ಫಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟು ಯಿರಿಗೇಷನ್ ಸೆಸ್ಸ ಫಂಡಿನ ಆಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟು ಕಮ್ಮಿಟಿಗಳವರು ಅನುಸರಿಸತಕ್ಕ ಬಗ್ಯೆ ಏರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರಿಗೆ ತಿದ್ದುಪಾಡಾಗಿರತಕ್ಕದ್ದು.

VI. ಇನಾಂ ವ ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ಸಾಗುವಳೀ ಆಗುವ ತರೀ ಜಮೀನಿಗಾಗಿ ನೀರು ಸರದಿಯನ್ನ ತೆರಬೇಕಾದ ಆವಶ್ಯಕತೆ ತಪ್ಪಿರುತ್ತದೆಯಾಗಿ ಅಂತಾ ಕೆರೆಗಳಿಗೆ ಕಾಲ ಕಾಲಕ್ಕೆ ರಿಪೇರಿ ಮಾಡುವಂತಾ ವ ಅವುಗಳನ್ನ ವೊಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂತಾ ಜವಾಬ್ದಾರಿಯನ್ನ ಖಂಡಿತವಾಗಿ ಜಾರಿಯಲ್ಲಿ ತರಲ್ಪಡತಕ್ಕದ್ದು. ವೊಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ವೊಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಆವಶ್ಯಕವಾದ ಕಾಮಗಾರಿಗಳನ್ನ ಸಕಾಲದಲ್ಲಿ ಸಾಧ್ಯವಾದ ತ್ವರ್ಯದಿಂದಲೂ ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂತಾ ಕಾಮಗಾರೀ ವಗೈರೇ ಕೆಲಸವನ್ನ ಗವರ್ನಮೆಂಟಿನವರೇ ತೆಗದುಕೊಂಡು ಖುದ್ದು ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಲಾಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

4. ಈ ತಿದ್ದುಪಾಟುಗಳು ಸರ್ವರ ತಿಳುವಳಿಕೆ ಬಗ್ಯೆ ಗೆಜೆಟ್ಟನಲ್ಲಿ ಫಾಯಿಷ್ ಮಾಡಲ್ಪಡತಕ್ಕದ್ದು.

5. ಇನಾಂ ಗ್ರಾಮಗಳಲ್ಲಿರುವ ತರೀ ಜಮೀನ್ ಮೇಲೆ ವಸೂಲಾಗುವ ನೀರು ಸರದಿಯನ್ನ ನಿಲ್ಲಿಸಿ ಯಿಡತಕ್ಕ ಬಗ್ಯೆ, 1881ನೇ ಇಸವಿ ಡಿಶಂಬರ್ 17ನೇ ಮರ್ಕುಂ 7416—225ನೇ ನಂಬರುಳ್ಳ ಪ್ರೊಸಿಡಿಂಗ್ಸನಲ್ಲಿ ಕಂಡ ಹುಕ್ಕುಂ ಯಿದರ ದೆಸೆಯಿಂದ ರದ್ದು ಪಡಿಸಿರುತ್ತೆ. ಸರಕಾರದ ಜಲಾಧಾರ ವಿಲ್ಲದೇ ಯಿರುವ ತರೀ ಇನಾಂತಿ ಜಮೀನ್‌ಗಳ ಬಾಬತು ಬರತಕ್ಕ ಬಾಕೀಯಂತೆ ಲೆಖ್ಖದಲ್ಲಿ ನಮೂದಾಗಿರುವ ಮೊಬಲಗು, ಈಗ ಮಂಜೂರ್ಮಾಡಿರುವ ರೂಲ್ಸ್ ಅನುಸರಿಸಿ ವಜಾ ಮಾಡಲ್ಪಡತಕ್ಕದ್ದು, ಹಾಗೆ ವಜಾ ಮಾಡಲ್ಪಟ್ಟ ಮೊಬಲಗುಗಳು ಈ ಆಫೀಸಿಗೆ ಕ್ರಮವಾಗಿ ತಿಳಿಯಲ್ಪಡಿಸತಕ್ಕದ್ದು. ಈ ಬಾಬಿನಲ್ಲಿ ಮಿಕ್ಕಾದ ಸಂಗತಿಯೊಳಗೆ ಯಿರುವ ಬಾಕೀಗಳನ್ನ ವಸೂಲ್ ಮಾಡಲಿಕ್ಕೆ ಕೂಡ್ಲೇ ತರದೂದು ನಡಿಸಲ್ಪಡತಕ್ಕದ್ದು.

6. ಸದರೀ ಪರಿಷ್ಕರಿಸಲ್ಪಟ್ಟ ಸರ್ವೇ ಕೌಲಿನ 18ನೇ ಕಲಮುನುಸರಿಸಿ ಯಿರಿಗೇಷನ್ ಸೆಸ್ಸ್ ಯಾ ಅದ¤ ಸಮಾನ ಮೊಬಲಗನ್ನ ವಸೂಲ್ ಮಾಡುವದರಲ್ಲಿ ಯಾವ ಇನಾಂತಿ ತರೀ ಜಮೀನುಗಳನ್ನ ವಿನಾಯಿಸತಕ್ಕದ್ದೋ ಆ ವಿಷಯದಲ್ಲಿ ಡೆಪ್ಯುಟಿ ಕಮ್ಮಿಷನರುಗಳು ರೆವಿನ್ಯೂ ಸರ್ವೇ ಸೂಪರಿಂಟೆಂಡೆಂಟರಿಗೆ ಬರದು ವ್ಯವಸ್ಥೇ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ.

ಆರ್. ವಿಜಯಿಾಂದ್ರರಾವ್,
ಚೀಫ್ ಸೆಕ್ರೆಟೇರಿ.

ಪಬ್ಲಿಕ್ ವರ್ಕ್ಸ ಇಲಾಖಾ.

ಇಸ್ತಿಹಾನಾಮಾ.

ತಾರೀಖು 12ನೇ ಅಕ್ಟೋಬರ್ 1887.

ನಂ. 4472—915.—ಶಿವಮೊಗ್ಗಾ ಡಿವೀಜನ್ ಯಗ್ಜಿಕ್ಯುಟಿವ್ ಇಂಜನೀರ್ ಮೆ|| ಎ. ಯಸ್. ನಾಗೌಕರ್‌ಯುವರಿಗೆ, 1887ನೇ ಇಸವಿ ಅಕ್ಟೋಬರ್ 24ರ ಲಾಗಾಯತು ನವಂಬರ್ 30ರ ವರಿವಿಗೆ ಯರಡು ಧಿನಗಳೂ ಶೇರಿ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆ|| ನಾಗೌಕರ್ ಯವರು ರಜಾದಮೇಲೆ ಗೈರ್ ಹಾಜರ್ ಇರುವ ಕಾಲದಲ್ಲಿ ಅ|| ಇಂಜನೀರು ಮೆ|| ವೆಂಕಟಾಚಾರ್ಯರು ಶಿವಮೊಗ್ಗಾ ಯಗ್ಜಿಕ್ಯುಟೀವ್ ಇಂಜನೀರ್ ಕೆಲಸ ನೋಡತಕ್ಕದ್ದು.

ಹುಕ್ಮುಂ ಬಮೋಜಿಬ್,
ಸಿ. ಜೋರ್ಜ್, ಲೆ|| ಕರ್ನಲ್, ಆರ್. ಇ.
ಮೈಸೂರು ಗವರ್ನಮೆಂಟ್ ಸೆಕ್ರೆಟೇರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 22, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟು ಇಲಾಖಾ.

ತಾರೀಖು 11ನೇ ಅಕ್ಟೋಬರ್ 1887.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರಿಂದ 43ನೇ ಮೈಲಿಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕು ನಿಸನ ಸ್ಥಳದಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ಈ ಕೆಳಗೆ ನಮೂದು ಮಾಡಲ್ಪಡುವ ಆನೆಗಳು ಮತ್ತು ಈ ಮಧ್ಯ ಕಾಲದಲ್ಲಿ ಹಿಡಿಯಲ್ಪಡುವ ಆನೆಗಳು ಸಹ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರ್ರಿಟೆಂಡೆಂಟರವರಿಂದ ಸರ್ 1887ನೇ ಇಸವಿ ನವಂಬರ್ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹೆಸರುಗಳು.	ಜಾತಿ.	ಎತ್ತರ.		ಹಿಡಿಯಲ್ಪಟ್ಟ ತಿಂಗಳು.	ಷರಾ.
			ಅಡಿ.	ಅಂಗುಲ.		
1	ಗಜಲಕ್ಷ್ಮಿ ..	ಹೆಣ್ಣು.	4	10	1887ನೇ ಏಪ್ರೈಲ್	
2	ಸದಾಶಿವ ..	ಗಂಡು	4	5	ಡಿಟೋ ಜೂನ್	
3	ಶುಕಾರಿ ..	ಹೆಣ್ಣು.	4	0	ಡಿಟೋ ಆಗಸ್ಟ್	

ಷರತ್ತುಗಳು:—ಶೇಕಡಾ 25 ರೂಪಾಯಿ ಪ್ರಕಾರ ಠೇವಣಿ ಮೊಬಲಗನ್ನು ಕೂಡ್ಲೆ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡತಕ್ಕದ್ದು. ಬಾಕಿ ಮೊಬಲಗನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಮತ್ತು ಆನೆಗಳನ್ನು ಸಾಗಿಸಿಕೊಳ್ಳುವದಕ್ಕೆ ಮುಂಚಿತವಾಗಿ ಪಾವತೀ ಮಾಡಬೇಕು, ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದಲ್ಲದೆ ಆನೆಗಳು ಪುನಃ ಹರಾಜ್ ಮಾಡಲ್ಪಡುವವು ನಷ್ಟಕ್ಕೆ ಅವಲ್ ಖರೀದೀದಾರನು ಗುರಿಯಾಗತಕ್ಕದ್ದು. ಹರಾಜಿನಲ್ಲಿ ಜಾಸ್ತಿ ಹುಟ್ಟಿದರೆ ಅದರಲ್ಲಿ ಆತನಿಗೆ ಯೇನೂ ಸಲ್ಲಲಾರದು.

ಖರೀದಿ ತಾರೀಖು ಲಾಗಾಯಿತು ಖರೀದಿದಾರನೇ ಆನೆಗಳ ರಾತೀಪು ವಗ್ಯೆರೆ ಖರ್ಚುಗಳನ್ನು ವಹಿಸತಕ್ಕದ್ದು.

ತಾರೀಖು 3ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂಧಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು—ಶಿಕಾರಿಪುರದ ಕೋಠಿ	10ನೇ ನವಂಬರ್ 1887.	ಹೆಚ್ಚು ಕಡಮೆ 250	ಟನ್‌ಗಳು.
ಅನಂತಪುರದ ಕೋಠಿ ..	14ನೇ ಡಿಟೋ	.. 50	ಡಿಟೋ
ಶಿವಮೊಗ್ಗಾ ಡಿಟೋ ..	19ನೇ ಡಿಟೋ	.. 500	ಡಿಟೋ
ತೀರ್ಥಹಳ್ಳಿ ಡಿಟೋ ..	25ನೇ ಡಿಟೋ	.. 200	ಡಿಟೋ
ಕಡೂರು ಡಿಸ್ಟ್ರಿಕ್ಟು—ಚಿಕ್ಕಮಗಳೂರು ಕೋಠಿ	1ನೇ ಡಿಸಂಬರ್ 1887	.. 200	ಡಿಟೋ
ಹಾಸನ ಡಿಸ್ಟ್ರಿಕ್ಟು—ಹಾಸನ ಕೋಠಿ	7ನೇ ಡಿಟೋ	.. 300	ಡಿಟೋ
ಮೈಸೂರು ಡಿಸ್ಟ್ರಿಕ್ಟು—ಶ್ರೀರಂಗಪಟ್ಟಣ ಕೋಠಿ	12ನೇ ಡಿಟೋ	.. } 800	ಡಿಟೋ
ಹುಣಸೂರು ಡಿಟೋ ..	16ನೇ ಡಿಟೋ	..	
ಬೆಂಗಳೂರು ಡಿಸ್ಟ್ರಿಕ್ಟು—ಬೆಂಗಳೂರು ಕೋಠಿ	20ನೇ ಡಿಟೋ	.. 150	ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮಾಹೆಗಳ 34, 35ನೇ ನಂಬರು ಗೆಜೆಟ್‌ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿ|| ಅರ್ಜೀ ನಂಬರ್ 764.

ಮೃತಪಟ್ಟ ಬೆಂಗಳೂರು ಗುಡಮಯ್ಯನಪೇಟೇಲಿದ್ದ ಬೋರ್ಡು ಥಲಾಯತ ಮುನಿದಾಸಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಡಿಟೋ ಗುಡಮಯ್ಯನ ಪೇಟೇಲಿರುವ ಮುನಿದಾಸಪ್ಪನ ಹೆಂಡತಿ ಚನ್ನಮ್ಮ ಮೃತಪಟ್ಟ ಸದರೀ ಮುನಿದಾಸಪ್ಪನಿಗೆ ಹೆಂಡತಿಯಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಚನ್ನಮ್ಮನು ಗುಡಮಯ್ಯನಪೇಟೇ ವಾಸಸ್ಥನಾಗಿ ಮೃತಪಟ್ಟ ಮುನಿದಾಸಪ್ಪನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಚನ್ನಮ್ಮನ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿದಾಸಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ಸನ 1887ನೇ ಇಸವಿ ಅಕ್ಟೋಬರ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತು ಡನೇ ಕೊಡೋಣಾಗಿದೆ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ತರಗಿನಪೇಟೇಲಿರುವ ವೀರಸಂಗಂಣನವರ ರುದ್ರಪ್ಪನ ವಿಷಯತಲ್ಲಿ—

ಸನ 1887ನೇ ಇಸವಿ ದಿವಾಳೀ ಮಿ|| ಕೇಸ್ ನಂಬರ್ 263.

ಹುಕ್ಕುಂ.

ಮೇಲ್ಕಂಡ ರುದ್ರಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ರುದ್ರಪ್ಪನ ಪರವಾಗಿ ಮೆ|| ಅಡ್ವೊಕೇಟ್ ನಾರಾಯಣರಾವ್ ಯವರನ್ನ ಮತ್ತು ಸದರೀಯವನ ಲೇಣೇದಾರ್ರಾದ 3ನೇ ಮುನಿಯಪ್ಪನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ–1—2—4—5—6—7ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ರುದ್ರಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಜೂನ್ 24ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.			ಯಾವಾಗಿನದ್ದು ತಾರೀಖು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಬೆಂಗಳೂರಲ್ಲಿರುವ ಮಳವಳ್ಳಿ ಚಿಕ್ಕ ಗಿರಿಯಪ್ಪ ..	1080	12	4	1880	ಡಿಕ್ರೀ ಬಾಬತು	
2	ಡಿಟೋ ಮಾತ್ರಬಾಯಿ ಮುನೆಪ್ಪ ..	1000	0	0	ಡಿಟೋ	ಡಿಟೋ	
3	ಆನೆಕಲ್ ತಾ॥ ಬೆಂಡಿಗನಹಳ್ಳಿ ಯಲೇ ತೋಟದ ಮುನಿಯಪ್ಪ	1000	0	0	ಡಿಟೋ	ಡಿಟೋ	
4	ಬೆಂಗಳೂರಲ್ಲಿರತಕ್ಕ ದೇವರಿಟಿ ಗುರಂಣ ..	800	0	0	ಡಿಟೋ	ಪ್ರಾಂಸರಿ ಬಾಬತು	
5	ನೆಲವಂಗಲದ ಬಳೀ ಪುಟ್ಟಲಿಂಗಪ್ಪ ..	350	0	0	ಡಿಟೋ	ತಂಮಸೂಕು	
6	ನೆಲವಂಗಲದ ತಾ॥ ಹುಸಕೂರಲ್ಲಿರತಕ್ಕ ಬಳೀ ಬಸಮ್ಮ	150	0	0	1887	ಡಿಟೋ	
7	ಬೆಂಗಳೂರಲ್ಲಿರತಕ್ಕ ಕುಡತಿ ಗುರಂಣ ..	12	0	0	.	ಲೆಖ್ಖದ ಬಾಬತು	
	ಜುಮ್ಲಾ....	4392	12	4	..		

ದಿವಾಳೀಯಾದ ಡಿಕ್ರೀ ದೇಣೇದಾರ ಕೋಲಾರ ತಾ॥ ಮಾದಹಳ್ಳೀಲಿರುವ ಸುಬ್ಬಾಭಟ್ಟನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯಸ್ ನಂಬರ್ 398.

ಹುಕ್ಕುಂ.

ಮೇಲ್ಕಂಡ ಸುಬ್ಬಾಭಟ್ಟನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜೀದಾರನಾದ ಸುಬ್ಬಾಭಟ್ಟನ್ನ ಖುದ್ದಾಗಿ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ–1—2—3—4—5—6—7—8—9—10ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಸುಬ್ಬಾಭಟ್ಟನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಆಗಸ್ಟು 26ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಬಡ್ಡಿ ಯಾವಾಗ ಮುದ್ದತು.	ಒತ್ತೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಚಿಂತಾಮಣಿ ತಾ|| ಚಲಮಕೋಟೆ ರಾಮಶಾಸ್ತ್ರಿ.	73 0 0	..	ಡಿಕ್ರೀ ಬಾಬತು	
2	ಕೋಲಾರ ತಾ| ಮಾದನಹಳ್ಳಿ ಗೋವಿಂದಗೌಡ ..	100 0 0	..	ಭೋಗ್ಯ ಪತ್ರ	
3	ಡಿಟೋ ವೆಂಕಟರಮಣ ಗವುಡ ..	100 0 0	..	ಡಿಟೋ	
4	ಚಿಂತಾಮಣಿ ಕಾಶರ್ಲ ಸುಬ್ಬಾಭಟ್ಟ —	25 0 0	..	ಡಿಟೋ	
5	ಡಿಟೋ ತಾ|| ಇರಗಂಪಲ್ಲಿ ರಾಮಸೋಮಯಾಜಿ.	50 0 0	..	ಆಧಾರಪತ್ರ	
6	ಡಿಟೋ ತಾಲ್ಲೂಕು ಚಲಮಕೋಟೆ ಬೂರ್ಲಪಲ್ಲಿ ರಾಮಶಾಸ್ತ್ರಿ	145 0 0	..	ಡಿಟೋ	
7	ಡಿಟೋ ತಾ|| ಕೋಟಗಲ್ಲು ತ್ರಿಯಂಬಕ ಶಾಸ್ತ್ರಿ.	25 0 0	..	ಭೋಗ್ಯಗತ್ರ	
8	ಕೋಲಾರ ತಾ|| ವೆಲಗಲಬುರೆ ಯಳೇಗವುಡ ..	50 0 0	..	ಡಿಟೋ	
9	ಚಿಂತಾಮಣಿ ವೆಂಕಟಾಚಲ ಶಾಸ್ತ್ರಿ ..	45 0 0	..	ಆಧಾರಪತ್ರ	
10	ಕೋಲಾರ ತಾ| ಕೋರ್ಲಹಳ್ಳಿ ವಾಜರ ನಲ್ಲಪ್ಪ, ಶ್ರೀನಿವಾಸಾಚಾರಿಗೆ	30 0 0	..	ಪತ್ರ ಇದರಲ್ಲಿ 6ರಲ್ಲಿ 1 ಹಿಸ್ಸೆ	
	ಜುಮ್ಲಾ 643 ರೂ. ನಲ್ಲಿ ಅರ್ಜೀದಾರನ ಇಸ್ಸೆ ..	4215 4 0			

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಹಾಜರಿ ಬಾರ್ ಇಲಾಖಾ ಫಸ್ಟ್ ಪಟಾಲಂ 7ನೇ ಕುಂಫಣಿ ಹವಾಲ್ದಾರನಾಗಿರುವ ಮಹಮ್ಮದ್ ದಾವೂದನ ವಿಷಯದಲ್ಲಿ—

ಸೆ 1887ನೇ ಇಸವಿ ದಿವಾಳಿ ಕೇಸ್ ಮಿಸಲೇನಿಯಸ್ ನಂಬರ್ 625.

ಹುಕ್ಕುಂ.

ಮೇಲ್ಕಂಡ ಮಹಮ್ಮದ್ ದಾವೂದನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರೆಸ್ ಸಾಹೇಬರವರ ರೊಬರೂ ಅರ್ಜೀದಾರನಾದ ಮಹಮ್ಮದ್ ದಾವೂದನ್ನ ಖುದ್ದಾಗಿ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ.--1—2—3—4—5ನೇ ಯವರು ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮಹಮ್ಮದ್ ದಾವೂದನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸೆ 1887ನೇ ಇಸವಿ ಸೆಪ್ಟಂಬರ್ 9ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಡಿಕ್ರೀ ಮಾಡಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಬಂಗಳೂರಲ್ಲಿರತಕ್ಕ ಸಂಪನ್ನಪ್ಪನವರ ನಂಜುಂಡಪ್ಪ ..	17 0 0	..	ತೆಂಸೊಕು ಬಾಬತು	
2	ಡಿಟ್ಟೋ ಅಡಿಕೆ ಅಂಗಡಿ ನಂಜಪ್ಪ ..	20 0 0		ಡಿಟ್ಟೋ	
3	ಡಿಟ್ಟೋ ಅರಳೇಪೇಟೇಲಿರುವ ರಾಮಚಂದ್ರರಾವ್.	24 0 0	..	ಡಿಟ್ಟೋ	
4	ಡಿಟ್ಟೋ ಕುಂಬಾರಪೇಟೇಲಿರತಕ್ಕ ಸಿದ್ಧರಾಮಣ್ಣ.	25 0 0	..	ಛತ್ರದ ಬಾಬತು	
5	ಡಿಟ್ಟೋ ವಾದಿ ಹಾಜರಾಂಬಿ ..	118 6 0	1887	ಡಿಕರೀ ಬಾಬತು	
	ಜುಮ್ಲಾ	204 6 0	..		

ದಿವಾಳಿಯಾದ ಡಿಕ್ರೀ ದೇಣೇದಾರ ಶಿಡ್ಲಘಟ್ಟದ ತಾಲ್ಲೂಕು ಅಬಲೂಡಿನಲ್ಲಿರತಕ್ಕ ಬ್ಯಾಡರ ಚಿನ್ನಗಾನ ಮಗ ಪಾಪಿಗನ ವಿಷಯದಲ್ಲಿ—

ಸ್ತ 1887ನೇ ಇಸವಿ ದಿವಾಳೀ ಮಿಸಲೇನಿಯಸ್ ಕೇಸ್ ನಂಬರ್ 744.

ಹುಕ್ಕುಂ.

ಮೇಲ್ಕಂಡ ಪಾಪಿಗನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿರಾದ ಮ॥ ಕ್ರೈಸ್ ಸಾಹೆಬರವರ ರೂಬರೂ ಅರ್ಜೀದಾರನಾದ ಪಾಪಿಗನ್ನ ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—ಲೇಣೇದಾರ್ರುಗಳು ಯಿಬ್ಬರುನ್ನೂ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪಾಪಿಗನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ತ 1887ನೇ ಇಸವಿ ಸೆಪ್ಟಂಬರ್ 16ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತನಿಶೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಡಿಕ್ರೀ ಮಾಡಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಶಿಡ್ಲಘಟ್ಟದ ತಾಲ್ಲೂಕು ಭಾಗೇ ಅಗ್ರಹಾರದಲ್ಲಿರತಕ್ಕ ಬುಕ್ಕಪ್ಪನವರ ಲಕ್ಷ್ಮಣಾಚಾರಿ ..	53–13–0	..	ಡಿಕರೀ ಬಾಬತು	
2	ಶಿಡ್ಲಘಟ್ಟದಲ್ಲಿರುವ ಮಧುರೇ ಮುನಿರುದ್ರಪ್ಪ ..	27—0—0	..	ಪತ್ರದ ಬಾಬತು	
		80–13–0			

ಸಿ. ಕ್ರೈಸ್, ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ 502.

ಮೃತಪಟ್ಟ ಲಿಂಗೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಸುಬ್ಬೇಗೌಡನು ಮೃತಪಟ್ಟ ಸದರೀ ಲಿಂಗೇಗೌಡನಿಗೆ ಅಣ್ಣ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಜರಾಬಾದ ತಾ|| ಬ್ಯಾಗಡಹಳ್ಳಿ ಹೋಬಳಿ ಅರಣೀ ಗ್ರಾಮಕ್ಕೆ ಸೇರಿದ ಹೊನ್ನಘಟ್ಟ ಸ್ಥಳದ ಸದರೀ ಸುಬ್ಬೇಗೌಡನು ಸದರೀ ವಾಸಸ್ಥನಾಗಿ ಮೃತಪಟ್ಟ ಲಿಂಗೇಗೌಡನ ಜೆಂದಗೀ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸುಬ್ಬೇಗೌಡನ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಿಂಗೇಗೌಡನ ಆಸ್ತಿಗೆ ಹಕ್ಕುದಾರರಾದವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ 515.

ಮೃತಪಟ್ಟ ಕಿಲ್ಲೇದಾರ್ ದೇವರಾಜೇ ಅರಸಿನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ದೇವಿನಂಜರಾಜೇಅರಸ್ ಮೈನರ್, ಗಾರ್ಡಿಯನ್ ಮತ್ತು ದತ್ತುತಾಯಿ ವೀರಾಜಮ್ಮಣ್ಣೀಯವರು, ದೇವರಾಜೇ ಅರಸಿನವರಿಗೆ ದತ್ತುಮಗ, ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ದೇರಾಜಮ್ಮಣ್ಣೀರು ಸದರೀ ವಾಸಸ್ಥರಾಗಿ ಮೃತಪಟ್ಟ ದೇವರಾಜೇ ಅರಸಿನವರ ಜೆಂದಗೀ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೀರಾಜಮ್ಮಣ್ಣೀಯವರ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವರಾಜೇಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ 516.

ಮೃತಪಟ್ಟ ಗ್ರಾಮದ ಪುಟ್ಟಣ್ಣಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ದೇವರಾಜಯ್ಯನವರು ಮೃತಪಟ್ಟ ಸದರೀ ಪುಟ್ಟಣ್ಣಶೆಟ್ಟರಿಗೆ ದತ್ತುಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹಾಸನದ ಕಸಬಾ ಸ್ಥಳದ ಸದರೀ ದೇವರಾಜಯ್ಯನವರು ಸದರೀ ವಾಸಸ್ಥನಾಗಿ ಮೃತಪಟ್ಟ ಪುಟ್ಟಣ್ಣಶೆಟ್ಟರ ಜೆಂದಗೀ ಬಗ್ಯಾಗಿ ಬರತಕ್ಕ 1000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದೇವರಾಜಯ್ಯನವರ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಣ್ಣಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ 518.

ಮೃತಪಟ್ಟ ಶೀಕದಾರ್ ಶ್ರೀನಿವಾಸಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಶ್ರೀರಂಮ್ಮನು ಮೃತಪಟ್ಟ ಸದರೀ ಶ್ರೀನಿವಾಸಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹಾಸನದ ತಾಲ್ಲೂಕು ಗ್ರಾಮದ ಕಸಬಾ ಸ್ಥಳದ ಸದರೀ ಶ್ರೀರಂಗಮ್ಮನು ಸದರೀ ವಾಸಸ್ಥಳಾಗಿ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಜೆಂದಗೀ ಬಗ್ಯಾಗಿ ಬರತಕ್ಕ 950 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತು ದಾರಳಾದ ಶ್ರೀರಂಗಮ್ಮನ ಅರ್ಜೀಯನ್ನು 1887ನೇ ಇಸವಿ ನವೆಂಬರ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ 519.

ಮೃತಪಟ್ಟ ಸುಬ್ಬಮ್ಮನವರ ಆಸ್ತೀ ವಿಷಯಧಲ್ಲಿ—

ಅರ್ಜೀದಾರ ಶೀತಮ್ಮನವರು ಮೃತಪಟ್ಟ ಸದರೀ ಸುಬ್ಬಮ್ಮನಿಗೆ——ಆಗಬೇಕೆಂಬ ಹಕ್ಕುದಾರೀ ಮೇಲೆ ಪೆರಿಯಾಪಟ್ಣದ ತಾಲ್ಲೂಕು ಬೆಟ್ಟದಪುರದ ಸ್ಥಳದ ಸದರೀ ಶೀತಮ್ಮನು ಅರಕಲಗೂಡು ತಾ|| ಹೊಸಹಳ್ಳಿ ವಾಸಸ್ಥಳಾಗಿ ಮೃತಪಟ್ಟ ಸುಬ್ಬಮ್ಮನವರ ಜಿಂದಗೀ ಬಗ್ಯಾಗಿ ಬರತಕ್ಕ 150 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತು ದಾರಳಾದ ಶೀತಮ್ಮನ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅಕ್ಟೋಬರು ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್, ಡಿಸ್ಟ್ರಿಕ್ಟು ಜಡ್ಜು.

ಮೈಸೂರು ಡಿಸ್ಟ್ರಿಕ್ಟು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶ್ರೀರಂಗಪಟ್ಣದ ತಾ|| ಯೆಂಕಾರ್ ಕೊಪ್ಪಲ್‌ನಲ್ಲಿ ಇರುವ ವೆಂಕಟಪತಿ ಗೌಡನ ಹೆಂಡತಿ ತಿಮ್ಮಮ್ಮನ ವಿಷಯದಲ್ಲಿ—.

ಸ್ನ 1887ನೇ ಇಸವಿ ದಿವಾಳೀ ಕೇಸ್ ನಂಬರ 245.

ಹುಕ್ಕುಂ.

ಮೇಲ್ಕಂಡ ತಿಮ್ಮಮ್ಮನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರಳಾದ ತಿಮ್ಮಮ್ಮನು ಖುದ್ದು ಹಾಜರು ಮತ್ತು ಸದರೀಯವಳ ಲೇಣೇದಾರ್ರಾದ 2ನೇ ಕೆಂಪೇಗವುಡ ವುರಫ್ ಶಿದ್ದೇಗವುಡ ಹಾಜರ ಇವರಿಗೂ ದರ್ಯಾಫ್ತು ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತು ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರೆಂದರೆ,—1ನೇ ವೆಂಕಟಪತಿ ವುರಫ್ ಶೆತ್ತಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ವೆಂಕಟಪತಿಗವುಡನ ಹೆಂಡತಿ ತಿಮ್ಮಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬುದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ಅಕ್ಟೋಬರ್ 14ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್‌ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು	ಲೇಣೇದಾರ್ರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲದ ಮೊತ್ತ	ಯಾವಾಗ ಸಾಲ ಮಾಡಿದ್ದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ
1	ಶ್ರೀರಂಗಪಟ್ಣದ ತಾ|| ಎಂಮೇಕಾರ್ ಕೊಪ್ಪಲಲ್ಲಿರುವ ವೆಂಕಟಪತಿಗೌಡ ವುರಫ್ ಶೆತ್ತಿ.	229 5 2	..	ಡಿಕ್ರೀ ಬಾಬತು	

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ದೇವರಾಜ ಮೊಹಲ್ಲಾದಲ್ಲಿರುವ ಜೋರಣನ ಮಗ ಜವರಯ್ಯನ ವಿಷಯದಲ್ಲಿ—
ಸ್ 1887ನೇ ಇಸವಿ ದಿವಾಳೀ ಕೇಸ್ ನಂಬರು 3()2.

ಹುಕ್ಕುಂ.

ಮೇಲ್ಕಂಡ ಜವರಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನಾದ ಜವರಯ್ಯನು ಖುದ್ದು ಹಾಜರು ಇವನನ್ನ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, 1 ಮೈಸೂರು ಬ್ಯಾಂಕ ಯೇಜಂಟ್ ಬಾಳಾಜಿರಾವ್ 2 ಧನಾಭಿವೃದ್ಧೀ ಬ್ಯಾಂಕ್.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಜವರಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ಅಕ್ಟೋಬರ 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತುಡನೇ ಕೊಡೋಣಾಗಿಧೆ.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಡಿಕ್ರಿ ಆಯಿತು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರು ಬ್ಯಾಂಕ ಯೇಜಂಟ್ ಬಾಳಾಜಿರಾವ್	30 0 0	..	ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಫಾರೆಸ್ಟ್ ಇಲಾಖಾ.

ತಾರೀಖು 13ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 1889ನೇ ಇಸವಿ ಮಾರ್ಚೀ ಆಖೈರ್‌ವರೆಗೆ ಮೈಸೂರು ಡಿಸ್ಟ್ರಿಕ್ಟು ಹುಣಸೂರು ತಾಲ್ಲೂಕು ಬಾಬತು ಈ ಕೆಳಗೆ ನಮೂದಾಗುವ ಜಂಗಲ್‌ಗಳಿಂದ ಹುಣಸೂರ್ ಡಿಪೋಕ್ಕೆ ಚಿಲ್ಲರೇ ಚೌಬೀನೇ ಮತ್ತು ಗಳೂ ಸಹ ಹೇರಲು ಇಷ್ಟವುಳ್ಳವರು 1887ನೇ ಇಸವಿ ನವಂಬರ್ 15ನೇ ತಾರೀಖುವರೆಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸೂಪರಿಂಟೆಂಡೆಂಟ್ ಸಾಹೇಬರವರ ಆಫೀಸಿಗೆ ದರಖಾಸ್ತು ಮಾಡಬಹುದು.

ದರಖಾಸ್ತುದಾರೆ ತಾನು ಗಾಡೀ ಬೋಜಾ 1ಕ್ಕೆ ಯಾವ ದರದಂತೆ ಚಿಲ್ಲರೇ ಚೌಬೀನಾ ಮತ್ತು ಬಿದರುಗಳು ಹೇರಲು ಒಪ್ಪುತ್ತಾನೋ ಆ ದರವನ್ನ ದರಖಾಸ್ತಿನಲ್ಲಿ ನಮೂದಿಸಬೇಕು.

1 ವೀರನ ಹೊಸಹಳ್ಳಿ ಜಂಗಲ್
2 ಕಚಕೂನಹಳ್ಳಿ ಡಿಟೋ
3 ಆನೆಚವಕೂರು ಡಿಟೋ
4 ಬೂಣಾರೇ ಜಂಗಲ್
5 ಮಾವಕಲ್ ಡಿಟೋ

ಟಿ. ಆನಂದರಾವ್,
ಡೆಪ್ಯುಟಿ ಕಮ್ಮಿಷನರ್.

ನಂ. 10. ತಾರೀಖು 6ನೇ ಅಕ್ಟೋಬರ 1887.

ಹುಣಸೂರು ಸಬ್ ರಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನ ಕ್ರಮವಾದ ವಾರಸ್‌ದಾರ್ರಾಗಲೀ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳೊಳಗಾಗಿ ಹಾಜರಾಗಿ ವಾಪಸ ಪಡಿಯಬೇಕು, ತಪ್ಪಿದ್ದಲ್ಲಿ 1877ನೇ ಇಸವಿ 3ನೇ ನಂಬರ ರಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರೆಗೆ ನಾಶ ಪಡಿಸಲ್ಪಡುತ್ತೆ.

ನಂಬರ.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ಅಡಿರ್ಷ.	ದಸ್ತಾವೇಜು ಬರಸಿಕೊಂಡವನ ಹೆಸರು ಮತ್ತು ಅಡಿರ್ಷ.	ರಜಿಸ್ಟರಿಗೆ ಹಾಜರು ಮಾಡಿದ ತಾರೀಖು.	ರಜಿಸ್ಟರಿ ಮಾಡಿದ ತಾರೀಖು.	ಸ್ವಭಾವ ಮತ್ತು ಕಿಮ್ಮತು.
4ನೇ ಬುಕ್ಕು 2ನೇ ನಂಬರ 85—86ನೇ ಇಸವಿ	ಹುಣಸೂರು ತಾಲ್ಲೂಕು ಯಿಜೂರು ಗ್ರಾಮದಲ್ಲಿ ಇರುವ ಗುಡಗನಹಳ್ಳಿ ಬಲಗೈ ಕಾಳ	ಹುಣಸೂರು ತಾಲ್ಲೂಕು ಯಿಜೂರು ಗ್ರಾಮದಲ್ಲಿರುವ ಶಿರ್ವೇಗಾರ ಬಸವೇಗೌಡನ ಮಗ ಬೋರೇಗವುಡ	15—7—85	31—7—85	ಜೀತದ ಕರಾರು 50 ರೂಪಾಯಿ ಮತ್ತು ಬಂದುಖಂಡಗ ರಾಗಿ ಬಂದುಖಂಡಗ ಭತ್ತಾ ಸಹ ಮುದಗಡ ತೆಗದುಕೊಂಡು ಯಿರುವಹಾಗೂ ಮತ್ತು ಬರಸಿಕೊಂಡವನ ಮನೇಲಿ ಯರಡುಹೊತ್ತು ವೂಟಾ ಮಾಡಿಕೊಂಡು ಹೊದಿಯುವದಕ್ಕೆ ಕಂಬಳಿಯೂ ವುಡುವದಕ್ಕೆ ಬಟ್ಟೆಯೂ ಹೆಂಡರ ಮಕ್ಕಳ ಜೀವನಕ್ಕೆ ವರುಷ ಬಂದಕ್ಕೆ ಯರಡುಖಂಡಗ ರಾಗಿ ತೆಗದುಕೊಂಡು ಮೇಲ್ಕಂಡ ಅಸಲ ಹಣಕ್ಕೆ ಶೇಕಡಾ ಯರಡು ರೂಪಾಯಿ ಮೇರೆ ಆಗುವ ಬಡ್ಡಿ 12 ರೂಪಾಯಿ ಸಂಬಳಕ್ಕೆ ಒಪ್ಪಿ 12 ವರುಷ ಪರಿಯಂತ್ರ ಜೀತಾ ಮಾಡುವದಾಗಿ.
4ನೇ ಬುಕು 4ನೇ ನಂಬರ 1885—86	ಸದರೀ ಗ್ರಾಮದಲ್ಲಿರುವ ಬಲಗೈ ಜಾತಿ ಲಕ್ಕನ ಈರಾ	ಡಿಟೋ	ಡಿಟೋ	ಡಿಟೋ	ಡಿಟೋ
4ನೇ ಬುಕ್ಕು 3ನೇ ನಂಬರ 1885—86	ಸದರೀ ಗ್ರಾಮದ ಬಲಗೈ ಜಾತಿ ದಂಡನಮಗ ದಂಡಾ	ಡಿಟೋ	ಡಿಟೊ	ಡಿಟೋ	ಜೀತದ ಕರಾರು 60 ರೂಪಾಯಿ ಮತ್ತು ಬಂದುಖಂಡಗಭತ್ತಾ ಮತ್ತು ಬಂದುಖಂಡಗೆ ರಾಗಿ ಸಹ ಮುದಗಡ ತೆಗದುಕೊಂಡು ಯಿರುವಹಾಗೂ ಬರಸಿಕೊಂಡವನಲ್ಲಿ ಅಶನಾ ಅಛ್ಛಾದಾನ ತೆಗದುಕೊಂಡು 10 ವರುಷ ಪರಿಯಂತ್ರ ಅಸಲ ಹಣ ಬಡ್ಡಿ ಗಾಗಿ ನೌಕರೀ ಮಾಡುವದಾಗಿಯು ಹೆಂಡತಿ ಜೀವನಕ್ಕೆ ಸಾಲಿಸಾಲ 10 ವರುಷ ಪರಿಯಂತ್ರ 2 ಖಂಡಗ ರಾಗಿ ಕೊಡಬೇಕೆಂದು.

ಟಿ. ಆನಂದರಾವ್,
ರಜಿಸ್ಟ್ರಾರ.

ಹಾಸನ ಡಿಸ್ಟ್ರಿಕ್ಟು.

ತಾರೀಖು 7ನೇ ಅಕ್ಟೋಬರ 1887.

ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕು ಸಬ್ ರಜಿಸ್ಟ್ರಾರ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮ ಪ್ರಕಾರ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಬಂದು ತಿಂಗಳೊಳಗಾಗಿ ಹಾಜರಾಗಿ ವಾಪಸ ಪಡಿಯಬೇಕು. ತಪ್ಪಿದಲ್ಲಿ ರಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ.	ರಿಜಿಸ್ಟ್ರೇಷನಿಗೆ ಹಾಜರ್ಮಾಡಿದ ತಾರೀಖು.	ಬರದುಕೊಟ್ಟವರು ಹಾಜರಾದ ತಾರೀಖು.	ರಿಜಿಸ್ಟ್ರುದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
11 / 1883—84	21 4 83	21 4 83	21 4 83	ಚಿಕ್ಕನಾಯಕನಹಳ್ಳಿ ಬಲಗೈ ಲಾಳಿಮಗ ಲಕ್ಕ	ಚಿಕ್ಕನಾಯಕನಹಳ್ಳಿ ಬಸವೇಗೌಡ	(80) ರೂಪಾಯಿನ ಕ್ರಯಪತ್ರ.
79 / 1883—84	27 9 83	27 9 83	27 9 83	ಹೊಂಗಡಹಳ್ಳದ ಬಲಗೈ ಚೆಂಬ್ಬನಹಳ್ಳಿ ತಿಪ್ಪನಮಕ್ಕಳು ದೊಣೆಮಲ್ಲ ಮತ್ತು ಕೆಂಚ ಸಹ	ಹೊಂಗಡಹಳ್ಳದ ಮಂಚೇಗೌಡ	(100) ರೂಪಾಯಿನ ಕ್ರಯಪತ್ರ.
14 / 1884—85	11 4 84	11 4 84	12 4 84	ಬೈಕೆರೆ ಮಹಂತಗೌಡನ ಮಕ್ಕಳು ನಂಜೇಗೌಡ 1, ಅಂಣೇಗೌಡ 2, ಶಿವೇಗೌಡ 3, ಕೊಮಾರಗೌಡ 4 ಪುರಘ: ಪುಟ್ಟಸಾಮಿಗೌಡ ಸಹ	ಬೈಕೆರೆ ಮಹಂತಗೌಡನ ಮಕ್ಕಳು ಅಂಣೇಗವುಡ 1 ಶಿವೇಗೌಡ 2, ಕೊಮಾರಗೌಡ 3 ಪುರಘ: ಪುಟ್ಟಸಾಮಿಗೌಡ ನಂಜೇಗೌಡ 4 ಸಹ	(150) ರೂಪಾಯಿ ಕ್ರಯಬಾಳತಕ್ಕ ಸ್ವತ್ತುಗಳ ಬಾಬತು ಪಾಲು ಪಾರೀಖತ್ತು.
42 / 1884—85	26 6 84	26 6 84	26 6 84	ಮಂಜರಾಬಾದ ತಾಲ್ಲೂಕು ಮಾವಿನಕೋಲು ಗ್ರಾಮದಲ್ಲಿರುವ ಬಸವೇಗೌಡನ ಮಗ ನಂಜೇಗೌಡ	ಹಾಸನ ತಾಲ್ಲೂಕುಬಾಂವಾಸವಳ್ಳೀ ಗ್ರಾಮದ ಈರೇಗವುಡನ ಮಗ ನಿರ್ವಾಣೆಗವುಡ	(50) ರೂಪಾಯಿನ ಭೋಗ್ಯಪತ್ರ.

ಪಿ. ಎನ. ಪೂರ್ಣಯ್ಯ,
ರೆಜಿಸ್ಟ್ರಾರ.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ 894.

ತುಮಕೂರು ಡಿಸ್ಟ್ರಿಕ್ಟು ಗುಬ್ಬೀ ತಾಲ್ಲೂಕು ಕಡಬದಲ್ಲಿದ್ದು ಮೃತಪಟ್ಟ ಜಯರಾಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಡಿಟೋ ಕಡಬದಲ್ಲಿರುವ ಗರುಡಾಚಾರ್ರು, ಮೃತಪಟ್ಟ ಸದರೀ ಜಯರಾಮಯ್ಯನಿಗೆ ಭಾವಮೈದ ಆಗಬೇಕೆಂಬ ಹಕ್ಕುದಾರೀ ಮೇಲೆ ಕಡಬ ಸ್ಥಳದ ಗರುಡಾಚಾರ್ಯನು ಕಡಬದ ವಾಸಸ್ಥನಾಗಿ ಮೃತಪಟ್ಟ ಜಯರಾಮಯ್ಯನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತು ದಾರನಾದ ಗರುಡಾಚಾರ್ಯನ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 4ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಯರಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಿ|| ಅರ್ಜೀ ನಂಬರ್ 917.

ಮೃತಪಟ್ಟ ತುಮಕೂರು ಕಸಬಾದಲ್ಲಿದ್ದ ರಾಮಣ್ಣನ ಹೆಂಡತಿ ಲಕ್ಷ್ಮಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಡಿಟೋ ತುಮಕೂರಲ್ಲಿರುವ ಸೊಂಡೆಕೊಪ್ಪದ ಗೋಪಾಲಯ್ಯ, ಮೃತಪಟ್ಟ ಸದರೀ ಲಕ್ಷ್ಮಮ್ಮನಿಗೆ ಭಾವ ಆಗಬೇಕೆಂಬ ಹಕ್ಕುದಾರೀ ಮೇಲೆ ತುಮಕೂರು ಸ್ಥಳದ ಗೋಪಾಲಯ್ಯನು ಸದರೀ ವಾಸಸ್ಥಳಾಗಿ ಮೃತಪಟ್ಟ ಲಕ್ಷ್ಮಮ್ಮನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗೋಪಾಲಯ್ಯನ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 11ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿಧೆ.

1887ನೇ ಇಸವಿ ಅಕ್ಟೋಬರ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ ನಿಸೀ ನಮ್ಮ ಧಸ್ತು ಖತ್ತೊಡನೇ ಕೊಡೋಣಾಗಿಧೆ.

1887ನೇ ಇಸವಿ ಅರ್ಜೀ ನಂಬರ 925.

ಮೃತಪಟ್ಟ ಪರ್ವತಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರನಾದ ಮಲ್ಲಿಕಾರ್ಜುನಪ್ಪ, ಬೆಂಗಳೂರು ಡಿಸ್ಟ್ರಿಕ್ಟು ಮಾಗಡೀ ತಾಲ್ಲೂಕು ವೋಟಗಾನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಸದರೀ ಪರ್ವತಪ್ಪನಿಗೆ ಅಂಣನಾಗಬೇಕೆಂಬ ಹಕ್ಕುದಾರೀ ಮೇಲೆ ವೋಟಗಾನಹಳ್ಳಿ ಸ್ಥಳದ ಮಲ್ಲಿಕಾರ್ಜುನಪ್ಪನು ಸದರೀ ವೋಟಗಾನಹಳ್ಳಿ ವಾಸಸ್ಥನಾಗಿ ಮೃತಪಟ್ಟ ಪರ್ವತಪ್ಪನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಪರ್ವತಪ್ಪನ ಅಂಣ ಮಲ್ಲಿಕಾರ್ಜುನಪ್ಪನ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪರ್ವತಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

1887ನೇ ಇಸವಿ ಅಕ್ಟೋಬರು ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸೀ ನಮ್ಮದಸ್ತು ಖತ್ತೊಡನೆ ಕೊಡೋಣಾಗಿಧೆ.

ಸಿ. ಕ್ರೆಸ್,
ಸಬ್ ಜಡ್ಜ್.

ಗೈರವಿಲಾ ಆದ

ಯಡಭಾಗದ ಕರ್ರೆಸೀ ನೋಟಿನ,

ನಂಬರ.	ಸ್ಟಿಲ್.	ಹಕ್ಕುದಾರ್—ಮೈಸೂರು ಕೆಂಪನಂಜಂವಾಂಬಾ ಅಗ್ರಹಾರದಲ್ಲಿರುವ ಯೇಜಂಟ್ ವೆಂಕಟರಾಮಯ್ಯ.
ಬಿ. 94—66445	ಕ್ರಯ ರೂ. 100	

ಗವರ್ನಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರಗಳು ಕೊಂಡು ಕೊಳ್ಳಬಹುದು, ಒಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಶೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌಂಡು ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಔನ್ಸವುಳ್ಳ ಡಬ್ಬಿಒಂದಕ್ಕೆ ರೂ. 5—8—0, ಎಂಟು ಔನ್ಸವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌಂಡವುಳ್ಳ ಡಬ್ಬಿಗೆ 20 ರೂಪಾಯಿ, ಈ ಔಷಧವು ಕಲಕತ್ತೆಯಲ್ಲಿ ಮುಖ್ಯ ಮುಖ್ಯ ಯುರೋಪಿಯನ್ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌಂಡು ಡಬ್ಬಿಗೆ ಹನ್ನೆರಡು ಆಣೇ ಹಾಸಲೂ ಕೊಡಬೇಕು.

ಮೈಸೂರ ಗೆಜೆಟ್ ಚಂದಾ ದರ ವಗೈರೇ.

	ಚಂದಾ. ರೂ. ಆ.	ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ. ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಛವ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.	

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..		2 8
ಎರಡನೇ ಸಲ ವ ಆ ತರುವಾಯು ಪ್ರತಿ ಆವರ್ತಿಗೂ ಡಿಟೋ .. .		1 4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸಗಳಿಗೆ.—

ಮೊದಲನೇ ಸಲಕ್ಕೆ		5 0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ		2 8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟೆ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರಗಳು ಕೊಡುವ ನೋಟೀಸಗಳಿಗೆ:—

ಮೊದಲನೇ ಸಲಕ್ಕೆ ..	ಪುಟ 1ಕ್ಕೆ ..	10 0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ	,, ..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ		ಪಜ್ತಿ 1ಕ್ಕೆ ..	0 8
ಎರಡನೇ ದಫಾ	ಡಿಟೋ	ಡಿಟೋ ..	0 6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	..	..	0 4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಟಿ. ಟಿ. ಲಿನರಡ್,
ಮೈ. ಗೆ. ಕಂಪೈಲರ್.

ಮೈಸೂರ ಗೆಜೆಟ್.

ನಂ. 43 ಸರ್ಕಾರದಿಂದ ಛಾಯಿಷಿ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ಅಕ್ಟೋಬರ ತಾ|| 29, ಸನ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 12ನೇ ಅಕ್ಟೋಬರ್ 1887ನೇ ಇಸವಿ.

ಕ್ಯಾಂಪ್ ನಂ. 1486.—ಇದರಡೀ ಕಂಡ ಉಮೇದ್‌ವಾರರು ಅವರ ಹೆಸರಿಗೆ ಬಾಜೂದಲ್ಲಿ ಕಂಡ ತಾರೀಖು ಲಾಗಾಯತು ಆರು ತಿಂಗಳು ಪರಿಯಂತ ಅಜಮಾಯಿಷೀ ತರೀಕ್ ಆಸ್ಪಿಟಲ್ ಅಸಿಸ್ಟೆಂಟರಾಗಿ ಮೊಕರರ್‌ಮಾಡಲ್ಪಟ್ಟಿರುತ್ತಾರೆ:—

1. ಜ್ಞಾನಪ್ರಕಾಶಂಪಿಳ್ಳೆ, 2ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್, 1887ನೇ ಇಸವಿ ಅಕ್ಟೋಬರ್ 3ನೇ ಮಿತ್ತಿಂ ಲಾಗಾಯತು.
2. ಪಿ. ವೆಂಕಟರಂಗಂನಾಯಿಡು, 3ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್, 1887ನೇ ಇಸವಿ ಅಕ್ಟೋಬರ್ 6ನೇ ಮಿತ್ತಿ ಮಿನ ಲಾಗಾಯತು.

ಮೊಕ್ಕಾಂ ಮೈಸೂರು, ತಾರೀಖು 12ನೇ ಸೆಪ್ಟಂಬರ್ 1887ನೇ ಇಸವಿ.

ನಂ. 113.—1887ನೇ ಇಸವಿ ಸೆಪ್ಟಂಬರ್ 5ನೇ ಮಾರ್ಕಂ 107ನೇ ನಂಬರ್ ಇಸ್ತಿಹಾರ್‌ನಾಮೆಯ 5ನೇ ಕಲಂ ಪ್ರಕಾರ ಗನೀ ಕೆಲಸ ನಡಿಸುವ ಬಗ್ಯೆ ಲೈಸೆನ್ಸ ಕೊಡಲ್ಪಡಬೇಕಾದ ಜಮೀನಿನ ವಿಸ್ತೀರ್ಣದ ವಿಷಯದಲ್ಲಿ ಚಾಲತೀ ವರುಷಕ್ಕೆ 35 ಚದರ್ ಮೈಲಿಗಳ ಮಟ್ಟಿಗೆ ಕೊಡಲ್ಪಡತಕ್ಕದ್ದೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಗೊತ್ತು ಮಾಡಿರುವದರಿಂದಲೂ ಮತ್ತು ಇದಕ್ಕೆ ಶೇರಿಸೋಣಾದ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಪ್ರತಿ ತಾಕಿನ ವಿಷಯದಲ್ಲೂ ಗನೀ ಕೆಲಸ ನಡಿಸುವ ಲೈಸೆನ್ಸಿಗೋಸ್ಕರ ಒಂದಕ್ಕಿಂತಲೂ ಜಾಸ್ತಿಯಾಗಿ ದರಖಾಸ್ತುಗಳು ಬಂದಿರುವದರಿಂದಲೂ ಮತ್ತು ಸರ್ಕಾರದವರು, ಮೇಲ್ಕಂಡ ಪ್ರತಿ ತಾಕಿಗೂ ಬಹಿರಂಗವಾದ ಚಡ ದರಖಾಸ್ತು ಮೂಲಕ ಹುಟ್ಟಬಹುದಾದಂಥಾ ಪ್ರೀಮಿಯಂಯಾನೇ ನಫೆಗೆ ಗನೀ ಕೆಲಸದ ಲೈಸೆನ್ಸ ಕೊಡಲ್ಪಡತಕ್ಕದ್ದೆಂದು ನಿಷ್ಕರ್ಷೆ ಮಾಡಿರುವದರಿಂದ ಮೇಲ್ಕಂಡ ಲೈಸೆನ್ಸಗಳಿಗೋಸ್ಕರ, ಇದರಡೀಕಂಡ ಷರತ್ತುಗಳಿಗೆ ಒಳಪಟ್ಟು ಯಿದರ ದೆಶೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತವೆ:—

I. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತು ಮಾಡಲ್ಪಟ್ಟ ಗೊತ್ತಾದ ತಾಕು ನಮೂದಿಸಲ್ಪಡತಕ್ಕದ್ದಲ್ಲದೆ ಸದರೀ ತಾಕಿನ ಲೈಸೆನ್ಸಿಗೋಸ್ಕರ ದರಖಾಸ್ತುದಾರನು ಪಾವತೀ ಮಾಡುವದಕ್ಕೆ ಒಪ್ಪುವ ನಫೇ ಮೊಬಲಗು ಸುದಾ ಕಾಣಿಸಲ್ಪಡತಕ್ಕದ್ದು. ಲೈಸೆನ್ಸಿನ ಷರತ್ತುಗಳು ಇದಕ್ಕೆ ಶೇರಿಸೋಣಾದ B ನಮೂನೆಯಲ್ಲಿ ವಿವರಿಸಲ್ಪಟ್ಟಂತೆ ಯಿರುತವೆ. ನಫೇ ಮೊಬಲಗು ಪೌಂಡ್ ಸಂಖೆಯಲ್ಲಾಗಲೀ ರೂಪಾಯಿ ಸಂಖೆಯಲ್ಲಾಗಲೀ ತಿಳಿಸಲ್ಪಡತಕ್ಕದ್ದು.

II. ಪ್ರತಿ ದರಖಾಸ್ತಿನ ಸಂಗಡಲೂ, ಪಾವತೀ ಮಾಡುವದಕ್ಕೆ ಒಪ್ಪಿಕೊಳ್ಳುವ ನಫೇ ಮೊಬಲಗಿನ ದಶಮಾಂಶಕ್ಕೆ ಸರಿಯಾದ ಮೊಬಲಗು ಠೇವಣೀ ತರೀಕ್ ಕಳುಹಿಸಲ್ಪಡತಕ್ಕದ್ದಲ್ಲದೆ ಠೇವಣೀ ಮೊಬಲಗು ಮೈಸೂರು ದೇಶದ ದಿವಾನರವರ ಹೆಸರಿಗೆ ಜಮೇ ಹಿಡಿಯತಕ್ಕ ಬಗ್ಯೆ ಮೈಸೂರು ದೇಶದ ಯಾವದಾದರೂ ಸರ್ಕಾರ್ ಖಜಾನೆಯಲ್ಲಾಗಲಿ ಯಿಂಡಿಯಾ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಿಯಾಗಲಿ ಅಥವಾ ಲಂಡನ್ನಲ್ಲಿ 59ನೇ ಸ್ಟ್ರಾಂಡ್ ಸ್ಥಳದಲ್ಲಿರುವ ಮೆಸ್ಸಿಯರಸ್ ಕಾಟ್ಸ್ ಅಂಡ್‌ಕೋಯವರಿಗಾಗಲಿ ಪಾವತೀ ಮಾಡಲ್ಪಟ್ಟು ಅಂಥಾ ಪಾವತೀ ಬಗ್ಗಾಗಿ ಪಡೆದ ರಶೀತಿಯು ದರಖಾಸ್ತಿನೊಂದಿಗೆ ಕಳುಹಿಸಲ್ಪಡತಕ್ಕದ್ದು.

III. ದರಖಾಸ್ತು, ಈ ಇಸ್ತಿಹಾರ್‌ನಾಮೆಗೆ ಲಗತ್ತಿರುವ C ನಮೂನೇಯಲ್ಲಿ ಬರೆಯಲ್ಪಡತಕ್ಕದ್ದು.

IV. ಮೇಲ್ಕಂಡ IIನೇ ಪ್ಯಾರಾ ಅನುಸರಿಸಿ ಪಾವತೀ ಮಾಡಲ್ಪಟ್ಟ ಠೇವಣೀಗೋಸ್ಕರ ಪಡೆದ ರಶೀತೀ ಸಹಿತವಾಗಿ ದರಖಾಸ್ತು ಒಂದು ಲಿಫಾಫೆಯಲ್ಲಿ ಹಾಕಿ ಮೊಹರ್ ಮಾಡಲ್ಪಟ್ಟು "ಗನೀ ಕೆಲಸದ ಗುತ್ತಿಗೇ ಬಗ್ಯೆ ದರಖಾಸ್ತು" ಯಂಬದಾಗಿ ಮೇಲೆ ಬರೆಯಲ್ಪಟ್ಟು ಬೆಂಗಳೂರಲ್ಲಿ ಮೈಸೂರು ದೇಶದ ದಿವಾನರವರ ಹೆಸರಿಗೆ ಮೇಲ್ ವಿಳಾಸ ಬರೆಯಲ್ಪಡತಕ್ಕದ್ದು.

V. ದರಖಾಸ್ತುಗಳು, ದಿವಾನರವರಿಗೆ 1887ನೇ ಇಸವಿ ಡಿಶಂಬರ್ 10ನೇ ಮಾರ್ಕಿನ ಮಧ್ಯಾನ್ಹದಲ್ಲಿಯಾಗಲೀ ತತ್ಪೂರ್ವದಲ್ಲಿಯಾಗಲಿ ತಲಪಬೇಕಾಗಿರುತ್ತೆ. ಆಗ ಅವು ದಿವಾನರವರಿಂದ ಬೆಂಗಳೂರಲ್ಲಿರತಕ್ಕ ಪಬ್ಲಿಕ್ ಆಫೀಸ್ ಯಂಬ ಕಟ್ಟಡದೊಳಗೆ, ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

VI. ದರಖಾಸ್ತುಗಳ ಆಖೈರ್ ವ್ಯವಸ್ಥೆಯು ದಿವಾನರವರಿಗೆ ಶೇರಿರುತ್ತೆ. ಅವರು ಯಾವ ಕಾರಣವೂ ತಿಳಿಸದೇನೇ ಚಡ ದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

VII. ಯಾವ ದರಖಾಸ್ತು ದಿವಾನರವರಿಂದ ಅಂಗೀಕರಿಸಲ್ಪಡುತಿದೆಯೋ ಅಂಥಾ ದರಖಾಸ್ತುದಾರನು, ಅಂಥಾ ಅಂಗೀಕಾರ ತನಗೆ ತಿಳಿಸಲ್ಪಟ್ಟ 30 ದಿವಸಗಳೊಳಗಾಗಿ ದರಖಾಸ್ತಿನಲ್ಲಿ ಪಾವತೀ ಮಾಡುವದಾಗಿ ಒಪ್ಪಿಕೊಂಡಿರುವ ನಫೇ ಮೊಬಲಗಿನ ಉಳಿದ ಭಾಗವನ್ನು ದಿವಾನರವರ ಹೆಸರಿಗೆ ಜಮೇಕಟ್ಟುವ ಬಗ್ಯೆ ಮೈಸೂರು ದೇಶದ ಯಾವದಾದರೂ ಸರಕಾರದ ಖಜಾನೆಯಲ್ಲಾಗಲಿ, ಯಿಂಡಿಯ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಾಗಲೀ ಅಥವಾ ಲಂಡನ್ ಪಟ್ಟಣದ ಮೆಸ್ಸಿಯರ್ಸ್ ಕಾಟ್ಸ್ ಅಂಡ್‌ಕೋ ಯವರಿಗಾಗಲಿ ಪಾವತೀ ಮಾಡತಕ್ಕದ್ದು.

VIII. ಮಂಜೂರ್ ಮಾಡಲ್ಪಟ್ಟ ದರಖಾಸ್ತುದಾರರ ಹೆಸರು ದೇಖೀಲ್ ಇತರ ದರಖಾಸ್ತುಗಳು ಯಾವದಕ್ಕೆ ಅಂಗೀಕರಿಸಲ್ಪಟ್ಟಿರುತದೆಯೋ ಅಂಥಾ ತಾಕುಗಳ ವಿವರಣೆಯು ಸರ್ಕಾರೀ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಡುವದು.

IX. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಠೇವಣಿಯು, ಅವರು ಖಾಯಿಷ್ ಮಾಡಿದಾಗ ವಾಪಸ್ ಮಾಡಲ್ಪಡುವದು.

X. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು, ಗುತ್ತಿಗೇ ಕರಾರು ಹುಟ್ಟುವದಕ್ಕೆ ಮುಂಚೆ ಯಾವ ಕಾಲದಲ್ಲಿ ಆಗಲಿ ಇದಕ್ಕೆ ಲಗತ್ತಿರುವ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಸರಹದ್ದಿನೊಳಗಣ ತಾಕಿನಲ್ಲಿ ಮೊಕ್ಕಾಂ ಮಾಡುವ ಬಗ್ಗೆ ಅವಕಾಶ ಕೊಡಲ್ಪಡುವನು, ಆದರೆ ಆತನು ಮೇಲ್ಕಂಡ VIIನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟಂತೆ ನಫೇ ಬಾಬತು ಉಳಿದ ಬಾಕಿಯನ್ನ ಪಾವತೀ ಮಾಡಿದ ತರುವಾಯ ಆರು ತಿಂಗಳ ವಳಗಾಗಿ ಗವರ್ನಮೆಂಟ್ ತರಫಿನಲ್ಲಿ ದಿವಾನರವರಿಂದ ರುಜು ಮಾಡಲ್ಪಡುವ ಬಗ್ಗೆ ಇದಕ್ಕೆ ಜಂಟಿಸೋಣಾದ B. ನಮೂನೆಯಲ್ಲಿ ತಯಾರ್ಮಾಡಲ್ಪಟ್ಟು ಕ್ರಮವಾಗಿ ಸ್ಟಾಂಪ್ ಹಾಕಲ್ಪಟ್ಟ ಗುತ್ತಿಗೇ ಕರಾರನ್ನು ಹಾಜರ್ಮಾಡತಕ್ಕದ್ದು.

XI. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು VIIನೇ ಪ್ಯಾರಾದಲ್ಲಿ ನಿಯಮಿಸಲ್ಪಟ್ಟ ಪ್ರಕಾರ ನಫೆಯ ಬಾಕೀ ಮೊಬಲಗನ್ನ ಪಾವತೀ ಮಾಡುವದಕ್ಕಾಗಲೀ Xನೇ ಪ್ಯಾರಾದಲ್ಲಿ ವಿಧಿಸಲ್ಪಟಂತೆ ಗುತ್ತಿಗೇ ಕರಾರನ್ನು ದಸ್ತಖತ್ತಿಗೋಸ್ಕರ ಹಾಜರ್ಮಾಡುವದಕ್ಕಾಗಲಿ ತಪ್ಪಿದರೆ ದರಖಾಸ್ತುದಾರನಿಂದ ದಿವಾನರವರ ಹೆಸರಿಗೆ ಜಮೇಕಟ್ಟುವ ಬಗ್ಗೆ ಹಾಂಗೆ ತಪ್ಪಿಹೋದ ತಾರೀಖಿನ ವರಿಗೆ ಪಾವತೀ ಮಾಡಲ್ಪಟ್ಟಿರುವ ಕೇವಣೀ ಯಾ ಇತರ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೇ ಅಂಥಾ ಮೊಬಲಗು ಯಾವ ಬಗ್ಗೆ ಪಾವತೀ ಮಾಡಲ್ಪಟ್ಟಿತೋ ಅಂಥಾ ಜಮೀನುಗಳು ಸರ್ಕಾರದವರ ಯಖ್ತ್ಯಾರೀಯಲ್ಲಿ ಸಂಪೂರ್ಣವಾಗಿ ಯಿರತಕ್ಕದ್ದು.

XII. A ಷೆಡ್ಯೂಲ್‌ನಲ್ಲಿ ನಮೂದ್ ಮಾಡಲ್ಪಟ್ಟ ತಾಕುಗಳು ಯಿರತಕ್ಕ ಪ್ರದೇಶವನ್ನು ತೋರಿಸುವ ಮೈಸೂರು ದೇಶದ ಬ್ರಿಟಿಷ್ ಟೊಪೋಗ್ರಾಫಿಕಲ್ ಸರ್ವೆ ಇಲಾಖೇಯಿಂದ ತಯಾರ್ಮಾಡಲ್ಪಟ್ಟ ಮ್ಯಾಪ್‌ಯಾನೇ ನಕ್ಷೆಯು (ಅಂಗುಲ ವಂದಕ್ಕೆ ವಂದುಮೈಲೀ ಫಾಸಲೆಯುಳ್ಳ) ನಕ್ಕಲು ಬೆಂಗಳೂರಲ್ಲಿರುವ ದಿವಾನರವರ ಕಚೇರೀಯಲ್ಲಿ ಯಿರುವದು ಮತ್ತು ಅಂಡರ್ ಸೆಕ್ರೆಟರಿಯವರನ್ನ ಬೇಡಿದಲ್ಲಿ ಯಾರಿಗಾದರೂ ಬಗರ್ ಚಾರ್ಜ್ ನೋಡುವ ಬಗ್ಗೆ ಅವಕಾಶ ಕೊಡಲ್ಪಡುವದು.

ಹುಕ್ಕುಂ ಬಮೋಜೀಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರೆಟರಿ.

ಅಪೆಂಡಿಕ್ಸ A.

1887—88ನೇ ಇಸವಿಯಲ್ಲಿ ಜನಗಳಿಗೆ ಗನೀ ಕೆಲಸ ನಡಿಸುವ ಬಗ್ಯೆ ಲೈಸೆನ್ಸ ಕೊಡಲು ಉದ್ದೇಶಿಸಲ್ಪಟ್ಟ ಜಮೀನ ತಾಕಿನ ವಿವರಣೆಯನ್ನು ತೋರಿಸುವ ಷೆಡ್ಯೂಲ್ ಯಾನೇ ತಖ್ತೆ.

ಪ್ರತಿ ತಾಕಿನ ನಂಬರು.	ಪ್ರತಿ ತಾಕಿನ ಹೆಸರು.	ಪ್ರತಿ ತಾಕೂ ಇರತಕ್ಕ ಪ್ರದೇಶ.			ಟೊಪೋಗ್ರಾಫಿಕಲ್ ಷೀಟಿನ ನಂಬರು.	ಪ್ರತಿ ತಾಕೂ ಯಾವ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುತ್ತೆಂಬುವದು.		ಹಿಂದಿನ ಕಡೇ ಮೇಸ್ತಕಿನಲ್ಲಿ ವಿವರಿಸಲ್ಪಟ್ಟ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುವ ಜಮೀನ ಪೈಕೀ ಇದುವರಿಗೆ ಅನ್ಯಥಾ ವಿಲಾ ಮಾಡಲ್ಪಟ್ಟ ಜಮೀನಿನ ವಿಸ್ತೀರ್ಣ.	[illegible]
		ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮಗಳು.		ದಕ್ಷಿಣೋತ್ತರ ವೃತ್ತಗಳು.	ಯ್ಯಾಮ್ಯೋತ್ತರ ರೇಖೆ.		
1	ಹೊನ್ನೇಮರಡೀ ತಾಕು ..	ಚಿತ್ರದುರ್ಗ ..	ಜಗಲೂರು ..	(1) ಹೊನ್ನೇಮರಡಿ, (2) ಅಕ್ಕನೂರು, (3) ಜಮ್ಮಾಪುರ	10	14° 31′ರಮಧ್ಯೆ ಮತ್ತು 14° 32′	76° 25′ ಮತ್ತು 76° 26′ರಮಧ್ಯೆ	ಇಲ್ಲಾ ..	1 ಚದರಮೈಲಿ
2	ತುರವನೂರು ತಾಕು ..	ಡಿಟ್ಟೋ ..	ಚಿತ್ರದುರ್ಗ ..	(1) ತುರವನೂರು, (2) ಚಿಕ್ಕನಾಯಕನಹಳ್ಳಿ, (3) ಭಂಗಾರಕ್ಕನಹಳ್ಳಿ	10	14° 22′ „ ಮತ್ತು 14° 24′ರಮಧ್ಯೆ	76° 25′ ಮತ್ತು 76° 27′ „	ಡಿಟ್ಟೋ ..	2 ಚದರಮೈಲಿಗಳು
3	ರಂಗವನಹಳ್ಳೀ ತಾಕು ..	ಡಿಟ್ಟೋ ..	ಡಿಟ್ಟೋ ..	(1) ಗೌನೂರು (2) ಗುಡ್ಡದರಂಗವನಹಳ್ಳಿ, (3) ಮುಲ್ಲಾಪುರ, (4) ಕಲ್ಲೇನಹಳ್ಳಿ, (5) ಸಾಸಲದೊಡ್ಡಿ (6) ಬೊಮ್ಮೇನಹಳ್ಳಿ	10	14° 15′ „ ಮತ್ತು 14° 19′ರಮಧ್ಯೆ	76° 26′ ಮತ್ತು 66° 29′ „	ಗೌನೂರು ಗ್ರಾಮದ ಉತ್ತರ ಮತ್ತು ... 520 ಎಕರೆಗಳು ಮೇಜರ್ ಜನರಲ್ ಆರ್. ಎ. ಕೋಲ್‌ಯವರಿಗೆ ಕೊಡಲ್ಪಟ್ಟಿರುತ್ತೆ.	3 ಚದರಮೈಲಿಗಳು
4	ಬೆಳ್ಳೀಗುಡ್ಡದ ತಾಕು ..	ಡಿಟ್ಟೋ ..	ಡಿಟ್ಟೋ ..	(1) ಕಂಚಿಕನಹಾಳ್, (2) ಯಿಂಗ್ಳದಹಾಳ್ (3) ಕುರುಬರಮರಡಿಕೆರೆ	11	14° 9′ ಮತ್ತು 14° 12′ರ ಮಧ್ಯೆ	76° 29′ „ ಮತ್ತು 76° 33′ „	ಇಲ್ಲಾ ..	3 ಚದರಮೈಲಿಗಳು
5	ಕರಡೀಹಳ್ಳಿ ತಾಕು ..	ಹಾಸನ ..	ಅರಸೀಕೆರೆ ..	(1) ಕರಡಿಹಳ್ಳಿ, (2) ಚೆನ್ನಾಪುರ, (3) ಅಗ್ರಹಾರ, (4) ಯರೆಹಳ್ಳಿ	29	13° 25′ ಮತ್ತು 13° 26′ „	76° 14′ „ ಮತ್ತು 76° 16′ „	ಡಿಟ್ಟೋ ..	1 ಚದರಮೈಲಿ
6	ಬೆಳಗುಂಬ ತಾಕು ..	ಡಿಟ್ಟೋ ..	ಡಿಟ್ಟೋ ..	(1) ಬೆಳಗುಂಬ, (2) ತಿಮ್ಮಾಪುರ (3) ಕಾಲಕೆರೆ, (4) ಜೋತಿಮಲ್ಲಾಪುರ, (5) ತಾಳತುರಿ, (6) ಕೋಡಿಹಳ್ಳಿ	29 ವ 30	13° 14′ „ ಮತ್ತು 13° 16′ „	76° 21′ „ ಮತ್ತು 76° 24′ „	ಡಿಟ್ಟೋ ..	3 ಚದರಮೈಲಿಗಳು

7	ಬಿದರೆ ಕಾವಲ್ ತಾಕು	ಡಿಟೋ	ಅರಸೀಕೆರೆ ವ ಚನ್ನರಾಯಪಟ್ಣ ತಾಲ್ಲೂಕು	(1) ಬಿದರೆ 2 ಮಲ್ಲಾಪುರ, (3) ಮಂಗಲಾಪುರ, (4) ಕೋಡಿಹಳ್ಳಿ	30	13° 9' ಮತ್ತು 13° 11' ,,	76° 25' ಮತ್ತು 76° 28' ,,	ಇಲ್ಲಾ	3 ಚದರ ಮೈಲಿಗಳು
8	ಜಲಗಾರನಹಳ್ಳಿ ತಾಕು	ಡಿಟೋ	ಅರಸೀಕೆರೆ	(1) ಜಲಗಾರನಹಳ್ಳಿ (2) ಸೋಮೇನಹಳ್ಳಿ (3) ಚಲ್‍ನಾಯಕನಹಳ್ಳಿ	30	13° 12' ಮತ್ತು 13 13' ರಮಧ್ಯೆ	76° 24' ಮತ್ತು 76° 26' ರಮಧ್ಯೆ	ಡಿಟೋ	1 ಚದರ ಮೈಲಿ
9	ರಂಗಾಪುರ ಕಾವಲ್	ಡಿಟೋ	ಡಿಟೋ	(1) ಇಸವನಹಳ್ಳಿ, (2) ಆಡಿಹಳ್ಳಿ (3) ಗೊಲ್ಲರಹಳ್ಳಿ (4) ಮಂಗಲಾಪುರ (5) ಜೋರೆಹಳ್ಳಿ (6) ಜೋಗೇನಹಳ್ಳಿ (7) ಕಂಚೇನಹಳ್ಳಿ (8) ಚಿಟ್ಟನಹಳ್ಳಿ	30	13° 9' ಮತ್ತು 13° 12' ರ ,,	76° 18' ಮತ್ತು 76° 20' ರ ,,	ಸುಮಾರು 2 ಚದರ ಮೈಲಿಗಳು ಸರ ರೋಪರ್ ಲೆತ್‍ಬ್ರಿಡ್ಜ್ ಎಂ. ಪಿ. ವ ಮೆ|| ಫ್ರ್ಯಾಂಕ್ ಲೆತ್‍ಬ್ರಿಡ್ಜ್ ಯವರಿಗೆ ಕೊಡಲ್ಪಟ್ಟಿರುತ್ತೆ	1 ಚದರ ಮೈಲಿ
10	ನುಗ್ಗೇಹಳ್ಳಿ ತಾಕು	ಡಿಟೋ	ಚನ್ನರಾಯಪಟ್ಣ	(1) ಚಿಕ್ಕೋನಹಳ್ಳಿ, (2) ನವಲೆ (3) ರಾಯಸಮುದ್ರ ಅಮೃತಮಹಲ್ ಕಾವಲ್ (4) ವಿರುಪಾಕ್ಷಿಪುರ (5) ಮಾವಿನಹಳ್ಳಿ, (6) ನುಗ್ಗೇಹಳ್ಳಿ, (7) ಜಂಬೂರು (8) ಹೊನ್ನೇಮಾರನಹಳ್ಳಿ, (9) ಹುಲಿಕೆರೆ (10) ಹುಬ್ಬಿನಹಳ್ಳಿ	30 ಮತ್ತು 34	13° 0' ಮತ್ತು 13° 6' ರ ,,	76° 29' ಮತ್ತು 76° 32' ರ ,,	ಇಲ್ಲ	4 ಚದರ ಮೈಲಿಗಳು
11	ಕೆಂಪಿನಕೋಟೆ ತಾಕು	ಟಡೋ	ಡಿಟೋ	(1) ಕೆಂಪಿನಕೋಟೆ (2) ಹುಲಿಗೆರೆ (3) ಮಾರಶಟ್ಟಿಹಳ್ಳಿ (4) ಮಾದಿಹಳ್ಳಿ (5) ಗೊಲ್ಲಹಳ್ಳಿ, (6) ಬಸವನಹಳ್ಳಿ (7) ಹಳೇಬೆಳಗೊಳ (8) ಚಾಲ್ನಯ್ಯ	55	12° 54' ಮತ್ತು 12° 56' ರ ,,	76° 33' ಮತ್ತು 76° 35' ರ ,,	ರೆವಿನ್ಯೂ ಸರ್ವೆ ನಕಾಶಿನಲ್ಲಿ B ಗುರ್ತು ಮಾಡಲ್ಪಟ್ಟ 311 ಎಕರೆ ವಿಸ್ತೀರ್ಣದ ತಾಕು ಮೆ|| ಹೆಚ್. ಎಫ್. ಸ್ಟ್ರಿಕ್‍ಲೆಂಡ್ ವಗೈರೇರಿಗೆ ಕೊಡಲ್ಪಟ್ಟಿರುತ್ತೆ	1½ ಚದರ ಮೈಲಿ
12	ನಡಪಾಪನಹಳ್ಳಿ ತಾಕು	ಮೈಸೂರು	ಹುಣಸೂರು	(1) ನಡಪಾಪನಹಳ್ಳಿ (2) ಮಾದವನ ಹೊಸೂರು	53 ವ 54	12° 15' ಮತ್ತು 12° 17' ರ ,,	76° 26' ಮತ್ತು 76° 27' ರ ,,	ಇಲ್ಲ	2 ಚದರ ಮೈಲಿಗಳು
13	ಕರಿಮುದ್ದೇನಹಳ್ಳಿ ತಾಕು	ಡಿಟೋ	ಡಿಟೋ	(1) ಹೊಳ್ಳದ ಕೊಪ್ಪಲ್ (2) ಗಜ್ಜಯ್ಯನ ವಡ್ಡರಗುಡಿ (3) ಕರಿಮುದ್ದನಹಳ್ಳಿ	54	12° 12' ಮತ್ತು 12° 14' ರ ,,	76° 26' ಮತ್ತು 76° 27' ರ ,,	632 ಎಕರೆ 8 ಗುಂಟೆಗಳು ಮದರಾಸಿನ ಮೆಸ್ಸರ್ಸ್ ವಿಲ್ಸನ್ ಅಂಡ್ ಕೋಯವರಿಗೆಕೊಡಲ್ಪಟ್ಟಿರುತ್ತೆ	2 ಚದರ ಮೈಲಿಗಳು
14	ಸೋಂಣಹಳ್ಳಿ ತಾಕು	ಡಿಟೋ	ಡಿಟೋ	(1) ಸೋಂಣಹಳ್ಳಿ (2) ಬಾಚೇಗವುಡನಹಳ್ಳಿ	54	12° 9' ಮತ್ತು 12° 12' ರ ,,	76 28' ಮತ್ತು 76° 29' ರ ,,	ಇಲ್ಲ	3 ಚದರ ಮೈಲಿಗಳು

ಅಪೆಂಡಿಕ್ಸ್ B.

ಕಕ್ಷಿಗಾರರು.

ಈ ಕರಾರು ಒಂದು ಸಾವಿರದ ಯಂಟನೂರು ಯಂಭತ, ನೇ ಇಸವಿ ನೇ ಮರ್ಕ್ಕು ಮಿನಲ್ಲಿ ("ಗುತ್ತಿಗೆಗೆ ಕೊಡುವವರೆಂತ" ಐಯಿಂದ ಕರೆಯಲ್ಪಡುವ) ಮೈಸೂರು ಗವರ್ನಮೆಂಟಿನವರಿಗೂ ಮತ್ತು "ಗುತ್ತಿಗೆದಾರರೆಂತ" (ಐಯಿಂದ ಕರೆಯಲ್ಪಡುವ) ಇತರರಿಗೂ ನಡೆದಿರುತ್ತೆ.

ಗುತ್ತಿಗೆಗೆ ಕೊಡತಕ್ಕವರು ಗುತ್ತಿಗೇದಾರರ ಕೇಳಿಕೆ ಮೇಲೆ ಮತ್ತು ಅವರು, ಇದರ ಮುಂದೆನಮೂದ್ ಮಾಡಲ್ಪಟ್ಟ ಒಡಂಬಡಿಕೆಗಳನ್ನು ನೆರವೇರಿಸುವದಕ್ಕೋಸ್ಕರ ಜಾಮೀನೀ ತರೀಕ್ ರೂಪಾಯಿ

ಠೇವಣೀ ಮತ್ತು ಗುತ್ತಿಗೆಗೆ ಕೊಡುವ ಬಗ್ಯೆ ಕರಾರು.

ಗಳನ್ನು ಠೇವಣಿ ಕಟ್ಟಿ ಅಂಥಾ ಯಾವದಾದರೊಂದು ಒಡಂಬಡಿಕೆ ತಪ್ಪಿ ನಡಿಯುವಲ್ಲಿ ಸದರೀ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡತಕ್ಕದ್ದೆಂಬ ಷರತ್ತಿನ ಮೇಲೆ, ಮುಂದೆ ಅಡಗಿರತಕ್ಕ ಇದಕ್ಕೆ ಶೇರಿಸೋಣಾದ ಪಠ ಯಾ ನಕ್ಷೆಯಲ್ಲಿ ತೋರಿಸಲ್ಪಟ್ಟು ಮೈಸೂರು ಶೀಮೆಯ ಡಿಸ್ಟ್ರಿಕ್ಟು ತಾಲ್ಲೂಕಿನಲ್ಲಿ ಯಿರುವ ಅಂದಾಜ್‌ವುಳ್ಳ ಮತ್ತು ಯಿದರಡೀ ಶೇರಿಸಲ್ಪಟ್ಟ ಷೆಡ್ಯೂಲ್ ತಖ್ತೆಯಲ್ಲಿ ಮುಖ್ಯವಾಗಿ ನಮೂದ್ ಮಾಡಿ ವಿವರಿಸಲ್ಪಟ್ಟು "ಚುನಾಯಿಸಲ್ಪಟ್ಟ ತಾಕು" ಯಂಬದಾಗಿ ಐಯಿಂದ ಕರೆಯಲ್ಪಡುವ ಜಮೀನ್ ವಿಷಯದಲ್ಲಿ ಗನಿ ಕೆಲಸ ನಡಿಸುವದಕ್ಕಾಗಿ ಗುತ್ತಿಗೆಗೆ ಕೊಡುವ ಬಗ್ಯೆ ಒಪ್ಪಿ ಯಿರುತ್ತಾದ್ದರಿಂದ.

ಹಾಲಿ ಈ ಕರಾರಿನಿಂದ ಅಂಗೀಕರಿಸಲ್ಪಡುವದೇನಂದರೆ, ಮುಂದೆ ಉಳಸಿಕ್ಕೊಳ್ಳಲ್ಪಟ್ಟ ಕಂದಾಯಕ್ಕೂ ರಾಜಪಾಲಿಗೂ, ಜುರ್ಮಾನೆಗೂ, ಮತ್ತು ಇತರ ಪಾವತಿಗಳಿಗೂ ಮತ್ತು ಮುಂದೆ ಅಡಗಿರತಕ್ಕ ಗುತ್ತಿಗೇದಾರರಿಂದ ಹುಟ್ಟಲ್ಪಡುವಒಡಂಬಡಿಕೆಗಳು ವ ಕರಾರ್‌ಗಳಿಗೂ ಒಳಪಟ್ಟು, ಗುತ್ತಿಗೆಗೆ ಕೊಡುವವರಿಂದ ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರಿಗೆ, ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ, ಮೇಲೆ ನಮೂದ ಮಾಡಲ್ಪಟ್ಟು ವಿವರಿಸಲ್ಪಟ್ಟ ಚುನಾಯಿಸಲ್ಪಡೋಣಾದ ತಾಕಿನಲ್ಲಿ ಅಡಗಿರುವ ಆಕಾರ ಕಾಣದ ಸರ್ಕಾರ್ ಬಂಜರ್ ಜಮೀನ್ ದೇಖಿಲ್ ಹಿಡುವಳಿಯಲ್ಲಿ ಯಿಲ್ಲದ ಆಕಾರ ಕಂಡ ಸರ್ಕಾರ್ ಜಮೀನಿನಲ್ಲಿಯೂ, ಮತ್ತು ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ಹಿಡುವಳಿಯಲ್ಲಿನ ಸರ್ಕಾರ್ ಜಮೀನ್ ದೇಖೀಲ್ ಇನಾಂ ಜಮೀನ್‌ಗಳಲ್ಲಿಯೂ ವಿಂಗಡಿಸಿ, ಗನಿ ಕೆಲಸ ನಡಿಸುವದಕ್ಕೂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಯಿದ್ದಲು ಯಾ ವ್ಯಾಪಾರಕ್ಕೆ ಲಾಯಖಾದ ಇತರ ಪದಾರ್ಥಗಳುಳ್ಳಂಥಾ ಕಲ್ಲುಗಳು, ಬಳ್ಳಿ ಮೊಂಣು ಮುಂತಾದವುಗಳನ್ನು ಅಗೆದು ವಿಂಗಡಿಸುವದಕ್ಕೂ ಮತ್ತು ಅಲ್ಲಿ ಸಿಕ್ಕಬಹುದಾದ ತಮಾಂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು; ಮತ್ತು ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳನ್ನು ಜಾಲಿಶಿ ತಯಾರ್ಮಾಡಿ ಪುಡಿಮಾಡಿ ವ್ಯಾಪಾರಕ್ಕೆ ಲಾಯಖಾಗಿ ಮಾಡುವ ಬಗ್ಯೆ ಯಿದರ ದೆಸೆಯಿಂದ ಪಟ್ಟು ಲೈಸೆನ್ಸು ಕೊಡೋಣಾಗಿರುತ್ತದೆ, ಪರಂತು ಹಿಡುವಳಿ ವ ಇನಾಂ ಜಮೀನ್‌ಗಳ ವಿಷಯದಲ್ಲಿ ಅಂಥಾ ಹಿಡುವಳೀದಾರು ಮತ್ತು ಇನಾಂದಾರರಿಂದ ಮೇಲ್ಕಂಡ ಹಕ್ಕನ್ನು ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರ್‌ಗಳು, ವಹಿವಾಟುದಾರರೂ ಮತ್ತು ವರ್ಗದಾರರೂ ಕೊಂಡುಕೊಂಡಿರಬೇಕು, ಯಾ ಕೊಂಡುಕೊಳ್ಳುವವರಾಗಿರಬೇಕು ಯಾ ಅವರೊಂದಿಗೆ ಗುತ್ತಿಗೇದಾರರೂ, ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರರು ಯಾ ವರ್ಗದಾರರು ಸದರೀ ಯವರ್ಕ ಹಕ್ಕು ಪಡೆಯುವದಕ್ಕಾಗಿ ಅವರ ಸ್ವಂತ ಏರ್ಪಾಡು ಮಾಡಿಕೊಂಡಿರಬೇಕು ಯಾ ಮಾಡಿಕೊಳ್ಳಬೇಕು.

ಅಂಗೀಕಾರ.

ಕೊಡುವಣಿ.

ಗನಿ ಕೆಲಸ ನಡಿಸುವ ಬಗ್ಯೆ ಪಟ್ಟು ಸ್ವಾತಂತ್ರ್ಯ.

ಗನಿ ಕೆಲಸದಲ್ಲಿ ಉತ್ಪತ್ತಿ ಆದದ್ದನ್ನು ಮಾರುವ ಬಗ್ಯೆ ಗುತ್ತಿಗೇದಾರಗೆ ಸ್ವಾತಂತ್ರ್ಯ).

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳಿಗೆ ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ ಅವರಿಂದಲಾಗಲಿ ಯಾ ಅವರ ಪೈಕೀ ಯಾರಿಂದಲಾಗಲೀ ಅಂಥಾ ಚುನಾಯಿಸಲ್ಪಟ್ಟ ತಾಕಿನ ಮೇಲ್‌ಭಾಗದಲ್ಲಾಗಲೀ ತಳಭಾಗದಲ್ಲಾಗಲೀ ಹೊಂದಲ್ಪಡುವ ಭಂಗಾರ, ಲೋಹಉಳ್ಳ ಅದುರು, ವಜ್ರ ಮುಂತಾದ ಕಲ್ಲುಗಳು ಮತ್ತು ಕಲ್ಲಿದ್ದಲು ಮುಂತಾದ ವ್ಯಾಪಾರಕ್ಕೆ ಲಾಯಖಾದ ಪದಾರ್ಥಗಳನ್ನು ಸಾಗಿಸುವದಕ್ಕೂ ವಿಕ್ರಯಿಸುವದಕ್ಕೂ ಮತ್ತು ವಿಲಾವಾರಿ ಮಾಡುವದಕ್ಕೂ ಸ್ವಾತಂತ್ರ್ಯ ಕೊಡೋಣಾಗಿರುತ್ತೆ.

ಗುತ್ತಿಗೇದಾರರಿಗೆ, ಅವರ ಯಗ್ಸಿಕ್ಯೂಟರು ವಹಿವಾಟುದಾರರು ಮತ್ತು ವರ್ಗದಾರರಿಗೆ 30 ವರುಷಕಾಲ ಪರಿಯಂತ ಸ್ವಾಧೀನ.

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಸಿಕ್ಯೂಟರುಗಳು, ವಹಿವಾಟುದಾರರು ವ ವರ್ಗದಾರರು ಯಿದರ ಬಳಿಯಿಂದ ಅವರಿಗೆ ಕೊಡಲ್ಪಟ್ಟಿತೆಂಬ ಮತ್ತು ಕೊಡೋಣಾದ ಮೇಲೆ ನಮೂದ್ ಮಾಡಲ್ಪಟ್ಟ ಪ್ರದೇಶಗಳನ್ನ ಈ ಕರಾರ್ ತಾರೀಖು ಮೊದಲು ಮೂವತ್ತು ವರುಷಗಳ ವಾಯಿದೇ ಪರಿಯಂತ ಸ್ವಾಧೀನ ಉಂಟಾಗಿರತಕ್ಕದ್ದು.

ಮತ್ತು ಸದರೀ ವಾಯಿದೇಯಲ್ಲಿ——————ಡಿಸ್ಟ್ರಿಕ್ಟಿನೊಳಗೆ ಜಮೀನ್ ಕಂದಾಯದ ವಸೂಲಿ ಬಗ್ಗೆ ಜಾರೀ ಯಿರುವ

ಸರ್ಕಾರಿ ಜಮೀನ್‌ಗಳಿಗೆ ಕಂದಾಯವನ್ನೂ ಇನಾಂ ಜಮೀನ್‌ಗಳಿಗೆ ಜೋಡೀ ಮತ್ತು ಕ್ವಿಟ್‌ರೆಂಟನ್ನೂ ಪಾವತೀ ಮಾಡುವಣ.

ರೂಲ್ಸ್ ಅನುಸರಿಸಿ ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಹಿಡುವಳಿಯಲ್ಲಿ ಯಿರುವ ಮತ್ತು ಸಾಗುವಳಿ ಲಾಯಖಾದ ಬಂಜರ್ ಜಮೀನ್‌ಗಳ ಮೇಲೆ ಹಾಲೀ ವಸೂಲ್ ಮಾಡಲ್ಪಡಬೇಕಾದ ಸಾಲಿಯಾನಾ ಕಂದಾಯವನ್ನೂ ಅಥವಾ ಯಿಯಿಂದ ಯಾವ ಕಾಲದಲ್ಲಾಗಲೀ ಈ ಗುತ್ತಿಗೆ ಜಾರೀ ಯಿರುವ ಕಾಲದಲ್ಲಿ ಗುತ್ತಿಗೆಗೆ ಕೊಡುವವರಿಂದ ಯಾ ಅವರ ಉತ್ತರಾಧಿಕಾರಿಗಳಿಂದ ಯಾ ವರ್ಗದಾರರಿಂದ ಜಮೀನ್ ಕಂದಾಯದ ಯಾವದವರೂ ತಿದ್ದುಪಾಟಿನಲ್ಲಿ ಕಂದಾಯದ ತರೀಕ್ ಅಂಥಾ ಜಮೀನಿನ ಮೇಲೆ ಗೊತ್ತುಮಾಡಲ್ಪಡುವ ಜಾಸ್ತೀ ಮೊಬಲಗನ್ನೂ ಮತ್ತು ಸದರೀ ತಾಕಿನಲ್ಲಿ ಅಡಗಿರುವ ಯಾವದಾದರೂ ಇನಾಂ ಜಮೀನಿನ ಮೇಲೆ ತೆರಬೇಕಾದ ಜೋಡೀ ಯಾ ಕ್ವಿಟ್‌ರೆಂಟ್ ಮೊಬಲಗನ್ನೂ ಖಿಸ್ತುಬಂದೀ ಪ್ರಕಾರ ಪಾವತೀ ಮಾಡತಕ್ಕದ್ದಲ್ಲದೆ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಸಾಗುವಳಿ ನಾಲಾಯಖ್ ಸರ್ಕಾರಿ ಜಮೀನಿನ ಮೇಲೆ ಯಕರೆ ವಂದಕ್ಕೆ 8 ಆಣೆ ಮೇರಿಗೆ ಸಾಲೀಯಾನಾ ಕಂದಾಯವನ್ನು ಸುದಾ ಅವುಗಳಿಗಾಗಿ ಒಪ್ಪಿ ಮತ್ತು ಪಾವತೀ ಮಾಡುತ್ತಾ ಬರಬೇಕು.

ಮತ್ತು ಲೋಕಲ್‌ಸೆಸ್ಸು, ತೆರಿಗೆಗಳು ಯಾ ರಿವಾಜುಗಳನ್ನ ಪಾವತೀ ಮಾಡುವಣ.

ಮತ್ತು ಮೇಲೆಕಂಡ ಸಾಲಿಯಾನಾ ಕಂದಾಯ, ಜೋಡೀ ವ ಕ್ವಿಟ್‌ರೆಂಟ್ ದೇಖೀಲ್, ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ನಿವೇಶನ ಯಾ ಜಮೀನುಗಳು ಯಾ ಅವುಗಳಲ್ಲಿರುವ ಕಟ್ಟಡಗಳು ಯಾ ಕಾಮಗಾರಿ ಯಿವುಗಳಿಗಾಗಿ ತತ್ಕಾಲದಲ್ಲಿ ತೆರಬೇಕಾದ ತಮಾಂ ಲೋಕಲ್‌ಸೆಸ್ಸುಗಳೂ ಇತರ ತಮಾಂ ತರಹೆಯ ತೆರಿಗೆಗಳೂ ರಿವಾಜುಗಳೂ ಸುದಾ ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು.

ಮತ್ತು ಉತ್ಪತ್ತಿಯಾದ ಭಂಗಾರ ವಗೈರೇ ಮೇಲೆ ಶೇಕಡಾ 5ರಂತೆ ರಾಜಪಾಲು ಕೊಡುವಣ.

ಮತ್ತು ಗುತ್ತಿಗೇದಾರರಿಂದ ಅವರ ಯಗ್ಸಿಕ್ಯೂಟರುಗಳು ವಹಿವಾಟುದಾರ್ರು ಯಾ ವರ್ಗದಾರರುಗಳಿಂದ ತಯಾರ್ಮಾಡಲ್ಪಡುವ, ಪುಡಿಮಾಡಲ್ಪಡುವ ಮತ್ತು ವ್ಯಾಪಾರಕ್ಕೆ ಲಾಯಖಾಗಿ ಮಾಡಲ್ಪಡುವ ತಮಾಂ ಭಂಗಾರ, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮತ್ತು ಖರೀದಿ ಆಗುವ ಯಾ ವ್ಯಾಪಾರದ ಸ್ವಭಾವವುಳ್ಳ ಇತರ ಪದಾರ್ಥಗಳ ಒಟ್ಟು ಹುಟ್ಟುವಳೀ ಮೇಲೆ ಶೇಕಡಾ 5ರ ಪ್ರಕಾರ ರಾಜಪಾಲು ಕೊಡುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರಬೇಕು, ಅಂಥಾ ರಾಜಪಾಲು ಯಾವ ಬಾಬಿನ ಖರ್ಚು ವಜಾ ಮಾಡಲ್ಪಡದೆಯೆ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ದೊರಿಯುವಂಥಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಮೌಲ್ಯದ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನಲ್ಲಿ ದೊರಿಯುವಂಥಾ ತಮಾಂ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಖರೀದಿ ಮೊಬಲಗಿನ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲ್ ಮೊಬಲಗನ್ನು ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು; ಅಂಥಾ ರಾಜಪಾಲು, ಯಾವ ಬಾಬಿನ ಖರ್ಚು ವಜಾ ಮಾಡಲ್ಪಡದೆಯೇ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ಪ್ರತಿ ವರ್ಗದ ಯಾ ಒಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುಮ್ಮಾನೆ ಕೊಡುವಣ.

ಯಾವ ಕಾಲದಲ್ಲಾಗಲಿ ಗುತ್ತಿಗೇದಾರರಿಂದ ಅವರ ಎಗ್ಸಿಕ್ಯೂಟರುಗಳಿಂದ ವಹಿವಾಟದಾರರಿಂದ ಯಾ ವರ್ಗದಾರ್ರುಗಳಿಂದ ಸಂಪೂರ್ಣವಾಗಿಯಾಗಲಿ ವೊಂದುಭಾಗವಾಗಿಯಾಗಲಿ ಕೊಡಲ್ಪಡುವ ಮೇಲೆ ಹೇಳಲ್ಪಟ್ಟ ನಿವೇಶನಗಳ ಪ್ರತಿ ವರ್ಗ ಯಾ ವೊಳಗುತ್ತಿಗೇಗಾಗಿಯಾಗಲಿ ಈ ಕರಾರ್‌ಗಳಿಂದ ವೊಪ್ಪಿಸಲ್ಪಟ್ಟ ವ ಕೊಡಲ್ಪಟ್ಟ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸ್‌ಗಳನ್ನ ವಿಶಿಷ್ಟವಾಗಲಿ ಆ ವೈಕೀ ಕೆಲವನ್ನ ವರ್ಗ ಮಾಡುವದಕ್ಕಾಗಿಯಾಗಲಿ ಅಥವಾ ಮೇಲೆ ಹೇಳಲ್ಪಟ್ಟ ನಿವೇಶನಗಳೊಳಗಣ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸುಗಳಲ್ಲಿ ಸಂಬಂಧ ಯಾ ಹಿಸ್ಸೆಯನ್ನ ಸಂಪೂರ್ಣವಾಗಿಯಾಗಲಿ, ಕೆಲವು ಮಟ್ಟಿಗಾಗಲಿ ಕೊಡುವದಕ್ಕಾಗಲಿ, ಅಂಥಾ ವರ್ಗ ಯಾ ವೊಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುಮ್ಮಾನೆ ತೆರಲಿಕ್ಕೆ ವೊಪ್ಪಿಕೊಂಡು ಪಾವತೀ ಮಾಡುತ್ತಾ ಬರತಕ್ಕದ್ದು. ಅಂಥಾ ಜುಮ್ಮಾನೆಯು ಯಾವ ಬಾಬಿನ ಖರ್ಚು ವಜಾ ಮಾಡಲ್ಪಡದೇಯೇ ಪಾವತೀ ಮಾಡಲ್ಪಡತಕ್ಕದ್ದು. ಆದರೆ ಯರಡನೇ ದಫಾ ಯಾ ಆ ತರುವಾಯ ಮಾಡಲ್ಪಡುವ ವರ್ಗ ಯಾ ವೊಳಗುತ್ತಿಗೆ ವಿಷಯದಲ್ಲಿ ಕೊಡಬೇಕಾದ ಜುರಮಾನೆಯನ್ನ ಲೆಖ್ಖ ಮಾಡುವಾಗ, ಅದರ ಹಿಂದೆ ನಡೆದ ವರ್ಗ ಯಾ ವೊಳಗುತ್ತಿಗೆ ಮೊಬ

ಲಗು ಜಾತಾ ಆ ವರ್ಗದ ಯಾ ಒಳಗುತ್ತಿಗೆಯ ಮೊಬಲಗಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಪರಂತು ಯಾವದಾದರೊಂದು ವರ್ಗ ಯಾ ಒಳಗುತ್ತಿಗೆಯ ಮೊಬಲಗು ವಿಶಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ಹೊಂದ. ಕಂಪೆನಿಯ ಷೇರುಗಳಾಗಿ ಯಿದ್ದರೆ, ಅಂಥಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ಗುತ್ತಿಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಯಿಷ್ಟಾನುಸಾರ ಆ ಕಂಪೆನಿಯ ಷೇರುಗಳಾದರೂ ಆಗಬಹುದು ಅಥವಾ ಆ ಷೇರುಗಳ ಕ್ಲಿಪ್ತವಾದ ಮೌಲ್ಯದ ಮೇರಿಗೆ ಅದಕ್ಕೆ ಸರಿಯಾದ ನಗದು ಹಣವಾದರೂ ಆಗಬಹುದು. ಮತ್ತು ಯಾವದಾದರೊಂದು ವರ್ಗ ಯಾ ಒಳಗುತ್ತಿಗೆಯ ಮೊಬಲಗು ವಿಸಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ಹೊಂದು ತೆರಿಗೆ, ರಾಜಪಾಲು, ಯಾ ಇತರ ಖಿಸ್ತುಬಂದಿಯಾಗಿ ಸಲಿಕೆಯಾಗುವ ಸ್ವಭಾವ ಉಳ್ಳದ್ದಾಗಿ ಯಿದ್ದರೆ, ಅಂಥಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ತೆರಿಗೆ, ರಾಜಪಾಲು, ಅಥವಾ ಸಂದರ್ಭಾನುಸಾರ ಇತರ ಖಿಸ್ತುಬಂದೀ ಮೇರಿಗೆ ಸಲಿಕೆಯಾಗುವ ಸ್ವಭಾವವುಳ್ಳದ್ದಾಗಿಯೇ ಯಿರತಕ್ಕದ್ದು. ಹಾಗೆ ತರುವಾಯ ಮಾಡಲ್ಪಡುವ ವರ್ಗ ಯಾ ಒಳಗುತ್ತಿಗೆಯ ಮೇಲೆ ವಸೂಲಾಗತಕ್ಕ ಜುರಮಾನೆಯನ್ನ ಲೆಖ್ಖ ಮಾಡುವದಕ್ಕಾಗಿ ಆ ವರ್ಗ ಯಾ ಒಳಗುತ್ತಿಗೆಯ ಮೊಬಲಗಿನಲ್ಲಿ ಆವಶ್ಯಕವಾದ ವಜಾವನ್ನ ಮಾಡುವ ವೃದ್ಧಿಕ್ಕೆ ಅಂಥಾ ತೆರಿಗೆ, ರಾಜಪಾಲು ಯಾ ಇತರ ಖಿಸ್ತುಬಂದಿ ಸಲಿಕೆಯ ತಾತ್ಕಾಲಿಕ ಮೌಲ್ಯವು ಗುತ್ತಿಗೆಗೆ ಕೊಡುವವರಿಂದಲಾಗಲಿ ಅವರ ಉತ್ತರಾಧಿಕಾರಿಗಳಿಂದಲಾಗಲಿ, ಯಾ ವರ್ಗದಾರರುಗಳಿಂದಲಾಗಲಿ ಕರಾರು ಮಾಡಲ್ಪಡತಕ್ಕದ್ದು. ಮತ್ತು ಯಾವ ವರ್ಗವಾಗಲಿ ಯಾ ಒಳಗುತ್ತಿಗೆಯೇ ಆಗಲೀ ಅಂಥಾ ವರ್ಗ ಯಾ ಒಳಗುತ್ತಿಗೆಗಾಗಿ ಜುರ್ಮಾನೆಯು ಗುತ್ತಿಗೆಗೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರುಗಳಿಗೆ ಕ್ರಮವಾಗಿಯೂ, ಪೂರ್ತಿಯಾಗಿಯೂ ಪಾವತಿ ಮಾಡಲ್ಪಟ್ಟಿದ್ದರೇನೇ ಹೊರ್ತು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರ್ರುಗಳ ವಿಷಯದಲ್ಲಿ ಅದು ಸಿದ್ಧವಾಗುವದಿಲ್ಲವು.

ಕಂದಾಯ, ರಾಜಪಾಲ್, ಜುರ್ಮಾನೆ ಮತ್ತು ಇತರ ಬಾಕೀಗೋಸ್ಕರ ಗುತ್ತಿಗೆಗೆ ಕೊಡುವವರಿಂದ ಜಫ್ತಿ ಮಾಡುವಣ.

ಮತ್ತು ಅಂಥಾ ಕಂದಾಯ, ರಾಜಪಾಲು, ತೆರಿಗೆ ವ ಜುರ್ಮಾನೆ ಮೊದಲಾದ ಯಿತರ ಬಾಕಿಗಳು ಅವುಗಳ ಪಾವತಿಬಗ್ಯಾಗಿ ಈ ಕರಾರಿನ ದೆಶೆಯಿಂದ ಕೊಡಲ್ಪಟ್ಟ ವಾಯಿದೆಯು ಮುಗಿದ ಅರವತ್ತು ದಿವಸಗಳ ಪರಿಯಂತ ಪಾವತಿಆಗದೆ ಬಾಕಿಯಿದ್ದು ಮತ್ತು ಅಂಥಾ ಬಾಕಿಗಳನ್ನ ಪಾವತೀಮಾಡಬೇಕೆಂಬದಾಗಿ ಸದರೀ—ಡಿಸ್ಟ್ರಿಕ್ಟು ಸಿವಿಲ್ ಯಗ್ಸಿಕ್ಯೂಟಿವ್ ಆಫೀಸರವರಿಂದ ವಂದು ನೋಟೀಸು ಜಾರಿಮಾಡಲ್ಪಟ್ಟ ತರುವಾಯ ಮೂವತ್ತು ದಿವಸಗಳ ವಳಗಾಗಿ ಸದರೀ ಗುತ್ತಿಗೆದಾರರು, ಅವರ ಯಗ್ಸಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರ್ರು ಪಾವತಿಮಾಡದೆಯಿದ್ದ ಸಂದರ್ಭದಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ತಮ್ಮ ಭಂಗಾರ, ಲೋಹ ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು, ಮತ್ತು ಜುನಾಯಿಸಲ್ಪಟ್ಟ ತಾಕಿನೊಳಗಣ ಗನಿ ಯಾ ಹಳ್ಳಗಳ ಆಸ್ಪಾಸಿನಲ್ಲಿ ಗುತ್ತಿಗೇದಾರರು, ಅವರ ಯಗ್ಸಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರರಿಂದ ಉಪಯೋಗಿಸಲ್ಪಟ್ಟ ಯಾ ಸಾಗಿಸಲ್ಪಟ್ಟ ವಿಕ್ರಯ ಸ್ವಭಾವವುಳ್ಳ ಇತರ ಪದಾರ್ಥಗಳನ್ನಾಗಲಿ ಜುನಾಯಿಸಲ್ಪಟ್ಟ ತಾಕಿನಲ್ಲಿ ಯಿರಬಹುದಾದ ಮತ್ಯಾವ ಯಿತರ ಸ್ವತ್ತನ್ನಾಗಲಿ ಹಿಡಿದುಕೊಳ್ಳುವಬಗ್ಯೆ ಸ್ವತಂತ್ರರಾಗಿರತಕ್ಕದ್ದು. ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಂಥಾ ಭಂಗಾರ ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು ಮುಂತಾದ ಇತರ ಪದಾರ್ಥಗಳನ್ನೂ ಸ್ವತ್ತುಗಳನ್ನೂ ವಿಕ್ರಯಿಸಿ ವಿಲಾವಾರಿ ಮಾಡಬಹುದು, ಮತ್ತು ಅಂಥಾ ವಿಕ್ರಯದಿಂದ ಹುಟ್ಟಿದ ಮೊಬಲಗಿನಲ್ಲಿ ಈ ಗುತ್ತಿಗೆ ಅನುಸರಿಸಿ ಬರಬೇಕಾದ ಕಂದಾಯ, ರಾಜಪಾಲು, ಜುರ್ಮಾನೆ ಮುಂತಾದ ಯಿತರ ವಸೂಲಾಗಬೇಕಾದ ಮೊಬಲಗಿಗೋಸ್ಕರವೂ ಅಂಥಾ ಜಫ್ತಿ ಮತ್ತು ಹರಾಜಿಗೋಸ್ಕರ ತಗಲಿದ ಖರ್ಚು ಮೊಬಲಗಿಗೋಸ್ಕರವೂ ವಜಾಹಾಕಿಕೊಳ್ಳಬಹುದು.

ಗನಿ ಕೆಲಸಗಳನ್ನು ಅವಿಚ್ಛಿನ್ನವಾಗಿ ನಡೆಸುವಬಗ್ಯೆ ಗುತ್ತಿಗೇದಾರನಿಂದ ಒಡಂಬಡಿಕೆ.

ಮತ್ತು ಇದರದೆಶೆಯಿಂದ ಗುತ್ತಿಗೇದಾರರು ತಮಿಗೋಸ್ಕರವೂ ಅವರ ವಾರಸುದಾರರು, ಯಗ್ಸಿಕ್ಯೂಟರು, ವಹಿವಾಟ್ಟುದಾರರು ಮತ್ತು ವರ್ಗದಾರರು ಯಿವರಿಗೋಸ್ಕರವೂ ಮತ್ತು ಆಯಾ ಪ್ರತಿ ವಬ್ಬರಿಗೋಸ್ಕರವೂ ಬೇರೆಬೇರೆಯಾಗಿ ಒಡಂಬಟ್ಟು ಇದರದೆಶೆಯಿಂದ ಅವರಿಗೋಸ್ಕರ, ಮತ್ತು ಅವರ ವಾರಸುದಾರರು, ಯಗ್ಸಿಕ್ಯೂಟರು, ವಹಿವಾಟುದಾರರು ವ ವರ್ಗದಾರರಿಗೋಸ್ಕರ ಗುತ್ತಿಗೆಗೆ ಕೊಡುವವರೊಂದಿಗೂ, ಅವರ ಉತ್ತರಾಧಿಕಾರಿಗಳ ಮತ್ತು ವರ್ಗದಾರರೊಂದಿಗೂ ಒಡಂಬಟ್ಟಿರುವದೇನೆಂದರೆ, ಅವರು ಅಂದರೆ ಗುತ್ತಿಗೇದಾರರು, ಅವರ ಯಗ್ಸಿಕ್ಯೂಟರುಗಳು, ವಹಿವಾಟುದಾರರು ಗುತ್ತಿಗೆ ಕಾಲದ ಮದಲ್ ವರುಷದಲ್ಲಿ ಜುನಾಯಿಸಲ್ಪಟ್ಟ ಪ್ರದೇಶದಲ್ಲೆಲ್ಲ ಛಂದಾಗಿಯೂ ಫಲಕಾರಿಯಾಗುವಂತೆಯೂ ಭಂಗಾರಕ್ಕೋಸ್ಕರ ಯಾ ಯಿತರ ಲೋಹಗಳು ಯಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳಿಗೋಸ್ಕರ ಅಜಮಾಯಿಷೀಕೆಲಸ ನಡಿಸುವದಲ್ಲದೆ ಹಾಗೆ ಅವಶ್ಯಕವಾದಲ್ಲಿ ಅಜಮಾಯಿಷೀ ಕೆಲಸಗಳ ಫಲಪರ್ಯವಸಾನವನ್ನು ತೋರಿಸುಬಗ್ಯೆ ತಯಾರ್ಮಾಡಲ್ಪಟ್ಟಿರಬಹುದಾದಂಥಾ ಯಾವದಾದರೂ ರಿಪೋರ್ಟುಗಳ ಯಥಾ ನಕಲ್‌ಗಳನ್ನ ಗುತ್ತಿಗೆಗೆ ಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಒಪ್ಪಿಸತಕ್ಕದ್ದು.

ಮತ್ತು ಈ ಗುತ್ತಿಗೆ ತಾರೀಖು ಮೊದಲು ಯರಡು ವರುಷಗಳ ವಳಗಾಗಿ, ಜುನಾಯಿಸಲ್ಪಟ್ಟ ತಾಕಿನ ಪ್ರತಿ ಚದರಮೈಲ್ ವಂದಕ್ಕೆ 5,000 (ಐದುಸಾವಿರ) ಪವನುಗಳಿಗೆ ಕಮ್ಮಿಯಿಲ್ಲದ, ಖರ್ಚಿನಬಗ್ಯಾಗಿ ವಸೂಲ್ಮಾಡಲ್ಪಟ್ಟ ಮೂಲಧನವುಳ್ಳ ವಂದು ಕಂಪೆನಿಯಾನೆ ಸಂಘ

ವನ್ನು ಶೇರಿಸುವದಕ್ಕೆ ಅಶಕ್ತರಾದರೆ ಈ ಗುತ್ತಿಗೆಯ ದೆಶೆಯಿಂದ ಉಂಟುಮಾಡಲ್ಪಟ್ಟ ತಮಾಂ ಬಾಧ್ಯತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನ ಗುತ್ತಿಗ್ಯೆಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ದಂಡವಾಗಿ ವಪ್ಪಿಸತಕ್ಕದ್ದು.

ಮತ್ತು ಗುತ್ತಿಗೆ ವಾಯಿದೆಯಲ್ಲಿ ಫಲಕಾರಿಯಾಗುವಂತೆ ಅವಿಚ್ಛಿನ್ನವಾಗಿ, ಪರಂತು ಅಸಾಧ್ಯವಾದ ಆಕಸ್ಮಿಕದ ದೆಶೆಯಿಂದ ಅಡ್ಡೀ ಮಾಡಲ್ಪಟ್ಟ ಕಾಲದಲ್ಲಿವಿನಾ, ಚುನಾಯಿಸಲ್ಪಟ್ಟ ತಾಕಿನೊಳಗೂ ಮೇಲ್ಭಾಗದಲ್ಲಿಯೂ ಗನಿಕೆಲಸ ನಡಶಿ ದೊರಿಯುವ ತಮಾಂ ಭಂಗಾರ, ಲೋಹ, ಲೋಹಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲು, ಕಲ್ಲಿದ್ದಲು ಮತ್ತು ವಿಕ್ರಯಕ್ಕೆ ವ ವ್ಯಾಪಾರಕ್ಕೆ ಲಾಯಖಾದ ತಮಾಂ ಯಿತರ ಪದಾರ್ಥಗಳನ್ನೂ ತಯಾರ್ಮಾಡಿ ವ್ಯಾಪಾರ ಲಾಯಖಾಗಿ ಮಾಡತಕ್ಕದ್ದು.

ಭಂಗಾರದ ಮಾದರಿ ವಗೈರೆಯನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸುವಣ ಯಾ ತೆಗೆದುಕೊಳ್ಳುವಬಗ್ಯೆ ಅವಕಾಶ ಕೊಡುವಣ.

ಮತ್ತು, ಅಪೇಕ್ಷಿಸಲ್ಪಟ್ಟಲ್ಲಿ ಅವು ವಿಕ್ರಯವಾಗುವದಕ್ಕೆ ಮುಂಚಿತವಾಗಿ, ತಯಾರ್ಮಾಡಲ್ಪಟ್ಟು, ಪುಡಿ ಮಾಡಲ್ಪಟ್ಟು ಮತ್ತು ವ್ಯಾಪಾರ ಲಾಯಖಾಗಿ ಮಾಡಲ್ಪಟ್ಟಿರುವ ವಿಕ್ರಯಕ್ಕೆ ಶಿದ್ಧಪಡಿಶಿದಂಥಾ ತಮಾಂ ಭಂಗಾರ, ಲೋಹಗಳು, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳ ಮಾದರಿ ಯಾ ಮಾದರಿಗಳನ್ನು ಗುತ್ತಿಗ್ಯೆ ಕೊಡುವವರಿಗೆ. ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಅಥವಾ ಏಜಂಟ್ ಯಾ ಏಜಂಟರುಗಳಿಗೆ ಒಪ್ಪಿಸತಕ್ಕದ್ದು, ಅಥವಾ ಅವರಿಂದ ತೆಗದುಕೊಳ್ಳುವಬಗ್ಯೆ ಅವಕಾಶಕೊಡಲ್ಪಡತಕ್ಕದ್ದು ಹಾಂಗೆ ತೆಗದುಕೊಳ್ಳುವ ತಮಾಂ ಮಾದರಿಬಗ್ಯೂ ಆಗಿನ ಬಾಜಾರ್ ದಾರಣೆಪ್ರಕಾರ ಖರೀದಿ ಮೊಬಲಗು ಗುತ್ತಿಗೆಗೆ ಕೊಡುವವರಿಂದಲಾಗಲಿ, ಅವರ ಉತ್ತರಾಧಿಕಾರಿಗಳಿಂದಲಾಗಲೀ ಯಾ ವರ್ಗದಾರರಿಂದಲಾಗಲೀ ಪಾವತಿ ಮಾಡಲ್ಪಡತಕ್ಕದ್ದು.

ಗುತ್ತಿಗ್ಯೆ ಕೊಡುವವರಿಗೆದಾರಣೆಗಳ ಲೆಕ್ಕಗಳನ್ನು ಕೊಡುವಣ.

ಮತ್ತು ಸದರೀ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮತ್ತು ಇತರ ಪದಾರ್ಥಗಳು ಖರೀದಿಆದ ತರುವಾಯ, ಗುತ್ತಿಗ್ಯೆಕೊಡುವವರಿಗಾಗಲೀ ಅವರ ಉತ್ತರಾಧಿಕಾರಗಳು ಅಥವಾ ವರ್ಗದಾರರು ಯಾ ಏಜಂಟ್ ಯಾ ಏಜಂಟರಿಗಾಗಲಿ ಸದರೀ ಪದಾರ್ಥಗಳು ಯೆಷ್ಟು ಮೊಬಲಗ್ಯೆ ವಿಕ್ರಯಿಸಲ್ಪಟ್ಟವೋ ಆ ತಪಶೀಲನ್ನೂ ಅಪೇಕ್ಷಿಸಲ್ಪಟ್ಟಲ್ಲಿ ಅವುಗಳನ್ನ ಖರೀದಿಗೆ ಪಡೆದವರ ಹೆಸರನ್ನೂ ಸುದಾ ವದಗಿಸತಕ್ಕದ್ದು.

ಖರೀದಿಆದ 90 ದಿವಸಗಳ ವಳಗಾಗಿ ಯಾ ಅದುರು ತೆಗೆದ ಆರು ತಿಂಗಳ ವಳಗಾಗಿ ರಾಜಪಾಲ್ ಮೊಬಲಗನ್ನ ಪಾವತಿ ಮಾಡುವಣ.

ಮತ್ತು ಅಂಥಾ ವಿಕ್ರಯ ನಡೆದ 90 ದಿವಸಗಳ ವಳಗಾಗಿಯಾಗಲಿ ಅಥವಾ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳು ತೆಗದ ಅಥವಾ ವಜ್ರಮುಂತಾದ ಬೆಲೆಯುಳ್ಳ ಕಲ್ಲುಗಳು ಕಂಡುಹಿಡಿದ ಆರು ತಿಂಗಳ ವಳಗಾಗಿಯಾಗಲಿ, ಮೇಲೆ ಕಂಡ ಉಳಕೊಳ್ಳಲ್ಪಟ್ಟ ರಾಜಪಾಲು ಮೊಬಲಗನ್ನು ಗುತ್ತಿಗ್ಯೆ ಕೊಡುವವರಿಗೆ ಆಗಲಿ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ತಮಾಂ ವರ್ಗಗಳ ನಕ್ಕಲುಗಳನ್ನೂ ಗುತ್ತಿಗ್ಯೆ ಕೊಡುವವರಿಗೆ ಒಪ್ಪಿಸುವಣ.

ಮತ್ತು ಗುತ್ತಿಗೇದಾರರಿಗಾಗಲೀ ಅವರ ಉತ್ತರಾಧಿಕಾರಗಳು ಯಾ ವರ್ಗದಾರರಿಗಾಗಲೀ, ಸದರೀ ನಿವೇಶನಗಳು ಯಾ ಅದರ ಯಾವದಾದರೂ ವಂದು ಭಾಗದ ವರ್ಗ ಯಾ ವಳಗುತ್ತಿಗೆಯು ಅಥವಾ ಈ ಕರಾರಿನಿಂದ ಒಪ್ಪಿಸಲ್ಪಟ್ಟ ಯಾ ಕೊಡಲ್ಪಟ್ಟ ತಮಾಂ ಯಾ ಯಾವದಾದರೂ ಹಕ್ಕು ಸ್ವಾತಂತ್ರ್ಯ ಮತ್ತು ಲೈಸೆನ್ಸ್‌ಗಳ ಅಥವಾ ಸದರೀ ನಿವೇಶನಗಳಲ್ಲಿ ಅಥವಾ ಸದರೀ ಹಕ್ಕು, ಸ್ವಾತಂತ್ರ್ಯ ಮತ್ತು ಲೈಸೆನ್ಸ್ ಇವುಗಳಲ್ಲಿ ಪೂರ್ತಿಯಾಗಿ ಯಾಗಲಿ ಕೆಲವು ಮಟ್ಟಿಗಾಗಲಿ ಸಂಬಂಧ ಯಾ ಹಿಸ್ಸೆ ಇವುಗಳ ವರ್ಗ ಯಾ ವಳಗುತ್ತಿಗೆಯು ಅದು ನಡೆದ ಯರಡು ತಿಂಗಳ ವಳಗಾಗಿ ಒಪ್ಪಿಸಲ್ಪಡತಕ್ಕದ್ದು.

ತಮಾಂ ವರ್ಗಗಳ ಮೇಲೂ 90 ದಿವಸಗಳ ವಳಗಾಗಿ ಜುರ್ಮಾನೆ ಪಾವತಿ ಮಾಡುವಣ.

ಮತ್ತು ಅಂಥಾ ವರ್ಗ ಯಾ ವಳಗುತ್ತಿಗೆ ನಡೆದ 90 ದಿವಸಗಳ ವಳಗಾಗಿ ಅಂಥಾ ವರ್ಗ ಯಾ ವಳಗುತ್ತಿಗೆಗೋಸ್ಕರ ಇದಕ್ಕೆ ಮುಂಚೆ ವಿಧಿಸಿ ಉಳಿಕೊಂಡಿರುವ ಜುರ್ಮಾನೆಯನ್ನು ಗುತ್ತಿಗ್ಯೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಅಥವಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ಲೆಕ್ಕ ವ ನಕ್ಷೆಗಳ ಕ್ರಮವಾದ ಬುಕ್ಕುಗಳನ್ನ ಇಡುವಣ.

ಮತ್ತು ಸದರೀ ವಾಯಿದೆಯಲ್ಲಿ ಚುನಾಯಿಸಲ್ಪಟ್ಟ ತಾಕಿನ ಯಾವದಾದರೂ ಅನುಕೂಲವಾದ ಸ್ಥಳದಲ್ಲಿ, ಗುತ್ತಿಗೆದಾರರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಏಜಂಟ್ ಯಾ ಏಜಂಟರುಗಳು ಯಲ್ಲ ಕಾಲಗಳಲ್ಲೂ ಧಾರಾಳವಾಗಿ ನೋಡುವ ಬಗ್ಯೆ ಸದರೀ ಗನಿಗಳ ಆಡಳಿತ ಮತ್ತು ಹುಟ್ಟುವಳಿ ವ ಖರ್ಚು ಇವುಗಳ ತಪಶೀಲನ್ನೂ ಮತ್ತು ಭಂಗಾರ, ಲೋಹಗಳು, ಲೋಹ

ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲು, ವಿಕ್ರಯ ಯಾ ವ್ಯಾಪಾರ ಲಾಯಖಾದ ತಮಾಂ ಇತರ ಪದಾರ್ಥಗಳ ವಿಲಾವಾರಿ ಹಾಂಗೂ ಅವುಗಳ ಕರಾರ್‌ವಾಕಾ ಬೆಲೆ ತಿಳಿಯುವ ಬಗ್ಯಾಗಿ ಅವುಗಳ ತೇದಾದು, ತಾರೀಖು ಮತ್ತು ಅವಶ್ಯಕವಾದ ಯಾ ಯುಕ್ತವಾದ ಇತರ ಸಂಗತಿಗಳನ್ನ ತೋರಿಸುವಂಥಾ ಲೆಖ್ಖದ ಬುಕ್ಕುಗಳನ್ನ ತಯಾರ್ಮಾಡಿ ಇಡತಕ್ಕದ್ದಲ್ಲದೆ ಸದರೀ ಗನಿ ವ ಕಾಮಗಾರಿಗಳ ಸಾಚಾ ನಕ್ಷೆ, ಪ್ಲಾನು ವ ಸೆಕ್ಷರ್ನಗಳನ್ನ ತಯಾರ್ಮಾಡಿ ಇಡತಕ್ಕದ್ದು.

ಮತ್ತು ಅವುಗಳ ನಕಲುಗಳನ್ನು ಗುತ್ತಿಗೆಗೆ ಕೊಡುವವರಿಗೆ ಒದಗಿಸುವಣ.

ಮತ್ತು ಗುತ್ತಿಗೆಗೆ ಕೊಡುವವರಿಂದಲಾಗಲೀ ಅವರ ಉತ್ತರಾಧಿಕಾರಿಗಳಿಂದಲಾಗಲೀ ಅಥವಾ ವರ್ಗದಾರರಿಂದಲಾಗಲೀ ಯಾ ಅವರ ಏಜಂಟ್ ಯಾ ಏಜಂಟರುಗಳಿಂದಲಾಗಲೀ ಅಪೇಕ್ಷಿಸಲ್ಪಟ್ಟಾಗ ಅವರಿಗೆ ಸದರೀ ಬುಕ್ಕಿನಲ್ಲಿ ದಾಖಲಾದ ತಮಾಂ ಖಿತಾಯಿತಿಗಳ ನಕಲುಗಳನ್ನೂ ಮತ್ತು ಅಂಥಾ ತಮಾಂ ನಕ್ಷೆ, ಪ್ಲಾನು ವ ಮೇಲ್ಕಂಡ ಸೆಕ್ಷನಿನ ನಕಲುಗಳನ್ನೂ ಒದಗಿಸತಕ್ಕದ್ದು.

ಮತ್ತು ವಾಯಿದೆ ಆಖೈರಾದಾಗ ಬುಕ್ಕು ವ ಪ್ಲಾನ್‌ಗಳನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡುವಣ.

ಮತ್ತು ಸದರೀ ವಾಯಿದೆಯು ಮುಗಿದಾಗ ಅಥವಾ ಮುಂಚಿತವಾಗಿ ಮೌಕೂಫಾದಾಗ ಸದರೀ ಬುಕ್ಕುಗಳು, ನಕ್ಷೆಗಳು, ಪ್ಲಾನ್‌ಗಳು, ಸೆಕ್ಷರ್ನಯಾನೆ ವಿವರಣೆಗಳು ಇಷ್ಟಗಳನ್ನು ಗುತ್ತಿಗೆಗೆ ಕೊಡುವವರಿಗಾಗಲೀ ಅವರ ಉತ್ತರಾಧಿಕಾರಿಗಳಿಗಾಗಲೀ ಅಥವಾ ಅವರ ವರ್ಗದಾರರಿಗಾಗಲೀ ಪೂರ್ತಿಯಾಗಿ ಯೂ ಒಳ್ಳೇ ಸ್ಥಿತಿಯಲ್ಲಿಯೂ ಒಪ್ಪಿಸತಕ್ಕದ್ದು.

ಸರಹದ್ದು ಸ್ತಂಭಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಡುವಣ ಮತ್ತು ಸುರಂಗಗಳನ್ನು ಕ್ರಮವಾಗಿ ಬೇಲಿಯಿಂದ ಭದ್ರಪಡಿಸುವಣ.

ಮತ್ತು ಸದರೀ ವಾಯಿದೇ ಕಾಲದಲ್ಲಿ ತಮಾಂ ಸರಹದ್ದು ಸ್ತಂಭಗಳನ್ನೂ ದುರಸ್ತಿಸಲ್ಲಿಯೂ ಒಳ್ಳೇ ಸ್ಥಿತಿಯಲ್ಲಿಯೂ ಇಟ್ಟಿರತಕ್ಕದ್ದಲ್ಲದೆ ಸದರೀ ಚುನಾಯಿಸಲ್ಪಟ್ಟ ತಾಲ್ಲೂಕಿನೊಳಗಣ ಯಲ್ಲ ಕಾಲಿವೆ, ಹಳ್ಳ, ಯಾ ಶೈಲ್ ಕಾಮಗಾರಿಗಳನ್ನೂ ಮನುಷ್ಯರು ಮತ್ತು ಜಾನವರುಗಳಿಗೆ ಅಪಾಯ ಸಂಭವಿಸದಂತೆ ಪೂರ್ತಿಯಾಗಿ ಬೇಲಿ ಹಾಕಿ ಭದ್ರ ಪಡಿಸತಕ್ಕದ್ದು.

ಮತ್ತು ಸದರೀ ವಾಯಿದೇಯಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು, ಆಗಿಂದಾಗ್ಯೆ ವಿಧಿಸಬಹುದಾದಂಥಾ ಆರೋಗ್ಯ ವಿಷಯಕವಾದ ನಿಬಂಧನೆಗಳನ್ನು ಚುನಾಯಿಸಲ್ಪಟ್ಟ ತಾಕಿನ ಯಲ್ಲ ಪ್ರದೇಶದಲ್ಲೂ ಕ್ರಮವಾಗಿ ಜಾರಿಯಲ್ಲಿರತಕ್ಕದ್ದು.

ಕಾಲುವೆ ಯಾ ಸುರಂಗಗಳನ್ನು ಮುಚ್ಚದೆ ಇರುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಅವರ ಏಜಂಟ್ ಯಾ ಏಜಂಟರುಗಳಿಂದ ಬರಹ ಮೂಲಕವಾಗಿ ಲೈಸೆನ್ಸ್ ಪಡೆದ ಹೊರ್‍ತು ಯಾವ ಕಾಲಿವೆ ಯಾ ಸುರಂಗವನ್ನಾಗಲೀ ಮನಃಪೂರ್ವಕವಾಗಿ ಮುಚ್ಚಕೂಡದು ಭರ್ತೀ ಮಾಡಕೂಡದು ಅಥವಾ ಬಂದ್ ಮಾಡಕೂಡದು.

ಅಥವಾ ರೋಡು ವಗೈರೆಗಳನ್ನ ಆತಂಕಪಡಿಸದೆ ಇರುವಣ.

ಮತ್ತು ಈಗ ಇರುವ ತಮಾಂ ಯಾ ಯಾವ ರಸ್ತೆಗಳನ್ನಾಗಲಿ, ಕಾಲ್ದಾರಿಗಳನ್ನಾಗಲೀ ಯಾ ಯಾವ ತರಹೆಯ ಅಡ್ಡದಾರಿಗಳನ್ನಾಗಲೀ ಖುಲ್ಲಾ ಇಡತಕ್ಕದ್ದೇ ಹೊರ್‍ತು ಆತಂಕಪಡಿಸತಕ್ಕದ್ದಲ್ಲವು.

ಗುತ್ತಿಗೆಗೆ ಕೊಡುವವರು ಕಾಮಗಾರೀ ವಗೈರೆಗಳನ್ನ ತನಿಖೆ ಮಾಡಲಿಕ್ಕೆ ಅವಕಾಶ ಕೊಡುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮತ್ತು ಅವರ ಮುತಾಲೀಕ ಯಾ ಮುತಾಲೀಕರುಗಳು, ನೌಕರರು, ವ ಕೆಲಸಗಾರರು, ಇವರುಗಳು ವಾಯಿದೇ ಕಾಲದಲ್ಲಿ ಈ ಕರಾರುಗಳನ್ನನುಸರಿಸಿ ಯಾ ಈ ಕರಾರುಗಳ ಬಲೀಯದ ಮೇಲೆ ನಡಿಯುವ ಯಾವ ಕಾಮಗಾರಿಗಳೊಳಗಾಗಲೀ ಪ್ರವೇಶಿಸಿ ಅವುಗಳ ಸ್ಥಿತಿ ವ ಲಕ್ಷಣವನ್ನು ತನಿಖೆ ಮಾಡಲಿಕ್ಕೂ ಮತ್ತು ಆ ಬಗ್ಯೆ ಯಾಗಲೀ, ಅಥವಾ ಇತರ ಯಾವ ನ್ಯಾಯವಾದ ವ ಯುಕ್ತವಾದ ಉದ್ದೇಶ್ಯಕ್ಕಾಗಲೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾ ಅದರೊಳಗೆ ಇರುವ ಯಂಜಿನ್‌ಗಳನ್ನೂ, ಯಂತ್ರ ಸಾಧನಗಳನ್ನೂ ವ ಅಜಬಾಬುಗಳನ್ನೂ ಉಪಯೋಗಿಸಲಿಕ್ಕೂ ಪರಂತು ತನಖೀ ಮಾಡಿ ನಕ್ಷೆಗಳನ್ನೂ ತೆಗದುಕೊಳ್ಳತಕ್ಕದ್ದಕ್ಕಾಗಿ ವಿನಾ, ಅಂಥಾ ಉಪಯೋಗಕ್ಕಾಗಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮುನಾಸಬು ಈಡು ಮೊಬಲಗು ಕೊಡಲಾಗಿ ಅವಕಾಶ ಕೊಡತಕ್ಕದ್ದು ಮತ್ತು ಇದಕ್ಕೆ ಹಿಂದೆ ಉಳಿಸಿಕೊಳ್ಳಲ್ಪಟ್ಟ ಸ್ವಾತಂತ್ರ್ಯಗಳನ್ನು ಚಲಾಯಿಸಲಿಕ್ಕೂ ಸಹ ಅವಕಾಶ ಕೊಡತಕ್ಕದ್ದು ಮತ್ತು ಆ ಸ್ವಾತಂತ್ರ್ಯಗಳನ್ನ ಚಲಾಯಿಸುವದಕ್ಕಾಗಿ ನ್ಯಾಯವಾದ ಯಲ್ಲಾ ಅನುಕೂಲ್ಯತೆಯನ್ನೂ ವ ಕುಮ್ಮಕ್ಕನ್ನೂ ಕೊಡತಕ್ಕದ್ದು.

ಜಮೀನ್‌ಮೇಲಿನ ಹಕ್ಕುಗಳ ಹಾನಿಗಾಗಿ ಈಡು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನ ಯಾವದಾದರೊಂದು ಭಾಗದ ಯಾ ಪ್ರದೇಶದ ಜಮೀನ್ ಮೇಲ್ಭಾಗಕ್ಕೆ ಕೆಡಕು, ಹಾನಿ ಯಾ ಅಡ್ಡಿ ಉಂಟಾದ್ದಕ್ಕಾಗಿ ಅಂತಾ ಜಮೀನಿನ ಹಿಡುವಳೀದಾರ, ಅನುಭವದಾರ ಯಾ ಇತರ ಸ್ವಾಧೀನಗಾರನಿಗೆ ಆಗಿಂದಾಗ್ಯೆ ಈಡು ಕಟ್ಟಿಕೊಡತಕ್ಕದ್ದು.

ಮತ್ತು, ಚುನಾಯಿಸಲ್ಪಟ್ಟ ತಾಕಿನ ಯಾವಭಾಗದಲ್ಲಾಗಲಿ, ಗ್ರಾಮಸ್ತರು ದನಗಳನ್ನ ಮುಫತ್ ಮೇಯಿಸಿಕೊಳ್ಳುವ ಹಕ್ಕು ಉಂಟಾಗಿಯಿದ್ದು, ಅಂತಾ ಹಕ್ಕಿಗೆ ಯಾವರೀತಿಯಲ್ಲಾಗಲಿ ಅಡ್ಡಿ ಸಂಭವಿಸಿದಾಗ ಅಂತಾ ಗ್ರಾಮಸ್ಥರಿಗೆ ಕ್ರಮವಾದ ಈಡು ಸಹಾ ಕಟ್ಟಿಕೊಡತಕ್ಕದ್ದು.

ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಸೆಯಿಂದುಂಟಾಗುವ ದಾವೆಗಳು, ಗುತ್ತಿಗೆಗೆ ಕೊಡುವವರುಗಳ ಮೇಲೆ ಬಾರದಂತೆ ಮಾಡುವಣ.

ಯಾವ ಜಮೀನ್‌ಗಳಿಗಾಗಲಿ ಯಾ ಯಾವಬಗೆಯ ಸ್ವತ್ತಿಗಾಗಲಿ ಈ ಕರಾರುಗಳನ್ನನುಸರಿಸಿ ಕೆಲಸನಡಿಸುವಣದರ ದೆಸೆಯಿಂದ ಯಾ ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಶೆಇಂದ ಉಂಟಾಗುವ ಯಾ ಸಂಭವಿಸುವ ಯಾವ ವಿಧವಾದ ಹಾನಿ ಯಾ ಆತಂಕ ಈ ಕಾರಣದಿಂದ, ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರುಗಳ ಮೇಲೆ ಯಾವಬಗೆ ಖರ್ಚು ಯಿನ್ನುಮೇಲೆ ಆಗಿಂದಾಗ್ಯೆ ವ ಯಾವಾಗಲೂ ಶುದ್ಧಾಂಗವಾಗಿ ಯಾವಬಗೆ ದಾವೆಗಳೂ ತಗಾದೆಗಳೂ ಬಾರದಂತೆ ನಡದುಕೊಳ್ಳತಕ್ಕದ್ದು.

ವಾಯಿದೆ ಪೂರೈಸಿದ ನಂತರ ಗನಿಗಳು, ಕಟ್ಟಣ ವಗೈರೆಯನ್ನ ಗುತ್ತಿಗೆಗೆ ಕೊಡುವವರಿಗೆ ವೊಪ್ಪಿಸಿಬಿಡೋಣ.

ಮತ್ತು ಮೇಲೆಹೇಳಲ್ಪಟ್ಟ ವಾಯಿದೆ ಪೂರೈಸಿದಾಗಲಾಗಲಿ ಯಾ ಅದಕ್ಕೆ ಮುಂಚಿತವಾಗಿ ನಿಂತು ಹೋದಾಗಲಾಗಲಿ ಈ ಕರಾರುಗಳ ಧೆಸೆಇಂದ ಕೆಲಸ ನಡಿಯುತ್ತಿದ್ದ ಗನಿಗಳನ್ನೂ ತಮಾಂ ಕಾಲುವೆಗಳನ್ನೂ ಕಾಮಗಾರಿಗಳನ್ನೂ, ಸರಹದ್ದು ಸ್ತಂಭಗಳು ವ ಅವುಗಳಿಗೆ ಸೇರಿದ ಬೇಲಿಗಳನ್ನೂ ಮತ್ತು ಯಿತರ ನಿವೇಶನಗಳು ಇವುಗಳೆಲ್ಲವನ್ನೂ ವೊಳ್ಳೇದಾದ ವ ಕೆಲಸ ನಡಿಸಲಿಕ್ಕೆ ಅನುಕೂಲವಾದ ಸ್ಥಿತಿಯಲ್ಲಿ ಯೇವಂಚ ಇದಕ್ಕೆ ಹಿಂದೆ ಹೇಳಲ್ಪಟ್ಟ ಕರಾರುಗಳ ಪ್ರಕಾರ ನಡಿಯಲಿಕ್ಕೆ ಅನುಗುಣವಾಗುವಂತೆ ತಕ್ಕ ಸ್ಥಿತಿಯಲ್ಲಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಅಥವಾ ವರ್ಗದಾರರುಗಳಿಗಾಗಲಿ ಒಪ್ಪಿಸಿಬಿಡತಕ್ಕದ್ದು ಸದರೀ ಜಾಗಾವಲ್ಲಿ ಯಿರುವ ಕಟ್ಟಣಗಳಿಗಾಗಿಯಾಗಲಿ, ಯಾ ಇತರ ಸ್ವತ್ತಿಗಾಗಿಯಾಗಲಿ ಗುತ್ತಿಗೆದಾರರುಗಳಿಂದ, ಅವರ ಯಗ್ಜಿಕ್ಯೂಟರುಗಳಿಂದ, ಆಡಳಿತ ನಡಿಸುವವರುಗಳಿಂದ ಯಾ ವರ್ಗದಾರರುಗಳಿಂದಾಗಲಿ, ಗುತ್ತಿಗೆಗೆ ಕೊಡುವವರಮೇಲೆ, ಅವರ ಉತ್ತರಾಧಿಕಾರಿಗಳಮೇಲೆ ಯಾ ವರ್ಗದಾರರಮೇಲೆ ಯಾವ ದಾವೆಯೂ ಯಿಲ್ಲದಂತೆ ವೊಪ್ಪಿಸತಕ್ಕದ್ದು. ಅಂತಾ ಕಟ್ಟಣಗಳನ್ನು ವ ಯಿತರ ಸ್ವತ್ತುಗಳನ್ನ, ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರುಗಳು ಆಡಳಿತ ನಡಿಸುವವರು ಯಾ ವರ್ಗದಾರರು ಮುಂಚಿತವಾಗಿಯೇ ಸಾಗಿಸಲು ಸ್ವತಂತ್ರರಾಗಿರತಕ್ಕದ್ದು.

ಕಂದಾಯಗಳನ್ನ ರಾಜಪಾಲುಗಳನ್ನ ವ ಜುರ್ಮಾನೆ ವಗೈರೆಯನ್ನ ಕೊಡದೇ ಹೋದವೇಳಾಗಲಿ ಕರಾರುಗಳಿಗೆ ತಪ್ಪಿದವೇಳೆಯಾಗಲಿ ಪುನಸ್ಸ ಪ್ರವೇಶಿಸಲಿಕ್ಕೆ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಮತ್ತು ಕಂಠೋಕ್ತವಾದ ಈ ಷರತ್ತಿನಿಂದ ಕರಾರು ಮಾಡಿಕೊಳ್ಳುವದೇನಂದರೆ ಇದರ ದೆಸೆಇಂದ ಉಳಿಸಿಕ್ಕೊಳ್ಳಲ್ಪಟ್ಟಿರುವ ಕಂದಾಯಗಳು ರಾಜಪಾಲುಗಳು, ಜುರ್ಮಾನೆಗಳು ಯಾ ಯಿತರ ಸಲಿಕೆಗಳ ಯಾವಭಾಗವನ್ನಾಗಲಿ ಪಾವತೀಮಾಡಪೇಕೆಂತ ಗುತ್ತಿಗೆದಾರರ ಅವರ ಎಗ್ಜಿಕ್ಯೂಟರುಗಳ, ಆಡಳಿತ ನಡಿಸುವವರ ಯಾ ವರ್ಗದಾರರುಗಳಮೇಲೆ ಅಥವಾ ಅವರುಗಳಪೈಕಿ ವೊಬ್ಬನಮೇಲಾಗಲಿ ಹೆಚ್ಚಿಗೆ ಜನಗಳಮೇಲೆ, ಯಾ ಅವರ ಅಥವಾ ಆತನ ಮುತಾಲೀಕರುಗಳಮೇಲೆ ನೋಟೀಸ್ ಜಾರೀಯಾದ ಅಥವಾ ಚುನಾಯಿಸಲ್ಪಟ್ಟ ತಾಕಿನಪೈಕಿ ಯಾವದಾದರೊಂದು ಭಾಗದಲ್ಲಿ ಚಿಕಟಾಯಿಸಲ್ಪಟ್ಟ ತರುವಾಯ ಮೂವತ್ತು ದಿನಗಳ ವರಿವಿಗೂ ಬಾಕೀಲಿಯಿಟ್ಟುಕೊಂಡಾಗ್ಯೂ, ಅಥವಾ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರಗಳು ಆಡಳಿತ ನಡಿಸುವವರು ಯಾ ಅವರ ಯಾ ಆತನ ಕೆಲಸಗಾರರು ಗನಿಕೆಲಸ ಕ್ರಮವಾಗಿ ನಡಿಸದೇ ನಿಲ್ಲಿಸಿದಾಗ್ಯೂ, ಅಥವಾ ಗುತ್ತಿಗೆಗೆ ಕೊಡುವವರ, ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಉದ್ಯೋಗಸ್ಥರುಗಳಿಗೆ ಯಾವ ವಿಧವಾದ ಆತಂಕ ಯಾ ತೊಂದರೆ ವುಂಟುಮಾಡಿದಾಗ್ಯೂ ಅಥವಾ ಗುತ್ತಿಗೆಗೆ ಕೊಡುವವರಿಗಾಗಲಿ ಅಥವಾ ಉತ್ತರಾಧಿಕಾರಿಗಳಿಗಾಗಲಿ ಯಾ ವರ್ಗದಾರರಿಗಾಗಲಿ ಸಮಾಚಾರ ಕೊಡಲಿಕ್ಕೆ ನಿರಾಕರಿಸಿದಾಗ್ಯೂ ಅಥವಾ ಗುತ್ತಿಗೆದಾರರು ಅವರ ಯಗ್ಜಿಕ್ಯೂಟರುಗಳು, ಆಡಳಿತ ನಡಿಸುವರು ಯಾ ವರ್ಗದಾರರು ಈ ಕರಾರುಗಳ ಪೈಕಿ ಯಾವದಕ್ಕಾದರೂ ಅತಿಕ್ರಮಿಸಿ ನಡೆದರೇಆಗಲಿ ಆಗ ಅಂತಾ ಸಂಗತಿಯಲ್ಲಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಾ ಅವರ ತರಫಿನಲ್ಲಿ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಮುತಾಲೀಕರಾಗಲಿ ಯಲ್ಲರ ಹೆಸರಿನಲ್ಲಿಯೂ ಯಿರುವ ಈ ಗುತ್ತಿಗೆಯನ್ನನುಸರಿಸಿ ನಡಿಸಲ್ಪಡುವ ಕೆಲಸಗಳು ಯಾ ಇತರ ಕಾಮಗಾರಿಗಳ ಯಾವ ಭಾಗದೊಳಗೂ ಪುನಸ್ಸ ಪ್ರವೇಶಿಸಬಹುದು. ಆ ತರುವಾಯ ಮೇಲೆ ಹೇಳಲ್ಪಟ್ಟ ಮೂವತ್ತು ವರುಷಗಳ ವಾಯಿದೆಯು ಖಂಡಿತವಾಗಿ ಮುವಕೂಫಾಗತಕ್ಕದ್ದು.

ಆರುತಿಂಗಳ ನೋಟಿಸಿನ ಹೊರ್ತು ಪುನಃ ಪ್ರವೇಶ ಮಾಡುವಅಧಿಕಾರ ಚಲಾಯಿಸಕೂಡ ದೆಂಬ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರದೆಸೆಇಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ, ಇದಕ್ಕೆ ಹಿಂದೆ ನಮೂದಿಸಲ್ಪಟ್ಟ ಮೇರಿಗೆ ಪುನಃ ಪ್ರವೇಶಿಸಲಿಕ್ಕಿರುವ ನಿಯಮವನ್ನನುಸರಿಸಿ ಅಂತಾ ಯಾವ ಪುನಃಪ್ರವೇಶವಾಗಲಿ ಮೇಲೆ ಉದಹರಿಸಿದಂತಾ ವಾಯಿದೆಯ ಭಂಗವಾಗಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಿವರುಗಳು ಫಿರ್ಯಾದ್ ಬರುವ ಸಂಗತಿ ಯಾ ಸಂಗತಿಗಳ ವಿಷಯದಲ್ಲಿ ಸಮರ್ಪಕವಾದ ಸಮಜಾಯಿಷಿ ಕೊಡುವಂತೆಯೂ, ವ ಅಂತಾವುಗಳನ್ನ ವ್ಯವಸ್ಥೆ ಮಾಡಿಕೊಳ್ಳುವಂತೆಯೂ ಗುತ್ತಿಗೆದಾರರಿಗಾಗಲಿ, ಅವರ ಯಗ್ಜಿಕ್ಯೂಟರುಗಳಿಗಾಗಲಿ ಆಡಳಿತ ನಡಿಸುವವರಿಗಾಗಲಿ ಯಾ ವರ್ಗದಾರರಿಗಾಗಲಿ ಈ ಪೈಕಿ ಯಾವನಿಗಾಗಲಿ ಅಥವಾ ಯಾರಿಗಾಗಲಿ ನೋಟಿಸ್ ಕೊಟ್ಟಹೊರ್ತು ನಡಿಯತಕ್ಕದ್ದಲ್ಲವು. ಸದರೀ ನೋಟೀಸು ಬರವಣಿಗೆ ಮೂಲಕಇದ್ದು ಅದು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರುಗಳ ತರಫ ಮೇಲೆ ಹೇಳಲ್ಪಟ್ಟ ಡಿಸ್ಟ್ರಿಕ್ಟಿನ ಶಿವಿಲ್ ಕಾರ್ಬಾರ್‌ನಡಿಸುವ ಆಫಿಸರಿಂದಾಗಲಿ ಆಬಗ್ಗೆ ಮುಖ್ಯವಾಗಿ ಅಧಿಕಾರ ಪಡೆದ ಮತ್ಯಾವ ಆಫಿಸರಿಂದಾಗಲಿ ರುಜುಮಾಡಲ್ಪಟ್ಟು ಗುತ್ತಿಗೆದಾರರ ಮೇಲೆ ಅಥವಾ ಅವರ ಯಗ್ಜಿಕ್ಯೂಟರುಗಳಮೇಲೆ ಆಡಳಿತ ನಡಿಸುವವರಮೇಲೆ ವ ವರ್ಗದಾರರುಗಳ ಮೇಲೆಯಾಗಲಿ ಆ ಪೈಕಿ ಪೊಬ್ಬನ ಮೇಲಾಗಲಿ ಅದಕ್ಕೆ ಹೆಚ್ಚಿಗೆ ಜನರಮೇಲಾಗಲಿ ಅವರುಗಳ ಯಾ ಆತನ ಮುತಾಲೀಕರುಗಳ ಮೇಲಾಗಲಿ ಜಾರೀಮಾಡಲ್ಪಡತಕ್ಕದ್ದು, ಅಥವಾ ಆ ನೋಟೀಸು ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾವ ಪ್ರದೇಶದಲ್ಲಾಗಲಿ ಚಿಕಟಾಯಿಸಲ್ಪಡತಕ್ಕದ್ದು. ಹಾಗೆ ನೋಟೀಸು ಜಾರೀ ಆದ ಯಾ ಅಥವಾ ಚಿಕಟಾಯಿಸಲ್ಪಟ್ಟ ಲಾಗಾಯತು ಆರುತಿಂಗಳವರಿವಿಗೂ ಅಂತಾ ಫಿರ್ಯಾದಾದ ಸಂಗತಿ ಯಾ ಸಂಗತಿಗಳಲ್ಲಿ ಸಮರ್ಪಕವಾದ ಸಮಜಾಯಿಷಿಯೂ ಕೊಡಲ್ಪಡದೇ ವ ಫಿರ್ಯಾದ್ ಸಂಗತೀಲಿ ವ್ಯವಸ್ಥೆಯೂ ಮಾಡಿಕೊಳ್ಳದೇ ತಪ್ಪಿಹೋಗದ ಹೊರ್ತು ಅಂತಾ ಪುನಃಪ್ರವೇಶವಾಗಲಿ ಯಾ ವಾಯಿದೆಯ ಭಂಗವಾಗಲಿ ನಡಿಯತಕ್ಕದಲ್ಲವು.

ಯಾವ ವರುಷದಲ್ಲಾಗಲಿ ರಾಜಪಾಲಿಗೆ ಬದಲಾಗಿ ಎಕರೆ ಒಂದಕ್ಕೆ ಐದು ರೂಪಾಯಿ ಮೇರಿಗೆ ಕಂದಾಯ ವಸೂಲು ಮಾಡಲಿಕ್ಕೆ ಗುತ್ತಿಗೆಗೆ ಕೊಡುವವರಿಗೆ ಅಧಿಕಾರವಿರುವಬಗ್ಗೆನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ—ಗನಿಗಳ ಕೆಲಸ ನಡಿಸುವ ಬಗ್ಯಾಗಿ ಆವಶ್ಯಕವಾದ ಪ್ರಥಮ ಏರ್ಪಾಡಿಗೋಸ್ಕರ ಕೊಡಲ್ಪಡುವ ಗುತ್ತಿಗೆಯ ಪ್ರಾರಂಭದ ಎರಡು ವರುಷಗಳು ಆದ ತರುವಾಯ, ಗನಿಗಳ ಕೆಲಸದ ವಿಷಯದಲ್ಲಾಗಲಿ, ಅದರ ಫಲಾಂಶದ ವಿಷಯದಲ್ಲಾಗಲೀ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ, ಯಾ ವರ್ಗದಾರರುಗಳಿಗಾಗಲಿ ತೃಪ್ತಿಕರವಾಗಿ ಇರದೇಯಿರುವ ಪಕ್ಷಕ್ಕೆ ಅವರು ಗುತ್ತಿಗೆಯ ಯಾವವರುಷದ ರಾಜಪಾಲಿಗೆ ಬದಲಾಗಿಯಾದರೂ ಎಕರೆ ಒಂದಕ್ಕೆ ಐದು ರೂಪಾಯಿಯಮೇರಿಗೆ ಕಂದಾಯ ವಸೂಲ್ ಮಾಡಲಿಕ್ಕೆ ಸ್ವತಂತ್ರರಾಗಿರತಕ್ಕದ್ದು.

ಯಾವದಾದರೊಂದು ವರುಷದ ಆಖೈರಿನಲ್ಲಿ ಗುತ್ತಿಗೆದಾರನ ಇಷ್ಟಾನುಸಾರ ಗುತ್ತಿಗೆ ಖೈದಾಗತಕ್ಕಬಗ್ಯೆ ನಿಯಮ.

ಇನ್ನೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ,—ಇದರ ದೆಸೆಯಿಂದ ಕೊಡೋಣಾದ ಮೂವತ್ತು ವರುಷಗಳ ವಾಯಿದೆಯ ಪೈಕಿ ಯಾವದಾದರೊಂದು ವರುಷ ಆಖೈರಾಗುವಾಗ ಆ ವಾಯಿದೆಯು ಮೌಕೂಫ್ ಆಗಬೇಕೆಂಬದಾಗಿ 'ಗುತ್ತಿಗೆದಾರರಾಗಲಿ, ಅವರ ಎಗ್ಜಿಕ್ಯೂಟರುಗಳಾಗಲಿ, ಆಡಳಿತ ನಡಿಸುವವರಾಗಲಿ ಯಾ ವರ್ಗದಾರರಾಗಲಿ ಇಚ್ಛೈಸುವ ಪಕ್ಷಕ್ಕೆ ತಮ್ಮ ಇರಾದೆಯನ್ನ ನಮೂದಿಸಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಆರುತಿಂಗಳ ಮುಂಚಿತವಾಗಿ ಬರವಣಿಗೆ ಮೂಲಕ ನೋಟೀಸು ಕೊಟ್ಟು ಇದರ ದೆಸೆಯಿಂದ ಉಳಿಸಿಕೊಳ್ಳಲ್ಪಟ್ಟ ಮೇಲೆ ಹೇಳೋಣಾದ ಕಂದಾಯಗಳು, ರಾಜಪಾಲುಗಳು, ಜುರ್ಮಾನೆಗಳು, ಯಾ ಇತರ ಸಲಿಕೆಗಳು ಇವುಗಳನ್ನ ಸಂದಾಯಮಾಡಿ, ಇದರಲ್ಲಿ ಕಂಡ ಎಲ್ಲಾ ಕರಾರುಗಳ ವ ಒಡಂಬಡಿಕೆಗಳ ಮೇರಿಗೆ ನಡೆದುಕ್ಕೊಂಡು ವ ಜಾರೀಲಿತಂದು, ಮತ್ತು ಅಂತಾ ವರುಷ ಪೂರೈಸುವವರಿವಿಗೂ, ಗುತ್ತಿಗೆದಾರರು, ಅವರ ಎಗ್ಜಿಕ್ಯೂಟರುಗಳು, ಆಡಳಿತ ನಡಿಸುವವರು ಯಾ ವರ್ಗದಾರರು ನಡದುಕ್ಕೊಂಡಲ್ಲಿ ಯಾ ಜಾರೀಲಿ ತಂದಲ್ಲಿ ಆಗ್ಯೆ ಅಂತಾ ಸಂಗತಿಯಲ್ಲಿ ಆ ವರುಷ ಪೂರೈಸಿದ ತರುವಾಯ ಇದರ ದೆಸೆಯಿಂದಕೊಡಲ್ಪಟ್ಟಿರುವ ವಾಯಿದೆಯು ಖಂಡಿತವಾಗಿ ನಿಂತುಹೋಗಿ ಖೈದಾಗತಕ್ಕದ್ದಲ್ಲದೆ ಇದರಲ್ಲಿ ಮೇಲ್ಕಂಡ ಠೇವಣೀ ಬಾಬತು ರೂಪಾಯಿಗಳು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರ ವಶದಲ್ಲೀನೇ ಅವರ ಸ್ವಂತ ಆಸ್ತಿಯಂತೆ ನಿಂತು ಹೋಗತಕ್ಕದ್ದು.

ಇದಕ್ಕೆ ಸಾಕ್ಷಿಯಾಗಿ ಗುತ್ತಿಗೆ ಕೊಡುವವರಿಗಾಗಿ ವ ಅವರ ತರಫ ಕೆಲಸ ನೋಡುವ ಮೈಸೂರು ಶೀಮೆಯ ದಿವಾನರಾದ ಯವರೂ

ವ ಗುತ್ತಿಗೆದಾರರು ಸಹಾ ಮೇಲೆ ಷುರುವಿನಲ್ಲಿ ಬರಿಯೋಣಾದ ವರುಷ ವ ತಾರೀಖಿನಲ್ಲಿ ಇದಕ್ಕೆ ತಮ್ಮ ತಮ್ಮ ದಸ್ತಖತ್ ವ ಮೊಹರು ಹಾಕಿರುತ್ತಾರೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಅಪ್ಪೆಂಡಿಕ್ಸ್ C.

1887ನೇ ಇಸವಿ ಸೆಪ್ಟಂಬರ್ 5ನೇ ಮಾರ್ಕ್ಕಂ ರೂಲ್ಸ್ ಅನುಸಾರವಾಗಿ ಗನಿ ಕೆಲಸಗಳಿಗೋಸ್ಕರವಾದ ದರಖಾಸ್ತು ನಮೂನೆ.

ಮೈಸೂರು ಸೀಮೆಯ ದಿವಾನರವರಿಗೆ.

ಅಯ್ಯಾ,

ಮೈಸೂರ ಸೀಮೆಯಲ್ಲಿ ಕೆಲವು ತಾಕು ಜಮೀನುಗಳೊಳಗೆ ಗನಿ ಕೆಲಸ ನಡಿಸುವ ಬಗ್ಗೆ ಲೈಸೆನ್ಸ್ ಬಗ್ಗೆ ದರಖಾಸ್ತುಗಳು ಅಪೇಕ್ಷಿಸುವ 1887ನೇ ಇಸವಿ ಸೆಪ್ಟಂಬರ್ 12ನೇ ಮಾರ್ಕ್ಕಂ 113ನೇ ನಂಬರ್ ಇಸ್ತಿಹಾರ್‌ನಾಮೆ ವಿಷಯದಲ್ಲಿ * ನಾನು ಇದರಡಿ ವಿವರಿಸಲ್ಪಟ್ಟ ತಾಕಿನ ಲೈಸೆನ್ಸಿಗೋಸ್ಕರ ಇದರಿಂದ ದರಖಾಸ್ತು ಮಾಡಿರುತ್ತೇನೆ ಮತ್ತು ಸದರೀ ಲೈಸೆನ್ಸಿಗೋಸ್ಕರ ಪ್ರೀಮಿಯಂ ಯಾನೇ ನಫೇ ತರೀಕ ——————————ಪೌಂಡ್ (ಯಾ ರೂಪಾಯಿ)ಗಳನ್ನು ಪಾವತೀ ಮಾಡುವದಕ್ಕೆ ಒಪ್ಪುತ್ತೇನೆ ಮೇಲೆ ಉದಹರಿಸಲ್ಪಟ್ಟ ಇಸ್ತಿಹಾರ್‌ನಾಮೆಯ ಷರತ್ತುಗಳಿಗೆ ಬದ್ಧನಾಗುವದಕ್ಕೆ ಒಪ್ಪಿರುತ್ತೇನೆ.

2. ನಾನು ಮೈಸೂರು ಸೀಮೆಯ ದಿವಾನರವರ ಹೆಸರಿಗೆ ಜಮೆ ಕಟ್ಟತಕ್ಕ ಬಗ್ಗೆ ಮೇಲೆ ಹೇಳಿದ ನಫೆಯ ದಶಮಾಂಶದ ಮೊಬಲಗಿಗೋಸ್ಕರ——————————ಪೌಂಡ್(ಯಾ ರೂಪಾಯಿ)ಗಳನ್ನ——————————ಟ್ರೆಜರಿ (ಯಾ ಬ್ಯಾಂಕಿಗೆ ಪಾವತೀ ಮಾಡಿರುತ್ತೇನಲ್ಲದೆ ಅಂಥಾ ಪಾವತಿಗೆ ಆಧಾರವಾಗಿ————ನೇ ಮಾರ್ಕ್ಕಂ————ನೇ ನಂಬರ್ ರಶೀತಿಯನ್ನು ಇದರ ಸಂಗಡ ಹಾಜರ್ಮಾಡಿರುತ್ತೇನೆ.

ಅಯ್ಯಾ,
ತಮ್ಮ ಅತ್ಯಂತ ವಿಧೇಯ ಸೇವಕನಾದ,

——————————

ಮಾರ್ಕ್ಕಂ——————————

(ದರಖಾಸ್ತುದಾರನ ರುಜು.)

ಹೆಸರು ಮತ್ತು ಮೇಲ್ವಿಳಾಸ ಪೂರ್ತಿಯಾಗಿ ಕೆಳಗೆ ನಮೂದಿಸಲ್ಪಡಬೇಕು.

ದರಖಾಸ್ತು ಮಾಡೋಣಾದ ತಾಕಿನ ವಿವರಣೆ.

ನಂಬರು.	ಹೆಸರು.	ವಿಸ್ತೀರ್ಣ.

* ಒಂದು ಯಾ ಇತರ ಸಮಾಜದ ತರಫಿನಲ್ಲಿ ದರಖಾಸ್ತು ಮಾಡಲ್ಪಟ್ಟರೆ ಅಂಥಾ ಯಾ ಸಮಾಜಕ್ಕೆ ಸೇರಿದ ಮೆಂಬರುಗಳ ಹೆಸರು ತಪಸೀಲಾಗಿ ನಮೂದಿಸಲ್ಪಡಬೇಕು.

ನಂ. 128.—ಈ ಕೆಳಗೆ ಬರುವ ಸೆಕ್ಷನ್‌ಗಳು ಸರ್ವೇ ಮ್ಯಾನ್ಯುಯಲಿನ XVII ವ XVIII ಸೆಕ್ಷನ್‌ಗಳಿಗೆ ಬದಲಾಗಿ ಸೇರಿಸಲ್ಪಡತಕ್ಕದ್ದು.

XVII. ಯಿರಿಗೇಷನ್ ಸೆಸ್ಸ್ಯಾನೆ ನೀರು ಸರದಿಯು ಸರ್ಕಾರ ಗ್ರಾಮದಲ್ಲಿಯಾಗಲಿ ಪೂರಾ ಇನಾಂ ಗ್ರಾಮದಲ್ಲಿಯಾಗಲಿ ಇನಾಂ ತರೀಕ್ ಯಿರತಕ್ಕ ತಮಾಂ ತರೀ ಜಮೀನ್‌ಗಳ ಐಯಿಂದ ಠರಾವ್ ಆಗತಕ್ಕ ಸರ್ವೆ ಆಕಾರದಲ್ಲಿ ಬದಸ್ತೂರು ಸೇರಿಸಲ್ಪಡತಕ್ಕದ್ದು. ಮತ್ತು ಅಂಥಾ ಆಕಾರದ $\frac{1}{17}$ರ ಭಾಗವು ಬದಸ್ತೂರು ಜೋಡೀಮೇಲೆ ಪರಂತು "ಯಿರಿಗೇಷನ್ ಸೆಸ್ಸಿಗೆ ಸಮನಾದ ಮೊಬಲಗು" ಯೆಂಬ ಹೆಸರಿನಿಂದ ಮತ್ತು ಅಂಥಾ ಜಮೀನ್ ಯಾ ಗ್ರಾಮಗಳ ಮೇಲೆ ಅಲಾಹಿದಾ ವಸೂಲ್ ಮಾಡಲ್ಪಡಬೇಕಾದ ಕ್ವಿಟ್‌ರೆಂಟ್ ದೇಖೀಲ್ ವಸೂಲ್‌ಮಾಡಲ್ಪಡತಕ್ಕದ್ದಲ್ಲದೆ "ಡಿಸ್ಟ್ರಿಕ್ಟ್ ಯಿರಿಗೇಷನ್ ಫಂಡ್" ಹೆಡ್ಡಿಗೆ ಲೆಕ್ಕದಲ್ಲಿ ಜಮಾ ಕಟ್ಟಲ್ಪಡತಕ್ಕದ್ದು; ಪರಂತು ಅಂಥಾ ತರೀ ಜಮೀನುಗಳು ಪೂರಾ ಇನಾಂ ಗ್ರಾಮಗಳಲ್ಲಿ ಯಿದ್ದು ಅಂಥಾ ಗ್ರಾಮದಲ್ಲೇ ಯಿರತಕ್ಕಂಥಾ ಕೆರೇ ಯಾ ಇತರ ಜಲಾಧಾರಗಳಿಂದ ಮಾತ್ರವೇ ನೀರು ಒದಗಿಸಲ್ಪಟ್ಟರೆ ಅವುಗಳಿಗಾಗಿ ಯಾವ ನೀರು ಸರದಿಯಾಗಲಿ ಯಾ ಅದಕ್ಕೆ ಸಮಾನ ಮೊಬಲಗಾಗಲಿ ಸರ್ಕಾರಕ್ಕೆ ಸೇರಬೇಕಾದ್ದಿಲ್ಲವು.

ಪರಂತು ಯಿರಿಗೇಷನ್ ಸೆಸ್ಸ್ಯಾನೆ ನೀರು ಸರದಿಯನ್ನು ಠರಾವ್ ಮಾಡುವದಕ್ಕೋಸ್ಕರ ಸರ್ವೆ ಇಲಾಖೆಯವರು, ಸರ್ಕಾರ ಜಲಾಧಾರಗಳಿಂದ ನೀರು ಹಾಯಿಸುವಂಥಾ ಇನಾಂ ಗ್ರಾಮಗಳಲ್ಲಿರತಕ್ಕ ಅಂಥಾ ತರೀ ಜಮೀನುಗಳ ಆಕಾರವನ್ನು ತಿಳಿದು ರೆಕಾರ್ಡು ಮಾಡತಕ್ಕದ್ದು. ಮತ್ತು ತಮಾಂ ಇನಾಂ ಯಾ ಇತರ ತರೀ ಜಮೀನುಗಳ ಸರ್ವೆ ಆಕಾರದಲ್ಲಿ ಅವುಗಳ ಮೇಲೆ ಠರಾವ್ ಮಾಡಲ್ಪಡಬಹುದಾದ ಯಾವದಾದರೂ ಅಲಾಹಿದಾ ನೀರು ಸರದಿಯೂ ಅಡಗಿ ಯಿರತಕ್ಕದ್ದು.

XVIII. ಕಾಯಂಗುತ್ತಾ ಗ್ರಾಮಗಳಿಗೂ ಮತ್ತು (ಸರ್ವಮಾನ್ಯ ಯಾ ಜೋಡೀ) ಇನಾಂ ಗ್ರಾಮಗಳಿಗೂ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಫಂಡ್ ಸೆಸ್ ವಸೂಲ್ಮಾಡಲ್ಪಡತಕದ್ದು. ಕಾಯಂಗುತ್ತಾ ಗ್ರಾಮದ ವಿಷಯದಲ್ಲಿ ಕಾಯಂಗುತ್ತಾ ಮೊಬಲಗಿ ಮೇಲೂ ಇನಾಂ ಗ್ರಾಮಗಳ ವಿಷಯದಲ್ಲಿ ಇನಾಂ ಗ್ರಾಮಗಳ ಆಕಾರದಮೇಲೂ ವಸೂಲ್ ಮಾಡಲ್ಪಡತಕ್ಕದ್ದು.

ನಂ. 129.—1875ನೇ ಇಸವಿ ಮೇ 7ನೇ ಮರ್ಕೂಂ 62ನೇ ನಂಬರುಳ್ಳ ಮಾಜೀ ಚೀಫ್ ಕಮ್ಮಿಷನರವರ ಇಸ್ತಿಹಾರಿನೊಂದಿಗೆ ಷಾಯಿಷ್ ಮಾಡಲ್ಪಟ್ಟ ಡಿಸ್ಟ್ರಿಕ್ಟ್ ಯಿರಿಗೇಷನ್ ಸೆಸ್ಸ್ ಫಂಡಿನ ಆಡಳಿತವನ್ನು ನಡಿಸುವದರಲ್ಲಿ ಡಿಸ್ಟ್ರಿಕ್ಟ್ ಕಮ್ಮಿಟಿಗಳವರು ಅನುಸರಿಸತಕ್ಕ ಬಗ್ಗೆ ಏರ್ಪಡಿಸಿದ ನಿಬಂಧನೆಗಳ 6ನೇ ಕಲಮು ಈ ಕೆಳಗೆ ನಮೂದಾಗುವ ಮೇರೆಗೆ ತಿದ್ದಪಾಟ್ಟಿರುತ್ತದೆ:—

VI. ಇನಾಂ ವ ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರು ತಮ್ಮ ತಮ್ಮ ಗ್ರಾಮದ ಕೆರೆಯ ನೀರಿನಿಂದಲೇ ಸಾಗುವಳೀ ಆಗುವ ತರೀ ಜಮೀನಿಗಾಗಿ ನೀರು ಸರದಿಯನ್ನ ತೆರಬೇಕಾದ ಆವಶ್ಯಕತೆ ತಪ್ಪಿರುತ್ತದೆಯಾಗಿ ಅಂಥಾ ಕೆರೆಗಳಿಗೆ ಕಾಲಕಾಲಕ್ಕೆ ರಿಪೇರಿ ಮಾಡುವಂಥಾ ವ ಅವುಗಳನ್ನ ಒಳ್ಳೇ ದುರಸ್ತು ಸ್ಥಿತಿಯಲ್ಲಿ ಯಿಟ್ಟುಕೊಳ್ಳುವಂಥಾ ಜವಾಬ್‌ದಾರಿಯು ಖಂಡಿತವಾಗಿ ಜಾರೀಯಲ್ಲಿ ತರಲ್ಪಡತಕ್ಕದ್ದು. ಒಂದು ವೇಳೆ ಅವರುಗಳು ತಮ್ಮ ತಮ್ಮ ಕೆರೆಗಳನ್ನ ಒಳ್ಳೇ ಸ್ಥಿತಿಯಲ್ಲಿ ಯಿಟ್ಟುಕೊಳ್ಳುವದಕ್ಕಾಗಲಿ ಆವಶ್ಯಕವಾದ ಕಾಮಗಾರಿಗಳನ್ನ ಸಕಾಲದಲ್ಲಿ ಸಾಧ್ಯವಾದ ತ್ವರ್‍ಯದಿಂದಲೂ, ವ ಬಂದೋಬಸ್ತಾಗಿಯೂ ನಡಿಸಲಿಕ್ಕಾಗಲಿ ತಪ್ಪಿದರೆ, ಅಂಥಾ ಕಾಮಗಾರೀ ವಗೈರೇ ಕೆಲಸವನ್ನ ಗವರ್ನಮೆಂಟಿನವರೇ ತೆಗದುಕೊಂಡು ಖುದ್ದು ನಡಿಸಲು ನ್ಯಾಯ್ಯವಾಗಿರತಕ್ಕದ್ದು. ಆ ಬಾಬತು ಲಾಗವಡು ಕಂದಾಯದ ಬಾಕೀಯಂತೆಯೇ ಅವರುಗಳಿಂದ ವಸೂಲ್ ಮಾಡಲ್ಪಡತಕ್ಕದ್ದು.

ಮ್ಯುನಿಸಿಪಲ.

ನಂ. 131.—ಮೈಸೂರ ಷಹರಿನಲ್ಲಿ, ಕೆಲವು ಬೀದಿಗಳನ್ನ ಏರ್ಪಡಿಸತಕ್ಕ ಬಗ್ಗೆ ಈ ಕೆಳಗೆ ವಿವರಿಸೋಣಾದ ಜಮೀನ್‌ಗಳು, ಸರ್ಕಾರಕ್ಕೆ ಬೇಕಾಗಿರುತ್ತೆಂಬದಾಗಿ 1870ನೇ ಇಸವಿ 10ನೇ ಲ್ಯಾಂಡ ಅಕ್ವಿಜೇಷನ್ ಆಕ್ಟಿನ ಸೆಕ್ಷನ್ ಅನುಸರಿಸಿ ಯಿದರಿಂದ ಪ್ರಕಟಿಸಲ್ಪಟ್ಟು ಯಿಧೆ.

ಸಂಖ್ಯೆ.	ಜಮೀನ್ ಇರತಕ್ಕ ಭಾಗ.	ಮಾಲೀಕರ ಹೆಸರುಗಳು.	ವಿಸ್ತೀರ್ಣ. ಉತ್ತರ ದಕ್ಷಿಣ ಅಡಿ	ವಿಸ್ತೀರ್ಣ. ಪೂರ್ವ ಪಶ್ಚಿಮ ಅಡಿ	ತಪಶೀಲು.	ಯಾವ ಕೆಲಸಕ್ಕೆ ಬೇಕು	ಚಾತರ್ಫರ್.
1	ಕಿಲ್ಲೆಯಲ್ಲಿ ಮೋತೀಖಾನೆ ಬೀದಿ	ನಂಜನಗೂಡು ನಂಜುಂಡಪ್ಪ.	24	60	ತಖ್ತಪೋಷ್‌ಮನೆಯ 40 ಅಂಕಣಗಳು 11 ಅಂಕಣದ ತಾರಸೀ ಡಿಟೋ 1 ಭಾವಿ	ಚರಾಂಡೀನಲ್ಲಿ ಹಾಕುವಬಗ್ಗೆ	ಪೂರ್ವಕ್ಕೆ ರಾಮಣ್ಣನ ಮನೆ, ದಕ್ಷಿಣಕ್ಕೆ ಮೋತೀಖಾನೆಬೀದಿ, ಪಶ್ಚಿಮಕ್ಕೆ ಯಿಬ್ಬನಕಟ್ಟೆ ಮನೆ, ಉತ್ತರಕ್ಕೆ ರಾಮಣ್ಣನ ಮನೆ
2	ಡಿಟೋ	ರಾಮಣ್ಣ	18	24	3 ಹಂಚಿನ ಅಂಕಣಗಳು	ಡಿಟೋ	ಪೂರ್ವಕ್ಕೆ ತಿರುಮಲರಂಗಾಚಾರೀ ಮನೆ, ದಕ್ಷಿಣಕ್ಕೆ ನಂಜುಂಡಪ್ಪನ ಮನೆ, ಪಶ್ಚಿಮಕ್ಕೆ ರಾಮಣ್ಣನ ಮನೆ, ಉತ್ತರಕ್ಕೆ ಅನಂತಯ್ಯನ ಮನೆ
3	ಡಿಟೋ	ಅನಂತಯ್ಯ	11	16	ಜಮೀನು	ಡಿಟೋ	ಪೂರ್ವಕ್ಕೆ ಗಲ್ಲಿ, ದಕ್ಷಿಣಕ್ಕೆ ರಾಮಣ್ಣನ ಮನೆ, ಪಶ್ಚಿಮಕ್ಕೆ ಅನಂತಯ್ಯನ ಮನೆ, ಉತ್ತರಕ್ಕೆ ರಾಮಾಚಾರಿ ಮನೆ.
4	ಡಿಟೋ	ಪೆನಗೊಂಡೆ ರಾಮಾಚಾರ್	11	36	ಹಂಚಿನ 3 ಅಂಕಣ ತಾರಸೀವರಾಂಡಾವಿನ 3 ಅಂಕಣ, ತಖ್ತಪೋಷಿನ 2 ಅಂಕಣ ಹಂಚಿನ 2 ಅಂಕಣ	ಡಿಟೋ	ಪೂರ್ವಕ್ಕೆ ಗೋಪಾಲಾಚಾರಿ ಮನೆ, ದಕ್ಷಿಣಕ್ಕೆ ಅನಂತಯ್ಯನ ಮನೆ, ಪಶ್ಚಿಮಕ್ಕೆ ರಾಮಾಚಾರ್ರು ಮನೆ, ಉತ್ತರಕ್ಕೆ ವೆಂಕಟಸುಬ್ಬಯ್ಯನ ಮನೆ
5	ವೆಂಕಟಸುಬ್ಬಯ್ಯನವರ ಸಂದಿ	ದಾಸಂಭಟ್ಟ	33	46	ತಖ್ತಪೋಷ್ 11 ಅಂಕಣ, ಹಂಚಿನ 15 ಅಂಕಣ ಡಿಟೋ ವರಾಂಡ 5 ಅಂಕಣ ತಾರಸೀ 1 ಅಂಕಣ ಭಾವಿ 1	ಡಿಟೋ	ಪೂರ್ವಕ್ಕೆ ರಾಮಶಾಸ್ತ್ರೀ ಮನೆ, ದಕ್ಷಿಣಕ್ಕೆ ವೆಂಕಟಸುಬ್ಬಯ್ಯನವರ ಸಂದಿ, ಪಶ್ಚಿಮಕ್ಕೆ ಡಿ. ಕೃಷ್ಣಪ್ಪನ ಮನೆ, ಉತ್ತರಕ್ಕೆ ಮುನಿಯಾಜಟ್ಟೀ ಬೀದಿ
6	ಕಿಲ್ಲೆಯಲ್ಲಿ ಮುನಿಯಾಜಟ್ಟೀ ಬೀದಿ	ನಾಗೇಶರಾವ್	10	60	ಹಂಚಿನ ವಪ್ಪಾರದ 1 ಅಂಕಣ, 1 ಭಾವಿ	ಡಿಟೋ	ಪೂರ್ವಕ್ಕೆ ಮುರಾರಿರಾಯರ ಮನೆ, ದಕ್ಷಿಣಕ್ಕೆ ಸುಬ್ಬರಾಯರ ಜಮೀನು, ಪಶ್ಚಿಮಕ್ಕೆ ನಾಗೇಶರಾಯರ ಮನೆ, ಉತ್ತರಕ್ಕೆ ಮುನಿಯಾಜಟ್ಟೀಬೀದಿ
7	ಮೋತೀಖಾನಾ ಬೀದಿ	ಸುಬ್ಬರಾವ್	18	30	ಜಮೀನು	ಡಿಟೋ	ಪೂರ್ವಕ್ಕೆ ಸುಬ್ಬರಾಯರ ಮನೆ, ದಕ್ಷಿಣಕ್ಕೆ ಗರಳಪುರಿ ಶಾಸ್ತ್ರೀಗಳ ಮನೆಯಹಿತ್ತಲು, ಪಶ್ಚಿಮಕ್ಕೆ ವೆಂಕಟಕೃಷ್ಣೇಅರಸಿನವರ ಮನೆ, ಉತ್ತರಕ್ಕೆ ನಾಗೇಶರಾಯರ ಮನೆ
8	ಡಿಟೋ	ಗರಳಪುರಿಶಾಸ್ತ್ರಿ	18	33	ಹಂಚಿನ ವಪ್ಪಾರ 1 ಅಂಕಣ	ಡಿಟೋ	ಪೂರ್ವಕ್ಕೆ ಗರಳಪುರಿಶಾಸ್ತ್ರಿಗಳ ಮನೆ, ದಕ್ಷಿಣಕ್ಕೆ ಮೂರ್ತಪ್ಪನ ಮಗ ನರಸಿಂಹಮೂರ್ತಿ ಮನೆ, ಪಶ್ಚಿಮಕ್ಕೆ ವೆಂಕಟಕೃಷ್ಣೇಅರಸಿನವರ ಮನೆ, ಉತ್ತರಕ್ಕೆ ಸುಬ್ಬರಾಯರ ಮನೆ

ನಂಬರ್.	ಜಮೀನು ಇರತಕ್ಕ ಭಾಗ.	ಮಾಲೀಕರ ಹೆಸರುಗಳು.	ವಿಸ್ತೀರ್ಣ. ಪೂರ್ವ ಪಶ್ಚಿಮ ಅಡಿ.	ಉತ್ತರ ದಕ್ಷಿಣ ಅಡಿ.	ತಪಸೀಲು.	ಯಾವ ಕೆಲಸಕ್ಕೆ ಬೇಕಾಗಿತ್ತು.	ಚಾತುರ್ಸೀಮೆ.
9	ಮೋತೀಖಾನಾ ಬೀದಿ	ಮೂರ್ತೆಪ್ಪನ ಮಗ ನೃಸಿಂಹ ಮೂರ್ತಿ	48 48	30 31	ತಾರಸೀ ಮನೆಯು 3 ಅಂಕಣ ತಖ್ತಪೋಷ್ 21 ಅಂಕಣ ಹಂಚಿನ 2 ಅಂಕಣ ಬಂಜರ್ ಜಮೀನು	ಚರಾಂಡೀನಲ್ಲಿ ಹಾಕುವ ಬಗ್ಯೆ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಮೋತೀಖಾನೆ ಬೀದಿ, ಪಶ್ಚಿಮಕ್ಕೆ ವೆಂಕಟಕೃಷ್ಣೇಅರಸಿನವರ ಮನೆ, ಉತ್ತರಕ್ಕೆ ಗರಳಪುರಿಶಾಸ್ತ್ರಿಗಳ ಮನೆ
10	ಡಿಟ್ಟೋ	ಕಪನೀಪತಿ ಶಾಸ್ತ್ರಿ	26	66	ಹಂಚಿನ 16 ಅಂಕಣ ಡಿಟ್ಟೋ ಮಪ್ಪಾರ 2 ಅಂಕಣ 1 ಭಾವಿ	ಡಿಟ್ಟೋ	ಪೂರ್ವಕ್ಕೆ ವೆಂಕಟಸುಬಯ್ಯನ ಮನೆ, ದಕ್ಷಿಣಕ್ಕೆ ಸುಬಂಣನಮನೆ, ಪಶ್ಚಿಮಕ್ಕೆ ರಘುಪತಿ ಶಾಸ್ತ್ರಿಗಳ ಮನೆ, ಉತ್ತರಕ್ಕೆ ಮೋತೀಖಾನೆ ಬೀದಿ
11	ಡಿಟ್ಟೋ	ಚಿಕ್ಕಲಿಂಗರಾಜೇಅರಸಿನವರು	22 20	33 20	ಹಂಚಿನ 9 ಅಂಕಣ ಜಮೀನು	ಡಿಟ್ಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಮೋತೀಖಾನೆ ಬೀದಿ ಪಶ್ಚಿಮಕ್ಕೆ ಶಾಮರಾಯರ ಮನೆ, ಉತ್ತರಕ್ಕೆ ಮಾದಪ್ಪಶಾಸ್ತ್ರಿ ಮನೆ
12	ಡಿಟ್ಟೋ	ಮಾದಪ್ಪ ಶಾಸ್ತ್ರಿ	18	22	ತಖ್ತಪೋಷ್ 5 ಅಂಕಣ ಹಂಚಿನ 2 ಅಂಕಣ	ಡಿಟ್ಟೋ	ಪೂರ್ವಕ್ಕೆ ಸಂದೀ ದಕ್ಷಿಣಕ್ಕೆ ಲಿಂಗರಾಜೇಅರಸಿನವರ ಲಾಯ, ಪಶ್ಚಿಮಕ್ಕೆ ಶಾಮರಾಯನ್ನ ಬಂಜರ್ ಜಮೀನು, ಉತ್ತರಕ್ಕೆ ಸರಕಾರ್ ಜಮೀನು
13	ವೀಣೇ ವೆಂಕಟಸುಬ್ಬಯ್ಯನವರ ಬೀದಿ	ಸುಬ್ಬಂಣ	30	34	ತಾರಸೀ 7 ಅಂಕಣ ತಖ್ತಪೋಷ್ 12 ಅಂಕಣ ಹಂಚಿನದು 15 ಅಂಕಣ 1 ಭಾವಿ	ಡಿಟ್ಟೋ	ಪೂರ್ವಕ್ಕೆ ಸಂದೀ, ದಕ್ಷಿಣಕ್ಕೆ ಸರಕಾರದ ಜಮೀನು, ಪಶ್ಚಿಮಕ್ಕೆ ವೆಂಕಟರಮಣಯ್ಯನ ಮನೆ, ಉತ್ತರಕ್ಕೆ ವೀಣೇ ವೆಂಕಟಸುಬಯ್ಯನವರ ಗಲ್ಲಿ
14	ಡಿಟ್ಟೋ	ಅಗರದ ಕೃಷ್ಣಪ್ಪನ ಹೆಂಡತಿ ಶಂಕರಮ್ಮ	43	20	ಜಮೀನು 1 ಭಾವಿ	ಡಿಟ್ಟೋ	ಪೂರ್ವಕ್ಕೆ ಸುಬ್ಬಯ್ಯನ ಮನೆ, ದಕ್ಷಿಣಕ್ಕೆ ವೆಂಕಟಸುಬಯ್ಯನ ಬೀದಿ, ಪಶ್ಚಿಮಕ್ಕೆ ರಾಮಶಾಸ್ತ್ರಿ ಮನೆ, ಉತ್ತರಕ್ಕೆ ವೆಂಕಟಶಾಸ್ತ್ರಿ ಮನೆ
15	ಮುನಿಯಾಜಟ್ಟೀ ಬಿದಿ	ವೆಂಕಟಶಾಸ್ತ್ರಿ	45	27	ತಖ್ತಪೋಷ್ 4 ಅಂಕಣ ಹಂಚಿನದು 8 ಅಂಕಣ ಮಪ್ಪಾರ 3 ಅಂಕಣ	ಡಿಟ್ಟೋ	ಪೂರ್ವಕ್ಕೆ ಚಿನ್ನಪ್ಪಜೋಯಿಸರಮನೆ, ದಕ್ಷಿಣಕ್ಕೆ ಶಂಕರಮ್ಮನ ಮನೆ, ಪಶ್ಚಿಮಕ್ಕೆ ಸುಬ್ಬರಾಯರ ಮನೆ, ಉತ್ತರಕ್ಕೆ ಮುನಿಯಾಜಟ್ಟಿ ಬೀದಿ

ತಾರೀಖು 12ನೇ ಅಕ್ಟೋಬರ್ 1887.

ತಪ್ಪು ತಿದ್ದುಪಡಿ.

ಸಂ. 134.—ಸ್ನ 1884ನೇ ಇಸವಿ ಜೂನ್ 28ನೇ ಮುದ್ರಿತವಾದ ಮೈಸೂರು ಗೆಜೆಟ್ಟಿನ IIIನೇ ಭಾಗದಲ್ಲಿ ಪ್ರಕಟಿಸಿದ ಕನ್ನಡ ಸಿವಿಲ್ ಪ್ರೊಸಿಡ್ಯೂರ್ ಕೋಡಿನ 629ನೇ ಸೆಕ್ಷನಿನ 8ನೇ ಪಂಕ್ತಿಯಲ್ಲಿ "ಅಂಗೀಕಾರ ವಾಗಲಾರದೆಂಬ" ಯೆಂಬ ಮಾತುಗಳಿಗೆ ಬದಲಾಗಿ "ಅಂಗೀಕಾರವಾಗ ಬಹುದೆಂಬ" ಯೆಂದು ಓದಿಕೊಳ್ಳತಕ್ಕದ್ದು.

ತಾರೀಖು 13ನೇ ಅಕ್ಟೋಬರ 1887.

ಕ್ಯಾಂಪ್ ನಂ. 1494.—ಇದರಡೀ ಕಂಡ ಅಮಲ್ದಾರರ ವರ್ಗಾವರ್ಗಿಯು ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಹೆಸರು.	ಯಲ್ಲಿಂದ.	ಯಲ್ಲಿಗೆ.
ಡಿ. ವೆಂಕಟರಮಣಯ್ಯನವರು ..	ಕ್ಲೋಸ್ಪೇಟೇ ತಾಲ್ಲೂಕಿನಿಂದ	ಹೊಸಕೋಟೇ ತಾಲ್ಲೂಕಿಗೆ ಕೆಲಸದಿಂದ ನಿವೃತ್ತರಾದ ತಿರುಮಲರಾಯರಿಗೆ ಬದಲಾಗಿ.
ಕೆ. ಶ್ರೀನಿವಾಸರಾಯರು ..	ಕೋಲಾರ ಡಿಟೋ	ಕ್ಲೋಸ್ಪೇಟೆ ಡಿಟೋ
ಅಬದ್ದುಲ್ಅಜೀಜರು ..	ತುಮಕೂರು ಡಿಟೋ	ಕೋಲಾರ ಡಿಟೋ
ಶ್ರೀಕಂಠಯ್ಯನವರು ..	ಚಿಕ್ಕನಾಯಕನಹಳ್ಳಿ ಡಿಟೋ	ಗುಬ್ಬಿ ಡಿಟೋ
ಲಕ್ಷ್ಮಣರಾಯರು ..	ದೇವನಹಳ್ಳಿ ಡಿಟೋ	ಚಿಕ್ಕನಾಯಕನಹಳ್ಳಿ ಡಿಟೋ
ಯಸ್. ವೆಂಕಟರಾಯರು ..	(ಸೊರಬ ತಾಲ್ಲೂಕಿಗೆ ನೇಮಿಸಲ್ಪಟ್ಟವರು)	ದೇವನಹಳ್ಳಿ ಡಿಟೋ
ಬಿ. ಕೇಶವಯ್ಯಂಗಾರ್ರು ..	ಬೇಲೂರು ಡಿಟೋ	ಹೊಳಲ್ಕೆರೆ ಡಿಟೋ
ಅಹಂಮದ್ಅಲ್ಲೀ ..	ಹೊಳಲ್ಕೆರೆ ಡಿಟೋ	ಅರಶೀಕೆರೆ ಡಿಟೋ
ಹೇಮಾಹನುಮಂತಯ್ಯನವರು ..	ಗುಬ್ಬಿ ಡಿಟೋ	ತುಮಕೂರು ಡಿಟೋ
ಯಸ್. ಕೃಷ್ಣರಾವ್ ಬಿ. ಎ. ಯವರು ..	ಅರಶೀಕೆರೆ ಡಿಟೋ	ಬೇಲೂರು ಡಿಟೋ

ತಾರೀಖು 18ನೇ ಅಕ್ಟೋಬರ 1887.

ನಂ. 137.—ಹೆಗ್ಗಡದೇವನಕೋಟೆ ಅಮಲ್ದಾರ್ ಕೆ. ಶಾಮಯ್ಯಂಗಾರ್ರಿಗೆ, 1887ನೇ ಇಸವಿ ಮೇ 30ನೇ ಮುಕ್ಕಾಂ 617ನೇ ನಂಬರ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ಒಂದು ತಿಂಗಳ ರಜಾ ಅವರಿಂದ ಉಪಯೋಗಿಸಿಕೊಳ್ಳಲ್ಪಡದೇ ಯಿರುವಧರಿಂದ ಅದು ಅವರ ಖಾಯಿಷ್ ಮೇಲೆ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು—ನೇ ಅಕ್ಟೋಬರ 1887.

ಕ್ಯಾಂಪ್ ನಂ. 1510.—1878ನೇ ಇಸವಿ ಆಗಸ್ಟ್ 10ನೇ ಮುಕ್ಕಾಂ 130ನೇ ನಂಬರವುಳ್ಳ ಲೇಟ್ ಚೀಫ್ ಕಮ್ಮಿಷನರವರ ಇಸ್ತಿಹಾರ್ನಾಮೆಯನ್ನು ಬದಲಾಯಿಸಿ, ಇದರಡಿ ನಮೂದ್ ಮಾಡಲ್ಪಟ್ಟ ಶಿವಮೊಗ್ಗಾ ಷಹರಿನ ಪರಿಷ್ಕರಿಸಲ್ಪಟ್ಟ ಚಕ್ಕುಬಂದಿಯು ದಿವಾನರವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೇ ಬಗ್ಯೆ ಪ್ರಕಟಿಸಲ್ಪಡುತ್ತೆ:—

ಉತ್ತರಕ್ಕೆ.—ಶಿಂಗಪ್ಪನವರ ಬಂಗಲೇಯಿಂದ ಸದರೀ ಬಂಗಲೇ ದೇಖೀಲ್ ಮ್ಯುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೊರಟು ಮೆ|| ಡರ್ಕ ಮೆಕ್ಕೆಂಜಿ ಬಂಗಲೆ ಮತ್ತು ಯಗ್ಜಿಕ್ಯುಟಿವ್ ಇಂಜನಿಯರ್ ಆಫೀಸ್ ದೇಖೀಲ್ ಶಿವಮೊಗ್ಗೆಯ 30ನೇ ಸರ್ವೇನಂಬರ್ ಬಳಿ ಹೊನ್ನಾಳಿ ರಸ್ತೆಯ ವರಿಗೂ ವಿಸ್ತರಿಸಿ ಅದೇರಸ್ತೆ ಮಾರ್ಗವಾಗಿ ಹೊರಟು, ಶಿವಮೊಗ್ಗಾ—ಹೊನ್ನಾಳಿ (ಹರಿಹರ) ರಸ್ತೆಗಳು ಅಂದರೆ (ವಂದು ಯಗ್ಜಿಕ್ಯುಟಿವ್ ಇಂಜನಿಯರ್ ಆಫೀಸಿನ ಮುಂಭಾಗದಿಂದಲೂ ಮತ್ತೊಂದು ಸೋಮಯ್ಯನವರ ಕೆರೆ ಯೇರಿ ಯಿಂದಲೂ ಆರಂಭಿಸುವ) ಸಂಧಿಸುವ ಮುಳಕೆರೆಯ 60ನೇ ಸರ್ವೇ ನಂಬರ ಬಳಿಯಣ ಆಕಟ್ರಾಯಿ ತೆರಿಗೆ ಮನೆ ವರಿವಿಗೂ ವಿಸ್ತರಿಸುತ್ತದೆ.

ದಕ್ಷಿಣಕ್ಕೆ.—ಪೊಲೀಸ್ ಠಾಣೇ ದೇಖೀಲ್ ಅದರ ಬಳಿಯಣ ಆಗುಂಬಿ ರಸ್ತೇಯಿಂದ ತುಂಗಾ ನದಿವರಿಗೂ ಅಂದರೆ ತುಂಗಾ ನದಿ ಶೇತುವೆ ದಕ್ಷಿಣ ದಿಕ್ಕಿನ ಕೊನೆ ವರಿಗೂ ವಿಸ್ತರಿಸುತ್ತದೆ.

ಪೂರ್ವಕ್ಕೆ.—ಸದರೀ ತುಂಗಾನದಿ ಶೇತುವೆಯ ದಕ್ಷಿಣ ದಿಕ್ಕಿನ ಕೊನೇಯಿಂದ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೇ ಯೇರಿ ದಾಟಿ ಶಿವಮೊಗ್ಗಾ ಹೊನ್ನಾಳಿ ರಸ್ತೆಗಳು (ಮೊದನೇ ಕಲಂನಲ್ಲಿ ಪ್ಯಾರ್ಗಿಥ್ ಸೆಸನಲ್ಲಿ ತೋರಿಸಲ್ಪಟ್ಟಂತೆ) ಸಂಧಿಸುವ ಮುಳಕೆರೆಯ 60ನೇ ಸರ್ವೇ ನಂಬರ ಬಳಿಯಣ ಆಕ್ಟ್ರಾಯಿ ತೆರಿಗೆ ಮನೆ ವರಿಗೂ ವಿಸ್ತರಿಸುತ್ತದೆ.

ಪಶ್ಚಿಮಕ್ಕೆ.—ಪೋದಿಗೆರೆ ಮುರಿಗೇಂದ್ರಪ್ಪನ ಬಂಗಲೇಯಿಂದ ಸದರೀ ಬಂಗಲೆ ದೇಖೀಲ್ ಸಾಗರದ (ಹೊನ್ನಾವಾರ) ದೊಡ್ಡರಸ್ತೆ ಮಾರ್ಗವಾಗಿ ದಕ್ಷಿಣಕ್ಕಾಗಿ ಶಿಲೇದಾರ್ ತಬೇಲಿ ಮತ್ತು ಲೈನ್ಸಯಿಸಿನ ಮನೆಗಳು ದೇಖೀಲ್ 113 ಮತ್ತು 114ನೇ ಸರ್ವೇನಂಬರುಗಳು ಸಹಿತವಾಗಿ ಆಗುಂಬಿ ರಸ್ತೆಯಲ್ಲಿ ತುಂಗಾ ನದಿವರಿಗೂ ವಿಸ್ತರಿಸುತ್ತದೆ.

ಬಮೋಜಿಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರೆಟರಿ.

873

ಮೈಸೂರ ಗೆಜೆಟ್

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಅಕ್ಟೋಬರ್ ತಾ|| 29, ಸರ್ 1887.

ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟು ಇಲಾಖಾ.

ತಾರೀಖು 11ನೇ ಅಕ್ಟೋಬರ್ 1887.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರಿಂದ 43ನೇ ಮೈಲಿಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕು ನಿಸನ ಸ್ಥಳದಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ಈ ಕೆಳಗೆ ನಮೂದು ಮಾಡಲ್ಪಡುವ ಆನೆಗಳು ಮತ್ತು ಈ ಮಧ್ಯ ಕಾಲದಲ್ಲಿ ಹಿಡಿಯಲ್ಪಡುವ ಆನೆಗಳು ಸಹ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಸೂಪರಿಂಟೆಂಡೆಂಟರವರಿಂದ ಸರ್ 1887ನೇ ಇಸವಿ ನವಂಬರ್ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹೆಸರುಗಳು.	ಜಾತಿ.	ಎತ್ತರ.		ಹಿಡಿಯಲ್ಪಟ್ಟ ತಿಂಗಳು.	ಷರಾ.
			ಅಡಿ.	ಅಂಗುಲ.		
1	ಗಜಲಕ್ಷ್ಮಿ ..	ಹೆಣ್ಣು.	4	10	1887ನೇ ಏಪ್ರೈಲ್	
2	ಸದಾಶಿವ ..	ಗಂಡು	4	5	ಡಿಟ್ಟೋ ಜೂನ್	
3	ಶುಕಾರಿ ..	ಹೆಣ್ಣು.	4	0	ಡಿಟ್ಟೋ ಆಗಸ್ಟ್	

ಷರತ್ತುಗಳು—ಶೇಕಡಾ 25 ರೂಪಾಯಿ ಪ್ರಕಾರ ಠೇವಣಿ ಮೊಬಲಗನ್ನು ಕೂಡ್ಲೆ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡತಕ್ಕದ್ದು. ಬಾಕಿ ಮೊಬಲಗನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಮತ್ತು ಆನೆಗಳನ್ನು ಸಾಗಿಸಿಕೊಳ್ಳುವದಕ್ಕೆ ಮುಂಚಿತವಾಗಿ ಪಾವತೀ ಮಾಡಬೇಕು, ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಆನೆಗಳು ಪುನಃ ಹರಾಜ್ ಮಾಡಲ್ಪಡುವವು ನಷ್ಟಕ್ಕೆ ಅವಲ್ ಖರೀದೀದಾರನು ಗುರಿಯಾಗತಕ್ಕದ್ದು. ಹರಾಜಿನಲ್ಲಿ ಜಾಸ್ತಿ ಹುಟ್ಟಿದರೆ ಅದರಲ್ಲಿ ಆತನಿಗೆ ಯೇನೂ ಸಲ್ಲಲಾರದು.

ಖರೀದಿ ತಾರೀಖು ಲಾಗಾಯಿತು ಖರೀದಿದಾರನೇ ಆನೆಗಳ ರಾತೀಪು ವಗೈರೆ ಖರ್ಚುಗಳನ್ನ ವಹಿಸತಕ್ಕದ್ದು.

ತಾರೀಖು 3ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ವುತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು—ಶಿಕಾರಿಪುರದ ಕೋಠಿ	10ನೇ ನವಂಬರ 1887.	ಹೆಚ್ಚುಕಡಮೆ	250 ಟನ್‌ಗಳು.
ಅನಂತಪುರದ ಕೋಠಿ ..	14ನೇ ಡಿಟೋ	..	50 ಡಿಟೋ
ಶಿವಮೊಗ್ಗಾ ಡಿಟೋ ..	19ನೇ ಡಿಟೋ	..	500 ಡಿಟೋ
ತೀರ್ಥಹಳ್ಳಿ ಡಿಟೋ ..	25ನೇ ಡಿಟೋ	..	200 ಡಿಟೋ
ಕಡೂರು ಡಿಸ್ಟ್ರಿಕ್ಟು—ಚಿಕ್ಕಮಗಳೂರು ಕೋಠಿ	1ನೇ ಡಿಶಂಬರ 1887.	..	200 ಡಿಟೋ
ಹಾಸನ್ ಡಿಸ್ಟ್ರಿಕ್ಟು—ಹಾಸನ ಕೋಠಿ	7ನೇ ಡಿಟೋ	..	300 ಡಿಟೋ
ಮೈಸೂರು ಡಿಸ್ಟ್ರಿಕ್ಟು—ಶ್ರೀರಂಗಪಟ್ಣ ಕೋಠಿ	12ನೇ ಡಿಟೋ	...	} 800 ಡಿಟೋ
ಹುಣಸೂರು ಡಿಟೋ ..	16ನೇ ಡಿಟೋ	..	
ಬೆಂಗಳೂರು ಡಿಸ್ಟ್ರಿಕ್ಟು—ಬೆಂಗಳೂರು ಕೋಠಿ	20ನೇ ಡಿಟೋ	..	150 ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಅಗಸ್ಟ್ 27 ಮತ್ತು ಸೆಪ್ಟಂಬರ 3ನೇ ಮಾರ್ಖುಗಳ 34, 35ನೇ ನಂಬರು ಗೆಜೆಟ್‌ಗಳಲ್ಲಿ ಛಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್.

ಮೈಸೂರು ರೆವಿನ್ಯೂ ಸರ್ವೆ ಸೆಟ್ಲಮೆಂಟ್ ಇಲಾಖಾ.

ನಂ. 586. ತಾರೀಖು 21ನೇ ಅಕ್ಟೋಬರ್ 1387.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಯಿದರಿಂದ ಪ್ರಕಟಿಸಲ್ಪಡುವದೇನಂದರೆ, ಸನ್ 1887—88 ಸರ್ವೆ ಅಯಾಂ ಕಾಲದಲ್ಲಿ ಇದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ಮೆಜರಿಂಗ್ ಯಾನೆ ಮೋಜಣಿ, ಕ್ಲಾಸಿಫಿಕೇಷನ್ ಯಾನೆ ಪ್ರತಿಬಂದಿ ಮತ್ತು ಸೆಟಲ್‌ಮೆಂಟ್ ಯಾನೆ ತರಂ ಫೈಸಲ್ ಕೆಲಸಗಳು ನಡಿಸಲ್ಪಡುವವು.

ಡಿಸ್ಟ್ರಿಕ್ಟು.	ತಾಲ್ಲೂಕು.	ಕೆಲಸ ಷುರುವಾಗತಕ್ಕ ಷುಮಾರು ತಾರೀಖು.	ಷರಾ.
	ಮೋಜಣಿಯು.		
ಮೈಸೂರು ..	ಮಳವಳ್ಳಿ	1ನೇ ನವಂಬರ 1887	
ಡಿಟೋ ..	ತಿರುಮಕೂಡ್ಲು ನರಸೀಪುರ	ಡಿಟೋ	
ಡಿಟೋ ..	ಚಾಮರಾಜನಗರ್	ಡಿಟೋ	
ಡಿಟೋ ..	ನಂಜನಗೂಡು	ಡಿಟೋ	
ಬೆಂಗಳೂರು ..	ಹೊಸ್ಕೋಟೆ	ಡಿಟೋ	
ಡಿಟೋ ..	ಕಾನಕಾನಹಳ್ಳಿ	1ನೇ ಫೆಬ್ರವರೀ 1888	
ಕಡೂರು ..	ಶೃಂಗೇರಿಜಹಗೀರ್	1ನೇ ಜನವರೀ 1888	
	ಪ್ರತಿಬಂದಿಯು.		
ಕೋಲಾರ ..	ಕೋಲಾರ	1ನೇ ನವಂಬರ 1887	
ಡಿಟೋ ..	ಬವರಿಂಗಪೇಟೆ	ಡಿಟೋ	
ಮೈಸೂರು ..	ಶ್ರೀರಂಗಪಟ್ಣ	1ನೇ ಫೆಬ್ರವರೀ 1888	
	ತರಂ ಫೈಸಲ್.		
ಮೈಸೂರು ..	ಮಂಡ್ಯ	1ನೇ ಮಾರ್ಚಿ 1888	
ಡಿಟೋ ..	ನಾಗಮಂಗಲ್	15ನೇ ಏಪ್ರಲ್ 1888	

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಮೈಸೂರ್ ರೆವಿನ್ಯೂ ಸರ್ವೆ.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯುವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 876.

ಮೃತಪಟ್ಟ ಮರಿಬಸಪ್ಪನ ಆಸ್ತೀವಿಷಯದಲ್ಲಿ—

ಅರ್ಜೀದಾರ ರುದ್ರಪ್ಪ ಮೃತಪಟ್ಟ ಸದರೀ ಮರಿಬಸಪ್ಪನಿಗೆ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ನೆಲವಂಗಲ ಸ್ಥಳದ ಮರಿಬಸಪ್ಪನು ನೆಲವಂಗಲ ವಾಸಸ್ಥನಾಗಿ ಮೃತಪಟ್ಟ ಮರಿಬಸಪ್ಪನ ಜಿಂದಗೀ ಬಗ್ಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾರಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ರುದ್ರಪ್ಪನ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 4ರಲ್ಲು ಕೇಳೆ ಸರಟಿಫಿಕೇಟ್ ಪಡಿಯತಕ್ಕ ಬುದ್ಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಬಸಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

1887ನೇ ಇಸವಿ ಅಕ್ಟೋಬರ್ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ದಿವಾಳೀಯಾದ ಡಿಕ್ರೀ ದೇಣೇದಾರ ಪಾವಗಡ ತಾಲ್ಲೂಕು ರಂಗಸಮುದ್ರದಲ್ಲಿ ಯಿರತಕ್ಕ ಗರುಡಾ ವುರಫ್ ತಿಪ್ಪಯ್ಯನ ವಿಷಯದಲ್ಲಿ—

ಸ. 1887ನೇ ಇಸವಿ ದಿವಾಳೀ ಕೇಸ್ ನಂಬರ್ 467.

ಹುಕ್ಕುಂ.

ಮೇಲ್ಕಂಡ ತಿಪ್ಪಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯುವರಾದ ಮೆ|| ಸಿ. ಕ್ರಿಸ್ ಸಾಹೇಬರವರ ರೂಬರೂ ಅರ್ಜೀದಾರನಾದ ತಿಪ್ಪಯ್ಯನ ಪರವಾಗಿ ಮೆ|| ಅಡ್ವೋಕೇಟ್ ನರಸುಬ್ಬಯ್ಯಂಗಾರ್ರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1ನೇಯವರ ತರಫ್ ಅಡ್ವೋಕೇಟ್ ಮೆ|| ಕೆ. ಶ್ರೀನಿವಾಸಯ್ಯಂಗಾರ್ರಿಗೂ ದರ್ಯ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಗರುಡ ವುರಫ್ ತಿಪ್ಪಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ. 1887ನೇ ಇಸವಿ ಆಗಸ್ಟು 8ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಅಸಲು ಸಾಲ.	ರುಜುವಾತಾದ ಮೊಬಲಗು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಪಾವಗಡ ತಾಲ್ಲೂಕು ರಂಗಸಮುದ್ರದಲ್ಲಿರತಕ್ಕ ತಿಮ್ಮಣ್ಣಶಾಸ್ತ್ರಿ ..	380 0 0	..	ಡಿಕರೀ ಬಾಬತು.	
		100 0 0	..	ಪತ್ರದ ಬಾಬತು.	
		117—7—6	..	ಕಂದಾಯದ ಬಾ|| ಇದರ ಬಡ್ಡೀ ಸಹ	
	ಜುಮ್ಲಾ ..	597—7—6			

ತಾರೀಖು 21ನೇ ಅಕ್ಟೋಬರ್ 1887.

ದಿವಾಳೀಯೊದ ಡಿಕ್ರೀ ದೇಣೇದಾರ ಬೆಂಗಳೂರು ಶಿದ್ದೀಕಟ್ಟೇಲಿರತಕ್ಕ ಓರ್ಡ್ ಆಫೀಸ್ ಜವಾನ ರಾಮುನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯುಸ್ ನಂಬರ್ 527.

ಹುಕ್ಕುಂ.

ಮೇಲ್ಕಂಡ ರಾಮುನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರೈನ್ ಸಾಹೇಬರವರ ರೊಬರೂ ಅರ್ಜೀದಾರನಾದ ರಾಮುನ ಪರವಾಗಿ ಮೆ|| ಅಡ್ವೋಕೇಟ್ ನರಸುಹ್ಮಯ್ಯಂಗಾರ್ರನ್ನೂ ಮತ್ತೂ ಸದರೀಯವನ ಲೇಣೇದಾರ್ರುದವರ ತರಫ್ 1—2—3—4ನೇರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ರಾಮುನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರೀಯಿಂದ ಸಹ ಅವನ್ನನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸರ್ 1887ನೇ ಇಸವಿ ಅಕ್ಟೋಬರ್ 21ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲಗೆ.	ಸಾಲಮಾಡಿದ ಸನೆ.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ಮಹರಾಷ್ಟ್ರ ಬ್ಯಾಂಕಿಗೆ ..	166	1880	ಡಿಕರೀ	
2	ಡಿಟೋ ಧನಾಭಿವೃದ್ಧೀ ಬ್ಯಾಂಕಿಗೆ ..	25 ರೂ.	..	ಡಿಟೋ	
3	ಡಿಟೋ ಜವಳಿ ಅಂಗಡಿ ಬೋರಣ್ಣ ..	5	..	ಡಿಟೋ	
4	ಕಲಾಸಿಪಾಳ್ಯದ ತಿಬ್ಬಣ್ಣಗೆ ..	20	..	ಮೂಬದಲೇ ಬಾಬತು	
	ಜುಮ್ಲಾ ..	216			

ದಿವಾಳೀಯಾದ ಡಿಕ್ರೀ ದೇಣೇದಾರ ಚಿಕ್ಕಬಳ್ಳಾಪುರದ ಕೋಟೆಲಿರುವ ಭೀಮರಾವನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯುಸ್ ನಂಬರ್ 550.

ಹುಕ್ಕುಂ.

ಮೇಲ್ಕಂಡ ಭೀಮರಾವು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜೀರಾದ ಮೆ|| ಸಿ. ಕ್ರೈನ್ ಸಾಹೇಬರವರ ರೂಬರೂ ಅರ್ಜೀದಾರನಾದ ಭೀಮರಾವು ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರುದ 1ನೇ ಯವರ ತರಫ ಪ್ಲೀಡರ್ ಗಂಗಾಧರಯ್ಯನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—2—3—4—5—6ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಭೀಮರಾವು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟೆಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು			ಸಾಲಕೊಟ್ಟ ತಾರೀಖು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಚಿಕ್ಕಬಳ್ಳಾಪುರದಲ್ಲಿರುವ ದೇವಂಡಹಳ್ಳಿ ಬಸಪ್ಪನವರ ಚಿಕ್ಕಮುನಿಯಪ್ಪ ..	672	0	0	1885	ಡಿಕರೀ ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟು ಬಾಬತು ನಂಬರ 241.	
2	ಡಿಟ್ಟೋ ಕನ್ನಚಿಟ್ಟೆಪ್ಪನವರ ಪುಟ್ಟಣ್ಣ ..	147	7	5	..	ಚಂದ್ರಪ್ಪಗೆ ಜಾಮೀನಾಗಿ ಕೊಡಿಸಿದ್ದು	
3	ಡಿಟ್ಟೋ ಸ್ಟಾಂಪ್‌ವೆಂಡರ್ ಗೋವಿಂದಪ್ಪ ..	574	13	6	..	ಡಿ||	
4	ಡಿಟ್ಟೋ ಸುಬ್ರಹ್ಮಣ್ಯೇಶ್ವರ ಬ್ಯಾಂಕ್ ..	182	4	10	..	ಡಿಟ್ಟೋ	
5	ಶೃಂಗೇರೀ ಕೊಪ್ಪದಲ್ಲಿ ಇರತಕ್ಕ ಇಂಜನಿಯರ್ ಇಲಾಖಾ ಓವರಸೀ ಸೂರ್ಯನಾರಾಯಣರಾವು ..	100	0	0	..	ಭೋಗ್ಯದಬಾಬತು	
6	ದೇವಂಡಹಳ್ಳಿ ತಾಲ್ಲೂಕು ಸರ್ವಮಾನ್ಯ ನಾರಾಯಣಪುರ ಪಟೇಲ್ ನಂಜೇಗೌಡಗೆ ..	50	0	0	..	ಡಿಟ್ಟೋ	
	ಜುಮ್ಲಾ ..	1738	9	9			

ಸಿ. ಕ್ರೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 532.

ಮೃತಪಟ್ಟ ದನಗಹಳ್ಳಿ ನಂಜರಾಜೇ ಅರಸಿನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕೃಷ್ಣೇಅರಸಿನವರು ಮೃತಪಟ್ಟ ಸದರೀ ನಂಜರಾಜೇಅರಸಿನವರಿಗೆ ದತ್ತು ಮಕ್ಕಳಾಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ಕೃಷ್ಣೇ ಅರಸಿನವರು ಸದರೀ ವಾಸಸ್ಥರಾಗಿ ಮೃತಪಟ್ಟ ನಂಜರಾಜೇ ಅರಸಿನವರ ಜಿಂದಗೀ ಬಗ್ಗಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣೇ ಅರಸಿನವರ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜರಾಜೇ ಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಅಕ್ಟೋಬರ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸೀ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ 537.

ಮೃತಪಟ್ಟ ದೇವೀದಾಸ್‌ಲಾಲಾನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಸುಬಕರ್ರಲಾಲ್ ಮೃತಪಟ್ಟ ಸದರೀ ದೇವೀದಾಸಲಾಲನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ದೇವರಾಜ ಮೊಹಲಾ ಸ್ಥಳದ ಸದರೀ ಸುಬಕರ್ರಲಾಲರು ಸದರೀ ವಾಸಸ್ಥರಾಗಿ ಮೃತಪಟ್ಟ ದೇವೀದಾಸ್‌ಲಾಲಾರ ಜಿಂದಗೀ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬಕರ್ರಲಾಲರ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವೀದಾಸ್‌ಲಾಲಾರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1887ನೇ ಇಸವಿ ಅಕ್ಟೋಬರು ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸೀ ನಮ್ಮ ದಸ್ತು ಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ 502.

ಮೃತಪಟ್ಟ ಲಿಂಗೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಸುಬ್ಬೇಗೌಡನು ಮೃತಪಟ್ಟ ಸದರೀ ಲಿಂಗೇಗೌಡನಿಗೆ ಅಣ್ಣ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಜರಾಬಾದ್ ತಾ|| ಬ್ಯಾಗಡಹಳ್ಳಿ ಹೋಬಳಿ ಅರಣೀ ಗ್ರಾಮಕ್ಕೆ ಸೇರಿದ ಹೊನ್ನಘಟ್ಟ ಸ್ಥಳದ ಸದರೀ ಸುಬ್ಬೇಗೌಡನು ಸದರೀ ವಾಸಸ್ಥನಾಗಿ ಮೃತಪಟ್ಟ ಲಿಂಗೇಗೌಡನ ಜಿಂದಗೀ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸುಬ್ಬೇಗೌಡನ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಿಂಗೇಗೌಡನ ಆಸ್ತಿಗೆ ಹಕ್ಕುದಾರರಾದವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ 515.

ಮೃತಪಟ್ಟ ಕಿಲ್ಲೇದಾರ್ ದೇವರಾಜೇ ಅರಸಿನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ದೇವಿನಂಜರಾಜೇಅರಸ್ ಮೈನರ್, ಗಾರ್ಡಿಯನ್ ಮತ್ತು ದತ್ತುತಾಯಿ ವೀರಾಜಮ್ಮಣ್ಣೀಯವರು, ದೇವರಾಜೇ ಅರಸಿನವರಿಗೆ ದತ್ತುಮಗ, ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ದೇರಾಜಮ್ಮಣ್ಣೀರು ಸದರೀ ವಾಸಸ್ಥರಾಗಿ ಮೃತಪಟ್ಟ ದೇವರಾಜೇ ಅರಸಿನವರ ಜಿಂದಗೀ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್‌ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೀರಾಜಮ್ಮಣ್ಣೀಯವರ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವರಾಜೇಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅರ್ಜೀ ನಂಬರ 516.

ಮೃತಪಟ್ಟ ಗ್ರಾಮದ ಪುಟ್ಟಣ್ಣಶೆಟ್ಟರ ಆಸೀ ವಿಷಯದಲ್ಲಿ—

ಅರ್ಜೀದಾರ ದೇವರಾಜಯ್ಯನವರು ಮೃತಪಟ್ಟ ಸದರೀ ಪುಟ್ಟಣ್ಣಶೆಟ್ಟರಿಗೆ ದತ್ತುಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹಾಸನದ ಕಸಬಾ ಸ್ಥಳದ ಸದರೀ ದೇವರಾಜಯ್ಯನವರು ಸದರೀ ವಾಸಸ್ಥನಾಗಿ ಮೃತಪಟ್ಟ ಪುಟ್ಟಣ್ಣಶೆಟ್ಟರ ಜಿಂದಗೀ ಬಗ್ಯಾಗಿ ಬರತಕ್ಕ 1000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರ.

ಸದರೀ ದರಖಾಸ್ತುದಾರರಾದ ದೇವರಾಜಯ್ಯನವರ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಂಣಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ 518.

ಮೃತಪಟ್ಟ ಶೇಕದಾರ ಶ್ರೀನಿವಾಸಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಶ್ರೀರಂಮ್ಮನು ಮೃತಪಟ್ಟ ಸದರೀ ಶ್ರೀನಿವಾಸಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹಾಸನದ ತಾಲ್ಲೂಕು ಗ್ರಾಮದ ಕಸಬಾ ಸ್ಥಳದ ಸದರೀ ಶ್ರೀರಂಗಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಜಿಂದಗೀ ಬಗ್ಗ್ಯಾಗಿ ಬರತಕ್ಕ 950 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಶ್ರೀರಂಗಮ್ಮನ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 14ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ 519.

ಮೃತಪಟ್ಟ ಸುಬ್ಬಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಶೀತಮ್ಮನವರು ಮೃತಪಟ್ಟ ಸದರೀ ಸುಬ್ಬಮ್ಮನಿಗೆ———ಆಗಬೇಕೆಂಬ ಹಕ್ಕುದಾರೀ ಮೇಲೆ ಪೆರಿಯಾಪಟ್ಣದ ತಾಲ್ಲೂಕು ಬೆಟ್ಟದಪುರದ ಸ್ಥಳದ ಸದರೀ ಶೀತಮ್ಮನು ಅರಕಲಗೂಡು ತಾ|| ಹೊಸಹಳ್ಳಿ ವಾಸಸ್ಥಳಾಗಿ ಮೃತಪಟ್ಟ ಸುಬ್ಬಮ್ಮನವರ ಜಿಂದಗೀ ಬಗ್ಗ್ಯಾಗಿ ಬರತಕ್ಕ 150 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಶೀತಮ್ಮನ ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 14ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅಕ್ಟೋಬರು ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್, ಡಿಸ್ಟ್ರಿಕ್ಟು ಜಡ್ಜು.

ಮೈಸೂರು ಡಿಸ್ಟ್ರಿಕ್ಟು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶ್ರೀರಂಗಪಟ್ಣದ ತಾ|| ಯೆಂಕಾರ ಕೊಪ್ಪಲನಲ್ಲಿ ಇರುವ ವೆಂಕಟಪತಿ ಗೌಡನ ಹೆಂಡತಿ ತಿಮ್ಮಮ್ಮನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರ 245.

ಹುಕ್ಕುಂ.

ಮೇಲ್ಕಂಡ ತಿಮ್ಮಮ್ಮನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರಳಾದ ತಿಮ್ಮಮ್ಮನು ಖುದ್ದು ಹಾಜರು ಮತ್ತು ಸದರೀಯವಳ ಲೇಣೇದಾರ್ರಾದ 2ನೇ ಕೆಂಪೇಗವುಡ ವುರುಫ್ ಶಿದ್ದೇಗವುಡ ಹಾಜರ ಇವರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರೆಂದರೆ,—1ನೇ ವೆಂಕಟಪತಿ ವುರುಫ್ ಶೆಟ್ಟಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ವೆಂಕಟಪತಿಗವುಡನ ಹೆಂಡತಿ ತಿಮ್ಮಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ಅಕ್ಟೋಬರ 14ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ ನಮ್ಮ ದಸ್ತಖತ ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಡಿಕ್ರೀ ಆದದ್ದು.	ದೇಣೆಯ ಸ್ವಭಾವ ಮತ್ತು ಅದ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಷರಾ.
1	ಶ್ರೀರಂಗಪಟ್ಟಣದ ತಾ॥ ಎಂಮೇಕಾರ್ ಕೊಪ್ಪಲಲ್ಲಿರುವ ವೆಂಕಟಪತಿಗೌಡ ವುರಫ್ ಶತ್ತೆ. ..	229 5 2	..	ಡಿಕ್ರೀ ಬಾಬತು	

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ದೇವರಾಜ ಮೊಹಲ್ಲಾದಲ್ಲಿರುವ ಪೋಣನ ಮಗ ಜವರಯ್ಯನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರು 302.

ಹುಕ್ಕುಂ.

ಮೇಲ್ಕಂಡ ಜವರಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜಿದಾರನಾದ ಜವರಯ್ಯನು ಖುದ್ದು ಹಾಜರು ಇವನನ್ನ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತು ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ, 1 ಮೈಸೂರು ಬ್ಯಾಂಕ್ ಯೇಜಂಟ್ ಬಾಳಾಜಿರಾವ್ 2 ಧನಾಭಿವೃದ್ಧೀ ಬ್ಯಾಂಕ್.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಜವರಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇವರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ಅಕ್ಟೋಬರ್ 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಡಿಕ್ರೀ ಆದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರು ಬ್ಯಾಂಕ್ ಯೇಜಂಟ್ ಬಾಳಾಜಿರಾವ್	30 0 0	..	ಡಿಕ್ರೀ ಬಾಬತು	

ದಿವಾಳೀಯಾದ ಡಿಕ್ರೀ ದೇಣೇದಾರ ನಂಜನಗೂಡು ತಾಲ್ಲೂಕು ಹೆಡತಲೇ ಹೋಬಳಿ ಗಟ್ಟವಾಡೀಪುರದಲ್ಲಿರುವ ನಂಜಪ್ಪನ ಮಗ ಕೂಗೈಯನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 75.

ಹುಕ್ಕುಂ.

ಮೇಲ್ಕಂಡ ಕೂಗಯ್ಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಕೂಗಯ್ಯನ ಪರವಾಗಿ ಫಸ್ಟ್ ಗ್ರೇಡ್ ಪ್ಲಿಡರ್ ನಾರಾಯಣರಾವನ್ನು ಮತ್ತು ಸದರೀಯವನ ಲೇಣೇದಾರ್ರಾದ 2ನೇ ಸುಬ್ಬರಾಯ 3ನೇ ಕಣವಯ್ಯ, 8ನೇ ಲಿಂಗಣ್ಣಯ್ಯ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಚನ್ನಬಸವಯ್ಯ, 4ನೇ ಖಾದರ್‌ಶೇಟ್ 5ನೇ ರಾಮಣ್ಣ, 6ನೇ ಪುಟ್ಟನಾಯಕ, 7ನೇ ಬಸವೇಗೌಡ, 9ನೇ ಮಮ್ಮತ್‌ಖಾ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ನಂಜಪ್ಪನಮಗ ಕೂಗಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1887ನೇ ಇಸವಿ ಅಕ್ಟೋಬರ 20ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತನೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು) ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಡಿಕ್ರೀ ಆಯಿತು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಚಾಮರಾಜನಗರ ತಾಲ್ಲೂಕು ಹರಲೇ ಗ್ರಾಮದಲ್ಲಿರುವ ಚನ್ನಬಸವಯ್ಯ ..	113—6–6	..	ಡಿಕರೀ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಫಾರೆಸ್ಟ್ ಇಲಾಖಾ.

ತಾರೀಖು 13ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 1889ನೇ ಇಸವಿ ಮಾರ್ಚಿ ಆಖೈರ್‌ವರಿಗೆ ಮೈಸೂರು ಡಿಸ್ಟ್ರಿಕ್ಟು ಹುಣಸೂರು ತಾಲ್ಲೂಕು ಬಾಬತು ಈ ಕೆಳಗೆ ನಮೂದಾಗುವ ಜಂಗಲ್‌ಗಳಿಂದ ಹುಣಸೂರ ಡಿಪೋಕ್ಕೆ ಚಿಲ್ಲರೇ ಚೌಬೀನೇ ಮತ್ತು ಗಳೂ ಸಹ ಹೇರಲು ಇಷ್ಟವುಳ್ಳವರು 1887ನೇ ಇಸವಿ ನವಂಬರ್ 15ನೇ ತಾರೀಖುವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸೂಪರ್ರಿಟೆಂಡೆಂಟ್ ಸಾಹೇಬರವರ ಆಫೀಸಿಗೆ ದರಖಾಸ್ತು ಮಾಡಬಹುದು.

ದರಖಾಸ್ತುದಾರ ತಾನು ಗಾಡೀ ಬೋಜಾ 1ಕ್ಕೆ ಯಾವ ದರದಂತೆ ಚಿಲ್ಲರೇ ಚೌಬೀನಾ ಮತ್ತು ಬಿದರುಗಳು ಹೇರಲು ಒಪ್ಪುತ್ತಾನೋ ಆ ದರವನ್ನ ದರಖಾಸ್ತಿನಲ್ಲಿ ನಮೂದಿಸಬೇಕು.

1 ವೀರನ ಹೊಸಹಳ್ಳಿ ಜಂಗಲ್
2 ಕಚಕೂನಹಳ್ಳಿ ಡಿಟೋ
3 ಆನೆಚವಕೂರು ಡಿಟೋ
4 ಬಾಣಾರೇ ಜಂಗಲ್
5 ಮಾವಕಲ್ ಡಿಟೋ

ಟಿ. ಆನಂದರಾವ್,
ಡೆಪ್ಯುಟಿ ಕಮ್ಮಿಷನರ್.

ನಂ. 10. ತಾರೀಖು 6ನೇ ಅಕ್ಟೋಬರ 1887.

ಹುಣಸೂರು ಸಬ್ ರಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತಾವೇಜುಗಳನ್ನ ಕ್ರಮವಾದ ವಾರಸ್‌ದಾರ್‍ರಾಗಲೀ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ಮೇರಿಗೆ ನಾಶ ಪಡಿಸಲ್ಪಡುತ್ತೆ.

ನಂಬರ್.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ಅಡ್ರೆಷ್.	ದಸ್ತಾವೇಜು ಬರಸಿಕೊಂಡವನ ಹೆಸರು ಮತ್ತು ಅಡ್ರೆಷ್.	ರಿಜಿಸ್ಟರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿ ಆದ ತಾರೀಖು.	ಸ್ವಭಾವ ಮತ್ತು ಕಿಮ್ಮತ್ತು.
4ನೇ ಬುಕ್ಕು 2ನೇ ನಂಬರ್ — 85—86ನೇ ಇಸವಿ	ಹುಣಸೂರು ತಾಲ್ಲೂಕು ಯಿಜೂರು ಗ್ರಾಮದಲ್ಲಿ ಇರುವ ಗುಡಗನಹಳ್ಳಿ ಬಲಗೈ ಕಾಳ	ಹುಣಸೂರು ತಾಲ್ಲೂಕು ಯಿಜೂರು ಗ್ರಾಮದಲ್ಲಿರುವ ಶೆರ್‍ವೇಗಾರ ಬಸವೇಗೌಡನ ಮಗ ಬೋರೇಗವುಡ	15—7—85	31—7—85	ಜೀತದ ಕರಾರು 50 ರೂಪಾಯಿ ಮತ್ತು ಒಂದುಖಂಡಗ ರಾಗಿ ಒಂದುಖಂಡಗ ಭತ್ತಾ ಸಹ ಮುದಗಡ ತೆಗದುಕೊಂಡು ಯಿರುವಹಾಗೂ ಮತ್ತು ಬರಸಿಕೊಂಡವನ ಮನೇಲಿ ಯರಹುಹೊತ್ತು ವೂಟಾ ಮಾಡಿಕೊಂಡು ಹೊದಿಯುವದಕ್ಕೆ ಕಂಬಳಿಯೂ ವುಡುವದಕ್ಕೆ ಬಟ್ಟೆಯೂ ಹೆಂಡರ ಮಕ್ಕಳ ಜೀವನಕ್ಕೆ ವರುಷವಂದಕ್ಕೆ ಯರಡುಖಂಡಗ ರಾಗಿ ತೆಗದುಕೊಂಡು ಮೇಲ್ಕಂಡ ಅಸಲ್ ಹಣಕ್ಕೆ ಶೇಕಡಾ ಯರಡು ರೂಪಾಯಿ ಮೇರೆ ಆಗುವ ಬಡ್ಡಿ 12 ರೂಪಾಯಿ ಸಂಬಳಕ್ಕೆ ಒಪ್ಪಿ 12 ವರುಷ ಪರಿಯಂತ್ರ ಜೀತಾ ಮಾಡುವದಾಗಿ.
4ನೇ ಬುಕ್ಕು 4ನೇ ನಂಬರ್ — 1885—86	ಸದರೀ ಗ್ರಾಮದಲ್ಲಿರುವ ಬಲಗೈ ಜಾತಿ ಲಕ್ಕನ ಈರಾ	ಡಿಟ್ಟೋ	ಡಿಟ್ಟೋ	ಡಿಟ್ಟೋ	ಡಿಟ್ಟೋ
4ನೇ ಬುಕ್ಕು 3ನೇ ನಂಬರ್ — 1885—86	ಸದರೀ ಗ್ರಾಮದ ಬಲಗೈ ಜಾತಿ ದಂಡನಮಗ ದಂಡಾ	ಡಿಟ್ಟೋ	ಡಿಟ್ಟೊ	ಡಿಟ್ಟೋ	ಜೀತದ ಕರಾರು 60 ರೂಪಾಯಿ ಮತ್ತು ಒಂದುಖಂಡಗಭತ್ತಾ ಮತ್ತು ಒಂದುಖಂಡಗ ರಾಗಿ ಸಹ ಮುದಗಡ ತೆಗದುಕೊಂಡು ಯಿರುವಹಾಗೂ ಬರಸಿಕೊಂಡವನಲ್ಲಿ ಅಶನಾ ಆಛ್ಛಾದಾನ ತೆಗದುಕೊಂಡು 10 ವರುಷ ಪರಿಯಂತ್ರ ಅಸಲ್ ಹಣ ಬಡ್ಡಿಗಾಗಿ ನೌಕರೀ ಮಾಡುವದಾಗಿಯು ಹೆಂಡತಿ ಜೀವನಕ್ಕೆ ಸಾಲೆಸಾಲ್ 10 ವರುಷ ಪರಿಯಂತ್ರ, 2 ಖಂಡಗ ರಾಗಿ ಕೊಡಬೇಕೆಂದು.

ನಂ. 11. ತಾರೀಖು 21ನೇ ಅಕ್ಟೋಬರ 1887.

ಹುಣಸೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತೈವಜನ್ನ ಕ್ರಮವಾದ ವಾರಸ್‌ದಾರ್‍ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಮೇರಿಗೆ ನಾಶ ಮಾಡಲ್ಪಡುತ್ತೆ:—

ನಂಬರ್.	ದಸ್ತೈವಜನ್ನ ಬರದು ಕೊಟ್ಟವರ ಹೆಸರು ಮತ್ತು ಅಡಿರ್ಷ.	ದಸ್ತೈವಜನ್ನ ಬರಸಿಕೊಂಡವರ ಹೆಸರು ಮತ್ತು ಅಡಿರ್ಷ.	ರಿಜಿಸ್ಟ್ರೇಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿ ಮಾಡಿದ ತಾರೀಖು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತು.
222ನೇ ನಂ. 1885—86	ಶಿರ್ಯದ ತಾಲ್ಲೂಕು ಪುದ್ದೂಡಿ ಗ್ರಾಮದಲ್ಲಿ ಇರುವ ಬಲಗೈ ಹನುಮನ ಮಗ ಮಗ್ಗದ ಕಸಬಿನಿಂದ ಜೀವಿಸುವ ಹನುಮಂತ	ಹುಣಸೂರು ಟರ್ವನಲ್ಲಿಯಿರುವ ಜಿರಾಯತು ಮತ್ತು ಸರಕಾರದ ಚಾಕರಿ ತನದಿಂದ ಜೀವಿಸುವ ಬಲಗೈಗೂಳಿಗ	85ನೇ ಆಗಸ್ಟು ತಾರೀಖು 22	85ನೇ ಆಗಸ್ಟು ತಾರೀಖು 22	(26) ರೂಪಾಯಿನ ಹುಣಸೂರು ಗ್ರಾಮದಲ್ಲಿ ಇರುವ ಮನೆ ಮತ್ತು ಖಾಲೀಜಾಗ ಕ್ರಯಪತ್ರ.

ಟಿ. ಆನಂದರಾವ್,
ರೆಜಿಸ್ಟ್ರಾರ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 7ನೇ ಅಕ್ಟೋಬರ್ 1887.

ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮ ಪ್ರಕಾರ ವಾರಸ್‌ದಾರ್‍ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್.	ರಿಜಿಸ್ಟ್ರೇಷನ್‌ಗೆ ಹಾಜರ್ ಮಾಡಿದ ತಾರೀಖು.	ಬರದುಕೊಟ್ಟವರು ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
11 / 1883—84	21 4 83	21 4 83	21 4 83	ಚಿಕ್ಕನಾಯನಹಳ್ಳಿ ಬಲಗೈ ಲಾಳಿಮಗ ಲಕ್ಕ	ಚಿಕ್ಕನಾಯಕನಹಳ್ಳಿ ಬಸವೇಗೌಡ	(80) ರೂಪಾಯಿನ ಕ್ರಯಪತ್ರ.
79 / 1883—84	27 9 83	27 9 83	27 9 83	ಹೊಂಗಡಹಳ್ಳದ ಬಲಗೈ ಜೆಂಬ್ಬನಹಳ್ಳಿ ತಿಪ್ಪನಮಕ್ಕಳು ದೊಂಣೆಮಲ್ಲ ಮತ್ತು ಕೆಂಚ ಸಹ	ಹೊಂಗಡಹಳ್ಳದ ಮಂಚೇಗೌಡ	(100) ರೂಪಾಯಿನ ಕ್ರಯಪತ್ರ.
14 / 1884—85	11 4 84	11 4 84	12 4 84	ಬೈಕೆರೆ ಮಹಂತಗೌಡನ ಮಕ್ಕಳು ನಂಜೇಗೌಡ 1, ಅಂಣೇಗೌಡ 2, ಶಿವೇಗೌಡ 3, ಕೊಮಾರಗೌಡ 4 ವುರಫ್ ಪುಟ್ಟಸಾಮಿಗೌಡ ಸಹ	ಬೈಕೆರೆ ಮಹಂತಗೌಡನ ಮಕ್ಕಳು ಅಂಣೇಗವುಡ 1 ಶಿವೇಗೌಡ 2, ಕೊಮಾರಗೌಡ 3 ವುರಫ್ ಪುಟ್ಟಸಾಮಿಗೌಡ ನಂಜೇಗೌಡ 4 ಸಹ	(150) ರೂಪಾಯಿ ಕ್ರಯಬಾಳತಕ್ಕ ಸ್ವತ್ತುಗಳ ಬಾಬತು ಪಾಲು ಪಾರೀಖತು.
42 / 1884—85	26 6 84	26 6 84	26 6 84	ಮಂಜರಾಬಾದ್ ತಾಲ್ಲೂಕು ಮಾವಿನಕೋಲು ಗ್ರಾಮದಲ್ಲಿರುವ ಬಸವೇಗೌಡನ ಮಗ ನಂಜೇಗೌಡ	ಹಾಸನ ತಾಲ್ಲೂಕು ಬ್ಯಾಂಮಸವಳ್ಳೀ ಗ್ರಾಮದ ಈರೇಗವುಡನ ಮಗ ನಿರ್ವಾಣಿಗವುಡ	(50) ರೂಪಾಯಿನ ಭೋಗ್ಯಪತ್ರ.

ಪಿ. ಎನ್. ಪೂರ್ಣಯ್ಯ,
ರೆಜಿಸ್ಟ್ರಾರ್.

ಗೈರವಿಲಾ ಅದ

ಯಡಭಾಗದ ಕರ್ರೆಸೀ ನೋಟಿನ,

ನಂಬರ್.	ಸರ್ಕಲ್.	
ಬಿ. 94—66445	ಕ್ರಯ ರೂ. 100	ಹಕ್ಕುದಾರ್—ಮೈಸೂರು ಕೆಂಪನಂಜಂವಾಂಬಾ ಅಗ್ರಹಾರದಲ್ಲಿರುವ ಯೋಜಂಟ್ ವೆಂಕಟರಾಮಯ್ಯ.

ಮೈಸೂರ ಗೆಜೆಟ್ ಚಂದಾ ದರ ವಗ್ಯೆರೇ.

	ಚಂದಾ.		ಟಪ್ಪಾಲ್ ಹಾಸಲು ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಷ್ ಮಾಹೇ ಯಾ ಕ್ವಾರಟರಿಗೆ	ದಾಮಾಷಾಯಿ ಪ್ರಕಾರ ದರಗಳು.			

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—

ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2	8
ಎರಡನೇ ಸಲ ವ ಆ ತರುವಾಯು ಪ್ರತಿ ಆವರ್ತಿಗೂ ಡಿಟೋ	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟಿ ವಗ್ಯೆರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ ..	ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯು ಪ್ರತಿ ಸಲಕ್ಕೂ	,, ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ;—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ ..	0	8
ಎರಡನೇ ದಫಾ ಡಿಟೋ	ಡಿಟೋ ..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ ..	..	0	4

ಷರಾ.—ಚಂದಾ ವಗ್ಯೆರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಟಿ. ಟಿ. ಲೆನರಡ್,
ಮೈ. ಗೆ. ಕಂಪೈಲರ್.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 44 .ಸರ್ಕಾರದಿಂದ ಛಾಯಿಷ್ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ನವಂಬರ್ ತಾ|| 5, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೇಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪೆಟ್ರೋಲರವರು, ಪಬ್ಲಿಕ ವರ್ಕ್ಸ ಆಫೀಸರ್‌ಗಳು, ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 18ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1553.—ಮಿಸ್. ಆರ್. ಗೋವಿಂದರಾಜುಲುಯವರು, ಅಜಮಾಯಿಷಿ ತರೀಕ ಮಾಹೇ ಮಜಕೂರ್ ಗುರ್ರೇ ತಾರೀಖು ಮೊದಲು ಆರು ತಿಂಗಳ ಪರಿಯಂತ 3ನೇ ಗ್ರೇಡ್ ಅಸಿಸ್ಟೆಂಟ್ ಸರ್ಜನ್ಯರಾಗಿ ಮೋಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 19ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1527.—ಕೋಲಾರ ತಾಲ್ಲೂಕು ಅಮಲ್ದಾರ್ ಕೆ. ಶ್ರೀನಿವಾಸರಾಯರಿಗೆ ಈ ಆಫೀಸ್ 1887ನೇ ಇಸವಿ ಸೆಪ್ಟೆಂಬರ್ 16ನೇ ಮರ್ಕುಂ ಕ್ಯಾಂಪ್ ನಂಬರ್ 1273ನೇ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಪ್ರಿವಿಲೇಜ್ ರಜಾ 1887ನೇ ಇಸವಿ ಅಕ್ಟೋಬರ್ 17ನೇ ತಾರೀಖು ವರಿಗೆ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 12ನ ಸೆಪ್ಟಂಬರ್ 1887ನೇ ಇಸವಿ.

ನಂ. 113.—1887ನೇ ಇಸವಿ ಸೆಪ್ಟಂಬರ್ 5ನೇ ಮರ್ಕ್ಕಂ 1·7ನೇ ನಂಬರ್ ಇಸ್ತಿಹಾರ್‌ನಾಮೆಯ 5ನೇ ಕಲಂ ಪ್ರಕಾರ ಗನೀ ಕೆಲಸ ನಡಿಸುವ ಬಗ್ಯೆ ಲೈಸೆನ್ಸ್ ಕೊಡಲ್ಪಡಬೇಕಾಗ ಪರಿಗಣಿಸಿ ನಿಶ್ಚಯವಾದ ವಿಷಯವಲ್ಲಿ ಜಾಬತೀ ಪರಿಷತ್ತಿಕ್ಕೆ 35 ಚದರ್ ಮೈಲಿಗಳ ಮಟ್ಟಿಗೆ ಕೊಡಲ್ಪಡತಕ್ಕದ್ದೆಂದು ಶ್ರೀಮನ್ ಮಹಾರಾಜಾ ಸರ್ಕಾರದವರು ಗೊತ್ತು ಮಾಡಿರುವದರಿಂದಲೂ ಮತ್ತು ಇದಕ್ಕೆ ಶೇರಿಸೋಣಾದ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಪ್ರತಿ ತಾಕಿನ ವಿಷಯದಲ್ಲೂ ಗನೀ ಕೆಲಸ ನಡಿಸುವ ಲೈಸೆನ್ಸಿಗೋಸ್ಕರ ಒಂದಕ್ಕಿಂತಲೂ ಜಾಸ್ತಿಯಾಗಿ ದರಖಾಸ್ತುಗಳು ಬಂದಿರುವದರಿಂದಲೂ ಮತ್ತು ಸರ್ಕಾರದವರು, ಮೇಲ್ಕಂಡ ಪ್ರತಿ ತಾಕಿಗೂ ಬಹಿರಂಗವಾದ ಚಡ ದರಖಾಸ್ತು ಮೂಲಕ ಹುಟ್ಟಬಹುದಾದಂಥಾ ಪ್ರಿಮಿಯಂಯಾನೇ ನಫೆಗೆ ಗನೀ ಕೆಲಸದ ಲೈಸೆನ್ಸ್ ಕೊಡಲ್ಪಡತಕ್ಕದ್ದೆಂದು ನಿಷ್ಕರ್ಷೆ ಮಾಡಿರುವದರಿಂದ ಮೇಲ್ಕಂಡ ಲೈಸೆನ್ಸ್‌ಗಳಿಗೋಸ್ಕರ, ಇದರಡೀಕಂಡ ಷರತ್ತುಗಳಿಗೆ ಒಳಪಟ್ಟು ಚಡ ದರ ನಡೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತವೆ:—

I. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತು ಮಾಡಲ್ಪಟ್ಟ ಗೊತ್ತಾದ ತಾಕು ನಮೂದಿಸಲ್ಪಡತಕ್ಕದ್ದಲ್ಲದೆ ಸದರೀ ತಾಕಿನ ಲೈಸೆನ್ಸಿಗೋಸ್ಕರ ದರಖಾಸ್ತುದಾರನು ಪಾವತೀ ಮಾಡುವದಕ್ಕೆ ಒಪ್ಪುವ ನಫೇ ಮೊಬಲಗು ಸುದಾ ಕಾಣಿಸಲ್ಪಡತಕ್ಕದ್ದು, ಲೈಸೆನ್ಸಿನ ಷರತ್ತುಗಳು ಇದಕ್ಕೆ ಶೇರಿಸೋಣಾದ B ನಮೂನೆಯಲ್ಲಿ ವಿವರಿಸಲ್ಪಟ್ಟಂತೆ ಯಿರುತವೆ. ನಫೇ ಮೊಬಲಗು ಪೌಂಡ್ ಸಂಖೆಯಲ್ಲಾಗಲೀ ರೂಪಾಯಿ ಸಂಖೆಯಲ್ಲಾಗಲೀ ತಿಳಿಸಲ್ಪಡತಕ್ಕದ್ದು.

II. ಪ್ರತಿ ದರಖಾಸ್ತಿನ ಸಂಗಡಲೂ, ಪಾವತೀ ಮಾಡುವದಕ್ಕೆ ಒಪ್ಪಿಕೊಳ್ಳುವ ನಫೇ ಮೊಬಲಗಿನ ದಶಮಾಂಶಕ್ಕೆ ಸರಿಯಾದ ಮೊಬಲಗು ಶೇವಣೀ ತರೀಕ್ ಕಳುಹಿಸಲ್ಪಡತಕ್ಕದ್ದಲ್ಲದೆ ಶೇವಣೀ ಮೊಬಲಗು ಮೈಸೂರು ದೇಶದ ದಿವಾನರವರ ಹೆಸರಿಗೆ ಜಮೇ ಹಿಡಿಯುತಕ್ಕ ಬಗ್ಯೆ ಮೈಸೂರು ದೇಶದ ಯಾವದಾದರು ಸರ್ಕಾರ್ ಖಜಾನೆಯಲ್ಲಾಗಲಿ ಯಿಂಡಿಯಾ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಿಯಾಗಲಿ ಅಥವಾ ಲಂಡನ್‌ನಲ್ಲಿ 59ನೇ ಸ್ಟ್ರ್ಯಾಂಡ್ ಸ್ಥಳದಲ್ಲಿರುವ ಮೆಸ್ಸಿಯರಸ್ ಕಾಟ್ಸ್ ಅಂಡ್‌ಕೋಯವರಿಗಾಗಲಿ ಪಾವತೀ ಮಾಡಲ್ಪಟ್ಟು ಅಂಥಾ ಪಾವತೀ ಬಗ್ಯಾಗಿ ಪಡೆದ ರಶೀತಿಯು ದರಖಾಸ್ತಿನೊಂದಿಗೆ ಕಳುಹಿಸಲ್ಪಡತಕ್ಕದ್ದು.

III. ದರಖಾಸ್ತು, ಈ ಇಸ್ತಿಹಾರ್‌ನಾಮೆಗೆ ಲಗತ್ತಿರುವ C ನಮೂನೇಯಲ್ಲಿ ಬರೆಯಲ್ಪಡತಕ್ಕದ್ದು.

IV. ಮೇಲ್ಕಂಡ IIನೇ ಪ್ಯಾರಾ ಅನುಸರಿಸಿ ಪಾವತೀ ಮಾಡಲ್ಪಟ್ಟ ಶೇವಣೀಗೋಸ್ಕರ ಪಡೆದ ರಶೀತೀ ಸಹಿತವಾಗಿ ದರಖಾಸ್ತು ಒಂದು ಲಿಫಾಫೆಯಲ್ಲಿ ಹಾಕಿ ಮೊಹರ್ ಮಾಡಲ್ಪಟ್ಟು "ಗನೀ ಕೆಲಸದ ಗುತ್ತಿಗೇ ಬಗ್ಯೆ ದರಖಾಸ್ತು" ಯಂಬದಾಗಿ ಮೇಲೆ ಬರೆಯಲ್ಪಟ್ಟು ಬೆಂಗಳೂರಲ್ಲಿ ಮೈಸೂರು ದೇಶದ ದಿವಾನರವರ ಹೆಸರಿಗೆ ಮೇಲ್ ವಿಳಾಸ ಬರೆಯಲ್ಪಡತಕ್ಕದ್ದು.

V. ದರಖಾಸ್ತುಗಳು, ದಿವಾನರವರಿಗೆ 1887ನೇ ಇಸವಿ ಡಿಶಂಬರ್ 10ನೇ ಮರ್ಕ್ಕಮಿನ ಮಧ್ಯಾಹ್ನದಲ್ಲಿಯಾಗಲೀ ತತ್ಪೂರ್ವದಲ್ಲಿಯಾಗಲಿ ತಲಪಬೇಕಾಗಿರುತ್ತೆ. ಆಗ ಅವು ದಿವಾನರವರಿಂದ ಬೆಂಗಳೂರಲ್ಲಿರತಕ್ಕ ಪಬ್ಲಿಕ್ ಆಫೀಸ್ ಯಂಬ ಕಟ್ಟಡದೊಳಗೆ, ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

VI. ದರಖಾಸ್ತುಗಳ ಆಖೈರ್ ವ್ಯವಸ್ಥೆಯು ದಿವಾನರವರಿಗೆ ಶೇರಿರುತ್ತೆ. ಅವರು ಯಾವ ಕಾರಣವೂ ತಿಳಿಸದೇನೇ ಚಡ ದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

VII. ಯಾವ ದರಖಾಸ್ತು ದಿವಾನರವರಿಂದ ಅಂಗೀಕರಿಸಲ್ಪಡುತಿದೆಯೋ ಅಂಥಾ ದರಖಾಸ್ತುದಾರನು, ಅಂಥಾ ಅಂಗೀಕಾರ ತನಿಗೆ ತಿಳಿಸಲ್ಪಟ್ಟ 30 ದಿವಸಗಳೊಳಗಾಗಿ ದರಖಾಸ್ತಿನಲ್ಲಿ ಪಾವತೀ ಮಾಡುವದಾಗಿ ಒಪ್ಪಿಕೊಂಡಿರುವ ನಫೇ ಮೊಬಲಗಿನ ಉಳಿದ ಭಾಗವನ್ನು ದಿವಾನರವರ ಹೆಸರಿಗೆ ಜಮೇಕಟ್ಟುವ ಬಗ್ಯೆ ಮೈಸೂರು ದೇಶದ ಯಾವದಾದರೂ ಸರಕಾರದ ಖಜಾನೆಯಲ್ಲಾಗಲಿ, ಯಿಂಡಿಯ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಾಗಲೀ ಅಥವಾ ಲಂಡನ್ ಪಟ್ಟಣದ ಮೆಸ್ಸಿಯರ್ಸ್ ಕಾಟ್ಸ್ ಅಂಡ್‌ಕೋ ಯವರಿಗಾಗಲಿ ಪಾವತೀ ಮಾಡತಕ್ಕದ್ದು.

VIII. ಮಂಜೂರ್ ಮಾಡಲ್ಪಟ್ಟ ದರಖಾಸ್ತುದಾರರ ಹೆಸರು ದೇಖೀಲ್ ಅವರ ದರಖಾಸ್ತುಗಳು ಯಾವದಕ್ಕೆ ಅಂಗೀಕರಿಸಲ್ಪಟ್ಟಿರುತದೆಯೋ ಅಂಥಾ ತಾಕುಗಳ ವಿವರಣೆಯು ಸರ್ಕಾರೀ ಗೆಜೆಟ್ಟಿನಲ್ಲಿ ಘಾಯಿಷ್ ಮಾಡಲ್ಪಡುವದು.

IX. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಶೇವಣಿಯು, ಅವರು ಖ್ವಾಯಿಷ್ ಮಾಡಿದಾಗ ವಾಪಸ್ ಮಾಡಲ್ಪಡುವದು.

X. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು, ಗುತ್ತಿಗೇ ಕರಾರು ಹುಟ್ಟುವದಕ್ಕೆ ಮುಂಚೆ ಯಾವ ಕಾಲದಲ್ಲಿ ಆಗಲಿ ಇದಕ್ಕೆ ಲಗತ್ತಿರುವ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಸರಹದ್ದಿನೊಳಗಣ ತಾಕಿನಲ್ಲಿ ಮೊಕ್ಕಾಂ ಮಾಡುವ ಬಗ್ಯೆ ಅವಕಾಶ ಕೊಡಲ್ಪಡುವನು, ಆದರೆ ಆತನು ಮೇಲಿಕಂಡ VIIನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟಂತೆ ನಷೇ ಬಾಬತು ಉಳಿದ ಬಾಕಿಯನ್ನ ಪಾವತೀ ಮಾಡಿದ ತರುವಾಯ ಆರು ತಿಂಗಳ ವಳಗಾಗಿ ಗವರ್ನಮೆಂಟ್ ತರಫಿನಲ್ಲಿ ದಿವಾನರವರಿಂದ ರುಜು ಮಾಡಲ್ಪಡುವ ಬಗ್ಯೆ ಇದಕ್ಕೆ ಜಂಟಿಸೋಣಾದ B. ನಮೂನೆಯಲ್ಲಿ ತಯಾರ್ಮಾಡಲ್ಪಟ್ಟು ಕ್ರಮವಾಗಿ ಸ್ಟಾಂಪ್‌ಹಾಕಲ್ಪಟ್ಟ ಗುತ್ತಿಗೇ ಕರಾರನ್ನು ಹಾಜರ್ಮಾಡತಕ್ಕದ್ದು.

XI. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು VIIನೇ ಪ್ಯಾರಾದಲ್ಲಿ ನಿಯಮಿಸಲ್ಪಟ್ಟ ಪ್ರಕಾರ ನಷೆಯ ಬಾಕೀ ಮೊಬಲಗನ್ನ ಪಾವತೀ ಮಾಡುವದಕ್ಕಾಗಲೀ Xನೇ ಪ್ಯಾರಾದಲ್ಲಿ ವಿಧಿಸಲ್ಪಟಂತೆ ಗುತ್ತಿಗೇ ಕರಾರನ್ನು ದಸ್ತಖತ್ತಿಗೋಸ್ಕರ ಹಾಜರ್ಮಾಡುವದಕ್ಕಾಗಲಿ ತಪ್ಪಿದರೆ ದರಖಾಸ್ತುದಾರನಿಂದ ದಿವಾನರವರ ಹೆಸರಿಗೆ ಜಮೇಕಟ್ಟುವ ಬಗ್ಯೆ ಹಾಂಗೆ ತಪ್ಪಿಹೋದ ತಾರೀಖಿನ ವರಿಗೆ ಪಾವತೀ ಮಾಡಲ್ಪಟ್ಟಿರುವ ಠೇವಣೀ ಯಾ ಇತರ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೇ ಅಂಥಾ ಮೊಬಲಗು ಯಾವ ಬಗ್ಯೆ ಪಾವತೀ ಮಾಡಲ್ಪಟ್ಟಿತೋ ಅಂಥಾ ಜಮೀನುಗಳು ಸರ್ಕಾರದವರ ಯಖ್ತ್ಯಾರೀಯಲ್ಲಿ ಸಂಪೂರ್ಣವಾಗಿ ಯಿರತಕ್ಕದ್ದು.

XII. A ಷೆಡ್ಯೂಲ್‌ನಲ್ಲಿ ನಮೂದ್ ಮಾಡಲ್ಪಟ್ಟ ತಾಕುಗಳು ಯಿರತಕ್ಕ ಪ್ರದೇಶವನ್ನು ತೋರಿಸುವ ಮೈಸೂರು ದೇಶಧ ಬ್ರಿಟಿಷ್ ಟೊಪೋಗ್ರ್ಯಾಫಿಕಲ್ ಸರ್ವೆ ಇಲಾಖೇಯಿಂದ ತಯಾರ್ಮಾಡಲ್ಪಟ್ಟ ಮ್ಯಾಪ್‌ಯಾನೇ ನಕ್ಷೆಯ (ಅಂಗುಲ ವಂದಕ್ಕೆ ವಂದುಮೈಲೀ ಫಾಸಲೆಯುಳ್ಳ) ನಕ್ಕಲು ಬೆಂಗಳೂರಲ್ಲಿರುವ ದಿವಾನರವರ ಕಚೇರೀಯಲ್ಲಿ ಯಿರುವದು ಮತ್ತು ಅಂಡರ್ ಸೆಕ್ರಿಟೆರಿಯವರನ್ನ ಬೇಡಿದಲ್ಲಿ ಯಾರಿಗಾದರೂ ಬಗರ್ ಚಾರ್ಜು ನೋಡುವ ಬಗ್ಯೆ ಅವಕಾಶ ಕೊಡಲ್ಪಡುವದು.

ಹುಕ್ಕುಂ ಬಮೋಜೀಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರಟೆರಿ.

ಅರ್ಪೆಂಡಿಕ್ಸ್ A.

1887—88ನೇ ಇಸವಿಯಲ್ಲಿ ಜನಗಳಿಗೆ ಗನೀ ಕೆಲಸ ನಡಿಸುವ ಬಗ್ಯೆ ಲೈಸೆನ್ಸ್ ಕೊಡಲು ಉದ್ದೇಶಿಸಲ್ಪಟ್ಟ ಜಮೀನ್ ತಾಕಿನ ವಿವರಣೆಯನ್ನು ತೋರಿಸುವ ಷೆಡ್ಯೂಲ್ ಯಾನೇ ತಖ್ತೆ.

ಪ್ರತಿತಾಕಿನ ನಂಬರು.	ಪ್ರತಿ ತಾಕಿನ ಹೆಸರು.	ಪ್ರತಿ ತಾಕೂ ಇರತಕ್ಕ ಪ್ರದೇಶ.			ಟೊಪೊಗ್ರಾಫಿಕಲ್ ನಕ್ಷೆಯ ನಂಬರು.	ಪ್ರತಿ ತಾಕೂ ಯಾವ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುತ್ತೆಂಬುವದು.		ಹಿಂದಿನ ಕಚೇ ಮೋಸ್ತಕಿನಲ್ಲಿ ವಿವರಿಸಲ್ಪಟ್ಟ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುವ ಜಮೀನ್ ಪೈಕೀ ಇದುವರಿಗೆ ಅನ್ಯಥಾ ವಿಲಾ ಮಾಡಲ್ಪಟ್ಟ ಜಮೀನಿನ ವಿಸ್ತೀರ್ಣ.	ಪ್ರತಿ ತಾಕಿನ ಅಂದಾಜು ವಿಸ್ತೀರ್ಣ (ಚದರಮೈಲಿಗಳಲ್ಲಿ).
		ಡಿಸ್ಟ್ರಿಕ್ಟ್.	ತಾಲ್ಲೂಕು.	ಗ್ರಾಮಗಳು.		ದಕ್ಷಿಣೋತ್ತರ ವೃತ್ತಗಳು.	ಯ್ಯಾಮ್ಯೋತ್ತರ ರೇಖೆ.		
1	ಹೊನ್ನೇಮರಡೀ ತಾಕು ..	ಚಿತ್ರದುರ್ಗ ..	ಜಗಲೂರು ..	(1) ಹೊನ್ನೇಮರಡಿ, (2) ಅಕ್ಕನೂರು, (3) ಜಮ್ಮಾಪುರ	10	14° 31′ ರ ಮಧ್ಯೆ ಮತ್ತು 14° 32′	76° 25′ ಮತ್ತು 76° 26′ ರ ಮಧ್ಯೆ	ಇಲ್ಲಾ ..	1 ಚದರಮೈಲಿ
2	ತುರವನೂರು ತಾಕು ..	ಡಿಟೋ ..	ಚಿತ್ರದುರ್ಗ ..	(1) ತುರವನೂರು, (2) ಚಿಕ್ಕನಾಯಕನಹಳ್ಳಿ, (3) ಭಂಗಾರಕ್ಕನಹಳ್ಳಿ	10	14° 22′ „ ಮತ್ತು 14° 24′ ರ ಮಧ್ಯೆ	76° 25′ ಮತ್ತು 76° 27′ „	ಡಿಟೋ ..	2 ಚದರಮೈಲಿಗಳು
3	ರಂಗವನಹಳ್ಳೀ ತಾಕು ..	ಡಿಟೋ	ಡಿಟೋ ..	(1) ಗೌನೂರು (2) ಗುಡ್ಡದರಂಗವನಹಳ್ಳಿ, (3) ಮಲ್ಲಾಪುರ, (4) ಕಲ್ಲೇನಹಳ್ಳಿ, (5) ಸಾಸಲದೊಡ್ಡಿ (6) ಬೊಮ್ಮೇನಹಳ್ಳಿ	10	14° 15′ „ ಮತ್ತು 14° 19′ ರ ಮಧ್ಯೆ	76° 26′ ಮತ್ತು 66° 29′ „	ಗೌನೂರು ಗ್ರಾಮದ ಉತ್ತರ ಮತ್ತು [illegible] ಬಕ್ಕಿನಲ್ಲಿ 620 ಎಕರೆಗಳು ಮೇಜರ್ ಜನರಲ್ ಆರ್. ಎ. ಕೋಲ್‌ಯವರಿಗೆ ಕೊಡಲ್ಪಟ್ಟಿರುತ್ತೆ.	3 ಚದರಮೈಲಿಗಳು
4	ಬೆಳ್ಳೀಗುಡ್ಡದ ತಾಕು ..	ಡಿಟೋ ..	ಡಿಟೋ ..	(1) ಕಂಚಿಕನಹಾಳ್, (2) ಯಿಂಗ್ಳದಹಾಳ್ (3) ಕುರುಬರಮರಡಿಕೆರೆ	11	14° 9′ ಮತ್ತು 14° 12′ ರ ಮಧ್ಯೆ	76° 29′ „ ಮತ್ತು 76° 33′ „	ಇಲ್ಲಾ ..	3 ಚದರಮೈಲಿಗಳು
5	ಕರಡೀಹಳ್ಳಿ ತಾಕು ..	ಹಾಸನ ..	ಅರಸೀಕೆರೆ ..	(1) ಕರಡಿಹಳ್ಳಿ, (2) ಚನ್ನಾಪುರ, (3) ಅಗ್ರಹಾರ, (4) ಯರೆಹಳ್ಳಿ	29	13° 25′ ಮತ್ತು 13° 26′ „	76° 14′ „ ಮತ್ತು 76° 16′ „	ಡಿಟೋ ..	1 ಚದರಮೈಲಿ
6	ಬೆಳಗುಂಬ ತಾಕು ..	ಡಿಟೋ ..	ಡಿಟೋ ..	(1) ಬೆಳಗುಂಬ, (2) ತಿಮ್ಮಾಪುರ (3) ಕಾಲಕೆರೆ, (4) ಜೋತಿ ಮಲ್ಲಾಪುರ, (5) ತಾಳತುರಿ, (6) ಕೋಡಿಹಳ್ಳಿ	29 ವ 30	13° 14′ „ ಮತ್ತು 13° 16′ „	76° 21′ „ ಮತ್ತು 76° 24′ „	ಡಿಟೋ ..	3 ಚದರಮೈಲಿಗಳು

7	ಬಿದರೆ ಕಾವಲ್ ತಾಕು	ಡಿಟೋ	ಅರಸೀಕೆರೆ ವ ಚನ್ನರಾಯಪಟ್ಣ ತಾಲ್ಲೂಕು	(1) ಬಿದರೆ 2 ಮಲ್ಲಾಪುರ, (3) ಮಂಗಲಾಪುರ, (4) ಕೋಡಿಹಳ್ಳಿ	30	13° 9' ಮತ್ತು 13° 11' ,,	76° 25' ಮತ್ತು 76° 28' ,,	ಇಲ್ಲಾ	3 ಚದರ ಮೈಲಿಗಳು
8	ಜಲಗಾರನಹಳ್ಳಿ ತಾಕು	ಡಿಟೋ	ಅರಸೀಕೆರೆ	(1) ಜಲಗಾರನಹಳ್ಳಿ (2) ಸೋಮೋನಹಳ್ಳಿ (3) ಚಲನಾಯಕನಹಳ್ಳಿ	30	13° 12' ಮತ್ತು 13 13'ರಮಧ್ಯೆ	76° 24' ಮತ್ತು 76° 26'ರಮಧ್ಯೆ	ಡಿಟೋ	1 ಚದರ ಮೈಲಿ
9	ರಂಗಾಪುರ ಕಾವಲ್	ಡಿಟೋ	ಡಿಟೋ	(1) ಇಸವನಹಳ್ಳಿ (2) ಆಡಿಹಳ್ಳಿ (3) ಗೊಲ್ಲರಹಳ್ಳಿ (4) ಮಂಗಲಾಪುರ (5) ಬೋರೆಹಳ್ಳಿ (6) ಜೋಗೇನಹಳ್ಳಿ (7) ಕಂಣೇನಹಳ್ಳಿ (8) ಚಿಟನಹಳ್ಳಿ	30	13° 9' ಮತ್ತು 13° 12'ರ ,,	76° 18' ಮತ್ತು 76° 20'ರ ,,	ಸುಮಾರು 2 ಚದರ ಮೈಲಿಗಳು ಸರ್ ರೋಪರ್ ಲೆತ್‌ಬ್ರಿಡ್ಜ್ ಎಂ. ಪಿ. ವ ಮೆ॥ ಫ್ರ್ಯಾಂಕ್ ಲೆತ್‌ಬ್ರಿಡ್ಜ್ ಯವರಿಗೆ ಕೊಡಲ್ಪಟ್ಟಿರುತ್ತೆ	1 ಚದರ ಮೈಲಿ
10	ನುಗ್ಗೇಹಳ್ಳಿತಾಕು	ಡಿಟೋ	ಚನ್ನರಾಯಪಟ್ಣ	(1) ಚಿಕ್ಕೋನಹಳ್ಳಿ (2) ನವಲೆ (3) ರಾಯಸಮುದ್ರ ಅಮೃತಮಹಲ್ ಕಾವಲ್ (4) ವಿರುಪಾಕ್ಷಿಪುರ (5) ಮಾವಿನಹಳ್ಳಿ (6) ನುಗ್ಗೇಹಳ್ಳಿ (7) ಜಂಬೂರು (8) ಹೊನ್ನೇಮಾರನಹಳ್ಳಿ (9) ಹುಲಿಕೆರೆ (10) ಹುವ್ವಿನಹಳ್ಳಿ	30 ಮತ್ತು 34	13° 0' ಮತ್ತು 13° 6'ರ ,,	76° 29' ಮತ್ತು 76° 32'ರ ,,	ಇಲ್ಲ	4 ಚದರ ಮೈಲಿಗಳು
11	ಕೆಂಪಿನಕೋಟೆ ತಾಕು	ಟಿಡೋ	ಡಿಟೋ	(1) ಕೆಂಪಿನಕೋಟೆ (2) ಹುಲಿಗೆರೆ (3) ಮಾರಶೆಟ್ಟಿಹಳ್ಳಿ (4) ಮಾದಿಹಳ್ಳಿ (5) ಗೊಲ್ಲಹಳ್ಳಿ (6) ಬಸವನಹಳ್ಳಿ (7) ಹಳೇಬೆಳಗೊಳ (8) ಚಾಲ್ಯ	55	12° 54' ಮತ್ತು 12° 56'ರ ,,	76° 33' ಮತ್ತು 76° 35ರ ,,	ರೆವಿನ್ಯೂ ಸರ್ವೆ ನಖಾಸೆನಲ್ಲಿ B ಗುರ್ತು ಮಾಡಲ್ಪಟ್ಟ 311 ಎಕರೆ ವಿಸ್ತೀರ್ಣದ ತಾಕು ಮೆ॥ ಹೆಚ್. ಎಫ್. ಸ್ಟ್ರಿಕ್‌ಲೆಂಡ್ ವಗೈರೇರಿಗೆ ಕೊಡಲ್ಪಟ್ಟಿರುತ್ತೆ	1½ ಚದರ ಮೈಲಿ
12	ನಡಪಾಪನಹಳ್ಳಿ ತಾಕು	ಮೈಸೂರು	ಹುಣಸೂರು	(1) ನಡಪಾಪನಹಳ್ಳಿ (2) ಮಾದವನ ಹೊಸೂರು	53 ವ 54	12° 15' ಮತ್ತು 12° 17ರ ,,	76° 26' ಮತ್ತು 76° 27'ರ ,,	ಇಲ್ಲ	2 ಚದರ ಮೈಲಿಗಳು
13	ಕರೀಮುದ್ದೇನಹಳ್ಳಿ ತಾಕು	ಡಿಟೋ	ಡಿಟೋ	(1) ಹೊಳ್ಳದ ಕೊಪ್ಪಲ್ (2) ಗಜ್ಜಯ್ಯನ ವಡ್ಡರಗುಡಿ (3) ಕರಿಮುದ್ದನಹಳ್ಳಿ	54	12° 12' ಮತ್ತು 12° 14'ರ ,,	76° 26' ಮತ್ತು 76° 27'ರ ,,	632 ಎಕರೆ 8 ಗುಂಟೆಗಳು ಮದರಾಸಿನ ಮೆಸ್ಸರ್ಸ್ ವಿಲ್‌ಸನ್ ಅಂಡ್ ಕೋಯುವರಿಗೆಕೊಡಲ್ಪಟ್ಟಿರುತ್ತೆ	2 ಚದರ ಮೈಲಿಗಳು
14	ಸೋಣಹಳ್ಳಿ ತಾಕು	ಡಿಟೋ	ಡಿಟೋ	(1) ಸೋಣಹಳ್ಳಿ (2) ಬಾಚೇಗವುಡನಹಳ್ಳಿ	54	12° 9' ಮತ್ತು 12° 12'ರ ,,	76 28' ಮತ್ತು 76° 29ರ ,,	ಇಲ್ಲ	3 ಚದರ ಮೈಲಿಗಳು

ಅಪೆಂಡಿಕ್ಸ್ B.

ಕಕ್ಷಿಗಾರರು.

ಈ ಕರಾರು ಒಂದು ಸಾವಿರದ ಎಂಟುನೂರು ಯಂಭತ, ನೇ ಇಸವಿ ನೇ ಮಾರ್ಚ್ ತಿಂಗಳಲ್ಲಿ (''ಗುತ್ತಿಗೆಗೆ ಕೊಡುವವರೆಂತ'' ಐಯಿಂದ ಕರೆಯಲ್ಪಡುವ) ಮೈಸೂರು ಗವರ್ನಮೆಂಟಿನವರಿಗೂ ಮತ್ತು ''ಗುತ್ತಿಗೆದಾರರೆಂತ'' (ಐಯಿಂದ ಕರೆಯಲ್ಪಡುವ) ಇತರರಿಗೂ ನಡೆದಿರುತ್ತೆ.

ಗುತ್ತಿಗೆಗೆ ಕೊಡತಕ್ಕವರು ಗುತ್ತಿಗೇದಾರರ ಕೇಳಿಕೆ ಮೇಲೆ ಮತ್ತು ಅವರು, ಇದರ ಮುಂದೆನಮೂದ್ ಮಾಡಲ್ಪಟ್ಟ ಒಡಂಬಡಿಕೆಗಳನ್ನು ನೆರವೇರಿಸುವದಕ್ಕೋಸ್ಕರ ಜಾಮಿನೀ ತರೀಕ್ ರೂಪಾಯಿ

ಠೇವಣೀ ಮತ್ತು ಗುತ್ತಿಗೆಗೆ ಕೊಡುವ ಬಗ್ಗೆ ಕರಾರು.

ಗಳನ್ನು ಠೇವಣೀ ಕಟ್ಟಿ ಅಂಥಾ ಯಾವದಾದರೊಂದು ಒಡಂಬಡಿಕೆ ತಪ್ಪಿ ನಡಿಯುವಲ್ಲಿ ಸದರೀ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡತಕ್ಕದ್ದೆಂಬ ಷರತ್ತಿನ ಮೇಲೆ, ಮುಂದೆ ಅಡಗಿರತಕ್ಕ ಇದಕ್ಕೆ ಶೇರಿಸೋಣಾದ ಪತ ಯಾ ನಕ್ಷೆಯಲ್ಲಿ ತೋರಿಸಲ್ಪಟ್ಟು ಮೈಸೂರು ಶೀಮೆಯ ಡಿಸ್ಟ್ರಿಕ್ಟ್ ತಾಲ್ಲೂಕಿನಲ್ಲಿ ಯಿರುವ ಅಂದಾಜ ವೃಕ್ಷ ಮತ್ತು ಯಿದರಡೀ ಶೇರಿಸಲ್ಪಟ್ಟ ಷೆಡ್ಯೂಲ್ ತಖ್ತೆಯಲ್ಲಿ ಮುಖ್ಯವಾಗಿ ನಮೂದ್ ಮಾಡಿ ವಿವರಿಸಲ್ಪಟ್ಟು ''ಚುನಾಯಿಸಲ್ಪಟ್ಟ ತಾಕು'' ಯಂಬದಾಗಿ ಐಯಿಂದ ಕರೆಯಲ್ಪಡುವ ಜಮೀನ್ ವಿಷಯದಲ್ಲಿ ಗನಿ ಕೆಲಸ ನಡಿಸುವದಕ್ಕಾಗಿ ಗುತ್ತಿಗೆಗೆ ಕೊಡುವ ಬಗ್ಗೆ ಒಪ್ಪಿ ಇರುತ್ತಾದ್ದರಿಂದ.

ಅಂಗೀಕಾರ.

ಕೊಡುವಣ.

ಹಾಲಿ ಈ ಕರಾರಿನಿಂದ ಅಂಗೀಕರಿಸಲ್ಪಡುವದೇನಂದರೆ, ಮುಂದೆ ಉಳಸಿಕೊಳ್ಳಲ್ಪಟ್ಟ ಕಂದಾಯಕ್ಕೂ ರಾಜಪಾಲಿಗೂ, ಜುರ್ಮಾನೆಗೂ, ಮತ್ತು ಇತರ ಪಾವತಿಗಳಿಗೂ ಮತ್ತು ಮುಂದೆ ಅಡಗಿರತಕ್ಕ ಗುತ್ತಿಗೇದಾರರಿಂದ ಹುಟ್ಟಲ್ಪಡುವಒಡಂಬಡಿಕೆಗಳು ವ ಕರಾರ್‌ಗಳಿಗೂ ಒಳಪಟ್ಟು, ಗುತ್ತಿಗೆಗೆ ಕೊಡುವವರಿಂದ ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರಿಗೆ, ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ, ಮೇಲೆ ನಮೂದ್ ಮಾಡಲ್ಪಟ್ಟು ವಿವರಿಸಲ್ಪಟ್ಟ ಚುನಾಯಿಸಲ್ಪಡೋಣಾದ ತಾಕಿನಲ್ಲಿ ಅಡಗಿರುವ ಆಕಾರ ಕಾಣದ ಸರ್ಕಾರ್ ಬಂಜರ್ ಜಮೀನ್ ದೇಖಿಲ್ ಹಿಡುವಳಿಯಲ್ಲಿ ಯಿಲ್ಲದ ಆಕಾರ ಕಂಡ ಸರ್ಕಾರ್ ಜಮೀನಿನಲ್ಲಿಯೂ, ಮತ್ತು ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ಹಿಡುವಳಿಯಲ್ಲಿನ ಸರ್ಕಾರ್ ಜಮೀನ್ ದೇಖೀಲ್ ಇನಾಂ ಜಮೀನ್‌ಗಳಲ್ಲಿಯೂ ವಿಂಗಡಿಸಿ, ಗನಿ ಕೆಲಸ ನಡಿಸುವದಕ್ಕೂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಯಿದ್ದಲು ಯಾ ವ್ಯಾಪಾರಕ್ಕೆ ಲಾಯಖಾದ ಇತರ ಪದಾರ್ಥಗಳುಳ್ಳಂಥಾ ಕಲ್ಲುಗಳು, ಬಳ್ಳಿ ಮೋಣು ಮುಂತಾದವುಗಳನ್ನು ಅಗೆದು ವಿಂಗಡಿಸುವದಕ್ಕೂ ಮತ್ತು ಅಲ್ಲಿ ಸಿಕ್ಕಬಹುದಾದ ತಮಾಂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು; ಮತ್ತು ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳನ್ನು ಜಾಲಿಶಿ ತಯಾರ್ಮಾಡಿ ಪುಡಿಮಾಡಿ ವ್ಯಾಪಾರಕ್ಕೆ ಲಾಯಖಾಗಿ ಮಾಡುವ ಬಗ್ಯೂ ಯಿದರ ದೆಸೆಯಿಂದ ಪಟ್ಟು ಲೈಸೆನ್ಸು ಕೊಡೋಣಾಗಿರುತ್ತದೆ, ಪರಂತು ಹಿಡುವಳಿ ವ ಇನಾಂ ಜಮೀನ್‌ಗಳ ವಿಷಯದಲ್ಲಿ ಅಂಥಾ ಹಿಡುವಳೀದಾರು ಮತ್ತು ಇನಾಂದಾರರಿಂದ

ಗನಿ ಕೆಲಸ ನಡಿಸುವ ಬಗ್ಯೆ ಪಟ್ಟು ಸ್ವಾತಂತ್ರ್ಯ.

ಮೇಲ್ಕಂಡ ಹಕ್ಕನ್ನು ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರ್‌ಗಳು, ವಹಿವಾಟುದಾರರೂ ಮತ್ತು ವರ್ಗದಾರರೂ ಕೊಂಡುಕೊಂಡಿರಬೇಕು, ಯಾ ಕೊಂಡುಕೊಳ್ಳುವವರಾಗಿರಬೇಕು ಯಾ ಅವರೊಂದಿಗೆ ಗುತ್ತಿಗೇದಾರರೂ, ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರರು ಯಾ ವರ್ಗದಾರರು ಸದರೀ ಯವರ ಹಕ್ಕು ಪಡೆಯುವದಕ್ಕಾಗಿ ಅವರ ಸ್ವಂತ ಏರ್ಪಾಡು ಮಾಡಿಕೊಂಡಿರಬೇಕು ಯಾ ಮಾಡಿಕೊಳ್ಳಬೇಕು.

ಗನಿ ಕೆಲಸದಲ್ಲಿ ಉತ್ಪತ್ತಿ ಆದದ್ದನ್ನು ಮಾರುವ ಬಗ್ಯೆ ಗುತ್ತಿಗೇದಾರಗೆ ಸ್ವಾತಂತ್ರ್ಯ).

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳಿಗೆ ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ ಅವರಿಂದಲಾಗಲಿ ಯಾ ಅವರ ಪೈಕೀ ಯಾರಿಂದಲಾಗಲೀ ಅಂಥಾ ಚುನಾಯಿಸಲ್ಪಟ್ಟ ತಾಕಿನ ಮೇಲ್‌ಭಾಗದಲ್ಲಾಗಲೀ ತಳಭಾಗದಲ್ಲಾಗಲೀ ಹೊಂದಲ್ಪಡುವ ಭಂಗಾರ, ಲೋಹಉಳ್ಳ ಅದುರು, ವಜ್ರ ಮುಂತಾದ ಕಲ್ಲುಗಳು ಮತ್ತು ಕಲ್ಲಿದ್ದಲು ಮುಂತಾದ ವ್ಯಾಪಾರಕ್ಕೆ ಲಾಯಖಾದ ಪದಾರ್ಥಗಳನ್ನು ಸಾಗಿಸುವದಕ್ಕೂ ವಿಕ್ರಯಿಸುವದಕ್ಕೂ ಮತ್ತು ವಿಲಾವಾರಿ ಮಾಡುವದಕ್ಕೂ ಸ್ವಾತಂತ್ರ್ಯ ಕೊಡೋಣಾಗಿರುತ್ತೆ.

ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರು ವಹಿವಾಟುದಾರರು ಮತ್ತು ವರ್ಗದಾರರಿಗೆ30 ವರುಷಕಾಲ ಪರಿಯಂತ ಸ್ವಾಧೀನ.

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳು, ವಹಿವಾಟುದಾರರು ವ ವರ್ಗದಾರರು ಯಿದರ ದೆಶೇಯಿಂದ ಅವರಿಗೆ ಕೊಡಲ್ಪಟ್ಟಿತೆಂಬ ಮತ್ತು ಕೊಡೋಣಾದ ಮೇಲೆ ನಮೂದ್ ಮಾಡಲ್ಪಟ್ಟ ಪ್ರದೇಶಗಳನ್ನ ಈ ಕರಾರ್ ತಾರೀಖು ಮೊದಲು ಮೂವತ್ತು ವರುಷಗಳ ವಾಯಿದೇ ಪರಿಯಂತ ಸ್ವಾಧೀನ ಉಂಟಾಗಿರತಕ್ಕದ್ದು.

ಸರ್ಕಾರಿ ಜಮೀನ್ಗಳಿಗೆ ಕಂದಾಯವನ್ನೂ ಇನಾಂ ಜಮೀನ್ಗಳಿಗೆ ಜೋಡೀ ಮತ್ತು ಕ್ವಿಟ್ ರೆಂಟನ್ನೂ ಪಾವತೀ ಮಾಡುವಣ.

ಮತ್ತು ಸದರೀ ವಾಯಿದೇಯಲ್ಲಿ——————ಡಿಸ್ಟ್ರಿಕ್ಟಿನೊಳಗೆ ಜಮೀನ್ ಕಂದಾಯದ ವಸೂಲಿ ಬಗ್ಯಾಗಿ ಜಾರೀ ಯಿರುವ ರೂಲ್ಸ್ ಅನುಸರಿಸಿ ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಹಿಡುವಳಿಯಲ್ಲಿ ಯಿರುವ ಮತ್ತು ಸಾಗುವಳಿ ಲಾಯಖಾದ ಬಂಜರ್ ಜಮೀನ್ಗಳ ಮೇಲೆ ಹಾಲೀ ವಸೂಲ್ ಮಾಡಲ್ಪಡಬೇಕಾದ ಸಾಲಿಯಾನಾ ಕಂದಾಯವನ್ನೂ ಅಥವಾ ಯಿಯಿಂದ ಯಾವ ಕಾಲದಲ್ಲಾಗಲೀ ಈ ಗುತ್ತಿಗೆ ಜಾರೀ ಯಿರುವ ಕಾಲದಲ್ಲಿ ಗುತ್ತಿಗೆಗೆ ಕೊಡುವವರಿಂದ ಯಾ ಅವರ ಉತ್ತರಾಧಿಕಾರಿಗಳಿಂದ ಯಾ ವರ್ಗದಾರರಿಂದ ಜಮೀನ್ ಕಂದಾಯದ ಯಾವದದರೂ ತಿದ್ದುಪಾಟನಲ್ಲಿ ಕಂದಾಯದ ತರೀಕ್ ಅಂಥಾ ಜಮೀನಿನ ಮೇಲೆ ಗೊತ್ತುಮಾಡಲ್ಪಡುವ ಜಾಸ್ತೀ ಮೊಬಲಗನ್ನೂ ಮತ್ತು ಸದರೀ ತಾಕಿನಲ್ಲಿ ಅಡಗಿರುವ ಯಾವದಾದರೂ ಇನಾಂ ಜಮೀನಿನ ಮೇಲೆ ತೆರಬೇಕಾದ ಜೋಡೀ ಯಾ ಕ್ವಿಟ್‌ರೆಂಟ್ ಮೊಬಲಗನ್ನೂ ಖಿಸ್ತುಬಂದೀ ಪ್ರಕಾರ ಪಾವತೀ ಮಾಡತಕ್ಕದ್ದಲ್ಲದೆ ಚುನಾಯಿಸಲ್ಪಟ್ಟತಾಕಿನಲ್ಲಿ ಅಡಗಿರುವ ತಮಾಂ ಸಾಗುವಳಿ ನಾಲಾಯಖ್ ಸರ್ಕಾರಿ ಜಮೀನಿನ ಮೇಲೆ ಯಕರೆ ವಂದಕ್ಕೆ 8 ಆಣೆ ಮೇರಿಗೆ ಸಾಲೀಯಾನಾ ಕಂದಾಯವನ್ನು ಸುದಾ ಅವುಗಳಿಗಾಗಿ ಒಪ್ಪಿ ಮತ್ತು ಪಾವತೀ ಮಾಡುತ್ತಾ ಬರಬೇಕು.

ಮತ್ತು ಲೋಕಲ್‌ಸೆಸ್ಸು, ತೆರಿಗೆಗಳು ಯಾ ರಿವಾಜುಗಳನ್ನ ಪಾವತೀ ಮಾಡುವಣ.

ಮತ್ತು ಮೇಲೆಕಂಡ ಸಾಲಿಯಾನಾ ಕಂದಾಯ, ಜೋಡೀ ವ ಕ್ವಿಟ್‌ರೆಂಟ್ ದೇಖೀಲ್, ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ನಿವೇಶನ ಯಾ ಜಮೀನುಗಳು ಯಾ ಅವುಗಳಲ್ಲಿರುವ ಕಟ್ಟಡಗಳು ಯಾ ಕಾಮಗಾರಿ ಯಿವುಗಳಿಗಾಗಿ ತತ್ಕಾಲದಲ್ಲಿ ತೆರಬೇಕಾದ ತಮಾಂ ಲೋಕಲ್‌ಸೆಸ್ಸುಗಳೂ ಇತರ ತಮಾಂ ತರಹೆಯ ತೆರಿಗೆಗಳೂ ರಿವಾಜುಗಳೂ ಸುದಾ ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು.

ಮತ್ತು ಉತ್ಪತ್ತಿಯಾದ ಭಂಗಾರ ವಗೈರೇ ಮೇಲೆ ಶೇಕಡಾ 5ರಂತೆ ರಾಜಪಾಲು ಕೊಡುವಣ.

ಮತ್ತು ಗುತ್ತಿಗೇದಾರರಿಂದ ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರ್ರು ಯಾ ವರ್ಗದಾರರುಗಳಿಂದ ತಯಾರ್ಮಾಡಲ್ಪಡುವ, ಪುಡಿಮಾಡಲ್ಪಡುವ ಮತ್ತು ವ್ಯಾಪಾರಕ್ಕೆ ಲಾಯಖಾಗಿ ಮಾಡಲ್ಪಡುವ ತಮಾಂ ಭಂಗಾರ, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮತ್ತು ಖರೀದಿ ಆಗುವ ಯಾ ವ್ಯಾಪಾರದ ಸ್ವಭಾವವುಳ್ಳ ಇತರ ಪದಾರ್ಥಗಳ ಒಟ್ಟು ಹುಟ್ಟುವಳೀ ಮೇಲೆ ಶೇಕಡಾ 5ರ ಪ್ರಕಾರ ರಾಜಪಾಲು ಕೊಡುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರಬೇಕು, ಅಂಥಾ ರಾಜಪಾಲು ಯಾವ ಬಾಬಿನ ಖರ್ಚೂ ವಜಾ ಮಾಡಲ್ಪಡದೆಯೆ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ದೊರಿಯುವಂಥಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಮೌಲ್ಯದ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನಲ್ಲಿ ದೊರಿಯುವಂಥಾ ತಮಾಂ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಖರೀದಿ ಮೊಬಲಗಿನ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲ್ ಮೊಬಲಗನ್ನು ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು; ಅಂಥಾ ರಾಜಪಾಲು, ಯಾವ ಬಾಬಿನ ಖರ್ಚೂ ವಜಾ ಮಾಡಲ್ಪಡದೆಯೇ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ಪ್ರತಿ ವರ್ಗದ ಯಾ ಒಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುರ್ಮಾನೆ ಕೊಡುವಣ.

ಯಾವ ಕಾಲದಲ್ಲಾಗಲಿ ಗುತ್ತಿಗೇದಾರರಿಂದ ಅವರ ಎಗ್ಜಿಕ್ಯೂಟರುಗಳಿಂದ ವಹಿವಾಟುದಾರರಿಂದ ಯಾ ವರ್ಗದಾರ್ರುಗಳಿಂದ ಸಂಪೂರ್ಣವಾಗಿಯಾಗಲಿ ವೊಂದುಭಾಗವಾಗಿಯಾಗಲಿ ಕೊಡಲ್ಪಡುವ ಮೇಲೆ ಹೇಳಲ್ಪಟ್ಟ ನಿವೇಶನಗಳ ಪ್ರತಿ ವರ್ಗ ಯಾ ವೊಳಗುತ್ತಿಗೇಗಾಗಿಯಾಗಲಿ ಈ ಕರಾರ್ಗಳಿಂದ ವೊಪ್ಪಿಸಲ್ಪಟ್ಟ ವ ಕೊಡಲ್ಪಟ್ಟ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸ್‌ಗಳನ್ನ ವಿಶಿಷ್ಟವಾಗಲಿ ಆ ವೈಕೀ ಕೆಲವನ್ನ ವರ್ಗ ಮಾಡುವದಕ್ಕಾಗಿಯಾಗಲಿ ಅಥವಾ ಮೇಲೆ ಹೇಳಲ್ಪಟ್ಟ ನಿವೇಶನಗಳೊಳಗಣ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸುಗಳಲ್ಲಿ ಸಂಬಂಧ ಯಾ ಹಿಸ್ಸೆಯನ್ನ ಸಂಪೂರ್ಣವಾಗಿಯಾಗಲಿ, ಕೆಲವು ಮಟ್ಟಿಗಾಗಲಿ ಕೊಡುವದಕ್ಕಾಗಲಿ, ಅಂಥಾ ವರ್ಗ ಯಾ ವೊಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುರ್ಮಾನೆ ತೆರಲಿಕ್ಕೆ ವೊಪ್ಪಿಕೊಂಡು ಪಾವತೀ ಮಾಡುತ್ತಾ ಬರತಕ್ಕದ್ದು. ಅಂಥಾ ಜುರ್ಮಾನೆಯು ಯಾವಬಾಬಿನ ಖರ್ಚೂ ವಜಾ ಮಾಡಲ್ಪಡದೇಯೇ ಪಾವತೀ ಮಾಡಲ್ಪಡತಕ್ಕದ್ದು. ಆದರೆ ಯರಡನೇ ದಫಾ ಯಾ ಆ ತರುವಾಯ ಮಾಡಲ್ಪಡುವ ವರ್ಗ ಯಾ ವೊಳಗುತ್ತಿಗೆ ವಿಷಯದಲ್ಲಿ ಕೊಡಬೇಕಾದ ಜುರಮಾನೆಯನ್ನ ಲೆಖ್ಖ ಮಾಡುವಾಗ, ಅದರ ಹಿಂದೆ ನಡೆದ ವರ್ಗ ಯಾ ವೊಳಗುತ್ತಿಗೆ ಮೊಬ

ಲಗು ಖಾತಾ ಆ ವರ್ಗದ ಯಾ ವೊಳಗುತ್ತಿಗೆಯು ಮೊಬಲಗಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಪರಂತು ಯಾವದಾದರೊಂದು ವರ್ಗ ಯಾ ಒಳಗುತ್ತಿಗೆಯ ಮೊಬಲಗು ವಿಶಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ವೊಂದು ಕಂಪೆನಿಯ ಷೇರುಗಳಾಗಿ ಯಿದ್ದರೆ, ಅಂಥಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜಾರಮಾನೆಯು ಗುತ್ತಿಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಯಿಷ್ಟಾನುಸಾರ ಆ ಕಂಪೆನಿಯ ಷೇರುಗಳಾದರೂ ಆಗಬಹುದು ಅಥವಾ ಆ ಷೇರುಗಳ ಕ್ಲಿಪ್ತವಾದ ಮೌಲ್ಯದ ಮೇರಿಗೆ ಅವಕ್ಕೆ ಸರಿಯಾದ ನಗದು ಹಣವಾದರೂ ಆಗಬಹುದು. ಮತ್ತು ಯಾವದಾದರೊಂದು ವರ್ಗ ಯಾ ಒಳಗುತ್ತಿಗೆಯು ಮೊಬಲಗು ವಿಸಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ವೊಂದು ತೆರಿಗೆ, ರಾಜಪಾಲು, ಯಾ ಇತರ ಖಿಸ್ತುಬಂದಿಯಾಗಿ ಸಲಿಕೆಯಾಗುವ ಸ್ವಭಾವ ಉಳ್ಳದ್ದಾಗಿ ಯಿದ್ದರೆ, ಅಂಥಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜಾರಮಾನೆಯು ತೆರಿಗೆ, ರಾಜಪಾಲು, ಅಥವಾ ಸಂದರ್ಭಾನುಸಾರ ಇತರ ಖಿಸ್ತುಬಂದೀ ಮೇರಿಗೆ ಸಲಿಕೆಯಾಗುವ ಸ್ವಭಾವವುಳ್ಳದ್ದಾಗಿಯೇ ಯಿರತಕ್ಕದ್ದು. ಹಾಗೆ ತರುವಾಯ ಮಾಡಲ್ಪಡುವ ವರ್ಗ ಯಾ ಒಳಗುತ್ತಿಗೆಯು ಮೇಲೆ ವಸೂಲಾಗತಕ್ಕ ಜಾರಮಾನೆಯನ್ನ ಲೆಖ್ಖ ಮಾಡುವದಕ್ಕಾಗಿ ಆ ವರ್ಗ ಯಾ ಒಳಗುತ್ತಿಗೆಯ ಮೊಬಲಗಿನಲ್ಲಿ ಆವಶ್ಯಕವಾದ ವಜಾವನ್ನ ಮಾಡುವ ವೃದ್ಧಿಕ್ಷಯ ಅಂಥಾ ತೆರಿಗೆ, ರಾಜಪಾಲು ಯಾ ಇತರ ಖಿಸ್ತುಬಂದಿ ಸಲಿಕೆಯ ತಾತ್ಕಾಲಿಕ ಮೌಲ್ಯವು ಗುತ್ತಿಗೆಗೆ ಕೊಡುವವರಿಂದಲಾಗಲಿ ಅವರ ಉತ್ತರಾಧಿಕಾರಿಗಳಿಂದಲಾಗಲಿ, ಯಾ ವರ್ಗದಾರರುಗಳಿಂದಲಾಗಲಿ ಠರಾವ್ ಮಾಡಲ್ಪಡತಕ್ಕದ್ದು. ಮತ್ತು ಯಾವ ವರ್ಗವಾಗಲಿ ಯಾ ಒಳಗುತ್ತಿಗೆಯೇ ಆಗಲೀ ಅಂಥಾ ವರ್ಗ ಯಾ ಒಳಗುತ್ತಿಗೆಗಾಗಿ ಜುರ್ಮಾನೆಯು ಗುತ್ತಿಗೆಗೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರುಗಳಿಗೆ ಕ್ರಮವಾಗಿಯೂ, ಪೂರ್ತಿಯಾಗಿಯೂ ಪಾವತೀ ಮಾಡಲ್ಪಟ್ಟಿದ್ದರೇನೇ ಹೊರ್ತು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರ್ರುಗಳ ವಿಷಯದಲ್ಲಿ ಅದು ಸಿದ್ಧವಾಗುವದಿಲ್ಲವು.

ಕಂದಾಯ, ರಾಜಪಾಲ್, ಜುರ್ಮಾನೆ ಮತ್ತು ಇತರ ಬಾಕೀಗೋಸ್ಕರ ಗುತ್ತಿಗೆಗೆ ಕೊಡುವವರಿಂದ ಜಫ್ತಿ ಮಾಡುವಣ.

ಮತ್ತು ಅಂಥಾ ಕಂದಾಯ, ರಾಜಪಾಲು, ತೆರಿಗೆ ವ ಜುರ್ಮಾನೆ ಮೊದಲಾದ ಯಿತರ ಬಾಕಿಗಳು ಅವುಗಳ ಪಾವತಿಬಗ್ಯಾಗಿ ಈ ಕರಾರಿನ ದೆಸೆಯಿಂದ ಕೊಡಲ್ಪಟ್ಟ ವಾಯಿದೆಯು ಮುಗಿದ ಅರವತ್ತು ದಿವಸಗಳ ಪರಿಯಂತ ಪಾವತಿಆಗದೆ ಬಾಕಿಯಿದ್ದು ಮತ್ತು ಅಂಥಾ ಬಾಕಿಗಳನ್ನ ಪಾವತೀಮಾಡಬೇಕೆಂಬದಾಗಿ ಸದರೀ—ಡಿಸ್ಟ್ರಿಕ್ಟು ಶಿವಿಲ್ ಯಗ್ಜಿಕ್ಯೂಟಿವ್ ಆಫಿಸರವರಿಂದ ವಂದು ನೋಟೀಸು ಜಾರಿಮಾಡಲ್ಪಟ್ಟ ತರುವಾಯ ಮೂವತ್ತು ದಿವಸಗಳ ವಳಗಾಗಿ ಸದರೀ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರ್ರು ಪಾವತಿಮಾಡದೆಯಿದ್ದ ಸಂದರ್ಭದಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ತಮಾಂ ಭಂಗಾರ, ಲೋಹ ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು, ಮತ್ತು ಚುನಾಯಿಸಲ್ಪಟ್ಟ ತಾಕಿನೊಳಗಣ ಗನಿ ಯಾ ಹಳ್ಳಗಳ ಆಸ್ಪಾಸಿನಲ್ಲಿ ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರರಿಂದ ಉಪಯೋಗಿಸಲ್ಪಟ್ಟ ಯಾ ಸಾಗಿಸಲ್ಪಟ್ಟ ವಿಕ್ರಯ ಸ್ವಭಾವವುಳ್ಳ ಇತರ ಪದಾರ್ಥಗಳನ್ನಾಗಲಿ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಿರುಹುದಾದ ಮತ್ಯಾವ ಯಿತರ ಸ್ವತ್ತನ್ನಾಗಲಿ ಹಿಡಿದುಕೊಳ್ಳುವಬಗ್ಯೆ ಸ್ವತಂತ್ರರಾಗಿರತಕ್ಕದ್ದು. ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಂಥಾ ಭಂಗಾರ ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು ಮುಂತಾದ ಇತರ ಪದಾರ್ಥಗಳನ್ನೂ ಸ್ವತ್ತುಗಳನ್ನೂ ವಿಕ್ರಯಿಸಿ ವಿಲಾವಾರಿ ಮಾಡಬಹುದು, ಮತ್ತು ಅಂಥಾ ವಿಕ್ರಯದಿಂದ ಹುಟ್ಟಿದ ಮೊಬಲಗಿನಲ್ಲಿ ಈ ಗುತ್ತಿಗೆ ಅನುಸರಿಸಿ ಬರಬೇಕಾದ ಕಂದಾಯ, ರಾಜಪಾಲು, ಜುರ್ಮಾನೆ ಮುಂತಾದ ಯಿತರ ವಸೂಲಾಗಬೇಕಾದ ಮೊಬಲಗಿಗೋಸ್ಕರವೂ ಅಂಥಾ ಜಫ್ತಿ ಮತ್ತು ಹರಾಜಿಗೋಸ್ಕರ ತಗಲಿದ ಖರ್ಚು ಮೊಬಲಗಿಗೋಸ್ಕರವೂ ವಜಾಹಾಕಿಕೊಳ್ಳಬಹುದು.

ಗನಿ ಕೆಲಸಗಳನ್ನು ಅವಿಚ್ಛಿನ್ನವಾಗಿ ನಡೆಸುವಬಗ್ಯೆ ಗುತ್ತಿಗೇದಾರನಿಂದ ಒಡಂಬಡಿಕೆ.

ಮತ್ತು ಇದರದೆಸೆಯಿಂದ ಗುತ್ತಿಗೇದಾರರು ತಮಿಗೋಸ್ಕರವೂ ಅವರ ವಾರಸುದಾರರು, ಯಗ್ಜಿಕ್ಯೂಟರು, ವಹಿವಾಟುದಾರರು ಮತ್ತು ವರ್ಗದಾರರು ಯಿವರಿಗೋಸ್ಕರವೂ ಮತ್ತು ಆಯಾ ಪ್ರತಿ ವಬ್ಬರಿಗೋಸ್ಕರವೂ ಬೇರೆಬೇರೆಯಾಗಿ ಒಡಂಬಟ್ಟು ಇದರದೆಸೆಯಿಂದ ಅವರಿಗೋಸ್ಕರ, ಮತ್ತು ಅವರ ವಾರಸ್ದಾರರು, ಯಗ್ಜಿಕ್ಯೂಟರು, ವಹಿವಾಟುದಾರರು ವ ವರ್ಗದಾರರಿಗೋಸ್ಕರ ಗುತ್ತಿಗೆಗೆ ಕೊಡುವವರೊಂದಿಗೂ, ಅವರ ಉತ್ತರಾಧಿಕಾರಿಗಳ ಮತ್ತು ವರ್ಗದಾರರೊಂದಿಗೂ ಒಡಂಬಟ್ಟಿರುವದೇನಂದರೆ, ಅವರು ಅಂದರೆ ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರುಗಳು, ವಹಿವಾಟದಾರರು ಗುತ್ತಿಗೆ ಕಾಲದ ಮದಲ್ ವರುಷದಲ್ಲಿ ಚುನಾಯಿಸಲ್ಪಟ್ಟ ಪ್ರದೇಶದಲ್ಲೆಲ್ಲ ಛಂದಾಗಿಯೂ ಫಲಕಾರಿಯಾಗುವಂತೆಯೂ ಭಂಗಾರಕ್ಕೋಸ್ಕರ ಯಾ ಯಿತರ ಲೋಹಗಳು ಯಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳಿಗೋಸ್ಕರ ಅಜಮಾಯಿಷೀಕೆಲಸ ನಡಿಸುವವಲ್ಲದೆ ಹಾಗೆ ಅವಶ್ಯಕವಾದಲ್ಲಿ ಅಜಮಾಯಿಷೀ ಕೆಲಸಗಳ ಫಲಪರ್ಯವಸಾನವನ್ನು ತೋರಿಸುಬಗ್ಯೆ ತಯಾರ್ಮಾಡಲ್ಪಟ್ಟಿರಬಹುದಾದ ಅಂಥಾ ಯಾವದಾದರೂ ರಿಪೋರ್ಟುಗಳ ಯಥಾ ನಕಲ್‌ಗಳನ್ನ ಗುತ್ತಿಗೆಗೆ ಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಒದಗಿಸತಕ್ಕದ್ದು.

ಮತ್ತು ಈ ಗುತ್ತಿಗೆ ತಾರೀಖು ಮೊದಲು ಯರಡು ವರುಷಗಳ ವಳಗಾಗಿ, ಚುನಾಯಿಸಲ್ಪಟ್ಟ ತಾಕಿನ ಪ್ರತಿ ಚದರಮೈಲ್ ವಂದಕ್ಕೆ 5,000 (ಐದುಸಾವಿರ) ಪವ್ಹನಗಳಿಗೆ ಕಮ್ಮಿಯಿಲ್ಲದ, ಖರ್ಚಿನಬಗ್ಯಾಗಿ ವಸೂಲ್ಮಾಡಲ್ಪಟ್ಟ ಮೂಲಧನವುಳ್ಳ ವಂದು ಕಂಪೆನಿಯಾನೆ ಸಂಘ

ವನ್ನು ಶೇರಿಸುವದಕ್ಕೆ ಅಶಕ್ತರಾದರೆ ಈ ಗುತ್ತಿಗೆಯ ದೆಶೆಯಿಂದ ಉಂಟುಮಾಡಲ್ಪಟ್ಟ ತಮಾಂ ಬಾಧ್ಯತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನ ಗುತ್ತಿಗ್ಯೆಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ದಂಡವಾಗಿ ವಪ್ಪಿಸತಕ್ಕದ್ದು.

ಮತ್ತು ಗುತ್ತಿಗೆ ವಾಯಿದೆಯಲ್ಲಿ ಫಲಕಾರಿಯಾಗುವಂತೆ ಅವಿಚ್ಛಿನ್ನವಾಗಿ, ಪರಂತು ಅಸಾಧ್ಯವಾದ ಆಕಸ್ಮಿಕದ ದೆಶೆಯಿಂದ ಅಡ್ಡೀ ಮಾಡಲ್ಪಟ್ಟ ಕಾಲದಲ್ಲಿವಿನಾ, ಚುನಾಯಿಸಲ್ಪಟ್ಟ ತಾಕಿನೊಳಗೂ ಮೇಲ್ಭಾಗದಲ್ಲಿಯೂ ಗನಿಕೆಲಸ ನಡಶಿ ದೊರಿಯುವ ತಮಾಂ ಭಂಗಾರ, ಲೋಹ, ಲೋಹಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲು, ಕಲ್ಲಿದ್ದಲು ಮತ್ತು ವಿಕ್ರಯಕ್ಕೆ ವ ವ್ಯಾಪಾರಕ್ಕೆ ಲಾಯಖಾದ ತಮಾಂ ಯಿತರ ಪದಾರ್ಥಗಳನ್ನೂ ತಯಾರ್ಮಾಡಿ ವ್ಯಾಪಾರ ಲಾಯಖಾಗಿ ಮಾಡತಕ್ಕದ್ದು.

ಭಂಗಾರದ ಮಾದರಿ ವಗೈರೆಯನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸುವಣ ಯಾ ತೆಗೆದುಕೊಳ್ಳುವಬಗ್ಯೆ ಅವಕಾಶ ಕೊಡುವಣ.

ಮತ್ತು, ಅಪೇಕ್ಷಿಸಲ್ಪಟ್ಟಲ್ಲಿ ಅವು ವಿಕ್ರಯವಾಗುವದಕ್ಕೆ ಮುಂಚಿತವಾಗಿ, ತಯಾರ್ಮಾಡಲ್ಪಟ್ಟು, ಪುಡಿ ಮಾಡಲ್ಪಟ್ಟು ಮತ್ತು ವ್ಯಾಪಾರ ಲಾಯಖಾಗಿ ಮಾಡಲ್ಪಟ್ಟಿರುವ ವಿಕ್ರಯಕ್ಕೆ ಶಿದ್ಧಪಡಿಶಿದಂಥಾ ತಮಾಂ ಭಂಗಾರ, ಲೋಹಗಳು, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳ ಮಾದರಿ ಯಾ ಮಾದರಿಗಳನ್ನು ಗುತ್ತಿಗ್ಯೆ ಕೊಡುವವರಿಗೆ. ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಅಥವಾ ಏಜಂಟ್ ಯಾ ಏಜಂಟರುಗಳಿಗೆ ಒಪ್ಪಿಸತಕ್ಕದ್ದು, ಅಥವಾ ಅವರಿಂದ ತೆಗದುಕೊಳ್ಳುವಬಗ್ಯೆ ಅವಕಾಶಕೊಡಲ್ಪಡತಕ್ಕದ್ದು ಹಾಂಗೆ ತೆಗದುಕೊಳ್ಳುವ ತಮಾಂ ಮಾದರಿಬಗ್ಯೆ ಆಗಿನ ಬಾಜಾರ್ ದಾರಣೆಪ್ರಕಾರ ಖರೀದಿ ಮೊಬಲಗು ಗುತ್ತಿಗೆಗೆ ಕೊಡುವವರಿಂದಲಾಗಲಿ, ಅವರ ಉತ್ತರಾಧಿಕಾರಿಗಳಿಂದಲಾಗಲೀ ಯಾ ವರ್ಗದಾರರಿಂದಲಾಗಲೀ ಪಾವತಿ ಮಾಡಲ್ಪಡತಕ್ಕದ್ದು.

ಗುತ್ತಿಗ್ಯೆ ಕೊಡುವವರಿಗೆದಾರಣೆಗಳ ಲೆಕ್ಕಗಳನ್ನು ಕೊಡುವಣ.

ಮತ್ತು ಸದರೀ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮತ್ತು ಇತರ ಪದಾರ್ಥಗಳು ಖರೀದಿಆದ ತರುವಾಯ, ಗುತ್ತಿಗ್ಯೆಕೊಡುವವರಿಗಾಗಲೀ ಅವರ ಉತ್ತರಾಧಿಕಾರಗಳು ಅಥವಾ ವರ್ಗದಾರರು ಯಾ ಏಜಂಟ್ ಯಾ ಏಜಂಟರಿಗಾಗಲಿ ಸದರೀ ಪದಾರ್ಥಗಳು ಯೆಷ್ಟು ಮೊಬಲಗ್ಯೆ ವಿಕ್ರಯಿಸಲ್ಪಟ್ಟವೋ ಆ ತಪಶೀಲನ್ನೂ, ಅಪೇಕ್ಷಿಸಲ್ಪಟ್ಟಲ್ಲಿ ಅವುಗಳನ್ನ ಖರೀದಿಗೆ ಪಡೆಗವರ ಹೆಸರನ್ನೂ ಸುದಾ ವದಗಿಸತಕ್ಕದ್ದು.

ಖರೀದಿಆದ 90 ದಿವಸಗಳ ವಳಗಾಗಿ ಯಾ ಅದುರು ತೆಗೆದ ಆರು ತಿಂಗಳ ವಳಗಾಗಿ ರಾಜಪಾಲ್ ಮೊಬಲಗನ್ನ ಪಾವತಿ ಮಾಡುವಣ.

ಮತ್ತು ಅಂಥಾ ವಿಕ್ರಯ ನಡೆದ 90 ದಿವಸಗಳ ವಳಗಾಗಿಯಾಗಲಿ ಅಥವಾ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳು ತೆಗದ ಅಥವಾ ವಜ್ರಮುಂತಾದ ಶಿಲೆಯುಳ್ಳ ಕಲ್ಲುಗಳು ಕಂಡುಹಿಡಿದ ಆರು ತಿಂಗಳ ವಳಗಾಗಿಯಾಗಲಿ, ಮೇಲೆ ಕಂಡ ಉಳಿಕೊಳ್ಳಲ್ಪಟ್ಟ ರಾಜಪಾಲು ಮೊಬಲಗನ್ನು ಗುತ್ತಿಗ್ಯೆ ಕೊಡುವವರಿಗೆ ಆಗಲಿ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ತಮಾಂ ವರ್ಗಗಳ ನಕ್ಕಲುಗಳನ್ನೂ ಗುತ್ತಿಗ್ಯೆ ಕೊಡುವವರಿಗೆ ಒಪ್ಪಿಸುವಣ.

ಮತ್ತು ಗುತ್ತಿಗೇದಾರರಿಗಾಗಲೀ ಅವರ ಉತ್ತರಾಧಿಕಾರಗಳು ಯಾ ವರ್ಗದಾರರಿಗಾಗಲೀ, ಸದರೀ ನಿವೇಶನಗಳು ಯಾ ಅದರ ಯಾವದಾದರೂ ವಂದು ಭಾಗದ ವರ್ಗ ಯಾ ವಳಗುತ್ತಿಗೆಯ ಅಥವಾ ಈ ಕರಾರಿನಿಂದ ಒಪ್ಪಿಸಲ್ಪಟ್ಟ ಯಾ ಕೊಡಲ್ಪಟ್ಟ ತಮಾಂ ಯಾ ಯಾವದಾದರೂ ಹಕ್ಕು ಸ್ವಾತಂತ್ರ್ಯ ಮತ್ತು ಲೈಸೆನ್ಸಗಳ ಅಥವಾ ಸದರೀ ನಿವೇಶನಗಳಲ್ಲಿ ಅಥವಾ ಸದರೀ ಹಕ್ಕು, ಸ್ವಾತಂತ್ರ್ಯ ಮತ್ತು ಲೈಸೆನ್ಸ್ ಇವುಗಳಲ್ಲಿ ಪೂರ್ತಿಯಾಗಿ ಯಾಗಲಿ ಕೆಲವು ಮಟ್ಟಿಗಾಗಲಿ ಸಂಬಂಧ ಯಾ ಹಿಸ್ಸೆ ಇವುಗಳ ವರ್ಗ ಯಾ ವಳಗುತ್ತಿಗೆಯು ಅದು ನಡೆದ ಯರಡು ತಿಂಗಳ ವಳಗಾಗಿ ಒಪ್ಪಿಸಲ್ಪಡತಕ್ಕದ್ದು.

ತಮಾಂ ವರ್ಗಗಳ ಮೇಲೂ 90 ದಿವಸಗಳ ವಳಗಾಗಿ ಜುರ್ಮಾನೆ ಪಾವತಿ ಮಾಡುವಣ.

ಮತ್ತು ಅಂಥಾ ವರ್ಗ ಯಾ ವಳಗುತ್ತಿಗೆ ನಡೆದ 90 ದಿವಸಗಳ ವಳಗಾಗಿ ಅಂಥಾ ವರ್ಗ ಯಾ ವಳಗುತ್ತಿಗೆಗೋಸ್ಕರ ಇದಕ್ಕೆ ಮುಂಚೆ ವಿಧಿಶಿ ಉಳಿಕೊಂಡಿರುವ ಜುರ್ಮಾನೆಯನ್ನು ಗುತ್ತಿಗ್ಯೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಅಥವಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ಲೆಕ್ಕವ ನಕ್ಷೆಗಳ ಕ್ರಮವಾದ ಬುಕ್ಕುಗಳನ್ನ ಇಡುವಣ.

ಮತ್ತು ಸದರೀ ವಾಯಿದೆಯಲ್ಲಿ ಚುನಾಯಿಸಲ್ಪಟ್ಟ ತಾಕಿನ ಯಾವದಾದರೂ ಅನುಕೂಲವಾದ ಸ್ಥಳದಲ್ಲಿ, ಗುತ್ತಿಗೆದಾರರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಏಜಂಟ್ ಯಾ ಏಜಂಟರುಗಳು ಯಲ್ಲಾ ಕಾಲಗಳಲ್ಲೂ ಧಾರಾಳವಾಗಿ ನೋಡುವ ಬಗ್ಯೆ ಸದರೀ ಗನಿಗಳ ಆಡಳಿತ ಮತ್ತು ಹುಟ್ಟುವಳಿ ವ ಖರ್ಚು ಇವುಗಳ ತಪಶೀಲನ್ನೂ ಮತ್ತು ಭಂಗಾರ, ಲೋಹಗಳು, ಲೋಹ

ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲು, ವಿಕ್ರಯ ಯಾ ವ್ಯಾಪಾರ ಲಾಯಖಾದ ತಮಾಂ ಇತರ ಪದಾರ್ಥಗಳ ವಿಲಾವಾರಿ ಹಾಂಗೂ ಅವುಗಳ ಕರಾರ್‌ವಾಕಾ ಬೆಲೆ ತಿಳಿಯುವ ಬಗ್ಯಾಗಿ ಅವುಗಳ ತೂಕದು, ತಾರೀಖು ಮತ್ತು ಅವಶ್ಯಕವಾದ ಯಾ ಯುಕ್ತವಾದ ಇತರ ಸಂಗತಿಗಳನ್ನ ತೋರಿಸುವಂಥಾ ಲೆಖ್ಖದ ಬುಕ್ಕುಗಳನ್ನ ತಯಾರ್ಮಾಡಿ ಇಡತಕ್ಕದ್ದಲ್ಲದೆ ಸದರೀ ಗನಿ ವ ಕಾಮಗಾರಿಗಳ ಸರ್ಫೇಸ್ ನಕ್ಷೆ, ಪ್ಲಾನು ವ ಸೆಕ್ಷನ್‌ಗಳನ್ನ ತಯಾರ್ಮಾಡಿ ಇಡತಕ್ಕದ್ದು.

ಮತ್ತು ಅವುಗಳ ನಕಲುಗಳನ್ನು ಗುತ್ತಿಗೆಗೆ ಕೊಡುವವರಿಗೆ ಒದಗಿಸುವಣ.

ಮತ್ತು ಗುತ್ತಿಗೆಗೆ ಕೊಡುವವರಿಂದಲಾಗಲೀ ಅವರ ಉತ್ತರಾಧಿಕಾರಿಗಳಿಂದಲಾಗಲೀ ಅಥವಾ ವರ್ಗದಾರರಿಂದಲಾಗಲೀ ಯಾ ಅವರ ಏಜಂಟ್ ಯಾ ಏಜಂಟರುಗಳಿಂದಲಾಗಲೀ ಅಪೇಕ್ಷಿಸಲ್ಪಟ್ಟಾಗ ಅವರಿಗೆ ಸದರೀ ಬುಕ್ಕಿನಲ್ಲಿ ದಾಖಲಾದ ತಮಾಂ ಖತಾಯಿತಿಗಳ ನಕಲುಗಳನ್ನೂ ಮತ್ತು ಅಂಥಾ ತಮಾಂ ನಕ್ಷೆ, ಪ್ಲಾನು ವ ಮೇಲ್ಕಂಡ ಸೆಕ್ಷನ್ಸ್ ನಕಲುಗಳನ್ನೂ ಒದಗಿಸತಕ್ಕದ್ದು.

ಮತ್ತು ವಾಯಿದೆ ಆಖೈರಾದಾಗ ಬುಕ್ಕು ವ ಪ್ಲಾನ್‌ಗಳನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡುವಣ.

ಮತ್ತು ಸದರೀ ವಾಯಿದೆಯು ಮುಗಿದಾಗ ಅಥವಾ ಮುಂಚಿತವಾಗಿ ಮೌಕೂಫಾದಾಗ ಸದರೀ ಬುಕ್ಕುಗಳು, ನಕ್ಷೆಗಳು, ಪ್ಲಾನ್‌ಗಳು, ಸೆಕ್ಷನ್ ಯಾನೆ ವಿವರಣೆಗಳು ಇವುಗಳನ್ನು ಗುತ್ತಿಗೆಗೆ ಕೊಡುವವರಿಗಾಗಲೀ ಅವರ ಉತ್ತರಾಧಿಕಾರಿಗಳಿಗಾಗಲೀ ಅಥವಾ ಅವರ ವರ್ಗದಾರರಿಗಾಗಲೀ ಪೂರ್ತಿಯಾಗಿ ಯಾ ಒಳ್ಳೇ ಸ್ಥಿತಿಯಲ್ಲಿಯೂ ಒಪ್ಪಿಸತಕ್ಕದ್ದು.

ಸರಹದ್ದು ಸ್ತಂಭಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಡುವಣ ಮತ್ತು ಸುರಂಗಗಳನ್ನು ಕ್ರಮವಾಗಿ ಬೇಲಿಯಿಂದ ಭದ್ರಪಡಿಸುವಣ.

ಮತ್ತು ಸದರೀ ವಾಯಿದೇ ಕಾಲದಲ್ಲಿ ತಮಾಂ ಸರಹದ್ದು ಸ್ತಂಭಗಳನ್ನೂ ದುರಸ್ತಿನಲ್ಲಿಯೂ ಒಳ್ಳೇ ಸ್ಥಿತಿಯಲ್ಲಿಯೂ ಇಟ್ಟಿರತಕ್ಕದ್ದಲ್ಲದೆ ಸದರೀ ಜುನಾಯಿಸಲ್ಪಟ್ಟ ತಾಲ್ಲೂಕಿನೊಳಗಣ ಯಲ್ಲ ಕಾಲುವೆ, ಹಳ್ಳ, ಯಾ ಶ್ಯಾಫ್ಟ್ ಕಾಮಗಾರಿಗಳನ್ನೂ ಮನುಷ್ಯರು ಮತ್ತು ಜಾನವರುಗಳಿಗೆ ಅಪಾಯ ಸಂಭವಿಸದಂತೆ ಪೂರ್ತಿಯಾಗಿ ಬೇಲಿ ಹಾಕಿ ಭದ್ರಪಡಿಸತಕ್ಕದ್ದು.

ಮತ್ತು ಸದರೀ ವಾಯಿದೇಯಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು, ಆಗಿಂದಾಗ್ಯೆ ವಿಧಿಸಬಹುದಾದಂಥಾ ಆರೋಗ್ಯ ವಿಷಯಕವಾದ ನಿಬಂಧನೆಗಳನ್ನು ಜುನಾಯಿಸಲ್ಪಟ್ಟ ತಾಕಿನ ಯಲ್ಲ ಪ್ರದೇಶದಲ್ಲೂ ಕ್ರಮವಾಗಿ ಜಾರಿಯಲ್ಲಿರತಕ್ಕದ್ದು.

ಕಾಲುವೆ ಯಾ ಸುರಂಗಗಳನ್ನು ಮುಚ್ಚದೆ ಇರುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಅವರ ಏಜಂಟ್ ಯಾ ಏಜಂಟರುಗಳಿಂದ ಬರಹ ಮೂಲಕವಾಗಿ ಲೈಸೆನ್ಸ್ ಪಡೆದ ಹೊರ್ತು ಯಾವ ಕಾಲುವೆ ಯಾ ಸುರಂಗವನ್ನಾಗಲೀ ಮನಃಪೂರ್ವಕವಾಗಿ ಮುಚ್ಚಕೂಡದು ಭರ್ತೀ ಮಾಡಕೂಡದು ಅಥವಾ ಬಂದ್ ಮಾಡಕೂಡದು.

ಅಥವಾ ರೋಡು ವಗೈರೆಗಳನ್ನ ಅತಂಕಪಡಿಸದೆ ಇರುವಣ.

ಮತ್ತು ಈಗ ಇರುವ ತಮಾಂ ಯಾ ಯಾವ ರಸ್ತೆಗಳನ್ನಾಗಲಿ, ಕಾಲ್ಹಾದಿಗಳನ್ನಾಗಲೀ ಯಾ ಯಾವ ತರಹದ ಅಡ್ಡದಾರಿಗಳನ್ನಾಗಲೀ ಖುಲ್ಲಾ ಇಡತಕ್ಕದ್ದೇ ಹೊರ್ತು ಅತಂಕಪಡಿಸತಕ್ಕದ್ದಲ್ಲವು.

ಗುತ್ತಿಗೆಗೆ ಕೊಡುವವರು ಕಾಮಗಾರೀ ವಗೈರೆಗಳನ್ನ ತನಿಖೆ ಮಾಡಲಿಕ್ಕೆ ಅವಕಾಶ ಕೊಡುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮತ್ತು ಅವರ ಮುತಾಲೀಕ ಯಾ ಮುತಾಲೀಕರುಗಳು, ನೌಕರರು, ವ ಕೆಲಸಗಾರರು, ಇವರುಗಳು ವಾಯಿದೇ ಕಾಲದಲ್ಲಿ ಈ ಕರಾರುಗಳನ್ನನುಸರಿಸಿ ಯಾ ಈ ಕರಾರುಗಳ ಬಲೀಯದ ಮೇಲೆ ನಡಿಯುವ ಯಾವ ಕಾಮಗಾರಿಗಳೊಳಗಾಗಲೀ ಪ್ರವೇಶಿಸಿ ಅವುಗಳ, ಸ್ಥಿತಿ ವ ಲಕ್ಷಣವನ್ನು ತನಿಖೆ ಮಾಡಲಿಕ್ಕೂ ಮತ್ತು ಆ ಬಗ್ಯೆ ಯಾಗಲೀ, ಅಥವಾ ಇತರ ಯಾವ ನ್ಯಾಯವಾದ ವ ಯುಕ್ತವಾದ ಉದ್ದೇಶ್ಯಕ್ಕಾಗಲೀ ಜುನಾಯಿಸಲ್ಪಟ್ಟ ತಾಕಿನಲ್ಲಿ ಯಾ ಅದರೊಳಗೆ ಇರುವ ಯಂಜಿನ್‌ಗಳನ್ನೂ, ಯಂತ್ರ ಸಾಧನಗಳನ್ನೂ ವ ಅಜುಬಾಬುಗಳನ್ನೂ ಉಪಯೋಗಿಸಲಿಕ್ಕೂ ಪರಂತು ತನಖೀ ಮಾಡಿ ನಕ್ಷೆಗಳನ್ನೂ ತೆಗದುಕೊಳ್ಳತಕ್ಕದ್ದಕ್ಕಾಗಿ ವಿನಾ, ಅಂಥಾ ಉಪಯೋಗಕ್ಕಾಗಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮುನಾಸಬ್ ಕೂಡು ಮೊಬಲಗು ಕೊಡಲಾಗಿ ಅವಕಾಶ ಕೊಡತಕ್ಕದ್ದು ಮತ್ತು ಇದಕ್ಕೆ ಹಿಂದೆ ಉಳಿಸಿಕೊಳ್ಳಲ್ಪಟ್ಟ ಸ್ವಾತಂತ್ರ್ಯಗಳನ್ನು ಚಲಾಯಿಸಲಿಕ್ಕೂ ಸಹ ಅವಕಾಶ ಕೊಡತಕ್ಕದ್ದು ಮತ್ತು ಆ ಸ್ವಾತಂತ್ರ್ಯಗಳನ್ನ ಚಲಾಯಿಸುವದಕ್ಕಾಗಿ ನ್ಯಾಯವಾದ ಯಲ್ಲಾ ಅನುಕೂಲ್ಯತೆಯನ್ನೂ ವ ಕುಮ್ಮಕ್ಕನ್ನೂ ಕೊಡತಕ್ಕದ್ದು.

895

ಜಮೀನ್‌ಮೇಲಿನ ಹಕ್ಕುಗಳ ಹಾನಿಗಾಗಿ ಈಡು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನ ಯಾವದಾದರೊಂದು ಭಾಗದ ಯಾ ಪ್ರದೇಶದ ಜಮೀನ್ ಮೇಲ್ಭಾಗಕ್ಕೆ ಕೆಡಕು, ಹಾನಿ ಯಾ ಅಡ್ಡಿ ಉಂಟಾದ್ದಕ್ಕಾಗಿ ಅಂತಾ ಜಮೀನಿನ ಹಿಡುವಳೀದಾರ, ಅನುಭವದಾರ ಯಾ ಇತರ ಸ್ವಾಧೀನಗಾರನಿಗೆ ಆಗಿಂದಾಗ್ಯೆ ಈಡು ಕಟ್ಟಿಕೊಡತಕ್ಕದ್ದು.

ಮತ್ತು, ಚುನಾಯಿಸಲ್ಪಟ್ಟ ತಾಕಿನ ಯಾವಭಾಗದಲ್ಲಾಗಲಿ, ಗ್ರಾಮಸ್ತರು ದನಗಳನ್ನ ಮುಫತ್ ಮೇಯಿಸಿಕೊಳ್ಳುವ ಹಕ್ಕು ಉಂಟಾಗಿಯಿದ್ದು, ಅಂತಾ ಹಕ್ಕಿಗೆ ಯಾವರೀತಿಯಲ್ಲಾಗಲಿ ಅಡ್ಡಿ ಸಂಭವಿಸಿದಾಗ ಅಂತಾ ಗ್ರಾಮಸ್ಥರಿಗೆ ಕ್ರಮವಾದ ಈಡು ಸಹಾ ಕಟ್ಟಿಕೊಡತಕ್ಕದ್ದು.

ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಸೆಯಿಂದುಂಟಾಗುವ ದಾವೆಗಳು, ಗುತ್ತಿಗೆಗೆ ಕೊಡುವವರುಗಳ ಮೇಲೆ ಬಾರದಂತೆ ಮಾಡುವಣ.

ಯಾವ ಜಮೀನ್‌ಗಳಿಗಾಗಲಿ ಯಾ ಯಾವಬಗೆಯ ಸ್ವತ್ತಿಗಾಗಲಿ ಈ ಕರಾರುಗಳನ್ನನುಸರಿಸಿ ಕೆಲಸನಡಿಸುವಣದರ ದೆಸೆಯಿಂದ ಯಾ ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಸೆಇಂದ ಉಂಟಾಗುವ ಯಾ ಸಂಭವಿಸುವ ಯಾವ ವಿಧವಾದ ಹಾನಿ ಯಾ ಆತಂಕ ಈ ಕಾರಣದಿಂದ, ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರುಗಳ ಮೇಲೆ ಯಾವಬಗೆ ಖರ್ಚು ಯಿನ್ನುಮೇಲೆ ಆಗಿಂದಾಗ್ಯೆ ವ ಯಾವಾಗಲೂ ಶುದ್ಧಾಂಗವಾಗಿ ಯಾವಬಗೆ ದಾವೆಗಳೂ ತಗಾದೆಗಳೂ ಬಾರದಂತೆ ನಡದುಕೊಳ್ಳತಕ್ಕದ್ದು.

ವಾಯಿದೆ ಪೂರೈಸಿದ ನಂತರ ಗನಿಗಳು, ಕಟ್ಟ ವಗೈರೆಯನ್ನ ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡೋಣ.

ಮತ್ತು ಮೇಲೆಹೇಳಲ್ಪಟ್ಟ ವಾಯಿದೆ ಪೂರೈಸಿದಾಗಲಾಗಲಿ ಯಾ ಅದಕ್ಕೆ ಮುಂಚಿತವಾಗಿ ನಿಂತು ಹೋದಾಗಲಾಗಲಿ ಈ ಕರಾರುಗಳ ದೆಸೆಇಂದ ಕೆಲಸ ನಡಿಯುತ್ತಿದ್ದ ಗನಿಗಳನ್ನೂ ತಮಾಂ ಕಾಲುವೆಗಳನ್ನೂ ಕಾಮಗಾರಿಗಳನ್ನೂ, ಸರಹದ್ದು ಸ್ತಂಭಗಳು ವ ಅವುಗಳಿಗೆ ಸೇರಿದ ಬೇಲಿಗಳನ್ನೂ ಮತ್ತು ಯಿತರ ನಿವೇಶನಗಳು ಇವುಗಳೆಲ್ಲವನ್ನೂ ಪ್ರೌಳ್ಳೀದಾದ ವ ಕೆಲಸನಡಿಸಲಿಕ್ಕೆ ಅನುಕೂಲವಾದ ಸ್ಥಿತಿಯಲ್ಲಿ ಯೀವಂಜ ಇದಕ್ಕೆ ಹಿಂದೆ ಹೇಳಲ್ಪಟ್ಟ ಕರಾರುಗಳ ಪ್ರಕಾರ ನಡಿಯಲಿಕ್ಕೆ ಅನುಗುಣವಾಗುವಂತೆ ತಕ್ಕ ಸ್ಥಿತಿಯಲ್ಲಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಅಥವಾ ವರ್ಗದಾರರುಗಳಿಗಾಗಲಿ ಒಪ್ಪಿಸಿಬಿಡತಕ್ಕದ್ದು ಸದರೀ ಜಾಗಾದಲ್ಲಿ ಯಿರುವ ಕಟ್ಟಗಳಿಗಾಗಿಯಾಗಲಿ, ಯಾ ಇತರ ಸ್ವತ್ತಿಗಾಗಿಯಾಗಲಿ ಗುತ್ತಿಗೆದಾರರುಗಳಿಂದ, ಅವರ ಯಗ್ಜಿಕ್ಯೂಟರುಗಳಿಂದ, ಆಡಳಿತ ನಡಿಸುವವರುಗಳಿಂದ ಯಾ ವರ್ಗದಾರರುಗಳಿಂದಾಗಲಿ, ಗುತ್ತಿಗೆಗೆ ಕೊಡುವವರಮೇಲೆ, ಅವರ ಉತ್ತರಾಧಿಕಾರಿಗಳಮೇಲೆ ಯಾ ವರ್ಗದಾರರಮೇಲೆ ಯಾವ ದಾವೆಯೂ ಯಿಲ್ಲದಂತೆ ಒಪ್ಪಿಸತಕ್ಕದ್ದು. ಅಂತಾ ಕಟ್ಟಗಳನ್ನು ವ ಯಿತರ ಸ್ವತ್ತುಗಳನ್ನ, ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರುಗಳು ಆಡಳಿತ ನಡಿಸುವವರು ಯಾ ವರ್ಗದಾರರು ಮುಂಚಿತವಾಗಿಯೇ ಸಾಗಿಸಲು ಸ್ವತಂತ್ರರಾಗಿರತಕ್ಕದ್ದು.

ಕಂದಾಯಗಳನ್ನ ರಾಜಪಾಲುಗಳನ್ನ ವ ಜುರ್ಮಾನೆ ವಗೈರೆಯನ್ನ ಕೊಡದೇ ಹೋದಮೇಲಾಗಲಿ ಕರಾರುಗಳಿಗೆ ತಪ್ಪಿದಮೇಲೆಯಾಗಲಿ ಪುನಹ ಪ್ರವೇಶಿಸಲಿಕ್ಕೆ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಮತ್ತು ಕಂಡೋಕ್ತವಾದ ಈ ಷರತ್ತಿನಿಂದ ಕರಾರು ಮಾಡಿಕೊಳ್ಳುವದೇನಂದರೆ ಇದರ ದೆಸೆಇಂದ ಉಳಿಸಿಕೊಳ್ಳಲ್ಪಟ್ಟಿರುವ ಕಂದಾಯಗಳು ರಾಜಪಾಲುಗಳು, ಜುರ್ಮಾನೆಗಳು ಯಾ ಯಿತರ ಸಲಿಕೆಗಳ ಯಾವಭಾಗವನ್ನಾಗಲಿ ಪಾವತೀಮಾಡಬೇಕೆಂತ ಗುತ್ತಿಗೆದಾರರ ಅವರ ಎಗ್ಜಿಕ್ಯೂಟರುಗಳ, ಆಡಳಿತ ನಡಿಸುವವರ ಯಾ ವರ್ಗದಾರರುಗಳಮೇಲೆ ಅಥವಾ ಅವರುಗಳಪೈಕಿ ಒಬ್ಬನಮೇಲಾಗಲಿ ಹೆಚ್ಚಿಗೆ ಜನಗಳಮೇಲೆ, ಯಾ ಅವರ ಅಥವಾ ಆತನ ಮುತಾಲೀಕರುಗಳಮೇಲೆ ನೋಟಿಸ್ ಜಾರೀಯಾದ ಅಥವಾ ಚುನಾಯಿಸಲ್ಪಟ್ಟ ತಾಕಿನಪೈಕಿ ಯಾವದಾದರೊಂದು ಭಾಗದಲ್ಲಿ ಚಿಕಟಾಯಿಸಲ್ಪಟ್ಟ ತರುವಾಯ ಮೂವತ್ತು ದಿನಗಳ ವರಿವಿಗೂ ಬಾಕೀಲಿಯಿಟ್ಟುಕೊಂಡಾಗ್ಯೂ, ಅಥವಾ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರ್‌ಗಳು ಆಡಳಿತ ನಡಿಸುವವರು ಯಾ ಅವರ ಯಾ ಆತನ ಕೆಲಸಗಾರರು ಗನಿಕೆಲಸ ಕ್ರಮವಾಗಿ ನಡಿಸದೇ ನಿಲ್ಲಿಸಿದಾಗ್ಯೂ, ಅಥವಾ ಗುತ್ತಿಗೆಗೆ ಕೊಡುವವರ, ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಉದ್ಯೋಗಸ್ಥರುಗಳಿಗೆ ಯಾವ ವಿಧವಾದ ಆತಂಕ ಯಾ ತೊಂದರೆ ವುಂಟುಮಾಡಿದಾಗ್ಯೂ ಅಥವಾ ಗುತ್ತಿಗೆಗೆ ಕೊಡುವವರಿಗಾಗಲಿ ಅಥವಾ ಉತ್ತರಾಧಿಕಾರಿಗಳಿಗಾಗಲಿ ಯಾ ವರ್ಗದಾರರಿಗಾಗಲಿ ಸಮಾಚಾರ ಕೊಡಲಿಕ್ಕೆ ನಿರಾಕರಿಸಿದಾಗ್ಯೂ ಅಥವಾ ಗುತ್ತಿಗೆದಾರರು ಅವರ ಯಗ್ಜಿಕ್ಯೂಟರುಗಳು, ಆಡಳಿತ ನಡಿಸುವರು ಯಾ ವರ್ಗದಾರರು ಈ ಕರಾರುಗಳ ಪೈಕಿ ಯಾವದಕ್ಕಾದರೂ ಅತಿಕ್ರಮಿಸಿ ನಡೆದರೇಆಗಲಿ ಆಗ ಅಂತಾ ಸಂಗತಿಯಲ್ಲಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಾ ಅವರ ತರಫಿನಲ್ಲಿ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಮುತಾಲೀಕರಾಗಲಿ ಯಿಲ್ಲರ ಹೆಸರಿನಲ್ಲಿಯೂ ಯಿರುವ ಈ ಗುತ್ತಿಗೆಯನ್ನನುಸರಿಸಿ ನಡಿಸಲ್ಪಡುವ ಕೆಲಸಗಳು ಯಾ ಇತರ ಕಾಮಗಾರಿಗಳ ಯಾವ ಭಾಗದೊಳಗೂ ಪುನಹ ಪ್ರವೇಶಿಸಬಹುದು. ಆ ತರುವಾಯ ಮೇಲೆ ಹೇಳಲ್ಪಟ್ಟ ಮೂವತ್ತು ವರುಷಗಳ ವಾಯಿದೆಯು ಖಂಡಿತವಾಗಿ ಮನಕೂಫಾಗತಕ್ಕದ್ದು.

ಆರುತಿಂಗಳ ನೋಟಿಸಿನ ಹೊರ್ತು ಪುನಃ ಪ್ರವೇಶ ಮಾಡುವ ಅಧಿಕಾರ ಚಲಾಯಿಸಕೂಡದೆಂಬ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇವರದೆಸೆಯಿಂದ ಒಪ್ಪಿಕೊಂಡು ಸ್ಥಾಪಿಸುವದೇನಂದರೆ, ಇದಕ್ಕೆ ಹಿಂದೆ ನಮೂದಿಸಲ್ಪಟ್ಟ ಮೇರಿಗೆ ಪುನಃ ಪ್ರವೇಶಿಸಲಿಕ್ಕಿರುವ ನಿಯಮವನ್ನನುಸರಿಸಿ ಅಂತಾ ಯಾವ ಪುನಃಪ್ರವೇಶವಾಗಲಿ ಮೇಲೆ ಉದಹರಿಸಿದಂತಾ ವಾಯಿದೆಯು ಭಂಗವಾಗಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಿವರುಗಳು ಫಿರ್ಯಾದ್ ಬರುವ ಸಂಗತಿ ಯಾ ಸಂಗತಿಗಳ ವಿಷಯದಲ್ಲಿ ಸಮರ್ಪಕವಾದ ಸಮಜಾಯಿಷಿ ಕೊಡುವಂತೆಯೂ, ವ ಅಂತಾವುಗಳನ್ನ ವ್ಯವಸ್ಥೆ ಮಾಡಿಕೊಳ್ಳುವಂತೆಯೂ ಗುತ್ತಿಗೆದಾರರಿಗಾಗಲಿ ಅವರ ಯಗ್ಜಿಕ್ಯೂಟರುಗಳಿಗಾಗಲಿ ಆಡಳಿತ ನಡಿಸುವವರಿಗಾಗಲಿ ಯಾ ವರ್ಗದಾರರಿಗಾಗಲಿ ಈ ಪೈಕಿ ಯಾವನಿಗಾಗಲಿ ಅಥವಾ ಯಾರಿಗಾಗಲಿ ನೋಟಿಸ್ ಕೊಟ್ಟಹೊರ್ತು ನಡಿಯತಕ್ಕದ್ದಲ್ಲವು. ಸದರೀ ನೋಟೀಸು ಬರವಣಿಗೆ ವ ಮೂಲಕಇದ್ದು ಅದು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರುಗಳ ತರಫ ಮೇಲೆ ಹೇಳಲ್ಪಟ್ಟ ಡಿಸ್ಟ್ರಿಕ್ಟಿನ ಸಿವಿಲ್ ಕಾರ್ಬಾರ್ ನಡಿಸುವ ಆಫೀಸರಿಂದಾಗಲಿ ಅಬಗ್ಗೆ ಮುಖ್ಯವಾಗಿ ಅಧಿಕಾರ ಪಡೆದ ಮತ್ಯಾವ ಆಫೀಸರಿಂದಾಗಲಿ ರುಜುಮಾಡಲ್ಪಟ್ಟು ಗುತ್ತಿಗೆದಾರರ ಮೇಲೆ ಅಥವಾ ಅವರ ಯಗ್ಜಿಕ್ಯೂಟರುಗಳಮೇಲೆ ಆಡಳಿತ ನಡಿಸುವವರಮೇಲೆ ವ ವರ್ಗದಾರರುಗಳ ಮೇಲೆಯಾಗಲಿ ಆ ಪೈಕಿ ಪ್ರೊಬ್ಬನ ಮೇಲಾಗಲಿ ಅದಕ್ಕೆ ಹೆಚ್ಚಿಗೆ ಜನರಮೇಲಾಗಲಿ ಅವರುಗಳ ಯಾ ಆತನ ಮುತಾಲೀಕರುಗಳ ಮೇಲಾಗಲಿ ಜಾರೀಮಾಡಲ್ಪಡತಕ್ಕದ್ದು, ಅಥವಾ ಆ ನೋಟೀಸು ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾವ ಪ್ರದೇಶದಲ್ಲಾಗಲಿ ಚಿಕಟಾಯಿಸಲ್ಪಡತಕ್ಕದ್ದು. ಹಾಗೆ ನೋಟೀಸು ಜಾರೀ ಆದ ಯಾ ಅಥವಾ ಚಿಕಟಾಯಿಸಲ್ಪಟ್ಟ ಲಾಗಾಯತು ಆರುತಿಂಗಳವರಿವಿಗೂ ಅಂತಾ ಫಿರ್ಯಾದು ಸಂಗತಿ ಯಾ ಸಂಗತಿಗಳಲ್ಲಿ ಸಮರ್ಪಕವಾದ ಸಮಜಾಯಿಷಿಯೂ ಕೊಡಲ್ಪಡದೇ ವ ಫಿರ್ಯಾದ್ ಸಂಗತೀಲಿ ವ್ಯವಸ್ಥೆಯೂ ಮಾಡಿಕೊಳ್ಳದೇ ತಪ್ಪಿಹೋಗದ ಹೊರ್ತು ಅಂಥಾ ಪುನಃಪ್ರವೇಶವಾಗಲಿ ಯಾ ವಾಯಿದೆಯು ಭಂಗವಾಗಲಿ ನಡಿಯತಕ್ಕದಲ್ಲವು.

ಯಾವ ವರುಷದಲ್ಲಾಗಲಿ ರಾಜಪಾಲಿಗೆ ಬದಲಾಗಿ ಎಕರೆ ಒಂದಕ್ಕೆ ಐದು ರೂಪಾಯಿ ಮೇರಿಗೆ ಕಂದಾಯ ವಸೂಲು ಮಾಡಲಿಕ್ಕೆ ಗುತ್ತಿಗೆಗೆ ಕೊಡುವವರಿಗೆ ಅಧಿಕಾರವಿರುವಬಗ್ಗೆ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇವರ ದೆಸೆಯಿಂದ ಒಪ್ಪಿಕೊಂಡು ಸ್ಥಾಪಿಸುವದೇನಂದರೆ—ಗನಿಗಳ ಕೆಲಸ ನಡಿಸುವ ಬಗ್ಯಾಗಿ ಅವಶ್ಯಕವಾದ ಪ್ರಥಮ ಏರ್ಪಾಟಿಗೋಸ್ಕರ ಕೊಡಲ್ಪಡುವ ಗುತ್ತಿಗೆಯ ಪ್ರಾರಂಭದ ಎರಡು ವರುಷಗಳು ಆದ ತರುವಾಯ, ಗನಿಗಳ ಕೆಲಸದ ವಿಷಯದಲ್ಲಾಗಲಿ, ಅದರ ಫಲಾಂಶದ ವಿಷಯದಲ್ಲಾಗಲೀ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ, ಯಾ ವರ್ಗದಾರರುಗಳಿಗಾಗಲಿ ತೃಪ್ತಿಕರವಾಗಿ ಇರದೇಯಿರುವ ಪಕ್ಷಕ್ಕೆ ಅವರು ಗುತ್ತಿಗೆಯ ಯಾವವರುಷದ ರಾಜಪಾಲಿಗೆ ಬದಲಾಗಿಯಾದರೂ ಎಕರೆ ಒಂದಕ್ಕೆ ಐದು ರೂಪಾಯಿಯುಮೇರಿಗೆ ಕಂದಾಯ ವಸೂಲ್ ಮಾಡಲಿಕ್ಕೆ ಸ್ವತಂತ್ರರಾಗಿರತಕ್ಕದ್ದು.

ಯಾವದಾದರೊಂದು ವರುಷದ ಆಖೈರಿನಲ್ಲಿ ಗುತ್ತಿಗೆದಾರನ ಇಷ್ಟಾನುಸಾರ ಗುತ್ತಿಗೆ ಖೈದಾಗತಕ್ಕಬಗ್ಗೆ ನಿಯಮ.

ಇನ್ನೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕೊಂಡು ಸ್ಥಾಪಿಸುವದೇನಂದರೆ,—ಇದರ ದೆಸೆಯಿಂದ ಕೊಡೋಣಾದ ಮೂವತ್ತು ವರುಷಗಳ ವಾಯಿದೆಯ ಪೈಕಿ ಯಾವದಾದರೊಂದು ವರುಷ ಆಖೈರಾಗುವಾಗ ಆ ವಾಯಿದೆಯು ಮೌಕೂಫ ಆಗಬೇಕೆಂಬದಾಗಿ 'ಗುತ್ತಿಗೆದಾರರಾಗಲಿ, ಅವರ ಎಗ್ಜಿಕ್ಯೂಟರುಗಳಾಗಲಿ, ಆಡಳಿತ ನಡಿಸುವವರಾಗಲಿ ಯಾ ವರ್ಗದಾರರಾಗಲಿ ಇಚ್ಛೈಸುವ ಪಕ್ಷಕ್ಕೆ ತಮ್ಮ ಇರಾದೆಯನ್ನ ನಮೂದಿಸಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಆರುತಿಂಗಳ ಮುಂಚಿತವಾಗಿ ಬರವಣಿಗೆ ಮೂಲಕ ನೋಟೀಸು ಕೊಟ್ಟು ಇದರ ದೆಸೆಯಿಂದ ಉಳಿಸಿಕೊಳ್ಳಲ್ಪಟ್ಟ ಮೇಲೆ ಹೇಳೋಣಾದ ಕಂದಾಯಗಳು, ರಾಜಪಾಲುಗಳು, ಜುಲ್ಮಾನೆಗಳು, ಯಾ ಇತರ ಸಲಿಕೆಗಳು ಇವುಗಳನ್ನ ಸಂದಾಯಮಾಡಿ, ಇದರಲ್ಲಿ ಕಂಡ ಎಲ್ಲಾ ಕರಾರುಗಳ ವ ಒಡಂಬಡಿಕೆಗಳ ಮೇರಿಗೆ ನಡೆದುಕ್ಕೊಂಡು ವ ಜಾರೀಲಿತಂದು, ಮತ್ತು ಅಂಥಾ ವರುಷ ಪೂರೈಸುವವರಿವಿಗೂ, ಗುತ್ತಿಗೆದಾರರು, ಅವರ ಎಗ್ಜಿಕ್ಯೂಟರುಗಳು, ಆಡಳಿತ ನಡಿಸುವವರು ಯಾ ವರ್ಗದಾರರು ನಡದುಕ್ಕೊಂಡಲ್ಲಿ ಯಾ ಜಾರೀಲಿ ತಂದಲ್ಲಿ ಆಗ್ಯೆ ಅಂತಾ ಸಂಗತಿಯಲ್ಲಿ ಆ ವರುಷ ಪೂರೈಸಿದ ತರುವಾಯ ಇದರ ದೆಸೆಯಿಂದಕೊಡಲ್ಪಟ್ಟಿರುವ ವಾಯಿದೆಯು ಖಂಡಿತವಾಗಿ ನಿಂತುಹೋಗಿ ಖೈದಾಗತಕ್ಕದ್ದಲ್ಲದೆ ಇದರಲ್ಲಿ ಮೇಲ್ಕಂಡ ಠೇವಣೀ ಬಾಬತು ರೂಪಾಯಿಗಳು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರ ವಶದಲ್ಲೇನೇ ಅವರ ಸ್ವಂತ ಆಸ್ತಿಯಂತೆ ನಿಂತು ಹೋಗತಕ್ಕದ್ದು.

ಇದಕ್ಕೆ ಸಾಕ್ಷಿಯಾಗಿ ಗುತ್ತಿಗೆ ಕೊಡುವವರಿಗಾಗಿ ವ ಅವರ ತರಫ ಕೆಲಸ ನೋಡುವ ಮೈಸೂರು ಸೀಮೆಯ ದಿವಾನರಾದ ಯವರೂ,

ವ ಗುತ್ತಿಗೆದಾರರು ಸಹಾ ಮೇಲೆ ಷುರುವಿನಲ್ಲಿ ಬರಿಯೋಣಾದ ವರುಷ ವ ತಾರೀಖಿನಲ್ಲಿ ಇದಕ್ಕೆ ತಮ್ಮ ತಮ್ಮ ದಸ್ತಖತ್ ವ ಮೊಹರು ಹಾಕಿರುತ್ತಾರೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಅಪೆಂಡಿಕ್ಸ್ C.

1887ನೇ ಇಸವಿ ಸೆಪ್ಟಂಬರ್ 5ನೇ ಮುರ್ಕ್ಕಂ ರೂಲ್ಸ್ ಅನುಸಾರವಾಗಿ ಗನಿ ಕೆಲಸಗಳಿಗೋಸ್ಕರವಾದ ದರಖಾಸ್ತು ನಮೂನೆ.

ಮೈಸೂರು ಶೀಮೆಯ ದಿವಾನರವರಿಗೆ.

ಅಯ್ಯಾ,

ಮೈಸೂರ ಶೀಮೆಯಲ್ಲಿ ಕೆಲವು ತಾಕು ಜಮೀನುಗಳೊಳಗೆ ಗನಿ ಕೆಲಸ ನಡಿಸುವ ಬಗ್ಯೆ ಲೈಸೆನ್ಸ್ ಬಗ್ಯೆ ದರಖಾಸ್ತುಗಳು ಅಪೇಕ್ಷಿಸುವ 1887ನೇ ಇಸವಿ ಸೆಪ್ಟಂಬರ್ 12ನೇ ಮುರ್ಕ್ಕಂ 113ನೇ ನಂಬರ್ ಇಸ್ತಿಹಾರ್‌ನಾಮೆ ವಿಷಯದಲ್ಲಿ * ನಾನು ಇದರಡಿ ವಿವರಿಸಲ್ಪಟ್ಟ ತಾಕಿನ ಲೈಸೆನ್ಸಿಗೋಸ್ಕರ ಇದರಿಂದ ದರಖಾಸ್ತು ಮಾಡಿರುತ್ತೇನೆ ಮತ್ತು ಸದರೀ ಲೈಸೆನ್ಸಿಗೋಸ್ಕರ ಪ್ರೀಮಿಯಂ ಯಾನೇ ನಫೇ ತರೀಕ್, ——————— ಪೌಂಡ್ (ಯಾ ರೂಪಾಯಿ)ಗಳನ್ನು ಪಾವತೀ ಮಾಡುವದಕ್ಕೆ ಒಪ್ಪುತ್ತೇನೆ ಮೇಲೆ ಉದಹರಿಸಲ್ಪಟ್ಟ ಇಸ್ತಿಹಾರ್‌ನಾಮೆಯ ಷರತ್ತುಗಳಿಗೆ ಬದ್ಧನಾಗುವದಕ್ಕೆ ಒಪ್ಪಿರುತ್ತೇನೆ.

2. ನಾನು ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಜಮೆ ಕಟ್ಟತಕ್ಕ ಬಗ್ಯೆ ಮೇಲೆ ಹೇಳಿದ ನಫೆಯ ದಶವಾಂಶದ ಮೊಬಲಗಿಗೋಸ್ಕರ ——————— ಪೌಂಡ್(ಯಾ ರೂಪಾಯಿ)ಗಳನ್ನ ——————— ಟ್ರೆಜರಿ (ಯಾ ಬ್ಯಾಂಕಿಗೆ ಪಾವತೀ ಮಾಡಿರುತ್ತೇನಲ್ಲದೆ ಅಂಥಾ ಪಾವತಿಗೆ ಆಧಾರವಾಗಿ ——— ನೇ ಮುರ್ಕ್ಕಂ ——— ನೇ ನಂಬರ್ ರಶೀತಿಯನ್ನು ಇದರ ಸಂಗಡ ಹಾಜರ್ಮಾಡಿರುತ್ತೇನೆ.

ಅಯ್ಯಾ,
ತಮ್ಮ ಅತ್ಯಂತ ವಿಧೇಯ ಶೇವಕನಾದ,

———————

ಮುರ್ಕ್ಕಂ. ———————

(ದರಖಾಸ್ತುದಾರನ ರುಜು.)

* ಒಂದು ಸರ್ಟಿಫಿಕೇಟ್ ಯಾನೇ ವಿದ್ಯಾಸಂಬಂಧದ ಯಾ ಇತರ ಸಮಾಜದ ತರಫಿನಲ್ಲಿ ದರಖಾಸ್ತು ಮಾಡಲ್ಪಟ್ಟರೆ ಅಂಥಾ ಯಾ ಸಮಾಜಕ್ಕೆ ಶೇರಿದ ಮೆಂಬರುಗಳ ಹೆಸರು ತಪಸೀಲಾಗಿ ನಮೂದಿಸಲ್ಪಡಬೇಕು.

ಹೆಸರು ಮತ್ತು ಮೇಲ್ವಿಳಾಸ ಪೂರ್ತಿಯಾಗಿ ಕೆಳಗೆ ನಮೂದಿಸಲ್ಪಡಬೇಕು.

ದರಖಾಸ್ತು ಮಾಡೋಣಾದ ತಾಕಿನ ವಿವರಣೆ.

ನಂಬರು.	ಹೆಸರು.	ವಿಸ್ತೀರ್ಣ.

ತಾರೀಖು 12ನೇ ಅಕ್ಟೋಬರ್ 1887.

ತಪ್ಪು ತಿದ್ದುಪಡಿ.

ನಂ. 134.—ಸನ್ 1884ನೇ ಇಸವಿ ಜೂನ್ 28ನೇ ಮರ್ಕುಮಿನ ಮೈಸೂರು ಗೆಜೆಟ್ಟಿನ IIIನೇ ಭಾಗದಲ್ಲಿ ಛಾಯಿಸಾದ ಕನ್ನಡ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 629ನೇ ಸೆಕ್ಷನಿನ 8ನೇ ಪಂಙ್ತಿಯಲ್ಲಿ "ಅಂಗೀಕಾರ ವಾಗಲಾರದೆಂಬ" ಯೆಂಬ ಮಾತುಗಳಿಗೆ ಬದಲಾಗಿ "ಅಂಗೀಕಾರವಾಗ ಬಹುದೆಂಬ" ಯೆಂದು ಓದಿಕೊಳ್ಳತಕ್ಕದ್ದು.

ತಾರೀಖು 14ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1502.—ಬನ್ನೂರಲ್ಲಿರುವ ಪಬ್ಲಿಕ್ ವರಕ್ಸ್ ಲಾಡ್ಜ್ ಬಂಗ್ಲೆಯು, ಈ ತಾರೀಖು ಲಾಗಾಯತು ಪ್ರಯಾಣಸ್ಥರಿಗೆ 3ನೇ ಕ್ಲಾಸ್ ಟ್ರಾವಲರ್ಸ್ ಬಂಗ್ಲೆಯಾಗಿ ಉಪಯೋಗಿಸಲ್ಪಡತಕ್ಕದ್ದು.

ತಾರೀಖು—ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1510.—1878ನೇ ಇಸವಿ ಆಗಸ್ಟ್ 10ನೇ ಮರ್ಕುಂ 130ನೇ ನಂಬರವುಳ್ಳ ಲೇಟ್ ಚೀಫ್ ಕಮಿಷನರವರ ಇಸ್ತಿಹಾರ್ನಾಮೆಯನ್ನು ಬದಲಾಯಿಸಿ, ಇದರಡಿ ನಮೂದ್ ಮಾಡಲ್ಪಟ್ಟ ಶಿವಮೊಗ್ಗಾ ಷಹರಿನ ಪರಿಷ್ಕರಿಸಲ್ಪಟ್ಟ ಚೆಕ್ಕುಬಂದಿಯು ದಿವಾನರವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೇ ಬಗ್ಯೆ ಪ್ರಕಟಿಸಲ್ಪಡುತ್ತೆ:—

ಉತ್ತರಕ್ಕೆ.—ಶಿಂಗಪ್ಪನವರ ಬಂಗಲೇಯಿಂದ ಸದರೀ ಬಂಗಲೇ ದೇಖೀಲ್ ಮ್ಯುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೊರಟು ಮೆ॥ ಡರ್ಕ್ ಮೆಕ್ಕೆಂಜಿ ಬಂಗಲೆ ಮತ್ತು ಯಗ್ಸಿಕ್ಯೂಟಿವ್ ಇಂಜನಿಯರ್ ಆಫೀಸ್ ದೇಖೀಲ್ ಶಿವಮೊಗ್ಗೆಯ 30ನೇ ಸರ್ವೇನಂಬರ್ ಬಳಿ ಹೊನ್ನಾಳಿ ರಸ್ತೆಯ ವರಿಗೂ ವಿಸ್ತರಿಸಿ ಅದೇರಸ್ತೆ ಮಾರ್ಗವಾಗಿ ಹೊರಟು, ಶಿವಮೊಗ್ಗಾ—ಹೊನ್ನಾಳಿ (ಹರಿಹರ) ರಸ್ತೆಗಳು ಅಂದರ (ವಂದು ಯಗ್ಸಿಕ್ಯೂಟಿವ್ ಇಂಜನಿಯರ್ ಆಫೀಸಿನ ಮುಂಭಾಗದಿಂದಲೂ ಮತ್ತೊಂದು ಸೋಮಯ್ಯನವರ ಕೆರೆ ಯೇರಿ ಯಿಂದಲೂ ಆರಂಭಿಸುವ) ಸಂಧಿಸುವ ಮುಳಕೆರೆಯ 60ನೇ ಸರ್ವೇ ನಂಬರ ಬಳಿಯಣ ಆಕಟ್ರಾಯಿ ತೆರಿಗೆ ಮನೆ ವರಿವಿಗೂ ವಿಸ್ತರಿಸುತ್ತದೆ.

ದಕ್ಷಿಣಕ್ಕೆ.—ಪೋಲೀಸ್ ಠಾಣೇ ದೇಖೀಲ್ ಅದರ ಬಳಿಯಣ ಆಗುಂಬಿ ರಸ್ತೇಯಿಂದ ತುಂಗಾ ನದಿವರಿಗೂ ಅಂದರೆ ತುಂಗಾ ನದಿ ಶೇತುವೆ ದಕ್ಷಿಣ ದಿಕ್ಕಿನ ಕೊನೆ ವರಿಗೂ ವಿಸ್ತರಿಸುತ್ತದೆ.

ಪೂರ್ವಕ್ಕೆ.—ಸದರೀ ತುಂಗಾನದಿ ಶೇತುವೆಯ ದಕ್ಷಿಣ ದಿಕ್ಕಿನ ಕೊನೇಯಿಂದ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೇ ಯೇರಿ ದಾಟಿ ಶಿವಮೊಗ್ಗಾ ಹೊನ್ನಾಳಿ ರಸ್ತೆಗಳು (ವಂದನೇ ಕಲಂನಲ್ಲಿ ಪ್ಯಾರೆಗ್ರಾಫ್ ನೆಂನಲ್ಲಿ ತೋರಿಸಲ್ಪಟ್ಟಂತೆ) ಸಂಧಿಸುವ ಮುಳಕೆರಿಯ 60ನೇ ಸರ್ವೇ ನಂಬರ್ ಬಳಿಯಣ ಆಕ್ಟ್ರಾಯಿ ತೆರಿಗೆ ಮನೆ ವರಿಗೂ ವಿಸ್ತರಿಸುತ್ತದೆ.

ಪಶ್ಚಿಮಕ್ಕೆ.—ಹೋದಿಗೆರೆ ಮುರಿಗೇಂದ್ರಪ್ಪನ ಬಂಗಲೇಯಿಂದ ಸದರೀ ಬಂಗಲೆ ದೇಖೀಲ್ ಸಾಗರದ (ಹೊನ್ನಾವಾರ) ದೊಡ್ಡರಸ್ತೆ ಮಾರ್ಗವಾಗಿ ದಕ್ಷಿಣಕ್ಕಾಗಿ ಕಿಲೇದಾರ್ ತಬೇಲಿ ಮತ್ತು ಲೈನ್ಸ್‌ಯಹಿನೆ ಮನೆಗಳು ದೇಖೀಲ್ 113 ಮತ್ತು 114ನೇ ಸರ್ವೇನಂಬರುಗಳು ಸಹಿತವಾಗಿ ಆಗುಂಬಿ ರಸ್ತೆಯಲ್ಲಿ ತುಂಗಾ ನದಿವರಿಗೂ ವಿಸ್ತರಿಸುತ್ತದೆ.

ತಾರೀಖು 20ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1555.—ಕೋಲಾರ ಡಿಸ್ಟ್ರಿಕ್ಟು ಟ್ರೆಜರೀ ಚಾರ್ಜುಳ್ಳ ಅಸಿಸ್ಟೆಂಟ್ ಕಮಿಷನರ್ ಮೆ|| ಕೃಷ್ಣಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಐದು ದಿವಸಗಳ ಕ್ಯಾಜುಎಲ್ ರಜಾ ಕೊಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1565.—ಚಿತ್ರದುರ್ಗದ ಮುನ್ಸಿಫ್ ವ 2ನೇ ಕ್ಲಾಸ ಮಾಜಿಸ್ಟ್ರೇಟರಾದ ತಿರುನಾರಣಾಚಾರ್ ಬಿ. ಯ. ಬಿ. ಎಲ್. ಯವರಿಗೆ, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 357ನೇ ಸೆಕ್ಷನ್ ಅನುಸರಿಸಿ ಫಿರ್ಯಾದಿಗಳ ವ ಸಾಕ್ಷಿಗಾರರ ವಾಗ್ಮೂಲವನ್ನು ಸ್ವದಸ್ತೂರ್ ಇಂಗ್ಲಿಷ್ ಭಾಷೆಯಲ್ಲಿ ತೆಗದುಕೊಳ್ಳುವ ಬಗ್ಗೆ ಅಧಿಕಾರ ಕೊಡಲ್ಪಟ್ಟಿರುತ್ತೆ.

ತಾರೀಖು 24ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1580.—ಶ್ರೀಮನ್ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ, ಇದರಡೀಕಂಡ ಜಮೀನ್ ತಾಕುಗಳು, ಮೈಸೂರು ದೇಶದಲ್ಲಿ ಕೆಲವು ಜಮೀನ್ ತಾಕುಗಳೊಳಗೆ ಗನೀ ಕೆಲಸನಡಿಸುವ ಬಗ್ಗೆ ಲೈಸೆನ್ಸಿಗೋಸ್ಕರ ದರಖಾಸ್ತುಗಳನ್ನು ಅಪೇಕ್ಷಿಸುವಂಥಾ 1887ನೇ ಇಸವಿ ಸೆಪ್ಟಂಬರ್ 12ನೇ ಹುಕ್ಕುಂ 113ನೇ ನಂಬರ್ ಇಸ್ತಿಹಾರ್‌ನಾಮೆಯ A ಗುರ್ತಿನ ಅರ್ಡಿಕಿಗೆ ಸೇರಿಸಲ್ಪಡತಕ್ಕದ್ದು:—

ಪ್ರತಿತಾಕಿನ ನಂಬರು.	ಪ್ರತಿ ತಾಕಿನ ಹೆಸರು.	ಪ್ರತಿ ತಾಕು ಇರತಕ್ಕ ಪ್ರದೇಶ.			ಟೋಪೋಗ್ರಾಫಿಕಲ್ ಮ್ಯಾಪಿನ ನಂಬರ್.	ಪ್ರತಿ ತಾಕು ಯಾವ ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುತ್ತಿಂಬುವದು.		ಹಿಂದಿನ ಕಡೇ ಮೇಸ್ತ್ರಿಕಿನಲ್ಲಿ ವಿವರಿಸಲ್ಪಟ್ಟ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುವ ಜಮೀನ್‌ಪೈಕಿ ಇದುವರಿಗೆ ಅನ್ಯಥಾ ವಿಲ್ಹೇವಾರಿ ಮಾಡಲ್ಪಟ್ಟ ಜಮೀನಿನ ವಿಸ್ತೀರ್ಣ.	(ಹಿಂದಿನ ಕಡೇ ಮೇಸ್ತ್ರಿಕಿನಲ್ಲಿ ಕಂಡ ವಿಸ್ತೀರ್ಣ ವಾಯಿ) ಹಾಲಿ ಗನೀಕೆಲಸದ ಲೈಸೆನ್ಸ್ ಕೊಡಲ್ಪಡುವಂಥಾದ್ದರ ವಿಸ್ತೀರ್ಣ.
		ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮಗಳು.		ದಕ್ಷಿಣೋತ್ತರ ವೃತ್ತಗಳು.	ಯಾಮ್ಯೋತ್ತರ ರೇಖೆ.		
15		ಹಾಸನ	ಚನ್ನರಾಯಪಟ್ಟಣ	1 ಮಾಲಶೆಟ್ಟಿಹಳ್ಳಿ 2 ಮಾದಾಪುರ 3 ರಾಜಾಪುರ	55	12°—56′ ಮತ್ತು 12°–57′ರ ಮಧ್ಯೆ	76°—33′ ಮತ್ತು 76°–35′ರ ಮಧ್ಯೆ		½ ಚದರಮೈಲಿ ಅಂದರೆ, ಪೂರ್ವ ಪಶ್ಚಿಮ ಒಂದು ಮೈಲಿ ಉತ್ತರ ದಕ್ಷಿಣ ½ ಮೈಲಿ
16		ಮೈಸೂರು	ಶ್ರೀರಂಗಪಟ್ಟಣ	1 ಹುವ್ವಿನಕೆರೆ 2 ವಡಯಂಡಹಳ್ಳಿ 3 ಗೊಬ್ಬಗಾಲ 4 ಕಾಳೇನಹಳ್ಳಿ 5 ಪೆರಮಾಂಡಹಳ್ಳಿ	57	12°—25′ ಮತ್ತು 12°–27′ರ ಮಧ್ಯೆ	76°—50′ ಮತ್ತು 76°–51ರ′ ಮಧ್ಯೆ		½ ಚದರ ಮೈಲಿ

ತಾರೀಖು 22ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1551.—ಹುಜೂರು ಖಜಾನಾ ಬಕ್ಷೀರಾದ ಮೆ|| ಎ. ವೀರಾಸಾಮಿ ಮೊದಲಿಯಾರ್ರಿಗೆ, ಮಾಹೇ ಮಜಕೂರ 24ನೇ ಹುಕ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು 5 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 23ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1587.—ಶಿಕಾರಿಪುರ ವ ಸೊರಬ ತಾಲ್ಲೂಕಿನ ಇದರಡೀಕಂಡ ಮಾರ್ಗಣೀಗಳು ಫಾರೆಸ್ಟು ಕೆಲಸಗಳಿಗೋಸ್ಕರ ಮಲ್‌ನಾಡೆಂಬದಾಗಿ ಆಚರಿಸಲ್ಪಡತಕ್ಕದ್ದು:—

ಶಿಕಾರಿಪುರ ತಾಲ್ಲೂಕು	..	ಜೆಳಂದೂರು	ಮಾಗಣಿ
		ಬಾರೂರು	,,
ಸೊರಬ ತಾಲ್ಲೂಕು	..	ಸೊರಬ	,,
		ಕ್ಯಾಸನೂರು	,,
		ಚಂದ್ರಗುತ್ತಿ	,,
		ಚಿಟ್ಟೂರು	,,
		ಶಿಗ್ಗಾ	,,
		ಹೆಚ್ಚೆ	,,

ತಾರೀಖು 25ನೇ ಅಕ್ಟೋಬರ್ 1887.

ನಂ. 138.—ತೀರ್ಥಹಳ್ಳಿ ಅಮಲ್‌ದಾರ್ ತಿರುಮಲಾಚಾರ್ರಿಗೆ, ಮಾಹೇ ಘುಜಕೂರ್ 7ನೇ ಮರ್ಕುಂ 1420ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಕೊಡಲ್ಪಟ್ಟ ಒಂದುತಿಂಗಳ ಪ್ರಿವಿಲೀಜ್ ರಜಾ ಅವರಿಂದ ಉಪಯೋಗಿಸಲ್ಪಡದೇ ಯಿರುವದರಿಂದ ಅವರ ಖಾಯಿಷ್ಮೇರಿಗೆ ರದ್ದು ಮಾಡಲ್ಪಟ್ಟಿರುತ್ತೆ.

ಬಮೋಜಿಬ್ ಹುಕ್ಕುಂ,
ಆರ್. ವಿಜಯೀಂದ್ರರಾವ್,
ಚೀಫ್ ಸೆಕ್ರೆಟರಿ.

901

ಮೈಸೂರ ಗೆಜೆಟ್

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ|| 5, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಾಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟು ಇಲಾಖಾ.

ತಾರೀಖು 11ನೇ ಅಕ್ಟೋಬರ್ 1887.

ಇದರಿಂದ ತಿಳಿಯುಪಡಿಸುವದೇನಂದರೆ, ಮೈಸೂರಿಂದ 43ನೇ ಮೈಲಿಯಲ್ಲಿರುವ ಹೆಗ್ಗಡದೇವನಕೋಟೆ ತಾಲ್ಲೂಕು ನಿಸನ ಸ್ಥಳದಲ್ಲಿ ಹೊಸದಾಗಿ ಹಿಡಿಯಲ್ಪಟ್ಟ ಈ ಕೆಳಗೆ ನಮೂದು ಮಾಡಲ್ಪಡುವ ಆನೆಗಳು ಮತ್ತು ಈ ಮಧ್ಯ ಕಾಲದಲ್ಲಿ ಹಿಡಿಯಲ್ಪಡುವ ಆನೆಗಳು ಸಹ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಸೂಪರ್‌ಟೆಂಡೆಂಟರವರಿಂದ ಸನ್ 1887ನೇ ಇಸವಿ ನವಂಬರ್ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು.

ನಂಬರು.	ಹೆಸರುಗಳು.	ಜಾತಿ.	ಎತ್ತರ.		ಹಿಡಿಯಲ್ಪಟ್ಟ ತಿಂಗಳು.	ಷರಾ.
			ಅಡಿ.	ಅಂಗುಲ.		
1	ಗಜಲಕ್ಷ್ಮಿ ..	ಹೆಣ್ಣು.	4	10	1887ನೇ ಏಪ್ರೆಲ್	
2	ಸದಾಶಿವ ..	ಗಂಡು	4	5	ಡಿಟ್ಟೋ ಜೂನ್	
3	ಶುಕಾರಿ ..	ಹೆಣ್ಣು.	4	0	ಡಿಟ್ಟೋ ಆಗಸ್ಟ್	

ಷರತ್ತುಗಳು—ಶೇಕಡಾ 25 ರೂಪಾಯಿ ಪ್ರಕಾರ ಠೇವಣಿ ಮೊಬಲಗನ್ನು ಕೂಡ್ಲೆ ಸಮೀಪದಲ್ಲಿರುವ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡತಕ್ಕದ್ದು. ಬಾಕಿ ಮೊಬಲಗನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಳಗಾಗಿ ಮತ್ತು ಆನೆಗಳನ್ನು ಸಾಗಿಸಿಕೊಳ್ಳುವದಕ್ಕೆ ಮುಂಚಿತವಾಗಿ ಪಾವತೀ ಮಾಡಬೇಕು, ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಆನೆಗಳು ಪುನಃ ಹರಾಜ್ ಮಾಡಲ್ಪಡುವವು ನಷ್ಟಕ್ಕೆ ಅವಲ್ ಖರೀದಾರನು ಗುರಿಯಾಗತಕ್ಕದ್ದು. ಹರಾಜಿನಲ್ಲಿ ಜಾಸ್ತಿ ಹುಟ್ಟಿದರೆ ಅದರಲ್ಲಿ ಆತನಿಗೆ ಯೇನೂ ಸಲ್ಲಲಾರದು.
ಖರೀದಿ ತಾರೀಖು ಲಾಗಾಯಿತು ಖರೀದಿದಾರನೇ ಆನೆಗಳ ರಾತೀಪು ವಗೈರೆ ಖರ್ಚುಗಳನ್ನ ವಹಿಸತಕ್ಕದ್ದು.

ತಾರೀಖು 5ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ, ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲೀಯಾನಾ ಹರಾಜ್‌ಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು—ಶಿಕಾರಿಪುರದ ಕೋರಿ	10ನೇ ನವಂಬರ 1887.	ಹೆಚ್ಚು ಕಡಮೆ	250 ಟರ್ಗಳು.
ಅನಂತಪುರದ ಕೋರಿ ..	14ನೇ ಡಿಟ್ಟೋ	..	50 ಡಿಟ್ಟೋ
ಶಿವಮೊಗ್ಗಾ ಡಿಟ್ಟೋ ..	19ನೇ ಡಿಟ್ಟೋ	..	500 ಡಿಟ್ಟೋ
ತೀರ್ಥಹಳ್ಳಿ ಡಿಟ್ಟೋ ..	25ನೇ ಡಿಟ್ಟೋ	..	200 ಡಿಟ್ಟೋ
ಕಡೂರು ಡಿಸ್ಟ್ರಿಕ್ಟು—ಚಿಕ್ಕಮಗಳೂರು ಕೋರಿ	1ನೇ ಡಿಶಂಬರ 1887.	..	200 ಡಿಟ್ಟೋ
ಹಾಸನ ಡಿಸ್ಟ್ರಿಕ್ಟು—ಹಾಸನ ಕೋರಿ	7ನೇ ಡಿಟ್ಟೋ	..	300 ಡಿಟ್ಟೋ
ಮೈಸೂರು ಡಿಸ್ಟ್ರಿಕ್ಟು—ಶ್ರೀರಂಗಪಟ್ಟಣ ಕೋರಿ	12ನೇ ಡಿಟ್ಟೋ	..	800 ಡಿಟ್ಟೋ
ಹುಣಸೂರು ಡಿಟ್ಟೋ ..	16ನೇ ಡಿಟ್ಟೋ	..	
ಬೆಂಗಳೂರು ಡಿಸ್ಟ್ರಿಕ್ಟು—ಬೆಂಗಳೂರು ಕೋರಿ	20ನೇ ಡಿಟ್ಟೋ	..	150 ಡಿಟ್ಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ 3ನೇ ತಾರೀಖುಗಳ 34, 35ನೇ ನಂಬರು ಗೆಜೆಟ್ ಗಳಲ್ಲಿ ಫಾಯಿಷ್ ಮಾಡಲ್ಪಟ್ಟ ಇಸ್ತಿಹಾರಗಳನ್ನ ನೋಡಿಕೊಳ್ಳತಕ್ಕದ್ದು ಮತ್ತು ಸದರೀ ಇಸ್ತಿಹಾರಗಳು ಹರಾಜ್ ಕಾಲದಲ್ಲಿ ಓದಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್.

ಮೈಸೂರು ರೆವಿನ್ಯೂ ಸರ್ವೆ ಸೆಟ್ಲಮೆಂಟ್ ಇಲಾಖಾ.

ನಂ. 586. ತಾರೀಖು 21ನೇ ಅಕ್ಟೋಬರ 1887.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಯಿದರಿಂದ ಪ್ರಕಟಿಸಲ್ಪಡುವದೇನಂದರೆ, ಸ್ಟ 1887—88 ಸರ್ವೆ ಅಯಾಂ ಕಾಲದಲ್ಲಿ ಇದರಡಿ ನಮೂದಿಸುವ ತಾಲ್ಲೂಕುಗಳಲ್ಲಿ ಮೆಜರಿಂಗ್ ಯಾನೆ ಮೋಜಣಿ, ಕ್ಲಾಸಿಫಿಕೇಷನ್ ಯಾನೆ ಪ್ರತಿಬಂದಿ ಮತ್ತು ಸೆಟಲ್‌ಮೆಂಟ್ ಯಾನೆ ತರಂ ಫೈಸಲ್ ಕೆಲಸಗಳು ನಡಿಸಲ್ಪಡುವವು.

ಡಿಸ್ಟ್ರಿಕ್ಟು.	ತಾಲ್ಲೂಕು.	ಕೆಲಸ ಷುರುವಾಗತಕ್ಕ ಷುಮಾರು ತಾರೀಖು.	ಷರಾ.
	ಮೋಜಣಿಯು.		
ಮೈಸೂರು ..	ಮಳವಳ್ಳಿ	1ನೇ ನವಂಬರ 1887	
ಡಿಟ್ಟೋ ..	ತಿರಮಕೂಡು ನರಸೀಪುರ	ಡಿಟ್ಟೋ	
ಡಿಟ್ಟೋ ..	ಚಾಮರಾಜನಗರ	ಡಿಟ್ಟೋ	
ಡಿಟ್ಟೋ ..	ನಂಜನಗೂಡು	ಡಿಟ್ಟೋ	
ಬೆಂಗಳೂರು ..	ಹೊಸ್ಕೋಟೆ	ಡಿಟ್ಟೋ	
ಡಿಟ್ಟೋ ..	ಕಾನಖಾನಹಳ್ಳಿ	1ನೇ ಫೆಬ್ರವರೀ 1888	
ಕಡೂರು ..	ಶೃಂಗೇರಿಜಹಗೀರ್	1ನೇ ಜನವರೀ 1888	
	ಪ್ರತಿಬಂದಿಯು.		
ಕೋಲಾರ ..	ಕೋಲಾರ	1ನೇ ನವಂಬರ 1887	
ಡಿಟ್ಟೋ ..	ಬವರಿಂಗಪೇಟೆ	ಡಿಟ್ಟೋ	
ಮೈಸೂರು ..	ಶ್ರೀರಂಗಪಟ್ಟಣ	1ನೇ ಫೆಬ್ರವರೀ 1888	
	ತರಂ ಫೈಸಲ್.		
ಮೈಸೂರು ..	ಮಂಡ್ಯ	1ನೇ ಮಾರ್ಚೀ 1888	
ಡಿಟ್ಟೋ ..	ನಾಗಮಂಗಲ	15ನೇ ಏಪ್ರೆಲ್ 1888	

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಮೈಸೂರ್ ರೆವಿನ್ಯೂ ಸರ್ವೆ.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 951.

ಚಿಕ್ಕಬಳ್ಳಾಪುರದ ಕಸಬೆಯಲ್ಲಿದ್ದು ಮೃತಪಟ್ಟ ವೆಂಗಟರಡ್ಡಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಚಿಕ್ಕಬಳ್ಳಾಪುರದಲ್ಲಿರುವ ಬಯ್ಯಮ್ಮ, ಮೃತಪಟ್ಟ ಸದರೀ ವೆಂಗಟರಡ್ಡಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಬಳ್ಳಾಪುರ ಸ್ಥಳದ ಬಯ್ಯಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ವೆಂಗಟರಡ್ಡಿಯ ಜಿಂದಗೀ ಬಗ್ಗೆ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಬಯ್ಯಮ್ಮನ ಅರ್ಜೀಯನ್ನು 1887ನೇ ಇಸವಿ ನವೆಂಬರ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಗಟರಡ್ಡಿಯ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅಕ್ಟೋಬರ್ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳೀಯಾದ ಡಿಕ್ರೀ ದೇಣೇದಾರ ಪಾವಗಡ ತಾಲ್ಲೂಕು ರಂಗಸಮುದ್ರದಲ್ಲಿ ಯಿರತಕ್ಕ ಗರುಡಾ ಪುರಫ್ ತಿಪ್ಪಯ್ಯನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರ 467.

ಹುಕ್ಕುಂ.

ಮೇಲ್ಕಂಡ ತಿಪ್ಪಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರಿಸ್ ಸಾಹೇಬರವರ ರೂಬರೂ ಅರ್ಜೀದಾರನಾದ ತಿಪ್ಪಯ್ಯನ ಪರವಾಗಿ ಮೆ|| ಅಡ್ವೊಕೇಟ್ ನರಸುಬ್ರಹ್ಮಣ್ಯಯ್ಯಂಗಾರ್ರವರೂ ಮತ್ತು ಸದರೀಯವನ ಲೇಣೇದಾರ್ರಾದ 1ನೇಯವರ ತರಫ್ ಅಡ್ವೊಕೇಟ್ ಮೆ|| ಕೆ. ಶ್ರೀನಿವಾಸಯ್ಯಂಗಾರ್ರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಗರುಡ ಪುರಫ್ ತಿಪ್ಪಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದ್ದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನು ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಆಗಸ್ಟು 8ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಡತಕ್ಕದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಪಾವಗಡ ತಾಲ್ಲೂಕು ರಂಗಸಮುದ್ರದಲ್ಲಿರತಕ್ಕ ತಿಮ್ಮಣ್ಣ ಶಾಸ್ತ್ರಿ ..	380 0 0	..	ಡಿಕರೀ ಬಾಬತು.	
		100 0 0	..	ಪತ್ರದ ಬಾಬತು.	
		117—7—6	..	ಕಂದಾಯದ ಬಾ|| ಇದರ ಬಡ್ಡೀ ಸಹ	
	ಜುಮ್ಲಾ ..	597—7—6			

ತಾರೀಖು 21ನೇ ಅಕ್ಟೋಬರ 1887.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಶಿದ್ದೀಕಟ್ಟೆಲಿರತಕ್ಕ ದಿವಾನ್ ಆಫೀಸ್ ಜವಾನ ರಾಮನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯಸ್ ನಂಬರ್ 527.

ಹುಕ್ಕುಂ.

ಮೇಲ್ಕಂಡ ರಾಮನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡಿಯವರಾದ ಮೆ|| ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ರಾಮನ ಪರವಾಗಿ ಮೆ|| ಅಡ್ವೊಕೇಟ್ ಸುಬ್ರಹ್ಮಣ್ಯಯ್ಯಂಗಾರ್ರನ್ನೂ ಮತ್ತು ಸದರೀಯವನ ಲೇಣೇದಾರ್ರಾದವರ ತರಫ್ 1—2—3—4ನೇರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ.—

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ರಾಮನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ, ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲೀ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸರ್ 1887ನೇ ಇಸವಿ ಅಕ್ಟೋಬರ್ 21ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಿಶೆ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಕೊಟ್ಟದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಬೆಂಗಳೂರು ಮಹರಾಷ್ಟ್ರ ಬ್ಯಾಂಕಿಗೆ ..	166	1880	ಡಿಕರೀ	
2	ಡಿಟ್ಟೋ ಧನಾಭಿವೃದ್ಧೀ ಬ್ಯಾಂಕಿಗೆ ..	25 ರೂ.	..	ಡಿಟ್ಟೋ	
3	ಡಿಟ್ಟೋ ಜವಳಿ ಅಂಗಡಿ ಬೋರಂಣ ..	5	..	ಡಿಟ್ಟೋ	
4	ಕಲಾಸಿಪಾಳ್ಯದ ತಿಬಂಣಗೆ ..	20	..	ಮೂಬದಲೇ ಬಾಬತು	
	ಜುಮ್ಲಾ ..	216			

ದಿವಾಳೀಯಾದ ಡಿಕ್ರೀ ದೇಣೇದಾರ ಚಿಕ್ಕಬಳ್ಳಾಪುರದ ಕೋಟೇಲಿರುವ ಭೀಮರಾವಿನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ಮಿಸಲೇನಿಯಸ್ ನಂಬರ್ 550.

ಹುಕ್ಕುಂ.

ಮೇಲ್ಕಂಡ ಭೀಮರಾವು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜೀರಾದ ಮೆ|| ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಭೀಮರಾವು ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಯವರ ತರಫ್ ಪ್ಲೀಡರ್ ಗಂಗಾಧರಯ್ಯನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ—2—3—4—5—6ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಭೀಮರಾವು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.			ಯಾವಾಗ ಬಿದ್ದಿತೋ ಅದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಚಿಕ್ಕಬಳ್ಳಾಪುರದಲ್ಲಿರುವ ದೇವಂಡಹಳ್ಳಿ ಬಸಪ್ಪರ ಚಿಕ್ಕ ಮುನಿಯಪ್ಪ	672	0	0	1885	ಡಿಕರೀ ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟಿನ ಬಾಬತು ನಂಬರ್ 241.	
2	ಡಿಟೋ ಕನ್ನಶೆಟ್ಟಪ್ಪನವರ ಪುಟಣ್ಣ ..	147	7	5	..	ಚಂದ್ರಪ್ಪಗೆ ಜಾಮೀನಾಗಿ ಕೊಡಿಸಿದ್ದು	
3	ಡಿಟೋ ಸ್ಟಾಂಪ್‌ವೆಂಡರ್ ಗೋವಿಂದಪ್ಪ ..	574	13	6	..	ಡಿಕ್ರೀ	
4	ಡಿಟೋ ಸುಬ್ರಹ್ಮಣ್ಯೇಶ್ವರ ಬ್ಯಾಂಕ್ ..	182	4	10	..	ಡಿಟೋ	
5	ಶೃಂಗೇರೀ ಕೊಪ್ಪದಲ್ಲಿ ಇರತಕ್ಕ ಇಂಜನಿಯರ್ ಇಲಾಖಾ ಓವರಸೀ ಸೂರ್ಯನಾರಾಯಣರಾವು ..	100	0	0	..	ಭೋಗ್ಯದಬಾಬತು	
6	ದೇವಂಡಹಳ್ಳಿ ತಾಲ್ಲೂಕು ಸರ್ವಮಾನ್ಯ ನಾರಾಯಣಪುರ ಪಟೇಲ್ ನಂಜೇಗೌಡಗೆ ..	50	0	0	..	ಡಿಟೋ	
	ಜುಮ್ಲಾ ..	1738	9	9			

ಸಿ. ಕ್ರೈಸ್,
ಸಬ್ ಜಡ್ಜ್.

ಫಾರೆಸ್ಟ್ ಇಲಾಖಾ.

ತಾರೀಖು 13ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 1889ನೇ ಇಸವಿ ಮಾರ್ಚಿ ಆಖೈರ್‌ವರಿಗೆ ಮೈಸೂರು ಡಿಸ್ಟ್ರಿಕ್ಟು ಹುಣಸೂರು ತಾಲ್ಲೂಕು ಬಾಬತು ಈ ಕೆಳಗೆ ನಮೂದಾಗುವ ಜಂಗಲ್‌ಗಳಿಂದ ಹುಣಸೂರ್ ಡಿಪೋಕ್ಕೆ ಚಿಲ್ಲರೇ ಚೌಬೀನೇ ಮತ್ತು ಗಳೂ ಸಹ ಹೇರಲು ಇಷ್ಟವುಳ್ಳವರು 1887ನೇ ಇಸವಿ ನವೆಂಬರ್ 15ನೇ ತಾರೀಖುವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಸೂಪರಿಂಟೆಂಡೆಂಟ್ ಸಾಹೇಬರವರ ಆಫೀಸಿಗೆ ದರಖಾಸ್ತು ಮಾಡಬಹುದು.

ದರಖಾಸ್ತುದಾರ ತಾನು ಗಾಡೀ ಬೋಜಾ 1ಕ್ಕೆ ಯಾವ ದರದಂತೆ ಚಿಲ್ಲರೇ ಚೌಬೀನಾ ಮತ್ತು ಬಿದರುಗಳು ಹೇರಲು ಒಪ್ಪುತ್ತಾನೋ ಆ ದರವನ್ನ ದರಖಾಸ್ತಿನಲ್ಲಿ ನಮೂದಿಸಬೇಕು.

1 ವೀರನ ಹೊಸಹಳ್ಳಿ ಜಂಗಲ್
2 ಕಜೂನಹಳ್ಳಿ ಡಿಟೋ
3 ಆನೆಚವಕೂರು ಡಿಟೋ
4 ಬಾಣಾರೀ ಜಂಗಲ್
5 ಮಾವಕಲ್ ಡಿಟೋ

ಟಿ. ಆನಂದರಾವ್,
ಡೆಪ್ಯುಟಿ ಕಮ್ಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 3ನೇ ನವಂಬರ್ 188".

ಡಿಸ್ಟ್ರಿಕ್ಟು ಮುಜಕೂರ್ ಬೆಂಗಳೂರು ತಾಲ್ಲೂಕು ಮತ್ತು ಕ್ಲೋಸ್‌ಪೇಟೆ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸ್‌ದಾರ‍್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶ ಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್ ಮತ್ತು ರಿಜಿಸ್ಟರ್ ಆಫೀಸ್ ಹೆಸರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಾನ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಾನ.	ರಿಜಿಸ್ಟರಿಗೆ ಹಾಜರು ಮಾಡಿದ ತಾರೀಖು.	ರಿಜಿಸ್ಟ್ರಿ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಬೆಂಗಳೂರು 1885—86 / 196	ಬೆಂಗಳೂರು ಮುದ್ದಪ್ಪನ ಪೇಟೇಯಲ್ಲಿ ಇರುವ ಗುಡೇಮಾರನಹಳ್ಳಿ ನಂಜಪ್ಪ	ಬೆಂಗಳೂರು ಬಳೆಪ್ಟೇಟೇಯಲ್ಲಿ ಇರುವ ಮಾತ್ರುಬಾಯಿ ಗುಂಡಪ್ಪ	1885ನೇ ಇಸವಿ ಮೇ ತಾರೀಖು 8	1885ನೇ ಇಸವಿ ಮೇ ತಾರೀಖು 8	ಬೆಂಗಳೂರು ಮುದ್ದಪ್ಪನ ಪೇಟೇಯಲ್ಲಿಇರುವ ಮ್ಯುನಿಸಿಪಲ್ ಬೋರ್ಡು 5ನೇ ನಂಬರ್ ಮನೆ 150 ರೂಪಾಯಿಗೆ ಭೋಗ್ಯ.
ಡಿಟ್ಟೋ 356	ಬೆಂಗಳೂರು ತಾಲ್ಲೂಕು ಬೇಗೂರಿನಲ್ಲಿರುವ ಚಿನ್ನಪ್ಪ	ಡಿಟ್ಟೋ ಬೆಂಗಳೂರಿನಲ್ಲಿರುವ ರಾಯಪ್ಪ	1885ನೇ ಜೂನ್ 5	1885ನೇ ಜೂನ್ 5	ಬೇಗೂರು ಗ್ರಾಮದ ಸರ್ವೆ 3ನೇ ನಂಬರ್ ಬಾಗಾಯತು ಜಮೀನು 50 ರೂಪಾಯಿಗೆ ಕ್ರಯ.
ಡಿಟ್ಟೋ 529	ಬೆಂಗಳೂರು ರಾಣಾಸಿಂಗನಪೇಟೇಲಿರುವ ಅಬುದುಲ್ ಖುದ್ದೂಸ್ ಸಾಬಿಹೆಂಡತಿ ಹಯಾತ್‌ಬಿ	ಡಿಟ್ಟೋ ಅಬ್ದುಲ್ ಖುದ್ದೂಸ್ ಸಾಬಿ	1885ನೇ ಜುಲೈ 3	1885ನೇ ಜುಲೈ 3	ಬೆಂಗಳೂರು ತಾಲ್ಲೂಕು ಗುಡದಹಳ್ಳಿ ಹೋಬಳಿ ಗ್ರಾಮದ ಬಳಿಯಣ ಜಮೀನುಗಳು 600 ರೂಪಾಯಿಗೆ ಕ್ರಯ ಮಾಡಿರುವಂತೆ.
ಡಿಟ್ಟೋ 813	ಬೆಂಗಳೂರು ತಾ|| ಬಾಣಾವಾರದಲ್ಲಿ ಇರುವ ಮಹಮ್ಮದ್ ಮದಾರ್‌ಸಾಬಿ	ಡಿಟ್ಟೋ ಬಾಣಾವಾರದಲ್ಲಿ ಇರುವ ಮುಳಗಿರಿಯಪ್ಪ, ಚಿನ್ನಪ್ಪ	1885ನೇ ಆಗಸ್ಟು 18	1885ನೇ ಆಗಸ್ಟು 18	ಬಾಣಾವಾರ ಗ್ರಾಮದ ಬಳಿ ಸರ್ವೆ 134ನೇ ಸಂ. ಹೊಲವನ್ನು 70 ರೂಪಾಯಿಗಳಿಗೆ ಆಧಾರಮಾಡಿ ಇರುವಂತೆ.
ಕ್ಲೋಸ್‌ಪೇಟೆ 1884—85 / ನಂ. 164	ನಾಗವಾರದಲ್ಲಿ ಇರುವ ವಕ್ಕಲಿಗರ ಕಬ್ಬೆ ಶಿದ್ದೇಗೌಡನ ಮಗ ಚೋರ	ಕಲಗೆರೇಲಿರುವ ನಾರಾಯಣಸಿಂಗರ ಮಗ ಚಂದ್ರಭಾನ್‌ಶಿಂಗ್	1885ನೇ ಮಾರ್ಚಿ 7	1885ನೇ ಮಾರ್ಚಿ 7	ನಾಗವಾರದ ಗ್ರಾಮದ ಖುಷ್ಕಿ 185ನೇ ನಂ. ಜಮೀನ್ ಸಾಲ್ 1ಕ್ಕೆ 9 ರೂಪಾಯಿ ಗುತ್ತಿಗೆ ವಾಯಿದೆ 3 ವರುಷ.
1885—86 ನಂಬರ್ 180	ಶಿಂಗರಾಜಪುರದಲ್ಲಿಇರುವ ಕೃಷ್ಣಪ್ಪನ ಮಗ ರಾಮಯ್ಯ ವುರಫ್ ವೆಂಕಟರಾಮಯ್ಯ	ಕೋಡಿ ಹೊಸಹಳ್ಳೀಲಿರುವ ಶಿವಾಚಾರದ ಮಲ್ಲಿಕಾರ್ಜುನಯ್ಯನ ಮಗ ಮಲ್ಲಯ್ಯ	1885ನೇ ಇಸವಿ ಅಕ್ಟೋಬರ್ ತಾರೀಖು 2	1885ನೇ ಇಸವಿ ಅಕ್ಟೋಬರ್ ತಾರೀಖು 2	100 ರೂಪಾಯಿನ ಶುದ್ಧ ಭೋಗ್ಯಪತ್ರ.
1885—86 2ನೇ ಬುಕ್ಕು ನಂಬರ್ 2	ಅಕ್ಕೂರು ಗ್ರಾಮದಲ್ಲಿ ಇರುವ ದಾಸೇಗೌಡನ ಮಗ ನೀಲೇಗೌಡ	ಅಕ್ಕೂರು ಗ್ರಾಮದಲ್ಲಿ ಇರುವ ನೀಲೇಗೌಡನ ಮಗ ದಾಸೇಗೌಡ	1885ನೇ ಇಸವಿ ಮೇ 18	ಯಿಲ್ಲ	100 ರೂಪಾಯಿಗೆ ಖರೀದಿಪತ್ರ.

ಎ. ಹೆಚ್. ಮೆಕ್ಕಿನ್ಟೈರ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 532.

ಮೃತಪಟ್ಟ ದನಗಹಳ್ಳಿ ನಂಜರಾಜೇ ಅರಸಿನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಕೃಷ್ಣೀ ಅರಸಿನವರು ಮೃತಪಟ್ಟ ಸದರೀ ನಂಜರಾಜೇಅರಸಿನವರಿಗೆ ದತ್ತು ಮಕ್ಕಳಾಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕಿಲ್ಲೇ ಸ್ಥಳದ ಸದರೀ ಕೃಷ್ಣೀ ಅರಸಿನವರು ಸದರೀ ವಾಸಸ್ಥರಾಗಿ ಮೃತಪಟ್ಟ ನಂಜರಾಜೇ ಅರಸಿನವರ ಜಿಂದಗೀ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣೀ ಅರಸಿನವರ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡೆಯುತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜರಾಜೇ ಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿಯಿದೆ.

1887ನೇ ಇಸವಿ ಅಕ್ಟೋಬರ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಸಿಸೀ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 537.

ಮೃತಪಟ್ಟ ದೇವೀದಾಸ್‌ಲಾಲಾನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಸುಬುಕರ್ಣಲಾಲ್ ಮೃತಪಟ್ಟ ಸದರೀ ದೇವೀದಾಸ್‌ಲಾಲನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ದೇವರಾಜ ಮೊಹಲಾ ಸ್ಥಳದ ಸದರೀ ಸುಬುಕರ್ಣಲಾಲರು ಸದರೀ ವಾಸಸ್ಥರಾಗಿ ಮೃತಪಟ್ಟ ದೇವೀದಾಸ್‌ಲಾಲಾರ ಜಿಂದಗೀ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲಗಳನ್ನು ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬುಕರ್ಣಲಾಲರ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವೀದಾಸ್‌ಲಾಲಾರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1887ನೇ ಇಸವಿ ಅಕ್ಟೋಬರು ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ಸಿಸೀ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 539.

ಮೃತಪಟ್ಟ ರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ತಿಮ್ಮಮ್ಮನವರು, ಮೃತಪಟ್ಟ ಸದರೀ ರಾಮಯ್ಯನವರಿಗೆ ತಾಯಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರ್ ಮಂಡಿಮೊಹಲಾ ಸ್ಥಳದ ಸದರೀ ತಿಮ್ಮಮ್ಮನವರು ಸದರೀ ವಾಸಸ್ಥರಾಗಿ ಮೃತಪಟ್ಟ ರಾಮಯ್ಯನವರ ಜಿಂದಗೀ ಬಗ್ಯಾಗಿ ಬರತಕ್ಕ 150 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ತಿಮ್ಮಮ್ಮನವರ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಯ್ಯನವರ ಆಸ್ತಿಗೆ ಹಕ್ಕುದಾರರಾದವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಅಕ್ಟೋಬರ್ 26ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ಯಸ್, ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ನಂ. 11. ತಾರೀಖು 21ನೇ ಅಕ್ಟೋಬರ್ 1887.

ಹುಣಸೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತೈವಜನ್ನ ಕ್ರಮವಾದ ವಾರಸ್ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಮೇರೆಗೆ ನಾಶ ಮಾಡಲ್ಪಡುತ್ತೆ:—

ನಂಬರ್.	ದಸ್ತೈವಜನ್ನ ಬರದು ಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜನ್ನ ಬರಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರುಪಡಿಸಿದ ತಾರೀಖು.	ರಿಜಿಸ್ಟ್ರು ಮಾಡಿದ ತಾರೀಖು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತು.
222ನೇ ನಂ. ——— 1885—86	ಶಿರ್ಯಾಪ ತಾಲ್ಲೂಕು ಮದ್ದೂಡಿ ಗ್ರಾಮದಲ್ಲಿ ಇರುವ ಬಲಗ್ಯೆ ಹನುಮನ ಮಗ ಮಗ್ಗದ ಕಸಬಿನಿಂದ ಜೀವಿಸುವ ಹನುಮಂತ	ಹುಣಸೂರು ಟವರ್ನಲ್ಲಿಯಿರುವ ಜಿರಾಯತು ಮತ್ತು ಸರಕಾರದ ಚಾಕರಿ ತನದಿಂದ ಜೀವಿಸುವ ಬಲಗ್ಯೆ ಗೂಳಿಗ	85ನೇ ಆಗಸ್ಟು ತಾರೀಖು 22	85ನೇ ಆಗಸ್ಟು ತಾರೀಖು 22	26) ರೂಪಾಯಿನ ಹುಣಸೂರು ಗ್ರಾಮದಲ್ಲಿ ಇರುವ ಮನೆ ಮತ್ತು ಖಾಲೀಜಾಗ ಕ್ರಯಪತ್ರ.

ಟಿ. ಆನಂದರಾವ್,
ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ನಂಜನಗೂಡು ತಾಲ್ಲೂಕು ಹೆಡತಲೇ ಹೋಬಳಿ ಗಟ್ಟವಾಡೀಪುರದಲ್ಲಿರುವ ನಂಜಪ್ಪನ ಮಗ ಕೂಗ್ಯೆಯನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 75.

ಹುಕ್ಕುಂ.

ಮೇಲ್ಕಂಡ ಕೂಗಯ್ಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಕೂಗಯ್ಯನ ಪರವಾಗಿ ಫಸ್ಟ್ ಗ್ರೇಡ್ ಪ್ಲಿಡರ್ ನಾರಾಯಣರಾವನ್ನು ಮತ್ತು ಸದರೀಯವನ ಲೇಣೇದಾರ್ರಾದ 2ನೇ ಸುಬ್ಬರಾಯ 3ನೇ ಕಣವಯ್ಯ, 8ನೇ ಲಿಂಗಣ್ಣಯ್ಯ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಚನ್ನಬಸವಯ್ಯ, 4ನೇ ಖಾದರ್‌ಶೇಟ್ 5ನೇ ರಾಮಣ್ಣ, 6ನೇ ಪುಟ್ಟನಾಯಕ, 7ನೇ ಬಸವೇಗೌಡ, 9ನೇ ಮಮ್ಮತ್‌ಖಾನ್.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ನಂಜಪ್ಪನಮಗ ಕೂಗಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸರ್ 1887ನೇ ಇಸವಿ ಅಕ್ಟೋಬರ್ 20ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನವ್ಯಾ ದಸ್ತಖತನಿಶೀ ಕೊಡಲ್ಪಟ್ಟಿತು.

ಸಾಲಡಪಟ್ಟಿ.

ನಂಬರ್.	ಲೇಣೇದಾರು) ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	[illegible]	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು, ಗಿರ್ವಿ ಯೇನಾದರೂ ಇದ್ದರೆ.,	ಷರಾ.
1	ಚಾಮರಾಜನಗರ ತಾಲ್ಲೂಕು ಹರಲೇ ಗ್ರಾಮದಲ್ಲಿರುವ ಚನ್ನಬಸವಯ್ಯ ..	113—6—6	..	ಡಿಕರೀ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ಪ್ರಂಚ್‌ರಾಕ್ಸ್ ರೆಜಿಸ್ಟ್ರೀ ಆಫೀಸ್.

ತಾರೀಖು 1ನೇ ನವಂಬರ್ 1887.

ಪ್ರಂಚ್‌ರಾಕ್ಸ್‌ಸಬ್ ಡಿವೀಜನ್ ನಾಗಮಂಗಲದ ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿಇರುವ ದಸ್ತಾವೇಜುಗಳನ್ನು ಕ್ರಮವಾದ ವಾರಸದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ:—

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರೆಜಿಸ್ಟ್ರಿಗೆ ಹಾಜರಾದ ತಾರೀಖು.	ರೆಜಿಸ್ಟ್ರಾದ ಮತ್ತು ತಿರಸ್ಕರಿಸಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು. 1885—86 / 78	ನಾಗತಿಹಳ್ಳಿ ಶಾನುಭೋಗ ಸುಬ್ಬಯ್ಯ ಪಟ್ಟೂರು ವಾಸಸ್ಥ.	ಬೋಳೇಗೌಡನ ಮಗ ನಿಂಗೇಗೌಡ ಜವನಹಳ್ಳಿ ವಾಸಸ್ಥ.	4—88—5	5—8—85	ವರಹಾ ಸಮುದ್ರ ಗ್ರಾಮದಲ್ಲಿ ತರೀ ನಂಬರು 93ನೇ ಪೈಕಿ 7ನೇ ಸಂಜಗದ್ದೆ ಬೀಜವರೀ 0—3—14 ಕಂದಾಯ 2—4—7 ವುಳ್ಳ ಜಮೀನನ್ನು 35 ರೂಪಾಯಿಗೆ ಶುದ್ಧ ಕ್ರಯಕ್ಕೆ ಕೊಟ್ಟಿರುವದಾಗಿ.
2ನೇ ಬುಕ್ಕು. 1885—86 / 1	ಹೊನ್ನಶೆಟ್ಟೀ ಮಗ ದೊಡ್ಡರಾಮಶೆಟ್ಟಿ ಚಿರಣ್ಯಾದ ಗ್ರಾಮದ ವಾಸಸ್ಥ	ಹೊನ್ನಲಶೆಟ್ಟೀ ಮಗ ವೆಂಕಟಸಂಜೀವಶೆಟ್ಟಿ ಚನ್ನಪಟ್ಟಣದ ಕಸಬಾ ವಾಸಸ್ಥ	13—68—5	13—6—85	ಸೋಮನಹಳ್ಳೀ ಗ್ರಾಮದಲ್ಲಿ ತರೀ ನಂಬರು 28 ಬೀಜವರಿ 0—9—4 ಕಂದಾಯ 6—11—8 ವುಳ್ಳ ಪೂರ್ವಕ್ಕೆ ತಿಮ್ಮರಾಯಶೆಟ್ಟಿ ದಾಸಪ್ಪನ ಗದ್ದೆ ಪಶ್ಚಿಮಕ್ಕೆ ಅಪ್ಪಣ್ಣನ ನಿಂಗಣ್ಣನಗದ್ದೆ ದಕ್ಷಿಣಕ್ಕೆ ರಾಜಕಾಲ್ವೇ ವುತ್ತರಕ್ಕೆ ಗಂಗನಹಳ್ಳಿ ಬೈರಶೆಟ್ಟಿ ಮತ್ತು ಮಗಣ್ಣನ ತೋಟ ಈ ಮಧ್ಯೇ ಇರುವ ನನ್ನ ಹಿಸ್ಸೆ ಬಾಬತು ನಾಲ್ಕರಲ್ಲಿ ಒಂದು ಭಾಗವಾದ ದಕ್ಷಿಣ ಭಾಗವನ್ನು 40 ರೂಪಾಯಿಗೆ ಶುದ್ಧ ಖರೀದಿಗೆ ಕೊಟ್ಟು ಇರುವದಾಗಿ

ಡಿ. ದೇವರಾಜೇ ಅರಸ್,
ರೆಜಿಸ್ಟ್ರಾರ್.

ನಗರ ಡಿವೀಜನ್ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ 105.

ಮೃತಪಟ್ಟ ಶಂಕರಪ್ಪಶಟ್ಟಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಮಲ್ಲಪ್ಪಶಟ್ಟಿಯು ಮೃತಪಟ್ಟ ಸದರೀ ಶಂಕರಪ್ಪಶಟ್ಟಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮಗಳೂರು ತಾಲ್ಲೂಕು ಕರ್ತಿಕೆರೇ ಸ್ಥಳದ ಮಲ್ಲಪ್ಪಶಟ್ಟಿಯು ಸದರೀ ಕರ್ತಿಕೆರೇ ವಾಸಸ್ಥನಾಗಿ ಮೃತಪಟ್ಟ ಶಂಕರಪ್ಪಶಟ್ಟಿಯ ಜಿಂದಗೀ ಬಗ್ಯಾಗಿ ಬರತಕ್ಕ (1,000) ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಫಿರಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲಪ್ಪಶಟ್ಟಿಯು ಅರ್ಜೀಯನ್ನು 1887ನೇ ಇಸವಿ ನವಂಬರ ತಿಂಗಳು ತಾರೀಖು 19ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಂಕರಪ್ಪಶಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

ಸನ್ 1887ನೇ ಇಸವಿ ಅಕ್ಟೋಬರ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರನಿಂ ನಮ್ಮದಸ್ತುಖತ್ತುಡನೇ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ತಾರೀಖು 21ನೇ ಅಕ್ಟೋಬರ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದು ಮಾಡಲ್ಪಟ್ಟ ಕಾಫೀ ಜಮೀನ್ ಮೇಲಿನ ಕಂದಾಯ್ದ ಬಾಕೀ ತಹಲ್ ವರಿಗೂ ಪಾವತೀ ಮಾಡಲ್ಪಟ್ಟಿರುವದಿಲ್ಲವಾದ್ದರಿಂದ ಸದರೀ ಜಮೀನ್ ಸನ್ 1887ನೇ ಇಸವಿ ಡಿಶಂಬರ 19ನೇ ತಾರೀಖಿನಲ್ಲಿ ಚಿಕ್ಕಮಗಳೂರು ತಾ॥ ಕಚೇರಿ ಬಳಿ ಮಾಮೂಲ್ ಷರ್ತುಗಳಿಗೆ ಒಳಪಡಿಸಿ ಬಹಿರಂಗವಾಗಿ ಕ್ರಮವಾಗಿ ಹರಾಜ್ ಹಾಕಲ್ಪಡುವದು.

ಸರ್ವೇ ನಂಬರು.	ಬಾಕೀದಾರನ ಹೆಸರು.	ತಾಲ್ಲೂಕು ಮತ್ತು ಗ್ರಾಮ.	ವಿಸ್ತೀರ್ಣ, ಎಕರೆ.	ಕಂದಾಯ.	ಬಾಕೀ ಮೊಬಲಗು. 1886—87	ಬಾಕೀ ಮೊಬಲಗು. ಜುಮ್ಲಾ.	ಚಕ್ಕುಬಂದಿ. ಪೂರ್ವ.	ಚಕ್ಕುಬಂದಿ. ಪಶ್ಚಿಮ.	ಚಕ್ಕುಬಂದಿ. ಉತ್ತರ.	ಚಕ್ಕುಬಂದಿ. ದಕ್ಷಿಣ.	ಷರಾ.
1	ಮೆ॥ ಜೆ. ಡಬ್ಲಿಯೂ ಎಫ್. ಮೆರ್ಪ್ರ್ಯ ಸಾಹೇಬರು	ಚಿಕ್ಕಮಗಳೂರು ತಾ॥ ಹಾರಿಬಿದ್ದಕೂಲು ಗ್ರಾಮ	150 0	127 8 0 ಲೋಕಲ್ ಸೆಸ್ ನೋಟೀಸ್ ಫೀ	127 8 0 7 15 6 1 0 0	136 7 6 ಹರಾಜ್ ತಾರೀಖು ವರಿಗಿನ ಬಡ್ಡಿ ಸಹಿತವಾಗಿ	ಮಾವಿನಹಳ್ಳಿ ಗ್ರಾಮದ ಸರಹದ್ದು.	ದತ್ತಾತ್ರಯ ಪೀಠದ ಸರಹದ್ದು ಮತ್ತು ಕವಿಕಲ್ಲಿಗೆ ಹೋಗುವ ರಸ್ತೆ	ದಾಸರಹಳ್ಳಿ ಸರಹದ್ದು ಮತ್ತು ಹಾರಿಬಿದ್ದಕೂಲು ಗ್ರಾಮದ ಸರ್ವೆ ನಂ. 2	ತೋಟದಹಳ್ಳಿ ಸರಹದ್ದು ಮತ್ತು ಬಾಬಾಬುಡ್ಡ ಪಹಡಿಗೆ ಹೋಗುವ ರಸ್ತೆ	ನೋಟೀಸ್ ಜಾರೀ ಆಗಿ ಇಧೆ.

ಜೆ. ಎ. ಕ್ಯಾಮಲ್,
ಡೆಪ್ಯುಟಿ ಕಮ್ಮಿಷನರ.

ಕೊಡಗು ಫಾರೆಸ್ಟ್.

ಕೊಡಗು ಫಾರೆಸ್ಟು ಇಲಾಖೆಯ ಬಾಬತು ಹುಣಸೂರು ಡಿಪೋದಲ್ಲಿ ಮಾರುವ ತೊಲೆ ವಗೈರೇ ಚವುಬೀನೆ ಸಾಮಾನುಗಳ ಕ್ರಯದ ಪಟ್ಟಿ.

ನಂಬರ.	ಮರದ ಜಾತಿ.			ಕ್ರಯ ದರ.		
1	ತ್ಯಾಗದ ಕುಯಿದ ಸಾಮಾನು		ಅಡಿ ವಂದಕ್ಕೆ	1	7	0
2	ತ್ಯಾಗದ ತೊಲೆ	40 ಅಡಿಗೆ ಮೇಲ್ಪಟ್ಟದ್ದು	,,	1	4	0
3	ಸದರೀ ..	31 ರಿಂದ 40 ಅಡಿ ವರಿಗೆ	,,	1	3	0
4	ಸದರೀ ..	21 ರಿಂದ 30 ಅಡಿ ವರಿಗೆ	,,	1	2	0
5	ಸದರೀ ..	1 ರಿಂದ 20 ಅಡಿ ವರಿಗೆ	,,	0	12	0
6	ಹೊನ್ನೇತೊಲೆ ..	20 ಅಡಿ ಮೇಲೆ	,,	0	13	0
7	ಸದರೀ ..	20 ಅಡಿ ವಳಗೆ	,,	0	11	0
8	ಮತ್ತಿ ..	20 ಅಡಿ ಮೇಲೆ	,,	0	9	0
9	ಸದರೀ ..	20 ಅಡಿ ವಳಗೆ	,,	0	8	0
10	ನಂದಿ ..	20 ಅಡಿ ಮೇಲೆ	,,	0	8	0
11	ಸದರೀ ..	20 ಅಡಿ ವಳಗೆ	,,	0	7	0
12	ಬೀಟೆ ..	20 ಅಡಿ ಮೇಲೆ	,,	0	12	0
13	ಸದರೀ ..	20 ಅಡಿ ವಳಗೆ	,,	0	10	0
14	ಕಾಡು ತೊಲೆ			0	7	0

ಪ್ರೇಜರಪೇಟೆ ಡಿಪೋದಲ್ಲಿ ಮಾರುವ ತೊಲೆ ವಗೈರೇ ಸಾಮಾನುಗಳ ದರದ ಪಟ್ಟಿ.

ನಂಬರ.	ಮರದ ಜಾತಿ.			ಕ್ರಯ ದರ.		
1	ತ್ಯಾಗದ ತೊಲೆ ..	30 ಅಡಿ ಮೇಲೆ	ಅಡಿ ವಂದಕ್ಕೆ	1	3	0
2	ಸದರೀ ..	30 ಅಡಿ ವಳಗೆ	,,	1	1	0
3	ಸದರೀ ..	20 ಅಡಿ ವಳಗೆ	,,	0	15	0
4	ಸದರೀ ಕೊಂಟುಕೊನೆಗಳು ..		,,	0	13	0
5	ಹೊನ್ನೇತೊಲೆಗಳು ..	20 ಅಡಿ ಮೇಲೆ	,,	0	10	0
6	ಸದರೀ ..	20 ಅಡಿ ವಳಗೆ	,,	0	8	0
7	ಬೀಟೆ ..	20 ಅಡಿ ಮೇಲೆ	,,	0	10	0
8	ಸದರೀ ..	20 ಅಡಿ ವಳಗೆ	,,	0	8	0
9	ನಂದಿ ..	20 ಅಡಿ ಮೇಲೆ	,,	0	7	0
10	ಸದರೀ ..	20 ಅಡಿ ವಳಗೆ	,,	0	6	0
11	ಮತ್ತಿ ..	20 ಅಡಿ ಮೇಲೆ	,,	0	7	0
12	ಸದರೀ ..	20 ಅಡಿ ವಳಗೆ	,,	0	6	0
13	ಕಾಡು ತೊಲೆಗಳು		,,	0	5	0
14	ತ್ಯಾಗದ ಸರಗಳು	ಗಾಡಿ ಜೋಡಿ ಒಂದಕ್ಕೆ		10	0	0
15	ಹೊನ್ನೇದಿಮ್ಮಿಗಳು ..	,,		9	0	0
16	ನಂದಿ ..	,,		6	0	0
17	ಮತ್ತಿ ..	,,		6	0	0
18	ಬೀಟೆ ..	,,		9	0	0
19	ಕಾಡುಮರ ..	,,		5	0	0
20	ಬಿದರುಗಳು ..	ಸಾವಿರಕ್ಕೆ		40 35 30		

ಯಫ್. ಬಿ. ಡಿ...ರ್ಸ,

ಡೆಪ್ಯುಟಿ ಕನಸರವೇಟರ ಆಫ್ ಫಾರೆಸ್ಟ್ ಕೊಡಗು.

ಗೈರವಿಲಾ

ಆದ ಕರ್ರೆನ್ಸೀ ನೋಟಿನ ಬಲಭಾಗದ.

ನಂಬರ್.	ಮುಕ್ಕಾಂ.	ಸರ್ಕಲ್.	ಕ್ರಯ.	
13252	3ನೇ ಜುಲೈ 1886	ಮದರಾಸ್	ರೂ. 100	ಹಕ್ಕುದಾರ್—ಹೊಳೇನರಸೀಪುರದಲ್ಲಿರುವ ಬಿಳೀಮುಗ್ಗದ ನರಸಿಂಹಯ್ಯನು ಅದರಪತ್ತೇ ಸಮಾಚಾರ ಕೊಡುವವರಿಗೆ 5 ರೂಪಾಯಿ ಇನಾಂ ಕೊಡುವದಕ್ಕೆ ಸಮ್ಮತಿ ಪಟ್ಟಿರುತ್ತಾರೆ.

ಮೈಸೂರ ಗೆಜೆಟ್ ಚಂದಾ ದರ ವಗೈರೇ.

	ಚಂದಾ. ರೂ. ಅ.	ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ. ಅ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಛಪ್ ಮಾಹೇ ಯಾ ಕ್ವಾರಟರಿಗೆ	ದಾಮೂಷಾಯಿ ಪ್ರಕಾರ ದರಗಳು.	

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—

ಮೊದಲನೇ ದಫಾ ಛಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ) ..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟ್ಟೋ ..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್‌ಗಳ ಬಗ್ಯೆ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕ್ಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯುಪ್ಲಿಕೇಟ್ ಕಾಪೀಪಟ್ಟೀ ವಗೈರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

ಮೊದಲನೇ ಸಲಕ್ಕೆ .. ಪುಟ 1ಕ್ಕೆ ..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ ,, ..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಜ್ತಿ 1ಕ್ಕೆ	0	8
ಎರಡನೇ ದಫಾ ಡಿಟ್ಟೋ ಡಿಟ್ಟೋ ...	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ	0	4

ಷರಾ.—ಚಂದಾ ವಗೈರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಟಿ. ಟಿ. ಲಿನರಡ್,
ಮೈ. ಗೆ. ಕಂಪೈಲರ್.

Mysore Government Press, Bangalore.—1887.

ಮೈಸೂರ ಗೆಜೆಟ್.

ನಂ. 45 ಸರ್ಕಾರದಿಂದ ಪ್ರಾಯಿಷ್ ಆದ್ದು. ಸನ್ 1887.

ಬೆಂಗಳೂರು, ಶನಿವಾರ, ನವೆಂಬರ್ ತಾ|| 12, ಸನ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ಇಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ಇಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್.

ಇಸ್ತಿಹಾರ್ನಾಮೆಗಳು.

ತಾರೀಖು 29ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1661.—ಈ ಆಫೀಸಿನ 1887ನೇ ಇಸವಿ ಅಕ್ಟೋಬರ್ 13ನೇ ಮರ್ಕುಂ 1494ನೇ ನಂಬರ್ ಇಸ್ತಿಹಾರ್ನಾಮೆಯನ್ನ ಬದಲಾಯಿಸಿ, ಅಮಲ್ದಾರ್ ಮ್ಸ್. ವೆಂಕಟರಾಯರಿಗೆ ತುಮಕೂರು ಡಿಸ್ಟ್ರಿಕ್ಟು ಗುಬ್ಬಿ ತಾಲ್ಲೂಕಿಗೆ ವರ್ಗಮಾಡಲ್ಪಟ್ಟಿರುತ್ತೆ.

ದೇವನಹಳ್ಳಿ ತಾಲ್ಲೂಕಿನಿಂದ ಚಿಕ್ಕನಾಯಕನಹಳ್ಳೀ ತಾಲ್ಲೂಕಿಗೆ ಅಮಲ್ದಾರ್ ಲಕ್ಷ್ಮಣರಾಯರ ವರ್ಗಾವರ್ಗಿಯೂ ಮತ್ತು ಚಿಕ್ಕನಾಯಕನಹಳ್ಳೀ ತಾಲ್ಲೂಕಿನಿಂದ ಗುಬ್ಬಿ ತಾಲ್ಲೂಕಿಗೆ ಶ್ರೀಕಂಠಯ್ಯನವರ ವರ್ಗಾವರ್ಗಿಯೂ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1671.—ಬೆಂಗಳೂರು ಷಹರ್ ಮ್ಯುನಿಸಿಪೆಲ್ ಕಮ್ಮಿಷನ್ನಿನ ವೈಸ್ ಪ್ರೆಸಿಡೆಂಟ್ ಮೆ|| ಎ. ಶ್ರೀನಿವಾಸಾಚಾರ್ಲುಯವರಿಗೆ, 1887ನೇ ಇಸವಿ ಅಕ್ಟೋಬರ್ 21ನೇ ಮರ್ಕುಂ ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಸ್ವಂತ ಕೆಲಸದ ಮೇಲೆ ಯರಡು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ಮೊಕ್ಕಾಂ ಮೈಸೂರು, ತಾರೀಖು 12ನೇ ಸೆಪ್ಟಂಬರ 1887ನೇ ಇಸವಿ.

ನಂ. 113.—1887ನೇ ಇಸವಿ ಸೆಪ್ಟಂಬರ 5ನೇ ಮುಕ್ಕಾಂ 107ನೇ ನಂಬರ ಇಸ್ತಿಹಾರ್ನಾಮೆಯ 5ನೇ ಕಲಂ ಪ್ರಕಾರ ಗನೀ ಕೆಲಸ ನಡಿಸುವ ಬಗ್ಯೆ ಲೈಸೆನ್ಸ ಕೊಡಲ್ಪಡಬೇಕಾದ ಜಮೀನಿನ ವಿಸ್ತೀರ್ಣದ ವಿಷಯದಲ್ಲಿ ಚಾಲತೀ ವರುಷಕ್ಕೆ 35 ಚದರ್ ಮೈಲಿಗಳ ಮಟ್ಟಿಗೆ ಕೊಡಲ್ಪಡತಕ್ಕದ್ದೆಂದು ಶ್ರೀಮನ್ ಮಹಾರಾಜಾ ಸರ್ಕಾರದವರು ಗೊತ್ತು ಮಾಡಿರುವದರಿಂದಲೂ ಮತ್ತು ಇದಕ್ಕೆ ಶೇರಿಸೋಣಾದ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಪ್ರತಿ ತಾಕಿನ ವಿಷಯದಲ್ಲೂ ಗನೀ ಕೆಲಸ ನಡಿಸುವ ಲೈಸೆನ್ಸಿಗೋಸ್ಕರ ಒಂದಕ್ಕಿಂತಲೂ ಜಾಸ್ತಿಯಾಗಿ ದರಖಾಸ್ತುಗಳು ಬಂದಿರುವದರಿಂದಲೂ ಮತ್ತು ಸರ್ಕಾರದವರು, ಮೇಲ್ಕಂಡ ಪ್ರತಿ ತಾಕಿಗೂ ಬಹಿರಂಗವಾದ ಚಡ ದರಖಾಸ್ತು ಮೂಲಕ ಹುಟ್ಟಬಹುದಾದಂಥಾ ಪ್ರಿಮಿಯಂಯೆಂಬ ನಫೆಗೆ ಗನೀ ಕೆಲಸದ ಲೈಸೆನ್ಸ ಕೊಡಲ್ಪಡತಕ್ಕದ್ದೆಂದು ನಿಷ್ಕರ್ಷೆ ಮಾಡಿರುವದರಿಂದ ಮೇಲ್ಕಂಡ ಲೈಸೆನ್ಸಗಳಿಗೋಸ್ಕರ, ಇದರಡೀಕಂಡ ಷರತ್ತುಗಳಿಗೆ ಒಳಪಟ್ಟು ಯಿದರ ಮೂಲಕ ದರಖಾಸ್ತುಗಳು ಅಪೇಕ್ಷಿಸಲ್ಪಡುತವೆ:—

I. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತು ಮಾಡಲ್ಪಟ್ಟ ಗೊತ್ತಾದ ತಾಕು ನಮೂದಿಸಲ್ಪಡತಕ್ಕದ್ದಲ್ಲದೆ ಸದರೀ ತಾಕಿನ ಲೈಸೆನ್ಸಿಗೋಸ್ಕರ ದರಖಾಸ್ತುದಾರನು ಪಾವತೀ ಮಾಡುವದಕ್ಕೆ ಒಪ್ಪುವ ನಫೇ ಮೊಬಲಗು ಸುದಾ ಕಾಣಿಸಲ್ಪಡತಕ್ಕದ್ದು, ಲೈಸೆನ್ಸಿನ ಷರತ್ತುಗಳು ಇದಕ್ಕೆ ಶೇರಿಸೋಣಾದ B ನಮೂನೆಯಲ್ಲಿ ವಿವರಿಸಲ್ಪಟ್ಟಂತೆ ಯಿರುತವೆ. ನಫೇ ಮೊಬಲಗು ಪೌಂಡ್ ಸಂಖೆಯಲ್ಲಾಗಲೀ ರೂಪಾಯಿ ಸಂಖೆಯಲ್ಲಾಗಲೀ ತಿಳಿಸಲ್ಪಡತಕ್ಕದ್ದು.

II. ಪ್ರತಿ ದರಖಾಸ್ತಿನ ಸಂಗಡಲೂ, ಪಾವತೀ ಮಾಡುವದಕ್ಕೆ ಒಪ್ಪಿಕೊಳ್ಳುವ ನಫೇ ಮೊಬಲಗಿನ ದಶಮಾಂಶಕ್ಕೆ ಸರಿಯಾದ ಮೊಬಲಗು ಠೇವಣೀ ತರೀಕ್ ಕಳುಹಿಸಲ್ಪಡತಕ್ಕದ್ದಲ್ಲದೆ ಠೇವಣೀ ಮೊಬಲಗು ಮೈಸೂರು ದೇಶದ ದಿವಾನರವರ ಹೆಸರಿಗೆ ಜಮೇ ಹಿಡಿಯತಕ್ಕ ಬಗ್ಯೆ ಮೈಸೂರು ದೇಶದ ಯಾವದಾದರೂ ಸರ್ಕಾರ್ ಖಜಾನೆಯಲ್ಲಾಗಲಿ ಯಿಂಡಿಯಾ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಿಯಾಗಲಿ ಅಥವಾ ಲಂಡನ್‌ನಲ್ಲಿ 59ನೇ ಸ್ಟ್ರಾಂಡ್ ಸ್ಥಳದಲ್ಲಿರುವ ಮೆಸ್ಸಿಯರಸ್ ಕಾಟ್ಸ ಅಂಡ್‌ಕೋಯವರಿಗಾಗಲಿ ಪಾವತೀ ಮಾಡಲ್ಪಟ್ಟು ಅಂಥಾ ಪಾವತೀ ಬಗ್ಯಾಗಿ ಪಡೆದ ರಶೀತಿಯು ದರಖಾಸ್ತಿನೊಂದಿಗೆ ಕಳುಹಿಸಲ್ಪಡತಕ್ಕದ್ದು.

III. ದರಖಾಸ್ತು, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ C ನಮೂನೇಯಲ್ಲಿ ಬರೆಯಲ್ಪಡತಕ್ಕದ್ದು.

IV. ಮೇಲ್ಕಂಡ IIನೇ ಪ್ಯಾರಾ ಅನುಸರಿಸಿ ಪಾವತೀ ಮಾಡಲ್ಪಟ್ಟ ಠೇವಣೀಗೋಸ್ಕರ ಪಡೆದ ರಶೀತೀ ಸಹಿತವಾಗಿ ದರಖಾಸ್ತು ಒಂದು ಲಿಫಾಫೆಯಲ್ಲಿ ಹಾಕಿ ಮೊಹರ್ ಮಾಡಲ್ಪಟ್ಟು "ಗನೀ ಕೆಲಸದ ಗುತ್ತಿಗೇ ಬಗ್ಯೆ ದರಖಾಸ್ತು" ಯೆಂಬದಾಗಿ ಮೇಲೆ ಬರೆಯಲ್ಪಟ್ಟು ಬೆಂಗಳೂರಲ್ಲಿ ಮೈಸೂರು ದೇಶದ ದಿವಾನರವರ ಹೆಸರಿಗೆ ಮೇಲ್ ವಿಳಾಸ ಬರೆಯಲ್ಪಡತಕ್ಕದ್ದು.

V. ದರಖಾಸ್ತುಗಳು, ದಿವಾನರವರಿಗೆ 1887ನೇ ಇಸವಿ ಡಿಶಂಬರ್ 10ನೇ ಮುಕ್ಕಾಮಿನ ಮಧ್ಯಾಹ್ನದಲ್ಲಿಯಾಗಲೀ ತತ್ಪೂರ್ವದಲ್ಲಿಯಾಗಲಿ ತಲಪಬೇಕಾಗಿರುತ್ತೆ. ಆಗ ಅವು ದಿವಾನರವರಿಂದ ಬೆಂಗಳೂರಲ್ಲಿರತಕ್ಕ ಪಬ್ಲಿಕ್ ಆಫೀಸ್ ಯೆಂಬ ಕಟ್ಟಡದೊಳಗೆ, ಹಾಜರಿರಬಹುದಾದ ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು.

VI. ದರಖಾಸ್ತುಗಳ ಆಖೈರ್ ವ್ಯವಸ್ಥೆಯು ದಿವಾನರವರಿಗೆ ಶೇರಿರುತ್ತೆ. ಅವರು ಯಾವ ಕಾರಣವೂ ತಿಳಿಸದೇನೇ ಚಡ ದರಖಾಸ್ತನ್ನಾಗಲೀ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

VII. ಯಾವ ದರಖಾಸ್ತು ದಿವಾನರವರಿಂದ ಅಂಗೀಕರಿಸಲ್ಪಡುತಿದೆಯೋ ಅಂಥಾ ದರಖಾಸ್ತುದಾರನು, ಅಂಥಾ ಅಂಗೀಕಾರ ತನಗೆ ತಿಳಿಸಲ್ಪಟ್ಟ 30 ದಿವಸಗಳೊಳಗಾಗಿ ದರಖಾಸ್ತಿನಲ್ಲಿ ಪಾವತೀ ಮಾಡುವದಾಗಿ ಒಪ್ಪಿಕೊಂಡಿರುವ ನಫೇ ಮೊಬಲಗಿನ. ಉಳಿದ ಭಾಗವನ್ನು ದಿವಾನರವರ ಹೆಸರಿಗೆ ಜಮೇಕಟ್ಟುವ ಬಗ್ಯೆ ಮೈಸೂರು ದೇಶದ ಯಾವದಾದರೂ ಸರಕಾರದ ಖಜಾನೆಯಲ್ಲಾಗಲಿ, ಯಿಂಡಿಯಾ ದೇಶದಲ್ಲಿನ ಯಾವದಾದರೂ ರಾಜಧಾನೀ ಬ್ಯಾಂಕಿನಲ್ಲಾಗಲೀ ಅಥವಾ ಲಂಡನ್ ಪಟ್ಟಣದ ಮೆಸ್ಸಿಯರ್ಸ್ ಕಾಟ್ಸ ಅಂಡ್‌ಕೋ ಯವರಿಗಾಗಲಿ ಪಾವತೀ ಮಾಡತಕ್ಕದ್ದು.

VIII. ಮಂಜೂರ್ ಮಾಡಲ್ಪಟ್ಟ ದರಖಾಸ್ತುದಾರರ ಹೆಸರು ದೇಖೀಲ್ ಅವರ ದರಖಾಸ್ತುಗಳು ಯಾವದಕ್ಕೆ ಅಂಗೀಕರಿಸಲ್ಪಟ್ಟಿರುತದೆಯೋ ಅಂಥಾ ತಾಕುಗಳ ವಿವರಣೆಯು ಸರ್ಕಾರೀ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಡುವದು.

IX. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಠೇವಣಿಯು, ಅವರು ಖಾಯಿಷ್ ಮಾಡಿದಾಗ ವಾಪಸ್ ಮಾಡಲ್ಪಡುವದು.

X. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು, ಗುತ್ತಿಗೇ ಕರಾರು ಹುಟ್ಟುವದಕ್ಕೆ ಮುಂಚೆ ಯಾವ ಕಾಲದಲ್ಲಿ ಆಗಲಿ ಇದಕ್ಕೆ ಲಗತ್ತಿರುವ A ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಸರಹದ್ದಿನೊಳಗಣ ತಾಕಿನಲ್ಲಿ ಮೊಕ್ಕಾಂ ಮಾಡುವ ಬಗ್ಗೆ ಅವಕಾಶ ಕೊಡಲ್ಪಡುವನು, ಆದರೆ ಆತನು ಮೇಲೆಕಂಡ VIIನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟಂತೆ ನಫೇ ಬಾಬತು ಉಳಿದ ಬಾಕಿಯನ್ನು ಪಾವತೀ ಮಾಡಿದ ತರುವಾಯ ಆರು ತಿಂಗಳ ವಳಗಾಗಿ ಗವರ್ನಮೆಂಟ್ ತರಫಿನಲ್ಲಿ ದಿವಾನರವರಿಂದ ರುಜು ಮಾಡಲ್ಪಡುವ ಬಗ್ಗೆ ಇದಕ್ಕೆ ಜಂಟಿಸೇರಿದ B. ನಮೂನೆಯಲ್ಲಿ ತಯಾರ್ಮಾಡಲ್ಪಟ್ಟು ಕ್ರಮವಾಗಿ ಸ್ಟ್ಯಾಂಪ್‌ಹಾಕಲ್ಪಟ್ಟ ಗುತ್ತಿಗೇ ಕರಾರನ್ನು ಹಾಜರ್ಮಾಡತಕ್ಕದ್ದು.

XI. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು VIIನೇ ಪ್ಯಾರಾದಲ್ಲಿ ನಿಯಮಿಸಲ್ಪಟ್ಟ ಪ್ರಕಾರ ನಫೆಯ ಬಾಕೀ ಮೊಬಲಗನ್ನು ಪಾವತೀ ಮಾಡುವದಕ್ಕಾಗಲೀ Xನೇ ಪ್ಯಾರಾದಲ್ಲಿ ವಿಧಿಸಲ್ಪಟ್ಟಂತೆ ಗುತ್ತಿಗೇ ಕರಾರನ್ನು ದಸ್ತಖತ್ತಿಗೋಸ್ಕರ ಹಾಜರ್ಮಾಡುವದಕ್ಕಾಗಲಿ ತಪ್ಪಿದರೆ ದರಖಾಸ್ತುದಾರನಿಂದ ದಿವಾನರವರ ಹೆಸರಿಗೆ ಜಮೇಕಟ್ಟುವ ಬಗ್ಗೆ ಹಾಗೆ ತಪ್ಪಿಹೋದ ತಾರೀಖಿನ ವರೆಗೆ ಪಾವತೀ ಮಾಡಲ್ಪಟ್ಟಿರುವ ಠೇವಣೀ ಯಾ ಇತರ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದಲ್ಲದೇ ಅಂಥಾ ಮೊಬಲಗು ಯಾವ ಬಗ್ಗೆ ಪಾವತೀ ಮಾಡಲ್ಪಟ್ಟಿತೋ ಅಂಥಾ ಜಮೀನುಗಳು ಸರ್ಕಾರದವರ ಯಖ್ತ್ಯಾರೀಯಲ್ಲಿ ಸಂಪೂರ್ಣವಾಗಿ ಯಿರತಕ್ಕದ್ದು.

XII. A ಷೆಡ್ಯೂಲ್‌ನಲ್ಲಿ ನಮೂದ್ ಮಾಡಲ್ಪಟ್ಟ ತಾಕುಗಳು ಯಿರತಕ್ಕ ಪ್ರದೇಶವನ್ನು ತೋರಿಸುವ ಮೈಸೂರು ದೇಶದ ಬ್ರಿಟಿಷ್ ಟೊಪೋಗ್ರಾಫಿಕಲ್ ಸರ್ವೆ ಇಲಾಖೆಯಿಂದ ತಯಾರ್ಮಾಡಲ್ಪಟ್ಟ ಮ್ಯಾಪ್‌ಯಾನೇ ನಕ್ಷೆಯು (ಅಂಗುಲ ವಂದಕ್ಕೆ ವಂದುಮೈಲೀ ಫಾಸಲೆಯುಳ್ಳ) ನಕ್ಕಲು ಬೆಂಗಳೂರಲ್ಲಿರುವ ದಿವಾನರವರ ಕಚೇರೀಯಲ್ಲಿ ಯಿರುವದು ಮತ್ತು ಅಂಡರ್ ಸೆಕ್ರಿಟೆರಿಯವರನ್ನು ಬೇಡಿದಲ್ಲಿ ಯಾರಿಗಾದರೂ ಬಗರ್ ಚಾರ್ಜು ನೋಡುವ ಬಗ್ಗೆ ಅವಕಾಶ ಕೊಡಲ್ಪಡುವದು.

ಹುಕ್ಕುಂ ಬಹೋಜೀಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರಟರಿ.

ಅರ್ಪೆಂಡಿಕ್ಸ್ A.

1887—88ನೇ ಇಸವಿಯಲ್ಲಿ ಜನಗಳಿಗೆ ಗನೀ ಕೆಲಸ ನಡಿಸುವ ಬಗ್ಯೆ ಲೈಸೆನ್ಸ್ ಕೊಡಲು ಉದ್ದೇಶಿಸಲ್ಪಟ್ಟ ಜಮೀನ್ ತಾಕಿನ ವಿವರಣೆಯನ್ನು ತೋರಿಸುವ ಷೆಡ್ಯೂಲ್ ಯಾನೇ ತಖ್ತೆ.

ಪ್ರತ್ಯೇಕ ನಂಬರು.	ಪ್ರತಿ ತಾಕಿನ ಹೆಸರು.	ಪ್ರತಿ ತಾಕೂ ಇರತಕ್ಕ ಪ್ರದೇಶ. ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮಗಳು.	ಟೋಪೋಗ್ರಾಫಿಕಲ್ ಷೀಟಿನ ನಂಬರು.	ಪ್ರತಿ ತಾಕೂ ಯಾವ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುತ್ತೆಂಬುವದು. ದಕ್ಷಿಣೋತ್ತರ ವೃತ್ತಗಳು.	ಯ್ಯಾಮ್ಯೋತ್ತರ ರೇಖೆ.	ಹಿಂದಿನ ಕಡೇ ಕಾಲಮ್‌ನಲ್ಲಿ ವಿವರಿಸಲ್ಪಟ್ಟ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುವ ಜಮೀನ್ ಪೈಕೀ ಇದುವರಿಗೆ ಅನ್ಯಥಾ ವಿಲಾ ಮಾಡಲ್ಪಟ್ಟ ಜಮೀನಿನ ವಿಸ್ತೀರ್ಣ.	[illegible]
1	ಹೊನ್ನೇಮರಡೀ ತಾಕು ..	ಚಿತ್ರದುರ್ಗ ..	ಜಗಲೂರು ..	(1) ಹೊನ್ನೇಮರಡಿ, (2) ಅಕ್ಕನೂರು, (3) ಜಮ್ಮಾಪುರ	10	14° 31′ರಮಧ್ಯೆ ಮತ್ತು 14° 32′	76° 25′ ಮತ್ತು 76° 26′ರಮಧ್ಯೆ	ಇಲ್ಲಾ ..	1 ಚದರಮೈಲಿ
2	ತುರವನೂರು ತಾಕು ..	ಡಿಟೋ ..	ಚಿತ್ರದುರ್ಗ ..	(1) ತುರವನೂರು, (2) ಚಿಕ್ಕನಾಯಕನಹಳ್ಳಿ, (3) ಭಂಗಾರಕ್ಕನಹಳ್ಳಿ	10	14° 22′ „ ಮತ್ತು 14° 24′ರಮಧ್ಯೆ	76° 25′ ಮತ್ತು 76° 27′ „	ಡಿಟೋ ..	2 ಚದರಮೈಲಿಗಳು
3	ರಂಗವನಹಳ್ಳೀ ತಾಕು ..	ಡಿಟೋ ..	ಡಿಟೋ ..	(1) ಗೊನೂರು (2) ಗು[illegible]ನಹಳ್ಳಿ, (3) ಮಲ್ಲಾಪುರ, (4) ಕಲ್ಲೇನಹಳ್ಳಿ, (5) ಸಾಸಲದೊಡ್ಡಿ (6) ಬೊಮ್ಮೇನಹಳ್ಳಿ	10	14° 15′ „ ಮತ್ತು 14° 19′ರಮಧ್ಯೆ	76° 26′ ಮತ್ತು 66° 29′ „	ಗೊನೂರು ಗ್ರಾಮದ ಉತ್ತರ ಮ[illegible]ನಲ್ಲಿ 520 ಎಕರೆಗಳು ಮೇಜರ್ ಜನರಲ್ ಆರ್. ಎ. ಕೋಲ್‌ಯವರಿಗೆ ಕೊಡಲ್ಪಟ್ಟಿರುತ್ತೆ.	3 ಚದರಮೈಲಿಗಳು
4	ಬೆಳ್ಳೀಗುಡ್ಡದ ತಾಕು ..	ಡಿಟೋ ..	ಡಿಟೋ ..	(1) ಕಂಚಿಕನಹಾಳ್, (2) ಯಿಂಗ್ಳದಹಾಳ್ (3) ಕುರುಬರಮರಡಿಕೆರೆ	11	14° 9′ ಮತ್ತು 14° 12′ರ ಮಧ್ಯೆ	76° 29′ „ ಮತ್ತು 76° 33′ „	ಇಲ್ಲಾ ..	3 ಚದರಮೈಲಿಗಳು
5	ಕರಡೀಹಳ್ಳಿ ತಾಕು ..	ಹಾಸನ ..	ಅರಸೀಕೆರೆ ..	(1) ಕರಡಿಹಳ್ಳಿ, (2) ಚನ್ನಾಪುರ, (3) ಅಗ್ರಹಾರ, (4) ಯರೆಹಳ್ಳಿ	29	13° 25′ ಮತ್ತು 13° 26′ „	76° 14′ „ ಮತ್ತು 76° 16′ „	ಡಿಟೋ ..	1 ಚದರಮೈಲಿ
6	ಬೆಳಗುಂಬ ತಾಕು ..	ಡಿಟೋ ..	ಡಿಟೋ ..	(1) ಬೆಳಗುಂಬ, (2) ತಿಮ್ಲಾಪುರ (3) ಕಾಲಕೆರೆ, (4) ಜೋತಿ ಮಲ್ಲಾಪುರ, (5) ತಾಳತುರಿ, (6) ಕೋಡಿಹಳ್ಳಿ	29 ವ 30	13° 14′ „ ಮತ್ತು 13° 16′ „	76° 21′ „ ಮತ್ತು 76° 24′ „	ಡಿಟೋ ..	3 ಚದರಮೈಲಿಗಳು

7	ಬಿದರೆ ಕಾವಲ್ ತಾಕು	ಡಿಟೋ	ಅರೇಕೆರೆ ವ ಚನ್ನರಾಯಪಟ್ಣ ತಾಲ್ಲೂಕು	(1) ಬಿದರೆ 2 ಮಲ್ಲಾಪುರ, (3) ಮಂಗಲಾಪುರ, (4) ಕೋಡಿಹಳ್ಳಿ	30	13° 9' ಮತ್ತು 13° 11' ,,	76° 25' ಮತ್ತು 76° 28' ,,	ಇಲ್ಲಾ	3 ಚದರ ಮೈಲಿಗಳು
8	ಜಲಗಾರನಹಳ್ಳಿ ತಾಕು	ಡಿಟೋ	ಅರೇಕೆರೆ	(1) ಜಲಗಾರನಹಳ್ಳಿ, (2) ಸೋಮೇನಹಳ್ಳಿ (3) ಚಲನಾಯಕನಹಳ್ಳಿ	30	13° 12' ಮತ್ತು 13 13'ರ ಮಧ್ಯೆ	76° 24' ಮತ್ತು 76° 26'ರ ಮಧ್ಯೆ	ಡಿಟೋ	1 ಚದರ ಮೈಲಿ
9	ರಂಗಾಪುರ ಕಾವಲ್	ಡಿಟೋ	ಡಿಟೋ	(1) ಇಸವನಹಳ್ಳಿ, (2) ಆಡಿಹಳ್ಳಿ (3) ಗೊಲ್ಲರಹಳ್ಳಿ, (4) ಮಂಗಲಾಪುರ (5) ಬೋರೆಹಳ್ಳಿ, (6) ಜೋಗೇನಹಳ್ಳಿ (7) ಕಂಚೇನಹಳ್ಳಿ (8) ಚಿಟನಹಳ್ಳಿ	30	13° 9' ಮತ್ತು 13° 12'ರ ,,	76° 18' ಮತ್ತು 76° 20'ರ ,,	ಸುಮಾರು 2 ಚದರ ಮೈಲಿಗಳು ಸರ ರೋಪರ್ ಲೆತ್‌ಬ್ರಿಡ್ಜ್ ಎಂ. ಪಿ. ವ ಮೆ|| ಫ್ರ್ಯಾಂಕ್ ಲೆತ್‌ಬ್ರಿಡ್ಜ ಯವರಿಗೆ ಕೊಡಲ್ಪಟ್ಟಿರುತ್ತೆ	1 ಚದಗ ಮೈಲಿ
10	ನುಗ್ಗೇಹಳ್ಳಿತಾಕು	ಡಿಟೋ	ಚನ್ನರಾಯಪಟ್ಣ	(1) ಚಿಕ್ಕೋನಹಳ್ಳಿ (2) ನವಲೆ (3) ರಾಯಸಮುದ್ರ, ಅಮೃತಮಹಲ್ ಕಾವಲ್ (4) ವಿರುಪಾಕ್ಷಿಪುರ (5) ಮಾವಿನಹಳ್ಳಿ (6) ನುಗ್ಗೇಹಳ್ಳಿ (7) ಜಂಬೂರು (8) ಹೊನ್ನೇಮಾರನಹಳ್ಳಿ (9) ಹುಲಿಕೆರೆ (10) ಹುಪ್ಪಿನಹಳ್ಳಿ	30 ಮತ್ತು 34	13° 0' ಮತ್ತು 13° 6'ರ ,,	76° 29' ಮತ್ತು 76° 32'ರ ,,	ಇಲ್ಲ	4 ಚದರ ಮೈಲಿಗಳು
11	ಕೆಂಪಿನಕೋಟೆ ತಾಕು	ಟಿಡೋ	ಡಿಟೋ	(1) ಕೆಂಪಿನಕೋಟೆ (2) ಹುಲಿಗೆರೆ (3) ಮಾರಶೆಟ್ಟಿಹಳ್ಳಿ (4) ಮಾದಿಹಳ್ಳಿ (5) ಗೊಲ್ಲಹಳ್ಳಿ (6) ಬಸವನಹಳ್ಳಿ (7) ಹಳೇಬೆಳಗೊಳ (8) ಚಾಲ್ಯ	55	12° 54' ಮತ್ತು 12° 56'ರ ,,	76° 33' ಮತ್ತು 76° 35ರ ,,	ರೆವಿನ್ಯೂ ಸರ್ವೆ ನಖಾಶೆನಲ್ಲಿ B ಗುರ್ತು ಮಾಡಲ್ಪಟ್ಟ 311 ಎಕರೆ ವಿಸ್ತೀರ್ಣದ ತಾಕು ಮೆ|| ಹೆಚ್. ಎಫ್‌ ಸ್ಟ್ರಿಕ್‌ಲೆಂಡ್ ವಗೈರೇರಿಗೆ ಕೊಡಲ್ಪಟ್ಟಿರುತ್ತೆ	1½ ಚದರ ಮೈಲಿ
12	ನಡಪಾಸನಹಳ್ಳಿ ತಾಕು	ಮೈಸೂರು	ಹುಣಸೂರು	(1) ನಡಪಾಪನಹಳ್ಳಿ, (2) ಮಾದವನ ಹೊಸೂರು	53 ವ 54	12° 15' ಮತ್ತು 12° 17'ರ ,,	76° 26' ಮತ್ತು 76° 27'ರ ,,	ಇಲ್ಲ	2 ಚದರ ಮೈಲಿಗಳು
13	ಕರೀಮುದ್ದೇನಹಳ್ಳಿ ತಾಕು	ಡಿಟೋ	ಡಿಟೋ	(1) ಹೊಳ್ಳದ ಕೊಪ್ಪಲ್ (2) ಗಜ್ಜಯ್ಯನ ವಡ್ಡರಗುಡಿ (3) ಕರಿಮುದ್ದನಹಳ್ಳಿ	54	12° 12' ಮತ್ತು 12° 14'ರ ,,	76° 26' ಮತ್ತು 76° 27'ರ ,,	632 ಎಕರೆ 8 ಗುಂಟೆಗಳು ಮದರಾಸಿನ ಮೆಸ್ಸೆರ್ಸ್ ವಿಲ್‌ಸನ್ ಅಂಡ್ ಕೋಯವರಿಗೆಕೊಡಲ್ಪಟ್ಟಿರುತ್ತೆ	2 ಚದರ ಮೈಲಿಗಳು
14	ಸೋಂಣಹಳ್ಳಿ ತಾಕು	ಡಿಟೋ	ಡಿಟೋ	(1) ಸೋಂಣಹಳ್ಳಿ (2) ಬಾಚೇಗವುಡನಹಳ್ಳಿ	54	12° 9' ಮತ್ತು 12° 12'ರ ,,	76 28' ಮತ್ತು 76° 29ರ ,,	ಇಲ್ಲ	3 ಚದರ ಮೈಲಿಗಳು

ಅಪೆಂಡಿಕ್ಸ್ B.

ಕಕ್ಷಿಗಾರರು.

ಈ ಕರಾರು ಒಂದು ಸಾವಿರದ ಯಂಟನೂರು ಎಂಭತ, ನೇ ಇಸವಿ ನೇ ಮಾರ್ಚ್ ಮಿನಲ್ಲಿ ("ಗುತ್ತಿಗೆಗೆ ಕೊಡುವವರೆಂತ" ಯಿಯಿಂದ ಕರೆಯಲ್ಪಡುವ) ಮೈಸೂರು ಗವರ್ನಮೆಂಟಿನವರಿಗೂ ಮತ್ತು "ಗುತ್ತಿಗೆದಾರರೆಂತ" (ಇಯಿಂದ ಕರೆಯಲ್ಪಡುವ) ಇತರರಿಗೂ ನಡೆದಿರುತ್ತೆ.

ಠೇವಣೀ ಮತ್ತು ಗುತ್ತಿಗೆಗೆ ಕೊಡುವ ಬಗ್ಯೆ ಕರಾರು.

ಗುತ್ತಿಗೆಗೆ ಕೊಡತಕ್ಕವರು ಗುತ್ತಿಗೇದಾರರ ಕೋರಿಕೆ ಮೇಲೆ ಮತ್ತು ಅವರು, ಇವರ ಮುಂದೆ ನಮೂದ್ ಮಾಡಲ್ಪಟ್ಟ ಒಡಂಬಡಿಕೆಗಳನ್ನು ನೆರವೇರಿಸುವದಕ್ಕೋಸ್ಕರ ಜಾಮೀನೀ ರೀಕ್ ರೂಪಾಯಿಗಳನ್ನು ಠೇವಣೀ ಕಟ್ಟಿ ಅಂಥಾ ಯಾವದಾದರೊಂದು ಒಡಂಬಡಿಕೆ ತಪ್ಪಿ ನಡಿಯುವಲ್ಲಿ ಸದರೀ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡತಕ್ಕದ್ದೆಂಬ ಷರತ್ತಿನ ಮೇಲೆ, ಮುಂದೆ ಅಡಗಿರತಕ್ಕ ಇದಕ್ಕೆ ಶೇರಿಸೋಣಾದ ಪತ ಯಾ ನಕ್ಷೆಯಲ್ಲಿ ತೋರಿಸಲ್ಪಟ್ಟ ಮೈಸೂರು ಶೀಮೆಯ ಡಿಸ್ಟ್ರಿಕ್ಟ ತಾಲ್ಲೂಕಿನಲ್ಲಿ ಯಿರುವ ಅಂದಾಜ್‌ವುಳ್ಳ ಮತ್ತು ಯಿದರಡೀ ಶೇರಿಸಲ್ಪಟ್ಟ ಷೆಡ್ಯೂಲ್ ತಖ್ತೆಯಲ್ಲಿ ಮುಖ್ಯವಾಗಿ ನಮೂದ್ ಮಾಡಿ ವಿವರಿಸಲ್ಪಟ್ಟ "ಚುನಾಯಿಸಲ್ಪಟ್ಟ ತಾಕು" ಯಂಬದಾಗಿ ಇಯಿಂದ ಕರೆಯಲ್ಪಡುವ ಜಮೀನ್ ವಿಷಯದಲ್ಲಿ ಗನಿ ಕೆಲಸ ನಡಿಸುವದಕ್ಕಾಗಿ ಗುತ್ತಿಗೆಗೆ ಕೊಡುವ ಬಗ್ಯೆ ಒಪ್ಪಿ ಯಿರುತ್ತಾರಾದ್ದರಿಂದ.

ಅಂಗೀಕಾರ.

ಕೊಡುವಣಾ.

ಹಾಲಿ ಈ ಕರಾರಿನಿಂದ ಅಂಗೀಕರಿಸಲ್ಪಡುವದೇನಂದರೆ, ಮುಂದೆ ಉಳಸಿಕೊಳ್ಳಲ್ಪಟ್ಟ ಕಂದಾಯಕ್ಕೂ ರಾಜಪಾಲಿಗೂ, ಜುರ್ಮಾನೆಗೂ, ಮತ್ತು ಇತರ ಪಾವತಿಗಳಿಗೂ ಮತ್ತು ಮುಂದೆ ಅಡಗಿರತಕ್ಕ ಗುತ್ತಿಗೇದಾರರಿಂದ ಹುಟ್ಟಲ್ಪಡುವಒಡಂಬಡಿಕೆಗಳು ವ ಕರಾರ್‌ಗಳಿಗೂ ಒಳಪಟ್ಟು, ಗುತ್ತಿಗೆಗೆ ಕೊಡುವವರಿಂದ ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರಿಗೆ, ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ, ಮೇಲೆ ನಮೂದ್ ಮಾಡಲ್ಪಟ್ಟು ವಿವರಿಸಲ್ಪಟ್ಟ ಚುನಾಯಿಸಲ್ಪಡೋಣಾದ ತಾಕಿನಲ್ಲಿ ಅಡಗಿರುವ ಆಕಾರ ಕಾಣದ ಸರ್ಕಾರ್ ಬಂಜರ್ ಜಮೀನ್ ದೇಖಿಲ್ ಹಿಡುವಳಿಯಲ್ಲಿ ಯಿಲ್ಲದ ಆಕಾರ ಕಂಡ ಸರ್ಕಾರ್ ಜಮೀನಿನಲ್ಲಿಯೂ, ಮತ್ತು ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ಹಿಡುವಳಿಯಲ್ಲಿನ ಸರ್ಕಾರ್ ಜಮೀನ್ ದೇಖೀಲ್ ಇನಾಂ ಜಮೀನ್‌ಗಳಲ್ಲಿಯೂ ವಿಂಗಡಿಸಿ, ಗನಿ ಕೆಲಸ ನಡಿಸುವದಕ್ಕೂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಯಿದ್ದಲು ಯಾ ವ್ಯಾಪಾರಕ್ಕೆ ಲಾಯಖಾದ ಇತರ ಪದಾರ್ಥಗಳುಳ್ಳಂಥಾ ಕಲ್ಲುಗಳು, ಬಳ್ಳಿ ಮೊಂಣು ಮುಂತಾದವುಗಳನ್ನು ಅಗೆದು ವಿಂಗಡಿಸುವದಕ್ಕೂ ಮತ್ತು ಅಲ್ಲಿ ಸಿಕ್ಕಬಹುದಾದ ತಮಾಂ ಭಂಗಾರ, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು; ಮತ್ತು ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳನ್ನು ಜಾಲಿಶಿ ತಯಾರ್ಮಾಡಿ ಪುಡಿಮಾಡಿ ವ್ಯಾಪಾರಕ್ಕೆ ಲಾಯಖಾಗಿ ಮಾಡುವ ಬಗ್ಯೂ ಯಿದರ ದೆಸೆಯಿಂದ ಪಟ್ಟಿ ಲೈಸೆನ್ಸು ಕೊಡೋಣಾಗಿರುತ್ತದೆ, ಪರಂತು ಹಿಡುವಳಿ ವ ಇನಾಂ ಜಮೀನ್‌ಗಳ ವಿಷಯದಲ್ಲಿ ಅಂಥಾ ಹಿಡುವಳೀದಾರು ಮತ್ತು ಇನಾಂದಾರರಿಂದ

ಗನಿ ಕೆಲಸ ನಡಿಸುವ ಬಗ್ಯೆ ಪಟ್ಟಿ ಸ್ವಾತಂತ್ರ್ಯ.

ಮೇಲ್ಕಂಡ ಹಕ್ಕನ್ನು ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರ್‌ಗಳು, ವಹಿವಾಟುದಾರರೂ ಮತ್ತು ವರ್ಗದಾರರೂ ಕೊಂಡುಕೊಂಡಿರಬೇಕು, ಯಾ ಕೊಂಡುಕೊಳ್ಳುವವರಾಗಿರಬೇಕು ಯಾ ಅವರೊಂದಿಗೆ ಗುತ್ತಿಗೇದಾರರೂ, ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರರು ಯಾ ವರ್ಗದಾರರು ಸದರೀ ಯವರ ಹಕ್ಕು ಪಡೆಯುವದಕ್ಕಾಗಿ ಅವರ ಸ್ವಂತ ಏರ್ಪಾಡು ಮಾಡಿಕೊಂಡಿರಬೇಕು ಯಾ ಮಾಡಿಕೊಳ್ಳಬೇಕು.

ಗನಿ ಕೆಲಸದಲ್ಲಿ ಉತ್ಪತ್ತಿ ಆದದ್ದನ್ನು ಮಾರುವ ಬಗ್ಯೆ ಗುತ್ತಿಗೇದಾರಗೆ ಸ್ವಾತಂತ್ರ್ಯ.

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳಿಗೆ ವಹಿವಾಟುದಾರರಿಗೆ ಮತ್ತು ವರ್ಗದಾರರಿಗೆ ಅವರಿಂದಲಾಗಲಿ ಯಾ ಅವರ ಪೈಕೀ ಯಾರಿಂದಲಾಗಲೀ ಅಂಥಾ ಚುನಾಯಿಸಲ್ಪಟ್ಟ ತಾಕಿನ ಮೇಲ್ಭಾಗದಲ್ಲಾಗಲೀ ತಳಭಾಗದಲ್ಲಾಗಲೀ ಹೊಂದಲ್ಪಡುವ ಭಂಗಾರ, ಲೋಹವುಳ್ಳ ಅದುರು, ವಜ್ರ ಮುಂತಾದ ಕಲ್ಲುಗಳು ಮತ್ತು ಕಲ್ಲಿದ್ದಲು ಮುಂತಾದ ವ್ಯಾಪಾರಕ್ಕೆ ಲಾಯಖಾದ ಪದಾರ್ಥಗಳನ್ನು ಸಾಗಿಸುವದಕ್ಕೂ ವಿಕ್ರಯಿಸುವದಕ್ಕೂ ಮತ್ತು ವಿಲಾವಾರಿ ಮಾಡುವದಕ್ಕೂ ಸ್ವಾತಂತ್ರ್ಯ ಕೊಡೋಣಾಗಿರುತ್ತೆ.

ಗುತ್ತಿಗೇದಾರರಿಗೆ, ಅವರ ಯಗ್ಜಿಕ್ಯೂಟರು ವಹಿವಾಟುದಾರರು ಮತ್ತು ವರ್ಗದಾರರಿಗೆ 30 ವರುಷಕಾಲ ಪರಿಯಂತ ಸ್ವಾಧೀನ.

ಮತ್ತು ಗುತ್ತಿಗೇದಾರರಿಗೆ ಅವರ ಯಗ್ಜಿಕ್ಯೂಟರುಗಳು, ವಹಿವಾಟುದಾರರು ವ ವರ್ಗದಾರರು ಯಿದರ ಪೇಶೆಯಿಂದ ಅವರಿಗೆ ಕೊಡಲ್ಪಟ್ಟಿತೆಂಬ ಮತ್ತು ಕೊಡೋಣಾದ ಮೇಲೆ ನಮೂದ ಮಾಡಲ್ಪಟ್ಟ ಪ್ರದೇಶಗಳನ್ನ ಈ ಕರಾರ ತಾರೀಖು ಮೊದಲು ಮೂವತ್ತು ವರುಷಗಳ ವಾಯಿದೇ ಪರಿಯಂತ ಸ್ವಾಧೀನ ಉಂಟಾಗಿರತಕ್ಕದ್ದು.

ಸರ್ಕಾರಿ ಜಮೀನುಗಳಿಗೆ ಕಂದಾಯವನ್ನೂ ಇನಾಂ ಜಮೀನುಗಳಿಗೆ ಜೋಡೀ ಮತ್ತು ಕ್ವಿಟ ರೆಂಟನ್ನೂ ಪಾವತೀ ಮಾಡುವಣ.

ಮತ್ತು ಸದರೀ ವಾಯಿದೇಯಲ್ಲಿ——————————ಡಿಸ್ಟ್ರಿಕ್ಟಿನೊಳಗೆ ಜಮೀನು ಕಂದಾಯದ ವಸೂಲಿ ಬಗ್ಯಾಗಿ ಜಾರೀ ಯಿರುವ ರೂಲ್ಸ ಅನುಸರಿಸಿ ಸದರೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಹಿಡುವಳಿಯಲ್ಲಿ ಯಿರುವ ಮತ್ತು ಸಾಗುವಳಿ ಲಾಯಖಾದ ಬಂಜರ ಜಮೀನುಗಳ ಮೇಲೆ ಹಾಲೀ ವಸೂಲ ಮಾಡಲ್ಪಡಬೇಕಾದ ಸಾಲಿಯಾನಾ ಕಂದಾಯವನ್ನೂ ಅಥವಾ ಯಿಯಿಂದ ಯಾವ ಕಾಲದಲ್ಲಾಗಲೀ ಈ ಗುತ್ತಿಗೆ ಜಾರೀ ಯಿರುವ ಕಾಲದಲ್ಲಿ ಗುತ್ತಿಗೆಗೆ ಕೊಡುವವರಿಂದ ಯಾ ಅವರ ಉತ್ತರಾಧಿಕಾರಿಗಳಿಂದ ಯಾ ವರ್ಗದಾರರಿಂದ ಜಮೀನು ಕಂದಾಯದ ಯಾವದದರೂ ತಿದ್ದುಪಾಟಿನಲ್ಲಿ ಕಂದಾಯದ ತರೀಕ ಅಂಥಾ ಜಮೀನಿನ ಮೇಲೆ ಗೊತ್ತುಮಾಡಲ್ಪಡುವ ಜಾಸ್ತೀ ಮೊಬಲಗನ್ನೂ ಮತ್ತು ಸದರೀ ತಾಕಿನಲ್ಲಿ ಅಡಗಿರುವ ಯಾವದಾದರೂ ಇನಾಂ ಜಮೀನಿನ ಮೇಲೆ ತೆರಬೇಕಾದ ಜೋಡೀ ಯಾ ಕ್ವಿಟರೆಂಟ ಮೊಬಲಗನ್ನೂ ಖಿಸ್ತುಬಂದೀ ಪ್ರಕಾರ ಪಾವತೀ ಮಾಡತಕ್ಕದ್ದಲ್ಲದೆ ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ತಮಾಂ ಸಾಗುವಳಿ ನಾಲಾಯಖ ಸರ್ಕಾರಿ ಜಮೀನಿನ ಮೇಲೆ ಯಕರೆ ವಂದಕ್ಕೆ 8 ಆಣೆ ಮೇರಿಗೆ ಸಾಲೀಯಾನಾ ಕಂದಾಯವನ್ನು ಸುದಾ ಅವುಗಳಿಗಾಗಿ ಒಪ್ಪಿ ಮತ್ತು ಪಾವತೀ ಮಾಡುತ್ತಾ ಬರಬೇಕು.

ಮತ್ತು ಲೋಕಲಸೆಸ್ಸು, ತೆರಿಗೆಗಳು ಯಾ ರಿವಾಜುಗಳನ್ನ ಪಾವತೀ ಮಾಡುವಣ.

ಮತ್ತು ಮೇಲೆಕಂಡ ಸಾಲಿಯಾನಾ ಕಂದಾಯ, ಜೋಡೀ ವ ಕ್ವಿಟರೆಂಟ ದೇಖೀಲ, ಚುನಾಯಿಸಲ್ಪಟ್ಟ ತಾಕಿನಲ್ಲಿ ಅಡಗಿರುವ ನಿವೇಶನ ಯಾ ಜಮೀನುಗಳು ಯಾ ಅವುಗಳಲ್ಲಿರುವ ಕಟ್ಟಡಗಳು ಯಾ ಕಾಮಗಾರಿ ಯಿವುಗಳಿಗಾಗಿ ತತ್ಕಾಲದಲ್ಲಿ ತೆರಬೇಕಾದ ತಮಾಂ ಲೋಕಲಸೆಸ್ಸುಗಳೂ ಇತರ ತಮಾಂ ತರಹೆಯ ತೆರಿಗೆಗಳೂ ರಿವಾಜುಗಳೂ ಸುದಾ ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು.

ಮತ್ತು ಉತ್ಪತ್ತಿಯಾದ ಭಂಗಾರ ವಗೈರೇ ಮೇಲೆ ಶೇಕಡಾ 5ರಂತೆ ರಾಜಪಾಲು ಕೊಡುವಣ.

ಮತ್ತು ಗುತ್ತಿಗೇದಾರರಿಂದ ಅವರ ಯಗ್ಜಿಕ್ಯೂಟರುಗಳು ವಹಿವಾಟುದಾರು ಯಾ ವರ್ಗದಾರರುಗಳಿಂದ ತಯಾರುಮಾಡಲ್ಪಡುವ, ಪುಡಿಮಾಡಲ್ಪಡುವ ಮತ್ತು ವ್ಯಾಪಾರಕ್ಕೆ ಲಾಯಖಾಗಿ ಮಾಡಲ್ಪಡುವ ತಮಾಂ ಭಂಗಾರ, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮತ್ತು ಖರೀದಿ ಆಗುವ ಯಾ ವ್ಯಾಪಾರದ ಸ್ವಭಾವವುಳ್ಳ ಇತರ ಪದಾರ್ಥಗಳ ಒಟ್ಟು ಹುಟ್ಟುವಳೀ ಮೇಲೆ ಶೇಕಡಾ 5ರ ಪ್ರಕಾರ ರಾಜಪಾಲು ಕೊಡುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರಬೇಕು, ಅಂಥಾ ರಾಜಪಾಲು ಯಾವ ಬಾಬಿನ ಖರ್ಚೂ ವಜಾ ಮಾಡಲ್ಪಡದೆಯೆ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ದೊರಿಯುವಂಥಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಮೌಲ್ಯದ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನಲ್ಲಿ ದೊರಿಯುವಂಥಾ ತಮಾಂ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳ ಖರೀದಿ ಮೊಬಲಗಿನ ಮೇಲೆ ಶೇಕಡಾ 10ರ ಪ್ರಕಾರ ರಾಜಪಾಲ ಮೊಬಲಗನ್ನು ತೆರುವದಕ್ಕೆ ಒಪ್ಪಿ ಪಾವತೀ ಮಾಡುತ್ತಾ ಬರತಕ್ಕದ್ದು; ಅಂಥಾ ರಾಜಪಾಲು, ಯಾವ ಬಾಬಿನ ಖರ್ಚೂ ವಜಾ ಮಾಡಲ್ಪಡದೆಯೇ ಪಾವತೀ ಮಾಡಲ್ಪಡತಕ್ಕದ್ದು.

ಮತ್ತು ಪ್ರತಿ ವರ್ಗದ ಯಾ ಒಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುಮಾನೆ ಕೊಡುವಣ.

ಯಾವ ಕಾಲದಲ್ಲಾಗಲಿ ಗುತ್ತಿಗೇದಾರರಿಂದ ಅವರ ಎಗ್ಜಿಕ್ಯೂಟರುಗಳಿಂದ ವಹಿವಾಟದಾರರಿಂದ ಯಾ ವರ್ಗದಾರುಗಳಿಂದ ಸಂಪೂರ್ಣವಾಗಿಯಾಗಲಿ ವೊಂದುಭಾಗವಾಗಿಯಾಗಲಿ ಕೊಡಲ್ಪಡುವ ಮೇಲೆ ಹೇಳಲ್ಪಟ್ಟ ನಿವೇಶನಗಳ ಪ್ರತಿ ವರ್ಗ ಯಾ ವೊಳಗುತ್ತಿಗೇಗಾಗಿಯಾಗಲಿ ಈ ಕರಾರಗಳಿಂದ ವೊಪ್ಪಿಸಲ್ಪಟ್ಟ ವ ಕೊಡಲ್ಪಟ್ಟ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸಗಳನ್ನ ವಿಶಿಷ್ಟವಾಗಲಿ ಆ ಮೈಕೀ ಕೆಲವನ್ನ ವರ್ಗ ಮಾಡುವದಕ್ಕಾಗಿಯಾಗಲಿ ಅಥವಾ ಮೇಲೆ ಹೇಳಲ್ಪಟ್ಟ ನಿವೇಶನಗಳೊಳಗಣ ಯಾವದಾದರೂ ಹಕ್ಕುಗಳ ಸ್ವಾತಂತ್ರ್ಯಗಳ ವ ಲೈಸೆನ್ಸುಗಳಲ್ಲಿ ಸಂಬಂಧ ಯಾ ಹಿಸ್ಸೆಯನ್ನ ಸಂಪೂರ್ಣವಾಗಿಯಾಗಲಿ, ಕೆಲವು ಮಟ್ಟಿಗಾಗಲಿ ಕೊಡುವದಕ್ಕಾಗಲಿ, ಅಂಥಾ ವರ್ಗ ಯಾ ವೊಳಗುತ್ತಿಗೆಯ ಮೊಬಲಗಿನ ದಶಮಾಂಶವನ್ನ ಜುಮಾನೆ ತೆರಲಿಕ್ಕೆ ವೊಪ್ಪಿಕೊಂಡು ಪಾವತೀ ಮಾಡುತ್ತಾ ಬರತಕ್ಕದ್ದು. ಅಂಥಾ ಜುಮಾನೆಯು ಯಾವಬಾಬಿನ ಖರ್ಚೂ ವಜಾ ಮಾಡಲ್ಪಡದೇಯೇ ಪಾವತೀ ಮಾಡಲ್ಪಡತಕ್ಕದ್ದು. ಆದರೆ ಯರಡನೇ ದಫಾ ಯಾ ಆ ತರುವಾಯ ಮಾಡಲ್ಪಡುವ ವರ್ಗ ಯಾ ವೊಳಗುತ್ತಿಗೆ ವಿಷಯದಲ್ಲಿ ಕೊಡಬೇಕಾದ ಜುರಮಾನೆಯನ್ನ ಲೆಖ್ಖಮಾಡುವಾಗ, ಅದರ ಹಿಂದೆ ನಡೆದ ವರ್ಗ ಯಾ ವೊಳಗುತ್ತಿಗೆ ಮೊಬ

ಲಗು ಜಾತಾ ಆ ವರ್ಗದ ಯಾ ವೊಳಗುತ್ತಿಗೆಯ ಮೊಬಲಗಿನ ಮೇಲೆ ಲೆಖ್ಖ ಮಾಡಲ್ಪಡತಕ್ಕದ್ದು. ಪರಂತು ಯಾವದಾವರೊಂದು ವರ್ಗ ಯಾ ಒಳಗುತ್ತಿಗೆಯ ಮೊಬಲಗು ವಿಶಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ವೊಂದು ಕಂಪೆನಿಯ ಷೇರುಗಳಾಗಿ ಯಿದ್ದರೆ, ಅಂಥಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ಗುತ್ತಿಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರ ಯಿಷ್ಟಾನುಸಾರ ಆ ಕಂಪೆನಿಯ ಷೇರುಗಳಾದರೂ ಆಗಬಹುದು ಅಥವಾ ಆ ಷೇರುಗಳ ಕ್ರಿಪ್ತವಾದ ಮೌಲ್ಯದ ಮೇರಿಗೆ ಅದಕ್ಕೆ ಸರಿಯಾದ ನಗದು ಹಣವಾದರೂ ಆಗಬಹುದು. ಮತ್ತು ಯಾವದಾವರೊಂದು ವರ್ಗ ಯಾ ಒಳಗುತ್ತಿಗೆಯ ಮೊಬಲಗು ವಿಸಿಷ್ಟವಾಗಲಿ ಯಾ ಭಿನ್ನಾಂಶವಾಗಲಿ ವೊಂದು ತೆರಿಗೆ, ರಾಜಪಾಲು, ಯಾ ಇತರ ಖಿಸ್ತುಬಂದಿಯಾಗಿ ಸಲಿಕೆಯಾಗುವ ಸ್ವಭಾವ ಉಳ್ಳದ್ದಾಗಿ ಯಿದ್ದರೆ, ಅಂಥಾ ವಿಸಿಷ್ಟ ಯಾ ಭಿನ್ನಾಂಶದ ಮೊಬಲಗಿನ ಮೇಲೆ ತೆರತಕ್ಕ ಜುರಮಾನೆಯು ತೆರಿಗೆ, ರಾಜಪಾಲು, ಆ ಸವಾ ಸಂದರ್ಭಾನುಸಾರ ಇತರ ಖಿಸ್ತುಬಂದೀ ಮೇರಿಗೆ ಸಲಿಕೆಯಾಗುವ ಸ್ವಭಾವವುಳ್ಳದ್ದಾಗಿಯೇ ಯಿರತಕ್ಕದ್ದು. ಹಾಗೆ ತರುವಾಯ ಮಾಡಲ್ಪಡುವ ವರ್ಗ ಯಾ ಒಳಗುತ್ತಿಗೆಯ ಮೇಲೆ ವಸೂಲಾಗತಕ್ಕ ಜುರಮಾನೆಯನ್ನು ಲೆಖ್ಖ ಮಾಡುವದಕ್ಕಾಗಿ ಆ ವರ್ಗ ಯಾ ಒಳಗುತ್ತಿಗೆಯ ಮೊಬಲಗಿನಲ್ಲಿ ಅವಶ್ಯಕವಾದ ವಜಾವನ್ನು ಮಾಡುವ ಉದ್ದಿಶ್ಯ ಅಂಥಾ ತೆರಿಗೆ, ರಾಜಪಾಲು ಯಾ ಇತರ ಖಿಸ್ತುಬಂದಿ ಸಲಿಕೆಯ ತಾತ್ಕಾಲಿಕ ಮೌಲ್ಯವು ಗುತ್ತಿಗೆಗೆ ಕೊಡುವವರಿಂದಲಾಗಲಿ ಅವರ ಉತ್ತರಾಧಿಕಾರಿಗಳಿಂದಲಾಗಲಿ, ಯಾ ವರ್ಗದಾರರುಗಳಿಂದಲಾಗಲಿ ತರಾಪು ಮಾಡಲ್ಪಡತಕ್ಕದ್ದು. ಮತ್ತು ಯಾವ ವರ್ಗವಾಗಲಿ ಯಾ ಒಳಗುತ್ತಿಗೆಯೇ ಆಗಲೀ ಅಂಥಾ ವರ್ಗ ಯಾ ಒಳಗುತ್ತಿಗೆಗಾಗಿ ಜುರ್ಮಾನೆಯು ಗುತ್ತಿಗೆಗೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರುಗಳಿಗೆ ಕ್ರಮವಾಗಿಯೂ, ಪೂರ್ತಿಯಾಗಿಯೂ ಪಾವತೀ ಮಾಡಲ್ಪಟ್ಟಿದ್ದರೇನೇ ಹೊರ್ತು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರ್ರುಗಳ ವಿಷಯದಲ್ಲಿ ಅದು ಸಿದ್ಧವಾಗುವದಿಲ್ಲವು.

ಕಂದಾಯ, ರಾಜಪಾಲ್, ಜುರ್ಮಾನೆ ಮತ್ತು ಇತರ ಬಾಕೀಗೋಸ್ಕರ ಗುತ್ತಿಗೆಗೆ ಕೊಡುವವರಿಂದ ಜಫ್ತಿ ಮಾಡುವಣ.

ಮತ್ತು ಅಂಥಾ ಕಂದಾಯ, ರಾಜಪಾಲು, ತೆರಿಗೆ ವ ಜುರ್ಮಾನೆ ಮೊದಲಾದ ಯಿತರ ಬಾಕಿಗಳು ಅವುಗಳ ಪಾವತಿಬಗ್ಗೆ ಈ ಕರಾರಿನ ಪೆಶೆಯಿಂದ ಕೊಡಲ್ಪಟ್ಟ ವಾಯಿದೆಯು ಮುಗಿದ ಅರವತ್ತು ದಿವಸಗಳ ಪರಿಯಂತ ಪಾವತಿಆಗದೆ ಬಾಕಿಯಿದ್ದು ಮತ್ತು ಅಂಥಾ ಬಾಕಿಗಳನ್ನು ಪಾವತೀಮಾಡಬೇಕೆಂಬದಾಗಿ ಸದರೀ-ಡಿಸ್ಟ್ರಿಕ್ಟು ಸಿವಿಲ್ ಯಗ್ಜಿಕ್ಯೂಟಿವ್ ಆಫೀಸರವರಿಂದ ವಂದು ನೋಟೀಸು ಜಾರಿಮಾಡಲ್ಪಟ್ಟ ತರುವಾಯ ಮೂವತ್ತು ದಿವಸಗಳ ವರೆಗಾಗಿ ಸದರೀ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರು, ವಹಿವಾಟುದಾರು ಯಾ ವರ್ಗದಾರ್ರು ಪಾವತಿಮಾಡದೆಯಿದ್ದ ಸಂದರ್ಭದಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ತಮಗೆ ಭಂಗಾರ, ಲೋಹ ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು, ಮತ್ತು ಚುನಾಯಿಸಲ್ಪಟ್ಟ ತಾಕಿನೊಳಗಣ ಗನಿ ಯಾ ಹಳ್ಳಗಳ ಆಸ್ಪಾನಲ್ಲಿ ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರು, ವಹಿವಾಟುದಾರ್ರು ಯಾ ವರ್ಗದಾರರಿಂದ ಉಪಯೋಗಿಸಲ್ಪಟ್ಟ ಯಾ ಸಾಗಿಸಲ್ಪಟ್ಟ ವಿಕ್ರಯ ಸ್ವಭಾವವುಳ್ಳ ಇತರ ಪದಾರ್ಥಗಳನ್ನಾಗಲಿ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಿರಬಹುದಾದ ಮತ್ಯಾವ ಯಿತರ ಸ್ವತ್ತನ್ನಾಗಲಿ ಹಿಡಿದುಕೊಳ್ಳುವಬಗ್ಗೆ ಸ್ವತಂತ್ರರಾಗಿರತಕ್ಕದ್ದು. ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಂಥಾ ಭಂಗಾರ ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳು, ಕಲ್ಲಿದ್ದಲು ಮುಂತಾದ ಇತರ ಪದಾರ್ಥಗಳನ್ನೂ ಸ್ವತ್ತುಗಳನ್ನೂ ವಿಕ್ರಯಿಸಿ ವಿಲೆವಾರಿ ಮಾಡಬಹುದು, ಮತ್ತು ಅಂಥಾ ವಿಕ್ರಯದಿಂದ ಹುಟ್ಟಿದ ಮೊಬಲಗಿನಲ್ಲಿ ಈ ಗುತ್ತಿಗೆ ಅನುಸರಿಸಿ ಬರಬೇಕಾದ ಕಂದಾಯ, ರಾಜಪಾಲು, ಜುರ್ಮಾನೆ ಮುಂತಾದ ಯಿತರ ವಸೂಲಾಗಬೇಕಾದ ಮೊಬಲಗಿಗೋಸ್ಕರವೂ ಅಂಥಾ ಜಫ್ತಿ ಮತ್ತು ಹರಾಜಿಗೋಸ್ಕರ ತಗಲಿದ ಖರ್ಚು ಮೊಬಲಗಿಗೋಸ್ಕರವೂ ವಜಾಹಾಕಿಕೊಳ್ಳಬಹುದು.

ಗನಿ ಕೆಲಸಗಳನ್ನು ಅವಿಚ್ಛಿನ್ನವಾಗಿ ನಡೆಸುವಬಗ್ಗೆ ಗುತ್ತಿಗೇದಾರನಿಂದ ಒಡಂಬಡಿಕೆ.

ಮತ್ತು ಇದರದೆಶೆಯಿಂದ ಗುತ್ತಿಗೇದಾರರು ತಮಗೋಸ್ಕರವೂ ಅವರ ವಾರಸುದಾರರು, ಯಗ್ಜಿಕ್ಯೂಟರು, ವಹಿವಾಟುದಾರರು ಮತ್ತು ವರ್ಗದಾರರು ಯಿವರಿಗೋಸ್ಕರವೂ ಮತ್ತು ಆಯಾ ಪ್ರತಿ ಪಬ್ಬರಿಗೋಸ್ಕರವೂ ಬೇರೆಬೇರೆಯಾಗಿ ಒಡಂಬಟ್ಟು ಇದರದೆಶೆಯಿಂದ ಅವರಿಗೋಸ್ಕರ, ಮತ್ತು ಅವರ ವಾರಸುದಾರರು, ಯಗ್ಜಿಕ್ಯೂಟರು, ವಹಿವಾಟುದಾರರು ವ ವರ್ಗದಾರರಿಗೋಸ್ಕರ ಗುತ್ತಿಗೆಗೆ ಕೊಡುವವರೊಂದಿಗೂ, ಅವರ ಉತ್ತರಾಧಿಕಾರಿಗಳ ಮತ್ತು ವರ್ಗದಾರರೊಂದಿಗೂ ಒಡಂಬಟ್ಟಿರುವದೇನೆಂದರೆ, ಅವರು ಅಂದರೆ ಗುತ್ತಿಗೇದಾರರು, ಅವರ ಯಗ್ಜಿಕ್ಯೂಟರುಗಳು, ವಹಿವಾಟುದಾರರು ಗುತ್ತಿಗೆ ಕಾಲದ ಮದಲ್ ವರುಷದಲ್ಲಿ ಚುನಾಯಿಸಲ್ಪಟ್ಟ ಪ್ರದೇಶದಲ್ಲೆಲ್ಲ ಛಂದಾಗಿಯೂ ಫಲಕಾರಿಯಾಗುವಂತೆಯೂ ಭಂಗಾರಕ್ಕೋಸ್ಕರ ಯಾ ಯಿತರ ಲೋಹಗಳು ಯಾ ವಜ್ರ ಮುಂತಾದ ಬೆಲೆಯುಳ್ಳ ಕಲ್ಲುಗಳಿಗೋಸ್ಕರ ಅಜಮಾಯಿಷೀಕೆಲಸ ನಡಿಸುವದಲ್ಲದೆ ಹಾಗೆ ಅವಶ್ಯಕವಾದಲ್ಲಿ ಅಜಮಾಯಿಷೀ ಕೆಲಸಗಳ ಫಲಪರ್ಯವಸಾನವನ್ನು ತೋರಿಸುಬಗ್ಗೆ ತಯಾರ್ಮಾಡಲ್ಪಟ್ಟಿರಬಹುದಾದಂಥಾ ಯಾವದಾದರೂ ರಿಪ್ರೋರ್ಟುಗಳ ಯಥಾ ನಕಲ್‍ಗಳನ್ನು ಗುತ್ತಿಗೆಗೆ ಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಒದಗಿಸತಕ್ಕದ್ದು.

ಮತ್ತು ಈ ಗುತ್ತಿಗೆ ತಾರೀಖು ಮೊದಲು ಯರಡು ವರುಷಗಳ ವಳಗಾಗಿ, ಚುನಾಯಿಸಲ್ಪಟ್ಟ ತಾಕಿನ ಪ್ರತಿ ಚದರಮೈಲ್ ವಂದಕ್ಕೆ 5,000 (ಐದುಸಾವಿರ) ಪವರ್ನಗಳಿಗೆ ಕಮ್ಮಿಯಿಲ್ಲದ, ಖರ್ಚಿನಬಗ್ಗೆಯಾಗಿ ವಸೂಲ್ಮಾಡಲ್ಪಟ್ಟ ಮೂಲಧನವುಳ್ಳ ವಂದು ಕಂಪೆನಿಯಾನೆ ಸಂಘ

ವನ್ನು ಶೇರಿಸುವದಕ್ಕೆ ಅಶಕ್ತರಾದರೆ ಈ ಗುತ್ತಿಗೆಯ ದೆಶೆಯಿಂದ ಉಂಟುಮಾಡಲ್ಪಟ್ಟ ತಮಾಂ ಬಾಧ್ಯತೆ, ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನ ಗುತ್ತಿಗ್ಯೆಕೊಡುವವರಿಗೆ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ದಂಡವಾಗಿ ವಪ್ಪಿಸತಕ್ಕದ್ದು.

ಮತ್ತು ಗುತ್ತಿಗೆ ವಾಯಿದೆಯಲ್ಲಿ ಫಲಕಾರಿಯಾಗುವಂತೆ ಅವಿಚ್ಛಿನ್ನವಾಗಿ, ಪರಂತು ಅಸಾಧ್ಯವಾದ ಆಕಸ್ಮಿಕದ ದೆಶೆಯಿಂದ ಅಡ್ಡಿ ಮಾಡಲ್ಪಟ್ಟ ಕಾಲದಲ್ಲಿವಿನಾ, ಚುನಾಯಿಸಲ್ಪಟ್ಟ ತಾಕಿನೊಳಗೂ ಮೇಲ್ಭಾಗದಲ್ಲಿಯೂ ಗನಿಕೆಲಸ ನಡಶಿ ದೊರಿಯುವ ತಮಾಂ ಭಂಗಾರ, ಲೋಹ, ಲೋಹಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲು, ಕಲ್ಲಿದ್ದಲು ಮತ್ತು ವಿಕ್ರಯಕ್ಕೆ ವ ವ್ಯಾಪಾರಕ್ಕೆ ಲಾಯಖಾದ ತಮಾಂ ಯಿತರ ಪದಾರ್ಥಗಳನ್ನೂ ತಯಾರ್ಮಾಡಿ ವ್ಯಾಪಾರ ಲಾಯಖಾಗಿ ಮಾಡತಕ್ಕದ್ದು.

ಭಂಗಾರದ ಮಾದರಿ ವಗ್ಯೆರೆಯನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸುವಣ ಯಾ ತೆಗೆದುಕೊಳ್ಳುವಬಗ್ಯೆ ಅವಕಾಶ ಕೊಡುವಣ.

ಮತ್ತು, ಅಪೇಕ್ಷಿಸಲ್ಪಟ್ಟಲ್ಲಿ ಅವು ವಿಕ್ರಯವಾಗುವದಕ್ಕೆ ಮುಂಚಿತವಾಗಿ, ತಯಾರ್ಮಾಡಲ್ಪಟ್ಟ, ಪುಡಿ ಮಾಡಲ್ಪಟ್ಟ ಮತ್ತು ವ್ಯಾಪಾರ ಲಾಯಖಾಗಿ ಮಾಡಲ್ಪಟ್ಟಿರುವ ವಿಕ್ರಯಕ್ಕೆ ಶಿದ್ಧಪಡಿಶಿದಂಥಾ ತಮಾಂ ಭಂಗಾರ, ಲೋಹಗಳು, ಲೋಹ ಸಂಬಂಧವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳ ಮಾದರಿ ಯಾ ಮಾದರಿಗಳನ್ನು ಗುತ್ತಿಗ್ಯೆ ಕೊಡುವವರಿಗೆ. ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಅಥವಾ ಏಜಂಟ್ ಯಾ ಏಜಂಟರುಗಳಿಗೆ ಒಪ್ಪಿಸತಕ್ಕದ್ದು, ಅಥವಾ ಅವರಿಂದ ತೆಗೆದುಕೊಳ್ಳುವಬಗ್ಯೆ ಅವಕಾಶಕೊಡಲ್ಪಡತಕ್ಕದ್ದು ಹಾಂಗೆ ತೆಗೆದುಕೊಳ್ಳುವ ತಮಾಂ ಮಾದರಿಬಗ್ಯೆ ಆಗಿನ ಬಜಾರ್ ಧಾರಣೆಪ್ರಕಾರ ಖರೀದಿ ಮೊಬಲಗು ಗುತ್ತಿಗೆಗೆ ಕೊಡುವವರಿಂದಲಾಗಲಿ, ಅವರ ಉತ್ತರಾಧಿಕಾರಿಗಳಿಂದಲಾಗಲೀ ಯಾ ವರ್ಗದಾರರಿಂದಲಾಗಲೀ ಪಾವತಿ ಮಾಡಲ್ಪಡತಕ್ಕದ್ದು.

ಗುತ್ತಿಗ್ಯೆ ಕೊಡುವವರಿಗೆ ಧಾರಣೆಗಳ ಲೆಕ್ಕಗಳನ್ನು ಕೊಡುವಣ.

ಮತ್ತು ಸದರೀ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ವಜ್ರ ಮುಂತಾದ ಕಲ್ಲುಗಳು, ಕಲ್ಲಿದ್ದಲು ಮತ್ತು ಇತರ ಪದಾರ್ಥಗಳು ಖರೀದಿಆದ ತರುವಾಯ, ಗುತ್ತಿಗ್ಯೆಕೊಡುವವರಿಗಾಗಲೀ ಅವರ ಉತ್ತರಾಧಿಕಾರಗಳು ಅಥವಾ ವರ್ಗದಾರರು ಯಾ ಏಜಂಟ್ ಯಾ ಏಜಂಟರಿಗಾಗಲಿ ಸದರೀ ಪದಾರ್ಥಗಳು ಯೆಷ್ಟು ಮೊಬಲಗ್ಯೆ ವಿಕ್ರಯಿಸಲ್ಪಟ್ಟವೋ ಆ ತಪಶೀಲನ್ನೂ ಅಪೇಕ್ಷಿಸಲ್ಪಟ್ಟಲ್ಲಿ ಅವುಗಳನ್ನ ಖರೀದಿಗೆ ಪಡೆದವರ ಹೆಸರನ್ನೂ ಸುದಾ ವದಗಿಸತಕ್ಕದ್ದು.

ಖರೀದಿಆದ 90 ದಿವಸಗಳ ವಳಗಾಗಿ ಯಾ ಅದುರು ತೆಗೆದ ಆರು ತಿಂಗಳ ವಳಗಾಗಿ ರಾಜಪಾಲ್ ಮೊಬಲಗನ್ನ ಪಾವತಿ ಮಾಡುವಣ.

ಮತ್ತು ಅಂಥಾ ವಿಕ್ರಯ ನಡೆದ 90 ದಿವಸಗಳ ವಳಗಾಗಿಯಾಗಲಿ ಅಥವಾ ಭಂಗಾರ, ಲೋಹಗಳು, ಲೋಹ ಮಿಶ್ರವಾದ ಅದುರು, ಕಲ್ಲಿದ್ದಲು ಮೊದಲಾದ ಇತರ ಪದಾರ್ಥಗಳು ತೆಗದ ಅಥವಾ ವಜ್ರಮುಂತಾದ ಬೆಲೆಯುಳ್ಳ ಕಲ್ಲುಗಳು ಕಂಡುಹಿಡಿದ ಆರು ತಿಂಗಳ ವಳಗಾಗಿಯಾಗಲಿ, ಮೇಲೆ ಕಂಡ ಉಳಕೊಳ್ಳಲ್ಪಟ್ಟ ರಾಜಪಾಲು ಮೊಬಲಗನ್ನು ಗುತ್ತಿಗ್ಯೆ ಕೊಡುವವರಿಗೆ ಆಗಲಿ ಅವರ ಉತ್ತರಾಧಿಕಾರಿಗಳಿಗೆ ಯಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ತಮಾಂ ವರ್ಗಗಳ ನಕ್ಕಲುಗಳನ್ನೂ ಗುತ್ತಿಗ್ಯೆ ಕೊಡುವವರಿಗೆ ಒಪ್ಪಿಸುವಣ.

ಮತ್ತು ಗುತ್ತಿಗೇದಾರರಿಗಾಗಲೀ ಅವರ ಉತ್ತರಾಧಿಕಾರಗಳು ಯಾ ವರ್ಗದಾರರಿಗಾಗಲೀ, ಸದರೀ ನಿವೇಶನಗಳು ಯಾ ಅದರ ಯಾವದಾದರೂ ವಂದು ಭಾಗದ ವರ್ಗ ಯಾ ವಳಗುತ್ತಿಗೆಯು ಅಥವಾ ಈ ಕರಾರಿನಿಂದ ಒಪ್ಪಿಸಲ್ಪಟ್ಟ ಯಾ ಕೊಡಲ್ಪಟ್ಟ ತಮಾಂ ಯಾ ಯಾವದಾದರೂ ಹಕ್ಕು ಸ್ವಾತಂತ್ರ್ಯ ಮತ್ತು ಲೈಸೆನ್ಸಗಳ ಅಥವಾ ಸದರೀ ನಿವೇಶನಗಳಲ್ಲಿ ಅಥವಾ ಸದರೀ ಹಕ್ಕು, ಸ್ವಾತಂತ್ರ್ಯ ಮತ್ತು ಲೈಸೆನ್ಸ್ ಇವುಗಳಲ್ಲಿ ಪೂರ್ತಿಯಾಗಿ ಯಾಗಲಿ ಕೆಲವು ಮಟ್ಟಿಗಾಗಲಿ ಸಂಬಂಧ ಯಾ ಹಿಸ್ಸೆ ಇವುಗಳ ವರ್ಗ ಯಾ ವಳಗುತ್ತಿಗೆಯು ಅದು ನಡೆದ ಯೆರಡು ತಿಂಗಳ ವಳಗಾಗಿ ಒಪ್ಪಿಸಲ್ಪಡತಕ್ಕದ್ದು.

ತಮಾಂ ವರ್ಗಗಳ ಮೇಲೂ 90 ದಿವಸಗಳ ವಳಗಾಗಿ ಜುರ್ಮಾನೆ ಪಾವತಿ ಮಾಡುವಣ.

ಮತ್ತು ಅಂಥಾ ವರ್ಗ ಯಾ ವಳಗುತ್ತಿಗೆ ನಡೆದ 90 ದಿವಸಗಳ ವಳಗಾಗಿ ಅಂಥಾ ವರ್ಗ ಯಾ ವಳಗುತ್ತಿಗೆಗೋಸ್ಕರ ಇದಕ್ಕೆ ಮುಂಚೆ ವಿಧಿಶಿ ಉಳಿಶಿಕೊಂಡಿರುವ ಜುರ್ಮಾನೆಯನ್ನು ಗುತ್ತಿಗ್ಯೆ ಕೊಡುವವರಿಗೆ, ಅವರ ಉತ್ತರಾಧಿಕಾರಿಗಳಿಗೆ ಅಥವಾ ವರ್ಗದಾರರಿಗೆ ಪಾವತಿ ಮಾಡತಕ್ಕದ್ದು.

ಲೆಖ್ಖ ವ ನಕ್ಷೆಗಳ ಕ್ರಮವಾದ ಬುಕ್ಕುಗಳನ್ನ ಇಡುವಣ.

ಮತ್ತು ಸದರೀ ವಾಯಿದೆಯಲ್ಲಿ ಚುನಾಯಿಸಲ್ಪಟ್ಟ ತಾಕಿನ ಯಾವದಾದರೂ ಅನುಕೂಲವಾದ ಸ್ಥಳದಲ್ಲಿ, ಗುತ್ತಿಗೆದಾರರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಏಜಂಟ್ ಯಾ ಏಜಂಟರುಗಳು ಯಲ್ಲ ಕಾಲಗಳಲ್ಲೂ ಧಾರಾಳವಾಗಿ ನೋಡುವ ಬಗ್ಯೆ ಸದರೀ ಗನಿಗಳ ಆಡಳಿತ ಮತ್ತು ಹುಟ್ಟುವಳಿ ವ ಖರ್ಚು ಇವುಗಳ ತಪಶೀಲನ್ನೂ ಮತ್ತು ಭಂಗಾರ, ಲೋಹಗಳು, ಲೋಹ

ಮಿಶ್ರವಾದ ಅದುರು ವಜ್ರ ಮುಂತಾದ ಬೆಲೆಯುಳ್ಳ ಕಲ್ಲು, ವಿಕ್ರಯ ಯಾ ವ್ಯಾಪಾರ ಲಾಯಖಾದ ತಮಾಂ ಇತರ ಪದಾರ್ಥಗಳ ವಿಲಾವಾರಿ ಹಾಂಗೂ ಅವುಗಳ ಕರಾರ್‌ವಾಕಾ ಬೆಲೆ ತಿಳಿಯುವ ಬಗ್ಯಾಗಿ ಅವುಗಳ ತೇದಾದು, ತ ರೀಖು ಮತ್ತು ಅವಶ್ಯಕವಾದ ಯಾ ಯುಕ್ತವಾದ ಇತರ ಸಂಗತಿಗಳನ್ನ ತೋರಿಸುವಂಥಾ ಲೆಖ್ಖದ ಬುಕ್ಕುಗಳನ್ನ ತಯಾರ್ಮಾಡಿ ಇಡತಕ್ಕದ್ದಲ್ಲದೆ ಸದರೀ ಗನಿ ವ ಕಾಮಗಾರಿಗಳ ಸಾಚಾ ನಕ್ಷೆ, ಪ್ಲಾನು ವ ಸೆಕ್ಶನ್‌ಗಳನ್ನ ತಯಾರ್ಮಾಡಿ ಇಡತಕ್ಕದ್ದು.

ಮತ್ತು ಅವುಗಳ ನಕಲುಗಳನ್ನು ಗುತ್ತಿಗೆಗೆ ಕೊಡುವವರಿಗೆ ಒದಗಿಸುವಣ.

ಮತ್ತು ಗುತ್ತಿಗೆಗೆ ಕೊಡುವವರಿಂದಲಾಗಲೀ ಅವರ ಉತ್ತರಾಧಿಕಾರಿಗಳಿಂದಲಾಗಲೀ ಅಥವಾ ವರ್ಗದಾರರಿಂದಲಾಗಲೀ ಯಾ ಅವರ ಏಜಂಟ್ ಯಾ ಏಜಂಟರುಗಳಿಂದಲಾಗಲೀ ಅಪೇಕ್ಷಿಸಲ್ಪಟ್ಟಾಗ ಅವರಿಗೆ ಸದರೀ ಬುಕ್ಕಿನಲ್ಲಿ ದಾಖಲಾದ ತಮಾಂ ಖತಾಯಿತಿಗಳ ನಕಲುಗಳನ್ನೂ ಮತ್ತು ಅಂಥಾ ತಮಾಂ ನಕ್ಷೆ, ಪ್ಲಾನು ವ ಮೇಲ್ಕಂಡ ಸೆಕ್ಷನಿನ ನಕಲುಗಳನ್ನೂ ಒದಗಿಸತಕ್ಕದ್ದು.

ಮತ್ತು ವಾಯಿದೆ ಆಖೈರಾದಾಗ ಬುಕ್ಕು ವ ಪ್ಲಾನುಗಳನ್ನು ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡುವಣ.

ಮತ್ತು ಸದರೀ ವಾಯಿದೆಯು ಮುಗಿದಾಗ ಅಥವಾ ಮುಂಚಿತವಾಗಿ ಮೌಕೂಫಾದಾಗ ಸದರೀ ಬುಕ್ಕುಗಳು, ನಕ್ಷೆಗಳು, ಪ್ಲಾನುಗಳು, ಸೆಕ್ಷನ್ ಯಾನೆ ವಿವರಣೆಗಳು ಇತ್ಯಾದಿಗಳನ್ನು ಗುತ್ತಿಗೆಗೆ ಕೊಡುವವರಿಗಾಗಲೀ ಅವರ ಉತ್ತರಾಧಿಕಾರಿಗಳಿಗಾಗಲೀ ಅಥವಾ ಅವರ ವರ್ಗದಾರರಿಗಾಗಲೀ ಪೂರ್ತಿಯಾಗಿಯೂ ವಳ್ಳೇ ಸ್ಥಿತಿಯಲ್ಲಿಯೂ ಒಪ್ಪಿಸತಕ್ಕದ್ದು.

ಸರಹದ್ದು ಸ್ತಂಭಗಳನ್ನು ಒಳ್ಳೇ ಸ್ಥಿತಿಯಲ್ಲಿ ಇಡುವಣ ಮತ್ತು ಸುರಂಗಗಳನ್ನು ಕ್ರಮವಾಗಿ ಬೇಲಿಯಿಂದ ಭದ್ರಪಡಿಸುವಣ.

ಮತ್ತು ಸದರೀ ವಾಯಿದೇ ಕಾಲದಲ್ಲಿ ತಮಾಂ ಸರಹದ್ದು ಸ್ತಂಭಗಳನ್ನೂ ದುರಸ್ತಿಯಲ್ಲಿಯೂ ವಳ್ಳೇ ಸ್ಥಿತಿಯಲ್ಲಿಯೂ ಇಟ್ಟಿರತಕ್ಕದ್ದಲ್ಲದೆ ಸದರೀ ಚುನಾಯಿಸಲ್ಪಟ್ಟ ತಾಲ್ಲೂಕಿನೊಳಗಣ ಯಲ್ಲ ಕಾಲಿವೆ, ಹಳ್ಳ, ಯಾ ಶ್ಯಾಫ್ಟ್ ಕಾಮಗಾರಿಗಳನ್ನೂ ಮನುಷ್ಯರು ಮತ್ತು ಜಾನವರುಗಳಿಗೆ ಅಪಾಯ ಸಂಭವಿಸದಂತೆ ಪೂರ್ತಿಯಾಗಿ ಬೇಲಿ ಹಾಕಿ ಭದ್ರ ಪಡಿಸತಕ್ಕದ್ದು.

ಮತ್ತು ಸದರೀ ವಾಯಿದೇಯಲ್ಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು, ಆಗಿಂದಾಗ್ಯೆ ವಿಧಿಸಬಹುದಾದಂಥಾ ಆರೋಗ್ಯ ವಿಷಯಕವಾದ ನಿಬಂಧನೆಗಳನ್ನು ಚುನಾಯಿಸಲ್ಪಟ್ಟ ತಾಕಿನ ಯೆಲ್ಲ ಪ್ರದೇಶದಲ್ಲೂ ಕ್ರಮವಾಗಿ ಜಾರಿಯಲ್ಲಿರತಕ್ಕದ್ದು.

ಕಾಲುವೆ ಯಾ ಸುರಂಗಗಳನ್ನು ಮುಚ್ಚದೆ ಇರುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಅಥವಾ ಅವರ ಏಜಂಟ್ ಯಾ ಏಜಂಟರುಗಳಿಂದ ಬರಹ ಮೂಲಕವಾಗಿ ಲೈಸೆನ್ಸ್ ಪಡೆದ ಹೊರ್ತು ಯಾವ ಕಾಲಿವೆ ಯಾ ಸುರಂಗವನ್ನಾಗಲೀ ಮನಃಪೂರ್ವಕವಾಗಿ ಮುಚ್ಚಕೂಡದು ಭರ್ತೀ ಮಾಡಕೂಡದು ಅಥವಾ ಬಂದ್ ಮಾಡಕೂಡದು.

ಅಥವಾ ರೋಡು ವಗೈರೆಗಳನ್ನ ಆತಂಕಪಡಿಸದೆ ಇರುವಣ.

ಮತ್ತು ಈಗ ಇರುವ ತಮಾಂ ಯಾ ಯಾವ ರಸ್ತೆಗಳನ್ನಾಗಲಿ, ಕಾಲ್ದಾರಿಗಳನ್ನಾಗಲೀ ಯಾ ಯಾವ ತರಹೆಯ ಅಡ್ಡದಾರಿಗಳನ್ನಾಗಲೀ ಖುಲ್ಲಾ ಇಡತಕ್ಕದ್ದೇ ಹೊರ್ತು ಆತಂಕಪಡಿಸತಕ್ಕದ್ದಲ್ಲವು.

ಗುತ್ತಿಗೆಗೆ ಕೊಡುವವರು ಕಾಮಗಾರೀ ವಗೈರೆಗಳನ್ನ ತನಿಖೆ ಮಾಡಲಿಕ್ಕೆ ಅವಕಾಶ ಕೊಡುವಣ.

ಮತ್ತು ಗುತ್ತಿಗೆಗೆ ಕೊಡುವವರು, ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮತ್ತು ಅವರ ಮುತಾಲೀಕ ಯಾ ಮುತಾಲೀಕರುಗಳು, ನೌಕರರು, ವ ಕೆಲಸಗಾರರು, ಇವರುಗಳು ವಾಯಿದೇ ಕಾಲದಲ್ಲಿ ಈ ಕರಾರುಗಳನ್ನನುಸರಿಸಿ ಯಾ ಈ ಕರಾರುಗಳ ಬಲೀಯದ ಮೇಲೆ ನಡಿಯುವ ಯಾವ ಕಾಮಗಾರಿಗಳೊಳಗಾಗಲೀ ಪ್ರವೇಶಿಸಿ ಅವುಗಳ ಸ್ಥಿತಿ ವ ಲಕ್ಷಣವನ್ನು ತನಿಖೆ ಮಾಡಲಿಕ್ಕೂ ಮತ್ತು ಆ ಬಗ್ಯೆಯಾಗಲೀ, ಅಥವಾ ಇತರ ಯಾವ ನ್ಯಾಯವಾದ ವ ಯುಕ್ತವಾದ ಉದ್ದೇಶ್ಯಕ್ಕಾಗಲೀ ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾ ಅದರೊಳಗೆ ಇರುವ ಯಂಜಿನ್‌ಗಳನ್ನೂ, ಯಂತ್ರ ಸಾಧನಗಳನ್ನೂ ವ ಅಜಬಾಬುಗಳನ್ನೂ ಉಪಯೋಗಿಸಲಿಕ್ಕೂ ಪರಂತು ತನಖೀ ಮಾಡಿ ನಕ್ಷೆಗಳನ್ನೂ ತೆಗದುಕೊಳ್ಳತಕ್ಕದ್ದಕ್ಕಾಗಿ ವಿನಾ, ಅಂಥಾ ಉಪಯೋಗಕ್ಕಾಗಿ ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳು ವ ವರ್ಗದಾರರು ಮುನಾಸಬು ಕೂಡು ಮೊಬಲಗು ಕೊಡಲಾಗಿ ಅವಕಾಶ ಕೊಡತಕ್ಕದ್ದು ಮತ್ತು ಇದಕ್ಕೆ ಹಿಂದೆ ಉಳಿಸಿಕೊಳ್ಳಲ್ಪಟ್ಟ ಸ್ವಾತಂತ್ರ್ಯಗಳನ್ನು ಚಲಾಯಿಸಲಿಕ್ಕೂ ಸಹ ಅವಕಾಶ ಕೊಡತಕ್ಕದ್ದು ಮತ್ತು ಆ ಸ್ವಾತಂತ್ರ್ಯಗಳನ್ನ ಚಲಾಯಿಸುವದಕ್ಕಾಗಿ ನ್ಯಾಯವಾದ ಯಲ್ಲಾ ಅನುಕೂಲ್ಯತೆಯನ್ನೂ ವ ಕುಮ್ಮಕ್ಕನ್ನೂ ಕೊಡತಕ್ಕದ್ದು.

ಜಮೀನ್ ಮೇಲಿನ ಹಕ್ಕುಗಳ ಹಾನಿಗಾಗಿ ಈಡು ಕೊಡುವಣ.

ಮತ್ತು ಚುನಾಯಿಸಲ್ಪಟ್ಟ ತಾಕಿನ ಯಾವದಾದರೊಂದು ಭಾಗದ ಯಾ ಪ್ರದೇಶದ ಜಮೀನ್ ಮೇಲ್ಭಾಗಕ್ಕೆ ಕೆಡಕು, ಹಾನಿ ಯಾ
ಅಡ್ಡಿ ಉಂಟಾದ್ದಕ್ಕಾಗಿ ಅಂತಾ ಜಮೀನಿನ ಹಿಡುವಳೀದಾರ, ಅನುಭವದಾರ ಯಾ ಇತರ
ಸ್ವಾಧೀನಗಾರನಿಗೆ ಆಗಿಂದಾಗ್ಯೆ ಈಡು ಕಟ್ಟಿಕೊಡತಕ್ಕದ್ದು.

ಮತ್ತು, ಚುನಾಯಿಸಲ್ಪಟ್ಟ ತಾಕಿನ ಯಾವಭಾಗದಲ್ಲಾಗಲಿ, ಗ್ರಾಮಸ್ಥರು ದನಗಳನ್ನ ಮುಫತ್ ಮೇಯಿಸಿಕೊಳ್ಳುವ ಹಕ್ಕು ಉಂ
ಟಾಗಿಯಿದ್ದು, ಅಂತಾ ಹಕ್ಕಿಗೆ ಯಾವರೀತಿಯಲ್ಲಾಗಲಿ ಅಡ್ಡಿ ಸಂಭವಿಸಿದಾಗ ಅಂತಾ ಗ್ರಾಮಸ್ಥರಿಗೆ ಕ್ರಮವಾದ ಈಡು ಸಹಾ ಕಟ್ಟಿ
ಕೊಡತಕ್ಕದ್ದು.

ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಸೆಯಿಂದುಂಟಾಗುವ ದಾವೆಗಳು, ಗುತ್ತಿಗೆಗೆ ಕೊಡುವವರುಗಳ ಮೇಲೆ ಬಾರದಂತೆ ಮಾಡುವಣ.

ಯಾವ ಜಮೀನ್‌ಗಳಿಗಾಗಲಿ ಯಾ ಯಾವಬಗೆಯ ಸ್ವತ್ತಿಗಾಗಲಿ ಈ ಕರಾರುಗಳನ್ನನುಸರಿಸಿ ಕೆಲಸನಡಿಸುವಣದರ ದೆಸೆಯಿಂದ
ಯಾ ಇದರಿಂದ ಕೊಡೋಣಾಗುವ ಸ್ವಾತಂತ್ರ್ಯಗಳನ್ನ ಚಲಾಯಿಸುವಣದರ ದೆಸೆಇಂದ
ಉಂಟಾಗುವ ಯಾ ಸಂಭವಿಸುವ ಯಾವ ವಿಧವಾದ ಹಾನಿ ಯಾ ಆತಂಕ ಈ ಕಾರಣ
ದಿಂದ, ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರುಗಳ
ಮೇಲೆ ಯಾವಬಗೆ ಖರ್ಚು ಯಿನ್ನುಮೇಲೆ ಆಗಿಂದಾಗ್ಯೆ ವ ಯಾವಾಗಲೂ ಶುದ್ಧಾಂ
ಗವಾಗಿ ಯಾವಬಗೆ ದಾವೆಗಳೂ ತಗಾದೆಗಳೂ ಬಾರದಂತೆ ನಡದುಕೊಳ್ಳತಕ್ಕದ್ದು.

ಮಾಯಿದೆ ಪೂರೈಸಿದ ನಂತರ ಗನಿಗಳು, ಕಟ್ಟಡ ವಗೈರೆಯನ್ನ ಗುತ್ತಿಗೆಗೆ ಕೊಡುವವರಿಗೆ ಒಪ್ಪಿಸಿಬಿಡೋಣ.

ಮತ್ತು ಮೇಲೆಹೇಳಲ್ಪಟ್ಟ ಮಾಯಿದೆ ಪೂರೈಸಿದಾಗಲಾಗಲಿ ಯಾ ಅದಕ್ಕೆ ಮುಂಚಿತವಾಗಿ ನಿಂತು ಹೋದಾಗಲಾಗಲಿ ಈ ಕರಾರು
ಗಳ ದೆಸೆಇಂದ ಕೆಲಸ ನಡಿಯುತ್ತಿದ್ದ ಗನಿಗಳನ್ನೂ ತಮಾಂ ಕಾಲುವೆಗಳನ್ನೂ ಕಾಮ
ಗಾರಿಗಳನ್ನೂ, ಸರಹದ್ದು ಸ್ತಂಭಗಳು ವ ಅವುಗಳಿಗೆ ಸೇರಿದ ಬೇಲಿಗಳನ್ನೂ ಮತ್ತು
ಯಿತರ ನಿವೇಶನಗಳು ಇವುಗಳೆಲ್ಲವನ್ನೂ ಪ್ರೊಳ್ಳೇದಾದ ವ ಕೆಲಸ ನಡಿಸಲಿಕ್ಕೆ ಅನುಕೂ
ಲವಾದ ಸ್ಥಿತಿಯಲ್ಲಿ ಯೇವಂಚಕ ಇದಕ್ಕೆ ಹಿಂದೆ ಹೇಳಲ್ಪಟ್ಟ ಕರಾರುಗಳ ಪ್ರಕಾರ ನಡಿ
ಯಲಿಕ್ಕೆ ಅನುಗುಣವಾಗುವಂತೆ ತಕ್ಕ ಸ್ಥಿತಿಯಲ್ಲಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವ
ರ ಉತ್ತರಾಧಿಕಾರಿಗಳಿಗಾಗಲಿ ಅಥವಾ ವರ್ಗದಾರರುಗಳಿಗಾಗಲಿ ಒಪ್ಪಿಸಿಬಿಡತಕ್ಕದ್ದು ಸದರೀ ಜಾಗಾದಲ್ಲಿ ಯಿರುವ ಕಟ್ಟಡಗಳಿಗಾಗಿಯಾಗಲಿ,
ಯಾ ಇತರ ಸ್ವತ್ತಿಗಾಗಿಯಾಗಲಿ ಗುತ್ತಿಗೆದಾರರುಗಳಿಂದ, ಅವರ ಯಗ್ಜಿಕ್ಯೂಟರುಗಳಿಂದ, ಆಡಳಿತ ನಡಿಸುವವರುಗಳಿಂದ ಯಾ ವರ್ಗದಾ
ರರುಗಳಿಂದಾಗಲಿ, ಗುತ್ತಿಗೆಗೆ ಕೊಡುವವರಮೇಲೆ, ಅವರ ಉತ್ತರಾಧಿಕಾರಿಗಳಮೇಲೆ ಯಾ ವರ್ಗದಾರರಮೇಲೆ ಯಾವ ದಾವೆಯೂ ಯಿಲ್ಲ
ದಂತೆ ಒಪ್ಪಿಸತಕ್ಕದ್ದು. ಅಂತಾ ಕಟ್ಟಡಗಳನ್ನು ವ ಯಿತರ ಸ್ವತ್ತುಗಳನ್ನ, ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರುಗಳು ಆಡಳಿತ
ನಡಿಸುವವರು ಯಾ ವರ್ಗದಾರರು ಮುಂಚಿತವಾಗಿಯೇ ಸಾಗಿಸಲು ಸ್ವತಂತ್ರರಾಗಿರತಕ್ಕದ್ದು.

ಕಂದಾಯಗಳನ್ನ ರಾಜಪಾಲುಗಳನ್ನ ವ ಜುರ್ಮಾನೆ ವಗೈರೆಯನ್ನ ಕೊಡದೇ ಹೋದಮೇಲಾಗಲಿ ಕರಾರುಗಳಿಗೆ ತಪ್ಪಿದಮೇಲೆಯಾಗಲಿ ಪುನಹ ಪ್ರವೇಶಿಸಲಿಕ್ಕೆ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಮತ್ತು ಕಂತೋಕ್ತವಾದ ಈ ಷರತ್ತಿನಿಂದ ಕರಾರು ಮಾಡಿಕೊಳ್ಳುವದೇನಂದರೆ ಇದರ
ದೆಸೆಇಂದ ಉಳಿಸಿಕೊಳ್ಳಲ್ಪಟ್ಟಿರುವ ಕಂದಾಯಗಳು ರಾಜಪಾಲುಗಳು, ಜುರ್ಮಾನೆಗಳು
ಯಾ ಯಿತರ ಸಲಿಕೆಗಳ ಯಾವಭಾಗವನ್ನಾಗಲಿ ಪಾವತೀಮಾಡಬೇಕೆಂತ ಗುತ್ತಿಗೆದಾ
ರರ ಅವರ ಎಗ್ಜಿಕ್ಯೂಟರುಗಳ, ಆಡಳಿತ ನಡಿಸುವವರ ಯಾ ವರ್ಗದಾರರುಗಳಮೇಲೆ,
ಅಥವಾ ಅವರುಗಳಪೈಕಿ ಒಬ್ಬನಮೇಲಾಗಲಿ ಹೆಚ್ಚಿಗೆ ಜನಗಳಮೇಲೆ, ಯಾ ಅವರ
ಅಥವಾ ಆತನ ಮುತಾಲೀಕರುಗಳಮೇಲೆ ನೋಟಿಸ್ ಜಾರೀಯಾದ ಅಥವಾ ಚುನಾಯಿ
ಸಲ್ಪಟ್ಟ ತಾಕಿನಪೈಕಿ ಯಾವದಾದರೊಂದು ಭಾಗದಲ್ಲಿ ಚಿಕಟಾಯಿಸಲ್ಪಟ್ಟ ತರುವಾಯ
ಮೂವ್ವತ್ತು ದಿನಗಳ ವರಿವಿಗೂ ಬಾಕೀಲಿಯಿಟ್ಟುಕೊಂಡಾಗ್ಯೂ, ಅಥವಾ ಗುತ್ತಿಗೆದಾರರು, ಅವರ ಯಗ್ಜಿಕ್ಯೂಟರ್‌ಗಳು ಆಡಳಿತ ನಡಿಸುವ
ವರು ಯಾ ಅವರ ಯಾ ಆತನ ಕೆಲಸಗಾರರು ಗನಿಕೆಲಸ ಕ್ರಮವಾಗಿ ನಡಿಸದೇ ನಿಲ್ಲಿಸಿದಾಗ್ಯೂ, ಅಥವಾ ಗುತ್ತಿಗೆಗೆ ಕೊಡುವವರ, ಅವರ
ಉತ್ತರಾಧಿಕಾರಿಗಳ ಯಾ ವರ್ಗದಾರರ ಉದ್ಯೋಗಸ್ಥರುಗಳಿಗೆ ಯಾವ ವಿಧವಾದ ಆತಂಕ ಯಾ ತೊಂದರೆ ವುಂಟುಮಾಡಿದಾಗ್ಯೂ ಅಥವಾ
ಗುತ್ತಿಗೆಗೆ ಕೊಡುವವರಿಗಾಗಲಿ ಅಥವಾ ಉತ್ತರಾಧಿಕಾರಿಗಳಿಗಾಗಲಿ ಯಾ ವರ್ಗದಾರರಿಗಾಗಲಿ ಸಮಾಚಾರ ಕೊಡಲಿಕ್ಕೆ ನಿರಾಕರಿಸಿದಾಗ್ಯೂ
ಅಥವಾ ಗುತ್ತಿಗೆದಾರರು ಅವರ ಯಗ್ಜಿಕ್ಯೂಟರುಗಳು, ಆಡಳಿತ ನಡಿಸುವರು ಯಾ ವರ್ಗದಾರರು ಈ ಕರಾರುಗಳ ಪೈಕಿ ಯಾವದಕ್ಕಾ
ದರೂ ಅತಿಕ್ರಮಿಸಿ ನಡೆದರೇಆಗಲಿ ಆಗ ಅಂತಾ ಸಂಗತಿಯಲ್ಲಿ ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು
ಯಾ ಅವರ ತರಫಿನಲ್ಲಿ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಮುತಾಲೀಕರಾಗಲಿ ಯಲ್ಲರ ಹೆಸರಿನಲ್ಲಿಯೂ ಯಿರುವ ಈ
ಗುತ್ತಿಗೆಯನ್ನನುಸರಿಸಿ ನಡಿಸಲ್ಪಡುವ ಕೆಲಸಗಳು ಯಾ ಇತರ ಕಾಮಗಾರಿಗಳ ಯಾವ ಭಾಗದೊಳಗೂ ಪುನಹ ಪ್ರವೇಶಿಸಬಹುದು. ಆ
ತರುವಾಯ ಮೇಲೆ ಹೇಳಲ್ಪಟ್ಟ ಮೂವತ್ತು ವರುಷಗಳ ಮಾಯಿದೆಯು ಖಂಡಿತವಾಗಿ ಮುಕ್ತಾಯವಾಗತಕ್ಕದ್ದು.

ಆರುತಿಂಗಳ ನೋಟೀಸಿನ ಹೊರ್ತು ಪುನಃಪ್ರವೇಶ ಮಾಡುವಅಧಿಕಾರ ಚಲಾಯಿಸಕೂಡದೆಂಬ ನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರದೆಸೆಇಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ, ಇದಕ್ಕೆ ಹಿಂದೆ ನಮೂದಿಸಲ್ಪಟ್ಟ ಮೇರಿಗೆ ಪುನಃಪ್ರವೇಶಿಸಲಿಕ್ಕಿರುವ ನಿಯಮವನ್ನನುಸರಿಸಿ ಅಂಥಾ ಯಾವ ಪುನಃಪ್ರವೇಶವಾಗಲಿ ಮೇಲೆ ಉದಹರಿಸಿದಂತಾ ವಾಯಿದೆಯ ಭಂಗವಾಗಲಿ, ಗುತ್ತಿಗೆಗೆ ಕೊಡುವವರು ಅವರ ಉತ್ತರಾಧಿಕಾರಿಗಳು ಯಾ ವರ್ಗದಾರರು ಯಿವರುಗಳು ಫಿರ್ಯಾದ್ ಬರುವ ಸಂಗತಿ ಯಾ ಸಂಗತಿಗಳ ವಿಷಯದಲ್ಲಿ ಸಮರ್ಪಕವಾದ ಸಮಜಾಯಿಷಿ ಕೊಡುವಂತೆಯೂ, ವ ಅಂತಾವುಗಳನ್ನ ವ್ಯವಸ್ಥೆ ಮಾಡಿಕೊಳ್ಳುವಂತೆಯೂ ಗುತ್ತಿಗೆದಾರರಿಗಾಗಲಿ ಅವರ ಯಗ್ಸಿಕ್ಯೂಟರುಗಳಿಗಾಗಲಿ ಆಡಳಿತ ನಡಿಸುವವರಿಗಾಗಲಿ ಯಾ ವರ್ಗದಾರರಿಗಾಗಲಿ ಈ ಪೈಕಿ ಯಾವನಿಗಾಗಲಿ ಅಥವಾ ಯಾರಿಗಾಗಲಿ ನೋಟೀಸ್ ಕೊಟ್ಟಹೊರ್ತು ನಡಿಯತಕ್ಕದ್ದಲ್ಲವು. ಸದರೀ ನೋಟೀಸ ಬರವಣಿಗೆ ಮೂಲಕಇದ್ದು ಅದು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ಯಾ ವರ್ಗದಾರರುಗಳ ತರಫ್ ಮೇಲೆ ಹೇಳಲ್ಪಟ್ಟ ಡಿಸ್ಟ್ರಿಕ್ಟಿನ ಶಿವಿಲ್ ಕಾರ್ಬಾರ್‌ನಡಿಸುವ ಆಫೀಸರಿಂದಾಗಲಿ ಅಬಗ್ಗೆ ಮುಖ್ಯವಾಗಿ ಅಧಿಕಾರ ಪಡೆದ ಮತ್ಯಾವ ಆಫೀಸರಿಂದಾಗಲಿ ರುಜುಮಾಡಲ್ಪಟ್ಟು, ಗುತ್ತಿಗೆದಾರರ ಮೇಲೆ ಅಥವಾ ಅವರ ಯಗ್ಸಿಕ್ಯೂಟರುಗಳಮೇಲೆ ಆಡಳಿತ ನಡಿಸುವವರಮೇಲೆ ವ ವರ್ಗದಾರರುಗಳ ಮೇಲೆಯಾಗಲಿ ಆ ಪೈಕಿ ಒಬ್ಬನ ಮೇಲಾಗಲಿ ಅದಕ್ಕೆ ಹೆಚ್ಚಿಗೆ ಜನರಮೇಲಾಗಲಿ ಅವರುಗಳ ಯಾ ಆತನ ಮುತಾಲೀಕರುಗಳ ಮೇಲಾಗಲಿ ಜಾರೀಮಾಡಲ್ಪಡತಕ್ಕದ್ದು, ಅಥವಾ ಆ ನೋಟೀಸು ಚುನಾಯಿಸಲ್ಪಟ್ಟ ತಾಕಿನಲ್ಲಿ ಯಾವ ಪ್ರದೇಶದಲ್ಲಾಗಲಿ ಚಿಕಟಾಯಿಸಲ್ಪಡತಕ್ಕದ್ದು. ಹಾಗೆ ನೋಟೀಸು ಜಾರೀ ಆದ ಯಾ ಅಥವಾ ಚಿಕಟಾಯಿಸಲ್ಪಟ್ಟ ಲಾಗಾಯತು ಆರುತಿಂಗಳವರಿವಿಗೂ ಅಂತಾ ಫಿರ್ಯಾದಾದ ಸಂಗತಿ ಯಾ ಸಂಗತಿಗಳಲ್ಲಿ ಸಮರ್ಪಕವಾದ ಸಮಜಾಯಿಷಿಯೂ ಕೊಡಲ್ಪಡದೇ ವ ಫಿರ್ಯಾದ್ ಸಂಗತೀಲಿ ವ್ಯವಸ್ಥೆಯೂ ಮಾಡಿಕೊಳ್ಳದೇ ತಪ್ಪಿಹೋಗಿದ ಹೊರ್ತು ಅಂಥಾ ಪುನಃಪ್ರವೇಶವಾಗಲಿ ಯಾ ವಾಯಿದೆಯ ಭಂಗವಾಗಲಿ ನಡಿಯತಕ್ಕದಲ್ಲವು.

ಯಾವ ವರುಷದಲ್ಲಾಗಲಿ ರಾಜಪಾಲಿಗೆ ಬದಲಾಗಿ ಎಕರೆ ಒಂದಕ್ಕೆ ಐದು ರೂಪಾಯಿ ಮೇರಿಗೆ ಕಂದಾಯ ವಸೂಲು ಮಾಡಲಿಕ್ಕೆ ಗುತ್ತಿಗೆಗೆ ಕೊಡುವವರಿಗೆ ಅಧಿಕಾರವಿರುವಬಗ್ಗೆನಿಯಮ.

ಯಾವಾಗಲೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ—ಗನಿಗಳ ಕೆಲಸ ನಡಿಸುವ ಬಗ್ಗ್ಯಾಗಿ ಆವಶ್ಯಕವಾದ ಪ್ರಥಮ ಏರ್ಪಾಡಿಗೋಸ್ಕರ ಕೊಡಲ್ಪಡುವ ಗುತ್ತಿಗೆಯ ಪ್ರಾರಂಭದ ಎರಡು ವರುಷಗಳು ಆದ ತರುವಾಯ, ಗನಿಗಳ ಕೆಲಸದ ವಿಷಯದಲ್ಲಾಗಲಿ, ಅದರ ಫಲಾಂಶದ ವಿಷಯದಲ್ಲಾಗಲೀ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ, ಯಾ ವರ್ಗದಾರರುಗಳಿಗಾಗಲಿ ತೃಪ್ತಿಕರವಾಗಿ ಇರದೇಯಿರುವ ಪಕ್ಷಕ್ಕೆ ಅವರು ಗುತ್ತಿಗೆಯ ಯಾವವರುಷದ ರಾಜಪಾಲಿಗೆ ಬದಲಾಗಿಯಾದರೂ ಎಕರೆ ಒಂದಕ್ಕೆ ಐದು ರೂಪಾಯಿಯ ಮೇರಿಗೆ 'ಕಂದಾಯ ವಸೂಲ್' ಮಾಡಲಿಕ್ಕೆ ಸ್ವತಂತ್ರರಾಗಿರತಕ್ಕದ್ದು.

ಯಾವದಾದರೊಂದು ವರುಷದ ಆಖ್ಯೆರಿನಲ್ಲಿ ಗುತ್ತಿಗೆದಾರನ ಇಷ್ಟಾನುಸಾರ ಗುತ್ತಿಗೆ ಖೈದಾಗತಕ್ಕ ಬಗ್ಗೆ ನಿಯಮ.

ಇನ್ನೂ ನಿಯಮಕ್ಕೆ ಒಳಪಟ್ಟು ಇದರ ದೆಸೆಯಿಂದ ಒಪ್ಪಿಕ್ಕೊಂಡು ಸ್ಥಾಪಿಸುವದೇನಂದರೆ,—ಇದರ ದೆಸೆಯಿಂದ ಕೊಡೋಣಾದ ಮೂವತ್ತು ವರುಷಗಳ ವಾಯಿದೆಯ ಪೈಕಿ ಯಾವದಾದರೊಂದು ವರುಷ ಆಖ್ಯೆರಾಗುವಾಗ ಆ ವಾಯಿದೆಯು ಮಾಫ್ ಆಗಬೇಕೆಂಬದಾಗಿ 'ಗುತ್ತಿಗೆದಾರರಾಗಲಿ, ಅವರ ಎಗ್ಸಿಕ್ಯೂಟರುಗಳಾಗಲಿ, ಆಡಳಿತ ನಡಿಸುವವರಾಗಲಿ ಯಾ ವರ್ಗದಾರರಾಗಲಿ ಇಚ್ಛೈಸುವ ಪಕ್ಷಕ್ಕೆ ತಮ್ಮ ಇರಾದೆಯನ್ನ ನಮೂದಿಸಿ ಗುತ್ತಿಗೆಗೆ ಕೊಡುವವರಿಗಾಗಲಿ, ಅವರ ಉತ್ತರಾಧಿಕಾರಿಗಳಿಗಾಗಲಿ ಆರುತಿಂಗಳ ಮುಂಚಿತವಾಗಿ ಬರವಣಿಗೆ ಮೂಲಕ ನೋಟೀಸು ಕೊಟ್ಟು ಇದರ ದೆಸೆಯಿಂದ ಉಳಿಸಿಕೊಳ್ಳಲ್ಪಟ್ಟ ಮೇಲೆ ಹೇಳೋಣಾದ ಕಂದಾಯಗಳು, ರಾಜಪಾಲುಗಳು, ಜುರ್ಮಾನೆಗಳು, ಯಾ ಇತರ ಸಲಿಕೆಗಳು ಇವುಗಳನ್ನ ಸಂದಾಯಮಾಡಿ, ಇದರಲ್ಲಿ ಕಂಡ ಎಲ್ಲಾ ಕರಾರುಗಳ ವ ಒಡಂಬಡಿಕೆಗಳ ಮೇರಿಗೆ ನಡೆದುಕ್ಕೊಂಡು ವ ಜಾರೀಲಿತಂದು, ಮತ್ತು ಅಂಥಾ ವರುಷ ಪೂರೈಸುವವರಿವಿಗೂ, ಗುತ್ತಿಗೆದಾರರು, ಅವರ ಎಗ್ಸಿಕ್ಯೂಟರುಗಳು, ಆಡಳಿತ ನಡಿಸುವವರು ಯಾ ವರ್ಗದಾರರು ನಡದುಕ್ಕೊಂಡಲ್ಲಿ ಯಾ ಜಾರೀಲಿ ತಂದಲ್ಲಿ ಆಗ್ಯೆ ಅಂತಾ ಸಂಗತಿಯಲ್ಲಿ ಆ ವರುಷ ಪೂರೈಸಿದ ತರುವಾಯ ಇದರ ದೆಸೆಯಿಂದಕೊಡಲ್ಪಟ್ಟಿರುವ ವಾಯಿದೆಯು ಖಂಡಿತವಾಗಿ ನಿಂತುಹೋಗಿ ಖೈದಾಗತಕ್ಕದ್ದಲ್ಲದೆ ಇದರಲ್ಲಿ ಮೇಲ್ಕಂಡ ಠೇವಣೀ ಬಾಬತು ರೂಪಾಯಿಗಳು ಗುತ್ತಿಗೆಗೆ ಕೊಡುವವರ ಅವರ ಉತ್ತರಾಧಿಕಾರಿಗಳ ವ ವರ್ಗದಾರರ ವಶದಲ್ಲೀನೇ ಅವರ ಸ್ವಂತ ಆಸ್ತಿಯಂತೆ ನಿಂತು ಹೋಗತಕ್ಕದ್ದು.

ಇದಕ್ಕೆ ಸಾಕ್ಷಿಯಾಗಿ ಗುತ್ತಿಗ್ಗೆ ಕೊಡುವವರಿಗಾಗಿ ವ ಅವರ ತರಫ್ ಕೆಲಸ ನೋಡುವ ಮೈಸೂರು ಶೀಮೆಯ ದಿವಾನರಾದ

ಯವರೂ,

ವ ಗುತ್ತಿಗೆದಾರರು ಸಹಾ ಮೇಲೆ ಷುರುವಿನಲ್ಲಿ ಬರಿಯೋಣಾದ ವರುಷ ವ ತಾರೀಖಿನಲ್ಲಿ ಇದಕ್ಕೆ ತಮ್ಮ ತಮ್ಮ ದಸ್ತಖತ್ ವ ಮೊಹರು ಹಾಕಿರುತ್ತಾರೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಮೇಲೆ ಹೇಳೋಣಾದ
ಯವರಿಂದ
ಯವರ
ರೂಬರೂ ರುಜು ವ ಮೊಹರ್ ಮಾಡ
ಲ್ಪಟ್ಟು ಒಪ್ಪಿಸಲ್ಪಟ್ಟಿರುತ್ತೆ.

ಅಪೆಂಡಿಕ್ಸ್ C.

1887ನೇ ಇಸವಿ ಸೆಪ್ಟಂಬರ 5ನೇ ಮುಕ್ಕಾಂ ರೂಲ್ಸ್ ಅನುಸಾರವಾಗಿ ಗನಿ ಕೆಲಸಗಳಿಗೋಸ್ಕರವಾದ ದರಖಾಸ್ತು ನಮೂನೆ.

ಮೈಸೂರು ಶೀಮೆಯ ದಿವಾನರವರಿಗೆ.

ಅಯ್ಯಾ,

ಮೈಸೂರ ಶೀಮೆಯಲ್ಲಿ ಕೆಲವು ತಾಕು ಜಮೀನುಗಳೊಳಗೆ ಗನಿ ಕೆಲಸ ನಡಿಸುವ ಬಗ್ಯೆ ಲೈಸೆನ್ಸ್ ಬಗ್ಯೆ ದರಖಾಸ್ತುಗಳು ಅಪೇಕ್ಷಿಸುವ 1887ನೇ ಇಸವಿ ಸೆಪ್ಟಂಬರ್ 12ನೇ ಮುಕ್ಕಾಂ 113ನೇ ನಂಬರ್ ಇಸ್ತಿಹಾರ್‌ನಾಮೆ ವಿಷಯದಲ್ಲಿ *, ನಾನು ಇದರಡಿ ವಿವರಿಸಲ್ಪಟ್ಟ ತಾಕಿನ ಲೈಸೆನ್ಸಿಗೋಸ್ಕರ ಇದರಿಂದ ದರಖಾಸ್ತು ಮಾಡಿರುತ್ತೇನೆ ಮತ್ತು ಸದರೀ ಲೈಸೆನ್ಸಿಗೋಸ್ಕರ ಕ್ರಿಮಿಯಂ ಯಾನೇ ನಘೇ ತರೀಕ ——————ಪೌಂಡ (ಯಾ ರೂಪಾಯಿ)ಗಳನ್ನು ಪಾವತೀ ಮಾಡುವದಕ್ಕೆ ವಪ್ಪುತ್ತೇನೆ ಮೇಲೆ ಉದಹರಿಸಲ್ಪಟ್ಟ ಇಸ್ತಿಹಾರ್‌ನಾಮೆಯ ಷರತ್ತುಗಳಿಗೆ ಬದ್ಧನಾಗುವದಕ್ಕೆ ಒಪ್ಪಿರುತ್ತೇನೆ.

2. ನಾನು ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಜಮೆ ಕಟ್ಟತಕ್ಕ ಬಗ್ಯೆ ಮೇಲೆ ಹೇಳಿದ ನಘೆಯ ದಶಮಾಂಶದ ಮೊಬಲಗಿಗೋಸ್ಕರ——————ಪೌಂಡ(ಯಾ ರೂಪಾಯಿ)ಗಳನ್ನ——————ಟ್ರಿಜರಿ (ಯಾ ಬ್ಯಾಂಕಿಗೆ ಪಾವತೀ ಮಾಡಿರುತ್ತೇನಲ್ಲದೆ ಅಂಥಾ ಪಾವತಿಗೆ ಆಧಾರವಾಗಿ———ನೇ ಮುಕ್ಕಾಂ——————ನೇ ನಂಬರ್ ರಶೀತಿಯನ್ನು ಇದರ ಸಂಗಡ ಹಾಜರ್ಮಾಡಿರುತ್ತೇನೆ.

ಅಯ್ಯಾ,
ತಮ್ಮ ಅತ್ಯಂತ ವಿಧೆಯ ಶೇವಕನಾದ,

——————

ಮುಕ್ಕಾಂ ——————

(ದರಖಾಸ್ತುದಾರನ ರುಜು.)

* ಒಂದು ಸಿಂಡಿಕೇಟ್ ಯಾನೇ ವಿದ್ಯಾಸಂಬಂಧದ ಯಾ ಇತರ ಸಮಾಜದ ತರಫಿನಲ್ಲಿ ದರಖಾಸ್ತು ಮಾಡಲ್ಪಟ್ಟರೆ ಅಂಥಾ ಯಾ ಸಮಾಜಕ್ಕೆ ಶೇರಿದ ಮೆಂಬರುಗಳ ಹೆಸರು ತಪಸೀಲಾಗಿ ನಮೂದಿಸಲ್ಪಡಬೇಕು.

ಹೆಸರು ಮತ್ತು ಮೇಲ್ವಿಳಾಸ ಪೂರ್ತಿಯಾಗಿ ಕೆಳಗೆ ಸಮೂದಿಸಲ್ಪಡಬೇಕು.

ದರಖಾಸ್ತು ಮಾಡೋಣಾದ ತಾಕಿನ ವಿವರಣೆ.

ನಂಬರು.	ಹೆಸರು.	ವಿಸ್ತೀರ್ಣ.

ತಾರೀಖು—ನೇ ಅಕ್ಟೋಬರ 1887.

ಕ್ಯಾಂಪ್ ನಂ. 1510.—1878ನೇ ಇಸವಿ ಆಗಸ್ಟ್ 10ನೇ ಮರ್ಕುಂ 130ನೇ ನಂಬರವುಳ್ಳ ಲೇಟ ಚೀಫ ಕಮ್ಮಿಷನರವರ ಇಸ್ತಿಹಾರ್‌ನಾಮೆಯನ್ನು ಬದಲಾಯಿಸಿ, ಇದರಡಿ ನಮೂದ್ ಮಾಡಲ್ಪಟ್ಟ ಶಿವಮೊಗ್ಗಾ ಷಹರಿನ ಪರಿಷ್ಕರಿಸಲ್ಪಟ್ಟ ಚಕ್ಕುಬಂದಿಯು ದಿವಾನರವರಿಂದ ಮಂಜೂರ್ಮಾಡಲ್ಪಟ್ಟು ಸರ್ವರ ತಿಳುವಳಿಕೇ ಬಗ್ಯೆ ಪ್ರಕಟಿಸಲ್ಪಡುತ್ತೆ:—

ಉತ್ತರಕ್ಕೆ.—ಶಿಂಗಪ್ಪನವರ ಬಂಗಲೇಯಿಂದ ಸದರೀ ಬಂಗಲೇ ದೇಖೀಲ್ ಮ್ಯುನಿಸಿಪೆಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೊರಟು ಮೆ|| ಡರ್ಕ ಮೆಕ್ಕೆಂಜಿ ಬಂಗಲೆ ಮತ್ತು ಯಗ್ಜಿಕ್ಯುಟಿವ ಇಂಜನಿಯರ್ ಆಫೀಸ್ ದೇಖೀಲ್ ಶಿವಮೊಗ್ಗೆಯ 30ನೇ ಸರ್ವೇನಂಬರ ಬಳಿ ಹೊನ್ನಾಳಿ ರಸ್ತೆಯ ವರಿಗೂ ವಿಸ್ತರಿಸಿ ಅದೇರಸ್ತೆ ಮಾರ್ಗವಾಗಿ ಹೊರಟು, ಶಿವಮೊಗ್ಗಾ—ಹೊನ್ನಾಳಿ (ಹರಿಹರ) ರಸ್ತೆಗಳು ಅಂದರೆ (ವಂಬು.ಯಗ್ಜಿಕ್ಯುಟಿವ ಇಂಜನಿಯರ್ ಆಫೀಸಿನ ಮುಂಭಾಗದಿಂದಲೂ ಮತ್ತೊಂದು ಸೋಮಯ್ಯನವರ ಕೆರೆ ಯೇರಿ ಯಿಂದಲೂ ಆರಂಭಿಸುವ) ಸಂಧಿಸುವ ಮುಳಕೆರೆಯ 60ನೇ ಸರ್ವೇ ನಂಬರ ಬಳಿಯಣ ಆಕಟ್ರಾಯಿ ತೆರಿಗೆ ಮನೆ ವರಿಗೂ .ವಿಸ್ತರಿಸುತ್ತದೆ.

ದಕ್ಷಿಣಕ್ಕೆ.—ಪೋಲೀಸ್ ಠಾಣೇ ದೇಖೀಲ್ ಅದರ ಬಳಿಯಣ ಆಗುಂಬಿ ರಸ್ತೇಯಿಂದ ತುಂಗಾ ನದಿವರಿಗೂ ಅಂದರೆ ತುಂಗಾ ನದಿ ಶೇತುವೆ ದಕ್ಷಿಣ ದಿಕ್ಕಿನ ಕೊನೆ ವರಿಗೂ ವಿಸ್ತರಿಸುತ್ತದೆ.

ಪೂರ್ವಕ್ಕೆ.—ಸದರೀ ತುಂಗಾನದಿ ಶೇತುವೆಯ ದಕ್ಷಿಣ ದಿಕ್ಕಿನ ಕೊನೇಯಿಂದ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೇ ಯೇರಿ ದಾಟಿ ಶಿವಮೊಗ್ಗಾ ಹೊನ್ನಾಳಿ ರಸ್ತೆಗಳು (ವಂದನೇ ಕಲಂನಲ್ಲಿ ಪ್ಯಾರ್ಗ್ರಾಫಿ ಸೆಸ್‌ನಲ್ಲಿ ತೋರಿಸಲ್ಪಟ್ಟಂತೆ) ಸಂಧಿಸುವ ಮುಳಕೆರಿಯ 60ನೇ ಸರ್ವೇ ನಂಬರ ಬಳಿಯಣ ಆಕ್ಟ್ರಾಯಿ ತೆರಿಗೆ ಮನೆ ವರಿಗೂ ವಿಸ್ತರಿಸುತ್ತದೆ.

ಪಶ್ಚಿಮಕ್ಕೆ.—ಹೋದಿಗೆರೆ ಮುರಿಗೇಂದ್ರಪ್ಪನ ಬಂಗಲೇಯಿಂದ ಸದರೀ ಬಂಗಲೆ ದೇಖೀಲ್ ಸಾಗರದ (ಹೊನ್ನಾವಾರ) ದೊಡ್ಡರಸ್ತೆ ಮಾರ್ಗವಾಗಿ ದಕ್ಷಿಣಕ್ಕಾಗಿ ಕಿಲೇದಾರ್ ತಬೇಲಿ ಮತ್ತು ಲೈನ್‌ಸಿಯಾನೆ ಮನೆಗಳು ದೇಖೀಲ್ 113 ಮತ್ತು 114ನೇ ಸರ್ವೇನಂಬರುಗಳು ಸಹಿತವಾಗಿ ಆಗುಂಬೀ ರಸ್ತೆಯಲ್ಲಿ ತುಂಗಾ ನದೀವರಿಗೂ ವಿಸ್ತರಿಸುತ್ತದೆ.

ತಾರೀಖು 2ನೇ ನವಂಬರ 1887.

ನಂ. 140.—ಖಜಾನಾ ಬಕ್ಷಿ ಮೆ|| ಎ. ವೀರಾಸಾಮಿ ಮೊದಲಿಯಾರ್ರಿಗೆ ಮಾಹೇ ಗುಜಷ್ತಾ 22ನೇ ಮರ್ಕುಂ 1551ನೇ ನಂಬರ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಐದು ದಿವಸಗಳ ಪ್ರಿವಿಲೀಜ್ ರಜಾವು, ಅವರಿಂದ ಉಪಯೋಗಿಸಲ್ಪಡದ ಕಾರಣ ಯಿದರದೆಶೇಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 4ನೇ ನವಂಬರ 1887.

ನಂ. 141.—ಮಾಹೇ ಗುಜಷ್ತಾ 7ನೇ ಮರ್ಕುಂ 1430ನೇ ನಂಬರ ಇಸ್ತಿಹಾರ್‌ನಾಮೆಯಲ್ಲಿ ಮೆ|| ವಿ. ಪಿ. ಮಾಧವರಾಯರಿಗೆ ಕೊಡಲ್ಪಟ್ಟ ವಂದು ತಿಂಗಳ ಪ್ರಿವಿಲೀಜ್ ರಜಾದಿಂದ ಅವರು ವಾಪಸ್ ಬಂದು ಸದರೀ ಮಾಹೆ 30ನೇ ಮರ್ಕುಂ ಪೂರ್ವಾಹ್ನದಲ್ಲಿ ಮೆ|| ಬಿ. ತಿರುಮಲಾಚಾರಿಯವರಿಂದ ಶಿವಮೊಗ್ಗಾ ಡಿಸ್ಟ್ರಿಕ್ಟ ಚಾರ್ಜನ್ನು ಪುನಹ ವಹಿಸಿರುತ್ತಾರಾಗಿ ಉಳಿದ ರಜಾ ಇದರದೆಶೇಯಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 24ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1580.—ಶ್ರೀಮನ್ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುವದೇನಂದರೆ. ಇದರಡೀಕಂಡ ಜಮೀನ್ ತಾಕುಗಳು, ಮೈಸೂರು ದೇಶದಲ್ಲಿ ಕೆಲವು ಜಮೀನ್ ತಾಕುಗಳೊಳಗೆ ಗನೀ ಕೆಲಸನಡಿಸುವ ಬಗ್ಗೆ ಲೈಸೆನ್ಸಿಗೋಸ್ಕರ ದರಖಾಸ್ತುಗಳನ್ನ ಅಪೇಕ್ಷಿಸುವಂಥಾ 1887ನೇ ಇಸವಿ ಸೆಪ್ಟಂಬರ್ 12ನೇ ಮರ್ಕ್ಯಂ 113ನೇ ನಂಬರ್ ಇಸ್ತಿಹಾರ್‌ನಾಮೆಯ A ಗುರ್ತಿನ ಅಪೆಂಡಿಕ್ಸಿಗೆ ಶೇರಿಸಲ್ಪಡತಕ್ಕದ್ದು:—

ಪ್ರತಿತಾಕಿನ ನಂಬರು.	ಪ್ರತಿ ತಾಲ್ಲೂಕಿನ ಹೆಸರು.	ಪ್ರತಿ ತಾಕು ಇರತಕ್ಕ ಪ್ರದೇಶ.			ಟೊಪೋಗ್ರಾಫಿಕಲ್ ಮ್ಯಾಪಿನ ನಂಬರ್.	ಪ್ರತಿ ತಾಕು ಯಾವ ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುತ್ತಿಂಬುವದು.		ಹಿಂದಿನ ಕಡೇ ಮೇಸ್ತಕಿನಲ್ಲಿ ವಿವರಿಸಲ್ಪಟ್ಟ ಯ್ಯಾಮ್ಯೋತ್ತರ ರೇಖೆ ಮತ್ತು ದಕ್ಷಿಣೋತ್ತರ ವೃತ್ತಗಳ ಸಮಭುಜ ರೇಖೆಗಳಲ್ಲಿ ಅಡಗಿರುವ ಜಮೀನ್‌ಪೈಕಿ ಇದುವರಿಗೆ ಅನ್ಯಥಾ ವಿಲ್ಲಾಮಾಡಲ್ಪಟ್ಟ ಜಮೀನಿನ ವಿಸ್ತೀರ್ಣ.	(ಹಿಂದಿನ ಕಡೇ ಮೇಸ್ತಕಿನಲ್ಲಿ ಕಂಡ ವಿಸ್ತೀರ್ಣವಾಯಿ) ಹಾಲಿ ಗನೀಕೆಲಸದ ಲೈಸೆನ್ಸ್ ಕೊಡಲ್ಪಡುವಂಥಾದ್ದರ ವಿಸ್ತೀರ್ಣ.
		ಡಿಸ್ಟ್ರಿಕ್ಟ್.	ತಾಲ್ಲೂಕು.	ಗ್ರಾಮಗಳು.		ದಕ್ಷಿಣೋತ್ತರ ವೃತ್ತಗಳು.	ಯಾಮ್ಯೋತ್ತರ ರೇಖೆ.		
15		ಹಾಸನ	ಚೆನ್ನರಾಯಪಟ್ಣ	1 ಮಾಲಶೆಟ್ಟಿಹಳ್ಳಿ 2 ಮಾದಾಪುರ 3 ರಾಜಾಪುರ	55	12°—56′ ಮತ್ತು 12°—57′ರ ಮಧ್ಯೆ	76°—33′ ಮತ್ತು 76°—35′ರ ಮಧ್ಯೆ		½ ಚದರಮೈಲಿ ಅಂದರೆ, ಪೂರ್ವ ಪಶ್ಚಿಮ ಒಂದು ಮೈಲಿ ಉತ್ತರ ದಕ್ಷಿಣ ½ ಮೈಲಿ
16		ಮೈಸೂರು	ಶ್ರೀರಂಗಪಟ್ಣ	1 ಹುಲ್ಲಿನಕೆರೆ 2 ಪಡಯಂಡಹಳ್ಳಿ 3 ಗೊಬ್ಬಗಾಲ 4 ಕಾಳೇನಹಳ್ಳಿ 5 ಪೆರಮಾಂಡಹಳ್ಳಿ	57	12°—25′ ಮತ್ತು 12°—27′ರ ಮಧ್ಯೆ	76°—50′ ಮತ್ತು 76°—51′ರ ಮಧ್ಯೆ		½ ಚದರ ಮೈಲಿ

ತಾರೀಖು 23ನೇ ಅಕ್ಟೋಬರ್ 1887.

ಕ್ಯಾಂಪ್ ನಂ. 1587.—ಶಿಕಾರಿಪುರ ವ ಸೊರಬ ತಾಲ್ಲೂಕಿನ ಇದರಡೀಕಂಡ ಮಾಗಣೀಗಳು ಫಾರೆಸ್ಟು ಕೆಲಸಗಳಿಗೋಸ್ಕರ ಮಲ್‌ನಾಡೆಯಿದಾಗಿ ಆಚರಿಸಲ್ಪಡತಕ್ಕದ್ದು:—

ಶಿಕಾರಿಪುರ ತಾಲ್ಲೂಕು	ಉಳಂದೂರು	ಮಾಗಣಿ
	ಬಾರೂರು	„
ಸೊರಬ ತಾಲ್ಲೂಕು	ಸೊರಬ	„
	ಕ್ಯಾಸನೂರು	„
	ಚಂದ್ರಗುತ್ತಿ	„
	ಚಿಟ್ಟೂರು	„
	ಶಿಗ್ಗ	„
	ಹೆಚ್ಚೆ	„

ಬಮೋಜಿಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರೆಟರಿ.

ಕ್ಕುಗಳನ್ನ ಆ ಯಾ ಟ್ರೆಜರೀ ಆಫೀಸರಗಳು 3 ತಿಂಗಳಿಗೆ ಒಂದಾವರ್ತಿ ತರಿಸಿ ತನಖೀ ಮಾಡ ತಕ್ಕದ್ದು.

12. ನಗದು ಹಣಕ್ಕೆ ಸ್ಟ್ಯಾಂಪುಗಳನ್ನ ಖರೀದೀಮಾಡುವ ಸ್ಟ್ಯಾಂಪು ವೆಂಡರಗಳು ನಂ. 2ನೇ ಲೋಜ್ ಲೆಖ್ಖ ಮಟ್ಟಿಗೆ ಯಿಡಬೇಕಾಗಿ ಇರುತ್ತೆ.

ನಂಬರ.	ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರೆಜಿಸ್ಟ್ರಿಗೆ ಹಾಜರಾದ ತಾರೀಖು.	ರೆಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
239 1ನೇ ಬುಕ್ಕು 1885—86	ಪಿರಿಯಾಪಟ್ಣ ಕಸಬಾದಲ್ಲಿ ಇರುವ ಪಂಚಾಳದ ಜಾತಿ ಈರಣ್ಣನ ಮಗ ಚಿನ್ನ ಕೆಲಸದ ಸುಬ್ಬರಾಯ	ಯಡತೊರೆ ತಾಲ್ಲೂಕು ಸಾಲಿಗ್ರಾಮದ ಕಸಬಾದಲ್ಲಿರುವ ಪಂಚಾಳದ ಜಾತಿ ಪ ಪ್ಯಾಪಟ್ಣದ ಕಲ್ಯಾಣಯ್ಯನ ಮಗ ಕುಂದಣ ಕೆಲಸದ ನಂಜುಂಡಯ್ಯ	85ನೇ ಇಸವಿ ಸೆಪ್ಟೆಂ 5 ತಾರೀಖು 1	85ನೇ ಇಸವಿ ಸೆಪ್ಟೆಂ 25 ತಾರೀಖು 1	ಪಿರಿಯಾಪಟ್ಣದಲ್ಲಿ ಇರುವ ಮನೆ ಹಿತ್ತಲು ಸಹ 25 ರೂಪಾಯಿಗೆ ಶುದ್ಧ ಭೋಗ್ಯಮಾಡಿರುವದಾಗಿ ಪತ್ರದ ವಾಯಿದೆ 10 ವರುಷ.

ನಂ. 14.

ತಾರೀಖು 19ನೇ ನವಂಬರ 1887.

ಚಾಮರಾಜನಗರ ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತೈವಜನ್ನ ಕ್ರಮವಾದ ವಾರಸ್ ದಾರ್‍ರಾಗಲಿ ಅಥವಾ ಅಧಿಕಾರಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು—ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರು ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಮಾಡಲ್ಪಡುತ್ತೆ.

ನಂಬರ್.	ಬರದುಕೊಟ್ಟವನ ಹೆಸರು ಮತ್ತು ಅಡ್ರಿಸ್ಸ್.	ಬರಸಿಕೊಂಡವನ ಹೆಸರು ಮತ್ತು ಅಡ್ರಿಸ್ಸ್.	ರೆಜಿಸ್ಟರಿಗೆ ಹಾಜರಾದ ತಾರೀಖು.	ರೆಜಿಸ್ಟರಾದ ತಾರೀಖು.	ಸ್ವಭಾವ ಮತ್ತು ಕಿಮ್ಮತು.
7 85—86ನೇ ಇಸವಿ	ಚಾಮರಾಜನಗರ ತಾಲ್ಲೂಕು ಕಾಗಲವಾಡೀ ಗ್ರಾಮದಲ್ಲಿ ರುವ ಶಿವಾಚಾರದ ಯನಂಜ್ಯನ ಸುಬ್ಬಯ್ಯ	ಚಾಮರಾಜನಗರ ತಾಲ್ಲೂಕು ಕಾಗಲವಾಡೀ ಗ್ರಾಮದಲ್ಲಿ ಯಿರುವ ಶಿವಾಚಾರದ ಶಿದ್ದೇಗೌಡನ ಮಗ ಜಿರಾಯತು ಕಸಬಿನ ಮಲ್ಲೇಗೌಡ	17—11—85	ತಿರಸ್ಕರಿಸಿದೆ 17—11—85	(45—8) ಕ್ರಯಪತ್ರ ಭೂಸ್ಥಿತಿಗೆ ಸಂಬಂಧಪಟ್ಟದ್ದು ಕಾಗಲವಾಡೀ ಗ್ರಾಮದ ಸರ್ವೇ ನಂಬರ್ 69ನೇ ಪೈಕಿ ತರೀ ಗದ್ದೆ ಗುಂಡಿ 10 ಆಕಾರ 1—7—1

ಟ. ಆನಂದರಾವ್,
ರೆಜಿಸ್ಟ್ರಾರ್.

ಫ್ರೆಂಚ್‌ರಾಕ್ಸ್ ರೆಜಿಸ್ಟ್ರೀ ಆಫೀಸ್.

ತಾರೀಖು 19ನೇ ನವಂಬರ್ 1887.

ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಶ್ರೀರಂಗಪಟ್ಟಣ ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ಇವರ ಕೆಳಗೆ ನಮೂದಿಸುವ ದಸ್ತಾವೇಜುಗಳನ್ನು ಕ್ರಮವಾದ ವಾರಸ್‌ದಾರರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ವಾಪಸ್ ಪಡಿಯಬೇಕು. ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ:—

ದಸ್ತಾವೇಜಿನ ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರೆಜಿಸ್ಟ್ರಿಗೆ ಹಾಜರಾದ ತಾರೀಖು.	ರೆಜಿಸ್ಟ್ರಾದ ಮತ್ತು ತಿರಸ್ಕರಿಸಿದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1ನೇ ಬುಕ್ಕು. 698 1885—86	ಮೈಸೂರು ಲಷ್ಕರ್ ಮೊಹಲಾದಲ್ಲಿರುವ ವೈಶ್ಯರ ಜಾತಿ ನರಸಿಪುರದ ಚೆಂಣಶೆಟ್ಟಿ ಮಗ ವ್ಯಾಪಾರದ ಕಸಬು—ಸೂರಶೆಟ್ಟಿ	ಮೈಸೂರು ಲಷ್ಕರ್ ಮೊಹಲಾದಲ್ಲಿರುವ ರಂಗಾರೆ ಜಾತಿ ಖಂಡೇರಾವು ಮಗ ಹೊಲಿಗೇ ಕಸಬು-ಧೋಂಡೋಜಿ ರಾವು	15—1-85	16—1-85	ಹೆಬ್ಬಾಡೀ ಗ್ರಾಮದ 46ನೇ ನಂಬರು ಗದ್ದೆಯನ್ನು 94 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ
756 1885—86	ತಿರುಮಕೂಡ್ಲು ನರಸೀಪುರದ ತಾಲ್ಲೂಕು ರಂಗಸಮುದ್ರದಲ್ಲಿರುವ ಪದ್ಮಸಾಲೇ ಜಾತಿ ಬಂನಹಳ್ಳೀ ಗೋಪಾಲಯ್ಯನ ಮಗ ರಂಗಯ್ಯ 1 ಯಿವನ ಮಗ ವೆಂಕಟಸಾಮಿ 1 ಕುಳ್ಳಯ್ಯ 1	ಶ್ರೀರಂಗಪಟ್ಟಣ ತಾಲ್ಲೂಕು ಶಟ್ಟಿಹಳ್ಳೀ ಹೋಬಳಿ ಕೊಡಿಯಾಲದ ಗ್ರಾಮದಲ್ಲಿರುವ ಪದ್ಮಸಾಲೆ ಜಾತಿ ಲಕ್ಷ್ಮಯ್ಯನ ಮಗ ಚಿಕ್ಕ ದಾಸಪ್ಪ	7—2-85	10—2-85	ಕೊಡಿಯಾಲದ ಗ್ರಾಮದಲ್ಲಿರುವ ಹೆಂಚಿನ ಮತ್ತು ಹುಲ್ಲುಮನೆ ಸಹ 200 ರೂಪಾಯಿಗೆ ಕ್ರಯಕ್ಕೆ ಕೊಟ್ಟಿರುವದಾಗಿ

ಡಿ. ದೇವರಾಜೇ ಅರಸ್,
ರೆಜಿಸ್ಟ್ರಾರ್.

ಕೊಡಗು ಫಾರೆಸ್ಟ್ ಇಲಾಖಾ.

ತಾರೀಖು 31ನೇ ಅಕ್ಟೋಬರ್ 1887.

ಸರ್ 1887ನೇ ಇಸವಿ ನವಂಬರ್ ತಾರೀಖು 1ರಿಂದ ಸಾತ: ಕೊಡಗು ಫಾರೆಸ್ಟುಗಳಲ್ಲಿ ಮಾರಲ್ಪಡುವ ಈ ಕೆಳಗೆ ನಮೂದಾದ ಮರ ಮತ್ತು ಬಿದರುಗಳ ಕ್ರಯವನ್ನು ತೋರಿಸುವ ತಖ್ತಾ.

ಸಾಮಾನು ತರಹೆ.	ತಿತಿಮತಿ ಫಾರೆಸ್ಟು.			ಮಾಲ್ದಾರೆ ಫಾರೆಸ್ಟು.			ನಾಲ್ಕೇರಿ ಫಾರೆಸ್ಟು.			ಹತ್ತಗಟ್ಟು ಫಾರೆಸ್ಟು.			ಹತ್ತಗಟ್ಟು ಕೊಳ್ಳಂಗೇರಿ ತಿಟ್ಟು.			ಹತ್ತಗಟ್ಟುವ ಬಾರ್ಕಲ್.			ಷರಾ.
ಮತ್ತಿ ಗಾಡಿ ಜೋಡಾ ಒಂದಕ್ಕೆ ..	6	8	0	6	8	0	4	8	0	5	0	0	5	0	0	6	0	0	ಈ ಸಾಮಾನುಗಳಿಗೆ ಹುಣಸೂರು ಡಿಪೋ ಮುತ್ಸದ್ದೀರು ಲೆಟರ್ ಆಫ್ ಅಡ್ವೈಸ್ ಕೊಡುವರು-ಕೊಂಡು ಕೊಳ್ಳತಕ್ಕವನು ರಶೀತಿಯನ್ನ ಫಾರೆಸ್ಟರಿಗೆ ಹಾಜರ್ ಮಾಡಿದಲ್ಲಿ ಅವರಿಂದ ಸಾಮಾನನ್ನ ಮತ್ತು ರಹದಾರಿಯನ್ನ ಹೊಂದುವನು-ಸಾಮಾನುಗಳನ್ನ ಕೊಂಡು ಕೊಳ್ಳುವವನು ಕಡೆದುಕೊಳ್ಳತಕ್ಕದ್ದು.
ಊದಿ ಮತ್ತು ಇಪ್ಲಿ ಸದರೀ ..	3	0	0	3	0	0	2	0	0	2	0	0	2	8	0	3	0	0	
ದಿಂಡಗ, ಕಡಸಲು ಮತ್ತು ಇತರ ಕಾಡುಜಾತಿ	1	8	0	1	8	0	1	0	0	1	0	0	1	0	0	1	0	0	
ಬಿದರು ನೂರಕ್ಕೆ ..	1	0	0	1	0	0	0	0	0	1	0	0	1	0	0	1	0	0	

ನೋಟೀಸ್.

ತಾರೀಖು 3ನೇ ನವಂಬರ್ 1887.

ಸರ್ 1888ನೇ ಇಸವಿ ಜನವರೀ ತಾರೀಖು 5ರಲ್ಲು ಫ್ರೇಜರ್‌ಪೇಟೆ ಗಂಧದ ಕೋಠಿಲಿ 60 ಟನ್ ಗಂಧ ಹರಾಜ್ ಹಾಕಲ್ಪಡುವದು.

ಷರತ್ತು ಸರ್ 1885ನೇ ಜನವರೀ ತಾರೀಖು 3ನೇ ನಂಬರ್ 1ರ ಕೊಡಗು ಡಿಸ್ಟ್ರಿಕ್ಟು ಗೆಜೆಟ್ಟಿನಲ್ಲಿ ಘಾಯಿಷ್ ಮಾಡೋಣಾದ ಕೊಡಗು ಚೀಫ್ ಕಮ್ಮಿಷನರ್ ಸಾಹೇಬರವರ ಸರ್ 1881ನೇ ಇಸವಿ ಫಿಬ್ರವರೀ ತಾರೀಖು 15ನೇ ನಂಬರ್ 26ರ ನೋಟಿಫಿಕೇಷನ ಮೇರೆ.

ಗಂಧದ ಕ್ರಯವನ್ನು ಸರ್ 1888ನೇ ಇಸವಿ ಮಾರ್ಚೀ ತಾರೀಖು 25ರ ವಳಗೆ ಸಾಕಲ್ಯವಾಗಿ ಪಾವತೀ ಮಾಡತಕ್ಕದ್ದು.

ಯಫ್. ಬಿ. ಡಿಕಿನ್ಸನ್,

ಡೆಪ್ಯುಟಿ ಕನ್ಸರ್‌ವೇಟರ್ ಆಫ್ ಫಾರೆಸ್ಟ್ ಕೊಡಗು.

ಗೈರವಿಲಾ

ಆದ ಕರೆನ್ಸೀ ನೋಟಿನ ಬಲಭಾಗದ.

ನಂಬರ್.	ಮುದ್ರಾಂ.	ಸರ್ಕಲ್.	ಕ್ರಯ.	ಹಕ್ಕುದಾರ್—ಹೊಳೇನರಸೀಪುರದಲ್ಲಿರುವ ಬಿಳೀಮುಗ್ಗದ ನರಸಣಯ್ಯನು ಅದರಪತ್ತೇ ಸಮಾಚಾರ ಕೊಡುವವರಿಗೆ 5 ರೂಪಾಯಿ ಇನಾಂ ಕೊಡುವದಕ್ಕೆ ಸಮ್ಮತಿ ಪಟ್ಟಿರುತ್ತಾನೆ.
13252	3ನೇ ಜುಲೈ 1886	ಮದರಾಸ್	ರೂ. 100	

ಗೈರವಿಲಾ ಆದ ಪೂರಾ ನೋಟಿನ

ನಂಬರ್.	ಸರ್ಕಲ್.	ಕ್ರಯ.	ಹಕ್ಕುದಾರ್ — ಬೆಂಗಳೂರು ಮಾಮೂಲ್‌ಪೇಟೇಲಿರುವ ಚಂದ್ರಣನವರ ನಿರಂಜನಪ್ಪ.
18545	ಮದರಾಸ್	ರೂ. 50	

ಗೈರವಿಲಾ ಆದ ಕರೆನ್ಸೀನೋಟಿನ ಎಡಭಾಗದ

ನಂಬರ್.	ಸರ್ಕಲ್.	ಕ್ರಯ.	ಹಕ್ಕುದಾರ—ನಂಜನಗೂಡು ಮುನ್ಸಿಫ್ ಕೋರ್ಟು ನಾಜರ್ ಶ್ರೀರಂಗನಾಥಾಚಾರ್.
J. 14—29250	ಮದರಾಸ್	ರೂ. 10	

ಮೈಸೂರ ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ॥ 26, ಸ್ನ 1887.

☞ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ

ಸರಕಾರೀ ಕಾಗದ ಪತ್ರಗಳು.

ಇಂಡ್ಯ ಗವರ್ನ್ಮೆಂಟಿನ ಅಂಡರ್ ಸೆಕರಟೇರಿಯಾದ ಡಬ್ಲಿಯು. ಆರ್. ಲಾರೆನ್ಸ್ ಯಸ್ಕ್ವಾಯರ್, ಸಿ. ಯಸ್. ಯವರಿಂದ, ಮದರಾಸ್, ಬೊಂಬಾಯಿ, ಬಂಗಾಳ ವ ಪಂಜಾಬ್ ಗವರ್ನ್ಮೆಂಟ್‌ಗಳ ಸೆಕರಟೇರಿಗಳಿಗೂ ಸೆಂಟ್ರಲ್ ಪ್ರಾವಿನ್ಸ್ ಅಜಮೀರ್, ವ ಕೊಡಗು ಈ ದೇಶಗಳ ಚೀಫ್ ಕಮ್ಮಿಷನರ್‌ಗಳಿಗೂ ಸಹ ರೆವಿನ್ಯೂ ವ ಅಗ್ರಿಕಲ್ ಚುರಲ್ ಇಲಾಖಾ ಸರ್ಕ್ಯುಲರ್ ನಂಬರ್ 46—16—28 A.,

ಮೊಕ್ಕಾಂ ಸಿಂಲಾ, ತಾರೀಖು 26ನೇ ಆಗಸ್ಟ್ 1887.

ಐಯ್ಯಾ,

ಈ ಮಾರ್ಜಿನನಲ್ಲಿ ಕಂಡ, ಇದಕ್ಕೆ ಮುಂಚಿನ ಸರ್ಕ್ಯುಲರ್‌ಗಳನ್ನನುಸರಿಸಿ, ಖರ್ಜೂರದ ಗಿಡಗಳ ವ್ಯವಸಾಯವನ್ನು ಕುರಿತು ಡಾ॥ ಈ. ಬೊನೇವಿಯ ಯಂಬವರು ಬರೆದ ರಿಪೋರ್ಟಿನ ಒಂದು ಪ್ರತಿಯನ್ನು ನಿಮ್ಮ ತಿಳುವಳಿಕೆ ಬಗ್ಯೆ ಕಳುಹಿಸುವಂತೆ ಅಪ್ಪಣೇ ಆಗಿರುವದಲ್ಲದೇ, ಸದರೀ ರಿಪೋರ್ಟು ಅಗ್ರಿಕಲ್‌ಚುರಲ್ ಇಲಾಖೆಗಳಿಗೂ, ಡಿಸ್ಟ್ರಿಕ್ಟ್ ಆಫೀಸರುಗಳಿಗೂ ಮತ್ತು ಸದರೀ ಗಿಡವನ್ನ ಅಜಮಾಯಿಷೀ ತರೀಕು ವ್ಯವಸಾಯ ಮಾಡಲಿಛ್ಛೆಯುಳ್ಳ ಇತರರಿಗೂ ಸಹ ಕಳುಹಿಸಲ್ಪಡಬೇಕೆಂಬದಾಗಿಯೂ ಸೂಚಿಸುತ್ತೇನೆ.

ನಂ. 3—15—9A, ತಾರೀಖು 1ನೇ ಮೇ 1886.
ನಂ. 52-15-21A, ತಾರೀಖು 20ನೇ ಸೆಪ್ಟಂಬರ್ 1886.

2. ಖರ್ಜೂರದ ಬೀಜದಿಂದ ಮಾಡಿದ ಸೊಸಿಗಳೊಳಗೆ ಪ್ರಾಯೇಣ ಬಗೆಬಗೆಯಾದವುಗಳು ಯಿರುತ್ತೆಂದು ಡಾ॥ ಬೊನೇವಿಯಯವರು ಖಂಡಿತವಾಗಿ ತಿಳಿದು ಯಿರುತ್ತಾರಾಗಿ, ಬೀಜಗಳು ಅಲ್ಪಲಾಗವಡಿನಲ್ಲಿಯೂ, ಸುಲುಭವಾಗಿಯೂ ದೊರೆಯುವಣದರಿಂದ, ಯಿನ್ನು ಮೇಲೆ ವಾಡಿಕೆಯಾಗಿ ಬೀಜವನ್ನೇ ತರಿಸತಕ್ಕದ್ದೆಂಬದಾಗಿ ಇಂಡ್ಯ ಗವರ್ನಮೆಂಟಿನವರು ಅಭಿಪ್ರಾಯಪಡುತ್ತಾರೆ, ಇದರ ವ್ಯವಸಾಯಕ್ಕಾಗಿ ಬೇಕಾಗುವ ಬೀಜವನ್ನ ಪರಷ್ಯಾ ದೇಶದಿಂದಲಾಗಲಿ, ಈಜಿಪ್ಟ (ಐಗುಪ್ತ) ದೇಶದಿಂದಲಾಗಲಿ ತರಿಸಿಕೊಡುವ ವಿಷಯದಲ್ಲೂ ಯಿದಕ್ಕಾಗಿ ವರುಷಕ್ಕೆ 500 ರೂಪಾಯಿಗಳಿಗೆ ಜಾಸ್ತಿಯಿಲ್ಲದೇ ಹಣ ಕೊಡುವದಕ್ಕೂ ಸಹ ಇಂಡ್ಯ ಗವರ್ನಮೆಂಟಿನವರು ಸಿದ್ಧರಾಗಿ ಯಿ

ದ್ದಾರೆ, ಪರಂತು, ಯಿಂಡ್ಯ ದೇಶದಲ್ಲಿ ಖರ್ಜೂರದ ವ್ಯವಸಾಯದ ಪ್ರಕರಣವು ಮುಖ್ಯವಾಗ್ಯರಿಂದ ಬೀಜ ತರಿಸತಕ್ಕ ಬಗ್ಯೆ ತಗಲುವ ಖರ್ಚಿಗಾಗಿ ದಾವಾಷಾಯಿ ಮೊಬಲಗನ್ನ ಕೊಡಲಿಕ್ಕೆ————ಯವರು ಸಮರ್ಥರಾಗಿರುವರೆಂದು ನಂಬೋಣಾಗಿ ಯಿಧೆ, ಮತ್ತು ಈಗ————ಯವರಿಗೆ ಬೇಕಾಗುವ ಬೀಜದ ತೇದಾದೂ, ವ ಅದರ ಖರೀದೀ ಲಾಗವಷೂ ವ ಖರ್ಚಿಗಾಗಿ ಕೊಡಲ್ಪಡುವ ದಾವಾಷಾಯಿ ಮೊಬಲಗು ಯೇನಾದರೂ ಯಿದ್ದಲ್ಲಿ ಅದು ಸಹ ಯಿಂಡ್ಯ ಗವರ್ನಮೆಂಟಿನವರಿಗೆ ಸಾಧ್ಯವಾದಷ್ಟುತ್ವರ್ಯದಲ್ಲಿ ತಿಳಿಸಲ್ಪಡಬೇಕೆಂದು ಕೋರೋಣವಾಗಿಧೆ.

ತಮ್ಮ ವಿಧೇಯನಾದ ಡಬ್ಲಿಯೂ. ಆರ್. ಲಾರೆನ್ಸ್,
ಇಂಡ್ಯ ಗವರ್ನಮೆಂಟಿನ ಅಂಡರ್ ಸೆಕ್ರೆಟರಿ.

ಲಂಡನ್, ತಾರೀಖು 4ನೇ ಜುಲೈ 1887.

ಇಂಡ್ಯನ್ ಮೆಡಿಕಲ್ ಇಲಾಖಾ ಬ್ರಿಗೇಡ್ ಸರ್ಜನ್‌ರಾದ (ರಜಾ ಮೇಲಿರುವ) ಡಾಕ್ಟರ್ ಈ. ಬೊನೇವಿಯವರಿಂದ, ವಾಯವ್ಯ ದೇಶಗಳ ವ ಅಯೋಧ್ಯ ಗವರ್ನಮೆಂಟಿನ ಸೆಕರಟೇರಿಯವರಿಗೆ.

ಐಯ್ಯಾ,

ಖರ್ಜೂರದ ಗಿಡಗಳು ಕುರಿತ ವಾಯುವ್ಯ ದೇಶಗಳ ವ ಅಯೋಧ್ಯ ಗವರ್ನಮೆಂಟಿಗಾಗಿ, ಈ ಕೆಳಗೆ ಬರುವ ಸಂಗತಿಗಳನ್ನ ತಿಳಿಸುತ್ತೇನೆ.

2. ಉಪಯೋಗವುಳ್ಳ ಈ ಗಿಡಗಳನ್ನ ಇಂಡ್ಯ ದೇಶದೊಳಗೆ ಹೇರಳವಾಗಿ ಪ್ರಚಾರ ಪಡಿಸಿದಲ್ಲಿ ಉತ್ತರೋತ್ತರ ಜನಗಳಿಗೆ ಬಹಳ ಲಾಭಕರವಾಗುವದೆಂದು ನನಿಗೆ ಖಂಡಿತವಾಗಿ ತಿಳಿಯಬಂದಿರುವದರಿಂದ, ಅದು ಯಾವ ಯಾವ ದೇಶಗಳಲ್ಲಿ ವಿಸ್ತಾರವಾಗಿ ಬೆಳೆಯುತ್ತದೆಯೋ ಅಂಥಾ ದೇಶಗಳಿಂದಲ್ಯಾವತ್ತೂ ಅದನ್ನು ಕುರಿತ ತಪಶೀಲನ್ನು ತರಿಸಿ ಇರುತ್ತೇನೆ, ಕಾತಃಸೀಲುಗಳನ್ನ ಇಂಡ್ಯ ಗವರ್ನಮೆಂಟಿನವರ ವ್ಯವಸ್ಥೇ ಬಗ್ಯೆ ಕಳುಹಿಸಿ ಇರುತ್ತೇನೆ.

3. ಖರ್ಜೂರದ ಸೊಸಿಗಿಡಗಳು ಉಪಯೋಗಿಸತಕ್ಕ ಹ್ಯಾಗೆ ಯಂಬುವ ವಿಷಯದಲ್ಲಿ ಇಂಡ್ಯ ದೇಶದವರಿಗೆ ಇನ್ನೂ ಸಂಶಯ ವುಂಟಾಗಬಹುದೆಂದು, ಇದಕುರಿತು ವಿಚಾರ ಮಾಡುವವರಲ್ಲಿ ವಿಶೇಷವಾಗಿ ನಿಗೆ ಕೊಟ್ಟಿರುತ್ತೇನೆ; ಆಲ್‌ಜೇರಿಯ ಮತ್ತು ಟ್ಯೂನಿಸ್ ಎಂಬ ಸ್ಥಳಗಳಿಗೆ ಹರಮೇಜಸ್ಟೀಯವರ ಕೌನ್ಸಲ್ ಜನರಲ್‌ರಾದ ಸರ್ ಆರ್ ಲ್ಯಾಂಬರಟ್ ಪ್ಲೇಫೇರ್‌ಯವರು ಆಲ್‌ಜೇರಿಯ ಯಂಬ ಸ್ಥಳದಿಂದ ಬರೆದ 1887ನೇ ಇಸವಿ ಜನವರೀ 11ನೇ ತಾರೀಖಿನ ಲೆಟರಿನಲ್ಲಿ ನಮೂದಿರುವದೇನಂದರೆ-"ನೀವು ಹೇಳಿದಂತೆಯೇ ಮೊಳಿಕೆಗಳನ್ನ ಇಂಡ್ಯದೇಶಕ್ಕೆ ಕಳುಹಿಸುವ ವಿಷಯದಲ್ಲಿ ತೊಂದರೆಯೇನೂ ಇರುವದಿಲ್ಲ, ಪರಂತು, ಆ ರೀತಿ ಅಜಮಾಯಿಷೀ ಮಾಡಬೇಕಾದವಶ್ಯಕತೆಯೇ ಇರುವದಿಲ್ಲ; ಬೀಜಗಳಿಂದಲೇ ಮೊಳಿಕೆಗಳಾಗುತ್ತವೆ, ಇಲ್ಲಿರುವ ಅರಬ್ ಜನಗಳ ಅನುಭವದ ಮೇಲೆ ತಿಳಿಯಬರುವದೇನಂದರೆ—ಬೀಜದಿಂದ ಹುಟ್ಟಿದ್ದ ಸೊಸಿಗಳ ಗಿಡದಲ್ಲಿ ಬಿಟ್ಟ ಹಣ್ಣು, ಗಿಡದ ಬುಡದಲ್ಲೇ ಕವಲು ವಡೆದ ಸೊಸಿಗಳಿಂದ ಆದ ಗಿಡಗಳ ಹಣ್ಣಿನಂತೆಯೇ ಚನ್ನಾಗಿ ಇರುತ್ತದೆ-ಪರಂತು, ಇದರಲ್ಲಿ ಗಂಡು ಜಾತಿಯ ಗಿಡಗಳೇ ಹೆಚ್ಚಾಗಿ ಸೇರುವ ಸಂಭವ ವುಂಟಾಗುತ್ತೆಂಬ ಒಂದು ಆಕ್ಷೇಪಣೆ ಮಾತ್ರವಿಧೆ." ಸೀ. ರೆಗ್ನಿಯರ್ ಎಂಬುವರು ಇದೇ ವಿಷಯದಲ್ಲಿ ಬರೆದ ಪುಸ್ತಕದಲ್ಲಿ ಇರುವದೇನಂದರೆ "ಬೀಜದಿಂದ ಹುಟ್ಟಿದ ಮೊಳಿಕೆಗಳಲ್ಲಿ ಬೆರಿಕೆ ಜಾತಿಗಳು ವುಂಟಾಗುತ್ತವೆ ಅವುಗಳು ಪ್ರಾಯೇಣ ಪ್ರಸಿದ್ಧವಾದ ಬೇರೆ ಬೇರೆ ಜಾತಿಗಳಾಗಿಯೇ ನಿಂತು ಹೋಗುತ್ತದೆ, ಕೆಲವು ವೇಳೆ ಶುದ್ಧ ಹೊಸ ಜಾತಿಗಳು ವುಂಟಾಗಿ ತರುವಾಯ ಅವುಗಳ ಬುಡದಲ್ಲಿ ಕವಲುಗಳು ಹೊರಡುತ್ತವೆ."

4. ಖರ್ಜೂರದ ಮೊಳಿಕೆಗಳೇ ಉಪಯೋಗವಾದ್ದೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಸಂಗತಿಯೇ ನಿದರ್ಶನವಾಗಿರುತ್ತದೆ. ಆಗಲೇ ಇಂಡ್ಯ ದೇಶದಲ್ಲಿ ಇದರ ಅನುಭವ ಬಂದಿರುತ್ತದೆ. ನಾನು ಇಂಡ್ಯ ದೇಶದಿಂದ ರಜಾದ ಮೇಲೆ ಹೋಗುವದಕ್ಕೆ ಮುಂಚೆ ಅಯೋಧ್ಯ, ಮುಲ್ತಾನ್ ಈ ರಾಜ್ಯಗಳಲ್ಲಿ ಮೊಳಿಕೆಯಿಂದ ಮಾಡಿದ ಗಿಡಗಳಲ್ಲಿ ಆದ ಮೊಳ್ಳೇ ತರಹಾವಾರ್ ಖರ್ಜೂರದ ಹಣ್ಣುಗಳನ್ನ ಕ್ಯೂ ಸ್ಥಳದಲ್ಲಿರುವ ರಾಯಲ್ ಲಾಲ್‌ಬಾಗಿನ ಡೈರೆಕ್ಟರ್ ಯವರಿಗೆ ಕಳುಹಿಸಿದೆನು. ಅವುಗಳು ಈಗ ಕ್ಯೂ ಇಕನಾಮಿಕ್ ಮ್ಯೂಜಿಯಂನಲ್ಲಿ ಇರುತ್ತವೆ. ಇದಲ್ಲದೆ ಬೀಜದಿಂದ ಮೊಳಕೆ ಮಾಡಿದ ಗಿಡದ ವಿಷಯದಲ್ಲಿ ಸರ್ ಲ್ಯಾಂಬರಟ್‌ಪ್ಲೇಫೇರ್‌ಯವರು ಯಾವ ಅಂಶವು ಸ್ವಲ್ಪ ಆಕ್ಷೇಪಣೀಯವಾದ್ದೆಂದು ಎಣಿಸುತ್ತಾರೋ ಅದೇ ಅಂಶ ಆರಂಭದಲ್ಲಿ ಇಂಡ್ಯ ದೇಶಕ್ಕೆ ಉಪಯೋಗಕಾರಿಯಾಗಿರುವದೆಂದು ನಾನು ಎಣಿಸುತ್ತೇನೆ. ಗಂಡು ಜಾತಿ ಗಿಡದ ಹುವ್ವಿನ ಮೇಲಿನ ಹಿಟ್ಟನ್ನ ಹೆಣ್ಣು ಜಾತಿ ಗಿಡದ ಹುವ್ವಿನ ಮೇಲೆ ಉದರಿಸುವಿಣದರಿಂದ ಹೆಣ್ಣು ಗಿಡಗಳನ್ನ ಫಲವತ್ತಾಗಿ ಮಾಡುವಂಥಾ ವಿಷಯವೇ ಇಂಡ್ಯದೇಶದಲ್ಲಿ ಸರ್ವತ್ರ ಅದ್ಯಾಪಿ ತಿಳಿಯದೇಲೇ ಇದೆ. ಆದ್ದರಿಂದ ಗಿಡಗಳಲ್ಲಿ ಹೆಣ್ಣು ಜಾತಿಗಿಂತಲೂ ಗಂಡು ಜಾತಿಯೇ ಜಾಸ್ತೀಯಾಗಿದ್ದರೇನೇ ಬೆಳೆ ಆಗುವದಲ್ಲದೆ, ಬೆಳೆ ಇಡುವಂಥಾವರಿಗೆ ನಿರುತ್ಸಾಹ ಉಂಟಾಗಲಾರದು. ಕಾಲಕ್ರ

ವೋಣ ಇಂಡ್ಯದೇಶದಲ್ಲಿಯೇ ಅನೇಕ ತರಹೇಗಳ ಖರ್ಜೂರ ಗಿಡಗಳುಂಟಾಗಿ, ಅವುಗಳಿಂದಲೇ ಕವಲು ಪಡೆದ ಸೊಸಿಗಳು ತಯಾರಾಗಿ ಇತರ ದೇಶಗಳಿಂದ ದೊರೆಯುವ ಹಾಗೆಯೇ ಇಲ್ಲಿಯೂ ಹೆಂಣು ಗಿಡಗಳ ಕವಲುಸೊಸಿಗಳು ದೊರಿಯ ಬಹುದಲ್ಲದೇ ಅವುಗಳನ್ನು ಹಸನು ಸಹಾ ಮಾಡಬಹುದು, ಈಗ ಬೀಜಗಳಿಂದ ಇನ್ನೂ ವಿಶೇಷವಾದ ವುಪಯೋಗವೇನೆಂದರೆ, ಇವುಗಳನ್ನ ತರಿಸಬೇಕಾದರೆ ಅತ್ಯಲ್ಪ ಖರ್ಚು ತಗಲುವದಲ್ಲದೆ, ಕವಲುಸೊಸಿಗಳನ್ನ ಫಲವೃಕ್ಷವಾಗಿ ಮಾಡುವದಕ್ಕಿಂತಲೂ ಸುಲಭವಾಗಿ ಈ ಬೀಜದ ಸೊಸಿಗಳನ್ನ ಫಲವೃಕ್ಷವಾಗಿ ಮಾಡಬಹುದು. ಆದಕಾರಣ ಇಂಡ್ಯ ದೇಶದೊಳಗೆ ಯಾವಯಾವ ಸ್ಥಳಗಳಲ್ಲಿ ಖರ್ಜೂರ ಗಿಡಗಳನ್ನ ಬೆಳೆಯಬಹುದೋ ಆ ಸ್ಥಳಗಳಿಗೆಲ್ಲಾ ಶೀಘ್ರವಾಗಿ ಈ ಗಿಡಗಳನ್ನ ಬಹು ಸ್ವಲ್ಪ ಲಾಗವಡಿನಿಂದ ಒದಗಿಸಿಕೊಡಬಹುದು.

5. "ಟ್ಯೂನಿಸ್ ರಾಜ್ಯ ವ ಅಲ್ಲಿನ ಜನಗಳು." ಯಂಬ ಸಿ. ಹೆಸ್ಸೇವಾರ್ಟ್ಗಿಯವರಿಂದ ಬರೆಯಲ್ಪಟ್ಟ ನವೀನ ಗ್ರಂಥದಿಂದ ಖರ್ಜೂರದ ಗಿಡವನ್ನು ಕುರಿತ ಉಪಯೋಗವಾದ ಸಂಗತಿಯನ್ನ ತೆಗದು ಇದರ ಕೆಳಗೆ ಬರೆಯುತ್ತೇನೆ, ಯಾಕಂದರೆ ಖರ್ಜೂರದಗಿಡದಿಂದ ಆಗುವ ಉಪಯೋಗ ತೋರಿಸುತ್ತೇನೆ. 13ನೇ ಅಧ್ಯಾಯದ 278ನೇ ಪುಟದಲ್ಲಿ ಸದರೀಯವರು ಹೇಳುವದೇನಂದರೆ "ಆಲ್‌ಜಿಯರ್ಸ್ ರಾಜ್ಯದ ಒಳತನಕಲೂ ವ್ಯಾಪಿಸಿರುವ ಸೆಬ್‌ಷಾಫ್ಯಾರೋಗ್ ಯಂಬ ಜೌಗುಳ್ಳ ಚವುಳು ಪ್ರದೇಶದ ಉಭಯಪಾರ್ಶ್ವದಲ್ಲಿರುವ ದಕ್ಷಿಣಟ್ಯೂನಿಸ್ ಎಂಬ ರಾಜ್ಯದಲ್ಲೆಲ್ಲಾ ಅಲಂಕಾರವಾದ ಗರಿಗಳುಳ್ಳ ಗಿಡಗಳು ಇರುತ್ತವೆ, ಈ ಪ್ರದೇಶದಂತೆ ನೈಲ್‌ನದಿಯ ತೀರದಲ್ಲಿ ಯಾವದೂ ಇಲ್ಲ, ಸಾಗುವಳೀ ಲಾಯಖಾದ ಮೂವತ್ತು ಕಾಡು ಭೂಪ್ರದೇಶಗಳು ಸಾಲ್ಹಿಡಿದು ಬಂದರ ಪಕ್ಕದಲ್ಲಿ ಮತ್ತೊಂದಾಗಿ ಇರುತ್ತೆ ಇವು ಲವಣ ಸರೋವರಕ್ಕೂ ಹಳೇ ನ್ಯೂಮಿಡಿಯ ದೇಶದ ಅರಣ್ಯಾ ಪ್ರಾಂತ್ಯಕ್ಕೂ ಮಧ್ಯೆ ಬಂದು ಅವುಗಳನ್ನ ಬೇರೆಬೇರೆಯಾಗಿ ಮಾಡಿ ಇವೆ, ಈ ಸರೋವರವು ವರುಷದಲ್ಲಿ ಒಂಭತ್ತು ತಿಂಗಳವರಿಗೂ ಒಣಗಿಯೇ ಇರುತ್ತದೆ. ಆಫ್ರಿಕಾ ಖಂಡದೊಳಗಾಗಿ ಅತ್ಯುತ್ತಮವಾದ ಈ ಪ್ರಾಂತ್ಯಕ್ಕೆ ಬೆಲೆಡಲ್‌ಜರೀದ್ ಯಂದು ಹೆಸರು—"ಜರೀದ್" ಯಂಬ ಮಧುರವಾದ ರಸಭರಿತದ ಖರ್ಜೂರದ ಹಣ್ಣಿಗಿಂತ ಮತ್ಯಾವ ಜಾತಿಫಲವೂ ಅಧಿಕ ಬೆಲೆಯುಳ್ಳದ್ದಿಲ್ಲವು. ಮತ್ತು ಯೂರೋಪ್ ಮಾರ್ಕೆಟ್‌ಗಳಲ್ಲಿಯೂ ಈ ಹಣ್ಣುಗಳಿಗೆ ಕೇವಲ ಅಧಿಕವಾದ ಖರೀದಿ ದೊರೆಯುತ್ತದೆ" 279ನೇ ಪುಟದಲ್ಲಿ ಅವರು ಹೇಳಿರುವದೇನಂದರೆ, "ಈ ಗಿಡಗಳ ಸಂಣದಿಂಡು ಸಾಧಾರಣವಾಗಿ 100 ಅಡಿಗಳ ಉದ್ದ ಬೆಳದು ಗರಿಗಳ ಮಧ್ಯ ಆಕಾಶ ಕಾಣಿಸುವ ಹಾಗೆ ಛತ್ರಿಯಂತೆ ಯಿರುತ್ತವೆ, ಈ ಗಿಡಗಳಿಗೆ ಬಿಸಲೇ ಮುಖ್ಯವಾಗಿ ಅವಶ್ಯಕವಾದದ್ದು, ಯಿವುಗಳಿಗೆ ಬಿಸಲು ಯಷ್ಟು ಬಡದಾಗ್ಯೂ ಸಹಿಸಿ, ತಮ್ಮ ಬುಡದಲ್ಲಿರುವ ಭೂಮಿಗೆ ತಂಪಾನ ನೆರಳು ಉಂಟು ಮಾಡುತ್ತದೆ, ಯಿದರ ದೆಸೇಯಿಂದ ಆ ನೆರಳಿನ ಜಾಗಾದಲ್ಲಿ ಅಂಜೂರು, ಕಿತ್ತಲೆ, ಗಜನಿಂಬೆ, ಬಾದಾಮ್, ಯಿಪ್ಪೆ ವ ಪಿಸ್ತಾ ಈ ಫಲ ವೃಕ್ಷಗಳು ಚನ್ನಾಗಿ ಬೆಳೆಯುತ್ತವೆ. ಯಿವುಗಳು ಖರ್ಜೂರದ ಗಿಡಗಳ ಮಧ್ಯ ಛಾಯದಲ್ಲಿ ಬೆಳೆಯುತ್ತವೆ, ಬುಡದ ತೇವದಲ್ಲಿ ಜೇರು ವ ಹುಲ್ಲು ಸಮೃದ್ಧಿಯಾಗಿ ತುಂಬಾ ಬೆಳೆದಿರುತ್ತದೆ ಆದಕಾರಣ ಖರ್ಜೂರದ ಗಿಡಗಳು ಮೂರು ಬಗೆಯ ವುಪಯೋಗವುಳ್ಳ ಫಲವೃಕ್ಷವಾಗಿ ಯಿದೆ" 280ನೇ ಪುಟದಲ್ಲಿ ಹೇಳಲ್ಪಟ್ಟಿರುವದೇನಂದರೆ "ಈ ಕಾಡು ಪ್ರದೇಶಗಳ ಪೈಕೀ ಗಾಫಾ ಯಂಬ ಪ್ರದೇಶವೇ ಬಹಳ ವಿಸ್ತಾರವಾದದ್ದು, ಯಿದರೊಳಗೆ ಸುಮಾರು 2,00,000 ವರಿವಿಗೂ ಗಿಡಗಳಿರುವ ಕಾಡು ಯಿದ್ದು ಯಿದರಲ್ಲಿ ಮೂರುನಾಲ್ಕು ಸಾವಿರ ಮಂದಿ ಅರಬ್ಬರು ವ ಬರ್ಬರರುವಾಸವಾಗಿ ಯಿರುತ್ತಾರೆ. ಎಲ್‌ಗೆಟೂರ್ ಯಂಬ ಕಾಡು ಪ್ರದೇಶದಲ್ಲಿ ಪ್ರಾಯೇಣ ನೀರು ಅಷ್ಟು ಸಮೃದ್ಧಿಯಾಗಿಲ್ಲದೇಯಿರುವದರಿಂದ ಕೇದೋಭಾವಿಯಿಂದ ಒಂಟೆಗಳ ಮೂಲಕ ಬಹಳ ಶ್ರಮದೊಡನೆ ನೀರು ದೊರಿಯುತ್ತೆ; ಪರಂತು, ಯಿಲ್ಲಿ ವಾಸಮಾಡುವ ಕೆಲ ನೂರಾರು ಜನಗಳಿಗೆ ಖರ್ಜೂರವೇ ಜೀವನಾಧಾರವಾಗಿರುವ ಕಾರಣ ಯಷ್ಟೇ ಶ್ರಮವಾಗಲಿ ನೀರು ವದಗಿಸಿಕೊಂಡ ಹೊರ್ತು ಬೇರೆ ಉಪಾಯವಿಲ್ಲಾ. ಎಲ್‌ಗೆಟೂರಿನಲ್ಲಿ ಒಂದು ಖರ್ಜೂರದ ಕಾಡೇ ಉದ್ದದಲ್ಲಿ ಮೂರು ಕಿಲೋಮೀಟರ್ ವರಿವಿಗೂ ವ್ಯಾಪಿಸಿರುತ್ತದೆ. "ಸೆಬಿಷಾ ಫ್ಯಾರೋಗ್" ಯಂಬ ಪ್ರದೇಶಕ್ಕೆ ಉತ್ತರಭಾಗದಲ್ಲೆಲ್ಲವೂ ಹದಿನೈದು ಲಕ್ಷಕ್ಕೆ ಕಡಿಮೆಯಿಲ್ಲದೇ ಖರ್ಜೂರದ ಮರಗಳೂ ಇದಕ್ಕೆ ಸಮಸಂಖ್ಯೆಯುಳ್ಳ ಪಿಪ್ಪೆ, ಕಿತ್ತಲೆ, ವ ಬಾದಾಮ್ ಗಿಡಗಳೂ ಅವುಗಳ ಮಧ್ಯದಲ್ಲಿ ಯಿರುತ್ತವೆ; ಗ್ರೇಟ್‌ಷಾಟ್ ಯಂಬ ಜಂಗ್ಲಿಗೆ ದಕ್ಷಿಣವಾಗಿ "ನೆಫ್‌ಜಾನೀ ಯಂಬ ವಿಸ್ತಾರವಾದ ಕಾಡು ಪ್ರದೇಶಗಳಿವೆ ಯಿವುಗಳಲ್ಲಿ 300,000ಕ್ಕೂ ಹೆಚ್ಚಾದ ಖರ್ಜೂರದ ಮರಗಳುಳ್ಳ ಜಂಗ್ಲಿಯೂ ಅದರೊಳಗೆ 40 ಗ್ರಾಮಗಳಾಗಿ ಹದಿನೆಂಟು ಯಿಪ್ಪತ್ತು ಸಾವಿರದ ವರಿವಿಗೂ ಜನಗಳು ವಾಸಮಾಡುತ್ತಿಧಾರೆ."

6. ಮೇಲೆ ಹೇಳಲ್ಪಟ್ಟ ಸಂಗತಿಗಳ ದೆಸೆಯಿಂದ ಮುಖ್ಯಾಂಶವಾಗಿ ತಿಳಿಯ ಬರುವದೇನಂದರೆ—(*a*) ಖರ್ಜೂರದ ಗಿಡವು ಚವಳು ಭೂಮಿಯಲ್ಲಿ ಚನ್ನಾಗಿಯೇ ವೃದ್ಧಿಯಾಗುತ್ತದೆ, ಖಂಡಿತವಾಗಿ ಹೇಳಬೇಕಾದ ಪಕ್ಷದಲ್ಲಿ ಯಿದರಲ್ಲಿ ನೂರಾರು ಬಗೆಗಳು ಯಿರುವದರಿಂದ, ಕೆಲವು ಜಾತಿಗಳು ಅಂಥಾ ಭೂಮಿಯಲ್ಲಿ ವೃದ್ಧಿಯಾಗುತ್ತವೆ. ಪರಂತು, ಟ್ಯೂನಿಸ್ ರಾಜ್ಯದ "ಜರಿದ್" ಯಂದು ಹೆಸರುಳ್ಳ ಖರ್ಜೂರ ಬಹಳ ಶ್ರೇಷ್ಠವಾದ್ದೆಂತಲೂ, ಯೂರೋಪಿಯನ್ ಮಾರ್ಕೆಟ್‌ಗಳಲ್ಲಿ ಯಿವುಗಳಿಗೆ ಒಳ್ಳೇಬೆಲೆ ದೊರೆಯುತ್ತದೆಂದು ಹೇಳಲಿಕ್ಕೇನೂ ಸಂದೇಹವಿಲ್ಲವು. (*b*) ಈ ಖರ್ಜೂರದ ಫಸಲಿನಿಂದಲೇ ಜೀವಿಸುವ ಪ್ರಜೆಗಳು ಯಿಷ್ಟುಮಂದಿ ಯಂದು ಹೇಳಬಹುದು, ಆ ಜನಗಳಿಗೆ ಸಾಕಾಗಿ ಮಿಕ್ಕಂಥಾ ಖರ್ಜೂರದ ಹಣ್ಣನ್ನ ಇತರ ಪದಾರ್ಥಗಳಿಗಾಗಿ ಬದಲಾಯಿಸಿ ಕೊಳ್ಳುತ್ತಾರೆ—(*c*) ಖರ್ಜೂರದ ಗಿಡಗಳು ನೀರು ಮೇಲ್‌ಗಡೆ ಯಿರುವ ಭೂಮಿಯಲ್ಲಿಯೂ, ಮತ್ತು ಬಹಳ ಶ್ರಮದಿಂದ ನೀರು ದೊರಿಯುವ ಸ್ಥಳಗಳಲ್ಲಿ ಸಹ ಬೆಳೆಯಬಹುದೆಂದು ತಿಳಿಯಬರುತ್ತದೆ. (*d*) ಖರ್ಜೂರದ ಗಿಡವನ್ನ ಯಾವ ಸ್ಥಳದಲ್ಲಿ ಬೆಳಸಬಹುದೋ ಮತ್ತು ನೀರು ಸುಲಭವಾಗಿ ದೊರಿಯುವ ಸ್ಥಳಗಳಲ್ಲಿ ಖರ್ಜೂರದ ಗಿಡಗೆ

ಳ ನೆರಳಿನಲ್ಲಿ ಅಂದರೆ ಅವುಗಳ ಮಧ್ಯಜಾಗಾದಲ್ಲಿ ಕಿತ್ತಲೆಗಿಡಗಳನ್ನೂ ಗಜಲಿಂಬೇ ಗಿಡಗಳನ್ನೂ ವ ಇತರ ಫಲವೃಕ್ಷಗಳನ್ನೂ ಸಹ ಜಾಗ್ರತೆಯಲ್ಲಿ ವಿಸ್ತಾರವಾಗಿ ಬೆಳೇಮಾಡಬಹುದೆಂದು ಸಹ ತಿಳಿಯಬರುತ್ತದೆ.

7. ಇಂಡ್ಯಾ ದೇಶದೊಳಗೆ ರಾಜಪುತಾನಾ ವ ಶಿಂಧುದೇಶ, ಈ ರಾಜ್ಯಗಳಲ್ಲಿ ಸಿಂಧು ನದಿಯ ಉಭಯ ಪಾರ್ಶ್ವದಲ್ಲಿಯೂ, ಭೂಗುಣಗಳು ಹ್ಯಾಗಿವೆ ಯಂದರೆ, ಅರಬರು, ಬರ್ಬರರು ಈ ಜನಗಳಿಗೆ ಇಂಥಾ ಪ್ರದೇಶಗಳು ದೊರೆತಿದ್ದ ಪಕ್ಷದಲ್ಲಿ ಐವತ್ತು ವರುಷಗಳೊಳಗಾಗಿಯೇ ಆ ಪ್ರದೇಶಗಳನ್ನೆಲ್ಲಾ ಖರ್ಜೂರದ ತೋಟಗಳಾಗಿ ಮಾಡುತ್ತಿದ್ದರು.

8. ನನ್ನ ಅಜಮಾಯಿಷೀಯಲ್ಲಿ ಸ್ಪಷ್ಟವಾಗಿ ತಿಳಿಯಬಂದಿರುವದೇನಂದರೆ --ಖರ್ಜೂರದಲ್ಲಿ ಯರಡು ಬಗೆಗಳಿರುತ್ತವೆ, (1ನೇದು) ಗಿಡವಲ್ಲೇ ಮಾಗಿರೋಣ ಅಥವಾ ಕಿತ್ತಿದ ಕೂಡ್ಲೆ ಹಣ್ಣಾಗೋಣ, ಯಿದೇ ಯೂರೋಪಿಯನ್ ಜನಗಳ ಫಲಫಲಾರೀ ಅಂಗಡಿಗಳಲ್ಲಿ ಮಾರಲ್ಪಡುವಂಥಾದ್ದು—(2ನೇದು) ಮೇಲೆ ಹೇಳಿದಂತೆ ಮಾಗಿರುವಂಥಾದ್ದಲ್ಲ, ಗಟ್ಟಿಯಾಗಿಯೂ ಮತ್ತು ಒಣಗಿ ನರಟಿಕೊಂಡು ಹೋಗಿರುತ್ತದೆ, ಅದನ್ನ ಹಾಗೆಯೇ ತಿನ್ನಲೂ ಬಹುದು ಅಥವಾ ಬಗೆಬಗೆಯಾಗಿ ಪಕ್ವಮಾಡಲೂ ಬಹುದು.

9. ಸಿನೊರಡಾನ್ ಮ್ಯಾಕ್ಸಿಮೊ ಲಗುನಾ ಯಂಬವರು ಬರೆದ ಈ ಕೆಳಗೆ ಬರುವ ಸಂಗತಿಗಳನ್ನು ಮೆಡ್ರಿಡ್ ರಾಜಧಾನಿಯಲ್ಲಿರುವ ಹರ್‌ಮೇಜಸ್ಟೀಯವರ ರಾಯಭಾರದ ಸೆಕರ್‌ಟೇರಿಯವರು ದಯವಿಟ್ಟು ತಿಳಿಸಿರತ್ತಾರದೇನಂದರೆ.

"(ಸ್ಪೈನ್‌ರಾಜ್ಯದೊಳು) ಎಲಚೆ ಯಂಬ ಸ್ಥಳದಲ್ಲಿರುವ ಕೆಲವು ಮುಖ್ಯ ಮುಖ್ಯ ಜಾತಿಗಳು ಅವುಗಳ ಹಣ್ಣಿನ ಲಕ್ಷಣದ ಮೇಲೆ ಗೊತ್ತಾಗುತ್ತವೆ--"ಕ್ಯಾಂಡಿಕ್ಸ್" ಯಂಬ ಹಣ್ಣು ಆಗುವಂಥಾ ಗಿಡಗಳನ್ನೇ ಬಹಳವಾಗಿ ಪೋಷಿಸುತ್ತಾರೆ—ಯಿದು ಗಿಡದಮೇಲೆಯೇ ಹಣ್ಣಾಗಿ ಮಾಧುರ್ಯ ಉಂಟಾಗುತ್ತೆ. ಮಿಕ್ಕವುಗಳು ಹಳದೀ ವರ್ಣವಾಗಿ, ಘಟ್ಟಿಯಾಗಿಯೂ ಶಿಪ್ಪೆಮೇಲೆ ನುಣ್ಣಗೆ ಯಿರುತ್ತವೆ. ಈ ಜಾತಿಹಣ್ಣುಗಳನ್ನ ತಿನ್ನಲಿಕ್ಕೆ ಯೋಗ್ಯವಾಗಿ ಮಾಡಬೇಕಾದರೆ, ಆ ಹಣ್ಣುಗಳ ಮೇಲೆ ವಿನಿಗರ್ ಯಂಬ ಕಾಡಿಯನ್ನ ಚಿಮುಕಿಸಿ ಯರಡು ದಿವಸದ ವರಿವಿಗೂ ಮುಚ್ಚಿಡಬೇಕು. ಆ ತರುವಾಯ ಅದು ಸೀಯಾಗಿ ಚೆನ್ನಾಗಿರುವದು. ಆದರೆ 5—6 ದಿವಸದ ವರಿವಿಗೇನೇ ಒಳ್ಳೇ ಸ್ಥಿತಿಯಲ್ಲಿದ್ದು ಅನಂತರ ಕೆಟ್ಟು ಕೊಳತು ಹೋಗುತ್ತದೆ, ಆದದರಿಂದ ಯಷ್ಟು ಆವಶ್ಯಕವೋ ಅಷ್ಟರ ಮಟ್ಟಿಗೆ ಮಾಡಿಕೊಳ್ಳುತ್ತಾರೆ. ಎಲಚೇ ಸ್ಥಳದಲ್ಲಿ ಹೆಣ್ಣುಗಿಡದೊಳಗಿನ ಗೊಂಚಲುಗಳಿಗೆ ಗಂಡುಗಿಡದ ಹುವ್ವುಗಳನ್ನು ಕಟ್ಟುವದರ ಮೂಲಕ ಫಲ ವುಂಟುಮಾಡುವ ಪದ್ಧತಿ ಯಿದ್ದಾಗ್ಯೂ, ವಿಶೇಷವಾಗಿ ಹೆಣ್ಣುಗಿಡಗಳ ಜೊತೆಗೆ ಅಂದರೆ ಅಲ್ಪ ಫಾಸಲೆಯಲ್ಲಿ ಯರಡು ಮೂರು ಹೆಣ್ಣುಗಿಡಗಳಿಗೆ ಒಂದು ಗಂಡುಗಿಡದಂತೆ ನಾಟುತ್ತಾರೆ."

10. ಖರ್ಜೂರದ ಗಿಡವು ತಂಪು ಹವಾಕ್ಕೆ ಅರ್ಹವಾದ್ದಲ್ಲವೆಂತಲೂ ಗಿಡದ ಬೇರು ಭೂಮಿಯಲ್ಲಿ ಜಲಪ್ರಮಾಣದ ವರಿವಿಗೆ ಯಿಳಿದು, ಗಿಡದ ತಲೆ ಪೂರಾ ಬಿಸಲು ಹವಾದಲ್ಲಿ ಯಿದ್ದರೇನೇ ಹಣ್ಣು ಮಾಗುತ್ತದೆಂಬ ಒಂದು ತಪ್ಪು ಅಭಿಪ್ರಾಯ ಉಂಟಾಗಿರುತ್ತದೆ, ಯಿಂಥಾ ಅಭಿಪ್ರಾಯಕ್ಕೆ ಯರಡು ಬಗೆ ಕಾರಣಗಳಿರಬಹುದು—ಮೊದಲನೇದು-ಖರ್ಜೂರದ ಗಿಡಗಳು ಪ್ರಥಮತಃ ಮೇಲೆ ಉದಹರಿಸಲ್ಪಟ್ಟ ಸ್ಥಿತಿಯಲ್ಲಿಯೇ ಕಾಣಬಂದು ಆ ಪ್ರಾಂತ್ಯಗಳಲ್ಲಿ ಅಂಥಾ ಸ್ಥಿತಿಯಲ್ಲಿಯೇ ವಾಸವಾಗಿದ್ದ ಅರಬ್ ಜನಗಳಲ್ಲಿ ವಿಶೇಷ ರೂಢಿಯುಂಟಾಗಿರಬಹುದು,—ಯರಡನೇದು, ಯೂರೋಪಿಯನ್ ಮಾರ್ಕೆಟ್‌ಗಳಿಗೆ ಬರುವ ಅತ್ಯುತ್ತಮವಾದ ಜಿನಸ್ವಾರ್ ಖರ್ಜೂರವು ಪ್ರಾಯೇಣ ಅಂಥಾ ಸ್ಥಿತಿಯಲ್ಲಿಯೇ ಬೆಳದಂಥಾವುಗಳಾಗಿರಬಹುದು, ಆದರೆ ತಿನ್ನಲಿಕ್ಕೆ ಯೋಗ್ಯವಾಗಿಯೂ ಶರೀರಕ್ಕೆ ಪುಷ್ಟಿಕಾರೀಯಾಗಿಯೂ ಮತ್ತು ಉಪಯೋಗವುಳ್ಳದ್ದಾಗಿರುವಂಥಾ ಖರ್ಜೂರವು ಶುದ್ಧಾಂಗ ವ್ಯತಿರಿಕ್ತವಾದ ಹವಾ ವಗೈರೇವುಳ್ಳ ಪ್ರದೇಶದಲ್ಲಿ ಬೆಳೆಯಲಾರದೆಂದು ಹೇಳುವದಕ್ಕೇನೇನೂ ಕಾರಣವಿಲ್ಲವು.

11. ಈಚಿಗೆ ಈಜಿಪ್ಟ (ಐಗುಪ್ತ) ಮಾರ್ಗವಾಗಿ ಪ್ರಯಾಣಮಾಡುವಾಗ, ರೈಲ್ವೆಯ ಪಕ್ಕದಲ್ಲಿ ಅನೇಕ ಖರ್ಜೂರದ ಮರಗಳನ್ನ ಕಂಡೆನು, ಅವುಗಳಲ್ಲಿದ್ದ ಹಣ್ಣುಗಳು ಆಗಲೇ ಕಿತ್ತಲ್ಪಟ್ಟಿದ್ದವು, ಆ ಮರಗಳ ಬೇರು ನೈಲ್ ನದಿಯು ಈಚಿಗೆ ಉಕ್ಕಿ ಹರಿದು ಭೂಮಿಮೇಲೆ ನಿಂತಿದ್ದ ನೀರಿನಲ್ಲಿ ಯಿದ್ದವು, ಇದು ಅಲ್ಲದೆ, ಈಜಿಪ್ಟ ದೇಶದಲ್ಲಿ ಖರ್ಜೂರದಗಿಡವು ಬಹುಕಾಲದಿಂದ ಜನರಲ್ಲಿ ರೂಢಿಯಾಗಿಯಿಥೆ ಸಿ. ಯಫ್. ಗಾರ್ಡನ್ ಕಮ್ಮಿಂಗ್‌ಯವರು ಬರೆದ "ಕಾರ್ನವಲ್ ಮಾರ್ಗವಾಗಿ ಈಜಿಪ್ಟಿಗೆ" ಎಂಬ ಪುಸ್ತಕದ 137ನೇ ಪುಟದಲ್ಲಿರುವದೇನಂದರೆ, "ರೋಮನ್ ಜನಗಳ ಕಾಲದಲ್ಲಿ ಸುಮಾರು 1600 ವರುಷಗಳಿಗೆ ಮುಂಚೆ ಐಗುಪ್ತ ಜನರು ಹೆಂಚಿನ ಬಿಲ್ಲೆಯ ತುಂಡುಗಳ ಮೇಲೆ ತೆರಿಗೆ ಸಂದ ರಶೀದಿಗಳನ್ನ ಬರೆದು ಕೊಡುತ್ತಿದ್ದರು, ಅಂಥಾ ರಶೀದಿಗಳಲ್ಲಿ ಅನೇಕ ನಫರ್ ಸುಂಕಾ ದನ ತೆರಿಗೆ, ಖರ್ಜೂರ ಗಿಡದ ಸುಂಕಾ, ಮುಂತಾದವುಗಳಿಗಾಗಿ ಕೊಡಲ್ಪಟ್ಟವುಗಳಾಗಿವೆ. ನಫರ ಸುಂಕಕ್ಕಾಗಿ ಕೊಡಲ್ಪಟ್ಟಿದ್ದ ಒಂದಾನೊಂದು ರಶೀದಿಯಲ್ಲಿ ಕ್ರೀಸ್ತ ಶಕದ 103—104ನೇ ವರುಷ ನಮೂದು ಯಿಥೆ" .... "ಫ್ಯಾರೋಹಾ ಜನರು ಅಸ್ಸಿರಿಯವನ್ನ ತೆಗದುಕ್ಕೊಂಡ ತರುವಾಯ, ಅಂದರೇ ಕ್ರೀಸ್ತ ಹುಟ್ಟುವದಕ್ಕೆ 1500 ವರುಷಗಳ ಮುಂಚೆ, ಫ್ಯಾರೋಹಾ ಜನರಿಗೆ ಹೇರಳವಾಗಿ ಗುಗ್ಗಳವನ್ನ ಪಗದೀ ಕೊಡುತ್ತಿದ್ದರು ಅದು ಮೊದಲು, ಈ ಗುಗ್ಗಳವನ್ನೇ ಈಜಿಪ್ಟ ಶವಗಳಿಗೆ ಲೇಪನ ಮಾಡುತ್ತಾ ಯಿಧಾರೆ ಮೃತಪಟ್ಟ ಬಡಜನರ ಶವ

ಗಳನ್ನ ಗುಗ್ಗಿಳದಲ್ಲಿ ನೆನಸಿ ಕಬ್ಬಿಣದ ಒಲೆಯ ಮೇಲೆ ಬಿಸಿಮಾಡಿ ಕಂಬಳೀಪಟ್ಟಿಯಲ್ಲಿ ಸುತ್ತಿ ಖರ್ಜೂರಗಿಡದ ವಾಲೆಯ ಪೊರಟು ಚಾಪೆಯಿಂದ ಕಟ್ಟಿಬಿಡುತ್ತಾರೆ ಯಿಂತಾ ಸಾವಿರಾರು ಶವಗಳು ವರಸೆಯಾಗಿ ಭಾರೀ ಸಮಾಧಿಗಳಲ್ಲಿ ಯಿಡಲ್ಪಟ್ಟಿದ್ದವು'' ಆದಕಾರಣ, ಐಗುಪ್ತ ದೇಶದಲ್ಲಿ ಪ್ರತಿ ವರುಷವೂ ನೈಲ್ ನದಿಯು ಕ್ರಮವಾಗಿ ಉಕ್ಕಿ, ನದಿಯ ಉಭಯ ಪಾರ್ಶ್ವದಲ್ಲಿರುವ ಶೀಮೆಯಲ್ಲೆಲ್ಲಾ ಪ್ರಾಯೇಣ ಸರ್ವತ್ರ ನೀರು ನಿಲ್ಲುತ್ತಾ ಯಿರುವದಲ್ಲದೆ, ಕ್ರಿಸ್ತ ಹುಟ್ಟುವದಕ್ಕೆ ಮುಂಚೆ ನೂರಾರು ವರುಷಗಳು ಅಥವಾ ಸಾವಿರಾರು ವರುಷಗಳಿಂದಾ ಆ ದೇಶದಲ್ಲಿ ಖರ್ಜೂರದ ಗಿಡಗಳು ಸಹ ಯಿರುತ್ತವೆ ಆದ್ದರಿಂದಲೇ ಉಪಯೋಗವುಳ್ಳ ಈ ಖರ್ಜೂರದ ಗಿಡಗಳು ಕಾಲ ಕ್ರಮೇಣ, ಶುಷ್ಕಂಗ ಪರಸ್ಪರ ವಿರುದ್ಧವಾದ ಉಭಯ ಸ್ಥಿತಿಗೂ ಯೋಗ್ಯವಂತಾ ನಿದರ್ಶನ ಈಜಿಪ್ಟ್‌ದೇಶದಲ್ಲಲ್ಲದೆ ಮತ್ತೆಲ್ಲಿಯೂ ದೊರೆಯುವದಿಲ್ಲವು. ಯಿದರ ದೃಷ್ಟಾಂತಕ್ಕಾಗಿ, ಈಜಿಪ್ಟಿನ ಖರ್ಜೂರದ ಗಿಡವನ್ನು ಕುರಿತ ಸಂಗತಿ ತಿಳಿಸಬೇಕೆಂಬದಾಗಿ ಈಜಿಪ್ಟ್ ದೇಶದ ಪಬ್ಲಿಕ್ ವರ್ಕ್ಸ್ ಇಲಾಖೆಯ ಮುಖ್ಯಾಧಿಕಾರಿಗೆ ಕೇಳಿಕೊಂಡೆನು. ಇಂಡ್ಯ ಯಿರಿಗೇಷನ್ ಇಲಾಖೆಯ ಮೇಜರ್ ರಾಸ್ ಆರ್. ಇ. ಯವರು, ಯಿದರ ತಪಸೀಲ್ ತಿಳಿಸಲು ಸಮರ್ಥರಾದ ಉದ್ಯೋಗಸ್ಥರುಗಳಿಗೆ, ನನ್ನ ಪ್ರಶ್ನೆಗಳ ಸಹಿತ ಸರಕ್ಯುಲರನ್ನು ಕಳುಹಿಸಿದರು; ಕರ್ನಲ್ ಮಾರ್ಕ್ರೀಫ್ ಯವರು 1887ನೇ ಇಸವೀ ಜೂನ್ 15ನೇ ಮುಕ್ಕಾಮಿನ ಲೆಟರಿನೊಂದಿಗೆ, ತಾವು ಜಮಾಯಿಶಿದ ನೋಟ್ಸ್‌ಗಳನ್ನ ಬಹಳ ಮೆಹರ್ಬಾನಗೀಯಿಂದ ಕಳುಹಿಸಿರುವದಲ್ಲದೆ, ನೋಟ್ಸ್ ಬರೆದ ಪ್ರತಿ ಒಬ್ಬನ ಪ್ರಾಮಾಣಿಕತೆ, ವಿಚಕ್ಷಣೆ ಮತ್ತು ಪರಿಶೋಧನಾಸಾಮರ್ಥ್ಯ ಯಿವುಗಳನ್ನ ಕುರಿತು ಸಂಗ್ರಹವಾಗಿ ತಮ್ಮ ಅಭಿಪ್ರಾಯ ಸಹ ತಿಳಿಸಿರುತ್ತಾರೆ ಮೇಲೆ ಹೇಳಿದ ತಪಸೀಲುಗಳನ್ನು ಒದಗಿಸಿ ಕೊಟ್ಟ ಉದ್ಯೋಗಸ್ಥರ್ಯಾರಾಂದರೆ:—

ಮೆ|| ಬೈರ್ಯಕಾರ್ಡೀ. ಯಿವರು ಬಹುದಿವಸದಿಂದ ರೈಲ್‌ವೇಯ ಮ್ಯಾನೇಜರು ಮತ್ತು ಪ್ರಸಿದ್ಧರಾದ ಫಲಪುಷ್ಪ ಶಾಸ್ತ್ರಜ್ಞರು.

ಬೆಕಾರಾ ಟೂಕ್ಲಾಬೇಗ್, ಯಿವರು ಸಿರಿಯಾದೇಶದಲ್ಲಿ ಪ್ರಸಿದ್ಧವಾದ ಅರಬ್ಬೀನ್ಯೂಸ್ ಪೇಪರಿನ ಎಡಿಟರು, ಅದೇ ಶೀಮೆಯ ಒಬ್ಬ ಮನುಷ್ಯ ಈತನು ಒಳ್ಳೇ ಅನುಭವಶಾಲಿಯಾದ ನೇಟಿವ್

ಮೆ|| ಈ. ಡಬ್ಲಿಯು ಪಿ. ಫಾಸ್ಟರ್, ಬಂಗಾಳಾ ಇರಿಗೇಷನ್ ಇಲಾಖಾ ಯಿವರು ಪರಮ ಜಾಗರೂಕತೆಯಿಂದಲೂ ವ ಪ್ರಯಾಸವಹಿಸಿ ಕೆಲಸಮಾಡುವವರು, ಯಿವರು ಹೇಳುವಂತಾ ಸಂಗತಿಗಳೆಲ್ಲವೂ ಚನ್ನಾಗಿ ಮಾಡಿದ ಪರಿಶೋಧನೆಯ ಪರ್ಯವಸಾನವೇ

ಮೆ|| ಮಾರಷಲ್ ಹಿವೆಟ್, ಯಿವರು ಈಜಿಪ್ಟ್ ದೇಶದಲ್ಲಿ ಬಹು ವರುಷಗಳಿಂದ ಯಿರುವ ಇಂಜನೀರು

ಡಾಕ್ಟರ್ ಹಾಗ್, ಯಿವರು ಅಮೆರಿಕನ್‌ಮಿಷನ್‌ಗೆ ಶೇರಿದವರು ವ ಈಜಿಪ್ಟಿನಲ್ಲಿ ಬಹುಕಾಲದಿಂದ ವಾಸ ಮಾಡುವರು.

ವಿಲ್‌ಸನ್, ಯಿವರು ಸ್ಕಾಟ್ ದೇಶದ ಚತುರರಾದ ಯಂತ್ರ ಸಾಧನಗಳ ಇಂಜನೀರು ಮತ್ತು ಈಜಿಪ್ಟಿನಲ್ಲಿ ಬಹು ವರುಷದ ಅನುಭವಸ್ಥರು.

ಕೆಪ್ಟನ್ ಆರ್. ಹೆಚ್. ಬ್ರೌನ್, ಆರ್. ಇ. ಬಂಗಾಳಾ ಯಿರಿಗೇಷನ್ ಯಿಲಾಖಾ, ಯಿವರು ಜಾಗರೂಕರಾದ ವ ಕರಾರ್‌ವಾಕಾ ಮನುಷ್ಯರು.

ಮೆ|| ಆರನಾಲ್ಡ್ ಪೆರಿ, ಯಿವರು ಚಿಕ್ಕವಯಸ್ಸಿನ ಯಿಂಗ್ಲೀಷ್ ಇಂಜನೀರು.

12. ಈಜಿಪ್ಟ್ ರಾಜ್ಯದ ಪಬ್ಲಿಕ್‌ವರ್ಕ್ಸ ಇಲಾಖೆಯ ಸ್ಟೇಟ್ ಅಂಡರ್ ಸೆಕರಟೆರಿಯವರಾದ ಕರ್ನಲ್ ಸ್ಕಾಟ್ ಮಾರ್ಕ್ರೀಫ್, ಆರ್. ಇ. ಯವರು ಸದರೀ ನೋಟ್ಸ್‌ಗಳನ್ನು ಕಳುಹಿಸುತ್ತಾ ನನ್ನದೊಂದು ಪ್ರಶ್ನೆಗೂ ಜವಾಬಾಗಿ ತಿಳಿಸುತ್ತಾರೇನೆಂದರೆ ''ನೈಲ್ ನದಿಯಲ್ಲಿ ಜುಲೈತಿಂಗಳೊಳಗೆ ಪರಮ ಆಶ್ಚರ್ಯವಾದ ಕ್ರಮದಿಂದ ಪ್ರವಾಹ ವುಂಟಾಗಿ, ಶಪ್ಟಂಬರ್ ತಿಂಗಳಲ್ಲಿ ಆ ರಾಜ್ಯದಲ್ಲೆಲ್ಲಾ ವ್ಯಾಪಿಸುತ್ತೆ, ಅಕ್ಟೋಬರ್ 15ರ ಸುಮಾರಿನಲ್ಲಿ ಕೈರೋಯೆಂಬ ಸ್ಥಳದ ಬಳಿ ಸಂಪೂರ್ಣ ಪ್ರವಾಹ ವಿರುತ್ತದೆ, ಆ ತರುವಾಯು ಅತಿಶೀಘ್ರವಾಗಿ ಯಿಳಿಯುತ್ತಾ ಬಂದು ನವೆಂಬರ್ ತಿಂಗಳ ಆದಿಭಾಗದಲ್ಲೇ ಭೂಮಿಯ ಮೇಲೆ ಉಕ್ಕಿ ಹರಿದ ನೀರೆಲ್ಲಾ ಬತ್ತಿಹೋಗುತ್ತದೆ'' ಯಿದರ ದೆಸೆಯಿಂದ ತಿಳಿಯಕೊಳ್ಳತಕ್ಕದ್ದೇನೆಂದರೆ ಜುಲೈ ಲಾಗಾಯತು ನವೆಂಬರ್ ತಿಂಗಳವರಿವಿಗೇನೇ ಖರ್ಜೂರವು ರಸತುಂಬಿ ಬಣ್ಣ ವುಂಟಾಗಿ, ಹಣ್ಣಾಪಕ್ವಕ್ಕೆ ಬರುವ ಕಾಲವಾಗಿರುತ್ತದೆ, ನೀರು ಹರಿದಂತಾ ಭೂಮಿಯಲ್ಲಿ ಯಿರುವ ಖರ್ಜೂರದ ಗಿಡಗಳ ಬೇರುಗಳ್ಯಾವತ್ತೂ ಹರಿದಿರುವ ನೀರಿನೊಳಗೇನೇ ಯಿರುವವಲ್ಲದೆ, ನೈಲ್‌ನದಿಯಿಂದ ಹರಿದ ಅಪಾರವಾದ ನೀರಿನ ದೆಸೆಯಿಂದ ಆ ಗಿಡಗಳ ಸುತ್ತಮುತ್ತಲೂ ಬಲವಾದ ಥಂಡಿಯು ವ್ಯಾಪಿಸಿರುವದು, ವರುಷದೊಳಗೆಲ್ಲಾ ಜುಲೈ ಲಾಗಾಯತು ನವೆಂಬರ್ ವರಿವಿಗೇನೆ ಅತಿತೀಕ್ಷ್ಣವಾದ ಬೇಸಿಗೆಯು, ಆಗ್ಯೆ ಸರ್ವತ್ರ ಹೆಚ್ಚಾಗಿ ಥಂಡಿಯಿಲ್ಲದೇ ಯಿದ್ದಾಗ್ಯೂ ಯಿಂಡಿಯ ದೇಶದ ವಾಯವ್ಯ ಶೀಮೆಯಲ್ಲಿ ಮಳೆಗಾಲದ ಹವಾ ಯಾವರೀತಿ ಯಿರುತ್ತದೆಯೋ ಅದರಂತೆಯೇ ಯಿಲ್ಲಿಯೂ ಯಿರುವದು.

13 ನನಿಗೆ ಬಂದು ತಲಪಿರುವ ನೋಟಸ್‌ಗಳ ಸಾರದ ಯನ್ನ ತಪ್ಪಿಸುವ ಉದ್ದಿಶ್ಯ, ಅವುಗಳನ್ನ ಸಂಗ್ರಹವಾಗಿ ತಿಳಿಸುತ್ತೇನೆ-ಯಲ್ಲರೂ ಹೇಳುವದೇನಂದರೆ ನೀರಾವರಿ ಸಾಗುವಳೀ ಆಗಬಹುದಾದ ಖುಷ್ಕೀ ಜಮೀನಿನಲ್ಲಿರುವ ಗಿಡಗಳ ಹಣ್ಣುಗಳೇ ಅತ್ಯುತ್ತಮವಾದವು, ಮತ್ತು ಜಂಗ್ಲಿಗೆ ಹತ್ತಿದಂತೆ ಇರುವ ಗಿಡಗಳ ಹಣ್ಣು ಸಹಾ ಕೆಲವು ವೇಳೆ ಒಳ್ಳೇದಾದ್ದೇ ಯಿರುತವೆ, ಮರಳು ಭೂಮಿಯಾಗಿದ್ದು ನೀರಾವರಿ ಸಾಗುವಳೀ ಆಗಬಹುದಾದ ಜಮೀನಿನಲ್ಲಿ ಶ್ರೇಷ್ಠವಾದ ಕೆಲವು ಬಗೆ ಖರ್ಜೂರಗಳನ್ನ ಬೆಳೆಯಬಹುದು, ಹಗ್ಗಿನಲ್ಲಿದ್ದು ನೀರು ತಗಲುವಂತಾ ಗಿಡಗಳು ಕೆಟ್ಟದಲ್ಲವು, ಪರಂತು ಮೇಲೆ ಹೇಳಲ್ಪಟ್ಟಷ್ಟು ಒಳ್ಳೇದಲ್ಲವು, ಗಾಳಿ ವ ಭೂಮಿ ಯಿವು ಥಂಡಿಯಾಗಿರಲಿ, ಉಷ್ಣವಾಗಿರಲಿ ಯಿದರಿಂದೇನೂ ವ್ಯತ್ಯಾಸ ವಾಗಲಾರದು. ಒಂದು ಉಷ್ಣ ಭೂಮಿಯಾಗಿದ್ದಲ್ಲಿ, ಅವಶ್ಯಕವಾದಾಗಲೆಲ್ಲಾ ನೀರಾವರೀ ಸಾಗುವಳಿ ಮಾಡಬೇಕಾಗಿರುತ್ತೆ. ರೋಜೆಟ್ಟಾ, ಅಬೌಕರ, ರಾಮಲೇ, ಗಬ್ಬಾರಿ ಈ ಸ್ಥಳಗಳಲ್ಲಿ ಹಾಕಿದ ಗಿಡಗಳ್ಯಾವತ್ತೂ ಥಂಡೀ ಹವಾವಲ್ಲೇ ಯಿದ್ದಾಗ್ಯೂ ಹಣ್ಣುಗಳು ಒಳ್ಳೇ ಬಗೆಗಳವಾಗಿಯೇ ಯಿರುತ್ತವೆ, ರೋಜೆಟ್ಟಾ ಸ್ಥಳದಲ್ಲಿ ಆಗುವ ಉತ್ತಮವಾದ ಜಾತಿಗಳು ಜಾಗ್ಲೊಲ್ (ಕೆಂಪು) ಮತ್ತು ಸಾಮುನಿ (ಹಳದಿ) ಯಿವು ಮರಳು ದಿನ್ನೆಗಳಲ್ಲಿ ಆಗುತ್ತವೆ ಯಂಬದಾಗಿ ಮೆ॥ ಫಾಸ್ಟರ್ ಯವರು ಹೇಳುತ್ತಾರೆ, ನದಿಯ ಪ್ರವಾಹ ಬಂದು ಹೋದ ತರುವಾಯ ದಿನ್ನೇಭೂಮಿಗೆ ಜಲ ವೇರುವ ಪರಿಮಿತಿ ಹೆಚ್ಚಾಗಿರುವದ್ದರಿಂದ ಗಿಡದ ಬೇರು ಪ್ರಾಯಶಃ ಜವುಗು ಭೂಮಿಯಲ್ಲಿಯೇ ನಿಂತಿರುತ್ತವೆ, ಸದರೀ ಜಮೀನುಗಳಲ್ಲಿ ನೀರಾವರಿ ಸಾಗುವಳಿಯೇ ಆಗುವದಿಲ್ಲವು, ಆದರೆ ಹಗ್ಗಿನ ಭೂಮಿಯು ಮರಳು ಮಿಶ್ರವಾಗಿದ್ದಾಗ್ಯೂ ಅಲ್ಲಿ ಖರ್ಜೂರ ಗಿಡಗಳು ವಿಶೇಷವಾಗಿ ಬೆಳದಿರುತ್ತವೆ, ದಾಸೆಟ್ಟಾ ನಾಲೆಯ ದೆಸೆಯಿಂದ ನೀರಾವರೀ ಸಾಗುವಳಿಗೆ ಸಲೀಸು ಉಂಟಾಗಿರುವ ಕಾರಣ ಈ ಗಿಡಗಳು ಗುರುವಲ್ಲಿ ವೃದ್ಧಿಯಾಗುತ್ತಾ ಬಂದಿವೆ, ಜಮೀನು ಹಾಗೆ ಬಣಗಿದಷ್ಟು ನೀರಾವರಿ ಸಾಗುವಳೀ ಅಧಿಕ್ತೋ ಫಸಲೂ ಹೆಚ್ಚುವದಾಗಿ ತೋರುತ್ತದೆ. ಗೀಜೆ ಯಂಬ ಪ್ರದೇಶದಲ್ಲಿ ನದೀ ಪ್ರವಾಹ ಬಂದು ನೀರ್ಕು ನಿಲ್ಲುವ ಭೂಮಿಗಳಲ್ಲಿ ಖರ್ಜೂರದ ಗಿಡಗಳು ಯಿರುತ್ತವೆ, ವೃಷ್ಟಿ ಬಂದ ನೀರು ಗಿಡದ ಬೇರನ್ನು ಕೆಡಿಸದಂತೆ 70 ದಿವಸಗಳ ವರಿಗೂ ಬೀಸ ಮಟ್ಟಾಗದಲ್ಲಿ ನಿಲ್ಲುವುದು, ಇದಕ್ಕೆ ಹೆಚ್ಚು ದಿನಗಳು ನಿಂತರೆ ಬೆಳೆ ಕೆಟ್ಟು ಹೋಗುತ್ತೆ. ಪರಂತು ಉಕ್ಕಿಬಂದ ನೀರು ನಿಲ್ಲುವ ಕಾಲವನ್ನೇ ಕಡಿಮೆ ಮಾಡುವದೇ ಉತ್ತಮ, 20 ದಿವಸಗಳ ಲಾಗಾಯತು 70 ದಿವಸಗಳ ವರಿವಿಗೂ ಇರುವ ಪ್ರವಾಹವು ವಾಡಿಕೆಯಾದದ್ದು ಹೊಳೆ ಉಕ್ಕಿ ಭೂಮಿಯ ಮೇಲೆ ಹರಿಯದೇ ಯಿದ್ದರೆ ಫಸಲಿನ ತೇದಾದು ಸ್ವಲ್ಪವಾಗುವದಲ್ಲದೇ, ಹಣ್ಣಿನ ಗುಣವೂ ಕಡಿಮೆಯಾಗುವದು, ಗೀಜೆಯಲ್ಲಿ ಮೂರು ಬಗೆಯ ಖರ್ಜೂರವು ಆಗುತ್ತದೆ, ಅವು ಯಾವವಂದರೆ, ಸೇವಿ ಯಂಬದು ಅವಲ್ ತರಹದ್ದು ಯಿದು ಹಳದೀ ಬಣ್ಣದ ಮೇಲೆ ಯಿರುತ್ತದೆ, ಅಮ್ಹತ್ ಯಂಬದು ಬಹಳ ಮೃದು ಜಾತಿ ಯಿದು ಮಾಗುವಾಗ ಹಳದೀ ಬಣ್ಣದಿಂದ ಪೂರಾ ಯರ್ರಗೆಂಪು ಬಣ್ಣಕ್ಕೆ ತಿರಗುತ್ತೆ. ಮತ್ತು ಹಯನಿ ಯಂಬ ಕೆಂಪುಜಾತಿ ಗೀಜೆಯ ಅವಲ್ ತರಹದ ಖರ್ಜೂರವು ಹಳದೀ ಭೂಮಿಯಲ್ಲಿ ಆಗುತ್ತೆ, ಮರಳು ಭೂಮಿಯಾಗಿದ್ದು ನೈಲ್‌ನದಿಯ ಕಸವಂಡು ನಿಂತಿದ್ದ ಸ್ಥಳದಲ್ಲಿ ಅಂತಾ ಒಳ್ಳೇ ಖರ್ಜೂರವಾಗುವದಿಲ್ಲವು." ಮೆ॥ ಬಿರ್ಯಕಾರಡಿಯವರು ಹೇಳುವದೇನಂದರೆ—"ತೋಟಗಳೊಳಗೆ ಹೊಳೇ ನೀರು ನುಗ್ಗಿ ಫಸಲ್ ಖಿಲವಾದ್ದು ನೋಡಿದೇನೆ ಹೆಚ್ಚು ನೀರು ಅವಶ್ಯಕ ವಿರುವದಿಲ್ಲಾ ಕಾಲ್ವೆಗಳ ಮಧ್ಯೆ ಒಂಟೊಂಟಿ ಗಿಡಗಳು ಯಿರುತ್ತವೆ ಅಂತಾ ಗಿಡಗಳು ನೋಡಲಿಕ್ಕೆ ಚನ್ನಾಗಿಯೇ ಯಿರುತ್ತವೆ ಪರಂತು ಹಣ್ಣುಮಾತ್ರ ಬಿಡುವದಿಲ್ಲಾ" ಈ ಒಂಟೊಂಟಿಗಿಡಗಳು ಗಂಡು ಜಾತಿಯದೋ ಅಥವಾ ಹೆಣ್ಣುಜಾತಿಯದೋ ಯಂತಾದ್ದು ಯಂಬದಾಗಿ ಅವರು ಹೇಳುವದಿಲ್ಲ, ಒಂದು ವೇಳೆ ಹೆಣ್ಣುಗಿಡಗಳಾಗಿದ್ದ ಪಕ್ಷದಲ್ಲಿ ಕಾಲ್ವೇ ಮಧ್ಯದಲ್ಲಿರುವ ಗಿಡಗಳನ್ನ ಹಸನು ಮಾಡುವ ಬಗ್ಯೆ ಜನಗಳು ಕಷ್ಟಪಡುತ್ತಾರೆಯೇ ಯಿಲ್ಲವೆ ಯಂಬ ಸಂಗತಿಯನ್ನೂ ನಮೂದಿಸಿರುವದಿಲ್ಲಾ, ಒಂಟಿಗಿಡಗಳು ಒಳ್ಳೇದಾಗ ವ ಒಳ್ಳೇ ಸ್ಥಿತಿಯಲ್ಲಿ ಯಿರುತ್ತವಾದಾಗ್ಯೂ ಫಲವಷ್ಟಾಗಿ ಬಿಡುವದಿಲ್ಲಾ.—ಡಾಕ್ಟರ್ ಹಾರವಿಯವರು ಹೇಳುವದೇನಂದರೆ "ಕೆಲವು ವೇಳೆ ಖರ್ಜೂರ ಗಿಡಗಳಲ್ಲಿ ನೀರು ಹರಿದು 1 ತಿಂಗಳು ಲಾಗಾಯತು 3 ತಿಂಗಳ ವರಿವಿಗೂ ನಿಲ್ಲುತ್ತದೆ ಪರಂತು ಹೆಚ್ಚು ನೀರಿನಿಂದ ಗಿಡ ಕೆಡುವದಿಲ್ಲವು, ನೀರು ನಿಂತಿದ್ದ ಸ್ಥಳದಲ್ಲಿ ಗಿಡಗಳೊಳಗೆ ಉತ್ತಮವಾದ್ದಾಗಿಯೂ ಹೇರಳವಾಗಿಯೂ ಫಲ ಬಿಡುತ್ತೆ ಪರಂತು ಈ ಅಂಶದಲ್ಲಿ ಗಿಡಗಳಲ್ಲಿ ನೀರು ನಿಲ್ಲಲಿ ನಿಲ್ಲದೇ ಯಿರಲಿ ಯಿದರಿಂದೇನೂ ವ್ಯತ್ಯಾಸ ಉಂಟಾಗಲಾರದು, ಖರ್ಜೂರ ಫಸಲು ಆಗಬೇಕಾದರೆ ಒಣಗಿದ ಭೂಮಿ ಮತ್ತು ಉಷ್ಣ ಗಾಳಿಯೇ ಅತ್ಯಾವಶ್ಯಕ ವಿರುವದಿಲ್ಲವೆಂಬದಾಗಿ ಕೆಲವರು ಹೇಳುತ್ತಾರೆ."

14. ಅಯೋಧ್ಯ ದೇಶದಲ್ಲಿ ಆಗುವ ಖರ್ಜೂರವು ಅತ್ಯುತ್ತಮವಾದ್ದೆಂಬದಕ್ಕೇನೂ ಸಂದೇಹವಿಲ್ಲವು; ಅದು ಹಾಗಿರಲಿ; ಈಜಿಪ್ಟಿನಿಂದ ಬಂದಿರುವ ಜವಾಬುಗಳಿಂದ ನನಿಗೆ ವ್ಯಕ್ತವಾಗಿ ತಿಳಿಯಬರುವದೇನಂದರೆ—ಹವಾ ಉಷ್ಣವಾಗಿಯೂ, ಭೂಮಿ ಒಣಗಿದ್ದಾಗಿಯೂ ಯಿದ್ದು ನೀರಾವರಿಗೆ ಸಹಾ ಕಠಿಣವಾದ ಸ್ಥಳದಲ್ಲಿ ಒಂದು ವೇಳೇ ಶ್ರೇಷ್ಠವಾದ ಖರ್ಜೂರ ಆಗಿ ಅದು ಗಿಡದಲ್ಲೆ ಒಣಗಿ ಅದು ಬಹು ದಿವಸ ಯಿಡಲಿಕ್ಕೂ ಮತ್ತು ರಫ್ತು ಮಾಡಲಿಕ್ಕೂ ಸಹಾ ಸಂಪೂರ್ಣ ಅರ್ಹವಾದ್ದಾಗಬಹುದು, ಪರಂತು ಜವುಗು ಭೂಮಿ ವ ತಂಪು ಹವಾ ಯಿವುಗಳ ಸ್ಥಿತಿ ಅತ್ಯಧಿಕವಾಗಿ ಯಿದ್ದಾಗ್ಯೂ ಖಂಡಿತವಾಗಿ ಖರ್ಜೂರದ ಗಿಡಕ್ಕೇನೂ ಹಾನಿಯುಂಟಾಗಲಾರದು; ಯಿದೂ ಅಲ್ಲದೆ ಆಹಾರಕ್ಕೆ ಯೋಗ್ಯವಾದ ವ ಬಲೆ ಯುಂಟಾಗುವ ಫಸಲೂ ಆಗುತ್ತವೆ. ಈಜಿಪ್ಟ ದೇಶದೊಳಗೆ ಖರ್ಜೂರದ ಗಿಡವು ಜನಗಳಿಗೆ ತಿಳಿದು ಅನುಭವಕ್ಕೆ ಬಂದು ಸಾವಿರಾರು ವರುಷಗಳಾಗಿರುತ್ತವಷ್ಟೆ, ಈ ಮಧ್ಯೆ ಅನೇಕ ಬಗೆಯ ಖರ್ಜೂರದ ಗಿಡಗಳುಂಟಾದವು ಯಿದಕ್ಕೇನೂ ಸಂದೇಹವಿಲ್ಲ, ಯಿವುಗಳ ಪೈಕೀ ಕೆಲವು ಜಾತಿಗಳು ಒಣಗಿದ ಭೂಮಿಗೂ ಉಷ್ಣ ವಾಕ್ಕೂ ಅರ್ಹವಾದವು, ಮಿಕ್ಕಾದ ಬಗೆಗಳೋ ಭೂಮಿಯು ವ ಹವಾ ಲಕ್ಷಣ ಯಂತಾದ್ದಾಗಿಯೇ ಯಿರಲಿ ತಡೆಯುತ್ತವೆ. ಈಜಿಪ್ಟ ದೇಶದ ಕೆಲವು ಬಗೆಗಳು ಯಿಂಡ್ಯದೇಶದ ತಂಪು ಹವಾ ಪ್ರದೇಶಗಳಲ್ಲಿ ಸಹ ಅಂದರೆ ಬೊಂಬಾಯಿ ಬಂಗಾಳಾ ಈ ಪ್ರಾಂತದಲ್ಲಿ ಆಗಬಹುದಾದ ಸಂಭವ ಕಾಣುತ್ತೆ.

15. ನನಗೆ ಬಂದಿರುವ ಎಲ್ಲ ಜವಾಬುಗಳಿಂದಲೂ ತಿಳಿಯಬರುವದೇನಂದರೆ—ವಾಡಿಕೆಯಾಗಿ ಗುತ್ತಿಯು ಖರ್ಜೂರವೆಲ್ಲವೂ ಯೇಕಕಾಲದಲ್ಲಿ ಗಿಡದ ಮೇಲೆ ಹಣ್ಣಾದ್ದೇ ಯಿಲ್ಲವು, ಕೇವಲ ವೊಣಗಿದ ಭೂಮಿಯಲ್ಲಿಯೂ ಅರಣ್ಯದ ಕಿನಾರೆಯಲ್ಲಿಯೂ ಗುತ್ತಿಯ ಹಣ್ಣುಗಳೆಲ್ಲ ವಾಗುವವರಿವಿಗೂ ಗಿಡದಲ್ಲಿಯೇ ನಿಲ್ಲಿಸಿಡುತ್ತಾರೆ, ಆದರೆ ಪ್ರಾಯೇಣ ಯಲ್ಲಕಡೆಯಲ್ಲೂ ದಫೆಗಳಾಗಿ ಕೈಯಿಂದಲಾದರೂ ಬಿಡಿಸುತ್ತಾರೆ. ಅಥವಾ ಗಿಡದ ಕೆಳಗೆ ಬಲೆಕಟ್ಟಿ ಅದರೊಳಗೆ ಗುತ್ತಿಯನ್ನಲ್ಲಾಡಿಸಿ ಹಣ್ಣು ಉದರಿಸುತ್ತಾರೆ. ಗಿಡದಿಂದ ತೆಗದ ಈ ಹಣ್ಣನ್ನ ಹಾಗೆಯೇ ತಿನ್ನುವದೂ ಉಂಟು ಅಥವಾ ಬಿಸಲಿನಲ್ಲಿ ವೊಣಗಿಸಿ ಅನೇಕವಿಧವಾಗಿ ತಯಾರ್ಮಾಡುವದೂ ಉಂಟು. ಪ್ರಾಯೇಣ ಗೊನೆಯು ಕೆಂಪು ಅಥವಾ ಹಳದೀ ಬಣ್ಣಕ್ಕೆ ತಿರುಗಿದಾಗ ಗುತ್ತಿಗುತ್ತಿಯಾಗಿಯೇ ಕಿತ್ತಲ್ಪಟ್ಟು ಅಂಗಡಿಗಳಲ್ಲಿ ಮಾರಲ್ಪಡುತ್ತವೆ, ಅದು ವಗರಾಗಿಯೂ ಕೀ ಯಿಲ್ಲದೇ ಯಿದ್ದಾಗ್ಯೂ ಜನಗಳು ಅದನ್ನೇ ತಿನ್ನುತ್ತಾರೆ, ವೊಂದು ಖರ್ಜೂರದ ಗೊನೆಯೊಳಗೆ ಅಲ್ಲಲ್ಲೊಂದು ಹಣ್ಣಾಗುವದಕ್ಕೆ ಆರಂಭವಾದ ಕೂಡ್ಲೆ ಆ ಗೊನೆಯನ್ನೇ ಕತ್ತರಿಸಿ ತಂದು ನೇಟೀವ್ ಮತ್ತು ಯೂರೋಪಿಯರ್ಸ್ ಜನಗಳು ತಮ್ಮ ತಮ್ಮ ಮನೆಗಳೊಳಗೆ ತೂಗಕಟ್ಟುತ್ತಾರೆ. ಅದರೊಳಗಿನ ಖರ್ಜೂರವು ವಾಗುತ್ತಾ ಬಂದಹಾಗೆಲ್ಲಾ ಕಿತ್ತು ತಿನ್ನುತ್ತಾರೆ, ದೋರ ಹಣ್ಣಿನಿಂದ ವೊಂದು ಬಗೆಯ ಮುರಬ್ಬಾ ಆಗುತ್ತದೆ ಅಥವಾ ಅದಕ್ಕೆ ವುಪ್ಪುಹಾಕಿ ತೊಕ್ಕಿನಂತೆಯಾದರೂ ಮಾಡಿ ತಿನ್ನುತ್ತಾರೆ, ಗೊನೆಯಲ್ಲಿ ವೊಣಗಿ ಬತ್ತಿದ ಹಣ್ಣನ್ನ ಕಿತ್ತುಹಾಕಿ ವುಳಿದ ಹಣ್ಣುಗಳಿಗೆ ಬಲವಿರುವಂತೆ ಮಾಡುತ್ತಾರೆ.

16. ಒಳ್ಳೇ ಚನ್ನಾಗಿ ಬೆಳದ ಗಿಡದಲ್ಲಿ ಅದರ ಸ್ಥಳ ಲಕ್ಷಣ ಮತ್ತು ಕಾಪಾಡುವ ರೀತಿಯನ್ನನುಸರಿಸಿ 50ರ ಲಾಗಾಯತು 500ಪವ್ಡ ತೂಕದವರಿವಿಗೂ ಖರ್ಜೂರ ವಾಗುತ್ತದೆ, ಖರ್ಜೂರದ ಗಿಡವು 80 ವರುಷದ ಲಾಗಾಯತು 100 ವರುಷಗಳ ವರಿವಿಗೂ ಯಿರುತ್ತದೆ, ಹಾಲೀ ಯಿರುವ ಯಿನ್ನೂ ಕೆಲವುಗಿಡಗಳು 100—200 ವರುಷಗಳಿಂದಲೂ ಯಿವೆ, ಪ್ರಾಯೇಣ ಬಲವಾದ ಗಾಳೀ ಮಳೆಯ ಪೆಟ್ಟಿನಿಂದಲೇ ಗಿಡಗಳು ಸಾಯುತ್ತವೆ. ಚನ್ನಾಗಿನಾತ್ರ ಕಾಪಾಡಿದಲ್ಲಿ ಗಿಡಗಳು ಯಿರುವ ವರಿವಿಗೂ ಪ್ರತಿ ವರ್ಷವೂ ಹೇರಳವಾಗಿ ಫಲ ಕೊಡುತ್ತವೆ.

17. ಖರ್ಜೂರದ ಗಿಡದ ಬೇಸಾಯವು ಈಜಿಪ್ಟ್ ದೇಶದಲ್ಲಿ ವಿಸ್ತಾರವಾಗಿ ನಡೆಯುತ್ತದೆ, ಫಲವೂ ಬಹಳವಾಗಿ ಆಗುತ್ತೆ ಬಹುಶಃ ನೇಟಿವ್ ಜನಗಳೆಲ್ಲರೂ ದೋರಹಣ್ಣಿನ ಮೇಲೂ ಮತ್ತು ಒಣಗಿದ ಹಣ್ಣಿನ ಮೇಲೂ ಸಂಪೂರ್ಣವಾಗಿ ಮೂರು ತಿಂಗಳ ವರಿವಿಗೂ ಜೀವಿಸುತ್ತಾರೆ, ಅವರುಗಳಿಗೆ ಸಾಧಾರಣ ರೊಟ್ಟಿಗಿಂತಲೂ ಖರ್ಜೂರವೇ ಅಗ್ಗವಾಗಿ ಇದೆ, ಬಡಜನರು ಖರ್ಜೂರದ ಬೀಜಗಳನ್ನು ಜವಾಯಿಸಿ ಇಟ್ಟುಕೊಂಡು ಒಲೆಗೆ ಸವುದೆಯಂತೆ ಉಪಯೋಗಿಸಿಕೊಳ್ಳುತ್ತಾರೆ. ವಿನಿಗರ ವ ಸ್ಪಿರಿಟ್ ಸಾರಾಯಿ ಈ ಹಣ್ಣಿನಿಂದ ತಯಾರಾಗುತ್ತದೆ ಹೆಚ್ಚಾದ ಅಕ್ಕರೆಯಿಂದ ಕಾಪಾಡಿದ ಗಿಡಗಳಲ್ಲಿ ಹೆಚ್ಚಾಗಿಯೂ ಮತ್ತು ಒಳ್ಳೇ ಫಸಲಾಗುತ್ತದೆ, ಈ ಗಿಡಕ್ಕೆ ಹಕ್ಕಿಯ ಹಿಕ್ಕೆ ಕುದರೆಯ ವ ಇತರ ಗೊಬ್ಬರವನ್ನ ವಿಶೇಷವಾಗಿ ಕೊಡುತ್ತಾರೆ. ಹಳೇ ಗ್ರಾಮಗಳ ಕಸವನ್ನೂ ಸಹ ಹಾಕುತ್ತಾರೆ. ಇದು ಇಂಡ್ಯದ ಬೇಸಾಯಗಾರರು ನೊನ ಯಿಂದು ಕರಿಯತಕ್ಕ ಪದಾರ್ಥಕ್ಕೆ ಸದೃಶವಾದದ್ದು ಮತ್ತು ನೈಟ್ರೇಟ್ ಅವ್ ಪೊಟ್ಯಾಷ್ ಯಂಬ ಒಂದು ಬಗೆಯ ಕ್ಷಾರದ ಸತ್ತುವಾಗಿಯೇ ಇರಬಹುದು. ಈಜಿಪ್ಟಿನ ಕೆಳ ಪ್ರದೇಶದಲ್ಲಿ ಗೊಬ್ಬರವೇ ವಿಸ್ತಾರವಾಗಿ ವುಪಯೋಗಿಸಲ್ಪಡುತ್ತದೆ. ಮೇಲ್ ಪ್ರದೇಶದಲ್ಲಿ ಖರ್ಜೂರ ಗಿಡಗಳ ಮಧ್ಯೆ ಭೂಮಿಯನ್ನ ಉಳೋಣದರ ದೆಸೆಯಿಂದಲೇ ಅವಶ್ಯಕವಾದ ಹಸನಾಗುತ್ತೆಂದು ಯಣಿಸಲ್ಪಟ್ಟಿದೆ ವರುಷದಲ್ಲಿ ನೂರು ಗಿಡಗಳ ಕೆಲಸ ಒಬ್ಬ ಮನುಷ್ಯನಿಗೆ ಮೂರು ತಿಂಗಳ ವರಿವಿಗೆ ಇರುತ್ತೆ ಗಿಡದಲ್ಲಿ ಒಣಗಿ ಹೋದ ಗರಿಗಳು ವರುಷಕ್ಕೆ ಒಂದು ದಫಾ ಕಿತ್ತುಹಾಕಲ್ಪಡುತ್ತವೆ.

18. ಆ ರಾಜ್ಯದಲ್ಲಿ ಈ ಕೆಲಸದ ಅನುಭವಶಾಲಿಯಾದ ನೇಟೀವ್ ಆಯಾಯ ಬಗೆಗಳ ಹೆಸರುಗಳನ್ನ ತಿಳಿಸುತ್ತಾನೆ, ಅವ್ಯಾವವೆಂದರೆ—ಹಯ್ಯನಿ, ಅರಾಬಿಯೇಟೆ, ಕಬಾಬಿ, ಫಿಂದಿಐಷಾ, ಜಾನಾರ್, ಸರಗ್ಗಿ, ರವಾಕದ್, ಸಾಮುನಿ, ಜಗಲಾಲ್, ಭಶೀದ್ದು, ಅಮೆನಸರದ್ದೀಲ್, ಅಲೇಲಿ, ಅಮ್ರಿ, ಚಿಹಯುತ್, ಆಸಾಲಾ, ಮೊಕರಬಾ, ಜೆಮರಿ, ಚೋಕಾರ್, ಜೊಯಿಮಫೆಲ್, ಅಬ್ರೀಮಿ, ಸ್ಟೋಕಾತ್, ಹಾಫಲಿಗನೇದಿ, ಬೆಜಲನಾಕಾ, ಸೊಬ್ಯಾಜಿನಾಬ್, ಗಾಂದಿಲಾ, ಖೋದ್ರಾಯಿ, ಎಲ್‌ಸಿವಿ, ಎಲ್‌ವಾಹಿ, ಮುಂತಾದ ಇತರ ಜಾತಿಗಳು. ಈಪೈಕಿ ಶ್ರೇಷ್ಟವಾದವು ಯಾವವೆಂದರೆ ಜೆಗಲಾಲ್, ಎಲ್‌ಅಮ್ರಿ ಎಲ್‌ಸೊಕಾತ್, ಎಲ್‌ಗಾಂದಿಲಾ, ಎಲ್‌ಖೋದ್ರಾಯಿ, ಎಲ್‌ಅಬ್ರೀಮು, ಮತ್ತು ಎಲ್‌ಸೀವಿ, ಗಾಜಾಲಿ, ಹಯಾನಿ, ಅಮ್ರಿ ಅಕಲಾಲಿ ಬ್ಯೆಯದೆಲ್‌ಗಮೂಲ್ ಬಿಂಕ್ಐಷಾ ಎಗಲಾನಿ ಈ ಜಾತಿಗಳು ಉತ್ತಮವಾದ್ದೆಂದು ಮೆ|| ಬಿ. ಏ. ಕಾರಡಿಯವರು ಹೇಳುತ್ತಾರೆ. ಸ್ಕಾಟ್‌ಲೆಂಡ್ ದೇಶದ ಮೆಕಾನಿಕಲ್ ಇಂಜನಿಯರವರಾದ ವಿಲ್‌ಸರ್ನಬೇಯುವರು ಗೀಜೇ ಪ್ರದೇಶದಲ್ಲಿ ಜೊಳೆಯ ನೀರು ಉಕ್ಕಿ ಹರಿಯದ ಮರಳು ಭೂಮಿಯಲ್ಲಿ ಬೆಳೆಯುವಂಥಾ ಎಣೆಗೆಂಪುಬಣ್ಣವುಳ್ಳ ಸಣದಾದ ಅಮ್ರತ್ ಎಂಬದೇ ಎಲ್ಲಕ್ಕಿಂತಲೂ ಉತ್ತಮವಾದ್ದೆಂದು ಹೇಳುತ್ತಾರೆ, ಅದಕ್ಕೆ ಎರಡನೇ ತರದ್ದು ಅಮ್ರಿ ಎಂಬದು ಇದು ಒಳ್ಳೇ ದೊಡ್ಡದು ವಾಗಿದ ನಂತರ ಕಪ್ಪಾಗಿರುವದು ವಾಗಿದ ಈ ಹಂಣು ಲಿವ್ಯಾಂಟ್ ಗ್ರೀಸ್ ಮತ್ತು ಯೂರೋಪಿನ ಇತರ ಪ್ರಾಂತ್ಯಕ್ಕೆ ರಫ್ತಿಗೆ ಬರುತ್ತದೆ. ಯಿದು ಷಿರಜ್ಯೆ, ಘಾಕೂಸ್ ಸಾಲಹ್ಯೆ ಮತ್ತು ಅಬೂಕೇಬಕ್ ಈ ಸ್ಥಳಗಳಲ್ಲಿ ಬೆಳೆಯುತ್ತದೆ ಸಾಮುನಿ ಎಂಬದು ವಾಗಿದ ಮೇಲೆ ಹಳದೀ ಬಣ್ಣ ವುಳ್ಳದ್ದಾಗಿ ದೊಡ್ಡದಾಗಿರುವದು.ಇದು ರಾಸೆಟ್ಟಾ ಎಂಬ ಸ್ಥಳದ ಅಜೂಬಾಜೂದಲ್ಲಿ ನದೀ ನೀರು ಹರಿಯದ ಮರಳು ಭೂಮಿಯಲ್ಲಿ ಬೆಳೆಯುತ್ತೆ. ಜೆಗಲಾಲ್ ಎಂಬದು ಒಳ್ಳೆ ಹಸನಾದ ಖರ್ಜೂರ ಇದನ್ನ ಹಂಣು ಆಗುವದಕ್ಕೆ ಮುಂಚೆ ಕೆಂಪಾಗಿರುವಾಗಲೇ ಕಿತ್ತಿ ತಿನ್ನುತ್ತಾರೆ. ಇವನ್ನ ರಾಸೆಟ್ಟಾ ಸ್ಥಳದ ಮರಳು ಭೂಮಿಯಲ್ಲಿಯೂ ಬೆಳೆಯುತ್ತಾರೆ ಇದರ ಕೆಳಗೆ ನಮೂದಾಗುವ ಖರ್ಜೂರವು ಮಧ್ಯಮ ತರಹೇಗಳಾದ್ದೆಂದು

ತಿಳಿಸುತ್ತಾರೆ ಅವು ಯಾವವೆಂದರೆ, ಹಯನೀ ಎಂಬ ವರಟು ಜಾತೀ ಹಣ್ಣು ಇದನ್ನ ಸಾಧಾರಣವಾಗಿ ಮಾಗುವದಕ್ಕೆ ಮುಂಚೆ ಕೆಂಪಾಗಿರುವಾಗಲೇ ತಿನ್ನುತ್ತಾರೆ ಇದು ಕ್ಯಾಲಿಯೋಬಿಯು ಎಂಬ ಸ್ಥಳದಲ್ಲಿ ಜೇಡೀ ಭೂಮಿಯ ಮೇಲೆ ಕೆಲವು ವೇಳೆ ನದೀ ನೀರು ಉಕ್ಕಿ ಹರಿಯುವದುಂಟು ಬಿಂತ್‌ಅಜ ಎಂಬ ಸಣ್ಣ ಖರ್ಜೂರವು ಕೆಳ ಪ್ರಾಂತದ ಎಲ್ಲಾ ಕಡೆಯಲ್ಲೂ ಮತ್ತು ನೀರಾವರಿ ಕಲ್ಪಿಸಿರುವ ಡಿಸ್ಟ್ರಿಕ್ಟುಗಳಲ್ಲೂ ಆಗುತ್ತದೆ. ಅಗಲಾನೀ ಎಂಬ ಜಾತಿಯು ಜೇಡೀ ಭೂಮಿಯಲ್ಲಿಯೂ ಮರಳಿನ ಪ್ರದೇಶದ ನೀರಾವರಿ ಸಾಗುವಳೀಯಾಗುವ ಸ್ಥಳಗಳಲ್ಲಿಯೂ ಆಗುತ್ತದೆ.

19. ಮೆ॥ ಬಿರ್ಡ್‌ಕಾರ್ಡಿಯವರು ಕೆಲಸದಲ್ಲಿ ಹೊಳ್ಳೇ ಅನುಭವಶಾಲಿಯಾಗಿಯೂ ಫಲಪುಷ್ಪಶಾಸ್ತ್ರಜ್ಞರಾಗಿಯೂ ಇರುತ್ತಾರಾಗಿ ಅವರ ನೋಟೆಸ್‌ನಲ್ಲಿ ಇದರಡಿ ಬರುವ ತಪಸೀಲು ಪ್ರಯೋಜನಕಾರಿಯಾಗಿರುವದು, ೯ ಮಹಮ್ಮದ ಅರ್ಲೆ ಅಥವಾ ಸಾಲಹೈ ಈ ಸ್ಥಳದಿಂದ ಸೊಸಿಗಳನ್ನ ತರಿಸಬೇಕು, ಅವು ತಾಯಿ ಮರಗಳಿಂದ ವಿಂಗಡಿಸಿ ತೆಗದವಾಗಿರಬೇಕು. ಇವು ಸಾಧಾರಣವಾಗಿ ಸುಮಾರು ಮೂರು ವರುಷದ ಸೊಸಿಗಳಾಗಿದ್ದು 4–5 ಅಡಿ ಎತ್ತರವಿರುತ್ತವೆ, ಈ ಸೊಸಿಗಳು ಖರ್ಜೂರ ಗಿಡದ ನಾರಿನಲ್ಲಿ ಸುತ್ತಲ್ಪಟ್ಟಿದ್ದು ಜನವರೀ ಫಿಬ್ರವರೀ ತಿಂಗಳಲ್ಲಿ ಗುಣಿಗಳಲ್ಲಿಡಲ್ಪಡುವವು. ಇವುಗಳನ್ನ ಬೊಂಬಾಯಿಗೆ ಜಹಜಿನಲ್ಲಿ ತರಬಹುದು, ೯ಗ ಸೊಸಿಗಳು ಚನ್ನಾಗಿಯೇ ಇರುತ್ತವೆ. ಸುತ್ತಲ್ಪಟ್ಟಿರುವ ಬೇರುಗಳಿಗೆ ಮಾತ್ರ ದಿನಕ್ಕೊಂದಾವರ್ತಿ ತ್ಯಾವವುಂಟಾಗುವಂತೆ ನೀರು ಹಾಕುತ್ತಲಿರಬೇಕು, ಸ್ಥಳಕ್ಕೆ ಬಂದು ತಲಪಿದ ಮೇಲೆ ಆಳವಾದ ಒಂದೊಂದು ಗುಣಿಯಲ್ಲಿ ಒಂದೊಂದು ಸೊಸಿಯಂತೆ ಕೆಳಗಿನ ಗರೀ ಮಟ್ಟಕ್ಕೆ ನಾಟಬೇಕು, ಅನಂತರ ನಾಟಿದ ಸೊಸಿಗೆ ಹಳೇ ಚಾಪೆ ಸುತ್ತಿ ನಾಲ್ವತ್ತು ದಿವಸಗಳ ವರಿಗೂ ಪ್ರತಿ ದಿನವೂ ನೀರು ಹಾಕುತ್ತಾ ಆ ತರುವಾಯ 4 ತಿಂಗಳ ವರಿವಿಗೂ ದಿನಬಿಟ್ಟು ದಿನ ನೀರು ಹಾಕುತ್ತಾ ಬರಬೇಕು. ಆಗ್ಯೆ ಬೇರುಗಳು ವೃದ್ಧವಾಗಿ ಯಿಳಕೊಂಡು ಜೀವಿತವಾಗುವದಲ್ಲದೆ ಗಿಡಗಳು ಇತರ ಫಲವೃಕ್ಷದಂತೆ ಎಣಿಸಲ್ಪಡುವವು. ಪೂರಾ ಬೆಳದ ಮರವು ನೀರಿಲ್ಲದೇ ಸತ್ತು ಹೋಯಿತೆಂಬದು ಯಂದಿಗೂ ಯಿಲ್ಲ—ಪ್ರೊಬ್ಬಿಬ್ಬನಖಿಲ್‌ಗಳನ್ನ (ಅಂದರೆ ಖರ್ಜೂರದ ಗಿಡದ ವ್ಯಾಸಾಯಗಾರರು) ಸೊಸಿಗಳಸಂಗಡ ಕರೆಯಿಸಿ ಮೇಲೆ ಹೇಳಿದ ಕ್ರಮವನ್ನ ನಡಿಸಬೇಕು, ಅವರು ಈ ಗಿಡಗಳ ವಿಷಯದಲ್ಲಿ ಯಾವ ಕ್ರಮ ನಡಿಸಬೇಕೋ ಅದನ್ನ ಯಿಂಡ್ಯ ಜನಗಳಿಗೆ ಯರಡು ಮೂರು ವರುಷಗಳೊಳಗಾಗಿ ಕಲಿಸುತ್ತಾರೆ. ಸುಮಾರು ಐದು ವರುಷದೊಳಗಾಗಿ 20,000 ಈಜಿಪ್ಟಿನ ಗಿಡಗಳನ್ನ ಮೇಲೆ ಹೇಳಿದ ಮೇರಿಗೆ ತಯಾರ್ಮಾಡಿದಲ್ಲಿ (ಈಜಿಪ್ಟ ದೇಶದ ಲೆಖ್ಖಾಚಾರದ ಮೇರಿಗೆ) ಮೊಬಲಗು 10,000£ಗಳು ಹುಟ್ಟುವದೇ ಆಗುವದು. ಈ 20,000 ಗಿಡಗಳಿಗೆ ಲಾಗವಾತು ದರ ಗಿಡಕ್ಕೆ ಹೊಂದು ಷಿಲಿಂಗ್ (ಅರ್ಧ ರೂಪಾಯಿ) ಮೇರಿಗೆ 1000£ಗಳು ಆಗುತ್ತದೆ. ಅವುಗಳ ಉತ್ಪತ್ತಿಯು ತೇದಾದು 1000 £ಗಳಾಗುತ್ತವೆ; ಸದರೀ (20,000) ಗಿಡಗಳನ್ನ ಯಿಂಡ್ಯಾ ದೇಶಕ್ಕೆ ತಂದು ನಾಟಲಿಕ್ಕೆ ಯಲ್ಲಾಶೇರಿ 3000£ಗಳು ಖರ್ಚು ತಗಲುತ್ತೆ. 200 ಎಕರೆಯುಳ್ಳ ಬಂಜರ್ ಬೀಳು ಭೂಮಿಯಲ್ಲಿ ಮೇಲ್ಕಂಡ 20,000 ಗಿಡಗಳನ್ನ ಹಾಕಬಹುದು, ಯಿಂತಾ ಭೂಮಿಯನ್ನ ಸ್ವಲ್ಪಕ್ರಯಕ್ಕೆ ಪಡೆಯಬಹುದು, ಗಿಡಗಳ ಫಲಕ್ಕೆ ಬರಲು 4—5 ವರುಷಗಳಾಗುವ ಸಂಗತಿಯನ್ನೂ ವ ಅವುಗಳಿಗಾಗಿ ಹಾಕಲ್ಪಡುವ ಬಂಡವಾಳದ ಬಡ್ಡಿಯನ್ನೂ ಆಲೋಚಿಸಿ ನೋಡಲಾಗಿ ಮೊದಲ್ ಫಳಿ ಬರುವಾಗ ಪ್ರಾಯಶಃ ಮೊಬಲಗು 6000£ ವರಿವಿಗೆ ಹೊಟ್ಟು ಖರ್ಚು ತಗಲುವದು, ಹೊಂದುವೇಳೆ ಅರವಾಸಿ ಗಿಡಗಳು ಸತ್ತು ಹೋಗುತ್ತವೆಂತಲಾಗಲಿ ಅಥವಾ ಫಲಬಿಡದೆ ಗೊಡ್ಡು ಗಿಡಗಳಾಗುತ್ತವೆಂತಲಾಗಲಿ ಹೇಳಿದಾಗ್ಯೂ ಬಾಕೀ ಉಳಿದ 10,000 ಗಿಡಗಳಲ್ಲಿ ಅರ್ಧಫಲದಿಂದಲೇ ಮೊದಲನೇ ವರುಷದ ಉತ್ಪತ್ತಿ 5000£ಗಳು ಹುಟ್ಟುವದು. ಖರ್ಜೂರದ ಗಿಡದಲ್ಲಿ ಮೊದಲು ಮೊದಲು ಫಸಲು ಹೆಚ್ಚಾಗುವದಿಲ್ಲ, ಮೊದಲನೇ ವರುಷದ ಫಲ ಬಿಡುವಾಗ ಕೆಲವು ಗಿಡಗಳಲ್ಲಿ ಹೊಂದು ಗೊನೆ ಕೆಲವು ಗಿಡಗಳಲ್ಲಿ ಯರಡು ಗೊನೆಗಳು ಈ ಮೇರಿಗೆ ಬಿಡುತ್ತವೆ. ಗಿಡಗಳಿಗೆ 15 ವರುಷಗಳು ಆಗುವ ವರಿವಿಗೂ ಗೊನೆಗಳು ಹೆಚ್ಚೆಚ್ಚಾಗಿ ಬಿಡುತಲಿರುತವೆ, ಅಂದರೆ 10ರ ಲಾಗಾಯತು 12 ಗೊನೆಗಳ ವರಿವಿಗೂ ಆಗುತ್ತವೆ.'' ಚನ್ನಾಗಿ ಕಾಪಾಡಿದರೆ ಹೀಗೆಯೇ ಹೊಂದುಗಿಡವು 100 ವರುಷಗಳ ವರಿವಿಗೂ ಅಥವಾ ಯಿನ್ನೂ ಹೆಚ್ಚಾದ ಕಾಲದ ಮಟ್ಟಿಗೂ ಪ್ರತಿ ವರುಷವೂ ಗೊನೆಗಳನ್ನ ಬಿಡುತ್ತಿರುವದೆಂದು ಸಹಾ ಮೆ॥ ಬಿರ್ಡ್‌ಕಾರ್ಡಿಯವರು ಹೇಳಿರಬಹುದು.

20. ಇಂಡ್ಯಾ ದೇಶದೊಳಗೆ ಪ್ರಾಯಶಃ ಖರ್ಜೂರದ ಬೇಸಾಯವನ್ನ ಯಾರೂ ಯಿಷ್ಟು ಭಾರೀಯಾಗಿ ಮಾಡಲಿಕ್ಕೆ ಯತ್ನಿಸಲಾರರು. ರಾಜಪುಟಾನಾ ದೇಶದ ಕೆಲವು ಅರಸುಗಳೇ ಆಗಲಿ, ಹೈದರಾಬಾದ್ ನೈಜಾಮರೇ ಆಗಲಿ ಸ್ವಲ್ಪಮಟ್ಟಿಗೆ ಅಜಮಾಯಿಷೀ ತರೀಕ ಬೇಸಾಯ ನಡಿಸಲಿಕ್ಕೆ ಮನಸ್ಸು ಮಾಡುವರು ಅಸಂಭಾವ್ಯವೇನು ಅಲ್ಲಾ; ಸೊಸಿಗಳೊಂದಿಗೆ ಪ್ರೊಬ್ಬಿಬ್ಬ ಈಜಿಪ್ಟ ಜನರನ್ನ ಈಜಿಪ್ಟನಲ್ಲಿ ಯಾವರೀತಿ ನಡಿಸುತ್ತಾರೋ ಆ ಮೇರಿಗೆ ಗಿಡಗಳ ಬೇಸಾಯವನ್ನೂ ಮಾಡಿಸಬಹುದು, ಸರ್ ಆರ್ ಟೆಂಪಲ್ ಯವರು ಬರೆದ "ಹೈದರಾಬಾದಜರ್ನಲ್'' ಯಂಬ ಬಖೈರಿನಲ್ಲಿ ಹೇಳುತ್ತಾರೇನಂದರೆ—"ಮಂಜ್ಹುರಾ ನದಿಯ ಕೊರಕಲಿನ ಕೆಳಭಾಗಕ್ಕೂ ಮತ್ತು ಮಂಜ್ಹುರಾ ಭೀಮಾ, ಕೃಷ್ಣ ಈ ನದಿಗಳಿಗೂ ಮಧ್ಯದಲ್ಲಿ ನೈಜಾಮರವರ ದರ್ಖದೇಶದ ಮುಖ್ಯವಾದ ಪ್ರದೇಶಗಳಿರುತ್ತವೆ—ಈ ಪ್ರದೇಶವು ನಾನಾರೀತಿಯಾದ ಸೀಮೆಗಳೂ ಬಗೆಬಗೆಯಾದ ಭೂಮಿಗಳೂ, ಮತ್ತು ಬೇರೆಬೇರೆ ಹವಾ ವುಳ್ಳದ್ದಾಗಿಯಿದೆ. ಅಂದರೆ ದಿಟ್ಟಗುಟ್ಟಗಳು ತುಂಬಿವೆ ಅಥವಾ ಭೂಮಿ ಕೆಲವು ಕಡೆ ತಗ್ಗಾಗಿಯೂ ಕೆಲವು ಕಡೆ ದಿಟ್ಟೆಯಾಗಿಯೂ ಯಿರುತ್ತದೆ, ಇದರ ಪೂರ್ವಭಾಗದಲ್ಲಿ ಪೂರ್ವಿಕ ರಾಜರುಗಳಿಂದ ಕಲ್ಪಿಸಲ್ಪಟ್ಟ ಸರೋವರಗಳು ಅಂದರೆ ಕೆರೆಗಳು ಸಾಲಾಗಿರುತ್ತವೆ. ಕೆರೆಯ ನೀರಾರಂಭದ ವಿಷಯದಲ್ಲಾದರೋ ಇಂಡ್ಯಾ ದೇಶ

ದೊಳಗೆಲ್ಲಾ ಯಿದು ಕೇವಲ ರಮಣೀಯ್ಯವಾದ ಪ್ರದೇಶವು, ಹಿಂದೂಸ್ತಾನಿನಲ್ಲೆಲ್ಲಾ ಬಹಳ ದೊಡ್ಡದಾದಂತಾ ಪಖಾಲ್ ಯಂಬ ಕೆರೆಯು
ಈ ಪ್ರದೇಶದಲ್ಲಿರುತ್ತದೆ" ಸದರೀಯವರು ಯಿನ್ನೂ ಹೇಳುತ್ತಾರೇನಂದರೆ—"ಭೂಲಕ್ಷಣಶಾಸ್ತ್ರ ರೀತ್ಯ ಹೇಳುವಲ್ಲಿ ಉತ್ತರ ಪಶ್ಚಿಮ ಈ
ಪ್ರಾಂತ್ಯ ಕರೇ ಛಾಯದ ನೊರಜು ಮತ್ತು ಘಟ್ಟ ರೇಗಡ ಭೂಮಿ ವಿಶೇಷವಾಗಿ ಯಿಧೆ. ಮಿಕ್ಕ ಕಡೆ ಅಂದರೆ ಆಗ್ನೇಯ ಪ್ರಾಂತದಲ್ಲಿ ಸ್ವಲ್ಪ
ಕೆಂಪು ಬಣ್ಣದ ಬಿಂಗಚ್ಚಿ ಗಿರೋಲ್ ಕಲ್ಲಿನ ಭೂಮಿಯೂ ವ ಹುಣಿಮಣ್ಣಿನ ಭೂಮಿ ಸಹಾ ಯಿರುತ್ತದೆ. ಈ ಭೂಲಕ್ಷಣ ಭೇದಗಳ ದೆಸೇ
ಯಿಂದ ಕೃಷಿಯಲ್ಲಿಯು ಮತ್ತು ಫಳೆಯಲ್ಲಿಯೂ ಪ್ರಬಲವಾದ ವೆತ್ಯಾಸಗಳು ಉಂಟಾಗುತ್ತದೆ. ಹ್ಯಾಗೆಂದರೆ ಕೃಷ್ಣರೇಗಡೆ ಭೂಮಿಯಲ್ಲಿ
ಹತ್ತಿ, ಗೋಧಿ ಫಳೆಗಳಾಗುತ್ತವೆ—ಕೆಬ್ಬೇ ಭೂಮಿಯಲ್ಲಿ ಸಂಪೂರ್ಣವಾಗಿ ಕೆರೆಯ ನೀರಾವರಿ ಆಸರಾದಿಂದಲೇ ಕಾರ್ತೀಕ ವೈಶಾಖಿ ಭತ್ತ
ದ ಫಳೆಯಾಗುತ್ತದೆ. ಆದ್ದರಿಂದಲೇ ತಟಾಕಗಳಿರುವ ಈ ರಾಜ್ಯದಲ್ಲಿ ಕೂಡ ಕಟ್ಟಲ್ಪಟ್ಟ ಕೆರೆಗಳಿರುವ ಡಿಸ್ಟ್ರಿಕ್ಟುಗಳೊಳಗಣ ಮೆಥು
ಭೂಮಿಯೇ ಸರ್ವೋತ್ಕೃಷ್ಟವಾದುದಾಗಿ "ಯಿದೆ" ಮೇಲೆಕಂಡ ವಿವರಣೇ ಮೇರಿಗೆ ಈಜಿಪ್ಟ್ ದೇಶದ ಖರ್ಜೂರದ ಗಿಡಗಳ ವ್ಯವಸಾಯ
ವನ್ನ ವಿಸ್ತಾರವಾಗಿ ಚನ್ನಾಗಿ ಅಭಿವೃದ್ಧಿಯಾಗುವಂತೆ ನಡಿಸಲಿಕ್ಕೆ ನೈಜಾಮರವರ ರಾಜ್ಯವು ಸ್ವಾಭಾವಿಕವಾಗಿಯೇ ಮಾಡಿ ಯಿಟ್ಟಂತೆ
ತೋರುತ್ತದೆ. ಗಿಡಗಳು ಬೇರುಬಿಟ್ಟುಕೊಂಡ ತರುವಾಯ ಕೆರೆಯ ನೀರನ್ನ ಹೀರುವಣದಿಂದ ಭೂಮಿಯೊಳಗೆ ತಂಪು ಉಂಟಾಗಿ ಗಿಡಗ
ಳು ಸೊಂಪಾಗಿರುತ್ತವೆ; ಈ ಸೊಸಿಗಿಡಗಳ ಮಧ್ಯದಲ್ಲಿ ಹತ್ತಿ ಗೋಧಿಯನ್ನ ಸಹ ಫಳೆಯಬಹುದು. ಗಿಡಗಳು ಬಹಳ ದೊಡ್ಡದಾದನಂತ
ರ, ಟ್ಯೂನಿಸ್ ರಾಜ್ಯದಲ್ಲಿ ಫಳದಂತೆ, ಅವುಗಳ ನೆರಳಿನಲ್ಲಿ ಕಿತ್ತಳೆ, ಸಕ್ಕರಿಲಿಂಬೆ, ಅಂಜೂರ ವಗೈರೇ ಗಿಡಗಳನ್ನ ಫಳೆಸಬಹುದು, ನೈಜಾಮ
ರ ರಾಜ್ಯವನ್ನ ನಾನು ನೋಡಿರುವದರಲ್ಲಿ, ನೀರಿಗೆ ಅನುಕೂಲವಾಗಿರುವ ಹಸನು ಭೂಮಿಯೊಳಗೆ ಯೂರೋಪಿಯನ್ ದೇಶದ ಅನೇಕ ಬಗೆ
ಫಲವೃಕ್ಷಗಳನ್ನ ಚನ್ನಾಗಿ ಫಳೆಯಬಹುದು. ಖರ್ಜೂರದ ಗಿಡಗಳ ವಿಷಯದಲ್ಲಾದರೋ ಈಜಿಪ್ಟ್ ರಾಜ್ಯದಲ್ಲಿಯ ಮಿಟ್ಟೀ ಭೂಮಿಯಲ್ಲಿ
ಫಳೆಯುವಂತಾ ವ ತಗ್ಗು ಭೂಮಿಯಲ್ಲಿ ಫಳೆಯುವಂತಾ ಗಿಡಗಳು ಸಹಾ ಫಳೆಯಬಹುದಲ್ಲದೆ ಕಾಲಾನುಕಾಲದಲ್ಲಿ ದಖನ್ ರಾಜ್ಯದ ಜನ
ಗಳು ಕೆಲವು ತಿಂಗಳ ಮಟ್ಟಿಗೂ ಖರ್ಜೂರದಿಂದಲೇ ಜೀವಿಸಬಹುದು.

21. ಖರ್ಜೂರ ಗಿಡಗಳನ್ನ ಕುರಿತು ನಾನು ಪರಿಶೋಧನೆ ಮಾಡಿದ್ದರಲ್ಲಿ ಖರ್ಜೂರದ ಗಿಡವು ಇತರ ಅನೇಕ ಗಿಡ ಜಾತಿಗಳಿಗೆ
ವಿರುದ್ಧವಾಗಿ ಅಂದರೆ, ಪ್ರೋಮ ಸ್ಥಳಕ್ಕೇನೇ ನಿಯಮಿತವಾದ ಮತ್ತು ಬದಲಾವಣೆಗೆ ಸಾಧ್ಯವಿಲ್ಲದಂತಾ ತರುಜಾತಿ ಯಂಬದಾಗಿ ಪ್ರಸ್ತಕದಲ್ಲಿ
ಬರೆಯಲ್ಪಟ್ಟಂತೆಯೂ, ಅದೇ ಮೇರಿಗೆ ಜನಗಳು ನಂಬಿ ಇದ್ದಂತಾ ಪ್ರಬಲವಾದ ತಪ್ಪು ಅಭಿಪ್ರಾಯವನ್ನ ಘರ್ಷಣೆಯಿಂದ ನಿವಾರಣೆ
ಮಾಡಲೆತ್ನಿಸಿದೆನು, ನಿಜಸ್ಥಿತಿಗಳಿಂದ ವ್ಯಕ್ತಪಡುವದೇನಂದರೆ ಈಜಿಪ್ಟ್ ವ ಇತರ ಸ್ಥಳಗಳಲ್ಲಿ ಕೆಲವು ಪ್ರದೇಶಗಳೊಳಗೆ ಮಾತ್ರ ಕಾಲಕ್ರ
ಮೇಣ ಖರ್ಜೂರದ ಗಿಡವು ತನಗೆ ಪರಿವೇಷ್ಟವಾದ ಸಂದರ್ಭಗಳಿಗೆ ಹೊಂದಿ ಹೋಗಿರುತ್ತದೆ. ಅರಣ್ಯದ ಹವಾದಲ್ಲಿ ಸೊಂಪಾಗಿ ಫಳೆ
ಯುವಂತಾ ಗಿಡವು ನದೀ ನೀರು ಉಕ್ಕಿ ತಿಂಗಳಗಟ್ಲೆ ನೀರು ನಿಲ್ಲುವ ಭೂಮಿಯಲ್ಲಿ ಸಹಾ ಫಳೆಯುವದಕ್ಕೆ ವಗ್ಗಿ ಇರುತ್ತದೆ, ಸಮುದ್ರದ
ಆಸ್‌ಪಾಸ್‌ನಲ್ಲಿಯೂ ಚವಳು ಭೂಮಿ ಮೊದಲಾದವುಗಳಲ್ಲಿಯೂ ಕೂಡ ಆಗುತ್ತದೆ, ಕೆಲವು ಸ್ಥಳಗಳಲ್ಲಿ ಅತ್ಯುತ್ತಮವಾದ ಖರ್ಜೂರವೂ
ಇನ್ನೂ ಕೆಲವು ಕಡೆ ಮಧ್ಯಮ ತರದ ಖರ್ಜೂರವಾಗುತ್ತದೆ ಯೇವಂಚ ಇದು ಫಳೆಯುವ ಎಲ್ಲ ಕಡೆಯಲ್ಲೂ ಜನಗಳಿಗೂ ಅವರ ದನಗ
ಳಿಗೂ ಸಹ ಜೀವನಾಧಾರವಾಗಿ ಇಧೆ. ಖರ್ಜೂರದ ಗಿಡದಂತೆ ಎಲ್ಲಾ ಸಂದರ್ಭಗಳಿಗೂ ವಗ್ಗುವಂತಾ ಮತ್ಯಾವ ಗಿಡವಿದ್ದೀತೆಂದು ನಾವು
ದೂರ ಹುಡಕಬೇಕಾದವಶ್ಯಕವೇ ಇಲ್ಲ. ಭತ್ತದ ಫಳೆಯೇ ಖಂಡಿತವಾಗಿ ಉಷ್ಣ ಹವಾದಲ್ಲಿ ಫಳೆಯತಕ್ಕದ್ದಾದದರಿಂದ ಬರಮಾ, ಸಿಲೋನ್,
ದಕ್ಷಿಣಹಿಂದುಸ್ತಾನ ವ ಬಂಗಾಳ ಈ ದೇಶಗಳಲ್ಲೇ ವಿಸ್ತಾರವಾಗಿ ಫಳೆ ಆಗುತ್ತದೆ, ಆದಾಗ್ಯೂ ಭತ್ತದ ನೂರಾರು ಬಗೆಗಳ ಪೈಕಿ ಕೆಲ
ವು ಬಗೆ ಭತ್ತಗಳು ಉತ್ತರ ಹಿಂದುಸ್ತಾನಿನ ಹವಾಕ್ಕೆ ವಗ್ಗಿ ಪೆಷಾವರ ವರಿವಿಗೂ, ವ್ಯಾಪಿಸಿ ಹಿಮಾಲಯಪರ್ವತಗಳ ಕೊರಕಲುಗಳು
ಆಫ್‌ಗಾನ್‌ಸ್ತಾನ್, ಇಟಲಿ, ಅಮರಿಕಾ ಮುಂತಾದ ಖಂಡಗಳ ಹವಾಗಳಿಗೆ ಸಹಾ ವಗ್ಗಿ ಇರುತ್ತದೆ, ಖರ್ಜೂರದ ಗಿಡದಲ್ಲಿಯೂ ನೂರಾರು
ಬಗೆಗಳು ಇವೆ, ಇದ್ದಾಗ್ಯೂ ಕೆಲವು ಬಗೆ ಗಿಡಗಳು ಉಷ್ಣ ಹವಾಕ್ಕೂ ಕೆಲವು ತಂಪು ಹವಾಕ್ಕೂ, ಇನ್ನು ಕೆಲವು ಮರಳು ಭೂಮಿ,
ಜೇಡಿಭೂಮಿ, ಯಾ ಚವಳು ಭೂಮಿ ಇತ್ಯಾದಿಗಳಿಗೆ ವಗ್ಗಿ ಇರುತ್ತವೆ.

22. ಖರ್ಜೂರದ ಫಳೆಯು ಈಜಿಪ್ಟಿನಲ್ಲಿ ಸೆಪ್ಟಂಬರ್ ತಿಂಗಳೊಳಗೆ ಪಕ್ವಕ್ಕೆ ಬರುತ್ತದೆ. ಈಜಿಪ್ಟ್ ದೇಶದ ಬಾಪತು ಕೆಲವು
ಒಳ್ಳೇ ಜಾತಿಗಳ ಬೀಜವನ್ನ ತರಿಸುವದು ಯುಕ್ತವೆಂದು ಇಂಡಿಯಾ ಗವರ್ನಮೆಂಟಿನವರು ಎಣಿಸುವ ಪಕ್ಷಕ್ಕೆ ಕರ್ನಲ್ ಸ್ಕಾಟ್ ಮಾನ್
ಕ್ರೀಫ್ ಯವರು ಬರೆಯಲ್ಪಟ್ಟ ತಪಶೀಲುಗಳನ್ನೂ ತಿಳಿಸುತ್ತೇನೇನಂದರೆ—"ಇಂಡ್ಯ ದೇಶಕ್ಕೆ ಬೀಜಗಳನ್ನ ಹೇರಳವಾಗಿ ಕಳುಹಿಸಬೇಕಾದ
ರೆ, ಗವರ್ನಮೆಂಟ್ ಮಾರ್ಫತ್ತು ಕೆಲಸ ನಡಿಸತಕ್ಕದ್ದು ಬಹಳ ಉತ್ತಮವಾದ್ದೆಂದು ಎಣಿಸುತ್ತೇನೆ. ಸರ್ ಎಲಿವಿನ್ ಬೇರಿಂಗ್ ಯವರಿಗೆ
ಸರಕಾರಿಯಾಗಿ ಕೇಳಿಕೊಂಡಲ್ಲಿ ಅವರು ಈ ವಿಷಯವನ್ನ (ಪೂರ್ವ ಬೊಂಬಾಯಿ ರೆವಿನ್ಯೂ ಸರ್ವೇಯಲ್ಲಿ ಯಿದ್ದು) ಈ ಸ್ಟೇಟ್ ರಾಜ್ಯಕೆ
ಕಮ್ಮಿಷನ್ನರಾಗಿರುವ ಮೆ|| ಜೇ. ಬಿ. ಗಿಬ್‌ಸನ್‌ಯವರು ವ ಡೈರಾಸಾನಿಹೆ ಕಂಟ್ರೋಲರ ಮೆ|| ಹ್ಯಾಮಿಲ್ಟನ್ ಲ್ಯಾಂಗ್ ಸಿ. ಎಂ. ಜಿ.
ಯಿವರುಗಳಿಗೆ ಒಪ್ಪಿಸುವರು—ಯಿವರಿಬ್ಬರಲ್ಲಿ ಯಾರೇ ಆಗಲಿ, ಖರ್ಜೂರದ ಬೀಜ ಯೆಷ್ಟು ಬೇಕಾದಾಗ್ಯೂ ವ್ಯೊಧಗಿಸಿಕೊಡಲಿಕ್ಕೆ
ಸಮರ್ಥರಾಗಿ ಯಿಧಾರೆ. ಯಿದಕ್ಕಾಗಿ ಜುಜವೀಖರ್ಚು ತಗಲುವದು ಅಥವಾ ಪ್ರಸಿದ್ಧರಾದ ವ ಘನವನ್ನು ಪಡೆದಿರುವ ಥಕ್ಸುಗಿ ವ್ಯಾಪಾರಿ
ಗಳಾಗಿ ಅಲೆಗ್ಜಾಂಡ್ರಿಯ ಸ್ಥಳದಲ್ಲಿರುವ ಮೆಸ್ಸಿಯರ್ಸ್ ಕಾರವರ್ ಅಂಡ್ ಕಂಪೆನಿ ಯಿಂತಾ ಭಾರೀ ಹೌಸಿನ ಮಾರ್ಫತ್ತು ಇಂಡ್ಯ ಗವರ್ನ
ಮೆಂಟಿನವರೇ ತರಿಸಿಕೊಡಲೂ ಬಹುದು."

23. ಅಯೋಧ್ಯೆಯ ಖರ್ಜೂರದ ಗಿಡಗಳ ಶಿವಾಯಿ ಇಂಡ್ಯ ದೇಶದೊಳಗೆ ಫಲಕೊಡುವ ಖರ್ಜೂರದ ಗಿಡಗಳು ಅನೇಕ ಸ್ಥಳಗಳಲ್ಲಿ ಒಂಟಿಯಾಗಿಯೂ ಎರಡೆರಡಾಗಿಯೂ ಈ ಮೇರಿಗೆ ಇರುತ್ತವೆ. ಇವು ಪ್ರಥಮತಃ ಮಕ್ಕಾದಿಂದಲೂ ವ ಅರಬ್ಬಿಯ ದೇಶದ ಇತರ ಸ್ಥಳಗಳಿಂದ ತರಲ್ಪಟ್ಟಂತಾವುಗಳಾಗಿ ವೆ. ಆದಾಗ್ಯೂ ಆ ಗಿಡಗಳು ಇಲ್ಲೊಂದು ಅಲ್ಲೊಂದು ಇರುವದ್ದರಿಂದ ಖರ್ಜೂರದ ಗಿಡವನ್ನ ಸರಿಯಾದ ಕ್ರಮದಿಂದ ಬೇಸಾಯ ನಡಿಸಲಿಕ್ಕೆ ತಕ್ಕಷ್ಟು ಪ್ರೋತ್ಸಾಹ ವುಂಟುಮಾಡಿರುವದಿಲ್ಲ ಈಜಿಪ್ಟ್ ವ ಪರಷಿಯಾದೇಶದ ಖರ್ಜೂರದ ಬೇಸಾಯಗಾರರು ಇದರ ಕ್ರಮ ಚನ್ನಾಗಿ ಬಲ್ಲವರಾದ್ದರಿಂದ ಅವರು ಇಂಡ್ಯ ದೇಶದ ನೇಟಿವ್ ಜನರಿಗೆ ಅದನ್ನ ಬೋಧೆಮಾಡಿ ಕೊಡಲು ಅತ್ಯಂತೋಪಯೋಗಿಗಳಾಗಿರುವರು ಇಂತಾ ವುಪಯೋಗವುಳ್ಳ ಗಿಡವನ್ನ ಇಂಡ್ಯ ದೇಶದೊಳಗೆ ವಿಸ್ತಾರವಾಗಿ ಪ್ರಚಾರಪಡಿಸುವಣವು ಸಾಧ್ಯವಾದದ್ದೆಂಬ ವಿಷಯದಲ್ಲೂ ಅದು ಜನಗಳಿಗೆ ಬಹಳ ವುಪಯೋಗಕರವಾದ್ದೆಂಬ ವಿಷಯದಲ್ಲೂ ಸಹಾ ನನಗೇನೂ ಸಂಶಯವಿರುವದಿಲ್ಲವು, ಇದು ಅಲ್ಲದೆ ಕ್ಯೂ ಎಂಬ ಸ್ಥಳದಲ್ಲಿರುವ ರಾಯಲ್ ಗಾರ್ಡನ್ ಎಂಬ ತೋಟದ ಡೈರೆಕ್ಟರಾದ ಮಿ|| ಥಿಸೆಲ್ಟನ್ ಡೈಯರ್ ಯವರು ಬರದಿರುವ 1886ನೇ ಇಸವಿ ನವಂಬರ್ 15ನೇ ತಾರೀಖಿನ ಲೆಟರಿನಲ್ಲಿ ಹೇಳುವದೇನಂದರೆ "ಈ ವ್ಯವಸಾಯವು ಪೂರಾ ಫಲಕಾರಿಯಾದದ್ದೆಂದು ನಾನು ಖಂಡಿತವಾಗಿ ತಿಳಿದಿರುತ್ತೇನೆ" ಏವಂಚ ನನಗೆ ತೋರುವದೇನಂದರೆ ಇಂಡ್ಯ ದೇಶದಲ್ಲಿ ಸಾಧಾರಣ ಕಾಲದಲ್ಲಿ ಖರ್ಜೂರದ ಕ್ರಯ ಹ್ಯಾಗಾದರೂ ಇರಲಿ ಕ್ಷಾಮ ಕಾಲದಲ್ಲಂತೂ ಖರ್ಜೂರದ ಬೆಳೆಯು ಖಂಡಿತವಾದ್ದೆಂಬುವದಕ್ಕೇನೂ ಸಂಶಯವಿಲ್ಲವು.

ಮೈಸೂರ ಗೆಜೆಟ್.

ನಂ. 48 ಸರ್ಕಾರದಿಂದ ಛಾಯಿಸಲ್ಪಟ್ಟದ್ದು. ಸನ್ 1887.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 3, ಸನ್ 1887.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ರಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ ವರ್ಕ್‌ಸ್ ಆಫೀಸರಗಳು, ಫಾರೆಸ್ಟು ಇನ್ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ರಿಟೆಂಡೆಂಟರು, ಫಾರೆಸ್ಟು ಆಫೀಸರಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟೀಸಗಳು.

3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 5ನೇ ನವಂಬರ 1887.

ಕ್ಯಾಂಪ್ ನಂ. 1723.—ಇದರಿಂದ ಸರ್ವರ ತಿಳುವಳಿಕೇ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಈದೇಶದ ಅನೇಕ ಪ್ರಾಂತ್ಯಗಳಲ್ಲಿ ಮಾರಿಕಾ ಉಪದ್ರವ ಯಿನ್ನೂ ವ್ಯಾಪಿಸಿ ಯಿರುತ್ತದೆ; ಆದದರಿಂದ ಸಧ್ಯದಲ್ಲೇ ನಡೆಯುವ ಸುಬ್ರಹ್ಮಣ್ಯದ ಯಾತ್ರೆಗೋಸ್ಕರ ಹಾಸನ ಡಿಸ್ಟ್ರಿಕ್ಟು ಮಂಜಿರಾಬಾದ್ ತಾಲ್ಲೂಕು ಬಿಸಲೇಗೆ ಹೋಗಲಿಚ್ಛೈಸುಳ್ಳವರು ಹಾಂಗೆ ಹೋಗುವದರಿಂದ ಸಂಭವಿಸಬಹುದಾದ ಅಪಾಯುಕ್ಕೆ ವಳಗಾಗ ಬಾರದೆಂಬದಾಗಿ ಇದರಿಂದ ಯಚ್ಚರಿಸಲ್ಪಟ್ಟಿರುತ್ತಾರೆ.

ತಾರೀಖು 15ನೇ ನವಂಬರ್ 1887.

ಕ್ಯಾಂಪ್ ನಂ. 1799.—ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸ್ ರೆವಿನ್ಯೂ ಶಿರಸ್ತೇಧಾರ್ ಮ|| ಯ. ಯಸ್. ರಾಘವಾಚಾರ್‍ರಿಗೆ, ರಾಯಬಹದೂರ್ ಯೆ. ಶ್ರೀನಿವಾಸಾಚಾರ್‍ರು ರಜಾದ ಮೇಲೆ ಯಿರುವ ಕಾಲದಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿ ಕಮ್ಮಿಷನ್ನಿನ ವೈಸ್ ಪ್ರೆಸಿಡೆಂಟರಾಗಿ ಆಕ್ಟಿಂಗ್ ತರೀಕ ಕೆಲಸನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂ. 1802.—1884ನೇ ಇಸವಿ ಡಿಶಂಬರ್ 6ನೇ ಹುಕ್ಕುಂ 5063—107ನೇ ನಂಬರ್ ಉಳ್ಳ ದಿವಾನರವರ ಪ್ರೊಸೀಡಿಂಗ್ಸಿನ ಷರತ್ತುಗಳನುಸರಿಸಿ ಕ್ಲೋಸ್‍ಪೇಟೆ ತಾಲ್ಲೂಕು ಅಮಲ್ದಾರ್ ಶ್ರೀನಿವಾಸರಾಯರಿಗೆ, 1887ನೇ ಇಸವಿ ನವಂಬರ್ 21ನೇ ಮರ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು 6 ದಿವಸಗಳ ಕ್ಯಾಜುಎಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 18ನೇ ನವಂಬರ್ 1887.

ಕ್ಯಾಂಪ್ ನಂ. 1836.—ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮ|| ಪಿ. ಎನ್. ಕೃಷ್ಣಮೂರ್ತಿಯವರು ಮಾಹೇ ಮಜಕೂರು 23ನೇ ಮರ್ಕುಂ ಲಾಗಾಯತು ಮೂರು ದಿವಸಗಳ ಕ್ಯಾಜುಎಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 1838.—ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಮ|| ಪಿ. ಎನ್. ಪೂರ್ಣಯ್ಯನವರಿಗೆ 1887ನೇ ಇಸವಿ ನವಂಬರ್ 21ನೇ ಮರ್ಕುಂ ಲಾಗಾಯಿತು ಎರಡು ದಿವಸಗಳ ಕ್ಯಾಜುಎಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 23ನೇ ನವಂಬರ್ 1887.

ನಂ. 145.—ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಅಮಲ್ದಾರ್ ಸೈದ್ ಅಹಮ್ಮದ್‍ಯವರಿಗೆ 1887ನೇ ಇಸವಿ ನವಂಬರ್ 1ನೇ ಮರ್ಕುಂ ಲಾಗಾಯತು 5 ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ನವಂಬರ್ 1887.

ಕ್ಯಾಂಪ್ ನಂಬರ್ 1867.—ಕೋಲಾರ ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮ|| ಜೆ. ಜಿ. ನಾರ್ತ್‍ಯವರಿಗೆ, ಅವರು ವುಪಯೋಗಿಸಿಕೊಂಡ ತಾರೀಖು ಲಾಗಾಯತು ಮೂರು ದಿವಸಗಳ ಕ್ಯಾಜುಎಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 11ನೇ ನವಂಬರ್ 1887.

ನಂ. .—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸವಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ವ ಕಾಯಂಗುತ್ತಾ ಗ್ರಾಮಗಳು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆಯಾವದೂ ಇಲ್ಲದೇ ಗ್ರಾಮಗಳು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್‍ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮನುಕೂಫ್ ಮಾಡಲ್ಪಡತಕ್ಕದ್ದು. ಪರಂತು, ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯಖ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರ್ ವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲೀಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್ ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಕೋಲಾರ	ವಕ್ಕಲೇರಿ	ಜೋಡೀ ಪಾಪನಹಳ್ಳಿ	ಶಿಲೇಮಾನ್ ಸಾಬರಮಗ ಫಕರುದ್ದೀನ್	15 0 0	14 12 9	12 0 0	41 6 6 ಮತ್ತು ಹರಾಜ್ ತಾರೀಖು ವರಿಗಿನ ಬಡ್ಡೀ.	1887ನೇ ಇಸವಿ ಡಿಶಂಬರ್ 19ರಲ್ಲು ತಾಲ್ಲೂಕು ಕಚೇರೀಯಲ್ಲಿ ಅಮಲ್‌ದಾರ್ರ ರೂಬರು.
			ಜೋಡೀ ಸಾಂಬಾಪುರ	ಕಾರಂಜಿ ರಾಮಾಚಾರಿ	20 15 3½	100 0 0	21 4 0	50 14 3 ಮತ್ತು ಹರಾಜ್ ತಾರೀಖು ವರಿಗಿನ ಬಡ್ಡೀ.	ಡಿಟೋ 20 ಡಿಟೋ.
	ಚಿಂತಾಮಣಿ	ಡಿಟೋ	ಕಾಯಂಗುತ್ತಾ ಬ್ರಾಹ್ಮಣಗದ್ದೆ	ನೀಲಕಂಠಶಾಸ್ತ್ರಿ	4 10 8	11 14 9	11 14 9	66 1 8 ಮತ್ತು ಹರಾಜ್ ತಾರೀಖು ವರಿಗಿನ ಬಡ್ಡೀ.	ಡಿಟೋ 19 ಡಿಟೋ.

ತಾರೀಖು 25ನೇ ನವಂಬರ್ 1887.

ನಂ. .—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ವ ಕಾಯಂಗುತ್ತಾ ಗ್ರಾಮಗಳು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಶುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಜಾಸ್ತಿ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡ: 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜಾ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ಶಾಮೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು, ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮವಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ರುಜಾ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಚಕ್ಕಬಂದಿ ಪಾಟೀಲ್ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೋಕು.	ಹೋಬಳಿ.	ಗ್ರಾಮ.	ಜೋಡೀ ವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಎ. ಸೆಂ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಮಾಲೂರು.	ಲಕ್ಕೂರು.	ಜೋಡೀ ಬಾಗೂರು ಸೊಂಣಹಳ್ಳಿ	ಪಿ. ವಾಸುದೇವಾಚಾರಿ ಮತ್ತು ಶಾಮಾಚಾರಿ.	151 48	80 0 0	65 10 8	684 13 4 ಮತ್ತು ಬಡ್ಡಿ.	ಸ 1888ನೇ ಇಸವಿ ಜನವರಿ ತಾರೀಖು 6ರಲ್ಲಿ ತಾಲ್ಲೋಕು ಕಚೇರಿಯಲ್ಲಿ (ಅಮಲ್ದಾರರು) ರವರಿಂದ.
					ಖಂ. ಕೊ. ಪ.				
	ಕೋಲಾರ.	ಹುತ್ತೂರು.	ಕಾಯುಂಗುತ್ತಾ ಚೊಕ್ಕಹಳ್ಳಿ	ಚಂದ್ರಶೇಖರಪ್ಪ ವಗೈರೆ	23 15 8¼	139 5 6	99 8 5	441 14 3 ಮತ್ತು ಬಡ್ಡಿ	

ಬಮೋಜೀಬ್ ಹುಕ್ಕುಂ,
ಆರ್. ವಿಜಯಿೀಂದ್ರರಾವ್,
ಚೀಫ್ ಸೆಕ್ರೆಟರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 3, ಸನ್ 1887.

☞ ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಮೈಸೂರು ಚೀಫ್ ಕೋರ್ಟಿನಲ್ಲಿ.

ಕ್ರಿಮಿನಲ್ ತರಫ್.

ಸನ್ 1887ನೇ ಇಸವಿ ನವಂಬರ್ 10ನೇ ತಾರೀಖಿನ 49ನೇ ನಂಬರ್ ರೂಲ್ ಆಫ್ ಪ್ರಾಕ್ಟಿಸ್.

ಪೋಲೀಸ್ ಸ್ಟೇಷನ್‌ನಲ್ಲಿ ಇಡುವ ಅಸಲ್ ಡೈರೀಗಳನ್ನು ಮತ್ತು ಇತರ ರೆಜಿಸ್ಟರುಗಳನ್ನು ಮೇಜಿಸ್ಟ್ರೇಟಗಳ ಮತ್ತು ಸೆಷನ್ ಕೋರ್ಟುಗಳ ಮುಂದೆ ಹಾಜರ್ಮಾಡುವ ಬಗ್ಗೆ ತೆಗದುಕೊಂಡು ಹೋಗೋಣದರಿಂದ ಪೋಲೀಸ್ ಕೆಲಸಗಳನ್ನು ನಡಿಸುವದರಲ್ಲಿ ಕೇವಲ ಅನಾನುಕೂಲ್ಯ ಉಂಟಾದೀತೆಂತ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ತಿಳಿಯಪಡಿಸುವದ್ದರಿಂದ, ಚೀಫ್ ಕೋರ್ಟಿನವರು ಆಜ್ಞಾಪಿಸುವದೇನಂದರೆ,—ನ್ಯಾಯ ವಿಮರ್ಶೆಬಗ್ಗೆ ಸದರೀ ಡೈರಿಗಳಲ್ಲಿ ಅಥವಾ ರೆಜಿಸ್ಟರುಗಳಲ್ಲಿ ಬರೆದಿರುವ ಅಂಶಗಳನ್ನು ನೋಡತಕ್ಕದ್ದು ಅವಶ್ಯವೆಂತ ಕ್ರಿಮಿನಲ್ ಕೋರ್ಟಿಗೆ ತೋರುವಾಗ್ಯೆ, ಇಂಡಿಯನ್ ಎವಿಡೆನ್ಸ್ ಆಕ್ಟಿನ ನಿಬಂಧನೆಗಳಿಗೆ ಬಳಪಟ್ಟಿರುವಂತೆ ಅಂಥಾ ಡೈರೀಗಳು ಅಥವಾ ರೆಜಿಸ್ಟರುಗಳ ಸೈನ್ ಮೊಹರಾದ ಕಾಪೀಯನ್ನಾಗಲೀ ಅಥವಾ ಅವುಗಳ ಎಕ್ಸ್ಟ್ರಾಕ್ಟ್ ಎಂಬ ಒಂದು ಭಾಗವನ್ನಾಗಲಿ, ಹಾಜರ್ಮಾಡಬೇಕೆಂದು, ಅಥವಾ ಹಾಜರ್ಮಾಡಿಸಬೇಕೆಂದು, ಇಂಥಾ ಕಾಗದಗಳನ್ನು ಸುಫರ್ದಿನಲ್ಲಿಟ್ಟುಕೊಂಡು ಇರುವ ಪೋಲೀಸ್ ಆಫೀಸರನಿಗೆ ಸಮನ್ ಕೊಡಬಹುದು. ಸದರೀ ಆಫೀಸರನಿಗೆ ಮೇಲ್ಪಟ್ಟ ಡೆಪ್ಯುಟಿ ಕಮ್ಮಿಷನರ್ ಅಥವಾ ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ ಮಾರೀಫತ್ತು ಅಂಥಾ ಸಮನನ್ನು ಕಳುಹಿಸಬೇಕು.

2. ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 172 ನೇ ಸೆಕ್ಷನ್ ಪ್ರಕಾರ ಸ್ಪೆಷಲ್ ಡೈರಿಯು ಅಸಲು ಬುಕ್ಕನ್ನೇ ಹಾಜರುಮಾಡುವದಕ್ಕೆ ಪೋಲೀಸಿನವರು ಬದ್ಧರಾಗಿರುತ್ತಾರೆ. ಇದನ್ನು ಹಾಜರ್ಮಾಡಿಸಿಕೊಳ್ಳದೇ ಇರುವದಕ್ಕೆ ಆಗುವದಿಲ್ಲ; ಆದರೆ ಇತರ ಪೋಲೀಸು ರಿಕಾರ್ಡುಗಳು ಬೇಕಾಗುವಾಗ್ಯೆ ಹಿಂದಿನ ಕಲಂನಲ್ಲಿ ಉಕ್ತವಾಗಿರುವ ನಡವಳಿಕೆಯನ್ನು ಆಚರಿಸಬೇಕು.

3. ಅಸಲುಗಳನ್ನ ತರಿಸದೇ ಇರಕೂಡದೆಂತಲೇ ಆಗಲೀ, ಅಥವಾ ಅವುಗಳನ್ನ ಯಾತಕ್ಕೋಸ್ಕರ ತರಿಸಬೇಕಾಯಿತೋ ಆ ಉದ್ದೇಶವು ಕಾಪಿಗಳನ್ನ ಅಥವಾ ಎಕ್‌ಸ್ಟ್ರಾಕ್ಟ್‌ಗಳನ್ನ ಹಾಜರ್ಮಾಡಿದ್ದರಿಂದ ಸಫಲವಾಗಿ ನೆರವೇರುವದಿಲ್ಲವೆಂತಲೇ ಆಗಲೀ ಸ್ಥಾಪನೆಯಾಗುವ ಸಂದರ್ಭಗಳಲ್ಲಿ ಮಾತ್ರವೇ ಅಸಲ್ ರೆಜಿಸ್ಟರು ಮುಂತಾದವುಗಳನ್ನ ತರಿಸಬೇಕು.

ಸಿವಿಲ್ ತರಫ್.

ಸರ್ 1887ನೇ ಇಸವಿ ನವಂಬರು 10ನೇ ತಾರೀಖಿನ 69ನೇ ನಂಬರ್ ರೂಲ್ ಆಫ್ ಪ್ರ್ಯಾಕ್ಟೀಸ್,

ಪೋಲೀಸ್ ಸ್ಟೇಷನ್‌ಗಳಲ್ಲಿ ಇಡುವ ಅಸಲ್ ಡೈರೀಗಳನ್ನು ಮತ್ತು ಇತರ ರೆಜಿಷ್ಟರುಗಳನ್ನು ಸಿವಿಲ್ ಕೋರ್ಟುಗಳ ಮುಂದೆ ಹಾಜರ್ಮಾಡುವಬಗ್ಗೆ ತೆಗದುಕೊಂಡು ಹೋಗೋಣದರಿಂದ ಪೋಲೀಸ್ ಕೆಲಸಗಳನ್ನ ನಡಿಸುವದರಲ್ಲಿ ಕೇವಲ ಅನಾನುಕೂಲ್ಯ ಉಂಟಾದೀತೆಂತ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರು ತಿಳಿಯಪಡಿಸಿದ್ದರಿಂದ, ಚೀಫ್ ಕೋರ್ಟಿನವರು ಅಜ್ಞಾಪಿಸುವದೇನಂದರೆ,—ನ್ಯಾಯ ವಿಮರ್ಶೆಬಗ್ಗೆ ಸದರೀ ಡೈರೀಗಳಲ್ಲಿ ಅಥವಾ ರೆಜಿಸ್ಟರುಗಳಲ್ಲಿ ಬರೆದಿರುವ ಅಂಶಗಳನ್ನ ನೋಡತಕ್ಕದ್ದು ಅವಶ್ಯವೆಂತ ಸಿವಿಲ್ ಕೋರ್ಟಿಗೆ ತೋರುವಾಗ್ಯೆ, ಇಂಡಿಯನ್ ಎವಿಡೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟಿರುವಂತೆ, ಅಂಥಾ ಡೈರೀಗಳ ಅಥವಾ ರೆಜಿಸ್ಟರುಗಳ ಸರ್ಟಿಫೈಡ್ ಕಾಪಿಯನ್ನಾಗಲೀ ಅಥವಾ ಅವುಗಳ ಎಕ್‌ಸ್ಟ್ರಾಕ್ಟ್ ಎಂಬ ವೊಂದು ಭಾಗವನ್ನಾಗಲೀ ಹಾಜರ್ಮಾಡಬೇಕೆಂದು, ಅಥವಾ ಹಾಜರ್ಮಾಡಿಸಬೇಕೆಂದು, ಇಂಥಾ ಕಾಗದಗಳನ್ನ ಸುಫರ್ದಿನಲ್ಲಿ ಇಟ್ಟುಕೊಂಡಿರುವ ಪೋಲೀಸ್ ಆಫೀಸರನಿಗೆ ಸಮನ್ ಕೊಡಬಹುದು. ಸದರೀ ಆಫೀಸರನಿಗೆ ಮೇಲ್ಪಟ್ಟ ಡೆಪ್ಯುಟಿ ಕಮಿಷನರ್ ಅಥವಾ ಪೋಲೀಸ್ ಅಸಿಸ್ಟೆಂಟ್ ಕಮಿಷನರ ಮಾರೀಫತ್ತು ಅಂಥಾ ಸಮನನ್ನ ಕಳುಹಿಸಬೇಕು.

2. ಅಸಲುಗಳನ್ನ ತರಿಸದೇ ಇರಕೂಡದೆಂತಲೇ ಆಗಲೀ ಅಥವಾ ಯಾತಕ್ಕೋಸ್ಕರ ಅವುಗಳನ್ನ ತರಿಸಬೇಕಾಯಿತೋ ಆ ಉದ್ದೇಶವು ಕಾಪಿಗಳನ್ನ ಅಥವಾ ಎಕ್‌ಸ್ಟ್ರಾಕ್ಟ್‌ಗಳನ್ನ ಹಾಜರ್ಮಾಡಿದ್ದರಿಂದ ಸಫಲವಾಗಿ ನೆರವೇರುವದಿಲ್ಲವೆಂತಲೇ ಆಗಲೀ ಸ್ಥಾಪನೆಯಾಗುವ ಸಂದರ್ಭಗಳಲ್ಲಿ ಮಾತ್ರವೇ ಅಸಲ್ ರೆಜಿಸ್ಟರ್ ಮುಂತಾದವುಗಳನ್ನ ತರಿಸಬೇಕು.

" ಕೋರ್ಟಿನ ಹುಕುಂ ಪ್ರಕಾರ "
ಎಲ್. ಅನಂತ ಸ್ವಾಮಿರಾವ್,
ರೆಜಿಸ್ಟ್ರಾರ್.

ಇನಾಂ ಇಲಾಖಾ.

ನಂ. 1. ತಾರೀಖು 19ನೇ ನವಂಬರು 1887.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಲೇಟ ದೊಡ್ಡೇರಿ (ಹಾಲಿಚಳ್ಳಕೆರೆ) ತಾಲ್ಲೂಕಿನಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು 136 ಫೈನಲ್‌ಟೈಟಿಲ್‌ಡೀಡ್ಸು ಯಾನೆ ಖಾಯಂ ಪಟ್ಟೇಗಳು ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ ಬಟವಾಡೇ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದುಕೊಳ್ಳುವ ಬಗ್ಗೆ ಸದರೀ ಇನಾಂದಾರರು ಐರ್ಜಿ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರು, ಅಂಥಾ ನೋಟೀಸ್‌ಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಯಿನಾಂಗಳ ಬಗ್ಯೆ ಸ್ನ 1881ನೇ ಇಸವಿ ಡಿಶಂಬರ್ 6ನೇ ತಾರೀಖಿನ 21ನೇ ನಂಬರು ಇಸ್ತಿಹಾರುನಾಮೇ ಪ್ರಕಾರ ಕೊಡಲ್ಪಟ್ಟ ಪಟ್ಟೇಗಳು ರದ್ದು ಮಾಡಲ್ಪಟ್ಟಿರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಡುತ್ತೆ.

ನಂ. 2. ತಾರೀಖು 23ನೇ ನವಂಬರ್ 1887ನೇ ಇಸವಿ.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಚಾಮರಾಜನಗರ ಮತ್ತು ಮೊಳಕಾಲ್ ಮುರು ತಾಲ್ಲೂಕುಗಳಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು 144 ಫೈನಲ್‌ಟೈಟಲ್‌ಡೀಡ್ಸು ಯಾನೆ ಖಾಯಂ ಪಟ್ಟೆಗಳು ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮ್ಮಿಷನರವರಗಳಿಗೆ ಬಟವಾಡೇ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕುಗಳ ಅಮಲ್ದಾರ್ರುಗಳಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದು ಕೊಳ್ಳುವ ಬಗ್ಯೆ ಸದರೀ ಯಿನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕುಗಳ ಅಮಲ್ದಾರ್ರುಗಳು ಅಂಥಾ ನೋಟೀಸುಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಇನಾಂಗಳ ಬಗ್ಯೆ ಮೊದಲೇ ಈ ಆಫಿಸಿನ 1881ನೇ ಇಸವಿ ಆಕ್ಟೋಬರು 28ನೇ ತಾರೀಖಿನ 17ನೇ ನಂಬರು ಮತ್ತು ಡಿಸಂಬರು 13ನೇ ತಾರೀಖಿನ 22ನೇ ನಂಬರು ಇಸ್ತಿಹಾರ್‌ನಾಮೆಗಳ ಪ್ರಕಾರ ಕೊಡಲ್ಪಟ್ಟ ಟೈಟಲ್‌ಡೀಡ್ಸುಗಳು ರದ್ದುಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಬೆಂಗಳೂರು ಪುಪ್ಪಾರಹಳ್ಳೀಲಿರುವ ತಿಪ್ಪರಾಜು ವಿಷಯದಲ್ಲಿ—

ಸ್ನ 1887ನೇ ಇಸವಿ ದಿವಾಳೀ ಕೇಸ್ ನಂಬರ್ 843.

ಹುಕ್ಕುಂ.

ಮೇಲ್ಕಂಡ ತಿಪ್ಪರಾಜನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿಯವರಾದ ಮೆ|| ಸಿ. ಕ್ರೆಸ್ ಸಾಹೇಬರವರ ರೂಬರೂ ಅರ್ಜೀದಾರನಾದ ತಿಪ್ಪರಾಜನ್ನ ಖುದ್ದಾಗಿಯೂ ಮತ್ತು ಸದರೀಯವನ ಲೇಣೇದಾರ್ರಾದ 3ನೇ ಸುಬ್ಬರಾಜುನಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, 1—2ನೇ ಯವರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ತಿಪ್ಪರಾಜು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1887ನೇ ಇಸವಿ ಅಕ್ಟೋಬರ್ 28ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗಿನಿಂದ ಬಡ್ಡಿ.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಬೆಂಗಳೂರುಬಳಿ ಚಿಕ್ಕಮಾವಳ್ಳೀಲಿರುವ ರಾಮಸ್ವಾಮಿಶೆಟ್ಟಿ	500—0—0 150—0—0	.. ..	ಡಿಕರೀ ಬಾಬತು ತಮಸೂಕು ಬಾಬತು	
2	ಕನಕನಪಾಳ್ಯದ ತಿಮ್ಮಯ್ಯ ..	10—0—0	..	ತಪಸೀಲ್ ಯಿಲ್ಲಾ	
3	ಬೆಂಗಳೂರುಬಳಿ ನೃಪ್ಪಾರಹಳ್ಳೀಲಿರುವ ಸುಬ್ಬರಾಜು	36—6—9	..	ಡಿಕರೀ ಬಾಬತು	
	ಜುಮ್ಲಾ	696—6—9			

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ತಾ|| ಕೋನಪ್ಪನ ಅಗ್ರಹಾರದಲ್ಲಿ ಇರುವ ಪಿಚ್ಚಗುಂಟ್ಲ ಮುನಿಯಲ್ಲಿಯ ವಿಷಯದಲ್ಲಿ—
ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರು ಮಿಸಲೇನಿಯಸ್ 766.

ಹುಕ್ಕುಂ.

ಅರ್ಜೀದಾರ ವಸಂತರಾಯಶೆಟ್ಟಿ ಮೃತಪಟ್ಟ ಸದರೀ ಹನುಮಂತಶೆಟ್ಟಿಗೆ ತಮ್ಮನಾಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಬಳ್ಳಾಪುರದ ಸ್ಥಳದ ವಸಂತರಾಯಶೆಟ್ಟಿಯು ಚಿಕ್ಕಬಳ್ಳಾಪುರದ ವಾಸಸ್ಥನಾಗಿ ಮೃತಪಟ್ಟ ಹನುಮಂತಶೆಟ್ಟಿಯು ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವಸಂತರಾಯಶೆಟ್ಟಿಯ ಅರ್ಜೀಯನ್ನು 1888ನೇ ಇಸವಿ ಜನವರಿ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಂತಶೆಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಡಿಶಂಬರ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 1123.

ಮೃತಪಟ್ಟ ವಿಟೋಬಾನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳಾದ ಪಾರ್ವತಾಬಾಯಿ, ಮೃತಪಟ್ಟ ಸದರೀ ವಿಟೋಬಾನಿಗೆ ಹೆಂಡತೀ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ದರ್ಜೀಪ್ಯಾಟೇ ಸ್ಥಳದ ಪಾರ್ವತಾಬಾಯಿಯು ದರ್ಜೀಪ್ಯಾಟೇ ವಾಸಸ್ಥನಾಗಿ ಮೃತಪಟ್ಟ ವಿಟೋಬಾನಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಪಾರ್ವತಾಬಾಯಿಯ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವಿಟೋಬಾನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಅರ್ಜೀ ನಂಬರ್ 1085.

ಮೃತಪಟ್ಟ ತ್ಯಾಮಗೊಂಡ್ಲದ ದಾಸಶೆಟ್ಟಿಯ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಜಯರಾಮಶೆಟ್ಟಿ ಮೃತಪಟ್ಟ ಸದರೀ ದಾಸಶೆಟ್ಟಿಗೆ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ನೆಲವಂಗಲದ ತಾಲ್ಲೂಕು ತ್ಯಾಮಗೊಂಡ್ಲ ಸ್ಥಳದ ಚಿಟ್ಟೂರು ದಾಸಶೆಟ್ಟಿಯು ತ್ಯಾಮಗೊಂಡ್ಲದ ವಾಸಸ್ಥನಾಗಿ ಮೃತಪಟ್ಟ ದಾಸಶೆಟ್ಟಿಯ ಜಿಂದಗೀ ಬಗ್ಯಾಗಿ ಬರ ತಕ್ಕ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಜಯರಾಮಶೆಟ್ಟಿಯ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 12ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾಸಶೆಟ್ಟಿಯ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಯಿದರಿಂದ ತಿಳಿಯಪಡಿಸಿ ಯಿಧೆ.

1887ನೇ ಇಸವಿ ಡಿಶಂಬರ್ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೇ ಕೊಡೋಣಾಗಿಧೆ.

ಸಿ. ಕ್ರೈಸ್,
ಸಬ್ ಜಡ್ಜಿ.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 576.

ಮೃತಪಟ್ಟ ಜಗನ್ನಾಥನಾಯಿಡೂ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವರದರಾಜುಲು ನಾಯಿಡುಯವರು ಮೃತಪಟ್ಟ ಸದರೀ ಜಗನ್ನಾಥನಾಯಡೂ ಯವರಿಗೆ ಯೆರಡನೇ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ದೇವರಾಜಮೊಹಲಾ ಸ್ಥಳದ ಸದರೀ ವರದರಾಜುಲುನಾಯಡೂ ಯವರು ಸದರೀ ವಾಸಸ್ಥನಾಗಿ ಮೃತ ಪಟ್ಟ ಜಗನ್ನಾಥನಾಯಿಡೂ ಯವರ ಜಿಂದಗೀ ಬಗ್ಯಾಗಿ ಬರತಕ್ಕ 3200 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವರದರಾಜುಲು ನಾಯಿಡೂಯವರ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೇಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಗನ್ನಾಥ ನಾಯಿಡೂ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಡಿಶಂಬರ್ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸೀ ನಮ್ಮ ದಸ್ತಖತ್ತೊಡನೇ ಕೊಡೋಣಾಗಿಧೆ.

1887ನೇ ಇಸವಿ ಅರ್ಜೀ ನಂಬರ್ 577.

ಮೃತಪಟ್ಟ ಮಹಂತದೇವವಡೇರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಈರಯ್ಯ 2ನೇ ಶಂಕರಯ್ಯ 3ನೇ ಮಹಂತದೇವರು ಮೈನರ್ ಗಾರ್ಡಿಯನ್ ಮತ್ತು ತಾಯಿ ಮಲ್ಲಮ್ಮ ಸಹ ಮೃತಪಟ್ಟ ಸದರೀ ಮಹಂತದೇವವಡೇರಿಗೆ ಮಕ್ಕಳು, ಹೆಂಡತೀ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಬಿುವಹಳ್ಳಿಗೆ ಸೇರಿದ ವೀರಪ್ಪವಡೇರ ಹುಂಡಿ ಸ್ಥಳದ ಮೇಲ್ಕಂಡ 1—2—3ನೇ ಅರ್ಜೀದಾರು ಸದರೀ ವಾಸಸ್ಥನಾಗಿ ಮೃತಪಟ್ಟ

ಮಹಂತದೇವರ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1—2—3ನೇ ಅರ್ಜೀದಾರ್ರು ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 30ರಲ್ಲು ಕೇಳಿಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಹಂತ ದೇಹವರ್ಡೀರ ಆಸ್ತಿಗೆಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

ಸ್ನ 1887ನೇ ಇಸವಿ ಡಿಶಂಬರ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶೀ ನಮ್ಮ ದಸ್ತಖತ್ತೊಡನೇ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯೊದ ಡಿಕ್ರೀ ದೇಣೇದಾರ ಯಳಂದೂರು ಕಸಪೇಯಲ್ಲಿರುವ ಶಿವಾಚಾರದ ವೀರಶಟ್ಟೀಮಗ ಆವಂಣಶಟ್ಟೀ ಯಂಬವನ ವಿಷಯದಲ್ಲಿ—

ಸ್ನ 1887ನೇ ಇಸವಿ ದಿವಾಳೀ ಕೇಸ್ ನಂಬರ್ 321.

ಹುಕ್ಕುಂ.

ಮೇಲ್ಕಂಡ ಆವಂಣಶಟ್ಟೀ ಯಂಬವನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಆವಂಣಶಟ್ಟೀ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣಾಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಯಜಮಾನ ಪುಟ್ಟಣ್ಣನ ತರಫ಼ ಅಡ್ವೊಕೇಟ್ ಮ॥ ಕಂಠೀರವಾಚಾರ್, 2ನೇ ನಾರಾಯಣಶಟ್ಟೀ ಖುದ್ದು ಹಾಜರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ,—3ನೇ ಗುರುಬಸವಶಟ್ಟಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ವೀರಶಟ್ಟೀ ಮಗ ಆವಂಣಶಟ್ಟೀ ಯಂಬವನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ, ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ನ 1887ನೇ ಇಸವಿ ನವಂಬರ 30ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್‌ನಿಶೀ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂಡ ಅವರುಗಳ ವಾಸಸ್ಥಳ.	ಮೊಬಲಗು.	ಚಾಲಾಗ ಬಡ್ಡಿ ಸಹ ಮೊಬಲಗು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ತಿರುಮಕೂಡ್ಲು ನರಸೀಪುರದ ತಾಲ್ಲೂಕು ನರಸೀಪುರದಲ್ಲಿರುವ ಯಜಮಾನ ಪುಟ್ಟಂಣ ..	72—1—6	..	ಡಿಕರೀ ಬಾಬತು.	

ದಿವಾಳೀಯಾದ ಡಿಕ್ರೀದೇಣೇದಾರ ಮೈಸೂರಿನಲ್ಲಿರುವ ಅನಂತರಾಮಯ್ಯನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರು 271.

ಹುಕ್ಕುಂ.

ಮೇಲ್ಕಂಡ ಅನಂತರಾಮಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಅನಂತರಾಮಯ್ಯನ ಪರವಾಗಿ ಅಡ್ವೊಕೇಟ್ ಮೆ|| ನರಸುಹ್ಮಾಚಾರ್ಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಆಳಶಿಂಗ್ರಾಚಾರಿ 9ನೇ ತಿಮ್ಮಯ್ಯ, 4ನೇ ಶಿದ್ಧರಾಮಯ್ಯ ಇವರು ಖುದ್ದು ಹಾಜರು; 3ನೇ ಸುಬ್ಬರಾವ್ 5ನೇ ಸುಬ್ಬಾಜೋಯಿಸ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—2ನೇ ಶ್ರೀನಿವಾಸಯ್ಯಂಗಾರ್ರು 6ನೇ ಸೈದ್ ಮುಹಮ್ಮದ್ 7ನೇ ವೆಂಕಟಸುಬ್ಬಶೆಟ್ಟಿ 8ನೇ ನಂಜುಂಡಶೆಟ್ಟಿ 10ನೇ ರಂಗರಾವು ನರಸುಹ್ಮಾಚಾರಿ 11ನೇ ಬಚ್ಚಣ್ಣ.

ಸಿವಿಲ್ ಪ್ರೋಸಿಡೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅನಂತರಾಮಯ್ಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸರ್ 1887ನೇ ಇಸವಿ ನವಂಬರ್ 30ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಬಾಕೀ ಬಿದ್ದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಮೈಸೂರು ಸಂಪತ್ತು ವೂರ ಬ್ಯಾಂಕ್ ಏಜಂಟ್ ಆಳಶಿಂಗ್ರಾಚಾರು ..	232—11—0	..	ಡಿಕರೀ ಬಾಬತು.	

ದಿವಾಳಿಯಾದ ಡಿಕ್ರೀ ದೇಣೇದಾರ ಶ್ರೀರಂಗಪಟ್ಟಣದ ತಾಲ್ಲೂಕು ರಾಂಪುರದಲ್ಲಿರುವ ತಿಪ್ಪೇಗೌಡನ ಹೆಂಡತೀ ಜೋರಮ್ಮನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 334.

ಹುಕ್ಕುಂ.

ಮೇಲ್ಕಂಡ ಜೋರಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರಳಾದ ಜೋರಮ್ಮನ ಪರವಾಗಿ ಅಡ್ವೊಕೇಟ್ ಮೆ|| ನರಸುಹ್ಮಯ್ಯಂಗಾರ್ರನ್ನೂ ಮತ್ತು ಸದರೀಯವಳ ಲೇಣೇದಾರ್ರಾದ 1ನೇ ಗಂಗಾಧರಜೋಯಿಸ 2ನೇ ಬಿಳಗಿರಿಜೋಯಿಸ ಇವರ ತರಫ಼್ ಅಡ್ವೊಕೇಟ್ ನರಸುಹ್ಮಾಚಾರ್ರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—3ನೇ ವೆಂಕಟರಮಣಜೋಯಿಸ,

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಜೋರಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳೀಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೇ

ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಡಿಶಂಬರ್ 7ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲದಗ.	ಬಡ್ಡಿ ಹಣ ಸಿಕ್ಕುವ ಬಗ್ಗೆ	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ
1	ಮೈಸೂರಿನಲ್ಲಿರುವ 1ನೇ ಗಂಗಾಧರಜೋಯಿಸ 2ನೇ ಬಿಳಗಿರಿಜೋಯಿಸ, 3ನೇ ವೆಂಕಟರಮಣ ಜೋಯಿಸ	76—0—6	..	ಡಿಕರೀ ಬಾಬತು.	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ನೋಟೀಸ್.

ತಾರೀಖು 9ನೇ ಡಿಶಂಬರ್ 1887.

ಅಲದೂರು ವಿವಾಹಮಂಗಲ ಪ್ರದ ಪರಸ್ಪರಸಹಾಯನಿಧಿ ಲಿಮಿಟೆಡ್ ಆಫೀಸಿನಿಂದ,—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕಂಪನೀಯನ್ನ ಸನ್ 1887ನೇ ಇಸವಿ ಡಿಶಂಬರ್ ತಾರೀಖು 30ನೇ ದಿವಸದಲ್ಲಿ ಮುಚ್ಚಿ ಬಿಡಲ್ಪಡುತ್ತೆ. ಈ ಕಂಪನೀ ಮೇಲೆ ಲೇಣೇ ದೇಣೇ ವಗೈರೇ ವ್ಯವಹರಣೇ ಇರತಕ್ಕವರು ಆ ತಾರೀಖಿನ ವಳಗಾಗಿ ಕೋರ್ಟಿನ ಮೂಲಕವೇ ಆಗಲಿ ಕಂಪನೀ ರೂಬರೂಪೇ ಆಗಲಿ ವ್ಯವಹರಿಸಿಕೊಳ್ಳಬೇಕು. ನಂತರ ವ್ಯವಹರಣೇ ಬಂದರೆ ಕಂಪನೀಯವರು ಜವಾಬ್ದಾರರಾಗುವದಿಲ್ಲ.

ನಾ|| ಸುಬ್ಬರಾವ್ ಮ್ಯಾನೇಜರ್. ನಂಜಪ್ಪಗೌಡ ಪ್ರಸಿಡೆಂಟ್.

ಗೈರವಿಲಾ ಆದ ಕರ್ರೆಸೀನೋಟಿನ ಬಲಭಾಗದ.

ನಂಬರ್.	ಸರ್ಕಲ್.	ಕ್ರಯ.	ಹಕ್ಕುದಾರ್—ಬೆಂಗಳೂರು ಚಿಕ್ಕಪೇಟೆಯಲ್ಲಿ
B. 96—33248	ಮದರಾಸ್.	ರೂ. 10	45ನೇ ನಂಬರ್ ಸ್ಟ್ಯಾರ್ಡಿನ್ ಹೋಂನಲ್ಲಿರುವ ಯಂ.
	ಡಿಟ್ಟೋ ಯಡಭಾಗ.		ಕೇಶವಯ್ಯ.
B. 87—17124	ಮದರಾಸ್.	ರೂ. 5	

Mysore Govt. Press, Bangalore.—1887.

ಮೈಸೂರ ಗೆಜೆಟ್.

ನಂ. 51 ಸರ್ಕಾರದಿಂದ ಪ್ರಕಾಯಿಷ್ ಆದ್ದು. ಸ್ನ 1887.

ಬೆಂಗಳೂರು, ಶನಿವಾರ, ಡಿಶಂಬರ ತಾ|| 24, ಸ್ನ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ-ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ-ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರ್ರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕ್‌ಸ್ ಆಫೀಸರ್‌ಗಳು, ಫಾರೆಸ್ಟು ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷ್ನ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡ್ಸು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ನ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ರಿಂಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ-ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ-ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 3ನೇ ಡಿಶಂಬರ 1887.

ಕ್ಯಾಂಪ್ ನಂ. 2019.—ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ದೇಶದ ತಮಾಂ ಪಬ್ಲಿಕ ಆಫೀಸ್‌ಗಳೂ ಕ್ರಿಸ್‌ಮಸ್ ರಜಾಕ್ಕೋಸ್ಕರ 1887ನೇ ಇಸವಿ ಡಿಶಂಬರ್ 22ನೇ ಗುರುವಾರದಾರಭ್ಯ 1888ನೇ ಇಸವಿ ಜನವರೀ 4ನೇ ಮುಕ್ಕಾಂ ಬುಧವಾರದ ಪರಿಯಂತ ಬರಖಾಸ್ತು ಮಾಡಲ್ಪಡತಕ್ಕದ್ದು.

ರಜಾ ಕಾಲದಲ್ಲಿ ಜರೂರಿಯಾತ್ ಕೆಲಸಗಳ ಚಲಾವಣೀ ಬಗ್ಯಾಗಿ ಆಯಾ ಇಲಾಖಾ ಮೊಖ್ತೇಸರರಿಂದ ತಕ್ಕ ಏರ್ಪಾಟು ಮಾಡಲ್ಪಡತಕ್ಕದ್ದು.

ಈ ಇಸ್ತಿಹಾರ್‌ನಾಮೆಯು ತಾಲ್ಲೂಕು ಶಿಬ್ಬಂದಿಗಾಗಲಿ ಜಮಾಬಂದೀ ಫೈಸಲಾತೀ ಕೆಲಸದಲ್ಲಿರುವವರಿಗಾಗಲಿ ಅನ್ವಯಿಸುವದಿಲ್ಲ.

ತಾರೀಖು 25ನೇ ನವಂಬರ 1887.

1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡೀಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಬಾಗಾಯತು ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಮಾನಂದವಾಡೀ ರಸ್ತೇಯಿಂದ ನಂಜಿನಗೂಡು ರಸ್ತೆಗೆ ಹೋಗುವ ವೈಸರಾಯಿ ಯವರ ರಸ್ತೆಯನ್ನು ವಿಸ್ತರಿಸುವ ಬಗ್ಗೆ ಬೇಕಾಗಿರುತ್ತೆ:—

ನಂಬರ.	ಜಮೀನು ಇರತಕ್ಕ ಪ್ರದೇಶ.	ಸ್ವಂತಗಾರರ ಹೆಸರು.	ಬೇಕಾಗಿರುವ ಸುಮಾರು ವಿಸ್ತೀರ್ಣ, ಚದರ ಗಜಗಳು.	ಯಿರತಕ್ಕ ಮರ ವ ಬಳ್ಳಿ ಮುಂತಾದವುಗಳ ಸಂಖ್ಯೇ ತಪಸೀಲ್.							ಚಕ್ಕು ಬಂದಿ.	ಷರಾ.
				ತೆಂಗು.	[illegible]	[illegible]	[illegible]	ಮಾವು.	[illegible]	ಇತರ ಜಾತಿ.		
1	ಕರೂಬಟ್ಟು ರಸ್ತೇಗೂ ಮತ್ತು ಷಹರಿನ ಚಿರಾಂಡಿ ದೊಡ್ಡ ಕಾಲವೆಗೂ ಮಧ್ಯದಲ್ಲಿನ ಪೂರ್ವಪಶ್ಚಿಮಭಾಗ; ಮುಖ್ಯ ತೋಟಕ್ಕೂ ಸರಕಾರದ ಓಣೀಗೂ ನಡುವೇ ಇರುವ ಉತ್ತರ ದಕ್ಷಿಣ ಭಾಗ. 181ನೇ ಸರ್ವೇ ನಂಬರ್ ಪೈಕಿ.	[illegible]	$2689\frac{1}{3}$	23	834	147	27	134	0	1	ಉತ್ತರಕ್ಕೆ-ಸ್ವಂತಗಾರರ ತೋಟದಭಾಗ, ದಕ್ಷಿಣಕ್ಕೆ ಸದರೀಯವರ ತೋಟದಭಾಗ ಮತ್ತು ತಮಾಂ ಇತರ ತೋಟಗಳಿಗೆ ಹೋಗುವ ಸರ್ಕಾರದ ಓಣೀ, ಪೂರ್ವಕ್ಕೆ ಷಹರಿನ ಚಿರಾಂಡಿ ದೊಡ್ಡ ಕಾಲವೆ, ಪಶ್ಚಿಮಕ್ಕೆ ಕರೂಬಟ್ಟು ರಸ್ತೆ.	ಸಸ್ಯಾದಿಗಳ ಪ್ರಾಬಲ್ಯದದೆಸೆಯಿಂದ ಕರಾರುವಾಕಾ ಅಳತೆ ತೆಗದುಕೊಳ್ಳುವದು ಅನಾನುಕೂಲವಾಗಿದ್ದದ್ದರಿಂದ ಅಂದಾಜ್ ಮೇಲೆ ಈ ಅಂಕೆಗಳು ದಾಖಲ್ಮಾಡಲ್ಪಟ್ಟಿರುತ್ತೆ.
2	ಮೇಲ್ಕಂಡ ದೊಡ್ಡ ಕಾಲ್ವೇ ಮತ್ತು ಓಣೀಮಧ್ಯೆ ಮಧುವನ ಮತ್ತು ದೇವಪಾರ್ಥಿವರಾಜರವರ ತೋಟ ಮತ್ತು ಮಧುವನದ ಬಂದುಭಾಗದ ಮಧ್ಯೆ. ಸರ್ವೇನಂಬರ್ 176–177 ಮತ್ತು 178ರ ಪೈಕಿ.	[illegible]	$3793\frac{1}{3}$	10	237	15	1	34	14	1	ಉತ್ತರಕ್ಕೆ ಮಾಲೀಕರ ಮುಖ್ಯತೋಟ, ದಕ್ಷಿಣಕ್ಕೆ ಅವರ ತೋಟದ ಪೈಕೀ ಬಂದುಭಾಗ ಮತ್ತು ಸರ್ಕಾರದ ರಸ್ತೆ, ಪೂರ್ವಕ್ಕೆ-ದೇವಪಾರ್ಥಿವರಾಜರವರ ತೋಟಕ್ಕೂ ಮಧುವನಕ್ಕೂ ಮಧ್ಯೆ ಇರುವ ಓಣೀ, ಪಶ್ಚಿಮಕ್ಕೆ ಷಹರಿನ ಚಿರಾಂಡಿ ದೊಡ್ಡ ಕಾಲವೆ.	

ತಾರೀಖು 5ನೇ ಡಿಶಂಬರ್ 1887.

ಕ್ಯಾಂಪ್ ನಂ. 2037.—ಲೇಟ್ ಕನ್ಸಲ್‌ಟಿಂಗ್ ಇಂಜನಿಯರ್ ಆಫೀಸ್ ಹೆಡ್ ಕ್ಲರ್ಕರಾದ ಹಾಲೀ ಸೂಪರ್ ನ್ಯೂಮರೇರಿಯಾಗಿರುವ ಪಿ. ಸುಬ್ಬರಾವ್ ನಾಯಡರಿಗೆ, ಲಕ್ಷ್ಮಣರಾಯರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ಹಿರಿಯೂರು ತಾಲ್ಲೂಕು 5ನೇ ಗ್ರೇಡ್ ಅಮಲ್‌ದಾರ್ ವ 3ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತೆ.

ತಾರೀಖು 29ನೇ ನವಂಬರ್ 1887.

ಕ್ಯಾಂಪ್ ನಂ. 2018.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದರಡೀಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ್ ಕೆಲಸಕ್ಕೆ ಅಂದರೆ ಮೈಸೂರು ಷಹರಿನಲ್ಲಿ ಕೆಲವು ಬೀದಿಗಳನ್ನು ಉಂಟು ಮಾಡುವ ಬಗ್ಗೆ ಬೇಕಾಗಿರುತ್ತೆ:—

ನಂಬರ್.	ಮುನಿಸಿಪಲ್ ನಂಬರ್.	ಸ್ವಂತಗಾರರ ಹೆಸರು.	ವಿಸ್ತೀರ್ಣ. ಪೂರ್ವ ಪಶ್ಚಿಮ	ವಿಸ್ತೀರ್ಣ. ಉತ್ತರ ದಕ್ಷಿಣ.	ವಿವರಣೆ.	ಯಾವ ಕೆಲಸಕ್ಕೆ ಬೇಕಾಗಿದೆ.	ಷರಾ.
			ಅಡಿ.	ಅಡಿ.			
1		ಲಕ್ಷ್ಮಯ್ಯ	32	18	ಜಮೀನು		ಪೂರ್ವಕ್ಕೆ-ಚಲುವಯ್ಯನ ಓಣೀ, ಪಶ್ಚಿಮಕ್ಕೆ ಪಾಳು ಭೂಮಿ, ಉತ್ತರಕ್ಕೆ ಲಕ್ಷ್ಮಯ್ಯನ ಭೂಮಿ, ದಕ್ಷಿಣಕ್ಕೆ ಸರ್ಕಾರದ ಓಣಿ.
2		ಚಲುವಯ್ಯ ..	35	14	ಇದರಲ್ಲಿ 5 ಅಂಕಣ ಝೋಪಡೀ ಯಿರುತ್ತೆ		ಪೂರ್ವ—ಕ್ಕೆ-ಸಂದು, ಪಶ್ಚಿಮಕ್ಕೆ ಲಕ್ಷ್ಮಯ್ಯನ ಭೂಮಿ, ಉತ್ತರಕ್ಕೆ ನರಸನಮನೆ, ದಕ್ಷಿಣಕ್ಕೆ ಸರ್ಕಾರದ ಬೀದಿ.
3		ನರಸಾ ..	21	10	ಡಿಟ್ಟೋ 3 ಡಿಟ್ಟೋ	“ತಿಮ್ಮಾಪುರ ನಾಲೆ” ಗದ್ದೆಯನ್ನು ಅಗಲಮಾಡಿ ಎತ್ತರಿಸುವ ಬಗ್ಗೆ	ಪೂರ್ವಕ್ಕೆ-ಸಂದು ಪಶ್ಚಿಮಕ್ಕೆ ನರಸನಭೂಮಿ, ದಕ್ಷಿಣಕ್ಕೆ ಚಲುವಯ್ಯನ ಮನೆ, ಉತ್ತರಕ್ಕೆ ಸರ್ಕಾರದ ಬೀದಿ.
4		ಜವರಪ್ಪ ..	48	21	ಡಿಟ್ಟೋ 3 ಡಿಟ್ಟೋ ಡಿಟ್ಟೋ 3 ಅಂಕಣ ಹೆಂಚು ಡಿಟ್ಟೋ 3 ಡಿಟ್ಟೋ ಡಿಟ್ಟೋ ಕೈಸಾಲೆ		ಪೂರ್ವಕ್ಕೆ-ಕಪನಯ್ಯನ ಮನೆ, ಪಶ್ಚಿಮಕ್ಕೆ ಓಣಿ, ದಕ್ಷಿಣಕ್ಕೆ ಓಣಿ, ಉತ್ತರಕ್ಕೆ ಜೋರಮ್ಮನ ತಿಮ್ಮಕ್ಕ ಇವರ ಮನೆ.
5		ಕಪನಯ್ಯ ..	48	22	ಡಿಟ್ಟೋ 5 ಅಂಕಣ ಝೋಪಡಿ		ಪೂರ್ವಕ್ಕೆ-ಓಣಿ, ಪಶ್ಚಿಮಕ್ಕೆ ಜವರಪ್ಪನಮನೆ, ದಕ್ಷಿಣ ವ ಉತ್ತರಕ್ಕೆ ಓಣಿಗಳು.
6		ಸೋಮಯ್ಯ ...	53	22	ಡಿಟ್ಟೋ 6 ಡಿಟ್ಟೋ ಹಂಚಿನದು ಡಿಟ್ಟೋ 3 ಡಿಟ್ಟೋ ಝೋಪಡಿ		ಪೂರ್ವಕ್ಕೆ-ಅಂದಾನಯ್ಯನ ಭಾವಿ, ಪಶ್ಚಿಮ ವ ದಕ್ಷಿಣಕ್ಕೆ ಓಣಿ, ಉತ್ತರಕ್ಕೆ ಕೆಂಪಣ್ಣನ ಮನೆ.
7		ಪುಟ್ಟಣ್ಣ ..	54	24	ಡಿಟ್ಟೋ 11 ಡಿಟ್ಟೋಹಂಚಿನದು		ಪೂರ್ವಕ್ಕೆ—ಓಣಿ ಮತ್ತು ದಡ್ನೂರಯ್ಯನ ಮನೆ, ಪಶ್ಚಿಮಕ್ಕೆ ಅಂಡಿವಾನಯ್ಯನ ಭಾವಿ, ದಕ್ಷಿಣಕ್ಕೆ ಓಣಿ, ಉತ್ತರಕ್ಕೆ ಮುದ್ದಪ್ಪನ ಹಿತ್ತಲು.
8		ದಡ್ನೂರಯ್ಯ	53	20	ಡಿಟ್ಟೋ 3 ಡಿಟ್ಟೋ ಹಂಚಿನದು ಡಿಟ್ಟೋ 3 ಡಿಟ್ಟೋ ಡಿಟ್ಟೋ ಕೈಸಾಲೆ		ಪೂರ್ವ ಪಶ್ಚಿಮ ವ ದಕ್ಷಿಣಕ್ಕೆ ಓಣಿಗಳು ಉತ್ತರಕ್ಕೆ ದಡ್ನೂರಯ್ಯನ ಮನೆ.
9		ಬಡಗೀಕಪನಯ್ಯ	62	25	ಡಿಟ್ಟೋ 8 ಅಂಕಣ ಹಂಚಿನದು ಡಿಟ್ಟೋ 1 ಡಿಟ್ಟೋತಬ್ಬು ಪೋಷ್ ಡಿಟ್ಟೋ 1 ಡಿಟ್ಟೋ ಹಂಚಿನ ವೆರಾಂಡಾ		ಪೂರ್ವಕ್ಕೆ-ಹೊನ್ನಯ್ಯನ ಮನೆ, ಪಶ್ಚಿಮ ವ ದಕ್ಷಿಣಕ್ಕೆ ಓಣಿಗಳು, ಉತ್ತರಕ್ಕೆ ಮುದ್ದಪ್ಪನ ಮನೇ ಹಿತ್ತಲು.
10		ಹೊನ್ನಯ್ಯ ..	16	25	ಡಿಟ್ಟೋ 3 ಡಿಟ್ಟೋ ಹಂಚಿನದು ಡಿಟ್ಟೋ 3 ಡಿಟ್ಟೋ ವೆರಾಂಡಾ	“ತಿಮ್ಮಾಪುರ ನಾಲೆ” ಗದ್ದೆಯನ್ನು ಅಗಲಮಾಡಿ ಎತ್ತರಿಸುವ ಬಗ್ಗೆ	ಪೂರ್ವಕ್ಕೆ-ಕಣುವಯ್ಯನ ಮನೆ, ಪಶ್ಚಿಮಕ್ಕೆ ಕಪನಯ್ಯನ ಮನೆ, ದಕ್ಷಿಣಕ್ಕೆ ಓಣಿ, ಉತ್ತರಕ್ಕೆ ಮುದ್ದಪ್ಪನ ಮನೆ.
11		ಕಣುವಯ್ಯ ..	30	24	ಜಮೀನು		ಪೂರ್ವಕ್ಕೆ-ಜೀವಣರಾಯರ ಕೇರೇದಾರಿ, ಪಶ್ಚಿಮಕ್ಕೆ ಹೊನ್ನಯ್ಯನ ಮನೆ, ದಕ್ಷಿಣಕ್ಕೆ ಓಣಿ, ಉತ್ತರಕ್ಕೆ ಮುದ್ದಪ್ಪನ ಮನೆ.

ತಾರೀಖು 5ನೇ ಡಿಶಂಬರ್ 1887.

ನಂ, 151.— ಯಾವ ಇನಾಂದಾರನು, ಸರ್ಕಾರ್ ನೀರಾವರೀ ಕೆಲಸದ ದೆಸೆಯಿಂದ ಉಂಟಾದ ಸರಕಾರೀ ನೀರನ್ನು ತನ್ನ ಇನಾಂತೀ ಜಮೀನ್ ಸಾಗುವಳಿಗಾಗಿ ಉಪಯೋಗಿಸಲಿಕ್ಕೆ ಅಪ್ಪಣೇ ಕೊಡಲ್ಪಟ್ಟು, ಹಾಗೆ ಉಪಯೋಗಿಸಲು ಅಪ್ಪಣೇ ಕೊಡಲ್ಪಡುವಂತಾ ನೀರು ಹೊಸದಾಗಿ ಕೊಡೋಣಾದ ಜಲಾಧಾರವಾಗಿರಲಿ, ಇನಾಮಿನ ದೆಸೆಯಿಂದ ಆ ಇನಾಂದಾರನು ಪಡೆಯಲಿಕ್ಕೆ ಅರ್ಹನಾಗಿರುವ ತೇದಾದಿಗಿಂತಲೂ ಜಾಸ್ತೀಯಾದ ಜಲಾಧಾರವಾಗಿರಲಿ, ಈ ಕೆಳಗೆ ನಮೂದಾಗುವ ದರಗಳ ಮೇರಿಗೆ ನೀರ್ ಸರದಿಯನ್ನ ಸರಕಾರಕ್ಕೆ ತೆರಲಿಕ್ಕೆ ಗುರಿಯಾಗಿರುವನು.

(1.) ಜಲಾಧಾರವು ಸಂಪೂರ್ಣವಾಗಿ ಸರಕಾರದ ಲಾಗವಡಿನಿಂದಲೇ ಸರಕಾರದ ನದೀ ನೀರಾವರೀ ನಾಲೆಯ ದೆಸೇಯಿಂದ ಒದಗಿಸಿ ಕೊಟ್ಟಲ್ಲಿ ಎಕರೆ 1ಕ್ಕೆ 4 ರೂಪಾಯಿಗಳು.

(2.) ಸರಕಾರೀ ನದೀ ನೀರಾವರಿಯ ನಾಲೆಯು ದೆಸೆಯಿಂದ ಸ್ವಂತಲಾಗವಡಿನಿಂದ ತೆಗದ ಅಡ್ಡನಾಲೆಯ ಜಲಾಧಾರಕ್ಕಾಗಿ ಎಕರೆ1ಕ್ಕೆ ರೂಪಾಯಿ 3.

(3.) ಒಂದು ಒಳ್ಳೇ ಸರಕಾರೀ ತಲಾವಿನಿಂದಲಾಗಲಿ, ಮಾರ್ಚೀ ಅಜ್ಯೆರ್ ವರಿವಿಗೆ ನೀರು ಹರಿಯುವಂತಾ ಇತರ ನೀರಾವರೀ ಕೆಲಸದ ಜಲಾಧಾರಕ್ಕಾಗಿ ಎಕರೆ 1ಕ್ಕೆ ರೂಪಾಯಿ 2—8—0.

(4.) ಸರಕಾರೀ ಇತರ ಜಾಜವೀ ನೀರಾವರೀ ಕಾಮಗಾರಿಗಳಿಂದುಂಟಾಗುವ ಜಲಾಧಾರಕ್ಕಾಗಿ ಎಕರೆ 1ಕ್ಕೆ ರೂಪಾಯಿ 1—8—0.

2. ಮೇಲೆಹೇಳಲ್ಪಟ್ಟ ದರಗಳು ಸರ್ವೇ ಆಗದೇ ಯಿರುವ ತಾಲ್ಲೂಕುಗಳಿಗೆ ಲಗಾವಾಗತಕ್ಕದ್ದು, ಪರಂತು ಸರ್ವೇ ಸಟಿಲ್‌ಮೆಂಟ್ ಆದ ಕೂಡ್ಲೆ ಈ ದರಗಳು ತಿದ್ದುಪಾಡಾಗತಕ್ಕವು. ಸರ್ವೇಆದ ತಾಲ್ಲೂಕುಗಳಲ್ಲಿ ಮೇಲೆ ನಮೂದಾಗಿರುವ ಕ್ವಾಸುವಾರನುಸರಿಸಿ ಪ್ರತಿ ಸಂಗತಿಯಲ್ಲೂ ಡೆಪ್ಯುಟಿ ಕಮ್ಮಿಷನರು ದರ ಮೊಕರರ್ ಮಾಡತಕ್ಕದ್ದು, ಹಾಗೆ ಮೊಕರರ್ ಮಾಡುವದರಲ್ಲಿ ಸಂಶಯಾಸ್ಪದವಾದ ಸಂಗತಿಗಳೊಳಗೆ ಸರ್ವೇ ಸೂಪರ್‌ಟೆಂಡೆಂಟರ ತಿಳುವಳಿಕೆಯಿಂದ ಆಜಾಬಾಜಾ ಇನಾಂ ಜಮೀನಿನ ಸರ್ವೇ ಆಕಾರವನ್ನ ಅನುಸರಿಸಿ ಸಾಧಾರಣ ಖುಷ್ಕೀ ದರವನ್ನ ವಜಾ ಮಾಡಿ ದಾಖಲ್‌ಮಾಡತಕ್ಕದ್ದು.

3. ಈ ಇಸ್ತಿಹಾರನುಸರಿಸಿ ಮೊಕರರ್ ಮಾಡಲ್ಪಡುವ ನೀರ್ ಸರದೀ ದರಗಳು ತಪ್ಪದೇ ಸರ್ವೇ ವ ಸಟಿಲ್‌ಮೆಂಟ್ ಇಲಾಖೆಗೆ ರಿಪೋರ್ಟ್ ಮಾಡಲ್ಪಡತಕ್ಕದ್ದು.

ತಾರೀಖು 12ನೇ ಡಿಶಂಬರ್ 1887.

ನಂ, 153.—ಸೆಟ್ಲಮೆಂಟ್ ಆದ ಮೈದಾನ್ ತಾಲ್ಲೂಕುಗಳಲ್ಲಿ ಇನಾಂಗಳು ಜಮೀನ್ ರೂಪವಾಗಿ ಅನುಭವಿಸಲ್ಪಡುತ್ತಿರುವ ಸಂದರ್ಭಗಳಲ್ಲಿ ಅಂಥಾ ಚಿಲ್ಲರೇ ಇನಾಂಗಳಲ್ಲಿ ಜಾಸ್ತೀ ಯಿರುವ ಬಗ್ಯೆ ನಡಿಸಲ್ಪಡಬೇಕಾದ ಇದರಡೀ ಕಂಡ ರೂಲ್ಸ್‌ಗಳು, ಅದೇವಿಷಯದಲ್ಲಿ ಇದುವರಿಗೆ ಸಾದರ್ಮಾಡಲ್ಪಟ್ಟಿರುವ ತಮಾಂ ರೂಲ್ಸ್ ವ ಆರ್ಡರ್‌ಗಳ ರದ್ದಿಯಾತಿಯಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುತ್ತೆ.

1. ಹಾಲೀ ಅನುಭವಿಸಲ್ಪಡುತಿರುವಂತೆ ಯಾವ ಇನಾಮಿನ ಸರ್ವೇ ಆಕಾರವು 5 ರೂಪಾಯಿಗೆ ಮೇಲ್ಪಟ್ಟು ಯಿರುವದಿಲ್ಲವೋ ಅಂಥಾ ತಮಾಂ ಇನಾಂಗಳೂ ಪೂರ್ತಿಯಾಗಿ ಕಾಯಂ ಮಾಡಲ್ಪಡತಕ್ಕವು.

2. ಹಾಲೀ ಅನುಭವಿಸಲ್ಪಡುವಂತೆ ಯಾವ ಇನಾಮಿನ ಸರ್ವೇ ಬೇರೀಜು 5 ರೂಪಾಯಿಗೆ ಮೇಲ್ಪಟ್ಟಿರುತ್ತೋ ಅಂಥಾ ಇನಾಂಗಳ ವಿಷಯದಲ್ಲಿ ಇನಾಂ ಇಲಾಖೆಯಿಂದ ಮಂಜೂರ್ಮಾಡಲ್ಪಟ್ಟ ವಿಸ್ತೀರ್ಣಕ್ಕೆ ಜಾಸ್ತಿಯಾಗಿರುವದರ ಪೈಕೀ ಅರ್ಧಭಾಗವನ್ನು, (ಇದುವರಿಗೂ ಜಾರೀಲಿಯಿರುವ ರೂಲ್ಸ್ ಅನುಸರಿಸಿ ಅಂಥಾ ಜಾಸ್ತೀ ಅಂಶದ ಮೇಲೆ ಶೇಕಡಾ 10ರಂತೆ ಬಿಡುವದಕ್ಕೆ ಬದಲಾಗಿ) ಸದರೀ ಮಂಜೂರ್ಮಾಡಲ್ಪಟ್ಟ ವಿಸ್ತೀರ್ಣ ದೇಖೀಲ್ ಇನಾಮಾಗಿ ಕಾಯಂ ಮಾಡತಕ್ಕದ್ದು, ಉಳಿದ ಅರ್ಧ ಭಾಗವು ಪೂರ್ತಿಯಾದ ಸರ್ವೇ ಬೇರೀಜು ಕಟ್ಟಲ್ಪಡತಕ್ಕದ್ದು.

ಪರಂತು ಯಾವ ಸಂದರ್ಭದಲ್ಲಿಯೇ ಆಗಲಿ ಇನಾಂ ಇಲಾಖೆಯಿಂದ ಮಂಜೂರ್ಮಾಡಲ್ಪಟ್ಟ ಇನಾಮಿನ ವಿಸ್ತೀರ್ಣದ ಸರ್ವೇ ಬೇರೀಜಿನ ಮೂರರಷ್ಟಕ್ಕಿಂತಾ ಜಾಸ್ತಿಯಾದ ಸರ್ವೆ ಆಕಾರಉಳ್ಳ ಜಮೀನು, ಅಂಥಾ ಸರ್ವೆ ಅಂದಾಜಿನ ಮೂರರಷ್ಟು ಮೊಬಲಗು 5 ರೂಪಾಯಿಗೆ ಕಮ್ಮಿಯಿದ್ದ ಸಂದರ್ಭದಲ್ಲಿ ವಿನಾ, ಅನ್ಯಥಾ ಯಾವಾಗಲೂ ಇನಾಮಾಗಿ ಜಾರೀಮಾಡಲ್ಪಡಕೂಡದು, ಹಾಗೆ ಕಮ್ಮಿಯಿರುವ ಸಂಗತಿ

ಯಲ್ಲಿ 5 ರೂಪಾಯಿ ವರೆಗಿನ ಪರಂತು ಅದಕ್ಕೆ ಜಾಸ್ತಿಯಾಗದ ಸರ್ವೇ ಆಕಾರವುಳ್ಳ ಜಮೀನು, ಯಿದುವರೆಗೆ ಇನಾಮಾಗಿ ಅನುಭವಿಸಲ್ಪಟ್ಟ ವಿಸ್ತೀರ್ಣದ ಪೈಕಿ, ಇನಾಮಾಗಿ ಕಾಯಂಮಾಡಲ್ಪಡತಕ್ಕದ್ದು.

ಪರಂತು ಯಾವ ಸಂದರ್ಭದಲ್ಲಾಗಲಿ ಈ ರೂಲ್ಸ್ ಅನುಸರಿಸಿ ಕಾಯಂಮಾಡಲ್ಪಡುವ ಇನಾಂ 5 ರೂಪಾಯಿಗಳಿಗಿಂತ ಕಮ್ಮಿ ಆಕಾರ ಉಳ್ಳದ್ದಾಗಿರಕೂಡದು.

3. ಯಿದುವರೆಗೆ ಇನಾಮಾಗಿ ಅನುಭವಿಸಲ್ಪಟ್ಟ ಯಾವದಾದರೂ ಒಂದು ಸರ್ವೇ ನಂಬರ್ ಪೈಕಿ, ಮೇಲೆಕಂಡ 2ನೇ ರೂಲ್ಸ್ ಅನುಸರಿಸಿ ಇನಾಂ ತರೀಕ್ ಕಾಯಂಮಾಡಲ್ಪಟ್ಟ ವಿಸ್ತೀರ್ಣಕ್ಕೆ ಜಾಸ್ತಿಯಾದ ಭಾಗಗಳೆಲ್ಲವೂ, ಸರ್ಕಾರದ ಜಮೀನೆಂದು ಎಣಿಸಲ್ಪಟ್ಟು ಪೂರಾ ಬೇರೀಜು ಕಟ್ಟಲ್ಪಡತಕ್ಕವು. ಅಂಥಾ ಹೆಚ್ಚುವರಿಯು ಸರ್ವೇ ಬೇರೀಜ್ ಪ್ರಕಾರ ಯರಡು ರೂಪಾಯಿಗೆ ಜಾಸ್ತಿಯಾಗದೇ ಇರುವ ಪಕ್ಷದಲ್ಲಿ ಅದು, ಇನಾಮಿನ ಒಂದುಭಾಗವೆಂದು ಎಣಿಸಲ್ಪಟ್ಟು ಅದರಮೇಲೆ ಜೋಡೀ ತರೀಕು ಬೇರೀಜು ಕಟ್ಟಲ್ಪಡತಕ್ಕದ್ದು. ಅಂಥಾ ಹೆಚ್ಚುವರಿಯು ಸರ್ವೇ ಬೇರೀಜಿನಂತೆ ಯರಡು ರೂಪಾಯಿಗಳಿಗೆ ಜಾಸ್ತಿಯಾಗಿ ಇದ್ದರೆ ಅದು ಸರ್ಕಾರ ಜಮೀನಿನ ಒಂದು ಯಾ ಹೆಚ್ಚು ಸರ್ವೇ ನಂಬರುಗಳುಳ್ಳ ಬೇರೆಬೇರೆ ಜಮೀನುಗಳಾಗಿ ಭಾವಿಸಲ್ಪಟ್ಟು ಅದಕ್ಕೆ ಅಥವಾ ಅವುಗಳಿಗೆ ಸರಿಯಾದ ಸರ್ಕಾರದ ಕಂದಾಯ ಅಲಾಹಿದಾ ಕಟ್ಟಲ್ಪಡತಕ್ಕದ್ದು.

ತಾರೀಖು 14ನೇ ಡಿಶಂಬರ್ 1887.

ನಂ. 155.—ಶ್ರೀಮನ್ಮಹಾರಾಜಾ ಸರ್ಕಾರದವರು, ಕಾಫೀ ತೋಟಗಳಲ್ಲಿ ಕಡಿಯಲ್ಪಟ್ಟ ನಾಟಾ ವಗೈರೆಗಳ ರಫ್ತನ್ನು ಹದ್ದುಪಡಿಸಲಿಕ್ಕೆ ಈ ಕೆಳಗೆ ಬರುವ ನಿಬಂಧನೆಗಳನ್ನು ಮಂಜೂರ್ಮಾಡಿರುತ್ತಾರೆ.

ಉಳಿಸಿಕೊಳ್ಳಲ್ಪಟ್ಟ ನಾಟಾ.

1. ಕಾಫೀ ಜಮೀನುಗಳ ಹಿಡುವಳೀದಾರರುಗಳು ತಮ್ಮ ತಮ್ಮ ತೋಟಗಳಲ್ಲಿರುವ ಉಳಿಸಿಕೊಳ್ಳಲ್ಪಟ್ಟಂಥಾ ನಾಟಾವನ್ನು ಪ್ರಾಮಾಣಿಕವಾಗಿ ತಮ್ಮ ಸ್ವಂತ ಉಪಯೋಗಕ್ಕೋಸ್ಕರ ಸರಕಾರದ ಉದ್ಯೋಗಸ್ಥರಿಗೆ ಮುಂಚಿತವಾಗಿ ತಿಳಿಸದೇನೇ, ಕಡಿಯಲು ಸ್ವತಂತ್ರರಿರುತ್ತಾರೆ.

2. ಯಾವ ಕಾಫೀ ಜಮೀನು ಹಿಡುವಳೀದಾರನಾಗಲಿ, ಅಂಥಾ ಉಳಿಸಿಕೊಳ್ಳಲ್ಪಟ್ಟ ನಾಟಾವನ್ನು ಹಾಗೆ ಪ್ರಾಮಾಣಿಕವಾದ ಸ್ವಂತ ಉಪಯೋಗಕ್ಕಾಗಿ ಕಡಿದು ತನ್ನ ತೋಟದಿಂದ ಹೊರಗೆ ಸಾಗಿಸಲಿಚ್ಛೆಯುಳ್ಳ ಪಕ್ಷಕ್ಕೆ ಮುಂಚಿತವಾಗಿಯೇ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರಿಗೆ ತಿಳಿಸಿ, ಅವರಿಂದ ಇದರಡೀ ನಮೂದಿರುವ ನಮೂನೆಯಲ್ಲಿ ಒಂದು ಮಾಫೀ ಪ್ಯಾಸನ್ನು ಪಡೆಯತಕ್ಕದ್ದು.

3. ಆ ಪ್ಯಾಸು ನಾಟಾ ರಫ್ತಾಗುವಾಗ ಸಂಗಡಲೇ ಇರತಕ್ಕದ್ದಲ್ಲದೆ, ಗವರ್ನಮೆಂಟ್ ಪೋಲೀಸ್ ಫಾರೆಸ್ಟ್ ವ ರೆವಿನ್ಯೂ ಆಫೀಸರುಗಳಿಂದ ತನಿಖೀಗೆ ಒಳಪಟ್ಟಿರತಕ್ಕದ್ದು. ನಾಟಾವನ್ನು ಬೇರೆಬೇರೆ ಸಂದರ್ಭಗಳಲ್ಲಿ ಸಾಗಿಸಲ್ಪಟ್ಟರೆ ಪ್ರತಿ ದಫೆಗೂ ಪ್ಯಾಸಿನೊಂದಿಗೆ ಇರತಕ್ಕದ್ದು ಹಾಗೆ ಪ್ರತಿ ದಫೆಯಲ್ಲೂ ಸಾಗಿಸಲ್ಪಟ್ಟ ತೇದಾದು ಇಷ್ಟು ಭಂಡಿಗಳೆಂದು ಆ ಪ್ಯಾಸಿನ ಹಿಂಭಾಗದಲ್ಲಿ ಕಾಫೀ ಜಮೀನು ಹಿಡುವಳೀದಾರನು ಷರಾ ನಮೂದಿಸತಕ್ಕದ್ದು.

4. ನಾಟಾವನ್ನು ಪ್ಯಾಸಿನಲ್ಲಿ ಕಂಡ ವಾಯಿದೆಯೊಳಗಾಗಿ ಸಾಗಿಸತಕ್ಕದ್ದಲ್ಲದೆ, ವಾಯಿದೇ ಆಖೈರ್ ತಾರೀಖು ಯಾ ಅದಕ್ಕೆ ಮುಂಚಿನ ತಾರೀಖಿನಲ್ಲಿ ಪ್ಯಾಸ್ ಕೊಟ್ಟಂಥಾ ಆಫೀಸಿಗೆ ಆ ಪ್ಯಾಸನ್ನು ವಾಪಸ್ ಮಾಡತಕ್ಕದ್ದು.

5. ಕಾಫೀ ತೋಟದಿಂದ ಹೊರಕ್ಕೆ ಸಾಗಿಸಲ್ಪಡಬೇಕಾದ ಎಲ್ಲಾ ನಾಟಾಗಳ ಮೇಲೂ, ಕಾಫೀ ಜಮೀನು ಹಿಡುವಳೀದಾರನ ಸ್ವಂತ ಸ್ಟಾಂಪಿನಿಂದ ಗುರ್ತು ಮಾಡಲ್ಪಡತಕ್ಕದ್ದು. ಸದರೀ ಸ್ವಂತ ಸ್ಟಾಂಪು ಫಾರೆಸ್ಟು ನಿಬಂಧನೆಗಳ 39ನೇ ಸೆಕ್ಷನನುಸರಿಸಿ ರಿಜಿಸ್ಟರ್ ಮಾಡಲ್ಪಡತಕ್ಕದ್ದು.

6. ಯಾವ ಕಾಫೀ ಜಮೀನುಗಳನ್ನು ಏಕರೇ ಒಂದಕ್ಕೆ ಸರಕಾರ ಚಡನಿರಖಿನ ಮೇಲೆ ಖರೀದಿಗೆ ತೆಗದುಕೊಳ್ಳುವಣದರ ಮೂಲಕ, ಗಂಧದ ಮರಗಳ ವಿನಾ ಇತರ ಉಳಿಸಿಕೊಳ್ಳಲ್ಪಟ್ಟ ಮರಗಳ ಹಕ್ಕನ್ನು ಪಡೆದು ಇರುತ್ತಾರೋ ಅಂಥಾವರು ತಮಾಂ ನಾಟಾವನ್ನೂ ಸಾಗಿಸಲಿಕ್ಕೆ ಮೇಲೆ ವಿಧಿಸಿರುವ ಮೇರಿಗೆ ಮಾಫೀ ಪ್ಯಾಸನ್ನು ಪಡೆದು ಸಾಗಿಸತಕ್ಕದ್ದು.

ಉಳಿಸಿಕೊಳ್ಳಲ್ಪಡದ ಮರಗಳು ವ ಚೌಬೀನೆ.

7. ಕಾಫೀ ಜಮೀನು ಹಿಡುವಳೀದಾರರಾಗಲಿ, ಯಾ ಅವರಿಂದ ಖರೀದಿಗೆ ಪಡೆದುಕೊಳ್ಳುವವರಾಗಲಿ ಉಳಿಸಿಕೊಳ್ಳಲ್ಪಡದ ಮರಗಳು ವ ಚೌಬೀನೇ ಯಾವ ತೋಟದಲ್ಲಿ ಕಡಿಯಲ್ಪಟ್ಟವೋ ಅಂಥಾ ತೋಟದಿಂದ ಆಚೆಗೆ ಸಾಗಿಸಲಿಚ್ಛೆಯುಳ್ಳವರು ತಾಲ್ಲೂಕು ಅಮಲ್ದಾ

ರ್ರಿಂದ ಬದಸ್ತೂರ್ ಮಾಫೀ ಪ್ಯಾಸನ್ನ ಪಡೆಯತಕ್ಕದ್ದು. ರೂಲ್ಸ್ 18ರ ಲಾಗಾಯತು 5ರ ವರಿವಿಗೂ ಕೇರಿ ಮೇಲಿನ ನಿಬಂಧನೆಗಳು ಈ ನಾಟುಗಳ ವ ಚೌಪೀನೆಗಳನ್ನ ಸಾಗಿಸುವ ಸಂಗತಿಗೂ ಸಹ ಲಗಾವಾಗಿರತಕ್ಕವು.

8. ಯಾವ ಕಾಫೀ ಜಮೀನ್ ಹಿಡುವಳೀದ್ದಾರನಾಗಲಿ, ಯಾ ಇತರ ಮನುಷ್ಯನಾಗ, ಈ ನಿಬಂಧನೆಗಳಿಗೆ ತಪ್ಪಿನಡೆದಲ್ಲಿ ಫಾರೆಸ್ಟ್ ನಿಬಂಧನೆಗಳ 40ನೇ ಸೆಕ್ಷನ್ ಅನುಸರಿಸಿ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗುವನು.

ಪಾಸಿನ ನಂಬರು ಮತ್ತು ತಾರೀಖು.	ಯಾರಿಗೆ ಕೊಡಲ್ಪಟ್ಟಿತ್ತೋ ಅವರ ಹೆಸರು.	ಕಾಫೀ ತೋಟದ ಹೆಸರು.	ನಾಟು ಇತ್ಯಾದಿಗಳ ಜಾತಿ.	ಅಳತೆ.	ಎಲ್ಲಿಗೆ ಸಾಗಿಸಲ್ಪಡತಕ್ಕದ್ದು.	ಸಾಗಿಸಲ್ಪಡಬೇಕಾದ ಮಾರ್ಗ.	ಪಾಸು ಯಾವ ತಾರೀಖಿನವರೆಗೆ ನಡೆಯತಕ್ಕದ್ದು.	ಯಾವ ತಾರೀಖಿನ ದಿವಸ ನಡೆದಿತು.

ಪ್ಯಾನ್‌ಕೋರ್ಟ್ ಆಫೀಸರ ರುಜಾ ವ ಹುದ್ದೆ.

ತಾರೀಖು 14ನೇ ಡಿಸಂಬರ್ 1887.

ನಂ. 156.—ಕಾಫೀ ಜಮೀನ್‌ಗಳಲ್ಲಿರುವ ಮನ್ನಾ ಜಾತೀ ಮರಗಳನ್ನ, ಮಾಲೀಕರು ಪ್ರಾಮಾಣಿಕವಾಗಿ ಸ್ವಂತ ಉಪಯೋಗಕ್ಕಲ್ಲದೇ ಇತರ ಉದ್ದೇಶಕ್ಕಾಗಿ, ಕಡಿದುಕೊಳ್ಳಲಿಕ್ಕೆ ತೆರಬೇಕಾದ ತೀರ್ವೆಗಳನ್ನ ಏರ್ಪಡಿಸತಕ್ಕ ಗ್ಯೊ, ಕಳೆದ ಯೇಪ್ರೆಲ್ 2ನೇ ಮರ್ಕ್ಯಾಂಪ್ 8ನೇ ನಂಬರುಳ್ಳ ಇಸ್ತಿಹಾರನ್ನನುಸರಿಸಿ ಅಂಥಾ ನಾಟುಗಳನ್ನ ಸಾಗಿಸುವ ಬಗ್ಯೆ ರಂಟಾದ ಈ ಕೆಳಗೆ ಬರುವ ನಿಬಂಧನೆಗಳನ್ನ ಶ್ರೀಮನ್ಮಹಾರಾಜಾ ಸರಕಾರದವರು ಮಂಜೂರ್ಮಾಡಿರುತ್ತಾರೆ.

1. ಕಾಫೀ ಜಮೀನಿನ ಹಿಡುವಳೀದಾರನು ತನ್ನ ಜಮೀನಿನಲ್ಲಿರತಕ್ಕ ಪುಳಿಸಿಕೊಳ್ಳಲ್ಪಟ್ಟ ನಾಟುಗಳನ್ನ, ಪ್ರಾಮಾಣಿಕವಾಗಿ ತನ್ನ ಸ್ವಂತ ಉಪಯೋಗಕ್ಕಲ್ಲದೇ ಯಿತರ ಉದ್ದೇಶಕ್ಕಾಗಿ, ಕಡಿದುಕೊಳ್ಳಲು ಅಪೇಕ್ಷಿಸಿದಲ್ಲಿ, ಅದಕ್ಕಾಗಿ ಮೊಕರರಾಗಿರುವ ಯಿದರಡೀ ಕಂಡ ತೀರ್ವೆಯನ್ನ ತಾಲ್ಲೂಕು ಖಜಾನೆಯಲ್ಲಿ ಪಾವತೀ ಮಾಡಿ, ಟ್ರೇಜರೀ ಆಫೀಸರಿಂದ ರಶೀದಿಯನ್ನ ಪಡೆಯತಕ್ಕದ್ದು.

ಕಡಿಯತಕ್ಕ ಮರ 1ಕ್ಕೆ ತಿರ್ವೆ.

	ರೂಪಾಯಿ.		ರೂಪಾಯಿ.
ತೇಗ	8	ಹೊನ್ನೇ	3
ಪೂರ್	6	ಜಾಲಾರೀ	3
ಬೀಟೀ (ಕರೀ ಮರ)	8	ನಂದೀ	3

2. ಆ ಮೇಲೆ, ಕಾಫೀ ಜಮೀನ್ ಹಿಡುವಳೀದಾರನು ನಾಟುವನ್ನ ಕಡಿದು ಸಾಗಿಸಲಿಕ್ಕೆ ಒಪ್ಪಣೇ ಪಡೆಯಲು, ಮೇಲೆ ಹೇಳಲ್ಪಟ್ಟ ರಶೀದಿನಿಸೀ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರಿಗೆ ಅಪ್ಲಿಕೇಷನ್ ಕಳುಹಿಸತಕ್ಕದ್ದು. ಆ ಅಪ್ಲಿಕೇಷನಿನಲ್ಲಿ ಮರಗಳ ಜಾತಿ, ಸಂಖ್ಯೆ ವ ಅವುಗಳು ಯಿರತಕ್ಕ ಜಾಗಾ ಇವುಗಳನ್ನ ನಮೂದಿಸಬೇಕು.

3. ಅಂಥಾ ಅಪ್ಲಿಕೇಷನ್ ಬಂದ ತರುವಾಯ, ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರರು, ನಾಟುಗಳನ್ನ ಕಡಿದು ಸಾಗಿಸಲಿಕ್ಕೆ ಯಿದರಡೀ ಕಂಡ ನಮೂನೆಯಲ್ಲಿ ಒಂದು ಲೈಸೆನ್ಸನ್ನ ಕೊಡತಕ್ಕದ್ದು. ಈ ಲೈಸೆನ್ಸಿನ ಪ್ರಕಾರ ಕಾಫೀಜಮೀನಿನಲ್ಲಿ ಕಡಿದು ಸಾಗಿಸಲ್ಪಡುವ

ತವಾಂ ನಾಟಾ ಯಂದಿಗೂ ಸದರೀ ಲೈಸೆನ್ಸು ಹಾಜರಿರತಕ್ಕದ್ದು. ಹಾಗೆ ಕಡಿಯಲ್ಪಟ್ಟ ನಾಟಾಗಳು ದಫೇವಾರಾಗಿ ಸಾಗಿಸಲ್ಪಟ್ಟರೆ, ಪ್ರತಿ ದಫೆಯ ನಾಟಾಗಳೊಂದಿಗೂ ಸದರೀ ಲೈಸೆನ್ಸು ಯಿರತಕ್ಕದ್ದು, ಹಾಗೆ ಪ್ರತಿ ದಫೆ ಸಾಗಿಸಲ್ಪಟ್ಟ ನಾಟಾಗಳ ತೇದಾದು ಯಿಷ್ಟು ಬಂಡಿ ಜೋಡಿಯಂದು, ಕಾಫೀಜಮೀನ್ ಹಿಡುವಳೀದಾರನು ಆ ಲೈಸೆನ್ಸಿನ ಹಿಂಭಾಗದಲ್ಲಿ ಷರಾ ನಮೂದಿಸಕ್ಕದ್ದು. ನಾಟಾ ರಫ್ತಾಗುತ್ತಿರುವಾಗ ಸದರೀ ಲೈಸೆನ್ಸು ಗವರ್ನಮೆಂಟ್ ಫಾರೆಸ್ಟು ಪೊಲೀಸ್, ವ ರೆವಿನ್ಯೂ ಆಫೀಸರುಗಳ ತನಿಖೀಗೆ ಒಳಪಟ್ಟಿರತಕ್ಕದ್ದು, ಕಾಫೀ ಜಮೀನ್ ಹಿಡುವಳೀದಾರನು ತನ್ನ ಮರಗಳನ್ನ ಬೇರೆಬೇರೆ ಜನಗಳಿಗೆ ಕೊಡಲು ಇಚ್ಛೈಸಿದಲ್ಲಿ ಬೇರೆಬೇರೆ ಲೈಸೆನ್ಸುಗಳನ್ನ ಪಡೆಯತಕ್ಕದ್ದು.

4. ಲೈಸೆನ್ಸ್‌ದಾರನಾಗಲಿ, ಲೈಸೆನ್ಸ್‌ದಾರನಿಂದ ನಾಟಾವನ್ನ ಖರೀದಿಗೆ ಪಡೆಯುವ ಮನುಷ್ಯನಾಗಲಿ, ಲೈಸೆನ್ಸಿನಲ್ಲಿ ಕಂಡ ವಾಯಿದೆಯೊಳಗಾಗಿ, ಅದನ್ನ ಕೊಟ್ಟಂಥಾ ಆಫೀಸರಿಗೇನೇ ಲೈಸೆನ್ಸು ವಾಪಸ್ ಮಾಡಲಿಕ್ಕೆ ಬದ್ಧನಾಗಿರತಕ್ಕದ್ದು.

5. ಯಾವ ತೋಟದಲ್ಲಿ ನಾಟಾ ಕಡಿಯಲ್ಪಡುತ್ತೋ ಆ ತೋಟದಿಂದ ಹೊರಗೆ ಸಾಗಿಸಲ್ಪಡಬೇಕಾದ ತವಾಂ ನಾಟಾಗಳಿಗೂ, ಕಾಫೀ ಜಮೀನ್ ಹಿಡುವಳೀದಾರನ ಸ್ವಂತ ಸ್ಟಾಂಪಿನಿಂದಾಗಲಿ, ಅಥವಾ ಆತನಿಂದ ಖರೀದಿಗೆ ಪಡೆದ ಮನುಷ್ಯನ ಸ್ವಂತ ಸ್ಟಾಂಪಿನಿಂದಾಗಲಿ, ಗುರ್ತು ಮಾಡತಕ್ಕದ್ದು. ಅಂಥಾ ಸ್ಟಾಂಪು ಫಾರೆಸ್ಟು ರೂಲ್ಸಿನ 39ನೇ ಸೆಕ್ಷನ್ ಪ್ರಕಾರ ರೆಜಿಸ್ಟರ್ ಮಾಡಲ್ಪಡತಕ್ಕದ್ದು.

6. ಕಾಫೀ ಜಮೀನಿನಲ್ಲಿರುವ ಉಳಿಸಿಕೊಳ್ಳಲ್ಪಟ್ಟ ನಾಟಾವನ್ನ ವಾಸ್ತವ್ಯವಾಗಿ ತನ್ನ ಸ್ವಂತ ಉಪಯೋಗಕ್ಕಲ್ಲದೆ ಬೇರೇ ಉದ್ದೇಶಕ್ಕಾಗಿ, ಈ ರೂಲಸ್ ಅನುಸರಿಸಿ ಲೈಸೆನ್ಸ್ ಯಿಲ್ಲದೇ ಕಡಿದು ಸಾಗಿಸುವಂಥಾ ಅಥವಾ ಈ ರೂಲಸ್‌ಗಳಿಗೆ ತಪ್ಪಿ ನಡಿಯುವಂಥಾ ಪ್ರತಿ ಮನುಷ್ಯನೂ ಫಾರೆಸ್ಟು ನಿಬಂಧನೆಗಳ 40ನೇ ಸೆಕ್ಷನ್ ಅನುಸರಿಸಿ ಶಿಕ್ಷಿಸಲ್ಪಡಲಿಕ್ಕೆ ಗುರಿಯಾಗುವನು.

ಕಾಫೀತೋಟದೊಳಗಿನ ನಾಟಾವನ್ನ ಕಡಿದು ತೋಟದೊಳಗೇನೇ ಸಾಗಿಸುವದಕ್ಕಾಗಲಿ ಅಥವಾ ತೋಟದಿಂದ ಹೊರಗೆ ಸಾಗಿಸುವದಕ್ಕಾಗಲಿ ಲೈಸೆನ್ಸಿನ ನಮೂನೆ.

ಲೈಸೆನ್ಸಿನ ನಂಬರ್ ವ ತಾರೀಖು.	ಲೈಸೆನ್ಸ್‌ದಾರನಹೆಸರು.	ಕಾಫೀ ತೋಟದ ಹೆಸರು.	ಕಡಿಯತಕ್ಕ ಮರಗಳ ವಿವರ.	ಸಂಖ್ಯೆ.	ಗಿಡಗಳಿರತಕ್ಕ ಪ್ರದೇಶ.	ತೀರ್ವೆಯ ಮೊಬಲಗು.	ಪಾವತೀ ತಾರೀಖು.	ಯಲ್ಲಿಗೆ ಸಾಗಿಸತಕ್ಕದ್ದು ಮತ್ತು ಯಷ್ಟು ವಾಯಿದೇ ವಳಗಾಗಿ ಸಾಗಿಸತಕ್ಕದ್ದು.	ಲೈಸೆನ್ಸ್ ವಾಪಸ್ ಮಾಡಬೇಕಾದ ತಾರೀಖು.	ವಾಪಸಾದ ತಾರೀಖು.

ತಾರೀಖು 10ನೇ ಡಿಶಂಬರ್ 1887.

ಮೈಸೂರು ಲೋಕಲ್ ಸರವಿಸ್‌ಯಾನೇ ಸ್ಥಳಿಕ ನೌಕರಿ ವ ಪ್ಲೀಡರುಗಳ ವಿಷಯಕವಾದ ಪರೀಕ್ಷೆ.

ನಂ. 150.—ಮೈಸೂರು ದೇಶದ ಸ್ಥಳಿಕ ನೌಕರಿಯ ಸಿವಿಲ್, ಕ್ರಿಮಿನಲ್ ವ ರೆವಿನ್ಯೂ ಪರೀಕ್ಷೆಗೂ ಪ್ಲೀಡರುಗಳ ಪರೀಕ್ಷೆಗೂ ವಿಧಿಸಲ್ಪಟ್ಟ ಪ್ರತಿ ಪಾಠದ ಹೆಚ್ಚು ನಂಬರುಗಳು ಮತ್ತು ಪರೀಕ್ಷೆ ನಡಿಯುವ ಕಾಲ ತೋರಿಸುವ ಇದರಡೀ ಕಂಡ ತಖ್ತೆಯು, ಸರ್ವರ ತಿಳುವಳಿಕೇ ಬಗ್ಗೆ ಪ್ರಕಟಿಸಲ್ಪಡುತ್ತೆ. ಆಯಾ ಪರೀಕ್ಷೆಗಳು ಇದರಡೀ ಕಂಡಂತೆ ಅಕ್ಷರಗಳಿಂದ ತೋರಿಸಲ್ಪಟ್ಟಿದೆ.

ಸಿವಿಲ್ ಪರೀಕ್ಷೆ	A	ರೆವಿನ್ಯೂ ಪರೀಕ್ಷೆ	C
ಕ್ರಿಮಿನಲ್ ,,	B	ಪ್ಲೀಡರ್ ,,	D

ದಿನಗಳು.	ಕಾಲ.	ಪಾಠಗಳು.	ಪರೀಕ್ಷೆ.	ಹೆಚ್ಚು ನಂಬರ್.
ಮದಲ್‌ದಿವಸ.	11 ರಿಂದ 12	ಲ್ಯಾಂಡ್ ಅಕ್ವಿಜಿಷರ್ಷ ಆಕ್ಟು ..	G.	50
	12 ರಿಂದ 1½	ರೆಜಿಸ್ಟ್ರೇಷರ್ಷ ಆಕ್ಟು ..	G. D.	50
	2 ,, 4	ಕ್ಯಾಟಲ್ ಟ್ರೆಸ್‌ಪೆಸ್ ಆಕ್ಟು, ಯಕ್ಸೈಸ್ ಆಕ್ಟು, ಅಫೀಂ ಆಕ್ಟು ..	G.	60
	4 ರಿಂದ 5	ಸ್ಟ್ಯಾಂಪ್ ವ ಕೋರ್ಟ್‌ಫೀಜ್ ಆಕ್ಟು ..	G. D.	40
ಎರಡನೇದಿವಸ.	11 ರಿಂದ 12	ಫಾರೆಸ್ಟ್ ರೂಲ್‌ಸು ..	G.	40
	12 ರಿಂದ 3	ರೆವಿನ್ಯೂ ವ ಸರ್ವೇ ಮ್ಯಾನ್ಯುಎಲ್‌ಗಳು ..	C.	150
	12 ರಿಂದ 2	ರೆವಿನ್ಯೂ ಮ್ಯಾನ್ಯುಎಲ್ .	D.	75
	3½ ,, 5½	ಸಿವಿಲ್ ಅಕೌಂಟ್ ಕೋಡು ಮತ್ತು ಫೈನಾನ್ಷಿಯಲ್ ಕೋಡು	C.	60
ಮೂರನೇದಿವಸ.	11 ರಿಂದ 2	ಇಂಡಿಯರ್ನ ಪೆನಲ್‌ಕೋಡು .	B. D.	100
	2½ ,, 5½	ಕ್ರಿಮಿನಲ್ ಪ್ರೋಸೀಡ್ಯೂರ್ ಕೋಡು .	B. D.	100
ನಾಲ್ಕನೇದಿವಸ.	11 ರಿಂದ 1	ಟಾರಟಸ್ ಕಾನೂನು. .	A. D.	70
	1½ ,, 3½	ಸಾಕ್ಷ್ಯಸಂಗ್ರಹ .	A. B. D.	80
	4 ,, 5	ಪೊಲೀಸ್ ರೂಲ್‌ಸು .	B.	50
ಐದನೇ ದಿವಸ.	11 ರಿಂದ 1½	ಹಿಂದೂಲಾ ..	A. D.	100
	2 ,, 4½	ಮಹಮ್ಮದ್ದರ್ನಲಾ ..	A. D.	70
ಆರನೇ ದಿವಸ.	11 ,, 1	ಸ್ಪೆಸಿಫಿಕ್ ರಲೀಫ್ ಆಕ್ಟು ..	A. D.	60
	2 ,, 5	ಸಿವಿಲ್ ಪ್ರೊಸಿಡ್ಯೂರ್ ಕೋಡ್ ..	A. D.	100
ಏಳನೇ ದಿವಸ.	10½ ,, 12½	ಲಾ ಆಫ್ ಮಾರ್ಗೇಜಸ್ ..	A. D.	60
	1 ,, 3	ಲಿಮಿಟೇಷರ್ನ ಆಕ್ಟು .	A. D.	60
	3½ ,, 5½	ಕಂಟ್ರಾಕ್ಟು ಆಕ್ಟು ..	A. D.	70
ಯಂಟನೇ ದಿವಸ.	11 ,, 1	ಪ್ಲೀಡಿಂಗ್‌ಯಾನೇ ವಾದ ನಡಿಸುವಣ ..	D..	60

ತಾರೀಖು 15ನೇ ಡಿಶಂಬರ್ 1887.

ನಂ. 157.—ಮೆ|| ಈ. ಸಿ. ಷಣ್ಮುಗವೇಲುಪಿಳ್ಳೆಯವರು ಬೆಂಗಳೂರು ಟರ್ವ ಮಾಜಿಸ್ಟ್ರೇಟ್ ಕೋರ್ಟಿನ ಚಾರ್ಜನ್ನು 1887ನೇ ಇಸವಿ ಡಿಶಂಬರ 8ನೇ ಮರ್ಕ್ಕುಮಿನ ಮಧ್ಯಾಹ್ನಾತ್ಪರ ಮೆ|| ಸೈಯ್ಯದ್ ನೊರುದ್ದೀನ್‌ಯವರಿಗೆ ಒಪ್ಪಿಸಿ ಇರುತ್ತಾರೆ.

ಬಮೋಜೀಬ್ ಹುಕ್ಕುಂ.

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರಿಟರಿ.

ಮೈಸೂರ ಗೆಜೆಟ್

ಸರ್ಕಾರದಿಂದ ಛಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 24, ಸ್ನೆ 1887.

ಈ ಭಾಗವನ್ನು ಪ್ರತ್ಯೇಕ ಶೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಪ್ರಕಟನೆ.

ತಾರೀಖು 22ನೇ ನವಂಬರ್ 1887ನೇ ಇಸವಿ.

ಶ್ರೀಮತ್ ಮಹಾರಾಜರವರ ಸರ್ಕಾರದ ಅನುಮತಿಯ ಪ್ರಕಾರ 1888ನೇ ಇಸವಿಗೆ ಈ ಕೆಳಗೆ ನಮೂದಾಗುವ ಕೋರ್ಟು ರಜಾ ದಿವಸಗಳ ಪಟ್ಟಿಯು ತಿಳುವಳಿಕೆ ಬಗ್ಯೆ ಈ ಮೂಲಕ ಪ್ರಸಿದ್ಧಪಡಿಸಿದೆ.

ಅದೇ ಪ್ರಕಾರ ಈ ದಿವಸಗಳು ಈ ಸೀಮೆಯಲ್ಲಿ ಎಲ್ಲಾ ಸೀವಿಲ್ ಕೋರ್ಟುಗಳಲ್ಲಿಯೂ ಸಂಪೂರ್ಣವಾದ ರಜಾದಿವಸಗಳಾಗಿ ಆಚರಿಸತಕ್ಕದ್ದು.

ರಜಾದಿವಸಗಳ ಪಟ್ಟಿ.

ಜನವರೀ 1ರಿಂದ 5ರ ವರಿಗೆ ಉಭಯ ದಿವಸಗಳೂ ಸೇರಿ ..	ಕ್ರಿಸ್ಮಸ್ ರಜಾ
ಸದರೀ 13, 14 ಸಹ	ಪೊಂಗಲು
ಫೆಬ್ರುವರೀ 10	ಶಿವರಾತ್ರೆ
ಸದರೀ 15	ಆಷ್‌ವೆಡ್ನೆಸ್‌ಡೆ
ಸದರೀ 17	ಶ್ರೀಮತ್ ಮಹಾರಾಜರವರ ಜನ್ಮದಿವಸ
ಸದರೀ 27	ಹೋಳೀ ಹಬ್ಬ
ಮಾರ್ಚ್ 29ರಿಂದ ಏಪ್ರೆಲ್ 3ರವರಿಗೆ ಉಭಯ ದಿವಸಗಳೂ ಸೇರಿ ..	ಈಸ್ಟರ್ ರಜಾ
ಏಪ್ರೆಲ್ 4ರಿಂದ ಮೇ 15ರ ವರೆಗೆ ಉಭಯ ದಿವಸಗಳೂ ಸೇರಿ ..	ಪ್ರತಿ ವರುಷವೂ ಬರುವ 6 ವಾರದ ವಿರಾಮ
ಮೇ 24	ಚಕ್ರವರ್ತಿನಿಯವರ ಜನ್ಮದಿವಸ
ಜೂನ್ 20	ಶ್ರೀಮತ್ ಯುವರಾಜರ ಜನ್ಮ ದಿವಸ
ಆಗಸ್ಟ್ 20, 21 ಸಹ	ಆಶ್ವಲಾಯನಾಪಸ್ತಂಭರ ಉಪಾಕರ್ಮ
ಸೆಪ್ಟಂಬರ್ 8	ಗೌರೀಹಬ್ಬ

ಸೆಪ್ಟಂಬರ 19	..	..	..	ಅನಂತಚತುರ್ದಶಿ
ಅಕ್ಟೋಬರ 5	..	..	..	ಮಹಾಲಯ ಅಮಾವಾಸ್ಯೆ
ಸದರೀ 6	..	..	..	ನವರಾತ್ರೀ ಆರಂಭ ದಿವಸ
ಸದರೀ 11ರಿಂದ 20ರ ವರಿಗೆ ಉಭಯ ದಿವಸಗಳೂ ಸೇರಿ			..	ದಸರಾ ರಜಾ
ನವಂಬರ 3	..	..	..	ದೀಪಾವಳಿ
ಸದರೀ 9	..	..	..	ಪ್ರಿನ್ಸಿಆಫ್‌ವೇಲ್ಸ್‌ರವರ ಜನ್ಮದಿವಸ
ಡಿಶಂಬರ 24ರಿಂದ 31ರ ವರಿಗೆ ಉಭಯ ದಿವಸಗಳೂ ಸೇರಿ				ಕ್ರಿಸ್‌ಮಸ್ ರಜಾ

ಈ ವರ್ಷದಲ್ಲಿ ಬರುವ ಸಮಸ್ತ ಭಾನುವಾರಗಳೂ—

ವಿಶೇಷ ವಿಷಯ—ಶ್ರೀಮನ್ ಮಹಾರಾಜರವರ ರಾಜ್ಯಾಭಿಷೇಕದ ದಿವಸ, ವಿನಾಯಕ ಚತುರ್ಥೀ ಮತ್ತು ಬಲಿಪಾಡ್ಯಮೀ ಹಬ್ಬಗಳು ಇವು ಭಾನುವಾರದ ದಿವಸ ಬರುವ ಕಾರಣ, ಇಲ್ಲಿ ಸೇರಿಸಿಲ್ಲ.

ಯುಗಾದೀ ಹಬ್ಬ, ಶ್ರೀರಾಮ ನವಮಿ, ಅನ್‌ರ್‌ಷಡೆ, ಇವುಗಳು ಪ್ರತಿ ವರ್ಷವೂ ಬರುವ ವಿರಾಮದ ರಜಾದಲ್ಲಿ ಸಂಭವಿಸುವ ಕಾರಣ ಇಲ್ಲಿ ಸೇರಿಸಿಲ್ಲ.

ಅಪ್ಪಣೇ ಪ್ರಕಾರ,

ಎಲ್. ಅನಂತಸ್ವಾಮಿರಾವ್,
ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮಾ.

ತಾರೀಖು 13ನೇ ಡಿಶಂಬರ 1887.

ಸನ್ 1886ನೇ ಇಸವಿ ಏಪ್ರೆಲ್ ಮಾಹೇ 24ನೇ ತಾರೀಖಿನ ಮೈಸೂರ ಗೆಜೆಟನಲ್ಲಿ ಪ್ರಾಮಿಷ್ ಮಾಡಿರುವ ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರವರ ಅದೇ ಮಾಹೇ 19ನೇ ಮುಕ್ಕಾಮಿನ ಇಸ್ತಿಹಾರ್ ಪ್ರಕಾರ ಮೈಸೂರು ಶೀಮೆ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳ ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರ ಹುಕ್ಕುಂ ಅನುಸರಿಸಿ ಇದರಿಂದ ಪ್ರಕಟಿಸುವದೇನಂದರೆ, ಇದುವರಿವಿಗೆ 2ನೇ ತರಗತಿಯ ಬಂಗ್ಲೆಯಂತೆ ಉಪಯೋಗಿಸುತ್ತಿದ್ದ ದೇವರಾಯದುರ್ಗ ಸ್ಟೇಟ್ ಫಾರೆಸ್ಟಿನಲ್ಲಿರುವ ಫಾರೆಸ್ಟು ಲಾಡ್ಜನ್ನು ಇದರಿಂದ ಪ್ರಯಾಣಸ್ತರಾಗಲಿ ಅಥವಾ ಶಿಕಾರೀ ಜನಗಳಾಗಲಿ ಉಪಯೋಗಿಸಲು ಅವಕಾಶ ವಿರುವದಿಲ್ಲ.

ಎಂ. ಅಣ್ಣಾಜೀರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ 576.

ಮೃತಪಟ್ಟ ಜಗನ್ನಾಥನಾಯಿಡೂ ಯವರ ಆಸ್ತೀ ವಿಷಯದಲ್ಲಿ—.

ಅರ್ಜೀದಾರ ವರದರಾಜುಲು ನಾಯಿಡೂಯವರು ಮೃತಪಟ್ಟ ಸದರೀ ಜಗನ್ನಾಥನಾಯಡೂ ಯವರಿಗೆ ಯಿರಡನೇ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ದೇವರಾಜಮೊಹಲಾ ಸ್ಥಳದ ಸದರೀ ವರದರಾಜುಲುನಾಯಡೂ ಯವರು ಸದರೀ ವಾಸಸ್ಥನಾಗಿ ಮೃತಪಟ್ಟ ಜಗನ್ನಾಥನಾಯಿಡೂ ಯವರ ಜಿಂದಗೀ ಬಗ್ಯಾಗಿ ಬರತಕ್ಕ 3200 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವರದರಾಜುಲು ನಾಯಿಡೂಯವರ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಗನ್ನಾಥ ನಾಯಿಡೂ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಡಿಶಂಬರ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸೀ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

1887ನೇ ಇಸವಿ ಅರ್ಜೀ ನಂಬರ್ 577.

ಮೃತಪಟ್ಟ ಮಹಂತದೇವವರ್ಡೇರ ಆಸ್ತೀ ವಿಷಯದಲ್ಲಿ—

ಅರ್ಜೀದಾರ 1ನೇ ಈರಯ್ಯ 2ನೇ ಶಂಕರಯ್ಯ 3ನೇ ಮಹಂತದೇವರು ಮೈನರ್ ಗಾರ್ಡಿಯನ್ ಮತ್ತು ತಾಯಿ ಮಲ್ಲಮ್ಮ ಸಹ ಮೃತಪಟ್ಟ ಸದರೀ ಮಹಂತದೇವವಡೇರಿಗೆ ಮಕ್ಕಳು, ಹೆಂಡತೀ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಬಿಳಿಗೆರೆ ಸೇರಿದ ವೀರಪ್ಪವಡೇರ ಹುಂಡೀ ಸ್ಥಳದ ಮೇಲ್ಕಂಡ 1—2—3ನೇ ಅರ್ಜೀದಾರು ಸದರಿ ವಾಸಸ್ಥನಾಗಿ ಮೃತಪಟ್ಟ ಮಹಂತದೇವರ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1—2—3ನೇ ಅರ್ಜೀದಾರ್ರು ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 30ರಲ್ಲು ಕೇಳಿಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಹಂತ ದೇವವಡೇರ ಆಸ್ತಿಗೆಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿಧೆ.

ಸರ್ 1887ನೇ ಇಸವಿ ಡಿಶಂಬರ್ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನೀ ನಮ್ಮದಸ್ತಖತ್ತೂಡನೇ ಕೊಡೋಣಾಗಿಧೆ.

1887ನೇ ಇಸವಿ ಅರ್ಜೀ ನಂಬರ್ 581.

ಮೃತಪಟ್ಟ ಶಾನಭೋಗ ವೆಂಕಟೇಶಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳಾದ ಕುಪ್ಪಮ್ಮನವರು, ಮೃತಪಟ್ಟ ಸದರೀ ವೆಂಕಟೇಶಯ್ಯನವರಿಗೆ ಹೆಂಡತೀ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಮುಗೂರು ಸ್ಥಳದ ಸದರೀ ಕುಪ್ಪಮ್ಮನವರು ಚಾಮರಾಜನಗರದ ತಾಲ್ಲೂಕು ತೆಳನೂರು ವಾಸಸನಾಗಿ ಮೃತಪಟ್ಟ ವೆಂಕಟೇಶಯ್ಯನವರ ಜಿಂದಗೀ ಬಗ್ಯಾಗಿ ಬರತಕ್ಕ 400 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಕುಪ್ಪಮ್ಮನವರ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟೇಶಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1887ನೇ ಇಸವಿ ಡಿಶಂಬರ್ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೂಡನೇ ಕೊಡೋಣಾಗಿಧೆ.

ಯಸ್. ಹೇಮಾಜಿರಾವ್,

ಡಿಸ್ಟ್ರಿಕ್ಟ ಜಡ್ಜ್.

ಮೈಸೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳೀಯೂದ ಡಿಕ್ರೀ ದೇಣೇದಾರ ಯಳಂದೂರು ಕಸಬೇಯಲ್ಲಿರುವ ಶಿವಾಚಾರದ ವೀರಶೆಟ್ಟೀಮಗ ಆವಂಣಶೆಟ್ಟೀ ಯಂಬವನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 321.

ಹುಕ್ಕುಂ.

ಮೇಲ್ಕಂಡ ಆವಂಣಶೆಟ್ಟೀ ಯಂಬವನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೊಬರೂ ಅರ್ಜೀದಾರನಾದ ಆವಂಣಶೆಟ್ಟೀ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣರಾಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 1ನೇ ಯಜಮಾನ ಪುಟ್ಟಣ್ಣನ ತರಫ಼ ಅಡ್ವೊಕೇಟ್ ಮ|| ಕಂಠೀರವಾಚಾರ್, 2ನೇ ನಾರಾಯಣಶೆಟ್ಟೀ ಖುದ್ದುಹಾಜರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ,—3ನೇ ಗುರುಬಸವಶೆಟ್ಟಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ವೀರ ಟ್ಟೀ ಮಗ ಆವಂಣಶೆಟ್ಟೀ ಯಂಬವನು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರು ತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರೀಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ನವಂಬರ್ 30ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್‌ನೀ ನಮ್ಮ ದಸ್ತಖತ್ತೊಡನೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಬಾಕಿ ಆದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ತಿರುಮಕೂಡ್ಲು ನರಸೀಪುರದ ತಾಲ್ಲೂಕು ನರಸೀಪುರದಲ್ಲಿರುವ ಯಜಮಾನ ಪುಟ್ಟಣ್ಣ ..	72—1—6	..	ಡಿಕರೀ ಬಾಬತು.	

ದಿವಾಳೀಯಾದ ಡಿಕ್ರೀದೇಣೇದಾರ ಮೈಸೂರಿನಲ್ಲಿರುವ ಅನಂತರಾವ ಯ್ಯನ ವಿಷಯದಲ್ಲಿ—

ಸನ್ 1887ನೇ ಇಸವಿ ದಿವಾಳೀ ಕೇಸ್ ನಂಬರು 271.

ಹುಕ್ಕುಂ.

ಮೇಲ್ಕಂಡ ಅನಂತರಾಮಯ್ಯನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನ ರೂಬರೂ ಅರ್ಜೀದಾರನಾದ ಅನಂತರಾಮಯ್ಯನ ಪರವಾಗಿ ಅಡ್ವೊಕೇಟ್ ಮೆ|| ನರಸುಹ್ಮಾಚಾರ್ರ ರಸ್ನು ಮತ್ತು ಸದರೀಯವನ ಲೇಣೇದಾರ್ರಾದ 1ನೇ ಅಳಸಿಂಗ್ರಾಚಾರಿ 9ನೇ ತಿಮ್ಮಯ್ಯ, 4ನೇ ಸಿದ್ದರಾಮಯ್ಯ ಇವರು ಖುದ್ದು ಹಾಜರು, 3ನೇ ಸುಬ್ಬಣ್ಣರಾವ್ 5ನೇ ಸುಬ್ಬಾಜೋಯಿಸ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರ ನ್ನೆಂದರೆ,—2ನೇ ಶ್ರೀನಿವಾಸಯ್ಯಂಗಾರ್ರು 6ನೇ ಸೈದ್ ಮಹಮ್ಮದ್ 7ನೇ ವೆಂಕಟಸುಬ್ಬಶೆಟ್ಟಿ 8ನೇ ನಂಜುಂಡಶೆಟ್ಟಿ 10ನೇ ರಂಗರಾಮನರಸು ಹ್ಮಾಚಾರಿ 11ನೇ ಬಚ್ಚಣ್ಣ.

ಸಿವಿಲ್ ಪ್ರೋಸಿಡೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅನಂತರಾಮಯ್ಯನು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ನವಂಬರ್ 30ನೇ ತಾರೀಖಿನಲ್ಲಿ ಈ ಕೋರ್ಟಿನ ಮೋಹರ್ ನಮ್ಮ ದಸ್ತಖತನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ಬಾಕಿ ಆದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಮೈಸೂರು ಸಂಪತ್ತುಕುಮಾರ ಬ್ಯಾಂಕ್ ಏಜಂಟ್ ಅಳಸಿಂಗ್ರಾಚಾರ್ರು ..	232—11—0	..	ಡಿಕರೀ ಬಾಬತು.	

ದಿವಾಳೀಯಾದ ಡಿಕ್ರೀ ದೇಣೇದಾರ ಶ್ರೀರಂಗಪಟ್ಟಣದ ತಾಲ್ಲೂಕು ರಾಂಪುರದಲ್ಲಿರುವ ತಿಬ್ಬೇಗೌಡನ ಹೆಂಡತೀ ಬೋರಮ್ಮನ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 334.

ಹುಕ್ಕುಂ.

ಮೇಲ್ಕಂಡ ಬೋರಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರಳಾದ ಬೋರಮ್ಮನ ಪರವಾಗಿ ಅಡ್ವೊಕೇಟ್ ಮೆ|| ನರಸುಹ್ಮಯ್ಯಂಗಾರ್ರನ್ನೂ ಮತ್ತು ಸದರೀಯವಳ ಲೇಣೇದಾರ್ರಾದ 1ನೇ ಗಂಗಾಧರಜೋಯಿಸ 2ನೇ ಬಿಳಗಿರಿಜೋಯಿಸ ಇವರ ತರಫ್ ಅಡ್ವೊಕೇಟ್ ನರಸುಹ್ಮಾಚಾರ್ರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ,—3ನೇ ವೆಂಕಟರಮಣಜೋಯಿಸ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಬೋರಮ್ಮನು ಹೊಂದುವದಕ್ಕೆ ಹಕ್ಕುದಾರಳಾಗುವದರ ಮೂಲಕ ದಿವಾಳೀಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸರ್ 1887ನೇ ಇಸವಿ ಡಿಶಂಬರ್ 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಕೊಡಬೇಕಾದ ತಾರೀಖು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ.
1	ಮೈಸೂರಿನಲ್ಲಿರುವ 1ನೇ ಗಂಗಾಧರಜೋಯಿಸ, 2ನೇ ಬಿಳಗಿರಿಜೋಯಿಸ, 3ನೇ ವೆಂಕಟರಮಣ ಜೋಯಿಸ.	76—0—6	..	ಡಿಕರೀ ಬಾಬತು.	

ದಿವಾಳೀಯಾದ ಡಿಕ್ರೀ ದೇಣೇದಾರ ಮೈಸೂರು ಬಸವನ ಮೊಹಲಾದಲ್ಲಿರುವ ಅನಂತರಾಮಯ್ಯಂಗಾರ್ರ ವಿಷಯದಲ್ಲಿ—

ಸರ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 328.

ಹುಕ್ಕುಂ.

ಮೇಲ್ಕಂಡ ಅನಂತರಾಮಯ್ಯಂಗಾರನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಅನಂತರಾಮಯ್ಯಂಗಾರ್ರು ಖುದ್ದು ಹಾಜರು ಮತ್ತು ಸದರೀಯವನ ಲೇಣೇದಾರ್ರಾದ 1ನೇ ಪಿ|| ಪಾಪಣ್ಣ 2ನೇ ರಾಮಯ್ಯ 3ನೇ ವೆಂಕಟಸಾಮಯ್ಯಂಗಾರ್ರ ತರಫ್ ಅಡ್ವೊಕೇಟ್ ನರಸುಹ್ಮಾಚಾರಿ ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರೆಂದರೆ,—4ನೇ ಸುಬ್ಬಾಜೋಯಿಸ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅನಂತರಾಮಯ್ಯಂಗಾರ್ರು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂ

ಥದಿಂದ ವಿಮೋಚಕನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯು ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ ದಾರೀಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸನ್ 1887ನೇ ಇಸವಿ ಡಿಶಂಬರ್ 1ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ನಮ್ಮ ದಸ್ತಖತನಿಸೀ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರು ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗದಿಂದ ಬಡ್ಡಿ ಮೊಬಲಗು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಮೈಸೂರಿನಲ್ಲಿರುವ ದೇಶೀ ಅರಶಿನವರಕಡೇ ಯೇಜಂಟ್ ಪಾಪಣ್ಣ	140—7—2	..	ಡಿಕರೀ ಬಾಬತು.	
3	ಮೇಲ್‌ಕೋಟೇ ವೆಂಕಟಸಾಮಯ್ಯಂಗಾರು ..	340—0—0	..	ಡಿಟೋ	
4	ಮೈಸೂರಿನಲ್ಲಿರುವ ಸುಬ್ಬಾ ಜೋಯಿಸ ..	50—0—0	..	ಡಿಟೋ	
		530—7—2			

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.

ನಂ. 16. ತಾರೀಖು 14ನೇ ಡಿಶಂಬರ್ 1887.

ತಿರುಮಕೂಡ್ಲು ನರಸೀಪುರದ ಸಬ್ ರೆಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ದಸ್ತೈವಜುಗಳನ್ನ ಕ್ರಮವಾದ ವಾರಸ್ ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು, ತಪ್ಪಿದಲ್ಲಿ 1877ನೇ ಇಸವಿ 3ನೇ ನಂಬರ್ ರೆಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಮೇರಿಗೆ ನಾಶ ಮಾಡಲ್ಪಡುತ್ತೆ:—

ನಂಬರ್.	ದಸ್ತೈವಜನ್ನ ಬರೆದು ಕೊಟ್ಟವರ ಹೆಸರು ಮತ್ತು ಅಡ್ರೆಸ್.	ದಸ್ತೈವಜನ್ನ ಬರೆಸಿಕೊಂಡವರ ಹೆಸರು ಮತ್ತು ಅಡ್ರೆಸ್.	ರಿಜಿಸ್ಟ್ರಿಗೆ ಹಾಜರ್ ಮಾಡಿದ ತಾರೀಖು.	ರಿಜಿಸ್ಟ್ರಿ ಮಾಡಿದ ತಾರೀಖು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
983 ——— 1885—86	ಸೋಸಲೇ ಹೋಬಳಿ ಕಂನಾಯಕನಹಳ್ಳೀಲಿರುವ ಬಲಗೈಜಾತೀ ಮರಿಯನ ಮಕ್ಕಳು ಚಕ್ರತನದಿಂದ ಜೀವಿಸುವ ಕುಂಡಮಾದ 1 ವನ ತಮ್ಮ ಚಕ್ರತನದಿಂದ ಜೀವಿಸುವ ಲಿಂಗಾ 1	ಶ್ರೀರಂಗಪಟ್ಣ ಕಸಬಾ ವಲ್ಲಿರುವ ಆರಾಧ್ಯಜಂಗಮ ಜಾತಿ ರುದ್ರಪ್ಪನ ಮಗ ಜಿರಾಯತು, ಕಸಬಿನ ನಂಜೇದೇವರು	29—10—85	20—11—85	ಕನ್ನಾಯಕನಹಳ್ಳಿಗ್ರಾಮದ ಖುಷ್ಕೀ ತರೀ ಮನೆಗೆ ಸಂಬಂಧವಿರುವ (200)ರೂಪಾಯಿನ ಆಧಾರಪತ್ರ ತಿಂಗಳು 1ಕ್ಕೆ ವಂದುರೂಪಾಯಿನ ಮೇರಿಗೆ ನಡೆದ ದಿವಸಕ್ಕೆ ಅಸಲು ಬಡ್ಡೀ ಸಹ ಪಾವತೀ ಆಗತಕ್ಕದ್ದು.

ಟಿ. ಅನಂದರಾವ್,
ರೆಜಿಸ್ಟ್ರಾರ್.

(62)

ನೋಟೀಸ್.

ತಾರೀಖು 9ನೇ ಡಿಶಂಬರ್ 1887.

ಅಲದೂರು ವಿವಾಹಮಂಗಲ ಪ್ರದ ಪರಸ್ಪರಸಹಾಯನಿಧೀ ಲಿಮಿಟೆಡ್ ಆಫೀಸಿನಿಂದ,—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕಂಪನೀಯನ್ನ ಸರ್ 1887ನೇ ಇಸವಿ ಡಿಶಂಬರ್ ತಾರೀಖು 30ನೇ ದಿನದಲ್ಲಿ ಮುಚ್ಚಿ ಬಿಡಲ್ಪಡುತ್ತೆ. ಈ ಕಂಪನೀ ಮೇಲೆ ಲೇಣೇ ದೇಣೇ ವಗ್ಯೆರೇ ವ್ಯವಹರಣೇ ಇರತಕ್ಕವರು ಆ ತಾರೀಖಿನ ವಳಗಾಗಿ ಕೋರ್ಟು ಮೂಲಕವೇ ಆಗಲಿ ಕಂಪನೀ ರೂಬರೂಬೇ ಆಗಲಿ ವ್ಯವಹರಿಸಿಕೊಳ್ಳಬೇಕು. ನಂತರ ವ್ಯವಹರಣೇ ಬಂದರೆ ಕಂಪನೀಯವರು ಜವಾಬ್‌ದಾರರಾಗುವದಿಲ್ಲ.

ನಾ|| ಸುಬ್ಬರಾವ್ ಮ್ಯಾನೇಜರ್. ನಂಜಪ್ಪಗೌಡ ಪ್ರಸಿಡೆಂಟ್.

ಮೈಸೂರ ಗೆಜೆಟ್ ಚಂದಾ ದರ ವಗ್ಯೆರೇ.

	ಚಂದಾ.			ಟಪ್ಪಾಲ್ ಹಾಸಲು ಮೈಸೂರು ಶೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.		ರೂ.	ಆ.
ಇಂಗ್ಲೀಷು ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8		1	12
ಇಂಗ್ಲೀಷು ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0		3	8
ಛಿವಷ್ ಮಾಹೇ ಯಾ ಕ್ವಾರಟರಿಗೆ	ದಾಮೂಷಾಯಿ ಪ್ರಕಾರ ದರಗಳು.				

ಸಿವಿಲ್ ಕೋರ್ಟಿನಿಂದ ಕೊಡಲ್ಪಡುವ, 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟೀಸುಗಳು:—

				ರೂ.	ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ (ಇಂಗ್ಲೀಷು ಅಥವಾ ಕನ್ನಡ)			..	2	8
ಎರಡನೇ ಸಲ ವ ಆ ತರುವಾಯ ಪ್ರತಿ ಆವರ್ತಿಗೂ ಡಿಟೋ		..	..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೇ ಸೆಕ್ಷನ್ ಅನುಸರಿಸಿ ದಿವಾಳೀ ಅಪ್ಲಿಕೇಷನ್ಗಳ ಬಗ್ಯೆ ನೋಟೀಸ್‌ಗಳಿಗೆ:-

				ರೂ.	ಆ.
ಮೊದಲನೇ ಸಲಕ್ಕೆ	..	..	..	5	0
ಎರಡನೇ ವ ಆ ತರುವಾಯ ಪ್ರತಿ ದಫಾಕ್ಕೆ		..	..	2	8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೇ ಸೆಕ್ಷನ್ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳೀ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತವೆ.

ಡ್ಯುಪ್ಲಿಕೇಟ್ ಕಾಫೀಪಟ್ಟಿ ವಗ್ಯೆರೇ ಕೊಡುವ ಬಗ್ಯೆ ರೆವಿನ್ಯೂ ಆಫೀಸರ್‌ಗಳು ಕೊಡುವ ನೋಟೀಸ್‌ಗಳಿಗೆ:—

				ರೂ.	ಆ.
ಮೊದಲನೇ ಸಲಕ್ಕೆ	..	ಪುಟ 1ಕ್ಕೆ	..	10	0
ಎರಡನೇ ಸಲ ವ ಆ ತರುವಾಯ ಪ್ರತಿ ಸಲಕ್ಕೂ		,,	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ;—

				ರೂ.	ಆ.
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	.	ಪಜ್ತಿ 1ಕ್ಕೆ	..	0	8
ಎರಡನೇ ದಫಾ	ಡಿಟೋ	ಡಿಟೋ	..	0	6
ಮೂರನೇ ವ ಆ ತರುವಾಯ ಪ್ರತಿ ಸಲಕ್ಕೆ		..	..	0	4

ಷರಾ.—ಚಂದಾ ವಗ್ಯೆರೇ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ವಂದಾಣೆ ಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಟಿ. ಟಿ. ಲೆನರಡ್,
ಮೈ. ಗೆ. ಕಂಪೈಲರ್.

Mysore Government Press, Bangalore.—13-12-87.—200.

1022

ಮೈಸೂರ್ ಗೆಜೆಟ್.

ಸರ್ಕಾರದಿಂದ ಪ್ರಕಾಶಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಜನವರೀ ತಾ॥ 22, ಸ್ಟ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೩ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟು.

1886ನೇ ಇಸವಿಯ 1ನೇ ನಂಬರ್ ರಿಗ್ಯುಲೇಷನ್.

ಇದರಡಿಕಂಡ ರಿಗ್ಯುಲೇಷನ್ ಯಾನೆ ನಿಬಂಧನೆಯು [illegible] 1886ನೇ ಇಸವಿ ಮಾರ್ಚಿ 15ನೇ ಮರ್ಕ್ಯಾರ್ [illegible] ಸನ ವನ್ನೇರಿದ ಶ್ರೀಮನ್ಮಹಾರಾಜ ರಾಜಾಸಾಹೇಬರವರ [illegible] ಜೂರಾತಿನಿಶಿ ಸಕಲಜನಗಳ ತಿಳುವಳಿಕೆಯ ಬಗ್ಯೆ ಇದರಿಂದ ಪ್ರಾಯಿಷ್ ಮಾಡಲ್ಪಟ್ಟಿರುತ್ತದೆ.

1874ನೇ ಇಸವಿಯ XIನೇ ನಂಬರ್ ಆಕ್ಟಿನ ದೆಸೆಯಿಂದ ತಿದ್ದುಪಡಿಯಾದ 1872ನೇ ಇಸವಿಯ Xನೇ ನಂಬರ್ ಆಕ್ಟಿಗೆ ಬದಲು; 1882ನೇ ಇಸವಿಯ Xನೇ ನಂಬರ್ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡನ್ನು ಮೈಸೂರು ದೇಶದಲ್ಲಿ ಜಾರಿಯೊಳು ತರತಕ್ಕ ಬಗ್ಯೆ ಏರ್ಪಟ್ಟ ರಿಗ್ಯುಲೇಷನ್ ಯಾನೆ ನಿಬಂಧನೆ.

ಆಲೋಚನೆ ಸಭೆಯೊಳಗಣ ಇಂಡ್ಯಾದೇಶದ ಗವರ್ನರ್ ಜನರಲ್ಲವರಿಂದ ಮಂಜೂರ್ಮಾಡಲ್ಪಟ್ಟ 1882ನೇ ಇಸವಿ 10ನೇ ನಂಬರ್ ಆಕ್ಟನ್ನು ಮೈಸೂರು ಶೀಮೆಯಲ್ಲಿ ಜಾರಿಗೆ ತರಬೇಕಾದ್ದು ಉಚಿತವಾದ್ದರಿಂದ ಸದರೀ ಆಕ್ಟು ಇದರಡಿ ಕಂಡ ಲೋಪಗಳು, ಭೇದಗಳು, ಅಧಿಕ್ಯಗಳು ಇವುಗಳೊಂದಿಗೆ ಮೈಸೂರು ಶೀಮೆಯಲ್ಲಿ ಕಾನೂನಾಗಿ ಜಾರೀಗೆ ಬರತಕ್ಕದ್ದೆಂದು ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರವರು ವಿಧಿಸಿರುತ್ತಾರೆ ಹ್ಯಾಗಂದರೆ—

1. ರಾಜಧಾನಿಪಟ್ಟಣಗಳಿಗೂ ರಾಜಧಾನಿಪಟ್ಟಣಗಳಲ್ಲಿರುವ ಮ್ಯಾಜಿಸ್ಟ್ರೇಟರ ಕೋರ್ಟುಗಳಿಗೂ ರಾಯಲ್ ಛಾರ್ಟರ್‌ನಿಂದ ಸ್ಥಾಪಿಸಲ್ಪಟ್ಟ ಹೈ ಕೋರ್ಟುಗಳಿಗೂ, ಪಂಜಾಬಿನ ಚೀಫ್ ಕೋರ್ಟಿಗೂ, ರಂಗೂನ್ ರಿಕಾರ್ಡರ ಮತ್ತು ಬ್ರಿಟಿಷ್ ಬರ್ಮಾ ಜುಡಿಷಿಯಲ್ ಕಮ್ಮಿಷನರ್ ಕೋರ್ಟುಗಳಿಗೂ, ಜಸ್ಟೀಸ್ ಆಫ್ ಪೀಸ್ ಎಂಬ ನ್ಯಾಯಾಧಿಪತಿಗಳ ಮೊಕದ್ದಮೆ, ಸರ್ಟಿಫಿಕೇಟ್ ಯಾನೆ ಅಮಾನತ್ ತಗ್ಗೆರ್ ಮತ್ತು ಅವರು ಚಲಾಯಿಸುವ ಅಧಿಕಾರಗಳು ಇವುಗಳಿಗೆ ಸಂಬಂಧಪಟ್ಟ ನಿಬಂಧನೆಗಳು, ಮತ್ತು ಮೈಸೂರ್ ಸಂಸ್ಥಾನದ ಹೊರಗೆ ಇರುವ ವಿಶೇಷವಾಗಿ ಗೊತ್ತಾದ ಸ್ಥಳಗಳಿಗೂ, ಕೋರ್ಟುಗಳಿಗೂ, ಆಫೀಸ್‌ಗಳಿಗೂ, ಲೋಕಲ್ ಗವರ್ನಮೆಂಟುಗಳಿಗೂ ಸಂಬಂಧಪಟ್ಟ ವಿಶಿಷ್ಟ ನಿಬಂಧನೆಗಳನ್ನೂ ಬಿಟ್ಟುಬಿಡಬೇಕು. ಆದರೆ ಇದರಲ್ಲಿ ಇರುವ ಯಾವ ಅಂಶವಾದ್ದರೂ ಯೂರೋಪಿಯನ್ ಬ್ರಿಟಿಷ್ ಸಬ್ಜಕ್ಟುಗಳ ಮೇಲಿನ ವ್ಯವಹಾರದಲ್ಲಿ ಅಧಿಕಾರಕೊಡುತ್ತದೆಂದು ಭಾವಿಸತಕ್ಕದ್ದಲ್ಲವು.

2. ಲೋಕಲ್ ಗವರ್ನ್ಮೆಂಟಿನವರಿಂದ ಮಾಡಲ್ಪಟ್ಟ ಆಕ್ಟಿಗೆ ಆಲೋಚನೆ ಸಭೆಯೊಳಗಣ ಗವರ್ನರ್ ಜನರಲ್ಲವರ ಅನುಮತಿಯನ್ನು ಪಡೆಯಬೇಕೆಂದು ವಿಧಿಸುವ ಅಥವಾ ಆಲೋಚನೆ ಸಭೆಯೊಳಗಣ ಗವರ್ನರ್ ಜನರಲ್ಲವರು ಯಾವದಾದರೂ ಒಂದು ಅಧಿಕಾರವನ್ನು ಚಲಾಯಿಸತಕ್ಕದ್ದೆಂದು ವಿಧಿಸುವ ವಿಶಿಷ್ಟ ನಿಬಂಧನೆಗಳೂ ಬಿಟ್ಟುಬಿಡಲ್ಪಡಬೇಕು.

3. 28, 29, 106, 206, 207, 213, 216, 217, 218, 226, 227, 337, 347, 348, 424, 463, 465, 469, 478, 479, 487, 499, 516, 517 ಮತ್ತು 532ನೇ ಸೆಕ್ಷನ್ನುಗಳಲ್ಲಿ ಹೈ ಕೋರ್ಟಿಗೆ ಸಂಬಂಧಪಟ್ಟ ವಿಶಿಷ್ಟ ನಿಬಂಧನೆಗಳೂ ಸದರೀ ಹೈ ಕೋರ್ಟಿನ ಪ್ರಸ್ತಾಪ ಅವುಗಳಲ್ಲಿ ಮಾಡಲ್ಪಡದೆ ಇದ್ದರೆ ಹ್ಯಾಗೋ ಹಾಗೆಯೇ ಬಿಟ್ಟುಬಿಡಲ್ಪಡತಕ್ಕವು.

4. "ಬ್ರಿಟಿಷ್ ಇಂಡಿಯಾ" ಎಂಬ ಮಾತುಗಳಿಗೆ ಬದಲಾಗಿ "ಮೈಸೂರು ಸೀಮೆ" ಎಂದು ಓದಿಕೊಳ್ಳಬೇಕು.

5. "ಯಾವದಾದರೂ ಲೋಕಲ್ ಗವರ್ನ್ಮೆಂಟ್" ಅಥವಾ "ಸದರೀ ಲೋಕಲ್ ಗವರ್ನ್ಮೆಂಟ್" ಅಥವಾ "ಪ್ರತಿ ಒಂದು ಲೋಕಲ್ ಗವರ್ನ್ಮೆಂಟ್" ಅಥವಾ "ಅದೇ ಲೋಕಲ್ ಗವರ್ನಮೆಂಟ್" ಎಂಬ ಮಾತುಗಳಿಗೆ ಬದಲಾಗಿ "ಮೈಸೂರು ಗವರ್ನಮೆಂಟ್" ಎಂದು ಓದಿಕೊಳ್ಳಬೇಕು.

6. "ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟ್" ಮತ್ತು "ಅಸಿಸ್ಟೆಂಟ್ ಡಿಸ್ಟ್ರಿಕ್ಟ ಸೂಪರಿಂಟೆಂಡೆಂಟ್" ಎಂಬ ಮಾತುಗಳಿಗೆ ಬದಲಾಗಿ "ಡೆಪ್ಯುಟಿ ಯಾ ಅಸಿಸ್ಟೆಂಟ್ ಕಮ್ಮಿಷನರ್" ಎಂದು ಓದಿಕೊಳ್ಳಬೇಕು.

7. "ಕಲೆಕ್ಟರ್" ಎಂಬ ಮಾತಿಗೆ ಬದಲಾಗಿ "ಡೆಪ್ಯುಟೀ ಕಮ್ಮಿಷನರ್" ಎಂದು ಓದಿಕೊಳ್ಳಬೇಕು.

8. "ಶ್ರೀಮರ್ಮಹಾರಾಜ್ಞೀ" ಎಂಬ ಮಾತುಗಳಿಗೆ ಬದಲಾಗಿ "ಮೈಸೂರು ಸೀಮೆಯ ಶ್ರೀಮನ್ಮಹಾರಾಜರು" ಎಂದು ಓದಿಕೊಳ್ಳಬೇಕು.

9. "ಶ್ರೀಮರ್ಮಹಾರಾಜ್ಞೀಯವರ ಸೈನ್ಯ" ಎಂಬ ಮಾತುಗಳಿಗೆ ಬದಲಾಗಿ "ಶ್ರೀಮನ್ಮಹಾರಾಜರವರ ಮಿಲಿಟರಿ ಫೌಜ್" ಎಂದು ಓದಿಕೊಳ್ಳಬೇಕು.

10. 1ನೇ 2ನೇ ಪ್ರಕರಣಗಳಲ್ಲಿ "1882ನೇ ಇಸವಿ ಜನವರಿ" ಎಂಬುವದಕ್ಕೆ ಬದಲಾಗಿ "1886ನೇ ಇಸವಿ ಜುಲೈ" ಎಂದು ಓದಿಕೊಳ್ಳಬೇಕು.

11. 1ನೇ ಪ್ರಕರಣದ 2ನೇ ಪ್ಯಾರಾದಲ್ಲಿ (*a*) (*b*) (*c*) (*d*) ಮತ್ತು (*e*) ಗುರ್ತುಳ್ಳ ಕಲಂಗಳಿಗೆ ಬದಲಾಗಿ "ಮೈಸೂರು ಸೀಮೆಯ ಗ್ರಾಮ ಪೋಲೀಸ್ ಉದ್ಯೋಗಸ್ತರು" ಎಂದು ಓದಿಕೊಳ್ಳಬೇಕು.

12. 3ನೇ ಪ್ರಕರಣದಲ್ಲಿ "ಪೋಲೀಸ ಮ್ಯಾಜಿಸ್ಟ್ರೇಟರು ಎಂಬ ಮಾತುಗಳು ಪ್ರಸಿಡೆನ್ಸೀ ಮ್ಯಾಜಿಸ್ಟ್ರೇಟರೆಂದು ಅರ್ಥ ಕೊಡುತ್ತದೆಂಬದಾಗಿ ಭಾವಿಸಬೇಕು," ಎಂದಿರುವ ಮಾತುಗಳನ್ನು ಬಿಟ್ಟುಬಿಡಬೇಕು.

13. "ಸದರೀ ಹೈಕೋರ್ಟ್" ಅಥವಾ "ಯಾವದಾದರೂ ಹೈಕೋರ್ಟ್" ಅಥವಾ "ಒಂದು ಹೈಕೋರ್ಟ್" ಅಥವಾ "ಹೈಕೋರ್ಟ್" ಎಂಬ ಮಾತುಗಳಿಗೆ ಬದಲಾಗಿ "ಚೀಫ್ ಕೋರ್ಟ್" ಎಂದು ಓದಿಕೊಳ್ಳಬೇಕು. ಮತ್ತು 4ನೇ ಪ್ರಕರಣದ (*i*) ಗುರ್ತುಳ್ಳ ಕಲಮಿಗೆ ಬದಲಾಗಿ ಇದರಡಿ ಕಂಡ ಮಾತುಗಳನ್ನು ಸೇರಿಸಬೇಕು:—"ಚೀಫ್ ಕೋರ್ಟ್ ಎಂಬ ಮಾತು ಮೈಸೂರು ಸಂಸ್ಥಾನದೊಳಗೆ ಕ್ರಿಮಿನಲ್ ಅಪೀಲಿಗಾಗಿ ಅಥವಾ ಪುನರ್ವಿಮರ್ಶೆಗಾಗಿ ಇರತಕ್ಕ ಅತ್ಯಂತ ದೊಡ್ಡ ಕೋರ್ಟ್ ಎಂದು ಅರ್ಥ ಕೊಡುತ್ತದೆ".

14. 4ನೇ ಪ್ರಕರಣ (*n*) ಗುರ್ತುಳ್ಳ ಕಲಮಿನಲ್ಲಿ "ಒಬ್ಬ ವಕೀಲನು" ಮತ್ತು "ಒಬ್ಬ ಅಟರ್ನಿ" ಎಂಬ ಮಾತುಗಳನ್ನು ಬಿಟ್ಟು ಬಿಡಬೇಕು.

15. 6ನೇ ಪ್ರಕರಣದ 1ನೇ ಪ್ಯಾರಾದಲ್ಲಿ "ಐದು" ಎಂಬ ಶಬ್ದಕ್ಕೆ ಬದಲಾಗಿ "ನಾಲ್ಕು" ಎಂದು ಓದಿಕೊಳ್ಳಬೇಕು.

16. 7ನೇ ಪ್ರಕರಣದಲ್ಲಿ "ಪ್ರತಿ ಒಂದು ಪ್ರಾವಿನ್ಸ" ಎಂಬ ಮಾತುಗಳಿಗೆ ಬದಲಾಗಿ "ಈ ಪ್ರಾವಿನ್ಸ್" ಎಂದು ಓದಿಕೊಳ್ಳಬೇಕು.

17. 30ನೇ ಪ್ರಕರಣಕ್ಕೆ ಬದಲಾಗಿ ಈ ಕೆಳಗೆ ಕಂಡದ್ದನ್ನು ಓದಿಕೊಳ್ಳಬೇಕು.

"29ನೇ ಪ್ರಕರಣದಲ್ಲಿ ಏನು ನಮೂದಿದ್ದಾಗ್ಯೂ ಮೈಸೂರು ಗವರ್ನಮೆಂಟಿನವರು ಮರಣ ದಂಡನೆಗೆ ಒಳಪಡದ ವಿಶಿಷ್ಟ ತಕ್ಸೀರುಗಳನ್ನೂ ಮ್ಯಾಜಿಸ್ಟ್ರೇಟ ತರೀಕ ದರ್ಯಾಫ್ತೀ ಮಾಡುವಂತೆ ಒಬ್ಬ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ಅಧಿಕಾರವನ್ನು ಕೊಡಬಹುದು."

18. 45ನೇ ಪ್ರಕರಣದಲ್ಲಿ "ಕೋರ್ಟಾಫ್ ವಾರ್ಡ್ಸ್" ಎಂಬ ಮಾತುಗಳಿಗೆ ಬದಲಾಗಿ "ಡಿಸ್ಟ್ರಿಕ್ಟ್ ಕೋರ್ಟು" ಎಂದು ಓದಿಕೊಳ್ಳಬೇಕು.

19. 54ನೇ ಪ್ರಕರಣದ 6ನೇ ಕಲಮನ್ನು ಬಿಟ್ಟುಬಿಡಬೇಕು.

20. 132ನೇ ಪ್ರಕರಣದಲ್ಲಿ "ಅಲೋಚನೆ ಸಭೆಯೊಳಗಣ ಗವರ್ನರ ಜನರಲ್" ಎಂಬ ಮಾತುಗಳಿಗೆ ಬದಲಾಗಿ "ಮೈಸೂರು ಗವರ್ನಮೆಂಟಿನವರು" ಎಂದು ಓದಿಕೊಳ್ಳಬೇಕು.

21. 164ನೇ ಪ್ರಕರಣದ 1ನೇ ಕಲಮಿಗೆ ಬದಲಾಗಿ "ಯಾವ ಮಾಜಿಸ್ಟ್ರೇಟಾದರೂ ಈ ಅಧ್ಯಾಯವನ್ನನುಸರಿಸಿ ತನಿಖೀ ಮಾಡುವ ಕಾಲದಲ್ಲಿ ಯಾಗಲಿ ಅಥವಾ ಅದರನಂತರ ವಿಚಾರಣೆಯಾ ದರಿಯಾಫ್ತು ಶುರುಮಾಡುವದಕ್ಕಿಂತ ಮುಂಚೆ ತನಿಗೆ ಹೇಳಲ್ಪಡುವ ಕೈಫಿಯತ್ತನ್ನಾಗಲಿ ಕಬೂಲಿ ಕೈಫಿಯತ್ತನ್ನಾಗಲಿ ರಿಕಾರ್ಡು ಮಾಡಬಹುದು. ಪರಂತು ಸದರೀ ಮ್ಯಾಜಿಸ್ಟ್ರೇಟರು ಸದರೀ ತನಿಖೀಯಲ್ಲಿ ಪೊಲೀಸ್ ಆಫೀಸರಾಗಿ ಅಮಲು ನಡಿಸಿ ಇರಕೂಡದು." ಎಂಬದಾಗಿ ಓದಿಕೊಳ್ಳಬೇಕು.

22. 174ನೇ ಪ್ರಕರಣದ 4ನೇ ಪ್ಯಾರಾವಿಗೆ ಬದಲಾಗಿ ಇದರಡಿ ಕಂಡ ಮಾತುಗಳನ್ನು ಶೇರಿಸಬೇಕು.

"ಈ ಪ್ರಕರಣವನ್ನನುಸರಿಸಿ ಮಾಡುವ ತನಿಖೆಗಳು ಗ್ರಾಮ ಪಟೇಲನಿಂದ ನಡಿಸಲ್ಪಡಬಹುದು. ಅನಂತರ ಆತನು ಅವುಗಳ ಫಲಿತಾಂಶವನ್ನು ದರ್ಯಾಫ್ತೀ ಮಾಡುವದಕ್ಕೆ ಅಧಿಕಾರವುಳ್ಳ ಅತ್ಯಂತ ಸಮೀಪವಾಗಿರುವ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕು."

23. 186ನೇ ಪ್ರಕರಣದಲ್ಲಿ "ಬ್ರಿಟಿಷ್ ಇಂಡಿಯಾ ಒಳಗಾಗಲಿ, ಹೊರಗಾಗಲಿ" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

24. 188ನೇ ಪ್ರಕರಣಕ್ಕೆ ಬದಲಾಗಿ ಇದರಡಿ ಕಂಡ ಪ್ರಕರಣವನ್ನು ಶೇರಿಸತಕ್ಕದ್ದು.

"188 ಮೈಸೂರು ಸಂಸ್ಥಾನದ ಹೊರಗಿನ ಯಾವ ಪ್ರದೇಶದಲ್ಲಾಗಲಿ ಮೈಸೂರು ಶ್ರೀಮಿಯು ಮಹಾರಾಜರವರ ಯಾವ ಪ್ರಜೆಯಾದರೂ ತಕ್ಸೀರ್ ಮಾಡಿದರೆ ಯೆಲ್ಲಿ ಅವನು ಕಂಡು ಹಿಡಿಯಲ್ಪಟ್ಟನೋ ಅಲ್ಲಿ ಮೈಸೂರು ಸಂಸ್ಥಾನದೊಳಗಿನ ಒಂದು ಸ್ಥಳದಲ್ಲಿ ಸದರೀ ತಕ್ಸೀರುನಡದಿದ್ದರೆ ಹ್ಯಾಗೋ ಹಾಗೆ ಆ ತಕ್ಸೀರಿಗಾಗಿ ಅವನ ಮೇಲೆ ವ್ಯವಹರಿಸಬಹುದು.

ಪರಂತು ಕೃತ್ಯನಡೆಸಿದ ಸ್ಥಳದಲ್ಲಿ ಸದರೀ ತಕ್ಸೀರಿಗಾಗಿ ಆತನ ಮೇಲೆ ಮುಂಚೆ ದರಿಯಾಫ್ತೀ ಮಾಡಲ್ಪಡದಿರಬೇಕು. ಮತ್ತು ಬ್ರಿಟಿಷ್ ಗವರ್ನಮೆಂಟಿನವರು ತಮ್ಮ ಸುಫರ್ದಿಗೆ ಅಪರಾಧಿಯನ್ನು ಒಪ್ಪಿಸುವಂತೆ ಕೇಳುವದಕ್ಕೆ ಅರ್ಹವಾದ ತಕ್ಸೀರಾಗಿ ಅದು ಇದ್ದರೆ ದರ್ಬಾರಿನವರು ಮೊದಲು ರೆಸಿಡೆಂಟರಿಗೆ ತಿಳಿಸಿ, ಬ್ರಿಟಿಷ್ ಗವರ್ನಮೆಂಟಿನವರು ಅಪರಾಧಿಯನ್ನು ತಮ್ಮ ಸುಫರ್ದಿಗೆ ಒಪ್ಪಿಸುವಂತೆ ಕೇಳತಕ್ಕ ಬಗ್ಯೆ ಇರುವ ಹಕ್ಕನ್ನು ಬಿಟ್ಟು ಬಿಡುತ್ತಾರೆಯೋ ಎಂಬುವದನ್ನು ನಿಶ್ಚಯಿಸಿಕೊಳ್ಳಬೇಕು."

25. 189ನೇ ಪ್ರಕರಣದಲ್ಲಿ "ಪೊಲಿಟಿಕಲ್ ಏಜಂಟ್ ಅಥವಾ" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

26. 190ನೇ ಮತ್ತು 194ನೇ ಪ್ರಕರಣಗಳನ್ನು ಬಿಟ್ಟುಬಿಡಬೇಕು.

27. 191ನೇ ಪ್ರಕರಣಕ್ಕೆ ಇದರಡಿ ಬರುವದನ್ನು ಶೇರಿಸಬೇಕು.

ಏನೆಂದರೆ:—

"(c) ಗುರ್ತುಳ್ಳ ಕಲಮಿಗೆ ಅನುಗುಣವಾಗಿ ಒಬ್ಬ ಮ್ಯಾಜಿಸ್ಟ್ರೇಟು ತಕ್ಸೀರ್ ಫಿರ್ಯಾದನ್ನು ಹಿಡಿದಾಗ ಅಪರಾಧಿಯು ಅಥವಾ ಅನೇಕ ಅಪರಾಧಿಗಳು ಇದ್ದರೆ ಅವರ ಪೈಕಿ ಯಾವನಾದರೂ ಒಬ್ಬ ಅಪರಾಧಿಯು ಸದರೀ ಮೊ

ಕದ್ದಮೆಯು ಸದರೀ ಮ್ಯಾಜಿಸ್ಟ್ರೇಟರಿಂದ ವಿಚಾರಣೆ ಮಾಡಲ್ಪಡುವದಕ್ಕೆ ಬದಲಾಗಿ ಇನ್ನೊಬ್ಬ ಮ್ಯಾಜಿಸ್ಟ್ರೇಟರಿಗೆ ವರ್ಗ ಮಾಡಲ್ಪಡುವಂತೆ ಆಗಲಿ ಅಥವಾ ಸೆಷನ್ಸ್ ಕೋರ್ಟಿಗೆ ಕಮಿಟ್ ಮಾಡುವಂತೆ ಯಾಗಲಿ ಕೇಳಿಕೊಳ್ಳತಕ್ಕ ಹಕ್ಕು ಉಳ್ಳವನಾಗಿರುತ್ತಾನೆ."

28. 197ನೇ ಪ್ರಕರಣದಲ್ಲಿ "ಇಂಡ್ಯಾ ಗವರ್ನಮೆಂಟ್ ಅಥವಾ" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು. ಮತ್ತು "ಅವನನ್ನು ಸ್ಥಾನಾಂತರ ಪಡಿಸುವದಕ್ಕೆ ಅಧಿಕಾರವುಳ್ಳ ಗವರ್ನಮೆಂಟ್" ಎಂಬ ಮಾತುಗಳಿಗೆ ಬದಲಾಗಿ "ಅಂತಾ ಗವರ್ನಮೆಂಟ್" ಎಂದು ಓದಿಕೊಳ್ಳಬೇಕು.

29. 211ನೇ ಪ್ರಕರಣದ 2ನೇ ಪ್ಯಾರಾದಲ್ಲಿ "ಮತ್ತು ಅಪಾದನೆಯಿಟ್ಟ" ಎಂಬ ಮಾತುಗಳು ಮೊದಲ್ಗೊಂಡು ಪ್ರಕರಣದ ಅಂತ್ಯದವರಿವಿಗೂ ಬಿಟ್ಟುಬಿಡಬೇಕು.

30. 214ನೇ ಪ್ರಕರಣವನ್ನು ಬಿಟ್ಟುಬಿಡಬೇಕು.

31. 215ನೇ ಪ್ರಕರಣದಲ್ಲಿ "ಅಥವಾ 214ನೇ ಪ್ರಕರಣ" ಎಂಬ ಮಾತುಗಳನ್ನೂ ಮತ್ತು ಅಂಕೆಗಳನ್ನೂ ಬಿಟ್ಟುಬಿಡಬೇಕು.

32. 216ನೇ ಪ್ರಕರಣದ 2ನೇ ಪ್ಯಾರಾವನ್ನು ಬಿಟ್ಟುಬಿಡಬೇಕು.

33. 320ನೇ ಪ್ರಕರಣದಲ್ಲಿ (c) ಗುರ್ತುಳ್ಳ ಕಲಮಿಗೆ ಬದಲಾಗಿ "ಡೆಪ್ಯೂಟೀ ಕಮಿಷನರುಗಳು" ಎಂಬದಾಗಿ ಸೇರಿಸಬೇಕು.

34. 341ನೇ ಪ್ರಕರಣದಲ್ಲಿ "ಹೈಕೋರ್ಟು ಅಲ್ಲದ ಇತರ ಕೋರ್ಟಿನಲ್ಲಿ ಆದ ಸಂಗತಿಯಲ್ಲಿ" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

35. 266, 267, 273,ನೇ ಪ್ರಕರಣಗಳನ್ನೂ 274ನೇ ಪ್ರಕರಣದ 1ನೇ ಪ್ಯಾರಾವನ್ನೂ 276ನೇ ಪ್ರಕರಣದ 3ನೇ ನಿಯಮವನ್ನೂ 277ನೇ ಪ್ರಕರಣದ 3ನೇ ಪ್ಯಾರಾವನ್ನೂ, 296, 305, 308, 311, 312, 313, 314, 315, 316, 317, 318, 333, 334, 335, 336, 362, 365, ಮತ್ತು 539 ನೇ ಪ್ರಕರಣಗಳನ್ನೂ ಬಿಟ್ಟುಬಿಡಬೇಕು.

36. 344ನೇ ಪ್ರಕರಣದ 3ನೇ ಪ್ಯಾರಾದಲ್ಲಿ "ಹೈ ಕೋರ್ಟ್ ನವರಿಂದ ಅಲ್ಲದ ಇತರ" ಎಂಬ ಮಾತುಗಳನ್ನು ಬಿಟ್ಟು ಬಿಡಬೇಕು.

37. 408ನೇ ಪ್ರಕರಣದ (b) ಗುರ್ತುಳ್ಳ ನಿಯಮವನ್ನು ಬಿಟ್ಟು ಬಿಡಬೇಕು.

38. 434ನೇ ಪ್ರಕರಣವನ್ನು ಬಿಟ್ಟು ಬಿಡಬೇಕು.

39. 439ನೇ ಪ್ರಕರಣದಲ್ಲಿ "273ನೇ ಪ್ರಕರಣ ಪ್ರಕಾರ ಒಂದು ಖತಾಯತಿಗೆ ಲಗಾವಾಗತಕ್ಕದ್ದು ಅಲ್ಲ, ಅಥವಾ" ಎಂಬ ಮಾತುಗಳನ್ನು ಬಿಟ್ಟು ಬಿಡಬೇಕು.

40. 443, 444, 445, 446, 447, 448, 449, 450, 451, 452, 453, 454, 455, 456, 457, 458, ಮತ್ತು 459ನೇ ಪ್ರಕರಣಗಳನ್ನು ಬಿಟ್ಟು ಬಿಡಬೇಕು.

41. 462ನೇ ಪ್ರಕರಣದಲ್ಲಿ "451ನೇ ಪ್ರಕರಣ ಅಥವಾ" ಎಂಬ ಮಾತುಗಳನ್ನೂ ಮತ್ತು ಅಂಕೆಗಳನ್ನೂ ಬಿಟ್ಟು ಬಿಡಬೇಕು.

42. 463ನೇ ಪ್ರಕರಣದ ಮೊದಲಲ್ಲಿ ಬರುವ "ಯೂರೋಪಿಯನ್ ಬ್ರಿಟಿಷ್ ಸಬ್ಜೆಕ್ಟ್‌ಗಳು" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

43. 477ನೇ ಪ್ರಕರಣದಲ್ಲಿ "444ನೇ ಪ್ರಕರಣದ ನಿಬಂಧನೆಗಳಿಗೆ ಒಳಪಟ್ಟು" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

44. 480ನೇ ಪ್ರಕರಣದಲ್ಲಿ 2ನೇ ಪ್ಯಾರಾವನ್ನು ಬಿಟ್ಟುಬಿಡಬೇಕು.

45. 491ನೇ ಪ್ರಕರಣವನ್ನು ಬಿಟ್ಟುಬಿಡಬೇಕು.

46. 503ನೇ ಪ್ರಕರಣದ 2ನೇ ಪ್ಯಾರಾವಿಗೆ ಬದಲಾಗಿ ಇದರಡಿ ಕಂಡದ್ದನ್ನು ಶೇರಿಸಬೇಕು.

" ಸಾಕ್ಷಿಯು ಬ್ರಿಟಿಷ್ ಇಂಡ್ಯಾದಲ್ಲಿ ವಾಸಮಾಡುವ ಪಕ್ಷದಲ್ಲಿ ಬ್ರಿಟಿಷ್ ಇಂಡ್ಯಾ ಗವರ್ನ್ಮೆಂಟಿನವರು ಈ ವಿಷಯಕ್ಕಾಗಿ ನೇಮಿಸುವ ಉದ್ಯೋಗಸ್ಥರಿಗೆ ಸದರೀ ಕಮಿಷನನ್ನು ಕಳುಹಿಸಬಹುದು."

47. 504ನೇ ಪ್ರಕರಣವನ್ನು ಬಿಟ್ಟುಬಿಡಬೇಕು.

48. (1) 526ನೇ ಪ್ರಕರಣದಲ್ಲಿ "267ನೇ ಪ್ರಕರಣದಲ್ಲಿ ನಿಬಂಧಿಸೋಣಾದ ಮೇರಿಗೆ ಶಿವಾಯಿ" ಎಂಬ ಮಾತುಗಳನ್ನೂ ಮತ್ತು ಅಂಕೆಗಳನ್ನೂ ಬಿಟ್ಟುಬಿಡಬೇಕು; ಮತ್ತು ಇದರಡಿ ಕಂಡ ಮಾತುಗಳನ್ನು (*d*) ಗುರುತು ಳ್ಳ ಕಲಮಿನ ತರುವಾಯ ಶೇರಿಸಬೇಕು.

"ಅಥವಾ"

"(*e*) ಸದರೀ ಹುಕುಂ ನ್ಯಾಯ ವಿಮರ್ಶೆಗೆ ಉಪಯೋಗವಾದ್ದಾಗಿದೆ ಎಂದು"

(2) ಸದರೀ ಪ್ರಕರಣದ (3ನೇ ಕಲಮಿನ ತರುವಾಯ ಇದರಡಿ ಕಂಡದ್ದನ್ನು ಶೇರಿಸಬೇಕು ಏನಂದರೆ.—

"ಅಥವಾ"

(4) ಸದರೀ ಕೋರ್ಟಿಗಾಗಲೀ ಸೆಷನ್ಸ ಕೋರ್ಟಿಗಾಗಲೀ ಒಬ್ಬ ತಕ್ಸೀರ್ ಆಪಾದನೆ ಪಟ್ಟ ಮನುಷ್ಯನು ದರ್ಯಾಫ್ತಿ ಬಗ್ಗೆ ಕಮಿಟ್ಟಾಗಬೇಕೆಂದಾಗಲಿ"

49. 526ನೇ ಪ್ರಕರಣದ ತರುವಾಯ ಇದರಡಿಕಂಡ ಪ್ರಕರಣವನ್ನು ಶೇರಿಸಬೇಕು.

ಏನಂದರೆ.—

526ನೇ ಪ್ರಕರಣವನ್ನನುಸರಿಸಿ ಅರಿಕೆ ಮಾಡಿಕೊಳ್ಳುವಲ್ಲಿ ಅಡ್ಜರ್ನಮೆಂಟ್.

"526 A. ಯಾವ ಕ್ರಿಮಿನಲ್ ಮೊಕದ್ದಮೆಯಲ್ಲಿಯಾಗಲಿ ಅಪೀಲಿನಲ್ಲಿಯಾಗಲಿ, ಹಿಯರಿಂಗ್ ಪ್ರಾರಂಭವಾಗುವದಕ್ಕೆ ಮುಂಚೆ ಪಬ್ಲಿಕ್ ಪ್ರಾಸಿಕ್ಯೂಟರಾಗಲಿ, ಫಿರ್ಯಾದಿಯಾಗಲಿ; ಆಪಾದನೆ ಪಟ್ಟವನಾಗಲಿ, 526ನೇ ಪ್ರಕರಣವನ್ನು ಅನುಸರಿಸಿ ಸದರೀ ಮೊಕದ್ದಮೆಯ ವಿಷಯವಾಗಿ ಅರಿಕೆಮಾಡಿಕೊಳ್ಳಬೇಕೆಂಬ ತನ್ನ ಅಭಿಪ್ರಾಯವನ್ನು ಸದರೀ ಮೊಕದ್ದಮೆ ಅಥವಾ ಅಪ್ಪೀಲು ಎಲ್ಲಿ ಫೈಸಲಾಗದೆ ಇರುತ್ತದೋ ಆ ಕೋರ್ಟಿಗೆ ತಿಳಿಸಿದರೆ ಸದರೀ ತಕ್ಸೀರ್ ಆಪಾದನೆಪಟ್ಟ ಮನುಷ್ಯನನ್ನು ಡಿಫೆನ್ಸ ಕೊಡುವದಕ್ಕೆ ಹುಕ್ಕುಂ ಮಾಡುವದಕ್ಕೆ ಮುಂಚಿತವಾಗಿ ಅಥವಾ ಅಪೀಲಾಗಿದ್ದರೆ ಅಪೀಲು ವಿಚಾರಣೆ ಆಗುವದಕ್ಕಿಂತ ಮುಂಚಿತವಾಗಿ ಅರ್ಜಿಯನ್ನು ಕೊಡಲಿಕ್ಕೂ ಅದರ ವಿಷಯದಲ್ಲಿ ಹುಕ್ಕುಂ ಪಡೆಯಲಿಕ್ಕೂ ಮುನಾಸಬ್ ವ್ಯವಧಾನ ಕೊಡುವಹಾಗೆ ಸದರೀ ಕೋರ್ಟಿನವರು ದರ್ಯಾಫ್ತಿಯನ್ನು ನಿಲ್ಲಿಸುವ ಯಾ ಅಡ್ಜರ್ನ ಮಾಡುವ ಬಗ್ಗೆ 344ನೇ ಪ್ರಕರಣದಲ್ಲಿ ಕೊಡಲ್ಪಟ್ಟಿರುವ ಅಧಿಕಾರವನ್ನು ಚಲಾಯಿಸತಕ್ಕದ್ದು"

50. 527ನೇ ಪ್ರಕರಣವನ್ನು ಬಿಟ್ಟುಬಿಡಬೇಕು.

51. 528ನೇ ಪ್ರಕರಣಕ್ಕೆ ಇದರಡಿ ಕಂಡದ್ದನ್ನು ಶೇರಿಸಬೇಕು.

ಏನಂದರೆ.—

"ಈ ಪ್ರಕರಣವನ್ನನುಸರಿಸಿ ಒಂದು ಹುಕುಮನ್ನು ಕೊಡುವ ಮ್ಯಾಜಿಸ್ಟ್ರೇಟರು ಸದರೀ ಹುಕುಮನ್ನು ಕೊಡಲಿಕ್ಕೆ ಇರುವ ಕಾರಣವನ್ನ ಲಿಖಿತಮೂಲಕ ರಿಕಾರ್ಡು ಮಾಡತಕ್ಕದ್ದು"

52. 553ನೇ ಪ್ರಕರಣಕ್ಕೆ ಬದಲಾಗಿ ಇದರಡಿ ಕಂಡದ್ದನ್ನು ಸೇರಿಸಬೇಕು.

"ಮೈಸೂರು ಸರ್ಕಾರದವರ ಮಂಜೂರಾತಿಯನ್ನು ಮೊದಲು ಪಡೆದು ಚೀಫ್ ಕೋರ್ಟಿನವರು ಆಗಿಂದಾಗ್ಯೆ ಸಬಾರ್ಡಿನೇಟ್ ಕೋರ್ಟುಗಳ ರಿಕಾರ್ಡುಗಳನ್ನು ಪರೀಕ್ಷಿಸುವದಕ್ಕೆ ರೂಲ್ಸುಗಳನ್ನು ಮಾಡಬಹುದು. ಮತ್ತು ಸದರೀ ಮಂಜೂರಾತಿಯಿಂದ ಆಗಿಂದಾಗ್ಯೆ.

(a) ತಮಗೆ ತಾಬೇದಾರಿಯಾಗಿರುವ ಎಲ್ಲಾ ಕ್ರಿಮಿನಲ್ ಕೋರ್ಟುಗಳಲ್ಲಿ ಇಡಬೇಕಾಗ ಸಮಸ್ತ ಪುಸ್ತಕಗಳು, ಖತಾಯಿತಿಗಳು—ವ—ಲೆಕ್ಕಗಳು ಇಡುವ ಬಗ್ಯೆ, ಮತ್ತು ಅಂಥಾ ಕೋರ್ಟುಗಳಿಂದ ತಯಾರಾಗಿ ರವಾನೆ ಆಗತಕ್ಕ ಯಾವದಾದರೂ ರಿಟರ್ನುಗಳನ್ನ—ಯಾ—ಸ್ಟೇಟ್‌ಮೆಂಟುಗಳನ್ನ ತಯಾರುಮಾಡುವ—ವ—ರವಾನ ಮಾಡುವ ಬಗ್ಯೆ ಕ್ರಮಗಳನ್ನು ಮಾಡಲೂ;

(b) ನಮೂನೆ ಏರ್ಪಡಿಸಬೇಕಾದ್ದು ಅಗತ್ಯವೆಂತ ತಮಗೆ ತೋರುವ ಸದರೀ ಕೋರ್ಟುಗಳ ಪ್ರತಿ ಪ್ರೊಸೀಡಿಂಗ್ಸ್ ನಮೂನೆಗಳನ್ನು ಏರ್ಪಡಿಸಲೂ;

(c) ತಮ್ಮ ಸ್ವಂತ ಕೋರ್ಟಿನಲ್ಲಿ ನಡಿಯತಕ್ಕ ಪದ್ಧತಿಯನ್ನು—ವ—ಪ್ರೊಸೀಡಿಂಗ್ಸುಗಳನ್ನು ಕ್ರಮ ಪಡಿಸುವದಕ್ಕೂ, ಮತ್ತು ತಮಗೆ ತಾಬೇದಾರಿಯಾದ ಸಮಸ್ತ ಕ್ರಿಮಿನಲ್ ಕೋರ್ಟುಗಳಲ್ಲಿ ನಡಿಯತಕ್ಕ ಪದ್ಧತಿಯನ್ನು—ವ—ಪ್ರೊಸೀಡಿಂಗ್ಸುಗಳನ್ನು ಕ್ರಮಪಡಿಸುವದಕ್ಕೋಸ್ಕರ, ರೂಲುಗಳನ್ನು ನಿರ್ಣಯಿಸಲೂ; ಮತ್ತು

(d) ಈ ಕೋಡಿನ ಪ್ರಕಾರ ಜುರುಮಾನೆ ವಸೂಲಾತಿ ಬಗ್ಯೆ ಕೊಡಲ್ಪಟ್ಟಾದ ವಾರಂಟುಗಳ ಜಾರಿಯನ್ನು ಕ್ರಮ ಪಡಿಸುವದಕ್ಕಾಗಿ ಕ್ರಮಗಳನ್ನು ಏರ್ಪಡಿಸಲೂ ಬಹುದು:

ಪರಂತು, ಈ ಪ್ರಕರಣಕ್ಕನುಗುಣವಾಗಿ ಮಾಡೋಣಾದ—ವ—ಏರ್ಪಡಿಸೋಣಾದ, ಕಾಯಿದೆಗಳು—ವ—ನಮೂನೆಗಳು ಈ ಕೋಡಿಗೆ ಅಥವಾ ತತ್ಕಾಲದಲ್ಲಿ ಜಾರೀಲಿರುವ ಇತರ ಯಾವ ಕಾನೂನಿಗಾದರೂ ಅನುಸಾರವಾಗದೇ ಇರಕೂಡದು.

ಈ ಪ್ರಕರಣಕ್ಕನುಗುಣವಾಗಿ ಮಾಡೋಣಾದ ಎಲ್ಲಾ ಕಾಯಿದೆಗಳು ಆಫಿಷಿಯಲ್ ಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

53. 554ನೇ ಪ್ರಕರಣದಲ್ಲಿ ಆದಿಯಿಂದ „ಅಧಿಕಾರಕ್ಕೆ ಒಳಪಟ್ಟು" ಎಂಬ ಮಾತುಗಳವರಿವಿಗೆ ಇರುವ ಅಂಕೆಗಳನ್ನೂ ಮಾತುಗಳನ್ನೂ ಬಿಟ್ಟುಬಿಡಬೇಕು.

54. ಇಂಡಿಯಾ ಗವರ್ನ್ಮೆಂಟ್ ಫಾರಿನ್ ಇಲಾಖಾ 1872ನೇ ಇಸವಿ ಜುಲೈ 18ನೇ ತಾರೀಖಿನ ನಂಬರು 143. J. ಗುರುತುಳ್ಳ ನೋಟಿಫಿಕೇಷನ್ 1872ನೇ ಇಸವಿಯ 10ನೇ ನಂಬರ್ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿಗೆ ಎಷ್ಟರವಮಟ್ಟಿಗೆ ಸಂಬಂಧ ಪಟ್ಟಿದೆಯೋ ಅಷ್ಟರ ಮಟ್ಟಿಗೆ, ಮತ್ತು 1874ನೇ ಇಸವಿ ಜುಲೈ 24ನೇ ತಾರೀಖಿನ ನಂಬರು 139 J. ಗುರ್ತುಳ್ಳ ನೋಟಿಫಿಕೇಷನ್ ಮತ್ತು 1880ನೇ ಇಸವಿ ಜನವರಿ 23ನೇ ತಾರೀಖಿನ ನಂಬರು 27 I. J. ಗುರ್ತುಳ್ಳ ನೋಟಿಫಿಕೇಷನಿನ ಮೊದಲನೇ ಪ್ಯಾರಾ ಸಹ 1886ನೇ ಇಸವಿ ಜುಲೈ 1ನೇ ತಾರೀಖು ಲಾಗಾಯಿತು ಇದರಿಂದ ರದ್ದುಮಾಡಲ್ಪಟ್ಟಿವೆ.

ಕೆ. ಶೇಷಾದ್ರಿ ಅಯ್ಯರ್,
ಮೈಸೂರು ಸೀಮೆಯ ದಿವಾನ್.

ACT No. X OF 1882.

1882ನೇ ಇಸವಿಯ 10ನೇ ನಂಬರು ಆಕ್ಟು.

THE CODE OF CRIMINAL PROCEDURE, 1882.

1882ನೇ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್, ಕೋಡು.

AS AMENDED BY REGULATION I OF 1886.

1886ನೇ ಇಸವಿಯ Iನೇ ರೆಗ್ಯೂಲೇಷನಿನಿಂದ ತಿದ್ದುಪಡಿಯಾದ ಪ್ರಕಾರ.

TABLE OF CONTENTS.

ವಿಷಯ ಸೂಚಿಕೆ.

ಪೀಠಿಕೆ.

PART I.

1ನೇ ಭಾಗ.

PRELIMINARY.

ಅವತರಣಿಕೆ.

CHAPTER I.

1ನೇ ಅಧ್ಯಾಯ.

ಪ್ರಕರಣಗಳು.

1. ಚಿಕ್ಕ ಹೆಸರು.
ಷುರು.
ಸ್ಥಳಿಕವ್ಯಾಪ್ತಿ.
2. ಚಟ್ಟಗಳ ರದ್ದಿಯಾತಿ.
ರದ್ದಾದ ಆಕ್ಟುಗಳನ್ನನುಸರಿಸಿದ ಪ್ರಕಟನೆ ಇತ್ಯಾದಿಗಳು.
3. ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿಗೆ ಮತ್ತು ರದ್ದಾದ ಇತರ ಚಟ್ಟಗಳಿಗೆ ದಾಖಲೆಗಳು.
ಮುಂಚಿನ ಆಕ್ಟುಗಳಲ್ಲಿರುವ ತಾತ್ಪರ್ಯ.

ಪ್ರಕರಣಗಳು.

4. ಅರ್ಥವಿವರಣೆಯ ಕಲಂ.
ಕೃತ್ಯಗಳನ್ನು ಸೂಚಿಸುವ ಮಾತುಗಳು.
ಮಾತುಗಳಿಗೆ ಪಿನಲ್ ಕೋಡಿನಲ್ಲಿ ಇರುವ ಅರ್ಥವೇ ಇರತಕ್ಕದ್ದು.

5. ಪಿನಲ್‌ಕೋಡಿನ ಅನುಗುಣವಾದ ತಕ್ಸೀರುಗಳ ದರ್ಯಾಫ್ತಿ.
ಇತರ ಕಾನೂನುಗಳ ಅನುಗುಣವಾದ ತಕ್ಸೀರುಗಳ ದರ್ಯಾಫ್ತಿ.

PART II.

2ನೇ ಭಾಗ.

CONSTITUTION AND POWERS OF CRIMINAL COURTS AND OFFICES.

ಕ್ರಿಮಿನಲ್ ಕೋರ್ಟುಗಳ—ವ—ಉದ್ಯೋಗಗಳ ಯೇರ್ಪಾಟು ಮತ್ತು ಅಧಿಕಾರಗಳು.

Chapter II.—Of Constitution of Criminal Courts and Offices.

2ನೇ ಅಧ್ಯಾಯ.—ಕ್ರಿಮಿನಲ್ ಕೋರ್ಟುಗಳ—ವ—ಉದ್ಯೋಗಗಳ ಏರ್ಪಾಟನ್ನು ಕುರಿತು.

A.—Classes of Criminal Courts.

A.—ಕ್ರಿಮಿನಲ್ ಕೋರ್ಟುಗಳ ತರಗತಿಗಳು.

6. ಕ್ರಿಮಿನಲ್ ಕೋರ್ಟುಗಳ ತರಗತಿಗಳು.

B.—Territorial Divisions.

B.—ರಾಜ್ಯಸಂಬಧವಾದ ಡಿವಿಜನ್‌ಗಳು.

7. ಸೆಷನ್ ಡಿವಿಜನ್‌ಗಳು.
ಡಿಸ್ಟ್ರಿಕ್ಟುಗಳು.
ಡಿವಿಜನ್‌ಗಳನ್ನು—ವ—ಡಿಸ್ಟ್ರಿಕ್ಟುಗಳನ್ನು ಬದಲಾಯಿಸಲಿಕ್ಕೆ ಅಧಿಕಾರ.
ತಾತ್ಕಾಲಿಕ ಡಿವಿಜನ್‌ಗಳು—ವ—ಡಿಸ್ಟ್ರಿಕ್ಟುಗಳು ಬದಲಾಯಿಸುವತನಕ ಹಾಗೆಯೇ ಇರತಕ್ಕದ್ದು.

8. ಡಿಸ್ಟ್ರಿಕ್ಟುಗಳನ್ನ ಸಬ್ ಡಿವಿಜನ್‌ಗಳಾಗಿ ವಿಭಾಗಿಸಲಿಕ್ಕೆ ಅಧಿಕಾರ.
ಈಗ ಇರುವ ಸಬ್ ಡಿವಿಜನ್‌ಗಳನ್ನ ಕಾಪಾಡತಕ್ಕದ್ದು.

C.—Courts and Offices.

C.—ಕೋರ್ಟುಗಳು—ವ—ಉದ್ಯೋಗಗಳು.

9. ಸೆಷನ್‌ಕೋರ್ಟು.

10. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು.

11. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಿನ ಉದ್ಯೋಗವು ಖಾಲಿಯಾದಾಗ ಹಂಗಾಮಿಯಾಗಿ ಬರುವ ಆಫೀಸರುಗಳು.

12. ಸಬಾರ್ಡಿನೇಟ್ ಮ್ಯಾಜಿಸ್ಟ್ರೇಟುಗಳು
ಅವರ ಅಧಿಕಾರದ ಸ್ಥಳಿಕ ಸರಹದ್ದುಗಳು.

13. ಮಾಜಿಸ್ಟ್ರೇಟನ್ನ ಸಬ್ ದಿವಿಜನ್ ಜಿಮ್ಮೆಯಲ್ಲಿರಿಸಲಿಕ್ಕೆ ಅಧಿಕಾರ.
ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟುಗಳಿಗೆ ಅಧಿಕಾರಗಳನ್ನ ಒಪ್ಪಿಸೋಣ.

14. ಸ್ಪೆಷಲ್ ಮ್ಯಾಜಿಸ್ಟ್ರೇಟರು.

15. ಮ್ಯಾಜಿಸ್ಟ್ರೇಟರ ಬೆಂಚುಗಳು.
ವಿಶೇಷ ನಿರ್ದೇಶಗಳಿಲ್ಲದೆ ಇರುವಾಗ ಬೆಂಚಿನವರು ಛಲಾಯಿಸತಕ್ಕ ಅಧಿಕಾರಗಳು.

ಪ್ರಕರಣಗಳು.

16. ಬೆಂಚುಗಳ ನಡವಳಿತೆಬಗ್ಗೆ ಕಾಯಿದೆಗಳು ಮಾಡಲಿಕ್ಕೆ ಅಧಿಕಾರ.

17. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟಿಗೆ ಮ್ಯಾಜಿಸ್ಟ್ರೇಟುಗಳು—ವ—ಬೆಂಚುಗಳು ತಾಬೇದಾರಿಯಾಗಿರೋಣ. ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟಿಗೆ ತಾಬೇದಾರಿಯಾಗಿರೋಣ.
ಅಸಿಸ್ಟೆಂಟ್ ಸೆಷನ್ ಜಡ್ಜಿಗಳು ಸೆಷನ್ ಜಡ್ಜೀಯವರಿಗೆ ತಾಬೇದಾರಿಯಾಗಿರೋಣ.

F.—Suspension and Removal.

F.—ಅವಮಾನತ್ತು ಮತ್ತು ಕೆಲಸದಿಂದ ದೂರಪಡಿಸುವಿಕೆ.

26. ಜಡ್ಜಿಗಳನ್ನ ಮತ್ತು ಮ್ಯಾಜಿಸ್ಟ್ರೇಟರನ್ನ ಅವಮಾನತ್ತು ಮಾಡೋಣ ಮತ್ತು ಕೆಲಸದಿಂದ ದೂರಪಡಿಸೋಣ.

CHAPTER III.—POWERS OF COURTS.

3ನೇ ಅಧ್ಯಾಯ.—ಕೋರ್ಟುಗಳ ಅಧಿಕಾರಗಳು.

A.—Description of Offences cognizable by each Court.

A.—ಒಂದೊಂದು ಕೋರ್ಟಿನಿಂದ ದರ್ಯಾಪ್ತಿಯಾಗತಕ್ಕ ತಕ್ಸೀರುಗಳ ತಪ್ಸೀಲುಗಳು.

28. ಪಿನಲ್‌ಕೋಡ್ ಪ್ರಕಾರ ತಕ್ಸೀರುಗಳು.

29. ಇತರ ಕ್ಯಾನೂನುಗಳ ಪ್ರಕಾರ ತಕ್ಸೀರುಗಳು.

30. ಮರಣದಂಡನೆಯಿಂದ ಶಿಕ್ಷಿಸಲ್ಪಡದ ತಕ್ಸೀರುಗಳು.

B.—Sentences which may be passed by Courts of various Classes.

B.—ಬೇರೆಬೇರೆ ತರಗತಿಯ ಕೋರ್ಟುಗಳಿಂದ ವಿಧಿಸಲ್ಪಡಬಹುದಾದ ಸಜಾಗಳು.

31. ಚೀಫ್ ಕೋರ್ಟಿನವರು—ವ—ಸೆಷನ್ ಜಡ್ಜಿಗಳು ವಿಧಿಸಬಹುದಾದ ಸಜಾಗಳು.

32. ಮ್ಯಾಜಿಸ್ಟ್ರೇಟರು ವಿಧಿಸಬಹುದಾದ ಶಿಕ್ಷೆಗಳು.

33. ಜುರ್ಮಾನೆಕೊಡದೆ ತಪ್ಪಿದರೆ ಕೈದು ವಿಧಿಸಲಿಕ್ಕೆ ಮ್ಯಾಜಿಸ್ಟ್ರೇಟುಗಳ ಅಧಿಕಾರ. ಕೆಲವು ಮೊಕದ್ದಮೆಗಳಲ್ಲಿ ನಿಯಮ.

34. ಕೆಲವು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟುಗಳ ಹೆಚ್ಚಿನ ಅಧಿಕಾರಗಳು.

35. ಒಂದೇ ದರ್ಯಾಪ್ತಿಯಲ್ಲಿ ಬೇರೆಬೇರೆ ತಕ್ಸೀರುಗಳು ಸಾಬೀತಾದಲ್ಲಿ ಸಜಾ ದಂಡನೆಯು ಅತ್ಯಧಿಕ ವಾಯಿದೆ

C.—Ordinary and Additional Powers.

C.—ಸಾಧಾರಣವಾದ—ವ—ಹೆಚ್ಚಾದ ಅಧಿಕಾರಗಳು.

36. ಮ್ಯಾಜಿಸ್ಟ್ರೇಟಿನವರ ಸಾಧಾರಣ ಅಧಿಕಾರಗಳು.

37. ಮ್ಯಾಜಿಸ್ಟ್ರೇಟುಗಳಿಗೆ ಕೊಡಬಹುದಾದ ಹೆಚ್ಚಿನ ಅಧಿಕಾರ.

38. ಅಧಿಕಾರಕೊಡುವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಮೇಲೆ ಇರುವ ಮೇಲ್ವಿಚಾರ.

D.—Conferment, Continuance and Cancellation of Powers.

D.—ಅಧಿಕಾರಗಳು ಕೊಡೋಣ, ಮತ್ತು ಅವುಗಳ ಊರ್ಜಿತ—ವ—ರದ್ದಿಯಾತಿ ಕುರಿತು.

39. ಅಧಿಕಾರಗಳನ್ನು ಕೊಡುವ ರೀತಿ.

40. ವರ್ಗವಾದ ಆಫೀಸರರ ಅಧಿಕಾರಗಳ ಊರ್ಜಿತ.

41. ಅಧಿಕಾರಗಳು ರದ್ದು ಮಾಡಲ್ಪಡಬಹುದು.

ಪ್ರಕರಣಗಳು.

PART III.

೩ನೇ ಭಾಗ.

GENERAL PROVISIONS.

ಸಾಧಾರಣ ನಿಬಂಧನೆಗಳು.

CHAPTER IV.—OF AID AND INFORMATION TO THE MAGISTRATES, THE POLICE AND PERSONS MAKING ARRESTS.

೪ನೇ ಅಧ್ಯಾಯ.—ಮ್ಯಾಜಿಸ್ಟ್ರೇಟುಗಳಿಗೆ ಕೊಡತಕ್ಕ ಸಹಾಯ ಮತ್ತು ವರ್ತಮಾನ, ಪೋಲೀಸಿನವರು—ವ—ಹಿಡಿಯುವ ಮನುಷ್ಯರುಗಳನ್ನು ಕುರಿತು.

42. ಮ್ಯಾಜಿಸ್ಟ್ರೇಟಗೂ—ವ—ಪೋಲೀಸಿಗೂ ಎಲ್ಲರೂ ಯಾವಾಗ ಸಹಾಯಮಾಡತಕ್ಕದ್ದು.
43. ಪೋಲೀಸ್ ಆಫೀಸರಲ್ಲದ ವಾರಂಟಿನ ಅಮಲ್‌ಜಾರೀಮಾಡುವ ಇತರ ಮನುಷ್ಯನಿಗೆ ಮಾಡಬೇಕಾದ ಸಹಾಯ.
44. ಕೆಲವು ತಕ್ಸೀರುಗಳ ಬಾಬಿನಲ್ಲಿ ಜನರು ವರ್ತಮಾನ ಕೊಡತಕ್ಕದ್ದು.
45. ಗ್ರಾಮದ ಮುಖ್ಯಸ್ಥನು ಸ್ವಾಸ್ಥ್ಯದಾರರು ಮುಂತಾದವರು ಕೆಲವು ವಿಷಯವನ್ನ ತಿಳಿಸಲಿಕ್ಕೆ ಬದ್ಧರಾಗಿರುತ್ತಾರೆ.

CHAPTER V.—OF ARREST, ESCAPE AND RETAKING.

೫ನೇ ಅಧ್ಯಾಯ.—ಹಿಡಿಯೋಣ, ತಪ್ಪಿಸಿಕೊಂಡು ಹೋಗೋಣ ಪುನಃ ಹಿಡಿಯೋಣ ಇವುಗಳನ್ನ ಕುರಿತು.

A.—Arrest generally.

A.—ಸಾಧಾರಣವಾಗಿ ಹಿಡಿಯೋಣವನ್ನು ಕುರಿತು.

46. ಹ್ಯಾಗೆ ಹಿಡಿಯೋಣ
ಹಿಡಿಯುವ ಪ್ರಯತ್ನವನ್ನು ತಡೆಯೋಣ.
47. ಹಿಡಿಯುವ ಬಗ್ಯಾಗಿ ಹುಡುಕಲ್ಪಟ್ಟ ಮನುಷ್ಯನು ಹೊಕ್ಕಿದ ಸ್ಥಳವನ್ನು ಹುಡುಕೋಣ.
48. ಒಳಕ್ಕೆ ಹೋಗಲಿಕ್ಕೆ ಆಸ್ಪದಕೊಕ್ಕದೆ ಹೋದರೆ ನಡಿಸತಕ್ಕ ಕ್ರಮ.
ಜನಾನಾವೆಂಬ ಅಂತಃಪುರವನ್ನು ಒಡೆಯೋಣ.
49. ಹೊರಗೆ ಬರುವ ಉದ್ದಿಶ್ಯ ಕದಗಳನ್ನು ಕಿಟಕಿಗಳನ್ನು ಒಡೆಯಲು ಅಧಿಕಾರ.
50. ಅನಾವಶ್ಯಕವಾದ ನಿರ್ಬಂಧಕೂಡದು.
51. ಹಿಡಿಯೋಣಾದವರನ್ನು ತಲಾಷ್ ಮಾಡೋಣ.
52. ಹೆಂಗಸರನ್ನು ಝುಡ್ತಿ ಮಾಡುವ ರೀತಿ.
53. ಅಪಾಯಕರವಾದ ಆಯುಧಗಳನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರ.

B.—Arrest without Warrant.

B.—ವಾರಂಟು ಇಲ್ಲದೆ ಹಿಡಿಯುವದು.

54. ಪೋಲಿಸಿನವರು ವಾರಂಟು ಇಲ್ಲದೆ ಯಾವಾಗ್ಯೆ ಹಿಡಿಯಬಹುದು.
55. ದೇಶಗೇಡಿಗರನ್ನೂ ವಾಡಿಕೆ ಕಳ್ಳರುಗಳು ಮುಂತಾದವರನ್ನೂ ಹಿಡಿಯೋಣ.
56. ಪೋಲೀಸಾಫೀಸರು ವಾರಂಟಿಲ್ಲದೆ ಹಿಡಿಯಲ್ಲಿಕ್ಕೆ ತನ್ನ ತಾಬೇದಾರಿ ಆಫೀಸರನನ್ನು ಕಳುಹಿಸುವಾಗ ನಡಿಸತಕ್ಕ ಕ್ರಮ.
57. ಹೆಸರನ್ನೂ ವಾಸಸ್ಥಳವನ್ನೂ ಕೊಡದೆ ನಿರಾಕರಿಸೋಣ.
58. ಬೇರೆ ಅಧಿಕಾರ ಸರಹದ್ದುಗಳಲ್ಲಿ ಕೈದಿಗಳನ್ನು ಅಟ್ಟಿಕೊಂಡು ಹೋಗೋಣ.
59. ಖಾಸಗಿ ಜನರಿಂದ ಹಿಡಿಯೋಣ.
ಹಾಗೆ ಹಿಡಿದರೆ ನಡಿಸತಕ್ಕ ಕ್ರಮ.
60. ಹಿಡಿಯಲ್ಪಟ್ಟವನನ್ನು ಮ್ಯಾಜಿಸ್ಟ್ರೇಟನ ಬಳಿಗಾಗಲೀ ಪೋಲೀಸ್ ಸ್ಟೇಷನ್ ಜಿಮ್ಮೆಯನ್ನುಳ್ಳ ಆಫೀಸರನ ಬಳಿಗಾಗಲೀ ತೆರದು ಕೊಂಡುಹೋಗತಕ್ಕದ್ದು.

ಪ್ರಕರಣಗಳು.

61. ಹಿಡಿಯಲ್ಪಟ್ಟ ಮನುಷ್ಯನನ್ನ ಇಪ್ಪತ್ನಾಲ್ಕು ಘಂಟೆಗಳಿಗಿಂತ ಹೆಚ್ಚು ತಡೆದಿಡಕೂಡದು.
62. ಪೋಲೀಸಿನವರು ದಸ್ತುಗಿರಿಗಳನ್ನು ರಿಪೋರ್ಟುಮಾಡತಕ್ಕದ್ದು.
63. ಹಿಡಿಯಲ್ಪಟ್ಟವನ ವಿಮೋಚನೆ.
64. ಮ್ಯಾಜಿಸ್ಟ್ರೇಟಿನ ರೂಬರೂಬ ನಡೆದ ತಕ್ಸೀರು.
65. ಮಾಜಿಸ್ಟ್ರೇಟನಿಂದಾಗಲೀ—ಯಾ—ಅವರ ಸಮಕ್ಷಮದಲ್ಲಾಗಲಿ ಹಿಡಿಯೋಣ.
66. ತಪ್ಪಿಸಿಕೊಂಡಮೇಲೆ ಹಿಂದಟ್ಟಿ ಹಿಡಿಯಲಿಕ್ಕೆ ಅಧಿಕಾರ.
67. 47, 48 ಮತ್ತು 49ನೇ ಪ್ರಕರಣಗಳ ನಿಬಂಧನೆಗಳು 66ನೇ ಪ್ರಕರಣಪ್ರಕಾರದ ದಸ್ತುಗಿರಿಗಳಿಗೆ ಲಗಾವಾಗುತ್ತೆ.

Chapter VI.—Of Processes to compel Appearance.

೬ನೇ ಅಧ್ಯಾಯ.—ಹಾಜರಾಗಲಿಕ್ಕೆ ಬಲಾತ್ಕರಿಸುವ ಪ್ರೊಸೆಸ್‌ಗಳು.

A.—Summons.

A.—ಸಮ್ಮನುಗಳು.

68. ಸಮ್ಮನುಗಳ ನಮೂನೆ,
ಯಾರಿಂದ ಸಮ್ಮನ್ ಸಾದರಾಗತಕ್ಕದ್ದು.
69. ಸಮ್ಮನ್ ಹ್ಯಾಗೆ ಸಾದರಾಗತಕ್ಕದ್ದು.
ಸಮ್ಮನಿನಬಗ್ಯೆ ರಶೀದಿಗೆ ದಸ್ತಕತ್ತು ಹಾಕೋಣ.
70. ಸಮ್ಮನ್‌ಪಟ್ಟ ಮನುಷ್ಯನು ಸಿಕ್ಕದಿದ್ದರೆ ಸಾದರ್ಮಾಡುವ ರೀತಿ.
71. ರಶೀದಿ ಸಿಕ್ಕಕೂಡದ ಸಂಗತಿಯಲ್ಲಿ ಮಾಡತಕ್ಕ ರೀತಿ.
72. ಸರ್ಕಾರ ನೌಕರೀಲಿ—ಯಾ—ರೆಯಿಲ್ವೇ ಕಂಪೆನಿಯಲ್ಲಿ ಇರುವವರಮೇಲೆ ಸಾದರ್ಮಾಡೋಣ.
73. ಸ್ಥಳೀಯ ಸರಹದ್ದಿನಹೊರಗೆ ಸಮ್ಮನ್‌ಗಳು ಸಾದರ್ಮಾಡೋಣ.
74. ಅಂಥಾ ಮೊಕದ್ದಮೆಗಳಲ್ಲಿ ಸಾದರಾತಿಕುರಿತು ಸಾಕ್ಷ್ಯ, ಮತ್ತು ಸಾದರ್ಮಾಡಿದ ಆಫೀಸರನು ಹಾಜರು ಇಲ್ಲದಿದ್ದರೆ.

B.—Warrant of Arrest.

B.—ದಸ್ತುಗಿರಿ ವಾರಂಟು

75. ದಸ್ತುಗಿರಿ ವಾರಂಟಿನ ನಮೂನೆ.
ದಸ್ತುಗಿರಿ ವಾರಂಟು ನೆಲೆಯಾಗಿರುವಿಕೆ.
76. ಜಾಮೀನ್ ತೆಗದುಕೊಳ್ಳತಕ್ಕದ್ದೆಂದು ಕೋರ್ಟಿನವರು ವಿಧಿಸಬಹುದು.
ಮುಚ್ಚಳಿಕೆಗಳನ್ನು ರವಾನಿಸತಕ್ಕದ್ದು.
77. ವಾರಂಟನ್ನು ಯಾರಿಗೆ ಕಳುಹಿಸತಕ್ಕದ್ದು.
ಹೆಚ್ಚುಮಂದಿಗೆ ವಾರಂಟು ಜಾರೀ ಮಾಡಲುಕೊಟ್ಟಾಗ.
78. ಭೂಮೂಲಗಾರದೂ ಮುಂತಾದವರಿಗೆ ವಾರಂಟನ್ನು ಕಳುಹಿಸಬಹುದು.
79. ಪೋಲೀಸ್ ಆಫೀಸರಿಗೆ ವಿಲಾಸ ಹಾಕೋಣಾದ ವಾರಂಟು.
80. ವಾರಂಟಿನ ಸಾರಾಂಶದ ಪ್ರಕಟನೆ.
81. ಹಿಡಿಯೋಣಾದ ಮನುಷ್ಯನನ್ನು ಕಾಲವಿಳಂಬವಿಲ್ಲದೆ ಕೋರ್ಟುಮುಂದೆ ತೆಗದುಕೊಂಡುಹೋಗತಕ್ಕದ್ದು.
82. ವಾರಂಟನ್ನು ಯಲ್ಲಿ ಜಾರೀಮಾಡಬಹುದು.
83. ಅಧಿಕಾರ ಸರಹದ್ದಿನಹೊರಗೆ ಜಾರೀಮಾಡುವಬಗ್ಯೆ ಮ್ಯಾಜಿಸ್ಟ್ರೇಟಿಗೆ ಕಳುಹಿಸೋಣಾದ ವಾರಂಟ್.
84. ಅಧಿಕಾರ ಸರಹದ್ದಿನಹೊರಗೆ ಜಾರೀಬಗ್ಯೆ ಪೋಲೀಸ್ ಆಫೀಸರನ ವಿಲಾಸ ಹಾಕೋಣಾದ ವಾರಂಟ್.
85. ಯಾರಮೇಲೆ ವಾರಂಟ್ ಹುಟ್ಟಿತೋ ಆ ಮನುಷ್ಯನನ್ನು ಹಿಡಿದಮೇಲೆ ನಡಿಸತಕ್ಕ ಕ್ರಮ.
86. ಹಿಡಿಯಲ್ಪಟ್ಟ ಮನುಷ್ಯನು ಮ್ಯಾಜಿಸ್ಟ್ರೇಟನಮುಂದೆ ತರಲ್ಪಟ್ಟಾಗ ಆತನು ನಡಿಸತಕ್ಕ ಕ್ರಮ.

C.—*Proclamation and Attachment.*

C.—ಇಸ್ತಿಹಾರು—ವ—ಜಪ್ತಿ.

87. ಶಿಕ್ಕದೆ ಗೈರ್ ಹಾಜರಾದ ಆಸಾಮಿಗೆ ಇಸ್ತಿಹಾರ್.
88. ಶಿಕ್ಕದೆ ಗೈರ್ ಹಾಜರಾದವನ ಸ್ವತ್ತಿನ ಜಪ್ತಿ.
89. ಜಪ್ತಾದ ಸ್ವತ್ತನ್ನು ಖುಲಾಸೆ ಮಾಡೋಣ.

D.—*Other Rules regarding Processes.*

D.—ಪ್ರೊಸೆಸ್ಸುಗಳನ್ನು ಕುರಿತು ಬೇರೆ ಕ್ರಮಗಳು.

90. ಸಮ್ಮನಿಗೆ ಕೊಡಿಸಿ—ಯಾ—ಅದರ ಬದಲಾಗಿ ವಾರಂಟ್ ಕೊಡೋಣ.
91. ಹಾಜರಾತಿಯಬಗ್ಯೆ ಪತ್ರ ತೆಗದುಕೊಳ್ಳುವ ಅಧಿಕಾರ.
92. ಹಾಜರಾತೀಬಗ್ಯೆ ತೆಕ್ಕೊಂಡೋಣಾದ ಪತ್ರ ಪ್ರಕಾರ ನಡಕೊಳ್ಳದೇ ಹೋದರೆ ಹಿಡಿಯೋಣ.
93. ಈ ಅಧ್ಯಾಯದಲ್ಲಿ ಇರುವ ನಿಬಂಧನೆಗಳು ಸಮ್ಮನ್ಸುಗಳಿಗೂ ಹಿಡಿಯುವಬಗ್ಗೆತು ವಾರಂಟುಗಳಿಗೂ ಸಾಧಾರಣವಾಗಿ ಲಗಾವಾಗತಕ್ಕದ್ದು.

CHAPTER VII.—OF PROCESSES TO COMPEL THE PRODUCTION OF DOCUMENTS AND OTHER MOVEABLE PROPERTY AND FOR THE DISCOVERY OF PERSONS WRONGFULLY CONFINED

೭ನೇ ಅಧ್ಯಾಯ.—ದಸ್ತೈವಜುಗಳನ್ನು ಇತರ ಚರಸ್ವತ್ತು ಹಾಜರು ಪಡಿಸುವದಕ್ಕೆ ಬಲಾತ್ಕರಿಸುವ ಪ್ರೊಸೆಸ್ಸುಗಳನ್ನು ಮತ್ತು ಅಕ್ರಮವಾಗಿ ಬಂಧಿಸಲ್ಪಟ್ಟ ಜನರ ತಲಾಷನ್ನು ಕುರಿತು.

A.—*Summons to produce.*

A.—ಹಾಜರುಪಡಿಸುವದಕ್ಕೆ ಸಮ್ಮನ್ಸ್.

94. ದಸ್ತೈವಜು—ಯಾ—ಇತರ ಸ್ವತ್ತು ಹಾಜರ್ಪಡಿಸುವದಕ್ಕೆ ಸಮ್ಮನ್ಸ್.
95. ಕಾಗದಗಳನ್ನು ಟೆಲಿಗ್ರಾಮುಗಳನ್ನು ಕುರಿತು ನಡಿಸಬೇಕಾದ ಕ್ರಮ.

B.—*Search-warrants.*

B.—ಝಡ್ತೀ ವಾರಂಟುಗಳು.

96. ಝಡ್ತೀವಾರಂಟನ್ನು ಯಾವಾಗ್ಯೆ ಕೊಡಬಹುದು.
97. ವಾರಂಟುಗಳನ್ನು ಕಟ್ಟುಪಡಿಸಿ ಕೊಡುವ ಅಧಿಕಾರ.
98. ಚೋರೀನಮಾಲನ್ನಾಗಲಿ, ಸೃಷ್ಟನೆ ದಸ್ತೈವಜು, ಮುಂತಾಗಿ ಒಳಗೆ ಇರುವದಾಗಿ ಗುಮಾನೀಪಟ್ಟ ಮನೆಯ ಝಡ್ತೀ.
99. ಸ್ಥಳೀಯ ಅಧಿಕಾರ ಸರಹದ್ದಿನಹೊರಗೆ ಝಡ್ತೀಯಲ್ಲಿ ಶಿಕ್ಕಿದ ಪದಾರ್ಥಗಳ ವಿಲೇವಾರಿ.

C.—*Discovery of Persons wrongfully confined.*

C.—ಅಕ್ರಮವಾಗಿ ಬಂಧಿಸಲ್ಪಟ್ಟ ಮನುಷ್ಯರ ತಲಾಷ್.

100. ಅಕ್ರಮವಾಗಿ ಬಂಧಿಸಲ್ಪಟ್ಟ ಮನುಷ್ಯರ ತಲಾಷ್.

D.—*General Provisions relating to Searches.*

D.—ಝಡ್ತಿಗಳಿಗೆ ಸಂಬಂಧಿಸಿದ ಸಾಧಾರಣ ನಿಬಂಧನೆಗಳು.

101. ಝಡ್ತೀ ವಾರಂಟಿಗೆ ವಿಳಾಸಾ ಹಾಕುವದು ವಗೈರೆ.
102. ಮುಚ್ಚಿ ಇರುವ ಸ್ಥಳದ ತಾಬೇದಾರಿಯಲ್ಲಿ ಇರುವವರು ಝಡ್ತೀ ಮಾಡಬಿಡೋಣ.

ಪ್ರಕರಣಗಳು.

103. ಸಾಕ್ಷಿಗಾರರ ಮುಂದೆ ಝಡ್ತಿ ಮಾಡಬೇಕು.
ಝಡ್ತಿ ಮಾಡಿದ ಸ್ಥಳದ ವಾಸಸ್ಥನು ಹಾಜರು ಇರಬಹುದು.

E.—Miscellaneous.

E.—ವಿವಿಧ ವಿಷಯಗಳು.

104. ಹಾಜರುಮಾಡಿದ ದಸ್ತೈವಜು ಮುಂತಾಗಿ ಹಿಡಿದಿಡುವ ಅಧಿಕಾರ.
105. ಮೇಜಿಸ್ಟ್ರೇಟನು ತನ್ನ ಎದುರಿಗೆ ಝಡ್ತಿ ಮಾಡಹೇಳಿ ಹುಕುಂ ಮಾಡಬಹುದು.

PART IV.

4ನೇ ಭಾಗ.

PREVENTION OF OFFENCES.

ತಕ್ಸೀರುಗಳನ್ನು ತಡೆಮಾಡುವದನ್ನು ಕುರಿತು.

CHAPTER VIII.—OF SECURITY FOR KEEPING THE PEACE AND FOR GOOD BEHAVIOUR.

8ನೇ ಅಧ್ಯಾಯ.—ನೆಮ್ಮದಿಯ ಪರಿಪಾಲನಾರ್ಥವಾಗಿ ಮತ್ತು ಒಳ್ಳೇ ನಡತೆಯ ಜಾಮೀನು ಕುರಿತು.

A.—Security for keeping the Peace on Conviction.

A.—ತಕ್ಸೀರು ಸಾಬೀತಾದ ಸಂಗತಿಯಲ್ಲಿ ನೆಮ್ಮದಿಯ ಪರಿಪಾಲನಾರ್ಥವಾಗಿ ಜಾಮೀನು ಕುರಿತು.

---

106. ತಕ್ಸೀರು ಸಾಬೀತಾದ ಸಂಗತಿಯಲ್ಲಿ ನೆಮ್ಮದಿಯ ಪರಿಪಾಲನಾರ್ಥವಾಗಿ ಜಾಮೀನು.

B.—Security for keeping the Peace in other Cases and Security for Good Behaviour.

B.—ಇತರ ಸಂಗತಿಗಳಲ್ಲಿ ನೆಮ್ಮದಿ ಪರಿಪಾಲನಾರ್ಥವಾಗಿ ಜಾಮೀನು ಮತ್ತು ಒಳ್ಳೇನಡತೆ ಜಾಮೀನು ಕುರಿತು.

107. ಇತರ ಸಂಗತಿಗಳಲ್ಲಿ ನೆಮ್ಮದಿ ಪರಿಪಾಲನಾರ್ಥ ಜಾಮೀನು.
108. 107ನೇ ಪ್ರಕರಣ ಪ್ರಕಾರ ವರ್ತಿಸುವದಕ್ಕೆ ಅಧಿಕಾರ ಪಡೆಯದೆ ಇರುವ ಮ್ಯಾಜಿಸ್ಟ್ರೇಟ ಮುಂತಾದವರು ನಡಿಸಬೇಕಾದ ನಡವಳಿತ ಕ್ರಮ.
109. ದೇಶಗೇಡಿಗಳಿಂದಲೂ ಗುಮಾನೀ ಜನಗಳಿಂದಲೂ ಒಳ್ಳೇ ನಡತೆಬಗ್ಗೆ ಜಾಮೀನು.
110. ವಾಡಿಕೆಯ ತಕ್ಸೀರುಗಾರರಿಂದ ಒಳ್ಳೇ ನಡತೆಯಬಗ್ಗೆ ಜಾಮೀನು.
111. ಯೂರೋಪಿಯನ್ ದೇಶಗೇಡಿಗಳ ಕುರಿತ ನಿಯಮ
112. ಕೊಡತಕ್ಕ ಹುಕುಂ.
113. ಕೋರ್ಟಿನಲ್ಲಿ ಹಾಜರು ಇರುವ ಮನುಷ್ಯನ ಕುರಿತು ನಡಿಸಬೇಕಾದ ನಡವಳಿತ ಕ್ರಮ.
114. ಹಾಗೆ ಹಾಜರು ಇಲ್ಲದೆ ಇರುವ ಮನುಷ್ಯನ ವಿಷಯದಲ್ಲಿ ಕೊಡಬೇಕಾದ ಸಮನ್ಸ—ಯಾ—ವಾರಂಟ್.
115. 112ನೇ ಪ್ರಕರಣ ಪ್ರಕಾರ ಕೊಡೋಣಾಗುವ ಹುಕುಮಿನ ನಕಲು ಸಮನ್ಸ—ಯಾ—ವಾರಂಟು ಸಂಗಡ ಇರತಕ್ಕದ್ದು.
116. ಖುದ್ದು ಹಾಜರಾಗಬೇಕಾದ ಅಗತ್ಯವಿಲ್ಲವೆಂಬ ಅಧಿಕಾರ.
117. ವರ್ತಮಾನದ ನಿಜಸ್ಥಿತಿ ಕುರಿತು ವಿಚಾರಣೆಗಳು.
118. ಜಾಮೀನು ಕೊಡಹೇಳಿ ಹುಕುಂ.
119. ಯಾರಮೇಲೆ ವರ್ತಮಾನಬಂತೋ ಆ ಮನುಷ್ಯನ ವಿಮೋಚನೆ.

ಪ್ರಕರಣಗಳು.

C.—Proceedings in all Cases subsequent to Order to furnish Security.

C.—ಜಾಮೀನು ಕೊಡಬೇಕೆ, ಹುಕುಂ ಕೊಟ್ಟನಂತರ ಎಲ್ಲಾ ಮೊಕದ್ದಮೆಗಳಲ್ಲಿ, ನಡಿಸತಕ್ಕ ವ್ಯವಹರಣೆ.

120. ಯಾವ ಕಾಲದಬಗ್ಯೆ ಜಾಮೀನು ಕೇಳೋಣಾಯಿತೋ ಆ ಕಾಲದ ಪ್ರಾರಂಭ.
121. ಪತ್ರದ ಮತಲಬು.
122. ಜಾಮೀನ್‌ದಾರರನ್ನು ತಿರಸ್ಕರಿಸುವ ಅಧಿಕಾರ.
123. ಜಾಮೀನ್ ಕೊಡಲು ತಪ್ಪಿದರೆ ಖೈದು.
ಸೆಷನ್‌ಕೋರ್ಟಿನವರ ಮುಂದೆ ಪ್ರೊಸೀಡಿಂಗ್ಸ್‌ಗಳನ್ನು ಯಾವಾಗ ಇಡಬೇಕು.
ಖೈದಿನ ತರಹ.
124. ಜಾಮೀನು ಕೊಡುವದಕ್ಕೆ ತಪ್ಪಿದರಿಂದ ಖೈದಿನಲ್ಲಿರುವಂಥವರನ್ನು ಬಿಡುಗಡೆ ಮಾಡುವ ಸ್ವಾತಂತ್ರ್ಯ.
125. ನೆಮ್ಮದಿ ಕಾಪಾಡತಕ್ಕಬಗ್ಯೆ ತಕ್ಕೊಂಡ ಯಾವ ಪತ್ರವನ್ನಾದರೂ, ರದ್ದು ಮಾಡಲಿಕ್ಕೆ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಿನ ಅಧಿಕಾರ.
126. ಜಾಮೀನದಾರರ ವಿಮೋಚನೆ.

CHAPTER IX.—UNLAWFUL ASSEMBLIES.

9ನೇ ಅಧ್ಯಾಯ.—ಅಕ್ರಮ ಗುಂಪುಗಳನ್ನು ಕುರಿತು.

127. ಮ್ಯಾಜಿಸ್ಟ್ರೇಟು—ಯಾ—ಪೋಲೀಸು ಆಫಿಸರು ಹುಕುಂ ಮಾಡಿದ ಕೂಡಲೇ ಗುಂಪು ಚದರಿ ಹೋಗಬೇಕು.
128. ಚದರಿ ಹೋಗುವದಕ್ಕೆ ಸಿವಿಲ್ ಫೋರ್ಸಿನ ಉಪಯೋಗ.
129. ಮಿಲಿಟರಿ ಫೋರ್ಸಿನ ಉಪಯೋಗ.
130. ಗುಂಪನ್ನು ಚದರಿಸುವದಕ್ಕೆ ಮ್ಯಾಜಿಸ್ಟ್ರೇಟನು ಕೇಳಿಕೊಂಡ ತುಕಡಿಯ ಮೇಲೆ ಅಧಿಪತ್ಯವುಳ್ಳ ಆಫಿಸರನ ಕೆಲಸ.
131. ಕೂಟವನ್ನು ಚದರಿಸಲಿಕ್ಕೆ ಮಿಲಿಟರಿ ಕಮ್ಮಿಷನಡ್ ಆಫಿಸರರಿಗೆ ಇರುವ ಅಧಿಕಾರ.
132. ಈ ಅಧ್ಯಾಯಕ್ಕನುಗುಣವಾಗಿ ಮಾಡೋಣಾದ ಕೃತ್ಯಗಳಿಗೋಸ್ಕರ ಫಿರ್ಯಾದು ಮಾಡುವ ವಿಷಯದಲ್ಲಿ ಆಧಾರ.

CHAPTER X.—PUBLIC NUISANCES.

10ನೇ ಅಧ್ಯಾಯ.—ಬಹಿರಂಗವಾದ ಹೇಸಿಕೆಗಳು.

133. ಹೇಸಿಕೆಗಳನ್ನು ತೆಗದು ಹಾಕಬೇಕೆ ಷರತ್ತುಬಂದಿಯಾಗಿ ಕೊಡೋಣಾಗುವ ಹುಕುಂ.
134. ಹುಕುಮಿನ ಸಾದರಾತಿ—ಯಾ—ಜಾಹಿರಾತಿ.
135. ಯಾರ ಹೆಸರಿಗೆ ಆ ಹುಕುಂ ಆಯಿತೋ ಆ ಮನುಷ್ಯನು ಆ ಹುಕುಂಮೇರೆಗೆ ನಡಕೊಳ್ಳಬೇಕು ಅಥವಾ ಸಬಬ್ ತೋರಿಸಬೇಕು—ಯಾ—ಜೂರಿ ಏರ್ಪಡಿಸಬೇಕೆ ಕೇಳಿಕೊಳ್ಳಬೇಕು.
136. ಹಾಗೆ ಮಾಡುವದಕ್ಕೆ ತಪ್ಪಿದ್ದರಿಂದುಂಟಾಗುವ ಫಲ.
137. ಸಬಬು ತೋರಿಸುವಬಗ್ಯೆ ಹಾಜರಾದ ಸಂಗತಿಯಲ್ಲಿ ನಡಿಸಬೇಕಾದ ವ್ಯವಹರಣೆ.
138. ಜೂರಿ ಏರ್ಪಡಿಸಬೇಕೆ ಕೇಳಿಕೊಂಡಾಗ ನಡಿಸತಕ್ಕ ಕ್ರಮ.
139. ಮ್ಯಾಜಿಸ್ಟ್ರೇಟನ ಹುಕುಂ ಯುಕ್ತವೆಂತ ಜೂರಿಗೆ ತಿಳಿದರೆ ನಡಿಸತಕ್ಕ ಕ್ರಮ.
140. ಹುಕುಮನ್ನು ಷರತಬಂದಿ ಇಲ್ಲದೆ ಪೂರ್ತಿಯಾಗ ಮಾಡಿದ್ದಾಗ ನಡಿಸತಕ್ಕ ಕ್ರಮ.
ಹುಕುಮಿಗೆ ಅವಿಧೆಯವಾಗಿ ನಡಕೊಂಡದರಿಂದುಂಟಾಗುವ ಫಲ.
141. ಜೂರಿಗಳನ್ನ ಮೊಕರುರ್ ಮಾಡುವದಕ್ಕೆ ತಪ್ಪಿದರೆ, ಅಥವಾ ಅವರ ತೀರ್ಮಾನವನ್ನು ಕೊಡುವದಕ್ಕೆ ತಪ್ಪಿದರೆ ನಡಿಸತಕ್ಕ ಕ್ರಮ.
142. ವಿಚಾರಣೆ ಬಾಕೀಯಿರುವಾಗ್ಯೆ ಕೊಡುವ ಇಂಜಂಕ್ಷನ್.
143. ಬಹಿರಂಗವಾದ ಹೇಸಿಕೆಗಳು ಪುನಃ ನಡಿಯದಂತೆ—ಯಾ—ನಡಿಸುತ್ತಾ ಇರದಂತೆ ಮ್ಯಾಜಿಸ್ಟ್ರೇಟು ನಿಷೇಧಿಸಬಹುದು.

ಪ್ರಕರಣಗಳು.

CHAPTER XI.—TEMPORARY ORDERS IN URGENT CASES OF NUISANCE.

11ನೇ ಅಧ್ಯಾಯ.—ಹೇಸಿಕೆಯ ಬಾಬತು ಜರೂರಿಯಾತಿ ಮೊಕದ್ದಮೆಗಳಲ್ಲಿ ಹಂಗಾಮಿ ಹುಕುಮುಗಳನ್ನು ಕೊಡುವದನ್ನು ಕುರಿತು.

144. ಹೇಸಿಕೆಯ ಬಾಬತು ಜರೂರಿಯಾತಿ ಮೊಕದ್ದಮೆಗಳಲ್ಲಿ ಏಕಾಏಕಿಯಾಗಿ ಅಮಲ್ ಜಲಾಯಿಸುವಂತೆ ಹುಕುಂ ಕೊಡುವದಕ್ಕೆ ಅಧಿಕಾರ.

CHAPTER XII.—DISPUTES AS TO IMMOVEABLE PROPERTY.

12ನೇ ಅಧ್ಯಾಯ.—ಸ್ಥಿರಸೊತ್ತುಗಳ ವಿಷಯದ ವಿವಾದಗಳನ್ನು ಕುರಿತು.

145. ಜಮೀನ ವಗೈರೇ ವಿಷಯವಾಗಿ ವಿವಾದದಿಂದ ಸಮ್ಮತಿಗೆ ಭಂಗಬರುವದಾಗಿ ಇದ್ದರೆ ನಡಿಸತಕ್ಕ ಕ್ರಮ.
ಸ್ವಾಧೀನತೆ ಕುರಿತು ವಿಚಾರಣೆ.
ಸ್ವಾಧೀನಗಾರನಿಗೆ ನ್ಯಾಯವಾಗಿ ಹೊರಡಿಸುವವರಿಗೆ ಅವನೇ ಅದನ್ನು ಇಟ್ಟುಕೊಂಡಿರಬೇಕು.
146. ವಿವಾದಸ್ವತ್ತು ಜಪ್ತುಮಾಡುವ ಅಧಿಕಾರ.
147. ಈಜ್‌ಮೆಂಟ್ಸ್ ಮುಂತಾದ್ದರನ್ನು ಕುರಿತು ವಿವಾದಗಳು.
148. ಸ್ಥಳೀಯ ವಿಚಾರಣೆ.
ಖರ್ಚುಗಳನ್ನು ಕುರಿತು ಹುಕುಂ.

CHAPTER XIII.—PREVENTIVE ACTION OF THE POLICE.

13ನೇ ಅಧ್ಯಾಯ.—ಪೋಲೀಸಿನವರು ಅಡ್ಡೀಮಾಡುವ ವ್ಯವಹರಣೆಗಳನ್ನು ಕುರಿತು.

149. ವಾರಂಟುಯಿಲ್ಲದೆ ಹಿಡಿಯಬಹುದಾದ ತಕ್ಸೀರುಗಳನ್ನು ಪೋಲೀಸಿನವರು ಅಡ್ಡೀಮಾಡೋಣ.
150. ಅಂಥಾ ತಕ್ಸೀರುಗಳ ಸನ್ನಾಹ ಕುರಿತು ವರ್ತಮಾನ.
151. ಅಂಥಾ ತಕ್ಸೀರುಗಳು ಅಡ್ಡೀಮಾಡುವದಕ್ಕೋಸ್ಕರ ಹಿಡಿಯೋಣ.
152. ಪಬ್ಲಿಕ್ ಸ್ವತ್ತಿಗೆ ಹಾನಿಪಡಿಸದಂತೆ ಅಡ್ಡೀಮಾಡೋಣ.
153. ಬಟ್ಟುಗಳನ್ನೂ ಅಳತೆ ಸಾಧನೆಗಳನ್ನೂ ನೋಡೋಣ.

PART V.

5ನೇ ಭಾಗ.

INFORMATION TO THE POLICE AND THEIR POWERS TO INVESTIGATE.

ಪೋಲೀಸಿನವರಿಗೆ ವರ್ತಮಾನ, ಮತ್ತು ಪೋಲೀಸವಿಚಾರಣೇ ಮಾಡಲಿಕ್ಕೆ ಅವರಿಗೆ ಇರುವ ಅಧಿಕಾರ.

CHAPTER XIV.

14ನೇ ಅಧ್ಯಾಯ.

154. ವಾರಂಟು ಶಿವಾಯಿ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ವರ್ತಮಾನ.
155. ವಾರಂಟಿಲ್ಲದೆ ಹಿಡಿಯಕೂಡದ ಮೊಕದ್ದಮೆಗಳಲ್ಲಿ ವರ್ತಮಾನ.
ವಾರಂಟುಯಿಲ್ಲದೆ ಹಿಡಿಯಕೂಡದಾದ ಮೊಕದ್ದಮೆಗಳ ಪೋಲೀಸ ವಿಚಾರಣೆ.
156. ವಾರಂಟು ಶಿವಾಯಿ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ಪೋಲೀಸ ವಿಚಾರಣೆ.

ಪ್ರಕರಣಗಳು.

157. ವಾರಂಟು ಇಲ್ಲದೆಯೆ ಹಿಡಿಯಬಹುದಾದ ತಪ್ಪಿತಸ್ಥರು ಗುರ್ಮಾ ಇರುವ ಸಂಗತಿಯಲ್ಲಿ ನಡಿಸಬೇಕಾದ ನಡವಳಿತೆ:
(a) ಸ್ಥಳೀಯ ವಿಚಾರಣೆ ಯಾವಾಗ್ಗೆ ಮಾಡತಕ್ಕದ್ದು ಇಲ್ಲ.
(b) ತಾಬೇದಾರಿಯಲ್ಲಿರುವ ಪೊಲೀಸು ಆಫಿಸರಿಗೆ ಪೊಲೀಸ್ ವಿಚಾರಣೆ ಮಾಡಲಿಕ್ಕೆ ಸಾಕಾದ ಸಬಬು ತೋರದೆ ಹೋದರೆ.
158. 157ನೇ ಪ್ರಕರಣದ ಪ್ರಕಾರ ಮಾಡುವ ರಿಪೋರ್ಟು ಹ್ಯಾಗೆ ಕಳುಹಿಸಲ್ಪಡತಕ್ಕದ್ದು.
159. ಪೊಲೀಸು ವಿಚಾರಣೇ ಮಾಡಲಿಕ್ಕೆ—ಯಾ—ಪ್ರಥಮವಿಚಾರಣೆ ಮಾಡಲಿಕ್ಕೆ ಅಧಿಕಾರ.
160. ಸಾಕ್ಷಿಗಾರರನ್ನ ಹಾಜರುಪಡಿಸಿಕೊಳ್ಳಲಿಕ್ಕೆ ಪೊಲೀಸ್ ಆಫಿಸರಗೆ ಇರುವ ಅಧಿಕಾರ.
161. ಪೊಲೀಸಿನವರಿಂದ ಸಾಕ್ಷಿಗಳ ವಿಚಾರಣೆ.
162. ಪೊಲೀಸಿನವರೊಂದಿಗೆ ಕೊಡೋಣಾದ ಹೇಳಿಕೆಗೆ ದಸ್ತಕತು ಹಾಕಲ್ಪಡತಕ್ಕದ್ದಿಲ್ಲ ಅಥವಾ ರುಜುವಾತಾಗಿ ಅಂಗೀಕರಿಸಕೂಡದು.
163. ಕಬೂಲಾತಿಯು ಯಾವ ಆಶೋತ್ತರವನ್ನು ಹೇಳಕೂಡದು.
164. ಹೇಳಿಕೆಗಳನ್ನು ತಕ್ಕೀರು ಕಬೂಲಾತಿಗಳನ್ನು ರಿಕಾರ್ಡು ಮಾಡಲಿಕ್ಕೆ ಅಧಿಕಾರ.
165. ಪೊಲೀಸಾಫಿಸರಿಂದ ಝಡ್ತಿ.
166. ಪೊಲೀಸ್ ಸ್ಟೇಷನ್ನ ತಾಬೇದಾರಿಯಲ್ಲಿ ಇರುವ ಆಫಿಸರು ಝಡ್ತೀ ವಾರಂಟು ಕೊಡಹೇಳಿ ಮತ್ತೊಬ್ಬ ಆಫಿಸರನನ್ನ ಯಾವಾಗ ಕೇಳಬಹುದು.
167. ಪೊಲೀಸು ವಿಚಾರಣೆಯು 24 ಘಂಟೆಗಳೊಳಗೆ ಪೂರ್ತಿ ಮಾಡಲ್ಪಡಕೂಡದಿದ್ದರೆ ನಡಿಸಬೇಕಾದ ಕ್ರಮ.
168. ಸಬಾರ್ಡಿನೇಟ್ ಪೊಲೀಸು ಆಫಿಸರನು ಮಾಡಿದ ಪೊಲೀಸು ವಿಚಾರಣೆಯ ರಿಪೋರ್ಟು.
169. ಸಾಕ್ಷ್ಯವು ಸಾಲದೆ ಇರುವ ಸಂಗತಿಯಲ್ಲಿ ಅಪಾದನೆಪಟ್ಟವನನ್ನು ಬಿಡುಗಡೆ ಮಾಡೋಣ.
170. ಸಾಕ್ಷ್ಯವು ಸಾಕಾಗಿದ್ದರೆ ಮೊಕದ್ದಮೆಯನ್ನ ಮ್ಯಾಜಿಸ್ಟ್ರೇಟಿಗೆ ರವಾನಿಸತಕ್ಕದ್ದು.
171. ಫಿರ್ಯಾದಿದಾರರಾಗಲಿ ಸಾಕ್ಷಿಗಳಾಗಲಿ ಪೊಲೀಸ್ ಆಫಿಸರರ ಸಂಗಡಲೇ ಹೋಗ ಹೇಳತಕ್ಕದ್ದಿಲ್ಲ.
ಫಿರ್ಯಾದಿದಾರರನ್ನು ಸಾಕ್ಷಿಗಳನ್ನು ಆತಂಕಕ್ಕೆ ಒಳಪಡಿಸಕೂಡದು.
ತಿರಸ್ಕರಿಸುವ ಫಿರ್ಯಾದದಾರನನ್ನು—ಯಾ—ಸಾಕ್ಷಿಯನ್ನು ಪಹರೇಯಲ್ಲಿ ಕಳುಹಿಸಬಹುದು.
172. ಪೊಲೀಸ್ ವಿಚಾರಣೆ ಪ್ರೊಸೀಡಿಂಗ್ಸ್‌ಗಳ ಡೈರಿ.
173. ಪೊಲೀಸ್ ಆಫಿಸರನ ರಿಪೋರ್ಟು.
174. ಆತ್ಮಹತ್ಯೆ ಮುಂತಾದ ಬಾಬುಗಳಲ್ಲಿ ಪೊಲೀಸಿನವರು ವಿಚಾರಣೆಮಾಡಿ ರಿಪೋರ್ಟು ಮಾಡತಕ್ಕದ್ದು.
175. ಮನುಷ್ಯರನ್ನು ಸಮ್ಮನ್ಸು ಮಾಡುವದಕ್ಕೆ ಅಧಿಕಾರ.
176. ಮರಣ ಕಾರಣವನ್ನು ಕುರಿತು ಮೇಜಿಸ್ಟ್ರೇಟನಿಂದ ವಿಚಾರಣೆ.
ಹೂಣಿಟ್ಟ ಶವವನ್ನು ತೆಗಿಸುವ ಅಧಿಕಾರ.

PART VI.

6ನೇ ಭಾಗ.

PROCEEDINGS IN PROSECUTIONS.

ಫಿರ್ಯಾದಿಗಳಲ್ಲಿ ಪ್ರೊಸೀಡಿಂಗಸುಗಳು.

CHAPTER XV.—OF THE JURISDICTION OF THE CRIMINAL COURTS IN INQUIRIES AND TRIALS.

15ನೇ ಅಧ್ಯಾಯ.—ವಿಚಾರಣೆಗಳಲ್ಲಿ—ವ—ದರ್ಯಾಪ್ತಿಗಳಲ್ಲಿ ಕ್ರಿಮಿನಲ್ ಕೋರ್ಟುಗಳಿಗೆ ಉಂಟಾಗಿರುವ ಅಧಿಕಾರವನ್ನ ಕುರಿತು.

A.—Place of Inquiry or Trial.

A.—ವಿಚಾರಣೆಯ—ಯಾ—ದರ್ಯಾಪ್ತಿಯ ಸ್ಥಲ.

177. ವಿಚಾರಣೆಯ ಮತ್ತು ದರ್ಯಾಪ್ತಿಯ ವಾಡಿಕೆಯಾದ ಸ್ಥಳ
178. ಮೊಕದ್ದಮೆಗಳನ್ನು ಬೇರೆಬೇರೆ ಸೆಷನ್ ಡಿವಿಜನಗಳಲ್ಲಿ ದರ್ಯಾಪ್ತಿ ಮಾಡಲ್ಪಡತಕ್ಕ ಬಗ್ಗೆ ಹುಕುಂ ಕೊಡುವದಕ್ಕೆ ಅಧಿಕಾರ.

1038

ಪ್ರಕರಣಗಳು.

179. ಎಲ್ಲಿ ಕೃತ್ಯ ನಡಿಯಿತೋ ಅಥವಾ ಎಲ್ಲಿ ಫಲ ಉಂಟಾಯಿತೋ ಆ ಡಿಸ್ಟ್ರಿಕ್ಟಿನಲ್ಲಿ ಆಪಾದನೆ ಪಟ್ಟವನು ದರ್ಯಾಫ್ತು ಮಾಡಲ್ಪಡಬಹುದು.

180. ಮತ್ತೊಂದು ತಕ್ಸೀರಿಗೆ ಸಂಬಂಧಪಡುವ ಕಾರಣದಿಂದ ಕೃತ್ಯವು ತಕ್ಸೀರಾದರೆ ಆಗ ವಿಚಾರಣೆಯ ಸ್ಥಳ.

181. ಪಾಶಗಾರಿ ಕಳ್ಳನಾಗಿ ಅಥವಾ ಡಕಾಯಿತಿ ಗುಂಪಿನಲ್ಲಿ ಸೇರಿದವನಾಗಿರೋಣ, ಪಹರೆಯಿಂದ ತಪ್ಪಿಸಿಕೊಳ್ಳೋಣ, ವಗೈರೆ
ತಕ್ಸೀರುಕರವಾದ ದುರುಪಯೋಗ ಮತ್ತು ತಕ್ಸೀರುಕರದಾದ ವಿಶ್ವಾಸ ಘಾತಕತೆ.
ಕಳ್ಳತನ.

182. ತಕ್ಸೀರು ನಡದ ಸ್ಥಳ ಗೊತ್ತಾಗದೆ ಹೋದರೆ ವಿಚಾರಣೆ—ವ—ದರ್ಯಾಫ್ತು ಬಗ್ಯೆ ಸ್ಥಳ.
ಅಥವಾ ಒಂದೇ ಡಿಸ್ಟ್ರಿಕ್ಟಿನಲ್ಲಿ ಅಲ್ಲದೆ ಹೋದರೆ ;
ಅಥವಾ ತಕ್ಸೀರು ನಡಿಯುತ್ತಾ ಇರುವಂಥಾದ್ದಾದರೆ.
ಅಥವಾ ಅನೇಕ ಕೃತ್ಯಗಳಿಂದ ಸೇರಿ ಇರುವದಾದರೆ.

183. ಪ್ರಯಾಣ ಮಾಡುತ್ತಿರುವಾಗ ನಡದ ತಕ್ಸೀರು.

185. ವಿಚಾರಣೆ—ಯಾ—ದರ್ಯಾಫ್ತು ಯಾವ ಡಿಸ್ಟ್ರಿಕ್ಟಿನಲ್ಲಿ ನಡೆಯತಕ್ಕದ್ದೆಂಬ ಬಾಬಿನಲ್ಲಿ ಸಂಶಯಹುಟ್ಟಿದ ಸಂಗತಿಯಲ್ಲಿ, ಚೀಫ್ ಕೋರ್ಟಿನವರ ತೀರ್ಮಾನಿಸತಕ್ಕದ್ದು.

186. ಸ್ಥಳೀಯ ಅಧಿಕಾರ ಸರಹದ್ದಿನ ಹೊರಗೆ ನಡೆದ ತಕ್ಸೀರ ಬಾಬಿನಲ್ಲಿ ಸಮ್ಮನ್ಸ—ಯಾ—ವಾರಂಟ್ ಕೊಡುವ ಅಧಿಕಾರ.
ಹಿಡಿಯೋಣಾದಲ್ಲಿ ಮೇಜಿಸ್ಟ್ರೇಟನು ನಡಿಸತಕ್ಕ ಕ್ರಮ.

187. ವಾರಂಟ್ ಸಬಾರ್ಡಿನೇಟು ಮೇಜಿಸ್ಟ್ರೇಟು ಕೊಟ್ಟದ್ದರೆ ನಡಿಸತಕ್ಕ ಕ್ರಮ.

188. ಮೈಸೂರು ಶೀಮೆಯ ಹೊರಗೆ ಶ್ರೀಮನ್ಮಹಾರಾಜರವರ ಸಬ್ಜಕ್ಟುಗಳು ನಡಿಸಿದ ತಕ್ಸೀರುಗಳ ಬಾಬಿನಲ್ಲಿ ಗುರಿ ಪಡುವಿಕೆ.
ಆಪಾದನೆಯು ವಿಚಾರಿಸಲ್ಪಡಲು ಯೋಗ್ಯವಾದ್ದೆಂತ ಪೊಲಿಟಿಕಲ್ ಯೇಜಂಟನು ನಿರ್ಣಯಪತ್ರ ಕೊಡಬೇಕು.

189. ವಾಂಗ್ಮೂಲಗಳ ಮತ್ತು ಸಾಧನಗಳ ನಕಲುಗಳನ್ನು ರುಜುವಾತಾಗಿ ತಕ್ಕೊಳ್ಳಲಿಕ್ಕೆ ಅಪ್ಪಣೆ ಕೊಡುವದಕ್ಕೆ ಅಧಿಕಾರ.

B.—Conditions requisite for Initiation of Proceedings.

B.—ಪ್ರೊಸೀಡಿಂಗ್ಸಗಳನ್ನು ಪ್ರಾರಂಭಿಸುವದಕ್ಕೆ ಆವಶ್ಯವಾದ ವಿದ್ಯಮಾನಗಳು.

191. ತಕ್ಸೀರುಗಳ ತನಖಿ ಮಾಡುವಬಗ್ಯೆ ಮೇಜಿಸ್ಟ್ರೇಟರಿಗೆ ಇರುವ ಅಧಿಕಾರ.

192. ಮೆಜಿಸ್ಟ್ರೇಟುಗಳು ಮೊಕದ್ದಮೆಗಳನ್ನು ವರ್ಗಮಾಡೋಣ.

193. ಸೆಷನ್ ಕೋರ್ಟಿನವರಿಂದ ತಕ್ಸೀರುಗಳು ತನಖಿ.
ಅಡಿಷನಲ್ ಮತ್ತು ಜಾಯಿಂಟ್ ಸೆಷನ್ ಜಡ್ಜರಿಂದ ದರಿಯಾಫ್ತು ಮಾಡಲ್ಪಡಬೇಕಾದ ಮೊಕದ್ದಮೆಗಳು ;
ಅಸಿಸ್ಟೆಂಟ್ ಸೆಷನ್ ಜಡ್ಜರಿಂದ.

195. ಸರಕಾರ ನೌಕರರ ನ್ಯಾಯವಾದ ಅಧಿಕಾರವನ್ನ ಅಲಕ್ಷ್ಯ ಮಾಡಿದ್ದಕ್ಕಾಗಿ ಫಿರ್ಯಾದು.
ಸರಕಾರ ನ್ಯಾಯಕ್ಕೆ ವಿರೋಧವಾಗಿ ನಡದ ಕೆಲವು ತಕ್ಸೀರುಗಳಿಗೋಸ್ಕರ ಫಿರ್ಯಾದ.
ರುಜುವಾತಾಗಿ ದಾಖಲ್ ಮಾಡಿದ ದಸ್ತಾವೇಜುಗಳ ವಿಷಯವಾಗಿ ಕೆಲವು ತಕ್ಸೀರುಗಳಿಗೋಸ್ಕರ ಫಿರ್ಯಾದ
ಅವಶ್ಯಕವಾದ ಅನುಮತಿಯಾನೆ ಸ್ಯಾಂಕ್ಷನ್ ಸ್ವಭಾವ.

196. ಸಂಸ್ಥಾನಕ್ಕೆ ವಿರೋಧವಾದ ತಕ್ಸೀರುಗೋಸ್ಕರ ಫಿರ್ಯಾದಗಳು.

197. ಜಡ್ಜಿಗಳ—ವ—ಸರಕಾರಿ ನವುಕರರಮೇಲೆ ಫಿರ್ಯಾದಗಳು.
ಪ್ರಾಸಿಕ್ಯೂಷನ್ ಬಾಬಿನಲ್ಲಿ ಗವರ್ನಮೆಂಟನವರ ಅಧಿಕಾರ.

198. ಕರಾರಿನಪ್ರಕಾರ ನಡಕೊಳ್ಳದೆ ತಪ್ಪಿದ ತಕ್ಸೀರು, ಮಾನನಷ್ಟ ಮತ್ತು ಮದುವೆಗೆ ವಿರೋಧವಾದ ತಕ್ಸೀರುಗಳ ಬಾಬಿನಲ್ಲಿ ಫಿರ್ಯಾದ.

199. ಹಾದರದ ವಿಷಯದಲ್ಲಿ—ಯಾ—ಮದುವೆಯಾದ ಹೆಂಗಸನ್ನ ಬೋಧನೆಯಿಂದ ಕರಕೊಂಡು ಹೋದದ್ದಕ್ಕಾಗಿ ಫಿರ್ಯಾದು.

Chapter XVI.—Of Complaints to Magistrates.

16ನೇ ಅಧ್ಯಾಯ.—ಮೇಜಿಸ್ಟ್ರೇಟರಬಳಿಯ ಫಿರ್ಯಾದುಗಳನ್ನು ಕುರಿತು.

200. ಫಿರ್ಯಾದುದಾರನ ವಿಚಾರಣೆ.

201. ಮೊಕದ್ದಮೆಯನ್ನು ತನಖಿ ಮಾಡುವದಕ್ಕೆ ಅಧಿಕಾರವಿಲ್ಲದ ಮೆಜಿಸ್ಟ್ರೇಟನು ನಡಿಸತಕ್ಕ ಕ್ರಮ.

ಪ್ರಕರಣಗಳು.

202. ಪ್ರೋಸೆಸ್ ಕೊಡದೆ ನಿಲ್ಲಿಸಿಡೋಣ.
203. ಫಿರ್ಯಾದನ್ನು ಡಿಸ್‌ಮಿಸ್ ಮಾಡೋಣ.

CHAPTER XVII.—OF THE COMMENCEMENT OF PROCEEDINGS BEFORE MAGISTRATES.

17ನೇ ಅಧ್ಯಾಯ.—ಮೇಜಿಸ್ಟ್ರೇಟರಮುಂದೆ ನಡಿಯತಕ್ಕ ವ್ಯವಹರಣೆಯು ಪ್ರಾರಂಭಿಸುವಿಕೆಯನ್ನು ಕುರಿತು.

204. ಪ್ರೋಸೆಸ್ ಕೊಡೋಣ.
205. ಆಪಾದನೆಪಟ್ಟ ಮನುಷ್ಯನು ಖುದ್ದು ಹಾಜರಾಗದೆ ಇರಲಿಕ್ಕೆ ಮೇಜಿಸ್ಟ್ರೇಟ್ ಅನುಮತಿ ಕೊಡಬಹುದು.

CHAPTER XVIII.—OF INQUIRY INTO CASES TRIABLE BY THE COURT OF SESSION

18ನೇ ಅಧ್ಯಾಯ.—ಸೆಷನ್ ಕೋರ್ಟಿನಿಂದ ದರಿಯಾಫ್ತು ಆಗತಕ್ಕ ಮುಕದ್ದಮೆಗಳ ವಿಚಾರಣೆಯನ್ನು ಕುರಿತು.

206. ದರಿಯಾಫ್ತುಬಗ್ಗೆ ಕಮಿಟ್ ಮಾಡಲಿಕ್ಕೆ ಇರುವ ಅಧಿಕಾರ.
207. ಕಮಿಟ್ ಮಾಡಲಿಕ್ಕೆ ಸಿದ್ಧಪಡಿಸುವಿಕೆಯ ವಿಚಾರಣೆ ಕ್ರಮ.
208. ಹಾಜರುಪಡಿಸಿದ ಸಾಕ್ಷ್ಯವನ್ನು ತೆಗೆದುಕೊಳ್ಳೋಣ.
ಹೆಚ್ಚಿಗೆ ಸಾಕ್ಷ್ಯವನ್ನು ಹಾಜರು ಪಡಿಸುವಬಗ್ಗೆ ಪ್ರೋಸೆಸ್.
209. ಆಪಾದನೆ ಪಟ್ಟವನು ಯಾವಾಗ ವಿಮೋಚನೆಯಾಗಲ್ಪಡಬಹುದು.
210. ತಕ್ಸೀರುನಾಮೆ ಯಾವಾಗ ಏರ್ಪಡಿಸಬಹುದು.
ತಕ್ಸೀರುನಾಮೆ ವಿವರಿಸತಕ್ಕದ್ದು—ವ—ಅದರ ನಕಲು ಆಪಾದನೆಪಟ್ಟ ಮನುಷ್ಯನಿಗೆ ಕೊಡತಕ್ಕದ್ದು.
211. ಡಿಫೆನ್ಸ್‌ಬಗ್ಗೆ ದರಿಯಾಫ್ತಿಯಲ್ಲಿ ಸಾಕ್ಷಿಗಾರರ ಪಟ್ಟಿ.
ತಾಜಾಪಟ್ಟಿ.
212. ಅಂಥಾ ಸಾಕ್ಷಿಗಾರರನ್ನ ವಿಚಾರಣೆ ಮಾಡುವದಕ್ಕೆ ಮೇಜಿಸ್ಟ್ರೇಟಿಗೆ ಇರುವ ಅಧಿಕಾರ.
213. ಕಮ್ಮಿಟ್‌ಮೆಂಟ್ ಹುಕುಂ.
215. 213ನೇ ಪ್ರಕರಣಪ್ರಕಾರ ಮಾಡೋಣಾದ ಕಮಿಟ್‌ಮೆಂಟುಗಳನ್ನು ರದ್ದು ಮಾಡೋಣ.
216. ಆಪಾದನೆಪಟ್ಟ ಮನುಷ್ಯನು ಕಮಿಟ್‌ಮಾಡಲ್ಪಟ್ಟಾಗ ಡಿಫೆನ್ಸ್‌ಕಡೆ ಸಾಕ್ಷಿಗಾರರನ್ನು ಸಮನ್ ಕೊಡುವದನ್ನು ಕುರಿತು.
ಠೇವಣಿ ಮಡಗಿದ ಹೊರತು ಅನಾವಶ್ಯಕವಾದ ಸಾಕ್ಷಿಯನ್ನು ಸಮನ್ಸ್‌ಮಾಡುವದಕ್ಕೆ ನಿರಾಕರಿಸೋಣ.
217. ಫಿರ್ಯಾದುದಾರರ—ವ—ಸಾಕ್ಷಿಗಾರರ ಪತ್ರ.
ಹಾಜರಾಗುವದಕ್ಕೆ ಅಥವಾ ಕರಾರು ಬರಕೊಡಲಿಕ್ಕೆ ನಿರಾಕರಿಸಿದರೆ ಪಹರೆಯಲ್ಲಿ ತಡೆದಿಡೋಣ.
218. ಕಮಿಟ್‌ಮೆಂಟ್ ಯಾವಾಗ ತಿಳಿಸಲ್ಪಡತಕ್ಕದ್ದು.
ತಕ್ಸೀರುನಾಮೆ ಮುಂತಾದ್ದು ಸೆಷನ್‌ಕೋರ್ಟಿಗೆ ರವಾನಿಸತಕ್ಕದ್ದು.
219. ಉಪ ಸಾಕ್ಷಿಗಾರರನ್ನ ಸಮ್ಮನ್ಸ್‌ಮಾಡಲಿಕ್ಕೆ ಅಧಿಕಾರ.
220. ದರಿಯಾಫ್ತು ಮುಗಿಯುವತನಕ ಆಪಾದನೆಪಟ್ಟ ಮನುಷ್ಯನನ್ನ ಪಹರೆಯಲ್ಲಿಡೋಣ.

CHAPTER XIX.—OF THE CHARGE.

19ನೇ ಅಧ್ಯಾಯ.—ತಕ್ಸೀರುನಾಮೆಯನ್ನ ಕುರಿತು.

Form of Charges.

ತಕ್ಸೀರುನಾಮೆಗಳ ನಮೂನೆ.

221. ತಕ್ಸೀರುನಾಮೆಯಲ್ಲಿ ತಕ್ಸೀರನ್ನು ಬರೆದಿರತಕ್ಕದ್ದು.
ಫಲಾನೇ ತಕ್ಸೀರಿನ ಹೆಸರು ಸಾಕಾದ ವಿವರಣೆ.

ಪ್ರಕರಣಗಳು.

ಫಲಾನೆದೆಂದು ತಕ್ಸೀರಿಗೆ ಹೆಸರು ಇಲ್ಲದೆ ಹೋದರೆ ಹ್ಯಾಗೆ ಬರಿಯತಕ್ಕದ್ದು.

ತಕ್ಸೀರುನಾಮೆಯಿಂದ ಏನು ಗೂಢವಾಗಿ ಅರ್ಥವಾಗುತ್ತದೆ.

ತಕ್ಸೀರುನಾಮೆಯನ್ನು ಬರೆಯುತಕ್ಕ ಭಾಷೆ.

ಪ್ರಾಕಿನ ಸಾಬೀತನ್ನು ಯಾವಾಗ ಬರೆದಿರತಕ್ಕದ್ದು.

222. ಕಾಲ, ಸ್ಥಳ—ವ—ಮನುಷ್ಯನ ವಿಷಯವಾಗಿ ಸಂಗತಿಗಳು.

223. ತಕ್ಸೀರುನಡಿಸಿದ ರೀತಿಯನ್ನು ಯಾವಾಗ ಬರೆಯತಕ್ಕದ್ದು.

224. ತಕ್ಸೀರುನಾಮೆಯ ಶಬ್ದಗಳು ಆ ತಕ್ಸೀರು ಯಾವ ಕಾನೂನುಪ್ರಕಾರ ಶಿಕ್ಷಿಸಲ್ಪಡಬಹುದೋ ಆ ಕಾನೂನಿನ ಅಭಿಪ್ರಾಯ ಲ್ಲಿ ತಕ್ಕೊಳ್ಳೋಣ.

225. ಫರಾಮೋಷಿಗಳ ಫಲ.

226. ತಕ್ಸೀರುನಾಮೆ ಇಲ್ಲದೇನೇ ಅಥವಾ ಅಪೂರ್ಣವಾದ ತಕ್ಸೀರುನಾಮೆ ನಿಃ ಕಮಿಟ್ ಮಾಡೋಣಾದಲ್ಲಿ ನಡಿಸತಕ್ಕ ಕ್ರಮ.

227. ಕೋರ್ಟಿನವರು ತಕ್ಸೀರುನಾಮೆಯನ್ನು ತಬ್ದಿಲ್ ಮಾಡಬಹುದು.

228. ಯಾವಾಗ ತಬ್ದಿಲ್ ಆದಕೂಡ್ಲೆ ದರಿಯಾಫ್ತಿ ನಡೆಯಬಹುದು.

229. ಯಾವಾಗ ಹೊಸದರ್ಯಾಫ್ತಿ ಯಾಗತಕ್ಕದ್ದೆಂದು ವಿಧಿಸಬಹುದು, ಅಥವಾ ದರ್ಯಾಫ್ತಿಯನ್ನ ನಡಿಸದೆ ನಿಲ್ಲಿಸಿಡಬಹುದು.

230. ತಬ್ದಿಲಾದ ತಕ್ಸೀರನಾಮೆಯ ತಕ್ಸೀರಿನ ಫಿರ್ಯಾದಿಗೆ ಮುಂಚಿತವಾಗಿಯೇ ಅನುಮತಿ ಅಗತ್ಯ ಇದ್ದರ ವ್ಯಾವಹರಣೆ ನಿಲ್ಲಿಸಿಡೋಣ.

231. ತಕ್ಸೀರುನಾಮೆಯು ತಬ್ದಿಲ್ ಮಾಡಲ್ಪಟ್ಟಾಗ ಸಾಕ್ಷಿಗಾರರನ್ನ ಪುನಃ ಕರೆಯೋಣ.

232. ಮುಖ್ಯವಾದ ಫರಾಮೋಷಿಯ ಫಲ.

Joinder of Charges.

ತಕ್ಸೀರುನಾಮೆಗಳ ಜಾಯಿಂಡರ್.

233. ಬೇರೆ ಬೇರೆ ತಕ್ಸೀರುಗಳಿಗೆ ಪ್ರತ್ಯೇಕ ಪ್ರತ್ಯೇಕ ತಕ್ಸೀರುನಾಮೆಗಳನ್ನು ತಯಾರ್ಮಾಡತಕ್ಕದ್ದು.

234. ಒಂದು ಸಂವತ್ಸರದೊಳಗಾಗಿ ಒಂದೇ ತರಹಾವಿನ ಮೂರು ತಕ್ಸೀರುಗಳಿಗಾಗಿ ಒಟ್ಟಿನಲ್ಲೇ ಅಪಾದನೆ ಮಾಡಬಹುದು.

235. I. ಒಂದಕ್ಕಿಂತ ಹೆಚ್ಚು ತಕ್ಸೀರುಗಾಗಿ ದರಿಯಾಫ್ತಿ.

II. ಎರಡು ವಿವರಣೆಗಳೊಳಗಾಗಿ ಬೀಳುವ ತಕ್ಸೀರು.

III. ಒಂದೇ ತಕ್ಸೀರಾಗುವ ಕೃತ್ಯಗಳು ಸೇರಿಕೊಂಡು ಇದ್ದರೆ, ಬೇರೆ ತಕ್ಸೀರಾಗ್ತೋಣ.

236. ಯಾವ ತಕ್ಸೀರು ನಡೆಯಿತೋ ಎಂದು ಸಂಶಯವಾದರೆ.

237. ಒಂದು ತಕ್ಸೀರಿಗೆ ಅಪಾದನೆಯಾದ ಒಬ್ಬನನ್ನ ಮತ್ತೊಂದು ತಕ್ಸೀರಿಗೆ ಆಗಿ ಸಾಬೀತು ಮಾಡಬಹುದು.

238. ಆಪಾದನೆಯಾದ ತಕ್ಸೀರಿನಲ್ಲಿ ರುಜು ವಾದ ತಕ್ಸೀರು ಸೇರಿದಾಗ.

239. ಯಾರನ್ನ ಜೊತೆಯಾಗಿ ಅಪಾದನೆ ಮಾಡಬಹುದು.

240. ಅನೇಕ ಅಪಾದನೆಗಳಪೈಕಿ ಒಂದು ಸಾಬೀತಾದಮೇಲೆ ಉಳಿದ ಅಪಾದನೆಗಳನ್ನು ವಾಪಸು ತೆಗದುಕೊಳ್ಳೋಣ.

CHAPTER XX.—OF THE TRIAL OF SUMMONS-CASES BY MAGISTRATES.

20ನೇ ಅಧ್ಯಾಯ.—ಮೇಜಿಸ್ಟ್ರೇಟುಗಳಿಂದ ಸಮ್ಮನ್ ಮೊಕದ್ದಮೆಗಳ ದರ್ಯಾಫ್ತಿಯನ್ನು ಕುರಿತು.

241. ಸಮ್ಮನ್ ಮೊಕದ್ದಮೆಗಳಲ್ಲಿ ನಡಿಸತಕ್ಕ ಕ್ರಮ.

242. ಆಪಾದನೆಯ ಸಾರಾಂಶ ಹೇಳಲ್ಪಡಬೇಕು.

243. ಅಪಾದನೆಯ ಯತಾರ್ಥವನ್ನು ಒಪ್ಪಿದ್ದರಮೇಲೆ ತಕ್ಸೀರು ಸಾಬೀತು.

244. ಹಾಗೆ ಒಪ್ಪಿಕೊಳ್ಳದಿದ್ದರೆ ನಡಿಸತಕ್ಕ ಕ್ರಮ.

245. ಖುಲಾಸೆ.

ಸಜಾ.

246. ಫಿರ್ಯಾದಿ—ಯಾ—ಸಮ್ಮನ್ನಿಂದ ಇತ್ಯರ್ಥವು ಮಾಟ್ಟಾಗತಕ್ಕದ್ದಲ್ಲ.

ಪ್ರಕರಣಗಳು.

247. ಫಿರ್ಯಾದ್‌ದಾರನ ಗೈರ್‌ಹಾಜರಿ.
248. ಫಿರ್ಯಾದನ್ನು ವಾಪಸ್ ತೆಗೆದುಕೊಳ್ಳೋಣ.
249. ಫಿರ್ಯಾದುದಾರನು ಇಲ್ಲದಿರುವಾಗ ವ್ಯವಹರಣೆ ನಿಲ್ಲಿಸಿಡಲಿಕ್ಕೆ ಅಧಿಕಾರ.
250. ಅಲ್ಪವಾದ—ಯಾ—ರೋಷ್ಟುಕರವಾದ ಫಿರ್ಯಾದುಗಳಿಗೆ.
ಪರಿಹಾರ ದ್ರವ್ಯವನ್ನು ವಸೂಲ್ಮಾಡೋಣ.

Chapter XXI.—Of the Trial of Warrant-cases by Magistrates.

21ನೇ ಅಧ್ಯಾಯ.—ಮೇಜಿಸ್ಟ್ರೇಟುಗಳಿಂದ ವಾರಂಟು ಮೊಕದ್ದಮೆಗಳ ದರ್ಯಾಫ್ತಿಯನ್ನು ಕುರಿತು.

251. ವಾರಂಟು ಮೊಕದ್ದಮೆಗಳಲ್ಲಿ ನಡಿಸತಕ್ಕ ಕ್ರಮ.
252. ಫಿರ್ಯಾದಬಗ್ಗೆ ಸಾಕ್ಷ್ಯ.
253. ಆಪಾದನೆಪಟ್ಟವನ ವಿಮೋಚನೆ.
254. ತಕ್ಕೀರು ರುಜುವಾದ್ದಾಗಿ ಕಂಡುಬಂದಾಗ ತಕ್ಕೀರುನಾಮೆ ಏರ್ಪಡಿಸತಕ್ಕದ್ದು.
255. ಉದಹರಿಸುವಿಕೆ.
256. ಪ್ರತಿವಾದ.
257. ಆಪಾದನೆಪಟ್ಟವನ ಅಪೇಕ್ಷೆಪ್ರಕಾರ ಸಾಕ್ಷ್ಯವನ್ನು ಹಾಜರುಪಡಿಸಲು ಬಲಾತ್ಕರಿಸುವದಕ್ಕಾಗಿ ಪ್ರೊಸೆಸ್.
258. ಖುಲಾಸೆ.
ಸಾಬೀತು.
259. ಫಿರ್ಯಾದ್‌ದಾರನ ಗೈರ್‌ಹಾಜರಿ.

Chapter XXII.—Of Summary Trials.

22ನೇ ಅಧ್ಯಾಯ.—ಫೂಟ ವಿಚಾರಣೆಗಳನ್ನು ಕುರಿತು.

260. ಫೂಟಾಗಿ ದರಿಯಾಫ್ತಿ ಮಾಡಲಿಕ್ಕೆ ಇರುವ ಅಧಿಕಾರ.
261. ಕಮ್ಮಿ ಅಧಿಕಾರ ಹೊಂದಿದ ಮೇಜಿಸ್ಟ್ರೇಟರ ಬೆಂಚಿಗೆ ಅಧಿಕಾರ ಕೊಡುವದಕ್ಕೆ ಸ್ವಾತಂತ್ರ್ಯ.
262. ಸಮನ್ಸ—ವ—ವಾರಂಟು ಮೊಕದ್ದಮೆಗಳಿಗೆ ಲಗಾವಾಗತಕ್ಕ ನಡವಳಿಕೆ ಕ್ರಮ.
ಕೈದಿನಕಾಲದ ಮಿತ.
263. ಅಪ್ಪೀಲಿಲ್ಲದ ಮೊಕದ್ದಮೆಗಳಲ್ಲಿ ರಿಕಾರ್ಡು.
264. ಅಪ್ಪೀಲಾಗತಕ್ಕ ಮೊಕದ್ದಮೆಗಳಲ್ಲಿ ರಿಕಾರ್ಡು.
265. ರಿಕಾರ್ಡಿನ—ವ—ತೀರ್ಪಿನ ಭಾಷೆ.
ಮೇಜಿಸ್ಟ್ರೇಟುಗಳ ಬೆಂಚು ಕ್ಲಾರ್ಕನ್ನ ನೇಮಿಸುವದಕ್ಕೆ ಅಧಿಕಾರ ಹೊಂದಬಹುದು.

Chapter XXIII.—Of Trials before Courts of Session.

23ನೇ ಅಧ್ಯಾಯ.—ಸೆಷನ್ ಕೋರ್ಟುಗಳ ಮುಂದೆ ದರ್ಯಾಫ್ತಿಗಳು.

A.—Preliminary.

A.—ಪ್ರಾರಂಭ.

266. ಸೆಷನ್‌ಕೋರ್ಟಿನವರಮುಂದೆ ನಡೆಯುವ ದರ್ಯಾಫ್ತಿಗಳು ಜ್ಯೂರಿಯವರಿಂದ—ಯಾ—ಅಸ್ಸೆಸ್ಸರುಗಳೊಂದಿಗೆ ಆಗಿರತಕ್ಕದ್ದು.
267. ಸೆಷನ್‌ಕೋರ್ಟಿನವರ ಬಳಿ ದರ್ಯಾಫ್ತಿಗಳು ಜ್ಯೂರಿಯವರಿಂದ ಆಗತಕ್ಕದ್ದೆಂದು ಗವರ್ನ್‌
ಮೆಂಟಿನವರು ಹುಕುಂ ಮಾಡುವದನ್ನು,

ಪ್ರಕರಣಗಳು.

270. ಸೆಷನ್ ಕೋರ್ಟಿನಮುಂದೆ ನಡೆಯುವ ದರಿಯಾಫ್ತಿಗಳು ಪಬ್ಲಿಕ್ ಪ್ರೊಸಿಕ್ಯೂಟರಿಂದ ನಡಿಸಲ್ಪಡತಕ್ಕದ್ದು.

B.—Commencement of Proceedings.

B.—ವ್ಯವಹರಣೆಗಳ ಪ್ರಾರಂಭ.

271. ದರ್ಯಾಫ್ತಿಯ, ಪ್ರಾರಂಭ.

ತಪ್ಪಿತಸ್ಥನೆಂದು ಉದಾಹರಣೆ.

272. ಉದಾಹರಣೆಕೊಡದೇ ನಿರಾಕರಿಸಿದರೂ—ಯಾ—ದರ್ಯಾಫ್ತಿ ಆಗಬೇಕೆಂತ ದಾವೇ ಮಾಡಿದರೂ.

ಒಂದೇ ಜೊತೆಯ ಜ್ಯೂರಿಯು ಅಥವಾ ಅಸ್ಸೆಸ್ಸರುಗಳು ತಕ್ಸೀರುದಾರರನ್ನು ಒಬ್ಬೊಬ್ಬರನ್ನಾಗಿ ತನಖೀ ಮಾಡಬಹುದು.

C.—Choosing a Jury.

C.—ಜ್ಯೂರಿಯವರನ್ನು ಆರಿಸೋಣ.

274. ಜ್ಯೂರಿಯಾವರ ಸಂಖ್ಯೆ.

275. ಸೆಷನ್ ಕೋರ್ಟಿನವರಮುಂದೆ ಯೂರೋಪಿಯನ್—ಯಾ—ಅಮೆರಿಕನ್‌ರಲ್ಲದವರ ದರಿಯಾಫ್ತಿಗಾಗಿ ಜ್ಯೂರಿ.

276. ಲಾಟು ಚೀಟಿನದ್ವಾರಾ ಜ್ಯೂರರುಗಳನ್ನು ಏರ್ಪಡಿಸಬೇಕು.

ನಿಯಮ.

ಪ್ರಕೃತದ ನಡವಳಿತೆ ನಡಿಸತಕ್ಕದ್ದು.

ಸಮ್ಮನ್ ಮಾಡಲ್ಪಡದೆ ಇದ್ದವರು ಯೋಗ್ಯ ಅರ್ಹರಾಗುತ್ತಾರೆ.

277. ಜ್ಯೂರಿಯವರ ಹೆಸರುಗಳನ್ನು ಕರೆಯತಕ್ಕದ್ದು.

ಜ್ಯೂರರ ವಿಷಯವಾಗಿ ಆಕ್ಷೇಪಣೆ.

278. ಆಕ್ಷೇಪಣೆಯ ಸಬಬುಗಳು.

279. ಆಕ್ಷೇಪಣೆಯ ಇತ್ಯರ್ಥ.

ಯಾವ ಜ್ಯೂರರಮೇಲಿನ ಆಕ್ಷೇಪಣೆ ಅಂಗೀಕರಿಸೋಣಾಯಿತೋ ಅವನ ಸ್ಥಳದಲ್ಲಿ ಜೇರಿಯವನ ನೇಮಕ.

280. ಜ್ಯೂರಿ ಸಭೆಯ ಪ್ರಮುಖನು.

281. ಜ್ಯೂರರುಗಳಿಂದ ಪ್ರಮಾಣಮಾಡಿಸುವಿಕೆ.

282. ಜ್ಯೂರಿಯವನು ಹಾಜರ್ ವಗ್ಯೆರೆ ಆಗದೇ ಇದ್ದರೆ ನಡಿಸತಕ್ಕ ಕ್ರಮ.

283. ಕೈದಿಯು ಅಸ್ವಸ್ಥನಾದ ಸಂಗತಿಯಲ್ಲಿ ಜ್ಯೂರಿಯವರನ್ನು ವಿಮೋಚನೆ ಪಡಿಸೋಣ.

D.—Choosing Assessors.

D.—ಅಸ್ಸೆಸ್ಸರನ್ನು ಆರಿಸೋಣ.

284. ಅಸ್ಸೆಸ್ಸರನ್ನು ಹ್ಯಾಗೆ ಆರಿಸೋಣ.

285. ಅಸ್ಸೆಸ್ಸರು ಹಾಜರಾಗಲಿಕ್ಕೆ ಅಸಮರ್ಥರಾದರೆ ನಡಿಸತಕ್ಕ ಕ್ರಮ.

E.—Trial to Close of Cases for Prosecution and Defence.

E.—ಮೊಕದ್ದಮೆಗಳ ಪ್ರೊಸಿಕ್ಯೂಷನನ್ನು—ವ—ಡಿಫೆನ್ಸನ್ನು ಪೂರೈಸುವದಕ್ಕೆ ದರ್ಯಾಫ್ತಿ.

286. ಫಿರ್ಯಾದ್ ತರಫಿನಿಂದ ಮೊಕದ್ದಮೆಯನ್ನು ಪ್ರಾರಂಭಿಸೋಣ.

ಸಾಕ್ಷಿಗಾರರ ವಿಚಾರಣೆ.

287. ಮ್ಯಾಜಿಸ್ಟ್ರೇಟನ ಮುಂದೆ ಮಾಡೋಣಾದ ಆಪಾದನೆಪಟ್ಟವನ ವಿಚಾರಣೆಯು ಸಾಕ್ಷ್ಯವಾಗಿ ಇರತಕ್ಕದ್ದು.

288. ಪ್ರಥಮ ವಿಚಾರಣೆಯಲ್ಲಿ ಕೊಡೋಣಾದ ಸಾಕ್ಷ್ಯವು ಅಂಗೀಕಾರವಾಗತಕ್ಕದ್ದು.

289. ಫಿರ್ಯಾದಿ ತರಫಿನ ಸಾಕ್ಷಿಗಾರರ ವಿಚಾರಣೆಯ ನಂತರ ನಡಿಸತಕ್ಕ ಕ್ರಮ.

ಪ್ರಕರಣಗಳು.

290. ಡಿರ್ಫೆನ್ಸ್ ಎಂಬ ಪ್ರತಿವಾದ.
291. ಸಾಕ್ಷ್ಯಗಳನ್ನ ಸಮ್ಮರ್ ಮಾಡುವ ಮತ್ತು ವಿಚಾರಣೆ ಮಾಡುವ ವಿಷಯದಲ್ಲಿ ಆಪಾದನೆಪಟ್ಟವನ ಹಕ್ಕು.
292. ಜವಾಬು ಕೊಡಲಿಕ್ಕೆ ಫಿರ್ಯಾದುದಾರನ ಹಕ್ಕು.
293. ಜೂರಿ ಅಥವಾ ಅಸ್ಸೆಸ್ಸರುಗಳ ಅವಲೋಕನೆ.
294. ಯಾವಾಗ ಜೂರಿಯವನು—ಯಾ—ಅಸ್ಸೆಸ್ಸರನು ವಿಚಾರಣೆ ಮಾಡಲ್ಪಡಬಹುದು.
295. ನಿಲ್ಲಿಸಿ ಇಡೋಣಾದ ತನಖಿ ನಡಿಯಬೇಕಾದಾಗ ಜೂರಿಯೂ ಅಥವಾ ಅಸ್ಸೆಸ್ಸರನು ಹಾಜರಾಗಬೇಕು.

F—Conclusion of Trial in Cases tried by Jury.

F—ಜೂರಿಯವರಿಂದ ದರ್ಯಾಫ್ತು ಮಾಡಲ್ಪಟ್ಟ ಮೊಕದ್ದಮೆಗಳ ದರ್ಯಾಫ್ತಿ ಸಂಪೂರ್ಣತ್ವ.

297. ಜೂರಿಗಳಿಗೆ ಒಪ್ಪಿಸೋಣ.
298. ಜಡ್ಜಿಯ ಕೆಲಸ.
299. ಜೂರಿಯ ಕೆಲಸ.
300. ಆಲೋಚಿಸುವದಕ್ಕೆ ಹೋಗೋಣ.
301. ಜೂರಿಯವರು ತೀರ್ಮಾನ ಹೇಳೋಣ.
302. ಜೂರಿಯವರು ಭಿನ್ನಾಭಿಪ್ರಾಯಪಟ್ಟ ಸಂಗತಿಯಲ್ಲಿ ನಡಿಸತಕ್ಕ ಕ್ರಮ.
303. ಪ್ರತಿ ಚಾರ್ಜಿನ ಮೇಲೆ ಕೊಡತಕ್ಕ ತೀರ್ಮಾನ.
ಜೂರಿಯನ್ನು ಜಡ್ಜಿಯು ಪ್ರಶ್ನೆ ಮಾಡಬಹುದು.
ಪ್ರಶ್ನೆಗಳು ಮತ್ತು ಅವುಗಳ ಜವಾಬುಗಳು ರಿಕಾರ್ಡು ಮಾಡಲ್ಪಡೋಣ.
304. ತೀರ್ಮಾನವನ್ನು ದುರಸ್ತು ಮಾಡೋಣ.
306. ಸೆಷನ್ ಕೋರ್ಟಿನಲ್ಲಿ ತೀರ್ಮಾನವು ಯಾವಾಗ ಊರ್ಜಿತಪಡತಕ್ಕದ್ದು.
307. ಸೆಷನ್ ಜಡ್ಜಿಯು ತೀರ್ಮಾನ ಸಮ್ಮತಿಸುವದಿಲ್ಲವಾದ ಸಂಗತಿಯಲ್ಲಿ ನಡಿಸತಕ್ಕ ಕ್ರಮ.

H—Conclusion of Trial in Cases tried with Assessors

H—ಅಸ್ಸೆಸ್ಸರೊಂದಿಗೆ ದರ್ಯಾಫ್ತಾದ ಮೊಕದ್ದಮೆಗಳಲ್ಲಿ ದರ್ಯಾಫ್ತಿ ಮುಗಿಸೋಣ.

309. ಅಸ್ಸೆಸ್ಸರ ಅಭಿಪ್ರಾಯ ನುಡಿಯೋಣ.
ಫೈಸಲ್.

I—Procedure in Case of previous Conviction

I—ಪೂರ್ವದ ಸಾಬೀತಿಯಸಂಗತಿಯಲ್ಲಿ ನಡಿಸತಕ್ಕ ಕ್ರಮ.

310. ಪೂರ್ವದ ತಕ್ಸೀರು ಸಾಬೀತಿಯ ಸಂಗತಿಯಲ್ಲಿ ನಡಿಸತಕ್ಕ ಕ್ರಮ.

K—List of Jurors and Assessors for Court of Sessions and summoning Jurors and Assessors for that Court.

K—ಸೆಷನ್ ಕೋರ್ಟು ಬಗ್ಗಾಗಿ ಜೂರರ—ವ—ಅಸ್ಸೆಸ್ಸರ ಪಟ್ಟಿ ಮತ್ತು ಆ ಕೋರ್ಟು ಬಗ್ಗಾಗಿ ಜೂರರನ್ನು ಅಸ್ಸೆಸ್ಸರನ್ನು ಸಮನ್ ಮಾಡೋಣ.

319. ಜೂರರುಗಳು—ಯಾ—ಅಸ್ಸೆಸ್ಸರುಗಳಾಗಿ ಕೆಲಸ ನೋಡುವದಕ್ಕೆ ಗುರಿಯಾಗೋಣ.
320. ವಿನಾಯಿತಿಗಳು.
321. ಜೂರರುಗಳ—ವ—ಅಸ್ಸೆಸ್ಸರುಗಳ ಪಟ್ಟಿ.
322. ಪಟ್ಟಿಯ ಪ್ರಕಟನೆ.

ಪ್ರಕರಣಗಳು.

323. ಪಟ್ಟಿಗೆ ಆಕ್ಷೇಪಣೆಗಳು.
324. ಪಟ್ಟಿಯ ಪುನರ್ವಿಮರ್ಶೆ.
325. ಪಟ್ಟಿಯ ಸಾಲಿಯಾನಾ ದುರುಸ್ತು.
326. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಜೂರರುಗಳನ್ನು ಅಸ್ಸೆಸ್ಸರನ್ನು ಸಮ್ಮನ್ಸ್ ಮಾಡುವಿಕೆ.
327. ಮತ್ತೊಂದು ಜೊತೆ ಜೂರರುಗಳನ್ನು—ಯಾ—ಅಸ್ಸೆಸ್ಸರುಗಳನ್ನು ಸಮ್ಮನ್ಸ್ ಮಾಡಲಿಕ್ಕೆ ಅಧಿಕಾರ.
328 ಸಮ್ಮನ್ಸಿನ ನಮೂನೆ—ವ—ಸಾದರಾತಿ.
329. ಗವರ್ನ್ಮೆಂಟು ಅಥವಾ ರೈಲ್ವೆ ಆಫೀಸರು ಯಾವಾಗ ಮನ್ನಿಸಲ್ಪಡಬಹುದು.
330. ಜೂರರಾಗಲೀ ಅಥವಾ ಅಸ್ಸೆಸ್ಸರಾಗಲೀ ಹಾಜರಾಗದೆ ಇರಲಿಕ್ಕೆ ಕೋರ್ಟಿನವರು ಅಪ್ಪಣೆ ಕೊಡಬಹುದು.
331. ಹಾಜರಾಗುವ ಜೂರರುಗಳು ಮತ್ತು ಅಸ್ಸೆಸರುಗಳ ಪಟ್ಟಿ.
332. ಜೂರರಾಗಲೀ ಅಥವಾ ಅಸ್ಸೆಸ್ಸರಾಗಲೀ ಗೈರ್‌ಹಾಜರಾದರೆ ದಂಡನೆ.

CHAPTER XXIV—GENERAL PROVISIONS AS TO INQUIRIES AND TRIALS.

24ನೇ ಅಧ್ಯಾಯ.—ವಿಚಾರಣೆ—ವ—ದರ್ಯಾಫ್ತಿಗಳ ಬಾಬತು ಸಾಧಾರಣ ನಿಬಂಧನೆಗಳು.

337. ಷರೀಕಾದವನಿಗೆ ಮಾಫಿ ವಾಗ್ದಾನ ಕೊಡೋಣ.
338. ಮಾಫಿ ಕೊಡುವದಕ್ಕೆ ಹುಕುಂ ಮಾಡುವದಕ್ಕೆ ಅಧಿಕಾರ.
339. ಮಾಫಿ ವಾಗ್ದಾನ ಕೊಡೋಣಾದ ಮನುಷ್ಯನನ್ನು ಕಮ್ಮಿಟ್ ಮಾಡೋಣ.
340. ಪ್ರತಿವಾದ ಮಾಡಲ್ಪಡಲಿಕ್ಕೆ ಅಪಾದನೆಪಟ್ಟವನ ಹಕ್ಕು.
341. ಅಪಾದನೆಪಟ್ಟವನು ಪ್ರೊಸೀಡಿಂಗ್ಸ್‌ಗಳನ್ನು ತಿಳಿಯದೆ ಇರುವಾಗ ನಡಿಸತಕ್ಕ ಕ್ರಮ.
342. ಅಪಾದಪಟ್ಟ ಮನುಷ್ಯನನ್ನು ವಿಚಾರಣೆ ಮಾಡುವ ಅಧಿಕಾರ.
343. ಗುಟ್ಟನ್ನು ಹೊರಪಡಿಸುವ ನಿಮಿತ್ಯವಾಗಿ ಯಾವ ಪ್ರೇರೇಪಣೆಯು ಉಪಯೋಗಿಸಕೂಡದು.
344. ವ್ಯವಹರಣೆಯನ್ನು ಮುಂದರಿಸಿಡಲಿಕ್ಕೂ—ಯಾ—ನಿಲ್ಲಿಸಿಡಲಿಕ್ಕೂ ಅಧಿಕಾರ.
ರಿಮ್ಯಾಂಡ್.
ರಿಮ್ಯಾಂಡ್ ಬಗ್ಗೆ ತಕ್ಕ ಸಬಬು.
345. ತಕ್ಸೀರುಗಳನ್ನು ಸಮಾಧಾನ ಮಾಡೋಣ.
346. ರಾಜಧಾನಿ ಹೊರಗಿನ ಮ್ಯಾಜಿಸ್ಟ್ರೇಟರು ತಾವು ಫಡಿಚಾ ಮಾಡಕೂಡದ ಮೊಕದ್ದಮೆಗಳಲ್ಲಿ ನಡಿಸತಕ್ಕ ಕ್ರಮ.
347. ವಿಚಾರಣೆ—ಯಾ—ದರ್ಯಾಫ್ತಿ ಷುರೂಮಾಡಿದ ನಂತರ, ಆ ಮೊಕದ್ದಮೆಯು ಕಮ್ಮಿಟ್ ಮಾಡಬೇಕು ಎಂತ ಮ್ಯಾಜಿಸ್ಟ್ರೇಟಿಗೆ ತೋರಿದಾಗ ನಡಿಸಬೇಕಾದ ಕ್ರಮ.
348. ನಾಣ್ಯಗಳ, ಸ್ಟಾಂಪು ಕಾನೂನು—ಯಾ—ಸ್ವತ್ತಿಗೆ ಸಂಬಂಧಪಟ್ಟ ಬಾಬಿನ ತಕ್ಸೀರುಗಳು ಮುಂಚಿತವಾಗಿ ಸಾಬೀತಿಪಟ್ಟ ಜನರ ದರ್ಯಾಫ್ತಿ.
349. ಮ್ಯಾಜಿಸ್ಟ್ರೇಟನು ಸಾಕಾಗಿ ಕಠಿಣವಾದ ಸಜಾ ಕೊಡಲಾಗದ ಪಕ್ಷದಲ್ಲಿ ನಡಿಸತಕ್ಕ ಕ್ರಮ.
350. ಒಬ್ಬ ಮ್ಯಾಜಿಸ್ಟ್ರೇಟನಿಂದ ಕೊಂಚ ರಿಕಾರ್ಡಾದ ಮತ್ತೊಬ್ಬನಿಂದ ಕೊಂಚ ರಿಕಾರ್ಡಾದ ಸಾಕ್ಷ್ಯದ ಮೇಲೆ ಸಾಬೀತುಗಳು, ಅಥವಾ ಕಮ್ಮಿಟ್‌ಮೆಂಟುಗಳು.
351. ಕೋರ್ಟಿಗೆ ಹಾಜರಾಗಿರುವ ತಕ್ಸೀರುದಾರರನ್ನು ತಡೆದು ನಿಲ್ಲಿಸಿಡೋಣ.
352. ಕೋರ್ಟುಗಳು ಬಹಿರಂಗವಾದ್ದಾಗಿರ ತಕ್ಕದ್ದು.

CHAPTER XXV—OF THE MODE OF TAKING AND RECORDING EVIDENCE IN INQUIRIES AND TRIALS.

25ನೇ ಅಧ್ಯಾಯ.—ವಿಚಾರಣೆ—ವ—ದರ್ಯಾಫ್ತಿಗಳಲ್ಲಿ ಸಾಕ್ಷ್ಯವನ್ನು ತೆಕ್ಕೊಳ್ಳುವ ಮತ್ತು ಬರಕೊಳ್ಳುವ ರೀತಿ.

353. ಸಾಕ್ಷ್ಯವನ್ನು ಅಪಾದನೆಪಟ್ಟವನ ಸಮಕ್ಷಮದಲ್ಲಿ ತಕ್ಕೊಳ್ಳತಕ್ಕದ್ದು.
354. ಸಾಕ್ಷ್ಯವನ್ನು ರಿಕಾರ್ಡ್ ಮಾಡತಕ್ಕ ರೀತಿ.

ಪ್ರಕರಣಗಳು.

355. ಸರ್ಮ ಮೊಕದ್ದಮೆಗಳಲ್ಲಿ ಮತ್ತು ಕೆಲವು ತಕ್ಸೀರುಗಳ ಬಾಬತು ಫಸ್ಟು —ವ— ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟುಗಳಿಂದ ಆಗುವ ದರ್ಯಾಫ್ತುಗಳಲ್ಲಿ ರಿಕಾರ್ಡು.

356. ಇತರ ಮೊಕದ್ದಮೆಗಳ ರಿಕಾರ್ಡು.
ಇಂಗ್ಲೀಷಿನಲ್ಲಿ ಕೊಡೋಣಾದ ಸಾಕ್ಷ್ಯ.
ಜಡ್ಜಿ —ಯಾ— ಮ್ಯಾಜಿಸ್ಟ್ರೇಟು ತಾನು ಸ್ವತಃ ಸಾಕ್ಷ್ಯವನ್ನು ಬರಿಯದೆ ಇದ್ದಾಗ ಯಾದಾಸ್ತು.

357. ಸಾಕ್ಷ್ಯದ ರಿಕಾರ್ಡಿನ ಭಾಷೆ.

358. 355ನೇ ಪ್ರಕರಣಪ್ರಕಾರ ಮೊಕದ್ದಮೆಗಳಲ್ಲಿ ಮ್ಯಾಜಿಸ್ಟ್ರೇಟನ ಇಷ್ಟ.

359. 356ನೇ ಪ್ರಕರಣ —ಯಾ— 357ನೇ ಪ್ರಕರಣದ ಮೇರಿಗೆ ಸಾಕ್ಷ್ಯವನ್ನು ಬರೆಯತಕ್ಕ ರೀತಿ.

360. ಅಂಥಾ ಸಾಕ್ಷ್ಯವು ಪೂರ್ತಿಯಾದಾಗ ನಡಿಸತಕ್ಕ ಕ್ರಮ.

361. ಆಪಾದನೆಯಾದವನಿಗೆ —ಯಾ— ಅವನ ಪ್ಲೀಡರನಿಗೆ ಸಾಕ್ಷ್ಯದ ದುಬಾಸಿಕನ.

363. ಸಾಕ್ಷಿಯ ನಡತೆಯು ವಿಷಯವಾದ ಹೇಳಿಕೆಗಳು.

364. ಆಪಾದನೆಪಟ್ಟವನ ವಿಚಾರಣೆಯನ್ನು ಬರಿಯತಕ್ಕ ರೀತಿ.

Chapter XXVI—Of the Judgment.

26ನೇ ಅಧ್ಯಾಯ.—ಜಡ್ಜ್‌ಮೆಂಟ್‌ಯಾನೆ ತೀರ್ಪು ಕುರಿತು.

366. ತೀರ್ಪು ಹೇಳುವ ಕ್ರಮ.

367. ಜಡ್ಜ್‌ಮಂಟಿನ ಭಾಷೆ.
ಜಡ್ಜ್‌ಮೆಂಟಿನ ಮತಲಬು
ಬಂದಿಲ್ಲದಿದ್ದರೆ ಮತ್ತೊಂದು ಸರಿಮಾಡುವ ಹಾಗೆ ಜಡ್ಜ್‌ಮೆಂಟು ಕೊಡತಕ್ಕದ್ದು.

368. ಮರಣದಂಡನೆ ಸಜಾ
ಟ್ರಾನ್ಸ್‌ಪೋರ್ಟೇಷನ್ ಸಜಾ.

369. ಕೋರ್ಟಿನವರು ಜಡ್ಜಿಮೆಂಟನ್ನು ಬದಲಾಯಿಸಕೂಡದು.

371. ತೀರ್ಪು ವಿವರಿಸಿ ಹೇಳಲ್ಪಟ್ಟು ಆಪಾದನೆಪಟ್ಟವನಿಗೆ ಅದರ ಪ್ರತಿಯನ್ನು ಕೊಡತಕ್ಕದ್ದು.
ಮರಣದಂಡನೆ ಸಜಾ ವಿಧಿಸಲ್ಪಟ್ಟ ಮನುಷ್ಯನ ಸಂಗತಿಯಲ್ಲಿ.

372. ತೀರ್ಪು ಯಾವಾಗ ತರ್ಜುಮೆ ಮಾಡಲ್ಪಡಬೇಕು

373. ಇತ್ಯರ್ಥ —ವ— ಸಜಾವಿನ ನಕಲನ್ನು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಿಗೆ ಸೆಷನ್ ಕೋರ್ಟಿನವರು ಕಳುಹಿಸತಕ್ಕದ್ದು.

Chapter XXVII—Of the Submission of Sentences for Confirmation.

27ನೇ ಅಧ್ಯಾಯ.—ಮಂಜೂರಿಬಗ್ಯೆ ಸಜಾಗಳನ್ನು ರವಾನಿಸುವದರ ರಿಕಾರ್ಡುಗಳನ್ನು ಕುರಿತು.

374. ಮರಣದಂಡನೆ ಸಜಾ ರಿಕಾರ್ಡು ಸೆಷನ್ ಕೋರ್ಟಿನವರಿಂದ ಕಳುಹಿಸಲ್ಪಡತಕ್ಕದ್ದು.

375. ಹೆಚ್ಚಿನ ವಿಚಾರಣೆ ಮಾಡುವ ಹಾಗೆ —ಯಾ— ಅಧಿಕ ಸಾಕ್ಷ್ಯವನ್ನು ತಕ್ಕೊಳ್ಳುವ ಹಾಗೆ ಆಜ್ಞಾಪಿಸುವದಕ್ಕೆ ಅಧಿಕಾರ.

376. ಸಜಾವನ್ನು ಕಾಯಂಮಾಡಲಿಕ್ಕೂ —ಯಾ— ಸಾಬೀತನ್ನ ರದ್ದುಮಾಡಲಿಕ್ಕೂ ಚೀಫ್‌ಕೋರ್ಟಿನವರ ಅಧಿಕಾರ

377. ಸಜಾ ಕಾಯಿಮಾವರೆ ಅದಕ್ಕೂ, ಹೊಸ ಸಜಾ ವಿಧಿಸೋಣಾದರೆ ಅದಕ್ಕೂ ಇಬ್ಬರು ಜಡ್ಜೀರುದಸ್ಕತುಮಾಡಬೇಕು.

378. ಅಭಿಪ್ರಾಯವು ಭೇದ ಆಗಿರುವ ಸಂಗತಿಯಲ್ಲಿ ನಡಿಸತಕ್ಕ ಕ್ರಮ.

379. ಮಂಜೂರು ಮಾಡುವದಕ್ಕಾಗಿ ಚೀಫ್ ಕೋರ್ಟಿಗೆ ಕಳುಹಿಸಿದ ಮೊಕದ್ದಮೆಗಳಲ್ಲಿ ನಡಿಸತಕ್ಕ ಕ್ರಮ.

380. ಅಸಿಸ್ಟೆಂಟ್ ಸೆಷನ್ ಜಡ್ಜರ ಅಥವಾ 34ನೇ ಪ್ರಕರಣಕ್ಕನುಗುಣವಾಗಿ ನಡಿಯುವ ಮ್ಯಾಜಿಸ್ಟ್ರೇಟನ ಸಜಾವಿನ ಮಂಜೂರಾತಿ.

Chapter XXVIII—Of Execution.

28ನೇ ಅಧ್ಯಾಯ—ಅಮಲ್‌ಜಾರಿ ಕುರಿತು.

381. 371ನೇ ಪ್ರಕರಣಕ್ಕನುಗುಣವಾಗಿ ವಿಧಿಸಿದ ಹುಕುಮಿನ ಅಮಲ್‌ಜಾರಿ.

382. ಗರ್ಭಿಣಿಯಾದ ಹೆಂಗಸಿನ ಮೇಲೆ ವಿಧಿಸೋಣಾದ ಮರಣದಂಡನೆ ಸಜಾವನ್ನು ನಿಲ್ಲಿಸೋಣ.

ಪ್ರಕರಣಗಳು.

383. ಟ್ರ್ಯಾನ್ಸ್ಪೊರ್ಟೇಷನ್ ಸಜಾಗಳ ಅಥವಾ ಇತರ ಮೊಕದ್ದಮೆಗಳಲ್ಲಿ ಕೈದು ಸಜಾಗಳ ಅಮಲ್ಜಾರಿ.

384. ಅಮಲ್ಜಾರಿಬಗ್ಯೆ ವಾರಂಟಿನ ಮೇಲ್ವಿಲಾಸ.

385. ವಾರಂಟನ್ನು ಯಾರಲ್ಲಿ ಇಡತಕ್ಕದು.

386. ಜುಲ್ಮಾನೆ ವಸೂಲಾತಿಬಗ್ಯೆ ವಾರಂಟು.

387. ಅಂಥಾವಾರಂಟಿನ ಫಲ.

388. ಕೈದು ಸಜಾವಿನ ಅಮಲ್ಜಾರಿ ಅಮಾನತ್ ಇಡೋಣ.

389. ವಾರಂಟು ಯಾರು ಕೊಡಬಹುದು.

390. ಪೆಟ್ಟಿನ ಸಜಾಮಾತ್ರವಾಗಿದ್ದಲ್ಲಿ ಅಮಲ್ಜಾರಿ.

391. ಕೈದು ಸಜಾಕ್ಕೆ ಸೇರಿಸಿ ಪೆಟ್ಟಿನ ಸಜಾವಿನ ಅಮಲ್ಜಾರಿ.

392. ಶಿಕ್ಷೆ ಜಾರೀಮಾಡತಕ್ಕ ರೀತಿ.
ಪೆಟ್ಟುಗಳ ಸಂಖ್ಯೆ ಮಿತ.

393. ಕೊಂಚಕೊಂಚವಾಗಿ ಅಮಲ್ಜಾರಿ ಮಾಡಕೂಡದು.
ವಿನಾಯಿತಿಗಳು.

394. ತಕ್ಸೀರುದಾರನು ತಕ್ಕ ಸ್ವಾಸ್ಥ್ಯಸ್ಥಿತಿಯಲ್ಲಿ ಇಲ್ಲದೇ ಇದ್ದರೆ ಪೆಟ್ಟಿನ ಶಿಕ್ಷೆನಡಿಸಕೂಡದು.
ಅಮಲ್ಜಾರಿಯನ್ನು ನಿಲ್ಲಿಸುವಿಕೆ.

395. ಶಿಕ್ಷೆಯನ್ನು 394ನೇ ಪ್ರಕರಣದ ಮೇರಿಗೆ ಪೂರೈಸಲಾಗದೇ ಹೋದರೆ ನಡಿಸತಕ್ಕ ಕ್ರಮ.

396. ತಪ್ಪಿಸಿಕೊಂಡು ಓಡಿಹೋದ ಕೈದಿಗಳ ಮೇಲೆ ಶಿಕ್ಷೆಗಳ ಅಮಲ್ಜಾರಿ.

397. ಮತ್ತೊಂದು ತಕ್ಸೀರಿಗಾಗಿ ಮೊದಲೇ ಸಜಾವಾದ ತಕ್ಸೀರುದಾರನ ಮೇಲೆ ಸಜಾ.

398. 396ನೇ ಮತ್ತು 397ನೇ ಪ್ರಕರಣಗಳ ವಿಷಯವಾದ ಸುರಕ್ಷಿತ.

399. ತಕ್ಸೀರುದಾರರಾದ ಹುಡುಗರನ್ನು ರಿಫಾರ್ಮೆಟೋರಿ ಯೆಂಬ ಕೈದಿನಲ್ಲಿ ಇಡೋಣ.

400. ಸಜಾವಿನ ಅಮಲ್ಜಾರಿ ಆದ ಮೇಲೆ ವಾರಂಟು ವಾಪಸಮಾಡೋಣ.

Chapter XXIX.—Of Suspensions, Remissions and Commutations of Sentences.

29ನೇ ಅಧ್ಯಾಯ.—ಸಜಾಗಳು ನಿಲ್ಲಿಸಿಡೋಣ, ಮಾಫ್‌ಮಾಡೋಣ ಮತ್ತು ಬದಲಾಯಿಸೋಣವನ್ನು ಕುರಿತು.

401. ಶಿಕ್ಷೆಯನ್ನು ನಿಲ್ಲಿಸಿ ಇಡುವ ಅಥವಾ ಮಾಫ್ ಮಾಡುವ ಅಧಿಕಾರ.

402. ಶಿಕ್ಷೆಯನ್ನು ಬದಲಾಯಿಸುವ ಅಧಿಕಾರ.

Chapter XXX.—Of previous Acquittals or Convictions.

30ನೇ ಅಧ್ಯಾಯ.—ಪ್ರಾಕು ಖುಲಾಸೆಗಳು—ಯಾ—ಸಾಬೀತುಗಳು ಕುರಿತು.

403. ಒಂದುಸಲ ತಕ್ಸೀರುಗಾಗಿ ಸಾಬೀತಾದವನನ್ನು—ಯಾ ಖುಲಾಸೆ ಯಾದವನನ್ನು ಅದೇ ತಕ್ಸೀರಿಗಾಗಿ ದರ್ಯಾಫ್ತಿ ಮಾಡಕೂಡದು.

PART VII.

7ನೇ ಭಾಗ.

OF APPEAL, REFERENCE AND REVISION.

ಅಪ್ಪೀಲ್, ರಿಫರೆನ್ಸ್—ವ—ಪುನರ್ವಿಮರ್ಶೆಯನ್ನು ಕುರಿತು.

Chapter XXXI.—Of Appeals.

31ನೇ ಅಧ್ಯಾಯ.—ಅಪ್ಪೀಲುಗಳನ್ನು ಕುರಿತು.

404. ಅನ್ಯಥಾ ನಿಬಂಧಿಸಿರೋಣಾದ ಹೊರ್ತು, ಅಪ್ಪೀಲಿರುವದಿಲ್ಲ.

405. ಜಪ್ತುಮಾಡಲ್ಪಟ್ಟ ಸ್ವತ್ತು ವಾಪಸ್ ಪಡಕೊಳ್ಳುವಬಗ್ಯೆ ಬರಕೊಂಡ ಮನ್ವಿ ಅರ್ಜಿಯನ್ನು ತಿರಸ್ಕರಿಸಿ ಕೊಡೋಣಾದ ಹುಕುಮಿನ ಮೇಲೆ ಅಪ್ಪೀಲ್.

ಪ್ರಕರಣಗಳು.

406. ಒಳ್ಳೇನಡತೆ ಬಗ್ಗೆ ಜಾಮೀನುಕೊಡಹೇಳಿ ವಿಧಿಸಿರುವ ಹುಕುಮಿನ ಮೇಲೆ ಅಪ್ಪೀಲು.

407. ಸೆಕೆಂಡು—ಯಾ—ತರ್ಡ್ ಕ್ಲಾಸ್ ಮೇಜಿಸ್ಟ್ರೇಟನ ಸಜಾ ತೀರ್ಪುಗಳ ಮೇಲೆ ಅಪ್ಪೀಲು.
ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟಿಗೆ ಅಪ್ಪೀಲುಗಳನ್ನು ವರ್ಗಮಾಡೋಣ.

408. ಅಸಿಸ್ಟ್ಯಾಂಟ್ ಸೆಷನ್‌ಜಡ್ಜಿ—ಯಾ—ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ತೀರ್ಪುಗಳ ಮೇಲೆ ಅಪ್ಪೀಲು.

409. ಸೆಷನ್‌ಕೋರ್ಟಿಗೆ ಮಾಡೋಣಾದ ಅಪ್ಪೀಲುಗಳು ಹ್ಯಾಗೆ ಕೇಳಲ್ಪಡತಕ್ಕದ್ದು.

410. ಸೆಷನ್‌ಕೋರ್ಟಿನವರ ಸಜಾ ವಿಧಿಮೇಲೆ ಅಪ್ಪೀಲುಗಳು.

412. ಆಪಾದನೆ ಪಟ್ಟವನು ಕಬೂಲುಮಾಡಿ ಉದಹರಿಸಿದ ಕೆಲವು ಮೊಕದ್ದಮೆಗಳ ಅಪ್ಪೀಲ್ ಇರುವದಿಲ್ಲ.

413. ಅಲ್ಪ ಮೊಕದ್ದಮೆಗಳಲ್ಲಿ ಅಪ್ಪೀಲಿಲ್ಲ.

414. ಕೆಲವು ಫೂಟ್ ಸಾಬೀತುಗಳ ಮೇಲೆ ಅಪ್ಪೀಲ್ ಇರುವದಿಲ್ಲ.

415. 413—ವ—414ನೇ ಪ್ರಕರಣಗಳಿಗೆ ನಿಯಮ.

417. ಖುಲಾಸೆ ತೀರ್ಪಿನ ವಿಷಯದಲ್ಲಿ ಗವರ್ನಮೆಂಟ್ ತರ್ಫ ಅಪ್ಪೀಲ್.

418. ಯಾವ ಸಂಗತಿಯಲ್ಲಿ ಅಪ್ಪೀಲ್ ಅಂಗೀಕರಿಸೋಣ.

419. ಅಪ್ಪೀಲ್ ಅರ್ಜಿ.

420. ಅಪ್ಪೀಲ್‌ದಾರನು ಜೈಲಿನಲ್ಲಿ ಇರುವಾಗ ನಡಿಸತಕ್ಕ ಕ್ರಮ.

421. ಅಪ್ಪೀಲನ್ನ ಫೂಟಾಗಿ ತಿರಸ್ಕರಿಸೋಣ.

422. ಅಪ್ಪೀಲಿನ ನೋಟಿಸ್.

423. ಅಪ್ಪೀಲ್ ತೀರ್ಮಾನ ಮಾಡುವಲ್ಲಿ ಅಪ್ಪೀಲ್ ಕೋರ್ಟಿನವರ ಅಧಿಕಾರಗಳು

424. ಸಬಾರ್ಡಿನೆಟ್ ಅಪ್ಪೀಲ್ ಕೋರ್ಟುಗಳ ತೀರ್ಪುಗಳು.

425. ಅಪ್ಪೀಲಿನಲ್ಲಿ ಚೀಫ್ ಕೋರ್ಟಿನವರಿಂದ ಕೊಡೋಣಾಗುವ ಹುಕುಮನ್ನು ಕೀಳ್‌ಕೋರ್ಟಿನವರಿಗೆ ಸರ್ಟಿಫೈ ಮಾಡಿ
ತಿಳಿಸತಕ್ಕದ್ದು.

426. ಅಪ್ಪೀಲ್ ತೀರ್ಮಾನ ಆಗುವತನಕ ಸಜಾವನ್ನ ನಿಲ್ಲಿಸಿಡೋಣ.
ಜಾಮೀನಿನಮೇಲೆ ಅಪ್ಪೀಲಾಂಟನನ್ನು ಬಿಡಗಡೆ ಪಡಿಸೋಣ.

427. ಖುಲಾಸೆಮೇಲಿನ ಅಪ್ಪೀಲಿನಲ್ಲಿ ಆಪಾದನೆಪಟ್ಟವನನ್ನು ಹಿಡಿಯೋಣ.

428. ಅಪ್ಪೀಲ್ ಕೋರ್ಟಿನವರು ಹೆಚ್ಚಿನ ಸಾಕ್ಷ್ಯವನ್ನು ತೆಕ್ಕೊಳ್ಳಬಹುದು—ಯಾ—ತಕ್ಕೊಳ್ಳುವ ಹಾಗೆ ಅಪ್ಪಣೆಮಾಡಬಹುದು.

429. ಅಪ್ಪೀಲ್ ಕೋರ್ಟಿನ ಜಡ್ಜಿಗಳು ಸಮಸಂಖ್ಯೆಯಾಗಿ ವಿಭೇಧಪಟ್ಟರೆ ನಡಿಸತಕ್ಕ ಕ್ರಮ.

430. ಅಪ್ಪೀಲಿನ ಮೇಲೆ ಆದ ಹುಕುಮುಗಳು ಅಖೈರಾದ್ದು.

431. ಅಪ್ಪೀಲ್‌ಗಳ ಅನವಕಾಶ.

CHAPTER XXXII.—OF REFERENCE AND REVISION.

32ನೇ ಅಧ್ಯಾಯ.—ರಿಫರೆನ್ಸ—ವ—ಪುನರ್ವಿಮರ್ಶೆಯನ್ನು ಕುರಿತು.

435. ಕೆಳ ಕೋರ್ಟುಗಳ ರಿಕಾರ್ಡುಗಳನ್ನು ತರಿಸಲಿಕ್ಕೆ ಅಧಿಕಾರ.

436. ಕಮ್ಮಿಟಮಾಡಲಿಕ್ಕೆ ಹುಕ್ಕುಂಕೊಡುವ ಅಧಿಕಾರ.

437. ವಿಚಾರಣೆ ಮಾಡುವದಕ್ಕೆ ಹುಕ್ಕುಂ ಕೊಡುವ ಅಧಿಕಾರ.

438. ಚೀಫ್ ಕೋರ್ಟಿಗೆ ರಿಪೋರ್ಟು.

439. ಚೀಫ್ ಕೋರ್ಟಿನವರ ಪುನರ್ವಿಮರ್ಶೆ ಅಧಿಕಾರಗಳು.

440. ಪಕ್ಷಗಾರರು ಹೇಳುವದನ್ನು ಕೇಳುವದು ಕೋರ್ಟಿನವರ ಇಷ್ಟ.

442. ಚೀಫ್ ಕೋರ್ಟಿನವರ ಹುಕುಮನ್ನು ಕೆಳಕೋರ್ಟಿನವರಿಗೆ—ಯಾ—ಮಾಜಿಸ್ಟ್ರೇಟರಿಗೆ ಸರ್ಟಿಫೈಮಾಡಿ ತಿಳಿಸತಕ್ಕದ್ದು.

PART VIII.

೮ನೇ ಭಾಗ.

SPECIAL PROCEEDINGS.

ವಿಶೇಷ ವ್ಯವಹರಣೆಗಳು.

CHAPTER XXXIII.—CRIMINAL PROCEEDINGS AGAINST EUROPEANS AND AMERICANS.

33ನೇ ಅಧ್ಯಾಯ—ಯೂರೋಪಿಯರ್-ವ-ಅಮೇರಿಕರ್ನರಮೇಲೆ ಕ್ರಿಮಿನಲ್ ವ್ಯವಹರಣೆಗಳು.

ಪ್ರಕರಣಗಳು.

460. ಯೂರೋಪಿಯರ್ನಗಳ— ಯಾ—ಅಮೇರಿಕಾ ದೇಶಸ್ಥರ ದರ್ಯಾಫ್ತೀ ಬಗ್ಗೆ ಜಾರಿ.
461. ಯೂರೋಪಿಯರ್ ಆಗಲೀ—ಯಾ—ಅಮೆರಿಕನಾಗಲೀ ಮತ್ತೊಂದು ಜಾತಿಯವನ ಜೊತೆಯಲ್ಲಿ ಅಪಾದನೆಯಾದಾಗ ಜಾರಿ.
462. 460ನೇ ಪ್ರಕರಣಕ್ಕನುಗುಣವಾಗಿ ಜೂರರುಗಳನ್ನ ಸಮ್ಮರ್ ಮಾಡುವದು-ವ-ಕೂಡಿಸುವದು.
463. ಯೂರೋಪಿಯರ್ ಬ್ರಿಟಿಷ್ ಸಬ್ಜೆಕ್ಟುಗಳಲ್ಲದ ಯೂರೋಪಿಯರ್ನಗಳು ಮುಂತಾದವರಮೇಲೆ ಕ್ರಿಮಿನಲ್ ವ್ಯವಹರಣೆ ನಡಿಸೋಣ.

CHAPTER XXXIV.—LUNATICS.

34ನೇ ಅಧ್ಯಾಯ.—ಹುಚ್ಚರು.

464. ಆಪಾದನೆಪಟ್ಟವನು ಹುಚ್ಚನಾಗಿ ಇದ್ದ ಸಂಗತಿಯಲ್ಲಿ ನಡಿಸತಕ್ಕ ಕ್ರಮ.
465. ಸೆಷನ್ ಕೋರ್ಟಿಗೆ ಕಮ್ಮಿಟಾದ ಮನುಷ್ಯನು ಹುಚ್ಚನಾಗಿದ್ದರೆ ನಡಿಸತಕ್ಕ ಕ್ರಮ.
466. ಪೋಲೀಸು ವಿಚಾರಣೆ-ಯಾ-ದರ್ಯಾಫ್ತಿಯಾಗುವತನಕ ಹುಚ್ಚನನ್ನ ಬಿಟ್ಟು ಇರಬೇಕು. ಹುಚ್ಚನಮೇಲೆ ಪಹರೆ.
467. ಪುನಃ ವಿಚಾರಣೆ—ಯಾ—ಪುನಃ ದರ್ಯಾಫ್ತಿ.
468. ಆಪಾದನೆಪಟ್ಟವನು ಮ್ಯಾಜಿಸ್ಟ್ರೇಟನಮುಂದೆ ಅಥವಾ ಕೋರ್ಟಿನಮುಂದೆ ಹಾಜರಾದಮೇಲೆ ನಡಿಸತಕ್ಕ ಕ್ರಮ.
469. ಆಪಾದನೆಪಟ್ಟವನು ಮನೋ ಸ್ವಾಸ್ಥ್ಯತೆ ಇಲ್ಲದವನಾಗಿ ಕಾಣಬಂದರೆ ಆಗ.
470. ಹುಚ್ಚನೆಂಬ ಸಬಬಿನಮೇಲೆ ಖುಲಾಸೆ ಇತ್ಯರ್ಥ.
471. ಅಂಥಾ ಸಬಬಿನಮೇಲೆ ಖುಲಾಸೆಯಾದವನನ್ನ ಬಂದೋಬಸ್ತಾಗಿ ಪಹರೆಯಲ್ಲಿಡತಕ್ಕದ್ದು.
472. ಹುಚ್ಚು ಕೈದೀರನ್ನ ಇನ್ಸ್ಪೆಕ್ಟರ್ ಜನರಲ್ ಬಂದು ನೋಡತಕ್ಕದ್ದು.
473. ಹುಚ್ಚು ಕೈದಿಯೂ ಪ್ರತಿವಾದ ಮಾಡಲುಳ್ಳವನೆಂದು ಅರಿಕೆಯಾದಾಗ ನಡಿಸತಕ್ಕ ಕ್ರಮ.
474. 466 ಅಥವಾ 471ನೇ ಪ್ರಕರಣದ ಪ್ರಕಾರ ಕೈದಾಗಿರುವ ಹುಚ್ಚನು ವಿಮೋಚನೆ ಪಡಕೊಳ್ಳಲಿಕ್ಕೆ ಲಾಯಖಾಗಿದ್ದಾನೆಂತ ತಿಳಿಸೋಣಾದರೆ ನಡಿಸತಕ್ಕ ಕ್ರಮ.
475. ಬಂಧುವಿನ ಸ್ವಾಧೀನದಲ್ಲಿ ಹುಚ್ಚನನ್ನು ಒಪ್ಪಿಸೋಣ.

CHAPTER XXXV.—PROCEEDINGS IN CASE OF CERTAIN OFFENCES AFFECTING THE ADMINISTRATION OF JUSTICE.

35ನೇ ಅಧ್ಯಾಯ.—ನ್ಯಾಯವಿಚಾರಣೆಗೆ ಸಂಬಂಧಿಸಿದ ಕೆಲವು ತಕ್ಸೀರುಗಳ ವಿಷಯಗಳಲ್ಲಿ ಪ್ರೊಸೀಡಿಂಗ್ಸ್ಯಾನೆ ವ್ಯವಹರಣೆ.

476. 195ನೇ ಪ್ರಕರಣದಲ್ಲಿ ನಮೂದಿಸಿರುವ ವಿಷಯಗಳಲ್ಲಿ ನಡಿಸತಕ್ಕ ಕ್ರಮ.
477. ಅಂಥಾ ತಕ್ಸೀರುಗಳು ಸೆಷನ್ ಕೋರ್ಟಿನವರಮುಂದೆ ನಡದರೆ ಆ ವಿಷಯದಲ್ಲಿ ಆ ಕೋರ್ಟಿನವರಿಗೆ ಇರುವ ಅಧಿಕಾರ.
478. ವಿಚಾರಣೆಯನ್ನು ಪೂರ್ತಿಮಾಡುವದಕ್ಕೂ ಸೆಷನ್ ಕೋರ್ಟಿಗೆ ಕಮ್ಮಿಟ್ ಮಾಡುವದಕ್ಕೂ ಸಿವಿಲ್—ವ—ರೆವಿನ್ಯೂ ಕೋರ್ಟುಗಳಿಗೆ ಇರುವ ಅಧಿಕಾರ.
479. ಅಂಥಾ ಸಂಗತಿಗಳಲ್ಲಿ ಸಿವಿಲ್ ಕೋರ್ಟಿನವರು ನಡಿಸತಕ್ಕ ಕ್ರಮ.
480. ಅಲಕ್ಷ್ಯ ಸಂಬಂಧವಾದ ಕೆಲವು ಸಂಗತಿಗಳಲ್ಲಿ ಅನುಸರಿಸತಕ್ಕ ಕ್ರಮ.

ಪ್ರಕರಣಗಳು.

481. ಅಂಥಾ ಸಂಗತಿಗಳಲ್ಲಿ ರಿಕಾರ್ಡು.

482. ಮೊಕದ್ದಮೆಯು 480ನೇ ಪ್ರಕರಣಕ್ಕ ನುಗುಣವಾಗಿ ವರ್ತಿಸಲ್ಪಡಬೇಕಾದದ್ದಾಗಿ ಕೋರ್ಟಿನವರು ನೆನಸಿದರೆ ನಡಿಸತಕ್ಕ ಕ್ರಮ.

483. ರಿಜಿಸ್ಟ್ರಾರು—ಯಾ—ಸಬ್ ರಿಜಿಸ್ಟ್ರಾರು 480—ವ—482ನೇ ಪ್ರಕರಣಗಳಿಗೆ ಒಳಪಡುವ ಸಿವಿಲ್ ಕೋರ್ಟೆಂತ ಯಾವಾಗ ಎಣಿಸಲ್ಪಡಬೇಕು.

484. ತಕ್ಸೀರುದಾರನು ವಿಧೇಯನಾದ ಮೇಲೆ—ಯಾ—ಮಾಫ್ ಕೇಳಿಕೊಂಡರೆ ಅವನ ಖುಲಾಸೆ.

485. ಜವಾಬು ಕೊಡದೆ—ಯಾ—ದಸ್ತಾವೇಜು ಹಾಜರುಪಡಿಸುವದಕ್ಕೆ ನಿರಾಕರಿಸಿದ ಮನುಷ್ಯನನ್ನ ಕೈದು—ಯಾ—ಕಮ್ಮಿಟ ಮಾಡೋಣ.

486. ಅಲಕ್ಷ್ಯದ ಮೊಕದ್ದಮೆಗಳಲ್ಲಿ ಸಾಬೀತುಗಳ ಮೇಲೆ ಅಪ್ಪೀಲುಗಳು.

487. ಕೆಲವು ಜಡ್ಜಿಗಳು—ವ—ಮೇಜಿಸ್ಟ್ರೇಟುಗಳು ತಮ್ಮಮುಂದೆಯೇ 195ನೇ ಪ್ರಕರಣದಲ್ಲಿ ಹೇಳೋಣಾದ ತಕ್ಸೀರುಗಳು ಮಾಡಲ್ಪಟ್ಟರೆ ಅದನ್ನು ಅವರು ದರಿಯಾಫ್ತು ಮಾಡಕೂಡದು.

Chapter XXXVI.—Of the Maintenance of Wives and Children.

36ನೇ ಅಧ್ಯಾಯ.—ಹೆಂಡರ ಮಕ್ಕಳ ಸಂರಕ್ಷಣೆಯನ್ನು ಕುರಿತು.

488. ಹೆಂಡರು ಮಕ್ಕಳನ್ನು ಸಂರಕ್ಷಿಸ ಹೇಳಿ ಹುಕ್ಕುಂ.

ಹುಕುಮಿನ ಅಮಲ್‌ಜಾರಿ.

ನಿಯಮ.

489. ಜೀವನಾಂಶವನ್ನು ಬದಲಾಯಿಸೋಣ.

490. ಜೀವನಾಂಶದ ಹುಕುಮಿನ ಅಮಲ್‌ಜಾರಿ.

PART IX.

9ನೇ ಭಾಗ.

SUPPLEMENTARY PROVISIONS.

ಉಪಭಾಗವಾದ ನಿಬಂಧನೆಗಳು.

Chapter XXXVIII.—Of the Public Prosecutor.

38ನೇ ಅಧ್ಯಾಯ.—ಪಬ್ಲಿಕ ಪ್ರೊಸಿಕ್ಯೂಟರನ್ನು ಕುರಿತು.

492. ಪಬ್ಲಿಕ ಪ್ರೊಸಿಕ್ಯೂಟರುಗಳನ್ನ ನೇಮುಕಮಾಡುವ ಅಧಿಕಾರ.

493. ಪಬ್ಲಿಕ ಪ್ರೊಸಿಕ್ಯೂಟರನ ಜಿಮ್ಮೆಯಲ್ಲಿರತಕ್ಕ ಮೊಕ್ಕದ್ದಮೆಗಳಲ್ಲಿ ಎಲ್ಲಾ ಕೋರ್ಟುಗಳೊಳಗೂ ಆತ ವಿವಾದ ಮಾಡಬಹುದು.

ಖಾಸಗಿಯಾಗಿ ತಿಳಿಸೋಣಾದ ಪ್ಲೀಡರುಗಳು ಆತನ ಹುಕುಮಿನ ಕೆಳಗೆ ಇರತಕ್ಕದ್ದು.

494. ದರಿಯಾಫ್ತಿಯನ್ನ ನಡಿಸದೆ ಹಿಂತೆಗದದರಿಂದ ಉಂಟಾಗುವ ಫಲ.

495. ಫಿರ್ಯಾದ್ ನಡಿಸಲಿಕ್ಕೆ ಅಪ್ಪಣೆ.

Chapter XXXIX.—Of Bail.

39ನೇ ಅಧ್ಯಾಯ.—ಜಾಮೀನ ಕುರಿತು.

496. ಜಾಮೀನು ತೆಗದುಕೊಳ್ಳತಕ್ಕದ್ದಾದ ತಕ್ಸೀರಿನ ಸಂಗತಿಯಲ್ಲಿ ಜಾಮೀನು ತೆಗದುಕೊಳ್ಳಲ್ಪಡತಕ್ಕದ್ದು.

497. ಜಾಮೀನು ತೆಗದುಕೊಳ್ಳತಕ್ಕದ್ದಲ್ಲವಾದ ತಕ್ಸೀರಿನ ಸಂಗತಿಯಲ್ಲಿ ಯಾವಾಗ ಜಾಮೀನು ತೆಗದುಕೊಳ್ಳಲ್ಪಡಬಹುದು.

498. ಜಾಮೀನ್ ತೆಗಿಯಹೇಳಿ ಅಥವಾ ಜಾಮೀನ ತಗ್ಗಿಸಹೇಳಿ ವಿಧಿಸಲಿಕ್ಕೆ ಅಧಿಕಾರ.

499. ಆಪಾದನೆಪಟ್ಟವನ—ವ—ಜಾಮೀನದಾರರ ಪತ್ರ.

ಪ್ರಕರಣಗಳು.

500. ಪಹರೆಯಿಂದ ವಿಮೋಚನೆ.
501. ಪ್ರಥಮತಃ ತೆಗದುಕೊಂಡ ಜಾಮಿನು ಸಾಲದೆ ಇದ್ದಾಗ ಸಾಕಾದ ಜಾಮಿನು ಕೊಡಹೇಳಿ ಹುಕ್ಕುಂ ಮಾಡುವ ಅಧಿಕಾರ.
502. ಜಾಮಿನುದಾರರ ವಿಮೋಚನೆ.

Chapter XL.—Of Commissions for the Examination of Witnesses.

40ನೇ ಅಧ್ಯಾಯ.—ಸಾಕ್ಷಿಗಾರರ ವಿಚಾರಣೆ ಬಗ್ಗೆ ಕಮ್ಮಿಶ್ಚರ್ಷ ಕೊಡುವದನ್ನು ಕುರಿತು.

503. ಸಾಕ್ಷಿಗಾರನ ಖುದ್ದು ಹಾಜರಾತಿಯು ಅವಶ್ಯ ವಿಲ್ಲವೆಂದು ಯಾವಾಗ್ಗೆ ಹೇಳಬಹುದು.
ಕಮ್ಮಿಶ್ಚರ್ಷ ಕೊಡೋಣ—ವ—ಅದರ ಮೇರೆಗೆ ನಡವಳಿತೆ.
505. ಕಕ್ಷಿಗಾರರು ಸಾಕ್ಷಿಗಾರನನ್ನು ವಿಚಾರಣೆ ಮಾಡಬಹುದು.
506. ಕಮ್ಮಿಶ್ಚರ್ಷ ಕೊಡತಕ್ಕ ಬಗ್ಗೆ ಅರ್ಜಿಮಾಡುವದಕ್ಕೆ ತಾಬೇದಾರಿ ಮ್ಯಾಜಿಸ್ಟ್ರೇಟಿನ ಅಧಿಕಾರ.
507. ಕಮ್ಮಿಶ್ಚರ್ಷ ವಾಪಸ್ ಮಾಡೋಣ.
508. ವಿಚಾರಣೆ—ಯಾ—ದರಿಯಾಫ್ತು ನಿಲ್ಲಿಸಿಡೋಣ.

Chapter XLI.—Special Rules of Evidence.

41ನೇ ಅಧ್ಯಾಯ.—ಸಾಕ್ಷ್ಯದ ವಿಶೇಷ ಕಾಯಿದೆಗಳು.

509. ವೈದ್ಯನಾದ ಸಾಕ್ಷಿಗಾರನ ವಾಂಗ್ಮೂಲ.
ವೈದ್ಯನಾದ ಸಾಕ್ಷಿಗಾರನನ್ನು ಸಮ್ಮನ್ಸ್ ಕೊಡುವ ಅಧಿಕಾರ.
510. ಕೆಮಿಕಲ್ ಎಗ್ಜಾಮಿನರ್ ಎಂಬ ಉದ್ಯೋಗಸ್ಥನ ರಿಪೋರ್ಟು.
511. ಪ್ರಾಕಿನ ಸಾಬೀತು—ಯಾ—ಖುಲಾಸೆ ಯಾವಪ್ರಕಾರ ರುಜುಮಾಡಲ್ಪಡುತ್ತೆ.
512. ಆಪಾದನೆಪಟ್ಟವನ ಗೈರ್ ಹಾಜರಿಯಲ್ಲಿ ಸಾಕ್ಷ್ಯದ ರಿಕಾರ್ಡ.

Chapter XLII.—Provisions as to Bonds.

42ನೇ ಅಧ್ಯಾಯ.—ಪತ್ರಗಳನ್ನು ಕುರಿತು ನಿಬಂಧನೆಗಳು.

513. ಮುಚ್ಚಳಿಕೆ ಬದಲಾಗಿ ಠೇವಣಾತಿ.
514. ಪತ್ರದ ಷರತನ್ನು ತಪ್ಪಿ ಭಂಗಪಡಿಸಿದರೆ ನಡವಳಿತ ಕ್ರಮ.
515. 514ನೇ ಪ್ರಕರಣಪ್ರಕಾರ ಹುಕುಂಗಳ ಮೇಲೆ ಪುನರ್ವಿಮರ್ಶೆ ಮತ್ತು ಅಪ್ಪೀಲುಗಳು.
516. ಕೆಲವು ಮುಚ್ಚಳಿಕೆಗಳ ಮೇಲೆ ಸಂದಾಯವಾಗಬೇಕಾದ ಹಣ ವಸೂಲುಮಾಡಲಿಕ್ಕೆ ಹುಕ್ಕುಂ ಕೊಡುವದಕ್ಕೆ ಅಧಿಕಾರ.

Chapter XLIII.—Of the Disposal of Property

43ನೇ ಅಧ್ಯಾಯ.—ಸ್ವತ್ತಿನ ವಿನಿಯೋಗವನ್ನು ಕುರಿತು.

517. ಯಾವದರ ವಿಷಯವಾಗಿ ತಕ್ಸೀರು ಜರಿಗಿತೋ ಆ ಸ್ವತ್ತಿನ ವಿನಿಯೋಗಕ್ಕಾಗಿ ಹುಕ್ಕುಂ.
518. ಹುಕ್ಕುಂ ಡಿಸ್ಟ್ರಿಕ್ಟು—ಯಾ—ಸಬ್ ಡಿವಿಜನ ಮ್ಯಾಜಿಸ್ಟ್ರೇಟರಿಗೆ ರೆಫರೆನ್ಸ್ ನಮೂನೆಯಾಗಿ ತೆಗದುಕೋಬಹುದು.
519. ಆಪಾದನೆಪಟ್ಟವನ ಮೈ ಮೇಲೆ ಸಿಕ್ಕಿದ ಹಣವನ್ನು ನಿರಪರಾಧಿಗಳಾಗಿ ಕ್ರಯಕ್ಕೆ ಕೊಂಡುಕೊಂಡವರಿಗೆ ವಾಪತಿ ಮಾಡೋಣ
520. 517, 518—ಯಾ—519ನೇ ಪ್ರಕರಣಗಳ ಮೇರಿನ ಹುಕುಮನ್ನು ನಿಲ್ಲಿಸೋಣ
521. ನಿಂದ್ಯಕರವಾದ ಮತ್ತು ಇತರ ಬಾಬುಗಳನ್ನ ನಾಶಪಡಿಸೋಣ.
522. ಸ್ಥಿರಸ್ವತ್ತಿನ ಸ್ವಾಧೀನವನ್ನು ಕೊಟ್ಟು ಬಿಡಲಿಕ್ಕೆ ಅಧಿಕಾರ.
523. 51ನೇ ಪ್ರಕರಣಪ್ರಕಾರ ಸ್ವತ್ತನ್ನು ಅಥವಾ ಚೋರಿಮಾಲನ್ನು ಹಿಡಿದನಂತರ ಪೋಲೀಸಿನವರು ನಡಿಸತಕ್ಕ ಕ್ರಮ.
ಸಿಕ್ಕಿದ ಸ್ವತ್ತಿನ ಮಾಲೀಕನು ಗೊತ್ತಾಗದಿದ್ದರೆ ನಡಿಸತಕ್ಕ ಕ್ರಮ.

ಪ್ರಕರಣಗಳು.

524. ಆರು ತಿಂಗಳೊಳಗಾಗಿ ಬಾಧ್ಯಸ್ತರು ಬಾರದಿದ್ದರೆ ನಡಿಸತಕ್ಕ ಕ್ರಮ.

525. ನಾಶವಾಗತಕ್ಕ ಸ್ವತ್ತುಗಳನ್ನು ಮಾರುವ ಸ್ವಾತಂತ್ರ್ಯ.

CHAPTER XLIV.—OF THE TRANSFER OF CRIMINAL CASES.

44ನೇ ಅಧ್ಯಾಯ.—ಕ್ರಿಮಿನಲ್ ಮೊಕದ್ದಮೆಗಳನ್ನು ವರ್ಗಮಾಡೋಣ.

526. ಮೊಕದ್ದಮೆಯನ್ನು ಚೀಫ್ ಕೋರ್ಟಿನವರು ವರ್ಗಮಾಡಬಹುದು-ಯಾ-ತಾವೇ ದರ್ಯಾಫ್ತು ಮಾಡಬಹುದು.
ಈ ಪ್ರಕರಣಪ್ರಕಾರ ಅರ್ಜಿ ಕುರಿತು ಪಬ್ಲಿಕ್ ಪ್ರಾಸಿಕ್ಯೂಟರಿಗೆ ನೋಟಿಸ್.
526ನೇ ಸೆಕ್ಷನ್ ಅನುಸರಿಸಿ ಅರ್ಜಿಯ ಮೇಲೆ ನಿಲ್ಲಿಸಿಡುವಣ.

528. ಡಿಸ್ಟ್ರಿಕ್ಟು—ಯಾ—ಸಬ್ ಡಿವೀಜನಲ್ ಮಾಜಿಸ್ಟ್ರೇಟು ಮೊಕದ್ದಮೆಗಳನ್ನು ತರಿಸಿಕೊಳ್ಳಬಹುದು-ಯಾ-ರಿಫರ್ ಮಾಡಬಹುದು
ಡಿಸ್ಟ್ರಿಕ್ಟು ಮಾಜಿಸ್ಟ್ರೇಟಿಗೆ ಮೊಕದ್ದಮೆ ತರಗತಿಗಳನ್ನು ತರಿಸಿಕೊಳ್ಳಲಿಕ್ಕೆ ಅಧಿಕಾರಕೊಡುವ ಸ್ವಾತಂತ್ರ್ಯ.

CHAPTER XLV.—OF IRREGULAR PROCEEDINGS.

45ನೇ ಅಧ್ಯಾಯ.—ಅಕ್ರಮವಾದ ಪ್ರೊಸೀಡಿಂಗ್ಸುಗಳನ್ನು ಕುರಿತು.

529. ಪ್ರೊಸೀಡಿಂಗ್ಸುಗಳನ್ನು ಅಸಿದ್ಧಪಡಿಸದಂಥಾ ಅಕ್ರಮಗಳು.

530. ಪ್ರೊಸೀಡಿಂಗ್ಸುಗಳನ್ನು ಅಸಿದ್ಧಪಡಿಸುವ ಅಕ್ರಮಗಳು.

531. ತಪ್ಪಿತವಾದ ಸ್ಥಳದಲ್ಲಿ ನಡದ ಪ್ರೊಸೀಡಿಂಗಸ್‌ಗಳು.

532. ಅಕ್ರಮ ಕಮ್ಮಿಟಮೆಂಟುಗಳು ಯಾವಾಗ ಸಿದ್ಧಪಡಿಸಬಹುದು.

533. 164—ಯಾ—364ನೇ ಪ್ರಕರಣದ ನಿಬಂಧನೆಗಳಿಗನುಸರಿಸದಿದ್ದರೆ.

535. ತಕ್ಸೀರುನಾಮೆ ತಯಾರು ಮಾಡುವದಕ್ಕೆ ತಪ್ಪಿದರಿಂದ ಉಂಟಾಗುವ ಫಲ.

536. ಅಸ್ಸೆಸ್ಸರೊಡನೆ ದರಿಯಾಫ್ತು ಮಾಡತಕ್ಕ ತಕ್ಸೀರು ಜ್ಯೂರಿಯವರಿಂದ ದರಿಯಾಫ್ತು ಮಾಡಲ್ಪಟ್ಟರೆ.
ಜ್ಯೂರಿಯವರಿಂದ ದರಿಯಾಫ್ತು ಮಾಡತಕ್ಕ ತಕ್ಸೀರು ಅಸ್ಸೆಸ್ಸರಿಂದ ದರಿಯಾಫ್ತು ಮಾಡಲ್ಪಟ್ಟರೆ.

537. ತಕ್ಸೀರುನಾಮೆಯಲ್ಲಿ—ಯಾ—ಇತರ ಪ್ರೊಸೀಡಿಂಗಸ್‌ಗಳಲ್ಲಿ ತಪ್ಪಿತ—ಯಾ—ಲೋಪವಿದ್ದ ಸಬಬಿನಿಂದ ಇತ್ಯರ್ಥ—ಯಾ—ಸಜಾವು ಯಾವಾಗ್ಯೆ ತಿರಿಗಿಸಲ್ಪಡಬಹುದು.

538. ಪ್ರೊಸೀಡಿಂಗಸ್‌ಗಳಲ್ಲಿ ಕ್ರಮತಪ್ಪಿದ್ದರಿಂದ—ಯಾ—ಕುಂದುತನದ ಬಗ್ಯಾಗಿ ಜಫ್ತಿಯು ಅಕ್ರಮವಾಗಿರಲಿಕ್ಕಿಲ್ಲ-ಯಾ-ಜಪ್ತು ಮಾಡಿದವನು ಅತಿಕ್ರಮಪ್ರವೇಶ ಮಾಡಿದವನಾಗಲಿಕ್ಕಿಲ್ಲ.

CHAPTER XLVI.—MISCELLANEOUS.

46ನೇ ಅಧ್ಯಾಯ.—ವಿವಿಧ ವಿಷಯಗಳು.

540. ಮುಖ್ಯಸಾಕ್ಷಿಯನ್ನ ಸಮನ್ ಮಾಡುವದಕ್ಕೂ—ಯಾ—ಹಾಜರಿರುವವರನ್ನ ವಿಚಾರಣೆ ಮಾಡುವದಕ್ಕೂ ಅಧಿಕಾರ.

541. ಕೈದು ಮಾಡತಕ್ಕ ಸ್ಥಳವನ್ನು ನೇಮಿಸುವ ಅಧಿಕಾರ.

543. ದುಬಾಸಿ ನಿಜವಾಗಿ ತರ್ಜುಮೆಮಾಡಿ ಹೇಳಲಿಕ್ಕೆ ಬದ್ಧನಾಗಿರುವಿಕೆ.

544. ಫಿರ್ಯಾದುದಾರರ—ವ—ಸಾಕ್ಷಿಗಾರರ ಖರ್ಚುಗಳು.

545. ಜುರ್ಮಾನೆಯಿಂದ ಖರ್ಚನ್ನು—ಯಾ—ಪರಿವರ್ತನೆಯನ್ನು ಕೊಡಿಸಲಿಕ್ಕೆ ಕೋರ್ಟಿನವರ ಅಧಿಕಾರ.

546. ಅನಂತರದ ವ್ಯಾಜ್ಯದಲ್ಲಿ ವಸೂಲಾತಿಗಳು ಲೆಕ್ಕಕ್ಕೆ ತಕೊಳ್ಳತಕ್ಕದ್ದು.

547. ತೆರತಕ್ಕದ್ದೆಂತ ಹುಕ್ಕುಂ ಮಾಡೋಣಾದ ಹಣವು ಜುರುಮಾನೆಯೋಪಾದಿ ವಸೂಲ್ ಮಾಡಲ್ಪಡತಕ್ಕದ್ದು.

548. ಪ್ರೊಸೀಡಿಂಗ್ಸಿನ ನಕಲುಗಳು.

549. ಕೋರ್ಟು ಮಾರ್ಷಲಿನಿಂದ ದರ್ಯಾಫ್ತುಮಾಡಲಿಕ್ಕೆ ಗುರಿಯಾಗುವ ಮನುಷ್ಯರನ್ನ ಮಿಲಿಟೇರಿ ಅಧಿಕಾರಸ್ಥರಿಗೆ ಒಪ್ಪಿಸೋಣ.
ಅಂಥಾ ಮನುಷ್ಯನನ್ನ ಹಿಡಿಯೋಣ.

550. ಪೋಲಿಸಿನ ದೊಡ್ಡ ಆಫಿಸರರ ಅಧಿಕಾರಗಳು.

1052

ಪ್ರಕರಣಗಳು.

551. ಜುಲುಮಿನಿಂದ—ಯಾ—ವಂಚನೆಯಿಂದ ವೈಯ್ಯೋಣಾದ ಹೆಂಗಸರನ್ನು ತಿರಿಗಿ ಒಪ್ಪಿಸುವ ಹಾಗೆ ಬಲಾತ್ಕರಿಸುವದಕ್ಕೆ ಅಧಿಕಾರ.
553. ತಾಬೇದಾರಿ ಕೋರ್ಟುಗಳ ರಿಕಾರ್ಡುಗಳನ್ನು ಪರಿಶೋಧಿಸುವದಕ್ಕಾಗಿ ಕ್ರಮಗಳನ್ನು ಏರ್ಪಡಿಸುವದಕ್ಕೆ ಚೀಫ್ ಕೋರ್ಟಿನವರ ಸ್ವಾತಂತ್ರ್ಯ.
554. ನಮೂನೆಗಳು.
555. ಜಡ್ಜಿ—ಯಾ—ಮ್ಯಾಜಿಸ್ಟ್ರೇಟನು ಸ್ವತಃ ಸಂಬಂಧಪಟ್ಟ ಮೊಕದ್ದಮೆ.
556. ಕೋರ್ಟುಗಳ ಭಾಷೆ ನಿರ್ಣಯಿಸುವ ಅಧಿಕಾರ.
557. ಮೈಸೂರು ಗವರ್ನಮೆಂಟಿನವರ ಅಧಿಕಾರಗಳು ಆಗಿಂದಾಗ್ಯೆ ನಡಿಸಬಹುದಾದ್ದು.
558. ಬಾಕಿಯಲ್ಲಿ ಇರುವ ಮೊಕದ್ದಮೆಗಳು.

SCHEDULE I.—Enactments repealed.
1ನೇ ಷೆಡ್ಯೂಲ್ ಪಟ್ಟಿ.—ರದ್ದಾದ ಚಟ್ಟಗಳು.

SCHEDULE II.—Tabular statement of offences.
2ನೇ ಷೆಡ್ಯೂಲ್ ಪಟ್ಟಿ.—ತಕ್ಸೀರುಗಳ ವಿವರಣೆಯ ತಖ್ತೆ.

SCHEDULE III.—Ordinary powers of Magistrates.
3ನೇ ಷೆಡ್ಯೂಲ್ ಪಟ್ಟಿ.—ಮ್ಯಾಜಿಸ್ಟ್ರೇಟರ ಸಾಧಾರಣ ಅಧಿಕಾರಗಳು.

SCHEDULE IV.—Additional powers with which Magistrates may be invested.
4ನೇ ಷೆಡ್ಯೂಲ್ ಪಟ್ಟಿ.—ಮ್ಯಾಜಿಸ್ಟ್ರೇಟರಿಗೆ ಕೊಡಲ್ಪಡಬಹುದಾದ ಹೆಚ್ಚಿನ ಅಧಿಕಾರಗಳು.

SCHEDULE V.—Forms.
5ನೇ ಷೆಡ್ಯೂಲ್ ಪಟ್ಟಿ.—ಫಾರಂಗಳು.

AN ACT TO CONSOLIDATE AND AMEND THE LAW RELATING TO CRIMINAL PROCEDURE.

ಕ್ರಿಮಿನಲ್ ಪ್ರೊಸಿಡ್ಯೂರ್‌ಗೆ ಸಂಬಂಧಪಟ್ಟ ಕಾನೂನನ್ನು ಒಟ್ಟುಪಡಿಸಿ ದುರಸ್ತು ಮಾಡಲಿಕ್ಕೆ ಉಂಟಾದ ಆಕ್ಟು.

ಪೀಠಿಕೆ.

ಕ್ರಿಮಿನಲ್ ಪ್ರೊಸಿಡ್ಯೂರ್‌ಗೆ ಸಂಬಂಧಪಟ್ಟ ಕಾನೂನನ್ನು ಒಟ್ಟುಪಡಿಸಿ ದುರಸ್ತು ಮಾಡುವದು ಯುಕ್ತವಾಗಿರುವದರಿಂದ ಇದರಿಂದ ನಿರ್ಣಯಿಸುವದೇನಂದರೆ:—

PART I.

1ನೇ ಭಾಗ.

PRELIMINARY.

ಅವತರಣಿಕೆ.

CHAPTER I.

1ನೇ ಅಧ್ಯಾಯ.

ಚಿಕ್ಕ ಹೆಸರು.

ಷುರು.

1. ಈ ಆಕ್ಟು—"1882ನೇ ಇಸವಿಯ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡು" ಯೆಂಬದಾಗಿ ಕರೆಯಲ್ಪಡಬಹುದು; ಮತ್ತು ಇದು 1886ನೇ ಇಸವಿ ಜುಲೈ ಗುರ್‍ರ್ರೀ ತಾರೀಖಿಗೆ ಜಾರೀಲಿ ಬರತಕ್ಕದ್ದು;

ಸ್ಥಳಿಕವ್ಯಾಪ್ತಿ.

ಇದು ಮೈಸೂರು ದೇಶದೊಳಗೆಲ್ಲಾ ವ್ಯಾಪಿಸುತ್ತದೆ; ಆದರೆ, ವಿರೋಧವಾಗಿ ಆಜ್ಞಾಪಿಸುವ ಯಾವ ವಿಶೇಷ ನಿಬಂಧನೆಯೂ ಇಲ್ಲದಪಕ್ಷದಲ್ಲಿ, ಇದರಲ್ಲಿ ಅಡಗಿರುವಂಥಾದ್ದು ಯಾವದೂ ಈಗ ಜಾರೀಲಿರುವಂಥಾ ಸ್ಥಳಿಕ ಯಾ ವಿಶೇಷ ಕಾನೂನನ್ನಾಗಲೀ, ಅಥವಾ ಕೊಡೋಣಾದ ಯಾವದಾದರೂ ಅಧಿಕಾರ—ಯಾ—ವಿಶೇಷ ಅಧಿಕಾರ ಸರಹದ್ದನ್ನಾಗಲೀ, ಈಗ ಜಾರೀಲಿರುವಂಥಾ ಇತರ ಯಾವ ಕಾನೂನಿನಿಂದಾದರೂ ಏರ್ಪಡಿಸೋಣಾದ ವಿಶೇಷವಾದ ನಡವಳತೆ ನಮೂನೆಗಳನ್ನಾಗಲೀ, ಬಾಧಿಸುವದಿಲ್ಲಾ, ಅಥವಾ ಇದರಲ್ಲಿ ಅಡಗಿರುವಂಥಾದ್ದು ಯಾವದೂ—

ಮೈಸೂರು ಶೀಮೆಯಲ್ಲಿ ಗ್ರಾಮ ಪೋಲಿಸು ಆಫಿಸರುಗಳಿಗೆ ಲಗಾವಾಗುವದಿಲ್ಲ.

ಚಟ್ಟಗಳ ರದ್ದಿಯಾತಿ.

2. 1886ನೇ ಇಸವಿ ಜುಲೈ ಗುರ್‍ರ್ರೀ ತಾರೀಖಿನಲ್ಲಿ—ವ—ಆ ತಾರೀಖಿನಿಂದ, ಮೊದಲನೇ ಷೆಡ್ಯೂಲಿನಲ್ಲಿ ನಮೂದಿಸಿದ ಚಟ್ಟಗಳು, ಸದರೀ ಷೆಡ್ಯೂಲಿನ ಮೂರನೇ ಮದ್ದಿನಲ್ಲಿ ನಮೂದಿಸಿರುವಷ್ಟರಮಟ್ಟಿಗೆ ರದ್ದಾಗತಕ್ಕದ್ದು, ಆದರೆ ಅದರಿಂದ ಮುಂಚೆಯಿಲ್ಲದ—ಯಾ—ತದನಂತರ ಬಂದ ಯಾವ ಅಧಿಕಾರ ಸರಹದ್ದಾಗಲೀ ನಡವಳತೆಯ ನಮೂನೆಯಾಗಲೀ ಪುನಹ ಉಂಟಾಗುವದಿಲ್ಲ—ಯಾ—ಮುಂಚೆ ಕಾನೂನುಪ್ರಕಾರ ವಾಗಿರುತ್ತಿದ್ದು ಈಗ ಜಾರಿಯಲ್ಲಿ ಇರುತ್ತಿರುವ ಶೆರೆಯನ್ನ ಕಾನೂನಿನಪ್ರಕಾರ ವಾದ್ದಲ್ಲದ್ದಾಗಿ ಮಾಡುವದಿಲ್ಲ.

ರದ್ದಾದ ಆಕ್ಟುಗಳನ್ನನುಸರಿಸಿದ ಪ್ರಕಟನೆ ಇತ್ಯಾದಿಗಳು.

ಇದರಿಂದ ರದ್ದಾಗಿರುವ ಯಾವ ಚಟ್ಟಪ್ರಕಾರವಾದರೂ, ಅಂಥಾ ಚಟ್ಟದಿಂದ ರದ್ದಾದ ಯಾವ ಚಟ್ಟ ಪ್ರಕಾರವಾದರೂ, ಪ್ರಕಟಿಸಲ್ಪಟ್ಟ ಯಲ್ಲಾ ಪ್ರಕಟನೆಗಳು, ಕೊಡಲ್ಪಟ್ಟ ಇಸ್ತಿಹಾರುಗಳು, ಅಧಿಕಾರಗಳು, ನಿರ್ದೇಶಿಸಲ್ಪಟ್ಟ ನಮೂನೆಗಳು, ವಿವರಿಸಲ್ಪಟ್ಟ ಸ್ಥಳಿಕ ಸರಹದ್ದುಗಳು, ಕೊಡಲ್ಪಟ್ಟ ತೀರ್ಪುಗಳು—ವ—ಹುಕ್ಕು

ಮುಗಳು, ಮಾಡಲ್ಪಟ್ಟ ನೌಕರರಾತಿಗಳು,—ವ—ರೂಲ್ಸುಗಳು, 1886ನೇ ಇಸವಿಯ ಜುಲೈ ಗುರ್ನೇ ತಾರೀಖಿಗೆ ಮುಂಚೆ ಅತಿ ತತ್ಪೂರ್ವದಲ್ಲಿ ಜಾರೀಲಿರುತ್ತಿದ್ದರೆ ಅವು ಈ ಕೋಡಿನಲ್ಲಿ ಅವುಗಳಿಗೆ ಸರಿಬೀಳುವ ಆಯಾಯ ಪ್ರಕರಣದವೇರಿಗೆ ಪ್ರಕಟಿಸೋಣಾಯಿತು, ಕೊಡೋಣಾಯಿತು, ನಿರ್ದೇಶಿಸೋಣಾಯಿತು, ವಿವರಿಸೋಣಾಯಿತು, ಕೊಡೋಣಾಯಿತು—ವ—ಮಾಡೋಣಾಯಿತು ಯೆಂಬದಾಗಿ ಎಣಿಸತಕ್ಕದ್ದು.

ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡಿಗೆ ಮತ್ತು ರದ್ದಾದ ಯಿತರಚಟ್ಟಗಳಿಗೆ ದಾಖಲೆಗಳು.

3. ಈ ಕೋಶ ಜಾರೀಲಿ ಬರುವದಕ್ಕಿಂತಮುಂಚೆ ನಿರ್ಣಯಿಸಲ್ಪಟ್ಟಂಥಾ ಪ್ರತಿ ಚಟ್ಟದಲ್ಲಿ—ಯಾ—1861ನೇ ಇಸವಿಯ 25ನೇ ನಂಬರ ಆಕ್ಟಾದ—ಯಾ—1872ನೇ ಇಸವಿಯ 10ನೇ ನಂಬರ ಆಕ್ಟಾದ, ಕ್ರಿಮಿನಲ್ ಪ್ರೊಸೀಡ್ಯೂರ್‌ಕೋಡಿನ ಅಥವಾ ಇದರಿಂದ ರದ್ದಾಗಿರುವ ಇತರ ಕಾನೂನಿನ ಯಾವ ಅಧ್ಯಾಯಕ್ಕಾಗಲೀ ಪ್ರಕರಣಕ್ಕಾಗಲೀ ದಾಖಲೆ ತೋರಿಸಿದ್ದರೆ ಅಂಥಾ ದಾಖಲೆಯನ್ನು ಸಾಧ್ಯವಾಗುವಷ್ಟರಮಟ್ಟಿಗೆ, ಈ ಕೋಡಿಗೆ ಅಥವಾ ಇದಕ್ಕೆ ಸರಿಬೀಳುವ ಅಧ್ಯಾಯ—ಯಾ—ಪ್ರಕರಣಕ್ಕೆ, ಮಾಡಿದ ಹಾಗೆ ಯೆಣಿಸತಕ್ಕದ್ದು.

ಮುಂಚಿನ ಆಕ್ಟುಗಳಲ್ಲಿರುವ ಮಾತುಗಳು.

ಈ ಕೋಶ ಜಾರೀಲಿಬರುವದಕ್ಕಿಂತ ಮುಂಚೆ ನಿರ್ಣಯಿಸಲ್ಪಟ್ಟಂಥಾ ಪ್ರತಿ ಚಟ್ಟದಲ್ಲಿ ಬರೆದಿರುವ "ಬಬ್ಬ ಮೇಜಿಸ್ಟ್ರೇಟಿನ ಅಧಿಕಾರಗಳನ್ನು (—ಯಾ—'ಪೂರಾ ಅಧಿಕಾರಗಳನ್ನು') ಚಲಾಯಿಸುವಂಥಾ (—ಯಾ—'ಇರುವ') ಆಫಿಸರು," "ಫಸ್ಟ್‌ಕ್ಲಾಸ್ ಸಬಾರ್ಡಿನೇಟ್ ಮಾಜಿಸ್ಟ್ರೇಟು," "ಸೆಕಂಡುಕ್ಲಾಸ ಸಬಾರ್ಡಿನೇಟ ಮೇಜಿಸ್ಟ್ರೇಟು," ಯೆಂಬ ಮಾತುಗಳ ಪೈಕಿ ಬಂದೊಂದಕ್ಕೆ ಬಂದೊಂದು ಕ್ರಮವಾಗಿ "ಫಸ್ಟ್‌ಕ್ಲಾಸ ಮಾಜಿಸ್ಟ್ರೇಟು," "ಸೆಕಂಡ ಕ್ಲಾಸ ಮ್ಯಾಜಿಸ್ಟ್ರೇಟು,"—ವ—"ಥರ್ಡ್‌ಕ್ಲಾಸ್ ಮ್ಯಾಜಿಸ್ಟ್ರೇಟು," ಯೆಂಬದಾಗಿ ಅರ್ಥಕೊಡುತ್ತದೆಂದು ಗ್ರಹಿಸತಕ್ಕದ್ದು; "ಬಂದು ಡಿಸ್ಟ್ರಿಕ್ಟಿನ ಡಿವಿಜನ ಮ್ಯಾಜಿಸ್ಟ್ರೇಟು" ಅಂದರೆ "ಸಬ ಡಿವಿಜನಲ್ ಮ್ಯಾಜಿಸ್ಟ್ರೇಟ," ಯೆಂಬದಾಗಿ "ಡಿಸ್ಟ್ರಿಕ್ಟಿನ ಮ್ಯಾಜಿಸ್ಟ್ರೇಟು" ಅಂದರೆ "ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ," ಯೆಂಬದಾಗಿ ಅರ್ಥಕೊಡುತ್ತದೆಂದು ಗ್ರಹಿಸತಕ್ಕದ್ದು.

ಅರ್ಥವಿವರಣೆಯ ಕಲಂ.

4. ಪ್ರಮೇಯದಿಂದ—ಯಾ—ಸಂದರ್ಭದಿಂದ ಬೇರೇ ತಾತ್ಪರ್ಯ ತೋರಿದರೇನೇ ಶಿವಾಯಿ ಈ ಕೋಡಿನಲ್ಲಿ ಈ ಕೆಳಗಣ ಪದಗಳು—ವ—ಮಾತುಗಳು ಕೆಳಗಣ ಅರ್ಥಗಳುಳ್ಳವುಗಳಾಗಿವೆ:—

"ಫಿರ್ಯಾದು."

(a) "ಫಿರ್ಯಾದು" ಯೆಂಬವಮಾತು, ಗೊತ್ತಾದ—ಯಾ—ಗೊತ್ತಿಲ್ಲದ ಬಬ್ಬಾನೊಬ್ಬ ಮನುಷ್ಯನು ಬಂದು ತಕ್ಸೀರನ್ನು ಮಾಡಿದನೆಂಬದಾಗಿ, ಬಬ್ಬ ಮ್ಯಾಜಿಸ್ಟ್ರೇಟ ಈ ಕೋಡನ್ನನುಸರಿಸಿ ಅಮಲ್‌ನಡಿಸತಕ್ಕಬಗ್ಗೆ ಆತನಿಗೆ ಜುಬಾನಿಯಾಗಿ—ಯಾ—ಬರಹಮೂಲವಾಗಿ ತಿಳಿಸೋಣಾದ, ಹೇಳಿಕೆ ಯೆಂದು ಅರ್ಥಕೊಡುತ್ತದೆ; ಪರಂತು ಇದರಲ್ಲಿ ಪೋಲಿಸು ಆಫಿಸರನ ರಿಪೋರ್ಟು ಶೇರುವದಿಲ್ಲ:

"ಪೋಲಿಸು ವಿಚಾರಣೆ."

(b) "ಪೋಲಿಸು ವಿಚಾರಣೆ" ಯೆಂಬ ಮಾತುಗಳು ಸಾಕ್ಷ್ಯವನ್ನು ಜಮಾಯಿಸುವದಕ್ಕಾಗಿ ಪೋಲಿಸುನವರಾಗಲೀ ಅಥವಾ ಈ ಬಗ್ಗಾಗಿ ಬಬ್ಬ ಮ್ಯಾಜಿಸ್ಟ್ರೇಟಿನಿಂದ ಅಧಿಕಾರ ಹೊಂದಿರುವ (ಬಬ್ಬ ಮ್ಯಾಜಿಸ್ಟ್ರೇಟಿಲ್ಲದ—ಯಾ—ಪೋಲಿಸು ಆಫೀಸರಲ್ಲದ ಇತರ) ಯಾವ ಮನುಷ್ಯನಾಗಲೀ ಈ ಕೋಡಿಗನುಗುಣವಾಗಿ ಜರಗಿಸುವ ಯೆಲ್ಲಾ ವ್ಯವಹರಣೆಗಳನ್ನು ಅಡಗಿಸಿಕೊಂಡಿವೆ:

"ವಿಚಾರಣೆ."

(c) "ವಿಚಾರಣೆ" ಯೆಂಬವಮಾತು ಬಬ್ಬ ಮ್ಯಾಜಿಸ್ಟ್ರೇಟುನಿಂದಲಾದರೂ ಕೋರ್ಟಿನವರಿಂದಲಾದರೂ ಈ ಕೋಡಿಗನುಗುಣವಾಗಿ ಜರಗಿಸಲ್ಪಡಬಹುದಾದ ಪ್ರತಿ ವಿಚಾರಣೆಯನ್ನು ಅಡಗಿಸಿಕೊಂಡಿರುತ್ತದೆ:

1055

"ಜುಡಿಷಲ್ ಪ್ರೊಸೀಡಿಂಗ್."

(d) "ಜುಡಿಷಲ ಪ್ರೊಸೀಡಿಂಗ್" ಯಾನೆ ಜುಡಿಷಲ ವ್ಯವಹರಣೆಯೆಂಬ ಮಾತುಗಳು, ಯಾವ ವ್ಯವಹರಣೆಯು ಜರುಗುತ್ತಿರುವಾಗ ಸಾಕ್ಷ್ಯವು, ಕಾನೂನುಪ್ರಕಾರ ತೆಗೆಯಲ್ಪಟ್ಟು—ಯಾ—ತೆಗೆಯಲ್ಪಡಬಹುದಾಗಿ ಇರುತ್ತದೋ ಅಂಥಾ ವ್ಯವಹರಣೆಯೆಂತ ಅರ್ಥವಾಗುತ್ತದೆ:

"ಬರಹ" ಮತ್ತು "ಲಿಖಿತವಾದ."

(e) "ಬರಹ"—ವ—"ಲಿಖಿತವಾದ" ಯೆಂಬ ಮಾತುಗಳು ಕಾಗದದಮೇಲಾಗಲೀ ಯಾವ ಪದಾರ್ಥದಮೇಲಾಗಲೀ ಅಕ್ಷರಗಳನ್ನ—ಯಾ—ರೂಪಗಳನ್ನ ತೋರಿಸಲಿಕ್ಕಾಗುವಂಥಾ "ಛಾಪಾ," "ಶಿಲಾಯಂತ್ರ," "ಛಾಯಗ್ರಾಹಿ," "ಕೆತ್ತುವಿಕೆ" ಮತ್ತು ಯಿತರ ಪ್ರತಿವಿಧವನ್ನೂ ಅಡಗಿಸಿಕೊಂಡಿರುತ್ತವೆ:

"ಸಬ್ ಡಿವಿಜನ್."

(f) "ಸಬ್ ಡಿವಿಜನ್" ಅಂದರೆ ಈ ಕೋಡಿಗನುಗುಣವಾಗಿ ಮಾಡೋಣಾದ ಒಂದು ಡಿಸ್ಟ್ರಿಕ್ಟಿನ ಸಬ್ ಡಿವಿಜನು:

"ಪ್ರಾವಿನ್ಸ್."

(g) "ಪ್ರಾವಿನ್ಸ್" ಅಂದರೆ ಆಯಾ ಕಾಲದಲ್ಲಿ ಮೈಸೂರು ಗವರ್ನಮೆಂಟಿನವರ ಆಡಳಿತದಲ್ಲಿರುವಂಥಾ ರಾಜ್ಯ:

"ಪಬ್ಲಿಕ ಪ್ರೊಸಿಕ್ಯೂಟರ."

(m) "ಪಬ್ಲಿಕ ಪ್ರೊಸಿಕ್ಯೂಟರ" ಅಂದರೆ 492ನೇ. ಪ್ರಕರಣಪ್ರಕಾರ ನೇಮಿಸಲ್ಪಟ್ಟ ಯಾವನೊಬ್ಬ ಮನುಷ್ಯನೆಂತಾ ಅರ್ಥವಾಗುತ್ತದೆ, ಮತ್ತು ಒಬ್ಬ ಪಬ್ಲಿಕ ಪ್ರೊಸಿಕ್ಯೂಟರಿನ ಅಪ್ಪಣೆನಿಶಿ ನಡೆಯುವ ಮನುಷ್ಯನನ್ನು ಅಡಗಿಸಿಕೊಂಡಿರುತ್ತದೆ:

"ಪ್ಲೀಡರು."

(n) "ಪ್ಲೀಡರ" ಯೆಂಬಮಾತು ಯಾವ ವೊಂದುಕೋರ್ಟಿನ ವ್ಯವಹರಣೆಯಲ್ಲಿ ಉಪಯೋಗಿಸುವಾಗ, ಸದರೀ ಕೋರ್ಟಿನಲ್ಲಿ ವ್ಯವಹರಿಸಲಿಕ್ಕೆ ಆಯಾ ಕಾಲದಲ್ಲಿ ಜಾರೀಲಿರುವ ಯಾವ ಕಾನೂನಿಗನುಗುಣವಾಗಾಗಲೀ ಅಧಿಕಾರಹೊಂದಿದ ಪ್ಲೀಡರೆಂತ ಅರ್ಥವಾಗುತ್ತದೆ; ಮತ್ತು (1) ಹಾಗೆ ಅಧಿಕಾರಹೊಂದಿರುವ ಚೀಫ ಕೋರ್ಟಿನ ಅಡ್ವೋಕೇಟನ್ನು ಮತ್ತು (2) ಅಂಥಾ ವ್ಯವಹರಣೆಯಲ್ಲಿ ಕಾರ್ಯ ಜರಗಿಸಲಿಕ್ಕೆ ಕೋರ್ಟಿನವರ ಅಪ್ಪಣೆಪ್ರಕಾರ, ನೇಮಿಸಲ್ಪಟ್ಟ ಮೊಖ್ತ್ಯಾರನನ್ನು—ಯಾ—ಇತರ ಮನುಷ್ಯನನ್ನು ಅಡಗಿಸಿಕೊಂಡಿರುತ್ತದೆ:

"ಪೋಲಿಸ ಸ್ಟೇಷನ."

"ಒಂದು ಪೋಲೀಸು ಸ್ಟೇಷನ ಜಿಮ್ಮೆಯುಳ್ಳ ಆಫಿಸರು."

(o) "ಪೋಲಿಸಸ್ಟೇಷನ" ಅಂದರೆ ಈ ಕೋಡಿನ ಉದ್ದೇಶ್ಯಗಳಿಗೋಸ್ಕರ ಒಂದು ಪೋಲಿಸು ಸ್ಟೇಷನಯೆಂತ ಮೈಸೂರು ಗವರ್ನಮೆಂಟಿನವರಿಂದ ಸಾಧಾರಣವಾಗಿ—ಯಾ—ವಿಶೇಷವಾಗಿ ಹೇಳಲ್ಪಟ್ಟ ಸ್ಥಾನಯೆಂತ ಅರ್ಥವಾಗುತ್ತದೆ. ಮತ್ತು ಈ ಬಗ್ಗಾಗಿ ಮೈಸೂರು ಗವರ್ನಮೆಂಟಿನವರಿಂದ ನಮೂದಿಸಲ್ಪಟ್ಟ ಒಂದು ಸ್ಥಳೀಕ ಸರಹದ್ದನ್ನು ಅಡಗಿಸಿಕೊಂಡಿರುತ್ತದೆ; ಮತ್ತು "ಪೋಲಿಸ ಸ್ಟೇಷನ ಜಿಮ್ಮೆಯನ್ನುಳ್ಳ ಆಫಿಸರ" ಯೆಂಬ ಮಾತು, ಪೋಲಿಸ ಸ್ಟೇಷನ ಜಿಮ್ಮೆಯನ್ನುಳ್ಳ ಆಫಿಸರು ಅದರಲ್ಲಿ ಹಾಜರಿಲ್ಲದೆಯಾಗಲೀ—ಯಾ—ಕಾಹಿಲೆಯಿಂದ ಕೆಲಸ ನಡಿಸಲಿಕ್ಕೆ ಅಶಕ್ತನಾಗಿಯಾಗಲೀ ಇರುವಾಗ್ಯೆ, ಸದರೀ ಆಫಿಸರಿಗೆ ಎರಡನೇದರ್ಜೆಗೂ ಕಾನ್ಸ್ಟೇಬಿಲ ದರ್ಜೆಗಿಂತ ಹೆಚ್ಚು ದರ್ಜೆಗೂ ಸೇರಿದವನಾಗಿ ಪೋಲಿಸ ಸ್ಟೇಷನಿನಲ್ಲಿ ಹಾಜರಿರುವ ಪೋಲಿಸಾಫಿಸರನ್ನು, ಅಥವಾ ಮೈಸೂರು ಗವರ್ನಮೆಂಟಿನವರು ನಿರ್ದೇಶಿಸುವಮೇರಿಗೆ ಹಾಗೆ ಹಾಜರಿರುವ ಯಾವ ಇತರ ಪೋಲಿಸಾಫಿಸರನ್ನು ಅಡಗಿಸಿಕೊಂಡಿರುತ್ತದೆ:

"ಆಫೆನ್ಸ್."

(p) "ಅಫೆನ್ಸ ಯಾನೆ ತಕ್ಸೀರ" ಅಂದರೆ ಆಯಾ ಕಾಲದಲ್ಲಿ ಜಾರೀಲಿರುವ ಯಾವ ಕಾನೂನಿನ ಪ್ರಕಾರವಾಗಲೀ ಶಿಕ್ಷಿಸತಕ್ಕ ಕೃತ್ಯವು—ಯಾ—ಲೋಪವು ಎಂಬದಾಗಿ ಅರ್ಥವಾಗುತ್ತದೆ:

(q) "ವಾರಂಟು ಇಲ್ಲದೆ ಹಿಡಿಯಬಹುದಾದ ತಕ್ಸೀರು" ಮತ್ತು "ವಾರಂಟು ಇಲ್ಲದೆ ಹಿಡಿಯಬಹುದಾದ ಮೊಕದ್ದಮೆ" ಅಂದರೆ ಒಬ್ಬ ಪೋಲಿಸು ಆಫಿಸರು ಯೆರಡನೇ ಷಡ್ಯೂಲು ಪ್ರಕಾರವಾಗಲೀ ಆಯಾ ಕಾಲದಲ್ಲಿ ಜಾರೀಲಿ ಇರುವ ಯಾವ ಕಾನೂನಿನ ಪ್ರಕಾರವಾಗಲೀ ವಾರಂಟಿಲ್ಲದೆ ಹಿಡಿಯಬಹುದಾದ ತಕ್ಸೀರು—ಯಾ—ಮೊಕದ್ದಮೆಯೆಂತ ಅರ್ಥವಾಗುತ್ತದೆ:

"ವಾರಂಟು ಇಲ್ಲದೆ ಹಿಡಿಯಬಹುದಾದ ತಕ್ಸೀರು"
"ವಾರಂಟು ಇಲ್ಲದೆ ಹಿಡಿಯಬಹುದಾದ ಮೊಕದ್ದಮೆ."

"ವಾರಂಟು ಇಲ್ಲದೆ ಹಿಡಿಯಕೂಡದ ತಕ್ಸೀರು" ಮತ್ತು "ವಾರಂಟಿಲ್ಲದೆ ಹಿಡಿಯಕೂಡದ ಮೊಕದ್ದಮೆ" ಅಂದರೆ ಒಬ್ಬ ಪೋಲಿಸು ಆಫಿಸರು ವಾರಂಟು ಇಲ್ಲದೆ ಹಿಡಿಯಕೂಡದ ತಕ್ಸೀರು ಯಾ ಮೊಕದ್ದಮೆ ಎಂತ ಅರ್ಥವಾಗುತ್ತದೆ:

"ವಾರಂಟು ಇಲ್ಲದೆ ಹಿಡಿಯಕೂಡದ ತಕ್ಸೀರು."
"ವಾರಂಟು ಇಲ್ಲದೆ ಹಿಡಿಯಕೂಡದ ಮೊಕದ್ದಮೆ."

(r) "ಜಾಮೀನ್ಮೇಲೆ ಬಿಡಬಹುದಾದ ತಕ್ಸೀರು" ಅಂದರೆ ಎರ. ನೇ ಷಡ್ಯೂಲಿನಲ್ಲಿ ಜಾಮೀನಿಗೆ ಯೋಗ್ಯವೆಂತ ತೋರಿಸಿರುವ—ಯಾ—ತತ್ಕಾಲದಲ್ಲಿ ಜಾರಿಯಲ್ಲಿಯಿರುವ ಯಾವ ಕಾನೂನಿಂದಾಗಲೀ ಜಾಮೀನಿಗೆ ಯೋಗ್ಯವಾಗಿ ಮಾಡಲ್ಪಟ್ಟಿರುವ ತಕ್ಸೀರೆಂತ ಅರ್ಥವಾಗುತ್ತದೆ : ಮತ್ತು "ಜಾಮೀನುಮೇಲೆ ಬಿಡಕೂಡದ ತಕ್ಸೀರು" ಅಂದರೆ ಯಾವದಾದರೂ ಇತರ ತಕ್ಸೀರೆಂತಾ ಅರ್ಥವಾಗುತ್ತದೆ:

"ಜಾಮೀನ್ಮೇಲೆ ಬಿಡಬಹುದಾದ ತಕ್ಸೀರ."
"ಜಾಮೀನ್ಮೇಲೆ ಬಿಡಕೂಡದ ತಕ್ಸೀರ."

(s) "ವಾರಂಟು ಕೇಸ್" ಅಂದರೆ, ಮರಣದಂಡನೆಯಿಂದ, ಟ್ರಾನ್ಸ್ಪೋರ್ಟೇಷನಿಂದ, ಶಿಕ್ಷಿಸತಕ್ಕ—ಯಾ—6 ತಿಂಗಳಿಗೆ ಮೀರಿದ ವಾಯಿದೆ ಕೈದಿನಿಂದ ಶಿಕ್ಷಿಸತಕ್ಕ ತಕ್ಸೀರಿಗೆ ಸಂಬಂಧಪಟ್ಟ ಮೊಕದ್ದಮೆಯೆಂತ ಅರ್ಥವಾಗುತ್ತದೆ.

"ವಾರಂಟ್ ಕೇಸ್."

(t) "ಸಮನಸ ಕೇಸ್" ಅಂದರೆ ಸದರೀ ಮೇರಿಗೆ ಶಿಕ್ಷಿಸತಕ್ಕದ್ದಲ್ಲದ ತಕ್ಸೀರಿಗೆ ಸಂಬಂಧಪಟ್ಟ ಮೊಕದ್ದಮೆ ಎಂತ ಅರ್ಥವಾಗುತ್ತದೆ;

"ಸಮನಸ ಕೇಸ್:"

(u) "ಯೂರೋಪಿಯನ್ ಬ್ರಿಟಿಷ್ ಸಬ್‌ಜೆಕ್ಟ್" ಅಂದರೆ—

(1) ಗ್ರೇಟ್ ಬ್ರಿಟನ್—ವ—ಐರ್ಲಾಂಡ್ ಯೆಂಬ ಯುನೈಟೆಡ್ ಕಿಂಗಡಮಿನಲ್ಲಿ—ಯಾ—ಯೂರೋಪಿಯನ್ ಅಮೇರಿಕನ್‌ದೇಶದ—ಯಾ—ಆಸ್ಟ್ರೇಲಿಯನ್‌ದೇಶಗಳ —ಯಾ ಮಹಾರಾಣಿಯವರ ಸ್ವಾಧೀನ ದೇಶಗಳ ಯಾವ ಭಾಗದಲ್ಲಾದರೂ —ಯಾ—ನ್ಯೂಜೀಲ್ಯಾಂಡ್ ದೇಶದಲ್ಲಿ—ಯಾ—ಕೇಪ್ ಆಫ್ ಗುಡು ಹೋಪ್ ದೇಶದಲ್ಲಾದರೂ—ಯಾ—ನೆಟಾಲ್ ದೇಶದಲ್ಲಾದರೂ ಹುಟ್ಟಿದ, ಅಭ್ಯಸ್ತನಾದ ಅಥವಾ ಮನೆ ಬಾಗಿಲುಮಾಡಿಕೊಂಡಿರುವ, ಮಹಾರಾಣಿಯವರ ಪ್ರಜೆಯೆಂತಲೂ ;

"ಯೂರೋಪಿಯನ್ ಬ್ರಿಟಿಷ್ ಸಬ್ಜೆಕ್ಟ್:"

(2) ಶಾಸ್ತ್ರೀಯವಾದ ಸಂತತಿಯಿಂದ ಹುಟ್ಟಿದ ಸದರೀ ಮನುಷ್ಯನ ಮಗ —ಯಾ— ಮೊಂಮ್ಮಗಯೆಂತ ಅರ್ಥವಾಗುತ್ತದೆ ;

(v) "ಚಾಪ್ಟರ್" ಅಂದರೆ, ಈ ಕೋಡಿನ ಒಂದು ಅಧ್ಯಾಯ ಮತ್ತು "ಷೆಡ್ಯೂಲ್" ಅಂದರೆ ಇದರಲ್ಲಿ ಶೇರಿಸಿರುವ, ಪಟ್ಟಿ, ಎಂತ ಅರ್ಥವಾಗುತ್ತದೆ.

"ಚಾಪ್ಟರ್:"
"ಷೆಡೂಲ್:"

(w) "ಸ್ಥಳ" ಎಂಬ ಮಾತು ಮನೆ, ಕಟ್ಟಡ, ಗುಡಾರ, ಹಡಗು ಎಂಬದನ್ನು ಅಡಗಿಸಿಕೊಂಡಿರುತ್ತದೆ.

"ಸ್ಥಳ :"

ಕೃತ್ಯಗಳನ್ನು ಸೂಚಿಸುವ ಮಾತುಗಳು.

ಮಾಡಲ್ಪಟ್ಟ ಕೃತ್ಯಗಳನ್ನು ಸೂಚಿಸುವ ಮಾತುಗಳು ಅಕ್ರಮವಾದ ಲೋಪಕ್ಕೂ ಕೂಡ ವ್ಯಾಪಿಸುತ್ತದೆ ; ಮತ್ತು ಇಂಡಿಯನ್ ಪೆನಲ್‌ಕೋಡಿನಲ್ಲಿ ವಿವರಿಸಲ್ಪಟ್ಟು ಉಪಯೋಗಿಸಲ್ಪಟ್ಟು ಇದಕ್ಕೆ ಮೊದಲು ಇದರಲ್ಲಿ ವಿವರಿಸಲ್ಪಡದೇ ಇರುವ ಎಲ್ಲಾ

ಮಾತುಗಳಿಗೆ ಪಿನಲ್‌ಕೋಡಿನಲ್ಲಿ ಇರುವ ಅರ್ಥವೇ ಇರತಕ್ಕದ್ದು.

ಮಾತುಗಳು—ವ—ಪದಗಳು ಆ ಕಾನೂನಿನಲ್ಲಿ ಅವುಗಳಿಗೆ ಕೊಡುವ ಅರ್ಥವೇ ಇಲ್ಲಿ ಕೊಡುತ್ತದೆಂಬದಾಗಿ ಭಾವಿಸವಿಸಲ್ಪಡತಕ್ಕದ್ದು.

ಪಿನಲ್‌ಕೋಡಿನ ಅನುಗುಣವಾದ ತಕ್ಕೀರ್ರುಗಳ ದರ್ಯಾಫ್ತು. ಇತರ ಕಾನೂನುಗಳ ಅನುಗುಣವಾದ ತಕ್ಕೀರುಗಳ ದರ್ಯಾಫ್ತು.

5. ಇಂಡಿಯನ್ ಪೆನಲ್‌ಕೋಡಿಗೆ ಅನುಗುಣವಾದ ಎಲ್ಲಾ ತಕ್ಕೀರುಗಳು ಇದರಲ್ಲಿ ಮುಂದೆ ಕಾಣುವ ನಿಬಂಧನೆ ಪ್ರಕಾರ ವಿಚಾರಿಸಲ್ಪಡತಕ್ಕದ್ದು ಮತ್ತು ದರ್ಯಾಫ್ತು ಮಾಡಲ್ಪಡತಕ್ಕದ್ದು ; ಮತ್ತು ಇತರ ಕಾನೂನಿಗೆ ಅನುಗುಣವಾದ ಎಲ್ಲಾ ತಕ್ಕೀರುಗಳು ಸದರೀ ನಿಬಂಧನೆಗಳ ಪ್ರಕಾರವೇ ವಿಚಾರಿಸಲ್ಪಡತಕ್ಕದ್ದು—ವ—ದರ್ಯಾಫ್ತು ಮಾಡಲ್ಪಡತಕ್ಕದ್ದು. ಆದರೆ ಸದರೀ ತಕ್ಕೀರುಗಳನ್ನು ವಿಚಾರಿಸುವ ಅಥವಾ ದರ್ಯಾಫ್ತು ಮಾಡುವಸ್ಥಳ—ಯಾ—ರೀತಿಯನ್ನು ಕ್ರಮಪಡಿಸಿ ಆಯಾಯ ಕಾಲದಲ್ಲಿ ಜಾರೀಲಿ ಇರುವ ಜಟ್ಟಕ್ಕೆ ಒಳಪಟ್ಟಿರಬೇಕಾದ್ದು.

PART II.

2ನೇ ಭಾಗ.

CONSTITUTION AND POWERS OF CRIMINAL COURTS AND OFFICES.

ಕ್ರಿಮಿನಲ್ ಕೋರ್ಟುಗಳ—ವ—ಉದ್ಯೋಗಗಳ ಏರ್ಪಾಟು ಮತ್ತು ಅಧಿಕಾರಗಳು.

CHAPTER II.—OF CONSTITUTION OF CRIMINAL COURTS AND OFFICES.

2ನೇ ಅಧ್ಯಾಯ.—ಕ್ರಿಮಿನಲ್ ಕೋರ್ಟುಗಳ—ವ—ಉದ್ಯೋಗಗಳ ಏರ್ಪಾಡನ್ನು ಕುರಿತು.

A.—Classes of Criminal Courts.

A.—ಕ್ರಿಮಿನಲ್ ಕೋರ್ಟುಗಳ ತರಗತಿಗಳು.

ಕ್ರಿಮಿನಲ್ ಕೋರ್ಟುಗಳ ತರಗತಿಗಳು.

6. ಚೀಫ್ ಕೋರ್ಟಲ್ಲದೆ—ವ—ಆಯಾ ಕಾಲದಲ್ಲಿ ಜಾರೀಲಿರುವ ಈ ಕೋಡಲ್ಲದ ಇತರ ಯಾವ ಕಾನೂನನ್ನಾದರೂ ಅನುಸರಿಸಿ ಏರ್ಪಟ್ಟ ಕೋರ್ಟುಗಳಲ್ಲದೆ, ಮೈಸೂರು ಸೀಮೆಯಲ್ಲಿ ನಾಲ್ಕು ವಿಧವಾದ ಕ್ರಿಮಿನಲ್ ಕೋರ್ಟುಗಳು ಇರತಕ್ಕದ್ದು, ಯಾವವಂದರೆ :—

I.—ಸೆಷನ್ ಕೋರ್ಟುಗಳು :

II.—ಫಸ್ಟ್‌ಕ್ಲಾಸು ಮೇಜಸ್ಟ್ರೇಟುಗಳ ಕೋರ್ಟುಗಳು :

III.—ಸೆಕೆಂಡ್‌ಕ್ಲಾಸ್ ಮೇಜಸ್ಟ್ರೇಟುಗಳ ಕೋರ್ಟುಗಳು :

IV.—ಥರ್ಡ್‌ಕ್ಲಾಸ್ ಮೇಜಸ್ಟ್ರೇಟುಗಳ ಕೋರ್ಟುಗಳು :

B.—Territorial Divisions.

B.—ರಾಜ್ಯ ಸಂಬಂಧವಾದ ಡಿವಿಜನ್‌ಗಳು.

ಸೆಷನ್ ಡಿವೀಜನ್‌ಗಳು. :

7. ಈ ಪ್ರಾವಿನ್ಸು ಒಂದು ಸೇಷನ್ ಡಿವೀಜನಾಗಿರತಕ್ಕದ್ದು—ಯಾ—ಅದರಲ್ಲಿ ಸೆಷನ್ ಡಿವೀಜನ್‌ಗಳನ್ನು ಉಂಟಾಗಿರತಕ್ಕದ್ದು ;

ಡಿಸ್ಟ್ರಿಕ್ಟುಗಳು.

ಮತ್ತು ಪ್ರತಿ ಸೆಷನ್ ಡಿವಿಜನು ಈ ಕೋಡಿನ ಉದ್ದೇಶ್ಯಗಳಿಗಾಗಿ ಒಂದು ಡಿಸ್ಟ್ರಿಕ್ಟಾಗಿರತಕ್ಕದ್ದು—ಯಾ—ಅದರಲ್ಲಿ ಡಿಸ್ಟ್ರಿಕ್ಟುಗಳನ್ನು ಉಂಟಾಗಿರತಕ್ಕದ್ದು.

ಅಂಥಾ ಡಿವಿಜ಼ಗಳ—ವ—ಡಿಸ್ಟ್ರಿಕ್ಟುಗಳ ಸರಹದ್ದುಗಳನ್ನು ಮೈಸೂರು ಗವರ್ನಮೆಂಟಿನವರು ಬದಲಾಯಿಸ ಬಹುದು,—ಯಾ—ಅವುಗಳ ಸಂಖ್ಯೆಯನ್ನು ಬದಲಾಯಿಸ ಬಹುದು.

ಡಿವಿಜ಼ಗಳನ್ನು—ವ—ಡಿಸ್ಟ್ರಿಕ್ಟುಗಳನ್ನು ಬದಲಾಯಿಸಲಿಕ್ಕೆ ಅಧಿಕಾರ.

ಈ ಕೋಡು ಜಾರೀಲಿ ಬರುವಾಗ್ಯೆ ಇರುತ್ತಿರುವ ಸೆಷ್ಷ಼ ಡಿವಿಜ಼ಗಳು—ವ—ಡಿಸ್ಟ್ರಿಕ್ಟುಗಳು ಹಾಗೆ ಬದಲಾಯಿಸಿದ ಹೊರ್ತು—ವ—ಬದಲಾಯಿಸುವ ವರಿಗೆ, ಅವು ಆಯಾಯ ಸೆಷ್ಷ಼ ಡಿವಿಜ಼ಗಳಾಗಿ—ವ—ಡಿಸ್ಟ್ರಿಕ್ಟುಗಳಾಗಿ ಇರತಕ್ಕದ್ದು.

ತಾತ್ಕಾಲಿಕ ಡಿವಿಜ಼ಗಳು—ವ—ಡಿಸ್ಟ್ರಿಕ್ಟುಗಳು ಬದಲಾಯಿಸುವ ತನಕ ಹಾಗೆಯೇ ಇರತಕ್ಕದ್ದು.

8. ಮೈಸೂರು ಗವರ್ನಮೆಂಟಿನವರು, ಯಾವ ಡಿಸ್ಟ್ರಿಕ್ಟನ್ನಾದರೂ ಸಬ್ ಡಿವಿಜ಼ಗಳಾಗಿ ವಿಭಾಗಿಸಬಹುದು, ಅಥವಾ ಅಂಥಾ ಡಿಸ್ಟ್ರಿಕ್ಟಿನ ಯಾವ ಭಾಗವನ್ನಾದರೂ ಬಂದು ಸಬ್ ಡಿವಿಜ಼ಆಗಿ ಮಾಡಬಹುದು, ಮತ್ತು ಯಾವ ಸಬ್ ಡಿವಿಜನಿನ ಸರಹದ್ದನ್ನಾಗಲೀ ಬದಲಾಯಿಸಬಹುದು.

ಡಿಸ್ಟ್ರಿಕ್ಟುಗಳನ್ನು ಸಬ್ ಡಿವಿಜ಼ಗಳಾಗಿ ವಿಭಾಗಿಸಲಿಕ್ಕೆ ಅಧಿಕಾರ.

ಪ್ರಕೃತದಲ್ಲಿ ಇರುವ ಮತ್ತು ಈಗಸಾಧಾರಣವಾಗಿ ಮೇಜಸ್ಟ್ರೇಟಿನ ಜಿಮ್ಮೆಯಲ್ಲಿ ಇಡಲ್ಪಡುವ ಸಬ್ ಡಿವಿಜ಼ಗಳೆಲ್ಲಾ ಈ ಕೋಡಿಗನುಗುಣವಾಗಿ ಮಾಡಲ್ಪಟ್ಟಂತೆ ಭಾವಿಸತಕ್ಕದ್ದು.

ಈಗ ಇರುವ ಸಬ್ ಡಿವಿಜ಼ಗಳನ್ನು ಕಾಪಾಡತಕ್ಕದ್ದು.

C.—Courts and Offices.

C.—ಕೋರ್ಟುಗಳು—ವ—ಉದ್ಯೋಗಗಳು.

9. ಮೈಸೂರು ಗವರ್ನಮೆಂಟಿನವರು ಪ್ರತಿ ಸೆಷನ್ಸ್ ಡಿವಿಜನಿಗೂ ಬಂದು ಸೆಷ್ಷ಼ ಕೋರ್ಟನ್ನು ಸ್ಥಾಪಿಸಿ, ಅದಕ್ಕೆ ಒಬ್ಬ ಜಡ್ಜಿಯನ್ನು ನೇಮಿಸತಕ್ಕದ್ದು.

ಸೆಷ್ಷ಼ಕೋರ್ಟು.

ಅಂಥಾ ಕೋರ್ಟುಗಳಪೈಕಿ ಬಂದರಲ್ಲಿ—ಯಾ—ಹೆಚ್ಚು ಕೋರ್ಟುಗಳಲ್ಲಿ ಅಧಿಕಾರವನ್ನು ಚಲಾಯಿಸುವದಕ್ಕಾಗಿ ಅಡ್ಡಿಷನಲ್ ಸೆಷ್ಷ಼ ಜಡ್ಜಿಗಳನ್ನು, ಜಾಯಿಂಟ್ ಸೆಷ್ಷ಼ ಜಡ್ಜಿಗಳನ್ನು, ಅಸಿಸ್ಟೆಂಟ್ ಸೆಷನ್ಸ್ ಜಡ್ಜಿಗಳನ್ನು ಕೂಡ ಅವರು ನೇಮಿಸಬಹುದು.

ಈ ಕೋಡು ಜಾರೀಗೆ ಬರುವಾಗ್ಯೆ ಇರುವ ಯೆಲ್ಲಾ ಸೆಷ್ಷ಼ಕೋರ್ಟುಗಳು ಈ ಆಕ್ಟಿಗನುಗುಣವಾಗಿ ಸ್ಥಾಪಿಸಲ್ಪಟ್ಟಿರುವಂತೆ ಯೆಣಿಸಲ್ಪಡತಕ್ಕದ್ದು.

10. ಪ್ರತಿ ಡಿಸ್ಟ್ರಿಕ್ಟಿನಲ್ಲಿ, ಮೈಸೂರು ಗವರ್ನಮೆಂಟಿನವರು ಡಿಸ್ಟ್ರಿಕ್ಟು ಮೇಜಸ್ಟ್ರೇಟೆಂಬದಾಗಿ ಕರೆಯಲ್ಪಡತಕ್ಕ ಒಬ್ಬ ಫಸ್ಟ್‌ಕ್ಲಾಸ್ ಮೇಜಸ್ಟ್ರೇಟನ್ನು ನೌಕರರು ಮಾಡತಕ್ಕದ್ದು.

ಡಿಸ್ಟ್ರಿಕ್ಟು ಮೇಜಿಸ್ಟ್ರೇಟು.

11. ಬಂದು ಡಿಸ್ಟ್ರಿಕ್ಟುಮೇಜಸ್ಟ್ರೇಟಿನ ಉದ್ಯೋಗವು ಖಾಲಿಬಿದ್ದ ಪ್ರಯುಕ್ತ, ಸದರೀ ಡಿಸ್ಟ್ರಿಕ್ಟಿನ ಮುಖ್ಯವಾದ ಎಗ್ಜಿಕ್ಯೂಟಿವ್ ಅಧಿಕಾರಕ್ಕಾಗಿ ಯಾವನೊಬ್ಬ ಆಫೀಸರನಾಗಲೀ ಹಂಗಾಮಿಯಾಗಿ ಬರುವಾಗ್ಯೆಲ್ಲಾ, ಅಂಥಾ ಆಫೀಸರು ಮೈಸೂರು ಗವರ್ನಮೆಂಟಿನ ಹುಕ್ಕುಮು ಬರುವತನಕ ಒಬ್ಬ ಡಿಸ್ಟ್ರಿಕ್ಟು ಮೇಜಸ್ಟ್ರೇಟಿಗೆ ಈ ಕೋಡಿನಿಂದ ವಿಧಿಸೋಣಾದ—ವ—ಕೊಡೋಣಾದ ಆಯಾಯ ಯೆಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು—ವ—ಕೆಲಸಗಳನ್ನು ನಡಿಸತಕ್ಕದ್ದು.

ಡಿಸ್ಟ್ರಿಕ್ಟು ಮೇಜಿಸ್ಟ್ರೇಟಿನ ಉದ್ಯೋಗವು ಖಾಲಿಯಾದಾಗ ಹಂಗಾಮಿಯಾಗಿ ಬರುವ ಆಫೀಸರುಗಳು.

ಸಬಾರ್ಡಿನೇಟು ಮೇಜಿಸ್ಟ್ರೇಟುಗಳು.

ಅವರ ಅಧಿಕಾರದ ಸ್ಥಳಿಕ ಸರಹದ್ದುಗಳು.

12. ಯಾವ ಡಿಸ್ಟ್ರಿಕ್ಟಿನಲ್ಲಾಗಲೀ ಮೈಸೂರು ಗವರ್ನ್ಮೆಂಟಿನವರು ತಮಗೆ ಯುಕ್ತವೆಂದು ತೋರಿದ ಹಾಗೆ ಡಿಸ್ಟ್ರಿಕ್ಟು ಮೇಜಸ್ಟ್ರೇಟಲ್ಲದೆ ಬೇರೆ ಯೆಷ್ಟು ಮಂದಿಯನ್ನಾಗಲೀ ಫಸ್ಟ—ಯಾ—ಸೆಕಂಡ—ಯಾ—ತರ್ಡ್ ಕ್ಲಾಸು ಮೇಜಸ್ಟ್ರೇಟರಾಗಿ ಮೊಕರೂರುಮಾಡಬಹುದು ; ಅಂಥಾ ಮನುಷ್ಯರು ಈ ಕೋಡಿಗನುಗುಣವಾಗಿ ಅವರವರಿಗೆ ಕೊಡೋಣಾದ ಅಧಿಕಾರಗಳಪೈಕಿ ತಮಾಮನ್ನಾಗಲೀ—ಯಾ—ಯಾವದನ್ನಾಗಲೀ, ಚಲಾಯಿಸಬಹುದಾದ ಸ್ಥಳಿಕ ಪ್ರದೇಶಗಳನ್ನ ಮೈಸೂರು ಗವರ್ನ್ಮೆಂಟಿನವರಾಗಲೀ, ಮೈಸೂರು ಗವರ್ನ್ಮೆಂಟಿನವರ ಅಧಿಕಾರಕ್ಕೆ ಒಳಪಟ್ಟು ಡಿಸ್ಟ್ರಿಕ್ಟು ಮೇಜಸ್ಟ್ರೇಟಾಗಲೀ, ಆಗಿಂದಾಗ್ಯೆ ನಿರ್ಣಯಿಸಬಹುದು.

ಅಂಥಾ ನಿರ್ಣಯದಿಂದ ಅನ್ಯಥಾ ನಿಬಂಧನೆಯಾದರೇನೇ ಹೊರ್ತು, ಇತರ ಸಂಗತಿಯಲ್ಲಿ ಅಂಥಾ ಮನುಷ್ಯರ ಅಧಿಕಾರ ಸರಹದ್ದು—ವ—ಅಧಿಕಾರಗಳು ಅಂಥಾ ಡಿಸ್ಟ್ರಿಕ್ಟಿನ ಎಲ್ಲಾ ಭಾಗದಲ್ಲೂ ವ್ಯಾಪಿಸತಕ್ಕದ್ದು.

ಮೇಜಿಸ್ಟ್ರೇಟನ್ನ ಸಬ್ ಡಿವಿಜನ್ ಜಿಮ್ಮೆಯಲ್ಲಿರಿಸಲಿಕ್ಕೆ ಅಧಿಕಾರ.

13. ಮೈಸೂರು ಗವರ್ನ್ಮೆಂಟಿನವರು, ಫಸ್ಟು—ಯಾ—ಸೆಕಂಡುಕ್ಲಾಸ್ ಯಾವ ಮೇಜಸ್ಟ್ರೇಟನ್ನಾದರೂ ಒಂದು ಸಬ್ ಡಿವಿಜನಿನ ಜಿಮ್ಮೆಯಲ್ಲಿ ಇರಿಸಬಹುದು, ಮತ್ತು ಅವಶ್ಯವಾದಾಗ ಅಂಥಾ ಜಿಮ್ಮೆಯಿಂದ ಆತನನ್ನ ಬಿಡಿಸಬಹುದು.

ಸದರೀ ಮೇಜಸ್ಟ್ರೇಟರು ಸಬ್ ಡಿವಿಜನಲ್ ಮೇಜಸ್ಟ್ರೇಟರಾಗಿ ಕರೆಯಲ್ಪಡತಕ್ಕದ್ದು.

ಡಿಸ್ಟ್ರಿಕ್ಟು ಮೇಜಿಸ್ಟ್ರೇಟುಗಳಿಗೆ ಅಧಿಕಾರಗಳನ್ನ ಒಪ್ಪಿಸೋಣ.

ಮೈಸೂರು ಗವರ್ನ್ಮೆಂಟಿನವರು ಈ ಪ್ರಕರಣಕ್ಕನುಗುಣವಾದ ತಮ್ಮ ಅಧಿಕಾರಗಳನ್ನ ಡಿಸ್ಟ್ರಿಕ್ಟು ಮೇಜಸ್ಟ್ರೇಟಿಗೆ ಒಪ್ಪಿಸಬಹುದು.

ಸ್ಪೆಷಲ್ ಮೇಜಿಸ್ಟ್ರೇಟರು.

14. ಮೈಸೂರು ಗವರ್ನ್ಮೆಂಟಿನವರು, ಫಲಾನಾ ಮೊಕದ್ದಮೆಗಳ ವಿಷಯವಾಗಿ, ಅಥವಾ ಫಲಾನಾ ತರಗತಿಯ—ಯಾ—ಫಲಾನಾ ತರಗತಿಗಳ ಮೊಕದ್ದಮೆಗಳ ವಿಷಯವಾಗಿ ಅಥವಾ ಸಾಧಾರಣವಾಗಿ ಮೊಕದ್ದಮೆಗಳ ವಿಷಯವಾಗಿ, ಫಸ್ಟು, ಸೆಕೆಂಡು—ಯಾ—ತರ್ಡುಕ್ಲಾಸು ಮೇಜಸ್ಟ್ರೇಟಿಗೆ ಈ ಕೋಡಿಗನುಗುಣವಾಗಿ ಕೊಡೋಣಾದ—ಯಾ—ಕೊಡೋಣಾಗಬಹುದಾದ ಯೆಲ್ಲಾ ಅಧಿಕಾರಗಳನ್ನಾಗಲೀ ಯಾವ ಅಧಿಕಾರಗಳನ್ನಾಗಲೀ ಯಾವ ಮನುಷ್ಯನಿಗಾದರೂ ಕೊಡಬಹುದು.

ಅಂಥಾ ಮೇಜಸ್ಟ್ರೇಟರು ಸ್ಪೆಷಲ್ ಮೇಜಸ್ಟ್ರೇಟರು ಯೆಂಬದಾಗಿ ಕರೆಯಲ್ಪಡತಕ್ಕದ್ದು.

ಮೈಸೂರು ಗವರ್ನ್ಮೆಂಟಿನವರು, ಈ ಪ್ರಕರಣದ ಮೊದಲನೇ ಕಲಮಿನಿಂದ ಕೊಡೋಣಾದ ಅಧಿಕಾರಗಳನ್ನ ಅವರಿಗೆ ನ್ಯಾಯಕರವಾಗಿ ತೋರುವಂಥಾ ಹದ್ದುನಿಶಿ ತಮ್ಮ ಮೇಲ್ವಿಚಾರದಲ್ಲಿರುವಂಥಾ ಯಾವ ಅಫಿಸರಿಗಾಗಲೀ ಒಪ್ಪಿಸಬಹುದು.

ಅಸಿಸ್ಟ್ಯಾಂಟ್ ಕಮಿಷನರ್ ದರ್ಜೆಗಿಂತ ಕಮ್ಮಿ ದರ್ಜೆಯಲ್ಲಿರುವ ಯಾವ ಪೋಲಿಸು ಅಫಿಸರನಿಗಾದರೂ ಈ ಪ್ರಕರಣಕ್ಕನುಗುಣವಾಗಿ ಯಾವ ಅಧಿಕಾರಗಳಾದರೂ ಕೊಡಲ್ಪಡಕೂಡದು, ಮತ್ತು ನೆಮ್ಮದಿಯ ಪರಿಪಾಲನಾರ್ಥದ ಬಗ್ಗ್ಯೂ, ತಕ್ಸೀರನ್ನ ತಡೆಮಾಡುವ—ವ—ಕಂಡು ಹಿಡಿಯುವಬಗ್ಗ್ಯೂ, ಮೇಜಸ್ಟ್ರೇಟರಮುಂದೆ ಹಾಜರುಮಾಡಿಸುವದಕ್ಕೋಸ್ಕರ ತಕ್ಸೀರುದಾರನನ್ನ ಹಿಡಿದು ತಡೆದಿಡುವಬಗ್ಗ್ಯೂ, ಆಯಾಯಕಾಲದಲ್ಲಿ ಜಾರೀಲಿರುವ ಯಾವ ಕಾನೂನಿನಿಂದಾದರೂ ಸದರಿ ಅಫಿಸರಿಗೆ ವಿಧಿಸೋಣಾದ ಇತರ ಕೆಲಸಗಳನ್ನ ನೆರವೇರಿಸುವಬಗ್ಗ್ಯೂ, ಆವಶ್ಯಕರವಾಗಿರುವಷ್ಟರಮಟ್ಟಿಗೆ ಶಿವಾಯಿ, ಹಾಗೆ ಯಾವ ಅಧಿಕಾರಗಳಾದರೂ ಕೊಡಲ್ಪಡಲಾಗದು.

ಮೇಜಸ್ಟ್ರೇಟರ ಬೆಂಚುಗಳು.

15. ಯಾವ ಸ್ಥಳದಲ್ಲಾದರು ಇಬ್ಬರು—ಯಾ—ಹೆಚ್ಚುಮಂದಿ ಮೇಜಸ್ಟ್ರೇಟರನ್ನ ಜೊತೆಯಾಗಿ ಒಂದು ಬೆಂಚಾಗಿ ಕೂಡಲಿಕ್ಕೆ ಮೈಸೂರು ಗವರ್ನ್ಮೆಂಟಿನವರು ಹುಕ್ಕುಂಮಾಡಬಹುದು, ಮತ್ತು ಅಂಥಾ ಬೆಂಚಿಗೆ ಫಸ್ಟು—ಯಾ—ಸೆಕೆಂಡು—ಯಾ—

ತರ್ಡು ಕ್ಲಾಸು ಮೇಜಸ್ಟ್ರೇಟನಿಗೆ ಈ ಕೋಡಿಗನುಗುಣವಾಗಿ ಕೊಡತೋಣಾಡ—ಯ—ಇದರಿಂದ ಕೊಡತಕ್ಕ ಅ ಕಾರಗಳಪೈಕಿ ಯಾವದನ್ನಾಗಲೀ ಹುಕ್ಕುಮಿನದ್ವಾರಾ ಕೊಡಬಹುದು, ಮತ್ತು ಫೈಸಲೆ ಮೊಕದ್ದಮೆಗಳಲ್ಲಿ ಅಥವಾ ಮೊಕದ್ದಮೆಗಳ ಫೈಸಲೆ ತರಗತಿಗಳಲ್ಲಿಮಾತ್ರ ಮತ್ತು ಮೈಸೂರು ಗವರ್ನ್ಮೆಂಟಿನವರಿಗೆ ಯುಕ್ತವೆಂದು ತೋರುವ ಸ್ಥಳಿಕ ಸರಹದ್ದುಗಳೊಳಗೆ ಅಂಥಾ ಅಧಿಕಾರಗಳನ್ನ ಚಲಾಯಿಸತಕ್ಕದ್ದೆಂದು ಹುಕುಂ ಮಾಡಬಹುದು.

ವಿಶೇಷ ನಿರ್ದೇಶಗಳಿಲ್ಲದೆ ಇರುವಾಗ ಬೆಂಚಿನವರು ಚಲಾಯಿಸತಕ್ಕ ಅಧಿಕಾರಗಳು.

ಅಂಥಾ ಪ್ರತಿ ಬೆಂಚಿನವರು, ಈ ಪ್ರಕರಣಕ್ಕನುಗುಣವಾದ ಯಾವ ಹುಕ್ಕುಮಿನಿಂದಾದರೂ ಅನ್ಯಥಾ ನಿಬಂಧಿಸಿದ್ದರೇನೇ ಶಿವಾಯಿ ಇತರ ಸಂಗತಿಗಳಲ್ಲಿ ಸದರಿ ಬೆಂಚಿನಮೆಂಬರುಗಳಾಗಿ ಶೇರಿ ಹಾಜರಿದ್ದು ಪ್ರೊಸೀಡಿಂಗ್ಸು ನಡಿಸುವವರೊಳಗೆ ಯಾವ ಒಬ್ಬನಿಗಾದರೂ ಈ ಕೋಡಿನಿಂದ ಉಂಟಾಗಿರುವ ಮೇಜಸ್ಟ್ರೇಟಿನ ಹೆಚ್ಚಾದ ಕ್ಲಾಸಿನ ಅಧಿಕಾರಗಳನ್ನ ಉಳ್ಳವರಾಗಿರತಕ್ಕದ್ದು, ಮತ್ತು ಸಾಧ್ಯವಾಗುವಷ್ಟರಮಟ್ಟಿಗೆ ಈ ಕೋಡಿನ ಉದ್ದೇಶ್ಯಗಳಗಾಗಿ ಅಂಥಾ ಕ್ಲಾಸಿಗೆ ಶೇರಿದ ಒಬ್ಬ ಮೇಜಸ್ಟ್ರೇಟರಾಗಿ ಭಾವಿಸಲ್ಪಡತಕ್ಕದ್ದು.

ಬೆಂಚುಗಳ ನಡವಳಿತೇಬಗ್ಯೆ ಕಾಯಿದೆಗಳು ಮಾಡಲಿಕ್ಕೆ ಅಧಿಕಾರ

16. ಮೈಸೂರು ಗವರ್ನ್ಮೆಂಟಿನವರು ಅಥವಾ ಮೈಸೂರು ಗವರ್ನ್ಮೆಂಟಿನವರ ಮೇಲ್ವಿಚಾರಕ್ಕೆ ಒಳಪಟ್ಟ ಡಿಸ್ಟ್ರಿಕ್ಟು ಮೇಜಸ್ಟ್ರೇಟಿನವರು ಈ ಕಾನೂನಿಗೆ ಅನುಗಣವಾಗಿ, ಈ ಕೆಳಗಣ ವಿಷಯಗಳನ್ನು ಕುರಿತು ಯಾವ ಡಿಸ್ಟ್ರಿಕ್ಟಿನಲ್ಲಾದರೂ ಇರುವ ಮೇಜಸ್ಟ್ರೇಟುಗಳ ಬೆಂಚುಗಳ ನಡವಳಿತದಬಗ್ಯೆ, ಕಾಯಿದೆಗಳನ್ನ ಆಗಿಂದಾಗ್ಯೆ ಮಾಡಬಹುದು :—

(a) ದರ್ಯಾಫ್ತಿಮಾಡಲ್ಪಡತಕ್ಕ ಮೊಕದ್ದಮೆಗಳ ವಿಧಗಳು ;

(b) ಕೂತುಕೊಳ್ಳತಕ್ಕ ಕಾಲಗಳು—ವ—ಸ್ಥಳಗಳು ;

(c) ದರ್ಯಾಫ್ತಿಗಳನ್ನ ನಡಿಸುವದಕ್ಕೋಸ್ಕರ ಬೆಂಚಿನ ಏರ್ಪಾಡು :

(d) ಕೆಲಸದಲ್ಲಿ ಕೂತಿರುವಾಗ ಮೇಜಸ್ಟ್ರೇಟರೊಳಗೆ ಅಭಿಪ್ರಾಯ ಭೇದವಾದರೆ ಅವುಗಳನ್ನ ತೀರ್ಮಾನಿಸುವ ರೀತಿ.

ಡಿಸ್ಟ್ರಿಕ್ಟು ಮೇಜಸ್ಟ್ರೇಟಿಗೆ ಮೇಜಸ್ಟ್ರೇಟುಗಳೂ ಬೆಂಚುಗಳೂ ತಾಬೇದಾರಿಯಾಗಿರೋಣ.

17. 12, 13—ವ—14 ಈ ಪ್ರಕರಣಗಳಪ್ರಕಾರ ನೇಮಿಸಲ್ಪಟ್ಟ ಯೆಲ್ಲಾ ಮೇಜಸ್ಟ್ರೇಟುಗಳೂ, 15ನೇ ಪ್ರಕರಣ ಪ್ರಕಾರ ಏರ್ಪಾಟಾದ ಯೆಲ್ಲಾ ಬೆಂಚುಗಳೂ, ಡಿಸ್ಟ್ರಿಕ್ಟು ಮೇಜಸ್ಟ್ರೇಟಿಗೆ ತಾಬೇದಾರಿಯಾಗಿರತಕ್ಕದ್ದು, ಮತ್ತು ಅವರು ಈ ಕಾನೂನಿಗೆ ಅನುಗುಣವಾಗಿ ಆಗಿಂದಾಗ್ಯೆ ಸದರೀ ಮೇಜಸ್ಟ್ರೇಟುಗಳಿಗೆ ಮತ್ತು ಬೆಂಚುಗಳಿಗೆ ಕೆಲಸ ವಿಭಾಗಿಸಿಕೊಡುವ ವಿಷಯದಲ್ಲಿ, ಕಾಯಿದೆಗಳನ್ನು ಮಾಡಬಹುದು ; ಮತ್ತು

ಸಬ್ ಡಿವಿಜನಲ್ ಮೇಜಸ್ಟ್ರೇಟಿಗೆ ತಾಬೇದಾರಿಯಾಗಿರೋಣ.

ಒಂದು ಸಬ್ ಡಿವಿಜನಿನಲ್ಲಿ ಅಧಿಕಾರ ಚಲಾಯಿಸುವ (ಸಬ್ ಡಿವಿಜನಲ್ ಮೇಜಸ್ಟ್ರೇಟರಲ್ಲದ ಇತರ) ಪ್ರತಿ ಮೇಜಸ್ಟ್ರೇಟೂ, ಪ್ರತಿ ಬೆಂಚೂ, ಸಬ್ ಡಿವಿಜನಲ್ ಮೇಜಸ್ಟ್ರೇಟಿಗೆ ತಾಬೇದಾರಿಯಾಗಿ ಇರತಕ್ಕದ್ದು. ಆದಾಗ್ಯೂ ಡಿಸ್ಟ್ರಿಕ್ಟ ಮೇಜಸ್ಟ್ರೇಟಿನ ಸಾಧಾರಣ ಮೇಲ್ವಿಚಾರಣೆಗೆ ಒಳಪಟ್ಟಿರತಕ್ಕದ್ದು.

ಅಸಿಸ್ಟಾಂಟ್ ಸೆಷನ್ ಜಡ್ಜಿಗಳು ಸೆಷನ್ ಜಡ್ಜಿಯವರಿಗೆ ತಾಬೇದಾರಿಯಾಗಿರೋಣ.

ಎಲ್ಲಾ ಅಸಿಸಟೆಂಟ್ ಸೆಷನ್ ಜಡ್ಜಿಗಳು ಯಾರ ಕೋರ್ಟಿನಲ್ಲಿ ಅಧಿಕಾರ ಚಲಾಯಿಸುತ್ತಾರೋ ಆ ಸೆಷನ್ ಜಡ್ಜಿಗೆ ತಾಬೇದಾರಿಯಾಗಿರತಕ್ಕದ್ದು. ಮತ್ತು ಸದರೀ ಸೆಷನ್ ಜಡ್ಜಿಯವರು ಆಗಿಂದಾಗ್ಯೆ ಅಂಥಾ ಅಸಿಸಟೆಂಟ್ ಸೆಷನ್ ಜಡ್ಜಿಗಳಿಗೆ ಕೆಲಸ ವಿಭಾಗಿಸಿಕೊಡುವಬಗ್ಯೆ ಈ ಕಾನೂನಿಗೆ ಅನುಗುಣವಾದ ಕಾಯಿದೆಗಳನ್ನು ಮಾಡಬಹುದು.

ಡಿಸ್ಟ್ರಿಕ್ಟು ಮೇಜಿಸ್ಟ್ರೇಟರಾಗಲೀ 12, 13, 14–ವ–15 ಈ ಪ್ರಕರಣಗಳ ಪ್ರಕಾರ ನೇಮಿಸಲ್ಪಟ್ಟ ಅಥವಾ ಪರ್ಟಿಟ್ಟು ಮೇಜಿಸ್ಟ್ರೇಟುಗಳಾಗಲೀ–ಯಾ–ಬೆಂಚುಗಳಾಗಲೀ ಸೆಷನ್ಸ್‌ಜಡ್ಜಿಯವರಿಗೆ, ಇನ್ನು ಮೇಲೆ ಸ್ಪಷ್ಟವಾಗಿ ನಿಬಂಧಿಸುವ ರೀತಿ–ವ–ಪರಿಮಾಣದ ಮಟ್ಟಿಗೆ ಅಲ್ಲದೆ, ತಾಬೇದಾರಿಯಾಗಿರತಕ್ಕದ್ದಿಲ್ಲಾ.

F.—Suspension and Removal.

F.—ಅವಮಾನತ್ತು ಮತ್ತು ಕೆಲಸದಿಂದ ದೂರಪಡಿಸುವಿಕೆ.

ಜಡ್ಜಿಗಳನ್ನ ಮತ್ತು ಮೇಜಿಸ್ಟ್ರೇಟರನ್ನ ಅವಮಾನತ್ತು ಮಾಡೋಣ ಮತ್ತು ಕೆಲಸದಿಂದ ದೂರಪಡಿಸೋಣ.

26. ಕ್ರಿಮಿನಲ್ ಕೋರ್ಟುಗಳ ಎಲ್ಲಾ ಜಡ್ಜಿಗಳು, ಮತ್ತು ಮೇಜಸ್ಟ್ರೇಟುಗಳು, ಮೈಸೂರು ಗವರ್ನ್ಮೆಂಟಿನವರಿಂದ ಕೆಲಸದಿಂದ ಸಸ್ಪೆಂಡ್ ಮಾಡಲ್ಪಡಬಹುದು ಅಥವಾ ಕೆಲಸದಿಂದ ನಿವರ್ತಿಸಲ್ಪಡಬಹುದು.

Chapter III.

3ನೇ ಅಧ್ಯಾಯ.

Powers of Courts.

ಕೋರ್ಟುಗಳ ಅಧಿಕಾರಗಳು.

A.—Description of Offences cognizable by each Court.

A.—ಒಂದೊಂದು ಕೋರ್ಟಿನಿಂದ ದರ್ಯಾಫ್ತಿಯಾಗತಕ್ಕ ತಕ್ಸೀರುಗಳ ತಪ್ಸೀಲುಗಳು.

ಪಿನಲ್‌ಕೋಡುಪ್ರಕಾರ ತಕ್ಸೀರುಗಳು.

28. ಈ ಕೋಡಿನ ಇತರ ನಿಬಂಧನೆಗಳಿಗೆ ಒಳಪಟ್ಟು, ಇಂಡಿಯನ್ ಪಿನಲ್‌ಕೋಡಿನಪ್ರಕಾರ ಯಾವ ತಕ್ಸೀರಾದರೂ, ಸೆಷನ್ಸ್ ಕೋರ್ಟಿನವರಿಂದಾಗಲಿ–ಯಾ–ಅಂಥಾ ತಕ್ಸೀರು ಎರಡನೇ ಷೆಡ್ಯೂಲಿನ ೮ನೇ ಕಲಮಿನಲ್ಲಿ ದರ್ಯಾಫ್ತಿ ಮಾಡತಕ್ಕದ್ದಾಗಿ ತೋರಿಸಲ್ಪಟ್ಟಿರುವ ಇತರ ಯಾವ ಕೋರ್ಟಿನವರಿಂದಾಗಲೀ ದರ್ಯಾಫ್ತಿ ಮಾಡಲ್ಪಡಬಹುದು.

ಇತರ ಕಾನೂನುಗಳ ಪ್ರಕಾರ ತಕ್ಸೀರುಗಳು.

29. ಇತರ ಯಾವ ಕಾನೂನು ಪ್ರಕಾರ ಆಗುವ, ಯಾವ ತಕ್ಸೀರ್ ಆದರೂ ಅಂಥಾ ಕಾನೂನಿನಲ್ಲಿ ಈಬಗ್ಗಾಗಿ ಯಾವ ಕೋರ್ಟಾದರೂ, ನಮೂದಿಸಲ್ಪಟ್ಟಿದ್ದರೆ, ಅಂಥಾ ಕೋರ್ಟಿನವರಿಂದ ದರ್ಯಾಫ್ತಿ ಮಾಡಲ್ಪಡತಕ್ಕದ್ದು.

ಆ ಪ್ರಕಾರ ಯಾವ ಕೋರ್ಟುಯೆಂಬುದು ನಮೂದಿಸಲ್ಪಡದೆ ಇದ್ದರೆ, ಆದು ಈ ಕೋಡಿನ ಪ್ರಕಾರ ಏರ್ಪಾಟಾದ ಯಾವ ಕೋರ್ಟಿನಿಂದಾದರೂ, ದರ್ಯಾಫ್ತಿ ಮಾಡಲ್ಪಡಬಹುದು : ಪರಂತು—

(a) ಏಳುವರುಷಕ್ಕೆ ಮೇಲ್ಪಟ್ಟ ಮಾಯಿದೆಯು ಖೈದನಿಂದ ಶಿಕ್ಷಿಸಲ್ಪಡತಕ್ಕ ಅಂಥಾ ಯಾವ ತಕ್ಸೀರನ್ನೂ ಯಾವ ಫಸ್ಟುಕ್ಲಾಸ್ ಮೇಜಿಸ್ಟ್ರೇಟರಾದರೂ ದರ್ಯಾಫ್ತಿ ಮಾಡಕೂಡದು;

(b) ಮೂರುವರುಷದ ಮಾಯಿದೆವರಿಗಿನ ಖೈದನಿಂದ ಶಿಕ್ಷೆಯಾಗತಕ್ಕ ಅಂಥಾ ಯಾವ ತಕ್ಸೀರನ್ನೂ ಯಾವ ಸೆಕಂಡ್‌ಕ್ಲಾಸ್ ಮೇಜಸ್ಟ್ರೇಟಾದರೂ ದರ್ಯಾಫ್ತಿ ಮಾಡಕೂಡದು ; ಮತ್ತು

(c) ಒಂದು ವರುಷದ ಮಾಯಿದೆವರಿಗಿನ ಖೈದನಿಂದ ಶಿಕ್ಷೆಯಾಗತಕ್ಕ ಅಂಥಾ ಯಾವ ತಕ್ಸೀರನ್ನೂ ಯಾವ ಥರ್ಡ್‌ಕ್ಲಾಸ್ ಮೇಜಸ್ಟ್ರೇಟಾದರೂ ದರ್ಯಾಫ್ತಿ ಮಾಡಕೂಡದು.

ಮರಣದಂಡನೆಯಿಂದ ಶಿಕ್ಷಿಸಲ್ಪಡದ ತಕ್ಸೀರುಗಳು.

30. 29ನೇ ಪ್ರಕರಣದಲ್ಲಿ ಏನು ನಮೂದಿಸಿದ್ದಾಗ್ಯೂ ಮೈಸೂರು ಸರ್ಕಾರದವರು, ಮರಣದಂಡನೆಗೆ ಒಳಪಡದ ವಿಶಿಷ್ಟ ತಕ್ಸೀರುಗಳನ್ನೂ ದರ್ಯಾಫ್ತಿ ಮಾಡುವಂತೆ ಒಬ್ಬ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ಅಧಿಕಾರವನ್ನು ಕೊಡಬಹುದು.

B.—Sentences which may be passed by Courts of various Classes.

B.—ಬೇರೆ ಬೇರೆ ತರಗತಿಯ ಕೋರ್ಟುಗಳಿಂದ ವಿಧಿಸಲ್ಪಡಬಹುದಾದ ಸಜಾಗಳು.

ಚೀಫ್ ಕೋರ್ಟಿನವರು—ವ—ಸೆಷನ್ ಜಡ್ಜೀಗಳು ವಿಧಿಸಬಹುದಾದ ಸಜಾಗಳು.

31. ಕಾನೂನಿನ ಪ್ರಕಾರ ಕೊಡಬಹುದಾದ ಯಾವ ಸಜಾವನ್ನಾಗಲಿ ಚೀಫ್ ಕೋರ್ಟಿನವರು ವಿಧಿಸಬಹುದು.

ಸೆಷನ್ ಜಡ್ಜೀಯವರು, ಅಡಿಷನಲ್ ಸೇಷನ್ ಜಡ್ಜೀಯವರು ಅಥವಾ ಜಾಯಿಂಟು ಸೆಷನ್ ಜಡ್ಜಿಯವರು ಕಾನೂನಿಂದ ಕೊಡಬಹುದಾದ ಯಾವ ಸಜಾವನ್ನಾಗಲೀ ವಿಧಿಸಬಹುದು; ಪರಂತು ಅಂಥಾ ಯಾವ ಜಡ್ಜೀಯವರಿಂದಾದರೂ ವಿಧಿಸಲ್ಪಟ್ಟ ಮರಣ ದಂಡನೆಯು ಚೀಫ್‌ಕೋರ್ಟಿನವರ ಮಂಜೂರಾತಿಗೆ ಒಳಪಟ್ಟದ್ದಾಗಿರತಕ್ಕದ್ದು.

ಒಬ್ಬ ಅಸಿಸ್ಟಂಟ್ ಸೆಷನ್ ಜಡ್ಜೀಯವರು, ಮರಣದಂಡನೆ ಸಜಾ—ಯಾ—ಏಳುವರುಷದ ವಾಯಿದೆಗಿಂತ ಜಾಸ್ತಿಯಾಗಿ ನೀರಿನಮೇಲೆ ಕಳುಹಿಸುವ ಸಜಾ—ಯಾ—ಏಳುವರುಷದ ವಾಯಿದೆಗಿಂತ ಜಾಸ್ತಿಯಾಗುವ ಖೈದುಸಜಾ ಇವುಗಳು ಶಿವಾಯಿ, ಕಾನೂನಿನಿಂದ ಕೊಡಬಹುದಾದ ಯಾವ ಸಜಾವನ್ನಾಗಲೀ ವಿಧಿಸಬಹುದು; ಆದರೆ ಒಬ್ಬ ಅಸಿಸ್ಟಂಟು ಸೆಷನ್ ಜಡ್ಜೀಯವರಿಂದ ವಿಧಿಸಲ್ಪಟ್ಟ ಮೂರು ಸಂವತ್ಸರಕ್ಕಿಂತ ಜಾಸ್ತಿ ಯಾಗುವ ಖೈದಿನ ಸಜಾ ಸೆಷನ್ ಜಡ್ಜೀಯವರ ಮಂಜೂರಾತಿಗೆ ಒಳಪಟ್ಟದ್ದಾಗಿರತಕ್ಕದ್ದು.

ಮೇಜಿಸ್ಟ್ರೇಟುಗಳು ವಿಧಿಸಬಹುದಾದ ಶಿಕ್ಷೆಗಳು.

32. ಮೇಜಿಸ್ಟ್ರೇಟ್ ಕೋರ್ಟುಗಳು ಕೆಳಗಣ ಸಜಾಗಳನ್ನು ವಿಧಿಸಬಹುದು, ಯಾವವೆಂದರೆ:—

(a) ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟುಗಳು :	ಕಾನೂನು ಮೇರಿಗೆ ವಿಧಿಸಬಹುದಾದಂಥಾ ಸಾಲಿಟರಿ ಕನ್‌ಫೈನ್‌ಮೆಂಟನ್ನು ಶೇರಿಸಿಕೊಂಡು ಎರಡು ವರುಷಗಳ ವಾಯಿದೆಗಿಂತ ಜಾಸ್ತಿಯಾಗದೆ ಖೈದು ; ಒಂದು ಸಾವಿರ ರೂಪಾಯಿಗೆ ಮೀರದ ಜುಲ್ಮಾನೆ; ಬೆಬ್ಬೆ ಹೊಡಿಯೋಣ.
(b) ಸೆಕಂಡ್ ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟುಗಳು :	ಕಾನೂನು ಮೇರಿಗೆ ವಿಧಿಸಬಹುದಾದಂಥಾ ಸಾಲಿಟರಿ ಕನ್‌ಫೈನ್‌ಮೆಂಟನ್ನು ಶೇರಿಸಿಕೊಂಡು ಆರುತಿಂಗಳ ವಾಯಿದೆಗಿಂತ ಮೀರದ ಖೈದು ; ಇನ್ನೂರು ರೂಪಾಯಿಗೆ ಮೀರದ ಜುಲ್ಮಾನೆ; ಬೆಬ್ಬೆ ಹೊಡಿಯೋಣ.
(c) ತರ್ಡ್ ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟುಗಳು :	ಒಂದು ತಿಂಗಳ ವಾಯಿದೆಗಿಂತ ಜಾಸ್ತಿಯಾಗದ ಖೈದು ; ಐವತ್ತು ರೂಪಾಯಿಗೆ ಮೀರದ ಜುಲ್ಮಾನೆ.

ಯಾವ ಮೇಜಿಸ್ಟ್ರೇಟು ಕೋರ್ಟಾದರೂ ಕಾನೂನು ಮೇರಿಗೆ ತಾವು ವಿಧಿಸಕೂಡುವದಾದ ಸಜಾಗಳ ಪೈಕಿ ಯಾವವನ್ನಾಗಲೀ ಶೇರಿಸಿ ಒಂದು ನ್ಯಾಯವಾದ ಸಜಾವನ್ನ ವಿಧಿಸಬಹುದು.

ಯಾವ ಸೆಕಂಡ್‌ಕ್ಲಾಸ್ ಮೇಜಿಸ್ಟ್ರೇಟು ಕೋರ್ಟಾದರೂ ಮೈಸೂರು ಗವರ್ನಮೆಂಟಿನವರಿಂದ ಈ ಬಗ್ಗೆಯಾಗಿ ಅಧಿಕಾರ ಹೊಂದಿಸಲ್ಪಟ್ಟ ಹೊರತು ಬೆಬ್ಬೆ ಸಜಾವನ್ನು ವಿಧಿಸಕೂಡದು.

ಜುಲ್ಮಾನೆ ಕೊಡದೆ ತಪ್ಪಿದರೆ ಖೈದು ವಿಧಿಸಲಿಕ್ಕೆ ಮೇಜಿಸ್ಟ್ರೇಟುಗಳ ಅಧಿಕಾರ.

33. ಜುಲ್ಮಾನೆ ಕೊಡಲಿಕ್ಕೆ ತಪ್ಪಿದರೆ, ಆ ಪ್ರಕಾರ ತಪ್ಪಿದಲ್ಲಿ ಕಾನೂನು ಮೇರಿಗೆ ಯೆಷ್ಟು ಖೈದು ವಿಧಿಸಬಹುದೋ ಅಷ್ಟುಕಾಲದ ಖೈದು ಯಾವ ಮೇಜಿಸ್ಟ್ರೇಟು ಕೋರ್ಟಿನವರಾದರೂ ವಿಧಿಸಬಹುದು : ಪರಂತು, ಅಂಥಾ ಕಾಲವು ಈ ಕೋಡದ ಪ್ರಕಾರ ಆ ಮೇಜಿಸ್ಟ್ರೇಟಿನ ಅಧಿಕಾರಕ್ಕೆ ಮೀರಿದ್ದಾಗಿರಕೂಡದು.

ಮತ್ತು ಮೇಜಸ್ಟ್ರೇಟನಿಂದ ತೀರ್ಪು ಮಾಡೋಣಾದಂಥಾ ಸಂಗತಿಯಲ್ಲಿ ಸಜಾ ಇಲ್ಲ ಸಜಾವಿನ ಭಾಗವಾಗಿ ವಿಧಿಸಿದ್ದರೆ, ವಸೂಲಾಗದ ಜುಲ್ಮಾನೆ ತೆರಲಿಕ್ಕೆ ತಪ್ಪಿದ್ದಕ್ಕೆ ವಿಧಿಸಲಾದ ಖೈದಿನ ವಾಯಿದೆ, ಜುಲ್ಮಾನೆ ಸಂದಾಯ ಪಡಿಸದೆ, ತಪ್ಪಿದ್ದಕ್ಕೆ ಬದಲಾಗಿ ಅಲ್ಲದೆ ಅನ್ಯಥಾ ಸದರೀ ತಕ್ಕೀರಿಗೆ ಶಿಕ್ಷೆಯಾಗಿ ಅಂಥಾ ಮೇಜಸ್ಟ್ರೇಟು ವಿಧಿಸಬಹುದಾಗಿ ಇರುವ ಖೈದಿನ ವಾಯಿದೆಯ ಪೈಕಿ ನಾಲ್ಕರಲ್ಲಿ ಒಂದು ಪಾಲುಗಿಂತ ಎಷ್ಟುಮಾತ್ರವೂ ಹೆಚ್ಚಾಗಕೂಡದು.

ಕೆಲವು ಮೊಕದ್ದಮೆಗಳಲ್ಲಿ ನಿಯಮ.

ಈ ಪ್ರಕರಣಪ್ರಕಾರ ವಿಧಿಸತಕ್ಕ ಖೈದು ಮೇಜಸ್ಟ್ರೇಟಿಗೆ 32ನೇ ಪ್ರಕರಣಪ್ರಕಾರ ವಿಧಿಸಲಿಕ್ಕೆ ಅಧಿಕಾರ ಇರುವ ಅತ್ಯಧಿಕ ಸಬ್ ಸ್ಟ್ಯಾಟಿವ್ ಸಜಾವಿಗೆ ಕೂಡಿಸಿ ಇರಬಹುದು.

34. 30ನೇ ಪ್ರಕರಣ ಪ್ರಕಾರ ವಿಶೇಷವಾಗಿ ಅಧಿಕಾರ ಕೊಡಲ್ಪಟ್ಟ ಒಂದು ಡಿಸ್ಟ್ರಿಕ್ಟು ಮೇಜಸ್ಟ್ರೇಟ ಕೋರ್ಟಿನವರು, ಕಾನೂನು ಮೇರೆಗೆ ಸಾಲಿಟರಿ ಕನ್ಫೈನ್ಮೆಂಟನ್ನು ಸೇರಿಸಿಕೊಂಡು, ಏಳುವರುಷದ ವಾಯಿದೇಗಿಂತ ಜಾಸ್ತಿಯಾಗದ ಯಾವದೊಂದು ಖೈದು ಸಜಾವನ್ನಾಗಲಿ,—ಯಾ—ಜುಲ್ಮಾನೇ ಸಜಾವನ್ನಾಗಲಿ, ಯಾ—ದೆಬ್ಬೆ ಹೊಡಿಯುವ ಸಜಾವನ್ನಾಗಲಿ, ಅಥವಾ ಕಾನೂನು ಮೇರೆಗೆ ಈ ದಂಡನೆಗಳ ಪೈಕಿ ಯಾವವನ್ನಾಗಲಿ ಕೂಡಿಸಿ ಕೊಡಬಹುದಾದ ಪ್ರೊಂದು ಸಜಾವನ್ನಾಗಲಿ, ವಿಧಿಸಬಹುದು.

ಕೆಲವು ಡಿಸ್ಟ್ರಿಕ್ಟು ಮೇಜಿಸ್ಟ್ರೇಟುಗಳ ಹೆಚ್ಚಿನ ಅಧಿಕಾರಗಳು.

ಆದರೆ ಅಂಥಾ ಒಂದು ಕೋರ್ಟಿನವರಿಂದ ವಿಧಿಸಲ್ಪಟ್ಟ 3 ವರುಷದ ವಾಯಿದೇಗಿಂತ ಹೆಚ್ಚಾಗಿ ಇರುವ ಯಾವದೊಂದು ಖೈದು ಸಜಾವು ಸೆಷ್ನ ಜಡ್ಜಿಯವರ ಮಂಜುರಾತಿಗೆ ಒಳಪಟ್ಟಿರತಕ್ಕದ್ದು.

35. ಒಂದು ದರಿಯಾಫ್ತಿಯಲ್ಲಿ, ಒಬ್ಬ ಮನುಷ್ಯನಮೇಲೆ ಎರಡು—ಯಾ—ಹೆಚ್ಚು ಪ್ರತ್ಯೇಕ ಪ್ರತ್ಯೇಕವಾದ ತಕ್ಕೀರುಗಳು ಸಾಬೀತಾದರೆ; ಅಂಥಾ ತಕ್ಕೀರುಗಳಗೋಸ್ಕರ, ಅದಕ್ಕಾಗಿ ನಿರ್ದೇಶಿಸಿರುವ ಕೋರ್ಟಿನವರು ನ್ಯಾಯವಾಗಿ ವಿಧಿಸಬಹುದಾದ ಆಯಾ ಸಜಾಗಳನ್ನು ವಿಧಿಸಬಹುದು: ಅಂಥಾ ದಂಡನೆಗಳು, ನೀರಿನಮೇಲೆ ಕಳುಹಿಸೋಣ ಅಥವಾ ಖೈದು ಸಜಾ ದಂಡನೆಯಾಗಿದ್ದರೆ, ಕೋರ್ಟಿನವರು ಅಪ್ಪಣೆ ಕೊಡುವ ಕ್ರಮದಂತೆ ಅವುಗಳು ಒಂದು ವಾಯಿದೆ ಮುಗಿದ ತರುವಾಯ ಮತ್ತೊಂದು ಆರಂಭವಾಗತಕ್ಕದ್ದು.

ಒಂದೇ ದರ್ಯಾಪ್ತಿಯಲ್ಲಿ ಬೇರೆಬೇರೆ ತಕ್ಕೀರುಗಳು ಸಾಬೀತಾದಲ್ಲಿ ಸಜಾ.

ಬೇರೆಬೇರೆ ತಕ್ಕೀರುಗಳಗೋಸ್ಕರ ವಿಧಿಸೋಣಾದ ಒಟ್ಟು ಶಿಕ್ಷೆಯು ಒಂದೇ ತಕ್ಕೀರು ಸಾಬೀತಾದರೆ ತಾವು ವಿಧಿಸುವದಕ್ಕೆ ತಮಗೆ ಅಧಿಕಾರ ಇರುವ ಶಿಕ್ಷೆಗಿಂತ ಹೆಚ್ಚಾಗಿರುತ್ತದೆ ಎಂಬ ಒಂದೇ ಸಬಬಿನಮೇಲೆ ಕೋರ್ಟಿನವರು ತಕ್ಕೀರುದಾರನನ್ನು ದರಿಯಾಫ್ತಿಬಗ್ಗೆ ಮೇಲ್ ಕೋರ್ಟಿಗೆ ಕಳುಹಿಸಬೇಕಾದ ಅಗತ್ಯವಿಲ್ಲ.

ದಂಡನೆಯ ಅತ್ಯಧಿಕ ವಾಯಿದೆ.

ಪರಂತು ಈ ಕೆಳಗೆ ಕಾಣಿಸಿದ ಪ್ರಕಾರ:—

(a) ಯಾವ ಸಂಗತಿಯಲ್ಲೂ ಅಂಥಾ ಮನುಷ್ಯನಿಗೆ ಹದಿನಾಲ್ಕು ಸಂವತ್ಸರಕ್ಕಿಂತ ಹೆಚ್ಚು ವಾಯಿದೆಯ—ಸಜಾ ವಿಧಿಸಕೂಡದು.

(b) ಆ ಮೊಕದ್ದಮೆಯು (34ನೇ ಪ್ರಕರಣಕ್ಕೆ ಅನುಗುಣವಾಗಿ ಕೆಲಸಮಾಡುವ ಮೇಜಸ್ಟ್ರೇಟಲ್ಲದ) ಇತರ ಮೇಜಸ್ಟ್ರೇಟನಿಂದ ದರಿಯಾಫ್ತಿಯಾದದ್ದಾಗಿದ್ದರೆ, ಅಂಥಾ ಸಂಗತಿಯಲ್ಲಿ ಒಟ್ಟು ಶಿಕ್ಷೆಯು ತನ್ನ ಸಾಧಾರಣಾಧಿಕಾರವನ್ನು ಚಲಾಯಿಸುವಲ್ಲಿ ವಿಧಿಸಬಹುದಾಗಿರುವ ಶಿಕ್ಷೆಯ ಎರಡರಷ್ಟಕ್ಕೆ ಮೀರಿರಕೂಡದು.

ಒಂದೇ ದರ್ಯಾಪ್ತಿಯಲ್ಲಿ ಸಾಬೀತಾದ ಬೇರೆಬೇರೆ ತಕ್ಕೀರುಗಳಗೋಸ್ಕರ ಈ ಪ್ರಕರಣಕ್ಕನುಗುಣವಾಗಿ ವಿಧಿಸೋಣಾದ ಸಜಾಗಳ ಒಟ್ಟು ಸಜಾಗಳು, ಮಂಜುರಾತಿ—ಯಾ—ಅಪೀಲಗಳ, ಬಗ್ಯಾಗಿ ಒಂದೇ ಸಜಾ ವಿಧಿಸೋಣಾದಂತೆ ಎಣಿಸತಕ್ಕದ್ದು.

C.—Ordinary and Additional Powers.

C.—ಸಾಧಾರಣವಾದ—ವ—ಹೆಚ್ಚಾದ ಅಧಿಕಾರಗಳು.

ಮೇಜಿಸ್ಟ್ರೇಟಿನವರ ಸಾಧಾರಣಾಧಿಕಾರಗಳು.

36. ಎಲ್ಲಾ ಡಿಸ್ಟ್ರಿಕ್ಟು ಮೇಜಿಸ್ಟ್ರೇಟುಗಳು, ಸಬ್ ಡಿವಿಜನಲ್ ಮೇಜಿಸ್ಟ್ರೇಟುಗಳು, ಫಸ್ಟು, ಸೆಕಂಡ್—ವ—ಥರ್ಡ್ ಕ್ಲಾಸ್ ಮೇಜಿಸ್ಟ್ರೇಟುಗಳು, ಆಯಾ ಮೇಜಿಸ್ಟ್ರೇಟರಿಗೆ ಈ ಕೆಳಗೆ ಕೊಡಲ್ಪಟ್ಟ ಮೂರನೇ ಷೆಡ್ಯೂಲಿನಲ್ಲಿ ನಮೂದಿಸಲ್ಪಟ್ಟ ಅಧಿಕಾರವುಳ್ಳವರಾಗಿರತಕ್ಕದ್ದು. ಅಂಥಾ ಅಧಿಕಾರಗಳು ಅವರ "ಸಾಧಾರಣ ಅಧಿಕಾರಗಳಂತೆ" ಹೇಳಿಸಿಕೊಳ್ಳಲ್ಪಡುತ್ತವೆ.

ಮೇಜಿಸ್ಟ್ರೇಟುಗಳಿಗೆ ಕೊಡಬಹುದಾದ ಹೆಚ್ಚಿನ ಅಧಿಕಾರ.

37. ತಮ್ಮ ಸಾಧಾರಣ ಅಧಿಕಾರಗಳೊಡನೆ ಶೇರಿಸಿ ಯಾವನೊಬ್ಬ ಸಬ್ ಡಿವಿಜನಲ್ ಮೇಜಸ್ಟ್ರೇಟ್, ಫಸ್ಟ್ ಸೆಕೆಂಡ್—ಯಾ—ಥರ್ಡ್ ಕ್ಲಾಸ್ ಮೇಜಸ್ಟ್ರೇಟ್ ನಾಲ್ಕನೇ ಷೆಡ್ಯೂಲಿನಲ್ಲಿ ಮೈಸೂರು ಗವರ್ನ್ಮೆಂಟಿನವರಿಂದ—ಯಾ—ಡಿಸ್ಟ್ರಿಕ್ಟು ಮೇಜಸ್ಟ್ರೇಟಿನಿಂದ ಕೊಡಲ್ಪಡಬಹುದೆಂದು ನಮೂದಿಸಲ್ಪಟ್ಟ ಯಾವ ಅಧಿಕಾರಗಳಾಗಲೀ ಸಂದರ್ಭಾನುಸಾರವಾಗಿ, ಮೈಸೂರು ಗವರ್ನ್ಮೆಂಟಿನವರಿಂದಾದರೂ,—ಯಾ—ಡಿಸ್ಟ್ರಿಕ್ಟು ಮೇಜಸ್ಟ್ರೇಟಿನವರಿಂದಾದರೂ, ಕೊಡಲ್ಪಡಬಹುದು.

ಅಧಿಕಾರ ಕೊಡುವ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಮೇಲೆ ಇರುವ ಮೇಲ್ವಿಚಾರ.

38. 37ನೇ ಪ್ರಕರಣ ಪ್ರಕಾರ ಡಿಸ್ಟ್ರಿಕ್ಟು ಮೇಜಸ್ಟ್ರೇಟರಿಗೆ ಕೊಡಲ್ಪಟ್ಟ ಅಧಿಕಾರ ಮೈಸೂರು ಗವರ್ನ್ಮೆಂಟಿನವರ ಮೇಲ್ವಿಚಾರಕ್ಕೆ ಒಳಪಟ್ಟು ನಡಿಸಲ್ಪಡತಕ್ಕದ್ದು.

D.—Conferment, Continuance and Cancellation of Powers

D.— ಅಧಿಕಾರಗಳು ಕೊಡೋಣ, ಮತ್ತು ಅವುಗಳ ಊರ್ಜಿತ—ವ—ರದ್ದೀಯಾತಿ ಕುರಿತು.

ಅಧಿಕಾರಗಳನ್ನು ಕೊಡುವ ರೀತಿ.

39. ಈ ಕೋಶದ ಪ್ರಕಾರ ಅಧಿಕಾರಗಳನ್ನ ಕೊಡುವದರಲ್ಲಿ, ಫಲಾನೆಯವನೆಂದು ಪ್ರತ್ಯೇಕವಾಗಿ ಹೆಸರು ಹೇಳಿ ಆಗಲಿ ಅಥವಾ ಉದ್ಯೋಗ ಪ್ರಯುಕ್ತವಾಗಿದ್ದರೆ, ಅಥವಾ ಸಾಧಾರಣವಾಗಿ ಯಾವ ತರಗತಿಯ ಉದ್ಯೋಗಸ್ಥರೆಂತಾಗಲೀ ಅವರ ಉದ್ಯೋಗದ ಹೆಸರುಗಳನ್ನು ಬರೆದು ಅವರನ್ನ ಮೈಸೂರು ಗವರ್ನ್ಮೆಂಟಿನವರು ಹುಕುಂ ಮೂಲವಾಗಿ ಅಧಿಕಾರ ಗೊಳಿಸಬಹುದು.

ಅಂಥಾ ಪ್ರತಿ ಹುಕ್ಕುಂ ಆ ಪ್ರಕಾರ ಅಧಿಕಾರಪಟ್ಟ ಮನುಷ್ಯನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು ಜಾರೀಗೆ ಬರತಕ್ಕದ್ದು.

ವರ್ಗವಾದ ಆಫೀಸರರ ಅಧಿಕಾರಗಳ ಊರ್ಜಿತ.

40. ಸ್ಥಳಿಕ ಯಾವ ಸರಹದ್ದಿನಲ್ಲಾದರೂ, ಈ ಕೋಶದ ಪ್ರಕಾರ ಯಾವ ಅಧಿಕಾರಗಳನ್ನಾದರೂ ಪಡದಿರುವಂಥಾವನಾಗಿ, ಗವರ್ನ್ಮೆಂಟಿನ ನವುಕರೀಲಿ, ಒಂದು ಉದ್ಯೋಗವನ್ನುಳ್ಳ ಯಾವನಾದರೂ, ಮೈಸೂರು ಗವರ್ನ್ಮೆಂಟಿನೊಳಗೆ ಇರುವ ಹಾಗೆಯೇ ಸ್ಥಳಿಕ ಸರಹದ್ದಿರುವ ಯಾವ ಸ್ಥಳಕ್ಕಾದರೂ, ಅದೇ ಸ್ವಭಾವವುಳ್ಳದ್ದಾಗಿರುವ ಅದಕ್ಕೆ ಸಮನಾದ—ಯಾ—ಹೆಚ್ಚಾದಲುದ್ಯೋಗದ ಮೇಲೆ ವರ್ಗಪಟ್ಟಾಗ್ಯೆ, ಮೈಸೂರು ಗವರ್ನ್ಮೆಂಟಿನವರು ಅನ್ಯಥಾ ಹುಕುಂ ಮಾಡದೆ ಇದ್ದ ಪಕ್ಷದಲ್ಲಿ—ಯಾ—ಮಾಡಿರದೆ ಇದ್ದ ಪಕ್ಷದಲ್ಲಿ, ತನ್ನನ್ನು ಎಲ್ಲಿಗೆ ವರ್ಗ ಮಾಡೋಣಾಯಿತೋ ಆ ಸ್ಥಳಿಕ ಸರಹದ್ದಿನಲ್ಲಿ ಅದೇ ಅಧಿಕಾರಗಳನ್ನು ಚಲಾಯಿಸುತ್ತಾ ಇರತಕ್ಕದ್ದು.

41. ಮೈಸೂರು ಗವರ್ನಮೆಂಟಿನವರು ತಮ್ಮಿಂದಾಗಲೀ—ಯಾ—ತಮಗೆ ತಾಬೇದಾರಿಯಾದ ಯಾವ ಅಧಿಕಾರಿಯಿಂದಾಗಲೀ ಈ ಕೋಶದ ಪ್ರಕಾರ ಒಬ್ಬನಿಗೆ ಕೊಡಲ್ಪಟ್ಟ ಯಾವ ಅಧಿಕಾರಗಳನ್ನಾದರೂ ರದ್ದುಮಾಡಬಹುದು.

ಅಧಿಕಾರಗಳು ರದ್ದುಮಾಡಲ್ಪಡಬಹುದು.

PART III.

3ನೇ ಭಾಗ.

GENERAL PROVISIONS.

ಸಾಧಾರಣ ನಿಬಂಧನೆಗಳು.

CHAPTER IV.—OF AID AND INFORMATION TO THE MAGISTRATES, THE POLICE AND PERSONS MAKING ARRESTS.

4ನೇ ಅಧ್ಯಾಯ.—ಮೇಜಿಸ್ಟ್ರೇಟುಗಳಿಗೆ ಕೊಡತಕ್ಕ ಸಹಾಯ ಮತ್ತು ವರ್ತಮಾನ, ಪೋಲೀಸಿನವರು ವ ಹಿಡಿಯುವ ಮನುಷ್ಯರುಗಳನ್ನು ಕುರಿತು.

ಮೇಜಿಸ್ಟ್ರೇಟಿಗೂ ವ ಪೋಲೀಸಿಗೂ ಎಲ್ಲರೂ ಯಾವಾಗ ಸಹಾಯ ಮಾಡತಕ್ಕದ್ದು.

42. ತಕ್ಕ ಸಬಬಿನಮೇಲೆ,

(a) ಅಂಥಾ ಮೇಜಿಸ್ಟ್ರೇಟು ಅಥವಾ ಪೋಲಿಸು ಆಫಿಸರ್ ಹಿಡಿಯಲಿಕ್ಕೆ ಅಧಿಕಾರವುಳ್ಳ ಇತರ ಯಾವ ಮನುಷ್ಯನನ್ನಾದರೂ ಹಿಡಿಯುವದರಲ್ಲಿ;

(b) ಜನಗಳ ನೆಮ್ಮದಿಗೆ ಭಂಗಬಾರದಂತೆ ತಡೆಯೋಣದರಲ್ಲಿ, ರೆಯಿಲ್‌ವೆ, ಕಾಲ್ವೆ, ಟೆಲಿಗ್ರಾಪ್ ಯಾನೆ ತಂತಿ ಯಾ ಪಬ್ಲಿಕ್ ಸೊತ್ತು, ಇವುಗಳಿಗೆ ಹಾನಿಮಾಡಲಿಕ್ಕೆ ಪ್ರಯತ್ನ ಪಡುವದನ್ನು ತಡೆಯೋಣದರಲ್ಲಿ; ಅಥವಾ

(c) ದೊಂಬಿಯನ್ನು—ಯಾ—ಕಲಹವನ್ನು ಅಡಗಿಸೋಣದರಲ್ಲಿ, ಕುಮ್ಮಕು ಮಾಡಹೇಳಿ ಮೇಜಿಸ್ಟ್ರೇಟನಾಗಲೀ, ಪೋಲಿಸು ಆಫಿಸರನಾಗಲೀ, ಅಪೇಕ್ಷಿಸಿದರೆ, ಆತನಿಗೆ ಸಹಾಯ ಮಾಡುವದಕ್ಕೆ ಪ್ರತಿ ಮನುಷ್ಯನೂ ಬದ್ಧನಾಗಿರುತ್ತಾನೆ.

ಪೋಲಿಸು ಆಫಿಸರಲ್ಲದ ವಾರಂಟಿನ ಅಮಲ್ದಾರಿ ಮಾಡುವ ಇತರ ಮನುಷ್ಯನಿಗೆ ಮಾಡಬೇಕಾದ ಸಹಾಯ.

43. ಪೋಲಿಸು ಆಫಿಸರಲ್ಲದ ಇತರ ಮನುಷ್ಯನ ಹೆಸರಿಗೆ ವಾರಂಟಿಗೆ ವಿಲಾಸಾ ಹಾಕೋಣಾದರೆ, ಅಂಥಾ ಸಂಗತಿಯಲ್ಲಿ ಯಾವನ ಹೆಸರಿಗೆ ವಿಲಾಸಾ ಹಾಕೋಣಾಯಿತೋ ಆ ಮನುಷ್ಯನು ಸಮೀಪದಲ್ಲಿದ್ದುಕೊಂಡು, ವಾರಂಟನ್ನು ಅಮಲ್ದಾರಿ ಮಾಡುವದರಲ್ಲಿ ಪ್ರವರ್ತಿಸಿ ಇದ್ದರೆ, ಆಗ ಅದರ ಜಾರಿಯ ವಿಷಯದಲ್ಲಿ ಇತರ ಯಾವ ಮನುಷ್ಯನಾದರೂ, ಸಹಾಯ ಮಾಡಬಹುದು.

ಕೆಲವು ತಕ್ಸೀರುಗಳ ಬಾಬಿನಲ್ಲಿ ಜನರು ವರ್ತಮಾನ ಕೊಡತಕ್ಕದ್ದು.

44. ಇಂಡಿಯನ್ ಪಿನಲ್‌ಕೋಡಿನ ಪ್ರಕರಣಗಳ ಪ್ರಕಾರ (ಅಂದರೆ) 121, 121A 122, 123, 124, 124A, 125, 126, 130, 302, 303, 304, 382, 392, 393, 394, 395, 396, 397, 398, 399, 402, 435, 436, 449, 450 456, 457, 458, 459, ಮತ್ತು 460 ಪ್ರಕರಣಗಳ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಕ್ಸೀರಾದರೂ ನಡೆಯಿತೆಂತಾಗಲೀ—ಯಾ—ಅಂಥಾ ತಕ್ಸೀರು ಮಾಡಲಿಕ್ಕೆ ಯಾವನಾದರೂ ಎತ್ನಿಸುತ್ತಾನೆಂತಾಗಲೀ ತಿಳಿದವನಾದ ಪ್ರತಿ ಮನುಷ್ಯನೂ, ತಿಳಿಸದೆ ಇರಲಿಕ್ಕೆಯುಕ್ತವಾದಸಬಬು ಇಲ್ಲದಿದ್ದರೆ, ಸದರೀ ವಿಷಯವನ್ನು ಕುರಿತು ಅತಿಸಮೀಪದಲ್ಲಿರುವ ಮೇಜಿಸ್ಟ್ರೇಟಿಗಾಗಲೀ—ಯಾ—ಪೋಲಿಸು ಆಫಿಸರಿಗಾಗಲೀ ತಕ್ಷಣ ತಿಳಿಸತಕ್ಕದ್ದು. ತಕ್ಕಸಬಬು ಇತ್ತೆಂಬದು ರುಜುವಾತು ಪಡಿಸುವ ಭಾರ ಅಂಥವನಮೇಲೆ ಬಿದ್ದಿರುತ್ತದೆ.

45. ಈ ಕೆಳಗಿನ ವಿಷಯವಾಗಿ ತಾನು ಪಡೆಯಬಹುದಾದ ಯಾವ ಸಮಾಚಾರವನ್ನಾಗಲೀ, ಪ್ರತಿ ಗ್ರಾಮ ಮುಖ್ಯಸ್ಥನು, ಗ್ರಾಮದ ಕಾವಲುಗಾರನು, ಗ್ರಾಮದ ಪೋಲೀಸು ಆಫಿಸರ, ಭೂಮಿಯ ಮಾಲೀಕನು—ಯಾ—ಅದನ್ನ ಸ್ವಾಧೀನದಲ್ಲಿಟ್ಟುಕೊಂಡಿರುವವನು,—ವ—ಅಂಥಾಮಾಲೀಕನ—ಯಾ—ಸ್ವಾಧೀನದಲ್ಲಿಟ್ಟುಕೊಂಡವನ ಮುತಾಲೀಕನು, ಮತ್ತು ಖಿಸ್ತನ್ನಾಗಲೀ—ಯಾ—ಕಂದಾಯವನ್ನಾಗಲೀ ಜಮೆಮಾಡಲಿಕ್ಕೆಗವರ್ನಮೆಂಟಿನ—ಯಾ—ಡಿಸ್ಟ್ರಿಕ್ಟು ಕೋರ್ಟಿನ ಕಡೆಯಿಂದ ನೌಕರರಾದ ಪ್ರತಿ ಆಫಿಸರೂ, ಕೂಡಲೇ ಅತಿ ಸಮೀಪದಲ್ಲಿರುವ ಮೇಜಿಸ್ಟ್ರೇಟಿಗೆ,—ಯಾ—ಅತಿ ಸಮೀಪದಲ್ಲಿರುವ ಪೋಲಿಸು ಸ್ಟೇಷನಿನ ಜಿಮ್ಮೆಯನುಳ್ಳ ಆಫಿಸರಿಗೆ, ಈ ಎರಡರಪೈಕಿ ಯಾವದು ಕೇವಲ ಸಮೀಪದೊಳಗಿರುತಿದೆಯೋ ಅದರ ಆಫಿಸರಿಗೆತಿಳಿಸತಕ್ಕದ್ದು.

ಗ್ರಾಮದ ಮುಖ್ಯಸ್ಥನು ಸ್ವಾಸ್ಥ್ಯದಾರರು ಮುಂತಾದವರು ಕೆಲವು ವಿಷಯವನ್ನ ತಿಳಿಸಲಿಕ್ಕೆ ಬದ್ಧರಾಗಿರುತ್ತಾರೆ.

ಅವು ಯಾವ ವಿಷಯದಲ್ಲಿ ಅಂದರೆ—

(a) ಅವನು ಎಲ್ಲಿಗೆ ಮುಖ್ಯಸ್ಥನೋ, ಕಾವಲುಗಾರನೋ—ಯಾ—ಪೋಲಿಸು ಆಫಿಸರನೋ ಆ ಗ್ರಾಮದಲ್ಲಿ, ಅಥವಾ ಅವನು ಎಲ್ಲಿ, ಭೂಮಿಯನ್ನು ಪಡೆದಿರುವವನಾಗಿ—ಯಾ—ಸ್ವಾಧೀನದಲ್ಲುಳ್ಳವನಾಗಿದ್ದಾನೆಯೋ,—ಯಾ—ಎಲ್ಲಿ ಮುತಾಲೀಕನೋ, ಅಥವಾ ಎಲ್ಲಿ ಖಿಸ್ತನ್ನು—ಯಾ—ಕಂದಾಯವನ್ನು ಜಮೆ ಮಾಡುತ್ತಾನೋ, ಅಂಥಾ ಯಾವದೊಂದು ಗ್ರಾಮದಲ್ಲಿ, ಚೋರೀಮಾಲನ್ನ ಪ್ರಸಿದ್ಧವಾಗಿ ಈಸುಕೊಳ್ಳುವವನ—ಯಾ—ಮಾರುವವನ ಕಾಯಮಾದ—ಯಾ—ಹಂಗಾಮಿಯಾದ ವಾಸಸ್ಥಳ;

(b) ಅಂಥಾ ಗ್ರಾಮದೊಳಗೆ ಎಲ್ಲಿಯಾಗಲೀ,—ಯಾ—ಅಲ್ಲಿಗಾಗಿ ಹೋಗುವ ರಸ್ತಾವಿನಲ್ಲಾಗಲೀ, ಒಬ್ಬ ಠಗ್ಗಂಬ ಪಾಶಗಾರಿ ಕಳ್ಳನಾಗಿರುವ, ಚೋರನಾಗಿ ಇರುವ, ತಪ್ಪಿಸಿಕ್ಕೊಂಡ ಕೈದಿಯಾಗಿರುವ—ಯಾ—ಇಸ್ತಿಹಾರ ಆಗಲ್ಪಟ್ಟ ತಕ್ಶೀರುದಾರನೆಂದು ತಾನು ತಿಳಿಯುವ—ಯಾ—ತಕ್ಕ ಸಬಬಿನಮೇಲೆ ಗುಮಾನಿಸುವ ಮನುಷ್ಯರು ಹೋಗಿ ತಂಗುವ ಸ್ಥಳ;

(c) ಸದರೀ ಗ್ರಾಮದೊಳಗೆ—ಯಾ—ಗ್ರಾಮದ ಬಳಿ ಯಾವದೊಂದು ಜಾಮೀನಿನ ಮೇಲೆ ಬಿಡುಗಡೆ ಯಾಗತಕೂಡದ ತಕ್ಶೀರನ್ನು ನಡೆದ—ಯಾ—ಅಂಥಾ ತಕ್ಶೀರುನಡಿಸುವ ಇರಾದೆ;

(d) ಆ ಗ್ರಾಮದಲ್ಲಿ ಯಾವದೊಂದು ಅಕಸ್ಮಾತ್—ಯಾ—ಅಕಾಲಮರಣ—ಯಾ—ಸಂದೇಹ ಪಡಬೇಕಾದ ಸಂದರ್ಭಗಳಲ್ಲಿ ಮರಣ ವುಂಟಾದದ್ದನ್ನು ಕುರಿತು.

ಟಿಪ್ಪಣಿ.—ಈ ಪ್ರಕರಣದಲ್ಲಿ "ಗ್ರಾಮ" ಎಂಬುವದು, ಗ್ರಾಮದ ಭೂಮಿಗಳು ಎಂಬದನ್ನು ಅಡಗಿಸಿಕೊಂಡಿರುತ್ತದೆ.

CHAPTER V.—OF ARREST, ESCAPE AND RETAKING.

5ನೇ ಅಧ್ಯಾಯ.—ಹಿಡಿಯೋಣ, ತಪ್ಪಿಸಿಕೊಂಡು ಹೋಗೋಣ, ಪುನಃ ಹಿಡಿಯೋಣ, ಇವುಗಳನ್ನ ಕುರಿತು.

A.—Arrest generally.

A.—ಸಾಧಾರಣವಾಗಿ ಹಿಡಿಯೋಣವನ್ನು ಕುರಿತು.

46. ಪೋಲಿಸು ಆಫಿಸರ ಅಥವಾ ಇತರ ಮನುಷ್ಯನು ಒಬ್ಬನನ್ನು ಹಿಡಿಯಬೇಕಾದರೆ, ಹಾಗೆ ಹಿಡಿಯಬೇಕಾದ ಮನುಷ್ಯನ ದೇಹವನ್ನ ಆತ ಮುಟ್ಟಿಯಾಗಲೀ—ಯಾ—ಕೈದ್ ಮಾಡಿಯಾಗಲೀ, ಹಿಡಿಯಬಹುದು. ಯಾವಪಕ್ಷದಲ್ಲಂದರೆ ಮಾತಿನಮೂಲಕವಾಗಿ-ಯಾ-ಸನ್ನೆಯ ಮೂಲಕವಾಗಿ ಆ ಆಸಾಮಿ ಸ್ವಾಧೀನಪಡದೆ ಇದ್ದಪಕ್ಷದಲ್ಲಿ ಅವನನ್ನು ಹಾಗೆ ಮಾಡತಕ್ಕದ್ದು.

ಹ್ಯಾಗೆ ಹಿಡಿಯೋಣ.

ಅಂಥಾ ಮನುಷ್ಯನನ್ನು ಹಿಡಿಯುವದಕ್ಕೆ ಪ್ರಯತ್ನ ನಡಿಯುವಾಗ ಅವನು ಜುಲುಮಿನಿಂದ ಎದರಿಸಿದರೂ ಅಥವಾ ಹಿಡಿಯೋಣದರಿಂದ ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನಪಟ್ಟರೂ, ಸದರೀ ಪೋಲಿಸಾಫಿಸರರು—ಯಾ—ಇತರ ಮನುಷ್ಯನು ಹಿಡಿಯಲಿಕ್ಕೆ ಅವಶ್ಯವಾದ ಎಲ್ಲಾ ತರದೂದುಗಳನ್ನು ಮಾಡಬಹುದು.

ಹಿಡಿಯುವ ಪ್ರಯತ್ನವನ್ನು ತಡೆಯೋಣ.

ಈ ಪ್ರಕರಣದಲ್ಲಿ ಅಡಗಿರುವ ಯಾವದೂ ಮರಣದಂಡನೆಯಿಂದಾಗಲೀ,—ಯಾ—ಜೀವಮಾನಪರಿಯಂತ ನೀರಿನಮೇಲೆ ಕಳುಹಿಸೋಣದರಿಂದಾಗಲೀ ಶಿಕ್ಷಿಸಲ್ಪಡತಕ್ಕ ತಕ್ಸೀರಿನ ಆಪಾದನೆಪಡದ ಮನುಷ್ಯನ ಮರಣವನ್ನು ಉಂಟುಮಾಡಿಸಲಿಕ್ಕೆ ಅಧಿಕಾರವನ್ನು ಕೊಡುವದಿಲ್ಲ.

47. ಹಿಡಿಯುವ ವಾರಂಟನ್ನು ಜಾರಿಮಾಡುವ ಯಾವ ಮನುಷ್ಯನಾಗಲೀ,—ಯಾ—ಹಿಡಿಯುವ ಬಗ್ಗೆ ಅಧಿಕಾರವುಳ್ಳ ಯಾವ ಪೋಲಿಸು ಆಫಿಸರನಾಗಲೀ, ಹಿಡಿಯಲ್ಪಡಬೇಕಾಗಿರುವ ಮನುಷ್ಯನು ಒಂದು ಸ್ಥಳದಲ್ಲಿ ಪ್ರವೇಶಿಸಿದ್ದಾಗಿಯಾಗಲೀ, ಇರುವದಾಗಿಯಾಗಲೀ, ನಂಬಲಿಕ್ಕೆ ಕಾರಣ ಇದ್ದರೆ, ಅಂಥಾ ಸಂಗತಿಯಲ್ಲಿ, ಸದರೀ ಸ್ಥಳದಲ್ಲಿ ವಾಸಮಾಡುವಂಥಾ ಅಥವಾ ಅದರ ಜಿಮ್ಮೇದಾರನಾದಂಥಾ ಮನುಷ್ಯನು, ಮೇಲೆ ಹೇಳಿದ ಪ್ರಕಾರ ಜಾರೀಮಾಡುವ ಸದರೀ ಮನುಷ್ಯನು—ಯಾ—ಸದರೀ ಪೋಲಿಸು ಆಫಿಸರನಾಗಲೀ ಅಪೇಕ್ಷಿಸಿದರೆ, ಆತನನ್ನು ಒಳಕ್ಕೆ ಹೋಗಲಿಕ್ಕೆ ಬಿಟ್ಟು, ಅದರಲ್ಲಿ ಝುಡ್ತಿನೋಡಲಿಕ್ಕೆ ನ್ಯಾಯವಾದ ಸಲಕರಣೆಗಳನ್ನೆಲ್ಲಾ ಉಂಟುಮಾಡಿಕೊಡತಕ್ಕದ್ದು.

ಹಿಡಿಯುವ ಬಗ್ಗ್ಯಾಗಿ ಹುಡುಕಲ್ಪಟ್ಟ ಮನುಷ್ಯನು ಹೊಕ್ಕಿದ ಸ್ಥಳವನ್ನು ಹುಡುಕೋಣ.

48. 47ನೇ ಪ್ರಕರಣಪ್ರಕಾರ ಒಳಕ್ಕೆ ಬಿಡಬೇಕಾಗಿ ಹಾಗೆ ಬಿಡದೆ ಇದ್ದರೆ, ವಾರಂಟಿನ ಪ್ರಕಾರ ನಡಿಯುವ ಯಾವ ಮನುಷ್ಯನಾಗಲೀ ಮತ್ತು ವಾರಂಟು ಶಿಕ್ಕಬಹುದಾಗಿದ್ದು, ಹಾಗೆ ಶಿಕ್ಕುವ ಮೊದಲು ಹಿಡಿಯಬೇಕಾದ ಮನುಷ್ಯನು ತಪ್ಪಿಸಿಕೊಂಡು ಹೋಗಲಿಕ್ಕೆ ಆಸ್ಪದ ಶಿಕ್ಕದ ಹಾಗೆ ಮಾಡಕೂಡದದಸಂಗತಿಯಲ್ಲಿ ಯಾವನೊಬ್ಬ ಪೋಲೀಸು ಆಫಿಸರನಾಗಲೀ ಸದರೀ ಸ್ಥಳವನ್ನು ಪ್ರವೇಶಿಸಿ, ಅದರಲ್ಲಿ ಝುಡ್ತಿಮಾಡುವದಕ್ಕೂ,

ಒಳಕ್ಕೆ ಹೋಗಲಿಕ್ಕೆ ಆಸ್ಪದಶಿಕ್ಕದೆ ಹೋದರೆ ನಡಿಸತಕ್ಕ ಕ್ರಮ.

ಮತ್ತು ಸದರೀ ಸ್ಥಳಕ್ಕೆ ಪ್ರವೇಶಿಸುವ ನಿಮಿತ್ಯ, ತಾನು ಬಂದ ಕೆಲಸವನ್ನೂ ಅಧಿಕಾರವನ್ನು ಸಹ ತಿಳಿಸಿ ತನ್ನನ್ನು ಒಳಕ್ಕೆ ಬಿಡಬೇಕೆಂತ ಕ್ರಮವಾಗಿ ಅಪೇಕ್ಷಿಸಿದ ತರುವಾಯ, ಅನ್ಯಥಾ ಒಳಕ್ಕೆ ಪ್ರವೇಶಿಸುವದಕ್ಕೆ ಆಗದೆ ಇದ್ದ ಪಕ್ಷದಲ್ಲಿ, ಹಿಡಿಯಲ್ಪಡಬೇಕಾದ ಮನುಷ್ಯನ—ಯಾ—ಯಾವ ಇತರನ ಮನೆಯ—ಯಾ—ಸ್ಥಳದ ಹೊರಗಿನ ಯಾ—ಒಳಗಿನ ಕದವನ್ನಾದರೂ, ಕಿಟಕಿಯನ್ನಾದರೂ ಒಡೆದು ತೆರೆಯಬಹುದು.

ಪರಂತು, ಅಂಥಾ ಝುಡ್ತಿಮಾಡತಕ್ಕ ಸ್ಥಳವು ದೇಶಾಚಾರಪ್ರಕಾರ ಬಹಿರಂಗಕ್ಕೆ ಬಾರದೆ ಗೋಷಾವಾಗಿ ಇರುವಂಥಾ(ಹಿಡಿಯಬೇಕಾದವಳಲ್ಲದ)ಹೆಂಗಸು ವಾಸವಾಗಿರುವ ಅಂತಃಪುರವಾಗಿದ್ದರೆ, ಝುಡ್ತಿಮಾಡುವ ಮನುಷ್ಯನು—ಯಾ—ಪೋಲಿಸ್ ಆಫಿಸರರು ಸದರೀ ಕೊಠಡಿಯನ್ನು ಪ್ರವೇಶಿಸುವದಕ್ಕೆ ಮುಂಚಿತವಾಗಿ ಸದರೀ ಗೋಷಾಸ್ತ್ರೀ ಹೊರಟು ಹೋಗಬಹುದೆಂದು ತಿಳಿಸಿ, ಹೊರಟು ಹೋಗುವನಿಮಿತ್ಯ ನ್ಯಾಯವಾದ ಸಲಕರಣೆಗಳನ್ನು ಕೊಟ್ಟತರುವಾಯ, ಕೊಠಡಿಯನ್ನು ಒಡದು ಪ್ರವೇಶಿಸಬಹುದು.

ಜನಾನವೆಂಬ ಅಂತಃಪುರವನ್ನು ಒಡೆಯೋಣ.

49. ಹಿಡಿಯುವದಕ್ಕೆ ಅಧಿಕಾರ ಪಡೆದ ಯಾವ ಪೋಲಿಸು ಆಫಿಸರಾದರೂ—ಯಾ—ಇತರ ಮನುಷ್ಯನಾದರೂ ಹಿಡಿಯುವ ಉದ್ದಿಶ್ಯ ನ್ಯಾಯವಾಗಿ ಪ್ರವೇಶಮಾಡಿ ಇದ್ದು, ಅಲ್ಲೀ ತಡದು ಇಡಲ್ಪಟ್ಟರೆ ತಾನು ಖುಲಾಸೆಪಡುವ ಉದ್ದಿಶ್ಯ ಅಥವಾ ಇತರನನ್ನು ಖುಲಾಸೆ ಮಾಡುವದಕ್ಕೋಸ್ಕರ ಯಾವ ಮನೆ—ಯಾ—ಸ್ಥಳವನ್ನಾದರೂ, ಒಳಕದವನ್ನಾದರೂ, ಕಿಟಕಿಯನ್ನಾದರೂ ಒಡದು ತೆರೆಯಬಹುದು.

ಹೊರಗೆ ಬರುವ ಉದ್ದಿಶ್ಯ ಕದಗಳನ್ನು ಕಿಟಕಿಗಳನ್ನು ಒಡೆಯ ಅಧಿಕಾರ

1068

50. ಹಿಡಿಯಲ್ಪಟ್ಟ ಮನುಷ್ಯನು ತಪ್ಪಿಸಿಕೊಂಡು ಹೋಗಲಿಕ್ಕೆ ಆಗದೆ ಇರುವಷ್ಟು ನಿರ್ಬಂಧ ಹೊರ್ತು ಅವನನ್ನು ಹೆಚ್ಚಾಗಿ ನಿರ್ಬಂಧ ಸಕೂಡದು.

ಅನಾವಶ್ಯಕವಾದ ನಿರ್ಬಂಧಕೂಡದು.

51 ಜಾಮಿನ್ ತೆಕ್ಕೊಳ್ಳಲಿಕ್ಕೆ ನಿಬಂಧಿಸದೇ ಇರುವ ಒಂದು ವಾರಂಟಿಗನುಗುಣವಾಗಿ, ಅಥವಾ ಜಾಮಿನ್ ತೆಕ್ಕೊಳ್ಳಲಿಕ್ಕೆ ನಿಬಂಧಿಸಿದ ವಾರಂಟಿಗನುಗುಣವಾಗಿ, ಇದ್ದಾಗ್ಯೂ, ಹಿಡಿಯಲ್ಪಟ್ಟವನು ಜಾಮಿನ್‌ಕೊಡಲಿಕ್ಕೆ ಆಗದೆ ಇರುವಾಗ, ಪೋಲೀಸಾಫಿಸರಿಂದ ಒಬ್ಬನು ಹಿಡಿಯಲ್ಪಟ್ಟಾಗ್ಯೆಲ್ಲಾ,

ಹಿಡಿಯೋಣಾದವರನ್ನು ತಲಾಷ್ ಮಾಡೋಣ.

ಮತ್ತು ಒಬ್ಬನು ವಾರಂಟಿಲ್ಲದೆ ಅಥವಾ ಒಬ್ಬ ಖಾಸಗೀ ಮನುಷ್ಯನಿಂದ ವಾರಂಟಿಗನುಗುಣವಾಗಿ ಹಿಡಿಯಲ್ಪಟ್ಟು, ಕಾನೂನಿನವೇರಿಗೆ ಜಾಮಿನಿನಮೇಲೆ ಬಿಡಲ್ಪಡಕೂಡದೇ ಇದ್ದು—ಯಾ—ಜಾಮಿನ್‌ಕೊಡಲಿಕ್ಕೆ ಶಕ್ತಿಯಿಲ್ಲದೆ ಇರುವಾಗ,

ಹಿಡಿಯುವ ಆಫಿಸರನು, ಅಥವಾ ಒಬ್ಬ ಖಾಸಗೀ ಮನುಷ್ಯನಿಂದ ಹಿಡಿಯೋಣವಾಗಿದ್ದರೆ, ಅಂಥಾ ಮನುಷ್ಯನನ್ನ ಯಾವ ಪೋಲಿಸು ಆಫಿಸರನ ಬಳಿಯಲ್ಲಿ ಆತನು ಒಪ್ಪಿಸುತ್ತಾನೆಯೋ ಆ ಪೋಲಿಸು ಆಫಿಸರರು ಅಂಥವನನ್ನು ಝಡ್ತೀಮಾಡಬಹುದು. ಮತ್ತು ಅವನಮೈಮೇಲೆ ಶಿಕ್ಕಿದ ತೊಡುಕೊಳ್ಳುವದಕ್ಕೆ ಆವಶ್ಯಕವಾದ ಉಡುಪು ಅಲ್ಲದೆ ಇತರ ವಸ್ತುಗಳನ್ನ ಭದ್ರವಾದ ಪಹರೆಯಲ್ಲಿ ಇಡಬಹುದು.

52. ಹೆಂಗಸನ್ನು ಝಡ್ತೀಮಾಡಿಸಬೇಕಾಗಿ ಅವಶ್ಯವಾದಾಗೆಲ್ಲಾ; ಮರ್ಯಾದೆಯಲ್ಲಿ ತುಂಬಾ ದೃಷ್ಟಿ ಇಟ್ಟು ಮತ್ತೊಬ್ಬ ಹೆಂಗಸಿನಿಂದ ಝಡ್ತೀ ಮಾಡಿಸತಕ್ಕದ್ದು.

ಹೆಂಗಸರನ್ನು ಝಡ್ತೀಮಾಡುವ ರೀತಿ.

53. ಈ ಕೋಶದಪ್ರಕಾರ ಹಿಡಿಯುವ ಆಫಿಸರಾಗಲೀ—ಯಾ—ಇತರನಾಗಲೀ ಹಿಡಿಯಲ್ಪಟ್ಟ ಮನುಷ್ಯನ ಮೈ ಮೇಲೆ ಇರುವ ಅಪಾಯಕರವಾದ ಯಾವ ಆಯುಧಗಳನ್ನಾದರೂ ಅವನಿಂದ ತೆಗೆದುಕೊಳ್ಳಬಹುದು. ಮತ್ತು ಹಾಗೆ ತೆಕ್ಕೊಳ್ಳೋಣಾದ ಆಯುಧಗಳನ್ನೆಲ್ಲಾ, ಈ ಕೋಶದಪ್ರಕಾರ ಹಿಡಿಯಲ್ಪಟ್ಟ ಮನುಷ್ಯನನ್ನು ಯಾವ ಕೋರ್ಟು—ಯಾ—ಆಫಿಸರ್‌ಮುಂದೆ, ಹಿಡಿದ ಆಫಿಸರ್—ಯಾ—ಮನುಷ್ಯನು ಹಾಜರು ಮಾಡಬೇಕೋ ಆ ಕೋರ್ಟು—ಯಾ—ಆಫಿಸರಿಗೆ ಒಪ್ಪಿಸತಕ್ಕದ್ದು.

ಅಪಾಯಕರವಾದ ಆಯುಧಗಳನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರ.

B.—Arrest without Warrant.

B.—ವಾರಂಟು ಇಲ್ಲದೆ ಹಿಡಿಯುವದು.

54. ಯಾವ ಪೋಲೀಸು ಆಫಿಸರನಾದರೂ, ಮ್ಯಾಜಿಸ್ಟ್ರೇಟಿನ ಹುಕುಂ ಇಲ್ಲದೇನೇ ಮತ್ತು ವಾರಂಟು ಇಲ್ಲದೇನೇ ಹಿಡಿಯಬಹುದು, ಯಾರನ್ನು ಅಂದರೆ:—

ಪೋಲೀಸಿನವರು ವಾರಂಟು ಇಲ್ಲದೆ ಯಾವಾಗ್ಯೆ ಹಿಡಿಯಬಹುದು.

ಮೊದಲನೇ—ವಾರಂಟುಇಲ್ಲದೇನೇ ಹಿಡಿಯಬಹುದಾದ ತಕ್ಸೀರಲ್ಲಿ ಷರೀಕಾಗಿರುವ ಯಾವನೊಬ್ಬ ಮನುಷ್ಯನು—ಯಾ—ಹಾಗೆ ಷರೀಕಾಗಿರುವದಾಗಿ ಯಾರಮೇಲೆ ನ್ಯಾಯವಾದ ಫಿರ್ಯಾದು ಬಂದಿರುತ್ತದೋ—ಯಾ—ನಂಬತಕ್ಕ ಸಮಾಚಾರ ತಲಪಿರುತ್ತದೋ—ಯಾ—ಹಾಗೆ ಆತ ಷರೀಕಾದ್ದಾಗಿ ಯುಕ್ತವಾದ ಗುಮಾನ್ ಇರುತ್ತದೋ, ಅಂಥಾ ಮನುಷ್ಯನನ್ನು;

ಎರಡನೇ—ಯಾವನ ಸ್ವಾಧೀನದಲ್ಲಿ ನ್ಯಾಯವಾದ ಕಾರಣಗಳಿಲ್ಲದೆ ಮನೆಗೆ ಕನ್ನಾ ಹಾಕುವ ಸಾಮಾನುಗಳು ಇವೆಯೋ ಅಂಥಾ ಮನುಷ್ಯನನ್ನು, ಅಂಥಾ ನ್ಯಾಯವಾದ ಕಾರಣ ರುಜು ಮಾಡಬೇಕಾದ ಭಾರ ಅಂಥಾವನಮೇಲೆ ಬಿದ್ದಿರುತ್ತೆ;

ಮೂರನೇ—ಈ ಕೋಶಪ್ರಕಾರ—ಯಾ—ಮೈಸೂರು ಗವರ್ನಮೆಂಟಿನವರ ಹುಕುಮಿನ ಪ್ರಕಾರ ಯಾರ ಬಾಬಿನಲ್ಲಿ ತಕ್ಸೀರುದಾರನಾಗಿ ಇಸ್ತಿಹಾರು ಹುಟ್ಟಿದೆಯೋ ಆ ಮನುಷ್ಯನನ್ನು;

ನಾಲ್ಕನೇ—ಯಾವನ ಸ್ವಾಧೀನದಲ್ಲಿ ಚೋರೀಮಾಲೆಂತ ನ್ಯಾಯವಾಗಿ ಗುಮಾನಾಸ್ಪದವಾದದ್ದೇನಾದರೂ ಶಿಕ್ಕುತ್ತದೋ ಮತ್ತು ಅವನು ಸದರೀ ಸೊತ್ತಿನ ವಿಷಯದಲ್ಲಿ ಒಂದು ತಕ್ಸೀರು ಮಾಡಿದವನೆಂದು ನ್ಯಾಯವಾಗಿ ಗುಮಾನಾಸ್ಪದವಾಗುತ್ತಾನೋ ಆ ಮನುಷ್ಯನನ್ನು; ಮತ್ತು

ಐದನೇ—ಪೋಲಿಸು ಆಫಿಸರನು ತನ್ನ ಉದ್ಯೋಗ ಪ್ರಯುಕ್ತವಾದ ಕೆಲಸ ನಡೆಸುತ್ತಿರುವಾಗ ಆತನನ್ನು ಆತಂಕಪಡಿಸುವ ಮನುಷ್ಯನನ್ನು—ಯಾ—ನ್ಯಾಯವಾದ ಪಹರೆಯಿಂದ ತಪ್ಪಿಸಿಕೊಂಡು ಓಡಿಹೋದ ಮನುಷ್ಯನನ್ನು, ಅಥವಾ, ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನಪಡುವ ಮನುಷ್ಯನನ್ನು.

ದೇಶಗೇಡಿಗನನ್ನೂ ಮಾಮೂಲಾಗಿ ವಾಡಿಕೆ ಕಳ್ಳರುಗಳು ಮುಂತಾದವರನ್ನೂ ಹಿಡಿಯೋಣ.

55. ಪೋಲಿಸು ಸ್ಟೇಷಣ್ ಜಿಮ್ಮೇದಾರನಾದ ಯಾವನೊಬ್ಬ ಆಫಿಸರ್ ಅದೇ ಮೇರಿಗೆ—

(a) ವಾರಂಟಿಲ್ಲದೆ ಹಿಡಿಯತಕ್ಕ ತಕ್ಸೀರನ್ನು ಮಾಡುವ ಯತ್ನದಿಂದ ತನ್ನ ಇರುವಿಕೆಯನ್ನು ಮರೆಪಡಿಸಿಕೊಳ್ಳುವದಕ್ಕೆ ಮುಂಜಾಗ್ರತೆಗಳನ್ನ ಮಾಡುತ್ತಾನೆಂದು ನಂಬಲಿಕ್ಕೆ ಕಾರಣಗಳು ತೋರುವ ಸಂದರ್ಭಗಳಲ್ಲಿ, ಅಂಥಾ ಸ್ಟೇಷಣ್ ಸರಹದ್ದೊಳಗೆ, ಹಾಗೆ ಮರೆ ಮಾಡಿಕೊಳ್ಳಲಿಕ್ಕೆ ಮುಂಜಾಗ್ರತೆಗಳನ್ನು ಮಾಡುವವನೆಂದು ಕಂಡುಬರುವ ಯಾವ ಮನುಷ್ಯನನ್ನಾದರೂ;

(b) ಬಹಿರಂಗವಾದ ಜೀವನಮಾರ್ಗವಿಲ್ಲದೆ ಅಥವಾ ತನ್ನ ವಿದ್ಯಮಾನಗಳನ್ನು ಕುರಿತು ಸಮರ್ಪಕವಾದ ಸಮಾಧಾನ ಹೇಳಲಾರದೆ ಪೋಲೀಸು ಸ್ಟೇಷಣ್ ಸರಹದ್ದುಗಳ ಒಳಗೆ ಇರುವ ಯಾವ ಮನುಷ್ಯನನ್ನಾದರೂ;

(c) ಪ್ರಸಿದ್ಧವಾಗಿ ವಾಡಿಕೆಯಾದ ಚೋರನನ್ನು, ಮನೆಗೆ ಕನ್ನಾ ಹಾಕುವವನನ್ನು, ಕಳ್ಳನು—ಯಾ—ಚೋರೀ ಸೊತ್ತನ್ನು ಚೋರೀ ಸೊತ್ತೆಂತ ತಿಳಿದು ವಾಡಿಕೆಯಾಗಿ ತೆಗದುಕೊಳ್ಳುವವನನ್ನು—ಯಾ—ಪ್ರಸಿದ್ಧವಾಗಿ ಸುಲಿಗೆ ಮಾಡುವಲ್ಲಿ ವಾಡಿಕೆ ಪಟ್ಟವನನ್ನು—ಯಾ—ಸುಲಿಗೇ ಮಾಡೋ ಉದ್ದಿಶ್ಯದಿಂದ ಮನುಷ್ಯರುಗಳನ್ನು ಹಿಂಸೆಮಾಡುತ ವಾಡಿಕೆಯಾಗಿ ಹೆದರಿಸುವವನನ್ನು—ಯಾ—ಹಾಗೆ ಮಾಡಲಿಕ್ಕೆ ಪ್ರಯತ್ನ ಮಾಡುವನನ್ನು; ಹಿಡಿಯಬಹುದು—ಯಾ—ಹಿಡಿಸಬಹುದು.

ಪೋಲೀಸಾಫೀಸರು ವಾರಂಟಿಲ್ಲದೇ ಹಿಡಿಯಲಿಕ್ಕೆ ತನ್ನ ತಾಬೇದಾರಿ ಆಫೀಸರನನ್ನು ಕಳುಹಿಸುವಾಗ ನಡಿಸತಕ್ಕ ಕ್ರಮ.

56. ಪೋಲೀಸು ಸ್ಟೇಷನಿನ ಜಿಮ್ಮೇದಾರನಾದ ಯಾವನೊಬ್ಬ ಆಫೀಸರನು ವಾರಂಟು ಇಲ್ಲದೇನೇ ನ್ಯಾಯವಾಗಿ ತಾನು ಯಾವನೊಬ್ಬನನ್ನು ಹಿಡಿಯಬಹುದಾಗಿ ಇರುವ ಸಂಗತಿಯಲ್ಲಿ ವಾರಂಟು ಇಲ್ಲದೇನೇ (ತನ್ನ ರೂಬರೂ ಅಲ್ಲದೆ ಅನ್ಯಥಾ) ಹಿಡಿಯ ಹೇಳಿ ತನ್ನ ತಾಬೇದಾರೀ ಆಫೀಸರಿಗೆ ವಿಧಿಸುವಾಗ, ಆತನು ಬರಹ ಮೂಲವಾಗಿ ಒಂದು ಹುಕ್ಕುಂ ತಯಾರ್ಮಾಡಿ, ಅದರಲ್ಲಿ ಫಲಾನಾ ಮನುಷ್ಯನನ್ನು ಹಿಡಿಯತಕ್ಕದ್ದೆಂತಲೂ ಹಾಗೆ ಹಿಡಿಯಲಿಕ್ಕೆ ಕಾರಣವಾದ ತಕ್ಸೀರು ಫಲಾನೆದೆಂತಲೂ, ನಮೂದುಮಾಡಿ ಸದರೀ ಪೋಲೀಸು ಆಫೀಸರಿಗೆ ಕೊಡತಕ್ಕದ್ದು.

ಹೆಸರನ್ನೂ ವಾಸಸ್ಥಳವನ್ನೂ ಕೊಡದೆ ನಿರಾಕರಿಸೋಣ.

57. ಯಾವ ತಕ್ಸೀರನ್ನು ಕುರಿತು ವಾರಂಟು ಇಲ್ಲದೇ ಅಸಾಮಿಯನ್ನು ಹಿಡಿಯುವದಕ್ಕೆ ಪೋಲೀಸು ಆಫೀಸರಿಗೆ ಅಧಿಕಾರ ಇಲ್ಲವೋ ಅಂಥಾ ತಕ್ಸೀರು ಒಬ್ಬ ಪೋಲೀಸು ಆಫೀಸರನ ಸಮಕ್ಷಮದಲ್ಲಿ ಯಾವನೊಬ್ಬನು ನಡಿಸಿದರೆ ಅಥವಾ ಅಂಥಾ ತಕ್ಸೀರು ಮಾಡಿದ್ದಾಗಿ ಆಪಾದಿಸಲ್ಪಟ್ಟು ಇದ್ದರೆ, ಮತ್ತು ಅಂಥಾವನು ಪೋಲೀಸು ಆಫೀಸರಿಂದ ಅಪೇಕ್ಷಿಸಲ್ಪಟ್ಟಲ್ಲಿ ತನ್ನ ಹೆಸರನ್ನು, ವಾಸಸ್ಥಾನವನ್ನು, ಹೇಳದೆ ನಿರಾಕರಿಸಿದರೆ; ಅಥವಾ

ಸುಳ್ಳಾದ್ದೆಂತ ಸದರೀ ಪೋಲೀಸು ಆಫೀಸರಿಗೆ ನಂಬಲಿಕ್ಕೆ ಕಾರಣ ಇರುವಂಥಾ ಹೆಸರನ್ನು—ಯಾ—ವಾಸಸ್ಥಾನವನ್ನು ತಿಳಿಸಿದರೆ, ಆ ಮನುಷ್ಯನು ಅಂಥಾ ಪೋಲೀಸಾಫೀಸರಿಂದ ಅಂಥಾ ಮನುಷ್ಯನ ಹೆಸರನ್ನು—ಯಾ—ವಾಸಸ್ಥಾನವನ್ನು ಗೊತ್ತುಮಾಡಿಕೊಳ್ಳುವ ಬಗ್ಯೆ ಹಿಡಿಯಲ್ಪಡಬಹುದು; ಮತ್ತು ಹಿಡಿದ ಇಪ್ಪತ್ನಾಲ್ಕು ಘಂಟೆಗಳೊಳಗಾಗಿ ಅತಿಸಮೀಪವಾದ ಮ್ಯಾಜಿಸ್ಟ್ರೇಟಿಗೆ ರವಾನಿಸಲ್ಪಡತಕ್ಕದ್ದು. ಇದಕ್ಕೆ ಮುಂಚೆಯೇ ಅವನ ನಿಜವಾದ ಹೆಸರು ವಾಸಸ್ಥಳ, ಗೊತ್ತಾದರೆ ರವಾನಿಸಲ್ಪಡತಕ್ಕದ್ದಿಲ್ಲವು. ಇಂಥಾ ಸಂಗತಿಯಲ್ಲಿ ಅವಶ್ಯವಾಗಿದ್ದರೆ ಮ್ಯಾಜಿಸ್ಟ್ರೇಟರ ಮುಂದೆ ಹಾಜರಾಗುವಬಗ್ಯೆ ಪತ್ರ ಬರೆದು ಕೊಟ್ಟಮೇಲೆ ಅವನು ಬಿಡಲ್ಪಡಬಹುದು.

ಬೇರೆ ಅಧಿಕಾರ ಸರಹದ್ದುಗಳಲ್ಲಿ ಖೈದಿಗಳನ್ನು ಅಟ್ಟಿಕೊಂಡು ಹೋಗೋಣ.

58. ಈ ಅಧ್ಯಾಯದ ಪ್ರಕಾರ ಯಾವ ಮನುಷ್ಯನನ್ನಾಗಲೀ ವಾರಂಟಿಲ್ಲದೆ ಹಿಡಿಯುವನಿಮಿತ್ಯ ಅಧಿಕಾರ ಇರುವ ಒಬ್ಬ ಪೋಲೀಸು ಆಫೀಸರ್ ಸದರೀ ಮನುಷ್ಯನನ್ನು, ಮೈಸೂರು ಶೀಮೆಯ ಒಳಗೆ ಯಾವ ಸ್ಥಳಕ್ಕಾದರೂ ಅಟ್ಟಿಕೊಂಡು ಹೋಗಬಹುದು.

ಖಾಸಗೀ ಜನರಿಂದ ಹಿಡಿಯೋಣ.

59. ಯಾವ ಖಾಸಗೀ ಮನುಷ್ಯನಾದರೂ ಸರಿಯೆ, ತನ್ನ ದೃಷ್ಟಿಗೆ ಬೀಳುವ, ಜಾಮೀನಿನಮೇಲೆ ಬಿಡಲಾಗದ ಮತ್ತು ವಾರಂಟಿಲ್ಲದೇನೇ ಹಿಡಿಯಬಹುದಾದ ತಕ್ಸೀರನ್ನು ಮಾಡುವಂಥಾ ಅಥವಾ ತಕ್ಸೀರು ಗಾರನೆಂದು ಇಸ್ತಿಹಾರು ಕೊಡಲ್ಪಟ್ಟ ಯಾವನನ್ನಾದರೂ ಹಿಡಿಯಬಹುದು;

ಹಾಗೆ ಹಿಡಿದರೆ ನಡಿಸತಕ್ಕ ಕ್ರಮ.

ಮತ್ತು ಹಿಡಿಯಲ್ಪಟ್ಟವನನ್ನ ಅನಾವಶ್ಯಕವಾದ ಕಾಲವಿಳಂಬ ಇಲ್ಲದೆ ಒಬ್ಬ ಪೋಲೀಸು ಆಫಿಸರಿಗೆ ಒಪ್ಪಿಸಬೇಕು; ಪೋಲೀಸಾಫೀಸರ್ ಗೈರ್‌ಹಾಜರಾಗಿದ್ದರೆ ಅಂಥಾ ಮನುಷ್ಯನನ್ನ ಅತಿಸಮೀಪದಲ್ಲಿರುವ ಪೋಲೀಸು ಸ್ಟೇಷನಿಗೆ ಕೊಂಡುಹೋಗತಕ್ಕದ್ದು;

ಆ ಮನುಷ್ಯನು 54ನೇ ಪ್ರಕರಣದ ನಿಬಂಧನೆಗಳಿಗೆ ಒಳಪಡುವ ಹಾಗೆ ನಂಬಲಿಕ್ಕೆ ಕಾರಣಗಳಿದ್ದರೆ, ಒಬ್ಬ ಪೋಲೀಸ್ ಆಫಿಸರ್ ಅವನನ್ನ ಪುನಃ ಹಿಡಿಯಬಹುದು.

ಅವನು ವಾರಂಟಿಲ್ಲದೆ ಹಿಡಿಯಕೂಡದ ತಕ್ಸೀರನ್ನು ಮಾಡಿರುತ್ತಾನೆಂಬದಾಗಿ ನಂಬಲಿಕ್ಕೆ ಕಾರಣವಿದ್ದು ಪೋಲೀಸಾಫಿಸರಿಂದ ಕೇಳೋಣಾದಮೇಲೆ ತನ್ನ ಹೆಸರನ್ನು ವಾಸಸ್ಥಳವನ್ನು ತಿಳಿಸದೆ ನಿರಾಕರಿಸುತ್ತಾನಾದರೆ ಅಥವಾ ಸುಳ್ಳಾದ್ದೆಂತ ಸದರೀ ಆಫಿಸರ್ ನಂಬಲಿಕ್ಕೆ ಕಾರಣವಿರುವಂಥಾ ಹೆಸರನ್ನು—ಯಾ—ವಾಸಸ್ಥಾನವನ್ನು ತಿಳಿಸುತ್ತಾನಾದರೆ, ಅವನು 57ನೇ ಪ್ರಕರಣದ ನಿಬಂಧನೆಗಳಿಗನುಗುಣವಾಗಿ ನಡಿಸಲ್ಪಡತಕ್ಕದ್ದು.—ಯಾವ ತಕ್ಸೀರನ್ನಾದರೂ ಮಾಡಿರುತ್ತಾನೆಂದು ನಂಬಲಿಕ್ಕೆ ಕಾರಣವಿಲ್ಲದಿದ್ದರೆ, ಅವನನ್ನು ಕೂಡಲೆ ಬಿಟ್ಟುಬಿಡತಕ್ಕದ್ದು.

ಹಿಡಿಯಲ್ಪಟ್ಟವನನ್ನು ಮ್ಯಾಜಿಸ್ಟ್ರೇಟಿನ ಬಳಿಗಾಗಲೀ ಪೋಲೀಸ್ ಸ್ಟೇಷನ್ ಜಿಮ್ಮೆಯನ್ನುಳ್ಳ ಆಫಿಸರನ ಬಳಿಗಾಗಲೀ ಕೊಂಡು ಹೋಗತಕ್ಕದ್ದು.

60. ವಾರಂಟು ಇಲ್ಲದೇ ಹಿಡಿಯುವ ಪೋಲೀಸು ಆಫೀಸರ್ ಅನಾವಶ್ಯಕವಾದ ಕಾಲವಿಳಂಬವಿಲ್ಲದೆ ಮತ್ತು ಜಾಮೀನ್ನ ವಿಷಯವಾಗಿ ಇದರಲ್ಲಿ ಅಡಗಿರುವ ನಿಬಂಧನೆಗಳಿಗೆ ಒಳಪಟ್ಟು ಮೊಕದ್ದಮೆಯಲ್ಲಿ ಅಧಿಕಾರವುಳ್ಳ ಮ್ಯಾಜಿಸ್ಟ್ರೇಟಿನ ಬಳಿಗಾಗಲೀ ಪೋಲೀಸು ಸ್ಟೇಷನ ಜಿಮ್ಮೇದಾರನಾದ ಆಫಿಸರನ ಬಳಿಗಾಗಲೀ ಹಿಡಿಯಲ್ಪಟ್ಟ ಮನುಷ್ಯನನ್ನು ತೆಗದುಕೊಂಡು ಹೋಗತಕ್ಕದ್ದು—ಯಾ—ಕಳುಹಿಸತಕ್ಕದ್ದು.

ಹಿಡಿಯಲ್ಪಟ್ಟ ಮನುಷ್ಯನನ್ನ ಇಪ್ಪತ್ನಾಲ್ಕು ಘಂಟೆಗಳಿಗಿಂತ ಹೆಚ್ಚು ತಡೆದಿಡಕೂಡದು.

61. ವಾರಂಟಿಲ್ಲದೆ ಹಿಡಿಯಲ್ಪಟ್ಟ ಒಬ್ಬನನ್ನು ಸದರೀ ಮೊಕದ್ದಮೆಯ ಯಾವತ್ತು ಸಂಗತಿಗಳ ಪ್ರಕಾರ ಕಾಣಬರುವ ಯುಕ್ತವಾದ ಕಾಲಕ್ಕಿಂತ ಹೆಚ್ಚಾಗಿ ಯಾವ ಪೋಲೀಸು ಆಫಿಸರನಾದರೂ ಸರಿಯೇ ಪಹರೆಯಲ್ಲಿಡಕೂಡದು. 167ನೇ ಪ್ರಕರಣ ಪ್ರಕಾರ ಒಬ್ಬ ಮ್ಯಾಜಿಸ್ಟ್ರೇಟಿನ ವಿಶೇಷ ಹುಕುಂ ಇಲ್ಲದಿದ್ದರೆ ಸದರೀ ಕಾಲವು ಇಪ್ಪತ್ನಾಲ್ಕು ಘಂಟೆಗಳಿಗಿಂತ ಜಾಸ್ತಿಯಾಗಕೂಡದು. ಈ ಕಾಲದೊಳಗೆ ಹಿಡಿಯೋಣಾದ ಸ್ಥಳದಿಂದ ಮ್ಯಾಜಸ್ಟ್ರೇಟಿನ ಕೋರ್ಟಿಗೆ ಪ್ರಯಾಣಮಾಡಲಿಕ್ಕೆ ಅವಶ್ಯವಾದ ಕಾಲವು ಸೇರುವದಿಲ್ಲ.

ಪೋಲೀಸಿನವರು ದಸ್ತಗಿರಿಗಳನ್ನು ರಿಪೋರ್ಟು ಮಾಡತಕ್ಕದ್ದು.

62. ಪೋಲೀಸು ಸ್ಟೇಷನ್ನುಗಳ ಜಿಮ್ಮೇದಾರಗಳಾದ ಆಫೀಸರುಗಳು ತಮ್ಮ ತಮ್ಮ ಸ್ಟೇಷನ್ನುಗಳ ಸರಹದ್ದುಗಳ ಒಳಗೆ ವಾರಂಟು ಇಲ್ಲದೆ ಹಿಡಿಯೋಣಾದ ಯಾವತ್ತು ಮನುಷ್ಯರ ಮೊಕದ್ದಮೆಗಳನ್ನು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಿಗೆ—ಯಾ—ಅವರು ಹಾಗೆ ನಿರ್ದೇಶಿಸಿದರೆ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟಿಗೆ ರಿಪೋರ್ಟು ಮಾಡತಕ್ಕದ್ದು. ಸದರೀ ಮನುಷ್ಯರು ಜಾಮೀನಿನಮೇಲೆ ಇದ್ದಾಗ್ಯೂ ಅನ್ಯಥಾ ಇದ್ದಾಗ್ಯೂ ಚಿಂತೆಯಿಲ್ಲ.

ಹಿಡಿಯಲ್ಪಟ್ಟವನ ವಿಮೋಚನೆ.

63. ಪೋಲೀಸು ಆಫೀಸರಿಂದ ಹಿಡಿಯಲ್ಪಟ್ಟ ಮನುಷ್ಯನನ್ನು ಅವನ ಸ್ವಂತ ಪತ್ರದ ಮೇಲಾದರೂ—ಯಾ—ಜಾಮೀನಿನ ಮೇಲಾದರೂ—ಯಾ—ಮ್ಯಾಜಿಸ್ಟ್ರೇಟಿನ ವಿಶೇಷ ಹುಕುಮಿನ ಮೇಲಾದರೂ ಶಿವಾಯಿ ಅನ್ಯಥಾ ಬಿಡಕೂಡದು.

ಮೇಜಿಸ್ಟ್ರೇಟಿನ ರೂಬರೂಬ ನಡೆದ ತಕ್ಸೀರು.

64. ಮ್ಯಾಜಿಸ್ಟ್ರೇಟಿನ ಸಮಕ್ಷಮದಲ್ಲಿ ಆತನ ಸ್ಥಳಿಕ ಅಧಿಕಾರ ಸರಹದ್ದುಗಳೊಳಗೆ ಯಾವ ತಕ್ಸೀರಾದರೂ ಮಾಡೋಣಾದರೆ, ಆ ತಕ್ಸೀರುದಾರನನ್ನು ಮ್ಯಾಜಿಸ್ಟ್ರೇಟನು ತಾನೇ ಹಿಡಿಯಬಹುದು. ಅಥವಾ ಹಿಡಿಯಹೇಳಿ ಯಾವ ಮನುಷ್ಯನಿಗಾದರೂ ಹುಕುಂ ಮಾಡಬಹುದು. ಅದರಮೇಲೆ ಜಾಮೀನು ವಿಷಯದಲ್ಲಿ ಇದರಲ್ಲಿ ಅಡಗಿರುವ ನಿಬಂಧನೆಗಳಿಗೆ ಒಳಪಟ್ಟು ತಕ್ಸೀರದಾರನನ್ನು ಪಹರೆಯಲ್ಲಿ ಇಡಬಹುದು.

ಮೇಜಿಸ್ಟ್ರೇಟಿನಿಂದಾಗಲೀ—ಯಾ—ಅವನ ಸಮಕ್ಷಮದಲ್ಲಾಗಲೀ ಹಿಡಿಯೋಣ.

65. ಯಾವ ಒಬ್ಬ ಮನುಷ್ಯನನ್ನು ಹಿಡಿಯುವಬಗ್ಗೆ ಆ ಕಾಲದಲ್ಲಿ ಮತ್ತು ಯಾವಸಂಗತಿಗಳಲ್ಲಿ ತಾನು ವಾರಂಟು ಕೊಡಲಿಕ್ಕೆ ಒಬ್ಬ ಮ್ಯಾಜಿಸ್ಟ್ರೇಟನು ಅರ್ಹನಾಗಿರುತ್ತಾನೋ ಅಂಥಾವನನ್ನು ತನ್ನ ಸ್ಥಳಿಕ ಸರಹದ್ದಿನ ಒಳಗೆ ತನ್ನ ಸಮಕ್ಷಮದಲ್ಲಿ ಯಾವನೊಬ್ಬ ಮ್ಯಾಜಿಸ್ಟ್ರೇಟು ಯಾವಕಾಲದಲ್ಲಾದರೂ ಹಿಡಿಯಬಹುದು ಯಾ—ಹಿಡಿಯುವಂತೆ ಹುಕುಂ ಮಾಡಬಹುದು.

ತಪ್ಪಿಸಿಕೊಂಡಮೇಲೆ ಹಿಂದಟ್ಟಿ ಹಿಡಿಯಲಿಕ್ಕೆ ಅಧಿಕಾರ.

66. ಒಬ್ಬ ಮನುಷ್ಯನು ನ್ಯಾಯವಾದ ಪಹರೆಯಿಂದ ತಪ್ಪಿಸಿಕೊಂಡರೆ ಅಥವಾ ತಪ್ಪಿಸಲ್ಪಟ್ಟರೆ, ಯಾವ ಮನುಷ್ಯನ ಪಹರೆಯಿಂದ ತಪ್ಪಿಸಿಕೊಂಡನೋ ಅಥವಾ ತಪ್ಪಿಸಲ್ಪಟ್ಟನೋ ಆ ಮನುಷ್ಯನು ಮೈಸೂರು ಶೀಮೆಯ ಯಾವ ಸ್ಥಳದಲ್ಲಾದರೂ ಕೂಡಲೇ ಹಿಂದಟ್ಟಿ ಅವನನ್ನು ಹಿಡಿಯಬಹುದು.

47, 48 ಮತ್ತು 49ನೇ ಪ್ರಕರಣಗಳ ನಿಬಂಧನೆಗಳು 66ನೇ ಪ್ರಕರಣ ಪ್ರಕಾರ ಹಿಡಿಯೋಣದಕ್ಕೆ ಲಗಾವಾಗುತ್ತೆ.

67. 47, 48, 49 ಈ ಪ್ರಕರಣಗಳ ನಿಬಂಧನೆಗಳು 66ನೇ ಪ್ರಕರಣ ಪ್ರಕಾರ ಹಿಡಿಯೋಣದಕ್ಕೆ ಲಗಾವಾಗತಕ್ಕದ್ದು. ಸದರೀ ಹಿಡಿಯುವ ಮನುಷ್ಯನು ವಾರಂಟು ಅಮಲ್ ಜಾರೀಮಾಡುವನಲ್ಲದಿದ್ದರೂ ಹಿಡಿಯುವ ಅಧಿಕಾರವುಳ್ಳ ಪೋಲೀಸಾಫೀಸರ್ ಅಲ್ಲದೆ ಇದ್ದಾಗ್ಯೂ ಚಿಂತೆಯಿಲ್ಲ.

CHAPTER VI.—OF PROCESSES TO COMPEL APPEARANCE.

6ನೇ ಅಧ್ಯಾಯ.—ಹಾಜರಾಗಲಿಕ್ಕೆ ಬಲಾತ್ಕರಿಸುವ ಪ್ರೋಸೆಸ್‌ಗಳು.

A.—Summons.

A.—ಸಮ್ಮನುಗಳು.

68. ಈ ಕೋಡಿನ ಪ್ರಕಾರ ಒಂದು ಕೋರ್ಟಿನ ಕಡೆಯಿಂದ ಕೊಡಲ್ಪಡುವ ಪ್ರತಿ ಸಮ್ಮನು ಬರಹದ ಮೂಲವಾಗಿ ದ್ವಿಪ್ರತಿಯಾಗಿರತಕ್ಕದ್ದು. ಮತ್ತು ಅದಕ್ಕೆ ಸದರೀ ಕೋ

ಸಮ್ಮನ್ಸುಗಳ ನಮೂನೆ.

ರ್ಟಿನ ಅಧ್ಯಕ್ಷ ಆಫೀಸರರು ಅಥವಾ ಜೀಫ್ ಕೋರ್ಟಿನವರು ಆಗಿಂದಾಗ್ಯೆ ನಿಬಂಧನೆಗಳ ಮೂಲಕ ನಿರ್ದೇಶಿಸುವ ಇತರ ಆಫೀಸರರ ದಸ್ಕತ್ತು ಮೊಹರ್ ಮಾಡಲ್ಪಡತಕ್ಕದ್ದು.

ಯಾರಿಂದ ಸಮ್ಮನ್ಸು ಸಾದರಾಗತಕ್ಕದ್ದು.

ಅಂಥಾ ಸಮ್ಮನ್ಸು ಒಬ್ಬ ಪೋಲೀಸಾಫೀಸರಿಂದಾಗಲೀ—ಅಥವಾ ಈ ಕೋಶದ ನಿಬಂಧನೆಗಳಿಗನುಸಾರವಾಗಿ ಈ ವಿಷಯವಾಗಿ ಮೈಸೂರು ಗವರ್ನ್ಮೆಂಟಿನವರು ಏರ್ಪಡಿಸಬಹುದಾದ ಕ್ರಮಗಳಿಗೆ ಒಳಪಟ್ಟು, ಅದನ್ನು ಹುಟ್ಟಿಸುವ ಕೋರ್ಟಿನ ಒಬ್ಬ ಆಫೀಸರಿಂದಾಗಲೀ—ಸಾದರಾಗತಕ್ಕದ್ದು.

ಸಮ್ಮನ್ಸ್ ಹ್ಯಾಗೆ ಸಾದರ್ಮಾಡತಕ್ಕದ್ದು.

69. ಯಾರಿಗೆ ಸಮ್ಮನ್ಸ್ ಉಂಟಾಯಿತೋ ಅವನಿಗೆ ಖುದ್ದಾಗಿ ಸಾಧ್ಯವಾದರೆ ಸಮ್ಮನ್ಸನ್ನು ಸಾದರ್ಮಾಡತಕ್ಕದ್ದು. ಸಮ್ಮನ್ಸುಗಳ ನಕಲುಗಳಲ್ಲಿ ಒಂದನ್ನು ಅವನಿಗೆ ಒಪ್ಪಿಸುವದರಿಂದ—ಯಾ—ಕೊಡುವದರಿಂದ ಸಾದರುಮಾಡತಕ್ಕದ್ದು.

ಸಮ್ಮನ್ಸಿನಬಗ್ಯೆ ರಶೀದಿಗೆ ದಸ್ಕತ್ತು ಮಾಡೋಣ.

ಹಾಗೆ ಸಮ್ಮನ್ಸ್ ಯಾರಮೇಲೆ ಸಾದರ್ ಮಾಡೋಣಾಯಿತೋ ಆ ಪ್ರತಿಮನುಷ್ಯನು ಸಮ್ಮನ್ಸು ಸಾದರ್ಮಾಡಿದ ಆಫೀಸರನು ಅಪೇಕ್ಷಿಸಿದ್ದಲ್ಲಿ, ಅದರ ಮತ್ತೊಂದು ಪ್ರತಿ ಹಿಂದಗಡೆ, ಅದಕ್ಕಾಗಿ ಒಂದು ರಶೀದಿಗೆ ದಸ್ಕತ್ತು ಮಾಡತಕ್ಕದ್ದು.

ಸಮ್ಮನ್ಸ್ಪಟ್ಟ ಮನುಷ್ಯನು ಸಿಕ್ಕದಿದ್ದರೆ ಸಾದರ್ಮಾಡುವರೀತಿ.

70. ಸಮ್ಮನ್ಸಾದ ಮನುಷ್ಯನು ತಕ್ಕ ಜಾಗ್ರತೆಗಳು ನಡಿಸಿಯೂ ಸಿಕ್ಕದೆ ಹೋದರೆ, ಅವನ ಕುಟುಂಬದ ಪೈಕಿ ಪ್ರಾಯಸ್ಥನಾದ ನೆಂಟನ ವಶದಲ್ಲಿ, ಅವನಿಗೋಸ್ಕರ ಒಂದು ನಕಲನ್ನು ಇಟ್ಟು ಸಮ್ಮನ್ಸನ್ನು ಸಾದರ್ಮಾಡಬಹುದು ; ಮತ್ತು ಯಾರಲ್ಲಿ ಹಾಗೆ ಸಮ್ಮನ್ಸ್ ಬಿಡೋಣಾಯಿತೋ, ಅವನು ಸಮನ್ಸ್ ಸಾದರ್ಮಾಡಿದ ಮನುಷ್ಯನು ಅಪೇಕ್ಷಿಸಿದ್ದಲ್ಲಿ, ಇನ್ನೊಂದು ಪ್ರತಿಯ ಹಿಂದುಗಡೆ ಅದಕ್ಕಾಗಿ ಒಂದು ರಶೀದಿಗೆ ದಸ್ಕತ್ತು ಮಾಡತಕ್ಕದ್ದು.

ರಶೀದಿ ಸಿಕ್ಕಕೂಡದ ಸಂಗತಿಯಲ್ಲಿಮಾಡತಕ್ಕರೀತಿ.

71. ತಕ್ಕ ಜಾಗ್ರತೆಗಳನ್ನು ನಡಸಿಯೂ, 69 ನೇ ಮತ್ತು 70 ನೇ ಪ್ರಕರಣಗಳಲ್ಲಿ ನಮೂದಿಸಿದ ದಸ್ಕತು ಪಡಕೊಳ್ಳಕಿಕ್ಕೆ ಸಾಧ್ಯವಾಗದೇಹೋದರೆ, ಸಮ್ಮನ್ಸ್ ಸಾದರ್ಮಾಡುವ ಆಫಿಸರ್ ಆ ಸಮ್ಮನ್ಸಿನ ಒಂದು ನಕಲನ್ನು ಸಮ್ಮನ್ಸ್ ಆದಮನುಷ್ಯನು ಸಾಧಾರಣವಾಗಿ ವಾಸಮಾಡುವ ಮನೆಯ—ಯಾ—ಒಕ್ಕಲಿರುವ ಸ್ಥಳದ ಬಹಿರಂಗವಾದ ಭಾಗದಲ್ಲಿ ಹಚ್ಚತಕ್ಕದ್ದು; ಅನಂತರ ಆಸಮ್ಮನ್ಸ್ ಕ್ರಮವಾಗಿ ಸಾದರ್ಮಾಡಲ್ಪಟ್ಟದಾಗಿ ಎಣಿಸತಕ್ಕದ್ದು.

ಸರ್ಕಾರ ನೌಕರೀಲಿ—ಯಾ—ರೈಯಿಲ್ವೆಕಂಪೆನಿಯಲ್ಲಿ ಇರುವವರಮೇಲೆ ಸಾದರ್ಮಾಡೋಣ.

72. ಸಮ್ಮನ್ಸ್ ಆದ ಮನುಷ್ಯನು ಸರಕಾರ್ ನೌಕರಿಯಲ್ಲಿ, ಅಥವಾ, ರೆಯಿಲ್ವೇ ಕಂಪೆನಿಯ ಹಾಲ್ ನೌಕರಿಯಲ್ಲಿ ಇರುತ್ತಾನಾದರೆ, ಸಮ್ಮನ್ಸ್ಮಾಡಿದ ಕೋರ್ಟಿನವರು ಸದರೀ ಸಮ್ಮನ್ಸ್ಪಟ್ಟ ಮನುಷ್ಯನು ನೌಕರಿಮಾಡುವ ಆಫಿಸಿನ ಮುಖ್ಯಸ್ಥನಿಗೆ ಸಮ್ಮನ್ಸನ್ನು ದ್ವಿಪ್ರತಿಯಾಗಿ ವಾಡಿಕೆಯಾಗಿ ರವಾನಿಸತಕ್ಕದ್ದು.

ಸ್ಥಳೀಯ ಸರಹದ್ದಿನಹೊರಗೆ ಸಮ್ಮನ್ಸುಗಳನ್ನು ಸಾದರ್ಮಾಡೋಣ.

73. ತಮ್ಮಿಂದ ಕೊಡೋಣಾದ ಒಂದು ಸಮ್ಮನ್ಸ್, ತಮ್ಮ ಅಧಿಕಾರ ಸರಹದ್ದಿನ ಹೊರಗೆ ಇರುವ ಯಾವ ಸ್ಥಳದಲ್ಲಾದರೂ ಸಾದರ್ ಮಾಡಬೇಕೆಂತ ಒಂದು ಕೋರ್ಟಿನವರು ಅಪೇಕ್ಷಿತರಾಗಿದ್ದರೆ, ಅವರು ಸಮ್ಮನ್ಸ್ಮಾಡಲ್ಪಟ್ಟ ಮನುಷ್ಯನು, ಯಾವ ಮ್ಯಾಜಿಸ್ಟ್ರೇಟಿನ ಸ್ಥಳಿಕ ಅಧಿಕಾರ ಸರಹದ್ದಿನೊಳಗೆ ವಸಿಸುತಲಿರುತ್ತಾನೋ ಅಥವಾ ಇರುತ್ತಾನೋ ಆ ಮ್ಯಾಜಿಸ್ಟ್ರೇಟಿನ ಬಳಿಗೆ, ಸಮ್ಮನ್ಸ್ ದ್ವಿಪ್ರತಿಗಳನ್ನು ಅಲ್ಲಿ ಸಾದರ್ ಮಾಡಲ್ಪಡತಕ್ಕಬಗ್ಯೆ ವಾಡಿಕೆಯಾಗಿ ಕಳುಹಿಸತಕ್ಕದ್ದು.

74. ಒಂದು ಕೋರ್ಟಿನವರು ಕೊಟ್ಟ ಸಮ್ಮನ್ಸ್, ತಮ್ಮ ಸ್ಥಳಿಕ ಅಧಿಕಾರ ಸರಹದ್ದಿನ ಹೊರಗೆ ಸಾದರ್ಪಡಿಸೋಣಾದ ಸಂಗತಿಯಲ್ಲಿ, ಮತ್ತು ಸಮ್ಮನ್ಸ್ ಸಾದರ್ಪಡಿಸಿದ ಆಫೀಸರನು ಮೊಕದ್ದಮೆಯು ಹಿಯರಿಂಗಿನ ಕಾಲದಲ್ಲಿ ಹಾಜರು ಇಲ್ಲದೆ ಇರುವ ಯಾವ ಸಂಗತಿಯಲ್ಲಾದರೂ, ಅಂಥಾ ಸಮ್ಮನು ಸಾದರ್ಪಡಿಸೋಣಾಗಿದೆ ಯೆಂಬದಾಗಿ, ಮ್ಯಾಜಿಸ್ಟ್ರೇಟಿನ ಸಮಕ್ಷಮ ಮಾಡೋಣಾದ್ದಾಗಿ ತೋರುವ, ಒಂದು ಅಫಿಡವಿಟ್, ಮತ್ತು ಸಮ್ಮನ್ಸ್ ಯಾರಿಗೆ ಕೊಡೋಣಾಯಿತೋ—ಯಾ—ಒಪ್ಪಿಸೋಣಾಯಿತೋ ಅಥವಾ ಯಾರೊಂದಿಗೆ ಬಿಡೋಣಾಯಿತೋ, ಅಂಥಾ ಮನುಷ್ಯನಿಂದ (69ನೇ ಪ್ರಕರಣದಲ್ಲಿ—ಯಾ—70ನೇ ಪ್ರಕರಣದಲ್ಲಿ ನಿಬಂಧಿಸೋಣಾದ ರೀತಿಯಲ್ಲಿ) ಇಂಡಾರ್ಸು ಮಾಡಲ್ಪಟ್ಟದ್ದಾಗಿ ತೋರುವ ಸಮ್ಮನಿನ ದ್ವಿಪ್ರತಿಯು, ಸಾಕ್ಷ್ಯವಾಗಿ ಅಂಗೀಕರಿಸಲ್ಪಡತಕ್ಕದ್ದು, ಮತ್ತು ಪ್ರತಿಕೂಲವಾಗಿ ರುಜುವಾತ್ ಆಗುವವರೆಗೆ—ಯಾ—ಅದ ಹೊರ್ತು ಅದರಲ್ಲಿ ತಿಳಿಸಲ್ಪಡೋಣಾದ ಹೇಳಿಕೆಗಳು ಸರಿಯಾದವೆಂತ ಎಣಿಸಲ್ಪಡತಕ್ಕದ್ದು.

ಅಂಥಾ ಮೊಕದ್ದಮೆಗಳಲ್ಲಿ ಸಾದರಾತಿ ಕುರಿತು ಸಾಕ್ಷ್ಯ, ಮತ್ತು ಸಾದರ್ಪಡಿಸಿದ ಆಫೀಸರನು ಹಾಜರು ಇಲ್ಲದಿದ್ದರೆ.

ಈ ಪ್ರಕರಣದಲ್ಲಿ ನಮೂದಿಸಿದ ಅಫಿಡವಿಟ್ ಸಮ್ಮನಿನ ದ್ವಿಪ್ರತಿಗೆ ಅಂಟಿಸಲ್ಪಟ್ಟು ಸದರೀ ಕೋರ್ಟಿಗೆ ತಿರುಗಿ ರವಾನಿಸಲ್ಪಡಬಹುದು.

B.—Warrant of Arrest.

B.—ಹಿಡಿಯುವ ವಾರಂಟು.

75. ಕೋರ್ಟಿನವರಿಂದ ಈ ಕೋಡ್ ಪ್ರಕಾರ ಕೊಡೋಣಾದ ಪ್ರತಿ ಒಂದು ಹಿಡಿಯುವ ವಾರಂಟು ಬರಹ ಮೂಲಕವಾಗಿ ಇದ್ದು, ಅಧ್ಯಕ್ಷ ಆಫೀಸರನ ದಸ್ಕತು ಮಾಡಲ್ಪಟ್ಟು, ಅಥವಾ, ಮ್ಯಾಜಿಸ್ಟ್ರೇಟು ಬೆಂಚಿನವರ ಸಂಗತಿಯಲ್ಲಿ, ಆ ಬೆಂಚಿನ ಯಾವ ನೊಬ್ಬ ಮೆಂಬರಿನ ದಸ್ಕತು ಇರತಕ್ಕದ್ದು; ಮತ್ತು ಸದರೀ ಕೋರ್ಟಿನ ಮೋಹರು ಅದಕ್ಕೆ ಇರತಕ್ಕದ್ದು.

ಹಿಡಿಯುವ ವಾರಂಟಿನ ನಮೂನೆ.

ಅಂಥಾ ಪ್ರತಿ ಒಂದು ವಾರಂಟು, ಜಾರೀ ಯಾಗುವವರೆಗೂ, ಅಥವಾ ವಾರಂಟನ್ನು ಕೊಟ್ಟ ಕೋರ್ಟಿನವರು ರದ್ದು ಪಡಿಸುವವರೆಗೂ, ಊರ್ಜಿತವಾಗಿರತಕ್ಕದ್ದು.

ಹಿಡಿಯುವ ವಾರಂಟು ನೆಲೆಯಾಗಿರುವಿಕೆ.

76. ಯಾವನೊಬ್ಬ ಮನುಷ್ಯನನ್ನಾದರೂ ಹಿಡಿಯುವಬಗ್ಯೆ ವಾರಂಟು ಕೊಡುವ ಯಾವದೊಂದು ಕೋರ್ಟಿನವರು, ತಮಗೆ ಯುಕ್ತ ತೋರಿದರೆ, ವಾರಂಟಿನ ಮೇಲೆ ಇಂಡಾರ್ಸು ಮಾಡುವದರ ದ್ವಾರಾ, ಅಂಥಾ ಮನುಷ್ಯನು ಕೋರ್ಟಿನವರ ಮುಂದೆ ಫಲಾನಾ ಕಾಲದಲ್ಲಿ—ವ—ಅನಂತರ ಕೋರ್ಟಿನವರು ಅನ್ಯಥಾ ಅಪ್ಪಣೆ ಕೊಡುವವರೆಗೆ, ಹಾಜರು ಇರುವದಕ್ಕೆ, ಸಾಕಾದ ಜಾಮೀನುದಾರರ ಸಮೇತ ಪತ್ರ ಬರಕೊಟ್ಟಲ್ಲಿ, ಯಾರ ಹೆಸರಿಗೆ ವಾರಂಟಿಗೆ ವಿಲಾಸಾ ಹಾಕೋಣಾಗಿದೆಯೋ ಆ ಆಫಿಸರನು ಅಂಥಾ ಜಾಮೀನನ್ನು ತಕ್ಕೊಂಡು ಅಂಥಾ ಮನುಷ್ಯನನ್ನು ಪಹರೆಯಿಂದ ಬಿಟ್ಟು ಬಿಡತಕ್ಕದ್ದೆಂತ ವಿಧಿಸಬಹುದು.

ಜಾಮೀನು ತೆಗದುಕೊಳ್ಳತಕ್ಕದ್ದೆಂದು ಕೋರ್ಟಿನವರು ವಿಧಿಸಬಹುದು.

ಆ ಇಂಡಾರ್ಸುಮೆಂಟಿನಲ್ಲಿ (a) ಜಾಮೀನುದಾರರ ಸಂಖ್ಯೆ, (b) ಅವರು ಮತ್ತು ಯಾರನ್ನು ಹಿಡಿಯುವ ಬಗ್ಯೆ ವಾರಂಟು ಉಂಟಾಯಿತೋ ಆ ಮನುಷ್ಯನು, ಒಬ್ಬೊಬ್ಬರು ಎಷ್ಟು ಮೊಬಲಗಿಗೆ ಬದ್ಧಪಡಿಸಲ್ಪಡಬೇಕು, (c) ಕೋರ್ಟು ಮುಂದೆ ಅತ ಯಾವ ಕಾಲದಲ್ಲಿ ಹಾಜರಾಗಬೇಕೆಂಬದನ್ನು ಕೂಡಾ ನಮೂದಿಸತಕ್ಕದ್ದು.

ಈ ಪ್ರಕರಣದ ಪ್ರಕಾರ ಜಾಮೀನು ಪಡಕೊಳ್ಳೋಣಾದಾಗ, ವಾರಂಟು ಯಾರ ವಿಲಾಸಕ್ಕೆ ಹಾಕೋಣಾಯಿತೋ ಆ ಆಫೀಸರನು ಪತ್ರವನ್ನು ಕೋರ್ಟಿಗೆ ರವಾನಿಸತಕ್ಕದ್ದು.

ಮುಚ್ಚಳಿಕೆಗಳು ರವಾನಿಸಲ್ಪಡತಕ್ಕದ್ದು.

77. ಹಿಡಿಯುವ ವಾರಂಟು ಪಾಡಿಕೆಯಾಗಿ ಒಬ್ಬ—ಯಾ—ಹೆಚ್ಚು ಮಂದಿ ಪೋಲಿಸು ಆಫೀಸರಿಗೆ ವಿಲಾಸ ಹಾಕಲ್ಪಟ್ಟು ಹುಕುಂ ಮಾಡಿಸತಕ್ಕದ್ದು, ಪರಂತು ವಾರಂಟಿನ ಜಾರೀ ತಕ್ಷಣದಲ್ಲಿ ಮಾಡಿಸಬೇಕಾಗಿಇದ್ದು ಆಗಲೇ ಪೋಲಿಸು ಆಫೀಸರ್ ಒದಗದೇ ಇರುವ ಸಂಗತಿಯಲ್ಲಿ, ಅಂಥಾ ವಾರಂಟನ್ನು ಕೊಡುವ ಇತರ ಯಾವದೊಂದು ಕೋರ್ಟಿನವರು, ಅದನ್ನು ಬೇರೆ ಯಾವನೊಬ್ಬ ಮನುಷ್ಯನಿಗೆ—ಯಾ—ಮನುಷ್ಯರಿಗೆ ಕೊಟ್ಟು ಹುಕ್ಕುಂ ಮಾಡಬಹುದು; ಮತ್ತು ಅಂಥಾ ಮನುಷ್ಯ—ಯಾ—ಮನುಷ್ಯರು ಅದರ ಜಾರೀ ನಡಿಸತಕ್ಕದ್ದು.

ವಾರಂಟನ್ನು ಯಾರಿಗೆ ಕಳುಹಿಸತಕ್ಕದ್ದು.

ಒಬ್ಬನಿಗಿಂತ ಹೆಚ್ಚು ಆಫಿಸರಿಗೆ—ಯಾ—ಜನಗಳಿಗೆ ಒಂದು ವಾರಂಟು ವಿಲಾಸಾ ಹಾಕಲ್ಪಟ್ಟು ಹುಕುಂ ಮಾಡೋಣಾದಾಗ, ಅವರೆಲ್ಲಾ, ಅಥವಾ ಅವರ ಪೈಕಿ ಒಬ್ಬ—ಯಾ—ಹೆಚ್ಚು ಮಂದಿಯು, ಅದರ ಜಾರೀಯನ್ನು ನಡಿಸಬಹುದು.

ಹೆಚ್ಚು ಮಂದಿಗೆ ವಾರಂಟು ಜಾರೀಮಾಡಲು ಕೊಟ್ಟಾಗ.

78. ತಪ್ಪಿಸಿಕೊಂಡು ಓಡಿಹೋದ ತಪ್ಪಿತಸ್ತನನ್ನಾಗಲಿ, ಇಸ್ತಿಹಾರು ಕೊಡಲ್ಪಟ್ಟ ತಕ್ಸೀರುದಾರನನ್ನಾಗಲೀ, ಅಥವಾ ಜಾಮೀನಿನಮೇಲೆ ಬಿಡಕೂಡದ ತಕ್ಸೀರಿನ ಬಾಬತು ಆಪಾದನೆಪಟ್ಟು, ಹಿಂಬಾಲಿಸಿ ಬರುವವರಿಂದ ತಪ್ಪಿಸಿ ಕೊಂಡವನನ್ನಾಗಲೀ, ಹಿಡಿಯುವದಕ್ಕೆ, ತಮ್ಮ ಡಿಸ್ಟ್ರಿಕ್ಟಿನ—ಯಾ—ಸಬ್ ಡಿವಿಜನಿನ ಒಳಗೆ ಜಮೀನ್ದಾರ್ ಹಿಡುವಳೀದಾರರಿಗೆ, ಒಕ್ಕಲುಗಳಿಗೆ—ಯಾ—ಜಮೀನ್ದಾರ್ ಮ್ಯಾನೇಜರಿಗೆ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಅಥವಾ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಒಂದು ವಾರಂಟನ್ನು ವಿಲಾಸ ಹಾಕಿ ಹುಕುಂ ಮಾಡಬಹುದು.

ಜಮೀನ್ದಾರ್ ಹಿಡುವಳೀದಾರರು ಮುಂತಾದವರಿಗೆ ವಾರಂಟನ್ನು ಕಳುಹಿಸಬಹುದು.

ಅಂಥಾ ಜಮೀನ್ದಾರ್ ಹಿಡುವಳೀದಾರರು, ಒಕ್ಕಲು ಅಥವಾ ಭೂಮಿ ಮ್ಯಾನೇಜರರು ಆ ವಾರಂಟು ತಲಪಿದ್ದಕ್ಕಾಗಿ ಬರಹ ಮೂಲಕ ರಶೀದಿಯ ದ್ವಾರ ಅಂಗೀಕರಿಸತಕ್ಕದ್ದು, ಮತ್ತು ಯಾರನ್ನು ಹಿಡಿಯುವದಕ್ಕೆ ಅದು ಹುಟ್ಟಿತೋ ಆ ಮನುಷ್ಯನು ತನ್ನ ಜಮೀನಿನಲ್ಲಿ—ಯಾ—ತನ್ನ ಜಿಮ್ಮೆಯಲ್ಲಿ ಇರತಕ್ಕ ಕಂದಾಯದ ಜಮೀನಿನಲ್ಲಿ, ಯಾ—ಭೂಮಿಯಲ್ಲಿ ಪ್ರವೇಶಿಸಿದರೆ,—ಯಾ—ಅಲ್ಲಿ ಇದ್ದರೆ, ಅದನ್ನು ಜಾರೀ ಮಾಡತಕ್ಕದ್ದು.

ಯಾರಮೇಲೆ ವಾರಂಟು ಹುಟ್ಟಿತೋ ಆ ಮನುಷ್ಯನು ಹಿಡಿಯಲ್ಪಟ್ಟರೆ, ವಾರಂಟು ಸಮೇತ ಅವನನ್ನು ಅತಿ ಸಮೀಪದಲ್ಲಿರುವ ಪೋಲಿಸು ಆಫೀಸರಿಗೆ ಒಪ್ಪಿಸಿ ಬಿಡತಕ್ಕದ್ದು. 76ನೇ ಪ್ರಕರಣದ ಮೇರಿಗೆ ಜಾಮೀನ್ ತೆಕ್ಕೊಳ್ಳದೆ ಇರುವ ಸಂಗತಿಯಲ್ಲಿ ಅಲ್ಲದೆ, ಇತರ ಸಂಗತಿಯಲ್ಲಿ ಸದರೀ ಪೋಲಿಸು ಆಫಿಸರ್ ಆ ಮೊಕದ್ದಮೆಯಲ್ಲಿ ಅಧಿಕಾರವುಳ್ಳ ಮ್ಯಾಜಿಸ್ಟ್ರೇಟಿನ ಒಳಗೆ ಅವನನ್ನು ಕಳುಹಿಸತಕ್ಕದ್ದು.

79. ಯಾವನೊಬ್ಬ ಪೋಲಿಸು ಆಫೀಸರಿನ ಹೆಸರಿಗೆ ವಿಲಾಸಾ ಹಾಕೋಣಾದ ವಾರಂಟನ್ನು ಯಾರ ಹೆಸರಿಗೆ ವಾರಂಟಿಗೆ ವಿಲಾಸಾ ಹಾಕೋಣಾಯಿತೋ—ಯಾ—ಇಂಡಾರ್ಸ್ ಮಾಡಲ್ಪಟ್ಟಿತೋ, ಆ ಆಫೀಸರು ಮತ್ತೊಂದು ಪೋಲಿಸ್ ಆಫೀಸರರ ಹೆಸರಿಗೆ ಅದನ್ನು ವಿಲಾಸಾ ಹಾಕಿ ವಾರಂಟಿನ ಮೇಲೆ ಇಂಡಾರ್ಸು ಮಾಡಿದ ಪಕ್ಷದಲ್ಲಿ ಅದನ್ನು ಆತನು ಜಾರೀ ಮಾಡಬಹುದು.

ಪೋಲಿಸು ಆಫೀಸರಿಗೆ ವಿಲಾಸಾ ಹಾಕೋಣಾದ ವಾರಂಟು.

80. ಹಿಡಿಯುವದರ ಬಾಬತು ವಾರಂಟನ್ನು ಜಾರೀ ಮಾಡುವ ಪೋಲಿಸು ಆಫಿಸರ್—ಯಾ—ಇತರ ಮನುಷ್ಯನು ತಾನು ಹಿಡಿಯಬೇಕಾದ ಮನುಷ್ಯನಿಗೆ, ವಾರಂಟಿನ ಸಾರಾಂಶವನ್ನು ತಿಳಿಸತಕ್ಕದ್ದು, ಮತ್ತು, ವಾರಂಟು ತೋರಿಸುವದಕ್ಕೆ ಅಪೇಕ್ಷಿಸಿದರೆ, ಆ ಮನುಷ್ಯನಿಗೆ ವಾರಂಟು ತೋರಿಸತಕ್ಕದ್ದು.

ವಾರಂಟಿನ ಸಾರಾಂಶದ ಪ್ರಕಟಣೆ.

81. ಹಿಡಿಯುವದರ ಬಾಬತು, ವಾರಂಟನ್ನು ಜಾರೀ ಮಾಡುವ ಪೋಲಿಸು ಆಫೀಸರ್—ಯಾ—ಇತರ ಮನುಷ್ಯನು (ಜಾಮೀನ್ ವಿಷಯದಲ್ಲಿ 76ನೇ ಪ್ರಕರಣದ ನಿಬಂಧನೆಗಳಿಗೆ ಒಳಪಟ್ಟು) ಹಿಡಿಯಲ್ಪಟ್ಟ ಮನುಷ್ಯನು ಯಾರ ಮುಂದೆ ಕಾನೂನು ಪ್ರಕಾರ ಹಾಜರು ಪಡಿಸಬೇಕೋ ಆ ಕೋರ್ಟಿನ ಮುಂದೆ, ಅನಾವಶ್ಯಕವಾದ ಕಾಲವಿಳಂಬವಿಲ್ಲದೆ ಅವನನ್ನು ಹಾಜರು ಪಡಿಸತಕ್ಕದ್ದು.

ಹಿಡಿಯೋಣಾದ ಮನುಷ್ಯನನ್ನು ಕಾಲ ವಿಳಂಬವಿಲ್ಲದೆ ಕೋರ್ಟಿನ ಮುಂದೆ ಹಾಜರ್ ಮಾಡತಕ್ಕದ್ದು.

ವಾರಂಟನ್ನು ಯಲ್ಲಿ ಜಾರೀ ಮಾಡಬಹುದು.

82. ಹಿಡಿಯುವದರ ಬಾಬತು ಒಂದು ವಾರಂಟು ಮೈಸೂರು ಶೀಮೆಯಲ್ಲಿ ಯಾವ ಸ್ಥಳದಲ್ಲಾದರೂ ಜಾರೀ ಮಾಡಬಹುದು.

ಅಧಿಕಾರ ಸರಹದ್ದಿನ ಹೊರಗೆ ಜಾರೀ ಮಾಡುವಬಗ್ಗೆ ಮ್ಯಾಜಿಸ್ಟ್ರೇಟಿಗೆ ಕಳುಹಿಸೋಣಾದ ವಾರಂಟು.

83. ಒಂದು ವಾರಂಟನ್ನು ಕೊಟ್ಟ, ಕೋರ್ಟಿನವರ ಅಧಿಕಾರ ಸರಹದ್ದಿನ ಹೊರಗೆ ಜಾರೀ ಮಾಡಬೇಕಾಗಿ ಇದ್ದಾಗ, ಅಂಥಾ ಕೋರ್ಟಿನವರು, ಅದನ್ನು ಒಬ್ಬ ಪೋಲಿಸು ಆಫೀಸರನ ವಿಲಾಸ ಹಾಕುವದಕ್ಕೆ ಬದಲಾಗಿ, ಆ ವಾರಂಟು ಯಾವ ಮ್ಯಾಜಿಸ್ಟ್ರೇಟಿನ ಅಧಿಕಾರ ಸರಹದ್ದಿನೊಳಗೆ ಜಾರೀ ಮಾಡಬೇಕಾಗಿ ಇದೆಯೋ ಆತಗೆ ಅಂಚೆಯ ದ್ವಾರಾ—ಯಾ—ಅನ್ಯಥಾ ಅದನ್ನು ಕಳುಹಿಸ ಬಹುದು.

ಅಂಥಾ ವಾರಂಟು ಯಾವ ಮ್ಯಾಜಿಸ್ಟ್ರೇಟಿಗೆ ಹಾಗೆ ಕಳುಹಿಸೋಣಾಯಿತೋ ಆತನು ತನ್ನ ಹೆಸರನ್ನು ಅದರ ಮೇಲೆ ಇಂಡಾರ್ಸು ಮಾಡತಕ್ಕದ್ದು, ಮತ್ತು, ಸಾಧ್ಯವಾದರೆ, ತನ್ನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಅದನ್ನು ಜಾರೀ ಮಾಡಿಸತಕ್ಕದ್ದು.

ಅಧಿಕಾರ ಸರಹದ್ದಿನ ಹೊರಗೆ ಜಾರಿಯ ಬಗ್ಗೆ ಪೋಲಿಸು ಆಫಿಸರನ ವಿಲಾಸ ಹಾಕೋಣಾದ ವಾರಂಟು.

84. ಪೋಲಿಸು ಆಫಿಸರನಿಗೆ ವಿಲಾಸ ಹಾಕೋಣಾದ ಒಂದು ವಾರಂಟು, ಅದನ್ನು ಕೊಡುವ ಕೋರ್ಟಿನವರ ಅಧಿಕಾರ ಸರಹದ್ದಿನ ಹೊರಗೆ ಜಾರೀ ಮಾಡಬೇಕಾಗಿ ಇದ್ದರೆ, ಆತನು ಅದನ್ನು ಯಾರ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಜಾರೀ ಮಾಡಬೇಕಾಗಿದೆಯೋ ಆ ಮ್ಯಾಜಿಸ್ಟ್ರೇಟಿನ ಬಳಿಯಲ್ಲಾಗಲಿ, ಅಥವಾ ಸ್ಟೇಷನಿನ ಜಿಮ್ಮೇದಾರನಾದ ಆಫೀಸರನ ಹುದ್ದೆಗಿಂತ ಕಮ್ಮೀ ದರ್ಜೆ ಇಲ್ಲದವನಾದ ಪೋಲಿಸು ಆಫೀಸರನ ಬಳಿಯಲ್ಲಾಗಲಿ, ಇಂಡಾರ್ಸು ಮಾಡಿಸತಕ್ಕಬಗ್ಗೆ ವಾಡಿಕೆಯಾಗಿ ತೆಗದು ಕೊಂಡು ಹೋಗತಕ್ಕದ್ದು.

ಅಂಥಾ ಮ್ಯಾಜಿಸ್ಟ್ರೇಟ—ಯಾ—ಪೋಲೀಸ್ ಆಫೀಸರನು ತನ್ನ ಹೆಸರನ್ನು ಅದರ ಮೇಲೆ ಇಂಡಾರ್ಸ್ ಮಾಡತಕ್ಕದ್ದು; ಮತ್ತು ಆ ವಾರಂಟು ಯಾರ ಹೆಸರಿಗೆ ವಿಲಾಸ ಹಾಕೋಣಾಯಿತೋ ಅವನಿಗೆ ಅಂಥಾ ಸರಹದ್ದಿನ ಒಳಗೆ ಜಾರೀ ಮಾಡಲಿಕ್ಕೆ ಸದರೀ ಇಂಡಾರ್ಸುಮೆಂಟು ಸಾಕಾದ ಅಧಿಕಾರವಾಗಿರತಕ್ಕದ್ದು, ಮತ್ತು ಸ್ಥಳೀಯ ಪೋಲಿಸ್‌ನವರು, ಅಂಥಾ ಆಫೀಸರನು ಅಪೇಕ್ಷಿಸಿದಲ್ಲಿ, ವಾರಂಟು ಜಾರೀ ಮಾಡುವಬಗ್ಗೆ ಆತನಿಗೆ ಸಹಾಯ ಮಾಡತಕ್ಕದ್ದು.

ಯಾರ ಸ್ಥಳೀಯ ಅಧಿಕಾರ ಸರಹದ್ದಿನ ಒಳಗೆ ಒಂದು ವಾರಂಟು ಜಾರೀ ಮಾಡಬೇಕೋ ಅಂಥಾ ಮ್ಯಾಜಿಸ್ಟ್ರೇಟಿನ ಅಥವಾ ಪೋಲಿಸು ಆಫೀಸರನ ಇಂಡಾರ್ಸುಮೆಂಟ ಪಡಕೊಳ್ಳತಕ್ಕಬಗ್ಗೆ ಉಂಟಾಗ ಬಹುದಾದ ಕಾಲ ವಿಳಂಬ ಸಲವಾಗಿ, ಅಂಥಾ ಜಾರೀಯನ್ನು ಮಾಡುವದಕ್ಕೆ ತಡೆಯಾಗುವದೆಂದು, ನಂಬುವದಕ್ಕೆ ಸಬಬ್ ಇದ್ದರೆ, ಯಾರ ವಿಲಾಸಕ್ಕೆ ಆ ವಾರಂಟು ಕೊಡೋಣಾಯಿತೋ—ಆ ಪೋಲಿಸು ಆಫೀಸರನು—ಅಂಥಾ ಇಂಡಾರ್ಸ್‌ಮೆಂಟ್ ಇಲ್ಲದೇನೇ—ಸದರೀ ವಾರಂಟನ್ನು ಕೊಟ್ಟ ಮ್ಯಾಜಿಸ್ಟ್ರೇಟಿನ ಸ್ಥಳೀಯ ಸರಹದ್ದಿನ ಹೊರಗೆ ಯಾವ ಸ್ಥಳದಲ್ಲಾದರೂ ಅದನ್ನು ಜಾರೀ ಮಾಡಬಹುದು.

ಯಾರಮೇಲೆ ವಾರಂಟು ಹುಟ್ಟಿತೋ ಆ ಮನುಷ್ಯನನ್ನು ಹಿಡಿದ ಮೇಲೆ ನಡಿಸತಕ್ಕ ಕ್ರಮ.

85. ಹಿಡಿಯುವ ಬಾಬತು ಒಂದು ವಾರಂಟು, ಅದು ಹುಟ್ಟಿದ ಡಿಸ್ಟ್ರಿಕ್ಟಿನ ಹೊರಗೆ ಜಾರೀ ಮಾಡೋಣಾದಾಗ, ಹಿಡಿಯಲ್ಪಟ್ಟ ಮನುಷ್ಯನನ್ನು—ವಾರಂಟು ಕೊಟ್ಟ ಮ್ಯಾಜಿಸ್ಟ್ರೇಟನು ಹಿಡಿದ ಸ್ಥಳದಿಂದ ಇಪ್ಪತ್ತು ಮೈಲಿಗಳೊಳಗೆ ಇದ್ದರೆ, ಅಥವಾ ಯಾವ ಮ್ಯಾಜಿಸ್ಟ್ರೇಟಿನ ಸ್ಥಳೀಯ ಸರಹದ್ದಿನ ಒಳಗೆ ಹಿಡಿಯೋಣಾಯಿತೋ—ಅವರಿಗಿಂತ—ವಾರಂಟು ಕೊಟ್ಟ ಕೋರ್ಟಿನವರು ಸಮೀಪಯಿದ್ದ ಸಂಗತಿಯಲ್ಲಿ ಅಲ್ಲದೆ, ಅಥವಾ 76ನೇ ಪ್ರಕರಣದ ಪ್ರಕಾರ ಜಾಮೀನ್ ತೆಗದುಕೊಂಡ ಸಂಗತಿಯಲ್ಲಿ ಅಲ್ಲದೆ, ಇತರ ಸಂಗತಿಯಲ್ಲಿ ಅಂಥಾ ಮ್ಯಾಜಿಸ್ಟ್ರೇಟ ಬಳಿಗೆ ತೆಗದು ಕೊಂಡು ಹೋಗತಕ್ಕದ್ದು.

86. ಅಂಥಾ ಮ್ಯಾಜಿಸ್ಟ್ರೇಟು, ಸದರೀ ಹಿಡಿಯಲ್ಪಟ್ಟವನು ವಾರಂಟು ಕೊಟ್ಟ ಮ್ಯಾಜಿಸ್ಟ್ರೇಟಿನಿಂದ ಉದ್ದೇಶಿಸಲ್ಪಟ್ಟವನೇ ಯೆಂದು ತೋರಿದರೆ, ವಾರಂಟು ಕೊಟ್ಟ ಮ್ಯಾಜಿಸ್ಟ್ರೇಟಿನ ಬಳಿಗೆ ಆವನನ್ನ ಪಹರೇ ವಶದಲ್ಲಿ ಕಳುಹಿಸತಕ್ಕದ್ದೆಂತ ಅಪ್ಪಣೆ ಕೊಡತಕ್ಕದ್ದು: ಪರಂತು ಜಾಮೀನಿನಮೇಲೆ ಬಿಡಬಹುದಾದ ತಕ್ಸೀರಾದರೆ, ಮತ್ತು ಅಂಥಾ ಮನುಷ್ಯನು ಸದರೀ ಮ್ಯಾಜಿಸ್ಟ್ರೇಟರಿಗೆ ಸಮಾಧಾನಕರವಾದ ಜಾಮೀನ್ ಕೊಡಲಿಕ್ಕೆ ಸಿದ್ಧವಾಗಿ ಇರಾದೆಯುಳ್ಳವನಾಗಿದ್ದರೆ, ಅಥವಾ ವಾರಂಟಿನಲ್ಲಿ 76ನೇ ಪ್ರಕರಣದ ಪ್ರಕಾರ ಇಂಡಾರ್ಸು ಮಾಡಲ್ಪಟ್ಟು ಅಂಥಾ ಇಂಡಾರ್ಸುಮೆಂಟಿನಿಂದ ತೋರಿಬರುವ ಮೇರಿಗೆ ಜಾಮೀನ್ ಕೊಡುವದಕ್ಕೆ ಆ ಮನುಷ್ಯನು ಸಿದ್ಧವಾಗಿ ಇರಾದೆಯುಳ್ಳವನಾಗಿದ್ದರೆ, ಅಂಥಾ ಮ್ಯಾಜಿಸ್ಟ್ರೇಟು ಸಂಗತ್ಯಾನುಸಾರವಾಗಿ, ಅಂಥಾ ಜಾಮೀನ್—ಯಾ—ಹೊಣೆಯನ್ನ ತಕ್ಕೊಂಡು, ಸದರೀ ಪತ್ರವನ್ನು ವಾರಂಟು ಕೊಟ್ಟ ಕೋರ್ಟಿನವರ ಬಳಿಗೆ ಕಳುಹಿಸತಕ್ಕದ್ದು.

ಹಿಡಿಯಲ್ಪಟ್ಟ ಮನುಷ್ಯನು ಮ್ಯಾಜಿಸ್ಟ್ರೇಟಿನ ಮುಂದೆ ತರಲ್ಪಟ್ಟಾಗ ಆತನು ನಡಿಸತಕ್ಕ ಕ್ರಮ.

76ನೇ ಪ್ರಕರಣ ಪ್ರಕಾರ ಜಾಮೀನ್ ತೆಕ್ಕೊಳ್ಳುವದಕ್ಕೆ ಪೋಲಿಸು ಆಫೀಸರನನ್ನ ಅತಂಕಿಸುವಂಥಾದ್ದೇನೂ ಈ ಪ್ರಕರಣದಲ್ಲಿ ಉಂಟೆಂತ ಎಣಿಸಕೂಡದು.

C.—Proclamation and Attachment.

C.—ಇಸ್ತಿಹಾರು—ವ—ಜಪ್ತಿ.

87. ಯಾವ ಮನುಷ್ಯನಮೇಲೆ ವಾರಂಟು ಕೊಟ್ಟಿರುತ್ತದೋ, ಅಂಥಾ ಯಾವನೊಬ್ಬ ಮನುಷ್ಯನು ಅಂಥಾ ವಾರಂಟಿನ ಜಾರೀ ಮಾಡಲ್ಪಡದ ಹಾಗೆ ತಪ್ಪಿಸಿಕೊಂಡಿರುವದಾಗಿ—ಯಾ—ಮರೆಪಡಿಸಿಕೊಳ್ಳುವದಾಗಿ ಯಾವದೊಂದು ಕೋರ್ಟಿನವರು (ಸಾಕ್ಷ್ಯ ತೆಕ್ಕೊಂಡು ಆಗಲೀ—ಯಾ—ತೆಕ್ಕೊಳ್ಳದೇನೇ ಆಗಲೀ) ನಂಬಲಿಕ್ಕೆ ಸಬಬು ಇದ್ದರೆ, ಅಂಥಾ ಕೋರ್ಟಿನವರು, ಆತನು, ಫಲಾನಾ ಸ್ಥಳದಲ್ಲಿ ಮತ್ತು ಅಂಥಾ ಇಸ್ತಿಹಾರು ಪ್ರಕಟಿಸಲ್ಪಟ್ಟ ತಾರೀಖು ಮೊದಲ್ಗೊಂಡು ಮೂವತ್ತು ದಿನಗಳಿಗೆ ಕಮ್ಮಿ ಇಲ್ಲದೆ ಗೊತ್ತು ಮಾಡಿದ ಒಂದು ವಾಯಿದೆಯೊಳಗೆ ಹಾಜರಾಗತಕ್ಕದ್ದೆಂತ ವಿಧಿಸಿ ಒಂದು ಬರಹ ಮೂಲಕವಾದ ಇಸ್ತಿಹಾರನ್ನು ಕೊಡಬಹುದು.

ಸಿಕ್ಕದೆ ಗೈರು ಹಾಜರಾದ ಅಸಾಮಿಗೆ ಇಸ್ತಿಹಾರ್.

ಸದರೀ ಇಸ್ತಿಹಾರ್ ಈ ಕೆಳಗೆ ಕಾಣಿಸಿದ ಮೇರಿಗೆ ಪ್ರಕಟಿಸಲ್ಪಡತಕ್ಕದ್ದು :—

(a) ಅದನ್ನು ಆ ಮನುಷ್ಯನು ವಾಡಿಕೆಯಾಗಿ ವಾಸ ಮಾಡುವಂಥಾ ಪಟ್ಟಣದಲ್ಲಿ ಅಥವಾ ಗ್ರಾಮದಲ್ಲಿ ಒಂದು ಪ್ರಸಿದ್ಧವಾದ ಸ್ಥಳದಲ್ಲಿ ಪ್ರಕಟವಾಗಿ ಓದತಕ್ಕದ್ದು ;

(b) ಅದನ್ನು ಆ ಮನುಷ್ಯನು ವಾಡಿಕೆಯಾಗಿ ವಸಿಸುವ ಮನೆಯು ಅಥವಾ ಒಕ್ಕಲಿರುವ ಸ್ಥಳದ ಬಹಿರಂಗವಾದ ಕಡೆಯಲ್ಲಿ, ಅಥವಾ ಅಂಥಾ ಪಟ್ಟಣದ—ಯಾ—ಗ್ರಾಮದ ಬಹಿರಂಗವಾದ ಸ್ಥಳದಲ್ಲಿ ಹಚ್ಚತಕ್ಕದ್ದು ; ಮತ್ತು

(c) ಅದರ ಒಂದು ನಕಲನ್ನು ಕೋರ್ಟುಹೌಸೆಂಬ ಕೋರ್ಟಿನ ಬಹಿರಂಗವಾದ ಭಾಗಗಳಲ್ಲಿ ಹಚ್ಚತಕ್ಕದ್ದು.

ಸದರೀ ಇಸ್ತಿಹಾರ್ ಫಲಾನಾ ದಿವಸವೇ ಕ್ರಮವಾಗಿ ಪ್ರಕಟಿಸಲ್ಪಟ್ಟಿತು ಎಂಬದಾಗಿ ಇಸ್ತಿಹಾರ್ ಕೊಟ್ಟ ಕೋರ್ಟಿನವರ ಹೇಳಿಕೆಯು, ಈ ಪ್ರಕರಣ ಉದ್ದಿಶ್ಯಗಳು ನೆರವೇರಿಸೋಣಾಗಿ ಇವೆ, ಮತ್ತು ಸದರೀ ಇಸ್ತಿಹಾರ್ ಅಂಥಾ ದಿನ ಪ್ರಕಟಿಸೋಣಾಗಿದೆ ಎಂಬ ಸಂಗತಿಗಳಿಗೆ ಪರಿಷ್ಕಾರವಾದ ಸಾಕ್ಷ್ಯವಾಗಿದೆ.

88. ಕೋರ್ಟಿನವರು, 87ನೇ ಪ್ರಕರಣ ಪ್ರಕಾರ ಇಸ್ತಿಹಾರ್ ಕೊಟ್ಟ ನಂತರ, ಇಸ್ತಿಹಾರ್ ಪಟ್ಟ ಮನುಷ್ಯನ ಬಾಬತು ಚರ—ಯಾ—ಸ್ಥಿರಸ್ವತ್ತನ್ನು—ಯಾ—ಇವೆರಡನ್ನೂ, ಜಪ್ತಿ ಮಾಡುವಂತೆ ಹುಕುಂ ಮಾಡಬಹುದು.

ಸಿಕ್ಕದೆ ಗೈರ್ ಹಾಜರ್ ಆದವನ ಸ್ವತ್ತಿನ ಜಪ್ತಿ.

ಯಾವ ಡಿಸ್ಟ್ರಿಕ್ಟಿನಲ್ಲಿ ಆ ಹುಕ್ಕುಂ ಹುಟ್ಟಿತೋ ಆ ಡಿಸ್ಟ್ರಿಕ್ಟಿನೊಳಗೆ ಇರುವ ಅಂಥಾ ಮನುಷ್ಯನ ಯಾವದೊಂದು ಸ್ವತ್ತನ್ನು ಜಪ್ತೀ ಮಾಡಲಿಕ್ಕೆ ಅಂಥಾ ಹುಕುಮಿನಿಂದ ಅಧಿಕಾರ ಉಂಟಾಗಿರತಕ್ಕದ್ದು; ಮತ್ತು ಆ ಡಿಸ್ಟ್ರಿಕ್ಟಿನ ಹೊರಗೆ ಅಂಥಾ ಮನುಷ್ಯನ ಬಾಬತು ಸ್ವತ್ತು ಇದ್ದರೆ, ಸದರೀ ಸ್ವತ್ತು ಇರುವ ಡಿಸ್ಟ್ರಿಕ್ಟಿನ ಮ್ಯಾಜಿಸ್ಟ್ರೇಟಿನಿಂದ ಸದರೀ ಹುಕ್ಕುಂ ಇಂಡಾರ್ಸು ಆದಾಗ ಆ ಸ್ವತ್ತನ್ನು ಜಪ್ತೀಮಾಡಲಿಕ್ಕೆ ಆ ಹುಕುಮಿನಿಂದ ಅಧಿಕಾರ ಉಂಟಾಗತಕ್ಕದ್ದು.

ಜಪ್ತೀ ಮಾಡಲಿಕ್ಕೆ ಹುಕ್ಕುಂ ಹುಟ್ಟಿದ ಸ್ವತ್ತು, ಸಾಲ—ಯಾ—ಇತರ ಚರಸ್ವತ್ತಾಗಿ ಇದ್ದರೆ, ಅದನ್ನ ಈ ಪ್ರಕರಣ ಪ್ರಕಾರ—

(a) ಹಿಡಿಯುವದರ ಮೂಲವಾಗಿ; ಅಥವಾ

(b) ರಿಸೀವರನ್ನ ಮೊಕರರು ಮಾಡುವದರ ಮೂಲವಾಗಿ; ಅಥವಾ

(c) ಇಸ್ತಿಹಾರು ಪಟ್ಟ ಮನುಷ್ಯನಿಗೆ ಆಗಲೀ—ಯಾ—ಅವನ ಬಗ್ಯಾಗಿ ಯಾವ ಮನುಷ್ಯನಿಗಾದರೂ ಅಂಥಾ ಸ್ವತ್ತು ಕೊಡದ ಹಾಗೆ ನಿಷೇಧಿಸಿ ಬರಹಮೂಲಕ ಹುಕುಂ ಮಾಡುವದರಿಂದ; ಅಥವಾ

(d) ಕೋರ್ಟಿನವರಿಗೆ ಯುಕ್ತ ತೋರುವ ಪ್ರಕಾರ ಈ ರೀತಿಗಳಲ್ಲಿ ಎಲ್ಲಾ ಅಥವಾ ಅವುಗಳ ಪೈಕಿ ಯಾವದಾದರೂ ಎರಡು ರೀತಿಗಳಿಂದ.

ಜಪ್ತೀ ಮಾಡುವಂತೆ ಹುಕುಮಾದ ಸ್ವತ್ತು ಸ್ಥಿರಸ್ವತ್ತಾಗಿದ್ದರೆ, ಗವರ್ನಮೆಂಟಿನವರಿಗೆ ಕಿಸ್ತು ತೆರುವ ಭೂಮಿಯಾಗಿ ಇದ್ದ ಸಂಗತಿಯಲ್ಲಿ, ಈ ಪ್ರಕರಣಪ್ರಕಾರ ಜಪ್ತೀಯನ್ನು ಸದರೀ ಭೂಮಿ ಯಾವ ಡಿಸ್ಟ್ರಿಕ್ಟಿನಲ್ಲಿ ಇರುತ್ತದೋ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರವರ ದ್ವಾರಾ ಮಾಡತಕ್ಕದ್ದು, ಮತ್ತು ಇತರ ಎಲ್ಲಾ ಸಂಗತಿಗಳಲ್ಲಿ—

(e) ಸ್ವಾಧೀನಕ್ಕೆ ತೆಕ್ಕೊಳ್ಳುವದರಿಂದ; ಅಥವಾ

(f) ಒಬ್ಬ ರಿಸೀವರನ್ನ ಮೊಕರರ್ ಮಾಡುವದರಿಂದ; ಅಥವಾ

(g) ಇಸ್ತಿಹಾರುಪಟ್ಟ ಮನುಷ್ಯನಿಗೆ—ಯಾ—ಅವನ ಬಗ್ಯಾಗಿ ಯಾರಿಗಾದರೂ ಗೇಣಿಯನ್ನಾಗಲೀ —ಯಾ—ಸ್ವತ್ತನ್ನಾಗಲೀ ಕೊಡಕೂಡದ್ದಾಗಿ ನಿಷೇಧಿಸಿ ಬರಹಮೂಲಕ ಹುಕ್ಕುಂ ಮಾಡುವದರಿಂದ; ಅಥವಾ

(h) ಕೋರ್ಟಿನವರಿಗೆ ಯುಕ್ತ ತೋರುವ ಪ್ರಕಾರ ಈ ರೀತಿಗಳಲ್ಲಿ ಎಲ್ಲಾ ಅಥವಾ ಅವುಗಳ ಪೈಕಿ ಯಾವದಾದರೂ ಯೆರಡು ರೀತಿಗಳಿಂದ.

ಈ ಪ್ರಕರಣಪ್ರಕಾರ ಮೊಕರರ್ ಪಟ್ಟ ರಿಸೀವರಿನ ಅಧಿಕಾರಗಳು, ಕೆಲಸಗಳು—ವ—ಜವಾಬ್ದಾರಿಗಳು ಸಿವಿಲ್ ಪ್ರೊಸಿಡ್ಯೂರ್ ಕೋಡಿನ 36ನೇ ಚಾಪ್ಟರ್ ಪ್ರಕಾರ ನೇಮಕ ಪಟ್ಟ ರಿಸೀವರಿನದರ ಹಾಗೆಯೇ ಆಗಿರತಕ್ಕದ್ದು.

ಇಸ್ತಿಹಾರುಪಟ್ಟ ಮನುಷ್ಯನು ಇಸ್ತಿಹಾರಿನಲ್ಲಿ ನಮೂದಾದ ವಾಯಿದೆಯೊಳಗೆ ಹಾಜರಾಗದೆ ಇದ್ದರೆ, ಅಂಥಾ ಸಂಗತಿಯಲ್ಲಿ ಜಪ್ತೀಯಾದ ಸ್ವತ್ತು ಗವರ್ನಮೆಂಟಿನವರ ವಿಲೇವಾರಿಗೆ ಸೇರಿದ್ದಾಗಿರತಕ್ಕದ್ದು; ಪರಂತು ಆ ಸ್ವತ್ತು ತ್ವರ್ಯದಿಂದ ಮತ್ತು ಸ್ವಾಭಾವಿಕವಾಗಿ ನಾಶವಾಗತಕ್ಕದ್ದೆಂಬ ಸಂಗತಿಯಲ್ಲಿಯೂ, ಅಥವಾ ವಿಕ್ರಯದಿಂದ ಮಾಲೀಕನಿಗೆ ಪ್ರಯೋಜನ ಉಂಟಾದೀತೆಂದು, ಕೋರ್ಟಿನವರಿಗೆ ತೋರುವ ಸಂಗತಿಯಲ್ಲಿ ಕೂಡಾ, ಕೋರ್ಟಿನವರಿಗೆ ಯುಕ್ತವಾದ್ದೆಂತ ತೋರುವ ಸಮಯದಲ್ಲಿ ವಿಕ್ರಯಿಸಲಿಕ್ಕೆ ಹುಕುಂ ಮಾಡಬಹುದು, ಅಲ್ಲದೆ ಇತರ ಸಂಗತಿಯಲ್ಲಿ ಜಪ್ತೀ ತಾರೀಖು ಮೊದಲ್ಗೊಂಡು 6 ತಿಂಗಳು ಕಳೆಯುವ ಪರ್ಯಂತ ವಿಕ್ರಯಿಸಕೂಡದು.

89. 88ನೇ ಪ್ರಕರಣದ ಅಕ್ಕೈರ ಕಲಂ ಪ್ರಕಾರ ಆ ಜಾರಸ್ವತ್ತು ಗವರ್ನ್ಮೆಂಟಿನ ವಿಲೇವಾರಿಯೊಳಗೆ ಇಧೆಯೋ—ಯಾ—ಬಂದು ಇಧೆಯೋ ಅಂಥಾ ಯಾವನೊಬ್ಬ ಮನುಷ್ಯನು ಜಪ್ತಿ ಯ ತಾರೀಖು ಮೊದಲುಗೊಂಡು ಎರಡು ಸಂವತ್ಸರಗಳೊಳಗಾಗಿ ತಾನಾಗಿ ಹಾಜರಾದರೂ—ಯಾ—ಹಿಡಿಯಲ್ಪಟ್ಟು ಯಾವ ಕೋರ್ಟಿನವರ ಹುಕುಂ ಪ್ರಕಾರ ಜಪ್ತಿ ಮಾಡೋಣಾಯಿತೋ ಆ ಕೋರ್ಟಿನವರ ಮುಂದೆ ಹಾಜರು ಮಾಡಲ್ಪಟ್ಟು, ತಾನು ಗೈರ್ ಹಾಜರು ಆಗಿದ್ದದ್ದು—ಯಾ—ಮರೆಯಾಗಿದ್ದದ್ದು ವಾರಂಟಿನ ಜಾರಿಯಾಗಗೊಡದಂತೆ ಮಾಡುವ ನಿಮಿತ್ಯವಲ್ಲವೆಂತಲೂ—ವ—ಇಸ್ತಿಹಾರಿನಲ್ಲಿ ನಮೂದಿಸೋಣಾದ ವಾಯಿದೆಯೊಳಗೆ ಹಾಜರಾಗುವಂತೆ ತನಗೆ ಇಸ್ತಿಹಾರಿನ ಸಂಗತಿ ತಿಳಿಯಲಿಲ್ಲವೆಂತ ಕೂಡಾ, ಅಂಥಾ ಕೋರ್ಟಿನವರಿಗೆ ಸಮಾಧಾನಕರವಾಗಿ ರುಜುಪಡಿಸಿದರೂ, ಅಂಥಾ ಸ್ವತ್ತು ಅಥವಾ ಅದು ಮಾರಲ್ಪಟ್ಟು ಇದ್ದರೆ, ಖರೀದಿಯಿಂದ ಜಪ್ತಿಗಾಗಿ ತಗಲಿದ ಯೆಲ್ಲಾ ಖರ್ಚುಗಳೂ ಕಳೆದು ಉಳಿದ ಮೊಬಲಗು ಅಥವಾ ಸ್ವತ್ತಿನ ಯಾವ ಅಂಶವಾದರೂ ಮಾರಲ್ಪಟ್ಟು ಇದ್ದರೆ, ಉಳಿದ ಮೊಬಲಗು ಮತ್ತು ಉಳಿದ ಸ್ವತ್ತು ಕೂಡಾ, ಅವನಿಗೆ ವಾಪತಿಮಾಡಲ್ಪಡತಕ್ಕದ್ದು.

ಜಪ್ತಾದ ಸ್ವತ್ತನ್ನು ಖುಲಾಸೆ ಮಾಡೋಣ.

D.—Other Rules regarding Processes.

D.—ಪ್ರೊಸೆಸ್ಸುಗಳನ್ನು ಕುರಿತು ಬೇರೆ ಕ್ರಮಗಳು.

90 ಜೂರರ್—ಯಾ—ಅಸ್ಸೆಸ್ಸರ್ ಅಲ್ಲದೆ ಇತರ ಯಾವನೊಬ್ಬ ಮನುಷ್ಯನ ಹಾಜರಾತಿಯ ಬಗ್ಗೆ ಯಾವ ಸಂಗತಿಗಳಲ್ಲಿ ಸಮ್ಮನ್ಸ್ ಕೊಡುವದಕ್ಕೆ ಕೋರ್ಟಿನವರಿಗೆ ಈ ಕೋಡು ಪ್ರಕಾರ ಅಧಿಕಾರವಿಧೆಯೋ ಅಂಥಾ ಯಾವದೊಂದು ಸಂಗತಿಯಲ್ಲಿ, ಕೋರ್ಟಿನವರು ತಮ್ಮ ಸಬಬುಗಳನ್ನು ಬರಹಮೂಲಕ ರಿಕಾರ್ಡು ಮಾಡಿದನಂತರ, ಹಿಡಿಯುವ ಬಗ್ಯೆ ವಾರಂಟನ್ನು ಕೊಡಬಹುದು, ಯಾವಾಗ ಅಂದರೆ—

ಸಮ್ಮನ್ಸಿಗೆ ಕೊಡಿಸಿ—ಯಾ—ಅದರ ಬದಲಾಗಿ ವಾರಂಟು ಕೊಡೋಣ.

(a) ಅಂಥಾ ಸಮ್ಮನ್ಸ್ ಕೊಡುವದಕ್ಕೆ ಮುಂಚೆ, ಅಥವಾ ಅದನ್ನು ಕೊಟ್ಟನಂತರ, ಆದರೆ ಹಾಜರಾತಿ ಬಗ್ಯೆ ನಿಶ್ಚಯಿಸಿದ ವಾಯಿದೆಗೆ ಮುಂಚೆ, ಅಂಥಾ ಮನುಷ್ಯನು ತಪ್ಪಿಸಿಕೊಂಡು ಮರೆಪಟ್ಟಿರುವದಾಗಿ, ಅಥವಾ ಅತನು ಸಮ್ಮನ್ಸ್ ಪ್ರಕಾರ ನಡಕೊಳ್ಳಲಾರನೆಂತ ನಂಬುವದಕ್ಕೆ ಕೋರ್ಟಿನವರಿಗೆ ಸಬಬು ತೋರಿ ಬಂದ ಸಂಗತಿಯಲ್ಲಿ; ಅಥವಾ

(b) ಸಮ್ಮನ್ಸ್ ಮೇರಿಗೆ ಹಾಜರಾಗುವದಕ್ಕೆ ಸಂದರ್ಭ ಇರುವ ಹಾಗೆ ತಕ್ಕ ಕಾಲದೊಳಗೆ ಸಮ್ಮನ್ಸ್ ಸಾದರ್ಮಾಡೋಣಾಗಿಧೆ ಯೆಂತ ರುಜುವಾಗಿ, ಹಾಜರಾಗುವದಕ್ಕೆ ತಪ್ಪಿದ್ದಕ್ಕಾಗಿ ತಕ್ಕ ಸಬಬು ತೋರಿಸದೆ ಇದ್ದು, ಅಂಥಾ ವಾಯಿದೆಯೊಳಗಾಗಿ ಹಾಜರಾಗುವದಕ್ಕೆ ತಪ್ಪಿದರೆ.

91. ಯಾವದೊಂದು ಕೋರ್ಟಿನಲ್ಲಿ ಅಧ್ಯಕ್ಷನಾಗಿ ಇರುವ ಆಫೀಸರನಿಗೆ ಯಾವ ಮನುಷ್ಯನ ಹಾಜರಾತಿಯ ಬಗ್ಯೆ ಸಮ್ಮನ್ಸ್ ಕೊಡುವದಕ್ಕೆ—ಯಾ—ಹಿಡಿಯೋಣದರ ಬಗ್ಯೆ ವಾರಂಟು ಕೊಡುವದಕ್ಕೆ ಅಧಿಕಾರ ಉಂಟಾಗಿರುತ್ತದೋ, ಅಂಥಾ ಮನುಷ್ಯನು, ಆ ಕೋರ್ಟಿನಲ್ಲಿ ಹಾಜರು ಯಿದ್ದರೆ, ಅಂಥಾ ಕೋರ್ಟಿನಲ್ಲಿ ಹಾಜರಾಗುವ ಬಗ್ಯೆ ಜಾಮೀನುದಾರರ ಸಮೇತ—ಯಾ—ಜಾಮೀನು ಇಲ್ಲದೇನೇ ಒಂದು ಪತ್ರವನ್ನು ಬರಕೊಡುವ ಹಾಗೆ ಆ ಆಫೀಸರನು ಅಂಥಾ ಮನುಷ್ಯನಿಗೆ ಅಪ್ಪಣೆ ಮಾಡಬಹುದು.

ಹಾಜರಾತಿಯ ಬಗ್ಯೆ ಪತ್ರ ತೆಗದುಕೊಳ್ಳುವ ಅಧಿಕಾರ.

92. ಒಂದು ಕೋರ್ಟಿನವರಮುಂದೆ ಹಾಜರಾಗುವದಕ್ಕೆ ಈ ಕೋಡು ಪ್ರಕಾರ ತೆಕ್ಕೊಳ್ಳೋಣಾದ ಪತ್ರ ಪ್ರಕಾರ ಬದ್ಧನಾಗಿರುವ ಯಾವನೊಬ್ಬ ಮನುಷ್ಯನು—ಹಾಗೆ ಹಾಜರಾಗದೆ ಇದ್ದರೆ, ಅಂಥಾ ಮನುಷ್ಯನನ್ನು ಹಿಡಿದು ತನ್ನ ಮುಂದೆ ಹಾಜರು ಪಡಿಸುವಂತೆ ವಿಧಿಸಿ ಸದರೀ ಕೋರ್ಟಿನಲ್ಲಿ ಅಧ್ಯಕ್ಷನಾಗಿರುವ ಆಫೀಸರನು ಒಂದು ವಾರಂಟನ್ನು ಕೊಡಬಹುದು.

ಹಾಜರಾತಿ ಬಗ್ಯೆ ತೆಕ್ಕೊಳ್ಳೋಣಾದ ಪತ್ರಪ್ರಕಾರ ನಡಕೊಳ್ಳದೆ ಹೋದರೆ ಹಿಡಿಯೋಣ.

V0 78

93. ಸರ್ಚು ಮತ್ತು ವಾರಂಟು—ವ—ಅವುಗಳ ಹುಟ್ಟುವದರ ಮತ್ತು ಸಾದರಾತಿ ಮತ್ತು ಅಮಲನ್ನು ಕುರಿತು ಈ ಅಧ್ಯಾಯದಲ್ಲಿ ಇರುವ ನಿಬಂಧನೆಗಳು ಈ ಕೋಡಿನ ಪ್ರಕಾರ ಕೊಡೋಣಾಗುವ ಪ್ರತಿ ಸರ್ಚುಗಳಿಗೂ—ವ—ಹಿಡಿಯುವ ಬಾಬತು ವಾರಂಟುಗಳಿಗೂ, ಸಂಬಂದಿದಿಸುವಷ್ಟರಮಟ್ಟಿಗೆ, ಲಗಾವಾಗತಕ್ಕದ್ದು.

ಈ ಅಧ್ಯಾಯದಲ್ಲಿ ಇರುವ ನಿಬಂಧನೆಗಳು ಸರ್ಚುಗಳಿಗೂ ಹಿಡಿಯುವ ಬಾಬತು ವಾರಂಟು ಗಳಿಗೂ ಸಾಧಾರಣವಾಗಿ ಲಗಾವಾಗತಕ್ಕದ್ದು.

Chapter VII.—Of Processes to compel the production of Documents and other Moveable Property and for the Discovery of Persons wrongfully confined.

7ನೇ ಆಧ್ಯಾಯ.—ದಸ್ತಾವೇಜುಗಳನ್ನು ಇತರ ಚರಸ್ವತ್ತು ಹಾಜರುಪಡಿಸುವದಕ್ಕೆ ಬಲಾತ್ಕರಿಸುವ ಪ್ರೊಸೆಸ್ಸುಗಳನ್ನು ಮತ್ತು ಅಕ್ರಮವಾಗಿ ಬಂಧಿಸಲ್ಪಟ್ಟ ಜನರ ತಲಾಷನ್ನು ಕುರಿತು.

A.—Summons to produce.

A.—ಹಾಜರು ಪಡಿಸುವದಕ್ಕೆ ಸಮ್ಮನ್ಸ್.

94. ಯಾವದೊಂದು ಕೋರ್ಟಿನವರಿಗೆ, ಅಥವಾ, ಒಂದು ಪೋಲಿಸು ಸ್ಟೇಷನ್ ಆಫೀಸಿನ ಚಿಮ್ಮೆಯಲ್ಲಿ ಇರುವ ಯಾವನೊಬ್ಬ ಪೋಲಿಸ್ ಆಫೀಸರಿಗೆ, ಈ ಕೋಡು ಪ್ರಕಾರ ತಾವು ನಡಿಸುವ—ಯಾ—ಅಂಥಾ ಕೋರ್ಟು—ಯಾ—ಪೋಲೀಸು ಆಫೀಸರನ ಮುಂದೆ ಇರುವ ಯಾವದೊಂದು ಪೋಲಿಸು ವಿಚಾರಣೆಯ, ವಿಚಾರಣೆಯ ದರ್ಯಾಫ್ತಿಯ ಉದ್ದೇಶ್ಯಾರ್ಥವಾಗಿಯಾಗಲೀ ಅಥವಾ ಇತರ ಯಾವದೊಂದು ಪ್ರೊಸಿಡಿಂಗ್ಸಿನ ಉದ್ದೇಶಾರ್ಥವಾಗಿಯಾಗಲೀ ಯಾವ ದಸ್ತಾವೇಜಾದರೂ ಅಥವಾ ಯಾವದೊಂದು ಪದಾರ್ಥವಾದರೂ ಸರಿಯೇ, ಅದರ ಹಾಜರಾತಿಯು ಅವಶ್ಯಕವಾಗಿದೆಯೆಂದು—ಯಾ—ಬೇಕಾಗಿದೆಯೆಂದು ತೋರಿಬಂದಾಗ, ಯಾರ ಸ್ವಾಧೀನದಲ್ಲಿ ಅಥವಾ ಎಖ್ತ್ಯಾರಿಯಲ್ಲಿ ಅಂಥಾ ದಸ್ತಾವೇಜು—ಯಾ—ಪದಾರ್ಥ ಇದೆಯೆಂದು ನಂಬೋಣಾಗಿದೆಯೋ ಅಂಥಾ ಮನುಷ್ಯನು ಅದನ್ನು ಸಮ್ಮನ್ಸ್—ಯಾ—ಹುಕುಮಿನಲ್ಲಿ ಕಾಣಿಸೋಣಾದ ಫಲಾನೆ ಸ್ಥಳ—ವ—ಕಾಲದಲ್ಲಿ ಹಾಜರಾಗಿ ಅದನ್ನು ಹಾಜರ್ಮಾಡತಕ್ಕದ್ದೆಂತ, ಅಥವಾ ಹಾಜರು ಪಡಿಸತಕ್ಕದ್ದೆಂತ ಆಜ್ಞಾಪಿಸಿ ಅಂಥಾ ಕೋರ್ಟಿನವರು ಒಂದು ಸಮ್ಮನನ್ನಾಗಲೀ ಅಂಥಾ ಆಫೀಸರನು ಒಂದು ಬರಹಮೂಲಕವಾದ ಹುಕುಮನ್ನಾಗಲೀ ಕೊಡಬಹುದು.

ದಸ್ತಾವೇಜು—ಯಾ—ಇತರ ಸ್ವತ್ತು ಹಾಜರು ಪಡಿಸುವದಕ್ಕೆ ಸಮ್ಮನ್.

ಒಂದು ದಸ್ತಾವೇಜನ್ನಾಗಲೀ—ಯಾ—ಇತರ ಪದಾರ್ಥವನ್ನಾಗಲೀ ಹಾಜರುಮಾಡತಕ್ಕ ಬಗ್ಗೆ ಮಾತ್ರ ಈ ಪ್ರಕರಣ ಪ್ರಕಾರ ಆಜ್ಞಾಪಿಸಲ್ಪಟ್ಟ ಮನುಷ್ಯನು ಅದನ್ನು ಹಾಜರುಪಡಿಸುವದಕ್ಕೆ, ತಾನು ಸ್ವತಃ ಹಾಜರಾಗುವದಕ್ಕೆ ಬದಲಾಗಿ ಅಂಥಾ ದಸ್ತಾವೇಜು—ಯಾ—ಪದಾರ್ಥವು ಹಾಜರುಮಾಡಲ್ಪಡುವ ಹಾಗೆ ಮಾಡಿದ್ದಲ್ಲಿ ಈ ಪ್ರಕರಣದ ಉದ್ದಿಶ್ಯಗಳು ನೆರವೇರಿಸಿದ ಹಾಗೆ ಎಣಿಸಲ್ಪಡತಕ್ಕದ್ದು.

1872ನೇ ಇಸವಿ ಇಂಡಿಯನ್ ಎವಿಡೆನ್ಸ್ ಆಕ್ಟಿನ 123ನೇ—ವ—124ನೇ ಪ್ರಕರಣಗಳಿಗೆ ಬಾಧಿಸುವಂಥಾದ್ದು, ಅಥವಾ ಅಂಚೆ—ಯಾ—ಟೆಲಿಗ್ರಾಫ್ ಅಧಿಕಾರಸ್ಥರ ಭದ್ರತೆಯಲ್ಲಿ ಇರುವ ಒಂದು ಕಾಗದ, ಪೋಸ್ಟುಕಾರ್ಡು, ಟೆಲಿಗ್ರಾಮ್—ಯಾ—ಇತರ ದಸ್ತಾವೇಜಿಗೆ ಲಗಾವಾಗುವಂಥಾದ್ದು ಏನೂ ಈ ಪ್ರಕರಣದಲ್ಲಿ ಇಲ್ಲ.

95. ಅಂಥಾ ಭದ್ರತೆಯಲ್ಲಿ ಇರುವ ಯಾವದೊಂದು ದಸ್ತಾವೇಜು, ಈ ಕೋಡಿನ ಪ್ರಕಾರ ಯಾವದೊಂದು ಪೋಲಿಸು ವಿಚಾರಣೆ, ವಿಚಾರಣೆ, ದರ್ಯಾಫ್ತಿ—ಯಾ—ಇತರ ಪ್ರೊಸಿಡಿಂಗ್ಸಿನ ಉದ್ದಿಶ್ಯಾರ್ಥವಾಗಿ ಬೇಕಾಗಿದೆ, ಯೆಂಬದಾಗಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು, ಚೀಫ್ ಕೋರ್ಟು ಅಥವಾ ಸೆಷನ್ಸ್ ಕೋರ್ಟಿನವರು ಅಭಿಪ್ರಾ

ಕಾಗದಗಳನ್ನು ಟೆಲಿಗ್ರಾಮುಗಳನ್ನು ಕುರಿತು ನಡಿಸಬೇಕಾದ ಕ್ರಮ.

ಯಪಟ್ಟರೆ, ಸದರೀ ಮೇಜಿಸ್ಟ್ರೇಟು ಅಥವಾ ಕೋರ್ಟಿನವರು ಅಂಥಾ ದಸ್ತಾವೇಜನ್ನ ತಾವು ಅಪ್ಪಣೆಕೊಡುವ ಫಲಾನೇ ಮನುಷ್ಯನ ಸ್ವಾಧೀನಕ್ಕೆಕೊಡತಕ್ಕದ್ದೆಂತ ಅಂಚೆ—ಯಾ—ಟೆಲಿಗ್ರಾಫು ಅಧಿಕಾರಸ್ಥರನ್ನ ಅಜ್ಞಾಪಿಸಬಹುದು.

ಅಂಥಾ ದಸ್ತಾವೇಜು, ಸದರೀ ಯಾವದೊಂದು ಉದ್ದಿಷ್ಟಾರ್ಥವಾಗಿ ಬೇಕಾಗಿದೆ ಎಂದು, ಇತರ ಯಾವ ಮೇಜಿಸ್ಟ್ರೇಟಾಗಲೀ—ಯಾ—ಡೆಪ್ಯುಟಿ ಕಮ್ಮಿಷನರಾಗಲೀ ಅಭಿಪ್ರಾಯಪಟ್ಟರೆ, ಆತನು ಅಂಥಾ ಡಿಸ್ಟ್ರಿಕ್ಟು ಮೇಜಿಸ್ಟ್ರೇಟರ ಅಥವಾ ಕೋರ್ಟಿನವರ ಹುಕ್ಕುಂ ಬರುವತನಕ ಅಂಥಾ ದಸ್ತಾವೇಜನ್ನ ಹುಡಿಕಿಸಿ ತಡೆದಿಡಬೇಕಾಗಿಅಂಚೇ ಅಥವಾ ಟೆಲೆಗ್ರಾಫ್ ಇಲಾಖೆಯವರನ್ನ ಸಂಗತ್ಯಾನುಸಾರ ಅಪೇಕ್ಷಿಸಬಹುದು.

B.—Search-warants.

B.—ಝಡ್ತಿವಾರಂಟುಗಳು.

ಝಡ್ತಿವಾರಂಟನ್ನ ಯಾವಾಗ್ಯೆ ಕೊಡಬಹುದು.

96. 94ನೇ ಪ್ರಕರಣಪ್ರಕಾರ ಯಾವ ಮನುಷ್ಯನ ವಿಲಾಸಕ್ಕೆ ಸಮ್ಮನ್—ಯಾ—ಹುಕ್ಕುಂ ಅಥವಾ 95ನೇ ಪ್ರಕರಣದ 1ನೇ ಕಲಮಿನಪ್ರಕಾರ ಆಜ್ಞಾಪನೆಯನ್ನು ಮಾಡೋಣಾಗಿದೆಯೋ—ಯಾ—ಮಾಡಲ್ಪಡಬಹುದೋ, ಅಂಥವನು ಆ ಸಮ್ಮನ್—ಯಾ—ಆಜ್ಞಾಪನೆಮೇರಿಗೆ ದಸ್ತಾವೇಜನ್ನು—ಯಾ—ಇತರ ಪದಾರ್ಥವನ್ನು ಹಾಜರು ಪಡಿಸಲಾರನು—ಯಾ—ಪಡಿಸಲಿಕ್ಕೆ ಇಲ್ಲವೆಂತ ಯಾವದೊಂದು ಕೋರ್ಟಿನವರು ನಂಬಲಿಕ್ಕೆ ಸಬಬು ಇದ್ದ ಸಂಗತಿಯಲ್ಲಿ,

ಅಥವಾ ಅಂಥಾ ದಸ್ತಾವೇಜು—ಯಾ— ಇತರ ಪದಾರ್ಥ ಯಾವನೊಬ್ಬ ಮನುಷ್ಯನ ಸ್ವಾಧೀನ ಉಂಟೆಂತ ಕೋರ್ಟಿನವರಿಗೆ ತಿಳಿಯದೆ ಇರುವ ಸಂಗತಿಯಲ್ಲಿ,

ಅಥವಾ ಈ ಕೋಡಿಗನುಗುಣವಾದ ಯಾವದೊಂದು ಪೋಲಿಸು ವಿಚಾರಣೆ, ದರ್ಯಾಫ್ತಿ, ಅಥವಾ ಇತರ ಪ್ರೊಸೀಡಿಂಗ್ಸ್‌ಗಳ ಉದ್ದಿಷ್ಟಾರ್ಥವು, ಸಾಧಾರಣವಾದ ಝಡ್ತಿ ಮಾಡುವದರಿಂದ—ಯಾ—ಪರೀಕ್ಷಿಸಿ ನೋಡುವದರಿಂದ ನೆರವೇರೀತಾಗಿ ಕೋರ್ಟಿನವರಿಗೆ ತೋರಿದಾಗ,

ಅವರು ಝಡ್ತಿವಾರಂಟನ್ನು ಕೊಡಬಹುದು; ಮತ್ತು ಆ ವಾರಂಟನ್ನು ಯಾರ ವಿಲಾಸಕ್ಕೆ ಹಾಕೋಣಾಗಿದೆಯೋ, ಆತನು ಅದಕ್ಕನುಗುಣವಾಗಿ, ಮತ್ತು ಇದರಕೆಳಗೆ ಇರುವ ನಿಬಂಧನೆ ಅನುಸರಿಸಿ ಝಡ್ತಿ ಮಾಡಬಹುದು, ಅಥವಾ ಪರಿಕ್ಷಿಸಿ ನೋಡಬಹುದು.

ಅಂಚೆ—ಯಾ—ಟೆಲಿಗ್ರಾಫು ಅಧಿಕಾರಸ್ಥರ ಭದ್ರತೆಯಲ್ಲಿ ಇರುವ ಯಾವದೊಂದು ದಸ್ತಾವೇಜನ್ನು ತಲಾಷ್ ಮಾಡುವಬಗ್ಯೆ ವಾರಂಟು ಕೊಡಲಿಕ್ಕೆ ಡಿಸ್ಟ್ರಿಕ್ಟು ಮೇಜಿಸ್ಟ್ರೇಟರ ಹೋರ್ತು ಇತರ ಮೇಜಿಸ್ಟ್ರೇಟರಿಗೆ ಅಧಿಕಾರ ಕೊಡುವಂಥಾದ್ದೇನೂ ಈ ಪ್ರಕರಣದಲ್ಲಿ ಯಿರುವದಿಲ್ಲ.

ವಾರಂಟುಗಳನ್ನು ಕಟ್ಟುಪಡಿಸಿ ಕೊಡುವ ಅಧಿಕಾರ.

97. ಅಂಥಾ ಕೋರ್ಟಿನವರು ತಮಗೆ ಯುಕ್ತ ತೋರಿದರೆ, ಫಲಾನೆ ಸ್ಥಳದಲ್ಲಿ—ಯಾ—ಅದರ ಅಂಶದಲ್ಲಿ ಇಷ್ಟರ ಒಳಗಾಗಿ ಮಾತ್ರ ಝಡ್ತಿ ಮಾಡತಕ್ಕದ್ದು—ಯಾ—ಪರೀಕ್ಷಿಸಿ ನೋಡತಕ್ಕದ್ದೆಂತ ವಾರಂಟಿನಲ್ಲಿ ನಮೂದಿಸಬಹುದು; ಮತ್ತು ಅಂಥಾ ವಾರಂಟಿನ ಅಮಲ್ದಾರೀ ನಡೆಸಲಿಕ್ಕೆ ಅಪ್ಪಣೆ ಹೊಂದಿದ ಆಪೀಸರು ಆಗ, ಹಾಗೆ ನಮೂದಾದ ಸ್ಥಳವನ್ನು—ಯಾ—ಭಾಗವನ್ನು ಮಾತ್ರ ಝಡ್ತಿ ಮಾಡತಕ್ಕದ್ದು—ಯಾ—ಪರೀಕ್ಷಿಸಿನೋಡತಕ್ಕದ್ದು.

1081

ಚೋರಿಮಾಲನ್ನಾಗಲೀ ಸೃಷ್ಟನೆ ದಸ್ತಾಜು ಮಾಂತಾಗಿ ಬಳಗೆ ಇರುವದಾಗಿ ಗುಮಾನಪಟ್ಟ ಮನೆಯ ಝುಡ್ತಿ.

98. ಡಿಸ್ಟ್ರಿಕ್ಟ ಮೇಜಿಸ್ಟ್ರೇಟು, ಸಬ್ ಡಿವೀಜನಲ್ ಮೇಜಿಸ್ಟ್ರೇಟು, ಅಥವಾ ಫಸ್ಟ್‌ಕ್ಲಾಸ ಮೇಜಿಸ್ಟ್ರೇಟಗೆ ವರ್ತಮಾನ ಬಂದು, ಅಗತ್ಯವಾಗಿ ಅತಗೆ ತೋರುವಂಥಾ ವಿಚಾರ ಣೆಮಾಡಿ, ಚೋರೀಮಾಲನ್ನು ಇಡುವದಕ್ಕಾಗಲೀ ಮಾರುವದಕ್ಕಾಗಲೀ,

ಅಥವಾ ಸೃಷ್ಟನೇ ದಸ್ತಾವೇಜಗಳನ್ನು ಬನಾವಣಿ ಮುದ್ರೆಗಳನ್ನು—ಯಾ—ಬನಾವಣಿ ಸ್ಟಾಂಪುಗಳನ್ನು—ಯಾ—ನಾಣ್ಯಗಳನ್ನು, ಅಥವಾ ನಾಣ್ಯಗಳನ್ನು—ಯಾ—ಸ್ಟಾಂಪುಗಳನ್ನು ಬನಾವಣಿಮಾಡುವದಕ್ಕೆ, ಅಥವಾ ಸೃಷ್ಟನೆ ಮಾಡುವದಕ್ಕೆ ಬದಗುವಂಥಾ ಸಾಧನಗಳು—ಯಾ—ಅಂಥಾ ಪದಾರ್ಥಗಳು ಇಡುವದಕ್ಕಾಗಲೀ ಮಾರುವದಕ್ಕಾಗಲೀ ಮಾಡುವದಕ್ಕಾಗಲೀ, ಯಾವದೊಂದು ಸ್ಥಳ ಉಪದೋಗಿಸೋಣಾಗುತ್ತದೆ,

ಅಥವಾ ಸೃಷ್ಟನೆ ದಸ್ತಾವೇಜುಗಳು, ಬನಾವಣಿ ಮುದ್ರೆಗಳು ಅಥವಾ ಬನಾವಣಿ ನಾಣ್ಯ—ಯಾ—ಸ್ಟಾಂಪುಗಳು, ನಾಣ್ಯ—ಯಾ—ಸ್ಟಾಂಪುಗಳು ಬನಾವಣಿ ಮಾಡುವದಕ್ಕೆ—ಯಾ— ಸೃಷ್ಟನೆ ಮಾಡುವದಕ್ಕೆ ಬದಗುವಂಥಾ ಸಾಧನಗಳು—ಯಾ—ಪದಾರ್ಥಗಳು ಯಾವದೊಂದು ಸ್ಥಳದಲ್ಲಿ ಇಡೋಣಾಗಿವೆ—ಯಾ—ಇರಿಸೋಣಾಗಿವೆ,

ಎಂತಲಾದರೂ ನಂಬಲಿಕ್ಕೆ ಕಾರಣವುಂಟಾಗಿ ಇದ್ದರೆ, ಆತನು, ಕಾನಿಸ್ಟೇಬಲಿನ ಹುದ್ದೇಗಿಂತ ಮೇಲಿನ ಬಂದು ಪೊಲೀಸ ಆಫಿಸರನನ್ನು, ತನ್ನ ವಾರಂಟಿನಿಂದ—

(a) ಅಗತ್ಯವಾದಷ್ಟು ಕುಮ್ಮಕು ಸಹಿತವಾಗಿ ಅಂಥಾ ಸ್ಥಳಕ್ಕೆ ಪ್ರವೇಶಿಸಲಿಕ್ಕೆ, ಮತ್ತು

(b) ವಾರಂಟಿನಲ್ಲಿ ನಮೂದಿಸಿದ ರೀತಿಯಿಂದ ಆ ಬಗ್ಗ್ಯಾಗಿ ಝುಡ್ತಿಮಾಡಲಿಕ್ಕೆ, ಮತ್ತು

(c) ಚೋರೀ ಬಾಬತಿನದಾಗಿ, ಅಕ್ರಮವಾಗಿ ದೊರಕಿಸಿಕೊಂಡದ್ದಾಗಿ, ಸೃಷ್ಟನೆಮಾಡಲಾದ್ದಾಗಿ, ಸುಳ್ಳಾದ್ದಾಗಿ—ಯಾ—ಬನಾವಣಿ ಮಾಡಿದ್ದಾಗಿ ಆತನಿಗೆ ನ್ಯಾಯವಾಗಿ ಗುಮಾನ ತೋರಿಬರುವ ಸದರೀ ಸ್ಥಳದೊಳಗೆ ಶಿಕ್ಕುವಂಥಾ ದಸ್ತಾವೇಜನ್ನಾದರೂ, ಮುದ್ರೆಗಳಾದರೂ ಸ್ಟಾಂಪುಗಳು—ಯಾ—ನಾಣ್ಯಗಳನ್ನಾದರೂ, ಯಾವ ಸ್ವತ್ತನ್ನಾದರೂ ಮತ್ತು ಮೇಲೆ ಹೇಳಿದಂಥಾ ಸಾಧನಗಳು—ವ—ಪದಾರ್ಥಗಳನ್ನು ಸ್ವಾಧೀನಕ್ಕೆ ತೆಕೊಂಡು, ಮತ್ತು

(d) ಅಂಥಾ ಸ್ವತ್ತು, ದಸ್ತಾವೇಜುಗಳು, ಮುದ್ರೆಗಳು, ಸ್ಟಾಂಪುಗಳು, ನಾಣ್ಯಗಳು, ಸಾಧನಗಳು—ಯಾ—ಪದಾರ್ಥಗಳು ಒಬ್ಬ ಮೇಜಿಸ್ಟ್ರೇಟಿನ ಮುಂದಕ್ಕೆ ಒಯುವದಕ್ಕೆ, ಅಥವಾ ತಕ್ಸೀರ್‌ದಾರನನ್ನ ಮೇಜಿಸ್ಟ್ರೇಟಿನ ಮುಂದೆ ಕರದು ಕೊಂಡುಹೋಗುವ ವರಿಗೆ ಆ ಸ್ಥಳದಲ್ಲಿ ಅದನ್ನು ಪಹರೆಮಾಡಿಕೊಂಡಿರುವ ಹಾಗೆ, ಅಥವಾ ಬೇರೆ ವಿಧವಾಗಿ ಅದನ್ನು ಭದ್ರವಾಗಿ ಯಾವದೊಂದು ಸ್ಥಳದಲ್ಲಿ ಅದನ್ನು ವಿಲೇವಾರಿ ಪಡಿಸುವ ಹಾಗೆ, ಮತ್ತು

(e) ಹಾಗೆ ಇರಿಸುವದಕ್ಕೆ, ವಿಕ್ರಯಿಸುವದಕ್ಕೆ—ಯಾ—ಉಟುಮಾಡುವದಕ್ಕೆ ಅಥವಾ ಅಂಥಾ ಯಾವದಾದರೂ ಸ್ವತ್ತು, ದಸ್ತಾವೇಜುಗಳು, ಮುದ್ರೆಗಳು, ಸ್ಟಾಂಪುಗಳು, ನಾಣ್ಯಗಳು, ಸಾಧನಗಳು—ಯಾ—ಪದಾರ್ಥಗಳು ಚೋರಿಮಾಲೆಂತ ತಿಳಿದು ಅಥವಾ ಚೋರೀ ಮಾಲೆಂತ—ಯಾ—ಬೇರೆ ವಿಧವಾಗಿ ಅಕ್ರಮವಾಗಿ ದೊರಕಿಸಿಕೊಂಡದ್ದೆಂತ ಗುಮಾನುಪಡುವದಕ್ಕೆ ನ್ಯಾಯವಾದ, ಸಬಬು ಇದ್ದು ಇರಿಸೋಣಾದ್ದಕ್ಕೆ ಅಥವಾ ಸದರೀ ದಸ್ತಾವೇಜಗಳು, ಮುದ್ರೆಗಳು, ಸ್ಟಾಂಪುಗಳು, ನಾಣ್ಯಗಳು, ಸಾಧನಗಳು, ಅಥವಾ ಪದಾರ್ಥಗಳು ಸೃಷ್ಟನೆ ಮಾಡೋಣಾದ್ದು, ಸುಳ್ಳು ಮಾಡೋಣಾದ್ದು—ಯಾ—ಬನಾವಣಿ ಮಾಡೋಣಾದ್ದು—ಯಾ—ನಾಣ್ಯಗಳನ್ನು—ಯಾ—ಸ್ಟಾಂಪುಗಳನ್ನು ಬನಾವಣಿ ಮಾಡುವ ಬಗ್ಗೆ ಅಥವಾ ಸೃಷ್ಟನೆ ಮಾಡುವ ಬಗ್ಗೆ ಉಪಯೋಗಿಸಲ್ಪಟ್ಟು—ಯಾ—ಉಪಯೋಗಿಸಲ್ಪಡುವ ಇರಾದೆಯಿಂದ

ಇಡೋಣಾದಂಥಾ ಸಾಧನಗಳು—ಯಾ—ಪದಾರ್ಥಗಳು, ಇಡೋಣಾದ್ದೆಂತ ತಿಳಿದು, ಅಥವಾ ತಿಳಿಯುವದಕ್ಕೆ ಸಾಕಾವ ಸಬಬು ಇದ್ದು ಅವು ಸಹಕರಿಸಿದವನಾಗಿ ತೋರುವಲ್ಲಿ ಹಾಜರು ಇರುವ ಮನುಷ್ಯನನ್ನ ಹಿಡಿದು ಪಹರೆಯಲ್ಲಿ ಒಬ್ಬ ಮೇಜಸ್ಟ್ರೇಟನ ಮುಂದಕ್ಕೆ ಒಯ್ಯಲಿಕ್ಕೆ ಅಧಿಕಾರ ಗೊಳಸಬಹುದು.

ಸ್ಥಳೀಯ ಅಧಿಕಾರ ಸರಹದ್ದಿನಹೊರಗೆ ಝುಡ್ತೀಯಲ್ಲಿ ಸಿಕ್ಕಿದ ಪದಾರ್ಥಗಳ ವಿಲೇವಾರಿ

99. ಒಂದು ವಾರಂಟು ಕೊಟ್ಟ ಕೋರ್ಟು ಸ್ಥಳೀಯ ಅಧಿಕಾರ ಸರಹದ್ದಿನಹೊರಗೆ ಇರುವ ಯಾವ ಸ್ಥಳದಲ್ಲಿ ಆಗಲೀ ಝುಡ್ತೀ ವಾರಂಟಿನ ಜಾರೀ ನಡಿಸಿದ್ದಲ್ಲಿ, ಯಾವ ಪದಾರ್ಥಗಳ ಬಗ್ಗೆ ಝುಡ್ತೀ ಮಾಡೋಣಾಯಿತೋ ಆ ಪದಾರ್ಥಗಳ ಪೈಕಿ ಏನಾದರೂ ತಲಾಷಿಗೆ ಸಿಕ್ಕಿದರೆ, ಈ ಕೆಳಗೆ ಇರುವ ನಿಬಂಧನೆಗಳ ಮೇರಿಗೆ ತಯಾರ್ ಮಾಡೋಣಾದ ಅಂಥಾ ಪದಾರ್ಥಗಳ ಪಟ್ಟಿ ಸಮೇತ, ಆ ಪದಾರ್ಥಗಳನ್ನು ಕೂಡಲೇ ವಾರಂಟನ್ನು ಕೊಟ್ಟ ಕೋರ್ಟು ಬಳಿಗೆ ಒಯ್ಯತಕ್ಕದ್ದು, ಪರಂತು ಅಂಥಾ ಸ್ಥಳವು ಸದರೀ ಸ್ಥಳದಲ್ಲಿ ಅಧಿಕಾರ ವಿರುವ ಮ್ಯಾಜಸ್ಟ್ರೇಟನು ಅಂಥಾ ಕೋರ್ಟಿಗಿಂತ ಸಮೀಪ ಇರುವ ಸಂಗತಿಯಲ್ಲಿ ಸದರೀ ಪಟ್ಟಿ—ವ—ಪದಾರ್ಥಗಳನ್ನು ಕೂಡಲೇ ಅಂಥಾ ಮಾಜಸ್ಟ್ರೇಟನ ಬಳಿಗೆ ತೆಗದುಕೊಂಡುಹೋಗತಕ್ಕದ್ದು; ಮತ್ತು ವಿರುದ್ಧವಾದ ಒಳ್ಳೇ ಸಬಬುಗಳು ಇಲ್ಲದಿದ್ದರೆ, ಆ ಮಾಜಸ್ಟ್ರೇಟು ಆ ಪದಾರ್ಥಗಳನ್ನ ಅಂಥಾ ಕೋರ್ಟಿಗೆ ರವಾನೆ ಮಾಡಹೇಳಿ ಹುಕ್ಕುಂ ಮಾಡತಕ್ಕದ್ದು.

C.—Discovery of Persons wrongfully confined.

C.—ಅಕ್ರಮವಾಗಿ ಬಂಧಿಸಲ್ಪಟ್ಟ ಮನುಷ್ಯರ ತಲಾಷ್.

ಅಕ್ರಮವಾಗಿ ಬಂಧಿಸಲ್ಪಟ್ಟ ಮನುಷ್ಯರ ತಲಾಷ್.

100. ಯಾವದೊಂದು ಬಂಧನೆಯು, ಒಂದು ತಕ್ಸೀರೆಂತ ಆಗುವ ಸಂದರ್ಭಗಳಲ್ಲಿ ಯಾವನೊಬ್ಬ ಮನುಷ್ಯನಾದರೂ ಬಂಧಿಸಲ್ಪಟ್ಟು ಇರುತ್ತಾನೆಂತ ಒಬ್ಬ ಫಸ್ಟಕ್ಲಾಸು ಮೇಜಸ್ಟ್ರೇಟಗಾದರೂ, ಸಬ್‌ಡಿವಿಜನಲ್ ಮೇಜಸ್ಟ್ರೇಟಗೆ ಆದರೂ ನಂಬುವದಕ್ಕೆ ಸಬಬು ಇದ್ದರೆ, ಆತನು ಒಂದು ಝುಡ್ತಿ ವಾರಂಟನ್ನು ಕೊಡಬಹುದು, ಮತ್ತು ಆ ಝುಡ್ತೀವಾರಂಟು ಯಾರ ವಿಲಾಸಾ ಹಾಕಿ ಹುಕುಂ ಮಾಡೋಣಾಗಿದೆಯೋ ಆ ಮನುಷ್ಯನು ಹಾಗೆ ಬಂಧಿಸಲ್ಪಟ್ಟಮನುಷ್ಯನ ತಲಾಷ್ ಬಗ್ಗಾಗಿ ಝುಡ್ತೀ ಮಾಡಬಹುದು; ಮತ್ತು ಅಂಥಾ ಝುಡ್ತೀಯು ಆದಕ್ಕನುಗುಣವಾಗಿ ಮಾಡಲ್ಪಡತಕ್ಕದ್ದು,—ವ—ಸದರೀ ಮನುಷ್ಯನು ಸಿಕ್ಕಿದರೆ ಅವನನ್ನ ಒಬ್ಬ ಮೇಜಸ್ಟ್ರೇಟನ ಬಳಿಗೆ ತಕ್ಷಣವೇ ಕರದುಕೊಂಡುಹೋಗತಕ್ಕದ್ದು. ಸದರೀ ಮೇಜಸ್ಟ್ರೇಟನು ಮೊಕದ್ದಮೆಗಳ ಸಂಗತಿಗಳಿಂದ ತನಗೆ ಯುಕ್ತವೆಂತ ತೋರುವ ಹುಕುಮನ್ನು ಮಾಡತಕ್ಕದ್ದು.

D.—General Provisions relating to Searches.

D.—ಝುಡ್ತೀಗಳಿಗೆ ಸಂಬಂಧಿಸಿದ ಸಾಧಾರಣ ನಿಬಂಧನೆಗಳು.

ಝುಡ್ತೀವಾರಂಟಿಗೆ ವಿಲಾಸಾ ಹಾಕುವದು ವಗೈರೆ.

101. 43, 75, 77, 79, 82, 83ನೇ ಮತ್ತು 84ನೇ ಪ್ರಕರಣದ ನಿಬಂಧನೆಗಳು 96ನೇ ಪ್ರಕರಣದ, 98ನೇ ಪ್ರಕರಣ ಅಥವಾ 100ನೇ ಪ್ರಕರಣದ ಪ್ರಕಾರ ಕೊಡೋಣಾದ ಝುಡ್ತೀವಾರಂಟುಗಳಿಗೆ ಸಂಬಂಧಿಸಬಹುದಾದಷ್ಟುರಮಟ್ಟಿಗೆ ಲಗಾವಾಗಿರತಕ್ಕದ್ದು.

ಮುಚ್ಚಿ ಇರುವ ಸ್ಥಳದ ಜಿಮ್ಮೆಯಲ್ಲಿ ಇರುವವರು ಝುಡ್ತೀ ಮಾಡಿಬಿಡೋಣ.

102. ಈ ಅಧ್ಯಾಯಕ್ಕನುಗುಣವಾಗಿ ಝುಡ್ತೀ ಅಥವಾ ಪರೀಕ್ಷಿಸಿ ನೋಡಬೇಕಾದಂಥಾ ಯಾವದೊಂದು ಸ್ಥಳವು, ಮುಚ್ಚಿ ಇದ್ದರೆ, ಅಂಥಾ ಸ್ಥಳದಲ್ಲಿ ವಾಸವಾಗಿ ಇರುವ—ಯಾ—ಜಿಮ್ಮೇದಾರನಾಗಿ ಇರುವ ಮನುಷ್ಯನು, ವಾರಂಟಿನ ಅಮಲ್‌ಜಾರೀಮಾಡುವ ಆಫಿಸರನಾಗಲೀ—ಯಾ—ಇತರ ಮನುಷ್ಯನಾಗಲೀ ಅಪೇಕ್ಷಿಸಿ, ವಾ

 1083

ರಂಟನ್ನು ತೋರಿಸಿದಲ್ಲಿ, ಅಂಥವನನ್ನು ನಿರಾತಂಕವಾಗಿ ಒಳಕ್ಕೆ ಬಿಡತಕ್ಕದ್ದರ ಶಿವಾಯಿ ಒಳಗೆತಲಾಷ್ ಮಾಡಲಿಕ್ಕೆ ನ್ಯಾಯೆವಾದ ಸಮಸ್ತ ಸಲಕರಣೆಗಳನ್ನೂ ಸಹ ಉಂಟುಮಾಡಿ ಕೊಡತಕ್ಕದ್ದು.

ಅಂಥಾ ಸ್ಥಳದ ಒಳಕ್ಕ, ಹಾಗೆ ಪ್ರವೇಶಿಸುವದಕ್ಕೆ ಅಗದೆ ಇದ್ದಪಕ್ಷದಲ್ಲಿ, ವಾರಂಟಿನ ಜಾರೀಮಾಡುವ ಆಫೀಸರು—ಯಾ—ಇತರ ಮನುಷ್ಯನು 48ನೇ ಪ್ರಕರಣದಲ್ಲಿ ಏರ್ಪಡಿಸೋಣಾದ ರೀತಿಯಲ್ಲಿ ವರ್ತಿಸಬಹುದು.

ಸಾಕ್ಷಿಗಾರರಮುಂದೆ ಝಡ್ತೀ ಮಾಡಬೇಕು. 103. ಈ ಅಧ್ಯಾಯದ ಪ್ರಕಾರ ಝಡ್ತೀ ಮಾಡುವದಕ್ಕಿಂತ ಮುಂಚೆ, ಝಡ್ತೀ ಮಾಡಲಿಕ್ಕಿರುವ ಆಫಿಸರು—ಯಾ—ಇತರ ಮನುಷ್ಯನು ಹಾಗೆ ಝಡ್ತೀ ಮಾಡಬೇಕಾದಂಥಾ ಸ್ಥಳ ಎಲ್ಲಿ ಇರುತ್ತದೋ, ಆ ಸ್ಥಳದ ವಾಸಸ್ಥರಾದ ಇಬ್ಬರು—ಯಾ—ಹೆಚ್ಚು ಜನ ಗೃಹಸ್ಥರು ಹಾಜರಾಗಿ ತಲಾಷ್ ಮಾಡುವದನ್ನು ನೋಡಲಿಕ್ಕೆ ಅವರನ್ನು ಕೇಳತಕ್ಕದ್ದು.

ಅವರ ಸಮಕ್ಷಮದಲ್ಲಿ ಸದರೀ ಝಡ್ತೀಯನ್ನು ಮಾಡತಕ್ಕದ್ದು, ಮತ್ತು ಸದರೀ ಝಡ್ತೀಯವೇಳೆ ಕಂಡು ಹಿಡಿಯೋಣಾದ ಎಲ್ಲಾ ಪದಾರ್ಥಗಳ ಬಾಬತು ಮತ್ತು ಯಾವ್ಯಾವವು ಎಲ್ಲೆಲ್ಲಿ ಶಿಕ್ಕಿತೆಂಬ ಒಂದು ಪಟ್ಟಿಯನ್ನು ಸದರೀ ಆಫಿಸರ್—ಯಾ—ಅಂಥಾ ಮನುಷ್ಯನು ತಯಾರ್ ಮಾಡತಕ್ಕದ್ದು, ಮತ್ತು ಅದಕ್ಕೆ ಅಂಥಾ ಸಾಕ್ಷಿಗಳು ತಮ್ಮ ದಸ್ಕತ್ತು ಹಾಕತಕ್ಕದ್ದು, ಪರಂತು, ಈ ಪ್ರಕರಣಕ್ಕನುಗುಣವಾದ ಝಡ್ತೀಯನ್ನು ಕಂಡ ಸಾಕ್ಷಿಗಳು, ಅವರಿಗೆ ವಿಶೇಷವಾಗಿ ಸಮ್ಮನ್ಸ್ ಮಾಡಿದರೇನೇ ಹೊರ್ತು ಅನ್ಯಥಾ, ಝಡ್ತೀ ಸಾಕ್ಷಿಗಾರರಾಗಿ ಕೋರ್ಟಿಗೆ ಹಾಜರಾಗಬೇಕಾದ್ದಿಲ್ಲ.

ಝಡ್ತೀಮಾಡಿದ ಸ್ಥಳದ ವಾಸಸ್ಥನು ಹಾಜರು ಇರಬಹುದು.

ಝಡ್ತೀಮಾಡಿದ ಸ್ಥಳದ ವಾಸಸ್ಥನಾದರೂ—ಯಾ—ಅವನ ತರಫಿನಲ್ಲಿ ಮತ್ತ್ಯಾರನ್ನಾದರೂ, ಪ್ರತಿ ಸಂಗತಿಯಲ್ಲಿಯೂ, ಝಡ್ತಿ ಮಾಡುವಾಗ್ಯೆ ಹಾಜರಾಗಿ ಇರಹೇಳ, ಅವನಿಗೆ ಅಪ್ಪಣೆ ಕೊಡತಕ್ಕದ್ದು, ಮತ್ತು ಅವನು ಅರಿಕೆ ಮಾಡಿಕೊಂಡಲ್ಲಿ, ಈ ಪ್ರಕರಣದ ಪ್ರಕಾರ ತಯಾರ್ ಮಾಡೋಣಾದ ಪಟ್ಟಿಯ ಒಂದು ನಕಲನ್ನು ಸದರೀ ಸಾಕ್ಷಿಗಳಿಂದ ದಸ್ಕತ್ತು ಮಾಡಿಶಿ ಅಂಥಾ ವಾಸಸ್ಥ—ಯಾ—ಮನುಷ್ಯನಿಗೆ ಕೊಡತಕ್ಕದ್ದು.

E.—Miscellaneous.

E.—ವಿವಿಧ ವಿಷಯಗಳು.

ಹಾಜರುಮಾಡಿದ ದಸ್ತಾವೇಜು ಮುಂತಾಗಿ ಹಿಡಿದಿಡುವ ಅಧಿಕಾರ.

104. ಯಾವ ಕೋರ್ಟಿನವರಾದರೂ ತಮಗೆ ಯುಕ್ತವೆಂತ ತೋರಿದರೆ, ತಮ್ಮಮುಂದೆ ಈ ಕೋಡು ಪ್ರಕಾರ ಹಾಜರ್ಮಾಡಲ್ಪಟ್ಟ ಯಾವದೊಂದು ದಸ್ತಾವೇಜನ್ನಾದರೂ—ಯಾ—ಪದಾರ್ಥವನ್ನಾದರೂ ಹಿಡಿದಿಟ್ಟುಕೊಳ್ಳಬಹುದು.

ಮೇಜಿಸ್ಟ್ರೇಟನು ತನ್ನ ಎದುರಿಗೆ ಝಡ್ತೀ ಮಾಡಹೇಳಿ ಹುಕುಂ ಮಾಡಬಹುದು.

105. ಯಾವ ಸ್ಥಳವನ್ನು ಝಡ್ತೀ ಮಾಡಲಿಕ್ಕೆ ಒಬ್ಬ ಮೇಜಿಸ್ಟ್ರೇಟನು ಝಡ್ತಿ ವಾರಂಟನ್ನು ಕೊಡಬಹುದಾಗಿ ಇರುತ್ತದೋ, ಅಂಥಾ ಯಾವ ಸ್ಥಳವನ್ನಾದರೂ, ತನ್ನ ಯೆದುರಿಗೆ ಝಡ್ತೀ ಮಾಡಹೇಳಿ ಆತನು ಅಪ್ಪಣೆ ಮಾಡಬಹುದು.

———————

1084

PART IV.

4ನೇ ಭಾಗ.

PREVENTION OF OFFENCES

ತಕ್ಶೀರುಗಳನ್ನು ತಡೆಮಾಡುವದನ್ನು ಕುರಿತು.

CHAPTER VIII.—OF SECURITY FOR KEEPING THE PEACE AND FOR GOOD BEHAVIOUR.

8ನೇ ಅಧ್ಯಾಯ.—ನೆಮ್ಮದಿಯ ಪರಿಪಾಲನಾರ್ಥವಾಗಿ ಮತ್ತು ಒಳ್ಳೇನಡತೆಯ ಜಾಮೀನುಕುರಿತು.

A.—Security for keeping the Peace on Conviction.

A.—ತಕ್ಸೀರು ಸಾಬೀತಾದ ಸಂಗತಿಯಲ್ಲಿ ನೆಮ್ಮದಿಯ ಪರಿಪಾಲನಾರ್ಥವಾಗಿ ಜಾಮೀನುಕುರಿತು.

ತಕ್ಸೀರು ಸಾಬೀತಾದ ಸಂಗತಿಯಲ್ಲಿ ನೆಮ್ಮದಿಯ ಪರಿಪಾಲನಾರ್ಥವಾಗಿ ಜಾಮೀನು.

106. ದೊಂಬಿ, ಜಗಳ, ಅಥವಾ ಇತರ ರೀತಿಯಾದ ನೆಮ್ಮದಿಯ ಭಂಗ, ಅಥವಾ ಇಂಥಾ ತಕ್ಸೀರಿಗೆ ಕುಮ್ಮಕ್ಕು—ಯಾ—ಇಂಥಾದ್ದನ್ನು ಮಾಡಬೇಕೆಂಬ ಪ್ರತ್ಯೕಕ್ಷವಾದ ಇರಾದೆಯಿಂದ ಆಯುಧಪಾಣಿಗಳನ್ನ ಕೇರಿ ಹೋಣ— ಯಾ—ಅಕ್ರಮವಾದ ಕೃಷಿಗಳು ನಡಿಸೋಣ ಇಂಥಾ ಯಾವದನ್ನಾಗಲೀ ಮಾಡಿದ್ದಾಗಿ ಯಾವನೊಬ್ಬ ಮನುಷ್ಯನ ಮೇಲಾದರೂ ಅಪಾದನೆ ಬಂದು, ಅಥವಾ ದೇಹಕ್ಕೆ—ಯಾ—ಸ್ವತ್ತಿಗೆ ಕೆಡಕನ್ನುಂಟುಮಾಡುವದಾಗಿ ಭಯಪಡಿಸುವದರಿಂದ ತಕ್ಸೀರುಕರವಾದ ಬೆದರಿಸೋಣದರ ತಕ್ಸೀರು ಮಾಡಿದ್ದಾಗಿ, ಅಪಾದನೆಬಂದು, ಸೆಷ್ಶನ್‌ಕೋರ್ಟಿನವರ ಮುಂದೆ, ಅಥವಾ ಡಿಸ್ಟ್ರಿಕ್ಟ ಮೇಜಸ್ಟ್ರೇಟರಮುಂದೆ, ಸಬ್‌ಡಿವಿಜ್ಹನ ಮೇಜಸ್ಟ್ರೇಟರಮುಂದೆ, ಅಥವಾ ಫಷ್ಟಕ್ಲಾಸ ಮೇಜಸ್ಟ್ರೇಟರಮುಂದೆ ಆ ಮನುಷ್ಯನಮೇಲೆ ಸದರೀ ಅಪಾದನೇ ತಕ್ಸೀರು ಸಾಬೀತಾದಾಗ,

ಮತ್ತು ನೆಮ್ಮದಿ ಪರಿಪಾಲನಾರ್ಥವಾಗಿ ಅಂಥಾ ಮನುಷ್ಯನನ್ನು ಪತ್ರವನ್ನು ಬರೆದು ಕೊಡಹೇಳತಕ್ಕದ್ದು ಆಗತ್ಯವೆಂತ ಅಂಥಾ ಕೋರ್ಟಿನವರು ಅಭಿಪ್ರಾಯಪಟ್ಟರೆ,

ಅಂಥಾ ಕೋರ್ಟಿನವರು, ಆ ಮನುಷ್ಯನ ಮೇಲೆ ಸಜಾವಿಧಿಸುವಕಾಲದಲ್ಲಿ, ಮೂರು ಸಂವತ್ಸರಗಳಿಗೆ ಮೀರದೇ ತಮಗೆ ಯುಕ್ತವಾಗಿ ಕಾಣಬರುವಷ್ಟು ಕಾಲದಪರಿಯಂತ ನೆಮ್ಮದಿ ಕಾಪಾಡುವದಕ್ಕಾಗಿ ಸದರೀಮನುಷ್ಯನ ಸ್ಥಿತಿಗನುಗುಣವಾಗಿ, ಕೋರ್ಟಿನವರು ನಿರ್ಣಯಿಸುವ ಒಂದು ಮೊಬಲಗಿನ ಜಾಮೀನುದಾರರ ಸಮೇತ—ಯಾ—ಜಾಮೀನುದಾರರು ಇಲ್ಲದೇನೇ ಒಂದು ಪತ್ರವನ್ನು ಅಂಥಾ ಮನುಷ್ಯನು ಬರಕೊಡಬೇಕೆಂತಹುಕುಂ ಮಾಡಬಹುದು.

ಅಪೀಲ್‌ನಲ್ಲಿ ಅಥವ ಇತರ ವಿಧವಾಗಿ ಅಂಥಾ ಸಜಾವಿಧಿಯು ತಿರಿಗಿಸಲ್ಪಟ್ಟರೆ, ಹಾಗೆ ಬರಕೊಟ್ಟಪತ್ರ ರದ್ದಾಗಿರತಕ್ಕದ್ದು.

B.—Security for keeping the Peace in other Cases and Security for Good Behavior.

B.—ಇತರ ಸಂಗತಿಗಳಲ್ಲಿ ನೆಮ್ಮದಿ ಪರಿಪಾಲನಾರ್ಥವಾಗಿ ಜಾಮೀನು ಮತ್ತು ಒಳ್ಳೇನಡತೆ ಜಾಮೀನು ಕುರಿತು.

ಇತರ ಸಂಗತಿಗಳಲ್ಲಿ ನೆಮ್ಮದಿ ಪರಿಪಾಲನಾರ್ಥಜಾಮೀನು.

107. ಡಿಸ್ಟ್ರಿಕ್ಟ ಮೇಜಿಸ್ಟ್ರೇಟ, ಸಬ್‌ಡಿವಿಜ್ಹನ ಮೇಜಿಸ್ಟ್ರೇಟ, ಅಥವಾ ಫಷ್ಟಕ್ಲಾಸ ಮೇಜಿಸ್ಟ್ರೇಟರಿಗೆ, ತಮ್ಮ ಸ್ಥಳೀಯ ಅಧಿಕಾರ ಸರಹದ್ದಿನಒಳಗೆ, ಯಾವನೊಬ್ಬ ಮನುಷ್ಯನು ನೆಮ್ಮದಿಗೆ ಭಂಗಪಡಿಸುವ ಸಂಭವದಲ್ಲಿರುವದಾಗಿ,ಅಥವಾ ಬಹುಶಃ ನೆಮ್ಮದಿಯ ಭಂಗಕ್ಕೆ ಹೇತುವಾಗಬಹುದಾದ ಯಾವದೊಂದು ಅಕ್ರಮಕ

ತ್ಯಮಾಡುವ ಸಂಭವದಲ್ಲಿರುವದಾಗಿ, ಅಥವಾ ಅಂಥಾ ಸರಹದ್ದಿನ ಹೊರಗೆ ಇರುವ ಯಾವದೊಂದು ಸ್ಥಳದಲ್ಲಿ ಅವರೂ, ನೆಮ್ಮದಿಗೆ ಭಂಗಪಡಿಸುವ ಸಂಭವದಲ್ಲಿರುವದಾಗಿ—ಯಾ—ಮೇಲೆ ಹೇಳಿದಮೇರೆಗೆ ಯಾವದೊಂದು ಅಕ್ರಮಕೃತ್ಯ ಮಾಡುವ ಮನುಷ್ಯನು ತಮ್ಮ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಇರುವದಾಗಿ ವರ್ತಮಾನ ಬಂದಾಗ, ಅಂಥಾ ಮೇಜಿಸ್ಟ್ರೇಟನು ಒಂದು ವರುಷಕ್ಕೆ ಮೀರದೆ ತನ್ನ ಯುಕ್ತಪ್ರಕಾರ್ರ ನಿರ್ಣಯಿಸುವ ಒಂದು ಕಾಲಪರಿಯಂತ ನೆಮ್ಮದಿ ಪರಿಪಾಲನಾರ್ಥವಾಗಿ, ಜಾಮೀನುದಾರರ ಸಮೇತ—ಯಾ—ಜಾಮೀನುದಾರರು ಇಲ್ಲದೇನೇ ಒಂದು ಪತ್ರವನ್ನು ಬರಕೊಡುವದಕ್ಕೆ ಯಾಕೆ ಹುಕುಂ ಮಾಡಕೂಡದೆಂಬದಕ್ಕೆ ಸಬಬ್ ತೋರಿಸುವ ಹಾಗೆ, ಈ ಕೆಳಗೆ ಏರ್ಪಡಿಸೋಣಾಗುವ ಕ್ರಮಕ್ಕನುಗುಣವಾಗಿ, ಅಂಥಾ ಮನುಷ್ಯನನ್ನ ಕೇಳಬಹುದು.

107ನೇ ಪ್ರಕರಣಪ್ರಕಾರ ವರ್ತಿಸುವದಕ್ಕೆ ಅಧಿಕಾರಪಡಿಯದೆ ಇರುವ ಮೇಜಿಸ್ಟ್ರೇಟಮುಂತಾದವರು ನಡಿಸಬೇಕಾದ ನಡವಳಿತದ ಕ್ರಮ.

108. ಯಾವನೊಬ್ಬ ಮನುಷ್ಯನು ನೆಮ್ಮದಿಗೆ ಭಂಗಪಡಿಸುವ ಸಂಭವದಲ್ಲಿ ಇರುವದಾಗಿ, ಅಥವಾ ನೆಮ್ಮದಿಭಂಗಕ್ಕೆ ಬಹುಶಃ ಹೇತುವೆಯಾಗಬಹುದಾದ ಯಾವದೊಂದು ಅಕ್ರಮಕೃತ್ಯಮಾಡುವ ಹಾಗೆ ಇರುವದಾಗಿಯೂ,—ವ—ಅಂಥಾ ಮನುಷ್ಯನನ್ನ ಕೈದಿನಲ್ಲಿ ಇರಿಸಿದವಿನಹಾ, ಅಂಥಾ ನೆಮ್ಮದಿ ಭಂಗತಡಿಯಕೂಡದೆಂತ, 107ನೇ ಪ್ರಕರಣ ಪ್ರಕಾರ ವರ್ತಿಸುವದಕ್ಕೆ ಅಧಿಕಾರ ಪಡಿಯದೆ ಇರುವ ಯಾವನೊಬ್ಬ ಮೇಜಿಸ್ಟ್ರೇಟ್, ಅಥವಾ ಸರ್ಕ್ಯೂಟ್‌ಕೋರ್ಟ—ಯಾ—ಚೀಫ್‌ಕೋರ್ಟನವರಿಗೆ ನಂಬುವದಕ್ಕೆ ಸಬಬು ತೋರಿಬಂದಾಗ, ಅಂಥಾ ಮೇಜಿಸ್ಟ್ರೇಟ್—ಯಾ—ಕೋರ್ಟನವರು ಅಂಥಾ ಮನುಷ್ಯನನ್ನ (ಅವನು ಕೋರ್ಟನವರಮುಂದೆ ಅಥವಾ ಕೈದಿನಲ್ಲಿ ಆ ಮೊದಲೇ ಇಲ್ಲದೆ ಇದ್ದರೆ) ಕೈದು ಮಾಡುವಬಗ್ಗೆ ವಾರಂಟು ಕೊಡಬಹುದು, ಮತ್ತು 107ನೇ ಪ್ರಕರಣಪ್ರಕಾರ ಆ ಮೊಕದ್ದಮೆಯಲ್ಲಿ ವರ್ತಿಸುವದಕ್ಕೆ ಅಧಿಕಾರಪಡದು ಇರುವ ಮೇಜಿಸ್ಟ್ರೇಟನ ಬಳಿಗೆ ಅವನನ್ನು ಕಳುಹಿಸಬಹುದು.

ಈ ಪ್ರಕರಣಪ್ರಕಾರ ಯಾವನೊಬ್ಬನಾಗಲೀ ಒಬ್ಬ ಮೇಜಿಸ್ಟ್ರೇಟನ ಮುಂದೆ ಕಳುಹಿಸಲ್ಪಟ್ಟರೆ ಆ ಮೇಜಿಸ್ಟ್ರೇಟನು ಈ ಕೆಳಗೆ ನಿಬಂಧಿಸುವಣಾದ ತನಖಿ ಮುಗಿಯುವಪರಿಯಂತ ತನ್ನ ಯುಕ್ತಾನುಸಾರವಾಗಿ ಅಂಥಾ ಮನುಷ್ಯನನ್ನ ಕೈದಿನಲ್ಲಿ ಇರಿಸಬಹುದು.

ದೇಶಗೇಡಿಗಳಿಂದಲೂ ಗುಮಾನಿ ಜನಗಳಿಂದಲೂ ಒಳ್ಳೇನಡತೆಬಗ್ಗೆ ಜಾಮೀನು.

109. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಸಬು ಡಿವೀಜನು ಮೇಜಿಸ್ಟ್ರೇಟ್ ಅಥವಾ ಫಸ್ಟ್‌ಕ್ಲಾಸಮೇಜಿಸ್ಟ್ರೇಟಗೆ,

(a) ಆ ಮೇಜಿಸ್ಟ್ರೇಟನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ, ಯಾವನೊಬ್ಬ ಮನುಷ್ಯನು ಇದ್ದು ತನ್ನ ಇರುವಿಕೆಯು ಮರೆಪಡಿಸುವಹಾಗೆ ಎಚ್ಚರಿಕೆ ತಕ್ಕೊಳ್ಳುವದಾಗಿಯೂ, ಮತ್ತು ಯಾವದೊಂದು ತಕ್ಸೀರು ಮಾಡುವ ಉದ್ದಿಶ್ಯದಿಂದ ಹಾಗೆ ಆತನು ಎಚ್ಚರಿಕೆ ತಕ್ಕೊಳ್ಳುವದಾಗಿ ಕೂಡಾ ನಂಬಲಿಕ್ಕೆ ಸಬಬ್ ಇರುವದಾಗಿ, ಅಥವಾ

(b) ಅಂಥಾ ಸರಹದ್ದಿನೊಳಗೆ ಕಂಡೆಹಾಗೆ ಜೀವನೋಪಾಯವಿಲ್ಲದಂಥಾ, ಅಥವಾ ತನ್ನ ಹಾಲ್ ಅಹವಾಲ್ ಫಲಾನೇದೆಂತ ಸಮರ್ಪಕವಾಗಿ ತಿಳಿಸಲಾಗದಂಥಾ ಮನುಷ್ಯನು ಇರುವದಾಗಿ,

ವರ್ತಮಾನಬಂದಾಗ, ಅಂಥಾ ಮೇಜಿಸ್ಟ್ರೇಟನು, ಈ ಕೆಳಗೆ ನಿಬಂಧಿಸುವಣಾದ ಕ್ರಮಕ್ಕನುಗುಣವಾಗಿ, ಮೇಜಿಸ್ಟ್ರೇಟನ ಯುಕ್ತಪ್ರಕಾರ, ನಿರ್ಣಯಿಸುವ ಆರುತಿಂಗಳಿಗೆ ಮೀರದೆಯಿರುವ ಒಂದು ವಾಯಿದೆ ಪರ್ಯಂತ ಒಳ್ಳೇನಡತೆಯಬಗ್ಗೆ,ಜಾಮೀನು ಸಮೇತ ಒಂದು ಪತ್ರವನ್ನು, ಬರಕೊಡಲಿಕ್ಕೆ ಯಾಕೆ ಅವನನ್ನ ಕೇಳಕೂಡದೆಂಬದಕ್ಕೆ ಸಬಬ್ ತೋರಿಸುವಹಾಗೆ ಅಪೇಕ್ಷಿಸಬಹುದು.

ವಾಡಿಕೆಯ ತಕ್ಸೀರುದಾರರಿಂದ ಒಳ್ಳೇನಡತೆಯಬಗ್ಗೆ ಜಾಮೀನು.

110. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಸಬ್ ಡಿವೀಜನ್ ಮೇಜಿಸ್ಟ್ರೇಟ್ ಅಥವಾ ಮೈಸೂರು ಗವರ್ನ್ಮೆಂಟಿನವರಿಂದ ಇದರ ಉದ್ದಿಶ್ಯವಾಗಿ ವಿಶೇಷವಾಗಿ ಅಧಿಕಾರ ಕೊಡಲ್ಪಟ್ಟ ಫಸ್ಟ್ ಕ್ಲಾಸ ಮೇಜಿಸ್ಟ್ರೇಟಗೆ ತಮ್ಮ ಸ್ಥಳಿಕ ಅಧಿಕಾರ ಸರಹದ್ದಿನೊಳಗೆ ಇರುವ ಯಾವನೊಬ್ಬ ಮನುಷ್ಯನು, ವಾಡಿಕೆಯ ಕಳ್ಳನು—ಕನ್ನಗಾರ

ನ —ಯಾ—ಚೋರನು—ಯಾ—ಚೋರಿಮಾಲೆಂತ ತಿಳದು ಅದನ್ನು ವಾಡಿಕೆಯಾಗಿ ಈಸು ಕೊಳ್ಳುವವನೆ ಅಥವಾ ವಾಡಿಕೆಯಾಗಿ ಸುಲಿಗೆ ಮಾಡುತ್ತಾನೆಂತ ಅಥವಾ ಸುಲಿಗೆ ಮಾಡುವನಿಮಿತ್ತ ಕೆಡಕು ಮಾಡುವದಾ ಜನರನ್ನ ವಾಡಿಕೆಯಾಗಿ ಭೀತಿಪಡಿಸುವದಾಗಿ—ಯಾ—ಭೀತಿಪಡಿಸುವದಕ್ಕೆ ಯತ್ನಿಸುವದಾಗಿ ವರ್ತಮಾನ ಬಂದಾಗ,

ಅಂಥಾ ಮೇಜಸ್ಟ್ರೇಟನು, ಈ ಕೆಳಗೆ ಏರ್ಪಡಿಸೋಣಾದ ಕ್ರಮಕ್ಕನುಗುಣವಾಗಿ, ಮೂರುವರುಷಗಳಿಗೆ ಮೀರದೆ ಮೇಜಸ್ಟ್ರೇಟನ ಯುಕ್ತಪ್ರಕಾರ ನಿರ್ಣೈಸುವ ಒಂದು ಕಾಲದಪರಿಯಂತ ತನ್ನ ಒಳ್ಳೇನಡತೆಯಬಗ್ಯೆ ಜಾಮೀನುದಾರರ ಸಮೇತ, ಒಂದು ಪತ್ರವನ್ನು ಬರಕೊಡಲಿಕ್ಕೆ ಯಾಕೆ ಹುಕ್ಕುಂ ಕೊಡಕೂಡದೆಂಬದಕ್ಕೆ ಸಬಬ ತೋರಿಸುವಹಾಗೆ ಅಂಥಾ ಮನುಷ್ಯನನ್ನ ಅಪೇಕ್ಷಿಸಬಹುದು.

ಯುರೋಪಿಯನ ದೇಶ ಗೇಡಿಗಳಕುರಿತು ನಿಯಮ.

111. 1874ನೇ ಇಸವಿ ಯುರೋಪಿಯನಃ ದೇಶಗೇಡಿಗಳ ಆಕ್ಟ್ಪ್ರಕಾರ ತೀರ್ಮಾನಿಸಬಹುದಾದ ಸಂಗತಿಗಳಲ್ಲಿ ಯುರೋಪಿಯನಃ ಬ್ರಿಟಿಷ ಸಬ್ಜೆಕ್ಟಗಳಿಗೆ 109,—ವ—110ನೇ ಪ್ರಕರಣದ ನಿಬಂಧನೆಗಳು ಲಾಗೂವಾಗಕೂಡದು.

ಕೊಡತಕ್ಕ ಹುಕ್ಕುಂ.

112. 107ನೇ ಪ್ರಕರಣ, 109ನೇ ಪ್ರಕರಣ ಅಥವಾ 110ನೇ ಪ್ರಕರಣಕ್ಕನುಗುಣವಾಗಿ ನಡಕೊಳ್ಳುವ ಒಬ್ಬ ಮೇಜಸ್ಟ್ರೇಟನು ಯಾವನೊಬ್ಬ ಮನುಷ್ಯನನ್ನಾಗಲೀ ಅಂಥಾ ಪ್ರಕರಣದಮೇರಿಗೆ ಸಬಬ ತೋರಿಸಹೇಳುವಂತಾದ್ದು ಅಗತ್ಯವೆಂತ ಅಭಿಪ್ರಾಯಪಟ್ಟರೆ, ತಲ್ಪಿದವರ್ತಮಾನದ ಸಾರಾಂಶ, ಬರಕೊಡಬೇಕಾದ ಪತ್ರದ ಮೊಬಲಗು, ಮತ್ತು ಅದು ಸಲುವಳಿಯಾಗಿ ಇರತಕ್ಕಕಾಲ, ಅಗತ್ಯವಿದ್ದಲ್ಲಿ ಜಾಮೀನುದಾರರು (ಇದ್ದರೆ) ಅವರ ಸಂಖ್ಯೆ, ಸ್ಥಿತಿ, ತರಗತಿ, ಕೂಡಾ ನಮೂದಿಸಿ ಬರಹಮೂಲಕವಾಗಿ ಒಂದು ಹುಕುಮನ್ನು ಮಾಡತಕ್ಕದ್ದು.

ಕೋರ್ಟಿನಲ್ಲಿ ಹಾಜರು ಇರುವ ಮನುಷ್ಯನನ್ನು ಕುರಿತು ನಡಿಸಬೇಕಾದ ನಡವಳಿತ ಕ್ರಮ.

113. ಅಂಥಾ ಹುಕುಂ ಯಾವಮನುಷ್ಯನ ವಿಷಯವಾಗಿ ಉಂಟಾಯಿತೋ ಆ ಮನುಷ್ಯನು ಕೋರ್ಟಿನಲ್ಲಿ ಹಾಜರು ಇದ್ದರೆ, ಆ ಹುಕುಂ ಆತಗೆ ಓದಿ ಹೇಳತಕ್ಕದ್ದು, ಅಥವಾ, ಅವನು ಹಾಗೆ ಅಪೇಕ್ಷಿಸಿದಲ್ಲಿ, ಅದರ ಮತಲಬನ್ನು ಆತಗೆ ವಿವರಿಸಿ ಹೇಳತಕ್ಕದ್ದು.

ಹಾಗೆ ಹಾಜರು ಇಲ್ಲದೆ ಇರುವ ಮನುಷ್ಯನ ವಿಷಯದಲ್ಲಿ ಕೊಡಬೇಕಾದ ಸಮನ—ಯಾ—ವಾರಂಟ.

114. ಅಂಥಾ ಮನುಷ್ಯನು ಕೋರ್ಟಿನಲ್ಲಿ ಹಾಜರು ಇಲ್ಲದೆ ಇದ್ದರೆ, ಸದರೀ ಮನುಷ್ಯನು ಹಾಜರಾಗಹೇಳಿ ಒಂದು ಸಮ್ಮನ ಕೊಡತಕ್ಕದ್ದು, ಅಥವಾ, ಅಂಥಾ ಮನುಷ್ಯನು ಕೈದಿನಲ್ಲಿ ಇರುವದಾದರೆ, ಅವನು ಯಾವ ಆಫಿಸರನ ಭದ್ರತೆಯಲ್ಲಿ ಇರುತ್ತಾನೋ, ಅಂಥವನು ಆಮನುಷ್ಯನನ್ನ ಕೋರ್ಟಿಬಳಿ ಹಾಜರುಪಡಿಸುವಹಾಗೆ ಆಜ್ಞಾಪಿಸಿ ಒಂದು ವಾರಂಟನ್ನ ಕೊಡತಕ್ಕದ್ದು :

ಪರಂತು, ಪೋಲಿಸ ಆಫಿಸರನ ರಿಪೋರ್ಟಿನಮೇಲಾಗಲೀ ಅಥವಾ ಬೇರೆ ವರ್ತಮಾನದಿಂದಾಗಲೀ (ಅಂಥಾ ರಿಪೋರ್ಟ—ಯಾ—ವರ್ತಮಾನದ ಮತ್ಲಬನ್ನು ಮೇಜಸ್ಟ್ರೇಟನು ಬರೆದು ಇಡತಕ್ಕದ್ದು) ನೆಮ್ಮದಿಗೆ ಭಂಗವಾಗುವ ಭೀತಿ ತೋರುವ ಸಬಬು ಇರುವದಾಗಿಯೂ,—ವ—ಅಂಥಾ ಮನುಷ್ಯನನ್ನ ಕೂಡಲೇ ಕೈದುಮಾಡದೆ ಇದ್ದವಿನಹಾ ಅಂಥಾ ನೆಮ್ಮದಿ ಭಂಗ ತಡೆಯಕೂಡದೆಂತ ಅಂಥಾ ಮೇಜಸ್ಟ್ರೇಟಗೆ ಕಾಣಬಂದರೆ, ಸದರೀ ಮೇಜಸ್ಟ್ರೇಟನು ಯಾವಾಗಾದರೂ ಆ ಮನುಷ್ಯನನ್ನ ಕೈದುಮಾಡುವಬಗ್ಯೆ ವಾರಂಟನ್ನು ಕೊಡಬಹುದು.

112ನೇ ಪ್ರಕರಣ ಪ್ರಕಾರ ಕೊಡೋಣಾಗುವ ಹುಕುಮಿನ ನಕಲು ಸಮ್ಮನ—ಯಾ—ವಾರಂಟ ಸಂಗಡ ಇರತಕ್ಕದ್ದು.

115. 114 ನೇ ಪ್ರಕರಣಪ್ರಕಾರ ಕೊಡೋಣಾಗುವ ಪ್ರತಿ ಒಂದು ಸಮ್ಮನ—ಯಾ—ವಾರಂಟಿನೊಂದಿಗೆ 112ನೇ ಪ್ರಕರಣ ಪ್ರಕಾರ ಮಾಡೋಣಾದ ಹುಕುಮಿನ ನಕಲು ಇರತಕ್ಕದ್ದು, ಮತ್ತು ಸಮ್ಮನ ಸಾದರುಮಾಡುವ—ಯಾ—ವಾರಂಟನ್ನು ಜಾರಿಮಾಡುವ ಆಫಿಸರನು ಸದರೀ ನಕಲನ್ನು ಸಮ್ಮನ ಸಾದರು ಮಾಡಲ್ಪಟ್ಟ—ಯಾ—ವಾರಂಟು ಮೇರೆಗೆ ಕೈದು ಮಾಡಲ್ಪಟ್ಟ ಆಸಾಮಿಗೆ ಕೊಡತಕ್ಕದ್ದು.

1087

116. ಮೇಜಸ್ಟ್ರೇಟಿಗೆ, ಸಾಕಾದ ಸಬಬು ಕಾಣಬಂದರೆ, ನೆಮ್ಮದಿಯನ್ನು ಕಾಪಾಡತಕ್ಕಬಗ್ಗೆ ಪತ್ರವನ್ನು ಯಾಕೆ ಬರಕೊಡಕೂಡದೆಂಬದಕ್ಕೆ ಸಬಬು ತೋರಿಸಬೇಕಾಗಿ ಕೇಳೋಣಾದ ಮನುಷ್ಯನು ಸ್ವತಃ ಹಾಜರು ಆಗಬೇಕಾದ ಅಗತ್ಯವಿಲ್ಲವೆಂತ ಅಪ್ಪಣೆ ಕೊಡಬಹುದು, ಮತ್ತು ಅವನು ವಕೀಲನ ಮುಖಾಂತ್ರವಾಗಿ ಹಾಜರಾಗಬಹುದಾಗಿ ಅಪ್ಪಣೆ ಕೊಡಬಹುದು.

ಖುದ್ದು ಹಾಜರಾಗಬೇಕಾದ ಅಗತ್ಯವಿಲ್ಲವೆಂಬುವ ಅಧಿಕಾರ.

117. 112ನೇ ಪ್ರಕರಣ ಪ್ರಕಾರ ಕೊಡೋಣಾದ ಹುಕ್ಕುಂ ಕೋರ್ಟಿನಲ್ಲಿ ಹಾಜರು ಇರುವ ಮನುಷ್ಯಗೆ, 113ನೇ ಪ್ರಕರಣ ಪ್ರಕಾರ ಪೋದಿ ಹೇಳಿದಾಗ—ಯಾ—ವಿವರಿಸಿ ಹೇಳಿದಾಗ, ಅಥವಾ 114ನೇ ಪ್ರಕರಣ ಪ್ರಕಾರ ಕೊಡೋಣಾದ ಸಮ್ಮನ್ಸ-ಯಾ—ವಾರಂಟು ಪ್ರಕಾರ, ಯಾವನೊಬ್ಬನು ಮೇಜಸ್ಟ್ರೇಟನಮುಂದೆ ಹಾಜರಾದಾಗ—ಯಾ—ತರಲ್ಪಟ್ಟಾಗ, ಮೇಜಿಸ್ಟ್ರೇಟನು ವ್ಯವಹರಣೆಗಳ ನಡಿಸುವದಕ್ಕೆ ಆಧಾರವಾದ ವರ್ತಮಾನದ ನಿಜತ್ವವನ್ನು ಕುರಿತು ವಿಚಾರಣೆ ಮಾಡತಕ್ಕದ್ದು, ಮತ್ತು ಅವಶ್ಯವೆಂತ ತೋರುವ ಹೆಚ್ಚಿನ ರುಜುವಾತನ್ನು ತಕ್ಕೊಳ್ಳತಕ್ಕದ್ದು.

ವರ್ತಮಾನದ ನಿಜಸ್ಥಿತಿ ಕುರಿತು ವಿಚಾರಣೆಗಳು.

ನೆಮ್ಮದಿಯ ಪರಿಪಾಲನಾರ್ಥವಾಗಿ ಜಾಮೀನು ಕೊಡಹೇಳಿ ಹುಕುಂಮಾಡಿದ ಸಂಗತಿಯಲ್ಲಿ, ಸಮ್ಮನ್ಸ ಮೊಕದ್ದಮೆಗಳ ದರ್ಯಾಫ್ತಿಯನ್ನು ನಡಿಸುವ ವಿಷಯದಲ್ಲಿ ಈ ಕೆಳಗೆ ನಿಬಂಧಿಸುವಣಾದ ಕ್ರಮಪ್ರಕಾರವೂ, ಒಳ್ಳೇನಡತೆಯಬಗ್ಗೆ ಜಾಮೀನು ಕೊಡಹೇಳಿ ಹುಕುಂಮಾಡಿದ ಸಂಗತಿಯಲ್ಲಿ ಆಪಾದನೆ ಚೀಟು ತಯ್ಯಾರ ಮಾಡತಕ್ಕ ಸಂಗತಿ ಹೊರತು ಮಿಕ್ಕ ಸಂಗತಿಯಲ್ಲಿ, ವಾರಂಟ ಮೊಕದ್ದಮೆಗಳ ದರ್ಯಾಫ್ತಿಯನ್ನು ನಡಿಸುವ ವಿಷಯದಲ್ಲಿ ಈ ಕೆಳಗೆ ಏರ್ಪಡಿಸೋಣಾದ ಕ್ರಮಕ್ಕನುಸಾರವಾಗಿಯೂ ಸ್ವಲ್ಪಹೆಚ್ಚು ಕಡಮೆಯಾಗಿ ಸಾಧ್ಯವಾಗುವಷ್ಟರಮಟ್ಟಿಗೆ ನಡಿಸತಕ್ಕದ್ದು.

ಈ ಪ್ರಕರಣದ ಉದ್ದಿಶ್ಯಾರ್ಥವಾಗಿ ಒಬ್ಬನು ವಾಡಿಕೆಯ ತಕ್ಸೀರುದಾರನೆಂಬ ಸಂಗತಿಯು ಅವನ ಸಾಧಾರಣ ಪ್ರತಿಷ್ಠೆವಿಷಯದ ರುಜುವಾತಿನಿಂದ—ಯಾ—ಬೇರೇವಿಧವಾಗಿ ರುಜುಪಡಿಸಬಹುದು.

118. ಅಂಥಾ ವಿಚಾರಣೆಯಲ್ಲಿ, ಯಾವಮನುಷ್ಯನ ವಿಷಯವಾಗಿ ವಿಚಾರಣೆ ನಡಿಸೋಣಾಯಿತೋ ಅಂಥವನು ನೆಮ್ಮದಿಯ ಪರಿಪಾಲನಾರ್ಥವಾಗಿಯಾಗಲೀ, ಅಥವಾ ಒಳ್ಳೇ ನಡತೆಯಿಂದ ಇರುವಹಾಗೆಯಾಗಲೀ, ಆಯಾ ಸಂಗತಿಗನುಸಾರವಾಗಿ, ಜಾಮೀನು ಸಮೇತ—ಯಾ—ಜಾಮೀನು ಇಲ್ಲದೇನೇ, ಪತ್ರ ಬರಕೊಡಬೇಕಾದ್ದು ಅಗತ್ಯವೆಂತ ರುಜೂಪಟ್ಟರೆ, ಮೇಜಿಸ್ಟ್ರೇಟನು ಆ ಮೇರೆಗೆ ಹುಕುಮನ್ನು ಮಾಡತಕ್ಕದ್ದು:

ಜಾಮೀನು ಕೊಡಹೇಳಿ ಹುಕುಂ

ಪರಂತು —

ಒಂದನೇ—112ನೇ ಪ್ರಕರಣ ಪ್ರಕಾರ ಮಾಡೋಣಾದ ಹುಕುಮಿನಲ್ಲಿ ನಮೂದಿಸುವಣಾದ ಜಾಮೀನುತರಕ್ಕೆ ವಿಭೇದವಾಗಿಯಾಗಲೀ, ಅಥವಾ ಅದರಲ್ಲಿ ನಮೂದಿಸೋಣದರಕಿಂತ ಹೆಚ್ಚು ಮೊಬಲಗಿಗೆಯಾಗಲೀ,—ಯಾ—ಅದರಲ್ಲಿ ತೋರಿಸೋಣಾದ ವಾಯಿದೆಗಿಂತ ಜಾಸ್ತಿ ವಾಯಿದೆಗೆ ಜಾಮೀನು ಯಾವನೊಬ್ಬನಿಂದಲೂ ಕೇಳಕೂಡದು:

ಎರಡನೇ—ಅಂಥಾ ಪ್ರತಿಬಂದು ಪತ್ರದ ಮೊಬಲಗು ಇಷ್ಟೇ ಎಂಬದು ಮೊಕದ್ದಮೆಯ ಸಂಗತಿಗಳಿಗನುಸಾರವಾಗಿ ನಿಶ್ಚೈಸತಕ್ಕದ್ದಲ್ಲದೆ ಅತಿಹೆಚ್ಚಾಗಿರಕೂಡದು:

ಮೂರನೇ—ಯಾವ ಮನುಷ್ಯನ ವಿಷಯವಾಗಿ ವಿಚಾರಣೆ ನಡಿಸೋಣಾಯಿತೋ ಅಂಥವನು ಮೈನರಾಗಿದ್ದಪಕ್ಷಕ್ಕೆ, ಅವನ ಜಾಮೀನುದಾರರುಮಾತ್ರ ಪತ್ರವನ್ನು ಬರಕೊಡತಕ್ಕದ್ದು.

119. 117ನೇ ಪ್ರಕರಣಪ್ರಕಾರ ಮಾಡೋಣಾದ ವಿಚಾರಣೆಯಲ್ಲಿ, ಯಾರವಿಷಯವಾಗಿ ವಿಚಾರಣೆ ನಡಿಸೋಣಾಯಿತೋ ಅಂಥವನು ನೆಮ್ಮದಿ ಪರಿಪಾಲನಾರ್ಥವಾಗಿ—ಯಾ—ಒಳ್ಳೇನಡತೆಯಿಂದ ಇರುವಹಾಗೆ ಆಗಲೀ, ಆಯಾ ಸಂಗತಿಮೇರಿಗೆ, ಪತ್ರವನ್ನು ಕೊಡತಕ್ಕ ಆಗತ್ಯವೆಂತ ರುಜೂಪಡದು ಇದ್ದರೆ, ಮೇಜಸ್ಟ್ರೇಟನು ಆ ಸಂಗತಿ ಕಾಣಿಸಿ ರಿಕಾರ್ಡಿನಲ್ಲಿ ಬರೆದಿಡತಕ್ಕದ್ದು, ಮತ್ತು, ಅಂಥಾ ಮನುಷ್ಯನು ವಿಚಾರಣೆಸಂಬಂಧವಾಗಿ, ಮಾತ್ರ ಕೈದಿನಲ್ಲಿ ಇರುವ ಪಕ್ಷಕ್ಕೆ, ಆತಗೆ ಬಿಟ್ಟುಬಿಡತಕ್ಕದ್ದು, ಅಥವಾ ಆತನು ಕೈದಿನಲ್ಲಿ ಇಲ್ಲದೆ ಇರುವ ಪಕ್ಷಕ್ಕೆ, ಆತನನ್ನು ವಿಮೋಚನೆ ಪಡಿಸತಕ್ಕದ್ದು.

ಯಾರಮೇಲೆ ವರ್ತಮಾನಬಂತೋ ಆ ಮನುಷ್ಯನ ವಿಮೋಚನೆ.

C.—Proceedings in all Cases subsequent to Order to furnish Security.

C.—ಜಾಮೀನು ಕೊಡಹೇಳಿ, ಹುಕುಂ ಕೊಟ್ಟನಂತರ ಯೆಲ್ಲಾ ಮೊಕದ್ದಮೆಗಳಲ್ಲೂ, ನಡಿಸತಕ್ಕ ವ್ಯವಹರಣೆ.

120. 106 ಅಥವಾ 118ನೇ ಪ್ರಕರಣ ಪ್ರಕಾರ ಯಾವ ಮನುಷ್ಯನಿಂದ ಜಾಮೀನುಕೇಳಿ ಹುಕುಂ ಮಾಡೋಣಾಯಿತೋ, ಅಂಥವನು ಆ ಹುಕುಂ ಮಾಡುವ ಕಾಲದಲ್ಲಿ, ಕೈದು ಸಜಾ ವಿಧಿಸಲ್ಪಟ್ಟವನಾಗಿದ್ದರೆ—ಯಾ—ಸಜಾ ಅನುಭವಿಸುತ್ತಾನಾದರೆ, ಅಂಥಾ ಜಾಮೀನು ಕೇಳೋಣಾದ ಕಾಲವು, ಅಂಥಾ ಸಜಾ ಪೂರ್ತಿ ಆದ ಕಾಲದಿಂದ, ಪ್ರಾರಂಭವಾಗತಕ್ಕದ್ದು.

ಯಾವ ಕಾಲದ ಪರ್ಯಂತ ಜಾಮೀನು ಕೇಳೋಣಾಯಿತೋ ಆಕಾಲದ ಪ್ರಾರಂಭ.

ಇತರ ಸಂಗತಿಗಳಲ್ಲಿ ಅಂಥಾ ಕಾಲವು ಹುಕುಂ ಆದ ತಾರೀಖಿನಿಂದ ಪ್ರಾರಂಭವಾಗತಕ್ಕದ್ದು.

121. ಅಂಥಾ ಮನುಷ್ಯನು, ಬರಕೊಡಬೇಕಾದ ಪತ್ರವು, ಆಯಾ ಸಂಗತ್ಯಾನುಸಾರವಾಗಿ, ನೆಮ್ಮದಿಯನ್ನ ಕಾಪಾಡತಕ್ಕಬಗ್ಯೆ ಆಗಲೀ, ಅಥವಾ ಒಳ್ಳೇ ನಡತೆಯಿಂದ ಇರತಕ್ಕಬಗ್ಯೆ ಆಗಲೀ, ಅಂಥವನನ್ನು ಬದ್ಧಪಡಿಸಿ ಇರತಕ್ಕದ್ದು. ಒಳ್ಳೇ ನಡತೆಯಿಂದ ಇರತಕ್ಕಬಗ್ಯೆ ಜಾಮೀನು ಕೊಟ್ಟ ಸಂಗತಿಯಲ್ಲಿ, ಕೈದು ಸಜಾವಿನಿಂದ ಶಿಕ್ಷಿಸಲ್ಪಡತಕ್ಕ ಯಾವ ತಕ್ಸೀರನ್ನಾದರೂ, ಮಾಡೋಣ—ಯಾ—ಮಾಡಲಿಕ್ಕೆ ಪ್ರಯತ್ನ ಮಾಡೋಣ—ಯಾ—ಅದಕ್ಕೆ ಕುಮ್ಮಕು ಮಾಡೋಣ, ಇದು ಯೆಲ್ಲಿ ಮಾಡಿದಾಗ್ಯೂ ಸರಿಯೇ, ಪತ್ರಕ್ಕೆ ತಪ್ಪಿದಹಾಗೆ ಆಗುತ್ತೆ.

ಪತ್ರದ ಮತ್ಲಬು.

122. ಈ ಅಧ್ಯಾಯಕ್ಕನುಗುಣವಾಗಿ, ಒಳ್ಳೇ ನಡತೆಯಬಗ್ಯೆ ಕೊಡೋಣಾದ ಯಾವ ಜಾಮೀನುದಾರನನ್ನಾದರೂ, ಅಂಥಾ ಜಾಮೀನುದಾರನು ಮೇಜಸ್ಟ್ರೇಟನು ಬರದಿಡಬೇಕಾದ ಸಬಬುಗಳಮೇಲೆ, ನಾಲಾಯಖನೆಂಬ ಸಂಗತಿಯಿಂದ ಅಂಗೀಕರಿಸುವದಿಲ್ಲವೆಂತ ಮೇಜಸ್ಟ್ರೇಟನು ನಿರಾಕರಿಸಬಹುದು.

ಜಾಮೀನದಾರರನ್ನು ತಿರಸ್ಕರಿಸುವ ಅಧಿಕಾರ.

123. 106 ನೇ ಪ್ರಕರಣ ಅಥವಾ 118 ನೇ ಪ್ರಕರಣಪ್ರಕಾರ ಜಾಮೀನು ಕೊಡಹೇಳಿ ಹುಕುಂ ಮಾಡಲ್ಪಟ್ಟ ಯಾವನೊಬ್ಬ ಮನುಷ್ಯನು, ಹಾಗೆ ಕೊಡಬೇಕಾದ ಜಾಮೀನು ಕಾಲವು ಯಾವ ತಾರೀಖಿನಿಂದ ಪ್ರಾರಂಭವಾಗುತ್ತದೋ ಆ ತಾರೀಖಿನಲ್ಲಿ—ಯಾ—ತತ್ಪೂರ್ವದಲ್ಲಿ ಜಾಮೀನು ಕೊಡಲು ತಪ್ಪಿದರೆ, ಈ ಕೆಳಗೆ ನಮೂದಿಸೋಣಾದ ಸಂಗತಿಯಲ್ಲಿ ಅಲ್ಲದೆ, ಇತರ ಸಂಗತಿಯಲ್ಲಿ ಅವನನ್ನ ಕೈದಿನಲ್ಲಿ ಇಡತಕ್ಕದ್ದು, ಅಥವಾ, ಅವನು ಆ ಮೊದಲೇ ಕೈದಿನಲ್ಲಿ ಇರುವನಾದರೆ, ಅಂಥಾ ಕಾಲ ಕಳೆಯುವವರಿಗೆ ಅಥವಾ ಅಂಥಾ ಕಾಲದೊಳಗಾಗಿ ಜಾಮೀನು ಕೊಡಹೇಳಿದ ಕೋರ್ಟು—ಯಾ—ಮೇಜಸ್ಟ್ರೇಟ್, ಅಥವಾ ಯಾವ ಜೈಲಿನಲ್ಲಿ ಆತನನ್ನ ಕೈದು ಮಾಡಿಡಬೇಕೆಂತ, ಹುಕುಂ ಮಾಡಲ್ಪಟ್ಟಿರುತದೋ, ಆ ಜೈಲ್ ಜಿಮ್ಮೆಯಲ್ಲಿರುವ ಆಫಿಸರ್ ಬಳಿ ಜಾಮೀನು ಕೊಡುವವರಿಗೆ ಅವನನ್ನ ಕೈದಿನಲ್ಲಿ ತಡೆದಿಡತಕ್ಕದ್ದು.

ಜಾಮೀನು ಕೊಡಲು ತಪ್ಪಿದರೆ ಕೈದು.

ಅಂಥಾ ಮನುಷ್ಯನು ಪ್ರೊಂದು ಸಂವತ್ಸರಕ್ಕೆ ಮೀರಿದ ಪ್ರೊಂದು ಕಾಲದಪರ್ಯಂತ ಜಾಮೀನುಕೊಡಬೇಕೆಂತ

ಸೆಷನ್ ಕೋರ್ಟಿನವರಮುಂದೆ ಪ್ರೊಸೀಡಿಂಗಸಗಳನ್ನು ಯಾವಾಗ ಇಡಬೇಕು.

ಮೇಜಿಸ್ಟ್ರೇಟನಿಂದ ಹುಕುಂ ಮಾಡಲ್ಪಟ್ಟಿರುವದಾದರೆ, ಮತ್ತು ಆತ ಆ ಮೇರಿಗೆ ಜಾಮೀನು ಕೊಡದೆ ಇದ್ದರೆ, ಅಂಥಾ ಮೇಜಿಸ್ಟ್ರೇಟನು, ಸೆಷನ್ ಕೋರ್ಟಿನವರ ಹುಕುಂ ಉಂಟಾಗುವ ತನಕ, ಅಂಥವನನ್ನು ಕೈದಿನಲ್ಲಿ ಇರಿಸತಕ್ಕದೆಂತ ಅಜ್ಞಾಪಿಸಿ ಒಂದು ವಾರಂಟನ್ನು ಕೊಡತಕ್ಕದ್ದು; ಮತ್ತು ಅನುಕೂಲವಾದಷ್ಟು ತ್ವರೆಯಲ್ಲಿ, ಆ ಬಾಬತು ಪ್ರೊಸೀಡಿಂಗ್ಸುಗಳನ್ನು ಅಂಥಾ ಕೋರ್ಟಿನವರ ಮುಂದೆ ಇಡತಕ್ಕದ್ದು.

ಅಂಥಾ ಕೋರ್ಟಿನವರು, ಆ ಪ್ರೊಸಿಡಿಂಗ್ಸುಗಳನ್ನು ವಿಮರ್ಶಿಸಿ, ತಮಗೆ ಅಗತ್ಯವಾಗಿ ತೋರುವಂಥಾ ತಾಜಾ ವರ್ತಮಾನ—ಯಾ—ಸಾಕ್ಷ್ಯವನ್ನು ತರಿಸಿಕೊಂಡು, ಸದರೀ ಮೊಕದ್ದಮೆಯಲ್ಲಿ ತಮಗೆ ಯುಕ್ತ ತೋರುವ ಹುಕುಮನ್ನು ಕೊಡಬಹುದು. ಪರಂತು ಜಾಮೀನು ಕೊಡಲು ತಪ್ಪಿದ್ದಕ್ಕೋಸ್ಕರ ಒಬ್ಬನನ್ನು ಕೈದಿನಲ್ಲಿ ಇಟ್ಟ ಕಾಲವು (ಹಾಗೆ ಇದ್ದರೆ) ಮೂರು ಸಂವತ್ಸರಗಳಿಗೆ ಮೀರಿ ಇರಕೂಡದು.

ಕೈದಿನ ತರಹ.

ನೆಮ್ಮದಿ ಕಾಪಾಡತಕ್ಕಬಗ್ಯೆ ಜಾಮೀನು ಕೊಡುವದಕ್ಕೆ ತಪ್ಪಿದ್ದರಿಂದುಂಟಾಗುವ ಕೈದು ಬರೀ ಕೈದಾಗಿರತಕ್ಕದ್ದು.

ಒಳ್ಳೇ ನಡತೆಯಬಗ್ಯೆ ಜಾಮೀನು ಕೊಡುವದಕ್ಕೆ ತಪ್ಪಿದ್ದರಿಂದುಂಟಾಗುವ ಕೈದು ಕೋರ್ಟಿನವರಾಗಲೀ ಯಾ—ಮ್ಯಾಜಿಸ್ಟ್ರೇಟನಾಗಲೀ ಪ್ರತಿ ಮೊಕದ್ದಮೆಯಲ್ಲಿಯೂ ವಿಧಿಸುವಹಾಗೆ ಕಠಿಣವಾದ್ದಾಗಿ—ಯಾ—ಬರೀದಾಗಿ ಇರಬಹುದು.

ಜಾಮೀನು ಕೊಡುವದಕ್ಕೆ ತಪ್ಪಿದ್ದರಿಂದ ಕೈದಿನಲ್ಲಿರುವಂಥವರನ್ನು ಬಿಡುಗಡೆ ಮಾಡುವ ಸ್ವಾತಂತ್ರ್ಯ.

124. ಈ ಅಧ್ಯಾಯಕ್ಕನುಗುಣವಾಗಿ ಜಾಮೀನು ಕೊಡುವದಕ್ಕೆ ತಪ್ಪಿದ್ದರಿಂದ ಕೈದಿನಲ್ಲಿ ಇರಿಸಲ್ಪಟ್ಟ ಯಾವ ಮನುಷ್ಯನನ್ನಾದರೂ, ಅವನಿಗೆ ಬಿಡುಗಡೆ ಮಾಡಿದ್ದರಿಂದ ಜನಗಳಿಗೆ ಅಥವಾ ಬೇರೆ ಯಾವನೊಬ್ಬ ಮನುಷ್ಯನಿಗಾದರೂ, ಬಾಧಕ ಇರಲಾರದೆಂತ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನಿಗೆ ತೋರಿ ಬಂದಾಗ, ಅವನನ್ನು ಖುಲಾಸಾ ಮಾಡುವಂತೆ ಹುಕುಂ ಕೊಡಬಹುದು; ಆ ಪಕ್ಷದಲ್ಲಿ ಸದರೀ ಕೈದು, ಅಂಥಾ ಮ್ಯಾಜಿಸ್ಟ್ರೇಟನ—ಯಾ—ತನ್ನ ಉದ್ಯೋಗದಲ್ಲಿ ಮುಂಚೆ ಇರುತ್ತಿದ್ದವನ ಅಥವಾ ತನ್ನ ತಾಬೇದಾರಿ ಮ್ಯಾಜಿಸ್ಟ್ರೇಟನ ಹುಕುಮಿನ ಮೂಲವಾಗಿ ಮಾಡಲ್ಪಟ್ಟದ್ದಾಗಿ ಇದ್ದಾಗ್ಯೂ, ಚಿಂತೆ ಇಲ್ಲ.

ಈ ಅಧ್ಯಾಯಕ್ಕನುಗುಣವಾಗಿ ಸೆಷನ್ ಅಥವಾ ಚೀಫ್ ಕೋರ್ಟಿನವರಿಂದ ಹುಕುಂ ಮಾಡಲ್ಪಟ್ಟ ಮೇರೆಗೆ, ಜಾಮೀನನ್ನು ಕೊಡುವದಕ್ಕೆ ತಪ್ಪಿದ್ದರಿಂದ ಕೈದಿನಲ್ಲಿ ಇರಿಸಲ್ಪಟ್ಟ ಯಾವನೊಬ್ಬ ಮನುಷ್ಯನನ್ನಾದರೂ, ಆ ಮೇರೆಗೆ ಯಾರಿಗೂ ಬಾಧಕ ಇಲ್ಲದೆ ಖುಲಾಸಾ ಮಾಡಬಹುದೆಂತ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ತೋರಿ—ಬಂದಾಗ, ಅಂಥಾ ಮ್ಯಾಜಿಸ್ಟ್ರೇಟು ಆಯಾ ಸಂಗತಿಗನುಗುಣವಾಗಿ, ಸೆಷನ್ ಕೋರ್ಟಿನವರಿಗೆ—ಯಾ—ಚೀಫ್ ಕೋರ್ಟಿನವರಿಗೆ ಸದರೀ ಮೊಕದ್ದಮೆಯನ್ನು ಕುರಿತು ಕೂಡಲೇ ರಿಪೋರ್ಟ್ ಮಾಡತಕ್ಕದ್ದು; ಮತ್ತು ಸದರೀ ಕೋರ್ಟಿನವರು, ತಮಗೆ ಯುಕ್ತಕಂಡರೆ, ಅಂಥಾ ಮನುಷ್ಯನನ್ನು ಖುಲಾಸಾ ಪಡಿಸುವದಕ್ಕೆ ಹುಕುಂ ಮಾಡಬಹುದು.

ನೆಮ್ಮದಿ ಕಾಪಾಡತಕ್ಕಬಗ್ಯೆ ತಕ್ಕೊಂಡ ಯಾವ ಪತ್ರವನ್ನಾದರೂ, ರದ್ದು ಮಾಡಲಿಕ್ಕೆ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನ ಅಧಿಕಾರ.

125. ಈ ಅಧ್ಯಾಯಕ್ಕನುಗುಣವಾಗಿ ತನ್ನ ಕೋರ್ಟಿಗೆ ಮೇಲ್ ಕೋರ್ಟಾಗಿರದೆ, ತನ್ನ ಡಿಸ್ಟ್ರಿಕ್ಟಿನಲ್ಲಿ ಯಾವ ಕೋರ್ಟಿನವರಿಂದಾದರೂ, ಕೊಡೋಣಾದ ಹುಕುಮಿನಗನುಗುಣವಾಗಿ ನೆಮ್ಮದಿ ಕಾಪಾಡತಕ್ಕಬಗ್ಯೆ, ಕೊಟ್ಟ ಪತ್ರವನ್ನು, ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನು ಯಾವ ಕಾಲದಲ್ಲಾದರೂ, ಬರೆದಿಡಬೇಕಾದ ತಕ್ಕಷ್ಟು ಸಬಬುಗಳ ಮೇಲೆ, ರದ್ದು ಮಾಡಬಹುದು.

ಜಾಮೀನುದಾರರ ವಿಮೋಚನೆ.

126. ಒಬ್ಬನ ನೆಮ್ಮದಿಕರವಾದ ನಡತೆಬಗ್ಯೆ, ಅಥವಾ, ಒಳ್ಳೇ ನಡತೆಯಂ ಕುರಿತು ಹೊಣೆಯಾಗ್ನಿನಿಂತ ಯಾವ ಜಾಮೀನುದಾರನಾದರೂ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ, ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ, ಅಥವಾ ಫಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟಿಗೆ, ಈ

ಅಧ್ಯಾಯಕ್ಕನುಗುಣವಾಗಿ, ಆ ಮ್ಯಾಜಿಸ್ಟ್ರೇಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಬರಕೊಟ್ಟ ಯಾವದೊಂದು ಪತ್ರವನ್ನು ರದ್ದು ಮಾಡಬೇಕೆಂದು, ಯಾವಾಗ್ಯೆ ಅಂದರೆ ಅವಾಗ್ಯೆ, ಅರ್ಜಿ ಬರೆದು ಕೊಳ್ಳಬಹುದು.

ಹಾಗೆ ಅರ್ಜಿ ಬಂದ ಮೇಲೆ, ಯಾರಿಗೆ ಆ ಜಾಮೀನುದಾರನು ಹೊಣೆಯಾಗಿರುತ್ತಾನೋ, ಆ ಮನುಷ್ಯನು ತನ್ನ ಮುಂದೆ ಹಾಜರಾಗುವಹಾಗೆ—ಯಾ—ಹಾಜರು ಪಡಿಸಲ್ಪಡುವಹಾಗೆ ಮ್ಯಾಜಿಸ್ಟ್ರೇಟನು, ತನ್ನ ಯುಕ್ತ ಪ್ರಕಾರ, ಸಮ್ಮನ್ಸ—ಯಾ—ವಾರಂಟನ್ನು ಕೊಡತಕ್ಕದ್ದು.

ಅಂಥಾ ಮನುಷ್ಯನು ಮ್ಯಾಜಿಸ್ಟ್ರೇಟಿನ ಮುಂದೆ ಹಾಜರಾಗ—ಯಾ—ಹಾಜರು ಮಾಡಲ್ಪಟ್ಟಾಗ, ಸದರೀ ಮ್ಯಾಜಿಸ್ಟ್ರೇಟು ಪತ್ರವನ್ನು ರದ್ದು ಪಡಿಸಿ, ಆ ಪತ್ರದಮೇರೆಗೆ ಗತವಾದಕಾಲ ಕಳೆದು, ಬಾಕಿ ಉಳಿಯುವ ಕಾಲಕ್ಕೆ, ಮೂಲ ಜಾಮೀನಿನ ತರದಲ್ಲಿಯೇ ಹೊಸ ಜಾಮೀನನ್ನು ಕೊಡ ಹೇಳಿ ಅವನಿಗೆ ಹುಕುಂ ಮಾಡತಕ್ಕದ್ದು. ಅಂಥಾ ಪ್ರತಿ ಯೊಂದು ಹುಕ್ಕುಂ 121, 122, 123—ವ—124 ನೆ: ಪ್ರಕರಣಗಳ ಉದ್ದಿಶ್ಯಾರ್ಥವಾಗಿ, 106 ಅಥವಾ 118ನೇ ಪ್ರಕರಣ ಪ್ರಕಾರ ಸಂಗತ್ಯಾನುಸಾರವಾಗಿ ಕೊಡಲ್ಪಟ್ಟ ಹುಕುಮಿನೋಪಾದಿ ಎಣಿಸತಕ್ಕದ್ದು.

CHAPTER IX.—UNLAWFUL ASSEMBLIES.

9ನೇ ಅಧ್ಯಾಯ.—ಅಕ್ರಮ ಗುಂಪುಗಳನ್ನು ಕುರಿತು.

ಮ್ಯಾಜಿಸ್ಟ್ರೇಟು—ಯಾ—ಪೋಲಿಸು ಅಧೀಸರು ಹುಕುಂ ಮಾಡಿದ ಕೂಡ್ಲೇ ಗುಂಪು ಚದರೀ ಹೋಗಬೇಕು.

127. ಯಾವ ಮ್ಯಾಜಿಸ್ಟ್ರೇಟಾದರೂ ಸರಿಯೇ, ಒಂದು ಪೋಲಿಸು ಸ್ಟೇಷನಿನ ಜೆವ್ಮೇದಾರನಾದ ಆಫೀಸರಾದರೂ ಸರಿಯೇ, ಪ್ರಜಾ ನೆಮ್ಮದಿಗೆ ಕಲತೆ ಉಂಟು ಮಾಡುವದಾಗಿ ತೋರುವ ಯಾವ ಅಕ್ರಮಕೂಟವನ್ನಾಗಲಿ, ಐದು—ಯಾ—ಹೆಚ್ಚು ಮಂದಿ ಯಿಂದ ಕೂಡಿದ ಯಾವ ಕೂಟವನ್ನಾಗಲೀ ಚದರಿ ಹೋಗಹೇಳಿ ಹುಕುಂ ಮಾಡಬಹುದು; ಮತ್ತು ಆ ಮೇಲೆ ಅದೇಮೇರಿಗೆ ಚದರಿಹೋಗಲಿಕ್ಕೆ ಸದರೀ ಕೂಟದ ಮೆಂಬರುಗಳ ಕೆಲಸವಾಗಿರತಕ್ಕದ್ದು.

ಚದರಿ ಹೋಗುವದಕ್ಕೆ ಸಿವಿಲ್ ಫೋರ್ಸಿನ ಉಪಯೋಗ

128. ಹಾಗೆ ಹುಕುಂ ಮಾಡಿದರೂ, ಅಂಥಾ ಯಾವ ಕೂಟವಾದರೂ ಚದರಿ ಹೋಗದಿದ್ದರೆ, ಅಥವಾ ಹಾಗೆ ಹುಕುಂ ಮಾಡದೆ ಇರುವಲ್ಲಿ, ಚದರಿಹೋಗ ಕೂಡದ್ದೆಂಬ ದೃಢತ್ವವನ್ನು ತೋರಿಸುವಂಥಾ ರೀತಿಯಲ್ಲಿ ಅದು ನಡದರೆ, ಯಾವ ಮ್ಯಾಜಿಸ್ಟ್ರೇಟಾದರೂ, ಒಂದು ಪೋಲಿಸು ಸ್ಟೇಷನಿನ ಜೆವ್ಮೇದಾರನಾದ ಆಫೀಸರಾದರೂ, ಅಂಥಾ ಕೂಟವನ್ನು ಬಲಾತ್ಕಾರದಿಂದ ಚದರಿಸಲಿಕ್ಕೆ ಪ್ರವರ್ತಿಸಬಹುದು; ಮತ್ತು ಅದನ್ನು ಚದರಿಸುವ ಉದ್ದಿಶ್ಯ ಅವಶ್ಯವಾದರೆ, ಚದರಿಸುವ ಉದ್ದಿಶ್ಯವಾಗಿ—ಯಾ—ಅದರಲ್ಲಿ ಶೇರಿ ಇರುವಂಥವರನ್ನು ಹಿಡಿದು ತಡೆದಿಡುವ ಉದ್ದಿಶ್ಯ ಅಥವಾ ಕಾನೂನಿಗನುಗುಣವಾಗಿ ಅವರನ್ನ ಶಿಕ್ಷಿಸುವ ನಿಮಿತ್ಯ, ಶ್ರೀ ಮನ್ಮಹಾರಾಜರವರ ಫೌಜಿಗೆ ಶೇರಿದ ಆಫೀಸರ—ಯಾ—ಸೋಲ್ಜರನಾಗಲಿ—ಯಾ—1869ನೇ ಇಂಡಿಯನ್ ವಾಲಂಟಿಯರನ್ ಆಕ್ಟಿನ ಪ್ರಕಾರ ದಾಖಲಾದ ವಾಲಂಟಿಯರನಾಗಿ ಹಾಗೆ ಕೆಲಸ ಮಾಡುವವರಲ್ಲದೆ ಇರುವಂಥಾ ಇತರ ಯಾವ ಗಂಡಸಿನ ಸಹಾಯವನ್ನಾದರೂ ಅಪೇಕ್ಷಿಸಬಹುದು.

ಮಿಲ್ಟೆರಿ ಫೋರ್ಸಿನ ಉಪಯೋಗ

129. ಅಂಥಾ ಒಂದು ಕೂಟವು ಅನ್ಯಥಾ ಚದರಿಸಲಾಗದಿದ್ದರೆ, ಮತ್ತು ಜನರ ಬಂದೋಬಸ್ತಿಗೋಸ್ಕರ ಅದನ್ನ ಚದರಿಸತಕ್ಕದ್ದು ಅಗತ್ಯವಾದರೆ, ಅಲ್ಲಿ ಹಾಜರು ಇರುವವರಲ್ಲಿ ಹೆಚ್ಚಿನ ದರ್ಜೆಯ ಮ್ಯಾಜಿಸ್ಟ್ರೇಟನು ಅದನ್ನು ಮಿಲ್ಟೆರಿ ಸೈನ್ಯದಿಂದ ಚದರಿಸ ಬಹುದು.

130. ಅಂಥಾ ಒಂದು ಕೂಟವನ್ನು ಮಿಲ್ಟೆರಿ ಸೈನ್ಯದಿಂದ ಚದರಿಸಲಿಕ್ಕೆ ಒಬ್ಬ ಮ್ಯಾಜಿಸ್ಟ್ರೇಟನು ನಿಶ್ಚೈಯಿಸಿದರೆ, ಮಿಲ್ಟೆರಿ ಸೈನ್ಯದಿಂದ ಅಂಥಾ ಕೂಟವನ್ನು ಚದರಿಸುವ ನಿಮಿತ್ಯ—ವ—ಮ್ಯಾಜಿಸ್ಟ್ರೇಟನು ಅಪ್ಪಣೆ ಕೊಡುವಂಥಾ ಸದರೀ ಕೂಟಕ್ಕೆ ಶೇರಿದ ಜನರನ್ನು ಕೈದು ಮಾಡಿ ಹಿಡಿದು ತಡೆಯಲಿಕ್ಕೆ, ಅಥವಾ ಕೂಟವನ್ನು ಚದರಿಸುವ ಉದ್ದಿಶ್ಯ ಹಿಡಿದು ತಡೆದು ಇಡುವ ನಿಮಿತ್ಯ ಅಥವಾ ಕಾನೂನು ಮೇರಿಗೆ ಅವರನ್ನು ಶಿಕ್ಷಿಸುವ ನಿಮಿತ್ಯವಾಗಿ, ಶ್ರೀಮನ್ಮಹಾರಾಜರವರ ಫೌಜಿನ ಸೋಲ್ಜರರ ಹುಕುಮತುಮಾಡುವ ಕಮಿಷನ್ಡ್—ಯಾ—ನಾನ್‌ಕಮ್ಮಿಷನ್ಡ್ ಆಫೀಸರರನ್ನು, 1869ನೇ ಇಸಿವಿ ಇಂಡಿಯನ್ ವಾಲಂಟಿಯರ್ಸ್ ಆಕ್ಟಿನ ಪ್ರಕಾರ ದಾಖಲಾದ ವಾಲಂಟಿಯರರ ಹುಕುಮತಿನಲ್ಲಿರುವ ಆಫೀಸರನ್ನು, ಸದರೀ ಮ್ಯಾಜಿಸ್ಟ್ರೇಟನು ಅಪೇಕ್ಷಿಸಬಹುದು.

ಗುಂಪನ್ನು ಚದರಿಸುವದಕ್ಕೆ ಮ್ಯಾಜಿಸ್ಟ್ರೇಟನು ಕೇಳಿಕೊಂಡ ತುರುಪುಗಳ ಆಧಿಪತ್ಯವುಳ್ಳ ಆಫೀಸರನ ಕೆಲಸ.

ಹಾಗೆ ಕೇಳಿ ಕೊಳ್ಳೋಣಾದ ಪ್ರತಿ ಒಬ್ಬ ಆಫೀಸರನು ತನಗೆ ಯುಕ್ತವಾದ ರೀತಿಲಿ ಕೇಳಿಕೊಂಡದ್ದಕ್ಕನುಗುಣವಾಗಿ, ನಡಕೊಳ್ಳತಕ್ಕದ್ದು; ಆದರೆ ಹಾಗೆ ಮಾಡುವದರಲ್ಲಿ, ಸದರೀ ಕೂಟವನ್ನು ಚದರಿಸುವದಕ್ಕೂ—ವ—ಅಂಥವರನ್ನು ಹಿಡಿದು ತಡೆಯಲಿಕ್ಕೂ, ಅವಶ್ಯವಿರುವ—ವ—ಅನುಕೂಲಿಸುವಷ್ಟು ಕೊಂಚವಾಗಿ ಬಲಾತ್ಕಾರಪೂರ್ವಕ ಸ್ವಲ್ಪ ಹಾನಿಯನ್ನು ದೇಹಕ್ಕೂ ಸ್ವೊತ್ತಿಗೂ ಆತನು ಮಾಡತಕ್ಕದ್ದು.

131. ಅಂಥಾ ಯಾವದೊಂದು ಕೂಟದಿಂದ ಜನರ ಬಂದೋಬಸ್ತು ಪ್ರತ್ಯಕ್ಷವಾಗಿ ಅಪಾಯವಾದಾಗ, ಮತ್ತು ಯಾವ ಮ್ಯಾಜಿಸ್ಟ್ರೇಟಿಗಾದರು ತಿಳಿಸಲಿಕ್ಕೆ ಆಗದೆ ಹೋದಾಗ, ಶ್ರೀಮನ್ಮಹಾರಾಜರವರ ಫೌಜಿನ ಯಾವನೊಬ್ಬ ಕಮ್ಮಿಷನ್ಡ್ ಆಫೀಸರನಾದರೂ ಅಂಥಾ ಕೂಟವನ್ನು ಮಿಲಿಟೆರಿ ಸೈನ್ಯದಿಂದ ಚದರಿಸಬಹುದು, ಮತ್ತು ಅಂಥಾ ಕೂಟವನ್ನು ಚದರಿಸುವ ನಿಮಿತ್ಯ ಅಥವಾ ಕಾನೂನಿನ ಮೇರಿಗೆ ಶಿಕ್ಷಿಸಲ್ಪಡುವದಕ್ಕೋಸ್ಕರ ಅಂಥಾ ಅಕ್ರಮಕೂಟಕ್ಕೆ ಶೇರಿದ ಯಾವ ಮನುಷ್ಯನನ್ನಾದರೂ ಹಿಡಿದು ತಡೆದಿಡಬಹುದು; ಪರಂತು, ಈ ಪ್ರಕರಣಕ್ಕನುಗುಣವಾಗಿ ಆತನು ನಡಕೊಳ್ಳುತ್ತಿರುವಾಗ, ಯಾವನೊಬ್ಬ ಮ್ಯಾಜಿಸ್ಟ್ರೇಟಿಗಾದರೂ ತಿಳಿಸುವಬಗ್ಗೆ ಸಾಧ್ಯವಾಗಿ ಬಂದ ಪಕ್ಷಕ್ಕೆ, ಆ ಪ್ರಕಾರ ಆತನು ಮಾಡತಕ್ಕದ್ದು, ಮತ್ತು ಅನಂತರ ತಾನು ಹಾಗೆ ಮುಂದೆಯು ಅಮಲ್ ನಡಿಸಬೇಕೋ ಇಲ್ಲವೆಂಬದು ಮಾಜಿಸ್ಟ್ರೇಟನು ತನಗೆ ಕೊಡುವ ಅನುಜ್ಞೆಗಳಿಗನುಗುಣವಾಗಿ ಆತನು ನಡಕೊಳ್ಳತಕ್ಕದ್ದು.

ಕೂಟವನ್ನು ಚದರಿಸಲಿಕ್ಕೆ ಮಿಲಿಟೆರಿ ಕಮಿಷನ್ಡ್ ಆಫೀಸರರಿಗೆ ಇರುವ ಅಧಿಕಾರ.

132. ಈ ಅಧ್ಯಾಯಕ್ಕನುಗುಣವಾಗಿ ಮಾಡೋಣಾದ್ದಾಗಿ ಯೆಣಿಸೋಣಾಗುವ ಯಾವ ಕೃತ್ಯಕ್ಕೋಸ್ಕರವಾದರೂ ಯಾವ ಮ್ಯಾಜಿಸ್ಟ್ರೇಟನ ಮೇಲಾಗಲಿ ಮಿಲಿಟೆರಿ ಆಫೀಸರನ ಮೇಲಾಗಲೀ, ಪೋಲೀಸು ಆಫೀಸರನ ಮೇಲಾಗಲೀ, ಸೋಲ್ಜರ್—ಯಾ—ವಾಲಂಟಿಯರನ ಮೇಲಾಗಲೀ, ಮೈಸೂರು ಗವರ್ನಮೆಂಟಿನವರ ಅನುಮತಿ ವಿನಹಾ, ಯಾವ ಕ್ರಿಮಿನಲ್ ಕೋರ್ಟಿನಲ್ಲಿ ಆದರೂ, ಫಿರ್ಯಾದು ನಡಿಸಕೂಡದು; ಮತ್ತು

ಈ ಅಧ್ಯಾಯಕ್ಕನುಗುಣವಾಗಿ ಮಾಡೋಣಾದ ಕೃತ್ಯಗಳಿಗೋಸ್ಕರ ಫಿರ್ಯಾದು ಮಾಡುವ ವಿಷಯದಲ್ಲಿ ಆಧಾರ.

(a) ನಿಸ್ಪೃಹನಾಗಿ ಈ ಅಧ್ಯಾಯಕ್ಕನುಗುಣವಾಗಿ ನಡಕೊಳ್ಳುವ ಯಾವ ಮ್ಯಾಜಿಸ್ಟ್ರೇಟು—ಯಾ—ಪೋಲೀಸ್ ಆಫೀಸರನು,

(b) ನಿಸ್ಪೃಹನಾಗಿ 131ನೇ ಪ್ರಕರಣದ ಪ್ರಕಾರ ನಡಕೊಳ್ಳುವ ಯಾವ ಆಫೀಸರನು,

(c) 128ನೇ ಪ್ರಕರಣ, ಅಥವಾ 130ನೇ ಪ್ರಕರಣದಮೇರಿಗೆ ಕೇಳೋಣಾದ ಕೇಳ್ವಿಕೆಗನುಗುಣವಾಗಿ ನಿಸ್ಪೃಹನಾಗಿ ಯಾವದೊಂದು ಕೃತ್ಯಮಾಡಿದ ಮನುಷ್ಯನು, ಮತ್ತು

(d) ಮಿಲಿಟೆರಿ ಕಾನೂನು ಮೇರಿಗೆ ಯಾವ ಹುಕುಮಿಗೆ ವಿಧೇಯನಾಗಿ ನಡಕೊಳ್ಳಲಿಕ್ಕೆ ಬದ್ಧನಾಗಿರುತ್ತಾನೋ ಅಂಥಾ ಯಾವದೊಂದು ಕೃತ್ಯವನ್ನು ಮಾಡಿದ್ದಕ್ಕಾಗಿ, ಯಾವ ಕೀಳುದರ್ಜೆಯ ಆಫೀಸರ್—ಯಾ—ಸೋಲ್ಜರ್ ಅಥವಾ ವಾಲಂಟಿಯರ್,

ಅಂಥಾ ಯಾವ ಕೃತ್ಯದಿಂದಲಾದರೂ ತಕ್ಸೀರ್ ಮಾಡಿದ್ದಾಗಿ ಯೆಣಿಸಲ್ಪಡಕೂಡದು.

———

CHAPTER X.—PUBLIC NUISANCES.

10ನೇ ಅಧ್ಯಾಯ.—ಬಹಿರಂಗವಾದ ಹೇಸಿಕೆಗಳು.

ಹೇಸಿಕೆಗಳನ್ನು ತೆಗದು ಹಾಕ ಹೇಳಿ ಷರತ್ ಬಂದಿಯಾಗಿ ಕೊಡೋಣಾಗುವ ಹುಕುಂ

133. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಅಥವಾ, ಇದಕ್ಕಾಗಿಯೇ ಮೈಸೂರು ಗವರ್ನಮೆಂಟಿನವರಿಂದ ಅಧಿಕಾರ ಕೊಡೋಣಾದಾಗ, ಫಸ್ಟ್‌ಕ್ಲಾಸು ಮ್ಯಾಜಿಸ್ಟ್ರೇಟನು, ತನಗೆ ಪಲಪಿದ ರಿಪೋರ್ಟ—ಯಾ—ಬೇರೆ ವರ್ತಮಾನದ ಮೇಲೆ—ವ—ತನಗೆ ಯುಕ್ತವಾಗಿ ತೋರುವ ಸಾಕ್ಷ್ಯವನ್ನು (ಯೇನಾದರೂ ಇದ್ದರೆ) ತಕೊಂಡು,

ಬೀದಿಯಿಂದ, ಜನರು ಉಪಯೋಗಿಸುವ ಅಥವಾ ನ್ಯಾಯವಾಗಿ ಉಪಯೋಗಿಸಬಹುದಾದನದಿಯಿಂದ, ಅಥವಾ ಕಾಲುವೆಯಿಂದ, ಅಥವಾ ಬಹಿರಂಗವಾದ ಸ್ಥಳದಿಂದ, ಯಾವದೊಂದು ಅಕ್ರಮ ಆತಂಕವನ್ನು—ಯಾ—ಹೇಸಿಕೆಯನ್ನು ನಿವಾರಣೆ ಮಾಡಬೇಕೆಂತಾದರೂ, ಅಥವಾ

ಜನಗಳ ಆರೋಗ್ಯಕ್ಕೆ—ಯಾ—ಸ್ವಾಭಾವಿಕ ಸೌಖ್ಯಕ್ಕೆ, ಬಾಧಕಕರವಾಗಿರುವದೆಂಬ ಕಾರಣದಿಂದ ಯಾವದೊಂದು ವ್ಯಾಪಾರವನ್ನು—ಯಾ—ಕಸಬನ್ನು, ಅಥವಾ ಸರಕುಗಳ—ಯಾ—ಜಿನಸುಗಳ ಇಡುವಿಕೆಯನ್ನು, ಮೋಖೂಫ್ ಮಾಡಬೇಕೆಂತಾದರೂ—ಯಾ—ಬೇರೆ ಸ್ಥಳಕ್ಕೆ ಸಾಗಿಸಬೇಕೆಂತಾದರೂ—ಯಾ—ನಿಷೇಧಿಸಬೇಕೆಂತಾದರೂ, ಅಥವಾ

ಕಟ್ಟುತ್ತಾ ಇರುವ ಕಟ್ಟಡವನ್ನು, ಅಥವಾ ಭಗ್ಗೆಂತಾ ಬೆಂಕಿ ಹೀಳತಕ್ಕ—ಯಾ—ತನ್ನಷ್ಟಕ್ಕೆ ತಾನೇ ಬೆಂಕಿ ಹತ್ತಿಕೊಳ್ಳುವ ಯಾವದೊಂದು ಪದಾರ್ಥದ ವಿನಿಯೋಗವನ್ನು, ಅಟಕಾಯಿಸಬೇಕೆಂತಾಗಲೀ, ಅಥವಾ ನಿಲ್ಲಿಸಿಬಿಡಬೇಕೆಂತಾಗಲೀ, ಅಥವಾ

ಯಾವದೊಂದು ಕಟ್ಟಡ ಬೀಳುವ ಸ್ಥಿತಿಯಲ್ಲಿ ಇದ್ದು ಸಮೀಪದಲ್ಲಿ ವಾಸಿಸುವಂಥಾ, ಅಥವಾ ಅದರ ನೆರೆಹೊರೆಯಲ್ಲಿ ಕಸಬ್ ಮಾಡುವ—ಯಾ—ತಿರುಗುವಂಥಾ, ಜನಗಳಿಗೆ ಅಪಾಯಕರವಾಗಿರುವದರಿಂದ ಅದನ್ನು ತೆಗಿಸಿ ಹಾಕುವದು, ದುರುಸ್ತು ಮಾಡಿಸುವದು, ಅಥವಾ ಅದನ್ನು ಬಲಪಡಿಸುವದು ಅಗತ್ಯವೆಂತಾಗಲೀ, ಅಥವಾ

ಅಂಥಾ ಬೀದಿ—ಯಾ—ಬಹಿರಂಗವಾದ ಸ್ಥಳದ ಅಜುಬಾಜಿನಲ್ಲಿರುವ ಕೆರೆ, ಭಾವಿ ಅಥವಾ ಡೊಗರು ಇಂಥಾದ್ದರಿಂದ ಜನಗಳಿಗೆ ಉಂಟಾಗುವ ಅಪಾಯವನ್ನು ನಿವಾರಣೆ ಮಾಡುವಹಾಗೆ ಅದಕ್ಕೆ ಆವರಣ ಏರ್ಪಡಿಸಬೇಕೆಂತಾದರೂ, ತೋರಿದರೆ,

ಅಂಥಾ ಆತಂಕವನ್ನು—ಯಾ—ಹೇಸಿಕೆಯನ್ನು ತೆಗದು ಹಾಕಹೇಳಿ; ಅಥವಾ

ಅಂಥಾ ವ್ಯಾಪಾರವನ್ನು—ಯಾ—ಕಸಬನ್ನು ಮೋಕೂಫ್—ಯಾ—ಸ್ಥಳಾಂತರ ಪಡಿಸಹೇಳಿ; ಅಥವಾ

ಅಂಥಾ ಸರಕುಗಳನ್ನು—ಯಾ—ಜಿನಸುಗಳನ್ನು ಸ್ಥಳಾಂತರ ಪಡಿಸಹೇಳಿ; ಅಥವಾ

ಅಂಥಾ ಕಟ್ಟಡದ ಕೆಲಸವನ್ನು ಆತಂಕಪಡಿಸಲಿಕ್ಕೆ—ಯಾ—ನಿಲ್ಲಿಸಿ ಬಿಡಹೇಳಿ; ಅಥವಾ

ಅದನ್ನು ತೆಗದು ಹಾಕಿ—ಯಾ—ದುರಸ್ತು ಮಾಡಿ—ಯಾ—ಬಲಪಡಿಸ ಹೇಳಿ; ಅಥವಾ

ಅಂಥಾ ಪದಾರ್ಥದ ವಿನಿಯೋಗವನ್ನು ಬದಲಾಯಿಸಹೇಳಿ; ಅಥವಾ

ಅಂಥಾ ಕೆರೆ ಭಾವಿ ಅಥವಾ ಡೊಗರು ಇಂಥಾದ್ದ್ಯಾವದಕ್ಕಾದರೂ, ಸಂಗತ್ಯಾನುಸಾರವಾಗಿ ಆವರ್ಣವನ್ನು ಏರ್ಪಡಿಸ ಬೇಕೆಂತ ಹೇಳಿ; ಅಥವಾ

ಹುಕುಮಿನ ದ್ವಾರಾ ಬಂದು ವಾಯಿದೆ—ವ—ಸ್ಥಳ ನಿಶ್ಚಯಿಸಿ ಅಂಥಾ ವಾಯಿದೆ ಒಳಗಾಗಿ ತನ್ನ ಮುಂದೆಯಾಗಲಿ—ಯಾ—ಫಲಾನೆ ಫಸ್ಟು—ಯಾ—ಸೆಕೆಂಡ್‌ಕ್ಲಾಸ್ ಮ್ಯಾಜಿಸ್ಟ್ರೇಟನ ಮುಂದೆ ಆಗಲೀ ಸದರೀ ವಾಯಿದೆಯೊಳಗೆ—ವ—ಸ್ಥಳದಲ್ಲಿ ಹಾಜರಾಗಿ ಈ ಕೆಳಗೆ ಏರ್ಪಡಿಸೋಣಾದ ನಿಬಂಧನೆಗನುಗುಣವಾಗಿ ಸದರೀ ಹುಕುಮನ್ನು

ಮನ್ನು ರದ್ದು ಪಡಿಸುವದಕ್ಕೆ—ಯಾ—ಬದಲಾಯಿಸುವದಕ್ಕೆ ಕೋರ್ಟಿನವರಿಗೆ ಅರಿಕೆ ಮಾಡಿಕೊಳ್ಳತಕ್ಕದ್ದೆಂತ ಆಜ್ಞಾಪಿಸಿ, ಆತಂಕವನ್ನು—ಯಾ—ಹೇಸಿಕೆಯನ್ನು ಉಂಟು ಮಾಡುವವನಿಗೆ, ಅಥವಾ, ಅಂಥಾ ವ್ಯಾಪಾರ—ಯಾ—ಕಸಬನ್ನು ನಡಿಸುವವನಿಗೆ ಅಥವಾ, ಅಂಥಾ ಜಿನಸು—ಯಾ—ಸರಕು ಇಟ್ಟುಕೊಂಡಿರುವವನಿಗೆ, ಅಥವಾ ಅಂಥಾ ಕಟ್ಟಡ, ಪದಾರ್ಥ, ಕೆರೆ, ಭಾವಿ ಅಥವಾ ಡೊಗರು, ಇವುಗಳ ಮಾಲೀಕನಿಗೆ—ಯಾ—ಇವುಗಳನ್ನ ಸ್ವಾಧೀನಪಡಿಸಿ ಕೊಂಡಿರುವವನಿಗೆ—ಯಾ—ಇವುಗಳ ಮೇಲೆ ಅಧಿಕಾರ ಇರುವವಗೆ ಅಂಥಾ ಮ್ಯಾಜಿಸ್ಟ್ರೇಟನು ಷರತ್ ಬಂದಿಯಾದ ಒಂದು ಹುಕುಮನ್ನು ಮಾಡಬಹುದು.

ಈ ಪ್ರಕರಣಕ್ಕನುಸರಿಸಿ ಕ್ರಮವಾಗಿ ಒಬ್ಬ ಮ್ಯಾಜಿಸ್ಟ್ರೇಟನಿಂದ ಮಾಡೋಣಾದ ಯಾವದೊಂದು ಹುಕುಂ ಯಾವದೊಂದು ಶಿವಿಲ್ ಕೋರ್ಟಿನಲ್ಲೂ ಆಕ್ಷೇಪಣೆಗೆ ಗುರಿಯಾಗ ಕೂಡದು.

ಟಿಪ್ಪಣಿ.—ಒಂದು "ಬಹಿರಂಗವಾದ ಸ್ಥಳ" ಎಂಬುವದರಲ್ಲಿ ಸಂಸ್ಥಾನಕ್ಕೆ ಶೇರಿದ ಸ್ವತ್ತನ್ನು, ದಂಡಿಳಿಯುವ ಭೂಮಿಗಳನ್ನು, ಮತ್ತು ಆರೋಗ್ಯದ ಉದ್ದಿಶ್ಯಾರ್ಥವಾಗಿ—ವ—ಉಲ್ಲಾಸದ ಉದ್ದಿಶ್ಯವಾಗಿ ಖಾಲಿಯಾಗಿರುವ ಭೂಮಿಗಳು ಅಡಗಿವೆ.

ಹುಕುಮಿನ ಸಾದರಾತಿ—ಯಾ—ಜಾಹಿರಾತಿ.

134. ಅಂಥಾ ಹುಕುಂ ಯಾರಮೇಲೆ ಉಂಟಾಯಿತೋ ಅಂಥಾ ಮನುಷ್ಯನಿಗೆ ಸರ್ಮ್ಸ ಸಾದರು ಮಾಡುವ ವಿಷಯದಲ್ಲಿ ಇದರಲ್ಲಿ ಏರ್ಪಡಿಸೋಣಾದ ಕ್ರಮ ಪ್ರಕಾರ, ಸಾಧ್ಯವಾದಲ್ಲಿ, ಖುದ್ದಾಗಿ ಸಾದರು ಮಾಡತಕ್ಕದು.

ಅಂಥಾ ಹುಕುಂ ಹಾಗೆ ಸಾದರು ಮಾಡಲಿಕ್ಕಾಗದೆ ಇದ್ದರೆ, ಸಧರೀ ಹುಕುಮನ್ನು ಇಸ್ತಿಹಾರಿನ ದ್ವಾರಾ ಬಹಿರಂಗಪಡಿಸಿ, ಮೈಸೂರು ಗವರ್ನಮೆಂಟಿನವರು ಕಾಯಿದೆ ಏರ್ಪಡಿಸಿ ಆಜ್ಞಾಪಿಸುವ ಕ್ರಮದಲ್ಲಿ, ಪ್ರಸಿದ್ಧಪಡಿಸತಕ್ಕದ್ದು, ಮತ್ತು ಅದರ ಒಂದು ಪ್ರತಿಯನ್ನು ಅಂಥಾ ಮನುಷ್ಯನಿಗೆ ಸಮಾಚಾರ ತಿಳಿಯಲಿಕ್ಕೆ ಅತ್ಯಂತ ಅನುಕೂಲವಾದಂಥಾ ಸ್ಥಳದಲ್ಲಿ—ಯಾ—ಅಂಥಾ ಸ್ಥಳಗಳಲ್ಲಿ ಹಚ್ಚತಕ್ಕದ್ದು.

135. ಅಂಥಾ ಹುಕುಂ ಯಾರಮೇಲೆ ಉಂಟಾಯಿತೋ ಅಂಥವನು—

ಯಾರ ಹೆಸರಿಗೆ ಆ ಹುಕುಂ ಆಯಿತೋ ಆ ಮನುಷ್ಯನು ಆ ಹುಕುಂ ಮೇರೆಗೆ ನಡಕೊಳ್ಳಬೇಕು.

(a) ಹುಕುಮಿನಲ್ಲಿ ನಮೂದಿಸೋಣಾದ ವಾಯಿದೆಯೊಳಗೆ ಹುಕುಮಿನಿಂದ ಆಜ್ಞಾಪಿಸೋಣಾದ ಕೃತ್ಯ ಮಾಡತಕ್ಕದ್ದು; ಅಥವಾ

ಯಾ—ಸಬಬ್ ತೋರಿಸಬೇಕು, ಅಥವಾ ಜೂರಿ ಏರ್ಪಡಿಸ ಹೇಳಿ ಕೇಳಿ ಕೊಳ್ಳಬಹುದು.

(b) ಅಂಥಾ ಹುಕುಂ ಮೇರಿಗೆ ಹಾಜರಾಗಿ, ಆ ಹುಕುಮಿಗೆ ಆಕ್ಷೇಪಣೆ ಸಬಬುಗಳನ್ನು ತೋರಿಸಬಹುದು, ಅಥವಾ ಸದರೀ ಹುಕುಂ ವಾಜಬಿಯೋ—ವ—ಸರಿಯಾದ್ದೋ ಎಂಬದನ್ನು ದರಿಯಾಫ್ತಿ ಮಾಡಲಿಕ್ಕೆ ಜೂರಿಯನ್ನು ಏರ್ಪಡಿಸುವ ಹಾಗೆ, ಆ ಹುಕುಂ ಯಾವ ಮ್ಯಾಜಿಸ್ಟ್ರೇಟನಿಂದ ಉಂಟಾಯಿತೋ ಆ ಮ್ಯಾಜಿಸ್ಟ್ರೇಟಿಗೆ ಅರ್ಜಿ ಮಾಡಬಹುದು.

ಹಾಗೆ ಮಾಡುವದಕ್ಕೆ ತಪ್ಪಿದ್ದರಿಂದುಂಟಾಗುವ ಫಲ.

136. ಅಂಥಾ ಮನುಷ್ಯನು ಅಂಥಾ ಕೃತ್ಯವು ಮಾಡದೆಯೂ, ಅಥವಾ ಹಾಜರಾಗಿ ಆಕ್ಷೇಪಣೆ ಸಬಬು ತೋರಿಸದೆಯೂ—ಯಾ—135ನೇ ಪ್ರಕರಣದಲ್ಲಿ ನಿಬಂಧಿಸೋಣಾದ ಮೇರೆಗೆ ಜೂರಿಯನ್ನು ಏರ್ಪಡಿಸುವ ಹಾಗೆ ಅರ್ಜಿ ಕೊಡದೆಯೂ, ಇದ್ದರೆ, ಆತನು ಅದಕ್ಕಾಗಿ ಇಂಡಿಯನ್ ಪೆನಲ್ ಕೋಡಿನ 188ನೇ ಪ್ರಕರಣದಲ್ಲಿ ನಮೂದಿರುವ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು ಆ ಹುಕುಮನ್ನು ಜಾರೀ ಮಾಡತಕ್ಕದ್ದು.

ಸಬಬು ತೋರಿಸುವ ಬಗ್ಗೆ ಆತನು ಹಾಜರಾದ ಸಂಗತಿಯಲ್ಲಿ ನಡಿಸಬೇಕಾದ ಕ್ರಮ.

137. ಆತನು ಹಾಜರಾಗಿ, ಸದರೀ ಹುಕುಮಿನಮೇಲೆ ಆಕ್ಷೇಪಣೆ ಸಬಬ್ ತೋರಿಸಿದರೆ, ಸದರೀ ವಿಷಯದಲ್ಲಿ ಮ್ಯಾಜಿಸ್ಟ್ರೇಟನು ಸಾಕ್ಷ್ಯವನ್ನು ತಕ್ಕೊಳ್ಳತಕ್ಕದ್ದು.

ಅಂಥಾ ಹುಕುಂ ನ್ಯಾಯ—ವ—ಯುಕ್ತವಾದ್ದಲ್ಲವೆಂತ ಮ್ಯಾಜಿಸ್ಟ್ರೇಟನು ಸಮಾಧಾನ ಪಟ್ಟರೆ, ಆ ಮೇಲೆ, ಆ ಸಂಗತಿಯಲ್ಲಿ ಯಾವ ನಡವಳಿಕೆಗಳನ್ನೂ ನಡಿಸಕೂಡದು.

ಮ್ಯಾಜಿಸ್ಟ್ರೇಟನು ಹಾಗೆ ಸಮಾಧಾನ ಪಡದೆ ಇದ್ದರೆ, ಸದರೀ ಹುಕುಂ ಜಾರೀ ನಡಿಸತಕ್ಕದ್ದು.

ಜೂರಿ ಏರ್ಪಾಡಿಸಹೇಳಿ ಕೇಳಿಕೊಂಡಾಗ ನಡಿಸತಕ್ಕ ಕ್ರಮ.

138. 135ನೇ ಪ್ರಕರಣದಪ್ರಕಾರ ಜೂರಿ ಏರ್ಪಡಿಸಹೇಳಿ ಅರ್ಜಿ ತಲಪಿದ ಮೇಲೆ, ಮ್ಯಾಜಿಸ್ಟ್ರೇಟನು—

(a) ತ್ವರೇಲಿ ಜೂರಿಯನ್ನು ಏರ್ಪಾಡಿಸತಕ್ಕದ್ದು, ಆ ಜೂರಿಯಲ್ಲಿ ನೇಮಕವಾದವರು ಐದು ಜನಕ್ಕೆ ಕಮ್ಮಿ ಇಲ್ಲದೆ ಅಸಮ ಸಂಖ್ಯೆಯಾಗಿರತಕ್ಕದ್ದು, ಅವರ ಪೈಕಿ ಫೋರ್‌ಮೆನನ್ನು ಉಳಿದ ಮೆಂಬರುಗಳ ಪೈಕಿ ಅರೆವಾಶಿ ಮೆಂಬರುಗಳನ್ನು ಸದರೀ ಮಾಜಿಸ್ಟ್ರೇಟು ನೇಮಿಸತಕ್ಕದ್ದು, ಮತ್ತು ಉಳಿದ ಮೆಂಬರುಗಳನ್ನು ಅರ್ಜಿದಾರನು ನೇಮಿಸತಕ್ಕದ್ದು;

(b) ಮ್ಯಾಜಿಸ್ಟ್ರೇಟಿಗೆ ಯುಕ್ತ ತೋರುವ ಸ್ಥಳದಲ್ಲಿ—ವ—ಸಮಯದಲ್ಲಿ ಜೂರಿಯವರು—ವ—ಫೋರ್‌ಮೇನ್ ಕೂಡ ಹಾಜರು ಆಗಬೇಕಾಗಿ ಹೇಳಿ ಸಮ್ಮನ್ಸ ಮಾಡತಕ್ಕದ್ದು; ಮತ್ತು

(c) ಅವನು ಇಷ್ಟುಕಾಲದ ಒಳಗೆ ತಮ್ಮ ತೀರ್ಮಾನವನ್ನು ರವಾನಿಸತಕ್ಕದ್ದೆಂತ ಒಂದು ಕಾಲವನ್ನು ನಿಶ್ಚಯಿಸತಕ್ಕದ್ದು.

ಮ್ಯಾಜಿಸ್ಟ್ರೇಟನ ಹುಕ್ಕುಂ ಯುಕ್ತವೆಂತ ಜೂರಿಗೆ ತೀಳಿದರೆ ನಡಿಸತಕ್ಕ ಕ್ರಮ.

139. ಜೂರಿಯವರಾಗಲೀ—ಯಾ—ಜೂರಿಯವರಪೈಕಿ ಅಧಿಕ ಪಕ್ಷದವರಾಗಲಿ ಮ್ಯಾಜಿಸ್ಟ್ರೇಟನು ಮೊದಲೇ ಮಾಡಿರುವಂಥಾ ಹುಕುಂ—ಯಾ—ಮ್ಯಾಜಿಸ್ಟ್ರೇಟನು ಅಂಗೀಕರಿಸುವ ತಿದ್ದುಪಡಿಗೆ ಒಳಪಡುವಂಥಾ ಸದರೀ ಹುಕುಂ ನ್ಯಾಯವಾದ್ದು—ವ—ಯುಕ್ತವಾದ್ದು, ಎಂತ ಇತ್ಯರ್ಥ ಮಾಡಿದರೆ, ಅಂಥಾ ತಿದ್ದು ಪಡಿ (ಇದ್ದರೆ) ಅದಕ್ಕೆ ಒಳಪಟ್ಟು, ತನ್ನ ಹುಕುಮನ್ನು ಮ್ಯಾಜಿಸ್ಟ್ರೇಟನು ಜಾರೀ ಮಾಡಬಹುದು.

ಇತರ ಸಂಗತಿಗಳಲ್ಲಿ, ಇನ್ನು ಯಾವ ಪ್ರೊಸೀಡಿಂಗಸುಗಳನ್ನು ನಡಿಸಕೂಡದು.

ಹುಕುಮನ್ನು ಷರತ್‌ಬಂದಿ ಇಲ್ಲದೆ ಪೂರ್ತಿಯಾಗಿ ಮಾಡಿದಾಗ ನಡಿಸತಕ್ಕ ಕ್ರಮ.

140. 136ನೇ ಪ್ರಕರಣದ 137ನೇ ಪ್ರಕರಣದ ಅಥವಾ 139ನೇ ಪ್ರಕರಣದ ಪ್ರಕಾರ ಒಂದು ಹುಕುಂ ಷರತ್‌ಬಂದಿ ಇಲ್ಲದೆ ಪೂರ್ತಿಯಾಗಿ ಮಾಡಿದಾಗ, ಆ ಹುಕುಮು ಯಾರ ಮೇಲೆ ಮಾಡೋಣಾಯಿತೋ, ಅಂಥವನಿಗೆ ಆ ಸಂಗತಿ ಕುರಿತು ನೋಟೀಸಿನ ದ್ವಾರಾ ತಿಳಿಸಿ, ಗೊತ್ತಾದ ಕಾಲದೊಳಗೆ ಹುಕುಂ ಮಾಡೋಣಾದ ಕೃತ್ಯವನ್ನು ಮಾಡಬೇಕೆಂತಲೂ, ಅದಕ್ಕೆ ಅವಿಧೇಯವಾಗಿ ನಡಕೊಂಡ ಪಕ್ಷಕ್ಕೆ, ಇಂಡಿಯನ್ ಪೆನಲ್ ಕೋಡಿನ 188ನೇ ಪ್ರಕರಣದಲ್ಲಿ ನಮೂದಿಸೋಣಾದ ದಂಡನೆಗೆ, ಗುರಿಯಾಗತಕ್ಕದ್ದೆಂತ ಕೂಡಾ ತಿಳಿಸತಕ್ಕದ್ದು.

ಹುಕುಮಿಗೆ ಅವಿಧೇಯವಾಗಿ ನಡಕೊಂಡದರಿಂದುಂಟಾಗುವ ಫಲ.

ನಿಶ್ಚಯಿಸೋಣಾದ ಕಾಲದೊಳಗೆ ಅಂಥಾ ಕೆಲಸ ಮಾಡೋಣಾಗದೆ ಇದ್ದರೆ, ಮ್ಯಾಜಿಸ್ಟ್ರೇಟನು ಅಂಥಾ ಕೆಲಸವನ್ನು ಮಾಡಿಸಿ, ಆ ಪ್ರಕಾರ ಮಾಡಿಸುವದಕ್ಕೆ ತಗಲಿದ ಖರ್ಚನ್ನು ಸದರೀ ಹುಕುಮಿನ ಪ್ರಕಾರ ತೆಗಿಸಿ ಹಾಕಿದಂತಾ ಕಟ್ಟಡವನ್ನು, ಸಾಮಾನನ್ನು ಅಥವಾ ಇತರ ಸ್ವತ್ತನ್ನು ವಿಕ್ರಯದ ಮೂಲವಾಗಿಯಾಗಲೀ, ಅಥವಾ ತನ್ನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ—ಯಾ—ಹೊರಗೆ ಇರತಕ್ಕ ಸದರೀ ಮನುಷ್ಯನ ಇತರ ಯಾವದಾದರೂ ಚರಸ್ವತ್ತನ್ನು ಜಫ್ತೀ ಮಾಡಿ ಮಾರುವದರ ಮೂಲವಾಗಿ ಆಗಲೀ ವಸೂಲ್ ಮಾಡಬಹುದು. ಅಂಥಾ ಇತರ ಸ್ವತ್ತು ತನ್ನ ಅಧಿಕಾರ ಸರಹದ್ದಿನ ಹೊರಗೆ ಇದ್ದರೆ, ಯಾರ ಸ್ಥಳೀಯ ಅಧಿಕಾರ ಸರಹದ್ದಿನಲ್ಲಿ ಜಫ್ತೀ ಮಾಡತಕ್ಕ ಸ್ವತ್ತು ಇಧೆಯೋ ಆ ಮಾಜಿಸ್ಟ್ರೇಟನಿಂದ ಸದರೀ ಆರ್ಡರು ಎಂಡಾರ್ಸ್ ಆದಾಗ, ಸದರೀ ಸ್ವತ್ತನ್ನು ಜಫ್ತೀ ಬಗ್ಯೆ—ವ—ವಿಕ್ರಯದಬಗ್ಯೆ ಅಧಿಕಾರ ಕೊಡಲ್ಪಡುತ್ತೆ.

ಈ ಪ್ರಕರಣಕ್ಕನುಗುಣವಾಗಿ ನಡಕೊಳ್ಳುವಲ್ಲಿ ನಿಸ್ಪೃಹತೆಯಿಂದ ಮಾಡಿದ ಯಾವ ಕೃತ್ಯದ ವಿಷಯದಲ್ಲಾಗಲೀ ವ್ಯಾಜ್ಯ ಇರಕೂಡದು.

141. ಅರ್ಜೀದಾರನು, ಅಶ್ರದ್ಧೆಯಿಂದ—ಯಾ—ಅನ್ಯಥಾ ಜೂರಿ ಮೊಕರರ್ ಆಗದ ಹಾಗೆ ಮಾಡಿದರೂ, ಅಥವಾ ಮತ್ತ್ಯಾವ ಕಾರಣದಿಂದಾದರೂ ನೇಮಕವಾದ ಜೂರಿಯವರು ನಿರ್ಣಯಿಸೋಣಾದ ವಾಯಿದೆ ಒಳಗಾಗಲೀ, ಅಥವಾ ಮ್ಯಾಜಿಸ್ಟ್ರೇಟನ ಯುಕ್ತ ಪ್ರಕಾರ ಕೊಡೋಣಾದ ಹೆಚ್ಚಿಗೆ ವಾಯಿದೆ ಒಳಗಾಗಲೀ ತೀರ್ಮಾನವನ್ನು ಕೊಡುವದಕ್ಕೆ ತಪ್ಪಿದರೆ, ಮ್ಯಾಜಿಸ್ಟ್ರೇಟನು ತನಗೆ ಯುಕ್ತವೆಂದು ತೋರುವ ಹುಕುಮನ್ನು ಕೊಡಬಹುದು, ಮತ್ತು ಅಂಥಾ ಹುಕುಂ 140ನೇ ಪ್ರಕರಣದಲ್ಲಿ ಏರ್ಪಡಿಸೋಣಾದ ಕ್ರಮಪ್ರಕಾರ ಜಾರೀ ನಡಿಸತಕ್ಕದ್ದು.

ಜೂರಿಗಳನ್ನ ಮೊಕರರ್ ಮಾಡುವದಕ್ಕೆ ತಪ್ಪಿದರೆ, ಅಥವಾ ಅದರ ತೀರ್ಮಾನವನ್ನು ಕೊಡುವದಕ್ಕೆ ತಪ್ಪಿದರೆ ನಡಿಸತಕ್ಕ ಕ್ರಮ.

142. ಜನಗಳಿಗೆ ವಿಶೇಷವಾದ ಆಪತ್ತು ಅಥವಾ ಹಾನಿ ಸಂಭವಿಸುವದಾಗಿ ಇದ್ದು, ಅದಕ್ಕೆ ಒಡನೇ ತಕ್ಕ ಬಂದೋಬಸ್ತು ಮಾಡಬೇಕೆಂತ 133ನೇ ಪ್ರಕರಣದ ಪ್ರಕಾರ ಹುಕುಂ ಮಾಡುವ ಒಬ್ಬ ಮ್ಯಾಜಿಸ್ಟ್ರೇಟಿಗೆ ತೋರಿದರೆ, ಸದರೀ ಅಪಾಯವನ್ನು—ಯಾ—ಹಾನಿಯನ್ನು ತಡೆಯುವದಕ್ಕೆ—ಯಾ—ನಿವಾರಣೆ ಮಾಡುವದಕ್ಕೆ ಅಗತ್ಯವಾದ ಮಟ್ಟಿಗೆ ಯಾರಿಗೆ ಹುಕುಂ ಕೊಡೋಣಾಗಿತ್ತೊ ಅಂಥಾ ಮನುಷ್ಯನಿಗೆ, ಒಂದು ಜೂರಿ ಮಾಡಬೇಕಾಗಿದ್ದರೂ—ಯಾ—ಮೊಕರರೂರು ಮಾಡಿ ಇದ್ದರೂ—ಯಾ—ಮಾಡದೆ ಇದ್ದರೂ, ಸರಿಯೇ, ಇಂಜಂಕ್ಷನ್ ಯೆಂಬ ಒಂದು ಕಟ್ಟುತ್ತರವನ್ನು ಕೊಡಬಹುದು.

ವಿಚಾರಣೇ ಬಾಕೀ ಇರುವಾಗ್ಯೆ ಕೊಡುವ ಇಂಜಂಕ್ಷನ್.

ಸದರೀ ಕಟ್ಟುತ್ತರಕ್ಕನುಗುಣವಾಗಿ ಕೂಡಲೇ ನಡಿಯುವದಕ್ಕೆ ತಪ್ಪಿದಲ್ಲಿ, ಸದರೀ ಅಪಾಯಬಾರದ ಹಾಗೆ ಅಥವಾ ಸದರೀ ಹಾನಿ ಸಂಭವಿಸದ ಹಾಗೆ, ಇರಲಿಕ್ಕೆ ಬೇಕಾದದ್ದೆಂತ ಆತನು ತಿಳುಕೊಳ್ಳುವ ಬಂದೋಬಸ್ತುಗಳನ್ನು ಮ್ಯಾಜಿಸ್ಟ್ರೇಟನು ತಾನೇ ಮಾಡಬಹುದು—ಯಾ—ಮಾಡಿಸಬಹುದು.

ಈ ಪ್ರಕರಣಕ್ಕನುಗುಣವಾಗಿ ನಿಸ್ಪೃಹತೆಯಿಂದ ಯಾವನೊಬ್ಬ ಮ್ಯಾಜಿಸ್ಟ್ರೇಟನು ಮಾಡಿದ ಯಾವ ಕೃತ್ಯದ ವಿಷಯದಲ್ಲಿ ಆದರೂ, ಯಾವ ವ್ಯಾಜ್ಯವೂ, ಇರಕೂಡದು.

143. ಇಂಡಿಯನ್ ಪೆನಲ್ ಕೋಡಿನಲ್ಲಿ ವಿವರಿಸಿರುವ—ಯಾ—ಯಾವ ಸ್ಥಳಿಕ—ಯಾ—ವಿಶೇಷ ಕಾನೂನಿನ ಮೇರಿಗೆ ಒಂದು ಬಹಿರಂಗವಾದ ಹೇಸಿಕೆಯನ್ನು ನಡಿಸುತ್ತಾ ಇರಕೂಡದು, ಅಥವಾ ಪುನಹ ನಡಿಸಕೂಡದು ಎಂತ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು—ಯಾ—ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟು, ಅಥವಾ ಈ ಬಗ್ಯಾಗಿಯೇ ಮೈಸೂರು ಗವರ್ನಮೆಂಟಿನವರಿಂದಾಗಲೀ—ಯಾ—ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಿನಿಂದಾಗಲೀ ಅಧಿಕಾರಪಟ್ಟ ಯಾವನೊಬ್ಬ ಇತರ ಮ್ಯಾಜಿಸ್ಟ್ರೇಟನು, ಯಾವನೊಬ್ಬ ಮನುಷ್ಯನಿಗಾದರೂ ಹುಕುಂ ಮಾಡಬಹುದು.

ಬಹಿರಂಗವಾದ ಹೇಸಿಕೆಗಳು ಪುನಃ ನಡಿಯದಂತೆ-ಯಾ-ನಡಿಯುತ್ತಾ ಇರದಂತೆ ಮ್ಯಾಜಿಸ್ಟ್ರೇಟು ನಿಷೇಧಿಸಬಹುದು.

CHAPTER XI.—TEMPORARY ORDERS IN URGENT CASES OF NUISANCE.

11ನೇ ಅಧ್ಯಾಯ.—ಹೇಸಿಕೆಯ ಬಾಬತು ಜರೂರಿಯಾತಿ ಮೊಕದ್ದಮೆಗಳಲ್ಲಿ ಹಂಗಾಮಿ ಹುಕುಮುಗಳನ್ನು ಕೊಡುವದರನ್ನು ಕುರಿತು.

144. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ್, ಸಬ್ ಡಿವಿಜನ್ ಮ್ಯಾಜಿಸ್ಟ್ರೇಟ್, ಅಥವಾ ಈ ಪ್ರಕರಣಕ್ಕನುಗುಣವಾಗಿ ನಡಿಯುವದಕ್ಕೆ ಮೈಸೂರು ಗವರ್ನಮೆಂಟಿನವರಿಂದಾಗಲೀ—ಯಾ—ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಿನವರಿಂದಾಗಲೀ ವಿಶೇಷವಾಗಿ ಅಧಿಕಾರಪಟ್ಟ ಯಾವನೊಬ್ಬ ಇತರ ಮ್ಯಾಜಿಸ್ಟ್ರೇಟಿಗೆ, ತಕ್ಷಣದಲ್ಲಿ ನಿವಾರಣೆ ಮಾಡುವಂಥಾದ್ದು—ಯಾ—ಕೂಡಲೇ ಆತಂಕಪಡಿಸುವಂಥಾದ್ದು ಬಹಳ ಒಳ್ಳೇದೆಂತ ಅಭಿಪ್ರಾಯಪಡುವ ಸಂಗತಿಗಳಲ್ಲಿ,

ಹೇಸಿಕೆಯ ಬಾಬತು ಜರೂರಿಯಾತಿ ಮೊಕದ್ದಮೆಗಳಲ್ಲಿ ಯೇಕಾಯೇಕಿಯಾಗಿ ಅಮಲ್ ಚಲಾಯಿಸುವಂತೆ ಹುಕ್ಕುಂ ಕೊಡುವದಕ್ಕೆ ಅಧಿಕಾರ.

ನ್ಯಾಯವಾಗಿ ಚಾಕರಿ ಮಾಡುವ ಯಾವ ಮನುಷ್ಯನಿಗಾದರೂ, ಆತಂಕವನ್ನು—ಯಾ—ರೋಷ್ಟ್ನ—ಯಾ—ಹಾನಿಯನ್ನು ಅಥವಾ ಆತಂಕದ ಸಂಭವವನ್ನು ರೋಷ್ಟಿನ ಸಂಭವವನ್ನು—ಯಾ—ಹಾನಿಯ ಸಂಭವವನ್ನು ಅಥವಾ ಮನುಷ್ಯನ ಪ್ರಾಣಕ್ಕೆ, ಆರೋಗ್ಯಕ್ಕೆ—ಯಾ—ಭದ್ರತೆಗೆ ಅಪಾಯವನ್ನು ಅಥವಾ ಬಂದು ದೊಂಬಿ—ಯಾ—ಕಲಹವನ್ನು ಬಹುಶಃ ಅಡ್ಡೀ ಮಾಡಬಹುದೆಂದು—ಯಾ—ಅಡ್ಡೀ ಮಾಡುವದಕ್ಕೆ ಅನುಕೂಲಿಸುವದೆಂದು ಅಂಥಾ ಮ್ಯಾಜಿಸ್ಟ್ರೇಟನಿಗೆ ತೋರಿದಾಗ, ಅವನು 134ನೇ ಪ್ರಕರಣದಲ್ಲಿ ಯೇರ್ಪಡಿಸೋಣಾದ ನಿಬಂಧನೆಗಳ ಪ್ರಕಾರ ಸಾದರು ಮಾಡಬೇಕಾದ ಮೊಕದ್ದಮೆಯ ಮುಖ್ಯ ಸಂಗತಿಗಳನ್ನು ನಮೂದಿಸಿರುವ, ಒಂದು ಲಿಖಿತವಾದ ಹುಕುಮಿನ ಮೂಲವಾಗಿ, ಯಾವ ಮನುಷ್ಯನನ್ನಾದರೂ ಒಂದು ಫಲಾನೇ ಕೃತ್ಯ ಮಾಡಬಾರದೆಂದು—ಯಾ—ತನ್ನ ಸ್ವಾಧೀನ—ಯಾ—ತನ್ನ ಮೇಲ್ವಿಚಾರಣೆ ಕೆಳಗೆ ಇರತಕ್ಕ ಫಲಾನೇ ಸ್ವತ್ತಿನ ವಿಷಯವಾಗಿ ಫಲಾನೆ ಕ್ರಮ ಮಾಡತಕ್ಕದ್ದೆಂದು ವಿಧಿಸಬಹುದು.

ಜರೂರಿಯಾತ್ತಿಯಾದ ಸಂಗತಿಗಳಲ್ಲಿ, ಅಥವಾ ಹುಕುಂ ಯಾರ ಹೆಸರಿಗೆ ಉಂಟಾಯಿತೋ ಅಂಥವನಿಗೆ ನೋಟೀಸು ತಕ್ಕಕಾಲದೊಳಗೆ ಸಾದರು ಮಾಡಲಿಕ್ಕೆ ಸಂದರ್ಭ ಸಿಕ್ಕಕೂಡದ ಸಂಗತಿಗಳಲ್ಲಿ, ಈ ಪ್ರಕರಣಕ್ಕನುಗುಣವಾಗಿ ಕೊಡೋಣಾಗುವ ಹುಕುಂ ಯೆಕ್ಸ್‌ಪಾರ್ಟಿಯಾಗಿ (Ex parte) ವಿಧಿಸಬಹುದು.

ಈ ಪ್ರಕರಣಕ್ಕನುಗುಣವಾಗಿ ಕೊಡುವ ಹುಕುಂ ಫಲಾನಾ ಆಸಾಮಿಗೇನೇ—ಯಾ— ಜನರು ಪ್ರತ್ಯೇಕ ಒಂದು ಸ್ಥಳಕ್ಕೆ ಹೋಗುತ್ತಾ ಬರುತ್ತಾ—ಯಾ—ಸಂದರ್ಶಿಸುತ್ತಾ ಇರುತ್ತಾರಾದರೆ ಸಾಧಾರಣವಾಗಿ ಜನರಿಗೆ ಯೆಂದು ವಿಲಾಸಾ ಹಾಕಬಹುದು.

ಯಾವ ಮ್ಯಾಜಿಸ್ಟ್ರೇಟನಾದರೂ ತಾನೇಯಾಗಲೀ—ಯಾ—ತನ್ನ ಉದ್ಯೋಗದಲ್ಲಿ ಮುಂಚೆ ಇರುತ್ತಿದ್ದವನಾಗಲೀ, ಅಥವಾ ತನ್ನ ತಾಬೇದಾರಿಯ ಯಾವನೊಬ್ಬ ಮ್ಯಾಜಿಸ್ಟ್ರೇಟನಾಗಲೀ, ಈ ಪ್ರಕರಣಕ್ಕನುಗುಣವಾಗಿ ಕೊಡೋಣಾದ ಯಾವದಾದರು ಹುಕುಮನ್ನು ರದ್ದುಮಾಡಲೂ ಬಹುದು,—ಯಾ—ಬದಲಾಯಿಸಲೂ ಬಹುದು.

ಮನುಷ್ಯನ ಪ್ರಾಣಕ್ಕೆ, ಆರೋಗ್ಯ—ಯಾ—ಭದ್ರತೆಗೆ ಅಪಾಯಕರವಾದ ಅಥವಾ ಬಂದು ದೊಂಬಿ—ಯಾ—ಕಲಹ ವುಂಟಾಗಬಹುದಾದ ಸಂಭವ ಇರುವ ಸಂಗತಿಗಳಲ್ಲಿ, ಸರಕಾರಿ ಗೆಜೆಟನಲ್ಲಿ ಮೈಸೂರು ಗವರ್ನಮೆಂಟಿನವರು ಅನ್ಯಥಾ ಪ್ರಕಟಿಸಿದ ಸಂಗತಿಗಳಲ್ಲಿ ಅಲ್ಲದೆ, ಇತರ ಸಂಗತಿಗಳಲ್ಲಿ ಈ ಪ್ರಕರಣದ ಪ್ರಕಾರ ಕೊಡೋಣಾದ ಹುಕುಂ, ಅದು ಕೊಡಲ್ಪಟ್ಟದ್ದು ಮೊದಲು, ಯೆರಡು ತಿಂಗಳಿಗಿಂತ ಹೆಚ್ಚು ಕಾಲ ಸಲುವಳಿಯುಳ್ಳದ್ದಾಗಿ ಇರಕೂಡದು.

CHAPTER XII.—DISPUTES AS TO IMMOVABLE PROPERTY.

12ನೇ ಅಧ್ಯಾಯ.—ಸ್ಥಿರಸ್ವತ್ತುಗಳ ವಿಷಯದ ವಿವಾದಗಳನ್ನು ಕುರಿತು.

ಜಮೀನು ವಗೈರೆ ವಿಷಯವಾಗಿ ವಿವಾದದಿಂದ ನೆಮ್ಮದಿಗೆ ಭಂಗಬರುವದಾಗಿ ಇದ್ದರೆ ನಡಿಸತಕ್ಕ ಕ್ರಮ.

145. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟು, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟು ಅಥವಾ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟಿಗೆ ತನ್ನ ಸ್ಥಳಿಕ ಅಧಿಕಾರ ಸರಹದ್ದಿನ ಒಳಗಿರುವ ಸ್ಪರ್ಶೇಂದ್ರಿಯ ಗ್ರಾಹ್ಯವಾದ ಯಾವದೊಂದು ಸ್ಥಿರಸ್ವತ್ತಿನ—ಯಾ—ಅದರ ಸರಹದ್ದನ್ನು ಕುರಿತು ನೆಮ್ಮದಿಗೆ ಭಂಗಬರತಕ್ಕ ಸಂಭವವುಳ್ಳ ವಿವಾದವಿರುತ್ತದೆ, ಯೆಂತ ಪೋಲೀಸ್ ರಿಪೋರ್ಟಿನಿಂದಾಗಲೀ,—ಯಾ—ಇತರ ವರ್ತಮಾನದಿಂದಾಗಲೀ, ಮನದಟ್ಟಾದರೆ, ಹಾಗೆ ಮನದಟ್ಟಾದ ಸಬಬುಗಳು ಕಾಣಿಸಿ, ಅಂಥಾ ವಿವಾದದಲ್ಲಿ ಸಂಬಂಧಪಟ್ಟ ಕಕ್ಷಿಗಳು ಸದರೀ ಮ್ಯಾಜಿಸ್ಟ್ರೇಟನು ನಿಶ್ಚಯಿಸುವ ಫಲಾನಾ ವಾಯಿದೆಯೊಳಗೆ ಸ್ವತಃ ಆದರೂ—ಯಾ—ಪ್ಲೀಡರಿನ ಮೂಲಕವಾಗಿಯಾದರೂ ತನ್ನ ಕೋರ್ಟಿಗೆ ಹಾಜರಾಗಿ, ವಿವಾದದಸ್ವತ್ತಿನ ನಿಜವಾದ ಸ್ವಾಧೀನತೆ ವಿಷಯವಲ್ಲಿ ತಮ್ಮ ತಮ್ಮ ದಾವೆಗಳನ್ನು ಕಾಣಿಸಿ ಬರಹದಮೂಲಕವಾದ ಸ್ಟೇಟ್‌ಮೆಂಟ್ ದಾಖಲ್‌ಮಾಡಬೇಕೆಂತ ತದ್ವಾರಾ ವಿಧಿಸಿ ಬಂದು ಲಿಖಿತವಾದ ಹುಕುಮನ್ನು ಮಾಡತಕ್ಕದ್ದು.

ಸದರೀ ಮ್ಯಾಜಿಸ್ಟ್ರೇಟನು ವಿವಾದದ ಸ್ವತ್ತಿನ ಸ್ವಾಧೀನತೆಯನ್ನು ಇಟುಕೊಳ್ಳುವದಕ್ಕೆ ಬಾಧ್ಯತೆಯನ್ನು ಕುರಿತು ಅಂಥಾ ಯಾವದಾದರೂ ಕಕ್ಷಿಗಳ ದಾವೆಯು ಯೋಗ್ಯತೆ ವಿಚಾರಿಸದೇನೇ, ಹಾಗೆ ದಾಖಲು ಮಾಡೋಣಾದ ಸ್ಟೇಟ್‌ಮೆಂಟುಗಳನ್ನ ಓದಿ ನೋಡಿಕೊಂಡು, ಕಕ್ಷಿಗಳ ಹೇಳಿಕೆ ಕೇಳಿಕೊಂಡು, ಅವರು ತಮ್ಮತಮ್ಮ ಕಡೆಯಿಂದ ಹಾಜರುಪಡಿಸುವ ಸಾಕ್ಷ್ಯವನ್ನ ತಕ್ಕೊಂಡು, ಅಂಥಾ ರುಜುವಾತಿನ ಫಲವನ್ನಾಲೋಚಿಸಿ, ಅವಶ್ಯವೆಂತ ಆತಗೆ ತೋರುವ ಹೆಚ್ಚಿಗೆ ರುಜುವಾತು (ಇದ್ದರೆ) ತಕ್ಕೊಂಡು, ಕಕ್ಷಿಗಳ ಪೈಕಿ ಯಾರಾದರೂ ಅಥವಾ ಅವರ ಪೈಕಿ ಯಾರು ಆಗ್ಯೆ ಸ್ವತ್ತಿನ ಅಂಥಾ ಸ್ವಾಧೀನತೆಯಲ್ಲಿ ಇರುತ್ತಾನೆಂಬದು, ಸಾಧ್ಯವಾದರೆ, ಇತ್ಯರ್ಥಿಸತಕ್ಕದ್ದು.

ಸ್ವಾಧೀನತೆ ಕುರಿತು ವಿಚಾರಣೆ.

ಕಕ್ಷಿಗಳ ಪೈಕಿ ಒಬ್ಬನು ಆಗ್ಯೆ ಸದರೀ ಸ್ವತ್ತಿನ ಅಂಥಾ ಸ್ವಾಧೀನತೆಯಲ್ಲಿರುವದಾಗಿ ಮ್ಯಾಜಿಸ್ಟ್ರೇಟನು ಇತ್ಯರ್ಥಿಸಿದರೆ, ಅಂಥಾಕಕ್ಷಿಯು ನ್ಯಾಯವಾದ ರೀತೀಲಿ ಸ್ವಾಧೀನತೆ ತಪ್ಪಿಸಲ್ಪಡುವವರಿಗೆ ಅವನೇ ಅದನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳಲಿಕ್ಕೆ ಅರ್ಹನೆಂತಲೂ, ಮತ್ತು ಅವನ ಸ್ವಾಧೀನತೆ ತಪ್ಪಿಸಲ್ಪಡುವವರಿಗೆ ಆತನ ಸ್ವಾಧೀನತೆಗೆ ಖಲಲು ಮಾಡಕೂಡದೆಂತಲೂ, ಒಂದು ಹುಕುಮುನ್ನು ಕೊಡತಕ್ಕದ್ದು.

ಸ್ವಾಧೀನಗಾರನಿಗೆ ನ್ಯಾಯವಾಗಿ ಹೊರಡಿಸುವವರಿಗೆ ಅವನೇ ಅದನ್ನು ಇಟ್ಟುಕೊಂಡಿರಬೇಕು.

ಹಾಗೆ ಹಾಜರಾಗಲಿಕ್ಕೆ ಹೇಳೋಣಾದ ಯಾವನೊಬ್ಬ ಕಕ್ಷಿಯು ಮೇಲೆ ಹೇಳೋಣಾದ ಅಂಥಾ ವಿವಾದವೇ ಇರಲಿಲ್ಲ—ಯಾ—ಇಲ್ಲವೆಂತ ತೋರಿಸುವದಕ್ಕೆ ಆತಂಕಿಸುವಂಥಾದ್ದೇನೂ, ಈ ಪ್ರಕರಣವಲ್ಲಿ ಇಲ್ಲ; ಮತ್ತು ಅಂಥಾ ಸಂಗತಿಯಲ್ಲಿ, ಮ್ಯಾಜಿಸ್ಟ್ರೇಟನು ಸದರೀ ತನ್ನ ಹುಕುಮುನ್ನು ರದ್ದುಮಾಡತಕ್ಕದ್ದು ಮತ್ತು ಆ ಬಾಬಿನಲ್ಲಿ ಮುಂದಿನಯೆಲ್ಲಾ ವ್ಯವಹರಣೆಗಳೂ ನಿಲ್ಲಿಸಿಬಿಡತಕ್ಕದ್ದು,

146 ಕಕ್ಷಿಗಾರರ ಪೈಕಿ ಒಬ್ಬನಾದರೂ ಆಗ ವಿವಾದದ ಸ್ವತ್ತಿನ ಅಂಥಾ ಸ್ವಾಧೀನವುಳ್ಳವನಲ್ಲವೆಂತ ಮ್ಯಾಜಿಸ್ಟ್ರೇಟನು ಇತ್ಯರ್ಥಿಸಿದರೆ, ಅಥವಾ ಕಕ್ಷಿಗಳ ಪೈಕಿ ಯಾರು ಆಗ ವಿವಾದದ ಸ್ವತ್ತಿನ ಸ್ವಾಧೀನಗಾರನೆಂತ ಮುಂದಟ್ಟು ಮಾಡಿಕೊಳ್ಳುವದಕ್ಕೆ ಆವನಿಂದ ಆಗದೆ ಹೋದರೆ, ಅಂಥಾ ಸಂಗತಿಯಲ್ಲಿ ತಕ್ಕ ಸಿವಿಲ್ ಕೋರ್ಟಿನವರು ಆ ಬಾಬಿನ ಕಕ್ಷಿಗಾರರ ಹಕ್ಕನ್ನು ಇತ್ಯರ್ಥ ಮಾಡುವತನಕ, ಅಥವಾ ಫಲಾನಾವನು ಸ್ವಾಧೀನತೆಗೆ ಹಕ್ಕುವುಳ್ಳವನಾಗಿ ಇರಬೇಕೆಂತ ನಿಶ್ಚೈಸುವತನಕ, ಆ ಸ್ವತ್ತನ್ನು ಜಪ್ತಿಮಾಡಿ ಇಡಬಹುದು.

ವಿವಾದದ ಸ್ವತ್ತನ್ನು ಜಪ್ತು ಮಾಡುವ ಅಧಿಕಾರ.

147. ತನ್ನ ಸ್ಥಳಿಕ ಅಧಿಕಾರ ಸರಹದ್ದಿನೊಳಗಿರುವ ಸ್ಪರ್ಶೇಂದ್ರಿಯ ಗ್ರಾಹ್ಯವಾದ ಯಾವದೊಂದು ಸ್ಥಿರ ಸ್ವತ್ತಿನಲ್ಲಿ—ಯಾ—ಸ್ವತ್ತಿನ ಮೇಲೆ ಯಾವದೊಂದು ಕೃತ್ಯವನ್ನಾದರೂ ಮಾಡುವದನ್ನು ಕುರಿತು ಅಥವಾ ಮಾಡುವದನ್ನ ಆತಂಕಿಸುವದರನ್ನು ಕುರಿತು ಇರುವ ಹಕ್ಕಿನ ವಿಷಯದಲ್ಲಿ ನೆಮ್ಮದಿಗೆ ಭಂಗಬರತಕ್ಕ ಸಂಭವವುಳ್ಳ ವಿವಾದ ಇರುತ್ತದೆ ಯೆಂತಾ ಮೇಲೆ ಹೇಳಿದ ಮೇರಿಗೆ ಅಂಥಾ ಯಾವನೊಬ್ಬ ಮ್ಯಾಜಿಸ್ಟ್ರೇಟಗೆ ಮುಂದಟ್ಟಾದರೆ, ಆವನು ಆ ಬಾಬಿನಲ್ಲಿ ವಿಚಾರಿಸಬಹುದು; ಮತ್ತು ಅಂಥಾ ಹಕ್ಕು ಉಂಟು ಯೆಂತ ತೋರಿದಲ್ಲಿ, ಆ ಕೃತ್ಯವನ್ನ ಮಾಡುವ ವಿಷಯದಲ್ಲಿ, ಆಕ್ಷೇಪಿಸುವ ಅಥವಾ ಅಂಥಾ ಕೃತ್ಯವನ್ನ ಮಾಡುವದಕ್ಕೆ ಬಾಧ್ಯತೆ ಹೇಳುವ ಮನುಷ್ಯನು ಅಂಥಾ ಕೃತ್ಯವನ್ನು ಆತಂಕಿಸುವದಕ್ಕೆ—ಯಾ—ಮಾಡುವದಕ್ಕೆ ಸಂಗತ್ಯಾನುಸಾರವಾಗಿ ತನ್ನ ಹಕ್ಕು ಸ್ಥಾಪಿಸಿ ನ್ಯಾಯವಾದ ಕೋರ್ಟಿನ ತೀರ್ಪು ಪಡಕೊಳ್ಳುವ ತನಕ, ಸದರೀ ಕೃತ್ಯ ಮಾಡಬೇಕೆಂತಾಗಲೀ—ಯಾ—ಸಂಗತ್ಯಾನುಸಾರವಾಗಿ ಮಾಡಕೂಡದೆಂತಾಗಲೀ, ಆಜ್ಞಾಪಿಸಿ ಒಂದು ಹುಕುಮುನ್ನು ಮಾಡಬಹುದು;

ಈಜ್‌ಮೆಂಟ್ಸ್ ಮುಂತಾದ್ದರನ್ನು ಕುರಿತು ವಿವಾದಗಳು.

ಪರಂತು, ಅಂಥಾ ಕೃತ್ಯವನ್ನು ಮಾಡುವದಕ್ಕೆ ಇರುವ ಹಕ್ಕು ಸಂವತ್ಸರದಲ್ಲಿ ಸಾರ್ವದಾ ಅನುಭವಿಸತಕ್ಕದ್ದಾಗಿ ಇರುವ ಸಂಗತಿಯಲ್ಲಿ, ವಿಚಾರಣೆಗೆ ಆರಂಭವಾದ ತಾರೀಖಿಗೆ ಮುಂಚೆ ಮೂರು ತಿಂಗಳ ಒಳಗೆ ಸದರೀ

ಹಕ್ಕು ಅನುಭವಿಸದೆ ಇದ್ದ ಪಕ್ಷದಲ್ಲಿ: ಅಥವಾ, ಅಂಥಾ ಅನುಭವದ ಹಕ್ಕು ಕ್ಲುಪ್ತಕಾಲಗಳಲ್ಲಿ ಮಾತ್ರ ಚಲಾಯಿಸತಕ್ಕದ್ದಾಗಿದ್ದ ಸಂಗತಿಯಲ್ಲಿ, ಆಪ್ರಕಾರ ವಿಚಾರಣೆಗೆ ಷುರುವಾಗುವದಕ್ಕೆ ಪೂರ್ವ ಅವ್ಯವಹಿತವಾದ ಅಂಥಾ ಕಾಲದಲ್ಲಿ ಹಕ್ಕು ಅನುಭವಿಸದೆ ಇರುವ ಸಂಗತಿಯಲ್ಲಿ, ಈ ಪ್ರಕರಣಪ್ರಕಾರ ಯಾವದೊಂದು ಕೃತ್ಯ ಮಾಡುವದಕ್ಕೆ ಅಪ್ಪಣೆ ಕೊಟ್ಟು ಹುಕುಂ ಮಾಡಕೂಡದು.

143. ಈ ಅಧ್ಯಾಯದ ಉದ್ದೇಶಾರ್ಥವಾಗಿ ಒಂದು ಸ್ಥಳೀಯ ವಿಚಾರಣೆ ಅವಶ್ಯವಾದಾಗ, ಯಾವನೊಬ್ಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟಾಗಲೀ, ಅಥವಾ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟಾಗಲಿ, ವಿಚಾರಣೆ ಮಾಡಲಿಕ್ಕೆ ತನಗೆ ತಾಬೇದಾರಿಯಾದ ಯಾವ ಮ್ಯಾಜಿಸ್ಟ್ರೇಟನನ್ನಾದರೂ ಕಳುಹಿಸಬಹುದು, ಮತ್ತು ಆತನ ನಡವಳಿಕೆ ಬಗ್ಗೆ ಅವಶ್ಯಕವೆಂದು ತೋರುವಂಥಾ ಆಯಾ ಕಾಲವಲ್ಲಿ, ಜಾರಿಯಲಿರುವ ಕಾನೂನಿಗನುಕೂಲಿಸಿರುವಂಥಾ ಬರಹಮೂಲಕವಾದ ಅಜ್ಞಾಪನೆಗಳನ್ನು ಆತನಿಗೆ ಕೊಡಬಹುದು, ಮತ್ತು ವಿಚಾರಣೆಗೆ ಅವಶ್ಯಕವಾಗಿರುವ ಯಾವತ್ತು ಖರ್ಚನ್ನು ಅಥವಾ ಖರ್ಚಿನ ಭಾಗವನ್ನು ಫಲಾನಾಯವನಿಂದಲೇ ಪಾವತಿಯಾಗತಕ್ಕದ್ದೆಂಬದನ್ನು ಹೇಳಬಹುದು.

ಸ್ಥಳೀಯ ವಿಚಾರಣೆ.

ಹಾಗೆ ರವಾನಿಸಲ್ಪಟ್ಟ ಮನುಷ್ಯನ ರಿಪೋರ್ಟನ್ನು ಮೊಕದ್ದಮೆಯಲ್ಲಿ ಸಾಕ್ಷ್ಯವಾಗಿ ಓದಬಹುದು.

ಈ ಅಧ್ಯಾಯಕ್ಕನುಗುಣವಾದ ವ್ಯವಹರಣೆಯಲ್ಲಿ ಸಾಕ್ಷಿಗಾರರ ಬಗ್ಗೆ—ಯಾ—ವಕೀಲ ರುಸುಮಿನ ಬಗ್ಗೆ ಅಥವಾ ಯಿವೆರಡರ ಬಗ್ಗೆ ಕೂಡಾ, ಯಾವನೊಬ್ಬ ಕಕ್ಷಿಗಾರನಾದರೂ ಎಷ್ಟನ್ನಾದರೂ ಖರ್ಚುಮಾಡಿ ಯಿರುವ ಪಕ್ಷಕ್ಕೆ 145ನೇ ಪ್ರಕರಣ, 146ನೇ ಪ್ರಕರಣ, ಅಥವಾ 147ನೇ ಪ್ರಕರಣದ ಪ್ರಕಾರ ತೀರ್ಪನ್ನು ಕೊಡುವ ಮ್ಯಾಜಿಸ್ಟ್ರೇಟನು ಅಂಥಾ ಖರ್ಚುಗಳು ಪೂರಾವಾಗಿ ಅಥವಾ ಭಾಗವಾಗಿ—ಯಾ—ದಾವೆದಾಯಿಮೇಲೆ ಆ ಕಕ್ಷಿಗಾರನಿಂದಲೇಯೋ ಅಥವಾ ವ್ಯವಹರಣೆಗೆ ಸಂಬಂಧಪಟ್ಟ ಇತರ ಯಾವನೊಬ್ಬ ಕಕ್ಷಿಗಾರನಿಂದಲೋ ಯಾರಿಂದ ತೆರಲ್ಪಡಬೇಕೆಂಬದಕ್ಕೆ ಅಪ್ಪಣೆ ಮಾಡಬಹುದು. ಹಾಗೆ ತೆರಲ್ಪಡತಕ್ಕದ್ದೆಂತ ಅಪ್ಪಣೆಮಾಡಿದ ಸಮಸ್ತ ಖರ್ಚುಗಳೂ ಜರ್ಮಾನೆಯೋಪಾದಿ ವಸೂಲ್ ಮಾಡಲ್ಪಡಬಹುದು.

ಖರ್ಚುಗಳನ್ನು ಕುರಿತ ಹುಕ್ಕುಂ.

Chapter XIII.—Preventive Action of the Police.

13ನೇ ಅಧ್ಯಾಯ.—ಪೋಲಿಸಿನವರು ಅಡ್ಡಿ ಮಾಡುವ ವ್ಯವಹರಣೆಗಳನ್ನು ಕುರಿತು.

149. ವಾರಂಟು ಇಲ್ಲದೆ ಹಿಡಿಯಬಹುದಾದ ತಕ್ಸೀರುಗಳು ನಡೆಯದಂತೆ ಅಡ್ಡಿ ಮಾಡುವದಕ್ಕೋಸ್ಕರವಾಗಿ, ಪ್ರತಿ ಪೋಲೀಸು ಆಫಿಸರು ಮಧ್ಯೆ ಪ್ರವೇಶಿಸಬಹುದು, ಮತ್ತು, ಅವುಗಳು ನಡಿಯದಂತೆ ತಮ್ಮಿಂದ ಕೂಡುವಷ್ಟು ಸಾಹಸ ಮಾಡತಕ್ಕದ್ದು.

ವಾರಂಟು ಇಲ್ಲದೆ ಹಿಡಿಯಬಹುದಾದ ತಕ್ಸೀರುಗಳನ್ನು ಪೋಲಿಸಿನವರು ಅಡ್ಡಿ ಮಾಡೋಣ.

150. ವಾರಂಟು ಇಲ್ಲದೆ ಪೋಲಿಸಿನವರು ಹಿಡಿಯಬಹುದಾದ ತಕ್ಸೀರು ಮಾಡಲಿಕ್ಕೆ ಸನ್ನಾಹ ನಡಿಯುತ್ತದೆಂಬ ವರ್ತಮಾನ ಶಿಕ್ಕಿದ ಪ್ರತಿ ಪೋಲಿಸು ಆಫಿಸರನು—ಅಂಥಾ ವರ್ತಮಾನವನ್ನು ತಾನು ಯಾರಿಗೆ ತಾಬೇದಾರಿಯಾಗಿರುತ್ತಾನೋ, ಆ ಪೋಲಿಸ್ ಆಫಿಸರಿಗೂ, ಮತ್ತು ಅಂಥಾ ತಕ್ಸೀರು ನಡೆಯದಂತೆ ಬಂದೋಬಸ್ತು ಮಾಡಬೇಕಾದಂಥಾ ಅಥವಾ ತಕ್ಸೀರನ್ನು ವಿಚಾರಿಸಬೇಕಾದಂಥಾ ಇತರ ಆಫಿಸರಿಗೂ ತಿಳಿಸತಕ್ಕದ್ದು.

ಅಂಥಾ ತಕ್ಸೀರುಗಳ ಸನ್ನಾಹಕುರಿತು ವರ್ತಮಾನ.

151. ವಾರಂಟು ಇಲ್ಲದೆ ಪೋಲಿಸಿನವರು ಹಿಡಿಯಬಹುದಾದ ಯಾವದೊಂದು ತಕ್ಸೀರನ್ನು ಮಾಡುವ ಯತ್ನ ನಡೆಯುವದಾಗಿ ತಿಳಿದ ಪೋಲಿಸು ಆಫಿಸರನು, ಸದರೀ ತಕ್ಸೀರು ಪ್ರಯತ್ನ ಗಾರನನ್ನ ಹಿಡದಹೊರತು, ಅಂಥಾದ್ದನ್ನ ತಡೆಯಕೂಡದೆಂತ ಅಂಥಾ ಆಫಿಸರನು ತಿಳಕೊಳ್ಳುವನಾದರೆ, ಮ್ಯಾಜಿಸ್ಟ್ರೇಟನ ಹುಕ್ಕುಂ—ವ— ವಾರಂಟ್ ಇಲ್ಲದೇನೇ ಸದರೀ ಪ್ರಯತ್ನಗಾರನನ್ನ ಹಿಡಿಯಬಹುದು.

ಅಂಥಾ ತಕಸೀರುಗಳನ್ನು ಅಡ್ಡಿಮಾಡುವವ ಕ್ಕೋಸ್ಕರ ಹಿಡಿಯೋಣ.

152. ಚರವಾದ— ಯಾ—ಸ್ಥಿರವಾದ ಪಬ್ಲಿಕ್ ಸ್ವತ್ತಿಗೆ, ಊನಪಡಿಸುವ ಪ್ರಯತ್ನ ವೇನಾದರೂ ನಡೆದು, ಅಥವಾ ಪಬ್ಲಿಕ್ ಭೂಮಿಯ ಗುರ್ತು ಅಥವಾ ಬೋಯಿ (Buoy) ಯೆಂಬ ನೀರಿನಗುರ್ತು ಅಥವಾ ನಾವೆಗೆ ಸಬಂಧವಾದ ಇತರ ಗುರ್ತು ಇಂಥಾದ್ದನ್ನು, ತೆಗದು ಹಾಕುವಂಥಾದ್ದು—ಯಾ—ಊನ ಪಡಿಸುವಂಥಾದ್ದು, ಪೋಲಿಸು ಆಫಿಸರ ದೃಷ್ಟಿಗೆ ಬಿದ್ದರೆ, ಅಂಥಾ ಸಂಗತಿಯಲ್ಲಿ ಆತನು ತನ್ನ ಸ್ವತಂತ್ರದಿಂದಲೇ ಅಂಥಾ ಹಾನಿ ಬಾರದಂತೆ ತಡೆಯುವ ಬಗ್ಯೆ ಪ್ರವರ್ತಿಸಬಹುದು.

ಪಬ್ಲಿಕ್ ಸೊತ್ತಿಗೆ ಹಾನಿಪಡಿಸದಂತೆ ಅಡ್ಡಿ ಮಾಡೋಣ.—

153. ಪೋಲೀಸು ಸ್ಟೇಷನ್ ಜಿಮ್ಮೆದಾರನಾದ ಯಾವನೊಬ್ಬ ಆಫಿಸರನಿಗೆ ಅಂಥಾ ಸ್ಟೇಷನ್ ಸರಹದ್ದಿನೊಳಗಿರುವ ಯಾವದೊಂದು ಸ್ಥಳದಲ್ಲಿ ಸುಳ್ಳಾದ ಬಟ್ಟುಗಳು—ಯಾ—ಅಳತೆ ಸಾಧನಗಳು—ಯಾ—ತೂಕ ಸಾಧನಗಳು, ಇರುತ್ತವೆ ಯೆಂತ ನಂಬಲಿಕ್ಕೆ ಕಾರಣವಿದ್ದರೆ ಅಂಥಾ ಸಂಗತಿಯಲ್ಲಿ ಆತನು ಅದರಲ್ಲಿ ಉಪಯೋಗಿಸುತ್ತಾ ಇರುವ—ಯಾ—ಇಟ್ಟಿರುವ ಬಟ್ಟುಗಳನ್ನು—ಯಾ—ಅಳತೆ ಸಾಧನಗಳನ್ನು—ಯಾ—ತೂಕದ ಸಾಧನಗಳನ್ನು ನೋಡುವ ನಿಮಿತ್ಯ—ಯಾ—ತಲಾಷ್‌ಮಾಡುವನಿಮಿತ್ಯ, ಅಂಥಾ ಸ್ಥಳಕ್ಕೆ ವಾರಂಟ್ ಇಲ್ಲದೇನೇ ಪ್ರವೇಶಿಸಬಹುದು.

ಬಟ್ಟುಗಳನ್ನೂ ಅಳತೆ ಸಾಧನಗಳನ್ನೂ ನೋಡೋಣ.

ಅಂಥಾಸ್ಥಳದಲ್ಲಿ ಯಾವ ಸುಳ್ಳು ಬಟ್ಟುಗಳಾದರೂ, ಅಳತೆ ಸಾಧನಗಳಾದರೂ,—ಯಾ—ತೂಕದ ಸಾಧನಗಳಾದರೂ, ಆತನಿಗೆ ಸಿಕ್ಕಿದರೆ; ಅವುಗಳನ್ನು ಹಿಡಿದು, ಹಾಗೆ ಹಿಡಿದ ಸಂಗತಿಯನ್ನು ಅಧಿಕಾರವುಳ್ಳ ಮ್ಯಾಜಿಸ್ಟ್ರೇಟಿಗೆ ಕೂಡಲೇ ತಿಳಿಸತಕ್ಕದ್ದು.

PART V.

5ನೇ ಭಾಗ.

INFORMATION TO THE POLICE AND THEIR POWERS TO INVESTIGATE.

ಪೋಲಿಸಿನವರಿಗೆ ವರ್ತಮಾನ, ಮತ್ತು ಪೋಲೀಸ್ ವಿಚಾರಣೆಮಾಡಲಿಕ್ಕೆ ಅವರಿಗೆ ಇರುವ ಅಧಿಕಾರಗಳು.

CHAPTER XIV.

14ನೇ ಅಧ್ಯಾಯ.

154. ವಾರಂಟು ಶಿವಾಯಿ ಹಿಡಿಯಬಹುದಾದ ತಕ್ಸೀರು ನಡದ್ದರನ್ನು ಕುರಿತು ಪ್ರತಿ ವರ್ತಮಾನವನ್ನು, ಅಂಥಾ ವರ್ತಮಾನವು ಪೋಲಿಸುಸ್ಟೇಷನ್ ಜಿಮ್ಮೆಯಲ್ಲಿರುವ ಆಫಿಸರಗೆ ಜುಬಾನಿಯಾಗಿ ಕೊಡೋಣಾಗಿದ್ದಪಕ್ಷಕ್ಕೆ, ಅದನ್ನು ಆತನು ಸ್ವತಃ ಆಗಲೀ—ಯಾ—ಅವನ ಅನುಜ್ಞೆಗನುಗುಣವಾಗಿಯಾಗಲೀ ಬರಹಮೂಲಕ ಪಡಿಸತ

ವಾರಂಟು ಶಿವಾಯಿ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ವರ್ತಮಾನ.

ಕ್ಕದ್ದು, ಮತ್ತು ವರ್ತಮಾನ ಕೊಟ್ಟವನಿಗೆ ಅದನ್ನು ಓದಿ ಹೇಳತಕ್ಕದ್ದು; ಮತ್ತು ಅಂಥಾ ಪ್ರತಿ ವರ್ತಮಾನವೂ, ಬರಹಮೂಲಕವಾಗಿಯೇ ಕೊಡೋಣಾವಾಗ್ಯೂ ಸರಿಯೇ ಅಥವಾ ಮೇಲೆ ಹೇಳಿದ ಪ್ರಕಾರ ಬರಹಮೂಲಕ ಪಡಿಸಿದ್ದಾಗಿದ್ದರೂ ಸರಿಯೇ, ಅಂಥಾ ವರ್ತಮಾನ ಕೊಡುವವನ ದಸ್ಕತು ಅದಕ್ಕೆ ಹಾಕಲ್ಪಡಬೇಕು, ಮತ್ತು ಅದರ ಸಾರಾಂಶವನ್ನು ಸ್ಥಳೀಯ ಗವರ್ನಮೆಂಟಿನವರು ಈ ಬಗ್ಗ್ಯಾಗಿ ನಿರ್ಣಯಿಸುವ ನಮೂನೆಯ ಪ್ರಕಾರ ಅಂಥಾ ಆಫೀಸರು ಇಡಬೇಕಾದ ಪುಸ್ತಕದಲ್ಲಿ ದಾಖಲ್ ಮಾಡತಕ್ಕದ್ದು.

ವಾರಂಟಿಲ್ಲದೆ ಹಿಡಿಯಕೂಡದ ಮೊಕದ್ದಮೆಗಳಲ್ಲಿ ವರ್ತಮಾನ.

155. ವಾರಂಟು ಇಲ್ಲದೆ ಪೋಲೀಸಿನವರು ಹಿಡಿಯಕೂಡದಾದ ವೊಂದು ತಕ್ಸೀರು ತನ್ನ ಸ್ಟೇಷನ್ ಸರಹದ್ದಿನೊಳಗೆ ನಡೆದ್ದರನ್ನು ಕುರಿತು ಒಬ್ಬ ಪೋಲೀಸ ಸ್ಟೇಷನ್ ಜಿಮ್ಮೇದಾರನಾದಒಬ್ಬ ಆಫಿಸರನಿಗೆ ವರ್ತಮಾನ ಕೊಡೋಣಾದರೆ, ಅಂಥಾ ವರ್ತಮಾನದ ಸಾರಾಂಶವನ್ನು ಮೇಲೆ ಹೇಳಿದ ಪ್ರಕಾರ ಇಡೋಣಾಗುವ ಪುಸ್ತಕದಲ್ಲಿ ದಾಖಲುಮಾಡಿ, ವರ್ತಮಾನಕೊಟ್ಟವನನ್ನು ಮ್ಯಾಜಿಸ್ಟ್ರೇಟ ಬಳಿಗೆ ರಿಫರ್ ಮಾಡತಕ್ಕದ್ದು.

ವಾರಂಟು ಇಲ್ಲದೆ ಹಿಡಿಯಕೂಡದಾದ ಮೊಕದ್ದಮೆಗಳ ಪೋಲಿಸ್ ವಿಚಾರಣೆ.

ವಾರಂಟು ಇಲ್ಲದೆ ಪೋಲಿಸಿನವರು ಹಿಡಿಯಕೂಡದಾದ ತಕ್ಸೀರಿನ ಬಾಬತು ಮೊಕದ್ದಮೆಯನ್ನು ದರ್ಯಾಫ್ತಿ ಮಾಡಲಿಕ್ಕೆ—ಯಾ—ದರ್ಯಾಫ್ತಿ ಬಗ್ಗೆ ಕಮ್ಮಿಟು ಮಾಡುವ ಬಗ್ಗೆ ಅಧಿಕಾರ ಇರುವ ಫಸ್ಟ್ ಅಥವಾ ಸೆಕೆಂಡ ಕ್ಲಾಸ ಮ್ಯಾಜಿಸ್ಟ್ರೇಟನ ಹುಕುಮಿಲ್ಲದೆ ಯಾವನೊಬ್ಬ ಪೋಲಿಸ್ ಆಫೀಸರನು ವಿಚಾರಣೆ ಮಾಡಕೂಡದು.

ಅಂಥಾ ಹುಕುಂ ತಲಪಿದ ಯಾವನೊಬ್ಬ ಪೋಲಿಸ್ ಆಫೀಸರನು ಸದರೀ ಪೋಲಿಸ ವಿಚಾರಣೆಯಲ್ಲಿ ವಾರಂಟು ಇಲ್ಲದೆ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ಒಬ್ಬ ಸ್ಟೇಷನ್ ಜಿಮ್ಮೆಯಲ್ಲಿರುವ ಆಫೀಸರನು ಯಾವ ಅಧಿಕಾರಗಳನ್ನು ಚಲಾಯಿಸಬಹುದೋ ಅಂಥವುಗಳನ್ನು ವಾರಂಟು ಇಲ್ಲದೆ ಕೈದು ಮಾಡುವ ಅಧಿಕಾರ ವಿನಹಾ ಚಲಾಯಿಸಬಹುದು.

ವಾರಂಟು ಶಿವಾಯಿ ಹಿಡಿಯಬಹುದಾದ ಮೊಕದ್ದಮೆಗಳಲ್ಲಿ ಪೋಲಿಸ್ ವಿಚಾರಣೆ.

156. ವಿಚಾರಣೆ-ಯಾ-ದರ್ಯಾಫ್ತಿ ಸ್ಥಲವನ್ನು ಕುರಿತು 15ನೇ ಅಧ್ಯಾಯದ ನಿಬಂಧನೆಗಳಿಗನುಗುಣವಾಗಿ ಆ ಸ್ಟೇಷನ್ ಸ್ಥಳೀಯ ಸರಹದ್ದಿನ ಒಳಗೆ ಅಧಿಕಾರ ಇರುವ ಕೋರ್ಟಿನವರು ಯಾವ ಮೊಕದ್ದಮೆಯನ್ನು ವಿಚಾರಣೆ ಮಾಡಲಿಕ್ಕೂ ಅಥವಾ ದರ್ಯಾಫ್ತಿ ಮಾಡಲಿಕ್ಕೂ ಅಧಿಕಾರ ಉಂಟೋ—ಪೋಲಿಸಿನವರು ವಾರಂಟು ಶಿವಾಯಿ ಹಿಡಿಯಬಹುದಾದ—ಅಂಥಾ ಮೊಕದ್ದಮೆಯನ್ನು ಒಬ್ಬ ಮ್ಯಾಜಿಸ್ಟ್ರೇಟನ ಅಪ್ಪಣೆ ಇಲ್ಲದೇನೇ ಪೋಲಿಸ್ ಸ್ಟೇಷನ್ ಜಿಮ್ಮೆಯಲ್ಲಿ ಇರುವ ಯಾವನೊಬ್ಬ ಆಫೀಸರನಾದರೂ ವಿಚಾರಣೆ ಮಾಡಬಹುದು.

ಅಂಥಾ ಮೊಕದ್ದಮೆಗಳಲ್ಲಿ ಪೋಲಿಸು ಆಫೀಸರು ನಡಿಸಿದ ಯಾವದೊಂದು ವ್ಯವಹರಣೆ, ಅಂಥಾ ವ್ಯವಹರಣೆ ಯಾವ ಸ್ಥಿತಿಯಲ್ಲಿ ಇದ್ದಾಗ್ಯೂ ಸರಿಯೇ ಸದರೀ ಮೊಕದ್ದಮೆ ವಿಚಾರಣೆ ಮಾಡಲಿಕ್ಕೆ ಈ ಪ್ರಕರಣ ಪ್ರಕಾರ ಪೋಲಿಸು ಆಫೀಸರಿಗೆ ಅಧಿಕಾರವಿಲ್ಲವೆಂಬ ಸಬಬಿನ ಮೇಲೆ, ಆಕ್ಷೇಪಿಸಲ್ಪಡಕೂಡದು.

ವಾರಂಟುಶಿವಾಯಿ ಹಿಡಿಯಬಹುದಾದ ತಕ್ಸೀರು ಗುಮಾನ್ ಇರುವ ಸಂಗತಿಯಲ್ಲಿ ನಡಿಸಬೇಕಾದ ನಡವಳಿಕೆ.

157. ವರ್ತಮಾನ ಶಿಕ್ಕಿಆಗಲೀ ಅಥವಾ ಅನ್ಯಥಾ ಆಗಲೀ, 156ನೇ ಪ್ರಕರಣಪ್ರಕಾರ ಪೋಲಿಸ್ ವಿಚಾರಣೆ ಮಾಡಲಿಕ್ಕೆ ತನಗೆ ಅಧಿಕಾರ ಇರುವ ಯಾವದೊಂದು ತಕ್ಸೀರು ನಡಿಯಿತೆಂದು ಒಂದು ಸ್ಟೇಷನ್ ಜಿಮ್ಮೆಯಲ್ಲಿರುವ ಒಬ್ಬ ಆಫೀಸರಗೆ, ಗುಮಾನು ಪಡಲಿಕ್ಕೆ ಕಾರಣವಿದ್ದರೆ, ಪೋಲಿಸು ರಿಪೋರ್ಟು ಮೇಲೆ ಅಂಥಾ ತಕ್ಸೀರು ವಿಷಯದಲ್ಲಿ ತನಿಖಿ ಮಾಡುವದಕ್ಕೆ ಅಧಿಕಾರ ಯಿರುವ ಮ್ಯಾಜಿಸ್ಟ್ರೇಟಗೆ ಆ ಸಮಾಚಾರವನ್ನು ಕೂಡಲೇ ರವಾನಿಸತಕ್ಕದ್ದು. ಮತ್ತು ಮೊಕದ್ದಮೆಯ ವಿದ್ಯಮಾನಗಳನ್ನೂ ...ತ್ರಿಗಳನ್ನೂ ಪೋಲಿಸು ವಿಚಾರಣೆ ಮಾಡಲಿಕ್ಕೂ ತಕ್ಸೀರುದಾರನನ್ನು ತಲಾಷ್‌ಮಾಡಿ ಹಿಡಿಯಲಿಕ್ಕೂ ಮತ್ತು ...ವಾಗಿರಬಹುದಾದ ತರದೂದುಗಳನ್ನು ಮಾಡಲಿಕ್ಕೂ ತಕ್ಸೀರು ನಡದ್ದೆಂಬ ಸ್ಥಳಕ್ಕೆ ತಾನೇ ಹೋಗತಕ್ಕದ್ದು, ತನ್ನ ತಾಬೇದಾರಿ ಆಫೀಸರುಗಳ ಪೈಕಿ ಒಬ್ಬನನ್ನು ಕಳುಹಿಸತಕದ್ದು.

1101

ಪರಂತು, ಈ ಕೆಳಗಿನ ಮೇರೆಗೆ—

ಸ್ಥಳೀಯ ವಿಚಾರಣೆ ಯಾವಾಗ್ಯೆ ಮಾಡತಕ್ಕದ್ದು ಇಲ್ಲ.

(a) ಅಂಥಾ ತಕ್ಸೀರು ಮಾಡಿದ್ದಾಗಿ ಯಾವ ಮನುಷ್ಯನ ಮೇಲಾದರೂ ಹೆಸರುನಿಶಿ ವರ್ತಮಾನ ಕೊಡೋಣಾದಾಗ ಮತ್ತು ಆ ಮೊಕದ್ದಮೆ ಭಾರಿ ಮೊಕದ್ದಮೆಯಾಗಿ ಯಿರದೆ ಯಿದ್ದರೆ, ಅಂಥಾ ಸಂಗತಿಯಲ್ಲಿ ಪೋಲಿಸ್ ಸ್ಟೇಷನ್ ಜಿಮ್ಮೆಯಲ್ಲಿ ಯಿರುವ ಆಫೀಸರನು ಸ್ಥಳದಲ್ಲಿ ತನಿಖಿಮಾಡತಕ್ಕ ಬಗ್ಯೆ ತಾನು ಸ್ವತಃ ಹೋಗತಕ್ಕದ್ದಾಗಲೀ ಅಥವಾ ತನ್ನ ತಾಬೇದಾರಿಯಾದ ಆಫಿಸರಗೆ ರವಾನಿಸುವದಾಗಲೀ ಆಗತ್ಯವಿಲ್ಲ:

ಸ್ಟೇಷನ್ ಜಿಮ್ಮೆಯಲ್ಲಿರುವ ಪೋಲಿಸು ಆಫಿಸರಗೆ ಪೋಲಿಸ್ ವಿಚಾರಣೆ ಮಾಡಲಿಕ್ಕೆ ಸಾಕಾದ ಸಬಬ್ ತೋರದೆ ಹೋದರೆ.

(b) ಪೋಲಿಸ್ ಸ್ಟೇಷನ್ ತಾಬೇದಾರಿಯಲ್ಲಿರುವ ಆಫಿಸರಗೆ ಪೋಲಿಸು ವಿಚಾರಣೆ ಮಾಡಲಿಕ್ಕೆ ಸಾಕಾದ ಸಬಬ್ ತೋರದೆ ಹೋದರೆ, ಅವನು ಆ ಮೊಕದ್ದಮೆಯಲ್ಲಿ ವಿಚಾರಣೆ ಮಾಡತಕ್ಕದ್ದು ಇಲ್ಲ.

(a) ಮತ್ತು (b) ಕ್ಲಾಜುಗಳಲ್ಲಿ ನಮೂದಿಸೋಣಾದ ಪ್ರತಿ ಮೊಕದ್ದಮೆಯಲ್ಲಿಯೂ ಈ ಪ್ರಕರಣದ ಒಂದನೇ ಕಲಮಿನ ನಿಬಂಧನೆಯನ್ನು ಪೂರ್ಣವಾಗಿ ಅನುಸರಿಸದೆ ಇರುವದಕ್ಕೆ ಇರಬಹುದಾದ ಸಬಬುಗಳನ್ನು ಪೋಲಿಸ್ ಸ್ಟೇಷನ್ ಜಿಮ್ಮೆಯಲ್ಲಿರುವ ಆಫಿಸರನು ಆತನ ಸದರೀ ರಿಪೋರ್ಟಿನಲ್ಲಿ ನಮೂದಿಸತಕ್ಕದ್ದು.

157ನೇ ಪ್ರಕರಣದಪ್ರಕಾರ ಮಾಡುವ ರಿಪೋರ್ಟು ಹ್ಯಾಗೆ ಕಳುಹಿಸಲ್ಪಡತಕ್ಕದ್ದು.

158. 157ನೇ ಪ್ರಕರಣದಪ್ರಕಾರ ಮ್ಯಾಜಿಸ್ಟ್ರೇಟಿಗೆ ಕಳುಹಿಸೋಣಾಗುವ ಪ್ರತಿ ಒಂದು ರಿಪೋರ್ಟು ಮೈಸೂರು ಗವರ್ನಮೆಂಟಿನವರು ಸಾಧಾರಣ-ಯಾ-ವಿಶೇಷ ಹುಕುಂ ಮಾಡಿ, ತದ್ವಾರ ಇದಕ್ಕಾಗಿಯೇ ಮೊಕರರ್ ಮಾಡುವಂಥ ಪೋಲಿಸಿನ ಫಲಾನೆಮೇಲ್ ಉದ್ಯೋಗಸ್ಥನ ಮುಖಾಂತರವೇ ಕಳುಹಿಸಬೇಕೆಂತ ಅಪ್ಪಣೆ ಮಾಡಿರುವಲ್ಲಿ ಅಂಥಾ ಉದ್ಯೋಗಸ್ಥನ ಮುಖಾಂತರ ರವಾನಿಸತಕ್ಕದ್ದು.

ಸದರೀ ಮೇಲ್ ಉದ್ಯೋಗಸ್ಥನು ತನಗೆ ಯುಕ್ತವೆಂದು ತೋರುವಂಥಾ ಅನುಜ್ಞೆಗಳನ್ನು ಸ್ಟೇಷನ್ ಜಿಮ್ಮೆಯಲ್ಲಿ ಇರುವ ಆಫಿಸರಗೆ ಕೊಡಬಹುದು, ಮತ್ತು ಅಂಥಾ ಅನುಜ್ಞೆಗಳನ್ನು ಆ ರಿಪೋರ್ಟಿನಮೇಲೆ ಬರದು, ಕಾಲವಿಳಂಬವಿಲ್ಲದೆ ಅದನ್ನು ಮ್ಯಾಜಿಸ್ಟ್ರೇಟಿನ ಬಳಿಗೆ ಕಳುಹಿಸತಕ್ಕದ್ದು.

ಪೋಲೀಸು ವಿಚಾರಣೇ ಮಾಡಲಿಕ್ಕೆ—ಯಾ—ಪ್ರಥಮ ವಿಚಾರಣೆ ಮಾಡಲಿಕ್ಕೆ ಅಧಿಕಾರ.

159. ಅಂಥಾ ರಿಪೋರ್ಟು ಅಂಥಾ ಮ್ಯಾಜಿಸ್ಟ್ರೇಟಿಗೆ ತಲ್ಪಿದಾಗ, ಈ ಕೋಶದಲ್ಲಿ ನಿಬಂಧಿಸೋಣಾದ ಮೇರೆಗೆ ಸದರೀ ಮೊಕದ್ದಮೆಯನ್ನು ಪೋಲಿಸ್ ವಿಚಾರಣೆ ಮಾಡುವ ಬಗ್ಯೆ ಆಗಲೀ ಅಥವಾ ಪ್ರಥಮ ವಿಚಾರಣೆ ಮಾಡುವ ಉದ್ದಿಶ್ಯವಾಗಲೀ ಅಥವಾ ಅನ್ಯಥಾ ಫಡಿಚಾ ಮಾಡಲಿಕ್ಕಾಗಲೀ, ತನಗೆ ಯುಕ್ತತೋರಿದರೆ, ಕೂಡಲೇ ಸ್ವತಃ ಹೋಗಬಹುದು, ಅಥವಾ ತನ್ನ ತಾಬೇದಾರಿಯ ಮಾಜಿಸ್ಟ್ರೇಟರಪೈಕಿ ಯಾರನ್ನಾಗಲೀ ಕಳುಹಿಸಬಹುದು.

ಸಾಕ್ಷಿಗಾರರನ್ನ ಹಾಜರುಪಡಿಸಿ ಕೊಳ್ಳಲಿಕ್ಕೆ ಪೋಲೀಸ್ ಆಫೀಸರಗೆ ಇರುವ ಅಧಿಕಾರ.

160. ಈ ಅಧ್ಯಾಯಕ್ಕನುಗುಣವಾಗಿ ಪೋಲಿಸ್ ವಿಚಾರಣೆ ಮಾಡುವ ಯಾವನೊಬ್ಬ ಪೋಲೀಸ್ ಆಫಿಸರನಾಗಲೀ ಮೊಕದ್ದಮೆಯ ಸಂಗತಿಗಳು ತಿಳದವನಾಗಿ ಕೊಡೋಣಾದ ವರ್ತಮಾನದಿಂದಾಗಲೀ—ಯಾ—ಅನ್ಯಥಾ ಆಗಲೀ ಕಾಣಬರುವ, ತನ್ನ ಸ್ವಂತ—ಯಾ—ಬಾಜೂ ಸ್ಟೇಷನಿನ ಸರಹದ್ದುಗಳೊಳಗೆ ಇರುವ ಮನುಷ್ಯನನ್ನು ತನ್ನ ಮುಂದೆ ಹಾಜರಾಗ ಹೇಳಿ, ಬರಹ ಮೂಲಕವಾದ ಹುಕುಮಿನದ್ವಾರಾ ವಿಧಿಸಬಹುದು; ಮತ್ತು ಅಂಥಾ ಮನುಷ್ಯನು ತನ್ನನ್ನು ಅಪೇಕ್ಷಿಶಿದಮೇರೆಗೆ ಹಾಜರಾಗತಕ್ಕದ್ದು.

ಪೋಲೀಸನವರಿಂದ ಸಾಕ್ಷಿಗಳ ವಿಚಾರಣೆ.

161. ಈ ಅಧ್ಯಾಯಕ್ಕನುಗುಣವಾಗಿ ಪೋಲಿಸ್ ವಿಚಾರಣೆ ಮಾಡುವ ಯಾವನೊಬ್ಬ ಪೋಲಿಸ್ ಆಫಿಸರನು ಮೊಕದ್ದಮೆಗಳ ವಿದ್ಯಮಾನಗಳನ್ನೂ—ವ—ಸಂಗತಿಗಳನ್ನೂ ತಿಳಿದ;

ವನಾಗಿ ತೋರುವ ಯಾವನೊಬ್ಬ ಮನುಷ್ಯನನ್ನಾದರೂ, ಜಬಾನಿಯಾಗಿ ವಿಚಾರಣೆಮಾಡಿ, ಹಾಗೆ ವಿಚಾರಣೆ ಮಾಡಲ್ಪಟ್ಟ ಮನುಷ್ಯನ ಹೇಳಿಕೆಯನ್ನು ಆತನು ಬರಹ ಮೂಲಕ ಪಡಿಸಬಹುದು.

ತನ್ನ ಮೇಲೆ ಅಪರಾಧ ಹೊರಿಸುವ-ಯಾ_ದಂಡಕ್ಕೆ-ಯಾ-ಶಿಕ್ಷೆಗೆ ಗುರಿಪಡಿಸಬಹುದಾಗಿ ಭಾವ ತೋರುವ ಪ್ರಶ್ನೆಗಳನ್ನು ಶಿವಾಯಿ, ಸದರೀ ಮೊಕದ್ದಮೆಗೆ ಸಂಬಂಧಪಡುವದಾಗಿ ಅಂಥಾ ಆಫಿಸರು ಹಾಕುವ ಇತರ ಎಲ್ಲಾ ಪ್ರಶ್ನೆಗಳಿಗೂ ಎಥಾರ್ಥವಾಗಿ ಜವಾಬು ಕೊಡಲಿಕ್ಕೆ ಅಂಥಾ ಮನುಷ್ಯನು ಬದ್ಧನಾಗಿರತಕ್ಕದ್ದು.

ಪೋಲೀಸಿನವರೊಂದಿಗೆ ಕೊಡೋಣಾದ ಹೇಳಿಕೆಗೆ ದಸ್ಕತ್ತು ಹಾಕಲ್ಪಡತಕ್ಕದ್ದಿಲ್ಲ ಅಥವಾ ರುಜುವಾತಾಗಿ ಅಂಗೀಕರಿಸಕೂಡದು.

162. ಈ ಅಧ್ಯಾಯಕ್ಕನುಗುಣವಾಗಿ ನಡಿಸುತ್ತಾ ಇರುವ ಪೋಲೀಸ್ ವಿಚಾರಣೆಯಲ್ಲಿ ಪೋಲಿಸ್ ಆಫಿಸರನೊಂದಿಗೆ ಯಾವನೊಬ್ಬ ಮನುಷ್ಯನು ಮಾಡೋಣಾದ ಮರಣಕಾಲದ ಹೇಳಿಕೆಯ ವಿನಹ ಇತರಹೇಳಿಕೆ, ಬರಹ ಮೂಲಕ ಪಡಿಸೋಣಾಗಿದ್ದರೆ, ಹಾಗೆ ಹೇಳಿಕೆ ಹೇಳಿದವನು ದಸ್ಕತು ಮಾಡಬೇಕಾದ್ದಿಲ್ಲ, ಅಥವಾ ಅಪರಾದ ನೆಪಟ್ಟವನಿಗೆ ವಿರೋಧವಾಗಿ ಸಾಕ್ಷ್ಯವಾಗಿ ಉಪಯೋಗಿಸಲ್ಪಡಲೂ ಕೂಡದು.

1872ನೇ ಇಸವಿ ಇಂಡಿಯನ್ ಎವಿಡೆನ್ಸು ಆಕ್ಟಿನ 27ನೇ ಪ್ರಕರಣದಲ್ಲಿರುವ ನಿಬಂಧನೆಗಳಿಗೆ ಈ ಪ್ರಕರಣದಲ್ಲಿ ಇರುವಂಥಾದ್ದು ಯಾವದೂ ಬಾಧಿಸುವದೆಂತ ಎಣಿಸಲ್ಪಡ ಕೂಡದು.

ಕಬೂಲಾತಿಯ ಯಾವ ಆಶೋತ್ತರವನ್ನೂ ಹೇಳಕೂಡದು.

163. ಯಾವನೊಬ್ಬ ಪೋಲಿಸ್ ಆಫಿಸರನಾಗಲೀ ಅಥವಾ ಅಧಿಕಾರದಲ್ಲಿರುವ ಮನುಷ್ಯನಾಗಲೀ, 1872ನೇ ಇಸವಿ ಇಂಡಿಯನ್ ಎವಿಡೆನ್ಸು ಆಕ್ಟಿನ 24ನೇ ಪ್ರಕರಣದಲ್ಲಿ ನಮೂದಿಸಿರುವಂತಾ ಆಶೋತ್ತರವನ್ನಾಗಲೀ, ಅಥವಾ ವಾಗ್ದಾನವಾಗಲೀ ಕೊಡಲೂ ಅಥವಾ ಅಂಜಿಕೆಯನ್ನು ಹುಟ್ಟಿಸಲೂಕೂಡದು-ಯಾ-ಹಾಗೆ ಹುಟ್ಟಿಸುವ ಹಾಗೆ-ಯಾ-ಕೊಡಿಸಲ್ಪಡುವಹಾಗೆ, ಮಾಡಲೂ ಕೂಡದು.

ಪರಂತು –ಯಾವನೊಬ್ಬನಾಗಲೀ ಈ ಅಧ್ಯಾಯಕ್ಕನುಗುಣವಾಗಿ ಮಾಡೋಣಾಗುವ ವಿಚಾರಣೆಯ ಕಾಲದಲ್ಲಿ ತಾನೇ ಮನಃಪೂರ್ತಿಯಾಗಿ ಹೇಳುವದಕ್ಕೆ ತಾತ್ಪರ್ಯಪಡುವ ಹೇಳಿಕೆಯನ್ನು ಹೇಳದಂತೆ ಯೆಚ್ಚರಿಕೆಯಿಂದಾಗಲೀ –ಯಾ-ಅನ್ಯಥಾ ಆಗಲೀ ಯಾವ ಪೋಲಿಸ್ ಆಫಿಸರಾದರೂ ಸರಿಯೇ ಅಥವಾ ಯಾವ ಮನುಷ್ಯನಾದರೂ ಸರಿಯೇ ಅಡ್ಡಿ ಮಾಡಕೂಡದು.

ಹೇಳಿಕೆಗಳನ್ನೂ ತಕ್ಸೀರು ಕಬೂಲಾತಿಗಳನ್ನೂ ರಿಕಾರ್ಡು ಮಾಡಲಿಕ್ಕೆ ಅಧಿಕಾರ.

164. ಯಾವ ಮ್ಯಾಜಿಸ್ಟ್ರೇಟಾದರೂ ಈ ಅಧ್ಯಾಯವನ್ನನುಸರಿಸಿ ವಿಚಾರಣೆಮಾಡುವ ಕಾಲದಲ್ಲಿಯಾಗಲಿ, ಅಥವಾ ತದನಂತರ ವಿಚಾರಣೆ-ಯಾ-ದರಿಯಾಫ್ತಿ ಷುರುಮಾಡುವದಕ್ಕಿಂತ ಮುಂಚೆ ತನಿಗೆ ಹೇಳಲ್ಪಡುವ ಕೈಫಿಯತ್ತನ್ನಾಗಲಿ ರಿಕಾರ್ಡು ಮಾಡಬಹುದು. ಪರಂತು ಸದರೀ ಮಾಜಿಸ್ಟ್ರೇಟರು ಸದರೀ ವಿಚಾರಣೆಯಲ್ಲಿ ಪೋಲಿಸ್ ಆಫಿಸರಾಗಿ ಅಮಲ್ ನಡಶಿರಕೂಡದು.

ಅಂಥಾ ಹೇಳಿಕೆಗಳನ್ನು ಸಾಕ್ಷ್ಯವನ್ನು ರಿಕಾರ್ಡು ಮಾಡುವದಕ್ಕೋಸ್ಕರ ಇದರ ಕೆಳಗೆ ನಿರ್ದೇಶಿಸೋಣಾದ ರೀತಿಗಳಲ್ಲಿ ಆಯಾ ಮೊಕದ್ದಮೆಗಳ ಸಂಗತಿಗಳಿಗನುಗುಣವಾಗಿ, ಅತ್ಯುತ್ತಮವಾಗಿ ಆತನಿಗೆ ತೋರುವ ರೀತಿಯಲ್ಲಿ ರಿಕಾರ್ಡು ಮಾಡತಕ್ಕದ್ದು; ಅಂಥಾ ತಕ್ಸೀರು ಕಬೂಲಾತಿಗಳು 364ನೇ ಪ್ರಕರಣದಲ್ಲಿ ಏರ್ಪಡಿಸೋಣಾದ ರೀತಿಯಲ್ಲಿ ರಿಕಾರ್ಡು ಮಾಡಲ್ಪಟ್ಟು, ದಸ್ಕತ್ ಹಾಕಲ್ಪಡತಕ್ಕದ್ದು, ಮತ್ತು ಅನಂತರ ಮೊಕದ್ದಮೆ ಯಾರಿಂದ ವಿಚಾರ–ಯಾ-ದರ್ಯಾಫ್ತಿ ಮಾಡಲ್ಪಡುವದೋ ಆ ಮ್ಯಾಜಿಸ್ಟ್ರೇಟಿಗೆ ರವಾನಿಸಲ್ಪಡತಕ್ಕದ್ದು.

ತಕ್ಸೀರು ಕಬೂಲಾತಿಯು ಸ್ವೇಚ್ಛೆಯಾಗಿ ಕೊಡಲ್ಪಟ್ಟಿತೋ ಯೆಂಬದನ್ನು ಆ ಹೇಳಿಕೆ ಹೇಳುವ ಮನುಷ್ಯನ ವಿಚಾರಣೆಮೇಲೆ ಮ್ಯಾಜಿಸ್ಟ್ರೇಟನು ನಂಬಲಿಕ್ಕೆ ಕಾರಣವಿದ್ದರೇನೇ ಹೊರತು ಅನ್ಯಥಾ ರಿಕಾರ್ಡು ಮಾಡಬೇಕಾದ್ದಿ

ಲ್ಲ, ಮತ್ತು ಯಾವದೊಂದು ತಕ್ಶೀರು ಕಬೂಲಾತಿಯನ್ನೂ ರಿಕಾರ್ಡು ಮಾಡುವ ಕಾಲದಲ್ಲಿ ಅಂಥಾ ಕಬೂಲಾತಿಯ ಕೆಳಗೆ-ಕೆಳಗಣ ಅರ್ಥಕೊಡುವಹಾಗೆ ನ್ನೊಂದು ಮಿಮೋರಾಂಡಮನ್ನ ಬರೆಯತಕ್ಕದ್ದು:—

"ಈ ಕಬೂಲಾತಿಯು ಸ್ವೇಚ್ಛೆಯಾಗಿ ಕೊಡಲ್ಪಟ್ಟಿತೆಂದು ನಾನು ನಂಬುತ್ತೇನೆ. ಅದು ನನ್ನ ಸಮಕ್ಷಮದಲ್ಲಿ-ವ-ಕೇಳುವಿಕೆಯಲ್ಲಿ ತಕ್ಕೊಳ್ಳೋಣಾಗಿ ಆ ಹೇಳಿಕೆ ಹೇಳಿದ ಮನುಷ್ಯಗೆ ಓದಿ ಹೇಳಿದ್ದರಲ್ಲಿ ಅದು ಸರಿಯಾಗಿದೆಯೆಂತಲೂ ಅದರಲ್ಲಿ ತಾನು ಹೇಳಿದ ಹೇಳ್ವಿಕೆಯು ಪೂರ್ಣವಾಗಿಯೂ ಯಥಾರ್ಥ ಸ್ಥಿತಿಯಲ್ಲಿ ಇರುವದಾಗಿಯೂ ಒಪ್ಪಿದ್ದಾನೆ.

"(ದಸ್ಕತು) A. B.,

"ಮ್ಯಾಜಿಸ್ಟ್ರೇಟ."

ಪೋಲೀಸ್ ಆಫೀಸರಿಂದ ಝಡ್ತಿ.

165. ಒಂದು ಪೋಲಿಸ ಸ್ಟೇಷನ ಜಿಮ್ಮೆಯಲ್ಲಿ ಇರುವ ಆಫಿಸರನಾಗಲೀ, ಅಥವಾ ಪೋಲಿಸ ವಿಚಾರಣೆಯನ್ನು ಮಾಡುವ ಪೋಲಿಸ ಆಫಿಸರನಾಗಲೀ, ತಾನು ಪೋಲಿಸು ವಿಚಾರಣೆ ಮಾಡಲಿಕ್ಕೆ ಅಧಿಕಾರ ಇರುವ ಯಾವ ತಕ್ಸಿರಿನ ಬಾಬತಾದರೂ ಪೋಲಿಸ ವಿಚಾರಣೆ ನಡೆಯಲಿಕ್ಕೆ ಯಾವ ದಸ್ತೈವೇಜಾದರೂ—ಯಾ-ಪದಾರ್ಥವಾದರೂ ಅದರ ಹಾಜರಾತಿ ಅವಶ್ಯವಾದ್ದೆಂತ ತಿಳಿದರೆ, ಮತ್ತು 94ನೇ ಪ್ರಕರಣದಪ್ರಕಾರ ಸಮ್ಮನ್ಸ-ಯಾ-ಹುಕ್ಕುಂ ಕೊಡಲ್ಪಟ್ಟ-ಯಾ-ಕೊಡಲ್ಪಡಬಹುದಾದ ಮನುಷ್ಯನು ಆ ಸಮ್ಮನ್ಸ-ಯಾ-ಹುಕುಮಿನಲ್ಲಿ ನಿರ್ದೇಶಿಸೋಣಾದ ಮೇರಿಗೆ ಆ ದಸ್ತೈವೇಜನ್ನ ಅಥವಾ ಪದಾರ್ಥವನ್ನ ಹಾಜರುಮಾಡಲಿಕ್ಕಿಲ್ಲವೆಂತ ನಂಬಲಿಕ್ಕೆ ಕಾರಣ ತೋರಿದರೆ, ಅಥವಾ ಸದರೀ ದಸ್ತೈವೇಜು—ಯಾ—ಪದಾರ್ಥ ಯಾವನೊಬ್ಬನ ಸ್ವಾಧೀನದಲ್ಲೇ ಇರುತ್ತದೆಂಬದು ಗೊತ್ತಿಗೆ ಬಾರದೆ ಇದ್ದರೆ, ತಾನು ಯಾವ ಸ್ಟೇಷನ ಜಿಮ್ಮೆಯಲ್ಲಿ ಇರುತ್ತಾನೋ ಅಥವಾ ಯಾವ ಸ್ಟೇಷನಿಗೆ ಶೇರಿ ಇರುತ್ತಾನೋ ಆ ಸ್ಟೇಷನ ಸರಹದ್ದುಗಳೊಳಗಿರುವ ಯಾವ ಸ್ಥಳದಲ್ಲಿ ಆದರೂ ಅದಕ್ಕೋಸ್ಕರ ಝಡ್ತೀಮಾಡಬಹುದು—ಯಾ—ಮಾಡಿಸಲೂಬಹುದು.

ಅಂಥಾ ಆಫಿಸರನು ಝಡ್ತಿಯನ್ನು, ಸಾಧ್ಯವಾಗಿದ್ದಲ್ಲಿ, ತಾನು ಖುದ್ದಾಗಿ ನಡಿಸತಕ್ಕದ್ದು.

ಖುದ್ದಾಗಿ ಝಡ್ತೀ ನಡಿಸಲಿಕ್ಕೆ ತಾನು ಅಶಕ್ತನಾದರೆ, ಮತ್ತು ಆ ಕಾಲದಲ್ಲಿ ಹಾಜರಿದ್ದು ಝಡ್ತಿನಡಿಸುವದಕ್ಕೆ ಲಾಯಖಾದ ಇತರ ಮನುಷ್ಯನು ಇಲ್ಲದೆ ಇದ್ದರೆ, ಅವನು ತನಗೆ ತಾಬೇದಾರನಾಗಿರುವ ಯಾವ ಆಫಿಸರನನ್ನಾದರೂ, ಝಡ್ತಿ ಮಾಡಹೇಳಿ ಅಪೇಕ್ಷಿಸಬಹುದು, ಮತ್ತು ಅಂಥಾ ತಾಬೇದಾರಿ ಆಫಿಸರನಿಗೆ ಬರಹ ಮೂಲವಾಗಿ ಒಂದು ಹುಕುಮನ್ನು ಕೊಡತಕ್ಕದ್ದು. ಅದರಲ್ಲಿ ಯಾವ ದಸ್ತೈವೇಜು—ಯಾ-ಪದಾರ್ಥದಬಗ್ಗೆ ಝಡ್ತೀ ಮಾಡೋಣಾಗಬೇಕೋ ಅವುಗಳನ್ನೂ, ಝಡ್ತೀ ಮಾಡಬೇಕಾದ ಸ್ಥಳವನ್ನೂ ಕೂಡಾ ನಮೂದಿಸತಕ್ಕದ್ದು; ಮತ್ತು ಅಂಥಾ ತಾಬೇದಾರಿ ಆಫಿಸರನು ಆ ಮೇಲೆ ಸದರೀ ಸ್ವತ್ತಿಗೋಸ್ಕರ ಸದರೀ ಸ್ಥಳದಲ್ಲಿ ಝಡ್ತೀ ಮಾಡಬಹುದು.

ಝಡ್ತೀ ವಾರಂಟುಗಳಿಗೆ ಸಂಬಂಧವಾದ ಈ ಕೋಡಿನ ನಿಬಂಧನೆಗಳು, ಸಾಧ್ಯವಾಗುವಷ್ಟರಮಟ್ಟಿಗೆ ಈ ಪ್ರಕರಣಕ್ಕನುಗುಣವಾಗಿ ಮಾಡೋಣಾಗುವ ಝಡ್ತೀಗಳಿಗೆ ಲಾಗೂವಾಗತಕ್ಕದ್ದು.

ಪೋಲೀಸ್‌ಸ್ಟೇಷನ ಜಿಮ್ಮೆಯಲ್ಲಿ ಇರುವ ಆಫೀಸರು ಝಡ್ತೀವಾರಂಟು ಕೊಡಹೇಳಿ ಮತ್ತೊಬ್ಬ ಸ್ಟೇಷನ ಆಫೀಸರನ್ನು ಯಾವಾಗ ಕೇಳಬಹುದು.

166. ಒಂದು ಪೋಲಿಸು ಸ್ಟೇಷನಿನ ಜಿಮ್ಮೇದಾರನಾದ ಒಬ್ಬ ಆಫಿಸರನು, ಅದೇ ಡಿಸ್ಟ್ರಿಕ್ಟಿನಲ್ಲಿ ಅಥವಾ ಬೇರೆ ಡಿಸ್ಟ್ರಿಕ್ಟಿನಲ್ಲಿ ಇರುವ ಪೋಲಿಸ ಸ್ಟೇಷನ ಜಿಮ್ಮೇದಾರನನ್ನ ತನ್ನ ಸ್ವಂತ ಸರಹದ್ದುಗಳೊಳಗೆ ತಾನು ಯಾವ ಮೊಕದ್ದಮೆಯಲ್ಲಿ ಝಡ್ತೀ ಮಾಡಿಸಬಹುದೋ ಅಂಥಾ ಮೊಕದ್ದಮೆಯಲ್ಲಿ ಯಾವ ಸ್ಥಳದಲ್ಲಾದರೂ ಝಡ್ತಿ ಮಾಡಿಸಲು ಅಪೇಕ್ಷಿಸಬಹುದು.

ಅಂಥಾ ಆಫಿಸರನು, ಹಾಗೆ ಅಪೇಕ್ಷಿಸಲ್ಪಟ್ಟಾಗ, 165ನೇ ಪ್ರಕರಣದಲ್ಲಿ ಏರ್ಪಡಿಸೋಣಾದ ನಿಬಂಧನೆಯಮೇರೆಗೆ ಪ್ರವರ್ತಿಸತಕ್ಕದ್ದು, ಮತ್ತು ಶಿಕ್ಕಿದ ಪದಾರ್ಥ ಏನಾದರೂ ಇದ್ದರೆ, ಯಾರ ಅಪೇಕ್ಷೆಮೇರೆಗೆ ಝಡ್ತೀಮಾಡೋಣಾಯಿತೋ ಆ ಆಫಿಸರಗೆ ಕಳುಹಿಸತಕ್ಕದ್ದು.

167. 61ನೇ ಪ್ರಕರಣದಲ್ಲಿ ನಿರ್ಣಯಿಸೋಣಾದ 24 ಘಂಟೆಗಳ ಸಮಯದೊಳಗೆ ಈ ಅಧ್ಯಾಯಕ್ಕನುಗುಣವಾಗಿ ಮಾಡುವ ಪೋಲಿಸು ವಿಚಾರಣೆಯು ಪೂರ್ತಿ ಮಾಡಲ್ಪಡಕೂಡದೆಂತ ತೋರಿದರೆ, ಮತ್ತು ಆಪಾದನೆಯು ಒಳ್ಳೇಸಕಾರಣವಾದ್ದು ಎಂತ ನಂಬಲಿಕ್ಕೆ ಕಾರಣವಿದ್ದರೆ, ಪೋಲಿಸು ಸ್ಟೇಷರ್ನ ಜಿಮ್ಮೆಯಲ್ಲಿ ಇರುವ ಆಫಿಸರನು ಈ ಕೆಳಗೆ ಏರ್ಪಡಿಸೋಣಾದ ಕ್ರಮಕ್ಕನುಗುಣವಾಗಿ ಇಡುವ ಡೈರಿಯ ಸದರೀ ಮೊಕದ್ದಮೆಗೆ ಸಂಬಂಧಪಟ್ಟ ಖಿತಾಯಿತಿಗಳ ಒಂದು ನಕಲನ್ನು ಸಮೀಪದಲ್ಲಿ ಇರುವ ಮ್ಯಾಜಿಸ್ಟ್ರೇಟಗೆ ಕೂಡಲೇ ರವಾನಿಸತಕ್ಕದ್ದು; ಮತ್ತು ಅದೇಕಾಲದಲ್ಲಿ ಆಪಾದನೇ ಪಟ್ಟವನನ್ನ ಅಂಥಾ ಮ್ಯಾಜಿಸ್ಟ್ರೇಟನಬಳಿಗೆ ಕಳುಹಿಸತಕ್ಕದ್ದು.

ಪೋಲೀಸ್ ವಿಚಾರಣೆಯು 24 ಘಂಟೆಗಳೊಳಗೆ ಪೂರ್ತಿ ಮಾಡಲ್ಪಡಕೂಡದಿದ್ದರೆ ನಡಿಸಬೇಕಾದ ಕ್ರಮ.

ಈ ಪ್ರಕರಣಕ್ಕನುಗುಣವಾಗಿ ಆಪಾದನೇ ಪಟ್ಟವನು ಯಾವ ಮ್ಯಾಜಿಸ್ಟ್ರೇಟನಬಳಿಗೆ ಕಳುಹಿಸಲ್ಪಟ್ಟಿರುತ್ತಾನೋ, ಅವನು ಆ ಮೊಕದ್ದಮೆಯನ್ನು ತನಖಿಮಾಡುವದಕ್ಕೆ ತನಗೆ ಅಧಿಕಾರವಿದ್ದಾಗ್ಯೂ ಸರಿಯೇ ಇಲ್ಲದೆ ಹೋದಾಗ್ಯೂ ಸರಿಯೇ, 15 ದಿವಸಕ್ಕೆ ಮೀರದೆ ತನಗೆ ಯುಕ್ತತೋರುವ ವೊಂದು ಕಾಲಕ್ಕೆ ಆಪಾದನೆ ಪಟ್ಟವನನ್ನ ಕೈದಿನಲ್ಲಿ ಇಡುವಬಗ್ಯೆ ಆಗಾಗ್ಯೆ ಅಧಿಕಾರ ಕೊಡಬಹುದು. ಸದರೀ ಮೊಕದ್ದಮೆಯನ್ನ ವಿಚಾರಣೆ ಮಾಡುವದಕ್ಕಾಗಲೀ ದರ್ಯಾಫ್ತಿ ಬಗ್ಯೆ ಕಮ್ಮಿಟು ಮಾಡತಕ್ಕಬಗ್ಯೆ ಆಗಲೀ ಆತಗೆ ಅಧಿಕಾರ ಇಲ್ಲದೆ ಇದ್ದರೆ, ಮತ್ತು, ಆಪಾದನೆ ಪಟ್ಟವನನ್ನ ಇನ್ನು ತಡೆದಿಡುವದು ಅನಾವಶ್ಯಕವೆಂತ ಆತನು ತಿಳಕೊಳ್ಳುವನಾದರ, ಅಧಿಕಾರ ಇರುವ ಮ್ಯಾಜಿಸ್ಟ್ರೇಟನಬಳಿಗೆ ಆಪಾದನೆ ಪಟ್ಟವನನ್ನ ಕಳುಹಿಸುವಹಾಗೆ ಹುಕುಂ ಮಾಡಬಹುದು.

ಈ ಪ್ರಕರಣಕ್ಕನುಗುಣವಾಗಿ ಪೋಲಿಸಿನವರ ಭದ್ರತೆಯಲ್ಲಿ ಇಡದಿರಲಿಕ್ಕೆ ಅಧಿಕಾರಕೊಡುವ ಒಬ್ಬ ಮ್ಯಾಜಿಸ್ಟ್ರೇಟನು ಹೀಗೆ ಕೊಡುವದಕ್ಕಾಗಿ ತನ್ನ ಸಬಬುಗಳನ್ನು ರಿಕಾರ್ಡು ಮಾಡತಕ್ಕದ್ದು.

ಅಂಥಾ ಹುಕುಂ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ—ಯಾ—ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟಲ್ಲದ ಇತರ ಮ್ಯಾಜಿಸ್ಟ್ರೇಟನಿಂದ ಕೊಡಲ್ಪಟ್ಟಿದ್ದರೆ, ಸದರೀ ಮ್ಯಾಜಿಸ್ಟ್ರೇಟು ತನ್ನ ಹುಕುಮಿನ ನಕಲನ್ನು, ಹಾಗೆ ಹುಕುಂ ಮಾಡಲಿಕ್ಕೆ ತನ್ನ ಕಾರಣಗಳನಿತ್ತಿ, ತಾನು ಯಾರಿಗೆ ತಾಬೇದಾರನಾಗಿದ್ದಾನೋ ಆ ಮ್ಯಾಜಿಸ್ಟ್ರೇಟಗೆ ಕಳುಹಿಸತಕ್ಕದ್ದು.

168. ಈ ಅಧ್ಯಾಯದಪ್ರಕಾರ ಯಾವನೊಬ್ಬ ಸಬಾರ್ಡಿನೇಟ ಪೋಲಿಸು ಆಫಿಸರನು ಯಾವದಾದರೂ ಪೋಲಿಸು ವಿಚಾರಣೆ ನಡಸಿ ಇದ್ದರೆ, ಆತನು ಅಂಥಾ ಪೋಲಿಸ್ ವಿಚಾರಣೆಯ ಫಲವನ್ನ ಕುರಿತು ಸ್ಟೇಷನ್ ತಾಬೇದಾರಿಯಲ್ಲಿ ಇರುವ ಆಫಿಸರಿಗೆ ರಿಪೋರ್ಟನ್ನು ಕಳುಹಿಸತಕ್ಕದ್ದು.

ಸಬಾರ್ಡಿನೇಟು ಪೋಲೀಸ್ ಆಫೀಸರನುಮಾಡಿದ ಪೋಲೀಸ್ ವಿಚಾರಣೆಯ ರಿಪೋರ್ಟು.

169. ಈ ಅಧ್ಯಾಯದಪ್ರಕಾರ ಮಾಡೋಣಾದ ಪೋಲಿಸ ವಿಚಾರಣೆಯಮೇಲೆ, ಆಪಾದನೆಪಟ್ಟ ಮನುಷ್ಯನನ್ನು ಮ್ಯಾಜಿಸ್ಟ್ರೇಟನಬಳಿಗೆ ಕಳುಹಿಸಿಕೊಡತಕ್ಕ ಬಗ್ಯೆ ಸಾಕಾದ ಸಾಕ್ಷ್ಯವೂ—ಯಾ—ಯುಕ್ತವಾದ ಗುಮಾನಿಯು, ಇಲ್ಲವೆಂತ ಪೋಲಿಸ್‌ಸ್ಟೇಷರ್ನ ಜಿಮ್ಮೆಯಲ್ಲಿ ಇರುವ ಆಫಿಸರಗೆ ತೋರಿದರೆ, ಸದರೀ ಆಫಿಸರನು, ಅಂಥಾ ಮನುಷ್ಯನು ಪಹರೆಯಲ್ಲಿ ಇರುಪಕ್ಷಕ್ಕೆ, ಸದರೀ ಆಫಿಸರನು ಅಪ್ಪಣೆಕೊಡಬಹುದಾದ ಪ್ರಕಾರ ಅವನಿಂದ ಜಾಮೀನುದಾರರುಸಮೇತ—ಯಾ—ಜಾಮೀನು ಇಲ್ಲದೇನೇ, ಒಂದು ಪತ್ರವನ್ನ ಬರಕೊಟ್ಟಲ್ಲಿ, ಅವನನ್ನ ಬಿಟ್ಟುಬಿಡಬಹುದು, ಆ ಪತ್ರದಲ್ಲಿ ಪೋಲಿಸ್ ರಿಪೋರ್ಟಮೇಲೆ ಆ ತಕ್ಸೀರನ್ನ ತನಖಿಮಾಡುವದಕ್ಕೆ ಮತ್ತು ಆಪಾದನೆ ಪಟ್ಟವನನ್ನ ದರ್ಯಾಫ್ತಿಮಾಡುವಬಗ್ಯಾಗಿ ಅಥವಾ ದರ್ಯಾಫ್ತಿ ಬಗ್ಯೆ ಕಮ್ಮಿಟು ಮಾಡುವಬಗ್ಯೆ ಆಗಲೀ ಅಧಿಕಾರ ಇರುವ ಮ್ಯಾಜಿಸ್ಟ್ರೇಟನಮುಂದೆ, ಹಾಜರಾಗುವಂತೆ ಹೇಳಿದಾಗ ಹಾಗೆ ಹಾಜರಾಗುವೆನೆಂಬದಾಗಿ ನಮೂದಿಸತಕ್ಕದ್ದು.

ಸಾಕ್ಷ್ಯವು ಸಾಲದೆ ಇರುವ ಸಂಗತಿಯಲ್ಲಿ ಆಪಾದನೆಪಟ್ಟವನನ್ನು ಬಿಡುಗಡೆ ಮಾಡೋಣ.

1105

170. ಈ ಅಧ್ಯಾಯಪ್ರಕಾರ ಮಾಡೋಣಾದ ಪೋಲಿಸ್ ವಿಚಾರಣೆಯಲ್ಲಿ, ಸ್ಟೇಷನ್ ಜಿಮ್ಮೆಯಲ್ಲಿ ಇರುವ ಆಫಿಸರಗೆ ಮೇಲೆ ಹೇಳಿದಪ್ರಕಾರ ಸಾಕಾವಷ್ಟು ಸಾಕ್ಷ್ಯವು ಅಥವಾ ಯುಕ್ತವಾದ ಸಬಬು ಉಂಟೆಂತ ಕಂಡುಬಂದರೆ, ಸದರೀ ಆಫಿಸರನು ಪೋಲಿಸ್ ರಿಪೋರ್ಟಮೇಲೆ ಆ ತಕ್ಸೀರನ್ನ ತನಖಿಮಾಡುವದಕ್ಕೆ ಮತ್ತು ಆಪಾದನೆ ಪಟ್ಟವನನ್ನ ದರ್ಯಾಫ್ತ ಮಾಡುವಬಗ್ಗ್ಯಾಗಲೀ—ಯಾ—ದರ್ಯಾಫ್ತಿ ಬಗ್ಗ್ಯೆ ಕಮ್ಮಿಟ ಮಾಡುವಬಗ್ಗ್ಯಾಗಲೀ ಅಧಿಕಾರ ಇರುವ ಮ್ಯಾಜಿಸ್ಟ್ರೇಟನಬಳಿಗೆ ಆಪಾದನೆ ಪಟ್ಟವನನ್ನ ಮೊಹಸಲೆ ಹಾಕಿ ಕಳುಹಿಸತಕ್ಕದ್ದು ; ಅಥವಾ ಸದರೀ ತಕ್ಸೀರು ಜಾಮೀನು ತಕೊಳ್ಳಬಹುದಾದ್ದಾದರೆ ಮತ್ತು ಆಪಾದನೆ ಪಟ್ಟವನು ಜಾಮೀನು ಕೊಡಶಕ್ತನಾಗಿದ್ದರೆ, ಫಲಾನಾ ತಾರೀಕೆಂತ ನಿಶ್ಚಯಿಸಿ, ಆದಿನ ಮತ್ತು ಮ್ಯಾಜಿಸ್ಟ್ರೇಟನು ಅನ್ಯಥಾ ಅಪ್ಪಣೆ ಕೊಡುವವರಿಗೆ ಪ್ರತಿದಿನ ಅಂಥಾ ಮ್ಯಾಜಿಸ್ಟ್ರೇಟನಮುಂದೆ ಹಾಜರು ಇರುವ ಹಾಗೆ ಅವನಿಂದ ಒಂದು ಜಾಮೀನನ್ನು ತಕ್ಕೊಳ್ಳತಕ್ಕದ್ದು.

ಸಾಕ್ಷ್ಯವು ಸಾಕಾಗಿದ್ದರೆ ಮೊಕದ್ದಮೆಯನ್ನ ಮ್ಯಾಜಿಸ್ಟ್ರೇಟಗೆ ರವಾನಿಸತಕ್ಕದ್ದು.

ಸ್ಟೇಷನ್ ಜಿಮ್ಮೆಯಲ್ಲಿ ಇರುವ ಆಫಿಸರನು ಈ ಪ್ರಕರಣಪ್ರಕಾರ ಆಪಾದನೆ ಪಟ್ಟವನನ್ನು ಮ್ಯಾಜಿಸ್ಟ್ರೇಟನಬಳಿಗೆ ರವಾನಿಸುವಾಗ ಅಥವಾ ಅಂಥಾ ಮ್ಯಾಜಿಸ್ಟ್ರೇಟನಮುಂದೆ ಹಾಜರು ಆಗುವ ಹಾಗೆ ಈ ಪ್ರಕರಣಪ್ರಕಾರ ಜಾಮೀನು ತಕ್ಕೊಳ್ಳುವಾಗ, ಮ್ಯಾಜಿಸ್ಟ್ರೇಟನಮುಂದೆ ಅವಶ್ಯವಾಗಿ ಹಾಜರು ಪಡಿಸಬೇಕಾಗಬಹುದಾದ ಆಯುಧವನ್ನು—ಯಾ—ಇತರ ಪದಾರ್ಥವನ್ನು ಸಹಾ ಕಳುಹಿಸತಕ್ಕದ್ದು ; ಮತ್ತು ಫಿರ್ಯಾದುದಾರನು, ಯಾರಾದರೂ ಇದ್ದರೆ, ಅವನನ್ನೂ, ಮೊಕದ್ದಮೆಯ ಸಂಗತಿಗಳನ್ನು ತಿಳಿದವರಾಗಿ ಕಾಣಬರುವವರೊಳಗೆ ಅವಶ್ಯವಾದವರೆಂತ ಅಂಥಾ ಆಫಿಸರಗೆ ತೋರುವಷ್ಟುಮಂದಿಯನ್ನೂ ಮ್ಯಾಜಿಸ್ಟ್ರೇಟನಮುಂದೆ ಹಾಜರಾಗಿ, ಆಪಾದನೆ ಪಟ್ಟವನಮೇಲೆ ಏರ್ಪಡಿಸೋಣಾದ ಆಪಾದನೆ ಬಾಬಿನಲ್ಲಿ ಫಿರ್ಯಾದ ನಡಿಸುವದಾಗಿ ಅಥವಾ (ಸಂಗತ್ಯಾನುಸಾರ) ಸಾಕ್ಷ್ಯಕೊಡುವದಾಗಿ ಒಂದುಪತ್ರ ಬರಕೊಡಹೇಳಿ ಅಪೇಕ್ಷಿಸತಕ್ಕದ್ದು.

ಅಂಥಾ ಪತ್ರದಲ್ಲಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟು—ಯಾ—ಸಬಡಿವಿಜನಲ್ ಮ್ಯಾಜಿಸ್ಟ್ರೇಟು ಕೋರ್ಟೆಂತ ನಮೂದಾಗಿದ್ದರೆ, ವಿಚಾರಣೆಗಾಗಿ—ಯಾ—ದರ್ಯಾಫ್ತಿಗಾಗಿ ಅಂಥಾ ಮ್ಯಾಜಿಸ್ಟ್ರೇಟು ರಿಫರ ಮಾಡುವ ಯಾವ ಕೋರ್ಟನ್ನಾದರೂ ಅದು ಅಡಗಿಸಿಕೊಂಡಿದೆ ಎಂದು ಗ್ರಹಿಸಲ್ಪಡತಕ್ಕದ್ದು, ಪರಂತು ಹಾಗೆ ರಿಫರಮಾಡಿದ ಸಂಗತಿಕುರಿತು ಅಂಥಾ ಫಿರ್ಯಾದುದಾರಗೆ—ಯಾ—ಜನರಿಗೆ ತಕ್ಕ ನೋಟೀಸು ಕೊಡಲ್ಪಡಬೇಕು.

ಈ ಪ್ರಕರಣಪ್ರಕಾರ ನಿಶ್ಚಯಿಸಬೇಕಾದ ತಾರೀಖು ಆಪಾದನೆಪಟ್ಟ ಮನುಷ್ಯನನ್ನ ಜಾಮೀನುಮೇಲೆ ಬಿಡೋಣಾಗಿದ್ದರೆ ಆತನು ಮ್ಯಾಜಿಸ್ಟ್ರೇಟನಮುಂದೆ ಯಾವ ತಾರೀಖಿಗೆ ಹಾಜರಾಗಬೇಕೋ ಆ ತಾರೀಖಾಗಿಯೂ, ಮೊಹಸಲೆಮೇಲೆ ಆಪಾದನೆ ಪಟ್ಟವನನ್ನ ಕಳುಹಿಸಿದ ಸಂಗತಿಯಲ್ಲಿ ಅಂಥಾ ಮ್ಯಾಜಿಸ್ಟ್ರೇಟು ಕೋರ್ಟನಲ್ಲಿ ತಲ್ಪುವದಾಗಿ ನಿರೀಕ್ಷಿಸೋಣಾದ ತಾರೀಖಾಗಿಯೂ ಇರತಕ್ಕದ್ದು.

ಪತ್ರವು ಯಾವ ಆಫಿಸರನ ಸಮಕ್ಷಮದಲ್ಲಿ ಬರದುಕೊಡಲ್ಪಟ್ಟಿತೋ ಆ ಆಫಿಸರನು ಅದರ ಒಂದು ಪ್ರತಿಯನ್ನ ಆ ಪತ್ರ ಬರಕೊಟ್ಟ ಒಬ್ಬನಿಗೆ ಕೊಟ್ಟು, ಮೂಲಪ್ರತಿಗಳನ್ನ ತನ್ನ ರಿಪೋರ್ಟನೊಂದಿಗೆ ಮ್ಯಾಜಿಸ್ಟ್ರೇಟನಬಳಿಗೆ ರವಾನಿಸತಕ್ಕದ್ದು.

171. ಯಾವನೊಬ್ಬ ಫಿರ್ಯಾದಿದಾರನಾಗಲೀ ಸಾಕ್ಷಿಗಾರನಾಗಲೀ, ಮ್ಯಾಜಿಸ್ಟ್ರೇಟು ಕೋರ್ಟಗೆ ಹೋಗುವಾಗ ಪೋಲಿಸ್ ಆಫೀಸರ ಸಂಗಡಲೇ ಹೋಗಬೇಕೆಂತ ಹೇಳತಕ್ಕದ್ದಿಲ್ಲ,

ಫಿರ್ಯಾದಿದಾರರಾಗಲೀ ಸಾಕ್ಷಿಗಳಾಗಲೀ ಪೋಲೀಸ್ ಆಫೀಸರರ ಸಂಗಡಲೇ ಹೋಗ ಹೇಳತಕ್ಕದ್ದಿಲ್ಲ.

ಅಥವಾ, ಅವನನ್ನು ಅನಾವಶ್ಯಕವಾಗಿ ನಿರ್ಬಂಧಪಡಿಸಲೂ, ಇಕ್ಕಟ್ಟು ಪಡಿಸಲೂ, ಕೂಡದು, ಅಥವಾ ಅವನ ಹಾಜರಾತಿ ಬಗ್ಗ್ಯೆ ಅವನ ಸ್ವಂತ ಪತ್ರವಿನಹಾ ಜಾಮೀನು ಕೊಡಹೇಳಿ ಅಪೇಕ್ಷಿಸಲೂ ಕೂಡದು.

ಫಿರ್ಯಾದಿದಾರರನ್ನು ಸಾಕ್ಷಿಗಳನ್ನು ಆಟಂಕಕ್ಕೆ ಒಳಪಡಿಸಕೂಡದು.

ಪರಂತು, ಯಾವ ಫಿರ್ಯಾದುದಾರನಾಗಲೀ—ಯಾ—ಸಾಕ್ಷಿಗಾರನಾಗಲೀ ಹಾಜರಾಗದೆ ನಿರಾಕರಿಸಿದರೂ, ಅಥವಾ 170ನೇ ಪ್ರಕರಣದಲ್ಲಿ ವಿಧಿಸೋಣಾದ ಮುಚ್ಚಳಿಕೆಯನ್ನು ಬರಕೊಡಲಿಕ್ಕೆ ನಿರಾಕರಿಸಿದರೂ, ಅಂಥಾ ಸಂಗತಿಯಲ್ಲಿ, ಪೋಲೀಸ ಸ್ಟೇಷನ್ ಜಿಮ್ಮೇದಾರನಾದ ಆಫೀಸರನು ಅಂಥವನನ್ನು, ಮೊಹಸಲೆನಿಶಿ ಮ್ಯಾಜಿಸ್ಟ್ರೇಟಿನ ಬಳಿಗೆ ಕಳುಹಿಸಬಹುದು. ಸದರೀ ಮ್ಯಾಜಿಸ್ಟ್ರೇಟು ಅವನು ಅಂಥಾ ಪತ್ರವನ್ನು ಬರಕೊಡುವಪರ್ಯಂತವಾಗಲೀ—ಯಾ—ಮೊಕದ್ದಮೆಯ ವಿಚಾರಣೆ ಪೂರ್ತಿಯಾಗುವ ಪರ್ಯಂತವಾಗಲೀ, ಅವನನ್ನು ಪಹರೆಯಲ್ಲಿ ತಡಿದಿಡಬಹುದು.

ತಿರಸ್ಕರಿಸುವ ಫಿರ್ಯಾದುದಾರರನ್ನು ಯಾ ಸಾಕ್ಷಿಯನ್ನು ಪಹರೆಹಾಕಿ ಕಳುಹಿಸಬಹುದು.

172. ಈ ಅಧ್ಯಾಯದ ಪ್ರಕಾರ ಪೋಲೀಸ್ ವಿಚಾರಣೆಮಾಡುವ ಪ್ರತಿ ಪೋಲೀಸ್ ಆಫೀಸರನು ತನ್ನ ಪ್ರೊಸೀಡಿಂಗ್ಸಗಳನ್ನು ತನ್ನ ಡೈರಿಯಲ್ಲಿ ದಿನೇ ದಿನೇ ದಾಖಲು ಮಾಡತಕ್ಕದ್ದು, ಅದರಲ್ಲಿ ವರ್ತಮಾನವು ಎಷ್ಟುಹೊತ್ತಿಗೆ ತನಗೆ ತಲಪಿತೆಂಬದು, ತಾನು ಪೋಲೀಸ್ ವಿಚಾರಣೆ ಆರಂಭಿಸಿದ ಮತ್ತು ವಿಚಾರಣೆ ಪೂರ್ತಿ ಮಾಡಿದ ಕಾಲ, ತಾನು ನೋಡಿದಂಥಾ ಸ್ಥಳ—ಯಾ—ಸ್ಥಳಗಳು ಇಾತಿಂಥಾದ್ದೆಂತಲೂ, ಬರೆಯುವದು ಶಿವಾಯಿ ಅವನ ವಿಚಾರಣೆಯಲ್ಲಿ ತಿಳಿದುಬಂದ ಸಂಗತಿಗಳು ಕೂಡಾ ಬರೆಯಬೇಕು.

ಪೋಲೀಸ್‌ವಿಚಾರಣೆ ಪ್ರೊಸೀಡಿಂಗ್ಸುಗಳ ಡೈರಿ.

ಯಾವ ಕ್ರಿಮಿನಲ್ ಕೋರ್ಟನವರಾದರೂ ಸಹಾ, ಸದರೀ ಕೋರ್ಟಿನಲ್ಲಿ ವಿಚಾರಣೆ—ಯಾ—ದರ್ಯಾಫ್ತಿಯಲ್ಲಿರುವ ಮೊಕದ್ದಮೆಯ ಬಾಬತು ಪೋಲೀಸ್ ಡೈರಿಗಳನ್ನ ತರಿಸಿಕೊಳ್ಳಬಹುದು. ಮತ್ತು ಅಂಥಾ ಡೈರಿಗಳನ್ನ ಸದರೀ ಮೊಕದ್ದಮೆಯಲ್ಲಿ ರುಜುವಾತಾಗಿ ಅಲ್ಲದಿದ್ದಾಗ್ಯೂ, ಅಂಥಾ ವಿಚಾರಣೆ—ಯಾ—ದರ್ಯಾಫ್ತಿ ಕಾಲದಲ್ಲಿ ತಮಗೆ ಸಹಾಯಾರ್ಥವಾಗಿ ಉಪಯೋಗಿಸಬಹುದು. ಕೈದೀಗೆಯಾಗಲೀ ಅವನ ಮುತಾಲೀಕರಿಗಾಗಲೀ ಅಂಥಾ ಡೈರಿ ಕೊಡ ಕೇಳಲಿಕ್ಕೆ ಅರ್ಹತೆ ಇಲ್ಲ, ಅಥವಾ ಅವುಗಳನ್ನ ಕೋರ್ಟನವರು ರಿಫರು ಮಾಡುತ್ತಾರೆಂಬ ಸಬಬಿನಮೇಲೆಯೇ ಮಾತ್ರ, ಅವುಗಳನ್ನು ನೋಡಲಿಕ್ಕೆ ಅವನಾಗಲೀ ಅವರಾಗಗೇ ಅರ್ಹತೆ ಉಳ್ಳವರಾಗಿ, ಇರುವದಿಲ್ಲ; ಆದರೆ ಅವುಗಳನ್ನು ತಯ್ಯಾರುಮಾಡಿದ ಪೋಲಿಸ್ ಆಫಿಸರನಿಂದ, ಜ್ಞಾಪಕ ಪಡಿಸಿಕೊಳ್ಳುವದಕ್ಕಾಗಿ ಅವುಗಳು ಉಪಯೋಗಿಸಲ್ಪಟ್ಟರೆ, ಅಥವಾ ಅಂಥಾ ಪೋಲಿಸ್ ಆಫಿಸರು ಹೇಳುವದನ್ನು ವಿರುದ್ಧಿಸಲಿಕ್ಕೆ ಅವುಗಳನ್ನು ಕೋರ್ಟನವರು ಉಪಯೋಗಿಸಿಕೊಂಡರೆ, 1872ನೇ ಇಸವಿ ಇಂಡಿಯನ್ ಎವಿಡನ್ಸ ಆಕ್ಟಿನ 161 ಅಥವಾ 145ನೇ ಪ್ರಕರಣದ ನಿಬಂಧನೆಗಳು ಸಂಗತ್ಯಾನುಸಾರವಾಗಿ ಅವುಗಳಿಗೆ ಲಗಾವಾಗತಕ್ಕದ್ದು.

173. ಈ ಅಧ್ಯಾಯಕ್ಕನುಗುಣವಾಗಿ ಮಾಡುವ ಪ್ರತಿ ಪೋಲಿಸ್ ವಿಚಾರಣೆಯು ಅನಾವಶ್ಯಕವಾದ ಕಾಲವಿಳಂಬವಿಲ್ಲದೆ ಪೂರ್ತಿ ಮಾಡತಕ್ಕದ್ದು, ಮತ್ತು, ಪೂರ್ತಿಯಾದಕೂಡಲೇ, ಪೋಲಿಸ್ ಸ್ಟೇಷನ್ ಜಿಮ್ಮೆಯಲ್ಲಿ ಇರುವ ಪೋಲಿಸು ಆಫಿಸರನು ಮೈಸೂರು ಗವರ್ನಮೆಂಟಿನವರಿಂದ ನಿರ್ದೇಶಿಸಲ್ಪಟ್ಟ, ನಮೂನೆಯಲ್ಲಿ ಒಂದು ರಿಪೋರ್ಟನ್ನು, ಪೋಲೀಸ್ ರಿಪೋರ್ಟು ಮೇಲೆ, ಆ ತಕ್ಸೀರಿನ ಬಾಬಿನಲ್ಲಿ ತನಖಿಮಾಡುವದಕ್ಕೆ ಅಧಿಕಾರವಿರುವ ಮ್ಯಾಜಿಸ್ಟ್ರೇಟಿಗೆ ಕಳುಹಿಸತಕ್ಕದ್ದು, ಆ ರಿಪೋರ್ಟನಲ್ಲಿ ಸಾಕ್ಷಿಗಾರರ ಹೆಸರುಗಳನ್ನೂ, ವರ್ತಮಾನದಸ್ವಭಾವವನ್ನು ಸದರೀ ಮೊಕದ್ದಮೆಯ ಸಂಗತಿಗಳನ್ನು ಬಲ್ಲವರಾಗಿ ತೋರುವ ಜನರ ಹೆಸರುಗಳನ್ನು, ಆಪಾದನೇಪಟ್ಟ ಮನುಷ್ಯನು ಪಹರೆನಿಶಿ ಕಳುಹಿಸಲ್ಪಟ್ಟಿದ್ದಾನೋ ಅಥವಾ ಜಾಮೀನುಸಮೇತ—ಯಾ—ಜಾಮೀನು ಇಲ್ಲದೆ ಆತನ ಪತ್ರದಮೇಲೆಯೇ ಬಿಡಲ್ಪಟ್ಟಿದ್ದಾನೋ ಎಂಬ ಸಂಗತಿಗಳು ಕೂಡ ನಮೂದುಮಾಡತಕ್ಕದ್ದು.

ಪೋಲೀಸ್ ಆಫೀಸರನ ರಿಪೋರ್ಟು.

153ನೇ ಪ್ರಕರಣದಪ್ರಕಾರ ಪೋಲಿಸಿನ ಮೇಲ್ ಉದ್ಯೋಗಸ್ಥನು ಮೊಕರರಪಟ್ಟು ಇರುವ ಸಂಗತಿಯಲ್ಲಿ, ಅಂಥಾ ರಿಪೋರ್ಟು ಅವನ ಮುಖಾಂತರ ಕಳುಹಿಸಲ್ಪಡತಕ್ಕದ್ದು, ಮತ್ತು ಮ್ಯಾಜಿಸ್ಟ್ರೇಟರ ಹುಕುಂ ಬರುವ ತನಕ, ಇನ್ನು ಹೆಚ್ಚಿನ ಪೋಲಿಸ್ ವಿಚಾರಣೆ ಮಾಡಬೇಕೆಂತ, ಪೋಲಿಸ್ ಸ್ಟೇಷನ್ ಜಿಮ್ಮೆಯಲ್ಲಿ ಇರುವ ಆಫಿಸರಿಗೆ ಆತನು ಅಪ್ಪಣೆಮಾಡಬಹುದು.

ಈ ಪ್ರಕರಣದಪ್ರಕಾರ ಕಳುಹಿಸೋಣಾದ ರಿಪೋರ್ಟಿನಿಂದ ಅಪಾದನೆಪಟ್ಟವನು ಆತನ ಪತ್ರದಮೇಲೆ ಬಿಡುಗಡೆ ಮಾಡಲ್ಪಟ್ಟಿದ್ದಾನೆಂತ ತೋರಿದಾಗ, ಅಂಥಾ ಪತ್ರವಿಮೋಚನೆ ಪಡಿಶಿಯಾಗಲೀ, ಅನ್ಯಥಾ ಆಗಲೀ ಮ್ಯಾಜಿಸ್ಟ್ರೇಟನು ತನಗೆ ಯುಕ್ತತೋರುವಪ್ರಕಾರ ಹುಕುಮನ್ನು ಮಾಡತಕ್ಕದ್ದು.

ಆತ್ಮಹತ್ಯ ಮುಂತಾದ ಬಾಬುಗಳಲ್ಲಿ ಪೋಲೀಸಿನವರು ವಿಚಾರಣೆಮಾಡಿ ರಿಪೋರ್ಟುಮಾಡತಕ್ಕದ್ದು.

174. ಪೋಲಿಸ್ ಸ್ಟೇಷನ್ ಜಿಮ್ಮೆಯಲ್ಲಿ ಇರುವ ಪ್ರತಿ ಒಬ್ಬ ಆಫಿಸರನಿಗೆ, ಯಾವನೊಬ್ಬ ಮನುಷ್ಯನಾಗಲಿ—

(a) ಆತ್ಮಹತ್ಯ ಮಾಡಿಕೊಂಡಿದ್ದಾನೆಂತಾಗಲೀ, ಅಥವಾ,

(b) ಬೇರೆಯವನಿಂದ ಅಥವಾ ಒಂದು ಜಂತುವಿನಿಂದ—ಯಾ—ಯಂತ್ರದಿಂದ ಅಥವಾ ಅಕಸ್ಮಾತ್ತಾದ ಅಪಾಯದಿಂದ, ಕೊಲ್ಲಲ್ಪಟ್ಟಿದ್ದಾನೆಂತ, ಅಥವಾ

(c) ಬೇರೆ ಒಬ್ಬನು ಒಂದು ತಕ್ಸೀರು ಮಾಡಿದ್ದಾನೆಂತ ನ್ಯಾಯವಾಗಿ ಗುಮಾನು ಹುಟ್ಟುವ ತರದ ಸಂಗತಿಗಳಲ್ಲಿ ಸ್ರೊಬ್ಬನು ಮರಣಪಟ್ಟಿದ್ದಾನೆಂತ.

ವರ್ತಮಾನ ಬಂದಲ್ಲಿ, ಆತನು ಅವಿಧಿಮರಣದ ವಿಚಾರಣೆಯನ್ನು ಮಾಡುವದಕ್ಕೆ ಅಧಿಕಾರಪಟ್ಟು ಇರುವ ಅತ್ಯಂತ ಸಮೀಪದಲ್ಲಿ ಇರುವ ಮ್ಯಾಜಿಸ್ಟ್ರೇಟಿಗೆ ತಕ್ಷಣದಲ್ಲಿ ಆ ಬಾಬಿನ ವರ್ತಮಾನ ಕೊಡತಕ್ಕದ್ದು, ಮತ್ತು, ಮೈಸೂರು ಗವರ್ನಮೆಂಟಿನವರಿಂದ ಏರ್ಪಡಿಸೋಣಾದ ಯಾವದೊಂದು ಕಾಯಿದೆಯಿಂದ ಅಥವಾ ಡಿಸ್ಟ್ರಿಕ್ಟು—ಯಾ—ಸಬ ಡಿವಿಜನಲ್ ಮ್ಯಾಜಿಸ್ಟ್ರೇಟನಿಂದ ಕೊಡೋಣಾದ ಸಾಧಾರಣ—ಯಾ—ವಿಶೇಷ ಹುಕುಮಿನಿಂದ ಅನ್ಯಥಾ ಅನುಜ್ಞೆ ಸೋಣಾಗದೆ ಇರುವ ಪಕ್ಷಕ್ಕೆ, ಆ ಮೇರಿಗೆ ಮೃತಪಟ್ಟ ಮನುಷ್ಯನ ಶರೀರ ಇರುವಂಥಾ ಸ್ಥಳಕ್ಕೆ ಕೂಡಲೇ ಹೋಗಿ, ಮತ್ತು ಅಲ್ಲಿ, ನೆರೆಹೊರೇ ವಾಸಸ್ಥರಾದ ಎರಡು—ಯಾ—ಹೆಚುಮಂದಿ ಮರ್ಯಾದೆವಂತರಾದ ಗ್ರಹಸ್ಥರ ಸಮಕ್ಷಮದಲ್ಲಿ, ಪೋಲಿಸ್ ವಿಚಾರಣೆಮಾಡುವದಲ್ಲದೆ ಮರಣಕ್ಕೆ ದ್ಯೋತಕವಾಗಿ ಇರುವ ಕಾರಣ ಫಲಾನಾದೆಂತಲೂ, ಶರೀರದಮೇಲೆ ಕಾಣಬರುವ ಘಾಯಗಳೂಬಿಡೆದ—ಯಾ—ಗೀರಿನ ಜಖಮಿನ ಗುರ್ತುಗಳು—ವ—ಬೇರೆ ಜಖಮಿನ ಕಲೆಗಳು ಫಲಾನಾದೆಂತಲೂ ಫಲಾನಾರೀತೀಲಿ ಫಲಾನಾ ಆಯುಧದಿಂ—ಯಾ—ಸಾಧಕದಿಂದ (ಯೇನಾದರೂ ಇದ್ದರೆ) ಆ ಗುರ್ತುಗಳು ಅದ್ದಾಗಿ ಕಾಣಬರುತ್ತದೆಂತಲೂ ಸಹ ವಿವರವಾಗಿ ರಿಪೋರ್ಟ ಮಾಡತಕ್ಕದ್ದು,

ಸದರೀ ರಿಪೋರ್ಟಿಗೆ ಆ ಪೋಲಿಸ್ ಆಫಿಸರೂ ಮತ್ತು ಇತರ ಮನುಷ್ಯರೂ, ಅಥವಾ ಅವರಷ್ಟೆಕಿ ಅದರಲ್ಲಿ ಏಕೀಭವಿಸುವಂಥಾ ಮನುಷ್ಯರೂ ದಸ್ಕತುಮಾಡಿ, ಕೂಡಲೇ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನ—ಯಾ—ಸಬ ಡಿವಿಜನಲ್ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸತಕ್ಕದ್ದು.

ಮರಣಕ್ಕೆ ಕಾರಣ ಫಲಾನದೆಂಬ ವಿಷಯದಲ್ಲಿ ಸಂಶಯವಿದ್ದರೆ, ಅಥವಾ ಬೇರೆ ಯಾವ ಕಾರಣದಿಂದಾದರೂ ಶವವನ್ನು ಪರಿಕ್ಷಿಸುವಬಗ್ಗೆ ಕಳುಹಿಸುವದು ಯುಕ್ತವಾಗಿ ಪೋಲಿಸ್ ಆಫಿಸರನಿಗೆ ಕಂಡ ಸಂಗತಿಯಲ್ಲಿ, ಈ ಬಗ್ಗಾಗಿ ಮೈಸೂರು ಗವರ್ನಮೆಂಟಿನವರು ಏರ್ಪಡಿಸುವ ಕ್ರಮಗಳಿಗೆ ಒಳಪಟ್ಟು, ಶವವನ್ನು ಪರಿಶೋಧಿಸುವ ನಿಮಿತ್ಯವಾಗಿ, ಕಾಲಸ್ಥಿತಿಯನ್ನು ದೂರವನ್ನು ನೋಡಲಾಗಿ ಹಾದೀಲಿ ಹೆಣಕೊಳತು ಅಂಥಾ ಪರಿಶೋಧನೆ ಅಪ್ರಯೋಜಕವಾಗಿರುವದೆಂತ ತೋರುವ ಸಂಭವ ಇಲ್ಲದೇನೇ ಇರುವ ಸಂಗತಿಯಲ್ಲಿ, ಅದನ್ನು ಅತಿ ಸಮೀಪದಲ್ಲಿ ಇರುವ ಶಿವಿಲ್ ಸರ್ಜನಿನ ಅಥವಾ ಇದಕ್ಕಾಗಿಯೇ ಮೈಸೂರು ಗವರ್ನಮೆಂಟಿನವರಿಂದ ಮೊಕರರ್ಪಟ್ಟ ಇತರ ಮೆಡಿಕಲ್ ಆಫಿಸರನ ಬಳಿಗೆ ರವಾನಿಸತಕ್ಕದ್ದು.

ಈ ಪ್ರಕರಣವನ್ನನುಸರಿಸಿ ಮಾಡುವ ವಿಚಾರಣೆಗಳು ಗ್ರಾಮಪಟೇಲನಿಂದ ನಡಿಸಲ್ಪಡಬಹುದು. ಅನಂತರ ಆತನು ಅವುಗಳ ಫಲಿತಾಂಶವನ್ನು ದರ್ಯಾಪ್ತಿ ಮಾಡುವದಕ್ಕೆ ಅಧಿಕಾರವುಳ್ಳ ಅತ್ಯಂತ ಸಮೀಪವಾಗಿರುವ ಮ್ಯಾಜಿಸ್ಟ್ರೇಟರಿಗೆ ತಿಳಿಸಬೇಕು.

1108

ಅವಿಧಿಯ ಮರಣಗಳನ್ನು ಕುರಿತು ವಿಚಾರಣೆ ಮಾಡುವದಕ್ಕೆ ಈ ಕೆಳಗೆ ಕಾಣಿಸಿದ ಮ್ಯಾಜಿಸ್ಟ್ರೇಟರ ಅಧಿಕಾರಪಟ್ಟಿರುತ್ತಾರೆ; ಯಾರೆಂದರೆ, ಯಾವನೊಬ್ಬ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು—ಯಾ—ಸಬ್ ಡಿವಿಜನ್ ಮ್ಯಾಜಸ್ಟ್ರೇಟು ಮತ್ತು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಂದಾಗಲೀ—ಯಾ—ಮೈಸೂರು ಗವರ್ನರ್ಮೆಂಟಿನವರಿಂದಾಗಲೀ, ಈ ಬಗ್ಗ್ಯಾಗಿ ವಿಶೇಷವಾಗಿ ಅಧಿಕಾರಪಟ್ಟ ಯಾವನೊಬ್ಬ ಮ್ಯಾಜಿಸ್ಟ್ರೇಟು.

175. ಒಂದು ಪೋಲಿಸ್ ಸ್ಟೇಷನಿನ ಜಿಮ್ಮೇದಾರನಾದ ಆಫೀಸರನು, ಬರಹ ಮೂಲಕವಾದ ಒಂದು ಹುಕುಮಿನ ಮೂಲವಾಗಿ, ಸದರೀ ಪೋಲಿಸ್ ವಿಚಾರಣೆ ಉದ್ದಿಶ್ಯ, ಮೇಲೆ ನಮೂದಿಸೋಣಾದ ಮೇರಿಗೆ ಇಬ್ಬರನ್ನು—ಯಾ—ಹೆಚ್ಚು ಮಂದಿಯನ್ನು, ಮತ್ತು ಸದರೀ ಮೊಕದ್ದಮೆಯ ವಿದ್ಯಮಾನಗಳನ್ನು ಬಲ್ಲವನಾಗಿ ತೋರುವ ಇತರ ಮನುಷ್ಯನನ್ನು ಸಮ್ಮನ್ ಮಾಡಬಹುದು. ಹಾಗೆ ಸಮ್ಮನ್ ಮಾಡಲ್ಪಟ್ಟ ಪ್ರತಿ ಒಬ್ಬ ಮನುಷ್ಯನು ಹಾಜರಾಗಿ—ತನ್ನ ಮೇಲೆ ಕಸೂರಾದನೆ ಹೊರಿಸುವ—ಯಾ—ದಂಡಕ್ಕೆ—ಯಾ—ಶೀಕ್ಷೆಗೆ ಗುರಿಪಡಿಸಬಹುದಾಗಿ ಭಾವ ತೋರುವ ಪ್ರಶ್ನೆಗಳು ಶಿವಾಯಿ, ಅಂಥಾ ಅಫೀಸರು ಹಾಕುವ ಇತರ ಎಲ್ಲ ಪ್ರಶ್ನೆಗಳಿಗೆ ನಿಜವಾಗಿ ಜವಾಬುಗಳನ್ನು ಕೊಡಲಿಕ್ಕೆ ಅಂಥಾ ಮನುಷ್ಯನು ಬದ್ಧನಾಗಿರತಕ್ಕದ್ದು.

ಮನುಷ್ಯರನ್ನು ಸಮ್ಮನ್ ಮಾಡುವದಕ್ಕೆ ಅಧಿಕಾರ.

ಸದರೀ ವಿದ್ಯಮಾನಗಳು, 170ನೇ ಪ್ರಕರಣಕ್ಕೆ ಲಗಾವಾಗ ಅಂಥಾ ವಾರಂಟಿಲ್ಲದೆ ಹಿಡಿಯಬಹುದಾದ ಒಂದು ತಕ್ಸೀರು ಹೊರಪಡಿಸದಿದ್ದರೆ, ಅಂಥವರು ಒಬ್ಬ ಮೇಜಿಸ್ಟ್ರೇಟಿನ ಕೋರ್ಟಿಗೆ ಹಾಜರಾಗತಕ್ಕದ್ದೆಂದು ಪೋಲಿಸು ಅಫೀಸರರಿಂದ ಅಪೇಕ್ಷಿಸಲ್ಪಡತಕ್ಕೂಡದು.

176. ಪೋಲಿಸ್‌ನವರ ಮೊಹಸಲಿಯಲ್ಲಿ ಇರುವಾಗ ಯಾವನೊಬ್ಬನಾಗಲೀ ಮರಣಪಟ್ಟರೆ, ಅವಿಧಿ ಮರಣಗಳ ಬಾಬಿನಲ್ಲಿ ವಿಚಾರಣೆ ಮಾಡುವಬಗ್ಗೆ ಅಧಿಕಾರ ಇರುವ ಅತ್ಯಂತ ಸಮೀಪದಲ್ಲಿರುವ ಮೇಜಸ್ಟ್ರೇಟನು, ಮತ್ತು 174ನೇ ಪ್ರಕರಣದ (a), (b), ಮತ್ತು (c) ಕ್ಲಾಜುಗಳಲ್ಲಿ ನಮೂದಿಸೋಣಾದ ಇತರ ಯಾವದಾದರೂ ಸಂಗತಿಗಳಲ್ಲಿ, ಹಾಗೆ ಪ್ರವರ್ತಿಸುವದಕ್ಕೆ ಅಧಿಕಾರಪಟ್ಟು ಇರುವ ಯಾವನೊಬ್ಬ ಮೇಜಸ್ಟ್ರೇಟನಾಗಲೀ ಮರಣದ ಕಾರಣಕುರಿತು ಪೋಲಿಸ್ ಅಫೀಸರಿಂದ ನಡೆದ ಪೋಲಿಸು ವಿಚಾರಣೆಗೆ ಬದಲಾಗಿಯಾಗಲೀ, ಅಥವಾ ಸದರೀ ವಿಚಾರಣೆಗೆ ಕೂಡಿಸಿಯಾಗಲೀ, ಪೋಲಿಸು ವಿಚಾರಣೇ ಮಾಡಬಹುದು; ಮತ್ತು ಅತನು ಹಾಗೆ ಮಾಡಿದರೆ, ಅದನ್ನು ನಡಿಸುವದರಲ್ಲಿ ಒಂದು ತಕ್ಸೀರನ್ನು ವಿಚಾರಣೆ ಮಾಡುವಲ್ಲಿ ತನಗೆ ಇರಬಹುದಾದ ಅಧಿಕಾರಗಳನ್ನೆಲ್ಲ ಆತಗೆ ಇರತಕ್ಕದ್ದು. ಅಂಥಾ ವಿಚಾರಣೆಯನ್ನು ಮಾಡುವಲ್ಲಿ ಮೇಜಸ್ಟ್ರೇಟ ಸದರೀ ಮೊಕದ್ದಮೆಗಳಿಗೆ ಸಂದರ್ಭಾನುಸಾರವಾಗಿ ಇನ್ನು ಕೆಳಗೆ ನಿರ್ದೇಶಿಸುವ ರೀತಿಗಳೊಳಗೆ ಯಾವದಾದರೊಂದರ ಪ್ರಕಾರ ತಾನು ತಕ್ಕೊಂಡ ಬಾಬತು ಅದಕ್ಕೆ ಸಂಬಂಧವಾದ ಸಾಕ್ಷ್ಯವನ್ನು ರಿಕಾರ್ಡು ಮಾಡತಕ್ಕದ್ದು.

ಮರಣದ ಕಾರಣವನ್ನು ಕುರಿತು ಮೇಜಸ್ಟ್ರೇಟಿನಿಂದ ವಿಚಾರಣೆ

ಯಾವನೊಬ್ಬನ ಶವವು ಮೊದಲೇ ಹೂಳಲ್ಪಟ್ಟು ಇದ್ದು, ಆತನ ಮರಣದ ಕಾರಣವನ್ನು ಕಂಡು ಹಿಡಿಯುವ ನಿಮಿತ್ಯ, ಶವವನ್ನು ಪರಿಶೋಧಿಸುವದು ಯುಕ್ತವಾದ್ದೆಂತ ಅಂಥಾ ಮೇಜಸ್ಟ್ರೇಟಿಗೆ ತೋರಿಬಂದರೆ, ಅಂಥಾ ಶವವನ್ನು ಹೂಣಿಟ್ಟಲ್ಲಿಂದ ಮೇಲಕ್ಕೆ ತೆಗಿಸಿ ಪರಿಶೋಧಿಸಬಹುದು.

ಹೂಣಿಟ್ಟ ಶವವನ್ನು ತೆಗಿಸುವ ಅಧಿಕಾರ.

1109

PART VI.

6ನೇ ಭಾಗ.

PROCEEDINGS IN PROSECUTIONS.

ಫಿರ್ಯಾದುಗಳನ್ನು ನಡಿಸುವ ಬಾಬಿನ ಪ್ರೊಸೀಡಿಂಗಸುಗಳು.

---

*CHAPTER XV.—OF THE JURISDICTION OF THE CRIMINAL COURTS IN INQUIRIES AND TRIALS.

ವಿಚಾರಣೆಗಳಲ್ಲಿ—ವ—ದರ್ಯಾಫ್ತಿಗಳಲ್ಲಿ ಕ್ರಿಮಿನಲ್ ಕೋರ್ಟುಗಳಿಗೆ ಉಂಟಾಗಿರುವ ಅಧಿಕಾರವನ್ನು ಕುರಿತು.

A.—Place of Inquiry or Trial.

A.—ವಿಚಾರಣೆಯು—ಯಾ—ದರ್ಯಾಫ್ತಿಯ ಸ್ಥಳ.

ವಿಚಾರಣೆಯು ಮತ್ತು ದರ್ಯಾಫ್ತಿಯ ವಾಡಿಕೆಯಾದ ಸ್ಥಳ.

177. ಪ್ರತಿ ತಕ್ಸೀರೂ ಯಾವ ಕೋರ್ಟಿನವರ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ನಡೆಯಿತೋ, ಆ ಕೋರ್ಟಿನವರಿಂದ ವಾಡಿಕೆಯಾಗಿ ವಿಚಾರಣೆ—ವ—ದರ್ಯಾಫ್ತಿ ಮಾಡಲ್ಪಡತಕ್ಕದ್ದು.

ಮೊಕದ್ದಮೆಗಳನ್ನು ಬೇರೆ ಬೇರೆ ಸೆಷನ್ ಡಿವಿಜನಗಳಲ್ಲಿ ದರ್ಯಾಫ್ತಿ ಮಾಡಲ್ಪಡತಕ್ಕ ಬಗ್ಯೆ ಹುಕುಂ ಕೊಡುವದಕ್ಕೆ ಅಧಿಕಾರ.

178. 177ನೇ ಪ್ರಕರಣದಲ್ಲಿ ಯೇನು ಇದ್ದಾಗ್ಯೂ ಚಿಂತೆಇಲ್ಲ, ಯಾವದಾದರೂ ಒಂದು ಡಿಸ್ಟ್ರಿಕ್ಟಿನಲ್ಲಿ ದರ್ಯಾಫ್ತಿ ಬಗ್ಯೆ ಕಮಿಟ ಮಾಡಲ್ಪಟ್ಟ ಯಾವ ಮೊಕದ್ದಮೆಗಳನ್ನಾಗಲೀ—ಯಾ—ಮೊಕದ್ದಮೆಗಳ ತರಗತಿಯನ್ನಾಗಲೀ, ಯಾವ ಸೆಷನ್ ಡಿವಿಜನೊಳಗೆ ಆದರೂ ಸರಿಯೇ, ದರ್ಯಾಫ್ತಿಯಾಗಲ್ಪಡಬಹುದೆಂತ ಮೈಸೂರು ಗವರ್ನಮೆಂಟಿನವರು ಹುಕುಂ ಮಾಡಬಹುದು.

ಪರಂತು ಈ ಕೋಡಿನ 526ನೇ ಪ್ರಕರಣ ಪ್ರಕಾರ ತತ್ಪೂರ್ವದಲ್ಲಿ ಕೊಡೋಣಾದ ಯಾವ ಅನುಜ್ಞೆಗಳಿಗಾದರೂ ವಿರೋಧವಾಗಿ ಇರದೆ ಇರುವ ಪಕ್ಷದಲ್ಲಿ ಮಾತ್ರ ಹಾಗೆ ಮಾಡಬಹುದು.

ಎಲ್ಲಿ ಕೃತ್ಯ ನಡಿಯಿತೋ ಅಥವಾ ಎಲ್ಲಿ ಫಲ ಉಂಟಾಯಿತೋ ಆ ಡಿಸ್ಟ್ರಿಕ್ಟಿನಲ್ಲಿ ಅಪಾದನೆ ಪಟ್ಟವನು ದರ್ಯಾಫ್ತಿ ಮಾಡಲ್ಪಡಬಹುದು.

179. ಮಾಡೋಣಾದ ಯಾವದೊಂದು ಕೃತ್ಯದ ಕಾರಣದಿಂದಲೂ ಮತ್ತು ಅದರಿಂದ ಒಂದುಫಲ ಸಂಭವಿಸಿತೆಂಬ ಕಾರಣದಿಂದಲೂ ಒಂದು ತಕ್ಸೀರನ್ನು ನಡಸಿದನೆಂದು ಒಬ್ಬನು ಆಪಾದನೆ ಪಟ್ಟರೆ, ಯಾವ ಕೋರ್ಟಿನವರ ಅಧಿಕಾರ ಸರಹದ್ದಿನೊಳಗೆ ಅಂಥಾ ಯಾವದೊಂದು ಕೃತ್ಯ ನಡೆಯಿತೋ, ಅಥವಾ ಅದರಿಂದ ಒಂದುಫಲ ಸಂಭವಿಸಿತೋ, ಆ ಕೋರ್ಟಿನವರಿಂದ ಅಂಥಾ ತಕ್ಸೀರು ವಿಚಾರಣೆ ಅಥವಾ ದರ್ಯಾಫ್ತಿ ಮಾಡಲ್ಪಡಬಹುದು.

ಉದಾಹರಣೆಗಳು.

(a) X ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ A ಯೆಂಬವನು ಘಾಯಮಾಡಲ್ಪಟ್ಟು Z ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಸಾಯುತ್ತಾನೆ. A ಯ ಕೊಲೆಪಾತಕದ ತಕ್ಸೀರು X ರಿಂದಾಗಲೀ, ಅಥವಾ Z ರಿಂದಾಗಲೀ, ವಿಚಾರಿಸಲ್ಪಡಬಹುದು ಅಥವಾ ದರ್ಯಾಫ್ತಿ ಮಾಡಲ್ಪಡಬಹುದು.

(b) A ಎಂಬವನು X ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಘಾಯವಾಗಿ, 10 ದಿವಸಗಳವರಿಗೆ Y ಕೋರ್ಟಿನ, ಸ್ಥಳೀಯ ಅಧಿಕಾರ ಸರಹದ್ದಿನೊಳಗೂ, ಇನ್ನೂ 10 ದಿವಸಗಳ ವರಿಗೆ Z ಕೋರ್ಟಿನ, ಸ್ಥಳೀಯ ಅಧಿಕಾರ ಸರಹದ್ದಿನೊಳಗೂ, ಇದ್ದು Y ಅಥವಾ Zರ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಅವನ ಸಹಜ ಕಾರ್ಯಗಳನ್ನು ಮಾಡಲಿಕ್ಕಾಗದೆ, ಅಶಕ್ತನಾಗಿರುತ್ತಾನೆ. Aಗೆ ಸಂಕಟಕರವಾದ ಹಿಂಸೆಪಡಿಸಿದ ತಕ್ಸೀರು Xರಿಂದಾಗಲೀ Y ರಿಂದಾಗಲೀ ಅಥವಾ Zರಿಂದಾಗಲೀ ವಿಚಾರಿಸಲ್ಪಡಬಹುದು—ಯಾ—ದರ್ಯಾಫ್ತಿ ಮಾಡಲ್ಪಡಬಹುದು.

(c) X ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ Aನು ಅಂಜಿಸಲ್ಪಟ್ಟವನಾಗಿ Y ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗಾಗಿ ಅವನನ್ನು ಭಯಪಡಿಸಿದವನಿಗೆ ಸ್ವತ್ತನ್ನು ಕೊಡುವಹಾಗೆ ಪ್ರೇರೇಪಿಸಲ್ಪಡುತ್ತಾನೆ. Aಗೆ ಸುಲಿಗೆ ಮಾಡಿದ ತಕ್ಸೀರು X ರಿಂದಾಗಲೀ ಅಥವಾ Y ರಿಂದಾಗಲೀ ವಿಚಾರಿಸಲ್ಪಡಬಹುದು, ಅಥವಾ ದರ್ಯಾಫ್ತು ಮಾಡಲ್ಪಡಬಹುದು.

ಮತ್ತೊಂದು ತಕ್ಸೀರಿಗೆ ಸಂಬಂಧಪಡುವ ಕಾರಣದಿಂದ ಕೃತ್ಯವು ತಕ್ಸೀರಾದರೆ ಆಗ ವಿಚಾರಣೆಯ ಸ್ಥಳ.

180. ತಕ್ಸೀರಾಗಿರುವ ಮತ್ತೊಂದು ಕೃತ್ಯಕ್ಕಾದರೂ, ಅಥವಾ ಕೃತ್ಯ ಮಾಡುವವನು ತಕ್ಸೀರು ಮಾಡ ಯೋಗ್ಯತೆ ಪುಳ್ಳವನಾಗಿ ಇದ್ದರೆ ಯಾವ ಕೃತ್ಯವು ತಕ್ಸೀರಾಗುತಿತ್ತೋ—ಅಂಥಾ ಕೃತ್ಯಕಾದರೂ ಸಂಬಂಧ ಇಟ್ಟಿರುವ ಕಾರಣದಿಂದ—ಒಂದು ಕೃತ್ಯವು ತಕ್ಸೀರಾದರೆ, ಈ ಪ್ರಥಮದಲ್ಲಿ ಹೇಳಿದ ತಕ್ಸೀರಿನ ಅಪಾದನೆಯು ಸದರೀ ಎರಡು ತಕ್ಸೀರುಗಳಲ್ಲಿ ಯಾವದಾದರೂ ಒಂದು ಕೃತ್ಯ ಯಾವ ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನಲ್ಲಿ ನಡೆಯಿತೋ ಆ ಕೋರ್ಟಿನಲ್ಲಿ ವಿಚಾರಿಸಲ್ಪಡಬಹುದು—ಯಾ—ದರಿಯಾಫ್ತು ಮಾಡಲ್ಪಡಬಹುದು.

ಉದಾಹರಣೆಗಳು.

(a) ಸಹಕರಿಸಿದ ಅಪಾದನೆಯು ಯಾವ ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಸಹಕರಿಸೋಣಾಯಿತೋ ಆ ಕೋರ್ಟಿನಲ್ಲಿ ಆಗಲೀ ಅಥವಾ ಸಹಕರಿಸಲ್ಪಟ್ಟ ತಕ್ಸೀರು ಯಾವ ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ನಡೆಯಿತೋ ಆ ಕೋರ್ಟಿನಲ್ಲಿ ಆಗಲೀ ವಿಚಾರಿಸಲ್ಪಡಬಹುದು—ಯಾ—ದರ್ಯಾಫ್ತು ಮಾಡಲ್ಪಡಬಹುದು.

(b) ಚೋರಿ ಮಾಲನ್ನು ಈಸುಕೊಂಡ ಅಥವಾ ಇಟ್ಟುಕೊಂಡ ಅಪಾದನೆಯು ಸದರೀ ಮಾಲು ಯಾವ ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಚೋರಿ ಆಯಿತೋ ಆ ಕೋರ್ಟಿನಲ್ಲಿ ಆಗಲೀ, ಅಥವಾ ಅವುಗಳಪೈಕಿ ಯಾವದನ್ನಾದರೂ ಯಾವಾಗಲಾದರೂ ಅಪ್ರಮಾಣಿಕತೆಯಾಗಿ ಯಾವ ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಈಸುಕೊಳ್ಳೋಣ—ಯಾ—ಇಟ್ಟುಕೊಳ್ಳೋಣಾಯಿತೋ ಆ ಕೋರ್ಟಿನಲ್ಲಾಗಲಿ ವಿಚಾರಣೆ ಮಾಡಲ್ಪಡಬಹುದು—ಯಾ—ದರಿಯಾಫ್ತು ಮಾಡಲ್ಪಡಬಹುದು.

(c) ಚೋರಿಯಾಗಲ್ಪಟ್ಟವನೆಂದು ತಿಳಿಯಬಂದ ಒಬ್ಬನನ್ನು ಅಕ್ರಮವಾಗಿ ಮರೆಪಡಿಸಿದ ಅಪಾದನೆಯು, ಯಾವ ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಅಕ್ರಮವಾಗಿ ಮರೆಪಡಿಸೋಣಾಯಿತೋ, ಆ ಕೋರ್ಟಿನಲ್ಲಿ ಆಗಲೀ,—ಯಾ—ಚೋರಿ ಯಾವ ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ನಡೆಯಿತೋ ಆ ಕೋರ್ಟಿನಲ್ಲಿ ಆಗಲೀ ವಿಚಾರಿಸಲ್ಪಡಬಹುದು—ಯಾ—ದರಿಯಾಫ್ತು ಮಾಡಲ್ಪಡಬಹುದು.

ಪಾಶಗಾರಿ ಕಳ್ಳನಾಗಿ ಅಥವಾ ಡಕಾಯಿತಿ ಗುಂಪಿನಲ್ಲಿ ಶೇರಿದವನಾಗಿರೋಣ, ಪಹರೆಯಿಂದ ತಪ್ಪಿಸಿಕೊಳ್ಳೋಣ, ವಗೈರೆ.

181. ಪಾಶಗಾರಿ ಕಳ್ಳನಾಗಿ ಇರೋಣ, ಪಾಶಗಾರಿ ಕಳ್ಳನಾಗಿದ್ದು ಖೂನಿಮಾಡೋಣ, ಡಕಾಯಿತಿ, ಅಥವಾ ಖೂನಿಸಹಿತ ಡಕಾಯಿತಿ, ಡಕಾಯಿತಿ ಗುಂಪಿಗೆ ಶೇರಿದವನಾಗಿರೋಣ, ಅಥವಾ ಪಹರೆಯಿಂದ ತಪ್ಪಿಸಿಕೊಳ್ಳೋಣಾದ ತಕ್ಸೀರು, ಯಾವ ಕೋರ್ಟಿನವರ ಸ್ಥಳೀಯ ಅಧಿಕಾರ ಸರಹದ್ದಿನ ಒಳಗೆ ಅಪಾದಿಸಲ್ಪಟ್ಟ ಮನುಷ್ಯನು ಇರುತ್ತಾನೋ ಆ ಕೋರ್ಟಿನವರಿಂದ ವಿಚಾರಿಸಲ್ಪಡಬಹುದು—ಯಾ—ದರಿಯಾಫ್ತು ಮಾಡಲ್ಪಡಬಹುದು.

ತಕ್ಸೀರುಕರವಾದ ದುರುಉಪಯೋಗ ಮತ್ತು ತಕ್ಸೀರುಕರವಾದ ವಿಶ್ವಾಸಘಾತಕತೆ.

ತಕ್ಸೀರುಕರವಾದ ದುರುಉಪಯೋಗದ ಅಥವಾ ತಕ್ಸೀರುಕರವಾದ ವಿಶ್ವಾಸಘಾತಕತೆ ತಕ್ಸೀರು ಸದರೀ ತಕ್ಸೀರಿಗೆ ಕಾರಣವಾದ ಸ್ವತ್ತಿನ ಯಾವ ಭಾಗವನ್ನಾದರೂ, ಯಾವ ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನ ಒಳಗೆ ಅಪಾದನೆ ಪಟ್ಟವನು ಈಸುಕೊಂಡನೋ, ಆ ಕೋರ್ಟಿನಲ್ಲಿ ಆಗಲೀ, ಅಥವಾ ತಕ್ಸೀರು ಯಾರ ಸ್ಥಳೀಯ ಅಧಿಕಾರ ಸರಹದ್ದಿನ ಒಳಗೆ ನಡಿಯಿತ್ತೋ ಆ ಕೋರ್ಟಿನಲ್ಲಿ ಆಗಲೀ, ವಿಚಾರಿಸಲ್ಪಡಬಹುದು—ಯಾ—ದರಿಯಾಫ್ತು ಮಾಡಲ್ಪಡಬಹುದು.

ಕಳ್ಳತನ.

ಯಾವ ಪದಾರ್ಥವನ್ನಾದರೂ ಕದ್ದ ಬಾಬಿನ ತಕ್ಸೀರು ಯಾವ ಕೋರ್ಟಿನವರ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಅಂಥಾ ಪದಾರ್ಥವು ಕದಿಯಲ್ಪಟ್ಟಿತೋ, ಅಥವಾ ಅದು ಯಾವ ಕೋರ್ಟಿನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಕಳ್ಳನ ಸ್ವಾಧೀನದಲ್ಲಿತ್ತೋ ಅಥವಾ ಕಳವಾದ್ದೆಂತ ತಿಳಿದು—ಯಾ—ನಂಬಲಿಕ್ಕೆ ಸಬಬುಯಿದ್ದು ಅದನ್ನು ಬರವಮಾಡಿಕೊಳ್ಳುವ—ಯಾ—ಇಟ್ಟುಕೊಂಡಿರುವ ಯಾವನೊಬ್ಬ ಮನುಷ್ಯನ ಸ್ವಾಧೀನದಲ್ಲಿ ಅದು ಇತ್ತೋ ಆ ಕೋರ್ಟಿನಲ್ಲಿ ವಿಚಾರಿಸಲ್ಪಡಬಹುದು ಅಥವಾ ದರ್ಯಾಫ್ತಿ ಮಾಡಲ್ಪಡಬಹುದು.

ತಕ್ಸೀರು ನಡದಸ್ಥಳ ಗೊತ್ತಾಗದೇಹೋದರೆ ವಿಚಾರಣೆ—ವ—ದರ್ಯಾಫ್ತಿ ಬಗ್ಯೆ ಸ್ಥಳ.

ಅಥವಾ ಒಂದೇ ಡಿಸ್ಟ್ರಿಕ್ಟಿನಲ್ಲಿ ಅಲ್ಲದೇಹೋದರೆ;

ಅಥವಾ ತಕ್ಸೀರು ನಡಿಯುತ್ತಾ ಇರುವಂಥಾದ್ದಾದರೆ.

ಅಥವಾ ಅನೇಕ ಕೃತ್ಯಗಳಿಂದ ಕೂಡಿಯಿರುವದಾದರೆ.

182. ಒಂದು ತಕ್ಸೀರು, ಅನೇಕ ಸ್ಥಳೀಯ ಸರಹದ್ದುಗಳ ಪೈಕಿ ಯಾವ ಸರಹದ್ದಿನೊಳಗೆ ನಡದ್ದೆಂಬದು ಗೊತ್ತಾಗದೆ ಹೋದರೆ, ಅಥವಾ

ಒಂದು ತಕ್ಸೀರು ಒಂದು ಸ್ಥಳೀಯ ಸರಹದ್ದಿನಲ್ಲಿ ಕೊಂಚವಾಗಿಯೂ ಮತ್ತೊಂದರಲ್ಲಿ ಕೊಂಚವಾಗಿಯೂ ನಡದ ಸಂಗತಿಯಲ್ಲಿ,

ಸದರೀ ತಕ್ಸೀರು ನಡೆಯುತ್ತಾ ಇರುವಂಥಾದ್ದಾಗಿ ಒಂದರಕಿಂತ ಹೆಚ್ಚು ಸ್ಥಳೀಯ ಸರಹದ್ದುಗಳಲ್ಲಿ ನಡೆಯುತ್ತಿದ್ದರೆ, ಅಥವಾ

ಬೇರೆ ಬೇರೆ ಸ್ಥಳೀಯ ಸರಹದ್ದುಗಳಲ್ಲಿ ನಡದ ಅನೇಕ ಕೃತ್ಯಗಳಿಂದ ಕೂಡಿದ ತಕ್ಸೀರಾದರೆ,

ಅಂಥಾ ಸ್ಥಳೀಯ ಸರಹದ್ದುಗಳಪೈಕಿ ಯಾವದೊಂದು ಸರಹದ್ದಿನಲ್ಲಿ ಅಧಿಕಾರ ಇರುವ ಕೋರ್ಟಿನವರು ಅದನ್ನು ವಿಚಾರಣೆ ಮಾಡಲೂ—ಯಾ—ದರಿಯಾಫ್ತಿ ಮಾಡಲೂ ಬಹುದು.

ಪ್ರಯಾಣ ಮಾಡುತ್ತಿರುವಾಗ ನಡದತಕ್ಸೀರು.

183. ಭೂಮಿಯಮೇಲೆ ಅಥವಾ ನೀರಿನಮೇಲೆ ತಕ್ಸೀರದಾರನು ಪ್ರಯಾಣಮಾಡುತ್ತಿರುವಾಗ ನಡದ ತಕ್ಸೀರು—ತಕ್ಸೀರುದಾರನಾಗಲೀ ಅಥವಾ ಯಾರಮೇಲೆ ಅಥವಾ ಯಾವದರ ವಿಷಯವಾಗಿ ತಕ್ಸೀರು ನಡಿಸೋಣಾಯತೋ ಅವನಾಗಲೀ ಆ ವಸ್ತುವಾಗಲೀ ಭೂಮಿಯಮೇಲೆ ಅಥವಾ ನೀರಿನಮೇಲೆ ಯಾವಕೋರ್ಟಿನ ಸರಹದ್ದಿನ ಮಾರ್ಗವಾಗಿ—ಯಾ—ಸರಹದ್ದಿನೊಳಗೆ ಹೋಗೋಣಾಗಿ ಇದೆಯೋ ಆ ಕೋರ್ಟಿನವರು ಅದನ್ನು ವಿಚಾರಿಸಬಹುದು ಅಥವಾ ದರಿಯಾಫ್ತಿ ಮಾಡಬಹುದು.

ವಿಚಾರಣೆ—ಯಾ—ದರ್ಯಾಫ್ತಿ ಯಾವ ಡಿಸ್ಟ್ರಿಕ್ಟಿನಲ್ಲಿ ನಡೆಯತಕ್ಕದ್ದೆಂಬ ಬಾಬಿನಲ್ಲಿ ಸಂಶಯ ಹುಟ್ಟಿದ ಸಂಗತಿಯಲ್ಲಿ, ಚೀಫ್ ಕೋರ್ಟಿನವರು ತೀರ್ಮಾನಿಸತಕ್ಕದ್ದು.

185. ಈ ಅಧ್ಯಾಯದ ಹಿಂದಿನ ನಿಬಂಧನೆಗಳಗನುಗುಣವಾಗಿ ಯಾವದೊಂದು ತಕ್ಸೀರು ಯಾವ ಕೋರ್ಟಿನಿಂದ ವಿಚಾರಣೆ—ಯಾ—ದರ್ಯಾಫ್ತಿ ಆಗಬೇಕೆಂಬ ಯಾವದೊಂದು ಸಂಶಯ ಉಂಟಾದರೆ, ಅಂಥಾ ಸಂಗತಿಯಲ್ಲಿ ಯಾವ ಚೀಫ್ ಕೋರ್ಟಿನ ಅಪ್ಪೀಲ್ ಅಧಿಕಾರದ ಸ್ಥಳೀಯ ಸರಹದ್ದಿನ ಒಳಗೆ ಸದರೀ ತಕ್ಸೀರುದಾರನು ವಾಸ್ತವ್ಯವಾಗಿ ಇರುತ್ತಾನೋ, ಅಂಥಾ ಚೀಫ್ ಕೋರ್ಟಿನವರು ಸದರೀ ತಕ್ಸೀರು ಯಾವ ಕೋರ್ಟಿನಲ್ಲಿ ವಿಚಾರಿಸಲ್ಪಡತಕ್ಕದ್ದು—ಯಾ—ದರ್ಯಾಫ್ತಿ ಮಾಡಲ್ಪಡತಕ್ಕದ್ದೆಂಬದನ್ನು ತೀರ್ಮಾನಿಸಬಹುದು.

ಸ್ಥಳೀಯ ಅಧಿಕಾರ ಸರಹದ್ದಿನ ಹೊರಗೆ ನಡೆದ ತಕ್ಸೀರ್ ಬಾಬಿನಲ್ಲಿ ಸಮ್ಮನ್—ಯಾ—ವಾರಂಟ್ ಕೊಡುವ ಅಧಿಕಾರ.

186. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ಅಥವಾ ಈ ಬಗ್ಗಾಗಿ ಮೈಸೂರು ಗವರ್ನ್ಮೆಂಟಿನವರಿಂದ ವಿಶೇಷವಾಗಿ ಅಧಿಕಾರ ಕೊಡಲ್ಪಟ್ಟಾಗ, ಒಬ್ಬ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟಗೆ, ತನ್ನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಇರುವ ಯಾವನೊಬ್ಬ ಮನುಷ್ಯನಾಗಲೀ ಅಂಥಾ ಸರಹದ್ದಿನಹೊರಗೆ ಒಂದು ತಕ್ಸೀರು ನಡಿಸಿದ್ದಾನೆಂತ ನಂಬಲಿಕ್ಕೆ ಸಾಕಾದ ಸಬಬು ತೋರಿಬಂದು, ಅಂಥಾ ತಕ್ಸೀರು 177 ರಿಂದ 183 (ಈ ಎರಡು ಕೇರಿಸಿಕೊಂಡು) ನೇ ಪ್ರಕರಣಗಳ ಅಥವಾ ಆಯಾಕಾಲದಲ್ಲಿ ಜಾರಿಯಲ್ಲಿ ಇರುವ ಇತರ ಕಾನೂನಿನ ನಿಬಂಧನೆಗಳಗನುಗುಣವಾಗಿ ಅಂಥಾ ಸ್ಥಳೀಯ ಸರಹದ್ದಿನಒಳಗೆ ವಿಚಾ

ರಿಸಲ್ಪಡಕೂಡದು—ಯಾ—ದರ್ಯಾಪ್ತಿ ಮಾಡಲ್ಪಡ ಕೂಡದು ಎಂತ ಆದಾಗ್ಯೂ, ಆಯಾಕಾಲದಲ್ಲಿ ಜಾರಿಯಲ್ಲಿ ಇರುವ ಯಾವದಾದರೂ ಒಂದು ಕಾನೂನಮೇರೆಗೆ ಮೈಸೂರು ಶೀಮೆಯಲ್ಲಿ ಸದರೀ ತಕ್ಸೀರು ದರಿಯಾಪ್ತಿ ಮಾಡಲ್ಪಡಬಹುದಾಗಿ ಇದ್ದರೆ, ಅಂಥಾ ಮ್ಯಾಜಿಸ್ಟ್ರೇಟನು ಆ ತಕ್ಸೀರನ್ನ ತನ್ನ ಸ್ಥಳೀಯ ಸರಹದ್ದಿನೊಳಗೆ ನಡದರೆ ಹ್ಯಾಗೆಯೋ, ಹಾಗೆಯೇ, ವಿಚಾರಣೆ ಮಾಡಬಹುದು, ಮತ್ತು ಹಿಂದೆವಿರ್ಪಡಿಸೋಣಾದ ರೀತಿಯಲ್ಲಿ ಅಂಥಾ ಮನುಷ್ಯನನ್ನ ತನ್ನ ಮುಂದೆ ಹಾಜರು ಆಗುವ ಹಾಗೆ ಬಲಾತ್ಕರಿಸಬಹುದು, ಮತ್ತು ಅಂಥಾ ತಕ್ಸೀರನ್ನ ವಿಚಾರಣೆ ಮಾಡುವದಕ್ಕಾಗಲೀ—ಯಾ—ದರಿಯಾಪ್ತಿ ಮಾಡುವದಕ್ಕಾಗಲೀ, ಅಧಿಕಾರ ಇರುವ ಮ್ಯಾಜಿಸ್ಟ್ರೇಟನ ಬಳಿಗೆ ಅವನನ್ನ ಕಳುಹಿಸಬಹುದು, ಅಥವಾ, ಆ ತಕ್ಸೀರು ಜಾಮೀನು ತಕ್ಕೊಳ್ಳ ಬಹುದಾಗಿದ್ದರೆ, ಅಂಥಾ ಮ್ಯಾಜಿಸ್ಟ್ರೇಟನಮುಂದೆ ಹಾಜರಾಗುವಬಗ್ಗೆ ಜಾಮೀನುದಾರರ ಸಮೇತ—ಯಾ—ಜಾಮೀನುದಾರರು ಇಲ್ಲದೇನೇ ಒಂದು ಮುಚ್ಚಳಿಕೆಯನ್ನು ತಕ್ಕೊಳ್ಳಬಹುದು.

ಹಿಡಿಯೋಣಾದಲ್ಲಿ ಮೇಜಸ್ಟ್ರೇಟನು ಮಾಡ ತಕ್ಕ ಕ್ರಮ.

ಹಾಗೆ ಅಧಿಕಾರ ಇರುವ ಮ್ಯಾಜಿಸ್ಟ್ರೇಟರು ಒಬ್ಬನಕಿಂತ ಹೆಚ್ಚುಜನರು ಇದ್ದು, ಅವರ ಪೈಕಿ ಅಂಥಾ ಮನುಷ್ಯನನ್ನ ಯಾರಮುಂದೆ ಕಳುಹಿಸಬೇಕು—ಯಾ—ಹಾಜರಾಗುವ ಬಗ್ಗೆ ಬದ್ಧಪಡಿಸಬೇಕೆಂಬದು ಈ ಪ್ರಕರಣ ಪ್ರಕಾರ ನಡೆಯುವ ಮ್ಯಾಜಿಸ್ಟ್ರೇಟರಿಗೆ ಮುಂದಟ್ಟು ಆಗದೆ ಹೋದರೆ, ಆ ಮೊಕದ್ದಮೆಯನ್ನ ಚೀಫ್ ಕೋರ್ಟಿನವರ ಅಪ್ಪಣೇಬಗ್ಗೆ ರಿಪೋರ್ಟು ಮಾಡತಕ್ಕದ್ದು.

ವಾರಂಟು ಸಬಾರ್ಡಿನೇಟು ಮ್ಯಾಜಿಸ್ಟ್ರೇಟ ಕೊಟ್ಟಿದ್ದರೆ ನಡಿಸತಕ್ಕ ಕ್ರಮ.

187. ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಲ್ಲದ ಇತರ ಒಬ್ಬ ಮ್ಯಾಜಿಸ್ಟ್ರೇಟನಿಂದ 186ನೇ ಪ್ರಕರಣಪ್ರಕಾರ ಕೊಡೋಣಾದ ವಾರಂಟು ಮೇರೆಗೆ ಒಬ್ಬನು ಹಿಡಿಯಲ್ಪಟ್ಟಿದ್ದರೆ, ಅಂಥಾ ಸಂಗತಿಯಲ್ಲಿ ಸದರೀ ಮ್ಯಾಜಿಸ್ಟ್ರೇಟನು ಆಪ್ರಕಾರ ಹಿಡಿಯಲ್ಪಟ್ಟ ಮನುಷ್ಯನನ್ನ ತಾನು ಯಾವ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನಿಗೆ ತಾಬೇದಾರಿಯಾಗಿರುತ್ತಾನೋ ಆ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನಬಳಿಗೆ ರವಾನಿಸತಕ್ಕದ್ದು, ಪರಂತು ಯಾವಪಕ್ಷದಲ್ಲಿ ಅಂದರೆ ಅಂಥಾ ತಕ್ಸೀರು ವಿಚಾರಣೆಮಾಡಲಿಕ್ಕೂ—ಯಾ—ದರಿಯಾಪ್ತಿಮಾಡಲಿಕ್ಕೂ ಅಧಿಕಾರ ಇರುವ ಮ್ಯಾಜಿಸ್ಟ್ರೇಟನು ಅಂಥಾ ಮನುಷ್ಯನನ್ನ ಹಿಡಿಯುವಬಗ್ಗೆ ವಾರಂಟು ಕೊಡೋಣಾಗಿದ್ದರೆ, ಹಾಗೆ ಕಳುಹಿಸತಕ್ಕದ್ದಿಲ್ಲಾ, ಅಂಥಾ ಸಂಗತಿಯಲ್ಲಿ ಹಿಡಿಯೋಣಾದ ಮನುಷ್ಯನನ್ನ ವಾರಂಟು ಜಾರಿಮಾಡುವ ಪೋಲಿಸ್ ಆಫಿಸರನ ಸ್ವಾಧೀನಕ್ಕೆ ಕೊಡತಕ್ಕದ್ದು, ಅಥವಾ ಆ ವಾರಂಟು ಯಾವ ಮ್ಯಾಜಿಸ್ಟ್ರೇಟನಿಂದ ಕೊಡೋಣಾಯಿತೋ ಆ ಮ್ಯಾಜಿಸ್ಟ್ರೇಟನಬಳಿಗೆ ಕಳುಹಿಸತಕ್ಕದ್ದು.

ಹಿಡಿಯೋಣಾದ ಮನುಷ್ಯನು ಮಾಡಿದ್ದಾಗಿ ಗುಮಾನು ಉಂಟಾದ—ಯಾ—ಹೇಳೋಣಾದ ತಕ್ಸೀರು 186ನೇ ಪ್ರಕರಣಪ್ರಕಾರ ನಡಿಯುವ ಮ್ಯಾಜಿಸ್ಟ್ರೇಟನಲ್ಲದ ಅದೇ ಡಿಸ್ಟ್ರಿಕ್ಟಿನಲ್ಲಿ ಇರುವ ಇತರ ಯಾವ ಕ್ರಿಮಿನಲ್ ಕೋರ್ಟಿನಿಂದಾದರೂ, ವಿಚಾರಿಸಲ್ಪಡಬಹುದಾಗಿ—ಯಾ—ದರಿಯಾಪ್ತಿ ಮಾಡಲ್ಪಡಬಹುದಾಗಿ ಇದ್ದರೆ, ಅಂಥಾ ಮ್ಯಾಜಿಸ್ಟ್ರೇಟನು ಸದರೀ ಮನುಷ್ಯನನ್ನ ಅಂಥಾ ಕೋರ್ಟಿಗೆ ಕಳುಹಿಸತಕ್ಕದ್ದು.

ಮೈಸೂರು ಶೀಮೆಯ ಶ್ರೀಮನ್ಮಹಾರಾಜರವರ ಪ್ರಜೆಗಳು ನಡಿಸಿದ ತಕ್ಸೀರುಗಳ ಬಾಬಿನಲ್ಲಿ ಗುರಿಪಡುವಿಕೆ.

188. ಮೈಸೂರು ಸಂಸ್ಥಾನದ ಹೊರಗಿನ ಯಾವ ಪ್ರದೇಶದಲ್ಲಾಗಲಿ ಮೈಸೂರು ಶೀಮೆಯ ಮಹಾರಾಜರವರ ಯಾವ ಪ್ರಜೆಯಾದರೂ ತಕ್ಸೀರ್ ಮಾಡಿದರೆ ಯೆಲ್ಲಿ ಅವನು ಕಂಡು ಹಿಡಿಯಲ್ಪಟ್ಟನೋ ಅಲ್ಲಿ ಮೈಸೂರು ಸಂಸ್ಥಾನದೊಳಗಿನ ಒಂದು ಸ್ಥಳದಲ್ಲಿ ಸದರೀ ತಕ್ಸೀರುನಡದಿದ್ದರೆ ಹ್ಯಾಗೋ ಹಾಗೆ ಆ ತಕ್ಸೀರಿಗಾಗಿ ಅವನ ಮೇಲೆ ವ್ಯವಹರಿಸಬಹುದು.

ಪರಂತು ಕೃತ್ಯನಡೆಸಿದ ಸ್ಥಳದಲ್ಲಿ ಸದರೀ ತಕ್ಸೀರಿಗಾಗಿ ಆತನ ಮೇಲೆ ಮುಂಚೆ ದರ್ಯಾಫ್ತೀ ಮಾಡಲ್ಪಡದಿರಬೇಕು. ಮತ್ತು ಬ್ರಿಟಿಷ್ ಗವನ್ನಮೆಂಟಿನವರು ತಮ್ಮ ಸುಪರ್ದಿಗೆ ಅಪರಾಧಿಯನ್ನು ಒಪ್ಪಿಸುವಂತೆ ಕೇಳುವದಕ್ಕೆ

ಅರ್ಹವಾದ ತಕ್ಸೀರಾಗಿ ಅನು ಇದ್ದರೆ ದರ್ಬಾರಿನವರು ಮೊದಲು ಬ್ರಿಟಿಷ ರಸಿಡೆಂಟರಿಗೆ ತಿಳಿಸಿ, ಬ್ರಿಟಿಷ ಗವರ್ನ್ನಮೆಂಟಿನವರು ಅಪರಾಧಿಯನ್ನು ತಮ್ಮ ಸುಪರ್ದಿಗೆ ಒಪ್ಪಿಸುವಂತೆ ಕೇಳತಕ್ಕಬಗ್ಯೆ ಇರುವ ಹಕ್ಕನ್ನು ಬಿಟ್ಟು ಬಿಡುತ್ತಾರೆಯೊ ಎಂಬುವದನ್ನು ನಿಶ್ಚಯಿಸಿಕೊಳ್ಳಬೇಕು.

ವಾಂಗ್ಮೂಲಗಳ ಮತ್ತು ಸಾಧನಗಳ ನಕಲುಗಳನ್ನು ರುಜುವಾತಾಗಿ ತಕ್ಕೊಳ್ಳಲಿಕ್ಕೆ ಅಪ್ಪಣೆ ಕೊಡುವದಕ್ಕೆ ಅಧಿಕಾರ.

189. 188ನೇ ಪ್ರಕರಣದಲ್ಲಿ ಹೇಳೋಣಾದಂಥಾ ಯಾವದೊಂದು ತಕ್ಕೀರು ವಿಚಾರಿಸಲ್ಪಡುತ್ತಾ—ಯಾ—ದರಿಯಾಪ್ತಿ ಮಾಡಲ್ಪಡುತ್ತಾ ಇರುವದಾದರೆ, ಯಾವ ರಾಜ್ಯದಲ್ಲಿ ಅಂಥಾ ತಕ್ಕೀರು ನಡಿಸೋಣಾಗಿದೆಂತ ಹೇಳೋಣಾಗಿ ಇದೆಯೋ, ಆ ರಾಜ್ಯದಲ್ಲಿ—ಯಾ—ರಾಜ್ಯದ ಜುಡಿಷಿಯಲ್ ಆಫಿಸರಮುಂದೆ ಕೊಡೋಣಾದ—ಯಾ—ಹಾಜರು ಪಡಿಸೋಣಾದ ವಾಂಗ್ಮೂಲಗಳ—ಯಾ—ಸಾದನಗಳ ನಕಲುಗಳು ಅಂಥಾ ವಿಚಾರಣೆ—ಯಾ—ದರಿಯಾಪ್ತಿ ನಡಿಸುವ ಕೋರ್ಟಿನವರಿಂದ, ಅಂಥಾ ವಾಗ್ಮೂಲ—ಯಾ—ಸಾಧನಗಳು ಸಂಬಂಧಿಸುವ ಬಾಬುಗಳಲ್ಲಿ ಸಾಕ್ಷ್ಯವನ್ನು ಯಾವ ಸಂಗತಿಯಲ್ಲಿ ತಕ್ಕೊಳ್ಳುವ ಹಾಗೆ ಕಮ್ಮಿಷನ್ ಆ ಕೋರ್ಟಿನವರು ಕೊಡಬಹುದೋ ಅಂಥಾ ಸಂಗತಿಗಳಲ್ಲಿ, ಸಾಕ್ಷ್ಯವಾಗಿ ತೆಗದುಕೊಳ್ಳಲ್ಪಡತಕ್ಕದ್ದೆಂತ ಮೈಸೂರು ಗವರ್ನ್ನಮೆಂಟಿನವರು ತಮಗೆ ಯುಕ್ತತೋರಿದರೆ, ಹುಕುಮನ್ನು ಕೊಡಬಹುದು.

B.—Conditions requisite for Initiation of Proceedings.

B.—ಪ್ರೊಸೀಡಿಂಗ್ಸ್‌ಗಳನ್ನು ಪ್ರಾರಂಭಿಸುವದಕ್ಕೆ ಅವಶ್ಯವಾದ ವಿದ್ಯಮಾನಗಳು.

ತಕ್ಕೀರುಗಳ ತನಖಿಮಾಡುವಬಗ್ಯೆ ಮ್ಯಾಜಿಸ್ಟ್ರೇಟರಿಗೆ ಇರುವ ಅಧಿಕಾರ.

191. ಈ ಕೆಳಗೆ ಏರ್ಪಡಿಸೋಣಾದಮೋರೆಗೆ ಅಲ್ಲದೆ, ಯಾವನೊಬ್ಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ, ಮತ್ತು ಈ ಬಗ್ಯಾಗಿ ವಿಶೇಷವಾಗಿ ಅಧಿಕಾರ ಪಟ್ಟ ಇತರ ಯಾವನೊಬ್ಬ ಮ್ಯಾಜಿಸ್ಟ್ರೇಟನಾಗಲೀ ಯಾವ ಒಂದು ತಕ್ಕೀರ ಬಾಬಿನಲ್ಲಿ ಆದರೂ,—

(a) ಅಂಥಾ ತಕ್ಕೀರಾಗುವ ವಿದ್ಯಮಾನಗಳನ್ನು ಕುರಿತು ಫಿರ್ಯಾದ್ ಬಂದನಂತರ ;

(b) ಅಂಥಾ ವಿದ್ಯಮಾನಗಳಕುರಿತಾ ಪೋಲಿಸ್ ರಿಪೋರ್ಟಿನ ಮೇಲೆ ;

(c) ಅಂಥಾ ತಕ್ಕೀರು ನಡಿಸೋಣಾಗಿದೆಂಬದಾಗಿ ಪೋಲಿಸ ಆಫಿಸರನಲ್ಲದ ಇತರ ಮನುಷ್ಯನಿಂದ ತಲಪಿದ ವರ್ತಮಾನದಮೇಲಾಗಲೀ, ಅಥವಾ ತನ್ನ ಸ್ವಂತ ತಿಳುವಳಿಕೆ—ಯಾ—ಗುಮಾನಿನ ಮೇಲೆ ತನಖಿಮಾಡಬಹುದು.

ಒಬ್ಬ ಮ್ಯಾಜಿಸ್ಟ್ರೇಟನು ತಾನು ದರ್ಯಾಪ್ತಿಮಾಡಬಹುದಾದ—ಯಾ—ದರ್ಯಾಪ್ತಿಬಗ್ಯೆ ಕಮಿಟಮಾಡಬಹುದಾದ ತಕ್ಕೀರುಗಳ ವಿಷಯದಲ್ಲಿ (a) ಅಥವಾ (b) ಕ್ಲಾಜುಪ್ರಕಾರ ತನಖಿ ನಡಿಸುವದಕ್ಕೆ ಮೈಸೂರು ಗವರ್ನ್ನಮೆಂಟಿನವರಾಗಲೀ, ಅಥವಾ ಮೈಸೂರು ಗವರ್ನ್ನಮೆಂಟಿನವರ ವಿಶೇಷ—ಯಾ—ಸಾಧಾರಣ ಹುಕುಮುಗಳಿಗೆ ಒಳಪಟ್ಟ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಲೀ ಯಾವನೊಬ್ಬ ಮ್ಯಾಜಿಸ್ಟ್ರೇಟರಿಗಾದರೂ ಅಧಿಕಾರ ಕೊಡಬಹುದು.

ಆತನು ದರ್ಯಾಪ್ತಿ ಮಾಡಬಹುದಾದ—ಯಾ—ದರಿಯಾಪ್ತಿಗೆ ಕಮಿಟಮಾಡಬಹುದಾದ ತಕ್ಕೀರುಗಳ ಬಾಬಿನಲ್ಲಿ (c) ಒಳಕಲಂಪ್ರಕಾರ ತನಖಿ ನಡಿಸುವದಕ್ಕೆ ಯಾವನೊಬ್ಬ ಫಸ್ಟ್—ಯಾ—ಸೆಕೆಂಡ್ ಕ್ಲಾಸ ಮ್ಯಾಜಿಸ್ಟ್ರೇಟನಿಗೆ ಮೈಸೂರು ಗವರ್ನ್ನಮೆಂಟನವರು ಅಧಿಕಾರ ಕೊಡಬಹುದು.

(c) ಗುರ್ತುಳ್ಳ ಕಲಮಿಗೆ ಅನುಗುಣವಾಗಿ ಒಬ್ಬ ಮ್ಯಾಜಿಸ್ಟ್ರೇಟು ತಕ್ಸೀರು ಫಿರ್ಯಾದನ್ನು ಹಿಡಿದಾಗ ಅಪರಾಧಿಯು ಅಥವಾ ಅನೇಕ ಅಪರಾಧಿಗಳು ಇದ್ದರೆ ಅವರ ಪೈಕಿ ಯಾವನಾದರೂ ಒಬ್ಬ ಅಪರಾಧಿಯು ಸದರೀ ಮೊ

ಕದ್ದಮೆಯು ಸದರೀ ಮ್ಯಾಜಿಸ್ಟ್ರೇಟರಿಂದ ವಿಚಾರಣೆ ಮಾಡಲ್ಪಡುವದಕ್ಕೆ ಬದಲಾಗಿ ಇನ್ನ... ವರ್ಗ ಮಾಡಲ್ಪಡುವಂತೆ ಆಗಲಿ ಅಥವಾ ಸೆಷನ್ಸ್‌ಕೋರ್ಟಿಗೆ ಕಮಿಟ್ ಮಾಡಲ್ಪಡುವಂತೆ ... ಹಕ್ಕು ಉಳ್ಳವನಾಗಿರುತ್ತಾನೆ.

1114

ಮ್ಯಾಜಿಸ್ಟ್ರೇಟುಗಳು ಮೊಕದ್ದಮೆಗಳನ್ನು ವರ್ಗ ಮಾಡೋಣ.

192. ಯಾವನೊಬ್ಬ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ ಅಥವಾ ಸಬ್ ಡಿವಿಜನಲ್ ಮ್ಯಾಜಿ... ಅಂಥಾ ... ತಕ್ಕೊಂಡ ಯಾವದೊಂದು ಮೊಕದ್ದಮೆಯನ್ನಾ ...ಗೆ ಅವ... ದರಿಯಾಫ್ತಿಗೋಸ್ಕರ ತನಗೆ ತಾಬೇದಾರ—ಯಾ—ಸರಕಾರ ನೌಕರ... ಗಾದರೂ ಕಳುಹಿಸಬಹುದು; ಅಂಥವನ ಅನುಮತಿ ಪ್ರಥಮದಲ್ಲಿ...

ಒಬ್ಬ ಫಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟನು ತನಖಿಗೆ ತಕ್ಕೊಂಡ ... ತನಿಖಿ ಮಾಡಕೂಡದು. ಪ್ರಕಾರ ಆಪಾದನೆ ಪಟ್ಟವನನ್ನು ದರಿಯಾಫ್ತಿ ಮಾಡುವ... ಆವಾತನು ಯಾವ ರೀತಿಯಲ್ಲಿ ಫಿರ್ಯಾದ ನಡಿಸಬೇ... ಅಧಿಕಾರ ಇರುವ ತನ್ನ ಡಿಸ್ಟ್ರಿಕ್ಟಿನ ಫಲಾನೇ ಮ್ಯಾಜಿಸ್ಟ್ರೇ... ...ಂಟಿನವರು ಇಚ್ಛ್ಯರ್ಥಿಸಬಹುದು, ಮತ್ತು ಫಲಾನಾ... ಳುಹಿಸಲ್ಪಡುವ ಹಾಗೆ ಸದರೀ ಫಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟಿಗೆ ... ದರಿಯಾಫ್ತಿ ನಡಿಸಲ್ಪಡಬೇಕೆಂಬದು ಹೇಳಬ... ಕೊಡಬಹುದು; ಅಂಥಾ ಮ್ಯಾಜಿಸ್ಟ್ರೇಟ ಅದೇಮೇರಿಗೆ ಅದನ್ನು...

ಸೆಷನ್ಸ್ ಕೋರ್ಟನವರಿಂದ ತಕ್ಸೀರುಗಳ ತನಿಖಿ.

193. ಈ ಕೋಶದಿಂದಾಗಲೀ ಅಥವಾ ಆಯಾಕಾಲದಲ್ಲಿ... ...ನ್ಯಾಯಗಳಲ್ಲಿ ಅಡಗಿ ಇರುವ ಯಾವದೊಂದು ದಾಗಲಿ ಅದರೂ ನಿರ್ಧಿಷ್ಟ... ...ನ 493 ರಿಂದ 496ನೇ (ಉಭಯ ಪ್ರಕರ ಹೊರತು, ಇದಕ್ಕಾಗಿಯೇ ... ...ರ ತಕ್ಸೀರಿನ ಬಾಬಿನಲ್ಲಿ, ಅಂಥಾ ತಕ್ಸೀ ಮ್ಯಾಜಿಸ್ಟ್ರೇಟನಿಂದ ಆಪಾದನೆ ...ಟ್ಟನ ಫಿರ್ಯಾದಿನಮೇಲೆ ಹೊರತು, ಅನ್ಯ ... ತನಿಖಿ ಮಾಡಕೂಡದು.

ಅಲ್ಲದೆ ಅನ್ಯಥಾ ಯಾವದೊಂದು ಸೆಷನ್ಸ್ ಕೋರ್ಟಿನವರೂ ಅಸಲ ಅಧಿಕ... ತಕ್ಸೀರನ್ನು ತನಿಖಿ ಮಾಡತಕ್ಕದ್ದಿಲ್ಲ.

ಅಡಿಷನಲ್ ಮತ್ತು ಜಾಯಿಂಟ ಸೆಷನ್ಸ್ ಜಡ್ಜರಿಂದ ದರಿಯಾಫ್ತಿ ಮಾಡಲ್ಪಡಬೇಕಾದ ಮೊಕದ್ದಮೆಗಳು.

ಅಡಿಷನಲ್ ಸೆಷನ್ಸ್ ಜಡ್ಜಿಯವರಾಗಲೀ ಜಾಯಿಂಟ ಸೆಷನ್ಸ್ ಜಡ್ಜಿಯ... ...19?ನೇ ಪ್ರಕರಣ ಪ್ರಕಾರ ತಕ್ಸೀರಿನ ಸಾಧಾರಣ ಹುಕುಮಿನಿಂದ ಅಥವಾ ... ಅಥವಾ ಅವನ ಗೈರ ಹಾಜರಿಯಲ್ಲಿ ದರಿಯಾಫ್ತಿ ಮಾಡಬೇಕೆಂತ ... ಅವನ ತರಫಿನಲ್ಲಿ ಅಂಥಾ ಹೆಂಗ ಬಸ್ಯ ಡಿವಿಜನಲ್ ಸೆಷನ್ಸ್ ಜಡ್ಜಿಯು ತಮಗೆ ...ನಮೇಲೆ ಅಲ್ಲದೆ, ಯಾವ ...ಗಳನ್ನು ಮಾತ್ರ ದರಿಯಾಫ್ತಿ ಮಾಡತಕ್ಕದ್ದು.

ಅಸಿಸ್ಟಂಟ ಸೆಷನ್ಸ್ ಜಡ್ಜರಿಂದ.

ಅಸಿಸ್ಟಂಟ ಸೆಷನ್ಸ್ ಜಡ್ಜಗಳು ಡಿವಿಜನ ಸೆಷನ್ಸ್ ಜಡ್ಜಿಯು ಸಾಧಾರಣ ಹುಕುಮಿನಿಂದಾಗಲೀ ಅಥವಾ ಒಂದು ವಿಶೇಷ ಹುಕುಮಿನಿಂದಾಗಲೀ ತಮಗೆ ಕಳುಹಿಸುವ ಮೊಕದ್ದಮೆಗಳನ್ನು ಮಾತ್ರವೇ ದರಿಯಾಫ್ತಿ ಮಾಡತಕ್ಕದ್ದು.

195. ಯಾವದೊಂದು ಕೋರ್ಟಿನವರು—

ಸರಕಾರ ನೌಕರರ ನ್ಯಾಯವಾದ ಅಧಿಕಾರವನ್ನು ಅಲಕ್ಷ್ಯಮಾಡಿದಕ್ಕಾಗಿ ಫಿರ್ಯಾದು.

(a) ಇಂಡಿಯನ್ ಪಿನಲ ಕೋಡಿನ 172 ರಿಂದ 188ನೇ ಪ್ರಕರಣಗಳ (ಉಭಯಪ್ರಕರಣಗಳು ಕೇರಿಸಿಕೊಂಡು) ಪ್ರಕಾರ ಶಿಕ್ಷೆಯಾಗತಕ್ಕ ಯಾವದೊಂದು ತಕ್ಸೀರು, ಸಂಬಂಧಪಟ್ಟ ಸರಕಾರ ನೌಕರನ, ಅಥವಾ ಆತನು ಯಾರಿಗೆ ತಾಬೇದಾರಿಯಾಗಿ ಇರುತ್ತಾನೋ ಅಂಥಾ ಸರಕಾರಿ ನೌಕರನ ಪ್ರಥಮದಲ್ಲಿ ಪಡಕೊಂಡ ಅನುಮತಿನಿಶಿ—ಯಾ—ಅವನ ಫಿರ್ಯಾದಿನಮೇಲೆ ಹೊರತು, ಅನ್ಯಥಾ ಅಂಥಾ ಯಾವದೊಂದು ತಕ್ಸೀರು ಬಾಬಿನಲ್ಲಿ ;

ಸರಕಾರ ನ್ಯಾಯಕ್ಕೆ ವಿರೋಧವಾಗಿ ನಡೆದ ಕೆಲವು ತಕ್ಸೀರುಗಳಗೋಸ್ಕರ ಫಿರ್ಯಾದು.

(b) ಅದೇ ಕೋಡಿನ 193, 194, 195, 196, 199, 200, 205, 206, 207, 208, 209, 210, 211 ಅಥವಾ 228ನೇ ಪ್ರಕರಣಪ್ರಕಾರ ಶಿಕ್ಷೆಯಾಗತಕ್ಕ ಯಾವದೊಂದು ತಕ್ಸೀರನ್ನು ಯಾವದೊಂದು ಕೋರ್ಟಿನಲ್ಲಿ ಆಗಲಿ ಅಥವಾ ಕೋರ್ಟಿ

1115 'ಬ

ಯಾವದೊಂದು ಪ್ರೊಸೀಡಿಂಗಸಗಳಿಗೆ ಸಂಬಂಧಿಸಿಲಾಗಲಿ ನಡಿಸೋಣಾದರೆ, ಅಂಥಾ ಕೋರ್ಟಿನವರಿಂದ
ರ್ಟಿ ಯಾರಿಗೆ ತಾಬೇದಾರಿಯಾಗಿ ಇರುತ್ತದೋ ಆ ಇತರ ಕೋರ್ಟಿನವರಿಂದ ಪ್ರಥಮತಃ
ನುಮತಿನಿಶಿ—ಯಾ—ಅವರ ಫಿರ್ಯಾದಿನಮೇಲೆ ಹೊರತು ಅನ್ಯಥಾ ಅಂಥಾ ಯಾವದೊಂದು ತಕ್ಸೀರ

ಕೋಡಿನ 463ನೇ ಪ್ರಕರಣದಲ್ಲಿ ವಿವರಿಸೋಣಾದ, ಅಥವಾ 471, 475 ಅಥವಾ 476ನೇ
ಪ್ರಕರಣಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು, ಯಾವದೊಂದು ಕೋರ್ಟ
ಲ್ಲಿ ಯಾವದೊಂದು ಪ್ರೊಸೀಡಿಂಗ್ಸಿನ ಕಕ್ಷಿಗಾರನಿಂದ ಅಂಥಾ ಪ್ರೊಸೀಡಿಂ
ಲಿ ರುಜುವಾತಾಗಿ ಕೊಡೋಣಾದ ಯಾವದೊಂದು ದಸ್ತಾವೇಜಿನ
ನಡಿಸೋಣಾದ್ದಾಗ, ಅಂಥಾ ಕೋರ್ಟಿನವರ—ಯಾ—ಆ ಕೋ
ದೋ ಆ ಇತರ ಕೋರ್ಟಿನವರ ಪ್ರಥಮತಃ ಪಡಕೊಂಡ ಅನು
ರತು, ಅನ್ಯಥಾ ಅಂಥಾ ತಕ್ಸೀರಬಾಬಿನಲ್ಲಿ ತನಖಿ ಮಾಡಕೂಡದು

ತಿ ಸಾಧಾರಣ ಮಾತುಗಳಲ್ಲಿ ಬರೆಯಲ್ಪಡಬಹುದಲ್ಲದೆ, ಅಪಾದನೆ
ವನ ಹೆಸರು ನಮೂದಾಗಬೇಕೆಂಬದಿಲ್ಲ; ಪರಂತು, ಸಾಧ್ಯವಾದಷ್ಟ
ಮಟ್ಟಿಗೆ, ಯಾವ ಕೋರ್ಟಿನಲ್ಲಿ—ಯಾ—ಇತರ ಸ್ಥಳದಲ್ಲಿ ಮತ್ತು ಯಾ
ವ ಸಂಭವದಲ್ಲಿ ಅಂಥಾ ತಕ್ಸೀರು ನಡಿಸೋಣಾಯಿತೋ ಅದನ್ನು ನಮೂ
ತಕ್ಕದ್ದು.

ನ ವಿಷಯದಲ್ಲಾದರೂ ಅನುಮತಿ ಕೊಡೋಣಾ
ಕೋರಿಬರುವ ಇತರ ಯಾವ ತಕ್ಸೀರಿನ ಅಪಾದ
ಸಬಹುದು.

ಅದ್ದು ಮಾಡ
ಅನುಮತಿ ಒಟ್ಟ ತಾರೀಖಿನಿಂದ ಆರುತಿ
ಂದು ಅನುಮತಿಯನ್ನು ಆ
ಕರಣದ ಉದ್ದಿಶ್ಯಾರ್ಥವಾಗಿ, ಸ್ಮಾಲಕಾಜ ಕೋ ಅಧಿಕಾರಿಗಳಿಗೆ ತಾಬೇದಾರಿಯಾಗಿರು
ಅಪ್ಪೀಲಗಳು ಯಾವ ಕೋರ್ಟಿಗೆ ಸಾಧಾರಣವಾ ಕೊಡುಟ್ಟದನ್ನು; ಮತ್ತು ಹಾಗೆ ಕೊಡೋಣಾದ
ಳಗೆ ಮೀರಿ ಸಲ
ಎಣಿಸಲ್ಪಡತಕ್ಕದ್ದು.

ಪ್ರತಿ ಒಂದು ಸ್ಮಾಲಕಾಜಕೋರ್ಟು ಅದು ಯಾವ ಸೆಷನ್ ಡಿವಿಜನೊಳಗೆ ಇರುತ್ತದೋ ಆ ಸೆ
ರ್ಟಿನ ತಾಬೇದಾರಿ ಕೋರ್ಟಂತೆ ಎಣಿಸಲ್ಪಡತಕ್ಕದ್ದು.

ಸಂಸ್ಥಾನಕ್ಕೆ ವಿರೋಧವಾದ ತಕ್ಸೀರುಗಳೇ ಸ್ಕರ ಫಿರ್ಯಾದಿಗಳು.

196. ಇಂಡಿಯನ್ ಪಿನಲ್ ಕೋಡಿನ 127ನೇ ಪ್ರಕರಣ ಹೊರತು, 6ನೇ ಚಾಪ್ಟರಪ್ರಕಾರ ಶಿಕ್ಷೆಯಾಗ ತಕ್ಕ, ಅಥವಾ ಸದರೀ ಕೋಡಿನ 294 A ಪ್ರಕರಣಪ್ರಕಾರ ಶಿಕ್ಷೆಯಾಗ ತಕ್ಕ ತಕ್ಸೀರಿನ ಬಾಬಿನಲ್ಲಿ, ಮೈಸೂರು ಗವರ್ನ್ಮೆಂಟಿನವರಾಗಲೀ ಅಥವಾ ಮೈಸೂರು ಗವರ್ನ್ಮೆಂಟಿನವರಿಂದ ಈ ಬಗ್ಗೆಯೇ ಅಧಿಕಾರಗೊ ಳಿಸೋಣಾದ ಯಾವನೊಬ್ಬ ಅಫಿಸರನ ಹುಕುಮು, ಅಥವಾ ಅಧಿಕಾರಮೇರೆಗೆ, ಫಿರ್ಯಾದ ಮಾಡೋಣಾದ ಹೊರತು ಯಾವ ಕೋರ್ಟಿನವರಾಗಲೀ ಅಂಥಾ ತಕ್ಸೀರುಗಳ ತನಖಿ ಮಾಡಕೂಡದು.

197. ಮೈಸೂರು ಗವರ್ನ್ಮೆಂಟಿನವರ ಅನುಮತಿ ಶಿವಾಯಿ ಬರ್ತರಫ್ ಆಗಕೂಡದಂಥಾ, ಯಾವನೊಬ್ಬ ಜಡ್ಜಿ, ಅಥವಾ ಯಾವನೊಬ್ಬ ಸರಕಾರ ನವುಕರನಮೇಲೆ, ಅಂಥಾ ಜಡ್ಜಿ—ಯಾ—ಸರಕಾರ ನವುಕರನಾಗಿ ಯಾವದೊಂದು ತಕ್ಸೀರು ಆಪಾದನೆಯಾದ ಅಂಥಾ ಗವರ್ನ್ಮೆಂಟಿನವರು ಅಥವಾ ಈ ಬಗ್ಗ್ಯಾಗಿ ಅಂಥಾ ಗವರ್ನ್ಮೆಂಟಿನವರಿಂದ ಅಧಿಕಾರಪಡಕೊಂಡ ಯಾವನೊಬ್ಬ ಆಫಿಸರನ, ಅಥವಾ ಗವರ್ನ್ಮೆಂಟಿನವರು ಹಾಗೆ ಅನುಮತಿ ಕೊಡುವ ಅಧಿಕಾರವನ್ನು ಮಟ್ಟುಪಡಿಸದೆ ಇರುವ ಸಂಗತಿಯಲ್ಲಿ, ಅಂಥಾ ಜಡ್ಜಿ—ಯಾ—ಸರಕಾರ ನವುಕರನು ಯಾವ ಕೋರ್ಟಿಗೆ—ಯಾ—ಅಧಿಕಾರಿಗೆ ತಾಬೇದಾರಿಯಾಗಿ ಇರುತ್ತಾನೋ, ಅಂಥವನ ಅನುಮತಿ ಪ್ರಥಮದಲ್ಲಿ ಪಡದ ಹೊರತುಅಂಥಾ ತಕ್ಸೀರಿನ ಬಾಬಿನಲ್ಲಿ ಯಾವ ಕೋರ್ಟಿನವರಾದರೂ ತನಖಿ ಮಾಡಕೂಡದು.

ಜಡ್ಜಿಗಳ—ವ—ಸರಕಾರಿ ನೌಕರರ ಮೇಲೆ ಫಿರ್ಯಾದಿಗಳು.

ಅಂಥಾ ಜಡ್ಜಿ—ಯಾ—ಸರಕಾರಿ ನವುಕರನಮೇಲೆ ಯಾವಾತನು ಯಾವ ರೀತಿಯಲ್ಲಿ ಫಿರ್ಯಾದ್ ನಡಿಸಬೇಕೆಂಬದು ಅಂಥಾ ಗವರ್ನ್ಮೆಂಟಿನವರು ಇತ್ಯರ್ಥಿಸಬಹುದು, ಮತ್ತು ಫಲಾನಾ ಕೋರ್ಟಿನವರಮುಂದೆ ದರಿಯಾಫ್ತಿ ನಡಿಸಲ್ಪಡಬೇಕೆಂಬದು ಹೇಳಬಹುದು.

ಪ್ರಾಸಿಕ್ಯೂಷನ್ ಬಾಬಿನಲ್ಲಿ ಗವರ್ನ್ಮೆಂಟಿನವರ ಅಧಿಕಾರ.

198. ಇಂಡಿಯನ್ ಪೆನಲ್‌ಕೋಡಿನ 19, ಅಥವಾ 21ನೇ ಅಧ್ಯಾಯಗಳಲ್ಲಿ ಅಡಗಿ ಇರುವ ಯಾವದೊಂದು ತಕ್ಸೀರಿನ ಅಥವಾ ಅದೇಕೋಡಿನ 493 ರಿಂದ 496ನೇ (ಉಭಯ ಪ್ರಕರಣಗಳು ಶೇರಿ) ಪ್ರಕರಣಗಳಪ್ರಕಾರ ತಕ್ಸೀರಿನ ಬಾಬಿನಲ್ಲಿ, ಅಂಥಾ ತಕ್ಸೀರಿನಿಂದ ನೊಂದವನಾದ ಯಾವನೊಬ್ಬನ ಫಿರ್ಯಾದಿನಮೇಲೆ ಹೊರತು, ಅನ್ಯಥಾ ಯಾವ ಕೋರ್ಟಿನವರಾಗಲೀ ತನಖಿ ಮಾಡಕೂಡದು.

ಕರಾರಿನಪ್ರಕಾರ ನಡಕೊಳ್ಳದೆ ತಪ್ಪಿದ ತಕ್ಸೀರು, ಮಾನನಷ್ಟ ಮತ್ತು ಮದುವೆಗೆ ವಿರೋಧವಾದ ತಕ್ಸೀರುಗಳ ಬಾಬಿನಲ್ಲಿ ಫಿರ್ಯಾದ.

199. ಇಂಡಿಯನ್ ಪೆನಲ್ ಕೋಡಿನ 497ನೇ ಪ್ರಕರಣ—ಯಾ—498ನೇ ಪ್ರಕರಣ ಪ್ರಕಾರ ತಕ್ಸೀರಿನ ಬಾಬಿನಲ್ಲಿ, ಆ ಹೆಂಗಸಿನ ಗಂಡನ, ಅಥವಾ ಅವನ ಗೈರ್ ಹಾಜರಿಯಲ್ಲಿ ಅಂಥಾ ತಕ್ಸೀರು ನಡಿಯುವ ಕಾಲದಲ್ಲಿ ಅವನ ತರಫಿನಲ್ಲಿ ಅಂಥಾ ಹೆಂಗಸನ್ನ ನೋಡಿಕೊಳ್ಳುವ ಮನುಷ್ಯನ, ಫಿರ್ಯಾದಿನಮೇಲೆ ಅಲ್ಲದೆ, ಯಾವ ಕೋರ್ಟಿನವರಾಗಲೀ ತನಖಿ ಮಾಡಕೂಡದು.

ಹಾದರದ ವಿಷಯದಲ್ಲಿ—ವ—ಮದುವೆಯಾದ ಹೆಂಗಸನ್ನ ಬೋಧನೆಯಿಂದ ಕರಕೊಂಡು ಹೋದದಕ್ಕಾಗಿ ಫಿರ್ಯಾದು

CHAPTER XVI—OF COMPLAINTS TO MAGISTRATES.

16ನೇ ಅಧ್ಯಾಯ.—ಮ್ಯಾಜಿಸ್ಟ್ರೇಟರ ಬಳಿಯ ಫಿರ್ಯಾದುಗಳನ್ನು ಕುರಿತು.

200. ಒಂದು ಫಿರ್ಯಾದಿನಮೇಲೆ ತಕ್ಸೀರನ್ನ ತನಿಖಿಮಾಡುವ ಒಬ್ಬ ಮ್ಯಾಜಿಸ್ಟ್ರೇಟನು ಫಿರ್ಯಾದುದಾರನನ್ನ, ಕೂಡ್ಲೇ ಪ್ರಮಾಣದಮೇಲೆ ವಿಚಾರಣೆ ಮಾಡತಕ್ಕದ್ದು—ವ—ವಿಚಾರಣೆಯ ಗೋಷ್ವಾರೆಯನ್ನ ಬರಹಮೂಲಕ ಪಡಿಸತಕ್ಕದ್ದು, ಮತ್ತು ಫಿರ್ಯಾದ್‌ದಾರನಿಂದ, ಮ್ಯಾಜಿಸ್ಟ್ರೇಟನಿಂದಕೂಡಾ ದಸ್ಕತು ಮಾಡಲ್ಪಡತಕ್ಕದ್ದು;

ಫಿರ್ಯಾದುದಾರನ ವಿಚಾರಣೆ.

ಪರಂತು ಈ ಕೆಳಗಿನ ಪ್ರಕಾರ—

(a) ಒಂದು ಫಿರ್ಯಾದ್ ಬರಹಮೂಲಕ ತರಲ್ಪಟ್ಟಾಗ, 192ನೇ ಪ್ರಕರಣಪ್ರಕಾರ ಮೊಕದ್ದಮೆಯನ್ನ ವರ್ಗ ಮಾಡಲಿಕ್ಕೆ ಮುಂಚೆಯೇ ಫಿರ್ಯಾದುದಾರನನ್ನ ಮ್ಯಾಜಿಸ್ಟ್ರೇಟನು ವಿಚಾರಣೆ ಮಾಡೋಣ ಅಗತ್ಯವೆಂಬುವದೇನೂ ಈ ಪ್ರಕರಣದಲ್ಲಿ ಉಂಟೆಂತ ಎಣಿಸಲ್ಪಡಕೂಡದು :

(c) ಒಂದು ಮೊಕದ್ದಮೆಯು 192ನೇ ಪ್ರಕರಣಪ್ರಕಾರ ವರ್ಗ ಮಾಡಲ್ಪಟ್ಟಾಗ—ವ—ಆ ಪ್ರಕಾರ ವರ್ಗ ಮಾಡುವ ಮ್ಯಾಜಿಸ್ಟ್ರೇಟನು ಫಿರ್ಯಾದುದಾರನನ್ನು ಮೊದಲೇ ವಿಚಾರಿಸಿರುವದಾದರೆ, ಯಾವ ಮ್ಯಾಜಿಸ್ಟ್ರೇಟನಿಗೆ ಹಾಗೆ ವರ್ಗ ಮಾಡೋಣಾಗಿದೆಯೋ ಅಂಥಾ ಮ್ಯಾಜಿಸ್ಟ್ರೇಟನು ಫಿರ್ಯಾದಿದಾರನನ್ನು ತಿರಿಗಿ ವಿಚಾರ ? ಮಾಡುವದಕ್ಕೆ ಬದ್ಧನಾಗಿ ಇರಕೂಡದು.

ಮೊಕದ್ದಮೆಯನ್ನು ತನಿಖಿಮಾಡುವದಕ್ಕೆ ಅಧಿಕಾರವಿಲ್ಲದ ಮ್ಯಾಜಿಸ್ಟ್ರೇಟನು ನಡಿಸತಕ್ಕ ಕ್ರಮ.

201. ಫಿರ್ಯಾದ ಬರಹಮೂಲಕ ತರಲ್ಪಟ್ಟು, ಮ್ಯಾಜಿಸ್ಟ್ರೇಟನು ಮೊಕದ್ದಮೆಯನ್ನು ತನಿಖಿಮಾಡಲಿಕ್ಕೆ ತಕ್ಕ ಅಧಿಕಾರವುಳ್ಳವನಾಗಿಲ್ಲದಿದ್ದರೆ, ಅದನ್ನು ತಕ್ಕ ಅಧಿಕಾರವುಳ್ಳ ನ್ಯಾಯಸ್ಥಾನದವರ ಬಳಿಗೆ ತೆಗೆದುಕೊಂಡು ಹೋಗತಕ್ಕಬಗ್ಗೆ ಆ ಸಂಗತಿ ಕಾಣಿಸಿ ಇಂಡಾರಸ್‌ಮೆಂಟ ಕೊಟ್ಟು ಫಿರ್ಯಾದನ್ನು ವಾಪಸ ಮಾಡತಕ್ಕದ್ದು.

ಪ್ರೊಸೆಸ ಕೊಡದೆ ನಿಲ್ಲಿಸಿಡೋಣ.

202. ಫರ್ಸ್ಟ—ಯಾ—ಸೆಕೆಂಡ ಕ್ಲಾಸ ಮ್ಯಾಜಿಸ್ಟ್ರೇಟಗೆ ಆಗಲೀ, ತಾನು ತನಿಖಿಮಾಡಲಿಕ್ಕೆ ಅಧಿಕಾರ ಇರುವ ಒಂದು ತಕ್ಕೈರಿನ ಫಿರ್ಯಾದಿಯು ನಿಜತ್ವವನ್ನು ಕುರಿತು ಅಪನಂಬಿಕೆ ಪಡುವದಕ್ಕೆ ಸಬಬು ತೋರಿದರೆ, ಫಿರ್ಯಾದುದಾರನು ವಿಚಾರಿಸಲ್ಪಟ್ಟು ಇದ್ದಾಗ, ಫಿರ್ಯಾದಿನ ನಿಜತ್ವವನ್ನು ಅಪನಂಬಿಕೆ ಪಡುವದಕ್ಕೆ ತನ್ನ ಸಬಬುಗಳನ್ನು ರಿಕಾರ್ಡು ಮಾಡಿ, ಯಾರಮೇಲೆ ಫಿರ್ಯಾದು ಮಾಡಲ್ಪಟ್ಟದೆಯೋ ಆ ಮನುಷ್ಯನ ಹಾಜರುಪಡಿಸಿ ಕೊಳ್ಳಲಿಕ್ಕೆ ಸಮನ್ಸ ಕೊಡದೆ ನಿಲ್ಲಿಸಿ, ಫಿರ್ಯಾದಿನ ನಿಜತ್ವವನ್ನು—ಯಾ—ಅಸತ್ಯವನ್ನು ಗೊತ್ತುಮಾಡಿ ಕೊಳ್ಳಲಿಕ್ಕೆ ಆ ಮೊಕದ್ದಮೆಯನ್ನು ತಾನೇ ವಿಚಾರಣೆ ಮಾಡಬಹುದು ಅಥವಾ ಅಂಥಾ ಮ್ಯಾಜಿಸ್ಟ್ರೇಟನ ತಾಬೇದಾರಿಯಾದ ಯಾವ ಆಫಿಸರನಾದರೂ—ಯಾ—ಪೋಲಿಸ ಆಫಿಸರನಾದರೂ ಅಥವಾ ಮ್ಯಾಜಿಸ್ಟ್ರೇಟ—ಯಾ—ಪೋಲಿಸ ಆಫಿಸರನಲ್ಲದಂಥಾವನಾಗಿ, ಯುಕ್ತ ತೋರುವ ಇತರ ಮನುಷ್ಯನಾದರೂ, ಮುಂಚಿತವಾಗಿ ಸ್ಥಳಿಕ ಪೋಲಿಸ ವಿಚಾರಣೆ ಮಾಡತಕ್ಕದ್ದೆಂತ ಅಪ್ಪಣೆ ಕೊಡಬಹುದು.

ಮ್ಯಾಜಿಸ್ಟ್ರೇಟ ಅಥವಾ ಪೋಲಿಸ ಆಫಿಸರನಲ್ಲದ ಇತರ ಮನುಷ್ಯನಿಂದ ಅಂಥಾ ಪೋಲಿಸ ವಿಚಾರಣೆ [illegible] ನಡಿಸಲ್ಪಟ್ಟರೆ, ಅವನು ಈ ಕೋಡಿನ ಪ್ರಕಾರ ಪೋಲಿಸ ಸ್ಟೇಶನ್ ಜಿಮ್ಮೆದಾರನ [illegible]

ದರಿಯಾಫ್ತಿ ಬಗ್ಗೆ ಕಮ್ಮಿಟ ಮಾಡ[illegible]ರುವ ಅಧಿಕಾರ.

[illegible]ದ ಅಧಿಕಾರ ಹೊಂದಿದ[illegible] ಮ್ಯಾಜಿಸ್ಟ್ರೇಟನಾದರೂ, [illegible] ಕೋರ್ಟನವರಿಂದ ದರಿಯಾಫ್ತಿ ಆಗತಕ್ಕ ತಕ್ಕೈರಿನ ಬಗ್ಗಾಗಿ ಯಾವನೊಬ್ಬನ[illegible] ಕೋರ್ಟುಗಳಿಗೆ ದರಿಯಾಫ್ತಿ ಬಗ್ಗಾಗಿ ಕಮ್ಮಿಟ ಮಾಡಬಹುದು.

ನ್ನಾದರ[illegible]

ಕಮ್ಮಿಟ ಮಾಡಲಿಕ್ಕೆ ಸಿದ್ಧಪಡಿಸುವಿಕೆಯ ವಿಚಾರಣೆಯ ಕ್ರಮ.

207. [illegible] ಮೊಕದ್ದಮೆ[illegible] ಸೆಷನ್ ಕೋರ್ಟನವರಿಂದ ಮಾತ್ರವೇ ದರಿಯಾಫ್ತಿಯಾಗಬಹುದಾದ ಸಂಗತಿಯಲ್ಲಿ, ಅಥವಾ, ಅಂಥಾ ಕೋರ್ಟನವರಿಂದ ದರ್ಯಾಫ್ತಿ ಆಗಲ್ಪಡ[illegible] ಅಭಿಪ್ರಾಯ ಪಡುವಲ್ಲಿ, ಮ್ಯಾಜಿಸ್ಟ್ರೇ[illegible]ಟುಗಳ ಮುಂದೆ ವಿಚಾರಣೆಗಳಲ್ಲಿ [illegible] ಕೆಳಗಣ ಕ್ರಮವನ್ನು ಅನುಸರಿಸತಕ್ಕದ್ದೆಂತ ಮ್ಯಾಜಿಸ್ಟ್ರೇಟನ[illegible] ತಕ್ಕದ್ದು.

ಹಾಜರುಪಡಿಸಿದ ಸಾಕ್ಷ್ಯವನ್ನು ತೆಗದುಕೊಳ್ಳೋಣ.

208. ಮ್ಯಾಜಿಸ್ಟ್ರೇಟನ ಮುಂದೆ ಆಪಾದನೆ ಪಟ್ಟವನು ಹಾಜರಾದಾ—ಯಾ—ತರಲ್ಪಟ್ಟಾಗ, ಫಿರ್ಯಾದದಾರನ (ಯಾವನೊಬ್ಬನು ಇದ್ದರೆ) ಹೇಳಿಕೆಯನ್ನು ಕೇಳಲಿಕ್ಕೆ ಪ್ರವರ್ತಿಸತಕ್ಕದ್ದು, ಮತ್ತು ಫಿರ್ಯಾದಿಗೆ ಆಧಾರವಾಗಿ ಹಾಜರು ಪಡಿಸೋಣಾಗಬಹುದಾದ—ಯಾ—ಆಪಾದನೆ ಪಟ್ಟವನ ತರ್ಫೆನಿಂದ ಹಾಜರಾಗಬಹುದಾದ ಅಥವಾ ಮ್ಯಾಜಿಸ್ಟ್ರೇಟನು ತರಿಸಿದಂಥಾ ಎಲ್ಲ ಸಾಕ್ಷ್ಯವನ್ನು, ಇದರ ಕೆಳಗೆ ನಿಬಂಧಿಸೋಣಾದ ಕ್ರಮದಲ್ಲಿ ತೆಗದು ಕೊಳ್ಳತಕ್ಕದ್ದು.

ಕಲಂ ಪ್ರಕಾರ ಪ್ರಥಮತಃ ವಾರಂಟು ಕೊಡತಕ್ಕದ್ದಾದ ಮೊಕದ್ದಮೆ ಎಂತ ತೋರಿ ಬಂದರೆ, ಅಂಥಾ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಅಧಿಕಾರ ಇರುವ ಬೇರೆ ಮ್ಯಾಜಿಸ್ಟ್ರೇಟಿನ ಮುಂದೆ ಫಲಾನಾ ಕಾಲದಲ್ಲಿ ಹಾಜರು ಆಗುವ ಹಾಗೆ, ತನಗೆ ಯುಕ್ತ ಕಂಡರೆ, ಸಮನು, ಅಥವಾ ಆಪಾದನೆ ಪಟ್ಟವನನ್ನು ಹಾಜರು ಪಡಿಸುವ ಹಾಗೆ ವಾರಂಟನ್ನು, ಕೊಡಿಸಬಹುದು.

90ನೇ ಪ್ರಕರಣದ ನಿಬಂಧನೆಗಳಿಗೆ ಬಾಧಿಸುವಂಥಾದ್ದೇನೂ ಈ ಪ್ರಕರಣದಲ್ಲಿ ಉಂಟೆಂತ ಎಣಿಸಲ್ಪಡ ಕೂಡದು.

ಆಪಾದನೆಪಟ್ಟ ಮನುಷ್ಯನು ಖುದ್ದು ಹಾಜರಾಗದೆ ಇರಲಿಕ್ಕೆ ಮ್ಯಾಜಿಸ್ಟ್ರೇಟ್ ಅನುಮತಿ ಕೊಡಬಹುದು.

205. ಮ್ಯಾಜಿಸ್ಟ್ರೇಟನು ಯಾವಾಗಲಾದರೂ ಸಮನ್ಸ್ ಕೊಡುವಾಗ, ಆಪಾದನೆ ಪಟ್ಟವನನ್ನು ಖುದ್ದು ಹಾಜರಾಗ ಹೇಳಿ ವಿಧಿಸದೆ ಇರುವದಕ್ಕೆ ಸಬಬು ಆತಗೆ ಕಾಣಬಂದರೆ, ಖುದ್ದು ಹಾಜರಾಗದೆ, ಆತನ ಪ್ಲೀಡರನ ಮುಖಾಂತರ ಆತನು ಹಾಜರಾಗಬಹುದು ಎಂದು ಹೇಳಿ ಅವನಿಗೆ ಅಪ್ಪಣೆ ಕೊಡಬಹುದು.

ಪರಂತು ಮೊಕದ್ದಮೆಯನ್ನು ವಿಚಾರಣೆ—ಯಾ—ದರಿಯಾಪ್ತಿ ಮಾಡುವ ಮ್ಯಾಜಿಸ್ಟ್ರೇಟನು, ವ್ಯವಹರಣೆ ನಡಿಯುತ್ತಿರುವ ಯಾವ ಕಾಲದಲ್ಲಾದರೂ, ತನಗೆ ಯುಕ್ತ ತೋರಿದರೆ, ಆಪಾದನೆ ಪಟ್ಟವನನ್ನು ಖುದ್ದು ಹಾಜರಾಗ ಹೇಳಿ ಹುಕುಂ ಮಾಡಬಹುದು, ಮತ್ತು, ಅವಶ್ಯ ಇದ್ದರೆ, ಅಂಥಾ ಹಾಜರಾತಿಯನ್ನು ಈ ಮೊದಲು ಏರ್ಪಡಿಸೋಣಾದ ರೀತಿಯಲ್ಲಿ ಬಲಾತ್ಕರಿಸ ಬಹುದು.

Chapter XVIII.—Of Inquiry into Cases Triable by the Court of Session.

18ನೇ ಅಧ್ಯಾಯ.—ಸೆಷನ್ ಕೋರ್ಟಿನಿಂದ ದರಿಯಾಫ್ತಿ ಆಗತಕ್ಕ ಮೊಕದ್ದಮೆಗಳ ವಿಚಾರಣೆಯ ಕುರಿತು.

206. ಯಾವನೊಬ್ಬ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು, ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟು, ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟು—ಯಾ—ಈ ಬಗ್ಗೆ ಮೈಸೂರು ಗವರ್ನ್ಮೆಂಟಿನವ [illegible] ವಾರಂಟು ಇಲ್ಲದೇನೇ ಹಿಡಿಯುವ ಅಧಿಕಾರ ಹೊರತು, ಉಳಿದ ಅಧಿಕಾರಗಳೆಲ್ಲಾ [illegible] ಆಫೀಸರಗೆ ಉಂಟಾಗಿರುವ, ನಡಿಸಬಹುದು.

ಫಿರ್ಯಾದನ್ನು ಡಿಸ್‌ಮಿಸ್ ಮಾಡೋಣ.

203. ಯಾರಮುಂದೆ ಒಂದು ಫಿರ್ಯಾದು ತರಲ್ಪಡೋಣಾಗಿಯಿದೆಯೋ ಅಥವಾ ಅದನ್ನ ಯಾರ ಬಳಿಗೆ ವರ್ಗ ಮಾಡೋಣಾಗಿದೆಯೋ ಆ ಮ್ಯಾಜಿಸ್ಟ್ರೇಟನು ಫಿರ್ಯಾದ [illegible] ವಿಚಾರಣೆ ಮಾಡಿದಮೇಲೆ ಮತ್ತು 20[illegible]ನೇ ಪ್ರಕರಣಪ್ರಕಾರ ಮಾಡಿರುವ (ಇದ್ದರೆ ಯಾವದಾದರೂ) ಪೋಲಿಸ್ ವಿಚಾರಣೆಯ ಫಲವನ್ನು ಆಲೋಚಿಸಿ, [illegible] ಮುಂದಿನ ವ್ಯವಹರಣೆಗೆ ತಕ್ಕ ಸಬಬು ಇಲ್ಲವೆಂದು ಆತನು ಇತ್ಯರ್ಥಿಸಿದರೆ ಫಿರ್ಯಾದನ್ನು ಡಿಸಮಿಸ್ ಮಾಡಬಹುದು.

Chapter XVII.—Of the Commencement of Proceedings before Magistrates.

17ನೇ ಅಧ್ಯಾಯ.—ಮ್ಯಾಜಿಸ್ಟ್ರೇಟರ ಮುಂದೆ ನಡಿಯತಕ್ಕ ವ್ಯವಹರಣೆಯ ಪ್ರಾರಂಭಿಸುವಿಕೆಯನ್ನು ಕುರಿತು.

ಪ್ರೊಸ್ಸೆಸ್ ಕೊಡೋಣ.

204. ವ್ಯವಹರಣೆ ನಡಿಸುವದಕ್ಕೆ ಸಾಕಾದ ಸಬಬಿದೆ ಎಂದು ಒಂದು ತಕ್ರೀರನ್ನು ತನಿಖೆ ಮಾಡುವ ಮ್ಯಾಜಿಸ್ಟ್ರೇಟನು ಅಭಿಪ್ರಾಯ ಪಡುತ್ತಾನಾದರೆ—ವ—ಎರಡನೇ ಷೆಡ್ಯೂಲಿನ ನಾಲ್ಕನೇ ಕಲ್ಲಂ ಪ್ರಕಾರ ಪ್ರಥಮತಃ ಸಮನ್ಸ್ ಕೊಡತಕ್ಕದ್ದಾದ ಮೊಕದ್ದಮೆ ಎಂತ ತೋರಿ ಬಂದಲ್ಲಿ, ತಕ್ರೀರುದಾರನ ಹಾಜರಿಬಗ್ಗೆ ಆತ ಸಮನ್ಸ್ ಕೊಡತಕ್ಕದ್ದು. ಸದರೀ

1119

ಫಿರ್ಯಾದುದಾರನು ಅಥವಾ ಫಿರ್ಯಾದನ್ನು ನಡಿಸುವ ಆಪಿಸರನು, ಅಥವಾ ಅಪಾದನೆ ಪಟ್ಟವನು, ಯಾವ ಸಾಕ್ಷಿಗಾರನನ್ನಾದರೂ—ಯಾ—ಯಾವ ದಸ್ತಾವೇಜನ್ನಾದರೂ—ಯಾ—ಇತರ ವಸ್ತುವನ್ನಾದರೂ ಹಾಜರು ಪಡಿಸಿ ಕೊಳ್ಳುವದಕ್ಕೆ ಅರಿಕೆ ಮಾಡಿಕೊಂಡರೆ, ರಿಕಾರ್ಡು ಮಾಡಲ್ಪಡಬೇಕಾದ ಸಂಗತಿಗಳಿಂದ, ಹಾಗೆ ಮಾಡುವದು ಅನಾವಶ್ಯಕವೆಂತ ಮ್ಯಾಜಿಸ್ಟ್ರೇಟನು ತಿಳುಕೊಳ್ಳುವ ಸಂಗತಿಗಳಲ್ಲಿ ಅಲ್ಲದೆ, ಅನ್ಯಥಾ, ಅತನು ಪ್ರೊಸೆಸ್ ಕೊಡತಕ್ಕದ್ದು.

ಹೆಚ್ಚಿಗೆ ಸಾಕ್ಷ್ಯವನ್ನು ಹಾಜರು ಪಡಿಸುವ ಬಗ್ಯೆ ಪ್ರೊಸೆಸ್.

209. 208ನೇ ಪ್ರಕರಣದ 1ನೇ 2ನೇ ಕ್ಲಾಜಿನಲ್ಲಿ ನಮೂದಿಸೋಣಾದ ಸಾಕ್ಷ್ಯವು ತೆಗೆದುಕೊಳ್ಳಲ್ಪಟ್ಟಾಗ, ಮತ್ತು ಅಪಾದನೆ ಪಟ್ಟವನ ಮೇಲೆ ಕೊಡೋಣಾದ ಸಾಕ್ಷ್ಯದಲ್ಲಿ ತೋರುವ ಯಾವ ಸಂಗತಿಗಳನ್ನಾದರೂ ವಿವರಿಸಲಿಕ್ಕೆ ಸಂದರ್ಭ ಶಿಕ್ಕುವ ಹಾಗೆ ಅತನು ವಿಚಾರಿಸಲ್ಪಟ್ಟು, ಅಂಥಾ ಮ್ಯಾಜಿಸ್ಟ್ರೇಟಗೆ ಅಪಾದನೆ ಪಟ್ಟವನನ್ನು ದರಿಯಾಫ್ತಿ ಬಗ್ಯೆ ಕಮ್ಮಿಟ ಮಾಡುವದಕ್ಕೆ ಸಾಕಾದ ಸಬಬು ಇಲ್ಲವಾಗಿ ಕಂಡು ಬಂದರೆ, ಮ್ಯಾಜಿಸ್ಟ್ರೇಟನು ಅತನನ್ನು ವಿಮೋಚಿಸತಕ್ಕದ್ದು. ಯಾವ ಪಕ್ಷದಲ್ಲಿ ಅಂದರೆ ಅಂಥಾ ಮನುಷ್ಯನು ತನ್ನ ಮುಂದೆ ಅಥವಾ ಇತರ ಮ್ಯಾಜಿಸ್ಟ್ರೇಟನ ಮುಂದೆ ದರಿಯಾಫ್ತಿ ಮಾಡಲ್ಪಡತಕ್ಕದ್ದು ಎಂದು ಮ್ಯಾಜಿಸ್ಟ್ರೇಟಗೆ ಕಾಣ ಬರುವ ಸಂಗತಿಯಲ್ಲಿ, ಅತನು ಆ ಮೇರೆಗೆ ವರ್ತಿಸತಕ್ಕದ್ದಲ್ಲದೆ ವಿಮೋಚಿಸತಕ್ಕದ್ದಿಲ್ಲ.

ಅಪಾದನೆ ಪಟ್ಟವನು ಯಾವಾಗ ವಿಮೋಚನೆಯಾಗಲ್ಪಡ ಬಹುದು.

ತತ್ಪೂರ್ವದ ವ್ಯವಹರಣೆಯು ಯಾವ ಕಾಲದಲ್ಲಾದರೂ ಅಂಥಾ ಮ್ಯಾಜಿಸ್ಟ್ರೇಟನು ಬರದಿಡಬೇಕಾದ ಕಾರಣಗಳ ಮೇಲೆ ಅಂಥಾ ಅಪಾದನೆಯು ಅಕಾರಣದ್ದೆಂತ ಆಲೋಚಿಸುವನಾದರೆ, ಅಪಾದನೆ ಪಟ್ಟವನನ್ನು ವಿಮೋಚನೆ ಪಡಿಸಲಿಕ್ಕೆ ಆತಂಕಿಸುವಂಥಾದ್ದೇನೂ ಈ ಪ್ರಕರಣದಲ್ಲಿ ಉಂಟೆಂತಾ ಎಣಿಸಲ್ಪಡಕೂಡದು.

210. ಅಂಥಾ ಸಾಕ್ಷ್ಯವನ್ನು ತೆಗೆದುಕೊಂಡು ಮತ್ತು ಅಂಥಾ ವಿಚಾರಣೆಯೂ (ಏನಾದರೂ ಇದ್ದರೆ) ಮಾಡೋಣಾದ ಮೇಲೆ, ದರ್ಯಾಫ್ತಿ ಬಗ್ಯೆ ಅಪಾದನೆ ಪಟ್ಟವನನ್ನು ಕಮ್ಮಿಟ ಮಾಡಲಿಕ್ಕೆ ಸಾಕಾದ ಸಬಬುಗಳು ಇರುತ್ತವೆಂತ ಮ್ಯಾಜಿಸ್ಟ್ರೇಟಗೆ ತೋರಿದರೆ, ಅಪಾದನೆ ಪಟ್ಟವನು ಯಾವ ತಕ್ಕೀರಿನ ಬಗ್ಯೆ ಅಪಾದಿಸಲ್ಪಟ್ಟಿದ್ದಾನೆಂಬದು ನಮೂದು ಮಾಡಿ, ತನ್ನ ದಸ್ಕತುನಿಶಿ ತಕ್ಕೀರುನಾಮೆ ಏರ್ಪಡಿಸತಕ್ಕದ್ದು.

ತಕ್ಕೀರುನಾಮೆ ಯಾವಾಗ ಏರ್ಪಡಿಸ ಬಹುದು.

ತಕ್ಕೀರುನಾಮೆ ಏರ್ಪಡಿಸೋಣಾದ ಕೂಡಲೇ, ಅದನ್ನು ಅಪಾದನೆ ಪಟ್ಟ ಮನುಷ್ಯನಿಗೆ ಓದಿ ವಿವರಿಸಿ, ಅವನು ಅಪೇಕ್ಷಿಸಿದರೆ, ಅದರ ಒಂದು ಪ್ರತಿಯನ್ನು ಖರ್ಚು ಇಲ್ಲದೇನೇ ಅವನಿಗೆ ಕೊಡತಕ್ಕದ್ದು.

ತಕ್ಕೀರುನಾಮೆ ವಿವರಿಸತಕ್ಕದ್ದು—ವ— ಅದರ ನಕಲು ಅಪಾದನೆಪಟ್ಟ ಮನುಷ್ಯನಿಗೆ ಕೊಡತಕ್ಕದ್ದು.

211. ಸದರೀ ಅಪಾದನೆ ಪಟ್ಟವನ ದರ್ಯಾಫ್ತಿ ಕಾಲದಲ್ಲಿ ಯಾವ ಮನುಷ್ಯರಿಗೆ ಸಮ್ಮನಸ ಆಗಬೇಕೆಂತ ಅವನು ಅಪೇಕ್ಷಿಸುತ್ತಾನೋ ಅಂಥಾ ಮನುಷ್ಯರ (ಯಾರಾದರೂ ಇದ್ದರೆ,) ಪಟ್ಟಿ ಕೂಡಲೇ ಜುಬಾನಿಯಿಂದ ಅಥವಾ ಬರಹ ಮೂಲಕ ಕೊಡಹೇಳಿ ಅಪಾದನೆ ಪಟ್ಟವನಿಗೆ ಕೋರತಕ್ಕದ್ದು.

ಡಿಫೆನಸಬಗ್ಯೆ ದರಿಯಾಫ್ತಿಯಲ್ಲಿ ಸಾಕ್ಷಿಗಾರರ ಪಟ್ಟಿ.

ಮ್ಯಾಜಿಸ್ಟ್ರೇಟಗೆ ಯುಕ್ತ ತೋರಿದರೆ ಅನಂತರ ತಾಜಾ ಸಾಕ್ಷಿಗಾರರ ಪಟ್ಟಿ ಕೊಡುವದಕ್ಕೆ ಅಪಾದನೆಪಟ್ಟ ಮನುಷ್ಯನಿಗೆ ಬಿಡಬಹುದು ;

ತಾಜಾಪಟ್ಟಿ.

212. ಮ್ಯಾಜಿಸ್ಟ್ರೇಟಗೆ ಯುಕ್ತ ತೋರಿದರೆ 211ನೇ ಪ್ರಕರಣ ಪ್ರಕಾರ ತನ್ನ ಬಳಿಗೆ ಕೊಡೋಣಾದ ಯಾವದೊಂದು ಪಟ್ಟಿಯಲ್ಲಿ ಹೆಸರು ನಮೂದಿರುವ ಯಾವ ಸಾಕ್ಷಿಗಾರನನ್ನಾದರೂ ಸಮ್ಮನ್ಸ ಕೊಟ್ಟು ವಿಚಾರಣೆ ಮಾಡಬಹುದು.

ಅಂಥಾ ಸಾಕ್ಷಿಗಾರನನ್ನು ವಿಚಾರಣೆ ಮಾಡುವದಕ್ಕೆ ಮ್ಯಾಜಿಸ್ಟ್ರೇಟಗೆ ಇರುವ ಅಧಿಕಾರ.

ಕಮ್ಮಿಟಮೆಂಟ್ ಹುಕುಂ.

213. 211ನೇ ಪ್ರಕರಣಪ್ರಕಾರ ಪಟ್ಟಿ ಕೊಡಹೇಳಿ ಆಪಾದನೆ ಪಟ್ಟವನು ವಿಧಿಸಲ್ಪಟ್ಟು ಆ ಪ್ರಕಾರ ಕೊಡಲಿಕ್ಕೆ ಆತನು ನಿರಾಕರಿಸಿದರೆ, ಅಥವಾ ಆತ ಅಂಥಾ ಪಟ್ಟಿ ಕೊಟ್ಟಿರುವದಾದರೆ, ಮತ್ತು ಅಂಥಾ ಪಟ್ಟಿಯಲ್ಲಿ ಶೇರಿರುವ ಯಾವ ಸಾಕ್ಷಿಗಳನ್ನಾದರೂ (ಇದ್ದರೆ) ಮ್ಯಾಜಿಸ್ಟ್ರೇಟನು ವಿಚಾರಿಸುವದಕ್ಕೆ ಅಪೇಕ್ಷಿಸಿ ಅವರನ್ನ 212ನೇ ಪ್ರಕರಣಪ್ರಕಾರ ಸಮ್ಮನ್ಸ ಕೊಟ್ಟು ವಿಚಾರಿಸಿ ಇದ್ದರೆ, ಸದರೀ ಮ್ಯಾಜಿಸ್ಟ್ರೇಟನು ಆಪಾದನೆ ಪಟ್ಟವನನ್ನ ಸೆಷನ್ಸ ಕೋರ್ಟಿನವರಿಂದ ಪರ್ಯಾಪ್ತಿಬಗ್ಗೆ ಕಮ್ಮಿಟ ಮಾಡಿ ಹುಕುಂ ಮಾಡಬಹುದು, ಮತ್ತು ಆ ಪ್ರಕಾರ ಕಮ್ಮಿಟ ಮಾಡಲಿಕ್ಕಾದ ಸಬಬುಗಳನ್ನು ಕೂಡಾ ಗೋಷ್ವಾರೆಯಾಗಿ ರಿಕಾರ್ಡು ಮಾಡತಕ್ಕದ್ದು.

213ನೇ ಪ್ರಕರಣಪ್ರಕಾರ ಮಾಡೋಣಾದ ಕಮ್ಮಿಟಮೆಂಟುಗಳನ್ನು ರದ್ದು ಮಾಡೋಣ.

215. ತಕ್ಕ ಅಧಿಕಾರವುಳ್ಳ ಒಬ್ಬ ಮ್ಯಾಜಿಸ್ಟ್ರೇಟನಿಂದ 213ನೇ ಪ್ರಕರಣಪ್ರಕಾರ ಬಂದಾವರ್ತಿ ಮಾಡೋಣಾದ ಕಮ್ಮಿಟಮೆಂಟ ಚೀಫ್ ಕೋರ್ಟಿನವರಿಂದ ಮಾತ್ರವೇ ರದ್ದು ಮಾಡಲ್ಪಡಬಹುದು, ಮತ್ತು ಅಂಥಾ ರದ್ದಿಯಾತಿಯು ಕಾನೂನು ಸಂಬಂಧವಾದ ಪ್ರಶ್ನೆ ಮೇಲೆ ಮಾತ್ರವಾಗಿರತಕ್ಕದ್ದು.

ಆಪಾದನೆಪಟ್ಟ ಮನುಷ್ಯನು ಕಮ್ಮಿಟ ಮಾಡಲ್ಪಟ್ಟಾಗ ಡಿಫೆನ್ಸಕಡೆ ಸಾಕ್ಷಿಗಾರರಿಗೆ ಸಮ್ಮನ್ಸ ಕೊಡುವದರನ್ನು ಕುರಿತು.

216. ಆಪಾದನೆ ಪಟ್ಟವನು 211ನೇ ಪ್ರಕರಣ ಪ್ರಕಾರ ಸಾಕ್ಷಿಗಾರರ ಪಟ್ಟಿಯನ್ನು ಕೊಟ್ಟಾಗ—ವ—ದರಿಯಾಪ್ತಿ ಉದ್ದಿಶ್ಯವಾಗಿ ಅವನು ಕಮ್ಮಿಟ ಮಾಡಲ್ಪಟ್ಟು ಇದ್ದರೆ, ಆ ಪಟ್ಟಿಯಲ್ಲಿ ಶೇರಿದವರ ಪೈಕಿ ತನ್ನ ಮುಂದೆ ಹಾಜರಾಗದೆ ಇರುವ ಸಾಕ್ಷಿಗಾರರನ್ನು, ಆತನು ಯಾವ ಕೋರ್ಟಿಗೆ ಕಮ್ಮಿಟ ಮಾಡಲ್ಪಟ್ಟಿರುತ್ತಾನೋ ಆ ಕೋರ್ಟು ಮುಂದೆ ಹಾಜರಾಗುವ ಹಾಗೆ ಸಮನ್ಸ ಕೊಡತಕ್ಕದ್ದು:

ಶೇವಣಿ ಮಡಿಗಿದ ಹೊರತು ಅನಾವಶ್ಯಕವಾದ ಸಾಕ್ಷಿಯನ್ನು ಸಮ್ಮನ್ಸ ಮಾಡೋಣವನ್ನು ನಿರಾಕರಿಸೋಣ.

ಪರಂತು ರೋಷ್ಟು—ಯಾ—ಕಾಲವಿಳಂಬ ಪಡಿಸುವದಕ್ಕಾಗಿ—ಯಾ—ನ್ಯಾಯ ನಡಿಯದೆ ತಪ್ಪಿ ಹೋಗಲಿಕ್ಕಾಗಿ, ಪಟ್ಟಿಯಲ್ಲಿ ಯಾವನೊಬ್ಬ ಸಾಕ್ಷಿಗಾರನನ್ನಾದರೂ ಶೇರಿಸೋಣಾಗಿದೆ ಎಂದು ಮ್ಯಾಜಿಸ್ಟ್ರೇಟ ಆಲೋಚಿಸುವನಾದರೆ, ಅಂಥಾ ಸಾಕ್ಷಿಗಾರನ ಸಾಕ್ಷ್ಯವು ಪ್ರಾಮುಖ್ಯವೆಂದು ನಂಬುವದಕ್ಕೋಸ್ಕರ ಯುಕ್ತವಾದ ಸಬಬುಗಳು ಇವೆ ಎಂದು ತನಗೆ ಸಮಾಧಾನ ಪಡಿಸ ಹೇಳಿ ಆಪಾದನೆ ಪಟ್ಟವನನ್ನ ಅಪೇಕ್ಷಿಸಬಹುದು, ಮತ್ತು, ಆತನು ಹಾಗೆ ಸಮಾಧಾನ ಪಡದೆ ಇದ್ದರೆ, ಸಾಕ್ಷಿಗಾರನನ್ನ ಸಮನ್ಸ ಕೊಡಲಿಕ್ಕೆ (ಅಂಥಾ ನಿರಾಕರಣೆಗೆ ತನ್ನ ಸಬಬುಗಳು ರಿಕಾರ್ಡು ಮಾಡಿ) ನಿರಾಕರಿಸಬಹುದು, ಅಥವಾ ಆತನನ್ನ ಸಮ್ಮನ್ಸ ಕೊಡಲಿಕ್ಕೆ ಮುಂಚಿತವಾಗಿ ಸದರೀ ಸಾಕ್ಷಿಗಾರನನ್ನ ಹಾಜರು ಮಾಡಿಸುವದಕ್ಕೆ ಅವಶ್ಯ ಎಂದು ಮ್ಯಾಜಿಸ್ಟ್ರೇಟಿಗೆ ತೋರುವ ಖರ್ಚಿನ ಮೊಬಲಗನ್ನು ಶೇವಣಿ ಇಡತಕ್ಕದ್ದೆಂದು ಆತಗೆ ಹುಕುಂ ಕೊಡಬಹುದು.

ಫಿರ್ಯಾದುದಾರರ-ವ-ಸಾಕ್ಷಿಗಾರರಪತ್ರ.

217. ಸೆಷನ್ಸ ಕೋರ್ಟು ಮುಂದೆ ಯಾವ ಫಿರ್ಯಾದುದಾರ—ಪ—ಫಿರ್ಯಾದಿ—ವ—ಡಿಫೆನ್ಸಕಡೆ ಸಾಕ್ಷಿಗಾರರ ಹಾಜರಾತಿಯು ಅವಶ್ಯ ಇದ್ದು, ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗಿ ಇರುತ್ತಾರೋ, ಅಂಥಾ ಫಿರ್ಯಾದುದಾರರು ಸಾಕ್ಷಿಗಾರರು ಫಿರ್ಯಾದಿ ನಡಿಸಲಿಕ್ಕೆ—ಯಾ—ಸಂಗತ್ಯಾನುಸಾರವಾಗಿ, ಸಾಕ್ಷ್ಯ ಕೊಡಲಿಕ್ಕೆ, ಸೆಷನ್ಸ ಕೋರ್ಟಿನಲ್ಲಿ ಕರೆಯಲ್ಪಟ್ಟಾಗ ಹಾಜರಾಗುವದಕ್ಕೆ ಬದ್ಧ ಪಡಿಸಿಕೊಂಡು, ಪತ್ರಗಳನ್ನು ಸದರೀ ಮ್ಯಾಜಿಸ್ಟ್ರೇಟನ ಮುಂದೆ ಬರ ಕೊಡತಕ್ಕದ್ದು.

ಹಾಜರಾಗುವದಕ್ಕೆ ಅಥವಾ ಕರಾರು ಬರ ಕೊಡಲಿಕ್ಕೆ ನಿರಾಕರಿಸಿದರೆ ಪಹರೆಯಲ್ಲಿ ತಡೆದಿಡೋಣ.

ಯಾವ ಫಿರ್ಯಾದುದಾರನಾಗಲೀ ಅಥವಾ ಸಾಕ್ಷಿಗಾರನಾಗಲೀ ಸೆಷನ್ಸ ಕೋರ್ಟು ಮುಂದೆ ಹಾಜರಾಗುವದಕ್ಕೆ ನಿರಾಕರಿಸಿದರೂ, ಅಥವಾ ಮೇಲೆ ನಿರ್ದೇಶಿಸಿರೋಣಾದ ಮೇರೆಗೆ ಪತ್ರವನ್ನು ಬರ ಕೊಡುವದಕ್ಕೆ ನಿರಾಕರಿಸಿದರೂ, ಅಂಥಾ ಕರಾರನ್ನು ಅವನು ಬರದು ಕೊಡುವವರಿವಿಗೆ—ಯಾ—ಸೆಷನ್ಸ ಕೋರ್ಟು ಮುಂದೆ ಆತ ಯಾವಾಗ್ಯೆ ಹಾಜರಾಗತಕ್ಕದ್ದೋ ಆ ವರಿವಿಗೆ, ಅವನನ್ನ ಮ್ಯಾಜಿಸ್ಟ್ರೇಟನು ತಡೆದಿಟ್ಟು ಅವನಮೇಲೆ ಮೊಹಸಲೆ ಹಾಕಿ ಅವನನ್ನ ಸೆಷನ್ಸ ಕೋರ್ಟಿಗೆ ಕಳುಹಿಸತಕ್ಕದ್ದು.

ಕಮ್ಮಿಟಮೆಂಟ ಯಾವಾಗ ತಿಳಿಸಲ್ಪಡ ತಕ್ಕದ್ದು.

218. ಆಪಾದನೆಪಟ್ಟ ಮನುಷ್ಯನನ್ನು ದರಿಯಾಫ್ತಿ ಬಗ್ಗೆ ಕಮ್ಮಿಟ ಮಾಡೋಣಾದಾಗ, ಈ ಬಗ್ಯಾಗಿ ಮೈಸೂರು ಗವರ್ನಮೆಂಟಿನವರಿಂದ ನೇಮಿಸಲ್ಪಟ್ಟಂಥಾ ಮನುಷ್ಯನಿಗೆ ಕಮ್ಮಿಟಮೆಂಟ ಸಂಗತಿ ತಿಳಿಸಿ, ತಕ್ಕೀರುನಾಮೆ ಚೀಟಿನ ನಮೂನೆಯಲ್ಲಿಯೇ ತಕ್ಕೀರನ್ನು ನಮೂದಿಸಿ, ಒಂದು ಹುಕುಂ ಕೊಡತಕ್ಕದ್ದು, ಆದರೆ ಅಂಥಾ ಮನುಷ್ಯಗೆ ಕಮ್ಮಿಟಮೆಂಟಿನ—ವ—ತಕ್ಸೀರುನಾಮೆಯ ನಮೂನೆಯ ಸಂಗತಿ ಮೊದಲೇ ತಿಳಿದಿರುತ್ತದೆಂತ ಮ್ಯಾಜಿಸ್ಟ್ರೇಟಿಗೆ ಮಂದಟ್ಟು ಆದ ಸಂಗತಿಯಲ್ಲಿ ಹಾಗೆ ಕಳುಹಿಸಬೇಕಾದ್ದಿಲ್ಲಾ ;

ತಕ್ಸೀರುನಾಮೆ ಮುಂತಾದ್ದು ಸೆಷ್ಷ ಕೋರ್ಟಿಗೆ ರವಾನಿಸತಕ್ಕದ್ದು.

ಮತ್ತು ತಕ್ಸೀರ ನಾಮೆಯನ್ನೂ, ವಿಚಾರಣೆಯ ರಿಕಾರ್ಡು—ವ—ಸಾಕ್ಷ್ಯವಾಗಿ ಹಾಜರ್ಮಾಡಲ್ಪಡ ಬೇಕಾದ ಯಾವದೊಂದು ಆಯುಧವನ್ನಾದರೂ ಅಥವಾ ಇತರ ವಸ್ತುವನ್ನಾದರೂ, ಸೆಷ್ಷ ಕೋರ್ಟಿಗೆ ರವಾನಿಸತಕ್ಕದ್ದು.

ಉಪ ಸಾಕ್ಷಿಗಾರರನ್ನು ಸಮ್ಮನ್ ಮಾಡಲಿಕ್ಕೆ ಅಧಿಕಾರ.

219. ಕಮ್ಮಿಟ ಮಾಡಿದ ತರುವಾಯ ಮತ್ತು ದರಿಯಾಫ್ತಿ ಷುರು ಆಗುವದಕ್ಕೆ ಮುಂಚೆ ಮ್ಯಾಜಿಸ್ಟ್ರೇಟು ಉಪ ಸಾಕ್ಷಿಗಾರರನ್ನು ಸಮ್ಮನ್ ಮಾಡಿ ವಿಚಾರಣೆ ಮಾಡಬಹುದು, ಮತ್ತು ಅವರು ಹಾಜರಾಗಿ ಸಾಕ್ಷ್ಯ ಕೊಡಲಿಕ್ಕೆ ಈ ಮುಂಚೆ ಏರ್ಪಾಡಿಸೋಣಾದ ರೀತೀಲಿ ಅವರನ್ನು ಬದ್ಧಪಡಿಸಬಹುದು.

ಅಂಥಾ ವಿಚಾರಣೆಯು, ಸಾಧ್ಯವಾದರೆ, ಆಪಾದನೆಪಟ್ಟ ಮನುಷ್ಯನ ಸಮಕ್ಷಮದಲ್ಲಿ ಮಾಡತಕ್ಕದ್ದು, ಮತ್ತು, ಅಂಥಾ ಸಾಕ್ಷಿಗಾರರ ಸಾಕ್ಷ್ಯದ ಒಂದು ನಕಲನ್ನು ಆಪಾದನೆಪಟ್ಟ ಮನುಷ್ಯನು ಅಪೇಕ್ಷಿಸಿದರೆ, ಆತಗೆ ಖರ್ಚು ಇಲ್ಲದೆ ಕೊಡತಕ್ಕದ್ದು.

ದರಿಯಾಫ್ತಿ ಮುಗಿಯುವತನಕ ಅಪಾದನೆ ಪಟ್ಟ ಮನುಷ್ಯನನ್ನು ಪಹರೆಯಲ್ಲಿಡೋಣ.

220. ದರಿಯಾಫ್ತಿ ನಡಿಯುತ್ತಿರುವಾಗ, ಅದು ಮುಗಿಯುವ ತನಕ, ಜಾಮೀನು ತೆಗದು ಕೊಳ್ಳುವದನ್ನು ಕುರಿತು ಈ ಕೋಡಿನ ನಿಬಂಧನೆಗಳಿಗೆ ಒಳಪಟ್ಟು, ಸದರೀ ಮ್ಯಾಜಿಸ್ಟ್ರೇಟು ಆಪಾದನೆಪಟ್ಟ ಮನುಷ್ಯನನ್ನು, ವಾರಂಟು ದ್ವಾರಾ ಪಹರೆಗೆ ಕಳುಹಿಸಿ ಕೊಡತಕ್ಕದ್ದು.

Chapter XIX.—Of the Charge.

19ನೇ ಅಧ್ಯಾಯ.—ತಕ್ಸೀರುನಾಮೆಯನ್ನ ಕುರಿತು.

Form of Charges.

ತಕ್ಸೀರುನಾಮೆಗಳ ನಮೂನೆ.

ತಕ್ಸೀರುನಾಮೆಯಲ್ಲಿ ತಕ್ಸೀರನ್ನು ಬರೆದಿರತಕ್ಕದ್ದು.

221. ಈ ಕೋಡಿನ ಪ್ರಕಾರ ಪ್ರತಿ ತಕ್ಸೀರುನಾಮೆಯಲ್ಲಿ ಆಪಾದನೆ ಪಟ್ಟವನು ಯಾವದಕ್ಕೋಸ್ಕರ ಆಪಾದನೆ ಪಟ್ಟನೋ ಆ ತಕ್ಸೀರನ್ನು ಬರೆದಿರತಕ್ಕದ್ದು.

ಫಲಾನೆ ತಕ್ಸೀರೆಂದು ಅದರ ಹೆಸರು ನಮೂದಿಸೋಣ ಸಾಕಾದ ವಿವರಣೆ.

ಯಾವ ಕಾನೂನುಪ್ರಕಾರ ಒಂದು ತಕ್ಸೀರು ಉಂಟು ಆಗುತ್ತದೋ ಆ ಕಾನೂನಿನಲ್ಲಿ ಸದರೀ ತಕ್ಸೀರಿಗೆ ಒಂದು ಹೆಸರು ಕೊಟ್ಟಿದ್ದರೆ ಸದರೀ ಹೆಸರಿನಿಂದಲೇ ಆ ತಕ್ಸೀರು ಆಪಾದನೆ ಚೀಟಿನಲ್ಲಿ ವಿವರಿಸಲ್ಪಡಬಹುದು.

ಫಲಾನೆದೆಂದು ತಕ್ಸೀರಿಗೆ ಹೆಸರು ಇಲ್ಲದೆ ಹೋದರೆ ಹ್ಯಾಗೆ ಬರಿಯತಕ್ಕದ್ದು.

ಯಾವ ಕಾನೂನ್‌ಪ್ರಕಾರ ಒಂದು ತಕ್ಸೀರು ಉಂಟಾಗುತ್ತದೋ ಆ ಕಾನೂನಿನಲ್ಲಿ ಅದಕ್ಕೆ ಯಾವ ಹೆಸರನ್ನು ಕೊಡದಿದ್ದರೆ, ತಕ್ಸೀರಿನ ಬಾಬ್ತು ಎಷ್ಟನ್ನು ವಿ಼ ಅದರ ಆಪಾದನೆಯಾದ ಕೈದಿಗೆ ತಾನು ಆಪಾದಿಸಲ್ಪಟ್ಟದರನ್ನು ಯು ಬರುವದೋ ಅಷ್ಟನ್ನು ನಮೂದಿಸಬೇಕು.

ಯಾವ ಕಾನೂನು—ವ—ಪ್ರಕರಣಕ್ಕೆ ವಿರೋಧವಾಗಿ ತಕ್ಸೀರು ನಡಿಸಿದ್ದಾಗಿ ಹೇಳಿದೆಯೋ ಆ ಕಾನೂನನ್ನು—ವ—ಕಾನೂನಿನ ಪ್ರಕರಣವನ್ನು ತಕ್ಸೀರುನಾಮೆಯಲ್ಲಿ ನಮೂದಿಸತಕ್ಕದ್ದು.

ತಕ್ಸೀರುನಾಮೆಯಿಂದ ಏನು ಗೂಢವಾಗಿ ಅರ್ಥವಾಗುತ್ತದೆ.

ತಕ್ಸೀರುನಾಮೆ ಆಯಿತು ಎಂಬ ವಿದ್ಯಮಾನವು ಛಾರ್ಜಾದ ತಕ್ಸೀರನ್ನು ಕಲ್ಪಿಸಲಿಕ್ಕೆ ಕಾನೂನಿನಿಂದ ಅವಶ್ಯವಾದ ಪ್ರತಿ ನ್ಯಾಯ ಸಂಬಂಧವಾದ ಷರತ್ತು ಫಲಾನಾ ಮೊಕದ್ದಮೆಯಲ್ಲಿ ನೆರವೇರಿಸಲ್ಪಟ್ಟಿದೆ ಎಂಬ ಹೇಳಿಕೆಗೆ ಈಡಾಗಿರತಕ್ಕದ್ದು.

ತಕ್ಸೀರುನಾಮೆಯನ್ನು ಬರೆಯತಕ್ಕ ಭಾಷೆ.

ಛಾರ್ಜನಾಮೆ ಇಂಗ್ಲಿಷಿನಲ್ಲಾಗಲೀ—ಯಾ—ಕೋರ್ಟಿನ ಭಾಷೆಯಲ್ಲಾಗಲೀ ಬರೆಯಲ್ಪಡತಕ್ಕದ್ದು.

ಸದರೀ ಆಪಾದನೆಪಟ್ಟವನಮೇಲೆ ಪ್ರಾಕಿನ ಸಾಬೀತನ್ನು ಯಾವಾಗ ಬರೆದಿರತಕ್ಕದ್ದು.

ಒಂದು ತಕ್ಸೀರು ಪೂರ್ವದಲ್ಲಿ ಸಾಬೀತಾಗಿದ್ದರೆ, ಮತ್ತು ಕೋರ್ಟಿನವರುವಿಧಿಸಲಿಕ್ಕೆ ಅಧಿಕಾರವುಳ್ಳವರಾಗಿರುವ ಶಿಕ್ಷೆಯನ್ನು ಬಾಧಿಸುವ ನಿಮಿತ್ಯ ಅಂಥಾ ಪೂರ್ವದ ಸಾಬೀತನ್ನು ರುಜು ಮಾಡಲಿಕ್ಕೆ ಉದ್ದೇಶಿಸಿದ್ದರೆ, ಸದರೀ ಪೂರ್ವದ ಸಜಾವಿನ ವಿದ್ಯಮಾನ, ತಾರೀಖು—ವ—ಸ್ಥಳ ಸದರೀ ತಕ್ಸೀರುನಾಮೆಯಲ್ಲಿ ಬರೆಯಲ್ಪಡತಕ್ಕದ್ದು. ಆ ವಿವರಣೆ ಬರೆಯಲಿಕ್ಕೆ ಬಿಟ್ಟಿದ್ದರೆ, ಸಜಾ ವಿಧಿಸುವದಕ್ಕಿಂತ ಮುಂಚೆ ಕೋರ್ಟಿನವರು ಅದನ್ನು ಯಾವಾಗಲಾದರೂ ಸೇರಿಸಬಹುದು.

ಉದಾಹರಣೆಗಳು.

(a) B ಯನ್ನು ಖೂನಿ ಮಾಡಿದನೆಂದು A ಯು ಆಪಾದನೆ ಪಟ್ಟಿದ್ದಾನೆ. ಇದು, ಇಂಡ್ಯನ್ ಪಿನಲ್ ಕೋಡಿನ 299 ವ 300 ನೇ ಪ್ರಕರಣಗಳಲ್ಲಿ ಕೊಟ್ಟಿರುವ ಖೂನಿಯೆಂಬದರ ವಿವರಣದಲ್ಲಿ A ಯ ಕೃತ್ಯವು ಸೇರಿ ಅದೆ ಯೆಂಬುವ; ಅದೇ ಕೋಡಿನ ಯಾವ ಜನರಲ್ ಎಕ್ಸೆಪ್ಷನ್‌ಗಳೊಳಗಾದರೂ ಅದು ಬೀಳಲಿಲ್ಲವೆಂಬುವ; ಮತ್ತು 300ನೇ ಪ್ರಕರಣದ ಐದು ವಿನಾಯಿತಿಗಳ ಪೈಕಿ ಯಾವದರ ಒಳಗಾದರೂ ಅಡಗಲಿಲ್ಲವೆಂಬುವ—ಯಾ—1ನೇ ವಿನಾಯತಿಯ ಒಳಗೆ ಅದು ಅಡಗಿದ್ದರೂ, ಸದರೀ ವಿನಾಯತಿಗೆ ಸೇರಿರುವ ಮೂರು ನಿಯಮಗಳ ಯಾವದಾದರೊಂದು ಅದಕ್ಕೆ ಲಗಾವಾಗುತ್ತದೆಂಬುವ, ಹೇಳಿಕೆಗೆ ಈಡಾಗಿರುತ್ತದೆ.

(b) A ಯು, ಸುಡುವ ಸಾಧನದಿಂದ B ಗೆ ಇಂಡ್ಯನ್ ಪಿನಲ್‌ಕೋಡಿನ 326 ನೇ ಪ್ರಕರಣಕ್ಕನುಗುಣವಾಗಿ ಮನಃಪೂರ್ತಿಯಾಗಿ ಸಂಕಟಕರವಾದ ಹಿಂಸೆ ಮಾಡಿದನೆಂದು, ಆಪಾದನೇ ಪಡುತ್ತಾನೆ. ಇದು ಇಂಡ್ಯನ್ ಪಿನಲ್‌ಕೋಡಿನ 335 ನೇ ಪ್ರಕರಣದಿಂದ ಮೊಕದ್ದಮೆಯು ನಿಬಂಧಿಸಲ್ಪಡಲಿಲ್ಲವೆಂಬುವ, ಮತ್ತು ಸದರೀ ಜನರಲ್ ಎಕ್ಸೆಪ್ಷನುಗಳು ಅದಕ್ಕೆ ಲಗಾವಾಗಲಿಲ್ಲವೆಂಬುವ, ಹೇಳಿಕೆಗೆ ಈಡಾಗಿರುತ್ತದೆ.

(c) A ಯೆಂಬುವನು, ಖೂನಿ, ದಗಾ, ಕಳವು, ಸುಲಿಗೆ, ಹಾದರ—ಯಾ—ತಕ್ಸೀರುಕರವಾಗಿ ಬೆದರಿಸೋಣಾದ ಬಾಬತು—ಯಾ—ಸುಳ್ಳಾದ ಸಾವರ್ನ ಗುರ್ತನ್ನು ಉಪಯೋಗಿಸಿದ ಬಾಬತು, ಆಪಾದನೆಪಡುತ್ತಾನೆ. ಖೂನಿಯನ್ನು—ಯಾ—ದಗಾವನ್ನು—ಯಾ—ಕಳವನ್ನು—ಯಾ—ಸುಲಿಗೆಯನ್ನು—ಯಾ—ಹಾದರತನವನ್ನು ಮಾಡಿದನೆಂದು—ಯಾ—ತಕ್ಸೀರುಕರವಾಗಿ ಬೆದರಿಸಿದನೆಂದು—ಯಾ—ಸುಳ್ಳಾದ ಸಾವರ್ನ ಗುರ್ತನ್ನು ಉಪಯೋಗಿಸಿದನೆಂದು ಇಂಡ್ಯನ್ ಪಿನಲ್ ಕೋಡಿನಲ್ಲಡಗಿರುವ ಸದರೀ ತಕ್ಸೀರುಗಳ ವಿವರಣೆಗಳಿಗೆ ಸೂಚಿಸದೇನೇ, ತಕ್ಸೀರುನಾಮೆಯಲ್ಲಿ ಬರೆಯಬಹುದು; ಆದರೆ ಯಾವ ಪ್ರಕರಣಗಳಿಗನುಗುಣವಾಗಿ ತಕ್ಸೀರು ಶಿಕ್ಷಿಸಲ್ಪಡುವದೋ ಆ ಪ್ರಕರಣಗಳನ್ನು, ಪ್ರತಿಸಂಗತಿಯಲ್ಲೂ, ತಕ್ಸೀರುನಾಮೆಯಲ್ಲಿ ಸೂಚಿಸತಕ್ಕದ್ದು.

(d) A ಯೆಂಬುವನು, ಸರ್ಕಾರ್ ನವುಕರನು ತನ್ನ ನ್ಯಾಯವಾದ ಅಧಿಕಾರದ ಮೂಲವಾಗಿ ಹರಾಜು ಹಾಕಿಸುವ ಸ್ವತ್ತನ್ನು ಹರಾಜಾಗದಹಾಗೆ ಮನಃಪೂರ್ತಿಯಾಗಿ ಆಟಂಕಪಡಿಸಿದನೆಂದು ಇಂಡ್ಯನ್ ಪಿನಲ್‌ಕೋಡಿನ 184ನೇ ಪ್ರಕರಣಕ್ಕನುಗುಣವಾಗಿ, ಆಪಾದನೆ ಪಡುತ್ತಾನೆ. ಸದರೀ ತಕ್ಸೀರುನಾಮೆಯು ಆ ಮಾತುಗಳಲ್ಲಿರತಕ್ಕದ್ದು.

ಸ್ಥಳ—ವ—ಮನುಷ್ಯನ ವಿಷಯವಾಗಿಗಳು.

222. ತಕ್ಸೀರು ನಡಿಯಿತೆಂಬ ಕಾಲದ—ವ—ಸ್ಥಳದ ಬಾಬತು ವಿವರಗಳನ್ನು, ಮತ್ತು (ಯಾರಾದರೂ ಇದ್ದರೆ) ಯಾರಮೇಲೆ, ಅಥವಾ (ಏನಾದರೂಇದ್ದರೆ) ಯಾವದರ ವಿಷಯವಾಗಿ, ಅದು ನಡಿಸೋಣಾಯಿತೋ, ಆ ಮನುಷ್ಯನ—ಯಾ—ವಸ್ತುವಿನ ಬಾಬಿನಲ್ಲಿ, ಸದರೀ ತಕ್ಸೀರಿನ ಆಪಾದನೆಯಾದವನಿಗೆ ತಿಳಿಯುವದಕ್ಕೆ ಅಂಥಾ ವಿವರಗಳು ತಕ್ಸೀರುನಾಮೆಯಲ್ಲಿ ಅಡಗಿರತಕ್ಕದ್ದು.

1123

223. 221 ಮತ್ತು 222ನೇ ಪ್ರಕರಣಗಳಲ್ಲಿ ನಮೂದಿಶಿರುವ ವಿವರಗಳು ಆಪಾದನೆ ಪಟ್ಟವನಿಗೆ, ತನ್ನ ಮೇಲೆ ಆಪಾದನೆಯಾದ ವಿಷಯವನ್ನು ಕುರಿತು ಸಾಕಾಗಿ ತಿಳಿಸದೆ ಇರುವಂಥಾದ್ದಾಗಿ ಸದರೀ ಮೊಕದ್ದಮೆಯ ಸ್ವಭಾವ ವಿದ್ದರೆ, ಅದಕ್ಕೋಸ್ಕರ ಸಾಕಾಗಿರುವಷ್ಟು, ನಡೆಯಿತೆಂಬ ತಕ್ಕೀರು ನಡೆದ ರೀತಿಯ ವಿವರಗಳು ಸಹಾ ತಕ್ಕೀರುನಾಮೆಯಲ್ಲಿ ಅಡಗಿರತಕ್ಕದ್ದು.

ತಕ್ಕೀರು ನಡಿಸಿದ ರೀತಿಯನ್ನು ಯಾವಾಗ ಬರೆಯತಕ್ಕದ್ದು.

ಉದಾಹರಣೆಗಳು.

(a) A ಯು, ಫಲಾನಕಾಲದಲ್ಲಿ—ವ—ಸ್ಥಳದಲ್ಲಿ ಫಲಾನಾ ವಸ್ತುವನ್ನು ಕದ್ದನೆಂದು, ಆಪಾದನೆಪಟ್ಟನು. ಸದರೀ ಆಪಾದನೆಯಲ್ಲಿ, ಕಳವಾದ ರೀತಿಯನ್ನು ಬರೆದಿರತಕ್ಕದ್ದಿಲ್ಲಾ.

(b) A ಯು, ಫಲಾನಕಾಲದಲ್ಲಿ—ವ—ಸ್ಥಳದಲ್ಲಿ B ಯೆಂಬುವನನ್ನ ದಗೇಮಾಡಿದನೆಂದು, ಆಪಾದನೆ ಪಟ್ಟನು. ಹ್ಯಾಗೆ A ಯು B ಯನ್ನ ದಗೇ ಮಾಡಿದನೋ ಆ ರೀತಿಯನ್ನು ತಕ್ಕೀರುನಾಮೆಯಲ್ಲಿ ಬರೆದಿರತಕ್ಕದ್ದು.

(c) A ಯು, ನಮೂದಿಸಿರುವ ಕಾಲದಲ್ಲಿ—ವ—ಸ್ಥಳದಲ್ಲಿ ಸುಳ್ಳು ಸಾಕ್ಷ್ಯವನ್ನು ಕೊಟ್ಟನೆಂದು ಆಪಾದನೆ ಪಟ್ಟನು. A ಯಿಂದ ಕೊಡಲ್ಪಟ್ಟ ಸಾಕ್ಷ್ಯದಲ್ಲಿ ಯಾವಭಾಗವು ಸುಳ್ಳೆಂಬದಾಗಿ ಹೇಳಿದೆಯೋ, ಆ ಭಾಗವನ್ನು ತಕ್ಕೀರುನಾಮೆಯಲ್ಲಿ ಬರೆದಿರಬೇಕು.

(d) ಒಬ್ಬ ಸರ್ಕಾರ ನವುಕರನಾದ B ಯೆಂಬುವನು ಫಲಾನೆ ಸ್ಥಳದಲ್ಲಿ—ವ—ಕಾಲದಲ್ಲಿ ತಾನು ಸರ್ಕಾರಿ ಕೆಲಸಗಳನ್ನು ನೆರವೇರಿಸುತ್ತಿರುವಾಗ A ಯು ಅಟಂಕಿಸಿದನೆಂದು A ಯು ಆಪಾದನೆಪಟ್ಟನು. B ಯು ತನ್ನ ಕೆಲಸಗಳನ್ನು ನೆರವೇರಿಸುತ್ತಿರುವಾಗ ಹ್ಯಾಗೆ A ಯಿಂದ ಅಟಂಕಿಸಲ್ಪಟ್ಟನೋ ಆ ರೀತಿಯನ್ನು ಸದರೀ ತಕ್ಕೀರುನಾಮೆಯಲ್ಲಿ ಬರೆದಿರತಕ್ಕದ್ದು.

(e) A ಯು, ಒಂದು ಫಲಾನೆಕಾಲದಲ್ಲಿ—ವ—ಸ್ಥಳದಲ್ಲಿ B ಯನ್ನ ಖೂನಿಮಾಡಿದನೆಂದು ಆಪಾದನೆ ಪಡುತ್ತಾನೆ. ಹ್ಯಾಗೆ A ಯು B ಯನ್ನ ಖೂನಿ ಮಾಡಿದನೋ ಆ ರೀತಿಯನ್ನ ಸದರೀ ತಕ್ಕೀರುನಾಮೆಯಲ್ಲಿ ಬರೆದಿರತಕ್ಕದ್ದಿಲ್ಲಾ.

(f) A ಯು, B ಯನ್ನ ಶಿಕ್ಷೆಯಿಂದ ತಪ್ಪಿಸುವ ಯಿರಾದೆಯಿಂದ ಕಾನೂನಿನ ಬಾಬತು ಹುಕುಮಿಗೆ ಅವಿಧೇಯನಾದನೆಂದು, ಆಪಾದನೆ ಪಡುತ್ತಾನೆ. ಆಪಾದನೆಯಲ್ಲಿಕಂಡ ಅವಿಧೇಯತ್ವವನ್ನೂ ಉಲ್ಲಂಘಿಸಲ್ಪಟ್ಟ ಕಾನೂನನ್ನೂ ಸದರೀ ತಕ್ಕೀರುನಾಮೆಯಲ್ಲಿ ಬರೆದಿರಬೇಕು

224. ಪ್ರತಿ ಒಂದು ತಕ್ಕೀರುನಾಮೆಯಲ್ಲಿ ಒಂದು ತಕ್ಕೀರನ್ನ ವಿವರಿಸುವದಕ್ಕೆ ಉಪಯೋಗಿಸಿದ ಶಬ್ದಗಳಿಗೆ ಆ ತಕ್ಕೀರು ಯಾವ ಕಾನೂನಿನಪ್ರಕಾರ ಶಿಕ್ಷಿಸಲ್ಪಡತಕ್ಕದ್ದಾಗಿರುತ್ತದೋ ಆ ಕಾನೂನಿನಲ್ಲಿ ಅವುಗಳು ಯಾವ ಅರ್ಥದಲ್ಲಿ ಉಪಯೋಗಿಸೋಣಾಗಿದೇಯೋ ಅದೇ ಅರ್ಥದಲ್ಲಿ ಉಪಯೋಗಿಸೋಣಾಗಿದೆ ಎಂತ ಎಣಿಸಲ್ಪಡತಕ್ಕದ್ದು.

ತಕ್ಕೀರುನಾಮೆಯ ಶಬ್ದಗಳನ್ನು ಆತಕ್ಕೀರು ಯಾವ ಕಾನೂನುಪ್ರಕಾರ ಶಿಕ್ಷಿಸಲ್ಪಡಬಹುದೋ ಆ ಕಾನೂನಿನ ಅಭಿಪ್ರಾಯದಲ್ಲಿ ಗ್ರಹಿಸೋಣ.

225. ತಕ್ಕೀರು ಬರೆದಿರುವದರಲ್ಲಾಗಲೀ ಅಥವಾ ಆಪಾದನೆ ಚೀಟಿನಲ್ಲಿ ಬರೆಯಬೇಕಾದ ವಿವರಗಳಲ್ಲಾಗಲೀ, ಇರುವ ಯಾವ ಫರಾಮೋಷಿಯೂ, ಮತ್ತು ತಕ್ಕೀರನ್ನ—ಯಾ—ಆ ವಿವರಣೆಗಳನ್ನ ಬರೆಯಲಿಕ್ಕೆ ತಪ್ಪಿದರೆ, ಹಾಗೆ ತಪ್ಪಿ ಬಿಟ್ಟದ್ದು ಮುಖ್ಯವಾದ್ದೆಂದು ಮೊಕದ್ದಮೆಯ ಯಾವ ಸ್ಥಿತಿಯಲ್ಲೂ ಎಣಿಸಕೂಡದು, ಪರಂತು ಅಂಥಾ ಫರಾಮೋಷಿಯಿಂದ—ಯಾ—ಬಿಟ್ಟದ್ದರಿಂದ ಆಪಾದನೆ ಪಟ್ಟವನು ದಾರಿ ತಪ್ಪಿಸಲ್ಪಟ್ಟರೆ ಆಗ ಎಣಿಸತಕ್ಕದ್ದು.

ಫರಾಮೋಷಿಗಳ ಫಲ.

(a) A ಯು, "ಬನಾವಣಿ ನಾಣ್ಯವೆಂತ ಮೊದಲು ತನಗೆ ತಿಳಿದಿರಲಾಗಿ ಅಂಥಾ ನಾಣ್ಯವನ್ನು ಪಡಕೊಂಡು ಅದನ್ನು ಇಟ್ಟುಕೊಂಡಿದ್ದಾನೆಂದು" ಇಂಡ್ಯನ್ ಪೆನಲ್‌ಕೋಡಿನ 242ನೇ ಪ್ರಕರಣಕ್ಕನುಗುಣವಾಗಿ, ಆಪಾದನೆಪಟ್ಟನು. ಸದರೀ ತಕ್ಕೀರುನಾಮೆಯಲ್ಲಿ "ಮೋಸಕರವಾಗಿ" ಯೆಂಬಮಾತು ಬಿಟ್ಟಿದೆ. ಹೀಗೆ ಬಿಟ್ಟದ್ದರಿಂದ ವಾಸ್ತವ್ಯವಾಗಿ A ಯು ದಾರಿತಪ್ಪಿದನೆಂದು ತೋರಿದರೇನೇ ಹೊರ್ತು, ಸದರೀ ಫರಾಮೋಷಿಯನ್ನು ಮುಖ್ಯವಾದ್ದೆಂತ ಎಣಿಸತಕ್ಕದ್ದಿಲ್ಲಾ.

(b) A ಯು B ಯನ್ನ ದಗೇಮಾಡಿದನೆಂದು, ಆಪಾದನೆಪಟ್ಟನು, ಮತ್ತು ಅವನು B ಯನ್ನ ದಗೇಮಾಡಿದ ರೀತಿಯನ್ನ ತಕ್ಕೀರುನಾಮೆಯಲ್ಲಿ ಬರೆಯಲಿಲ್ಲ—ಯಾ—ಬರೆದಿದ್ದರೂ ತಪ್ಪಾಗಿ ಬರೆದಿದೆ. A ಯು, ತಾನೇ ಪ್ರತಿವಾದಾ ಮಾಡುತ್ತಾನೆ, ಸಾಕ್ಷಿಗಾರರನ್ನ ಕರೆಯುತ್ತಾನೆ ಮತ್ತು ಜರಿಗಿದ ಕಾರ್ಯದ ಬಾಬತು ತನ್ನ ಸ್ವಂತ ವೃತ್ತಾಂತವನ್ನು ಕೊಡುತ್ತಾನೆ. ಇದರಿಂದ ದಗೇಮಾಡಿದ ರೀತಿಯನ್ನು ಬರಿಯದೆ ಬಿಟ್ಟುಬಿಟ್ಟದ್ದು ಮುಖ್ಯವಾದ ವಿಷಯವಲ್ಲವೆಂದು, ಕೋರ್ಟಿನವರು ಅನುಮಾಯಿಸಬಹುದು.

(c) A ಯು, B ಯನ್ನ ದಗೇಮಾಡಿದನೆಂದು, ಆಪಾದನೆ ಪಟ್ಟನು, ಮತ್ತು ಆವನು B ಯನ್ನ ದಗೇಮಾಡಿದ ರೀತಿಯನ್ನು ತಕ್ಕೀರುನಾಮೆಯಲ್ಲಿ ಬರೆದಿರಲಿಲ್ಲಾ. A ಗೂ B ಗೂ ಮಧ್ಯೆ ಅನೇಕ ಕಾರ್ಯಗಳು ಜರಿಗಿದ್ದವು ಮತ್ತು ಅವುಗಳಪೈಕಿ ಯಾವದಕ್ಕೆ ತಕ್ಕೀರುನಾಮೆಯಲ್ಲಿ ಸೂಚಿಸಿದೆಯೋ ಅದನ್ನು A ಯು ತಿಳಿದುಕೊಳ್ಳಲಿಕ್ಕೆ ಮಾರ್ಗವೇನೂ ಇರುತ್ತಿರಲಿಲ್ಲಾ ಮತ್ತು ಪ್ರತಿವಾದ ಮಾಡಲಿಲ್ಲಾ. ಇಂಥಾ ವಿದ್ಯಮಾನಗಳಿಂದ, ಈ ಮೊಕದ್ದಮೆಯಲ್ಲಿ ಸದರೀ ದಗೇಮಾಡಿದ ರೀತಿಯನು ಬರಿಯದೆ ಬಿಟ್ಟದ್ದು ಒಂದು ಮುಖ್ಯವಾದ ಫರಾಮೋಷಿಯೆಂದು ಕೋರ್ಟಿನವರು ಅನುಮೇಯಿಸಬಹುದು.

(d) A ಯು, 1882ನೇ ಇಸವಿ ಜನವರಿ 21ಲ್ಲು ಖುದಾಬಕ್‌ಷ ಯೆಂಬುವನನ್ನ ಖೂನಿ ಮಾಡಿದನೆಂದು ಆಪಾದನೆ ಪಟ್ಟನು ವಾಸ್ತವ್ಯವಾಗಿ, ಖೂನಿಯಾದವನ ಹೆಸರು ಹೈದರ್‌ಬಕ್‌ಷ, ಮತ್ತು ಖೂನಿ ನಡೆದ ತಾರೀಖು 1882ನೇ ಇಸವಿ ಜನವರಿ 20. ಒಂದೇ ಖೂನಿ ಮೊಕದ್ದಮೆಯಲ್ಲಿ ಶಿವಾಯಿ ಬೇರೆ ಖೂನಿ ವಿಷಯವಾಗಿ A ಯು ಆಪಾದನೆ ಪಡಲೇಯಿಲ್ಲಾ, ಮತ್ತು ಹೈದರ್‌ಬಕ್‌ಷ ಯೆಂಬುವನ ಮೊಕದ್ದಮೆಗೇನೇ ಸೂಚಿಸಿದ ಮೇಜಿಸ್ಟ್ರೇಟನ ಮುಂದೆ ಜರಗಿದ ವಿಚಾರಣೆಯನ್ನು ಕೇಳಿದ, ಈ ವಿದ್ಯಮಾನಗಳಿಂದ A ಯು ದಾರಿ ತಪ್ಪಿಸಲ್ಪಡಲಿಲ್ಲವೆಂದೂ ತಕ್ಕೀರುನಾಮೆಯಲ್ಲಿರತಕ್ಕ ಫರಾಮೋಷಿಯು ಮುಖ್ಯವಾದಂಥಾದ್ದಲ್ಲವೆಂತ ಕೋರ್ಟಿನವರು ಅನುಮೇಯಿಸಬಹುದು.

(e) A ಯು, 1882ನೇ ಇಸವಿ ಜನವರಿ 20 ರಲ್ಲು ಹೈದರ್‌ಬಕ್‌ಷ ಯೆಂಬುವನನ್ನು ಖೂನಿ ಮಾಡಿದನೆಂದೂ ಮತ್ತು 1882ನೇ ಇಸವಿ ಜನವರಿ 21 ರಲ್ಲು (ಸದರೀ ಖೂನಿಗೋಸ್ಕರ ಅವನ್ನ ಹಿಡಿಯಲಿಕ್ಕೆ ಪ್ರಯತ್ನಿಸಿದ) ಖುದಾಬಕ್‌ಷ ಯೆಂಬುವನನ್ನ ಖೂನಿಮಾಡಿದನೆಂದೂ, ಆಪಾದನೆಪಟ್ಟನು. ಹೈದರ್‌ಬಕ್‌ಷ ಯೆಂಬುವನ ಖೂನಿಬಾಬತು ಆಪಾದನೆ ಯಾದಾಗ, ಖುದಾಬಕ್‌ಷ ಯೆಂಬುವನ ಖೂನಿಗಾಗಿ ದರ್ಯಾಫ್ತಿ ಮಾಡಲ್ಪಟ್ಟನು. ಇವನ ಪ್ರತಿವಾದದಲ್ಲಿ ಹಾಜರಾದ ಸಾಕ್ಷಿಗಾರರು ಹೈದರ್‌ಬಕ್‌ಷ ಯೆಂಬುವನ ಮೊಕದ್ದಮೆಯಲ್ಲಿ ಸಾಕ್ಷಿಗಾರರಾಗಿದ್ದರು. A ಯು ದಾರಿ ತಪ್ಪಿಸಲ್ಪಟ್ಟನೆಂದೂ ಮತ್ತು ಸದರೀ ಫರಾಮೋಷಿ ಮುಖ್ಯವಾದ್ದೆಂದೂ, ಇದರಿಂದ ಕೋರ್ಟಿನವರು ಅನುಮೇಯಿಸಬಹುದು.

ತಕ್ಕೀರುನಾಮೆ ಇಲ್ಲದೇನೇ ಅಥವಾ ಅಪೂರ್ಣವಾದ ತಕ್ಕೀರುನಾಮೆನಿಶಿ ಕಮ್ಮಿಟ್ ಮಾಡೋಣಾದಲ್ಲಿ ನಡಿಸತಕ್ಕ ಕ್ರಮ.

226. ತಕ್ಕೀರುನಾಮೆ ಇಲ್ಲದೇನೇ—ಯಾ—ಅಪೂರ್ಣ ಅಥವಾ ಫರಾಮೋಷಿಕರವಾದ ತಕ್ಕೀರು ನಾಮೆನಿಶಿ ದರ್ಯಾಫ್ತಿ ಬಗ್ಯೆ ಯಾವನೊಬ್ಬ ಮನುಷ್ಯನು ಕಮಿಟ್ ಮಾಡಲ್ಪಟ್ಟು ಇರುತ್ತಾನಾದರೆ, ಕೋರ್ಟಿನವರು, ತಕ್ಕೀರುನಾಮೆಗಳ ನಮೂನೆ ಕುರಿತು ಈ ಕೋಡಿನಲ್ಲಿ ಅಡಗಿರುವ ಕ್ರಮಗಳಿಗೆ ತಾತ್ಪರ್ಯಕೊಟ್ಟು, ತಕ್ಕೀರುನಾಮೆ ಏರ್ಪಡಿಸಲೂ, ಅದಕ್ಕೆ ಶೇರಿಸಲೂ—ಯಾ—ಸಂಗತ್ಯಾನುಸಾರವಾಗಿ, ಬೇರೆ ವಿಧವಾದ ತಬ್ದಿಲ್ ಮಾಡಲೂ ಬಹುದು.

ಕೋರ್ಟಿನವರು ತಕ್ಕೀರುನಾಮೆಯನ್ನು ತಬ್ದಿಲ್ ಮಾಡಬಹುದು.

227. ಯಾವ ಕೋರ್ಟಿನವರಾದರೂ ತೀರ್ಪು ಹೇಳುವದಕ್ಕಿಂತ ಮುಂಚೆ ಯಾವಾಗಲಾದರೂ ತಕ್ಕೀರುನಾಮೆಯನ್ನ ಬದಲಾಯಿಸಬಹುದು, ಅಥವಾ ಸೆಷನ್‌ಕೋರ್ಟಿನವರ ಮುಂದಣ ದರ್ಯಾಫ್ತಿಗಳ ಸಂಗತಿಯಲ್ಲಿ, ಜೂರಿಯವರ ಇತ್ಯರ್ಥವು ಪಡಕೊಳ್ಳುವದಕ್ಕೆ ಮುಂಚೆ—ಯಾ—ಅಸ್ಸೆಸ್ಸರುಗಳ ಅಭಿಪ್ರಾಯಗಳು ಹೇಳಲ್ಪಡುವದಕ್ಕಿಂತ ಮುಂಚೆ ಬದಲಾಯಿಸಬಹುದು.

ಅಂಥಾ ಪ್ರತಿ ಬದಲಾಯಿಸುವಿಕೆಯನ್ನೂ ಆಪಾದನೆಪಟ್ಟವನಿಗೆ ಓದಿ ವಿವರಿಸಿ ತಿಳಿಸತಕ್ಕದ್ದು.

ಯಾವಾಗ ತಬ್ದಿಲ್ ಆದಕೂಡ್ಲೆ ದರಿಯಾಫ್ತಿ ನಡೆಯಬಹುದು.

228. ಏರ್ಪಡಿಸೋಣಾದ ತಕ್ಕೀರುನಾಮೆಯು ಅಥವಾ 226 ನೇ ಪ್ರಕರಣ ಅಥವಾ 227 ನೇ ಪ್ರಕರಣ ಪ್ರಕಾರ ಮಾಡೋಣಾದ ತಬ್ದಿಲ್, ಕೂಡ್ಲೆ ದರ್ಯಾಫ್ತಿಯನ್ನು ನಡಿಶಿದರೆ, ಅದರಿಂದ ಆಪಾದನೆಪಟ್ಟ ಮನುಷ್ಯನಿಗೂ ಆತನ ಪ್ರತಿವಾದದಲ್ಲಿ, ಅಥವಾ ಮೊಕದ್ದಮೆಯನ್ನು ನಡಿಸುವಲ್ಲಿ ಫಿರ್ಯಾದದಾರನಿಗೆ, ಬಾಧಕವಾಗಬಹುದಾದ ಸಂಭವ ಇಲ್ಲವೆಂತ ಕೋರ್ಟಿನವರಿಗೆ ತೋರಿದರೆ, ಅಂಥಾ ಸಂಗತಿಯಲ್ಲಿ ಅಂಥಾ ತಕ್ಕೀರುನಾಮೆ ಏರ್ಪಡಿಸಿದ—ಯಾ—ತಬ್ದಿಲ್ ಮಾಡೋಣಾದ ತರುವಾಯ, ಕೋರ್ಟಿನವರಿಗೆ ಯುಕ್ತ ತೋರಿದರೆ, ಹೊಸದಾದ—ಯಾ—ತಬ್ದಿಲಾದ ತಕ್ಕೀರುನಾಮೆಯೇ ಮೊದಲಿನ ತಕ್ಕೀರುನಾಮೆಯಾಗಿ ಇದ್ದರೆ ಹ್ಯಾಗೋ ಹಾಗೆಯೇ ದರ್ಯಾಫ್ತಿಯನ್ನ ನಡಿಸಬಹುದು.

229. ಹೊಸ ಅಥವಾ ಬದಲಾಯಿಸಲ್ಪಟ್ಟ ತಕ್ಕೀರುನಾಮೆಯು, ಆ ಕೋರ್ಟಲ್ಲಿ ದರ್ಯಾಪ್ತಿ ಜರಗಿಸಿದರೆ ಅದರಿಂದ ಮೇಲೆ ಹೇಳಿದವರಿಗೆ ಸದರೀ ಅಪಾದನೆಪಟ್ಟ ಮನುಷ್ಯನಿಗೆ ಅಥವಾ ಫಿರ್ಯಾದದಾರಗೆ ಬಾಧಕ ಉಂಟಾಗತಕ್ಕಹುದಾದ ಸಂಭವ ಇರಬಹುದು, ಎಂತ ಕೋರ್ಟಿನವರು ಅಭಿಪ್ರಾಯಪಟ್ಟರೆ, ಅಂಥಾ ಸಂಗತಿಯಲ್ಲಿ ತಾಜಾದರ್ಯಾಪ್ತಿಗೆ ಹುಕುಂ ಕೊಡಬಹುದು—ಯಾ—ಅವಶ್ಯಕವಾಗಿ ಇರುವಷ್ಟು ಕಾಲದತನಕ ದರ್ಯಾಪ್ತಿಯನ್ನು ನಿಲ್ಲಿಸಿ ಇಡಲೂಬಹುದು.

ಯಾವಾಗ ಹೊಸ ದರ್ಯಾಫ್ತಿ ಯಾಗತಕ್ಕದ್ದೆಂದು ವಿಧಿಸಬಹುದು, ಅಥವಾ ದರ್ಯಾಫ್ತಿಯನ್ನ ನಡಿಸದೆ ನಿಲ್ಲಿಸಿಡಬಹುದು.

230. ಹೊಸ—ವ—ಬದಲಾಯಿಸಲ್ಪಟ್ಟ ತಕ್ಕೀರನಾಮೆಯಲ್ಲಿ ನಮೂದಿಸಿರುವ ತಕ್ಕೀರಿನ ಫಿರ್ಯಾದಿ ಬಗ್ಗೆ, ಮುಂಚಿತವಾದ ಅನುಮತಿ ಅವಶ್ಯವಾಗಿದ್ದರೆ, ಅಂಥಾ ಅನುಮತಿಯನ್ನು ಪಡೆಯುವತನಕ ಮೊಕದ್ದಮೆಯನ್ನು ಜರಗಿಸಕೂಡದು, ಪರಂತು ಯಾವ ವಿದ್ಯಮಾನಗಳಮೇಲೆ ಸದರೀ ಹೊಸ—ವ—ಬದಲಾಯಿಸಲ್ಪಟ್ಟ ತಕ್ಕೀರುನಾಮೆಯು ಆದರಿಸಲ್ಪಟ್ಟಿರುತ್ತದೋ ಅದೇ ವಿದ್ಯಮಾನಗಳಮೇಲೆ ಫಿರ್ಯಾದಿ ಬಗ್ಗೆ, ಮುಂಚಿತವಾಗಿಯೇ ಅನುಮತಿಯನ್ನು ಪಡದಿದ್ದರೆ, ಹಾಗೆ ಮಾಡಬೇಕಾದ್ದಿಲ್ಲ.

ಬದಲಾಯಿಸಲ್ಪಟ್ಟ ತಕ್ಕೀರನಾಮೆಯ ತಕ್ಕೀರಿನ ಫಿರ್ಯಾದಿಗೆ ಮುಂಚಿತವಾಗಿಯೇ ಅನುಮತಿ ಅಗತ್ಯ ಇದ್ದರೆ ವ್ಯವಹರಣೆ ನಿಲ್ಲಿಸಿಡೋಣ.

231. ದರಿಯಾಫ್ತಿ ಷುರು ಮಾಡಿದ ತರುವಾಯ ಒಂದು ತಕ್ಕೀರನಾಮೆಯು ಕೋರ್ಟಿನವರಿಂದ ಯಾವಾಗಲಾದರೂ ಬದಲಾಯಿಸಲ್ಪಟ್ಟರೆ, ವಿಚಾರಿಸಲ್ಪಟ್ಟಿರುವ ಯಾವ ಸಾಕ್ಷಿಗಾರರನ್ನಾದರೂ, ಅಂಥಾ ಬದಲಾವಣಿ ವಿಷಯವಾಗಿ ಪುನಃ ಕರೆಯಲಿಕ್ಕೂ ಅಥವಾ ತಿರಿಗಿ ಸಮನ್ ಮಾಡಲಿಕ್ಕೂ—ವ—ವಿಚಾರಿಸಲಿಕ್ಕೂ ಪ್ರಾಸಿಕ್ಯೂಟರಿಗೆ ಮತ್ತು ಅಪಾದನೆಯಾದ ಮನುಷ್ಯನಿಗೆ ಅಪ್ಪಣೆಕೊಡತಕ್ಕದ್ದು.

ತಕ್ಕೀರುನಾಮೆಯು ಬದಲಾಯಿಸಲ್ಪಟ್ಟಾಗ ಸಾಕ್ಷಿಗಾರರನ್ನ ಪುನಃ ಕರೆಯೋಣ.

232. ಯಾವದೊಂದು ಅಪ್ಪೀಲ್‌ಕೋರ್ಟಿನವರು ಅಥವಾ ಚೀಫ್‌ಕೋರ್ಟಿನವರು ತಮ್ಮ ಪುನರ್ವಿಮರ್ಶೆ ಅಧಿಕಾರಗಳನ್ನು ಅಥವಾ 27ನೇ ಅಧ್ಯಾಯಪ್ರಕಾರ ತಮ್ಮ ಅಧಿಕಾರಗಳನ್ನು ಚಲಾಯಿಸುತ್ತಿರುವಾಗ, ಒಂದು ತಕ್ಕೀರು ಸಾಬೀತಾದ ಯಾವನೊಬ್ಬ ಮನುಷ್ಯನು ತಕ್ಕೀರುನಾಮೆ ಇಲ್ಲದೆ ಇರುವದರಿಂದ—ಯಾ—ತಕ್ಕೀರುನಾಮೆಯಲ್ಲಿದ್ದ ಘರಾಮೋಷಿಯಿಂದ ತನ್ನ ಪ್ರತಿವಾದದಲ್ಲಿ ದಾರಿ ತಪ್ಪಿಸಲ್ಪಟ್ಟಿದ್ದಾನೆ ಎಂದು ಅಭಿಪ್ರಾಯ ಪಟ್ಟರೆ, ತಮಗೆ ಯುಕ್ತವೆಂದು ತೋರುವ ಯಾವ ರೀತಿಯಲ್ಲಾಗಲೀ ಏರ್ಪಡಿಸಬೇಕಾದ ಒಂದು ತಕ್ಕೀರುನಾಮೆಯಮೇಲೆ ಹೊಸ ದರಿಯಾಫ್ತಿ ಮಾಡತಕ್ಕದ್ದೆಂದು ಅಪ್ಪಣೆಕೊಡತಕ್ಕದ್ದು.

ಮುಖ್ಯವಾದ ಘರಾಮೋಷಿಯ ಫಲ.

ಮೊಕದ್ದಮೆಯ ವಿದ್ಯಮಾನಗಳನ್ನು ನೋಡಿದರೆ ರುಜುವಾದ ವಿದ್ಯಮಾನಗಳ ವಿಷಯದಲ್ಲಿ ಅಪಾದನೆ ಪಟ್ಟವನಮೇಲೆ ನ್ಯಾಯವಾದ ಯಾವ ತಕ್ಕೀರುನಾಮೆಯಾದರೂ ಅಗಲಾರದೆಂದು ಕೋರ್ಟಿನವರ ಅಭಿಪ್ರಾಯವಾಗಿದ್ದರೆ, ಅವರು ಸದರೀ ಸಾಬೀತನ್ನು ರದ್ದು ಮಾಡತಕ್ಕದ್ದು.

ಉದಾಹರಣೆ.

ನಿಜವಾದ್ದೆಂದು—ಯಾ—ಎಥಾರ್ಥವೆಂದು A ಎಂಬುವನು ಅಕ್ರಮವಾಗಿ ಉಪಯೋಗಿಸಿಕೊಂಡ ಅಥವಾ ಉಪಯೋಗಿಸುವದಕ್ಕೆ ಪ್ರಯತ್ನಪಟ್ಟ ರುಜುವಾತು ಸುಳ್ಳಾದ್ದು—ಯಾ—ಬನಾವಣಿ ಆದ್ದು ಎಂಬದು ಆತನು ತಿಳಿದು ಇದ್ದಾ ಎಂಬದನ್ನು ನಮೂದಿಸದೆ ಬಿಟ್ಟಿರತಕ್ಕ ಒಂದು ತಕ್ಕೀರುನಾಮೆಯಮೇಲೆ, ಆತನಮೇಲೆ ಇಂಡಿಯನ್ ಪೆನಲ್‌ಕೋಡಿನ 196ನೇ ಪ್ರಕರಣದ ತಕ್ಕೀರು, ಸಾಬೀತು ಮಾಡಲ್ಪಟ್ಟಿರುತ್ತೆ. A-ಯು ಅಂಥಾ ಸಂಗತಿಯನ್ನು ಪ್ರಾಯಶಃ ತಿಳಿದಿರಬಹುದು, ಹಾಗೆ ಅವನು ತಿಳಿದು ಇದ್ದಾ ಎಂಬ ಸಂಗತಿ ತಕ್ಕೀರುನಾಮೆಯಲ್ಲಿ ನಮೂದಿಸದೆ ಬಿಟ್ಟುಹೋದಕಾರಣ ಅವನು ಪ್ರತಿವಾದದಲ್ಲಿ ದಾರಿತಪ್ಪಿ ಇರಬಹುದು ಎಂದು ಕೋರ್ಟಿನವರು ಆಲೋಚಿಸಿದರೆ, ಒಂದು ದುರಸ್ತಾದ ತಕ್ಕೀರುನಾಮೆಯ ಮೇಲೆ ಒಂದು ಹೊಸ ದರ್ಯಾಫ್ತಿ ಆಗತಕ್ಕದ್ದೆಂದು ಅಪ್ಪಣೆಕೊಡತಕ್ಕದ್ದು : ಆದರೆ ಪ್ರೊಸೀಡಿಂಗಸನ್ನು ನೋಡಿದ್ದರಿಂದ ಬಹುಶಃ A ಯು ಹಾಗೆ ತಿಳದು ಇರಲಿಲ್ಲವೆಂದು ಕಾಣಬಂದರೆ, ಸದರೀ ತಕ್ಕೀರು ಸಾಬೀತನ್ನು ರದ್ದು ಮಾಡತಕ್ಕದ್ದು.

1126

Joinder of Charges.

ತಕ್ಸೀರು ನಾಮೆಗಳ ಜಾಯಿಂಡರ್.

233. ಯಾವಮನುಷ್ಯನ ಮೇಲಾದರೂ ಆಪಾದನೆಯಾದ ಪ್ರತಿ ಬೇರೆ ತಕ್ಸೀರಿಗೂ ಬೇರೆಬೇರೆ ತಕ್ಸೀರು ನಾಮೆ ಇರತಕ್ಕದ್ದು, ಮತ್ತು 234, 235, 236—ವ—239ನೇ ಪ್ರಕರಣಗಳಲ್ಲಿ ನಮೂದಿಸಿದ ಮೊಕದ್ದಮೆಗಳಲ್ಲಿ ಹೊರತು, ಅಂಥಾ ಪ್ರತಿ ತಕ್ಸೀರುನಾಮೆಯನ್ನೂ ಪ್ರತ್ಯೇಕ ಪ್ರತ್ಯೇಕದರಿಯಾಫ್ತಿ ಮಾಡತಕ್ಕದ್ದು.

ಬೇರೆ ಬೇರೆ ತಕ್ಸೀರುಗಳಿಗೆ ಪ್ರತ್ಯೇಕ ಪ್ರತ್ಯೇಕ ತಕ್ಸೀರು ನಾಮೆಗಳನ್ನು ತಯಾರ್ಮಾಡತಕ್ಕದ್ದು.

ಉದಾಹರಣೆ.

A ಯು, ಒಂದುಸಲ ಒಂದು ಕಳವಿನ ಬಾಬತು ಆಪಾದನೆ ಪಟ್ಟನು, ಮತ್ತು ಮತ್ತೊಂದುಸಲ ಸಂಕಟಕರವಾದ ಹಿಂಸೆ ಪಡಿಸಿದ ಬಾಬತು ಆಪಾದನೆ ಪಟ್ಟನು. ಕಳವಿನಬಾಬತು ಮತ್ತು ಸಂಕಟಕರವಾದ ಹಿಂಸೆ ಪಡಿಸಿದ ಬಾಬತು Aಯ ಮೇಲೆ ಪ್ರತ್ಯೇಕವಾಗಿ ತಕ್ಸೀರುನಾಮೆ ತಯಾರಾಗಬೇಕು ಮತ್ತು ಅವನು ಪ್ರತ್ಯೇಕವಾಗಿ ದರಿಯಾಫ್ತಿ ಮಾಡಲ್ಪಡಬೇಕು.

234. ಒಂದೇ ತರಹವಾದ್ದಾಗಿರುವ ಒಂದಕ್ಕಿಂತ್ತಹೆಚ್ಚು ತಕ್ಸೀರುಗಳ—ವ—ಇವುಗಳ ಪೈಕಿ ಪ್ರಥಮದ ತಕ್ಸೀರಿನಿಂದ ಕಡೆವರೆಗಿನ ಅಂಥಾ ತಕ್ಸೀರು ಹನ್ನೆರಡು ತಿಂಗಳುಗಳ ಸಮಯದೊಳಗಾಗಿ ಒಬ್ಬ ಮನುಷ್ಯನು ನಡಿಸಿದನೆಂದು ಆಪಾದನೆಯಾದಾಗ, ಅವನನ್ನು ಒಂದೇ ದರಿಯಾಫ್ತಿಯಲ್ಲಿ, ಮೂರರಕಿಂತ ಜಾಸ್ತಿ ಆಗದೆ ಸದರೀ ತಕ್ಸೀರುರುಗಳ ಪೈಕಿ ಎಷ್ಟು ಸಂಖ್ಯೆಗಾಗಲೀ ಆಪಾದನೆಯಾಗಿ, ದರಿಯಾಫ್ತಿ ಮಾಡಬಹುದು.

ಒಂದು ಸಂವತ್ಸರದೊಳಗಾಗಿ ಒಂದೇ ತರಹಾವಿನ ಮೂರು ತಕ್ಸೀರುಗಳಿಗಾಗಿಬಟ್ಟಿನಲ್ಲೇ ಆಪಾದನೆ ಮಾಡಬಹುದು.

ಇಂಡಿಯನ್ ಪೆನಲ್‌ಕೋಡ್ ಅಥವಾ ಯಾವದೊಂದು ವಿಶೇಷ ಕಾನೂನಿನ—ಯಾ—ಸ್ಥಳೀಯವಾದ ಕಾನೂನಿನ ಒಂದೇ ಪ್ರಕರಣಪ್ರಕಾರ ಅಷ್ಟೇ ಶಿಕ್ಷೆ ಆಗತಕ್ಕ ತಕ್ಸೀರುಗಳಾಗಿದ್ದಾಗ ಅವುಗಳು ಒಂದೇ ತರಹಾವಿನ ತಕ್ಸೀರುಗಳೆಂತಾಗುತ್ತವೆ.

235. 1.—ಒಂದೇ ಪರ್ಚಿಯಾಗಿರುವ ಕಾರ್ಯಗಳು ಒಂದೇ ಕೃತ್ಯವಾಗುವ ಹಾಗೆ ಒಂದಕ್ಕೊಂದು ಸೇರಿ ಇದ್ದು, ಒಬ್ಬನೇ ಒಂದಕ್ಕಿಂತ ಜಾಸ್ತಿಯಾಗಿ ತಕ್ಸೀರುಗಳನ್ನು ಮಾಡಿ ಇದ್ದರೆ, ಒಂದೇ ದರಿಯಾಫ್ತಿಯಲ್ಲಿ ಅಂಥಾ ಪ್ರತಿ ತಕ್ಸೀರಿಗೋಸ್ಕರ ಆಪಾದನೆಯಾಗಿ, ಅವನು ದರಿಯಾಫ್ತಿ ಮಾಡಲ್ಪಡಬಹುದು.

I.—ಒಂದಕ್ಕಿಂತ ಹೆಚ್ಚು ತಕ್ಸೀರಿಗಾಗಿ ದರಿಯಾಫ್ತಿ.

II. ಆಯಾ ಕಾಲದಲ್ಲಿ ಜಾರೀಲಿರುವ ಕಾನೂನಿನಲ್ಲಿ ಯಾವ ತಕ್ಸೀರುಗಳು ವಿವರಿಸಿದೆಯೋ—ಯಾ—ಶಿಕ್ಷೆ ವಿಧಿಸೋಣಾಗಿದೆಯೋ ಆ ಕಾನೂನಿನ ಎರಡು ಅಥವಾ ಹೆಚ್ಚು ಬೇರೆ ಬೇರೆ ಅರ್ಥ ವಿವರಣೆಗಳೊಳಗೆ ಫಿರ್ಯಾದಿನ ಕೃತ್ಯಗಳು ಒಳಪಟ್ಟು ಒಂದು ತಕ್ಸೀರಾಗುವದಾದರೆ, ಅವುಗಳಗೋಸ್ಕರ ಆಪಾದನೆ ಪಟ್ಟ ಮನುಷ್ಯನು ಒಂದೇ ದರಿಯಾಫ್ತಿಯಲ್ಲಿ ಅಂಥಾ ಪ್ರತಿ ತಕ್ಸೀರುಗಳಿಗೂ ಆಪಾದನೆಯಾಗಿ ದರಿಯಾಫ್ತಿ ಆಗಲ್ಪಡಬಹುದು.

II.—ಎರಡು ವಿವರಣೆಗಳೊಳಗಾಗಿ ಬೀಳುವ ತಕ್ಸೀರು.

III.—ಬೇರೆ ಬೇರೆ ಕೃತ್ಯಗಳ ಪೈಕಿ ಒಂದು—ಯಾ—ಒಂದರಕ್ಕಿಂತ ಹೆಚ್ಚು ಕೃತ್ಯಗಳು ಒಂದೊಂದಾಗಿ ತಕ್ಸೀರಾಗಿದ್ದು, ಒಟ್ಟು ಸೇರಿದರೆ ಪ್ರತ್ಯೇಕ ಒಂದು ತಕ್ಸೀರಾಗುವದಿದ್ದರೆ, ಅವುಗಳ ಬಾಬಿನಲ್ಲಿ ಆಪಾದನೆ ಪಟ್ಟವನು ಅಂಥಾ ಕೃತ್ಯಗಳು ಒಟ್ಟು ಸೇರಿ ಯಾವ ಕೃತ್ಯ ತಕ್ಸೀರಾಗುತ್ತೋ ಆ ತಕ್ಸೀರಿನ ಬಗ್ಯಾಗಿ ಆಗಲೀ ಅಥವಾ ಅಂಥಾ ಕೃತ್ಯಗಳ ಪೈಕಿ ಒಂದು,—ಯಾ—ಹೆಚ್ಚು, ಕೃತ್ಯಗಳಿಂದುಂಟಾದ ತಕ್ಸೀರಿನ ಬಗ್ಯೆ ಆಗಲೀ, ಆಪಾದಿಸಲ್ಪಟ್ಟು ಒಂದೇ ಆಗಿ ದರಿಯಾಫ್ತಿ ಮಾಡಲ್ಪಡಬಹುದು.

III.—ಒಂದೇ ತಕ್ಸೀರಾಗುವ ಕೃತ್ಯಗಳು ಸೇರಿಕೊಂಡಿದ್ದರೆ, ಬೇರೆ ತಕ್ಸೀರಾಗೋಣ.

ಈ ಪ್ರಕರಣದಲ್ಲಿ ಅಡಗಿರುವಂಥಾದ್ದು ಯಾವದೂ ಇಂಡಿಯನ್ ಪೆನಲ್‌ಕೋಡಿನ 71ನೇ ಪ್ರಕರಣಕ್ಕೆ ಬಾಧಿಸ ಕೂಡದು.

ಉದಾಹರಣೆಗಳು.

I ನೇ ಕಲಮಿಗೆ—

(a) A ಯು, ನ್ಯಾಯವಾದ ಕೈದಿನಲ್ಲಿ ಇರುವ ಒಬ್ಬ ಮನುಷ್ಯನಾದ B ಯಂಬುವನನ್ನು ತಪ್ಪಿಸುತ್ತಾನೆ, ಮತ್ತು ಹಾಗೆ ಮಾಡುವಲ್ಲಿ ಯಾರ ಕೈದಿನಲ್ಲಿ ಇದ್ದನೋ ಆ ಕಾನ್‌ಸ್ಟೆಬಿಲ್ಲಾದ C ಗೆ, ಸಂಕಟಕರವಾದ ಹಿಂಸೆ ಪಡಿಸುತ್ತಾನೆ. A ಯು, ಇಂಡಿಯನ್ ಪೆನಲ್‌ಕೋಡಿನ 225ನೇ—ವ—333ನೇ ಪ್ರಕರಣಗಳಿಗನುಗುಣವಾಗಿ, ತಕ್ಸೀರುಗಳಬಗ್ಗೆ ಚಾರ್ಜುಗಲ್ಪಟ್ಟು ದರಿಯಾಫ್ತಿ ಆಗಲ್ಪಡಬಹುದು.

(b) A ಯು, ವ್ಯಭಿಚಾರ ಮಾಡುವ ವುದ್ದೇಶ್ಯದಿಂದಾ ಹಗಲು ಹೊತ್ತಿನಲ್ಲಿ ಮನೆಗೆ ಕನ್ನ ಹಾಕುತ್ತಾನೆ. ಮತ್ತು ಹಾಗೆ ಪ್ರವೇಶಿಸಿದ ಮನೆಯಲ್ಲಿ Bಯ ಹೆಂಡತಿಯ ಸಂಗಡ ವ್ಯಭಿಚಾರ ಮಾಡುತ್ತಾನೆ. A ಯು, ಇಂಡಿಯನ್ ಪೆನಲ್‌ಕೋಡಿನ 454—ವ—497 ನೇ ಪ್ರಕರಣಗಳಿಗನುಗುಣವಾಗಿ ತಕ್ಸೀರುಗಳಿಗಾಗಿ ಬೇರೆ ಬೇರೆಯಾಗಿ ಚಾರ್ಜುಗಲ್ಪಡಬಹುದು—ವ—ಸಾಬೀತಾಗಲ್ಪಡಬಹುದು.

(c) A ಯು, Cಯ ಹೆಂಡತಿಯಾದ Bಯ ಸಂಗಡ ವ್ಯಭಿಚಾರ ಮಾಡುವ ವುದ್ದೇಶ್ಯದಿಂದ Bಯನ್ನು Cಯಿಂದ ಪುಸಲಾಯಿಸಿ ಎತ್ತಿಕೊಂಡುಹೋಗಿ ಅವಳ ಸಂಗಡ ವ್ಯಭಿಚಾರ ಮಾಡುತ್ತಾನೆ. Aಯು, ಇಂಡಿಯನ್ ಪೆನಲ್‌ಕೋಡ್ 498—ವ—497ನೇ ಪ್ರಕರಣಗಳಿಗನುಗುಣವಾಗಿ ತಕ್ಸೀರುಗಳು ಬೇರೆ ಬೇರೆಯಾಗಿ ಚಾರ್ಜುಗಲ್ಪಡಬಹುದು—ವ—ಸಾಬೀತಾಗಲ್ಪಡಬಹುದು.

(d) A ಯು, ಇಂಡಿಯನ್ ಪೆನಲ್‌ಕೋಡಿನ 466ನೇ ಪ್ರಕರಣಕ್ಕನುಗುಣವಾಗಿ ಟೈಕ್ಸೆಆಗತಕ್ಕ ಅನೇಕ ಸೃಷ್ಟ್ಯನೆಗಳನ್ನು ಮಾಡುವ ವುದ್ದಿಶ್ಯ ಉಪಯೋಗಿಸುವ ಇರಾದೆಯಿಂದ ಅನೇಕ ಬನಾವಟಿ ಮೊಹರಗಳನ್ನು ಅವುಗಳು ಬನಾವಣೆ ಅದ್ದೆಂತ ತಿಳಿದು ಸ್ವಾಧೀನದಲ್ಲಿ ಇಟ್ಟುಕೊಂಡಿರುತ್ತಾನೆ. A ಯು, ಇಂಡಿಯನ್ ಪೆನಲ್ ಕೋಡಿನ 473ನೇ ಪ್ರಕರಣಕ್ಕನುಗುಣವಾಗಿ, ಒಂದೊಂದು ಮೋಹರನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿದ್ದದ್ದಕ್ಕೋಸ್ಕರ, ಪ್ರತ್ಯೇಕ ಪ್ರತ್ಯೇಕವಾಗಿ, ಚಾರ್ಜುಗಲ್ಪಡಬಹುದು-ವ-ಸಾಬೀತಾಗಲ್ಪಡಬಹುದು.

(e) B ಗೆ ಹಾನಿಮಾಡುವ ಇರಾದೆಯಿಂದ, A ಯು ಅವನಮೇಲೆ ಕ್ರಿಮಿನಲ್ ವ್ಯವಹರಣೆ ನಡಿಸಲಿಕ್ಕೆ ನೀತಿಯಾದ-ಯಾ-ನ್ಯಾಯವಾದ ಸಬಬುಗಳಿಲ್ಲವೆಂತ ತಿಳಿದವನಾಗಿದ್ದುಕೊಂಡು, ಅವನಮೇಲೆ ಕ್ರಿಮಿನಲ್ ವ್ಯವಹರಣೆಗಳನ್ನು ದಾಖಲ್ಮಾಡುತ್ತಾನೆ; ಮತು ಅಪಾದನೆಗೆ ನೀತಿಯಾದ-ಯಾ-ನ್ಯಾಯವಾದ ಸಬಬುಗಳಿಲ್ಲವೆಂತ ತಿಳದವನಾಗಿದ್ದುಕೊಂಡು A ಯು, ಒಂದು ತಕ್ಸೀರುಮಾಡಿದ್ದಾನೆ ಎಂತ Bಯ ಮೇಲೆ ಸುಳ್ಳು ಫಿರ್ಯಾದನ್ನು ಸಹ ಮಾಡುತ್ತಾನೆ. Aಯು ಇಂಡಿಯನ್ ಪೆನಲ್ ಕೋಡಿನ 211ನೇ ಪ್ರಕರಣಕ್ಕನುಗುಣವಾಗಿ ಎರಡು ತಕ್ಸೀರುಗಳಿಗೋಸ್ಕರ ಬೇರೆ ಬೇರೆಯಾಗಿ ಚಾರ್ಜುಗಲ್ಪಡಬಹುದು-ವ-ಸಾಬೀತಾಗಲ್ಪಡಬಹುದು.

(f) Aಯು, Bಗೆ ಹಾನಿಮಾಡುವ ಇರಾದೆಯಿಂದ ಅಪಾದನೆಗೆ ನೀತಿಯಾದ -ಯಾ- ನ್ಯಾಯವಾದ ಸಬಬುಗಳಿಲ್ಲವೆಂದು ತಿಳದವನಾಗಿದ್ದು ಒಂದು ತಕ್ಸೀರನ್ನು ಮಾಡಿದನೆಂತ B ಯ ಮೇಲೆ ಒಂದು ಸುಳ್ಳು ಫಿರ್ಯಾದು ಮಾಡುತ್ತಾನೆ. Bಯು ಮರಣದಂಡನೆಯಾಗತಕ್ಕ ತಕ್ಸೀರು ಸಾಬೀತು ಪಡಲೆಕೆಂಬ ಇರಾದೆಯಿಂದ, ದರಿಯಾಫ್ತಿಯಲ್ಲಿ Aಯು ಸುಳ್ಳು ಸಾಕ್ಷ್ಯ ಕೊಡುತಾನೆ. Aಯು ಇಂಡಿಯನ್ ಪೆನಲ್ ಕೋಡಿನ 211 -ವ- 194ನೇ ಪ್ರಕರಣಗಳಿಗನುಗುಣವಾಗಿ ತಕ್ಸೀರುಗಳಿಗೋಸ್ಕರ ಬೇರೆ ಬೇರೆಯಾಗಿ ಚಾರ್ಜುಗಲ್ಪಡಬಹುದು -ವ-ಸಾಬೀತಾಗಲ್ಪಡಬಹುದು.

(g) Aಯು, ಇತರ ಆರುಮಂದಿಯೊಡನೆ, ದೊಂಬಿಯು ಬಾಬತು, ಸಂಕಟಕರವಾದ ಹಿಂಸೆಯ ಬಾಬತು ಮತ್ತು ದೊಂಬಿಯನ್ನು ಅಡಗಿಸುವದಕ್ಕೆ ತನ್ನ ಉದ್ಯೋಗ ಪ್ರಯುಕ್ತವಾದ ಕೆಲಸವನ್ನು ನಡಿಸಲಿಕ್ಕೆ ಪ್ರಯತ್ನಪಡುವ ಸರಕಾರಿ ನವುಕರನನ್ನ ಜುಲುಂ ನಡಿಸಿದ ಬಾಬತು, ತಕ್ಸೀರುಗಳನ್ನು ನಡಿಸುತ್ತಾನೆ. Aಯು ಇಂಡಿಯನ್ ಪೆನಲ್ ಕೋಡಿನ 147ನೇ 325 ಮತ್ತು 152ನೇ ಪ್ರಕರಣಗಳ ಪ್ರಕಾರ ತಕ್ಸೀರುಗಳಿಗೋಸ್ಕರ ಬೇರೆ ಬೇರೆಯಾಗಿ ಚಾರ್ಜುಗಲ್ಪಡಬಹುದು-ವ-ಸಾಬೀತಾಗಲ್ಪಡಬಹುದು.

(h) Aಯು, ಒಂದೇ ಕಾಲದಲ್ಲಿ B, C -ವ- D ಎಂಬವರನ್ನ ದಿಗಿಲು ಹುಟ್ಟಿಸಬೇಕೆಂಬ ಇರಾದೆಯಿಂದ ಅವರ ಶರೀರಕ್ಕೆ ಹಾನಿಪಡಿಸುವದಾಗಿ ಬೆದರಿಸುತ್ತಾನೆ. Aಯು, ಇಂಡಿಯನ್ ಪೆನಲ್ ಕೋಡಿನ 506ನೇ ಪ್ರಕರಣಕ್ಕನುಗುಣವಾಗಿ ಮೂರು ತಕ್ಸೀರುಗಳ ಒಂದೊಂದಕ್ಕೆ ಬೇರೆ ಬೇರೆಯಾಗಿ ಚಾರ್ಜುಗಲ್ಪಡಬಹುದು-ವ-ಸಾಬೀತಾಗಲ್ಪಡಬಹುದು.

(a) ಯಿಂದ (h) ವರೆಗಿನ ~~ಉದಾಹರಣೆಗಳಲ್ಲಿ~~ ಹೇಳಿರೋಣಾದ ಪ್ರತ್ಯೇಕ ಪ್ರತ್ಯೇಕ ಅಪಾದನೆಗಳು ಒಂದೇ ಕಾಲದಲ್ಲಿ ಪ್ರತ್ಯೇಕವಾಗಿ ದರಿಯಾಫ್ತಿ ಆಗಲ್ಪಡಬಹುದು.

II ನೇ ಕಲಮಿಗೆ—

(i) A ಯು, Bಯನ್ನು ಒಂದು ಶಸ್ತ್ರದಿಂದ ತಕ್ಸೀರುಕರವಾಗಿ ಹೊಡೆಯುತ್ತಾನೆ. Aಯು, ಇಂಡಿಯನ್ ಪೆನಲ್ ಕೋಡಿನ 352-ವ-323ನೇ ಪ್ರಕರಣಗಳಿಗನುಗುಣವಾಗಿ ತಕ್ಸೀರುಗಳು ಬೇರೆ ಬೇರೆಯಾಗಿ ಚಾರ್ಜುಗಲ್ಪಡಬಹುದು-ವ-ಸಾಬೀತಾಗಲ್ಪಡಬಹುದು

(j) ಧಾನ್ಯದ ಅನೇಕ ಚೋರೀ ಮೂಟೆಗಳು ಬಚ್ಚಿಡುವದಕ್ಕೋಸ್ಕರ A, B ಎಂಬವರಿಗೆ ಕೊಟ್ಟುಬಿಡೋಣಾದವು. ಅವು ಚೋರೀ ಮಾಲೆಂತ ಅವರಿಗೆ ತಿಳಿಯುವದು. ಆ ಮೇಲೆ, ಸದರೀ ಮೂಟೆಗಳನ್ನು ಒಂದು ಧಾನ್ಯದ ಪಾತ್ರೆಯಲ್ಲಿ ಕೆಳಗೆ ಬಚ್ಚಿಡಲಿಕ್ಕೆ Aಯು,

1128

Bಯು ಇವೆಲ್ಲರೂ ಮನಃಪೂರ್ತಿಯಾಗಿ ಸಹಾಯ ಮಾಡಿಕೊಳ್ಳುತ್ತಾರೆ. Aಯು, Bಯು, ಇಂಡಿಯನ್ ಪೆನಲ್‌ಕೋಡಿನ 411ನೇ -ವ-414ನೇ ಪ್ರಕರಣಗಳಗನುಗುಣವಾಗಿ ತಕ್ಸೀರುಗಳು ಬೇರೆ ಬೇರೆಯಾಗಿ ಚಾರ್ಜಾಗಲ್ಪಡಬಹುದು-ವ ಸಾಬೀತಾಗಲ್ಪಡಬಹುದು.

(k) Aಯು, ತನ್ನ ಮಗುವನ್ನು ಬಿಟ್ಟು ಬಿಡುವದರಿಂದ ಮೃತಪಡಿಸುವ ಸಂಭವವುಂಟೆಂತ ತಾನು ತಿಳಿದವಳಾಗಿ, ಬಿಟ್ಟು ಬಿಡುತ್ತಾಳೆ. ಹಾಗೆ ಬಿಟ್ಟು ಬಿಟ್ಟದ್ದರಿಂದ ಆ ಮಗು ಸಾಯುತ್ತದೆ. Aಯು ಇಂಡಿಯನ್ ಪೆನಲ್ ಕೋಡಿನ 317 -ವ-304ನೇ ಪ್ರಕರಣಗಳಿಗನುಗುಣವಾಗಿ ತಕ್ಸೀರುಗಳು ಬೇರೆ ಬೇರೆಯಾಗಿ ಚಾರ್ಜಾಗಲ್ಪಡಬಹುದು-ವ-ಸಾಬೀತಾಗಲ್ಪಡಬಹುದು.

(l) Aಯು, ಒಬ್ಬ ಸರ್ಕಾರಿ ನೌಕರನಾದ Bಯ ಮೇಲೆ, ಇಂಡಿಯನ್ ಪೆನಲ್ ಕೋಡಿನ 167ನೇ ಪ್ರಕರಣಕ್ಕನುಗುಣವಾದ ತಕ್ಸೀರನ್ನು ಸಾಬೀತಮಾಡಲಿಕ್ಕೆ ಒಂದು ಸೃಷ್ಟನೆ ದಸ್ತಾವೇಜನ್ನು ದಿಟವಾದ ಸಾಕ್ಷ್ಯವಾಗಿ ಅಪ್ರಮಾಣಿಕತೆಯಿಂದ ಉಪಯೋಗಿಸುತ್ತಾನೆ, Aಯು, ಇಂಡ್ಯನ್ ಪೆನಲ್ ಕೋಡಿನ (466 ರೊಂದಿಗೆ ಓದೋಣಾದ) 471ನೇ -ವ-196ನೇ ಪ್ರಕರಣಗಳಿಗನುಗುಣವಾಗಿ ತಕ್ಸೀರುಗಳು ಬೇರೆ ಬೇರೆಯಾಗಿ ಚಾರ್ಜಾಗಲ್ಪಡಬಹುದು-ವ-ಸಾಬೀತಾಗಲ್ಪಡಬಹುದು.

IIIನೇ ಕಲಮಿಗೆ—

(m) Aಯು, Bಯಲ್ಲಿದ್ದದ್ದನ್ನು ಚೋರೀ ಮಾಡುತ್ತಾನೆ. ಹೀಗೆ ಮಾಡುವದರಲ್ಲಿ, ಅವನಿಗೆ ಮನಃಪೂರ್ತಿಯಾಗಿ ಹಿಂಸೆ ಪಡಿಸುತ್ತಾನೆ. Aಯು, ಇಂಡ್ಯನ್ ಪೆನಲ್ ಕೋಡಿನ 323, 392—ವ-394ನೇ ಪ್ರಕರಣಗಳಿಗನುಗುಣವಾಗಿ ತಕ್ಸೀರುಗಳು ಬೇರೆ ಬೇರೆಯಾಗಿ ಚಾರ್ಜಾಗಲ್ಪಡಬಹುದು-ವ-ಸಾಬೀತಾಗಲ್ಪಡಬಹುದು.

ಯಾವ ತಕ್ಸೀರು ನಡೆಯಿತೋ ಎಂದು ಸಂಶಯವಾದರೆ.

236. ಏಕಕೃತ್ಯದ—ಯಾ—ಕೃತ್ಯಗಳ ತರದ ಸ್ವಭಾವವನ್ನು ನೋಡಿದರೆ, ಅನೇಕ ತಕ್ಸೀರುಗಳ ಪೈಕಿ ಯಾವದಕ್ಕೆ ರುಜುವಾಗುವ ವಿದ್ಯಮಾನಗಳು ಸೇರುವದೋ ಎಂದು ಸಂಶಯವಾದರೆ, ಅಂಥಾ ಎಲ್ಲಾ ತಕ್ಸೀರುಗಳನ್ನಾದರೂ ಅಥವಾ ಆ ಪೈಕಿ ಯಾವ ತಕ್ಸೀರನ್ನಾದರೂ ಮಾಡಿದ ಹಾಗೆ ಅಪಾದನೆ ಪಟ್ಟವನು ಚಾರ್ಜಾಗಲ್ಪಡಬಹುದು, ಮತ್ತು ಅಂಥಾ ಚಾರ್ಜುಗಳ ಎಷ್ಟು ಸಂಖ್ಯೆಯನ್ನಾದರೂ ಒಂದೇ ದಫಾ ದರ್ಯಾಫ್ತಿ ಮಾಡಬಹುದು. ಅಥವಾ ಸದರೀ ತಕ್ಸೀರುಗಳ ಬಾಬತು ಯಾವದೊಂದನ್ನಾಗಲೀ ಮಾಡಿದ ಹಾಗೆ ಅವನು ಬಂದನ್ನು ಬಿಟ್ಟರೆ, ಮತ್ತೊಂದರಿಂದ ಅಪಾದನೆ ಯಾಗಲ್ಪಡಬಹುದು,

ಉದಾಹರಣೆ.

Aಯು, ಒಂದು ಕೃತ್ಯಕ್ಕಾಗಿ ಅಪಾದನೆ ಪಟ್ಟನು. ಅದು ಕಳವು ಎಂದೂ-ಯಾ-ಚೋರಿ ಮಾಲನ್ನು ಈಸುಕೊಂಡನೆಂದೂ -ಯಾ-ತಕ್ಸೀರುಕರವಾದ ವಿಶ್ವಾಸಘಾತಕತೆಯೆಂದೂ-ಯಾ-ದಗೆ ಮಾಡಿದನೆಂದು, ಆಗಬಹುದು. ಅವನು ಕಳವಿಗೆ, ಚೋರೀ ಮಾಲನ್ನು ಈಸಕೊಳ್ಳೋಣತೆಗೆ, ತಕ್ಸೀರು ಕರವಾದ ವಿಶ್ವಾಸ ಘಾತಕತೆಗೆ, ಮತ್ತು ದಗೆಗೆ ಅಪಾದನೆಯಾಗಲ್ಪಡಬಹುದು, ಅಥವಾ ಅವನು ಕಳವು ಮಾಡಿದನು-ಯಾ-ಚೋರಿ ಮಾಲನ್ನು ಈಸುಕೊಂಡನು-ಯಾ-ತಕ್ಸೀರು ಕರವಾದ ವಿಶ್ವಾಸ ಘಾತಕತೆ ನಡಿಸಿದನು-ಯಾ-ದಗೆಮಾಡಿದನು, ಎಂಬ ಹಾಗೆ ಅಪಾದನೆ ಆಗಲ್ಪಡಬಹುದು.

ಒಂದು ತಕ್ಸೀರಿಗೆ ಅಪಾದನೆಯಾದ ಒಬ್ಬನನ್ನು ಮತ್ತೊಂದು ತಕ್ಸೀರಿಗೆ ಆಗಿ ಸಾಬೀತು ಮಾಡಬಹುದು.

237. 236ನೇ ಪ್ರಕರಣದಲ್ಲಿ ನಮೂದಿಸಿರುವ ಮೊಕದ್ದಮೆಯಲ್ಲಿ. ಅಪಾದನೆ ಪಟ್ಟವನು ಒಂದು ತಕ್ಸೀರಿನಬಗ್ಗೆ ಚಾರ್ಜು ಮಾಡಲ್ಪಟ್ಟರೆ, ಮತ್ತು ಆಪ್ರಕರಣದ ನಿಬಂಧನೆಗಳಿಗನುಗುಣವಾಗಿ ಅಪಾದನೆ ಮಾಡಿರಬಹುದಾಗಿರುವ ಬೇರೆ ತಕ್ಸೀರನ್ನು ನಡಿಸಿದ ಹಾಗೆ ಸಾಕ್ಷ್ಯದಲ್ಲಿ ಕಾಣಬಂದರೆ, ಅವನು ನಡಿಸಿದ್ದಾಗಿ ಕಾಣಬರುವಂಥಾ ತಕ್ಸೀರನ್ನು ಅವನಮೇಲೆ ಸಾಬೀತು ಮಾಡಬಹುದು, ಸದರೀ ತಕ್ಸೀರಿನ ವಿಷಯವಾಗಿ ಅವನು ಅಪಾದನೆಯಾಗದಿದ್ದರೂ ಚಿಂತೆಯಿಲ್ಲ.

ಉದಾಹರಣೆ.

A ಯು, ಕದ್ದನೆಂತ ಅಪಾದನೆಪಟ್ಟನು. ಅವನು ತಕ್ಸೀರುಕರವಾದ ವಿಶ್ವಾಸ ಘಾತಕತೆಯನ್ನು -ಯಾ-ಚೋರೀ ಮಾಲನ್ನು ಈಸುಕೊಳ್ಳೋಣದರ ತಕ್ಸೀರನ್ನು ಮಾಡಿದ್ದಾಗಿ ಕಾಣಬರುತ್ತದೆ. ಅವನ ಮೇಲೆ (ಸಂಗತ್ಯಾನುಸಾರವಾಗಿ) ತಕ್ಸೀರುಕರವಾದ ವಿಶ್ವಾಸ ಘಾತಕತೆಯನ್ನು ಸಾಬೀತು ಮಾಡಬಹುದು -ಯಾ-ಚೋರಿಮಾಲನ್ನು ಈಸುಕೊಂಡನೆಂದು ಸಾಬೀತು ಮಾಡಬಹುದು, ಅಂಥಾ ತಕ್ಸೀರಿನ ಅಪಾದನೆ ಅವನು ಆಗಲ್ಪಡದಿದ್ದರೂ ಚಿಂತೆಯಿಲ್ಲ.

238. ಬೇರೆಬೇರೆ ವಿಷಯಗಳು ಶೇರಿರುವ ಒಂದು ತಕ್ಕೀರು ಒಬ್ಬ ಮನುಷ್ಯನಮೇಲೆ ಆಪಾದನೆ ಯಾದರೆ, ಅವುಗಳಲ್ಲಿ ಕೆಲವು ವಿಷಯಗಳುಮಾತ್ರ ಶೇರಿ ಪೂರ್ಣವಾದ ಒಂದು ಸಂಣ ತಕ್ಕೀರಾದರೆ, ಮತ್ತು ಆಪ್ರಕಾರ ಶೇರಿದ ವಿಷಯಗಳು ರುಜುಆಗಲ್ಪಟ್ಟು ಉಳಿದ ವಿಷಯಗಳು ರುಜು ಆಗಲ್ಪಡದಿದ್ದರೆ, ಆತನು ಸಂಣ ತಕ್ಕೀರಿನ ಸಾಬೀತು ಮಾಡಲ್ಪಡಬಹುದು, ಅಂಥಾ ತಕ್ಕೀರು ಆತನಮೇಲೆ ಆಪಾದಿಸದೆ ಇದ್ದಾಗ್ಯೂ ಚಿಂತೆಇಲ್ಲ.

ಆಪಾದನೆಯಾದ ತಕ್ಕೀರಿನಲ್ಲಿ ರುಜುವಾದ ತಕ್ಕೀರು ಶೇರಿದಾಗ.

ಒಂದು ತಕ್ಕೀರು ಒಬ್ಬನಮೇಲೆ ಆಪಾದನೆಯಾದರೆ-ವ-ರುಜುವಾದ ವಿದ್ಯಮಾನಗಳಿಂದ ಅಂಥಾ ತಕ್ಕೀರು ಇನ್ನೂ ಸಂಣ ತಕ್ಕೀರಾಗುವ ಸಂಗತಿಯಲ್ಲಿ, ಅಂಥಾ ಸಂಣತಕ್ಕೀರು ಆತನಮೇಲೆ ಆಪಾದನೆ ಆಗಲ್ಪಡದಿದ್ದಾಗ್ಯೂ ಅದರ ಬಗ್ಗ್ಯಾಗಿ ಅವನು ತಕ್ಕೀರು ಸಾಬೀತು ಮಾಡಲ್ಪಡಬಹುದು.

198ನೇ ಪ್ರಕರಣದಲ್ಲಿ-ಯಾ-199ನೇ ಪ್ರಕರಣದಲ್ಲಿ ಹೇಳೋಣಾದ ತಕ್ಕೀರುಗಳ ಫಿರ್ಯಾದಿಯು ಆ ಪ್ರಕರಣಗಳಿಂದ ವಿಧಿಸಿದಮೇರಿಗೆ ತರಲ್ಪಡದೆ ಇದ್ದಾಗ ಆ ತಕ್ಕೀರುಗಳ ಸಾಬೀತಿಯನ್ನು ಮಾಡುವದಕ್ಕೆ ಅಧಿಕಾರ ಕೊಡುವಂಥಾದ್ದೇನೂ ಈ ಪ್ರಕರಣದಲ್ಲಿ ಉಂಟೆಂತ ಎಣಿಸಲ್ಪಡಕೂಡದು.

ಉದಾಹರಣೆಗಳು.

(a) A ಯು, ಒಯ್ಯುವವನೆಂತ ಅವನಬಳಿ ನಂಬಿಕೇ ಮೇಲೆ ಸ್ವಾಧೀನವಿಟ್ಟ ಸೊತ್ತಿನ ವಿಷಯವಾಗಿ ತಕ್ಕೀರು ಕರವಾದ ವಿಶ್ವಾಸ ಘಾತಕತೆಯನ್ನು ಮಾಡಿದನೆಂದು, ಇಂಡ್ಯನ್ ಪೆನಲ್ ಕೋಡಿನ 407ನೇ ಪ್ರಕರಣಕ್ಕನುಗುಣವಾಗಿ ಚಾರ್ಜಾದನು. ಸದರೀ ಸ್ವತ್ತಿನ ವಿಷಯವಾಗಿ 406ನೇ ಪ್ರಕರಣದ ಪ್ರಕಾರ ತಕ್ಕೀರುಕರವಾದ ವಿಶ್ವಾಸಘಾತಕತೆಯನ್ನು ಅವನು ಮಾಡಿದ್ದಾಗಿ ತೋರುತ್ತೆ, ಆದರೆ ಆದನ್ನ ಅವನ ಬಳಿ ಒಯ್ಯುವವನೆಂತ ಸ್ವಾಧೀನದಲ್ಲಿ ಕೊಟ್ಟಿರಲಿಲ್ಲಾ. 406ನೇ ಪ್ರಕರಣಕ್ಕನುಗುಣವಾಗಿ ತಕ್ಕೀರುಕರವಾದ ವಿಶ್ವಾಸ ಘಾತಕತೆಯ ಬಾಬತು ಅವನು ಸಾಬೀತಾಗಲ್ಪಡಬಹುದು.

(b) A ಯು, ಇಂಡ್ಯನ್ ಪೆನಲ್ ಕೋಡಿನ 325ನೇ ಪ್ರಕರಣ ಪ್ರಕಾರ ಸಂಕಟಕರವಾದ ಹಿಂಸೆ ಮಾಡಿದನೆಂದು ಆಪಾದನೆಯಾದನು. ಹಟಾತ್ತಾದ -ವ-ಮಹತ್ತಾದ ಕೋಪೋದ್ರೇಕದಿಂದ ತಾನು ನಡದ್ದೆಂತ ಆತನು ರುಜುಮಾಡುತ್ತಾನೆ. ಆ ಕೋಡಿನ 335ನೇ ಪ್ರಕರಣಕ್ಕನುಗುಣವಾಗಿ ಆತನು ತಕ್ಕೀರು ಸಾಬೀತು ಮಾಡಲ್ಪಡಬಹುದು.

239. ಒಂದೇಕಾರ್ಯದಲ್ಲಿ ಒಂದೇತಕ್ಕೀರನ್ನ—ಯಾ—ಬೇರೆಬೇರೆ ತಕ್ಕೀರುಗಳನ್ನ ನಡಿಸಿದರೆಂದು ಒಬ್ಬನಿಗಿಂತ ಹೆಚ್ಚುಮಂದಿ ಆಪಾದನೆಯಾದಾಗ, ಅಥವಾ ಯಾವ ತಕ್ಕೀರನ್ನಾದರೂ ಮಾಡಿದನೆಂದು ಒಬ್ಬನು ಆಪಾದನೆಯಾಗಿ, ಮತ್ತು ಅಂಥಾ ತಕ್ಕೀರಿಗೆ ಕುಮ್ಮಕು ಮಾಡಿದನೆಂದು—ಯಾ—ಅಂಥಾ ತಕ್ಕೀರನ್ನ ನಡಿಸಲಿಕ್ಕೆ ಯೆತ್ನಿಸಿದನೆಂದು ಮತ್ತೊಬ್ಬನು ಆಪಾದನೆಯಾದಾಗ, ಕೋರ್ಟಿನವರಿಗೆ ಯುಕ್ತವೆಂದು ತೋರುವ ರೀತೀಲಿ ಅವರನ್ನ ಕೂಡಿಕೆಯಾಗಲಿ—ಯಾ—ಬೇರೆಬೇರೆಯಾಗಲೀ ಚಾರ್ಜುಮಾಡಬಹುದು—ವ—ದರ್ಯಾಫ್ತಿ ಮಾಡಬಹುದು ; ಮತ್ತು ಅಂಥಾ ಯೆಲ್ಲಾ ಚಾರ್ಜುಗಳಿಗೂ ಈ ಅಧ್ಯಾಯದ ಹಿಂದಣ ಭಾಗದಲ್ಲಿ ಅಡಗಿದ್ದ ನಿಬಂಧನೆಗಳು ಲಗಾವಾಗತಕ್ಕದ್ದು.

ಯಾರನ್ನ ಜೊತೆಯಾಗಿ ಆಪಾದನೆ ಮಾಡಬಹುದು.

ಉದಾಹರಣೆಗಳು.

(a) A ಯು, B ಯು, ಒಂದೇ ಖೂನಿ ಬಾಬತು ಸಾಬೀತಾದರು. A ಯನ್ನು B ಯನ್ನು ಕೂಡಿಸಿ, ಇವರ ಮೇಲೆ ಖೂನಿಗಾಗಿ ಚಾರ್ಜುಮಾಡಬಹುದು -ವ- ದರ್ಯಾಫ್ತಿ ಮಾಡಬಹುದು.

(b) A ಯು, B ಯು, ಚೋರಿ ಬಾಬತು ಆಪಾದನೆಯಾದರೂ. ಚೋರಿಮಾಡುತ್ತಿರುವಾಗ A ಯು, ಖೂನಿ ಮಾಡಿದನು, ಇದರೊಂದಿಗೆ Bಗೆ ಯೇನೂ ಸಂಬಂಧವಿಲ್ಲಾ. ಇಬ್ಬರನ್ನೂ ಚೋರಿ ಬಾಬತು ಚಾರ್ಜುಮಾಡಿ A ಯನ್ನ ಮಾತ್ರವೇ ಖೂನಿ ಬಾಬತು ಚಾರ್ಜುಮಾಡಿ, ಸದರೀ ತಕ್ಕೀರುನಾಮೆಯ ಮೇಲೆ A, B ಇಬ್ಬರನ್ನ ಜೊತೆಯಾಗಿ ದರ್ಯಾಫ್ತಿ ಮಾಡಬಹುದು.

(c) A, B ಇಬ್ಬರೂ ಕಳವು ಬಾಬತು ಚಾರ್ಜಾಗುತ್ತಾರೆ. ಸದರೀ ಕಾರ್ಯವನ್ನ ಮಾಡುತ್ತಿರುವಾಗ ಯೆರಡು ಬೇರೆ ಕಳವುಗಳನ್ನು ಮಾಡಿದನೆಂದು B ಯು ಚಾರ್ಜಾದನು. ಇಬ್ಬರನ್ನೂ ಒಂದು ಕಳವಿಗಾಗಿಯೂ B ಯನ್ನ ಮಾತ್ರ ಇತರ ಯೆರಡು ಕಳವುಗಳಿಗಾಗಿಯೂ ಆಪಾದನೆಮಾಡಿ ಸದರೀ ತಕ್ಕೀರು ನಾಮೆಯ ಮೇಲೆ ಜೊತೆಯಾಗಿ A, B ಇಬ್ಬರನ್ನೂ ದರ್ಯಾಫ್ತಿ ಮಾಡಬಹುದು.

ಅನೇಕ ಆಪಾದನೆಗಳ ಪೈಕಿ ಒಂದು ಸಾಬೀತಾದ ಮೇಲೆ ಉಳಿದ ಆಪಾದನೆಗಳನ್ನು ವಾಪಸು ತೆಗದುಕೊಳ್ಳೋಣ.

240. ಒಬ್ಬನಮೇಲೆ ಒಂದಕ್ಕಿಂತ ಹೆಚ್ಚು ಆಪಾದನೆಗಳು ಮಾಡೋಣಾದಾಗ, ಮತ್ತು ಅವುಗಳ ಪೈಕಿ ಒಂದು —ಯಾ—ಹೆಚ್ಚು ಆಪಾದನೆಗಳು ಸಾಬೀತುಪಟ್ಟಾಗ, ಫಿರ್ಯಾದುದಾರನಾಗಲೀ—ಯಾ—ಫಿರ್ಯಾದು ನಡಿಸುವ ಆಫೀಸರನಾಗಲೀ, ಕೋರ್ಟಿನವರ ಅಪ್ಪಣೆನಿಶಿ, ಉಳಿದ ಆಪಾದನೆ—ಯಾ—ಆಪಾದನೆಗಳನ್ನು ವಾಪಸ್ ತೆಗದುಕೊಳ್ಳಬಹುದು, ಅಥವಾ ಸದರೀ ಕೋರ್ಟಿನವರು ತಾವು ಸ್ವತಃ ಅಂಥಾ ಆಪಾದನೆ—ಯಾ—ಆಪಾದನೆಗಳ ವಿಚಾರಣೆ ಅಥವಾ ದರ್ಯಾಫ್ತಿ ನಿಲ್ಲಿಸಿಡಬಹುದು. ಅಪ್ರಕಾರ ವಾಪಸ್ ತೆಗದುಕೊಳ್ಳೋಣದರಿಂದ ಅಂಥಾ ಆಪಾದನೆ—ಯಾ—ಆಪಾದನೆಗಳಿಂದ ಖುಲಾಸೆ ಪಡಿಸಿದ ಹಾಗೆ ಆಗುತ್ತೆ, ಯಾವಪಕ್ಷದಲ್ಲಿ ಅಂದರೆ, ಅಂಥಾ ತಕ್ಸೀರಿನ ಸಾಬೀತಿಯು ರದ್ದುಮಾಡಲ್ಪಟ್ಟ ಸಂಗತಿಯಲ್ಲಿ, ಸದರೀ ಕೋರ್ಟಿನವರು (ಸಾಬೀತು ರದ್ದು ಮಾಡುವಂಥಾ ಕೋರ್ಟಿನವರ ಹುಕುಮಿಗೆ ಒಳಪಟ್ಟು ಅಪ್ರಕಾರ ವಾಪಸ್‌ತೆಗದುಕೊಂಡ ಆಪಾದನೆಯ —ಯಾ—ಆಪಾದನೆಗಳ ವಿಚಾರಣೆ ಅಥವಾ ದರ್ಯಾಫ್ತಿಯನ್ನ ನಡಿಸಬಹುದು.

CHAPTER XX.—OF THE TRIAL OF SUMMONS-CASES BY MAGISTRATES.

20ನೇ ಅಧ್ಯಾಯ.—ಮೇಜಿಸ್ಟ್ರೇಟುಗಳಿಂದ ಸರ್ಮಾನ ಮೊಕದ್ದಮೆಗಳ ದರ್ಯಾಫ್ತಿಯನ್ನು ಕುರಿತು.

ಸರ್ಮಾನ ಮೊಕದ್ದಮೆಗಳಲ್ಲಿ ನಡಿಸತಕ್ಕ ಕ್ರಮ.

241. ಸರ್ಮಾನ ಮೊಕದ್ದಮೆಗಳ ದರ್ಯಾಫ್ತಿಯಲ್ಲಿ ಮೇಜಿಸ್ಟ್ರೇಟುಗಳು ಈ ಕೆಳಗಣ ಕ್ರಮವನ್ನು ಅನುಸರಿಸತಕ್ಕದ್ದು.

ಆಪಾದನೆಯ ಸಾರಾಂಶವನ್ನು ಹೇಳಬೇಕು.

242. ಆಪಾದನೆಪಟ್ಟವನು ಹಾಜರಾದಾಗ ಅಥವಾ ಮೇಜಿಸ್ಟ್ರೇಟಿನ ಮುಂದೆ ತರಲ್ಪಟ್ಟಾಗ, ಅವನು ಆಪಾದಿಸಲ್ಪಟ್ಟ ತಕ್ಸೀರಿನ ವಿವರಗಳನ್ನು ಆತಗೆ ತಿಳಿಸತಕ್ಕದ್ದು, ಮತ್ತು ಆ ತಕ್ಸೀರು ಅವನ ಮೇಲೆ ಯಾಕೆ ಸಾಬೀತು ಆಗಕೂಡದು ಎಂಬದಕ್ಕೆ ಏನಾದರೂ ಸಬಬು ಇದ್ದರೆ ತೋರಿಸುವ ಹಾಗೆ ಅವನನ್ನು ಕೇಳತಕ್ಕದ್ದು ಆದರೆ ಕ್ರಮವಾದ ತಕ್ಸೀರುನಾಮೆ ಏರ್ಪಡಿಸತಕ್ಕ ಅಗತ್ಯವಿಲ್ಲ.

ಆಪಾದನೆಯ ಎತಾರ್ಥವನ್ನು ಒಪ್ಪಿದ ತಕ್ಸೀರು ಸಾಬೀತು.

243. ಆಪಾದನೆಪಟ್ಟವನು ತಾನು ಆಪಾದಿಸಲ್ಪಟ್ಟ ತಕ್ಸೀರು ನಡಿಸಿದ್ದಾಗಿ ಒಪ್ಪಿಕೊಂಡರೆ, ಅವನ ಒಪ್ಪಿಗೆಯನ್ನ ಸಾಧ್ಯವಾಗುವಷ್ಟರಮಟ್ಟಿಗೆ ಆತನು ಉಪಯೋಗಿಸಿ ಕೊಂಡಿರುವ ಶಬ್ದಗಳಲ್ಲಿಯೇ ಬರಕೊಳ್ಳತಕ್ಕದ್ದು ; ಮತ್ತು ತನ್ನ ಮೇಲೆ ತಕ್ಸೀರು ಯಾಕೆ ಸಾಬೀತಾಗಕೂಡದು ಎಂಬದಕ್ಕೆ ಸಾಕಾದ ಸಬಬು ತೋರಿಸದೆ ಇದ್ದರೆ, ಮೇಜಿಸ್ಟ್ರೇಟು ಅದೇ ಮೇರಿಗೆ ಅವನ ಮೇಲೆ ತಕ್ಸೀರು ಸಾಬೀತು ಮಾಡತಕ್ಕದ್ದು.

ಹಾಗೆ ಒಪ್ಪಿಕೊಳ್ಳದಿದ್ದರೆ ನಡಿಸತಕ್ಕ ಕ್ರಮ.

244. ಆಪಾದನೆಪಟ್ಟವನು ಅಂಥಾ ಒಪ್ಪಿಗೆಯನ್ನು ಮಾಡದಿದ್ದರೆ, ಮೇಜಿಸ್ಟ್ರೇಟನು ಫಿರ್ಯಾದುದಾರನ (ಇದ್ದಲ್ಲಿ) ಹೇಳಿಕೆಯನ್ನು, ಮತ್ತು ಫಿರ್ಯಾದಿಗೆ ಆಧಾರವಾಗಿ ಹಾಜರು ಪಡಿಸಲ್ಪಡಬಹುದಾದ ಎಲ್ಲಾ ಸಾಕ್ಷ್ಯವನ್ನೂ ತಕ್ಕೊಂಡು—ವ—ಆಪಾದನೆಪಟ್ಟವನ ಹೇಳಿಕೆಯು—ವ—ಅವನು ತನ್ನ ಪ್ರತಿವಾದದಲ್ಲಿ ಹಾಜರು ಪಡಿಸುವ ಎಲ್ಲಾ ಸಾಕ್ಷ್ಯವನ್ನು ಕೂಡಾ ತಕ್ಕೊಳ್ಳತಕ್ಕದ್ದು.

ಮೇಜಿಸ್ಟ್ರೇಟು, ತನಿಗೆ ಯುಕ್ತ ಕಂಡರೆ, ಫಿರ್ಯಾದುದಾರನ—ಯಾ—ಆಪಾದನೆಪಟ್ಟವನ ಮನವಿ ಅರ್ಜೀ ಮೇಲೆ ಯಾವನೊಬ್ಬ ಸಾಕ್ಷಿಗಾರನ—ಯಾ—ಯಾವದಾದರೂ ದಸ್ತಾವೇಜಿನ—ಯಾ—ಬೇರೆ ವಸ್ತುವಿನ ಹಾಜರಿಬಗ್ಗೆ ಪ್ರೊಸೆಸ್ ಕೊಡಬಹುದು.

ಅಂಥಾ ಅರ್ಜೀ ಮೇಲೆ ಯಾವನೊಬ್ಬ ಸಾಕ್ಷಿಗಾರನಿಗೆ ಸರ್ಮಾನ್ ಕೊಡುವದಕ್ಕೆ ಮುಂಚೆ, ದರ್ಯಾಫ್ತಿ ಉದ್ದಿಶ್ಯ ಹಾಜರಾಗುವಲ್ಲಿ ಆತಗೆ ಉಂಟಾಗಬಹುದಾದ, ನ್ಯಾಯವಾದ ಖರ್ಚು ಕೋರ್ಟಿನಲ್ಲಿ ಠೇವಣಾತಿ ಕಟ್ಟಬೇಕೆಂತ ಮೇಜಿಸ್ಟ್ರೇಟು ಅಪೇಕ್ಷಿಸಬಹುದು.

ಖುಲಾಸೆ.

245. 244ನೇ ಪ್ರಕರಣದಲ್ಲಿ ಹೇಳೋಣಾದ ಸಾಕ್ಷ್ಯವನ್ನು, ಮತ್ತು ತನ್ನ ಸ್ವಂತ ಖುಷಿಯಿಂದ ಆತ ಹಾಜರುಪಡಿಸಿಕೊಂಡ ಹೆಚ್ಚಿನ ಸಾಕ್ಷ್ಯವು (ಇದ್ದರೆ)ತೆಕ್ಕೊಂಡು, ಆಪಾದನೆ ಪಟ್ಟವನನ್ನು (ಅವನಿಗೆ ಯುಕ್ತ ತೋರಿದರೆ) ವಿಚಾರಿಸಿ, ಆಪಾದನೆ ಪಟ್ಟವನು ತಕ್ಸೀರುದಾರನಲ್ಲಾ ಎಂತ ಮೇಜಿಸ್ಟ್ರೇಟಗೆ ಮಂಡಟ್ಟಾದರೆ, ಆತನು ಒಂದು ಖುಲಾಸೆ ಹುಕುಮನ್ನು ರಿಕಾರ್ಡು ಮಾಡತಕ್ಕದ್ದು.

ಸಜಾ.

ಆಪಾದನೆ ಪಟ್ಟವನು ತಕ್ಸೀರು ಮಾಡಿದವನೆಂತ ಆತಗೆ ಮಂಡಟ್ಟಾದರೆ, ಮೇಜಿಸ್ಟ್ರೇಟು ಕಾನೂನಿನ ಪ್ರಕಾರ ಅವನ ಮೇಲೆ ಸಜಾ ವಿಧಿಸತಕ್ಕದ್ದು.

ಫಿರ್ಯಾದಿ ಯಾ ಸಮನ್ಸಿನಿಂದ ಇತ್ಯರ್ಥವು ಮಟ್ಟಾಗತಕ್ಕದ್ದಲ್ಲ.

246. ಆಪಾದನೆಪಟ್ಟವನು ಒಪ್ಪುವ ಅಥವಾ ರುಜುವಾದ ವಿದ್ಯಮಾನಗಳಿಂದ 243ನೇ ಪ್ರಕರಣ ಅಥವಾ 245ನೇ ಪ್ರಕರಣ ಪ್ರಕಾರ ಈ ಅಧ್ಯಾಯಕ್ಕನುಗುಣವಾಗಿ ಪರ್ಯಾಪ್ತಿ ಆಗತಕ್ಕ ಯಾವ ತಕ್ಸೀರಾದರೂ ಆತ ಮಾಡಿದ್ದಾನೆಂತ ತೋರಿ ಬರುವಲ್ಲಿ, ಸಮನ್ಸಿನ ಅಥವಾ ಫಿರ್ಯಾದಿಯ ಸ್ವಭಾವ ಏನಿದ್ದಾಗ್ಯೂ ಸದರೀ ಯವನ ಮೇಲೆ ಮೇಜಿಸ್ಟ್ರೇಟು ಅಂಥಾ ತಕ್ಸೀರು ಸಾಬೀತು ಮಾಡಬಹುದು.

ಫಿರ್ಯಾದುದಾರನ ಗೈರಹಾಜರು.

247. ಫಿರ್ಯಾದಿನಮೇಲೆ ಸಮನ್ಸ ಕೊಡೋಣಾಗಿದ್ದರೆ—ವ—ಆಪಾದನೆಪಟ್ಟ ಮನುಷ್ಯನ ಹಾಜರಾತಿ ಬಗ್ಗೆ ನಿಶ್ಚಯಿಸಿದ ತಾರೀಖಿನಲ್ಲಾದರು—ಯಾ— ಅನಂತರ ತನಖಿ ನಿಲ್ಲಿಸಿಡಲ್ಪಟ್ಟ ಯಾವ ತಾರೀಖಿನಲ್ಲಾದರೂ ಫಿರ್ಯಾದುದಾರನು ಹಾಜರಾಗದೆ ಇದ್ದರೆ, ಮೇಜಿಸ್ಟ್ರೇಟು, ಇದರಮುಂಚೆ ಏನು ಹೇಳೋಣಾಗಿದ್ದಾಗ್ಯೂ ಸರಿಯೇ, ಆಪಾದನೆ ಪಟ್ಟವನನ್ನು ಖುಲಾಸಾ ಮಾಡತಕ್ಕದ್ದು, ಯಾವಪಕ್ಷದಲ್ಲಿ ಅಂದರೆ, ಏನಾದರೂ ಒಂದು ಸಬಬಿನಿಂದ ಮೊಕದ್ದಮೆಯ ವಿಚಾರಣೆಯನ್ನು ಬೇರೆ ಯಾವದೊಂದು ತಾರೀಖಿಗೆ ನಿಲ್ಲಿಸುವದಕ್ಕೆ ತನಗೆ ಯುಕ್ತತೋರುವದರಲ್ಲಿ ಹಾಗೆ ಮಾಡಬಹುದು.

ಫಿರ್ಯಾದನ್ನು ವಾಪಸ್ ತೆಗದುಕೊಳ್ಳೋಣ.

248. ಈ ಅಧ್ಯಾಯದಪ್ರಕಾರ ಯಾವಮೊಕದ್ದಮೆಯಲ್ಲಿ ಆದರೂ, ಆಖೈರು ಹುಕುಂ ಹುಟ್ಟುವದಕ್ಕಿಂತ ಮುಂಚೆ ಯಾವಾಗಲಾದರೂ, ಫಿರ್ಯಾದುದಾರನು ಮೇಜಿಸ್ಟ್ರೇಟನಿಗೆ ಸಾಕಾದ ಸಬಬು ತೋರಿಸಿ ತನ್ನ ಫಿರ್ಯಾದನ್ನ ವಾಪಸ್ ತೆಗದುಕೊಳ್ಳಲಿಕ್ಕೆ ತನಗೆ ಅಪ್ಪಣೆ ಯಾಗಬೇಕೆಂತ ಕೇಳಿಕೊಂಡರೆ, ಮೇಜಿಸ್ಟ್ರೇಟು ಅದನ್ನ ವಾಪಸ ತೆಗದುಕೊಳ್ಳಲಿಕ್ಕೆ ಅವನಿಗೆ ಅಪ್ಪಣೆ ಕೊಡಬಹುದು, ಮತ್ತು ಅವರಮೇಲೆ ಆಪಾದನೆ ಪಟ್ಟವನನ್ನ ಖುಲಾಸಾ ಪಡಿಸತಕ್ಕದ್ದು.

ಫಿರ್ಯಾದುದಾರನು ಇಲ್ಲದಿರುವಾಗ ವ್ಯವಹರಣೆ ನಿಲ್ಲಿಸಡಲಿಕ್ಕೆ ಅಧಿಕಾರ.

249. ಫಿರ್ಯಾದಿನಮೇಲೆ ಅಲ್ಲದೆ ಅನ್ಯಥಾ ಹಿಡಿದ ಯಾವ ಮೊಕದ್ದಮೆಯಲ್ಲಿ ಯಾದರೂ, ಫಸ್ಟಕ್ಲಾಸ ಮೇಜಿಸ್ಟ್ರೇಟು,ಅಥವಾ, ಡಿಸ್ಟ್ರಿಕ್ಟ ಮೇಜಿಸ್ಟ್ರೇಟರ ಅನುಮತಿಯನ್ನು ಪ್ರಥಮತಃ ಪಡಕೊಂಡು, ಇತರ ಯಾವ ಮೇಜಿಸ್ಟ್ರೇಟನಾದರೂ, ಆತನು ರಿಕಾರ್ಡು ಮಾಡಬೇಕಾದ ಸಬಬುಗಳಿಂದ, ಖುಲಾಸಾ ಅಥವಾ ಸಾಬೀತುಬಾಬತು ತೀರ್ಪು ಹೇಳದೇನೇ ವ್ಯವಹರಣೆಯು ಯಾವ ಕಾಲದಲ್ಲಾದರೂ, ಅದನ್ನ ನಿಲ್ಲಿಸಬಹುದು, ಮತ್ತು ಅನಂತರ ಆಪಾದನೆಪಟ್ಟವನನ್ನ ಬಿಡುಗಡೆ ಪಡಿಸಬಹುದು.

ಅಲ್ಪವಾದ-ಯಾ-ರೊಷ್ಟುಕರವಾದ ಫಿರ್ಯಾದುಗಳು.

250. ಫಿರ್ಯಾದಿನಮೇಲೆ ಹಿಡಿದ ಯಾವದೊಂದು ಮೊಕದ್ದಮೆಯಲ್ಲಿ, ಒಬ್ಬ ಮೇಜಿಸ್ಟ್ರೇಟನು ಆಪಾದನೆಪಟ್ಟವನನ್ನು 245ನೇ ಪ್ರಕರಣ ಅಥವಾ 247ನೇ ಪ್ರಕರಣಕ್ಕನುಗುಣವಾಗಿ ಖುಲಾಸಾ ಪಡಿಸುವದಾದರೆ, ಮತ್ತು ಸದರೀ ಫಿರ್ಯಾದ ಅಲ್ಪವಾದ್ದು—ಯಾ—ರೊಷ್ಟುಕರವಾದ್ದು ಎಂತ ಮೇಜಿಸ್ಟ್ರೇಟನು ಅಭಿಪ್ರಾಯಪಟ್ಟರೆ, ಖುಲಾಸಾ ಹುಕುಮಿನದ್ವಾರಾ, ಆತಗೆ ಯುಕ್ತ ತೋರುವಪ್ರಕಾರ, ಆಪಾದನೆಪಟ್ಟವನಿಗೆ, ಅಥವಾ ಒಬ್ಬನಿಗಿಂತ ಹೆಚ್ಚು ಜನ ಇರುವ ಸಂಗತಿಯಲ್ಲಿ ಪ್ರತಿ ಒಬ್ಬನಿಗೆ, ಐವತ್ತು ರೂಪಾಯಿಗೆ ಜಾಸ್ತಿ ಯಾಗದೆ, ಮೇಜಿಸ್ಟ್ರೇಟಗೆ ಯುಕ್ತ ತೋರುವಷ್ಟು ಪರಿಹಾರದ್ರವ್ಯವನ್ನು, ಫಿರ್ಯಾದುದಾರನು ಕೊಡತಕ್ಕದ್ದೆಂತ ವಿಧಿಸಬಹುದು.

ಅಪ್ರಕಾರ ಕೊಡಲಿಕ್ಕೆ ವಿಧಿಸಲ್ಪಟ್ಟ ಮೊಬಲಗು ಅದು ಜುರ್ಮಾನೆಯಾಗಿ ಇದ್ದರೆ ಹ್ಯಾಗೋಹಾಗೆಯೇ ವಸೂಲು ಮಾಡಲ್ಪಡತಕ್ಕದ್ದು; ಪರಂತು ಸದರೀ ಐವಜು ವಸೂಲಾಗದೆ ಇದ್ದರೆ; ವಿಧಿಸಲ್ಪಡುವ ಕೈದು, ಮ್ಯಾಜಿಸ್ಟ್ರೇಟನು ಆಜ್ಞಾಪಿಸುವ, ಮೂವತ್ತು ದಿವಸಗಳಿಗೆ ಜಾಸ್ತಿ ಆಗದ, ಒಂದು ಕಾಲಪರಿಯಂತ, ಬರೀ ಕೈದಾಗಿರತಕ್ಕದ್ದು.

ಪರಿಹಾರದ್ರವ್ಯವನ್ನು ವಸೂಲ್ಮಾಡೋಣ.

ಅದೇಕಾರ್ಯಕ್ಕೆ ಸಂಬಂಧಿಸಿದ ಅನಂತರದ ಯಾವದಾದರೂ ಸಿವಿಲ್ ವ್ಯವಹರಣೆಯಲ್ಲಿ ಪರಿಹಾರದ್ರವ್ಯ ಕೊಡಲಿಕ್ಕೆ ವಿಧಿಸುವ ಕಾಲದಲ್ಲಿ, ಈ ಪ್ರಕರಣಪ್ರಕಾರ ಪರಿಹಾರದ್ರವ್ಯವಾಗಿ ಕೊಟ್ಟಿದ್ದ ಯಾ ವಸೂಲಮಾಡಿದ ಯಾವ ಮೊಬಲಗನ್ನಾದರೂ ಕೋರ್ಟಿನವರು ಆಲೋಚನೆಗೆ ತೆಗದುಕೊಳ್ಳತಕ್ಕದ್ದು.

CHAPTER XXI.—OF THE TRIAL OF WARRANT-CASES BY MAGISTRATES.

21ನೇ ಅಧ್ಯಾಯ.—ಮ್ಯಾಜಿಸ್ಟ್ರೇಟುಗಳಿಂದ ವಾರಂಟು ಮೊಕದ್ದಮೆಗಳ ದರ್ಯಾಫ್ತಿಯನ್ನು ಕುರಿತು.

ವಾರಂಟು ಮೊಕದ್ದಮೆಗಳಲ್ಲಿ ನಡಿಸತಕ್ಕ ಕ್ರಮ.

251. ವಾರಂಟು ಮೊಕದ್ದಮೆಗಳ ದರ್ಯಾಫ್ತಿಯಲ್ಲಿ ಮ್ಯಾಜಿಸ್ಟ್ರೇಟರು ಈ ಕೆಳಗಣ ಕ್ರಮವನ್ನು ಅನುಸರಿಸತಕ್ಕದ್ದು.

ಫಿರ್ಯಾದಬಗ್ಯೆ ಸಾಕ್ಷ್ಯ.

252. ಮ್ಯಾಜಿಸ್ಟ್ರೇಟನಮುಂದೆ ಆಪಾದನೆಪಟ್ಟವನು ಹಾಜರಾದಾಗ ಅಥವಾ ತರಲ್ಪಟ್ಟಾಗ, ಅಂಥಾ ಮ್ಯಾಜಿಸ್ಟ್ರೇಟನು ಫಿರ್ಯಾದುದಾರನ (ಯಾರಾದರೂ ಇದ್ದರೆ) ಹೇಳಿಕೆ ಕೇಳಿಕೊಂಡು, ಫಿರ್ಯಾದಿಗೆ ಆಧಾರವಾಗಿ ಹಾಜರ್ಮಾಡಲ್ಪಡಬಹುದಾದಂಥಾ ಎಲ್ಲಾ ಸಾಕ್ಷ್ಯವನ್ನೂ ತೆಗದುಕೊಳ್ಳತಕ್ಕದ್ದು.

ಮ್ಯಾಜಿಸ್ಟ್ರೇಟನು, ಫಿರ್ಯಾದ್ದಾರನಿಂದಾಗಲೀ ಅಥವಾ ಅನ್ಯಥಾ, ಮೊಕದ್ದಮೆಯ ವಿದ್ಯಮಾನಗಳನ್ನು ತಿಳಿಯಬಹುದಾಗಿರುವ ಮತ್ತು ಫಿರ್ಯಾದಿಬಗ್ಯೆ ಸಾಕ್ಷ್ಯ ಕೊಡಲಿಕ್ಕೆ ಸಮರ್ಥರಾಗಿರುವ ಮನುಷ್ಯರ ಹೆಸರುಗಳನ್ನು, ಕೇಳಿ ತಿಳಕೊಳ್ಳತಕ್ಕದ್ದು, ಮತ್ತು ತಾನು ಅವಶ್ಯವೆಂತ ತಿಳಕೊಳ್ಳುವಂಥಾವರನ್ನು ತನ್ನ ಮುಂದೆ ಸಾಕ್ಷ್ಯ ಕೊಡಲಿಕ್ಕೆ ಸಮನ್ಸ್ ಕೊಡತಕ್ಕದ್ದು.

ಆಪಾದನೆಪಟ್ಟವನ ವಿಮೋಚನೆ.

253. 252ನೇ ಪ್ರಕರಣದಲ್ಲಿ ಹೇಳೋಣಾದ ಎಲ್ಲಾ ಸಾಕ್ಷ್ಯವನ್ನೂ ತೆಗದುಕೊಂಡು, ಮತ್ತು ಆಪಾದನೆಪಟ್ಟ ಮನುಷ್ಯನನ್ನು ಮ್ಯಾಜಿಸ್ಟ್ರೇಟನು ಅವಶ್ಯವೆಂದು ತಿಳಕೊಳ್ಳುವಂಥ ವಿಚಾರಣೆಯು (ಇದ್ದರೆ) ಮಾಡಿದ ಮೇಲೆ, ಆ ಮೊಕದ್ದಮೆ ಸಂಗತಿಗಳ ನಿಷೇಧಿಸಲ್ಪಡದಿದ್ದರೆ, ತಪ್ಪು ಸಾಬೀತುಪಡುವಷ್ಟು ಬಲೀಯವಾಗಿ ಆಪಾದನೆ ಪಟ್ಟವನ ಮೇಲೆ ಮೊಕದ್ದಮೆಯು ರುಜು ಆಗಲಿಲ್ಲವೆಂತ ಅವನಿಗೆ ತೋರಿದರೆ, ಮ್ಯಾಜಿಸ್ಟ್ರೇಟನು ಅವನನ್ನು ವಿಮೋಚನೆ ಮಾಡತಕ್ಕದ್ದು.

ಆಪಾದನೆಯು ಅಕಾರಣವಾದ್ದೆಂತ ಮ್ಯಾಜಿಸ್ಟ್ರೇಟಗೆ ತೋರಿದರೆ, ಮೊಕದ್ದಮೆಯಲ್ಲಿ ಆ ಮೊದಲು ನಡೆ ವ್ಯವಹರಣೆಯ ಯಾವ ಕಾಲದಲ್ಲಾದರೂ, ಆ ಬಗ್ಯೆ ಆತನು ಬರೆಯಬೇಕಾದ ಸಬಬುಗಳ ಮೇಲೆ, ಆಪಾದನೆ ಪಟ್ಟವನನ್ನು ವಿಮೋಚನೆ ಪಡಿಸಲಿಕ್ಕೆ ಆತಂಕಿಸುವಂಥಾದ್ದೇನೂ, ಈ ಪ್ರಕರಣದಲ್ಲಿ ಉಂಟೆಂತ ಎಣಿಸಲ್ಪಡಕೂಡದು.

ತಕ್ಸೀರು ರುಜುವಾದ್ದಾಗಿ ಕಂಡು ಬಂದಾಗ ತಕ್ಸೀರುನಾಮೆ ಏರ್ಪಡಿಸತಕ್ಕದ್ದು.

254. ಅಂಥಾ ಸಾಕ್ಷ್ಯವು ತೆಗಿಯಲ್ಪಟ್ಟು ಮತ್ತು ವಿಚಾರಣೆಯು ಮಾಡೋಣಾದಾಗ, ಈ ಅಧ್ಯಾಯಕ್ಕನುಗುಣವಾಗಿ ದರ್ಯಾಫ್ತಿ ಆಗತಕ್ಕ, ಮತ್ತು ಅಂಥಾ [illegible] ಮ್ಯಾಜಿಸ್ಟ್ರೇಟನು ದರಷ್ತು ಮಾಡಲಿಕ್ಕೆ ಅಧಿಕಾರ ಇರುವ ಒಂದು ತಕ್ಸೀರ[illegible] ಆಪಾದನೆಪಟ್ಟ ಮನುಷ್ಯನು ನಡಿಸಿರುವನಾಗಿ ಊಹಿಸಲಿಕ್ಕೆ ಸಬಬು ಇದ್ದ[illegible]ಎಂತ ಮ್ಯಾಜಿಸ್ಟ್ರೇಟ ಅಭಿಪ್ರಾಯಪಡುವದಾದರೆ, ಮತ್ತು ಸದರೀ ತಕ್ಸೀರು ತನ್ನಿಂದ ಸಾಕಾದಷ್ಟಾಗಿ ಶಿಕ್ಷಿಸಲ್ಪಡ[illegible]ದಾಗಿ ಆತನು ಅಭಿಪ್ರಾಯಪಡುವದಾದರೆ, ಆಪಾದನೆಪಟ್ಟ ಮನುಷ್ಯನ ಮೇಲೆ ಬರಹಮೂಲಕವಾಗಿ ಒಂದು ತಕ್ಸೀರುನಾಮೆಯನ್ನು ತಯಾರ್ಮಾಡತಕ್ಕದ್ದು.

255. ಅಪಾದನೆ ಚೀಟನ್ನು ಆಗ ಸದರೀ ಅಪಾದನೆಪಟ್ಟ ಮನುಷ್ಯನಿಗೆ ಓದಿ ವಿವರಿಸತಕದ್ದು, ಮತ್ತು ಆತನು ತಕ್ಸೀರು ಮಾಡಿದ್ದುಂಟೋ ಅಥವಾ ಉದಾಹರಣೆ ಏನಾದರೂ ಕೊಡುತ್ತಾನೋ ಎಂತ ಅವನನ್ನು ಕೇಳತಕ್ಕದ್ದು.

ಉದಹರಿಸುವಿಕೆ.

ಅಪಾದನೆಪಟ್ಟ ಮನುಷ್ಯನು ತಾನು ತಕ್ಸೀರುಮಾಡಿದ್ದು ಉಂಟು ಎಂತ ಉದಾಹರಣೆ ಕೊಟ್ಟರೆ, ಮ್ಯಾಜಿಸ್ಟ್ರೇಟನು ಆ ಉದಾಹರಣೆಯನ್ನು ಬರಕೊಳ್ಳತಕ್ಕದ್ದು, ಮತ್ತು ಆ ಮೇಲೆ ತನಗೆ ಯುಕ್ತ ತೋರುವ ಪ್ರಕಾರ ಅಪಾದನೆ ಪಟ್ಟವನ ಮೇಲೆ ತಕ್ಸೀರು ಸಾಬೀತು ಮಾಡಬಹುದು.

256. ಅಪಾದನೆ ಪಟ್ಟ ಮನುಷ್ಯನು ಉದಾಹರಣೆ ಕೊಡಲಿಕ್ಕೆ ನಿರಾಕರಿಸಿದರೆ ಅಥವಾ ಏವಾದ ಮಾಡದಿದ್ದರೆ; ಅಥವಾ ತನಗೆ ದರಿಯಾಫ್ತಿ ಆಗಬೇಕು ಎಂತ ದಾವೆಮಾಡಿದರೆ, ಅತನ ಪ್ರತಿವಾದ ಮಾಡಲಿಕ್ಕೂ-ವ- ಆತನ ಕಡೆ ಸಾಕ್ಷಿಗಾರರನ್ನು ಹಾಜರು ಮಾಡಲಿಕ್ಕೂ ಹೇಳಿ ಅವನಿಗೆ ವಿಧಿಸತಕ್ಕದ್ದು, ಮತ್ತು, ಅತ ಪ್ರತಿವಾದ ಮಾಡುತ್ತಿರುವಾಗ ಯಾವಾಗಲಾದರೂ, ಕೋರ್ಟಿನಲ್ಲಿ ಅಥವಾ ಅದರ ಆವರ್ಣದಲ್ಲಿ ಹಾಜರು ಇರುವ ಫಿರಿಯಾದಿ ತರಫಿನ ಯಾವ ಸಾಕ್ಷಿಗಾರನನ್ನಾದರೂ ಪುನಃ ಕರೆದು ಫಾಟೆ ಸವಾಲು ಮಾಡಲಿಕ್ಕೆ ಅತನನ್ನ ಬಿಡತಕ್ಕದ್ದು.

ಪ್ರತಿವಾದ.

ಅಪಾದನೆ ಪಟ್ಟವನು ಬರಹ ಮೂಲಕವಾದ ಹೇಳಿಕೆ ಏನಾದರೂ ಕೊಟ್ಟರೆ, ಅದನ್ನ ಮ್ಯಾಜಿಸ್ಟ್ರೇಟು ರಿಕಾರ್ಡಿನೊಂದಿಗೆ ದಾಖಲ್ ಮಾಡತಕ್ಕದ್ದು.

257. ಯಾವದಾದರೂ ದಸ್ತಾವೇಜಿನ-ಯಾ- ಬೇರೆ ಪದಾರ್ಥದ ಹಾಜರಿ ಉದ್ದಿಶ್ಯವಾದರೂ, ಅಥವಾ ವಿಚಾರಣೆ-ಯಾ-ಫಾಟೆ ವಿಚಾರಣೆ ಉದ್ದಿಶ್ಯ ಯಾವ ಸಾಕ್ಷಿಗಾರನ (ಅತನು ಆ ಮೊಕದ್ದಮೆಯಲ್ಲಿ ಮೊದಲು ವಿಚಾರಿಸಲ್ಪಟ್ಟರೂ-ಯಾ-ಪಡದಿದ್ದರೂ) ಹಾಜರಿಬಗ್ಗೆ ಆದರೂ, ಯಾವದಾದರೂ ಪ್ರೊಸೆಸ್ ಕೊಡಬೇಕೆಂತ ಅಪಾದನೆ ಪಟ್ಟವನು ಮ್ಯಾಜಿಸ್ಟ್ರೇಟನ ಬಳಿ ಮನವಿ ಮಾಡಿಕೊಂಡರೆ, ಸದರೀ ಮ್ಯಾಜಿಸ್ಟ್ರೇಟನು ಅಂಥಾ ಮನಿವಿಯು ರೋಷ್ಟ-ಯಾ-ಕಾಲವಿಳಂಬ ಪಡಿಸುವದಕ್ಕೆ ಅಥವಾ ನ್ಯಾಯ ನಡಿಯದೆ ತಪ್ಪಿ ಹೋಗುವ ಉದ್ದಿಶ್ಯ ಮಾಡೋಣಾದ್ದೆಂಬ ಸಬಬಿನ ಮೇಲೆ ತಿರಸ್ಕರಿಸಲ್ಪಡಬೇಕೆಂತ ಆಲೋಚಿಸುವ ಸಂಗತಿಗಳಲ್ಲಿ ಹೊರತು, ಅನ್ಯಥಾ, ಅಂಥಾ ಪ್ರೊಸೆಸನ್ನು ಕೊಡತಕ್ಕದ್ದು. ಹಾಗೆ ತಿರಸ್ಕರಿಸುವಲ್ಲಿ ಅಂಥಾ ಸಬಬುಗಳು ಮಾಜಿಸ್ಟ್ರೇಟನಿಂದ ಬರಹ ಮೂಲಕ ರಿಕಾರ್ಡ್ ಮಾಡಲ್ಪಡತಕ್ಕದ್ದು.

ಅಪಾದನೆಪಟ್ಟವನ ಅಪೇಕ್ಷೆ ಪ್ರಕಾರ ಸಾಕ್ಷ್ಯವನ್ನು ಹಾಜರುಪಡಿಸಲು ಬಲಾತ್ಕರಿಸುವದಕ್ಕಾಗಿ ಪ್ರೊಸೆಸ್.

ಅಂಥಾ ಮನವಿ ಮೇಲೆ ಯಾವನೊಬ್ಬ ಸಾಕ್ಷಿಗಾರನನ್ನ ಸಮನ್ಸಕೊಡುವದಕ್ಕೆ ಮುಂಚಿತವಾಗಿ, ದರಿಯಾಫ್ತಿ ಉದ್ದಿಶ್ಯವಾಗಿ ಹಾಜರಾಗುವಲ್ಲಿ ಆತನಿಗೆ ಉಂಟಾಗಬಹುದಾದ ನ್ಯಾಯ್ಯವಾದ ಖರ್ಚು ಕೋರ್ಟಿನಲ್ಲಿ ಠೇವಣಾತಿ ಕಟ್ಟಬೇಕೆಂತ ಮ್ಯಾಜಿಸ್ಟ್ರೇಟು ಅಪೇಕ್ಷಿಸಬಹುದು.

258. ಈ ಅಧ್ಯಾಯಕ್ಕನುಗುಣವಾಗಿ ತಕ್ಸೀರುನಾಮೆ ಏರ್ಪಡಿಸಿರುವ ಯಾವ ಮೊಕದ್ದಮೆಯಲ್ಲಾದರೂ ಅಪಾದನೆ ಪಟ್ಟವನು ತಪ್ಪು ನಡಿಸಲಿಲ್ಲವೆಂತ ಮ್ಯಾಜಿಸ್ಟ್ರೇಟನಿಗೆ ಕಾಣಬಂದರೆ, ಅವನು ಖುಲಾಸೆ ಹುಕ್ಕುಂ ಬರಿಯುತಕ್ಕದ್ದು.

ಖುಲಾಸೆ.

ಅಂಥಾ ಯಾವ ಮೊಕದಮೆಯಲ್ಲಾದರೂ ಅಪಾದನೆ ಪಟ್ಟವನು ತಪ್ಪು ಮಾಡಿದ್ದುಂಟೆಂತ ಮ್ಯಾಜಿಸ್ಟ್ರೇಟಗೆ ಕಾಣಬಂದರೆ, ಮ್ಯಾಜಿಸ್ಟ್ರೇಟನು, ಕಾನೂನ್ ಪ್ರಕಾರ ಅವನಿಗೆ ಸಜಾ ವಿಧಿಸತಕ್ಕದ್ದು.

ಸಾಬೀತು.

1134

259\. ಫಿರ್ಯಾದಿನ ಮೇಲೆ ವ್ಯವಹರಣೆಯು ಪ್ರಾರಂಭಿಸಲ್ಪಟ್ಟದ್ದಾಗಿ ಇದ್ದು, ಮೊಕದ್ದಮೆಯು ತನಿಖಿ ಬಗ್ಯೆ ನಿಶ್ಚಯಿಸಿದ ತಾರೀಖಿಗೆ ಫಿರ್ಯಾದುದಾರನು ಗೈರ ಹಾಜರಾಗಿ ಇದ್ದರೆ, ಮತ್ತು ಸದರೀ ತಕ್ಶೀರು ನ್ಯಾಯವಾಗಿ ಸಮಾಧಾನವಾಗಲ್ಪಡಬಹುದಾಗಿದ್ದಾಗ, ಈ ಮುಂಚೆ ಇವರಲ್ಲಿ ಏನೊಂದು ಅಡಗಿ ಇದ್ದಾಗ್ಯೂ ಸರಿಯೇ, ಮ್ಯಾಜಿಸ್ಟ್ರೇಟನು, ತನಗೆ ಯುಕ್ತ ತೋರುವ ಪ್ರಕಾರ, ತಕ್ಶೀರ್ದಾರನನ್ನು ಖುಲಾಸೆಮಾಡಬಹುದು. ...

ಫಿರ್ಯಾದ್ದಾರನ ಗೈರಹಾಜರಿ.

CHAPTER XXII.—OF SUMMARY TRIALS.

22ನೇ ಅಧ್ಯಾಯ.—ಘೂಟ ವಿಚಾರಣೆಗಳನ್ನ ಕುರಿತು.

ಘೂಟಾಗಿ ದರಿಯಾಫ್ತು ಮಾಡಲಿಕ್ಕೆ ಇರುವ ಅಧಿಕಾರ.

260\. ಈ ಕೋಡಿನಲ್ಲಿ ಏನೂ ಅಡಗಿ ಇದ್ದಾಗ್ಯೂ ಸರಿಯೇ,

(1) ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ,

(2) ಮೈಸೂರು ಗವರ್ನಮೆಂಟನವರಿಂದ ಈ ಬಗ್ಯೆ ವಿಶೇಷವಾಗಿ ಅಧಿಕಾರ ಹೊಂದಿದ ಯಾವನೊಬ್ಬ ಫರ್ಸ್ಟಕ್ಲಾಸ ಮಾಜಿಸ್ಟ್ರೇಟ, ಮತ್ತು

(3) ಫರ್ಸ್ಟಕ್ಲಾಸ ಮಾಜಿಸ್ಟ್ರೇಟನ ಅಧಿಕಾರಗಳು ಪಡೆದಿರುವ ಮತ್ತು ಮೈಸೂರು ಗವರ್ನಮೆಂಟನವರಿಂದ ಈ ಬಗ್ಯಾಗಿ ವಿಶೇಷವಾಗಿ ಅಧಿಕಾರಪಟ್ಟ ಮಾಜಿಸ್ಟ್ರೇಟರ ಯಾವ ಬೆಂಚಿನವರಾದರೂ, ಈ ಕೆಳಗಿನ ತಕ್ಶೀರುಗಳ ಬಾಬತು ಎಲ್ಲವನ್ನಾಗಲೀ—ಯಾ—ಯಾವವನ್ನಾಗಲೀ ಘೂಟಾಗಿ ದರಿಯಾಫ್ತು ಮಾಡಬಹುದು:—

(a) ಮರಣದಂಡನೆಯ ಮೂಲವಾಗಿ, ನೀರಿನಮೇಲೆ ಕಳುಹಿಸಲ್ಪಡುವ ದಂಡನೆಯ ಮೂಲವಾಗಿ, ಅಥವಾ 6 ತಿಂಗಳಿಗೆ ಮೀರಿ ಇರುವ ಒಂದು ವಾಯಿದೆ ಪರಿಯಂತ ಕೈದಿನ ಮೂಲವಾಗಿ ಶಿಕ್ಷಿಸಲ್ಪಡ ಕೂಡದಂಥಾ ತಕ್ಶೀರುಗಳು;

(b) ಇಂಡಿಯನ್ ಪೆನಲ್ ಕೋಡಿನ 264,—265—ವ—266ನೇ ಪ್ರಕರಣಗಳಿಗನುಗುಣವಾಗಿ ಬಟ್ಟುಗಳಿಗೆ—ವ—ಅಳತೇ ಸಾಧನಗಳಿಗೆ ಸಂಬಂಧಪಡುವ ತಕ್ಶೀರುಗಳು ;

(c) ಅದೇ ಕೋಡಿನ 323ನೇ ಪ್ರಕರಣಕ್ಕನುಗುಣವಾಗಿ, ಹಿಂಸೆ ;

(d) ಚೋರಿಯಾದ ಮಾಲಿನ ಕಿಮ್ಮತು ಐವತ್ತು ರೂಪಾಯಿಗಳಿಗೆ ಜಾಸ್ತಿಯಾಗದ ಪಕ್ಷದಲ್ಲಿ, ಅದೆ ಕೋಡಿನ 379, 380—ವ—381ನೇ ಪ್ರಕರಣಕ್ಕನುಗುಣವಾಗಿ, ಕಳವು;

(e) ಚೋರಿಮಾಲಿನ ಕಿಮ್ಮತ್ತು ಐವತ್ತು ರೂಪಾಯಿಗಳಿಗೆ ಜಾಸ್ತಿಯಾಗದ ಪಕ್ಷದಲ್ಲಿ, ಅದೇಕೋಡಿನ 411ನೇ ಪ್ರಕರಣಕ್ಕನುಗುಣವಾಗಿ, ಚೋರಿ ಮಾಲನ್ನು ತಾಸುಕೊಳ್ಳೋಣ ಅಥವಾ ಇಟ್ಟು ಕೊಳ್ಳೋಣ;

(f) ಚೋರಿ ಮಾಲಿನ ಕಿಮ್ಮತು ಐವತ್ತು ರೂಪಾಯಿಗಳಿಗೆ ಜಾಸ್ತಿಯಾಗದ ಪಕ್ಷದಲ್ಲಿ, ಅದೇಕೋಡಿನ 414ನೇ ಪ್ರಕರಣಕ್ಕನುಗುಣವಾಗಿ, ಚೋರಿಮಾಲನ್ನು ಮರೆ ಪಡಿಸುವದಕ್ಕೆ—ಯಾ—ಮಾರುವದಕ್ಕೆ ಸಹಾಯ ಮಾಡೋಣ ;

(g) ಅದೇಕೋಡಿನ 427ನೇ ಪ್ರಕರಣಕ್ಕನುಗುಣವಾಗಿ, ಕೆಡಕು ;

(h) ಅದೇಕೋಡಿನ 448ನೇ ಪ್ರಕರಣಕ್ಕನುಗುಣವಾಗಿ, ಮನೆಗೆ ಅತಿಕ್ರಮ ಪ್ರವೇಶ;

(i) ಅದೇ ಕೋಡಿನ 504ನೇ ಪ್ರಕರಣಕ್ಕನುಗುಣವಾಗಿ, ನೆಮ್ಮದಿಗೆ ಭಂಗ ಹುಟ್ಟಿಸ ಬೇಕೆಂಬ ಇರಾದೆಯಿಂದ ಕೆಣಕೋಣ ಮತ್ತು 506ನೇ ಪ್ರಕರಣಕ್ಕನುಗುಣವಾಗಿ, ತಕ್ಸೀರುಕರವಾಗಿ ಬೆದರಿಸೋಣ ;

(j) ಮೇಲಿನ ತಕ್ಸೀರುಗಳೊಳಗೆ ಯಾವದನ್ನಾಗಲೀ ಸಹಕರಿಸೋಣ ;

(k) ಮೇಲಿನ ತಕ್ಸೀರುಗಳೊಳಗೆ ಯಾವದನ್ನಾಗಲೀ ಮಾಡಲಿಕ್ಕೆ ಪ್ರಯತ್ನ ಮಾಡೋಣ, ಅಂಥಾ ಪ್ರಯತ್ನ ಪಡೋಣ ತಕ್ಸೀರು ಆಗಿರುವಾಗ್ಯೆ :

ಪರಂತು 34ನೇ ಪ್ರಕರಣದಿಂದ ಕೊಡೋಣಾದ ವಿಶೇಷ ಅಧಿಕಾರಗಳನ್ನು ಡಿಸ್ಟ್ರಿಕ್ಟು ಮಾಜಿಸ್ಟ್ರೇಟನು ಯಾವ ಮೊಕದ್ದಮೆಗಳಲ್ಲಿ ಚಲಾಯಿಸುತ್ತಾನೋ ಆ ಯಾವದೊಂದು ಮೊಕದ್ದಮೆಯೂ ಪೂರಾಗಿ ದರಿಯಾಫ್ತೀ ಆಗಲ್ಪಡತಕ್ಕದ್ದಲ್ಲ.

ಕಮ್ಮಿ ಅಧಿಕಾರ ಹೊಂದಿದ ಮ್ಯಾಜಿಸ್ಟ್ರೇಟರ ಬೆಂಚಿಗೆ ಅಧಿಕಾರ ಕೊಡುವದಕ್ಕೆ ಸ್ವಾತಂತ್ರ್ಯ.

261. ಸೆಕೆಂಡ್—ಯಾ—ಥರ್ಡುಕ್ಲಾಸ್ ಮಾಜಿಸ್ಟ್ರೇಟನ ಅಧಿಕಾರಗಳನ್ನು ಪಡೆದಿರುವ ಮಾಜಿಸ್ಟ್ರೇಟರ ಯಾವ ಬೆಂಚಿನವರಿಗಾದರೂ, ಈ ಕೆಳಗೆ ನಮೂದಿಸಿರುವ ತಕ್ಸೀರುಗಳ ಬಾಬತು, ಎಲ್ಲವನ್ನಾಗಲೀ—ಯಾ—ಯಾವವನ್ನಾಗಲೀ, ಪೂರಾಗಿ ದರಿಯಾಫ್ತು ಮಾಡಲಿಕ್ಕೆ ಮೈಸೂರು ಗವರ್ನಮೆಂಟಿನವರು ಅಧಿಕಾರ ಕೊಡಬಹುದು:—

(a) ಇಂಡಿಯನ್ ಪೆನಲ್ ಕೋಡಿಗೆ ವಿರೋಧವಾದ ತಕ್ಸೀರುಗಳು, 277, 278, 279, 285, 286, 289, 290, 292, 293, 294, 323, 334, 336, 341, 352, 426,—ವ—447ನೇ ಪ್ರಕರಣಗಳು;

(b) ಜುರು ಮಾನೆಯಿಂದ ಮಾತ್ರ ಅಥವಾ ಒಂದು ತಿಂಗಳಗಿಂತ ಜಾಸ್ತಿಯಾಗದೆ ಒಂದು ವಾಯಿದೆ ಪರಿಯಂತ ಕೈದಿನಿಂದ ಶಿಕ್ಷೆಯಾಗತಕ್ಕ, ಮುನಿಸಿಪಲ್ ಆಕ್ಟುಗಳಿಗೆ ವಿರೋಧವಾದ ಮತ್ತು ಪೋಲಿಸ್ ಆಕ್ಟುಗಳ ಕನಸರ್ವೆನ್ಸಿ ಕಲಮುಗಳಿಗೆ ವಿರೋಧವಾದ ತಕ್ಸೀರುಗಳು ;

(c) ಮೇಲಿನ ತಕ್ಸೀರುಗಳೊಳಗೆ ಯಾವದನ್ನಾಗಲೀ ಸಹಕರಿಸೋಣ ;

(d) ಮೇಲಿನ ತಕ್ಸೀರುಗಳೊಳಗೆ ಯಾವದನ್ನಾಗಲೀ ಮಾಡುವದಕ್ಕೆ ಎತ್ತಿಸೋಣ; ಮತ್ತು ಅಂಥಾ ಎತ್ತಿಸೋಣವು ತಕ್ಸೀರು ಆಗಿರುವಾಗ.

ಸಮನ್ಸ್—ವ—ವಾರಂಟು ಮೊಕದ್ದಮೆಗಳಿಗೆ ಲಗಾವಾಗತಕ್ಕ ನಡವಳಿಕೆ ಕ್ರಮ.

262. ಈ ಅಧ್ಯಾಯಕ್ಕನುಗುಣವಾದ ದರಿಯಾಫ್ತಿಗಳಲ್ಲಿ, ಈ ನಂತರ ನಮೂದಿಸೋಣಾದ್ದರ ಶಿವಾಯಿ, ಸಮನ್ಸ್ ಮೊಕದ್ದಮೆಗಳಗೋಸ್ಕರ ಏರ್ಪಡಿಸೋಣಾದ ನಡವಳಿಕೆಯ ಕ್ರಮವನ್ನು ಸಮನ್ಸ್ ಮೊಕದ್ದಮೆಗಳಲ್ಲಿ ಅನುಸರಿಸತಕ್ಕದ್ದು, ಮತ್ತು ವಾರಂಟು ಮೊಕದ್ದಮೆಗಳ ಬಗ್ಯೆ ಏರ್ಪಡಿಸೋಣಾದ ನಡವಳಿಕೆಯ ಕ್ರಮವನ್ನು ವಾರಂಟು ಮೊಕದ್ದಮೆಗಳಲ್ಲಿ ಅನುಸರಿಸತಕ್ಕದ್ದು.

ಕೈದಿನ ಕಾಲದ ಮಿತ.

ಈ ಅಧ್ಯಾಯಕ್ಕನುಗುಣವಾಗಿ ಸಾಬೀತು ಪಟ್ಟ ಯಾವ ಸಂಗತಿಯಲ್ಲ್ಯಾದರೂ, ಮೂರು ತಿಂಗಳಗಿಂತ ಜಾಸ್ತಿಯಾದ ಒಂದು ವಾಯಿದೆ ಪರಿಯಂತ ಕೈದಿನ ಸಜಾವನ್ನು ವಿಧಿಸಕೂಡದು.

ಅಪ್ಪೀಲಿಲ್ಲದ ಮೊಕದ್ದಮೆಗಳಲ್ಲಿ ರಿಕಾರ್ಡು.

263. ಅಪ್ಪೀಲಿಲ್ಲದೆ ಇರುವಂಥಾ ಮೊಕದ್ದಮೆಗಳಲ್ಲಿ, ಮ್ಯಾಜಿಸ್ಟ್ರೇಟಾಗಲೀ ಯಾ ಮ್ಯಾಜಿಸ್ಟ್ರೇಟುಗಳ ಬೆಂಚಿನವರಾಗಲೀ ಸಾಕ್ಷಿಗಾರರ ಸಾಕ್ಷ್ಯವನ್ನು ಬರೆಯಬೇಕೆಂಬ ಅಥವಾ ಕ್ರಮವಾದ ತಕ್ಸೀರುನಾಮೆಯನ್ನು ಏರ್ಪಡಿಸ ಬೇಕೆಂಬ ಅಗತ್ಯವಿಲ್ಲ; ಆದರೆ ಮೈಸೂರು ಗವರ್ನಮೆಂಟಿನವರು ಆಜ್ಞಾಪಿಸ ಬಹುದಾದಂಥಾ ನಮೂನೆಯಲ್ಲಿ ಈ ಕೆಳಗಿನ ವಿವರಣೆಗಳನ್ನು ಆತನಾಗಲೀ—ಯಾ—ಅವರಾಗಲೀ ಬರೆಯ[illegible]ದ್ದು:—

(a) ಅವಿಚ್ಛಿನ್ನವಾದ ಸಂಖ್ಯೆ ;

(b) ತಕ್ಸೀರು ನಡೆದ ತಾರೀಖು ;

(c) ರಿಪೋರ್ಟಾದ—ಯಾ—ಫಿರ್ಯಾದಾದ ತಾರೀಖು ;

(d) ಫಿರ್ಯಾದುದಾರನ ಹೆಸರು (ಇದ್ದರೆ) ;

(e) ಆಪಾದನೆ ಪಟ್ಟವನ ಹೆಸರು, ತಂದೆ ತಾಯಿಗಳ ವಿವರ, ವಾಸಸ್ಥಳ ;

(f) ಫಿರ್ಯಾದು ಹೇಳಲ್ಪಟ್ಟ ತಕ್ಸೀರು ಮತ್ತು ರುಜುವಾದ ತಕ್ಸೀರು (ಇದ್ದರೆ), ಮತ್ತು 260ನೇ ಪ್ರಕರಣದ ಕ್ಲಾಸ್ (d)ಕ್ಲಾಸ್ (e)—ಯಾ—ಕ್ಲಾಸ್ (f) ನೊಳಗಡಗುವ ಮೊಕದ್ದಮೆಗಳಲ್ಲಿ ಯಾವದರ ವಿಷಯವಾಗಿ ತಕ್ಸೀರು ನಡದಿದ್ದೆಯೋ ಆ ಸ್ವತ್ತಿನ ಕಿಮ್ಮತ್ತು ;

(g) ಆಪಾದನೆ ಪಟ್ಟವನ ಉದಾಹರಣೆ ಮತ್ತು ಆತನ ವಿಚಾರಣೆ (ಇದ್ದರೆ) ;

(h) ಇತ್ಯರ್ಥ, ಮತ್ತು, ಸಾಬೀತಾದ ವಿಷಯದಲ್ಲಿ, ಇದಕ್ಕಾಗಿ ಕಾರಣಗಳ ಗೋಷ್ವಾರೆ ;

(i) ಸಜಾ ಯಾ ಇತರ ಆಖೈರು ಹುಕುಮ್ ; ಮತ್ತು

(j) ಪ್ರೊಸೀಡಿಂಗ್ಸ್ ಆಖೈರು ಆದ ತಾರೀಖು.

ಅಪ್ಪೀಲಾಗತಕ್ಕ ಮೊಕದ್ದಮೆಗಳಲ್ಲಿ ರಿಕಾರ್ಡು.

264. ಮ್ಯಾಜಿಸ್ಟ್ರೇಟನಿಂದ ಅಥವಾ ಬೆಂಚಿನವರಿಂದ ಸ್ರೂಟಾಗಿ ದರಿಯಾಫ್ತಿ ಆಗಲ್ಪಟ್ಟ, ಅಪ್ಪೀಲುಳ್ಳ ಪ್ರತಿ ಮೊಕದ್ದಮೆಗಳಲ್ಲಿ, ಅಂಥಾ ಮಾಜಿಸ್ಟ್ರೇಟ—ಯಾ—ಬೆಂಚಿನವರು, ಸಜಾ ವಿಧಿಸುವದಕ್ಕಿಂತ ಮುಂಚಿತವಾಗಿ, ಸಾಕ್ಷ್ಯದ ಗೋಷ್ವಾರೆಯನ್ನು ಮತ್ತು 263ನೇ ಪ್ರಕರಣದಲ್ಲಿ ನಮೂದಿಸೋಣಾದ ವಿವರಣೆಗಳನ್ನ ಸಹ ಸೇರಿಸಿ, ಬಂದು ತೀರ್ಪು ಬರೆಯತಕ್ಕದ್ದು.

ಈ ಪ್ರಕರಣಕ್ಕೊಳಪಡುವ ಮೊಕದ್ದಮೆಗಳಲ್ಲಿ ಅಂಥಾ ತೀರ್ಪು ಮಾತ್ರವೇ ದಾಖಲೆಯಾಗಿರತಕ್ಕದ್ದು.

ರಿಕಾರ್ಡಿನ—ವ—ತೀರ್ಪಿನ ಭಾಷೆ.

265. 263 ನೇ ಪ್ರಕರಣಕ್ಕನುಗುಣವಾಗಿ ಮಾಡೋಣಾದ ರಿಕಾರ್ಡುಗಳು, ಮತ್ತು 264ನೇ ಪ್ರಕರಣಕ್ಕನುಗುಣವಾಗಿ ಬರಿಯೋಣಾದ ತೀರ್ಪುಗಳು, ಅಧ್ಯಕ್ಷನಾಗಿ ಕೆಲಸ ನೋಡುವ ಆಫಿಸರರಿಂದ ಇಂಗ್ಲೀಷಿನಲ್ಲಾಗಲಿ ಅಥವಾ ಕೋರ್ಟು ಭಾಷೆಯಲ್ಲಾಗಲೀ ಬರೆಯಲ್ಪಡತಕ್ಕದ್ದು, ಅಥವಾ, ಅಂಥಾ ಅಧ್ಯಕ್ಷ ಆಫಿಸರನು ಯಾರಿಗೆ ಖುದ್ದು ತಾಬೇದಾರಿಯಾಗಿದ್ದಾನೆಯೋ ಆ ಕೋರ್ಟಿನವರು ನಿರ್ದೇಶಿಸುವ ಮೇರಿಗೆ, ಅಂಥಾ ಆಫಿಸರನ ಸ್ವಂತ ಭಾಷೆಯಲ್ಲಿ, ಬರೆಯಲ್ಪಡತಕ್ಕದ್ದು.

ಬೆಂಚಿನವರು ಯಾರಿಗೆ ಖುದ್ದು ತಾಬೇದಾರಿಯಾಗಿದ್ದಾರೆಯೋ ಆ ಕೋರ್ಟಿನವರಿಂದ, ಈ ಬಗ್ಗೆ ನೇಮಕ ಪಟ್ಟ ಬಬ್ಬ ಆಫಿಸರನದ್ವಾರ, ಮೇಲೆ ಹೇಳೋಣಾದ ರಿಕಾರ್ಡನ್ನು—ಯಾ ತೀರ್ಪನ್ನು ತಯಾರ್ಮಾಡಲಿಕ್ಕೆ, ತಕ್ಸೀರುಗಳನ್ನು ಸ್ರೂಟಾಗಿ ದರಿಯಾಫ್ತಿ ಮಾಡಲಿಕ್ಕೆ ಅಧಿಕಾರ ಹೊಂದಿರುವ ಮಾಜಿಸ್ಟ್ರೇಟುಗಳ ಯಾವ ಬೆಂಚಿನವರಿಗಾದರೂ, ಮೈಸೂರು ಗವರ್ನಮೆಂಟಿನವರು ಅಧಿಕಾರ ಕೊಡಬಹುದು, ಮತ್ತು ಹಾಗೆ ತಯಾರ್ಮಾಡಲ್ಪಟ್ಟ ರಿಕಾರ್ಡ್—ಯಾ—ತೀರ್ಪು ಹಾಜರಾಗಿ ವ್ಯವಹರಣೆಯಲ್ಲಿ ಷರೀಕಾದಂಥಾ ಬೆಂಚಿನ ಪ್ರತಿ ಮೆಂಬರಿಂದ ದಸ್ಕತಾಗಲ್ಪಡತಕ್ಕದ್ದು.

ಮ್ಯಾಜಿಸ್ಟ್ರೇಟುಗಳ ಬೆಂಚು ಕ್ಲಾರ್ಕನನ್ನ ನೇಮಿಸುವದಕ್ಕೆ ಅಧಿಕಾರ ಹೊಂದಬಹುದು.

CHAPTER XXIII.—OF TRIALS BEFORE COURTS OF SESSION.

23ನೇ ಅಧ್ಯಾಯ.—ಸೆಷನ್ ಕೋರ್ಟುಗಳ ಮುಂದೆ ದರ್ಯಾಫ್ತಿಗಳು.

A.—Preliminary.

A.—ಪ್ರಾರಂಭ.

ಸೆಷನ್‌ಕೋರ್ಟಿನವರ ಮುಂದೆ ನಡಿಯುವ ದರ್ಯಾಫ್ತಿಗಳು ಜೂರಿಯವರಿಂದ—ಯಾ—ಅಸ್ಸೆಸ್ಸರುಗಳೊಂದಿಗೆ ಆಗಿರತಕ್ಕದ್ದು

268. ಸೆಷನ್ ಕೋರ್ಟಿನವರ ಮುಂದೆ ನಡೆಯುವ ಎಲ್ಲಾ ದರ್ಯಾಫ್ತಿಗಳೂ ಜೂರಿಯವರಿಂದಾಗಲಿ ಅಥವಾ ಅಸ್ಸೆಸ್ಸರ ಸಹಾಯದಿಂದಾಗಲೀ ಆಗಿರತಕ್ಕದ್ದು.

269. ಯಾವದೊಂದು ಸೆಷನ್ ಕೋರ್ಟಿನವರಮುಂದೆ ದರಿಯಾಫ್ತು ಆಗುವ ತಕ್ಸೀರುಗಳನ್ನೆಲ್ಲಾ, ಅಥವಾ ಫಲಾನೆ ಒಂದು ತರಹಾವಿನ ತಕ್ಸೀರುಗಳನ್ನು, ಯಾವ ಡಿಸ್ಟ್ರಿಕ್ಟಿನಲ್ಲಾದರೂ ಅವುಗಳ ದರಿಯಾಫ್ತು ಜೂರಿಯುವರಿಂದಾಗತಕ್ಕದ್ದೆಂತ, ಸರಕಾರಿ ಗೆಜೆಟಿನಲ್ಲಿ ಹುಕ್ಕುಂ ಕೊಡುವದರದ್ವಾರ, ಮೈಸೂರು ಗವರ್ನಮೆಂಟಿನವರು ಅಪ್ಪಣೆ ಕೊಡಬಹುದು, ಮತ್ತು ಅಂಥಾ ಹುಕುಮನ್ನು ರದ್ದುಮಾಡಲೂ—ಯಾ—ಬದಲಾಯಿಸಲೂ ಬಹುದು.

ಸೆಷನ್ ಕೋರ್ಟಿನವರ ಬಳಿ ದರಿಯಾಫ್ತುಗಳು ಜೂರಿಯುವರಿಂದ ಆಗತಕ್ಕದೆಂದು ಮೈಸೂರು ಗವರ್ನಮೆಂಟಿನವರು ಹುಕ್ಕುಂ ಮಾಡಬಹುದು.

ಒಂದೇ ದರಿಯಾಫ್ತಿಯಲ್ಲಿ ಅಪಾದನೆಪಟ್ಟವನು ಅನೇಕ ತಕ್ಸೀರುಗಳಿಂದ ಆಪಾದಿಸಲ್ಪಟ್ಟು, ಅವುಗಳ ಪೈಕಿ ಕೆಲವು ಜೂರಿಯುವರಿಂದಲೂ, ಮತ್ತು ಕೆಲವು ಜೂರಿಯುವರಿಂದಲ್ಲದೆಯೂ, ದರ್ಯಾಫ್ತು ಪಡತಕ್ಕವುಗಳಾದರೆ, ಅಂಥಾ ಎಲ್ಲಾ ತಕ್ಸೀರುಗಳ ಬಗ್ಯೆ ಆತನು ಜೂರಿಯುವರಿಂದಲೇ ದರ್ಯಾಫ್ತು ಮಾಡಲ್ಪಡತಕ್ಕದ್ದು.

270. ಸೆಷನ್‌ಕೋರ್ಟುಮುಂದೆ ನಡೆಯುವಪ್ರತಿ ಒಂದು ದರ್ಯಾಫ್ತಿಯಲ್ಲಿ, ಪ್ರಾಸಿಕ್ಯೂಷನ್ ಯಾನೆ ಫಿರ್ಯಾದು ಪಬ್ಲಿಕ್ ಪ್ರಾಸಿಕ್ಯೂಟರನಿಂದ ನಡಿಸಲ್ಪಡತಕ್ಕದ್ದು.

ಸೆಷನ್ ಕೋರ್ಟುಮುಂದೆ ನಡೆಯುವ ದರಿಯಾಫ್ತಿಗಳು ಪಬ್ಲಿಕ್ ಪ್ರಾಸಿಕ್ಯೂಟರಿಂದ ನಡಿಸಲ್ಪಡತಕ್ಕದ್ದು.

B—Commencement of Proceedings.

B.—ವ್ಯವಹರಣೆಗಳ ಪ್ರಾರಂಭ.

271. ದರ್ಯಾಫ್ತು ಮಾಡಲು ಅರಂಭಿಸಲಿಕ್ಕೆ ಕೋರ್ಟಿನವರು ಸಿದ್ಧವಾದಾಗ, ಅಪಾದನೆಪಟ್ಟವನು ಕೋರ್ಟಿನವರ ಮುಂದೆ ಹಾಜರಾಗತಕ್ಕದ್ದು.—ಯಾ—ತರಲ್ಪಡತಕ್ಕದ್ದು, ಆ ಮೇಲೆ ತಕ್ಸೀರುನಾಮೆಯನ್ನು ಅವನಿಗೆ ಕೋರ್ಟಿನಲ್ಲಿ ಓದಿ ವಿವರಿಸತಕ್ಕದ್ದು. ಮತ್ತು ಆತನು ಅಪಾದನೆಪಟ್ಟ ತಕ್ಸೀರು ಮಾಡಿದ್ದುಂಟೋ, ಅಥವಾ ದರ್ಯಾಫ್ತು ಆಗಬೇಕೆಂತ ದಾವೆ ಮಾಡುತ್ತಾನೋ, ಎಂತ ಅವನನ್ನು ಕೇಳತಕ್ಕದ್ದು.

ದರಿಯಾಫ್ತಿಯ ಪ್ರಾರಂಭ.

ಅಪಾದನೆಪಟ್ಟವನು ತಾನು ತಪ್ಪುಮಾಡಿದ್ದು ಉಂಟು ಎಂತ ಉದಾಹರಣೆ ಕೊಟ್ಟರೆ, ಅತನ ಉದಾಹರಣೆಯನ್ನು ಬರಕೊಂಡು, ಅದರ ಮೇಲೆ ತಕ್ಸೀರು ಸಾಬೀತು ಮಾಡಬಹುದು.

ತಪ್ಪಿತಸ್ಥನೆಂದು ಉದಾಹರಣೆ.

272. ಅಪಾದನೆಪಟ್ಟವನು ಉದಾಹರಣೆಕೊಡದೆ ನಿರಾಕರಿಸಿದರೂ,—ಯಾ—ವಿವಾದಮಾಡದಿದ್ದರೂ, ಅಥವಾ ತನಗೆ ದಯಾಫ್ತು ಆಗಬೇಕು ಎಂತ ದಾವೆಮಾಡಿದರೂ, ಕೋರ್ಟಿನವರು ಇದರಲ್ಲಿ ಇನ್ನು ಮುಂದೆ ನಿರ್ದೇಶಿಸೋಣಾದ ಮೇರೆಗೆ ಜೂರರನ್ನು ಅಥವಾ ಅಸೆಸ್ಸರುಗಳನ್ನು ಆರಿಸಲಿಕ್ಕೆ ಮತ್ತು ಮೊಕದ್ದಮೆಯನ್ನು ದರ್ಯಾಫ್ತು ಮಾಡಲಿಕ್ಕೆ ಪ್ರವರ್ತಿಸತಕ್ಕದ್ದು.

ಉದಾಹರಣೆ ಕೊಡದೆ ನಿರಾಕರಿಸಿದರೂ—ಯಾ—ದರ್ಯಾಫ್ತು ಆಗಬೇಕೆಂತ ದಾವೆಮಾಡಿದರೂ.

ಪರಂತು ಇನ್ನು ಮುಂದೆ ನಮೂದಿಸೋಣಾದ ಆಕ್ಷೇಪಣೆ ತೆಗೆಯುವ ಹಕ್ಕಿಗೆ ಒಳಪಟ್ಟು, ಕೋರ್ಟಿನವರಿಗೆ ಯುಕ್ತವೆಂದು ತೋರುವಷ್ಟು ಅಪಾದನೆಪಟ್ಟ ಮನುಷ್ಯರನ್ನು ಒಂದರಹಿಂದೇ ಮತ್ತೊಂದಾಗಿ, ಒಂದೇ ಜೂರಿಯುವರು ದರಿಯಾಫ್ತು ಮಾಡಬಹುದು ಅಥವಾ ಒಂದೇ ಜೊತೆ ಅಸೆಸ್ಸರುಗಳು ದರ್ಯಾಫ್ತಿಯಲ್ಲಿ ಸಹಾಯ ಮಾಡಬಹುದು.

ಒಂದೇ ಜೊತೆಯ ಜೂರಿಯು ಅಥವಾ ಅಸ್ಸೆಸರುಗಳು ತಕ್ಸೀರುದಾರರನ್ನು ಒಬ್ಬೊಬ್ಬನ್ನಾಗಿ ತನಿಖಿ ಮಾಡಬಹುದು.

C.—Choosing a Jury.

C.—ಜೂರಿಯುವರನ್ನು ಆರಿಸೋಣ.

274. ಸೆಷನ್ ಕೋರ್ಟಿನವರ ಮುಂದೆ ಜೂರಿಯುವರಿಂದ ದರ್ಯಾಫ್ತು ಆಗುವ ಮೊಕದ್ದಮೆಗಳಲ್ಲಿ, ಮೈಸೂರು ಗವರ್ನಮೆಂಟಿನವರು, ಫಲಾನಾ ಡಿಸ್ಟ್ರಿಕ್ಟಿನ ಬಗ್ಯೆ ಅಥವಾ ಫಲಾನಾ ತರಹ ತಕ್ಸೀರುಗಳ ದರಿಯಾಫ್ತಿ ಬಗ್ಯೆ ಆ ಡಿಸ್ಟ್ರಿಕ್ಟಿನಲ್ಲಿ ಮೂರುಮುಂದಿ

ಜೂರಿಯುವರ ಸಂಖ್ಯೆ.

ಗೆ ಕಮ್ಮಿಯಿಲ್ಲದೆ,—ಯಾ—ಒಂಭತ್ತು ಮಂದಿಗೆ ಮೀರದೆ ವಿಷಮಸಂಖ್ಯೆಲಿ ಇಷ್ಟುಮಂದಿ ಜೂರಿ ಇರಬೇಕೆಂತ, ಹುಕುಮಿನ ಮೂಲವಾಗಿ ವಿಧಿಸಬಹುದಾದಷ್ಟು ಮಂದಿಯನ್ನುಳ್ಳ ಜೂರಿ ಇರತಕ್ಕದ್ದು;

ಸೆಷನ್ ಕೋರ್ಟಿನವರ ಮುಂದೆ ಯುರೋಪಿಯರ್—ಯಾ—ಅಮೇರಿಕರ್ರಲ್ಲದವರ ದರಿಯಾಫ್ತಿಗಾಗಿ ಜೂರಿ.

275. ಸೆಷನ್ ಕೋರ್ಟಿನವರಮುಂದೆ, ಜೂರಿಯುವರಿಂದಾಗುವ ಯುರೋಪಿಯರ್—ಯಾ—ಅಮೇರಿಕನಲ್ಲದಂಥಾ ಒಬ್ಬ ಮನುಷ್ಯನ ದರ್ಯಾಫ್ತಿಯಲ್ಲಿ, ಸದರೀ ಅಪಾದನೆ ಪಟ್ಟವನು ಅಪೇಕ್ಷಿಸಿದರೆ ಜೂರಿಯುವರ ಪೈಕಿ ಮೆಜಾರಟಿ (Majority) ಅಂದರೆ ಬಹು ಭಾಗದವರು ಯುರೋಪಿಯರ್—ಯಾ—ಅಮೇರಿಕರ್ರಲ್ಲದವರಿಂದ ಶೇರಿರತಕ್ಕದ್ದು.

ಲಾಟು ಚೀಟಿನ ದ್ವಾರ ಜೂರರುಗಳನ್ನು ಏರ್ಪಡಿಸಬೇಕು.

276. ಚೀಫ್ ಕೋರ್ಟಿನವರು ಆಗಿಂದಾಗ್ಯೆ ಕ್ರಮ ಏರ್ಪಡಿಸಿ ಅಪ್ಪಣೆ ಕೊಡಬಹುದಾದ ರೀತಿಯಲ್ಲಿ ಜೂರರುಗಳಾಗಿ ಏರ್ಪಡಿಸಲಿಕ್ಕೆ ಸಮ್ಮನ್ಸ್ ಪ್ರಕಾರ ಹಾಜರಾದ ಜನಗಳಿಂದ ಲಾಟು ಚೀಟಿನ ಮೂಲವಾಗಿ ಜೂರರನ್ನ ಆರಿಸತಕ್ಕದ್ದು.

ನಿಯಮ.

ಪರಂತು—

ಪ್ರಕೃತದ ನಡವಳಿಕೆ ನಡಿಸತಕ್ಕದ್ದು.

ಮೊದಲನೇ, ಯಾವದೊಂದು ಕೋರ್ಟಿನವರ ಬಗ್ಯಾಗಿ, ಈ ಪ್ರಕರಣಪ್ರಕಾರ ಕ್ರಮ ಏರ್ಪಡಿಸುವ ತನಕ, ಜೂರರನ್ನು ಏರ್ಪಡಿಸುವ ವಿಷಯದಲ್ಲಿ ಆ ಕೋರ್ಟಿನಲ್ಲಿ ಪ್ರಕೃತದಲ್ಲಿ ಚಾಲತಿಯಲ್ಲಿರುವ ನಡವಳಿಕೆಯನ್ನು ಅನುಸರಿಸಿ ನಡೆಯತಕ್ಕದ್ದು;

ಸಮ್ಮನ್ಸ್ ಮಾಡಲ್ಪಡದೆ ಇದ್ದವರು ಯಾವ್ಯೆ ಅರ್ಹರಾಗುತ್ತಾರೆ.

ಎರಡನೇ, ಸಮ್ಮನ್ಸ್ ಮಾಡಲ್ಪಟ್ಟ ಜನರು ಕಡಮೆಬಿದ್ದ ಸಂಗತಿಯಲ್ಲಿ ಅವಶ್ಯ ಇರುವ ಸಂಖ್ಯೆಯನ್ನು, ಕೋರ್ಟಿನವರ ಅಪ್ಪಣೆಸಿಶಿ, ಹಾಜರು ಇರುವಂಥಾ ಇತರಜನರಿಂದ ಆರಿಸಿ ತೆಗಿಯಬಹುದು.

ಜೂರಿಯವರ ಹೆಸರುಗಳನ್ನು ಕರೆಯತಕ್ಕದ್ದು.

277. ಒಬ್ಬೊಬ್ಬ ಜೂರರನ್ನ ಆರಿಸಿದ ಕೂಡಲೇ, ಆತನ ಹೆಸರನ್ನು ಘಟ್ಟಿಯಾಗಿ ಕರೆಯತಕ್ಕದ್ದು, ಮತ್ತು, ಆತನು ಹಾಜರಾದ ಕೂಡಲೇ, ಸದರೀ ಜೂರರನಿಂದ ದರ್ಯಾಫ್ತಿ ಆಗಲಿಕ್ಕೆ ಆತನಿಗೆ ಏನಾದರು ಆಕ್ಷೇಪ ಉಂಟೋ ಎಂತ ಅಪಾದನೆಪಟ್ಟವನನ್ನು ಕೇಳತಕ್ಕದ್ದು.

ಜೂರರ ವಿಷಯವಾಗಿ ಆಕ್ಷೇಪಣೆ.

ಆಗ ಸದರೀ ಅಪಾದನೆ ಪಟ್ಟವನು ಅಥವಾ ಪಬ್ಲಿಕ್ ಪ್ರಾಸಿಕ್ಯೂಟರನು ಸದರೀ ಜೂರಿಮೇಲೆ ಆಕ್ಷೇಪಿಸಬಹುದು,—ವ—ಹಾಗೆ ಆಕ್ಷೇಪಣೆಸಬಬುಗಳನ್ನು ತಿಳಿಸತಕ್ಕದ್ದು.

ಆಕ್ಷೇಪಣೆಯ ಸಬಬುಗಳು.

278. ಈ ಕೆಳಗಿನ ಸಬಬುಗಳ ಪೈಕಿ, ಯಾವ ಸಬಬನ್ನಾದರೂ ಹಿಡಿದು, ಕೋರ್ಟಿಗೆ ಸಮಾಧಾನಕರವಾಗಿ ಜೂರರ ಮೇಲೆ ಆಕ್ಷೇಪಿಸೋಣಾದರೆ, ಆಗ ಆಕ್ಷೇಪಣೆಯನ್ನು, ಅಂಗೀಕರಿಸತಕ್ಕದ್ದು:—

(a) ಜೂರರಲ್ಲಿ ಇರುವ ಏನಾದರೂ ಊಹಿಸಲ್ಪಟ್ಟ—ಯಾ—ವಾಸ್ತವ್ಯವಾದ ಪಕ್ಷಪಾತ ;

(b) ಆಸಾಮಿವಾರಿಯಾದ ಯಾವದಾದರೂ ಸಬಬು, ಯಾವತರದಂದ್ದರೆ, ಅನ್ಯರಾಜವಿಶ್ವಾಸ, ಆಯಾಯ ಕಾಲದಲ್ಲಿ ಜಾರೀಯಲ್ಲಿರುವ ಯಾವದಾದರೂ ಕಾನೂನು—ಯಾ—ಕಾನೂನಿನ ಭಾರ ಇರುವ ಕ್ರಮಕ್ಕನುಸಾರವಾಗಿ ಅವಶ್ಯವಾಗಿ ಇರುವ ಯೋಗ್ಯತೆಯುಲೋಪ ಅಥವಾ, ಇಪ್ಪತ್ತೊಂದು ವರುಷಕ್ಕಿಂತ ಕಮ್ಮಿ—ಯಾ—ಅರವತ್ತು ವರುಷಕ್ಕಿಂತ ಹೆಚ್ಚು ಪ್ರಾಯವಾಗಿ ಇರುವಿಕೆ;

(c) ಆತನು ಆಚಾರದಿಂದ ಅಥವಾ ಮತಸಂಬಂಧವಾದ ಪ್ರತಿಜ್ಞೆಯಿಂದ ಲೌಕಿಕ ಕಾರ್ಯಗಳ ಚಿಂತೆಬಿಟ್ಟ ದರಿಂದ ;

(d) ಆತನು ಸದರೀ ಕೋರ್ಟಿನಲ್ಲಿ—ಯಾ—ಕೋರ್ಟ ಕೆಳಗೆ ಯಾವ ಉದ್ಯೋಗದಲ್ಲಿಯಾದರೂ ಇರುವ ದರಿಂದ ;

(e) ಆತನು ಯಾವದಾದರೂ ಪೋಲೀಸ್ ಕೆಲಸಗಳನ್ನು ನಡಿಸುತ್ತಾ ಅಥವಾ ಆತನಿಗೆ ಪೋಲಿಸ್ ಕೆಲಸಗಳು ಒಪ್ಪಿಸಲ್ಪಟ್ಟು ಇರುವದರಿಂದ ;

(f) ಆತನು ಜೂರಿಯಾಗಿ ಕೆಲಸ ನೋಡಲಿಕ್ಕೆ, ಅನರ್ಹನೆಂತ ಕೋರ್ಟಿನವರಿಗೆ ತೋರುವಂಥಾ ಯಾವ ದಾದರೂ ಒಂದು ತಕ್ಸೀರು ಆತನ ಮೇಲೆ ಸಾಬೀತಿ ಪಟ್ಟಿರುವದರಿಂದ ;

(g) ಸಾಕ್ಷ್ಯವು ಯಾವ ಭಾಷೆಯಲ್ಲಿ ಕೊಡೋಣಾಗುತ್ತದೋ, ಅಥವಾ, ಅಂಥಾ ಸಾಕ್ಷ್ಯವನ್ನು ಯಾವ ಭಾಷೆಯಲ್ಲಿ ದುಭಾಷಿತನಮಾಡಿ ಹೇಳೋಣಾಗುತ್ತದೋ, ಆ ಭಾಷೆ ತಿಳಿಯುವದಕ್ಕೆ ಅಸ ಮರ್ಥತೆ ;

(h) ಜೂರರನಾಗಲಿಕ್ಕೆ ಅಯೋಗ್ಯನೆಂತ, ಕೋರ್ಟಿನವರಿಗೆ ತೋರಬಹುದಾದ, ಇತರ ಯಾವದಾದರೂ ಸಂಗತಿಗಳು.

ಆಕ್ಷೇಪಣೆಯ—ಇತ್ಯರ್ಥ.

279. ಒಬ್ಬ ಜೂರರನ ವಿಷಯವಾಗಿ ಮಾಡೋಣಾದ ಪ್ರತಿ ಆಕ್ಷೇಪಣೆಯು ಕೋರ್ಟಿನವರಿಂದ ಇತ್ಯ ರ್ಥಿಸಲ್ಪಡತಕ್ಕದ್ದು, ಮತ್ತು ಅಂಥಾ ಇತ್ಯರ್ಥವು ರಿಕಾರ್ಡುಮಾಡಲ್ಪಟ್ಟು ಆಖೈರು ಆಗಿರತಕ್ಕದ್ದು.

ಯಾವ ಜೂರರ ಮೇಲಿನ ಆಕ್ಷೇಪಣೆ ಅಂಗೀ ಕರಿಸೋಣಾಯಿತೋ ಅವನ ಸ್ಥಳದಲ್ಲಿ ಚೇರ್ರ ಯವನ ನೇಮಕ.

ಆಕ್ಷೇಪಣೆಯು ಅಂಗೀಕರಿಸಲ್ಪಟ್ಟರೆ, ಅಂಥಾ ಜೂರರನ ಸ್ಥಳವನ್ನು ಸರ್ಮ-ಪ್ರಕಾರ ಹಾಜರಾಗಿ 276ನೇ ಪ್ರಕರಣದಿಂದ ನಿಬಂಧಿಸಲ್ಪಟ್ಟ ರೀತಿಯಲ್ಲಿ ಆರಿಸಲ್ಪಟ್ಟ ಬೇರೆ ಯಾವನೊ ಬ್ಬನಿಂದಾದರೂ; ಅಥವಾ, ಆ ಮೇರಿಗೆ ಬೇರೆ ಯಾವನೊಬ್ಬ ಜೂರರನು ಹಾಜರು ಇಲ್ಲದಿದ್ದರೆ, ಆಗ ಜೂರರ ಪಟ್ಟಿಯಲ್ಲಿ ಹೆಸರು ಇರುವ ಕೋ ರ್ಟಿನಲ್ಲಿ ಹಾಜರು ಇರುವ ಇತರ ಯಾವನಿಂದಾದರೂ, ಅಥವಾ ಜೂರರ ನಾಗಿ ಕೆಲಸ ನಡಿಸುವದಕ್ಕೆ ಯೋಗ್ಯನೆಂತ ಕೋರ್ಟಿನವರು ಆಲೋಚಿಸುವ ಇತರ ಯಾವ ಮನುಷ್ಯನಿಂದಾದ ರೂ, ಭರ್ತಿಮಾಡತಕ್ಕದ್ದು, ಪರಂತು ಅಂಥಾ ಜೂರರ—ಯಾ—ಇತರ ಮನುಷ್ಯನ ವಿಷಯವಾಗಿ 278ನೇ ಪ್ರಕರ ಣಪ್ರಕಾರ ಆಕ್ಷೇಪಣೆ ತೆಗದು ಅಂಗೀಕರಿಸಲ್ಪಡದೇ ಇದ್ದರೇನೇ ಹಾಗೆಮಾಡಬಹುದು.

ಜೂರಿ ಸಭೆಯ ಪ್ರಮುಖನು.

280. ಜೂರರು ಆರಿಸಲ್ಪಟ್ಟಾಗ, ತಮ್ಮಪೈಕಿ ಒಬ್ಬನನ್ನು ತಮ್ಮ ಫೋರಮೆನ್ ಎಂಬ ಪ್ರಮುಖನಾಗಿ ಅವರು ನೇಮಿಸಿಕೊಳ್ಳತಕ್ಕದ್ದು.

ಆತನು ಜೂರಿಯ ಚರ್ಚೆಗಳಲ್ಲಿ ಪ್ರಮುಖನಾಗಿ ಇದ್ದು, ಜೂರಿಯವರ ತೀರ್ಮಾನವನ್ನು ನುಡಿಯಲಿಕ್ಕೂ, ಮತ್ತು ಜೂರಿಯವರಾಗಲೀ—ಯಾ—ಜೂರರಪೈಕಿ ಯಾವನೊಬ್ಬನಾಗಲೀ ಅವಶ್ಯಪಡುವ ಯಾವ ಪ್ರಮೇಯವ ನ್ನಾದರೂ ಕೋರ್ಟಿನವರೊಡನೆ ಕೇಳುವದು ಕೂಡಾ ಅವನ ಕೆಲಸವಾಗಿ ಇರುವದು.

ತಕ್ಕ ಕಾಲವೆಂತ ಜಡ್ಜಿರು ತಿಳಕೊಳ್ಳುವ ಕಾಲದೊಳಗಾಗಿ, ಜೂರಿಯವರ ಪೈಕಿ ಬಹುಭಾಗದವರು ಫೋರ್ ಮೇನ್ ಎಂಬ ಪ್ರಮುಖನನ್ನು ನೇಮಿಸುವ ವಿಷಯದಲ್ಲಿ ಐಕಮತ್ಯ ಪಡದಿದ್ದರೆ, ಆಗ ಆತನನ್ನು ಕೋರ್ಟಿನವ ರು ನೇಮಿಸತಕ್ಕದ್ದು.

ಜೂರರಗಳಿಂದ ಪ್ರಮಾಣ ಮಾಡಿಸುವಿಕೆ.

281. ಫೋರ್ಮೆನನ್ನು ನೇಮಿಸಿದಾಗ, 1873ನೇ ಇಸವಿ ಇಂಡಿಯ ದ ಪ್ರಮಾಣಗಳ ಆಕ್ಟುಪ್ರಕಾರ ಜೂರರುಗಳಿಂದ ಪ್ರಮಾಣ—ಯಾ—ಸ ತ್ಯ ಮಾಡಿಸತಕ್ಕದ್ದು.

282. ಜೂರಿಯವರಿಂದ ದರ್ಯಾಫ್ತಿ ಆಗುತ್ತಾ ಇರುವಾಗ್ಯೆ, ತೀರ್ಮಾನವನ್ನು ಕೊಡಲಿಕ್ಕೆ ಮುಂಚೆ ಯಾವಾಗಲಾದರೂ, ಸಾಕಾದ ಕಾರಣದಿಂದ ಯಾವನೊಬ್ಬ ಜೂರರನು ದರ್ಯಾಫ್ತಿ ಪೂರೈಸುವತನಕ ಹಾಜರಾಗಲಿಕ್ಕೆ ಆಗದೆ ಹೋದರೆ, ಅಥವಾ ಯಾವ ಜೂರರಾದರೂ ತಾನೇ ಗೈರ ಹಾಜರಾಗಿದ್ದು, ಅತನನ್ನ ಹಾಜರುಮಾಡಿಸಿಕೊಳ್ಳಲಿಕ್ಕೆ ಸಾಧ್ಯವಾಗದೆ ಹೋದರೂ, ಅಥವಾ ಯಾವ ಜೂರರಾದರೂ ಸಾಕ್ಷ್ಯವು ಯಾವ ಭಾಷೆಯಲ್ಲಿ ಕೊಡೋಣಾಗಿರುತ್ತದೊ—ಯಾ—ಅದನ್ನು ಯಾವ ಭಾಷೆಯಲ್ಲಿ ದುಭಾಷಿತನ ಮಾಡಿ ಹೇಳೋಣಾಗಿರುತ್ತದೋ, ಆ ಭಾಷೆಯನ್ನು ತಿಳಿಯುವದಕ್ಕೆ ಅಸಮರ್ಥನೆಂತ ತೋರಿಬಂದರೆ, ಒಬ್ಬ ಹೊಸಜೂರರನ್ನು ಸೇರಿಸತಕ್ಕದ್ದು, ಅಥವಾ ಸದರೀ ಜೂರಿಗಳನ್ನ ವಿಮೋಚನೆ ಮಾಡತಕ್ಕದ್ದು ಮತ್ತು ಒಂದು ಹೊಸ ಜೂರಿಯನ್ನು ಆರಿಸಿ ಕೂಡಿಸತಕ್ಕದ್ದು.

ಜೂರಿಸುವನು ಹಾಜರಾಗದೆ ವಗೈರೆ ಇದ್ದರೆ ನಡಿಸತಕ್ಕ ಕ್ರಮು.

ಅಂಥಾ ಪ್ರತಿ ಸಂಗತಿಯಲ್ಲಿಯೂ ಹೊಸದಾಗಿ ದರಿಯಾಫ್ತಿ ಶುರು ಮಾಡತಕ್ಕದ್ದು.

283. ಬಾರ bar ಎಂಬ ಕೈದಿಗಳನ್ನಿರಿಸುವ ಸ್ಥಳದಲ್ಲಿ ಕೈದಿಯು ಇರಲಿಕ್ಕೆಸಾಮರ್ಥ್ಯರಹಿತನಾದಾಗೆಲ್ಲಾ ಜಡ್ಜೀರು ಜೂರಿಗಳನ್ನ ವಿಮೋಚನೆ ಪಡಿಸಬಹುದು.

ಕೈದಿಯು ಅಸ್ವಸ್ಥನಾದ ಸಂಗತಿಯಲ್ಲಿ ಜೂರಿಯವರನ್ನ ವಿಮೋಚನೆ ಪಡಿಸೋಣ.

D.—*Choosing Assessors.*

D.—ಅಸ್ಸೆಸರನ್ನ ಆರಿಸೋಣ.

284. ಅಸೆಸ್ಸರುಗಳ ಸಹಾಯದಿಂದ ದರ್ಯಾಫ್ತಿಯೂ ಮಾಡಬೇಕಾಗಿದ್ದಾಗ, ಅಸ್ಸೆಸ್ಸರಾಗಿ ಕೆಲಸನೋಡತಕ್ಕಬಗ್ಗೆ ಸಮ್ಮರ್ಮ ಮಾಡಲ್ಪಟ್ಟ ಮನುಷ್ಯರಲ್ಲಿ, ಜಡ್ಜಿಯು ತನಗೆ ಯುಕ್ತವೆಂದು ತೋರುವ ಇಬ್ಬರು—ಯಾ—ಹೆಚ್ಚು ಮಂದಿಗಳನ್ನು ಆರಿಸಿ ಏರ್ಪಡಿಸತಕ್ಕದ್ದು.

ಅಸ್ಸೆಸ್ಸರನ್ನ ಹ್ಯಾಗೆ ಆರಿಸೋಣ.

285. ಅಸ್ಸೆಸ್ಸರುಗಳ ಸಹಾಯದಿಂದ ದರ್ಯಾಫ್ತಿಯಾಗುತ್ತಾ ಇರುವ ಮೊಕದ್ದಮೆಗಳಲ್ಲಿ, ಇತ್ಯರ್ಥವನ್ನು ಕೊಡುವದಕ್ಕೆ ಮುಂಚೆ, ದರ್ಯಾಫ್ತಿ ನಡಿಯುತ್ತಾ ಇರುವಾಗಯಾವ ಕಾಲದಲ್ಲಾದರೂ ಸಾಕಾದ ಸಬಬಿನಮೇಲೆ, ಅಸ್ಸೆಸ್ಸರುಗಳ ಪೈಕಿ ಒಬ್ಬನಿಗೆ ಪೂರಾ ದರ್ಯಾಫ್ತಿ ತೀರುವವರಿಗೂ ಹಾಜರು ಇರಲಿಕ್ಕಾಗದೆ ಅಸಂಧರ್ಭವಾದರೂ, ಅಥವಾ ತಾನೇ ಗೈರ ಹಾಜರಾಗಿ, ಅಂಥವನನ್ನ ಹಾಜರು ಪಡಿಸಿಕ್ಕೊಳ್ಳಲಿಕ್ಕೆ ಅಸಾಧ್ಯವಾದ ಸಂಗತಿಯಲ್ಲಿ, ಉಳಿದ ಅಸ್ಸೆಸ್ಸರ ಅಥವಾ ಅಸ್ಸೆಸ್ಸರುಗಳ ಸಹಾಯದಿಂದ ದರ್ಯಾಫ್ತಿ ನಡೆಯತಕ್ಕದ್ದು.

ಅಸ್ಸೆಸರ ಹಾಜರಾಗಲಿಕ್ಕೆ ಅಸಮರ್ಥರಾದರೆ ನಡಿಸತಕ್ಕ ಕ್ರಮು.

ದರ್ಯಾಫ್ತಿ ನಡೆಯುತ್ತಿರುವಾಗ ಅಸ್ಸೆಸ್ಸರುಗಳೆಲ್ಲಾ ಹಾಜರು ಇರಲಿಕ್ಕಾಗದೆ ಅಸಂಧರ್ಭ ಸಂಭವಿಸಿದರೆ, ಅಥವಾ ಗೈರ ಹಾಜರಾದರೂ, ವ್ಯವಹಾರಣೆಯನ್ನು ನಿಲಿಸತಕ್ಕದ್ದು, ಮತ್ತು ಹೊಸ ಅಸ್ಸೆಸ್ಸರ ಸಹಾಯದಿಂದ ಮೊಕದ್ದಮೆಯಲ್ಲಿ ತಾಜಾ ದರ್ಯಾಫ್ತಿ ನಡಿಸತಕ್ಕದ್ದು.

E.—Trial to Close of Cases for Prosecution and Defence.

E.—ಮೊಕದ್ದಮೆಗಳ ಪ್ರಾಸಿಕ್ಯೂಷನನ್ನು—ವ—ಡಿಫೆನ್ಸನ್ನ ಪೂರ್ತಿಮಾಡುವದಕ್ಕೆ ದರ್ಯಾಫ್ತಿ.

286. ಜೂರರ್‌ಗಳು, ಅಥವಾ ಅಸ್ಸೆಸ್ಸರುಗಳು ಆರಿಸಲ್ಪಟ್ಟು ಏರ್ಪಡಿಸೋಣಾದಾಗ, ಫಿರ್ಯಾದನ್ನು ನಡಿಸುವವನು ಅಪಾದಿಸಲ್ಪಟ್ಟ ತಕ್ಸೀರಿನ ವಿವರಣೆಯನ್ನು ಇಂಡಿಯನ ಪೆನಲ್‌ಕೋಡಿನಿಂದಾಗಲೀ—ಯಾ—ಇತರ ಯಾವ ಕಾನೂನಿನಿಂದಾದರೂ ಓದಿ ಹೇಳಿ, ಅಪಾದನೆ ಪಟ್ಟವನ ತಕ್ಸೀರು ಯಾವ ಸಾಕ್ಷ್ಯದಿಂದ ಸ್ಥಾಪಿಸುವದಕ್ಕೆ ತಾನು ನಿರೀಕ್ಷಿಸುತ್ತಾನೋ ಅದನ್ನು ಗೋಷ್ವಾರೆಯಾಗಿ ಹೇಳಿ ತನ್ನ ಮೊಕದ್ದಮೆಯನ್ನು ಪ್ರಾರಂಭಮಾಡತಕ್ಕದ್ದು.

ಫಿರ್ಯಾದಿ ತರಫಿನಿಂದ ಮೊಕದ್ದಮೆಯನ್ನು ಪ್ರಾರಂಭಿಸೋಣ.

ಸಾಕ್ಷಿಗಾರರ ವಿಚಾರಣೆ.

ಆಗ ಫಿರ್ಯಾದನ್ನು ನಡಿಸುವವನು ತನ್ನ ಸಾಕ್ಷಿಗಳನ್ನು ವಿಚಾರಣೆ ಮಾಡತಕ್ಕದ್ದು.

ಮ್ಯಾಜಿಸ್ಟ್ರೇಟನಮುಂದೆ ಮಾಡೋಣಾದ ಆಪಾದನೆಪಟ್ಟವನ ವಿಚಾರಣೆಯು ಸಾಕ್ಷ್ಯವಾಗಿ ಇರತಕ್ಕದ್ದು.

287. ಕಮಿಟಿಮಾಡುವ ಮ್ಯಾಜಿಸ್ಟ್ರೇಟನಿಂದ—ಯಾ—ಆತನ ಮುಂದೆ ಕ್ರಮವಾಗಿ ರಿಕಾರ್ಡು ಮಾಡಲ್ಪಟ್ಟ ಆಪಾದನೆಪಟ್ಟ ಮನುಷ್ಯನ ವಿಚಾರಣೆಯನ್ನು ಫಿರ್ಯಾದ ನಡಿಸುವವನು ಹಾಜರು ಪಡಿಸಿ ಸಾಕ್ಷ್ಯವಾಗಿ ಓದತಕ್ಕದ್ದು.

ಪ್ರಥಮ ವಿಚಾರಣೆಯಲ್ಲಿ ಕೊಡೋಣಾದ ಸಾಕ್ಷ್ಯವು ಅಂಗೀಕಾರವಾಗತಕ್ಕದ್ದು.

288. ಕಮ್ಮಿಟಿಮಾಡುವ ಮ್ಯಾಜಿಸ್ಟ್ರೇಟನಮುಂದೆ ಆಪಾದನೆ ಪಟ್ಟವನ ರೂಬರೂಬಿನಲ್ಲಿ ಕ್ರಮವಾಗಿ ತೆಗದುಕೊಳ್ಳಲ್ಪಟ್ಟ ಸಾಕ್ಷ್ಯವನ್ನು, ಅಂಥಾ ಸಾಕ್ಷಿಗಾರನು ಹಾಜರ್ಮಾಡಲ್ಪಟ್ಟು ವಿಚಾರಿಸಲ್ಪಟ್ಟು ಇದ್ದರೆ, ಅದನ್ನು ನಿರ್ವಹಿಸುತ್ತಿರುವ ಜಡ್ಜಿಯವರ ಯುಕ್ತಾನುಸಾರವಾಗಿ, ಮೊಕದ್ದಮೆಯಲ್ಲಿ ಸಾಕ್ಷ್ಯವಾಗಿ ತೆಕ್ಕೊಳ್ಳಬಹುದು.

ಫಿರ್ಯಾದ ತರಫಿನ ಸಾಕ್ಷಿಗಾರರ ವಿಚಾರಣೆ ನಂತರ ನಡಿಸತಕ್ಕ ಕ್ರಮ.

289. ಫಿರ್ಯಾದಿತರಫಿನ ಸಾಕ್ಷಿಗಾರರ ವಿಚಾರಣೆಯು, ಮತ್ತು ಆಪಾದನೆ ಪಟ್ಟವನ ವಿಚಾರಣೆಯು (ಇದ್ದರೆ) ಪೂರ್ತಿಮಾಡಲ್ಪಟ್ಟಾಗ, ಸಾಕ್ಷ್ಯವನ್ನು ಹಾಜರುಪಡಿಸಲಿಕ್ಕೆ ತಾತ್ಪರ್ಯ ಪಡುತ್ತಾನೋ ಎಂತ ಆಪಾದನೆ ಪಟ್ಟವನನ್ನು ಕೇಳತಕ್ಕದ್ದು. ಕರೆಯುವದಿಲ್ಲವೆಂದು ಅವನು ಹೇಳಿದರೆ, ಸದರೀ ಫಿರ್ಯಾದನ್ನು ನಡಿಸುವವನು ತನ್ನ ಮೊಕದ್ದಮೆಯ ಸಂಗತಿಗಳನ್ನು ಒಟ್ಟುಮಾಡಿ ಹೇಳತಕ್ಕದ್ದು; ಮತ್ತು ಆಗ ಆಪಾದನೆ ಪಟ್ಟವನು ತಕ್ಕೀರು ಮಾ...ಂಬ ವಿಷಯದಲ್ಲಿ ರುಜುವಾತು ಇಲ್ಲವೆಂದು ಕೋರ್ಟಿನವರು ಆಲೋಚಿಸುತ್ತಾರಾದರೆ, ಅಸೆಸ್ಸರುಗಳ ಸಹಾಯದಿಂದ ದರ್ಯಾಫ್ತಿ ಆದ ಮೊಕದ್ದಮೆಯಾಗಿದ್ದ ಸಂಗತಿಯಲ್ಲಿ, ಒಂದು ಇತ್ಯರ್ಥವನ್ನು ಬರೆಯಬಹುದು, ಅಥವಾ, ಜೂರಿಯವರಿಂದ ದರ್ಯಾಫ್ತಿ ಆದ ಮೊಕದ್ದಮೆಯಾಗಿದ್ದ ಸಂಗತಿಯಲ್ಲಿ, ಖುಲಾಸೆ ತೀರ್ಮಾನ ಕೊಡಹೇಳಿ ಜೂರಿಯು ಆಜ್ಞಾಪಿಸಬಹುದು.

ಆಪಾದನೆ ಪಟ್ಟವನಾಗಲೀ—ಯಾ—ಆಪಾದನೆಪಟ್ಟ ಅನೇಕರಲ್ಲಿ ಒಬ್ಬನು ರುಜುವಾತು ಕೊಡಲಿಕ್ಕೆ ತಾತ್ಪರ್ಯಪಡುವದಾಗಿ ಹೇಳಿದರೆ, ಮತ್ತು ಆಪಾದನೆ ಪಟ್ಟವರು ತಕ್ಕೀರು ಮಾಡಿದರೆಂದು ಸಾಕ್ಷ್ಯವೇನೂ ಇಲ್ಲವೆಂದು ಕೋರ್ಟಿನವರು ಆಲೋಚಿಸುತ್ತಾರಾದರೆ, ಆಗ ಸದರೀ ಕೋರ್ಟಿನವರು, ಅಸ್ಸೆಸ್ಸರುಗಳ ಸಹಾಯದಿಂದ ದರ್ಯಾಫ್ತಿಯಾದಮೊಕದ್ದಮೆ ಆಗಿದ್ದರೆ, ಒಂದು ಇತ್ಯರ್ಥವನ್ನು ಬರೆಯಬಹದು, ಅಥವಾ, ಜೂರಿಯವರಿಂದ ದರ್ಯಾಫ್ತಿಯಾಗಿ ಇದ್ದ ಸಂಗತಿಯಲ್ಲಿ, ಖುಲಾಸೆ ತೀರ್ಮಾನಕೊಡಹೇಳಿ ಜೂರಿಯವರಿಗೆ ಆಜ್ಞಾಪಿಸಬಹುದು.

ಆಪಾದನೆಪಟ್ಟವನಾಗಲೀ, ಅಥವಾ ಆಪಾದನೆಪಟ್ಟ ಅನೇಕರಪೈಕಿ ಯಾವನೊಬ್ಬನಾಗಲೀ ಸಾಕ್ಷ್ಯವನ್ನು ಕೊಡಲಿಕ್ಕೆ ತಾನು ತಾತ್ಪರ್ಯಪಡುವವಾಗಿ ಹೇಳುತ್ತಾನಾದರೆ, ಮತ್ತು ಆತ ತಪ್ಪುಮಾಡಿದ್ದುಂಟು ಎಂತ ಕೋರ್ಟಿನವರು ಆಲೋಚಿಸುತ್ತಾರಾದರೆ, ಅಥವಾ ತಾನು ರುಜುವಾತು ಕೊಡುವದಕ್ಕೆ ತಾತ್ಪರ್ಯಪಡುವದಿಲ್ಲವಾಗಿ ಆತನು ಹೇಳಿದಮೇಲೆ ಫಿರ್ಯಾದನ್ನು ನಡಿಸುವವನು ತನ್ನ ಮೊಕದ್ದಮೆಯ ಸಂಗತಗಳನ್ನು ಒಟ್ಟುಪಡಿಸಿ ಹೇಳಿದಾಗ, ಆಪಾದನೆಪಟ್ಟವನು ತಕ್ಕೀರು ನಡಿಸಿದ್ದಾನೆಂಬದಾಗಿ ರುಜುವಾತು ಉಂಟೆಂತ ಕೋರ್ಟಿನವರು ಆಲೋಚಿಸುತ್ತಾರಾದರೆ, ಆಪಾದನೆಪಟ್ಟವನನ್ನು ಆತನ ಪ್ರತಿವಾದ ಪ್ರಾರಂಭಿಸುವ ಹಾಗೆ ಕೋರ್ಟಿನವರು ಹೇಳತಕ್ಕದ್ದು.

ಡಿಫೆನ್ಸಯೆಂಬ ಪ್ರತಿವಾದ.

290. ಆಪಾದನೆ ಪಟ್ಟವನಾಗಲೀ—ಯಾ—ಆತನ ತರಫಿನ ಪ್ಲೀಡರಾಗಲೀ ತಾನು ಬಚಾಯಿಸಿಕೊಳ್ಳಲಿಕ್ಕೆ ಆಲೋಚಿಸಿರುವ ಸಂಗತಿಗಳು ಅಥವಾ ಕಾನೂನ ಯಾವದೆಂಬದು ಹೇಳಿ, ಮತ್ತು ಫಿರ್ಯಾದ ತರಫಿನಿಂದ ಹಾಜರುಮಾಡೋಣಾದ ಸಾಕ್ಷ್ಯದ ವಿಷಯದಲ್ಲಿ ಆತನಿಗೆ ಅವಶ್ಯವೆಂದು ತೋರುವ ವ್ಯಾಖ್ಯಾನಗಳನ್ನು ಮಾಡಿ, ಆತನ ಮೊಕದ್ದಮೆಯನ್ನು ಪ್ರಾರಂಭಮಾಡತ

ಕ್ಕದ್ದು. ಅನಂತರ ಆತನು ತನ್ನ ತರಫಿನ ಸಾಕ್ಷಿಗಳನ್ನ (ಇದ್ದರೆ) ವಿಚಾರಣೆ ಮಾಡಬಹುದು, ಮತ್ತು ಅವರ ಘಾಟಿ ಸವಾಲು ಮತ್ತು ಪುನರ್ವಿಚಾರಣೆ (ಇದ್ದರೆ) ಆದಮೇಲೆ ತನ್ನ ಮೊಕದ್ದಮೆಯ ಸಂಗತಿಗಳನ್ನು ಒಟ್ಟುಪಡಿಸಿ ಹೇಳಬಹುದು.

ಸಾಕ್ಷಿಗಳನ್ನ ಸಮ್ಮನ್ಸ್ ಮಾಡುವ ಮತ್ತು ವಿಚಾರಣೆಮಾಡುವ ವಿಷಯದಲ್ಲಿ ಆಪಾದನೆ ಪಟ್ಟವನ ಹಕ್ಕು.

291. ಆಪಾದನೆಪಟ್ಟವನು ತತ್ಪೂರ್ವದಲ್ಲಿ ಹೆಸರು ಹೇಳದೆ ಇರುವ ಯಾವನೊಬ್ಬ ಸಾಕ್ಷಿಗಾರನನ್ನಾದರೂ, ಅಂಥಾ ಸಾಕ್ಷಿಗಾರನು ಹಾಜರು ಇದ್ದರೆ, ವಿಚಾರಣೆ ಮಾಡಲು ಅಪ್ಪಣೇ ಕೊಡಲ್ಪಡತಕ್ಕದ್ದು ; ಪರಂತು 211 ಮತ್ತು 231ನೇ ಪ್ರಕರಣಗಳಲ್ಲಿ ನಿಬಂಧಿಸೋಣಾದಮೇರೆಗೆ ಹೊರತು, ಆತನನ್ನ ದರ್ಯಾಪ್ತಿ ಬಗ್ಗೆ ಕಮ್ಮಿಟಮಾಡಿದ ಮ್ಯಾಜಿಸ್ಟ್ರೇಟಿನ ಬಳಿಯು ಆತನುಕೊಟ್ಟ ಪಟ್ಟಿಯಲ್ಲಿ ಹೆಸರು ನಮೂದಿಸೋಣಾದ ಸಾಕ್ಷಿಗಳನ್ನಲ್ಲದೆ, ಇತರ ಯಾವ ಸಾಕ್ಷಿಗಾರರನ್ನಾಗಲೀ ಸಮ್ಮನ್ಸ್ ಮಾಡಿಸುವದಕ್ಕೆ ಆತನ ಅರ್ಹತೆ ಉಳ್ಳವನಾಗಿ ಇರಲಿಕ್ಕಿಲ್ಲ.

ಜವಾಬುಕೊಡಲಿಕ್ಕೆ ಫಿರ್ಯಾದಿದಾರನಹಕ್ಕು.

292. ಆಪಾದನೆ ಪಟ್ಟವನಾಗಲೀ, ಅಥವಾ ಆಪಾದನೆ ಪಟ್ಟವರ ಪೈಕಿ ಯಾವನೊಬ್ಬನಾಗಲೀ, 289ನೆ ಪ್ರಕರಣಪ್ರಕಾರ ಕೇಳೋಣಾದಾಗ, ತನ್ನ ತರಫಿನಿಂದ ಸಾಕ್ಷ್ಯವನ್ನ ಹಾಜರು ಪಡಿಸುವದಕ್ಕೆ ತಾತ್ಪರ್ಯಪಡುವದಾಗಿ ಹೇಳಿ ಇದ್ದರೆ ಫಿರ್ಯಾದನ್ನ ನಡಿಸುವವನು ಪ್ರತ್ಯುತ್ತರ ಕೊಡಲಿಕ್ಕೆ ಬಾಧ್ಯತೆ ಉಳ್ಳವನಾಗಿರತಕ್ಕದ್ದು.

ಜ್ಯೂರಿ ಅಥವಾ ಅಸ್ಸೆಸ್ಸರ್‌ಗಳ ಅವಲೋಕನೆ.

293. ಆಪಾದನೆ ಯಾದ ತಕ್ಸೀರು ಯೆಲ್ಲಿನಡೆದದ್ದಾಗಿ ಹೇಳೋಣಾಯಿತೋ ಆ ಸ್ಥಲವನ್ನಾದರೂ—ದರ್ಯಾಫ್ತಿಗೆ ಮುಖ್ಯವಾದಂಥ ಇತರ ಯಾವ ಸಂಗತಿಯಾದರೂ ನಡೆದ ಹೇಳೋಣಾದ ಇತರ ಯಾವ ಸ್ಥಲವನ್ನಾದರೂ, ಜ್ಯೂರಿ ಅಥವಾ ... ರುಗಳು ನೋಡಬೇಕಾದ್ದು ಯುಕ್ತವೆಂತ ಕೋರ್ಟಿನವರಿಗೆ ತೋರಿದರೆ, ಅಂಥಾ ಸಂಗತಿಯಲ್ಲಿ ಹಾಗೆ ನೋ... ಕೋರ್ಟಿನವರು ಹುಕುಂ ಮಾಡತಕ್ಕದ್ದು, ಮತ್ತು ಸದರೀ ಕೋರ್ಟಿನ ಒಬ್ಬ ಆಫೀಸರನು, ತನ್ನ ಖಬರದಾರಿ... ಆ ಜ್ಯೂರಿಯನ್ನ ಅಥವಾ ಅಸ್ಸೆಸ್ಸರುಗಳನ್ನು ಒಟ್ಟಿಗೆ ಆ ಸ್ಥಲಕ್ಕೆ ಕರಕೊಂಡು ಹೋಗತಕ್ಕದ್ದು, ಅವರಿಗೆ ... ವನ್ನು ಕೋರ್ಟಿನವರಿಂದ ನೇಮಕವಾದ ಮನುಷ್ಯನು ತೋರಿಸತಕ್ಕದ್ದು.

ಸದರೀ ಆಫಿಸರು, ಕೋರ್ಟಿನವರ ಅಪ್ಪಣೆ ಹೊರತು, ಆ ಜ್ಯೂರಿಯ ಅಥವಾ ಅಸ್ಸೆಸ್ಸರುಗಳ ಪೈಕಿ ಯಾರೊಬ್ಬರ ಸಂಗಡ ಇತರ ಯಾವ ಮನುಷ್ಯನನ್ನು ಮಾತನಾಡಲಿಕ್ಕೆ ಅಥವಾ ಬಾತಮಿ ನಡಿಸಲಿಕ್ಕೆ ಬಿಡಕೂಡದು, ಮತ್ತು ಅದನ್ನ ನೋಡಿಯಾದಮೇಲೆ, ಕೋರ್ಟಿನವರು ಅನ್ಯಥಾ ಹುಕುಂ ಕೊಡದೆ ಇದ್ದರೆ, ಅವರನ್ನ ಕೂಡಲೇ ಕೋರ್ಟಿಗೆ ವಾಪಸ್ ಕರಕೊಂಡು ಹೋಗತಕ್ಕದ್ದು.

ಯಾವಾಗ ಜ್ಯೂರಿಯವನ—ಯಾ—ಅಸ್ಸೆಸ್ಸರಿನ ವಿಚಾರಣೆ ಆಗಬಹುದು.

294. ಒಬ್ಬ ಜ್ಯೂರರ—ಯಾ—ಅಸ್ಸೆಸ್ಸರನು ಯಾವದೊಂದು ಸಂಬಂಧವುಳ್ಳ ವಿದ್ಯಮಾನಕುರಿತು ತಾನು ಸ್ವತಃ ಬಲ್ಲವನಾಗಿ ಇದ್ದರೆ, ಹಾಗೆ ಇರುವ ಸಂಗತಿಯನ್ನು ಜಡ್ಜಿಗೆ ತಿಳಿಸುವಂಥಾದ್ದು ಅವನ ಕೆಲಸವಾಗಿದೆ, ಆ ಮೇಲೆ ಅವನು ಇತರ ಯಾವನೊಬ್ಬ ಸಾಕ್ಷಿಗಾರನಂತೆಯೇ, ಅದೇರೀತಿಯಲ್ಲಿ ಅವನು ಪ್ರಮಾಣಮಾಡಿಸಲ್ಪಟ್ಟು, ವಿಚಾರಿಸಲ್ಪಡಲೂ, ಘಾಟಿಸವಾಲ್ ಹಾಕಲ್ಪಡಲೂ ಮತ್ತು ಪುನರ್ವಿಚಾರಣೆ ಮಾಡಲ್ಪಡಲೂಬಹುದು.

ನಿಲ್ಲಿಸಿ ಇಡೋಣಾದ ತನಖೀ ನಡಿಯಬೇಕಾದಾಗ ಜ್ಯೂರಿಯೂ ಅಥವಾ ಅಸ್ಸೆಸ್ಸರು ಹಾಜರಾಗಬೇಕು.

295. ಒಂದು ದರ್ಯಾಪ್ತಿಯು ನಿಲ್ಲಿಸಿಡೋಣಾದರೆ, ಅಂಥಾ ಸಂಗತಿಯಲ್ಲಿ ಹಾಗೆ ನಿಲ್ಲಿಸಿಡೋಣಾದ ದರ್ಯಾಪ್ತಿ ನಡಿಯಬೇಕಾದ ಕಾಲದಲ್ಲೂ ಆಮೇಲೆ ದರ್ಯಾಪ್ತಿ ಮುಗಿಯುವತನಕ ಅವರುಕೂಡ ಬೇಕಾದ ಪ್ರತಿ ದಫಾವಿನಲ್ಲೂ ಜ್ಯೂರರ ಅಥವಾ ಅಸ್ಸೆಸ್ಸರುಗಳು ಹಾಜರು ಇರತಕ್ಕದ್ದು.

 1143

F.—Conclusion of Trial in Cases tried by Jury.

F.—ಜೂರಿಯವರಿಂದ ದರ್ಯಾಫ್ತಿ ಮಾಡಲ್ಪಟ್ಟ ಮೊಕದ್ದಮೆಗಳ ದರ್ಯಾಫ್ತಿಯಪೂರ್ತಿ.

ಜೂರಿಗಳಿಗೆ ಒಪ್ಪಿಸೋಣ.

297. ಜೂರಿಯವರಿಂದ ದರ್ಯಾಫ್ತಿ ಮಾಡಲ್ಪಟ್ಟ ಮೊಕದ್ದಮೆಗಳಲ್ಲಿ, ಪ್ರತಿವಾದದಬಗ್ಗೆ ಮೊಕದ್ದಮೆಯು ಮತ್ತು ಫಿರ್ಯಾದು ನಡಿಸುವವನ ಜವಾಬು (ಏನಾದರೂ ಇದ್ದರೆ). ಮುಗಿದ ಮೇಲೆ, ಕೋರ್ಟಿನವರು ಫಿರಿಯಾದಿಯ—ವ—ಪ್ರತಿವಾದದ ತರಪಿನ ಸಾಕ್ಷ್ಯವನ್ನು ಒಟ್ಟುಮಾಡಿ ಮತ್ತು ಜೂರಿಯವರು ಯಾವ ಕಾನೂನಿನಂತೆ ನಡಕೊಳ್ಳತಕ್ಕದ್ದೋ ಅದನ್ನು ಕೂಡ ಬರೆದು, ಜೂರಿಯವರಿಗೆ ಚಾರ್ಜು ಮಾಡೋಣಾಗಿ ಮೊಕದ್ದಮೆ ಒಪ್ಪಿಸತಕ್ಕದ್ದು.

ಜಡ್ಜಿಯ ಕೆಲಸ.

298. ಅಂಥಾ ಮೊಕದ್ದಮೆಗಳಲ್ಲಿ, ಜಡ್ಜಿಯ ಕೆಲಸವೇನಂದರೆ—

(a) ದರ್ಯಾಫ್ತಿ ನಡೆಯುತ್ತಿರುವಾಗ, ಹುಟ್ಟುವ ಕಾನೂನು ಸಂಬಂಧವಾದ ಪ್ರಶ್ನೆಗಳನ್ನೆಲ್ಲಾ, ಮತ್ತು ಮುಖ್ಯವಾಗಿ ರುಜುಮಾಡಲಿಕ್ಕೆ ಉದ್ದೇಶಿಸಿರೋಣಾದ ವಿದ್ಯಮಾನಗಳ ಸಂಬಂಧದ ವಿಷಯವಾಗಿ ಉಂಟಾಗುವ ಪ್ರಶ್ನೆಗಳನ್ನೆಲ್ಲಾ, ಮತ್ತು ಸಾಕ್ಷ್ಯದ ಅಂಗೀಕಾರವು ಅಥವಾ ಕಕ್ಷಿಗಾರರಿಂದ—ಯಾ—ಅವರ ತರಫಿನಿಂದ ಕೇಳಲ್ಪಟ್ಟ ಸವಾಲುಗಳ ಯುಕ್ತತೆಯನ್ನು ಫೈಸಲ ಮಾಡುವದು; ಮತ್ತು ಅಂಗೀಕಾರವಾಗದ ಸಾಕ್ಷ್ಯವನ್ನು ಕಕ್ಷಿಗಾರರು ಆಕ್ಷೇಪಿಸಿದರೂ ಆಕ್ಷೇಪಿಸದಿದ್ದರೂ ಸದರೀ ಸಾಕ್ಷ್ಯವನ್ನ ತನ್ನ ಯುಕ್ತಾನುಸಾರ ಹಾಜರ್ಮಾಡಕೂಡದೆಂದು ಅಡ್ಡೀಮಾಡುವದು;

(b) ದರ್ಯಾಫ್ತಿ ಕಾಲದಲ್ಲಿ ಸಾಕ್ಷ್ಯವಾಗಿ ಕೊಡೋಣಾದ ಯೆಲ್ಲಾ ದಸ್ತಾವೇಜುಗಳ ಅರ್ಥದ—ವ—ನಿರ್ಮಾಣದ ಮೇಲೆ ಫೈಸಲ್ಮಾಡುವದು;

(c) ಫಲಾನೇ ವಿಷಯಗಳಬಾಬತು ಸಾಕ್ಷ್ಯವನ್ನು ಕೊಡಿಸುವದಕ್ಕೋಸ್ಕರ ರುಜುಮಾಡಲಿಕ್ಕೆ ಅವಶ್ಯವಾಗಿರಬಹುದಾದ, ವಿದ್ಯಮಾನದ ಬಾಬತು ಸಮಸ್ತ ವಿಷಯಗಳಮೇಲೆ ಫೈಸಲ್ಮಾಡುವದು;

(d) ಹುಟ್ಟುವಂಥಾ ಯಾವ ಪ್ರಶ್ನೆಯಾದರೂ ತನಗೋ ಅಥವಾ ಜೂರಿಯವರಿಗೋ, ಯೆಂಬದನ್ನು ಫೈಸಲ್ಮಾಡುವದು, ಸದರೀ ಪ್ರಶ್ನೆಯ ವಿಷಯವಾಗಿ ಆತನು ಕೊಡುವ ಫೈಸಲ್ ಜೂರರನ್ನು ಬದ್ಧಪಡಿಸುವದು,

ಜಡ್ಜಿಯು, ಒಟ್ಟುಪಡಿಸುತ್ತಿರುವಾಗ, ತನಗೆ ಯುಕ್ತವೆಂದು ತೋರಿದರೆ, ವಿದ್ಯಮಾನದ ಪ್ರಶ್ನೆಯಮೇಲೆ ೞ ಕಾನೂನು—ವ—ವಿದ್ಯಮಾನ ಇವೆರಡೂ ಮಿಶ್ರವಾಗಿ ವ್ಯವಹರಣೆಗೆ ಸಂಬಂಧಪಡುವ ಪ್ರಶ್ನೆಯಮೇಲೆ ಇರುವ ಅಭಿಪ್ರಾಯವನ್ನು ಜೂರಿಯವರಿಗೆ ಹೇಳತಕ್ಕದ್ದು.

ಉದಾಹರಣೆಗಳು.

(a) ಮೊಕದ್ದಮೆಯಲ್ಲಿ ಸಾಕ್ಷಿಗಾರನಲ್ಲದ ಒಬ್ಬನ ವಾಂಗ್ಮೂಲದ ಸಾಕ್ಷ್ಯವನ್ನು ಸಾಕ್ಷ್ಯವಾಗಿ ಅಂಗೀಕಾರ ಪಡಬಹುದಾದ ಸಂಧರ್ಭಗಳು ರುಜುಪಟ್ಟಿರುವದೆಂಬ ಸಬಬಿನಮೇಲೆ ಸಾಕ್ಷ್ಯವಾಗಿ ಕೊಡುವದಕ್ಕೆ ಹೇಳಿಧೆ.

ಅಂಥಾ ಸಂದರ್ಭಗಳ ಇರೋಣವು ರುಜುವಾಗಲ್ಪಟ್ಟಿಧೆಯೋ ಇಲ್ಲವೇ ಯಂಬದನ್ನು ತೀರ್ಮಾನಿಸುವದು ಜಡ್ಜಿಯ ಕೆಲಸವಾಗಿಧೆ, ಜೂರಿಯವರ ಕೆಲಸವಲ್ಲ.

(b) ಒಂದು ಮೂಲ ದಸ್ತಾವೇಜು ಕಳೆದುಹೋಯಿತೆಂದು—ಯಾ—ನಾಶವಾಯಿತೆಂದು ಹೇಳಿರುವಾಗ ಸದರೀ ದಸ್ತಾವೇಜಿನ ದುಯ್ಯಂ ಸಾಕ್ಷ್ಯವನ್ನು ಕೊಡಲಿಕ್ಕೆ ಹೇಳಿದೆ.

ಸದರೀ ಮೂಲ ದಸ್ತಾವೇಜನ್ನ ಹೋಗಲಾಡಿಸಿಕ್ಕೊಂಡನೋ—ಯಾ—ಅದು ನಾಶನವಾಯಿತೋ ಯೆಂಬದನ್ನು ತೀರ್ಮಾನಿಸುವದು ಜಡ್ಜಿಯ ಕೆಲಸವಾಗಿಧೆ.

ಜೂರಿಯ ಕೆಲಸ.

299. ಜೂರಿಯ ಕೆಲಸವೇನಂದರೆ—

(a) ವಿದ್ಯಮಾನಗಳ ಬಾಬತು ಯಾವ ಭಾವವು ಯತಾರ್ಥವು ಯೆಂಬದನ್ನು ಫೈಸಲ್ ಮಾಡುವದೂ, ಮತ್ತು ಜಡ್ಜಿಯವರು ವಿಧಿಸುವ ರೀತೀಲಿ, ಆಗ ಸದರೀ ಭಾವಕ್ಕನುಗುಣವಾಗಿ ಯೆಂಥಾ ಫೈಸಲ್ ಕೊಡತಕ್ಕದ್ದೋ ಆ ಫೈಸಲ್ ಕೊಡುವದು ;

(b) ಅಸಾಧಾರಣ ಭಾವವಾಗಿ ಉಪಯೋಗಿಸೋಣಾದ ಸಮಸ್ತ ಪಾರಿಭಾಷಿಕ ಪದಗಳ (ಕಾನೂನಿನ ಪದಗಳ್ಲಲ್ಲದೆ ಇತರ) ಮತ್ತು ಮಾತುಗಳ ಅರ್ಥವನ್ನು ಗೊತ್ತು ಮಾಡುವದು ಅವಶ್ಯವಾಗಿರಬಹುದಾಗಿದ್ದರೆ, ಆಗ ಸದರೀ ಅರ್ಥವನ್ನು ಗೊತ್ತು ಮಾಡುವದು, ಅಂಥಾ ಮಾತು ದಸ್ತಾವೇಜುಗಳಲ್ಲಿ ಬಂದರೂ ಬಾರದಿದ್ದರೂ ಚಿಂತೆಯಿಲ್ಲ ;

(c) ಕಾನೂನಿನಿಂದ ವಿದ್ಯಮಾನದ ಬಾಬತು ಸವಾಲುಗಳೆಂಬದಾಗಿ ಯೆಣಿಸಲ್ಪಡುವ ಪ್ರಶ್ನೆಗಳನ್ನೆಲ್ಲಾ ಫೈಸಲ್ ಮಾಡುವದು ;

(d) ಸಾಧಾರಣವಾಗಿ ನಿರ್ಧಾರಣವಾಗದ ಉಚ್ಚಾರಣೆಗಳು ಫಲಾನೇ ಫಲಾನೇ ಮೊಕದ್ದಮೆಗಳಿಗೆ, ಲಗಾವಾಗುತ್ತವೋ—ಯಾ—ಲಗಾವಾಗುವದಿಲ್ಲವೋ ಯೆಂಬುದನ್ನು ಫೈಸಲ್ ಮಾಡುವದು, ಪರಂತು ಉಚ್ಚಾರಣೆಗಳು ಕಾನೂನು ಸಂಬಂಧವಾದ ಆಚರಣೆ ಕ್ರಮಕ್ಕೆ ಠಿಘರಾದರೂ, ಅಥವಾ ಅ ಅರ್ಥವು ಕಾನೂನಿನಿಂದ ಗೊತ್ತಾಗತಕ್ಕದ್ದಾಗಿದ್ದರೂ, ಈ ಉಭಯ ಸಂಗತಿಗಳು ಅವುಗಳನ್ನು ಇತ್ಯರ್ಥಮಾಡುವದು ಜಡ್ಜಿಯ ಕೆಲಸವಾಗಿದೆ.

ಉದಾಹರಣೆಗಳು.

(a) B ಯೆಂಬವನ ಖೂನೀಬಾಬಿನಲ್ಲಿ A ಯು ದರ್ಯಾಪ್ತಿ ಮಾಡಲ್ಪಟ್ಟನು.

ಖೂನಿ ಯೆಂಬದಕ್ಕೂ ಕೊಲೇಪಾತಕವೆಂಬದಕ್ಕೂ ಇರುವ ವ್ಯತ್ಯಾಸವನ್ನು ಜೂರಿಯವರಿಗೆ ತಿಳಿಸುವಂಥಾದ್ದು ಜಡ್ಜಿಯವಾಗಿದೆ, ಮತ್ತು ವಿದ್ಯಮಾನಗಳ ಬಾಬತು ಯಾವ ಭಾವಗಳಮೇಲೆ A ಯೆಂಬುವನಮೇಲೆ ಖೂನಿ—ಯಾ—ಕೊಲೇಪಾತಕತು ಮಾಡತಕ್ಕದ್ದು—ಯಾ—ಅವನನ್ನ ಖುಲಾಸೆ ಮಾಡತಕ್ಕದ್ದು, ಯೆಂದ ಜೂರಿಯವರಿಗೆ ಹೇಳುವಂಥಾದ್ದು ಜಡ್ಜಿಯಕೆಲಸ.

ವಿದ್ಯಮಾನಗಳ ಯಾವ ಭಾವವು ಯತಾರ್ಥವೆಂದು ಫೈಸಲ್ ಮಾಡುವಂಥಾದ್ದು, ಮತ್ತು ಜಡ್ಜಿಯ ನಿರ್ದೇಶಕ್ಕನುಗುವೊಂದು ಫೈಸಲ್ ಕೊಡುವಂಥಾದ್ದು, ಜೂರಿಯವರ ಕೆಲಸವಾಗಿದೆ, ಅ ನಿರ್ದೇಶವು ಸರಿಯಾಗಿದ್ದರೂ ಇಲ್ಲದಿದ್ದರೂ ಸದರೀ ನಿರ್ದೇದಿಗೆ ಜೂರಿಯವರು ಸಮ್ಮತಿಪಟ್ಟರೂ ಸಮ್ಮತಿಪಡದಿದ್ದರೂ ಚಿಂತೆಯಿಲ್ಲ.

(b) ಒಂದು ಫಲಾನೇ ಬಾಬತಿನಲ್ಲಿ ಒಬ್ಬ ಮನುಷ್ಯನು ಯುಕ್ತವಾದ ನಂಬಿಕೆಯುಳ್ಳವನಾಗಿದ್ದಾನೆಯೋ ಯೆಂಬುವದು ಪ್ರಶ್ನೆಯಾಗಿರುತ್ತದೆ.

ಯುಕ್ತವಾದ ಪ್ರವೀಣತೆಯಿಂದ—ಯಾ—ಕ್ರಮವಾದ ಜಾಗರೂಕತೆಯಿಂದ ಕೆಲಸ ನಡಿಸಲ್ಪಟ್ಟಿದೆ ಯೆಂಬುವಂಥಾದ್ದು. ಅವುಗಳಪೈಕಿ ಒಂದೊಂದು ಜೂರಿಯವರಿಗೆ ಶೇರಿದ ಪ್ರಶ್ನೆಯಾಗಿರುತ್ತದೆ.

300. ಜೂರಿಯವರಿಂದ ದರ್ಯಾಪ್ತಿಆದ ಮೊಕದ್ದಮೆಗಳಲ್ಲಿ, ಜಡ್ಜಿಯವರು ಜೂರಿಯವರಿಗೆ ಚಾರ್ಜ್ ಹೇಳಿ ಆದಮೇಲೆ, ಜೂರಿಯವರು ತಮ್ಮ ತೀರ್ಮಾನವನ್ನು ಆಲೋಚಿಸುವದಕ್ಕೆ ಹೋಗಬಹುದು.

ಆಲೋಚಿಸುವದಕ್ಕೆ ಹೋಗೋಣ.

ಕೋರ್ಟಿನವರ ಅಪ್ಪಣೆಯು ಹೊರತು, ಜೂರರಲ್ಲದ ಇತರ ಯಾವ ಮನುಷ್ಯನಾದರೂ ಜೂರಿಯನೊಬ್ಬ ಮೆಂಬರನೊಂದಿಗಾದರೂ ಮಾತನಾಡಲೂ ಬಾತಮಿ ನಡಿಸಲೂ ಕೂಡದು.

301. ಜೂರಿಯವರು ತಮ್ಮ ತೀರ್ಮಾನವನ್ನು ಆಲೋಚಿಸಿದಮೇಲೆ, ತಮ್ಮ ತೀರ್ಮಾನ ಫಲಾನಿದೆಂತಲೂ ಅಥವಾ ಬಹು ಸಂಖ್ಯೆಯವರ ತೀರ್ಮಾನ ಫಲಾನಾದೆಂತಲೂ, ತಮ್ಮ ಫೋರ್ಮ್ಯಾನ್ ಎಂಬ ಪ್ರಮುಖನು ಜಡ್ಜಿಗೆ ತಿಳಿಸತಕ್ಕದ್ದು.

ಜೂರಿಯವರು ತೀರ್ಮಾನಹೇಳೋಣ.

1145

302. ಜೂರಿಯವರು ಐಕಮತ್ಯ ಪಡೆಯದಿದ್ದರೆ, ಆ ಜಡ್ಜಿಯು ಇನ್ನೂ ಆಲೋಚಿಸಲಿಕ್ಕೆ ಹೋಗಹೇಳಿ ಅವರನ್ನು ಅಪೇಕ್ಷಿಸಬಹುದು. ಜಡ್ಜಿಗೆ ನ್ಯಾಯವಾಗಿ ತೋರುವಷ್ಟು ಹೊತ್ತು ಆದ ತರುವಾಯ, ಜೂರಿಯವರು ತಾವು ಐಕಮತ್ಯ ಪಡೆಯದಿದ್ದಾಗ್ಯೂ, ತಮ್ಮ ಇತ್ಯರ್ಥವನ್ನು ಹೇಳಬಹುದು.

ಜೂರಿಯವರು ಭಿನ್ನಾಭಿಪ್ರಾಯಪಟ್ಟ ಸಂಗತಿಯಲ್ಲಿ ನಡಿಸತಕ್ಕ ಕ್ರಮ.

303. ಕೋರ್ಟಿನವರು ಅನ್ಯಥಾ ಅಪ್ಪಣೆ ಮಾಡಿದರೇನೇ ಹೊರತು, ಯಾವ ಆಪಾದನೆಗಳಮೇಲೆ ಆಪಾದನೆ ಪಟ್ಟವನು ದರ್ಯಾಫ್ತಿ ಮಾಡಲ್ಪಟ್ಟನೋ ಆ ಎಲ್ಲಾ ಆಪಾದನೆಗಳ ಮೇಲೆ ತೀರ್ಮಾನವನ್ನು ಜೂರಿಯವರು ಕೊಡತಕ್ಕದ್ದು, ಮತ್ತು ಜಡ್ಜಿಯು ಅವರ ತೀರ್ಮಾನ ವೇನೆಂದು ಗೊತ್ತು ಮಾಡಲಿಕ್ಕೆ ಅವಶ್ಯವಾದಂಥಾ ಪ್ರಶ್ನೆಗಳನ್ನು ಕೇಳಬಹುದು.

ಪ್ರತಿಚಾರ್ಜಿನಮೇಲೆ ಕೊಡತಕ್ಕ ತೀರ್ಮಾನ, ಜೂರಿಯನ್ನು ಜಡ್ಜಿಯು ಪ್ರಶ್ನೆ ಮಾಡಬಹುದು.

ಅಂಥಾ ಪ್ರಶ್ನೆಗಳೂ—ವ—ಅವುಗಳ ಜವಾಬುಗಳು ರಿಕಾರ್ಡು ಮಾಡಲ್ಪಡತಕ್ಕದ್ದು.

ಪ್ರಶ್ನೆಗಳನ್ನೂ ಅವುಗಳ ಜವಾಬುಗಳನ್ನೂ ರಿಕಾರ್ಡು ಮಾಡೋಣ.

304. ತಪ್ಪಿತದಿಂದಾಗಲೀ —ಯಾ— ಅಕಸ್ಮಿತವಾಗಿ ಆಗಲೀ ತಪ್ಪಾದ ತೀರ್ಮಾನವನ್ನು ನುಡಿಯೋಣಾಗಿದ್ದಾಗ, ಅದನ್ನು ರಿಕಾರ್ಡು ಮಾಡುವದಕ್ಕೆ ಮುಂಚೆ—ಯಾ—ಮಾಡೋಣಾದ ಕೂಡಲೇ, ಜೂರಿಯವರು ತೀರ್ಮಾನವನ್ನು ದುರಸ್ತು ಮಾಡಬಹುದು, ಮತ್ತು ಆಖ್ಯೈರಿಗೆ ದುರಸ್ತಾದ ರೀತಿಯಲ್ಲಿ ಆ ತೀರ್ಮಾನ ವಿರತಕ್ಕದ್ದು.

ತೀರ್ಮಾನವನ್ನು ದುರಸ್ತು ಮಾಡೋಣ.

306. ಸೆರ್ಷ ಕೋರ್ಟುಮುಂದೆ ದರ್ಯಾಫ್ತಿ ಆದ ಒಂದು ಮೊಕದ್ದಮೆಯಲ್ಲಿ, ಜೂರರು ಅಥವಾ ಜೂರರಲ್ಲಿ ಬಹು ಸಂಖ್ಯೆಯವರು ಕೊಟ್ಟ ತೀರ್ಮಾನವನ್ನು ಸಮ್ಮತಿಸುವದಿಲ್ಲವೆಂದು ಹೇಳುವದು ಅಗತ್ಯವೆಂತ ಜಡ್ಜಿಯು ತಿಳಕೊಳ್ಳದಿದ್ದರೆ, ಅದೇಪ್ರಕಾರ ಜಡ್ಜ್ಮೆಂಟು ಕೊಡತಕ್ಕದ್ದು.

ಸೆರ್ಷಕೋರ್ಟಿನಲ್ಲಿ ತೀರ್ಮಾನವು ಯಾವಾಗ ತಪಡತಕ್ಕದ್ದು.

ಆಪಾದನೆಪಟ್ಟವನು ಖುಲಾಸೆಯಾದರೆ, ಖುಲಾಸೆ ಜಡ್ಜ್ಮೆಂಟನ್ನು ಜಡ್ಜಿಯು ಬರೆಯತಕ್ಕದ್ದು ಆಪಾದನೆ ಪಟ್ಟವನಮೇಲೆ ಸಾಬೀತಾದರೆ, ಕಾನೂನಿನಪ್ರಕಾರ ಅವನಿಗೆ ಸಜಾವನ್ನು ವಿಧಿಸತಕ್ಕದ್ದು.

307. ಅಂಥಾ ಯಾವದೊಂದು ಮೊಕದ್ದಮೆಯಲ್ಲಿ, ಆಪಾದನೆಪಟ್ಟ ಮನುಷ್ಯನು ಯಾವ ಆಪಾದನೆಗಳಿಗೋಸ್ಕರ ದರ್ಯಾಫ್ತಿ ಮಾಡಲ್ಪಟ್ಟನೋ, ಆ ಎಲ್ಲಾ —ಯಾ— ಅವುಗಳ ಪೈಕಿ ಯಾವದೊಂದು ಆಪಾದನೆಮೇಲೆ, ಜೂರರು —ಯಾ— ಜೂರರಪೈಕಿ ಬಹು ಭಾಗದವರು ಕೊಟ್ಟ ತೀರ್ಮಾನವನ್ನು ಸೆರ್ಷಜಡ್ಜಿಯು ಸಮ್ಮತಿಸದೆ, ನ್ಯಾಯ ನಡಿಸಲಿಕ್ಕೆ ಮೊಕದ್ದಮೆಯನ್ನು ಚೀಫ್ ಕೋರ್ಟಿನವರಿಗೆ ಕಳುಹಿಸುವಷ್ಟು ಹೆಚ್ಚು ಅಗತ್ಯ ಉಂಟೆಂತ ತಿಳಕೊಳ್ಳುವನಾದರೆ, ಅಭಿಪ್ರಾಯದ ತನ್ನ ಸಬಬುಗಳನ್ನು ಬರೆದು, ಮತ್ತು ಖುಲಾಸೆ ತೀರ್ಪಾದ ಸಂಗತಿಯಲ್ಲಿ, ಯಾವ ತಕ್ಸೀರು ಮಾಡೋಣಾಗಿದೆಂಬದಾಗಿ ತಾನು ಆಲೋಚಿಸುತ್ತೇನೆಂಬದನ್ನು ನಮೂದಿಸಿ, ಮೊಕದ್ದಮೆಯನ್ನು ಅದೇಮೇರಿಗೆ ಚೀಫ್ ಕೋರ್ಟಿನವರ ಬಳಿಗೆ ರವಾನಿಸತಕ್ಕದ್ದು.

ಸೆರ್ಷಜಡ್ಜಿಯು ತೀರ್ಮಾನ ಸಮ್ಮತಿಸುವದಿಲ್ಲವಾದ ಸಂಗತಿಯಲ್ಲಿ ನಡಿಸತಕ್ಕ ಕ್ರಮ.

ಈ ಪ್ರಕರಣ ಪ್ರಕಾರ ಒಂದು ಮೊಕದ್ದಮೆಯನ್ನು ಜಡ್ಜಿಯು ಕಳುಹಿಸುವಾಗ, ಆಪಾದನೆಪಟ್ಟವನು ಯಾವ ಚಾರ್ಜಿನ ಆಪಾದನೆಯ ಮೇಲೆ ದರ್ಯಾಫ್ತಿ ಮಾಡಲ್ಪಟ್ಟನೋ ಆ ಆಪಾದನೆಗಳಲ್ಲಿ ಯಾವದೊಂದರ ಮೇಲಾದರೂ ಖುಲಾಸೆಯ—ಯಾ— ಸಾಬೀತಿಯ ತೀರ್ಪು ಆತನು ಬರೆಯತಕ್ಕದ್ದಿಲ್ಲ, ಆದರೆ ಆಪಾದನೆ ಪಟ್ಟವನನ್ನು ಪಹರೆಯಲ್ಲಿ ಇಡುವಹಾಗೆ ರಿಮ್ಯಾಂಡ ಮಾಡಬಹುದು —ಯಾ— ಜಾಮೀನು ತಕ್ಕೊಳ್ಳಬಹುದು.

ಹಾಗೆ ಕಳುಹಿಸೋಣಾದ ಅಂಥಾ ಮೊಕದ್ದಮೆಯಲ್ಲಿ ಪ್ರವರ್ತಿಸುವಲ್ಲಿ, ಅಪ್ಪೀಲಿನಲ್ಲಿ ಯಾವ ಅಧಿಕಾರಗಳು ತಾವು ಚಲಾಯಿಸ ಬಹುದೋ ಆ ಅಧಿಕಾರಗಳಪೈಕಿ ಯಾವವನ್ನಾದರೂ ಚೀಫ್‌ಕೋರ್ಟಿನವರು ಚಲಾಯಿಸ ಬಹುದು; ಪರಂತು ತಮ್ಮ ಮುಂದೆ ತಕ್ಸೀರುನಾಮೆ ಏರ್ಪಡಿಸೋಣಾಗಿ ಇರಿಸಲ್ಪಟ್ಟ ಆಪಾದನೆ ಮೇಲೆ ಯಾವ ತಕ್ಸೀರಿನ ಬಗ್ಗ್ಯಾಗಿ ಜೂರಿಗಳು ಆಪಾದನೆ ಪಟ್ಟವನನ್ನ ಸಾಬೀತು ಪಡಿಸಬಹುದಾಗಿತ್ತೊ ಅಂಥಾ ಯಾವದೊಂದು ತಕ್ಸೀರಿನ ಖುಲಾಸೆಯು,—ಯಾ—ಸಾಬೀತಿಯು ಚೀಫ್ ಕೋರ್ಟಿನವರು ಆಪಾದನೆಪಟ್ಟವನ ಮೇಲೆ ಮಾಡಬಹುದು; ಮತ್ತು ಸದರೀ ಕೋರ್ಟಿನವರು ಅವನ ಮೇಲೆ ತಪ್ಪು ಸಾಬೀತ್ ಮಾಡಿದರೆ, ಸೆಷನ್ ಕೋರ್ಟಿನವರಿಂದ ಯಾವ ಸಜಾ ಕೊಡೋಣಾಗ ಬಹುದಾಗಿತ್ತೋ ಅಂಥಾ ಸಜಾವನ್ನ ವಿಧಿಸಬಹುದು.

H.—Conclusion of Trial in Cases tried with Assessors.

H.—ಅಸ್ಸೆಸ್ಸರೊಂದಿಗೆ ದರ್ಯಾಫ್ತಿಯಾದ ಮೊಕದ್ದಮೆಗಳಲ್ಲಿ ದರ್ಯಾಫ್ತಿ ಮುಗಿಸೋಣ.

309. ಅಸ್ಸೆಸ್ಸರುಗಳ ಸಹಾಯದಿಂದ ದರ್ಯಾಫ್ತಿ ಆದ ಮೊಕದ್ದಮೆಯಲ್ಲಿ, ಪ್ರತಿವಾದದ ಕಡೆ ಮೊಕದ್ದಮೆ ಮತ್ತು ಫಿರ್ಯಾದಿ ನಡಿಸುವವನ ಜವಾಬ್(ಇದ್ದರೆ) ಪೂರ್ತಿ ಮಾಡಲ್ಪಟ್ಟಾಗ, ಕೋರ್ಟಿನವರು ಫಿರ್ಯಾದಿ—ವ—ಪ್ರತಿವಾದದ ಬಗ್ಗೆ ಇದ್ದ ಸಾಕ್ಷ್ಯವನ್ನು ಒಟ್ಟುಪಡಿಸಿ ಹೇಳಿ, ಪ್ರತಿ ಒಬ್ಬ ಅಸ್ಸೆಸ್ಸರನ ಅಭಿಪ್ರಾಯವನ್ನ ಜುಬಾನಿಯಾಗಿ ಕೊಡತಕ್ಕದ್ದೆಂತ ಆಜ್ಞೆಸಿ, ಸದರೀ ಅಭಿಪ್ರಾಯವನ್ನ ಕೋರ್ಟಿನವರು ಬರೆದು ರಿಕಾರ್ಡು ಮಾಡತಕ್ಕದ್ದು.

ಅಸ್ಸೆಸ್ಸರ ಅಭಿಪ್ರಾಯ ನುಡಿಯೋಣ.

ಜಡ್ಜಿಯು ಆಗ ತಮ್ಮ ಫೈಸಲನ್ನ ಕೊಡತಕ್ಕದ್ದು; ಮತ್ತು ಹಾಗೆ ಕೊಡುವಲ್ಲಿ ಅಸ್ಸೆಸ್ಸರುಗಳ ಅಭಿಪ್ರಾಯಗಳ ಪ್ರಕಾರವೇ ಜಡ್ಜಿಯು ನಡಿಯಲಿಕ್ಕೆ ಬದ್ಧನಲ್ಲ.

ಫೈಸಲ್.

ಆಪಾದನೆ ಯಾವವನ ತಕ್ಸೀರು ಸಾಬೀತಾದರೆ, ಕಾನೂನು ಮೇರೆಗೆ ಅವನಿಗೆ ಸಜಾವನ್ನ ಜಡ್ಜಿಯು ತಕ್ಕದ್ದು.

I.—Procedure in Case of previous Conviction

I.—ಪೂರ್ವದ ಸಾಬೀತಿಯ ಸಂಗತಿಯಲ್ಲಿ ನಡಿಸತಕ್ಕ ಕ್ರಮ.

310. ಜೂರಿಯವರಿಂದಾಗಲೀ—ಯಾ—ಅಸ್ಸೆಸ್ಸರುಗಳ ಸಹಾಯದಿಂದಾಗಲೀ ಯಾವದೊಂದು ತಕಿ ಉದ್ದಿಶ್ಯ ದರ್ಯಾಫ್ತಿ ಆಗುವ ಮೊಕದ್ದಮೆಯಲ್ಲಿ, ಆಪಾದನೆ ಪಟ್ಟವನು ಮೊದಲು ತಕ್ಸೀರು ಸಾಬೀತಾದ ನಂತರ ನಡಿಸಿದ ತಕ್ಸೀರಿನ ಬಗ್ಗೆ ಆಪಾದನೆ ಆಗಿರುವ ಸಂಗತಿಯಲ್ಲಿ, 271, 286, 306, ಮತ್ತು 309 ನೇ ಪ್ರಕರಣಗಳಲ್ಲಿ ಏರ್ಪಟ್ಟ ನಡವಳತೆ ಕ್ರಮವು ಈ ಕೆಳಗೆ ಕಾಣಿಸಿದ ಮೇರೆಗೆ ತಿದ್ದುಪಡಿ ಮಾಡಲ್ಪಡತಕ್ಕದ್ದು:—

ಪೂರ್ವದ ತಕ್ಸೀರು ಸಾಬೀತಿಯ ಸಂಗತಿಯಲ್ಲಿ ನಡಿಸತಕ್ಕ ಕ್ರಮ.

(a) ಪೂರ್ವದ ತಕ್ಸೀರು ಸಾಬೀತಿನ ಆಪಾದನೆ ಸಂಗತಿ ನಮೂದಿರುವ ಅಂಶವನ್ನು, ಆತನು ಅನಂತರ ತಕ್ಸೀರು ಮಾಡಿದ್ದುಂಟೆಂತ ಹೇಳಿದ, ಅಥವಾ ಸಾಬೀತ್ ಆಗುವವರಿಗೆ,—ವ—ಆವ ಹೊರತು, ಕೋರ್ಟಿನಲ್ಲಿ ಓದಲ್ಪಡಕೂಡದು, ಅಥವಾ ತಕ್ಸೀರುನಾಮೆಯಲ್ಲಿ ಹೇಳೋಣಾದ ಮೇರೆಗೆ ಆತನು ತತ್ಪೂರ್ವದಲ್ಲಿ ತಕ್ಸೀರು ಸಾಬೀತು ಆದದ್ದುಂಟೋ ಎಂತ ಕೇಳಲ್ಪಡಕೂಡದು.

(b) ಅನಂತರದ ತಕ್ಸೀರು ಮಾಡಿದ್ದುಂಟೆಂತ ಆತ ಉದಹರಿಸಿದರೆ, ಅಥವಾ ಸಾಬೀತಾದರೆ, ಆಗ ಆತನು ತಕ್ಸೀರುನಾಮೆಯಲ್ಲಿ ಹೇಳೋಣಾದ ಮೇರಿಗೆ ತತ್ಪೂರ್ವದಲ್ಲಿ ತಕ್ಸೀರು ಸಾಬೀತಾದ್ದುಂಟೋ ಎಂತ ಅವನು ಕೇಳಲ್ಪಡಬಹುದು.

1147

(c) ಆಪ್ರಕಾರ ತಾನು ಪೂರ್ವದಲ್ಲಿ ತನ್ನ ಮೇಲೆ ತಕ್ಸೀರು ಸಾಬೀತು ಆದ್ದುಂಟು ಎಂತ ಜವಾಬು ಹೇಳಿದರೆ, ಆದೇಮೇರೆಗೆ ಜಡ್ಜಿಯು ಸಜಾವನ್ನು ಅವನಿಗೆ ವಿಧಿಸಬಹುದು ; ಪರಂತು, ತನಿಗೆ ತತ್ಪೂರ್ವದಲ್ಲಿ ಸಜಾ ಆದ್ದು ಆತನು ನಿರಾಕರಿಸುವನಾದರೆ ಅಥವಾ ಅಂಥಾ ಪ್ರಶ್ನೆಗೆ ಜವಾಬು ಹೇಳುವದಕ್ಕೆ ನಿರಾಕರಿಸಿದರೂ ಜವಾಬು ಹೇಳದೆ ಇದ್ದರೂ, ಜೂರಿಯುವರಾಗಲೀ ಅಥವಾ (ಸಂಗತ್ಯಾನುಸಾರವಾಗಿ) ಕೋರ್ಟಿನವರು ಮತ್ತು ಅಸ್ಸೆಸ್ಸರು ಇವರಾಗಲಿ ಆಗ ಅಂಥಾ ಪೂರ್ವದ ಸಾಬೀತ್ ಸಂಗತಿಯನ್ನು ಕುರಿತು ವಿಚಾರಿಸತಕ್ಕದ್ದು, ಮತ್ತು ಅಂಥಾ ಸಂಗತಿಯಲ್ಲಿ (ದರಿಯಾಫ್ತಿಯು ಜೂರಿಯುವರಿಂದಾಗಿದ್ದಲ್ಲಿ) ಜೂರರನ್ನು ತಿರಿಗಿ ಪ್ರಮಾಣ ಮಾಡಿಸಬೇಕಾದ ಅಗತ್ಯವಿಲ್ಲ.

K.—List of Jurors and Assessors for Court of Session and summoning Jurors and Assessors for that Court.

K.—ಸೆಷನ್ ಕೋರ್ಟಿಗೋಸ್ಕರ ಜೂರರ—ವ—ಅಸ್ಸೆಸ್ಸರ ಪಟ್ಟಿ, ಮತ್ತು ಆ ಕೋರ್ಟಿಗೋಸ್ಕರ ಜೂರರನ್ನೂ ಅಸ್ಸೆಸ್ಸರನ್ನೂ ಸಮನ್ ಮಾಡೋಣ.

ಜೂರರುಗಳಾಗಿ -ಯಾ- ಅಸ್ಸೆಸ್ಸರುಗಳಾಗಿ ಕೆಲಸ ನೋಡುವದಕ್ಕೆ ಗುರಿಯಾಗೋಣ.

319. ಅವ್ಯವಹಿತವಾಗಿ ಈ ಕೆಳಗೆ ನಮೂದಿರುವ ಪ್ರಕಾರ ಹೊರ್ತು, ಇಪ್ಪತ್ತೊಂದು ಮೊದಲು ಅರವತ್ತರವರಿಗಿನ ಪ್ರಾಯವುಳ್ಳವರಾಗಿರುವ ಸಮಸ್ತ ಗಂಡು ಮನುಷ್ಯರು ತಾವು ವಸಿಸುವ ಜಿಲ್ಲೆಯೊಳಗೆ ಆಗುವ ಯಾವದೊಂದು ದರ್ಯಾಫ್ತಿಯಲ್ಲಿ ಜೂರಿಯಾಗಿಯೂ—ಯಾ—ಅಸ್ಸೆಸ್ಸರಾಗಿಯೂ ಕೆಲಸ ನೋಡಲಿಕ್ಕೆ ಗುರಿಯಾಗಿರತಕ್ಕದ್ದು.

ವಿನಾಯತಿಗಳು.

320. ಈ ಕೆಳಗೆ ನಮೂದಿರುವ ಮನುಷ್ಯರು ಜೂರಿಗಳಾಗಿ ಅಥವಾ ಅಸ್ಸೆಸ್ಸರಗಳಾಗಿ ಕೆಲಸ ನೋಡಲಿಕ್ಕೆ ಗುರಿಯಾಗ ತಕ್ಕದ್ದಿಲ್ಲ, ಅವರು ಯಾರಂದರೆ:—

(a) ಒಬ್ಬ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟಗಿಂತ ಮೇಲಿನ ಸಿವಿಲ್ ಉದ್ಯೋಗದಲ್ಲಿರುವ ಆಫಿಸರರು ;

(b) ಜಡ್ಜಿಗಳು ;

(c) ಡೆಪ್ಯುಟಿ ಕಮ್ಮಿಷನರುಗಳು ;

(d) ಕಸ್ಟಂಸ್ ಡಿಪಾರ್ಟುಮೆಂಟಿನಲ್ಲಿ ಪ್ರಿವೆಂಟಿವ್ ಸರ್ವಿಸಿನಲ್ಲಿ ಶೇರಿರುವ ಜನಗಳು ;

(e) ರೆವಿನ್ಯೂ ವಸೂಲಾತೀ ಕೆಲಸದಲ್ಲಿ ಶೇರಿ ಆ ಕೆಲಸದ ಸಂಬಂಧದಿಂದ ನಿವೃತ್ತಿಸಲ್ಪಡಬಹುದೆಂದು ಡೆಪ್ಯುಟಿ ಕಮ್ಮಿಷನರಿಗೆ ತೋರುವ ಜನರು ;

(f) ನಿಜವಾಗಿ ತಮ್ಮ ತಮ್ಮ ಮತಗಳಲ್ಲಿ ಪುರೋಹಿತರಾಗಿ—ಯಾ— ಗುರುವಾಗಿ ಪ್ರವರ್ತಿಸಿರುವಂಥಾ ಮನುಷ್ಯರು ;

(g) ತಾತ್ಕಾಲಿಕ್ಕಾಗಿ ಜಾರೀಲಿರುವ ಯಾವ ಕಾನೂನಿನಿಂದಲಾದರೂ, ವಿಶೇಷವಾಗಿ ಜೂರರುಗಳಾಗಿ ಅಥವಾ ಅಸ್ಸಸ್ಸರುಗಳಾಗಿ ಕೆಲಸ ನೋಡಲಿಕ್ಕೆ ಗುರಿಮಾಡಿದಾಗ ಹೊರ್ತು,ಶ್ರೀಮಹಾರಾಜರವರ ಸೈನ್ಯದಲ್ಲಿ ಇರುವಂಥಾ ಜನರು ;

(h) ವೈದ್ಯ ಕೆಲಸದಲ್ಲಿ ಬಹಿರಂಗವಾಗಿ—ವ—ಸರ್ವದಾ ಉದ್ಯೋಗಸ್ಥರಾಗಿ ಇರುವಂಥಾ ಸರ್ಜನ್‌ಗಳು ಮತ್ತು ಇತರರು ;

(i) ಪೋಸ್ಟಾಫೀಸಿನಲ್ಲೂ ಮತ್ತು ಟೆಲಿಗ್ರಾಫ್ ಡಿಪಾರ್ಟುಮೆಂಟುಗಳಲ್ಲೂ, ಉದ್ಯೋಗವಾಗಿ ಇರುವಂಥಾ ಮನುಷ್ಯರು ;

(j) ಕೋರ್ಟಿಗೆ ಖುದ್ದು ಹಾಜರಾಗತಕ್ಕ ಅವಶ್ಯವಿಲ್ಲವೆಂದು ಸಿವಿಲ್ ಪ್ರೊಸಿಡ್ಯೂರ್ ಕೋಡಿನ 640—ವ— 641ನೇ ಪ್ರಕರಣಕ್ಕನುಗುಣವಾಗಿ ವಿನಾಯಿಸೋಣಾದವರು ;

(k) ಜೂರರಾಗಿ ಅಥವಾ ಅಸ್ಸೆಸ್ಸರಗಳಾಗಿ ಕೆಲಸ ನೋಡುವ ಬಗ್ಯೆ ಗುರಿಯಾಗೋಣದರಿಂದ ಮೈಸೂರು ಗವರ್ನಮೆಂಟಿನವರಿಂದ ವಿನಾಯಿಸೋಣಾದ ಇತರ ಮನುಷ್ಯರು ,

ಜೂರರುಗಳ.ವ.ಅಸ್ಸೆಸರುಗಳ ಪಟ್ಟಿ.

321. ಸೆಷ್ಷ ಜಡ್ಜಿ—ವ—ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರು ಅಥವಾ ಇದಕ್ಕಾಗಿಯೇ ಮೈಸೂರು ಗವರ್ನಮೆಂಟಿನವರು ಮೊಕರರು ಮಾಡುವಂಥಾ ಇತರ ಆಫಿಸರು, ಜೂರಿಯಾಗಿ ಅಥವಾ ಅಸ್ಸೆಸ್ಸರಾಗಿ ಕೆಲಸ ನೋಡಲಿಕ್ಕೆ ಗುರಿಯಾದ—ವ—ಯೋಗ್ಯರಾಗಿ ಇರುವದಾಗಿ ಸದರೀ ಸೆಷ್ಷ ಜಡ್ಜಿಗೆ ಡೆಪ್ಯುಟಿ ಕಮ್ಮಿಷನರಿಗೆ—ಯಾ—ಮೇಲೆ ನಮೂದಿಸೋಣಾದ ಹಾಗೆ ಇತರ ಆಫಿಸರಿಗೆ ಆಯಾರೀತಿ ಜೂರಿಯಾಗಿ—ಯಾ—ಅಸೆಸ್ಸರಾಗಿ ಕೆಲಸ ನೋಡಲಿಕ್ಕೆ ಯೋಗ್ಯರಾಗಿ ತೋರುವಂಥಾ ಮತ್ತು 278 ನೇ ಪ್ರಕರಣದ (B) ಇಂದ (H) ಉಭಯ ಕ್ಲಾಜುಗಳ ಮೇರೆಗೆ ಅನುಕೂಲವಾಗಿ ಆಕ್ಷೇಪಿಸ ಕೂಡದಂಥಾ ಜನಗಳ ಹೆಸರಿನ ಒಂದು ಪಟ್ಟಿಯನ್ನು ಅಕಾರಾದಿಯಾಗಿ ತಯಾರ್ಮಾಡತಕ್ಕದ್ದು.

ಆ ಪಟ್ಟಿಯಲ್ಲಿ ಅಂಥಾ ಪ್ರತಿ ಮನುಷ್ಯನ ಹೆಸರೂ, ವಾಸಸ್ಥಾನವೂ, ಉದ್ಯೋಗ—ಯಾ—ಕಸಬೂ ಬರೆಯಲ್ಪಟ್ಟಿರತಕ್ಕದ್ದು ; ಮತ್ತು ಆ ಮನುಷ್ಯನು ಯೂರೋಪಿಯನಾಗಿ—ಯಾ—ಅಮೇರಿಕನಾಗಿ ಇದ್ದರೆ ಸದರೀ ಪಟ್ಟಿಯಲ್ಲಿ ಅವನ ವಂಶ ಫಲಾನದೆಂತ ಸಹ ನಮೂದು ಮಾಡತಕ್ಕದ್ದು.

ಪಟ್ಟಿಯ ಪ್ರಕಟನೆ.

322. ಸದರೀ ಪಟ್ಟಿಯ ನಕಲುಗಳನ್ನು ಸದರೀ ಡೆಪ್ಯುಟಿ ಕಮ್ಮಿಷನರವರ ಕಚ್ಚೇರಿಯಲ್ಲೂ—ಯಾ—ಮೇಲೆ ಹೇಳಿದ ಹಾಗೆ ಇತರ ಆಫಿಸರ ಕಚ್ಚೇರಿಯಲ್ಲೂ, ಮತ್ತು ಡಿಸ್ಟ್ರಿಕ್ಟ ಮೇಜಿಸ್ಟ್ರೇಟಿನ ಕೋರ್ಟಿನಲ್ಲೂ, ಡಿಸ್ಟ್ರಿಕ್ಟ ಕೋರ್ಟಿನಲ್ಲು ಪಟ್ಟಿಯಲ್ಲಿ ನಮೂದಿರುವ ಮನುಷ್ಯರು ಎಲ್ಲಿ ಅಥವಾ ಯಾವದರ ಸಮೀಪದಲ್ಲಿ ವಾಸ ಮಾಡುತ್ತಾರೋ ಅಂಥ ದಲ್ಲಿ ಅಥವಾ ಪಟ್ಣಗಳಲ್ಲಿ ಬಹಿರಂಗವಾದಂಥಾ ಸ್ಥಳದಲ್ಲೂ, ಸಹ ಹಚ್ಚತಕ್ಕದ್ದು.

ಪಟ್ಟಿಗೆ ಆಕ್ಷೇಪಣೆಗಳು.

323. ಅಂಥಾ ಪ್ರತಿ ನಕಲಿನಲ್ಲೂ, ಕೆಳಗೆ ಒಂದು ನೋಟೀಸು ಬರೆಯಲ್ಪಟ್ಟಿರತಕ್ಕದ್ದು. ಆ ನೋಟೀಸಿನಲ್ಲಿ ಸದರೀ ಪಟ್ಟಿಯ ಮೇಲಿನ ಆಕ್ಷೇಪಣೆಗಳು ಸೆಷ್ಷ ಕೋರ್ಟಿನ ನಮೂದಿಸೋಣಾದ ಫಲಾನಾ ಕಾಲದಲ್ಲಿ ಸದರೀ ಸೆಷ್ಷ ಜಡ್ಜಿ, ಡೆಪ್ಯುಟಿ ಕಮ್ಮಿಷನರಿಂದ ಅಥವಾ ಮೇಲೆ ಹೇಳಿದ ಹಾಗೆ ಇತರ ಆಫಿಸರಿಂದ ವಿಮರ್ಶಿಸೋಣಾಗಿ ತೀರ್ಮಾನಿಸೋಣಾಗುತ್ತದೆಂತ ಬರೆದು ಇರತಕ್ಕದ್ದು.

ಪಟ್ಟಿಯ ಪುನರ್ವಿಮರ್ಶೆ.

324. ಅಂಥಾ ಆಕ್ಷೇಪಣೆಗಳನ್ನು ಕೇಳಲಿಕ್ಕೆ ಸೆಷ್ಷ ಜಡ್ಜಿಯು, ಮೇಲೆ ನಮೂದಿಸೋಣಾದ ಮೇರೆಗೆ ಡೆಪ್ಯುಟಿ ಕಮಿಷನರೊಂದಿಗೆ ಅಥವಾ ಇತರ ಆಫಿಸರೊಂದಿಗೆ ಕೂತುಕೊಂಡು, ಸದರೀ ನೋಟೀಸಿನಲ್ಲಿ ನಮೂದಿರುವಂಥಾ ಕಾಲದಲ್ಲಿ—ವ—ಅಂಥಾ ಸ್ಥಲದಲ್ಲಿ, ಸದರೀ ಪಟ್ಟಿಯನ್ನು ಪುನರಾಲೋಚನೆಮಾಡಿ ಅದರ ತಿದ್ದುಪಡಿಯಲ್ಲಿ ಸಂಬಂಧವುಳ್ಳ ಜನರು (ಏನಾದರೂ) ಆಕ್ಷೇಪಣೆ ಮಾಡಿದರೆ ಅದನ್ನು ವಿಚಾರಿಸತಕ್ಕದ್ದು, ಮತ್ತು ಜೂರಿಯಾಗಿ ಅಥವಾ ಅಸ್ಸೆಸ್ಸರಾಗಿ ಕೆಲಸನೋಡಲಿಕ್ಕೆ ಸರಿಯಲ್ಲವೆಂದು ತಮಗೆ ತೋರುವ ಯಾವನೊಬ್ಬ ಮನುಷ್ಯನ ಹೆಸರನ್ನು ಅಥವಾ 320 ನೇ ಪ್ರಕರಣದಿಂದುಂಟಾಗಿರುವ ವಿನಾಯತಿಗೆ ತನ್ನ ಹಕ್ಕು ಸ್ಥಾಪಿಸುವ ಮನುಷ್ಯನ ಹೆಸರನ್ನು ಆ ಪಟ್ಟಿಯಲ್ಲಿ ಹೊಡದುಬಿಟ್ಟು, ಹಾಗೆ ಕೆಲಸ ನೋಡಲಿಕ್ಕೆ ಲಾಯಖಾಗಿ ತಮಗೆ ತೋರಿ ಅದರಲ್ಲಿ ಬಿಟ್ಟುಹೋಗಿ ಇರುವ ಮನುಷ್ಯನ ಹೆಸರನ್ನು ಅಲ್ಲಿ ಶೇರಿಸತಕ್ಕದ್ದು.

1149

ಡೆಪ್ಯುಟಿ ಕಮ್ಮಿಷನರಿಗೂ—ಯಾ—ಮುಂಚೆ ನ...ೂದಿಸಿದ್ದ ಆಫಿಸರಿಗೂ ಮತ್ತು ಸೆಷ್ಷನ್ ಜಡ್ಜಿಗೂ ಮಧ್ಯೆ ಅಭಿಪ್ರಾಯ ಭೇದವಾದರೆ,ಯಾರನ್ನ ಜೂರರಾಗಿ—ಯಾ—...ಸ್ಸೆಸ್ಸರಾಗಿ ಮಾಡಬೇಕೆಂತ ಹೇಳಿರೋಣಾದವನ ಹೆಸರನ್ನ ಪಟ್ಟಿಯಲ್ಲಿ ಬರೆಯದೆ ಬಿಟ್ಟುಬಿಡತಕ್ಕದ್ದು.

ಈ ದುರಸ್ತಾದ ಪಟ್ಟಿಯು ಒಂದು ನಕಲಿಗೆ ಸದ... ಸೆಷ್ಷನ್ ಜಡ್ಜೀರು—ವ—ಡೆಪ್ಯುಟಿ ಕಮಿಷನರು ಅಥವಾ ಮೇಲೆ ನಮೂದಿಸಲ್ಪಟ್ಟಿರುವ ಇತರ ಆಫಿಸರು ದಸ್ಕತು...ಡಿ ಅದನ್ನು ಸೆಷ್ಷನ್ ಕೋರ್ಟಿಗೆ ಕಳುಹಿಸತಕ್ಕದ್ದು.

ಪಟ್ಟಿಯನ್ನು ತಯಾರ್ಮಾಡಿ ದುರಸ್ತು ಮಾಡುವಲ್ಲಿ ...ದರೀ ಸೆಷ್ಷನ್ ಜಡ್ಜೀರು—ವ—ಡೆಪ್ಯುಟಿ ಕಮ್ಮಿಷನರವರು ಅಥವಾ ಮೇಲೆ ನಮೂದಿಸೋಣಾದಂಥಾ ಇತರ ಆಫಿಸರ... ಕೊಡೋಣಾದ ಯಾವದೊಂದು ಹುಕುಂ ಅಖೈರಾದ್ದಾಗಿ ಇರತಕ್ಕದ್ದು.

ಈ ಪ್ರಕರಣ ಪ್ರಕಾರ ಯಾವ ವಿನಾಯಿತಿಯನ್ನು ...ರಿತಾದರೂ ದಾವೆ ಮಾಡೋಣಾಗದಿದ್ದರೆ ಆ ಪಟ್ಟಿಯು 2ನೇ ದಫಾ ಪುನರ್ವಿಮರ್ಶಿಸುವವರಿಗೆ ಅಂಥಾ ಹಕ್ಕನ್ನು ಬ...ಟ್ಟುಬಿಟ್ಟದ್ದಾಗಿ ಎಣಿಸಲ್ಪಡತಕ್ಕದ್ದು.

ಪಟ್ಟಿಯ ಸಾಲಿಯಾನಾ ದುರಸ್ತು.

325. ಹಾ... ತಯಾರ್ಮಾಡಿ ದುರಸ್ತು ಮಾಡೋಣಾದ ಪಟ್ಟಿಯನ್ನು ಸಾಲಿಯಾನಾ ಒ... ಸಲವಾದರೂ ಪುನಃ ದುರಸ್ತು ಮಾಡತಕ್ಕದ್ದು. ಹಾಗೆ ಪುನಃ ದುರಸ್ತಾದ ಪಟ್ಟಿಯನ್ನು ಹೊಸಪಟ್ಟಿಯ...ಗಿ ಭಾವಿಸತಕ್ಕದ್ದು, ಮತ್ತು ಅದು ಪ್ರಥಮತಃ ತಯಾರ್ಮಾಡೋಣಾದ ಪಟ್ಟಿ ವಿಷಯದಲ್ಲಿ ಮೇಲೆ ಹೇಳಲ್ಪಟ್ಟಿರು... ಸಮಸ್ತ ಕಾಯಿದೆಗಳಿಗೂ ಒಳಪಟ್ಟು ಇರತಕ್ಕದ್ದು.

ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಜೂರರುಗಳನ್ನೂ ಅಸ್ಸೆಸ್ಸರನ್ನೂ ಸಮ್ಮನ್ಸು ಮಾಡುವಿಕೆ.

326. ಸೆಷ್ಷನ್ ಜಡ್ಜೀರು ಸಾಧಾರಣವಾಗಿ ಸದರೀ ದು...ಸ್ತಾದ ಪಟ್ಟಿಯಲ್ಲಿ, ನಮೂದಿರುವ ಮನುಷ್ಯರಪೈಕಿ ತಮ್ಮ ಕೋರ್ಟಿನಲ್ಲಿ ಜೂರಿಯಿಂದ ಆಗತಕ್ಕ ದರ್ಯಾಪ್ತಿಗಳಿಗೂ—ವ—ಅಸ್ಸೆಸ್ಸರ ಕುಮ್ಮಕ್ಕಿ...ದ ನಡಿಯುತಕ್ಕ ದರ್ಯಾಪ್ತಿಗಳಿಗೂ, ಆವಶ್ಯಕವಾಗಿ ತಮಗೆ ತೋರುವಷ್ಟು ಮಂದಿ ಜನಗಳಿಗೆ ಸಮ್ಮನ್ಸ್ ಮಾಡಹೇಳಿಕೊಂಡು ಒಬ್ಬ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟಿಗೆ ಪತ್ರವನ್ನು ಆಗಿಂದಾಗ್ಯ ಸೆಷ್... ಆರಂಭವಾಗುವದಕ್ಕೆ ಗೊತ್ತಾಗಿ ಇರುವ ದಿನಕ್ಕೆ ಮೂರುದಿನವಾದರೂ ಮುಂಚಿತವಾಗಿ ಕಳುಹಿಸತಕ್ಕದ್ದು. ಅಂ... ದರ್ಯಾಪ್ತಿಗಳಿಗೆ ಎಷ್ಟು ಮಂದಿ ಬೇಕಾಗಿ ಇರುತದೋ ಅಷ್ಟರ ಎರಡಷ್ಟಕ್ಕೆ ಕಮ್ಮಿಯಾಗದಷ್ಟು ಮಂದಿಗೆ ಸಮ... ಮಾಡತಕ್ಕದ್ದು.

ದುರಸ್ತಾದ ಪಟ್ಟಿಯಲ್ಲಿ ನಮೂದಾಗಿರುವ ಜನರ ಪೈಕಿ ಆ... ತಿಂಗಳೊಳಗೆ ಜೂರೀ ಕೆಲಸ ನೋಡಿದಂಥವರನ್ನು ಬಿಟ್ಟು, ಸಮ್ಮನ್ಸ್ ಮಾಡಬೇಕಾದ ಇತರ ಮನುಷ್ಯರ ಹೆಸ...ಗಳನ್ನು ಕೋರ್ಟುಕೂಡಿ ಇರುವಾಗ ಲಾಟೇರೀ ಚೀಟಿನ ಮೂಲವಾಗಿ ನಿಶ್ಚಯಿಸತಕ್ಕದ್ದು—ವ—ಹಾಗೆ ಬರೆಯೋಣಾ...ದ ಹೆಸರುಗಳನ್ನೂ ಅಂಥಾ ಪತ್ರದಲ್ಲಿ ನಮೂದು ಮಾಡತಕ್ಕದ್ದು, ಪರಂತು ಹಾಗೆ ಕೆಲಸಾ ನೋಡಿದವರನ್ನು ಬಿಟ್ಟು... ಸಾಕಾದಷ್ಟು ಮಂದಿ ಶಿಕ್ಕದೆ ಇದ್ದ ಪಕ್ಷದಲ್ಲಿ ಅವರನ್ನು ಹಾಗೆ ಬಿಡಬೇಕೆಂಬ ನಿರ್ಬಂಧವಿಲ್ಲ.

ಮತ್ತೊಂದು ಜೊತೆ ಜೂರರುಗಳನ್ನು—ಯಾ—ಅಸ್ಸೆಸ್ಸರುಗಳನ್ನು ಸಮ್ಮನ್ಸ್ ಮಾಡಲಿಕ್ಕೆ ಅಧಿಕಾರ.

327. 326 ನೇ ಪ್ರಕರಣದಲ್ಲಿ ನಮೂದಿರುವಂಥಾ ಕಾಲಗಳಲ್ಲಿ ಸೆಷ್ಷನ್ ಕೋರ್ಟಿನವರು ಜೂರಿಗಳಿಗೆ ಅಥವಾ ಅಸ್ಸೆಸ್ಸರುಗಳಿಗೆ ಸಮ್ಮನ್ಸ್ ಮಾಡಿಸುತ್ತಾರಷ್ಟೆ, ಅದು ಶಿವಾಯಿ ಇತರ ಕಾಲಗಳಲ್ಲಿ ಆ ಕೋರ್ಟಿನವರು ಇನ್ನೊಂದು ಜೊತೆ ಜೂರಿಗಳಿಗೆ ಅಥವಾ ಅಸ್ಸೆಸ್ಸರುಗಳಿಗೆ ಸಮ್ಮನ್ಸ್ ಮಾಡಿಸಬಹುದು, ಯಾವ ಪಕ್ಷದಲ್ಲಂದರೆ, ಕೋರ್ಟಿನವರ ಮುಂದೆ ದರ್ಯಾಪ್ತಿಯಾಗಬೇಕಾದ ಮೊಕದ್ದಮೆಗಳ ಸಂಖ್ಯೆಯನ್ನು ನೋಡಲಾಗಿ ಒಂದೇ ಜೊತೆ ಜೂರೀ ಜನರನ್ನು ಅಥವಾ ಅಸ್ಸೆಸ್ಸರುಗಳನ್ನು ತಮೂಂ ಸೆಷನ್ಸಲ್ಲಿ ಹಾಜರಾತೀಲಿ ಇಟ್ಟುಕೊಂಡಿರೋಣ ಅವರಿಗೆ ಶ್ರಮಕರವಾಗಿ ಇರುವ ಪಕ್ಷದಲ್ಲಿ, ಅಥವಾ ಹಾಗ ಅಪ್ಪಣೆ ಕೊಡುವದು ಕೋರ್ಟಿನವರಿಗೆ ಅಗತ್ಯವಾಗಿ ಬೇರೆ ಕಾರಣಗಳಿಂದ ತೋರುವಾಗ್ಯೆಲ್ಲಾ, ಅವರು ಮತ್ತೊಂದು ಜೊತೆಯವರಿಗೆ ಸಮ್ಮನ್ಸ್ ಮಾಡಿಸಬಹುದು.

ಅ॥ ಥ 328. ಜೂರರಿಗೆ ಅಥವಾ ಅಸ್ಸೆಸ್ಸರಿಗೆ ಆಗತಕ್ಕ ಪ್ರತಿ ಸಮ್ಮನೂ ಬರಹಮೂಲವಾಗಿ ಇರತಕ್ಕದ್ದು ಮತ್ತು ಅದರಲ್ಲಿ ಸಮೂದಿಸೋಣಾದ ಫಲಾನಾ ಸ್ಥಳದಲ್ಲಿ—ವ—ಫಲಾನಾ ಕಾಲದಲ್ಲಿ, ಅವನು ಸಂಗತ್ಯಾನುಸಾರವಾಗಿ ಜೂರರಾಗಿ ಅಥವಾ ಅಸ್ಸೆಸ್ಸರಾಗಿ ಹಾಜರಾಗಬೇಕೆಂತ ಅವನಿಗೆ ವಿಧಿಸಿರತಕ್ಕದ್ದು.

ಸಮ್ಮನಿನ ನಮೂನೆ-ವ-ಸಾದರಾತಿ.

329. ಜೂರಿಯಾಗಿ ಅಥವಾ ಅಸ್ಸೆಸ್ಸರಾಗಿ ಕೆಲಸ ನೋಡಲಿಕ್ಕೆ ಸಮ್ಮರ್ವಮಾಡಲ್ಪಟ್ಟ ಯಾವನೊಬ್ಬ ಮನುಷ್ಯನು ಗವರ್ನ್ಮೆಂಟಿನವರ—ಯಾ—ರೇಲ್ವೆ ಕಂಪನಿಯವರ ನವ್ಕರನಾಗಿ ಇದ್ದರೆ, ಆಗ ಅಂಥಾ ಮನುಷ್ಯನು ಉದ್ಯೋಗವಾಗಿ ಇರುವ ಆಫಿಸಿನ ಹೆಡ ಆಫಿಸರನು ಸರ್ಕಾರ ಕೆಲಸಕ್ಕೆ ಅನಾನುಕೂಲವಿಲ್ಲದೆ ಅಂಥಾ ಮನುಷ್ಯನು ಸಂಗತ್ಯಾನುಸಾರವಾಗಿ ಜೂರಿಯಾಗಿ ಅಥವಾ ಅಸ್ಸೆಸ್ಸರಾಗಿ ಕೆಲಸ ನೋಡಲಿಕ್ಕೆ ಸಂದರ್ಭವಾಗಲಿಕ್ಕಿಲ್ಲವೆಂತ ತಿಳಿಸಿದ ಪಕ್ಷದಲ್ಲಿ, ಮತ್ತು ಹಾಗೆ ತೋರಿದರೆ, ಕೆಲಸ ನೋಡುವದಕ್ಕೆ ಹಾಗೆ ಸಮ್ಮರ್ವ ಮಾಡಿದ ಕೋರ್ಟಿನವರು ಅಂಥಾ ಮನುಷ್ಯನು ಹಾಜರಾಗದೆ ಇರಲಿಕ್ಕೆ ಅವನಿಗೆ ಅಪ್ಪಣೆ ಕೊಡಬಹುದು.

ಗವರ್ನ್ಮೆಂಟು ಅಥವಾ ರೈಲ್ವೆ ಆಫೀಸರ್ರು ಯಾವಾಗ ಮನ್ನಿಸಲ್ಪಡಬಹುದು.

330. ಸೆಷನ್ ಕೋರ್ಟಿನವರು, ನ್ಯಾಯವಾದ ಸಬಬಿನಮೇಲೆ ಯಾವ ಯಾವದಾದರೂ ಪ್ರತ್ಯೇಕ ಒಂದು ಸೆಷನಿಗೆ ಹಾಜರಾಗದೆ ಇರಲಿಕ್ಕೆ ಜೂರರಿಗಾದರೂ ಅಥವಾ ಯಾವ ಅಸ್ಸೆಸ್ಸರಿಗಾದರೂ, ಅಪ್ಪಣೆ ಕೊಡಬಹುದು.

ಜೂರರಾಗಲೀ ಅಥವಾ ಅಸ್ಸೆಸ್ಸರಾಗಲಿ ಹಾಜರಾಗದೆ ಇರಲಿಕ್ಕೆ ಕೋರ್ಟಿನವರು ಅಪ್ಪಣೆ ಕೊಡಬಹುದು.

331. ಆಯಾ ಸೆಷನ್‌ಗಳಲ್ಲಿ, ಹಾಜರಾದ ಜೂರಿಗಳ ಹೆಸರುಗಳನ್ನೂ—ವ—ಅಸ್ಸೆಸ್ಸರುಗಳ ಹೆಸರುಗಳನ್ನೂ ಸದರೀ ಸೆಷನ್ ಕೋರ್ಟಿನವರು ಪ್ರತಿ ಸೆಷನನಲ್ಲಿ ಒಂದು ಪಟ್ಟಿಯಲ್ಲಿ ಬರಿಸತಕ್ಕದ್ದು.

ಹಾಜರಾಗುವ ಜೂರರುಗಳ ಮತ್ತು ಅಸ್ಸೆಸ್ಸರುಗಳ ಪಟ್ಟಿ.

ಸದರೀ ಪಟ್ಟಿಯನ್ನು 324 ನೇ ಪ್ರಕರಣದ ಪ್ರಕಾರ ದುರಸ್ತಾಗಿ ಇರುವ ಜೂರರುಗಳ—ವ—ಅಸ್ಸೆಸ್ಸರುಗಳ ಪಟ್ಟಿ ಸಂಗಡ ಇಡತಕ್ಕದ್ದು.

ಈ ಪ್ರಕರಣದ ಪ್ರಕಾರ ತಯಾರಾದ ಪಟ್ಟಿಯಲ್ಲಿ ನಮೂದಿರುವ ಹೆಸರುಗಳ ಪೈಕಿ ಪ್ರತಿ ಹೆಸರಿಗೂ ಸದರೀ ದುರಸ್ತಾದ ಪಟ್ಟಿಯ ಅಂಚಿನಲ್ಲಿ ಒಂದು ದಾಖಲೆ ಬರಿಯತಕ್ಕದ್ದು.

332. ಜೂರರಾಗಿ ಅಥವಾ ಅಸ್ಸೆಸ್ಸರಾಗಿ ಹಾಜರಾಗುವಂತೆ, ಸಮ್ಮನ್ ಮಾಡಲ್ಪಟ್ಟ ಯಾವನು, ನ್ಯಾಯವಾದ ಸಬಬು ಇಲ್ಲದೆ, ಸಮ್ಮನ್ ಪ್ರಕಾರ ಹಾಜರಾಗದೆ ತಪ್ಪುತ್ತಾನೋ, ಅಥವಾ ಹಾಜರಾಗಿ, ಆ ಮೇಲೆ ಕೋರ್ಟಿನವರ ಅಪ್ಪಣೆ ಶಿವಾಯಿ ಹೊರಟು ಹೋಗುತ್ತಾನೋ, ಅಥವಾ ಕೋರ್ಟಿನವರು ಅಡ್ಜರ್ನು ಮಾಡಿದ ಕಾಲವಾದ ಮೇಲೆ ಹಾಜರಾಗತಕ್ಕದ್ದೆಂದು ಹೇಳಿ ಇದ್ದರೂ ಹಾಜರಾಗದೆ ಇದ್ದರೆ, ಅಂಥಾ ಪ್ರತಿ ಮನುಷ್ಯನು ಸೆಷನ್ ಕೋರ್ಟಿನವರ ಹುಕುಂ ಪ್ರಕಾರ ನೂರು ರೂಪಾಯಿಗೆ ಮೀರದೆ ಜುಲ್ಮಾನೆ ತೆರಲಿಕ್ಕೆ ಗುರಿಯಾಗತಕ್ಕದ್ದು.

ಜೂರರಾಗಲೀ ಅಥವಾ ಅಸ್ಸೆಸ್ಸರಾಗಲೀ ಗೈರ್ಹಾಜರಾದರೆ ದಂಡನೆ.

ಡಿಸ್ಟ್ರಿಕ್ಟ ಮೇಜಿಸ್ಟ್ರೇಟು ಸದರೀ ಜುಲ್ಮಾನೆಯನ್ನು, ಅಂಥಾ ಜೂರರಿನದಾಗಿ ಅಥವಾ ಅಸ್ಸೆಸ್ಸರಿನದಾಗಿ, ಸದರೀ ಹುಕ್ಕುಂ ಕೊಟ್ಟ ಕೋರ್ಟಿನ ಸ್ಥಳೀಯ ಅಧಿಕಾರದ ಸರಹದ್ದಿನ ಒಳಗೆ ಇರುವ, ಚರಸ್ವತ್ತಿನ ಜಪ್ತಿ ವಿಕ್ರಯಗಳ ಮೂಲವಾಗಿ ವಸೂಲ ಮಾಡತಕ್ಕದ್ದು.

ಅಂಥಾ ಜಪ್ತಿ ವಿಕ್ರಯಗಳ ದ್ವಾರಾ ಜುಲ್ಮಾನೆ ವಸೂಲಾಗದೆ ಇದ್ದರೆ, ಸದರೀ ಜೂರರನ್ನು ಅಥವಾ ಅಸ್ಸೆಸ್ಸರನ್ನು ಸೆಷನ್ ಕೋರ್ಟಿನವರ ಹುಕ್ಕುಂ ದ್ವಾರಾ ಹದಿನೈದು ದಿನದ ತನಕ ಸಿವಿಲ್ ಜೈಲಿನಲ್ಲಿ ಇಡಬಹುದು, ಯಾವಾ ಪಕ್ಷದಲ್ಲಂದರೆ ಆ ವಾಯಿದೆ ತೀರುವ ಮುಂಚೆ ಜುಲ್ಮಾನೆ ಸಂದಾಯವಾಗದೆ ಇದ್ದ ಪಕ್ಷದಲ್ಲಿ ಹಾಗೆ ಇಡಬಹುದು.

ತಕ್ಸೀರಿನಲ್ಲಿ ಷರೀಕಾದವಗೆ ಮಾಫೀ ವಾಗ್ದಾನ ಕೊಡೋಣ.

337. ಸೆಷನ್ಸ್ ಕೋರ್ಟಿನವರಿಂದಲೇ, ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಂದಲೇ, ಮಾತ್ರ ದರ್ಯಾಫ್ತಾಗತಕ್ಕ ಯಾವದೊಂದು ತಕ್ಸೀರಿನ ಮೊಕದ್ದಮೆಯಲ್ಲಿ, ತಕ್ಸೀರನ್ನು ವಿಚಾರಣೆ ಮಾಡುವ ಯಾವನೊಬ್ಬ ಫಸ್ಟ್‌ಕ್ಲಾಸ ಮೇಜಿಸ್ಟ್ರೇಟನು, ಅಥವಾ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರ ಅನುಮತಿಯನ್ನು ಪಡಕೊಂಡ ಇತರ ಯಾವನೊಬ್ಬ ಮೇಜಿಸ್ಟ್ರೇಟನು ವಿಚಾರಣೆಯಲ್ಲಿರುವ ತಕ್ಸೀರಿಗೆ, ಪ್ರತ್ಯಕ್ಷವಾಗಿ—ಯಾ—ಪರೋಕ್ಷವಾಗಿ ಸಂಬಂಧಪಟ್ಟದ್ದಾಗಿ ಅಥವಾ ಷರೀಕಾದ್ದಾಗಿ ನೆನಸಲ್ಪಟ್ಟ ಯಾವನೊಬ್ಬ ಮನುಷ್ಯನಸಾಕ್ಷ್ಯವನ್ನು ಪಡಕೊಳ್ಳುವ ಉದ್ದಿಶ್ಯವಾಗಿ, ಅಂಥಾ ತಕ್ಸೀರನ್ನು ಕುರಿತು ಆತಗೆ ತಿಳಿದ ಮತ್ತು ಸದರೀ ತಕ್ಸೀರನ್ನು ಮಾಡುವಲ್ಲಿ ಮುಖ್ಯಸ್ಥನಾಗಿ—ಯಾ—ಸಹಕರಿಸಿದವನಾಗಿ ಷರೀಕ ಪಟ್ಟ ಪ್ರತಿ ಒಬ್ಬನನ್ನು ಯಾವತ್ತು ವಿದ್ಯಮಾನಗಳನ್ನು ಕುರಿತ ಪೂರ್ಣವಾಗಿಯೂ—ವ—ನಿಜವಾಗಿಯೂ ನಿರ್ವಂಚನೆಯಾಗಿಯೂ ತಿಳಿಸುವನೆಂಬ ಷರತ್ತಿನಮೇಲೆ, ಅಂಥಾ ಮನುಷ್ಯಗೆ ಮಾಫೀ ವಾಗ್ದಾನ ಕೊಡಬಹುದು.

ಈ ಪ್ರಕರಣಪ್ರಕಾರ ಯಾವ ಮನುಷ್ಯನಾದರೂ ಮಾಫೀ ವಾಗ್ದಾನ ಪಡಕೊಂಡರೆ, ಆತನು ಮೊಕದ್ದಮೆಯಲ್ಲಿ ಒಬ್ಬ ಸಾಕ್ಷಿಗಾರನಂತೆ ವಿಚಾರಿಸಲ್ಪಡತಕ್ಕದ್ದು.

ಅಂಥಾ ಮನುಷ್ಯನು, ಜಾಮೀನಮೇಲೆ ಬಿಡುಗಡೆಯಾಗದೆ ಇದ್ದಲ್ಲಿ, ಸೆಷನ್ಸ ಕೋರ್ಟಿನವರಿಂದ ದರ್ಯಾಫ್ತು ಮುಗಿಯುವ ತನಕ ಅವನನ್ನು ಪಹರೆಯಲ್ಲಿ ಇಡತಕ್ಕದ್ದು.

ಈ ಪ್ರಕರಣಪ್ರಕಾರ ಮಾಫೀ ವಾಗ್ದಾನಕೊಡುವ, ಪ್ರತಿ ಮೇಜಿಸ್ಟ್ರೇಟನೂ, ತಾನು ಹಾಗೆ ಮಾಡುವದಕ್ಕೆ ತನ್ನ ಸಬಬುಗಳನ್ನು ಬರೆಯತಕ್ಕದ್ದು; ಮತ್ತು ಯಾವನೊಬ್ಬ ಮೇಜಿಸ್ಟ್ರೇಟನೂ ಅಂಥಾ ಮಾಫೀ ವಾಗ್ದಾನ ಕೊಟ್ಟಾಗ ಮತ್ತು ಹಾಗೆ ಕೊಡಲ್ಪಟ್ಟವನು ವಿಚಾರಿಸಲ್ಪಟ್ಟಾಗ, ಆಪಾದನೆಪಟ್ಟವನು ಮಾಡಿದ್ದೆಂತ ತೋರುವ ತಕ್ಸೀರು ಅಂಥಾ ಮೇಜಿಸ್ಟ್ರೇಟನಿಂದ ದರ್ಯಾಫ್ತು ಮಾಡಲ್ಪಡಬಹುದಾದಾಗ್ಯೂ, ಸದರೀ ಮೊಕದ್ದಮೆಯನ್ನು ಆತನು ಸ್ವತಃ ದರ್ಯಾಫ್ತು ಮಾಡಕೂಡದು.

ಮಾಫೀ ಕೊಡುವದಕ್ಕೆ ಹುಕ್ಕುಂ ಮಾಡುವದಕ್ಕೆ ಅಧಿಕಾರ.

338. ಕಮ್ಮಿಟ್ ಮಾಡೋಣಾದ ನಂತರ, ತೀರ್ಪು ಕೊಡುವದಕ್ಕೆ ಮುಂಚಿತವಾಗಿ ಯಾವಕಾಲದಲ್ಲಾದರೂ, ಯಾವ ಕೋರ್ಟಿಗೆ ಕಮ್ಮಿಟ ಮಾಡೋಣಾಯಿತೋ ಆ ಕೋರ್ಟಿನವರು, ಅಂಥಾ ಯಾವ ತಕ್ಸೀರಿಗೂ ಪ್ರತ್ಯಕ್ಷವಾಗಿ—ಯಾ—ಪರೋಕ್ಷವಾಗಿ ಸಂಬಂಧ ಪಟ್ಟದ್ದಾಗಿ—ಯಾ—ಷರೀಕಾದ್ದಾಗಿ ನೆನಸಲ್ಪಟ್ಟ ಮನುಷ್ಯನ ಸಾಕ್ಷ್ಯವನ್ನು ದರ್ಯಾಫ್ತಿನಲ್ಲಿ ಪಡಕೊಳ್ಳುವ ಉದ್ದಿಶ್ಯದಿಂದ, ಅದೇ ಷರತ್ತುಗಳ ಮೇಲೆ ಅಂಥಾ ಮನುಷ್ಯಗೆ ತಾವೇ ಮಾಫೀ ವಾಗ್ದಾನ ಕೊಡಬಹುದು, ಅಥವಾ ಕೊಡುವಹಾಗೆ ಡಿಸ್ಟ್ರಿಕ್ಟ ಮೇಜಿಸ್ಟ್ರೇಟ—ಯಾ—ಕಮ್ಮಿಟಮಾಡಿದ ಮೇಜಿಸ್ಟ್ರೇಟಗೆ ಹುಕುಂ ಮಾಡಬಹುದು.

ಮಾಫೀ ವಾಗ್ದಾನ ಕೊಡೋಣಾದ ಮನುಷ್ಯನನ್ನು ಕಮಿಟ ಮಾಡೋಣ.

339. 337ನೇ ಪ್ರಕರಣ ಅಥವಾ 338ನೇ ಪ್ರಕರಣಪ್ರಕಾರ ಒಂದು ಮಾಫೀ ವಾಗ್ದಾನ ಕೊಡಲ್ಪಟ್ಟ ಸಂಗತಿಯಲ್ಲಿ, ಮತ್ತು ಹಾಗೆ ಮಾಫೀ ವಾಗ್ದಾನವನ್ನು ಪಡಕೊಂಡ ಮನುಷ್ಯನು, ಮುಖ್ಯವಾದ ಯಾವ ಸಂಗತಿಯನ್ನಾದರೂ ಮನಃಪೂರ್ತಿಯಾಗಿ ಮರೆಪಡಿಸುವದರಿಂದಾಗಲೀ—ಯಾ—ಸುಳ್ಳುಸಾಕ್ಷ್ಯವನ್ನು ಕೊಡುವದ್ದರಿಂದಾಗಲೀ, ಮಾಫಿಯು ಯಾವ ಷರತ್ತಿನಮೇಲೆ ಕೊಡೋಣಾಯಿತೋ, ಆ ಷರತ್ತಿನ ಮೇಲೆ ನಡಕೊಳ್ಳದೇ ಇದ್ದ ಪಕ್ಷದಲ್ಲಿ, ಹಾಗೆ ಯಾವ ತಕ್ಸೀರಿನ ಬಾಬಿನಲ್ಲಿ ಮಾಫಿ ಕೊಡೋಣಾಯಿತೋ ಆ ತಕ್ಸೀರಿನ ಬಾಬಿನಲ್ಲಿ, ಅಥವಾ

ಅದೇ ಬಾಬಿಗೆ ಸಂಬಂಧವಾಗಿ ಆತನು ಯಾವ ತಕ್ಸೀರು ಮಾಡಿದ್ದಾಗಿ ತೋರುತ್ತದೋ ಅಂಥಾ ಇತರ ಯಾವ ತಕ್ಸೀರ್ ಬಗ್ಗಾದರೂ, ಅವನು ದರ್‍ಯಾಫ್ತಿ ಮಾಡಲ್ಪಡಬಹುದು.

ಮಾಫೀ ವಾಗ್ದಾನದಲ್ಲಿ ಇರುವಾಗ ಒಬ್ಬ ಮನುಷ್ಯನಿಂದ ಮಾಡಲ್ಪಟ್ಟ ವಾಂಗ್ಮೂಲವು ಈ ಪ್ರಕರಣಕ್ಕನುಗುಣವಾಗಿ ಆ ಮನ್ನಣೆಯನ್ನು ವಾಪಸ ಪಡಕೊಂಡಮೇಲೆ ಅವನಿಗೆ ವಿರೋಧವಾಗಿ ಸಾಕ್ಷ್ಯದಲ್ಲಿ ಕೊಡಲ್ಪಡಬಹುದು.

ಅಂಥಾ ವಾಗ್ಮೂಲ ಬಾಬಿನ ಸುಳ್ಳು ಸಾಕ್ಷಿಕೊಟ್ಟ ತಕ್ಸೀರಿನ ಫಿರ್ಯಾದಿಯು ಚೀಫ್ ಕೋರ್ಟಿನವರ ಅನುಮತಿ ಇಲ್ಲದೆ ಹಿಡಿಯಕೂಡದಾಗಿರುತ್ತದೆ.

ಪ್ರತಿವಾದ ಮಾಡಲ್ಪಡಲಿಕ್ಕೆ ಆಪಾದನೆ ಪಟ್ಟವನ ಹಕ್ಕು.

340. ಯಾವದೊಂದು ಕ್ರಿಮಿನಲ್ ಕೋರ್ಟಿನವರ ಮುಂದೆ ತಕ್ಸೀರು ಆಪಾದಿಸಲ್ಪಟ್ಟ ಪ್ರತಿ ಮನುಷ್ಯನು ಪ್ಲೀಡರನದ್ವಾರ ಜವಾಬ ಕೊಡಲಿಕ್ಕೆ ಬಾಧ್ಯತೆ ಉಳ್ಳವನಾಗಿರತಕ್ಕದ್ದು.

ಆಪಾದನೆ ಪಟ್ಟವನು ಪ್ರೊಸೀಡಿಂಗ್ಸಗಳನ್ನ ತಿಳಿಯದೆ ಇರುವಾಗ ನಡಿಸತಕ್ಕದ್ದು.

341. ಆಪಾದನೆ ಪಟ್ಟವನು, ಹುಚ್ಚನಾಗಿಲ್ಲದಿದ್ದಾಗ್ಯೂ, ಪ್ರೊಸೀಡಿಂಗ್ಸನ್ನು ತಿಳಿದುಕೊಳ್ಳುವಹಾಗೆ ಮಾಡಲ್ಪಡತಕ್ಕಾಗದೆ ಹೋದರೆ, ಕೋರ್ಟಿನವರು ವಿಚಾರಣೆಯನ್ನು—ಯಾ—ದರ್‍ಯಾಫ್ತಿಯನ್ನ ಷುರುಮಾಡಿ ಪ್ರವರ್ತಿಸಬಹುದು ; ಮತ್ತು ಅಂಥಾ ವಿಚಾರಣೆಯು ಕಮಿಟಾಗೋಣದರಲ್ಲಿ ಮುಕ್ತಾಯವಾದರೆ, ಅಥವಾ ಅಂಥಾ ದರ್‍ಯಾಫ್ತಿಯು ಸಾಬೀತ ಆಗೋಣದರಲ್ಲಿ ಮುಕ್ತಾಯವಾದರೆ, ಸದರೀ ಪ್ರೊಸೀಡಿಂಗ್ಸನ್ನು ಮೊಕದ್ದಮೆಯ ಸಂಗತಿಗಳ ರಿಪೋರ್ಟಿನೊಂದಿಗೆ ಚೀಫು ಕೋರ್ಟಿಗೆ ರವಾನಿಸತಕ್ಕದ್ದು, ಮತ್ತು ಚೀಫು ಕೋರ್ಟಿನವರು ತಮಗೆ ಯುಕ್ತವೆಂದು ಆಲೋಚಿಸುವಂಥಾ ಆರ್ಡರನ್ನ ಅದರಮೇಲೆ ವಿಧಿಸತಕ್ಕದ್ದು.

ಆಪಾದನೆಪಟ್ಟ ಮನುಷ್ಯನನ್ನ ವಿಚಾರಣೆ ಮಾಡುವ ಅಧಿಕಾರ.

342. ಸಾಕ್ಷ್ಯದಲ್ಲಿ ಒಬ್ಬ ಆಪಾದನೆ ಪಟ್ಟವನಿಗೆ ವಿರೋಧವಾಗಿ ತೋರುವ ಯಾವದಾದರೂ ಸಂಗತಿಗಳನ್ನು ವಿವರಿಸುವದಕ್ಕೆ ಆತ ಸಂದರ್ಭ ಶಿಕ್ಕುವ ಉದ್ದಿಶ್ಯವಾಗಿ ಕೋರ್ಟಿನವರು, ಒಂದು ದರ್‍ಯಾಫ್ತಿಯು ಅಥವಾ ವಿಚಾರಣೆಯು ಯಾವ ಸ್ಥಿತಿಯಲ್ಲಾದರೂ, ಆಪಾದನೆ ಪಟ್ಟವನನ್ನ ಮುಂಚಿತವಾಗಿ ಎಚ್ಚರಿಸದೇನೇ, ತಮಗೆ ಅವಶ್ಯವೆಂತ ತೋರುವ ಸವಾಲುಗಳನ್ನು ಹಾಕ ಬಹುದು, ಮತ್ತು ಮೇಲೆ ಹೇಳಿದ ಉದ್ದಿಶ್ಯಾರ್ಥವಾಗಿ, ಪಿರ್ಯಾದಿ ತರಪಿನ ಸಾಕ್ಷಿಗಳ ವಿಚಾರಣೆ ಆದನಂತರ, ಆತನು ಪ್ರತಿವಾದ ಮಾಡುವದಕ್ಕೆ ಹೇಳಲ್ಪಡುವ ಮುಂಚೆ, ಮೊಕದ್ದಮೆವಿಷಯವಾಗಿ ಸಾಮಾನ್ಯವಾಗಿ ಸವಾಲುಗಳನ್ನು ಕೇಳತಕ್ಕದ್ದು.

ಅಂಥಾ ಸವಾಲುಗಳಿಗೆ ಜವಾಬು ಕೊಡದೆ, ನಿರಾಕರಿಸಿದ್ದಕ್ಕೋಸ್ಕರ ಅಥವಾ ಸದರೀ ಸವಾಲುಗಳಿಗೆ ಸುಳ್ಳು ಜವಾಬು ಕೊಟ್ಟದ್ದಕ್ಕೋಸ್ಕರ ಆಪಾದನೆ ಪಟ್ಟವನು ಶಿಕ್ಷೆಗೆ ಗುರಿಮಾಡಿಸಲಿಕ್ಕಿಲ್ಲಾ ; ಆದರೆ ಕೋರ್ಟಿನವರು ಮತ್ತು ಜೂರಿಯವರು (ಇದ್ದರೆ) ಅಂಥಾ ನಿರಾಕರಣೆಯಿಂದ—ಯಾ—ಜವಾಬುಗಳಿಂದ ತಾವು ನ್ಯಾಯವೆಂದು ಆಲೋಚಿಸುವಂಥಾ ಅನುಮಾನಗಳನ್ನು ಕಟ್ಟಬಹುದು.

ಆಪಾದನೆ ಪಟ್ಟವನು ಕೊಟ್ಟ ಜವಾಬುಗಳನ್ನು ಅಂಥಾ ವಿಚಾರಣೆ—ಯಾ—ದರ್‍ಯಾಫ್ತಿಯಲ್ಲಿ ಆಲೋಚನೆಗೆ ತಕ್ಕೊಳ್ಳ ಬಹುದು, ಮತ್ತು ಅವನ ಜವಾಬುಗಳಿಂದ ಆತನು ಮಾಡಿದ್ದಾಗಿ ತೋರುವ ಇತರ ಯಾವ ತಕ್ಸೀರಿನ ವಿಚಾರಣೆ—ಯಾ—ದರ್‍ಯಾಫ್ತಿಯಲ್ಲಿ ಅವನಿಗೆ ವಿರೋಧವಾಗಿ —ಯಾ—ಅವನ ಪರವಾಗಿ ಸಾಕ್ಷ್ಯವಾಗಿ ಕೊಡಬಹುದು.

ಆಪಾದನೆ ಪಟ್ಟವನಿಂದ ಪ್ರಮಾಣ ಮಾಡಿಸಕೂಡದು.

ಗುಟ್ಟನ್ನು ಹೊರಪಡಿಸುವ ನಿಮಿತ್ಯವಾಗಿ ಯಾವ ಪ್ರೇರೇಪಣೆಯೂ ಉಪಯೋಗಿಸಲ್ಪಡ ಕೂಡದು.

343. 337 ಮತ್ತು 338ನೇ ಪ್ರಕರಣಗಳಲ್ಲಿ ನಿಬಂಧಿಸೋಣಾದ ಮೇರೆಗೆ ಹೊರತು, ಆಪಾದನೆ ಪಟ್ಟ ಮನುಷ್ಯನು ತನ್ನ ತಿಳುವಳಿಕೆಯಲ್ಲಿ ಇರುವ ಯಾವ ಸಂಗತಿಯನ್ನಾದರೂ ಹೊರ ಪಡಿಸುವಹಾಗೆ—ಯಾ—ಬಚ್ಚಿ ಇಟ್ಟುಕೊಳ್ಳುವಹಾಗೆ ಪ್ರೇರೇಪಿಸುವದಕ್ಕೆ ಆಶೋತ್ತರ ಕೊಡುವದರಿಂದಾಗಲೀ—ಯಾ—ಅಂಜಿಸುವದರಿಂದಾಗಲೀ—ಯಾ—ಅನ್ಯಥಾ ಆಗಲೀ, ಯಾವತರದ ಪ್ರೇರೇಪಣೆಯು ಉಪಯೋಗಿಸಲ್ಪಡಕೂಡದು.

ವ್ಯವಹರಣೆಯನ್ನು ಮುಂದಿರಿಸಿಡಲಿಕ್ಕೂ—ಯಾ—ನಿಲ್ಲಿಸಿಡಲಿಕ್ಕೂ ಅಧಿಕಾರ.

344. ಸಾಕ್ಷಿಗಾರನ ಗೈರ ಹಾಜರಿಯಿಂದಾಗಲೀ ಅಥವಾ ಇತರ ತಕ್ಕ ಸಬಬಿನಮೇಲೆ ಆದರೂ, ಯಾವದೊಂದು ವಿಚಾರಣೆ—ಯಾ—ದರ್ಯಾಫ್ತಿಯ ಪ್ರಾರಂಭವನ್ನ ಮುಂದಿರಿಸಿಡುವದು—ಯಾ—ನಿಲ್ಲಿಸಿಡುವದು ಯುಕ್ತವೆಂತ—ಯಾ—ಅವಶ್ಯವೆಂತ ಕೋರ್ಟಿನವರಿಗೆ ತೋರಿದರೆ, ಕೋರ್ಟಿನವರು, ಬರಹಮೂಲಕ ಹುಕುಮಿನದ್ವಾರ, ಆಬಗ್ಗೆ ಸಬಬುಗಳು ಕೊಟ್ಟು, ಆಗಾಗ್ಯೆ ತಾವು ಯುಕ್ತವೆಂದು ಆಲೋಚಿಸುವಂಥಾ, ಮತ್ತು ತಕ್ಕವಾದ್ದೆಂದು ತಾವು ಗ್ರಹಿಸುವಂಥಾ, ಷರತ್ತುಗಳಮೇಲೆ ಒಂದು ವಾಯಿದೆ ವರಿಗೆ, ಅದನ್ನು ಮುಂದರಿಸಿಡಲೂ—ಯಾ—ನಿಲ್ಲಿಸಿಡಲೂ ಬಹುದು. ಮತ್ತು ಆಪಾದನೆ ಪಟ್ಟವನು ಕೈದಿನಲ್ಲಿ ಇರುವದಾದರೆ ಅವನನ್ನು ವಾರಂಟುದ್ವಾರ ರಿಮ್ಯಾಂಡ್ ಮಾಡಬಹುದ್ದು.

ರಿಮ್ಯಾಂಡ್.

ಪರಂತು ಈ ಪ್ರಕರಣ ಪ್ರಕಾರ ಯಾವನೊಬ್ಬ ಮೇಜಿಸ್ಟ್ರೇಟನು ಒಂದು ಸಲಕ್ಕೆ 15 ದಿನಗಳ ವಾಯಿದೆಗೆ ಮೀರಿ ಆಪಾದನೆ ಪಟ್ಟವನನ್ನು ಪಹರೆಯಲ್ಲಿ ಇಡುವಹಾಗೆ ರಿಮ್ಯಾಂಡ್ ಮಾಡಕೂಡದು.

ಈ ಪ್ರಕರಣ ಪ್ರಕಾರ ಕೋರ್ಟುಗಳಿಂದ ಮಾಡೋಣಾದ ಪ್ರತಿ ಒಂದು ಹುಕುಮು ಬರಹ ಮೂಲಕವಾಗಿ ಇರಬೇಕಾಗಿ ಇದ್ದು ಅಧ್ಯಕ್ಷ ಜಡ್ಜ—ಯಾ—ಮೇಜಿಸ್ಟ್ರೇಟನಿಂದ ದಸ್ತಕತು ಹಾಕಲ್ಪಡತಕ್ಕದ್ದು.

ರಿಮ್ಯಾಂಡಬಗ್ಗೆ ತಕ್ಕ ಸಬಬು.

ಟಿಪ್ಪಣಿ.—ಆಪಾದನೆ ಪಟ್ಟಮನುಷ್ಯನು ತಕ್ಸೀರನ್ನು ಮಾಡಿರಬಹುದೆಂಬ ಗುಮಾನಿ ಹುಟ್ಟಲಿಕ್ಕೆ ಸಾಕಾದ ಸಾಕ್ಷ್ಯ ಸಿಕ್ಕಿದರೆ, ಮತ್ತು ರಿಮ್ಯಾಂಡು ಮಾಡುವದರಿಂದ ಇನ್ನೂ ಸಾಕ್ಷ್ಯ ದೊರಕುವದೆಂಬ ಸಂಭವ ಕಾಣಬಂದರೆ, ಇದು ರಿಮ್ಯಾಂಡು ಮಾಡಲಿಕ್ಕೆ ಒಂದು ಯುಕ್ತವಾದ ಕಾರಣವಾಗಿಧೆ.

ತಕ್ಸೀರುಗಳನ್ನು ಸಮಾಧಾನಮಾಡೋಣ.

345. ಈ ಕೆಳಗಿನ ತಖ್ತೆಯ ಪ್ರಥಮದ 2 ಕಲಮುಗಳಲ್ಲಿ ವಿವರಿಸಿದ ಇಂಡಿಯನ ಪೆನಲ್ ಕೋಡಿನ ಪ್ರಕರಣಗಳಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರುಗಳು ಅದೇ ತಖ್ತೆಯ 3ನೇ ಕಲಮಿನಲ್ಲಿ ನಮೂದಿಸೋಣಾದ ಮನುಷ್ಯರಿಂದ ಸಮಾಧಾನ ಮಾಡಲ್ಪಡಬಹುದು.

ತಕ್ಸೀರು.	ಲಾಗೂವಾಗತಕ್ಕ ಇಂಡಿಯನ್ ಪೆನಲ್‌ಕೋಡಿನ ಪ್ರಕರಣಗಳು.	ತಕ್ಸೀರು ಯಾವ ಮನುಷ್ಯನಿಂದ ಸಮಾಧಾನ ಮಾಡಿಕೊಳ್ಳಲ್ಪಡಬಹುದೋ ಆ ಮನುಷ್ಯನು.
ಒಬ್ಬನ ಮತದ ವಿಷಯದಲ್ಲಿ ಅವನ ಮನಸ್ಸಿಗೆ ಸಂಕಟ ಉಂಟಾಗಬೇಕೆಂಬ ಯೋಚನೆ ಪೂರ್ವಕವಾದ ಇರಾದೆ ಯಿಂದ ಮಾತುಗಳನ್ನು ಮುಂತಾಗಿ ನುಡಿಯೋಣ.	298	ಯಾವಾತನ ಮತದ ವಿಷಯದಲ್ಲಿ ಮನಸ್ಸಿಗೆ ಸಂಕಟ ಉಂಟಾಗಬೇಕೆಂಬದಾಗಿ ಉದ್ದೇಶಿಸೋಣಾಯಿತೋ ಆ ಮನುಷ್ಯನು.
ಹಿಂಸಿಸೋಣ.	323,334	ಯಾವಾತನಿಗೆ ಹಿಂಸೆ ಪಡಿಸೋಣಾಯಿತೋ ಆ ಮನುಷ್ಯನು.
ಒಬ್ಬನನ್ನ ಅಕ್ರಮವಾಗಿ ತಡೆಯೋಣ—ಯಾ—ಕೈದು ಮಾಡೋಣ.	341,342	ತಡೆಯೋಣಾದ—ಯಾ—ಕೈದು ಮಾಡೋಣಾದ ಮನುಷ್ಯನು,
ಜುಲುಂ—ಯಾ—ತಕ್ಸೀರುಕರವಾದ ಬಲೋದ್‌ಬಂದಿ ಮಾಡೋಣ.	352,355,358	ಜುಲುಂಪಟ್ಟು ಅಥವಾ ತಕ್ಸೀರುಕರವಾದ ಬಲೋದ್‌ಬಂದಿ ಯಾರಿಗೆ ಮಾಡೋಣಾಯಿತೋ ಆ ಮನುಷ್ಯನು.
ಅಕ್ರಮ ಬಲಾತ್ಕಾರವಾದ ಕಾಮಗಾರಿ.	374	ಕಾಮಗಾರಿ ಮಾಡುವದಕ್ಕೆ ಬಲಾತ್ಕರಿಸಲ್ಪಟ್ಟ ಮನುಷ್ಯನು.
ಕೆಡಕು, ಪಡಿಸೋಣಾದ ನಷ್ಟ ಅಥವಾ ಪಡಿಸೋಣಾದ ಲುಕ್ಸಾನು ಒಬ್ಬ ಖಾಸಗೀ ಮನುಷ್ಯಗಾದ ನಷ್ಟ—ಯಾ—ಲುಕ್ಸಾನುಮಾತ್ರ ಆಗಿದ್ದಲ್ಲಿ. ..	426,427	ನಷ್ಟ—ಯಾ—ಲುಕ್ಸಾನು ಯಾರಿಗೆ ಮಾಡೋಣಾಯಿತೋ ಆ ಮನುಷ್ಯನು.
ತಕ್ಸೀರುಕರವಾದ ಅತಿಕ್ರಮಪ್ರವೇಶ .. .. ಮನೆಗೆ ಅತಿಕ್ರಮ ಪ್ರವೇಶ	447 448	ಅತಿಕ್ರಮಪ್ರವೇಶ ಮಾಡಲ್ಪಟ್ಟ ಸ್ವತ್ತು ಯಾರ ಸ್ವಾಧೀನದಲ್ಲಿ ಅದೆಯೋ ಆ ಮನುಷ್ಯನು.
ನವುಕರಿ ಕರಾರಿನ ಪ್ರಕಾರ ನಡಿಯದೆ ತಕ್ಸೀರುಕರವಾಗಿ ತಪ್ಪೋಣ.	490,491,492	ತಕ್ಸೀರುದಾರನು ಯಾರಬಳಿ, ಕರಾರುಮಾಡಿದನೋ ಆ ಮನುಷ್ಯನು.
ಹಾದರ .. .. .. ಮದುವೆಯಾದ ಹೆಂಗಸನ್ನು ಅಕ್ರಮ ಇರಾದೆಯಿಂದ ಪುಸಲಾಯಿಸಿ—ಯಾ—ಎಳಕೊಂಡು ಹೋದರೂ—ಯಾ—ಇಟ್ಟುಕೊಂಡರೂ.	497 498	ಹೆಂಗಸಿನ ಗಂಡನು.
ಮಾನನಷ್ಟ .. .. ಮಾನ ಹಾನಿಕರವಾದ್ದೆಂತ ತಿಳಿದ ಸಂಗತಿಯನ್ನು ಟಸ್ಸೆ ಹಾಕಿದರೂ—ಯಾ—ಕೆತ್ತನೆ ಕೆತ್ತಿದರೂ. ಮಾನಹಾನಿಕರವಾದ ಸಂಗತಿಯನ್ನುಳ್ಳದ್ದಾಗಿ ತಿಳಿದರಲಾಗಿ ಅಂಥಾ ಟಸ್ಸೆ ಹಾಕಲಾದ ಅಥವಾ ಕೆತ್ತನೆ ಕೆತ್ತಿದ ಪದಾರ್ಥವನ್ನು ಮಾರೋಣ.	500 501 502	ಮಾನಹಾನಿಪಟ್ಟ ಮನುಷ್ಯನು.
ನೆಮ್ಮದಿಗೆ ಭಂಗಪಡಿಸಬೇಕೆಂಬ ಇರಾದೆಯಿಂದ ಕೆಣಕೋಣ	504	ಕೆಣಕಲ್ಪಟ್ಟ ಮನುಷ್ಯನು.
ಏಳುವರುಷಗಳ ಕೈದು ಶಿಕ್ಷೆಪಡತಕ್ಕ ತಕ್ಸೀರಾಗಿ ಇಲ್ಲದೆ ಇದ್ದಾಗ ತಕ್ಸೀರುಕರವಾಗಿ ಹೆದರಿಸೋಣ.	506	ಹೆದರಿಸಲ್ಪಟ್ಟ ಮನುಷ್ಯನು.

ಇಂಡಿಯನ್ ಪೆನಲ್‌ಕೋಡಿನ 324ನೇ ಪ್ರಕರಣ, 335 ನೇ ಪ್ರಕರಣ, 337ನೇ ಪ್ರಕರಣ, ಅಥವಾ 338ನೇ ಪ್ರಕರಣ ಪ್ರಕಾರ ಶಿಕ್ಷೆ ಆಗತಕ್ಕ ಮನಃಪೂರ್ತಿಯಾಗಿ ಹಿಂಸೆ ಪಡಿಸೋಣ, ಮನಃಪೂರ್ತಿಯಾಗಿ ಸಂಕಟಕರವಾದ ಹಿಂಸೆ ಪಡಿಸೋಣ, ಪ್ರಾಣಕ್ಕೆ ಅಪಾಯಕರವಾದ ಕೃತ್ಯದದ್ವಾರ ಹಿಂಸೆಪಡಿಸೋಣ, ಅಥವಾ ಪ್ರಾಣಕ್ಕೆ ಅಪಾಯಕರವಾದ ಕೃತ್ಯದ ದ್ವಾರ ಸಂಕಟಕರವಾದ ಹಿಂಸೆಪಡಿಸೋಣಾದ ತಕ್ಸೀರಿನ ಫಿರಿಯಾದು ಯಾವಕೋರ್ಟಿನವಮುಂದೆ ಬಾಕಿ ಅದೆಯೋ ಆ ಕೋರ್ಟಿನವರ ಅನುಮತಿ ಪಡಕೊಂಡು, ಹಿಂಸೆ ಯಾರಿಗೆ ಪಡಿಸೋಣಾಗಿದಿಯೋ ಆ ಮನುಷ್ಯನಿಂದ ಸಮಾಧಾನ ಮಾಡಿಕೊಳ್ಳಲ್ಪಡಬಹುದು.

ಈ ಪ್ರಕರಣ ಪ್ರಕಾರ ಯಾವದೊಂದು ತಕ್ಸೀರು ಸಮಾಧಾನಮಾಡಿಕೊಳ್ಳಲ್ಪಡಬಹುದಾಗಿ ಇದ್ದಾಗ, ಅಂಥಾ ತಕ್ಸೀರು ಮಾಡುವದಕ್ಕೆ ಸಹಕರಿಸೋಣ ಅಥವಾ ಅಂಥಾ ತಕ್ಸೀರು ಮಾಡುವದಕ್ಕೆ ಯತ್ನಿಸೋಣವು (ಅಂಥಾ ಯತ್ನಿಸೋಣವು ಸ್ವತಃ ತಕ್ಸೀರಾಗಿರುವಾಗ) ಅದೇಮೇರೆಗೆ ಸಮಾಧಾನಮಾಡಿಕೊಳ್ಳಲ್ಪಡಬಹುದು.

ಒಂದು ತಕ್ಸೀರನ್ನು ಈ ಪ್ರಕರಣಪ್ರಕಾರ ಸಮಾಧಾನ ಮಾಡಿಕೊಳ್ಳುವದಕ್ಕೆ ಒಬ್ಬನು ಲಾಯಖ ಆಗಿದ್ದು, ಅಂಥವನು ಮೈನರಾಗಿ, ಹುಚ್ಚನಾಗಿ—ಯಾ—ಮನೋಸ್ವಾಸ್ಥ್ಯತೆ ಇಲ್ಲದವನಾಗಿ ಇದ್ದರೆ, ಅವನಿಗೋಸ್ಕರ ಕರಾರ್ ಮಾಡಲಿಕ್ಕೆ ಲಾಯಖ ಆದ ಯಾವನೊಬ್ಬ ಮನುಷ್ಯನಾದರೂ ಅಂಥಾ ತಕ್ಸೀರನ್ನು ಸಮಾಧಾನ ಮಾಡಿಕೊಳ್ಳಬಹುದು.

ಈ ಪ್ರಕರಣ ಪ್ರಕಾರ ಒಂದು ತಕ್ಸೀರನ್ನ ಸಮಾಧಾನ ಮಾಡಿಕೊಳ್ಳೋಣವು ಅಪಾದನೆ ಪಟ್ಟವನನ್ನು ಖುಲಾಸೆ ಮಾಡುವ ಫಲವುಳ್ಳದ್ದಾಗಿರತಕ್ಕದ್ದು.

ಈ ಪ್ರಕರಣದಲ್ಲಿ ನಮೂದಾಗದೆ ಇರುವ ಯಾವ ತಕ್ಸೀರಾದರೂ ಸಮಾಧಾನ ಮಾಡಿಕೊಳ್ಳಲ್ಪಡಕೂಡದು.

ಮೇಜಿಸ್ಟ್ರೇಟರು ತಾವು ಫಡಚಾ ಮಾಡ ಕೂಡದ ಮೊಕದ್ದಮೆಗಳಲ್ಲಿ ನಡಿಸತಕ್ಕ ಕ್ರಮ.

346. ಒಬ್ಬ ಮೇಜಿಸ್ಟ್ರೇಟನಮುಂದೆ ಯಾವದೊಂದು ವಿಚಾರಣೆ—ಯಾ—ದರ್ಯಾಫ್ತಿ ನಡಿಯುತ್ತಿರುವಲ್ಲಿ, ಆ ಮೊಕದ್ದಮೆಯು ಅಂಥಾ ಡಿಸ್ಟ್ರಿಕ್ಟಿನಲ್ಲಿ ಬೇರೆ ಒಬ್ಬ ಮೇಜಿಸ್ಟ್ರೇಟನಿಂದ ದರ್ಯಾಫ್ತಿ ಮಾಡಲ್ಪಡಬೇಕಾದ್ದು—ಯಾ—ದರ್ಯಾಫ್ತಿ ಬಗ್ಗೆ ಕಮಿಟ್ ಮಾಡಲ್ಪಡ ಬೇಕಾದ್ದೆಂದು ಸಾಕ್ಷ್ಯದಿಂದ ಸಾಕಾದ ಊಹೆ ತನಗೆ ತೋರಿದರೆ, ಪ್ರೊಸೀಡಿಂಗ್‌ಸನ್ನು ನಿಲ್ಲಿಸಿಡತಕ್ಕದ್ದು, ಮತ್ತು ಆ ಮೊಕದ್ದಮೆಯ ಸ್ವಭಾವವನ್ನು ಸಂಕ್ಷೇಪವಾಗಿ ಕಾಣಿಸಿ ಒಂದು ಇತ್ತಿಲೆ ನಿಶಿ, ತಾನು ಯಾರಿಗೆ ತಾಬೇದಾರಿಯಾಗಿ ಇರುತ್ತಾನೋ ಆ ಮೇಜಿಸ್ಟ್ರೇಟಿಗಾದರೂ ಅಥವಾ ಡಿಸ್ಟ್ರಿಕ್ಟು ಮೇಜಿಸ್ಟ್ರೇಟು ಅಜ್ಞಾಪಿಸುವಂಥಾ, ಅಧಿಕಾರ ಇರುವ, ಇತರ ಯಾವ ಮೇಜಿಸ್ಟ್ರೇಟಗಾದರೂ ಕಳುಹಿಸತಕ್ಕದ್ದು.

ಮೊಕದ್ದಮೆಯು ಯಾರಿಗೆ ಕಳುಹಿಸೋಣಾಯಿತೋ ಆ ಮೇಜಿಸ್ಟ್ರೇಟನು, ತಾನು ಹಾಗೆ ಮಾಡುವದಕ್ಕೆ ಅಧಿಕಾರ ಹೊಂದಿ ಇದ್ದರೆ, ಆ ಮೊಕದ್ದಮೆಯನ್ನು ತಾನೇ ದರ್ಯಾಫ್ತಿ ಮಾಡಬಹುದು, ಅಥವಾ ತನಗೆ ತಾಬೇದಾರಿಯಾಗಿ ಅಧಿಕಾರೆ ಇರುವ ಯಾವ ಮೇಜಿಸ್ಟ್ರೇಟಿಗಾದರೂ ಅದನ್ನ ರಿಫರ್ ಮಾಡಬಹುದು, ಅಥವಾ ಆತನು ಅಪಾದನೆ ಪಟ್ಟವನನ್ನ ದರ್ಯಾಫ್ತಿ ಬಗ್ಗೆ ಕಮಿಟ ಮಾಡಬಹುದು.

ವಿಚಾರಣೆ—ಯಾ—ದರ್ಯಾಫ್ತಿ ಷುರು ಮಾಡಿದನಂತರ ಆ ಮೊಕದ್ದಮೆಯು ಕಮಿಟ್ ಮಾಡಬೇಕು ಎಂತ ಮೇಜಿಸ್ಟ್ರೇಟಗೆ ತೋರಿದಾಗ ನಡಿಸಬೇಕಾದ ಕ್ರಮ.

347. ಮೇಜಿಸ್ಟ್ರೇಟನಮುಂದೆ ನಡಿಯುತ್ತಿರುವ ಯಾವದೊಂದು ವಿಚಾರಣೆಯಲ್ಲಿ ಆಗಲೀ, ಅಥವಾ ಮೇಜಿಸ್ಟ್ರೇಟನಮುಂದೆ ನಡಿಯುತ್ತಿರುವ ಯಾವದೊಂದು ದರ್ಯಾಫ್ತಿಯಲ್ಲಿ ಆಗಲೀ, ತೀರ್ಪಿಗೆ ದಸ್ತಖತುಹಾಕುವದಕ್ಕೆ ಮುಂಚೆ, ವ್ಯವಹರಣೆ ನಡಿಯುತ್ತಿರುವ ಯಾವಸ್ಥಿತಿಯಲ್ಲಾದರೂ ಮೊಕದ್ದಮೆಯು ಸೆಷನ್ಸ್‌ಕೋರ್ಟಿನವರಿಂದ ದರ್ಯಾಫ್ತಿ ಮಾಡಲ್ಪಡತಕ್ಕದ್ದಾಗಿ ಆತಗೆ ತೋರಿಬಂದರೆ, ಮತ್ತು ದರ್ಯಾಫ್ತಿ ಬಗ್ಗೆ ಕಮಿಟ್ ಮಾಡುವದಕ್ಕೆ ತಾನು ಅಧಿಕಾರಹೊಂದಿ ಇದ್ದರೆ, ಮುಂದಿನ ವ್ಯವಹರಣೆಯನ್ನು ನಿಲ್ಲಿಸಿ ಬಿಟ್ಟು, ಅಪಾದನೆ ಪಟ್ಟವನನ್ನು ಇದರಲ್ಲಿ ಈ ಮೊದಲು ಅಡಗಿ ಇರುವ ನಿಬಂಧನೆಗಳಿಗನುಸಾರವಾಗಿ ಕಮಿಟ್ ಮಾಡತಕ್ಕದ್ದು.

ಅಂಥಾ ಮೇಜಿಸ್ಟ್ರೇಟನು ದರ್ಯಾಪ್ತಿ ಬಗ್ಯೆ ಕಮಿಟ್ ಮಾಡುವದಕ್ಕೆ ಅಧಿಕಾರ ಪಡಿಯದೆ ಇರುವಲ್ಲಿ, ಆತನು 346 ನೇ ಪ್ರಕರಣಪ್ರಕಾರ ಪ್ರವರ್ತಿಸತಕ್ಕದ್ದು.

ನಾಣ್ಯಗಳ—ಸ್ಟಾಂಪು ಕಾನೂನು—ಯಾ—ಸ್ವತ್ತಿಗೆ ಸಂಬಂಧಪಟ್ಟ ಬಾಬಿನ ತಕ್ಸೀರುಗಳು ಮುಂಚಿತವಾಗಿ ಸಾಬೀತಿಸಪಟ್ಟ ಜನರ ದರ್ಯಾಪ್ತಿ.

348 ಇಂಡಿಯನ್ ಪಿನಲ್ ಕೋಡಿನ 12ನೇ ಅಧ್ಯಾಯ ಅಥವಾ 17ನೇ ಅಧ್ಯಾಯವಮೇರೆಗೆ ಮೂರು ವರುಷಗಳ ಪರಿಯಂತ—ಯಾ—ಅದಕ್ಕಿಂತ ಹೆಚ್ಚು ಕೈದಿನ ಶಿಕ್ಷೆ ಆಗತಕ್ಕ ಒಂದು ತಕ್ಸೀರಿನ ಸಾಬೀತಿಪಟ್ಟ ಯಾವನೊಬ್ಬನವೇಲಾದರೂ, ಸದರೀ ಅಧ್ಯಾಯಗಳ ಪೈಕಿ ಒಂದರವಮೇರೆಗೆ ಮೂರು ಸಂವತ್ಸರ—ಯಾ—ಮೂರು ಸಂವತ್ಸರಕ್ಕೆ ಜಾಸ್ತಿ ಆದಕೈದ್ ಶಿಕ್ಷೆ ಆಗತಕ್ಕ ಯಾವದೊಂದು ತಕ್ಸೀರಿಗಾಗಿ ತಿರಿಗಿ ಅಪಾದಿಸಲ್ಪಟ್ಟರೆ, ಯಾವ ಮ್ಯಾಜಿಸ್ಟ್ರೇಟನಮುಂದೆ ಆತನು ಅಪಾದನೆಪಟ್ಟು ಇರುತ್ತಾನೋ ಆ ಮ್ಯಾಜಿಸ್ಟ್ರೇಟನು ಆತನು ಮಾಡಿಕೆಯಾದ ತಕ್ಸೀರುದಾರನೆಂತ ತಿಳುಕೊಳ್ಳುತ್ತಾನಾದರೆ, ಅವನು ಸಾಧಾರಣವಾಗಿ, ಸೆಷ್ಷನ್ ಕೋರ್ಟಿನಮುಂಗೆ ಕಮ್ಮಿಟ್ ಮಾಡಲ್ಪಡತಕ್ಕದ್ದು; ಅಥವಾ, 30ನೇ ಪ್ರಕರಣಪ್ರಕಾರ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನು ಅಧಿಕಾರ ಕೊಡಲ್ಪಟ್ಟು ಇರುವ ಡಿಸ್ಟ್ರಿಕ್ಟುಗಳಲ್ಲಿ, ಅಂಥಾ ಮ್ಯಾಜಿಸ್ಟ್ರೇಟನಮುಂದೆ ದರ್ಯಾಪ್ತಿ ಬಗ್ಯೆ ಆತನು ಕಳುಹಿಸಲ್ಪಡತಕ್ಕದ್ದು.

ಮ್ಯಾಜಿಸ್ಟ್ರೇಟನು ಸಾಕಾದಷ್ಟು ಕಠಿಣವಾದ ಸಜಾ ಕೊಡಲಾಗದ ಪಕ್ಷದಲ್ಲಿ ನಡಿಸತಕ್ಕ ಕ್ರಮ.

349. ಅಧಿಕಾರ ಇರುವ, ಸೆಕೆಂಡ್—ಯಾ—ತರ್ಡ್ ಕ್ಲಾಸಿನ ಒಬ್ಬ ಮ್ಯಾಜಿಸ್ಟ್ರೇಟನು ಫಿರ್ಯಾದಿ ತರಫಿನ ಮತ್ತು ಅಪಾದನೆಪಟ್ಟವನ ತರಫಿನ ಸಾಕ್ಷ್ಯವನ್ನು ಕೇಳಿಕೊಂಡು ಅಪಾದನೆ ಪಟ್ಟವನು ತಕ್ಸೀರು ಮಾಡಿದ್ದಾನೆಂದೂ,—ವ—ತಾನು ಯಾವತರದ ಶಿಕ್ಷೆ ಕೊಡಲಿಕ್ಕೆ ಅಧಿಕಾರವಿದಿಯೋ ಅದಕ್ಕಿಂತ ಬೇರೆ ತರದ—ಯಾ—ಹೆಚ್ಚು ಕಠಿಣ ಶಿಕ್ಷೆಯನ್ನು ಅವನು ಪಡತಕ್ಕದ್ದೆಂದೂ, ಅಥವಾ 106ನೇ ಪ್ರಕರಣಪ್ರಕಾರ ಆತನು ಪತ್ರವನ್ನು ಬರಕೊಡಹೇಳಿ ವಿಧಿಸಲ್ಪಡಬೇಕೆಂತ ಅಭಿಪ್ರಾಯಪಟ್ಟಾಗ, ಆತನು ತನ್ನ ಅಭಿಪ್ರಾಯವನ್ನು ಬರೆದು, ತನ್ನ ಪ್ರೊಸೀಡಿಂಗಸನ್ನೂ ಅಪಾದನೆಪಟ್ಟವನನ್ನೂ, ತಾನು ತಾಬೇದಾರಿಯಾಗಿ ಇರುವ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟು—ಯಾ—ಸಬ್ ಡಿವಿಜನ್ ಮ್ಯಾಜಿಸ್ಟ್ರೇಟು ಬಳಿಗೆ ಕಳುಹಿಸತಕ್ಕದ್ದು.

ಯಾರಿಗೆ ಪ್ರೊಸೀಡಿಂಗ್ಸು ಕಳುಹಿಸೋಣಾಯಿತೋ ಆ ಮ್ಯಾಜಿಸ್ಟ್ರೇಟು, ತನಗೆ ಯುಕ್ತವೆಂದು ತೋರಿದರೆ ಕಕ್ಷಿಗಾರರನ್ನ ವಿಚಾರಣೆ ಮಾಡಬಹುದು, ಮತ್ತು ಮೊಕದ್ದಮೆಯಲ್ಲಿ ಆಗಲೇ ಸಾಕ್ಷ್ಯವನ್ನು ಕೊಟ್ಟಿರುವಂಥ ಯಾವ ಸಾಕ್ಷಿಗಾರನನ್ನೇಯಾಗಲೀ ಪುನಃ ಕರೇಕಳುಹಿಸಿ ವಿಚಾರಣೇ ಮಾಡಬಹುದು, ಮತ್ತು ಇನ್ನೂ ಸಾಕ್ಷ್ಯವನ್ನು ತರಿಸಿಕೊಂಡು ತಕ್ಕೊಳ್ಳಬಹುದು; ಮತ್ತು ಸದರೀ ಮೊಕದ್ದಮೆಯಲ್ಲಿ ತನಗೆ ಯುಕ್ತವೆಂದು ತೋರುವ ಮತ್ತು ಕಾನೂನಿನ ಪ್ರಕಾರವಿರುವ ಜಡ್ಜಿಮೆಂಟನ್ನಾಗಲೀ, ಸಜಾವನ್ನಾಗಲೀ—ಯಾ—ಆರ್ಡರನ್ನಾಗಲೀ ವಿಧಿಸತಕ್ಕದ್ದು: ಪರಂತು 32 ಮತ್ತು 33ನೇ ಪ್ರಕರಣಗಳಿಗನುಗುಣವಾಗಿ ತಾನು ಕೊಡುವದಕ್ಕೆ ಅಧಿಕಾರ ಪಡದಿರುವ ಶಿಕ್ಷೆಗಿಂತ ಹೆಚ್ಚು ಕಠಿಣವಾದ ಶಿಕ್ಷೆಯನ್ನು ಅವನು ವಿಧಿಸಕೂಡದು.

ಒಬ್ಬ ಮ್ಯಾಜಿಸ್ಟ್ರೇಟನಿಂದ ಕೊಂಚ ರಿಕಾರ್ಡಾದ ಮತ್ತೊಬ್ಬನಿಂದ ಕೊಂಚ ರಿಕಾರ್ಡಾದ ಸಾಕ್ಷ್ಯದಮೇಲೆ ಸಾಬೀತುಗಳು ಅಥವಾ ಕಮ್ಮಿಟಮೆಂಟುಗಳು.

350. ಯಾವದೊಂದು ವಿಚಾರಣೆಯಲ್ಲಿ—ಯಾ—ದರ್ಯಾಪ್ತಿಯಲ್ಲಿ, ಒಬ್ಬ ಮ್ಯಾಜಿಸ್ಟ್ರೇಟನು, ಸಾಕ್ಷ್ಯ ಕೇಳಿಕೊಂಡು ಪೂರಾ ಆಗಲೀ—ಯಾ—ಕಲವು ಭಾಗವನ್ನು ಆಗಲೀ ರಿಕಾರ್ಡು ಮಾಡಿದನಂತರ, ಅವರಲ್ಲಿ ಆತನು ಅಧಿಕಾರ ಚಲಾಯಿಸದೆ, ಆತನ ಕೆಲಸಕ್ಕೆ ಅಂಥಾ ಅಧಿಕಾರವುಳ್ಳ—ವ—ಅಧಿಕಾರ ಚಲಾಯಿಸುವ ಮತ್ತೊಬ್ಬ ಮ್ಯಾಜಿಸ್ಟ್ರೇಟು ಬಂದರೆ, ಹಾಗೆ ಬಂದ ಮ್ಯಾಜಿಸ್ಟ್ರೇಟನು ತನ್ನ ಪೂರ್ವಾಧಿಕಾರಿಯಿಂದ ಹಾಗೆ ರಿಕಾರ್ಡು ಮಾಡಲ್ಪಟ್ಟ, ಅಥವಾ ಕೊಂಚಕವಾಗಿ ತನ್ನ ಪೂರ್ವಾಧಿಕಾರಿಯಿಂದಲೂ ಮತ್ತು ಕೊಂಚವಾಗಿ ತನ್ನಿಂದಲೂ ರಿಕಾರ್ಡಾದ ಸಾಕ್ಷ್ಯದಮೇಲೆ, ಪ್ರವರ್ತಿಸಬಹುದು; ಅಥವಾ ಆತನು ಸಾಕ್ಷಿಗಾರರನ್ನ ಪುನಃ ಸಮನ್ ಮಾಡಿ, ವಿಚಾರಣೆ—ಯಾ—ದರ್ಯಾಪ್ತಿಯನ್ನ ತಿರಿಗಿ ಪ್ರಾರಂಭಿಸ ಬಹುದು.

ಪರಂತು, ಈ ಕೆಳಗೆ ಕಾಣಿಸಿದಮೇರೆಗೆ :—

(a) ಯಾವದೊಂದು ದರ್ಯಾಫ್ತಿಯಲ್ಲಿ, ಎರಡನೇ ಮ್ಯಾಜಿಸ್ಟ್ರೇಟು ತನ್ನ ಪ್ರೊಸೀಡಿಂಗಸ್‍ಗಳನ್ನು ಷುರೂಮಾಡಿದಾಗ, ಸಾಕ್ಷಿಗಾರರು—ಯಾ—ಸಾಕ್ಷಿಗಾರರ ಪೈಕಿ ಯಾತಾದರೂ ತಿರಿಗಿ ಸರ್ವ್ ಮಾಡಲ್ಪಡಬೇಕಾಗಿ ಮತ್ತು ಪುನಃ ಕೇಳಲ್ಪಡತಕ್ಕದೆಂದೂ ಆಪಾದನೆ ಪಟ್ಟವನು ಕೇಳಿಕೋ ಬಹುದು :—

(b) ಚೀಫ್ ಕೋರ್ಟಿನವರಾಗಲೀ, ಅಥವಾ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟಿಗೆ ತಾಬೇದಾರಿಯಾದ ಮ್ಯಾಜಿಸ್ಟ್ರೇಟರಿಂದ ದರ್ಯಾಫ್ತಿ ಮಾಡಲಿಪಟ್ಟ ಮೊಕದ್ದಮೆಗಳಲ್ಲಿ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟು, ತಕ್ಸೀರು ಸಾಬೀತು ಪಡಿಸಿದ ಮ್ಯಾಜಿಸ್ಟ್ರೇಟನಿಂದ ಪೂರಾ ರಿಕಾರ್ಡು ಮಾಡಲ್ಪಡದೆ ಇರುವ ಸಾಕ್ಷ್ಯದಮೇಲೆ ವಿಧಿಸೋಣಾದ ಯಾವದೊಂದು ತಕ್ಸೀರು ಸಾಬೀತಿಯನ್ನು, ಅದರಿಂದ ಆಪಾದನೆ ಪಟ್ಟವನು ಮುಖ್ಯವಾಗಿ ಬಾಗುಣಪಟ್ಟದ್ದಾನೆಂತ ಅಂಥಾ ಕೋರ್ಟಿನವರು—ಯಾ—ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಅಭಿಪ್ರಾಯಪಟ್ಟರೆ, ಅಪ್ಪೀಲ ಆಗಿ ಇದ್ದರೂ—ಯಾ—ಇಲ್ಲದಿದ್ದರೂ ಸರಿಯೇ, ಅದನ್ನು ರದ್ದು ಪಡಿಸಬಹುದು; ಮತ್ತು ಒಂದು ಹೊಸ ವಿಚಾರಣೆ—ಯಾ—ದರ್ಯಾಫ್ತಿ ಮಾಡತಕ್ಕಬಗ್ಯೆ ಅಪ್ಪಣೆ ಕೊಡಬಹುದು.

346ನೇ ಪ್ರಕರಣಪ್ರಕಾರ ವ್ಯವಹರಣೆ ನಿಲ್ಲಿಸಲ್ಪಟ್ಟಿರುವ ಮೊಕದ್ದಮೆಗಳಿಗೆ ಈ ಪ್ರಕರಣದಲ್ಲಿ ಇರುವಂಥಾದ್ದೇನೂ ಲಗಾವಾಗತಕ್ಕದ್ದಲ್ಲ.

ಕೋರ್ಟಿಗೆ ಹಾಜರಾಗಿರುವ ತಕ್ಸೀರುದಾರರನ್ನು ತಡೆದು ನಿಲ್ಲಿಸಿಡೋಣ.

351. ಹಿಡಿಯಲ್ಪಡದೆಯೂ, ಸಮ್ಮನ್ಸ ಮಾಡಲ್ಪಡದೆಯೂ, ಒಂದು ಕ್ರಿಮಿನಲ್ ಕೋರ್ಟಿಗೆ ಬಂದ ಯಾವ ಮನುಷ್ಯನಾದರೂ, ತಾವು ವಿಚಾರಣೇ ಮಾಡಬಹುದಾದ ಯಾವದೊಂದು ತಕ್ಸೀರು ಮಾಡಿದವನಾಗಿ ಸಾಕ್ಷ್ಯದಿಂದ ಕಾಣಬಂದರೆ, ಆ ತಕ್ಸೀರಿನ ಸಂಬಂಧ ವಿಚಾರಣೆ ಮಾಡುವದಕ್ಕಾಗಿ ಅವನನ್ನು ಅಂಥಾ ಕೋರ್ಟಿನವರು ತಡೆದು ಇಡಬಹುದು; ಮತ್ತು ಅವನನ್ನು ಹಿಡಿಯೋಣಾಗಿ ಅಥವಾ ಅವನಿಗೆ ಸಮ್ಮನಾಗಿ ಇದ್ದರೆ ಹ್ಯಾಗೋ ಹಾಗೆ ಅವನ ವಿಷಯುದಲ್ಲಿ ಅನಂತರ ನಡಿಸಬಹುದು.

18ನೇ ಅಧ್ಯಾಯದ ಪ್ರಕಾರ ವಿಚಾರಣೆಯಾಗುತ್ತಿರುವಾಗ, ಅಥವಾ ದರ್ಯಾಫ್ತಿ ಷುರುವಾದಮೇಲೆ, ಹಾಗೆ ತಡೆದಿಡೋಣಾದರೆ, ಅಂಥವನಿಗೆ ಸಂಬಂಧಪಡುವ ಪ್ರೊಸೀಡಿಂಗ್ಸು ಹೊಸದಾಗಿ ಷುರುವಾಗತಕ್ಕದ್ದು. ಮತ್ತು ಸಾಕ್ಷಿಗಾರರನ್ನು ಪುನಃ ಕೇಳತಕ್ಕದ್ದು.

ಕೋರ್ಟುಗಳು ಬಹಿರಂಗವಾದ್ದಾಗಿರ ತಕ್ಕದ್ದು.

352. ಒಂದು ತಕ್ಸೀರಿನ ವಿಷಯವಾಗಿ ದರ್ಯಾಫ್ತಿಗೋಸ್ಕರವಾದರೂ—ಯಾ—ವಿಚಾರಣೆ ನಡಿಸುವದರ ಉದ್ದೇಶಾರ್ಥವಾದರೂ, ಎಲ್ಲಿ ಕ್ರಿಮಿನಾಲ ಕೋರ್ಟು ನಡಿಯುತ್ತದೋ ಆ ಸ್ಥಳವು ತೆರೆದಿರುವ ಬಹಿರಂಗವಾದ ಕೋರ್ಟು ಯೆಂತ ಭಾವವಾಗತಕ್ಕದ್ದು, ಅನಾನುಕೂಲವಿಲ್ಲದೆ ಎಷ್ಟು ಮಂದಿ ಅದರಲ್ಲಿ ಅಡಗಬಹುದೋ ಸಾಧಾರಣವಾಗಿ ಅಷ್ಟುಜನ ಅದರೊಳಗೆ ಹೋಗಬಹುದು:

ಪರಂತು ಅಧ್ಯಕ್ಷನಾಗಿರುವ ಮ್ಯಾಜಿಸ್ಟ್ರೇಟಾಗಲೀ—ಯಾ—ಜಡ್ಜಾಗಲೀ, ತಮಗೆ ಯುಕ್ತವೆಂದು ತೋರಿದರೆ, ಒಂದು ಫಲಾನೆ ಮೊಕದ್ದಮೆಯಬಾಬತು ವಿಚಾರಣೆಯ—ಯಾ—ದರ್ಯಾಫ್ತಿಯ ವ್ಯವಹರಣೆ ಯಾವ ಸ್ಥಿತಿಯಲ್ಲ್ಯಾದರೂ, ಸಾಧಾರಣವಾಗಿ ಯಾರೂ, ಅಥವಾ ಫಲಾನೇಯವನು ಕೋರ್ಟಿನವರು ಉಪಯೋಗಿಸುವ ಕೊಟ್ಟಡಿಯ—ಯಾ—ಕಟ್ಟಡದ ಒಳಗೆ ಬರಕೂಡದೆಂತಲೂ—ಯಾ—ನಿಲ್ಲಕೂಡದೆಂತಲೂ—ಯಾ—ಇರಕೂಡದೆಂತಲೂ ಹುಕುಂ ಮಾಡಬಹುದು.

CHAPTER XXV.—OF THE MODE OF TAKING AND RECORDING EVIDENCE IN INQUIRIES AND TRIALS.

25ನೇ ಅಧ್ಯಾಯ.—ವಿಚಾರಣೆ—ವ—ದರ್ಯಾಫ್ತಿಗಳಲ್ಲಿ ಸಾಕ್ಷ್ಯವನ್ನು ತೆಕ್ಕೊಳ್ಳುವ ಮತ್ತು ಬರಕೊಳ್ಳುವ ರೀತಿ.

ಸಾಕ್ಷ್ಯವನ್ನು ಆಪಾದನೆಪಟ್ಟವನ ಸಮಕ್ಷಮದಲ್ಲಿ ತಕ್ಕೊಳ್ಳತಕ್ಕದ್ದು.

353. ಕಂಠೋಕ್ತವಾಗಿ ಅನ್ಯಥಾ ನಿಬಂಧಿಸೋಣಾದ ಹೊರತು, 18, 20, 21, 22,—ವ—23ನೇ ಅಧ್ಯಾಯಗಳಪ್ರಕಾರ ತಕ್ಕೊಳ್ಳುವ ಸಾಕ್ಷ್ಯವನ್ನೆಲ್ಲಾ ಆಪಾದನೆಪಟ್ಟವನ ಸಮಕ್ಷಮದಲ್ಲಿ, ಅಥವಾ,ಆತನು ಸ್ವತಃ ಹಾಜರಾಗ ಬೇಕಾದ ಅಗತ್ಯವಿಲ್ಲವೆಂದಾಗ, ಅವನ ಪ್ಲೀಡರನ ಸಮಕ್ಷಮದಲ್ಲಿ ತಕ್ಕೊಳ್ಳತಕ್ಕದ್ದು.

ಸಾಕ್ಷ್ಯವನ್ನು ರಿಕಾರ್ಡು ಮಾಡತಕ್ಕ ರೀತಿ.

354. ಈ ಕೋಡಿಗನುಗುಣವಾಗಿ ಮ್ಯಾಜಿಸ್ಟ್ರೇಟ—ಯಾ—ಸೆಷ್ಷ ಜಡ್ಜೀರಿಂದ—ಯಾ—ಅವರ ಮುಂದೆ ನಡಿಯುವ ವಿಚಾರಣೆಗಳಲ್ಲೂ ಮತ್ತು (ಫ್ರೂಟ ದರ್ಯಾಫ್ತಿಗಳಲ್ಲದ ಇತರ) ದರ್ಯಾಫ್ತಿಗಳಲ್ಲೂ, ಸಾಕ್ಷಿಗಾರರ ಸಾಕ್ಷ್ಯವನ್ನು ಕೆಳಗಣ ರೀತೀಲಿ ರಿಕಾರ್ಡು ಮಾಡತಕ್ಕದ್ದು.

ಸಮ್ಮರಿ ಮೊಕದ್ದಮೆಗಳಲ್ಲಿ ಮತ್ತು ಕೆಲ ತಕ್ಸೀರುಗಳ ಬಾಬತು ಫಸ್ಟು—ವ—ಸೆಕೆಂಡ ಕ್ಲಾಸ್ ಮ್ಯಾಜಿಸ್ಟ್ರೇಟುಗಳಿಂದ ಆಗುವ ದರ್ಯಾಫ್ತಿಗಳಲ್ಲಿ ರಿಕಾರ್ಡು.

355. ಮ್ಯಾಜಿಸ್ಟ್ರೇಟರಮುಂದೆ ದರ್ಯಾಫ್ತಿಯಾದ ಸಮ್ಮರಿ ಮೊಕದ್ದಮೆಗಳಲ್ಲೂ, ಮತ್ತು 260ನೇ ಪ್ರಕರಣದ (b) ಯಿಂದ (k) ಉಭಯತುಕ್ಡಾಜುಗಳು ಶೇರಿಸಿಕೊಂಡ ಕ್ಲಾಜುಗಳಲ್ಲಿ ನಮೂದಾದ ತಕ್ಸೀರುಗಳ ಮೊಕದ್ದಮೆಗಳು ಬಬ್ಬ ಫಸ್ಟು—ಯಾ—ಸೆಕೆಂಡು ಕ್ಲಾಸು ಮ್ಯಾಜಿಸ್ಟ್ರೇಟನಿಂದ ದರ್ಯಾಫ್ತಿಯಾದಾಗ, ಪ್ರತಿ ಸಾಕ್ಷಿಗಾರನೂ ಸಾಕ್ಷ್ಯ ನುಡಿಯುತ್ತಾ ಇರುವಾಗ ಮ್ಯಾಜಿಸ್ಟ್ರೇಟು ಆ ಸಾಕ್ಷ್ಯದ ಸಾರಾಂಶದ ಯಾದಾಸ್ತು ಬರೆಯತಕ್ಕದ್ದು.

ಅಂಥಾ ಯಾದಾಸ್ತು ಮ್ಯಾಜಿಸ್ಟ್ರೇಟನಿಂದ ಸ್ವಂತ ಹಸ್ತದಿಂದ ಬರೆಯಲ್ಪಟ್ಟು ದಸ್ಕತು ಮಾಡಲ್ಪಟ್ಟು, ಆ ಮೇಲೆ ಅದು ರಿಕಾರ್ಡಿನಲ್ಲಿ ಶೇರತಕ್ಕದ್ದು.

ಹಾಗೆ ಯಾದಾಸ್ತು ಬರಿಯಲಿಕ್ಕಾಗದಂತೆ ಮ್ಯಾಜಿಸ್ಟ್ರೇಟಗೆ ಅಸಂದರ್ಭ ಸಂಭವಿಸಿದರೆ, ಆ ಅಸಂದರ್ಭದ ಸಬಬನ್ನು ಬರೆದು, ಕೋರ್ಟು ಕೂಡಿ ಇರುವಾಗ ತನ್ನ ಹೇಳಿಕೆಯಿಂದ ಸದರೀ ಯಾದಾಸ್ತು ಬರೆಸಿ, ಅದಕ್ಕೆ ಮ್ಯಾಜಿಸ್ಟ್ರೇಟನು ದಸ್ಕತು ಮಾಡತಕ್ಕದ್ದು; ಆ ಮೇಲೆ ಸದರೀ ಯಾದಾಸ್ತು ರಿಕಾರ್ಡಿನಲ್ಲಿ ಶೇರತಕ್ಕದ್ದು.

ಇತರ ಮೊಕದ್ದಮೆಗಳ ರಿಕಾರ್ಡು.

356. ಸೆಷ್ಷ ಕೋರ್ಟು ಮತ್ತು ಮ್ಯಾಜಿಸ್ಟ್ರೇಟುಗಳ ಮುಂದೆ ಜರಗುವ ಇತರ ಎಲ್ಲಾ ದರ್ಯಾಫ್ತಿಗಳಲ್ಲೂ ಮತ್ತು 12ನೇ ಮತ್ತು 18ನೇ ಅಧ್ಯಾಯಗಳ ಮೇರೆಗೆ ನಡಿಯುವ ಯೆಲ್ಲಾ ವಿಚಾರಣೆಗಳಲ್ಲೂ, ಪ್ರತಿ ಸಾಕ್ಷಿಗಾರನೂ ನುಡಿಯುವ ವಾಂಗ್ಮೂಲವನ್ನು ಕೋರ್ಟು ಭಾಷೆಯಲ್ಲಿ ಮ್ಯಾಜಿಸ್ಟ್ರೇಟು—ಯಾ—ಸೆಷ್ಷ ಜಡ್ಜಿಯು ಬರಕೊಳ್ಳತಕ್ಕದ್ದು, ಅಥವಾ ತಾನು ನೋಡುತ್ತಾ ಇರುವಾಗ ತನ್ನ ಅಪ್ಪಣೇ ಪ್ರಕಾರ ಸಾಕ್ಷ್ಯ ನಡಿಯುವದು ತನಗೆ ಕೇಳಿಸುತ್ತಾ ಇರುವಲ್ಲಿ ತನ್ನ ಸಮಕ್ಷಮದಲ್ಲಾದರೂ ಅದನ್ನು ಬರಿಸತಕ್ಕದ್ದು, ಆ ಮೇಲೆ ಅದಕ್ಕೆ ಆ ಮ್ಯಾಜಿಸ್ಟ್ರೇಟು—ಯಾ—ಸೆಷ್ಷ ಜಡ್ಜಿಯು ದಸ್ಕತು ಮಾಡತಕ್ಕದ್ದು.

ಇಂಗ್ಲೀಷಿನಲ್ಲಿ ಕೊಡೋಣಾದ ಸಾಕ್ಷ್ಯ.

ಆ ಸಾಕ್ಷಿಗಾರನು ಇಂಗ್ಲೀಷು ಭಾಷೆಯಲ್ಲಿ ಸಾಕ್ಷ್ಯ ಹೇಳಿದರೆ, ಅದನ್ನು ಮ್ಯಾಜಿಸ್ಟ್ರೇಟು—ಯಾ—ಸೆಷ್ಷ ಜಡ್ಜಿಯು ಆ ಭಾಷೇಲಿ ತನ್ನ ಸ್ವಹಸ್ತದಿಂದ ಬರಕೊಳ್ಳಬಹುದು, ಮತ್ತು ಆಪಾದನೆ ಪಟ್ಟವನು ಇಂಗ್ಲೀಷನ್ನು ತಿಳಿದವನಾಗಿದ್ದು ಅಥವಾ ಕೋರ್ಟು ಭಾಷೆಯು ಇಂಗ್ಲೀಷು ಆಗಿದ್ದ ಹೊರ್ತು ಅಂಥಾ ಸಾಕ್ಷ್ಯಕ್ಕೆ ಕೋರ್ಟು ಭಾಷೆಯಲ್ಲಿ ಮಾಡಲ್ಪಟ್ಟ ನೈಜಮೊಹರಾದ ತರ್ಜುಮೆಯನ್ನು ರಿಕಾರ್ಡಿಗೆ ಶೇರಿಸತಕ್ಕದ್ದು.

ಜಡ್ಜಿ-ಯಾ-ಮ್ಯಾಜಿಸ್ಟ್ರೇಟು ತಾನು ಸ್ವತಃ ಸಾಕ್ಷ್ಯವನ್ನು ಬರಿಯದೆ ಇದ್ದಾಗ, ಯಾದಾಸ್ತು.

ಮ್ಯಾಜಿಸ್ಟ್ರೇಟು—ಯಾ—ಸೆಷ್ಷ ಜಡ್ಜಿಯು ಸಾಕ್ಷ್ಯವನ್ನು ಬರಕೊಳ್ಳದ ಸಂಗತಿಗಳಲ್ಲಿ, ಆದಾ ಸಾಕ್ಷಿಗಾರನ ವಿಚಾರಣೆಯಾಗುವಾಗ ಅವನವನು ಹೇಳುವದರ ಸಾರಾಂಶವನ್ನು ಸದರೀ ಮ್ಯಾಜಿಸ್ಟ್ರೇಟು—ಯಾ—ಸೆಷ್ಷ ಜಡ್ಜಿಯು ತನ್ನ ಸ್ವದಸ್ತೂರೀಲಿ ಯಾದಾಸ್ತು ಬರದು, ಆ ಯಾದಾಸ್ತಿಗೆ ದಸ್ಕತು ಮಾಡತಕ್ಕದ್ದು; ಆ ಮೇಲೆ ಆ ಯಾದಾಸ್ತು ರಿಕಾರ್ಡಿನಲ್ಲಿ ಶೇರತಕ್ಕದ್ದು.

ಸದರೀ ಪ್ರಕಾರ ಯಾದಾಸ್ತು ಬರೆಯಲಿಕ್ಕಾಗದಂತೆ ಮ್ಯಾಜಿಸ್ಟ್ರೇಟಗೆ—ಯಾ—ಸೆಷ್ಷ ಜಡ್ಜಿಗೆ ಅಸಂದರ್ಭ ಸಂಭವಿಸಿದರೆ, ಆ ಅಸಂದರ್ಭದ ಸಬಬನ್ನು ಆತನು ಬರೆಯತಕ್ಕದ್ದು.

ಸಾಕ್ಷ್ಯದ ರಿಕಾರ್ಡಿನ ಭಾಷೆ.

357. ಯಾವ ಡಿಸ್ಟ್ರಿಕ್ಟಿನಲ್ಲೂ—ಯಾ—ಡಿಸ್ಟ್ರಿಕ್ಟಿನ ಭಾಗದಲ್ಲೂ ಅಥವಾ ಯಾವ ಸೆಷ್ಷ ಕೋರ್ಟಿನವರಮುಂದೆ ನಡೆಯುವ ಪ್ರೊಸೀಡಿಂಗಸ್‌ಗಳಲ್ಲಿ ಅಥವಾ ಯಾವ ಮ್ಯಾಜಿಸ್ಟ್ರೇಟನ ಮುಂದೆ—ಯಾ—ಮ್ಯಾಜಿಸ್ಟ್ರೇಟರ ತರಗತಿಯ ಮುಂದೆ 356ನೇ ಪ್ರಕರಣದಲ್ಲಿ ಹೇಳೋಣಾದ ಮೊಕದ್ದಮೆಗಳಲ್ಲಿ ಪ್ರತಿ ಸಾಕ್ಷಿಗಾರನ ಸಾಕ್ಷ್ಯವನ್ನೂ ಸೆಷ್ಷ ಜಡ್ಜಾಗಲೀ—ಯಾ—ಮ್ಯಾಜಿಸ್ಟ್ರೇಟಾಗಲೀ ತನ್ನ ಸ್ವಭಾಷೇಲಿ—ವ—ಸ್ವದಸ್ತೂರೀಲಿ ಬರಿಯಬೇಕೆಂತ ಮೈಸೂರು ಗವರ್ನ್ಮೆಂಟಿನವರು ಹುಕುಂ ಮಾಡಬಹುದು. ಯಾವ ಪಕ್ಷದಲ್ಲೆಂದರೆ, ಸಾಕ್ಷಿಗಾರನ ಸಾಕ್ಷ್ಯವನ್ನು ಬರಕೊಳ್ಳಲಿಕ್ಕೆ ಆಗದಷ್ಟು ಅಸಂದರ್ಭ ಸೆಷ್ಷ ಜಡ್ಜಿಗೆ—ಯಾ—ಮ್ಯಾಜಿಸ್ಟ್ರೇಟಗೆ ಸಂಭವಿಸದೆ ಇದ್ದ ಪಕ್ಷದಲ್ಲಿ ಅದನ್ನು ಆತನು ಸ್ವತಃ ಬರಿಯಬೇಕು ಎಂತ ಹುಕುಂ ಮಾಡಬಹುದು. ಹಾಗೆ ಬರಿಯಕೂಡದಂಥಾ ಅಸಂದರ್ಭ ಸಂಭವಿಸಿದರೆ, ಅಂಥಾ ಸಂಗತಿಯಲ್ಲಿ, ಆತನು ಆ ಅಸಂದರ್ಭದ ಸಬಬನ್ನು ಬರೆದು, ಸದರೀ ಸಾಕ್ಷ್ಯವನ್ನು ಬಹಿರಂಗವಾಗಿ ಕೋರ್ಟು ನಡಿಯುವ ಕಾಲದಲ್ಲಿ ತಾನು ಹೇಳಿ ಬರಿಸತಕ್ಕದ್ದು.

ಹಾಗೆ ಬರಿಸೋಣಾದ ಸಾಕ್ಷ್ಯಕ್ಕೆ ಸೆಷ್ಷ ಜಡ್ಜಿಯು—ಯಾ—ಮ್ಯಾಜಿಸ್ಟ್ರೇಟು ದಸ್ಕತು ಮಾಡತಕ್ಕದ್ದು, ಆ ಮೇಲೆ ಆ ವಾಙ್ಮೂಲ ರಿಕಾರ್ಡಿನಲ್ಲಿ ಶೇರತಕ್ಕದ್ದು:

ಪರಂತು ಸಾಕ್ಷ್ಯವನ್ನು ಮ್ಯಾಜಿಸ್ಟ್ರೇಟನು—ಯಾ—ಸೆಷ್ಷ ಜಡ್ಜಿಯು ಇಂಗ್ಲೀಷು ಭಾಷೆಯಲ್ಲಾದರೂ, ಅಥವಾ ಕೋರ್ಟು ಭಾಷೆಯಲ್ಲಾದರೂ, ತೆಗಿಯಹೇಳಿ ಮೈಸೂರು ಗವರ್ನ್ಮೆಂಟಿನವರು, ಆ ಭಾಷೆಯು ಆತನ ಸ್ವಭಾಷೆ ಅಲ್ಲದಿದ್ದಾಗ್ಯೂ, ಹುಕುಂ ಮಾಡಬಹುದು.

355ನೇ ಪ್ರಕರಣ ಪ್ರಕಾರ ಮೊಕದ್ದಮೆಗಳಲ್ಲಿ ಮ್ಯಾಜಿಸ್ಟ್ರೇಟನ ಇಷ್ಟ.

358. 355ನೇ ಪ್ರಕರಣದಲ್ಲಿ ನಮೂದಾದ ತರಹಾವಿನ ಮೊಕದ್ದಮೆಗಳಲ್ಲಿ, ಮ್ಯಾಜಿಸ್ಟ್ರೇಟು ತನಗೆ ಯುಕ್ತವೆಂದು ತೋರಿದರೆ, ಯಾವ ಸಾಕ್ಷಿಗಾರನ ಸಾಕ್ಷ್ಯವನ್ನಾದರೂ 356ನೇ ಪ್ರಕರಣದಲ್ಲಿ ನಿಬಂಧಿಸಿರೋಣಾದ ರೀತೀಲಿ ತೆಕ್ಕೊಳ್ಳಬಹುದು, ಅಥವಾ, ಅಂಥಾ ಮ್ಯಾಜಿಸ್ಟ್ರೇಟನ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ 357ನೇ ಪ್ರಕರಣದಲ್ಲಿ ಪ್ರಸಕ್ತವಾದ ಹುಕುಮನ್ನು ಮೈಸೂರು ಗವರ್ನ್ಮೆಂಟಿನವರು ಮಾಡಿದರೆ, ಆಗ, ಸದರೀ ಪ್ರಕರಣದಲ್ಲಿ ನಿಬಂಧಿಸಿರೋಣಾದ ರೀತೀಲಿ ತೆಕ್ಕೊಳ್ಳಬಹುದು.

356ನೇ ಪ್ರಕರಣ-ಯಾ-357ನೇ ಪ್ರಕರಣದಮೇರೆಗೆ ಸಾಕ್ಷ್ಯವನ್ನು ಬರೆಯತಕ್ಕ ರೀತಿ.

359. 356ನೇ ಪ್ರಕರಣ ಅಥವಾ 357ನೇ ಪ್ರಕರಣಕ್ಕನುಗುಣವಾಗಿ ಸಾಕ್ಷ್ಯವನ್ನು, ಕೈಫಿಯತ್ತಿನ ರೂಪವಾಗಿ ತೆಗಿಯತಕ್ಕದ್ದೇ ಹೊರ್ತು, ಸಾಧಾರಣವಾಗಿ ಸವಾಲುಜವಾಬು ರೂಪವಾಗಿ ಬರೆಯಕೂಡದು.

ಮ್ಯಾಜಿಸ್ಟ್ರೇಟಗೆ—ಯಾ—ಸೆಷ್ಷ ಜಡ್ಜಿಗೆ ಯುಕ್ತವಾಗಿ ತೋರಿದರೆ, ಆತನು ಪ್ರತ್ಯೇಕ ಸವಾಲು ಜವಾಬು ಆಗಿ ಬರಕೊಳ್ಳಬಹುದು—ಯಾ—ಬರೆಸಿ ಕೊಳ್ಳಲೂ ಬಹುದು.

1160

360. 356ನೇ ಪ್ರಕರಣ ಅಥವಾ 357ನೇ ಪ್ರಕರಣದ ಮೇರೆಗೆ ತೆಗೆಯಲ್ಪಟ್ಟ ಪ್ರತಿ ಸಾಕ್ಷಿಗಾರನ ಸಾಕ್ಷ್ಯವೂ ಪೂರ್ತಿಯಾದಾಗ, ಸದರೀ ಅಪಾದನೆಪಟ್ಟ ಮನುಷ್ಯನು ಹಾಜರಾಗಿ ಇದ್ದರೆ, ಆ ಸಾಕ್ಷ್ಯವನ್ನು ಅವನ ಸಮಕ್ಷಮದಲ್ಲಿ—ಯಾ—ಅಪಾದನೆ ಪಟ್ಟವನು ಅವನ ಪ್ಲೀಡರಿನ ಮುಖಾಂತರ ಹಾಜರಾಗಿ ಇದ್ದರೆ, ಆ ಪ್ಲೀಡರಿನ ಸಮಕ್ಷಮದಲ್ಲಿ ಆ ಸಾಕ್ಷಿಗಾರನಿಗೆ ಓದಿ ಹೇಳತಕ್ಕದ್ದು, ಮತ್ತು ಅಗತ್ಯವಾಗಿ ಇದ್ದಲ್ಲಿ, ತಿದ್ದತಕ್ಕದ್ದು.

ಅಂಥಾ ಸಾಕ್ಷ್ಯವೂ ಪೂರ್ತಿಯಾದಾಗ ನಡಿಸತಕ್ಕ ಕ್ರಮ.

ಸಾಕ್ಷ್ಯವನ್ನು ಸಾಕ್ಷಿಗಾರನಿಗೆ ಓದಿ ತೋರಿಸುವಾಗ ಅದರಪೈಕಿ ಯಾವದೊಂದಂಶ ಸರಿಯಲ್ಲವೆಂತ ಅವನು ಆಕ್ಷೇಪಿಸಿದರೆ, ಆಗ ಆ ಮ್ಯಾಜಿಸ್ಟ್ರೇಟು—ಯಾ—ಸೆಷನ್ಸ ಜಡ್ಜಿಯು, ಆ ಸಾಕ್ಷ್ಯವನ್ನು ತಿದ್ದುವದಕ್ಕೆ ಬದಲಾಗಿ, ಅದರ ವಿಷಯವಾದ ಆ ಸಾಕ್ಷಿಗಾರನ ಆಕ್ಷೇಪಣೆಯನ್ನು ಆ ಸಾಕ್ಷ್ಯದಮೇಲೆ ಗೂಡಾಸ್ತು ಬರೆದು, ಆ ವಿಷಯದಲ್ಲಿ ತನಗೆ ಅಗತ್ಯವಾಗಿ ತೋರುವಂಥಾ ಷರಾಗಳನ್ನು ಸಹ ಬರಿಯತಕ್ಕದ್ದು.

ಯಾವ ಭಾಷೆಯಲ್ಲಿ ಸಾಕ್ಷ್ಯ ನುಡಿಯೋಣಾಯಿತೋ ಆ ಭಾಷೆಯಲ್ಲಿ ಅಲ್ಲದೆ ಬೇರೆ ಭಾಷೇಲಿ ಅದನ್ನು ಬರಿಯೋಣಾಗಿ, ಆ ಬರಿಯೋಣಾದ ಭಾಷೆ ಸಾಕ್ಷಿಗಾರನಿಗೆ ತಿಳಿಯದ ಭಾಷೆಯಾಗಿ ಇದ್ದರೆ, ಅಂಥಾ ಸಂಗತಿಯಲ್ಲಿ ಆ ಸಾಕ್ಷಿಗಾರನು ತನ್ನ ಸಾಕ್ಷ್ಯವನ್ನು ಯಾವ ಭಾಷೇಲಿ ನುಡಿದನೋ ಆ ಭಾಷೆಯಲ್ಲಾದರೂ—ಯಾ—ಆತನಿಗೆ ತಿಳಿದಿರುವ ಇತರೆ ಭಾಷೆಯಲ್ಲಾದರೂ ದುಬಾಸಿತನಮಾಡಿ ಹೇಳತಕ್ಕದ್ದು.

361. ಅಪಾದನೆಪಟ್ಟ ಮನುಷ್ಯನು ತಿಳಿಯದ ಭಾಷೆಯಲ್ಲಿ ಸಾಕ್ಷ್ಯ ಕೊಡೋಣಾದ ಸಂಗತಿಗಳಲ್ಲೆಲ್ಲಾ ಆ ಸಾಕ್ಷ್ಯವನ್ನು ಆ ಅಪಾದನೆ ಪಟ್ಟವನಿಗೆ ತಿಳಿದ ಭಾಷೇಲಿ ಬಹಿರಂಗವಾಗಿ ಕೋರ್ಟು ಕೂಡಿ ಇರುವಾಗ, ಸದರೀ ಅಪಾದನೆಯಾದ ಮನುಷ್ಯನು ಸ್ವತಃ ಹಾಜರು ಇರುವಲ್ಲಿ ಅವನಿಗೆ ದುಬಾಸಿತನಮಾಡಿ ತಿಳಿಸತಕ್ಕದ್ದು.

ಅಪಾದನೆಯಾದವನಿಗೆ-ಯಾ-ಅವನ ಪ್ಲೀಡರಿಗೆ ಸಾಕ್ಷ್ಯದ ದುಬಾಸಿತನ.

ಅಪಾದನೆಯಾದ ಮನುಷ್ಯನ ತರಫಿನಲ್ಲಿ ಪ್ಲೀಡರನು ಹಾಜರಾಗಿ ಮತ್ತು ಕೋರ್ಟು ಭಾಷೆಯಲ್ಲದ ಬೇರೆ ಭಾಷೇಲಿ ಸಾಕ್ಷ್ಯ ಕೊಡೋಣಾದರೆ, ಮತ್ತು ಪ್ಲೀಡರಿಗೆ ಅಂಥಾ ಭಾಷೆ ತಿಳಿಯದ ಸಂಗತಿಯಲ್ಲಿ, ಆ ವಾಂಗ್ಮೂಲವನ್ನು ಆ ಭಾಷೇಲಿ ಆ ಪ್ಲೀಡರಿಗೆ ದುಬಾಸಿತನಮಾಡಿ ಹೇಳತಕ್ಕದ್ದು.

ಕ್ರಮವಾದ ರುಜುವಾತಿನ ಉದ್ದಿಶ್ಯ ದಸ್ತಾವೇಜುಗಳನ್ನು ಹಾಜರ್ಮಾಡಿರುವ ಮೊಕದ್ದಮೆಗಳಲ್ಲಿ, ಸದರೀ ದಸ್ತಾವೇಜುಗಳ ಪೈಕಿ ಎಷ್ಟು ಭಾಗವನ್ನ ಅವಶ್ಯವಾಗಿ ದುಬಾಸಿತನ ಮಾಡಬೇಕಾದ್ದೆಂತ ತೋರುತ್ತದೋ ಅಷ್ಟು ಭಾಗವನ್ನು ದುಬಾಸಿತನಮಾಡುವದು ಕೋರ್ಟಿನವರ ಇಷ್ಟಾನುಸಾರವಾಗಿರತಕ್ಕದ್ದು.

363. ಒಬ್ಬ ಸಾಕ್ಷಿಗಾರನ ಸಾಕ್ಷ್ಯವನ್ನು ಸೆಷನ್ಸ ಜಡ್ಜಿಯು—ಯಾ—ಮೇಜಿಸ್ಟ್ರೇಟು, ರಿಕಾರ್ಡು ಮಾಡಿರುವಾಗ, ಆ ಸಾಕ್ಷಿಗಾರನ ವಿಚಾರಣೆಯಾಗುತ್ತಾ ಇರುವ ಕಾಲದ ಅವನ ನಡತೆ ಕುರಿತು ತನಗೆ ಅಗತ್ಯವಾಗಿ ತೋರುವಂಥಾ ಷರಾಗಳನ್ನು ಕೂಡಾ (ಇದ್ದರೆ) ಬರೆಯತಕ್ಕದ್ದು.

ಸಾಕ್ಷಿಯ ನಡತೆಯ ವಿಷಯವಾಗಿ ಹೇಳಿಕೆಗಳು.

364. ಯಾವನೊಬ್ಬ ಮೇಜಿಸ್ಟ್ರೇಟನಿಂದ ಅಪಾದನೆಯಾದ ಮನುಷ್ಯನು ವಿಚಾರಣೆ ಮಾಡಲ್ಪಟ್ಟಾಗ, ಅವನಿಗೆ ಹಾಕಿದ ಪ್ರತಿ ಸವಾಲ್ ಮತ್ತು ಜವಾಬನ್ನು ಶೇರಿಸಿಕೊಂಡು, ಆತನು ಯಾವ ಭಾಷೆಯಲ್ಲಿ ವಿಚಾರಣೆ ಮಾಡಲ್ಪಟ್ಟನೋ, ಆ ಭಾಷೆಯಲ್ಲಿ ಅಥವಾ ಇದು ಅಸಾಧ್ಯವಾದಲ್ಲಿ, ಇಂಗ್ಲಿಷಿನಲ್ಲಿ—ಯಾ—ಕೋರ್ಟು ಭಾಷೆಯಲ್ಲಿ, ಅಂಥಾ ವಿಚಾರಣೆಯನ್ನು ಪೂರ್ಣವಾಗಿ ಬರಕೊಳ್ಳತಕ್ಕದ್ದು; ಮತ್ತು ಆ ರಿಕಾರ್ಡನ್ನು ಅತಗೆ ತೋರಿಸತಕ್ಕದ್ದು ಅಥವಾ ಓದಿ ಹೇಳತಕ್ಕದ್ದು, ಅಥವಾ, ಅದು ಯಾವ

ಅಪಾದನೆ ಪಟ್ಟವನ ವಿಚಾರಣೆಯನ್ನು ಬರೆಯತಕ್ಕ ರೀತಿ.

1161

ಭಾಷೆಯಲ್ಲಿ ಬರೆಯಲ್ಪಟ್ಟಿತೋ ಆ ಭಾಷೆಯು ಆತಗೆ ತಿಳಿಯುವದಿಲ್ಲವಾದರೆ, ಆತಗೆ ತಿಳಿಯುವ ಭಾಷೆಯಲ್ಲಿ ತರ್ಜುಮೆಮಾಡಿ ಹೇಳತಕ್ಕದ್ದು, ಮತ್ತು ಆಗ ಅವನು ಜವಾಬುಗಳನ್ನು ವಿವರಿಸುವದಕ್ಕೂ—ಯಾ—ಇನ್ನು ವಿನಾದರೂ ಕೂಡಿಸಿ ಹೇಳುವದಕ್ಕೂ ಸ್ವತಂತ್ರನಾಗಿ ಇರತಕ್ಕದ್ದು.

ಆ ಯಾವತ್ತನ್ನೂ ಅವನು ಯಾವದು ನಿಜವೆಂತ ಹೇಳುತ್ತಾನೋ ಅದಕ್ಕೆ ಸರಿಪಡಿಸಿಯಾದಮೇಲೆ, ಆ ವಿಚಾರಣೇ ರಿಕಾರ್ಡಿಗೆ ಅಪಾದನೆ ಪಟ್ಟವನು ಮತ್ತು ಮೇಜಿಸ್ಟ್ರೇಟು ಅಥವಾ ಅಂಥಾ ಕೋರ್ಟಿನ ಜಡ್ಜಿಯು ದಸ್ಕತು ಮಾಡತಕ್ಕದ್ದು, ಮತ್ತು ಆಗ ಆತನು ಸದರೀ ಕೈಫೀಯತ್ತು ನುಡಿದದ್ದು ತನಗೆ ಕೇಳಸುತ್ತಾ ಇರುವಾಗ ಅದನ್ನು ತನ್ನ ಸಮುಕ್ಷಮದಲ್ಲಿ ತೆಗಿಯೋಣಾಯಿತೆಂತಲೂ—ವ—ಅಪಾದನೆಪಟ್ಟ ಮನುಷ್ಯನು ಹೇಳಿದ ಹೇಳಿಕೆ ಯಾವತ್ತೂ—ವ—ವಾಸ್ತವ್ಯವಾದದ್ದು ಅದರಲ್ಲಿ ಸರಿಯಾಗಿ ಇರುತ್ತದೆ ಎಂತಲೂ ತನ್ನ ಸ್ವದಸ್ತೂರೀಲಿ ಆ ಮೇಜಿಸ್ಟ್ರೇಟು—ಯಾ—ಜಡ್ಜಿಯು ಬರೆದು ದೃಢಪಡಿಸತಕ್ಕದ್ದು.

ಮೇಜಿಸ್ಟ್ರೇಟನಿಂದ—ಯಾ—ಸೆಷನ್ ಜಡ್ಜಿಯಿಂದ ಖುದ್ದು ಅಪಾದನೆ ಪಟ್ಟವನ ವಿಚಾರಣೆ ರಿಕಾರ್ಡ್ಹಗನೆ ಇರುವ ಮೊಕದ್ದಮೆಗಳಲ್ಲಿ, ವಿಚಾರಣೆಯಾಗುತ್ತಲಿರುವಾಗ, ಅದರ ಯಾದಾಸ್ತನ್ನು ಕೋರ್ಟ್ ಭಾಷೆಯಲ್ಲಿ—ಯಾ—ಸಾಕಾದಷ್ಟು ಇಂಗ್ಲಿಷ್ ಭಾಷೆಯು ಬಲ್ಲವನಾಗಿದ್ದರೆ, ಆ ಭಾಷೆಯಲ್ಲಿ, ಬರೆಯಲಿಕ್ಕೆ ಬದ್ಧನಾಗಿರತಕ್ಕದ್ದು ; ಮತ್ತು ಅಂಥಾ ಯಾದಾಸ್ತನ್ನು ಮೇಜಿಸ್ಟ್ರೇಟು—ಯಾ—ಜಡ್ಜಿಯು ಸ್ವದಸ್ತೂರಲ್ಲಿ ಬರೆದು ದಸ್ಕತು ಮಾಡತಕ್ಕದ್ದು, ಮತ್ತು ಅದನ್ನ ರಿಕಾರ್ಡಿನೊಂದಿಗೆ ಶೇರಿಸತಕ್ಕದ್ದು. ಮೇಲೆ ಅಜ್ಞಾಪಿಸೋಣಾದಮೇರಿಗೆ ಸದರೀ ಮೇಜಿಸ್ಟ್ರೇಟು—ಯಾ—ಜಡ್ಜಿಯು ಯಾದಾಸ್ತನ್ನ ಬರೆಯಲಿಕ್ಕೆ ಆಗದೇ ಹೋದರೆ, ಆತನು ಅದಕ್ಕಾಗಿ ತನ್ನ ಅಶಕ್ತತೆಯ ಸಬಬನ್ನು ರಿಕಾರ್ಡು ಮಾಡತಕ್ಕದ್ದು.

ಈ ಪ್ರಕರಣದಲ್ಲಿ ಇರುವಂಥಾದ್ದ್ಯಾವದೂ 263ನೇ ಪ್ರಕರಣಕ್ಕನುಗುಣವಾದ ಅಪಾದನೆ ಪಟ್ಟವನ ವಿಚಾರಣೆಗೆ ಲಗಾವಾಗತಕ್ಕದ್ದಲ್ಲ.

CHAPTER XXVI.—OF THE JUDGMENT.

26ನೇ ಅಧ್ಯಾಯ.—ಜಡ್ಜಮೆಂಟೆಯಾನೆ ತೀರ್ಪನ್ನು ಕುರಿತು.

ತೀರ್ಪು ಹೇಳುವ ಕ್ರಮ.

366. ಅಸಲು ಅಧಿಕಾರ ಇರುವ ಯಾವ ಕ್ರಿಮಿನಲ್ ಕೋರ್ಟಿನಲ್ಲಾದರೂ ಪ್ರತಿ ದರ್ಯಾಫ್ತಿಯಲ್ಲಿ ತೀರ್ಪು ತಕ್ಷಣದಲ್ಲಾಗಲೀ—ಯಾ—ಅನಂತರ ಯಾವ ಕಾಲದಲ್ಲ್ಯಾದರೂ, ಆ ಬಾಬಿನಲ್ಲಿ ಕಕ್ಷಿಗಾರರಿಗೆ—ಯಾ—ಅವರ ಪ್ಲೀಡರುಗಳಿಗೆ ಕ್ರಮವಾಗಿ ತಿಳಿಸಿ ಬಹಿರಂಗವಾದ ಕೋರ್ಟಿನಲ್ಲಿ ಜಡ್ಜಮೆಂಟನ್ನು ಹೇಳತಕ್ಕದ್ದು ; ಮತ್ತು ಅಪಾದನೆ ಪಟ್ಟವನು, ಪಹರೆಯಲ್ಲಿ ಇದ್ದರೆ, ಆತನು, ನುಡಿಯೋಣಾಗುವ ಜಡ್ಜಮೆಂಟನ್ನು ಕೇಳುವ ಬಗ್ಯೆ ತರಲ್ಪಟ್ಟು, ಅಥವಾ ಆತನು ಪಹರೆಯಲ್ಲಿ, ಇಲ್ಲದಿದ್ದರೆ ಆ ಬಗ್ಯಾಗಿ ಅವನು ಹಾಜರಾಗತಕ್ಕದ್ದೆಂತ ಅಜ್ಞಾಪಿಸಲ್ಪಡತಕ್ಕದ್ದು, ಆದರೆ ದರ್ಯಾಫ್ತಿಕಾಲದಲ್ಲಿ ಆತನ ಖುದ್ದು ಹಾಜರಾತಿ ಅಗತ್ಯವಿಲ್ಲದೆಯು ಮತ್ತು ಸಜಾವು ಜುರುಮಾನೇ ಮಾತ್ರದ್ದಾಗಿರುವ ಸಂಗತಿಯಲ್ಲಿ, ಆತನ ಪ್ಲೀಡರನ ಸಮುಕ್ಷಮದಲ್ಲಿ, ಆ ತೀರ್ಪು ಹೇಳಲ್ಪಡಬಹುದು.

ಜಡ್ಜಿಮೆಂಟಿನ ಭಾಷೆ.

367. ಈ ಕೋಡಿನಿಂದ ಕಂಪೋಕ್ತವಾಗಿ ನಿಬಂಧಿಸಿದರೇನೇ ಹೊರತು, ಅಂಥಾ ಪ್ರತಿ ಜಡ್ಜಿಮೆಂಟನ್ನ ಕೋರ್ಟು ಭಾಷೆಯಲ್ಲ್ಯಾಗಲೀ ಅಥವಾ ಇಂಗ್ಲಿಷಿನಲ್ಲ್ಯಾಗಲೀ, ಕೋರ್ಟಿನ ಅಧ್ಯಕ್ಷ ಅಫಿಸರು ಬರೆಯತಕ್ಕದ್ದು ; ಮತ್ತು ತೀರ್ಮಾನಿಸತಕ್ಕ ಅಂಶ—ಯಾ—ಅಂಶಗಳನ್ನೂ, ಅದರ ಮೇಲಿನ ತೀರ್ಪನ್ನೂ,—ವ— ತೀರ್ಪಿಗೋಸ್ಕರ ಸಬಬುಗಳನ್ನೂ, ಅಡಗಿಶಿಕೊಂಡಿರತಕ್ಕದ್ದು ;

ಜಡ್ಜಿಮೆಂಟಿನ ಮತಲಬು.

ಮತ್ತು ಅದನ್ನ ಹೇಳುವಾಗ ಅಧ್ಯಕ್ಷ ಆಫೀಸರು ಬಹಿರಂಗವಾದ ಕೋರ್ಟಿನಲ್ಲಿ ಅದಕ್ಕೆ ತಾರೀಖುಹಾಕಿ ದಸ್ಕತ್ತು ಮಾಡತಕ್ಕದ್ದು.

ಅವರಲ್ಲಿ ಅಪಾದನೆ ಪಟ್ಟವನು ಯಾವ ತಕ್ಕೀರಿನ ಬಗ್ಯಾಗಿ ಅಥವಾ ಯಾವವರ ಮೇರೆಗೆ ತಕ್ಕೀರನ್ನು ಸಾಬೀತು ಮಾಡಲ್ಪಟ್ಟದ್ದಾನೋ, ಆ ತಕ್ಕೀರು, (ಇದ್ದರೆ) ಮತ್ತು ಇಂಡಿಯರ್ನ ಪಿನಲ್ ಕೋಡಿನ—ಯಾ—ಇತರ ಪ್ರಕರಣವನ್ನು ಮತ್ತು ಅವನಿಗೆ ಸಜಾವಾದ ಶಿಕ್ಷೆಯನ್ನು, ನಮೂದಿಸತಕ್ಕದ್ದು.

ಇಂಡಿಯರ್ನ ಪಿನಲ್ ಕೋಡಿಗೆ ಅನುಗುಣವಾಗಿ ಸಾಬೀತಾದ್ದಾಗಿ, ಆ ಕೋಡಿನ ಎರಡು ಪ್ರಕರಣಗಳಪೈಕಿ ಇಂಥಾ ಪ್ರಕರಣದಲ್ಲಿ ಅಥವಾ ಅದೇ ಪ್ರಕರಣದ ಯೆರಡು ಭಾಗಗಳೊಳಗೆ ಇಂಥಾ ಭಾಗದಲ್ಲಿ ತಕ್ಕೀರು ಶೇರಿದ್ದೆಂಬ ವಿಷಯದಲ್ಲಿ ಸಂಶಯ ಉಂಟಾಗಿದ್ದರೆ, ಅದು ಫಲಾನೇದೆಂತ ಕೋರ್ಟನವರು ಸ್ಪಷ್ಟವಾಗಿ ಬರೆದು, ಅವುಗಳಲ್ಲಿ ಬಂದಿಲ್ಲದಿದ್ದರೆ ಮತ್ತೊಂದು ಸರಿವಡುವ ಹಾಗೆ ಇತ್ಯರ್ಥ ನುಡಿಯತಕ್ಕದ್ದು.

ಬಂದಿಲ್ಲದಿದ್ದರೆ ಮತ್ತೊಂದು ಸರಿಹೊಂದುವ ಹಾಗೆ ಜಡ್ಜಿಮೆಂಟು ಕೊಡತಕ್ಕದ್ದು.

ಅವನು ಖುಲಾಸೆ ತೀರ್ಪು ಆಗಿದ್ದರೆ, ಅಪಾದನೆ ಪಟ್ಟವನು ಯಾವ ತಕ್ಕೀರು ಬಾಬಿನಲ್ಲಿ ಖುಲಾಸೆ ಪಟ್ಟದ್ದಾನೋ ಆತಕ್ಕೀರು ನಮೂದಿಸಿ ಅವನನ್ನು ಬಿಟ್ಟುಬಿಡತಕ್ಕದ್ದೆಂದು ವಿಧಿಸತಕ್ಕದ್ದು.

ಮರಣದಿಂದ ಶಿಕ್ಷಿಸಲ್ಪಡತಕ್ಕ ತಕ್ಕೀರಿನ ಬಾಬತು ಅಪಾದನೆ ಪಟ್ಟವನಮೇಲೆ ಸಾಬೀತುಮಾಡಿ, ಅವನ ಮೇಲೆ ಸದರೀ ಕೋರ್ಟನವರು ಮರಣವಲ್ಲದೆ ಇತರ ಶಿಕ್ಷೆಯಿಂದ ಸಜಾ ವಿಧಿಸಿದರೆ, ಸದರೀ ಕೋರ್ಟನವರು ತಮ್ಮ ಜಡ್ಜಮೆಂಟಿನಲ್ಲಿ ಯಾತಕ್ಕೆ ಮರಣದ ಸಜಾವನ್ನು ವಿಧಿಸಲಿಲ್ಲವೋ, ಆ ಕಾರಣವನ್ನು ನಮೂದಿಸತಕ್ಕದ್ದು.

ಪರಂತು, ಜೂರಿಯವರಿಂದ ಮಾಡಲ್ಪಡುವ ದರ್ಯಾಫ್ತಿಗಳಲ್ಲಿ, ಕೋರ್ಟನವರು ಜಡ್ಜಮೆಂಟನ್ನು ಬರೆಯುತಕ್ಕ ಅಗತ್ಯವಿಲ್ಲ, ಆದರೆ ಜೂರಿಗೆ ಮಾಡಿದ ಚಾರ್ಜಿನ ಬಾಬುಗಳನ್ನು ಸೆಷನ್ಸ್‌ಕೋರ್ಟನವರು ರಿಕಾರ್ಡ್ಮಾಡತಕ್ಕದ್ದು.

368. ಯಾವ ಮನುಷ್ಯನಿಗಾದರೂ ಮರಣ ಸಜಾ ವಿಧಿಸೋಣಾದರೆ, ಅಂಥಾ ಸಂಗತಿಯಲ್ಲಿ ಅವನು ಮೃತಪಡುವ ತನಕ ಅವನನ್ನು ಗಲ್ಲಿಗೆ ಹಾಕತಕ್ಕದ್ದು ಎಂತ ವಿಧಿಸತಕ್ಕದ್ದು,

ಮರಣದಂಡನೆ ಸಜಾ.

ಯಾವ ಟ್ರಾನ್ಸ್‌ಪೋರ್ಟೇಷನ್ ಸಜಾವಿನಲ್ಲೂ ಸಜಾವಾದವನನ್ನು ನೀರಿನಮೇಲೆ ರವಾನಿಸಬೇಕಾದ ಸ್ಥಳ ಫಲಾನದೆಂದು ನಮೂದಿಸ ಕೂಡದು.

ಟ್ರಾನ್ಸ್‌ಪೋರ್ಟೇಷನ್ ಸಜಾ.

369. ಚೀಫ್‌ಕೋರ್ಟನವರಲ್ಲದೆ, ಇತರ ಯಾವ ಕೋರ್ಟನವರಾದರೂ, ತಾವು ತಮ್ಮ ತೀರ್ಪಿಗೆ ದಸ್ತಖತು ಹಾಕಿದಾಗ, 395ನೇ ಪ್ರಕರಣದಲ್ಲಿ ನಿಬಂಧಿಸೋಣಾದ ಮೇರೆಗೆ ಹೊರತು—ಯಾ—ಕೈತಪ್ಪು ಸರಿಪಡಿಸಬೇಕಾದರೆ ಹೊರತು, ಇತರ ಸಂಗತಿಯಲ್ಲಿ ಅದನ್ನು ಬದಲಾಯಿಸಲೂ,—ಯಾ—ಪುನರ್ವಿಮರ್ಶಿಸಲೂ ಕೂಡದು.

ಕೋರ್ಟನವರು ಜಡ್ಜಮೆಂಟನ್ನು ಬದಲಾಯಿಸಕೂಡದು.

371. ಅಪಾದನೆ ಪಟ್ಟವನಿಗೆ ತೀರ್ಪು ವಿವರಿಸಿಹೇಳತಕ್ಕದ್ದು, ಮತ್ತು ಅವನು ಅರ್ಜಿಮಾಡಿಕೊಂಡಲ್ಲಿ ತೀರ್ಪಿನ ಒಂದು ಪ್ರತಿಯನ್ನು, ಅಥವಾ ತನ್ನ ಸ್ವಂತ ಭಾಷೆಯಲ್ಲಿ ತರ್ಜುಮೆ ಅಪೇಕ್ಷಿಸಿದರೆ, ಸಾಧ್ಯವಾದರೆ, ಆ ಪ್ರಕಾರ ತರ್ಜುಮೆಯನ್ನು—ಯಾ—ಕೋರ್ಟಿನ ಭಾಷೆಯಲ್ಲಾಗಲೀ, ದೇರೀ ಶಿವಾಯಿ ಆತಗೆ ಕೊಡಲ್ಪಡತಕ್ಕದ್ದು.

ತೀರ್ಪು ವಿವರಿಸಿ ಹೇಳಲ್ಪಟ್ಟು ಅಪಾದನೆ ಪಟ್ಟವನಿಗೆ ಅದರ ಪ್ರತಿಯನ್ನು ಕೊಡತಕ್ಕದ್ದು.

ಸಮನಸ್ ಮೊಕದ್ದಮೆಗಳಲ್ಲದ, ಇತರ ಯಾವದೊಂದು ಮೊಕದ್ದಮೆಯಲ್ಲಿಯೂ, ಅಂಥಾ ಪ್ರತಿಯು ಖರ್ಚು ಇಲ್ಲದೇನೇ ಕೊಡತಕ್ಕದ್ದು.

ಸೆಷ್ನ ಕೋರ್ಟಿನಲ್ಲಿ ಜೂರಿಯವರಮುಂದೆ ನಡೆಯುವ ದರ್ಯಾಪ್ತಿಗಳಲ್ಲಿ, ಜೂರಿಗೆ ಮಾಡಿದ ಚಾರ್ಜಿನ ಬಾಬುಗಳ ಒಂದು ಪ್ರತಿಯು, ಅಪಾದನೆಪಟ್ಟ ಮನುಷ್ಯನು ಅಪೇಕ್ಷಿಸಿದಲ್ಲಿ, ದೇರೀ ಶಿವಾಯಿ—ವ—ಖರ್ಚು ಇಲ್ಲದೇನೇ ಆತಗೆ ಕೊಡತಕ್ಕದ್ದು.

ಮರಣ ಸಜಾ ವಿಧಿಲ್ಪಟ್ಟ ಮನುಷ್ಯನ ಸಂಗತಿಯಲ್ಲಿ.

ಅಪಾದನೆಪಟ್ಟವನು ಒಬ್ಬ ಸೆಷ್ನ ಜಡ್ಜಿಯಿಂದ ಮರಣ ಸಜಾ ವಿಧಿಸಲ್ಪಟ್ಟಾಗ, ಆತ ಅಪ್ಪೀಲ್ ಮಾಡಲಿಕ್ಕೆ ಅಪೇಕ್ಷಿಸುವದಿದ್ದರೆ, ಆತನ ಅಪ್ಪೀಲ್ ಯಾವ ಕಾಲದೊಳಗಾಗಿ ದಾಖಲ್ ಅಗಲ್ಪಡ ಬೇಕೆಂಬವನ್ನು ಕೂಡಾ ಅಂಥಾ ಜಡ್ಜಿಯು ಆತಗೆ ತಿಳಿಸ ತಕ್ಕದ್ದು.

ತೀರ್ಪು ಯಾವಾಗ ತರ್ಜುಮೆ ಮಾಡಲ್ಪಡಬೇಕು.

372. ಅಸಲು ತೀರ್ಪನ್ನು ಪ್ರೊಸೀಡಿಂಗ್ಸುಗಳ ರಿಕಾರ್ಡಿನೊಂದಿಗೆ ಶೇರಿಸತಕ್ಕದ್ದು, ಮತ್ತು ಕೋರ್ಟಿನ ಭಾಷೆಯಲ್ಲಿ ಅಲ್ಲದೆ ಬೇರೆ ಭಾಷೆಯಲ್ಲಿ ಅಸಲು ರಿಕಾರ್ಡು ಬರೆಯಲ್ಪಟ್ಟಿದ್ದರೆ—ವ—ಅಪಾದನೆಪಟ್ಟವನು ಅಪ್ರಕಾರ ಅಪೇಕ್ಷಿಸಿದಲ್ಲಿ, ಕೋರ್ಟಿನ ಭಾಷೆಯಲ್ಲಿ ಅದರ ತರ್ಜುಮೆಯನ್ನು ಅಂಥಾ ರಿಕಾರ್ಡಿಗೆ ಶೇರಿಸತಕ್ಕದ್ದು.

ಇತ್ಯರ್ಥ—ವ—ಸಜಾವಿನ ನಕಲನ್ನು ಡಿಸ್ಟ್ರಿಕ್ಟ ಮೇಜಿಸ್ಟ್ರೇಟಿಗೆ ಸೆಷ್ನಕೋರ್ಟಿನವರು ಕಳುಹಿಸತಕ್ಕದ್ದು.

373. ಸೆಷ್ನ ಕೋರ್ಟಿನವರಿಂದ ದರ್ಯಾಪ್ತಿ ಆದ ಮೊಕದ್ದಮೆಗಳಲ್ಲಿ, ಸದರೀ ಕೋರ್ಟಿನವರು ತಮ್ಮ ಇತ್ಯರ್ಥದ—ವ—ಸಜಾವಿನ (ಇದ್ದರೇ) ಒಂದು ನಕಲನ್ನು, ಯಾರಿಅಧಿಕಾರದ ಸ್ಥಳೀಯ ಸರಹದ್ದಿನ ಒಳಗೆ ದರ್ಯಾಪ್ತಿ ನಡಿಯುತೋ, ಆ ಡಿಸ್ಟ್ರಿಕ್ಟ ಮೇಜಿಸ್ಟ್ರೇಟಿಗೆ ಕಳುಹಿಸತಕ್ಕದ್ದು.

CHAPTER XXVII.—OF THE SUBMISSION OF SENTENCES FOR CONFIRMATION.

27ನೇ ಅಧ್ಯಾಯ.—ಮಂಜೂರೀಬಗ್ಗೆ ಸಜಾರಿಕಾರ್ಡುಗಳು ರವಾನಿಸುವದರನ್ನು ಕುರಿತು.

ಮರಣ ಸಜಾ ರಿಕಾರ್ಡು ಸೆಷ್ನ ಕೋರ್ಟಿನವರಿಂದ ಕಳುಹಿಸಲ್ಪಡತಕ್ಕದ್ದು.

374. ಸೆಷ್ನ ಕೋರ್ಟಿನವರು ಮರಣದ ಸಜಾ ವಿಧಿಸಿದಾಗ, ಪ್ರೊಸೀಡಿಂಗ್ಸನ್ನು ಚೀಫ್ ಕೋರ್ಟಿನವರಿಗೆ ರವಾನಾ ಮಾಡತಕ್ಕದ್ದು, ಮತ್ತು ಅದು ಚೀಫ್ ಕೋರ್ಟಿನವರಿಂದ ಮಂಜೂರಾದ ಹೊರತು ಸದರೀ ಸಜಾವನ್ನು ಅಮಲ್ಜಾರಿ ಮಾಡಕೂಡದು.

ಹೆಚ್ಚಿನ ವಿಚಾರಣೆಮಾಡುವ ಹಾಗೆ—ಯಾ—ಅಧಿಕ ಸಾಕ್ಷ್ಯವನ್ನು ತಕ್ಕೊಳ್ಳುವಹಾಗೆ ಅಜ್ಞಾಪಿಸುವದಕ್ಕೆ ಅಧಿಕಾರ.

375. ಅಂಥಾ ಪ್ರೊಸೀಡಿಂಗ್ಸ ರವಾನಿಸಲ್ಪಟ್ಟಾಗ, ತಕ್ಸೀರು ಸಾಬೀತುಪಟ್ಟ ಮನುಷ್ಯನ ಅಪರಾಧವನ್ನು ಅಥವಾ ನಿರಪರಾಧವನ್ನು ಕುರಿತು, ಹೆಚ್ಚಿನ ವಿಚಾರಣೇ ಮಾಡಲ್ಪಡಬೇಕಾಗಿ, ಅಥವಾ ಹೆಚ್ಚಿನ ಸಾಕ್ಷ್ಯವು ತೆಗೆದುಕೊಳ್ಳಲ್ಪಡಬೇಕಾಗಿ ಚೀಫ್ ಕೋರ್ಟಿನವರು ಆಲೋಚಿಸಿದರೆ, ತಾವೇ ಅಂಥಾ ವಿಚಾರಣೆ ಮಾಡಲೂಬಹುದು—ಯಾ—ಅಂಥಾ ಸಾಕ್ಷ್ಯ ತೆಗೆದುಕೊಳ್ಳಲೂಬಹುದು, ಅಥವಾ ಸೆಷ್ನ ಕೋರ್ಟಿನವರಿಂದ ಅಂಥಾ ವಿಚಾರಣೆಯು ಮಾಡಲ್ಪಡುವ ಹಾಗೆ ಅಥವಾ ಸಾಕ್ಷ್ಯವು ತೆಗೆದುಕೊಳ್ಳಲ್ಪಡುವ ಹಾಗೆ ಹುಕ್ಕುಂ ಮಾಡಬಹುದು.

ಜೂರರುಗಳ—ಯಾ—ಅಸ್ಸೆಸ್ಸರುಗಳ ಸಮಕ್ಷಮದಲ್ಲಿ ಅಂಥಾ ವಿಚಾರಣೆ ಮಾಡತಕ್ಕದ್ದಾಗಲೀ—ಯಾ—ಅಂಥಾ ಸಾಕ್ಷ್ಯ ತೆಗಿಯತಕ್ಕದ್ದಾಗಲೀ ಇಲ್ಲ, ಮತ್ತು ಚೀಫ್ ಕೋರ್ಟಿನವರು ಅನ್ಯಥಾ ಹುಕ್ಕುಂ ಕೊಟ್ಟರೇನೇ ಹೊರತು, ಹೆಚ್ಚಿನ ವಿಚಾರಣೆ ಮಾಡುವಾಗ—ಯಾ—ಸಾಕ್ಷ್ಯ ತೆಗೆದುಕೊಳ್ಳುವಾಗ ತಕ್ಸೀರುಸಾಬೀತುಪಟ್ಟವನ ಹಾಜರಾತಿ ಅವಶ್ಯವಿಲ್ಲವೆನ್ನಬಹುದು.

ಚೀಫ್ ಕೋರ್ಟಿನವರಿಂದ ವಿಚಾರಣೆ ಮಾಡಲ್ಪಡದೆ ಮತ್ತು ಸಾಕ್ಷ್ಯ ಇದ್ದರೆ) ತೆಗೆದುಕೊಳ್ಳಲ್ಪಡದೆ ಇದ್ದಾಗ ಅಂಥಾ ವಿಚಾರಣೆಯ ಮತ್ತು ಸಾಕ್ಷ್ಯದಫಲ ಪರ್ಯವಸಾನವನ್ನು ಅಂಥಾ ಕೋರ್ಟಿನವರಿಗೆ ಸರ್ಟಿಫೈ ಮಾಡಿ ತಿಳಿಸ ತಕ್ಕದ್ದು.

ಸಜಾವನ್ನು ಕಾಯಂಮಾಡಲಿಕ್ಕೂ—ಯಾ—ಸಾಬೀತನ್ನ ರದ್ದುಮಾಡಲಿಕ್ಕೂ ಚೀಫ್ ಕೋರ್ಟಿನವರ ಅಧಿಕಾರ.

376. 374ನೇ ಪ್ರಕರಣಕ್ಕನುಗುಣವಾಗಿ ರವಾನಿಸೋಣಾದ ಯಾವ ಮೊಕದ್ದಮೆಯಲ್ಲಾದರೂ ಸರಿ, ಮೊಕದ್ದಮೆಯು ಅಸ್ಸೆಸ್ಸರುಗಳ ಸಹಾಯದಿಂದ ದರ್ಯಾಪ್ತೀ ಆಗಿಇದ್ದರೂ ಅಥವಾ ಜೂರರಿಂದ ದರ್ಯಾಪ್ತಿ ಆಗಿಇದ್ದರೂ ಚಿಂತೆಇಲ್ಲ, ಚೀಫ್ ಕೋರ್ಟಿನವರು—

(a) ಸಜಾವನ್ನು ಕಾಯಂಮಾಡಲೂಬಹುದು—ಯಾ—ಕಾನೂನಿಗನುಗುಣವಾದ ಬೇರೆ ಸಜಾ ವಿಧಿಸಲೂ ಬಹುದು, ಅಥವಾ

(b) ತಕ್ಸೀರು ಸಾಬೀತನ್ನು ರದ್ದುಮಾಡಿ, ಸರ್ಷನ್ ಕೋರ್ಟಿನವರು ಅವನ ಮೇಲೆ ಯಾವ ತಕ್ಸೀರಿನ ಸಾಬೀತು ಮಾಡಬಹುದಾಗಿತ್ತೋ ಆ ತಕ್ಸೀರನ್ನು ಆಪಾದನೆ ಪಟ್ಟಿಯನಮೇಲೆ ಸಾಬೀತು ಮಾಡಬಹುದು, ಅಥವಾ ಅದೇ ತಕ್ಸೀರು ನಾಮೆಯಮೇಲೆ—ಯಾ—ದುರಸ್ತಾದ ತಕ್ಸೀರುನಾಮೆಯಮೇಲೆ ಹೊಸ ದರ್ಯಾಪ್ತಿಮಾಡಬೇಕೆಂಬ ಹುಕ್ಕುಂ ಮಾಡಬಹುದು, ಅಥವಾ

(c) ಆಪಾದನೆ ಪಟ್ಟಿಯನನ್ನು ಖುಲಾಸೆ ಮಾಡಲೂಬಹುದು.

ಪರಂತು ಅಪ್ಪೀಲ್ ಮಾಡಲಿಕ್ಕಿರುವ ಕಾಲವು ಕಳೆಯುವತನಕ, ಅಥವಾ ಅಂಥಾ ಕಾಲದೊಳಗಾಗಿ ಅಪ್ಪೀಲ್ ದಾಖಲಾಗಿ ಇದ್ದರೆ, ಆ ಅಪ್ಪೀಲ್ ಪಡಿಬಾ ಆಗುವತನಕ, ಈ ಪ್ರಕರಣಕ್ಕನುಗುಣವಾಗಿ ಕಾಯಂ ಮಾಡಿ ಹುಕುಂ ಮಾಡಕೂಡದು.

ಸಜಾ ಕಾಯಮಾದರೆ ಅದಕ್ಕೂ, ಹೊಸ ಸಜಾವಿಧಿಸೋಣಾದರೆ ಅದಕ್ಕೂ ಇಬ್ಬರು ಜಡ್ಜೀರು ದಸ್ತಕತುಮಾಡಬೇಕು.

377. ಹಾಗೆ ಕಳುಹಿಸೋಣಾದ ಪ್ರತಿ ಮೊಕದ್ದಮೆಯಲ್ಲೂ ಸಜಾ ಚೀಫ್ ಕೋರ್ಟಿನವರಿಂದ ಕಾಯಮಾದರೆ ಅದು—ಯಾ—ಹೊಸ ಸಜಾ ಅಥವಾ ಹೊಸ ಆರ್ಡರ್ ವಿಧಿಸೋಣಾದರೆ ಅದು ಅಂಥಾ ಕೋರ್ಟಿನಲ್ಲಿ ಇಬ್ಬರು—ಯಾ—ಹೆಚ್ಚು ಜಡ್ಜೀರು ಕೂಡಿರುವಾಗ, ಕಡೇಪಕ್ಷದಲ್ಲಿ ಅವರ ಪೈಕಿ ಇಬ್ಬರು ಜಡ್ಜೀರಿಂದ ಮಾಡಲ್ಪಟ್ಟು, ವಿಧಿಸಲ್ಪಟ್ಟು ದಸ್ತಕತು ಮಾಡಲ್ಪಡತಕ್ಕದ್ದು.

ಅಭಿಪ್ರಾಯವು ಭೇದವಾಗಿರುವ ಸಂಗತಿಯಲ್ಲಿ ನಡಿಸತಕ್ಕ ಕ್ರಮ.

378. ಅಂಥಾ ಯಾವ ಮೊಕದ್ದಮೆಯು ಜಡ್ಜಿಗಳ ಬೆಂಚಿನವರ ಮುಂದೆ ಕೇಳಲ್ಪಟ್ಟು, ಅಂಥಾ ಜಡ್ಜೀರು ತಮ್ಮ ಅಭಿಪ್ರಾಯದಲ್ಲಿ ಸಮಸಂಖ್ಯೆಯಾಗಿ ವಿಭೇದಪಟ್ಟಾಗ, ಸದರೀ ಮೊಕದ್ದಮೆಯು, ಅದರ ಮೇಲಣ ಅದರ ಅಭಿಪ್ರಾಯಗಳೊಡನೆ ಇನ್ನೊಬ್ಬ ಜಡ್ಜಿಯಮುಂದೆ ಇರಿಸತಕ್ಕದ್ದು, ಮತ್ತು ಅಂಥಾ ಜಡ್ಜಿಯು, ತನಗೆ ಯುಕ್ತತೋರುವಂಥಾ ವಿಚಾರಣೆಯು ಮತ್ತು ಹಿಯರಿಂಗ್ ಆದನಂತರ, ತನ್ನ ಅಭಿಪ್ರಾಯವನ್ನು ನುಡಿಯತಕ್ಕದ್ದು, ಮತ್ತು ತೀರ್ಪು ಅಥವಾ ಹುಕ್ಕುಂ ಅಂಥಾ ಅಭಿಪ್ರಾಯಕ್ಕನುಸಾರವಾಗಿ ಇರತಕ್ಕದ್ದು.

ಮಂಜೂರು ಮಾಡುವದಕ್ಕಾಗಿ ಚೀಫ್ ಕೋರ್ಟಿಗೆ ಕಳುಹಿಸಿದ ಮೊಕದ್ದಮೆಗಳಲ್ಲಿ ನಡಿಸತಕ್ಕ ಕ್ರಮ.

379. ಮರಣ ಸಜಾ ಮಂಜೂರಾಗುವಬಗ್ಗೆ ಸೆಷನ್ ಕೋರ್ಟಿನವರು ಚೀಫ್ ಕೋರ್ಟಿಗೆ ಮೊಕದ್ದಮೆಯನ್ನು ಕಳುಹಿಸುತ್ತಾರಷ್ಟೇ, ಹಾಗೆ ಕಳುಹಿಸಿದ ಮೊಕದ್ದಮೆಗಳಲ್ಲಿ ಚೀಫ್ ಕೋರ್ಟಿನವರು ಮಂಜೂರಾತಿಯ ಹುಕುಂ ಅಥವಾ ಇತರ ಹುಕುಂ ಮಾಡಿದನಂತರ, ಚೀಫ್ ಕೋರ್ಟಿಗೆ ಶೇರಿದ ತಕ್ಕ ಆಫೀಸರು, ಸದರೀ ಹುಕುಮಿನ ಒಂದು ನಕಲು ಅದಕ್ಕೆ ತನ್ನ ಆಫಿಷಿಯಲ್ ದಸ್ತಕತನಿಶಿ ಚೀಫ್ ಕೋರ್ಟಿನವರ ಮೊಹರ್ ಹಾಕಿ ಅದನ್ನು ಕಾಲವಿಳಂಬವಿಲ್ಲದೆ ಸೆಷನ್ ಕೋರ್ಟಿಗೆ ಕಳುಹಿಸತಕ್ಕದ್ದು.

1165

ಅಸಿಸ್ಟೆಂಟ್ ಸೆಷನ್ ಜಡ್ಜರ ಅಥವಾ 34ನೇ ಪ್ರಕರಣಕ್ಕನುಗುಣವಾಗಿ ನಡಿಯುವ ಮ್ಯಾಜಿಸ್ಟ್ರೇಟನ ಸಜಾವಿನ ಮಂಜೂರಾತಿ.

380. ಒಬ್ಬ ಅಸಿಸ್ಟೆಂಟ ಸೆಷನ್ ಜಡ್ಜಿಯಿಂದ ಅಥವಾ 34ನೇ ಪ್ರಕರಣಕ್ಕನುಗುಣವಾಗಿ ನಡಕೊಳ್ಳುವ ಒಬ್ಬ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನಿಂದವಿಧಿಸೋಣಾದ ಸಜಾ ಮಂಜೂರಾತಿಬಗ್ಯೆ ಸೆಷನ್ ಜಡ್ಜಿಯು ಬಳಿಗೆ ಕಳುಹಿಸಿದಲ್ಲಿ, ಅಂಥಾ ಸೆಷನ್ ಜಡ್ಜಿಯು—

(a) ಸಜಾವನ್ನು ಕಾಯಂ ಮಾಡಲೂಬಹುದು, ಅಥವಾ ಕೆಳ ಕೋರ್ಟಿನವರು ವಿಧಿಸಬಹುದಾಗಿ ಇದ್ದ ಬೇರೆ ಸಜಾವನ್ನು ವಿಧಿಸಲೂಬಹುದು ; ಅಥವಾ

(b) ಸಾಬೀತನ್ನು ರದ್ದು ಮಾಡಿ, ಕೆಳ ಕೋರ್ಟಿನವರು ಅವನಮೇಲೆ ಸಾಬೀತು ಮಾಡಬಹುದಾಗಿದ್ದ ಯಾವ ತಕ್ಸೀರನ್ನಾದರೂ ಆಪಾದನೆ ಪಟ್ಟವನಮೇಲೆ ಸಾಬೀತು ಮಾಡಬಹುದು—ಯಾ—ಅದೇ ತಕ್ಸೀರುನಾಮೆಯಮೇಲೆ ಅಥವಾ ದುರಸ್ತಾದ ತಕ್ಸೀರುನಾಮೆಯಮೇಲೆ ಹೊಸ ದರ್ಯಾಫ್ತಿ ಮಾಡಹೇಳಿ ಹುಕುಂ ಮಾಡಬಹುದು ; ಅಥವಾ

(c) ಆಪಾದನೆ ಪಟ್ಟವನನ್ನು ಖುಲಾಸೆ ಮಾಡಲೂಬಹುದು ; ಅಥವಾ

(d) ಆಪಾದನೆಪಟ್ಟ ಮನುಷ್ಯನ ಅಪರಾಧವನ್ನು ಅಥವಾ ನಿರಪರಾಧವನ್ನು ಕುರಿತು ಹೆಚ್ಚಿನ ವಿಚಾರಣೆ—ಯಾ—ಹೆಚ್ಚಿನ ಸಾಕ್ಷ್ಯ ಅವಶ್ಯವಾಗಿರುವದಾಗಿ ಆತ ತಿಳಕೊಂಡರೆ, ತಾನೇ ಅಂಥಾ ವಿಚಾರಣೆ ಮಾಡಲೂಬಹುದು—ಯಾ—ಅಂಥಾ ಸಾಕ್ಷ್ಯ ತೆಗದುಕೊಳ್ಳಲೂ ಬಹುದು, ಅಥವಾ ಅಂಥಾ ವಿಚಾರಣೆ ಮಾಡುವದಾಗಿ—ಯಾ—ಸಾಕ್ಷ್ಯ ತೆಗದುಕೊಳ್ಳುವ ಹಾಗೆ ಹುಕುಂ ಮಾಡಲೂಬಹುದು.

ಅನ್ಯಥಾ ಸೆಷನ್ ಕೋರ್ಟಿನವರು ಹುಕುಂ ಕೊಟ್ಟರೇನೇ ಹೊರತು, ಅಂಥಾ ದರ್ಯಾಫ್ತಿ ಮಾಡುವಾಗ—ಯಾ—ಸಾಕ್ಷ್ಯ ತೆಗದುಕೊಳ್ಳುವಾಗ ಸಾಬೀತಾದವನ ಹಾಜರಾತಿಯು ಅವಶ್ಯವಿಲ್ಲವೆನ್ನಬಹುದು; ಮತ್ತು, ಒಬ್ಬ ಅಸಿಸ್ಟೆಂಟ್ ಸೆಷನ್ ಜಡ್ಜಿಯಿಂದ ಸಜಾ ರಿಕಾರ್ಡು ಕಳುಹಿಸೋಣಾದಾಗ, ಜೂರರುಗಳ—ಯಾ—ಅಸ್ಸೆಸ್ಸರುಗಳ ಸಮಕ್ಷಮದಲ್ಲಿ, ಅಂಥಾ ವಿಚಾರಣೆ ಮಾಡತಕ್ಕದ್ದು—ಯಾ—ಅಂಥಾ ಸಾಕ್ಷ್ಯ ತೆಗದುಕೊಳ್ಳತಕ್ಕದ್ದೂ ಇಲ್ಲ.

ಸೆಷನ್ ಕೋರ್ಟಿನವರಿಂದ ವಿಚಾರಣೆ ಮಾಡಲ್ಪಡದೆ ಮತ್ತು ಸಾಕ್ಷ್ಯ (ಇದ್ದರೆ) ತೆಗದುಕೊಳ್ಳಲ್ಪಡದೆ ಇದ್ದಾಗ, ಅಂಥಾ ವಿಚಾರಣೆ—ವ—ಸಾಕ್ಷ್ಯದ ಫಲಪರ್ಯವಸಾನವನ್ನು ಅಂಥಾ ಕೋರ್ಟಿನವರಿಗೆ ಸರ್ಟಿಫೈ ಮಾಡಿ ತಿಳಿಸತಕ್ಕದ್ದು.

CHAPTER XXVIII.—OF EXECUTION.

28ನೇ ಅಧ್ಯಾಯ.—ಅಮಲ್ದಾರಿಯನ್ನು ಕುರಿತು.

366ನೇ ಪ್ರಕರಣಕ್ಕನುಗುಣವಾಗಿ ವಿಧಿಸಿದ ಹುಕುಮಿನ ಅಮಲ್‌ದಾರಿ.

381. ಸೆಷನ್ ಕೋರ್ಟಿನವರಿಂದ ವಿಧಿಸಲ್ಪಟ್ಟ ಮರಣ ಸಜಾ ಚೀಫ್ ಕೋರ್ಟಿನವರ ಮಂಜೂರಾತಿ ಬಗ್ಯೆ ಕಳುಹಿಸಲ್ಪಟ್ಟಾಗ, ಮಂಜೂರಾತಿ ಹುಕುಂ, ಅಥವಾ ಚೀಫ್ ಕೋರ್ಟಿನವರ ಅದರ ಮೇಲಣ ಇತರ ಹುಕುಂ ತಲ್ಪುತ್ತಲೇ, ಅಂಥಾ ಸೆಷನ್ ಕೋರ್ಟಿನವರು ವಾರಂಟು ಕೊಡುವದರಮೂಲಕವಾಗಲೀ—ಯಾ—ಅವಶ್ಯಕಗಳಾದ ಇತರ ಉಪಾಯಗಳಮೂಲಕವಾಗಲೀ, ಅಂಥಾ ಹುಕುಮನ್ನು ಅಮಲ್ದಾರಿ ಮಾಡಿಸತಕ್ಕದ್ದು.

ಗರ್ಭಿಣಿಯಾದ ಹೆಂಗಸಿನಮೇಲೆ ವಿಧಿಸೋಣಾದ ಮರಣ ಸಜಾವನ್ನು ನಿಲ್ಲಿಸೋಣ.

382. ಮರಣದಂಡನೆ ಸಜಾವಾದ ಹೆಂಗಸು ಗರ್ಭಿಣಿಯೆಂದು ಕಾಣಬಂದರೆ, ಸದರೀ ಸಜಾವಿನ ಅಮಲನ್ನು ಮುಂದಕ್ಕೆ ತಳ್ಳಿಡತಕ್ಕದ್ದೆಂದು ಚೀಫ್ ಕೋರ್ಟಿನವರು ಹುಕುಂ ಮಾಡತಕ್ಕದ್ದು, ಮತ್ತು ಸದರೀ ಸಜಾವನ್ನ ಯಾವ ಜೀವವು ನೀರಿನಮೇಲೆ ಕಳುಹಿಸಲ್ಪಡುವ ಸಜಾವಾಗಿ ಬದಲಾಯಿಸಬಹುದು.

ಟ್ರ್ಯಾನ್ಸ್‌ಪೋರ್ಟೇಷನ್ ಸಜಾಗಳ ಅಥವಾ ಇತರ ಮೊಕದ್ದಮೆಗಳಲ್ಲಿ ಕೈದು ಸಜಾಗಳ ಅಮಲ್‌ಜಾರಿ.

383. ಅಪಾದನೆಯಾದವನು 381ನೇ ಪ್ರಕರಣದಿಂದ ನಿಬಂಧಿಸೋಣಾದ್ದಲ್ಲದ ಇತರ ಮೊಕದ್ದಮೆಗಳಲ್ಲಿ ಟ್ರ್ಯಾನ್ಸ್‌ಪೋರ್ಟೇಷನ್ ಅಥವಾ ಕೈದು ಸಜಾ ವಿಧಿಸಲ್ಪಟ್ಟಿದ್ದರೆ, ಸಜಾ ವಿಧಿಸುವ ಕೋರ್ಟಿನವರು ಅವನನ್ನು ಸೆರೆಯಲ್ಲಿ ಇಡಬೇಕಾದ ಜೈಲಿಗೆ ವಾರಂಟಿನೊಂದಿಗೆ ಕಳುಹಿಸತಕ್ಕದ್ದು, ಮತ್ತು ಅಪಾದನೆ ಪಟ್ಟವನು ಅಂಥಾ ಜೈಲಿನಲ್ಲಿ ಮೊದಲೇ ಸೆರೆಯಲ್ಲಿ ಇರುವವನಾಗಿದ್ದರೆ ವಾರಂಟನ್ನು ಕೂಡಲೇ ಅಂಥಾ ಜೈಲಿಗೆ ಕಳುಹಿಸತಕ್ಕದ್ದು.

ಅಮಲ್‌ಜಾರಿಬಗ್ಗೆ ವಾರಂಟಿನ ಮೇಲ್ವಿಲಾಸ.

384. ಕೈದು ಸಜಾವಿನ ಅಮಲ್‌ಜಾರಿ ಬಗ್ಗೆ ಕೊಡುವ ಪ್ರತಿ ವಾರಂಟು, ಕೈದಿಯು ಯಾವ ಜೈಲಿನಲ್ಲಿ—ಯಾ—ಇತರ ಸ್ಥಳದಲ್ಲಿ ಇರುತ್ತಾನೋ—ಯಾ—ಸೆರೆಯಲ್ಲಿಡಲ್ಪಡಬೇಕೋ ಆ ಸ್ಥಳದ—ಯಾ—ಆ ಜೈಲಿನ ಜಿಮ್ಮೆಯನ್ನುಳ್ಳ ಆಫೀಸರಿಗೆ ಆಜ್ಞಾಪಿಸಿ ರವಾನಿಸತಕ್ಕದ್ದು.

ವಾರಂಟನ್ನು ಯಾರಲ್ಲಿ ಇಡತಕ್ಕದ್ದು.

385. ಬಂದಿವಾನನು ಜೈಲಿನಲ್ಲಿ ಸೆರೆ ಇಡಲ್ಪಡಬೇಕಾದಾಗ, ವಾರಂಟು ಜೈಲರನೊಂದಿಗೆ ಇಡತಕ್ಕದ್ದು.

ಜುರ್ಮಾನೆ ವಸೂಲಾತಿಬಗ್ಗೆ ವಾರಂಟು.

386. ಯಾವಾಗಲಾದರೂ ತಕ್ಸೀರುದಾರನಿಗೆ ಜುರ್ಮಾನೆ ವಿಧಿಸೋಣಾದರೆ, ಸಜಾ ವಿಧಿಸುವ ಕೋರ್ಟಿನವರು, ತಕ್ಸೀರುದಾರನದಾದ ಯಾವದಾದರೂ ಚರ ಜಿಂದಿಗಿಯನ್ನು ಜಪ್ತಿ ಮಾಡಿ ಮಾಡುವದರ ಮೂಲಕವಾಗಿ ಸದರೀ ಜುರ್ಮಾನೆಯ ಮೊಬಲಗನ್ನು ವಸೂಲ್ಮಾಡಿಸುವ ಬಗ್ಗೆ, ತಮ್ಮ ಯುಕ್ತ ಪ್ರಕಾರ, ವಾರಂಟು ಕೊಡಬಹುದು. ಸದರೀ ಸಜಾ ನಾಮೆಯಲ್ಲಿ ಜುರ್ಮಾನೆ ಸಂದಾಯವಾಗದೆ ಇದ್ದರೆ, ತಕ್ಸೀರುದಾರನು ಕೈದು ಅನುಭವಿಸತಕ್ಕದ್ದೆಂತ ವಿಧಿಸಲಾಗಿ ಇದ್ದಾಗ್ಯೂ ಚಿಂತೆ ಇಲ್ಲ.

ಅಂಥಾ ವಾರಂಟಿನ ಫಲ.

387. ಅಂಥಾ ವಾರಂಟನ್ನು ಕೊಟ್ಟ ಕೋರ್ಟಿನವರ ಸ್ಥಳೀಕ ಅಧಿಕಾರದ ಸರಹದ್ದಿನ ಒಳಗೆ ಅದು ಜಾರೀ ಮಾಡಲ್ಪಡಬಹುದು. ಮತ್ತು ಅಂಥಾ ಯಾವ ಸ್ವತ್ತಾದರೂ ಅಂಥಾ ಸರಹದ್ದಿನ ಹೊರಗೆ ಇದ್ದರೆ ಆಗ ಅದು ಯಾರ ಸ್ಥಳೀಕ ಅಧಿಕಾರದ ಸರಹದ್ದಿನೊಳಗೆ ಸಿಕ್ಕಿರುತ್ತದೋ ಆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟನಿಂದ ಇಂಡಾರ್ಸು ಮಾಡಲ್ಪಟ್ಟಲ್ಲಿ, ಆ ಸ್ವತ್ತನ್ನು ಜಪ್ತಿ ಮಾಡಿ ವಿಕ್ರಯಿಸಲಿಕ್ಕೆ ಅಧಿಕಾರ ಉಂಟಾಗತಕ್ಕದ್ದು.

ಕೈದು ಸಜಾವಿನ ಅಮಲ್‌ಜಾರೀ ಅಮಾನತು ಇಡೋಣ.

388. ತಕ್ಸೀರುದಾರನು ಜುರುಮಾನೆ ಸಜಾ ಮಾತ್ರ ವಿಧಿಸಲ್ಪಟ್ಟು, ಅಂಥಾ ಜುರುಮಾನೆ ಸಂದಾಯ ಪಡಿಸದೆ ತಪ್ಪಿದ್ದಕ್ಕೆ ಕೈದು ಸಜಾ ವಿಧಿಸೋಣಾಗಿದ್ದು, ಕೋರ್ಟಿನವರು 386ನೇ ಪ್ರಕರಣಕ್ಕನುಸಾರವಾಗಿ ವಾರಂಟು ಕೊಟ್ಟರೆ, ಸದರೀ ವಾರಂಟು ರಿಟರ್ನ್ ಮಾಡುವಬಗ್ಗೆ ನೇಮಕವಾದ ತಾರೀಖಿನಲ್ಲಿ ಅಂಥಾ ಕೋರ್ಟಿನ ಮುಂದೆ ಹಾಜರಾಗುವ ಷರತ್ತಿನಮೇಲೆ, ಕೋರ್ಟಿನವರಿಗೆ ಯುಕ್ತ ತೋರುವ ಮೇರಿಗೆ, ಜಾಮೀನ್ದಾರರ ನಿಶಿ ಅಥವಾ ಜಾಮೀನ್ದಾರರು ಇಲ್ಲದೇನೇ ತಕ್ಸೀರುದಾರನು ಪತ್ರ ಬರಕೊಟ್ಟಲ್ಲಿ, ಆತನನ್ನು ಬಿಟ್ಟು ಬಿಟ್ಟು, ಕೈದು ಸಜಾವಿನ ಅಮಲ್ಜಾರಿ ನಿಲ್ಲಿಸಿ ಇಡಬಹುದು; ಹಾಗೆ ನಿಶ್ಚಯಿಸಿದ ತಾರೀಖು ಬರಕೊಟ್ಟ ಪತ್ರದ ಕಾಲದಿಂದ 15 ದಿವಸಗಳಿಗಿಂತ ಹೆಚ್ಚಿಗೆ ಯಾದ್ದಾಗಿರಕೂಡದು; ಮತ್ತು ಜುರುಮಾನೆಯು ವಸೂಲಾಗದೆ ಇರುವ ಸಂಗತಿಯಲ್ಲಿ ಕೈದಿನ ಸಜಾವನ್ನು ಕೂಡಲೇ ಜಾರೀಲಿ ತರತಕ್ಕದ್ದೆಂತ ಸದರೀ ಕೋರ್ಟಿನವರು ಅಪ್ಪಣೆ ಕೊಡಬಹುದು.

ವಾರಂಟು ಯಾರು ಕೊಡಬಹುದು.

389. ಯಾವದೊಂದು ಸಜಾವಿನ ಅಮಲ್ಜಾರಿಬಗ್ಗೆ ಕೊಡುವ ಪ್ರತಿ ವಾರಂಟು ಸಜಾ ವಿಧಿಸಿದ ಜಡ್ಜಿಯಿಂದಾಗಲೀ—ಯಾ—ಮ್ಯಾಜಿಸ್ಟ್ರೇಟನಿಂದಾಗಲೀ ಅಥವಾ ಆತನ ಉತ್ತರಾಧಿಕಾರಿಯಿಂದಾಗಲೀ ಕೊಡಲ್ಪಡಬಹುದು.

1167

ಪೆಟ್ಟಿನ ಸಜಾಮಾತ್ರವಾಗಿದ್ದಲ್ಲಿ ಅಮಲ್ ಜಾರಿ.

390. ಅಪಾದನೆ ಪಟ್ಟವನು ಪೆಟ್ಟಿನ ಸಜಾ ಮಾತ್ರ, ವಿಧಿಸಲ್ಪಟ್ಟಾಗ, ಸದರೀ ಸಜಾ ಕೋರ್ಟಿನವರು ಅಜ್ಞಾಪಿಸುವಂಥಾ ಸ್ಥಳ—ವ—ಕಾಲದಲ್ಲಿ ಜಾರೀಲಿ ತರಲ್ಪಡತಕ್ಕದ್ದು.

ಕೈದು ಸಜಾಕ್ಕೆ ಸೇರಿಸಿ ಪೆಟ್ಟಿನ ಸಜಾವಿನ ಅಮಲ್‌ಜಾರಿ.

391. ಆಪಾದನೆಪಟ್ಟವನು ಅಪ್ಪೀಲಿಗೆ ಒಳಪಟ್ಟ ಒಂದು ಮೊಕದ್ದಮೆಯಲ್ಲಿ, ಕೈದು ಸಜಾಕ್ಕೆ ಶೇರಿಸಿ ಪೆಟ್ಟಿನ ಸಜಾ ವಿಧಿಸಲ್ಪಟ್ಟಾಗ, ಸಜಾವಾದ ತಾರೀಖಿನಿಂದ ಹದಿನೈದು ದಿವಸಗಳವರಿವಿಗೆ, ಅಥವಾ ಆ ಕಾಲದ ಒಳಗಾಗಿ ಅಪ್ಪೀಲು ಆಗಿ ಇದ್ದರೆ, ಅಪ್ಪೀಲ್ ಕೋರ್ಟಿನವರಿಂದ ಸದರೀ ಸಜಾ ಕಾಯಂ ಮಾಡಲ್ಪಡುವವರಿಗೆ, ಪೆಟ್ಟು ಹೊಡಿಯಲ್ಪಡಕೂಡದು. ಆದರೆ ಹದಿನೈದು ದಿವಸಗಳು ಕಳೆದ ತರುವಾಯ ಸಾಧ್ಯವಾಗುವಷ್ಟು ಬೇಗನೆ ಪೆಟ್ಟು ಹೊಡೆಯಲ್ಪಡತಕ್ಕದ್ದು, ಅಥವಾ; ಅಪ್ಪೀಲ್ ಆಗಿರುವಲ್ಲಿ, ಅಪ್ಪೀಲ್ ಕೋರ್ಟಿನವರು ಸದರೀ ಸಜಾವನ್ನು ಮಂಜೂರು ಮಾಡಿದಹುಕುಂ ತಲ್ಪಿದ ತರುವಾಯ ಸಾಧ್ಯವಾಗುವಷ್ಟು ಬೇಗನೆ ಪೆಟ್ಟು ಹೊಡಿಯಲ್ಪಡತಕ್ಕದ್ದು.

ಜಡ್ಜ್ ಅಥವಾ ಮೇಜಿಸ್ಟ್ರೇಟು ತನ್ನ ಸಮಕ್ಷಮದಲ್ಲಿ ಸದರೀ ಪೆಟ್ಟು ಹೊಡೆಯಲ್ಪಡತಕ್ಕದ್ದು ಎಂತ ಹುಕುಂ ಮಾಡದೆ ಇದ್ದರೆ, ಜೈಲ ಜಿಮ್ಮೆಯನ್ನುಳ್ಳ ಆಫೀಸರನ ಸಮಕ್ಷಮದಲ್ಲಿ ಹೊಡೆಯಲ್ಪಡತಕ್ಕದ್ದು.

ಶಿಕ್ಷೆ ವಿಧಿಸತಕ್ಕ ರೀತಿ.

392. ಹದಿನಾರು ಸಂವತ್ಸರಗಳ ವಯಸ್ಸುಳ್ಳವನಾಗಿ—ಯಾ—ಅದಕ್ಕೆ ಮೇಲ್ಪಟ್ಟ ವಯಸ್ಸುಳ್ಳವನಾಗಿರುವವನ ವಿಷಯದಲ್ಲಿ, ಮೈಸೂರು ಗವರ್ನ ಮೆಂಟಿನವರು ನಿರ್ದೇಶಿಸುವ ಮೇರೆಗೆ ಅರ್ಧ ಇಂಚಿಗಿಂತ ಕಮ್ಮಿ ಇಲ್ಲದ ಹಗೂರವಾದ ಬೆತ್ತದಿಂದ ಸದರೀ ಯವನ ಫಲಾನಾ ಭಾಗದಲ್ಲಿ ಫಲಾನಾ ರೀತೀಲಿ, ಪೆಟ್ಟು ಹೊಡೆಯಲ್ಪಡತಕ್ಕದ್ದು; ಮತ್ತು, ಹದಿನಾರು ಸಂವತ್ಸರಗಳಿಗೊಳಪಟ್ಟವನಾಗಿದ್ದರೆ, ಸ್ಕೂಲ್ ತರಬಿಯತಿನಲ್ಲಿ ವಿಧಿಸುವಹಾಗೆ ಒಂದು ಹಗೂರವಾದ ಬೆತ್ತದಿಂದ ಹೊಡೆಯತಕ್ಕದ್ದು.

ಪೆಟ್ಟುಗಳ ಸಂಖೆ ಮಿತ.

ಯಾವ ವಿಷಯದಲ್ಲೂ ಮೂವತ್ತು ದೆಬ್ಬೆಗಳಿಗಿಂತ ಜಾಸ್ತೀಯಾದ ಶಿಕ್ಷೆಯನ್ನು ವಿಧಿಸಕೂಡದು.

ಕೊಂಚ ಕೊಂಚವಾಗಿ ಅಮಲ್‌ಜಾರಿಮಾಡಕೂಡದು.

393. ಪೆಟ್ಟಿನ ಸಜಾವನ್ನು, ಕೊಂಚ ಕೊಂಚವಾಗಿ ಅಮಲ್ಜಾರಿಮಾಡಕೂಡದು, ಮತ್ತು ಈ ಕೆಳಗೆ ನಮೂದಿರುವ ಜನರಪೈಕಿ ಯಾರೊಬ್ಬರೂ ಪೆಟ್ಟಿನಿಂದ ಶಿಕ್ಷಿಸಲ್ಪಡಕೂಡದು (ಯಾರೆಂದರೆ):—

ವಿನಾಯತಿಗಳು.

(a) ಹೆಂಗಸರು;

(b) ಮರಣ, ಅಥವಾ ಟ್ರಾನ್ಸ್‌ಪೋರ್ಟೇಷನ್—ಯಾ—ಪೀನಲ ಸರ್ವಿಟ್ಯೂಡ್,—ಯಾ—ಐದು ಸಂವತ್ಸರಗಳಿಗಿಂತ ಜಾಸ್ತಿಯಾದ ಕೈದು ಸಜಾಪಟ್ಟ ಗಂಡಸರು;

(c) ನಾಲ್ವತ್ತೈದು ವರುಷಗಳಿಗಿಂತ ಹೆಚ್ಚು ಪ್ರಾಯದವರೆಂತ ಕೋರ್ಟಿನವರು ತಿಳಕೊಳ್ಳುವ ಗಂಡಸರು.

ತಕ್ಸೀರುದಾರನು ತಕ್ಕ ಸೌಖ್ಯಸ್ಥಿತಿಯಲ್ಲಿ ಇಲ್ಲದೇ ಇದ್ದರೆ ಪೆಟ್ಟಿನ ಶಿಕ್ಷೆ ನಡಿಸಕೂಡದು.

394. ಒಬ್ಬ ಮೆಡಿಕಲ ಆಫೀಸರು ಹಾಜರಿದ್ದರೆ, ತಕ್ಸೀರುದಾರನು ಶಿಕ್ಷಿಸಲ್ಪಡಲಿಕ್ಕೆ ತಕ್ಕ ಆರೋಗ್ಯಸ್ಥಿತಿಯಲ್ಲಿಧಾನೆಂದು ಸರ್ಟಿಫೈಮಾಡಿ ಹೇಳಿದರೇನೇ ಹೊರ್ತು, ಅಥವಾ, ಮೆಡಿಕಲ ಆಫೀಸರು ಹಾಜರಿಲ್ಲದೇ ಇರುವಾಗ, ತಕ್ಸೀರುದಾರನು ಆ ಪ್ರಕಾರ ಶಿಕ್ಷಿಸಲ್ಪಡಲಿಕ್ಕೆ ತಕ್ಕ ಆರೋಗ್ಯ ಸ್ಥಿತಿಯಲ್ಲಿಧಾನೆಂದು ಹಾಜರಿರುವ ಮೆಜಿಸ್ಟ್ರೇಟಿಗೆ—ಯಾ—ಆಫೀಸರಿಗೆ ತೋರಿದರೇನೇ ಹೊರ್ತು, ಪೆಟ್ಟಿನಸಜಾ ನಡಿಸಲ್ಪಡಕೂಡದು.

1168

ಪೆಟ್ಟಿನ ಸಜಾವನ್ನ ಅಮಲಜಾರಿ ಮಾಡುತ್ತಿರುವಾಗ, ಶಿಕ್ಷೆಯಲ್ಲಿ ಉಳಿದದ್ದನ್ನು ಸಹಿಸಲಿಕ್ಕೆ ತಕ್ಸೀರುದಾರನು ತಕ್ಕ ಆರೋಗ್ಯಸ್ಥಿತಿಯಲ್ಲಿಲ್ಲವೆಂದು, ಒಬ್ಬ ಮೆಡಿಕಲ ಆಫಿಸರು ಹೇಳಿದರೆ,—ಯಾ—ಹಾಜರಿರುವ ಮೇಜಿಸ್ಟ್ರೇಟಿಗೆ ಅಥವಾ ಆಫಿಸರಗೆ ತೋರಿದರೆ, ಪೆಟ್ಟಿನ ಶಿಕ್ಷೆಯನ್ನು ಕಡೆಗೂ ನಿಲ್ಲಿಸಿಬಿಡತಕ್ಕದ್ದು.

ಅಮಲ ಜಾರಿಯನ್ನು ನಿಲ್ಲಿಸುವಿಕೆ.

395. ಯಾವ ಮೊಕದ್ದಮೆಯಲ್ಲಾದರೂ, 394 ನೇ ಪ್ರಕರಣಕ್ಕನುಗುಣವಾಗಿ, ಪೆಟ್ಟಿನ ಸಜಾ ಪೂರ್ತಿಯಾಗಿಯಾಗಲೀ—ಯಾ—ಕೊಂಚವಾಗಿಯಾಗಲೀ, ಅಮಲ್ಜಾರಿಯಾಗದೆ ಅಡ್ಡಿಯಾದರೆ, ಸದರೀ ಸಜಾವನ್ನ ವಿಧಿಸಿದ ಕೋರ್ಟಿನವರು ಅದನ್ನ ಪುನರ್ವಿಮರ್ಶೆ ಮಾಡುವ ತನಕ ತಕ್ಸೀರುದಾರನನ್ನ ಪಹರೆಯಲ್ಲಿಡತಕ್ಕದ್ದು; ಮತ್ತು ಸದರೀ ಕೋರ್ಟಿನವರು, ತಮ್ಮ ಯುಕ್ತಾನುಸಾರ, ಅಂಥ ಸಜಾವನ್ನ ಮಾಫುಮಾಡಬಹುದು, ಅಥವಾ ಪೆಟ್ಟಿನ ಶಿಕ್ಷೆಯ ಬದಲಾಗಿ—ಯಾ—ಪೆಟ್ಟಿನ ಸಜಾವಿನಲ್ಲಿ ಯೆಷ್ಟುಮಟ್ಟಿಗೆ ಅಮಲ್ಜಾರಿ ಮಾಡಲಿಲ್ಲವೋ ಅಷ್ಟರಬದಲಾಗಿ, ಹನ್ನೆರಡು ತಿಂಗಳುಗಳಿಗೆ ಜಾಸ್ತಿಯಾಗದ ಯಾವದವರೂ ಒಂದು ಕಾಲಪರ್ಯಂತ ತಕ್ಸೀರುದಾರನಮೇಲೆ ಕೈದು ಸಜಾ ವಿಧಿಸಲೂ ಬಹುದು. ಅದೇ ತಕ್ಸೀರಿಗೋಸ್ಕರ ಅವನಿಗೆ ಸಜಾವಾಗಿರ ಬಹುದಾದ ಕೈದು ಅಲ್ಲದೆ ಜಾಸ್ತಿಯಾಗಿ ಸದರೀ ಸಜಾ ಇರಬಹುದು.

ಶಿಕ್ಷೆಯನ್ನು 394ನೇ ಪ್ರಕರಣದ ಮೇರೆಗೆ ಪೂರೈಸಲಾಗದೆ ಹೋದರೆ ನಡಿಸತಕ್ಕ ಕ್ರಮ.

ಅಪಾದನೆ ಪಟ್ಟವನು ಕಾನೂನಿನಿಂದ ಎಷ್ಟರ ಕೈದಿಗೆ ಗುರಿಯಾಗುತ್ತಾನೋ ಅಥವಾ ಸದರೀ ಕೋರ್ಟಿನವರು ವಿಧಿಸಲಿಕ್ಕೆ ಲಾಯಖ್ ವ್ಯಕ್ತವರಾಗಿರುತ್ತಾರೋ ಆ ವಾಯಿದೆಗೆ ಮಿಂಚಿ ವಿಧಿಸುವದಕ್ಕೆ ಯಾವ ಕೋರ್ಟಿನವರಿಗಾವರೂ ಅಧಿಕಾರಕೊಡುವಂಥಾದ್ದೇನೂ ಈ ಪ್ರಕರಣದಲ್ಲಿ ಉಂಟೆಂತ ಎಣಿಸಲ್ಪಡಕೂಡದು.

396. ತಪ್ಪಿಸಿಕೊಂಡು ಓಡಿಹೋದ ಕೈದಿಯಮೇಲೆ ಈ ಕೋಡಿಗನುಗುಣವಾಗಿ ಸಜಾ ವಿಧಿಸೋಣಾದಾಗ, ಅಂಥಾ ಸಜಾ, ಮರಣದಂಡನೆ, ಜುರುಮಾನೆ ಅಥವಾ ಪೆಟ್ಟಿನ ಸಜಾ ಆಗಿದ್ದಲ್ಲಿ, ಇದಕ್ಕೆ ಮುಂಚೆ ಅಡಗಿರುವ ನಿಬಂಧನೆಗಳಿಗೆ ಒಳಪಟ್ಟು, ಆ ಸಜಾಕೂಡಲೇ ಜಾರಿಯಾಗತಕ್ಕದ್ದು; ಮತ್ತು ಸದರೀ ಸಜಾ ಕೈದು, ಪೀನಲ್ ಸರ್ವಿಟ್ಯೂಡ್ ಅಥವಾ ಟ್ರಾನ್ಸ್ಪೋರ್ಟೇಷನ್ ಸಜಾವಾಗಿದ್ದರೆ, ಈ ಕೆಳಗಣ ಕ್ರಮಗಳಿಗೆ ಅನುಸಾರವಾಗಿ ಜಾರಿಯಾಗತಕ್ಕದ್ದು, ಹ್ಯಾಗಂದರೆ :—

ತಪ್ಪಿಸಿಕೊಂಡು ಓಡಿಹೋದ ಕೈದಿಗಳಮೇಲೆ ಶಿಕ್ಷೆಗಳ ಅಮಲ್ಜಾರಿ.

ಸದರೀ ಕೈದಿಯು ತಪ್ಪಿಸಿಕೊಂಡು ಓಡಿಹೋದಾಗ ಅನುಭವಿಸುತ್ತಿದ್ದ ಸಜಾಕಿಂತ ಸ್ವಭಾವದಲ್ಲಿ ಹೊಸ ಸಜಾವು ಕಠಿಣವಾಗಿ ಇದ್ದರೆ, ಹೊಸ ಸಜಾ ಕೂಡಲೇ ಜಾರಿಯಾಗತಕ್ಕದ್ದು.

ಸದರೀ ಕೈದಿಯು ತಪ್ಪಿಸಿಕೊಂಡು ಓಡಿಹೋದಾಗ ಯಾವ ಸಜಾ ಅನುಭವಿಸುತ್ತಿದ್ದನೋ ಆ ಸಜಾವಿಗಿಂತ ಸ್ವಭಾವದಲ್ಲಿ ಹೊಸ ಸಜಾ ಕಠಿಣವಲ್ಲವಾಗಿದ್ದಾಗ, ಸಂಗತ್ಯಾನುಸಾರ ಕೈದಾಗಲೀ, ಪೀನಲ್ ಸರ್ವಿಟ್ಯೂಡ್ ಆಗಲೀ—ಯಾ—ಟ್ರಾನ್ಸ್ಪೋರ್ಟೇಷನ್ ಆಗಲೀ, ಅವನಿಗೆ ಮೊದಲು ವಿಧಿಸೋಣಾಗಿದ್ದ ಶಿಕ್ಷೆಯಲ್ಲಿ ಅವನು ಅನುಭವಿಸಿದ್ದು ಹೋಗಲಾಗಿ, ಅವನು ಓಡಿಹೋಗುವ ಕಾಲದಲ್ಲಿ, ಎಷ್ಟು ಬಾಕಿ ವುಳಿದಿತ್ತೋ ಅದಕ್ಕೆ ಸರಿಯಾದಷ್ಟು ಅನುಭವಿಸಿದನಂತರ, ಹೊಸ ಸಜಾ ಜಾರಿಯಾಗತಕ್ಕದ್ದು.

ಟಿಪ್ಪಣಿ—ಈ ಪ್ರಕರಣದ ಉದ್ದೇಶ್ಯಗಳಿಗೋಸ್ಕರ—

(a) ಟ್ರಾನ್ಸ್ಪೋರ್ಟೇಷನಿನ ಒಂದು ಸಜಾವಾಗಲೀ ಅಥವಾ ಪೆನಲ್ ಸರ್ವಿಟ್ಯೂಡಿನ ಒಂದು ಸಜಾವಾಗಲೀ ಕೈದು ಸಜಾವಿಗಿಂತ ಕಠಿಣವಾದ್ದಾಗಿ ಎಣಿಸಲ್ಪಡತಕ್ಕದ್ದು;

(b) ಆಸಾಮಿವಾರಿ ಕೈದುನಿಶ್ಶಿ ಕೈದಿನ ಸಜಾ ಆಸಾಮಿವಾರಿ ಕೈದು ಇಲ್ಲದೆ ಇರುವ ಕೈದಿನ ಅದೇ ತರಹಾವಿನ ಒಂದು ಸಜಾವಿಗಿಂತ ಕಠಿಣವಾಗಿರುವದಾಗಿ ಎಣಿಸಲ್ಪಡತಕ್ಕದ್ದು; ಮತ್ತು

 1169

(c) ಕಠಿಣ ಕೈದಿನ ಒಂದು ಸಜಾವು ಆಸಾಮಿವಾರಿ ಕೈದು ಸಿಶೀ—ಯಾ—ಇಲ್ಲದೆ ಇರುವ ಬರೀಕೈದು ಸಜಾವಿಗಿಂತ ಕಠಿಣವಾಗಿ ಇರುವದಾಗಿ ಎಣಿಸಲ್ಪಡತಕ್ಕದ್ದು :

ಮತ್ತೊಂದು ತಕ್ಸೀರಿಗಾಗಿ ಮೊದಲೇ ಸಜಾವಾದ ತಕ್ಸೀರುದಾರನಮೇಲೆ ಸಜಾ.

397. ಕೈದು ಪೆನಲ ಸರ್ವಿಟ್ಯೂಡ ಅಥವಾ ಟ್ರಾನ್ಸ್‌ಪೋರ್ಟೇಷನ್ ಎಂಬ ಶಿಕ್ಷೆಯನ್ನು ಮೊದಲೇ ಅನುಭವಿಸುತ್ತಾ ಇರುವಮನುಷ್ಯನಿಗೆ ಕೈದಿನ ಪೆನಲ್ ಸರ್ವಿಟ್ಯೂಡ—ಯಾ—ಟ್ರಾನ್ಸ್‌ಪೋರ್ಟೇಷನಿನ ಸಜಾವಾದರೆ, ಆತಗೆ ಪ್ರಾಕ್ಕು ಆದ ಸಜಾವಿನಬಾಬತು ಕೈದಿನಕಾಲ ಪೆನಲ ಸರ್ವಿಟ್ಯೂಡ ಯಂಬ ದಂಡನೆಯ ಕಾಲ ಅಥವಾ ಟ್ರಾನ್ಸ್‌ಪೋರ್ಟೇಷನ್ ಎಂಬ ದಂಡನೆಯ ಕಾಲ ಕಳೆದ ಕೂಡಲೇ ಅಂಥಾ ಕೈದು, ಪೆನಲ್ ಸರ್ವಿಟೂಡ—ಯಾ—ಟ್ರಾನ್ಸ್‌ಪೋರ್ಟೇಷನ್ ಆರಂಭವಾಗತಕ್ಕದ್ದು:

ಪರಂತು ಆತನು ಪ್ರಾಕ್ಕಿನ ಸಜಾವಿನಪ್ರಕಾರ ಕೈದಿನಲ್ಲಿ ಇರುತ್ತಾ ಇರುವಾಗ, ಅನಂತರ ಆದ ಸಾಬೀತಿನಮೇಲೆ ಅವನಿಗೆ ವಿಧಿಸಲಾದ ಸಜಾ ಟ್ರಾನ್ಸ್‌ಪೋರ್ಟೇಷನ್ ಆಗಿದ್ದರೆ, ಅಂಥಾ ಸಂಗತಿಯಲ್ಲಿ, ಕೋರ್ಟಿನವರು, ತಮ್ಮ ಯುಕ್ತಾನುಸಾರ, ಅನಂತರದ ಸಜಾ ತಕ್ಷಣದಲ್ಲೇ ಅಮಲ್ಜಾರಿಯಾಗತಕ್ಕದ್ದೆಂತಲಾದರೂ ಅಥವಾ ಆತಗೆ ಪ್ರಾಕ್ಕು ವಿಧಿಸಲಾದ ಸಜಾವಿನಬಾಬತು ಕೈದು ಮುಗಿದು ತರುವಾಯ ಅಮಲ್ಜಾರಿಯಾಗತಕ್ಕದ್ದೆಂತ ಲಾದರೂ ಹುಕುಂ ಮಾಡಬಹುದು.

396 ನೇ ಮತ್ತು 397 ನೇ ಪ್ರಕರಣಗಳ ವಿಷಯವಾದ ಸುರಕ್ಷಿತ.

398. 396 ನೇ ಪ್ರಕರಣದಲ್ಲಿ ಅಥವಾ 397 ನೇ ಪ್ರಕರಣದಲ್ಲಿ ಇರುವ ಯಾವದೂ, ಯಾವನೊಬ್ಬ ಮನುಷ್ಯನಮೇಲೆ ಪ್ರಾಕ್ಕು ಅಥವಾ ಅನಂತರ ಆದ ಸಾಬೀತಿನಮೇಲೆ ಅವನಿಗೆ ವಿಧಿಸೋಣಾದ ಶಿಕ್ಷೆಯ ಯಾವ ಭಾಗವನ್ನು ಎಷ್ಟುಮಾತ್ರವು ಮಾಫು ಮಾಡುವದಿಲ್ಲವೆಂತ ಭಾವ ಮಾಡಿಕೋತಕ್ಕದ್ದು.

ತಕ್ಸೀರುದಾರರಾದ ಹುಡುಗರನ್ನು ರಿಫಾರ್ಮೆಟೋರಿ ಯೆಂಬ ಕೈದಿನಲ್ಲಿಡತಕ್ಕದ್ದು.

399. ಯಾವದೊಂದು ಕ್ರಿಮಿನಲ್ ಕೋರ್ಟಿನವರು ಹದಿನಾರು ಸಂವತ್ಸರ ಪ್ರಾಯುಕ್ಕಿಂತ ಕಮ್ಮಿಯಾದ ಯಾವನೊಬ್ಬ ಮನುಷ್ಯನಿಗೆ ಯಾವದೊಂದು ತಕ್ಸೀರಿನ ಸಂಬಂಧ ಕೈದು ಸಜಾ ವಿಧಿಸಿದರೆ, ಅಂಥಾ ಸಂಗತಿಯಲ್ಲಿ ಸದರೀ ಕ್ರಿಮಿನಲ ಕೋರ್ಟಿನವರು ಅವನನ್ನು ಕ್ರಿಮಿನಲ ಜೈಲಿನಲ್ಲಿ ಇಡುವದಕ್ಕೆ ಬದಲಾಗಿ, ರಿಫಾರ್ಮೆಟೋರಿ ಎಂಬ ಕೈದಿನಲ್ಲಿ ಇಡುವಂತೆ ಹುಕುಂ ಮಾಡಬಹುದು, ಯೆಂಥಾ ರಿಫಾರ್ಮೆಟೋರಿ ಕೈದು ಅಂದರೆ, ಕೈದು ಮಾಡಲಿಕ್ಕೆ ತಕ್ಕಸ್ಥಲವೆಂತ ಮೈಸೂರುಗವರ್ನ್ಮೆಂಟಿನವರಿಂದ ಸ್ಥಾಪಿಸಲ್ಪಟ್ಟು, ಉಪಯೋಗವಾದ ಮೆಹನತು ಕೆಲಸದಲ್ಲಿ ತಕ್ಕಷ್ಟು ತರಬೇತಾಗಲಿಕ್ಕೆ ಉಪಾಯಗಳನ್ನು ಉಳ್ಳದ್ದಾಗಿರುವಂಥಾ ಅಥವಾ, ಅದರಲ್ಲಿ ಇಡೋಣಾಗುವ ಮನುಷ್ಯರ ತರಬೇತಿನ ವಿಷಯದಲ್ಲಿ ಮೈಸೂರು ಗವರ್ನ್ಮೆಂಟಿನವರು ನಿರ್ದೇಶಿಸುವ ಕಾಯಿದೆಗಳಿಗೆ ಅನುಗುಣವಾಗಿ ನಡಕೊಳ್ಳಲಿಕ್ಕೆಮನಸುಳ್ಳ ಮನುಷ್ಯನಿಂದ ನಿರ್ಪಡಿಸಿರುವಂಥಾ ಕೈದಿನಲ್ಲಿಡಬಹುದು.

ಈ ಪ್ರಕರಣ ಪ್ರಕಾರ ಕೈದು ಮಾಡೋಣಾದ ಸಮಸ್ತ ಮನುಷ್ಯರು ಹಾಗೆ ನಿರ್ದೇಶಿಸಿರೋಣಾದ ಕಾಯಿದೆಗಳಿಗೆ ಒಳಪಟ್ಟವರಾಗಿ ಇರತಕ್ಕದ್ದು.

ಸಜಾವಿನ ಅಮಲ್ಜಾರಿ ಆದಮೇಲೆ ವಾರಂಟು ವಾಪಸ ಮಾಡೋಣ.

400. ಒಂದು ಸಜಾವನ್ನು ಪೂರಾ ಅಮಲ್ಜಾರೀ ಮಾಡಿದಮೇಲೆ, ಅದರ ಅಮಲ್ಜಾರಿಮಾಡಿದ ಆಫಿಸರು ಸಜಾವನ್ನು ಫಲಾನಾ ಪ್ರಕಾರ ಅಮಲ್ಜಾರೀ ಮಾಡೋಣಾಯಿತು ಎಂತ ವಾರಂಟಿನಮೇಲೆ ಬರದು, ಅದಕ್ಕೆ ಎಂಡಾರ್ಸಮೆಂಟ್ ನಿಶೀ ತನ್ನ ದಸ್ತು ಮಾಡಿ, ಅದು ಯಾವಕೋರ್ಟಿನಿಂದ ಬಂತೋ, ಆ ಕೋರ್ಟಿಗೆ ಅದನ್ನು ವಾಪಸು ಮಾಡತಕ್ಕದ್ದು.

———

2 F

Chapter XXIX—Of Suspensions, Remissions and Commutations of Sentences.

29ನೇ ಅಧ್ಯಾಯ.—ಸಜಾಗಳು ನಿಲ್ಲಿಸಿಡೋಣ, ಮಾಫ್ ಮಾಡೋಣ ಮತ್ತು ಬದಲಾಯಿಸೋಣ ಇವನ್ನು ಕುರಿತು.

ಶಿಕ್ಷೆಯನ್ನು ನಿಲ್ಲಿಸಿಡುವ ಅಥವಾ ಮಾಫ್ ಮಾಡುವ ಅಧಿಕಾರ.

401. ಒಂದು ತಕ್ಸೀರಿನ ಸಂಬಂಧ ಯಾವನೊಬ್ಬ ಮನುಷ್ಯನಿಗೆ ಶಿಕ್ಷೆಯಾಗುವಂತೆ ಸಜಾ ಕೊಡೋಣಾದರೆ, ಅಂಥಾ ಸಂಗತಿಯಲ್ಲಿ ಮೈಸೂರು ಗವರ್ನ್ಮೆಂಟಿನವರು, ಷರತ್ತುಗಳೇನೂ ಇಲ್ಲದೆ, ಅಥವಾ ಸಜಾವಾದವನೊಪ್ಪುವ ಷರತ್ತುಗಳನಿಶಿ, ಯಾವಾಗ ಅಂದರೆ ಆವಾಗ, ಅವನ ಸಜಾವಿನ ಅಮಲ್ದಾರಿ ನಿಲ್ಲಿಸಿಡಬಹುದು ಅಥವಾ ಆತನು ಸಜಾಪಟ್ಟಿರುವ ಶಿಕ್ಷೆಯನ್ನು ಪೂರಾ ಆಗಲೀ—ಯಾ—ಎಷ್ಟುಮಾತ್ರವಾಗಲೀ ಮಾಫ್ ಮಾಡಬಹುದು.

ಸಜಾ ನಿಲ್ಲಿಸಿಡುವ ಬಗ್ಯೆ ಅಥವಾ ಮಾಫೀಬಗ್ಯೆ ಮೈಸೂರು ಗವರ್ನ್ಮೆಂಟಿನವರಿಗೆ ಮನ್ವಿ ಅರ್ಜಿ ಬರೆದುಕೊಂಡಿರುವಾಗ, ಮೈಸೂರು ಗವರ್ನ್ಮೆಂಟಿನವರು, ಸಾಬೀತು ಯಾವ ಕೋರ್ಟಮುಂದೆ ಆಗೋಣಾಗಿತ್ತೋ ಅಥವಾ ಅದು ಯಾವ ಕೋರ್ಟಿನವರಿಂದ ಕಾಯಂ ಮಾಡೋಣಾಗಿತ್ತೋ, ಆ ಕೋರ್ಟಿನ ಪ್ರಮುಖ ಜಡ್ಜಿಯನ್ನು, ಸದರೀ ಮನ್ವಿಅರ್ಜಿ ಅರಿಕೆ ನಡಿಸಬಹುದೋ—ಯಾ—ನಿರಾಕರಿಸ ತಕ್ಕದ್ದೋ ಹ್ಯಾಗೆ ಎಂಬದರ ವಿಷಯವಾಗಿ, ತನ್ನ ಆಲೋಚನೆಯನ್ನು ಸಬಬುಗಳೊಂದಿಗೆ, ತಿಳಿಸುವ ಹಾಗೆ, ಅಪೇಕ್ಷಿಸಬಹುದು.

ಯಾರ ಪಕ್ಷಕ್ಕಾಗಿ ಒಂದು ಸಜಾ ನಿಲ್ಲಿಸಿ ಇಡೋಣಾಗಿಧೆಯೋ—ಯಾ—ಮಾಫು ಮಾಡೋಣಾಗಿಧೆಯೋ ಆ ಮನುಷ್ಯನು ಮೈಸೂರು ಗವರ್ನ್ಮೆಂಟಿನವರಿಂದ ನಿರ್ದೇಶಿಸಲ್ಪಟ್ಟ ಷರತುಗಳ ಪ್ರಕಾರ ನಡಕೊಳ್ಳದೆ ತಪ್ಪಿದರೆ, ಸದರೀ ಗವರ್ನ್ಮೆಂಟಿನವರು, ಅಂಥಾ ನಿಲ್ಲಿಸಿಡೋಣವನ್ನು ಅಥವಾ ಮಾಫಿಯನ್ನು ರದ್ದು ಮಾಡಬಹುದು, ಆಮೇಲೆ, ಅಂಥಾ ಮನುಷ್ಯನು ಪಹರೆಯಲ್ಲಿ ಇಲ್ಲದಪಕ್ಷಕ್ಕೆ, ವಾರಂಟು ಇಲ್ಲದೆ ಪೋಲಿಸು ಆಫಿಸರಿಂದ ಹಿಡಿಯಲ್ಪಡಬಹುದು ಮತ್ತು ಅವನನ್ನು ಅವನ ಸಜಾವಿನ ಪೈಕಿ ಉಳಿಗಿಯದ ಕಾಲವನ್ನು ಅನುಭವಿಸಲಿಕ್ಕೆ ರಿಮ್ಯಾಂಡು ಮಾಡಬಹುದು.

ಇದರಲ್ಲಿ ಅಡಗಿರುವಂಥಾದ್ಯಾವದೂ, ಶ್ರೀಮನ್ ಮೈಸೂರು ಮಹಾರಾಜರವರಿಗುಂಟಾಗಿರುವ, ಶಿಕ್ಷೆ ಬಾಬತು ಮನ್ನಣೆಗಳನ್ನೂ, ಬಿಡುಗಡೆಗಳನ್ನೂ ಸಾವಕಾಶತೆಗಳನ್ನು—ಯಾ—ಮಾಫುಗಳನ್ನೂ ಕೊಡಲಿಕ್ಕೆ ಇರುವ ಅರ್ಹತೆಗೆ ಬಾಧಿಸುತ್ತೆಂತ ಎಣಿಸಲ್ಪಡಕೂಡದು.

ಶಿಕ್ಷೆಯನ್ನು ಬದಲಾಯಿಸುವ ಅಧಿಕಾರ.

402. ಮೈಸೂರು ಗವರ್ನ್ಮೆಂಟಿನವರು, ಸಜಾವಾದವನ ಅನುಮತಿ ಇಲ್ಲದೆ, ಈ ಕೆಳಗಣ ಸಜಾಗಳೊಳಗೆ ಯಾವದಕ್ಕೆ ಬದಲಾಗಿಯಾಗಲಿ ಅದರನಂತರ ಬರುವ ಸಜಾವನ್ನು ವಿಧಿಸಬಹುದು :—

ಮರಣ, ಟ್ರಾನಸ್ಪೋರ್ಟೇಷನ್, ಪಿನಲ್ ಸರ್ವಿಟ್ಯೂಡ್, ಆತನು ಸಜಾವಾಗಲ್ಪಡ ಬಹುದಾದಂಥಾದರಕಿಂತ ಜಾಸ್ತಿಯಾಗದ ಒಂದು ಮಾಯಿದೆ ಪರಿಯಂತರ ಕಠಿಣ ಕೈದು, ಅದೇ ಮಾಯಿದೆ ಪರಿಯಂತ ಬರೀ ಕೈದು, ಜುರುಮಾನೆ.

Chapter XXX.—Of Previous Acquittals or Convictions.

30ನೇ ಅಧ್ಯಾಯ—ಪ್ರಾಕ್ಕ ಖುಲಾಸೆಗಳು—ಯಾ—ಸಾಬೀತುಗಳು ಕುರಿತು.

ಒಂದುಸಲ ತಕ್ಸೀರುಗಾಗಿ ಸಾಬೀತಾದವನ್ನ—ಯಾ—ವಿಮೋಚನೆ ಯಾದವನನ್ನ ಅದೇ ತಕ್ಸೀರಿಗಾಗಿ ದರ್ಯಾಫ್ತು ಮಾಡಕೂಡದು.

403. ತಕ್ಕ ಅಧಿಕಾರವುಳ್ಳ ಕೋರ್ಟಿನವರಿಂದ ಒಂದು ತಕ್ಸೀರಿಗಾಗಿ ಒಂದುಸಲಾದರ್ಯಾಫ್ತಿಯಾಗಿ ಮತ್ತು ಅಂಥಾ ತಕ್ಸೀರಿನ ಬಾಬತು ಸಾಬೀತಾಗಿ—ಯಾ—ಖುಲಾಸೆಯಾಗಿರುವ ಒಬ್ಬ ಮನುಷ್ಯನು, ಅಂಥಾ ಸಾಬೀತು—ಯಾ—ಖುಲಾಸೆ ಜಾರೀಲಿರುವಾಗ್ಯೆ ಅದೇ ತಕ್ಸೀರಿಗೋಸ್ಕರ ಪುನಃ ದರ್ಯಾಫ್ತು ಮಾಡಲ್ಪಡಲಿಕ್ಕೆ ಗುರಿಯಾಗ್ಯ

ಕೂಡದು,—ಯಾ—ಅದೇ ವಿದ್ಯಮಾನಗಳನ್ನನುಸರಿಸಿ ಅವನಮೇಲೆ ಮಾಡಿರುವಂಥಾ ಬಂದು ತಕ್ಸೀರುನಾಮೆಯಿಲ್ಲದ್ದಾಗಿ, 236ನೇ ಪ್ರಕರಣಕ್ಕನುಗುಣವಾಗಿ ಬೇರೆ ತಕ್ಸೀರುನಾಮೆಯನ್ನು ಮಾಡಿರಬಹುದಾದ ಇತರ ತಕ್ಸೀರಿಗೋಸ್ಕರ, ಅಥವಾ ಯಾವದಕ್ಕೋಸ್ಕರ 237ನೇ ಪ್ರಕರಣಕ್ಕನುಗುಣವಾಗಿಸಾಬೀತಾಗಿರಬಹುದೋ ಆ ಇತರ ತಕ್ಸೀರಿಗೋಸ್ಕರ, ಅವನು ಪುನಃ ದರ್‍ಯಾಫ್ತು ಮಾಡಲ್ಪಡಲಿಕ್ಕೆ ಗುರಿಯಾಗಲಿಕ್ಕಿಲ್ಲ.

ಯಾವ ತಕ್ಸೀರಿಗೋಸ್ಕರವಾದರೂ ಖುಲಾಸೆಯಾದ—ಯಾ—ಸಾಬೀತಾದ ಒಬ್ಬ ಮನುಷ್ಯನನ್ನು ಆಮೇಲೆ ಪ್ರತ್ಯೇಕ ಯಾವ ತಕ್ಸೀರಿಗೋಸ್ಕರವಾದರೂ ದರ್‍ಯಾಫ್ತುಮಾಡಬಹುದು. ಯೆಂಥಾ ತಕ್ಸೀರಂದರೆ, 235 ನೇ ಪ್ರಕರಣ 1ನೇ ಕಲಮಿಗನುಗುಣವಾಗಿ ಮುಂಚಿನ ದರ್‍ಯಾಫ್ತಿಯಮೇಲೆ ಅವನಿಗೆ ವಿರುದ್ಧವಾಗಿ ಬಂದು ಬೇರೆ ತಕ್ಸೀರುನಾಮೆಯು ಮಾಡಿರಬಹುದಾಗಿರುವದೋ ಆ ಯಾವ ತಕ್ಸೀರಿಗೋಸ್ಕರವಾದರೂ ದರ್‍ಯಾಫ್ತುಮಾಡಲ್ಪಡಬಹುದು.

ಪರ್‍ಯವಸಾನಗಳಿಗೆ ಹೇತುವಾದ ಬಂದು ಕೃತ್ಯದಿಂದ ಉಂಟಾದ ಯಾವ ತಕ್ಸೀರಿಗೋಸ್ಕರವಾದರೂ, ಒಬ್ಬ ಮನುಷ್ಯನು, ಸಾಬೀತು ಆಗುತ್ತಾನಷ್ಟೆ, ಸದರೀ ಪರ್‍ಯವಸಾನಗಳೂ ಮತ್ತು ಅಂಥಾ ಕೃತ್ಯವೂ ಇವೆರಡೂ ಶೇರಿ, ಯಾವದರನ್ನು ಕುರಿತು ಅವನು ಮುಂಚೆ ಸಾಬೀತಾದನೋ ಆ ತಕ್ಸೀರಲ್ಲದೆ ಇತರ ಬೇರೆ ತಕ್ಸೀರು ಉಂಟಾದರೆ, ಸದರೀ ಕಡೇಲಿ ನಮೂದಿಸಿರುವ ತಕ್ಸೀರಿಗೋಸ್ಕರ, ಅವನು ತರ್ವಾಯ ದರ್‍ಯಾಫ್ತುಮಾಡಲ್ಪಡಬಹುದು. ಯಾವ ಪಕ್ಷದಲ್ಲಂದರೆ ಅವನಮೇಲೆ ಸಾಬೀತಾದ ಕಾಲದಲ್ಲಿ ಸದರೀ ಪರ್‍ಯವಸಾನಗಳು ಸಂಭವಿಸದೇ ಇದ್ದರೆ, ಅಥವಾ ಸಂಭವಿಸಿತೆಂದು ಕೋರ್ಟಿನವರಿಗೆ ತಿಳಿಯದೆ ಇದ್ದರೆ, ಹಾಗೆ ತರ್ವಾಯು ದರ್‍ಯಾಫ್ತು ಮಾಡಬಹುದು.

ಯಾವ ಕೃತ್ಯಗಳಿಂದಾದರೂ ಉಂಟಾದ ಬಂದು ತಕ್ಸೀರಿನಬಾಬತು ಖುಲಾಸೆಯಾದ—ಯಾ—ಸಾಬೀತಾದ ಒಬ್ಬ ಮನುಷ್ಯನನ್ನು, ಅವನು ಹಾಗೆ ಖುಲಾಸೆಯಾಗಿದ್ದರೂ—ಯಾ—ಸಾಬೀತಾಗಿದ್ದರೂ ಚಿಂತೆ ಇಲ್ಲದೆ, ಅದೇ ಕೃತ್ಯಗಳಿಂದ ಉಂಟಾದ ಅವನು ನಡಿಸಿರಬಹುದಾದ ಇತರ ಯಾವ ತಕ್ಸೀರಿಗೋಸ್ಕರವಾದರೂ ತರ್ವಾಯ ಚಾರ್ಜು ಮಾಡಬಹುದು—ಯಾ—ದರ್‍ಯಾಫ್ತು ಮಾಡಬಹುದು. ಯಾವಪಕ್ಷದಲ್ಲಂದರೆ, ಯಾರಿಂದ ಅವನು ಮೊದಲ್ಲಿ ದರಿಯಾಫ್ತಿಯಾದನೋ ಆ ಕೋರ್ಟಿನವರು, ಅನಂತರ ಅವನಮೇಲೆ ಚಾರ್ಜಾದ ತಕ್ಸೀರನ್ನು ದರ್‍ಯಾಫ್ತು ಮಾಡಲಿಕ್ಕೆ ಲಾಯಖಾಗಿಲ್ಲದೆ ಇದ್ದರೆ, ಹಾಗೆ ದರ್‍ಯಾಫ್ತು ಮಾಡಲ್ಪಡಬಹುದು.

ಟಿಪ್ಪಣಿ.—ಬಂದು ಫಿರ್‍ಯಾದಿಯು ಡಿಸ್‌ಮಿಸ್ ಮಾಡೋಣ, 249ನೇ ಪ್ರಕರಣಕ್ಕನುಗುಣವಾಗಿ ವ್ಯವಹರಣೆ ನಿಲ್ಲಿಸಿಡೋಣ, ಆಪಾದನೆಪಟ್ಟ ಮನುಷ್ಯನನ್ನು ವಿಮೋಚನೆ ಪಡಿಸೋಣ, ಈಪ್ರಕರಣದ ವುದ್ದೇಶಗಳಿಗೋಸ್ಕರ ಬಂದು ಖುಲಾಸೆಯಾಗಿರಲಿಕ್ಕಿಲ್ಲ.

ಉದಾಹರಣೆಗಳು.

(a) A ಯು, ಸೇವಕನಾಗಿದ್ದು ಕಳವು ಮಾಡಿದನೆಂಬ ತಕ್ಸೀರುನಾಮೆಯಮೇಲೆ ದರ್‍ಯಾಫ್ತಿಯಾಗಿ ಖುಲಾಸೆಯಾದನು. ಖುಲಾಸೆಯು ಜಾರೀಲಿರುವಾಗ್ಯೆ, ಅವನು ಅನಂತರ ಸೇವಕನಾಗಿ ಕಳವು ಮಾಡಿದನೆಂದಾಗಲೀ, ಅಥವಾ ಅದೆ ವಿದ್ಯಮಾನಗಳಮೇಲೆ ಬರೀ ಕಳವು ಮಾಡಿದನೆಂದಾಗಲೀ, —ಯಾ— ತಕ್ಸೀರುಕರವಾಗಿ ವಿಶ್ವಾಸ ಘಾತಕತೆ ಮಾಡಿದ್ಧಾನೆಂದಾಗಲೀ, ಚಾರ್ಜು ಮಾಡಲ್ಪಡಕೂಡದು.

(b) A ಯು, ಖೂನಿ ಬಾಬತು ಚಾರ್ಜಾಗಿ ಖುಲಾಸೆಯಾದನು. ಚೋರಿ ಮಾಡಿದನೆಂಬ ಚಾರ್ಜಿಲ್ಲಾ ; ಆದರೆ ಖೂನಿ ನಡೆದಾಗ A ಯು ಚೋರಿ ಮಾಡಿದನೆಂದು ವಿದ್ಯಮಾನಗಳಿಂದ ತೋರುತ್ತೆ ; ಅನಂತರ ಅವನು ಚೋರಿಗಾಗಿ ಚಾರ್ಜು ಮಾಡಲ್ಪಡಬಹುದು, ಮತ್ತು ದರಿಯಾಫ್ತುಮಾಡಲ್ಪಡಬಹುದು.

(c) A ಯು, ಸಂಕಟಕರವಾದ ಹಿಂಸೆ ಪಡಿಸಿದ ಬಗ್ಗೆ ದರಿಯಾಫ್ತು ಮಾಡಲ್ಪಟ್ಟು ಸಾಬೀತಾದನು. ಹಿಂಸೆಪಟ್ಟ ಮನುಷ್ಯನು ಅನಂತರ ಸಾಯುತ್ತಾನೆ. A ಯು ಕೊಲೆಪಾತಕಕ್ಕಾಗಿ ಪುನಃ ದರಿಯಾಫ್ತು ಮಾಡಲ್ಪಡಬಹುದು.

(d) A ಯು, ಸೆಷನ್ಸ್ ಕೋರ್ಟಿನಮುಂದೆ ಚಾರ್ಜಾಗಿ B ಯನ್ನು ಕೊಲೆಪಾತಕ ಮಾಡಿದನೆಂದು ಸಾಬೀತಾದನು. A ಯು ಅನಂತರ ಅದೇ ವಿದ್ಯಮಾನಗಳ ಮೇಲೆ B ಯನ್ನು ಖೂನಿ ಮಾಡಿದನೆಂದು ದರ್‍ಯಾಫ್ತು ಮಾಡಲ್ಪಡಕೂಡದು.

(e) Aಯು, Bಯನ್ನ ಮನಃಪೂರ್ತಿಯಾಗಿ ಹಿಂಸೆ ಪಡಿಸಿದನೆಂದು ಒಬ್ಬ ಫಸ್ಟುಕ್ಲಾಸು ಮ್ಯಾಜಿಸ್ಟ್ರೇಟನಿಂದ ಚಾರ್ಜ್ ಮಾಡಲ್ಪಟ್ಟು ಅದೇ ತಕ್ಸೀರಿಗಾಗಿಯೇ ಆತನಿಂದ ಸಾಬೀತಾದನು. ಸದರೀ ಮೊಕದ್ದಮೆಯು ಈ ಪ್ರಕರಣದ ಪೂರಣೇ ಕಲಮಿಗೆ ಒಳಪಟ್ಟರೇನೇ ಹೊರ್ತು, ಅದೇ ವಿದ್ಯಮಾನಗಳ ಮೇಲೆ Bಗೆ ಮನಃಪೂರ್ತಿಯಾಗಿ ಸಂಕಟಕರವಾದ ಹಿಂಸೆ ಪಡಿಸಿದ್ದಕ್ಕೋಸ್ಕರ ಅನಂತರ Aಯು ಚಾರ್ಜ್ ಮಾಡಲ್ಪಡಕೂಡದು.

(f) Aಯು, Bಯ ಮೇಲಿದ್ದ ಸ್ವತ್ತನ್ನು ಕಳವು ಮಾಡಿದನೆಂದು ಒಬ್ಬ ಸೆಕೆಂಡುಕ್ಲಾಸು ಮ್ಯಾಜಿಸ್ಟ್ರೇಟನಿಂದ ಚಾರ್ಜಾಗಿ ಅದೇ ತಕ್ಸೀರಿಗಾಗಿ ಆತನಿಂದ ಸಾಬೀತ್ ಮಾಡಲ್ಪಟ್ಟನು. ಅನಂತರ Aಯು, ಅದೇ ವಿದ್ಯಮಾನಗಳ ಮೇಲೆ ಚೋರಿ ಮಾಡಿದನೆಂದು ಚಾರ್ಜಾಗಿ ದರ್ಯಾಫ್ತಿ ಮಾಡಲ್ಪಡಬಹುದು.

(g) A, B,—ವ—C, ಇವರು Dಯನ್ನ ಚೋರಿ ಮಾಡಿದರೆಂದು ಒಬ್ಬ ಫಸ್ಟುಕ್ಲಾಸು ಮ್ಯಾಜಿಸ್ಟ್ರೇಟನಿಂದ ಚಾರ್ಜಾಗಲ್ಪಟ್ಟು ಅದೇ ತಕ್ಸೀರಿಗಾಗಿ ಆತನಿಂದ ಸಾಬೀತಾಗಲ್ಪಡುತ್ತಾರೆ. ಅನಂತರ A, B, C, ಇವರು ಅದೇ ವಿದ್ಯಮಾನಗಳ ಮೇಲೆ ಡಕಾಯಿತಿಗೋಸ್ಕರ ಚಾರ್ಜಾಗಿ ದರ್ಯಾಫ್ತಿ ಮಾಡಲ್ಪಡಬಹುದು.

PART VII.

7ನೇ ಭಾಗ.

OF APPEAL, REFERENCE AND REVISION.

ಅಪ್ಪೀಲ್, ರಿಫರೆನ್ಸ್—ವ—ಪುನರ್ವಿಮರ್ಶೆಗಳನ್ನು ಕುರಿತು.

CHAPTER XXXI.—OF APPEALS.

31ನೇ ಅಧ್ಯಾಯ.—ಅಪ್ಪೀಲುಗಳನ್ನು ಕುರಿತು.

ಅನ್ಯಥಾ ನಿಬಂಧಿಸಿರೋಣಾದ ಹೊರ್ತು, ಅಪ್ಪೀಲಿರುವದಿಲ್ಲ

404. ಈ ಕೋಡಿನಿಂದ—ಯಾ—ತತ್ಕಾಲದಲ್ಲಿ ಜಾರೀಲಿರುವ ಇತರ ಯಾವ ಕಾನೂನಿನಿಂದಾದರೂ ನಿಬಂಧಿಸಿರೋಣಾದ ವಿಷಯಗಳಲ್ಲಿ ಶಿವಾಯಿ, ಅನ್ಯಥಾ ಒಂದು ಕ್ರಿಮಿನಲ್ ಕೋರ್ಟಿನವರ ಯಾವದೊಂದು ಜಡ್ಜಮೆಂಟಿನ ಮೇಲೆ—ಯಾ—ಆರ್ಡರಿನ ಮೇಲೆ ಯಾವ ಅಪ್ಪೀಲೂ ಇರುವದಿಲ್ಲ.

ಜಪ್ತು ಮಾಡಲ್ಪಟ್ಟ ಸ್ವತ್ತು ವಾಪಸ್ ಪಡಕೊಳ್ಳುವ ಬಗ್ಯೆ ಬರಕೊಂಡ ಮನ್ವಿಅರ್ಜಿ ತಿರಸ್ಕರಿಸಿ ಕೊಡೋಣಾದ ಹುಕುಮಿನ ಮೇಲೆ ಅಪ್ಪೀಲ್.

405. 89ನೇ ಪ್ರಕರಣಕ್ಕನುಗುಣವಾಗಿ ಸ್ವತ್ತು ಅಥವಾ ಆ ಸ್ವತ್ತಿನ ಮಾರಾಟದಿಂದ ಹುಟ್ಟಿದ ಐವಜು ಕೊಡಿಸಬೇಕಾಗಿ ಯಾವನೊಬ್ಬನ ಮನ್ವಿ ಅರ್ಜಿ ಯಾವ ಕೋರ್ಟಿನವರಿಂದಾದರೂ ತಿರಸ್ಕರಿಸಲ್ಪಟ್ಟಿದ್ದರೆ, ಆ ಕೋರ್ಟಿನವರ ಸಜಾ ವಿಧಿಗಳ ಮೇಲೆ ವಾಡಿಕೆಯಾಗಿ ಯಾವ ಕೋರ್ಟಿಗೆ ಅಪ್ಪೀಲಾಗಿ ಇರುತ್ತದೋ, ಅಂಥಾ ಕೋರ್ಟಿಗೆ ಆತನು ಅಪ್ಪೀಲ್ ಮಾಡಬಹುದು.

ಒಳ್ಳೇನಡತೆಬಗ್ಯೆ ಜಾಮೀನ್ ಕೊಡಹೇಳಿ ವಿಧಿಸಿರುವ ಹುಕುಮಿನಮೇಲೆ ಅಪ್ಪಿಲ್.

406. 118ನೇ ಪ್ರಕರಣಕ್ಕನುಗುಣವಾಗಿ ಒಳ್ಳೇ ನಡತೆಗಾಗಿ ಜಾಮೀನ್ ಕೊಡಹೇಳಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಲ್ಲದ ಇತರ ಮ್ಯಾಜಿಸ್ಟ್ರೇಟನಿಂದ ವಿಧಿಸಲ್ಪಟ್ಟ ಯಾವ ಮನುಷ್ಯನಾದರೂ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಗೆ ಅಪ್ಪೀಲು ಮಾಡಿಕೋಬಹುದು.

ಸೆಕೆಂಡ್—ಯಾ—ಥರ್ಡುಕ್ಲಾಸ್ ಮ್ಯಾಜಿಸ್ಟ್ರೇಟನ ಸಜಾ ತೀರ್ಪುಗಳಮೇಲೆ ಅಪ್ಪಿಲ್.

407. ಸೆಕೆಂಡು—ಯಾ—ಥರ್ಡುಕ್ಲಾಸಿಗೆ ಶೇರಿದ ಯಾವ ಮ್ಯಾಜಿಸ್ಟ್ರೇಟನಿಂದಲಾದರೂ ನಡೆದ ದರ್ಯಾಫ್ತಿಯ ಮೇಲೆ ಸಾಬೀತಾದ ಯಾವ ಮನುಷ್ಯನಾದರೂ, ಅಥವಾ 349ನೇ ಪ್ರಕರಣಕ್ಕನುಗುಣವಾಗಿ ಸೆಕೆಂಡುಕ್ಲಾಸಿಗೆ ಶೇರಿದ ಒಬ್ಬ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟನಿಂದ ಸಜಾವಾದ ಯಾವ ಮನುಷ್ಯನಾದರೂ, ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಗೆ ಅಪ್ಪೀಲು ಮಾಡಬಹುದು.

1173

ಈ ಪ್ರಕರಣಕ್ಕನುಗುಣವಾದ ಯಾವ ಅಪ್ಪೀಲ್—ಯಾ—ಅಂಥಾ ಅಪ್ಪೀಲುಗಳ ಯಾವ ತರಗತಿಯೂ, ಅಂಥಾ ಅಪ್ಪೀಲ್‌ಗಳು ಕೇಳಲಿಕ್ಕೆ ಮೈಸೂರು ಗವರ್ನ್ಮೆಂಟಿನವರಿಂದ ಅಧಿಕಾರ ಹೊಂದಿರುವ—ಮತ್ತು—ತನಗೆ ತಾಬೇದಾರಿಯಾಗಿರುವ ಯಾವನೊಬ್ಬ ಫಸ್ಟ್‌ಕ್ಲಾಸ ಮಾಜಿಸ್ಟ್ರೇಟನಿಂದ ಕೇಳಲ್ಪಡತಕ್ಕದ್ದಾಗಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ್ ಅಪ್ಪಣೆ ಕೊಡಬಹುದು, ಮತ್ತು ಅದರ ಮೇಲೆ ಅಂಥಾ ಅಪ್ಪೀಲ್—ಯಾ—ಅಂಥಾ ಅಪ್ಪೀಲುಗಳ ತರಗತಿಯು ಆ ತಾಬೇದಾರಿ ಮ್ಯಾಜಿಸ್ಟ್ರೇಟನ ಬಳಿಗೆ ಹಾಜರ್ ಮಾಡಲ್ಪಡತಕ್ಕದ್ದು,—ಯಾ—ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ ಬಳಿಗೆ ಅಂಥಾ ಅಪ್ಪೀಲ್ ಮೊದಲೇ ಹಾಜರ್ಮಾಡಲ್ಪಟ್ಟಿದ್ದರೆ ತಾಬೇದಾರಿಯ ಅಂಥಾ ಮ್ಯಾಜಿಸ್ಟ್ರೇಟನ ಬಳಿಗೆ ವರ್ಗ ಮಾಡಲ್ಪಡತಕ್ಕದ್ದು. ಹಾಗೆ ಹಾಜರು ಪಡಿಸೋಣಾದ ಅಥವಾ ವರ್ಗಮಾಡೋಣಾದ ಯಾವ ಅಪ್ಪೀಲ್—ಯಾ—ಅಪ್ಪೀಲ್‌ಗಳ ಯಾವ ತರಗತಿಯಾದರೂ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು ಅಂಥಾ ಮ್ಯಾಜಿಸ್ಟ್ರೇಟು ಬಳಿಯಿಂದ ವಾಪಸ ತರಿಸಿಕೊಳ್ಳಬಹುದು.

ಫಸ್ಟ್‌ಕ್ಲಾಸ ಮೇಜಿಸ್ಟ್ರೇಟಗೆ ಅಪ್ಪಿಲಗಳನ್ನು ವರ್ಗಮಾಡೋಣ.

408. ಅಸಿಸ್ಟೆಂಟ ಸೆಷನ್ಸ ಜಡ್ಜಿಯಿಂದ, ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನಿಂದ—ಯಾ—ಫಸ್ಟ್‌ಕ್ಲಾಸಿಗೆ ಶೇರಿದ ಇತರ ಮ್ಯಾಜಿಸ್ಟ್ರೇಟನಿಂದ ನಡೆದ ಒಂದು ದರ್ಯಾಪ್ತಿಯಲ್ಲಿ ಸಾಬೀತಾದ ಯಾವ ಮನುಷ್ಯನಾದರೂ, ಅಥವಾ ಫಸ್ಟ್‌ಕ್ಲಾಸಿಗೆ ಶೇರಿದ ಒಬ್ಬ ಮ್ಯಾಜಿಸ್ಟ್ರೇಟನಿಂದ 349ನೇ ಪ್ರಕರಣಕ್ಕನುಗುಣವಾಗಿ ಸಜಾವಾದ ಯಾವ ಮನುಷ್ಯನಾದರೂ, ಸೆಷನ್ಸ ಕೋರ್ಟಿಗೆ ಅಪ್ಪೀಲ್ಮಾಡಿಕೊಳ್ಳಬಹುದು;

ಅಸಿಸ್ಟೆಂಟ ಸೆಷನ್ಸಜಡ್ಜಿಯ—ಯಾ—ಫಸ್ಟ್ ಕ್ಲಾಸ ಮೇಜಿಸ್ಟ್ರೇಟರ ತೀರ್ಪುಗಳಮೇಲೆ ಅಪ್ಪೀಲ್.

ಪರಂತು ಈ ಕೆಳಗೆ ಕಾಣಿಸಿದ ಮೇರಿಗೆ ಆಗಿರತಕ್ಕದ್ದು:—

(a) ಒಬ್ಬ ಅಸಿಸ್ಟೆಂಟ ಸೆಷನ್ಸ ಜಡ್ಜಿಯು, ಅಥವಾ, ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟ ಯಾವದೊಂದು ಸಜಾ ವಿಧಿಸಿದ್ದು, ಅಂಥಾ ಸಜಾ ಸೆಷನ್ಸ ಕೋರ್ಟಿನವರ ಮಂಜೂರಾತಿಗೆ ಒಳಪಟ್ಟು ಇರುವ ಯಾವದೊಂದು ಸಂಗತಿಯಲ್ಲಿ, ಅಂಥಾ ಮೊಕದ್ದಮೆಯಲ್ಲಿ ಪ್ರತಿ ಅಪ್ಪೀಲು ಚೀಫ ಕೋರ್ಟಿಗೇಆಗಿ ಇರತಕ್ಕದ್ದು. ಆದರೆ ಮೊಕದ್ದಮೆಯು ಸೆಷನ್ಸ ಕೋರ್ಟಿನವರಿಂದ ತೀರ್ಮಾನಿಸಲ್ಪಡುವ ವರಿಗೆ ಸದರೀ ಅಪ್ಪೀಲು ಹಾಜರ್ ಮಾಡಲ್ಪಡತಕ್ಕದ್ದು.

409. ಸೆಷನ್ಸ ಕೋರ್ಟಿಗೆ ಅಥವಾ ಸೆಷನ್ಸ ಜಡ್ಜಿಗೆ ಮಾಡೋಣಾದ ಒಂದು ಅಪ್ಪೀಲ್ ಸೆಷನ್ಸ ಜಡ್ಜಿಯಿಂದ ಅಥವಾ ಅಡ್ಡಿಷನಲ್—ಯಾ—ಜಾಯಿಂಟ ಸೆಷನ್ಸ ಜಡ್ಜಿಯಿಂದ ಕೇಳಲ್ಪಡತಕ್ಕದ್ದು.

ಸೆಷನ್ಸ ಕೋರ್ಟಿಗೆ ಮಾಡೋಣಾದ ಅಪ್ಪೀಲಗಳು ಹ್ಯಾಗೆ ಕೇಳಲ್ಪಡತಕ್ಕದ್ದು.

410. ಒಬ್ಬ ಸೆಷನ್ಸ ಜಡ್ಜಿಯಿಂದ—ಯಾ—ಅಡ್ಡಿಷನಲ್—ಯಾ— ಜಾಯಿಂಟ ಸೆಷನ್ಸ ಜಡ್ಜಿಯಿಂದ ನಡೆದ ಒಂದು ದರ್ಯಾಪ್ತಿಯಲ್ಲಿ ಸಾಬೀತಾದ ಯಾವ ಮನುಷ್ಯನಾದರೂ ಚೀಫ ಕೋರ್ಟಿಗೆ ಅಪ್ಪೀಲ್ಮಾಡಬಹುದು.

ಸೆಷನ್ಸ ಕೋರ್ಟಿನವರ ಸಜಾವಿಧಿಯ ಮೇಲೆ ಅಪ್ಪೀಲಗಳು.

412. ಇದರಲ್ಲಿ ಮುಂಚೆ ಏನು ಅಡಗಿ ಇದ್ದಾಗ್ಯೂ ಸರಿಯೇ, ಒಬ್ಬ ಆಪಾದನೆಪಟ್ಟ ಮನುಷ್ಯನು ತಕ್ಸೀರು ಮಾಡಿದ್ದುಂಟು ಎಂತ ಉದಹರಿಸಿ ಮತ್ತು ಅಂಥಾ ಉದಹರಿಸುವಿಕೆಯ ಮೇಲೆ ಸೆಷನ್ಸ ಕೋರ್ಟಿನವರಿಂದ ಆತನಮೇಲೆ ತಕ್ಸೀರು ಸ್ಥಾಬೀತು ಮಾಡಲ್ಪಟ್ಟರೆ ಸದರೀ ಸಜಾವಿನ ಪರಿಮಾಣ—ಯಾ—ಅದರ ನ್ಯಾಯಾನುಸರಣ ಗಿರತ ವಿಚಾರವಾಗಿ ಶಿವಾಯಿ, ಅನ್ಯಥಾ, ಯಾವ ಅಪ್ಪೀಲೂ ಇರಲಿಕ್ಕಿಲ್ಲ.

ಆಪಾದನೆಪಟ್ಟವನು ಕಬೂಲ್ಮಾಡಿ ಉದಹರಿಸಿದ ಕೆಲವು ಮೊಕದ್ದಮೆಗಳಲ್ಲಿ ಅಪ್ಪೀಲ್ ಇರುವದಿಲ್ಲ.

413. ಇದರಲ್ಲಿ ಮುಂಚೆ ಏನು ಅಡಗಿದ್ದಾಗ್ಯೂ ಸರಿಯೆ, ಒಂದು ಸೆಷನ್ಸ ಕೋರ್ಟಿನವರು—ಯಾ—ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು—ಯಾ—ಇತರ ಫಸ್ಟ್‌ಕ್ಲಾಸು ಮ್ಯಾಜಿಸ್ಟ್ರೇಟರು ವಿಧಿಸಿದ ಒಂದೇ ತಿಂಗಳಿಗಿಂತ ಜಾಸ್ತಿಯಾಗದ ಕೈದಿನ ಸಜಾವಿನ ಮೇಲೆ

ಅಲ್ಪ ಮೊಕದ್ದಮೆಗಳಲ್ಲಿ ಅಪ್ಪೀಲಿಲ್ಲ.

ಮಾತ್ರ, ಅಥವಾ ಏವತ್ತು ರೂಪಾಯಿಗಳಿಗಿಂತ ಜಾಸ್ತಿಯಾಗದ ಜುರ್ಮಾನೆಯ ಶಿಕ್ಷೆಯಮೇಲೇ ಮಾತ್ರ, ಅಥವಾ ದೆಬ್ಬೆ ಹೊಡಿಯತಕ್ಕದ್ದೆಂಬ ಶಿಕ್ಷೆಯ ಮೇಲೆ ಮಾತ್ರ, ಸಾಬೀತುಪಟ್ಟ ಮನುಷ್ಯನಿಂದ ಯಾವ ಅಪ್ಪೀಲೂ ಇರುವದಿಲ್ಲ.

ಟಿಪ್ಪಣಿ—ಕೈದಿನ ಬಾಬತು ಸಬ್ ಸ್ಟಾಂಟಿವ್ ಸಜಾ ವಿಧಿಸದಿರುವಾಗ್ಯ್ಯೆ ಅಂಥಾ ಕೋರ್ಟಿನವರು—ಯಾ—ಮ್ಯಾಜಿಸ್ಟ್ರೇಟು, ಜುಲ್ಮಾನೆಯನ್ನು ಪಾವತಿಮಾಡದೆ ತಪ್ಪಿದರೆ ಇಷ್ಟುದಿವಸ ಕೈದೆಂಬದಾಗಿ, ವಿಧಿಸಿದ ಸಜಾವಿನಮೇಲೆ ಯಾವ ಅಪ್ಪೀಲೂ ಇರತಕ್ಕದ್ದಿಲ್ಲ.

414. ಇದರಲ್ಲಿ ಮುಂಚೆ ಏನು ಅಡಗಿ ಇದ್ದಾಗ್ಯೂ ಸರಿಯೇ, 260ನೇ ಪ್ರಕರಣಕ್ಕನುಗುಣವಾಗಿ ವರ್ತಿಸುವದಕ್ಕೆ ಅಧಿಕಾರಹೊಂದಿದ ಮ್ಯಾಜಿಸ್ಟ್ರೇಟನು ಫೋಟಾಗಿ ದರಿಯಾಫ್ತಿ ಮಾಡಿ, ಮೂರುತಿಂಗಳುಗಳಿಗೆ ಮೀರದ ಕೈದುಮಾತ್ರ,—ಯಾ—ಇನ್ನೂರು ರೂಪಾಯಿಗಳಿಗೆ ಮೀರದ ಜುರುಮಾನೆಮಾತ್ರ,—ಯಾ—ದೆಬ್ಬೆ ಸಜಾ ಮಾತ್ರ ವಿಧಿಸಿದ ಮೊಕದ್ದಮೆಗಳಲ್ಲಿ, ಸಾಬೀತಾದ ಮನುಷ್ಯನಿಂದ ಅಪ್ಪೀಲ್ ಮಾಡಲ್ಪಡತಕ್ಕದ್ದಿಲ್ಲ.

ಕೆಲವು ಫೋಟ್ ಸಾಬೀತುಗಳಮೇಲೆ ಅಪ್ಪೀಲ್ ಇರುವದಿಲ್ಲ.

415. 413ನೇ ಪ್ರಕರಣದಲ್ಲಿ ಅಥವಾ 414ನೇ ಪ್ರಕರಣದಲ್ಲಿ ರಿಫರಾಗುವ ಯಾವ ಸಜಾವಿನಮೇಲಾದರೂ ಸದರೀ ಪ್ರಕರಣದಲ್ಲಿ ನಮೂದಿಸಿರುವ ಶೀಕ್ಷೆಗಳ ಪೈಕಿ ಎರಡರಿಂದ—ಯಾ—ಹೆಚ್ಚು ಶೀಕ್ಷೆಗಳಿಂದ ಕೂಡಿಸಲ್ಪಟ್ಟದ್ದಾಗಿ ಸದರೀ ಸಜಾಗಳು ಇದ್ದರೆ, ಅಪ್ಪೀಲ್ ತರಲ್ಪಡಬಹುದು, ಆದರೆ ನೆಮ್ಮದಿಯ ಪರಿಪಾಲನಾರ್ಥವಾಗಿ ಜಾಮೀನ್ ಕೊಡಹೇಳಿ—ಸಾಬೀತಾದವನಿಗೆ—ಹುಕುಂ ಆಯಿತೆಂಬ ಕಾರಣದಿಂದ ಮಾತ್ರ, ಅನ್ಯಥಾ ಅಪ್ಪೀಲ್ ಮಾಡಲಿಕ್ಕೆ ಗುರಿಯಾಗಲಿಕ್ಕಿಲ್ಲದ, ಯಾವ ಸಜಾವಿನಮೇಲೂ ಅಪ್ಪೀಲು ತರಲ್ಪಡಲಿಕ್ಕಿಲ್ಲ.

413—ವ—414ನೇ ಪ್ರಕರಣಗಳಿಗೆ ನಿಯಮ.

ಟಿಪ್ಪಣಿ—ಜುರುಮಾನೆಯನ್ನು ಪಾವತಿಮಾಡದೆ ಇದ್ದ ಸಂಬಂಧದ ಕೈದು.ಸಜಾ ಈ ಪ್ರಕರಣದ ಅರ್ಥಕ್ಕೆ ಒಳಪಡುವ ಎರಡರಿಂದ—ಯಾ—ಹೆಚ್ಚು ಶೀಕ್ಷೆಗಳಿಂದ ಕೊಡಲ್ಪಟ್ಟ ಸಜಾವಾಗಿರುವದಿಲ್ಲ.

417. ಚೀಫ್‌ಕೋರ್ಟಲ್ಲದ ಇತರ ಯಾವ ಕೋರ್ಟಿನಿಂದಾದರೂ ವಿಧಿಸಲ್ಪಟ್ಟ ಅಸಲ್—ಯಾ—ಅಪ್ಪಿಲೆಟ್ ಖುಲಾಸಾ ಹುಕುಮಿನಮೇಲೆ ಚೀಫ್‌ಕೋರ್ಟಿಗೆ ಅಪ್ಪೀಲು ಹಾಜರು ಮಾಡುವದಕ್ಕೆ ಮೈಸೂರು ಗವರ್ನಮೆಂಟಿನವರು ಪಬ್ಲಿಕ್ ಪ್ರಾಸಿಕ್ಯೂಟರಿಗೆ ಅಪ್ಪಣೆ ಮಾಡಬಹುದು.

ಖುಲಾಸೆ ತೀರ್ಪಿನ ವಿಷಯದಲ್ಲಿ ಗವರ್ನಮೆಂಟ್ ತರ್ಫ ಅಪ್ಪೀಲ್.

418. ಒಂದು ವಿದ್ಯಮಾನದ ಬಾಬತಿನಮೇಲೆ ಮತ್ತು ಕಾನೂನ್ ಬಾಬತಿನಮೇಲೆ ಒಂದು ಅಪ್ಪೀಲ್ ಇರಬಹುದೇ ಹೊರ್ತು ಜೂರಿಯರಿಂದ ದರಿಯಾಫ್ತಿ ಆದ್ದಾಗಿರುವ ಸಂಗತಿಯಲ್ಲಿ, ಕಾನೂನ್ ಬಾಬತಿನಮೇಲೆ ಮಾತ್ರ ಅಪ್ಪೀಲ್ ಇರತಕ್ಕದ್ದು.

ಯಾವ ಸಂಗತಿಯಲ್ಲಿ ಅಪ್ಪೀಲ್ ಅಂಗೀಕರಿಸೋಣ.

ಟಿಪ್ಪಣಿ—ಸಜಾ ವಿಧಿಯು ಕಠಿಣವಾದ್ದೆಂದು ಹೇಳುವದು ಈ ಪ್ರಕರಣದ ಉದ್ದಿಶ್ಯಗಳಿಗೋಸ್ಕರ ಕಾನೂನ್ ಬಾಬತಿನದಾಗಿ ಎಣಿಸಲ್ಪಡತಕ್ಕದ್ದು.

419. ಪ್ರತಿ ಅಪ್ಪೀಲ್ ಅರ್ಜಿ ನಮೂನೆಯಲ್ಲಿ ಬರಹಮೂಲಕವಾಗಿ ಇದ್ದು, ಅಪ್ಪೀಲ್ಮಾಡುವನಿಂದ—ಅಥವಾ, ಅವನ ಪ್ಲೀಡರನಿಂದ ಹಾಜರು ಮಾಡಲ್ಪಡತಕ್ಕದ್ದು, ಮತ್ತು ಅಂಥಾ ಪ್ರತಿ ಅರ್ಜಿಯು (ಯಾವ ಕೋರ್ಟಿಗೆ ಹಾಜರು ಮಾಡೋಣಾಗಿರುತ್ತದೋ ಆ ಕೋರ್ಟಿನವರು ಅನ್ಯಥಾ ನಿರ್ದೇಶಿಸಿದರೇನೇ ಶಿವಾಯಿ) ಸಂಗಡ ಅಪ್ಪೀಲಾದ ತೀರ್ಪಿನ ಅಥವಾ ಹುಕುಮಿನ ನಕಲು ಇರತಕ್ಕದ್ದು, ಮತ್ತು ಜೂರಿಯವರಿಂದ ದರಿಯಾಫ್ತಿ ಆದ ಮೊಕದ್ದಮೆಗಳಲ್ಲಿ, 367ನೇ ಪ್ರಕರಣ ಪ್ರಕಾರ ರಿಕಾರ್ಡಾದ ಜೂರಿಗೆ ಮಾಡಿದ ಚಾರ್ಜಿನ ಬಾಬುಗಳ ನಕಲು, ಸದರೀ ಅಪ್ಪೀಲ್ ಅರ್ಜೀ ಸಂಗಡ ಇರತಕ್ಕದ್ದು.

ಅಪ್ಪೀಲ್ ಅರ್ಜಿ.

420. ಅಪ್ಪೀಲ್ಮಾಡಿದವನು ಜೈಲಿನಲ್ಲಿ ಇದ್ದರೆ, ತನ್ನ ಅಪ್ಪೀಲ್ ಅರ್ಜಿಯನ್ನು ಮತ್ತು ಅದರ ಸಂಗಡ ಇರತಕ್ಕ ನಕಲುಗಳನ್ನು ಜೈಲ್ ಜಿಮ್ಮೇದಾರನಾದ ಆಫಿಸರಬಳಿ ಕೊಡಬಹುದು, ಆತನು ಆವೇಲೆ ಅಂಥಾ ಅರ್ಜಿಯನ್ನು ಮತ್ತು ನಕಲುಗಳನ್ನು ತಕ್ಕ ಅಪ್ಪೀಲ್ ಕೋರ್ಟಿನವರ ಬಳಿಗೆ ರವಾನೆ ಮಾಡತಕ್ಕದ್ದು.

ಅಪ್ಪೀಲ್‌ದಾರನು ಜೈಲಿನಲ್ಲಿ ಇರುವಾಗ ನಡಿಸತಕ್ಕ ಕ್ರಮ.

421. 419ನೇ ಪ್ರಕರಣ ಅಥವಾ 420ನೇ ಪ್ರಕರಣ ಪ್ರಕಾರ ಅರ್ಜಿ—ವ—ನಕಲು ತಲ್ಪುತ್ತಲೇ, ಅದನ್ನ ಅಪ್ಪೀಲ್ ಕೋರ್ಟಿನವರು ಓದಿನೋಡಿ, ಪ್ರವೇಶಿಸಲಿಕ್ಕೆ ಸಾಕಾದ ಸಬಬು ಇಲ್ಲವೆಂತ ಸದರೀ ಕೋರ್ಟಿನವರಿಗೆ ತೋರಿದ ಪಕ್ಷದಲ್ಲಿ, ಅವರು ಸದರೀ ಅಪ್ಪೀಲನ್ನ ಫೂಟಾಗಿ ತಿರಸ್ಕರಿಸಬಹುದು: ಪರಂತು ಸದರೀ ಅಪ್ಪೀಲಿಗೆ ಆಧಾರವಾಗಿ ಕೇಳಲ್ಪಡುವದಕ್ಕೆ ಅಪ್ಪೀಲ್ದಾರನಿಗೆ ಅಥವಾ ಅವನ ಪ್ಲೀಡರಿಗೆ ನ್ಯಾಯವಾದ ಸಂದರ್ಭ ಇದ್ದರೇನೇ ಶಿವಾಯಿ 419ನೇ ಪ್ರಕರಣ ಪ್ರಕಾರ ಹಾಜರು ಮಾಡೋಣಾದ ಯಾವ ಅಪ್ಪೀಲಾದರೂ ತೆಗದು ಹಾಕಲ್ಪಡಕೂಡದು.

ಅಪ್ಪೀಲನ್ನ ಫೂಟಾಗಿ ತಿರಸ್ಕರಿಸೋಣ.

ಈ ಪ್ರಕರಣ ಪ್ರಕಾರ ಅಪ್ಪೀಲನ್ನು ತಿರಸ್ಕರಿಸುವದಕ್ಕಿಂತ ಮುಂಚೆ, ಸದರೀ ಕೋರ್ಟಿನವರು ಮೊಕದ್ದಮೆಯ ರಿಕಾರ್ಡನ್ನು ತರಿಸಿಕೊಳ್ಳಬಹುದು, ಪರಂತು ಅವರು ಹಾಗೆ ತರಿಸಿಕೊಳ್ಳುವದಕ್ಕೆ ಬದ್ಧರಲ್ಲ.

422. ಅಪ್ಪೀಲ್ ಕೋರ್ಟಿನವರು ಅಪ್ಪೀಲನ್ನು ಫೂಟಾಗಿ ತಿರಸ್ಕರಿಸುವದಿಲ್ಲವಾದರೆ, ಸದರೀ ಕೋರ್ಟಿನವರು ಅಪ್ಪೀಲ್ದಾರನಿಗೆ—ಯಾ—ಅವನ ಪ್ಲೀಡರಗೆ ಮತ್ತು ಮೈಸೂರು ಗವರ್ನಮೆಂಟಿನವರು ಈ ಬಗ್ಗ್ಯಾಗಿ ನೇಮಕಮಾಡುವಂಥಾ ಆಫಿಸರಗೆ ಅಂಥಾ ಅಪ್ಪೀಲು ಕೇಳಲ್ಪಡುವ ಸ್ಥಳ—ವ—ಕಾಲವನ್ನು ನಮೂದಿಸಿ ಒಂದು ನೋಟೀಸ್ ಕೊಡಿಸತಕ್ಕದ್ದು, ಮತ್ತು ಅಂಥಾ ಆಫಿಸರನು ಅರ್ಜಿ ಮಾಡಿಕೊಂಡಲ್ಲಿ, ಅಪ್ಪೀಲ್ ಸಬಬುಗಳ ನಕಲನ್ನು ಆತಗೆ ಕೊಡತಕ್ಕದ್ದು;

ಅಪ್ಪೀಲಿನ ನೋಟೀಸ್.

ಮತ್ತು, 417ನೇ ಪ್ರಕರಣಕ್ಕನುಗುಣವಾದ ಅಪ್ಪೀಲ್ ಮೊಕದ್ದಮೆಗಳಲ್ಲಿ, ಅಪ್ಪೀಲ್ ಕೋರ್ಟಿನವರು ಆಪಾದನೆಪಟ್ಟವಗೆ ಅದೇ ಪ್ರಕಾರ ನೋಟೀಸ್ ಕೊಡಿಸತಕ್ಕದ್ದು.

423. ಮೊಕದ್ದಮೆಯ ರಿಕಾರ್ಡು ಕೋರ್ಟಿನಲ್ಲಿ ಆಗಲೇ ಇಲ್ಲದಿದ್ದರೆ, ಅಂಥಾ ರಿಕಾರ್ಡನ್ನು ಅಪ್ಪೀಲ್ ಕೋರ್ಟಿನವರು ಆಗ ತರಿಸಿಕೊಳ್ಳತಕ್ಕದ್ದು. ಅಂಥಾ ರಿಕಾರ್ಡನ್ನು ಓದಿ ನೋಡಿದಮೇಲೆ, ಮತ್ತು ಹಾಜರಾದಲ್ಲಿ, ಅಪ್ಪೀಲ್ದಾರನು ಯಾ—ಅವನ ಪ್ಲೀಡರನು,—ವ—ಹಾಜರಾದಲ್ಲಿ, ಪಬ್ಲಿಕ್ ಪ್ರಾಸಿಕ್ಯೂಟರನು, ಮತ್ತು, 417ನೇ ಪ್ರಕರಣ ಪ್ರಕಾರದ ಒಂದು ಅಪ್ಪೀಲ್ ಮೊಕದ್ದಮೆಯಲ್ಲಿ, ಹಾಜರಾದಲ್ಲಿ, ಆಪಾದನೆಪಟ್ಟವನು, ಹೇಳುವ ಹೇಳಿಕೆ ಕೇಳಿಕೊಂಡು, ಪ್ರವೇಶಿಸಲಿಕ್ಕೆ ಸಾಕಾದ ಸಬಬು ಇಲ್ಲವಾಗಿ ಸದರೀ ಕೋರ್ಟಿನವರಿಗೆ ತೋರಿದರೆ, ಅಪ್ಪೀಲನ್ನು ತೆಗದು ಹಾಕಬಹುದು, ಅಥವಾ—

ಅಪ್ಪೀಲ್ ತೀರ್ಮಾನ ಮಾಡುವಲ್ಲಿ ಅಪ್ಪೀಲ್ ಕೋರ್ಟಿನವರ ಅಧಿಕಾರಗಳು.

(a) ಖುಲಾಸೆ ಹುಕುಮಿನಮೇಲೆ ಆದ ಅಪ್ಪೀಲಿನಲ್ಲಿ, ಅಂಥಾ ಹುಕುಮನ್ನು ತಿರುಗಿಸಿ ಹೆಚ್ಚಿಗೆ ವಿಚಾರಣೆ ಮಾಡಲ್ಪಡುವ ಹಾಗೂ—ಯಾ—ಸಂಗತ್ಯಾನುಸಾರವಾಗಿ, ಆಪಾದನೆಪಟ್ಟ ಮನುಷ್ಯನನ್ನ ಪುನಃ ದರ್ಯಾಫ್ತಿ ಮಾಡಲ್ಪಡುವಂತೆ—ಯಾ—ದರ್ಯಾಫ್ತಿ ಬಗ್ಯೆ ಕಮ್ಮಿಟ್ ಮಾಡಲ್ಪಡುವಂತೆ ವಿಧಿಸಬಹುದು, ಅಥವಾ ಅವನನ್ನ ತಪ್ಪಿತಸ್ಥನೆಂದು ಇತ್ಯರ್ಥಮಾಡಲೂ ಬಹುದು—ವ—ಅವನಮೇಲೆ ಕಾನೂನುಮೇರಿಗೆ ಸಜಾ ವಿಧಿಸಲೂಬಹುದು;

(b) ಒಂದು ಸಾಬೀತಿಮೇಲಿನ ಅಪ್ಪೀಲಿನಲ್ಲಿ, (1) ಇತ್ಯರ್ಥ—ವ—ಸಜಾವನ್ನು ತಿರುಗಿಸಿ, ಆಪಾದನೆಪಟ್ಟವನನ್ನ ಖುಲಾಸೆ ಪಡಿಸಲೂ—ಯಾ—ವಿಮೋಚನೆ ಪಡಿಸಲೂ ಬಹುದು,—ಯಾ—ಅಂಥಾ ಅಪ್ಪೀಲ್ ಕೋರ್ಟಿನವರ ತಾಬೇದಾರಿಯಾದ ತಕ್ಕ ಅಧಿಕಾರವುಳ್ಳ ಕೋರ್ಟಿನವರಿಂದ ಅವನ

ನ್ನು ಪುನಃ ದರ್ಯಾಫ್ತು ಆಗಲ್ಪಡುವಂತೆ—ಯಾ—ದರ್ಯಾಫ್ತಿಬಗ್ಗೆ ಕಮ್ಮಿಟ್ ಮಾಡಲ್ಪಡುವಂತೆ ಹುಕುಂ ಕೊಡಬಹುದು, ಅಥವಾ (2) ಸಜಾವನ್ನು ಕಾಯಂ ಇಟ್ಟು, ಇತ್ಯರ್ಥವನ್ನು ಬದಲಾಯಿಸಬಹುದು, ಅಥವಾ, ಇತ್ಯರ್ಥವನ್ನು ಬದಲಾಯಿಸಿ—ಯಾ—ಬದಲಾಯಿಸದೇನೆ, ಸಜಾವನ್ನು ತಗ್ಗಿಸಬಹುದು ಅಥವಾ (3) ಅಂಥಾ ತಗ್ಗಿಸುವಿಕೆಯಿಂದ—ಯಾ—ತಗ್ಗಿಸುವಿಕೆಯಿಲ್ಲದೇನೇ—ವ—ಇತ್ಯರ್ಥ ಬದಲಾಯಿಸುವಿಕೆಯಿಂದ—ಯಾ—ಬದಲಾಯಿಸದೇನೇ, ಸಜಾವಿನ ಸ್ವಭಾವವನ್ನು ಬದಲಾಯಿಸಬಹುದು, ಪರಂತು ಸಜಾವನ್ನ ಹೆಚ್ಚಿಸುವ ಹಾಗೆ ಸ್ವಭಾವವನ್ನು ಬದಲಾಯಿಸಕೂಡದು ;

(c) ಇತರ ಯಾವದಾದರೂ ಹುಕುಮಿನ ಮೇಲಿನ ಅಪ್ಪೀಲಿನಲ್ಲಿ, ಅಂಥಾ ಹುಕ್ಕುಮನ್ನು ಬದಲಾಯಿಸಲೂ ಅಥವಾ ತಿರುಗಿಸಲ್ಲೂ ಬಹುದು :

(d) ಜಡ್ಜಿಯವರಿಂದ ಜೂರಿಯವರಿಗೆ ತಪ್ಪಿತವಾಗಿ ನಿರ್ದೇಶಿಸಲ್ಪಡೋಣದರಿಂದಲಾಗಲೀ ಅಥವಾ ಜಡ್ಜಿಯವರಿಂದ ತಿಳಿಸಲ್ಪಟ್ಟ ಕಾನೂನವಿಷಯವಾ , ಜೂರಿಯವರು ತಪ್ಪರ್ಥ ಮಾಡಿಕೊಳ್ಳೋಣದರಿಂದಾಗಲೀ ಅಂಥಾ ಜೂರಿಯವರ ಅಭಿಪ್ರಾಯವು ತಪ್ಪಾದ್ದೆಂದು ಕೋರ್ಟಿನವರು ಅಭಿಪ್ರಾಯಪಟ್ಟ ಹೊರ್ರತ್ತು ಜೂರಿಯವರ ತೀರ್ಮಾನವನ್ನು ತಬ್ದೀಲ್ ಮಾಡಲಿಕ್ಕೂ—ಯಾ—ತಿರುಗಿಸಲಿಕ್ಕೂ ಕೋರ್ಟಿನವರಿಗೆ ಅಧಿಕಾರ ಕೊಡುವಂಥಾದ್ಯಾವದೂ ಈ ಪ್ರಕರಣದಲ್ಲಿ ಅಡಗಿ ಇರುವದಿಲ್ಲ.

ಸಬಾರ್ಡಿನೇಟ್ ಅಪ್ಪೀಲ್ ಕೋರ್ಟುಗಳ ತೀರ್ಪುಗಳು.

424. ಅಸಲ್ ಅಧಿಕಾರದ ಕ್ರಿಮಿನಾಲ್ ಕೋರ್ಟಿನ ತೀರ್ಪುಗಳನ್ನು ಕುರಿತು 26ನೇ ಅಧ್ಯಾಯದಲ್ಲಿ ಅಡಗಿರುವ ಕ್ರಮಗಳು, ಯಾವ ಅಪ್ಪೀಲ್ ಕೋರ್ಟುಗಳ ತೀರ್ಪುಗಳಿಗಾದರೂ, ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ, ಲಗಾವಾಗತಕ್ಕದ್ದು.

ಪರಂತು, ಅಪ್ಪೀಲ್ ಕೋರ್ಟಿನವರು ಅನ್ಯಥಾ ಅಪ್ಪಣೆ ಕೊಟ್ಟಲ್ಲೇನೇ ಹೊರ್ತು, ಅವರು ಹೇಳೋಣಾಗುವ ತೀರ್ಪನ್ನು ಕೇಳಲಿಕ್ಕೆ ಆಪಾದನೆಪಟ್ಟವನು ತರಲ್ಪಡಬೇಕೆಂಬುದಿಲ್ಲ—ಯಾ—ಹಾಜರಾಗಬೇಕೆಂಬ ಅಗತ್ಯವೂ ಇಲ್ಲ.

ಅಪ್ಪೀಲಿನಲ್ಲಿ ಚೀಫ್ ಕೋರ್ಟಿನವರಿಂದ ಕೊಡೋಣಾಗುವ ಹುಕುಮನ್ನು ಕೆಳ ಕೋರ್ಟಿನವರಿಗೆ ಸರ್ಟಿಫೈಮಾಡಿ ತಿಳಿಸತಕ್ಕದ್ದು.

425. ಈ ಅಧ್ಯಾಯಕ್ಕನುಗುಣವಾಗಿ ಬಂಧುವೋಕದ್ದಮೆಯು ಅಪ್ಪೀಲಿನಲ್ಲಿ ಚೀಫ್ ಕೋರ್ಟಿನವರಿಂದ ತೀರ್ಮಾನಿಸಲ್ಪಟ್ಟಾಗ್ಗೆ, ಅಪ್ಪೀಲಾಗಲ್ಪಟ್ಟ ಇತ್ಯರ್ಥ ಸಜಾ ಅಥವಾ ಹುಕ್ಕುಂ ಯಾವ ಕೋರ್ಟಿನವರಿಂದ ರಿಕಾರ್ಡು ಮಾಡಲ್ಪಟ್ಟಿತೋ—ಯಾ—ವಿಧಿಸಲ್ಪಟ್ಟಿತೋ ಆ ಕೋರ್ಟಿನವರಿಗೆ, ತಮ್ಮ ತೀರ್ಪು—ಯಾ—ಹುಕುಮನ್ನು ಸದರೀ ಚೀಫ್ ಕೋರ್ಟಿನವರು ಸರ್ಟಿಫೈಮಾಡಿ ತಿಳಿಸತಕ್ಕದ್ದು. ಸದರೀ ಇತ್ಯರ್ಥ, ಸಜಾ—ಯಾ—ಹುಕ್ಕುಂ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಇಲ್ಲದ್ದೆ ಇತರ ಮೇಜಿಸ್ಟ್ರೇಟನಿಂದ ರಿಕಾರ್ಡು ಮಾಡಲ್ಪಟ್ಟಿದ್ದರೆ—ಯಾ—ವಿಧಿಸಲ್ಪಟ್ಟಿದ್ದಲ್ಲಿ, ಸದರೀ ಸರ್ಟಿಫಿಕೇಟ್ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್ ಮುಖಾಂತರ ರವಾನಿಸಲ್ಪಡತಕ್ಕದ್ದು.

ಚೀಫ್ ಕೋರ್ಟಿನವರು ತಮ್ಮ ತೀರ್ಪನ್ನು—ಯಾ—ಹುಕ್ಕುಮನ್ನು ತಿಳಿಸುವಂಥಾ ಕೋರ್ಟಿನವರು ಆ ಮೇಲೆ, ಸದರೀ ಚೀಫ್ ಕೋರ್ಟಿನವರ ತೀರ್ಪಿಗೆ—ಯಾ—ಹುಕುಮಿಗೆ ಅನುಗುಣವಾದಂಥಾ ಹುಕುಮುಗಳನ್ನು ಮಾಡತಕ್ಕದ್ದು; ಮತ್ತು ಅಗತ್ಯವಾಗಿ ಇದ್ದಲ್ಲಿ ಆಪ್ರಕಾರ ನುಗುಣವಾಗಿ ರಿಕಾರ್ಡನ್ನು ಸಹಾ ದುರಸ್ತು ಮಾಡತಕ್ಕದ್ದು.

ಅಪ್ಪೀಲ್ ತೀರ್ಮಾನ ಆಗುವತನಕ ಸಜಾವನ್ನ ನಿಲ್ಲಿಸಿಡೋಣ.

426. ಸಾಬೀತುಪಟ್ಟ ಮನುಷ್ಯನು ದಾಖಲುಮಾಡಿದ ಯಾವದೊಂದು ಅಪ್ಪೀಲ್ ತೀರ್ಮಾನ ಆಗುವತನಕ, ಅಪ್ಪೀಲ್ ಕೋರ್ಟಿನವರು, ಬರಹಮೂಲಕ ರಿಕಾರ್ಡು ಮಾಡಲ್ಪಡಬೇಕಾದ ಸಬಬುಗಳ ಮೇಲೆ, ಆ ಅಪ್ಪೀಲಾಗಲ್ಪಟ್ಟ ಸಜಾ ಅಥವಾ ಹುಕುಮಿನ ಜಾರಿಯನ್ನು ನಿಲ್ಲಿಸಿಡುವದಕ್ಕೆ ಹುಕ್ಕುಂ ಮಾಡಬಹುದು,

117

ಜಾಮೀನಿನ ಮೇಲೆ ಅಪ್ಪೀಲ್ಮಾಡಿದವನನ್ನು ಬಿಡುಗಡೆಮಾಡೋಣ.

ಮತ್ತು, ಅಪಾದನೆಪಟ್ಟವನು ಶೆರೆಯಲ್ಲಿ ಇದ್ದರೆ, ಅತನು ಜಾಮೀನಿನ—ಯಾ—ಅತನ ಸ್ವಂತ ಪತ್ರದ ಮೇಲೆ ಬಿಡುಗಡೆ ಮಾಡಲ್ಪಡುವಂತೆ ಹುಕುಂ ಮಾಡಬಹುದು.

ಈ ಪ್ರಕರಣದಿಂದ ಒಂದು ಅಪ್ಪೀಲ್ ಕೋರ್ಟಿನವರಿಗೆ ಕೊಡೋಣಾದ ಅಧಿಕಾರವು, ಅಪಾದನೆ ಪಟ್ಟ ಒಬ್ಬ ಮನುಷ್ಯನಿಂದ ಚೀಫ್ ಕೋರ್ಟಿಗೆ ತಾಬೇದಾರಿ ಅಗಿರುವ ಒಂದು ಕೋರ್ಟಿಗೆ ಮಾಡೋಣಾಗಿರುವ, ಯಾವ ಅಪ್ಪೀಲಿನ ಸಂಗತಿಯಲ್ಲ್ಯಾದರೂ ಚೀಫ್ ಕೋರ್ಟಿನವರಿಂದ ಕೂಡಾ ಚಲಾಯಿಸಲ್ಪಡಬಹುದು.

ಅಪ್ಪೀಲ್ಮಾಡಿದವನು ಅಖ್ಯೆರಿಗೆ ಕೈದು, ಪೆನಲ್ ಸರ್ವಿಟ್ಯೂಡ್—ಯಾ—ಟ್ರ್ಯಾನ್ಸ್ಪೋರ್ಟೇಷನ್ ಸಜಾ ವಿಧಿಸಲ್ಪಟ್ಟರೆ, ಅತನು ಹಾಗೆ ಬಿಡುಗಡೆಪಟ್ಟ ಕಾಲವು, ಅಪ್ರಕಾರ ಶೀಕ್ಷೆಪಟ್ಟವಾಯಿದೆಯನ್ನು ಎಣಿಸುವದರಲ್ಲಿ ಬಿಟ್ಟು ಬಿಡಲ್ಪಡತಕ್ಕದ್ದು.

ಖುಲಾಸೆ ಮೇಲಿನ ಅಪ್ಪೀಲಿನಲ್ಲಿ ಅಪಾದನೆ ಪಟ್ಟವನನ್ನು ಹಿಡಿಯೋಣ.

427. 417ನೇ ಪ್ರಕರಣದ ಪ್ರಕಾರ ಒಂದು ಅಪ್ಪೀಲ್ ಹಾಜರು ಮಾಡೋಣಾದಾಗ, ಅಪಾದನೆ ಪಟ್ಟವನನ್ನು ಹಿಡಿದು ತಮ್ಮಮುಂದೆ—ಯಾ—ತಾಬೇದಾರಿಯಾದ ಯಾವ ಕೋರ್ಟಿನ ಮುಂದೆ ಆದರೂ ತರಲ್ಪಡುವಂತೆ ಚೀಫ್‌ಕೋರ್ಟಿನವರು ಅಜ್ಞಾಪಿಸಿ, ಒಂದು ವಾರಂಟು ಕೊಡಬಹುದು, ಮತ್ತು ಯಾವ ಕೋರ್ಟಿನ ಮುಂದೆ ಅತ ತರಲ್ಪಟ್ಟಿದ್ದಾನೊ ಆ ಕೋರ್ಟಿನವರು ಅಪ್ಪೀಲ್ ಫಡಿಚಾ ಆಗುವ ತನಕ ಅವನನ್ನು ಶೆರೆಗೆ ಕಳುಹಿಸಬಹುದು, ಯಾ—ಅವನಿಂದ ಜಾಮೀನ್ ತಕ್ಕೊಳ್ಳಬಹುದು.

ಅಪ್ಪೀಲ್ಕೋರ್ಟಿನವರು ಹೆಚ್ಚಿನ ಸಾಕ್ಷ್ಯವನ್ನು ತಕ್ಕೊಳ್ಳಬಹುದು—ಯಾ—ತಕ್ಕೊಳ್ಳುವ ಹಾಗೆ ಅಪ್ಪಣೆ ಮಾಡಬಹುದು.

428. ಈ ಅಧ್ಯಾಯಪ್ರಕಾರ ಯಾವದೊಂದು ಅಪ್ಪೀಲ್ಬಾಬಿನಲ್ಲಿ ವರ್ತಿಸುವಲ್ಲಿ, ಆ ಅಪ್ಪೀಲ್ ಕೋರ್ಟಿನವರು, ಹೆಚ್ಚಿನ ಸಾಕ್ಷ್ಯ ಅವಶ್ಯ ಇರುವದಾಗಿ ತಿಳಕೊಳ್ಳುವದಾದರೆ, ಅಂಥಾ ಸಾಕ್ಷ್ಯವನ್ನ ತಾವೇ ತೆಗೆದುಕೊಳ್ಳಬಹುದು, ಅಥವಾ ಅದನ್ನು ಒಬ್ಬ ಮ್ಯಾಜಿಸ್ಟ್ರೇಟನಿಂದ ತೆಗೆದುಕೊಳ್ಳಲ್ಪಡುವ ಹಾಗೆ, ಅಥವಾ ಅಪ್ಪೀಲ್ಕೋರ್ಟು ಚೀಫ್ ಕೋರ್ಟು ಅಗಿದ್ದಾಗ, ಸೆಷನ್ ಕೋರ್ಟಿನವರಿಂದ—ಯಾ—ಒಬ್ಬ ಮ್ಯಾಜಿಸ್ಟ್ರೇಟನಿಂದ ಅಂಥಾ ಸಾಕ್ಷ್ಯವನ್ನು ತೆಗದುಕೊಳ್ಳಲ್ಪಡುವ ಹಾಗೆ ಅಪ್ಪಣೆ ಕೊಡಬಹುದು.

ಹೆಚ್ಚಿನ ಸಾಕ್ಷ್ಯವು ಸೆಷನ್ ಕೋರ್ಟಿನವರಿಂದ ಅಥವಾ ಮ್ಯಾಜಿಸ್ಟ್ರೇಟನಿಂದ ತೆಗದುಕೊಳ್ಳಲ್ಪಟ್ಟಾಗ, ಸದರೀ ಕೋರ್ಟು—ಯಾ—ಮ್ಯಾಜಿಸ್ಟ್ರೇಟ ಅಂಥಾ ಸಾಕ್ಷ್ಯವನ್ನು ಅಪ್ಪೀಲ್ ಕೋರ್ಟಿಗೆ ಸರ್ಟಿಫೈಮಾಡಿ ತಿಳಿಸತಕ್ಕದ್ದು, ಮತ್ತು ಅಂಥಾ ಕೋರ್ಟಿನವರು ಅದರ ಮೇಲೆ ಅಪ್ಪೀಲನ್ನ ಫಡಚಾ ಮಾಡತಕ್ಕದ್ದು.

ಅಪ್ಪೀಲ್ ಕೋರ್ಟಿನವರು ಅನ್ಯಥಾ ಅಪ್ಪಣೆ ಕೊಟ್ಟರೇನೇ ಹೊರತು, ಹೆಚ್ಚಿನ ಸಾಕ್ಷ್ಯ ತೆಗದುಕೊಳ್ಳಲ್ಪಡುವಾಗ್ಯೆ, ಅಪಾದನೆಪಟ್ಟವನು ಅಥವಾ ಅವನ ಪ್ಲೀಡರ ಹಾಜರು ಇರತಕ್ಕದ್ದು; ಪರಂತು ಅಂಥಾ ಸಾಕ್ಷ್ಯ ಜೂರರ—ಯಾ—ಅಸ್ಸೆಸ್ಸರ ಸಮಕ್ಷಮದಲ್ಲಿ ತೆಗೆದುಕೊಳ್ಳಲ್ಪಡತಕ್ಕದ್ದು ಇಲ್ಲ.

ಈ ಪ್ರಕರಣಕ್ಕನುಗುಣವಾಗಿ ಸಾಕ್ಷ್ಯದ ತೆಗೆದುಕೊಳ್ಳೋಣವು 25ನೇ ಅಧ್ಯಾಯದ ಉದ್ದೇಶ್ಯಗಳಿಗೋಸ್ಕರ ಒಂದು ವಿಚಾರಣೆ ಎಂಬ ಹಾಗೆ ಎಣಿಸಲ್ಪಡತಕ್ಕದ್ದು.

ಅಪ್ಪೀಲ್ಕೋರ್ಟಿನ ಜಡ್ಜಿಗಳು ಸಮಸಂಖ್ಯೆಯಾಗಿ ವಿಭೇದಪಟ್ಟರೆ ನಡಿಸತಕ್ಕ ಕ್ರಮ.

429. ಅಪ್ಪೀಲ್ ಕೋರ್ಟಿಗೆ ಉಂಟಾದ ಜಡ್ಜಿಗಳು ಅಭಿಪ್ರಾಯದಲ್ಲಿ ಸಮಸಂಖ್ಯೆಯಾಗಿ ವಿಭೇದಪಟ್ಟಾಗ, ಸದರೀ ಮೊಕದ್ದಮೆಯನ್ನು, ಅದರ ಮೇಲಣ ಅವರ ಅಭಿಪ್ರಾಯಗಳೊಡನೆ, ಅದೇ ಕೋರ್ಟಿನ ಇನ್ನೊಬ್ಬ ಜಡ್ಜಿಯಮುಂದೆ ಇರಿಸತಕ್ಕದ್ದು; ಮತ್ತು ಅಂಥಾ ಜಡ್ಜಿಯು, ತನಗೆ ಯುಕ್ತ ತೋರುವಂಥಾ ವಿಚಾ

ರಣೆ ಮತ್ತು ಹಿಯರಿಂಗ್ (ಇದ್ದರೆ) ಆದನಂತರ, ತನ್ನ ಅಭಿಪ್ರಾಯವನ್ನು ನುಡಿಯತಕ್ಕದ್ದು, ಮತ್ತು ಸದರೀ ತೀರ್ಪು ಅಥವಾ ಹುಕುಂ ಅಂಥಾ ಅಭಿಪ್ರಾಯಕ್ಕನುಸಾರವಾಗಿ ಇರತಕ್ಕದ್ದು.

430. 417ನೇ ಪ್ರಕರಣದಲ್ಲಿ—ವ—32ನೇ ಅಧ್ಯಾಯದಲ್ಲಿ ನಿಬಂಧಿಸಿರೋಣಾದ ವಿಷಯಗಳಲ್ಲಿ ಶಿವಾಯಿ, ಅಪ್ಪೀಲ್ ಮೇಲೆ—ಅಪ್ಪೀಲ್ ಕೋರ್ಟಿನವರು ವಿಧಿಸಿದ ಜಡ್ಜಿಮೆಂಟುಗಳು—ವ—ಆರ್ಡರುಗಳು ಆಖೈರಾಗಿರತಕ್ಕದ್ದು.

ಅಪ್ಪೀಲಿನ ಮೇಲೆ ಆದ ಹುಕುಮುಗಳು ಆಖೈರಾದ್ದು.

431. 417ನೇ ಪ್ರಕರಣಕ್ಕನುಗುಣವಾದ ಪ್ರತಿ ಅಪ್ಪೀಲ್ ಅಪಾದನೆಪಟ್ಟವನು ಮರಣಹೊಂದುತ್ತಲೇ ಆಖೈರಾಗಿ ನಿಂತು ಹೋಗತಕ್ಕದ್ದು, ಮತ್ತು ಈ ಅಧ್ಯಾಯಕ್ಕನುಗುಣವಾದ ಇತರ ಪ್ರತಿ ಅಪ್ಪೀಲ್ ಅಪ್ಪೀಲ್ಮಾಡಿದವನು ಮರಣ ಹೊಂದುತ್ತಲೆ ಆಖೈರಾಗಿ ನಿಂತು ಹೋಗತಕ್ಕದ್ದು.

ಅಪ್ಪೀಲ್‌ಗಳು ನಿಂತು ಹೋಗೋಣ.

Chapter XXXII.—Of Reference and Revision.

32ನೇ ಅಧ್ಯಾಯ.—ರಿಫರೆನ್ಸ—ವ—ಪುನರ್ವಿಮರ್ಶೆಯನ್ನು ಕುರಿತು.

435. ಚೀಫ್ ಕೋರ್ಟಿನವರಾಗಲೀ—ಯಾ—ಯಾವದೊಂದು ಸೆಷನ್ ಕೋರ್ಟಿನವರಾಗಲೀ—ಯಾ—ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಾಗಲಿ, ಅಥವಾ ಈ ಬಗ್ಗ್ಯಾಗಿ ಮೈಸೂರು ಗವರ್ನಮೆಂಟಿನವರಿಂದ ಅಧಿಕಾರ ಕೊಡಲ್ಪಟ್ಟ ಯಾವನೊಬ್ಬ ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟಾಗಲೀ, ತಮ್ಮ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಇರುವ ಯಾವದೊಂದು ಕೀಳು ಕ್ರಿಮಿನಲ್ ಕೋರ್ಟಿನವರ ಮುಂದೆ ನಡೆದ ಯಾವದೊಂದು ಪ್ರೊಸೀಡಿಂಗ್ಸಿನ ರಿಕಾರ್ಡನ್ನಾದರೂ, ಯಾವದೊಂದು ಇತ್ಯರ್ಥ, ಬರೆಯಲ್ಪಟ್ಟ—ಯಾ—ಕೊಡಲ್ಪಟ್ಟ ಯಾವದೊಂದು ಸಜಾ—ಯಾ—ಹುಕುಂ, ಸರಿಯಾದ್ದೋ, ಕಾನೂನಿನ ಮೇರಿಗೆ ಆದ್ದೋ—ಯಾ—ಯುಕ್ತವಾದ್ದೋ, ಮತ್ತು ಅಂಥಾ ಕೀಳು ಕೋರ್ಟಿನ ಪ್ರೊಸೀಡಿಂಗ್ಸಗಳು ಕ್ರಮವಾದ್ದೋ, ಎಂಬದನ್ನು ತೃಪ್ತಿಕರವಾಗಿ ಮುಂದಟ್ಟು ಮಾಡಿಕೊಳ್ಳುವದಕ್ಕೋಸ್ಕರ, ತರಿಸಿಕೊಂಡು ತನಿಖೆ ಮಾಡಬಹುದು.

ಕೀಳು ಕೋರ್ಟುಗಳ ರಿಕಾರ್ಡುಗಳನ್ನು ತರಿಸಲಿಕ್ಕೆ ಅಧಿಕಾರ.

ಈ ಪ್ರಕರಣಪ್ರಕಾರ ನಡಕೊಳ್ಳುವ ಯಾವನೊಬ್ಬ ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟನು ಅಂಥಾ ಯಾವ ಇತ್ಯರ್ಥ ಸಜಾ ಅಥವಾ ಹುಕುಂ ನ್ಯಾಯವಿರುದ್ಧವಾದ್ದು—ಯಾ—ಅಯುಕ್ತವಾದ್ದು, ಅಥವಾ ಅಂಥಾ ಯಾವ ಪ್ರೊಸೀಡಿಂಗ್ಸಗಳು ಅಕ್ರಮವಾದ್ದು ಎಂತಾ ಆಲೋಚಿಸಿದರೆ, ಸದರೀ ರಿಕಾರ್ಡನ್ನು ತನಗೆ ಯುಕ್ತ ತೋರುವ ಅದರ ಮೇಲಿನ ಷರಾಸಮೇತ, ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸತಕ್ಕದ್ದು.

143ನೇ ಮತ್ತು 144ನ್ನೇ ಪ್ರಕರಣಗಳಪ್ರಕಾರ ಮಾಡೋಣಾದ ಹುಕುಂಗಳು ಮತ್ತು 176ನೇ ಪ್ರಕರಣ ಪ್ರಕಾರ ನಡಿಸಿದ ಪ್ರೊಸೀಡಿಂಗ್ಸಗಳು ಈ ಪ್ರಕರಣದ ಅರ್ಥಕ್ಕೆ ಒಳಪಡುವ ಪ್ರೊಸೀಡಿಂಗ್ಸಗಳಲ್ಲ.

436. 435ನೇ ಪ್ರಕರಣಪ್ರಕಾರ ಯಾವದೊಂದು ಮೊಕದ್ದಮೆಯ ರಿಕಾರ್ಡು ತನಿಖೆಮಾಡುವಲ್ಲಿ ಆಗಲೀ—ಯಾ—ಅನ್ಯಥಾ ಸೆಷನ್ ಕೋರ್ಟಿನವರಾಗಲೀ—ಯಾ—ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಾಗಲೀ, ಅಂಥಾ ಮೊಕದ್ದಮೆಯು ಸೆಷನ್ ಕೋರ್ಟಿನವರಿಂದಲೇ ದರಿಯಾಫ್ತು ಆಗಲ್ಪಡತಕ್ಕದ್ದಾಗಿಯೂ, ಮತ್ತು ಆಪಾದನೆಪಟ್ಟವನು ಕೀಳು ಕೋರ್ಟಿನವರಿಂದ ಅಕ್ರಮವಾಗಿ ವಿಮೋಚಿಸಲ್ಪಟ್ಟನೆಂತ ಆಲೋಚಿಸಿದರೆ, ಸೆಷನ್ ಕೋರ್ಟಿನವರಾಗಲೀ—ಯಾ—ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಾಗಲೀ ಆತನನ್ನು ತಿರಿಗಿ ಹಿಡಿಸಬಹುದು, ಮತ್ತು ಆ ಮೇಲೆ, ಹೊಸವಿಚಾರಣೆಯ ಬಗ್ಗೆ ಅಪ್ಪಣೆ ಕೊಡುವದರ ಬದಲಾಗಿ, ಯಾವ ಬಾಬಿನಲ್ಲಿ ಅಕ್ರಮವಾಗಿ ವಿಮೋಚನೆ ಮಾಡಲ್ಪಟ್ಟದ್ದಾನೆ

ಕಮ್ಮಿಟ ಮಾಡಲಿಕ್ಕೆ ಹುಕ್ಕುಂ ಕೊಡುವ ಅಧಿಕಾರ.

ಎಂತ ಸೆಷನ್ ಕೋರ್ಟನವರು—ಯಾ—ಡಿಸ್ಟ್ರಿಕ್ಟ ಮಾಜಿಸ್ಟ್ರೇಟರು ಅಭಿಪ್ರಾಯಪಟ್ಟಿರುತ್ತಾರೋ, ಆ ಬಾಬಿನ ಮೇಲೆ, ದರ್ಖಾಸ್ತಿ ಬಗ್ಗೆ ಅವನು ಕಮ್ಮಿಟ ಮಾಡಲ್ಪಡುವ ಹಾಗೆ ಹುಕುಂ ಮಾಡಬಹುದು.

ಪರಂತು ಈ ಕೆಳಗಿನ ಪ್ರಕಾರ—

(a) ಕಮ್ಮಿಟ ಯಾಕೆ ಮಾಡಲ್ಪಡಕೂಡದು ಎಂಬದಕ್ಕೆ ಸಬಬನ್ನು ಅಂಥಾ ಕೋರ್ಟು—ಯಾ—ಮ್ಯಾಜಿಸ್ಟ್ರೇಟಗೆ ತೋರಿಸುವ ನಿಮಿತ್ತವಾಗಿ ಆಪಾದನೆ ಪಟ್ಟವನಿಗೆ ಸಂದರ್ಭ ಇರುತ್ತಾದ ಪಕ್ಷದಲ್ಲಿ ಹಾಗೆ ಹುಕುಂ ಮಾಡಬಹುದು.

(b) ಆಪಾದನೆಪಟ್ಟವನಿಂದ ಬೇರೆ ಯಾವದಾದರೂ ಒಂದು ತಕ್ಸೀರು ಮಾಡಲ್ಪಟ್ಟಿರುವದಾಗಿ ರುಜುವಾತಿನಿಂದ ತೋರುವದಾಗಿ ಅಂಥಾ ಕೋರ್ಟು—ಯಾ—ಮ್ಯಾಜಿಸ್ಟ್ರೇಟರು ತಿಳಕೊಂಡರೆ, ಅಂಥಾ ತಕ್ಸೀರು ವಿಚಾರಣೆ ಮಾಡುವ ಹಾಗೆ ಸದರೀ ಕೋರ್ಟನವರು—ಯಾ—ಮ್ಯಾಜಿಸ್ಟ್ರೇಟರು ಕೀಳು ಕೋರ್ಟನವರಿಗೆ ಅಪ್ಪಣೆ ಕೊಡಬಹುದು.

ವಿಚಾರಣೆ ಮಾಡಲು ಹುಕುಂ ಕೊಡುವದಕ್ಕೆ ಅಧಿಕಾರ.

437. 435ನೇ ಪ್ರಕರಣಪ್ರಕಾರ—ಯಾ—ಅನ್ಯಥಾ, ಯಾವದೊಂದು ರಿಕಾರ್ಡು ಪರಾಂಬರಿಸುವಲ್ಲಿ, 203ನೇ ಪ್ರಕರಣಪ್ರಕಾರ ಡಿಸಮಿಸ್ ಮಾಡಲ್ಪಟ್ಟ ಯಾವದೊಂದು ಫಿರ್ಯಾದಿ—ಯಾ—ವಿಮೋಚಿಸಲ್ಪಟ್ಟ ಯಾವನೊಬ್ಬ ಆಪಾದನೆಪಟ್ಟ ಮನುಷ್ಯನ ಮೊಕದ್ದಮೇ ಬಾಬಿನಲ್ಲಿ, ಹೆಚ್ಚಿನ ವಿಚಾರಣೆಯನ್ನು ಸ್ವತಃ ಮಾಡುವ ಹಾಗೆ—ಯಾ—ಆತನಿಗೆ ತಾಬೇದಾರಿಯಾದ ಯಾವನೊಬ್ಬ ಮ್ಯಾಜಿಸ್ಟ್ರೇಟನಿಂದ ಮಾಡಿಸುವ ಹಾಗೆ, ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟಗೆ ಚೀಫ ಕೋರ್ಟನವರಾಗಲೀ—ಯಾ—ಸೆಷನ್ ಕೋರ್ಟನವರಾಗಲೀ ಹುಕುಂ ಮಾಡಬಹುದು, ಮತ್ತು ಸದರೀ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನು ತಾನು ಸ್ವತಃ ವಿಚಾರಣೆ ಮಾಡಬಹುದು, ಅಥವಾ ತನ್ನ ತಾಬೇದಾರೀ ಮ್ಯಾಜಿಸ್ಟ್ರೇಟರಿಂದ ಮಾಡಿಸಬಹುದು.

ಚೀಫ ಕೋರ್ಟಿಗೆ ರಿಪೋರ್ಟು.

438. ಸೆಷನ್ ಕೋರ್ಟನವರಾಗಲೀ—ಯಾ—ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟಾಗಲೀ, 435ನೇ ಪ್ರಕರಣ ಪ್ರಕಾರ—ಯಾ—ಅನ್ಯಥಾ ಯಾವದೊಂದು ಪ್ರೊಸೀಡಿಂಗ್ಸಿನ ರಿಕಾರ್ಡನ್ನು ಪರಾಂಬರಿಸಿ, ತಮಗೆ ಯುಕ್ತ ತೋರಿದರೆ, ಅಂಥಾ ಪರಾಂಬರಿಕೆ ಫಲವನ್ನು ಕುರಿತು ಚೀಫ ಕೋರ್ಟನವರ ಅಪ್ಪಣೇ ಬಗ್ಗೆ ರಿಪೋರ್ಟು ಮಾಡಬಹುದು, ಮತ್ತು, ಅಂಥಾ ರಿಪೋರ್ಟನಲ್ಲಿ, ಸಜಾ ವಿಧಿಯು ತಿರಿಗಿಸಲ್ಪಡಬೇಕೆಂತ ಶಿಫಾರಸ್ ಮಾಡೋಣಾದಾಗ, ಅಂಥಾ ಸಜಾ ವಿಧಿಯ ಅಮಲ್ದಾರಿಯನ್ನ ಅಮಾನತ್ತು ಇಡಬೇಕೆಂತ ಅಪ್ಪಣೆ ಕೊಡಬಹುದು, ಮತ್ತು ಆಪಾದನೆ ಪಟ್ಟವನು ಶೆರೆಯಲ್ಲಿ ಇರುವದಾದರೆ ಜಾಮಿನಿನ ಮೇಲೆ—ಯಾ—ಅವನ ಸ್ವಂತ ಪತ್ರದ ಮೇಲೆ ಬಿಡಲ್ಪಡತಕ್ಕದ್ದಾಗಿ ಹುಕುಂ ಮಾಡಬಹುದು.

ಚೀಫ ಕೋರ್ಟನವರ ಪುನರ್ವಿಮರ್ಶೆ ಅಧಿಕಾರಗಳು.

439. ಚೀಫ ಕೋರ್ಟನವರು ತಾವೇ ರಿಕಾರ್ಡನ್ನು ತರಿಸಿಕೊಂಡ—ಯಾ—ಹುಕುಮಿನ ಬಗ್ಗೆ ರಿಪೋರ್ಟಾದ, ಅಥವಾ ಅನ್ಯಥಾ ತಮ್ಮ ತಿಳುವಳಿಕೆಗೆ ಬಂದ, ಯಾವದೊಂದು ಪ್ರೊಸೀಡಿಂಗ್ಸಿನ ಮೊಕದ್ದಮೆಯಲ್ಲಿ 195, 423, 426, 427,—ವ—428ನೇ ಪ್ರಕರಣಗಳ ಪ್ರಕಾರ ಅಪ್ಪೀಲು ಕೋರ್ಟನವರಿಗೆ—ಯಾ—338ನೇ ಪ್ರಕರಣ ಪ್ರಕಾರ ಒಂದು ಕೋರ್ಟನವರಿಗೆ ಕೊಡೋಣಾದ ಯಾವ ಅಧಿಕಾರಗಳನ್ನಾದರೂ, ಚೀಫ ಕೋರ್ಟನವರು, ತಮಗೆ ಯುಕ್ತ ತೋರುವ ಪ್ರಕಾರ, ಚಲಾಯಿಸಬಹುದು, ಮತ್ತು ಸಜಾವನ್ನು ಹೆಚ್ಚಿಸಲೂ ಬಹುದು, ಮತ್ತು, ಪುನರ್ವಿಮರ್ಶಿಸುವ ಕೋರ್ಟಿಗೆ ಶೇರಿರುವ ಜಡ್ಜಿಗಳು ಸಮಸಂಖ್ಯೆಯಾಗಿ ಭಿನ್ನಾಭಿಪ್ರಾಯ ಪಟ್ಟರೆ429ನೇ ಪ್ರಕರಣದಲ್ಲಿ ನಿಬಂಧಿಸಿರುವ ರೀತಿಯಲ್ಲಿ ಮೊಕದ್ದಮೆಯನ್ನು ಫಡಚಾ ಮಾಡತಕ್ಕದ್ದು.

ಆಪಾದನೆ ಪಟ್ಟವನು ತನ್ನ ಪ್ರತಿವಾದದ ಬಾಬಿನಲ್ಲಿ ಸ್ವತಃ ಆಗಲೀ—ಯಾ—ವಕೀಲನ ಮುಖಾಂತರವಾಗಿ ಆಗಲೀ ಜಾಹಿರು ಮಾಡುವದಕ್ಕೆ ಸಂಧರ್ಭ ಕೊಡಲ್ಪಟ್ಟ ವಿನಃ ಅನ್ಯಥಾ ಆಪಾದನೆ ಪಟ್ಟವನ ಅವಗುಣಕ್ಕಾಗಿ ಈ ಪ್ರಕರಣದ ಯಾವದೊಂದು ಹುಕುಂ ಕೊಡಲ್ಪಡ ಕೂಡದು.

ಈ ಪ್ರಕರಣದ ಪ್ರಕಾರ ವರ್ತಿಸೋಣಾದ ಸಜಾವು 34ನೇ ಪ್ರಕರಣ ಪ್ರಕಾರ ನಡಕೊಳ್ಳುವನಲ್ಲದ ಒಬ್ಬ ಮ್ಯಾಜಿಸ್ಟ್ರೇಟನಿಂದ ವಿಧಿಸೋಣಾದ್ದಾಗಿದ್ದ ಸಂಗತಿಯಲ್ಲಿ, ಅಪೀಲನೆಪೇಕ್ಷನು ಮಾಡಿದ್ದಾಗಿ ಅಂಥಾ ಕೋರ್ಟಿನವರು ಅಭಿಪ್ರಾಯಪಡುವ ತಕ್ಸೀರಿನ ಬಗ್ಗೆ ಒಬ್ಬ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟನು ಅಂಥಾ ತಕ್ಸೀರಿನ ಬಗ್ಗೆ ವಿಧಿಸಬಹುದಾಗಿದ್ದ ಶೀಕ್ಷೆಗಿಂತ ಹೆಚ್ಚಿನ ಶೀಕ್ಷೆಯನ್ನು ಸದರೀ ಕೋರ್ಟಿನವರು ವಿಧಿಸಕೂಡದು.

ಈ ಪ್ರಕರಣದಲ್ಲಿ ಇರುವಂಥಾದ್ದ್ಯಾವದೂ ಖುಲಾಸೆಯ ಒಂದು ಇತ್ಯರ್ಥವನ್ನು ಸಜಾ ಸಾಬೀತು ಇತ್ಯರ್ಥವಾಗಿ ತಬ್ದಿಲ್ ಮಾಡುವದಕ್ಕೆ ಚೀಫ್ ಕೋರ್ಟಿನವರಿಗೆ ಅಧಿಕಾರ ಗೊಡಿಸುವದು ಎಂತ ಎಣಿಸಲ್ಪಡತಕ್ಕದ್ದು ಅಲ್ಲ.

ಕಕ್ಷಿಗಾರರು ಹೇಳುವದನ್ನು ಕೇಳುವದು ಕೋರ್ಟಿನವರ ಇಷ್ಟ.

440. ಯಾವದೊಂದು ಕೋರ್ಟಿನವರು ತಮ್ಮ ಪುನರ್ವಿಮರ್ಶಾ ಅಧಿಕಾರವನ್ನು ಚಲಾಯಿಸುತ್ತಿರುವಾಗ—ಖುದ್ದಾಗಿ ಆಗಲೀ—ಯಾ—ಪ್ಲೀಡರಿನಮುಖಾಂತರವಾಗಿ ಆಗಲೀ ಕೇಳಲ್ಪಡಲಿಕ್ಕೆ ಯಾವ ಕಕ್ಷಿಗಾರರಾದರೂ ಹಕ್ಕುಳ್ಳವರಾಗಿ ಇರುವದಿಲ್ಲ; ಪರಂತು ಕೋರ್ಟಿನವರು, ಯುಕ್ತ ತೋರಿದರೆ, ಅಂಥಾ ಅಧಿಕಾರವನ್ನು ನಡಿಸುವಲ್ಲಿ, ಯಾವ ಕಕ್ಷಿಗಳನ್ನಾದರೂ ಸ್ವತಃ ಆಗಿ ಆಗಲೀ—ಯಾ—ಪ್ಲೀಡರನ ಮುಖಾಂತರವಾಗಿ ಆಗಲೀ ಕೇಳಿಕೊಳಬಹುದು, ಮತ್ತು 439ನೇ ಪ್ರಕರಣದ 2ನೇ ಕಲಮಿಗೆ ಬಾಧಿಸತಕ್ಕಂಥಾದ್ದು ಈ ಪ್ರಕರಣದಲ್ಲಿ ಏನೂ ಉಂಟೆಂತಾ ಎಣಿಸಲ್ಪಡತಕ್ಕದ್ದಿಲ್ಲ.

ಚೀಫ್ ಕೋರ್ಟಿನವರ ಹುಕುಮನ್ನು ಕೆಳ ಕೋರ್ಟಿನ ವರಿಗೆ—ಯಾ—ಮ್ಯಾಜಿಸ್ಟ್ರೇಟನ ವರಿಗೆ ಸರ್ಟಿಫೈಮಾಡಿತಿಳಿಸತಕ್ಕದ್ದು.

442. ಈ ಅಧ್ಯಾಯಕ್ಕನುಗುಣವಾಗಿ ಚೀಫ್ಕೋರ್ಟಿನವರು ಒಂದು ಮೊಕದ್ದಮೆಯನ್ನು ಪುನರ್ವಿಮರ್ಶೆ ಮಾಡಿದರೆ, ಪುನರ್ವಿಮರ್ಶಿಸೋಣಾದ ಇತ್ಯರ್ಥ—ಸಜಾ—ಯಾ—ಹುಕುಂ ಯಾವ ಕೋರ್ಟಿನಿಂದ ರಿಕಾರ್ಡು ಮಾಡೋಣಾಯಿತೋ—ಯಾ—ಕೊಡೋಣಾಯಿತೋ ಆ ಕೋರ್ಟಿಗೆ, ತಮ್ಮ ಇತ್ಯರ್ಥ—ಯಾ—ಹುಕುಮನ್ನು ಸರ್ಟಿಫೈ ಮಾಡಿ ತಿಳಿಸತಕ್ಕದ್ದು, ಮತ್ತು ಹಾಗೆ ಇತ್ಯರ್ಥ—ಯಾ—ಹುಕುಂ ಸರ್ಟಿಫೈ ಮಾಡಿ ತಿಳಿಸಲ್ಪಡೋಣಾದಂಥಾ ಕೋರ್ಟು—ಯಾ—ಮ್ಯಾಜಿಸ್ಟ್ರೇಟರು ಆ ಮೇಲೆ ಹಾಗೆ ಸರ್ಟಿಫೈ ಮಾಡಿ ತಿಳಿಸೋಣಾದ ಇತ್ಯರ್ಥಕ್ಕನುಗುಣವಾದಂಥಾ ಹುಕುಂಗಳನ್ನು ಕೊಡತಕ್ಕದ್ದು; ಮತ್ತು ಅಗತ್ಯವಾಗಿದ್ದಲ್ಲಿ, ಅದಕ್ಕನುಗುಣವಾಗಿ ರಿಕಾರ್ಡುಗಳನ್ನು ಸಹಾ ದುರುಸ್ತು ಮಾಡತಕ್ಕದ್ದು.

PART VIII.

8ನೇ ಭಾಗ.

SPECIAL PROCEEDINGS.

ವಿಶೇಷ ವ್ಯವಹರಣೆಗಳು.

CHAPTER XXXIII.—CRIMINAL PROCEEDINGS AGAINST EUROPEANS AND AMERICANS.

33ನೇ ಅಧ್ಯಾಯ.—ಯೂರೋಪಿಯನ್—ವ—ಅಮೇರಿಕನ್ರಮೇಲೆ ಕ್ರಿಮಿನಲ್ ವ್ಯವಹರಣೆಗಳು.

ಯೂರೋಪಿಯನ್ಗಳ—ಯಾ—ಅಮೆರಿಕಾ ದೇಶಸ್ಥರ ದರ್ಯಾಪ್ತಿ ಬಗ್ಗೆ ಜ್ಯೂರಿ.

460. ಜ್ಯೂರಿಯವರಿಂದಾಗಲೀ—ಯಾ—ಅಸ್ಸೆಸ್ಸರುಗಳ ಸಹಾಯದಿಂದ ಆಗಲೀ ದರ್ಯಾಪ್ತಿ ಮಾಡಲ್ಪಡತಕ್ಕ ಒಬ್ಬ (ಯೂರೋಪಿಯನ್ ಬ್ರಿಟಿಷ್ ಸಬ್ಜೆಕ್ಟಲ್ಲದ) ಯೂರೋಪಿಯನ್—ಯಾ—ಅಮೆರಿಕನು (ಆಪಾದಿಸಲ್ಪಟ್ಟ—ಯಾ—ಆಪಾದಿಸಲ್ಪಟ್ಟವರ ಪೈಕಿ ಒಬ್ಬನಾದ, ಪ್ರತಿ ಮೊಕದ್ದಮೆಯಲ್ಲಿ, ಜ್ಯೂರರ್—ಯಾ—ಅಸ್ಸೆಸ್ಸರ ಸಂಖ್ಯೆಯಲ್ಲಿ, ಸಾಧ್ಯವಾದರೆ, ಮತ್ತು ಅಂಥಾ ಯೂರೋಪಿಯನ್—ಯಾ—ಅಮೆರಿಕನು ಹಾಗೆ ಕೇಳಿಕೊಂಡರೆ, ಅರ್ಧಕ್ಕೆ ಕಮ್ಮಿಯಾಗದಷ್ಟು ಜನರು ಯೂರೋಪಿಯನ್—ಯಾ—ಅಮೆರಿಕನ್ರಾಗಿ ಇರತಕ್ಕದ್ದು.

ಯೂರೋಪಿಯರ್ನ ಆಗಲೀ—ಯಾ—ಅಮೆರಿಕನಾಗಲೀ ಮತ್ತೊಂದು ಜಾತೀಯವನ ಜೊತೆಯಲ್ಲಿ ಆಪಾದನೆಯಾದಾಗ ಜೂರಿ.

461. ಸೆಷರ್ನ ಕೋರ್ಟ ಮುಂದೆ ಒಬ್ಬ ಯೂರೋಪಿಯರ್ನ—ಯಾ—ಅಮೆರಿಕನು, ಯೂರೋಪಿಯರ್ನ—ಯಾ—ಅಮೆರಿಕನಲ್ಲದ ಮನುಷ್ಯನ ಜೊತೇಲಿ ಆಪಾದಿಸಲ್ಪಟ್ಟು ಇದ್ದಾಗ್ಯೆ, ಮತ್ತು 460ನೇ ಪ್ರಕರಣ ಪ್ರಕಾರ ಕೇಳಿಕೊಂಡ ಮೇರಿಗೆ ನಡಿಸುವಲ್ಲಿ, ಕನಿಷ್ಟ ಪಕ್ಷದಲ್ಲಿ ಅರ್ಧಕ್ಕೆ ಕಮ್ಮಿ ಇಲ್ಲದೆ ಯೂರೋಪಿಯರ್ನ—ವ— ಅಮೆರಿಕನರಿಂದ ಶೇರಲ್ಪಟ್ಟ ಜೂರರಿಂದ—ಯಾ—ಅಸ್ಸೆಸ್ಸರ ಜೊತೆಯ ಸಹಾಯದಿಂದಾಗಲೀ, ದರ್ಯಾಫ್ತಿ ಮಾಡಲ್ಪಡುವದಿದ್ದರೆ, ಯೂರೋಪಿಯನ್—ಯಾ—ಅಮೇರಿಕನಲ್ಲದವನು ಹಾಗೆ ಕೇಳಿಕೊಂಡರೆ, ಆತನು ಪ್ರತ್ಯೇಕವಾಗಿ ದರ್ಯಾಫ್ತಿ ಮಾಡಲ್ಪಡತಕ್ಕದ್ದು.

460ನೇ ಪ್ರಕರಣಕ್ಕನುಗುಣವಾಗಿ ಜೂರರುಗಳನ್ನ ಸರ್ಮನ ಮಾಡುವದು—ವ—ಕೂಡಿಸುವದು.

462. ಸೆಷರ್ನ ಕೋರ್ಟಮುಂದೆ ದರ್ಯಾಫ್ತಿಯಾಗುವ ಯಾವ ಮೊಕದ್ದಮೆಯಲ್ಲಿ ಆಪಾದನೆ ಪಟ್ಟ ಮನುಷ್ಯನು; ಅಥವಾ ಆಪಾದನೆಪಟ್ಟವರಪೈಕಿ ಒಬ್ಬನು, 460ನೇ ಪ್ರಕರಣದ ನಿಬಂಧನೆಗಳ ಮೇರಿಗೆ ಏರ್ಪಟ್ಟ ಜೂರಿಯಿಂದ ದರ್ಯಾಫ್ತಿಯಾಗತಕ್ಕವನಾಗಿ ಇರುತ್ತಾನೋ, ಅಂಥಾ ಮೊಕದ್ದಮೆ ದರ್ಯಾಫ್ತಿಯಾಗಬೇಕಾದಾಗ, ಸೆಷರ್ನ ಕೋರ್ಟನವರು ಸದರೀ ಮೊಕದ್ದಮೆಯು ದರ್ಯಾಫ್ತಿಗೆ ಗೊತ್ತಾದ ತಾರೀಖಿಗೆ ಕಡೇಪಕ್ಷದಲ್ಲಿ ಮೂರು ದಿನವಾದರೂ ಮುಂಚಿತವಾಗಿ ಈ ಮೊದಲು ನಿರ್ದೇಶಿಸಿರೋಣಾದ ರೀತ್ಸೀಲಿ, ದರ್ಯಾಫ್ತಿಗೋಸ್ಕರ ಎಷ್ಟುಮಂದಿ, ಬೇಕೋ ಅಷ್ಟುಮಂದಿ ಯೂರೋಪಿಯರ್ನ—ವ—ಅಮೆರಿಕರ್ನ ಜೂರರನ್ನ ಸಮ್ಮರ್ನ ಮಾಡಿಸತಕ್ಕದ್ದು.

ಹಾಗೆಯೇ ಸದರೀ ಕೋರ್ಟನವರು ದುರಸ್ತಾದ ಪಟ್ಟೀಯಲ್ಲಿ ನಮೂದಿರುವ ಜನರಪೈಕಿ ಅಷ್ಟುಮಂದಿ ಇತರ ಜನಕ್ಕೆ ಸಹಾ ಸಮ್ಮರ್ನ ಮಾಡಿಸತಕ್ಕದ್ದು, ಯಾವ ಪಕ್ಷದಲ್ಲಂದರೆ, ಸದರೀ ಇತರ ಜನರಿಗೆ ಅದೇ ಸೆಷರ್ನನಲ್ಲಿ ಜೂರಿ ದರ್ಯಾಫ್ತಿ ಬಗ್ಯೆ ಆಗಲೇ ಸಮ್ಮನಾಗದೆ ಇದ್ದಪಕ್ಷದಲ್ಲಿ ಹಾಗೆ ಸಮ್ಮರ್ನ ಮಾಡಿಸತಕ್ಕದ್ದು.

ಹಾಗೆ ಬಂದ ಎಲ್ಲಾ ಜನರಪೈಕಿ, ಜೂರಿಯಾಗಿ ಏರ್ಪಡಿಸಬೇಕಾದ ಜೂರರನ್ನ 276ನೇ ಪ್ರಕರಣದಲ್ಲಿ ನಮೂದ ರೀತ್ಸೀಲಿ ಲಾಟ ಚೀಟ ಮೂಲಕವಾಗಿ ನಿಶ್ಚಯಿಸತಕದ್ದು, ಯಾವತನಕ ಅಂದರೆ, ಯೂರೋಪಿಯನವ ಯಾ—ಅಮೆರಿಕನವರಲ್ಲಿ ಜೂರಿಗೆ ಸಾಧ್ಯವಾಗಿ ಬೇಕಾದಷ್ಟುಮಂದಿ ಅಥವಾ ಷುಮಾರು ಜೂರಿಗೆ ಬೇಕಾದಷ್ಟು ಶಿಕ್ಕಿ ಜೂರಿಯಾಗಿ ಏರ್ಪಡುವತನಕ ಹಾಗೆ ಮಾಡತಕ್ಕದ್ದು.

ಪರಂತು ಯೂರೋಪಿಯರ್ನ—ವ—ಅಮೆರಿಕನರ ಕ್ರಮವಾಗಿ ಬೇಕಾದ ಸಂಖ್ಯೆಯು ಅನ್ಯಥಾ ದೊರಕಲಾರದ ಸಂಗತಿಯಲ್ಲಿ, ಕೋರ್ಟನವರು, ತಮ್ಮ ಯುಕ್ತಪ್ರಕಾರ, ಜೂರಿಯವರನ್ನ ಏರ್ಪಡಿಸುವ ನಿಮಿತ್ಯವಾಗಿ, 320ನೇ ಪ್ರಕರಣಪ್ರಕಾರ ವಿನಾಯಿಸಲ್ಪಟ್ಟವನೆಂಬ ಸಬಬಿನ ಮೇಲೆ ಪಟ್ಟಿಯಿಂದ ಬಿಡಲ್ಪಟ್ಟ ಯಾವ ಮನುಷ್ಯನನ್ನಾದರೂ ಸರ್ಮನ ಮಾಡಬಹುದು.

ಯೂರೋಪಿಯರ್ನ ಬ್ರಿಟಿಷ ಸಬ್ಜಕ್ಟುಗಳಲ್ಲದ ಯೂರೋಪಿಯರ್ನರು ಮುಂತಾದವರಮೇಲೆ ಕ್ರಿಮಿನಲ್ ವ್ಯವಹರಣೆ ನಡಿಸೋಣ.

463. ಯೂರೋಪಿಯರ್ನ ಬ್ರಿಟಿಷ ಸಬ್ಜಕ್ಟುಗಳಲ್ಲದ ಯೂರೋಪಿಯನರ, ಮತ್ತು ಅಮೆರಿಕನವರ ಮೇಲೆ, ಸೆಷರ್ನ ಕೋರ್ಟ ಮುಂದೆ ನಡಿಯುವ ಕ್ರಿಮಿನಲ್ ಪ್ರೊಸೀಡಿಂಗ್ಸಗಳು ಸ್ಪಷ್ಟವಾಗಿ ನಿರ್ದೇಶಿಸಲ್ಪಟ್ಟರೇ ಹೊರ್ತು ಅನ್ಯಥಾ, ಈ ಕೋಡಿನ ನಿಬಂಧನೆಗಳಿಗೆ ಅನುಗುಣವಾಗಿ ನಡಿಸಲ್ಪಡತಕ್ಕದ್ದು.

CHAPTER XXXIV.—LUNATICS.

34ನೇ ಅಧ್ಯಾಯ.—ಹುಚ್ಚರು.

ಆಪಾದನೆಪಟ್ಟವನು ಹುಚ್ಚನಾಗಿ ಇದ್ದಸಂಗತಿಯಲ್ಲಿ ನಡಿಸತಕ್ಕ ಕ್ರಮ.

464. ಒಂದು ವಿಚಾರಣೆ—ಯಾ—ದರ್ಯಾಫ್ತಿ ನಡಿಸುವ ಮ್ಯಾಜಿಸ್ಟ್ರೇಟಗೆ, ಆಪಾದನೆ ಪಟ್ಟವನು ಮನೋಸ್ವಾಸ್ಥ್ಯವಿಲ್ಲದವನಾಗಿ ಇದ್ದು, ಆ ಸಂಬಂಧ ಪ್ರತಿವಾದ ಮಾಡಲಿಕ್ಕೆ ಅಸಮರ್ಥನಾಗಿದ್ದಾನೆಂದು ನಂಬುವದಕ್ಕೆ ಸಬಬು ಇದ್ದಾಗ, ಸದರೀ ಮ್ಯಾಜಿಸ್ಟ್ರೇಟನು ಅಂಥಾ ಮನೋಸ್ವಾಸ್ಥ್ಯವಿಲ್ಲದ ವಿದ್ಯಮಾನವನ್ನು ಕುರಿತು

ವಿಚಾರಣೆ ಮಾಡತಕ್ಕದ್ದು, ಮತ್ತು ಅಂಥಾ ಮನುಷ್ಯನನ್ನು ಡಿಸ್ಟ್ರಿಕ್ಟಿನ ಸಿವಿಲ್ ಸರ್ಜನ್—ಯಾ—ಮೈಸೂರು ಗವರ್ನಮೆಂಟಿನವರು ಆಜ್ಞಾಪಿಸುವ ಇತರ ಮೆಡಿಕಲ್ ಆಫಿಸರ ಮೂಲಕವಾಗಿ ಪರೀಕ್ಷಿಸತಕ್ಕದ್ದು, ಮತ್ತು ಆ ಮೇಲೆ ಸದರೀ ಮಾಜಿಸ್ಟ್ರೇಟು ಆ ಸಿವಿಲ್ ಸರ್ಜನನ್ನು ಅಥವಾ ಇತರ ಆಫಿಸರನ್ನು ಒಬ್ಬ ಸಾಕ್ಷಿಗಾರನ ಹಾಗೆ, ವಿಚಾರಣೆ ಮಾಡಿ, ಆ ವಿಚಾರಣೇ ಸಂಗತಿಯನ್ನು ಬರಿಯತಕ್ಕದ್ದು.

ಆಪಾದನೆಪಟ್ಟ ಮನುಷ್ಯನು ಮನೋಸ್ವಾಸ್ಥ್ಯವಿಲ್ಲದವನೆಂತಲೂ—ವ—ಆ ಸಂಬಂಧ ಪ್ರತಿವಾದ ಮಾಡಲಿಕ್ಕೆ ಅಸಮರ್ಥನಾಗಿದ್ದಾನೆಂತ ಅಂಥಾ ಮ್ಯಾಜಿಸ್ಟ್ರೇಟಿಗೆ ತೋರಿದರೆ, ಅವನು ಆ ಮೊಕದ್ದಮೆಯಲ್ಲಿ ಮುಂದಕ್ಕೆ ವ್ಯವಹರಿಸದೆ ನಿಲ್ಲಿಸತಕ್ಕದ್ದು.

ಸೆಷನ್ಸ್ ಕೋರ್ಟಿಗೆ ಕಮ್ಮಿಟಾದ ಮನುಷ್ಯನು ಹುಚ್ಚನಾಗಿದ್ದರೆ ನಡಿಸತಕ್ಕ ಕ್ರಮ.

465. ದರ್ಯಾಫ್ತಿ ಬಗ್ಗೆ ಸೆಷನ್ ಕೋರ್ಟಿಗೆ ಕಮ್ಮಿಟ್ ಮಾಡೋಣಾದ ಯಾವನೊಬ್ಬ ಮನುಷ್ಯನು ದರ್ಯಾಫ್ತಿಯಾಗುವ ಕಾಲದಲ್ಲಿ ಮನೋಸ್ವಾಸ್ಥ್ಯವಿಲ್ಲದವನಾಗಿಯೂ—ವ—ಆಸಂಬಂಧ ಫಿರ್ಯಾದಿಗೆ ಉದಾಹರಣೆ ಕೊಡಲಾರದವನಾಗಿಯೂ ಇರುವದಾಗಿ ಕೋರ್ಟಿನವರಿಗೆ ಕಾಣಬಂದರೆ, ಆಗ ಜೂರಿಯವರು—ಯಾ—ಅಸ್ಸೆಸ್ಸರ ಸಹಾಯದಿಂದ ಕೋರ್ಟಿನವರು, ಅವನಿಗೆ ಅಂಥಾ ಮನೋಸ್ವಾಸ್ಥ್ಯವಿಲ್ಲದ—ವ—ಅಸಮರ್ಥತೆ ವಿದ್ಯಮಾನವನ್ನು, ಮೊದಲೇ ಪರಿಶೋಧಿಸತಕ್ಕದ್ದು, ಮತ್ತು ಅದು ನಿಜವೆಂತ ಕಂಡಬನ್ನಾದರೆ, ಆಗ ಕೋರ್ಟಿನವರು ಅದೇ ಪ್ರಕಾರವಾಗಿ ತೀರ್ಪು ಮಾಡತಕ್ಕದ್ದು—ವ—ಆ ಮೇಲೆ ಸದರೀ ದರ್ಯಾಫ್ತಿಯನ್ನು ನಿಲ್ಲಿಸಿಡತಕ್ಕದ್ದು.

ಆಪಾದನೆಪಟ್ಟವನ ಮನೋಸ್ವಾಸ್ಥ್ಯವಿಲ್ಲದ—ವ—ಅಸಮರ್ಥತೆ ವಿದ್ಯಮಾನದ ದರ್ಯಾಫ್ತಿಯು ಕೋರ್ಟಿನಮುಂದಿನ ಆತನ ದರ್ಯಾಫ್ತಿಯ ಭಾಗವಾಗಿ ಎಣಿಸಲ್ಪಡತಕ್ಕದ್ದು.

ಪೋಲೀಸ್ ವಿಚಾರಣೆ—ಯಾ—ದರ್ಯಾಫ್ತಿಯಾಗುವತನಕ ಹುಚ್ಚನನ್ನ ಬಿಟ್ಟು ಇರಬೇಕು.

466. ಯಾವಾಗ ಆಪಾದನೆಪಟ್ಟ ಮನುಷ್ಯನು ಮನೋಸ್ವಾಸ್ಥ್ಯವಿಲ್ಲದವನಾಗಿಯೂ, ಉದಾಹರಣೆಕೊಡಲಿಕ್ಕೆ ಅಸಮರ್ಥನಾಗಿಯೂ ಇರುವದಾಗಿ ಕಾಣಬರುತ್ತದೋ, ಆಗ ಮ್ಯಾಜಿಸ್ಟ್ರೇಟು ಅಥವಾ ಸಂಗತ್ಯಾನುಸಾರವಾಗಿ, ಕೋರ್ಟಿನವರು ಸದರೀ ಮೊಕದ್ದಮೆಯು ಜಾಮೀನ್ ತೆಗದುಕೊಳ್ಳತಕ್ಕಂಥಾದ್ದಾಗಿ ಸಾಕಾದಷ್ಟು ಜಾಮೀನ್ ಕೊಡೋಣಾದಮೇಲೆ ಆ ಮನುಷ್ಯನನ್ನು ಬಿಟ್ಟುಬಿಡಬಹುದು, ಏನೆಂತ ಜಾಮಿನ್ ಡಬೇಕಂದರೆ, ಅವನನ್ನು ಕ್ರಮವಾಗಿ ನೋಡಿಕೊಳ್ಳೋಣಾಗುತ್ತದೆಂತಲೂ, ಮತ್ತು ಅವನಿಂದ ಸ್ವಂತಕ್ಕಾ ಯಾ—ಅನ್ಯರಿಗಾಗಲೀ ಹಾನಿ ಬಾರದಹಾಗೆ ಬಂದೋಬಸ್ತು ಮಾಡೋಣಾಗುತ್ತದೆಂತಲೂ,—ವ—ಬೇಕಾದಾಗ ಮ್ಯಾಜಿಸ್ಟ್ರೇಟು—ಯಾ—ಕೋರ್ಟು ಮುಂದೆ ಅಥವಾ ಸದರೀ ಮ್ಯಾಜಿಸ್ಟ್ರೇಟು—ಯಾ—ಕೋರ್ಟು ಈ ನೇಮಿಸುವಂಥಾ ಆಫಿಸರ ಮುಂದೆ ಹಾಜರು ಪಡಿಸೋಣಾಗುತ್ತದೆಂತಲೂ, ಜಾಮೀನ್ ಕೊಡಬೇಕು.

ಹುಚ್ಚನಮೇಲೆ ಪಹರೆ.

ಮೊಕದ್ದಮೆಯು ಜಾಮೀನ್ ತೆಗದುಕೊಳ್ಳತಕ್ಕದ್ದಲ್ಲವಾಗಿ ಇದ್ದರೂ—ಯಾ—ಸಾಕಾದ ಜಾಮೀನ್ ಕೊಡದಿದ್ದರೂ, ಆಗ ಆ ಸಂಗತಿಯನ್ನು ಮ್ಯಾಜಿಸ್ಟ್ರೇಟು—ಯಾ—ಕೋರ್ಟಿನವರು ಮೈಸೂರು ಗವರ್ನಮೆಂಟಿನವರಿಗೆ ಅರಿಕೆ ಮಾಡತಕ್ಕದ್ದು, ಮತ್ತು ಮೈಸೂರು ಗವರ್ನಮೆಂಟಿನವರು ಸದರೀ ಆಪಾದನೆಪಟ್ಟ ಮನುಷ್ಯನನ್ನು ಲೂನೆಟಿಕ್ ಅಸ್ಸೈಲಮ್ ಎಂಬ ಹುಚ್ಚರ ಆಸ್ಪತ್ರಿಯಲ್ಲಿ—ಯಾ—ಬಳ್ಳೇ ಪಹರೆಯುಳ್ಳ ಇತರ ತಕ್ಕಸ್ಥಳದಲ್ಲಿ ಸೆರೇಲಿ ಇಡಲ್ಪಡುವದಕ್ಕೆ ಹುಕ್ಕುಂ ಮಾಡಬಹುದು, ಮತ್ತು ಸದರೀ ಮ್ಯಾಜಿಸ್ಟ್ರೇಟು—ಯಾ—ಕೋರ್ಟಿನವರು ಅಂಥಾ ಹುಕುಮಿನ ಜಾರಿ ನಡಿಸತಕ್ಕದ್ದು.

ಪುನಃ ವಿಚಾರಣೆ—ಯಾ—ಪುನಃ ದರ್ಯಾಫ್ತಿ.

467. 464ನೇ ಪ್ರಕರಣದ ಪ್ರಕಾರ ಅಥವಾ 465ನೇ ಪ್ರಕರಣದ ಪ್ರಕಾರ ಮೊಕದ್ದಮೆಯ ವಿಚಾರಣೆಯನ್ನು—ಯಾ—ದರ್ಯಾಫ್ತಿಯನ್ನು ನಿಲ್ಲಿಸಿ ಇಡೋಣಾದಾಗ, ಮ್ಯಾಜಿಸ್ಟ್ರೇಟು ಅಥವಾ ಸಂಗತ್ಯಾನುಸಾರ, ಕೋರ್ಟಿನವರು, ಯಾವಾಗಂದರೆ

ಆವಾಗ ಸದರೀ ವಿಚಾರಣೆಯನ್ನು—ಯಾ—ದರ್ಯಾಫ್ತಿಯನ್ನು ಪುನಃ ಷುರು ಮಾಡಬಹುದು, ಮತ್ತು ಸದರೀ ಅಪಾದನೆಪಟ್ಟ ಮನುಷ್ಯನನ್ನು ಅಂಥಾ ಮ್ಯಾಜಿಸ್ಟ್ರೇಟನ—ಯಾ—ಕೋರ್ಟಿನ ಮುಂದೆ ಹಾಜರ್ಮಾಡುವಂತೆ—ಯಾ—ತರಲ್ಪಡುವಂತೆ ಹೇಳಿ ಅಪೇಕ್ಷಿಸಬಹುದು.

ಅಪಾದನೆಪಟ್ಟವನು 466ನೇ ಪ್ರಕರಣ ಪ್ರಕಾರ ಬಿಡಲ್ಪಟ್ಟು, ಅವನ ಹಾಜರಾತೀಬಗ್ಯೆ ನಿಂತ ಜಾಮೀನುದಾರರು ಸದರೀ ಮ್ಯಾಜಿಸ್ಟ್ರೇಟ—ಯಾ—ಕೋರ್ಟಿನವರು ಈ ಬಗ್ಯಾಗಿ ನೇಮಿಸುವ ಆಫಿಸರ ಬಳಿಯು ಅವನನ್ನು ಹಾಜರುಪಡಿಸಿದ್ದಾಗ, ಅಪಾದನೆಪಟ್ಟವನು ಪ್ರತಿವಾದಾ ಮಾಡಲಿಕ್ಕೆ ಸಾಮರ್ಥ್ಯವುಳ್ಳವನಾಗಿದ್ದಾನೆಂತ ಅಂಥಾ ಆಫಿಸರು ಕೊಡುವ ಸರ್ಟಿಫಿಕೇಟ ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

ಅಪಾದನೆಪಟ್ಟವನು ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಕೋರ್ಟಿನ ಮುಂದೆ ಹಾಜರಾದ ಮೇಲೆ ನಡಿಸತಕ್ಕ ಕ್ರಮು.

468\. ಅಪಾದನೆಪಟ್ಟ ಮನುಷ್ಯನು ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಸಂಗತ್ಯಾನುಸಾರ, ಕೋರ್ಟಿನ ಮುಂದೆ ಹಾಜರಾಗುತ್ತಾನಷ್ಟ್ಯೇ, ಅಥವಾ ಅವನನ್ನು ಪುನಃ ಹಾಜರುಪಡಿಸೋಣಾಗುತ್ತದಷ್ಟ್ಯೇ; ಆಗ ಅವನು ತನ್ನ ಪ್ರತಿವಾದಾ ಮಾಡಲಿಕ್ಕೆ ಲಾಯಖಾಗಿ ಇರುವದಾಗಿ ಸದರೀ ಮ್ಯಾಜಿಸ್ಟ್ರೇಟ ಅಥವಾ ಕೋರ್ಟಿನವರು ಆಲೋಚಿಸುತ್ತಾರಾದರೆ, ವಿಚಾರಣೆ—ಯಾ—ದರ್ಯಾಫ್ತಿಯು ಮುಂದರಿಸತಕ್ಕದ್ದು.

ಅಪಾದನೆಪಟ್ಟ ಮನುಷ್ಯನು ಆಗಲೂ ಪ್ರತಿವಾದಾ ಮಾಡಲಿಕ್ಕೆ ಅಸಮರ್ಥನಾಗಿ ಇರುವದಾಗಿ ಮ್ಯಾಜಿಸ್ಟ್ರೇಟು—ಯಾ—ಕೋರ್ಟಿನವರು ಆಲೋಚಿಸುತ್ತಾರಾದರೆ, ಆಗ ಮ್ಯಾಜಿಸ್ಟ್ರೇಟು ಅಥವಾ ಕೋರ್ಟಿನವರು, 464ನೇ ಪ್ರಕರಣದ ಅಥವಾ ಸಂಗತ್ಯಾನುಸಾರ 465ನೇ ಪ್ರಕರಣದ ನಿಬಂಧನೆಗಳ ಪ್ರಕಾರ ಪುನಃ ನಡಕೋತಕ್ಕದ್ದು.

ಅಪಾದನೆಪಟ್ಟವನು ಮನೋಸ್ವಾಸ್ಥ್ಯವಿಲ್ಲದವನಾಗಿ ಕಾಣಬಂದರೆ ಆಗ.

469\. ವಿಚಾರಣೆ—ಯಾ—ದರ್ಯಾಫ್ತೀಕಾಲದಲ್ಲಿ ಅಪಾದನೆಪಟ್ಟವನು ಮನೋಸ್ವಾಸ್ಥ್ಯ ಇದ್ದವನಾಗಿ ಕಾಣಬಂದು, ಮ್ಯಾಜಿಸ್ಟ್ರೇಟನು ತನ್ನ ಮುಂದೆ ಕೊಡಲ್ಪಟ್ಟ ಸಾಕ್ಷ್ಯದಿಂದ ಅಪಾದನೆಪಟ್ಟವನು ಮನೋಸ್ವಾಸ್ಥ್ಯದವನಾಗಿ ಇದ್ದರೆ, ತಕ್ಸೀರಾಗುತ್ತಿದ್ದ ಕೃತ್ಯವನ್ನು ಸದರೀ ಅಪಾದನೆಪಟ್ಟವನು ನಡಿಸಿದ್ದಾನೆಂತಲೂ, ಸದರೀ ಮನುಷ್ಯನು ಆ ಕೃತ್ಯವನ್ನು ನಡಿಸಿದಾಗ, ಮನೋಸ್ವಾಸ್ಥ್ಯವಿಲ್ಲದೆ ಇದ್ದ ಕಾರಣದಿಂದ, ಸದರೀ ಕೃತ್ಯದ ಸ್ವಭಾವವನ್ನಾಗಲೀ—ಯಾ—ಆ ಕೃತ್ಯ ಅಕ್ರಮವಾದ್ದು—ಯಾ—ನ್ಯಾಯವಿರೋಧವಾದ್ದೆಂದು ತಿಳಿಯಲಿಕ್ಕೆ ಅಸಮರ್ಥನಾಗಿದ್ದನೆಂತಲೂ, ನಂಬಲಿಕ್ಕೆ ಸಬಬು ಇದೆ ಎಂತ ಸದರೀ ಮ್ಯಾಜಿಸ್ಟ್ರೇಟಗೆ ಮುಂದಟ್ಟಿದರೆ, ಸದರೀ ಮ್ಯಾಜಿಸ್ಟ್ರೇಟನು ಮೊಕದ್ದಮೆಯ ವ್ಯವಹರಣೆಯನ್ನು ಮುಂದರಿಸತಕ್ಕದ್ದು, ಮತ್ತು ಅಪಾದನೆಪಟ್ಟವನನ್ನು ಸೆಷ್ನಕೋರ್ಟಿಗೆ ಕಮಿಟ ಮಾಡಬೇಕಾಗಿದ್ದಾಗ ಸೆಷ್ನಕೋರ್ಟಿಗೆ ಅವನನ್ನು ದರ್ಯಾಫ್ತೀಬಗ್ಯೆ ಕಳುಹಿಸತಕ್ಕದ್ದು.

ಹುಚ್ಚನೆಂಬ ಸಬಬಿನಮೇಲೆ ಖುಲಾಸೆ ಇತ್ಯರ್ಥ.

470\. ತಕ್ಸೀರು ಮಾಡಿದ್ದಾಗಿ ಹೇಳೋಣಾದ ಕಾಲದಲ್ಲಿ, ಮನೋಸ್ವಾಸ್ಥ್ಯವಿಲ್ಲದವನಾಗಿ ಇದ್ದದರಿಂದ ತಕ್ಸೀರು ಯಂದು ಹೇಳೋಣಾದ ಕೃತ್ಯದ ಸ್ವಭಾವ ಅಥವಾ ತಾನು ನಡಿಸುವ ಕೃತ್ಯ ಅಕ್ರಮವಾದ್ದು ಅಥವಾ ನ್ಯಾಯ ವಿರೋಧವಾದ್ದು ಎಂತಲಾದರು ತಿಳುಕೊಳ್ಳಲಾರದೆ ಇದ್ದನು, ಎಂಬ ಸಬಬಿನಮೇಲೆ ಯಾವ ಮನುಷ್ಯನಿಗಾದರು ಖುಲಾಸಾ ಆದರೆ, ಆಗ ಅವನು ಸದರೀ ಕೃತ್ಯ ಮಾಡಿದ್ದು ಉಂಟೋ—ಯಾ—ಇಲ್ಲವೋ ಎಂಬದನ್ನು ವಿಶೇಷವಾಗಿ ಇತ್ಯರ್ಥದಲ್ಲಿ ನಮೂದು ಮಾಡತಕ್ಕದ್ದು.

ಅಂಥಾ ಸಬಬಿನಮೇಲೆ ಖುಲಾಸೆಯಾದವನನ್ನು ಬಂದೋಬಸ್ತಾಗಿ ಪಹರೆಯಲ್ಲಿಡತಕ್ಕದ್ದು.

471\. ಅಪಾದನೆಪಟ್ಟ ಮನುಷ್ಯನು ಹೇಳೋಣಾದ ಕೃತ್ಯವನ್ನು ಮಾಡಿದ್ದು ಉಂಟು ಎಂತ ಸದರೀ ಇತ್ಯರ್ಥದಲ್ಲಿ ನಮೂದಾಗಿ ಇದ್ದರೆ, ಅಂಥಾ ಸಂಗತಿಯಲ್ಲಿ ಸದರೀ ಅಸಮರ್ಥತೆ ಇಲ್ಲದೆ ಇದ್ದಲ್ಲಿ, ಸದರೀ ಕೃತ್ಯ ತಕ್ಸೀರಾಗಿ ಇರುವದಾಗಿ ಇದ್ದರೆ, ಆಗ ಸದರೀ ದರ್ಯಾಫ್ತಿ ಯಾರಮುಂದೆ ನಡದಿತ್ತೋ ಆ ಮ್ಯಾಜಿಸ್ಟ್ರೇಟು ಅಥವಾ

ಕೋರ್ಟಿನವರು ತಮಗೆ ಯುಕ್ತವಾಗಿ ತೋರುವ ಸ್ಥಳದಲ್ಲಿ—ವ—ತಮಗೆ ಯುಕ್ತವಾಗಿ ತೋರುವ ಪ್ರಕಾರ, ಸದರೀ ಮನುಷ್ಯನನ್ನು ಬಳ್ಳೀ ಕೈದಿನಲ್ಲಿ ಇಡುವಂತೆ ಹುಕುಂ ಮಾಡಿ, ಆ ಸಂಗತಿಯನ್ನು ಮೈಸೂರು ಗವರ್ನ್ಮೆಂಟಿನವರಿಗೆ ಅರಿಕೆಮಾಡಿ ಆ ವಿಷಯದಲ್ಲಿ ಅವರ ಹುಕುಂ ಪಡಕೊಳ್ಳತಕ್ಕದ್ದು.

ಮೈಸೂರು ಗವರ್ನ್ಮೆಂಟಿನವರು ಲೂನೆಟಿಕ್ ಅಸ್ಸೈಲಮ್ ಎಂಬ ಹುಚ್ಚರನ್ನು ಇಟ್ಟು ಇರುವಂಥಾ ಸ್ಥಳದಲ್ಲಾದರೂ ಜೈಲಿನಲ್ಲಾದರೂ—ಯಾ—ಬಳ್ಳೀ ಪಹರೆಯುಳ್ಳ ಇತರ ತಕ್ಕ ಸ್ಥಳದಲ್ಲಾದರೂ ಸದರೀ ಮನುಷ್ಯನನ್ನು ಶೆರೆಯಲ್ಲಿ ಇಡಲ್ಪಡುವದಕ್ಕೆ ಹುಕ್ಕುಂ ಮಾಡಬಹುದು.

ಹುಚ್ಚು ಕೈದೀರನ್ನು ಇನ್ಸ್ಪೆಕ್ಟರ್ ಜನರಲ್ ಬಂದು ನೋಡತಕ್ಕದ್ದು.

472. ಯಾವ ಮನುಷ್ಯನಾದರೂ 466ನೇ ಪ್ರಕರಣ ಅಥವಾ 471ನೇ ಪ್ರಕರಣದ ನಿಬಂಧನೆಗಳ ಪ್ರಕಾರ ಕೈದು ಮಾಡೋಣಾದಾಗ, ಅವನಿಗೆ ಜೈಲಿನಲ್ಲಿ ಕೈದಾಗಿ ಇದ್ದರೆ, ಪ್ರಿಜನುಗಳ ಇನ್ಸ್ಪೆಕ್ಟರ್ ಜನರಲೂ,—ಯಾ—ಅವನಿಗೆ ಲೂನೆಟಿಕ್ ಅಸ್ಸೈಲಮ್ ಎಂಬ ಹುಚ್ಚರ ಆಸ್ಪತ್ರಿಯಲ್ಲಿ ಕೈದಾಗಿ ಇದ್ದರೆ, ಆಗ ಲೂನೆಟಿಕ್ ಅಸ್ಸೈಲಮ್ ವಿಜಿಟರ್‌ಗಳೂ, ಅವನ ಮನೋಸ್ಥಿತಿಯನ್ನು ತಿಳಕೊಳ್ಳುವ ನಿಮಿತ್ಯ ಅವನನ್ನು ನೋಡಬಹುದು, ಸದರೀ ವಿಜಿಟರುಗಳ ಪೈಕಿ ಇಬ್ಬರಾದರೂ ಅವನನ್ನು ನೋಡಬಹುದು; ಮತ್ತು ಅಂಥಾ ಇನ್ಸ್ಪೆಕ್ಟರ್ ಜನರಲಾಗಲೀ—ಯಾ—ಮೇಲೆಹೇಳಿದ ವಿಜಿಟರುಗಳ ಪೈಕಿ ಇಬ್ಬರಾಗಲೀ ಸದರೀ ಮನುಷ್ಯನನ್ನು ಕನಿಷ್ಟಪಕ್ಷ ಆರುತಿಂಗಳುಗಳಿಗೆ ಒಂದುಸಲವಾದರೂ ನೋಡಿ, ಅವನ ಮನೋಸ್ಥಿತಿಯನ್ನು ಕುರಿತು ಮೈಸೂರು ಗವರ್ನ್ಮೆಂಟಿನವರಿಗೆ ಒಂದು ವಿಶೇಷವಾದ ರಿಪೋರ್ಟು ಮಾಡತಕ್ಕದ್ದು.

ಹುಚ್ಚು ಕೈದಿಯು ಪ್ರತಿವಾದಾ ಕೊಡಲು ಳ್ಳವನೆಂದು ಅರಿಕೆಯಾದಾಗ ನಡಿಸತಕ್ಕ ಕ್ರಮ.

473. ಅಂಥಾ ಮನುಷ್ಯನನ್ನು 466ನೇ ಪ್ರಕರಣದ ನಿಬಂಧನೆಗಳಗನುಗುಣವಾಗಿ ಕೈದು ಮಾಡೋಣಾಗಿದ್ದರೆ, ಮತ್ತು ಸದರೀ ಇನ್ಸ್ಪೆಕ್ಟರು ಜನರಲು ಅಥವಾ ವಿಜಿಟರುಗಳು ಆ ಮನುಷ್ಯನು ಪ್ರತಿವಾದಾ ಮಾಡಲಿಕ್ಕೆ ಶಕ್ತಿಯುಳ್ಳವನಾಗಿ ಇರುತ್ತಾನೆಂದು ತನಗೆ—ಯಾ—ತಮಗೆ ತೋರುತ್ತದೆಂದು ಸರ್ಟಿಫಿಕೇಟ ಕೊಟ್ಟರೆ, ಅವನನ್ನು ಮ್ಯಾಜಿಸ್ಟ್ರೇಟನ ಬಳೀಲಾದರೂ—ಯಾ—ಸಂಗತ್ಯಾನುಸಾರವಾಗಿ, ಕೋರ್ಟಿನವರ ಬಳೀಲಾದರೂ, ಅಂಥಾ ಮ್ಯಾಜಿಸ್ಟ್ರೇಟು—ಯಾ—ಕೋರ್ಟಿನವರು ಗೊತ್ತು ಮಾಡುವ ಕಾಲದಲ್ಲಿ, ಹಾಜರು ಪಡಿಸತಕ್ಕದ್ದು. ಆ ಮೇಲೆ ಆ ಮ್ಯಾಜಿಸ್ಟ್ರೇಟು ಅಥವಾ ಕೋರ್ಟಿನವರು ಸದರೀ ಮನುಷ್ಯನ ವಿಷಯದಲ್ಲಿ 468ನೇ ಪ್ರಕರಣದ ನಿಬಂಧನೆಗಳ ಪ್ರಕಾರ ನಡಿಸತಕ್ಕದ್ದು; ಮತ್ತು ಸದರೀ ಇನ್ಸ್ಪೆಕ್ಟರ್ ಜನರಲುಗಳ—ಯಾ—ವಿಜಿಟರುಗಳ ಸರ್ಟಿಫಿಕೇಟನ್ನು ಸರಿಯಾಗಿ ಅಂಗೀಕರಿಸತಕ್ಕದ್ದು.

466 ಅಥವಾ 471ನೇ ಪ್ರಕರಣದ ಪ್ರಕಾರ ಕೈದಾಗಿರುವ ಹುಚ್ಚನು ವಿಮೋಚನೆ ಪಡಕೊಳ್ಳಲಿಕ್ಕೆ ಲಾಯಖಾಗಿದ್ದಾನೆಂತ ತಿಳಿಸೋಣಾದರೆ ನಡಿಸತಕ್ಕ ಕ್ರಮ.

474. ಅಂಥಾ ಮನುಷ್ಯನನ್ನು 466ನೇ ಪ್ರಕರಣದ—ಯಾ—471ನೇ ಪ್ರಕರಣದ ನಿಬಂಧನೆಗಳ ಪ್ರಕಾರ ಕೈದು ಮಾಡೋಣಾಗಿರುವ ಸಂಗತಿಯಲ್ಲಿ—ವ—ಸದರೀ ಇನ್ಸ್ಪೆಕ್ಟರ್ ಜನರಲು—ಯಾ—ವಿಜಿಟರುಗಳು, ಸದರೀ ಹುಚ್ಚನಿಂದ ಅವನ ಸ್ವಂತಕ್ಕೂ—ಯಾ—ಅನ್ಯರಿಗೂ ಹಾನಿ ಸಂಭವಿಸುವ ಅಪಾಯವಿಲ್ಲದೇನೇ ವಿಮೋಚನೆ ಮಾಡಬಹುದಾಗಿ ತನಗೆ—ಯಾ—ತಮಗೆ ತೋರುತ್ತದೆಂತ ತಿಳಿಸಿದರೆ, ಆ ಮೇಲೆ ಮೈಸೂರು ಗವರ್ನ್ಮೆಂಟಿನವರು ಅವನನ್ನು ವಿಮೋಚನೆ ಮಾಡಹೇಳಿ ಅಥವಾ ಪಹರೆಯಲ್ಲಿಡಹೇಳಿ—ಯಾ—ಅವನನ್ನು ಲೂನೆಟಿಕ್ ಅಸ್ಸೈಲಮಿಗೆ ಆಗಲೇ ಕಳುಹಿಸದೆ ಇದ್ದರೆ ಅವನನ್ನು ಅಂಥಾ ಒಂದು ಅಸ್ಸೈಲಮಿಗೆ ಕಳುಹಿಸಹೇಳಿ ಹುಕುಂ ಮಾಡಬಹುದು; ಮತ್ತು, ಆತನನ್ನು ಒಂದು ಅಸ್ಸೈಲಮಿಗೆ ಕಳುಹಿಸಹೇಳಿ ಮೈಸೂರು ಗವರ್ನ್ಮೆಂಟಿನವರು ಅಪ್ಪಣೆ ಕೊಡುವ ಸಂಗತಿಯಲ್ಲಿ, ಒಬ್ಬ ಜುಡಿಷಿಯಲ್ ಆಫಿಸರನೂ—ವ—ಇಬ್ಬರು ಮೆಡಿಕಲ್ ಆಫಿಸರುಗಳು ಸೇರಿರುವ ಒಂದು ಕಮ್ಮಿಷನ್ ಮೊಕರರು ಮಾಡಬಹುದು.

ಅಂಥಾ ಕಮ್ಮಿಷನಿನವರು, ಅಗತ್ಯವಾದ ಸಾಕ್ಷ್ಯವನ್ನು ತೆಗೆದುಕೊಂಡು, ಸದರೀ ಮನುಷ್ಯನ ಮನೋಸ್ಥಿತಿಯನ್ನು ಕುರಿತು ಕ್ರಮವಾಗಿ ದರ್ಯಾಪ್ತಿಮಾಡಿ, ಮೈಸೂರು ಗವರ್ನಮೆಂಟಿನವರಿಗೆ ರಿಪೋರ್ಟು ಮಾಡತಕ್ಕದ್ದು. ಅವರು ಯುಕ್ತವಾಗಿ ತೋರುವ ರೀತಿಲಿ ಅವನನ್ನು ವಿಮೋಚನೆ ಮಾಡಬಹುದು—ಯಾ—ತಡೆದಿರಿಸಲೂಬಹುದು.

ಬಂಧುವಿನ ಸ್ವಾಧೀನದಲ್ಲಿ ಹುಚ್ಚನನ್ನು ಒಪ್ಪಿಸೋಣ.

475. 466ನೇ ಪ್ರಕರಣದ ಅಥವಾ 471ನೇ ಪ್ರಕರಣದ ನಿಬಂಧನೆಗಳ ಪ್ರಕಾರ ಕೈದು ಪಡಿಸೋಣಾದ ಮನುಷ್ಯನ ಯಾವ ನೆಂಟನಾದರೂ—ಯಾ—ಸ್ನೇಹಿತನಾದರೂ ಅವನನ್ನು ತನ್ನ ವಶದಲ್ಲಿ ಬಿಡಬೇಕೆಂತ ಅಪೇಕ್ಷಿಸಿದರೆ, ಅಂಥಾ ಸಂಗತಿಯಲ್ಲಿ, ಸದರೀ ನೆಂಟನ ಅಥವಾ ಸ್ನೇಹಿತನ ಅರ್ಜಿ ಬಂದಮೇಲೆ, ಅವನು ತಾನು ಸದರೀ ಮನುಷ್ಯನನ್ನು ಚನ್ನಾಗಿ ನೋಡಿಕೊಳ್ಳುವದಾಗಿಯೂ, ಅವನಿಂದ ಸ್ವಂತಕ್ಕೂ ಅನ್ಯನಿಗೂ ಹಾನಿಬಾರದಹಾಗೆ ಬಂದೋಬಸ್ತು ಮಾಡುವದಾಗಿಯೂ ಮೈಸೂರು ಗವರ್ನಮೆಂಟಿನವರಿಗೆ ಸಮಾಧಾನಕರವಾಗಿ ಜಾಮೀನು ಕೊಟ್ಟರೆ, ಆಮೇಲೆ ಸದರೀ ಗವರ್ನಮೆಂಟಿನವರು ಆ ಕೈದಿನಲ್ಲಿ ಇರುವ ಮನುಷ್ಯನನ್ನು ಅಂಥಾ ನೆಂಟನ ಅಥವಾ ಸ್ನೇಹಿತನ ವಶಕ್ಕೆ ವೊಪ್ಪಿಸಹೇಳಿ ಹುಕುಂ ಮಾಡಬಹುದು.

ಅಂಥಾ ಮನುಷ್ಯನನ್ನು ಹಾಗೆ ವೊಪ್ಪಿಸುವಾಗ, ಮೈಸೂರು ಗವರ್ನಮೆಂಟಿನವರು ಮೊಕರರ್‍ಮಾಡುವ ಆಫಿಸರನಬಳಿ ಪರಿಶೋಧನೆಬಗ್ಗೆ ನೇಮಿಸುವ ಕಾಲದಲ್ಲಿ ಅವನನ್ನು ಹಾಜರುಪಡಿಸುವ ಷರತ್ತುನಿಶಿ ಅವನನ್ನು ಹಾಗೆ ವೊಪ್ಪಿಸತಕ್ಕದ್ದು.

472. ಮತ್ತು 474ನೇ ಪ್ರಕರಣಗಳಲ್ಲಿ ಇರುವ ನಿಬಂಧನೆಗಳು ಅವಶ್ಯ ಇರುವ (mutatis mutandis) ಅದಲು ಬದಲಾಗಿ ಈ ಪ್ರಕರಣದ ನಿಬಂಧನೆಗಳ ಪ್ರಕಾರ ಒಪ್ಪಿಸಲ್ಪಟ್ಟ ಮನುಷ್ಯರಿಗೆ ಲಗಾವಾಗತಕ್ಕದ್ದು ; ಮತ್ತು ಈ ಪ್ರಕರಣ ಪ್ರಕಾರ ನೇಮಕವಾದ ಇನ್ಸ್‌ಪೆಕ್ಟಿಂಗ್ ಆಫಿಸರ ಸರ್ಟಿಫಿಕೇಟು, ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

CHAPTER XXXV.—PROCEEDINGS IN CASE OF CERTAIN OFFENCES AFFECTING THE ADMINISTRATION OF JUSTICE.

35ನೇ ಅಧ್ಯಾಯ.—ನ್ಯಾಯವಿಚಾರಣೆಗೆ ಸಂಬಂಧಿಸಿದ ಕೆಲವು ತಕ್ಸೀರುಗಳ ವಿಷಯಗಳಲ್ಲಿ ಪ್ರೊಸೀಡಿಂಗ್ಸ್ ಯಾನೆ ವ್ಯವಹರಣೆ.

195ನೇ ಪ್ರಕರಣದಲ್ಲಿ ನಮೂದಿಸಿರುವ ವಿಷಯಗಳಲ್ಲಿ ನಡಿಸತಕ್ಕ ಕ್ರಮ.

476. 195ನೇ ಪ್ರಕರಣದಲ್ಲಿ ಹೇಳೋಣಾದ ಯಾವದೊಂದು ತಕ್ಸೀರು ತಮ್ಮ ಮುಂದೆ ನಡಿಸೋಣಾಗಿ,—ಯಾ—ಜುಡಿಷಿಯಲ್ ವ್ಯವಹರಣೆ ಜರಗುತ್ತಿರುವಲ್ಲಿ ಜಾಹಿರಾತಿಗೆ ತರಲ್ಪಟ್ಟು, ಅದನ್ನು ವಿಚಾರಿಸಲಿಕ್ಕೆ ಸಬಬು ಉಂಟೆಂತ ಯಾವದೊಂದು ಸಿವಿಲ್ ಕ್ರಿಮಿನಲ್—ಯಾ—ರೆವಿನ್ಯೂ ಕೋರ್ಟಿನವರು ಅಭಿಪ್ರಾಯ ಪಟ್ಟಾಗ, ಅಂಥಾ ಕೋರ್ಟಿನವರು, ಅಗತ್ಯವಾಗಿರಬಹುದಾದ ಯಾವದಾದರೂ ಪ್ರಥಮ ವಿಚಾರಣೆ ಮಾಡಿದನಂತರ, ಅತಿ ಸಮೀಪದಲ್ಲಿ ಇರುವ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟನ ಬಳಿಗೆ ಮೊಕದ್ದಮೆಯನ್ನು ವಿಚಾರಣೇಬಗ್ಗೆ—ಯಾ—ದರಿಯಾಫ್ತಿಬಗ್ಗೆ ಕಳುಹಿಸಬಹುದು, ಮತ್ತು ಸದರೀ ಕೋರ್ಟಿನವರು ಅಪಾದನೆಪಟ್ಟ ಮನುಷ್ಯನನ್ನು ಮೊಹಸಲೆನಿಶಿ ಅಂಥಾ ಮ್ಯಾಜಿಸ್ಟ್ರೇಟನ ಮುಂದೆ ಕಳುಹಿಸಬಹುದು, ಅಥವಾ ಮ್ಯಾಜಿಸ್ಟ್ರೇಟನಮುಂದೆ ಅವನು ಹಾಜರಾಗತಕ್ಕಬಗ್ಗೆ ಅವನ ಕಡೆಯಿಂದ ಸಾಕಾದಷ್ಟು ಜಾಮೀನು ತೆಗೆದುಕೊಳ್ಳಬಹುದು ; ಮತ್ತು ಆ ಕೋರ್ಟಿನವರು ದರ್ಯಾಪ್ತೀಕಾಲದಲ್ಲಿ—ಯಾ—ವಿಚಾರಣೇಕಾಲದಲ್ಲಿ ಹಾಜರಾಗಿ ಸಾಕ್ಷ್ಯ ಕೊಡುವಂತೆ ಯಾವ ಮನುಷ್ಯನನ್ನಾದರೂ ಬದ್ಧಪಡಿಸಬಹುದು.

ಆ ಮೇಲೆ, ಅಂಥಾ ಮ್ಯಾಜಿಸ್ಟ್ರೇಟು ಆ ಮೊಕದ್ದಮೆ ವಿಷಯದಲ್ಲಿ ಕಾನೂನು ಪ್ರಕಾರ ಪ್ರವರ್ತಿಸತಕ್ಕದ್ದು, ಮತ್ತು 192ನೇ ಪ್ರಕರಣ ಪ್ರಕಾರ ಮೊಕದ್ದಮೆಗಳನ್ನು ವರ್ಗಮಾಡಲಿಕ್ಕೆ ತಾನು ಅಧಿಕಾರ ಪಡೆದಿದ್ದರೆ, ಲಾಯಖಾದ ಇತರ ಯಾವ ಮ್ಯಾಜಿಸ್ಟ್ರೇಟನ ಬಳಿಗಾದರೂ ವಿಚಾರಣೆಯನ್ನು—ಯಾ—ದರ್ಯಾಪ್ತಿಯನ್ನು ವರ್ಗ ಮಾಡಬಹುದು.

ಅಂಥಾ ತಕ್ಸೀರುಗಳು ಸೆಷನ್ ಕೋರ್ಟಿನವರ ಮುಂದೆ ನಡದರೆ ಆ ವಿಷಯದಲ್ಲಿ ಆ ಕೋರ್ಟಿನವರಿಗೆ ಇರುವ ಅಧಿಕಾರ.

477. 195ನೇ ಪ್ರಕರಣದಲ್ಲಿ ಹೇಳೋಣಾದ ಯಾವದೊಂದು ತಕ್ಸೀರು ತಮ್ಮ ಮುಂದೆ ನಡಿಸಲ್ಪಟ್ಟು,—ಯಾ—ಜುಡಿಷಿಯಲ್ ವ್ಯವಹರಣೆ ನಡಿಯುತ್ತಿರುವಲ್ಲಿ ತಮ್ಮ ಜಾಹಿರಾತಿಗೆ ತರಲ್ಪಟ್ಟು ಇದ್ದರೆ, ಒಂದು ಸೆಷನ್ ಕೋರ್ಟಿನವರು ಅವನಮೇಲೆ ತಕ್ಸೀರು ನಾಮೆ ಏರ್ಪಡಿಸಿ ಅವನನ್ನ ಕೆರೆಗೆ ರೊಯ್ಯಲೂ—ಯಾ—ಜಾಮೀನಮೇಲೆ ಬಿಡಲೂ ಬಹುದು, ಮತ್ತು ತಮ್ಮ ಸ್ವಂತ ತಕ್ಸೀರನಾಮೇಮೇಲೆ ಅಂಥಾ ಮನುಷ್ಯನನ್ನ ದರ್ಯಾಪ್ತಿ ಮಾಡಲೂ ಬಹುದು.

ಅಂಥಾ ಕೋರ್ಟಿನವರು ದರ್ಯಾಪ್ತೀ ವೃದ್ಧಿಶ್ಯವಾಗಿ ಯಾವ ಸಾಕ್ಷಿಗಾರನನ್ನಾದರೂ ಹಾಜರುಪಡಿಸಹೇಳಿ ಮ್ಯಾಜಿಸ್ಟ್ರೇಟಗೆ ಹುಕುಂ ಮಾಡಬಹುದು.

ವಿಚಾರಣೆಯನ್ನು ಪೂರ್ತಿಮಾಡುವದಕ್ಕೂ ಸೆಷನ್‌ಕೋರ್ಟಿಗೆ ಕಮ್ಮಿಟ ಮಾಡುವದಕ್ಕೂ ಸಿವಿಲ್—ವ—ರೆವಿನ್ಯೂ ಕೋರ್ಟುಗಳಿಗೆ ಇರುವ ಅಧಿಕಾರ.

478. ಅಂಥಾ ಯಾವದೊಂದು ತಕ್ಸೀರು ಸಿವಿಲ್ ಅಥವಾ ರೆವಿನ್ಯೂ ಬಾಬತು ಯಾವದಾದರೂ ಕೋರ್ಟಿನವರ ಮುಂದೆ ನಡದು—ಯಾ—ಜುಡಿಷಿಯಲ್ ವ್ಯವಹರಣೆ ನಡಿಯುತ್ತಿರುವಲ್ಲಿ ಯಾವದೊಂದು ಸಿವಿಲ್ ಅಥವಾ ರೆವಿನ್ಯೂ ಕೋರ್ಟಿನವರ ಜಾಹಿರಾತಿಗೆ ತರಲ್ಪಟ್ಟು ಇದ್ದು,—ವ—ಸದರೀ ಮೊಕದ್ದಮೆಯು ಸೆಷನ್‌ಕೋರ್ಟಿನವರಿಂದ ಮಾತ್ರವೇ ದರ್ಯಾಪ್ತಿ ಆಗತಕ್ಕದ್ದಾಗಿದ್ದು, ಅಥವಾ ಅಂಥಾ ಸಿವಿಲ್—ಯಾ—ರೆವಿನ್ಯೂ ಕೋರ್ಟಿನವರು ಸದರೀ ಮೊಕದ್ದಮೆಯು ಸೆಷನ್ ಕೋರ್ಟಿನವರಿಂದ ದರ್ಯಾಪ್ತಿ ಆಗಲ್ಪಡಬೇಕಾಗಿ ಆಲೋಚಿಸುವಲ್ಲಿ, ಅಂಥಾ ಸಿವಿಲ್—ಯಾ—ರೆವಿನ್ಯೂ ಕೋರ್ಟಿನವರು, 476ನೇ ಪ್ರಕರಣ ಪ್ರಕಾರ ಸದರೀ ಮೊಕದ್ದಮೆಯನ್ನು ವಿಚಾರಣೇಬಗ್ಯೆ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸುವದಕ್ಕೆ ಬದಲಾಗಿ, ಸ್ವತಃ ವಿಚಾರಣೆಯನ್ನು ಪೂರ್ತಿಮಾಡಿ, ಅಪಾದನೆಪಟ್ಟವನನ್ನು ಸೆಷನ್‌ಕೋರ್ಟಿನವರ ಮುಂದೆ ದರ್ಯಾಪ್ತೀ ಮಾಡಲ್ಪಡತಕ್ಕ ಬಗ್ಯೆ ಕೆರೆಗೆ ರವಾನಿಸಲ್ಪಡಲೂ, ಅಥವಾ ಜಾಮೀನಮೇಲೆ ಬಿಡಲ್ಪಡಲೂ ಬಹುದು.

ಈ ಪ್ರಕರಣಕ್ಕನುಗುಣವಾದ ವಿಚಾರಣೆಯ ಉದ್ದೇಶ್ಯಗಳ ಬಗ್ಯೆ, ಸಿವಿಲ್—ಯಾ—ರೆವಿನ್ಯೂ ಕೋರ್ಟಿನವರು, 443ನೇ ಪ್ರಕರಣದ ನಿಬಂಧನೆಗಳಿಗೆ ಒಳಪಟ್ಟು, ಒಬ್ಬ ಮ್ಯಾಜಿಸ್ಟ್ರೇಟನ ಅಧಿಕಾರಗಳನ್ನೆಲ್ಲಾ ಚಲಾಯಿಸಬಹುದು; ಮತ್ತು ಅಂಥಾ ವಿಚಾರಣೆಯಲ್ಲಿ ತಮ್ಮ ಪ್ರೊಸೀಡಿಂಗ್ಸಗಳು 18ನೇ ಅಧ್ಯಾಯದ ನಿಬಂಧನೆಗಳಿಗೆ ಅನುಸಾರವಾಗಿರಬಹುದಾದಷ್ಟುರಮಟ್ಟಿಗೆ ನಡಿಸಲ್ಪಡತಕ್ಕದ್ದು, ಮತ್ತು ಅವುಗಳು ಮ್ಯಾಜಿಸ್ಟ್ರೇಟನಿಂದ ನಡಿಸಲ್ಪಟ್ಟದ್ದ ಹಾಗೆ ಎಣಿಸಲ್ಪಡತಕ್ಕದ್ದು.

ಅಂಥಾ ಸಂಗತಿಗಳಲ್ಲಿ ಸಿವಿಲ್‌ಕೋರ್ಟಿನವರು ನಡಿಸತಕ್ಕ ಕ್ರಮ.

479. ಒಂದು ಸಿವಿಲ್ ಅಥವಾ ರೆವಿನ್ಯೂ ಕೋರ್ಟಿನವರಿಂದ ಹಾಗೆ ಕಮ್ಮಿಟ ಮಾಡೋಣಾದಲ್ಲಿ, ಸದರೀ ಕೋರ್ಟಿನವರು ತಕ್ಸೀರನಾಮೆಯನ್ನು ಕಮ್ಮಿಟಮೆಂಟಿನ ಹುಕುಂ—ವ—ಮೊಕದ್ದಮೆಯ ರಿಕಾರ್ಡು ಸಹಿತವಾಗಿ, ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನ ಬಳಿಗೆ ಆಗಲೀ—ಯಾ—ದರ್ಯಾಪ್ತೀಬಗ್ಯೆ ಕಮ್ಮಿಟ ಮಾಡಲಿಕ್ಕೆ ಅಧಿಕಾರಹೊಂದಿದ ಇತರ ಮ್ಯಾಜಿಸ್ಟ್ರೇಟನ ಬಳಿಗಾಗಲೀ ಕಳುಹಿಸತಕ್ಕದ್ದು; ಆ ಮೇಲೆ ಅಂಥಾ ಮ್ಯಾಜಿಸ್ಟ್ರೇಟು ವಾದಿ ಪ್ರತಿವಾದಿಗಳ ತರಫಿನ ಸಾಕ್ಷಿಗಾರರ ನಿಶಿ ಆ ಮೊಕದ್ದಮೆಯನ್ನು ಸೆಷನ್ ಕೋರ್ಟಿನವರ ಮುಂದೆ ಹಾಜರುಪಡಿಸತಕ್ಕದ್ದು.

ಅಲಕ್ಷ್ಯಸಂಬಂಧವಾದ ಕೆಲವು ಸಂಗತಿಗಳಲ್ಲಿ ಅನುಸರಿಸತಕ್ಕ ಕ್ರಮ.

480. ಇಂಡಿಯನ್ ಪೀನಲ್‌ಕೋಡಿನ 175ನೇ ಪ್ರಕರಣ, 178ನೇ ಪ್ರಕರಣ, 179ನೇ ಪ್ರಕರಣ, 180ನೇ ಪ್ರಕರಣದಲ್ಲಿ ಅಥವಾ 228ನೇ ಪ್ರಕರಣದಲ್ಲಿ ನಮೂದಾಗಿರುವಂಥಾ ಯಾವ ತಕ್ಸೀರನ್ನಾದರೂ ಯಾವದೊಂದು ಸಿವಿಲ್ ಕೋರ್ಟಿನ, ಕ್ರಿಮಿನಲ್ ಕೋರ್ಟಿನ—ಯಾ—ರೆವಿನ್ಯೂಕೋರ್ಟಿನ ಮುಂದೆ—ಯಾ—ಸಮಕ್ಷಮದಲ್ಲಿ ನಡೆದರೆ, ಅಂಥಾ ಸಂಗತಿಯಲ್ಲಿ ಆ ಕೋರ್ಟಿನವರು ಆ ತಕ್ಸೀರುಗಾರನನ್ನ ಪಹರೆಯಲ್ಲಿ ಇಡಿಸಬಹುದು, ಆ ತಕ್ಸೀರುಗಾರನು ಯೂರೋಪಿಯನ್ ಬ್ರಿಟಿಷ್ ಸಬ್ಜಕ್ಟ ಆಗಿದ್ದಾಗ್ಯೂ ಅಲ್ಲದೆ ಇದ್ದಾಗ್ಯೂ ಚಿಂತೆಯಿಲ್ಲ; ಮತ್ತು ತಕ್ಸೀರು

1187

ದಾರನನ್ನು ಪಹರೇಯಲ್ಲಿಟ್ಟ ತಾರೀಖಿನಲ್ಲಿ ಕೋರ್ಟು ಬರಖಾಸ್ತು ಆಗುವದಕ್ಕಿಂತ ಮುಂಚೆ ಯಾವ ಕಾಲದಲ್ಲಾದರೂ, ಆ ಕೋರ್ಟಿನವರು, ತಮಗೆ ಯುಕ್ತತೋರಿದರೆ, ಸದರೀ ತಕ್ಸೀರನ್ನು ವಿಚಾರಣೆಮಾಡಿ, ತಕ್ಸೀರುದಾರನಿಗೆ ಇನ್ನೂರು ರೂಪಾಯಿಗೆ ಮೀರದ ಜುಲ್ಮಾನೆಯನ್ನು—ವ—ಸದರೀ ಜುಲ್ಮಾನೆ ಸಂದಾಯವಾಗದಿದ್ದರೆ, ಒಂದು ತಿಂಗಳ ವಾಯಿದೇಪರ್ಯಂತ ಬರೀ ಕೈದು ಸಜಾ ವಿಧಿಸಬಹುದು, ಶೀಘ್ರವಾಗಿ ಅಂಥಾ ಜುಲ್ಮಾನೆಯನ್ನು ಪಾವತೀ ಮಾಡಿದರೆ ಆಗೆ ಅಗತ್ಯವಿಲ್ಲ.

ಅಂಥಾ ಸಂಗತಿಗಳಲ್ಲಿ ರಿಕಾರ್ಡು.

481. ಅಂಥಾ ಪ್ರತಿ ಸಂಗತಿಯಲ್ಲೂ, ಕೋರ್ಟಿನವರು ತಕ್ಸೀರು ಉಂಟಾಗುವ ವಿದ್ಯಮಾನಗಳನ್ನೂ ತಕ್ಸೀರುದಾರನು ಹೇಳಿದ (ಇದ್ದರೆ) ಹೇಳಿಕೆಯನ್ನು ಇತ್ಯರ್ಥವನ್ನು ಸಜಾವನ್ನೂ ಸಹ ಬರಿಯತಕ್ಕದ್ದು.

ಸದರೀ ತಕ್ಸೀರು ಇಂಡಿಯನ್ ಪಿನಲ್‌ಕೋಡಿನ 228ನೇ ಪ್ರಕರಣಕ್ಕನುಗುಣವಾಗಿ ಇದ್ದರೆ, ಆತಂಕ —ಯಾ— ತಿರಸ್ಕಾರ ಮಾಡಲ್ಪಟ್ಟ ಕೋರ್ಟಿನವರು ಕೂತಿರುವ ಜುಡಿಷಿಯಲ್ ಪ್ರೊಸೀಡಿಂಗ್ಸಿನ ಸ್ವಭಾವವನ್ನೂ, ಸ್ಥಿತಿಯನ್ನೂ, —ವ—ತಿರಸ್ಕಾರ —ಯಾ— ಆತಂಕದ ಸ್ವಭಾವಕೂಡಾ ರಿಕಾರ್ಡಿನಿಂದ ತೋರಬೇಕು.

ಮೊಕದ್ದಮೆಯು 480 ನೇ ಪ್ರಕರಣಕ್ಕನುಗುಣವಾಗಿ ವರ್ತಿಸಲ್ಪಡ ಬಾರದಾಗಿ ಕೋರ್ಟಿನವರು ನೆನಸಿದರೆ ನಡಿಸತಕ್ಕಕ್ರಮ.

482. ಯಾವ ಮೊಕದ್ದಮೆಯಲ್ಲಾದರು ಕೋರ್ಟಿನವರು 480ನೇ ಪ್ರಕರಣದಲ್ಲಿ ಹೇಳೋಣಾದ—ವ— ತಮ್ಮಮುಂದೆ —ಯಾ— ಸಮಕ್ಷಮ ನಡದ ತಕ್ಸೀರುಗಳಪೈಕಿ ಯಾವ ತಕ್ಸೀರಾದರೂ ಆಪಾದನೆಯಾದ ಮನುಷ್ಯನನ್ನು, ಜುಲ್ಮಾನೆ ಸಂದಾಯವಾಗದಿದ್ದರೆ ಆಗತಕ್ಕ ಕೈದಲ್ಲದೇ ಅನ್ಯಥಾ ಕೈದುಮಾಡಬೇಕು ಎಂತಲಾದರೂ —ಯಾ— ಅವನಿಗೆ ಇನ್ನೂರು ರೂಪಾಯಿಗಳಿಗೆ ಮೀರಿದ ಜುಲ್ಮಾನೆ ವಿಧಿಸಬೇಕೆಂತಲಾದರೂ ಆಲೋಚಿಸಿದರೆ —ಯಾ— ಅಂಥಾಕೋರ್ಟಿನವರು ಇತರ ಯಾವ ಕಾರಣಗಳ ನಿಮಿತ್ತವಾದರೂ ಮೊಕದ್ದಮೆಯು 480ನೇ ಪ್ರಕರಣ ಪ್ರಕಾರ ತೀರ್ಮಾನಿಸಲ್ಪಡತಕ್ಕದ್ದಲ್ಲವಾಗಿ ಅಭಿಪ್ರಾಯಪಟ್ಟರೆ, ಸದರೀ ಕೋರ್ಟಿನವರು, ಅಂಥಾ ಸಂಗತಿಗಳಲ್ಲಿ ತಕ್ಸೀರನ್ನುಂಟುಮಾಡುವ ವಿದ್ಯಮಾನಗಳನ್ನೂ—ವ—ಆಪಾದನೆಯಾದ ಮನುಷ್ಯನ ಹೇಳಿಕೆಯನ್ನೂ ಮುಂಚೆ ನಿಬಂಧಿಸಿದ ಪ್ರಕಾರ ಬರದು, ಆ ಮೇಲೆ ಆ ಮೊಕದ್ದಮೆಯನ್ನು ದರ್ಯಾಫ್ತಿ ಮಾಡಲಿಕ್ಕೆ ಅಧಿಕಾರ ಇರುವ ಮೇಜಿಸ್ಟ್ರೇಟನ ಬಳಿಗೆ ರವಾನೆ ಮಾಡಬಹುದು, ಮತ್ತು ಅಂಥಾ ಮೇಜಿಸ್ಟ್ರೇಟನ ಮುಂದೆ ಅವನು ಹಾಜರಾಗುವ ನಿಮಿತ್ತ ಜಾಮೀನು ಕೊಡಹೇಳಿ ವಿಧಿಸಬಹುದು, ಅಥವಾ, ಸಾಕಾದಷ್ಟು ಜಾಮೀನು ಕೊಡೋಣಾಗದೆ ಇದ್ದರೆ, ಕೋರ್ಟಿನವರು ಆಪಾದನೆಯಾದ ಮನುಷ್ಯನನ್ನು ಪಹರೆನಿಶಿ ಅಂಥಾ ಮೇಜಿಸ್ಟ್ರೇಟನ ಬಳಿಗೆ ಕಳುಹಿಸತಕ್ಕದ್ದು.

ಈ ಪ್ರಕರಣ ಪ್ರಕಾರ ಯಾವ ಮೊಕದ್ದಮೆಯನ್ನಾದರೂ ಯಾರಬಳಿಗೆ ರವಾನೆ ಮಾಡೋಣಾಯಿತೋ ಆ ಮೇಜಿಸ್ಟ್ರೇಟು ಮುಂಚೆ ನಿಬಂಧಿಸಿದ ರೀತೀಲಿ ಆಪಾದನೆ ಪಟ್ಟವನ ಮೇಲಣ ಫಿರ್ಯಾದನ್ನು ಕೇಳಲಿಕ್ಕೆ ಪ್ರವರ್ತಿಸತಕ್ಕದ್ದು.

ರಿಜಿಸ್ಟ್ರಾರು—ಯಾ—ಸಬ್ಬ ರಿಜಿಸ್ಟ್ರಾರು 480—ವ—482ನೇ ಪ್ರಕರಣಗಳಿಗೆ ಒಳಪಡುವ ಸಿವಿಲ್ ಕೋರ್ಟೆಂತಾ ಯಾವಾಗ ಎಣಿಸಲ್ಪಡಬೇಕು

483. ಮೈಸೂರು ಗವರ್ನಮೆಂಟಿನವರು ಹಾಗೆ ನಿರ್ದೇಶಿಸಿದ್ದಲ್ಲಿ, 1877 ನೇ ಇಸವಿ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು ಪ್ರಕಾರ ನೇಮಕಪಟ್ಟ ಯಾವ ರಿಜಿಸ್ಟ್ರಾರನಾದರೂ, ಅಥವಾ ಯಾವ ಸಬ್ ರಿಜಿಸ್ಟ್ರಾರನಾದರೂ, 480—ವ—482 ನೇ ಪ್ರಕರಣಗಳ ಅರ್ಥಕ್ಕೆ ಒಳಪಡುವ ಸಿವಿಲ್ ಕೋರ್ಟೆಂತಾ ಎಣಿಸಲ್ಪಡತಕ್ಕಕದ್ದು.

ತಕ್ಸೀರುದಾರನು ವಿಧೇಯನಾದಮೇಲೆ ಯಾ ಮಾಫ್ ಕೇಳಿಕೊಂಡರೆ ಅವನ ಖುಲಾಸೆ.

484. ಒಬ್ಬನು ತಾನು ನ್ಯಾಯ ಪ್ರಕಾರ ಮಾಡಬೇಕಾದ ಯಾವ ಕೃತ್ಯವನ್ನಾದರೂ ಮಾಡದೆ ನಿರಾಕರಿಸಿದ್ದಕ್ಕಾಗಿ ಅಥವಾ ಮಾಡದೆ ಬಿಟ್ಟದ್ದಕ್ಕಾಗಿ, ಅಥವಾ ಮನಃಪೂರ್ವಕವಾಗಿ ತಿರಸ್ಕಾರ ಪಡಿಸಿದ್ದಕ್ಕಾಗಿ—ಯಾ—ಆತಂಕ ಪಡಿಸಿದ್ದಕ್ಕಾಗಿ ಅವನಿಗೆ ಯಾವ ಕೋರ್ಟಿನವರಾದರೂ 480 ನೇ ಪ್ರಕರಣಕ್ಕನುಗುಣವಾಗಿ ಶಿಕ್ಷೆ

ವಿಧಿಸಿದರೆ, ಅಂಥಾ ಸಂಗತಿಯಲ್ಲಿ ಕೋರ್ಟಿನವರ ಹುಕುಂ ಪ್ರಕಾರ ಅಥವಾ ಅಪೇಕ್ಷೆ ಪ್ರಕಾರ ತಕ್ಸೀರುದಾರನು ವಿಧೇಯನಾಗಿ ನಡಕೊಂಡಲ್ಲಿ, ಅಥವಾ ಕೋರ್ಟಿನವರಿಗೆ ತೃಪ್ತಿಕರವಾಗುವಂತೆ ಕ್ಷಮೆ ಬೇಡಿಕೊಂಡಲ್ಲಿ, ಕೋರ್ಟಿನವರು ತಂಮ ಯುಕ್ತ್ಯಾನುಸಾರ ಅವನನ್ನು ವಿಮೋಚನೆ ಮಾಡಿದರೂ ಮಾಡಬಹುದು ಅಥವಾ ಮಾಫ್‌ಮಾಡಿದರೂ ಮಾಡಬಹುದು.

485. ಒಂದು ಕ್ರಿಮಿನಲ್ ಕೋರ್ಟಿನವರ ಮುಂದೆ ಯಾವ ಸಾಕ್ಷಿಗಾರನಾದರೂ ತನಗೆ ಹಾಕೋಣಾದ ಸವಾಲಿಗೆ ಜವಾಬು ಕೊಡದೆ ನಿರಾಕರಿಸಿ—ಯಾ—ಕೋರ್ಟಿನವರು ಅವನನ್ನ ಹಾಜರು ಮಾಡಹೇಳಿ ವಿಧಿಸುವ ಅತನ ಸ್ವಾಧೀನದಲ್ಲಿ—ಯಾ—ಸ್ವತಂತ್ರದಲ್ಲಿ ಇರುವ ಯಾವ ದಸ್ತಾವೇಜನ್ನಾದರೂ ಹಾಜರು ಮಾಡದೆ ನಿರಾಕರಿಸಿ, ಅಂಥಾ ನಿರಾಕರಣೆಗೆ ನ್ಯಾಯವಾದ ಸಬಬು ತೋರಿಸದೆ ಇದ್ದರೆ, ಆಗ ಅಂಥಾ ಕೋರ್ಟಿನವರು ಬರಹ ಮೂಲಕ ರಿಕಾರ್ಡುಮಾಡುವ ಸಬಬುಗಳಮೇಲೆ, ಅವನಿಗೆ ಬರೀಕೈದುಸಜಾ ವಿಧಿಸಬಹುದು,—ಯಾ—ಅಧ್ಯಕ್ಷರಾದ ಮೇಜಿಸ್ಟ್ರೇಟ—ಯಾ—ಜಡ್ಜಿಯ ದಸ್ಕತು ನಿಶಿ ವಾರಂಟಿನ ಮೂಲಕವಾಗಿ ಅಂಥಾ ನಿರಾಕರಣೆದಾರನನ್ನು ಏಳು ದಿನಗಳಿಗೆ ಮೀರದ ಒಂದು ವಾಯಿದೆ ಪರ್ಯಂತ ಸದರೀ ಕೋರ್ಟಿನ ಒಬ್ಬ ಆಫೀಸರನ ಭದ್ರತೆಯಲ್ಲಿಡಬಹುದು, ಯಾವ ಪಕ್ಷದಲ್ಲಿಂದರೆ ಅವನು ಪಿತಮಧ್ಯೆ ವಿಚಾರಣೆಯಾಗಲ್ಪಡಲಿಕ್ಕೆ ಒಪ್ಪದೆ ಜವಾಬು ಕೊಡದೆ ಇದ್ದ ಪಕ್ಷದಲ್ಲಿ—ಯಾ—ದಸ್ತಾವೇಜು ಹಾಜರುಮಾಡದೆ ಇದ್ದ ಪಕ್ಷದಲ್ಲಿ ಅವನನ್ನು ಹಾಗೆ ಕೈದಿನಲ್ಲಿ ಇಡಬಹುದು. ಅವನು ನಿರಾಕರಣೆಯಲ್ಲಿ ಮುಷ್ಕರವಾಗಿ ಇದ್ದರೆ, ಅವನ ವಿಷಯದಲ್ಲಿ 480ನೇ ಪ್ರಕರಣದ—ಯಾ—482 ನೇ ಪ್ರಕರಣದ ನಿಬಂಧನೆಗಳ ಪ್ರಕಾರ ನಡಿಸಬಹುದು.

ಜವಾಬು ಕೊಡದೆ—ಯಾ—ದಸ್ತಾವೇಜು ಹಾಜರು ಪಡಿಸುವದಕ್ಕೆ ನಿರಾಕರಿಸಿದಮನುಷ್ಯನನ್ನ ಕೈದು—ಯಾ—ಕಮ್ಮಿಟ್ ಮಾಡೋಣ.

486. ಯಾವ ಕೋರ್ಟಿನಿಂದಾಗಲೀ 480ನೇ ಪ್ರಕರಣ ಅಥವಾ 485ನೇ ಪ್ರಕರಣ ಪ್ರಕಾರ ಸಜಾಪಟ್ಟ ಯಾವ ಮನುಷ್ಯನಾದರೂ, ಇದರಲ್ಲಿ ಮುಂಚೆ ಯೇನು ಅಡಗಿಯಿದ್ದಾಗ್ಯೂ ಸರಿಯೆ, ಆ ಕೋರ್ಟಿನಲ್ಲಿ ಹುಟ್ಟಿದ ಡಿಕ್ರಿಗಳಮೇಲೆ ಯಾ ಆರ್ಡರುಗಳ ಮೇಲೆ ಸಾಧಾರಣವಾಗಿ ಯೆಲ್ಲಿ ಅಪ್ಪೀಲಾಗುತ್ತದೋ ಆ ಕೋರ್ಟಿಗೆ ಅಪ್ಪೀಲ್ಮಾಡಬಹುದು.

ಅಲಕ್ಷ್ಯದ ಮೊಕದ್ದಮೆಗಳಲ್ಲಿ ಸಾಬೀತುಗಳ ಮೇಲೆ ಅಪ್ಪೀಲುಗಳು.

31ನೇ ಅಧ್ಯಾಯದ ನಿಬಂಧನೆಗಳು, ಲಗಾವಾಗುವಷ್ಟರಮಟ್ಟಿಗೆ, ಈ ಪ್ರಕರಣಕ್ಕನುಗುಣವಾದ ಅಪ್ಪೀಲುಗಳಿಗೆ ಲಗಾವಾಗತಕ್ಕದ್ದು, ಮತ್ತು ಅಪ್ಪೀಲ್ ಕೋರ್ಟಿನವರು ತೀರ್ಪನ್ನು ಬದಲಾಯಿಸಲೂ ಬಹುದು—ಯಾ—ತಿರಿಗಿಸಲೂ ಬಹುದು, ಅಥವಾ ಅಪ್ಪೀಲಾಗಲ್ಪಟ್ಟ ಸಜಾವನ್ನ ತಗ್ಗಿಸಲೂ ಬಹುದು—ಯಾ—ತಿರಿಗಿಸಲೂ ಬಹುದು.

ಯಾವದೊಂದು ಸ್ಮಾಲ್‌ಕಾಜ್‌ಕೋರ್ಟಿನಿಂದ ಉಂಟಾದ ಅಂಥಾ ಸಾಬೀತಿ ಮೇಲಿನ ಅಪ್ಪೀಲ್ ಸದರೀಕೋರ್ಟ ಯಾವ ಸೆಷನ್ ಡಿವಿಜನಿನ ಒಳಗೆ ಇರುತ್ತದೋ ಆ ಸೆಷನ್ ಕೋರ್ಟಿಗೆ ಮಾಡತಕ್ಕದ್ದು.

ಮೇಲೆ ಹೇಳೋಣಾದ ಮೇರೆಗೆ ನೇಮಕಪಟ್ಟ ರಿಜಿಸ್ಟ್ರಾರ—ಯಾ—ಸಬ್‌ರಿಜಿಸ್ಟ್ರಾರಾಗಿ ಇರುವ ಆಫೀಸರಿಂದ ಮಾಡೋಣಾದಂಥಾ ಸಾಬೀತುಗಳ ಮೇಲಿನ ಅಪ್ಪೀಲು, ಅಂಥಾ ಆಫಿಸರು ಒಂದು ಸಿವಿಲ್ ಕೋರ್ಟಿನ ಜಡ್ಜ ಕೂಡಾ ಆಗಿದ್ದಲ್ಲಿ, ಅಂಥಾ ಜಡ್ಜಿ ಉದ್ಯೋಗದಲ್ಲಿ ಅಂಥಾ ಆಫಿಸರನಿಂದ ಮಾಡೋಣಾದಂಥ ಸಾಬೀತು ಒಂದು ಡಿಕ್ರಿಯಾಗಿ ಇದ್ದರೆ, ಈ ಪ್ರಕರಣದ ಹಿಂದಣ ಭಾಗಕ್ಕನುಗುಣವಾಗಿ ಅಪ್ಪೀಲ್ ಯಾವ ಕೋರ್ಟಿಗೆ ಮಾಡಲ್ಪಡಬೇಕಾದ್ದೋ ಆ ಕೋರ್ಟಿಗೆ ಮಾಡಲ್ಪಡ ಬಹುದು, ಮತ್ತು ಇತರ ಸಂಗತಿಗಳಲ್ಲಿ ಡಿಸ್ಟ್ರಿಕ್ಟ ಜಡ್ಜರಿಗೆ ಅಪ್ಪೀಲ್ ಮಾಡಲ್ಪಡಬಹುದು.

487. 477, 480—ವ—485 ಈ ಪ್ರಕರಣಗಳಲ್ಲಿ ನಿಬಂಧಿಸಿರುವ ಹಾಗೆ ಹೊರತು, ಅನ್ಯಥಾ ಯಾವ ಕ್ರಿಮಿನಲ್ ಕೋರ್ಟಿನ ಜಡ್ಜಿಯಾಗಲೀ—ಯಾ—ಮೇಜಿಸ್ಟ್ರೇಟನಾಗಲೀ, 195ನೇ ಪ್ರಕರಣದಲ್ಲಿ ಹೇಳೋಣಾದ ಯಾವ ತಕ್ಸೀರಾದರೂ, ತಮ್ಮ ಮುಂದೆ ಯಾ—ತಮ್ಮ ಅಧಿಕಾರಕ್ಕೆ ಅಲಕ್ಷ್ಯವಾಗಿ ನಡಿಸೋಣಾದರೆ,—ಯಾ—ಜಾಡಿ

ಕೆಲವು ಜಡ್ಜಗಳು—ವ—ಮೇಜಿಸ್ಟ್ರೇಟುಗಳು ತಮ್ಮ ಮುಂದೆಯೇ 195ನೇ ಪ್ರಕರಣದಲ್ಲಿ ಹೇಳೋಣಾದ ತಕ್ಸೀರುಗಳು ಮಾಡ

ಲ್ಪಟ್ಟರೆ ಅದನ್ನು ಅವರು ದರಿಯಾಫ್ತಿ ಮಾಡ ಕೂಡದು.

ಷಿಯಲ್ ಪ್ರೊಸೀಡಿಂಗ್ಸ್‌ಗಳು ನಡಿಯುತ್ತಾ ಇರುವಾಗ ಅಂಥಾ ಜಡ್ಜಿ—ಯಾ—ಮೇಜಿಸ್ಟ್ರೇಟನಾಗಿ ತನ್ನ ಜಾಹಿರಾತಿಗೆ ತರೋಣಾಗಿದ್ದಲ್ಲಿ, ಅಂಥಾ ತಕ್ಸೀರಿನ ಬಗ್ಯಾಗಿ ಯಾವ ಮನುಷ್ಯನನ್ನಾದರೂ ತಾನೇ ದರಿಯಾಫ್ತಿ ಮಾಡಕೂಡದು.

ಸೆಷನ್ಸ ಕೋರ್ಟಿಗೆ ಕಮ್ಮಿಟ ಮಾಡಲಿಕ್ಕೆ ಅಧಿಕಾರ ಇರುವ ಮೇಜಿಸ್ಟ್ರೇಟನು ಅಂಥಾ ಕೋರ್ಟಿಗೆ ಯಾವ ಮೊಕದ್ದಮೆಯನ್ನಾದರೂ ಸ್ವತಃ ಕಮ್ಮಿಟ ಮಾಡುವದಕ್ಕೆ, ಸದರೀ ಮೇಜಿಸ್ಟ್ರೇಟಗೆ ಆತಂಕಪಡಿಸುವಂಥಾದ್ದು ಯಾವದೂ 476 ನೇ ಪ್ರಕರಣದೊಳಗೆ ಅಥವಾ 482ನೇ ಪ್ರಕರಣದೊಳಗೆ ಇರುವದಿಲ್ಲ.

CHAPTER XXXVI.—OF THE MAINTENANCE OF WIVES AND CHILDREN.

36ನೇ ಅಧ್ಯಾಯ.—ಹೆಂಡರು ಮಕ್ಕಳ ಸಂರಕ್ಷಣೆಯನ್ನು ಕುರಿತು.

ಹೆಂಡರು ಮಕ್ಕಳನ್ನು ಸಂರಕ್ಷಿಸಹೇಳಿ ಹುಕುಂ.

488. ಸಾಕಾದ ಜೀವನೋಪಾಯವುಳ್ಳಂಥಾ ಮನುಷ್ಯನು, ತನ್ನ ಹೆಂಡತಿಯನ್ನ ಸಂರಕ್ಷಣೆ ಮಾಡದೆ ಉಪೇಕ್ಷಿಸಿದರೂ—ಯಾ—ನಿರಾಕರಿಸಿದರೂ, ಸ್ವಸಂರಕ್ಷಣೆ ಮಾಡಿಕೊಳ್ಳಲಿಕ್ಕೆ ಶಕ್ತಿಯಿಲ್ಲದ ಶಾಸ್ತ್ರೀಯವಾದ ಅಥವಾ ಅಶಾಸ್ತ್ರೀಯವಾದ ತನ್ನ ಮಗುವನ್ನು ಸಂರಕ್ಷಣೆ ಮಾಡದೆ ಉಪೇಕ್ಷಿಸಿದರೂ—ಯಾ—ನಿರಾಕರಿಸಿದರೂ, ಅಂಥಾ ಸಂಗತಿಯಲ್ಲಿ, ಡಿಸ್ಟ್ರಿಕ್ಟ ಮೇಜಿಸ್ಟ್ರೇಟು, ಸಬ್ ಡಿವೀಜನಲ್ ಮೇಜಿಸ್ಟ್ರೇಟು, ಅಥವಾ ಫಸ್ಟ ಕ್ಲಾಸು ಮೇಜಿಸ್ಟ್ರೇಟು ಅಂಥಾ ಉಪೇಕ್ಷೆ—ಯಾ—ನಿರಾಕರಣೆ ವಿಷಯ ರುಜುವಾದ ಮೇಲೆ, ತಿಂಗಳಿಗೆ ಐವತ್ತು ರೂಪಾಯಿಗೆ ಬಟ್ಟನಲ್ಲಿ ಮೀರದೆ ತಿಂಗಳಗಟ್ಲೆ ದರವಾಗಿ ತನಗೆ ಯುಕ್ತವಾಗಿ ತೋರುವಷ್ಟು ಹಣವನ್ನು ಸದರೀ ಹೆಂಡತಿಯ ಸಂರಕ್ಷಣೇ ಬಗ್ಯೆ ಅಥವಾ ಸದರೀ ಮಗುವಿನ ಸಂರಕ್ಷಣೆ ಬಗ್ಯೆ ಕೊಡಹೇಳಿ ಸದರೀ ಮನುಷ್ಯನಿಗೆ ಹುಕುಂ ಮಾಡಬಹುದು, ಮತ್ತು ಮೇಜಿಸ್ಟ್ರೇಟನು ಆಗಿಂದಾಗ್ಯೆ ಅಪ್ಪಣೆ ಕೊಡುವ ಆ ಮನುಷ್ಯನಿಗೆ ಸದರೀ ಐವಜು ಪಾವತೀ ಮಾಡ ಹೇಳಿ ಹುಕುಂ ಕೊಡಬಹುದು.

ಅಂಥಾ ಹಣವನ್ನು ಹುಕುಮಿನ ತಾರೀಖು ಮೊದಲ್ಗೊಂಡು ಕೊಡತಕ್ಕದ್ದು.

ಹುಕುಮಿನ ಅಮಲ್ದಾರಿ.

ಹಾಗೆ ಹುಕುಂ ಕೊಟ್ಟ ಮನುಷ್ಯನು ಆ ಹುಕುಂ ಪ್ರಕಾರ ನಡಿಯದೆ ಮನಃಪೂರ್ತಿಯಾಗಿ ಉಪೇಕ್ಷಿಸಿದರೆ ಆಗ ಅಂಥಾ ಯಾವ ಮೇಜಿಸ್ಟ್ರೇಟನಾದರೂ ಸದರೀ ಬರಬೇಕಾದ ಐವಜನ್ನ ವಸೂಲು ಮಾಡುವದಕ್ಕೆ ಜುಲ್ಮಾನೆ ವಸೂಲು ಮಾಡುವದಕ್ಕೆ ಇದರಲ್ಲಿ ಮುಂಚೆ ನಿಬಂಧಿಸಿರುವ ಕ್ರಮದಲ್ಲೆ—ತಪ್ಪಿದಾಗ್ಯೆಲ್ಲಾ—ವಾರಂಟು ಕೊಡಬಹುದು, ಮತ್ತು ವಾರಂಟಿನ ಅಮಲ್‌ಜಾರಿ ಆದನಂತರ, ಪ್ರತಿತಿಂಗಳ ಹಣವಿನಲ್ಲಿ ಪಾವತೀ ಮಾಡದೆ ಬಾಕಿ ಇರುವ ಯಾವ ಅಂಶಕ್ಕು—ಯಾ—ಪೂರಾ ಹಣದ ಬಗ್ಯಾಗಿ ಸದರೀ ಮೇಜಿಸ್ಟ್ರೇಟು ಅಂಥಾ ಮನುಷ್ಯನಿಗೆ ಒಂದು ತಿಂಗಳ ವಾಯಿದೆ ಪರ್ಯಂತ ಕೈದು ಸಜಾ ವಿಧಿಸಬಹುದು:

ನಿಯಮ.

ಪರಂತು ಸದರೀ ಮನುಷ್ಯನು, ತನ್ನ ಹೆಂಡತಿ ತನ್ನ ಸಂಗಡ ವಾಸ ಮಾಡಿದರೆ ತಾನು ಅವಳನ್ನು ಸಂರಕ್ಷಿಸುವದಾಗಿ ಹೇಳಿ, ಅವಳು ಅವನ ಸಂಗಡ ತಾನು ವಾಸಮಾಡುವದಿಲ್ಲವೆಂತ ಹೇಳಿದರೆ, ಅವಳ ನಿರಾಕರಣೆ ಸಬಬನ್ನು ಸದರೀ ಮೇಜಿಸ್ಟ್ರೇಟು ಆಲೋಚಿಸಬಹುದು; ಮತ್ತು ಆ ಮನುಷ್ಯನು ವ್ಯಭಿಚಾರಸ್ಥನಾಗಿ ಇದ್ದಾನೆ ಯೆಂತಲಾದರೂ,—ಯಾ—ಅವನು ತನ್ನ ಹೆಂಡತಿಯನ್ನ ನಿರಂತರವಾಗಿ ಅನಾದರಣೆ ಮಾಡುತ್ತಾನೆ ಎಂತಲಾದರು, ಸದರೀ ಮೇಜಿಸ್ಟ್ರೇಟಗೆ ಮುಂದಟ್ಟಿದ ಪಕ್ಷದಲ್ಲಿ, ಗಂಡನ ಹೇಳಿಕೆ ಹ್ಯಾಗೆ ಇದ್ದಾಗ್ಯೂ ಈ ಪ್ರಕರಣ ಪ್ರಕಾರವಾದ ಹುಕುಂ ಮಾಡಬಹುದು.

ಹೆಂಡತಿ ಹಾದರಗಿತ್ತಿಯಾಗಿ ಇರುತ್ತಾ ಇದ್ದರೂ,—ಯಾ—ಸಾಕಾದ ಸಬಬು ಶಿವಾಯಿ ತನ್ನ ಗಂಡನ ಸಂಗಡ ವಾಸಮಾಡುವದಿಲ್ಲವೆಂದು ನಿರಾಕರಿಸಿದರೂ,—ಯಾ—ಸಮ್ಮತಿಯಿಂದಲೇ ಬೇರೆ ಬೇರೆಯಾಗಿ ಅವರು ವಾಸಮಾಡುತ್ತಿದ್ದರೂ, ಅಂಥಾ ಸಂಗತಿಯಲ್ಲಿ, ತನ್ನ ಗಂಡನ ಕಡೆಯಿಂದ ಈ ಪ್ರಕರಣಕ್ಕನುಗುಣವಾಗಿ ಸದರೀ ಜೀವನಾಂಶ ಪಡಕೊಳ್ಳಲಿಕ್ಕೆ ಯಾವ ಹೆಂಡತಿಗೂ ಬಾಧ್ಯತೆ ಇಲ್ಲ.

ಯೂರಪಕ್ಷನಾಗಿ ಈ ಪ್ರಕರಣ ಪ್ರಕಾರ ಒಂದು ಹುಕುಂ ಮಾಡೋಣಾಗಿದೆಯೋ ಆ ಹೆಂಡತಿಯು ಹಾದರಗಿತ್ತಿಯಾಗಿ ಇರುತ್ತಾಳೆಂಬದು, ಅಥವಾ ಸಾಕಾದ ಕಾರಣ ಶಿವಾಯಿ ತನ್ನ ಗಂಡನ ಸಂಗಡ ವಾಸಮಾಡುವದಿಲ್ಲವೆಂದು ನಿರಾಕರಿಸುತ್ತಾಳೆಂಬದು, ಯಾ—ಉಭಯತ್ರರ ಸಂಮತಿಯಿಂದಲೇ ಬೇರೆ ಬೇರೆ ಅವರು ವಾಸಮಾಡುತ್ತಾರೆಂಬದು ರುಜು ಆದ ಮೇಲೆ, ಮೇಜಿಸ್ಟ್ರೇಟನು ಸದರೀ ಹುಕುಮನ್ನು ರದ್ದು ಮಾಡತಕ್ಕದ್ದು.

ಈ ಅಧ್ಯಾಯಕ್ಕನುಗುಣವಾದ ಎಲ್ಲಾ ಸಾಕ್ಷ್ಯವು ಗಂಡನ—ಯಾ—ಸಂಗತ್ಯಾನುಸಾರವಾಗಿ ತಂದೆಯ ಸಮಕ್ಷಮದಲ್ಲಿ ತೆಗೆದುಕೊಳ್ಳಲ್ಪಡತಕ್ಕದ್ದು, ಅಥವಾ, ಆತನ ಸ್ವತಃ ಹಾಜರಾತಿಯು ಅವಶ್ಯ ಇಲ್ಲವೆಂದಲ್ಲಿ, ಆಗ ಆತನ ಪ್ಲೀಡರಿನ ಸಮಕ್ಷಮದಲ್ಲಿ, ತೆಗೆದುಕೊಳ್ಳಲ್ಪಡತಕ್ಕದ್ದು, ಮತ್ತು ಸದರೀ ಸಾಕ್ಷ್ಯವು ಸಮ್ಮನ್ಸ್ ಮೊಕದ್ದಮೆಗಳ ಸಂಗತಿಯಲ್ಲಿ ನಿರ್ದೇಶಿಸೋಣಾದ ಕ್ರಮದಲ್ಲಿ ರಿಕಾರ್ಡು ಮಾಡಲ್ಪಡತಕ್ಕದ್ದು.

ಜೀವನಾಂಶವನ್ನು ಬದಲಾಯಿಸೋಣ.

489. 488 ನೇ ಪ್ರಕರಣ ಪ್ರಕಾರ ತಿಂಗಳಗಟ್ಲೆ ಜೀವನಾಂಶವನ್ನು ಈಸುಕೊಳ್ಳುವಂಥಾ ಯಾವ ಮನುಷ್ಯನ—ಯಾ—ಅದೇ ಪ್ರಕರಣ ಪ್ರಕಾರ ತನ್ನ ಹೆಂಡತಿಗೆ—ಯಾ—ತನ್ನ ಮಗುವಿಗೆ ತಿಂಗಳುಗಟ್ಲೆ ಜೀವನಾಂಶವನ್ನು ಕೊಡಹೇಳಿ ಹುಕುಮಾದಂಥಾ ಯಾವ ಮನುಷ್ಯನ ಸ್ಥಿತಿಯಲ್ಲಿನ ವ್ಯತ್ಯಾಸ ರುಜುವಾದಮೇಲೆ, ಸದರೀ ಜೀವನಾಂಶದಲ್ಲಿ, ಮೇಜಿಸ್ಟ್ರೇಟು ತನಗೆ ಯುಕ್ತವೆಂದು ತೋರುವಂಥಾ ತಿದ್ದುಪಾಟನ್ನು ಮಾಡಬಹುದು, ಪರಂತು ಐವತ್ತು ರೂಪಾಯಿಗಳ ತಿಂಗಳಗಟ್ಲೆ ದರವು ಮೀರಿರಕೂಡದು.

ಜೀವನಾಂಶದ ಹುಕುಮಿನ ಅಮಲ್‌ಜಾರಿ.

490. ಜೀವನಾಂಶದ ಬಾಬತು ಹುಕುಮಿನ ಒಂದು ನಕಲನ್ನು, ಯಾರಿಗೋಸ್ಕರ ಜೀವನಾಂಶ ಹುಕುಂ ಮಾಡೋಣಾಯಿತೋ ಆ ಮನುಷ್ಯನಿಗೆ ಅಥವಾ ಅವನ ಸಂರಕ್ಷಣೆಕರ್ತನು ಇದ್ದರೆ, ಆತಗೆ—ಯಾ—ಜೀವನಾಂಶವು ಯಾರಿಗೆ ಸಲ್ಲಬೇಕೋ ಆ ಮನುಷ್ಯಗೆ, ಖರ್ಚು ಇಲ್ಲದೆ ಕೊಡತಕ್ಕದ್ದು; ಮತ್ತು ಆ ಹುಕುಂ ಯಾರ ಮೇಲೆ ಮಾಡೋಣಾಗಿದೆಯೋ ಆ ಮನುಷ್ಯನು ಇರಬಹುದಾದ ಯಾವ ಸ್ಥಳದಲ್ಲಾದರೂ ಇರುವ ಯಾವ ಮೇಜಿಸ್ಟ್ರೇಟಾದರೂ ಅದನ್ನ ಅಮಲ್ ಚಲಾಯಿಸತಕ್ಕದ್ದು. ಯಾವಾಗೆಂದರೆ, ಕಕ್ಷಿಗಾರರು ಇವರೇ ಯೆಂದು ಕೊಡಬೇಕಾದ ಮೊಬಲಗನ್ನು ಸಂದಾಯ ಮಾಡಲಿಲ್ಲವೆಂದು ಮೇಜಿಸ್ಟ್ರೇಟಗೆ ಮಂದಟ್ಟಾದ ಮೇಲೆ, ಹಾಗೆ ಮಾಡತಕ್ಕದ್ದು.

PART IX.

9ನೇ ಭಾಗ.

SUPPLEMENTARY PROVISIONS.

ಉಪಭಾಗವಾದ ನಿಬಂಧನೆಗಳು.

CHAPTER XXXVIII.—OF THE PUBLIC PROSECUTOR.

38ನೇ ಅಧ್ಯಾಯ.—ಪಬ್ಲಿಕ್ ಪ್ರಾಸಿಕ್ಯೂಟರನ್ನು ಕುರಿತು.

ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನ ನೇಮಕ ಮಾಡುವ ಅಧಿಕಾರ.

492. ಮೈಸೂರು ಗವರ್ನಮೆಂಟಿನವರು, ಸಾಧಾರಣವಾಗಿಯಾಗಲೀ,—ಯಾ—ಯಾವ ಮೊಕದ್ದಮೆಯಲ್ಲಾದರೂ, ಅಥವಾ ಮೊಕದ್ದಮೆಗಳ ಫಲಾನಾ ತರಗತಿಬಗ್ಯೆಯಾದರೂ, ಯಾವ ಸ್ಥಳಿಕ ಪ್ರದೇಶದಲ್ಲು, ಪಬ್ಲಿಕ್ ಪ್ರಾಸಿಕ್ಯೂಟರುಗಳೆಂತ ಕರೆಯಲ್ಪಡುವ ಒಬ್ಬ—ಯಾ—ಹೆಚ್ಚು ಆಫೀಸರನ್ನು ನೇಮಿಸಬಹುದು.

ಸೆಷನ್ ಕೋರ್ಟಿಗೆ ದರಿಯಾಫ್ತಿ ಬಗ್ಯೆ ಕಮಿಟ್ ಆದ ಯಾವ ಮೊಕದ್ದಮೆಯಲ್ಲಿಯೂ, ಡಿಸ್ಟ್ರಿಕ್ಟು ಮೇಜಿಸ್ಟ್ರೇಟು, ಅಥವಾ ಡಿಸ್ಟ್ರಿಕ್ಟು ಮೇಜಿಸ್ಟ್ರೇಟನ ಮೇಲ್ವಿಚಾರಕ್ಕೆ ಒಳಪಟ್ಟು, ಸಬ್‌ಡಿವಿಜನ್ ಮೇಜಿಸ್ಟ್ರೇಟು,

ಪಬ್ಲಿಕ್ ಪ್ರೊಸಿಕ್ಯೂಟರನ ಗೈರಹಾಜರಿ ಕಾಲದಲ್ಲಿ, ಅಥವಾ ಪಬ್ಲಿಕ್ ಪ್ರೊಸಿಕ್ಯೂಟರನು ಮೊಕರ್ರ್ ಆಗಲ್ಪಡದೆ ಇರುವಲ್ಲಿ, ಅಂಥಾ ಮೊಕದ್ದಮೆಯು ಉದ್ದಿಶ್ಯವಾಗಿ ಅಸಿಸ್ಟಾಂಟ್ ಕಮಿಶ್ನರ ದರ್ಜೆಯಕಿಂತ ಕೀಳು ದರ್ಜೆಯ ಪೋಲಿಸ್ ಆಫೀಸರನಲ್ಲದ, ಇತರ ಯಾವ ಮನುಷ್ಯನನ್ನಾದರೂ ಪಬ್ಲಿಕ್ ಪ್ರೊಸಿಕ್ಯೂಟರಾಗಿ ನೇಮಿಸಬಹುದು. 1195

ಪಬ್ಲಿಕ್ ಪ್ರಾಸಿಕೂಟರಿನ ಜಿಮ್ಮೆಯಲ್ಲಿರತಕ್ಕ ಮೊಕದ್ದಮೆಗಳಲ್ಲಿ ಯೆಲ್ಲಾ ಕೋರ್ಟುಗಳೊಳಗೂ ಆತ ವಿವಾದ ಮಾಡಬಹುದು.

ಖಾಸಗಿಯಾಗಿ ತಿಳಿಸೋಣಾದ ಪ್ಲೀಡರುಗಳು ಆತನ ಹುಕುಮಿನ ಕೆಳಗೆ ಇರತಕ್ಕದ್ದು.

493. ಪಬ್ಲಿಕ್ ಪ್ರೊಸಿಕ್ಯೂಟರು ಒಂದು ಲಿಖಿತ ಅಧಿಕಾರ ಪತ್ರಿಕೆ ಇಲ್ಲದೇನೇ, ತಮ್ಮ ಜಿಮ್ಮೆಯಲ್ಲಿರುವ ಯಾವ ಮೊಕದ್ದಮೆಯಲ್ಲಿ ವಿಚಾರಣೆ ದರಿಯಾಫ್ತಿ—ಯಾ—ಅಪ್ಪೀಲು ಆಗುತ್ತಿದೆಯೋ ಅಂಥಾ ಯಾವ ಕೋರ್ಟುಗಳಿಗಾದರೂ ಒಂದು ಪ್ಲೀಡಿಯಾನೆ ವಿವಾದಮಾಡಬಹುದು; ಮತ್ತು ಯಾವ ಖಾಸಗೀ ಮನುಷ್ಯನಾದರೂ ಸರಿಯೇ ಅಂಥಾ ಯಾವ ಮೊಕದ್ದಮೆಯಲ್ಲಿಯೂ ಯಾವ ಮನುಷ್ಯನನ್ನಾದರೂಯಾವ ಕೋರ್ಟಿನಲ್ಲ್ಯಾದರೂ ಪ್ರೊಸಿಕ್ಯೂಟ್ ಮಾಡಲಿಕ್ಕೆ ಪ್ಲೀಡರಿಗೆ ಹೇಳಿದರೆ, ಸದರೀ ಫಿರ್ಯಾದನ್ನು ಪಬ್ಲಿಕ್ ಪ್ರೊಸಿಕ್ಯೂಟರ್ ನಡಿಸತಕ್ಕದ್ದು ಮತ್ತು ಹಾಗೆ ತಿಳಿಸಲ್ಪಟ್ಟ ಪ್ಲೀಡರನು ಅದರಲ್ಲಿ ಅವನ ಹುಕುಮುಗಳ ಮೇರಿಗೆ ನಡಿಯತಕ್ಕದ್ದು.

ದರಿಯಾಫ್ತಿಯನ್ನ ನಡಿಸದೆ ಹಿಂತೆಗದದ್ದರಿಂದ ಉಂಟಾಗುವ ಫಲ.

494. ಮೈಸೂರು ಗವರ್ನಮೆಂಟಿನವರಿಂದ ಮೊಕರ್ರರ್‌ಪಟ್ಟ ಯಾವನೊಬ್ಬ ಪಬ್ಲಿಕ್ ಪ್ರೊಸಿಕ್ಯೂಟರನು, ಜೂರಿಯವರಿಂದ ದರಿಯಾಫ್ತಿ ಆದ ಮೊಕದ್ದಮೆಗಳಲ್ಲಿ ಜೂರಿಯವರು ಇತ್ತೈರ್ಥ ಕೊಡುವದಕ್ಕೆ ಮುಂಚೆ, ಮತ್ತು ಇತರ ಮೊಕದ್ದಮೆಗಳಲ್ಲಿ ತೀರ್ಪು ಹೇಳುವದಕ್ಕೆ ಮುಂಚೆ, ಯಾವ ಮನುಷ್ಯನ ಕುರಿತಾದರೂ ಫಿರ್ಯಾದನ್ನ, ಕೋರ್ಟಿನವರ ಅನುಮತಿನಿಶಿ, ಹಿಂದಕ್ಕೆ ತೆಗೆದುಕೊಳ್ಳಬಹುದು; ಮತ್ತು, ಆ ಪ್ರಕಾರ ವಾಪಸ್ ತೆಗೆದುಕೊಳ್ಳೋಣಾದ ಮೇಲೆ,

(a) ತಕ್ಷೀರುನಾಮೆ ಏರ್ಪಡಿಸುವದಕ್ಕೆ ಮುಂಚೆಯೇ ವಾಪಸ್ ತೆಗೆದುಕೊಳ್ಳೋಣಾದರೆ, ಅಪಾದನೆ ಪಟ್ಟವನು ವಿಮೋಚನೆ ಮಾಡಲ್ಪಡತಕ್ಕದ್ದು;

(b) ತಕ್ಷೀರುನಾಮೆ ಏರ್ಪಡಿಸೋಣಾದ ಮೇಲೆ ಅಥವಾ ಈ ಕೋಡಿಗನುಗುಣವಾಗಿ ತಕ್ಷೀರುನಾಮೆ ಅಗತ್ಯ ಇಲ್ಲದಿರುವಾಗ ವಾಪಸ್ ತೆಗೆದುಕೊಳ್ಳೋಣಾದರೆ, ಅಪಾದನೆ ಯಾದವನು ಖುಲಾಸೆಮಾಡಲ್ಪಡತಕ್ಕದ್ದು.

ಫಿರ್ಯಾದಿ ನಡಿಸಲಿಕ್ಕೆ ಅಪ್ಪಣೆ.

495. ಒಂದು ಮೊಕದ್ದಮೆಯನ್ನು ವಿಚಾರಣೆಮಾಡುವ—ಯಾ—ದರಿಯಾಫ್ತಿ ಮಾಡುವ ಯಾವನೊಬ್ಬ ಮೇಜಿಸ್ಟ್ರೇಟು, ಫಿರಿಯಾದನ್ನ ಜರಗಿಸಲಿಕ್ಕೆ ಪೋಲಿಸ್ ಇನ್ಸ್‌ಪೆಕ್ಟರನ ದರ್ಜೆಯಕ್ಕಿಂತ ಕೀಳುದರ್ಜೆಯ ಒಬ್ಬ ಪೋಲಿಸ್ ಆಫೀಸರನಲ್ಲದ ಇತರ ಯಾವ ಮನುಷ್ಯನಿಗಾದರೂ ಅಪ್ಪಣೆ ಕೊಡಬಹುದು; ಪರಂತು ಪಬ್ಲಿಕ್ ಪ್ರೊಸಿಕ್ಯೂಟರು, ಅಥವಾ ಮೈಸೂರು ಗವರ್ನಮೆಂಟಿನವರಿಂದ ಈ ಬಗ್ಗಾಗಿ ಸಾಧಾರಣವಾಗಿ—ಯಾ—ವಿಶೇಷವಾಗಿ ಅಧಿಕಾರ ಹೊಂದಿದ ಇತರ ಯಾವ ಮನುಷ್ಯನಾದರೂ ಅಲ್ಲದವನು, ಅಂಥಾ ಅಪ್ಪಣೆ ಇಲ್ಲದೆ ಆ ಪ್ರಕಾರ ನಡಿಯಲಿಕ್ಕೆ ಅರ್ಹನಾಗಿ ಇರುವದಿಲ್ಲ.

ಫಿರ್ಯಾದ್ ನಡಿಸುವ ಯಾವನೊಬ್ಬ ಮನುಷ್ಯನು ತಾನೇ ಖುದ್ದಾಗಲೀ ಅಥವಾ ಪ್ಲೀಡರನ ಮುಖಾಂತರವಾಗಲೀ ಆ ಪ್ರಕಾರ ಜರಗಿಸಬಹುದು.

Chapter XXXIX.—Of Bail.

39ನೇ ಅಧ್ಯಾಯ.—ಜಾಮೀನನ್ನು ಕುರಿತು.

ಜಾಮೀನು ತೆಗದುಕೊಳ್ಳತಕ್ಕದ್ದಾದ ತಕ್ಷೀರಿನ ಸಂಗತಿಯಲ್ಲಿ ಜಾಮೀನು ತೆಗದುಕೊಳ್ಳಲ್ಪಡತಕ್ಕದ್ದು.

496. ಜಾಮೀನು ತೆಗೆದುಕೊಳ್ಳತಕ್ಕದ್ದಲ್ಲವಾದ ತಕ್ಷೀರು ಅಪಾದನೆಪಟ್ಟ ಮನುಷ್ಯನಲ್ಲದ ಇತರ ಯಾವ ಮನುಷ್ಯನಾದರೂ ಪೋಲಿಸ್ ಸ್ಟೇಷನ್ ಜಿಮ್ಮೇದಾರನಾದ ಒಬ್ಬ ಆಫೀಸರನಿಂದ ವಾರಂಟು ಇಲ್ಲದೆ ಹಿಡಿಯಲ್ಪಟ್ಟು—ಯಾ—ತಡೆದಿಡಲ್ಪಟ್ಟು, ಅಥವಾ

1192

ಕೋರ್ಟಿನ ಮುಂದೆ ಹಾಜರಾದರೂ—ಯಾ—ಹಾಜರ್ ಮಾಡಲ್ಪಟ್ಟರೂ—ವ—ಅಂಥಾ ಆಫಿಸರನ ಪಹರೆಯಲ್ಲಿ ಇದ್ದಾಗ ಯಾವಾಗಲಾದರೂ—ಯಾ—ಅಂಥಾ ಕೋರ್ಟಿನಮುಂದೆ ವ್ಯವಹರಣೆಯು ಯಾವ ಸ್ಥಿತಿಯಲ್ಲ್ಯಾದರೂ, ಜಾಮೀನು ಕೊಡಲಿಕ್ಕೆ ಸಿದ್ಧವಿದ್ದಾಗ, ಅಂಥಾ ಮನುಷ್ಯನನ್ನ ಜಾಮೀನು ಮೇಲೆ ಬಿಟ್ಟು ಬಿಡತಕ್ಕದ್ದು : ಪರಂತು ಅಂಥಾ ಆಫಿಸರು—ಯಾ—ಕೋರ್ಟಿನವರು ತಮಗೆ ಯುಕ್ತ ತೋರಿದರೆ, ಅಂಥಾ ಮನುಷ್ಯನಿಂದ ಜಾಮೀನು ತೆಗದುಕೊಳ್ಳುವದರ ಬದಲಾಗಿ, ಇದರಮೇಲೆ ನಿಬಂಧಿಸೋಣಾದ ಪ್ರಕಾರ ಅವನ ಹಾಜರಿ ಬಗ್ಗೆ ಜಾಮೀನುದಾರರು ಇಲ್ಲದೇನೇ, ಆತ ಪತ್ರ ಬರಕೊಟ್ಟಲ್ಲಿ, ಆತನನ್ನ ಬಿಡಬಹುದು.

497. ಜಾಮೀನು ತೆಗದುಕೊಳ್ಳತಕ್ಕದ್ದಲ್ಲಾದ ತಕ್ಸೀರು ಅಪಾದನೆಪಟ್ಟ ಯಾವ ಮನುಷ್ಯನಾದರೂ ಪೋಲಿಸ್ ಸ್ಟೇಷನ್ ಜಿಮ್ಮೆಯನ್ನುಳ್ಳ ಒಬ್ಬ ಆಫಿಸರನಿಂದ ವಾರಂಟು ಇಲ್ಲದೆ ಹಿಡಿಯಲ್ಪಟ್ಟು—ಯಾ—ತಡೆಹಿಡಲ್ಪಟ್ಟರೆ—ಯಾ—ಅಂಥಾ ಕೋರ್ಟಿ ಮುಂದೆ ಹಾಜರಾದರೂ—ಯಾ—ಹಾಜರ್ಮಾಡಲ್ಪಟ್ಟರೂ, ಅವನನ್ನ ಜಾಮೀನಮೇಲೆ ಬಿಟ್ಟು ಬಿಡಬಹುದು, ಪರಂತು ಅವನಮೇಲೆ ಆರೋಪಿಸೋಣಾದ ತಕ್ಸೀರನ್ನು ಅವನು ಮಾಡಿದ್ದಾಗಿ ನಂಬಲಿಕ್ಕೆ ನ್ಯಾಯವಾದ ಸಬಬುಗಳು ಕಾಣಬಂದರೆ, ಅವನು ಆ ಪ್ರಕಾರ ಬಿಟ್ಟುಬಿಡಲ್ಪಡಕೂಡದು.

ಜಾಮೀನು ತೆಗದುಕೊಳ್ಳತಕ್ಕದ್ದಲ್ಲವಾದ ತಕ್ಸೀರಿನ ಸಂಗತಿಯಲ್ಲಿ ಯಾವಾಗ ಜಾಮೀನು ತೆಗದುಕೊಳ್ಳಲ್ಪಡಬಹುದು.

ಅಪಾದನೆ ಪಟ್ಟವನು ಅಂಥಾ ತಕ್ಸೀರು ಮಾಡಿರುವದಾಗಿ ನಂಬಲಿಕ್ಕೆ ನ್ಯಾಯವಾದ ಸಬಬುಗಳು ಇಲ್ಲವೆಂತಾದರೂ, ಆತನ ತಕ್ಸೀರಾತಿಕುರಿತು ಇನ್ನು ಹೆಚ್ಚಿನ ತನಖಿ ಮಾಡುವದಕ್ಕೆ ಸಬಬುಗಳು ಅದೆಯೆಂತ, ಪೋಲಿಸ್ ವಿಚಾರಣೆ, ವಿಚಾರಣೆ—ಯಾ—ಸಂಗತ್ಯಾನುಸಾರ ಪರ್ಯಾಪ್ತಿಯು ಯಾವ ಸ್ಥಿತಿಯಲ್ಲ್ಯಾದರೂ ಅಂಥಾ ಆಫಿಸರಗೆ—ಯಾ—ಕೋರ್ಟಿನವರಿಗೆ ಕಾಣಬಂದರೆ, ಅಪಾದನೆಪಟ್ಟವನು, ಅಂಥಾವಿಚಾರಣೆಯು ಮುಗಿಯುವ ತನಕ, ಜಾಮೀನಿನಮೇಲೇ ಬಿಡಲ್ಪಡತಕ್ಕದ್ದು, ಅಥವಾ, ಅಂಥಾ ಆಫಿಸರ—ಯಾ—ಕೋರ್ಟಿನವರ ಇಷ್ಟವಿದ್ದ ರೀತಿ, ಇದರಮೇಲೆ ನಿಬಂಧಿಸೋಣಾದಪ್ರಕಾರ ಅವನ ಹಾಜರಿ ಬಗ್ಗೆ ಜಾಮೀನದಾರರು ಇಲ್ಲದೇ ಆತ ಪತ್ರ ಬರಕೊಟ್ಟಲ್ಲಿ, ಅವನು ಜಾಮೀನಮೇಲೆ ಬಿಡಲ್ಪಡತಕ್ಕದ್ದು.

ಈ ಕೋಡಿನಪ್ರಕಾರ ವ್ಯವಹರಣೆಯ ನಂತರದ ಯಾವಸ್ಥಿತಿಯಲ್ಲ್ಯಾದರೂ ಯಾವದೊಂದು ಕೋರ್ಟಿನವರು, ಈ ಪ್ರಕರಣಕ್ಕನುಗುಣವಾಗಿ ಜಾಮೀನಮೇಲೆ ಬಿಡಲ್ಪಟ್ಟ ಯಾವ ಮನುಷ್ಯನ್ನಾದರೂ ಹಿಡಿಸಿ, ಆತನನ್ನ ಪಹರೆಗೆ ಕಳುಹಿಸಬಹುದು.

498. ಈ ಅಧ್ಯಾಯಕ್ಕನುಗುಣವಾಗಿ ಬರಿಸಿಕೊಳ್ಳೋಣಾದ ಪ್ರತಿ ಪತ್ರದ ಮೊಬಲಗು ಮೊಕದ್ದಮೆಗು ಸಂಗತಿಗಳಿಗೆ ತಾತ್ಪರ್ಯಕೊಟ್ಟು ನಿರ್ಣಯಿಸತಕ್ಕದ್ದು, ಮತ್ತು ಆ ಮೊಬಲಗು ಅತಿ ಹೆಚ್ಚಾಗಿರಕೂಡದು ;—ವ—ಚೀಫ್ ಕೋರ್ಟಿನವರು—ಯಾ—ಸೆಷನ್ ಕೋರ್ಟಿನವರು ಯಾವ ಮೊಕದ್ದಮೆಯಲ್ಲ್ಯಾದರೂ, ಸಾಬೀತಿಯಮೇಲೆ ಅಪ್ಪೀಲ್ ಇದ್ದರೂ—ಯಾ—ಇಲ್ಲದಿದ್ದರೂ, ಯಾವ ಮನುಷ್ಯನಿಂದಾದರೂ ಜಾಮೀನು ತೆಗದುಕೊಳ್ಳತಕ್ಕದ್ದೆಂತ ಅಪ್ಪಣೆ ಕೊಡಬಹುದು, ಅಥವಾ ಪೋಲಿಸ್ ಆಫಿಸರ—ಯಾ—ಮೇಜಿಸ್ಟ್ರೇಟ್ ಕೊಡಹೇಳದ ಜಾಮೀನು ತಗ್ಗಿಸಬಹುದು.

ಜಾಮೀನ್ ತೆಗಿಯಹೇಳಿ ಅಥವಾ ಜಾಮೀನ್ ತಗ್ಗಿಸಹೇಳಿ ವಿಧಿಸಲಿಕ್ಕೆ ಅಧಿಕಾರ.

499. ಯಾವ ಮನುಷ್ಯನನ್ನಾದರೂ ಜಾಮೀನ ಮೇಲೆ ಅಥವಾ ಆತನ ಸ್ವಂತ ಪತ್ರದಮೇಲೆ ಬಿಡಲ್ಪಡುವದಕ್ಕೆ ಮುಂಚೆ, ಪೋಲಿಸ್ ಆಫಿಸರಗೆ—ಯಾ—ಸಂಗತ್ಯಾನುಸಾರ ಕೋರ್ಟಿನವರಿಗೆ ಸಾಕಾದ್ದಾಗಿ ತಿಳಕೊಳ್ಳುವಷ್ಟು ಮೊಬ್ಲಗಿಗೆ ಒಂದು ಪತ್ರವನ್ನು ಅಂಥಾ ಮನುಷ್ಯನು ಬರಕೊಡತಕ್ಕದ್ದು, ಮತ್ತು, ಆತನು ಜಾಮೀನ್ಮೇಲೆ ಬಿಡಲ್ಪಟ್ಟಾಗ, ಪೋಲಿಸ್ ಆಫಿಸರಗೆ—ಯಾ—ಸಂಗತ್ಯಾನುಸಾರ ಕೋರ್ಟಿನವರಿಗೆ ಸಾಕಾದ್ದಾಗಿ ತೋರುವಷ್ಟು ಹಣದ ಮೊಬ್ಲಗಿಗೆ ಒಬ್ಬ ತಕ್ಕ ಜಾಮೀನದಾರನಿಂದ—ಯಾ—ಹೆಚ್ಚು ಜಾಮೀನದಾರರಿಂದ

ಅಪಾದನೆಪಟ್ಟವನ—ವ—ಜಾಮೀನದಾರರ ಪತ್ರ.

ಬಂದು ಪತ್ರ ಬರಿಸಿಕೆಕೊಳ್ಳಲ್ಪಡತಕ್ಕದ್ದು. ಸದರೀ ಪತ್ರದಲ್ಲಿ ನಮೂದಿಸೋಣಾದ ಫಲಾನಾ ಕಾಲದಲ್ಲಿ—ವ—ಸ್ಥಳದಲ್ಲಿ ಹಾಜರಾಗುವದಾಗಿ—ವ—ಕೋರ್ಟಿನವರು—ಯಾ—ಸಂಗತ್ಯಾನುಸಾರ ಪೋಲಿಸ್ ಆಫಿಸರು ಅನ್ಯಥಾ ನಿರ್ದೇಶಿಸುವ ವರೆಗೆ ಹಾಗೆ ಹಾಜರಾಗುತ್ತಿರುವದಾಗಿಯೂ ಷರತ್ತು ಬರೆದು ಇರತಕ್ಕದ್ದು.

ಫಿರಿಯಾದಿಗೆ ಉದಾಹರಣೆ ಕೊಡುವನಿಮಿತ್ಯ ಅಪೇಕ್ಷಿಸಿದಾಗ, ಸೆಷನ್ಸ ಕೋರ್ಟಿನಲ್ಲಿ—ಯಾ—ಇತರ ಕೋರ್ಟಿನಲ್ಲಿ ಹಾಜರಾಗುವದಾಗಿ, ಸಂಗತಿಗಳಿಂದ ಹಾಗೆ ಅಗತ್ಯವಾದಲ್ಲಿ, ಸದರೀ ಪತ್ರದಿಂದ ಜಾಮೀನಮೇಲೆ ಬಿಡಲ್ಪಟ್ಟ ಮನುಷ್ಯನನ್ನ ಹಾಗೆ ಕೂಡಾ ಬದ್ಧಪಡಿಸತಕ್ಕದ್ದು.

500. ಪತ್ರವು ಬರಿಸಿಕೊಂಡ ಕೂಡಲೇ, ಯಾರ ಹಾಜರಾತಿಬಗ್ಗೆ ಆ ಪತ್ರವು ಬರಿಸಿಕೊಳ್ಳಲ್ಪಟ್ಟದ್ದೋ ಆ ಮನುಷ್ಯನನ್ನ ಬಿಟ್ಟುಬಿಡತಕ್ಕದ್ದು, ಮತ್ತು ಆತನು ಜೈಲಿನಲ್ಲಿ ಇದ್ದರೆ ಆಗ ಆತನಿಂದ ಜಾಮೀನುತೆಗೆದುಕೊಳ್ಳುವ ಕೋರ್ಟಿನವರು ಜೈಲ್ ಜಿಮ್ಮೆಯ ಆಫಿಸರಗೆ ಆತನನ್ನ ಬಿಡತಕ್ಕದ್ದೆಂತ ಒಂದು ಹುಕುಂ ಕೊಡತಕ್ಕದ್ದು, ಮತ್ತು ಅಂಥಾ ಆಫಿಸರನು ಸದರೀ ಹುಕುಂ ತಲ್ಪುತ್ತಲೇ ಆತನನ್ನ ಬಿಟ್ಟುಬಿಡತಕ್ಕದ್ದು.

ಪಹರೆಯಲ್ಲಿಂದ ವಿಮೋಚನೆ.

ಯಾವ ವಿಷಯವುವಾಗಿ ಪತ್ರ ಬರೆಕೊಡಲ್ಪಟ್ಟತೋ ಆ ವಿಷಯವಲ್ಲದ ಇತರ ಯಾವ ಸಂಗತಿಗೋಸ್ಕರವಾದರೂ ತಡೆದಿಡಲ್ಪಡುವದಕ್ಕೆ ಗುರಿಪಡುವ ಯಾವ ಮನುಷ್ಯನನ್ನಾದರೂ ಬಿಟ್ಟುಬಿಡುವದಕ್ಕೆ ಅಗತ್ಯ ಪಡಿಸುವಂಥಾದ್ದು ಏನೂ ಈ ಪ್ರಕರಣದಲ್ಲಿ 496 ನೇ ಪ್ರಕರಣದಲ್ಲಿ—ಯಾ—497 ನೇ ಪ್ರಕರಣದಲ್ಲಿ ಉಂಟೆಂತ ಎಣಿಸಲ್ಪಡಕೂಡದು.

501. ಘರಾವೋಷಿಯಿಂದ, ಮೋಸದಿಂದ—ಯಾ—ಅನ್ಯಥಾ ಸಾಕಾದ್ದಲ್ಲವಾದಂಥಾ ಜಾಮೀನುದಾರನನ್ನ ಅಂಗೀಕರಿಸೋಣಾದರೆ—ಯಾ—ಅವರು ಸಾಕಾದ್ದಲ್ಲದವರಾಗಿ ಅನಂತರ ಆದರೆ, ಜಾಮೀನಿನಮೇಲೆ ಬಿಡಲ್ಪಟ್ಟ ಮನುಷ್ಯನನ್ನ ತಮ್ಮಮುಂದೆ ಹಾಜರು ಪಡಿಸಬೇಕೆಂತ ಕೋರ್ಟಿನವರು ಅಪ್ಪಣೆ ಕೊಟ್ಟು ಹಿಡಿಯಲಿಕ್ಕೆ ಒಂದು ವಾರಂಟ ಕೊಡಬಹುದು, ಮತ್ತು ಸಾಕಾದ ಜಾಮೀನು ಕೊಡಹೇಳಿ ಕೋರ್ಟಿನವರು ಆಪಾದನೆಪಟ್ಟ ಮನುಷ್ಯನಿಗೆ ಹುಕುಂ ಮಾಡಬಹುದು—ವ—ಆತ ಹಾಗೆ ಕೊಡದೆ ತಪ್ಪಿದರೆ ಅವನನ್ನ ಕೈದಿನಲ್ಲಿ ಇರಿಸಬಹುದು.

ಪ್ರಥಮತಃ ತೆಗದುಕೊಂಡ ಜಾಮೀನು ಸಾಲದೆ ಇದ್ದಾಗ ಸಾಕಾದ ಜಾಮೀನು ಕೊಡ ಹೇಳಿ ಹುಕುಂ ಮಾಡುವ ಅಧಿಕಾರ.

502. ಜಾಮೀನಿನಮೇಲೆ ಬಿಡಲ್ಪಟ್ಟ ಮನುಷ್ಯನ ಹಾಜರಾತಿಬಗ್ಗೆ—ವ—ಹಾಜರ ಇರಲಿಕ್ಕೆ ಜಾಮೀನಿಂತ ಎಲ್ಲ ಜಾಮೀನುದಾರರು—ಯಾ—ಆ ಪೈಕಿ ಯಾವನು ಪೂರಾ ಆಗಲೀ—ಯಾ—ಅರ್ಜಿದಾರರಿಗೆ ಸಂಬಂಧಿಸುವಷ್ಟರಮಟ್ಟಿಗೆ ಪತ್ರದಿಂದ ವಿಮೋಚನೆ ಪಡಿಸಬೇಕೆಂತ ಯಾವ ಕಾಲದಲ್ಲಾದರೂ ಮೇಜಿಸ್ಟ್ರೇಟಗೆ ಅರ್ಜಿ ಕೊಡಬಹುದು.

ಜಾಮೀನುದಾರರ ವಿಮೋಚನೆ.

ಹಾಗೆ ಅರ್ಜಿ ಕೊಟ್ಟಮೇಲೆ, ಮೇಜಿಸ್ಟ್ರೇಟು ಹಾಗೆ ಬಿಡಲ್ಪಟ್ಟ ಮನುಷ್ಯನನ್ನ ತನ್ನ ಮುಂದೆ ಹಾಜರು ಪಡಿಸಹೇಳಿ, ಹಿಡಿಯಲಿಕ್ಕೆ ವಾರಂಟು ಕೊಡತಕ್ಕದ್ದು.

ಆ ವಾರಂಟಿನಪ್ರಕಾರ ಆ ಮನುಷ್ಯನು ಹಾಜರಾದರೂ—ಯಾ—ಅವನು ತಾನಾಗಿಯೇ ಹಾಜರಾದರೂ, ಅಂಥಾ ಸಂಗತಿಯಲ್ಲಿ ಮೇಜಿಸ್ಟ್ರೇಟು ಜಾಮೀನ್‌ದಾರರ ಪತ್ರವನ್ನು ಪೂರಾ ಅಥವಾ ಅರ್ಜಿದಾರರಿಗೆ ಸಂಬಂಧಿಸುವಷ್ಟರಮಟ್ಟಿಗೆ ವಿಮೋಚಿಸುವಂತೆ ಹುಕುಂ ಮಾಡಿ, ಆ ಮನುಷ್ಯನನ್ನು ಸಾಕಾದ ಬೇರೆ ಜಾಮೀನ್ ಕೊಡಹೇಳಿ ಅವನಿಗೆ ವಿಧಿಸತಕ್ಕದ್ದು,—ವ—ಅವನು ಹಾಗೆ ಜಾಮೀನ್ ಕೊಡದೆ ತಪ್ಪಿದರೆ, ಅವನನ್ನು ಪಹರೆಯಲ್ಲಿ ಇರಿಸಬಹುದು.

CHAPTER XL.—OF COMMISSIONS FOR THE EXAMINATION OF WITNESSES.

40ನೇ ಅಧ್ಯಾಯ.—ಸಾಕ್ಷಿಗಾರರ ವಿಚಾರಣೆಬಗ್ಯೆ ಕಮ್ಮಿಷನ್ ಕೊಡ ತಕ್ಕದರನ್ನು ಕುರಿತು.

ಸಾಕ್ಷಿಗಾರನ ಹಾಜರಾತಿಯು ಅವಶ್ಯ ಇಲ್ಲವೆಂದು ಯಾವಾಗ್ಯೆ ಹೇಳ ಬಹುದು.

503. ಈ ಕೋಡಿನಪ್ರಕಾರ ಯಾವದೊಂದು ವಿಚಾರಣೆ, ದರ್ಯಾಫ್ತಿ—ಯಾ—ಇತರ ಯಾವದೊಂದು ಪ್ರೊಸೀಡಿಂಗ್ಸಗಳು ನಡಿಯುತ್ತಾ ಇರುವಾಗ, ನ್ಯಾಯ ಸಲ್ಲುವದಕ್ಕೋಸ್ಕರವಾಗಿ ಯಾವನೊಬ್ಬ ಸಾಕ್ಷಿಗಾರನ ವಿಚಾರಣೆಯು ಅಗತ್ಯವೆಂತಲೂ—ವ—ಅಂಥಾ ಸಾಕ್ಷಿಗಾರನನ್ನು ಮೊಕದ್ದಮೆಯ ಸಂದರ್ಭಗಳಿಗೆ ಯುಕ್ತವಾದ ಕಾಲವಿಳಂಬ, ಖರ್ಚು—ಯಾ—ಅನಾನುಕೂಲವಿಲ್ಲದೆ ಹಾಜರು ಮಾಡಿಸಿಕೊಳ್ಳಕೂಡದೆಂತಾ ಕೂಡ ಯಾವನೊಬ್ಬ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟ್, ಸೆಷನ್ ಕೋರ್ಟ್—ಯಾ—ಚೀಫ್ ಕೋರ್ಟಿನವರಿಗೆ ತೋರಿಬಂದರೆ, ಅಂಥಾ ಮೇಜಿಸ್ಟ್ರೇಟು—ಯಾ—ಕೋರ್ಟಿನವರು ಅಂಥಾ ಹಾಜರಾತಿಯು ಅವಶ್ಯ ಇಲ್ಲವೆಂದು ಹೇಳಬಹುದು. ಮತ್ತು ಯಾರ ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಅಂಥಾ ಸಾಕ್ಷಿಗಾರನು ವಸಿಸುತ್ತಾನೋ, ಆ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟಿಗೆ—ಯಾ—ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟಿಗೆ, ಅಂಥಾ ಸಾಕ್ಷಿಗಾರನ ಸಾಕ್ಷ್ಯವನ್ನು ತಕೊಳ್ಳಲಿಕ್ಕೆಬಂದು ಕಮ್ಮಿಷನ್ ಕೊಡಬಹುದು.

ಕಮ್ಮಿಷನ್ ಕೊಡೋಣ—ವ—ಅದರ ಮೇರೆಗೆ ನಡವಳಿ.

ಸದರೀ ಸಾಕ್ಷಿಯು ಬ್ರಿಟಿಷ್ ಇಂಡಿಯಾಬಳಿಗೆ ವಾಸವಾಡುತ್ತಿದ್ದರೆ ಬ್ರಿಟಿಷ್ ಇಂಡಿಯಾ ಗವರ್ನ್ಮೆಂಟಿನವರು ಆಬಗ್ಯೆ ಯಾವ ಆಫೀಸರನ್ನು ನಿಯಮಿಸುತ್ತಾರೋ ಆ ಆಫೀಸರಿಗೆ ಕಮಿಷನ್ ಕೊಡಬಹುದು.

ಹಾಗೆ ಕಮ್ಮಿಷನ್ ಕೊಡಲ್ಪಟ್ಟ ಮೇಜಿಸ್ಟ್ರೇಟನು—ಯಾ—ಆಫೀಸರನು—ಯಾ—ಆತನು ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟನಾಗಿದ್ದಲ್ಲಿ, ತಾನು ಸ್ವತಃ—ಯಾ—ಈ ಬಗ್ಯಾಗಿ ಅವನಿಂದ ನೇಮಿಸಲ್ಪಡುವ ಫಸ್ಟ್‌ಕ್ಲಾಸಿನ ಅಂಥಾ ಮೇಜಿಸ್ಟ್ರೇಟನು, ಸಾಕ್ಷಿಗಾರನ ಇರತಕ್ಕ ಸ್ಥಳಕ್ಕೆ ಹೋಗತಕ್ಕದ್ದು, ಅಥವಾ ತನ್ನ ಮುಂದೆ ಹಾಜರಾಗತಕ್ಕದ್ದೆಂತ ಸದರೀ ಸಾಕ್ಷಿಗಾರಗೆ ಸಮನ್ಸ್ ಮಾಡತಕ್ಕದ್ದು, ಮತ್ತು ಈ ಕೋಡು ಪ್ರಕಾರ ವಾರಂಟ್ ಮೊಕದ್ದಮೆಗಳ ದರ್ಯಾಫ್ತಿಗಳಲ್ಲಿ ಹ್ಯಾಗೋ ಹಾಗೆಯೇ ಅಂಥಾ ಸಾಕ್ಷಿಗಾರನ ಸಾಕ್ಷ್ಯವನ್ನು ಮೇಜಿಸ್ಟ್ರೇಟನು ತಕೊಳ್ಳತಕ್ಕದ್ದು, ಮತ್ತು ಇದಕ್ಕಾಗಿ ಹಾಗೆಯೇ ಅದೇ ಅಧಿಕಾರಗಳನ್ನು ಚಲಾಯಿಸಬಹುದು.

ಕಕ್ಷಿಗಾರರು ಸಾಕ್ಷಿಗಾರರನ್ನು ವಿಚಾರಣೆ ಮಾಡಬಹುದು.

505. ಕಮ್ಮಿಷನ್ ಹುಟ್ಟಿದ ಈ ಕೋಡಿನ ಅನುಗುಣವಾದ ಯಾವದೊಂದು ಪ್ರೊಸೀಡಿಂಗ್ಸಿನ ಕಕ್ಷಿಗಳು, ವಿವಾದಾಂಶಕ್ಕೆ ಸಂಬಂಧವಾಗಿರುವದೆಂದು ಕಮ್ಮಿಷನ್ ಅಪ್ಪಣೆಮಾಡಿದ—ಮೇಜಿಸ್ಟ್ರೇಟು—ಯಾ—ಕೋರ್ಟಿನವರು ತಿಳಕೊಳ್ಳಬಹುದಾದಂಥಾ ತಮ್ಮ ತಮ್ಮ ಕಡೆ ಯಾವ ಸವಾಲುಗಳನ್ನಾದರೂ ಬರಹ ಮೂಲಕ ಕಳುಹಿಸಬಹುದು, ಮತ್ತು ಯಾರಿಗೆ ಕಮಿಷನ್ ಕಳುಹಿಸಲ್ಪಟ್ಟಿತೋ ಆ ಮೇಜಿಸ್ಟ್ರೇಟ್—ಯಾ—ಆಫೀಸರನು ಅಂಥಾ ಸವಾಲುಗಳಮೇಲೆ ಸಾಕ್ಷಿಗಾರನನ್ನು ವಿಚಾರಣೆಮಾಡತಕ್ಕದ್ದು.

ಅಂಥಾ ಯಾವನೊಬ್ಬ ಕಕ್ಷಿಗಾರನು ಸದರೀ ಮೇಜಿಸ್ಟ್ರೇಟ್—ಯಾ—ಆಫೀಸರನಮುಂದೆ ವಕೀಲನ ಮುಖಾಂತರವಾಗಿ ಆಗಲೀ—ಯಾ—ಸೆರೆಯಲ್ಲಿ ಇಲ್ಲದಿದ್ದರೆ, ತಾನೇ ಖುದ್ದಾಗಿ ಆಗಲೀ ಹಾಜರಾಗಿ, ಸದರೀ ಸಾಕ್ಷಿಗಾರನಿಗೆ ವಿಚಾರಣೆ ಮಾಡಲೂ, ಫಾಟಿ ಸವಾಲು ಮಾಡಲೂ—ವ—(ಸಂಗತ್ಯಾನುಸಾರವಾಗಿ) ಪುನರ್ವಿಚಾರಣೆ ಮಾಡಲೂ ಬಹುದು.

... ಕೊಡತಕ್ಕ ಬಗ್ಯೆ ಅರ್ಜಿ ಮಾ...

506. ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟನಲ್ಲದ ಇತರ ಯಾವನೊಬ್ಬ ಮೇಜಿಸ್ಟ್ರೇಟನ ಮುಂದೆ ಈ ಕೋಡಿನಪ್ರಕಾರ ಒಂದು ವಿಚಾರಣೆ—ಯಾ—ದರ್ಯಾಫ್ತಿ—ಯಾ—ಇತರ ಯಾವದೊಂದು ಪ್ರೊಸೀಡಿಂಗ್ಸಗಳು ನಡಿಯುತ್ತಾ ಇರುವಾಗ, ನ್ಯಾಯ ಸಲ್ಲು... ... ಸಾಕ್ಷ್ಯ ಅವಶ್ಯವಾಗಿದ್ದು, ಅಂಥಾ

1185

ಸಾಕ್ಷಿಗಾರನನ್ನ ಮೊಕದ್ದಮೆಗಳ ಸಂದರ್ಭಗಳಿಗೆ ಯುಕ್ತವಾದ ಕಾಲವಿಳಂಬ, ಖರ್ಚು—ಯಾ—ಅನಾನ್ಕೂಲವಿಲ್ಲದೆ ಹಾಜರು ಮಾಡಿಸಿಕೊಳ್ಳಕೂಡದಾಗಿದ್ದು, ವಿಚಾರಣೆಬಗ್ಗೆ ಒಂದು ಕಮ್ಮಿಷನ್ ಕಳುಹಿಸತಕ್ಕದೆಂತ ತೋರಿದರೆ, ಅಂಥಾ ಮೇಜಿಸ್ಟ್ರೇಟನು ಡಿಸ್ಟ್ರಿಕ್ಟ ಮೇಜಿಸ್ಟ್ರೇಟರಿಗೆ, ಅರ್ಜಿಬಗ್ಗೆ ಸಬಬುಗಳು ನಮೂದಿಸಿ, ಒಂದು ಅರ್ಜಿ ಬರಕೊಳ್ಳತಕ್ಕದ್ದು ; ಮತ್ತು ಡಿಸ್ಟ್ರಿಕ್ಟ ಮೇಜಿಸ್ಟ್ರೇಟರು ಈ ಮುಂಚೆ ನಿಬಂಧಿಸೋಣಾದ ರೀತಿಯಲ್ಲಿ ಕಮ್ಮಿಷನ್ ಕಳುಹಿಸಲೂ ಬಹುದು, ಅಥವಾ ಅರ್ಜಿಯನ್ನು ತಿರಸ್ಕರಿಸಲೂ ಬಹುದು.

ಕಮ್ಮಿಷನ್ ವಾಪಸ ಮಾಡೋಣ.

507. 503ನೇ ಪ್ರಕರಣ—ಯಾ—506ನೇ ಪ್ರಕರಣದಮೇರೆಗೆ ಹುಟ್ಟಿದ ಯಾವದೊಂದು ಕಮ್ಮಿಷನ್ ಕ್ರಮವಾಗಿ ಜಾರಿ ಮಾಡಿದನಂತರ, ಅದಕ್ಕನುಗುಣವಾಗಿ ವಿಚಾರಣೆಯಾದ ಸಾಕ್ಷಿಗಾರನ ವಾಗ್ಮೂಲ ಸಮೇತ, ಅದನ್ನು ಸದರೀ ಕಮ್ಮಿಷನ್ ಕೊಟ್ಟ ಕೋರ್ಟಿಗೆ ವಾಪಸ್ ಕಳುಹಿಸತಕ್ಕದ್ದು ; ಮತ್ತು ಸದರೀ ಕಮ್ಮಿಷನ್, ಅದರಮೇಲೆ ಉಂಟಾದ ರಿಟರ್ನ ಮತ್ತು ವಾಗ್ಮೂಲಕೂಡ ಕಕ್ಷಿ ಗಾರರು ನ್ಯಾಯವಾದ ಎಲ್ಲಾ ಕಾಲಗಳಲ್ಲಿ ನೋಡುವದಕ್ಕೆ ನಿರಾತಂಕವುಳ್ಳದ್ದಾಗಿರತಕ್ಕದ್ದು, ಮತ್ತು ನ್ಯಾಯವಾದ ಸಮಸ್ತ ವಿನಾಯತಿಗಳಿಗೆ ಒಳಪಟ್ಟು ಕಕ್ಷಿಗಾರರಪೈಕಿ ಯಾವನೊಬ್ಬ ಪಕ್ಷದವನಾಗಲೀ ಅದನ್ನು ಸಾಕ್ಷ್ಯವಾಗಿ ಓದಬಹುದು, ಮತ್ತು ಅದು ರಿಕಾರ್ಡಿನ ಒಂದು ಭಾಗವಾಗಿ ಇರತಕ್ಕದ್ದು.

ವಿಚಾರಣೆ-ಯಾ—ದರಿಯಾಫ್ತಿಯನ್ನು ನಿಲ್ಲಿಸಿಡೋಣ.

508. 503ನೇ ಪ್ರಕರಣ—ಯಾ—506 ನೇ ಪ್ರಕರಣ ಪ್ರಕಾರ ಕಮ್ಮಿಷನ್ ಹುಟ್ಟಿ ಇರುವ ಪ್ರತಿ ಮೊಕದ್ದಮೆಯಲ್ಲಿ, ಅಂಥಾ ಕಮ್ಮಿಷನ್ ಜಾರಿಮಾಡಿ ವಾಪಸ ಪಡಿಸುವದಕ್ಕೆ ನ್ಯಾಯವಾಗಿ ಸಾಕಾದ ಫಲಾನಾ ಕಾಲದವರಿಗೆ, ವಿಚಾರಣೆ ದರ್ಯಾಫ್ತಿ—ಯಾ—ಇತರ ಪ್ರೊಸೀಡಿಂಗ್ಸ ನಿಲ್ಲಿಸಿ ಇಡಲ್ಪಡಬಹುದು.

CHAPTER. XLI.—SPECIAL RULES OF EVIDENCE.

41ನೇ ಅಧ್ಯಾಯ—ಸಾಕ್ಷ್ಯದ ವಿಶೇಷ ಕಾಯಿದೆಗಳು.

ವೈದ್ಯನಾದ ಸಾಕ್ಷಿಗಾರನ ವಾಂಗ್ಮೂಲ.

509. ಅಪಾದನೆ ಪಟ್ಟವನ ಸಮಕ್ಷಮದಲ್ಲಿ ಮೇಜಿಸ್ಟ್ರೇಟನಿಂದ ತೆಗಿಯೋಣಾಗಿ ಆತನಿಂದ ದಸ್ಕತ್ತು ಮಾಡಲ್ಪಟ್ಟ ಸಿವಿಲ್ ಸರ್ಜನ್ ಎಂಬ ರಣವೈದ್ಯನ—ಯಾ—ಇತರ ವೈದ್ಯನಾದ ಸಾಕ್ಷಿಗಾರನ ವಾಂಗ್ಮೂಲವು, ಈ ಕೋಡಿಗನುಗುಣವಾದ ಯಾವದೊಂದು ವಿಚಾರಣೆಯಲ್ಲಿ, ದರ್ಯಾಫ್ತಿಯಲ್ಲಿ—ಯಾ—ಇತರ ಪ್ರೊಸೀಡಿಂಗ್ಸಿನಲ್ಲಿ, ವಾಂಗ್ಮೂಲ ಕೊಟ್ಟವನು ಸಾಕ್ಷಿಗಾರನಾಗಿ ಕರೆಯಲ್ಪಡದೆ ಇದ್ದಾಗ್ಯೂ, ಸಾಕ್ಷ್ಯವಾಗಿ ಅಂಗೀಕರಿಸಲ್ಪಡಬಹುದು.

ವೈದ್ಯನಾದ ಸಾಕ್ಷಿಗಾರನಿಗೆ ಸಮ್ಮನ್ ಕೊಡುವ ಅಧಿಕಾರ.

ಕೋರ್ಟಿನವರು, ಯುಕ್ತವೆಂತ ಆಲೋಚಿಸಿದರೆ, ಅಂಥಾ ವಾಂಗ್ಮೂಲ ಕೊಟ್ಟವನನ್ನು ಸಮ್ಮನ್ಮಾಡಿ ಅವನ ವಾಂಗ್ಮೂಲದ ಮುಖ್ಯಾಂಶವನ್ನು ಕುರಿತು ವಿಚಾರಣೆ ಮಾಡಬಹುದು.

ಕೆಮಿಕಲ್ ಎಗ್ಜಾಮಿನರ್ ಎಂಬ ಉದ್ಯೋಗಸ್ಥನ ರಿಪೋರ್ಟು.

510. ಈ ಕೋಡಿಗನುಗುಣವಾದ, ಯಾವದೊಂದು ಪ್ರೊಸೀಡಿಂಗ್ಸ್ ನಡಿಯುತ್ತಿರುವಲ್ಲಿ ಶೋಧನೆಮಾಡಿ—ಯಾ—ಪರಿಶೋಧನೆಮಾಡಿ, ರಿಪೋರ್ಟು ಮಾಡುವಬಗ್ಗೆ ಗವರ್ನಮೆಂಟ ಕೆಮಿಕಲ್ ಎಗ್ಜಾಮಿನರ್—ಯಾ—ಅಸಿಸ್ಟಾಂಟ ಕೆಮಿಕಲ್ ಎಗ್ಜಾಮಿನರ್ ಎಂಬ ಅಧಿಕಾರಸ್ಥನಿಗೆ ಕ್ರಮವಾಗಿ ಕಳುಹಿಸಿಕೊಡೋಣಾದಂಥ ಯಾವದೊಂದು ಬಾಬಿನಲ್ಲಿ—ಯಾ—ಪದಾರ್ಥದ ವಿಷಯದಲ್ಲಿ, ಆತನಿಂದ ಮಾಡೋಣಾದ್ದಾಗಿ ತೋರುವ ರಿಪೋರ್ಟು ಅದ ಆತನ ದಸ್ಕತು ಇರುವಂಥಾ ಯಾವದೊಂದು ದಸ್ತಾವೇಜನ್ನು, ಈ ಕೋಡಿಗನುಗುಣವಾದ ಯಾವದೊಂದು ವಿಚಾರಣೆ, ದರ್ಯಾಫ್ತಿ—ಯಾ—ಇತರ ಪ್ರೊಸೀಡಿಂಗ್ಸಿನಲ್ಲಿ, ಸಾಕ್ಷ್ಯವಾಗಿಉಪಯೋಗಿಸಬಹುದು.

1196

511. ಈ ಕೋಡಿಗನುಗುಣವಾದ ಯಾವದೊಂದು ವಿಚಾರಣೆಯಲ್ಲಿ, ದರ್ಯಾಫ್ತಿಯಲ್ಲಿ—ಯಾ—ಇತರ ಪ್ರೊಸಿಡಿಂಗ್ಸಿನಲ್ಲಿ, ಪ್ರಾಕಿನ ಸಾಬೀತಿ—ಯಾ—ಖುಲಾಸೆಯನ್ನು, ಆಯಾ ಕಾಲದಲ್ಲಿ ಜಾರಿಯಲ್ಲಿ ಇರುವ ಯಾವದೊಂದು ಕಾನೂನಿನಿಂದ ಏರ್ಪಡಿಸೋಣಾದ ಇತರ ಯಾವನ ರೀತಿಗಾದರೂ ಕೂಡಿಸಿ,—

ಪ್ರಾಕಿನ ಸಾಬೀತು—ಯಾ—ಖುಲಾಸೆ ಯಾವ ಪ್ರಕಾರ ರುಜು ಮಾಡಲ್ಪಡುತ್ತೆ.

(a) ಅಂಥಾ ಸಾಬೀತಿ—ಯಾ—ಖುಲಾಸೆಯು ಯಾವ ಕೋರ್ಟಿನಲ್ಲಿ ಆಯಿತೋ, ಆ ಕೋರ್ಟಿನ ರಿಕಾರ್ಡಿನ ಭದ್ರತೆಯಲ್ಲಿ ಇರುವ ಆಫಿಸರನ ದಸ್ಕತಿನಿಂದ ಸದರೀ ಸಜಾ ವಿಧಿಯು—ಯಾ—ಹುಕುಮಿನ ನಕಲೆಂದು ಸರ್ಟಿಫೈ ಮಾಡಲ್ಪಟ್ಟ ಒಂದು ಏಕಸ್ಟ್ರಾಕ್ಟಿನಿಂದ; ಅಥವಾ

(b) ಸಾಬೀತಿ ಸಂಗತಿಯಲ್ಲಿ, ಆ ಶಿಕ್ಷೆಯು—ಯಾ—ಅದರ ಯಾವದೊಂದು ಭಾಗವು ಯಾವ ಜೈಲಿನಲ್ಲಿ ಜಾರಿ ಮಾಡೋಣಾಯಿತೋ ಆ ಜೈಲ್ ಜಿಮ್ಮೆಯಲ್ಲಿ ಇರುವ ಆಫಿಸರನಿಂದ ದಸ್ಕತು ಮಾಡಲ್ಪಟ್ಟ ಸರಟಿಫಿಕೇಟಿನ ದ್ವಾರ, —ಯಾ— ಯಾವ ಕಮ್ಮಿಟಮೆಂಟ ವಾರಂಟ ಪ್ರಕಾರ ಶಿಕ್ಷೆ ಅನುಭವಿಸುವಣಾಯಿತೋ ಆ ವಾರಂಟನ್ನು ಹಾಜರುಪಡಿಸುವದರ ಮೂಲಕವಾಗಿ;

ಅಂಥಾ ಪ್ರತಿ ಒಂದು ಸಂಗತಿಯಲ್ಲಿ, ಹಾಗೆ ಸಾಬಿತುಪಟ್ಟ—ಯಾ—ಖುಲಾಸೆಪಟ್ಟ ಮನುಷ್ಯನು ಆಪಾದನೆಪಟ್ಟವನೇ ಎಂಬ ಗುರ್ತಿನ ವಿಷಯದಲ್ಲಿ ಸಾಕ್ಷ್ಯ ಕೊಡುವದರಿಂದ ಕೂಡ; ರುಜು ಮಾಡಲ್ಪಡಬಹುದು.

512. ಆಪಾದನೆಪಟ್ಟ ಮನುಷ್ಯನು ತಪ್ಪಿಸಿಕೊಂಡು ಓಡಿಹೋಗಿದ್ದಾನೆ ಯೆಂತ ರುಜು ಪಟ್ಟರೆ, ಮತ್ತು ಅವನನ್ನು ಹಿಡಿಯುವ ಸಮೀಪವಾದ ನಿರೀಕ್ಷಣೆಗಳೇನಾದರೂ ಇಲ್ಲ ದಿದ್ದರೆ, ಖ್ಯಾದಾದ ತಕ್ಸೀರಿನಬಗ್ಯೆ ಅಂಥಾ ಮನುಷ್ಯನನ್ನ ದರ್ಯಾಫ್ತಿ ಮಾಡಲಿಕ್ಕೆ—ಯಾ—ದರ್ಯಾಫ್ತಿ ಬಗ್ಯೆ ಕಮ್ಮಿಟ ಮಾಡಲಿಕ್ಕೆ ಅಧಿಕಾರ ಇರುವ ಕೋರ್ಟಿನವರು, ಆತನ ಗೈರ ಹಾಜರಿಯಲ್ಲಿ, ಫಿರಿಯಾದಿ ತರಫಿನಿಂದ ಹಾಜರು ಮಾಡಲ್ಪಟ್ಟ ಸಾಕ್ಷಿಗಳನ್ನು (ಇದ್ದರೆ) ವಿಚಾರಿಸಿ, ಅವರ ವಾಂಗ್ಮೂಲಗಳನ್ನು ಬರೆಕೊಳ್ಳಬಹುದು. ಸದರೀ ವಾಂಗ್ಮೂಲ ಕೊಟ್ಟವನು ಸತ್ತುಹೋದರೆ—ಯಾ—ಸಾಕ್ಷ್ಯವನ್ನು ಕೊಡಲಿಕ್ಕೆ ಅಯೋಗ್ಯನಾದರೆ—ಯಾ—ಅವನ ಹಾಜರಾತಿಯು ಮೊಕದ್ದಮೆ ಸಂಗತಿಗಳಿಂದ, ಅಕಾರಣವೆಂತ ತೋರುವಷ್ಟು ಕಾಲವಿಳಂಬ, ಖರ್ಚು—ಯಾ—ಅನಾನುಕೂಲತೇ ವಿನಾ, ದೊರಕಿಸಿಕೊಳ್ಳಲಿಕ್ಕೆ ಕೂಡದಾದರೆ, ಅಂಥಾ ಮನುಷ್ಯನು ಹಿಡಿಯಲ್ಪಟ್ಟಮೇಲೆ, ಅವನು ಆಪಾದಿಸಲ್ಪಟ್ಟ ತಕ್ಸೀರಿನ ಬಗ್ಯಾಗಿ ಅವನಮೇಲೆ ನಡಿಯುವ ವಿಚಾರಣೆಯಲ್ಲಿ—ಯಾ—ದರ್ಯಾಫ್ತಿಯಲ್ಲಿ, ಅಂಥಾ ಯಾವ ವಾಂಗ್ಮೂಲವು, ಸಾಕ್ಷ್ಯವಾಗಿ ಕೊಡಲ್ಪಡಬಹುದು.

ಆಪಾದನೆ ಪಟ್ಟವನ ಗೈರ ಹಾಜರಿಯಲ್ಲಿ ಸಾಕ್ಷ್ಯದ ರಿಕಾರ್ಡು.

CHAPTER XLII.—PROVISIONS AS TO BONDS.

42ನೇ ಅಧ್ಯಾಯ.—ಪತ್ರಗಳನ್ನು ಕುರಿತು ನಿಬಂಧನೆಗಳು.

513. ಯಾವ ಆಫಿಸರಿಂದ—ಯಾ—ಯಾವದೊಂದು ಕೋರ್ಟಿನವರಿಂದ, ಜಾಮೀನು ಸಮೇತ—ಯಾ—ಜಾಮೀನು ಇಲ್ಲದೇನೇ, ಒಂದು ಪತ್ರ ಬರಕೊಡಹೇಳಿ ಯಾವ ಮನುಷ್ಯನಾದರೂ ಅಪೇಕ್ಷಿಸಲ್ಪಟ್ಟಾಗ, ಒಳ್ಳೇ ನಡತೆಬಗ್ಯೆ ಪತ್ರ ಕೊಡಹೇಳಿದ ಸಂಗತಿಯಲ್ಲಿ ಶಿವಾಯಿ, ಸದರೀ ಆಫಿಸರ—ಯಾ—ಕೋರ್ಟಿನವರು, ಅಂಥಾ ಪತ್ರ ಬರಕೊಡುವದಕ್ಕೆ ಬದಲಾಗಿ ತಾವು ಗೊತ್ತುಮಾಡುವಷ್ಟು ಹಣವನ್ನು, ಅಥವಾ ಅಷ್ಟು ಐವಜಿಗೆ ಗವರ್ನಮೆಂಟ ಪ್ರಾಮಿಸರಿ ನೋಟುಗಳೆಂಬ ಪತ್ರಗಳನ್ನು ಠೇವಣಾತಿಯಾಗಿ ಇಡುವದಕ್ಕೆ ಅಪ್ಪಣೆ ಕೊಡಬಹುದು.

ಮುಚ್ಚಳಿಕೆ ಬದಲಾಗಿ ಠೇವಣಾತಿ.

 (1197)

514. ಈ ಕೋಡಿಗನುಗುಣವಾಗಿ ಯಾವದೊಂದು ಪತ್ರ ಪಡಕೊಂಡ ಕೋರ್ಟನವರಿಗೆ—ಯಾ—

ಪತ್ರದ ಷರತ್ತಿಗೆ ತಪ್ಪಿ ಭಂಗಪಡಿಸಿದರೆ ಫರ್ಸ್ಟ್‌ಕ್ಲಾಸ ಮೇಜಿಸ್ಟ್ರೇಟರಿಗೆ ಮುಂದಟ್ಟಾಗುವಹಾಗೆ, ನಡವಳತೆ ಕ್ರಮ.

ಯಾ—ಒಂದು ಕೋರ್ಟಮುಂದೆ ಹಾಜರಾಗುವಬಗ್ಯೆ ಪತ್ರವಾಗಿದ್ದಾಗ್ಯೆ, ಅಂಥಾ ಕೋರ್ಟನವರಿಗೆ ಮುಂದಟ್ಟಾಗುವ ಹಾಗೆ,

ಅಂಥಾ ಪತ್ರದಮೇರೆಗೆ ನಡಕೊಳ್ಳದೆ ಅದನ್ನು ಭಂಗಪಡಿಸಿದ್ದಾಗಿ, ರುಜುಪಟ್ಟಾಗ್ಯೆ, ಸದರೀ ಕೋರ್ಟನವರು ಆ ಮೇರೆಗೆ ರುಜುಪಟ್ಟ ಸಬಬನ್ನು ರಿಕಾರ್ಡು ಮಾಡತಕ್ಕದ್ದು, ಮತ್ತು ಸದರೀ ಪತ್ರದಿಂದ ಬದ್ಧಪಡಿಸೋಣಾದ ಮನುಷ್ಯನನ್ನು ಅದರ ಜುರುಮಾನೆ ತೆರಹೇಳ, ಅಥವಾ ಅದನ್ನು ತೆರದೆ ಇರಲಿಕ್ಕೆ ಸಬಬು ತೋರಿಸ ಹೇಳ, ವಿಧಿಸ ಬಹುದು.

ಸಾಕಾದ ಸಬಬು ತೋರಿಸೋಣಾಗದೆಯೂ—ವ—ದಂಡಸಂದಾಯವಾಗದೆಯೂ ಇದ್ದರೆ, ಸದರೀ ಕೋರ್ಟು ಅಂಥಾ ಮನುಷ್ಯನದಾಗಿರುವ ಯಾವ ಚರಸ್ವತ್ತನ್ನಾದರೂ ಜಫ್ತಿ ವಿಕ್ರಯಗಳ ಮೂಲಕವಾಗಿ ಆ ದಂಡವನ್ನು ವಾರಂಟು ಕೊಟ್ಟು ಅದ್ವಾರಾ ವಸೂಲ್ಮಾಡಲಿಕ್ಕೆ ಪ್ರವರ್ತಿಸಬಹುದು.

ಅಂಥಾ ವಾರಂಟು ಯೆಲ್ಲಿ ಹುಟ್ಟಿತೋ ಆ ಕೋರ್ಟು ಸ್ಥಳೀಯ ಅಧಿಕಾರ ಸರಹದ್ದಿನೊಳಗೆ ಅದನ್ನ ಅಮಲ್ ಜಾರೀ ಮಾಡಬಹುದು: ಮತ್ತು ಅದು ಯಾರ ಸ್ಥಳೀಯ ಅಧಿಕಾರಸರಹದ್ದಿನೊಳಗೆ ಸಿಕ್ಕಿ ಇಧೆಯೋ ಆ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನಿಂದ ಇಂಡಾರ್ಸ್ಮಾವಾಗ್ಯೆ ಅಂಥಾ ಸರಹದ್ದಿನ ಹೊರಗೆ ಇರುವ ಸದರೀ ಮನುಷ್ಯನ ಚರಸ್ವತ್ತನ್ನು ಜಪ್ತಿ ಮಾಡಿ ವಿಕ್ರಯಿಸಲಿಕ್ಕೆ ಅಧಿಕಾರ ಕೊಡತಕ್ಕದ್ದು.

ಸದರೀ ದಂಡ ಸಂದಾಯವಾಗದೆಯೂ ಮತ್ತು ಅಂಥಾ ಜಫ್ತಿ ವಿಕ್ರಯಗಳ ಮೂಲವಾಗಿ ವಸೂಲ್ಮಾಡಲಿಕ್ಕಾಗದೆಯೂ ಇದ್ದರೆ, ಹಾಗೆ ಬದ್ಧಪಡಿಸಲ್ಪಟ್ಟ ಮನುಷ್ಯನು ಆರು ತಿಂಗಳ ವಾಯಿದೆ ಪರ್ಯಂತ ವಾರಂಟು ಹುಟ್ಟಿದ ಕೋರ್ಟಿನ ಹುಕುಮಿನ ಮೂಲಕವಾಗಿ, ಸಿವಿಲ್ ಜೈಲಿನಲ್ಲಿ ಕೈದು ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

ಕೋರ್ಟನವರು, ತಮ್ಮ ಯುಕ್ತ ಪ್ರಕಾರ ನಮೂದಿಸೋಣಾದ ದಂಡದ ಎಷ್ಟರ ಅಂಶವನ್ನಾದರು ಮಾಫುಮಾಡಿ, ಅದರ ಒಂದು ಭಾಗದ ಪಾವತಿಬಗ್ಯೆ ಮಾತ್ರ ಅಮಲ್ಜಾರಿ ಮಾಡಿಸಬಹುದು.

514ನೇ ಪ್ರಕರಣಪ್ರಕಾರ ಹುಕುಂಗಳ ಮೇಲೆ ಪುನರ್ವಿಮರ್ಶೆ ಮತ್ತು ಅಪ್ಪೀಲುಗಳು.

515. 514ನೇ ಪ್ರಕರಣ ಪ್ರಕಾರ ರಾಜಧಾನಿ ಮ್ಯಾಜಿಸ್ಟ್ರೇಟು—ಯಾ—ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟು ಅಲ್ಲದ ಇತರ ಯಾವ ಮ್ಯಾಜಿಸ್ಟ್ರೇಟನಿಂದಾದರೂ ಕೊಡಲ್ಪಟ್ಟ ಸಮಸ್ತ ಆರ್ಡರುಗಳು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಿಗೆ ಅಪ್ಪೀಲ್ ಆಗತಕ್ಕವುಗಳು,—ಯಾ, ಹಾಗೆ ಅಪ್ಪೀಲ್ ಆಗದೆ ಹೋದರೆ, ಅವನಿಂದ ಪುನರ್ವಿಮರ್ಶೆ ಮಾಡಲ್ಪಡಬಹುದು.

ಕೆಲವು ಮುಚ್ಚಳಿಕೆಗಳ ಮೇಲೆ ಸಂದಾಯವಾಗಬೇಕಾದ ಹಣ ವಸೂಲ್ಮಾಡಲಿಕ್ಕೆ ಹುಕ್ಕುಂ ಕೊಡುವದಕ್ಕೆ ಅಧಿಕಾರ.

516. ಸೆಷನ್ಸ್ ಕೋರ್ಟು ಮುಂದೆ ಹಾಜರಾಗುವ—ಯಾ—ಹೊಣೆಯಾಗಿ ಯಿರತಕ್ಕ ಬಗ್ಯೆ ಕೊಟ್ಟ ಪತ್ರದ ಮೇಲೆ ಸಂದಾಯವಾಗಬೇಕಾದ ಹಣವನ್ನು ವಸೂಲು ಮಾಡಲಿಕ್ಕೆ ಯಾವನೊಬ್ಬ ಮ್ಯಾಜಿಸ್ಟ್ರೇಟನಿಗಾದರೂ ಸೆಷನ್ಸ್ ಕೋರ್ಟನವರು ಅಪ್ಪಣೆ ಕೊಡಬಹುದು.

CHAPTER XLIII—OF THE DISPOSAL OF PROPERTY.

43ನೇ ಅಧ್ಯಾಯ.—ಸ್ವತ್ತಿನ ವಿನಿಯೋಗವನ್ನು ಕುರಿತು.

ಯಾವದರ ವಿಷಯವಾಗಿ ತಕ್ಕೀರು ಜರಿಗಿತೋ ಆ ಸ್ವತ್ತಿನ ವಿನಿಯೋಗಕ್ಕಾಗಿ ಹುಕುಂ.

517. ಯಾವದೊಂದು ಕ್ರಿಮಿನಲ್ ಕೋರ್ಟಿನಲ್ಲಿ ವಿಚಾರಣೆ—ಯಾ—ದರಿಯಾಫ್ತಿ ಮುಗಿದಾಗ, ಯಾವ ಸ್ವತ್ತಿನ ವಿಷಯವಾಗಿ ತಕ್ಕೀರು ನಡಿಸಿದ್ದಾಗಿ—ಯಾ—ಯಾವದೊಂದು ತಕ್ಕೀರು ನಡಿಸುವ ಬಗ್ಯೆ ಉಪಯೋಗಿಸಿ ಕೊಂಡದ್ದಾಗಿ, ತೋ

1178

ರುವ, ತಮ್ಮ ಮುಂದೆ ಹಾಜರು ಮಾಡಲ್ಪಟ್ಟ ಇತರ ಸ್ವತ್ತಿನ—ಯಾ—ಯಾವದೊಂದು ದಸ್ತಾವೇಜಿನ ವಿನಿಯೋಗದ ಬಗ್ಗೆ, ತಾವು ಯುಕ್ತವೆಂದು ತಿಳಕೊಳ್ಳುವಂಥಾ ಹುಕ್ಕುಂ ಕೊಡಬಹುದು.

ಅಂಥಾ ಒಂದು ಹುಕುಂ ಸೆಷನ್ಸ ಕೋರ್ಟಿನವರಿಂದ ಕೊಡಲ್ಪಟ್ಟು, ಸ್ವತ್ತನ್ನು ಪಡಕೊಳ್ಳಲಿಕ್ಕೆ ಅರ್ಹನಾದ ಮನುಷ್ಯಗೆ ತಮ್ಮ ಕೋರ್ಟಿನ ಆಫೀಸರರ ದ್ವಾರಾ ಅದನ್ನು ಅನುಕೂಲವಾಗಿ ಒಪ್ಪಿಸುವದಕ್ಕೆ ಆಗದೆಹೋದಾಗ, ಅಂಥಾ ಕೋರ್ಟಿನವರು ಆ ಹುಕುಮಿನ ಜಾರಿಯನ್ನು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟನು, ನಡಿಸತಕ್ಕದ್ದೆಂತ ಅಪ್ಪಣೆ ಕೊಡಬಹುದು.

ಅಪ್ಪೀಲ್ ಇರುವ ಯಾವದೊಂದು ಮೊಕದ್ದಮೆಯಲ್ಲಿ ಈ ಪ್ರಕರಣಕ್ಕನುಗುಣವಾಗಿ ಒಂದು ಹುಕ್ಕುಂ ಮಾಡಲ್ಪಟ್ಟಾಗ, (ಸ್ವತ್ತು, ಜೀವಜಂತುಗಳಾಗಿ—ಯಾ—ತ್ವರೆಯಾಗಿ ಮತ್ತು ಸ್ವಭಾವಿಕವಾಗಿ ನಾಶವಾಗುವದಾಗಿ ಇದ್ದರೇನೇ ಶಿವಾಯಿ) ಅಂಥಾ ಅಪ್ಪೀಲ್ ಹಾಜರ್ ಮಾಡುವದಕ್ಕೆ ನಿರ್ಣಯಿಸಿರುವ ಕಾಲ ಕಳೆಯುವವರಿಗೆ,—ಯಾ—ಅಂಥಾ ಕಾಲದೊಳಗೆ ಅಪ್ಪೀಲ್ ಹಾಜರು ಮಾಡಲ್ಪಟ್ಟು ಇದ್ದರೆ, ಅದು ಪಡಿಚಾ ಆಗುವವರಿಗೆ, ಅಂಥಾ ಹುಕುಂ ಜಾರಿ ಮಾಡಲ್ಪಡಕೂಡದು.

ಟಿಪ್ಪಣಿ.—ಈ ಪ್ರಕರಣದಲ್ಲಿ "ಸ್ವತ್ತು" ಎಂಬ ಮಾತು, ತಕ್ಸೀರ್‌ನಡೆಸಲ್ಪಟ್ಟದ್ದಾಗಿ ತೋರುವ ಸ್ವತ್ತಿನ ಸಂಗತಿಯಲ್ಲಿ, ಯಾವ ಕಕ್ಷಿಗಾರನ ಸ್ವಾಧೀನದಲ್ಲಾದರೂ—ಯಾ—ತಾಬೆಯಲ್ಲಾದರೂ, ಮೊದಲು ಇತ್ತೋ ಅಂತಾ ಸ್ವತ್ತನ್ನು ಅಡಗಿಸಿಕೊಂಡಿರುತ್ತಿಯಲ್ಲದೆ, ಅಂಥಾ ಸ್ವತ್ತು ಮತ್ಯಾವ ಸ್ವತ್ತಾಗಿ ಮಾಡಲ್ಪಟ್ಟದ್ದರೂ, ಯಾ ಮತ್ಯಾವ ಸ್ವತ್ತಿಗಾಗಿ ವಿನಿಮಯಮಾಡಲ್ಪಟ್ಟದ್ದರೂ, ಆ ಸ್ವತ್ತನ್ನೂ ಮತ್ತು ಹಾಗೆ ಬದಲಾಯಿಸೋಣ, ಯಾ ವಿನಿಮಯಮಾಡೋಣವರಿಂದ ಕೂಡಲೇಯಾಗಲಿ, ಯಾ ಅನ್ಯಥಾವಾಗಲಿ ಏನುಸಂಪಾದಿಸಲ್ಪಡುತ್ತದೆಯೋ ಅದನ್ನು ಸಹ ಅಡಗಿಸಿಕೊಂಡಿರುತಿದೆ.

518. 517ನೇ ಪ್ರಕರಣದ ಮೇರಿಗೆ ತಾವು ಸ್ವತಃ ಒಂದು ಹುಕುಮನ್ನು ಮಾಡುವದರ ಬದಲಾಗಿ, ಸ್ವತ್ತನ್ನು ಡಿಸ್ಟ್ರಿಕ್ಟ—ಯಾ—ಸಬ್ ಡಿವಿಜನ್ ಮ್ಯಾಜಿಸ್ಟ್ರೇಟರ ಬಳಗೆ ಒಪ್ಪಿಸಲ್ಪಡಬೇಕೆಂತ ಕೋರ್ಟಿನವರು ಅಪ್ಪಣೆ ಕೊಡಬಹುದು, ಅಂಥಾ ಸಂಗತಿಗಳಲ್ಲಿ ಪೊಲೀಸಿನವರಿಂದ ಸದರೀ ಸ್ವತ್ತು ಹಿಡಿಯಲ್ಪಟ್ಟು ಹಾಗೆ ಹಿಡಿದದ್ದನ್ನು ಇನ್ನು ಮುಂದೆ ನಮೂದಿಸಿರುವ ರೀತೀಲಿ ತಮಗೆ ರಿಪೋರ್ಟು ಮಾಡಿದ್ದರೆ ಹ್ಯಾಗೋ ಹಾಗೆ ಅವರು ಅದರ ಬಾಬಿನಲ್ಲಿ ನಡಿಸತಕ್ಕದ್ದು.

ಹುಕುಂ ಡಿಸ್ಟ್ರಿಕ್ಟ—ಯಾ—ಸಬ್ ಡಿವಿಜನ್ ಮ್ಯಾಜಿಸ್ಟ್ರೇಟಗೆ ರಿಫರ್ನ್ಸ ನಮೂನೆಯಾಗಿರಬಹುದು.

519. ಯಾವನೊಬ್ಬ ಮನುಷ್ಯನು, ಕಳವು—ಯಾ—ಕಳವಿನ ಸ್ವತ್ತನ್ನು ಈಸುಕೊಳ್ಳೋಣ, ಈ ತಕ್ಸೀರು ಆಗುವ—ಯಾ—ಅಡಗಿಸಿಕೊಂಡಿರುವ, ಯಾವದೊಂದು ತಕ್ಸೀರಿನ ಸಾಬೀತಿಪಟ್ಟರೆ, ಮತ್ತು ಆತನಿಂದ ಇತರ ಯಾವನೊಬ್ಬ ಮನುಷ್ಯನಾಗಲೀ, ಆ ಕಳವಾದ ಸ್ವತ್ತನ್ನು ಅದು ಕಳವಾದ್ದೆಂತ ತಿಳಿಯದೆ—ಯಾ—ತಿಳಿಯಲಿಕ್ಕೆ ಸಬಬು ಇಲ್ಲದೆ, ಕ್ರಯಕ್ಕೆ ಪಡಕೊಂಡಿದ್ದಾನೆಂತ ರುಜು ಪಟ್ಟರೆ, ಮತ್ತು ಸಾಬೀತು ಪಟ್ಟ ಮನುಷ್ಯನ ಸ್ವಾಧೀನತೆಯಿಂದ ಏನಾದರೂ ಹಣ ಆತನು ಹಿಡಿಯಲ್ಪಟ್ಟಾಗ ತಕ್ಕೊಳ್ಳತಕ್ಕದ್ದಾಗಿ ಇದ್ದರೆ, ಆ ಕಳವಿನ ಸ್ವತ್ತನ್ನು ಸ್ವಾಧೀನಪಡಕೊಳ್ಳಲಿಕ್ಕೆ ಹಕ್ಕಿರುವ ಮನುಷ್ಯಗೆ ಅದು ತಿರಿಗಿ ಒಪ್ಪಿಸೋಣವಾದಾಗ, ಅಂಥಾ ಕ್ರಯಕ್ಕೆ ಪಡಕೊಂಡವನ ಅರ್ಜಿ ಮೇಲೆ, ಕೋರ್ಟಿನವರು, ಕ್ರಯವಾಗಿ ಆತನಿಂದ ತೆರೋಣಾದ ಮೊಬಲಗಿಗೆ ಮೀರದೆ ಇರುವಷ್ಟು ಹಣವನ್ನು ಅಂಥಾ ಹಣದಿಂದ ಆತಗೆ ಕೊಡಲ್ಪಡತಕ್ಕದ್ದೆಂತ ಹುಕುಂ ಮಾಡಬಹುದು.

ಅಪಾದನೆಪಟ್ಟವನ ಮೈಮೇಲೆ ಸಿಕ್ಕಿದ ಹಣವನ್ನು ನಿರಪರಾಧಿಗಳಾಗಿ ಕ್ರಯಕ್ಕೆ ಕೊಂಡುಕೊಂಡವರಿಗೆ ಪಾವತಿ ಮಾಡೋಣ.

520. ಅಪ್ಪೀಲಿನ, ಮಂಜೂರಾತಿಯ, ರಿಫರ್ನಸಿನ ಅಥವಾ ಪುನರ್ವಿಮರ್ಶೆಯ, ಯಾವದೊಂದು ಕೋರ್ಟಿನವರಾಗಲೀ 517ನೇ ಪ್ರಕರಣ518ನೇ ಪ್ರಕರಣ—ಯಾ—519ನೇ ಪ್ರಕರಣದ ಮೇರೆಗೆ, ತಮಗೆ ತಾಬೇದಾರಿಯಾದ ಕೋರ್ಟಿನವರಿಂದ ಕೊ

517,518—ಯಾ—519ನೇ ಪ್ರಕರಣಗಳ ಮೇರೆ ಹುಕುಮನ್ನು ನಿಲ್ಲಿಸೋಣ.

ಹೋಗಾದ ಯಾವದೊಂದು ಹುಕುಮನ್ನು, ತಮ್ಮ ಆಲೋಚನೆ ತೀರುವತನಕ ನಿಲ್ಲಿಸಿ ಇಡುವಂತೆ ಅಪ್ಪಣೆಮಾಡ ಬಹುದು, ಮತ್ತು ಅಂಥಾ ಹುಕುಮನ್ನು ತಿದ್ದಲೂ ತಬ್ದೀಲ್ ಮಾಡಲೂ—ಯಾ—ರದ್ದು ಮಾಡಲೂ ಬಹುದು.

ನಿಂದ್ಯಕರವಾದ ಮತ್ತು ಇತರ ಬಾಬುಗಳನ್ನು ನಾಶಪಡಿಸೋಣ.

521. ಇಂಡಿಯನ್ ಪಿನಲ್ ಕೋಡಿನ 292ನೇ ಪ್ರಕರಣ, 293ನೇ ಪ್ರಕರಣ, 501ನೇ ಪ್ರಕರಣ—ಯಾ 502ನೇ ಪ್ರಕರಣ ಪ್ರಕಾರ ತಕ್ಸೀರು ಸಾಬೀತು ಆದಮೇಲೆ, ಯಾವದರ ಬಾಬಿನಲ್ಲಿ ಸಾಬೀತು ಆಯಿತೋ ಅವರ ಬಾಬತು ಕೋರ್ಟಿನವರ ಭದ್ರತೆಯಲ್ಲಿ ಇರುವ—ಯಾ—ಸಾಬೀತುಪಟ್ಟವನ ಸ್ವಾಧೀನ—ಯಾ—ಎಖ್ತ್ಯಾರಿಯೊಳಗೆ ಇರುವ ಸಮಸ್ತ ಪ್ರತಿಗಳನ್ನು ನಾಶಪಡಿಸುವ ಹಾಗೆ ಕೋರ್ಟಿನವರು ಹುಕುಂ ಮಾಡಬಹುದು.

ಅದೇ ಮೇರೆಗೆ, ಇಂಡಿಯನ್ ಪಿನಲ್ ಕೋಡಿನ 272ನೇ ಪ್ರಕರಣ, 273ನೇ ಪ್ರಕರಣ, 274ನೇ ಪ್ರಕರಣ ಅಥವಾ 275ನೇ ಪ್ರಕರಣದ ತಕ್ಸೀರು, ಸಾಬೀತು ಆದಮೇಲೆ, ಯಾವದರ ವಿಷಯವಾಗಿ ತಕ್ಸೀರು ಸಾಬೀತು ಆಯಿತೋ ಅಂಥಾ ಆಹಾರ, ಪಾನ, ಗಂದಿಗೆಜಿನಸು—ಯಾ—ಔಷಧಿಯನ್ನು, ನಾಶಪಡಿಸುವಂತೆ ಹುಕುಂಮಾಡಬಹುದು.

ಸ್ಥಿರ ಸ್ವತ್ತಿನ ಸ್ವಾಧೀನವನ್ನು ಕೊಟ್ಟು ಬಿಡಲಿಕ್ಕೆ ಅಧಿಕಾರ.

522. ಯಾವನೊಬ್ಬ ಮನುಷ್ಯನ ಮೇಲೆ ತಕ್ಸೀರುಕರವಾದ ಬಲೋದ್ಬಂದಿಯೊಡನೆ ಬಂದು ತಕ್ಸೀರು ಸಾಬೀತಾದರೆ, ಮತ್ತು ಅಂಥಾ ಬಲೋದ್ಬಂದಿಯಿಂದ, ಯಾವ ಮನುಷ್ಯನಿಗಾದರೂ ಸ್ಥಿರಸ್ವತ್ತು ಸ್ವಾಧೀನತೆ ತಪ್ಪಿಹೋಯಿತೆಂದು ಅಂಥಾ ಕೋರ್ಟಿನವರಿಗೆ ತೋರಿದರೆ, ಅಂಥಾ ಸಂಗತಿಯಲ್ಲಿ, ಅಂಥಾ ಮನುಷ್ಯನಿಗೆ ಅದನ್ನು ಸ್ವಾಧೀನ ಕೊಟ್ಟುಬಿಡಹೇಳಿ ಸದರೀ ಕೋರ್ಟಿನವರು ಯುಕ್ತವೆಂತ ತಿಳಕೊಂಡರೆ ಹುಕುಂಮಾಡಬಹುದು.

ಅಂಥಾ ಯಾವ ಆರ್ಡರು, ಅಂಥಾ ಸ್ಥಿರಸ್ವತ್ತಿಗೆ—ಯಾ—ಸ್ವತ್ತಿನಲ್ಲಿ ಯಾವ ಮನುಷ್ಯನಾದರೂ ಬಂದು ಸಿವಿಲ್ ವ್ಯಾಜ್ಯದಲ್ಲಿ ಸ್ಥಾಪಿಸಲಿಕ್ಕಾಗಬಹುದಾದ ಯಾವ ಹಕ್ಕನ್ನು ಯಾ ಬಾಧ್ಯತೆಯನ್ನು ಬಾಧಿಸಕೂಡದು.

51ನೇ ಪ್ರಕರಣದಪ್ರಕಾರ ಸ್ವತ್ತನ್ನು ಅಥವಾ ಚೋರಿಮಾಲನ್ನು ಹಿಡಿದನಂತರ ಪೋಲಿಸಿನವರು ನಡಿಸತಕ್ಕ ಕ್ರಮ.

523. 51ನೇ ಪ್ರಕರಣಪ್ರಕಾರ ಹಿಡಿದ—ಯಾ—ಚೋರಿಮಾಲೆಂತ ಹೇಳೋಣಾದ ಅಥವಾ ಗುಮಾನಿ ತಗಲಿದ—ಯಾ—ಯಾವದೊಂದು ತಕ್ಸೀರು ನಡದ್ದಾಗಿ ಸಂಶಯಿಸಲಿಕ್ಕೆ ಆಸ್ಪದವಾದ ವಿದ್ಯಮಾನಗಳ ಮೇಲೆ ಹಿಡಿಯೋಣಾದ ಸ್ವತ್ತು, ಇಂಥಾದನ್ನು ಯಾವನೊಬ್ಬ ಪೋಲಿಸು ಆಫಿಸರನು ಹಿಡಿದರೆ, ಆ ಸಂಗತಿಯನ್ನು ಆತನು ತಕ್ಷಣದಲ್ಲಿ ಒಬ್ಬ ಮ್ಯಾಜಿಸ್ಟ್ರೇಟಗೆ ರಿಪೋರ್ಟು ಮಾಡತಕ್ಕದ್ದು, ಆತನು ಅದರ ಸ್ವಾಧೀನತೆಪಡಕೊಳ್ಳಲಿಕ್ಕೆ ಹಕ್ಕುಳ್ಳ ಮನುಷ್ಯನಿಗೆ ಅದನ್ನು ಒಪ್ಪಿಸುವ ಬಗ್ಗೆ—ಯಾ—ಅಂಥಾ ಮನುಷ್ಯನು ಯಾರೆಂಬುದು ನಿಶ್ಚಯಿಸುವದಕ್ಕೆ ಆಗದೇ ಹೋದರೆ, ಅದನ್ನು ಭದ್ರವಾಗಿ ಇಟ್ಟುಕೊಂಡಿರುವ ವಿಷಯದಲ್ಲೂ ಹಾಜರುಮಾಡುವ ವಿಷಯದಲ್ಲೂ, ತನಗೆ ಯುಕ್ತತೋರುವ ಹುಕ್ಕುಂ ಮಾಡತಕ್ಕದ್ದು.

ಶಿಕ್ಕಿದ ಸ್ವತ್ತಿನ ಮಾಲಿಕನು ಗೊತ್ತಾಗದಿದ್ದರೆ ನಡಿಸತಕ್ಕ ಕ್ರಮ.

ಸ್ವಾಧೀನತೆ ಪಡಕೊಳ್ಳಲಿಕ್ಕೆ ಹಕ್ಕುಳ್ಳ ಮನುಷ್ಯನು ಫಲಾನೆಯವನೆಂತ ತಿಳಿದರೆ, ಆ ಸ್ವತ್ತನ್ನು ಮ್ಯಾಜಿಸ್ಟ್ರೇಟು ಯುಕ್ತವೆಂತ ಆಲೋಚಿಸುವ ಷರತಗಳ (ಇದ್ದರೆ) ಮೇಲೆ ಆತನಿಗೆ ಒಪ್ಪಿಸತಕ್ಕದ್ದೆಂತ ಹುಕ್ಕುಂ ಮಾಡಬಹುದು. ಅಂಥಾ ಯಾವ ಸ್ವತ್ತಿನ ಮಾಲೀಕನಾದರೂ ಫಲಾನೆಯವನೆಂದು ತಿಳಿಯದೆ ಹೋದರೆ ಮ್ಯಾಜಿಸ್ಟ್ರೇಟು ಅದನ್ನು ತಡೆದು ಇಡಬಹುದು, ಮತ್ತು ಹಾಗೆ ಮಾಡಿದಲ್ಲಿ, ಒಂದು ಇಸ್ತಿಹಾರು ಕೊಡತಕ್ಕದ್ದು ಆ ಇಸ್ತಿಹಾರಿನಲ್ಲಿ ಆ ಸ್ವತ್ತು ಫಲಾನದಾಗಿದೆ ಯೆಂತಲೂ—ವ—ಅದಕ್ಕೆ ದಾವೆಯುಳ್ಳ ಯಾವ ಮನುಷ್ಯನಾದರೂ ಆ ಇಸ್ತಿಹಾರಿನ ತಾರೀಖಿನ ಮೊದಲು ಆರು ತಿಂಗಳ ಒಳಗೆ ತನ್ನ ಮುಂದೆ ಹಾಜರಾಗಿ ತನ್ನ ದಾವೆಯನ್ನು ಸ್ಥಾಪಿಸಿಕೊಳ್ಳತಕ್ಕದ್ದೆಂತಲೂ, ನಮೂದು ಮಾಡಿರತಕ್ಕದ್ದು.

ಆರು ತಿಂಗಳೊಳಗಾಗಿ ಬಾಧ್ಯಸ್ತರು ಬಾರದಿದ್ದರೆ ನಡಿಸತಕ್ಕ ಕ್ರಮ.

524. ಸದರೀ ವಾಯಿದೆಯೊಳಗೆ ಯಾವ ಮನುಷ್ಯನೂ ಅಂಥಾ ಸ್ವತ್ತಿಗೆ ದಾವೆಮಾಡದೆ ಇದ್ದರೆ, ಮತ್ತು ಯಾರ ಸ್ವಾಧೀನದಲ್ಲಿ ಅಂಥಾ ಸ್ವತ್ತು ಶಿಕ್ಕಿತೋ ಅವನು ಆ ಸ್ವತ್ತನ್ನು ನ್ಯಾಯವಾಗಿ ತಾನು ಸಂಪಾದಿಸಿದ್ದಾಗಿ ರುಜುವಾತಲಾರದೆ ಇದ್ದರೆ, ಸದರೀ ಸ್ವತ್ತು ಗವರ್ನಮೆಂಟಿನವರ ಯಿಖ್ತ್ಯಾರಿಯಲ್ಲಿ ಇರತಕ್ಕದ್ದು, ಮತ್ತು ಅದನ್ನು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನ—ಯಾ—ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟನ, ಅಥವಾ ಈ ಬಗ್ಗ್ಯಾಗಿ ಮೈಸೂರು ಗವರ್ನಮೆಂಟಿನವರಿಂದ ಅಧಿಕಾರ ಹೊಂದಿದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟನ ಹುಕ್ಕುಂ ಪ್ರಕಾರ ಮಾರಬಹುದು.

ಅಂಥಾ ಹುಕ್ಕುಂ ಮಾಡುವ ಕೋರ್ಟಿನವರ ಸಜಾಗಳ ಮೇಲೆ ಅಪ್ಪೀಲುಗಳು ಎಲ್ಲಿ ಆಗುವದೋ ಆ ಕೋರ್ಟಿಗೆ, ಈ ಪ್ರಕರಣಕ್ಕನುಗುಣವಾಗಿ ವಿಧಿಸೋಣಾದ ಪ್ರತಿ ಆರ್ಡರಿನ ವಿಷಯದಲ್ಲೂ ಅಪ್ಪೀಲ್ ಇರತಕ್ಕದ್ದು.

ನಾಶವಾಗತಕ್ಕ ಸ್ವತ್ತುಗಳನ್ನು ಮಾರುವ ಸ್ವಾತಂತ್ರ್ಯ.

525. ಅಂಥಾ ಸ್ವತ್ತಿನ ಸ್ವಾಧೀನತೆಯು ಪಡಕೊಳ್ಳಲಿಕ್ಕೆ ಹಕ್ಕುಳ್ಳ ಮನುಷ್ಯನು ಫಲಾನೆಯವನೆಂತ ತಿಳಿಯದಿದ್ದರೆ—ಯಾ—ಗೈರಹಾಜರಾಗಿ ಇದ್ದರೆ, ಮತ್ತು ಸದರೀ ಸ್ವತ್ತು ತ್ವರೆಯಾಗಿಯೂ—ವ—ಸ್ವಭಾವಿಕವಾಗಿಯೂ ಕೆಟ್ಟು ಹೋಗುವಂಥಾದ್ದಾಗಿದ್ದರೆ, ಅಥವಾ ಹಿಡಿಯೋಣಾದ ಸಂಗತಿ ಯಾವ ಮ್ಯಾಜಿಸ್ಟ್ರೇಟನಿಗೆ ರಿಪೋರ್ಟು ಮಾಡೋಣಾಯಿತೋ ಆತನು ಅದನ್ನು ವಿಕ್ರಯಿಸುವದು ಅದರ ಮಾಲೀಕನಿಗೆ ಪ್ರಯೋಜನಕರವಾದ್ದೆಂತ ಅಭಿಪ್ರಾಯಪಡುತ್ತಾನಾದರೆ, ಯಾವಕಾಲವಲ್ಲಾದರೂ ಅದು ಮಾರಲ್ಪಡತಕ್ಕದ್ದೆಂತ ಸದರೀ ಮ್ಯಾಜಿಸ್ಟ್ರೇಟನು ಹುಕ್ಕುಂ ಮಾಡಬಹುದು; ಮತ್ತು 523—ವ—524ನೇ ಪ್ರಕರಣಗಳ ನಿಬಂಧನೆಗಳು, ಸಾಧ್ಯವಾದಮಟ್ಟಿಗೆ, ಅಂಥಾ ವಿಕ್ರಯದಿಂದ ಹುಟ್ಟಿದ ಖರ್ಚು ವಿಕ್ರಯದ ಹಣಕ್ಕೆ ಲಗಾವಾಗತಕ್ಕದ್ದು.

Chapter XLIV.—Of the Transfer of Criminal Cases.

44ನೇ ಅಧ್ಯಾಯ.—ಕ್ರಿಮಿನಲ್ ಮೊಕದ್ದಮೆಗಳನ್ನು ವರ್ಗಮಾಡೋಣ.

ಮೊಕದ್ದಮೆಯನ್ನು ಚೀಫ್ ಕೋರ್ಟಿನವರು ವರ್ಗಮಾಡಬಹುದು—ಯಾ—ತಾವೇ ದರ್ಯಾಫ್ತು ಮಾಡಬಹುದು.

526. ಚೀಫ್ ಕೋರ್ಟಿನವರ ಮುಂದೆ:—

(a). ಅವರ ತಾಬೇದಾರಿಯಾದ ಯಾವದೊಂದು ಕ್ರಿಮಿನಲ್ ಕೋರ್ಟಿನಲ್ಲಿ ನ್ಯಾಯವಾದ—ವ—ನಿಷ್ಪಕ್ಷಪಾತವಾದ ವಿಚಾರಣೆ—ಯಾ—ದರ್ಯಾಫ್ತು ನಡಿಯಲಿಕ್ಕಿಲ್ಲ, ಅಥವಾ

(b) ಕಾನೂನಿನ ಬಾಬತು ಅಸಾಧಾರಣವಾದ ಕಷ್ಟವುಳ್ಳ ಯಾವದಾದರೂ ಪ್ರಶ್ನೆ ಹುಟ್ಟುವ ಸಂಭವ ಉಂಟು, ಯಾ

(c) ಒಂದು ತಕ್ಸೀರಿನ ವಿಷಯದ ಸಮಾಧಾನಕರವಾದ ವಿಚಾರಣೆ—ಯಾ—ದರ್ಯಾಫ್ತು ಉದ್ದಿಶ್ಯಾರ್ಥವಾಗಿ ಆತಕ್ಸೀರು ಯಾವಸ್ಥಳದಲ್ಲಿ—ಯಾ—ಯಾವಸ್ಥಳದ ಸಮೀಪದಲ್ಲಿ ನಡಿಯಿತೋ ಆ ಸ್ಥಳದ ಸಂದರ್ಶನವು ಅವಶ್ಯವಾಗಬಹುದು, ಅಥವಾ

(d) ಈ ಪ್ರಕರಣಪ್ರಕಾರ ಹುಕ್ಕುಂ ಮಾಡಿದರೆ ಕಕ್ಷಿಗಾರರ—ಯಾ—ಸಾಕ್ಷಿಗಾರರ ಸಾಮಾನ್ಯ ಅನುಕೂಲತೆ ಉಂಟಾಗುವ ಹಾಗೆ ಇದ್ದೆಯೆಂತ ಅಥವಾ

(e) ಸದರೀ ಹುಕುಂ ನ್ಯಾಯವಿಮರ್ಶೆಗೆ ಉಪಯೋಗವಾದ್ದಾಗಿದೆ ಎಂದು, ತೋರಿಸೋಣಾದಾಗ್ಯೆಲ್ಲಾ ಕೋರ್ಟಿನವರು—

(1) ಯಾವದೊಂದು ತಕ್ಸೀರು 177ನೇ ಯಿಂದ 184ನೇ (ಉಭಯ ಪ್ರಕರಣಗಳು ಶೇರಿ) ವರೆಗಿನ ಪ್ರಕರಣ ಮೇರೆಗೆ ಅಧಿಕಾರ ಪಡಯದೆ ಇರುವ ಪರಂತು ಬೇರೆ ವಿಷಯದಲ್ಲಿ ಅಂಥಾ ತಕ್ಸೀರಿನ ವಿಚಾರಣೆ—ಯಾ—ದರ್ಯಾಫ್ತಿ ಮಾಡುವದಕ್ಕೆ ಅಧಿಕಾರ ಇರುವ, ಯಾವ ಕೋರ್ಟಿನವರಾದರೂ ವಿಚಾರಿಸಬೇಕೆಂತಾಗಲೀ—ಯಾ—ದರ್ಯಾಫ್ತು ಮಾಡಬೇಕೆಂತಾಗಲೀ ;

(2) ಯಾವದೊಂದು ಫಲಾನಾ ಕ್ರಿಮಿನಲ್ ಮೊಕದ್ದಮೆ—ಯಾ—ಅಪ್ಪೀಲ್—ಯಾ—ಅಂಥಾ ಮೊಕದ್ದಮೆಗಳ—ಯಾ—ಅಪ್ಪೀಲಗಳ ತರ ತಮ್ಮ ತಾಬೇದಾರಿಯಾಗಿರುವ ಒಂದು ಕ್ರಿಮಿನಲ್ ಕೋರ್ಟಿನಿಂದ ಅಪ್ಪೇ—ಯಾ—ಅದಕ್ಕಿಂತಲೂ ವಿಶೇಷ ಅಧಿಕಾರವುಳ್ಳ ಅಂಥಾ ಇತರ ಯಾವದೊಂದು ಕೋರ್ಟಿಗೆ ವರ್ಗಪಡತಕ್ಕದ್ದೆಂತಾಗಲೀ; ಅಥವಾ

(3) ಯಾವದೊಂದು ಫಲಾನಾ ಕ್ರಿಮಿನಲ್ ಮೊಕದ್ದಮೆ—ಯಾ—ಅಪ್ಪೀಲ್ ತಮ್ಮ ಮುಂದಕ್ಕೆ ವರ್ಗ ಮಾಡಲ್ಪಟ್ಟು ದರಿಯಾಫ್ತು ಮಾಡಲ್ಪಡತಕ್ಕದ್ದೆಂತಾಗಲೀ; ಅಥವಾ

(4) ಸದರೀ ಕೋರ್ಟಿಗಾಗಲೀ ಸೆಷನ್ಸ ಕೋರ್ಟಿಗಾಗಲೀ ಒಬ್ಬ ತಕ್ಸೀರ್ ಆಪಾದನೆ ಪಟ್ಟ ಮನುಷ್ಯನು ದರ್ಯಾಫ್ತಿ ಬಗ್ಯೆ ಕಮ್ಮಿಟಾಗಬೇಕೆಂದಾಗಲೀ ಅಪ್ಪಣೆ ಕೊಡಬಹುದು

ಯಾವ ಕೋರ್ಟಿನಿಂದಾದರೂ ಯಾವ ಮೊಕದ್ದಮೆಯನ್ನಾದರೂ ಚೀಫ ಕೋರ್ಟಿನವರು ದರಿಯಾಫ್ತಿ ಬಗ್ಯೆ ತರಿಸಿಕೊಂಡಾಗ, ಅಂಥಾ ದರ್ಯಾಫ್ತಿಯಲ್ಲಿ ಆ ಮೊಕದ್ದಮೆಯು ಹಾಗೆ ತರಿಸಿಕೊಳ್ಳದೆ ಇದ್ದರೆ ಯಾವ ನಡವಳಿತೆ ಕ್ರಮ ನಡಿಸೋಣಾಗುತ್ತಿತ್ತೋ ಅದೇ ಕ್ರಮ ನಡಿಸತಕ್ಕದ್ದು.

ಅರ್ಜಿದಾರನು ಈ ಪ್ರಕರಣದಿಂದ ಕೊಡೋಣಾದ ಅಧಿಕಾರ ಚಲಾಯಿಸತಕ್ಕ ಬಗ್ಯೆ ಕೊಡುವ ಪ್ರತಿ ಅರ್ಜಿಯು, ಅಫಿಡಾವಿಟ—ಯಾ—ಪ್ರಮಾಣಪೂರ್ವಕವಾಗಿ ಆದರಿಸಲ್ಪಟ್ಟ ಅರಿಕೆ ಮೂಲಕವಾಗಿ ಮಾಡಲ್ಪಡತಕ್ಕದ್ದು.

ಈ ಪ್ರಕರಣಪ್ರಕಾರ, ಆಪಾದನೆಪಟ್ಟವನು ಒಂದು ಅರ್ಜಿಯನ್ನು ಕೊಟ್ಟರೆ, ತಕ್ಸೀರು ಸಾಬೀತಾದಲ್ಲಿ ಫಿರ್ಯಾದದಾರನ ಖರ್ಚನ್ನು ಕೊಟ್ಟೇನೆಂಬ ಷರತಿನಿಂದ, ಜಾಮೀನು ಸಮೇತ—ಯಾ—ಜಾಮೀನು ಇಲ್ಲದೆ, ಆತನು ಒಂದು ಪತ್ರವನ್ನು ಬರಕೊಡಬೇಕೆಂದು ಚೀಫ ಕೋರ್ಟಿನವರು ಅಪ್ಪಣೆ ಕೊಡಬಹುದು.

ಅಂಥಾ ಯಾವದೊಂದು ಅರ್ಜಿಯನ್ನು ಕೊಡುವ ಪ್ರತಿ ಒಬ್ಬ ಆಪಾದನೆಪಟ್ಟವನು, ಹಾಗೆ ಅರ್ಜಿಮಾಡಿದ ಸಬಬುಗಳ ನಕಲು ಸಮೇತ, ಒಂದು ಬರಹ ಮೂಲಕವಾದ ನೋಟಿಸನ್ನು ಪಬ್ಲಿಕ್ ಪ್ರೊಸಿಕ್ಯೂಟರಿಗೆ ಕೊಡತಕ್ಕದ್ದು, ಮತ್ತು ಹಾಗೆ ನೋಟಿಸ್ ಕೊಟ್ಟಕಾಲದಿಂದ ಅರ್ಜಿಯು ಹಿಯರಿಂಗಿಗೆ ಬರುವ ಕಾಲದೊಳಗೆ ಕನಿಷ್ಟಪಕ್ಷಕ್ಕೆ 24 ಘಂಟೆಗಳು ಕಳದ ಹೊರ್ತು ಅಂಥಾ ಅರ್ಜಿಯ ಯೋಗ್ಯತೆ ಮೇಲೆ ಯಾವದೊಂದು ಹುಕ್ಕುಂ ಮಾಡಲ್ಪಡಕೂಡದು.

ಈ ಪ್ರಕರಣಪ್ರಕಾರ ಅರ್ಜಿಯನ್ನು ಕುರಿತು ಪಬ್ಲಿಕ ಪ್ರೊಸಿಕ್ಯೂಟರಿಗೆ ನೋಟೀಸು.

ಈ ಪ್ರಕರಣದಲ್ಲಿ ಇರುವಂಥಾದ್ದ್ಯಾವದೂ 197ನೇ ಪ್ರಕರಣಪ್ರಕಾರ ಮಾಡೋಣಾದ ಯಾವದೊಂದು ಹುಕುಮಿಗೆ ಭಾಧಿಸೀತೆಂತ ಎಣಿಸಲ್ಪಡತಕ್ಕದ್ದಲ್ಲ.

526 A. ಯಾವ ಕ್ರಿಮಿನಲ್ ಮೊಕದ್ದಮೆಯಲ್ಲಿಯಾಗಲಿ ಅಪೀಲಿನಲ್ಲಿಯಾಗಲಿ, ಹಿಯರಿಂಗ್ ಪ್ರಾರಂಭವಾಗುವದಕ್ಕೆ ಮುಂಚೆ ಪಬ್ಲಿಕ ಪ್ರಾಸಿಕ್ಯೂಟರಾಗಲಿ, ಫಿರ್ಯಾದಿಯಾಗಲಿ, ಆಪಾದನೆ ಪಟ್ಟವನಾಗಲಿ, 526ನೇ ಪ್ರಕರಣವನ್ನು ಅನುಸರಿಸಿ ಸದರೀಮೊಕದ್ದಮೆಯು ವಿಷಯವಾಗಿ ಅರಿಕೆ ಮಾಡಿಕೊಳ್ಳಬೇಕೆಂಬ ತನ್ನ ಅಭಿಪ್ರಾಯವನ್ನು ಸದರೀ ಮೊಕದ್ದಮ್ಮಾ ಅಥವಾ ಅಪ್ಪೀಲು ಎಲ್ಲಿ ಫೈಸಲಾಗದೆ ಇರುತ್ತದೋ ಆ ಕೋರ್ಟಿಗೆ ತಿಳಿಸಿದರೆ ಸದರೀ ತಕ್ಸೀರ್ ಆಪಾದನೆಪಟ್ಟ ಮನುಷ್ಯನನ್ನು ಡಿಶ್ಚಾರ್ಜ್ ಕೊಡುವದಕ್ಕೆ ಹುಕ್ಕುಂ ಮಾಡುವದಕ್ಕೆ ಮುಂಚಿತವಾಗಿ ಅ

526ನೇ ಪ್ರಕರಣವನ್ನನುಸರಿಸಿ ಅರಿಕೆ ಮಾಡಿಕೊಳ್ಳುವಲ್ಲಿ ಅಡ್ಜರ್ನ್‌ಮೆಂಟ.

ಥವಾ ಅಪ್ಪೀಲಾಗಿದ್ದರೆ ಅಪೀಲು ವಿಚಾರಣೆ ಆಗುವದಕ್ಕಿಂತ ಮುಂಚಿತವಾಗಿ ಅರ್ಜಿಯನ್ನು ಕೊಡಲಿಕ್ಕೂ ಅದರ ವಿಷಯದಲ್ಲಿ ಹುಕುಂ ಪಡೆಯಲಿಕ್ಕೂ ತಕ್ಕ ಮುನಾಸಬ್ ಕಾಲ ಕೊಡುವಹಾಗೆ ಸದರೀ ಕೋರ್ಟಿನವರು ದರ್ಯಾಫ್ತಿಯನ್ನು ನಿಲ್ಲಿಸುವ ಯಾ ಅಡ್ಜರ್ನ ಮಾಡುವಬಗ್ಯೆ 314ನೇ ಪ್ರಕರಣದಲ್ಲಿ ಕೊಡಲ್ಪಟ್ಟಿರುವ ಅಧಿಕಾರವನ್ನು ಚಲಾಯಿಸತಕ್ಕದ್ದು.

ಡಿಸ್ಟ್ರಿಕ್ಟು—ಯಾ—ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟು ಮೊಕದ್ದಮೆಗಳನ್ನು ತರಿಸಿಕೊಳ್ಳಬಹುದು—ಯಾ—ರಿಫರ್ ಮಾಡಬಹುದು.

528. ಯಾವನೊಬ್ಬ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟನು—ಯಾ—ಸಬ ಡಿವಿಜನಲ್ ಮ್ಯಾಜಿಸ್ಟ್ರೇಟನು ತನಗೆ ತಾಬೇದಾರಿಯಾದ ಯಾವ ಮ್ಯಾಜಿಸ್ಟ್ರೇಟನಲ್ಲಿಂದಾದರೂ ಯಾವ ಮೊಕದ್ದಮೆಯನ್ನಾದರೂ ತರಿಸಲೂ—ಯಾ—ತಾನು ರವಾನಿಸಿದ ಯಾವ ಮೊಕದ್ದಮೆಯನ್ನಾದರೂ ವಾಪಸ್ ತರಿಸಲೂಬಹುದು, ಮತ್ತು ಅಂಥಾ ಮೊಕದ್ದಮೆಯನ್ನು ತಾನು ಸ್ವತಃ ವಿಚಾರಿಸಲೂಬಹುದು—ಯಾ—ದರ್ಯಾಫ್ತಿ ಮಾಡಲೂಬಹುದು, ಅಥವಾ ಅದನ್ನು ವಿಚಾರಿಸುವದಕ್ಕೆ—ಯಾ—ದರ್ಯಾಫ್ತಿ ಮಾಡುವದಕ್ಕೆ ಅಧಿಕಾರವುಳ್ಳ ಇತರ ಅಂಥಾ ಯಾವ ಮ್ಯಾಜಿಸ್ಟ್ರೇಟಗಾದರೂ ವಿಚಾರಣೆಬಗ್ಯೆ—ಯಾ—ದರ್ಯಾಫ್ತಿ ಬಗ್ಯೆ ಅದನ್ನು ರಿಫರ್ ಮಾಡಬಹುದು.

ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಗೆ ಮೊಕದ್ದಮೆಗಳ ತರಗತಿಗಳನ್ನು ವಾಪಸ್ ತರಿಸಿಕೊಳ್ಳಲಿಕ್ಕೆ ಅಧಿಕಾರ ಕೊಡುವ ಸ್ವಾತಂತ್ರ್ಯ.

ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಗೆ ತಾಬೇದಾರಿಯಾದ ಮ್ಯಾಜಿಸ್ಟ್ರೇಟರಿಂದ ಆತಗೆ ಯುಕ್ತತೋರುವ ಮೊಕದ್ದಮೆಗಳ ತರಗತಿಗಳನ್ನಾಗಲೀ ಅಥವಾ ಮೊಕದ್ದಮೆಗಳ ಫಲಾನಾ ತರಗತಿಗಳನ್ನಾಗಲೀ ಹಿಂದಕ್ಕೆ ತೆಗದುಕೊಳ್ಳಲಿಕ್ಕೆ ಸದರೀ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟಗೆ ಮೈಸೂರು ಗವರ್ನ್ಮೆಂಟಿನವರು ಅಧಿಕಾರಕೊಡಬಹುದು.

ಈ ಪ್ರಕರಣವನ್ನನುಸರಿಸಿ ಒಂದು ಹುಕುಮನ್ನು ಕೊಡುವ ಮ್ಯಾಜಿಸ್ಟ್ರೇಟರು ಸದರೀ ಹುಕುಮನ್ನು ಕೊಡಲಿಕ್ಕೆ ಇರುವ ಕಾರಣವನ್ನು ಲಿಖಿತ ಮೂಲಕ ರಿಕಾರ್ಡು ಮಾಡತಕ್ಕದ್ದು.

CHAPTER XLV.—OF IRREGULAR PROCEEDNGS.

45ನೇ ಅಧ್ಯಾಯ—ಅಕ್ರಮವಾದ ಪ್ರೊಸೀಡಿಂಗ್ಸ್‌ಗಳನ್ನು ಕುರಿತು.

ಪ್ರೊಸೀಡಿಂಗ್ಸ್‌ಗಳನ್ನು ಅಸಿದ್ಧಪಡಿಸದಂಥಾ ಅಕ್ರಮಗಳು.

529. ಈ ಕೆಳಗಿನ ಪ್ರೊಸೀಡಿಂಗ್ಸ್‌ಗಳಪೈಕಿ ಯಾವದೊಂದನ್ನು ನಡಿಸುವದಕ್ಕೆ ಕಾನೂನಮೇರೆಗೆ ಅಧಿಕಾರಪಡೆಯದ ಯಾವನೊಬ್ಬ ಮ್ಯಾಜಿಸ್ಟ್ರೇಟನು ಒಳ್ಳೇ ನಂಬಿಕೆಯಿಂದ ತಪ್ಪಾಗಿ ನಡಿಸಿದರೆ;

(ಯಾವವಂದರೆ):—

(a) 98ನೇ ಪ್ರಕರಣಪ್ರಕಾರ, ಝಡ್ತಿ ವಾರಂಟ ಕೊಡೋಣ;

(b) ಒಂದು ತಕ್ಸೀರನ್ನು ಪೋಲಿಸ್ ವಿಚಾರಣೆ ಮಾಡಲಿಕ್ಕೆ 155ನೇ ಪ್ರಕರಣಪ್ರಕಾರ, ಪೋಲಿಸಿನವರಿಗೆ ಹುಕುಂಕೊಡೋಣ;

(c) 176ನೇ ಪ್ರಕರಣಪ್ರಕಾರ ಅವಿಧಿಮರಣದ ವಿಚಾರಣೆಯನ್ನು ಮಾಡೋಣ;

(d) ತನ್ನ ಸ್ಥಳಿಕ ಅಧಿಕಾರಸರಹದ್ದಿನಹೊರಗೆ ಒಂದು ತಕ್ಸೀರನ್ನು ಮಾಡಿದಂಥಾವನನ್ನು ತನ್ನ ಸ್ಥಳಿಕ ಅಧಿಕಾರ ಸರಹದ್ದಿನ ಒಳಗೆ ಹಿಡಿಯಲಿಕ್ಕೆ 186ನೇ ಪ್ರಕರಣಪ್ರಕಾರ ಪ್ರೊಸೆಸ್ ಕೊಡೋಣ;

(e) 191ನೇ ಪ್ರಕರಣದ (a) ಕ್ಲಾಜ್—ಯಾ—(b) ಕ್ಲಾಜ್‌ಪ್ರಕಾರ ಒಂದು ತಕ್ಸೀರಿನ ವಿಚಾರಣೆ ಮಾಡೋಣ;

(f) 192ನೇ ಪ್ರಕರಣಪ್ರಕಾರ ಒಂದು ಮೊಕದ್ದಮೆಯನ್ನು ವರ್ಗ ಮಾಡೋಣ;

(g) 337ನೇ ಪ್ರಕರಣ—ಯಾ—338ನೇ ಪ್ರಕರಣಪ್ರಕಾರ ಮಾಫಿವಚನ್ನಾನ ಕೊಡೋಣ;

1203

(h) 524ನೇ ಪ್ರಕರಣ—ಯಾ—525ನೇ ಪ್ರಕರಣಪ್ರಕಾರ ಸ್ವತ್ತನ್ನು ವಿಕ್ರಯಿಸೋಣ ; ಯಾ—

(i) 528ನೇ ಪ್ರಕರಣಪ್ರಕಾರ ಬಂದು ಮೊಕದ್ದಮೆಯನ್ನು ತರಿಸಿಕೊಂಡು ತಾನೇ ದರ್ಯಾಫ್ತಿ ಮಾಡೋಣ.

ಅವನು ಹಾಗೆ ಅಧಿಕಾರಪಡಿಯಲ್ಲಿಲ್ಲವೆಂಬ ಸಬಬಿನಮೇಲೆ ಮಾತ್ರ ಅವನ ಪ್ರೊಸೀಡಿಂಗ್ಸ್‌ಗಳು ತಳ್ಳಿಹಾಕಲ್ಪಡಕೂಡದು.

ಪ್ರೊಸೀಡಿಂಗ್ಸ್‌ಗಳನ್ನು ಅಸಿದ್ಧಪಡಿಸುವ ಅಕ್ರಮಗಳು.

530. ಯಾವನೊಬ್ಬ ಮ್ಯಾಜಿಸ್ಟ್ರೇಟನಾಗಲಿ, ಈ ಬಗ್ಗ್ಯಾಗಿ ಕಾನೂನಿನಿಂದ ಅಧಿಕಾರಪಡಯದೆ, ಈ ಕೆಳಗಿನ ಯಾವದೊಂದು ಕೃತ್ಯವನ್ನು ಮಾಡಿದರೆ, (ಯಾವವೆಂದರೆ) :—

(a) 88ನೇ ಪ್ರಕರಣಪ್ರಕಾರ ಸ್ವತ್ತನ್ನು ಜಪ್ತಿಮಾಡಿದರೆ ಮತ್ತು ಮಾರಿದರೆ ;

(b) ಪೋಸ್ಟ ಆಫಿಸಿನಲ್ಲಿರುವ ಯಾವದೊಂದು ಕಾಗದದಬಗ್ಗ್ಯೆ—ಯಾ—ಟೆಲಿಗ್ರಾಫ ಇಲಾಖೆಯಲ್ಲಿ ಇರುವ ಯಾವದೊಂದು ಟೆಲಿಗ್ರಾಮಿನ ಬಗ್ಗ್ಯಾಗಿ ಝುಡ್ತೀ ವಾರಂಟಿಕೊಟ್ಟರೆ ;

(c) ನೆಮ್ಮದಿ ಕಾಪಾಡತಕ್ಕಬಗ್ಗ್ಯೆ ಜಾಮೀನು ಕೇಳಿದರೆ ;

(d) ಒಳ್ಳೇನಡತೆಬಗ್ಗ್ಯೆ ಜಾಮೀನು ಕೇಳಿದರೆ ;

(e) ಒಳ್ಳೇನಡತೆಯಿಂದ ಇರಿವಬಗ್ಗ್ಯೆ ನ್ಯಾಯವಾಗಿ ಬದ್ಧಪಡಿಸಲ್ಪಟ್ಟ ಮನುಷ್ಯನನ್ನು ವಿಮೋಚಿಸಿದರೆ ;

(f) ನೆಮ್ಮದಿ ಕಾಪಾಡತಕ್ಕಬಗ್ಗ್ಯೆ ಕೊಟ್ಟ ಪತ್ರವನ್ನು ರದ್ದು ಮಾಡಿದರೆ ;

(g) ಸ್ಥಳೀಯ ಹೇಸಿಗೆಯನ್ನು ಕುರಿತು 133ನೇ ಪ್ರಕರಣಪ್ರಕಾರ ಬಂದು ಹುಕುಮನ್ನು ಮಾಡಿದರೆ ;

(h) 143ನೇ ಪ್ರಕರಣಪ್ರಕಾರ ನಡಿಯುತ್ತಿರುವ ಬಹಿರಂಗವಾದ ಹೇಸಿಗೆಯನ್ನು ನಿಷೇಧಿಸಿ—ಯಾ—ಅದನ್ನು ತಿರಿಗಿ ಮಾಡದಂತೆ ಅಪ್ಪಣೆಕೊಟ್ಟರೆ ;

(i) 144ನೇ ಪ್ರಕರಣಪ್ರಕಾರ ಬಂದು ಹುಕುಂ ಕೊಟ್ಟರೆ ;

(j) 12ನೇ ಅಧ್ಯಾಯಪ್ರಕಾರ ಬಂದು ಹುಕುಂಮಾಡಿದರೆ ;

(k) 191ನೇ ಪ್ರಕರಣದ (c) ಕ್ಲಾಜಿನಪ್ರಕಾರ ಬಂದು ತಕ್ರೀರನ್ನು ವಿಚಾರಣೆಮಾಡಲು ಪ್ರವರ್ತಿಸಿದರೆ;

(l) ಬೇರೆ ಒಬ್ಬ ಮ್ಯಾಜಿಸ್ಟ್ರೇಟನಿಂದ ರಿಕಾರ್ಡಮಾಡಲ್ಪಟ್ಟ ಪ್ರೊಸೀಡಿಂಗ್ಸಗಳ ಮೇಲೆ, 349ನೇ ಪ್ರಕರಣಪ್ರಕಾರ ಬಂದು ಸಜಾವಿಧಿಸಿದರೆ ;

(m) 435ನೇ ಪ್ರಕರಣಪ್ರಕಾರ, ಪ್ರೊಸೀಡಿಂಗಸಗಳನ್ನು ತರಿಸಿದರೆ ;

(n) ಜೀವನಾಂಶಕ್ಕಾಗಿ ಹುಕುಂ ಮಾಡಿದರೆ ;

(o) 514ನೇ ಪ್ರಕರಣಪ್ರಕಾರ ಮಾಡೋಣಾದ ಹುಕುಮನ್ನು 515ನೇ ಪ್ರಕರಣಪ್ರಕಾರ ಪುನರ್ವಿಮರ್ಶಿಸಿದರೆ ;

(p) ತಕ್ರೀರುದಾರನನ್ನು ದರಿಯಾಫ್ತಿ ಮಾಡಿದರೆ ;

(q) ತಕ್ರೀರದಾರನನ್ನು ಪೂರಾಗಿ ದರಿಯಾಫ್ತಿ ಮಾಡಿದರೆ ; ಯಾ

(r) ಅಪೀಲನ್ನು ಇತ್ಯರ್ಥಿಸಿದರೆ ;

ಆತನ ಪ್ರೊಸಿಡಿಂಗಸಗಳು ಅಸಿದ್ಧವಾಗಿರತಕ್ಕದ್ದು.

ತಪ್ಪಿತವಾದಸ್ಥಳದಲ್ಲಿ ನಡದ ಪ್ರೊಸೀಡಿಂಗ್ಸ್‌ಗಳು.

531. ಯಾವದೊಂದು ಕ್ರಿಮಿನಲ ಕೋರ್ಟಿನವರ ಇತ್ಯರ್ಥ, ಸಜಾ—ಯಾ—ಹುಕುಂ, ತಪ್ಪಿತವಾದ ಬಂದು ಸೆಷನ್ಸ ಡಿವಿಜನಲ್ಲಿ, ಡಿಸ್ಟ್ರಿಕ್ಟಿನಲ್ಲಿ, ಸಬ ಡಿವಿಜನಿನಲ್ಲಿ—ಯಾ—ಇತರ ಸ್ಥಳಿಕ ಸರಹದ್ದಿನಲ್ಲಿ, ನಡೆಯುತ್ತಿರುವ ವಿಚಾರಣೆ ದರಿಯಾಫ್ತಿ ಯಾ—ಇತರ ಪ್ರೊಸೀಡಿಂಗಸಗಳಲ್ಲಿ ಹುಟ್ಟಿದ್ದು—ಯಾ—ವಿಧಿಸೋಣಾದ್ದು ಎಂಬ ಸಬಬಿನ ಮೇಲೆಯೇ, ಅಂಥಾ ತಪ್ಪಿತದಿಂದ ನ್ಯಾಯನಡಿಯುವದು ತಪ್ಪಿಹೋಗಿದೆ ಯೆಂತ ತೋರಿದ ಶಿವಾಯಿ, ತಳ್ಳಲ್ಪಡಕೂಡದು.

1204

532. ಯಾವನೊಬ್ಬ ವ್ಯಾಜಿಸ್ಟ್ರೇಟನಾಗಲೀ—ಯಾ—ಇತರ ಅಧಿಕಾರಿಯಾಗಲೀ, ಕೊಡಲ್ಪಡದೆ ಇರುವ ಅಧಿಕಾರಗಳನ್ನು, ಕ್ರಮವಾಗಿ ಕೊಡಲ್ಪಟ್ಟ ಅಧಿಕಾರಗಳ ಹಾಗೆ ಚಲಾಯಿಸಿ, ಒಬ್ಬ ಅಪಾದನೆಪಟ್ಟ ಮನುಷ್ಯನು ದರಿಯಾಫ್ತಿ ಬಗ್ಗ್ಯೆ ಸೆಷನ್ಸ ಕೋರ್ಟಿಮುಂದೆ ಕಮ್ಮಿಟ ಮಾಡಲ್ಪಟ್ಟಿದ್ದರೆ, ಯಾವ ಕೋರ್ಟಿಗೆ ಕಮ್ಮಿಟ ಮಾಡೋಣಾಯಿತೋ ಆ ಕೋರ್ಟಿನವರು, ಪ್ರೊಸೀಡಿಂಗಗಳನ್ನು ಓದಿನೋಡಿದಮೇಲೆ, ಅಪಾದನೆಪಟ್ಟವನು ಅದರಿಂದ ಬಾಧಕ ಪಡಲಿಲ್ಲ ಎಂತ ಆಲೋಚಿಸಿದರೆ, ವಿಚಾರಣೆ ನಡಿಯುತ್ತಾ ಇರುವಾಗ, ಮತ್ತು ಕಮ್ಮಿಟಮೆಂಟ ಹುಕುಮಿನಮೊದಲು, ಅಪಾದನೆಪಟ್ಟವನಕಡೆಯಿಂದಾಗಲೀ—ಯಾ—ಫಿರಿಯಾದಿ ತರ್ಫಿನಿಂದಾಗಲೀ ಅಂಥಾ ವ್ಯಾಜಿಸ್ಟ್ರೇಟಗೆ—ಯಾ—ಇತರ ಅಧಿಕಾರಿಗೆ ಸ್ವಾತಂತ್ರ್ಯ ಇಲ್ಲವೆಂಬು ಆಕ್ಷೇಪ ತೆಗಿಯೋಣಾಗದೆ ಇರುವ ಸಂಗತಿಯಲ್ಲಿ, ಸದರೀ ಕಮ್ಮಿಟಮೆಂಟನ್ನು ಅಂಗೀಕರಿಸ ಬಹುದು.

ಅಕ್ರಮ ಕಮ್ಮಿಟಮೆಂಟಗಳು ಯಾವಾಗ ಸಿದ್ಧಿಸಬಹುದು.

ಅಪಾದನೆಪಟ್ಟವನು ಬಾಧಿಸಲ್ಪಟ್ಟಿದ್ದಾನೆಂತ ಸದರೀ ಕೋರ್ಟಿನವರು ತಿಳಕೊಂಡರೆ, ಅಥವಾ ಅಂಥಾ ಆಕ್ಷೇಪಣೆ ಹಾಗೆ ಮಾಡೋಣಾದರೆ, ಸದರೀ ಕೋರ್ಟಿನವರು ಕಮ್ಮಿಟಮೆಂಟ ರದ್ದುಮಾಡಿ, ತಕ್ಕ ಅಧಿಕಾರವುಳ್ಳ ಒಬ್ಬ ವ್ಯಾಜಿಸ್ಟ್ರೇಟು ಹೊಸದಾದ ವಿಚಾರಣೆ ಮಾಡುವಂತೆ ಅಪ್ಪಣೆಕೊಡತಕ್ಕದ್ದು.

533. 164ನೇ ಪ್ರಕರಣ—ಯಾ—364ನೇ ಪ್ರಕರಣ ಪ್ರಕಾರ ರಿಕಾರ್ಡು ಮಾಡಲ್ಪಟ್ಟ ಒಬ್ಬ ತಕ್ಸೀರುದಾರನ ಕಬೂಲಾತಿ—ಯಾ—ಇತರ ಹೇಳಿಕೆಗಳು, ಯಾವದೊಂದು ಕೋರ್ಟಿನಲ್ಲಿ ಸಾಕ್ಷ್ಯವಾಗಿ ಹಾಜರು ಮಾಡಲ್ಪಟ್ಟು, ಅಂಥಾ ಹೇಳಿಕೆಯನ್ನು ರಿಕಾರ್ಡುಮಾಡಿದ ವ್ಯಾಜಿಸ್ಟ್ರೇಟರು ಆ ಪ್ರಕರಣದ ನಿಬಂಧನೆಗಳಿಗೆ ಪೂರ್ಣವಾಗಿ ಅನುಸರಿಸಲಿಲ್ಲವೆಂತ ಸದರೀ ಕೋರ್ಟಿನವರಿಗೆ ತೋರಿಬಂದರೆ, ರಿಕಾರ್ಡ ಮಾಡಲ್ಪಟ್ಟ ಹೇಳಿಕೆಯನ್ನು ಅಂಥಾ ಮನುಷ್ಯನು ಕ್ರಮವಾಗಿ ನುಡಿದನೆಂಬಬಗ್ಗ್ಯೆ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು; ಮತ್ತು, ಇಂಡಿಯನ್ ಎವಿಡೆನ್ಸ ಆಕ್ಟಿನ 91ನೇ ಪ್ರಕರಣದಲ್ಲಿ ಏನು ಅಡಗಿದ್ದಾಗ್ಯೂ ಚಿಂತೆಯಿಲ್ಲ, ಅಂಥಾ ತಪ್ಪಿತದಿಂದ ಪ್ರತಿವಾದದ ಯೋಗ್ಯತೆಯ ಮೇಲೆ ಅಪಾದನೆಪಟ್ಟವನನ್ನು ಬಾಧಕಪಡಿಸುವದಿಲ್ಲವಾದರೆ ಅಂಥಾ ಹೇಳಿಕೆಯನ್ನು ಸಾಕ್ಷ್ಯವಾಗಿ ಅಂಗೀಕರಿಸತಕ್ಕದ್ದು.

164—ಯಾ—364ನೇ ಪ್ರಕರಣದ ನಿಬಂಧನೆಗಳಿಗನುಸರಿಸದಿದ್ದರೆ.

535. ತಕ್ಸೀರುನಾಮೆಯನ್ನು ತಯ್ಯಾರು ಮಾಡದೆ ತಪ್ಪಿದ್ದೆಂಬ ಸಬಬಿನಿಂದಲೇ ಯಾವದೊಂದು ವಿಧಿಸೋಣಾದ—ಯಾ—ನುಡಿಯೋಣಾದ ಇತ್ಯರ್ಥ—ಯಾ—ಸಜಾವು, ಅಸಂಬಂಧವಾಗಿ ನ್ಯಾಯ ನಡಿಯದೆ ತಪ್ಪಿ ಇರುವದಾಗಿ, ಅಪ್ಪೀಲು—ಯಾ—ಪುನರ್ವಿಮರ್ಶೆ ಕೋರ್ಟಿನವರು ಅಭಿಪ್ರಾಯ ಪಡುವ ಸಂಗತಿಯಲ್ಲಿ ಅಲ್ಲದೇ ಅನ್ಯಥಾ ಅಸಿದ್ಧವಾಗಕೂಡದು.

ತಕ್ಸೀರುನಾಮೆಯನ್ನು ತಯಾರ್‌ಮಾಡುವದಕ್ಕೆ ತಪ್ಪಿದ್ದರಿಂದ ಉಂಟಾಗುವ ಫಲ.

ತಕ್ಸೀರುನಾಮೆಯನ್ನು ತಯ್ಯಾರು ಮಾಡದೆ ಬಿಟ್ಟುಬಿಟ್ಟದರಿಂದ ನ್ಯಾಯ ತಪ್ಪಲಿಕ್ಕೆ ಆಸ್ಪದವಾಯಿತೆಂತ ಅಪ್ಪೀಲ—ಯಾ—ಪುನರ್ವಿಮರ್ಶೆ ಕೋರ್ಟಿನವರು ತಿಳಕೊಂಡರೆ, ತಕ್ಸೀರುನಾಮೆ ತಯ್ಯಾರು ಮಾಡತಕ್ಕದೆಂತಲೂ—ವ—ತಕ್ಸೀರುನಾಮೆ ತಯ್ಯಾರಾದನಂತರದ ವ್ಯವಹರಣೆಯ ಸ್ಥಿತಿಯಿಂದ ಕೂಡಲೇ ನಡಿಸಬೇಕಾದ ದರಿಯಾಫ್ತಿಯು ತಿರಿಗಿ ಪ್ರಾರಂಭ ಮಾಡತಕ್ಕದ್ದೆಂತಲೂ, ಅಪ್ಪಣೆ ಕೊಡತಕ್ಕದ್ದು.

ಅಸ್ಸೆಸ್ಸರರೊಡನೆ ದರ್ಯಾಫ್ತಿ ಮಾಡಲ್ಪಡತಕ್ಕ ತಕ್ಸೀರು ಜೂರಿಯವರಿಂದ ದರ್ಯಾಫ್ತಿ ಮಾಡಲ್ಪಟ್ಟರೆ.

536. ಅಸ್ಸೆಸ್ಸರುಗಳ ಸಹಾಯದಿಂದ ದರಿಯಾಫ್ತಿ ಆಗತಕ್ಕ ತಕ್ಸೀರು ಜೂರಿಯವರಿಂದ ದರಿಯಾಫ್ತಿ ಆದರೆ, ಆ ಸಬಬಿನ ಮೇಲೆಯೇ ದರಿಯಾಫ್ತಿಯು ಅಸಿದ್ಧವಾಗತಕ್ಕದ್ದಲ್ಲ.

ಜೂರಿಯುವರಿಂದ ದರ್ಯಾಫ್ತಿ ಮಾಡಲ್ಪಡತಕ್ಕ ತಖ್ಖೀರು ಅಸ್ಸೆಸ್ಸರಿಂದ ದರ್ಯಾಫ್ತಿ ಮಾಡಲ್ಪಟ್ಟರೆ.

ಜೂರಿಯುವರಿಂದ ದರಿಯಾಫ್ತಿ ಆಗತಕ್ಕ ತಖ್ಖೀರು ಅಸ್ಸೆಸ್ಸರ ಸಹಾಯದೊಂದಿಗೆ ದರಿಯಾಫ್ತಿ ಆದರೆ, ಕೋರ್ಟಿನವರು ತಮ್ಮ ಇತ್ಯರ್ಥವನ್ನು ರಿಕಾರ್ಡು ಮಾಡುವದಕ್ಕೆ ಮುಂಚೆ ಆಕ್ಷೇಪ ತೆಗೆಯೋಣಾದ ಸಂಗತಿಯಲ್ಲಿ ಅಲ್ಲದೆ, ಅನ್ಯಥಾ ಹಾಗೆ ದರಿಯಾಫ್ತಿ ಆಯಿತೆಂಬ ಸಬಬಿನ ಮೇಲೆಯೇ ದರಿಯಾಫ್ತಿಯು ಅಸಿದ್ಧವಾಗತಕ್ಕದ್ದಲ್ಲ.

ತಖ್ಖೀರುನಾಮೆಯಲ್ಲಿ—ಯಾ—ಇತರಪ್ರೊಸೀಡಿಂಗ್ಸ್‌ಗಳಲ್ಲಿ ತಪ್ಪಿತ—ಯಾ—ಲೋಪಇದ್ದ ಸಬಬಿನಿಂದ ಇತ್ಯರ್ಥ—ಯಾ—ಸಜಾವು ಯಾವಾಗ್ಯೆ ತಿರಿಗಿಸಲ್ಪಡಬಹುದು.

537. ತಕ್ಕ ಅಧಿಕಾರ ಇರುವ ಕೋರ್ಟಿನವರಿಂದ ಕೊಡೋಣಾದ ಯಾವದೊಂದು ಇತ್ಯರ್ಥ, ಸಜಾ—ಯಾ—ಹುಕ್ಕುಂ ಇದಕ್ಕೆ ಮುಂಚೆ ಅಡಗಿರುವ ನಿಬಂಧನೆಗಳಿಗೆ ಒಳಪಟ್ಟು, 27ನೇ ಅಧ್ಯಾಯದ ಮೇರೆಗೆ ಯಾ—ಅಪ್ಪೀಲ್‌ಮೇಲೆ—ಯಾ—ಪುನರ್ವಿಮರ್ಶೆಯಲ್ಲಿ—

ಈ ಕೋಡಿನ ಪ್ರಕಾರ ದರಿಯಾಫ್ತಿ ಕಾಲದಲ್ಲಿ—ಯಾ—ಮುಂಚೆ ನಡದ ಇತರ ಪ್ರೊಸೀಡಿಂಗಸ್‌ಗಳಲ್ಲಿ, ಯಾ—ಯಾವದಾದರೂ ವಿಚಾರಣೆಯಲ್ಲಿ—ಯಾ—ಇತರ ಪ್ರೊಸೀಡಿಂಗಸ್‌ನಲ್ಲಿ—ಯಾ—ಫಿರಿಯಾದಿನಲ್ಲಿ, ಸಮನಿನಲ್ಲಿ, ವಾರಂಟಿನಲ್ಲಿ, ತಖ್ಖೀರುನಾಮೆಯಲ್ಲಿ, ಜಡ್ಜ್‌ಮೆಂಟಿನಲ್ಲಿ, ಯಾವದೊಂದು ತಪ್ಪಿತ, ಲೋಪ—ಯಾ—ಅಕ್ರಮವನ್ನು ಕುರಿತು, ಅಥವಾ

195ನೇ ಪ್ರಕರಣದಪ್ರಕಾರ ಅಗತ್ಯವಾದ ಯಾವದೊಂದು ಅಪ್ಪಣೆ ಇಲ್ಲವೆಂಬದರನ್ನು ಕುರಿತು,—ಯಾ—

324ನೇ ಪ್ರಕರಣಪ್ರಕಾರ ಜೂರರ—ಯಾ—ಅಸ್ಸೆಸ್ಸರು ಯಾವ ಪಟ್ಟಿಯನ್ನು ಪುನರ್ವಿಮರ್ಶಿಸುವಲ್ಲಿ ಲೋಪವಾದದ್ದರನ್ನು ಕುರಿತು—ಯಾ

ಜೂರಿಗೆ ಚಾರ್ಜುಮಾಡುವದರಲ್ಲಿ ಯಾವದಾದರೂ ತಪ್ಪು ನಿರ್ದೇಶಮಾಡಿದ್ದರನ್ನು ಕುರಿತು ; ಅಂಥಾ ತಪ್ಪು, ಲೋಪ, ಅಕ್ರಮ, ನ್ಯೂನತೆ ಅಥವಾ ತಪ್ಪು ನಿರ್ದೇಶದಿಂದ ನ್ಯಾಯನಡಿಯುವ ತಪ್ಪಿ ಇದ್ದಹಾಗೆ ಆದರೇನೇಹೊರ್ತು ಅನ್ಯಥಾ ತಿರಿಗಿಸಲ್ಪಡಕೂಡದು—ಯಾ—ಬದಲಾಯಿಸಲ್ಪಡ ಕೂಡದು.

ಪ್ರೊಸೀಡಿಂಗ್ಸ್‌ಗಳಲ್ಲಿ ಕ್ರಮ ತಪ್ಪಿದ್ದರಿಂದ ಯಾ—ಕುಂದುತನದ ಬಗ್ಗ್ಯಾಗಿ ಜಫ್ತಿಯು ಅಕ್ರಮವಾಗಿರಲಿಕ್ಕಿಲ್ಲ—ಯಾ—ಜಫ್ತುಮಾಡಿದವನು ಅತಿಕ್ರಮ ಪ್ರವೇಶ ಮಾಡಿದವನಾಗಲಿಕ್ಕಿಲ್ಲ.

538. ಸರ್ಮಸಿನಲ್ಲಾಗಲೀ, ತಖ್ಖೀರು ಸಾಬೀತಿಯಲ್ಲಾಗಲೀ, ಜಫ್ತಿ ಅಧಿಕಾರ ಪತ್ರದಲ್ಲಾಗಲೀ—ಯಾ—ಅದಕ್ಕೆ ಸಂಬಂಧವಾದ ಇತರ ಪ್ರೊಸೀಡಿಂಗಸ್‌ಗಳಲ್ಲಾಗಲೀ, ಯಾವದೊಂದು ಕ್ರಮ ಲೋಪ—ಯಾ—ಕುಂದು ಇರುವ ಸಂಗತಿಮೇಲೆ, ಈ ಕೋಡಿನಪ್ರಕಾರ ಮಾಡೋಣಾದ ಯಾವದೊಂದು ಜಫ್ತಿಯು, ಅಕ್ರಮವೆಂತಾಗಲೀ,—ಯಾ—ಅದನ್ನು ಮಾಡುವ ಯಾವಾತನು ಅತಿಕ್ರಮ ಪ್ರವೇಶ ಮಾಡುವವನೆಂತಾಗಲೀ, ಎಣಿಸಲ್ಪಡತಕ್ಕದ್ದಲ್ಲ.

Chapter XLVI.—Miscellaneous.

46ನೇ ಅಧ್ಯಾಯ.—ವಿವಿಧ ವಿಷಯಗಳು.

ಮುಖ್ಯಸಾಕ್ಷಿಯನ್ನು ಸರ್ಮಮಾಡುವದಕ್ಕೂ—ಯಾ—ಹಾಜರಿರುವವರನ್ನು ವಿಚಾರಣೇ ಮಾಡುವದಕ್ಕೂ ಅಧಿಕಾರ.

540. ಈ ಕೋಡಿನ ಪ್ರಕಾರ ಯಾವದೊಂದು ವಿಚಾರಣೆ, ದರಿಯಾಫ್ತಿ—ಯಾ—ಇತರ ಪ್ರೊಸೀಡಿಂಗಸ್ ನಡಿಯುತ್ತಾ ಇರುವಾಗ ಯಾವ ಸ್ಥಿತಿಯಲ್ಲಾದರೂ, ಯಾವದೊಂದು ಕೋರ್ಟಿನವರು, ಸಾಕ್ಷಿಗಾರನಾಗಿ ಯಾವ ಮನುಷ್ಯನನ್ನಾದರೂ ಸಮರ್ಮಮಾಡಬಹುದು, ಅಥವಾ ಹಾಜರಿರುವ ಯಾವನೊಬ್ಬ ಮನುಷ್ಯನು ಸಾಕ್ಷಿಯಾಗಿ ಸರ್ಮಮಾಡಲ್ಪಡದೆ ಇದ್ದಾಗ್ಯೂ, ಅವನನ್ನು ವಿಚಾರಣೆ ಮಾಡಲೂ—ಯಾ—ಮೊದಲೇ ವಿಚಾರಣೆಪಟ್ಟ ಯಾವನೊಬ್ಬ ಮನುಷ್ಯನನ್ನು ತಿರಿಗಿ ಕರಿಸಿ ಪುನಃ ವಿಚಾರಣೆ ಮಾ

1206

ಡಲೂಬಹುದು, ಮತ್ತು ಮೊಕದ್ದಮೆಯು ನ್ಯಾಯವಾದ ಇತ್ಯರ್ಥಕ್ಕೆ ಯಾವನೊಬ್ಬನ ಸಾಕ್ಷ್ಯವು ಅವಶ್ಯವೆಂತ ಕೋರ್ಟಿನವರಿಗೆ ತೋರಿದರೆ, ಆತನನ್ನ ಕೋರ್ಟಿನವರು ಸಮ್ಮನ್ ಮಾಡತಕ್ಕದ್ದು, ಮತ್ತು ವಿಚಾರಣೆ—ಯಾ—ತಿರಿಗಿ ಕರಿಸಿ ಪುನಃ ವಿಚಾರಣೆ ಮಾಡತಕ್ಕದ್ದು.

541. ಆಯಾಯ ಕಾಲದಲ್ಲಿ ಜಾರಿಯಲ್ಲಿ ಇರುವ ಯಾವದೋಮ ಕಾನೂನಿನಲ್ಲಿ ಅನ್ಯಥಾ ನಿಬಂಧಿಸೋಣಾದಾಗ ಅಲ್ಲದೆ, ಈ ಕೋಡಿನ ಪ್ರಕಾರ ಕೈದುಪಡುವವಕ್ಕೆ—ಯಾ—ಶೆರೆಯಲ್ಲಿ ಇಡಲ್ಪಡುವವಕ್ಕೆ ಗುರಿಯಾದ ಯಾವನೊಬ್ಬ ಮನುಷ್ಯನು ಯಾವ ಸ್ಥಳದಲ್ಲಿ ಶೆರೆಯಲ್ಲಿ ಇಡಲ್ಪಡಬೇಕೆಂಬದಾಗಿ ಮೈಸೂರು ಗವರ್ನಮೆಂಟಿನವರು ಅಪ್ಪಣೆ ಕೊಡಬಹುದು.

ಕೈದುಮಾಡತಕ್ಕ ಸ್ಥಳವನ್ನು ನೇಮಿಸುವ ಅಧಿಕಾರ.

543. ಯಾವ ಸಾಕ್ಷ್ಯವನ್ನಾದರೂ ಅಥವಾ ಹೇಳಿಕೆಯನ್ನಾದರೂ ದುಬಾಸಿತನಮಾಡುವ ನಿಮಿತ್ತ ಯಾವ ಕ್ರಿಮಿನಲ್ ಕೋರ್ಟಿನವರಿಂದಲಾದರೂ ದುಬಾಸಿ ಅಪೇಕ್ಷಿಸಲ್ಪಟ್ಟಾಗ ಆ ದುಬಾಸಿ ಅಂಥಾ ಸಾಕ್ಷ್ಯವನ್ನು—ಯಾ—ಹೇಳಿಕೆಯನ್ನು ನಿಜವಾಗಿ ದುಬಾಸಿತನಮಾಡುವದಕ್ಕೆ ಬದ್ಧನಾಗಿರತಕ್ಕದ್ದು.

ದುಬಾಸಿ ನಿಜವಾಗಿ ತರ್ಜುಮೆ ಮಾಡಿ ಹೇಳಲಿಕ್ಕೆ ಬದ್ಧನಾಗಿರುವಿಕೆ.

544. ಮೈಸೂರು ಗವರ್ನಮೆಂಟಿನವರಿಂದ ನಿರ್ಣಯಿಸೋಣಾದ ಕಾಯಿದೆಗಳಿಗೆ ಬಳಪಟ್ಟವರಾಗಿ, ಯಾವದೊಂದು ಕ್ರಿಮಿನಲ್ ಕೋರ್ಟಿನವರು ಈ ಕೋಡಿನ ಪ್ರಕಾರ ವಿಚಾರಣೆ ದರ್ಯಾಫ್ತಿ—ಯಾ—ಇತರ ಪ್ರೊಸೀಡಿಂಗಸಬಗ್ಯೆ ತಮ್ಮ ಮುಂದೆ ಹಾಜರಾಗುವ ಯಾವನೊಬ್ಬ ಫಿರ್ಯಾದುದಾರನ ಅಥವಾ ಸಾಕ್ಷಿಗಾರನ ನ್ಯಾಯವಾದ ಖರ್ಚುಗಳು, ಗವರ್ನಮೆಂಟಿನವರ ಕಡೆಯಿಂದ, ಪಾವತಿಯಾಗುವಂತೆ ಹುಕುಂ ಮಾಡಬಹುದು.

ಫಿರ್ಯಾದುದಾರರ—ವ—ಸಾಕ್ಷಿಗಾರರ ಖರ್ಚುಗಳು.

545. ತತ್ಕಾಲದಲ್ಲಿ ಜಾರೀಲಿರುವ ಯಾವ ಕಾನೂನಿನ ಪ್ರಕಾರವಾದರೂ, ಒಂದು ಕ್ರಿಮಿನಲ್ ಕೋರ್ಟಿನವರು ಒಂದು ಜುಲ್ಮಾನೆ ವಿಧಿಸುವಾಗ್ಯೆಲ್ಲಾ—ಯಾ—ಅಂಥಾ ಜುಲ್ಮಾನೆಯು ಸಜಾವನ್ನು ಅಪ್ಪೀಲಿನಲ್ಲಿ, ಪುನರ್ವಿಮರ್ಶೆಯಲ್ಲಿ—ಯಾ—ಅನ್ಯಥಾ ಮಂಜೂರು ಮಾಡುವಾಗ್ಯೆಲ್ಲಾ—ಯಾ—ಸಜಾವಿನೊಂದಿಗೆ ಅಂಥಾ ಜುರ್ಮಾನೆ ಭಾಗವಾಗುವಾಗ್ಯೆಲ್ಲಾ, ಸದರೀ ಕೋರ್ಟಿನವರು ವಸೂಲಾಗಬಹುದಾದ ಸದರೀ ಜುರ್ಮಾನೆಯು ಪೂರಾವನ್ನಾಗಲೀ—ಯಾ—ಯಾವದೊಂದು ಭಾಗವನ್ನಾಗಲೀ ಕೆಳಗೆ ನಮೂದಿಸುವದಕ್ಕೋಸ್ಕರ ಉಪಯೋಗಿಸತಕ್ಕದ್ದಾಗಿ ತೀರ್ಪನ್ನು ವಿಧಿಸುವಾಗ ಹುಕುಂ ಕೊಡಬಹುದು—

ಜುರ್ಮಾನೆ ಯಿಂದಖರ್ಚನ್ನು—ಯಾ—ಪರಿವರ್ತನೆಯನ್ನು ಕೊಡಸಲಿಕ್ಕೆ ಕೋರ್ಟಿನವರ ಅಧಿಕಾರ.

(a) ಪ್ರೊಸಿಕ್ಯೂಷನಿನಲ್ಲಿ ತಗಲಿದ ವಾಜಬಿಯಾದ ಖರ್ಚುಗಳ ಬಗ್ಯೆ ;

(b) ನಡಿಸೋಣಾದ ತಕ್ಸೀರಿನಿಂದ ಉಂಟಾದ ಹಾನಿಯ ಪರಿವರ್ತನೆಬಗ್ಯೆ, ಅಂಥಾ ಮುಖ್ಯಪರಿವರ್ತನೆಯು ಸಿವಿಲ್ ವ್ಯಾಜ್ಯದಿಂದ ಬರಮಾಡಬಹುದೆಂದು ಕೋರ್ಟಿನವರು ಅಭಿಪ್ರಾಯಪಟ್ಟ ಸಂಗತಿಯಲ್ಲಿ.

ಯಾವ ಮೊಕದ್ದಮೆಯು ಅಪ್ಪೀಲಿಗೆ ಬಳಪಟ್ಟದ್ದೆಯೋ ಅಂಥಾ ಮೊಕದ್ದಮೆಯಲ್ಲಿ ಜುರ್ಮಾನೆ ವಿಧಿಸೋಣಾದರೆ, ಅಂಥಾಪಾವತಿಯು ಅಪ್ಪೀಲಿಗಾಗಿ ನಿರ್ದೇಶಿಸಿರೋಣಾದ ಮಾಯಿದೆ ಕಳೆಯುವ ಮುಂಚೆ, ಅಥವಾ, ಅಪ್ಪೀಲು ಕೊಟ್ಟಿದ್ದರೆ, ಅಪ್ಪೀಲು ಫೈಸಲಾಗುವತನಕ, ಕೊಡತಕ್ಕದ್ದಿಲ್ಲ.

546. ಅದೇ ವಿಷಯವನ್ನು ಕುರಿತು ಆ ಮೇಲೆ ಜರಗುವ ಯಾವದೊಂದು ಸಿವಿಲ್ ವ್ಯಾಜ್ಯದಲ್ಲಿ ಪರಿವರ್ತನೆಯನ್ನು ವಿಧಿಸುವ ಕಾಲದಲ್ಲಿ, 545ನೇ ಪ್ರಕರಣಪ್ರಕಾರ ಪರಿಹಾರ ದ್ರವ್ಯವಾಗಿ ತೆತ್ತ—ಯಾ—ವಸೂಲಾದ ಯಾವದೊಂದು ಮೊಬಲಗನ್ನು ಕೋರ್ಟಿನವರು ಲೆಖ್ಖಕ್ಕೆ ತಕ್ಕೊಳ್ಳತಕ್ಕದ್ದು.

ಅನಂತರದ ವ್ಯಾಜ್ಯದಲ್ಲಿ ವಸೂಲಾತಿಗಳು ಲೆಖ್ಖಕ್ಕೆ ತೆಕ್ಕೊಳ್ಳತಕ್ಕದ್ದು.

ತೆರತಕ್ಕದ್ದೆಂತ ಹುಕ್ಕುಂ ಮಾಡೋಣಾದ ಹಣವು ಜುರುಮಾನೆಯೋಪಾದಿ ವಸೂಲ್ ಮಾಡಲ್ಪಡತಕ್ಕದ್ದು.

547. ಈ ಕೋಡಿನ ಪ್ರಕಾರ ಮಾಡೋಣಾದ ಯಾವದೊಂದು ಹುಕುಮಿನ ಬಲದಿಂದ ತೆರಬೇಕಾದ ಯಾವದೊಂದು (ಜುರುಮಾನೆಅಲ್ಲದ) ಹಣ ಜುರುಮಾನೆಯೋಪಾದಿಯಾಗಿಯೇ ವಸೂಲು ಮಾಡಲ್ಪಡತಕ್ಕದ್ದು.

ಪ್ರೊಸೀಡಿಂಗ್ಸುಗಳ ನಕಲುಗಳು.

548. ಒಂದು ಕ್ರಿಮಿನಲ್ ಕೋರ್ಟಿನವರ ಜಡ್ಜಿಮೆಂಟಿನಿಂದ—ಯಾ—ಹುಕುಮಿನಿಂದ ಬಾಧಿತನಾದ ಯಾವನೊಬ್ಬ ಮನುಷ್ಯನು ಜಾರಿಯವರಿಗೆ ಜಡ್ಜರಿಂದ ಮಾಡೋಣಾದ ಚಾರ್ಜಿನ—ಯಾ—ಯಾವದೊಂದು ಹುಕುಮಿನ—ಯಾ—ವಾಂಗ್ಮೂಲದ—ಯಾ—ರಿಕಾರ್ಡಿನ ಯಾವದೊಂದು ಅಂಶದ ನಕಲನ್ನು ತಕ್ಕೊಳ್ಳುವದಕ್ಕೆ ಅಪೇಕ್ಷಿಸುವದಿದ್ದರೆ, ಅಂಥಾ ನಕಲಿನಬಗ್ಯೆ ಅವನು ಅರ್ಜಿ ಕೊಟ್ಟನಂತರ, ಅದನ್ನು ಆತಗೆ ಕೊಡತಕ್ಕದ್ದು: ಪರಂತು ವಿಶೇಷ ಯಾವದೊಂದು ಕಾರಣದಿಂದ, ಖರ್ಚು ಶಿವಾಯಿ ಅದನ್ನು ಕೊಡುವದು ಯುಕ್ತವೆಂತ ಕೋರ್ಟಿನವರು ತಿಳಕೊಂಡ ಸಂಗತಿಯಲ್ಲಿ ಅಲ್ಲದೆ, ಅನ್ಯಥಾ ಆ ನಕಲುಗಳ ಖರ್ಚು ಆತನು ತೆತ್ತರೇನೇ ಹಾಗೆ ಕೊಡಬೇಕಾದ್ದು.

ಕೋರ್ಟ ಮಾರ್ಷಲ್‌ನಿಂದ ದರ್ಯಾಫ್ತಿ ಆಗಲಿಕ್ಕೆ ಗುರಿಯಾಗುವ ಮನುಷ್ಯರನ್ನ ಮಿಲಿಟರಿ ಅಧಿಕಾರಸ್ಥರಿಗೆ ಒಪ್ಪಿಸೋಣ.

549. ಮಿಲಿಟರಿ ಕಾನೂನಿಗೆ ಒಳಪಡುವ ಮನುಷ್ಯರು ಷರೀಕ್‌ಪಟ್ಟ ಮೊಕದ್ದಮೆಗಳಲ್ಲಿ ಈ ಕೋಡು ಲಗಾವಾಗತಕ್ಕ ಕೋರ್ಟಿನವರಿಂದ—ಯಾ—ಮಾರ್ಷಲ್ ಕೋರ್ಟಿನವರಿಂದ ದರ್ಯಾಫ್ತಿ ಮಾಡಲ್ಪಡಬೇಕೆಂಬ ಬಾಬಿನಲ್ಲಿ, ಮೈಸೂರು ಗವರ್ನಮೆಂಟಿನವರು 1881ನೇ ಇಸವಿ ಆರ್ಮಿ ಆಕ್ಟ—ವ—ಈ ಕೋಡನ್ನು, ಅಥವಾ ಆಯಾಯ ಕಾಲದಲ್ಲಿ ಜಾರಿಯಲ್ಲಿ ಇರುವ ಅದೇ ತರದ ಯಾವದೊಂದು ಕಾನಿಗೆ ಅನುಸಾರವಾಗಿ, ಕ್ರಮಗಳನ್ನು ಏರ್ಪಡಿಸಬಹುದು; ಮತ್ತು 1881ನೇ ಇಸವಿ ಆರ್ಮಿ ಆಕ್ಟಿನ 41ನೇ ಪ್ರಕರಣಪ್ರಕಾರ ಮಾರ್ಷಲ್ ಕೋರ್ಟಿನವರಿಂದ ದರ್ಯಾಫ್ತಿಮಾಡಲ್ಪಡಲಿಕ್ಕೆ ಗುರಿಪಡುವ ಒಂದು ತಕ್ಸೀರಿನ ಆಪಾದನೆಪಟ್ಟವನಾಗಿ, ಯಾವನೊಬ್ಬ ಮನುಷ್ಯನು ಮ್ಯಾಜಿಸ್ಟ್ರೇಟರ ಮುಂದೆ ತರಲ್ಪಟ್ಟರೆ, ಅಂಥಾ ಮ್ಯಾಜಿಸ್ಟ್ರೇಟನು ಅಂಥಾ ರೂಲುಗಳನ್ನು ಲಕ್ಷ್ಯಕ್ಕೆ ತಕೊಂಡು ನಡಿಯತಕ್ಕದ್ದು, ಮತ್ತು ತಕ್ಕವಾದ ಮೊಕದ್ದಮೆಗಳಲ್ಲಿ, ಆಪಾದನೆ ಪಟ್ಟವನ್ನ ಮಾರ್ಷಲ್ ಕೋರ್ಟಿನವರಿಂದ ದರ್ಯಾಫ್ತಿ ಮಾಡಲ್ಪಡತಕ್ಕ ಉದ್ದಿಶ್ಯವಾಗಿ, ಅವನನ್ನು ಅವನು ಆಪಾದಿಸಲ್ಪಟ್ಟ ತಕ್ಸೀರಿನ ಸ್ಟೇಟ್ ಮೆಂಟ್ ಸಮೇತ, ಆತನು ಸಂಬಂಧಪಟ್ಟ ರಿಜಿಮೆಂಟಿನ—ಯಾ—ಪಟಾಲಮ್ಮಿನ—ಯಾ—ರಿಜಿಮೆಂಟಿನ ಭಾಗದ ಕಮ್ಯಾಂಡಿಂಗ್ ಆಫಿಸರನ ಬಳಿಗೆ—ಯಾ—ಸಮೀಪದ ಮಿಲಿಟೇರಿ ಸ್ಟೇಷನಿನ ಕಮ್ಯಾಂಡಿಂಗ್ ಆಫಿಸರನ ಬಳಿಗೆ ಒಪ್ಪಿಸತಕ್ಕದ್ದು.

ಅಂಥಾಮನುಷ್ಯರನ್ನ ಹಿಡಿಯೋಣ.

ಅಂಥಾ ಯಾವದೊಂದು ಸ್ಥಳದಲ್ಲಿ ಇರುವ—ಯಾ—ಕೆಲಸಮಾಡುವ ತುರುಫಗಳ ಯಾವದೊಂದು ಸಮೂಹದ ಕಮ್ಯಾಂಡಿಂಗ್ ಆಫಿಸರನಿಂದ ಆಬಗ್ಯಾಗಿ ಬರಹ ಮೂಲವಾದ ಅರ್ಜಿ ತಲಪಿದಲ್ಲಿ, ಪ್ರತಿ ಮ್ಯಾಜಿಸ್ಟ್ರೇಟನು ಅಂಥಾ ತಕ್ಸೀರು ಆಪಾದಿಸಲ್ಪಟ್ಟ ಯಾವನೊಬ್ಬ ಮನುಷ್ಯನನ್ನ ಹಿಡಿದು ಭದ್ರವಾಗಿ ಇಡತಕ್ಕಬಗ್ಯೆ ಸಮಸ್ತ ಸಾಹಸಗಳನ್ನು ಮಾಡತಕ್ಕದ್ದು.

ಪೋಲಿಸಿನ ದೊಡ್ಡ ಆಫಿಸರರ ಅಧಿಕಾರಗಳು.

550. ಪೋಲಿಸ್ ಸ್ಟೇಷನ್ ಜಿಮ್ಮೆಯಲ್ಲಿಗುವ ಆಫಿಸರನಿಗಿಂತ ಹೆಚ್ಚಿನ ಹುದ್ದೆಯಲ್ಲಿರುವ ಪೋಲಿಸ್ ಆಫಿಸರರು, ಸ್ಟೇಷನ್ ಜಿಮ್ಮೆದಾರನಾದ ಅಂಥಾ ಆಫಿಸರನು ತನ್ನ ಸ್ಟೇಷನ್ ಸರಹದ್ದಿನೊಳಗೆ ಯಾವ ಅಧಿಕಾರಗಳನ್ನು ಚಲಾಯಿಸಬಹುದೋ ಅದೇ ಅಧಿಕಾರಗಳನ್ನು, ತಾವು ನೇಮಕಪಟ್ಟ ಸ್ಥಳೀಯ ಅಧಿಕಾರ ಸರಹದ್ದುಗಳೊಳಗೆಲ್ಲ, ನಡಿಸಬಹುದು.

ಜುಲುಮಿನಿಂದ—ಯಾ—ವಂಚನೆಯಿಂದ ವೈಯೋಣಾದ ಹೆಂಗಸರನ್ನು ತಿರಿಗಿ ಒಪ್ಪಿಸುವಹಾಗೆ ಬಲಾತ್ಕರಿಸುವದಕ್ಕೆ ಅಧಿಕಾರ.

551. ಅಕ್ರಮವಾದ ಯಾವದೊಂದು ಉದ್ದಿಶ್ಯದ ಬಗ್ಯೆ 14 ವರುಷಕ್ಕಿಂತ ಕಮ್ಮಿವಯಸ್ಸಿನ ಒಬ್ಬ ಹುಡುಗಿಯು—ಯಾ—ಒಬ್ಬ ಹೆಂಗಸನ್ನ ಜುಲುಮಿನಿಂದ—ಯಾ—ವಂಚನೆಯಿಂದ ಕರದುಕೊಂಡು ಹೋಗೋಣದರೆ—ಯಾ—ಅಕ್ರಮವಾಗಿ ತಡೆದಿಡಲ್ಪಟ್ಟಬಾಬಿನಲ್ಲಿ ಒಬ್ಬ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟನ ಬಳಿಯ ಪ್ರಮಾಣದ ಮೇಲೆ ಫಿರ್ಯಾದು ಮಾಡಿದಲ್ಲಿ, ಆತನು ಅಂಥಾ ಹೆಂಗಸನ್ನು ಕೂಡಲೇ ಸ್ವಾ

1208 ತಂತ್ರವಾಗಿ ಬಿಡತಕ್ಕದ್ದೆಂತಾಗಲೀ ಅಥವಾ ಅಂಥಾ ಹುಡಿಗಿಯನ್ನು ಅವಳಗಂಡನ, ಹೆತ್ತವರ, ಗಾರ್ಡಿಯನ್, ಅಥವಾ ಅಂಥಾ ಹುಡಿಗಿಯ ನ್ಯಾಯವಾದ ಮುಖ್ತ್ಯಾರಿ ಇರುವ ಇತರ ಮನುಷ್ಯನ ಸ್ವಾಧೀನಕ್ಕೆ ಕೂಡಲೇ ಒಪ್ಪಿಸತಕ್ಕದ್ದಾಗಿ, ಒಂದು ಹುಕುಮನ್ನು ಮಾಡಬಹುದು, ಮತ್ತು ಅವಶ್ಯ ಇರುವ ಬಲಾತ್ಕಾರವನ್ನು ಉಪಯೋಗಿಸಿ, ಅಂಥಾ ಹುಕುಮಿನ ಮೇರೆಗೆ ನಡಕೊಳ್ಳುವ ಹಾಗೆ ಬಲಾತ್ಕರಿಸ ಬಹುದು.

553. ಮೈಸೂರು ಸರ್ಕಾರದವರ ಮಂಜೂರಾತಿಯನ್ನು ಮೊದಲು ಪಡೆದು ಚೀಫ್ ಕೋರ್ಟಿನವರು ಆಗಿಂದಾಗ್ಯೆ ಸಬಾರ್ಡಿನೇಟ್ ಕೋರ್ಟುಗಳನ್ನು ಪರೀಕ್ಷಿಸುವದಕ್ಕೆ ರೂಲ್ಸುಗಳನ್ನು ಮಾಡಬಹುದು. ಮತ್ತು ಸದರೀ ಮಂಜೂರಾತಿಯಿಂದ ಆಗಿಂದಾಗ್ಯೆ

(a) ತಮಗೆ ತಾಬೇದಾರಿಯಾಗಿರುವ ಎಲ್ಲಾ ಕ್ರಿಮಿನಲ್ ಕೋರ್ಟುಗಳಲ್ಲಿ ಇಡಬೇಕಾದ ಸಮಸ್ತ ಪುಸ್ತಕಗಳು, ಖತಾಯಿತಿಗಳು—ವ—ಲೆಖ್ಖಗಳು ಇಡುವ ಬಗ್ಯೆ, ಮತ್ತು ಅಂಥಾ ಕೋರ್ಟುಗಳಿಂದ ತಯಾರಾಗಿ ರವಾನೆ ಆಗತಕ್ಕ ಯಾವದಾದರೂ ರಿಟರ್ನುಗಳನ್ನು—ಯಾ—ಸ್ಟೇಟ್‌ಮೆಂಟುಗಳನ್ನು ತಯಾರುಮಾಡುವ—ವ—ರವಾನೆ ಮಾಡುವ ಬಗ್ಯೆ ಕ್ರಮಗಳನ್ನು ಮಾಡಲೂ;

(b) ನಮೂನೆ ಏರ್ಪಡಿಸಬೇಕಾದ್ದು ಅಗತ್ಯವೆಂತ ತಮಗೆ ತೋರುವ ಸದರೀ ಕೋರ್ಟುಗಳ ಪ್ರತಿ ಪ್ರೊಸೀಡಿಂಗ್ಸು ನಮೂನೆಗಳನ್ನು ಏರ್ಪಡಿಸಲೂ;

(c) ತಮ್ಮಸ್ವಂತ ಕೋರ್ಟಿನಲ್ಲಿ ನಡಿಯತಕ್ಕ ಪದ್ಧತಿಯನ್ನು—ವ—ಪ್ರೊಸೀಡಿಂಗ್ಸುಗಳನ್ನು ಕ್ರಮಪಡಿಸುವದಕ್ಕೂ, ಮತ್ತು ತಮಗೆ ತಾಬೇದಾರಿಯಾದ ಸಮಸ್ತ ಕ್ರಿಮಿನಲ್ ಕೋರ್ಟುಗಳಲ್ಲಿ ನಡಿಯತಕ್ಕ ಪದ್ಧತಿಯನ್ನು—ವ—ಪ್ರೊಸೀಡಿಂಗ್ಸುಗಳನ್ನು ಕ್ರಮಪಡಿಸುವದಕ್ಕೋಸ್ಕರ, ರೂಲುಗಳನ್ನು ನಿರ್ಣಯಿಸಲೂ; ಮತ್ತು

(d) ಈ ಕೋಡಿನ ಪ್ರಕಾರ ಜುರುಮಾನೆ ವಸೂಲಾತಿ ಬಗ್ಯೆ ಕೊಡೋಣಾದ ವಾರಂಟುಗಳ ಜಾರಿಯನ್ನು ಕ್ರಮ ಪಡಿಸುವದಕ್ಕಾಗಿ ಕ್ರಮಗಳನ್ನು ಏರ್ಪಡಿಸಲೂ ಬಹುದು:

ಪರಂತು, ಈ ಪ್ರಕರಣಕ್ಕನುಗುಣವಾಗಿ ಮಾಡೋಣಾದ—ವ—ಏರ್ಪಡಿಸೋಣಾದ, ಕಾಯಿದೆಗಳು—ವ—ನಮೂನೆಗಳು ಈ ಕೋಡಿಗೆ ಅಥವಾ ತತ್ಕಾಲದಲ್ಲಿ ಜಾರೀಲಿರುವ ಇತರ ಯಾವ ಕಾನೂನಿಗಾದರೂ ಅನುಸಾರವಾಗದೆ ಇರಕೂಡದು.

ಈ ಪ್ರಕರಣಕ್ಕನುಗುಣವಾಗಿ ಮಾಡೋಣಾದ ಎಲ್ಲಾ ಕಾಯಿದೆಗಳು ಅಫಿಷಿಯಲ್ ಗೆಜೆಟಿನಲ್ಲಿ ಪ್ರಕಟಿಸಲ್ಪಡತಕ್ಕದ್ದು.

ನಮೂನೆಗಳು.

554. ಪ್ರತಿ ಒಂದು ಮೊಕದ್ದಮೆಯ ಸಂಗತಿಗಳಿಂದ ಅವಶ್ಯವಾಗಬಹುದಾದಂಥಾ ಬದಲಾಯಿಸುವಿಕೆಯೊಡನೆ, ಅದರಲ್ಲಿ ನಮೂದಿಸೋಣಾದ ಆಯಾಯ ಉದ್ದಿಶ್ಯಾರ್ಥಗಳ ಬಗ್ಯಾಗಿ, ಐದನೇ ಷೆಡ್ಯೂಲಿನಲ್ಲಿ ಕೊಡೋಣಾದ ನಮೂನೆಗಳು ಉಪಯೋಗಿಸಲ್ಪಡತಕ್ಕದ್ದು.

ಜಡ್ಜಿ—ಯಾ—ಮ್ಯಾಜಿಸ್ಟ್ರೇಟನು ಸ್ವತಃ ಸಂಬಂಧಪಟ್ಟ ಮೊಕದ್ದಮೆ.

555. ಯಾವನೊಬ್ಬ ಮ್ಯಾಜಿಸ್ಟ್ರೇಟ್—ಯಾ—ಜಡ್ಜೀಯಾಗಲೀ, ತನ್ನ ಕೋರ್ಟಿನಿಂದ ಅಪ್ಪೀಲಿರುವ ಕೋರ್ಟಿನವರ ಅಪ್ಪಣೆಯನ್ನು ಪಡಕೊಂಡ ಶಿವಾಯಿ, ತಾನು ಕಕ್ಷಿಗಾರನಾಗಿರುವ—ಯಾ—ಸ್ವತಃ ಸಂಬಂಧಪಟ್ಟ ಯಾವದೊಂದು ಮೊಕದ್ದಮೆಯನ್ನು ದರಿಯಾಫ್ತಿ ಮಾಡಲೂ—ಯಾ—ದರಿಯಾಫ್ತೀ ಬಗ್ಯೆ ಕಮಿಟ್ ಮಾಡಲೂ ಕೂಡದು, ಮತ್ತು ಯಾವನೊಬ್ಬ ಜಡ್ಜಿ—ಯಾ—ಮ್ಯಾಜಿಸ್ಟ್ರೇಟು ತಾನು ವಿಧಿಸಿದ—ಯಾ—ಕೊಟ್ಟ ಯಾವದೊಂದು ಜಡ್ಜ್‌ಮೆಂಟ್—ಯಾ—ಹುಕುಮಿನ ಮೇಲಿನ ಅಪ್ಪೀಲು ತಾನೇ ಕೇಳಕೂಡದು.

1209

ಟಿಪ್ಪಣಿ—ಮ್ಯುನಿಸಿಪಲ್ ಕಮ್ಮಿಷನರ್ ಎಂಬ ಸಬಬಿನಿಂದ ಮಾತ್ರ, ಒಬ್ಬ ಜಡ್ಜಿ—ಯಾ—ಮ್ಯಾಜಿಸ್ಟ್ರೇಟನು, ಈ ಪ್ರಕರಣದ ಅರ್ಥಕ್ಕೆ ಒಳಪಡುವಂಥಾ ಯಾವದೊಂದು ಮೊಕದ್ದಮೆಗೆ—ಯಾ—ಮೊಕದ್ದಮೆಯಲ್ಲಿ, ಕಕ್ಷಿಗಾರನೆಂತಾಗಲೀ—ಯಾ—ಸ್ವತಃ ಸಂಬಂಧಪಟ್ಟವನೆಂತಾಗಲೀ ಎಣಿಸಲ್ಪಡಕೂಡದು.

ಕೋರ್ಟುಗಳ ಭಾಷೆ ನಿರ್ಣಯಿಸುವ ಅಧಿಕಾರ.

556. ತಮ್ಮ ಆಡಳಿತದಲ್ಲಿ ಇರುವ ರಾಜ್ಯದೊಳಗೆ, ಈ ಕೋಡಿನ ಉದ್ದಿಶ್ಯವಾಗಿ, ಪ್ರತಿ ಒಂದು ಕೋರ್ಟಿನ ಭಾಷೆಯು ಯಾವದೆಂಬದನ್ನು ಮೈಸೂರು ಗವರ್ನ್ಮೆಂಟಿನವರು ನಿಶ್ಚಯಿಸಬಹುದು.

ಮೈಸೂರು ಗವರ್ನ್ಮೆಂಟಿನವರ ಅಧಿಕಾರಗಳು ಆಗಿಂದಾಗ್ಯೆ ನಡಿಸಬಹುದಾದ್ದು.

557. ಮೈಸೂರು ಗವರ್ನ್ಮೆಂಟಿನವರಿಗೆ ಈ ಕೋಡಿನಿಂದ ಕೊಡೋಣಾದ ಸಮಸ್ತ ಅಧಿಕಾರಗಳು ಅವಶ್ಯಬಿದ್ದ ಹಾಗೆ ಆಗಿಂದಾಗ್ಯೆ ಚಲಾಯಿಸಲ್ಪಡಬಹುದು.

ಬಾಕೀಯಲ್ಲಿ ಇರುವ ಮೊಕದ್ದಮೆಗಳು.

558. ಈ ಕೋಡು ಜಾರೀಯಲ್ಲಿ ಬರುವಾಗ್ಯೆ ಯಾವದೊಂದು ಕ್ರಿಮಿನಲ್ ಕೋರ್ಟಿನಲ್ಲಿ ಬಾಕೀಯಲ್ಲಿ ಇರುವ ಸಮಸ್ತ ಮೊಕದ್ದಮೆಗಳಿಗೂ, ಈ ಕೋಡಿನಿಂದ ನಿರ್ದೇಶಿಸೋಣಾದ ಕ್ರಮಗಳು, ಸಾಧ್ಯವಾದಷ್ಟುಮಟ್ಟಿಗೆ, ಲಗಾವಾಗತಕ್ಕದ್ದು.

SCHEDULE I.

I ನೇ ಷೆಡ್ಯೂಲು.

ENACTMENTS REPEALED.

ರದ್ದಾದ ಚಟ್ಟಗಳು.

(b)—*Acts of the Governor-General in Council.*

(b)—ಆಲೋಚನೆ ಸಭೆಯಲ್ಲಿ ಇರುವ ಗವರ್ನರ್ ಜನರಲವರ ಆಕ್ಟುಗಳು.

ಸಂವತ್ಸರ-ವ-ನಂಬರ್.	ವಿಷಯ.	ರದ್ದೀಯಾತಿಯ ವಿಸ್ತಾರ.
1860 ನೇ ಇಸವಿ 45ನೇ ನಂಬರ್.	ಪಿನಲ್ ಕೋಡು	214 ನೇ ಪ್ರಕರಣದ ಉದಾಹರಣೆಗಳು.
1861 ನೇ ಇಸವಿ 5ನೇ ನಂಬರ್.	ಪೋಲೀಸ್ ಆಕ್ಟು	6-ನೇ ಪ್ರಕರಣ ಮತ್ತು 24ನೇ ಪ್ರಕರಣದ ಆಖೈರು ಒಂಭತ್ತು ಶಬ್ದಗಳು. 35 ನೇ ಪ್ರಕರಣದಲ್ಲಿ "ಪರಂತು" ಎಂಬ ಶಬ್ದಗಳು ಶೇರಿವರಿಗಿನದು.
1864 ನೇ ಇಸವಿ 6ನೇ ನಂಬರ್.	ದೆಬ್ಬೆಗಳನ್ನು ಹೊಡಿಯುವ ಬಾಬತು ..	7 ನೇ ಪ್ರಕರಣ.
1872 ನೇ ಇಸವಿ 10ನೇ ನಂಬರ್.	ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ್	ರದ್ದಾಗದೆ ಇರುವಂಥಾದ್ದು.
1874 ನೇ ಇಸವಿ 11ನೇ ನಂಬರ್.	ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡಿನ ದುರಸ್ತು	ಪೂರಾ.

SCHEDULE II.

2 ನೇ ಷೆಡ್ಯೂಲ್ ಪಟ್ಟಿ.

TABULAR STATEMENT OF OFFENCES.

ತಕ್ಸೀರುಗಳ ತಖ್ತೆ.

ತಪ್ಸೀಲುವಾರಿ ಯಾದಾಸ್ತು.—ಈ ಷೆಡ್ಯೂಲಿನ 2 ನೇ ಕಲಮಿಗೆ "ತಕ್ಸೀರು" ಎಂತಲೂ, 7ನೇ ಕಲಮಿಗೆ "ಇಂಡಿಯನ್ ಪೆನಲ್ ಕೋಡಿನ ಪ್ರಕಾರ ಶಿಕ್ಷೆ" ಎಂತಲೂ ಶಿರ್ನಾಮೆ ಹಾಕಿ ಅವುಗಳ ಕೆಳಗೆ ಖುಲಾಸೆಗಳು ಮಾಡೋಣಾಗಿ ಇರುತ್ತವೆ. ಹಾಗೆಯೇ ಆಯಾ ಖುಲಾಸೆಗೆ ಸಂಬಂಧಿಸಿದ ಇಂಡಿಯನ್ ಪೆನಲ್ ಕೋಡಿನ ಪ್ರಕರಣ ಇಷ್ಟನೇದು ಎಂಬ ಸಂಖ್ಯೆಯನ್ನು ಅದಕ್ಕೆ ಸರಿಯಾಗಿ 1ನೇ ಕಲಮಿನಲ್ಲಿ ನಮೂದು ಮಾಡೋಣಾಗಿ ಇರುತ್ತದೆ. ಸದರೀ ಆಯಾ ಖುಲಾಸೆಗಳು ಆಯಾ ಪ್ರಕರಣದಲ್ಲಿ ವಿವರಿಸೋಣಾದ ತಕ್ಸೀರುಗಳಿಗೂ ಶಿಕ್ಷೆಗಳಿಗೂ ವಿವರಣೆಯಾಗುವದಿಲ್ಲ, ಪರಂತು ಆಯಾ ಪ್ರಕರಣದಲ್ಲಿಯ ವಿಷಯಕ್ಕೆ ಸೂಚನೆಯಾಗಿಮಾತ್ರ ಇರುತ್ತವೆ.

CHAPTER V.—ABETMENT.

5ನೇ ಅಧ್ಯಾಯ—ತಕ್ಸೀರಿನ ಮದ್ದತನ್ನು ಅಥವಾ ಕುಮ್ಮಕ್ಕನ್ನು ಕುರಿತದ್ದು.

1	2	3	4	5	6	7	8
ಪ್ರಕರಣ.	ತಕ್ಸೀರು.	ವಾರಂಟು ಇಲ್ಲದೆ ಪೋಲಿಸಿನವರು ಹಿಡಿಯಬಹುದೋ ಹಿಡಿಯಬಾರದೋ ಎಂಬದು.	ಸಾಧಾರಣವಾಗಿ ಮೊದಲ್ಲಿ ವಾರಂಟು ಹುಟ್ಟಿಸಬೇಕೋ ಸಮ್ಮನ್ಸ ಹುಟ್ಟಿಸಬೇಕೋ ಎಂಬದು.	ಜಾಮೀನ್ ತೆಗೆಯತಕ್ಕದ್ದೋ ಅಲ್ಲವೋ ಎಂಬದು.	ಸಮಾಧಾನ ಮಾಡಿಕ್ಕೊಳ್ಳಲ್ಪಡಬಹುದಾದ್ದೋ-ಯಾ-ಅಲ್ಲವೋ.	ಇಂಡಿಯನ್ ಪೆನಲ್ ಕೋಡಿನ ಪ್ರಕಾರ ಶಿಕ್ಷೆ.	ಫಲಾನೆ ಕೋರ್ಟಿನಿಂದ ದರ್ಯಾಫ್ತಿ ಯಾಗತಕ್ಕದ್ದೆಂಬದು.
109	ತಕ್ಸೀರಿಗೆ ಮಾಡೋಣಾದ ಮದ್ದತು ಅಥವಾ ಕುಮ್ಮಕ್ಕು, ಯಾವದಕ್ಕೆ ಕುಮ್ಮಕ್ಕು ಮಾಡೋಣಾಯಿತೋ ಆ ತಕ್ಸೀರು ಆ ಕುಮ್ಮಕ್ಕಿನಿಂದ ನಡದು, ಆ ಕುಮ್ಮಕ್ಕಿಗೆ ಶಿಕ್ಷೆಯಾಗತಕ್ಕ ಬಗ್ಗೆ ಕಂಠೋಕ್ತವಾಗಿ ನಿಬಂಧನೆ ಏರ್ಪಡದೆ ಇದ್ದಲ್ಲಿ.	ತಕ್ಸೀರುದಾರನ್ನ ವಾರಂಟು ಇಲ್ಲದೇ ಹಿಡಿಯಬಹುದು; ಯಾವ ಪಕ್ಷದಲ್ಲಂದರೆ, ಯಾವದಕ್ಕೆ ಕುಮ್ಮಕ್ಕು ಮಾಡೋಣಾಯಿತೋ ಆ ತಕ್ಸೀರು, ತಕ್ಸೀರುದಾರನ್ನ ವಾರಂಟುಇಲ್ಲದೆ ಹಿಡಿಯಬಹುದಾದ್ದಾಗಿ ಇದ್ದ ಪಕ್ಷದಲ್ಲಿ ಹಾಗೆ ಮಾಡಬಹುದು, ಇದಲ್ಲದೆ ಪಕ್ಷದಲ್ಲಿ ಕೂಡದು.	ಯಾವದಕ್ಕೆ ಕುಮ್ಮಕ್ಕು ಮಾಡೋಣಾಯಿತೋ ಆ ತಕ್ಸೀರಿಗೆ ವಾರಂಟು ಕೊಡಬಹುದಾಗಿ ಇದ್ದರೆ ಇದಕ್ಕೂ ವಾರಂಟು, ಅದಕ್ಕೆ ಸಮ್ಮನ್ಸ ಕೊಡಬಹುದಾಗಿದ್ದರೆ ಇದಕ್ಕೂ ಸಮ್ಮನ್ಸ.	ಯಾವದಕ್ಕೆ ಕುಮ್ಮಕ್ಕು ಮಾಡೋಣಾಯಿತೋ ಆ ತಕ್ಸೀರು ಜಾಮೀನ್ ತೆಗದುಕೋತಕ್ಕದ್ದಾಗಿ ಇದ್ದರೆ ಇದಕ್ಕೂ ಜಾಮೀನ್, ಅದು ಜಾಮೀನ್ ತೆಗದುಕೋತಕ್ಕದ್ದಲ್ಲವಾದರೆ ಇದಕ್ಕೂ ಇಲ್ಲ.	ಯಾವದಕ್ಕೆ ಕುಮ್ಮಕ್ಕು [illegible] ತೋ ಆ ತಕ್ಸೀರು ಸಮಾಧಾನಮಾಡಿಕ್ಕೊಳ್ಳಲ್ಪಡಬಹುದಾದ್ದೋ-ಯಾ-ಅಲ್ಲವೋ ಎಂಬದಕ್ಕೆ ಸರಿಯಾಗಿ.	ಯಾವದಕ್ಕೆ ಕುಮ್ಮಕ್ಕು ಮಾಡೋಣಾಯಿತೋ ಆ ತಕ್ಸೀರಿನಂತೆ ಯಿದಕ್ಕೆ ಶಿಕ್ಷೆ.	ಯಾವದಕ್ಕೆ ಕುಮ್ಮಕ್ಕು ಮಾಡೋಣಾಯಿತೋ ಆ ತಕ್ಸೀರನ್ನು [illegible] ಡತಕ್ಕ ಕೋರ್ಟಿನವರಿಂದ.

110	ತಕ್ಸೀರಿಗೆ ಮಾಡೋಣಾದ. ಕುಮ್ಮಕ್ಕು, ಯಾರಿಗೆಕುಮ್ಮಕ್ಕು ಮಾಡೋಣಾಯಿತೋ ಆ ಮನುಷ್ಯನು ಕುಂಮಕುದಾರನ ಇರಾದೆ ಇಲ್ಲದೆ ಬೇರೆ ಇರಾದೆಯಿಂದ ಆ ತಕ್ಸೀರುಮಾಡಿ ಇದ್ದಲ್ಲಿ.	ಸದರೀ	ಸದರೀ	ಸದರೀ	ಸದರೀ	ಸದರೀ	ಸದರೀ
111	ತಕ್ಸೀರಿಗೆ ಮಾಡೋಣಾದ ಮದ್ದತು, ಒಂದು ಕೃತ್ಯಕ್ಕೆ ಕುಂಮುಕ್ಕು ಮಾಡಲಾಗಿ ನಿಯಮಕ್ಕೆ ಒಳಪಟ್ಟು ಮತ್ತೊಂದು ಕೃತ್ಯ ನಡದರೆ.	ಸದರೀ	ಸದರೀ	ಸದರೀ	ಸದರೀ	ಯಾವದಕ್ಕೆ ಕುಮ್ಮಕ್ಕು ಮಾಡಬೇಕೆಂತ ಯತ್ನಿಸೋಣಾಯಿತೋ ಆ ತಕ್ಸೀರಿನಂತೆ ಶಿಕ್ಷೆ.	ಸದರೀ
113	ತಕ್ಸೀರಿಗೆ ಮಾಡೋಣಾದ ಮದ್ದತು, ಯಾವದಕ್ಕೆ ಕುಂಮಕು ಮಾಡೋಣಾಯಿತೋ ಆಕೃತ್ಯದ ಪರ್ಯವಸಾನ ಕುಂಮಕುದಾರನಿಂದ ಎತ್ನಿಸೋಣಾದ್ದಲ್ಲದೆ [illegible]ರೆಯಾದರೆ.	ಸದರೀ	ಸದರೀ	ಸದರೀ	ಸದರೀ	ಯಾವದನ್ನು ಮಾಡೋಣಾಯಿತೋ ಆತಕ್ಸೀರಿನಂತೆ ಇದಕ್ಕೆ ಶಿಕ್ಷೆ.	ಸದರೀ
114	ತಕ್ಸೀರಿಗೆ ಮಾಡೋಣಾದ. ಮದ್ದತು, ತಕ್ಸೀರು ನಡದಾಗ ಕುಂಮಕುದಾರನು ಅಲ್ಲಿ ಹಾಜರು ಇದ್ದರೆ.	ಸದರೀ	ಸದರೀ	ಸದರೀ	ಸದರೀ	ಸದರೀ	ಸದರೀ

1211

೫ನೇ ಅಧ್ಯಾಯ.—ತಕ್ಸೀರಿನ ಮದ್ದತನ್ನು ಅಥವಾ ಕುಮ್ಮಕನ್ನು ಕುರಿತದ್ದು—(ಸಶೇಷ).

1	2	3	4	5	6	7	8
ಪ್ರಕರಣ	ತಕ್ಸೀರು.	ವಾರಂಟು ಇಲ್ಲದೆ ಪೋಲಿಸಿನವರು ಹಿಡಿಯಬಹುದೋ ಹಿಡಿಯ ಬಾರದೋ ಎಂಬದು.	ಸಾಧಾರಣವಾಗಿ ಮೊದಲ್ಲಿ ವಾರಂಟು ಹುಟ್ಟಬೇಕೋ ಸಮ್ಮನ್ಸ ಹುಟ್ಟಬೇಕೋ ಎಂಬದು.	ಜಾಮೀನ ತೆಗೆಯತಕ್ಕದ್ದೋ ಅಲ್ಲವೋ ಎಂಬದು.	ಸಮಾಧಾನ ಮಾಡಿಕ್ಕೊಳ್ಳಲ್ಪಡಬಹುದಾದ್ದೋ-ಯಾ-ಅಲ್ಲವೋ.	ಇಂಡಿಯನ್ ಪೆನಲ್ ಕೋಡಿನ ಪ್ರಕಾರ ಶಿಕ್ಷೆ.	ಫಲಾನೆ ಕೋರ್ಟಿನಿಂದ ದರ್ಯಾಫ್ತಿ ಯಾಗತಕ್ಕದ್ದೆಂಬದು.
115	ಮರಣ ದಂಡನೆಯಿಂದ ಅಥವಾ ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರಿಂದ ಶಿಕ್ಷೆಯಾಗತಕ್ಕ ತಕ್ಸೀರಿಗೆ ಮಾಡೋಣಾದ ಕುಮ್ಮಕು, ಆ ತಕ್ಸೀರು ಸದರೀ ಕುಮ್ಮಕಿನಿಂದ ಆದ್ದಲ್ಲವಾಗಿ ಇದ್ದಲ್ಲಿ ಕುಮ್ಮಕಿನಿಂದ ಉಪದ್ರಕರವಾದ ಕೃತ್ಯ ನಡದಲ್ಲಿ.	ತಕ್ಸೀರುದಾರನ್ನ ವಾರಂಟು ಇಲ್ಲದೆ ಹಿಡಿಯಬಹುದು; ಯಾವ ಪಕ್ಷದಲ್ಲಂದರೆ, ಯಾವದಕ್ಕೆ ಕುಮ್ಮಕು ಮಾಡೋಣಾಯಿತೋ ಆ ತಕ್ಸೀರು, ತಕ್ಸೀರುದಾರನ್ನ ವಾರಂಟುಇಲ್ಲದೆ ಹಿಡಿಯಬಹುದಾದ್ದಾಗಿ ಇದ್ದ ಪಕ್ಷದಲ್ಲಿ ಹಾಗೆ ಮಾಡಬಹುದು, ಇಲ್ಲದ ಪಕ್ಷದಲ್ಲಿ ಕೂಡದು.	ಯಾವದಕ್ಕೆ ಕುಮ್ಮಕು ಮಾಡೋಣಾಯಿತೋ ಆ ತಕ್ಸೀರಿಗೆ ವಾರಂಟು ಕೊಡಬಹುದಾಗಿದ್ದರೆ ಇದಕ್ಕೂ ವಾರಂಟು, ಅದಕ್ಕೆ ಸಮ್ಮನ್ಸ ಕೊಡಬಹುದಾಗಿದ್ದರೆ ಇದಕ್ಕೂ ಸಮ್ಮನ್ಸ.	ಜಾಮೀನ ತೆಗೆಯಕೂಡದು.	ಯಾವದಕ್ಕೆ ಕುಮ್ಮಕು ಮಾಡೋಣಾಯಿತೋ ಆ ತಕ್ಸೀರು ಸಮಾಧಾನ ಮಾಡಿಕೊಳ್ಳಲ್ಪಡಬಹುದಾದ್ದೋ—ಯಾ—ಅಲ್ಲವೋಎಂಬದಕ್ಕೆ ಸರಿಯಾಗಿ.	7 ಸಂವತ್ಸರ ಪರ್ಯಂತ ಯಾವದಾದರೂ ವೊಂದು ತರಹ ಕೈದು-ವ-ಜುರುಮಾನೆ ಸಹ.	ಯಾವದಕ್ಕೆ ಕುಮ್ಮಕು ಮಾಡೋಣಾಯಿತೋ ಆ ತಕ್ಸೀರನ್ನು ದರ್ಯಾಫ್ತಿ ಮಾಡತಕ್ಕ ಕೋರ್ಟಿನವರಿಂದ. ಸದರೀ
116	ಕೈದಿನಿಂದ ಶಿಕ್ಷೆಯಾಗತಕ್ಕ ತಕ್ಸೀರಿಗೆ ಮಾಡೋಣಾದ ಕುಮ್ಮಕುಳಿ ತಕ್ಸೀರು ಸದರೀ ಕುಮ್ಮಕಿನಿಂದ [illegible] ವಾಗಿ ಇದ್ದರೆ.	ಸದರೀ	ಸದರೀ	ಯಾವದಕ್ಕೆ ಕುಮ್ಮಕು ಮಾಡೋಣಾಯಿತೋ ಆ ತಕ್ಸೀರು ಜಾಮೀನ ತೆಗದುಕೋ [illegible] ಇದ್ದರೆ, ಇದಕ್ಕೂ ಜಾಮೀನ, ಅದು ಜಾಮೀನ ತೆಗದುಕೋತಕ್ಕದ್ದಲ್ಲವಾದರೆ ಇದಕ್ಕೂ ಇಲ್ಲ.	ಸದರೀ	14 ಸಂವತ್ಸರ ಪರ್ಯಂತ ಯಾವದಾದರು ಒಂದು ತರಹ ಕೈದು ಇದು [illegible] ಜುಲುಮಾನೆ ಸಹ. ತಕ್ಸೀರಿಗೆ ಯಾವತನಕ ನಿರ್ಣಯ [illegible] ಅತ್ಯಂತ ದೀರ್ಘವಾಯಿದೆಯ ಪೈಕಿ ನಾಲ್ಕರಲ್ಲಿ ವೊಂದು ಪಾಲು ಕಾಲಪರ್ಯಂತ ವ್ಯಾಪಿಸ ಬಹುದಾದ ಅದೇ ತರಹ ಕೈದು ಅಥವಾ ಜುರುಮಾನೆ ಅಥವಾ ಈ ಎರಡೂ.	ಸದರೀ
	ಕುಮ್ಮಕುದಾರನಾದರೂ ಕುಮ್ಮಕು ಪಡಕೊಂಡವನಾದರೂ ಸರ್ಕಾರನ ವುಕರನಾಗಿ ಇದ್ದು ಅವನ ಕೆಲಸ ಸದರೀ ತಕ್ಸೀರನ್ನು ನಡಿಯಲಿಸದೆ ತಡೆಯ ಬೇಕಾದ್ದಾಗಿ ಇದ್ದಲ್ಲಿ.	ಸದರೀ	ಸದರೀ	ಸದರೀ	ಸದರೀ	ತಕ್ಸೀರಿಗೆ ಯಾವತನಕ ನಿರ್ಣಯವಾಗಿರುತ್ತದೋ ಆ ಅತ್ಯಂತ ದೀರ್ಘವಾಯಿದೆಯ ಪೈಕಿ ಅರ್ಧಪಾಲು ಕಾಲ ಪರ್ಯಂತ ವ್ಯಾಪಿಸಬಹುದಾದ ಅದೇತರಹ ಕೈದು, ಅಥವಾ ಜುರುಮಾನೆ ಅಥವಾ ಈ ಎರಡೂ.	ಸದರೀ
117	ಪೊಪ್ಪಿಗೆ ಜನಗಳಿಂದ ಅಥವಾ ಹತ್ತು ಮಂದಿಗಿಂತ ಹೆಚ್ಚು ಜನಗಳಿಂದ ಮಾಡೋಣಾದ ತಕ್ಸೀರಿಗೆ ಕುಮ್ಮಕು ಮಾಡೋಣ.	ಸದರೀ	ಸದರೀ	ಸದರೀ	ಸದರೀ	3 ಸಂವತ್ಸರ ಪರ್ಯಂತ ಯಾವದಾದರೂ ವೊಂದು ತರಹ ಕೈದು, ಅಥವಾಜುರುಮಾನೆ, ಅಥವಾ ಈ ಎರಡೂ.	ಸದರೀ

118	ಮರಣ ದಂಡನೆಯಿಂದ ಅಥವಾ ಯಾವಜ್ಜೀವವೂ ನೀರಿನಮೇಲೆ ಕಳುಹಿಸಲ್ಪಡುವದರಿಂದ ಶಿಕ್ಷೆಯಾಗತಕ್ಕ ತಕ್ಸೀರನ್ನು ಮಾಡುವದಕ್ಕೆ ನಡಿಯುವ ತರದೂದನ್ನು ಮರೆಪಡಿಸೋಣ, ಸದರೀ ತಕ್ಸೀರು ನಡದ ಪಕ್ಷದಲ್ಲಿ.	ಸದರೀ	ಸದರೀ	ಜಾಮೀನ್ ತೆಗೆಯಕೂಡದು.	ಸದರೀ	7 ಸಂವತ್ಸರ ಪರ್ಯಂತ ಯಾವದಾದರು ವೊಂದು ತರಹ ಕೈದುನಿಃ ಜುರುಮಾನೆ.	ಸದರೀ
	ಸದರೀ ತಕ್ಸೀರು ನಡಿಯದೆ ಇದ್ದರೆ,	ತಕ್ಸೀರುದಾರನ್ನ ವಾರಂಟು ಇಲ್ಲದೆ ಹಿಡಿಯಬಹುದು, ಯಾವ ಪಕ್ಷದಲ್ಲಂದರೆ, ಯಾವದಕ್ಕೆ ಕುಂಮಕು ಮಾಡೋಣಾಯಿತೋ ಆ ತಕ್ಸೀರು, ತಕ್ಸೀರುದಾರನ್ನ ವಾರಂಟು ಇಲ್ಲದೆ ಹಿಡಿಯಬಹುದಾದ್ದಾಗಿದ್ದ ಪಕ್ಷದಲ್ಲಿ ಹಾಗೆ ಮಾಡಬಹುದು, ಇಲ್ಲದ ಪಕ್ಷದಲ್ಲಿ ಕೂಡದು,	ಯಾವದಕ್ಕೆ ಕುಂಮಕು ಮಾಡೋಣಾಯಿತೋ ಆ ತಕ್ಸೀರಿಗೆ ವಾರಂಟು ಕೊಡಬಹುದಾಗಿದ್ದರೆ ಇದಕ್ಕೂ ವಾರಂಟು, ಅದಕ್ಕೆ ಸಮ್ಮನ್ ಕೊಡಬಹುದಾಗಿದ್ದರೆ ಇದಕ್ಕೂ ಸಮನ್.	ಸದರೀ	ಯಾವದಕ್ಕೆ ಮದ್ದತ್ತು ಮಾಡೋಣಾಯಿತೋ ಆ ತಕ್ಸೀರು ಸಮಾಧಾನ ಮಾಡಿಕೊಳ್ಳಲ್ಪಡಬಹುದಾದ್ದೋ-ಯಾ-ಅಲ್ಲವೋ ಎಂಬದಕ್ಕೆ ಸರಿಯಾಗಿ.	3 ಸಂವತ್ಸರ ಪರ್ಯಂತ ಯಾವದಾದರು ಒಂದು ತರಹ ಕೈದುನಿಃ ಜುರುಮಾನೆ.	ಯಾವದಕ್ಕೆ ಕುಂಮಕು ಮಾಡೋಣಾಯಿತೋ ಆ ತಕ್ಸೀರನ್ನು ದರ್ಯಾಪ್ತಿ ಮಾಡತಕ್ಕ ಕೋರ್ಟಿನವರಿಂದ.
119	ತಕ್ಸೀರು ನಡಿಯದಂತೆ ತಡೆಯಬೇಕಾದ ಸರಕಾರ ಉದ್ಯೋಗಸ್ತನು ತಕ್ಸೀರು ಮಾಡಲಿಕ್ಕೆ ನಡಿಯುವ ತರದೂದನ್ನು ಮರೆಪಡಿಸೋಣ, ಸದರೀ ತಕ್ಸೀರು ನಡದ ಪಕ್ಷದಲ್ಲಿ.	ಸದರೀ	ಸದರೀ.	ಯಾವದಕ್ಕೆ ಕುಂಮಕು ಮಾಡೋಣಾಯಿತೋ ಆ ತಕ್ಸೀರು ಜಾಮೀನ್ ತೆಗದುಕೋತಕ್ಕದ್ದಾಗಿ ಇದ್ದರೆ ಇದಕ್ಕೂ ಜಾಮೀನ್, ಅದು ಜಾಮೀನ್ ತೆಗಿಯತಕ್ಕದ್ದಲ್ಲವಾದರೆ ಇದಕ್ಕೂ ಇಲ್ಲ.	ಸದರೀ	ತಕ್ಸೀರಿಗೆ ಯಾವತನಕ ಯಾವತರಹ ಕೈದು ನಿರ್ಣಯವಾಗಿ ಇರುತ್ತದೋ ಆ ಅತ್ಯಂತ ದೀರ್ಘವಾಯಿದೆಯ ಪೈಕಿ ಅರ್ಧಪಾಲು ಕಾಲಪರ್ಯಂತ ವ್ಯಾಪಿಸಬಹುದಾದ ಅದೇ ತರಹ ಕೈದು ಅಥವಾ ಜುರುಮಾನೆ ಅಥವಾ ಈ ಎರಡು.	ಸದರೀ
	ಸದರೀ ತಕ್ಸೀರು ಮರಣ ದಂಡನೆಯಿಂದ ಅಥವಾ ಯಾವಜ್ಜೀವವೂ ನೀರಿನ ಮೇಲೆ ಕಳುಹಿಸಲ್ಪಡುವದರಿಂದ ಶಿಕ್ಷೆಯಾಗತಕ್ಕದ್ದಾಗಿದ್ದರೆ.	ಸದರೀ	ಸದರೀ	ಜಾಮೀನ್ ತೆಗೆಯಕೂಡದು.	ಸದ್ದರೀ	10 ಸಂವತ್ಸರ ಪರ್ಯಂತ ಯಾವದಾದರು ವೊಂದು ತರಹ ಕೈದು.	ಸದರೀ

1	2	3	4	5	6	7	8
ಪ್ರಕರಣ.	ತಕ್ಸೀರು.	ವಾರಂಟುಇಲ್ಲದೆ ಪೋಲಿಸಿನವರು ಹಿಡಿಯಬಹುದೋ ಹಿಡಿಯಬಾರದೋ ಯೆಂಬುದು.	ಸಾಧಾರಣವಾಗಿ ಮೊದಲ್ಲಿವಾರಂಟು ಹುಟ್ಟಬೇಕೋ ಸಮ್ಮನ್ಸ್ ಹುಟ್ಟಬೇಕೊಯೆಂಬದು.	ಜಾಮೀನ್ ತೆಗೆಯುತಕ್ಕದ್ದೋ ಅಲ್ಲವೋ ಯೆಂಬದು.	ಸಮಾಧಾನ ಮಾಡಿ ಕೊಳ್ಳಲ್ಪಡ ಬಹುದಾದ್ದೋ—ಯಾ—ಅಲ್ಲವೋ.	ಇಂಡಿಯನ್ ಪೆನಲ್‌ಕೋಡಿನ ಪ್ರಕಾರ ಶಿಕ್ಷೆ.	ಫಲಾನೆ ಕೋರ್ಟನಿಂದ ದರ್ಯಾಫ್ತಿಯಾಗತಕ್ಕದ್ದೆಂಬುದು.
	ಸದರೀ ತಕ್ಸೀರು ನಡಿಯದಿದ್ದರೆ	ತಕ್ಸೀರ್‌ದಾರನನ್ನು ವಾರಂಟುಯಿಲ್ಲದೆ ಹಿಡಿಯಬಹುದು, ಯಾವಪಕ್ಷದಲ್ಲಂದರೆ ಯಾವದಕ್ಕೆ ಕುಮುಕ್ ಮಾಡೋಣಾಯಿತೋ ಆ ತಕ್ಸೀರ್, ತಕ್ಸೀರ್ ದಾರನನ್ನ ವಾರಂಟು [illegible] ಬಹುದಾದ್ದಾಗಿದ್ದ ಪಕ್ಷದಲ್ಲಿ ಹಾಗೆ ಮಾಡಬಹುದು, ಇಲ್ಲದ ಪಕ್ಷದಲ್ಲಿ ಕೂಡದು.	ಯಾವದಕ್ಕೆ ಕುಮ್ಮಕು ಮಾಡೋಣಾಯಿತೋ, ಆ ತಕ್ಸೀರಿಗೆ ವಾರಂಟು ಕೊಡಬಹುದಾಗಿ ಇದ್ದರೆ ಇದಕ್ಕೂ ವಾರಂಟು, ಅದಕ್ಕೆ ಸಮ್ಮನ್ಸ್ ಕೊಡಬಹುದಾಗಿದ್ದರೆ ಇದಕ್ಕೂ ಸಮ್ಮನ್ಸ್.	ಯಾವದಕ್ಕೆ ಕುಮ್ಮಕ್ಕು ಮಾಡೋಣಾಯಿತೋ ಆತಕ್ಸೀರು ಜಾಮೀನ್‌ತೆಗದುಕೊಳ್ಳತಕ್ಕದ್ದಾಗಿ ಇದ್ದರೆ, ಇದಕ್ಕೂ ಜಾಮೀನ್, ಅದು ಜಾಮೀನ್ ತೆಗೆ [illegible] ಇದಕ್ಕೂ ಇಲ್ಲ.	ಯಾವದಕ್ಕೆ ಮುದ್ದತು ಮಾಡೋಣಾಯಿತೋ ಆ ತಕ್ಸೀರು ಸಮಾಧಾನ ಮಾಡಿಕೊಳ್ಳಲ್ಪಡ ಬಹುದಾದ್ದೋ -ಯಾ-ಅಲ್ಲವೋ ಎಂಬದಕ್ಕೆ ಸರಿಯಾಗಿ.	ತಕ್ಸೀರಿಗೆ ಯಾವತನಕ ಯಾವತರಹ ಕೈದು ನಿರ್ಣಯವಾಗಿ ಇರುತ್ತದೋ ಆ ಅತ್ಯಂತ ದೀರ್ಘವಾಯಿದೆಯ ಪೈಕಿ ನಾಲ್ಕರಲ್ಲಿ ಒಂದು ಪಾಲು ಕಾಲಪರ್ಯಂತ ವ್ಯಾಪಿಸಬಹುದಾದ ಅದೇ ತರಹ ಕೈದು ಅಥವಾ ಜುರುಮಾನೆ, ಅಥವಾ ಈ ಯೆರಡೂ.	ಯಾವದಕ್ಕೆ ಕುಮ್ಮಕ್ ಮಾಡೋಣಾಯಿತೋ ಆ ತಕ್ಸೀರನ್ನು ದರ್ಯಾಫ್ತಿ ಮಾಡತಕ್ಕ ಕೋರ್ಟನವರಿಂದ.
120	ಕೈದಿನ ಮೂಲಕವಾಗಿ ಶಿಕ್ಷೆಯಾಗತಕ್ಕ ತಕ್ಸೀರನ್ನು ಮಾಡುವದಕ್ಕೆ ನಡಿಯುವ ತರದೂದನ್ನು ಮರೆ ಪಡಿಸೋಣ. ಸದರೀ ತಕ್ಸೀರು ನಡದಪಕ್ಷದಲ್ಲಿ.	ಸದರೀ	ಸದರೀ	ಸದರೀ	ಸದರೀ.	ಸದರೀ	ಸದರೀ.
	ಸದರೀ ತಕ್ಸೀರು ನಡೆಯದೆ ಇದ್ದರೆ	ಸದರೀ	ಸದರೀ	ಸದರೀ	ಸದರೀ	ತಕ್ಸೀರಿಗೆ ಯಾವತನಕ ಯಾವತರಹ ಕೈದು ನಿರ್ಣಯವಾಗಿ ಇರುತ್ತದೋ ಆ ಅತ್ಯಂತ ದೀರ್ಘವಾಯಿದೆಯ ಪೈಕಿ ಯೆಂಟರಲ್ಲಿ ಒಂದು ಪಾಲು ಕಾಲಪರ್ಯಂತ ವ್ಯಾಪಿಸಬಹುದಾದ ಅದೇ ತರಹ ಕೈದು, ಅಥವಾ ಜುರುಮಾನೆ, ಅಥವಾ ಈ ಎರಡೂ.	ಸದರೀ.

121	ರಾಣಿಯವರಮೇಲೆ ಯುದ್ಧ ಮಾಡೋಣ, ಯುದ್ಧ ಮಾಡಲಿಕ್ಕೆ ಯತ್ನಿಸೋಣ, ಯುದ್ಧ ಮಾಡಲಿಕ್ಕೆ ಕುಮ್ಮಕ್ಕು ಮಾಡೋಣ.	ವಾರಂಟುಯಿಲ್ಲದೆ ಹಿಡಿಯಕೂಡದು.	ವಾರಂಟು	ಜಾಮೀನು ತೆಗೆಯ ಕೂಡದು.	ಸಮಾಧಾನ ಮಾಡಿ ಕೊಳ್ಳಲ್ಪಡಕೂಡದು.	ಮರಣದಂಡನೆ ಅಥವಾ ಯಾವಜ್ಜೀವವೂ ನೀರಿನಮೇಲೆ ಕಳುಹಿಸುವ ದಂಡನೆ, ಇದರ ನಿ ಆಸ್ತಿಯನ್ನು ಮುಟ್ಟುಗೋಳಾಗಿ ಸರ್ಕಾರಕ್ಕೆ ಸೇರಿಸಿ ಕೊಳ್ಳೋಣ.	ಸೆಷನ್ ಕೋರ್ಟು.
121A	ಸಂಸ್ಥಾನದಮೇಲೆ ಕೆಲವು ತಕ್ಸೀರುಗಳನ್ನು ಮಾಡಲಿಕ್ಕೆ ಫಿತೂರಿ ನಡಿಸೋಣ.	ಸದರೀ	ಸದರೀ	ಸದರೀ	ಸದರೀ	ಯಾವಜ್ಜೀವಪರ್ಯಂತ—[illegible]—ಅದ ಕ್ಕಿಂತ [illegible] ಯು ಪರ್ಯಂತ [illegible] ಹಿಸುವ ದಂಡನೆ [illegible] ಸಂವತ್ಸರಕ್ಕೆ ಮೀರ [illegible] ವಾಯಿದೆ ಪರ್ಯಂತ ಯಾವ [illegible] ಒಂದು ತರಹ ಕೈದು.	ಸದರೀ
	ರಾಣಿಯವರಮೇಲೆ ಯುದ್ಧ ಮಾಡಬೇಕೆಂಬ ಇರಾದೆಯಿಂದ ಆಯುಧ ಮುಂತಾದ್ದನ್ನು ಕೂಡಿಸೋಣ.	ಸ[illegible]	ಸದರೀ	ಸದರೀ	[illegible]	ಯಾವಜ್ಜೀವವೂ ನೀರಿನಮೇಲೆ ಕಳುಹಿಸುವ ದಂಡನೆ, ಅಥವಾ 10 ಸಂವತ್ಸರಪರ್ಯಂತ ಯಾವದಾದರು ಒಂದುತರಹ ಕೈದು ಇದರ ನಿ ಆಸ್ತಿಯನ್ನು ಮುಟ್ಟುಗೋಳಾಗಿ ಸರ್ಕಾರಕ್ಕೆ ಸೇರಿಸಿಕೊಳ್ಳೋಣ.	ಸದರೀ.
	[illegible] ಡುಯುವ.	ಸದರೀ	ಸದರೀ	ಸದರೀ	ಸದರೀ	10 ಸಂವತ್ಸರಪರ್ಯಂತ ಯಾವದಾದರು ಒಂದು ತರಹ ಕೈದುನಿಶಿ ಜಾರುಮಾನೆ.	ಸದರೀ.
124A	ವಿರೋಧ ತಾತ್ಪರ್ಯ ಉಂಟುಮಾಡುವಹಾಗೆ ಪ್ರೇರಣೆ ಮಾಡೋಣ—ಯಾ [illegible] ಕ್ಕೆ ವಿ [illegible] ದಯಿಂದ ಗವರ್ನರ [illegible] ರ್ನ 5 ಮುಂತಾದವರಮೇಲೆ ಜ [illegible] ನಡಿಸೋಣ.	ಸದರೀ	ಸದರೀ	ಸದರೀ	ಸದರೀ	7 ಸಂವತ್ಸರ ಪರ್ಯಂತ ಯಾವದಾದರು ಒಂದು ತರಹ ಕೈದುನಿಶಿ ಜಾರುಮಾನೆ.	ಸದರೀ.

121

6ನೇ ಅಧ್ಯಾಯ—ಸಂಸ್ಥಾನಕ್ಕೆ ವಿರೋಧವಾದ ತಕ್ಸೀರುಗಳು—(ಸಶೇಷ.)

1 ಪ್ರಕರಣ	2 ತಕ್ಸೀರು.	3 ವಾರಂಟು ಇಲ್ಲದೆ ಪೋಲೀಸಿನವರು ಹಿಡಿಯಬಹುದೋ ಹಿಡಿಯಬಾರದೋ ಯೆಂಬದು.	4 ಸಾಧಾರಣವಾಗಿ ವೊದಲ್ಲಿವಾರಂಟುಹುಟ್ಟಬೇಕೋ ಸಮ್ಮನ್ಸ್ ಹುಟ್ಟಬೇಕೋಯೆಂಬದು.	5 ಜಾಮೀನು ತೆಗೆಯತಕ್ಕದ್ದೋ ಅಲ್ಲವೋ ಯೆಂಬದು.	6 ಸಮಾಧಾನ ಮಾಡಿಕೊಳ್ಳಲ್ಪಡಬಹುದಾದ್ದೋ-ಯಾ-ಅಲ್ಲವೋ.	7 ಇಂಡಿಯನ್ ಪೆನಲ್‌ಕೋಡಿನ ಪ್ರಕಾರ ಶಿಕ್ಷೆ.	8 ಯಾವ ಕೋರ್ಟಿನಿಂದ ದರ್ಯಾಫ್ತಿ ಯಾಗತಕ್ಕದ್ದೆಂಬದು.
12[illegible]		ವಾರಂಟು ಇಲ್ಲದೆ ಹಿಡಿಯ ಕೂಡದು.	ವಾರಂಟು.	ಜಾಮೀನ್ ತೆಗಿಯ ಕೂಡದು.	ಸಮಾಧಾನ ಮಾಡಿಕೊಳ್ಳಲ್ಪಡಕೂಡದು.	ಯಾವಜ್ಜೀವ ಪರ್ಯಂತ—ಯಾ—ಅದಕ್ಕಿಂತ ಕಮ್ಮಿ ವಾಯಿದೆಯ ಪರ್ಯಂತ ನೀರಿನ ಮೇಲೆ ಕಳುಹಿಸೋಣವ—ಜುರ್ಮಾನೆ ಅಥವಾ 3 ಸಂವತ್ಸರದ ಪರ್ಯಂತ ಯಾವದಾದರೂ ಒಂದು ತರಹ ಕೈದು ನಿಜುರ್ಮಾನೆ—ಯಾ—ಜುರ್ಮಾನೆ.	ಸೆಷನ್ ಕೋರ್ಟ್.
ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟನು ಕೊಡಲ್ಪಡ ಬಹುದಾದ ಅಧಿಕಾರಗಳು	ಮೈಸೂರು ಗವರ್ನಮೆಂಟಿನವರಿಂದ	(1) ಬಳ್ಳೇ ನಡತೆ ಬಗ್ಗೆ ಜಾಮೀನು ಕೊಡಹೇಳಿ ವಿಧಿಸುವ ಅಧಿಕಾರ, ಪ್ರ. 110: (2) ಸ್ಥಳಿಕ ಹೇಸಿಕೆಗಳನ್ನು ಕುರಿತು ಹುಕುಂ ಮಾಡುವ ಅಧಿಕಾರ, ಪ್ರ. 133: (3) ಹೇಸಿಕೆಗಳನ್ನು ಮೋಖೂಬ್ ಮಾಡುವದಕ್ಕಾಗಿ ಹುಕುಂ ಕೊಡುವ ಅಧಿಕಾರ, ಪ್ರ. 143: (4) 144ನೇ ಪ್ರಕರಣಪ್ರಕಾರ ಹುಕುಂ ಮಾಡುವ ಅಧಿಕಾರ, ಪ್ರ. 144: (5) ಅವಿಧಿ ಮರಣಗಳ ವಿಚಾರಣೆ ಮಾಡುವ ಅಧಿಕಾರ, ಪ್ರ. 174: (6) ಮೇಜಿಸ್ಟ್ರೇಟನ ಸ್ಥಳೀಯ ಅಧಿಕಾರದ ಆಚೆ ತಕ್ಸೀರು ನಡಿಸಿದವನು ಸ್ಥಳಿಯ ಅಧಿಕಾರ ಸರಹದ್ದಿನೊಳಗೆ ಇದ್ದರೆ ಅವನಿಗೆ ಪ್ರೊಸೆಸ್‌ಕೊಡುವ ಅಧಿಕಾರ, ಪ್ರ. 186: (7) ಫಿರಿಯಾದಿಗಳಮೇಲೆ ತಕ್ಸೀರುಗಳ ತನಖಿಮಾಡುವ ಅಧಿಕಾರ, ಪ್ರ. 191: (8) ಪೋಲಿಸ್ ರಿಪೋರ್ಟುಗಳಮೇಲೆ ತಕ್ಸೀರುಗಳನ್ನು ತನಖಿಮಾಡುವ ಅಧಿಕಾರ, ಪ್ರ. 191: (9) ವರ್ತಮಾನದಮೇಲೆ ತಕ್ಸೀರುಗಳನ್ನು ತನಖಿಮಾಡುವ ಅಧಿಕಾರ, ಪ್ರ. 191: (10) ಫ್ರಾಟಾಗಿ ದರಿಯಾಫ್ತಿ ಮಾಡುವ ಅಧಿಕಾರ, ಪ್ರ. 260 (11) ಸೆಕೆಂಡ್–ವ–ಥರ್ಡ್‌ಕ್ಲಾಸ ಮೇಜಿಸ್ಟ್ರೇಟರಿಂದ ಆಗುವ ಸಾಬೀತ್ ಮೇಲಿನ ಅಪ್ಪೀಲ್‌ಗಳನ್ನು ಕೇಳುವ ಅಧಿಕಾರ, ಪ್ರ. 407: (12) ಚೋರಿಮಾಲೆಂತ ಹೇಳಲ್ಪಟ್ಟ–ಯಾ–ಗುಮಾನಿಪಟ್ಟ ಸೊತ್ತನ್ನು ವಿಕ್ರಯಿಸುವ ಅದಿಕಾರ, ಪ್ರ. 524:
	ಡಿಸ್ಟ್ರಿಕ್ಟ್ ಮೇಜಸ್ಟ್ರೇಟರಿಂದ	(1) ಹೇಸಿಗೆಗಳನ್ನು ಮೋಖೂಬ್ ಮಾಡುವದಕ್ಕಾಗಿ ಹುಕುಂಕೊಡುವ ಅಧಿಕಾರ, ಪ್ರ. 143: (2) 144ನೇ ಪ್ರಕರಣಪ್ರಕಾರ ಹುಕುಂಮಾಡುವ ಅಧಿಕಾರ. (3) ಅವಿಧಿ ಮರಣಗಳ ವಿಚಾರಣೆ ಮಾಡುವ ಅಧಿಕಾರ, ಪ್ರ. 174: (4) ಫಿರ್ಯಾದಿಗಳ ಮೇಲೆ ತಕ್ಸೀರುಗಳನ್ನು ತನಖಿಮಾಡುವ ಅಧಿಕಾರ, ಪ್ರ. 191: (5) ಪೋಲಿಸ್ ರಿಪೋರ್ಟುಗಳ ಮೇಲೆ ತಕ್ಸೀರುಗಳನ್ನು ತನಖಿಮಾಡುವ ಅಧಿಕಾರ, ಪ್ರ. 191: (6) ಮೊಕದ್ದಮೆಗಳನ್ನು ವರ್ಗಮಾಡುವ ಅಧಿಕಾರ, ಪ್ರ. 192:

ಸೆಕೆಂಡ್ ಕ್ಲಾಸ್ ಮೇಜಿಸ್ಟ್ರೇಟರು ಕೊಡಲ್ಪಡಬಹುದಾದ ಅಧಿಕಾರಗಳು	ಮೈಸೂರು ಗವರ್ನಮೆಂಟಿನವರಿಂದ	(1) ದೆಬ್ಬೆಗಳನ್ನು ಹೊಡಿಯುವ ಸಜಾ ವಿಧಿಸುವ ಅಧಿಕಾರ, ಪ್ರ. 32: (2) ಹೇಸಿಗೆಗಳನ್ನು ಮೋಖೂಬ್ ಮಾಡುವದಕ್ಕಾಗಿ ಹುಕುಂ ಕೊಡುವ ಅಧಿಕಾರ, ಪ್ರ. 143: (3) 144ನೇ ಪ್ರಕರಣಪ್ರಕಾರ ಹುಕುಂ ಮಾಡುವ ಅಧಿಕಾರ. (4) ಅವಿಧಿ ಮರಣಗಳ ವಿಚಾರಣೆ ಮಾಡುವ ಅಧಿಕಾರ, ಪ್ರ. 174: (5) ಫಿರ್ಯಾದಿಗಳಮೇಲೆ ತಕ್ಕೀರುಗಳು ತನಖಿಮಾಡುವ ಅಧಿಕಾರ, ಪ್ರ. 191: (6) ಪೋಲಿಸ್ ರಿಪೋರ್ಟುಗಳ ಮೇಲೆ ತಕ್ಕೀರುಗಳು ತನಖಿಮಾಡುವ ಅಧಿಕಾರ, ಪ್ರ. 191: (7) ವರ್ತಮಾನದಮೇಲೆ ತಕ್ಕೀರುಗಳನ್ನು ತನಖಿ ಮಾಡುವ ಅಧಿಕಾರ, ಪ್ರ. 191: (8) ದರಿಯೊಫ್ತಿ ಬಗ್ಯೆ ಕಮಿಟ್ ಮಾಡುವ ಅಧಿಕಾರ, ಪ್ರ. 206:
	ಡಿಸ್ಟ್ರಿಕ್ಟ್ ಮೇಜಸ್ಟ್ರೇಟರಿಂದ.	(1) ಹೇಸಿಗೆಗಳನ್ನು ಮೋಖೂಬ್ ಮಾಡುವದಕ್ಕಾಗಿ ಹುಕುಂ ಕೊಡುವ ಅಧಿಕಾರ, ಪ್ರ. 143: (2) 144ನೇ ಪ್ರಕರಣಪ್ರಕಾರ ಹುಕುಂ ಮಾಡುವ ಅಧಿಕಾರ. (3) ಅವಿಧಿ ಮರಣ ವಿಚಾರಣೆಮಾಡುವ ಅಧಿಕಾರ, ಪ್ರ. 174: (4) ಫಿರಿಯಾದಿ ಮೇಲೆ ತಕ್ಕೀರುಗಳನ್ನು ತನಖೀಮಾಡುವ ಅಧಿಕಾರ, ಪ್ರ. 191: (5) ಪೋಲಿಸ್ ರಿಪೋರ್ಟ್‌ಮೇಲೆ ತಕ್ಕೀರುಗಳನ್ನು ತನಖಿ ಮಾಡುವ ಅಧಿಕಾರ, ಪ್ರ. 191:
ಥರ್ಡ್‌ಕ್ಲಾಸ್ ಮೇಜಿಸ್ಟ್ರೇಟರು ಕೊಡಲ್ಪಡಬಹುದಾದ ಅಧಿಕಾರಗಳು	ಮೈಸೂರು ಗವರ್ನಮೆಂಟಿನವರಿಂದ	(1) ಹೇಸಿಗೆಗಳನ್ನು ಮೋಖೂಬ್ ಮಾಡುವದಕ್ಕಾಗಿ ಹುಕುಂಕೊಡುವ ಅಧಿಕಾರ, ಪ್ರ. 143: (2) 144ನೇ ಪ್ರಕರಣಪ್ರಕಾರ ಹುಕುಂಮಾಡುವ ಅಧಿಕಾರ. (3) ಅವಿಧಿ ಮರಣಗಳ ವಿಚಾರಣೆ ಮಾಡುವ ಅಧಿಕಾರ, ಪ್ರ. 174: (4) ಫಿರಿಯಾದಿಗಳಮೇಲೆ ತಕ್ಕೀರುಗಳನ್ನು ತನಖಿಮಾಡುವ ಅಧಿಕಾರ, ಪ್ರ. 191: (5) ಪೋಲಿಸ್ ರಿಪೋರ್ಟ್‌ಮೇಲೆ ತಕ್ಕೀರುಗಳನ್ನು ತನಖಿ ಮಾಡುವ ಅಧಿಕಾರ, ಪ್ರ. 191: (6) ದರಿಯಾಫ್ತಿ ಬಗ್ಯೆ ಕಮ್ಮಿಟ್ ಮಾಡುವ ಅಧಿಕಾರ, ಪ್ರ. 206:

1291

ಥರ್ಡ್ ಕ್ಲಾಸ್ ಮೇಜಿಸ್ಟ್ರೇಟರು ಕೊಡಲ್ಪಡಬಹುದಾದ ಅಧಿಕಾರಗಳು. (ಸಶೇಷ.)	ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಂದ.	(1) ಹೇಸಿಕೆಗಳನ್ನು ಮೋಖೂಫ್ ಮಾಡುವದಕ್ಕಾಗಿ ಹುಕುಂ ಕೊಡುವ ಅಧಿಕಾರ, ಪ್ರ. 143: (2) 144ನೇ ಪ್ರಕರಣಪ್ರಕಾರ ಹುಕುಂ ಕೊಡುವ ಅಧಿಕಾರ. (3) ಅವಿಧಿ ಮರಣಗಳ ವಿಚಾರಣೆಮಾಡುವ ಅಧಿಕಾರ. ಪ್ರ. 174: (4) ಫಿರಿಯಾದಿಗಳಮೇಲೆ ತಕ್ಸೀರುಗಳನ್ನು ತನಖಿಮಾಡುವ ಅಧಿಕಾರ, ಪ್ರ. 191: (5) ಪೋಲಿಸ್ ರಿಪೋರ್ಟುಗಳ ಮೇಲೆ ತಕ್ಸೀರುಗಳನ್ನು ತನಖಿಮಾಡುವ ಅಧಿಕಾರ, ಪ್ರ. 191:
ಸಬ್‌ಡಿವೀಜನಲ್ ಮೇಜಿಸ್ಟ್ರೇಟರು ಕೊಡಲ್ಪಡಬಹುದಾದ ಅಧಿಕಾರಗಳು.	ಮೈಸೂರು ಗವರ್ನಮೆಂಟಿನವರಿಂದ.	ರಿಕಾರ್ಡುಗಳನ್ನು ತರಿಸುವ ಅಧಿಕಾರ, ಪ್ರ. 435.

SCHEDULE V.
೫ನೇ ಷೆಡ್ಯೂಲ್.

FORMS.
ನಮೂನೆಗಳು.

I.—Summons to an Accused Person.
I.—ಅಪಾದನೆ ಪಟ್ಟ ಮನುಷ್ಯಗೆ ಸಮನ್ಸ್.

(*See Section* 68.)

(68ನೇ ಪ್ರಕರಣವನ್ನು ನೋಡು.)

ಸ್ಥಳದ ಗೆ.

(ಅಪಾದಿಸಲ್ಪಟ್ಟ ತಕ್ಸೀರನ್ನು ಸಂಕ್ಷೇಪವಾಗಿ ಇಲ್ಲಿ ಬರೀ) ಅಪಾದನೆಗೆ ಜವಾಬ್ ಕೊಡಲಿಕ್ಕೆ ನೀನು ಹಾಜರಾಗಬೇಕಾಗಿ ಇದೆ. ಆದಕಾರಣ ನೀನು ಇಸವಿ ತಿಂಗಳು ತಾರೀಖಿನಲ್ಲಿ (ಮೇಜಿಸ್ಟ್ರೇಟನ) ಮುಂದೆ ಸ್ವತಃ ಆದರೂ (ಅಥವಾ ಸಂಗತ್ಯಾನುಸಾರ ಪ್ಲೀಡರನಿಂದಾದರೂ) ಹಾಜರಾಗಬೇಕು ಎಂತ ನಿನಗೆ ಇದರಿಂದ ವಿಧಿಸೋಣಾಗಿ ಇರುತ್ತದೆ.

ಇದಕ್ಕೆ ತಪ್ಪಬೇಡ.

ತಾರೀಖು 18 .

(ಮೊಹರು.) (ದಸ್ಕತು.)

II.—Warrant of Arrest.
2.—ಹಿಡಿಯುವ ವಾರಂಟ್.

(*See Section* 75.)

(75ನೇ ಪ್ರಕರಣವನ್ನು ನೋಡು.)

(ಯಾರು ವಾರಂಟನ್ನ ಅಮಲ್‌ಜಾರಿ ಮಾಡಬೇಕೋ ಆ ಮನುಷ್ಯನ ಅಥವಾ ಆ ಮನುಷ್ಯರ ಹೆಸರನ್ನು ಉದ್ಯೋಗದ ಹೆಸರನ್ನು ಇಲ್ಲಿ ಬರಿ) ಗೆ.

ಸ್ಥಳದ ಮನುಷ್ಯನು (ತಕ್ಸೀರನ್ನು ಬರಿ) ತಕ್ಸೀರು ಆಪಾದಿಸಲ್ಪಟ್ಟಿದ್ದಾನೆ, ಆದಕಾರಣ ನೀನು ಸದರೀ ನ್ನ ಹಿಡಿದು ನಮ್ಮ ಮುಂದೆ ಹಾಜರು ಮಾಡಬೇಕು ಎಂತ ನಿನಗೆ ಇದರಿಂದ ವಿಧಿಸೋಣಾಗಿ ಇರುತ್ತದೆ. ಇದಕ್ಕೆ ತಪ್ಪಬೇಡ.

ತಾರೀಖು 18 .

(ಮೊಹರು.) (ದಸ್ಕತು.)

1192

(*See Section* 76.)

(76ನೇ ಪ್ರಕರಣವನ್ನು ನೋಡು.)

ಈ ಕೆಳಗೆ ನಮೂದಿರುವ ಪ್ರಕಾರ ವಾರಂಟಿಗೆ ಇಂಡಾರ್ಸು ಮಾಡ ಬಹುದು, ಹ್ಯಾಗಂದರೆ :—

ಸದರೀ ನು ಇಸವಿ ತಿಂಗಳು

ತಾರೀಖಿನಲ್ಲಿ ನಮ್ಮ ಮುಂದೆ ಹಾಜರಾಗುವದಾಗಿ,—ವ—ನಾವು ಅನ್ಯಥಾ ಅಪ್ಪಣೆ ಕೊಡುವವರಿಗೆ ಹಾಗೆಯೇ ಹಾಜರಾಗುತ್ತಿರುವದಾಗಿ ಸ್ವತಃ ಮೊಬಲಗಿಗೆ ಮುಚ್ಚಳಿಕೆಯೂ ಮೊಬಲಗಿಗೆ ಬಚ್ಚಿನ ಜಾಮೀನೂ (ಅಥವಾ ಇಬ್ಬರು ಜಾಮೀನುದಾರರು ಪ್ರತಿ ಪ್ರತಿ ಬಚ್ಚಿನ ಮೊಬಲಗಿಗೆ ಜಾಮೀನೂ) ಕೊಟ್ಟರೆ, ಅವನನ್ನು ಬಿಟ್ಟು ಬಿಡಬಹುದು.

ತಾರೀಖು 18 .

(ದಸ್ಕತು.)

III.—Bond and Bail-bond after Arrest under a Warrant.

3.—ವಾರಂಟು ಪ್ರಕಾರ ಹಿಡಿಯೋಣಾದ ತರುವಾಯ ಬರಿಸಿಕೊಳ್ಳುವ ಪತ್ರ—ವ—ಜಾಮೀನು ಪತ್ರ.

(*See Section* 86.)

(86ನೇ ಪ್ರಕರಣವನ್ನು ನೋಡು.)

ದ (ಹೆಸರುಳ್ಳ) ನಾನು ತಕ್ಸೀರಿನ ಅಪವಾದನೆಗೆ ಜವಾಬು ಕೊಡಲಿಕ್ಕೆ ನನ್ನನ್ನು ಹಾಜರು ಪಡಿಸುವದಕ್ಕೆ ಕೊಡೋಣಾದ ವಾರಂಟು ಪ್ರಕಾರ ಡಿಸ್ಟ್ರಿಕ್ಟ (ಅಥವಾ ಸಂಗತ್ಯಾನು ಸಾರ) ಮೇಜಿಸ್ಟ್ರೇಟಿನ ಮುಂದೆ ತರಲ್ಪಟ್ಟು ಇದ್ದು, ಬರುವ ತಾರೀಖಿನ ದಿವಸ ಸದರೀ ತಕ್ಸೀರುನಾಮೆಗೆ ಜವಾಬು ಕೊಡುವದಕ್ಕೆ ಕೋರ್ಟಿನಲ್ಲಿ ಹಾಜರಾಗುವದಕ್ಕೆ—ವ—ಕೋರ್ಟಿನವರು ಅನ್ಯಥಾ ಅಪ್ಪಣೆ ಕೊಡುವ ವರೆಗೆ ಆ ಪ್ರಕಾರ ಹಾಜರಾಗುತ್ತಾ ಇರಲಿಕ್ಕೆ ನಾನು ಇದರಿಂದ ಸ್ವತಃ ಬದ್ಧನಾಗುತ್ತೇನೆ ; —ವ—ನಾನು ಇದಕ್ಕೆ ತಪ್ಪಿದ ಸಂಗತಿಯಲ್ಲಿ, ಶ್ರೀ ಮೈಸೂರು ಮಹಾರಾಜಾಸಾಹೇಬಬಹದ್ದೂರ್ ಯವರಿಗೆ ಮೊಬಲಗು ರೂಪಾಯಿ ದಂಡವಾಗಿ ತೆರಲಿಕ್ಕೆ ನಾನುಸ್ವತಃ ಬದ್ಧನಾಗಿರುತ್ತೇನೆ.

ತಾರೀಕು 18 .

(ದಸ್ಕತು.)

ಮೇಲಿನ ಹೆಸರು ನಮೂದಿಸಿದ ನು ಬರುವ ತಾರೀಕಿನ ದಿವಸ ಕೋರ್ಟಿನ ಮುಂದೆ ಆತನು ಯಾವ ತಕ್ಸೀರುನಾಮೆಯ ಮೇಲೆ ಹಿಡಿಯಲ್ಪಟ್ಟನೋ ಆ ತಕ್ಸೀರನಾಮೆಗೆ ಜವಾಬು ಕೊಡಲಿಕ್ಕೆ ಹಾಜರಾಗತಕ್ಕ ಬಗ್ಗೆ,—ವ—ಕೋರ್ಟಿನವರು ಅನ್ಯಥಾ ಅಪ್ಪಣೆ ಕೊಡುವವರಿಗೆ ಆ ಪ್ರಕಾರ ಹಾಜರಾಗುತ್ತಾ ಇರಲಿಕ್ಕೂ, ಅವನಿಗೆ ನಾನು ಜಾಮೀನುದಾರನಾಗಿರುತ್ತೇನೆ ಎಂತಲೂ ; ಮತ್ತು ಆತ ಇದಕ್ಕೆ ತಪ್ಪಿದ ಸಂಗತಿಯಲ್ಲಿ, ಶ್ರೀ ಮೈಸೂರು ಮಹಾರಾಜಾಸಾಹೇಬ ಬಹದ್ದೂರ್ರವರಿಗೆ ಮೊಬ್ಲಗು ರೂಪಾಯಿ ದಂಡವಾಗಿ ತೆರಲಿಕ್ಕೆ ನಾನು ಯಿದರಿಂದ ಬದ್ಧನಾಗುತ್ತೇನೆ ಎಂಬದು ಕೂಡಾ ನಾನು ಸ್ವತಃ ಇದರ ಮೂಲವಾಗಿ ದೃಢಪಡಿಸುತ್ತೇನೆ.

ತಾರೀಖು 18 .

(ದಸ್ಕತು.)

IV.—Proclamation requiring the Appearance of a Person accused.

4.—ಅಪವಾದನೆ ಪಟ್ಟ ಮನುಷ್ಯನು ಹಾಜರಾಗಲು ವಿಧಿಸಿ ಕೊಡೋಣಾಗುವ ಇಸ್ತಿಹಾರು.

(*See Section* 87.)

(87ನೇ ಪ್ರಕರಣವನ್ನು ನೋಡು.)

ಇಂಡಿಯನ್ ಪಿನಲ್ ಕೋಡಿನ ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು (ಹೆಸರು ತಪಸೀಲ್—ವ—ವಿಲಾಸ) ಸು ನಡಿಸಿದ್ದಾಗಿ (ಅಥವಾ ನಡಿಸಿರುವದಾಗಿ ಗುಮಾನ್ ಪಟ್ಟು) ನಮ್ಮ ಮುಂದೆ

 1293

ಫಿರ್ಯಾದು ಮಾಡಲ್ಪಟ್ಟು, ಅದರಮೇಲೆ ಕೊಡೋಣಾದ ಹಿಡಿಯುವ ವಾರಂಟು ಸದರೀ (ಹೆಸರು) ನು ತಲಾಷಿಗೆ ಸಿಕ್ಕ ಲ್ಲಿಲ್ಲವಾಗಿ ವಾಪಸ್ ಮಾಡಲ್ಪಟ್ಟು ಇರುವದರಿಂದಲೂ; —ವ—ಸದರೀ (ಹೆಸರು) ತಪ್ಪಿಸಿಕೊಂಡು ಓಡಿ ಹೋಗಿದ್ದಾನೆಂತ (—ಯಾ—ಸದರೀ ವಾರಂಟು ಸಾದರು ಆಗದ ಹಾಗೆ ತಪ್ಪಿಸಿಕೊಳ್ಳಲಿಕ್ಕೆ ಆತ ಅಡಗಿಕೊಂಡಿರುತ್ತಾನೆಂತ) ನಮಗೆ ಮುಂದಟ್ಟು ಆಗುವಹಾಗೆ ತೋರಿಸಲ್ಪಟ್ಟಿರುವದರಿಂದ ಸಹ;

ಸದರೀ ನು ಈ ಕೋರ್ಟು ಮುಂದೆ (ಸ್ಥಳ) ದಲ್ಲಿ (—ಯಾ—ನಮ್ಮ ಮುಂದೆ) ಈ ತಾರೀಕಿನಿಂದ ದಿವಸಗಳೊಳಗೆ ಸದರೀ ಫಿರ್ಯಾದಿಗೆ ಜವಾಬ್ ಕೊಡುವದಕ್ಕೆ ಹಾಜರಾಗತಕ್ಕದ್ದೆಂತ ವಿಧಿಸಿ, ಈ ಮೂಲಕವಾಗಿ ಇಸ್ತಿಹಾರು ಕೊಡಲ್ಪಡೋಣಾಗುತ್ತೆ.

ತಾರೀಕು 18 .

(ಮೊಹರು.) (ದಸ್ಕತು.)

V.—Proclamation requiring the Attendance of a Witness.

5.—ಸಾಕ್ಷಿಗಾರನು ಹಾಜರಾಗುವ ಹಾಗೆ ವಿಧಿಸಿ ಕೊಡೋಣಾಗುವ ಇಸ್ತಿಹಾರು.

(See Section 87.)

(87ನೇ ಪ್ರಕರಣವನ್ನು ನೋಡು.)

(ತಕ್ಸೀರು ಸಂಕ್ಷೇಪವಾಗಿ ನಮೂದಿಸಬೇಕು) ತಕ್ಸೀರು (ಹೆಸರು ತಪಶೀಲ್—ವ—ವಿಲಾಸ) ನು ನಡಿಸಿದ್ದಾಗಿ (ಅಥವಾ ನಡಿಸಿಯಿರುವದಾಗಿ ಗುಮಾನಿಪಟ್ಟು) ನಮ್ಮ ಮುಂದೆ ಫಿರ್ಯಾದು ಮಾಡಲ್ಪಟ್ಟಿರುವದರಿಂದ, ಸದರೀ ಫಿರಿಯಾದಿನ ಸಂಗತಿಯ ವಿಷಯವಾಗಿ ವಿಚಾರಿಸಲ್ಪಡತಕ್ಕ ಬಗ್ಯೆ ಈ ಕೋರ್ಟು ಮುಂದೆ (ಸಾಕ್ಷಿಗಾರನ ಹೆಸರು ತಪಶೀಲ್ ವ—ವಿಲಾಸ)ನು ಹಾಜರಾಗತಕ್ಕ ಬಗ್ಯೆ ಒಂದು ವಾರಂಟು ಕೊಡಲ್ಪಟ್ಟು ಇರುವದರಿಂದ; —ವ—ಸದರೀ (ಸಾಕ್ಷಿಗಾರನ ಹೆಸರು) ಯವಗೆ ಸಾದರು ಮಾಡುವದಕ್ಕೆ ಕೂಡುವದಿಲ್ಲವಾಗಿ ಸದರೀ ವಾರಂಟು ವಾಪಸ್ ಆಗಿರುವದರಿಂದ,—ವ—ಆತನು ತಪ್ಪಿಸಿಕೊಂಡು ಓಡಿ ಹೋಗಿದ್ದಾನೆಂತ (—ಯಾ—ಸದರೀ ವಾರಂಟು ಸಾದರು ಆಗದ ರೀತಿ ತಪ್ಪಿಸಿ ಕೊಳ್ಳುವದಕ್ಕೆ ಆತನು ಅಡಗಿರುತ್ತಾನೆಂತ)ನಮಗೆ ಮುಂದಟ್ಟು ಆಗುವಹಾಗೆ (ತೋರಿಸಲ್ಪಟ್ಟಿರುವದರಿಂದ ಸಹ;

ಇದರಿಂದ ಪ್ರಕಟಿಸುವದೇನಂದರೇ ಫಿರ್ಯಾದಾದ ತಕ್ಸೀರಿನ ವಿಷಯವಾಗಿ ವಿಚಾರಿಸಲ್ಪಡುವದಕ್ಕೆ ಬರುವ ನೆ ತಾರೀಖಿನ ದಿವಸ—ಘಂಟೆಗೆ ಕೋರ್ಟುಮುಂದೆ (ಸ್ಥಳ) ದಲ್ಲಿ ಸದರೀ (ಹೆಸರು) ಹಾಜರಾಗತಕ್ಕದ್ದು.

ತಾರೀಕು 18 .

(ಮೊಹರು.) (ದಸ್ಕತು).

VI.—Order of Attachment to compel the Attendance of a Witness.

6.—ಸಾಕ್ಷಿಗಾರನ್ನ ಹಾಜರ ಪಡಿಸಿಕೊಳ್ಳಲಿಕ್ಕೆ ಜಪ್ತಿ ಹುಕುಂ.

(See Section 88.)

(88ನೇ ಪ್ರಕರಣವನ್ನು ನೋಡು.)

ಪೋಲಿಸ್ ಸ್ಟೇಶನ್ನ ಜಿಮ್ಮೆಯನ್ನುಳ್ಳ ಪೋಲಿಸ್ ಆಫಿಸರಗೆ.

ಈ ಕೋರ್ಟು ಮುಂದೆ ಬಾಕಿ ಇರುವ ಒಂದು ಫಿರ್ಯಾದಿಗೆ ಸಂಬಂಧಿಸಿ ಸಾಕ್ಷಿ ಹೇಳಲಿಕ್ಕೆ (ಹೆಸರು ತಪಶೀಲು—ವ—ವಿಲಾಸ) ನ್ನ ಹಾಜರು ಪಡಿಸಿಕೊಳ್ಳಲಿಕ್ಕೆ ಕ್ರಮವಾಗಿ ವಾರಂಟು ಕೊಡೋಣಾದಲ್ಲಿ, ಅದನ್ನ ಜಾರಿ ಮಾಡ ಕೂಡುವ ದಿಲ್ಲವಾಗಿ ವಾಪಸ್ ಆಗಿರುವದರಿಂದ: —ವ—ಆತನು ಓಡಿ ಹೋಗಿದ್ದಾನೆಂತ (—ಯಾ—ಸದರೀ ವಾರಂಟು ಜಾರಿ ಯಾಗದ ರೀತಿ ತಪ್ಪಿಸಿಕೊಳ್ಳುವದಕ್ಕೆ ಅಡಗಿರುತ್ತಾನೆಂತ) ನಮಗೆ ಮುಂದಟ್ಟು ಆಗುವಹಾಗೆ ತೋರಿಸಲ್ಪಟ್ಟಿರುವದರಿಂದ; —ವ—ಅಮೇಲೆ ಕ್ರಮವಾಗಿ ಇಸ್ತಿಹಾರು ಕೊಟ್ಟು ಪ್ರಕಟಿಸಿ ಸದರೀ ಇಸ್ತಿಹಾರಿನಲ್ಲಿ ನಮೂದಿರುವ ಸ್ಥಳದಲ್ಲಿ—ವ—ಕಾಲದಲ್ಲಿ ಸದರೀ ನ್ನ ಹಾಜರಾಗಿ ಸಾಕ್ಷಿ ಕೊಡಲಿಕೆ ವಿಧಿಸಿ ಇರುತ್ತಾ ಹಾಜರಾಗುವದಕ್ಕೆ ಆತನು ತಪ್ಪಿ ಇರುವದರಿಂದ;

ಡಿಸ್ಟ್ರಿಕ್ಟಿನೊಳಗೆ ನಿನಗೆ ತಲಾಷಿಗೆ ಶಿಕ್ಕಬಹುದಾದ   ರೂಪಾಯಿ ಮೌಲ್ಯದ ಸದರೀ
ನದಾದ ಚರಸೊತ್ತನ್ನು ಹಿಡಿಯುವದರ ಮೂಲಕ ಜಪ್ತಿ ಮಾಡುವದಕ್ಕೆ,—ವ—ಸದರೀ ಸೊತ್ತು ಈ ಕೋರ್ಟಿನವರ ಎರಡನೇ ಹುಕುಂಆಗುವ ವರಿಗೆ ಜಪ್ತಿಯಲ್ಲಿ ಇರಿಸಿ, ಈ ವಾರಂಟು ಜಾರಿಮಾಡಿದ ರೀತಿ ನಮೂದು ಮಾಡಿ ಇಂಡಾರಸ್‌ಮೆಂಟ್ ನಿ಼ ಇದನ್ನು ವಾಪಸ್ ಮಾಡುವದಕ್ಕೆ ಕೂಡಾ ಇದರಿಂದ ಸ್ವಾತಂತ್ರ್ಯವನ್ನು ಕೊಟ್ಟು ಅಜ್ಞಾಪಿಸೋಣಾಗುತ್ತದೆ.

ತಾರೀಕು   18

(ಮೊಹರು.)   (ದಸ್ಕತು.)

Order of Attachment to compel the Appearance of a Person accused.

ಅಪೊದನೆ ಪಟ್ಟ ಮನುಷ್ಯನ ಹಾಜರಾತಿ ಬಲಾತ್ಕರಿಸುವದಕ್ಕೆ ಜಪ್ತಿ ಹುಕುಂ.

(*See Section* 88.)

(88ನೇ ಪ್ರಕರಣವನ್ನು ನೋಡು.)

(ಯಾರು ವಾರಂಟನ್ನು ಅಮಲ್‌ಜಾರಿ ಮಾಡಬೇಕೋ ಆ ಮನುಷ್ಯನ ಅಥವಾ ಆ ಮನುಷ್ಯರ ಹೆಸರನ್ನೂ ಉದ್ಯೋಗದ ಹೆಸರನ್ನೂ ಇಲ್ಲಿ ಬರಿ) ಗೆ.

ಇಂಡಿಯನ್ ಪಿನಲ್ ಕೋಡಿನ   ನೇ ಪ್ರಕರಣ ಪ್ರಕಾರ ಶಿಕ್ಷೆ ಆಗತಕ್ಕ   ತಕ್ಸೀರು (ಹೆಸರು ತಪಶೀಲು—ವ—ವಿಳಾಸ) ಮಾಡಿದ್ದಾನೆಂತ (—ಯಾ—ಮಾಡಿರುವದಾಗಿ ಗುಮಾನ್ ಪಟ್ಟಿದ್ದಾನೆಂತ) ನಮ್ಮ ಮುಂದೆ ಫಿರ್ಯಾದು ಮಾಡೋಣಾಗಿ, ಅದರ ಮೇಲೆ ಕೊಡೋಣಾದ ಹಿಡಿಯುವ ವಾರಂಟು ಸದರೀ (ಹೆಸರು)   ನು ತಲಾಷಿಗೆ ಶಿಕ್ಕದೆ ವಾಪಸ್ ಆಗಿರುವದರಿಂದಲೂ ; —ವ—ಸದರೀ (ಹೆಸರು)   ನು ತಪ್ಪಿಸಿಕೊಂಡು ಓಡಿ ಹೋಗಿದ್ದಾನೆಂತಲೂ (ಅಥವಾ ಸದರೀ ವಾರಂಟ್ ಸಾದರಾಗದ ರೀತಿ ತಪ್ಪಿಸಿಕೊಳ್ಳುವದಕ್ಕೆ ಅಡಗಿ ಕೊಂಡು ಇರುತ್ತಾನೆ) ಎಂತ ನಮಗೆ ಮಂಜೂರು ಆಗುವ ಹಾಗೆ ತೋರಿಸಲ್ಪಟ್ಟು, ಆ ಮೇಲೆ ದಿವಸಗಳೊಳಗೆ ಸದರೀ ತಕ್ಸೀರುನಾಮೆಗೆ ಜವಾಬು ಕೊಡಲಿಕ್ಕೆ ಹಾಜರಾಗುವಂತೆ ಸದರೀ   ಗೆ ವಿಧಿಸಿ ಕ್ರಮವಾಗಿ ಒಂದು ಇಸ್ತಿಹಾರು ಕೊಡಲ್ಪಟ್ಟು ಪ್ರಕಟಿಸೋಣಾಗಿರುವದರಿಂದಲೂ :   ಡಿಸ್ಟ್ರಿಕ್ಟಿನಲ್ಲಿ
ಗ್ರಾಮ (ಅಥವಾ ಷಹರ) ನಲ್ಲಿ ಗವರ್ನಮೆಂಟಿಗೆ ನಿಗದಿ ತೆರುವ ಜಮೀನಲ್ಲದ ಇತರ ಈ ಕೆಳಗಿನ ಸೊತ್ತು ಸದರೀ
ನು ವುಳ್ಳವನಾಗಿದ್ದಾನೆ, ಅದು ಯಾವದೆಂದರೆ,   —ವ—ಅದರ ಜಪ್ತೀ ಬಗ್ಗೆ ಒಂದು ಹುಕುಂ ಮಾಡಲ್ಪಟ್ಟಿರುವದರಿಂದ ;

ಸದರೀ ಸೊತ್ತು ಹಿಡಿದು ಜಪ್ತಿ ಮಾಡಲಿಕ್ಕು—ವ—ಈ ಕೋರ್ಟಿನವರ ಎರಡನೇ ಹುಕುಂ ಕೊಡುವ ತನಕ ಅದನ್ನು ಜಪ್ತಿಯಲ್ಲೇ ಇರಿಸಿ, ವಾರಂಟು ಅಮಲ್‌ಜಾರಿ ಆದ ರೀತಿಯನ್ನು ನಮೂದಿಸಿ ಒಂದು ಇಂಡಾರಸ್‌ಮೆಂಟ್‌ನಿ಼ ಇದನ್ನು ವಾಪಸ್ ಮಾಡುವದಕ್ಕೆ ಇದರಿಂದ ನಿನಗೆ ಅಜ್ಞಾಪಿಸೋಣಾಗಿದೆ.

ತಾರೀಕು   ನೇ   18 .

(ಮೊಹರು.)   (ದಸ್ಕತು.)

Order authorizing an Attachment by the Deputy Commissioner.

ಡಿಪ್ಯುಟಿ ಕಮ್ಮಿಷನರವರಿಂದ ಜಪ್ತೀ ಮಾಡಲ್ಪಡಲು ಹುಟ್ಟಬೇಕಾದ ಹುಕುಂ,

(*See Section* 88.)

(88ನೇ ಪ್ರಕರಣವನ್ನು ನೋಡು.)

ಡಿಸ್ಟ್ರಿಕ್ಟಿನ ಡಿಪ್ಯುಟಿ ಕಮ್ಮಿಷನರಿಗೆ.

ಇಂಡಿಯನ್ ಪಿನಲ್ ಕೋಡಿನ   ನೇ ಪ್ರಕರಣ ಪ್ರಕಾರ ಶಿಕ್ಷೆ ಯಾಗತಕ್ಕ   ತಕ್ಸೀರು (ಹೆಸರು ತಪಶೀಲು—ವ—ವಿಳಾಸ)   ನು ನಡಿಸಿದ್ದಾನೆಂತ (ಅಥವಾ ನಡಿಸಿರುವದಾಗಿ ಗುಮಾನ್ ಪಟ್ಟಿರುತ್ತಾನೆಂತ) ನಮ್ಮ ಮುಂದೆ ಫಿರ್ಯಾದು ಮಾಡಲ್ಪಟ್ಟಿರುವದರಿಂದ,—ವ—ಸದರೀ (ಹೆಸರು)   ನು ತಲಾಷಿಗೆ ಶಿಕ್ಕುವದಿಲ್ಲವಾಗಿ ಅದರ ಮೇಲೆ ಕೊಡೋಣಾದ ವಾರಂಟ್ ವಾಪಸು ಆಗಿರುವದರಿಂದಲೂ ; ಮತ್ತು ಸದರೀ (ಹೆಸರು) ತಪ್ಪಿಸಿಕೊಂಡು ಓಡಿ ಹೋಗಿರುವದಾಗಿ (ಅಥವಾ ವಾರಂಟು ಸಾದ

ರು ಆಗದರೀತಿ ತಪ್ಪಿಸಿ ಕೊಳ್ಳುವದಕ್ಕೆ ಅಡಗಿಕೊಂಡಿರುತ್ತಾನೆಂತ) ನಮಗೆ ಮುಂದಟ್ಟು ಆಗುವ ಹಾಗೆ ತೋರಿಸಲ್ಪಟ್ಟಿರುವದರಿಂದಲೂ—ವ—ಆ ಮೇಲೆ ಸದರೀ ತಕ್ಕೀರುನಾಮೆಗೆ ಜವಾಬು ಕೊಡಲಿಕ್ಕೆ—ದಿವಸಗಳೊಳಗೆ ಹಾಜರಾಗಬೇಕೆಂತ ಸದರೀ ಗೆ ವಿಧಿಸಿ ಕ್ರಮವಾಗಿ ಒಂದು ಇಸ್ತಿಹಾರು ಕೊಟ್ಟು ಪ್ರಕಟಿಸಿರುತ್ತಾ ಅವನು ಹಾಜರಾಗಲಿಲ್ಲವಾದರಿಂದ ; ಡಿಸ್ಟ್ರಿಕ್ಟಿನ ಗ್ರಾಮ (—ಯಾ—ಷಹರ) ನಲ್ಲಿ ಸರಕಾರಕ್ಕೆ ನಿಗದಿ ತೆರುವ ಫಲಾನೆ ಜಮೀನ್ ಸದರೀ ನ ಸ್ವಾಧೀನ ಇರುವದರಿಂದ ;

ಸದರೀ ಜಮೀನು ಜಪ್ತಿ ಮಾಡಿಸಿ ಕೋರ್ಟಿನಿಂದ ಎರಡನೇ ಹುಕುಂ ಕೊಡುವ ತನಕ ಅದನ್ನ ಜಪ್ತಿಯಲ್ಲಿ ಇರಿಸುವದಕ್ಕೆ ನಿಮಗೆ ಇದರಿಂದ ಅಧಿಕಾರ ಕೊಟ್ಟು ಅಪೇಕ್ಷಿಸೋಣಾಗುತ್ತದೆ, ಮತ್ತು ನೀವು ಈ ಹುಕುಮಿಗೆ ಅನುಸಾರವಾಗಿ ನಡಿಸಿರಬಹುದಾದಂಥಾದನ್ನು ದೇರಿ ಶಿವಾಯಿ ತಿಳಿಸೋಣಾಗ ಬೇಕಾಗಿರುತ್ತದೆ.

ತಾರೀಕು 18 .

(ಮೊಹರು.) (ದಸ್ಕತು.)

VII.—Warrant in the first Instance to bring up a Witness.

7.—ಸಾಕ್ಷಿಗಾರನನ್ನ ಹಾಜರು ಪಡಿಸಲಿಕ್ಕೆ ಪ್ರಥಮದಲ್ಲೆ ಕೊಡೋಣಾಗುವ ವಾರಂಟು.

(*See Section* 90.)

(90ನೇ ಪ್ರಕರಣವನ್ನು ನೋಡು.)

(ಯಾರು ವಾರಂಟನ್ನು ಅಮಲ್‌ಜಾರಿ ಮಾಡಬೇಕೋ ಆ ಪೋಲಿಸ್ ಅಫಿಸರನ ಅಥವಾ ಇತರ ಮನುಷ್ಯನ—ಯಾ—ಮನುಷ್ಯರ ಹೆಸರನ್ನು ಉದ್ಯೋಗದ ಹೆಸರನ್ನು ಇಲ್ಲಿ ಬರಿ) ಗೆ.

ದ ನು (ತಕ್ಕೀರು ಸಂಕ್ಷೇಪವಾಗಿ ನಮೂದಿಸಬೇಕು) ತಕ್ಕೀರು ಮಾಡಿದ್ದಾಗಿ (ಅಥವಾ ನಡಿಸಿದ್ದಾಗಿ ಗುಮಾನ್ ಪಟ್ಟು) ನಮ್ಮ ಮುಂದೆ ಫಿರ್ಯಾದು ಮಾಡಲ್ಪಟ್ಟು ಇದ್ದು, ಸದರೀ ಫಿರ್ಯಾದು ಬಾಬಿನಲ್ಲಿ (ಸಾಕ್ಷಿಗಾರನ ಹೆಸರು—ವ—ತಪಶೀಲು) ನು ಬಹುಶಃ ಸಾಕ್ಷ್ಯವನ್ನು ಕೊಡಕೊಡುವವನಾಗಿ ತೋರುವದರಿಂದಲೂ—ವ—ಸದರೀ ಫಿರ್ಯಾದಿ ತನಖಿ ಕಾಲದಲ್ಲಿ ಬಲಾತ್ಕರಿಸಲ್ಪಟ್ಟ ವಿನಃ ಸಾಕ್ಷಿಗಾರನಂತೆ ಹಾಜರಾಗಲಿಕ್ಕಿಲ್ಲವೆಂತ ನಂಬಿಕೆ ಬಳ್ಳೇ—ವ—ಸಾ ... ಾದ ... ರುವದರಿಂದ ;

ಫಿರ್ಯಾದು ಆದ ತಕ್ಕೀರನ್ನು ಕುರಿತು ವಿಚಾರಿಸಲ್ಪಡಲಿಕ್ಕೆ ಸದರೀ (ಹೆಸರು) ನ್ನ ... ತಾರೀಕಿಗೆ ... ಕೋರ್ಟ ಮುಂದೆ ಹಾಜರು ... ವಾಗೆ ಇದರಿಂದ ನಿನಗೆ ಅಧಿಕಾರ ಕೊಟ್ಟು ನಿನ್ನನ್ನ ಆಜ್ಞಾಪಿಸೋಣಾಗುತ್ತದೆ.

ನಮ್ಮ ದಸ್ಕತು—ವ—ಕೋರ್ಟು ಮೊಹರುನಿಂ ಕೊಟ್ಟ ತಾರೀಖು 18 .

(ಮೊಹರು). (ದಸ್ಕತು.)

VIII.—Warrant to search after Information of a particular Offence.

8.—ಫಲಾನಾ ತಕ್ಕೀರು ವಿಷಯವಾಗಿ ವರ್ತಮಾನ ಶಿಕ್ಕಿದನಂತರ ಕೊಡತಕ್ಕ ಝಡತಿ ಬಗ್ಯೆ ವಾರಂಟು.

(*See Section* 96).

(96ನೇ ಪ್ರಕರಣವನ್ನು ನೋಡು.)

(ಯಾರು ವಾರಂಟನ್ನು ಅಮಲಜಾರಿ ಮಾಡಬೇಕೋ ಆ ಪೋಲಿಸ ಅಫಿಸರನ ಅಥವಾ ಇತರ ಮನುಷ್ಯನ—ಯಾ—ಮನುಷ್ಯರ ಹೆಸರನ್ನೂ ಉದ್ಯೋಗವನ್ನೂ ಇಲ್ಲಿ ಬರಿ) ಗೆ.

(ತಕ್ಕೀರು ಸಂಕ್ಷೇಪವಾಗಿ ಬರಿ) ತಕ್ಕೀರು ನಡಿಸಿದ್ದರನ್ನು ಕುರಿತು (—ಯಾ—ನಡಿಸಿದ್ದಾಗಿ ಗುಮಾನ್ ಪಟ್ಟು) ನಮಗೆ ವರ್ತಮಾನ ತಲ್ಪಿ (—ಯಾ—ಫಿರ್ಯಾದು ಮಾಡೋಣಾಗಿ) ಇರುವದರಿಂದ ಸದರೀ ತಕ್ಕೀರಿನ (—ಯಾ —ಗುಮಾನ್ ಪಟ್ಟ ತಕ್ಕೀರಿನ) ಬಾಬಿನಲ್ಲಿ ನಡಿಸುವ—ಯಾ—ನಡಿಸಲಿಕ್ಕೆ ಇರುವ ವಿಚಾರಣೆಗೆ (ಪದಾರ್ಥವನ್ನು ಸ್ಪಷ್ಟವಾಗಿ ನಮೂದಿಸಬೇಕು) ಹಾಜರಿಯು ಅವಶ್ಯವೆಂತ ನಮಗೆ ತೋರಿಸಲ್ಪಟ್ಟಿರುವದರಿಂದ ;

ಸದರೀ (ವಸ್ತುವನ್ನ ನಮೂದಿಸತಕ್ಕದ್ದು) ಬಗ್ಗೆ (ಯಾವಲ್ಲಿ ಝಡತಿ ಮಾಡಬೇಕಾಗಿದೆಯೋ ಆ ಮನೆ—ಯಾ—ಸ್ಥಳ—ಯಾ—ಅದರ ಭಾಗ ವಿವರವಾಗಿ ಬರಿ) ಲ್ಲಿ ಝಡತಿ ಮಾಡಲಿಕ್ಕೂ,—ಮತ್ತು—ತಲಾಷಿಗೆ ಶಿಕ್ಕಿದರೆ, ಅದನ್ನ ಈ ಕೋರ್ಟು ಮುಂದೆ ಕೂಡಲೇ ಹಾಜರು ಮಾಡಲಿಕ್ಕೂ ; ವಾರಂಟಿನ ಜಾರಿ ನಡಿಸಿದ ಕೂಡಲೇ ಅದಕ್ಕೆ ಅನುಗುಣವಾಗಿ ನೀನು ನಡಿಸಿದಂಥಾದ್ದರನ್ನು ಕುರಿತು ನಮೂದು ಮಾಡಿ ಇಂಡಾರ್ಸ್‌ಮೆಂಟನಿಃ ವಾರಂಟ್ ವಾಪಸ್ ಮಾಡಲಿಕ್ಕೂ, ಇದರಿಂದ ನಿನಗೆ ಸ್ವತಂತ್ರ ಕೊಟ್ಟು ನಿನ್ನನ್ನಾ ಅಜ್ಞಾಪಿಸೋಣಾಗುತ್ತದೆ.

ನಮ್ಮ ದಸ್ಕತು—ವ—ಕೋರ್ಟು ಮೊಹರುನಿ? ಕೊಟ್ಟ ತಾರೀಕು 18 .

(ಮೊಹರು.) (ದಸ್ಕತು.)

IX.—Warrant to search suspected Place of Deposit.

9.—ಯಾವದಾದರೂ ಇಡೋಣಾದ್ದಾಗಿ ಗುಮಾನೀಪಟ್ಟ ಸ್ಥಳದ ಝಡ್ತಿ ಬಗ್ಗೆ ವಾರಂಟು.

(*See Section* 98.)

(98ನೇ ಪ್ರಕರಣವನ್ನು ನೋಡು.)

(ಕಾನ್ಸ್ಟೇಬಲಿನ ಹುದ್ದೆಗಿಂತ ಮೇಲಿನ ಒಬ್ಬ ಪೋಲಿಸ್ ಆಫಿಸರನ ಹೆಸರು—ವ—ಉದ್ಯೋಗದ ಹೆಸರು) ಗೆ.

ನಮ್ಮ ಮುಂದೆ ಕೊಡೋಣಾದ ವರ್ತಮಾನದಿಂದಲೂ, ಅದರ ಮೇಲೆ ಮಾಡೋಣಾದ ತಕ್ಕವಾದ ವಿಚಾರಣೆಯಿಂದಲೂ (ಫಲಾನಾ ಮನೆ—ಯಾ—ಇತರ ಸ್ಥಳದ ತಪಸೀಲು ಬರಿಯತಕ್ಕದ್ದು) ಚೋರಿ ಮಾಲನ್ನ ಇಡುವದಕ್ಕಾಗಿ (ಅಥವಾ ವಿಕ್ರಯಿಸುವದಕ್ಕಾಗಿ) ಉಪಯೋಗಿಸೋಣಾಗುತ್ತದೆಂತ (ಅಥವಾ ಆ ಪ್ರಕರಣದಲ್ಲಿ ಹೇಳೋಣಾದ ಇತರ ಸಂಗತಿಗಳಲ್ಲಿ ಯಾವದೊಂದರ ಬಗ್ಯಾದರೆ, ಪ್ರಕರಣದ ಮಾತುಗಳಲ್ಲಿಯೇ ನಮೂದಿಸು) ನಂಬಲಿಕ್ಕೆ ಆಸ್ಪದ ಇರುವದರಿಂದ ;

ಅಗತ್ಯವಾದಷ್ಟು ಕುಮ್ಮಕು ಸಹಿತವಾಗಿ ಸದರೀ ಮನೆ (—ಯಾ—ಇತರ ಸ್ಥಳಕ್ಕೆ ಪ್ರವೇಶಿಸಲಿಕ್ಕೆ, ಮತ್ತು ಆ ಬಗ್ಯಾಗಿ, ಅವಶ್ಯ ಇದ್ದರೆ, ನ್ಯಾಯವಾದ ಬಲೋದ್ಧರಿಯಿಂದ ಉಪಯೋಗಿಸಲಿಕ್ಕು,—ವ—ಸದರೀ ಮನೆಯ (—ಯಾ—ಇತರ ಸ್ಥಳ ಅಥವಾ ಝಡ್ತಿಯು ಒಂದು ಭಾಗಕ್ಕೆ ಮಾತ್ರ ಮಾಡಬೇಕಾಗಿ ಇದ್ದರೆ ಆಭಾಗವನ್ನು ಸ್ಪಷ್ಟವಾಗಿ ನಮೂದಿಸಬೇಕು) ಪ್ರತಿ ಭಾಗವನ್ನು ಝಡ್ತಿ ಮಾಡಲಿಕ್ಕೂ ಯಾವ ಸ್ವತ್ತನ್ನಾಗಲಿ (—ಯಾ—ದಸ್ತೈವೇಜುಗಳು—ಯಾ—ಸ್ಟಾಂಪುಗಳು—ಯಾ—ಮೊಹರುಗಳು—ಯಾ—ನಾಣ್ಯಗಳು ಸಂಗತ್ಯಾನುಸಾರವಾಗಿ) ಹಿಡಿದು ಸ್ವಾಧೀನ ಪಡಿಸಿಕೊಳ್ಳಲಿಕ್ಕೂ, [(ಅವಶ್ಯವಿದ್ದಲ್ಲಿ) ಕೂಡಿಸತಕ್ಕದು ಮತ್ತು ಸ್ಪಷ್ಟನೆ ದಸ್ತೈವೇಜುಗಳು—ಯಾ—ಬನಾವಣಿ ಸ್ಟಾಂಪುಗಳು—ಯಾ—ಸುಳ್ಳು ಮೊಹರುಗಳು—ಯಾ—ಬನಾವಣಿನಾಣ್ಯ (ಸಂಗತ್ಯಾನುಸಾರವಾಗಿ) ಮಾಡುವದಕ್ಕೆ ಇಟ್ಟಿರುವದಾಗಿ ನೀನು ನ್ಯಾಯವಾಗಿ ನಂಬುವ ಯಾವದಾದರೂ ಕೊಳ್ಳಿಗಳು—ವ—ಪದಾರ್ಥಗಳು ಕೂಡ] ಹಿಡಿದು ಸ್ವಾಧೀನ ಪಡಿಯಲಿಕ್ಕೂ, ಸ್ವಾಧೀನ ಪಡಕೊಂಡಿರಬಹುದಾದಂಥಾ ಸದರೀ ವಸ್ತುಗಳನ್ನ ಈ ಕೋರ್ಟು ಮುಂದೆ ಕೂಡಲೆ ಹಾಜರು ಪಡಿಸಲಿಕ್ಕೂ ; ವಾರಂಟಿನ ಅಮಲ್‌ಜಾರಿ ನಡಿಸಿದ ಕೂಡಲೇ, ಅದಕ್ಕನುಗುಣವಾಗಿ ನೀನು ನಡಿಸಿದಂಥಾದ್ದರನ್ನು ಕುರಿತು ನಮೂದಿನಿಂದ ಒಂದು ಇಂಡಾರಸ್‌ಮೆಂಟನಿಃ ಇದನ್ನು ವಾಪಸ್ ಮಾಡಲಿಕ್ಕೂ, ಇದರಿಂದ ನಿನಗೆ ಸ್ವಾತಂತ್ರ್ಯವನ್ನು ಕೊಟ್ಟು ನಿನ್ನನ್ನು ಆಜ್ಞಾಪಿಸೋಣಾಗುತ್ತದೆ.

ನಮ್ಮ ದಸ್ಕತು—ವ—ಕೋರ್ಟು ಮೊಹರುನಿಃ ಕೊಟ್ಟ ತಾರೀಕು 18 .

(ಮೊಹರು.) (ದಸ್ಕತು.)

X.—Bond to keep the Peace.

10.—ನೆಮ್ಮದಿಯು ಪರಿಪಾಲನಾರ್ಥದ ಬಗ್ಗೆ ಬರಕೊಡಬೇಕಾದ ಪತ್ರ.

(*See Section* 106.)

(106ನೇ ಪ್ರಕರಣವನ್ನು ನೋಡು.)

(ಸ್ಥಳ)ದ ವಾಸಸ್ಥನಾದ (ಹೆಸರು) ನನ್ನನ್ನು ವಾಯಿದೆಯು ಪರಿಯಂತ ನೆಮ್ಮದಿಯನ್ನು ಪರಿಪಾಲಿಸುವದಾಗಿ ಮುಚ್ಚಳಿಕೆ ಬರಕೊಡ ಹೇಳಿದಕಾರಣ ನಾನು ಬರಕೊಡುವದೇನಂದರೆ, ಸದರೀ ವಾಯಿದೇ ಪರಿಯಂತ ನಾನು ನೆಮ್ಮದಿಗೆ ಭಂಗ

1297

ಪಡಿಸದೆಯೂ ನೆಮ್ಮದಿಗೆ ಭಂಗಬರುವ ಸಂಭವವುಳ್ಳ ಕೃತ್ಯ ಮಾಡದೆಯೂ ಇರುತ್ತೇನೆ ; ಮತ್ತು ಇದಕ್ಕೆ ತಪ್ಪಿದರೆ ನಾನು ಶ್ರೀ ಮೈಸೂರು ಮಹಾರಾಜಾ ಸಾಹೇಬ್‌ಬಹದ್ದೂರ್ ಯವರಿಗೆ ಮೊಬಲಗು ರೂಪಾಯಿ ದಂಡವಾಗಿ ತೆರಲಿಕ್ಕೆ ನಾನು ಇದರಿಂದ ಬದ್ಧನಾಗಿ ಇರುತ್ತೇನೆ.

ತಾರೀಖು 18 .

(ದಸ್ಕತು.)

XI.—Bond bor Good Behaviour.

11.—ಒಳ್ಳೇ ನಡತೆಯನ್ನು ಕುರಿತು ತಪ್ರ.

(*See Section* 109 *and* 110.)

(109—ವ—110ನೇ ಪ್ರಕರಣಗಳನ್ನು ನೋಡು.)

(ಸ್ಥಳ) ದ ವಾಸಸ್ಥನಾದ (ಹೆಸರು) ನನ್ನನ್ನು (ಕಾಲ ನಮೂದಿಸಬೇಕು) ವಾಯಿದೆಯ ಪರಿಯಂತ ಶ್ರೀ ಮೈಸೂರು ಮಹಾರಾಜಾ ಸಾಹೇಬ್ ಬಹದ್ದೂರ್ ಯವರ ವಿಷಯದಲ್ಲೂ, ಅವರ ಸಮಸ್ತ ಪ್ರಜೆಗಳ ವಿಷಯದಲ್ಲೂ, ಒಳ್ಳೇ ನಡತೆಯಿಂದ ಕ್ರಮವಾಗಿ ನಡಕೊಳ್ಳುತ್ತಾ ಇರತಕ್ಕ ಬಗ್ಗೆ ಮುಚ್ಚಳಿಕೆ ಬರಕೊಡಹೇಳಿ ಕೇಳಿದ ಕಾರಣ ನಾನು ಇದರಿಂದ ಬರಕೊಡುವದೇನಂದರೆ, ನಾನು ಸದರೀ ವಾಯಿದೆ ಪರಿಯಂತ ಶ್ರೀ ಮಹಾರಾಜಾ ಸಾಹೇಬರವರ ವಿಷಯದಲ್ಲೂ ಅವರ ಸಮಸ್ತ ಪ್ರಜೆಗಳ ವಿಷಯದಲ್ಲೂ ಕ್ರಮವಾಗಿ ನಡಕೊಳ್ಳುತ್ತೇನೆ ; ಇದಕ್ಕೆ ತಪ್ಪಿದರೆ, ನಾನು ಶ್ರೀ ಮಹಾರಾಜಾ ಸಾಹೇಬರವರಿಗೆ ಮೊಬಲಗು ರೂಪಾಯಿ ದಂಡವಾಗಿ ತೆರಲಿಕ್ಕೆ ಬದ್ಧನಾಗುತ್ತೇನೆ.

ತಾರೀಖು 18 .

(ದಸ್ಕತು.)

(ಪತ್ರವು ಜಾಮೀನುದಾರರೊಡನೆ ಬರಸಿಕೊಳ್ಳಲ್ಪಡುವಲ್ಲಿ, ಸೇರಿಸತಕ್ಕದ್ದು) ನಾವು ಇದರಿಂದ ದೃಢ ಪಡಿಸುವದೇನಂದರೆ, ಸದರೀ ನು ಸದರೀ ವಾಯಿದೆಪರಿಯಂತ ಶ್ರೀ ಮೈಸೂರು ಮಹಾರಾಜಾಸಾಹೇಬ್ ಬಹದ್ದೂರ್ರವರ ವಿಷಯದಲ್ಲೂ ಅವರ ಸಮಸ್ತ ಪ್ರಜೆಗಳ ವಿಷಯದಲ್ಲೂ ಒಳ್ಳೇ ನಡತೆಯಿಂದ ಕ್ರಮವಾಗಿ ನಡಕೊಳ್ಳತಕ್ಕ ಬಗ್ಗೆ ಅವನಿಗೆ ನಾವು ಜಾಮೀನುದಾರರಾಗಿ ಇದ್ದೇವೆ ; ಇದಕ್ಕೆ ಅವನು ತಪ್ಪಿದರೆ, ನಾವು ಒಟ್ಟನಲ್ಲಿ—ವ—ಪ್ರತ್ಯೇಕವಾಗಿ ಶ್ರೀ ಮಹಾರಾಜಾ ಸಾಹೇಬರವರಿಗೆ ಮೊಬಲಗು ರೂಪಾಯಿ ದಂಡವಾಗಿ ತೆರಲಿಕ್ಕೆ ಇದರಿಂದ ಬದ್ಧರಾಗುತ್ತೇವೆ.

ತಾರೀಕು 18 .

(ದಸ್ಕತು.)

XII.—Summons on Information of a probable Breach of the Peace.

12.—ನೆಮ್ಮದಿಗೆ ಭಂಗ ಉಂಟಾಗ ಬಹುದಾದ್ದೆಂಬದರನ್ನು ಕುರಿತು ವರ್ತಮಾನದ ಮೇಲೆ ಸಮನಸ್.

(*See Section* 114.)

(114ನೇ ಪ್ರಕರಣವನ್ನು ನೋಡು.)

ದ ಗೆ

ನೀನು ನೆಮ್ಮದಿಗೆ ಭಂಗಪಡಿಸುವ ಸಂಭವದಲ್ಲಿ ಇರುವದಾಗಿ (—ಯಾ—ನೆಮ್ಮದಿ ಭಂಗಪಡಿಸಲಿಕ್ಕೆ ಹೇತುವಾಗಬಹುದಾದ ಯಾವ ಕೃತ್ಯವನ್ನಾದರೂ ಮಾಡುವ ಸಂಭವದಲ್ಲಿ ಇರುವದಾಗಿ) ನಂಬತಕ್ಕ ವರ್ತಮಾನ (ವರ್ತಮಾನದ ಮತಲಬನ್ನು ಬರಿ) ಮೂಲವಾಗಿ ನಮಗೆ ತೋರಿಸಲ್ಪಟ್ಟಿರುವದರಿಂದ ವಾಯಿದೆ ಪರಿಯಂತ ನೆಮ್ಮದಿ ಕಾಪಾಡುವದಾಗಿ [ಜಾಮೀನುದಾರರು ಅವಶ್ಯ ಇದ್ದಾಗ, ಒಬ್ಬನೋ (—ಯಾ—ಇಬ್ಬರೋ ಎಂಬದು ಸಂಗತ್ಯಾನುಸಾರವಾಗಿ) ಸೇರಿಸತಕ್ಕದ್ದು ಒಬ್ಬ ಜಾಮೀನುದಾರನಾಗಿ (ಅಥವಾ ಜಾ

ಮಿರ್ನಾದಾರರಾಗಿ ಇದ್ದರೆ (ಒಬ್ಬನಕಿಂತ ಹೆಚ್ಚಾಗಿದ್ದರೆ ಪ್ರತಿ ಒಬ್ಬ ಜಾಮೀನುದಾರನು) ರೂಪಾಯಿ ಮೊಬಲಗಿಗೆ ಪತ್ರಮೂಲಕ ಜಾಮೀನ್ ಕೊಡಬೇಕೆಂಬದು ಶೀರಿಸು] ರೂಪಾಯಿ ಕ್ಕೆ ಪತ್ರ ಬರಕೊಡಲಿಕ್ಕೆ ನಿನ್ನನ್ನು ಯಾಕೆ ಕೇಳಕೂಡದೆಂಬದಕ್ಕೆ ಸಬಬು ತೋರಿಸುವದಕ್ಕೆ 18 ನೇ ಇಸವಿ ತಿಂಗಳ

ನೇ ತಾರೀಕು ಪೂರ್ವಾಹ್ಣ 10 ಘಂಟೆಗೆ ಮೇಜಿಸ್ಟ್ರೇಟು ಕೋರ್ಟಿನಮುಂದೆ ಸ್ವತಃ (—ಯಾ—ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕನ ದ್ವಾರ) ಹಾಜರಾಗತಕ್ಕದ್ದಾಗಿ ನಿನ್ನನ್ನ ಇದರಿಂದ ಆಜ್ಞಾಪಿಸೋಣಾಗುತ್ತದೆ.

ನಮ್ಮ ದಸ್ಕತು—ವ—ಕೋರ್ಟಿನ ಮೊಹರುನಿಶಿ ಕೊಟ್ಟ ತಾರೀಕು 18 .

(ಮೊಹರು.) (ದಸ್ಕತು.)

XIII.—Warrant of Commitment on Failure to find Security to keep the Peace.

13.—ನೆಮ್ಮದಿ ಪರಿಪಾಲನಾರ್ಥದಬಗ್ಗೆ ಜಾಮೀನ ಕೊಡಲುತಪ್ಪಿದಲ್ಲಿ ಕಮ್ಮಿಟಮೆಂಟ ವಾರಂಟ.

(*See Section* 123.)

(123ನೇ ಪ್ರಕರಣ ನೋಡು.)

ಜೈಲು ಸೂಪರ್ರಿಂಟೆಂಡೆಂಟ (ಅಥವಾ ತಾಪೇದಾರ) ಗೆ

(ಹೆಸರು—ವ—ವಿಲಾಸ) ನು ತಿಂಗಳು ಕಾಲಪರಿಯಂತರ ನೆಮ್ಮದಿ ಕಾಪಾಡುವದಾಗಿ ಒಬ್ಬ ಜಾಮೀನುದಾರ ಸಮೇತ (ಅಥವಾ ಎರಡು ಜಾಮೀನು ದಾರರೊಡನೆ ಪ್ರತಿ ಒಬ್ಬನಾ ರೂಪಾಯಿಗಳಿಗೆ ಒಂದು ಪತ್ರ ನನ್ನು) ರೂಪಾಯಿಗಳಿಗೆ ಆತನು ಯಾಕೆ ಪತ್ರ ಬರಕೊಡಕೂಡದೆಂಬದಕ್ಕೆ ಸಬಬು ತೋರಿಸಲಿಕ್ಕೆ ಅವನನ್ನು ಕೇಳಿಕೊಳ್ಳೋಣಾದ ಸರ್ಮನಿಗೆ ಅನುಗುಣವಾಗಿ ತಿಂಗಳು ತಾರೀಖಿಗೆ ಸ್ವತಃ(—ಯಾ—ಅಧಿಕಾರ ಹೊಂದಿದ ಮುತಾಲೀಕನ ಮುಖಾಂತರ) ನಮ್ಮ ಮುಂದೆ ಹಾಜರಾದಲ್ಲಿ, ಸದರೀ (ಹೆಸರು) ಆಪ್ರಕಾರ ಬದ್ಧಪಡಿಸಿಕೊಂಡು ಜಾಮೀನುದಾರರ (ಸಮನಸ್‌ನಲ್ಲಿ ಹೇಳೋಣಾದ್ದರಿಂದ ಹುಕ್ಕುಂ ಮಾಡೋಣಾದ ಜಾಮೀನು ವ್ಯತಿರಿಕ್ತ ಪಡುತ್ತದಾದರೆ ಅದನ್ನ ಇಲ್ಲಿ ಬರಿ) ತಲಾಷ್ವಮಾಡತಕ್ಕದ್ದಾಗಿ ವಿಧಿಸೋಣಾಗಿ ಸದರೀ ಹುಕ್ಕುಂ ಮೇರೆಗೆ ಆತ ನಡಕೊಳ್ಳದೆ ತಪ್ಪಿದ್ದರಿಂದ;

ಸದರೀ (ಹೆಸರು) ನನ್ನು ಈ ವಾರಂಟಿನೊಂದಿಗೆ ನಿಮ್ಮ ಭದ್ರತೆಯಲ್ಲಿ ತೆಗದುಕೊಳ್ಳಲಿಕ್ಕೂ (ಕೈದು ವಾಯಿದೆ) ಯ ಸದರೀ ಕಾಲಪರಿಯಂತರ ಸದರೀ ಜೈಲಿನಲ್ಲಿ ಆತನನ್ನ ಭದ್ರತೆಯಾಗಿ ಇರಿಸಲಿಕ್ಕೆ ಜೈಲು ಸೂಪರ್ರಿಂಟೆಂಡೆಂಟರಾದ (—ಯಾ—ಕೀಪರನಾದ) ನಿಮಗೆ ಇದರಿಂದ ಸ್ವಾತಂತ್ರ್ಯವನ್ನು ಕೊಟ್ಟು ಅಪೇಕ್ಷಿಸೋಣಾಗುತ್ತದೆ. ತನ್ಮಧ್ಯೆ ಆತನು ಸದರೀ ಹುಕ್ಕುಂ ಮೇರೆಗೆ ಸ್ವತಃ ಜಾಮೀನ್ದಾರ ಯಾ—ಜಾಮೀನ್ದಾರರ ಸಮೇತ ಬದ್ಧಪಡಿಸಿ ಸದರೀ ಪತ್ರ ಬರಕೊಟ್ಟರೆ, ಅದನ್ನು ಪಡಕೊಂಡು, ಸದರೀ (ಹೆಸರು) ನನ್ನ ಬಿಟ್ಟು ಬಿಡತಕ್ಕದ್ದು; ಮತ್ತು ಈ ವಾರಂಟು ಜಾರೀಮಾಡಿದ ರೀತಿಯನ್ನು ನಮೂದುಮಾಡಿ ಇಂಡಾರ್ಸಮೆಂಟ ನಿಶಿ ಇದನ್ನು ವಾಪಸ್ ಮಾಡತಕ್ಕದ್ದು.

ನಮ್ಮ ದಸ್ಕತು—ವ—ಕೋರ್ಟಿನವರ ಮೊಹರಿನಿಶಿ ಕೊಟ್ಟ ತಾರೀಖು 18 .

(ಮೊಹರು.) (ದಸ್ಕತು.)

XIV.—Warrant of Commitment on Failure to find Security for good Behaviour.

14.—ಒಳ್ಳೇನಡತೇ ಬಗ್ಗೆ ಜಾಮೀನ ಕೊಡದೆ ತಪ್ಪಿದಲ್ಲಿ ಕಮ್ಮಿಟಮೆಂಟು ವಾರಂಟು.

(*See Section* 123.)

(123ನೇ ಪ್ರಕರಣ ನೋಡು.)

ಜೈಲ್ ಸೂಪರ್ರಿಂಟೆಂಡೆಂಟ (—ಯಾ—ಕೀಪರ) ಗೆ

(ಹೆಸರು—ವ—ತಪಶೀಲು) ನು ಕಂಡಹಾಗೆ ಜೀವನ ಉಪಾಯ ವಿಲ್ಲದಂಥ (ಅಥವಾ ತನ್ನ ಅಹವಾಲು ಫಲಾನಾದಂತ ಸಮರ್ಪಕವಾಗಿ ತಿಳಿಸಲಾಗದಂಥ) ವನಾಗಿ ಡಿಸ್ಟ್ರಿಕ್ಟಿನ ಬಳಗೆ ಹೊಂಚು ಹಾಕಿಕೊಳ್ಳುತ್ತಾ ಇರುತ್ತಾನೆ—ಯಾ—ಇದ್ದಾನೆಂಬದಾಗಿ ನಮ್ಮ ಮುಂದೆ ತೋರಿಸಲ್ಪಟ್ಟಿರುವದರಿಂದ;

1299

ಅಥವಾ,

(ಹೆಸರು—ವ—ತಪಶೀಲು) ನ ಸಾಧಾರಣ ನಡತೆ ಕುರಿತು ನಮ್ಮ ಮುಂದೆ ಕೊಡೋಣಾದ—ವ—ರಿಕಾರ್ಡ ಮಾಡಲ್ಪಟ್ಟ ಸಾಕ್ಷ್ಯದಿಂದ ಆತನು ಮಾಮೂಲು ವಾಡಿಕೆಯ ಕಳ್ಳನು (ಅಥವಾ ಕನ್ನ ಹಾಕುವವನು, ವಗೈರೆ, ಸಂಗತ್ಯಾನುಸಾರ) ಎಂತ ತೋರಿಸಲ್ಪಟ್ಟಿರುವದರಿಂದ ;

ಸದರೀ (ಹೆಸರು) ನು (ಕಾಲವನ್ನು ನಮೂದಿಸತಕ್ಕದ್ದು) ವಾಯಿದೆ ಪರಿಯಂತರ ಆತನ ಒಳ್ಳೇ ನಡತೇ ಬಗ್ಗೆ ಒಬ್ಬ ಜಾಮೀನ್ದಾರನೊಡನೆ (ಅಥವಾ ಎರಡು—ಯಾ—ಹೆಚ್ಚು ಜಾಮೀನ್ದಾರರು ಸಂಗತ್ಯಾನುಸಾರವಾಗಿ) ಸ್ವತಃ ರೂಪಾಯಿಗಳಿಗೆ ಸದರೀ ಮತ್ತು ಜಾಮೀನ್ದಾರ (—ಯಾ—ಜಾಮೀನ್ದಾರ್ರು ಪೈಕಿ ಪ್ರತಿ ಒಬ್ಬ) ರೂಪಾಯಿಗಳಿಗೆ ಬದ್ಧಪಡಿಸಿಕೊಂಡು ಪತ್ರ ಬರಕೊಡುವದರ ಮೂಲವಾಗಿ ಜಾಮೀನ್ ಕೊಡಹೇಳಿ ವಿಧಿಸಿ, ಹುಕ್ಕುಂ ರಿಕಾರ್ಡ ಮಾಡಲ್ಪಟ್ಟಿರುವದರಿಂದ—ವ—ಸದರೀ (ಹೆಸರು) ಸದರೀ ಹುಕ್ಕುಂ ಮೇರೆಗೆ ನಡೆಯದೆ ತಪ್ಪಿದ್ದರಿಂದ, ಅಪ್ರಕಾರ ತಪ್ಪಿದ್ದಕ್ಕಾಗಿ (ಕಾಲ ನಮೂದಿಸತಕ್ಕದ್ದು) ಪರಿಯಂತರ—ಯಾ—ಅದಕ್ಕೆ ಮುಂಚಿತವಾಗಿ ಸದರೀ ಜಾಮೀನ್ ಕೊಡದೆ ಇದ್ದರೆ, ಕೈದು ವಿಧಿಸಲ್ಪಟ್ಟಿರುವದರಿಂದ ;

(ಹೆಸರು) ನನ್ನ ನಿಮ್ಮ ವಾರಂಟಿನ ಸಮೇತ ಸದರೀ ಭದ್ರತೆಯಲ್ಲಿ ತಕ್ಕೊಳ್ಳಲಿಕ್ಕೂ, (ಕೈದಿನ ವಾಯಿದೆ) ಸದರೀ ಕಾಲದ ವರಿಗೆ ಸದರೀ ಜೈಲಿನಲ್ಲಿ ಆತನನ್ನ ಭದ್ರತೆಯಲ್ಲಿ ಇರಿಸಲಿಕ್ಕೂ, ಅಷ್ಟರಲ್ಲಿ ಸದರೀ ಹುಕ್ಕುಂ ಅನುಸರಿಸಿ ತಾನು ಸ್ವತಃ—ವ—ತನ್ನ ಜಾಮೀನ್ದಾರ (ಅಥವಾ ಜಾಮೀನ್ದಾರರ) ನೊಡನೆ ಬದ್ಧಪಡಿಸಿಕ್ಕೊಂಡು ಸದರೀ ಪತ್ರ ಬರಕೊಟ್ಟ ಸಂಗತಿಯಲ್ಲಿ, ಅದನ್ನ ಪಡಕೊಂಡು, ಸದರೀ (ಹೆಸರು) ನನ್ನ ಬಿಟ್ಟುಬಿಡಲಿಕ್ಕೂ—ವ—ಈ ವಾರಂಟಿನ ಅಮಲಜಾರಿ ರೀತಿಯನ್ನು ನಮೂದಿನಿಂದ ಇಂಡಾರಸ್ಮೆಂಟನಿಸಿ ಇದನ್ನ ವಾಪಸ್ ಮಾಡಲಿಕ್ಕೂ ಸದರೀ ಸೂಪರಿಂಟೆಂಡೆಂಟ್ (ಅಥವಾ ಕೀಪರ) ರಾದ ನಿಮ್ಮನ್ನ ಇದರಿಂದ ಅಧಿಕಾರಕೊಟ್ಟು ಆಜ್ಞಾಪಿಸೋಣಾಗುತ್ತದೆ.

ನಮ್ಮ ದಸ್ಕತು—ವ—ಕೋರ್ಟು ಮೊಹರನಿಸಿ ಕೊಟ್ಟ ತಾರೀಖು 18 .

(ಮೊಹರ.) (ದಸ್ಕತು.)

XV.—Warrant to discharge a Person imprisoned on Failure to give Security.

15.—ಜಾಮೀನು ಕೊಡದೆ ತಪ್ಪಿದ್ದಕ್ಕೆ ಕೈದುಮಾಡಲ್ಪಟ್ಟ ಮನುಷ್ಯನನ್ನು ವಿಮೋಚನೆಪಡಿಸಲಿಕ್ಕೆ ವಾರಂಟು.

(See Sections 123 and 124.)

(123—ವ—124ನೇ ಪ್ರಕರಣಗಳನ್ನು ನೋಡು.)

ಜೈಲಿನ ಸೂಪರಿಂಟೆಂಡೆಂಟ್ (ಅಥವಾ ಕೀಪರ) (ಅಥವಾ ಸದರೀ ಮನುಷ್ಯನು ಯಾರ ಭದ್ರತೆಯಲ್ಲಿ ಇರುತ್ತಾನೋ ಅಂಥಾ ಇತರ ಆಫೀಸರ) ಗೆ.

ತಿಂಗಳು ತಾರೀಖಿನ ಬಾಬತು ಈ ಕೋರ್ಟು ವಾರಂಟ ಪ್ರಕಾರ ನಿಮ್ಮ ಭದ್ರತೆಗೆ ಕಳುಹಿಸಲ್ಪಟ್ಟ (ಕೈದಿ ಹೆಸರು—ವ—ತಪಶೀಲು) ನು ಕ್ರಿಮಿನಲ್ ಪ್ರೊಸೀಡ್ಯೂರ್ ಕೋಡಿನ ನೇ ಪ್ರಕರಣ ಪ್ರಕಾರ ಅನಂತರ ಕ್ರಮಪ್ರಕಾರ ಜಾಮೀನು ಕೊಟ್ಟಿರುವದರಿಂದ ;

ಅಥವಾ

ಜನಗಳಿಗೆ ಅಪಾಯವಿಲ್ಲದ್ದೆ ಆತನು ಬಿಡಲ್ಪಡಬಹುದು ಎಂತ ಗ್ರಹಿಸಲಿಕ್ಕೆ ಸಾಕಾದ ಸಬಬುಗಳು ನಮಗೆ ಕಂಡುಬಂದಿರುವದರಿಂದ ;

ಆತನು ಬೇರೆ ಸಬಬುಗಳಿಗೋಸ್ಕರ ತಡೆದಿಡಲ್ಪಡುವದಕ್ಕೆ ಗುರಿಯಾಗುವ ಸಂಗತಿಯಲ್ಲಿ ಹೊರ್ತು, ಅನ್ಯಥಾ ಸದರೀ (ಹೆಸರು) ನನ್ನ ನಿಮ್ಮ ಭದ್ರತೆಯಿಂದ ಕೂಡಲೇ ಬಿಟ್ಟು ಬಿಡಲಿಕ್ಕೆ ಇದರಿಂದ ನಿಮಗೆ ಅಧಿಕಾರಕೊಟ್ಟು ಆಜ್ಞಾಪಿಸೋಣಾಗುತ್ತದೆ.

ನಮ್ಮ ದಸ್ಕತು—ವ—ಕೋರ್ಟು ಮೊಹರನಿಸಿ ಕೊಟ್ಟ ತಾರೀಖು 18 .

(ಮೊಹರ.) (ದಸ್ಕತು.)

XVI.—Order for the Removal of Nuisances.

16.—ಹೇಸಿಕೆಗಳನ್ನ ಧೂರಪಡಿಸುವದಕ್ಕೆ ಹುಕ್ಕುಂ.

(See Section 133.)

(133ನೇ ಪ್ರಕರಣವನ್ನು ನೋಡು.)

(ಹೆಸರು ತಪಶೀಲು—ವ—ವಿಲಾಸ) ಗೆ.

ಜನರು ಉಪಯೋಗಿಸುವ ಬಹಿರಂಗವಾದ ರಸ್ತೆಗೆ (ಅಥವಾ ಇತರ ಬಹಿರಂಗವಾದ ಸ್ಥಳ) ಕ್ಕೆ ವಗೈರೆ (ರಸ್ತೆ—ಯಾ—ಬಹಿರಂಗವಾದ ಸ್ಥಳದ ವಿವರಹೇಳು) ರಿಂದ ವಗೈರೆ (ಆತಂಕ—ಯಾ—ಹೇಸಿಕೆ ಆಗುವಂಥಾದ್ದು ಹ್ಯಾಗೆಂಬದು ಹೇಳು) ಆತಂಕ (—ಯಾ—ಹೇಸಿಕೆ) ಮಾಡಿದ್ದೀಎಂತ ನಮ್ಮ ಮುಂದೆ ತೋರಿಸಲ್ಪಟ್ಟಿರುವದರಿಂದ—ವ—ಅಂಥಾ ಆತಂಕ (—ಯಾ—ಹೇಸಿಕೆ) ಈಗಲೂ ಇರುತ್ತದಾದ್ದರಿಂದ ;

ಅಥವಾ

ಮಾಲೀಕನಾಗಿ ಅಥವಾ ಮ್ಯಾನೇಜರನಾಗಿ ವ್ಯಾಪಾರ—ಯಾ—ಉದ್ಯೋಗ (ಫಲಾನಾ ವ್ಯಾಪಾರ—ಯಾ—ಉದ್ಯೋಗ—ವ—ಅದು ಯಾವಲ್ಲಿ ನಡಿಸುವದೆಂಬದು ನಮೂದಿಸಬೇಕು) ವನ್ನು ನೀನು ನಡಿಸುತ್ತಿರುವದಾಗಿ—ವ—ಅದು (ಯಾವರೀತಿಯಲ್ಲಿ ಹಾನಿಕರವಾದ ಫಲವನ್ನು ಉಂಟುಮಾಡುತ್ತದೆಂಬದು ಬರಿ) ಫಲಾನಾ ಕಾರಣದಿಂದ ಜನರ ಆರೋಗ್ಯಕ್ಕೆ (ಅಥವಾ ಸೌಖ್ಯಕ್ಕೆ) ಹಾನಿಕರವಾದ್ದಾಗಿಯೂ—ವ—ಅದನ್ನು ಮೋಕೂಫ ಮಾಡಲ್ಪಡಬೇಕಾಗಿಯೂ—ಅಥವಾ—ಬೇರೆ ಸ್ಥಳಕ್ಕೆ ವಯ್ಯಲ್ಪಡಬೇಕಾಗಿಯೂ, ನಮಗೆ ತೋರಿಸಲ್ಪಟ್ಟಿರುವದರಿಂದ ;

ಅಥವಾ

ನೀನು ಬಹಿರಂಗವಾದ ರಸ್ತೆ (ಆ ಬಹಿರಂಗವಾದ ಹಾದಿಯನ್ನ ವಿವರಿಸಿಬರಿ) ಆಜೂಬಾಜಿನಲ್ಲಿ ಇರುವ ಫಲಾನಾ ಕೆರೆ (ಅಥವಾ ಭಾವಿ—ಯಾ—ಡೊಗರು) ಯಜಮಾನ (ಅಥವಾ ಅದನ್ನ ಸ್ವಾಧೀನತೆ ವುಳ್ಳವ—ಯಾ—ಅದರ ಮೇಲೆ ಖಬರದಾರಿವುಳ್ಳವ) ನಾಗಿರುತ್ತೀ ಎಂಬದಾಗಿಯೂ—ವ—ಜನರ ಭದ್ರತೆಗೆ ಸದರೀ ಕೆರೆ (—ಯಾ—ಭಾವಿ—ಯಾ—ಡೊಗರು) ಇದಕ್ಕೆ ಆವರಣಇಲ್ಲದೆ (ಅಥವಾ ಅಬಲವಾಗಿ ಆವರಣ ಕಟ್ಟಲ್ಪಟ್ಟ) ಸಂಬಂಧ ಅಪಾಯ ಇರುತ್ತದಾಗಿ ನಮಗೆ ತೋರಿಸಲ್ಪಟ್ಟಿರುವದರಿಂದ ;

ಅಥವಾ

ಆದ್ದರಿಂದ, ವಗೈರೆ (ಸಂಗತ್ಯಾನುಸಾರ) ;

(ಕೊಡೋಣಾದ ವಾಯಿದೆ ನಮೂದಿಸಬೇಕು) ಕಾಲದೊಳಗೆ (ಹೇಸಿಕೆಯನ್ನ ತಳ್ಳಲಿಕ್ಕೆ ಅಗತ್ಯ ಇರುವಂಥಾದ್ಯಾವದೂ ಮಾಡಬೇಕೆಂದು ನಮೂದಿಸತಕ್ಕದ್ದು) ಕ್ಕೆ ಅಥವಾ ಬರುವ ತಿಂಗಳ ತಾರೀಖಿನದಿವಸ ಕೋರ್ಟು ಲ್ಲಿ ಹಾಜರಾಗಿ ಹುಕ್ಕುಂ ಯಾಕೆ ಬಲಾತ್ಕರಿಸಲ್ಪಡಕೂಡದೆಂಬದಕ್ಕೆ ಸಬಬು ತೋರಿಸುವದಕ್ಕೆ ನಾವು ಇದರ ಮೂಲವಾಗಿ ಅಪ್ಪಣೆಕೊಟ್ಟು ವಿಧಿಸುತ್ತೇವೆ ;

ಅಥವಾ

(ಕೊಡೋಣಾದ ಸಮಯ ನಮೂದಿಸಬೇಕು) ದೊಳಗೆ ಸದರೀ ಸ್ಥಳದಲ್ಲಿ ಸದರೀ ವ್ಯಾಪಾರ—ಯಾ—ಕಸಬನ್ನು ನಡಿಸುವಂಥಾದ್ದು ಮೋಕೂಫ ಮಾಡಬೇಕಾಗಿಯೂ—ವ—ಅದನ್ನು ಪುನಃ ನಡಿಸಬಾರದಾಗಿಯೂ,—ಯಾ—ಸದರೀ ವ್ಯಾಪಾರ ಯಾವ ಸ್ಥಳದಲ್ಲಿ ಈಗ ನಡಿಸೋಣಾಗುತ್ತದೋ ಅಲ್ಲಿಂದ ಸ್ಥಳಾಂತರ ಪಡಿಸಬೇಕಾಗಿಯೂ,—ಯಾ—ಹಾಜರಾಗುವಂತೆ ನಾವು ಯಿದರಿಂದ ಅಪ್ಪಣೆ ವಗೈರೆ, ಕೊಟ್ಟು ವಿಧಿಸುತ್ತೇವೆ ;

ಅಥವಾ

(ಕೊಡೋಣಾದ ಸಮಯ ನಮೂದಿಸಬೇಕು) ದೊಳಗೆ ಬಲವಾದ ಆವರ್ಣ (ಆವರ್ಣದರೀತಿ—ವ—ಯಾವ ಭಾಗಕ್ಕೆ ಆವರ್ಣ ಹಾಕಬೇಕೆಂಬದು ನಮೂದಿಸಬೇಕು) ಹಾಕಿಸಬೇಕೆಂತ ಅಥವಾ ಹಾಜರಾಗುವಂತೆ ವಗೈರೆ ನಾವು ಇದರಿಂದ ಅಪ್ಪಣೆಕೊಟ್ಟು ನಿನ್ನನ್ನ ವಿಧಿಸುತ್ತೇವೆ ;

ಅಥವಾ

ನಾವು ಇದರಿಂದ ವಗೈರೆ (ಸಂಗತ್ಯಾನುಸಾರ) ಅಪ್ಪಣೆಕೊಟ್ಟು ನಿನ್ನನ್ನ ವಿಧಿಸುತ್ತೇವೆ.

ನಮ್ಮದಸ್ತಕತು—ವ—ಕೋರ್ಟ ಮೊಹರಸಿಕ್ಕಿ ಕೊಟ್ಟ ತಾರೀಖು 18

(ಮೊಹರ.)

(ದಸ್ತಕತು.)

XVII.—Magistrate's Order constituting a Jury.

17.—ಜೂರಿಯನ್ನ ನೇಮಿಸಿ ಮ್ಯಾಜಿಸ್ಟ್ರೇಟನು ಕೊಡುವ ಹುಕುಂ.

(*See Section* 138.)

(138ನೇ ಪ್ರಕರಣವನ್ನು ನೋಡು.)

18 ನೇ ತಿಂಗಳು ನೇ ತಾರೀಖಿನ ದಿನ (ಹೆಸರು) ಗೆ (ಹುಕುಮಿನ ತಾತ್ಪರ್ಯ ಬರಿ) ವಿಧಿಸಿ ಒಂದು ಹುಕುಂ ಕೊಡಲ್ಪಟ್ಟು, ಸದರೀ (ಹೆಸರು) ಮೇಲೆ ಹೇಳಿದ ಸದರೀ ಹುಕುಂ ನ್ಯಾಯ—ವ—ಯುಕ್ತವಾದ್ದೋ ಎಂಬದನ್ನು ದರಿಯಾಫ್ತೀ ಬಗ್ಗೆ ಜೂರಿಯವರನ್ನ ನೇಮಿಸುವದಕ್ಕೆ ಒಂದು ಹುಕುಂ ಅಪೇಕ್ಷಿಸಿ ತಿಂಗಳು ತಾರೀಖಿನ ಅರ್ಜಿ ಮೂಲಕವಾಗಿ ನಮಗೆ ಅರಿಕೆಮಾಡಿಕೊಂಡಿರುವದರಿಂದ ; (ಐದು—ಯಾ—ಹೆಚ್ಚುಮಂದಿ ಜೂರರುಗಳ ಹೆಸರುಗಳು ಮುಂತಾದ್ದು) ನ್ನ ಸದರೀ ಪ್ರಶ್ನೆಯನ್ನು ದರಿಯಾಫ್ತೀ ಮಾಡಲಿಕ್ಕೂ—ವ—ತೀರ್ಮಾನಿಸಲಿಕ್ಕೂ ಜೂರರಾಗಿ ನಾವು ಇದರಿಂದ ನೇಮಕ ಮಾಡಿರುತ್ತೇವೆ, ಮತ್ತು ಈ ಹುಕುಮಿನ ತಾರೀಖಿನಿಂದ ದಿವಸಗಳೊಳಗೆ ಸದರೀ ಜೂರಿಯವರು ತಮ್ಮ ತೀರ್ಪನ್ನು ಸ್ಥಳದಲ್ಲಿ ನಮ್ಮ ಕೋರ್ಟಿಗೆ ರಿಪೋರ್ಟು ಮಾಡಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ನಮ್ಮ ದಸ್ಕತು—ವ—ಕೋರ್ಟು ಮೊಹರ್‌ನಿಂ ಕೊಟ್ಟ ತಾರೀಖು 18 .

(ಮೊಹರ್.) (ದಸ್ಕತು.)

XVIII.—Magistrate's Notice and Peremptory Order after the Finding by a Jury.

18.—ಜೂರಿಯವರ ಇತ್ಯರ್ಥದನಂತರ ಮ್ಯಾಜಿಸ್ಟ್ರೇಟರು ಕೊಡುವ ನೋಟಿಸ—ವ—ಖಂಡಿತ ಹುಕುಂ.

(*See Section* 140.)

(140ನೇ ಪ್ರಕರಣವನ್ನು ನೋಡು.)

(ಹೆಸರು ತಪಶೀಲು—ವ—ವಿಲಾಸ) ಗೆ.

ತಿಂಗಳು ತಾ ಲ್ಲು ನಿನ್ನನ್ನು (ಹುಕುಮಿನ ಸಾರಾಂಶವಾಗಿ ಆಜ್ಞಾಪನೆಯನ್ನು ಬರಿ) ಆಜ್ಞಾಪಿಸಿ ಕೊಟ್ಟ ಹುಕುಂ—ನೀನು ತಿಂಗಳ ತಾರೀಖಿನ ದಿವಸ ಹಾಜರು ಮಾಡಿದ ಅರ್ಜಿಮೇಲೆ ಕ್ರಮವಾಗಿ ನೇಮಕಪಟ್ಟ ಜೂರಿಯವರು—ನ್ಯಾಯವಾದ್ದು—ವ—ಯುಕ್ತವಾದ್ದೆಂತ ಇತ್ಯರ್ಥಿಸಿರುವದಾಗಿ ಇದರ ಮೂಲಕ ನಿನಗೆ ತಿಳಿಸೋಣಾಗುತ್ತದೆ. ಅಂಥಾ ಹುಕುಂ ಷರತ್ತು ಖಂದಿ ಯಿಲ್ಲದೆ ಪೂರ್ತಿಯಾಗಿ ಮಾಡೋಣಾಗಿರುತ್ತದೆ, ಮತ್ತು ಸದರೀ ಹುಕುಮಿಗೆ ವಿಧೇಯವಾಗಿ (ಕೊಡೋಣಾದ ಕಾಲ ನಮೂದಿಸಬೇಕು) ಕಾಲದೊಳಗಾಗಿ ನೀನು ನಡೆಯತಕ್ಕದ್ದೆಂತಲೂ, ಅದಕ್ಕೆ ಅವಿಧೇಯವಾಗಿ ನಡಕೊಂಡರೆ, ಆ ಬಗ್ಗೆ ಇಂಡಿಯನ್ ಪೆನಲ್‌ಕೋಡಿನಿಂದ ನಿಬಂಧಿಸೋಣಾದ ದಂಡನೆಗೆ ಗುರಿ ಪಡಬೇಕಾದೀತೆಂತ ಕೂಡ ಇದರಮೂಲಕಅಪ್ಪಣೆಕೊಟ್ಟುವಿಧಿಸುತ್ತೇವೆ.

ನಮ್ಮ ದಸ್ಕತು—ವ—ಕೋರ್ಟು ಮೊಹರ್‌ನಿಂ ಕೊಟ್ಟ ತಾರೀಖು 18 .

(ಮೊಹರ್.) (ದಸ್ಕತು.)

XIX.—Injunction to provide against Imminent Danger pending Inquiry by Jury.

19.—ಜೂರಿಯವರಿಂದ ವಿಚಾರಣೆ ಬಾಕೀ ಇರುವಾಗ್ಯೆ ವಿಶೇಷವಾದ ಆಪತ್ತು ತಡೆಯುವದಕ್ಕೋಸ್ಕರ ಇಂಜಂಕ್‌ಷನ್.

(*See Section* 142.)

(142ನೇ ಪ್ರಕರಣವನ್ನು ನೋಡು.)

(ಹೆಸರು ತಪಶೀಲು—ವ—ವಿಲಾಸ) ಗೆ.

18 ತಿಂಗಳ ತಾರೀಖಿನಲ್ಲು ನಮ್ಮಿಂದ ಕೊಡೋಣಾದ ಹುಕುಂ ನ್ಯಾಯ—ವ—ಯುಕ್ತವಾದ್ದೋ ಎಂಬದು ದರಿಯಾಫ್ತು ಮಾಡಲಿಕ್ಕೆ ನೇಮಕಪಟ್ಟ ಜೂರಿಯವರ ವಿಚಾರಣೆಯು ಇನ್ನು ಬಾಕಿಯಲ್ಲಿ ಇದ್ದು, ಸದರೀ

1302

ಹುಕುಮಿನಲ್ಲಿ ನಮೂದಿಸಿದ ಹೇಸಿಕೆಯೂ ಜನಗಳಿಗೆ ಅತಿ ವಿಶೇಷವಾದ ಆಪತ್ತು ಸಂಭವಿಸುವಷ್ಟರ ಮಟ್ಟಿನದಾಗಿ ಇದ್ದು—ಅಂಥಾ ಆಪತ್ತು ಮೊಕೂಫ್ ಮಾಡುವದಕ್ಕೆ ಒಡನೇ ತಕ್ಕ ಬಂದೋಬಸ್ತು ಮಾಡಬೇಕಾಗಿದೆ ಎಂತ ನಮಗೆ ತೋರಿಸಲ್ಪಟ್ಟಿರುವದರಿಂದ, ಜಾರಿಯವರ ಸ್ಥಳಿಕ ವಿಚಾರಣೆ ಮುಗಿಯುವ ತನಕ, ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ 142ನೇ ಪ್ರಕರಣದ ನಿಬಂಧನೆಗಳಿಗನು ಗುಣವಾಗಿ, ಕೂಡಲೇ (ಹಂಗಾಮಿ ರಕ್ಷನಾರ್ಥವಾಗಿ ಮಾಡಬೇಕಾದ್ಯಾವದೆಂಬದು ಸ್ಪಷ್ಟವಾಗಿ ನಮೂದಿಸತಕ್ಕದ್ದು) ಮಾಡತಕ್ಕದ್ದೆಂತ ಇದರ ಮೂಲವಾಗಿ ವಿಧಿಸುತ್ತೇವೆ.

ನಮ್ಮ ದಸ್ಕತು—ವ—ಕೋರ್ಟು ಮೊಹರನಿಶಿ ಕೊಟ್ಟ ತಾರೀಖು . 18 .

(ಮೊಹರ.) (ದಸ್ಕತು.)

XX.—Magistrate's Order prohibiting the Repetition, &c., of a Nuisance.

20.—ಹೇಸಿಕೆಯು ಪುನಃ ನಡಿಯದಂತೆ ವಗೈರೆ ನಿಷೇಧಿಸಿ ಮ್ಯಾಜಿಸ್ಟ್ರೇಟನ ಹುಕುಂ.

(*See Section* 143.)

(143ನೇ ಪ್ರಕರಣವನ್ನು ನೋಡು.)

(ಹೆಸರು ತಪಶೀಲು—ವ—ವಿಲಾಸ) ಗೆ.

(ನಂಬರ 16ನೇ ನಮೂನೆ—ಯಾ—ಸಂಗತ್ಯಾನುಸಾರವಾಗಿ—ನಂಬರು 21ನೇ ನಮೂನೆಯ ಆಧಾರದ ಮೇಲೆ ಕ್ರಮವಾದ ಹೇಳಿಕೆ ನಮೂದಿಸು) ವಗೈರೆಯಂತ—ನಮಗೆ ತೋರಿಸಲ್ಪಟ್ಟಿರುವದರಿಂದ ;

ಸದರೀ ಹೇಸಿಕೆಯು ಪುನಃ ಇರಿಸುವದರಿಂದ—ಯಾ—ಇರಗೊಡಿಸುವದರಿಂದ—ಯಾ—ಇರಿಸಲ್ಪಡಲಿಕ್ಕೆ ಬಿಡೋಣಾಗುವದ ರಿಂದ ವಗೈರೆ (ಸಂಗತ್ಯಾನುಸಾರವಾಗಿ) ಪುನಃ ನಡಿಯದಂತೆ ಮಾಡತಕ್ಕದ್ದಾಗಿ ಇದರ ಮೂಲಕ ಖಂಡಿತವಾಗಿ ಹುಕುಂ ಕೊಟ್ಟು ನಿನ್ನನ್ನು ಆಜ್ಞಾಪಿಸುತ್ತೇವೆ.

ನಮ್ಮ ದಸ್ಕತು—ವ—ಕೋರ್ಟು ಮೊಹರನಿಶಿ ಕೊಟ್ಟ ತಾರೀಖು . 18 .

(ಮೊಹರು.) (ದಸ್ಕತು.)

XXI.—Magistrate's Order to prevent Obstruction, Riot, &c.

21.—ತಡೆ, ದೊಂಬಿ ವಗೈರೆ ನಡೆಯದಂತೆ ಅಡ್ಡೀ ಪಡಿಸುವದಕ್ಕೆ ಮ್ಯಾಜಿಸ್ಟ್ರೇಟನ ಹುಕುಂ.

(*See Section* 144.)

(144ನೇ ಪ್ರಕರಣವನ್ನು ನೋಡು.)

(ಹೆಸರು ತಪಶೀಲು—ವ—ವಿಲಾಸ) ಗೆ.

ನಿನ್ನ ಸ್ವಾಧೀನದಲ್ಲಿ (ಅಥವಾ ಆಡಳಿತದಲ್ಲಿ) (ಸ್ವತ್ತಿನ ತಪಶೀಲು ಸ್ಪಷ್ಟವಾಗಿ ಕಾಣಿಸು) ಇದ್ದು, ಸದರೀ ಸ್ಥಳದಲ್ಲಿ ಬಂದು ಕಾಲ್ವೆ ಅಗದು ತೆಗಿಯುವದರಿಂದ—ಅಗದು ತೆಗಿಯಲ್ಪಟ್ಟ ಮಣ್ಣು—ವ—ಕಲ್ಲುಗಳ ಒಂದು ಅಂಶವನ್ನು ರಸ್ತೆಯನ್ನು ಉಪಯೋಗಿಸುವ ಮನುಷ್ಯರಿಗೆ ಆತಂಕದ ಸಂಭವವನ್ನು ಉಂಟು ಮಾಡುವಹಾಗೆ, ಬಾಜೂವಿನಲ್ಲಿರುವ ರಸ್ತೆಯಲ್ಲಿ ಬಿಸಾಡುವ—ಯಾ—ಇರಿಸುವ ಸಂಭವದಲ್ಲಿ ಇರುವದಾಗಿ ನಮ್ಮ ಮುಂದೆ ತೋರಿಸಲ್ಪಟ್ಟು ಇರುವದರಿಂದ ;

ಅಥವಾ

ನೀನು—ವ—ಇತರ ಅನೇಕರು (ಮನುಷ್ಯರ ತರಗತಿ ನಮೂದಿಸಬೇಕು), ಸಹಾ ಕೂಡಿಕೊಂಡು ಬಹಿರಂಗವಾದ ರಸ್ತೆಗಾಗಿ ವಗೈರೆ (ಸಂಗತ್ಯಾನುಸಾರ) ಮತಸಂಬಂಧವಾದ ಮೆರವಣಿಗೆಯು ಹೋಗುವ ಸಂಭವದಲ್ಲಿ ಇರುವದಾಗಿ—ವ—ಅಂಥಾ ಮೆರವಣಿಗೆಯಿಂದ ದೊಂಬಿ—ಯಾ—ಕಲಹ ಬಹುಶಃ ಉಂಟಾದೀತಾಗಿ ನಮಗೆ ತೋರಿಸಲ್ಪಟ್ಟಿರುವದರಿಂದ ;

ಅಥವಾ

ಆದ್ದರಿಂದ ವಗೈರೆ (ಸಂಗತ್ಯಾನುಸಾರ) ;

ನಿನ್ನ ಸ್ಥಳದಿಂದ ಅಗಿಯಲ್ಪಟ್ಟ ಎಷ್ಟನ್ನಾದರೂ ಮಣ್ಣು—ಯಾ—ಕಲ್ಲುಗಳನ್ನು ಸದರೀ ರಸ್ತೆಯ ಯಾವದೊಂದು ಭಾಗದಲ್ಲಿ ಇರಿಸಕೊಡದಾಗಿಯೂ—ಯಾ—ಇರಿಸಲ್ಪಡುವದಕ್ಕೆ ಬಿಡಕೊಡದಾಗಿಯೂ ನಾವು ಇದರ ಮೂಲಕವಾಗಿ ನಿನಗೆ ಆಜ್ಞಾಪಿಸುತ್ತೇವೆ ;

1303

ಅಥವಾ

ಸದರೀ ಮಾರ್ಗಕ್ಕಾಗಿ ಮೆರವಣಿಗೆಯು ಹೋಗಕೂಡದಾಗಿ—ವ—ಅಂಥಾ ಮೆರವಣಿಗೆಯಲ್ಲಿ (ಅಥವಾ. ಹೇಳೋಣಾದ ಸಂಗತಿ; ಅಗತ್ಯ ಪಡಬಹುದಾದ ಹಾಗೆ) ನೀನು ಯಾವ ತರದಲ್ಲ್ಯಾದರೂ ಷರೀಕ್ ಆಗಕೂಡದಾಗಿ ನಿನ್ನನ್ನು ಖಂಡಿತವಾಗಿ ಎಚ್ಚರಿಸಿ ಇದರ ಮೂಲಕ ಕಟ್ಟುತ್ತರ ಮಾಡುತ್ತೇವೆ.

ನಮ್ಮ ದಸ್ಕತು—ವ—ಕೋರ್ಟಿನ ಮೊಹರ್‌ನಿಸಿ ಕೊಟ್ಟ ತಾರೀಖು 18 .

(ಮೊಹರ್.) (ದಸ್ಕತು.)

XXII.—MAGISTRATE'S ORDER DECLARING PARTY ENTITLED TO RETAIN POSSESSION OF LAND, &c., IN DISPUTE.

22.—ವಿವಾದದಲ್ಲಿ ಇರುವ ಸ್ಥಳ ವಗೈರೆ ಸ್ವಾಧೀನ ಇಟ್ಟುಕೊಳ್ಳುವದಕ್ಕೆ ಅರ್ಹರಾದ ಕಕ್ಷಿಗಾರ ಫಲಾನೇಯವನೆಂತ ದೃಢಪಡಿಸಿ ಕೊಡೋಣಾಗುವ ಮ್ಯಾಜಿಸ್ಟ್ರೇಟನ ಹುಕುಂ.

(*See Section* 145.)

(145ನೇ ಪ್ರಕರಣವನ್ನು ನೋಡು.)

ನಮ್ಮ ಸ್ಥಳೀಕ ಅಧಿಕಾರ ಸರಹದ್ದಿನೊಳಗೆ ಇರುವವಂದರೆ (ವಿವಾದ ಹೇತುವಾದ ಸ್ವತ್ತನ್ನು ಸಂಕ್ಷೇಪವಾಗಿ ಬರಿ) ಕುರಿತು (ಕಕ್ಷಿಗಾರರ ಹೆಸರು—ವ—ವಾಸಸ್ಥಾನ—ಯಾ—ವಿವಾದವು ಬಟ್ಟು ಗ್ರಾಮಸ್ಥರ ಕೂಟದವರೊಳಗೆ ಆಗಿ ಇದ್ದರೆ ವಾಸಸ್ಥಾನಮಾತ್ರ ವಿವರಿಸತಕ್ಕದ್ದು) ರೊಳಗೆ ನೆಮ್ಮದಿಗೆ ಭಂಗ ಬರತಕ್ಕ ಸಂಭವವುಳ್ಳ ವಿವಾದ ಇತ್ತೆಂತಾ, ಕ್ರಮದಲ್ಲಿ ರಿಕಾರ್ಡು ಮಾಡಲ್ಪಟ್ಟ ಸಬಬುಗಳಿಂದ, ನಮಗೆ ಕಂಡು ಬಂದು, ಸದರೀ (ವಿವಾದ ಸ್ವತ್ತಿನ) ವಾಸ್ತವ್ಯವಾದ ಸ್ವಾಧೀನತೆ ವಿಷಯದಲ್ಲಿ ತಮ್ಮ ತಮ್ಮ ದಾವೆಗಳನ್ನು ಬರದುಕೊಡಬೇಕೆಂತ ಸದರೀ ಎಲ್ಲಾ ಕಕ್ಷಿಗಾರರು ವಿಧಿಸಲ್ಪಟ್ಟು, ಸದರೀ ಕಕ್ಷಿಗಾರರ ಪೈಕಿ ಯಾರೊಬ್ಬರ ಸ್ವಾಧೀನತೆಗೆ ನ್ಯಾಯವಾದ ಬಾಧ್ಯತೆಯ ಯೋಗ್ಯತೆ ನೋಡದೇನೇ, ಅದರಲ್ಲಿ ನಡಿಸೋಣಾದ ತಕ್ಕ ವಿಚಾರಣೇಯಲ್ಲಿ ಸದರೀ (ಹೆಸರು—ಯಾ—ಹೆಸರುಗಳು—ಯಾ—ತಪಶೀಲು) ನ ಬಾಬತು ವಾಸ್ತವ್ಯವಾದ ಸ್ವಾಧೀನತೇ ಹಕ್ಕು ಯಥಾರ್ಥವಾದ್ದಾಗಿ ಮಂದಟ್ಟುಪಟ್ಟು ಇರುವದರಿಂದ,

ಸದರೀ (ವಿವಾದದ ಸ್ವತ್ತು) ಸ್ವಾಧೀನವುಳ್ಳವನಿಗೆ (ಅಥವಾ ಸಾಧೀನವುಳ್ಳವರಿಗೆ) ನ್ಯಾಯಗತೀಲಿ ಅವರ ಸ್ವಾಧೀನತೆ ತಪ್ಪುವತನಕ ಅವನೇ (—ಯಾ—ಅವರೇ) ಅದರ ಸ್ವಾಧೀನಗಾರನಾಗಿರುತ್ತಾನೆಂತಲೂ—ಇರಲಿಕ್ಕೆ ಅರ್ಹರೆಂತಲೂ—ತನ್ಮಧ್ಯ ಅವನ (—ಯಾ—ಅವರ) ಸ್ವಾಧೀನತೆಗೆ ಯಾವದಾದರೂ ಕಲಲು ಮಾಡ ಕೂಡದೆಂತಲೂ ನಾವು ಖಂಡಿತವಾಗಿ ವಿಧಿಸಿ ಅಪ್ಪಣೇ ಕೊಡುತ್ತೇವೆ.

ನಮ್ಮ ದಸ್ಕತು—ವ—ಕೋರ್ಟಿನ ಮೊಹರ್‌ನಿಸಿ ಕೊಟ್ಟ ತಾರೀಖು 18 .

(ಮೊಹರ್.) (ದಸ್ಕತು.)

XXIII.—WARRANT OF ATTACHMENT IN THE CASE OF A DISPUTE AS TO THE POSSESSION OF LAND, &c.

23.—ಭೂಮಿಯ ವಗೈರೇ ಸ್ವಾಧೀನತೆ ಕುರಿತು ವಿವಾದ ಇರುವ ಸಂಗತಿಯಲ್ಲಿ ಜಫ್ತೀ ವಾರಂಟ್.

(*See Section* 146.)

(146ನೇ ಪ್ರಕರಣವನ್ನು ನೋಡು.)

ಪೋಲೀಸ್ ಸ್ಟೇಷನ್ ಜಿಮ್ಮೆಯನ್ನುಳ್ಳ ಪೋಲೀಸ್ ಆಫಿಸರಗೆ [ಅಥವಾ; ಕಲೆಕ್ಟರವರಿಗೆ].

ನಮ್ಮ ಅಧಿಕಾರ ಸರಹದ್ದಿನೊಳಗೆ ಇರುವ ವಂದರೆ (ವಿವಾದ ಹೇತುವಾದ ಸ್ವತ್ತನ್ನು ಸಂಕ್ಷೇಪವಾಗಿ ಬರಿಯತಕ್ಕದ್ದು) ಕುರಿತು (ಸಂಬಂಧಪಟ್ಟ ಕಕ್ಷಿಗಾರರ ಹೆಸರು—ವ—ವಾಸಸ್ಥಳ, ಅಥವಾ ಬಟ್ಟು ಗ್ರಾಮಸ್ಥರ ಕೂಟದವರೊಳಗೆ ವಿವಾದವಾಗಿದ್ದರೆ ವಾಸಸ್ಥಳ ಮಾತ್ರ ವಿವರಿಸತಕ್ಕದ್ದು) ರೊಳಗೆ ನೆಮ್ಮದಿಗೆ ಭಂಗ ಬರತಕ್ಕ ಸಂಭವವುಳ್ಳ ವಿವಾದ ಇತ್ತೆಂತ ನಮಗೆ ತೋರಿಸಲ್ಪಟ್ಟದ್ದು ಅದರಮೇಲೆ,

ಸದರೀ (ವಿವಾದದ ಸ್ವತ್ತಿನ) ನಿಜವಾದ ಸ್ವಾಧೀನತೆ ವಿಷಯದಲ್ಲಿ ತಮ್ಮ ತಮ್ಮ ದಾವೆಗಳನ್ನು ಬರದುಕೊಡಬೇಕೆಂತ ಸದರೀ ಕಕ್ಷಿಗಳು ಕ್ರಮದಲ್ಲಿ ವಿಧಿಸಲ್ಪಟ್ಟು—ವ—ಅದರಮೇಲೆ ಸದರೀ ದಾವೆಗಳ ಬಾಬಿನಲ್ಲಿ ತಕ್ಕ ವಿಚಾರಣೆ ನಡಿಸಿ, ಸದರೀ ಕಕ್ಷಿಗಾರರ ಪೈಕಿ ಒಬ್ಬರೂ ಸದರೀ (ವಿವಾದದ ಸ್ವತ್ತು) ಸ್ವಾಧೀನವುಳ್ಳವರಲ್ಲವೆಂತ ಇತ್ಯರ್ಥಿಸಿರುವದರಿಂದ [ಅಥವಾ ಮೇಲೆ ಹೇಳಿದಮೇರೆಗೆ ಸದರೀ ಕಕ್ಷಿಗಾರರ ಪೈಕಿ ಅದರ ಸ್ವಾಧೀನವುಳ್ಳವನು ಫಲಾನೆಯವನೆಂತ ಸ್ವತಃ ಗೊತ್ತುಮಾಡಲಿಕ್ಕೆ ನನ್ನಿಂದ ಆಗದೆ ಇರುವದರಿಂದ];

ಸದರೀ (ವಿವಾದ ಸ್ವತ್ತು) ಅದನ್ನ ಸ್ವಾಧೀನ ಪಡಕೊಂಡು—ವ—ಇರಿಸಿಕೊಂಡು ಜಫ್ತಿಮಾಡಲಿಕ್ಕೂ—ವ—ತಕ್ಕ ಸಿವಿಲ್ ಕೋರ್ಟಿನವರು ಕಕ್ಷಿಗಾರರ ಹಕ್ಕನ್ನು ಅಥವಾ ಸ್ವಾಧೀನತೆ ಹಕ್ಕನ್ನು ಇತ್ಯರ್ಥಮಾಡಿ ಡಿಕ್ರಿ—ಯಾ—ಹುಕುಂ ಪಡಕೊಳ್ಳುವ ತನಕ ಸದರೀ ಸ್ವತ್ತು ಜಫ್ತಿಯಲ್ಲಿ ಇರಿಸಲಿಕ್ಕೂ—ವ—ವಾರಂಟ್ ಜಾರಿ ಮಾಡಿದ ರೀತಿಯನ್ನು ನಮೂದುಮಾಡಿ ಒಂದು ಇಂಡಾರಸ್‌ಮೆಂಟ್ ನಿಃ ಇದನ್ನು ವಾಪಸ್ ಮಾಡಲಿಕ್ಕೂ ಇದರಿಂದ ಅಧಿಕಾರಕೊಟ್ಟು ನಿಮ್ಮನ್ನು ಅಪೇಕ್ಷಿಸೋಣಾಗುತ್ತದೆ.

ನಮ್ಮ ದಸ್ಕತು—ವ—ಕೋರ್ಟು ಮೊಹರ್‌ನಿಸಿ ಕೊಟ್ಟ ತಾರೀಖು 18 .

(ಮೊಹರ್.) (ದಸ್ಕತು.)

XXIV.—MAGISTRATE'S ORDER PROHIBITING THE DOING OF ANYTHING ON LAND OR WATER.

24.—ನೀರಿನ ಅಥವಾ ಭೂಮಿಯಮೇಲೆ ಯಾವದೊಂದು ಕೃತ್ಯ ಮಾಡೋಣವನ್ನು ನಿಷೇಧಿಸಿ ಮ್ಯಾಜಿಸ್ಟ್ರೇಟನ ಹುಕುಂ.

(*See Section* 147.)

(147ನೇ ಪ್ರಕರಣವನ್ನು ನೋಡು.)

ನಮ್ಮ ಅಧಿಕಾರ ಸರಹದ್ದಿನೊಳಗೆ ಇರುವ (ವಿವಾದದ ಸ್ವತ್ತು ಸಂಕ್ಷೇಪವಾಗಿ ಬರಿಯತಕ್ಕದ್ದು) ಅನುಭೋಗದ ಬಾಧ್ಯತೆಯನ್ನು ಕುರಿತು ವಿವಾದ ಹುಟ್ಟಿ, ಸದರೀ ಭೂಮಿ (—ಯಾ—ನೀರು) ಬಾಬಿನಲ್ಲಿ ತಾನು—ಯಾ—ತಾವು ಮಾತ್ರ ಸ್ವಾಧೀನಗಾರರೆಂತ (ಜನ ಅಥವಾ ಜನರನ್ನ ವಿವರಿಸಿ ಬರಿ) ರಿಂದ ದಾವೇ ಮಾಡೋಣಾಗಿ—ವ—ಸದರೀ ಬಾಬಿನಲ್ಲಿ ಮಾಡೋಣಾದ ತಕ್ಕ ವಿಚಾರಣೆಯಿಂದ ಸದರೀ ಭೂಮಿ (ಅಥವಾ ನೀರು) ಜನಗಳು ಸಮಷ್ಟಿಯಾಗಿ ಅನುಭವಿಸತಕ್ಕದ್ದಾಗಿ (—ಯಾ—ಒಬ್ಬನು—ಯಾ—ಒಂದು ಜಾತಿ ಜನರು ಅನುಭವಿಸತಕ್ಕದ್ದಾಗಿ ಇದ್ದರೆ, ಅವನನ್ನು—ಯಾ—ಅವರನ್ನು ವಿವರಿಸಿ ಬರಿ) ಇರುತ್ತದೆ ಎಂತಲೂ,—ವ—(ಸದರೀ ಅನುಭೋಗವು ಸಂವತ್ಸರದೊಳಗೆಲ್ಲ ಅನುಭವಿಸ ಕೂಡುವಂಥಾದ್ದಾಗಿದ್ದರೆ) ಸದರೀ ವಿಚಾರಣೆ ಆರಂಭವಾದ ಮೂರು ತಿಂಗಳೊಳಗೆ (ಅಥವಾ ಸದರೀ ಅನುಭೋಗವು ಫಲಾನಾ ಶ್ರಯದಲ್ಲೇ ಮಾತ್ರ ಅನುಭವಿಸುವದಾಗಿದ್ದರೆ, "ಸದರೀ ಶ್ರಯ ಪೈಕಿ ಅನುಭವಿಸತಕ್ಕದ್ದಾಗಿರುವದಾದ ಆಖೈರು ಇಂತಾ ಶ್ರಯದಲ್ಲಿ,") ಅನುಭವಿಸಲ್ಪಟ್ಟಿರುತ್ತದೆಂತಲೂ, ನಮಗೆ ಕಂಡು ಬರುವದ್ದರಿಂದ;

ಸದರೀ (ಸ್ವಾಧೀನತೆ ದಾವೇದಾರ—ಯಾ—ದಾವೇದಾರರು) ಅಥವಾ ಅವರ ಹಕ್ಕಿನಮೂಲವಾಗಿ ಬೇರೆ ಯಾರೊಬ್ಬರಾಗಲೀ ತಾನು (ಅಥವಾ ತಾವು) ಅದರ ಪ್ರತ್ಯೇಕ ಸ್ವಾಧೀನತೆಗೆ ಹಕ್ಕುಳ್ಳವರೆಂಬದಾಗಿ ತಕ್ಕ ಸಿವಿಲ್‌ಕೋರ್ಟಿನವರ ಡಿಕ್ರಿ—ಯಾ—ಹುಕುಂ ಆತನು (—ಯಾ—ಅವರು) ಪಡಕೊಳ್ಳುವತನಕ, ಮೇಲೆ ಹೇಳಿದ ಪ್ರಕಾರ ಅನುಭೋಗದ ಹಕ್ಕಲ್ಲದೆ ಸದರೀ ಭೂಮಿ (ಅಥವಾ ನೀರು) ಸ್ವಾಧೀನಪಡಕೊಳ್ಳ (ಅಥವಾ ಇಟ್ಟುಕೊಳ್ಳ) ಕೂಡದೆಂತ ನಾವು ಹುಕುಂ ಮಾಡುತ್ತೇವೆ.

ನಮ್ಮ ದಸ್ಕತು—ವ—ಕೋರ್ಟು ಮೊಹರ್‌ನಿಸಿ ಕೊಟ್ಟ ತಾರೀಖು ನೇ 18 .

(ಮೊಹರ್.) (ದಸ್ಕತು.)

XXV.—BOND AND BAIL-BOND ON A PRELIMINARY INQUIRY BEFORE A POLICE-OFFICER.

25.—ಒಬ್ಬ ಪೊಲೀಸ್ ಆಫಿಸರನಮುಂದೆ ಪೊಲೀಸ್ ವಿಚಾರಣೆಯಲ್ಲಿ ಬರಿಸಿಕೊಳ್ಳುವ ಪತ್ರ—ವ—ಜಾಮೀನ ಪತ್ರ.

(*See Section* 169.)

(169ನೇ ಪ್ರಕರಣವನ್ನು ನೋಡು.)

ದ (ಹೆಸರು) ನಾನು , ತಕ್ಸೀರು ಆಪಾದನೆಪಟ್ಟು—ನೆ—ವಿಚಾರಣೇಆದ ತರುವಾಯ ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗಲಿಕ್ಕೆ ಅಜ್ಞಾಪಿಸಲ್ಪಟ್ಟಿರುವದರಿಂದ,

ಮತ್ತು ವಿಚಾರಣೇಆದ ತರುವಾಯು ಸದರೀ ಫಿರ್ಯಾದಿಗೆ ಜವಾಬ್ ಕೊಡುವದಕ್ಕೂ ಅವಶ್ಯ ಇದ್ದಾಗ ಹಾಜರಾಗುವದಾಗಿ ಬದ್ಧಪಡಿಸಿ ನಾನು ಸ್ವತಃ ಮುಚ್ಚಳಿಕೆ ಬರೆಕೊಡಬೇಕಾಗಿ ಕೇಳಲ್ಪಟ್ಟಿರುವದರಿಂದ, ಬರುವ ತಿಂಗಳ ತಾರೀಖಿನ ದಿವಸ (ಅಥವಾ ಹಾಜರಾಗುವದಕ್ಕೆ ಇನ್ನು ಮುಂದೆ ಆಜ್ಞಾಪಿಸಲ್ಪಡಬಹುದಾದ ದಿವಸದಲ್ಲಿ) ಕೋರ್ಟಿನಲ್ಲಿ ಹಾಜರಾಗಲಿಕ್ಕೆ ನಾನು ಇದರ ಮೂಲ ಸ್ವತಃ ಬದ್ಧನಾಗುತ್ತೇನೆ, ಮತ್ತು, ಇದಕ್ಕೆ ತಪ್ಪಿದ ಸಂಗತಿಯಲ್ಲಿ, ಮೊಬಲಗು ರೂಪಾಯಿ ಶ್ರೀ ಮೈಸೂರು ಮಹಾರಾಜಾ ಸಾಹೇಬ್ ಬಹದ್ದೂರ್‌ರಯವರಿಗೆ ದಂಡವಾಗಿ ತೆರಲಿಕ್ಕೆ ನಾನು ಸ್ವತಃ ಬದ್ಧಪಡಿಸಿ ಕೊಳ್ಳುತ್ತೇನೆ.

ತಾರೀಖು 18 .

(ದಸ್ಕತು.)

ಆತನು ಬರುವ ತಿಂಗಳ ತಾರೀಖಿನಲ್ಲಿ (ಅಥವಾ ಹಾಜರಾಗುವದಕ್ಕೆ ಇನ್ನು ಮುಂದೆ ಆಜ್ಞಾಪಿಸಲ್ಪಡಬಹುದಾದಂಥಾ ದಿವಸದಲ್ಲಿ) ಕೋರ್ಟಿನಲ್ಲಿ ಅವನಮೇಲಣ ತಕ್ಕೀರುಸಂಬಂಧಗೆ ಜವಾಬು ಕೊಡುವದಕ್ಕೂ ಹಾಜರಾಗುವಂತೆ ಸದರೀ ಬಗ್ಗೆ ಜಾಮೀನುದಾರ (ಅಥವಾ ಜಾಮೀನುದಾರರು) ರಾಗಿರುವದಾಗಿ ನಾನು ಇದರ ಮೂಲಕ ಸ್ವತಃ (ಅಥವಾ ನಾವು ಒಟ್ಟಿನಲ್ಲಿ—ವ—ಪ್ರತ್ಯೇಕ ಪ್ರತ್ಯೇಕ ನಮ್ಮಿಷ್ಟಕ್ಕೆ—ವ—ನಮ್ಮ ಪೈಕಿ ಪ್ರತಿ ಒಬ್ಬ ದೃಢಪಡಿಸುತ್ತೇವೆ) ದೃಢಪಡಿಸುತ್ತೇನೆ, ವ—ಅದಕ್ಕೆ ತಪ್ಪಿದರೆ, ಮೊಬಲಗು ರೂಪಾಯಿ ಶ್ರೀ ಮೈಸೂರು ಮಹಾರಾಜಾಸಾಹೇಬ್ ಬಹದ್ದೂರ್ ಯವರಿಗೆ ದಂಡ ತೆರಲಿಕ್ಕೆ ನಾನು ಸ್ವತಃ ಇದರ ಮೂಲವಾಗಿ (ಅಥವಾ ನಾವು ಸ್ವತಃ ಇದರ ಮೂಲವಾಗಿ ಬದ್ಧಪಡುತ್ತೇವೆ) ಬದ್ಧಪಡಿಸಿಕೊಳ್ಳುತ್ತೇನೆ.

ತಾರೀಖು 18 .

(ದಸ್ಕತು.)

XXVI.—Bond to prosecute or give Evidence.

26.—ಫಿರ್ಯಾದು ನಡಿಸಲಿಕ್ಕೂ ಅಥವಾ ಸಾಕ್ಷ್ಯ ಕೊಡಲಿಕ್ಕೂ ಬದ್ಧಪಡಿಸುವ ಪತ್ರ.

(*See Section* 170.)

(170ನೇ ಪ್ರಕರಣವನ್ನು ನೋಡು.)

A—B ಎಂಬವರ ಮೇಲೆ ತರೋಣಾದ ತಕ್ಕೀರುನಾಮೆ ಬಾಬಿನಲ್ಲಿ ಬರುವ ತಾರೀಖು ಘಂಟೆಗೆ ಕೋರ್ಟಿನಲ್ಲಿ ಲ್ಲಿ ಹಾಜರಾಗಿ, ಹಾಗೆಯೇ ಫಿರ್ಯಾದು ನಡಿಸಲಿಕ್ಕೆ (ಅಥವಾ ಫಿರ್ಯಾದು ನಡಿಸಿ ಸಾಕ್ಷ್ಯ ಕೊಡಲಿಕ್ಕೆ—ಯಾ—ಸಾಕ್ಷ್ಯ ಕೊಡಲಿಕ್ಕೆ.) (ಸ್ಥಳ) ದ (ಹೆಸರುಳ್ಳ) ನಾನು ಸ್ವತಃ ಇದರ ಮೂಲ ಬದ್ಧಪಡುತ್ತೇನೆ, ಇದಕ್ಕೆ ತಪ್ಪಿದರೆ, ಮೊಬಲಗು ರೂಪಾಯಿ ಶ್ರೀ ಮೈಸೂರು ಮಹಾರಾಜಾಸಾಹೇಬ್ ಬಹದ್ದೂರ್‌ಯವರಿಗೆ ದಂಡ ತೆರಲಿಕ್ಕೆ ನಾನು ಸ್ವತಃ ಬದ್ಧಪಡಿಸಿಕೊಳ್ಳುತ್ತೇನೆ.

ತಾರೀಖು 18 .

(ದಸ್ಕತು.)

XXVII.—Notice of Commitment by Magistrate to Government Pleader.

27.—ಕಮ್ಮಿಟಮೆಂಟನ್ನು ಕುರಿತು ಗವರ್ನಮೆಂಟ ಪ್ಲೀಡರಿಗೆ ಮ್ಯಾಜಿಸ್ಟ್ರೇಟನಿಂದ ಕೊಡಲ್ಪಡಬೇಕಾದ ನೋಟೀಸ್.

(*See Section* 218.)

(218ನೇ ಪ್ರಕರಣವನ್ನು ನೋಡು.)

ಬರುವ ಸೆಷ್ಷನಲ್ಲಿ ದರಿಯಾಫ್ತೀ ಬಗ್ಗೆ ನನ್ನ ಕಮ್ಮಿಟ್ ಮಾಡಿರುವದಾಗಿ ಮ್ಯಾಜಿಸ್ಟ್ರೇಟನು ಇದರ ಮೂಲವಾಗಿ ನೋಟೀಸ್ ಕೊಟ್ಟು ತಿಳಿಸುತ್ತಾನೆ; ಮತ್ತು ಸದರೀ ಮೊಕದ್ದಮೆಯಲ್ಲಿ ಫಿರ್ಯಾದು ನಡಿಸಲಿಕ್ಕೆ ಗವರ್ನಮೆಂಟ್ ಪ್ಲೀಡರನನ್ನು ಸದರೀ ಮ್ಯಾಜಿಸ್ಟ್ರೇಟನು ಇದರ ಮೂಲವಾಗಿ ತಿಳಿಸುತ್ತಾನೆ.

ಆಪಾದನೆಪಟ್ಟವನ ಮೇಲಿನ ಆಪಾದನೆಯು ಇಂಥಾದ್ದಾಗಿರುತ್ತದೆ ಯೆಂಬದು, ವಗೈರೆ, (ತಕ್ಕೀರುನಾಮೆಯಲ್ಲಿ ಇದ್ದಹಾಗೆಯೇ ತಕ್ಕೀರು ಬರಿಯುತಕ್ಕದ್ದು.)

ತಾರೀಖು 18 .

(ದಸ್ಕತು.)

XXVIII.—Charges.

28.—ತಕ್ಕೀರುನಾಮೆಗಳು.

(*See Sections* 221, 222, 223.)

(221, 222, 223ನೇ ಪ್ರಕರಣಗಳನ್ನು ನೋಡು.)

(1).—Charge with one Head.

(1.) ಒಂದು ಬಾಬಿನ ತಕ್ಕೀರುನಾಮೆ.

(a) (ಫಲಾನಾ ಮ್ಯಾಜಿಸ್ಟ್ರೇಟಾದ ಫಲಾನಾ ಹೆಸರುಳ್ಳ) ನಾನು ನೀನಾದ (ಆಪಾದನೆಪಟ್ಟವನ ಹೆಸರು) ಮೇಲೆ ಈ ಮೂಲವಾಗಿ ತಕ್ಕೀರು ಏರ್ಪಡಿಸಿ ತಿಳಿಸುವದೇನಂದರೆ :—

ಪೆನಲ್‌ಕೋಡ್ 121ನೇ ಪ್ರಕರಣದ ವಿಷಯು.

(b) ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ ಶ್ರೀ ಮಹಾರಾಣಿಯವರಾದ ಇಂಡಿಯಾ ಚಕ್ರವರ್ತಿನಿಯವರ ಮೇಲೆ ಯುದ್ಧ ಮಾಡಿದಿ ಅದರಿಂದ ನೀನು ಇಂಡ್ಯನ್ ಪೆನಲ್‌ಕೋಡಿನ 121ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು ಮಾಡಿ ಇರುತ್ತೀ, ಆ ತಕ್ಕೀರು ಸೆಷನ್ ಕೋರ್ಟಿನವರಿಂದ ತನಖಿ ಆಗತಕ್ಕದ್ದಾಗಿರುತ್ತದೆ.

(c) ಸದರೀ ತಕ್ಕೀರುನಾಮೆಯ ಸಂಬಂಧ ನೀನು ಸದರೀ ಕೋರ್ಟಿನವರಿಂದ ದರಿಯಾಫ್ತಿಯಾಗಬೇಕು ಎಂತ ನಾನು ಇದರಿಂದ ವಿಧಿಸುತ್ತೇನೆ.

(ಇಲ್ಲಿ ಮ್ಯಾಜಿಸ್ಟ್ರೇಟನ ದಸ್ಕತೂ ಮೊಹರೂ ಇರಬೇಕು.)

[(b) ಗುರ್ತು ನಮೂನೆಗೆ ಬದಲಾಗಿ ಬರಿಯಬೇಕಾದ್ದೇನಂದರೆ:—]

124ನೇ ಪ್ರಕರಣದ ವಿಷಯು.

(2) ನೀನು (ಫಲಾನಾ ಸ್ಥಳದಲ್ಲಿ ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ ಇಂಡ್ಯಾ ಗವರ್ನರ್ ಜನರಲ್ಲವರ ಕೌನ್ಸಿಲ್ ಮೆಂಬರಾದ ಬಹುಮಾನಪಟ್ಟ A, B ಎಂಬುವರು, ತಮ್ಮ ಮೆಂಬರು ಹುದ್ದೇ ಬಾಬತು ನ್ಯಾಯಾಧಿಕಾರವನ್ನು ನಡಿಸದೆ ಇರುವಂತೆ ಮಾಡಬೇಕೆಂಬ ಇರಾದೆಯಿಂದ, ಅವರ ಮೇಲೆ ಜುಲುಂ ಜಾಸ್ತೀ ನಡಿಸಿದಿ, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 124ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು ಮಾಡಿ ಇರುತ್ತಿ, ಆ ತಕ್ಕೀರು ಸೆಷನ್‌ಕೋರ್ಟಿನವರಿಂದ ತನಿಖೀಯಾಗತಕ್ಕದ್ದಾಗಿರುತ್ತದೆ.

161ನೇ ಪ್ರಕರಣದ ವಿಷಯು.

(3) ನೀನು (ಫಲಾನಾ) ಡಿಪಾರ್ಟಮೆಂಟಿನಲ್ಲಿ ಸರ್ಕಾರ್ ನವುಕರನಾಗಿ ಇದ್ದುಕೊಂಡು, ಉದ್ಯೋಗ ಪ್ರಯುಕ್ತವಾಗಿ ಮಾಡ ಬೇಕಾದ ಕೆಲಸವನ್ನು ಮಾಡದೆ ಇರುವದಕ್ಕಾಗಿ (ಫಲಾನಾ) ಮನುಷ್ಯನ ತರಫಿನಲ್ಲಿ (ಫಲಾನಾ) ಮನುಷ್ಯನ ಕಡೆಯಿಂದ ನ್ಯಾಯವಾದ ಮೆಹನತಾನವಲ್ಲದೆ, ಬೇರೇ ಇನಾಮನ್ನು ಖುದ್ದಾಗಿ ಪಡಕೊಂಡಿದ್ದಿ, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 161ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಕೀರುಮಾಡಿ ಇರುತ್ತೀ, ಆ ತಕ್ಕೀರ ಸೆಷನ್ ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿ ಇರುತ್ತದೆ.

(4) ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಸುಮಾರು ಆ ಕಾಲದಲ್ಲಿ (ಫಲಾನೆ ಕಾರ್ಯವನ್ನು) ಮಾಡಿದಿ [—ಯಾ—ಸಂಗತ್ಯಾನುಸಾರವಾಗಿ ಫಲಾನೆ ಕಾರ್ಯವನ್ನು ಮಾಡದೆ ತಪ್ಪಿದಿ] ಅಂಥಾ ನಡತೆ (ಫಲಾನೆ) ಆಕ್ಟಿನ (ಫಲಾನೆ) ಪ್ರಕರಣದ ನಿಬಂಧನೆಗಳಿಗೆ ವಿರೋಧವಾಗಿದ್ದದ್ದರಿಂದ, (ಫಲಾನೆ) ಯವನಿಗೆ ಬಾಧಕವಾಗಿಥೆ ಯೆಂದು ನಿನಗೆ ತಿಳಿದಿತ್ತು, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 166ನೇ ಪ್ರಕರಣದ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರುಮಾಡಿ ಇರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಿಖಿ ಯಾಗತಕ್ಕದ್ದಾಗಿ ಇರುತ್ತದೆ.

166ನೇ ಪ್ರಕರಣದ ವಿಷಯ.

(5) ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಸುಮಾರು ಆ ಕಾಲದಲ್ಲಿ (ಫಲಾನಾ) ಯವರ ಮುಂದೆ (ಫಲಾನಾ) ದರ್ಯಾಫ್ತಿಯಾಗುತ್ತಿರುವಾಗ "ಹೀಗೆ ಎಂತ" ಸಾಕ್ಷ್ಯದಲ್ಲಿ ಹೇಳಿದಿ, ಸದರೀ ಹೇಳಿಕೆ ಸುಳ್ಳೆಂತ ನಿನಿಗೆ ತಿಳಿದಿತ್ತು—ಯಾ—ನಂಬಿಕೆಯಿತ್ತು, ಅಥವಾ ನಿಜವೆಂತ ನೀನು ನಂಬಲಿಲ್ಲಾ, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 193ನೇ ಪ್ರಕರಣದ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು ಮಾಡಿ ಇರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಖಿ ಯಾಗತಕ್ಕದ್ದಾಗಿ ಇರುತ್ತದೆ.

193ನೇ ಪ್ರಕರಣದ ವಿಷಯ.

(6) ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಸುಮಾರು ಆ ಕಾಲದಲ್ಲಿ (ಫಲಾನೆಯವನನ್ನು) ಮರಣಪಡಿಸಿ, ಖೂನಿ ಎನಿಸಿಕೊಳ್ಳದ ಕೊಲೆಪಾತಕ ಮಾಡಿದಿ, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 304ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರುಮಾಡಿ ಇರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿ ಇರುತ್ತದೆ.

304ನೇ ಪ್ರಕರಣದ ವಿಷಯ.

(7) ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಸುಮಾರು ಆ ಕಾಲದಲ್ಲಿ ಅಮಲುಹತ್ತಿ ಇದ್ದ A, B ಎಂಬವನು ಮಾಡಿಕೊಂಡ ಆತ್ಮಹತ್ಯಕ್ಕೆ ಕುಮ್ಮಕ್ಕು ಮಾಡಿದಿ, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 306ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರುಮಾಡಿ ಇರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿ ಇರುತ್ತದೆ.

306ನೇ ಪ್ರಕರಣದ ವಿಷಯ.

(8) ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಸುಮಾರು ಆ ಕಾಲದಲ್ಲಿ ಮನಃಪೂರ್ತಿಯಾಗಿ (ಫಲಾನಾಯವನನ್ನು) ಸಂಕಟಕರವಾದ ಹಿಂಸೆ ಪಡಿಸಿದಿ, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 325ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರುಮಾಡಿ ಇರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿ ಇರುತ್ತದೆ.

325ನೇ ಪ್ರಕರಣದ ವಿಷಯ.

(9) ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಸುಮಾರು ಆ ಕಾಲದಲ್ಲಿ [ಹೆಸರು ಬರಿಯತಕ್ಕದ್ದು] ಚೋರಿ ಮಾಡಿದಿ, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 392ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು ಮಾಡಿ ಇರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿ ಇರುತ್ತದೆ.

392ನೇ ಪ್ರಕರಣದ ವಿಷಯ.

(10) ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಸುಮಾರು ಆ ಕಾಲದಲ್ಲಿ ಡಕಾಯಿತಿ ಮಾಡಿದಿ, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 395ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರುಮಾಡಿ ಇರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿ ಇರುತ್ತದೆ.

395ನೇ ಪ್ರಕರಣದ ವಿಷಯ.

[ಮ್ಯಾಜಿಸ್ಟ್ರೇಟನಿಂದ ದರ್ಯಾಫ್ತಿಯಾದ ಮೊಕದ್ದಮೆಗಳಲ್ಲಿ "ಸೆಷನ್ ಕೋರ್ಟಿನಿಂದ ತನಿಖಿಯಾಗತಕ್ಕದ್ದಾಗಿ ಇರುತ್ತದೆ" ಎಂಬದಕ್ಕೆ ಬದಲಾಗಿ "ನನ್ನಿಂದ ತನಖಿಯಾಗತಕ್ಕದ್ದಾಗಿಥೆ" ಎಂಬದನ್ನು ಬರಿ ಮತ್ತು (c) ಯಲ್ಲಿ "ಸದರೀ ಕೋರ್ಟಿನಿಂದ" ಎಂಬದನ್ನು ಲೋಪಮಾಡು.]

(II.)—CHARGES WITH TWO OR MORE HEADS.

(2).—ಎರಡು—ಯಾ—ಅನೇಕ ಬಾಬುಗಳಮೇಲೆ ಚಾರ್ಜಗಳು.

(a) [ಫಲಾನೆ ಮ್ಯಾಜಿಸ್ಟ್ರೇಟನ ಅಥವಾ ಫಲಾನೆ ಹೆಸರುಳ್ಳ] ನಾನು [ಆಪಾದನೆಯಾದವನ ಹೆಸರುಳ್ಳ] ನಿನ್ನ ಮೇಲೆ ಈ ಮೂಲವಾಗಿ ತಕ್ಸೀರು ಏರ್ಪಡಿಸಿ ತಿಳಿಸುವದೇನಂದರೆ :—

241ನೇ ಪ್ರಕರಣ ವಿಷಯ.

(b) ಒಂದನೇದು.—ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ ಖೋಟಾ ನಾಣ್ಯವೆಂತ ತಿಳಿದಿರುವಂಥಾ ನಾಣ್ಯವನ್ನು A, B ಎಂಬ ಮತ್ತೊಬ್ಬನಿಗೆ ಒಳ್ಳೇ ನಾಣ್ಯವೆಂತ ಕೊಟ್ಟದ್ದೀ ಅದರಿಂದ ಇಂಡ್ಯನ್ ಪಿನಲ್‌ಕೋಡಿನ 241ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರುಮಾಡಿ ಇರುತ್ತಿ, ಆ ತಕ್ಸೀರು ಸೆಷನ್‌ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿ ಇರುತ್ತದೆ.

ಎರಡನೇದು.—ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ ಖೋಟಾ ನಾಣ್ಯವೆಂತ ತಿಳಿದಿರುವಂಥಾ ನಾಣ್ಯವನ್ನು ಒಳ್ಳೇನಾಣ್ಯವೆಂತ A, B ಎಂಬ ಮತ್ತೊಬ್ಬನು ನಂಬಿ ಈಸುಕೊಳ್ಳುವಂತೆ ಮಾಡುವದಕ್ಕೆ ಯತ್ನಿಸಿದಿ, ಅದರಿಂದ ಇಂಡಿಯನ್ ಪಿನಲ್‌ಕೋಡಿನ 241ನೇ ಪ್ರಕರಣಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು ಮಾಡಿ ಇರುತ್ತಿ, ಆ ತಕ್ಸೀರು ಸೆಷನ್‌ಕೋರ್ಟಿನವರಿಂದ ತನಖಿಯಾಗತಕ್ಕದ್ದಾಗಿ ಇರುತ್ತದೆ.

(c) ಮತ್ತು ಸದರೀ ಚಾರ್ಜಿನ ಸಂಬಂಧ ನಿನಗೆ ಸದರೀ ಕೋರ್ಟಿನವರಿಂದ ಚೌಕಷಿ ಯಾಗಬೇಕು ಎಂತ ನಾನು ಇದರಿಂದ ವಿಧಿಸುತ್ತೇನೆ.

[ಮ್ಯಾಜಿಸ್ಟ್ರೇಟನ ದಸ್ಕತು ಮೊಹರ್ ಇಲ್ಲಿ ಇರಬೇಕು.]

[(b) ಗುರ್ತಿನ ನಮೂನೆಗೆ ಬದಲಾಗಿ ಬರಿಯ ಬೇಕಾದದ್ದೇನಂದರೆ :—]

302, 304ನೇ ಪ್ರಕರಣಗಳ ವಿಷಯ.

(2) ಒಂದನೇದು.—ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ (ಫಲಾನಾವನನ್ನು) ಕೊಂದು ಖೂನಿ ಮಾಡಿದಿ, ಅದರಿಂದ ಇಂಡಿಯನ್ ಪಿನಲ್‌ಕೋಡಿನ 302ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು ಮಾಡಿಯಿರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿ ಇರುತ್ತದೆ.

ಎರಡನೇದು.—ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ (ಫಲಾನಾವನನ್ನು) ಕೊಂದು ಖೂನೀ ಅಲ್ಲದ ಕೊಲೇಪಾತಕ ಮಾಡಿಯಿರುತ್ತಿ, ಆದಕಾರಣ ಇಂಡಿಯನ್ ಪಿನಲ್‌ಕೋಡಿನ 304ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು ಮಾಡಿ ಇರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಖಿಯಾಗತಕ್ಕದ್ದಾಗಿ ಇರುತ್ತದೆ.

379, 382ನೇ ಪ್ರಕರಣಗಳ ವಿಷಯ.

(3) ಒಂದನೇದು.—ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ ಕಳವುಮಾಡಿದಿ, ಅದರಿಂದ ಇಂಡ್ಯನ್ ಪಿನಲ್‌ಕೋಡಿನ 379ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು ಮಾಡಿ ಯಿರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿ ಯಿರುತ್ತದೆ.

ಎರಡನೇದು.—ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ ಕಳವುಮಾಡಿದಿ ಹಾಗೆ ಕಳವುಮಾಡುವ ಉದ್ದಿಶ್ಯ ಒಬ್ಬನನ್ನು ಕೊಲ್ಲಲಿಕ್ಕೆ ಸಹ ಮೊದಲೇಸನ್ನಾಹ ಮಾಡಿಯಿದ್ದಿ, ಅದರಿಂದ ಇಂಡ್ಯನ್ ಪಿನಲ್ ಕೋಡಿನ 382ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಸೀರು ಮಾಡಿಯಿರುತ್ತಿ, ಆ ತಕ್ಸೀರು ಸೆಷನ್ ಕೋರ್ಟಿನವರಿಂದ ತನಿಖಿ ಯಾಗತಕ್ಕದ್ದಾಗಿ ಯಿರುತ್ತದೆ.

ಮೂರನೇದು.—ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ ಕಳವುಮಾಡಿದಿ, ಅನಂತರ ನೀನು ತಪ್ಪಿಸಿಕೊಂಡು ಹೋಗುವ ಉದ್ದಿಶ್ಯ ಮೊದಲ್ಲೇ ಒಬ್ಬನನ್ನು ನಿರ್ಬಂಧ

1308

ಪಡಿಸಲಿಕ್ಕೆ ಸನ್ನಾಹಮಾಡಿದ್ದಿ, ಅದರಿಂದ ಇಂಡ್ಯರ್ನ ಪಿನಲ್ ಕೋಡಿನ 382ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಕೀರು ಮಾಡಿಯಿರುತ್ತಿ, ಆ ತಕ್ಕೀರು ಸೆಷನ್ಸ ಕೋರ್ಟಿನವರಿಂದ ತನಿಖಿ ಯಾಗತಕ್ಕದ್ದಾಗಿ ಇರುತ್ತದೆ.

ನಾಲ್ಕನೇದು.—ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ ಕಳವುಮಾಡಿದಿ, ಆ ಕಳವಿನಿಂದ ಪಡಕೊಂಡ ಸೊತ್ತನ್ನು ಇಟ್ಟುಕೊಳ್ಳುವ ನಿಮಿತ್ತ್ಯ ಮೊದಲೇ ಒಬ್ಬನಿಗೆ ಹಿಂಸಾ ಭಯವನ್ನು ಉಂಟುಮಾಡಿದ್ದಿ, ಅದರಿಂದ ಇಂಡಿಯರ್ನ ಪಿನಲ್ ಕೋಡಿನ 382ನೇ ಪ್ರಕರಣ ಪ್ರಕಾರ ಶಿಕ್ಷೆಯಾಗತಕ್ಕ ತಕ್ಕೀರುಮಾಡಿ ಯಿರುತ್ತಿ, ಆ ತಕ್ಕೀರು ಸೆಷನ್ಸ ಕೋರ್ಟಿನವರಿಂದ ತನಿಖಿ ಯಾಗತಕ್ಕದ್ದಾಗಿ ಇರುತ್ತದೆ.

193ನೇ ಪ್ರಕರಣದ ಮೇಲೆ ಆಪಾದಿತರು ಒಂದು ಚಾರ್ಜ್.

(4) ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ (ಫಲಾನೆಯವರ) ಮುಂದೆ (ಫಲಾನಾ) ಬಾಬಿನಲ್ಲಿ ವಿಚಾರಣೆ ಯಾಗುತ್ತಿರುವಾಗ " " ಯೆಂತ ಸಾಕ್ಷ್ಯದಲ್ಲಿ ಹೇಳಿದಿ, ಮತ್ತು ನೀನು (ಫಲಾನಾ) ಸ್ಥಳದಲ್ಲಿ (ಫಲಾನಾ) ತಿಂಗಳು (ಫಲಾನಾ) ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ (ಫಲಾನೆಯವರ)ಮುಂದೆ ದರಿಯಾಫ್ತಿ ಯಾಗುತ್ತಿರುವಾಗ " " ಯೆಂತ ಸಾಕ್ಷ್ಯದಲ್ಲಿ ಹೇಳಿದಿ, ಈ ವಾಂಗ್ಮೂಲಗಳ ಪೈಕಿ ಯಾವದಾದರೂ ಒಂದನ್ನು ಸುಳ್ಳೆಂತ ತಿಳಿದುಯಿರುತ್ತಿ—ಯಾ—ಸುಳ್ಳೆಂತ ನಂಬಿಇರುತ್ತಿ—ಯಾ—ನಿಜವೆಂತ ನಂಬಿರಲಿಲ್ಲಾ—ಮತ್ತು—ಇದರಿಂದ ಇಂಡಿಯರ್ನ ಪಿನಲ್ ಕೋಡಿನ 193ನೇ ಪ್ರಕರಣಕ್ಕನುಗುಣವಾಗಿ ಶಿಕ್ಷೆಯಾಗತಕ್ಕ ತಕ್ಕೀರು ಮಾಡಿರುತ್ತಿ, ಆ ತಕ್ಕೀರು ಸೆಷನ್ಸ ಕೋರ್ಟಿನವರಿಂದ ತನಿಖಿಯಾಗ ತಕ್ಕದ್ದಾಗಿಇರುತ್ತದೆ.

[ಮ್ಯಾಜಿಸ್ಟ್ರೇಟುಗಳ ಮುಂದಿನದರ್ಯಾಫ್ತಿಗಳಲ್ಲಿ, "ಸೆಷನ್ಸ ಕೋರ್ಟಿನವರಿಂದ ತನಿಖಿಯಾಗತಕ್ಕದ್ದಾಗಿದೆ" ಯೆಂಬದಕ್ಕೆ ಬದಲಾಗಿ "ನನ್ನಿಂದ ತನಿಖಿಯಾಗತಕ್ಕದ್ದಾಗಿದೆ" ಯೆಂಬದನ್ನು ಬರೆಯತಕ್ಕದ್ದು, ಮತ್ತು (c) ಯಲ್ಲಿ "ಸದರೀ ಕೋರ್ಟಿನಿಂದ" ಯೆಂಬದನ್ನು ಬಿಟ್ಟುಬಿಡತಕ್ಕದ್ದು.]

(III.)—Charge for Theft after a previous Conviction.

(3).—ಪ್ರಾಕ್ ಒಂದು ಸಾಬೀತಿನ ತರುವಾಯ ಕಳವಿನ ಬಗ್ಗೆ ತಕ್ಕೀರುನಾಮೆ.

(ಫಲಾನಾ ಮ್ಯಾಜಿಸ್ಟ್ರೇಟಾದ ಫಲಾನಾ ಹೆಸರುಳ್ಳ) ನಾನು ನೀನಾದ (ಆಪಾದನೆ ಪಟ್ಟವನ ಹೆಸರು) ಮೇಲೆ ಈ ಮೂಲವಾಗಿ ತಕ್ಕೀರು ಏರ್ಪಡಿಸಿ ತಿಳಿಸುವದೇನಂದರೆ :—

ನೀನು ಸ್ಥಳದಲ್ಲಿ ತಿಂಗಳು ತಾರೀಖಿನಲ್ಲಿ ಅಥವಾ ಷುಮಾರು ಆ ಕಾಲದಲ್ಲಿ ಕಳವು ಮಾಡಿದ್ದಿ, ಅದರಿಂದ ಇಂಡಿಯರ್ನ ಪಿನಲ್‌ಕೋಡಿನ 379ನೇ ಪ್ರಕರಣಪ್ರಕಾರ ಶಿಕ್ಷೆಯಾಗತಕ್ಕ ತಕ್ಕೀರು ಮಾಡಿಇರುತ್ತಿ, ಆ ತಕ್ಕೀರು ಸೆಷನ್ಸ ಕೋರ್ಟಿನವರಿಂದ [ಅಥವಾ ಸಂಗತ್ಯಾನುಸಾರವಾಗಿ ಮ್ಯಾಜಿಸ್ಟ್ರೇಟನಿಂದ] ತನಖಿಆಗತಕ್ಕದ್ದಾಗಿರುತ್ತದೆ.

ಮತ್ತು ಸದರೀ (ಆಪಾದನೆ ಪಟ್ಟವನ ಹೆಸರು) ನಾದ ನಿನ್ನ ಮೇಲೆ ಹೆಚ್ಚಿಗೆಯಾಗಿ ತಕ್ಕೀರು ಏರ್ಪಡಿಸಿ ತಿಳಿಸುವದೇನಂದರೆ, ನೀನು ಸದರೀ ಕ...ರು ನಡಿಸುವದಕ್ಕೆ ಮುಂಚಿತವಾಗಿ, ಅಂದರೆ, ತಿಂಗಳ ತಾರೀಖಿನಲ್ಲಿ (ಯಾವಕೋರ್ಟಿನಿಂದ ಸಾಬೀತು ಮಾಡಲ್ಪಟ್ಟಿತ್ತೋ ಆ ಕೋರ್ಟ ನಮೂದಿಸತಕ್ಕದ್ದು) ನಿಂದ ಇಂಡಿಯರ್ನ ಪಿನಲ್‌ಕೋಡಿನ 17ನೇ ಅಧ್ಯಾಯದಪ್ರಕಾರ ಮೂರುವರುಷದ ವಾಯಿದೆ ಪರಿಯಂತ ಕೈದಿನಿಂದ ಶಿಕ್ಷೆಯಾಗತಕ್ಕ ಒಂದು ತಕ್ಕೀರು, ಅದು ಯಾವವಂದರೆ, ರಾತ್ರಿಕಾಲದಲ್ಲಿ ಮನೆಗೆ ಕನ್ನ ಹಾಕೋಣದ ತಕ್ಕೀರು (ಯಾವ ಪ್ರಕರಣಮೇರೆಗೆ ಆಪಾದನೆಪಟ್ಟವನು ಸಾಬೀತಾಗಲ್ಪಟ್ಟಿದ್ದನೋ ಆ ಪ್ರಕರಣದಲ್ಲಿ ಉಪಯೋಗಿಸುವ ಮಾತುಗಳಲ್ಲೇ ತಕ್ಕೀರನ್ನು ವಿವರಿಸತಕ್ಕದ್ದು) ಸಾಬೀತು ಆಗಲ್ಪಟ್ಟಿದ್ದೀ—ವ—ಸದರ್ರೀ ಸಾಬೀತು ಈ ವರಿಗೆ ಪೂರ್ಣವಾಗಿ ಜಾರೀಲಿ—ವ—ಊರ್ಜಿತವಾಗಿ ಇರುತ್ತದೆ. ಆದಕಾರಣ ಇಂಡಿಯರ್ನ ಪಿನಲ್‌ಕೋಡಿನ 75ನೇ ಪ್ರಕರಣಪ್ರಕಾರ ಹೆಚ್ಚಿಗೆ ಶಿಕ್ಷೆಗೆ ಗುರಿಯಾಗಿರುತ್ತಿ.

ಮತ್ತು ನೀನು ದರಿಯಾಫ್ತಿ ಮಾಡಲ್ಪಡತಕ್ಕದ್ದೆಂತ ವಗ್ಯೆರೆ ನಾವು ಇದರಮೂಲಕ ವಿಧಿಸುತ್ತೇವೆ.

XXIX.—WARRANT OF COMMITMENT ON A SENTENCE OF IMPRISONMENT OR FINE IF PASSED BY A MAGISTRATE.

29.—ಒಬ್ಬ ಮ್ಯಾಜಿಸ್ಟ್ರೇಟನಿಂದ ಕೈದು—ಯಾ—ಜುರುಮಾನೆ ಸಜಾವಿನಮೇಲೆ ಕೊಡೋಣಾಗುವ ಕಮ್ಮಿಟಿಮೆಂಟ್ ವಾರಂಟ್.

(*See Sections* 245 *and* 258.)

(245—ವ—258ನೇ ಪ್ರಕರಣಗಳನ್ನು ನೋಡು.)

ಜೈಲ್ ಸೂಪರ್ರಿಂಟೆಂಡೆಂಟು (ಅಥವಾ ಕೀಪರ) ಗೆ

(ಹೆಸರು—ವ—ಉದ್ಯೋಗೆ ಪ್ರಯುಕ್ತವಾದ ಹೆಸರು) ನಮ್ಮಮುಂದೆ 18 ನೇ ಇಸವಿ ತಿಂಗಳ ತಾರೀಖಿನಲ್ಲಿ 18 ನೇ ಇಸವಿ ಬಾಬತು ಕ್ಯಾಲೆಂಡರ್ ನಂಬರ ನೇ ಮೊಕದ್ದಮೆಯಲ್ಲಿ (1ನೇ 2ನೇ 3ನೇ ಸಂಗತ್ಯಾನೂಸಾರ) ಬಂದೀವಾನನಾದ (ಬಂದೀವಾನನ ಹೆಸರು) ನು ಇಂಡಿಯನ್ ಪೆನಲ್‌ಕೋಡಿನ (ಯಾ ಆಕ್ಟಿನ) ಪ್ರಕರಣ (ಅಥವಾ ಪ್ರಕರಣಗಳ) ಪ್ರಕಾರ (ತಕ್ಸೀರು—ಯಾ—ತಕ್ಸೀರುಗಳನ್ನು ಸಂಕ್ಷೇಪವಾಗಿ ನಮೂದಿಸತಕ್ಕದ್ದು) ತಕ್ಸೀರು ಸಾಬೀತುಪಟ್ಟು, (ಶಿಕ್ಷೆಯನ್ನು ಪೂರ್ಣವಾಗಿ—ವ—ಸ್ಪಷ್ಟವಾಗಿ ಬರಿಯತಕ್ಕದ್ದು) ಸಜಾ ವಿಧಿಸಲ್ಪಟ್ಟಿರುವದರಿಂದ ;

ಈ ವಾರಂಟ್ ಸಮೇತ, ಸದರೀ (ಕೈದಿಯ ಹೆಸರು) ನನ್ನ ಸದರೀ ಜೈಲಿನಲ್ಲಿ ನಿಮ್ಮ ಭದ್ರತೆಯೊಳಗೆ ತೆಗದುಕೊಳ್ಳಲಿಕ್ಕೂ, ಮತ್ತು ಮೇಲೆ ಹೇಳಿದ ಸಜಾವಿನ ಅಮಲ್‌ಜಾರಿ ಕಾನೂನಮೇರೆಗೆ ಅಲ್ಲಿ ನಡಿಸಲಿಕ್ಕೂ ಇದರೊಂದಿಗೆ ಸದರೀ ಸೂಪರ್ರಿಂಟೆಂಡೆಂಟ್ (ಅಥವಾ ಕೀಪರ) ರಾದ ನಿಮ್ಮನ್ನ ಸ್ವಾತಂತ್ರ್ಯಕೊಟ್ಟು ಆಜ್ಞಾಪಿಸೋಣಾಗುತ್ತದೆ

ನಮ್ಮ ದಸ್ಕತು—ವ—ಕೋರ್ಟು ಮೊಹರು ನಿಶಿ ಕೊಟ್ಟ ತಾರೀಖು ನೇ 18 .

(ಮೊಹರು.) (ದಸ್ಕತು.)

XXX.—WARRANT OF IMPRISONMENT ON FAILURE TO RECOVER AMENDS BY DISTRESS.

30.—ಜಪ್ತಿಮೂಲಕ ಪರಿಹಾರ ದ್ರವ್ಯವು ವಸೂಲು ಆಗದೆ ಇದ್ದರೆ ಕೊಡತಕ್ಕ ಕೈದು ವಾರಂಟು.

(*See Section* 250.)

(250ನೇ ಪ್ರಕರಣವನ್ನು ನೋಡು.)

ಜೈಲ್ ಸೂಪರ್ರಿಂಟೆಂಡೆಂಟು (ಅಥವಾ ಕೀಪರ) ಗೆ.

(ಹೆಸರು—ವ—ತಪಶೀಲು) ನು (ಆಪಾದನೆ ಪಟ್ಟವನ ಹೆಸರು—ವ—ತಪಶೀಲು) ಮೇಲೆ (ಫಿರಿಯಾದಿಯನ್ನ ಸಂಕ್ಷೇಪ ನಮೂದಿಸತಕ್ಕದ್ದು) ಎಂತಾ ಫಿರಿಯಾದು ತರಲ್ಪಟ್ಟು, ಸದರೀ ಫಿರಿಯಾದು ಅಲ್ಪವಾದ್ದು (ಅಥವಾ ರೊಪ್ಪುಕರವಾದ್ದು) ಎಂತಾ ಡಿಸ್‌ಮಿಸ್ ಮಾಡೋಣಾಗಿ, ಸದರೀ ಡಿಸ್‌ಮಿಸ್ ಮಾಡಿದ ಹುಕುಮಿನಲ್ಲಿ ಸದರೀ (ಫಿರಿಯಾದುದಾರನ ಹೆಸರು) ನು ಮೊ... ರೂಪಾಯಿ ಪರಿಹಾರದ್ರವ್ಯವನ್ನು ಕೊಡತಕ್ಕದ್ದು ಎಂತ ವಿಧಿಸಿ ಇರುವದರಿಂದ;—ವ—ಸದರೀ ಮೊಬಲಗು ವಸೂಲ್ ಕೊಡದೆಯೂ—ಸದರೀ (ಫಿರಿಯಾದುದಾರನ ಹೆಸರು)-ವ ಚರಸ್ವತ್ತು ಜಪ್ತೀ ಮೂಲಕವಾಗಿ ವಸೂಲು ಮಾಡಕೂಡದೆ ಹೋದ್ದಕಾರಣ ಮೇಲೆ ಹೇಳಿದ ಮೊಬಲಗು ಮುಂಚಿತವಾಗಿ ಸಂದಾಯ ಆಗದೆ ಇದ್ದ ಪಕ್ಷದಲ್ಲಿ, ದಿವಸಗಳ ವಾಯಿದೆ ಪರಿಯಂತ ಜೈಲಿನಲ್ಲಿ ಆತನು ಬರೀ ಕೈದು ಅನುಭವಿಸತಕ್ಕದ್ದೆಂತ ಒಂದು ಹುಕುಂ ಮಾಡೋಣಾಗಿರುವದರಿಂದ ;

ಈ ವಾರಂಟ್ ಸಮೇತ, ಸದರೀ (ಹೆಸರು) ನನ್ನ ನಿಮ್ಮ ಭದ್ರತೆಯೊಳಗೆ ತೆಗದುಕೊಳ್ಳಲಿಕ್ಕೂ—ವ—ಸದರೀ ಮೊಬಲಗು ಮುಂಚಿತವಾಗಿ ಸಂದಾಯವಾಗದೆ ಇದ್ದಪಕ್ಷದಲ್ಲಿ, ಇಂಡಿಯನ್ ಪೆನಲ್ ಕೋಡಿನ 69ನೇ ಪ್ರಕರಣದ ನಿಬಂಧನೆಗಳಿಗೆ ಒಳಪಟ್ಟು, ಹೇಳೋಣಾದ (ಕೈದಿನ ವಾಯಿದೆ) ಪರಿಯಂತ ಸದರೀ ಜೈಲಿನಲ್ಲಿ ಆತನನ್ನ ಭದ್ರತೆಯಲ್ಲಿ ಇರಿಸಲಿಕ್ಕೂ,—ವ—ಸದರೀ ಮೊಬಲಗು ಸಲ್ಲಿಸಿದ್ದಲ್ಲಿ ಆತನನ್ನ ಸ್ವತಂತ್ರವಾಗಿ ಕೂಡಲೇ ಬಿಟ್ಟುಬಿಡಲಿಕ್ಕೂ—ವ—ವಾರಂಟ್ ಅಮಲ್‌ಜಾರಿ ನಡಿಸಿದ ರೀತಿಯನ್ನ ನಮೂದಿಸಿ ಇಂಡಾರಸ್‌ಮೆಂಟ್